12th Century's
Enlightenment Technic
and Revolution



ಜ್ಞಾನ ಭಂಡಾರಿ ಬಸವಣ್ಣ

ಬಸವರಾಜ ಸ್ವಾಮಿ

12th Century's
Enlightenment Technic
and Revolution

ಜ್ಞಾನಭಂಡಾರಿ ಬಸವಣ್ಣ

ಬಸವಣ್ಣನವರ ವಚನಗಳ ವಚನಾನುಭವ (ಸಮಗ್ರ)

ಹನ್ನೆರಡನೆ ಶತಮಾನದ ಸ್ವಯಂಜ್ಞಾನ ಕ್ರಾಂತಿ ಮತ್ತು ತಂತ್ರಗಾರಿಕೆ

ಬಸವರಾಜ ಸ್ವಾಮಿ

ಪ್ರಕಾಶಕರು

ಬಾಲಂಕು ಸೇವಾ ಫೌಂಡೇಶನ್

ಬಾಲಂಕು ಆಸ್ಪತ್ರೆ, ಮುನ್ನುರುವಾಡಿ ಶಾಲೆ ಎದುರುಗಡೆ,
ಬಸವನಗರ, ಗಂಜರಸ್ತೆ, ರಾಯಚೂರು -584102
ರಾಯಚೂರು - 584 102 ಕರ್ನಾಟಕ

12th Century's
Enlightenment Technic
and Revolution

Jnanabhandari Basavanna -
Basavannanavara vachanagala vachananubhava
by : **Basavaraj Swamy**
Editor, Suddimoola Kannada Daily
Siyatalab, Raichur-584102
M. 9980553750

ಜ್ಞಾನಭಂಡಾರಿ ಬಸವಣ್ಣ
ಬಸವಣ್ಣನವರ ವಚನಗಳ ವಚನಾನುಭವ (ಸಮಗ್ರ)

ಹಕ್ಕುಗಳು : ಲೇಖಕರವು

ಬೆಲೆ : ರೂ. 800/

ಪ್ರತಿಗಳು : 1000

ಮುದ್ರಣ : ಜೂನ್ 2018

ಕಾಗದ ಬಳಕೆ : 60 ಜಿಎಸ್ಎಂ. ಎನ್ ಎಸ್ ಮ್ಯಾಪಲಿತೋ

ಆಕಾರ : ಡೆಮಿ 1/8

Page : 888 + xv

Price : Rs. 800/-

Copies : 1000

ಮುಖಪುಟ : ಮುರಳೀಧರ . ವಿ. ರಾಠೋಡ್, ಬೆಂಗಳೂರು

ಮುದ್ರಣ : ಶುಭೋದಯ ಪ್ರಿಂಟರ್ಸ್, ಬೆಂಗಳೂರು.

ಪ್ರಕಾಶನ :
ಬಾಲಂಕು ಸೇವಾ ಫೌಂಡೇಶನ್
ಬಾಲಂಕು ಆಸ್ಪತ್ರೆ, ಬಸವನಗರ, ಗಂಜ್ ರಸ್ತೆ,
ರಾಯಚೂರು – 584 102
ಕರ್ನಾಟಕ

ಪ್ರಕಾಶಕರ ಮಾತು

ಮಾನವೀಯ ಮೌಲ್ಯಗಳಿಗೆ ಸ್ಪಂದಿಸುವ ಜನಪರ ಕಾಳಜಿ ಮತ್ತು ಕಲ್ಯಾಣವನ್ನೇ ಮೂಲ ಆಶಯವನ್ನಾಗಿಸಿಕೊಂಡು ಪ್ರಾರಂಭವಾದ ಬಾಲಂಕು ಸೇವಾ ಫೌಂಡೇಶನ್ ಕಳೆದ ಒಂದು ದಶಕದಿಂದ ಹತ್ತು ಹಲವಾರು ವಿಧಾಯಕ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡು ತನ್ಮೂಲಕ ಜನ-ಮನದ ಏಳಿಗೆಯನ್ನು ಉನ್ನತೀಕರಿಸಿದ ಉದಾಹರಣೆಗಳು ನೊಂದವರ, ದುರ್ಬಲರ, ಆಶಾಕಿರಣವಾಗಿರುವುದು ಫೌಂಡೇಶನ್‌ನ ಕಾರ್ಯ ವೈಖರಿಯನ್ನು ಪ್ರತಿಬಿಂಬಿಸುತ್ತದೆ.

ರೈತ ಈ ನೆಲದ ಜೀವ ನಾಡಿ, ರೈತರ ಬದುಕು ಹಸನಾದಾಗ ಮಾತ್ರ ನಾಡು ಸುಭಿಕ್ಷವಾಗುವುದು ಎನ್ನುವ ಪರಿಕಲ್ಪನೆಯಲ್ಲಿ ಆತ್ಮ ಹತ್ಯೆಗೊಳಪಟ್ಟ ರೈತ ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿವರೆಗೆ ಉಚಿತ ವೈದ್ಯಕೀಯ ಸೇವೆ ಹಾಗೂ ಸರಕಾರಿ ಶಾಲೆಗಳ ಮಕ್ಕಳಿಗೆ ಆಟದ ಪರಿಕರಗಳ ವಿತರಣೆ, ಇದಲ್ಲದೇ ಬಾಲಂಕು ಸೇವಾ ಫೌಂಡೇಶನ್ ವತಿಯಿಂದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆರೋಗ್ಯ ಕುರಿತಂತೆ ಸವಿವರ ಮಾಹಿತಿಯ ಉಪನ್ಯಾಸಗಳನ್ನು ತಜ್ಞರಿಂದ ಆಯೋಜಿಸಿರುವುದು ಫೌಂಡೇಶನ್ ಕೈಗೊಂಡ ಕಾರ್ಯ ಯೋಜನೆಗಳು.

ಇಂದಿನ ಸಮಾಜದಲ್ಲಿ ಮೌಲ್ಯಗಳು ದಿನೇ ದಿನೇ ಕ್ಷೀಣಿಸುತ್ತಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ ಬಾಲಂಕು ಸೇವಾ ಫೌಂಡೇಶನ್ ಸಾಂಕ್ರಾಮಿಕ ಕಾಯಿಲೆ ಮುನ್ನೆಚ್ಚರಿಕೆ ಕುರಿತು ಕರಪತ್ರಗಳನ್ನು ಪ್ರಕಟಿಸಿ ಜನರಲ್ಲಿ ಆರೋಗ್ಯದ ಪ್ರಜ್ಞೆಯನ್ನು ಮೂಡಿಸಿದುದು ನಮ್ಮ ಸಂಸ್ಥೆಯ ಕಾರ್ಯವೈಖರಿ.

ಸಂಧಿವಾತದಿಂದ ಬಳಲುವ ಬಡರೋಗಿಗಳಿಗೆ ಎಂಟು ಹತ್ತು ವರ್ಷಗಳವರೆಗೆ ನಿರಂತರವಾಗಿ ಉಚಿತ ಚಿಕಿತ್ಸೆಯನ್ನು ಮಾಡುವ ಮೂಲಕ ಸೂಕ್ತ ಫಲಾನುಭವಿಗಳಿಗೆ ಫೌಂಡೇಶನ್‌ನಿಂದ ವೈದ್ಯಕೀಯ ನೆರವನ್ನು ನೀಡಲಾಗಿದೆ.

ಮಾನವನ ಅತಿಆಸೆ, ಅಹಂಕಾರಗಳ ಪರಿಣಾಮವಾಗಿ ಎಲ್ಲೆಡೆ ಭ್ರಷ್ಟಾಚಾರ ತಾಂಡವಾಡುತ್ತಿದೆ, ಮನುಕುಲಕ್ಕೆ ಕುಠಾರ ಪ್ರಾಯವಾಗಿರುವ ಭ್ರಷ್ಟಾಚಾರ ನಿವಾರಣೆಗಾಗಿ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಹಮ್ಮಿಕೊಂಡು ಆ ಕಾರ್ಯದಲ್ಲಿ ಯಶಸ್ವಿಯನ್ನು ಹೊಂದಿರುವುದು ಬಾಲಂಕು ಸೇವಾ ಫೌಂಡೇಶನ್‌ನ ಹಿರಿಮೆ ಎಂದು ಹೇಳಲು ಹೆಮ್ಮೆಯೆನಿಸುತ್ತಿದೆ.

ನಮ್ಮ ತಂದೆ ತಾಯಿಗಳಾದ ಶ್ರೀಮತಿ ಅಂಕಮ್ಮ ಶ್ರೀ ಬಾಲಮದ್ದಿಲೇಟಿ ರೆಡ್ಡಿ ರೈತ ನಗರ ಕ್ಯಾಂಪ್, ತಾಲೂಕ ಸಿಂಧನೂರು, ಜಿಲ್ಲಾ ರಾಯಚೂರು ಅವರ ಸದಾಶಯದ ಮೂಲಕ ಪ್ರಾರಂಭಗೊಂಡ ಬಾಲಂಕು ಸೇವಾ ಫೌಂಡೇಶನ್, ಮೂಲತಃ ಯೋಗ ಸಾಧನೆಯ ಉದಾತ್ತತೆಯನ್ನು ಜನಮನದಲ್ಲಿ ಬಿಂಬಿಸಿ ಹಲವು ಸಾಧಕರಿಗೆ ಪ್ರೇರೇಪಣೆ ಮಾಡಿದುದು ನಿಜಕ್ಕೂ ಸಾಧನೆಯ ಪ್ರತೀಕ,

ಪ್ರಸ್ತುತಃ ಸುದ್ದಿಮೂಲ ಸಂಪಾದಕರಾದ ಶರಣ ಚಿಂತಕ ಶ್ರೀ ಬಸವರಾಜ ಸ್ವಾಮಿಯವರು ಬಸವಣ್ಣನವರ ವಚನಗಳಿಗೆ ಹೊಸ ಪರಿಕಲ್ಪನೆಯ ಮೂಲಕ, ವ್ಯಾಖ್ಯಾನ ಮಾಡಿ ಶರಣ ಮಾರ್ಗದಲ್ಲಿ ಮುನ್ನಡೆಯುವ ಜ್ಞಾನದಾಹಿಗಳಿಗೆ ದಿಕ್ಸೂಚಿಯನ್ನು ತೋರಿದ್ದಾರೆ. ಶ್ರೀಬಸವರಾಜ ಸ್ವಾಮಿಗಳು ತಾವು ರಚಿಸಿದ ''ಜ್ಞಾನ ಭಂಡಾರಿ ಬಸವಣ್ಣ'' ಎನ್ನುವ ಬೃಹತ್ ಗ್ರಂಥವನ್ನು ಪ್ರಕಟಿಸುವ ಸದಾವಕಾಶವನ್ನು ನಮಗೆ ನೀಡಿರುವುದು ಸಂತೋಷದ ವಿಷಯ.

ಈ ಕೃತಿಯ ಬೆಲೆ ಕೇವಲ ಒಂದುನೂರು ರೂಪಾಯಿ, ಸುಮಾರು ಒಂಬತ್ತು ನೂರಾ ಎರಡು

ಪುಟಗಳ ''ಜ್ಞಾನ ಭಂಡಾರಿ ಬಸವಣ್ಣ'' ಪ್ರತಿಯೊಬ್ಬರ ಮನೆ-ಮನೆಗೆ ತಲುಪಲಿ, ಅವರ ಮನದಂತರಾಳದಲ್ಲಿ ಚಿರಸ್ಥಾಯಿಯಾಗಿ ಶರಣ ತತ್ವದ ಪರಿಮಳ ಬೀರಲಿ ಎನ್ನುವ ನಮ್ಮ ತಂದೆಯವರ ಸದಾಶಯ ಬಾಲಂಕು ಸೇವಾ ಫೌಂಡೇಶನ್‌ದ ಪ್ರಮುಖ ಉದ್ದೇಶ.

''ಕಳಬೇಡ ಕೊಲಬೇಡ'' ಎನ್ನುವ ಬಸವಣ್ಣನವರ ವಚನ ಅವರ ವಚನಗಳಲ್ಲಿಯೇ ಅತ್ಯಂತ ಪ್ರಮುಖವಾದುದು, ಈ ವಚನವನ್ನು ಸರಳ, ಸುಲಭವೆಂದು ಸಾಮಾನ್ಯವಾಗಿ ಸರ್ವರೂ ಭಾವಿಸುತ್ತಾರೆ, ಆದರೆ, ಅದರ ತಿರುಳು ಬೇರೆಯದೇ ಆಗಿದೆ. ಓದುಗರು ಅದನ್ನು ಓದಿಯೇ ತಿಳಿಯಬೇಕು.

ಈ ಪುಸ್ತಕದ ಆಯ್ದ ಕೆಲ ವಾಕ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ.

• ಅಧಿಕಾರ, ಕರೆನ್ಸಿ, ಚಿನ್ನ, ಭೂಮಿಗೆ ಮರುಳಾದ ರಾಜ ಮಹಾರಾಜರು ಯುದ್ಧ ಮಾಡಿ ರಕ್ತದ ಕಾಲುವೆ ಹರಿಸಿ ಮಣ್ಣು ಸೇರಿದ್ದಾರೆ. ಅವರ ತನುವಿನಲ್ಲಿದ್ದ ಸದಾಶಯ ಒಂದಿಷ್ಟು ಬಳಕೆಯಾಗದೆ ಅವರ ಜೊತೆಗೆಯೇ ಮಣ್ಣು ಸೇರಿ ಹೊರಟು ಹೋಯಿತು.

• ತನುವಿನಲ್ಲಿ ಆನೆಯ ಬಲದ ಅಜ್ಞಾನವೂ ಇದೆ; ಅಂಕುಶ ಗಾತ್ರದ ಅರಿವೂ ಇದೆ. ಅಂಕುಶ ಆನೆಗೆ ಬಳಕೆಯಾಗಿ ಅರಿವು ಮಾತ್ರ ಉಳಿಯಬೇಕು.

• ರಾವಣನ ಚರ್ಮ ಒಂದೇ ಸೀತಾ ಮಾತೆಯ ಚರ್ಮವೂ ಒಂದೇ, ಆದರೂ ಚರ್ಮ ಚರ್ಮವನ್ನೇ ಬಯಸಿ ರಾಮಾಯಣವನ್ನೇ ಸೃಷ್ಟಿ ಮಾಡಿತು. ಈ ಕಿಚ್ಚಿನಲ್ಲಿ ಅಪಾರ ಪ್ರಮಾಣದ ವಾನರ ಸೈನ್ಯ , ರಾವಣ ಸೈನ್ಯ ಸುಟ್ಟು ಬೂದಿಯಾಯಿತು. ರಾವಣ ಆತನ ಮಕ್ಕಳು ಸತ್ತು ಹೋದರು. ಬಲಶಾಲಿ ವಾಲಿ ವ್ಯರ್ಥ ಸತ್ತು ಹೋದ. ಚರ್ಮದಲ್ಲಿ ಹುಟ್ಟಿದ ಬಯಕೆಯ ಅಜ್ಞಾನವನ್ನು ಬಲಶಾಲಿಗಳಿಗೂ ಅಳಿಸಿ ಹಾಕಲು ಸಾಧ್ಯವಾಗಲಿಲ್ಲ.

• ದೇಹ ಎನ್ನುವುದು ಒಂದು ಕುದುರೆ. ಈ ಕುದುರೆಯಲ್ಲಿ ಅರಿವೆಂಬ ಗುರುವು ಇದ್ದಾನೆ; ಈ ಗುರುದೇವನನ್ನು ತಿಳಿಯುವ ಮನವೆಂಬ ಶಿಷ್ಯನೂ ಇದ್ದಾನೆ. ಆ ಗುರುದೇವನೇ ಬುದ್ಧ, ಆತನಿಗೆ ಶಿಷ್ಯನಾದವನೇ ಸಿದ್ಧಾರ್ಥ. ಬುದ್ಧ ಸಿದ್ಧಾರ್ಥನನ್ನು ತನ್ನಂತೆ ಮಾಡಿಕೊಂಡು ಜ್ಞಾನ ಯುದ್ಧಕ್ಕೆ ಹೋದ. ಎದುರಾದ ಅಜ್ಞಾನದ ಸೈನ್ಯವೆಲ್ಲ ನಾಶವಾಯಿತು. ಅಂಗುಲಿಮಾಲ ಸತ್ತು ಬುದ್ಧನೇ ಆದ!

• ಅರಿವು ಗ್ರಂಥದಲ್ಲಿದೆಯೆಂದು ಮನ ಓದಿ ಪಂಡಿತನಾಗುತ್ತದೆ. ಓದುವ ಸಕಲ ಗ್ರಂಥಗಳೂ ತನುವಿನಿಂದಲೇ ಬಂದದ್ದೆಂದು ಸಂದೇಹಿ ಮನಕ್ಕೆ ತಿಳಿಯುವುದೇ ಇಲ್ಲ. ಸಂದೇಹಿ ಮನವನ್ನು ಅರಿವು ತನ್ನತ್ತ ಸುಳಿಯಗೊಡುವುದಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ತನುವಿನಲ್ಲಿ ಹುಟ್ಟಿದ ಮನ ತನುವನ್ನೇ ತುಕ್ಕು ಹಿಡಿಸಿ ತನುವಿನೊಂದಿಗೆ ಇಲ್ಲವಾಗುತ್ತದೆ.

ಹೀಗೆ ಪುಟ ಪುಟದಲ್ಲೂ ಓದುಗರನ್ನು ಮನ ತನ್ನ ಅರಿವಿನತ್ತ ಕರೆದುಕೊಂಡು ಹೋಗುವ ತಿರುಳಿದೆ. ಓದುಗರು ಈ ಗ್ರಂಥವನ್ನು ಸಮಾಧಾನದಿಂದ ಓದಿ ಸ್ವಯಂ ಜ್ಞಾನ ಕ್ರಾಂತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂಬ ಕಳಕಳಿ ನಮ್ಮ ಸಂಸ್ಥೆಯದಾಗಿದೆ. ಈ ಅಕ್ಷರ ಕ್ರಾಂತಿಯ ಸೇವೆಯಲ್ಲಿ ಬಾಲಂಕು ಸೇವಾ ಫೌಂಡೇಶನ್ ಸಂಸ್ಥೆಗೆ ಅವಕಾಶ ಮಾಡಿಕೊಟ್ಟ ಲೇಖಕರಿಗೆ ವಂದನೆಗಳು.

ದಿನಾಂಕ : 6.10.2017

ಸ್ಥಳ : ರಾಯಚೂರು

ಡಾ।। ಶ್ರೀಧರ ರೆಡ್ಡಿ
ಅಧ್ಯಕ್ಷರು, ಬಾಲಂಕು ಸೇವಾ ಫೌಂಡೇಶನ್
ರಾಯಚೂರು

ಅರ್ಪಣೆ



ಪರಮಪೂಜ್ಯ ಸದ್ಗುರು

ಶ್ರೀ ವಿದ್ಯಾನಂದ ಶರಣರು

ಡಬ್ಬೇರುಮಡುವು

ತಾ.ಲಿಂಗಸೂಗೂರು, ಜಿ.ರಾಯಚೂರು

ಅವರಿಗೆ



ಶರಣ ದಂಪತಿಗಳಾದ ಶ್ರೀ ಬಾಲಮದ್ದಿಲೇಟಿ ರೆಡ್ಡಿ ಹಾಗೂ ಶ್ರೀಮತಿ ಅಂಕಮ್ಮ

ಸಂಸ್ಥಾಪಕ ಅಧ್ಯಕ್ಷರು, ಬಾಲಂಕು ಸೇವಾ ಫೌಂಡೇಶನ್

ರಾಯಚೂರು

ಓದುವ ಮುನ್ನ....

ಬಸವಣ್ಣನವರು ತಮ್ಮ ತನುವಿನ ಸಹಜಜ್ಞಾನ ಭಂಡಾರವನ್ನು ತಾವೇ ಸಂಪೂರ್ಣ ಬಳಸಿಕೊಂಡು ಮಹಾಜ್ಞಾನಿಗಳಾದವರು. ಆ ಮಹಾಜ್ಞಾನಕ್ಕೆ ಶರಣು ಹೋಗಿ ಶರಣರಾದವರು. ತನುವಿನ ಸಹಜಜ್ಞಾನ ಹೇಗೆ ಬಳಸಿಕೊಳ್ಳಬೇಕು ಎನ್ನುವ ಶಿಕ್ಷಣವನ್ನು ಒಂದು ಲಕ್ಷ ತೊಂಬತ್ತಾರುಸಾವಿರ ಜಿಜ್ಞಾಸುಗಳಿಗೆ ಕಲ್ಯಾಣದಲ್ಲಿ ಅತ್ಯಂತ ಕಿರಿಯರಾಗಿ ಹೇಳಿಕೊಟ್ಟರು. ಅವರು ಮಾಡಿದ ಪಾಠದಿಂದ ಏಳುನೂರಾ ಎಪ್ಪತ್ತು ಜನ ಸಂಪೂರ್ಣ ಸಹಜಜ್ಞಾನದ ನೈಪುಣ್ಯತೆಯನ್ನು ಹೊಂದಿ ಅಮರಗಣಂಗಳಾದರು !

ಅನೇಕ ವರ್ಷಗಳ ಪರ್ಯಂತ ನಡೆದ ಸಹಜಜ್ಞಾನ ಯಜ್ಞದಲ್ಲಿ ತನುವಿನಿಂದ ಒಡ ಮೂಡಿದ ಅಕ್ಷರಗಳೇ ವಚನಗಳಾದವು. ತನುವಿನ ಸಹಜಜ್ಞಾನ ಸಂಪತ್ತನ್ನು ಪಡೆಯುವ ಸರಳ ಸುಲಭದ ಸೂತ್ರಗಳಾದವು. ತಾವು ಪಡೆದು ಅನುಭವಿಸಿ ಆನಂದಿಸಿದ ಸಹಜಜ್ಞಾನ ಸಂಪತ್ತು ಸಕಲರಿಗೂ ಸರಳವಾಗಿ ಲಭ್ಯವಾಗಲೆಂದು ಶರಣರು ವಚನ ರೂಪದ ಸೂತ್ರಗಳನ್ನು ರಚಿಸಿದರು.

ಶಾಲಾ ಕಾಲೇಜಿನಿಂದ ವಿಶ್ವವಿದ್ಯಾಲಯದಿಂದ ಜ್ಞಾನ ದೊರೆಯುತ್ತದೆ ಎಂದು ಜಗತ್ತು ತಪ್ಪಾಗಿ ಭಾವಿಸಿದೆ. ಅಲ್ಲಿ ಕಲಿಯುವ ಪುಸ್ತಕಗಳೆಲ್ಲ ತನುವಿನಿಂದ ಹೊರಬಂದು ಮುದ್ರಣ ಗೊಂಡಿವೆ. ತನುವಿನಿಂದ ಬಂದ ಪುಸ್ತಕಗಳನ್ನು ತನು ಕಲಿಯುವುದೆಂದರೇನು? ಅವುಗಳನ್ನು ಸಂಗ್ರಹಿಸಿ ಓದುವುದೆಂದರೇನು? ಇದು ತನುವಿಗೆ ಅಪಹಾಸ್ಯದ ಮಾತೇ ಸರಿ. ಅದಕ್ಕಾಗಿಯೇ ತನು ಉದಾಸೀನ ಮಾಡುತ್ತದೆ. ಕಲಿತದ್ದು ತನುವಿಗೆ ಬಳಕೆಯಾಗುವುದಿಲ್ಲ, ಮಾತನಾಡಲು, ಕತೆ ಮಾಡಿ ಹೇಳಲು , ವೇದಿಕೆ ಮೂಲಕ ಕಲಿತ ಮಾತುಗಳನ್ನು ವಿನಿಮಯ ಮಾಡಿಕೊಳ್ಳಲು ಮಾತ್ರ ಬಳಕೆಯಾಗುತ್ತದೆ. ತನು ಪಂಡಿತ, ಉಪನ್ಯಾಸಕ, ಶಾಸ್ತ್ರಿ ಎಂದು ಹೊಗಳಿಸಿಕೊಳ್ಳುತ್ತದೆ. ಇಷ್ಟಕ್ಕೆ ಮಾತ್ರ ಕಲಿತದ್ದು ತನುವಿಗೆ ಬಳಕೆಯಾಗುತ್ತದೆ.

ಉದಾ: ಕಾಲಿಗೆ ಚುಚ್ಚಿದ ಒಂದು ಚಿಕ್ಕ ಮುಳ್ಳು ತನುವಿಗೆ ಯಾತನೆ ಉಂಟು ಮಾಡುತ್ತದೆ. ಅದು ಹೊರಬರುವವರೆಗೆ ತನುವಿಗೆ ಸಮಾಧಾನವೇ ಆಗುವುದಿಲ್ಲ. ಅಂತೆಯೇ ಮನ ಸಂಗ್ರಹ ಮಾಡಿಕೊಂಡ ಸುಖ ದುಃಖಗಳನ್ನುಂಟು ಮಾಡುವ ಶಬ್ದ ತನುವಿನಿಂದ ಹೊರಬರುವವರೆಗೆ ತನುವಿಗೆ ಸಮಾಧಾನವಾಗುವುದಿಲ್ಲ. ಆದರೆ ಕಾಲಿಗೆ ಚುಚ್ಚಿದ ಮುಳ್ಳು ಕಿತ್ತಿಕೊಂಡಂತೆ, ಮನದಲ್ಲಿ ನೆಟ್ಟ ಶಬ್ದ ಕಿತ್ತೆಸೆಯಲು ಮನಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಆ ಶಬ್ದ ತನುವಿಗೆ ಹಗಲಿರುಳು ಯಾತನೆಯನ್ನುಂಟು ಮಾಡುತ್ತದೆ. ಮನದಲ್ಲಿ ನೆಟ್ಟ ಶಬ್ದಗಳನ್ನು ಕಿತ್ತೆಸೆಯಲು ಸಹಾಯ ಮಾಡುವ ಸೂತ್ರಗಳೇ ಬಸವಾದಿ ಶರಣರ ವಚನಗಳು. ಇದರಿಂದ ತನು ನಿಃಶಬ್ದ ವೇದಿಯಾಗುತ್ತದೆ. ಸಹಜಜ್ಞಾನಿಯಾಗುತ್ತದೆ.

ಬಸವಣ್ಣನವರು ಮನದ ಮೂಲಕ ತನುವಿನ ಸಹಜಜ್ಞಾನಕ್ಕೆ ಭಕ್ತಿ ಮಾಡಿದರು. ತನುವಿನ ಸಹಜಜ್ಞಾನಭಂಡಾರದ ಸವಿಯನ್ನು ಸವಿದರು. ಕಾರಣ ಅಣ್ಣನವರನ್ನು ಸಹಜಜ್ಞಾನಕ್ಕೆ ಭಕ್ತಿಮಾಡಿದ ಭಕ್ತಿಭಂಡಾರಿ ಬಸವಣ್ಣ ಎಂದು ಶರಣರು ಹೃದಯ ತುಂಬಿ ನುಡಿದರು. ಜಗತ್ತೇ ಅವರನ್ನು ಜಗಜ್ಯೋತಿ ಬಸವೇಶ್ವರ ಎಂದು ಕರೆಯಿತು.

ನುಡಿದಡೆ ಮುತ್ತಿನ ಹಾರದಂತಿರಬೇಕು. ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದಡೆ ಕೂಡಲಸಂಗಮದೇವ ನೆಂತೊಲಿವನಯ್ಯ?

ಮುತ್ತು ಮಾಣಿಕ್ಯ ಸ್ಫಟಿಕ ನುಡಿಯುವುದಿಲ್ಲ, ಅವು ಬೆಳಗುವ ಮೂಲಕ ನುಡಿಯುತ್ತವೆ. ಬಸವಣ್ಣನವರು ನುಡಿಯುವ ಮೂಲಕ ತನುವನ್ನು ಬೆಳಗಿಸಿದರು. ತನುಗಳು ನುಡಿದ ನುಡಿಗಳನ್ನೆಲ್ಲ ಬೆಳಗಿನ ನುಡಿಯಾಗಿ ಕೇಳಿದರು. ನುಡಿ ಅಥವಾ ಶಬ್ದದಲ್ಲಿ ಅರಿವೇ ತುಂಬಿದೆ. ಶಬ್ದ ಬರೆದರೆ ನಪುಂಸಕವಾಗುತ್ತದೆ; ಓದಿದರೆ ಅರಿವಾಗುತ್ತದೆ. ತನು ಸ್ವೀಕರಿಸಿದರೆ ಸುಖವಾಗುತ್ತದೆ ಇಲ್ಲ ದುಃಖವಾಗುತ್ತದೆ. ಇವೆರಡನ್ನು ಕಳೆದು ಶಬ್ದವನ್ನು ಸಹಜ ಅರಿವಿನಿಂದ ಕೇಳುವ ಶಕ್ತಿ ಕಿವಿಯಲ್ಲಿ ಅಡಗಿದೆ. ಆ ನಿಃಶಬ್ದವೇದಿ ಶಕ್ತಿಯನ್ನು ಬಳಕೆ ಮಾಡಿಕೊಂಡು ಶಬ್ದ ಕೇಳುವ ಯುಕ್ತಿ ಕಿವಿಗೆ ರೂಢಿಸಬೇಕು ಅಷ್ಟೆ !

ಶಬ್ದವನ್ನು ಸಹಜ ಅರಿವಿನಿಂದ ಹೇಗೆ ಕೇಳಬೇಕು ಎಂಬ ಯುಕ್ತಿಯನ್ನು ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ಹೇಳಿಕೊಡುವುದಿಲ್ಲ. ಕಿವಿ, ಕಣ್ಣು, ಮೂಗು, ನಾಲಿಗೆ, ಚರ್ಮಕ್ಕೆ ಪಾಠ ಹೇಳಿಕೊಡುವ ಶಕ್ತಿ ಅವುಗಳಿಗೆ ಇರುವುದಿಲ್ಲ. ಅವು ಏನಿದ್ದರೂ ಪುಸ್ತಕಗಳ ಭಂಡಾರದೆಡೆಗೆ ಬೊಟ್ಟು ಮಾಡುತ್ತವೆಯೇ ಹೊರತು ಸಹಜಜ್ಞಾನ ಭಂಡಾರದೆಡೆಗೆ ಅಲ್ಲ. ಪುಸ್ತಕಗಳನ್ನು ಹೊರಚೆಲ್ಲಿದ ತನುವಿಗೆ ಪುಸ್ತಕಗಳ ಮೂಲಕ ಜ್ಞಾನ ಹೇಳಿಕೊಡುವುದು ಮೂರ್ಖತನವೆಂದು ಶಿಕ್ಷಣ ಇಲಾಖೆಗಳಿಗೆ ಹೊಳೆಯುವುದಿಲ್ಲ. ಸರಕಾರಕ್ಕೆ, ಗುರುಹಿರಿಯರು ಎನ್ನಿಸಿಕೊಂಡವರಿಗೆ ಪಾಲಕರಿಗೆ ಹೊಳೆಯುವವರೆಗೆ ಈ ಪ್ರಕ್ರಿಯೆ ನಿರಂತರವಾಗಿ ಹೀಗೇ ಸಾಗುತ್ತದೆ.

ಮನ ಪುಸ್ತಕದಲ್ಲಿರುವ ಜ್ಞಾನ ಸಂಗ್ರಹ ಮಾಡಿಕೊಂಡರೆ ತನು ಸಹಜಜ್ಞಾನಿಯಾಗುವುದಿಲ್ಲ. ಅಂತಹ ಜ್ಞಾನ ತನುವಿನ ಆಪತ್ಕಾಲದಲ್ಲಿ ಬಳಕೆಗೂ ಬರುವುದಿಲ್ಲ. ಹೀಗಾಗಿ ಇದನ್ನು ಸಂಗ್ರಹಿಸುವುದಕ್ಕಿಂತ ತನುವಿನಲ್ಲಿರುವ ಸಹಜಜ್ಞಾನವನ್ನು , ತನುವಿನ ಮನದಿಂದಲೇ ಅನುಭವಕ್ಕೆ ತಂದುಕೊಂಡು, ತನು ಬಳಕೆ ಮಾಡಿದಾಗಲೇ ಸಹಜಜ್ಞಾನಿ ತನು ಎನ್ನಿಸಿಕೊಳ್ಳುತ್ತದೆ. ಇದಕ್ಕೆ ಅಣ್ಣ ಬಸವಣ್ಣನವರ ಸೂತ್ರ ರೂಪದ ವಚನಗಳೇ ಸಾಕ್ಷಿಯಾಗಿವೆ.

ಮನ ತನುವಿನ ಅನುಭವದ ಆಳಕ್ಕೆ ಹೋಗುವುದಕ್ಕಾಗಿಯೇ ಬಸವಣ್ಣನವರು ವಚನಗಳನ್ನು ಬರೆದಿದ್ದಾರೆ. ನಿಧಾನವಾಗಿ ಓದಿದರೆ ಮನ ಅನುಭವದ ಆಳಕ್ಕೆ ಹೋಗಿ ಅನುಭಾವಿಯೇ ಆಗುವುದರಲ್ಲಿ ಸಂದೇಹವಿಲ್ಲ. ಸಾಧ್ಯವಾದರೆ ಓದುಗರು ಸಮೀಪದಲ್ಲಿರುವ ಅನುಭಾವಿಗಳನ್ನು ಕಂಡುಹಿಡಿದು ಅವರ ಸಹಾಯ ಪಡೆಯಬಹುದಾಗಿದೆ.

ಬುದ್ಧ ಮಹಾವೀರ ಕ್ರಿಸ್ತ ಕ್ರಿಷ್ಣ ಶಂಕರ ರಾಮಾನುಜರು, ಶರಣರು, ದಾಸವರೇಣ್ಯರು, ಅನುಭಾವಿಗಳು ಪ್ರತಿಯೊಂದು ದೃಶ್ಯವನ್ನು ಅನುಭವದಿಂದ ನೋಡಿದರು. ಶಬ್ದವನ್ನು ಅನುಭವದಿಂದ ನುಡಿದು ಕೇಳಿದರು. ಶಬ್ದದ ಪರಿಮಳ ಹಾಗೂ ರುಚಿಯನ್ನು ಅನುಭವದಿಂದಲೇ ರುಚಿಸಿದರು. ಅನುಭಾವದಿಂದಲೇ ಮುಟ್ಟಿದರು. ತನುವಿನ ಸ್ವಾನುಭವದಿಂದಾಗಿ ಸಹಜ ದೃಶ್ಯ, ಸಹಜ ಶಬ್ದ, ಸಹಜ ವಾಸನೆ, ಸಹಜ ಸ್ಪರ್ಷ, ಸಹಜ ರುಚಿಯಿಂದಾಗಿ ತನು ತಲ್ಲಣಗೊಳ್ಳಲಿಲ್ಲ. ತಾವು ತಮ್ಮ

ಸಹಜ ಅರಿವಿನಿಂದ ಅನುಭವಿಸಿ ಸುಖಿಸಿದರು. ಸರ್ವರಿಗೂ ಸ್ವಾನುಭವದ ಸಹಜಸುಖ ದಕ್ಕಲೆಂದು ಸರಳ ಸೂತ್ರಗಳನ್ನು ರಚಿಸಿದರು.

ಭಗವದ್ಗೀತೆ, ಬೈಬಲ್, ಶಂಕರ, ರಾಮಾನುಜರ, ಬಸವಾದಿ ಶರಣರ, ದಾಸವರೇಣ್ಯರ ಬರಹಗಳು, ಮನ ತನುವಿನ ಅನುಭವದತ್ತ ಪಯಣಿಸುವ ಸೂತ್ರಗಳೇ ಹೊರತು ಪಾಂಡಿತ್ಯ ಪ್ರದರ್ಶನಕ್ಕಾಗಿ ಹೇಳಿದವುಗಳಲ್ಲ. ಮನೆಯ ಸಿಮೆಂಟಿನ ಛತ್ತು ಗಟ್ಟಿಗೊಳ್ಳಲು ತಟ್ಟಿ ಬಳಸಿದಂತೆ ! ಛತ್ತು ಗಟ್ಟಿಗೊಂಡ ಮೇಲೆ ತಟ್ಟಿಯನ್ನು ಯಾರೂ ಪೂಜಿಸುವುದಿಲ್ಲ ; ಸಂಗ್ರಹಿಸುವುದಿಲ್ಲ.

ಸಹಜ ಅನುಭವ ಎನ್ನುವುದು ತನುವಿನ ಗರ್ಭದಲ್ಲಿಯೇ ನಿರ್ಮಾಣವಾಗಿದೆ. ಕಣ್ಣು ನೋಡುವುದನ್ನು, ಮೂಗು ಮೂಸಿಸುವುದನ್ನು, ಕಿವಿ ಕೇಳುವುದನ್ನು, ಚರ್ಮ ಸ್ಪರ್ಶಿಸುವುದನ್ನು, ನಾಲಿಗೆ ರುಚಿಸುವುದನ್ನು ತನು ಗರ್ಭದಲ್ಲಿರುವಾಗಲೇ ಕಲಿತುಕೊಂಡು ಬಂದಿದೆ. ತನುವಿನ ಈ ಐದು ಸಹಜ ಜ್ಞಾನೇಂದ್ರಿಯಗಳಿಗೆ ಯಾರ ಪಾಠದ ಅವಶ್ಯಕತೆಯೂ ಇಲ್ಲ.

ವಸ್ತುವಿನ ಸತ್ಯ, ಅಸತ್ಯವನ್ನು ಕಣ್ಣು ತನ್ನ ಗರ್ಭದಲ್ಲಿಯೇ ಅಡಗಿಸಿಕೊಂಡಿದೆ. ಅಸತ್ಯ ನೋಡಿ ನಿರ್ಧರಿಸುವ ಮುನ್ನ ಸಹಜ ಸತ್ಯ ತನ್ನ ಅನುಭವಕ್ಕೆ ತಂದುಕೊಂಡು ನೋಡುವುದೇ ಕಣ್ಣಿನ ಸ್ವಾನುಭವ! ಈ ನೋಟದಿಂದ ತನು ವಿಚಲಿತವಾಗುವುದಿಲ್ಲ. ಬದಲಿಗೆ ವಸ್ತುವಿನ ಸಹಜ ಸತ್ಯದರ್ಶನವಾಗುತ್ತದೆ.

ಉದಾ : ಕಲ್ಲು ನೋಡಿದ ಕಣ್ಣು ಕಲ್ಲೆಂದು ಹೇಳಲು ಬಾಯಿಗೆ ಆದೇಶ ಕೊಡುತ್ತದೆ. ಬಾಯಿ ಕಲ್ಲೆಂದು ಹೇಳುತ್ತದೆ. ಇದು ಕಣ್ಣಿನ ಅನುಭವದ ದೃಶ್ಯ ಸಂದೇಶ ! ಕಲ್ಲನ್ನು ನೋಡಿದ ಕಣ್ಣಿಗೆ, ಕಲ್ಲೆಂದು ನುಡಿದ ಬಾಯಿಗೆ ಮತ್ತು ಕಲ್ಲೆಂದು ಕೇಳಿದ ಕಿವಿಗಳಿಗೆ ಯಾವ ರೋಗವೂ ಉಂಟಾಗುವುದಿಲ್ಲ.

ಅದೇ ತುಂಡು ಕಲ್ಲನ್ನು ತೆಗೆದುಕೊಂಡು ಮೂರು ಭಾಗಗಳನ್ನಾಗಿ ಮಾಡಿ, ಒಂದು ಭಾಗದಲ್ಲಿ ಕ್ರಿಸ್ತನನ್ನು ಕೆತ್ತಿದಾಗ ಕಲ್ಲೆಂದು ಹೇಳಿದ ಕಣ್ಣಿನ ಸಹಜ ಅನುಭವ ಕಣ್ಣಿನಲ್ಲಿಯೇ ಉಳಿಯುತ್ತದೆ. ಕಣ್ಣಿನಲ್ಲಿ ಭ್ರಮೆ ಸೃಷ್ಟಿಯಾಗಿ ಅದು ಕ್ರಿಸ್ತ ಎಂದು ಬಾಯಿಗೆ ಆದೇಶ ಕೊಡುತ್ತದೆ. ಆಗ ನೋಡಿದ ಕಣ್ಣಿನಲ್ಲಿ, ನುಡಿದ ಬಾಯಿಯಲ್ಲಿ, ಕೇಳಿದ ಕಿವಿಗಳಲ್ಲಿ, ಕಲ್ಲು ಎನ್ನುವ ಅನುಭವ ಹಾಗೇ ಉಳಿದು, ದೇವರು ಎನ್ನುವ ಭ್ರಮೆಯ ರೋಗ ಆಯಾ ಇಂದ್ರಿಯಗಳಲ್ಲಿ ಉಂಟಾಗುತ್ತದೆ.

ಇನ್ನೊಂದು ಕಲ್ಲಿನ ತುಂಡಿನಲ್ಲಿ ಕ್ರಿಷ್ಣನನ್ನು, ಮತ್ತೊಂದು ಕಲ್ಲಿನ ತುಂಡಿನಲ್ಲಿ ಮಸೀದೆಯನ್ನು ಕೆತ್ತಿದರೆ, ಕಲ್ಲು ನೋಡಿ ಕಲ್ಲೆಂದು ಹೇಳಿದ ತನುಗಳಲ್ಲಿ, ಕೆತ್ತಿದ ಕಲ್ಲು ನೋಡಿ ಧರ್ಮದ ರೋಗ ಹುಟ್ಟುತ್ತದೆ. ದ್ವೇಷ, ರೋಷ, ಅಸೂಯೆಗಳು ತನುಗಳಲ್ಲಿ ಮನೆ ಮಾಡಿಕೊಳ್ಳುತ್ತವೆ. ಕಲ್ಲು ಎನ್ನುವ ಸಹಜ ಅನುಭವ ತನುಗಳ ಗರ್ಭದಲ್ಲಿ ಹಾಗೇ ಉಳಿಯುತ್ತದೆ.

ತನುವಿನಲ್ಲಿದ್ದ ಸಹಜ ಅನುಭವ ತನುವಿಗೆ ಬಳಕೆಯಾಗಲಿ ಎಂದು ಕ್ರಿಸ್ತ, ಕ್ರಿಷ್ಣ, ಬುದ್ಧ ಮಹಾವೀರ ಶಂಕರ ರಾಮಾನುಜರು ಬಸವಾದಿಶರಣರು, ದಾಸವರೇಣ್ಯರು ಪ್ರಯತ್ನ ಪಟ್ಟು ತನುವಿನಲ್ಲಿಯೇ ಅನುಭವದ ಸುಖವನುಂಡರು. ಅದು ಹೀಗಿದೆ ಎಂದು ಸೂತ್ರ ರೂಪದಲ್ಲಿ ಖುರಾನ್, ಭಗವದ್ಗೀತೆ, ಬೈಬಲ್, ಮೂಲಕ ಬರೆದು ತಿಳಿಸಿದರು. ಆದರೆ ಭ್ರಮೆಯಿಂದಾಗಿ ಒಬ್ಬೊಬ್ಬ ಅನುಭವಿಗೆ ಹಿಂಬಾಲಕರು ಹುಟ್ಟಿಕೊಂಡರು. ಜ್ಞಾನಿಗಳ ಹೆಸರಿನಲ್ಲಿ ಜಾತಿ ಮತ ಪಂಥ ಧರ್ಮದ ಕಿಚ್ಚನ್ನು ತನುವಿಗೆ ಹಚ್ಚಿಕೊಂಡರು. ಅದು ಜಗದ ತುಂಬಾ ವ್ಯಾಪಿಸಿತು. ಪುಸ್ತಕಗಳಿಂದ ತನುವಿಗೆ

ಹಚ್ಚಿಕೊಂಡ ಭ್ರಮೆಯ ಕಿಚ್ಚನ್ನು ಯಾವ ಗ್ರಂಥಗಳೂ ಆರಿಸಲರಿಯವು.

ತನುವಿನ ಮನದ ಭ್ರಮೆಯಿಂದಾಗಿ ತನುವಿಗೆ ಹತ್ತಿದ ಕಿಚ್ಚು, ತನುವಿನ ಸಹಜ ಅನುಭವದಿಂದಲೇ ನಂದುವುದು. ಇದಕ್ಕೆ ಪ್ರತಿ ತನುವಿನಲ್ಲಿದ್ದ ತನುವಿನ ಮನಗಳು, ತನುವಿನ ಸಹಜ ಸ್ವಾನುಭವ ಪಡೆಯಲು ಸಿದ್ಧವಾಗಬೇಕು. ಇಂತಹ ಬಯಕೆಯ ತನುಗಳಿಗೆ ಜ್ಞಾನ ಭಂಡಾರಿ ಬಸವಣ್ಣನವರ ವಚನಗಳು, ಮನಕ್ಕೆ ಸಹಜ ಅನುಭವದ ಅಮೃತದ ಬುಗ್ಗೆ ಸೂಚಿಸುವ ರಹದಾರಿಗಳು!

ತನುವನ್ನು ಆವರಿಸಿದ ಮನ, ತಾನು ನಿರ್ಮಾಣ ಮಾಡಿಕೊಂಡ ಅಜ್ಞಾನವನ್ನು ಮನವೇ ಪರಿಹರಿಸಿಕೊಳ್ಳಬೇಕು. ತನುವಿನಲ್ಲಿಯೇ ತನ್ಮಯವಾದ ಸಹಜ ಜ್ಞಾನದೆಡೆಗೆ ಪಯಣಿಸಿ, ಮನ ಜ್ಞಾನವೇ ತಾನಾಗಬೇಕು.

ಬಸವಣ್ಣನವರ ಒಂದೊಂದು ವಚನವು ತನುವಿನ ಸಹಜ ಜ್ಞಾನವನ್ನು ಬಗೆದು ನೋಡುವಂತಿದೆ. ಆ ಸಹಜಜ್ಞಾನವನ್ನು ಸವಿದು ಆ ಜ್ಞಾನವೇ ತಾನಾಗುವಂತಿದೆ. ತನುವಿನ ಸಹಜಜ್ಞಾನದಲ್ಲಿ ವಿರಮಿಸಿ ಮೈಮರೆಯುವಂತಿದೆ.

ವಚನಗಳ ಸೂತ್ರವನ್ನು ಯಥಾವತ್ತಾಗಿ ಅನುಭವದ ಮೂಲಕ ಅಕ್ಷರಗಳಲ್ಲಿ ಮೂಡಿಸುವ ಶಕ್ತಿ ಬಸವಣ್ಣನವರೇ ನನಗೆ ಕರುಣಿಸಲಿ. ಅವರೇ ಅರಿವಿನ ರೂಪದಲ್ಲಿ ತನುವಿನೊಳಗೆ ಬಂದು ತಿಳಿಯುವಂತೆ ಬರೆದು ಓದುಗರನ್ನು ತೃಪ್ತಿಪಡಿಸಲಿ. ಓದುವ ತನುವು ಸಹಜ ಜ್ಞಾನದತ್ತ ವಾಲಿ ಆ ಜ್ಞಾನದಲ್ಲಿ ವಿರಮಿಸಲಿ ಎಂದು ಆಶಿಸುವೆ. ' ಜ್ಞಾನಭಂಡಾರಿ ' ಗೆ ಪ್ರೇರಣೆ ನೀಡಿದ ಬಸವತಂದೆಯನ್ನು ನೆನೆದು, ಸಹಜ ಜ್ಞಾನವನ್ನು ಕರುಣಿಸಿದ ಡಬ್ಬೇರು ಮಡುವಿನ ಸದ್ಗುರು ವಿದ್ಯಾನಂದ ತಂದೆಯನ್ನು ನೆನೆದು ವಚನಗಳಿಗೆ ವಚನಾನುಭವ ಬರೆಯಲು ಪ್ರಾರಂಭಿಸುವೆ.

''ಜ್ಞಾನ ಭಂಡಾರಿ ಬಸವಣ್ಣ'' ಮೊದಲ ಭಾಗದಲ್ಲಿ ಒಂದು ನೂರಾ ಐವತ್ತು ವಚನಗಳಿಗೆ ಅನುಭಾವ ಮಾಡಲಾಗಿತ್ತು. ಎರಡನೆ ಭಾಗದಲ್ಲಿ ಒಂದುನೂರಾ ಐವತ್ತೊಂದರಿಂದ ನಾಲ್ಕು ನೂರಾ ಐವತ್ತೇಳು ವಚನಗಳಿಗೆ ಅನುಭಾವ ಮಾಡಲಾಗಿತ್ತು. ಮೊದಲ ಭಾಗದಲ್ಲಿ ಆಯಾ ವಚನಗಳಿಗೆ ತಲೆ ಬರಹವನ್ನು ಹಾಗೂ ಅಡಿಯಲ್ಲಿ ಅರಿವಿನ ಪರಿಮಳ ಕೊಡಲಾಗಿತ್ತು. ಇದು ಆಯಾ ವಚನದ ಅನುಭಾವದಿಂದಲೇ ಆಯ್ಕೆ ಮಾಡಿಕೊಳ್ಳಲಾಗಿತ್ತು. ಎರಡನೆ ಭಾಗದಲ್ಲಿ ಪುಟಸಂಖ್ಯೆ ಹೆಚ್ಚಳವಾಗದಿರಲೆಂದು ತಲೆಬರಹ ಕೊಟ್ಟಿರಲಿಲ್ಲ. ಈಗ '' ಜ್ಞಾನ ಭಂಡಾರಿ ಬಸವಣ್ಣ -ಸಮಗ್ರ '' ದಲ್ಲಿ ಒಂಭತ್ತು ನೂರಾ ಐವತ್ತೊಂಬತ್ತು ವಚನಗಳಿಗೆ ಅನುಭಾವ ಮಾಡಲಾಗಿದೆ.

ಡಾ.ಹೆಚ್. ತಿಪ್ಪೇರುದ್ರಸ್ವಾಮಿಗಳ '' ಬಸವೇಶ್ವರ ವಚನದೀಪಿಕೆ '' ಕೃತಿ ಜ್ಞಾನಭಂಡಾರಿ ಬಸವಣ್ಣ ಕೃತಿಗೆ ಪ್ರೇರಣೆ ಮತ್ತು ಸಹಕಾರಿಯಾಗಿದೆ. ಅವರನ್ನು ಆ ಕೃತಿಗೆ ಸಹಕರಿಸಿದ ಸಕಲ ಮಹಾನೀಯರನ್ನು ಈ ಸಂದರ್ಭದಲ್ಲಿ ನೆನೆಯದಿರಲಾರೆ.

ಬಸವರಾಜ ಸ್ವಾಮಿ
ಸಂಪಾದಕ, ಸುದ್ದಿಮೂಲ ಪತ್ರಿಕೆ
ರಾಯಚೂರು

ಒಳಪುಟಗಳಲ್ಲಿಯ ಪ್ರಸಾದ

ಭಕ್ತಸ್ಥಲ

ಪಿಂಡಸ್ಥಲ

1

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲಸಂಗಮದೇವರ ನಿಲವು
ಕನ್ನೆಯ ಸ್ನೇಹದಂತಿದ್ದಿತ್ತು.
ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು:

ಇದು ವಿಚಿತ್ರ; ಆದರೂ ಸತ್ಯ. ಉರಿಯುವ ಬೆಂಕಿಯನ್ನು ನಂದಿಸುವ ಗುಣ ಜಲಕ್ಕಿದೆ. ಆದರೆ ಜಲದಲ್ಲಿ ಕಿಚ್ಚು ಬಚ್ಚಿಟ್ಟುಕೊಂಡಿದೆ. ಬಚ್ಚಿಟ್ಟುಕೊಂಡ ಕಿಚ್ಚು ಜಲವನ್ನು ಸುಡುವುದಿಲ್ಲ; ಉರಿಯುವ ಜ್ವಾಲೆಯನ್ನು ಜಲ ತಣ್ಣಗೆ ಮಾಡದೆ ಬಿಡುವುದಿಲ್ಲ. ಇದು ಜಲದ ಗುಣ; ಜಲದಲ್ಲಿಯೇ ಅಡಗಿದ ಕಿಚ್ಚಿನ ಗುಣ !

ಜಲಜನಕ ಉರಿಯುತ್ತದೆ. ಆಮ್ಲಜನಕ ಉರಿಯಲು ಸಹಕರಿಸುತ್ತದೆ. ಜಲಜನಕದ ಎರಡು ಪ್ರಮಾಣ ಆಮ್ಲಜನಕದ ಒಂದು ಪ್ರಮಾಣ ಸೇರಿ ಜಲವಾಗಿದೆ. ಈ ಜಲದಲ್ಲಿ ಉರಿಯುವ ಬೆಂಕಿಯಿದೆ; ಉರಿಯುವುದಕ್ಕೆ ಸಹಕಾರಿಯಾಗುವ ಗಾಳಿಯು ಇದೆ. ಅಗ್ನಿಯನ್ನು ನಂದಿಸುವ ಜಲವೂ ಇದೆ.

ಈ ಜೀವ ಜಲಬಿಂದು ಗರ್ಭ ಪ್ರವೇಶಿಸಿ ರಕ್ತ ಪಿಂಡ ಮಾಂಸ ಮೂಳೆ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚವಾಗಿ ತನುವೆಂಬ ಹೆಸರು ಪಡೆದು ಗರ್ಭದಿಂದ ಹೊರಬಂದಿದೆ.

ತನುವೆಂಬುದು ಮಾತನಾಡುವ, ನೋಡುವ, ಕೇಳುವ, ಮೂಸಿ (ಘ್ರಾಣಿ)ಸುವ, ಸ್ಪರ್ಶಿಸುವ, ರುಚಿಸುವ ಜಲರಾಶಿ; ಜೀವಜಲರಾಶಿ !

ತನು ಒಂದೇ, ತನುವಿನ ನೋಡುವ ಕಣ್ಣುಗಳೆಲ್ಲಾ ಒಂದೇ, ಕೇಳುವ ಕಿವಿಗಳೆಲ್ಲ ಒಂದೇ, ರುಚಿಸುವ ನಾಲಿಗೆ ಒಂದೇ, ಮೂಸಿಸುವ ಮೂಗು ಒಂದೇ, ಸ್ಪರ್ಶಿಸುವ ಚರ್ಮ ಒಂದೇ, ನುಡಿಯುವ ಶಬ್ದವೂ ಒಂದೇ .

ಜೀವಜಲವೇ ಗಟ್ಟಿಗೊಂಡು ತನುವಾಗಿ, ತನುವಿನಲ್ಲಿ ಕಣ್ಣಾಗಿ ನೋಡುವ ಜ್ಞಾನ ಪಡೆಯಿತು. ನೋಡುವ ನೋಟವೆಲ್ಲ ಕಣ್ಣಿನಲ್ಲಿ ಮೂಡಿ ಆ ಸೌಂದರ್ಯದ ಜ್ಞಾನವನ್ನು ತನುವಿಗೆ ರವಾನಿಸಿತು. ಇಡೀ ತನು ಪುಳಕಿತಗೊಂಡು ಧ್ವನಿಯ ಮೂಲಕ ಸಂತೋಷ ವ್ಯಕ್ತಪಡಿಸಿತು. ಇದೊಂದು ಜಲದ ಪವಾಡ; ಜೀವಜಲದ ಪವಾಡ! ಕಿಚ್ಚು ಗಾಳಿಯಲ್ಲಿ ಬೆರೆತು ತಣ್ಣನೆಯ ಜಲವಾದದ್ದು ಪವಾಡ; ಜಲವೇ ಜೀವ ಜಲವಾಗಿ; ನೋಡಿ, ಬೆಳಗಿ, ಪುಳಕಿತಗೊಂಡು ಮಾತನಾಡಿದ್ದು ಪವಾಡ !

ಉದಕದ ಕಣ್ಣಿನಲ್ಲಿರುವ ಕಿಚ್ಚು ಉರಿದು ಬೆಳಕಾಯಿತು; ಆ ಬೆಳಕೇ ವಸ್ತುವಿನ ಮೇಲೆ

ಚೆಲ್ಲಿ ಆನಂದವನ್ನು ಪಡೆಯಿತು. ಹೀಗೆ ಮತ್ತೆ ಮತ್ತೆ ಪಡೆಯುವ ಬಯಕೆಯೆ ತನುವಿನ ಅಜ್ಞಾನವಾಯಿತು. ಕಣ್ಣಲ್ಲಿ ಹುಟ್ಟಿದ ಬೆಳಕು, ಕಣ್ಣಿನಲ್ಲಿಯೇ ಹುಟ್ಟಿದ ಬಯಕೆಯ ದೆಸೆಯಿಂದ ತನುವನ್ನು ಸುಡುವಂತೆ ಮಾಡಿತು. ತನು ಜಲವನ್ನು ಕುಡಿದರೂ ತನುವಿನ ಕಿಚ್ಚು ನಂದದಂತಾಯಿತು. ಜಲದಲ್ಲಿ ಹುಟ್ಟಿದ ಕಿಚ್ಚು ಜಲವನ್ನೇ ಸುಡುವಂತೆ ಮಾಡಿತು.

ಉದಕದೊಳಗೆ ಹುಟ್ಟಿದ ಕಿಚ್ಚು ಕಿವಿಯಲ್ಲಿ ಬೆಳಕಾಗಿ ಪ್ರತಿ ಶಬ್ದವನ್ನು ಕೇಳಿ ಅದರ ಆನಂದವನ್ನು ತನುವಿನ ಕಣಕಣಕ್ಕೆ ಬೀರಿ ಪುಳಕಿತಗೊಂಡಿತು. ಧ್ವನಿಯ ಮೂಲಕ ಚೆಲ್ಲಿ ತನುಗಳನ್ನೆಲ್ಲ ಪುಳಕಿತಗೊಳಿಸಿತು. ಆದರೆ ಕಿವಿಯಲ್ಲಿ ಬಯಕೆಯ ಪೊರೆಯನೆಳೆದು ಶಬ್ದವನ್ನು ಸ್ವೀಕರಿಸಿ ತನುವನ್ನು ಸ್ಫೋಟಿಸಿತು.

ಉದಕದೊಳಗೆ ಬಚ್ಚಿಟ್ಟುಕೊಂಡ ಕಿಚ್ಚು ಚರ್ಮ ಸೇರಿ ಸ್ಪರ್ಶಜ್ಞಾನದ ಬೆಳಕಾಯಿತು. ಸ್ಪರ್ಶದ ಚುಂಬನದಿಂದ ತನುವನ್ನು ಪುಳಕಿತಗೊಳಿಸಿತು. ತನುವಿನ ಸ್ಪರ್ಶ ಶಕ್ತಿಯು ತನುವಿಗೆ ಆನಂದವನ್ನುಂಟು ಮಾಡುವ ಮಹಾಜ್ಞಾನವಾಯಿತು. ಆ ಶಕ್ತಿಯಲ್ಲಿ ಬಯಕೆಯೆಂಬ ಅಜ್ಞಾನ ಬೆರೆತು ಆ ಬಯಕೆಯೇ ಸ್ಪರ್ಶವನ್ನು ಸ್ವೀಕರಿಸಿ ಇಡೀ ತನುವನ್ನೇ ಸ್ಫೋಟಿಸುವ ಕೆಲಸ ಮಾಡಿತು. ಆನಂದವನ್ನುಂಟು ಮಾಡುವ ಪ್ರತಿ ಸ್ಪರ್ಶವೂ ರಸಾಯನವನ್ನುಂಟುಮಾಡಿ ತನುವನ್ನು ಕತಕತನೆ ಕುದಿಯುವಂತೆ ಜಲದಲ್ಲಿ ಅಡಗಿದ ಕಿಚ್ಚು ಪ್ರೇರೇಪಿಸಿತು. ಇದು ಜಲದ ಮಹಿಮೆ. ಅದರಲ್ಲಿ ಅಡಗಿದ ಕಿಚ್ಚಿನ ಮಹಿಮೆ.

ಜಲದ ತನು, ಜಾತಿ ಮತ ಧರ್ಮಗಳನ್ನು ಸ್ಪರ್ಶದ ರೂಪದಲ್ಲಿ ಸ್ವೀಕರಿಸಿ ಅದರಲ್ಲಡಗಿದ ಬಯಕೆ ತನುವನ್ನು ಸುಡುವಂತೆ ಮಾಡುತ್ತದೆ. ತನುವಿನ ಚರ್ಮ ಒಂದೇ, ಆದರೂ ಆ ಚರ್ಮದಲ್ಲಿಯೇ ಹೆಣ್ಣು ಗಂಡು ಎನ್ನುವ ಜಾತಿ ಕಂದರವನ್ನು ಬಿತ್ತಿ ಚರ್ಮದ ಬಯಕೆ ಚರ್ಮದೊಂದಿಗೆ ಬೆರೆತು ಸುಖಿಸಿ ಸುಡುವಂತೆ ಮಾಡುತ್ತದೆ.

ರಾವಣನ ಚರ್ಮ ಒಂದೇ, ಸೀತಾಮಾತೆಯ ಚರ್ಮವೂ ಒಂದೇ, ಆದರೂ ಚರ್ಮ ಚರ್ಮವನ್ನು ಬಯಸಿ ರಾಮಾಯಣವನ್ನೇ ಸೃಷ್ಟಿ ಮಾಡಿತು. ಈ ಕಿಚ್ಚಿನಲ್ಲಿ ಅಪಾರ ಪ್ರಮಾಣದ ವಾನರ ಸೈನ್ಯ ರಾವಣ ಸೈನ್ಯ ಸುಟ್ಟು ಬೂದಿಯಾಯಿತು. ರಾವಣ ಆತನ ಮಕ್ಕಳು ಸತ್ತು ಹೋದರು. ಬಲಶಾಲಿ ವಾಲಿ ವ್ಯರ್ಥ ಸತ್ತುಹೋದ. ಜಲಭರಿತ ಚರ್ಮದಲ್ಲಿ ಹುಟ್ಟಿದ ಬಯಕೆಯ ಅಜ್ಞಾನವನ್ನು ಬಲಶಾಲಿಗಳಿಗೂ ಅಳಿಸಿಹಾಕಲು ಸಾಧ್ಯವಾಗಲಿಲ್ಲ,

ಉದಕದೊಳಗೆ ಬಚ್ಚಿಟ್ಟುಕೊಂಡ ಬಯಕೆ ಎಂಬ ಕಿಚ್ಚು ಕಣ್ಣಿನೊಳಗೆ ಹರಿದು ನೋಡದಂತೆ ಮಾಡಿತು. ಕಿವಿಯೊಳಗೆ ಹರಿದು ಕೇಳದಂತೆ ಮಾಡಿತು. ಚರ್ಮದೊಳಗೆ ಹರಿದು ಮುಟ್ಟಿ ಸುಖಿಸದಂತೆ ಮಾಡಿತು. ಎಂಬುದನ್ನು ಜ್ಞಾನ ಭಂಡಾರಿ ಬಸವಣ್ಣನವರು, ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ಎಂದು ಒಂದು ಸಾಲಿನಲ್ಲಿ ವೈಜ್ಞಾನಿಕವಾದ ಸೂತ್ರ ಹೇಳಿದ್ದಾರೆ.

ಸಸಿಯೊಳಗಣ ರಸದ ರುಚಿಯಂತಿದ್ದಿತ್ತು:ಸಸಿಗೆ ಹರಿದ ಉದಕ ಸಿಹಿಯಾಯಿತು, ಹುಳಿಯಾಯಿತು. ಖಾರ, ಖಾಕು ಘಾಟಾಯಿತು. ಕಹಿ ಸಿಹಿ ಒಗರು ಎಂಬ ಮುಂತಾದ ಹೆಸರಿನ ರುಚಿಗಳು ಸಸಿಯೊಳಗೆ ನಿರ್ಮಾಣವಾದವು.

ತನುವಿಗೆ ಹರಿದ ಉದಕ ನಾಲಿಗೆಯಲ್ಲಿ ರುಚಿಯನ್ನು ಸವಿದು ಇಡೀ ತನುವನ್ನೇ ಪುಳಕಿತಗೊಳಿಸಿತು. ಅದೇ ನಾಲಿಗೆಯಲ್ಲಿ ರುಚಿಯನ್ನು ಮತ್ತೆ ಮತ್ತೆ ಸವಿಯುವ ಬಯಕೆ

ಹುಟ್ಟಿಸಿ ಉದಕದ ಕಿಚ್ಚು ಸ್ಫೋಟಗೊಂಡು ತನುವನ್ನು ಕುದಿಯುವಂತೆ ಮಾಡಿತು.

ಉದಕಕ್ಕೆ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯಿಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ ಎನ್ನುವ ವಿಜ್ಞಾನಿಯ ಮಾತನ್ನೇ ತನುವಿನಲ್ಲಿ ಸಂಗಮವಾದ ಜಲ ಹುಸಿಮಾಡಿತು. ಜಲಕ್ಕೆ ಬಣ್ಣವಿಲ್ಲ; ಆದರೆ ತನುಗಳಿಗೆ ಹರಿದ ಜಲ ರಕ್ತವಾಗಿ ಕೆಂಪಾಯಿತು ! ಅದರ ಕವಚ ಕೆಂಪು ಕಪ್ಪು ಬಿಳಿ ಕಂದು ಬಣ್ಣಗಳಿಂದ ರಂಜಿಸಿ ಚರ್ಮ ಎಂದು ಹೆಸರು ಪಡೆಯಿತು. ಸಸಿಗಳಿಗೆ ಹರಿದ ಜಲಕ್ಕೂ ಬಣ್ಣ ಬಂದು ರುಚಿ ನಿರ್ಮಾಣ ವಾಯಿತು.

ರುಚಿ ಸಸಿಯದಾದರೂ ತನುವಿನ ನಾಲಿಗೆ ರುಚಿಸಿ ಮತ್ತೊಂದು ತನುವನ್ನೆ ನಿಂದಿಸಿತು ! ಅಡಿಗೆ ರುಚಿಯಾಗಲಿಲ್ಲವೆಂದು ತನು ತನುವನ್ನೇ ಹಿಂಸಿಸಿ ತನುವಿನ ಕಿಚ್ಚು ಸ್ಫೋಟಗೊಂಡು ತನುವನ್ನು ಕೊಲ್ಲುವ ಇಲ್ಲ ನಿಂದಿಸಿ ಆತ್ಮಹತ್ಯೆ ಮಾಡಿಕೊಂಡು ಸಾಯುವ ಕೆಲಸ ಮಾಡಿತು. ಬಯಕೆಯ ಮೋಸ ತನುವಿಗೆ ಅರ್ಥವಾದರೆ ರುಚಿ ತನ್ನದಲ್ಲ ! ಅದು ಸಸಿಯೊಳಗಣ ರಸದ ರುಚಿ! ಬಯಕೆಯಿಲ್ಲದೆ ಸವಿದರೆ ಸವಿದಷ್ಟೂ ಆನಂದ; ಬಯಸಿ ಸವಿದರೆ ಕಿಚ್ಚು; ತಿಳಿದು ಸವಿದರೆ ಸಸಿಯೊಳಗಣ ರಸವೂ ಜಲ! ತನುವೂ ಜಲ, ರುಚಿ ಸವಿಯುವ ನಾಲಿಗೆಯೂ ಜಲ! ಜಲ ಜಲದಲ್ಲಿ ಬೆರೆತು ಜಲಮಯ! ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ. ಇದನ್ನು ಮನ ತನುವಿನ ಜ್ಞಾನದಿಂದ ತಿಳಿಯಿತು; ತನ್ನ ಮಟ್ಟ ತಾನು ಸಮದರ್ಶಿಯಾಗಿ ಕಾಯ್ದುಕೊಂಡಿತು. ತನು ಜ್ಞಾನದ ಭಂಡಾರವೇ ತಾನಾಯಿತು !

ನನೆಯೊಳಗಣ ಪರಿಮಳದಂತಿದ್ದಿತ್ತು:

ಉದಕದ ಮಹಿಮೆ ಅಪಾರ! ಉದಕದಿಂದಲೇ ಜಗತ್ತಿನ ನಿರ್ಮಾಣ. ಗಿಡ, ಮರ, ಬಳ್ಳಿ, ಪಶು, ಪಕ್ಷಿ, ಜಲಚರ, ಉರಗ, ಕೀಟ ಕ್ರಿಮಿಗಳೆಲ್ಲ ಉದಕದಿಂದಲೇ ನಿರ್ಮಾಣ. ಇದೆಲ್ಲವನ್ನು ತಿಳಿದು ಜ್ಞಾನಭಂಡಾರವೇ ತಾನೆಂದು ಹೇಳಿಕೊಳ್ಳುವ ಮನುಷ್ಯನ ನಿರ್ಮಾಣವೂ ಉದಕದಿಂದಲೇ.

ಉದಕ ಪರಿಮಳವೂ ಹೌದು, ಸ್ವಾದವೂ ಹೌದು, ಸೌಂದರ್ಯವೂ ಹೌದು, ನೋಡುವ ದೃಷ್ಟಿ , ಕೇಳುವ ಶಬ್ದ, ಸ್ಪರ್ಶಿಸುವ ಸುಖ, ಎಲ್ಲವನ್ನು ತಿಳಿಯುವ ಜ್ಞಾನವೂ ಉದಕದಿಂದಲೇ; ಉದಕದಲ್ಲಿ ಬಚ್ಚಿಟ್ಟುಕೊಂಡ ಕಿಚ್ಚಿನಿಂದಲೇ!

ಉದಕ ಕಬ್ಬಿನ ಸಸಿಗೆ ಹರಿದು ಸಿಹಿ, ಹುಣಸೆಗೆ ಹರಿದು ಹುಳಿ, ಮೆಣಸಿಗೆ ಹರಿದು ಖಾರ, ಈರುಳ್ಳಿಗೆ ಹರಿದು ಖಾಕು, ಬೆಳ್ಳೊಳ್ಳಿಗೆ ಹರಿದು ಘಾಟಿನ ರುಚಿಯಾದಂತೆ, ಮಲ್ಲಿಗೆ, ಜಾಜಿ, ನಾನಾ ಪುಷ್ಪಗಳಿಗೆ ಹರಿದು ಪರಿಮಳವಾಯಿತು.

ಮಲ್ಲಿಗೆಯ ಮೊಗ್ಗು ಪರಿಮಳವನ್ನು ತನ್ನ ಗರ್ಭದಲ್ಲಿಟ್ಟುಕೊಂಡು ಗೋಚರಿಸುತ್ತದೆ. ಮಲ್ಲಿಗೆಯ ಸಸಿಗೆ ಪರಿಮಳವಿಲ್ಲ, ಅದರ ಮೊಗ್ಗಿಗೂ ಪರಿಮಳವಿಲ್ಲ. ಸಸಿ ಮತ್ತು ಮೊಗ್ಗು ಸೀಳಿ ಮೂಸಿಸಿದರೂ ಪರಿಮಳ ಗೋಚರಿಸುವುದಿಲ್ಲ.

ಉದಕವನ್ನೇ ಉಂಡು ಸಸಿಯಾಯಿತು; ಮೊಗ್ಗಾಗಿ ಅರಳುವುದರ ಮೂಲಕ ಪರಿಮಳವನ್ನು ಬೀರಿ ಮಲ್ಲಿಗೆಯಾಯಿತು.

ಉದಕ ತಾನೇ ಸಸಿಯಾಯಿತು; ತಾನೇ ಮೊಗ್ಗಾಯಿತು; ತಾನೇ ಅರಳಿ ಪರಿಮಳ ಬೀರಿತು. ತಾನಾಗುವ ಕಾಲಕ್ಕೆ ಆಗುವುದಲ್ಲದೆ ಸಸಿ ಮಾಡಲು, ಮೊಗ್ಗು ಮಾಡಲು, ಅದನ್ನು ಅರಳಿಸಲು ಬರುವುದಿಲ್ಲ.

ಉದಕ ತುಂಬಿದ ಕಬ್ಬು ವಿಕೃತಗೊಂಡು ಎಂದೂ ಕಹಿಯಾಗುವುದಿಲ್ಲ. ಉದಕ ತುಂಬಿದ ಮಲ್ಲಿಗೆ ಮೊಗ್ಗಾಗಿ ಅರಳಿ ವಿಕೃತಗೊಂಡು ಎಂದೂ ದುರ್ಗಂಧ ಬೀರುವುದಿಲ್ಲ. ಅಂತೆಯೇ ಉದಕ ತುಂಬಿದ ತನುವಿನಲ್ಲಿ ಬಳಕೆ ಮಾಡಿಕೊಳ್ಳುವ ಸಹಜತೆಯ ಜ್ಞಾನದ ಪರಿಮಳವಿದೆ. ಹಾಗೆಯೇ ಇಡೀ ತನುವನ್ನು ದುರ್ಬಳಕೆ ಮಾಡಿಕೊಳ್ಳುವ, ಬಯಸಿದತ್ತ ವಾಲುವ ಮನವೂ ಇದೆ. ಮನುಷ್ಯನನ್ನು ಬಿಟ್ಟು ಜಲದಿಂದ ರಚನೆಯಾದ ಎಲ್ಲವೂ ಸಹಜತೆಯಲ್ಲಿವೆ. ಮನುಷ್ಯ ಮಾತ್ರ ಒಮ್ಮೆ ಸಹಜ ಮತ್ತೊಮ್ಮೆ ಅಸಹಜನೂ ಆಗಿ ವರ್ತಿಸುತ್ತಾನೆ.

ತನುವಿನಲ್ಲಿ ಅರಿವೂ ಇದೆ. ಮನವೂ ಇದೆ. ಮನ ತನುವಿನ ಅರಿವನ್ನು ಬಳಕೆ ಮಾಡಿಕೊಂಡರೆ ಅರಿವಿನ ಸಹಜ ತನು. ಮನ ಅರಿವು ಬಳಕೆ ಮಾಡಿಕೊಳ್ಳದೆ ನೇರವಾಗಿ ವಸ್ತುಗಳನ್ನು ನೋಡಿದರೆ ಆ ವಸ್ತುಗಳೇ ಪ್ರಧಾನವಾಗಿ ಅಸಹಜ ತನುವಾಗುತ್ತದೆ. ವಸ್ತುಗಳ ಮೇಲಿನ ಬಯಕೆ ಅತಿಯಾಗಿ ಬಯಕೆಯ ಕಿಚ್ಚು ಸ್ಫೋಟಿಸಿ ರಕ್ಕಸ ತನುವಾಗುತ್ತದೆ.

ಕೂಡಲಸಂಗಮದೇವರ ನಿಲುವು ಕನ್ನೆಯ ಸ್ನೇಹದಂತಿದ್ದಿತ್ತು :

ಬಸವಣ್ಣನವರು ಮಹಾಜ್ಞಾನಿಗಳು. ತನುವಿನ ಜ್ಞಾನವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಂಡವರು. ತನುವಿನ ಜ್ಞಾನಭಂಡಾರವನ್ನು ಬಳಕೆ ಮಾಡಿಕೊಳ್ಳುವ ವಿಧಾನವನ್ನು ಸಕಲ ಶರಣರಿಗೆ ಸರಳವಾಗಿ ಹೇಳಿಕೊಟ್ಟವರು. ಹಾಗೆಯೇ ಇಡೀ ಜಗತ್ತಿನ ತನುಗಳೆಲ್ಲ ಜ್ಞಾನ ಬಳಕೆ ಮಾಡಿಕೊಳ್ಳಲು ಸೂತ್ರ ರೂಪದ ವಚನಗಳನ್ನು ರಚಿಸಿದರು.

ಈ ವಚನ ಐದು ಸಾಲಿನದಾದರೂ ತನುವಿನ ಜ್ಞಾನದ ಐದು ಮಹಾದ್ವಾರ ಬಾಗಿಲುಗಳನ್ನೇ ತಟ್ಟಿದೆ. ಮನ ತನುವಿನ ಒಳ ಪ್ರವೇಶ ಮಾಡಿ ಜ್ಞಾನದ ಸರ್ವ ಸುಖವನುಂಡು ಆ ಜ್ಞಾನಿಯೇ ತಾನಾಗುವ ಶಕ್ತಿ ಈ ವಚನದಲ್ಲಿ ಅಡಗಿದೆ. ನಿಧಾನವಾಗಿ ಓದಿ ಅರಿವಿನ ತನುವಿನೊಳಗೆ ಮನ ಪ್ರವೇಶ ಮಾಡಬೇಕು ಅಷ್ಟೆ.

ವಚನದ ಕೊನೆಯ ಸಾಲಿನಲ್ಲಿ ಕೂಡಲಸಂಗಮದೇವರ ನಿಲುವು ಕನ್ನೆಯ ಸ್ನೇಹದಂತಿದ್ದಿತ್ತು, ಎಂದು ಬಸವಣ್ಣನವರು ಎರಡು ಪಾತ್ರಗಳನ್ನು ಹೆಣೆದಿದ್ದಾರೆ.

ತನು ಒಂದೇ ಆದರೂ ತನುವಿನಲ್ಲಿ ಅರಿವು ಮತ್ತು ಮನ ಎನ್ನುವ ಎರಡು ಪಾತ್ರಗಳಿವೆ. ಅರಿವು ತನುವಿನ ಸಹಜ ಗುಣ. ಅದು ಕಬ್ಬಿನಂತೆ ಸದಾ ಸಿಹಿ; ಹೂವಿನಂತೆ ಸದಾ ಪರಿಮಳ! ಅರಿವು ಎಂದೂ ವಿಕೃತಗೊಳ್ಳುವುದಿಲ್ಲ.

ಮನ ಅರಿವಿನ ನೆರಳು. ತನುವನ್ನು ಆವರಿಸಿಕೊಂಡಿದೆ. ಅರಿವಿನ ಪಾತ್ರ ಹಾಕಿ ತನುವನ್ನು ಸದಾ ದುರ್ಬಳಕೆ ಮಾಡಿಕೊಳ್ಳುತ್ತದೆ.

ಬಸವಣ್ಣನವರು ತನುವಿನ ಅರಿವಿಗೆ ಕೂಡಲಸಂಗಮದೇವರು ಎಂದು ನಾಮಕರಣ ಮಾಡಿದ್ದಾರೆ. ಮನಕ್ಕೆ ಕನ್ಯೆ ಎಂದು ನಾಮಕರಣ ಮಾಡಿದ್ದಾರೆ.

ಅರಿವು ತನುವಿನ ಕಣಕಣದಲ್ಲಿ ಕೂಡಿ ಸಂಗಮವಾಗಿದೆ. ಕೂಡಲಸಂಗಮ ದೇವರು ಎಂದು ಅಣ್ಣನವರಿಂದ ಕರೆಸಿಕೊಂಡಿದೆ. ತನುವಿಲ್ಲದೆ ಅರಿವಿಲ್ಲ; ಅರಿವಿಲ್ಲದ ತನುಗಳೇ ಇಲ್ಲ.

ತನುವಿನ ಮನ ಕನ್ಯೆ ಇರುವಾಗಲೇ ಅಂದರೆ ಎಳೆತನದಲ್ಲಿಯೇ ತನುವಿನ ಅರಿವೆಂಬ ದೇವರ ಸ್ನೇಹ ಮಾಡಬೇಕು. ಅಂಗದ ಅರಿವೆಂಬ ಲಿಂಗಕ್ಕೆ ಮನ ಶರಣು ಹೋಗಿ ಸತಿಯಾಗಬೇಕು. ಶರಣ ಸತಿ ಲಿಂಗ ಪತಿಯಾಗಿ ಕೂಡಿದ ಮಹಾ ಜ್ಞಾನ ಭಂಡಾರದ ಅಂಗವೇ ಕೂಡಲಸಂಗಮ! ತನುವಿನಲ್ಲಿ ಅರಿವು ಮತ್ತು ಮನ ಸಂಗಮವಾಗಿದೆ. ಹರಿಯುವ ನದಿ

ಸಾಗರವನ್ನು ಹುಡುಕಿ ಆ ಸಾಗರದಲ್ಲಿ ಸಂಗಮವಾಗಿ ನದಿ ಎಂಬ ಹೆಸರು ಕಳೆದುಕೊಂಡು ಸಾಗರವಾದಂತೆ! ಹಾಗೆಯೇ ಹರಿದಾಡುವ ಮನ ಅತ್ತ ಇತ್ತ ಹರಿದಾಡದೆ, ತನುವಿನ ಅರಿವಿನತ್ತ ಹರಿದು, ಆ ಅರಿವಿನಲ್ಲಿ ಸಂಗಮವಾಗಿ; ಆ ಅರಿವೇ ತಾನಾಗಬೇಕು ಎನ್ನುವುದೇ ಬಸವಣ್ಣನವರ. ಆಶಯ.

ಪಿಂಡಜ್ಞಾನಸ್ಥಲ

2

ಕಾಳಿಯ ಕಂಕಾಳದಿಂದ ಮುನ್ನ
ತ್ರಿಪುರ ಸಂಹಾರದಿಂದ ಮುನ್ನ
ಹರಿವಿರಿಂಚಿಗಳಿಂದ ಮುನ್ನ
ಉಮೆಯ ಕಲ್ಯಾಣದಿಂದ ಮುನ್ನ
ಮುನ್ನ ಮುನ್ನ ಮುನ್ನ
ಅಂದಿಂಗೆಳೆಯ ನೀನು: ಹಳೆಯ ನಾನು
ಮಹಾದಾನಿ ಕೂಡಲಸಂಗಮದೇವಾ.

ವಚನ ಚಿಕ್ಕದಾದರೂ ಮೊದಲ ನಾಲ್ಕು ಸಾಲುಗಳಲ್ಲಿ ಸಾಲಿಗೊಂದರಂತೆ ನಾಲ್ಕು ಕತೆಗಳಿವೆ.ಇವು ಕಾಲಾನು ಕಾಲದಿಂದ ಬಂದ ಪೌರಾಣಿಕ ಕತೆಗಳು. ವಿಷ್ಣು ವಾಮನ ಬ್ರಹ್ಮರನ್ನು ಕುರಿತ ಕತೆ ಮೊದಲ ಸಾಲಿನಲ್ಲಿದ್ದರೆ, ರಕ್ಕಸ ಸಂಹಾರದ ಕತೆ ಎರಡನೆಯ ಸಾಲಿನಲ್ಲಿದೆ. ಬ್ರಹ್ಮ,ವಿಷ್ಣು,ಗಿರಿಜಾಕಲ್ಯಾಣದ ಕತೆಗಳು ಮೂರು ಮತ್ತು ನಾಲ್ಕನೇ ಸಾಲಿನಲ್ಲಿವೆ.

ಕತೆ ಓದಿದರೆ ಮನದಲ್ಲಿ ಸಂಗ್ರಹವಾಗುತ್ತದೆ. ಕತೆ ಕೇಳಿದರೂ ಮನದಲ್ಲಿ ಸಂಗ್ರಹವಾಗುತ್ತದೆ. ಕತೆಯ ವೀರಾವೇಷದ ಪಾತ್ರಗಳು ಸುಳಿದು ಒಂದು ಪಾತ್ರವನ್ನು ಹೊಗಳಿ ಮತ್ತೊಂದು ಪಾತ್ರವನ್ನು ತೆಗಳುತ್ತೇವೆ. ಒಟ್ಟಾರೆ ಕತೆ ಕತೆಯೇ. ಹೇಳುವುದಕ್ಕೆ, ಕೇಳುವುದಕ್ಕೆ ಪಾಂಡಿತ್ಯಕ್ಕೆ ಬಳಕೆಯಾಗುತ್ತದೆ. ಆ ಪಾತ್ರಧಾರಿಗಳ ಕಾಲ ನಿರ್ಣಯಕ್ಕೆ ಬಳಕೆಯಾಗುತ್ತದೆ. ಆ ಹೆಸರಿನ ದೇವಾಲಯ ಕಟ್ಟಲು ಬಳಕೆಯಾಗಿ, ಪುರಾಣ ಕತೆಗಳನ್ನು ರಚಿಸಲು ಕಥಾವಸ್ತು ಬಳಕೆಯಾಗುತ್ತದೆ.

ಕತೆ ಪುರಾಣಗಳನ್ನು ರಚಿಸಿದ್ದು ತನು. ಆ ತನುವಿನ ಮನದಿಂದಲೇ ಅವುಗಳಿಗೆ ದೇವಾಲಯಗಳನ್ನು ನಿರ್ಮಿಸಿ ರಥ ಉತ್ಸವ ಮಾಡಲಾಗುತ್ತದೆ. ಮನ ಆ ಪೀಠ ಪರಂಪರೆಗಳನ್ನು ಹಾಗೆಯೇ ಮುಂದುವರೆಸಿಕೊಂಡು ಬಂದು ಅವುಗಳಿಗೆ ತನುವಿನೊಂದಿಗೆ ವಿಧೇಯಕವಾಗಿದೆ. ನಾಲ್ಕು ಕತೆಗಳನ್ನು ರಚಿಸಿದ್ದು ಮನವೇ. ಅವುಗಳನ್ನು ಇದುವರೆಗೆ ಜೀವಂತವಿಟ್ಟಿದ್ದು ಮನವೇ. ಅವುಗಳಿಗೆ ದೇವಸ್ಥಾನ ನಿರ್ಮಿಸಿದ್ದು ಮನವೇ. ದೇವರಿಗೆ ಮದುವೆ ಮಾಡಿ ಚತ್ರಿ ಚಾಮರ ಬೀಸಿ ಶಯನ ಗೃಹಕ್ಕೆ ಕಳುಹಿಸಿದ್ದು ಮನವೇ. ಇವುಗಳನ್ನು ನೆನಪಿನಲ್ಲಿಟ್ಟುಕೊಂಡು ಸದಾ ಹೊಸತನ್ನು ನಿರ್ಮಿಸುವುದು ಮನವೇ.

ಬ್ರಹ್ಮ ವಿಷ್ಣು ದೇವಾನು ದೇವತೆಗಳು ಮೊದಲೊ? ಅವರು ಸಂಹರಿಸಿದ ರಕ್ಕಸರು

ಮೊದಲೊ? ಕತೆ ಪುರಾಣಗಳು ಮೊದಲೊ? ಅವುಗಳ ಹೆಸರಿನಲ್ಲಿ ಕಟ್ಟಿದ ಆಲಯಗಳು ಮೊದಲೊ? ಅಥವಾ ಇವೆಲ್ಲವುಗಳನ್ನು ಸೃಷ್ಟಿಮಾಡಿ ಕತೆ ಪುರಾಣ ಬರೆದು ಇಂದಿಗೂ ವೈಭವೀಕರಿಸಿ ಹೇಳುವ ತನುವಿನ ಮನ ಮೊದಲೊ ?

ದೇವತೆಗಳ ರಕ್ಕಸರ ಕತೆ ಪುರಾಣ ಬರೆದು, ಆಲಯಗಳನ್ನು ನಿರ್ಮಿಸಿ ಅಂದಿನಿಂದ ಇಂದಿನವರೆಗೂ ಜೀವಂತದಿಂದ ಇಟ್ಟು ರಂಜನೀಯವಾಗಿ ಹೇಳುವ ಮನ ಹಳೆಯ ದಾಗಲಿಲ್ಲವೇ ? ಆ ಮನಕ್ಕೆ ದೇವಾನು ದೇವತೆಗಳು ರಕ್ಕಸರು ಎಳೆಯರಾಗಲಿಲ್ಲವೆ ?

ಬಸವಣ್ಣನವರು ಮಹಾಜ್ಞಾನಿಗಳು. ಮನದ ಅಜ್ಞಾನವನ್ನು ಮನಕ್ಕೆ ಪರಿಚಯಿಸುವ ನಿಪುಣರು. ಹಾಗೆಯೇ ತನುವಿನ ಜ್ಞಾನವನ್ನು ಕೂಡಲೆ ಮನಕ್ಕೆ ಪರಿಚಯಿಸಿ ಬ್ರಹ್ಮಜ್ಞಾನಿಯನ್ನಾಗಿಸುವ ಪರಿಣಿತರು!

ದೇವರು ದೊಡ್ಡವರೋ ದೇವರನ್ನು ರಕ್ಕಸರನ್ನು ಸೃಷ್ಟಿಸಿದ ಮನ ದೊಡ್ಡದೊ ಎಂದು ಅಣ್ಣ ಮನಕ್ಕೆ ಪ್ರಶ್ನಿಸುತ್ತಾರೆ. ದೇವರನ್ನು ರಕ್ಕಸರನ್ನು ಎಳೆಯರನ್ನಾಗಿಸಿ ಮನವನ್ನೇ ಹಳೆಯನನ್ನಾಗಿಸಿ ಮೈದಡುವುತ್ತಾರೆ.

ಮುಂದುವರೆದು ಮಾತನಾಡುತ್ತಾ ಎಲೆ ಮನವೇ ಸರಿಯಾಗಿ ಕೇಳು; ನೀನು ದೊಡ್ಡವನಲ್ಲ; ನಿನ್ನಿಂದ ಸೃಷ್ಟಿಸಲ್ಪಟ್ಟ ದೇವರೂ ದೊಡ್ಡವನಲ್ಲ ; ನೀವಿಬ್ಬರೂ ಮಹಾದಾನಿ ಕೂಡಲ ಸಂಗಮ ದೇವರೆಂಬ ಅರಿವಿನಿಂದ ಸೃಷ್ಟಿಯಾದ ಕುನ್ನಿಗಳು. ಆ ಅರಿವಿನ ಬೆಳಕಿನಿಂದ ಹುಟ್ಟಿದ ಮನ ನೀನು. ಅರಿವಿನ ದಾನದಿಂದ ಹುಟ್ಟಿದ ನೀನು ದೇವರನ್ನು ರಕ್ಕಸರನ್ನು ಸೃಷ್ಟಿಸಿದೆ. ಅವರ ಪುರಾಣವನ್ನು ಬರೆದೆ, ಅವರನ್ನು ಹಾಡಿ ಹೊಗಳಿ ಕೊಂಡಾಡಿದೆ. ದೇವರನ್ನು ಸೃಷ್ಟಿಸಿದ್ದು ನೀನಲ್ಲವೇ ? ಅವರು ಎಳೆಯರು ; ನೀನು ಹಳಬನಲ್ಲವೇ? ಎಂದು ಸುಳುಹು ನೀಡಿದಾಗ ಮನ ಹೌದೆಂದು ತಲೆಯಾಡಿಸುತ್ತದೆ. ನೀನು ದೊಡ್ಡವನಲ್ಲ, ನಿನ್ನಿಂದ ಸೃಷ್ಟಿಯಾದ ದೇವರೂ ದೊಡ್ಡವರಲ್ಲ. ನೀನು, ನಿನ್ನ ದೇವರು ಸೃಷ್ಟಿಯಾಗಿದ್ದು ನಿನ್ನ ಅರಿವೆಂಬ ಸಂಗಯ್ಯನ ದಾನದಿಂದಲೇ ಎಂದು ಹೇಳಿದ ಕೂಡಲೇ ಮನ ಅರಿವೆಂಬ ಕೂಡಲಸಂಗಮದೇವರಲ್ಲಿ ಐಕ್ಯವಾಗಿ ಆ ಅರಿವೇ ತಾನಾಗುತ್ತದೆ. ಎಳೆಯ ಹಳೆಯರಿಬ್ಬರೂ ಅಳಿದು ತನುವಿನಲ್ಲಿ ಸಂಗಮವಾಗುತ್ತಾರೆ. ತನುವಿನ ಅರಿವಿನ ಅಂಗಳಕ್ಕೆ ಹರಿದ ಮನ ಅಲ್ಲಿಯೇ ಸಂಗಮವಾಗಿ ಅರಿವೇ ತಾನಾಗುತ್ತದೆ.

3

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ, ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ , ನೀನೆನ್ನ ಭವವ ಕೊಂದೆಹೆನೆಂದು

ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ.
ಕೂಡಲಸಂಗಮದೇವಾ.

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ: ಆದಿ ಆಧಾರವಿಲ್ಲದಂದು ಹಮ್ಮು ಬಿಮ್ಮು ಇಲ್ಲದಂದು ಸುರಾಳ ನಿರಾಳವಿಲ್ಲದಂದು ಶೂನ್ಯ ನಿಶ್ಶೂನ್ಯವಿಲ್ಲದಂದು ಸಚರಾಚರವೆಲ್ಲಾ ರಚನೆಗೆ ಬಾರದಂದು ಗುಹೇಶ್ವರ ಶರಣನುದಯಿಸಿದನಂದು ಎಂದು ಅಲ್ಲಮಪ್ರಭುಗಳು ಹೇಳುತ್ತಾರೆ.

ನೀನು ನಿರಾಕಾರವಾಗಿದ್ದಾಗ ಮನವೆಂಬ ನಾನು ಜ್ಞಾನವೆಂಬ ವಾಹನವಾಗಿ ನಿರಾಕಾರಕ್ಕೆ ಬಳಕೆಯಾದೆ. ನನಗೂ ನಿನಗೂ ಅವಿನಾಭಾವ ಸಂಬಂಧ. ಅಯ್ಯಾ ನೀನು ನಟರಾಜನಾಗಿ ನಾಟ್ಯಕ್ಕೆ ನಿಂದಲ್ಲಿ ಕುಣಿಯುವುದಕ್ಕೆ ನಾನು ನಿನಗೆ ಚೈತನ್ಯವಾಗಿ ಬಳಕೆಯಾದೆ. ನಿನಗೂ ನನಗೂ ಅವಿನಾಭಾವ ಸಂಬಂಧ.

ಅಯ್ಯಾ ನೀನು ಆಕಾರವಾಗಿ ತನುರೂಪ ತಾಳಿದಲ್ಲಿ ಪಶುವೆಂಬ ವೃಷಭನಾಗಿ ನಿನಗೆ ವಾಹನವಾಗಿ ಬಳಕೆಯಾದೆ. ನಿನಗೂ ನನಗೂ ಅವಿನಾಭಾವ ಸಂಬಂಧ.

ಅಯ್ಯಾ ಪಶು ನಾನಾಗಿ ಪಶುಪತಿ ನೀನಾಗಿ ಎನ್ನ ಭವವ ಕೊಲ್ಲಬೇಕೆಂದು ತನು ರೂಪದ ಅರಿವಿನ ಲಾಂಛನ ಧರಿಸಿ ಬಂದಾಗ ಕೂಡಲೇ ನಾನು ಭಕ್ತನೆಂಬ ವಾಹನವಾಗಿ ನಿನ್ನ ಸೇವೆ ಮಾಡಿ, ನಿನ್ನಲ್ಲಿ ಕೂಡಿ ಸಂಗಮವಾದೆ ತಂದೆ. ನಿನಗೂ ನನಗೂ ಅವಿನಾಭಾವ ಸಂಬಂಧ. ನಿನ್ನ ಬಿಟ್ಟು ನಾನಿಲ್ಲ ; ನನ್ನ ಬಿಟ್ಟು ನೀನಿಲ್ಲ. ಅರಿವೆಂಬ ಸಂಗನ ನಾಮ ಪಡೆದ ನಿನ್ನನ್ನು ತಿಳಿದು, ನಿನಗೆ ಭಕ್ತಿ ಮಾಡಿ, ನಿನಗೆ ವಾಹನವಾಗಿ, ನಿನ್ನಲ್ಲೆ ಸಂಗಮವಾಗುವ ಬಯಕೆ ಕೊಡು ನನ್ನಪ್ಪ.

4

ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ.
ಪ್ರಥಮ ಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು,
ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ
ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ.
ಮೂರನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ.
ನಾಲ್ಕನೆಯ ಭವಾಂತರದಲ್ಲಿ

ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಮನಃ ಪ್ರೇರಕನಾಗಿರಿಸಿಕೊಂಡಿರ್ದಿರಯ್ಯಾ.
ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ಸರ್ವಕಾಲ ಸಂಹಾರವ ಮಾಡಲೆಂದಿರಿಸಿಕೊಂಡಿರ್ದಿರಯ್ಯಾ.
ಆರನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮಗೇರಲು ವಾಹನವಾಗಲೆಂದಿರಿಸಿ ಕೊಂಡಿರ್ದಿರಯ್ಯಾ.
ಏಳನೆ ಭವಾಂತರದಲ್ಲಿ
ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗ ಲೆಂದಿರಿಸಿಕೊಂಡಿರ್ದಿರಯ್ಯಾ.
ಇದು ಕಾರಣ ಕೂಡಲ ಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.

ಭಾರತ ಪುಣ್ಯ ಭೂಮಿ. ಜ್ಞಾನ ಪ್ರಧಾನವಾದ ರಾಷ್ಟ್ರ. ತನುವಿನ ಜ್ಞಾನವನ್ನು ತನುವು ಸರಳವಾಗಿ ಪಡೆದು ಶಾಶ್ವತ ಸುಖ ಅನುಭವಿಸುವುದಕ್ಕಾಗಿ ಅನೇಕ ಸತ್ಪುರುಷರು, ಸಂತ ಮಹಾಂತರು , ಶರಣರು, ದಾಸವರೇಣ್ಯರು, ತತ್ವ ಪದಕಾರರು ಸರಳವಾಗಿ ಪಾಠ ಮಾಡಿದ್ದಾರೆ. ಸರಳ ಸೂತ್ರಗಳನ್ನು ರಚಿಸಿದ್ದಾರೆ.

ಜ್ಞಾನಿಗಳು ವೈಜ್ಞಾನಿಕವಾಗಿ ತನುವಿನ ತತ್ವ ತನುವೇ ಪಡೆಯಲು ರಚಿಸಿದ ಪುಸ್ತಕಗಳೆಲ್ಲ ಈ ದೇಶದಲ್ಲಿ ಧರ್ಮ ಗ್ರಂಥಗಳಾದವು. ಸರಳವಾಗಿ ತಿಳಿಯಲು ಕತೆ ಮಾಡಿ ಹೇಳಿದ ಪಾತ್ರಗಳೆಲ್ಲ ಪುರಾಣಗಳಾದವು . ದೇವಾನು ದೇವತೆಗಳಾದವು. ಪೂಜಿಸಿ ಆಲಯಗಳನ್ನು ನಿರ್ಮಿಸಿ ಆರಾಧಿಸುವ ರೋಗ ದೇಶದ ತುಂಬಾ ವ್ಯಾಪಿಸಿತು.

ಒಬ್ಬ ರಾಜನಿಂದ ಪೂಜೆಗೊಳಗಾದ ದೇವಾಲಯ ಮತ್ತೊಬ್ಬ ರಾಜನಿಂದ ಅವಸಾನಕ್ಕೊಳಗಾಯಿತು. ಕಟ್ಟಿದಾಗ ದೇವರು ಆಶೀರ್ವಾದ ಮಾಡಲಿಲ್ಲ ; ಅವಸಾನಕ್ಕೊಳಗಾದಾಗ ಶಾಪ ನೀಡಲಿಲ್ಲ. ಇವೆರಡೂ ಇತಿಹಾಸ ಸೇರಿದವು. ನೋಡಿದ ಓದಿದ ಕಣ್ಣುಗಳು ಹೌದು ಅಲ್ಲವೆಂದು ಹೇಳಿದವೇ ಹೊರತು ನಿಜ ತಿಳಿಯಲಿಲ್ಲ.

ನಿಜ ಎನ್ನುವುದು ತನುವಿನಲ್ಲಿಯೇ ಅಡಗಿದೆ. ಕಾಲುಗಳೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶ. ದೇಹವೆಂಬುದು ಮಾತನಾಡುವ ದೇವಾಲಯ. ಸಕಲ ಸೌಂದರ್ಯವನ್ನು ನೋಡುವ ದೇವಾಲಯ. ಶಬ್ದವನ್ನು ನಿಶ್ಯಬ್ದ ಮಾಡಿ ಅರಿವಿನಿಂದ ಕೇಳಿ ಪ್ರಸಾದದಂತೆ ಸ್ವೀಕರಿಸುವ ದೇವಾಲಯ. ಸಕಲ ವಾಸನೆಯನ್ನು ಅರಿವಿನಿಂದ ಘ್ರಾಣಿಸಿ ಅರಿವಿನ ಪರಿಮಳದಂತೆ ಸ್ವೀಕರಿಸುವ ದೇವಾಲಯ. ರುಚಿಸಿ, ಸ್ಪರ್ಶಿಸಿ, ಆನಂದದಿಂದ ಕುಣಿ ಕುಣಿದಾಡುವ ದೇವಾಲಯ. ನುಡಿದ ನುಡಿಯನ್ನೆ ಮುತ್ತಿನಂತೆ ಬೆಳಗಿ ತನುಗಳನ್ನೆಲ್ಲ ಪುಳಕಿತಗೊಳಿಸುವ ಸುಂದರ ದೇವಾಲಯ.

ದೇಹವೆಂಬ ದೇವಾಲಯ ಶಿವನೆಂಬ ಅರಿವಿನ ಆಲಯವೂ ಹೌದು. ಆ ಶಿವನಿಗೆ ಶಿಲಾದ, ಸ್ಕಂದ, ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭಾರೂಢ ಎಂಬ

ಹೆಸರುಗಳೂ ಇವೆ. ಜಗದ ಸಕಲ ತನುಗಳೂ ಶಿವಮಯ. ತನುಗಳಿಗೆ ಅರಿವೆಂಬ ಶಿವನ ಪರಿಚಯವಾಗಲೆಂದು ಪುರಾಣಿಕರು ಕಾಲಘಟ್ಟದಲ್ಲಿ ಆಯಾ ಹೆಸರಲ್ಲಿ ಪುರಾಣ ಕತೆಗಳನ್ನು ರಚಿಸಿದರು. ಓದುವ ತನುಗಳಿಗೆ, ಇಲ್ಲದ ಪುರಾಣಗಳೇ ನಿಜವಾಗಿ; ತನುವಿನಲ್ಲಿದ್ದ ಅರಿವೆಂಬ ಶಿವನೇ ದೂರವಾದ.

ಬಸವಣ್ಣನವರು ಮಹಾಜ್ಞಾನಿಗಳು. ತನುವಿನಲ್ಲಿ ಶಿವಮಯವಾದ ಅರಿವನ್ನು ತನುವಿನ ಮನದಿಂದಲೇ ಗಮನಿಸಿದರು. ಶಿವನೆಂಬ ಅರಿವಿಗೆ ಮನವನ್ನೆ(ಭೃತ್ಯ) ಸೇವಕನನ್ನಾಗಿ ಮಾಡಿ, ತನುವಿನ ಅರಿವನ್ನು ಅಪ್ಪಿಕೊಂಡು ಅರಿವಿನಿಂದ ನೋಡಿದರು. ನೋಡಿದ್ದೆಲ್ಲ ಶಿವಮಯವಾಯಿತು. ಕೇಳಿದ ಶಬ್ದವೆಲ್ಲ ಶಿವಮಯವಾಯಿತು. ರುಚಿಸಿದ ಪದಾರ್ಥ, ವಾಸಿಸಿದ ವಾಸನೆ, ಸ್ಪರ್ಶಿಸಿದ ವಸ್ತುಗಳೆಲ್ಲ ಶಿವಮಯವಾಯಿತು.

ಶಿಲಾದನೆಂಬ ಕುರುಡು ಋಷಿಮುನಿಯ ಗರ್ಭದಲ್ಲಿ ಆತನ ತಪದ ಬಯಕೆಯಂತೆ ಶಿವ ಹುಟ್ಟಿದ. ಶಿಲಾದ ಮಗನಿಗೆ ನಂದಿ ಎಂದು ಹೆಸರು ಇಟ್ಟ. ಇದು ಪುರಾಣ. ಹೀಗೆ ಸ್ಕಂದ, ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭಾರೂಢ ಎಂಬ ಐದು ಹೆಸರಿನ ಪುರಾಣ ಕತೆಗಳೂ ಇವೆ. ಇವುಗಳನ್ನು ಓದಿ ಅರಿವಿನಿಂದ ತಿಳಿಯಬೇಕು ಅಷ್ಟೆ !

ಕಣ್ಣಿದ್ದೂ ಶಿಲಾದನೆಂಬ ಕುರುಡ ಋಷಿ ಮುನಿಗಳ ತನುಗಳಂತೆ ಜಗತ್ತಿನಾದ್ಯಂತ ಕುರುಡು ತನುಗಳೆ ಇವೆ.

ನೋಡುವುದನ್ನು ನೋಡಲರಿಯದೇ ಕೆಟ್ಟಿತ್ತೀಜಗವೆಲ್ಲ. ನೋಡುವದನ್ನು ನೋಡವಡೆ ಕೂಡಲಿಲ್ಲ ಅಗಲಲಿಲ್ಲ ಎಂದು ಪ್ರಭುಗಳು ಹೇಳಿದ್ದಾರೆ.

ಆಭರಣ ಕರೆನ್ಸಿ ನೋಡಿ ತನುವನ್ನು ಕೊಂದು ಪಡೆಯುವ ಕಣ್ಣುಗಳು ಕುರುಡು ಕಣ್ಣುಗಳು. ಆ ಕಣ್ಣಿಗೆ ಶಿವನೆಂಬ ಅರಿವು ದರ್ಶನವಾದರೆ ; ಆಭರಣ ಲೋಹವಾಗಿ ಕರೆನ್ಸಿ ಕಾಗದವಾಗಿ ಅದನ್ನು ಹೊಂದಿದ ತನು ತನ್ನಂತೆ ಶಿವಮಯವಾಗಿ ಕಾಣುತ್ತದೆ.

ಅಜ್ಞಾನವೆಂಬ ಮನ ಆಭರಣ ಕರೆನ್ಸಿ ನೋಡುವ ಮುನ್ನ ಅರಿವಿಗೆ ದಾಸನಾಗಿ, ಆ ಅರಿವಿಗೆ ಭಕ್ತನಾಗಿ, ಆ ಅರಿವಿಗೆ ಭೃತ್ಯನಾಗಿ ನೋಡಿದರೆ ನೋಡುವುದೆಲ್ಲ ಶಿವಮಯವಾಗಿ ಕಾಣುತ್ತದೆ.

ಹೀಗೆ ಬಸವಣ್ಣನವರು ಶಿಲಾದನೆಂಬ ಹೆಸರಿನ ಶಿವತನುವಾಗಿ ಆ ತನುವಿನ ಅರಿವಿಗೆ ಭೃತ್ಯರಾದರು. ಕುರುಡು ಕಣ್ಣು ಅರಿವಿನ ಕಣ್ಣಾಯಿತು. ಸ್ಕಂದನೆಂಬ ತನುವಿಗೆ, ಶಿವ ಬಸವನನ್ನು ಕಾರುಣ್ಯವ ಮಾಡಿಸಿಕೊಂಡ. ನೀಲಲೋಹಿತನೆಂಬ ತನುವಿನಲ್ಲಿ ಶಿವ ಬಸವಣ್ಣನನ್ನು ಲೀಲಾ ವಿನೋದದಿಂದಿರಿಸಿಕೊಂಡ. ಮನೋಹರನೆಂಬ ತನುವಿಗೆ ಬಸವಣ್ಣನನ್ನು ಮನಃ ಪ್ರೇರಕನಾಗಿರಿಸಿ ಕೊಂಡ. ಕಾಲಲೋಚನೆಂಬ ತನುವಿಗೆ ಶಿವ ಬಸವಣ್ಣನನ್ನು ಸರ್ವಕಾಲ ಸಂಹಾರವ ಮಾಡಲಿರಿಸಿ ಕೊಂಡ. ವೃಷಭಾರೂಢನೆಂಬ ತನುವಿನಲ್ಲಿ ಶಿವ ಬಸವಣ್ಣನನ್ನು ವಾಹನವಾಗಿರಿಸಿಕೊಂಡ. ಬಸವನೆಂಬ ಹೆಸರಿನ ತನುವಿನ ಕಣ ಕಣದಲ್ಲಿ ಶಿವ ಬೆರೆತು ಬಸವಣ್ಣನನ್ನು ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿ ಕೊಂಡನೆಂದು ಬಸವಣ್ಣ ಹೇಳಿದ್ದಾರೆ.

ಮನೋಹರನೆಂಬ ಅರಿವಿನೊಂದಿಗೆ ಮನ ಪ್ರೇರಕನಾಗಿ ಕೂಡಿ ಕೂಡಲಸಂಗಮವೇ ಆಗಿದೆ. ತನು ಯಾವ ಗರ್ಭದಲ್ಲಿ ಬಂದರೂ ಅದು ಅರಿವಿನ ತನು. ಅರಿವು ಬರಿಸಿದ

ಭವಾಂತರದಲ್ಲಿ ತನುವಿನ ಅರಿವಿನ ಸಂಗಮದಲ್ಲಿ ನಾನು ಮನವಾಗಿ ಸೇರಿ ಸೇವಕನಾಗಿ, ಜ್ಞಾನ ಭೃತ್ಯನಾಗಿ ಭಕ್ತನಾಗಿದ್ದೇನೆ ಎಂದಿದ್ದಾರೆ ಜ್ಞಾನಭಂಡಾರಿ ಬಸವಣ್ಣ.

5

ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ.
ಅದೇನು ಕಾರಣ ತಂದೆಯೆಂದರಿದೆನಯ್ಯಾ.
ಎನ್ನ ಕಾರಣ ತಂದೆಯೆಂದರಿದೆನಯ್ಯಾ.
ಅರಿದರಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆರೆದೆನಯ್ಯಾ, ಕೂಡಲಸಂಗಮದೇವಾ.

ಬ್ರಹ್ಮಾಂಡವನ್ನು ತನುವಿನ ಜಲಬಿಂದುವೆಂಬ ಬೀಜದಲ್ಲಿ ಅಡಗಿಸಿ, ಆ ಜಲಬಿಂದುವೇ ತಂದೆ ಮುಂಖಾಂತರ ತಾಯಿ ಗರ್ಭ ಪ್ರವೇಶವಾಗಿ, ತನುವಾಗಿ; ಆ ತನುವಿನಲ್ಲಿಯೇ ಬ್ರಹ್ಮಾಂಡವನ್ನಿಟ್ಟು ಹೊಲಿದು ಮರ್ತ್ಯಕ್ಕೆ ತಂದ ಅರಿವಿನ ತಂದೆ ನೀನು. ತಂದೆಯಾಗಿ ಆ ತನುವಿನಲ್ಲಿ ಬಂಧಿಯಾದ ತಂದೆ ನೀನು. ಕಂದನಾಗಿ ಇದನ್ನು ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ.

ಅದೇನು ಕಾರಣ: ಇಲ್ಲದ ಕಂದನನು ಆ ತನುವಿನಲ್ಲಿಯೇ ಸೃಷ್ಟಿ ಮಾಡಿದ ತಂದೆ ನೀನು. ಆ ಕಂದ ನಾನು! ಆ ಕಂದನಿಂದಲೇ ನಿನ್ನನು ತಂದೆಯೆಂದರಿದೆನಯ್ಯಾ. ತನುವಿಗೆ ಜನ್ಮ ಕೊಟ್ಟು ; ಆ ತನುವಿನಲ್ಲಿಯೇ ನೀನಿದ್ದು ಆ ತನುವನ್ನೇ ಶಾಲಾ ಕಾಲೇಜು ವಿಶ್ವ ವಿದ್ಯಾಲಯ ಮಾಡಿ, ಆ ತನುವನ್ನೇ ಕೋರ್ಟ್, ಕಛೇರಿ , ರಾಜಕೀಯ ರಣರಂಗದ ಅಂಗಳ ಮಾಡಿದ ತಂದೆ ನೀನು .

ತನುವಿನಲ್ಲಿಯೇ ತಂದೆ ತಾಯಿ ಬಂಧು ಬಳಗವನ್ನು ಸೃಷ್ಟಿ ಮಾಡಿದ ತಂದೆ ನೀನು. ''ತಂದೆ ನೀನು ತಾಯಿ ನೀನು; ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು''

ತಂದೆಯಾಗಿ ತನುವಿನಲ್ಲಿಯೇ ಇದ್ದು ಕಂದ ಮಾಡಿದ ಅಪರಾಧಕ್ಕೆ ಮುನಿದು ಮೈದಡವಿದೆಯಲ್ಲದೆ ಎಂದೂ ಕಂದನ ಪ್ರಾಣಕ್ಕೆ ಮುನಿಯಲಿಲ್ಲ. ಎನಗೆ ಜನ್ಮ ಕೊಟ್ಟು ಕೈ ಹಿಡಿದು ನಡೆಸುವ ಕಾರಣಕ್ಕಾಗಿಯೇ ನಿಮ್ಮನ್ನು ತಂದೆ ಎಂದು ಅರಿದೆನಯ್ಯಾ.

ತನುವಿನಲ್ಲಿಯೇ ಅರಿದರಿದು, ಆ ಅರಿವೇ ತಾವೆಂದು ಕಂದನಾಗಿ ತಿಳಿದು, ಆ ಅರಿವಿನ ತಂದೆಗೆ ಶರಣು ಹೋಗಿ ಶರಣನಾದೆನಯ್ಯಾ. ಆ ಶರಣನು ಆಚರಿಸುವ ಆಚರಣೆ ಅಗೋಚರದ ಆಚರಣೆ; ಅರಿವಿನ ಆಚರಣೆ. ಅರಿವಿನ ತಂದೆ ಹೇಳಿದಂತೆ ಕೇಳುವ ಕಂದನ ಆಚರಣೆ. ಆ ತಂದೆಯ ಕಂದನಾಗಿ ಶರಣು ಹೋದ ಶರಣನ ಆಚರಣೆ ಸುಖದ ಆಚರಣೆ!

ಲೋಕದ ಕಣ್ಣು ಬೇರೆ, ಅರಿವಿಗೆ ಶರಣು ಹೋದ ಶರಣನ ಕಣ್ಣು ಬೇರೆ . ಲೋಕದ ಕಣ್ಣು ಕುರುಡು; ಈ ಕಣ್ಣಿಗೆ ಹೆಣ್ಣು, ಗಂಡು, ಭೂಮಿ, ಆಭರಣ, ವಸ್ತು,

ಕರೆನ್ಸಿ, ಬಡವ, ಶ್ರೀಮಂತ , ರಾಜಕಾರಣಿ, ಅಧಿಕಾರಿ , ದೇವಾಲಯಗಳು ಕಾಣುತ್ತವೆ. ಇದು ಗೋಚರರದ ಕಣ್ಣು.

ಲೋಕದ ಕಣ್ಣಿಗೆ ಆಭರಣ ಗೋಚರಿಸುತ್ತದೆ. ಶ್ರಮಪಟ್ಟು ದುಡಿದು ಸಂಗ್ರಹಿಸುತ್ತದೆ . ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡಿ ಸಂಗ್ರಹಿಸುತ್ತದೆ. ಇಲ್ಲ ಕಳುವು ಕೊಲೆ ಸುಲಿಗೆ ದರೋಡೆ ಮಾಡಿ ಸಂಗ್ರಹಿಸುತ್ತದೆ. ಈ ವಿಷಯದಲ್ಲಿ ಲೋಕಕ್ಕೆ ತಂದೆ, ತಾಯಿ , ಮಗ, ಬಂಧು, ಬಳಗ ಎನ್ನುವುದೂ ಉಳಿಯುವುದಿಲ್ಲ. ಒಬ್ಬ ಮತ್ತೊಬ್ಬನನ್ನು ಕೊಲೆ ಮಾಡಿಯಾದರೂ ಸಂಗ್ರಹಿಸುತ್ತಾನೆ . ಲೋಕದ ಕಣ್ಣಿಗೆ ಗೋಚರಿಸಿದ್ದು ಆಭರಣ ಮಾತ್ರ .

ಶರಣನ ಕಣ್ಣು ಅರಿವಿನ ತಂದೆಯನ್ನು ಪೂಜಿಸುವ ಅಗೋಚರ ಆಚಾರದ ಕಣ್ಣು. ಈ ಕಣ್ಣು ಆಭರಣ ನೋಡುತ್ತದೆ. ಇದೊಂದು ಹಳದಿ ಬಣ್ಣದ ಲೋಹ! ಲೋಹದಲ್ಲಿ ಹಳದಿ ಬಣ್ಣ ಅಡಗಿದೆ. ಲೋಹದಲ್ಲಿ ಅಡಗಿದ ಬಣ್ಣ ಡಿಸೈನ್‌ಗೆ ಶರಣ ಶರಣು ಹೋಗಲಿಲ್ಲ. ಶರಣ ಅರಿವಿಗೆ ಶರಣು ಹೋದ; ಆ ಅರಿವಿನಿಂದ ಕಣ್ದೆರೆದು ನೋಡಿದ. ಬಣ್ಣಕ್ಕೆ ಕಣ್ಣು ಮರುಳಾಗಲಿಲ್ಲ. ಬಣ್ಣಕ್ಕೆ ಮರುಳಾದ ಲೋಕದ ಕಣ್ಣುಗಳನ್ನು ಕುರುಡು ಕಣ್ಣುಗ್ಗಳೆಂದು ಕರೆದು ಮರುಗಿದ .

''ನೋಡೂದ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ; ನೋಡೂದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನ್ನು ಗುಹೇಶ್ವರ ನಿಮ್ಮ ಶರಣ ಮಾತ್ರ ಬಲ್ಲ'' ಇದು ಅರಿವಿನ ಸುಖ! ತನು ಮರ್ತ್ಯಕ್ಕೆ ಬಂದ ಸುಖ, ತನುವಿನ ಅರಿವೇ ತಂದೆಯಾದ ಸುಖ. ತಿಳಿಯುವ ಮನವೇ ಕಂದನಾಗಿ; ಅರಿವಿನ ತಂದೆಯನ್ನು ನೆನೆನೆನೆದು ಸುಖಿಯಾಗಿ ಶರಣ ಬದುಕಿದ ಸುಖ ! ಗೋಚರದ ಆಚಾರಗಳನೆಲ್ಲ ಅರಿದರಿದು ತನುವಿನ ಅರಿವಿನಲ್ಲಿ ಸಂಗಮ ಮಾಡಿ; ಕಣ್ದೆರೆದು ನೋಡುವ ಸಂಗಮನಾಥನ ಸುಖ !

6

ಕರಿ ಘನ : ಅಂಕುಷ ಕಿರಿದೆನ್ನಬಹುದೆ? ಬಾರದಯ್ಯಾ .
ಗಿರಿ ಘನ: ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ.
ತಮಂಧ ಘನ: ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ .
ಮರಹು ಘನ: ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?
ಬಾರದಯ್ಯಾ , ಕೂಡಲಸಂಗಮದೇವಾ.

ಅಶೋಕ, ಚಕ್ರವರ್ತಿ ಎನ್ನಿಸಿಕೊಂಡ. ಅಲೆಕ್ಝಾಂಡರ್ ಸಾಮ್ರಾಟ ಎನ್ನಿಸಿಕೊಂಡ. ಹೀಗೆ ಪ್ರಸಿದ್ಧಿ ಪಡೆದ ರಾಜ ಮಹಾರಾಜರು ಈ ಪ್ರಪಂಚದಲ್ಲಿ ಬಹಳಷ್ಟು ಜನ ಸಿಕ್ಕುತ್ತಾರೆ. ಜನ ಸಮುದಾಯದ ಕಷ್ಟ ಕಾರ್ಪಣ್ಯಗಳನ್ನು ಬಾಚಿಕೊಂಡು ಇಡೀ ಸಮುದಾಯವನ್ನೇ ಅರಳಿಸಬೇಕೆಂಬ ಪ್ರಾರಂಭದ ಆಶಯದಿಂದಲೇ ರಾಜನಾದ. ಅದು ಬರಬರುತ್ತಾ ಬತ್ತುತ್ತ ಹೋಗುತ್ತದೆ. ರಾಜನಾಗಿ ನೂರುಕಾಲ ಉಳಿಯಬೇಕೆಂಬ ಆಸೆ

ಚಿಗಿಯುತ್ತದೆ. ಅಡ್ಡಿಪಡಿಸಿದವರ ರುಂಡ ಚೆಂಡಾಡಿ ರಕ್ತದ ಕಾಲುವೆ ಹರಿಯುತ್ತದೆ. ಸಂಪತ್ತು ಸಂಗ್ರಹವಾಗುತ್ತದೆ. ಸಾಮ್ರಾಜ್ಯ ಭೂಮಿ ವಿಸ್ತಾರವಾಗುತ್ತದೆ. ಸಮುದಾಯದ ಸಾವು ನೋವುಗಳು ಅಧಿಕವಾಗುತ್ತವೆ.

ಪ್ರಜಾಪ್ರತಿನಿಧಿಗಳು ಅಧಿಕಾರಿಗಳು ಇದಕ್ಕೆ ಹೊರತಲ್ಲ. ತನುವಿನ ಮಹದಾಶಯದ ಸಂವಿಧಾನ ಪುಸ್ತಕದಲ್ಲಿದೆ. ಜನ ಸಮುದಾಯವನ್ನು ಒಳಿತುಪಡಿಸುವ ಸದಾಶಯ ಶಾಸಕರ ತನುವಿನಿಂದ ಹೊರಬಂದು ಸಂವಿಧಾನದ ಪುಸ್ತಕ ಸೇರಿತು. ಅಲ್ಲಿಯೇ ಉಳಿಯಿತು. ತನುವಿನ ಆಶಯ ಸಮುದಾಯಕ್ಕೆ ಬಳಕೆಯಾಗಲಿಲ್ಲ. ಆಶಯ ತನುವಿನ ಗರ್ಭದಲ್ಲಿ ಉಳಿದು, ಅಧಿಕಾರದ ಆಸೆಯ ಬಲ ಅಧಿಕವಾಯಿತು. ಮತ್ತೆ ಮತ್ತೆ ಶಾಸಕನಾಗಬೇಕೆಂಬ ಹಂಬಲಕ್ಕೆ ಮರುಳಾದ. ತನು ಕರೆನ್ಸಿ, ಚಿನ್ನ, ಭೂಮಿ ಮನೆ ಸಂಗ್ರಹಿಸಲು ಮುಂದಾಯಿತು. ಸಮುದಾಯದ ಸಾಮಾನ್ಯ ಬೇಡಿಕೆಗಳಿಗೆ ಕತ್ತರಿ ಬಿತ್ತು. ಅಜ್ಞಾನಕ್ಕೆ ಆನೆ ಬಲ ಬಂತು.

ಅಧಿಕಾರ, ಕರೆನ್ಸಿ, ಚಿನ್ನ, ಭೂಮಿಗೆ ಮರುಳಾದ ರಾಜ ಮಹಾರಾಜರು ಯುದ್ಧ ಮಾಡಿ ರಕ್ತದ ಕಾಲುವೆ ಹರಿಸಿ ಮಣ್ಣು ಸೇರಿದ್ದಾರೆ. ಅವರ ತನುವಿನಲ್ಲಿದ್ದ ಸದಾಶಯ ಒಂದಿಷ್ಟೂ ಬಳಕೆಯಾಗದೆ ಅವರ ಜೊತೆಗೆಯೇ ಮಣ್ಣು ಸೇರಿ ಹೊರಟುಹೋಯಿತು.

ಸಿದ್ಧಾರ್ಥ ಮಾತ್ರ ಯೋಚಿಸಿದ: ತಾನು ರಾಜನಾಗಿ ಸದಾಶಯವನ್ನು ಹೊಂದಿದ್ದೇನೆ. ಪಕ್ಕದ ರಾಜನೂ ಆ ಜನದ ಏಳ್ಗೆಗಾಗಿ ಸದಾಶಯವನ್ನು ಹೊಂದಿದ್ದಾನೆ. ನನ್ನಲ್ಲಿ ಚಿನ್ನದ ಕಿರೀಟವಿದೆ. ಹೆಂಡತಿ ಮಕ್ಕಳು ಇದ್ದಾರೆ, ಸಿಂಹಾಸನವಿದೆ. ಭೂಮಿ, ವಡವೆಗಳಿವೆ. ಕಿರೀಟಕ್ಕಾಗಿ ಭೂಮಿಯ ವಿಸ್ತಾರಕ್ಕಾಗಿ ರಕ್ತದ ಕಾಲುವೆ ಹರಿಸುವುದು ಮೂರ್ಖತನವಲ್ಲವೆ? ಸಮುದಾಯದ ಸದಾಶಯಕ್ಕಾಗಿ ಸಮುದಾಯವನ್ನೇ ಕೊಂದು ಚಿತ್ರಹಿಂಸೆಗೆ ಒಳಪಡಿ ಸುವುದು ಮೂರ್ಖತನವಲ್ಲವೆ ? ಸಿದ್ಧಾರ್ಥ ಹೀಗೆ ಯೋಚಿಸಿದ; ಸದಾಶಯದ ಬುದ್ಧ ಚಿಗುರೊಡೆದ. ಸಿದ್ಧಾರ್ಥನ ಅಜ್ಞಾನಕ್ಕೆ ಬುದ್ಧನ ಅರಿವೇ ಅಂಕುಶವಾಯಿತು.

ಸಿದ್ಧಾರ್ಥ ಹಾಗೂ ವರ್ಧಮಾನ ರಾಜರಾಗಿದ್ದರೆ ಸರ್ವರಾಜರಂತೆ ಮಣ್ಣು ಸೇರುತ್ತಿದ್ದರು. ಬುದ್ಧ, ಮಹಾವೀರರಾಗಿ ಪ್ರಪಂಚಕ್ಕೆ ಬೆಳಗುತ್ತಿರಲಿಲ್ಲ. ಅರಿವಿನ ಸದಾಶಯ ಚಿಕ್ಕದಾದರೂ ಆಸೆಯಿಂದ ಆನೆಯಂತೆ ಬೆಳೆದ ಅಜ್ಞಾನದ ತನುವಿಗೆ ಅಂಕುಶವಾಗುತ್ತದೆ. ತನ್ನ ತನುವಿನ ಅರಿವು ತನ್ನ ತನುವಿನ ಅಜ್ಞಾನಕ್ಕೆ ಅಂಕುಶವಾಗಿ; ಜಗದಗಲ ಮುಗಿಲಗಲ ಬೆಳಗುತ್ತದೆ. ಹಾಗೆಯೇ ಗಿರಿ ಘನವಾದರೂ ಅದನ್ನು ಕತ್ತರಿಸುವ ವಜ್ರದ ಉಳಿಯನ್ನು ಕಿರಿಯದೆನ್ನಲು ಬರುವುದಿಲ್ಲ. ಕತ್ತಲು ಘನವಾದರೂ ಅದನ್ನು ನುಂಗಿ ಬೆಳಗುವ ಜ್ಯೋತಿಯನ್ನು ಕಿರಿದೆನ್ನಲು ಬರುವುದಿಲ್ಲ. ಮರಹು ಘನವಾದರೂ ತನುವಿನ ಅರಿವಿನ ಮೂಲಕ ನೆನೆದು ಆ ಅರಿವೇ ತಾನಾಗುವ ಮನದ ಮರೆವನ್ನು ಕಿರಿದೆನ್ನಲು ಬರುವುದಿಲ್ಲ.

ತನುವಿನಲ್ಲಿ ಆನೆಯ ಬಲದ ಅಜ್ಞಾನವೂ ಇದೆ; ಅಂಕುಶ ಗಾತ್ರದ ಅರಿವೂ ಇದೆ. ಅಂಕುಶ ಆನೆಗೆ ಬಳಕೆಯಾಗಿ ಅರಿವು ಮಾತ್ರ ಉಳಿಯಬೇಕು. ಘನರೂಪದ ಗಿರಿ ವಜ್ರದ ಉಳಿಯಲ್ಲಿ ಸಂಗಮವಾದಂತೆ, ಬೃಹದಾಕಾರದ ಕತ್ತಲು ಜ್ಯೋತಿಯಲ್ಲಿ ಸಂಗಮವಾದಂತೆ; ಅರಿವು, ಮನ, ತನುವಿನಲ್ಲಿ ಸಂಗಮವಾಗಿ ಕೂಡಲಸಂಗಮನೇ ತಾನಾಗಬೇಕು.

ಸಂಸಾರಹೇಯಸ್ಥಲ

7

ಭವಬಂಧನ ಭವಪಾಶವಾದ ಕಾರಣವೇನಯ್ಯಾ?
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,
ಅರಿದಡೀ ಸಂಸಾರವ ಹೊದ್ದಲೀವೆನೆ,
ಕೂಡಲಸಂಗಮದೇವಾ?
ಭವಬಂಧನ ಭವಪಾಶವಾದ ಕಾರಣವೇನಯ್ಯಾ? :

ತನುವಿನ ಸದ್ಬಳಕೆಯಿಂದ ವಿಜ್ಞಾನ ಆವಿಷ್ಕಾರವಾಗಿದೆ. ಜೊತೆಗೆ ಏನೆಲ್ಲ ಕಂಡುಹಿಡಿದು ಬಳಕೆ ಮಾಡಿಕೊಂಡರೂ ತನುವಿನ ಸಂಕಟ ತುಮುಲ ದುಗುಡಗಳು ಕಡಿಮೆಯಾಗಿಲ್ಲ. ಹುಟ್ಟು ಸಾವಿನ ಭಯ ಕಾಡುವುದು ನಿಂತಿಲ್ಲ. ಇವೆರಡರ ಮಧ್ಯದ ಜೀವನವೇ ತನುವಿಗೆ ಉರುಳಾಗಿ ಕಾಡುತ್ತಿರುವ ಕಾರಣವಾದರೂ ಏನಿರಬೇಕು! ಎಂದು ಯೋಚಿಸಲು ತೊಡಗಿದರೆ ಸಾಕು ಅಂದಿನಿಂದಲೇ ಹೊಸ ಹುಟ್ಟು ಪ್ರಾರಂಭವಾಗುತ್ತದೆ .

ಹುಟ್ಟಿನಿಂದ ಸಾಯುವವರೆಗೆ ತನು ಉಪಜೀವನಕ್ಕಾಗಿಯೇ ತೊಳಲಿ ಬಳಲುತ್ತದೆ. ಅರಿವಿನ ಸುಳುಹು ಹೊಳೆದರೆ ಜೀವನ ಪ್ರಾರಂಭವಾಗುತ್ತದೆ. ಅರಿವಿನ ಸುಳುಹು ಹೊಳೆಯುವವರೆಗೆ ಜೀವಿಸಿದ ಜೀವನವೇ ಉಪಜೀವನ! ಉಪಜೀವನಕ್ಕಾಗಿ ಮಾತ್ರ ಬಳಕೆಯಾದ ತನುವಿನ ಹಿಂದಣ ಜನ್ಮವದು . ಈ ಜನ್ಮದಾದ್ಯಂತ ತನುವಿನಲ್ಲಿದ್ದ ಅರಿವು ತನುವಿನಲ್ಲಿದ್ದ ಮನಕ್ಕೆ ಹೊಳೆಯದೆ ಮರೆವಾಯಿತು.

ಹುಟ್ಟಿದಂದಿನಿಂದ ತನುವಿನ ಗರ್ಭದಲ್ಲಿದ್ದ ಅರಿವು ಬಳಕೆಯಾಗದೆ ಹುಟ್ಟೇ ತನುವಿಗೆ ಉರುಳಾಯಿತು. ತನುವಿನ ಆಯುಷ್ಯದ ಅವಧಿಯನ್ನು ತಿಳಿಯದ ಮನ ಉಪಜೀವನಕ್ಕೆ ಮೀಸಲಾಯಿತು. ಅರಿವು ತಿಳಿಯದ ಮನದ ತನುವಿನ ಹಿಂದಣ ಅವಧಿಯೇ ಹಿಂದಣ ಜನ್ಮ .

ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,

ಹಿಂದಣ ತನುವಿನ ಸಿರಿ ತನುವಿನ ಅರಿವೆಂಬ ಛಲಗಾರ ಜಂಗಮನಿಗೆ ಬಳಕೆಯಾಗಲಿಲ್ಲ, ಉಪಜೀವನಕ್ಕೆ ಬಳಕೆಯಾಗಿ ತನುವಿನ ಹುಟ್ಟೇ ತನುವಿಗೆ ಉರುಳಾಯಿತು.

ಅರಿದಡೀ ಸಂಸಾರವ ಹೊದ್ದಲೀವೆನೆ, ಕೂಡಲಸಂಗಮದೇವಾ?

ಹುಟ್ಟು ಸಾವುಗಳ ಮಧ್ಯದ ಅರಿವಿನ ಜೀವನ ಬಳಕೆಯಾದಡೆ ತನುವಿಗೆ ಹುಟ್ಟಿಲ್ಲ ಸಾವಿಲ್ಲ . ಸಂಕಟ ತುಮುಲ ದುಗುಡಗಳು ಮುನ್ನವೇ ಇಲ್ಲ. ಉಪಜೀವನಕ್ಕಾಗಿ ಕುದಿಯುವ ಅಜ್ಞಾನದ ಸಂಸಾರವನ್ನು ತನು ಹೊದಿಯುವುದಿಲ್ಲ. ಹುಟ್ಟು ಸಾವುಗಳೆಂಬ ಭವಪಾಶದ ಉರುಳು ತನುವಿನಲ್ಲಿ ಸಂಗಮವಾಗಿ ಹೂವಿನ ಹಾರವಾಗುತ್ತದೆ.

ಸಂಸಾರಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆವುತ್ತಿದೆ.
ಸಂಸಾರಸಾಗರ ಉರದುದ್ದವೆ? ಹೇಳಾ!
ಸಂಸಾರಸಾಗರ ಕೊರಳುದ್ದವೆ? ಹೇಳಾ!
ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ!
ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ
ಕೂಡಲಸಂಗಮದೇವಾ ನಾನೇವೆನೇವೆನಯ್ಯಾ!

ಸಂಸಾರ ಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಿದೆ:

ಜಲ , ಹಳ್ಳ ನದಿಯ ಹೆಸರಿನಲ್ಲಿ ಹರಿದು ಸಾಗರದ ಹೆಸರು ಪಡೆದು ಆ ಸಾಗರದಲ್ಲಿ ಸಂಸಾರ ಹೂಡುತ್ತದೆ. ಗಾಳಿ ಜೋರಾಗಿ ಬೀಸಿದಾಗ ಅದೇ ಜಲ ಅಲೆಗಳ ಹೆಸರು ಪಡೆಯುತ್ತದೆ. ಚಂದ್ರನ ಬೆಳಕಿಗೆ ತೆರೆಗಳು ಕೊಬ್ಬಿ ಉಬ್ಬಿ ಹರಿಯುತ್ತವೆ ಭೂಮಿ ಬಿರಿದು ಸಾಗರದ ಜಲ ಸುನಾಮಿ ಸೃಷ್ಟಿ ಮಾಡುತ್ತದೆ. ಹಳ್ಳದಲ್ಲಿ ಹರಿದರೂ ಜಲವೇ. ನದಿಯಲ್ಲಿ ಹರಿದರೂ ಜಲವೇ. ಸಾಗರದ ಹೆಸರು ಪಡೆದರೂ ಜಲವೇ. ಸಾಗರ ಕೊಬ್ಬಿ ಹರಿದು ಸುನಾಮಿಯ ಹೆಸರು ಪಡೆದರೂ ಜಲವೇ. ಅದರ ಅಲೆಯೂ ಜಲವೇ. ಎಲ್ಲ ಹೆಸರುಗಳು ಜಲದಲ್ಲಿ ಸಂಗಮವಾದಂತೆ!

ಜಲಬಿಂದುವೇ ತನುವಿನ ಗರ್ಭ ಸೇರಿ ತನುವಾಗಿದೆ. ಜಲಜನಕ ಆಮ್ಲಜನಕ ಬಯಲೊಂದಿಗೆ ಬಯಲಲ್ಲಿ ಬೆರೆತು ಜಲವಾಗಿದೆ. ಜಲಜನಕಕ್ಕೆ ಉರಿಯುವ ಗುಣ, ಆಮ್ಲಜನಕಕ್ಕೆ ಉರಿಸುವ ಗುಣ ; ಜಲಕ್ಕೆ ನಂದಿಸುವ ಗುಣ, ಬಯಲಿಗೆ ಸರ್ವವನ್ನು ತನ್ನ ಗರ್ಭದಲ್ಲಿಟ್ಟು ಕೊಂಡು ಬಯಲು ಮಾಡುವ ಬಯಲ ಗುಣ.

ಸಾಗರದ ಜಲ , ಜೀವರಾಶಿಗಳಿಗೆ ಜನ್ಮಕೊಡುವ ಜೀವಜಲ! ತನುವಿನ ಜಲವೆಲ್ಲ ಜೀವಜಲ. ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ , ತನ್ನ ಮಟ್ಟ ತಾನು ಕಾಯ್ದುಕೊಂಡಿದೆ. ಆದರೆ ತನುವಿನ ಜಲದ ಬಣ್ಣ ಕೆಂಪು ; ಅದು ರಕ್ತ ಎಂದು ಹೆಸರು ಪಡೆದಿದೆ. ಮಜ್ಜೆ , ಮೂಳೆ, ಮಾಂಸ, ಚರ್ಮ ಎಂದು ಹೆಸರು ಪಡೆದಿದೆ. ತನುವಿನಲ್ಲಿ ಬಯಲು ಅರಿವಿನ ಪಾತ್ರ ವಹಿಸಿ ತನುವನ್ನು ಬೆಳಗಿದರೆ ಆ ಬೆಳಕಿನ ನೆರಳು ಮನದ ಪಾತ್ರವಹಿಸಿ ತನುವನ್ನು ಸ್ವಾಧೀನ ಪಡೆಸಿಕೊಂಡಿದೆ.

ಕಣ್ಣಿನಲ್ಲಿ ಬೆರೆತು ಸಂಸಾರ ಹೂಡಿದ ಮನ ನೋಡಿದ್ದನ್ನೆಲ್ಲ ಬೇಡಿ ತನುವಿನ ಕೊರಳಿಗೆ ಉರುಳು ತರುತ್ತದೆ. ಕೇಳಿದ ಶಬ್ದ ಕಿವಿಯಲ್ಲಿ ಸೋಸದೆ ತನುವಿಗೆ ಬಡಿದು ಎದೆಯಲ್ಲಿ ಕಿಚ್ಚು ಹಚ್ಚುತ್ತದೆ. ತನ್ನಂತೆ ಇರುವ ತನುವಿನ ಸ್ಪರ್ಶ ಬಯಸಿ ತನುವಿನ ಶಿರವನ್ನೆ ಉರುಳುವಂತೆ ಮಾಡುತ್ತದೆ.

ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ ಕೂಡಲಸಂಗಮದೇವಾ ನಾನೇವೆನೇವೆನಯ್ಯಾ.

ಅಯ್ಯಾ ತನುವಿನಲ್ಲಿಯೇ ಕೂಡಿದ ಜಲದೊಡೆಯ ಸಂಗಮನಾಥನೆ ಮನವೆಂಬ

ಬಿಸಿಲುಗುದುರೆಯನ್ನು ಹಿಡಿದು ನಿನ್ನೊಳಗೆ ಸಂಗಮ ಮಾಡಿಕೊ ತಂದೆ; ಎನ್ನ ಮೊರೆಯನ್ನು ಆಲಿಸು ನಾನೇವೆನೇವೆನಯ್ಯಾ ಈ ದುರುಳ ಮನದಿಂದ!

ತಿಳಿಯದಿದ್ದರೆ ಜಲ ಕೆರೆ ಹಳ್ಳ ನದಿ ಸಾಗರ ತೆರೆಗಳ ಹೆಸರು ಪಡೆಯುತ್ತದೆ. ಸಂಸಾರ ಸಾಗರವೇ ಆಗುತ್ತದೆ. ಹಾಗೆಯೆ ಜಲ ತಿಳಿಯದಿದ್ದರೆ ತನುವಾಗಿ ಹೆಣ್ಣು , ಗಂಡು,ಜಾತಿ, ಮತ, ಪಂಥ, ಶ್ರೀಮಂತ, ಬಡವನೆಂಬ ಸಂಸಾರ ನಿರ್ಮಾಣವಾಗಿ ಸಂಸಾರ ಸಾಗರವಾಗುತ್ತದೆ. ತಿಳಿದರೆ ಜಲದಿಂದಾದ ಹೆಸರು ಜಲದಲ್ಲಿ ಸಂಗಮ; ಜಲ ಬಯಲಲ್ಲಿ ಸಂಗಮ! ತಿಳಿದರೆ ಬಯಲಿಂದಾದ ಜಲ ಜಲದಿಂದಾದ ತನು ; ತನುವಿನಿಂದಾದ ಶಬ್ದ , ಸ್ಪರ್ಶ, ರುಚಿ, ದೃಶ್ಯ, ವಾಸನೆ ತನುವಿನಲ್ಲಿಯೇ ಸಂಗಮ; ತನು ಬಯಲಲ್ಲಿ ಸಂಗಮ !

9

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ;
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ!
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು;
ಇನ್ನೆಂದಿಂಗೆ ಮೋಕ್ಷವಹುದೊ, ಕೂಡಲಸಂಗಮದೇವಾ?

ಸೂರ್ಯ ಚಂದ್ರನನ್ನು ಬೆಳಗಿ ಅದರ ಬೆಳಕು ಭೂಮಿಗೆ ತಂಪನೆರೆದು ಸಂತೋಷವನ್ನುಂಟು ಮಾಡುತ್ತದೆ . ಭೂಮಿಯ ಸುತ್ತ ಪ್ರದಕ್ಷಿಣೆ ಹಾಕುವ ಚಂದ್ರನ ಬೆಳಕಿನಲ್ಲಿ ವ್ಯತ್ಯಾಸ ಕಂಡಂತಾಗುತ್ತದೆ. ಗ್ರಹಗಳು ಸರಳ ರೇಖೆಯಲ್ಲಿ ಬಂದಾಗ ಚಂದ್ರ ಸಂಪೂರ್ಣ ಕಾಣದಂತಾಗುತ್ತದೆ. ಇದು ಕಾಲದ ಅಳತೆಯ ವಿಜ್ಞಾನ . ಸೂರ್ಯ ಚಂದ್ರ ಭೂಮಿಯಿಂದುಂಟಾಗುವ ಬೆಳಕಿನ ಆಟ. ಬೆಳಕಿನಲ್ಲಿ ವ್ಯತ್ಯಾಸವಿಲ್ಲ. ನೋಟದ ತಿಳುವಳಿಕೆಯಲ್ಲಿ ವ್ಯತ್ಯಾಸದ ಅಪನಂಬಿಕೆ ಉಂಟಾಗಿದೆ. ಚಂದ್ರನನ್ನು ರಾಹು ನುಂಗಿ ಕತ್ತಲಾದಂತೆ ಭಾಸವಾಗಿದೆ.

ಹಾಗೆಯೇ ತಿಳಿಯದೆ ದೇಹಕ್ಕೆ ಅಜ್ಞಾನವೆಂಬ(ಕತ್ತಲು)ಗ್ರಹಣವಾಗಿದೆ. ದೇಹದಲ್ಲಿಯೂ ಜ್ಞಾನ ಅಜ್ಞಾನದ ಕತ್ತಲು ಬೆಳಕಿನ ಆಟ ನಡೆದು ಸಂಸಾರವೆನ್ನುವುದು ರಣರಂಗವಾಗಿದೆ.

ಸೂರ್ಯ ಚಂದ್ರ ಭೂಮಿ ಮೂರು ಗ್ರಹಗಳು ಬಯಲ ಗರ್ಭದಲ್ಲಿಯೇ ಬಂಧಿ ಯಾಗಿವೆ. ಈ ಮೂರು ಗ್ರಹಗಳಿಂದಲೇ ಕತ್ತಲು ಬೆಳಕಿನ ಆಟ.

ಅಂತೆಯೇ ಸ್ಥೂಲ ದೇಹ,ಸೂಕ್ಷ್ಮ ದೇಹ,ಕಾರಣ ದೇಹವೆಂದು ಮೂರು ವಿಧ. ದೇಹ ಒಂದೇ ಆದರೂ ದೇಹದಲ್ಲಿ ಇನ್ನೆರಡು ದೇಹಗಳಿವೆ. ಸ್ಥೂಲ ದೇಹದ ಜನ್ಮ, ಕಾರಣ ದೇಹದಿಂದ! ಇದು ಬಯಲು. ಬಯಲೇ ಅರಿವಾಗಿ,ಅರಿವಿನ ಜಲಬಿಂದುವಾಗಿ ದೇಹಕ್ಕೆ ಜನ್ಮ ನೀಡಿದೆ. ದೇಹದ ಕಣಕಣದಲ್ಲಿ ಅರಿವಾಗಿ ಬೆರೆತು ದೇಹವನ್ನು ಬೆಳಗುತ್ತಲಿದೆ. ಆ ಬೆಳಕಿನ ನೆರಳೇ ಸೂಕ್ಷ್ಮ ದೇಹ.ಇದು ಮನವಾಗಿ ಚಂದ್ರನಂತೆ ಬೆಳಗುವ ದೇಹವನ್ನು ರಾಹುವಿನಂತೆ ಆವರಿಸಿ ಗ್ರಹಣ ಹಿಡಿಸಿದೆ. ಮನ ಸರಿದಾಗ ದೇಹ ಬೆಳಗುತ್ತದೆ; ಆವರಿಸಿದಾಗ ಕತ್ತಲಾಗುತ್ತದೆ. ಈ ಸೂಕ್ಷ್ಮ ದೇಹ ಕಣ್ಣಲ್ಲಿ ಬೆರೆತು ಕಾಣದಂತೆ , ಕಿವಿಯಲ್ಲಿ ಬೆರೆತು ಕೇಳದಂತೆ , ಚರ್ಮ ನಾಲಿಗೆ ಮೂಗಿನಲ್ಲಿ ಬೆರೆತು ಸಂಸಾರವೆಂಬ ರಾಹುವಾಗಿ ಕಾಡುತ್ತದೆ. ಅರಿವಾಗದಿದ್ದರೆ ಇಡೀ ದೇಹವನ್ನೇ ನುಂಗತ್ತದೆ.

ಕಾರಣ ದೇಹವೆಂಬ ಚಿತ್‌ಸೂರ್ಯ ಇಡೀ ದೇಹವನ್ನು ಮಾತನಾಡುವ ಮೂಲಕ ಗುರುವಾಗಿ ಸ್ಥೂಲದೇಹವನ್ನು ಬೆಳಗುತ್ತಾನೆ. ಈತನ ಬೆಳಕಿನಿಂದಾದ ನೆರಳೆಂಬ ಮನವೇ ಬೆಳಕಿನ

ದೇಹವನ್ನು ಕಾಣದಂತೆ ಮಾಡಿ ಸಂಸಾರ ಹೊಡಿದೆ. ಗ್ರಹಗಳು ಸರಿದರೆ ಬೆಳಕು. ದೇಹದಲ್ಲಿಯೇ ಹುಟ್ಟಿದ ಮನ ದೇಹ ಬಿಟ್ಟು ಸರಿಯಬೇಕಲ್ಲ. ಇದು ಸಾಧ್ಯವಾಗದ ಮಾತು. ಬೆಳಕಿದ್ದಲ್ಲಿ ಕತ್ತಲಿಲ್ಲ; ಕತ್ತಲಿದ್ದಲ್ಲಿ ಬೆಳಕಿಲ್ಲ. ಇವೆರಡೂ ಕಡುವೈರಿಗಳು. ಆದರೆ ದೇಹದಲ್ಲಿ ಅರಿವೆಂಬ ಬೆಳಕೂ ಇದೆ ಅಜ್ಞಾನವೆಂಬ ಮನವೂ ಇದೆ. ಇವೆರಡೂ ಕೂಡಿ ದೇಹವೆಂಬ ಒಂದೇ ತಟ್ಟೆಯಲ್ಲಿ ಉಣ್ಣುತ್ತಿವೆ. ಬೆಳಕಿನ ಮನೆಯಲ್ಲಿ ಕತ್ತಲು ವಾಸಮಾಡಿದೆ; ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ? ಎಂದು ತವಕಿಸಿದ್ದಾರೆ ಬಸವಣ್ಣ.

10

ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ
ಎನ್ನ ಸಂಸಾರ ತನು ಕೆಡುವನ್ನಕ್ಕ ಮಾಣದು .
ಹೆರರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು.
ಹೆರರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು.
ಅಕಟಕಟಾ, ಸಂಸಾರಕ್ಕೆ ಆಸತ್ತೆ
ಕೂಡಲಸಂಗಮದೇವಾ.

ಬೋನಿನಲ್ಲಿ ರುಚಿಕರ ಪದಾರ್ಥ ಇಡಲಾಗಿದೆ. ಇಲಿ ಪದಾರ್ಥ ನೋಡುತ್ತದೆ. ಬೋನು ಕಾಣುವುದಿಲ್ಲ. ತಿನ್ನಲು ಹೋದರೆ ಇಲಿ ಉಳಿಯುವುದಿಲ್ಲ. ತಿನ್ನದಿದ್ದರೆ ನಾಲಿಗೆ ಕೇಳುವುದಿಲ್ಲ. ಪರರ ಪದಾರ್ಥ ಮುಟ್ಟದಿದ್ದರೆ ಬೋನು ಇಟ್ಟು ಸಾಯಿಸುತ್ತಿರಲಿಲ್ಲ. ಪರರ ಬಾಧಿಸುವುದು ತನು ಸಾಯುವವರೆಗೂ ನಿಲ್ಲುವುದಿಲ್ಲ. ಇದು ಇಲಿಯ ಉದಾಹರಣೆ ಅಷ್ಟೆ. ಅರಿವಿದ್ದ ತನುವಿನ ಕತೆಯೂ ಇಲಿಯಂತೆಯೇ .

ತನು ಆಭರಣ ನೋಡಿ ಹಗಲಿರುಳು ದುಡಿದು ಧರಿಸಿ ಸಂಗ್ರಹಿಸಿ ಆನಂದ ಪಟ್ಟಿತು. ತನುವಿನ ಸಂಸಾರ ಆಭರಣಕ್ಕಾಗಿ ವ್ಯಯವಾಯಿತು. ಕಣ್ಣಿಗೆ ಲೋಹದ ಬಣ್ಣ ಡಿಸೈನ್ ಶ್ರೇಷ್ಠವೆನಿಸಿ, ತನುವನ್ನು ಅಜ್ಞಾನದ ಬೋನಿಗೆ ತಳ್ಳಿತು.

ಆಭರಣ ನೋಡಿದ ಕಣ್ಣು ಕದಿಯುವಂತೆ ತನುವಿಗೆ ಆದೇಶ ಮಾಡಿತು. ದಕ್ಕದಿದ್ದರೆ ಕೊಂದಾದರೂ ಪಡೆಯಿತು.ಲೋಹದ ಬಣ್ಣ , ಡಿಸೈನ್‌ಗಾಗಿ ತನು ಕಳ್ಳ ಕೊಲೆಗಡುಕನ ಪಟ್ಟ ಕಟ್ಟಿ ಕೊಂಡು ಸರಕಾರಿ ಬೋನು ಸೇರಿತು.

ಆಭರಣಕ್ಕೆ ಮಾರುಹೋದ ತಂದೆ ತಾಯಿಗಳು ತಾರತಮ್ಯವೆಸಗಿ ಮಕ್ಕಳಿಗೆ ಪಾಲು ಕೊಡಲಿಲ್ಲ. ಬಣ್ಣದ ಲೋಹಕ್ಕಾಗಿ ಜನ್ಮ ಕೊಟ್ಟವರನ್ನೇ ಮಕ್ಕಳು ಕೊಂದು ಕಡುಪಾಪಿಗಳೆನ್ನಿಸಿ ಕೊಂಡು ಸರಕಾರಿ ಬೋನು ಸೇರಿದರು.

ಪಿಠಾಧಿಪತಿಗಳು, ಶಾಸಕರು, ಸಚಿವರು, ನ್ಯಾಯಮೂರ್ತಿಗಳು , ಪೊಲೀಸರು, ಅಧಿಕಾರಿಗಳು ಇದಕ್ಕೆ ಹೊರತಾಗಿಲ್ಲ . ತನುಗಳೆಲ್ಲ ಒಂದೇ. ಅರಿವು ತನುವಿನಲ್ಲಿದೆ; ಪಾಠ ಪುಸ್ತಕದಲ್ಲಿದೆ. ಬಳಕೆಯಾಗದಿದ್ದರೆ ತನುವಿಗೆ ಕೇಡು ತಪ್ಪಿದ್ದಲ್ಲ. ಬೋನು ತಪ್ಪಿದ್ದಲ್ಲ.

ಚಿನ್ನಕ್ಕೆ ಜನ್ಮ ಕೊಟ್ಟ ಹಿಡಿ ಮಣ್ಣು ಯಾವ ಲೆಕ್ಕಕ್ಕಿಲ್ಲ .ಆ ಮಣ್ಣಿನ ಪಾತ್ರೆಯಲ್ಲಿಯೇ ಕುದ್ದು ಬಣ್ಣ ತಳೆದ ಲೋಹ ಚಿನ್ನ ! ಈ ಲೋಹದ ಬಣ್ಣಕ್ಕೆ ಮರುಳಾದ ಕಣ್ಣಿನ

ಅಜ್ಞಾನಕ್ಕೆ ಯಾವ ಶಿಕ್ಷೆಯೂ ಇಲ್ಲ .ಆ ಕಣ್ಣಿಗೆ ಯಾರೂ ಪಾಠ ಮಾಡುವುದಿಲ್ಲ.

ಕಣ್ಣಿನ ಅಜ್ಞಾನ ಹೆರರ ಬಾಧಿಸುವುದು, ಹೆರರ ಛಿದ್ರಿಸುವುದು ತನು ಕೆಡುವವರೆಗೆ ಈ ಅಜ್ಞಾನ ಅಳಿಯದು . ಅಕಟಕಟಾ, ಕಣ್ಣಿನ ಅಜ್ಞಾನದ ಸಂಸಾರಕ್ಕೆ ನಿರಪರಾಧಿ ತನು ಸಾಯುವುದಲ್ಲಾ ಕೂಡಲ ಸಂಗಮದೇವಾ ಎಂದು ಬಸವಣ್ಣ ಮರುಕ ವ್ಯಕ್ತ ಪಡಿಸಿದ್ದಾರೆ.

11

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ !
ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ!
ಕರ್ತುವೆ ಕೂಡಲಸಂಗಮದೇವಾ,
ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ.

ತನು ಮತ್ತು ತನುವಿನ ವಿಷಯ ವಾಸನೆ ಕಪ್ಪೆ ಸರ್ಪಗಳಿದ್ದಂತೆ. ಒಂದನ್ನು ಒಂದು ತಿಳಿಯದು. ತನುವಿನ ಚರ್ಮದ ಸ್ಪರ್ಶ ಶಕ್ತಿಯೇ ವಿಷಯ ಸುಖವಾಗಿ ಸರ್ಪವಾಗಿ ಮಾರ್ಪಟ್ಟಿದೆ.

ಸ್ಪರ್ಶ ಬಯಸಿ ಸುಖ ಅನುಭವಿಸಲು ಹೋದ ಚರ್ಮವನ್ನು ಕೆರಳಿ ಸರ್ಪವಾಗಿ ಕುಕ್ಕುತ್ತದೆ ಚರ್ಮ! ಸರ್ಪವಾಗಿ ಕೆರಳಿ ಕುಕ್ಕುವ ಚರ್ಮವೂ ಚರ್ಮವೇ; ಸುಖಿಸಲು ಹೋದ ಚರ್ಮವೂ ಚರ್ಮವೇ! ಅಕಟಕಟಾ ಒಂದನ್ನು ಮತ್ತೊಂದು ತಿಳಿಯದೆ ತನುವಿನ ಸಂಸಾರ ವೃಥಾ ಹೋಯಿತ್ತಲ್ಲಾ!

ಚರ್ಮದಲ್ಲಿ ಚರ್ಮ ಎಂದು ತಿಳಿಯುವ ಅರಿವಿನ ಕರ್ತುವಿದ್ದಾನೆ. ಚರ್ಮವನ್ನು ಬಯಕೆ ಮಾಡಿ ಸ್ಪರ್ಶಿಸಿ ಸುಖಿಸುವ ಅಜ್ಞಾನಿಯೂ ಇದ್ದಾನೆ . ಅಜ್ಞಾನ ಬಳಕೆಯಾದರೆ ತನುವಿನ ಸಂಸಾರ ಸರ್ಪ ಕಚ್ಚಿಸಿಕೊಂಡು ಸಾಯುತ್ತದೆ. ಅರಿವು ಬಳಕೆಯಾದರೆ ಜ್ಞಾನಿ ತನು ಎನ್ನಿಸಿಕೊಂಡು ಸರ್ಪ ದೋಷದಿಂದ ಮುಕ್ತವಾಗುತ್ತದೆ.

ಚರ್ಮ ಸ್ಪರ್ಶಿಸಿ ಸುಖಿಸುವ ಅಜ್ಞಾನ ರಸಾಯನಿಕ ದ್ರವ್ಯವನ್ನುಂಟು ಮಾಡುತ್ತದೆ. ತಡವಾದರೆ ಸ್ಪರ್ಶಿಸದಿದ್ದರೂ ಕಾಮ ದ್ರವ್ಯ ನಷ್ಟವಾಗಿ ತನುವಿಗೆ ಸುಖವಾಗುತ್ತದೆ. ಅಜ್ಞಾನ ಮತ್ತೆ ಸ್ಪರ್ಶ ಸುಖ ಬಯಸುವುದಿಲ್ಲ. ಸುಖ ಎನ್ನುವುದು ತನ್ನ ಚರ್ಮದಲ್ಲಿತ್ತೋ ಅನ್ಯ ಚರ್ಮದಲ್ಲಿತ್ತೋ ಎನ್ನುವುದು ಅಜ್ಞಾನಕ್ಕೆ ತಿಳಿಯುವುದಿಲ್ಲ.

ಚರ್ಮದ ಸುಖದ ದ್ರವ್ಯ ಚರ್ಮವೇ ಚೆಲ್ಲಿ ಸುಖಿಸಿ, ಅನ್ಯ ಚರ್ಮದಲ್ಲಿ ಸುಖವಿದೆಯೆಂದು ಬಯಸುವ ಅಜ್ಞಾನದ ತನುವಿನ ಸಂಸಾರ; ಸರ್ಪ ಕಚ್ಚಿಸಿಕೊಂಡು ವೃಥಾ ಹೋಯಿತ್ತಲ್ಲಾ !

ಚರ್ಮ ಹೆಣ್ಣೂ ಅಲ್ಲ; ಗಂಡೂ ಅಲ್ಲ! ಸ್ಪರ್ಶ ಶಕ್ತಿ ಉಳ್ಳ ತಿಳಿಯುವ ಅರಿವು! ತನುವಿನ ರಕ್ತ, ಮೂಳೆ, ಮಾಂಸ, ಮಜ್ಜಾ , ಮೇದಸ್ಸನ್ನು ಹೊರಚೆಲ್ಲದಂತೆ ರಕ್ಷಿಸುವ ರಕ್ಷಾ ಕವಚ! ರೋಮಗಳಿಂದ ಸುಂದರವಾಗಿ ಕಾಣುವ ಸಸ್ಯಕಾಶಿ, ಬೇರಿಲ್ಲದ ಮರ. ನುಡಿಯುತ್ತಾ ನಡೆದಾಡುವ ಬೋಧೀ ವೃಕ್ಷ! ಅರಿವೆಂಬ ಕರ್ತು ಮರವನ್ನು ಸೃಷ್ಟಿಸಿ ಮರದಲ್ಲಿಯೇ ಸಂಗಮವಾಗಿದ್ದಾನೆ. ನೆನೆದರೆ ಅಜ್ಞಾನದ ಸರ್ಪಕೊಂದು ತನುವೆಂಬ ಜ್ಞಾನದ ಮರವನ್ನು ರಕ್ಷಿಸುತ್ತಾನೆ.

ಶೂಲದ ಮೇಲಣ ವಿಭೋಗವೇನಾದಡೇನೊ?
ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ!
ತನ್ನಾತ್ಮ ತನಗೆ ಹಗೆಯಾದ ಬಳಿಕ
ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ?

ಆನಂದದಿಂದ ತಿನ್ನುವ ಅನ್ನವೇ ಬೇರೆ; ಹಸಿದು ಕಿತ್ತು ತಿನ್ನುವ ಮೃಷ್ಠಾನ್ನವೇ ಬೇರೆ. ಎರಡೂ ಅನ್ನವೇ ಆದರೂ ತಿನ್ನುವಲ್ಲಿ ಭಿನ್ನವಿದೆ. ಆನಂದದಿಂದ ತಿನ್ನುವ ಅನ್ನ ಮೃಷ್ಠಾನ್ನವಾಗುತ್ತದೆ. ಹಸಿದು ತಿನ್ನುವ ಅನ್ನ ಮೃಷ್ಠಾನ್ನವಾದರೂ ಕೂಳಾಗುತ್ತದೆ. ಇದು ದೇಹ ನಿರ್ಮಿಸಿಕೊಂಡ ಶೂಲದ ಮೇಲಿನ ವಿಭೋಗ.

ಕಣ್ಣಲ್ಲಿ ಹರಿದು ತಿನ್ನುವ ಕಾಮವೂ ಇದೆ; ನೋಡಿ ಆನಂದಪಡುವ ದೃಷ್ಟಿಯೂ ಇದೆ. ನೋಡಿ ತಿಳಿದು ತನ್ನಂತೆ ಇರುವ ಸೌಂದರ್ಯ ಹೊಂದಿದ ಜ್ಞಾನಿ ತನು ಎಂದು ಅರಿಯುವ ದಿವ್ಯ ದೃಷ್ಟಿಯೂ ಇದೆ.

ಕಣ್ಣಿನಲ್ಲಿ , ಚರ್ಮದಲ್ಲಿ, ನಾಲಿಗೆಯಲ್ಲಿ , ಮೂಗಿನಲ್ಲಿ, ಕಿವಿಯಲ್ಲಿ ಅಜ್ಞಾನವೆಂಬ ಹಾವುಗಳು ಇವೆ. ಅರಿವೆಂಬ ಗಾರುಡಿಗನೂ ಇದ್ದಾನೆ. ಕಣ್ಣಿನಲ್ಲಿ ವಾಸಮಾಡಿದ ವಿಷಯದ ಹಾವು ಕಣ್ಣಿನೊಂದಿಗೆ ನೋಡಿ ತನುವನ್ನು ಭೋಗಿಸಲು ಅಣಿಗೊಳಿಸುತ್ತದೆ. ಇಡೀ ತನು ಹಾವಿನಂತೆ ಹೆಡೆಬಿಚ್ಚಿ ವಯ್ಯಾರದಿಂದ ಬುಸುಗುಟ್ಟುತ್ತಾ ಕುಣಿಯುತ್ತದೆ. ಮನವೆಂಬ ಅಜ್ಞಾನದ ಈ ಸುಖ ತನುವಿಗೆ ಶೂಲದ ಮೇಲಣ ಭೋಗವೆಂದು ತಿಳಿಯುವುದಿಲ್ಲ.

ನೋಡಿದ ಕಣ್ಣು ಭೋಗಿಸಲರಿಯದು. ಭೋಗಿಸುವ ದೇಹ ನೋಡಲರಿಯದು! ನಾಲಿಗೆ, ಮೂಗು, ಕಿವಿ, ಚರ್ಮದಲ್ಲಿ ವಾಸ ಮಾಡಿದ ಮನವೆಂಬ ಹಾವು ಇಡೀ ದೇಹವನ್ನೆ ಹಾವನ್ನಾಗಿಸಿ ದೇಹದಲ್ಲಿಯೇ ಸಂಸಾರ ಹೂಡಿದೆ. ಹಾವಾಡಿಗನೊಂದಿಗೆ ಸ್ನೇಹ ಮಾಡಿದೆ !

ಬಸವಣ್ಣನವರು ಜ್ಞಾನಭಂಡಾರಿ! ನಾಲ್ಕು ಸಾಲಿನ ವಚನದಲ್ಲಿ ಜಗದ ತನುಗಳ ಅರಿವಿನ ಕಣ್ಣು ತೆರೆಸಿದ ಮಹಾತ್ಮ! ಮಹಾಮೇಧಾವಿ! ಇಲ್ಲಿ ದೇಹದ ಅರಿವನ್ನೇ ಹಾವಾಡಿಗನನ್ನಾಗಿ ಮಾಡಿದ್ದಾರೆ. ಜ್ಞಾನೇಂದ್ರಿಯ ಗಳಲ್ಲಿರುವ ಅಜ್ಞಾನವೆಂಬ ಮನವನ್ನೇ ಹಾವನ್ನಾಗಿ ಮಾಡಿದ್ದಾರೆ.

ಮನವೇ ಹಾವು , ತನುವೇ ಹಾವಿನ ಬುಟ್ಟಿ, ಅರಿವೇ ಹಾವಾಡಿಗ. ಮನ ಹರಿದೆಡೆ ತನುವಿನೊಂದಿಗೆ ಅರಿವೂ ಹೋಗುತ್ತದೆ. ಮನ ತನುವಿನೊಂದಿಗೆ ಭೋಗಿಸುತ್ತದೆ; ಅರಿವು ಬೇಡವೆಂದು ಪಾಠ ಮಾಡುತ್ತದೆ; ಇದು ಭೋಗದಲ್ಲಿ ಭಾಗಿಯಲ್ಲ. ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ !

ಮನವೆಂಬ ಹಾವು ವಿಷಯದ ಸ್ನೇಹ ಮಾಡಿದರೆ ತನುವೇನು ಮಾಡೀತು?

ಪಾಂಡವರು ಐದು ಜನ. ಕಣ್ಣು , ಕಿವಿ, ಮೂಗು, ನಾಲಿಗೆ, ಚರ್ಮ! ಈ ಐದೂ ಜನರಿಗೆ ಮನವೆಂಬ ದ್ರೌಪದಿಯೊಬ್ಬಳೆ ಹೆಂಡತಿ ! ಅರಿವೆಂಬ ಕೃಷ್ಣನೊಬ್ಬನೆ ಸಾರಥಿ ! ಮನ ಪಗಡೆಯಾಡಲು ಪಾಂಡವರನ್ನು ಕರೆದುಕೊಂಡು ಹೋದರೆ ಶ್ರೀ ಕೃಷ್ಣನೇನು ಮಾಡಿಯಾನು? ಅವರಿಗೆ ಸಾರಥಿಯಾದ! ಮನಹೇಳಿದಂತೆ ಕೇಳಿ ಪಗಡೆಯಾಡಿದರು. ರಾಜ್ಯವನ್ನು ಸೋತರು;

ತಮ್ಮನ್ನು ಸೋತರು; ದ್ರೌಪದಿಯನ್ನೂ ಸೋತರು; ವಿವಸ್ತ್ರಗೊಳ್ಳುವಾಗ ಮನವೆಂಬ ದ್ರೌಪತಿ ಅರಿವೆಂಬ ಕೃಷ್ಣನ ಮೊರೆ ಹೊಕ್ಕಳು. ವಸ್ತ್ರದಾನ ಮಾಡಿ ತನ್ನ ಬುಟ್ಟಿಯಲ್ಲಿ ಹಾಕಿಕೊಂಡು ಗಾರುಡಿಗನಾದ ಶ್ರೀಕೃಷ್ಣ !

ವ್ಯಾಸ ಮಹರ್ಷಿಗಳ ಮಹಾಭಾರತದ ಅರಿವಿನ ಈ ಸೂತ್ರವು ಜ್ಞಾನಕ್ಕೆ ಬಳಕೆ ಯಾಗಲಿಲ್ಲ ; ಕತೆಯಾಗಿ ಅಜ್ಞಾನದ ನಾಲಿಗೆಗಳಲ್ಲಿ ಕುಣಿದರೆ ಋಷಿಗಳೇನು ಮಾಡಿಯಾರು?

ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ; ಮಹಾದಾನಿ ಕೂಡಲಸಂಗಮದೇವಾ?:

ತನುವನ್ನು ಅರಿವಿನೆಡೆಗೆ ಕರೆದುಕೊಂಡು ಹೋಗುವ ಆತ್ಮವೂ ಇದೆ; ಅಜ್ಞಾನದೆಡೆಗೆ ಕರೆದುಕೊಂಡು ಹೋಗುವ ಮನವೂ ಇದೆ.

ಮನವನ್ನು ಅಪ್ಪಿಕೊಂಡು ಅರಿವಿನೆಡೆಗೆ ನಡೆಯುವ ತನ್ನಾತ್ಮ ತನಗೆ ಹಗೆಯಾದ ಬಳಿಕ ಮತ್ತಾರಿಗೆ ದೂರಲಿ? ಆತ್ಮವೆಂಬ ಜಗದ ಪರಮಾತ್ಮನಾದ ನೀನು ಅರಿವು ದಾನಮಾಡಿದೆ , ಅರಿವಿನ ನೆರಳೆಂಬ ಮನವನ್ನು ದಾನಮಾಡಿದೆ, ತನುವನ್ನು ದಾನಮಾಡಿ; ಆ ತನುವಿನಲ್ಲಿಯೇ ಸಂಗಮವಾದ ಮಹಾದಾನಿ ಕೂಡಲಸಂಗಮದೇವ ನೀನು! ನೀನೇ ನನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ? ಎಂಬ ಆಲಾಪದ ಬಸವಣ್ಣನ ಸೂತ್ರವನ್ನು ಹಿಡಿದು ಮನ ಅರಿವಿನೆಡೆಗೆ ಪಯಣಿಸಬೇಕಾಗಿದೆ. ಅವನ ಸ್ನೇಹ ಮಾಡಿ ಅಲ್ಲಿಯೇ ಸಂಗಮವಾಗಬೇಕಿದೆ.

13

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ
ಎನ್ನುವನು ಕಾಯಯ್ಯಾ, ಕಾಯಯ್ಯಾ.
ಹುರುಳಿಲ್ಲ! ಹುರುಳಿಲ್ಲ!
ಕೂಡಲಸಂಗಮದೇವಾ, ಶಿವಧೋ! ಶಿವಧೋ!

ಮನ ತನುವನ್ನು ಬಳಕೆ ಮಾಡಿಕೊಂಡು ತನಗೆ ಬಯಸಿದ ರುಚಿಯತ್ತ ವಾಲುತ್ತದೆ. ಆ ಬಲೆಯಲ್ಲಿ ತನುವನ್ನು ಸಿಲುಕಿಸಿ ತೊಳಲಿ ಬಳಲುವಂತೆ ಮಾಡುತ್ತದೆ. ತನು ಇರುವವರೆಗೆ ಮನ ಅನೇಕ ಸಂಸಾರಗಳನ್ನು ಹೂಡುತ್ತದೆ. ಇದು ಮನ ತನುವಿನಲ್ಲಿ ಹೂಡಿದ ಸಂಸಾರ.

ಸೇವೆಯ ಸೋಗುಹಾಕಿ ತನುವನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಂಡು ಉಪಜೀವನಕ್ಕೆ ತಂದು ನಿಲ್ಲಿಸುತ್ತದೆ. ಕರೆನ್ಸಿ, ಆಭರಣ, ಆಸ್ತಿ, ಸಂಪತ್ತಿನೆಡೆಗೆ ವಾಲಿ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ವಿಷಯಾಸಕ್ತಿ, ಮೋಜಿಗೆ ತನು ಬಳಕೆಯಾಗಿ ಸೇವೆ ಗೌಣವಾಗುತ್ತದೆ. ಅಡ್ಡಿಪಡಿಸಿದ ತನುಗಳನ್ನು ಇಲ್ಲವಾಗಿಸುತ್ತದೆ. ಇಲ್ಲ ತನ್ನಂತೆ ಮಾಡಿಕೊಂಡು ಜೈಕಾರ ಹಾಕಿಸುತ್ತದೆ.

ಮನ ತಾನೇ ನಿರ್ಮಿಸಿಕೊಂಡ ಸಂಸಾರದ ಬಲೆಯಲ್ಲಿ ತನುವನ್ನು ಬಂಧಿಸಿ ತನುವಿನೊಂದಿಗೆ ಸುಖಿಸುತ್ತದೆ ; ದುಃಖಕ್ಕೂ ಈಡುಮಾಡುತ್ತದೆ. ಮನ ತನುವಿನಲ್ಲಿ ಹೂಡುವ ಸಂಸಾರಗಳು ಒಂದೆರಡಲ್ಲ. ಸಾವಿರಾರು ! ರಾಜಕೀಯ, ಮಠ ಪೀಠ, ಹೋರಾಟ, ಅಧಿಕಾರ, ಬಡವ, ಶ್ರೀಮಂತ, ಶಿಕ್ಷಣ, ಕಳ್ಳ , ಹಾದರಿಗ, ವಿಷಯ ಲಂಪಟ ಈ ಸೋಗುಗಳೆಲ್ಲ ಉಪಜೀವನಕ್ಕಾಗಿ ಮಾರ್ಪಟ್ಟು ಜೀವನದ ದರ್ಶನವಾಗದೆ ಮನ ತನುವಿನೊಂದಿಗೆ ತೊಳಲಿ ಬಳಲುತ್ತದೆ.

ಸಂಸಾರದ ಬಲೆಯಲ್ಲಿ ತನುವನ್ನು ಸಿಲುಕಿಸಿ ಅದರಲ್ಲಿ ವಾಸ ಮಾಡುವುದು ಮನಕ್ಕೆ ಬಲು ಸುಖ ! ಮನ ಮಾಡುವ ಅವಿವೇಕಿ ಸಂಸಾರಕ್ಕೆ ಜನ ತನುವನ್ನು ನಿಂದಿಸುತ್ತಾರೆ. ಮನ ಜನಕ್ಕೆ ಕಾಣುವುದಿಲ್ಲ; ಜನ ಕೂಡಾ ಮನದ ಸಂಸಾರದ ಬಲೆಯಲ್ಲಿ ಬಂಧಿಯಾದ ಕಾರಣ ನಿಂದಿಸುವುದು, ನಿಂದನೆಗೆ ಒಳಗಾಗುವುದು ಸಹಜ ಕೆಲಸಗಳಾಗುತ್ತವೆ.

ಸಂಸಾರದ ಬಲೆ ಎಂದರೆ ಹೆಂಡತಿ, ಮಕ್ಕಳು, ಮನೆ , ಬಂಧು , ಬಳಗವೆಂದಲ್ಲ. ದೇಹ ಒಂದು ಅದ್ಭುತವಾದ ಮನೆ. ಈ ಮನೆಯಲ್ಲಿ ಅರಿವೂ ಇದೆ; ಮನವೂ ಇದೆ. ಮನ ಅರಿವಿನಲ್ಲಿ ಬಂಧಿಯಾದರೆ ಅರಿವಿನ ಮನೆ! ಮನ ವಿಷಯದಲ್ಲಿ ಬಂಧಿಯಾದರೆ ಅಜ್ಞಾನದ ಮನೆ ! ಮನ ತಾನೇ ನಿರ್ಮಿಸಿ ಕೊಂಡ ಸ್ವಯಂಕೃತ ಅಪರಾಧ. ನೋಡುವ ದೇಹಗಳೆಲ್ಲ ಒಂದೇ ಆದರೂ ಹಲವಾರು ಹಣೆಪಟ್ಟಿಗಳನ್ನು ಹೊಂದಿದೆ. ತಾನು ಕಟ್ಟಿಕೊಂಡ ಹಣೆಪಟ್ಟಿಯಲ್ಲಿ ತಾನೇ ಸಿಲುಕಿ ಹುರುಳಿಲ್ಲದ ಸಂಸಾರ ಮಾಡುತ್ತ ತನುವಿನೊಂದಿಗೆ ಸಾಯುತ್ತದೆ.

ಅರಿವು ತನುವಿನ ಸಂಪತ್ತು ; ಮನ ತನುವಿನ ಆಪತ್ತು. ಮನಕ್ಕೆ ಇನ್‌ಸ್ಟ್ಯಾಂಟ್ ಸುಖ ಬೇಕು. ಆ ಸುಖಕ್ಕಾಗಿ ತನುವನ್ನು ಆಪತ್ತಿಗೆ ಒಡ್ಡಿ ಮನ ಸುಖಪಟ್ಟು ತನುವನ್ನು ಸಂಕಷ್ಟಕ್ಕೆ ತಳ್ಳುತ್ತದೆ. ಅರಿವು ತನುವನ್ನು ತನ್ನತ್ತ ಸೆಳೆದರೆ ಮನ ತನುವನ್ನು ತನ್ನೆಡೆಗೆ ಸೆಳೆಯುತ್ತದೆ. ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆದಂತೆ.

ಹೋರಾಟದಿಂದ, ರಾಜಕೀಯದಿಂದ, ಸರಕಾರ ಕೊಡುವ ಶಿಕ್ಷಣದಿಂದ, ತನು ಶ್ರೀಮಂತವಾಗಲಾರದು. ಸಹಜ ತನುವಾಗಲೂ ಅರಿಯದು. ತನುವಿನ ಟೆಕ್ನಿಕ್ ತನುವೇ ಬಳಕೆ ಮಾಡಿಕೊಳ್ಳಬೇಕು , ತಾನು ನಿರ್ಮಿಸಿಕೊಂಡ ಬಲೆಯಿಂದ ತಾನೇ ಪಾರಾಗಬೇಕು.

ಬಸವಣ್ಣನವರು ಅರಿವಿನ ಟೆಕ್ನಿಕ್ ಬಳಸಿ ಅಜ್ಞಾನದ ಬಲೆಯಿಂದ ತನು ಪಾರಾಗುವ ಬಗೆಯನ್ನು ನಾಲ್ಕು ಸಾಲಿನಲ್ಲಿ ಹೇಳಿದ್ದಾರೆ: ಅರಿವಿನ ಬೆಳಕಿನಿಂದಾದ ನೆರಳೇ ಮನ . ಇದು ಸ್ವತಂತ್ರವಲ್ಲ. ತನುವಿನ ಮನೆಗೆ ಮನ ಬಾಡಿಗೆದಾರ. ನೋಡಿದ್ದನ್ನು, ಕೇಳಿದ್ದನ್ನು, ಮುಟ್ಟಿದ್ದನ್ನು, ಮೂಸಿಸಿ, ರುಚಿಸಿದ್ದನ್ನು ತನುವಿನಿಂದಲೇ ಸುಖಿಸುವುದು ಮನದ ಕೆಲಸ. ಹೀಗೆ ಸುಖಿಸಿ ತನುವನ್ನು ದುಃಖಕ್ಕೀಡುಮಾಡುವುದೆ ಮನದ ಗುರಿ. ಸುಖಿಸುವ ಪದಾರ್ಥವನ್ನು ಮನ ಅರಿವಿನಲ್ಲಿ ಸಂಗಮವಾಗಿ ನೋಡಿದರೆ ಪದಾರ್ಥದಲ್ಲಿ ಹುರುಳಿಲ್ಲ. ಅರಿವು ತನ್ನ ಬಲೆಯಲ್ಲಿ ಸಿಲುಕಿಸಿ ಅಜ್ಞಾನದೆಡೆಗೆ ಸುಳಿಯದಂತೆ ಮಾಡುತ್ತದೆ. ಮನ ಅರಿವಿನ ಬೆಳಕಿನಲ್ಲಿ ಸಂಗಮವಾಗಿ ಬೆಳಕೇ ತಾನಾಗುತ್ತದೆ. ತನು ಅರಿವಿನ ತನುವಾಗಿ ಬೆಳಗುತ್ತದೆ.

ಮಗುವಿಗೆ ತನ್ನ ಕರುಳ ಬಳ್ಳಿಯೇ ತನಗೆ ತೊಡಕಾದಂತೆ. ತನುವಿಗೆ ತನ್ನ ಮನವೇ ತನಗೆ ತೊಡಕಾಗಿದೆ. ತೊಡಕಿನ ಬಲೆಯಲ್ಲಿ ಸಿಲುಕಿದ ಮನ ತನುವಿನ ಅರಿವಿನಿಂದಲೇ ಕತ್ತರಿಸಿಕೊಳ್ಳಬೇಕು.

14

ನಾನೊಂದ ನೆನೆದಡೆ ತಾನೊಂದ ನೆನೆವುದು
ನಾನಿತ್ತಲೆಳೆದಡೆ ತಾನತ್ತಲೆಳೆವುದು
ತಾ ಬೇರೆ ಎನ್ನನಳಲಿಸಿ ಕಾಡಿತ್ತು

ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು
ಕೂಡಲಸಂಗನ ಕೂಡಿಹೆನೆಂದಡೆ,
ತಾನೆನ್ನ ಮುಂದುಗೆಡಿಸಿತ್ತು ಮಾಯೆ !

ಬಸವಣ್ಣನವರು ಮನುಕುಲ ಉದ್ಧಾರವಾಗಲು ಅರಿವಿನ ಅಮೃತವನ್ನೇ ಬೊಗಸೆಯಲ್ಲಿ ಹಿಡಿದು ಜಗದ ತನುಗಳಿಗೆ ಉಣಬಡಿಸಿದಂತಿದೆ ಈ ಸೂತ್ರ.

ತನುವಿನ ಅರಿವು ಮನಕ್ಕೆ ತಿಳಿದರೂ ಮನ ಅರಿವಿಗೆ ಅಷ್ಟು ಬೇಗ ಸೋಲುವುದಿಲ್ಲ. ಅರಿವಿನ ತನುವನ್ನೇ ವಾಹನ ಮಾಡಿಕೊಂಡು ಜ್ಞಾನದ ಮೇಲೆ ಸವಾರಿ ಮಾಡುತ್ತದೆ. ಅಷ್ಟೇ ಏಕೆ? ಮನ ನೂರಾ ಒಂದು ಭಾಗಗಳಲ್ಲಿ ಸೀಳಿ ತನುವನ್ನು ಘಾಸಿಗೊಳಿಸುತ್ತದೆ. ಈ ಪ್ರಯೋಗವನ್ನು ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ ಕೌರವ ಪಾತ್ರದಲ್ಲಿ ಹೆಣೆದಿದ್ದಾರೆ.

ಬಸವಣ್ಣನವರು ಬ್ರಹ್ಮಜ್ಞಾನಿಗಳು . ಈ ವಚನದಲ್ಲಿ ತಮ್ಮ ತೊಡಕನ್ನು ಹೇಳುತ್ತಿಲ್ಲ. ಸಕಲ ತನುಗಳು ಬ್ರಹ್ಮಜ್ಞಾನ ಹೊಂದಿದ್ದರೂ ಮನದ ತೊಡಕಿನಲ್ಲಿ ಸಿಲುಕಿ ಘಾಸಿಗೊಳ್ಳುತ್ತಿರುವ ಬಗ್ಗೆ ವಿವರಿಸಿ; ಅದನ್ನು ಬಿಡಿಸಿಕೊಳ್ಳುವ ಸೂಕ್ಷ್ಮಾತಿ ಸೂಕ್ಷ್ಮದ ಸೂತ್ರ ಹೆಣೆದಿದ್ದಾರೆ.

ಮನದಲ್ಲಿ ಎರಡು ಭಾಗಗಳಾಗಿಸಿದ್ದಾರೆ. ಒಂದು ಅರಿವಿನೆಡೆಗೆ ಎಳೆದರೆ ಮತ್ತೊಂದು ಅಜ್ಞಾನದೆಡೆಗೆ ಎಳೆದು ತನುವನ್ನು ಘಾಸಿ ಮಾಡುತ್ತದೆ. ತಾ ಬೇರೆಯೇ ಆಗಿ ತನುವನ್ನು ಅಳಲಿಸಿ ಕಾಡುತ್ತದೆ. ತಾ ಬೇರೆಯೇ ಆಗಿ ತನುವನ್ನು ಬಳಲಿಸಿ ಕಾಡುತ್ತದೆ .

ಹಳದಿ ಬಣ್ಣಕ್ಕೆ ಮಾರುಹೋದ ಮನ ತನುವಿಗೆ ಚಿನ್ನಾಭರಣದ ಸವಿಯನ್ನುಣ್ಣಿಸಿ ತನುವನ್ನು ಕಳುವಿಗೆ ಅಣಿಗೊಳಿಸುತ್ತದೆ . ದಕ್ಕದಿದ್ದರೆ ಅಡ್ಡಿ ಪಡಿಸಿದ ತನುವನ್ನು ಕೊಲೆ ಮಾಡುತ್ತದೆ . ಏಕ ಕಾಲಕ್ಕೆ ತನುವಿಗೆ ಕಳ್ಳ ಕೊಲೆಗಡುಕನೆಂಬ ಹಣೆಪಟ್ಟಿ ಕಟ್ಟಿ ಜೇಲಿಗೆ ತಳ್ಳುತ್ತದೆ. ತನುವನ್ನು ತೊಳಲಿ ಬಳಲುವಂತೆ ಮಾಡುತ್ತದೆ .

ಆಭರಣಕ್ಕೆ ಮಾರು ಹೋದ ಮನ ಅರಿವಿಗೆ ಮಾರು ಹೋಗಿ ಅರಿವಿನಿಂದ ಆಭರಣ ನೋಡಿದರೆ ಅದು ಹಳದಿ ಬಣ್ಣ ಆವರಿಸಿದ ಲೋಹ. ಬಣ್ಣ ಇಲ್ಲದ ಲೋಹವನ್ನು ಯಾರೂ ಖರೀದಿಸುವುದಿಲ್ಲ , ಕಳುವು ಮಾಡುವುದಿಲ್ಲ, ತನು ಸಾವು ನೋವುಗಳಿಗೆ ಒಳಗಾಗುವುದಿಲ್ಲ. ಜೇಲಿಗೆ ಹೋಗುವುದಿಲ್ಲ. ತನು ತೊಳಲಿ ಬಳಲುವುದಿಲ್ಲ.

ಕೂಡಲಸಂಗನ ಕೂಡಿಹೆನೆಂದಡೆ, ತಾನೆನ್ನ ಮುಂದುಗೆಡಿಸಿತ್ತು ಮಾಯೆ:

ತನುವಿನಲ್ಲಿ ಅರಿವು ಕೂಡಿ ಸಂಗಮವಾಗಿದೆ. ಈ ಅರಿವಿಗೆ ಬಸವಣ್ಣನವರು ಸಂಗಮನಾಥ ಎಂದು ಹೆಸರಿಸಿದ್ದಾರೆ . ಮನಕ್ಕೆ ಈ ಸಂಗಮನಾಥನ ಪರಿಚಯವಾದರೆ ಸಾಕು ಸಂಗಮನಾಥನೊಂದಿಗೆ ಬೆರೆತು ಸಂಗಮವಾಗಿ ತನ್ನ ಹೆಸರು ಕಳೆದುಕೊಳ್ಳುತ್ತದೆ.

15

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ

ನೀವೆ ಬಲ್ಲಿರಿ ಕೂಡಲಸಂಗಮದೇವಾ !

ಮನವೆಂಬ ಮಾಯೆ ನಿರ್ಧರಿಸಿದ ಶಬ್ದಗಳನ್ನು ಅರಿವಿನಿಂದ ನೋಡಲು ಹೋದರೆ ಅರ್ಥ ಕಳೆದುಕೊಳ್ಳುತ್ತವೆ. ಗಂಡು-ಹೆಣ್ಣು ಎನ್ನುವ ಶಬ್ದವನ್ನೂ ಕಳೆದುಕೊಂಡು ದೇಹ, ದೇಹದ ಅರಿವು ವಿರಾಟ ಸ್ವರೂಪವಾಗಿ ನಿಲ್ಲುತ್ತದೆ.

ದೇಹ ಒಂದೇ; ದೇಹದಲ್ಲಿರುವ ಮಟೀರಿಯಲ್ ಕೂಡಾ ಒಂದೇ. ದೇಹದಲ್ಲಿರುವ ಅರಿವೂ ಒಂದೇ. ದೇಹಕ್ಕೆ ಹೆಮ್ಮಾರಿಯಂತೆ ಆವರಿಸಿದ ಮನವೆಂಬ ಮಾಯೆಯ ಅಜ್ಞಾನವೂ ಒಂದೇ.

ಜನಿತಕ್ಕೆ ತಾಯಿ-ತಂದೆಯಾಗಿ, ಮೋಹಕ್ಕೆ ಮಗುವಾಗಿ, ಕೂಟಕ್ಕೆ ಸ್ತ್ರೀ ಪುರುಷನಾಗಿ ದೇಹಕ್ಕೆ ಮಾಯೆ ಕಾಡುತ್ತದೆ. ಈ ಮಾಯೆಯನ್ನು ಕಳೆಯುವುದು ಮನದಿಂದ ಸಾಧ್ಯವಿಲ್ಲ ; ದೇಹದ ಅರಿವು ಮಾತ್ರ ಕಳೆಯಲು ಸಾಧ್ಯ!

ಶರಣರು ಸಂತರು ಸಾಧು ಸತ್ಪುರುಷರು ದಾಸವರೇಣ್ಯರು ದೇಹದ ಶಾಶ್ವತ ಸುಖಕ್ಕಾಗಿ ವೈಜ್ಞಾನಿಕವಾಗಿ ಕೆಲಸ ಮಾಡಿದರು.

ಮಹಾಜ್ಞಾನಿ ರಾಮಕ್ರಿಷ್ಣ ಪರಮಹಂಸರು ದೇಹದ ಅರಿವನ್ನು ಜಗನ್ಮಾತೆ ಎಂದು ಕರೆದರು. ದೇಹಕ್ಕೆ ಆವರಿಸಿದ ಮನವೆಂಬ ಮಾಯೆಯನ್ನು ಮಗುವಾಗಿಸಿ, ಆ ಮಗುವೇ ತಾವಾಗಿ ಅರಿವೆಂಬ ತಾಯಿಯನ್ನು ಹಗಲಿರುಳು ನೆನೆದರು. ಆ ತಾಯಿಗೆ ಮಗುವಾಗಿ ತಾಯಿ ಮಗು ಒಂದಾದರು. ಮಾಯೆಯನ್ನು ಅಳಿದುಕೊಂಡ ಮನ ತಾಯಿಗರ್ಭ ಸೇರಿ ಜಗನ್ಮಾತೆಯೇ ತಾನಾಯಿತು.

ಮದಿರೆ ಪಾತ್ರೆಯಲ್ಲಿದ್ದರೆ ಹೊಯ್ದಾಡುವುದಿಲ್ಲ; ದೇಹಕ್ಕೆ ಇಳಿದರೆ ಸಕಲ ಸಂಬಂಧಗಳನ್ನು ಕಳೆದುಕೊಂಡು ಮರ್ಕಟನಂತಾಗುತ್ತದೆ. ಇಂತಹ ಮನವೆಂಬ ಮಾಯೆಯನ್ನು ಸಖಿಯನ್ನಾಗಿಸಿ, ದೇಹದ ಅರಿವನ್ನೇ ಸಖನನ್ನಾಗಿ ಮಾಡಿಕೊಂಡು ಅರಿವಿನ ಶಾಶ್ವತ ಸುಖ ಅನುಭವಿಸಿದರು ಉಮರ್‌ಖಯಾಮ್!

ಏಸುಕ್ರಿಸ್ತ ದೂತನಾದ. ದೇಹದ ಅರಿವೇ ದೇವನಾಯಿತು. ಆ ದೇವ ಹೇಳಿದಂತೆ ದೂತ ಕೇಳಿದ. ದೇವ ಒಡಲೊಡೆಯನಾದ. ಮಾಯೆಯೆಂಬ ಮನ ಒಡಲೊಡೆಯನ ದೂತನಾಯಿತು. ಒಡೆಯ ಹೇಳಿದ ಮಾತು ದೂತ ಕೇಳಲೇಬೇಕು; ಒಡಲೊಡೆಯ ಮತ್ತು ಮನವೆಂಬ ದೂತನ ಒಡಂಬಡಿಕೆಯೇ ಒಪ್ಪಂದವಾಯಿತು. ಮೆಮೊರೆಂಡೆಮ್ ಆಫ್ ಅಂಡ್ರಸ್ಟ್ಯಾಂಡಿಂಗ್ ದೇಹದಲ್ಲಿಯೇ ನಿರ್ಮಾಣವಾಯಿತು.

ಈ ಒಪ್ಪಂದಕ್ಕೆ ಮಾರುಹೋಗಿ ಹದಿನಾರು ಸಾವಿರ ಜನ ಶ್ರೀಕ್ರಿಷ್ಣನನ್ನು ಗಂಡನನ್ನಾಗಿ ಮಾಡಿಕೊಂಡರು. ತಾವು ಹೆಂಡಿರಾದರು. ಗೋಪಿಕಾ ಸ್ತ್ರೀಯರಾದರು. ಶ್ರೀಕ್ರಿಷ್ಣ ಗುರುವಾಗಿ ತಿಳಿಹೇಳಿದ; ಗೋಪಿಕಾ ಜನಕ್ಕೆ ಸಖನಾದ; ಮನದಿಂದ ಅರಿವಿನ ಮಾತು ಕೇಳಿದ ಹದಿನಾರು ಸಾವಿರ ಜನ ಸಖಿಯರಾದರು. ಸಖ ಹೇಳಿದ ಮಾತು ಸಖಿ ಕೇಳಲೇಬೇಕು. ಇದು ದೇಹದ ಒಪ್ಪಂದವಾಯಿತು.

ಕಲ್ಯಾಣದಲ್ಲಿ ಬಸವಣ್ಣನ ಅರಿವಿನ ಉಪನ್ಯಾಸ ನಡೆದಿತ್ತು. ಒಂದು ಲಕ್ಷ ತೊಂಬತ್ತಾರು ಸಾವಿರ ಜನ ಬಂದು ಹೋದರು. ಏಳು ನೂರಾ ಎಪ್ಪತ್ತು ಜನ ಅರಿವೆಂಬ ಲಿಂಗಕ್ಕೆ ಶರಣು ಹೋಗಿ ಸತಿಯಾದರು. ಕೂಡಲಸಂಗಮದೇವನೇ ತಾವಾದರು.

ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣೆಯ ಭಕ್ತೆ, ಗಂಡಕೊಂಬುದು ಪಾದೋದಕ ಪ್ರಸಾದ; ಹೆಂಡತಿಕೊಂಬುದು ಸುರೆಮಾಂಸ, ಭಾಂಡ ಭಾಜನ ಶುದ್ಧವಿಲ್ಲದಿರ್ದಡೆ ಹೆಂಡದ ಮಡಕೆ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

ದೇಹದಲ್ಲಿ ಅರಿವೆಂಬ ಗಂಡನಿದ್ದಾನೆ; ಮನವೆಂಬ ಹೆಂಡತಿಯಿದ್ದಾಳೆ. ಗಂಡ ಶಿವಲಿಂಗದೇವರ ಭಕ್ತನಾದರೆ ಹೆಂಡತಿ ಮಾರಿ ಮಸಣೆಯ ಭಕ್ತೆ. ಗಂಡನಿಗೆ ಪಾದೋದಕ ಪ್ರಸಾದ ಬೇಕು; ಹೆಂಡತಿಗೆ ಸುರೆ ಮಾಂಸ ಬೇಕು. ದೇಹದ ಅರಿವು ದೇಹದ ಮನ ಉತ್ತರ ದಕ್ಷಿಣವಾಗಿ, ದೇಹಕ್ಕೆ ಸಮಧಾನ ಇಲ್ಲವಾಗುತ್ತದೆ. ಭಾಂಡ ಭಾಜನ ಶುದ್ಧವಿಲ್ಲದ ದೇಹ ಹೆಂಡದ ಮಡಕೆ ಯಾಗುತ್ತದೆ. ಒಳಗೆ ತಿಳಿದು ಅರಿವಿನಿಂದ ಸ್ವಚ್ಚಗೊಳಿಸಿದರೆ ಸುಖ. ಮಾರಿ ಮಸಣೆಯ ಭಕ್ತೆಯೆಂಬ ಹೆಂಡತಿ ತಾನಾಗಿಯೇ ಅರಿವೆಂಬ ಗಂಡನಿಗೆ ಭಕ್ತಿ ಮಾಡುವುದು ಬಲು ಜಟಿಲ; ತಿಳಿದರೆ ಬಲು ಸುಲಭ !

ಶರಣರು ಮಾಯೆಯೆಂಬ ಮನಕ್ಕೆ ಮೋಹಗೊಳ್ಳಲಿಲ್ಲ; ಅದು ಕುಣಿಸಿದಂತೆ ಕುಣಿಯಲಿಲ್ಲ; ಅದನ್ನು ಹಿಡಿದು ಪಳಗಿಸಿದರು; ಹೆಳವಳನ್ನಾಗಿ ಮಾಡಿದರು; ಒಡಲೊಡೆಯ ಅರಿವೆಂಬ ದೇವರಿಗೆ ಕೊಟ್ಟು ಮದುವೆ ಮಾಡಿದರು. ಮನವೆಂಬ ಮಾಯೆ ಅರಿವೆಂಬ ಪತಿಗೆ ಶರಣು ಹೋಗಿ ಸತಿಯಾಯಿತು. ಅರಿವೆಂಬ ಲಿಂಗವೇ ಪತಿಯಾದ; ಸತಿಪತಿಗಳು ಸಂಸಾರ ಹೂಡಲು ಅಂಗವೇ ಮನೆಯಾಯಿತು.

ಶರಣ ಸತಿಯಾಯಿತು. ಲಿಂಗ ಪತಿಯಾಯಿತು. ಸತಿ ಪತಿ ಸಮರಸವಾಗಿ ಬೆರೆತರು, ಅಂಗವೇ ಲಿಂಗಾಂಗವಾಯಿತು; ಅರಿವಿನ ಅಂಗವಾಯಿತು. ಅರಿವು ಮನ ಅಂಗದಲ್ಲಿ ಬೆರೆತು ಕೂಡಲಸಂಗಮವಾಯಿತು.

16

ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇರಿ
ಕೊಡೆ ಕೋಟಿ ಶೂರರು ಹನ್ನಿಬ್ಬರಯ್ಯಾ !
ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ
ಅರಿದು ಕೊಲುವಡೆ ರಿಪುಗಳ ಕಲಿತನವ ನೋಡಾ !
ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತಾಯಿತ್ತು
ಕೂಡಲಸಂಗಮದೇವಾ, ನಿಮ್ಮ ಹೆಸರಿಲ್ಲದ ಹೆಸರು !

ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇರಿ ಕೊಡೆ ಕೋಟಿ ಶೂರರು ಹನ್ನಿಬ್ಬರಯ್ಯಾ :

ಅಲೆಕ್ಝಾಂಡರ್ ಮಹಾಶೂರ, ಅತ್ಯುತ್ತಮ ಕುದರೆ ಸವಾರ , ಯುದ್ಧ ನಿಪುಣ, ರಣರಂಗದ ಕಲಿ, ಅನೇಕ ಶೂರರನ್ನು ಕೊಂದು ಚಕ್ರವರ್ತಿ ಎನ್ನಿಸಿಕೊಂಡವ. ಆದರೂ ಇವನನ್ನು ಮಹಾವೀರ ಎನ್ನಲು ಬರುವುದಿಲ್ಲ. ಏಕೆಂದರೆ ಇವನು ಹತ್ತಿದ ಕುದುರೆಯನ್ನೇ ಕೊಂದವ. ಚಿನ್ನ, ಭೂಮಿಯ ದಾಹಕ್ಕಾಗಿ ಆಡಳಿತ ವಿಸ್ತರಣೆಗಾಗಿ ಅನೇಕ ಕುದುರೆಗಳನ್ನು ವೀರರನ್ನು ಕೊಂದು ಸಾಮ್ರಾಟನಾದವ. ಹತ್ತಿದ ಕುದುರೆಯನ್ನು ಪಳಗಿಸುವ ಕಲೆ ಗೊತ್ತಿಲ್ಲದವನು ಮಹಾವೀರನಾಗಲು ಸಾಧ್ಯವೇ ಇಲ್ಲ.

ಬುದ್ಧ ಮಹಾವೀರನಾದ. ಸಿದ್ಧಾರ್ಥನೆಂಬ ಹೆಸರಿನ ಕುದುರೆಯನ್ನು ಕೊಲ್ಲಲಿಲ್ಲ; ಪಳಗಿಸಿ ತನ್ನಂತೆ ಮಾಡಿಕೊಂಡ. ಆ ಕುದುರೆಯನ್ನು ಹತ್ತಿ ಜ್ಞಾನ ಯುದ್ಧಕ್ಕೆ ಹೋದ . ಕುದುರೆಗಳೆಲ್ಲ ಪಳಗಿ ಬುದ್ಧನಾದವು.

ದೇಹ ಎನ್ನುವುದು ಒಂದು ಕುದುರೆ. ಈ ಕುದುರೆಯಲ್ಲಿ ಅರಿವೆಂಬ ಗುರುವು ಇದ್ದಾನೆ; ಈ ಗುರುವನ್ನು ತಿಳಿಯುವ ಮನವೆಂಬ ಶಿಷ್ಯನು ಇದ್ದಾನೆ. ಆ ಗುರುವೇ ಬುದ್ಧ ಆತನಿಗೆ ಶಿಷ್ಯನಾದವನೇ ಸಿದ್ಧಾರ್ಥ. ಸಿದ್ಧಾರ್ಥನನ್ನು ತನ್ನಂತೆ ಮಾಡಿಕೊಂಡು ಜ್ಞಾನ ಯುದ್ಧಕ್ಕೆ ಹೋದ. ಎದುರಾದ ಅಜ್ಞಾನದ ಸೈನ್ಯವೆಲ್ಲ ನಾಷವಾಯಿತು. ಅಂಗುಲಿಮಾಲ ಸತ್ತು ಬುದ್ಧನೇ ಆದ !

ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ ಅರಿದು ಕೊಲುವಡೆ ರಿಪುಗಳ ಕಲಿತನವ ನೋಡಾ :

ಆನೆ ಅಮೃತ ಶಿಲೆಯಲ್ಲಿಯ ತನ್ನ ಪ್ರತಿರೂಪ ನೋಡಿ ವೈರಿಯೆಂದೇ ತಿಳಿದು ಯುದ್ಧ ಮಾಡಿ ಸಾಯುತ್ತದೆ. ತನ್ನಂತೆಯೇ ಇರುವ ಆನೆಯನ್ನು ನೋಡಿ ಆನೆಗೆ ಸಿಟ್ಟು ಬರಬೇಕೆ? ಇದು ಆನೆಗೆ ತಿಳಿಯುವುದಿಲ್ಲ; ಅದು ಮದ್ದಾನೆ! ಆದರೆ ಮನುಷ್ಯನಿಗೆ ತಿಳಿಯಬೇಡವೆ. ದೇಹದ ಅರಿವು ಮನವೆಂಬ ಅಹಂಕಾರಿಗೆ ಪರಿಚಯವಾಗುವುದಿಲ್ಲ. ದೇಹವೆಂಬ ಕುದುರೆಯನೇರಿದ ಮನ ದೇಹಗಳನ್ನೇ ಕೊಲ್ಲುತ್ತದೆ. ಕೋಟಿ ಕೋಟಿ ಕುದುರೆಗಳು ಸಾಯುತ್ತವೆ. ಶೂರರಿಬ್ಬರು ದೇಹವೆಂಬ ಕುದುರೆಯಲ್ಲಿ ಹಾಗೆ ಉಳಿಯುತ್ತಾರೆ. ಅವರೇನು ಮಾಡಿಯಾರು? ಕುದುರೆಯಿದ್ದಾಗ ಹತ್ತಲಿಲ್ಲ; ಸತ್ತಾಗ ಸವಾರಿ ಮಾಡಲು ಬರುವುದಿಲ್ಲ. ದೇಹವಿದ್ದಾಗಲೇ ದೇಹದ ಅರಿವನ್ನು ಮನ ತಿಳಿದು ಸವಾರಿ ಮಾಡಬೇಕು. ಆ ಸವಾರನ ಕಲಿತನ ಕುದುರೆಯ ಜ್ಞಾನದ ಬಲ ಅರಿವಿನೊಂದಿಗೆ ಸಂಗಮವಾಗಿ ತನಗೆದುರಾದ ಅಜ್ಞಾನದ ಸೈನ್ಯವನ್ನು ಅರಿದರಿದು ನಾಷ ಮಾಡುತ್ತಾನೆ.

ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತಾಯಿತ್ತು ಕೂಡಲಸಂಗಮದೇವಾ, ನಿಮ್ಮ ಹೆಸರಿಲ್ಲದ ಹೆಸರು:

ಬಸವಣ್ಣನವರ ಆರು ಸಾಲಿನ ಈ ವಚನದಲ್ಲಿ ಮೂರು ಉಪಮೆಗಳಿವೆ. ಕುಂಬಾರ ಮಣ್ಣು ನೀರು ಕಲಿಸಿ ಹದಮಾಡಿ, ಒಂದು ರೂಪವನ್ನು ಮಾಡುತ್ತಾನೆ. ಆ ರೂಪ ಆವಿಗೆಯಲ್ಲಿ ಬೆಂದು ಮಣ್ಣಿನ ಹೆಸರನ್ನು , ಜಲದ ಹೆಸರನ್ನು ಕಳೆದುಕೊಂಡು ಹೆಸರಲ್ಲದ ಹೆಸರಾಗುತ್ತದೆ. ರಾಜ ಮತ್ತು ಸಿದ್ಧಾರ್ಥ ದೇಹದಲ್ಲಿ ಸಂಗಮವಾಗಿ ಹೆಸರಿಲ್ಲದ ಹೆಸರು ಪಡೆದು ಬುದ್ಧನಾದಂತೆ!

17

ಇಂದಿಂಗೆಂತು ನಾಳಿಂಗೆಂತು ಎಂದು
ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ !
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ!
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ!
ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ
ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ!

ಕಸ್ತೂರಿ ಮೃಗದ ಹೊಕ್ಕುಳಲ್ಲಿಯೇ ಸುಗಂಧದ್ರವ್ಯವಿದೆ . ಅದು ಸಾಯುವವರೆಗೆ

ಹುಡುಕಿದರೂ ಸಿಕ್ಕುವುದೇ ಇಲ್ಲ ; ಆ ಪರಿಮಳವನ್ನು ನೆನೆನೆನೆದು ಒಂದು ದಿನ ಪ್ರಾಣ ಕಳೆದುಕೊಳ್ಳುತ್ತದೆ. ಅದು ಮೃಗ ; ಅದಕ್ಕೆ ವಾಸನಾ ಶಕ್ತಿ ಇದೆಯೇ ಹೊರತು ಅದನ್ನು ಪಡೆಯುವ ಯುಕ್ತಿ ಇಲ್ಲ. ಹಸಿದ ಒಡಲಿಗೆ ಹುಲ್ಲು ಹಾಕುತ್ತಾ ಪರಿಮಳ ನೆನೆಯುತ್ತಾ ಕಾಲಹರಣ ಮಾಡುತ್ತ ಕಾಲಗರ್ಭ ಸೇರುತ್ತದೆ.

ಮನುಷ್ಯ ಹಾಗಲ್ಲ; ದೇಹವೇ ಅರಿವಿನ ದೇಗುಲ. ಇಂದಿಂಗೆ ನಾಳಿಂಗೆ ಎನ್ನುವ ಆಸೆಯಿಂದ ಉಂಟಾಗುವ ರಕ್ಕಸ ಪ್ರವೃತ್ತಿಯನ್ನು ಕಳೆದುಕೊಳ್ಳುವ ಯುಕ್ತಿಯಿದೆ. ಶಕ್ತಿಯೂ ಇದೆ.

ದೇಹ ಸಂಪತ್ತಿಗಾಗಿ, ಆಹಾರಕ್ಕಾಗಿ ವಿಷಯಾಸಕ್ತಿಗಾಗಿ ಕ್ಷಣ ಕ್ಷಣವೂ ತೊಳಲಿ ಬಳಲುತ್ತದೆ. ದೇಹದ ಇತಿಹಾಸ ಇದಕ್ಕೆ ತಿಳಿದಿದೆ. ಆದರೂ ಮುಕ್ತನಾಗಬೇಕೆಂಬ ಯುಕ್ತಿ ಹೊಳೆಯುತ್ತಿಲ್ಲ . ಬಯಕೆಯೂ ಇಲ್ಲ.

ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ:

ದೇಹ ಎಂಬುದು ಎಂದೆಂದೂ ಸವೆಯದ ಸದಾಶಿವನ ನವನಿಧಿ! ಕುಬೇರನ(ಕುಂದ) ಸಂಪತ್ತು. ಈ ಸಂಪತ್ತನ್ನು ಮಾಯೆ ನೆನೆಯಲು ಅವಕಾಶ ಮಾಡಿಕೊಡುವುದಿಲ್ಲ .

ಇಂದಿಂಗೆಂತು ನಾಳಿಂಗೆಂತು ಎಂದು ಮಾಯೆ ಲೋಹ, ಕರೆನ್ಸಿ , ಭೂಮಿಯನ್ನು ಸಾಯುವವರೆಗೂ ಸಂಗ್ರಹಿಸುತ್ತದೆ. ಸಾವಿರಾರು ವರ್ಷಕ್ಕಾಗುವಷ್ಟು ದೋಚಿ ದುಃಖಕ್ಕೆ ಈಡು ಮಾಡಿಕೊಳ್ಳುತ್ತದೆ. ಇದು ತನ್ನ ಸೃಷ್ಟಿಯಿಂದಾದದ್ದೆಂದು ಮಾಯೆಗೆ ತಿಳಿಯುವುದಿಲ್ಲ.

ಸದಾಶಿವನ(ಕುಂದ)ನವನಿಧಿಯ ಸಂಪತ್ತು : ದೇಹದ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊರಳೆಗಳು, ನಾಲಿಗೆ, ಚರ್ಮ, ದೇವಾಂಗ (ಜನನೇಂದ್ರಿಯ). ಇವು ದೇಹದ ನವನಿಧಿಗಳು. ಸದಾಶಿವನ ವಾಸಸ್ಥಾನ ! ಎಂದೆಂದೂ ತೀರದ ಕುಬೇರನ ಸಂಪತ್ತು. ದೇವಾನುದೇವತೆಗಳು, ರಕ್ಕಸರೂ ಕೊಳ್ಳೆಹೊಡೆಯಲು ಬಾರದ ಸದಾಶಿವನ ಸಂಪತ್ತು ; ದೇಹದಲ್ಲಿಯೇ ಸಂಗಮವಾಗಿದೆ. ನೆನೆದು ಬಗೆದರೆ ಬೊಗಸೆಯ ತುಂಬಾ ಅಮೃತ. ಬಗೆದು ಉಂಡಷ್ಟೂ ಬರಿದಾಗದ ಅಮೃತ !

ಕಣ್ಣುಗಳು : ಮಣ್ಣಿನ ಗರ್ಭದಲ್ಲಿದ್ದ ಲೋಹಕ್ಕೆ ಚಿನ್ನ ಎಂದು ನಾಮಕರಣ ಮಾಡಿದ ಕಣ್ಣು ಸದಾಶಿವನ ಕಣ್ಣು. ಅರಿವಿನ ಕಣ್ಣು, ತಾನೇ ಸೃಷ್ಟಿಸಿ ಭೋಗಿಸಲರಿಯದ ಕಣ್ಣು. ಈ ಕಣ್ಣಿಗೆ ಮಾಯೆ ಆವರಿಸಿರುವುದರಿಂದ ಸದಾಶಿವನನ್ನು ನೆನೆಯಲು ಸಾಧ್ಯವಾಗದೆ ಇಂದಿಂಗೆ ನಾಳಿಂಗೆ ಎಂದು ಹಗಲಿರುಳು ದುಡಿದು ಸಂಗ್ರಹಿಸಿ ದೇಹಕ್ಕೆ ಧನಿಕ , ಜಿಪುಣನ ಪಟ್ಟ ಕಟ್ಟುತ್ತದೆ . ಕಳ್ಳ , ಕೊಲೆಗಡುಕ, ದರೋಡೆಕೋರನ ಪಟ್ಟಕಟ್ಟಿ ಸದಾಶಿವನ ದೇಹವನ್ನು ಜೇಲಿಗೆ ತಳ್ಳುತ್ತದೆ.

ಸದಾಶಿವನೆಂಬ ಅರಿವಿನ ಸಂಗನನ್ನು ಕೂಡಿ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲದ ಮಾಯೆ ತನ್ನ ತನುವಿನ ಸಂಪತ್ತನ್ನು ತಾನೇ ಅರಿಯದೆ ತನುವನ್ನು ತನುವಿನೊಡೆಯನನ್ನು ಕೊಂದುದಯ್ಯಾ ಈ ಮಾಯೆ ! ಎಂದು ಅಣ್ಣನವರು ಅತ್ಯಂತ ಸರಳವಾಗಿ ಜಗದ ತನುಗಳಿಗೆ ಕಿವಿಮಾತು ಹೇಳಿದ್ದಾರೆ.

ಕಿವಿಗಳು : ಬಾಯಿಯ ಮೂಲಕ ಧ್ವನಿಸಿದ ಶಬ್ದಗಳೆಲ್ಲ ಅರಿವಿನಿಂದ ಕೂಡಿವೆ.

ಶಬ್ದ ಬರೆದರೆ ನಪುಂಸಕವಾಗುತ್ತದೆ . ಓದಿದರೆ ಅರಿವಾಗುತ್ತದೆ. ಸ್ವೀಕರಿಸಿದರೆ ಸಂತೋಷವೂ ದುಃಖವೂ ಆಗುತ್ತದೆ. ದೇಹ ಹೊಗಳಿಕೆಗೆ ಹಿಗ್ಗುತ್ತದೆ; ತೆಗಳಿಕೆಗೆ ಕುಗ್ಗುತ್ತದೆ; ನುಡಿದ ದೇಹವನ್ನು ಕೊಲ್ಲುತ್ತದೆ ಇಲ್ಲ ತಾನೇ ಆತ್ಮಹತ್ಯೆಗೆಳೆಸುತ್ತದೆ .

ಕು ಶಬ್ದ-ಸುಶಬ್ದ ಶಬ್ದದಲ್ಲಿಯೇ ಅಡಗಿದೆ. ಕಿವಿಯಲ್ಲಿ ವಾಸಮಾಡಿದ ಸದಾಶಿವನೆಂಬ ಅರಿವಿನಿಂದ ಕೇಳಿದರೆ; ಶಬ್ಧ ನಿಶ್ಯಬ್ದವಾಗುತ್ತದೆ; ಅರಿವಾಗಿ ದೇಹಕ್ಕೆ ಪ್ರಸಾದವಾಗುತ್ತದೆ. ನುಡಿದ ಎದುರಾಳಿ ಮರು ನುಡಿಯುವುದಿಲ್ಲ. ವೈಷಮ್ಯ , ವೈರತ್ವ ಬೆಳೆಯುವುದಿಲ್ಲ. ಕೊಲ್ಲುವುದಿಲ್ಲ; ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ; ಎಂದೆಂದು ಸದಾಶಿವನ ನವನಿಧಿಯ ಶಬ್ದ ಸಂಪತ್ತನುಂಡು ನೆನೆನೆನೆದು ಮಾಯೆ ನಿರ್ಮಾಯೆಯಾಗುವುದು. ಇದು ಬಸವಣ್ಣನವರ ನಿಃಶಬ್ದವೇದಿ ಸೂತ್ರ!

ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ ! ಈ ವಚನದ ಕೊನೆಯ ಸಾಲಿನಲ್ಲಿ ಅಣ್ಣನವರು, ಬ್ರಹ್ಮಜ್ಞಾನದ ಸಂಪತ್ತನ್ನೇ ಬಚ್ಚಿಟ್ಟಿದ್ದಾರೆ. ಎಂದೆಂದೂ ಸದಾಶಿವನ ' ಕುಂದ 'ದೆ ಅಂದರೆ ' ನವನಿಧಿ 'ಯ ನೆನೆಯಲೀಯದೇ, ಸದಾಶಿವನನ್ನೇ ಕೊಂದುದಯ್ಯಾ ಈ ಮಾಯೆ. ಇಂದಿಂಗೆ ನಾಳಿಂಗೆ ಎಂದು ಹಸಿದ ಒಡಲು ತುಂಬುವುದರಲ್ಲಿಯೇ ಆಯುಷ್ಯ ಕಳೆದು ಹೋಗುತ್ತದೆ.

ಸದಾಶಿವನ ಒಡಲಿಗೆ ಮಾಯೆ ಅನ್ನ ಹಾಕುವುದೆಂದರೆ ವಿಚಿತ್ರವಲ್ಲವೇ? ಆಸೆ -ಆಮಿಷಗಳ ಅನ್ನ, ಕಾಮ - ಕ್ರೋಧಗಳ ಅನ್ನ, ಮದ -ಮತ್ಸರಗಳ ಅನ್ನ, ಲೋಭ -ಮೋಹಗಳ ಅನ್ನ , ರುಚಿ - ಅರುಚಿ ಎನ್ನುವ ವಿಷದಅನ್ನ ಹಾಕಿ ಸದಾಶಿವನ ಒಡಲನ್ನೇ ಕತಕತನೆ ಕುದಿಯುವಂತೆ ಮಾಡುತ್ತದೆ ಮಾಯೆ! ಆತನೇ ಸೃಷ್ಟಿಸಿದ ತೃಣವೆಂಬ ಮಾಯೆ ಆತನನ್ನೇ ಕೊಲ್ಲುವುದೆಂದರೆ ವಿಚಿತ್ರವಲ್ಲವೆ ?

ಕಣ್ಣಿನಲ್ಲಿ ಮಾಯೆ ಬೆರೆತು ನೋಡುವುದನ್ನು ನೋಡದಂತೆ ಮಾಡಿದೆ. ಕಿವಿಯಲ್ಲಿ ಬೆರೆತು ಕೇಳುವುದನ್ನು ಕೇಳದಂತೆ ಮಾಡಿದೆ. ಎರಡು ಕಣ್ಣು, ಎರಡು ಕಿವಿಗಳು ಸದಾಶಿವನ ವಾಸಸ್ಥಾನ. ಮಾಯೆ ಅವ(ಅರಿವಿ)ನೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲ, ಕಾಮ , ಕ್ರೋಧ , ಲೋಭ , ಮೋಹ, ಮದ , ಮತ್ಸರಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ತನಗೆ ಬೇಕಾದ ರುಚಿಯನ್ನು ಸದಾಶಿವನ ದೇಹದೊಂದಿಗೆ ಭೋಗಿಸುತ್ತದೆ. ಜನ ಒಡಲನ್ನು ಹಿಡಿದು ದಂಡಿಸುತ್ತಾರೆ. ಮಾಯೆಗೆ ಒಳಗಾದ ಜನರಿಗೇನು ಗೊತ್ತು ಇದು ಸದಾಶಿವನ ಒಡಲೆಂದು !

ಮಾಯೆಯನ್ನು ಕಳೆದುಕೊಳ್ಳಲು ಮಾಯೆಗೆ ಇಷ್ಟವಾಗಬೇಕಲ್ಲ? ಇಷ್ಟವಾದರೂ ನಿಜ ಸೂತ್ರ ಹೇಳುವ ಬಸವಣ್ಣನಂತವರು ಮಾಯೆಗೆ ಸಿಕ್ಕಬೇಕಲ್ಲ? ಒಡಲು ಸದಾಶಿವ (ಅರಿವಿ) ನದು; ಮಾಯೆ ಒಡಲಲ್ಲಿದೆ ಹೀಗಾಗಿ ಇದು ಬಲು ಜಟಿಲ!

ಚರ್ಮ : ರಕ್ತ , ಮೂಳೆ, ಮಾಂಸ, ಎಲುಬು , ಮಜ್ಜಾ ಮೇದಸ್ಸನ್ನು ಹೊರ ಚೆಲ್ಲದಂತೆ ಸುಂದರವಾಗಿ ಪ್ಯಾಕ್ ಮಾಡಿದ ರಕ್ಷಾ ಕವಚವೇ ಚರ್ಮ! ತನ್ಮೂಲಕ ಕಣ್ಣನ್ನು ನೋಡುವಂತೆ , ಕಿವಿಯನ್ನು ಕೇಳುವಂತೆ , ಮೂಗನ್ನು ಮೂಸಿಸುವಂತೆ ಹದವಾಗಿ ಅಪ್ಪಿ ಕೊಂಡಿದೆ. ಇದರ ಕಣಕಣದ ರಂಧ್ರಗಳಲ್ಲಿ ಅರಿವೆಂಬ ಸದಾಶಿವ ವಾಸಿಸಿದ್ದಾನೆ ;

ಹಾಗೆಯೇ ಮಾಯೆಯೂ ಆವರಿಸಿದೆ .

ಚರ್ಮದಲ್ಲಿದ್ದ ಮಾಯೆಗೆ ಚರ್ಮವನ್ನು ಘಾಸಿಗೊಳಿಸಿ ಸುಖಿಸಬೇಕೆಂಬ ವಿಕೃತ ಬಯಕೆ ; ಹರಿದು ತಿನ್ನುವ ರಕ್ಕಸ ಪ್ರವೃತ್ತಿ ಅದಕ್ಕೆ ! ದಕ್ಕದಿದ್ದರೆ ಕೊಂದಾದರೂ ಭೋಗಿಸಬೇಕೆಂಬ ಪೈಶಾಚಿಕ ಹಂಬಲ. ತಾನೂ ಚರ್ಮ; ಅನ್ಯಚರ್ಮವೂ ಚರ್ಮವೆ ಎಂಬ ಸಾಮಾನ್ಯ ತಿಳುವಳಿಕೆಯಿಲ್ಲ. ಎಡಗೈ ಚರ್ಮ ಬಲಗೈಗೆ ತಾಗಿದರೆ ಕಾಮ ಉಂಟಾಗುವುದಿಲ್ಲ. ಕಾಮದ್ರವ್ಯ ತನ್ನ ಚರ್ಮದಲ್ಲಿದೆಯೊ ಅನ್ಯ ಚರ್ಮದಲ್ಲಿದೆಯೋ ಎಂದು ಮಾಯೆಗೆ ತಿಳಿಯುವುದಿಲ್ಲ. ಸ್ಪರ್ಶಿಸುವ ಮುನ್ನ ಕಾಮ ದ್ರವ್ಯ ನಷ್ಟವಾದರೆ ಮತ್ತೆ ಕಾಮದ ಬಯಕೆಯಿಲ್ಲ ಎಂಬುದು ಚರ್ಮ ಆವರಿಸಿದ ಮಾಯೆಗೆ ತಿಳಿಯುವುದಿಲ್ಲ. ತನ್ನ ದ್ರವ್ಯ ತನ್ನಿಂದಲೇ ನಷ್ಟವಾಗಿ ತನಗೇ ಸುಖವಾದುದನ್ನು ಮಾಯೆ ಅರಿಯಲಿಲ್ಲ.

ರಾವಣನ ಚರ್ಮದ ಬಯಕೆ ರಾವಣನಿಗೇ ಮೃತ್ಯು ತಂದುದನ್ನು ಮಾಯೆ ತಿಳಿಯಲಿಲ್ಲ. ರಾಮಾಯಣದ ಕತೆ ಹೇಳುವ ಕೇಳುವ ತವಕದಲ್ಲಿ ಮಾಯೆ ಜಗದ ಸಕಲ ತನುಗಳಲ್ಲಿ ಬಂಧಿಯಾಗಿದೆ. ಮಾಯೆ ಚರ್ಮದ ಪೇಯಿಂಗ್ ಗೆಸ್ಟ್! ಇರಲು ಅವಕಾಶ ಮಾಡಿಕೊಟ್ಟ ಚರ್ಮವನ್ನೇ ಕ್ಷಣ ಕ್ಷಣಕ್ಕೂ ಘಾಸಿಗೊಳಿಸುತ್ತದೆ. ಮಾಯೆಯ ಬಯಕೆಯಿಂದ ರಕ್ತ, ಮೂಳೆ, ಮಾಂಸ, ಮಜ್ಜಾ , ಮೇದಸ್ಸನ್ನು ಕುದಿಯುವಂತೆ ಮಾಡುತ್ತದೆ . ಅದು ಅರಿವೆಂಬ ಸದಾಶಿವನನ್ನು ತಿಳಿದರೆ, ಸದಾ ಶಾಂತ. ತಾನೇ ಸದಾಶಿವನಾಗಿ ತನುವನ್ನು ಶಾಂತಸಾಗರವನ್ನಾಗಿಸುತ್ತದೆ.

ಮೂಗು : ಮಾಯೆ ಆವರಿಸಿರುವುದರಿಂದ ನಾಸಿಕದ ಅರಿವಿನ ಪರಿಚಯ ಮಾಯೆಗೆ ಆಗುವುದೇ ಇಲ್ಲ. ಮೂಸಿಸುವ ಪರಿಮಳವೆಲ್ಲ ಜಲದಿಂದಲೇ. ಜಲಜನಕ ಆಮ್ಲಜನಕದಿಂದಲೇ ಜಲದ ಜನನ. ಜಲ ಹರಿದು ಮಲ್ಲಿಗೆ ಪರಿಮಳ ಬೀರಿತು. ಜಲ ಕುಡಿದ ಮೀನು ಆಹಾರವಾಯಿತು. ಮಲ್ಲಿಗೆ ಪರಿಮಳ, ಮೀನು ದುರ್ಗಂಧವೆನ್ನಲು ಸಾಧ್ಯವೆ? ತಿನ್ನುವ ಪದಾರ್ಥ ಪರಿಮಳವೆಂದರೆ ಹೊರಸೂಸುವ ಮಲ ದುರ್ಗಂಧವೆನ್ನಲು ಸಾಧ್ಯವೇ? ಮೂಗೆಲ್ಲ ಒಂದೇ ; ಆದರೂ ಪರಿಮಳ ಬೇರೆ ಬೇರೆ ಎಂದರೆ ಹೇಗೆ ; ಇದು ಅಜ್ಞಾನವಲ್ಲವೆ? ಮೀನು ತಿನ್ನುವವನ ಮೂಗಿಗೆ ಮೀನಿನ ಪರಿಮಳ ಬಲು ಸೊಗಸು. ಉಳಿದ ಮೂಗುಗಳಿಗೆ ದುರ್ಗಂಧ. ಹಂದಿಗೆ ಮಲ ಪರಿಮಳ; ತನುವಿನ ಮೂಗಿಗೆ ದುರ್ಗಂಧ! ಮೂಗಿನಲ್ಲಿ ಮಾಯೆ ಆವರಿಸಿರುವುದರಿಂದ ಆ ಮಾಯೆಗೆ ನಿಜ ಪರಿಮಳ ಅರಿವಾಗದೆ ತನುವಿಗೆ ಸಂಕಟ ಒಡ್ಡುತ್ತದೆ. ಅದಕ್ಕಾಗಿಯೇ ಶ್ರೀ ಕೃಷ್ಣ ವರಾಹ ಅವತಾರ ಸೂತ್ರದ ಮೂಲಕ ಮೂಗಿನ ಮಾಯೆಗೆ ಪಾಠ ಮಾಡಿದ.

ನಾಲಿಗೆ : ರುಚಿಕರವಾದ ಪದಾರ್ಥಗಳ ರುಚಿಯನ್ನು ನಾಲಿಗೆ ಮೇಲಿನ ಮಾಯೆ ಸಂಗ್ರಹಿಸಿಕೊಂಡು ಮತ್ತೆ ಮತ್ತೆ ಆ ಪದಾರ್ಥವನ್ನು ಬೇಡಿ ತನುವನ್ನು ಘಾಸಿಗೊಳಿಸುತ್ತದೆ. ನಾಲಿಗೆ ಅರಿವಿನ ಸಂಪತ್ತು ; ಸದಾಶಿವನ ಸಂಪತ್ತು.

ತಿನ್ನುವ ಪ್ರತಿ ಪದಾರ್ಥವೂ ಜಲದಿಂದಲೇ ನಿರ್ಮಾಣವಾಗಿದೆ. ಪದಾರ್ಥದ ರುಚಿ ಕೂಡಾ ಜಲವೇ ಆಗಿದೆ. ಮೊದಲ ತುತ್ತಿಗೆ ರುಚಿ ಅರುಚಿ ಗೋಚರಿಸುತ್ತದೆ. ನಂತರದ ತುತ್ತುಗಳು ರುಚಿ ಕಳೆದು ಕೊಳ್ಳುತ್ತವೆ. ಯಾಕೆ ಎಂದು ಯೋಚಿಸುವ ಶಕ್ತಿ ಮನವೆಂಬ ಮಾಯೆಗೆ ಇಲ್ಲ. ಅರಿವಿನಲ್ಲಿ ಆ ಶಕ್ತಿ ಇದೆ. ಅರಿವಿನೊಂದಿಗೆ ಮಾಯೆ

ಒಪ್ಪಂದ ಮಾಡಿಕೊಂಡು ತಿಂದರೆ; ತಿನ್ನುವ ಪದಾರ್ಥವೆಲ್ಲ ಪ್ರಸಾದವೇ !

ಜಲ ಹರಿದು ಪದಾರ್ಥವಾಗಿದೆ. ಜಲದಿಂದಲೇ ತನುವಿನ ಜನ್ಮ. ಜಲ ಜಲದಲ್ಲಿ ಬೆರೆತು ಜಲವಾಗುತ್ತದೆ. ಜಲಕ್ಕೆ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯಿಲ್ಲ; ಈ ತತ್ವ ಮಾಯೆಯ ಅರಿವಿಗೆ ಬಂದು ಅರಿವಿನಲ್ಲಿ ಬೆರೆತು ಅರಿವೇ ತಾನಾಗುತ್ತದೆ. ಇದು ಬಸವಣ್ಣನವರ ಎಂಟನೇ ಸೂತ್ರ .

ದೇವಾಂಗ: ಇದು ನವನಿಧಿಯುಳ್ಳ ಸದಾಶಿವನ ಜ್ಞಾನಕ್ಕೆ ಜನ್ಮ ಕೊಡುವ ದಿವ್ಯಾಂಗ! ಜನನಾಂಗವೆಂದೂ ಹೆಸರಿದೆ. ಈ ಅಂಗದಿಂದ ಹೊರ ಚೆಲ್ಲುವ ಪ್ರತಿ ಕಣ ದೇವಕಣವೇ ಆಗಿದೆ. ದಿವ್ಯಾಂಗದ ಜನ್ಮಕ್ಕೆ ಒಪ್ಪಂದ ಮಾಡಿಕೊಂಡ ಜ್ಞಾನಾಂಗ (ಸತಿಪತಿ)ಗಳಿಗೆ ಮಾತ್ರ ದೇವಕಣ ಬಳಕೆಯಾಗಬೇಕು; ಪ್ರಾಣಿ, ಪಶು, ಪಕ್ಷಿ, ಗಿಡ , ಮರ , ಬಳ್ಳಿಗಳಲ್ಲಿ ಹೀಗೆ ಬಳಕೆಯಾಗುತ್ತದೆ. ಪಶುಗಳು ಬೆತ್ತಲಿದ್ದರೂ ಯಾವ ಗದ್ದಲವಿಲ್ಲದೆ ಸಾಲಾಗಿ ಹೋಗುತ್ತವೆ. ಸಂತಾನ ಬೇಕಾಗಿದ್ದಾಗ ಮಾತ್ರ ಒಂದು ಪಶು ಮತ್ತೊಂದು ಪಶುವಿನೊಂದಿಗೆ ಒಪ್ಪಂದ ಮಾಡಿಕೊಂಡು ದೇವಕಣ ಬಳಕೆ ಮಾಡಿ ಸಂತಾನ ಪಡೆಯುತ್ತವೆ.

ಇದು ಸಹಜ ನಿಸರ್ಗ ನಿಯಮ! ಮತ್ತೆ ಸಂತಾನ ಪಡೆಯುವ ಬಯಕೆ ಆಗುವವರೆಗೆ ಎರಡೂ ಪಶುಗಳು ಮಾಡಿಕೊಂಡ ಒಪ್ಪಂದವನ್ನು ಮುರಿಯುವುದಿಲ್ಲ. ಬೆತ್ತಲಿದ್ದರೂ ಬಯಕೆ ಆಗುವುದೇ ಇಲ್ಲ. ಸಂತಾನಕ್ಕಾಗಿ ಕೂಡುತ್ತವೆಯೇ ಹೊರತು ರುಚಿಗಾಗಿ ಅಲ್ಲ.

ಹಿಂದೆ ಋಷಿ ದಂಪತಿಗಳು ಕೂಡಾ ಜ್ಞಾನಾಂಗ (ಬ್ರಹ್ಮ ಜ್ಞಾನಿಯನ್ನು) ಪಡೆಯಬೇಕೆಂಬ ಹಿರಿಯ ಬಯಕೆಯಿಂದ ದೇವಕಣ ಬಳಕೆ ಮಾಡುತ್ತಿದ್ದರು. ಸದಾಶಿವನ ನವನಿಧಿಯ ಈ ಅಂಗ ಸಂಪೂರ್ಣ ದೇವಾಂಗವೇ ಆಗಿದೆ. ಅರಿವು ಕಣಕಣದಲ್ಲಿ ಬೆರೆತಿದೆ. ಈ ಅಂಗವನ್ನು ಮಾಯೆ ಆವರಿಸಿರುವುದರಿಂದ ರುಚಿ ಅದರಲ್ಲಿ ಸಂಗ್ರಹವಾಗಿ ಮತ್ತೆ ಮತ್ತೆ ಬಳಕೆಮಾಡುವ ತವಕ ವ್ಯಕ್ತ ಪಡಿಸುತ್ತದೆ.

ಸದಾಶಿವ ಅರಿವಿನೆಡೆಗೆ ಜಗ್ಗುತ್ತಾನೆ; ಮಾಯೆ ಅಜ್ಞಾನದೆಡೆಗೆ ಜಗ್ಗಿ ಹಾದರಮಾಡುತ್ತದೆ. ತನ್ನ ಹಾದರಕ್ಕಾಗಿ ಎರಡು ಕಣ್ಣು , ಎರಡು ಕಿವಿ, ಎರಡು ಮೂಗಿನ ಹೊರಳೆಗಳು , ಚರ್ಮ, ನಾಲಿಗೆ ಹಾಗೂ ದೇವಾಂಗ ದುರ್ಬಳಕೆಯಾಗುತ್ತದೆ. ಇವು ಸದಾಶಿವನ ಜ್ಞಾನಾಂಗದ ನವನಿಧಿಗಳು.

ಮಾಯೆ ಎಂಬ ಮನಕ್ಕೆ ದೇವಾಂಗದ ಜ್ಞಾನ ಅರಿವಾಗಬೇಕು. ಆ ಜ್ಞಾನದೊಂದಿಗೆ ಮನ ಒಪ್ಪಂದ ಮಾಡಿಕೊಳ್ಳಬೇಕು. ಆಗ ನಾನು ಪ್ರತಿ ದೃಶ್ಯವನ್ನು ಅರಿವಿನಿಂದ ನೋಡುತ್ತೇನೆ. ಶಬ್ದವನ್ನು ಅರಿವಿನಿಂದ ಕೇಳುತ್ತೇನೆ , ಪ್ರತಿ ತುತ್ತನ್ನು ಅರಿವಿನಿಂದ ಉಣ್ಣುತ್ತೇನೆ. ವಾಸನೆಯನ್ನು ಅರಿವಿನ ಪರಿಮಳವಾಗಿ ಅನುಭವಿಸುತ್ತೇನೆ. ಸ್ಪರ್ಶವನ್ನು ಅರಿವಿನಿಂದ ಸ್ಪರ್ಶಿಸುತ್ತೇನೆ. ಒಪ್ಪಂದ (ಸತಿಪತಿ)ಮಾಡಿಕೊಂಡ ದೇವಾಂಗದೊಂದಿಗೆ ಮಾತ್ರ ಜ್ಞಾನಾಂಗ ಪಡೆಯುತ್ತೇನೆ .

ಸದಾಶಿವನೆಂಬ ಮಹಾಜ್ಞಾನದ ನವನಿಧಿಯೊಂದಿಗೆ ಮನ ಒಪ್ಪಂದ ಮಾಡಿಕೊಂಡು ಮೆಮೊರೆಂಡಮ್ ಆಫ್ ಅಂಡ್ರಸ್ಟಾಂಡಿಂಗ್‌ಗೆ ಸಹಿ ಹಾಕಿದರೆ ಸಾಕು; ಸದಾಶಿವ ಮನವೆಂಬ ಮಾಯೆಯನ್ನು ತನ್ನಂತೆ ಮಾಡಿಕೊಳ್ಳುತ್ತಾನೆ. ಮನ ಸದಾಶಿವನ ಸತಿಯಾಗುತ್ತಾಳೆ. ಅರ್ಧಾಂಗಿ ಯಾಗಿ ಅರ್ಧನಾರಿಶ್ವರಳಾಗುತ್ತಾಳೆ.

ನೋಡುವ ಕಣ್ಣು ಮಾಯೆ ಕಳೆದುಕೊಂಡು ಸೌಂದರ್ಯದ ಕಣ್ಣಾಗುತ್ತದೆ.

ನೋಡುವುದೆಲ್ಲ ಸುಂದರವಾಗಿ ಕಾಣುತ್ತದೆ. ಜಾತಿ, ಮತ, ಪಂಥ, ಹೆಣ್ಣು , ಗಂಡು ಎನ್ನುವ ಅಜ್ಞಾನ ಕಣ್ಣಿನಿಂದ ಜಾರಿ ಜ್ಞಾನದಲ್ಲಿ ಸಂಗಮವಾಗುತ್ತದೆ.

ಕೇಳುವ ಪ್ರತಿ ಶಬ್ದ ಕಿವಿಗೆ ಆನಂದವನ್ನುಂಟು ಮಾಡುತ್ತದೆ. ಶಬ್ದ ನಿಃಶಬ್ದವಾಗಿ, ಶಬ್ದದ ಅರಿವು ಕಿವಿಗೆ ಪ್ರಸಾದವಾಗುತ್ತದೆ. ರುಚಿ ಸ್ಪರ್ಶ ವಾಸನೆಗಳೆಲ್ಲ ಜ್ಞಾನಕ್ಕೆ ಪ್ರಸಾದವಾಗುತ್ತದೆ. ಅಜ್ಞಾನ ಜ್ಞಾನದಲ್ಲಿ ಸಂಗಮವಾಗುತ್ತದೆ. ಮನ ಸದಾಶಿವನ ನವನಿಧಿಯ ಸಂಪತ್ತಿನ ಅರಿವಿನ ಭಂಡಾರ ತನುವಿನ ಕಣ ಕಣದಲ್ಲಿ ಬೆರೆಯುತ್ತದೆ. ಆ ಸದಾಶಿವನೇ ತಾನಾಗುತ್ತಾನೆ. ಇದು ಬಸವಣ್ಣನವರ ನವನಿಧಿಯ ಸೂತ್ರ. ಈ ಸೂತ್ರದೊಂದಿಗೆ ಮನ ಒಪ್ಪಂದ ಮಾಡಿಕೊಂಡು ತನುಗಳೆಲ್ಲ ಶರಣ ತನುಗಳಾಗಬೇಕೆಂಬ ಬಯಕೆ ಅವರದು. ಈ ಶಿಕ್ಷಣ ಶಾಲೆಗಳಲ್ಲಿ ಜಾರಿಗೆ ಬಂದು ಬೋಧಿಸುವಂತಾಗಬೇಕು . ಅರಿವಿನ ಕ್ರಾಂತಿಗಾಗಿ ತನುಗಳ ಮನ ತವಕಿಸುವಂತಾಗಬೇಕು. ತನುಗಳಲ್ಲಿ ಹೂತಿಟ್ಟ ನವನಿಧಿಯ ಸಂಪತ್ತನ್ನು ತನುಗಳೇ ಪಡೆಯುವಂತಾಗಬೇಕು ಇದು ಶರಣರ ಹಂಬಲ, ಬಸವಣ್ಣನ ಹಂಬಲ!

18

ದಿಟಪುಟ ಭಕುತಿಸಂಪುಟ ನೆಲೆಗೊಳ್ಳದಾಗಿ
ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ;
ಟೀವಕ ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಕೂಡಲಸಂಗಮದೇವಯ್ಯಾ,
ಹೊನ್ನು , ಹೆಣ್ಣು , ಮಣ್ಣು ತೋರಿ !

ದೇಹ ಎಂಬುದು ದಿಟದ ಪುಟಗಳುಳ್ಳ ಭಕುತಿಯ ಸಂಪುಟ. ''ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ! ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ, ಕೂಡಲಸಂಗಮದೇವಯ್ಯಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ''.

ಜಗದಗಲ ಮುಗಿಲಗಲ ಮಿಗೆಯಗಲವಿದ್ದ ದಿಟದ ಶಕ್ತಿ ದೇಹದ ಪುಟದಲ್ಲಿ ಬಂದು ಸೇರಿದೆ. ಪಾತಾಳದಿಂದತ್ತತ್ತ ಚಾಚಿದ ದಿಟದ ಪಾದ ಬ್ರಹ್ಮಾಂಡದಿಂದತ್ತತ್ತ ಚಾಚಿದ ದಿಟದ ಮುಕುಟ ದೇಹದ ಪುಟ-ಪುಟಗಳಲ್ಲಿ ಬಂದು ಮಿಳಿತವಾಗಿದೆ. ಯಾರೂ ಪ್ರಮಾಣಿಸದಂತಹ, ಗೋಚರಕ್ಕೆ ನಿಲುಕದಂತಹ, ಅಪ್ರತಿಮವಾದ ವಿರಾಟ ಸ್ವರೂಪವೇ ಆದ ಮಹಾಜ್ಞಾನವು ದೇಹದ ಪುಟ ಪುಟಗಳಲ್ಲಿ ಬಂದು ಚುಳುಕಾಗಿದೆ; ನ್ಯಾನೋ ಆಗಿದೆ; ಸಂಗಮವಾಗಿದೆ.

ದೇಹವೆಂಬುದು ದಿವ್ಯ ಜ್ಞಾನ ಗ್ರಂಥ ! ಪಂಜಾಬಿಯ ಗುರುಗಳು ಇದನ್ನು **'ಗ್ರಂಥ ಸಾಹೇಬ'** ಎಂದು ಕರೆದರು . ಅಲ್ಲಮಪ್ರಭುಗಳು **ಗುಹೇಶ್ವರಾ** ಎಂದು ಕರೆದರು . ಶ್ರೀಕೃಷ್ಣ ವಿರಾಟ ಸ್ವರೂಪವೇ ಇದರಲ್ಲಿ ಅಡಗಿದ್ದನ್ನು ಬಿತ್ತರಿಸಿ ಭಗವದ್ಗೀತೆ ಎಂದು ಕರೆದರು. ತನುವಿನಲ್ಲಿ ಬ್ರಹ್ಮಾಂಡವೇ ಚುಳುಕಾದುದನ್ನು ಕಂಡು ಬಸವಣ್ಣನವರು **ಕೂಡಲಸಂಗಮದೇವಾ** ಎಂದು ಕರೆದರು . ದೇಹ ದಿಟದ ಪುಟಗಳುಳ್ಳ ಮಹಾಸಂಪುಟವೇ ಹೌದು !

ದೇಹವೆಂಬ ಸತ್ಯದ ಸಂಪುಟದಿಂದಲೇ ಸಕಲ ಪುಸ್ತಕಗಳು ಮುದ್ರಣಗೊಂಡಿವೆ. ಬೈಬಲ್, ಭಗವದ್ಗೀತೆ, ತತ್ವಪದಗಳು, ದಾಸರಪದಗಳು, ವೇದ-ಉಪನಿಷತ್ತು, ರಾಮಾಯಣ,

ಮಹಾಭಾರತ ಹೊರಬಂದಿವೆ. ಪ್ರಪಂಚದ ಗ್ರಂಥಾಲಯಗಳಲ್ಲಿರುವ ಪುಸ್ತಕಗಳೆಲ್ಲ ಹೊರಬಂದದ್ದು ದೇಹದ ಸಂಪುಟದಿಂದಲೇ.

ದೇಹ ಎಂಬುದು ನಿತ್ಯ ನಿರಂಜನ. ಇದು ಬದುಕಿದ್ದಾಗಲೇ ತಾನಾರೆಂದು ತಿಳಿಯದೆ, ಸತ್ತ ದೇಹಗಳಿಂದ ಹೊರಬಂದ ಪುಸ್ತಕಗಳನ್ನು ಓದಿ ಓದಿ, ನಾಯಿಯಂತೆ ಬೊಗಳಿ ಬೊಗಳಿ ಮಾಯೆ, ವ್ಯರ್ಥ ಸಾಯುತ್ತದೆ.

ಟೀವಕ ಟಿಂಬನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ ಕೂಡಲಸಂಗಮದೇವಯ್ಯಾ, ಹೊನ್ನು, ಹೆಣ್ಣು, ಮಣ್ಣು, ತೋರಿ:

ಮನವೆಂಬ ಮಾಯೆ ಹೊರಗಿನಿಂದ ಬಂದು ಒಳಗೆ ಸೇರಿಲ್ಲ. ಅದು ಸತ್ಯದ ಪುಟಗಳಿಂದಲೇ ಬಂದು ಸತ್ಯ ಕಾಣದಂತೆ ಸತ್ಯದ ಪುಟ ಪುಟಗಳನ್ನು ಆವರಿಸಿದೆ. ದೇಹವೆಂಬ ದೇಗುಲದಲ್ಲಿದ್ದ ಸತ್ಯದ ಪುಟಗಳನ್ನು ಓದದೇ ಅದರಿಂದ ಬಂದ ಪುಸ್ತಕಗಳನ್ನು ಓದುತ್ತದೆ; ಓದಿದ್ದನ್ನೇ ಒದರಿ ಒದರಿ ಸಾಯುತ್ತದೆ. ಪುಸ್ತಕಗಳ ಓದಿನಲ್ಲಿಯೇ ನೆಲೆಗೊಳ್ಳುತ್ತದೆ. ದೇಹದಿಂದ ಹೊರಬಂದ ಪುಸ್ತಕಗಳೆಲ್ಲ ಗ್ರಂಥ ಸಾಹೇಬನ ಎಂಜಲೆಂದು ಮಾಯೆಗೆ ತಿಳಿದಿಲ್ಲ. ಮಾಯೆ ಗ್ರಂಥ ಸಾಹೇಬನಲ್ಲಿ ನೆಲೆಗೊಳ್ಳಬೇಕೋ ಅಥವಾ ಆತನಿಂದ ಬಂದ ಪುಸ್ತಕದ ಎಂಜಲಿನಲ್ಲಿ ನೆಲೆ ಗೊಳ್ಳಬೇಕೊ? ಇದನ್ನು ಮನವೆಂಬ ಮಾಯೆಯೇ ನಿರ್ಧರಿಸಬೇಕು.

ಹೊನ್ನು, ಹೆಣ್ಣು, ಮಣ್ಣಿಗಾಗಿ ಓದುವುದು, ಅದನ್ನೇ ನೋಡುವುದು, ಅದನ್ನೇ ಕೇಳುವುದು ಮಾಯೆಯ ಕೆಲಸ! ಭೂಮಿ ತನ್ನದಲ್ಲ, ಹೇಮವೂ ತನ್ನದಲ್ಲ, ಕಾಮಿನಿಯೂ ತನ್ನವಳಲ್ಲ. ಇವು ಜಗಕಿಕ್ಕಿದ ವಿಧಿಯೆಂದು ಮಾಯೆಗೆ ತಿಳಿದಿಲ್ಲ. ಇವುಗಳನ್ನೇ ದೇಹಕ್ಕೆ ಎಲುಬಿನಂತೆ ತೋರಿ ಇಡೀ ದೇಹವನ್ನೇ ದುರ್ಬಳಕೆ ಮಾಡಿಕೊಳ್ಳುತ್ತದೆ. ದೇಹದಿಂದಲೇ ಜನ್ಮ ಪಡೆದು ದೇಹಕ್ಕೆ ಮುಳುವಾದುದನು ಮನವೆಂಬ ಮಾಯೆಯೇ ತಿಳಿಯುತ್ತಿಲ್ಲ; ತಿಳಿದರೆ ಸಾಕು ದೇಹದಲ್ಲಿಯೇ ನೆಲೆಗೊಳ್ಳುವುದು. ದೇಹದ ಜ್ಞಾನಭಂಡಾರವೇ ತಾನಾಗುವುದು.

ಹೊನ್ನು : ಇದು ಮಣ್ಣಿನ ಗರ್ಭದಿಂದ ಜನ್ಮ ಪಡೆದ ಹಳದಿ ಲೋಹ. ಇದನ್ನು ದೇಹದಿಂದಲೇ ಗುರುತಿಸಿದ ಮಾಯೆ ಹೊನ್ನು ಎಂದು ನಾಮಕರಣ ಮಾಡಿ ಅದರ ಬೆನ್ನು ಹತ್ತಿದೆ. ದಿಟಪುಟವೆಂಬ ದೇಹದ ಸಂಪುಟದಲ್ಲಿ ನೆಲೆಗೊಂಡರೆ ಮಾಯೆ ಲೋಹಕ್ಕೆ ಬೆನ್ನು ಹತ್ತುವುದಿಲ್ಲ, ಹಳದಿ ಲೋಹವೆಂದು ಉದಾಸೀನ ಮಾಡುತ್ತದೆ.

ಹೆಣ್ಣು: ದೇಹ ಎನ್ನುವುದು ಅರಿವಿನ ಪುಟ ಪುಟಗಳುಳ್ಳ ಸತ್ಯದ ಸಂಪುಟ. ಇದು ಹೆಣ್ಣು ಅಲ್ಲ, ಗಂಡೂ ಅಲ್ಲ. ಇದನ್ನು ಆವರಿಸಿದ ಮಾಯೆಯೆ ಹೆಣ್ಣು. ಹೆಣ್ಣೆಂಬ ಮಾಯೆಯೆ ದೇಹವೆಂಬ ದಿಟದ ಪುಟಗಳಲ್ಲಿ ನೆಲೆಗೊಂಡು ಸಂಗಮವಾದಾಗ ದೇಹ ದೇಹವನ್ನೇ ನೋಡುತ್ತದೆ. ದೇಹ ಹೆಣ್ಣೂ ಅಲ್ಲ, ಗಂಡೂ ಅಲ್ಲ; ದೇಹದ ಸತ್ಯ ದೇಹಕ್ಕೆ ಗೋಚರವಾಗುತ್ತದೆ.

ಮಣ್ಣು: ಜಲ ಕುದ್ದು ಪಾಕವಾದದ್ದೇ ಮಣ್ಣು! ಜಲ ಕುದ್ದು ಪಿಂಡವಾದದ್ದೇ ದೇಹ! ಮಾಯೆಗೆ ಗೋಚರವಾದದ್ದು ಮಣ್ಣು! ದೇಹದ ಸತ್ಯಕ್ಕೆ ಗೋಚರವಾದದ್ದು ತನ್ನ ಸ್ವಸ್ವರೂಪ! ಜೀವಜಲ ಬಿಂದುವಿನಿಂದ ದೇಹವಾಯಿತು. ಜೀವಜಲಬಿಂದುವಿನಿಂದಲೇ ಮಣ್ಣಾಯಿತು!

ದೇಹದಲ್ಲಿ ಹೊನ್ನು, ಹೆಣ್ಣು, ಮಣ್ಣು ತೋರಿತು. ದೇಹಕ್ಕೆ ಸಂಕಟವನ್ನೊಡ್ಡದೆ ದೇಹದಲ್ಲಿಯೇ ಕೂಡಿ ಕೂಡಲಸಂಗಮವಾಯಿತು!

ದೇಹವೆಂಬ ಸತ್ಯದ ಪುಸ್ತಕವೂ ಇದೆ. ಅದರ ಪುಟಪುಟಗಳ ಸಂಪುಟದಲ್ಲಿ ಬರೆದ ಸತ್ಯದ

ಅರಿವೂ ಇದೆ. ಇದರಿಂದಲೇ ಬಂದ ಮನವೆಂಬ ಮಾಯೆಯ ನೆರಳೂ ಇದೆ. ಹೊರಗಿನ ಪುಸ್ತಕಗಳಿಗೆ , ವಸ್ತುಗಳಿಗೆ ಬಲಿಯಾದ ಮಾಯೆ ತನ್ನ ಪುಸ್ತಕದಲ್ಲಿ ನೆಲೆಗೊಂಡು ಕೂಡಿದರೆ ಕೂಡಲಸಂಗಮದೇವನೇ ತಾನಾಗುತ್ತದೆ.

19

ಆಸತ್ತೆ ಅಲಸಿದೆನೆಂದಡೆ ಮಾಣದು ;
ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು ;
ಏವೆನೇವೆನೆಂದಡೆ ಮಾಣದು
ಕಾಯದ ಕರ್ಮದ ಫಲಭೋಗವು !
ಕೂಡಲಸಂಗನ ಶರಣರು ಬಂದು
ಹೋ ಹೋ, ಅಂಜದಿರೆಂದಡಾನು ಬದುಕುವೆನು !

ಒಂದು ಕಾಯಕ್ಕೆ ರಾಜಭೋಗ, ಮತ್ತೊಂದು ಕಾಯಕ್ಕೆ ಬಡತನ, ಒಂದು ಕಾಯಕ್ಕೆ ಕಳ್ಳನ ಪಟ್ಟ, ಮತ್ತೊಂದು ಕಾಯಕ್ಕೆ ಶ್ರೀಮಂತಿಕೆಯ ಪಟ್ಟ, ಶಾಸಕ ಸಚಿವನ ಪಟ್ಟ, ಮಠ ಪೀಠದ ಪಟ್ಟ, ಹೀಗೆ ಕಾಯದ ಕರ್ಮದ ಫಲಭೋಗ ಅನುಭವಿಸದೆ ತಪ್ಪುವುದಿಲ್ಲ.

ಕಾಯ ಒಂದೇ ; ನೋಡುವ ಕಣ್ಣು, ಕೇಳುವ ಕಿವಿ, ರುಚಿಸುವ ನಾಲಿಗೆ, ಸ್ಪರ್ಶಿಸುವ ಚರ್ಮ, ವಾಸಿಸುವ ಮೂಗು ಕೂಡಾ ಒಂದೇ. ಆದರೆ ಫಲಭೋಗಗಳು ಹಲವು. ಸುಖಿಸುವ ತವಕ, ದು:ಖದಿಂದ ಬಿಡುಗಡೆಯಾಗುವ ನರಕಯಾತನೆ ; ಕ್ಷಣ ಕ್ಷಣವೂ ಬೆಂಬಿಡದಂತೆ ಕಾಡುವುದು.

ಕಾಯದ ಆಪತ್ತು ಹಲವಾರು. ಪುಣ್ಯಕ್ಷೇತ್ರಗಳಿಗೆ ಅಲೆದರೂ ತಪ್ಪದು; ಬೇಸತ್ತು ಬಿಡಬೇಕೆಂದರೂ ಬೆನ್ನು ಬಿಡದು, ಒಂದು ಕ್ಷಣ ಸುಖ; ಮತ್ತೊಂದು ಕ್ಷಣ ದು:ಖ.

ಮರದಲ್ಲಿ ವ್ಯತ್ಯಾಸವಿಲ್ಲ; ಸಿಹಿಫಲವೆಂದು ಬಿತ್ತಿದ ಬೀಜ ಹುಳಿಫಲ ನೀಡಬಹುದು, ಅದು ಎಂದೂ ಕಹಿ ಫಲ ಆಗುವುದೇ ಇಲ್ಲ. ಸಿಹಿ ನೀರೆರೆದರೂ ಸಾಧ್ಯವಾಗುವುದೇ ಇಲ್ಲ.

ಕಾಯ ಹೀಗಲ್ಲ; ಮನ ಇಚ್ಛಿಸಿದರೆ ಕಾಯದ ಕರ್ಮದ ಫಲಭೋಗವನ್ನು ಅಳಿಸಿಹಾಕಬಹುದು, ಆದರೆ ಹಲವಾರು ಕರ್ಮದಲ್ಲಿ ತಾನೇ ತೊಡಗಿದ ಮನ ತಾನೇ ಮುಕ್ತನಾಗಲು ಇಚ್ಛಿಸುವುದು ಬಲು ಜಟಿಲ, ಮತ್ತಷ್ಟು ಸಂಕಷ್ಟಗಳನ್ನು ಒಡ್ಡಿಕೊಂಡು ನರಕಯಾತನೆ ಪಡುತ್ತದೆಯೇ ಹೊರತು ಮುಕ್ತನಾಗುವುದಿಲ್ಲ. ಮನವೆಂಬುದು ಕಾಯದ ಕರ್ಮದ ಫಲಭೋಗದ ಸೂತ್ರಧಾರಿ.

ಕಾಯವನ್ನು ಒಮ್ಮೆ ಸಂಕಟಕ್ಕೊಡ್ಡುವುದು , ಮತ್ತೊಮ್ಮೆ ಸುಖಕ್ಕೆಳೆಸುವುದೇ ಮನದ ಕೆಲಸ. ತಾ ಮಾಡುವ ಕೆಲಸ ತಾನೇ ಬಿಡಬೇಕೆಂದರೆ ಹೇಗೆ ಸಾಧ್ಯ? ಕೂಡಲಸಂಗನ ಶರಣರು ಮಾತ್ರ ಮನಕ್ಕೆ ಮದ್ದನರೆಯಬಲ್ಲರು.

ತನುವನು ಹಿಡಿದು, ಮೈದಡವಿ ಹೋ ಹೋ ಅಂಜದಿರೆಂದು ಅರಿವಿನ ಮದ್ದು ಅರೆಯುವುದೊಂದೇ ತಡ, ಬೆಳಕಿಗಂಜಿದ ಕತ್ತಲಮನ ಆ ಅರಿವಿನ ಬೆಳಕಿನಲ್ಲಿ ಕರಗಿ, ಕಾಯದ ಬೆಳಕಿನಲ್ಲಿ ಬೆಳಕಾಗಿ ಬೆರೆಯುವುದು. ಕಾಯದ ಕರ್ಮದ ಫಲಭೋಗಗಳಿಂದ ಉದುರಿ ಬೀಳುವುದು !

ಆಸತ್ತು ಅಳಲಿದ ಕಾಯ ಬೇಸತ್ತು ಬಳಲಿದ ಕಾಯದ ಕರ್ಮದ ಗಾಯಗಳೆಲ್ಲ ಶರಣರ ಅರಿವಿನ ಧ್ವನಿಯಿಂದ ಮಾದು, ಅರಿವಿನ ಕಾಯವೇ ಆಗುವುದು.

ಶರಣರು ಕಾಯವನಿಡಿದು ಮೈದಡವಿ, ಕಾಯದ ಚೈತನ್ಯವನು ಕಾಯಕ್ಕೆ ತೋರಿ, ಸಮತೆಯ ಜಲ ಸಿಂಪಡಿಸಿ, ಕಾಯದ ಜ್ಞಾನವೆಂಬ ಅಗ್ನಿಯನ್ನು ಪುಟವಿಕ್ಕಿ, ಕಾಯದ ಸುಳುವಿನ ಪಾಕಕ್ಕೆ ತಂದು. ಮನವನ್ನು ಆ ಅರಿವಿನ ಪಾಕದಲ್ಲಿ ಬೆರಸುತ್ತಾರೆ. ಅದರಿಂದಾದ ಪರಿಮಾಣದನ್ನವನು ಕಾಯಕ್ಕೆ ಉಣಿಸುತ್ತಾರೆ. ಕಾಯ ಮತ್ತೆಂದು ಅಂಜದಂತೆ ಅಕಾಯ ಮಾಡುತ್ತಾರೆ. ಆಸತ್ತು ಬೇಸತ್ತು ಬದುಕುವ ಕಾಯವನ್ನು ಎಂದೆಂದೂ ಸಾಯದಂತೆ ಮಾಡುತ್ತಾರೆ.

ಶರಣರ ಬರುವಿಗಾಗಿ ಕಾಯ ಕಾಯಬೇಕು. ಆಸತ್ತು ಬೇಸತ್ತು ಬಳಲಬೇಕು. ಆ ಕಾಯಕ್ಕೆ ಮಾತ್ರ ಈ ಸೌಭಾಗ್ಯ ದೊರೆಯುತ್ತದೆ.

20

ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದ
ಆನು ಮುಂದುಗೆಟ್ಟೆನಯ್ಯಾ ;
ಆನು ಹೊರಳಿ ಬೀಳುತ್ತಿದ್ದೆನಯ್ಯಾ !
ಓಂ ನಮಃ ಶಿವಾಯ ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ
ಕೂಡಲಸಂಗಮದೇವಾ

ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ ವಿಷಯವೆಂಬ ವಿಷಯದಿಂದ ಆನು ಮುಂದುಗೆಟ್ಟೆನಯ್ಯಾ ; ಆನು ಹೊರಳಿ ಬೀಳುತ್ತಿದ್ದೆನಯ್ಯಾ :

ಸಂಸಾರವೆಂದರೆ ಹೆಂಡಿರು ಮಕ್ಕಳಲ್ಲ; ದೇಹಕ್ಕಂಟಿದ ಅಜ್ಞಾನವೇ ಸಂಸಾರ. ಇದು ಗಂಡ ಹೆಂಡತಿಗೆ ಉಂಟು; ಮಕ್ಕಳು ಮೊಮ್ಮಕ್ಕಳಿಗೂ ಉಂಟು. ಜಗದ ತನುಗಳಿಗೆಲ್ಲ ಉಂಟು.

ಬೇಕು ಬೇಡ ಎನ್ನುವ, ಸದಾ ಭೋಗಿಸಬೇಕೆನ್ನುವ, ನೋಡಿದ್ದನ್ನೆಲ್ಲ ಬೇಡುವ, ದಕ್ಕದಿದ್ದರೆ ಕೊಂದು ಪಡೆಯುವ ವಿಷಯದ ವಿಷ ಸರ್ಪ ದೇಹದಲ್ಲಿ ಸಂಸಾರ ಹೂಡಿದೆ. ಕಣ್ಣು ನೋಡಿ ಆನಂದ ಪಡುವ ಸದ್ಗುಣಕ್ಕೆ ಸರ್ಪ ನೆರಳಾಗಿ ಕಾಣದಂತೆ ಮಾಡಿದೆ.

ಕೇಳುವ ಕಿವಿಯಲ್ಲಿ ವಿಷಯವೆಂಬ ವಿಷದ ಸರ್ಪ ಹೆಡೆಯೆತ್ತಿ ಆಡುತ್ತಲಿದೆ. ಕೇಳಿದ ಶಬ್ದಗಳನ್ನು ಬುಸಗುಟ್ಟಿ ಕುಕ್ಕುತ್ತದೆ. ಅದರ ನಂಜು ತನುವನ್ನೇ ಕುದಿಯುವಂತೆ ಮಾಡಿದೆ.

ಮೂಸಿಸುವ ನಾಸಿಕದಲ್ಲಿ ಸರ್ಪ ಸಂಸಾರ ಹೂಡಿದೆ. ಬೇಕು ಬೇಡ ಎಂಬ ವಿಷ ಚೆಲ್ಲಿ, ಪರಿಮಳ ಹೀರುವ ನಾಸಿಕವನ್ನೇ ಘಾಸಿಗೊಳಿಸಿದೆ. ಹೊರಳಿ , ಹೊರಳಿ ಮೂಗನ್ನು ಕಚ್ಚಿ ತನುವಿಗೆ ಸಂಕಟವನ್ನೊಡ್ಡಿದೆ.

ರುಚಿಸುವ ನಾಲಿಗೆಯಲ್ಲಿ ರುಚಿ-ಅರುಚಿ ಎಂಬ ವಿಷ ಸರ್ಪ ಸಂಸಾರ ಹೂಡಿದೆ. ರುಚಿಸದಿದ್ದರೆ ಕತಕತನೆ ಕುದಿಯುತ್ತದೆ. ಅಡಿಗೆ ಮಾಡಿದ ತನುವನ್ನೇ ಕಚ್ಚಿ ಕಚ್ಚಿ ಕೊಲ್ಲುತ್ತದೆ. ಕಾರ, ಉಪ್ಪು, ಹುಳಿ, ಸಿಹಿ ತನುವಿನಿಂದಾದದ್ದಲ್ಲವೆಂದು ಸರ್ಪ ತಿಳಿಯಬೇಕಲ್ಲ . ನಾಲಿಗೆಯಲ್ಲಿ ಆಶ್ರಯ ಪಡೆದು, ನಾಲಿಗೆಯನ್ನು, ತನುವನ್ನು ಕಚ್ಚಿ ಕೊಲ್ಲುವ ದುರ್ಗುಣವದಕ್ಕೆ!

ರಕ್ತ, ಮೂಳೆ , ಮಾಂಸ ಹೊರಚೆಲ್ಲದಂತೆ ಬಂಧಿಸಿದ ತನುವಿನ ರಕ್ಷಾ ಕವಚವೆಂದೇ ಹೆಸರು ಪಡೆದದ್ದು ಚರ್ಮ. ಇದರಲ್ಲಿಯೂ ವಿಷಯವೆಂಬ ವಿಷ ಸರ್ಪ ಸಂಸಾರ ಹೂಡಿದೆ: ತಟ್ಟಿದರೆ ಸಾಕು ಬುಸುಗುಡುತ್ತದೆ. ನಂಜು ತಾಗಿದ ತನು ವಿಷಯದಿಂದ ವಿಕೃತವಾಗುತ್ತದೆ. ರಕ್ಕಸನಾಗುತ್ತದೆ. ಹಿಂದು , ಮುಂದು ಅರಿಯದೆ ತನು ತನುವಿನ ಮೇಲೆಯೇ ಹೊರಳಿ ಹೊರಳಿ ಬೀಳುತ್ತದೆ. ಸರ್ಪದ ಸಂಸಾರವೇ ವಿಚಿತ್ರ ! ಸರ್ಪ ಕಾಣುವುದಿಲ್ಲ; ತನು ಕಾಣುತ್ತದೆ. ತನು ಸರ್ಪವಲ್ಲ ಅದು ಈಶ್ವರನ ಆಭರಣ! ಅರಿವಿನ ಆಭರಣ! ಮಹಾಜ್ಞಾನದ ಮೇರುಪರ್ವತ !

ಓಂ ನಮಃ ಶಿವಾಯ ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ ಕೂಡಲ ಸಂಗಮದೇವಾ:

ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವು ತನುವಿನ ಜ್ಞಾನದ ಐದು ಮಹಾದ್ವಾರಗಳು . ಈ ಐದೂ ಮಹಾದ್ವಾರಗಳಲ್ಲಿ ಐದು ಹೆಡೆಯ ವಿಷಯವೆಂಬ ವಿಷದ ಸರ್ಪ ಸಂಸಾರ ಹೂಡಿದೆ. ಬೇಕು ಬೇಡಗಳ ಬಯಕೆ ಮಾಡಿ ಆಶ್ರಯ ಕೊಟ್ಟ ತನುವನ್ನೇ ಕುಕ್ಕಿ ಕುಕ್ಕಿ ಕೊಲ್ಲುತ್ತದೆ. ಇತ್ತ ಸಾಯುವುದಿಲ್ಲ; ಅತ್ತ ಬದುಕುವುದಿಲ್ಲ. ವಿಷಯವೆಂಬ ಸಂಸಾರದಲ್ಲಿಯೇ ತನು ನರಳಿ, ನರಳಿ ಸಾಯುತ್ತದೆ.

ಓಂ ನಮಃಶಿವಾಯ ಇದು ಮೃತ್ಯುಂಜಯ ಮಂತ್ರ! ಸರ್ಪ ಬಿಟ್ಟ ವಿಷವನ್ನು ಕಂಠದಲ್ಲಿ ಧರಿಸಿದ ನೀಲಕಂಠನ ಮಂತ್ರ. ಕಚ್ಚುವ ಸರ್ಪದ ವಿಷಯದ ಹಲ್ಲು ಕಿತ್ತಿ ಕೊರಳಲ್ಲಿ ಧರಿಸುವ ಈಶ್ವರನ ಮಂತ್ರ! ಐದು ಬೀಜಾಕ್ಷರಗಳೇ ಜ್ಞಾನದ ತನುವಾಗಿ, ಅರಿವಿನಿಂದ ಹಾವನಿಡಿದು ಹೊಸೆದು ನಾರಿ ಮಾಡಿ; ಆ ನಾರಿಯನ್ನೇ ತನುವಿನಲ್ಲಿ ಧರಿಸಿದ ಅರ್ಧನಾರೀಶ್ವರನ ಮಂತ್ರ ! ತನುವಿನಲ್ಲಿ ಬೆರೆತ ವಿಷಯವೆಂಬ ವಿಷವನ್ನೇ ಗಂಗೆಯನ್ನಾಗಿಸಿ ಜಟೆಯಲ್ಲಿ ಧರಿಸಿದ ಗಂಗಾಧರನ ಮಂತ್ರ!

ಈ ಮಂತ್ರ ಜಪಿಸಿದರೆ ಸಾಲದು , ತನುವಿನಲ್ಲಿ ಸಂಗಮವಾಗಬೇಕು; ಜಪಿಸುತ್ತ ಜಪಿಸುತ್ತ ಕೂಡಲಸಂಗಮನೇ ತಾನಾಗಬೇಕು. ಮೃತ್ಯುಂಜಯ, ನೀಲಕಂಠ , ಈಶ್ವರ, ಅರ್ಧನಾರೀಶ್ವ ರ, ಗಂಗಾಧರನೇ ತಾನಾಗಬೇಕು. ಇದು ಬಸವಣ್ಣನವರ ಆಶಯದ ಸೂತ್ರ.

21

ಅರಿಯದೆ ಜನನಿಯ ಜಠರದಲ್ಲಿ
ಬಾರದ ಭವಂಗಳಲ್ಲಿ ಬರಿಸಿದೆ ತಂದೆ!
ಹುಟ್ಟಿತ್ತೆ ತಪ್ಪಾಯಿತ್ತೆ ಎಲೆ ಲಿಂಗವೆ ?
ಮುನ್ನ ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೆ !
ಇನ್ನು ಹುಟ್ಟಿದೆನಾದಡೆ
ಕೂಡಲಸಂಗಮದೇವಾ ಏ, ನಿಮ್ಮಾಣೆ !

ಅರಿಯದೆ ಜನನಿಯ ಜಠರದಲ್ಲಿ ಬಾರದ ಭವಂಗಳಲ್ಲಿ ಬರಿಸಿದೆ ತಂದೆ:

ಸಂಗಮನಾಥನೆ , ಅರಿವಿನ ತಂದೆ ನೀನೆಂದು ಅರಿಯದಿದ್ದಕ್ಕಾಗಿ ನನ್ನನು ಬಾರದ ಭವಂಗಳಲ್ಲಿ ಬರಿಸಿದೆಯಲ್ಲ! ಜನನ ಮರಣಗಳ ಸಂಕಷ್ಟವನ್ನು ತಂದೊಡ್ಡಿದಿಯಲ್ಲಾ! ಕ್ಷಣ ಕ್ಷಣಕ್ಕೂ ಹುಟ್ಟುವ ; ಕ್ಷಣ ಕ್ಷಣಕ್ಕೂ ಸಾಯುವ ಕಷ್ಟವನ್ನು ಈ ತನುವಿಗೆ ನೀಡಿದೆಯಲ್ಲಾ

ಇದು ನಿನಗೆ ನ್ಯಾಯವೆ ?

ತಿಳಿಯದೆ ಹುಟ್ಟಿದೆ; ಅರಿವಿನ ತಂದೆಯಾದ ನಿನ್ನನ್ನು ಅರಿಯದಿದ್ದಕ್ಕಾಗಿ ಸಾವು ನೋವುಗಳನ್ನು ಅನುಭವಿಸಿದೆ. ಹುಟ್ಟಿದ್ದು ತಪ್ಪಾಯಿತ್ತೆ ? ಎಲೆ ಲಿಂಗವೇ, ಸಂಗಮನಾಥನೆ ; ತಿಳಿಯದೆ ಹುಟ್ಟಿದುದಕ್ಕೆ ಕೃಪೆಮಾಡು ; ಮಹಾಜ್ಞಾನವೆಂಬ ಅರಿವೇ ಆದ ನೀನು ಮನವೆಂಬ ನನಗೆ ಕೃಪೆಮಾಡು. ನೀನು ಸೃಷ್ಟಿಸಿದ ಕಂದ ನಾನು. ನಿನ್ನನ್ನೇ ಅರಿಯದ ಅಪರಾಧಿ ನಾನು. ಅರಿಯದಿದ್ದಕ್ಕಾಗಿ ಈ ಘೋರ ಶಿಕ್ಷೆಯೇ ನನಗೆ! ನಾನು ಅರಿಯದಿದ್ದರೇನಂತೆ ; ನೀನೆ ಬರಸೆಳೆದು ಕಂದನ ಅಪರಾಧ ಮನ್ನಿಸಿ ಅಪ್ಪಿ ಕೊಳ್ಳಬಾರದೆ?

ಕೃಪೆ ಮಾಡು ತಂದೆಯೇ! ಅರಿತ ಮೇಲೆ ಮತ್ತೊಮ್ಮೆ ಹುಟ್ಟಿದೆನಾದೊಡೆ ನಿಮ್ಮಾಣೆ ಸಂಗಮನಾಥನೇ, ಬೇಡಿದರೆ ನಿನ್ನನ್ನೇ ಬೇಡುವೆ. ಮಹಾದಾನಿ ಒಡಲೊಡೆಯ ನೀನು.

22

ಎಂದೊ , ಸಂಸಾರದಂದುಗ ಹಿಂಗುವುದು ?
ಎಂದೊ, ಮನದಲ್ಲಿ ಪರಿಣಾಮವಹುದೆನಗೆಂದೊ ಎಂದೊ ?
ಕೂಡಲಸಂಗಮದೇವಾ ,
ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ?

ಸುಖ-ದುಃಖ-ದುಮ್ಮಾನಗಳ ಸಾಗರವೇ ದೇಹ . ಸುಖ ಬಯಸಿ ದುಃಖ ಪಡುತ್ತದೆ. ಬಯಸಿದ ಸುಖ ದಕ್ಕಿದರೂ , ಮತ್ತೊಂದು ಸುಖ ಬಯಸಿ ದುಃಖ ಪಡುವ ದೇಹದ ಸಂಸಾರದ ದಂದುಗ ಹಿಂಗುವುದು ಎಂದೊ ?

ಹೀಗೆ ಸುಖ ದುಃಖಗಳನ್ನು ಬಯಸಿ ಸದಾ ತನುವನ್ನು ಸಂಕಟಕ್ಕೆ ಗುರಿಮಾಡುವ ಮನಕ್ಕೆ ; ಸುಖದ ಸುಖವಾದ ಶಾಶ್ವತ ಸುಖದ ಪರಿಣಾಮ ಎಂದಾಗುವುದೊ ಏನೊ? ತನುವಿನ ಕಣಕಣದಲ್ಲಿ ಸಂಗಮವಾದ ಅರಿವಿನ ಸಂಗಯ್ಯನನ್ನು ಮನ ಸೇರುವುದೆಂದೊ?

ಎಂದೊ, ಎಂದೊ ಜಗದ ತನು ಮನಗಳು ಒಂದಾಗುವುದೆಂದೊ, ಅರಿವಿನಿಂದ ಜಗವನ್ನು ನೋಡುವುದು ಇನ್ನೆಂದೊ, ಕೂಡಲಸಂಗಮದೇವನು ಜಗದ ತನುಗಳ ಮನವನ್ನು ಬಿಗಿದಪ್ಪಿ ಬಂಧಿಸುವುದಿನ್ನೆಂದೊ ಎಂದು ಬಸವಣ್ಣ ಚಿಂತಿತರಾಗಿದ್ದಾರೆ . ಸರಳವಾಗಿ ಮನ ತನುವಿನ ಅರಿವಿನಲ್ಲಿ ಸಂಗಮವಾಗುವ ಸೂತ್ರವನ್ನು ಜಗದ ತನುಗಳಿಗೆ ಕರುಣಿಸಿದ್ದಾರೆ .

ಗಿಡ, ಮರ, ಬಳ್ಳಿ, ಪಶು, ಪಕ್ಷಿ, ಜಲಚರಗಳಿಗೆ ಸಂಪತ್ತು ಹೇಗೆ ಬೇಕಿಲ್ಲವೊ? ಹಾಗೆಯೇ ತನುವಿಗೂ ಬಾಹ್ಯ ಸಂಪತ್ತು ಬೇಕಿಲ್ಲ . ತನುವಿಗೆ ಬೇಕಾದ ಹೊನ್ನು, ಕರೆನ್ಸಿ ಎಂಬ ಬಾಹ್ಯ ಸಂಪತ್ತು ನಾಯಿಗೆ ಕೂಡಾ ತೃಣ. ಅದನ್ನು ಮುಟ್ಟದೆ , ಮತ್ತೊಬ್ಬರು ಕೂಡಾ ಮುಟ್ಟಬಾರದೆಂದು ಮೂತ್ರ ಮಾಡುತ್ತದೆ .

ಹೊನ್ನಿಗೂ, ಮಣ್ಣಿಗೂ, ಕರೆನ್ಸಿಗೂ ವಿಷಯಾಸಕ್ತಿಗೂ ಮರುಳಾದ ಮನ ದೇಹದೊಂದಿಗೆ ಭೋಗಿಸುತ್ತದೆ ದಕ್ಕದಿದ್ದರೆ ಕಳುವು, ತುಡುಗು, ಕೊಲೆ ಮಾಡಿ ಸುಖಿಸುತ್ತದೆ ದುಃಖಿಸುತ್ತದೆ. ಇದು ಮನ ಮತ್ತು ತನುವಿನ ನಿರಂತರ ಸಂಸಾರದ ದಂದುಗ .

ಮನದ ಮಹಾರೋಗ ಕಳೆದುಕೊಳ್ಳಬೇಕೆಂಬ ಇಚ್ಛೆ ಮನಕ್ಕಿಲ್ಲದಿದ್ದಾಗ ಇನ್ನೆಂದೋ ಪರಮ ಸಂತೋಷ ಹೊಂದುವುದು ?

ದೇಹಕ್ಕೆ ಬೇರೆ ವೈರಿಗಳೇ ಇಲ್ಲ, ಮನವೇ ದೇಹದ ಕಡುವೈರಿ. ಕಪಟನಾಟಕದ ಸೂತ್ರಧಾರಿ ! ಅದರ ಸೂತ್ರದ ದಾರ ಹರಿದು ಕಪಟನಾಟಕದ ಪಾತ್ರ ಕಳಚಿದಾಗ ಹೊರಗೆ ಹಾರುವುದು ಬಿಟ್ಟು ದೇಹದೊಳಗೆ ವಿರಮಿಸುವುದು. ಪರಮಸಂತೋಷದಲ್ಲಿ ಮಿಂದು ಕೂಡಲಸಂಗಮನಲ್ಲಿ ಒಂದಾಗುವುದು.

23

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದಡಿಲ್ಲ ಕಂಡಯ್ಯಾ,
ತಾಳಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣ ನೊಂದುದಯ್ಯಾ ,
ಕೂಡಲಸಂಗಮದೇವಾ ಕೇಳಯ್ಯಾ ,
ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ !

ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದಡಿಲ್ಲ ಕಂಡಯ್ಯಾ:

ಭೂಮಿ ಹೇಮ ವಿಷಯಗಳ ಮೇಲೆ ಸದಾ ಆಸೆ ಮಾಡಿ, ಬಯಸಿ ಬಯಸಿ ಸುಖಿಸುವ ಇಲ್ಲ ದುಃಖಿಸುವ ಮನಕ್ಕೆ ಒಮ್ಮೆ ಅರಿವಿನ ನಿರಂತರ ಸುಖ ಉಣ್ಣುವ ಅಂತರಾಳದ ಆಸೆಯಾಗುತ್ತದೆ. ಶ್ರೀ ಗುರುವಿನ ಮೂಲಕ ಅರಿವೆಂಬ ಸದ್ಗುರುವಿನ ದರ್ಶನವಾಗುತ್ತದೆ.

ಭೂಮಿ ಹೇಮ ವಿಷಯ ಸುಖಗಳ ಬಾಹ್ಯ ಆಸೆ ಒಂದೆಡೆಯಾದರೆ; ಶ್ರೀ ಗುರು ಪರಿಚಯಿಸುವ ಅರಿವಿನ ಆಸೆ ಮತ್ತೊಂದೆಡೆ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಮನ ಎರಡೂ ದಡಗಳಲ್ಲಿ ಹೊಯ್ದಾಡುತ್ತದೆ. ಒಮ್ಮೆ ಆ ದಡಕ್ಕೆ ಹರಿದರೆ, ಮತ್ತೊಮ್ಮೆ ಈ ದಡಕ್ಕೆ ಹರಿಯುತ್ತದೆ.

ಶ್ರೀಗುರುವಿನ ಸಂಗ ಅಧಿಕವಾಗುತ್ತದೆ. ಭೂಮಿ ಹೇಮ ವಿಷಯಗಳ ಆಸೆಯಿಂದ ಮನ ವಿಮುಕ್ತನಾಗಲು ಬಯಸಿ, ಶ್ರೀ ಗುರುವಿನ ಸತ್ಯದ ಸುಖಕ್ಕೆ ಸೆರೆಯಾಳಾಗುತ್ತದೆ . ಕುಳಿತರೂ ನಿಂತರೂ ಶ್ರೀ ಗುರುವಿನ ಧ್ಯಾನ ! ತಾಯಿ-ಮಗುವಿನ ಪ್ರೇಮ, ಸಖ-ಸಖಿಯ ಪ್ರೇಮದಂತೆ ಸುಖಿಸುತ್ತ ಕಾಲಕಳೆಯುತ್ತದೆ .

ಭೂಮಿ ಹೇಮ ವಿಷಯ ಸುಖ ಬಿಟ್ಟ ಮನ ಗುರುವಿನ ಅಮೃತ ಮಾತುಗಳ ಸುಖವನ್ನು ಹಿಡಿಯುತ್ತದೆ. ಶ್ರೀ ಗುರು ಜಾಣನಾದರೆ ಮನದ ಈ ಬಾಂಧವ್ಯ ಕಳಚಿಕೊಳ್ಳುತ್ತಾನೆ. ಶಿಷ್ಯನ ಶಿಷ್ಯತ್ವ ಕೆಡಿಸಿ, ಗುರುವಿನ ಗುರುತನವನ್ನೂ ಕೆಡಿಸಿಕೊಳ್ಳುತ್ತಾನೆ. ಸುಖದ ಸುಖವನ್ನು ತಿಳಿಯಲು ಬಂದ ಮನಕ್ಕೆ ತನುವಿನಲ್ಲಿಯೇ ಇರುವ ಸದ್ಗುರುವಿನ ದರ್ಶನ ಮಾಡಿಸುತ್ತಾನೆ.

ತನುವಿನಲ್ಲಿರುವ ಮನ ಒಮ್ಮೆ ಭೂಮಿ ಹೇಮ ವಿಷಯಕ್ಕೆ ಸೆರೆಯಾಳಾಗಿತ್ತು ಮತ್ತೊಮ್ಮೆ ಶ್ರೀ ಗುರುವಿನ ಅಮೃತ ನುಡಿಗಳಿಗೆ ಸೆರೆಯಾಳಾಯಿತು. ಮಗದೊಮ್ಮೆ ತನ್ನ ತನುವಿನಲ್ಲಿರುವ ಸದ್ಗುರುವೆಂಬ ಅರಿವಿಗೆ ಸೆರೆಯಾಳಾಯಿತು. ಇದು ಶ್ರೀ ಗುರುವಿನ ಕೃಪೆಯಿಂದ ತಿಳಿಯಿತು.

ಮನಕ್ಕೆ ಬೋಧೆ ನಿಲುಕುವುದಿಲ್ಲ; ಅರಿವಿಗೆ ಬೋಧೆ ಮಾಡುವಂತಿಲ್ಲ! ತನುವಿನಲ್ಲಿ

ಅರಿವೆಂಬ ಸದ್ಗುರುವಿದ್ದಾನೆ; ಅದನ್ನು ತಿಳಿದು ತಾನೇ ಅರಿವಾಗುವ ಮನವೂ ಇದೆ . ಇದನ್ನು ತಿಳಿದು ನೀನೇ ಸುಖಿಯಾಗು ಎಂದು ಶ್ರೀ ಗುರು ಮನಕ್ಕೆ ಹೇಳುತ್ತಾ ಗುರು -ಶಿಷ್ಯ ಸಂಬಂಧದ ಕೊಂಡಿಯನ್ನು ಕಳಚಿಕೊಳ್ಳುತ್ತಾನೆ.

ಮನಕ್ಕೆ ಆನಂದವಾಗುತ್ತದೆ. ತನುವಿನಲ್ಲಿಯೇ ಅರಿವೆಂಬ ಸದ್ಗುರುವನ್ನು ಕಂಡು ಮನ ಬಯಸಿ ಬಯಸಿ ಆಸೆ ಮಾಡುತ್ತದೆ. ಅರಿವು ದಕ್ಕುವುದಿಲ್ಲ. ಶ್ರೀ ಗುರುವಿನ ಸಖ್ಯದಲ್ಲಿದ್ದ ಮನ ಸದ್ಗುರುವಿನ ತೆಕ್ಕೆಗೆ ಬರುತ್ತದೆ.

ಶ್ರೀ ಗುರು ಕ್ಷಮಾಶೀಲನೂ, ದಯಾಮಯನೂ ಆಗಿದ್ದ. ತಾಯಿಯಂತೆ ಉಣ್ಣಿಸುತ್ತಿದ್ದ ; ಲಾಲಿ ಹಾಡುತ್ತಿದ್ದ. ಅಮೃತ ಸಮಾನವಾದ ನುಡಿಗಳನ್ನೇ ನುಡಿಯುತ್ತಿದ್ದ. ಆದರೆ ಈಗ ಆತ ಇಲ್ಲ. ಇಲ್ಲವೆಂದರೆ ಇಲ್ಲವೆನ್ನಲೂ ಬರುವುದಿಲ್ಲ. ಶ್ರೀ ಗುರುವೇ ಅರಿವೆಂಬ ಸತ್ಯದ ಸದ್ಗುರುವಾಗಿದ್ದಾನೆ. ತನುವಿನಲ್ಲಿ ತನ್ಮಯನಾಗಿ ತನುವಿನ ಕಣಕಣದಲ್ಲಿ ಬೆರೆತಿದ್ದಾನೆ.

ನೋಡಿದರೆ ನೋಡಬೇಡವೆಂದು ಕಣ್ಣಿನ ನೋಟವನ್ನೇ ಕತ್ತರಿಸುತ್ತಾನೆ. ಕೇಳಿದರೆ ಕೇಳಬೇಡವೆಂದು ಕಿವಿಯ ಪೊರೆಯನ್ನೇ ಹರಿಯುತ್ತಾನೆ. ನುಡಿದರೆ ನುಡಿಯಬೇಡವೆಂದು ನುಡಿಗೆ ನುಡಿಯ ಸತ್ಯದ ಗಡಣವನ್ನೇ ಹಾಕುತ್ತಾನೆ. ವಾಸನೆಗೆ ಬಲಿಯಾದ ಮೂಗಿಗೆ ಅರಿವಿನ ಪರಿಮಳದ ಮೆಂಡು ಜಡಿಯುತ್ತಾನೆ . ರುಚಿ-ಬೇಡುವ ನಾಲಿಗೆಗೆ ಅರಿವಿನ ಅಮೃತ ತುರುಕುತ್ತಾನೆ. ಸ್ಪರ್ಶಿಸಿ ಸುಖಿಸುವ ಚರ್ಮಕ್ಕೆ ಕೂಡದಗಲದ ಕೂಟದ ಸವಿಯನುಣ್ಣಿಸುತ್ತಾನೆ .

ಸದ್ಗುರು ಕರುಣಿಸದಿದ್ದರೆ ಸಾಧ್ಯವಾಗದು ಈ ಸುಖ . ಬಯಸಿ ಬಯಸಿ ಆಸೆ ಮಾಡಿದರೂ ದೊರೆಯದು ಸುಖ. ಬಯಸಿದರೆ ಸಾಕು ಮರ ಹತ್ತಿ ಹಣ್ಣು ಕಿತ್ತು ತೊಳೆ ತೊಳೆಯ ಸುಲಿದು ಉಣ್ಣಿಸುವ ಶ್ರೀಗುರುವೆತ್ತ! ಬಯಸಿದರೆ ಬೇಡವೆನ್ನುವ ಸದ್ಗುರುವೆತ್ತ ! ಶ್ರೀ ಗುರು ಒಲಿಯುವುದು ಸುಲಭ ; ಶ್ರೀ ಗುರು ತೋರಿದ ಸದ್ಗುರು ಒಲಿಯುವುದು ಬಲು ಜಟಿಲ! ''ಅರಿದೆನೆಂದರೆ ಅರಿಯಬಾರದು ನೋಡಾ . ಘನಕ್ಕೆ ಘನ ತಾನೇ ನೋಡಾ. ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು'' ಎಂದು ಅಕ್ಕ ಹೇಳಿದರೆ, ಕೂಡಲ ಸಂಗಮದೇವಾ ಕೇಳಯ್ಯಾ , ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ ಎಂದು ಬಸವಣ್ಣನವರು ಹೇಳುತ್ತಾರೆ .

ಮನ ತನುವಿನ ಅರಿವಿನೆಡೆಗೆ ಹೋಗುವುದೇ ಬಲು ಜಟಿಲ. ಹೀಗಿರುವಾಗ ಶ್ರೀ ಗುರುವಿನ ಸಹಾಯದಿಂದ ಅರಿವಿಗೆ ಹೋದರೂ; ಅರಿವು ಮನಕ್ಕೆ ಒಲಿಯುವುದು ಇನ್ನೂ ಜಟಿಲವೆನ್ನುವ ಮಾತು ಬಸವಣ್ಣನವರು ಸಾರಿದ್ದಾರೆ. ಮನ ನಷ್ಟವಾಗಬೇಕಾದರೆ ಅರಿವಿನ ಮೊರೆ ಹೋಗಲೇಬೇಕು. ಅರಿವು ಮನಕ್ಕೆ ಒಲಿದು ಆ ಮನವನ್ನೇ ತನ್ನಂತೆ ಮಾಡಿಕೊಳ್ಳುವ ಪ್ರಯತ್ನ ಜಾಗ್ರತ್ ಸ್ವಪ್ನ ಸುಶುಪ್ತಿಯ ಕಾಲದಲ್ಲಿಯೂ ಜಾರಿಯಲ್ಲಿರಬೇಕು.

24

ಮುನ್ನ ಮಾಡಿದ ಪಾಪ ಬೆನ್ನಬಿಡದನ್ನಕ್ಕ
ಇನ್ನು ಬಯಸಿದಡುಂಟೆ ?
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದಡುಂಟೆ ,

ಕೂಡಲಸಂಗಮದೇವರಲ್ಲಿ ಮುನ್ನ ವರವ ಪಡೆಯದನ್ನಕ್ಕ ?

ಜ್ಞಾನಿಗಳನ್ನು ನೋಡಿ ಅವರಂತಾಗಬೇಕು ಎಂದು ಮನ ಬಯಸಿದರೆ ಸಾಧ್ಯವಾಗದು. ಅವರ ನುಡಿ ಕೇಳಿ, ಅವರು ಬರೆದುದನು ಓದಿ, ಅವರಂತೆ ನುಡಿಯಬೇಕು, ಬರೆಯಬೇಕು ಎಂದರೂ ಸಾಧ್ಯವಾಗದು. ಕೇಳಿ ನುಡಿಯಬಹುದು , ಓದಿ ಬರೆಯಬಹುದು ಅವರಂತೆ ಜ್ಞಾನದಿಂದಿರಲು ಸಾಧ್ಯವಾಗುವುದಿಲ್ಲ .

ಜ್ಞಾನಿಯ ಮಾತು ಕೇಳಿ ಜ್ಞಾನ ಬರುವುದಿಲ್ಲ ; ಜ್ಞಾನಿಯ ಬರಹ ಓದಿ ಜ್ಞಾನ ಬರುವುದಿಲ್ಲ . ಏನಿದ್ದರೂ ಅದು ಸಂಗ್ರಹವಾಗುತ್ತದೆ; ಓದಿದಾಗ ಕೇಳಿದಾಗ ಸಂತೋಷವಾಗುತ್ತದೆ. ಆ ಸಂತೋಷ ಸದಾ ದೇಹದಲ್ಲಿ ಉಳಿಯುವುದಿಲ್ಲ.

ಜ್ಞಾನ ಎನ್ನುವುದು ಜ್ಞಾನಿಯ ದೇಹದ ಸಂಪತ್ತು . ಅದು ಪುಸ್ತಕದಿಂದ ಬಂದುದು ಅಲ್ಲ ; ಮತ್ತೊಬ್ಬರಿಂದ ಎರವಲು ಪಡೆದದ್ದೂ ಅಲ್ಲ . ದೇಹದ ಕಣಕಣದಲ್ಲಿರುವ ಜ್ಞಾನವನ್ನು ಮನದಿಂದ ನಿರಂತರ ಕೃಷಿ ಮಾಡಿ ಪಡೆದದ್ದು! ಮನ ದೇಹದಲ್ಲಿರುವ ಆ ಜ್ಞಾನಕ್ಕೆ ಭಕ್ತಿ ಮಾಡಿ ಪಡೆದದ್ದು !

ಓದಿ ಕೇಳಿ ಜ್ಞಾನ ಪಡೆಯಬೇಕೆನ್ನುವ ಛಲ ಮನಕ್ಕೆ ಬರುತ್ತದೆ. ಆದರೆ 'ಓದಿ ಕೆಟ್ಟ ಕೂಚು ಭಟ್ಟ' ಎನ್ನುವ ಗಾದೆ ಮನಕ್ಕೆ ಮನದಟ್ಟಾಗದಿದ್ದರೆ ದೇಹದ ಆಯುಷ್ಯ ಕ್ಷೀಣಿಸುತ್ತದೆ, ದೇಹವನ್ನು ಅಲ್ಲಿ ಇಲ್ಲಿ ಸುತ್ತಾಡಿಸಿ ಅನೇಕ ಗ್ರಂಥಗಳನ್ನು ಓದಿ, ಪಂಡಿತ-ಪಾಮರ ಎನ್ನುವ ಪಟ್ಟ ದೇಹಕ್ಕೆ ಕಟ್ಟಿ ಮನ ದೇಹವನ್ನು ವ್ಯರ್ಥ ಕೊಲ್ಲುತ್ತದೆ.

ದೇಹದಲ್ಲಿದ್ದ ಬ್ರಹ್ಮ ಜ್ಞಾನವನ್ನು ಪಡೆಯಬೇಕಾದ ಮನ ಸುತ್ತಿ ಸುತ್ತಿ ದೇಹದೊಂದಿಗೆ ಬ್ರಹ್ಮ ಹತ್ಯೆ ಮಾಡಿದ ಪಾಪಕ್ಕೆ ಗುರಿಯಾಗುತ್ತದೆ . ಬೆನ್ನುಬಿಡದೆ ಕಾಡುತ್ತದೆ.

ದೇಹದ ಜ್ಞಾನಕ್ಕೆ ಭಕ್ತಿ ಮಾಡಿ, ಆ ಜ್ಞಾನವನ್ನು ಪಡೆದು, ಓತ ಪ್ರೋತವಾಗಿ ಆನಂದದಿಂದ ನುಡಿಯುವ ಜ್ಞಾನಿಗಳನ್ನು ನೋಡಿ ನೋಡಿ ; ಅವರ ನುಡಿ ಕೇಳಿ ಕೇಳಿ; ಅವರು ಬರೆದುದನ್ನು ಓದಿ ಓದಿ ಜ್ಞಾನಿಯಾಗ ಬೇಕೆಂದು ಬಯಸಿದಡೆ ಜ್ಞಾನಿಯಾಗುವನೆ? ಪಂಡಿತನಾಗಬಹುದೆ ಹೊರತು ಜ್ಞಾನಿಯಾಗಲು ಸಾಧ್ಯವಾಗುವುದಿಲ್ಲ.

ದೇಹದ ಕಣ ಕಣದಲ್ಲಿ ಸಂಗಮವಾದ ಮಹಾಜ್ಞಾನಿ ಸಂಗಮ ನಾಥನೆಂಬ ದೇವರಲ್ಲಿ ಬೇಡಿ ಬೇಡಿ ವರ ಪಡೆಯದನ್ನಕ್ಕ ಎಂದು ಬಸವಣ್ಣನವರು ಪ್ರಶ್ನಿಸುತ್ತಾ ಜ್ಞಾನ ಪಡೆಯುವ ಸರಳ ಸೂತ್ರವನ್ನು ಬಿತ್ತರಿಸಿದ್ದಾರೆ.

25

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ ,
ಚಂದ್ರ ಕುಂದೆ, ಕುಂದುವುದಯ್ಯಾ ,
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ , ಅಯ್ಯಾ?
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ; ಅಯ್ಯಾ ?
ಆರಿಗಾರೂ ಇಲ್ಲ; ಕೆಟ್ಟವಂಗೆ ಕೆಳೆಯಿಲ್ಲ !
ಜಗದ ನಂಟ ನೀನೆ ಅಯ್ಯಾ , ಕೂಡಲಸಂಗಮದೇವಾ!

ಸ್ನೇಹ ಮತ್ತು ನೆಂಟತನಕ್ಕೆ ಬಸವಣ್ಣನವರು ಎರಡು ಮಹಾನ್ ಉಪಮೆಗಳನ್ನು ತೆಗೆದು ಕೊಂಡಿದ್ದಾರೆ. ಸಹಜ ಮತ್ತು ಸದಾ ಉಳಿಯುವ ಬಲವಾದ ಸತ್ಯ ಸ್ನೇಹದ ಬಂಧುತ್ವವನ್ನು ಸೂತ್ರ ರೂಪದಲ್ಲಿ ಪ್ರತಿಪಾದಿಸಿದ್ದಾರೆ.

ಚಂದ್ರನಿಗೂ ಸಮುದ್ರಕ್ಕೂ ಅವಿನಾಭಾವ ಸಂಬಂಧ. ಚಂದ್ರ ಕೃಷನಾದಂತೆಲ್ಲ ಸಮುದ್ರವೂ ಕೃಷವಾಗುವುದು. ಚಂದ್ರ ಬೆಳೆಯುತ್ತಾ ಬೆಳೆಯುತ್ತಾ ಪೂರ್ಣ ಚಂದ್ರನಾದಾಗ ಸಮುದ್ರ ಚಂದ್ರನನ್ನು ಅಪ್ಪಿಕೊಳ್ಳಲು ಉಕ್ಕಿ ಉಕ್ಕಿ ಆತನೆತ್ತರಕ್ಕೂ ಚಿಮ್ಮುವುದು. ಆದರೆ ಚಂದ್ರನಿಗೆ ಗ್ರಹಣವಾಗಿ ರಾಹು ನುಂಗಲು ಅಣಿಯಾದಾಗ; ಪೂರ್ಣ ಚಂದ್ರನನ್ನು ರಾಹು ಗ್ರಹಣ ರೂಪದಲ್ಲಿ ನುಂಗಿದಾಗ, ಚಂದ್ರ ಮತ್ತು ಸಮುದ್ರದ ಸಂಬಂಧ ಉಳಿಯುವುದಿಲ್ಲ. ನನ್ನ ಪ್ರಿಯತಮ ಚಂದ್ರ ಸಾಯುತ್ತಾನಲ್ಲ ಎಂದು ಸಮುದ್ರ ಭೋರ್ಗರೆದು ರಂಪ ಮಾಡುವುದಿಲ್ಲ. ಚಂದ್ರನೊಂದಿಗೆ ಸಮುದ್ರವೂ ಇಲ್ಲವಾಗುವುದಿಲ್ಲ. ಇದು ಸಾಧ್ಯವಾಗುವುದೇ ಇಲ್ಲ .

ಹಾಗೆಯೇ ಸಮುದ್ರವನ್ನು ಅಗಸ್ತ್ಯ ಋಷಿಗಳು ಒಂದು ಬೊಗಸೆಯಲ್ಲಿ ಹಾಕಿಕೊಂಡು ಕುಡಿದಾಗ ಚಂದ್ರನೇನಾದರೂ ಅಡ್ಡಬಂದನೇ? ಆರಿಗಾರೂ ಇಲ್ಲ ಕೆಟ್ಟವಂಗೆ ಕೆಳೆಯಿಲ್ಲ . ಇದು ಜಗದ ನಂಟು. ಅಜ್ಞಾನದ ನಂಟು. ಯಾರಿಗೆ ಯಾರೂ ಇಲ್ಲದ ನಂಟು .

ಎಲೆ ಕೂಡಲಸಂಗಮದೇವಾ ನಾನು ನೀನು ಕೂಡಿದ ನಂಟು ಹಾಗಲ್ಲ. ಕೂಡದಗಲದ ಕೂಟದ ನಂಟ ನೀನು. ದೇಹದೊಂದಿಗೆ ಬಂದು, ದೇಹದಲ್ಲಿಯೇ ಸಂಗಮವಾಗಿ , ದೇಹವನ್ನೇ ಮನೆ ಮಾಡಿ ಕೊಂಡ ನಂಟ ನೀನು. ದೇಹದ ಮನವನ್ನು ಸತಿಯಾಗಿಸಿಕೊಂಡು ಆ ಮನಕ್ಕೆ ಪತಿಯಾದವ ನೀನು. ಸತಿ ಸತ್ತರೆ ಸತಿಯೊಂದಿಗೆ ಸಹಗಮನವಾಗಿ ಬಯಲಲ್ಲಿ ಬಯಲಾಗುವ ನಿಜ ನಂಟ ನೀನು. ಮಹಾಜ್ಞಾನಿ ಮಂಗಳಮೂರ್ತಿ ನೀನು.

26

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲ ಹತ್ತಿ ಉರಿದಡೆ ನಿಲಲುಬಹುದೆ?
ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ ?

ಅಡಿಗೆಗೆ ಬಳಕೆಯಾಗುವ ಅಗ್ನಿ ಧರೆಗೆ ಬಳಕೆಯಾದರೆ , ಭೂಮಿಗೆ ನೀರುಣಿಸುವ ಏರಿ ತಾನೇ ಆ ನೀರನುಂಡರೆ, ಬೆಳೆಗೆ ಆಸರೆಯಾದ ಬೇಲಿ ಬೆಳೆಯನ್ನೇ ಕಿತ್ತು ತಿಂದರೆ, ಮನೆಗೆ ಬೆಳಕಾದ ನಾರಿ ಮನೆಯ ಸಂಪತ್ತು ಕಳುವಡೆ, ಮಗುವಿಗೆ ಪ್ರಾಣಾನ್ನವಾದ ತಾಯ ಮೊಲೆ ಹಾಲು ಮಗುವಿಗೆ ನಂಜಾಗಿ ಕೊಲ್ಲುವುದಾದರೆ ಇನ್ನಾರಿಗೆ ದೂರುವುದು?

ಈ ಐದೂ ಉಪಮೆಗಳು ತನುವಿನ ಜ್ಞಾನಕ್ಕೆ ಸೋಪಾನಗಳು. ಅರಿವು ತನುವಿನಲ್ಲಿಯೇ ಇದೆ. ಮನ ಅದಕ್ಕೆ ಒಲೆಯಾಗಿ ಪ್ರಸಾದವಾಗಬೇಕಿತ್ತು . ಬಾವಿಗೆ ಏರಿಯಾಗಿ ಭೂಮಿಗೆ ನೀರುಣಿಸಬೇಕಿತ್ತು. ತನುವಿನ ಮನೆಗೆ ನಾರಿಯಾಗಿ ಬೆಳಗಬೇಕಿತ್ತು. ಮಗುವಿನ ಹಸಿವಿಗೆ ತಾಯಿಯ ಮೊಲೆಯಾಲಾಗಿ ಪ್ರಸಾದವಾಗಬೇಕಿತ್ತು. ಆದರೆ ತನುವಿನ ಮನೆಯಲ್ಲಿಯೇ

ಮನ ಹುಟ್ಟಿ ತನುವಿಗೆ ಕಡುವೈರಿಯಾಗಿದೆ .

ಮನ ಅರಿವಿನ ಸಂಬಂಧ ಮಾಡಿ, ಅರಿವೇ ತಾನಾಗಿ, ಅರಿವಿನ ತನುವಾಗಬೇಕಿತ್ತು. ಆದರೆ ಮನ ಅಜ್ಞಾನದ ಸಂಬಂಧ ಬೆಳಸಿ ತನುವಿಗೆ ಹಾದರದ ಪಟ್ಟ ಕಟ್ಟುತ್ತದೆ . ಕಳುವು ಮಾಡಿ ತನುವಿಗೆ ಕಳ್ಳನ ಪಟ್ಟ ಕಟ್ಟುತ್ತದೆ. ಲಂಚ ಪಡೆದು ತನುವಿಗೆ ಭ್ರಷ್ಟನ ಪಟ್ಟಕಟ್ಟುತ್ತದೆ. ಕೊಲೆ ಮಾಡಿ ತನುವಿಗೆ ಕೊಲೆಗಡುಕನ ಪಟ್ಟ ಕಟ್ಟುತ್ತದೆ . ನಾನಾ ವೇಷ ಧರಿಸಿ ಜ್ಞಾನತನುವಿಗೆ ಅಜ್ಞಾನದ ಪಟ್ಟ ಕಟ್ಟುತ್ತದೆ. ತನು ತನುವನ್ನೇ ದ್ವೇಷಿಸಿ, ಮನ ತನುವನ್ನೇ ದೂರಿ, ತನುವನ್ನೇ ಕೊಲ್ಲುವಂತೆ ಮಾಡುತ್ತದೆ; ಇನ್ನಾರಿಗೆ ದೂರುವುದು !

ಅರಿವು ಮತ್ತು ಮನ ತನುವಿನಲ್ಲಿ ಸಂಗಮವಾಗಿದ್ದರೂ ಮನವೆಂಬ ನಾಯಿಗೆ ಸಂಗಮನಾಥನ ಪರಿಚಯವಿಲ್ಲ, ತನುವಿನಲ್ಲಿ ವಾಸಮಾಡಿದೆ ; ತನುವನ್ನೇ ಕಚ್ಚಿ ಕಚ್ಚಿ ಕೊಲ್ಲುತ್ತದೆ. ತಾಯಿಯಾಗಿ ಮಗನಿಗೆ ನ್ಯಾಯ ಒದಗಿಸಲಿಲ್ಲ . ನಾರಿಯಾಗಿ ಗಂಡನಿಗೆ ನ್ಯಾಯ ಒದಗಿಸಲಿಲ್ಲ, ಏರಿಯಾಗಿ ಭೂಮಿಗೆ ನ್ಯಾಯ ಒದಗಿಸಲಿಲ್ಲ. ಹೊಲಕ್ಕೆ ಬೇಲಿಯಾಗಿ ಬೆಳೆಗೆ ನ್ಯಾಯ ಒದಗಿಸಲಿಲ್ಲ. ಒಲೆಗೆ ಅಗ್ನಿಯಾಗಿ ನೆಲಕ್ಕೆ ನ್ಯಾಯ ಒದಗಿಸಲಿಲ್ಲ, ಬಸವಣ್ಣನವರ ಈ ಸೂತ್ರ ಮನ ನಷ್ಟವಾಗಿ ಜ್ಞಾನಕ್ಕೆ ಹೋಗುವ ಸೋಪಾನ ! ಈ ಸೋಪಾನಗಳನ್ನು ಹತ್ತಿ ಮನ ಅರಿವಿನಲ್ಲಿ ವಿರಮಿಸಬೇಕು ಅಷ್ಟೆ !

27

ಎನ್ನ ಗುಣಾವಗುಣವ ಸಂಪಾದಿಸುವೆ ಅಯ್ಯಾ !
ಪ್ರತಿಯೆ; ಅಪ್ರತಿಮ ಮಹಿಮಾ, ನಿಮಗಾನು ಪ್ರತಿಯೆ ?
ಕೂಡಲಸಂಗಮದೇವಾ, ನೀವು ಮಾಡಲಾನಾದೆನು !

ಮನವೆಂಬ ನಾಯಿಯ ಗುಣವೇ ಹೀಗೆ ; ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿದರೂ; ತುಂಡು ಎಲುಬಿಗಾಗಿ ಠಣ್ಣನೆ ಹಾರಿ ಹೊತ್ತ ಪಲ್ಲಕ್ಕಿಯನ್ನೇ ನಿಂದಿಸುವುದು.

ತನುವೆಂಬುದು ಅರಿವಿನ ಪಲ್ಲಕ್ಕಿ. ಅದು ಮಹಾ ಜ್ಞಾನವೆಂಬ ಅರಿವಿನ ದೇವರ ತೇರು! ಈ ದೇವರ ನೆರಳಾಗಿ ಬದುಕಬೇಕಾದ ಮನವೆಂಬ ನಾಯಿ ; ತೇರು ನೋಡಿ ಬೊಗಳುವುದೆಂದರೇನು? ತನುವಿನ ಗುಣಾವಗುಣಗಳನ್ನು ತನುವಿನ ಆಶ್ರಯ ಪಡೆದು, ತನುವನ್ನೇ ನಿಂದಿಸುವುದೆಂದರೇನು ?

ಅರಿವಿನ ದೇವರ ತನುವಿನ ಪಲ್ಲಕ್ಕಿಯನ್ನು ಮನ ಬಳಸಿ ತನುವನ್ನೇ ನಿಂದಿಸುವುದೆ? ತಾನಿದ್ದ ತನುವಾದರೇನು ಅನ್ಯ ತನುವಾದರೇನು ? ಅದು ಅರಿವಿನ ದೇವರು ಒತ್ತಿದ ಅಚ್ಚು ಎಂದು ಮನ ಅರಿಯಬೇಡವೆ? ತನು ಅಚ್ಚುಗನು ಒತ್ತಿದ ಮೆಚ್ಚಿನ ಅಚ್ಚು ! ಅಪ್ರತಿಮ ಮಹಿಮನ ಅಚ್ಚು ! ಆತ ಮಾಡಲಾದ ಮನ ಆತನಿಗೆ ಸರಿಯೆ?

ಅಚ್ಚುಗನಿದ್ದ ತನುಗಳೆಲ್ಲ ಅಚ್ಚುಗನ ಸೊತ್ತು. ಕಳ್ಳ, ಸುಳ್ಳ, ಕೊಲೆಗಡುಕ, ವಿಷಯಲಂಪಟ, ಭ್ರಷ್ಟ, ಧನಿಕ, ಸ್ವಾಮಿ, ಗುರು. ಹೀಗೆ ದೇಹದ ಪಾತ್ರ ಯಾವುದಾದರೇನು? ಅದರ ಅರಿವಿನ ಸೂತ್ರ ಒಂದೇ ! ಸೂತ್ರದ ಪಾತ್ರಧಾರಿಯೂ ಒಬ್ಬನೇ !

ಪಾತ್ರದ ಗುಣ-ಅವಗುಣಗಳನ್ನು ನಿಂದಿಸುವುದೆಂದರೆ ಅದರ ಸೂತ್ರಧಾರಿಯನ್ನು ನಿಂದಿಸಿದಂತಾಗಲಿಲ್ಲವೆ ? ಆ ಸೂತ್ರಧಾರಿ ನಿರ್ಮಿಸಿದ ಮನ; ಆತನಿಗೆ ಸರಿಸಾಟಿಯೇ ?

ಆತ ಮಾಡಲಾಗಿ ಮನವಾಯಿತು. ಆತ ಮಾಡಲಾಗಿ ತನುವಾಯಿತು !

ತನುಗಳೆಲ್ಲ ಒಂದೇ; ತನುವಿನ ಮನವೆಲ್ಲ ಒಂದೇ. ಅದು ಮಹಾದೇವ ನಿರ್ಮಿಸಿದ ಅರಿವಿನ ಕುಲುಮೆ ! ಗುಣಾವಗುಣಗಳನ್ನು ಕುಲುಮೆಯಲ್ಲಿ ಸುಟ್ಟು ; ಮನ ತನುವಿನಲ್ಲಿ ಸಂಗಮವಾಗಿ ಅರಿವಿನ ಮಹಾದೇವನನ್ನು ಕೂಡಬೇಕಿದೆ. ಕೂಡಲಸಂಗಯ್ಯನೇ ತಾನಾಗಬೇಕಿದೆ.

28

ಬೆದಕದಿರು ಬೆದಕದಿರು; ಬೆದಕಿದಡೆ ಹುರುಳಿಲ್ಲ !
ಚಿತ್ತ ರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ ?
ನಿಮ್ಮ ಉತ್ತಮಿಕೆಯ ಪೂರೈಸುವುದು
ಕೂಡಲಸಂಗಮದೇವಾ.

ಬೆದಕದಿರು ಬೆದಕದಿರು; ಬೆದಕಿದಡೆ ಹುರುಳಿಲ್ಲ ! ಚಿತ್ತ ರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ ?

ನಾನಾ ರೀತಿಯ ಮರಗಳು ಭೂಮಿಯ ಮೇಲಿವೆ. ಅವುಗಳ ಹೆಸರುಗಳೂ ಅನಂತ; ಲೆಕ್ಕವಿಲ್ಲದಷ್ಟು! ಹಣ್ಣು, ಹೂ , ಕಾಯಿ , ಆಹಾರ, ಔಷಧಿಗಳನ್ನು ನೀಡುವ ಮರ. ಪಶು, ಪಕ್ಷಿಗಳು , ಪ್ರಾಣಿ ಕೀಟಗಳಿಗೆ ಆಶ್ರಯ ನೀಡುವ ಮರ. ತೊಲೆ, ಸರಳು,ದಿಮ್ಮಿ, ಫರ್ನಿಚರ್‌ಗಳಿಗೆ ತಮ್ಮ ಬಾಳನ್ನೇ ನೀಡುವ ಮರ . ಒಂದೇ ಎರಡೇ ಹೇಳಲೂ ಹೆಸರು ನಿಲುಕದ ಮರ ಈ ಭೂಮಿಯಲ್ಲಿ ಬೆಳೆದು ನಿಂತಿವೆ . ಅದರ ಬದುಕೇ ಸಾರ್ಥಕ .

ಎಲೆಗಳನ್ನು ಪರಪರನೆ ತರೆದು ತಿಂದರೂ ನೋವಿಲ್ಲ ; ಹೂ ಪತ್ರೆಗಳನ್ನು ತರೆದು ಉಪಯೋಗಿಸಿದರೂ ದುಃಖವಿಲ್ಲ; ಕಾಯಿ, ಹಣ್ಣುಗಳನ್ನು ಹೊಡೆದು ಬೀಳಿಸಿದರೂ ಕಣ್ಣೀರಿಡುವುದಿಲ್ಲ. ಇದು ಬೇರಿದ್ದ ಮರ; ಸದಾ ಹಸಿರು !

ದೇಹವೂ ಒಂದು ಮರ ; ಆದರೆ ಇದಕ್ಕೆ ಬೇರಿಲ್ಲ ! ಇದು ಕೂಡಾ ಸದಾ ಹಸಿರು ! ಈ ಮರದ ತುಂಬಾ ಹುಡುಕಿದರೂ ಹಣ್ಣಿಲ್ಲ ಕಾಯಿಲ್ಲ; ಹೂಗಳು ಮೊದಲೇ ಇಲ್ಲ, ಅಂಕುರ ಹೊಡೆದು ಚಿಗುರೆಲೆಗಳು ಬೆಳೆಯುವುದಿಲ್ಲ. ಆದರೂ ಮರದಂತೆ ; ತನುವಿನ ದಿಮ್ಮಿ ಸದಾ ಹಸಿರು ! ಇದರ ತುಂಬಾ ಸಸ್ಯಕಾಸಿಯ ರೋಮಗಳು ! ಬೇರಿದ್ದ ಮರ ನಡೆಯುವುದಿಲ್ಲ; ಬೇರಿಲ್ಲದ ತನು ನಡೆದಾಡುತ್ತದೆ. ಇದು ಜ್ಞಾನದ ಮರವೂ ಹೌದು .

ಬೆದಕಿದರೆ ಹುರುಳಿಲ್ಲ ! ಹುಡುಕಿದರೆ ಹಣ್ಣಿಲ್ಲ ಕಾಯಿಲ್ಲ ! ಬಿಚ್ಚಿ ನೋಡಿದರೆ ಹತ್ತಿಯ ಹಣ್ಣು; ಇದರ ತುಂಬಾ ರಕ್ತ, ಮಾಂಸ, ಮೂಳೆ, ಮಜ್ಜೆ , ಮೇದಸ್ಸು !

ಕಾಯದಲ್ಲಿರುವ ಚಿತ್ತ ಅಜ್ಞಾನದಲ್ಲಿ ನೆಟ್ಟರೆ ಅಜ್ಞಾನಿ ಮರ, ಜ್ಞಾನದಲ್ಲಿ ನೆಟ್ಟರೆ ಜ್ಞಾನಿ ಮರ. ಜ್ಞಾನದ ನುಡಿಗಳನ್ನೇ ನುಡಿಯುತ್ತಾ ನಡೆದಾಡುವ ಜ್ಞಾನದ ಮರ. ಟಾಕಿಂಗ್ ಟ್ರೀ, ಬೊಧೀ ವೃಕ್ಷ!

ನಿಮ್ಮ ಉತ್ತಮಿಕೆಯ ಪೂರೈಸುವುದು ಕೂಡಲಸಂಗಮದೇವಾ:

ಸಂಗಯ್ಯನ ಮರ. ನಿಮ್ಮ ಮರ . ಮಹಾಜ್ಞಾನವೆಂಬ ನಿಮ್ಮ ಉತ್ತಮಿಕೆಯನ್ನೇ ಸದಾ ಪೂರೈಸುವ ನಡೆದಾಡುವ ಅರಿವಿನ ಮರ . ಅರಿವಿನ ಕಾಯದಲ್ಲಿ ಮನ ಸಂಗಮವಾಗಿ ಚಿತ್ತ ಅರಿವಿನ ಸೊತ್ತಾಗಿದೆ . ನೋಡುವ ಕಣ್ಣಿನಲ್ಲಿ ಚಿತ್ತ ನೆಟ್ಟು ಅರಿವಿನ

ಪೂರೈಕೆಯಾಗಿ ಸೌಂದರ್ಯ ವನ್ನು ಅನುಭವಿಸುತ್ತದೆ. ಕಾಯದಿಂದ ಮುಟ್ಟದೆ, ತಟ್ಟದೆ, ಪಡೆಯದೆ ಕಣ್ಣು ಆನಂದ ಅನುಭವಿಸುತ್ತದೆ . ಬೇಕು ಬೇಡಗಳ ಅಜ್ಞಾನ ಕಣ್ಣಿನಿಂದ ಸರಿದು ಅರಿವಿನ ಉತ್ತಮಿಕೆಯೇ ಭರಿತವಾಗಿದೆ . ಕೇಳುವ ಶಬ್ದದಲ್ಲಿ ಅರಿವಿನ ಉತ್ತಮಿಕೆ ನೆಟ್ಟು ಕಿವಿಗೆ ಪ್ರಸಾದವಾಗುತ್ತದೆ. ಕೇಳಿದ ಶಬ್ದಗಳೆಲ್ಲ ಕಿವಿಗೆ ಆನಂದವನ್ನೇ ಕೊಡುತ್ತವೆ .

ರುಚಿಸುವ ನಾಲಿಗೆಯಲ್ಲಿ ಅರಿವು ಪೂರೈಕೆಯಾಗಿ ಪದಾರ್ಥ ಅನಾವರಣಗೊಳ್ಳುತ್ತದೆ. ಜಲ ರೂಪ ನಾಲಿಗೆಗೆ ಜಲರೂಪ ಪದಾರ್ಥ ತಾಗಿ ರುಚಿ ಕಳೆದುಕೊಂಡು ಜಲವೇ ಆಗುತ್ತದೆ. ರುಚಿಸಿದ್ದೆಲ್ಲ ಪ್ರಸಾದವೇ ಆಗುತ್ತದೆ .

ಮೂಗು, ಚರ್ಮದಲ್ಲಿಯೂ ಅರಿವಿನ ಪೂರೈಕೆಯಾಗಿ; ಸದಾ ಜ್ಞಾನದ ಆನಂದವನ್ನೇ ಅನುಭವಿಸುತ್ತದೆ. ಜ್ಞಾನದ ಪರಿಮಳ ಬೀರುತ್ತಾ, ನುಡಿಯುತ್ತಾ, ನಡೆದಾಡುತ್ತಾ, ಬೋಧಿಸುತ್ತಾ ಭೋದೀ ಮರವಾಗುತ್ತದೆ.

29

ಎನ್ನ ಚಿತ್ತವು ಹತ್ತಿಯ ಹಣ್ಣು, ನೋಡಯ್ಯಾ ;
ವಿಚಾರಿಸಿದಡೆ ಏನೂ ಹುರುಳಿಲ್ಲವಯ್ಯಾ !
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪು ಮಾಡಿ
ನೀವಿರಿಸಿದಿರಿ ಕೂಡಲಸಂಗಮದೇವಾ !

ಇಡೀ ಪ್ರಪಂಚದಲ್ಲಿ ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿ ಜಲಚರಗಳು ಸುಂದರವಾಗಿವೆ. ಸಹಜ ಜ್ಞಾನದಿಂದ ನಳನಳಿಸುತ್ತಿವೆ. ರೂಪುಳ್ಳ ಮನುಷ್ಯ ಮಾತ್ರ ವಿಚಿತ್ರ! ಸಹಜ ಜ್ಞಾನ ಬಳಕೆಯಾಗದೆ ತನುವಿನ ಗರ್ಭದಲ್ಲಿಯೇ ಉಳಿದಿದೆ. ನೋಡಿದಡೆ ಹತ್ತಿಯ ಹಣ್ಣಿನಂತೆ ಕಾಣುತ್ತಾನೆ . ಬಿಚ್ಚಿ ನೋಡಿದರೆ ಅದರ ತುಂಬಾ ಹುಳುಗಳು !

ಕಲ್ಲಿಗಾಗಿ ಜಗಳ, ಮಣ್ಣಿಗಾಗಿ ಜಗಳ, ಮಣ್ಣಿನ ಗರ್ಭದಲ್ಲಿದ್ದ ಲೋಹಕ್ಕಾಗಿ ಜಗಳ . ಮಣ್ಣಿನ ಮೇಲೆ ಹರಿಯುವ ನೀರಿಗಾಗಿ ಜಗಳ, ಬೆಳೆದ ಬೆಳೆಗಾಗಿ ಜಗಳ. ಉಣ್ಣುವುದಕ್ಕೆ, ತಿನ್ನುವುದಕ್ಕೆ ಜಗಳ. ಮಲಗಿ ನಿದ್ರಿಸುವುದಕ್ಕೂ ಜಗಳ. ವಿಚಾರಿಸಿ ನೋಡಿದಡೆ ಹುರುಳಿಲ್ಲದ ಸಂಸಾರ ! ಡಾಂಬಿಕ ಸಂಸಾರ .

ತನುಗಳೆಲ್ಲ ಒಂದೇ ! ತನುವಿಗೊಬ್ಬ ನಾಯಕ, ಸೇವಕ, ಮುಖಂಡ, ಸಚಿವ ಶಾಸಕ, ಅಧಿಕಾರಿ ಗುಮಾಸ್ತ, ಹೆಚ್ಚು-ಕಮ್ಮಿ, ಹೆಣ್ಣು-ಗಂಡು ವಿಚಾರಿಸಿ ನೋಡಿದಡೆ ಹುರುಳಿಲ್ಲದ ಸಂಸಾರ, ನರಕದ ಸಂಸಾರ . ಮೋಸದ ಸಂಸಾರ .

ತನುವೆಲ್ಲ ಒಂದೇ : ತನುವೇ ಶ್ರೀಮಂತ, ತನುವೇ ಬಡವ, ತನುವೇ ಭಿಕ್ಷುಕ, ತನುವೇ ದಾನಿ, ತನುವೇ ಗುರು, ತನುವೇ ಶಿಷ್ಯ . ತನುವೇ ವಿಷಯ ಲಂಪಟ, ತನುವೇ ಕಳ್ಳ, ತನುವೇ ಪೊಲೀಸು ವಿಚಾರಿಸಿ ನೋಡಿದಡೆ ಹುರುಳಿಲ್ಲದ ಡಾಂಬಿಕ ಸಂಸಾರ.

ಜೀವ ಜಲವೇ ಪ್ರಪಂಚದ ಸಕಲ ಜೀವಿಗಳಿಗೂ ಆಧಾರ ! ಸೃಷ್ಟಿಗೆ ಕಾರಣ ಅದರ ಮೂಲ ನಿರಾಧಾರ ; ಬಯಲು ! ಜಲಜನಕ ಬಯಲು ; ಆಮ್ಲಜನಕವೂ ಬಯಲು. ಬಯಲಲ್ಲಿಯೇ ಇವೆರಡರ ವಾಸ ! ಬಯಲು ಬೆರೆತು ಬಯಲು ಮಾಡಲಾಗಿ ಜೀವಜಲ ! ಜೀವಜಲ ಬಿಂದುವಿನಿಂದಲೇ ರೂಪು !

ಬಯಲೇ ಜಲದಲ್ಲಿ ಬೆರೆತು ಜೀವಕಣವಾಗಿದೆ . ಆ ಬಯಲೇ ಜೀವಕಣದಲ್ಲಿ ಬೆರೆತು ದೇವಕಣವಾಗಿದೆ. ಆ ದೇವ ಕಣವೇ ಗರ್ಭದಲ್ಲಿ ಸಂಗಮವಾಗಿ ರೂಪುಗೊಂಡಿದೆ. ಸಂಗಮನಾಥನೇ ಆಗಿದೆ .

ಚಿತ್ತದಲ್ಲಿ ಮನ ನೆಟ್ಟರೆ ತನು ಹತ್ತಿಯ ಹಣ್ಣು ಬಿಚ್ಚಿ ನೋಡಿದರೆ ಹುರುಳಿಲ್ಲ . ಚಿತ್ತ ಅರಿವಿನಲ್ಲಿ ಸಂಗಮವಾದರೆ. ಅದು ಕೂಡಲ ಸಂಗಮದೇವನ ತನು . ಮಹಾದೇವನ ತನು ವಿಚಾರಿಸಿ ನೋಡಿದಡೆ ಅರಿವೇ ತುಂಬಿದ ಹುರುಳಿದ್ದ ತನು!

30

ಎನ್ನ ನಡೆಯೊಂದು ಪರಿ ; ಎನ್ನ ನುಡಿಯೊಂದು ಪರಿ ;
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ .
ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲಸಂಗಮದೇವನೊಳಗಿಪ್ಪನಯ್ಯಾ.

ಎನ್ನ ನಡೆಯೊಂದು ಪರಿ ; ನುಡಿಯೊಂದು ಪರಿ ; ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ:

ಬಸವಣ್ಣನವರು ತಮ್ಮ ಮೇಲೆ ಆರೋಪಿಸಿಕೊಂಡು ತನುವಿನಲ್ಲಿರುವ ಬ್ರಹ್ಮಜ್ಞಾನವನ್ನು ತನುವಿಗೆ ದರ್ಶನ ಮಾಡಿಸಿದ ಮಹಾಂತರು ! ನಡೆದಂತೆ ನುಡಿದ ಮಹಾವೀರರು.

ತನುವಿನ ನುಡಿ ಮತ್ತು ಅದರ ನಡೆಯೇ ವಿಚಿತ್ರ. ನೋಡಲು ಬಾರದ; ಕಣ್ಣೇ ಇಲ್ಲದ ಬಾಯಿ ನೋಡಿದೆನೆಂದು ನುಡಿದರೆ ಆ ನುಡಿ ಸತ್ಯದ ನುಡಿ ಹೇಗಾದೀತು ! ಕಳವು ಕೊಲೆ ಹಾದರ ಭ್ರಷ್ಟಾಚಾರ ನೋಡಿದ ಕಣ್ಣು ನುಡಿಯುವುದಿಲ್ಲ. ಬಾಯಿ ಇಲ್ಲದ ಕಣ್ಣಿಗೆ ನುಡಿಯಲು ಬರುವುದಿಲ್ಲ. ಅದು ತನುವಿಗೆ ಆವರಿಸಿದ ಅಜ್ಞಾನದ ಕ್ರಿಯೆ ಎಂದು ನೋಡಿ ಸುಮ್ಮನಾಗುತ್ತದೆ. ಆದರೆ ಬಾಯಿ ನೋಡದಿದ್ದರೂ ನೋಡಿದೆನೆಂದು ಸುಳ್ಳು ಬೊಗಳುತ್ತದೆ . ಕೇಳಲು ಬಾರದಿದ್ದರೂ ಕೇಳಿದೆನೆಂದು ಸುಳ್ಳು ಬೊಗಳುತ್ತದೆ. ಕಿವಿ, ಕಣ್ಣಿನ ಕೆಲಸಗಳನ್ನು ಬಾಯಿ ತೆಗೆದುಕೊಂಡದ್ದಕ್ಕಾಗಿ ತನುವಿನ ನುಡಿಯೊಂದು ಪರಿಯಾದರೆ , ನಡೆಯೊಂದು ಪರಿ.

ಕಣ್ಣು , ಕಿವಿಯಿಂದ ಸುದ್ದಿ ಬಾಯಿಗೆ ಬರುವುದರೊಳಗೆ ಸೋರಿಕೆಯಾಗಿ ನಡೆ ನುಡಿಯಲ್ಲಿ ವ್ಯತ್ಯಾಸವಾಗುತ್ತದೆ . ನಡೆಗೆ ತಕ್ಕ ನುಡಿ , ನುಡಿಗೆ ತಕ್ಕ ನಡೆಯಿಲ್ಲದೆ ಬಾಯಿ ಬ್ರಹ್ಮತನುವನ್ನು ಕ್ಷಣ ಕ್ಷಣಕ್ಕೂ ಘಾಸಿಗೊಳಿಸುತ್ತದೆ .

ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲಸಂಗಮದೇವ ನೊಳಗಿಪ್ಪನಯ್ಯಾ:

ತನುವು ಬ್ರಹ್ಮ ಜ್ಞಾನದಿಂದ ಭರಿತವಾಗಿದೆ . ನುಡಿಯಲ್ಲದ ನುಡಿಯ ನುಡಿದು ಹೇಳುವ ಅರಿವಿನ ಸಂಗಯ್ಯ ತನುವಿನಲ್ಲಿ ಸಂಗಮವಾಗಿದ್ದಾನೆ . ಆತ ನಡೆಗೆ ತಕ್ಕ ನುಡಿಯ ನುಡಿದು ಕೈ ಹಿಡಿದು ನಡೆಸುತ್ತಾನೆ.

ಕಣ್ಣು ನೋಡಿ ಆನಂದ ಪಡುತ್ತದೆ; ಬೇಡಿ ನುಡಿಯುವ ಸಂದೇಶ ಬಾಯಿಗೆ ರವಾನಿಸುವುದಿಲ್ಲ. ಕೇಳಿ ಆನಂದ ಪಡುವ ಕಿವಿ ಬಾಯಿಗೆ ಯಾವುದೇ ಸಂದೇಶ ರವಾನಿಸುವುದಿಲ್ಲಮ. ಚರ್ಮ, ನಾಲಿಗೆ, ಮೂಗು ಸುಖಿಸುತ್ತವೆ . ಮಾತನಾಡದಂತೆ ಬಾಯಿಗೆ ಬೀಗ ಜಡಿಯುತ್ತವೆ. ಬಾಯಿ ಬ್ರಹ್ಮ ನುಡಿ ನುಡಿಯುತ್ತದೆ. ಆ ನುಡಿಯಂತೆ ತನು ನಡೆಯುತ್ತದೆ. ಮನ ತನುವಿನೊಳಗಿದ್ದ ಬ್ರಹ್ಮದಲ್ಲಿ ಲೀನವಾಗಿ ಆ ಬ್ರಹ್ಮನೇ ತಾನಾಗುತ್ತದೆ.

ಬ್ರಹ್ಮನ ನುಡಿ ನುಡಿಯುತ್ತದೆ ; ಬ್ರಹ್ಮನ ನಡೆ ನಡೆಯುತ್ತದೆ.

31

ಮುಂಗೈಯ ಕಂಕಣಕ್ಕೆ ಕನ್ನಡಿಯ ತೋರುವಂತೆ
ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ !
ನಾಯಿಗೆ ನಾರಿವಾಣವಕ್ಕುವುದೆ ,
ಕೂಡಲಸಂಗಮದೇವಾ ?

ಕಂಕಣ ಕಟ್ಟಿಕೊಂಡ ಕೈ ಕಣ್ಣಿಗೆ ಕಾಣುತ್ತದೆ. ಅದಕ್ಕೆ ಕನ್ನಡಿಯ ಅವಶ್ಯಕತೆ ಇಲ್ಲ. ಆದರೆ ಮನ ಕನ್ನಡಿಯಿಂದ ಕಂಕಣ ನೋಡಲು ಹೊರಟಿದೆ. ತನುವನ್ನು ಕಟ್ಟಿಕೊಂಡು ಸಂಪತ್ತನ್ನು ಹುಡುಕಲು ಹೋಗುತ್ತದೆ. ಸಂಪತ್ತು ತನುವಿನಲ್ಲಿಯೇ ಇದೆ ಎಂಬುದು ಮನಕ್ಕೆ ಹೊಳೆಯುವುದಿಲ್ಲ. ಥಳ ಥಳ ಹೊಳೆಯುವ ತನುವಿನ ಅರಿವಿನ ಚಿನ್ನವನೊಲ್ಲದ ಮನ ರಸ್ತೆ ನಾಲೆಯಲ್ಲಿದ್ದ ಮಣ್ಣು ಸಂಗ್ರಹ ಮಾಡಿ, ಜಲ್ಲಡಿಯಲ್ಲಿ ಜಾಲಾಡಿಸಿ ಚೂರುಪಾರು ಚಿನ್ನ ಹುಡುಕ ಹೊರಟಿದೆ .

ಅರಿವೂ ಇದೆ, ತನುವೂ ಇದೆ ಇವೆರಡನ್ನೂ ನಾಯಿಯೆಂಬ ಮನ ಒಮ್ಮೆ ಸೆರೆ ಅಂಗಡಿಗೆ ಮತ್ತೊಮ್ಮೆ ವೇಶ್ಯಾ ಗೃಹಕ್ಕೆ ಕರೆದೊಯ್ಯುತ್ತದೆ. ಒಮ್ಮೆ ಲಂಚಕ್ಕೆ ಕೈ ಒಡ್ಡಿದರೆ ಮತ್ತೊಮ್ಮೆ ಕಳುವಿಗೆ ಎಳೆಸುತ್ತದೆ. ಒಮ್ಮೆ ಆಭರಣ ಖರೀದಿಸಿದರೆ ಮತ್ತೊಮ್ಮೆ ಅದನ್ನು ಕದ್ದು ತೃಪ್ತಿಪಡಿಸುತ್ತದೆ .

ತನುವಿನಲ್ಲಿ ಅರಿವೆಂಬ ಗುರುವೂ ಇದ್ದಾನೆ; ನಾಯಿ ಎಂಬ ಮನವೂ ಇದೆ . ಇದಕ್ಕೆ ಯಾರು ಪಾಠ ಮಾಡಬೇಕು ? ಸರಕಾರ, ಶಾಲೆ, ಶಿಕ್ಷಣ ಸಂಸ್ಥೆಗಳು, ಹೊರಗಿನ ಗುರುಗಳು ನಾಯಿ ಎಂಬ ಮನಕ್ಕೆ ಪಾಠ ಮಾಡಬಹುದೆ ?

ಮನವೆಂಬ ನಾಯಿಗೆ ಪಾಠ ನಿಲ್ಲುವುದಿಲ್ಲ ; ಅರಿವೆಂಬ ಗುರುವಿಗೆ ಪಾಠ ಬೇಕಿಲ್ಲ ! ಇದು ಮುಂಗೈಯ ಕಂಕಣಕ್ಕೆ ಕನ್ನಡಿಯ ತೋರುವ ಕೆಲಸ ! ತನುವಿನಲ್ಲಿ ಅರಿವೆಂಬ (ನಿಧಾನ) ಚಿನ್ನವಿದ್ದೂ ಅದನ್ನು ಒಲ್ಲದ ನಾಯಿ ನಾಲೆಯ ಕಸದಲ್ಲಿ ಹೂತುಹೋದ ಚಿನ್ನದ ತುಣುಕು (ಜಲಗ) ಹುಡುಕುತ್ತದೆ.

ನಾಯಿಗೆ ನಾರಿವಾಣವಕ್ಕುವುದೆ , ಕೂಡಲಸಂಗಮದೇವಾ .

ತೆಂಗಿನ ಕಾಯಿಯನ್ನು ನಾರಿವಾಣ ನಾರಿಕೇಳ ಎಂದು ಕರೆಯುತ್ತಾರೆ. ಅಮೃತ ಪ್ರಧಾನವಾದ ಜಲ ತೆಂಗಿನ ಸಸಿಗೆ ಹರಿದು ನಾರು, ಕೊರಟ, ತಿರಿಳಿನೊಂದಿಗೆ ಸೇರಿ ಅಮೃತವಾಗಿ ತೆಂಗು ಎಂದು ಹೆಸರು ಪಡೆದಿದೆ. ನಾರನ್ನು ಸುಲಿದು ಕೊರಟ ಒಡೆದು ತಿರಿಳಿನೊಂದಿಗೆ ಅಮೃತ ಸೇವಿಸುತ್ತೇವೆ. ಹಾಗೆಯೇ ತನುವು ಕೂಡಾ ನಾರಿಕೇಳ ನಾರಿವಾಣದಂತೆ ಅರಿವೆಂಬ ಅಮೃತ ಪ್ರಧಾನವಾದುದು . ಅರಿವೆಂಬ ಅಮೃತ ತನುವಿನ ಕಣಕಣದಲ್ಲಿ ಸಂಗಮವಾಗಿದೆ; ಮನವೆಂಬ ಪೀಚಿನ ಪೊರೆ ಗೊರಟ ತನುವನ್ನು ಆವರಿಸಿದೆ. ಮನದಿಂದಲೇ ಪೊರೆ ಸರಿಸಿ, ಗೊರಟ ಹೊಡೆದು ಮನವೇ ತನುವಿನ ಅಮೃತ ಉಣ್ಣಬೇಕು.

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು !
ಕೂಡಲಸಂಗಮದೇವಾ,

ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು , ನಿಮ್ಮ ಧರ್ಮ .

ಮನವನ್ನು ಬಸವಣ್ಣನವರು ಮರ್ಕಟಕ್ಕೆ ಹೋಲಿಸಿದ್ದಾರೆ. ಮನ ದೇಹದಲ್ಲಿ ವಿಶ್ರಮಿಸಿ, ದೇಹದ ಅರಿವಿನ ಪರಿಮಳ ಉಣ್ಣುತ್ತ ದೇಹದಲ್ಲಿಯೇ ಮೈ ಮರೆತು ಆನಂದಪಡಬೇಕಿತ್ತು. ಆದರೆ ಮನ ಬಯಸಿದತ್ತ ದೇಹ ವಾಲುತ್ತದೆ.

ಮನ ದೇಹವನ್ನು ಬೆಳಿಗ್ಗೆ ಪೂಜಿಸಲು ಪ್ರೇರೇಪಿಸುತ್ತದೆ; ಆಫೀಸಿನಲ್ಲಿ ಲಂಚಕ್ಕೆ ಕೈ ಒಡ್ಡುತ್ತದೆ. ರಾತ್ರಿ ಬಾರಿಗೆ ಕರೆದೊಯ್ದು ಕಂಠಪೂರ್ತಿ ಕುಡಿಸುತ್ತದೆ. ವೇಶ್ಯೆಯನ್ನಾಗಿಸುತ್ತದೆ. ಅಲ್ಲಿಗೆ ಕರೆದೊಯ್ದು ದೇಹವನ್ನು ವಿಟನನ್ನಾಗಿಸುತ್ತದೆ. ಅರಿವಿನ ದೇಹಕ್ಕೆ ಕೋತಿಯ ಪಟ್ಟ ಕಟ್ಟುತ್ತದೆ. ಮನದ ಬಯಕೆ ಈಡೇರಿಸಲು ದೇಹ ಸದಾ ತುದಿಗಾಲ ಮೇಲೆ ನಿಂತಿರುತ್ತದೆ. ಮನ ಮಾಡಿದ ತಪ್ಪಿಗೆ ಜನ ದೇಹವನ್ನೇ ದಂಡಿಸುತ್ತಾರೆ. ಜನಕ್ಕೇನು ಗೊತ್ತು ಇದು ಮನದ ಕೆಲಸವೆಂದು! ಮನಕ್ಕೆ ಯಾವ ದೇಶದಲ್ಲಿಯೂ ಶಿಕ್ಷೆಯೇ ಇಲ್ಲ. ಶಿಕ್ಷೆಯೇನಾದರೂ ಕೊಟ್ಟರೆ ದೇಹಕ್ಕೆ ಕೊಡುತ್ತಾರೆ ಹೊರತು ಮನಕ್ಕಲ್ಲ. ಭಾರತದಲ್ಲಿ ಮಾತ್ರ ಮನಕ್ಕೆ ಶಿಕ್ಷೆ ಕೊಡುವ ಶಿಕ್ಷಣವಿದ್ದರೂ ಅದು ವ್ಯಾಪಾರಕ್ಕೆ ಸೀಮಿತವಾಗಿದೆ.

ಮನಕ್ಕೆ ಶಿಕ್ಷೆ ಕೊಡುವ ಆಧ್ಯಾತ್ಮ ಶಿಕ್ಷಣವನ್ನು ವ್ಯಾಪಾರೀಕರಿಸಬಹುದೆ? ಅದನ್ನು ಕಾರ್ಪೊರೇಟ್‌ಲೆವೆಲ್‌ಗೆ ಕೊಂಡೊಯ್ಯಬಹುದೆ? ಮನ ಇರುವುದೇ ಹಿಗೆ ! ತನಗೆ ಶಿಕ್ಷೆ ಕೊಡುವ ಶಿಕ್ಷಣದ ಮೇಲೆಯೇ ಸವಾರಿ ಮಾಡಿ ದೇಹದಲ್ಲಿಯೇ ಬದುಕುತ್ತದೆ . ಆಧ್ಯಾತ್ಮ ಶಿಕ್ಷಣವನ್ನು ದೇಹದ ಮೂಲಕ ಭೋಧಿಸುತ್ತಾ ವ್ಯಾಪಾರ ಮಾಡುತ್ತದೆ.

ಜ್ಞಾನ ಕಿರೀಟ ಪ್ರಧಾನವಾದ ನೆತ್ತಿಯ ಮೇಲೆ ರಕ್ಕಸನ ಕೊಂಬು ಮೂಡಿಸಿ, ಕೊಂಬಿನಿಂದ ಕೊಂಬಿಗೆ ಹಾರಿ ದೇಹವನ್ನೇ ತಲ್ಲಣಗೊಳಿಸುತ್ತದೆ. ನಿಂದಲ್ಲಿ ನಿಲ್ಲುವುದಿಲ್ಲ; ಹೊದ್ದ ಪದವಿಯನ್ನು ಹೊದಿಯಲೀಯದೆ ನರಕಯಾತನೆಯನ್ನುಂಟು ಮಾಡುತ್ತದೆ.

ಅರಿವು ದೇಹದ ಕಣಕಣದಲ್ಲಿ ಬೆರೆತಿದೆ. ದೇಹವೆಂಬುದು ಕಮಲ; ಬ್ರಹ್ಮನ ವಾಸಸ್ಥಾನ; ಬ್ರಹ್ಮ ಕಮಲ ! ಈ ಬ್ರಹ್ಮ ಕಮಲದ ಅರಿವಿನ ಪರಿಮಳ ಸವಿದು ಬದುಕ ಬೇಕಾದ ಮನ, ದೇಹದೊಂದಿಗೆ ಸೆರೆ ಅಂಗಡಿಗೆ ಹೋಗುತ್ತದೆ; ಲಂಚಕ್ಕೆ ಕೈ ಒಡ್ಡುತ್ತದೆ. ಭ್ರಷ್ಟಾಚಾರದಲ್ಲಿ ಭಾಗಿಯಾಗುತ್ತದೆ.

ಕಮಲವಿದ್ದಲ್ಲಿಗೆ ಭ್ರಮರ ಹೋಯಿತೊ? ಭ್ರಮರವಿದ್ದಲ್ಲಿಗೆ ಕಮಲ ಹೋಯಿತೋ? ಒಂದನ್ನು ಒಂದು ಅರಿಯದಂತೆ ಭ್ರಮರ ಕಮಲದಲ್ಲಿ ಬಂಧಿಯಾಗುತ್ತದೆ. ಪರಿಮಳವನ್ನು ಉಣ್ಣುತ್ತ ಆ ಪರಿಮಳದಲ್ಲಿಯೇ ಪ್ರಾಣ ಕಳೆದುಕೊಂಡು ಆ ಪರಿಮಳವೇ ತಾನಾಗುತ್ತದೆ.

33

ಮರನನೇರಿದ ಮರ್ಕಟನಂತೆ
ಹಲವು ಕೊಂಬಿಂಗೆ ಹಾಯುತ್ತಲಿದೆ;
ಬೆಂದ ಮನವ ನಾನೆಂತು ನಂಬುವೆನಯ್ಯಾ ?
ಎಂತು ನಚ್ಚುವೆನಯ್ಯಾ ?
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ
ಹೋಗಲೀಯದಯ್ಯಾ !

ದೇಹ ಮರದಂತೆ ನಿಶ್ಚಿಂತನಾಗಿರಬೇಕಿತ್ತು, ಹೂ ಹಣ್ಣು ಕಾಯಿ ಚಿಗರು ತುಂಬಿದ ಎಲೆಗಳಿಂದ ಸದಾ ನಳನಳಿಸುತ್ತಿರಬೇಕಾಗಿತ್ತು, ಆದರೆ ಜ್ಞಾನ ಹೊತ್ತ ದೇಹ, ಮನದಿಂದಾಗಿ ಸದಾ ಸಂಕಟದಲ್ಲಿರುತ್ತದೆ, ಶ್ರೀಮಂತ, ಬಡವ, ಕೃಷಿಕ, ಅಧಿಕಾರಿ, ರಾಜಕಾರಣಿ, ಹೆಣ್ಣು ಗಂಡು ಹೀಗೆ ಯಾವ ಪಾತ್ರದಲ್ಲಿದ್ದರೇನು ಚಿಂತೆ ತಪ್ಪಿದ್ದಲ್ಲ . ಈ ಚಿಂತೆಯಿಂದ ದೇಹಕ್ಕೆ ಮುಕ್ತಿ ದೊರಕಬೇಕೆಂದು ಬಸವಣ್ಣ ಪ್ರಯತ್ನಿಸಿದರು. ತಾವು ಮುಕ್ತರಾದರು. ಮನದ ಸಂಕಟವನ್ನು ತಾವೇ ಆರೋಪಿಸಿಕೊಂಡು ವಚನಗಳ ರೂಪದಲ್ಲಿ ಸೂತ್ರ ಬರೆದರು.

ಮನ ಮರ್ಕಟದಂತೆ; ದೇಹದೊಂದಿಗೆ ಹಲವು ಕೊಂಬೆಗಳಿಗೆ ಹಾಯುತ್ತದೆ. ಬೆಂದ ಮನ ತನುವನ್ನೇ ಬೇಯಿಸುತ್ತದೆ. ತನುವಿನ ರೂಪ ನೋಡಿ ತಾನು ಸುಟ್ಟು ತನುವಿನೊಂದಿಗೆ ಸುಖಿಸಲು ತನುವನ್ನೇ ಸುಡುತ್ತದೆ. ಮರ್ಕಟದಂತಹ ಮನವನ್ನು ನಂಬಿ ತನು ಸುಖಿಸಲು ಹೋದರೆ ಅದಕ್ಕೆ ದುರ್ಗತಿ ತಪ್ಪಿದ್ದಲ್ಲ. ತನುವನ್ನು ಸುಡುವ ಮನವನ್ನು ಹೇಗೆ ನಂಬುವುದು?

ಎನ್ನ ತಂದೆ ಕೂಡಲ ಸಂಗಮದೇವನಲ್ಲಿಗೆ ಹೋಗಲೀಯದಯ್ಯಾ ;

ಅರಿವೇ ತನುವಿಗೆ ತಂದೆ ತಾಯಿ ಬಂಧು ಬಳಗ; ಅರಿವಲ್ಲದೆ ಮತ್ತಾರೂ ಇಲ್ಲ, ಅರಿವು ತನುವಿನೊಂದಿಗೆ ಬೆರೆತಿದೆ. ತನುವಿನ ಮನಕ್ಕೆ ಕ್ಷಣ ಕ್ಷಣವೂ ಪಾಠ ಮಾಡುತ್ತಾ ತನುವಿನೊಂದಿಗೆ ಸಂಗಮವಾಗುತ್ತದೆ.

ಅರಿವು ಗುರುವಾಗಿ ಪಾಠಮಾಡುವುದು; ಮನ ತನ್ನ ಸುಖಕ್ಕಾಗಿ ತನುವನ್ನು ದುಃಖಕ್ಕೀಡು ಮಾಡುವುದು ಮನಕ್ಕೆ ತಿಳಿಯಬೇಕು, ಮನವೇ ಅರಿವಿನಲ್ಲಿಗೆ ಹೋಗಿ ಆ ಅರಿವಿನಲ್ಲಿ ಸಂಗಮವಾಗಬೇಕು, ಆದರೆ ಹೋಗಲೀಯದು, ಮರವನೇರಿದ ಮರ್ಕಟನಂತೆ ಹಲವು ಕೊಂಬೆಗಳಿಗೆ ಹಾಯುತ್ತದೆ. ಬೆಂದ ಮನ ತನುವನ್ನು ಬೇಯಿಸುತ್ತದೆ. ಇದನ್ನು ಹೇಗೆ ನಂಬುವುದು? ಅರಿವನ್ನು ನಂಬಿ ಅರಿವೆಂಬ ಗುರುವಿನೊಂದಿಗೆ ಬೆರೆತು ಆ ಅರಿವೇ ಆಗುವುದು ಹೇಗೆ? ಸಂಕಟದಲ್ಲಿದ್ದ ದೇಹ, ದೇಹದ ಅರಿವು ಮತ್ತು ಮನವೇ ಯೋಚಿಸಿ ನಿರ್ಧರಿಸಬೇಕಾಗಿದೆ.

34

ಅಂದಣವನೇರಿದ ಸೊಣಗನಂತೆ-
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು
ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು

ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲಸಂಗಮದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ.

ಗುರುವಾಗಿ, ಶಾಸಕ ಸಚಿವನಾಗಿ, ಶ್ರೀಮಂತ, ಅಧಿಕಾರಿಯಾಗಿ ದೇಹ ಪಲ್ಲಕ್ಕಿಯಲ್ಲಿ ಮೆರೆಯುತ್ತದೆ. ಆದರೆ ಇದು ಮನ ಹಾಕಿದ ಪಾತ್ರ! ಮನ ಆ ವೇಷದಲ್ಲಿ ಮಿಳಿತವಾಗಿದೆ. ತನು ಪಲ್ಲಕ್ಕಿಯಲ್ಲಿ ಕುಳಿತರೂ ಹೊತ್ತುಕೊಂಡವರ ದೇಹಶ್ರೀಮಂತಿಕೆಯನ್ನು ನೋಡಿ ಜೊಲ್ಲು ಸುರಿಸುತ್ತದೆ. ಕನ್ನಡಿ ಕಳಶ ಹಿಡಿದವರೊಂದಿಗೆ ಹಾದರ ಮಾಡುತ್ತದೆ.

ಭೋಗಕ್ಕಿಳಿದ ನಾಯಿಯನ್ನು ಒಮ್ಮೆ ಹೊತ್ತವರೆ ಥಳಿಸುತ್ತಾರೆ. ವೇಷ ಹಾಕಿಕೊಂಡ ನಾಯಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿದರೆ ಎಲುಬು ಕಂಡರೆ ಸಾಕು ಠಣ್ಣನೆ ಜಿಗಿಯುತ್ತದೆ. ಮುನ್ನಿನ ಸ್ವಭಾವ ಬಿಡದು, ಪಲ್ಲಕ್ಕಿಯ ಸುಖಕ್ಕಿಂತ ಎಲುಬಿನ ರುಚಿಯೇ ಅಧಿಕವಾಗುತ್ತದೆ. ತನ್ನದೇ ರಕ್ತ ಸ್ರವಿಸಿ ಎಲುಬಿನಿಂದ ಸುಖವಾಯಿತೆಂದು ಆನಂದಪಡುತ್ತದೆ.

ಮನವೆಂಬ ನಾಯಿಯ ಗುಣವನ್ನು ಯಾರು ಸುಡಬೇಕು? ಅಧಿಕಾರಿ ಶಾಸಕ ಸಚಿವರು ಸಂವಿಧಾನ ರಚಿಸಿ ಸರಕಾರದಿಂದ ಸುಡಲು ಬರುತ್ತದೆಯೇ? ಸಂವಿಧಾನ ಪುಸ್ತಕದಲ್ಲಿ ಉಳಿಯುತ್ತದೆ; ಚರ್ಚಿಸಿದವರು ದುಃಖಃಕ್ಕೀಡಾಗುತ್ತಾರೆ!

ಮೃಡ, ನಿಮ್ಮನನುದಿನ ನೆನೆಯಲೀಯದು ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣ ನೆನೆವಂತೆ ಕರುಣಿಸು ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ :

ಬಸವಣ್ಣನ ಸೂತ್ರದಿಂದ ಮಾತ್ರ ದೇಹಕ್ಕೆ ಶಾಶ್ವತ ಪರಿಹಾರ ದಕ್ಕುತ್ತದೆ. ಮನ ಅರಿವೆಂಬ ಮೃಡನನ್ನು ನೆನೆದರೆ ಅರಿವೇ ಆಗುತ್ತದೆ. ದೇಹದ ಅರಿವಿನಲ್ಲಿ ಕೂಡಿ ಕೂಡಲಸಂಗಯ್ಯನಾಗುತ್ತದೆ. ಆ ಅರಿವೆಂಬ ಗುರುದೇವನ ಚರಣವನ್ನು ಸದಾ ನೆನೆವಂತೆ ಮನಕ್ಕೆ ಕರುಣಿಸು; ನಾಯಿಯ ಸ್ವಭಾವವನ್ನು ಸುಡುಸುಡು ಗುರುವೆ ಸೆರಗೊಡ್ಡಿ ಬೇಡುವೆ. ನಿಮ್ಮ ಧರ್ಮ ಅರಿವಿನ ಧರ್ಮ. ಅದು ದೇಹದ ಧರ್ಮ. ದೇಹದ ಧರ್ಮ ದೇಹಕ್ಕೆ ದಯಪಾಲಿಸು ಕರುಣಾಮಯನೆ ಎಂದು ಬಸವಣ್ಣ ಅರಿವಿನ ಗುರುವನ್ನು ಬೇಡಿದ್ದಾರೆ.

35

ತುಪ್ಪದ ಸವಿಗೆ ಅಲಗ ನೆಕ್ಕುವ ನಾಯಿಯಂತೆ ಎನ್ನ ಬಾಳುವೆ !
ಸಂಸಾರ ಸಂಗವ ಬಿಡದು ನೋಡೆನ್ನ ಮನವು;
ಈ ನಾಯಿತನವ ಮಾಣಿಸು,
ಕೂಡಲಸಂಗಮದೇವಯ್ಯಾ, ನಿಮ್ಮ ಧರ್ಮ.

ತುಪ್ಪದ ಸವಿಗೆ ಅಲಗ ನೆಕ್ಕುವ ನಾಯಿಯಂತೆ ಎನ್ನ ಬಾಳುವೆ ! ಸಂಸಾರ ಸಂಗವ ಬಿಡದು ನೋಡೆನ್ನ ಮನವು:

ದೇಹದ ಸಂಸಾರವೇ ಹೀಗೆ. ನಾಯಿಗೆ ತುಪ್ಪ ಕಾಣುತ್ತದೆಯೇ ಹೊರತು ಖಡ್ಗ ಕಾಣುವುದಿಲ್ಲ, ಅದಕ್ಕೆ ಮೆತ್ತಿದ ತುಪ್ಪ ನೆಕ್ಕಲು ಹೋಗಿ ನಾಲಿಗೆಯನ್ನೇ ಸೀಳಿಕೊಳ್ಳುತ್ತದೆ. ಅದು ನಾಯಿ; ಅದಕ್ಕೆ

ಅರಿವಿಲ್ಲ, ಆದರೆ ಮನ ಅರಿವಿದ್ದ ತನುವನ್ನೇ ನಾಯಿಯನ್ನಾಗಿ ಮಾಡಿದರೆ ಹೇಗೆ ?

ಸಚಿವ, ಶಾಸಕ, ಅಧಿಕಾರಿ, ಗುರು ವರ್ಗದ ದೇಹಗಳಿಗೆ ಒಂದು ಗೌರವವಿದೆ. ಆ ದೇಹಗಳು ಪಲ್ಲಕ್ಕಿಯಲ್ಲಿ ಮೆರೆಯುತ್ತವೆ. ಅರಿವೆಂಬ ಗುರುವಿದ್ದ ಆ ದೇಹವನ್ನೇ ಮನ ಅಜ್ಞಾನದ ವಸ್ತ್ರ ಹಾಕಿ ನಾಯಿಯಂತೆ ತುಪ್ಪದ ಸವಿಗೆ ಅಲಗು ನೆಕ್ಕಲು ಕರೆದುಕೊಂಡು ಹೋದರೆ ಆ ದೇಹದ ಗತಿ ಏನಾಗಬೇಡ!

ಮನದ ನಾಯಿತನದ ಕೆಲಸವೆಂದು ಅರಿವಿನ ದೇಹ ತಿಳಯಬೇಡವೆ? ಪಲ್ಲಕ್ಕಿಯಲ್ಲಿ ಕುಳಿತ ಅರಿವಿನ ದೇಹವನ್ನು ಮರೆಯಿಸಿ ನಾಯಿತನದ ಕೆಲಸ ಮಾಡಬೇಕೆ ?

ಈ ನಾಯಿತನವ ಮಾಣಿಸು ಕೂಡಲಸಂಗಮದೇವಯ್ಯಾ, ನಿಮ್ಮ ಧರ್ಮ:

ಮನ ದೇಹವನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿಸುತ್ತದೆ. ಹಾಗೆಯೇ ದೇಹದ ಸಂಗ ಮಾಡಿ ಹಾದರ ಭ್ರಷ್ಟಾಚಾರ ಲಂಚ ಕಳುವು ಮಾಡಿಸುತ್ತದೆ. ಮನದ ಈ ನಾಯಿತನವ ಮಾಣಿಸು; ದೇಹದ ಅರಿವಿನಲ್ಲಿ ಮನವನ್ನು ಸಂಗಮ ಗೊಳಿಸು; ಅರಿವೆಂಬ ಧರ್ಮದಲ್ಲಿ ದೇಹವನ್ನು ಮೆರವಣಿಗೆ ಮಾಡು ಗುರುವೇ ಎಂದು ಬಸವಣ್ಣನವರು ಅರಿವೆಂಬ ಕೂಡಲಸಂಗಯ್ಯ ನೊಂದಿಗೆ ಮಾತನಾಡಿದ್ದಾರೆ. ಅದು ನೀನೇ ಮಾಡಬೇಕಾದ ಧರ್ಮ ಎಂದು ಮನವಿ ಮಾಡಿದ್ದಾರೆ.

36

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ
ಎನ್ನ ಬಿಡು, ತನ್ನ ಬಿಡು ಎಂಬುದು ಕಾಯವಿಕಾರ
ಎನ್ನ ಬಿಡು, ತನ್ನ ಬಿಡು ಎಂಬುದು ಮನೋವಿಕಾರ
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೈದುಗೆ, ಕೂಡಲಸಂಗಮದೇವಾ!

ದೇಹವೆಂಬುದು ಜ್ಞಾನದ ಮೊಲವಿದ್ದಂತೆ ! ಇದಕ್ಕೆ ಜ್ಞಾನದ ಒಂಭತ್ತು ದ್ವಾರಗಳಿವೆ. ಈ ದ್ವಾರಗಳಿಗೆ ಮಹಾಜ್ಞಾನದ ದ್ವಾರಪಾಲಕರೂ ಇದ್ದಾರೆ. ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊರಳೆಗಳು , ನಾಲಿಗೆ, ಬಾಯಿ , ಚರ್ಮ , ದೇವಾಂಗ.

ಚಿತ್ತ ಬುದ್ಧಿ ಅಹಂಕಾರವನ್ನೊಳಗೊಂಡ ಮನವೆಂಬ ನಾಯಿ ಒಂದೊಂದು ಬಾಗಿಲಿಗೂ ದ್ವಾರಪಾಲಕನನ್ನೇ ಕಡೆಗಣಿಸಿ ತನ್ನ ಆಡಳಿತ ಹೂಡುತ್ತದೆ. ಕಣ್ಣಿಗೆ ನೋಡುವ ಜ್ಞಾನಮಾತ್ರವಿದೆ. ಆ ನೋಟದಲ್ಲಿ ನಾಯಿ ಪ್ರವೇಶ ಮಾಡಿ ನೋಡಿದ್ದನ್ನು ಬೇಡುತ್ತದೆ. ದಕ್ಕದಿದ್ದರೆ ಬೊಗಳುತ್ತದೆ. ಜ್ಞಾನದ ದೇಹವನ್ನೇ ನಾಯಿಯಂತೆ ಮಾಡುತ್ತದೆ; ಭೋಗಿಸುತ್ತದೆ. ಮನವೆಂಬ ನಾಯಿ ಸಿಕ್ಕುವುದಿಲ್ಲ; ದೇಹವೆಂಬ ಮೊಲ ಉಳಿಯುವುದಿಲ್ಲ. ಜನ ದೇಹವೆಂಬ ಮೊಲವನ್ನು ಹೊಡೆಯುತ್ತಾರೆಯೇ ಹೊರತು ನಾಯಿಯನ್ನಲ್ಲ.

ನಾಯಿ ಶಬ್ದ ಕೇಳಿ ದೇಹವನ್ನು ವಿಕಾರಗೊಳಿಸುತ್ತದೆ. ಶಬ್ಧವೆಲ್ಲ ಜ್ಞಾನವೆಂದು ನಾಯಿಗೆ ತಿಳಿಯುವುದಿಲ್ಲ. ವಾಸನೆ , ರುಚಿ, ಸ್ಪರ್ಶ, ರೂಪ ಬಾಗಿಲುಗಳಲ್ಲೂ ನಾಯಿಯ ವಾಸ! ಅದು ಸ್ವೀಕರಿಸುತ್ತದೆ ದೇಹವನ್ನು ನಾಯಿಯಂತೆ ಮಾಡುತ್ತದೆ.

ಸೊಣಗ ಮುಟ್ಟದ ಮುನ್ನ ಮನ ಜ್ಞಾನದ ಐದು ಬಾಗಿಲುಗಳನ್ನು ಹೊಕ್ಕರೆ ಅದು ಘನ

ಮನ. ಅರಿವಿನ ಬಾಗಿಲುಗಳಲ್ಲಿ ಮನ ಸಂಗಮವಾಗಿ ಕೂಡಲಸಂಗಮನೇ ತಾನಾಗುತ್ತದೆ.

ನೋಡುವ ಅರಿವಿನ ಕಣ್ಣಿನಲ್ಲಿ ಬೆರೆತ ಮನ ಜ್ಞಾನದ ಕಣ್ಣಾಗಿ ನೋಡುತ್ತದೆ. ರೂಪ ನೋಡಿ ಆನಂದ ಪಡುತ್ತದೆ. ಚರ್ಮ, ಮೂಳೆ, ಮಾಂಸ, ರಕ್ತ, ಮಜ್ಜೆ ಮೇದಸ್ಸು ನೋಡಿ ಭೋಗಿಸುವುದಿಲ್ಲ, ನೋಡುವ ನಾಯಿ ಜ್ಞಾನದಲ್ಲಿ ಮಿಂದು ಸತ್ತುಹೋಗುತ್ತದೆ. ಮನ ಜ್ಞಾನದ ಆಭರಣವಾಗಿ ತನುವಿನ ಜ್ಞಾನದ ಕಣ ಕಣದಲ್ಲಿ ಬೆರೆಯುತ್ತದೆ. ಜಾಣ ಮೊಲ ಮಾತ್ರ ಉಳಿಯುತ್ತದೆ. ಅಜ್ಞಾನದ ಸಿಂಹವನ್ನು ಜ್ಞಾನದ ಬಾಯಿಗೆ ಕರೆದುಕೊಂಡು ಹೋಗಿ ಆ ಬಾವಿಯಲ್ಲಿ ತನ್ನದೇ ಆದ ಪ್ರತಿರೂಪ ತೋರಿ ಸಿಂಹವನ್ನು ತಾನೇ ಬೀಳುವಂತೆ ಮಾಡುತ್ತದೆ.

ಮೊಲವೇ ಸಿಂಹದ ಪ್ರತಿ ರೂಪವಾಗಿ ದೇಹವೆಂಬ ಕಾಡು ರಕ್ಷಿಸುವ ಜ್ಞಾನ ರಾಜನಾಗುತ್ತದೆ. ಕಾಡಿನ ರಾಜನಾಗಿ ಮೆರೆಯುತ್ತದೆ.

37

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ;
ಮುಂದೆ ಲಿಂಗವ ಕಂಡಿಹೆನೆಂಬ ಹುಸಿ ನೋಡಾ!
ಬೆಂದ ಕರಣಾದಿಗಳು ಒಂದೆ ಪಥವನರಿಯವು.
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ?
ಎನ್ನ ತಂದೆ ಕೂಡಲಸಂಗಮದೇವಾ ,

ನಿಮ್ಮ ಶರಣರ ಬಳಿವಿಡಿದಡೆ ಎನ್ನ ದಂದುಗ ಹಿಂಗುವುದು !

ಮನ ದೇಹದೊಂದಿಗೆ ಹಲವಾರು ತೊಂದರೆಗಳನ್ನು ತನಗೆ ತಾನೇ ಒಡ್ಡಿಕೊಂಡು ತೊಳಲಾಡುತ್ತದೆ. ಜಾತಿ , ಮತ, ಪಂಥ, ಧರ್ಮ, ಪಂಗಡ. ಶ್ರೀಮಂತ ಬಡವ, ಹೆಣ್ಣು ಗಂಡು, ಗುರು, ಶಿಷ್ಯ , ಶಾಸಕ, ಸಚಿವ , ಅಧಿಕಾರಿ, ಕಾರಕೂನ, ಜವಾನ, ಪದವೀಧರ , ಜ್ಞಾನಿ, ಅಜ್ಞಾನಿ, ಭಾಷೆ, ದೇಶ , ಗಡಿ ,ರಾಜ್ಯ , ಜಿಲ್ಲೆ, ಗ್ರಾಮ ಹೀಗೆ ನಾನಾ ಸಂದೇಹಗಳು ದೇಹದಲ್ಲಿ ಮತ್ತೆ ಮತ್ತೆ ಬಂದು ಕಾಡುತ್ತವೆ . ಮನ ತಾನು ನಿರ್ಮಿಸಿಕೊಂಡ ಅಜ್ಞಾನದ ಸುಳಿಯಲ್ಲಿ ದೇಹದೊಂದಿಗೆ ತಾನೇ ಬಿದ್ದು ತೊಳಲಾಡುತ್ತದೆ.

ಈ ತೊಳಲಾಟದಲ್ಲಿ ಮನಕ್ಕೆ ದೇಹದ ಅರಿವೇ ಮರೆತು ಹೋಗುತ್ತದೆ. ಚಿತ್ತ ಬುದ್ಧಿ ಅಹಂಕಾರ ಮನವೆಂಬ ಕರಣಾದಿಗಳು ದೇಹದಲ್ಲಿಯೇ ಸೃಷ್ಟಿಯಾಗಿ ದೇಹದ ಜ್ಞಾನ ಪಥವನ್ನೇ ಅರಿಯದಂತಾಗುತ್ತದೆ.

ಕ್ರಿಷ್ಣ ಕ್ರಿಸ್ತ, ಬುದ್ಧ, ಮಹಾವೀರ ಕನಕ ಬಸವಾದಿ ಪ್ರಮಥರೆಲ್ಲ ದೇಹದಿಂದಾದವರೇ! ಅವರು ಬರೆದ ಪುಸ್ತಕಗಳೆಲ್ಲ ದೇಹದಿಂದ ಬಂದವುಗಳೇ ಆಗಿವೆ. ದೇಹದಿಂದ ಬಂದ ಪುಸ್ತಕಗಳನ್ನು ದೇಹ ಪೂಜಿಸಿದರೆ ಕ್ರಿಸ್ತ, ಕ್ರಿಷ್ಣ , ಬುದ್ಧ , ಮಹಾವೀರ , ಕನಕ, ಬಸವಾದಿ ಶರಣನಾಗಬಹುದೇ? ಎನ್ನುವ ಪ್ರಶ್ನೆ ಹುಟ್ಟುತ್ತದೆ. ದೇಹದ ಸಂದೇಹ ಹಿಂಗಲಿಲ್ಲ. ದೇಹದ ಜ್ಞಾನದ ಸುಳಿವು ದೇಹಕ್ಕೆ ದಕ್ಕಲಿಲ್ಲ.

ಶ್ರೀ ಕ್ರಿಷ್ಣ ದೇಹ ಆವರಿಸಿದ ಮನಕ್ಕೆ ಕ್ರಿಷ್ಣನಾಗುವಂತೆ ಬೋಧಿಸಿದರೆ ಪೂಜಿಸಿ ಧರ್ಮಿಯಾಯಿತು. ಕ್ರಿಸ್ತನಾಗುವಂತೆ ಬೋಧಿಸಿದರೆ ದೇಹ ಕ್ರೈಸ್ತನಾಯಿತು. ಬುದ್ಧನಾಗುವಂತೆ ಬೋಧಿಸಿದರೆ ದೇಹ ಬೌದ್ಧ ನಾಯಿತು. ಜಿನನಾಗುವಂತೆ ಬೋಧಿಸಿದರೆ ದೇಹ ಜೈನನಾಯಿತು.

ಜ್ಞಾನಕ್ಕೆ ಶರಣು ಹೋಗುವಂತೆ ಬಸವ ಮನಕ್ಕೆ ಬೋಧಿಸಿದರೆ ದೇಹ ಲಿಂಗಾಯಿತನಾಯಿತು. ಜ್ಞಾನಕ್ಕೆ ದಾಸನಾಗುವಂತೆ ಕನಕ ಬೋಧಿಸಿದರೆ ದೇಹ ಜಾತಿಗೆ ದಾಸನಾಯಿತು.

ದೇಹ ಸಂದೇಹದ ಸುಳಿಯಲ್ಲಿ ಸಿಲುಕಿ ತೊಳಲಿ ಬಳಲಿತೇ ಹೊರತು, ಮನ ಅದರ ದಂದುಗ ಬಿಡಲಿಲ್ಲ. ಸಂದೇಹ ಹಿಂಗಲಿಲ್ಲ. ದೇಹದ ಜ್ಞಾನ ದೇಹಕ್ಕೆ ದಕ್ಕಲಿಲ್ಲ. ಶಾಲಾ, ಕಾಲೇಜುಗಳು ಜ್ಞಾನಿಗಳ ಚರಿತ್ರೆ ಹೇಳಿದವೇ ಹೊರತು; ದೇಹಕ್ಕೆ ಜ್ಞಾನದ ಸುಳುಹು ನೀಡಲಿಲ್ಲ. ಆ ಸುಳುಹು ಶಾಲಾ, ಕಾಲೇಜುಗಳಿಗೂ ದಕ್ಕಲಿಲ್ಲ! ಅವುಗಳ ಸಂದೇಹವೂ ಅಡಗಲಿಲ್ಲ!

ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ? ಎನ್ನ ತಂದೆ ಕೂಡಲಸಂಗಮದೇವಾ, ನಿಮ್ಮ ಶರಣರ ಬಳಿ ವಿಡಿದಡೆ ಎನ್ನ ದಂದುಗ ಹಿಂಗುವುದು:

ಜ್ಞಾನದ ದೇಹವನ್ನು ಅಜ್ಞಾನಕ್ಕೆ ಕರೆದುಕೊಂಡು ಹೋದ ಮನದಿಂದಲೇ ಜ್ಞಾನ ಸಿದ್ಧವಾಗಬೇಕು . ಆದರೆ ಮರೆತು ಮನ ದೇಹವನ್ನು ಅಜ್ಞಾನಕ್ಕೆ ಕರೆದುಕೊಂಡುಹೋಯಿತು. ಶಿವಪಥವೆಂಬ ದೇಹದ ಜ್ಞಾನವನ್ನು ಮನ ಅರಿತು ; ಆ ಜ್ಞಾನಕ್ಕೆ ಮೊರೆಹೋಗಬೇಕು.

ನಾನು ಎಂಬ ಮನಕ್ಕೆ ದೇಹದ ಜ್ಞಾನವೆಂಬ ಅವನೇ ತಂದೆ . ದೇಹದ ಕಣ ಕಣದಲ್ಲಿ ಕೂಡಿ ಆ ದೇಹವೇ ತಾನಾದ ಕೂಡಲಸಂಗಮ ಕ್ಷಣ ಕ್ಷಣಕ್ಕೂ ಕೈ ಮಾಡಿ ಕರೆದು ಅಪ್ಪಿಕೊಂಡು ಮನವನ್ನು ತನ್ನಂತೆ ಮಾಡಬೇಕೆಂಬ ತವಕವುಳ್ಳ ಜ್ಞಾನಿ ತಂದೆ.

ಜ್ಞಾನಿ ತಂದೆಯನ್ನು ತಿಳಿದು, ಆತನಿಗೆ ಶರಣು ಹೋಗಿ ಶರಣರಾದವರ ಬಳಿಗೆ ಹೋದರೆ ಮನದ ದಂದುಗ ಹಿಂಗುವುದು! ಮನ ಘನಮನವಾಗಿ ದೇಹದ ಅರಿವು ದೇಹಕ್ಕೆ ದಕ್ಕುವುದು. ಕ್ರಿಷ್ಣ, ಕ್ರಿಸ್ತ, ಬುದ್ಧ, ಮಹಾವೀರ, ಕನಕ, ಬಸವಾದಿ ಪ್ರಮಥರ ದೇಹದಂತಾಗುವುದು.

38

ತನ್ನ ವಿಚಾರಿಸಲೊಲ್ಲುದು; ಇದಿರ ವಿಚಾರಿಸ ಹೋಹುದೀಮನವು!
ಏನ ಮಾಡುವೆನೀ ಮನವನು! ಎಂತು ಮಾಡುವೆನೀ ಮನವನು!
ಕೂಡಲಸಂಗಮದೇವನ ಶರಣರ
ನಚ್ಚದ ಮಚ್ಚದ ಮನವನು, ಕಿಚ್ಚಿನೊಳಗಿಕ್ಕು!

ತನ್ನ ವಿಚಾರಿಸಲೊಲ್ಲುದು; ಇದಿರ ವಿಚಾರಿಸ ಹೋಹುದೀ ಮನವು:

ಜಗತ್ತು ಕೆಟ್ಟಿದೆ; ಜನ ಕೆಟ್ಟಿದ್ದಾರೆ. ಜನಕ್ಕೆ ಬುದ್ಧಿಯಿಲ್ಲ. ಇದು ಪ್ರತಿ ತನುವಿನಿಂದ ಬರುವ ಪದ. ತನುವಿನ ಮನವೇ ಈ ಶಬ್ದಗಳ ಜನಕ, ಮನಕ್ಕೆ ತನ್ನನ್ನು ನೋಡುವ, ತನ್ನನ್ನು ಕೇಳುವ ಬಯಕೆಯಿಲ್ಲ. ಬೆಳಕು ಹರಿದರೆ ಸಾಕು ಇತರರ ವಿಚಾರಗಳ ಸುಖವೇ ಅದಕ್ಕೆ.

ರಾತ್ರಿ ಮಲಗಿದಾಗ ತಾನು ತಾನಲ್ಲ. ತಾನು ಶ್ರೀಮಂತನಲ್ಲ . ಬಡವನಲ್ಲ, ತಾನು ಹೆಣ್ಣಲ್ಲ ಗಂಡಲ್ಲ. ಶಾಸಕ ಸಚಿವ ಅಧಿಕಾರಿಯಂತೂ ಮೊದಲೇ ಅಲ್ಲ, ಹೆಂಡತಿಗೆ ಗಂಡನಲ್ಲ, ಗಂಡನಿಗೆ ಹೆಂಡತಿಯಲ್ಲ. ಮಕ್ಕಳು ಮೊದಲೇ ಇಲ್ಲ. ರಾತ್ರಿ ಮಲಗಿದಾಗ ತಾನು ತಾನಾಗಿದ್ದಿಲ್ಲ; ಬೆಳಕಾದರೆ ಸಾಕು ತನ್ನ ಹೆಗ್ಗಳಿಕೆಯ ಪುರಾಣ. ಇತರರ ನಿಂದಿಸಿ ಹೊಗಳಿ ಜಗಳ ಕಾಯುವುದೇ ಮನದ ಕೆಲಸ. ಏನ ಮಾಡುವೆ ನೀ ಮನವನು! ಎಂತು ಮಾಡುವೆ ನೀ ಮನವನು! ಎಂದು ಬಸವಣ್ಣನವರು ಜಗದ ತನುಗಳಿಗೆ ಮನದ ಸೂತ್ರ ನೀಡಿದ್ದಾರೆ.

ರಾತ್ರಿ ತನುವಿನಲ್ಲಿ ತನ್ನದೇ ಎನ್ನುವ ಎಲ್ಲವೂ ಕಳೆದು ಹೋದಂತೆ, ಹಗಲಿನಲ್ಲಿ ಕೂಡಾ ಕಳೆದು ಹೋಗಬಾರದೆ? ರಾತ್ರಿ ಮನ ತನುವಿನಲ್ಲಿ ಕೂಡಿದಂತೆ ಹಗಲು ಕೂಡಾ ತನುವಿನಲ್ಲಿ ಸಂಗಮವಾಗಬಾರದೆ? ಅರಿವಿಗೆ ಶರುಣು ಹೋಗಿ ಅರಿವೇ ತಾವಾದ ಶರಣರನ್ನು ನಚ್ಚದ ಮಚ್ಚದ ಮನವನ್ನು ಅರಿವಿನ ಕಿಚ್ಚಿನೊಳಗಿಕ್ಕಿ ಕೆಂಡ ಮಾಡಿಸಲೇಬೇಕು. ನಚ್ಚದ ಮಚ್ಚದ ಮನವನ್ನು ಮೆಚ್ಚಿಸಲೇಬೇಕು, ತನ್ನ ತಾನು ವಿಚಾರಿಸುವಂತೆ ಮಾಡಲೇಬೇಕು.

39

ತನ್ನಿಚ್ಛೆಯ ನುಡಿದಡೆ ಮಚ್ಚುವುದೀ ಮನವು;
ಇದಿರಿಚ್ಛೆಯ ನುಡಿದಡೆ ಮಚ್ಚದೀ ಮನವು;
ಕೂಡಲಸಂಗನ ಶರಣರ
ನಚ್ಚದ ಮಚ್ಚದ ಮನವ ಕಿಚ್ಚಿನೊಳಗಿಕ್ಕು.

ತನ್ನನ್ನು ಪರರು ಬಣ್ಣಿಸಬೇಕು. ತನ್ನಿಚ್ಛೆಯಂತೆ ನುಡಿಯಬೇಕು. ತನಗಾಗುವ ಮಾತುಗಳನ್ನೇ ಆಡಬೇಕು. ಇದಿರು ನುಡಿದಡೆ ಮನ ಮೆಚ್ಚುವುದಿಲ್ಲ. ಹಾಗೆ ನುಡಿದವರನ್ನು ಮನ ಅಸಹ್ಯಪಟ್ಟುಕೊಳ್ಳುವುದು. ಹುಸಿ ನುಡಿಯ ನುಡಿದು, ಮರು ನುಡಿದವರನ್ನು ಅಸಹ್ಯಪಟ್ಟು ಕೊಳ್ಳುವುದು. ತನ್ನ ಬಣ್ಣನೆ ಮನಕ್ಕೆ ಬಲು ಪ್ರೀತಿ. ಇದು ತನುವಿನ ಮನದ ಕತೆ. ಪ್ರತಿ ತನುವಿನ ಮನವೂ ಇದಕ್ಕಿಂತ ಭಿನ್ನವಲ್ಲ. ಅದಕ್ಕಾಗಿಯೇ ಬಸವಣ್ಣನವರು ಮನವನ್ನು ತನುವಿನ ಅರಿವಿನಿಂದ ಸೆರೆಹಿಡಿಯುವ ನಾಲ್ಕು ಸಾಲಿನ ಸೂತ್ರ ಹೇಳಿದ್ದಾರೆ.

ತನುವಿನ ಅರಿವು ಮನಕ್ಕೆ ಪರಿಚಯವಾಗದಿದ್ದರೆ ಪ್ರತಿ ತನುವಿನ ರೋಗ ಹೀಗೆಯೇ ಇರುತ್ತದೆ. ಮನ ಪ್ರತಿ ಶಬ್ದವನ್ನು ಸಂಗ್ರಹ ಮಾಡಿಕೊಂಡು ಅನುಕರಣೆ ಮಾಡುತ್ತದೆಯೇ ಹೊರತು ಅದಕ್ಕೆ ಸ್ವತಂತ್ರ ಜ್ಞಾನವಿಲ್ಲ. ತನುವಿನ ಜ್ಞಾನ ಬಳಕೆ ಮಾಡುವ ವಿಧಾನ ಮನಕ್ಕೆ ತಿಳಿದಿಲ್ಲ. ತಿಳಿದರೆ ಅದು ಜಗದಗಲ ಮುಗಿಲಗಲ.

ತನುವಿನ ಜ್ಞಾನವನ್ನು ಯಾರೂ ಕಳುವು ಮಾಡಲು ಬರುವುದಿಲ್ಲ. ಯಾರಿಂದಲೂ ಕದಿಯಲು ಆಗುವುದಿಲ್ಲ. ಇಂತಹ ತನುವಿನ ಜ್ಞಾನದ ದರ್ಶನ ಮಾಡಿಕೊಳ್ಳಬೇಕಾದ ಮನ ಪುಸ್ತಕ ಓದಿ ಉಪನ್ಯಾಸ ಕೇಳಿ ಸಂಗ್ರಹಿಸಿಕೊಂಡು ಪಂಡಿತನಂತೆ ನುಡಿಯುತ್ತದೆ. ತನ್ನನ್ನೇ ತಾನು ಬಣ್ಣನೆ ಮಾಡಿ ಕೊಳ್ಳುತ್ತದೆ.

ಕೂಡಲಸಂಗನ ಶರಣರ ದರ್ಶನ ಪಡೆದರೆ, ಅವರೊಂದಿಗೆ ಚರ್ಚಿಸಿದರೆ ನಚ್ಚದ ಮಚ್ಚದ ಮನವನ್ನು ಜ್ಞಾನದ ಕಿಚ್ಚಿನೊಳ್ಳಗಿಕ್ಕಿ ಜ್ಞಾನದ ಖಣಿಯನ್ನಾಗಿ ಮಾಡುತ್ತಾರೆ. ಜ್ಞಾನದ ತನುವಿನ ಖಣಿಯೊಳಗೆ ಮಿಂದ ಮನ ಜ್ಞಾನವೇ ತಾನಾಗುತ್ತದೆ. ಆಗ ಪುಸ್ತಕ ಓದಿ, ಉಪನ್ಯಾಸ ಕೇಳಿ ಜ್ಞಾನ ಕಳುವು ಮಾಡುವುದಿಲ್ಲ. ಮನ ತನುವಿನ ಜ್ಞಾನವನ್ನು ಬಳಸದೆ ಕೊಲ್ಲುವುದಿಲ್ಲ. ಹುಸಿಯ ನುಡಿಯುವುದಿಲ್ಲ, ಮುನಿಯುವುದಿಲ್ಲ, ಅನ್ಯರನ್ನು ನೋಡಿ ಅಸಹ್ಯಪಡುವುದಿಲ್ಲ. ಏಕೆಂದರೆ ಆ ತನುಗಳು ಕೂಡಾ ಜ್ಞಾನದ ಖಣಿಗಳೇ ಆಗಿವೆ. ತನ್ನ ಬಣ್ಣಿಸುವುದಿಲ್ಲ; ಬಣ್ಣನೆಗೆ ನಿಲುಕದ ಜಗದಗಲ ಮುಗಿಲಗಲ ಜ್ಞಾನ ತಾನೇ ಇರುವಾಗ ಮನ ಏನೆಂದು ಬಣ್ಣಿಸಿಕೊಂಡೀತು! ಇದಿರು ಹಳಿಯುವುದಿಲ್ಲ, ಏಕೆಂದರೆ ಮನದ ಅಂತರಂಗ ಬಹಿರಂಗಗಳೆರಡೂ ಶುದ್ಧವಾಗಿವೆ. ತನುವಿನ ಜ್ಞಾನದಲ್ಲಿ ಮಿಂದ ಮನ ಘನಮನವಾಗಿದೆ.

ಕೂಡಲ ಸಂಗನ ಶರಣನಾಗಿದೆ.

40

ಸುಡಲೀಮನವೆನ್ನ ನುಡುಹನ ಮಾಡಿತ್ತು .
ನಡೆವಲ್ಲಿನುಡಿವಲ್ಲಿಅಧಿಕನೆಂದೆನಿಸಿತ್ತು .
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ
ಕಡುಗೂರ್ಪಮಡದಿ ತಾ ಮುಟ್ಟಲಮ್ಮಳು.
ಒಡಲನುರಿಕೊಂಬುದು; ಒಡವೆಯನರಸ ಕೊಂಬ;
ಕಡುಗೂರ್ಪಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ!
ಮುನ್ನ ಮಾಡಿದ ಪಾಪ ತನ್ನ ಬೆನ್ನಬಿಡದನ್ನಕ್ಕ
ಇನ್ನು ಮಾಡಿದಡೊಳವೆ, ಕೂಡಲಸಂಗಮದೇವಾ?

ದೇಹದ ಸಂಸಾರ ಎನ್ನುವುದು ಉಡದಂತೆ. ಮನ ದೇಹದ ಅರಿವನ್ನು ಉಡದಂತೆ ಹಿಡಿದರೆ ದೇಹಕ್ಕೆ ಸುಖವಿತ್ತು. ಆದರೆ ನಡೆವಲ್ಲಿ ನುಡಿಯುವಲ್ಲಿ ನಾನೇ ಅಧಿಕನೆಂಬ ಅಹಂಕಾರದಿಂದ ನುಡಿಯುತ್ತದೆ. ನುಡಿದಂತೆ ನಡೆಯುವುದಿಲ್ಲ. ನಡೆದಂತೆ ನುಡಿಯುವುದಿಲ್ಲ. ಮನ ದೇಹಕ್ಕೆ ನಾನಾವೇಷ ಮುಖವಾಡ ಹಾಕಿ ನುಡಿಯುತ್ತದೆ. ಹಾದರದ ನಡೆಯ ನಡೆಯುತ್ತದೆ. ಮನ ಅಧಿಕವೋ ಅರಿವಿನ ತನು ಅಧಿಕವೋ ಎಂದು ಒಂದಕ್ಕೊಂದು ತಿಳಿಯದಂತೆ ಮನ ವಿಷಯ ವಸ್ತುವನ್ನು ಉಡ ಹಿಡಿತದಿಂದ ಬಿಡದಂತೆ ಹಿಡಿದು ತನುವನ್ನು ಅದರತ್ತ ಸೆಳೆಯುತ್ತದೆ. ಮನಮಾಡುವ ಹಾದರಕ್ಕೆ ತನುವಿಗೆ ಪೆಟ್ಟು ಬೀಳುತ್ತದೆ.

ಮನದ ಹಾದರವೇ ಹೀಗೆ. ಬಲು ಬೆಡಗಿನಿಂದ ತುಂಬಿದೆ. ಈ ವಚನದಲ್ಲಿ ಬಸವಣ್ಣನವರು ಮನದ ತನುವಿನ ಕೀಲ ಸಡಿಲಿಸಿದ್ದಾರೆ, ಅರಿವಿನ ನುಡಿ ನುಡಿಯುವ ಚೆಲುವ ಚೆನ್ನಿಗನ ಮಾತುಗಳು ಕಡುಗೂರ್ಪ ಚೆಲುವೆ ಮಡದಿಯ ಮನಕ್ಕೆ ಮುಟ್ಟುವಂತೆ ಮಾಡಿದ್ದಾರೆ.

ಒಡಲಿನ ಅರಿವೆಂಬ ಚೆಲುವ ಚೆನ್ನಿಗನ ಮಾತು ಮನವೆಂಬ ಚೆಲುವ ಹೆಂಡತಿಗೆ ಹಿಡಿಸುವುದೇ ಇಲ್ಲ. ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆದಂತೆ. ದೇಹದ ಆಯುಷ್ಯ ಮುಗಿದು ಬೆಡಗಿನ ಒಡಲುಕೆಟ್ಟು ಮಲಗಿದಾಗ, ಮನವೆಂಬ ಚೆಲುವ ಹೆಂಡತಿ ಮುಟ್ಟಲಮ್ಮಳು. ಒಡಲು ಉರಿಕೊಂಬುದು. ಇದರ ಅರಿವಿನ ಒಡವೆಯನು ಒಡೆಯಕೊಂಬ! ತನುವಿನ ಮನವೆಂಬ ಚೆಲುವ ಹೆಂಡತಿಯನ್ನು ಮತ್ತೊಬ್ಬ ಚೆಲುವ ಕೊಂಬ!

ಜಲದಲ್ಲಿ ಹುಟ್ಟಿದ ಮುತ್ತು ಬೆಳಗುವ ಮೂಲಕ ನುಡಿಯುತ್ತದೆ. ಬೆಳಗುವ ಮೂಲಕವೇ ಅಧಿಕನೆಂದೆನಿಸಿಕೊಳ್ಳುತ್ತದೆ. ಮುತ್ತಿನ ಬೆಡಗು ಬಿಚ್ಚಿದರೆ ಅದು ಕೇವಲ ಜಲಬಿಂದು; ಆ ಬಿಂದುವಿನಿಂದಲೇ ಆದ ಚಿಪ್ಪು. ಜಲಬಿಂದುವೇ ಮುತ್ತಾಯಿತು.

ಕ್ಷಣ ಕ್ಷಣಕ್ಕೂ ಸುಡುವ ಒಡಲ ಬೆಡಗಿನ ಕೀಲ ಬಿಚ್ಚಿದರೆ; ಜಲ ಬಿಂದುವಿನಿಂದಾದ ಒಡಲು. ಅರಿವಿನಿಂದ ಬೆಳಗುತ್ತಲಿದೆ. ಈ ಬೆಳಕಿನ ನೆರಳಾಗಿ ಹುಟ್ಟಿತು ಮನ! ಬೆಳಕಿನ ನುಡಿ ನುಡಿಯುತ್ತ ಬೆಳಕಿನ ನಡೆ ನಡೆಯುತ್ತ ಎಲ್ಲೆಡೆ ಜ್ಞಾನದ ಬೆಳಕ ಬೀರಬೇಕಿತ್ತು .ಆದರೆ ಮುನ್ನ ಮಾಡಿದ ಅಜ್ಞಾನದ

ಪಾಪವಿದೆ. ಇಂದು ಅರಿವಿನಿಂದ ಅರಿತರೆ ತೊಲಗುತ್ತದೆ. ಕತ್ತಲ ಮನವೇ ಬೆಳಕಾಗಿ ಮಿಂಚುತ್ತದೆ.

41

ವಚನದ ಹುಸಿನುಸುಳೆಂತು ಮಾಬುದೆನ್ನ?
ಮನದ ಮರ್ಕಟತನವೆಂತು ಮಾಬುದೆನ್ನ?
ಹೃದಯದ ಕಲ್ಮಷವೆಂತು ಮಾಬುದೆನ್ನ?
ಕಾಯವಿಕಾರಕ್ಕೆ ತರಿಸಲುವೋದೆನು.
ಎನಗಿದು ವಿಧಿಯೆ ಕೂಡಲಸಂಗಮದೇವಾ?

ವಚನದ ಹುಸಿನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ:
ಮಾತಿನಲ್ಲಿ ನುಸುಳುವ ಹುಸಿ ಘಾಸಿಗೊಳಿಸಿ ತನುವಿಗೆ ಸುಳ್ಳನ ಪಟ್ಟ ಕಟ್ಟುತ್ತದೆ. ಮಾತಿನಲ್ಲಿ ಹುಸಿ ಬೆರಸಿ ನುಡಿಯುವುದು ಮನವೆಂಬ ಮರ್ಕಟಕ್ಕೆ ಬಲು ಸುಖ. ಈ ಮರ್ಕಟತನವನ್ನು ಮಾತಿನಲ್ಲಿ ಮತ್ತೆ ಮತ್ತೆ ಸುಳಿಯುವ ಹುಸಿಯನು ಹೃದಯದ ಕಲ್ಮಷವನ್ನು ಕಳೆಯುವ ಬಗೆ ಹೇಗೆ? ಕಾಯದಲ್ಲಿ ಉಂಟಾಗುವ ಕಾಮವಿಕಾರಕ್ಕೆ, ಕ್ರೋಧ ಕ್ರೌರ್ಯಕ್ಕೆ ಮರುಳಾದೆ. ಕಾಯದಲ್ಲಿ ಉಂಟಾಗುವ ಲೋಭ, ಮೋಹ, ಮದ, ಮತ್ಸರಗಳಿಗೆ ಮರುಳಾದೆ. ಕಾಯ ವಿಕೃತವಾದರೆ ಅದಕ್ಕೆ ದುರುಳನ ಪಟ್ಟ. ಎನಗಿದು ವಿಧಿಯೆ ಕೂಡಲ ಸಂಗಮದೇವಾ?

ಮನದ ಮರ್ಕಟತನ ಮನಕ್ಕೆ ತಿಳಿಯಬೇಡವೆ? ಹೃದಯದ ಕಲ್ಮಷ ಮನಕ್ಕೆ ತಿಳಿಯಬೇಡವೆ? ಮಾತಿನಲ್ಲಿ ನುಸುಳುವ ಹುಸಿ ಮನಕ್ಕೆ ತಿಳಿಯಬೇಡವೆ?

ಮನದ ವಿಕಾರ ಮನಕ್ಕೆ ತಿಳಿದರೆ ಬದಲಾವಣೆ ಉಂಟು. ಮನದಿಂದಾದ ವಿಕಾರ ಜನಕ್ಕೆ ತಿಳಿದರೆ ತನುವಿಗೆ ಕೆಟ್ಟ ಪಟ್ಟ!

ಮನ ಮರ್ಕಟ, ತನು ನಿರಪರಾಧಿ, ಅರಿವು ತನುವಿನ ಆಭರಣ. ದೇಹ ಇದೊಂದು ಮಂತ್ರದಂಡ. ಮೂರೂ ಕೆಲಸಗಳು ಬೇರೆ ಬೇರೆ. ಅರಿವು ಗುರುವಿನ ಕೆಲಸ ಮಾಡಿದರೆ ಮನ ಮರ್ಕಟನ ಕೆಲಸ ಮಾಡುತ್ತದೆ. ತನು ಮಂತ್ರಮುಗ್ಧವಾಗಿ ಆದೇಶ ಪಾಲಿಸುತ್ತದೆ.

ಮನ ಕಾಯವಿಕಾರಕ್ಕೆ ಕಾರಣವಾದರೆ, ಅರಿವು ವೇಗವರ್ಧಕವಾಗಿ ತಡೆಯುತ್ತದೆ; ಉಪದೇಶ ಮಾಡುತ್ತದೆ. ಮನ ಟಿಸಿಲೊಡೆದು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವಾಗಿ ಇಡೀ ದೇಹವನ್ನು ಆವರಿಸಿ ತಲ್ಲಣಗೊಳಿಸುತ್ತದೆ. ಸಾಲದೆಂಬಂತೆ ಅಷ್ಟ ಮದಗಳಾಗಿ ರೂಪ ತಾಳಿ ತನುವನ್ನು ವಿಕೃತಗೊಳಿಸಿ ವಿಧಿಯಾಗಿ ಕಾಡುತ್ತದೆ.

ವಿಧಿಯಂತೆ ಕಾಡುವ ಮನವೇ ಅರಿವಿನೊಂದಿಗೆ ಕೂಡಿ ಕೂಡಲಸಂಗಮವಾಗಬೇಕಲ್ಲ. ಇದು ಬಲು ಜಟಿಲ; ಪ್ರಯತ್ನಿಸಿದರೆ ಬಲು ಸರಳ!

ಮಾತಲ್ಲದ ಮಾತನ್ನು ಅರಿವೆಂಬ ಗುರು ಶಬ್ದ ಮಾಡದಂತೆ ನುಡಿಯುತ್ತಾನೆ; ಅರಿವಿನಲ್ಲಿ ಸಂಗಮವಾದ ಮನ ಅರಿವು ನುಡಿದಂತೆ, ಹುಸಿಯ ಬೆರೆಸದಂತೆ ನುಡಿಯುತ್ತದೆ. ನುಡಿಯೆಲ್ಲ ವಚನವಾಗುತ್ತದೆ. ಮರ್ಕಟವಳಿದು ಮಾಣಿಕ್ಯವಾಗಿ ಹೃದಯ ಬೆಳಗುತ್ತದೆ. ಕಾಯ ಎಂದೆಂದು ವಿಕಾರವಾಗದೆ ಕೂಡಲಸಂಗಮವಾಗುತ್ತದೆ.

42

ಅಂಗದ ನೋಟವು ಸಿಂಗದ ಗಾತ್ರವು;
ಹಿಂಗದು ಮನದಲ್ಲಿನಾನಾ ವಿಕಾರವು.
ಬಂದೆನೆಂದರಿಯೆಲಿಕ್ಕಿಲ್ಲಾಗಿ ಸಂದೇಹ ಬಿಡದು;
ಮುಂದುಗಾಣದು ಲೋಕ.
ಬೆಂದ ಮಾಯಕ್ಕಂಜಿ ನಿಮ್ಮ ಮರೆವೊಕ್ಕೆ
ಕೂಡಲಸಂಗಮದೇವಾ.

ಅಂಗ ಸಿಂಹದ ಗಾತ್ರವೂ ಇಲ್ಲ; ಆನೆಯ ಗಾತ್ರವೂ ಇಲ್ಲ; ತಿಮಿಂಗಲ ಗಾತ್ರವೂ ಇಲ್ಲ. ಆದರೆ ಇದರ ನೋಟ ಇವೆಲ್ಲವುಗಳನ್ನು ಮೀರುತ್ತದೆ. ಮನ ನೋಟದಲ್ಲಿ ಬೆರೆತು ಮದ ತುಂಬಿದ ಆನೆಯಂತೆ ಅಂಗವನ್ನು ವಿಕಾರಗೊಳಿಸುತ್ತದೆ. ಸಿಂಹದಂತೆ ಕಚ್ಚಿ ತಿನ್ನುತ್ತದೆ. ಬೃಹದಾಕಾರದ ತಿಮಿಂಗಲವನ್ನೂ ಪಳಗಿಸುತ್ತದೆ. ಆದರೆ ಮನ ದೇಹದಲ್ಲಿ ಯಾಕೆ ಪ್ರವೇಶವಾಯಿತು; ಮಾಡಬೇಕಾದ ಕರ್ತವ್ಯವೇನು? ದೇಹವನ್ನು ಯಾಕೆ ಸಂಕಟಕ್ಕೊಡ್ಡುತ್ತಿದೆ? ಕ್ಷಣ ಕ್ಷಣಕ್ಕೂ ಬೆಂದು, ಬಂದುದನ್ನು ತಿಳಿಯದೆ ಬೇಯುತ್ತಿದೆ.

ಸಂದೇಹ ಬಿಡದಿದ್ದರೆ ಅಂಗ ಮುಂದುಗಾಣುವುದಾದರೂ ಹೇಗೆ? ಲೋಕ ಮುಂದುಗಾಣುವುದಾದರೂ ಹೇಗೆ? ಮನದ ಅಪರಾಧವನ್ನು ಪೊಲೀಸರು ಸರಕಾರ ತಪ್ಪಿಸಲು ಸಾಧ್ಯವೆ?

ಲೋಕ ಅಂಗಗಳಿಂದ ಕೂಡಿದೆ. ಅಂಗವಿಲ್ಲದ ಲೋಕವನ್ನು ಲೋಕವೆನ್ನುವಂತಿಲ್ಲ. *ದೇಶಮಂಟೆ ಮಟ್ಟಿ ಕಾದೊಯ್ ದೇಶಮಂಟೆ ಮನಸುಲೊಯ್.* ಮನುಷ್ಯರಿಲ್ಲದ ದೇಶವನ್ನು ದೇಶ ಅನ್ನುವಂತಿಲ್ಲ. ದೇಹಗಳಿಂದ ತುಂಬಿದ ದೇಶವನ್ನು ದೇಶ ಎನ್ನಲು ಸಾಧ್ಯ ! ರಕ್ಕಸ ಮನಗಳಿಂದ ತುಂಬಿದ ದೇಹಗಳ ದೇಶ ಮುಂದುಗಾಣಲು ಸಾಧ್ಯವೆ? ಇದನ್ನು ಯಾರೂ ಸರಿ ಮಾಡಲು ಸಾಧ್ಯವಿಲ್ಲ.

ಗುರುವಾದಾತ ಅಂಗದ ಅರಿವಿಗೆ ಪಾಠ ಮಾಡಲು ಬರುವುದಿಲ್ಲ; ಅಂಗದ ಮನವು ಸದಾ ಸಿಂಹದಂತೆ ಘರ್ಜಿಸುತ್ತದೆ. ಇದಕ್ಕೆ ಮಾಡಿದ ಗುರುವಿನ ಪಾಠ ನಿಲ್ಲುವುದಿಲ್ಲ. ಮನಕ್ಕೆ ಪಾಠ ನಿಲ್ಲುವುದಿಲ್ಲ; ಅರಿವಿಗೆ ಪಾಠ ಬೇಕಿಲ್ಲ. ಹೀಗಾಗಿ ದೇಹ ಪಡೆದ ಪದವಿಗಳೆಲ್ಲ ವ್ಯರ್ಥವಾಗಿ ಇಡೀ ಲೋಕವೇ ಮುಂದುಗಾಣ ದಂತಾಗಿದೆ.

ಮಾಯೆಗೆ ಒಲವು ತೋರಿ ಬೆಂದ ಮನ, ಮಾಯಕ್ಕೆ ಅಂಜಿ ಅರಿವಿನ ಮೊರೆವೊಕ್ಕರೆ ಅರಿವೇ ಆಗುವುದು. ಅರಿವಿನ ಅಂಗ; ಅರಿವಿನ ನೋಟ. ಅರಿವಿನ ಅಂಗದಿಂದ ಕೂಡಿದ ಲೋಕವೆಲ್ಲ ಅಭ್ಯುದಯದ ಲೋಕ; ಮುಂದುವರಿದ ಲೋಕ! ಅಂಗ ಅಂಗವನ್ನು ಕಂಡು ಆರಾಧಿಸುವ ಲೋಕ. ಜಾತಿ ಮತ ಪಂಥ ಗಂಡು ಹೆಣ್ಣು ಬಡವ ಶ್ರೀಮಂತ ಎಂಬ ಅಜ್ಞಾನ ಕಳೆದುಕೊಂಡ ಅರಿವಿನ ಲೋಕ; ಜ್ಞಾನ ಪಕ್ಷಿಗಳ ಹಂಸ ಲೋಕ !

43

ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ;
ಮತಿಗೆಟ್ಟೆನು ಮನದ ವಿಕಾರದಿಂದ;

ಧೃತಿಗೆಟ್ಟೆನು ಕಾಯ ವಿಕಾರದಿಂದ;
ಶರಣುವೊಕ್ಕೆನು ಕೂಡಲಸಂಗಮದೇವಯ್ಯಾ.

ಮನುಷ್ಯನಿಗೆ ಐದು ಜ್ಞಾನೇಂದ್ರಿಯಗಳು! ಈ ಐದೂ ಜ್ಞಾನೇಂದ್ರಿಯಗಳಲ್ಲಿ ಮನವೆಂಬ ಭ್ರಾಂತಿಯೇ ತುಂಬಿದೆ. ಜ್ಞಾನೇಂದ್ರಿಯ ದೇಹಕ್ಕೆ ಸದಾ ಸುಖ, ಶಾಂತಿ, ಸಮೃದ್ಧಿ, ಸಂತೋಷವನ್ನುಂಟು ಮಾಡಿದರೆ, ಮನ ಭ್ರಾಂತಿಯಿಂದ ಸದಾ ದುಃಖ, ಅಸಂತೋಷ ಸಂಕಟವನ್ನುಂಟು ಮಾಡಿ ದೇಹವನ್ನು ಸುಡುತ್ತದೆ.

ಜ್ಞಾನೇಂದ್ರಿಯಗಳಲ್ಲಿ ಬೆರೆತ ಭ್ರಾಂತಿಯ ಧಾತು ಕೃತಕ ಸುಖದ ಸೂಕ್ಷ್ಮಾಣುಗಳನ್ನು ಹೊರಚೆಲ್ಲಿ ದೇಹಕ್ಕೆ ಕ್ಷಣಿಕ ಸುಖ ಶಾಶ್ವತ ದುಃಖವನ್ನುಂಟು ಮಾಡುತ್ತದೆ. ಇದನ್ನು ತಡೆಯುವ ಅರಿವಿನ ವೇಗವರ್ಧಕ ದೇಹದಲ್ಲಿದ್ದರೂ ಭ್ರಾಂತಿ ಅದನ್ನು ಬಳಕೆ ಮಾಡುವ ಗೋಜಿಗೆ ಹೋಗುವುದೇ ಇಲ್ಲ.

ಕಣ್ಣಿನಲ್ಲಿ ನೋಡುವ ಶಕ್ತಿಯಿದೆ. ನೋಡಿದ್ದನ್ನು ತಿಳಿದು ಆನಂದ ಪಡುವ ಜ್ಞಾನವಿದೆ. ಆದರೆ ಭ್ರಾಂತಿ ಬೆರೆತಿದೆ. ನೋಡಿದ್ದನ್ನು ಬೇಡಿ, ಕದ್ದು, ದೌರ್ಜನ್ಯದಿಂದ ಪಡೆದಾದರೂ ಸುಖಿಸುವ ವಿಷಾಣುಗಳನ್ನು ದೇಹದಲ್ಲಿ ಚೆಲ್ಲುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಹುಟ್ಟಿ ದೇಹವನ್ನು ತಲ್ಲಣಗೊಳಿಸುತ್ತದೆ. ಸಂಕಟಕ್ಕೀಡು ಮಾಡುತ್ತದೆ. ಅರಿವಿನ ದೇಹ ರಕ್ಕಸದೇಹವಾಗಿ ಮಾರ್ಪಡುತ್ತದೆ. ರಾಜಸಗುಣಗಳು ದೇಹದಲ್ಲಿ ಪ್ರಕಟವಾಗಿ ದೌರ್ಜನ್ಯವೆಸಗಿ ಸುಖಿಸಿ ರಾಜನೆಂದೆನಿಸಿಕೊಳ್ಳುತ್ತದೆ. ತಾಮಸಗುಣಗಳನ್ನು ಪ್ರಕಟಿಸಿ ತಾಮಸಿಗನ ಪಟ್ಟ ಕಟ್ಟಿ ಸದಾ ಭೋಗದಲ್ಲಿ ನಿರತವಾಗುತ್ತದೆ. ಸಾತ್ವಿಕನ ಪಟ್ಟ ಕಟ್ಟಿ ನೋಡಿ ಕೇಳಿ ಮುಟ್ಟಿ ರುಚಿಸಿ ವಾಸಿಸುತ್ತಾ ಮನದಲ್ಲಿಯೇ ಹಾದರ ಮಾಡಿ ಸಂಕಟ ಪಡುತ್ತದೆ. ಮುಖವಾಡ ಧರಿಸಿದ ಭ್ರಾಂತಿ ಸಾತ್ವಿಕನೆಂದು ದೇಹಕ್ಕೆ ಹೆಸರು ಕೊಡುವಂತೆ ಮಾಡುತ್ತದೆ.

ಮನದ ವಿಕಾರದಿಂದ ದೇಹ ಮತಿಗೆಟ್ಟು ಭ್ರಾಂತಿಗೆ ಶರಣಾಗುತ್ತದೆ. ಕಾಯ ವಿಕಾರದಿಂದ ದೇಹ ಧೃತಿ ಗೆಟ್ಟು ಭ್ರಾಂತಿಗೆ ಶರಣಾಗುತ್ತದೆ. ದೇಹದ ಜ್ಞಾನ ದೇಹಕ್ಕೆ ಬಳಕೆಯಾಗದೆ ದೇಹದಲ್ಲಿ ಹಾಗೆಯೇ ಉಳಿಯುತ್ತದೆ. ಸಂಗ್ರಹ ಜ್ಞಾನ ಮನದ ಭ್ರಾಂತಿಗೆ ಬಳಕೆಯಾಗಿ ದೇಹ ದುರ್ಬಳಕೆಯಾಗುತ್ತದೆ.

ಶರಣುವೊಕ್ಕೆನು ಕೂಡಲ ಸಂಗಮದೇವಯ್ಯ :

ನೋಡುವ ಕಣ್ಣಿನಲ್ಲಿ ,ಕಿವಿಯಲ್ಲಿ, ಮೂಗು, ಚರ್ಮ, ನಾಲಿಗೆಯಲ್ಲಿ ಭ್ರಾಂತಿ ಸೃಷ್ಟಿಸುವ ಮನ ಸ್ವಲ್ಪ ಎಚ್ಚರವಾಗಿ ದೇಹದಲ್ಲಿರುವ ಅರಿವಿಗೆ ಶರಣು ಹೋಗಿ ಅರಿವಿನಿಂದ ನೋಡಬೇಕು.ಆಗ ಕಣ್ಣಿನಲ್ಲಿರುವ ಅರಿವು ವಸ್ತುವಿನ ಮೇಲೆ ಬೆಳಕು ಚೆಲ್ಲುತ್ತದೆ. ಅರಿವಿಗೆ ಶರಣು ಹೋದ ಮನ ವಸ್ತುವಿನ ನಿಜರೂಪ ನೋಡಿ ಆನಂದ ಪಡುತ್ತದೆ.

ಸೂರ್ಯನ ಬೆಳಕು ವಸ್ತುಗಳನ್ನು ಬೆಳಗುತ್ತದೆ; ತನಗೆ ಬೇಕೆಂದು ಬಾಚಿ ಕೊಳ್ಳುವುದಿಲ್ಲ. ಬೆಳಕಿನಿಂದ ಸೃಷ್ಟಿಯಾದ ಕತ್ತಲು ಬೆಳಗಿದ ವಸ್ತುಗಳನ್ನೆಲ್ಲ ತನ್ನ ಗರ್ಭದಲ್ಲಿಟ್ಟುಕೊಳ್ಳತ್ತದೆ. ಬೆಳಕು ಸೂರ್ಯನದೆ; ಬೆಳಕಿನಿಂದ ಸೃಷ್ಟಿಯಾದ ಕತ್ತಲು ಸೂರ್ಯನದೆ! ಹಾಗೆಯೇ ಮನ ಕೂಡಾ ಅರಿವಿನ ಬೆಳಕಿನಿಂದ ಸೃಷ್ಟಿಯಾದ ಕತ್ತಲು! ಮನದ ಸೃಷ್ಟಿಯ ಬೆಳಕು ಕತ್ತಲಿನ ಆಟ ಕಳೆಯಲು ಬರುವುದಿಲ್ಲ. ಬೆಳಕಿನ ಕಿರಣಗಳ ನೆರಳು ಕತ್ತಲಾಗುತ್ತದೆ. ಕತ್ತಲ ಮೇಲೆ ಬಿದ್ದ ಕಿರಣಗಳೇ ಬೆಳಗಿ ಕತ್ತಲ ಹರಿಯುತ್ತದೆ. ಬೆಳಕು ಕತ್ತಲಿನ ನಿರಂತರ ಸೃಷ್ಟಿಯ ಕ್ರಿಯೆ.

ಅರಿವಿನ ದೇವ ಕಣದಿಂದ ದೇಹ ಸೃಷ್ಟಿಯಾಗಿರುವುದರಿಂದ ದೇಹವನ್ನು ದೇವಾಂಗ ಎನ್ನುತ್ತಾರೆ. ಅರಿವೇ ಗುರುವಿನಂತೆ ಮಾತಾಡಿ ಮುನ್ನಡೆಸುತ್ತದೆ. ಮನವೆಂಬ ಶಿಷ್ಯ ಅರಿವೆಂಬ ಗುರುದೇವನಿಗೆ ಶರಣು ಹೋಗಬೇಕು, ಆಗ ಮನ ಅರಿವಿನಲ್ಲಿ ಸಂಗಮವಾಗಿ ಸಂಗಯ್ಯನಾಗುತ್ತಾನೆ.

44

ಮುನಿದೆಯಾದಡೆ ಒಮ್ಮೆ ಜರಿದಡೆ ಸಾಲದೆ?
ಅಕಟಕಟಾ, ಮದನಂಗೆ ಮಾರುಗೊಡುವರೆ?
ಹಗೆಗೆ ಮಾರುಗೊಟ್ಟು ನಿನ್ನವರ ನೊಪ್ಪಿಸುವರೆ,
ಕೂಡಲಸಂಗಮದೇವಾ.

ಜಗದ ತನುಗಳೆಲ್ಲ ಜ್ಞಾನದ ಯಜ್ಞದಲ್ಲಿ ಪಾಲುಗೊಳ್ಳಲಿ ಎನ್ನುವ ಹಿರಿಯ ಆಸೆ ಬಸವಣ್ಣನವರಿಗೆ. ಅರಿವು ಮನ ತನುವಿನಲ್ಲಿ ಸಂಗಮ ವಾಗಿದ್ದರೂ ಮನ ಅರಿವಿನಿಂದ ಬಹುದೂರ ಉಳಿದಿದೆ. ಮರ್ಕಟನಂತೆ ತನುವನ್ನು ಅತ್ತ ಇತ್ತ ಸುಳಿಸಿ ದಣಿಸುತ್ತಲಿದೆ.

ದೇಹದ ಅಜ್ಞಾನವನ್ನು ಯಾರೂ ಕಳೆಯಲು ಬರುವುದಿಲ್ಲ. ದೇಹದ ಜ್ಞಾನವನ್ನು ಯಾವ ಶಿಕ್ಷಣ ಸಂಸ್ಥೆಗಳೂ, ಗುರುವೂ ವೃದ್ಧಿಸಲು ಬರುವುದಿಲ್ಲ. ದೇಹದ ಅಜ್ಞಾನಕ್ಕೆ ಮನವೇ ಕಾರಣ; ದೇಹದ ಜ್ಞಾನಕ್ಕೆ ಕೂಡಾ ಮನವೇ ಕಾರಣ. ಆ ಮನದ ಅಜ್ಞಾನವನ್ನು ಅರಿವೇ ಜರಿಯಬೇಕು. ಅರಿವೇ ಮುನಿಯಬೇಕು!

ಈ ವಚನದ ಸೂತ್ರದಲ್ಲಿ ಬಸವಣ್ಣನವರು ಅರಿವೆಂಬ ಗುರುವಿನೊಂದಿಗೆ ಹೃದಯಂಗಮವಾಗಿ ಸಂಭಾಷಣೆ ಮಾಡುತ್ತಿದ್ದಾರೆ:

ಮುನಿದೆಯಾದಡೆ ಒಮ್ಮೆ ಮರ್ಕಟ ಮನವನ್ನು ಜರಿದಡೆ ಸಾಲದೆ? ಅಕಟಕಟಾ, ವಿಷಯವೆಂಬ ಹಸುರು ತಿನ್ನುವ ಪಶು ಸಮಾನವಾದ ಮದನಂಗೆ ಮಾರುಗೊಡುವರೆ? ಮನದ ಹಗೆತನಕ್ಕೆ ಮಾರುಗೊಡುವುದೆ, ಅರಿವೆಂಬ ಗುರು ವಾಸಮಾಡಿದ ತನು, ಅರಿವಿನ ತನು. ಜಗದ ತನುಗಳೆಲ್ಲ ನೀನು ವಾಸ ಮಾಡಿದ ಅರಿವಿನ ತನುಗಳೇ ಆಗಿವೆ. ಆ ತನು ಉಳ್ಳ ನಿನ್ನವರನ್ನು ಮನವೆಂಬ ರಕ್ಕಸನಿಗೆ ಒಪ್ಪಿಸಬಹುದೆ? ನೀನು ಒಮ್ಮೆ ಜರಿದು ಮುನಿದಡೆ ಮನದ ಭ್ರಾಂತಿ ತನುವಿನಲ್ಲಿ ತಳ ಊರೀತೆ? ನಿನ್ನವರನ್ನು ಒಪ್ಪಿಸುವುದಕ್ಕಿಂತ ಮನವನ್ನು ಅಪ್ಪಿಕೊಂಡು ನಿನ್ನಂತೆ ಮಾಡಿಕೊ ಸಂಗಮನಾಥನೇ ಎಂದು ತನುವಿನ ಅರಿವೆಂಬ ಗುರು ಮನವನ್ನು ತನುವಿಗೆ ಒಪ್ಪಿಸದೆ ಅರಿವಿನಲ್ಲಿ ಅಪ್ಪಿಕೊಳ್ಳುವ ಸೂತ್ರವನ್ನು ಜಗದ ತನುಗಳಿಗೆ ಪರಿಚಯಿಸಿದ್ದಾರೆ ಬಸವಣ್ಣ!

45

ಆನು ಒಬ್ಬನು, ಸುಡುವರೈವರು;
ಮೇಲೆ ಕಿಚ್ಚು ಘನ; ನಿಲಲು ಬಾರದು!
ಕಾಡಬಸವನ ಹುಲಿ ಕೊಂಡೊಯ್ವಡೆ
ಆರೈಯಲಾಗದೆ ಕೂಡಲಸಂಗಮದೇವಾ?

ತನು ಒಂದೇ; ತನುವಿನ ಅರಿವು ಒಂದೇ! ತನುವಿನ ಮೇಲಿರುವ ನೆತ್ತಿ ಒಂದೇ. ನೆತ್ತಿಯ ಐದು ಜ್ಞಾನದ ಬಾಗಿಲುಗಳಲ್ಲಿ ಅಜ್ಞಾನದ ಕಿಚ್ಚು ಹೊತ್ತಿದೆ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮದ ಬಾಗಿಲುಗಳಲ್ಲಿ ಹೊತ್ತಿದ ಕಿಚ್ಚು ಇಡೀ ತನುವನ್ನೇ ಸುಡುತ್ತಲಿದೆ. ನಿಲ್ಲಲು ಬಾರದ ಕಿಚ್ಚಿನ ಘನ ಕೆನ್ನಾಲಿಗೆಗಳು ತನುವನ್ನೇ ಬೇಯುವಂತೆ ಮಾಡಿವೆ!

ಏನೂ ಅರಿಯದ ಕಾಡ ಬಸವನಂತಿರುವ ತನುವನ್ನು ಅಜ್ಞಾನದ ಮನವೆಂಬ ಹುಲಿಕಚ್ಚಿ ಎಳೆದೊಯ್ಯುತ್ತಿರುವುದನ್ನು ಕಂಡು ಹುಡುಕಿ ಹಿಡಿದು ಜಡಿಯಲಾಗದೆ !

ಅಜ್ಞಾನದ ಕಾಡಿನಲ್ಲಿ ಪಾಂಡವರು ಕಳೆದು ಹೋಗಿ ಅಜ್ಞಾತ ವಾಸವನು ಅನುಭವಿಸುತ್ತಿದ್ದರೆ ನೋಡಿ ಹುಡುಕಿ ಆರೈಯಲಾಗದೆ, ಹುಲಿಯ ಬಾಯಿಗೆ ಕೊಡುವುದೆ? ಇದು ನಿನಗೆ ನ್ಯಾಯವೆ?

ಜ್ಞಾನದ ಕಣ್ಣನು ಹುಲಿತಿಂದು ಕುರುಡು ಮಾಡುವ ಮುನ್ನ ಅರಿವಿನ ಬಲೆ ಬೀಸಿ ಬಂಧಿಸಲಾರೆಯಾ! ಅಜ್ಞಾನದ ಘರ್ಜನೆಗೆ ಕಿವಿ ಹರಿದು ತನು ಸುಡದ ಮುನ್ನ ಅರಿವಿನ ಬಲೆ ಬೀಸಿ ಬಂಧಿಸಲಾರೆಯಾ! ರುಚಿಗೆ ತನು ಸಿಡಿದು ಬೀಳದ ಮುನ್ನ ಅರಿವಿನ ಬಲೆ ಬೀಸಿ ಬಂಧಿಸಲಾರೆಯಾ! ಹೆಣದ ವಾಸನೆಗೆ ತನು ಹೊತ್ತಿ ಉರಿಯದ ಮುನ್ನ ಅರಿವಿನ ಬಲೆ ಬೀಸಿ ಹಿಡಿಯಬಾರದೆ? ಮಾಂಸದ ಮುದ್ದೆಯನುಂಡು ಸುಖಿಸುವ ವ್ಯಾಘ್ರ ನಿಡಿದು ತನುವಿಗೆ ಹೊತ್ತಿದ ಕಿಚ್ಚು ನಂದಿಸಬಾರದೆ? ಅವರೈವರಿದ್ದರೇನು ಐದು ಮುಖದೊಡೆಯ ನೀನಲ್ಲವೆ?

ಆನು ಒಬ್ಬನು ಸುಡುವವರು ಐದು ಜನ; ನೆತ್ತಿಯೆ ಮೇಲೆ ಹೊತ್ತಿದ ಕಿಚ್ಚು ಘನ; ನಿಲಲುಬಾರದು! ಅಜ್ಞಾನದ ಕಾಡಿನಲ್ಲಿ ಕಳೆದು ಹೋದ ಜ್ಞಾನಿ ಬಸವನನ್ನು ಹುಲಿ ಕಚ್ಚಿ ಕೊಂಡೊಯ್ವಡೆ ಸಂಗಮನಾಥನೆಂಬ ಅರಿವಿನ ಗುರುವೆ ನಿನಗೆ ರಕ್ಷಿಸಲಾಗದೆ?

46

ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ.
ಅದೇಕೆಂದಡೆ:
ನಿಮ್ಮತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ.

ದೇಹ ಜ್ಞಾನದ ಭಂಡಾರ ! ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ,ಕ್ರೋಧ, ಕ್ಷುದ್ರ, ಮಿಥ್ಯೆ ಇವು ದೇಹದ ಜ್ಞಾನದತ್ತ ಹೋಗಲೀಯವು .

ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವು ಜ್ಞಾನದ ಭಂಡಾರಗಳು.

ನೋಡುವ ಕಣ್ಣಿನಲ್ಲಿ ಹೆಣ್ಣು ಗಂಡು ಎನ್ನುವ ಜಾತಿ ಹುಟ್ಟಿ ಭೂಮಿ ಹೇಮ ವಿಷಯ ಎಂಬ ಅಜ್ಞಾನಕ್ಕೆ ಆಸೆ ಮಾಡುತ್ತದೆ. ಕಣ್ಣು ಹೆಣ್ಣೂ ಅಲ್ಲ ಗಂಡೂ ಅಲ್ಲ. ಅದಕ್ಕೆ ನೋಡುವ ಬೆಳಕಿನ ಶಕ್ತಿಯಿದೆ. ಅರಿವಿದೆ. ಮನ ಕಣ್ಣಿನಲ್ಲಿ ಬೆರೆತು ವಸ್ತುವನ್ನು ನೋಡಿದರೆ ದೇಹದಲ್ಲಿ

ಆಸೆಯ ಸಂಚಲನವಾಗುತ್ತದೆ. ಭೋಗಿಸುವ ಬಯಕೆ(ಆಮಿಷ)ಯಾಗುತ್ತದೆ. ಅರಿವು ಮರೆವೆಯಾಗಿ(ತಾಮಸ) ಕತ್ತಲೆ ಕವಿದು, ಸುಖಿಸುವ ಬಯಕೆ ಮಾತ್ರ ಉಳಿಯುತ್ತದೆ. ವಿಷಯಾಸಕ್ತಿ ಕೆರಳುತ್ತದೆ. ಹುಸಿ, ಕುಟಿಲತೆ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ, ಎಂಬ ದುರ್ಗುಣಗಳು ದೇಹದ ಸದ್ಗುಣವನ್ನು ಅಡಗಿಸುತ್ತವೆ. ದುರ್ಗುಣಗಳು ದೇಹದ ಅರಿವಿನ ಸೂರ್ಯನನ್ನು ನೋಡದಂತೆ ಮುಸುಕುತ್ತವೆ.

ಅರಿವಿನ ಸತ್ಯದ ನಾಲಿಗೆಯ ಮೇಲೆ ಆಸೆ, ಆಮಿಷ, ತಾಮಸ, ಹುಸಿ, ವಿಷಯಾದಿಗಳು ನರ್ತನ ಮಾಡುತ್ತವೆ. ಕುಟಿಲತೆಯಿಂದ, ಕುಹಕತನದಿಂದ, ಕ್ರೋಧದಿಂದ, ಕ್ಷುದ್ರತೆಯಿಂದ, ಸುಳ್ಳಿನಿಂದ ದೇಹ ವಿಷಯಸುಖವನ್ನು ಮತ್ತೆ ಮತ್ತೆ ಪಡೆಯಲು ಬಯಸುತ್ತದೆ.

ಸದಾ ಸಂಕಟ ಉಂಟುಮಾಡುವ ಈ ಹತ್ತು ಶಬ್ದಗಳನ್ನು ನಷ್ಟ ಮಾಡುವ ಸೂತ್ರವನ್ನು ಬಸವಣ್ಣನವರು ದೇಹಕ್ಕೆ ಕರುಣಿಸಿದ್ದಾರೆ. ಕರುಣಿಸಿದ ಶರಣರನ್ನು ದಾಸರನ್ನು ಆರಾಧಿಸಿದರೆ ದೇಹಕ್ಕೆ ಒಲಿಯುವ ಮಾತಲ್ಲ. ಅವರು ರಚಿಸಿದ ಸರಳ ಸೂತ್ರದಂತೆ ಮನ ದೇಹದ ಅರಿವಿನ ಪಂಚೇಂದ್ರಿಯಗಳಲ್ಲಿ ಪ್ರಯೋಗಕ್ಕಾಗಿ ಪ್ರವೇಶಿಸಬೇಕು.

ದೇಹದಲ್ಲಿದ್ದ ಅರಿವನ್ನು ಮನ ಬಳಕೆ ಮಾಡಿಕೊಳ್ಳದೆ ವಸ್ತುಗಳತ್ತ ವಾಲಿದೆ. ಆ ವಸ್ತುಗಳನ್ನು ಸಂಗ್ರಹಿಸಿ ಅಪ್ಪಿಕೊಂಡು ಸುಖಿಸಲು ಮನ ದೇಹವನ್ನು ಬಳಕೆಮಾಡಿಕೊಳ್ಳುತ್ತದೆ. ವಸ್ತುಗಳಲ್ಲಿ ಹುರುಳಿಲ್ಲವೆಂದು ಮನಕ್ಕೆ ತಿಳಿಯುವುದಿಲ್ಲ. ಕಾರಣವಿಷ್ಟೆ ವಿಷಯ ಸುಖಕ್ಕಾಗಿ ಆಸೆ ಪಟ್ಟ ಮನದಲ್ಲಿ ಹತ್ತು ದುರ್ಗುಣಗಳು ಮನೆ ಮಾಡಿದವು. ಮನ ದೇಹದ ಆಶ್ರಯ ಪಡೆದು ಅದರಿಂದಲೇ ಭೋಗಿಸುತ್ತದೆ, ಹೀಗಾಗಿ ಅದಕ್ಕೆ ಸಂಕಟ ಉಂಟಾಯಿತು.

ಸುಖಕ್ಕಾಗಿ ಗಳಿಕೆ ಮಾಡಿದ ದುರ್ಗುಣಗಳನ್ನು ಮನ ಸ್ವತಹ ಕಳೆದು ಕೊಳ್ಳಲು ಬರುವುದಿಲ್ಲ. ಶರಣರು, ದಾಸರು, ಗುರುಗಳು ಸ್ವತಹ ದೇವರು ಸಹ ಕಳೆಯಲು ಬರುವುದಿಲ್ಲ. ದೇವಸ್ಥಾನ ಪುಣ್ಯ ಕ್ಷೇತ್ರಗಳನ್ನು ಸುತ್ತಿದರೂ ಕೂಡಾ ಕಳೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಅರಿವಿನ ದೇಹದಲ್ಲಿ ಮನೆ ಮಾಡಿದ ಮನದ ದುರ್ಗುಣಗಳನ್ನು ದೇಹದ ಅರಿವು ಮಾತ್ರ ಕಳೆಯಬಲ್ಲದು!

ಇವೆಲ್ಲವ ಕಳೆದು ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ:

ನೋಡುವ ಕಣ್ಣಿನಲ್ಲಿ ಅರಿವೆಂಬ ಗುರುವಿದ್ದಾನೆ. ಮನವೆಂಬ ಶಿಷ್ಯನೂ ಇದ್ದಾನೆ. ಮನವೆಂಬ ಶಿಷ್ಯ ಕಣ್ಣಿನಲ್ಲಿ ಬೆರೆತು ಆಭರಣ ನೋಡಿ ಖರೀದಿಸುತ್ತಾನೆ. ಸಾಧ್ಯವಾಗದಿದ್ದರೆ ಕಳುವು ಮಾಡುತ್ತಾನೆ. ದಕ್ಕದಿದ್ದರೆ ಕೊಲೆ ಮಾಡಿ ಪಡೆಯುತ್ತಾನೆ. ಹಲ್ಲೆ ಅತ್ಯಾಚಾರವೆಸಗುತ್ತಾನೆ. ಖರೀದಿಸಿದರೆ ದೇಹಕ್ಕೆ ಶ್ರೀಮಂತನ ಪಟ್ಟ ; ಸಾಧ್ಯವಾಗದಿದ್ದರೆ ಕೊಲೆಗಡುಕ, ಕಳ್ಳ , ಹಲ್ಲೆ ಕೋರ ಅತ್ಯಾಚಾರಿಯ ಪಟ್ಟ . ಬಡವನ ಪಟ್ಟ ಮನಕ್ಕೆ ತಿಳಿಯುವುದೇ ಇಷ್ಟು.

ಗುರು , ಶಿಕ್ಷಕ , ಪೊಲೀಸರು, ಕೋರ್ಟ, ಸರಕಾರ , ಶಾಲಾ ಕಾಲೇಜುಗಳು ಹೇಳಿದ ಮಾತು ಮನಕ್ಕೆ ತಿಳಿಯುವುದಿಲ್ಲ. ಸದಾ ತನ್ನ ಸುಖದಲ್ಲಿ ತಾನು ದೇಹವನ್ನು ಬಳಸಿಯೇ ಸುಖಿಸುತ್ತದೆ.

ಮನ ವಸ್ತುಗಳನ್ನು ಬಳಕೆ ಮಾಡಿದಂತೆ, ಒಮ್ಮೆ ದೇಹದ ಅರಿವನ್ನು ಬಳಕೆ ಮಾಡಬೇಕು. ಆ ಅರಿವನ್ನೇ ಗುರುವೆಂದು ತಿಳಿದು ತಾನು ಅರಿವಿನ ಗುರುವಿಗೆ ಶಿಷ್ಯನಾಗಬೇಕು.

ಕಣ್ಣಿನಲ್ಲಿದ್ದ ಅರಿವೆಂಬ ಗುರುವಿನೊಂದಿಗೆ ಮನವೆಂಬ ಶಿಷ್ಯ ಬೆರೆತು ಆಭರಣ ನೋಡಿ

ಇಚ್ಚಿಸಿ ಖರೀದಿಸಲು ಹೋದರೆ; ಗುರು ಶಿಷ್ಯನನ್ನು ತಡೆಯುತ್ತಾನೆ. ಆಭರಣ ಇಷ್ಟವೋ? ಅದರ ಬಣ್ಣ , ಡಿಸೈನ್ ಇಷ್ಟವೋ? ಏನು ಲೋಹ ಇಷ್ಟವೋ? ಎಂದು ಶಿಷ್ಯನನ್ನು ಗುರು ಪ್ರಶ್ನಿಸುತ್ತಾನೆ. ಹಳದಿ ಬಣ್ಣ ಇರದಿದ್ದರೆ ಆಭರಣ ಬರೀ ಲೋಹ! ಲೋಹವನ್ನು ಕೊಳ್ಳುವುದಿಲ್ಲ, ಕಳುವು ಮಾಡುವುದಿಲ್ಲ. ಇದಕ್ಕಾಗಿ ಕೊಲೆ ಹಲ್ಲೆ ಅತ್ಯಾಚಾರಗಳೂ ನಡೆಯುವುದಿಲ್ಲ. ಪೋಲೀಸರು ಸರಕಾರ ಜೇಲುಗಳೇ ಬೇಡ !

ಮನ ನೋಡಿದರೆ ಆಭರಣ. ಮನ ಅರಿವಿಗೆ ಭಕ್ತಿ ಮಾಡಿ ಆ ಅರಿವಿನಲ್ಲಿ ಸಂಗಮವಾಗಿ ನೋಡಿದರೆ ಲೋಹ ! ಹೇಗಿದೆ ಅರಿವೆಂಬ ಗುರು ಬಸವಣ್ಣನ ಚಮತ್ಕಾರ! ಮನದಲ್ಲಿ ಅಡಗಿದ ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಗುಣಗಳೆಲ್ಲ ಅರಿವಿನಲ್ಲಿ ಕಳೆದು ಹೋದವು. ಮನ ಅರಿವೆಂಬ ಘನದಲ್ಲಿ ಬೆರೆತು ಘನಮನವಾಯಿತು!

47

ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ ?
ಎಂತು ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ ಕಟ್ಟುವಡೆದೆನು.
ಹಸಿವು, ತೃಷೆ, ವ್ಯಸನದಿಂದ ಕುಸಿಯುತ್ತಿದ್ದೇನೆ.
ಪಂಚೇಂದ್ರಿಯ, ಸಪ್ತಧಾತು
ಹರಿಹಂಚ ಮಾಡಿ ಕಾಡಿಹವಯ್ಯಾ !
ಅಯ್ಯಾ, ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ!
ಕೂಡಲಸಂಗಮದೇವಾ ನಾನೇವೆನೇವೆನಯ್ಯಾ !

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಬಂಧನಕ್ಕೆ ಒಳಪಟ್ಟ ತನುವಿನ ಮನದಿಂದಲೇ ತನುವಿನ ಅರಿವೆಂಬ ಶಿವನಿಗೆ ಭಕ್ತಿ ಮಾಡಲು ಸಾಧ್ಯವೆ? ಮನ ಕಾಮ ಕ್ರೋಧಗಳಿಗೆ ಬಂಧಿಯಾಗಿದೆ. ಲೋಭ, ಮೋಹ, ಮದ, ಮತ್ಸರಗಳಿಗೆ ಬಂಧಿಯಾಗಿದೆ. ಅರಿವಿನ ಆಚಾರ ಬಿಟ್ಟು ಅನಾಚಾರಕ್ಕೆ ಬಂಧಿಯಾಗಿದೆ. ಅರಿವಿನ ಆಚಾರವದು ಶಿವಾಚಾರ. ಇಂತಹ ಶಿವಾಚಾರಕ್ಕೆ ಮರಳಿ ಬರಲು ಮನಕ್ಕೆ ಸಾಧ್ಯವಾಗುವುದೆ? ಈ ಶಿವಾಚಾರದ ಸುಖ ಮರ್ಕಟವೆಂಬ ಮನಕ್ಕೆ ತಿಳಿಯಲು ಸಾಧ್ಯವೆ?

ತನುವಿನ ಅರಿವಿನ ಶಿವಾಚಾರದಲ್ಲಿಯೇ ಹುಟ್ಟಿ ಅನಾಚಾರಕ್ಕೆ ಒಗ್ಗಿದ ಮನಕ್ಕೆ ಪುನಃ ಶಿವಾಚಾರ ವೇದ್ಯವಾಗಬೇಕಲ್ಲ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಬಂಧಿಯಾಗಿದ್ದಲ್ಲದೆ, ಹಸಿವು, ತೃಷೆ, ವ್ಯಸನಗಳಿಂದಲೂ ಕುದಿಯುತ್ತಲಿದೆ.

ಪಂಚೇಂದ್ರಿಯ, ಸಪ್ತಧಾತು ಹರಿಹಂಚಮಾಡಿ ಕಾಡಿಹವಯ್ಯಾ :

ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ, ಜ್ಞಾನಿ ತನುವನ್ನು, ತನುವಿನೊಳಗಿದ್ದ ರಸ, ರಕ್ತ, ಮಾಂಸ, ಎಲುಬು, ಮೇದಸ್ಸು, ಮಜ್ಜೆ, ಶುಕ್ಲದೊಂದಿಗೆ ವ್ಯಸನದಿಂದ ಕತಕತನೆ ಇಡೀ ತನುವನ್ನೆ ಕುದಿಯುವಂತೆ ಮಾಡಿದೆ ಮನ.

ಪಂಚೇಂದ್ರಿಯ ಸಪ್ತಧಾತುಗಳುಳ್ಳ ತನುವಿನಲ್ಲಿಯೇ ವಾಸ ಮಾಡಿದ ಶಿವನೆಂಬ ಅರಿವನ್ನೇ

ಮರೆಮಾಚಿ, ಆ ತನುವನ್ನೇ ಮನ ಉಪಾಯದಿಂದ ಹರಿಹಂಚ ಮಾಡಿ, ಕಾಮದ ಕೂಪಕ್ಕೆ ತಳ್ಳುವಲ್ಲಿ ಯಶಸ್ವಿಯಾಗಿದೆ. ಆ ಮನದಿಂದ ಅರಿವಿನ ಆಚಾರವೇ ಆದ ಶಿವಾಚಾರ ಎಂತು ಸಾಧ್ಯವಾಗುವುದು?

ಅಯ್ಯಾ ತನುವಿನಲ್ಲಿಯೇ ಮನೆ ಮಾಡಿದ ಅರಿವೆಂಬ ಸದ್‍ಗುರುವೇ ತನುವನ್ನು ಈ ಪರಿ ಸಂಕಟಕ್ಕೊಡ್ಡಿದ ಮನದಿಂದ ನಾನು ತತ್ತರಿಸಿ ಹೋಗಿದ್ದೇನೆ. ಎಲೆ ಅಯ್ಯಾ ನನ್ನ ಮೊರೆ ಕೇಳಲಾರೆಯಾ? ನನ್ನ ಸಂಕಟ ಪರಿಹರಿಸು ತಂದೆ. ಈ ಮರ್ಕಟ ಮನವನ್ನು ಹಿಡಿದು ನಿನ್ನೊಳಗೆ ಸಂಗಮ ಮಾಡಿಕೊ ಸಂಗಯ್ಯ ಎಂದು ಬಸವಣ್ಣ ಅರಿವಿನ ಗುರುವಿಗೆ ಮೊರೆಯಿಡುವ ಸೂತ್ರವನ್ನು ಸಕಲ ತನುಗಳಿಗೂ ಕರುಣಿಸಿದ್ದಾನೆ. ದೇಹದ ಮಾನಸಿಕ ಸಂಕಟಗಳನ್ನು ಯಾರೂ ಪರಿಹರಿಸಲಾರರು. ತನ್ನ ಅರಿವಿನಿಂದಲೇ ತಾನು ಪರಿಹರಿಸಿ ಕೊಳ್ಳಬೇಕು. ಸಾಧ್ಯವಾದರೆ ಗುರು ಎನ್ನುವವನು ಕೌನ್ಸಿಲಿಂಗ್ ಮಾಡಬಹುದು.

48

ಕಾಯವಿಕಾರ ಕಾಡಿಹುದಯ್ಯಾ ;
ಮನೋವಿಕಾರ ಕೂಡಿಹುದಯ್ಯಾ ;
ಇಂದ್ರಿಯ ವಿಕಾರ ಸುಳಿವುದಯ್ಯಾ !
ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ; ಸಿಲುಕಿಸದಿರಯ್ಯಾ !
ಅನ್ಯ ಚಿತ್ತವಿರಿಸದಿರಯ್ಯಾ ; ನಿಮ್ಮ ಚಿತ್ತವಿರಿಸಯ್ಯಾ !
ಅನುಪಮ ಸುಖ ಸಾರಾಯ ಶರಣರಲ್ಲಿ
ಕೂಡಲಸಂಗಮದೇವಯ್ಯಾ , ಇದನೆ ಬೇಡುವೆನಯ್ಯಾ !

ಕ್ಷಣ ಕ್ಷಣಕ್ಕೂ ವಿಕಾರ ಹೊಂದುವ ಮನಕ್ಕೆ ಅರಿವಿನ ಕಾವು ಕಟ್ಟು ಕಟ್ಟಲು ಬಸವಣ್ಣನವರು ಒಂಬತ್ತುನೂರಾ ಐವತ್ತೊಂಬತ್ತು ವಚನಗಳ ಮೂಲಕ ಸೂತ್ರ ಬರೆದಿದ್ದಾರೆ. ಅವರ ವಚನಗಳನ್ನು ಸಾಹಿತ್ಯಕವಾಗಿ ನೋಡಿದರೆ ಸಾಹಿತಿಗಳಿಗೆ ಒಂದಷ್ಟು ವಿಷಯ ದೊರಕುತ್ತದೆ. ಸಾಮಾನ್ಯರು ಓದಿದರೆ; ಅವರು ಹೀಗಿದ್ದರೆ! ಮಹಾನುಭಾವರು ಎಂದು ಉದ್ಘರಿಸಿ ಪೂಜಿಸುತ್ತಾರೆ. ವಿತಂಡವಾದಿಗಳು ಓದಿದರೆ ಬಸವಣ್ಣನವರು ದ್ವಂದ್ವದಿಂದ ಕೂಡಿದ್ದರು ಸಮಾಧಾನಿಗಳಾಗಿರಲಿಲ್ಲ ಎನ್ನುತ್ತಾರೆ. ಸಂಶೋಧಕರು ಓದಿದರೆ ಶರಣರ ಜಾತಿ, ಹುಟ್ಟು, ಸ್ಥಳ, ಹೆಂಡತಿ, ತಾಯಿ, ಮಕ್ಕಳ ಬಗ್ಗೆ ಬರೆದು ಮಾತನಾಡುತ್ತಾರೆ. ಅವರ ಅಭಿಮಾನಿಗಳಿಗೆ ಸಂಕಟವನ್ನುಂಟು ಮಾಡುತ್ತಾರೆ . ಇಲ್ಲ ಸುಖವನ್ನುಂಟು ಮಾಡುತ್ತಾರೆ.

ಕ್ರಿಷ್ಣ, ಕ್ರಿಸ್ತ, ಬುದ್ಧ, ಮಹಾವೀರ, ಬಸವಾದಿಶರಣರು , ದಾಸರು , ತತ್ವಪದಕಾರರು ಯಾರಿಗೂ ಸಂಕಟವನ್ನುಂಟು ಮಾಡಲಿಲ್ಲ. ದೇಹದ ಸಂಕಟ ಕಳೆದುಕೊಳ್ಳುವ ಸೂತ್ರವನ್ನು ಕರುಣಿಸಿದ ವಿಜ್ಞಾನಿಗಳು ಅವರು.

ಸೂತ್ರ ಹಿಡಿದು ದೇಹದ ಸಂಕಟ ಕಳೆದುಕೊಂಡು ಸುಖಿಗಳಾಗುವಂತೆ ವಚನಗಳನ್ನು ಓದಬೇಕು. ತಿಳಿದವರೊಂದಿಗೆ ಚರ್ಚಿಸಬೇಕು. ಪುನಃ ಓದಿ ತನ್ನನ್ನು ತಾನೇ ಚರ್ಚೆಗೆ ಒಡ್ಡಿಕೊಳ್ಳಬೇಕು.

ದೇಹದಲ್ಲಿ ಅರಿವು ಮತ್ತು ಮನ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಸಾಕ್ಷಿಯಾಗಿ

ತಾನೇ ನೋಡಿಕೊಳ್ಳಬೇಕು. ತಂದೆ ತಾಯಿ ಬಂಧು ಬಳಗಕ್ಕೆ ತನ್ನಂತೆ ಇರುವ ದೇಹಗಳಿಗೆ ತಾನು ಹೇಗೆ ಮೋಸ ಮಾಡುತ್ತೇನೆ, ಮೋಸಕ್ಕೊಳಗಾಗುತ್ತೇನೆ. ನರಳುತ್ತೇನೆ, ಕೊಲ್ಲುತ್ತೇನೆ, ಆತ್ಮ ಹತ್ಯೆಗೆ ಒಳಗಾಗುತ್ತೇನೆ! ಇದೆಲ್ಲದಕ್ಕೆ ಕಾರಣವಾದುದ್ದೇನು? ವಸ್ತುವಾಗಿದ್ದರೆ ಅನಾವರಣ ಮಾಡಿ ನೋಡುವುದು; ಅರಿವಿನಿಂದ ತಿಳಿದು ಉದಾಸೀನ ಮಾಡುವುದು.

ದೇಹವನ್ನು ಕಳ್ಳ ಶ್ರೀಮಂತ, ಬಡವ, ಜಾತಿ, ಮತ, ಪಂಥ, ಗುರು, ಶಿಷ್ಯ, ಅತ್ಯಾಚಾರಿ, ಕೊಲೆಗಡುಕ, ಹೆಣ್ಣು, ಗಂಡು ಎನ್ನುವ ಹೆಸರಿನಿಂದ ಗುರುತಿಸುವಂತಿಲ್ಲ. ಇದೇನಿದ್ದರೂ ಮನದ ವ್ಯವಹಾರ! ಮನಕ್ಕೆ ಅರಿವಿನ ಪರಿಚಯವಾದರೆ ಸಾಕು ಅದು ಅರಿವಿನ ದೇಹ !

ಬುದ್ಧ, ಮಹಾವೀರ , ಕ್ರಿಸ್ತ, ಕ್ರಿಷ್ಣರ ದೇಹ . ಬಸವಾದಿ ಶರಣರ , ದಾಸವರೇಣ್ಯರ ದೇಹ; ತನ್ನನ್ನು ತಾನು ಅರಿವಿನಿಂದ ತಿಳಿದಾಗ ಮಾತ್ರ . ಆ ಸೂತ್ರ ಒಂದು ಇಲ್ಲಿದೆ:

ತನ್ನನ್ನು ತಾನು ಅರಿಯದ ಮುನ್ನ ತನ್ಮಯವಾದ ಅರಿವು . ತನ್ನ ತಾನು ಅರಿತ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು . ತನ್ನ ದೇಹದಲ್ಲಿಯೇ ಇರುವ ಅರಿವು ತನಗೆ ಕರಗತವಾದ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ ಎಂದು ಗುಜರಾತಿನ ಆದಯ್ಯ ಶರಣರು ಹೇಳಿದ್ದಾರೆ.

ಬುದ್ಧ, ಮಹಾವೀರ, ಕ್ರಿಸ್ತ, ಕ್ರಿಷ್ಣ, ಬಸವಾದಿ ಶರಣರ , ದಾಸ ವರೇಣ್ಯರ ವಚನಗಳನ್ನು ಮನದಿಂದ ಓದಿದರೆ ಜಾತಿ, ಮತ ,ಪಂಥ, ಪಂಗಡಗಳು ಸಿದ್ಧಿಯಾಗಿ ಪಂಡಿತ ಸಂಶೋಧಕನಾಗುತ್ತಾನೆ. ಸಾಹಿತಿ ಯಾಗುತ್ತಾನೆ. ಅವರ ಹೆಸರಲ್ಲಿ ಮಠ ಮಂದಿರ ಚರ್ಚ್ ಬಸದಿಗಳನ್ನು ನಿರ್ಮಿಸಿ ವ್ಯವಹಾರ ಮಾಡುತ್ತಾನೆ. ಅರಿವಿನಿಂದ ಓದಿದರೆ ಅವರಂತೆಯೇ ತಾನು ಜ್ಞಾನಿಯಾಗುತ್ತಾನೆ !

ಬಸವಣ್ಣನವರು ವಚನದ ಏಳು ಸಾಲಿನಲ್ಲಿ ಇದನ್ನೇ ಪ್ರತಿಪಾದಿಸಿದ್ದಾರೆ. ದೇಹ ಮನೋ ವಿಕಾರಕ್ಕೆ, ಇಂದ್ರಿಯಗಳ ವಿಕಾರಕ್ಕೆ ಗುರಿಯಾಗಿ ಅಜ್ಞಾನದ ಸುಳಿಯಲ್ಲಿಯೇ ಸುಳಿಯುತ್ತಲಿದೆ. ಮತ್ತೆ ಮತ್ತೆ ಅಜ್ಞಾನಕ್ಕೆ ಎಳೆಸದೆ, ಅನುಪಮ ಸುಖದ ಅರಿವಿನ ಸಾರಾಯವನ್ನು ತಿಳಿ ಹೇಳುವ ಶರಣರೊಂದಿಗೆ ಬೆರೆಯುವಂತೆ ಚಿತ್ತಕ್ಕೆ ಪ್ರೇರಣೆ ನೀಡು ಕೂಡಲಸಂಗಮದೇವಾ ನಿಮ್ಮಲ್ಲಿ ಇದನೆ ಬೇಡುವೆ ಎಂದು ದೇಹದ ಅರಿವೆಂಬ ಗುರುವಿನೊಂದಿಗೆ ಮಾತನಾಡುವ ಸಾರಾಯದ ಮಾರ್ಗವನ್ನು ಬಸವಣ್ಣನವರು ತೋರಿಸಿದ್ದಾರೆ.

49

ಬಂದ ಯೋನಿಯನರಿದು ಸಲಹೆನ್ನ ತಂದೆ!
ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು ;
ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು .
ಎನ್ನ ತಂದೆ ಕೂಡಲಸಂಗಮದೇವಾ,
ಇವ ಮಾಣಿಸು ನಿಮ್ಮ ಧರ್ಮ!

ಅರಿವಿಗೆ ಹೋಗುವ ಅದ್ಭುತವಾದ ಸೂತ್ರ ಈ ವಚನದಲ್ಲಿ ಅಡಗಿದೆ. ಸಮಾಧಾನಿಯಾಗಿ ಓದಿ ತನ್ನನ್ನು ತಾನೆ ತಿಳಿಯಬೇಕು. ದೇಹಕ್ಕಂಟಿದ ಒಂದು ರೋಗವಾದರೂ ವಾಸಿಯಾಗಲು ಸಹಾಯವಾಗುತ್ತದೆ.

ಹೆಣ್ಣಾದರೇನು ಗಂಡಾದರೇನು? ಬಂದ ಯೋನಿ ಒಂದೇ ! ಹಡೆದ ಅರಿವಿನ ದೇಹ ಒಂದೇ, ಹೊರಬಂದ ಅರಿವಿನ ದೇಹ ಒಂದೇ! ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಒಂದೇ. ಚರ್ಮದ ಪ್ಯಾಕ್‌ನಲ್ಲಿ ಅಡಗಿದ ರಕ್ತ, ಮೂಳೆ, ಮಾಂಸ, ಮಜ್ಜೆ, ಮೇದಸ್ಸು ಕೂಡಾ ಒಂದೆ ! ಕಣ್ಣು ಹೆಣ್ಣೂ ಅಲ್ಲ; ಗಂಡೂ ಅಲ್ಲ. ನೋಡುವ ಕಣ್ಣಿನಲ್ಲಿ ಮನ ಬೆರೆತು ಬಂದ ಯೋನಿಯನ್ನು ತಿಳಿಯದೇ ಬಂದ ಯೋನಿಯನ್ನೇ ಭೋಗಿಸುವ ಕಿಚ್ಚು ದೇಹಕ್ಕೆ ಹೊತ್ತಿಸಿದೆ. ಗತಿಗೆಡಿಸಿ ಕಾಡುತ್ತಲಿದೆ. ಇಡೀ ದೇಹವನ್ನು ಮತಿಗೆಡಿಸಿ ಕಾಡುತ್ತಲಿದೆ; ಬಂದ ಯೋನಿಯನ್ನೇ ಮರೆತು ಮತ್ತೆ ಮತ್ತೆ ಕಾಡಿಸುತ್ತಲಿದೆ.

ಬಂದ ಯೋನಿಯೊಂದಿಗೆ ಸುಖಿಸಲು ಹೋದ ಕೀಚಕ ಸತ್ತ; ಬಂದ ಯೋನಿಯೊಂದಿಗೆ ಸುಖಿಸಲು ಹೋದ ವಾಲಿ ಸತ್ತ; ಬಂಧು ಬಳಗ ರಾಜ್ಯವನ್ನು ಕಳೆದುಕೊಂಡು ರಾವಣ ಸತ್ತ.

ಬಂದಯೋನಿ ಅರಿವಿನ ದೇಹಕ್ಕೆ ಜನ್ಮ ನೀಡಿದ ಜ್ಞಾನದ ಬಾಗಿಲು; ಅದು ದೇವಾಂಗ ! ರೂಪು ಹಲವಾದಡೇನು, ಯೋನಿ ಒಂದೇ. ರೂಪವನು ಹೊತ್ತ ಚರ್ಮ ಒಂದೇ. ಚರ್ಮದೊಳಗಿದ್ದ ಪದಾರ್ಥಗಳು ಒಂದೇ, ರೂಪ ನೋಡಿ ಬಂದ ಯೋನಿಯೆಂದು ತಿಳಿಹೇಳದೆ, ಗತಿಗೆಡಿಸಿ, ಮತಿಗೆಡಿಸಿ, ಮನ ದೇಹದೊಳಗೆ ರಸಾಯನದ ಕಿಚ್ಚು ಹೊತ್ತಿಸಬೇಕೆ?

ಎಡಗೈ, ಬಲಗೈಗೆ ತಾಗಿದರೆ ಕಿಚ್ಚಿಲ್ಲ; ರೂಪು ನೋಡಿದರೆ ಬಂದ ಯೋನಿಯ ನರಿಯದೆ ಬೇಯಬೇಕೆ? ಮತಿಗೆಡಿಸಿ ಗತಿಗೆಡಿಸಿ ಕಾಡುವ ಮನಕ್ಕೆ ಯಾರು ಕಡಿವಾಣ ಹಾಕಬೇಕು? ದೇಹವನ್ನು ಆಪತ್ಕಾಲಕ್ಕೆ ತಳ್ಳುವ ಮನಕ್ಕೆ ಯಾರು ಶಿಕ್ಷೆ ಕೊಡಬೇಕು? ತಾನು ಸುಖಿಸಿ, ದೇಹವನ್ನು ಸಂಕಟಕ್ಕೆ ತಳ್ಳುವ ಮನವನ್ನು ಬಂಧಿಸುವುದಾದರೂ ಹೇಗೆ?

ಮನಕ್ಕೆ ತಂದೆ, ತಾಯಿ, ಬಂಧು, ಬಳಗ, ಅಕ್ಕ, ತಮ್ಮ, ಅಣ್ಣ, ಮಾವ, ಅಳಿಯ, ಗುರು, ಶಿಷ್ಯ, ಅನ್ನುವ ಭೇದ ಭಾವಗಳಿಲ್ಲ. ಹೆಂಡತಿ, ಸೊಸೆ, ಅತ್ತಿಗೆ, ನಾದಿನಿ, ಎನ್ನುವ ಅರಿವೂ ಇಲ್ಲ. ಶ್ರೀಮಂತ ಬಡವ ಭಿಕ್ಷುಕ ಅಧಿಕಾರಿ ಶಾಸಕ ಸಚಿವನೆಂಬ ಅರಿವು ಮೊದಲೇ ಇಲ್ಲ. ರೂಪ ಕಂಡರೆ ಸಾಕು; ಕಾಮ ಪಿಶಾಚಿ ! ಬಂದ ಯೋನಿಯನೇ ಮರೆತು ಭೋಗಕ್ಕೆ ಇಳಿಯುವುದು. ಅರಿವಿನ ದೇಹವನ್ನು ಅಪರಾಧಿಯಾಗಿ ಮಾಡುವುದು.

ಮನ ದೇಹದೊಂದಿಗೆ ಸುಖಿಸುವುದನ್ನು ಕಂಡರೆ ಅಪರಾಧಿ ದೇಹ. ಆ ದೇಹಕ್ಕೆ ಶಿಕ್ಷೆ ಉಂಟು ! ಕಾಣದಿದ್ದರೆ ಹಾದರದ ಮನ; ದೇಹಕ್ಕೆ ಮನಕ್ಕೆ ಶಿಕ್ಷೆ ಇಲ್ಲ; ಹಾದರ ನಡೆದೇ ಇರುತ್ತದೆ! ಸದಾ ಆಪತ್ಕಾಲಕ್ಕೆ ಗುರಿಯಾಗುವ ದೇಹವನ್ನು ಯಾರೂ ಪಾರುಮಾಡಲು ಸಾಧ್ಯವಾಗುವುದಿಲ್ಲ. ದೇಹದಲ್ಲಿರುವ ಅರಿವು ಮಾತ್ರ ಪಾರು ಮಾಡಬಲ್ಲುದು. ಆ ಅರಿವಿಗೆ ಬಸವಣ್ಣನವರು ಎಲೆ ತಂದೆಯೇ ಕೂಡಲ ಸಂಗಮದೇವನೇ ಮನದ ಈ ಅಜ್ಞಾನವನ್ನು ಕಳೆಯುವುದು ನಿಮ್ಮ ಧರ್ಮ ಎಂದಿದ್ದಾರೆ.

ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರೂ ಈ ಮನವೆಂಬ ಮರ್ಕಟವನ್ನು ಹಿಡಿಯಲು ಅರಿಯರಯ್ಯಾ ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನಿಮ್ಮ ಧರ್ಮ! ಎಂದು ಅರಿವಿಗೆ ಮೊರೆ ಹೋಗಲು ಹೇಳಿದ್ದಾರೆ.

50

ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ

ತಿಳಿಯಲೀಯದು ಎಚ್ಚರಲೀಯದು.
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ , ಲಿಂಗತಂದೆ;
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚರಲೀಯದು:

ದೇಹ ಅರಿವಿನ ಬೆಳೆ ಬೆಳೆಯುವ ಭೂಮಿ. ಅರಿವೆಂಬ ಗುರುವಿನ ಪುಣ್ಯಕ್ಷೇತ್ರ! ಇಂತಹ ಭೂಮಿಯಲ್ಲಿ ಅಜ್ಞಾನವೆಂಬ ಪ್ರಳಯದ ಕಸ ಹುಟ್ಟಿ ಬೆಳೆಯುವ ಭೂಮಿ ಬಿರಿಯುವಂತೆ ಮಾಡಿದೆ.

ಭೂಮಿಯಲ್ಲಿ ಬೆಳೆದ ಕಳೆ ಪಶು ತಿಂದು ಅಮೃತಕ್ಕೆ ಸಮಾನವಾದ ಹಾಲು ಕೊಡುತ್ತದೆ. ಆದರೆ ಅರಿವೇ ಬೆಳೆದು ವಿರಾಟ ಸ್ವರೂಪವಾಗುವ ದೇಹವೆಂಬ ಭೂಮಿಯಲ್ಲಿ ತಿಳಿಯಲೀಯದ, ಎಂದೆಂದೂ ಎಚ್ಚರಗೊಳ್ಳದ ಅವಗುಣವೆಂಬ ಕಸ ಬೆಳೆದಿದೆ.

ಅವಗುಣವೆಂಬ ಕಸವು ಸುಳಿದೆಗೆದು ಬೆಳೆವ ಅರಿವಿನ ಬೆಳೆಗೆ ಅಡ್ಡಿಯಾಗಿದೆ. ಅರಿವಿನ ಬೆಳೆಯಲ್ಲಿ ಬೆರೆತು, ಸುಳಿ ದೆಗೆದು ಬೆಳೆಯ ಬೇಕಾದ ಮನ ಅವಗುಣದ ಬೀಜ ಬಿತ್ತಿದೆ. ಅದು ಹೆಮ್ಮರವಾಗಿ ಬೆಳೆದಿದೆ. ತಿಳಿಯದೆ ಎಚ್ಚರಗೊಳ್ಳದೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಫಲವನ್ನುಣ್ಣುತ್ತ ಮೈಮರೆತಿದೆ.

ಹದವಾದ ದೇಹದ ಭೂಮಿಯ ತುಂಬಾ ಅರಿವಿನ ಬೆಳೆ ಬೆಳೆದು ವಡೆಯಾಗಿ ನಿಂತಿದೆ. ಎನ್ನವಗುಣವೆಂಬ ಕಸ ಕಿತ್ತು ಸಲಹಯ್ಯಾ ಅರಿವಿನ ಲಿಂಗತಂದೆಯೇ ಎಂದು ಮನ ಒಮ್ಮೆ ಬೇಡಿದರೆ ಸಾಕು; ಸುಳಿದೆಗೆದ ಬೆಳೆ ಅರಿವಿನ ಕಾಳುಗಳಿಂದ ನಳನಳಿಸುತ್ತದೆ. ಬೆಳಗಿ ನುಡಿಯುವ ಮುತ್ತಿನ ಕಾಳುಗಳಿಂದ ತನುವೆಂಬ ಭೂಮಿ ಫಳಫಳನೆ ಹೊಳೆಯುತ್ತದೆ.

51

ವಿಷಯವೆಂಬ ಹಸುರನೆನ್ನಮುಂದೆ ತಂದು ಪಸರಿಸಿದೆಯಯ್ಯಾ ;
ಪಶುವೇನ ಬಲ್ಲುದು, ಹಸುರೆಂದೆಳೆಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬ ಉದಕವನೆರೆದು
ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ ಕಾಣಾ. ಅದನ್ನು ಅಲಂಕರಿಸಿದೆಯಾದಡೆ ನಿನಗಿಂತ ಸಿರಿವಂತರು ಯಾರೂ ಇಲ್ಲ ಎಲೆ ಮನವೇ. ಎಂದು ಅಲ್ಲಮಪ್ರಭುಗಳು ಹೇಳಿದ್ದಾರೆ. ಆದರೂ ಜಗತ್ತು ಈ ಮೂರೂ ವಸ್ತುಗಳ ಹಿಂದೆ ಬಿದ್ದಿದೆ. ಸೂತ್ರ ಹಿಡಿದು ಜ್ಞಾನದಿಂದ ಈ ಮೂರೂ ವಸ್ತುಗಳನ್ನು ನೋಡಲು ಜಗತ್ತಿಗೆ ಸಾಧ್ಯವಾಗಿಲ್ಲ. ನೋಡಿದ ಬೆರಳೆಣಿಕೆಯ ಜನ ಮಾತ್ರ ಪ್ರಪಂಚದ ಶ್ರೀಮಂತರಾಗಿದ್ದಾರೆ.

ಅರಸೊತ್ತಿಗೆಯಿಂದ ಮೆರೆಯುತ್ತಿದ್ದ ಸಿದ್ಧಾರ್ಥ ಜ್ಞಾನದಿಂದ ನೋಡಿದ; ಬುದ್ಧನಾದ, ಪ್ರಪಂಚದ ಶ್ರೀಮಂತನಾದ. ನಿಜಗುಣರು, ಶ್ರೀ ಗುರು *ವಿದ್ಯಾನಂದರು, *ನಾಗಭೂಷಣರು, ಈ ಮೂರೂ ವಸ್ತುಗಳನ್ನು ಜ್ಞಾನದಿಂದ ನೋಡಿದರು. ಈ ನಾಡಿನ ಶ್ರೀಮಂತರಾದರು. ಭೂಮಿ ಹೇಮ ಕಾಮಿನಿಯನ್ನು ವರ್ಧಮಾನ ಜ್ಞಾನದಿಂದ ನೋಡಿದರು, ಈ ಜಗದ ಶ್ರೀಮಂತರಾದರು.

ಮಹಾವೀರರಾದರು. ಜ್ಞಾನವನ್ನು ದೇಹದ ಗರ್ಭದಲ್ಲಿಟ್ಟುಕೊಂಡ ಜನ ಬಳಕೆ ಮಾಡದೆ, ಭೂಮಿ ಹೇಮ ಕಾಮಿನಿಗೆ ಮರುಳಾದರು. ದೇಹದ ಜ್ಞಾನವನ್ನು ಜಗದ ಜನ ಬಳಕೆ ಮಾಡದೆ ಜಿಪುಣರಾದದ್ದಕ್ಕಾಗಿ ಜಗತ್ತೆ ವಿಧಿಗೆ ಬಲಿಯಾಯಿತು. ಮನ ವಿಷಯದ ಹಸುರು ಉಣ್ಣಲು ಹೋಗಿ ಪಶುವಾಯಿತು.

ವಿಷಯುರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ, ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯಾ ಕೂಡಲಸಂಗಮದೇವಾ:

ವಿಷಯಕ್ಕೆಳೆಸುವ ಮನಕ್ಕೆ ಅರಿವೆಂಬ ಗುರು ಜ್ಞಾನದ ರಸಾಪಾನ ಮಾಡಿಸಿ ಸುಬುದ್ಧಿಯೆಂಬ ಉದಕವನು ಎರೆದು ಸಲಹಿದರೆ ವಿಷಯ ಎಂಬುದೇ ಸುಳಿಯುವುದಿಲ್ಲ. ತನುವಿನಲ್ಲಿ ಹುಟ್ಟಿದ ಮನ ತನುವಿನ ಅರಿವಿನಲ್ಲಿ ಸಂಗಮವಾಯಿತು. ಅರಿವಿನ ತನುವಾಯಿತು. ಬುದ್ಧ ಬಸವ ಮಹಾವೀರನ ತನುವಾಯಿತು.

ಮಣ್ಣು, ಮಣ್ಣಿನ ಗರ್ಭದಲ್ಲಿ ಹುಟ್ಟಿದ ಲೋಹ ಮಣ್ಣಿನ ಕುಡಿಕೆಯಲ್ಲಿಯೇ ಕುದ್ದ ಹಳದಿಲೋಹ ಮಣ್ಣಲ್ಲದೇ ಮತ್ತೇನು? ಹಳದಿ ಬಣ್ಣ ತನುವಿನ ಅರಿವಿಗೆ ತುತ್ತಾಯಿತು. ವಿಧಿಯಾಗಲಿಲ್ಲ.

ಜಲ ಕುದ್ದು ಪಾಕವಾಯಿತು, ಗಟ್ಟಿಗೊಂಡು ಮಣ್ಣಾಯಿತು. ಜಲಬಿಂದು ಗರ್ಭಸೇರಿ ರಕ್ತ, ಮೂಳೆ, ಮಾಂಸ, ಮಜ್ಜೆ, ಮೇದಸ್ಸು, ಚರ್ಮವಾಯಿತು. ತನುವಾಗಿ ಹೊರಬಂದು ಎಲ್ಲವನ್ನೂ ತಿಳಿಯುವ ಅರಿವಾಯಿತು. ಜಲದಿಂದಲೇ ಜೀವಜಲ; ಜೀವ ಜಲದಿಂದಲೇ ಮಣ್ಣು, ಹೊನ್ನು, ಹೆಣ್ಣು!

ತನುವಿನ ಮನ ತನುವಿನ ಅರಿವಿಗೆ ಭಕ್ತಿ ಮಾಡಿತು. ಅರಿವಿನ ರಸಾಪಾನ ಮಾಡಿತು. ಬುದ್ಧಿ ಸುಬುದ್ಧಿಯಾಯಿತು. ಮನ ಬುದ್ಧಿ ಅರಿವಿನಲ್ಲಿ ಸಂಗಮವಾಯಿತು. ಹೊನ್ನು, ಮಣ್ಣು, ವಿಷಯಾಸಕ್ತನಾಗಿ ಸದಾ ತನುವನ್ನು ಕಾಡುವ ಮನವೆಂಬ ಹೆಣ್ಣು ಕೂಡಾ ಅರಿವಿನಲ್ಲಿ ಸಂಗಮವಾಗಿ ಕೂಡಲಸಂಗಮದೇವನೇ ತಾನಾಯಿತು. ಮನವೆಂಬ ಪಶು, ಅರಿವಿನ ಪಶುಪತಿಗೆ ಸತಿಯಾಯಿತು.

*ನನ್ನ ಗುರುಗಳು *ನನ್ನ ಗುರುವಿನ ಗುರುಗಳು

52

ಕೆಸರಲ್ಲಿ ಬಿದ್ದ ಬಡ ಪಶುವಿನಂತೆ
ಆನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ !
ಆರಯ್ವರಿಲ್ಲ-ಅಕಟಕಟಾ! ಪಶುವೆಂದೆನ್ನ
ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.

ದೇಹದ ಜ್ಞಾನ ತಿಳಿಯದ ಮನ ಬಡಪಶು! ದೇಹಕ್ಕೆ ಬಡತನವಿಲ್ಲ. ಅದು ಸದಾ ಶ್ರೀಮಂತ. ದೇಹದಲ್ಲಿ ನವರತ್ನಗಳುಳ್ಳ ಕುಬೇರ ವಾಸವಾಗಿದ್ದಾನೆ. ಅದನ್ನು ಸದ್ಬಳಕೆ ಮಾಡುವ ಪಂಚ ಮಹಾ ಜ್ಞಾನಿಗಳೂ ಇದ್ದಾರೆ. ಹೀಗಿದ್ದಾಗ ದೇಹ ಹೇಗೆ ಬಡಪಶುವಾಗುತ್ತದೆ!

ಪಶುವಿನಂತಹ ಮನ ಇಡೀ ದೇಹವನ್ನೇ ಆವರಿಸಿದೆ. ಪಂಚ ಮಹಾಜ್ಞಾನೇಂದ್ರಿಯಗಳ ಮೇಲೆ, ನವರತ್ನಗಳುಳ್ಳ ಕುಬೇರನ ಮೇಲೆ ತನ್ನ ಅಜ್ಞಾನದ ವಸ್ತ್ರ ಚೆಲ್ಲಿದೆ. ಶ್ರೀಮಂತ ದೇಹವನ್ನು ಬಡಪಶುವಿನಂತೆ ಮಾಡಿದೆ. ಹೊನ್ನು ಹೆಣ್ಣು ಮಣ್ಣಿಗಾಗಿ ದೆಸೆದೆಸೆಗೆ ಬಾಯಿ ಬಿಡುತ್ತಲಿದೆ. ಇದೆಲ್ಲ ಶ್ರೀಮಂತ ದೇಹದಿಂದ ಸೃಷ್ಟಿಯಾದ ತೃಣವೆಂದು ಮನಕ್ಕೆ ಪರಿಚಯವಿಲ್ಲ.

ಅಕಟಕಟಾ ಆರಯ್ವರಿಲ್ಲ; ಶ್ರೀಮಂತದೇಹವನ್ನು ಬಡಪಶುವೆಂಬ ಮನ ತನ್ನಿಚ್ಛೆಯಿದ್ದೆಡೆಗೆ

ಹೊತ್ತೊಯ್ಯುತ್ತಿದೆ. ಅದನ್ನು ಹುಡುಕಿ ಹಿಡಿಯುವ ಅರಿವಿನ ತನುವಿನ ಐದು ದೂತರೂ ಪಶುವಿನ ಸೆರೆಯಾಳಾಗಿದ್ದಾರೆ.

ಅಜ್ಞಾನದ ಕೆಸರಲ್ಲಿ ಬಿದ್ದ ದೇಹ ವಿಲವಿಲನೆ ಒದ್ದಾಡುತ್ತಲಿದೆ. ಮಹಾಜ್ಞಾನಿ ಕೂಡಲಸಂಗಮದೇವಯ್ಯನೇ ಪಶುವಿನ ಕೊಂಬ ಹಿಡಿದೆತ್ತುವವರೆಗೆ ಕೆಸರಿನಿಂದ ಹೊರಬರದು ಬಡಪಶು! ಅದನ್ನು ನೀನೇ ಹಿಡಿದೆತ್ತಬೇಕು. ನಿನ್ನ ಪಶುವನ್ನು ಪಶುಪತಿಯಾಗಿ ನೀನೇ ಸಲುಹಬೇಕು.

53

ಬಡಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವ! ಹೋದೆಹೆ ಹೋದೆಹೆನಯ್ಯಾ .
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ .
ಪಶುವಾನು, ಪಶುಪತಿ ನೀನು!
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯ ನಿಮ್ಮ ಬಯ್ಯದಂತೆ ಮಾಡು,
ಕೂಡಲಸಂಗಮದೇವಾ.

ದೇಹದಲ್ಲಿ ಮನವೆಂಬ ಪಶುವೂ ಇದೆ; ಅರಿವೆಂಬ ಪಶುಪತಿಯೂ ಇದ್ದಾನೆ. ಮನ ದೇಹವನ್ನು ಆವರಿಸಿದರೆ ಅದು ಪಶುವಾಗುತ್ತದೆ. ಮನಕ್ಕೆ ವಿಷಯವೆಂಬ ಹಸಿರಿನ ಬಯಕೆಯಾದರೆ ದೇಹವನ್ನು ಕರೆದೊಯ್ದು ತಿನ್ನುತ್ತದೆ. ದೇಹವನ್ನು ಕರೆದೊಯ್ದು ಸೆರೆಕುಡಿಯುತ್ತದೆ, ಭ್ರಷ್ಟಾಚಾರವೆಸಗಿ ಲಂಚಕ್ಕೆ ಕೈ ಚಾಚಿ ಅಜ್ಞಾನದ ಕೆಸರಿ(ಪಂಕ)ನಲ್ಲಿ ಬೀಳುತ್ತದೆ. ಆಭರಣಗಳಿಗೆ ಜೊಲ್ಲು ಸುರಿಸಿ ದೇಹವನ್ನು ಜೇಲಿಗೆ ತಳ್ಳುತ್ತದೆ. ಹಾದರಕ್ಕೆಳಿಸಿ ಪಾಪಕೂಪಕ್ಕೆ ತಳ್ಳುತ್ತದೆ. ಜನಕ್ಕೇನು ಗೊತ್ತು ದೇಹ ಪಶುಪತಿಯ ಸೊತ್ತೆಂದು! ದೇಹವನ್ನು ದಂಡಿಸುತ್ತಾರೆ.

ಪಶುವಾನು ಪಶುಪತಿ ನೀನು! ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ ಒಡೆಯಾ ನಿಮ್ಮ ಬಯ್ಯದಂತೆ ಮಾಡು ಕೂಡಲಸಂಗಮದೇವಾ:

ಇಂತಹ ಸುಂದರವಾದ ಕಾವ್ಯಮಯವಾದ ಅರಿವಿನ ಉಪಮೆಯನ್ನು ಬಸವಣ್ಣನಲ್ಲದೆ ಮತ್ತಾರು ಕೊಡಲು ಸಾಧ್ಯ! ಒಡಲೆಂಬ ಪಶು ನಾನು ; ಇದರ ಪಶುಪತಿ ನೀನು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ(ಪಂಕ) ಕೆಸರಿನಲ್ಲಿ ಹಸುರೆಂದು ತಿಳಿದು ಬಿದ್ದರೆ; ಜನ ಪಶುವನ್ನು ಹಿಡಿದು ಬಡಿಯುತ್ತಾರೆ. ಅದರ ಒಡೆಯನನ್ನು ಬಯ್ಯುತ್ತಾರೆ.

ಪಶುವಿನ ಒಡೆಯ ಪಶುಪತಿ ನೀನು. ಪಶು ಮಾಡಿದ ತಪ್ಪಿಗೆ ಒಡೆಯ ಪಶುಪತಿಯನ್ನು ಜನ ಬಯ್ಯುವುದು ಉಚಿತವೇ! ನಾನು ಪಶು; ನೀನು ಪಶುಪತಿ! ತುಡುಗುಣಿಯೆಂದು ಹಿಡಿದು ಜನ ನನ್ನನ್ನು ಬಡಿಯದ ಮುನ್ನ ಒಡೆಯಾ ನಿಮ್ಮನ್ನು ಬಯ್ಯದಂತೆ ಮಾಡು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಕಳುವು ಹಾದರ ಲಂಚವೆಂಬ ಅಜ್ಞಾನದ ಹೊಂಡದಲ್ಲಿ ಬಿದ್ದ ಬಡ ಪಶು ಕಾಲು ಬಡಿವುದಲ್ಲದೆ ಬೇರೆ ಗತಿಯುಂಟೆ? ಶಿವ ಶಿವ! ಮನ ಕರೆದತ್ತ ಹೋಗುವ ಪಶುವಿಗೆ ಬೇರೆ ಗತಿಯುಂಟೆ? ಅರಿವೆಂಬ ಒಡಲೊಡೆಯನೆ ಮನದತ್ತಲೆನ್ನ ತೆಗೆದು ನಿನ್ನಲ್ಲಿ

ಸಂಗಮ ಮಾಡಿಕೊ, ಕೂಡಲಸಂಗಮದೇವಾ.

54

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೆ,ಅಂಬೆ' ಎಂದು ಕರೆಯುತ್ತಲಿದ್ದೇನೆ;
'ಅಂಬೆ, ಅಂಬೆ' ಎಂದು ಒರಲುತ್ತಲಿದ್ದೇನೆ.
ಕೂಡಲಸಂಗಮದೇವಾ 'ಬಾಳು ಬಾಳೆಂಬನ್ನಕ್ಕ!

ದೇಹ ಎನ್ನುವುದು ಜ್ಞಾನದ ಕೈಲಾಸ! ಜ್ಞಾನದಿಂದ ನೋಡುವ ಅಂಜನ ವಿದ್ಯೆ ದೇಹದಲ್ಲಿದೆ. ಪ್ರತಿ ಶಬ್ದವನ್ನು ಅರಿವಿನಿಂದ ಕೇಳಿ ಸಂತೋಷ ಪಡುವ ಶಕ್ತಿ ತನುವಿನಲ್ಲಿದೆ. ಪ್ರತಿ ಪದಾರ್ಥದ ಪರಿಮಳ ಮೂಸಿಸಿ ಪುಳಕಿತಗೊಳ್ಳುವ ಮಂತ್ರ ವಿದ್ಯೆ ತನುವಿನಲ್ಲಿದೆ. ಪ್ರತಿ ತುತ್ತಿನ ರುಚಿಯನ್ನು ಪ್ರಸಾದದಂತೆ ಸ್ವೀಕರಿಸುವ ಭಕ್ತಿ ತನುವಿನಲ್ಲಿದೆ. ಪ್ರತಿ ಸ್ಪರ್ಷವನ್ನು ಆನಂದದಿಂದ ಸ್ವೀಕರಿಸುವ ಶಕ್ತಿ ತನುವಿನಲ್ಲಿದೆ. ತನು ಅರಿವೆಂಬ ಗುರುವಿನ ಮಂತ್ರದಂಡ!

ಹೀಗಿದ್ದೂ ತನವನ್ನು ಆವರಿಸಿದ ಮನ ಕಣ್ಣಿನಲ್ಲಿ ಬೆರೆತು ಸುಖ ದುಃಖಗಳನ್ನುಂಟು ಮಾಡಿ ಜೊಲ್ಲು ಸುರಿಸುತ್ತದೆ ಇಲ್ಲ ಸಂಕಟಪಡುತ್ತದೆ. ಅರಿವಿನ ಕೈಲಾಸ ಆಗಬೇಕಾದ ತನು, ದಟ್ಟಾರಣ್ಯವಾಗಿದೆ. ಹೊಲಬುಗೆಟ್ಟು ಪಶುವಿನಂತೆ ಅಂಬೆ ಅಂಬೆ ಎನ್ನುತ್ತಲಿದೆ.

ಕೇಳಿ ಅರಿವಾಗ ಬೇಕಾದ ಶಬ್ದ ದುಃಖಕ್ಕೆ ಈಡು ಮಾಡಿ ಇಡೀ ತನುವನ್ನು ಅಂಬೆ ಅಂಬೆ ಎಂದು ಒರಲುವಂತೆ ಮಾಡಿದೆ. ಮೂಸಿಸಿ, ರುಚಿಸಿ, ಸ್ಪರ್ಶಿಸಿ, ಆನಂದ ಪಡಬೇಕಾದ ತನು ಅಡವಿಯೊಳಗೆ ಹೊಲಬುಗೆಟ್ಟು ಅಂಬೆ ಅಂಬೆ ಎಂದು ಕರೆಯುತ್ತ ಒರಲುತ್ತಲಿದೆ.

ತನುವಿನಲ್ಲಿದ್ದ ಅರಿವೆಂಬ ಗುರು ದೇವನು ತನುವಿನಲ್ಲಿ ಆವರಿಸಿದ ಮನಕ್ಕೆ ದರ್ಶನವನಿತ್ತು ಬಾಳು ಬಾಳೆಂದು ಹೇಳುವವರೆಗೆ ತನುವಿನ ಬವಣೆ ಹರಿಯುವುದಿಲ್ಲ.

ತನು ಶ್ರೀಮಂತವಾದರೇನು; ಬಡವ ಭಿಕ್ಷುಕನಾದರೇನು: ತನುವಿನ ನಿಜ ಶ್ರೀಮಂತ್ರಿಕೆ ತನುವಿಗೆ ತಿಳಿಯುವವರೆಗೆ ಅದು ಹೊಲಬುಗೆಟ್ಟ ಪಶುವಿಗೆ ಸಮ. ಅಂಬೆ ಅಂಬೆ ಎಂದು ಕರೆಯುತ್ತ ಒರಲುವುದು ತಪ್ಪುವುದಿಲ್ಲ.

55

ಸಮುದ್ರದೊಳಗಣ ಸಿಂಪಿನಂತೆ
ಬಾಯ ಬಿಡುತ್ತಿದ್ದೇನಯ್ಯಾ!
ನೀವಲ್ಲದೆ ಮತ್ತಾರು ಎನ್ನನರಿವವರಿಲ್ಲ ನೋಡಯ್ಯಾ.
ಕೂಡಲಸಂಗಮದೇವಾ,
ನೀವಲ್ಲದೊಳಕೊಂಬವರಿಲ್ಲವಯ್ಯಾ!

ಸಮ್ರುದ ತನ್ನ ಜಲದಿಂದ ಎಷ್ಟೋ ಚಿಪ್ಪುಗಳನ್ನು ಪ್ರೊಡೆಕ್ಟ್ ಮಾಡುತ್ತದೆ. ಆ ಚಿಪ್ಪುಗಳನ್ನೆಲ್ಲ ಸಮ್ರುದದ ಜಲ ಪಡೆದು ಮುತ್ತು ಮಾಡಲು ಸಾಧ್ಯವಾಗುವುದಿಲ್ಲ. ಚಿಪ್ಪಿಗೆ ಮುತ್ತು ಮಾಡುವ ತವಕ ಬೇಕು. ಹಗಲಿರುಳೆನ್ನದೆ ಸ್ವಾತಿಯ ಹನಿಗಾಗಿ ಬಾಯಿಬಿಟ್ಟು ಕಾಯಬೇಕು. ಕಾದು ಕಾದು

ಸುಸ್ತಾಗಬೇಕು. ಆಗ ಸ್ವಾತಿಯ ಜಲಬಿಂದು ಕರುಣೆ ತೋರುತ್ತದೆ. ತನಗಾಗಿ ಹಗಲಿರುಳೆನ್ನದೆ ಪರಿತಪಿಸುವ ಚಿಪ್ಪಿನ ಬಾಯಲ್ಲಿ ತನ್ನ ಜಲಬಿಂದು ಚಿಮ್ಮುತ್ತದೆ. ಆ ಜಲಬಿಂದುವೇ ಗಟ್ಟಿಯಾಗಿ ಮುತ್ತಾಗುತ್ತದೆ. ಥಳಥಳನೆ ಹೊಳೆಯುತ್ತದೆ.

ಚಿಪ್ಪು ಜಲದಿಂದಲೆ; ಮುತ್ತು ಕೂಡಾ ಜಲದಿಂದಲೇ ಹುಟ್ಟಿದೆ. ಬಿಚ್ಚಿನೋಡುವ ಸಮರ್ಥ ಎರಡನ್ನು ತಿಳಿಯುತ್ತಾನೆ. ಚಿಪ್ಪಿನ ಹೊರವೈ ಹೊಳೆಯುವುದಿಲ್ಲ; ಒಳವೈ ಥಳಥಳನೆ ಹೊಳೆಯುತ್ತದೆ. ಅದರೊಳಗಿದ್ದ ಮುತ್ತು ಕೂಡಾ ಹೊಳೆಯುತ್ತದೆ. ಎರಡೂ ಜಲದ ಪದಾರ್ಥಗಳೇ! ಎರಡನ್ನೂ ನೋಡಿ ಆನಂದ ಪಡುತ್ತಾನೆ. ಸೂರ್ಯ ಬೆಳಗಿ ತನಗೆ ಬೇಕೆಂದು ಮುಟ್ಟುವುದಿಲ್ಲ. ಜ್ಞಾನಿ ನೋಡಿ ತಿಳಿದು ಆನಂದ ಪಟ್ಟು ಸಂಭ್ರಮಿಸಿ ಜಲದ ಲೀಲೆಯನ್ನು ಅರಿಯುತ್ತಾನೆ. ಮುಟ್ಟುವುದಿಲ್ಲ. ನೋಡುತ್ತಾನೆ; ಸಂಗ್ರಹಿಸುವುದಿಲ್ಲ.

ಜಗದ ತನುಗಳೆಲ್ಲ ಜಲದ ತನುಗಳೇ; ಜಲಬಿಂದುವೇ ಗರ್ಭ ಸೇರಿ ಗಟ್ಟಿಗೊಂಡು ಮುತ್ತಾಗಿದೆ. ಮುತ್ತು ಬೆಳಗುವ ಮೂಲಕ ಹೊಳೆಯುತ್ತದೆ. ತನುವಿನ ಮುತ್ತು ನುಡಿಯುವ ಮೂಲಕ ಹೊಳೆದು ಬೆಳಗುತ್ತದೆ. ಸಮುದ್ರದ ಎಲ್ಲಾ ಚಿಪ್ಪಿನಲ್ಲಿ ಮುತ್ತುಗಳು ಇರಲಿಕ್ಕಿಲ್ಲ; ಆದರೆ ಜಗದ ತನುಗಳೆಲ್ಲ ಮುತ್ತುಗಳೇ! ಮುತ್ತು ಪರೀಕ್ಷಿಸುವ ಕಣ್ಣು ಕುರುಡಾಗಿದೆ. ಚಿಪ್ಪು ನೋಡುವ ಕಣ್ಣಿಗೆ ಮುತ್ತು ಕಾಣುವುದಿಲ್ಲ. ಮುತ್ತು ನೋಡುವ ಕಣ್ಣಿಗೆ ಚಿಪ್ಪು ಕಾಣುವುದಿಲ್ಲ. ತನುವೆಂಬ ಚಿಪ್ಪಿನಲ್ಲಿ ಮುತ್ತು ಎನ್ನುವ ಅರಿವು ಸಂಗಮವಾಗಿದೆ. ಮನ ಚಿಪ್ಪಿನ ಮೇಲೆ ಪೊರೆಯಂತೆ ಆವರಿಸಿದೆ.

ಪೊರೆ ಹರಿದುಕೊಂಡು ಚಿಪ್ಪು ಸೀಳಿ ಮುತ್ತು ನೋಡುವ ಬಯಕೆ ಮನಕ್ಕೆ ಆಗಬೇಕು. ಇಲ್ಲ ಮನದ ಪೊರೆ ಹರಿದು ಚಿಪ್ಪುಸೀಳಿ ಮುತ್ತಿನ ಬೆಳಕು ಪ್ರಜ್ವಲಿಸಿ ಹೊರಬರಬೇಕು. ಮನದ ಕತ್ತಲು ಮುತ್ತಿನ ಬೆಳಕಿನಲ್ಲಿ ಒಳಕೊಂಡು ಜಾತಿ ಮುತ್ತಾಗಿ ಬೆಳಗುತ್ತದೆ. ತನುವಿನ ಅರಿವಿನಲ್ಲಿ ಮನ ಒಳಕೊಂಡು ಕೂಡಲ ಸಂಗಮವಾಗುತ್ತದೆ.

56

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ.
ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ.
ಓ ಎನ್ನಲಾಗದೆ ಅಯ್ಯಾ ?
ಆಗಳೂ ನಿಮ್ಮ ಕರೆವುತ್ತಲಿದ್ದೇನೆ,
ಮೌನವೇ ಕೂಡಲಸಂಗಮದೇವಾ?

ಅರಿವಿನ ಸಂಪತ್ತು ದೇಹದಲ್ಲಿಯೇ ಗರ್ಭೀಕರಿಸಿಕೊಂಡಿದೆ. ಆದರೂ ದೇಹಕ್ಕೆ ದಕ್ಕುತ್ತಿಲ್ಲ. ದೇಹದಿಂದ ಬಂದ ಪುಸ್ತಕಗಳಿಗೆ ಮರೆತು ದೇಹವೇ ಮರುಳಾಗಿದೆ. ಆ ಪುಸ್ತಕ ಓದಿ ಕಲಿಯುವವನೊಬ್ಬ, ಕಲಿಸುವವನೊಬ್ಬ. ಕಲಿಯುವವನಿಗೆ ಶಿಷ್ಯನೆಂಬ ಹೆಸರು; ಕಲಿಸುವವನಿಗೆ ಗುರುವೆಂಬ ಹೆಸರು. ಗುರು ಪಲ್ಲಕ್ಕಿಯಲ್ಲಿ ಕುಳಿತರೆ; ಶಿಷ್ಯ ಅದನ್ನು ಹೋರಬೇಕು. ಗುರುವಿಗೆ ಜಯಕಾರ ಶಿಷ್ಯನಿಗೆ ಆಶೀರ್ವಾದ! ಎರಡೂ ತನುಗಳು ಒಂದೇ ಎನ್ನುವುದು ತನುವಿಗೆ ತಿಳಿಯದಿದ್ದರೆ ಹೊರುವುದು ಹೋರಿಸಿಕೊಳ್ಳುವುದು ತಪ್ಪುವುದಿಲ್ಲ, ಅಯ್ಯಾ ಅಯ್ಯಾ ಎಂದು ಕರೆಯುತ್ತ ಒರಲುವುದು ತಪ್ಪುವುದಿಲ್ಲ.

ದಣಿದಿದ್ದೀಯ ನೀನೊಮ್ಮೆ ಈ ಪಲ್ಲಕ್ಕಿಯಲ್ಲಿ ಕೂಡು ನಾನೊಮ್ಮೆ ಹೋರುತ್ತೇನೆ ಎಂದು ಗುರು ಹೇಳುವುದಿಲ್ಲ. ಹೊತ್ತು ಬಳಲಿದ ಶಿಷ್ಯ ಒಮ್ಮೆಯೂ ಪಲ್ಲಕ್ಕಿಯಲ್ಲಿ ಕೂಡುವುದಿಲ್ಲ. ಗುರುವಿಗೊಂದು ಬಯಕೆ, ಶಿಷ್ಯನಿಗೊಂದು ಬಯಕೆ.

ಅಯ್ಯಾ ಅಯ್ಯಾ ಎಂದು ದೀನನಾಗಿ ತನುವಿನ ಅರಿವೆಂಬ ಗುರುವನ್ನು ಕರೆಯುವ ಬಯಕೆ ವೇಷದ ಗುರುವಿಗೆ ಆಗಬೇಕು. ಅಯ್ಯಾ ಅಯ್ಯಾ ಎಂದು ದೀನನಾಗಿ ತನುವಿನ ಅರಿವೆಂಬ ಗುರುದರ್ಶನಕ್ಕಾಗಿ ಶಿಷ್ಯ ಒರಲುತ್ತ ವಿಲವಿಲನೆ ತೊಳಲಿಬಳಲಬೇಕು.

ಗುರುವಿನ ದೇಹಕ್ಕೂ ಶಿಷ್ಯನ ದೇಹಕ್ಕೂ ಅರಿವೆಂಬ ಗುರು ಒಬ್ಬನೇ. ಆ ಗುರುವಿಗೆ ಶಿಷ್ಯರಾಗಿ ಅಯ್ಯಾ ಅಯ್ಯಾ ಎಂದು ಕರೆಯುವ ಬಯಕೆಯಾಗಬೇಕು. ಅಯ್ಯಾ ಅಯ್ಯಾ ಎಂದು ಒರಲುವ ಬಯಕೆಯಾಗಬೇಕು. ಓ ಎನ್ನಲಾಗದೆ ಅಯ್ಯಾ ಎಂದು ಮನದಿಂದ ಅರಿವಿನ ಗುರುವಿಗೆ ಮೊರೆಹೋಗಬೇಕು.

ಆಗಲೂ ನಿಮ್ಮನ್ನು ಕರೆವುತ್ತಲಿದ್ದೇನೆ ಈಗಲೂ ನಿಮ್ಮನ್ನು ಕರೆವುತ್ತಲಿದ್ದೇನೆ ಸದ್ಗುರುವೇ ಮೌನವೇ ತಂದೆ! ಎಂದು ತನುವಿನ ಕಣಕಣದಲ್ಲಿದ್ದ ಅರಿವೆಂಬ ಸದ್ಗುರುವಿನಲ್ಲಿ ಸಂಗಮವಾಗಬೇಕು. ಗೊತ್ತಿದ್ದರೆ ಸಕಲರಿಗೂ ಅರಿವೆಂಬ ಸದ್ಗುರುವನ್ನು ತೋರುವ ಮಾರ್ಗದರ್ಶಕನಾಗಬೇಕು. ಸಾರಾಯದ ಮಾರ್ಗವನ್ನು ಯಾರು ತೋರಿದಡೇನು ಎನ್ನುವ ಗುರು ಉಕ್ತಿಯಂತೆ ದಾರಿತೋರುವ ಕೈ-ಮರವಾಗಬೇಕು.

57

ನೀ ಹುಟ್ಟಿಸಿದಲ್ಲಿ ಹುಟ್ಟಿ,
ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ ?
ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ ?
ಅಕಟಕಟಾ! ಎನ್ನವ ನೆನ್ನವ ನೆನ್ನಯ್ಯಾ ,
ಕೂಡಲಸಂಗಮದೇವಾ.

ಅರಿವು ಒಂದೇ ತನು ಒಂದೇ ಮನ ಒಂದೇ ; ತನುವಿನ ಗರ್ಭ ಒಂದೇ! ಮನ ಅರಿವನು ಅರಿಯದಿದ್ದಕ್ಕಾಗಿ ಅರಿವಿನ ತನುವನ್ನು ಹೆಣ್ಣಾಗಿ ಕಾಣುತ್ತದೆ, ಗಂಡಾಗಿ ಕಾಣುತ್ತದೆ. ಶ್ರೀಮಂತ ಬಡವನಾಗಿ ಕಾಣುತ್ತದೆ. ಜಾತಿ, ಮತ, ಪಂಥ, ಪಂಗಡಗಳೆಂದು ವಿಂಗಡಿಸಿ ಗುರುವಾಗಿ, ಶಿಷ್ಯನಾಗಿ ಕಾಣುತ್ತದೆ.

ಅರಿವೇ ಗುರು. ಆ ಗುರುದೇವನೇ ಮಹಾದೇವ. ಆ ಮಹಾದೇವನೇ ಸದಾಶಿವ. ಆ ಸದಾಶಿವನೆ ಸಾಕ್ಷಾತ್ ಪರ ಬ್ರಹ್ಮವೆಂದು ಮನಕ್ಕೆ ತನುವಿನ ಅರಿವನ್ನು ತಿಳಿಯಲು ಹೊಳೆದರೆ ಸಾಕು ಮನ ತನುವಿನ ಕಣ ಕಣದಲ್ಲಿರುವ ಗುರು ದೇವನಿಗೆ ಮೊರೆಹೋಗುತ್ತದೆ.ಬ್ರಹ್ಮ ಹುಟ್ಟಿಸಿದಲ್ಲಿ ಹುಟ್ಟುತ್ತದೆ. ಬ್ರಹ್ಮ ಕೊಂದಲ್ಲಿ ಸಾಯುತ್ತದೆ. ಬ್ರಹ್ಮ ಇರಿಸಿದಲ್ಲಿ ಇರುತ್ತದೆ. ತನು ಬ್ರಹ್ಮನ ವಶವೇ ಹೊರತು ಭ್ರಮೆಯ ವಶವಲ್ಲ !

ಮನ ಬಯಸಿದತ್ತ ತನು ಹೋಗಲು ಸಿದ್ಧವಾದರೂ ಅದರ ಸಾರಥಿ ಮಾತ್ರ ಬ್ರಹ್ಮನೇ ಆಗಿದ್ದಾನೆ. ಭ್ರಮೆ ಕಳೆದುಕೊಂಡ ಮನ ಬ್ರಹ್ಮನನ್ನು ಆರಾಧಿಸುವ ಆಲಾಪವನ್ನು ಬಸವಣ್ಣನವರು ವಚನದ ಸೂತ್ರರೂಪದಲ್ಲಿ ನೀಡಿದ್ದಾರೆ. ಇದು ಜಗದ ತನುಗಳಿಗೆ ಸಹಾಯವಾಗುವುದರಲ್ಲಿ ಸಂದೇಹವೇ ಇಲ್ಲ.

ನೀನು ಹುಟ್ಟಿಸಿದಲ್ಲಿ ಹುಟ್ಟುವೆ, ನೀನು ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ ? ನೀವು ಇರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ ? ಅಕಟಕಟಾ! ನೀನು ಎನಗೆ ಎನ್ನವನು ಎನ್ನವನು

ಎಂದು ಸಂಭೋದಿಸಯ್ಯಾ, ಕೂಡಲಸಂಗಮದೇವಾ.

58

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ
ಶಿವ ಶಿವಾ ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವಾ.

ಪ್ರಚಾರ ಬಯಸಿದ ವ್ಯಕ್ತಿ ಪಲ್ಲಕ್ಕಿಯಲ್ಲಿ ಕೂಡುವುದು ತಡವಿಲ್ಲ . ಹೊತ್ತ ಜನವೇ ಬಡಿಯುವುದೂ ತಡವಿಲ್ಲ. ಏನಾದರೂ ಮಾಡಬೇಕೆನ್ನುವ ಬಯಕೆ, ಪ್ರಚಾರ ಪಡೆಯಬೇಕೆನ್ನುವ ಬಯಕೆ, ತಾಳತಪ್ಪಿದಾಗ ಸಂಕಟ. ಇದು ದೇಹದ ಮನದ ಗುಣ. ಮನಕ್ಕೆ ಅರಿವಿನಿಂದ ನೋಡುವ ಗುಣವಿಲ್ಲ.

ತನ್ನಂತೆ ಇರುವ ವ್ಯಕ್ತಿ ಅಸಹಾಯಕನಾಗುತ್ತಾನೆ. ಭಿಕ್ಷುಕನಾಗುತ್ತಾನೆ. ಅರಿವಿನ ಶಿಕ್ಷಣ ಇಲ್ಲದ ನಿಮಿತ್ಯ ತಾನು ದಾನಿಯಾಗುತ್ತಾನೆ, ಮುತ್ಸದ್ದಿಯಾಗುತ್ತಾನೆ. ದಾನಿ ಕೊಡುವ ವಸ್ತುವೂ ತನ್ನದಲ್ಲ, ಭಿಕ್ಷುಕ ಪಡೆಯುವ ವಸ್ತುವೂ ದಾನಿಯ ಪ್ರೊಡೆಕ್ಟ್ ಅಲ್ಲ. ಇಬ್ಬರಿಗೂ ಅರಿವು ಬಳಕೆಯಾಗದ ನಿಮಿತ್ತ ಒಬ್ಬನಿಗೆ ಒಂದು ಪಟ್ಟ, ಮತ್ತೊಬ್ಬನಿಗೆ ಮತ್ತೊಂದು ಪಟ್ಟ! ಈ ಪಟ್ಟದಿಂದ ಇಬ್ಬರಿಗೂ ತೊಂದರೆ ತಪ್ಪಿದ್ದಲ್ಲ.

ದೇಹದ ಅರಿವು ದೇಹಕ್ಕೆ ಬಳಕೆಯಾದರೆ, ದೇಹ ಅರಿವಿನ ಪಂಜರದೊಳಗಿರುತ್ತದೆ. ಮನ ಅರಿವಿನ ಅಗೋಚರದ ಆಚಾರದಲ್ಲಿದ್ದು ಸುಖಿಸುತ್ತದೆ.

ಭೂಮಿಯಿಂದ ಬಂದ ಅನ್ನ ಕೊಟ್ಟ ದೇಹ ದಾನಿ ಅನ್ನಿಸಿಕೊಳ್ಳಬೇಕಿಲ್ಲ ; ಪಡೆದು ಭಿಕ್ಷುಕ ಅನ್ನಿಸಿಕೊಳ್ಳಬೇಕಿಲ್ಲ. ಅರಿವಿನ ರಕ್ಷಣೆಯಲ್ಲಿದ್ದ ದೇಹ ದಿನದ ಅನ್ನ ತಾನೇ ಹುಡುಕುತ್ತದೆ. ಉಂಡು ಸುಖಿಯಾಗಿ ನಿದ್ರಿಸುತ್ತದೆ.

ಒಂದು ದೇಹ ಬೋಧಿಸುವ ಗುರುವಾಗಿ ಗೋಚರದ ಆಚಾರದಲ್ಲಿ ಮೆರೆಯುತ್ತದೆ. ಈ ದೇಹಕ್ಕೆ ಮರುಳಾದ ದೇಹಗಳು ಮೆರವಣಿಗೆ ಮಾಡುತ್ತವೆ. ಹಾಗೆಯೇ ಒಂದು ದೇಹ ಮುತ್ಸದ್ದಿಯಾಗಿ ಮೆರೆಯುತ್ತದೆ; ಉಳಿದ ದೇಹಗಳು ಮೆರವಣಿಗೆ ಮಾಡುತ್ತವೆ. ಮುತ್ಸದ್ದಿ ದೇಹ, ಗುರುವಿನ ದೇಹಗಳು ತಾಳ ತಪ್ಪಿದಾಗ ಮೆರವಣಿಗೆ ಮಾಡಿದವರೇ ಥಳಿಸುತ್ತಾರೆ.

ನರವಿಂಧ್ಯೆ ; ದಟ್ಟಾರಣ್ಯ, ದೇಹಗಳೇ ತುಂಬಿದ ಕಾಡುಪರ್ವತಗಳ ಸಾಲು. ಜ್ಞಾನದ ಕಿಡಿ ಕೂಡಾ ಕಿಚ್ಚಿನಂತೆ ಕಾಡಿಗೆ ಹೊತ್ತಿಕೊಳ್ಳುತ್ತದೆ. ಕ್ರಿಸ್ತ, ಬುದ್ಧ, ಕ್ರಿಷ್ಣ, ಮಹಾವೀರ, ಶರಣ, ದಾಸವರೇಣ್ಯರನ್ನು ಜನ ದಹಿಸದೇ ಬಿಡಲಿಲ್ಲ.

ದೇಹದಲ್ಲಿ ಅರಿವಿದೆ . ಪ್ರತಿದೇಹದ ಅರಿವೂ ಒಂದೇ ಆಗಿದೆ; ಬಳಕೆಯಾಗಿಲ್ಲ. ಮನದಿಂದ ದೇಹದ ಅರಿವು ಬಳಕೆ ಮಾಡುವ ವಿಧಾನವನ್ನು ಕಲಿತು; ಆ ಅರಿವಿನ ಪಂಜರದಲ್ಲಿ ದೇಹವನ್ನು ಬಂಧಿಸಿಕೊಳ್ಳಬೇಕಾಗಿದೆ. ದೇಹ ಇರುವವರೆಗೆ ಆ ದೇಹವನ್ನು ಅರಿವಿನಿಂದಲೇ ಸಲುಹಬೇಕಾಗಿದೆ. ಅರಿವಿನ ಸಂಗಯ್ಯನ ದೇಹವನ್ನು ಅರಿವಿನಿಂದಲೇ ರಕ್ಷಿಸಬೇಕಾಗಿದೆ.

59

ಅತ್ತಲಿತ್ತ ಹೋಗದಂತೆ : ಹೆಳವನ ಮಾಡಯ್ಯ ತಂದೆ;
ಸುತ್ತಿಸುಳಿದು ನೋಡದಂತೆ : ಅಂಧಕನ ಮಾಡಯ್ಯ ತಂದೆ;
ಮತ್ತೊಂದ ಕೇಳದಂತೆ : ಕಿವುಡನ ಮಾಡಯ್ಯ ತಂದೆ;
ನಿಮ್ಮ ಶರಣರ ಪಾದವಲ್ಲದೆ,
ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲಸಂಗಮದೇವಾ.

ತನ್ನ ಅರಿವಿನ ರುಚಿ ತನಗೆ ಗೊತ್ತಾಗದೆ ದೇಹ ಬಹಳ ದೂರ ಪಯಣಿಸಿ ಬಳಲಿ ಬೆಂಡಾಗಿದೆ. ಇನ್ನೂ ಅದಕ್ಕಾಗಿಯೇ ಹಪಹಪಿಸುತ್ತಿದೆ. ಇದಕ್ಕೆಲ್ಲ ಕಾರಣ ಮನ. ಸೆರೆ, ವಿಷಯ ವಾಸನೆ, ಜೂಜು, ಭ್ರಷ್ಟಾಚಾರ, ಲಂಚ ಮನಕ್ಕೆ ಬಲು ಸವಿ. ಅದನ್ನು ದೇಹದಿಂದಲೇ ಪಡೆದು, ದೇಹದ ಮೂಲಕ ರುಚಿಸಿ, ದೇಹವನ್ನೇ ಪಾಪದ ಕೂಪಕ್ಕೆ ತಳ್ಳುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಮೂಲಕ ಮನ ದೇಹವನ್ನು ಗುರುತಿಸುತ್ತದೆ.

ಅಜ್ಞಾನದ ಸುಖದಲ್ಲಿ ದೇಹದ ಮೂಲಕ ನಿರತವಾದ ಮನಕ್ಕೆ ಯಾರು ಪಾಠ ಮಾಡಬೇಕು! ಬಾಹ್ಯ ಗುರುವಿನ ಪಾಠ ಮನಕ್ಕೆ ನಾಟುವುದಿಲ್ಲ! ದೇಹದ ಅರಿವೆಂಬ ಗುರುವಿಗೆ ಬಾಹ್ಯ ಗುರು ಬೇಕಿಲ್ಲ ! ಬಾಹ್ಯ ಸುಖಕ್ಕಾಗಿ ದೇಹವನ್ನು ಮತ್ತೆ ಮತ್ತೆ ದಂಡಿಸುವ ಮನಕ್ಕೆ ಅರಿವಿನ ಬಯಕೆಯಾಗಬೇಕು . ಅರಿವಿಗೆ ಶರಣು ಹೋದ ಶರಣರ ಸಂಗ ಮಾಡಬೇಕು.

ಶರಣರ ಪಾಠ ಅರಿವಿನ ಪಾಠ ! ಮನ ದೇಹದ ಅರಿವನ್ನು ಬಳಕೆ ಮಾಡಿಕೊಂಡು ಆ ಅರಿವಿನಲ್ಲಿಯೇ ವಿರಮಿಸಿ ಹೆಳವನಾಗುವ ಪಾಠ ! ಥಳ ಥಳನೆ ಹೊಳೆಯುವ ಆಭರಣ ಅರಿವಿನ ಕಣ್ಣಿಗೆ ಹಳದಿ ಲೋಹವಾಗಿ ಕಾಣುತ್ತದೆ. ಕಣ್ಣಿನಲ್ಲಿ ಆವರಿಸಿದ ಮನ ಅರಿವಿನ ಸೆರೆಯಾಳಾಗಿ ಹೆಳವನಾಗುತ್ತದೆ. ಹೀಗಾಗಿ ಆಭರಣ ಮುಟ್ಟುವುದಿಲ್ಲ; ಖರೀದಿ ಮಾಡುವುದಿಲ್ಲ, ಕಳುವಿನ ಗೋಜಿಗೂ ಹೋಗುವುದಿಲ್ಲ!

ದೇಹದಲ್ಲಿದ್ದ ಅರಿವಿನ ತಂದೆ ಆಭರಣ ನೋಡಿ ಆನಂದ ಪಟ್ಟ; ಕಣ್ಣಿನಲ್ಲಿ ಆವರಿಸಿದ ಬೇಡುವ ಮನಕ್ಕೆ ಲೋಹ ಪರಿಚಯ ಮಾಡಿದ. ಮುಟ್ಟದಂತೆ, ಖರೀದಿಸದಂತೆ, ಕಳುವು ಮಾಡದಂತೆ ಹೆಳವನ ಮಾಡಿದ. ಬೇಡುವ ಮನ ಅಂಧಕನಾಯಿತು. ದೇಹದ ಅರಿವು ನೋಡಿ ದೇಹದೊಂದಿಗೆ ಆನಂದ ಪಟ್ಟಿತು!

ದೇಹದ ಅರಿವು ತನಗೆ ಒಂದು ಹೆಸರಿಟ್ಟುಕೊಂಡು ಗಿಡ, ಮರ, ಬಳ್ಳಿ, ಪ್ರಾಣಿ, ಪಶು, ಪಕ್ಷಿ, ಉರಗ, ಜಲಚರಗಳಿಗೂ ಹೆಸರಿಟ್ಟಿದೆ. ದೇಹದ ಅರಿವಿನ ಬೆಳಕಿನಿಂದ ಮನ ಎನ್ನುವ ಹೆಸರು ಪಡೆದು ನೆರಳು ಸೃಷ್ಟಿಯಾಗಿದೆ. ಅದು ಅರಿವಿನ ದೇಹವನ್ನೇ ಆವರಿಸಿದೆ . ಅರಿವನ್ನು ಬಳಕೆ ಮಾಡದೆ ದೇಹದಲ್ಲಿಯೇ ಬಂಧಿಸಿ; ಅರಿವಿನ ದೇಹವನ್ನು ಮನ ದುರ್ಬಳಕೆ ಮಾಡಿಕೊಂಡಿದೆ.

ಕತ್ತೆ ಎನ್ನುವ ಪದ ದೇಹ ಒಂದು ಪ್ರಾಣಿಗೆ ಇಟ್ಟ ಹೆಸರು. ಅದು ಕತ್ತೆಯಲ್ಲ; ಗುರುತಿಸಲು ಕರೆವ ಶಬ್ದ. ಹಾಗೆಯೇ ದೇಹಕ್ಕೂ ಒಂದು ಹೆಸರಿದೆ; ಆ ಹೆಸರೇ ದೇಹವಲ್ಲ. ಈ ವಿಷಯ ದೇಹದ ಅರಿವಿಗೆ ತಿಳಿದಿದೆ. ಮನಕ್ಕೆ ತಿಳಿಯುವುದಿಲ್ಲ ಸಂಗ್ರಹವಾಗಿದೆ.

ಕತ್ತೆ ಎನ್ನುವ ಶಬ್ದ ಕಿವಿಯಲ್ಲಿ ಆವರಿಸಿದ ಮನ ಕೇಳಿದರೆ ಇಡೀ ತನುವನ್ನೇ ಕತ ಕತನೆ ಕುದಿಯುವಂತೆ ಮಾಡುತ್ತದೆ. ಅರಿವು ಕೇಳಿದರೆ ಕತ್ತೆಯೂ ಕತ್ತೆಯಲ್ಲ. ತಾನೂ ಕತ್ತೆಯಲ್ಲ!

ಕೇಳುವ ಮನ ಕಿವುಡಾಗುತ್ತದೆ. ಅರಿವಿನ ತಂದೆ ಶಬ್ದವನ್ನು ನಪುಂಸಕ ಮಾಡಿ ಅರಿವಿನಿಂದ ಸ್ವೀಕರಿಸುತ್ತಾನೆ. ನುಡಿದ ನುಡಿಯನ್ನು ಬೆಳಗಿ ನುಡಿದ ದೇಹಕ್ಕೆ ಅರಿವಿನ ಬೆಳಕು ಚೆಲ್ಲುತ್ತಾನೆ. ಕೇಳಿ ಹಸನ್ಮುಖನಾಗುತ್ತಾನೆ. ಕೇಳುವ ಮನ ಕಿವುಡಾಗಿ ಅರಿವಿನ ಪಾದ ಸೇರುತ್ತದೆ. ದೇಹವನ್ನು ಅನ್ಯ ವಿಷಯಕ್ಕೆಳೆಸದಂತೆ ಅರಿವಿನ ಬೆಳಕಿನಲ್ಲಿ ಸಂಗಮವಾಗಿ ಹೆಳವನಾಗುತ್ತದೆ.

60

ಎನ್ನ ವಾಮಕ್ಷೇಮ ನಿಮ್ಮದಯ್ಯಾ ;
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ ;
ಎನ್ನ ಮಾನಾಪಮಾನ ನಿಮ್ಮದಯ್ಯಾ-
ಬಳ್ಳಿಗೆ ಕಾಯಿ ದಿಮ್ಮಿತ್ತೆ , ಕೂಡಲಸಂಗಮದೇವಾ?

ಶರಣರು ದಾಸರು ಸಂತರು ಉಪನಿಷತ್‌ಕಾರರು ಕಾಣದ ದೇವರಿಗೆ ಪೂಜಿಸಲಿಲ್ಲ. ಅವರಿಗೆ ಮಠ ಮಂದಿರಗಳನ್ನು ಕಟ್ಟಿ ಹಾಡಲಿಲ್ಲ. ಅವರ ಬರಹ ತೋರಿಕೆಗೆ ಹಾಗೆ ಕಂಡರೂ ಅದು ಬೆಡಗಿನ ಬರಹವೆಂದು ಓದುಗರಿಗೆ ತೋಚುವುದೇ ಇಲ್ಲ. ಬಸವಣ್ಣನವರ ಈ ವಚನ ಸರಳವಾಗಿ ಕಂಡರೂ ಅಷ್ಟೇ ಜಟಿಲ: ಅವರು ದೇವರನ್ನು ಕುರಿತು ಹಾಡಿದ್ದಾರೆ ಎಂದು ಓದಿ ನಾವೂ ಹಾಡುತ್ತೇವೆ. ಅವರು ಅರಿವಿನ ಲಿಂಗಯ್ಯನನ್ನು ಕುರಿತು ಹಾಡಿದರೆ; ನಾವು ಬಸವಯ್ಯನನ್ನು ಕುರಿತು ಹಾಡುತ್ತೇವೆ. ಅವರು ತಮ್ಮ ಮೇಲೆ ಆರೋಪಿಸಿಕೊಂಡು ಅರಿವಿನ ಸರಳ ಮಾರ್ಗ ಸೂಚಿಸಿದರೆ; ಅವರು ಎಷ್ಟೊಂದು ಯಾತನೆ ಪಟ್ಟಿದ್ದಾರೆ . ಜೀವನ ಅವರಿಗೆ ಸರಳವಿಲ್ಲದ ಮೇಲೆ ನಮಗೆ ತಪ್ಪಿದ್ದಲ್ಲ ಎಂದು ಲೊಚಗುಟ್ಟಿ ಅರಿವಿನ ಮಾರ್ಗಕ್ಕೆ ಎಳ್ಳು ನೀರು ಬಿಡುತ್ತೇವೆ.

ಅರಿವು ಮತ್ತು ಮನದ ಜುಗಲಬಂದಿಯೇ ಹೀಗೆ! ದೇಹದಲ್ಲಿ ನುಡಿದು, ಕೈಹಿಡಿದು ಮುನ್ನಡೆಸುವ ಅರಿವಿನ ದೇವರಿದ್ದರೂ, ಪೂಜಿಸದ ಮನ ದೇಹವನ್ನು ನಾನಾ ದೇವರಿಗೆ ಕರೆದುಕೊಂಡು ಹೋಗಿ ಮಣ್ಣು ಮಾಡುತ್ತದೆ! ಮನಕ್ಕೆ ದೇಹದ ಅರಿವಿನ ದೇವರನ್ನು ಕೂಡಲು ಜನ್ಮಗಳೇ ಬೇಕಾಗಬಹುದು! ಮನದಿಂದ ಯಾವ ದೇಹಕ್ಕೂ ಮೋಸವಾಗಬಾರದೆಂದು ತಿಳಿದು ಬಸವಣ್ಣನವರು ಈ ಸೂತ್ರ ರಚಿಸಿದ್ದಾರೆ.

ಕುಂಬಳ, ಕಲ್ಲಂಗಡಿ, ಕರಬೂಜು, ಸೋರೆ, ಹೀರೆ, ಸೌತೆ, ಹಾಗಲ, ಪಡವಲ ಇವು ಬಳ್ಳಿಯಲ್ಲಿ ಹುಟ್ಟುವ ಕಾಯಿಗಳು. ಕಾಯಿ ದೊಡ್ಡದು , ಬಳ್ಳಿ ಚಿಕ್ಕದು. ಕಾಲಿಗೆ ತಟ್ಟುತ್ತದೆಂದು ಭೋಗ್ಯದಾರ ಬಳ್ಳಿಯನ್ನು ಕತ್ತರಿಸುವುದಿಲ್ಲ. ಬಳ್ಳಿಗೆ ನೀರೆರೆದು ಪೋಷಿಸುತ್ತಾನೆ. ಕಾಯಿ ಸದೃಢವಾಗಲೆಂದು ಗೊಬ್ಬರ ಹಾಕುತ್ತಾನೆ. ಸುತ್ತಲೂ ಬೆಳೆದ ಕಳೆ ಕಿತ್ತಿ ಸಲುಹುತ್ತಾನೆ.

ಕಾಯಿಯ ವಾಮಕ್ಷೇಮ ಬಳ್ಳಿಯದೆಂದು ಆರೈಕೆ ಮಾಡುತ್ತಾನೆ. ಕಾಯಿಯ ಹಾನಿ ವೃದ್ಧಿ ಬಳ್ಳಿಯದೆಂದು ಕ್ಷಣ ಕ್ಷಣವೂ ಅವಲೋಕಿಸುತ್ತಾನೆ. ಬಳ್ಳಿಗೆ ಕಾಯಿಭಾರವೇ ಎಂದು ಹಾಡಿ ಹೊಗಳುತ್ತಾನೆ. ಭೋಗ್ಯದಾರನಾದ ರೈತನಿಗೆ ಇದು ತಿಳಿದಿದೆ.

ದೇಹ ದೊಡ್ಡದು, ಅರಿವಿನ ಬಳ್ಳಿ ದೇಹಕ್ಕಾಧಾರ! ಕಣ ಕಣದಲ್ಲಿಯೂ ಅರಿವಿನ ಬಳ್ಳಿಯ ತಂತುಗಳು ಪಸರಿಸಿವೆ! ದೇಹ ಕಾಣುತ್ತದೆ; ಅರಿವು ಕಾಣುವುದಿಲ್ಲ. ಮನವೂ ಕಾಣುವುದಿಲ್ಲ. ಮನವೇ ದೇಹದ ಭೋಗ್ಯದಾರ; ಅರಿವೇ ದೇಹಕ್ಕಾಧಾರ!

ಕಣ ಕಣದಲ್ಲಿಯೂ ಅರಿವೇ ತುಂಬಿದ ದೇಹವನ್ನು ಮನ ತನ್ನ ಭೋಗ್ಯಕ್ಕಾಗಿ ದುರ್ಬಳಕೆ

ಮಾಡಿಕೊಳ್ಳುತ್ತದೆ. ಸೆರೆ ಅಂಗಡಿಗೆ, ಜೂಜಿನ ಮನೆಗೆ, ಲಂಚ ವಂಚನೆಗೆ, ಭ್ರಷ್ಟಾಚಾರಕ್ಕೆ, ಕಳುವು, ಹಾದರ, ಮೋಸಕ್ಕೆಳೆಸಿ ಸುಖಿಸುತ್ತದೆ.

ನುಡಿದು ಹೇಳುವ ಅರಿವಿನ ದೇವರನ್ನು ಮನವೆಂಬ ಭೋಗ್ಯದಾರ ಕಡೆಗಣಿಸಿ ದೇಹವನ್ನು ತನ್ನ ಭೋಗ್ಯಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಾನೆ. ಕಾಯಕ್ಕೆ ಕಳ್ಳ, ವಂಚನೆ, ಮೋಸಗಾರ, ಕುಡುಕ, ಭ್ರಷ್ಟಾಚಾರಿಯ ಪಟ್ಟ ಕಟ್ಟುತ್ತಾನೆ.

ಎನ್ನ ವಾಮಕ್ಷೇಮ ನಿಮ್ಮದಯ್ಯ ಎಂದು ಮನವೆಂಬ ಭೋಗ್ಯದಾರ ಅರಿವಿನ ದೇವರನ್ನು ಕುರಿತು ಒಮ್ಮೆಯೂ ಹಾಡುವುದಿಲ್ಲ. ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ ಎಂದು ಒಮ್ಮೆಯೂ ಬೇಡುವುದಿಲ್ಲ. ಎನ್ನ ಮಾನಾಪಮಾನ ನಿಮ್ಮದಯ್ಯಾ ಎಂದು ಒಮ್ಮೆಯೂ ಕಾಡುವುದಿಲ್ಲ. ಅರಿವಿನ ಬಳಿಗೆ ಈ ಕಾಯ ಭಾರವೇ ಎಂದು ಒಮ್ಮೆಯೂ ಪ್ರಾರ್ಥಿಸುವುದಿಲ್ಲ.

ಅರಿವಿನಿಂದ ಹಾಡಿ, ಆಡಿ, ಅರಿವಿನಿಂದಲೇ ನೋಡಿ ಕೇಳಿ, ಮುಟ್ಟಿ, ಮೂಸಿಸಿ, ಅರಿವಿನಿಂದಲೇ ಅರಿವನ್ನೇ ರುಚಿಸಿದ ಭೋಗ್ಯದಾರ ಬುದ್ಧನಾದ ! ಅರಿವನ್ನೇ ಮರೆತು ಮರೆವನ್ನೇ ರುಚಿಸಿದ ಭೋಗ್ಯದಾರ ಅಂಗುಲಿಮಾಲನಾದ!

61

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ, ವೈಶಿಕವಿಲ್ಲದಂತೆ
ನಡೆಸಯ್ಯಾ , ಲಿಂಗ ತಂದೆ.
ಒಂದು ನಿಮಿಷವಾದಡೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ ;
ಬೇರೆ ಮತ್ತೆ ಅನ್ಯವ ತೋರದಿರಯ್ಯಾ ;
ಹೊಲಬುಗೆಟ್ಟೆನಯ್ಯಾ , ಕೂಡಲಸಂಗಮದೇವಾ!

ವೈಶಿಕ ಎಂದರೆ ಕಾಮ; ಮನಕ್ಕೆ ಇದು ದಕ್ಕದಿದ್ದರೆ ಕ್ರೋಧ; ವೈಶಿಕ ಸುಖಕ್ಕಾಗಿಯೇ ಲೋಭ ಮೋಹ ಮದ ಮತ್ಸರಗಳುಳ್ಳ ಸುಳ್ಳಿನ ಪ್ರಪಂಚ! ಇದು ಮನಕ್ಕೆ ಬಲು ಸುಖವೆನಿಸುತ್ತದೆ. ಅಧಿಕಾರ ಬಳಸಿ ಸುಖಿಸಿದರೆ ರಾಜಸ ತನು. ದೌರ್ಜನ್ಯವೆಸಗಿದರೆ ತಾಮಸ ತನು . ತೋರಗೊಡದೆ ಮನದ ಹಾದರದಿಂದ ಸುಖಿಸಿದರೆ ಸಾತ್ವಿಕ ತನು ; ಹೀಗೆ ಮನ ತನುವಿಗೆ ಹಾದರದ ಪಟ್ಟ ಕಟ್ಟುತ್ತದೆ.

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ , ವೈಶಿಕವಿಲ್ಲದಂತೆ ಒಂದು ನಿಮಿಷವೂ ಮನಕ್ಕೆ ಸುಮ್ಮನಿರಲು ಸಾಧ್ಯ ಆಗುವುದಿಲ್ಲ. ತನುವಿನಲ್ಲಿ ವಿಷಯವೆಂಬ ಸುಳ್ಳಿನ ಹಾದರ ನಡೆದೇ ಇರುತ್ತದೆ. ಮನ ಬಯಸಿದತ್ತ ದೇಹ ವಿಷಯ ಸುಖಕ್ಕೆ ವಾಲುತ್ತದೆ. ಇದು ಮನದ ಹಾದರದ ದುರ್ಗುಣ. ಪ್ರಾರ್ಥಿಸಿದರೆ ಅಳಿಯುವುದಿಲ್ಲ.

ದೇಹವನ್ನು ವೈಶಿಕ ಸುಖಕ್ಕೆ ಕರೆದುಕೊಂಡು ಹೋಗುವ ಮನಕ್ಕೆ ಜ್ಞಾನಿಗಳ ಸತ್ಸಂಗದ ಬಯಕೆಯಾಗಬೇಕು. ಮತ್ತೆ ಮತ್ತೆ ಅವರೊಂದಿಗೆ ಬೆರೆಯುವ ಬಯಕೆಯಾಗಬೇಕು. ಹೊಲಬುಗೆಟ್ಟ ಮನಕ್ಕೆ ಅನ್ಯವ ನೋಡಬಾರದೆಂಬ ಧೃಢ ನಿರ್ಧಾರ ವಾಗಬೇಕು . ಆಗ ಶರಣರು ವೈಶಿಕ ಸುಖವಿಲ್ಲದ ಸಟೆಯಿಲ್ಲದ ಅರಿವಿನ ಮತ್ತೊಂದು ಪ್ರಪಂಚವನ್ನೇ ಪರಿಚಯಿಸುತ್ತಾರೆ.

ದೇಹ ಅರಿವಿನ ದೇವರಿದ್ದ ದೇವಾಲಯ! ಕೂಡಲಸಂಗಯ್ಯನ ಸ್ವಕ್ಷೇತ್ರ . ಅಲ್ಲಿ ಸಟೆಯಿಲ್ಲದ ವೈಶಿಕವಿಲ್ಲದ ಅರಿವಿನ ಲಿಂಗ ತಂದೆ ವಾಸಿಸಿದ್ದಾನೆ. ಜ್ಞಾನಿಗಳು ತಮ್ಮ ಸಂಗದಲ್ಲಿ ನಿರತವಾದ

ಮನದ ಕೈ ಹಿಡಿದು ಅರಿವಿನ ಲಿಂಗ ತಂದೆಗೆ ಒಪ್ಪಿಸುತ್ತಾರೆ. ಸಟೆಯಿಂದ, ವೈಶಿಕದಿಂದ ಹೊಲಬುಗೆಟ್ಟ ಮನ ಅರಿವಿನ ಅಮೃತ ಉಂಡು ಅಲ್ಲಿಯೇ ವಿರಮಿಸುತ್ತದೆ.

62

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ ;
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ .
ಕೂಡಲಸಂಗಮದೇವಾ,
ನಿಮ್ಮ ಮನೆಯ ಮಗನೆಂದೆನಿಸಯ್ಯಾ .

ದೇಹ ಎನ್ನುವುದು ಅರಿವಿನ ಮನೆ. ಮನ ಅರಿವಿನ ಮನೆಯ ಮಗನಾಗಬೇಕಿತ್ತು. ಅರಿವಿನಿಂದ ನೋಡಿದರೆ ನೋಡುವ ದೇಹಗಳೆಲ್ಲ ಒಂದೇ. ದೇಹದ ಚರ್ಮ ಒಂದೇ , ಅದರೊಳಗಿದ್ದ ರಕ್ತ ಮೂಳೆ, ಮಾಂಸ, ಮಜ್ಜೆ, ಮೇದಸ್ಸುಗಳು ಕೂಡಾ ಒಂದೇ. ಅರಿವಿನ ಕಣ್ಣಿನಲ್ಲಿ ಮನವೆಂಬ ಅಜ್ಞಾನ ಬೆರೆತು ಹೆಣ್ಣು ಗಂಡು ಎಂದು ಆರೋಪಿಸಿಕೊಂಡಿದೆ. ಜಾತಿ, ಮತ, ಪಂಥ, ಪಂಗಡಗಳೆಂದು ಆರೋಪಿಸಿಕೊಂಡಿದೆ. ಶ್ರೀಮಂತ ಬಡವ ಭಿಕ್ಷುಕ ಅಧಿಕಾರಿ, ಜವಾನ ಎಂದು ವಿಂಗಡಿಸಿಕೊಂಡಿದೆ. ಹಿಂದು , ಬೌದ್ಧ, ಜೈನ, ಕೈಸ್ತ, ಫಾರ್ಸಿ ಎಂದು ದೇಹ ಅಜ್ಞಾನದಿಂದ ತನ್ನನ್ನೇ ಸೀಳಿಕೊಂಡಿದೆ.

ಅರಿವಿನ ಮನೆಯ ಮಗ ಅರಿವಿನ ತಂದೆಯನ್ನು ಗುರುತಿಸದೆ ಪಾಪದ ಕೂಪಕ್ಕೆ ತನ್ನನ್ನೇ ತಳ್ಳಿಕೊಂಡ ಮನದ ದುರ್ವರ್ತನೆ ಇದು. ಇವ ನಮ್ಮವ ಇವ ನಮ್ಮವನೆಂದು ಅರಿವಿನ ತಂದೆಯ ತನುವನ್ನು ಮನ ತಬ್ಬಿಕೊಂಡರೆ ಮನೆಯ ಮಗನೆಂದು ಮತ್ತೆ ಅಪ್ಪಿಕೊಳ್ಳುತ್ತಾನೆ.

63

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟಡೆ
ನಿಮ್ಮ ನಗುವರಯ್ಯಾ .
ಶಿವಬಟ್ಟೆಯಲ್ಲೆನ್ನನಿರಿಸಯ್ಯಾ ಹರನೆ;
ಹೊಲಬುಗೆಟ್ಟೆನು ಬಟ್ಟೆಯ ತೋರಯ್ಯಾ !
ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ ;
ಕೂಡಲಸಂಗಮದೇವಯ್ಯ ನೆನ್ನ ಕಾಡಿಹನಯ್ಯಾ!
ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟಡೆ ನಿಮ್ಮ ನಗುವರಯ್ಯಾ :

ಏರಿ ನೀರನುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ಮನೆಯಲ್ಲಿ ಕಳುವೊಡೆ, ತಾಯಿ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರಲಿ? ಹುಟ್ಟಿಸಿ ಸಂಕಷ್ಟಕ್ಕೆ ತಳ್ಳಿದ ನಿಮ್ಮ ನೋಡಿ ನಗುವರಯ್ಯಾ !

ಬಸವಣ್ಣನವರ ಬೆಡಗಿನ ಈ ಮಾತುಗಳು ಶಿಕ್ಷಕರಿಗೆ ಅರ್ಥವಾದರೆ ಸಕಲ ವಿದ್ಯಾರ್ಥಿಗಳೆಲ್ಲ ಬಸವಣ್ಣನಂತೆ ಮಹಾಜ್ಞಾನಿಗಳೇ ಆಗುವರು. ಗುರುಗಳಿಗೆ ಅರ್ಥವಾದರೆ ಸಕಲ ಶಿಷ್ಯ ವರ್ಗವೆಲ್ಲ

ಗುರುವರ್ಗವೇ ಆಗುವುದು.

ಅರಿವೆಂಬ ಗುರುದೇವನೇ ಮಹಾದೇವನು. ಆ ಮಹಾದೇವನೇ ಸದಾಶಿವನು. ಈ ಶಿವನೇ ತನ್ನ ಅರಿವಿನ ಲೀಲೆಯನ್ನು ವಿನೋದದಿಂದ ತೋರಲು ದೇಹವನ್ನು ಹುಟ್ಟಿಸಿದ. ಆ ದೇಹದಲ್ಲಿ ತಾನೇ ಹುದುಗಿ ನನ್ನನ್ನು ಅಜ್ಞಾನದಲ್ಲಿ ಇಳಿಯಬಿಟ್ಟ. ಈ ದೇಹವನ್ನು ಗುರುತಿಸಿ ಒಬ್ಬರು ನನ್ನನ್ನು ಪಂಡಿತನೆಂದರು. ಮತ್ತೊಬ್ಬರು ಪಾಮರನೆಂದರು. ಕಳ್ಳ ಸುಳ್ಳ ಹಾದರಿಗ, ಭ್ರಷ್ಟ, ಲಂಚಕೋರನೆಂದರು, ಮಂತ್ರಿ ಶಾಸಕ, ಸಚಿವನೆಂದರು, ಅಧಿಕಾರಿ ಜವಾನನೆಂದರು.

ದೇಹದಿಂದಲೇ ರಾಜನಾದ, ದೇಹದಿಂದಲೇ ಆ ರಾಜನಿಗೆ (ಸೈನಿಕ) ಕಾಲಾಳಾದ, ಅರಿವಿನ ದೇಹವೆಂದು ಹೆಸರಿಸಿ, ದೇಹದಲ್ಲಿ ನೀನಿದ್ದು, ಹುಟ್ಟೆಂದು ಈ ಲೋಕದಲ್ಲಿ ಹುಟ್ಟಿಸಿ ಏನೂ ತಿಳಿಯದೆ ಅಜ್ಞಾನದಲ್ಲಿ ನನ್ನನ್ನು ಇಳಿಯ ಬಿಟ್ಟಡೆ ಹುಟ್ಟಿಸಿದ ನಿನ್ನನ್ನು ನೋಡಿ ಜನ ನಗಲಾರರೆ!

ಶಿವ ಬಟ್ಟೆಯಲ್ಲೆನ್ನ ನಿರಿಸಯ್ಯಾ ಹರನೆ:

ಈ ದೇಹ ನೀನು ಸೃಷ್ಟಿ ಮಾಡಿದ ಅರಿವಿನ ಬಟ್ಟೆ. ಎಂದೆಂದೂ ಹರಿಯದ ಹರನ ಜ್ಞಾನದ ಬಟ್ಟೆ! ಈ ದೇಹದಲ್ಲಿ ನೀನು ಎಂಬ ಜ್ಞಾನವೂ ಇದೆ. ನಾನು ಎಂಬ ಅಜ್ಞಾನವೂ ಇದೆ. ಮೂರ್ಖ ನಾನು ! ನಿನ್ನಿಂದ ಹೊರಬಂದ ಮುದ್ರಣದ ಪುಸ್ತಕ ಓದಿ ಕೆಟ್ಟೆ. ಓದಿ ಕೆಟ್ಟ ಕೂಚು ಬಟ್ಟ ಎನ್ನಿಸಿಕೊಂಡೆ. ನನ್ನಲ್ಲಿಯೇ ಇದ್ದ ನಿನ್ನ ಜ್ಞಾನವನ್ನು ತಿಳಿಯಲಿಲ್ಲ. ನಿನ್ನನ್ನು ತಿಳಿಯಲಿಲ್ಲ !

ಹೊಲಬುಗೆಟ್ಟೆನು ಹರನೇ ಶಿವಾಜ್ಞಾನದ ಬಟ್ಟೆಯ ತೋರಿ ಸಲುಹಯ್ಯಾ ತಂದೆಯೇ ಎಂದು ಬಸವಣ್ಣನವರು ತಮ್ಮ ಜ್ಞಾನವನ್ನು ತಾವೇ ಪಡೆಯುವ ಸೂತ್ರವನ್ನು ದೇಹಗಳಿಗೆ ಕರುಣಿಸಿದ್ದಾರೆ.

ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ ; ಕೂಡಲಸಂಗಮದೇವಯ್ಯ ನೆನ್ನ ಕಾಡಿಹನಯ್ಯಾ :

ಮಗ ದೊಡ್ಡವನಾದ ಮೇಲೆ ತಂದೆಯನ್ನು ಪಾಲು ಕೇಳಲೇ ಬೇಕು. ಕೊಡದಿದ್ದಾಗ ಪಂಚರಲ್ಲಿಗೆ ಹೋಗಿ ನ್ಯಾಯ ಕೇಳಲೇ ಬೇಕು. ಹುಟ್ಟಿಸಿದ ಮಗನಿಗೆ ತಂದೆ ಪಾಲು ಕೊಡದಿದ್ದರೆ ಹೇಗೆ? ಜನ ಒಪ್ಪುವುದಿಲ್ಲ. ಇದು ಊರ ಪಂಚರಿಂದ ಬಗೆಹರಿಯುವ ನ್ಯಾಯವಲ್ಲ! ಈ ನ್ಯಾಯವನ್ನು ಜ್ಞಾನಿಗಳು ಮಾತ್ರ ಬಗೆಹರಿಸಬಲ್ಲರು. ಕಲ್ಯಾಣದ ಜ್ಞಾನಿಗಳು ಛಲದಂಕಮಲ್ಲರೆಂದೇ ಅನ್ನಿಸಿಕೊಂಡ ಗಣಂಗಳಿಗೆ ದೂರು ಸಲ್ಲಿಸಿದ್ದಾರೆ.

ಎನ್ನ ತಂದೆ ಕೂಡಲಸಂಗಯ್ಯ ನನ್ನನ್ನು ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಅಜ್ಞಾನದಲ್ಲಿ ಇಳಿಬಿಟ್ಟಿದ್ದಾನೆ. ನನಗೆ ದಕ್ಕ ಬೇಕಾದ ಜ್ಞಾನದ ಪಾಲು ನನಗೆ ಕೊಡೆಂದು ಹೊಲಬುಗೆಟ್ಟು ಹುಯ್ಯಲಿಟ್ಟು ಬೇಡಿದರೂ ಕೊಡುತ್ತಿಲ್ಲ. ಕೊಡದಿದ್ದರೂ ಅಡ್ಡಿಯಿಲ್ಲ ನಿನ್ನ ಬೆರಳಿಂದಲಾದರೂ ತೋರು ಎಂದರೂ ತೋರುತ್ತಿಲ್ಲ. ಜ್ಞಾನದ ಬಟ್ಟೆಯಲ್ಲಿಟ್ಟು ಸಲುಹುತ್ತಿಲ್ಲ. ಇದು ನ್ಯಾಯವೇ! ಗಣಂಗಳಾದ ನೀವಾದರೂ ನನಗೆ ನ್ಯಾಯ ಕೊಡಿಸಿರಯ್ಯಾ! ನನ್ನನ್ನು ಹುಟ್ಟಿಸಿದ ತಂದೆ ನನ್ನನ್ನೇ ಕಾಡಿಹನಯ್ಯಾ !

64

ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ!
ಅಕಟಕಟಾ, ಶಿವ ನಿನಗಿನಿತು ಕೃಪೆಯಿಲ್ಲ!
ಏಕೆ ಹುಟ್ಟಿಸಿದೆ ಇಹ ಲೋಕ ದುಃಖಿಯ?

ಏಕೆ ಹುಟ್ಟಿಸಿದೆ , ಕೂಡಲಸಂಗಮದೇವಾ ಕೇಳಯ್ಯಾ :
ಎನಗಾಗಿ ಮತ್ತೊಂದು ತರುಮರನಿಲ್ಲವೆ?

ದೇಹದಲ್ಲಿದ್ದ ಅರಿವು ದೇಹಕ್ಕೆ ಬಳಕೆಯಾಗದ ನಿಮಿತ್ತ ದೇಹಕ್ಕೆ ದುಃಖ! ಶ್ರೀಮಂತನಿಗೆ ಹಣಗಳಿಸಬೇಕೆಂಬ ದುಃಖ, ಬಡವನಿಗೆ ಹಣ ಪಡೆಯಬೇಕೆಂಬ ದುಃಖ. ದೇಹಕ್ಕೆ ಬೇಕಾದ ಆಹಾರ ನಿದ್ರೆ ಭಯ ಮೈಥುನಗಳು ಒಂದೇ. ಇದಕ್ಕೆ ದೇಶ ಗಡಿ ಜಾತಿ ಮತ ಪಂಥ ಹೆಣ್ಣು ಗಂಡು ಎಂದು ಬೇರ್ಪಡಿಸುವಂತಿಲ್ಲ. ದೇಹದ ಅರಿವು ದೇಹಕ್ಕೆ ದಕ್ಕಿದ್ದರೆ ಆಹಾರ ಮೈಥುನಗಳಿಗಾಗಿ ದೇಹ ದೇಹದೊಂದಿಗೆ ಜಗಳ ಕಾಯುವುದಿಲ್ಲ. ನಿರ್ಭಯದಿಂದ ಸುಖಿಸಿ ನಿದ್ರಿಸುತ್ತದೆ.

ದೇಹದ ಅರಿವು ದೇಹ ಪಡೆಯುವುದಕ್ಕಾಗಿಯೇ ಹಿಂದೆ ಗುರು ಕುಲಗಳಿದ್ದವು. ಇಂದು ಶಾಲೆ ಕಾಲೇಜು , ವಿಶ್ವವಿದ್ಯಾಲಯಗಳಿವೆ. ಆದರೂ ದೇಹಕ್ಕೆ ಶಾಂತಿ ಸಮಾಧಾನಗಳಿಲ್ಲ. ಕಲಿತ ದೇಹಗಳೇ ದುಃಖಕ್ಕೊಳಗಾಗಿವೆ; ದುಃಖ ಕೊಡುವುದರಲ್ಲಿಯೂ ನಿರತವಾಗಿವೆ. ಆಸೆಯೇ ದುಃಖಕ್ಕೆ ಕಾರಣವೆನ್ನುವ ಶಬ್ದ ತಿಳಿದರೂ ದುಃಖ ನಿಲ್ಲುವುದಿಲ್ಲ. ಸುಖದ ಬೆನ್ನು ಹತ್ತಿ ಹೋಗುವ ಮನಕ್ಕೆ ಅರಿವಿನ ಮಾರ್ಗ ತಿಳಿಯಬೇಕು. ಮನ ಆ ಅರಿವನ್ನೇ ಬೇಡಬೇಕು . ಆ ಅರಿವೇ ಕರುಣೆ ತೋರಬೇಕು. ಬಯಸಿದ ಸುಖವನ್ನು ಮನವೇ ಉದಾಸೀನ ಮಾಡಿ ದೇಹದ ಅರಿವಿನಲ್ಲಿ ನೆಲೆನಿಲ್ಲಬೇಕು. ಎನ್ನುವ ಆಲಾಪದ ಸೂತ್ರ ಬಸವಣ್ಣನವರು ಈ ವಚನದಲ್ಲಿ ಕರುಣಿಸಿದ್ದಾರೆ.

ಅಕಟಕಟಾ , ಅರಿವೆಂಬ ಶಿವನೇ ನಿನಗಿನಿತು ಕರುಣವಿಲ್ಲವೆ? ಅಕಟಕಟಾ, ಅರಿವೆಂಬ ಗುರುದೇವನೇ ನೀನಾದ ಮಹಾದೇವನು ನೀನು ; ಸದಾಶಿವನು ನೀನು; ನಿನಗಿನಿತು ಕೃಪೆಯಿಲ್ಲವೆ? ಏಕೆ ಹುಟ್ಟಿಸಿದೆ ಈ ಇಹಲೋಕದ ದುಃಖಿಯನ್ನು? ಹಣವಿದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ. ಹೆಂಡತಿಯಿದ್ದರೂ ಚಿಂತೆ ಇಲ್ಲದಿದ್ದರೂ ಚಿಂತೆ. ಮಕ್ಕಳಿದ್ದರೂ ಚಿಂತೆ ಇಲ್ಲದಿದ್ದರು ಚಿಂತೆ. ಅಧಿಕಾರವಿದ್ದರೂ ಚಿಂತೆ ಇಲ್ಲದಿದ್ದರೂ ಚಿಂತೆ! ಏಕೆ ಹುಟ್ಟಿಸಿದೆ ಈ ಇಹಲೋಕದಲ್ಲಿ ದೇಹವನ್ನು.

ಸದಾ ಶಿವಮಯವಾದ ಅರಿವು ಈ ದೇಹದಲ್ಲಿದ್ದೂ ಮನ ದೇಹದೊಂದಿಗೆ ದುಃಖಿಸುವಂತೆ ಮಾಡಿದೆ. ದೇಹದ ಅರಿವಿನ ಸೂತ್ರ ಮನಕ್ಕೆ ದಕ್ಕದಂತೆ ದೇಹವನ್ನು ಸದಾ ದುಃಖದಲ್ಲಿಟ್ಟೆ? ಏಕೆ ಹುಟ್ಟಿಸಿದೆ ಅಕಟಕಟಾ ನಿನಗಿನಿತು ಕರುಣವಿಲ್ಲವೆ?

ಅರಿವೇ ನೀನಾದ ಸದ್ಗುರುವೇ ನೀನಂತೂ ಕರುಣಿಸಲಿಲ್ಲ; ಕೃಪೆ ತೋರಲಿಲ್ಲ. ಎನಗಾಗಿ ಮತ್ತೊಂದು ತರುಮರ ಇಲ್ಲವೆ? ಏಕೆ ಕಾಡಿಸುತ್ತಿರುವೆ ಈ ಬಡದೇಹವನ್ನು? ದೇಹದೊಳಗೆ ನೀನಿದ್ದೂ ದೇಹವನ್ನು ಕಾಡಿಸುವುದೇ! ಕೃಪೆ ತೋರು ಕೂಡಲಸಂಗಮದೇವಾ!

65

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ !
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ !
ಇರುಳು ಹಗಲೆನ್ನದೆ ಪ್ರಾಣ ಘಾತಕವ ಮಾಡಿದ
ಬೇಡನ ಕೈಲಾಸಕೊಯ್ದೆಯಯ್ಯಾ !
ಎನ್ನನೇತಕೊಲ್ಲೆ, ಕೂಡಲಸಂಗಮದೇವಾ?

ತನ್ನ ಅರಿವೇ ತನಗೆ ಗುರುವೆಂದು ಬಲವಾಗಿ ತಿಳಿದು ಆ ಅರಿವೆಂಬ ಗುರುದೇವನೊಂದಿಗೆ ಮನ ಶಿಷ್ಯನಾಗಿ ಸಂಭಾಷಣೆ ಮಾಡುವುದನ್ನು ಬಸವಣ್ಣನವರು ಓದುವ ಮನಗಳಿಗೆ ವಿವರಿಸಿದ್ದಾರೆ. ಮನ ಅರಿವಿನಲ್ಲಿ ಬೆರೆತು ಘನಮನವಾಗಬೇಕೆಂಬ ಬಯಕೆ ಹೊಂದಿದ್ದಾರೆ.

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ :

ಕಿರಾತನ ವೇಷಧರಿಸಿ ಬಂದ ಶಿವನ ಮೇಲೆ ಹರಿತವಾದ ಬಾಣಬಿಟ್ಟ ಅರ್ಜುನನಿಗೆ ಒಲಿದು ಪಾಶುಪತ ಅಸ್ತ್ರನೀಡಿದೆ; ನನಗೇಕೆ ಒಲಿಯುತ್ತಿಲ್ಲ ಎಂದು ಮನ ಶಿಷ್ಯನಾಗಿ ತನುವಿನಲ್ಲಿಯೇ ಸಂಗಮವಾದ ಶಿವನನ್ನು ಪ್ರಶ್ನಿಸುತ್ತಿದ್ದಾನೆ. ಮನ ಕಿರಾತನು ಹೌದು ಅರ್ಜುನನೂ ಹೌದು. ಶ್ರೀ ಕ್ರಿಷ್ಣ ಅರ್ಜುನನಿಗೆ , ಕಿರಾತನನ್ನು ಜಯಿಸಿ ಪಾಶುಪತ ಅಸ್ತ್ರವನ್ನು ಹೇಗೆ ಪಡೆಯಬೇಕೆಂದು ಭೋಧಿಸಿದ್ದ. ಅರ್ಜುನ ಪಡೆದಿದ್ದ. ನಾನು ಎನ್ನುವ ಮನವೇ ಪಶು; ಅವನು ಎನ್ನುವ ಅರಿವೆಂಬ ಶಿವನೇ ಪಶುಪತಿ. ಅರಿವು ಎಂಬ ಪಾಶುಪತ ಅಸ್ತ್ರಪಡೆಯಬೇಕಾದರೆ ನಾನು ಎನ್ನುವ ಪಶುವನ್ನು ಜಯಿಸಲೇ ಬೇಕು. ಕಿರಾತನೊಂದಿಗೆ ಯುದ್ಧ ಮಾಡಿಯೇ ಅಸ್ತ್ರಪಡೆಯಬೇಕು. ಅವನಿಗೊಲಿದೆ ನನಗೇಕೆ ಒಲಿಯಲಿಲ್ಲವೆಂದು ಮನ ಅರಿವನ್ನು ಕೇಳಿದರೆ ಸಾಲದು. ಪ್ರಯೋಗಕ್ಕೆ ಇಳಿದು ಅರಿವಿನ ಅಸ್ತ್ರ ಪಡೆಯಬೇಕೆಂದು ಬಸವಣ್ಣನವರು ಬೆಡಗಿನ ಮೂಲಕ ವಿವರಿಸಿದ್ದಾರೆ.

ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ :

ಪ್ರಖರವಾದ ಬಾಣಬಿಟ್ಟ ಅರ್ಜುನನಿಗೆ ಒಲಿದೆ. ಹೂಬಾಣ ಬಿಟ್ಟ ಕಾಮನನ್ನು ಸುಟ್ಟೆ. ಏನಿದು ನಿನ್ನ ಲೀಲೆ. ಎಲ್ಲಾ ತಿರುವು ಮುರುವಾಗಿದೆಯಲ್ಲಾ! ಇದು ನಿನಗೆ ನ್ಯಾಯವೆ?

ಹೂ ಬಾಣವಲ್ಲ; ಇಡೀ ತನುವನ್ನೇ ತಲ್ಲಣಗೊಳಿಸುವ ಕಾಮದ ಬಾಣ! ಕಣ್ಣು , ಚರ್ಮದೊಂದಿಗೆ ಇಡೀ ದೇಹವನ್ನೇ ರಕ್ಕಸನನ್ನಾಗಿ ಮಾಡುತ್ತದೆ. ನೋಟದಲ್ಲಿ ರೂಪು ಬೆರೆತು ಅರಿವಾಗಬೇಕಾಗಿತ್ತು ; ಪ್ರತಿ ರೂಪ ನಿರೂಪದಿಂದಲೇ ಕೂಡಿದೆ. ನಿರೂಪ ಇಲ್ಲದ ರೂಪ ಶವ. ಶಿವನನ್ನು ನೋಡದ ಕಣ್ಣು ಶವದ ಕಣ್ಣು; ಕಾಮದ ಕಣ್ಣು. ಶಿವಮಯವಾದ ತನುವಿನ ಅರಿವಿನ ಕಣ್ಣಲ್ಲಿ ಕಾಮದ ಕಣ್ಣು ಹುಟ್ಟಿ ರೂಪ ನೋಡಿ ಚರ್ಮಕ್ಕೆ ಭೋಗದ ಸಂದೇಶ ಕಳಿಸುವ ಮನವೆಂಬ ಕಾಮನನ್ನು ಸುಡಲೇ ಬೇಕು; ಸುಟ್ಟು ಅರಿವಿನ ಭಸ್ಮಧರಿಸಿ ಮುಕ್ಕಣ್ಣನಾಗಲೇ ಬೇಕು.

ಇರುಳು ಹಗಲೆನ್ನದೆ ಪ್ರಾಣ ಘಾತಕವ ಮಾಡಿದ ಬೇಡನ ಕೈಲಾಸಕೊಯ್ದೆಯಯ್ಯಾ ; ಎನ್ನನೇತಕೊಲ್ಲೆ ಕೂಡಲಸಂಗಮದೇವಾ:

ದೇಹಕ್ಕೆ ಅರಿವು ಉಂಟು ಮಾಡಬೇಕಾದ ಕಣ್ಣು ಹಗಲಿರುಳೆನ್ನದೇ ದೇಹವನ್ನೇ ಸಂಕಟಕ್ಕೊಡ್ಡುತ್ತದೆ. ನೋಡಿದ್ದೆಲ್ಲ ಬೇಡುತ್ತದೆ. ಮನ ಕಣ್ಣಿನಲ್ಲಿ ಬೆರೆತು ತನ್ನ ಅಜ್ಞಾನದಿಂದ ನೋಡಿ ಇಡೀ ತನುವಿಗೆ ಬೇಡನ ಪಟ್ಟ ಕಟ್ಟಿದೆ. ಇದನ್ನು ಅರಿತ ಅರಿವಿನ ಕಣ್ಣಪ್ಪ ಬೇಡದ ಕಣ್ಣನ್ನು ಕಿತ್ತು ಅರಿವಿನ ಶಿವನಿಗೆ ಅರ್ಪಿಸಿದ. ಅಜ್ಞಾನದ ಕಣ್ಣು ಕಳೆದುಕೊಂಡ ಕಣ್ಣಪ್ಪ ಜ್ಞಾನದ ನಿಜ ಕಣ್ಣಪ್ಪನಾದ.

ಅರಿಯಲು ಹೋದರೆ ತನ್ನರಿವು ತನಗೇ ಒಲಿತು ಅವಿವೇಕ ತಾನೇ ಸರಿಯುತ್ತದೆ. ಎಂದು ಬಸವಣ್ಣನವರು ಅರ್ಜುನ, ಮನ್ಮಥ, ಕಣ್ಣಪ್ಪನ ಕತೆ ಮೂಲಕ ಅರಿವಿಗೆ ಹೋಗುವ ಸೂತ್ರವನ್ನು ಹೇಳಿದ್ದಾರೆ.

66

ನೀನೊಲಿದಡೆ ಕೊರಡು ಕೊನರುವುದಯ್ಯಾ.

ನೀನೊಲಿದಡೆ ಬರಡು ಹಯನಹುದಯ್ಯಾ.
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ.
ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ.

ಬೇರಿದ್ದ ಮರ ಚಿಗುರು ಎಲೆ ಹೂ ಕಾಯಿ ಹಣ್ಣು ಬಿಟ್ಟು ನಳನಳಿಸುತ್ತದೆ. ಪಶು, ಪಕ್ಷಿ, ಪ್ರಾಣಿ, ಕೀಟಗಳಿಗೆ ಆಶ್ರಯವಿತ್ತು ಧನ್ಯತೆ ಮೆರೆಯುತ್ತದೆ. ನೋವು ಮಾಡಿದರೂ ಮರ ಪ್ರತಿಭಟಿಸುವುದಿಲ್ಲ. ಯಾರ ಆಶ್ರಯವಿಲ್ಲದೆ, ಪತ್ರರಂಧ್ರಗಳ ಮೂಲಕ ಜಲ ಹೀರಿ ಬೇರಿನ ಮೂಲಕ ಮಣ್ಣನ್ನು ಜಿಗಿಗೊಳಿಸಿ ಗಟ್ಟಿಯಾಗಿ ನಿಲ್ಲುತ್ತದೆ. ಕೆಚ್ಚು ಕಡಿಮೆಯಾದಾಗ ಆಶ್ರಯ ಕೊಟ್ಟ ಕ್ರಿಮಿಗಳಿಗೆ ಆಹಾರವಾಗಿ ಕೊರಡಾಗಿ ನಿಲ್ಲುತ್ತದೆ. ಮನೆಗೆ ತೊಲೆಯಾಗಿ, ಬಾಗಿಲು ಕಿಟಕಿ, ಫರ್ನಿಚರ್‌ಗಳಿಗೂ ಸಹಕಾರಿಯಾಗುತ್ತದೆ. ಇದು ಬೇರಿದ್ದ ಮರದ ಕತೆ !

ದೇಹವು ಬೇರಿಲ್ಲದ ಮರ ! ಮರ ಚಲಿಸದೆ ಫಲಕೊಟ್ಟರೆ, ದೇಹ ಚಲಿಸುತ್ತಾ, ಮರದಂತೆ ಸದಾ ಹಸಿರಾಗಿ, ತಿಳಿದು ನುಡಿದು ಬೆಳಗುವ ಮೂಲಕ ಫಲಕೊಡುತ್ತದೆ. ತಿಳಿಯದಿದ್ದರೆ ತನುವಿನ ನುಡಿ ತನುವಿಗೇ ಸಂಕಟ ನೀಡಿ, ತನುಗಳಿಗೆ ಮುಳುವಾಗುತ್ತದೆ.

ಕೈಕೇಯಿಯ ನುಡಿಗಳಿಂದ ರಾಮ ಹದಿನಾಲ್ಕು ವರ್ಷ ವನವಾಸಕ್ಕೆ ಹೋದ. ಮಡಿವಾಳನ ನುಡಿ ಕೇಳಿ ಶ್ರೀರಾಮ ಸೀತಾಮಾತೆಯನ್ನು ಕಾಡಿಗೆ ಕಳುಹಿಸಿದ. ಅರಿವಿನ ನುಡಿ ನುಡಿಯದ ತನುವನ್ನು ಕೊರಡೆನ್ನಲೂ ಬರುವುದಿಲ್ಲ, ಬರಡೆನ್ನಲೂ ಬರುವುದಿಲ್ಲ. ನುಡಿಯ ಮೂಲಕ ವಿಷ ಚೆಲ್ಲುವ ಜಂತು !

ಬೇರಿದ್ದ ಮರ ಸಹಜ ಅರಿವಿನ ಕ್ರಿಯೆಯಿಂದ ಫಲ ಕೊಟ್ಟು ಬೆಳಗುತ್ತದೆ. ಹಾಗೆಯೇ ದೇಹದ ಸಹಜ ಅರಿವು ದೇಹಕ್ಕೆ ಒಲಿತರೆ ದೇಹ ಅರಿವಿನಿಂದ ಕೊನರಿ ಚಿಗುರುವುದು; ಬರಡುತನು ಹಯನಾಗುವುದು. ವಿಷ ಚೆಲ್ಲುವ ದೇಹ ಅಮೃತದ ನುಡಿಗಳನ್ನು ನಡೆದಾಡುತ್ತ ನುಡಿದು ಬೋಧೀವೃಕ್ಷವಾಗುವುದು. ಮನಕ್ಕೆ ತನುವಿನ ಅರಿವು ಒಲಿತರೆ ಸಕಲ ಪಡಿ-ಪದಾರ್ಥಗಳು ತನುವಿನ ಗರ್ಭದಲ್ಲಿಯೇ ದೊರೆಯುವವು.

67

ಮೇರುಗುಣವನರಸುವುದೆ ಕಾಗೆಯಲ್ಲಿ?
ಪರುಷಗುಣವನರಸುವುದೆ ಕಬ್ಬುನದಲ್ಲಿ?
ಸಾದು ಗುಣವನರಸುವುದೆ ಅವಗುಣಿಯಲ್ಲಿ?
ಚಂದನ ಗುಣವನರಸುವುದೆ ತರುಗಳಲ್ಲಿ?
ಸರ್ವಗುಣಸಂಪನ್ನಲಿಂಗವೆ, ನೀನೆನ್ನಲ್ಲಿ
ಅವಗುಣವನರಸುವುದೆ ಕೂಡಲಸಂಗಮದೇವಾ?

ಓದಿ, ಕಲಿತು, ಕೇಳಿ, ಅಳವಡಿಸಿಕೊಂಡು ಜ್ಞಾನಿಯಾಗಬೇಕೆನ್ನುವ ಸಂಕಲ್ಪ; ಕತ್ತಲಲ್ಲಿ ಬೆಳಕು ಹುಡುಕಿದಂತೆ. ಕತ್ತಲಿಗೆ ಬೆಳಕಾಗು ಎಂದು ಹೇಳಿದಂತೆ! ಮನ ಎನ್ನುವುದು ಕಾಗೆ; ಅದರಲ್ಲಿ ಮಧುರ ಧ್ವನಿ ಕೇಳಲಾಗುವುದಿಲ್ಲ. ಮನ ಎನ್ನುವುದು ಕಬ್ಬಿಣ; ಅದಕ್ಕೆ ಎಷ್ಟು ಬಣ್ಣ ಬಳಿದರೂ ಒಮ್ಮೆ ಬಣ್ಣದೊಂದಿಗೆ ತುಕ್ಕು ಹಿಡಿದು ಇಲ್ಲವಾಗುತ್ತದೆ. ಅದರಲ್ಲಿ ಪರುಷ ಹುಡುಕಲು ಸಾಧ್ಯವಿಲ್ಲ.

ಮನ ಎನ್ನುವುದು ಅವಗುಣಿ; ಅದರಲ್ಲಿ ನಿರ್ಗುಣದ ಸಮಾಧಾನವನ್ನು ಹುಡುಕಲು ಸಾಧ್ಯವಾಗುವುದಿಲ್ಲ. ಹಾಗೆಯೇ ತರುಮರಗಳಲ್ಲಿ ಚಂದನದ ಸುವಾಸನೆಯ ಗುಣವನು ಹುಡುಕಲು ಸಾಧ್ಯವಿಲ್ಲ.

ಇಡೀ ಜಗತ್ತು ಬಸವಣ್ಣನವರ ಈ ಸೂತ್ರಕ್ಕೆ ವಿರುದ್ಧವಾಗಿದೆ. ಜಗದ ಜನ ಮನದ ಬೆನ್ನು ಹತ್ತಿದ್ದಾರೆ. ಮನದಿಂದ ಶ್ರೀಮಂತನಾಗಬೇಕು, ಜ್ಞಾನಿಯಾಗಬೇಕು, ಪಂಡಿತನಾಗಬೇಕು, ಸಮಾಜಸೇವೆ ಮಾಡಬೇಕು, ಹೋರಾಟಗಾರನಾಗಬೇಕು, ವಿಜ್ಞಾನಿ, ಶಿಕ್ಷಕ, ಗುರುವಾಗಬೇಕು, ಸಚಿವ, ಶಾಸಕ, ಮಂತ್ರಿಯಾಗಿ ಸೇವೆ ಮಾಡಬೇಕು ಎನ್ನುವ ಛಲ ಹೊಂದಿದ್ದಾರೆ. ಅಭಿಯಂತ, ವೈದ್ಯನಾಗಿ ಸೇವೆ ಮಾಡಬೇಕು ಎನ್ನುವ ಧೃಡ ನಿರ್ಧಾರ ಹೊಂದಿದ್ದಾರೆ.

ಇದು ಮನದ ಗುಣ. ಈಗಿದ್ದ ಅನಿಸಿಕೆ ಮುಂದೆ ಉಳಿಯುವುದಿಲ್ಲ. ಈಗ ಸಿಕ್ಕ ಫಲ ಮುಂದೆ ಸಿಗುವುದಿಲ್ಲ. ಸೇವೆಯ ಸೋಗಿನಲ್ಲಿ ಮಾಡಿದ ಮನದ ಪಾತ್ರ; ಅಪಾತ್ರ! ಮನವೆಂಬ ನಾಯಿ ಪಲ್ಲಕ್ಕಿಯಲ್ಲಿ ಕ್ಷಣ ಹೊತ್ತು ಕುಳಿತು ಎಲುಬಿಗಾಗಿ ತಿಪ್ಪೆ ಹಾರಿದಂತೆ!

ಮನ ಭ್ರಮೆ; ಅರಿವು ಬ್ರಹ್ಮ! ಬ್ರಹನಿಗೆ ಯಾವ ಪಾತ್ರದ ಅವಶ್ಯಕತೆಯೇ ಇಲ್ಲ. ಒಂದೇ ಪಾತ್ರ; ಅದು ಅರಿವಿನ ಪಾತ್ರ! ಅರಿವಿನ ಪಾತ್ರದಲ್ಲಿದ್ದ ತನು ಯಾವ ಕಾಯಕ ಮಾಡಿದರೇನು ಅದು ನಿರ್ಗುಣಿ! ಅರಿವಿನ ದೇಹದಲ್ಲಿ ಮನವೆಂಬ ಮಂಗ ಬೆರೆತಾಗ ಅದು ಕೂಡಲಸಂಗಮದೇವನಾಗುತ್ತದೆ. ಮೇರುಗುಣದ ಕೋಗಿಲೆಯಾಗುತ್ತದೆ. ಪರುಷದಲ್ಲಿ ಸಂಗಮವಾಗಿ ಚಿನ್ನವಾಗುತ್ತದೆ. ಚಂದನದಲ್ಲಿ ಬೆರೆತು ಸದಾ ಪರಿಮಳ ಬೀರುವ ಶ್ರೀಗಂಧವಾಗುತ್ತದೆ. ಸರ್ವಗುಣ ಸಂಪನ್ನ ಅರಿವಿನ ಲಿಂಗಯ್ಯನಾಗುತ್ತದೆ. ಅರಿವಿನಲ್ಲಿ ಬೆರೆತು ಅರಿವೇ ಆದ ಘನ ಮನದಲ್ಲಿ ಅವಗುಣಗಳನ್ನು ಹುಡುಕಲು ಸಾಧ್ಯವಾಗುವುದಿಲ್ಲ.

68

ಭವಭವದಲ್ಲಿ ಎನ್ನ ಮನವು ನೀವಲ್ಲದೆ;
ಭವಭವದಲ್ಲೆನ್ನ ಮನವು ಸಿಲುಕದೆ
ಭವರಾಟಳದೊಳು ತುಂಬದೆ, ಕೆಡಹದೆ !
ಭವರೋಗವೈದ್ಯ ನೀನು, ಭವವಿರಹಿತ ನೀನು !
ಅವಧಾರು! ಕರುಣಿಸುವುದು ಕೂಡಲಸಂಗಮದೇವಾ.

ಮನದ ಅಜ್ಞಾನವೇ ಹೀಗೆ. ಸುಖಕ್ಕಾಗಿ ದೇಹವನ್ನು ಹಗಲಿರುಳೆನ್ನದೆ ಕಾಡುತ್ತದೆ. ಸುಖಕ್ಕಾಗಿ ದುಃಖಪಡುತ್ತದೆ. ದುಃಖ ನಿವಾರಣೆಗಾಗಿ ಸುಖ ಬಯಸುತ್ತದೆ. ಬಯಸಿ ಸುಖಿಸಿದ ಬೆನ್ನ ಹಿಂದೆಯೇ ದುಃಖ ಧುತ್ತೆಂದು ನಿಲ್ಲುತ್ತದೆ.

ಅರಿವಿನ ಪರಿಚಯವಿಲ್ಲದ ಮನ ಅರಿವಿನ ದೇಹವನ್ನು ಕ್ಷಣ ಕ್ಷಣಕ್ಕೂ ತಲ್ಲಣಗೊಳಿಸುತ್ತದೆ. ಹುಟ್ಟಿನೊಂದಿಗೆ ಬಂದು ದೇಹದ ಸಾವಿನವರೆಗೆ ಕಾಡುತ್ತದೆ. ಕಾಯದ ಕಾಯಿಲೆಗೆ ವೈದ್ಯ ಮದ್ದನರೆದು ಕಳೆಯಬಹುದು. ಆದರೆ ಇದು ಕಾಯದ ಕಾಯಿಲೆಯಲ್ಲ. ಮನ ಕಾಯಕ್ಕೆರಗಿ ಕಾಯವನ್ನು ಸಾವಿನವರೆಗೆ ಕಾಡುವ ಭವರೋಗದ ಕಾಯಿಲೆ!

ಗಿರಕಿ ಬಾವಿಯಲ್ಲಿ ಇಳಿಬಿಟ್ಟ ಬಕೀಟಿನಂತೆ ನೀರಿನಲ್ಲಿ ಮುಳುಗಿಸುವುದು ತೇಲಿಸುವುದು

ನಿರಂತರ ನಡೆದಿದೆ. ಹಗ್ಗ ಹರಿಯುವವರೆಗೆ ಬಕೀಟಿಗೂ ತಿಳಿಯುವುದಿಲ್ಲ, ಹಗ್ಗ ಜಗ್ಗಿ ಬಕೀಟನ್ನು ಹೊರಗೆ ಬಿಡುವುದಿಲ್ಲ. ಪ್ರಾಣ, ಕಾಯ, ಅರಿವು, ಮನದನಂಟು. ಕಾಯ ಇರುವವರೆಗೆ ಹೀಗೆ ನಡೆಯುತ್ತದೆ.

ಭವ ಭವದಿಂದ, ಆದಿ ಅನಾದಿಯಿಂದ ಬಂದ ಮನ ಅರಿವೆಂಬ ಗುರುವನ್ನು ಮರೆತುದೇ ದೇಹದ ದುಃಖಕ್ಕೆ ಕಾರಣವಾಗಿದೆ.

ಆದಿ ಅನಾದಿಯಿಂದಲೂ ಅರಿವೆಂಬ ಗುರುವಿಗೆ ಭವವಿಲ್ಲ ಬಂಧನವಿಲ್ಲ. ಆತ ಭವರೋಗದ ವೈದ್ಯ! ಮನ ಆ ವೈದ್ಯನ ಮೊರೆ ಹೊಕ್ಕರೆ ಭವವಿರಹಿತ. ಮನದ ಮೈದಡವಿ ತನ್ನಂತೆ ಮಾಡಿಕೊಳ್ಳವ ಅರಿವಿನ ದೇವತೆ; ಅವಧಾರು! ಅರಿವಿನ ಗುರುವನ್ನು ಬೇಡುವ ಮನಕ್ಕೆ ಒಲಿತು ಬೇಡಿದ್ದನ್ನು ಕೊಡುವ ಕೂಡಲಸಂಗಮ! ಕೃಪಾಸಾಗರನಾತ!

69

ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ ;
ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯಾ !
ಕರುಣಾಕರ, ಅಭಯಕರ, ವರದ ನೀ ಕರುಣಿಸಯ್ಯಾ ;
ಸಂಸಾರ ಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ
ನಿಮ್ಮ ಶ್ರೀಪಾದ ಪದ್ಮದಲ್ಲಿ ಭ್ರಮರನಾಗಿರಿಸು
ಭಕ್ತಜನ ಮನೋವಲ್ಲಭ ಕೂಡಲಸಂಗಮದೇವಾ.

ಆಸೆಯೆಂಬ ಉರುಳಿನ ಕುಣಿಕೆಯಲ್ಲಿ ಹುಟ್ಟಿದಂದಿನಿಂದ ಮನ ಬಂಧಿಯಾಗಿದೆ. ಸದಾ ಅರಳಿದ ಅರಿವಿನ ಹೂ ಅಲ್ಲಿಯೇ ಇದೆ. ಮನವೂ ಅಲ್ಲಿಯೇ ಇದೆ. ಮನಕ್ಕೆ ಅರಿವೆಂಬ ಕರುಣಾಕರನ ಪರಿಚಯವಿಲ್ಲ. ತನುವಿನ ಕಣಕಣದಲ್ಲಿ ಸಂದಿಲ್ಲದಂತೆ ನಿರ್ಭಯೀ ಅಭಯನು ವಾಸವಾಗಿದ್ದಾನೆ. ವರದ ನೀ ಕರುಣಿಸಯ್ಯಾ ಎಂದು ಬೇಡುವ ಆಸಕ್ತಿ ಮನಕ್ಕೆ ಹುಟ್ಟಿದರೆ ಸಾಕು; ಅದರ ಅಜ್ಞಾನ ಸಂಸಾರದ ಬಂಧನವನು ಕ್ಷಣಾರ್ಧದಲ್ಲಿ ಹರಿದು ಕೃಪೆ ಮಾಡುತ್ತಾನೆ. ಸಂಸಾರದಿಂದಾದ ದುಃಖವನ್ನು ಮಾಣಿಸುತ್ತಾನೆ.

ಅರಿವಿನ ಪಾದ ಪದ್ಮದ ಪರಿಮಳದಲ್ಲಿ ಮನವನ್ನು ಭ್ರಮರವಾಗಿರಿಸಿ ಅದರ ಭ್ರಮೆಯನ್ನು ಕಳೆಯುತ್ತಾನೆ. ಅರಿವಿನ ಶ್ರೀಪಾದ ನೆನೆಯುವ ಭಕ್ತ ಜನರಿಗೆ ಮನೋವಲ್ಲಭನಾಗಿ ದರ್ಶನ ನೀಡುತ್ತಾನೆ. ಆಸೆಯ ಪಾಶದ ಕುಣಿಕೆಯ ಹರಿದು ಭವ ಬಂಧನದಿಂದ ಮನವನ್ನು ಮುಕ್ತನಾಗಿಸುತ್ತಾನೆ. ತೆರೆಹಿಲ್ಲದಂತೆ ತನುವಿನಲ್ಲಿಯೇ ದರ್ಶನವಿತ್ತು ಅಭವನಾಗಿ ಮೆರೆಯುತ್ತಾನೆ.

ಗುರುಕರುಣ ಸ್ಥಲ

70

ಮಡಕೆಯ ಮಾಡುವಡೆ ಮಣ್ಣೆ ಮೊದಲು;

ತೊಡಿಗೆಯ ಮಾಡುವಡೆ ಹೊನ್ನೆ ಮೊದಲು;
ಶಿವ ಪಥವನರಿವಡೆ ಗುರುಪಥವೆ ಮೊದಲು
ಕೂಡಲಸಂಗಮದೇವರನರಿವಡೆ
ಶರಣರ ಸಂಗವೆ ಮೊದಲು.

ಜಗದ ಜನಕ್ಕೆ ಜಗದೀಶನನ್ನು ಕಾಣಬೇಕೆಂಬ ಬಯಕೆಯಿದೆ. ಅದಕ್ಕಾಗಿಯೇ ಎಲ್ಲೆಲ್ಲೂ ಶಿವನ ಮಂದಿರ; ಜಗದೀಶನ ಆರಾಧನೆ ನಡೆದಿದೆ. ಜಗದೀಶ, ಈಶ್ವರ, ಶಿವ, ನಾಗಭೂಷಣ, ಮಹಾದೇವ, ಸದಾಶಿವ ಹೀಗೆ ನೂರಾರು ಹೆಸರಿನಿಂದ ಆತನನ್ನು ಪೂಜಿಸುತ್ತಾರೆ. ಆತನಿಗಾಗಿ ಭವ್ಯವಾದ ಮಂದಿರಗಳನ್ನು ನಿರ್ಮಿಸಿ ಉತ್ಸವಗಳನ್ನು ಮಾಡುತ್ತಾರೆ. ಕುಳಿತರೆ ನಿಂತರೆ ಮಲಗಿದರೆ ಆತನದೇ ಧ್ಯಾನ. ಆತನನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕೆಂಬ ತವಕವೂ ಇದೆ.

ಶಿವನೆಂದರೆ ಯಾರು, ಆತನನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಬಗೆ ಹೇಗೆ? ಆತನಲ್ಲಿಗೆ ಹೋಗುವ ಮಾರ್ಗ ಯಾವುದೆಂದು ತಿಳಿದಿಲ್ಲ. ಸತ್ತಾಗ ಶಿವನ ಪಾದ ಸೇರಿದ ಎಂದು ಹೇಳುವುದು ವಾಡಿಕೆಯಾಗಿದೆ.

ಬಸವಣ್ಣನವರು ಶಿವಪಥದ ಮಾರ್ಗ ತಿಳಿಯುವ ಸೂತ್ರವನ್ನು ನಾಲ್ಕು ಸಾಲುಗಳಲ್ಲಿ ಹೇಳಿದ್ದಾರೆ. ಸಾವಿರಾರು ವರ್ಷಗಳಿಂದಲೂ ಸಾಧ್ಯವಾಗದ್ದನ್ನು ಸುಲಿದ ಬಾಳೆಯ ಹಣ್ಣಿನಂತೆ ಓದುಗರ ಬಾಯಿಗೆ ಹಾಕಿದ್ದಾರೆ. ಸಾಧ್ಯವಾದವರು ಸವಿದು ಗಮ್ಯ ಸೇರಬಹುದು.

ಮಡಕೆಯ ಮಾಡುವಡೆ ಮಣ್ಣೆ ಮೊದಲು:

ಮಡಕೆ, ಹರವಿ, ಮುಚ್ಚಳ, ಪ್ರಣತಿ, ಹೂಜಿ ಮಾಡಲು ಮಣ್ಣು ಬೇಕು. ಈಶ್ವರ, ಶಿವ, ಪಾರ್ವತಿ, ಗಣೇಶ, ಕ್ರಿಸ್ತ, ಕ್ರಿಷ್ಣನ ಮೂರ್ತಿಗಳನ್ನು ಮಾಡಲು ಕೂಡಾ ಮಣ್ಣೇ ಬೇಕು. ಮಣ್ಣು ಹದಗೊಳಿಸಿ ಮಡಕೆ ಮಾಡಿ ಸುಟ್ಟ ಮೇಲೆ ಮಣ್ಣು ಕಾಣುವುದಿಲ್ಲ; ಮಡಕೆ ಕಾಣುತ್ತದೆ. ಮಣ್ಣು ಮಡಕೆಯ ಗರ್ಭಸೇರಿ ಹರವಿ, ಮುಚ್ಚಳ, ಪ್ರಣತಿ, ಹೂಜಿಯ ಹೆಸರು ಪಡೆಯುತ್ತದೆ. ಒಡೆದರೆ ಬೋಕಿಯ ಹೆಸರು ಪಡೆಯುತ್ತದೆ.

ಈಶ್ವರ, ಶಿವ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಕ್ರಿಸ್ತ ಕ್ರಿಷ್ಣನ ಹೆಸರು ಪಡೆಯುತ್ತದೆ. ಮಣ್ಣು ಒಂದೆ, ಆದರೆ ಕಣ್ಣಿನ ಗರ್ಭದಲ್ಲಿ ಮಣ್ಣು ಉಳಿದು, ಕಣ್ಣಿನಲ್ಲಿ ಆವರಿಸಿದ ಮನ ಈಶ್ವರ, ಶಿವ,ಪಾರ್ವತಿ, ಲಕ್ಷ್ಮಿ, ಸರಸ್ವತಿ, ಕ್ರಿಸ್ತ, ಕ್ರಿಷ್ಣನೆಂದು ಆರಾಧಿಸುತ್ತದೆ. ಕಲ್ಲು ಮಣ್ಣನ್ನೇ ದೇವರನ್ನಾಗಿಸಿ, ಕಲ್ಲು ಮಣ್ಣಿನಿಂದಲೇ ಮಠ ಮಂದಿರ ಚರ್ಚ್ ಕಟ್ಟಿ,ರಥ ಉತ್ಸವಗಳನ್ನು ಮಾಡಿ ,ಆಚರಿಸಿ ಆರಾಧಿಸುತ್ತದೆ.

ಮಣ್ಣು ನೋಡಿದ ಕಣ್ಣು ಅರಿವಿನ ಕಣ್ಣು; ಇದು ಶಿವನ ಕಣ್ಣು. ಮಣ್ಣಿನಲ್ಲಿ ಕಣ್ಣು ಯಾವ ದೇವರನ್ನು ಹುಡುಕುವುದಿಲ್ಲ. ಇದು ಪಾರ್ವತಿ ಪರಮೇಶ್ವರ ಲಕ್ಷ್ಮಿ ಸರಸ್ವತಿ ಗಣೇಶ ಕ್ರಿಸ್ತ ಕ್ರಿಷ್ಣನೆಂದರೆ ನಂಬುವುದಿಲ್ಲ; ಆರಾಧಿಸುವುದಿಲ್ಲ, ಪೂಜಿಸುವುದಿಲ್ಲ! ಹಾಗೆಯೇ ಮೂರ್ತಿಗಳನ್ನು ತೋರಿಸಿ ಇದು ಮಣ್ಣೆಂದರೆ ನಂಬುವುದಿಲ್ಲ. ಪಾರ್ವತಿ ಪರಮೇಶ್ವರ ಕ್ರಿಸ್ತ ಕಿಷ್ಣನೆಂದು ಆರಾಧಿಸಲು ಅಣಿಯಾಗುತ್ತದೆ.

ಮಣ್ಣು ಒಂದೇ. ಬೊಂಬೆ ಒಂದೇ. ಕಾಣುವ ಕಣ್ಣು ಕೂಡಾ ಒಂದೇ. ಮಠ ಮಂದಿರ ಚರ್ಚ್‌ಗಳಿಗೆ ಬಳಸಿದ ಕಲ್ಲು ಮಣ್ಣು ಕೂಡಾ ಒಂದೇ. ಕಲ್ಲು ಮಣ್ಣು ನೋಡಿದ ಯಾವ ಕಣ್ಣೂ ಉರಿಯುವುದಿಲ್ಲ . ಕಲ್ಲು ಮಣ್ಣಿನಿಂದಾದ ಕ್ರಿಷ್ಣನನ್ನು ನೋಡಿದ ಕಣ್ಣು ಈಶ್ವರನನ್ನು ನೋಡಿ

ಉರಿಯುತ್ತದೆ. ಕ್ರಿಸ್ತನನ್ನು ನೋಡಿದ ಕಣ್ಣು ಕ್ರಿಷ್ಣ ಈಶ್ವರನನ್ನು ನೋಡಿ ಉರಿಯುತ್ತದೆ. ಪರಮೇಶ್ವರ, ಪಾರ್ವತಿ, ಲಕ್ಷ್ಮಿ,ಕ್ರಿಷ್ಣ, ಕ್ರಿಸ್ತ ಹಾಗೂ ಮಡಕೆಗೆ ಬಳಕೆಯಾದ ಮಣ್ಣೆಲ್ಲ ಒಂದೇ. ಆದರೂ ಕಣ್ಣು ಮೂರ್ತಿಗಳಿಗೆ ಬಳಕೆಯಾದ ಮಣ್ಣು ನೋಡಲಿಲ್ಲ. ಅರಿವು ಕಣ್ಣಿನ ಗರ್ಭದಲ್ಲಿಯೇ ಉಳಿದು ಮರೆವು ಮಾತ್ರ ಬಳಕೆ ಯಾಯಿತು.

ತೊಡಿಗೆಯ ಮಾಡುವಡೆ ಹೊನ್ನೆ ಮೊದಲು:

ಉಂಗುರ, ಚೈನ್, ನೆಕ್ಲೆಸ್, ಬೆಂಡೋಲೆ, ತಾಳಿಸರ, ಮೂಗುತಿ ಮುಂತಾದ ಆಭರಣಗಳನ್ನು ಮಾಡಲು ಚಿನ್ನ ಬೇಕೇ ಬೇಕು. ಚಿನ್ನ ಒಂದು ಹಳದಿ ಬಣ್ಣದ ಲೋಹ! ಇದು ಹಲವಾರು ಮಾಟಗಳಿಂದ ಕೂಡಿದ ಆಭರಣದ ಹೆಸರು ಪಡೆದು ಲೋಹ ಮರೆಯಾಗಿದೆ.

ಕಣ್ಣಿನಲ್ಲಿ ಆವರಿಸಿದ ಮನ, ಆಭರಣ ನೋಡಿ ಖರೀದಿಸುತ್ತದೆ ; ಇಲ್ಲ ಕಳುವು ಮಾಡಲು ದೇಹಕ್ಕೆ ಪ್ರೇರಣೆ ನೀಡುತ್ತದೆ. ಆಭರಣದಲ್ಲಿ ಹಳದಿ ಬಣ್ಣವಿಲ್ಲದಿದ್ದರೆ ಖರೀದಿಸುವುದಿಲ್ಲ, ಕಳುವು ಮಾಡುವುದಿಲ್ಲ. ಬಣ್ಣಕ್ಕೆ ಮರುಳಾದ ಕಣ್ಣು, ಕೊಂದಾದರೂ ಆಭರಣ ಪಡೆಯುತ್ತದೆ. ಮಣ್ಣಿನಿಂದಾದ ಬೊಂಬೆಗೂ ಲೋಹದಿಂದಾದ ಆಭರಣಕ್ಕೂ ಮರುಳಾದ ಮರೆವಿನ ಕಣ್ಣನ್ನು ಕಣ್ಣು ಎನ್ನಲು ಸಾಧ್ಯವೆ ! ಕಂಡರೂ ಅದು ಕುರುಡುಗಣ್ಣು.

ಅರಿವೇ ಗುರು; ಆ ಗುರುದೇವನೇ ಮಹಾದೇವ. ಆ ಮಹಾದೇವನೇ ಸದಾಶಿವ. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ. ಆ ಪರಬ್ರಹ್ಮನು ತಾನೇ ಆಗಿರುವಾಗ ಭ್ರಮೆಯಿಂದ ಶಿವನನ್ನು ಮಣ್ಣಿನಲ್ಲಿ, ಕಲ್ಲಿನಲ್ಲಿ, ಕಟ್ಟಿಗೆಯಲ್ಲಿ, ಪಂಚಲೋಹಗಳಲ್ಲಿ, ಚಿನ್ನದಲ್ಲಿ ಮಾಡಿದ ಬೊಂಬೆಯಲ್ಲಿ ಹುಡುಕಿದರೆ ಸಿಕ್ಕುವನೆ !

ಶಿವ ಪಥವನರಿವಡೆ ಗುರುಪಥವೆ ಮೊದಲು ಕೂಡಲಸಂಗಮದೇವರ ನರಿವಡೆ ಶರಣರ ಸಂಗವೆ ಮೊದಲು:

ದೇಹದಲ್ಲಿ ಶಿವನೂ ಇದ್ದಾನೆ; ಅರಿವೆಂಬ ಗುರುವೂ ಇದ್ದಾನೆ. ಸರಿ ದಾರಿ ಹಿಡಿದು ಶಿವನನ್ನೂ ಗುರುವನ್ನೂ ಸೇರುವ ಮನವೂ ಇದೆ. ಈ ಮನಕ್ಕೆ ಮಹಾಜ್ಞಾನಿಗಳಾದ ಶರಣರ ಸಂಗ ಮಾಡುವ ಬಯಕೆಯಾಗಬೇಕು. ಆಗ ಶರಣರು ಶಿವಪಥವನ್ನು ಗುರುಪಥವನ್ನು ತೋರಿ ಕೂಡಲಸಂಗಮದೇವನ ದರ್ಶನ ಮಾಡಿಸುತ್ತಾರೆ. ಕಾಯ ಅರಿವಿನ ಕಾಯವಾಗುತ್ತದೆ. ಮಣ್ಣಿನ ಮಡಕೆ-ಬೊಂಬೆಗಳೆಲ್ಲ ಮಣ್ಣಾಗಿ ಕಾಣುತ್ತವೆ. ಆಭರಣಗಳೆಲ್ಲ ಲೋಹವಾಗಿ ಕಾಣುತ್ತದೆ. ಮಣ್ಣು ನೋಡಿದ ಕಣ್ಣು ಜಗಳ ಕಾಯಲಿಲ್ಲ; ಲೋಹ ನೋಡಿದ ಕಣ್ಣು ಕಳ್ಳನಾಗಲಿಲ್ಲ ಖರೀದಿ ಮಾಡಲಿಲ್ಲ! ಕಾಯದಲ್ಲಿದ್ದ ಅರಿವು ಕಾಯದ ಮನಕ್ಕೆ ಒಲಿತು, ಶಿವಕಾಯವಾಗುತ್ತದೆ; ಗುರುಕಾಯವಾಗುತ್ತದೆ.

71

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!
ತನುವುದ್ದೇಶ, ಮನವುದ್ದೇಶವಾಗಿ,
ಮಾಡುವ ನೇಮ ಸಲ್ಲವು! ಸಲ್ಲವು!
ಗುರುಪಥವ ಮೀರಿ ಮಾಡುವ ನೇಮ ಸಲ್ಲವು! ಸಲ್ಲವು!
ಕೂಡಲಸಂಗಮದೇವಯ್ಯಾ ,

ಇವು ನಿಮ್ಮ ನಿಜದೊಳಗೆ ನಿಲ್ಲವು; ನಿಲ್ಲವು.

ಎಷ್ಟೊಂದು ತನುಗಳು ದೇವಸ್ಥಾನಗಳಿಗೆ, ಪುಣ್ಯಕ್ಷೇತ್ರಗಳಿಗೆ ಹೋಗುತ್ತವೆ. ವಾಮಾಚಾರಗಳನ್ನು ಮಾಡುತ್ತವೆ. ಮಡಿ ಮೈಲಿಗೆಯ ಆಚಾರದಲ್ಲಿ ನಿರತವಾಗಿವೆ. ಈ ತನುಗಳ ಉದ್ದೇಶ ಮನ ಉದ್ದೇಶದಿಂದ ಕೂಡಿದೆ. ಮನದ ಆದೇಶವನ್ನು ತನುಗಳು ಚಾಚೂ ತಪ್ಪದೆ ಪಾಲಿಸುತ್ತವೆ. ತನುವಿನಿಂದ ಮಾಡುವ ನೇಮ ತನುವಿನ ಅರಿವಿಗೆ ಸಲ್ಲವು! ಸಲ್ಲವು!

ಅರಿವೆಂಬ ಗುರುವನ್ನು ಮೀರಿ ಮನ ಮಾಡುವ ತನುವಿನ ನೇಮ ಸಲ್ಲವು! ಸಲ್ಲವು! ತನು ಮಾಡುವ ನೇಮಗಳೆಲ್ಲ ತನುವಿನ ಅರಿವಿನ ನಿಜದೊಳಗೆ ನಿಲ್ಲವು; ನಿಲ್ಲವು.

ಮೂರು ನಾಲ್ಕು ಕಿ.ಮೀ. ದೂರದಲ್ಲಿರುವ ಶಿಖರ ನೋಡಿದ ಮನ ದೇಹಕ್ಕೆ ನಮಸ್ಕರಿಸಲು ಹೇಳುತ್ತದೆ. ದೇವಾಲಯಕ್ಕೆ ಮಣಿಯುತ್ತದೆ. ಕೆತ್ತಿದ ಕಲ್ಲಿಗೂ, ಹೊಸ್ತಿಲಿಗೂ ಗರ್ಭಗುಡಿಯಲ್ಲಿದ್ದ ದೇವರಿಗೂ, ಬಾಗಿಲುಗಳಿಗೂ ನಮಿಸುತ್ತದೆ. ಮನದ ನಿಯಮ ತನುವಿನ ಮೇಲೆ ಹೇರುತ್ತದೆ. ಮನ ಬಾಗುವ ತನುಗಳನ್ನು ನೋಡಿ ನೋಡಿ ತನುವಿಗೆ ಬಾಗಲು ಆದೇಶ ನೀಡುತ್ತದೆ. ಮನ ಉದ್ದೇಶವೇ ತನುವಿನ ಕ್ರಿಯೆಯಾಗಿದೆ.

ತನುವಿನ ಅರಿವು ತನುವಿಗೆ ಗುರುವಾಗಿ ಪಾಠಮಾಡುತ್ತಾನೆ. ದೇವಾಲಯವೂ ಕಲ್ಲು, ಶಿಖರವೂ ಕಲ್ಲು, ಪ್ರಾಂಗಣದಲ್ಲಿ ಹಾಸಿದ್ದೂ ಕಲ್ಲು, ಕಂಬವೂ ಕಲ್ಲು, ಗರ್ಭಗುಡಿಯೂ ಕಲ್ಲು, ಅದರಲ್ಲಿ ಸ್ಥಾಪಿಸಿದ ದೇವರೆಂದು ಹೇಳುವ ಮೂರ್ತಿಯೂ ಕೆತ್ತಿದ ಕಲ್ಲು.!

ಜನಕ್ಕೆ ತಿಳಿಯುವುದಿಲ್ಲ; ನಿನಗೆ ತಿಳಿಯಬೇಡವೇ? ಮನ ಹೇಳಿದ ಮಾತು ನೀನು ಕೇಳುವುದೆ? ತನುವೆಂಬ ನೀನು ನನ್ನ ಶಿಷ್ಯ; ಅರಿವೆಂಬ ನಾನು ನಿನ್ನ ಗುರು! ನಾನು ಹೇಳಿದ ಮಾತೆಲ್ಲ ನಿಜ; ಒಮ್ಮೆ ಕಣ್ತೆರೆದು ಅರಿವಿನಿಂದ ನೋಡು; ಅಮಾಯಕನಾಗಬೇಡ. ನಿಜ ಬೋಧಿಸುವ ನಿನ್ನ ಅರಿವೆಂಬ ಗುರುವಿಗೆ ಶರಣು ಹೋಗಿ ಶರಣನಾಗು. ಅರಿವಿನ ಮಾರ್ಗತೋರಿಸುವ ಶರಣರಿಗೆ ಶರಣಾಗು.

72

ಗುರುವಚನವಲ್ಲದೆ ಲಿಂಗವೆಂದೆನಿಸದು;
ಗುರುವಚನವಲ್ಲದೆ ನಿತ್ಯವೆಂದೆನಿಸದು;
ಗುರುವಚನವಲ್ಲದೆ ನೇಮವೆಂದೆನಿಸದು.
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ,
ನಮ್ಮ ಕೂಡಲಸಂಗಮದೇವ ?

ಅರಿವಿಗೆ ದೇಹ ಬಳಕೆಯಾದರೆ ಗುರುವಿನ ಪೀಠವಾಗುತ್ತದೆ. ಅಂಗ ಲಿಂಗವೆಂದೆನ್ನಿಸಿಕೊಳ್ಳುತ್ತದೆ. ಲಿಂಗಾಂಗ ಸಾಮರಸ್ಯವೆನ್ನಿಸಿಕೊಳ್ಳುತ್ತದೆ. ನಿತ್ಯ ನುಡಿಯುವ ನುಡಿ ಗುರುವಚನವಾಗುತ್ತದೆ. ತನುವಿನ ನೇಮವೆಲ್ಲ ಅರಿವಿನ ನೇಮವಾಗುತ್ತದೆ. ಅರಿವಿನಿಂದ ಅಂಗದ ಮರೆವೆಲ್ಲ ಮರೆತು ಲಿಂಗಾಂಗವಾಗುತ್ತದೆ.

ಮನಕ್ಕೆ ದೇಹ ಬಳಕೆಯಾದರೆ ತಲೆಯಿಲ್ಲದ ಅಟ್ಟೆಯಂತಾಗುತ್ತದೆ. ಶಾಸಕ ಸಚಿವ ಅಧಿ

ಕಾರಿ ಗುರುವಿನ ವೇಷಧರಿಸಿದರೂ ಭ್ರಮೆಯ ಪಟ್ಟ ದೇಹಕ್ಕೆ ದಕ್ಕುತ್ತದೆ. ಮನ ತನುವಿನೊಂದಿಗೆ ವ್ಯವಹರಿಸುವ ವ್ಯವಹಾರವೆಲ್ಲ ಹಾದರದ ವ್ಯವಹಾರವಾಗುತ್ತದೆ. ತನು ಮತ್ತು ಮನದ ಉಭಯ ವ್ಯವಹಾರವು ಭ್ರಷ್ಟರ ವ್ಯವಹಾರ. ಈ ವ್ಯವಹಾರವನ್ನು ತನುವಿನ ಒಡೆಯನಾದ ಸಂಗಮನಾಥನೆಂಬ ಅರಿವಿನ ಗುರು ಮೆಚ್ಚುವುದಿಲ್ಲ. ಅರಿವಿನ ಗುರು ಮೆಚ್ಚದ ವಚನ ಲಿಂಗವೆಂದೆನಿಸದು; ನಿತ್ಯವೆಂದೆನಿಸದು; ನೇಮವೆಂದಿನಿಸದು. ತಲೆಯಿಲ್ಲದ ಮನ ಅಟ್ಟೆ(ತನುವಿ)ಗೆ ಪಟ್ಟ ಕಟ್ಟಿದಂತೆ! ಮರ್ಕಟನ ಕೈಗೆ ಮಾಣಿಕ್ಯ ಕೊಟ್ಟಂತೆ. ಉಭಯ ಭ್ರಷ್ಟರನ್ನು ಅರಿವಿನ ಸಂಗಯ್ಯ ಮೆಚ್ಚುವುದಿಲ್ಲ!

ವಿಭೂತಿಸ್ಥಲ

73

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ:
ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೆ ಮೂರು ದಿವಸಕ್ಕೆ?
ಅಯ್ಯಾ , ಹಲವು ಕಾಲ ಕೊಂದ ಸೊನೆಗಾರನ ಕೈಯ ಕತ್ತಿಯಾದಡೇನು
ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ !
ಲಲಾಟದಲ್ಲಿ ವಿಭೂತಿ ಬರೆಯಲಿಕೆ ಪಾಪ ಪಲ್ಲಟವಾಗದೆ,
ಕೂಡಲಸಂಗಮದೇವಾ?

ಅರಿವು ಹೇಳಲಿಕ್ಕಾಗಿ ಮನ ತನುವಿನೊಂದಿಗೆ ಸುಖಕ್ಕಾಗಿ ಹಲವಾರು ಪಾಪದ ಕೆಲಸಗಳನ್ನು ಮಾಡುತ್ತದೆ. ತಾನು ಮಾಡಿದ ಪಾಪ ತನ್ನ ಸ್ಮೃತಿಯಲ್ಲಿದ್ದು ನೆನಪಿಸಿಕೊಂಡು ಮತ್ತೆ ಮತ್ತೆ ಚಿಂತಿಸುತ್ತದೆ. ದುಃಖಕ್ಕೊಳಗಾಗಿ ತನುವಿನೊಂದಿಗೆ ಆತ್ಮಹತ್ಯೆಗೂ ಎಳೆಸುತ್ತದೆ.

ಅರಿವೆಂಬ ಗುರುರಾಯ ಕರುಣೆ ತೋರಿದರೆ ಸಾಕು 'ಬೆಟ್ಟದನಿತಪರಾಧವನು ಒಂದು ಬೊಟ್ಟಿಲೆ ತೊಡೆವ'

ತನು ನಿರಪರಾಧಿ; ಮನ ಅಪರಾಧಿ. ತನ್ನ ಸುಖದ ಬಯಕೆಗಳನ್ನೆಲ್ಲ ತನುವಿನಿಂದಲೇ ಪೂರೈಸಿಕೊಂಡು ತನುವಿಗೆ ಅಪರಾಧದ ಪಟ್ಟ ಕಟ್ಟುತ್ತದೆ. ತನುವನ್ನು ಸೆಗಣಿಯಂತೆ ಮಾಡಿದೆ. ಮನಕ್ಕೆ ಅರಿವಿನ ರುಚಿ ತಾಗಿದರೆ ಸಾಕು ಅರಿವಿನತ್ತ ತನುವನ್ನು ಸೆಳೆದೊಯ್ದು ಆ ಕಿಚ್ಚಿನಲ್ಲಿ ಬೆಂದು ವಿಭೂತಿಯ ಕಾಯವಾಗುತ್ತದೆ . ಕಹಿಸೋರೆಯಂತಿದ್ದ ಕಾಯ ವಿಭೂತಿಯ ಬಳಿದು ಸಿಹಿಯಾಗುತ್ತದೆ . ಅರಿವಿನಿಂದ ನೋಡಿದರೆ ಅದು ತನುವಿನ ಅಪರಾಧಗಳಲ್ಲ; ಮನ ಅರಿವಿನಲ್ಲಿ ಲೀನವಾಗಿ ಅರಿವೇ ತಾನಾದರೆ ಅರಿವಿನ ತನು! ಸಿಹಿನುಡಿಗಳನ್ನು ನುಡಿಯುವ ಜ್ಞಾನದ ಮನೆ!

ಹಲವಾರು ವರ್ಷಗಳವರೆಗೆ ಕಟುಗನ ಕತ್ತಿ ಪ್ರಾಣಿಗಳನ್ನು ಕೊಂದರೇನು? ಪರುಷ ಮುಟ್ಟಲು ಕಬ್ಬಿಣದ ಕತ್ತಿ ಚಿನ್ನದ ಕತ್ತಿ ಯಾಗದೆ? ತನುವಿನಲ್ಲಿದ್ದ ಅರಿವು ಮನಕ್ಕೆ ಹೊಳೆದರೆ ಮನ ಘನಮನವಾಗಿ ಪಲ್ಲಟವಾಗದೆ?

ತನುವಿನಲ್ಲಿಯೇ ಅರಿವು; ತನುವಿನಲ್ಲಿಯೇ ಮನ; ತನು ಇವೆರಡರ ಸಂಗಮ. ಮನಕ್ಕೆ ತನುವಿನ ಅರಿವಿನ ಸಂಗಮದ ಸಂಪತ್ತು ಹೊಳೆದರೆ ಸಾಕು ತಾನೇ ಕೂಡಲಸಂಗಮ! ಪಾಪವಿಲ್ಲ

ಪುಣ್ಯವಿಲ್ಲ. ಇವೆರಡೂ ಅರಿವಿನಲ್ಲಿಸಂಗಮ!

74

ನೀರಿಂಗೆ ನೈದಿಲೆಯೆ ಶೃಂಗಾರ;
ಸಮುದ್ರಕ್ಕೆ ತೆರೆಯೆ ಶೃಂಗಾರ;
ನಾರಿಗೆ ಗುಣವೇ ಶೃಂಗಾರ;
ಗಗನಕ್ಕೆ, ಚಂದ್ರಮನೆ ಶೃಂಗಾರ;
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೇ ಶೃಂಗಾರ.

ಸರೋವರದ ನೀರಲ್ಲಿ ಹುಟ್ಟಿದ ಹೂಗಳು ನೀರಿಗೆ ಶೃಂಗಾರ. ಸಮ್ರುದದ ಜಲದಿಂದಲೇ ಹುಟ್ಟಿದ ಅಲೆಗಳು ಸಮುದ್ರಕ್ಕೆ ಶೃಂಗಾರ!

ನಾರಿಗೆ ಗುಣವೇ ಶೃಂಗಾರ:

ತನುವಿನಲ್ಲಿ ಅರಿವೆಂಬ ಪುರುಷನಿದ್ದಾನೆ. ಅವನು ಸದಾ ನಿರ್ಗುಣಿ. ಪಶುಪತಿ; ಮಹಾದೇವ, ಸದಾಶಿವ, ಸಾಕ್ಷಾತ್ ಪರಬ್ರಹ್ಮನೂ ಹೌದು. ಅರಿವೆಂಬ ಸದ್ಗುರುವೂ ಹೌದು. ಹಾಗೆಯೇ

ತನುವಿನಲ್ಲಿ ಮನವೆಂಬ ನಾರಿಯಿದ್ದಾಳೆ. ತನ್ನ ಗುಣಾವಗುಣದಿಂದ ತನುವನ್ನು ಒಮ್ಮೆ ಮೆರೆಯುತ್ತಾಳೆ; ಮತ್ತೊಮ್ಮೆ ಪ್ರಪಾತಕ್ಕೆ ತಳ್ಳುತ್ತಾಳೆ. ಈ ನಾರಿ ಶೃಂಗಾರಗೊಳ್ಳಬೇಕಾದರೆ ಅರಿವೆಂಬ ಪುರುಷನೊಂದಿಗೆ ಬೆರೆತು ಅರ್ಧನಾರೀಶ್ವರಳಾಗಬೇಕು. ಆಗ ತನು ಅರಿವಿನ ಶೃಂಗಾರದಿಂದ ಮೆರೆಯುತ್ತದೆ. ನಾರಿಯ ಅವಗುಣಗಳು ಸುಟ್ಟು ಶರಣರ ತನುವಿನ ಹಣೆ ಸೇರಿ ವಿಭೂತಿಯಾಗುತ್ತದೆ. ಮನವೆಂಬ ಸೆಗಣಿ ಬೆಂದು ತನ್ನ ಮೊದಲ ಹೆಸರು ಕಳೆದುಕೊಂಡು ವಿಭೂತಿಯ ನಾಮ ಪಡೆದು ಫಳಫಳನೆ ಹೊಳೆಯುತ್ತದೆ.

ಪಂಚಾಕ್ಷರಿಸ್ಥಲ

75

ಕರಿಯಂಜುವುದು ಅಂಕುಶಕ್ಕಯ್ಯಾ !
ಗಿರಿಯಂಜುವುದು ಕುಲಿಶಕ್ಕಯ್ಯಾ !
ತಮಂಧವಂಜುವುದು ಜ್ಯೋತಿಗಯ್ಯಾ !
ಕಾನನವಂಜುವುದು ಬೇಗೆಗಯ್ಯಾ !
ಪಂಚ ಮಹಾಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ !

ದೇಹದ ಐದು ಜ್ಞಾನೇಂದ್ರಿಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕಾದರೆ ಮನದ ಸಕಲ ಪಾತಕಗಳೂ ನಿರ್ನಾಮವಾಗಬೇಕು. ಅರಿವಿನಿಂದ ಹುಟ್ಟಿದ ಮನದ ಪಾತಕಗಳು ಅರಿವಿನ

ಅಗ್ನಿಯಲ್ಲಿಯೇ ಸುಟ್ಟು ಬೂದಿಯಾಗಬೇಕು.

ಅಂಕುಶ ಚಿಕ್ಕದು ಆನೆ ದೊಡ್ಡದು. ಮದ ತುಂಬಿದ ಆನೆಯನ್ನೂ ಪಳಗಿಸುವ ಶಕ್ತಿ ಅಂಕುಶಕ್ಕಿದೆ. ಮನ ಅಂಗುಲಿಮಾಲನೆಂಬ ಮದ್ದಾನೆಯನ್ನು ತನುವಿನಲ್ಲಿಯೇ ಸೃಷ್ಟಿ ಮಾಡಿತು. ಬುದ್ಧನ ಸಹಾಯದಿಂದ ತನುವಿನಲ್ಲಿಯ ಅರಿವಿನ ಅಂಕುಶಕ್ಕೆ ಆನೆ ಬಲಿಯಾಯಿತು.

ಬಂಡೆಗಲ್ಲು ಭೂಮಿಯದೆ, ವಜ್ರವೂ ಭೂಮಿಯದೆ. ವಜ್ರ ಚಿಕ್ಕದಾದರೇನು? ಬಂಡೆಗಲ್ಲು ವಜ್ರದ ಹೊಡೆತಕ್ಕೆ ಪುಡಿಪುಡಿಯಾಗುವುದು.

ಬೆಳಕಿನ ನೆರಳೇ ಕತ್ತಲು. ಜ್ಯೋತಿಯ ಬೆಳಕಿನಿಂದಲೇ ಕತ್ತಲು ಕಳೆಯುವುದು. ಜ್ಯೋತಿಯಲ್ಲಿ ಹುದುಗಿ ಜ್ಯೋತಿಯೇ ಆಗುವುದು.

ಮರದಲ್ಲಿ ಮಂದಾಗ್ನಿಯಿದೆ. ಅದಕ್ಕಾಗಿಯೇ ಮರ ನಳನಳಿಸುತ್ತದೆ. ಮರದಲ್ಲಿದ್ದ ಬೇಗೆಯಿಂದಲೇ ಮರಕ್ಕೆ ಕುತ್ತು .

ಪಂಚ ಮಹಾ ಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ :

ದೇಹದ ಐದು ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳಲ್ಲಿ ಮನ ಬೆರೆತು ಪಂಚ ಮಹಾಪಾತಕಗಳನ್ನು ಸೃಷ್ಟಿ ಮಾಡಿದೆ. ದೇಹದಲ್ಲಿಯ ಜ್ಞಾನ ದೇಹಕ್ಕೆ ಬಳಕೆಗೆ ಬಾರದಂತಾಗಿದೆ. ಮನ ಅರಿವಿನ ದೇಹವನ್ನು ಬಳಕೆ ಮಾಡಿಕೊಂಡು ಪಂಚ ಮಹಾಪಾತಕಗಳನ್ನು ಎಸಗುತ್ತದೆ.

ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹ ಇವು ಪಂಚ ಮಹಾಪಾತಕಗಳು.

ಅಂಗದಲ್ಲಿರುವ ಅರಿವೇ ಗುರು; ಅಂಗದಲ್ಲಿರುವ ಮನವೇ ಶಿಷ್ಯ. ಗುರು ಹೇಳಿದಂತೆ ಕೇಳದ ಶಿಷ್ಯ ಗುರುದ್ರೋಹಿ.

ಅಂಗದಲ್ಲಿರುವ ಅರಿವೇ ಲಿಂಗ ಅಂಗದಲ್ಲಿರುವ ಮನವೇ ಶಿಷ್ಯ . ಮನ ಅರಿವಿನ ಲಿಂಗ ಪೂಜಿಸಿ ಅಂಗದಲ್ಲಿ ಒಂದಾಗುವುದೇ ಲಿಂಗಾಂಗ. ಲಿಂಗ ಪೂಜಿಸಲು ಒಲ್ಲದವನೇ ಲಿಂಗದ್ರೋಹಿ.

ಅಂಗದ ಅರಿವು ಮನಕ್ಕೆ ವೇದ್ಯವಾಗಿ ಛಲದಿಂದ ಪಾಲಿಸದವನೇ ಜಂಗಮ ದ್ರೋಹಿ.

ಮೂರ್ತಿ ನೋಡಿ ದೇವರೆಂದು ಪೂಜಿಸುವುದು ಗೋಚರರದ ಆಚಾರ. ಅರಿವಿನಿಂದ ಕಲ್ಲೆಂದು ತಿಳಿದು ಪೂಜಿಸದಿದ್ದರೆ ಅಗೋಚರದ ಆಚಾರ! ಗೋಚರದ ಆಚಾರವದು ಆಚಾರದ್ರೋಹ.

ನೋಡಿದ ವಸ್ತು ಅರಿವಿನಿಂದ ಅನಾವರಣಗೊಂಡು ಕಣ್ಣಿಗೆ ಪ್ರಸಾದವಾಗಬೇಕು; ಅಂಗಕ್ಕೆ ಸಂಕಟವನ್ನೊಡ್ಡಿದರೆ ಪ್ರಸಾದದ್ರೋಹ! ಕೇಳಿದ ಶಬ್ದ ಅರಿವಿನಿಂದ ಅನಾವರಣಗೊಂಡು ಕಿವಿಗೆ ಪ್ರಸಾದವಾಗಬೇಕು. ಅಂಗಕ್ಕೆ ಸುಖದುಃಖಗಳನ್ನುಂಟು ಮಾಡಿದರೆ ಪ್ರಸಾದ ದ್ರೋಹ! ಮೂಗಿಗೆ ತಾಗಿದ ಗಂಧ ಅಲ್ಲಿಯೇ ಪ್ರಸಾದವಾಗಬೇಕು ತನುವಿಗೆ ಸುಖದುಃಖವನ್ನುಂಟು ಮಾಡಿದರೆ ಪ್ರಸಾದ ದ್ರೋಹ! ರುಚಿಸಿದ ಪದಾರ್ಥ ನಾಲಿಗೆಯಲ್ಲಿ ಪ್ರಸಾದವಾಗಬೇಕು; ತನುವಿಗೆ ಸುಖದುಃಖಗಳನ್ನುಂಟುಮಾಡಿದರೆ ಪ್ರಸಾದ ದ್ರೋಹ! ಚರ್ಮಕ್ಕೆ ತಾಗಿದ ವಸ್ತು ಚರ್ಮದಲ್ಲಿಯೇ ಪ್ರಸಾದವಾಗಬೇಕು; ತನುವಿಗೆ ಸುಖದುಃಖವನ್ನುಂಟು ಮಾಡಿದರೆ ಪ್ರಸಾದ ದ್ರೋಹ!

ಪಂಚ ಜ್ಞಾನೇಂದ್ರಿಯಗಳಲ್ಲಿ ಹುಟ್ಟಿದ ಪಂಚ ಮಹಾಪತಕಗಳು ತನುವಿನಲ್ಲಿ ಸಂಗಮವಾದ ಅರಿವಿನ ಸಂಗಯ್ಯನಿಗೆ ಮಾತ್ರ ಅಂಜುವವು ಎಂದಿದ್ದಾರೆ ಬಸವಣ್ಣನವರು.

76

ಜಪ ತಪ ನಿತ್ಯನೇಮವೆನಗೆ ಉಪದೇಶ;
ನಿಮ್ಮ ನಾಮವೆನಗೆ ತಂತ್ರ ;
ಶಿವನಾಮವೆನಗೆ ಮಂತ್ರ ;
ಕೂಡಲಸಂಗಮದೇವಯ್ಯಾ ,
ನಿಮ್ಮ ನಾಮ, ಕಾಮಧೇನುವೆನಗೆ.

ಅರಿವಿನ ಜಪ, ಅರಿವಿನ ತಪ, ಅರಿವಿನ ನಿತ್ಯನೇಮವು ಎನಗೆ ಉಪದೇಶ; ಅರಿವಿನ ನಾಮವೇ ಎನಗೆ ತಂತ್ರ ; ಅರಿವೆಂಬ ಶಿವನಾಮವೇ ಎನಗೆ ಮಂತ್ರ .

ಅರಿವು-ಮನ ತನುವಿನಲ್ಲಿಯೇ ಬಂಧಿ ಮಾಡಿದ ಅರಿವಿನ ಸಂಗಯ್ಯನೇ ನಿಮ್ಮ ನಾಮವೇ ಎನಗೆ ಕಾಮಧೇನು.

ಆಭರಣ ನೋಡಿ ಕಳುವು ಮಾಡುವ ಮನಕ್ಕೆ; ನೋಡು ಮನವೇ ಅದು ಲೋಹವಲ್ಲದೆ ಬೇರಲ್ಲ ಎಂದು ಪರಿಚಯಿಸುವ ಅರಿವಿನ ಸಂಗಯ್ಯನ ನಾಮ ಕಾಮಧೇನುವಲ್ಲದೆ ಮತ್ತೇನು!

ರೂಪ ನೋಡಿ ಜೊಲ್ಲು ಸುರಿಸುವ ಮನಕ್ಕೆ; ನೋಡು ಮನವೇ ರಕ್ತ , ಮೂಳೆ, ಮಾಂಸ, ಬೇರಾಗದಂತೆ ಬಂಧಿಸಿದ ನಿನ್ನಂತಿರುವ ಚರ್ಮವಲ್ಲದೆ ಬೇರಲ್ಲ ; ಸರಿಯಾಗಿ ನೋಡು ಎಂದು ಪರಿಚಯಿಸುವ ಅರಿವಿನ ಸಂಗಯ್ಯನ ನಾಮ ಕಾಮಧೇನುವಲ್ಲದೆ ಮತ್ತೇನು!

ಕುಶಬ್ದವು-ಸುಶಬ್ದವೂ ಶಬ್ದದಲ್ಲಿಯೇ ಅಡಗಿದೆ ಎಂದು ಪರಿಚಯಿಸುವ ಅರಿವು ಕಾಮಧೇನುವಲ್ಲವೆ!

ನಾನು ಸೇವಿಸುವ ಪದಾರ್ಥ ನನಗೆ ಪರಿಮಳ; ನಾನು ವಿಸರ್ಜಿಸುವ ಮಲ ಮತ್ತೊಂದು ಪ್ರಾಣಿಗೆ ಪರಿಮಳವೆಂದು ಪರಿಚಯಿಸುವ ಅರಿವಿನ ಸಂಗಯ್ಯ ಕಾಮಧೇನುವಲ್ಲವೆ!

ಕಬ್ಬಿಗೆ ಹರಿದದ್ದೂ ಜಲ, ಹುಣಸೆ, ನಿಂಬೆ, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿಗೆ ಹರಿದದ್ದೂ ಜಲ. ತನುವಿನ ಗರ್ಭಕ್ಕೆ ಹರಿದದ್ದೂ ಜಲ ಬಿಂದುವಲ್ಲವೆ! ರುಚಿ ಅರುಚಿಗೆ ಸಂಕಟ ಪಡುವ ತನುವಿನ ಅಜ್ಞಾನಕ್ಕೆ ಮನವರಿಕೆ ಮಾಡಿಸಿದ ಅರಿವಿನ ಸಂಗಯ್ಯ ಕಾಮಧೇನುವಲ್ಲವೆ!

ಆ ಅರಿವಿನ ಸಂಗಯ್ಯನ ಜಪತಪವೇ ನಿತ್ಯನೇಮವೆನಗೆ! ಆತನ ಉಪದೇಶವೇ ವೇದವಾಕ್ಯವೆನಗೆ! ಆತನ ನಾಮವೇ ತಂತ್ರವೆನಗೆ! ಆತನೇ ಶಿವ; ನಾನೇ ಶಿವೆ ಆತನ ಮಂತ್ರವೇ ಶಿವನಾಮವೆನಗೆ!

ತನುವಿನಲ್ಲಿ ಕೂಡಿ ಎಂದೆಂದೂ ಅಗಲದ ಅರಿವಿನ ಸಂಗಮದೇವಯ್ಯನೆ ನಿಮ್ಮ ನಾಮ ಕಾಮಧೇನುವೆನಗೆ.

77

ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ!
ಓಂ ನಮಃ ಶಿವಾಯ ಎಂಬುದೆ ಮಂತ್ರ ;
ಓಂ ನಮಃ ಶಿವಾಯ ಎಂಬುದೆ ತಂತ್ರ ;
ನಮ್ಮ ಕೂಡಲಸಂಗಮದೇವರ ನೆನೆವುದೆ ತಂತ್ರ .

ಓಂನಮಃಶಿವಾಯ ಎಂಬ ಆರು ಅಕ್ಷರಗಳುಳ್ಳ ಮಂತ್ರವನ್ನು ಸರ್ವರೂ ಪಠಿಸುತ್ತಾರೆ. ಬೋಧಿಸುತ್ತಾರೆ. ಇದು ಷಡಕ್ಷರಿ ಮಂತ್ರ ; ಸರ್ವರಿಗೂ ಬೋಧಿಸುವಂತಹದ್ದಲ್ಲವೆಂದೂ ಹೇಳುತ್ತಾರೆ.

ಮಂತ್ರದ ಬೆಡಗು ಬಿನ್ನಾಣವನರಿತು ಬೋಧಿಸಬೇಕು; ಬೆಡಗು ಬಿನ್ನಾಣವನರಿತು ಬೋಧೆಗೆ ಒಳಗಾಗಬೇಕು. ಇಲ್ಲದಿದ್ದರೆ ಬರೀ ಶಬ್ದದ ಬಾಧೆ ತಪ್ಪಿದ್ದಲ್ಲ. ರಾಗಬದ್ಧವಾಗಿ, ತಾಳಬದ್ಧವಾಗಿ ಹಾಡಬಹುದು; ಸುಶ್ರಾವ್ಯವಾಗಿ ಮಂತ್ರದಂತೆ ಪಠಿಸಬಹುದು; ಕೇಳುಗರಿಗೆ ಹಾಡುಗರಿಗೆ ಭ್ರಮೆ ಹುಟ್ಟಿಸುಬಹುದಲ್ಲದೆ ಬೇರೇನೂ ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಬಸವಣ್ಣನವರು ಅಕಟಕಟಾ ಓದುವ, ಕೇಳುವ, ಹಾಡುವ, ಮಂತ್ರವೆಂದು ಪಠಿಸುವ, ಬೋಧಿಸುವವರ ಬೆಡಗು ಬಿನ್ನಾಣವೆಂಬುದೇನೊ ಎಂದು ಆಶ್ಚರ್ಯ ವ್ಯಕ್ತ ಪಡಿಸಿದ್ದಾರೆ.

ದೇಹವೆಂಬ ಕರಸ್ಥಲದಲ್ಲಿ ಷಟಸ್ಥಲಗಳಿವೆ. ಷಟಸ್ಥಲಗಳುಳ್ಳ ಕರಸ್ಥಲವೇ ದೇಹ! ಈ ದೇಹದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ , ಮತ್ಸರಗಳೆಂಬ ಅರಿಷಡ್ವರ್ಗಗಳೂ ಹುಟ್ಟಿವೆ. ಷಟ್‌ಸ್ಥಲಗಳಲ್ಲಿ ಹುಟ್ಟಿದ ಓಂ ನಮಃ ಶಿವಾಯ ಎಂಬ ಮಂತ್ರದ ತಂತ್ರಗಾರಿಕೆಯಿಂದ ಕಾಮ ಕ್ರೋಧ, ಲೋಭ, ಮೋಹ, ಮದ,ಮತ್ಸರಗಳು ಸುಟ್ಟು ಬೂದಿಯಾಗುತ್ತವೆ. ಷಡಕ್ಷರಿ ಮಂತ್ರದ ಅರಿವಿನ ತಂತ್ರಗಾರಿಕೆಯಿಂದ ಕೂಡಲಸಂಗಮದೇವರ ನೆನೆಯುವುದೆ ತಂತ್ರ. ಈ ಟೆಕ್ನಿಕ್ ಓಂನಮಃಶಿವಾಯ ಮಂತ್ರದದಲ್ಲಿ ಬೆಡಗು ಬಿನ್ನಾಣದಿಂದ ಅಡಗಿದೆ. ಇದನ್ನು ಬಿಚ್ಚಿ ಪಠಿಸಿದರೆ, ತನುವೇ ಆ ಮಂತ್ರ!

78

ವಶ್ಯವ ಬಲ್ಲೆವೆಂದೆಂಬಿರಯ್ಯಾ !
ಬುದ್ಧಿಯನರಿಯದ ಮನುಜರು ಕೇಳಿರಯ್ಯಾ ;
ವಶ್ಯವಾವುದೆಂದರಿಯದೆ,
ಮರುಳುಗೊಂಬಿರೆಲೆ ಗಾವಿಲ ಮನುಜರಿರಾ!
ಓಂ ನಮಃ ಶಿವಾಯ ಎಂಬ ಮಂತ್ರ ಸರ್ವಜನವಶ್ಯ ,
ಕೂಡಲಸಂಗಮದೇವಾ.

ವಶೀಕರಣ ವಿದ್ಯೆ ಬಲ್ಲೆವೆಂದು ಸ್ತ್ರೀ ಪುರುಷನನ್ನು, ಪುರುಷ ಸ್ತ್ರೀಯನ್ನು ವಶ ಮಾಡಿಕೊಳ್ಳುವ ವಿಧಾನವನ್ನು ಹಣ ಪಡೆದು ಹೇಳುವವರಿದ್ದಾರೆ. ರಾಜಸತ್ತೆ, ಅರಸೊತ್ತಿಗೆಯನ್ನು ಪಡೆಯುವ ವಶೀಕರಣ ವಿದ್ಯೆಯಿದೆಯೆಂದು ಹೇಳುವವರೂ ಇದ್ದಾರೆ. ಭ್ರಮೆ ಆವರಿಸಿದವರು ಸುಲಭವಾಗಿ ಮೋಸಕ್ಕೆ ಒಳಗಾಗುತ್ತಾರೆ.

ವ್ಯವಹಾರ ಮಾಡುವವನು ವ್ಯವಹಾರಕ್ಕೊಳಗಾದವನು ಇವರಿಬ್ಬರೂ ಬುದ್ಧಿಯಿಲ್ಲದೆ ಮೋಸಕ್ಕೊಳಗಾದವರು. ಮೋಸ ಮಾಡಿ ಹಣ ಪಡೆದೆನೆಂಬ ಭ್ರಮೆ ಒಬ್ಬನಿಗೆ, ವಶೀಕರಣವಿದ್ಯೆಯ ಸುಖ ಅನುಭವಿಸ ಬಹುದೆಂಬ ಭ್ರಮೆ ಮೋಸಕ್ಕೊಳಗಾದವನಿಗೆ. ಇವರಿಬ್ಬರೂ ಮೂರ್ಖರು.

ಒಬ್ಬ ವ್ಯಕ್ತಿಯಲ್ಲಿದ್ದ ಶಕ್ತಿ, ಮತ್ತೊಬ್ಬ ವ್ಯಕ್ತಿಯಲ್ಲಿದೆ. ಇಬ್ಬರೂ ಅರಿಯದೆ ಭ್ರಮೆಗೆ ಮೋಸ ಹೋಗಿದ್ದಾರೆ. ಮನ ತನುವನ್ನು ಆವರಿಸಿದ ಭ್ರಮೆ. ಅರಿವು ತನುವಿನ ಶಕ್ತಿ. ತನುವಿನ ಕಣ ಕಣದಲ್ಲಿ ಭರಿತವಾದ ಮಂತ್ರ! ಅದು ಓಂ ನಮಃ ಶಿವಾಯ!

ತ್ವಙ್ಮಯವಾಗಿಹುದು **ಓಂ**ಕಾರ, ರುಧಿರಮಯವಾಗಿಹುದು **ನ**ಕಾರ,

ಮಾಂಸಮಯವಾಗಿಹುದು **ಮಕಾರ**, ಮೇದೋಮಯವಾಗಿಹುದು **ಶಿಕಾರ**, ಅಸ್ತಿಮಯವಾಗಿಹುದು **ವಾಕಾರ**, ಮಜ್ಜೋಮಯವಾಗಿಹುದು **ಯ** ಕಾರ. ಇಂತೀ ಷಡ್‌ಧಾತುವೇ ಷಡಕ್ಷರಮಯವಾಗಿಪ್ಪುದು ಕೂಡಲಚನ್ನಸಂಗಮದೇವಾ. ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ.

ತನುವಿನ ಚರ್ಮದ ತುಂಬಾ ತನ್ಮಯವಾಗಿದೆ. ರಕ್ತದಲ್ಲಿ ಭರಿತವಾಗಿದೆ. ಮಾಂಸಮಯವೇ ತಾನಾಗಿದೆ. ಮೇದಸ್ಸು ಆಗಿ ಇಡೀ ತನುವಿಗೆ ಪುಷ್ಟಿ ನೀಡಿದೆ. ಅಸ್ತಿಮಯವಾಗಿ ಗಟ್ಟಿಗೊಂಡಿದೆ. ಮಜ್ಜೆಯಾಗಿ ಅಸ್ತಿ ಒಳ ಹೊರಗೆ ಹರಿಯುತ್ತಲಿದೆ. ಇಡೀ ದೇಹದ ಭಾರವನ್ನು ಹೊತ್ತು ದೇಹಕ್ಕೆ ಅರಿವಾಗಿದೆ. ಜಗದ ದೇಹಗಳನ್ನು ಬೆಳಗಿ ದೇಹಕ್ಕೆ ವಶವಾಗಿದೆ ಷಡಕ್ಷರಿ ಮಂತ್ರ!

ದೇಹ ಘನವಾದ ಮಹಾಮಂತ್ರ, ಅದರ ಕಣ ಕಣದಲ್ಲಿರುವುದೇ ಷಡಕ್ಷರಿ. ಅದು ಮಂತ್ರವೆಂಬುದು ಮನಕ್ಕೆ ತಿಳಿಯದು. ಈ ಮಂತ್ರ; ಮನವನ್ನು ತನ್ನ ವಶದಲ್ಲಿಟ್ಟುಕೊಂಡು ಅದು ಹೋದತ್ತ ದೇಹದೊಂದಿಗೆ ಹೋಗಿ ಅರಿವಾಗಿ ಬೋಧಿಸುವುದನ್ನು ಬಿಡದು. ದುರ್ಘಟಕ್ಕೆ ಮರುಳುಗೊಂಡ ಮನ ಓಂನಮಃಶಿವಾಯ ಎಂಬ ಮಹಾಮಂತ್ರದ ವಶದಲ್ಲಿದೆ. ಹೊರಗಿನ ವಸ್ತುಗಳಿಗೆ ಮರುಳಾದ ಮನ ಅಂತರಾಳದ ಅರಿವನ್ನು ತಿಳಿದರೆ ತಾನೇ ಆ ಮಹಾ ಮಂತ್ರ!

79

ಭವ ಬಂಧನ ದುರಿತಂಗಳ ಗೆಲುವಡೆ
ಓಂ ನಮಃ ಶಿವಾಯ ಶರಣೆಂದಡೆ ಸಾಲದೆ?
ಹರ ಹರ ಶಂಕರ ಶಿವ ಶಿವ ಶಂಕರ
ಜಯ ಜಯ ಶಂಕರ ಶರಣೆನುತ್ತಿದ್ದೇನೆ.
ಎನ್ನ ಪಾತಕ ಪರಿಹರ,
ಕೂಡಲಸಂಗಮದೇವಾ, ಶರಣೆನುತ್ತಿದ್ದೇನೆ.

ದೇಹಕ್ಕೆ ಹುಟ್ಟು ಇದೆ; ಸಾವು ಇದೆ . ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಅನುಭವಿಸುತ್ತ ಸಂಕಟಕ್ಕೆ ಶರಣಾಗಿ ಒಮ್ಮೆ ಸಾಯುತ್ತದೆ. ಮನ ಹುಟ್ಟು ಸಾವು ಮತ್ತು ಅರಿಷಡ್ವರ್ಗಗಳಿಗೆ ಶರಣಾಗಿರುವುದುರಿಂದ ದೇಹ ಹಲವಾರು ದುರಂತಗಳಿಗೆ ಅವಘಡಗಳಿಗೆ ಒಳಗಾಗುತ್ತದೆ.

ಮನ ಅರಿವಿನತ್ತ ವಾಲಿ ಓಂ ನಮಃ ಶಿವಾಯ ಎಂಬ ಆ ಅರಿವಿಗೆ ಶರಣೆಂದಡೆ ಮನದ ಪಾತಕವೆಲ್ಲ ಪರಿಹರ. ಆ ಅರಿವು ಹರ ಹರ ಶಂಕರನೂ ಹೌದು; ಶಿವ ಶಿವ ಶಂಕರನೂ ಹೌದು. ಜಯ ಜಯ ಶಂಕರನೂ ಹೌದು. ಮನಕ್ಕೆ ಅಂತರಂಗದ ಅರಿವು ಅರಿವಾಗಿ, ಆ ಅರಿವಿಗೆ ಶರಣು ಹೋದರೆ ತಾನೇ ಅರಿವಾಗುವುದು.

ತನುವಿನ ಕಣ ಕಣದಲ್ಲಿ ತನ್ಮಯವಾಗಿ ಬೆರೆತ ಓಂ ನಮಃ ಶಿವಾಯ ಮನದ ಅರಿವಿಗೆ ಬರುವುದು. ಅದು ಬಯಲು. ಜಗದಗಲ ಮುಗಿಲಗಲ. ಸಾವಿಲ್ಲದ , ಕೇಡಿಲ್ಲದ, ರೂಹಿಲ್ಲದ ಚೆಲುವು. ಈ ಚೆಲುವಿಗೆ ಹುಟ್ಟಿಲ್ಲ ಸಾವಿಲ್ಲ! ತನುವಿನಲ್ಲಿ ಸಂಗಮವಾಗಿ ಸದಾ ಮನವನ್ನು ತನ್ನತ್ತ ಸೆಳೆಯುತ್ತಿರುವ ಸಂಗಮನಾಥ. ಮನಕ್ಕೆ ಅರಿವಾದಡೆ ಭವ ಬಂಧನಗಳನ್ನು ಗೆಲ್ಲುತ್ತದೆ. ಓಂನಮಃ ಶಿವಾಯ ಎಂದು ಶರಣಾಗುತ್ತದೆ.

80

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ,
ಓಂನಮಃಶಿವಾಯ, ಓಂನಮಃಶಿವಾಯ
ಎನುತಿರ್ದೆನಯ್ಯಾ
ಎನಗಿದೇ ಮಂತ್ರ, ಎನಗಿದೇ ಜಪ.
ಕೂಡಲಸಂಗಮದೇವಾ, ನೀನೆ ಬಲ್ಲೆ, ಎಲೆ ಲಿಂಗವೆ.

ಮನ ಅಂತರಾಳದ ಅರಿವನು ತಿಳಿಯುವುದು ಬಿಟ್ಟು ಎಲ್ಲ ವಿಷಯಗಳನ್ನು ತಿಳಿಯಲು ಆಪೇಕ್ಷಿಸುತ್ತದೆ. ಹಲವಾರು ಪುಸ್ತಕಗಳನ್ನು ಓದುತ್ತದೆ. ಅದರ ಬಗ್ಗೆ ಚರ್ಚಿಸುತ್ತದೆ ವಾದಕ್ಕೆ ಇಳಿಯುತ್ತದೆ. ಓದಿದ ಪುಸ್ತಕಗಳೆಲ್ಲ ದೇಹದ ಅಂತರಾಳದಿಂದ ಮುದ್ರಣಗೊಂಡಿದ್ದು ಎನ್ನುವುದನ್ನೇ ಮರೆಯುತ್ತದೆ.

ತನುವಿನ ಕಣ ಕಣದಲ್ಲಿ ಬೆರೆತ ಅರಿವನ್ನು ಮನ ಅರಿತರೆ ಓಂ ನಮಃ ಶಿವಾಯ ಎಂಬ ಷಡಕ್ಷರಿಯ ಮಂತ್ರವೇ ತಾನಾಗುತ್ತದ. . ಮಾಂಸಪಿಂಡ ಮಂತ್ರ ಪಿಂಡವಾಗುತ್ತದೆ. ಆ ಮಂತ್ರದ ಸಹಾಯದಿಂದ ಹೊರಗಿನದನ್ನು ನೋಡಿದ ನೋಟವೆಲ್ಲ ಮಂತ್ರ, ನುಡಿದ ನುಡಿಗಳೆಲ್ಲ ಜಪ. ಕೂಡಿದ ಕೂಟವೆಲ್ಲ ಕೂಡದ ಅಗಲದ ಕೂಟ! ಮತ್ತೊಂದನು ಅರಿಯದ ಮಂತ್ರಮಯವಾದ ಮನವೇ ಈ ಸುಖವನು ಬಲ್ಲುದು.

ಇದು ಓದುವ ಓದುಗನಿಗೆ ನಿಲುಕದ ಮಾತು . ಇದು ಮನಕ್ಕೆ ಬಯಕೆಯಾಗಿ ಕಲಿಯುವ ಮಾತು!

81

ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ವೇದ;
ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ಶಾಸ್ತ್ರ;
ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ತರ್ಕ;
ಭಯಂಕರ ಭ್ರಮೆಗೊಂಡಿತ್ತು ಮಂತ್ರ-ತಂತ್ರ .
ಶಿವನಂತುವನರಿಯದೆ ಚಿಂತಿಸುತ್ತಿದ್ದಿತ್ತು ಲೋಕ!
ಕೂಡಲಸಂಗಮದೇವ ಶ್ವಪಚನ ಮೆರೆದಡೆ
ಜಾತಿ ಭೇದವ ಮಾಡಲಮ್ಮವು.

ಓಂನಮಃಶಿವಾಯ ಎಂಬ ಮಂತ್ರವನ್ನು ಮೀರಲು ವೇದಕ್ಕೆ ಸಾಧ್ಯವಾಗಲಿಲ್ಲ. ಶಾಸ್ತ್ರಕ್ಕೂ ಸಾಧ್ಯವಾಗಲಿಲ್ಲ. ತರ್ಕ ಗ್ರಂಥಗಳಿಗೂ ಸಾಧ್ಯವಾಗಲಿಲ್ಲ. ಆದರೂ ಜನ ಮಂತ್ರ ತಂತ್ರಗಳೇ ಏನೆಲ್ಲವೆಂದು ಭ್ರಮೆಗೊಂಡಿದೆ. ಶಿವನಿರುವನ್ನು ಅರಿಯುವ ಜಾಡನು ಮರೆತು ಮಂತ್ರಗಳ ಹಿಂದೆ ಬಿದ್ದಿದೆ ಲೋಕ; ಓಂ ನಮಃ ಶಿವಾಯ ಎಂಬ ಮಂತ್ರವನ್ನು ಅರಿಯದೆ.

ಪ್ರಣವದ ಹೆಸರಿಲ್ಲ ಬಸವಂಗೆ, ಪ್ರಣವದ ಕುರುಹಿಲ್ಲ ಬಸವಂಗೆ, ಪ್ರಣವದ ನೆಲೆಯಿಲ್ಲ ಬಸವಂಗೆ , ಪ್ರಣವದ ರೂಪಿಲ್ಲ ಬಸವಂಗೆ, ಪ್ರಣವವನು ಓದಿ ಓದಲಿಲ್ಲ ಬಸವಂಗೆ, ಪ್ರಮಾಣಕ್ಕೆ

ಅಪ್ರಮಾಣನಾದ ನಮ್ಮ ಬಸವನ ಸಂಗಯ್ಯನು . ಎಂದು ನೀಲಮ್ಮ ತಾಯಿಯವರು ಪ್ರಣವದ ಮಂತ್ರವನ್ನು ಬೇಧಿಸಿದ್ದಾರೆ. ಪ್ರಣವಕ್ಕೆ ಮೀರಿದ ಮಂತ್ರವನ್ನು ಕಂಡು ತಾವೇ ಆ ಪ್ರಣವವಾಗಿ ನುಡಿದಿದ್ದಾರೆ.

ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟು ಆಗಮ, ಮೂವತ್ತೆರಡು ಉಪನಿಷತ್ತುಗಳೆಲ್ಲವು ಪಂಚಾಕ್ಷರ ಸ್ವರೂಪವನರಿಯದೆ ನಿಂದವು. ಏಳು ಕೋಟಿ ಮಂತ್ರಗಳಿಗೆ ತಾನೇ ಮೂಲಮಂತ್ರವಾಗಿ, ಸುರರಿಗೆ ಅಣಿಮಾದಿ ಕೊಟ್ಟು, ಶರಣರಿಗೆ ತ್ರಿನಯನ ಕೊಟ್ಟುದು. ಈ ಪಂಚಾಕ್ಷರ ಪ್ರಣವದೊಳಡಕವಾದ ಪಂಚಾಕ್ಷರವನರಿತಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗ ಸಂಜ್ಞೆಯ ವರ್ಣವೆನ್ನ ಸರ್ವಾಂಗದಲ್ಲಿ ಅಡಗಿದವಯ್ಯಾ ಎಂದು ಆದಯ್ಯ ಶರಣರು ಪ್ರಣವವನ್ನು ಬಣ್ಣಿಸುತ್ತಾರೆ.

ನಾಲ್ಕು ವೇದಗಳು, ಹದಿನಾರು ಶಾಸ್ತ್ರಗಳು, ಹದಿನೆಂಟು ಪುರಾಣಗಳು, ಇಪ್ಪತ್ತೆಂಟು ಆಗಮ, ಮೂವತ್ತೆರಡು ಉಪನಿಷತ್ತುಗಳು, ಏಳುಕೋಟಿ ಮಂತ್ರಗಳು ದೇಹವೆಂಬ ಮಹಾ ಪ್ರಣವದಿಂದಲೇ ಹುಟ್ಟಿದವು. ದೇಹಕ್ಕೆ ಸವಾಲಾಗಿ ನಿಂತವು. ದೇಹದಿಂದಲೇ ಪೂಜಿಸಿಕೊಂಡವು. ಇದು ವಿಚಿತ್ರ ಆದರೂ ಸತ್ಯ !

ತಿಳಯಲು ಹೋದರೆ ದೇಹವೇ ಒಂದು ಪ್ರಣವ; **ಓಂಕಾರ! ನ** ಕಾರವೇ ಆಚಾರಲಿಂಗ, **ಮ** ಕಾರವೇ ಗುರುಲಿಂಗ, **ಶಿ** ಕಾರವೇ ಶಿವಲಿಂಗ, **ವಾ** ಕಾರವೇ ಜಂಗಮಲಿಂಗ, **ಯ** ಕಾರವೇ ಪ್ರಸಾದಲಿಂಗ, ಓಂಕಾರವೇ ಮಹಾಲಿಂಗವೆಂದು ಆರು ತೆರನಾಗಿಪ್ಪುದು ನೋಡಾ ಕೂಡಲಚೆನ್ನಸಂಗಮದೇವಾ ಎಂದು ಚನ್ನಬಸವಣ್ಣನವರು ಹೇಳಿದ್ದಾರೆ.

ಮೂಗಿನಲ್ಲಿ ವಾಸನಾ ಶಕ್ತಿಯಿದೆ: ಹಾಗೆಯೇ ಹೂವಿನ ಪರಿಮಳ ಬಯಸಿ ಕಿತ್ತಿಕೊಳ್ಳುವ, ಹೆಂಡದ ವಾಸನೆ ಬಯಸಿ ಕುಡಿದು ಓಲಾಡುವ ಅಜ್ಞಾನವಿದೆ. ಇವೆರಡಕ್ಕೂ ಜಲವೇ ಮೂಲ! ಮಲ್ಲಿಗೆಗೆ ಹರಿದು ಪರಿಮಳವಾಯಿತು. ಈಚಲಕ್ಕೆ ಹರಿದು ಹೆಂಡವಾಯಿತು; ಹೀಗೆ ತಿಳಿದು ಅರಿವಿನ ಆಚಾರದಲ್ಲಿ ತೊಡಗುವ ಮೂಗು ಆಚಾರಲಿಂಗವೂ ಹೌದು. ಇದರಲ್ಲಿ **'ನ'** ಕಾರವು ಅಡಗಿದೆ.

ನಾಲಿಗೆಯೇ ಗುರುಲಿಂಗ: ರುಚಿಸಿ ಸುಖಿಸುವ ದುಖಿಃಸುವ ಶಕ್ತಿ ನಾಲಿಗೆಗೆ ಇದೆ. ರುಚಿಸಿದ್ದನ್ನು ನುಡಿದು ಬಾಧೆಗೀಡು ಮಾಡುವ ಅಜ್ಞಾನವೂ ಇದೆ. ನಾಲಿಗೆ ಜಲಭರಿತವಾಗಿದೆ; ಪದಾರ್ಥಕೂಡಾ ಜಲಹರಿದು ಗಟ್ಟಿಗೊಂಡಿದೆ. ಜಲ ಜಲದಲ್ಲಿ ಬೆರೆತು ರುಚಿ ಕಳೆದುಕೊಳ್ಳುತ್ತದೆ. ಸ್ವಲ್ಪ ಕಾದು ರುಚಿಯನ್ನು ಆಸ್ವಾದಿಸಬೇಕು ಅಷ್ಟೆ. ಹೀಗೆ ತಿಳಿಯುವ ಅರಿವೆಂಬ ಗುರುದೇವನೇ ನಾಲಿಗೆಯಲ್ಲಿ ಪವಡಿಸಿದ್ದಾನೆ . ನಾಲಿಗೆ ಗುರು ಲಿಂಗ; ಇಲ್ಲಿ **'ಮ'** ಕಾರವಿದೆ.

ಕಣ್ಣಿನಲ್ಲಿ ವಸ್ತುವನ್ನು ಅನಾವರಣ ಮಾಡಿ ನೋಡುವ ಶಕ್ತಿಯಿದೆ. ನೋಡಿದ್ದನ್ನು ಬಾಚಿಕೊಳ್ಳುವ ಅಜ್ಞಾನವೂ ಇದೆ. ಆಭರಣವೆನ್ನುವುದು ಹಳದಿ ಬಣ್ಣದ ಲೋಹ. ಅದು ಮಾಟದಿಂದ ಕೂಡಿದೆ. ಅಜ್ಞಾನದ ಕಣ್ಣು ನೋಡಿ ಬಾಚಿಕೊಳ್ಳಲು ದೇಹಕ್ಕೆ ಆದೇಶ ನೀಡುತ್ತದೆ. ಅರಿವಿನ ಕಣ್ಣು ಅನಾವರಣ ಮಾಡಿ (ಬಣ್ಣ, ಲೋಹ, ಮಾಟ) ನೋಡಿ ಆನಂದ ಪಡುತ್ತದೆ. ಕೊಳ್ಳುವುದಿಲ್ಲ; ಕದ್ದು ಕಳ್ಳನಾಗುವುದಿಲ್ಲ; ಕೊಂದು ಪಡೆಯುವುದಿಲ್ಲ! ಇದು **'ಶಿ'** ಕಾರ ಅಡಗಿದ ಶಿವಲಿಂಗ !

ಚರ್ಮ ಸ್ಪರ್ಶದ ಜ್ಞಾನ ಹೊಂದಿದೆ. ಚರ್ಮಕ್ಕೆ ಚರ್ಮ ತಾಗಿದರೆ ಉದ್ರೇಕದ ಅಜ್ಞಾನ. ಎರಡೂ ಚರ್ಮವೇ ಎಂದು ತಿಳಿಯುವ ಮಹಾಜ್ಞಾನ ಹೊಂದಿದ ಜಂಗಮ ಲಿಂಗವೆಂಬ **'ವಾ'**

ಕಾರ ಚರ್ಮದಲ್ಲಿದೆ.

ಕಿವಿಗೆ ಶಬ್ದ ಕೇಳುವ ಜ್ಞಾನವಿದೆ-ಅಜ್ಞಾನವೂ ಇದೆ. ಸು-ಶಬ್ದವು ಶಬ್ದವೇ; ಕು-ಶಬ್ದವು ಶಬ್ದವೆ ಆಗಿದೆ. ಶಬ್ದವನ್ನು ಅರಿವಾಗಿಸಿ ಕೇಳಿದರೆ ದೇಹಕ್ಕೆ ಸಂಕಟವಿಲ್ಲ- ಸುಖವೂ ಇಲ್ಲ. ಈ ಅರಿವೇ ಪ್ರಸಾದ ಲಿಂಗ! ಶಬ್ದ ನಿಶಬ್ದ ಮಾಡಿ; ಆ ಶಬ್ದದಲ್ಲಿ ಬ್ರಹ್ಮನನ್ನು ಆಲಿಸುವ ಶಕ್ತಿ ಕಿವಿಯಲ್ಲಿದೆ. ಇಲ್ಲಿ **'ಯ'** ಕಾರವಡಗಿದೆ.

ಹೃದಯದ ಹೃದಯವೇ ಮಹಾಲಿಂಗ ಇಲ್ಲಿ **'ಓಂ'** ಕಾರವು ಅಡಗಿದೆ. ಭ್ರಮೆಗೊಂಡು ಪಠಿಸಿದರೆ ಬರೀ ಶಬ್ದ ; ಮತ್ತೇನೂ ಅಲ್ಲ. ತಿಳಿದು ಪಠಿಸಿದರೆ ಓಂ ನಮಃಶಿವಾಯ ಎಂಬ ಮಹಾ ಮಂತ್ರವೇ ತಾನು . ಈ ಆರು ಅಕ್ಷರಗಳ ಅಕ್ಷರೋತ್ತಮನೇ ತಾನು! ಈ ಅಕ್ಷರೋತ್ತಮನಿಂದಲೇ ಸಕಲ ವೇದ ಶಾಸ್ತ್ರ, ಆಗಮ , ಪುರಾಣ, ಉಪನಿಷತ್ತುಗಳು. ಏಳುಕೋಟಿ ಮಂತ್ರಗಳು.

ಮನ ತನುವಿನಲ್ಲಿರುವ ಅರಿವು ತಿಳಿದರೆ ಏನೂ ಕಲಿಯಬೇಕಿಲ್ಲ; ತಿಳಯದಿದ್ದರೆ ಓದುವುದರಲ್ಲಿಯೇ ತನುವಿನ ಆಯುಷ್ಯ ಕಳೆಯುವುದು.

ಕೂಡಲಸಂಗಮದೇವ ಶ್ವಪಚನ ಮೆರೆದಡೆ ಜಾತಿ ಭೇದವ ಮಾಡಲಮ್ಮವು :

ಶ್ವಪಚಯ್ಯನೆಂಬ ಶರಣ ಅಸ್ಪೃಶ್ಯ. ತಿಳಿದು ಅಕ್ಷರೋತ್ತಮನಾಗಿದ್ದ. ಓಂನಮಃಶಿವಾಯ ಎಂಬ ಮಂತ್ರವೇ ತಾನಾಗಿದ್ದ. ತಿನ್ನಲು ನಾಯಿ ಮಾಂಸ ಬೇಯಿಸುತ್ತಿರುವಾಗ ಸಾಮವೇದಿಯೊಬ್ಬ ಆಕಾಶದಲ್ಲಿ ಸಂಚರಿಸುತ್ತಿದ್ದ. ಆತನ ನೆರಳು ಪ್ರಸಾದದ ಮೇಲೆ ಬೀಳದಿರಲೆಂದು ತನ್ನ ಕೆರವು ತೆಗೆದು ಮಾಂಸದ ಮಡಕೆಯ ಮೇಲೆ ಇಡುತ್ತಾನೆ. ಸಾಮವೇದಿಗೆ ಕೋಪ ಬಂದು ಶ್ವಪಚಯ್ಯ ನೊಂದಿಗೆ ವಾದಕ್ಕಿಳಿಯುತ್ತಾನೆ. ಸೋತು ಶ್ವಪಚಯ್ಯನಿಗೆ ಶರಣಾಗತನಾಗಿ ಶಿಷ್ಯನಾಗುತ್ತಾನೆ. ಹಠಯೋಗಿಯಾಗಿ ಅಷ್ಟ ಸಿದ್ದಿಗಳಲ್ಲೊಂದಾದ ಆಕಾಶದಲ್ಲಿ ಹಾರುವ ಸಿದ್ಧಿಪಡೆದು ಅಹಂಕಾರ ಪಡುತ್ತಿದ್ದ ಸಾಮವೇದಿ, ಸಕಲ ಶಾಸ್ತ್ರಗಳ ಅಭ್ಯಾಸಕ್ಕಿಂತ ತನ್ನನ್ನು ತಾನು ತಿಳಿಯುವ ವಿದ್ಯೆಯೇ ಶ್ರೇಷ್ಠವೆಂದು ತಿಳಿಯುತ್ತಾನೆ. ಶ್ವಪಚಯ್ಯನಿಗೆ ಶಿಷ್ಯನಾಗಿ ಷಡಕ್ಷರಿ ಮಂತ್ರವೇ ತಾನಾಗುತ್ತಾನೆ. ಅರಿವು ಎನ್ನುವ ಮಹಾ ಮಂತ್ರ ಶ್ವಪಚನ ಮೆರೆದಡೆ ವೇದ ಜಾತಿ ಭೇದವನು ಮಾಡಲಮ್ಮವು!

82

ಬಿಳಿಯ ಕರಿಕೆ- ಕಣಗಿಲೆಲೆಯ, ತೊರೆಯ ತಡಿಯ ಮಳಲ
ತಂದು ಗೌರಿಯ ನೋನುವ ಬನ್ನಿರೆ,
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು-
ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು.

ಶ್ರೀ ಶಂಕರಾಚಾರ್ಯರು ಸೌಂದರ್ಯಲಹರಿಯಲ್ಲಿ ಗೌರಿಯನ್ನು ಪರಿಪರಿಯಿಂದ ಬಣ್ಣಿಸಿ ಆರಾಧಿಸಿದ್ದಾರೆ. ಹಾಗೆಯೇ ಶಿವಾನಂದಲಹರಿಯಲ್ಲಿ ಗೌರೀ ವಲ್ಲಭ ಶಂಕರನನ್ನು ನೂರಾಒಂದು ಸವಿನುಡಿಗಳ ಪುಷ್ಪ ವಚನಗಳಿಂದ ಆರಾಧಿಸಿದ್ದಾರೆ.

ಜಗದ ಚಿಕ್ಕ ಚಿಕ್ಕ ಮಕ್ಕಳೆಲ್ಲರನು ಬಸವಣ್ಣನವರು ಅಕ್ಕರೆಯಿಂದ ಕರೆದು ಬಿಳಿಯ ಕರಿಕೆ- ಕಣಗಿಲೆಲೆಯ, ತೊರೆಯ ತಡಿಯ ಮಳಲ ತಂದು ಗೌರಿಯ ನೋನುವ ಬನ್ನಿರೆ ಆಕೆಯ

ವ್ರತವನ್ನು ಮಾಡೋಣ ಬನ್ನಿರೆ ಎಂದು ಕರೆದಿದ್ದಾರೆ.

ಬಿಳಿಯ ಕರಿಕೆ, ತೊರೆಯ ತಡಿಯ ಮಳಲು, ಕಣಿಗಿಲೆ ಎಲೆ. ಕರಿಕೆ ಬಿಳಿ. ಕಣಿಗಿಲೆ ಎಲೆ . ಹಾಲು ಬಿಳಿ. ಮಳಲು ಬಿಳಿ. ಇವುಗಳಿಂದ ಮಾಡಿದ ಗೌರಿ ಎನ್ನುವ ಬೊಂಬೆಯೂ ಬಿಳಿ. ಚಿಕ್ಕ ಚಿಕ್ಕ ಮಕ್ಕಳೆಲ್ಲರು ಬಿಳಿ; ಏನೂ ಅರಿಯದ ಕನ್ಯೆಯರು ಇವರು. ಗೌರಿ ಕೂಡಾ ಕನ್ಯೆ ಶುದ್ಧವಾದ ಬಿಳಿ.

ತನುವಿನ ಮನ ಹಾಲಿನಂತಿರುವಾಗಲೇ ಅರಿವಿನ ಶಂಕರನೇ ಗಂಡನಾಗಿ ಆತನ ಸಂಗ ಮಾಡಬೇಕೆಂದು ವ್ರತ ಮಾಡಬೇಕು. ತನುವುಳ್ಳ ಹಾಲುಗಲ್ಲದ ಮಕ್ಕಳೆಲ್ಲರೂ.

ಬಸವಣ್ಣನವರು ಈ ವಚನದಲ್ಲಿ ಭೇದಿಸಲು ಬಾರದ ಬೆಡಗು ತುಂಬಿದ್ದಾರೆ. ಕರಿಕೆ ಒಣಗಿದ ಮೇಲೆ ಬಿಳಿ ಬಣ್ಣಕ್ಕೆ ಬರುತ್ತದೆ. ಕಣಿಗಿಲೆ ಎಲೆ ಹಸಿರು; ಅದರ ಹಾಲು ಬಿಳಿ ಹಾಗೂ ಜಿಗಿಯಿಂದ ತುಂಬಿದೆ. ತೊರೆಯ ತಡಿಯ ಮರಳು ಕೂಡಾ ಬಿಳಿ. ಚಿಕ್ಕ ಚಿಕ್ಕ ಮಕ್ಕಳೆಲ್ಲ ಕನ್ನೆಯರು; ಅವರ ಮನ ಏನೂ ಅರಿಯದ ಶುಭ್ರ ಬಿಳಿ ! ಗೌರಿ ಎಂದರೆ ಕನ್ಯೆ ; ಬಿಳಿ ! ಗೌರ ಎಂದರೂ ಕೂಡಾ ಬಿಳಿ !

ಚಿಕ್ಕ ಚಿಕ್ಕ ಮಕ್ಕಳೆಲ್ಲ ಪ್ರಭುದ್ಧರಾಗಿ ಅನುಪಮದಾನಿ ಅರಿವಿನ ಸಂಗಯ್ಯನೇ ಗಂಡನಾಗ ಬೇಕೆಂದು ಗೌರಿಯ ನೋನುವ ಬನ್ನಿರೆ! ಗೌರಿಯರೆಲ್ಲರು ಸೇರಿ ಅರಿವೇ ಗಂಡನಾಗ ಬೇಕೆಂದು ವ್ರತವ(ನೋನುವ) ಮಾಡೋಣ ಬನ್ನಿರೆ ಎಂದು ಜಗದ ತನುಗಳಿಗೆಲ್ಲ ಅರಿವಿನ ಸೂತ್ರ ಕೊಟ್ಟಿದ್ದಾರೆ ಬಸವಣ್ಣನವರು.

ತನುವಿಗೆ ಎಷ್ಟು ವಯಸ್ಸಾದರೇನು ಅರಿವನರಿಯದ ಮನ ಕನ್ಯೆ; ತನುವಿನಲ್ಲಿಯೇ ಇದ್ದ ಅರಿವು ತನುವಿಗೇ ಬಳಕೆಯಾಗುವುದು ಎಷ್ಟೊಂದು ಜಟಿಲ ! ಈ ವಚನ ಕಬ್ಬಿಣದ ಕಡಲೆ ಎಂದೆನ್ನಿಸದಿರದು. ನುರಿಸಲು ಪ್ರಯತ್ನಿಸಿದರೆ ಸಿಹಿಗಡಲೆಯಾಗದಿರದು.

83

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ ;
ರಾಶಿಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯಾ ;
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ ;
ನಾಳಿನ ದಿನ ಕಿಂದಿನದಿನ ಲೇಸೆಂದು ಹೇಳಿರಯ್ಯಾ ;
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ!

ಮುಹೂರ್ತ ಕೇಳಿ ಮದುವೆ ಮಾಡುವುದು ಸಂಪ್ರದಾಯ. ರಾಶಿ ಕೂಟ, ದೇವಗಣ, ರಕ್ಕಸ ಗಣ, ಚಂದ್ರ ಬಲ, ತಾರಾಬಲ ಕೇಳಿ ಮದುವೆ ಮಾಡುವುದು ವಾಡಿಕೆ . ಕರೆಯಲು ಇಟ್ಟ ಹೆಸರು, ಹುಟ್ಟಿದ ನಕ್ಷತ್ರ, ಮುಹೂರ್ತ, ಗಳಿಗೆ ಫಳ ವಿಫಳದಿಂದ ಅಳೆದು ತೂಗಿ ಜ್ಯೋತಿಷಿಗಳು ನಿರ್ಣಯಿಸುತ್ತಾರೆ . ಕಾಗದದಲ್ಲಿ ಬರೆದ ನಕ್ಷತ್ರಗಳು ಕೂಡಿದರೆ ಮದುವೆ ನಿರ್ಧಾರ. ಇಲ್ಲದಿದ್ದರೆ ಇಲ್ಲ. ಮನೆತನ ಸಂಪತ್ತು ವಿದ್ಯೆ ರೂಪ ಒಪ್ಪಿಗೆಯಾದರೂ ಕಾಗದದ ಬರಹ ಒಪ್ಪಿಗೆಯಾಗಬೇಕಲ್ಲ !

ಮುಹೂರ್ತ ನೋಡಿ ಮದುವೆಯಾದ ರಾಮ ವನವಾಸಕ್ಕೆ ಹೋದ. ಏನೂ ಅರಿಯದ ಸೀತೆ ಹಿಂಬಾಲಿಸಿದಳು. ಮದುವೆಯಾದ ಲಕ್ಷ್ಮಣ ರಾಮನೊಂದಿಗೆ ಹದಿನಾಲ್ಕು ವರ್ಷ ಕಳೆದ. ಕಾಗದದಲ್ಲಿ ಬರೆದ ಮೂಹೂರ್ತ ನೋಡಿ ಮದುವೆಯಾದರೂ ನಾಲ್ಕು ಜನರಿಗೆ ಬಾಧೆ ತಪ್ಪಲಿಲ್ಲ.

ಮುಹೂರ್ತ ನೋಡಿ ತಲೆ ಸೃಷ್ಟಿ ಮಾಡಿಕೊಂಡ ಬ್ರಹ್ಮನ ತಲೆಯೂ ಉಳಿಯಲಿಲ್ಲ! ಬಸವಣ್ಣನವರು ಹೇಳಿದ ಲಗ್ನ ಇದಲ್ಲ. ಮುಹೂರ್ತ ನೋಡಿ ಮಾಡುವ ಲಗ್ನ ಹೆಣ್ಣು ಹೆಣ್ಣು ಕೂಡುವ ಲಗ್ನ! ಬಸವಣ್ಣನವರು ಹೇಳಿದ ಲಗ್ನ ಹೆಣ್ಣು ಗಂಡಿನೊಂದಿಗೆ ಕೂಡುವ ಲಗ್ನ ; ಸತಿ-ಪತಿಗಳೊಂದಾಗುವ ಲಗ್ನ! ಈ ಲಗ್ನಕ್ಕೆ ಜ್ಯೋತಿಷಿ ಬೇಕಿಲ್ಲ; ನೆರೆಹೊರೆಯವರೂ ಬೇಕಿಲ್ಲ. ಮಹಾಜ್ಞಾನಿ ಶರಣ ಸಾಕು! ಲಗ್ನದ ಬಯಕೆಯುಳ್ಳ ಒಂದು ದೇಹದ ಮನ ಸಾಕು.

ಅರಿವಿನ ಬಯಕೆಯುಳ್ಳ ಮನ ಅರಿವಿನೊಂದಿಗೆ ಮದುವೆ ಯಾಗಬೇಕೆಂದು ಗುರುವನ್ನು ಹುಡುಕಲು ಹೋಗುತ್ತದೆ. ಯೋಗ್ಯ ಗುರು ಸಿಕ್ಕಾಗ ಶಿಷ್ಯನೆಂಬ ಮನ ಅರಿವಿನ ದೀಕ್ಷೆ ಪಡೆಯಲು ರಾಶಿ ಕೂಟ, ಗಣಸಂಬಂಧ, ಚಂದ್ರ ಬಲ, ತಾರಾಬಲ ನೋಡದೆ ಇದೇ ಸರಿಯಾದ ಸಮಯವೆಂದು ಆಲಿಸಬೇಕು. ನಾಳಿನ ದಿನಕಿಂತಲೂ ಇಂದಿನ ದಿನವೇ ಲೇಸೆಂದು ಹೇಳಬೇಕು.

ಮದುವೆ ಮಾಡಿಸಲು ಸಜ್ಜಾದ ಶ್ರೀಗುರು ರೂಪುಳ್ಳ ದೇಹವೆಂಬ ಮನೆಯನ್ನು ಶುದ್ಧೀಕರಿಸುತ್ತಾನೆ. ರೂಹಿಲ್ಲದ ಚೆಲುವೆಯೆಂಬ ಮನವನ್ನು ಮದುವೆಗೆ ಅಣಿಗೊಳಿಸುತ್ತಾನೆ. ರೂಹಿಲ್ಲದ, ಕೇಡಿಲ್ಲದ, ಸಾವಿಲ್ಲದ ಚೆಲುವ ಚೆನ್ನಿಗನೊಂದಿಗೆ ಮದುವೆ ಮಾಡಿಸುತ್ತಾನೆ. ಕೂಡದ ಅಗಲದ ಕೂಟದ ಮನೆಯ ರತಿ ಸುಖಕ್ಕೆ ಸತಿ ಪತಿಗಳನ್ನು ತಳ್ಳುತ್ತಾನೆ .

ಕೂಡದ ಅಗಲದ ಕೂಟದ ಫಲ; ಸತಿ ಪತಿಗಳೊಂದಾದ ಫಲ. ಮನ ಅರಿವನ್ನು ಪೂಜಿಸಿದ ಫಲ; ತನುವಿನಲ್ಲಿ ಉಂಟಾದ ಅರಿವಿನ ಸಿಹಿಫಲ; ತನುವಿನ ಫಲ.

ಲಿಂಗಧಾರಣಸ್ಥಲ

84

ಪಾತಕ ಶತಕೋಟಿಯ ನೊರಸಲು
ಸಾಲದೆ ಒಂದು ಶಿವನ ನಾಮ?
ಸಾಲದೆ ಒಂದು ಹರನ ನಾಮ ?
ಕೂಡಲಸಂಗಮದೇವಾ,
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ.

ಗೂಂಡಾಗಿರಿ , ಕಳುವು, ಭ್ರಷ್ಟಾಚಾರ, ಹಾದರ, ಹಲ್ಲೆ, ಕೊಲೆ, ಅತ್ಯಾಚಾರದಲ್ಲಿ ಅಜ್ಞಾನದಿಂದ ನಿರತವಾದ ಮನಕ್ಕೆ ಬಲು ಸುಖ! ಬಲು ಆನಂದ. ಬೆಳಿಗ್ಗೆ ಎದ್ದು ಏನಾದರೂ ಮಾಡಲೇಬೇಕು ; ಅಂದರೆ ಮಾತ್ರ ಸಮಾಧಾನ. ಹಗಲು ಕಾಲು ಕೆದರಿ ಜಗಳ ತೆಗೆಯಬೇಕು; ಲಂಚ-ಭ್ರಷ್ಟಾಚಾರದಲ್ಲಿ ಪಾಲಗೋಳ್ಳಬೇಕು; ರಾತ್ರಿ ಅದೇ ಕನಸು ಕಟ್ಟಬೇಕು ; ಇದು ದುರ್ಗತಿ ಹೊಂದಿದ ಮನ ಸದ್ಗತಿ ಹೊಂದಬೇಕಾದ ದೇಹವನ್ನು ದುರ್ಬಳಕೆ ಮಾಡಿಕೊಂಡ ವಿಧಾನ!

ಮನವೆಂಬ ಕೋತಿ ಮಾಡಿದ ಶತಕೋಟಿ ಪಾಪವನ್ನು ಸತ್ಯದ ದೇಹಕ್ಕೆ ಸವರುತ್ತದೆ. ಕೋತಿ ಮೊಸರನ್ನ ತಿಂದು ಮ್ಯಾಕೆ ಮೋತಿಗೆ ಸವರಿದಂತೆ !

ದೇಹ ಪಾಪದ್ದಲ್ಲ. ಅದು ಅರಿವಿನ ಸಿಹಿ ಕಲ್ಲಂಗಡಿ! ದೇಹ ನೋಡಿ ಅಪರಾಧ ಗುರುತಿಸಿ ದೇಹಕ್ಕೆ ಶಿಕ್ಷೆ ಕೊಡುವುದು ಮಹಾ ಪಾಪದ ಕೆಲಸ! ಪಾಪದ ಮನ ಮಾತ್ರ ದೇಹ ಗುರುತಿಸಿ

ಪಾತಕ ಮಾಡುತ್ತದೆ.

ಸಿದ್ಧಾರ್ಥನಿಗೆ ಅಂಗುಲಿಮಾಲ ಸಿಕ್ಕಿದ್ದರೆ, ಆತನ ದೇಹವನ್ನು ಗಲ್ಲಿಗೆ ಹಾಕುತ್ತಿದ್ದ. ಅದು ಶತಕೋಟಿ ಪಾತಕ ಮಾಡಿದ ದೇಹವೆಂದು ತಿಳಿಯುತ್ತಿದ್ದ. ದೇಹಕ್ಕೆ ಶಿಕ್ಷೆ ನೀಡುತ್ತಿದ್ದ. ಹಾಗೆಯೇ ಬಸವಣ್ಣ ಕನ್ನಮಾರಿ ಮಾರಯ್ಯನಿಗೆ ಶಿಕ್ಷೆ ನೀಡುತ್ತಿದ್ದ.

ಅಂಗುಲಿಮಾಲನಿಗೆ, ಮಾರಯ್ಯನಿಗೆ ದೇಹದ ಅರಿವು ಬಳಕೆಯಾಗಿರಲಿಲ್ಲ. ಮನ ಮಾತ್ರ ದೇಹವನ್ನು ದುರ್ಬಳಕೆ ಮಾಡಿಕೊಂಡಿತ್ತು. ಬುದ್ಧ-ಬಸವಣ್ಣ ಇವರಿಬ್ಬರು ಆ ದೇಹಗಳ ಅರಿವಿನೊಂದಿಗೆ ಮಾತನಾಡಿದರು. ಮಾರಯ್ಯನ ದೇಹ ಶರಣ ಮಾರಯ್ಯನ ಅರಿವಿನ ದೇಹವಾಯಿತು. ಅಂಗುಲಿಮಾಲನ ದೇಹ ಬುದ್ಧನ ದೇಹವಾಯಿತು. ದೇಹಗಳಿಗೆ ಅಂಟಿದ ಮನದ ಶತಕೋಟಿ ಪಾಪಗಳನ್ನು ಹೊಸಕಿಹಾಕಿದರು. ನೀನೊಲಿದರೆ ಕೊರಡು ಕೊನರುವುದಯ್ಯಾ ಎನ್ನುವಂತೆ ದೇಹದ ಅರಿವು ದೇಹಕ್ಕೆ ಒಲಿತು ಕೊರಡು ಕೊನರಿತು. ಬರಡು ಹಯನಾಯಿತು. ಅಂಗುಲಿಮಾಲ ಬುದ್ಧನಾದ ! ಕನ್ನಮಾರಿ ಮಾರಯ್ಯ ಶಿವಶರಣನಾದ !

ಕೂಡಲಸಂಗಮದೇವಾ ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ:

ಅರಿವಿನ ಸಿಹಿ ಕಲ್ಲಂಗಡಿಯೆಂಬ ದೇಹಕ್ಕೆ ಆವರಿಸಿದ ಮನವೆಂಬ ಪಶು ಉಂಡಿಗೆಯ ಮಾಡಿ ಅಂದರೆ ಕೊರೆದು ಕಲ್ಲಂಗಡಿ ಹೊಕ್ಕು ಅರಿವಿನ ಸಿಹಿಯನುಂಡು ಮೆರೆಯಿತು. ಬುದ್ಧನಾಯಿತು, ಶರಣನಾಯಿತು. ಮನ ಘನಮನವಾಗಿ ಮೆರೆಯಿತು.

85

ಲಿಂಗದ ಉಂಡಿಗೆಯ ಪಶು ವಾನಯ್ಯಾ ,
ವೇಷಧಾರಿಯಾನು, ಉದರ ಪೋಷಕ ನಾನಯ್ಯಾ .
ಕೂಡಲ ಸಂಗನ ಶರಣ ,
ಮನೆಯ ಧರ್ಮದ ಕವಿಲೆಯಾನಯ್ಯಾ .

ದೇಹ ಅರಿವಿನ ಉಂಡಿಗೆ. ದೇಹವನ್ನು ಆವರಿಸಿದ ಮನ, ದೇಹ ಕೊರೆದು ಒಳಹೊಕ್ಕು ಅರಿವಿನ ಉಂಡಿಗೆ ಸೇರಿ ಆ ಅರಿವೇ ತಾನಾಗಬೇಕಿತ್ತು. ಆದರೆ ಲಿಂಗವೆಂಬ ಅರಿವಿದ್ದೂ ಆ ಅರಿವಿನ ಉಂಡಿಗೆಯ ಪಶುವಾಗಿದೆ.

ಉದರ ಪೋಷಣೆಗಾಗಿ ಮನ ತನುವಿಗೆ ಗುರು, ಶಾಸಕ, ಸಚಿವ, ಶಿಕ್ಷಕ, ಹಾದರಿಗ, ಕಳ್ಳ, ಕೊಲೆಗಡುಕ, ವೇಶ್ಯೆ , ವಿಟ, ಲಂಚ ಕೋರ, ಭ್ರಷ್ಟಾಚಾರಿ ನಾನಾ ರೀತಿಯ ವೇಷವನ್ನು ಧರಿಸಿದೆ.

ದೇಹದ ಅರಿವಿಗೆ ಶರಣು ಹೋಗಿ ಆ ಅರಿವಿನಲ್ಲಿ ಸಂಗಮವಾದ ಮನ ಕೂಡಲಸಂಗನ ಶರಣನೆ ಹೌದು. ತನುವಿನ ಮನೆಯ ಅರಿವಿನ ಧರ್ಮದ ಹಸುವೂ ಹೌದು. ಅರಿವನು ಅರಿಯದ ಪಶುವಾದ ಮನ; ಅರಿವನು ಅರಿತು ಆ ಅರಿವಿನಲ್ಲಿ ಲೀನವಾಗಿ; ಅರಿವು ಹೇಳಿದಂತೆ ಕೇಳುವ ಹಸುವಾಯಿತು. ಉದರ ಪೋಷಣೆಯ ವೇಷ ಕಳಚಿ ಅರಿವಿನ ಅಮೃತ ಬೀರುವ ಕವಿಲೆಯಾಯಿತು.

86

ನಮಃಶಿವಾಯ ನಮಃಶಿವಾಯ ನಮಃಶಿವಾಯ

ಶರಣೆಂದಿತ್ತು ಲಲಾಟಲಿಖಿತ .
ಬರೆದ ಬಳಿಕ ಪಲ್ಲಟವ ಮಾಡಬಾರದು.
ಎನ್ನ ಉರದ ಉಂಡಿಗೆ, ಶಿರದ ಅಕ್ಷರ
ಕೂಡಲಸಂಗಯ್ಯಾ ಶರಣೆಂದಿತ್ತು .

ಪ್ರತಿ ತನುವಿನ ಹಣೆಯಲ್ಲೂ ಅರಿವೆಂಬ ಗುರುವಿನ ನಮಃಶಿವಾಯ ಎಂಬ ಐದಕ್ಷರಗಳಿವೆ. ಇವು ಅಕ್ಷರೋತ್ತಮ ಬರೆದ ಅಕ್ಷರಗಳು. ಆತ ಬರೆದ ಅಕ್ಷರಗಳನ್ನು ಮನ ಓದದಿದ್ದರೆ ಅಲ್ಲಿಯೇ ಪಲ್ಲಟಗೊಳ್ಳುತ್ತದೆ.

ಮನ ಅಕ್ಷರೋತ್ತಮ ಬರೆದ ಅಕ್ಷರಗಳನ್ನು ಓದುವುದು ಬಿಟ್ಟು ರಾಮಾಯಣ, ಮಹಾಭಾರತ, ವೇದ, ಆಗಮ, ಉಪನಿಷತ್ತುಗಳನ್ನು ಓದುತ್ತದೆ. ಇವು ಅಕ್ಷರೋತ್ತಮ ಬರೆದ ಎಂಜಲುಗಳೆಂದು ಮನಕ್ಕೆ ತಿಳಿಯುವುದಿಲ್ಲ. ಓದಿ , ಮನ ಪಂಡಿತ, ಶಾಸ್ತ್ರಿ, ವಿಜ್ಞಾನಿ ಎನ್ನಿಸಿಕೊಳ್ಳುತ್ತದೆಯೇ ಹೊರತು ಮಹಾಜ್ಞಾನಿ ಎನ್ನಿಸಿಕೊಳ್ಳುವುದಿಲ್ಲ.

ಹಣೆಯಲ್ಲಿ ಬರೆದ ಅಕ್ಷರಗಳನ್ನು ಓದುವ ಕಲೆ ಮನ ಮಹಾಜ್ಞಾನಿ ಶರಣರಿಂದಲೇ ತಿಳಿಯಬೇಕು. ಬುದ್ಧ , ಮಹಾವೀರ, ಬಸವಾದಿ ಶರಣರು, ದಾಸವರೇಣ್ಯರು ಬರೆದ ಸೂತ್ರದಿಂದಲೇ ತಿಳಿಯಬೇಕು.

ಎನ್ನ ಉರದ ಉಂಡಿಗೆ , ಶಿರದ ಅಕ್ಷರ ಕೂಡಲಸಂಗಯ್ಯಾ ಶರಣೆಂದಿತ್ತು :

ಅರಿವಿನ ದೇಹ, ಅಕ್ಷರೋತ್ತಮನ ಹಣೆ ಇವು ಮನದ ಸಂಪತ್ತು. ಮನ ತನ್ನ ಅಂತರಾಳದ ಸಂಪತ್ತಿಗೆ ಶರಣು ಹೋಗಬೇಕು. ಅರಿವಿನ ದೇಹದಲ್ಲಿ ಅಕ್ಷರೋತ್ತಮನ ಹಣೆಯಲ್ಲಿ ಸಂಗಮವಾಗಿ ಕೂಡಲ ಸಂಗಯ್ಯನೇ ತಾನಾಗಬೇಕು. ಅರಿವಿನ ಸಂಗಯ್ಯನಿಗೆ ಶರಣು ಹೋಗಿ ಶರಣೆನ್ನಬೇಕು. ಶರಣನೇ ತಾನಾಗಬೇಕು.

87

ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು;
ಲಿಂಗದೇವನಿಲ್ಲದ ತಾವು ನರವಿಂಧ್ಯ , ಹೊಗಲಾಗದು;
ದೇವಭಕ್ತರಿಲ್ಲದೂರು ಸಿನೆ, ಹಾಳು !
ಕೂಡಲಸಂಗಮದೇವಾ.

ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು:

ಅರಿವಿಲ್ಲದ ದೇಹ ಒಂದೂ ಇಲ್ಲ. ಅರಿವಿಲ್ಲದ ಮುಖವೂ ಒಂದೂ ಇಲ್ಲ. ವಿಭೂತಿಯಿಲ್ಲದ ಹಣೆ ಕೂಡಾ ಒಂದೂ ಇಲ್ಲ. ಭಸ್ಮ ಹಚ್ಚದಿದ್ದರೇನಂತೆ; ಕಾಣುವ ಹಣೆಗಳೆಲ್ಲ ಭಸ್ಮದ ಹಣೆಗಳೇ; ಅರಿವಿನ ಹಣೆಗಳೇ ; ಕೂಡಲ ಸಂಗಯ್ಯನೆಂಬ ಅಕ್ಷರೋತ್ತಮನಿದ್ದ ಹಣೆಗಳೇ ಆಗಿವೆ.

ವಿಭೂತಿಯ ಮೂಲ ಸೆಗಣಿ ; ಸೆಗಣಿ ಬಿಸಿಲ ಝಳದಿಂದ ಒಣಗಿದರೆ ಬೆರಣಿಯಾಗುತ್ತದೆ! ಬೆರಣಿಗೆ ಅಗ್ನಿ ತಾಗಿದರೆ ವಿಭೂತಿಯಾಗುತ್ತದೆ!! ಸೆಗಣಿಯನ್ನು ನೋಡಲಾಗದು, ಮುಟ್ಟಲಾಗದು. ಒಣಗಿದ ಬೆರಣಿಯನ್ನು ಅಗ್ನಿ ಬಳಸದೆ ಇರಲಾಗದು. ಅಗ್ನಿ

ಮುಟ್ಟಿದ ಬೆರಣಿ ಭಸ್ಮವಾಗದೇ ಇರಲಾಗದು. ಭಸ್ಮದಲ್ಲಿ ಸೆಗಣಿಯ ಗುಣಗಳಿಲ್ಲ. ಸೆಗಣಿಯಲ್ಲಿ ಭಸ್ಮ ಅಡಕವಾಗಿದೆ. ಭಸ್ಮ ನೋಡುವ ಅರಿವು ಪ್ರತಿ ಕಣ್ಣಿನಲ್ಲಿ ಅಡಕವಾಗಿದೆ. ಭಸ್ಮ ನೋಡಿದರೆ ಸೆಗಣಿ ಕಾಣುವುದಿಲ್ಲ. ಸೆಗಣಿ ನೋಡುವ ಕಣ್ಣಿಗೆ ಭಸ್ಮ ಕಾಣುವುದಿಲ್ಲ. ಕಣ್ಣಿನಲ್ಲಿ ಆವರಿಸಿದ ಸೆಗಣಿ ಬೆಂದು ಭಸ್ಮವಾದರೆ, ನೋಡುವ ಹಣೆಗಳೆಲ್ಲ ವಿಭೂತಿಯ ಹಣೆಗಳೆ ಆಗಿವೆ; ಅರಿವಿನ ಮುಖಗಳೇ ಆಗಿವೆ. ಅರಿವು ಇಲ್ಲದ ಕಣ್ಣಿನಿಂದ ನೋಡಲಾಗದು.

ಲಿಂಗದೇವನಿಲ್ಲದ ಠಾವು ನರವಿಂಧ್ಯ , ಹೊಗಲಾಗದು:

ಅರಿವಿನ ದೇವರಾದ ಗುರುದೇವನಿಲ್ಲದ ಠಾವು ನರವಿಂಧ್ಯ , ಹೊಗಲಾಗದು ಎಂದಿದ್ದಾರೆ ಬಸವಣ್ಣನವರು. ಒಳ ಹೊರ ಠಾವಿನಲ್ಲೂ ದೇವರಿದ್ದು ಅದನ್ನು ನೋಡದ ಮನ ಮರ್ಕಟ!

ಮರ್ಕಟಗಳೇ ವಾಸಮಾಡಿದ ಸ್ಥಳದಲ್ಲಿ ಭಕ್ತ ಅರಿವಿನೊಂದಿಗೆ ಬೆರೆಯುವುದಾದರೂ ಹೇಗೆ? ದೇವನಿಗೂ ಅವನನ್ನು ಅರಿಯುವ ಭಕ್ತನಿಗೂ ಯಾವ ಅಡ್ಡಗೋಡೆಗಳೂ ಇಲ್ಲ. ದೇಹವನ್ನೇ ಊರು ಪುರ ಪಟ್ಟಣವೆಂದು ಕರೆಯುತ್ತಾರೆ. ಅದು ಬಿಳಿಯ ಹಾಳೆ ಠಾವು; ಆ ಪುರದಲ್ಲಿಯೇ ಪುರುಷೋತ್ತಮನಿದ್ದಾನೆ. ಪುರದಲ್ಲಿಯೇ ಆತನನ್ನು ನೆನೆದು ಪುರಸೇರಿ ಪುರುಷೋತ್ತಮನಾಗುವ ಭಕ್ತನಿದ್ದಾನೆ. ದೇವ-ಭಕ್ತನಿಲ್ಲದೂರು ಸಿನೆ. ದೇವನೂ-ಭಕ್ತನೂ ತೆರಹಿಲ್ಲದಂತೆ ದೇಹದಲ್ಲಿಯೇ ಸಂಗಮವಾಗಿದ್ದಾರೆ. ನೆಲೆಸಿದ್ದಾರೆ. ಇದು ಗೋಚರವಾಗದ ಮನ ಹಾಳು!

88

ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ
ಶರಣರ ಕಂಡಡೆ ನಂಬುವುದೆನ್ನ ಮನವು,
ನಚ್ಚುವುದೆನ್ನ ಮನವು ಸಂದೇಹವಿಲ್ಲದೆ.
ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ.

ಮನ ದೇಹದ ಅರಿವು ಬಳಕೆ ಮಾಡಿಕೊಂಡು ಸರಿ ಹೋಗಲು ಬರುತ್ತದೆಯೇ ಹೊರತು ಮತ್ತೊಂದು ದೇಹಕ್ಕೆ ಪಾಠ ಮಾಡಿ ಆ ದೇಹವನ್ನು ಸರಿಪಡಿಸಲು ಬರುವುದಿಲ್ಲ. ದೇಹದಲ್ಲಿರುವ ಅರಿವು ಬಳಕೆ ಮಾಡಿಕೊಂಡು ಸರಿಹೋಗುವ ಮನ ಪ್ರತಿ ದೇಹದಲ್ಲಿಯೂ ಇದೆ. ಅದಕ್ಕಾಗಿಯೇ ಬಸವಣ್ಣನವರು ತನಗೆ ತಾನೇ ಹೇಳಿಕೊಂಡು ಸರಿಹೋಗುವ ಸೂತ್ರವನ್ನು ಕರುಣಿಸಿದರು.

ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ ಶರಣರ ಕಂಡಡೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು ಸಂದೇಹವಿಲ್ಲದೆ:

ಜ್ಞಾನ ಉಳ್ಳ ದೇಹ, ಅದನ್ನು ತಿಳಿಯುವ ಬಯಕೆಯುಳ್ಳ ದೇಹ, ಜ್ಞಾನಿಯೇ ತಾನಾಗುವ ದೇಹ. ಇದು ಶಿವನ ದೇಹ! ಪ್ರತಿ ದೇಹದ ಹಣೆ ಶಿವನ ಮಣಿಮುಕುಟ! ಕಾಯ ಯಾವ ವೇಷದಲ್ಲಿದ್ದರೇನು? ಯಾವ ಕಾಯಕದಲ್ಲಿದ್ದರೇನು? ಅರಿವಿನ ಕಾಯ; ಅರಿವಿನ ಲಾಂಛನ! ಈ ಲಾಂಛನವನ್ನು ನಂಬಲೇಬೇಕು. ಸಂದೇಹವಿಲ್ಲದೆ ಹೀಗೆ ನಂಬಿ ಗೌರವಿಸುವ ಲಕ್ಷಣವೇ ಗುರುವಿನ ಲಕ್ಷಣ. ನಿಜ ಶರಣನ ಲಕ್ಷಣ!

ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ:

ಪ್ರತಿ ತನು ಅರಿವಿನ ಲಾಂಛನ. ಆ ತನುವಿನ ಅಂತರಂಗವನ್ನು ಆ ತನುವಿನ ಅರಿವೆಂಬ ಗುರುವೇ ಬಲ್ಲನು! ಆ ಗುರುವನ್ನು ಹೊಂದಿದ ತನುವಿನ ಸೇವೆಯನ್ನು ಅರಿವು ಬಲ್ಲ ಗುರುವೇ

ಮಾಡಬೇಕು. ತನು ಮನಗಳೆರಡೂ ಅರಿವೆಂಬ ಗುರುವಿನ ತೊತ್ತು; ಸೇವಕರು. ಈ ಸೇವಕನಿಗೆ ಸೇವಕನ ಕೆಲಸವಲ್ಲದೆ ಮತ್ತೊಂದಿಲ್ಲ. ಅರಿವಿನ ಸೇವಕನಾದವನು ಮನವೆಂಬ ಅರಸನ ಸುದ್ದಿಗೆ ಹೋಗುವಂತಿಲ್ಲ; ಅದು ಮರ್ಕಟ!

ಅರಿವಿನ ತನುವನ್ನು ಆದರಿಸದೆ ಅಂದರೆ ತನು-ಮನ-ಅರಿವು ಅಡ್ಡ ತ್ರಿಪುಂಡ್ರದ ಮಣಿಮುಕುಟ ಉಳ್ಳ ತನು ಈ ತನುವನ್ನು ಕಳ್ಳ, ಸುಳ್ಳ, ಹಾದರಿಗ, ವಿಟ, ವೇಶ್ಯೆ, ಭ್ರಷ್ಟ ಲಂಚಕೋರ, ಕೊಲೆಗಡುಕ ಎಂದು ದೂಷಣೆ ಮಾಡುವವರನ್ನು ಕಂಡಡೆ ನಂಬದೆನ್ನ ಮನವು, ನಚ್ಚದೆನ್ನ ಮನವು ಕೂಡಲಸಂಗಮದೇವಾ.

ತಾಮಸನಿರಸನಸ್ಥಲ

89

ಆರಾಧ್ಯ ಪ್ರಾಣಲಿಂಗವೆಂದರಿದು,
ಪೂರ್ವಗುಣವನಳಿದು ಪುನರ್ಜಾತನಾದ ಬಳಿಕ
ಸಂಸಾರ ಬಂಧುಗಳೆನ್ನವರೆಂದಡೆ, ನಂಟು ಭಕ್ತಿ ;
ನಾಯಕ ನರಕ!
ಇಂತೆಂದುದು ಕೂಡಲಸಂಗನ ವಚನ.

ತನುವಿನ ಪ್ರಾಣಕ್ಕೆ ಅಂಟಿದ ಅರಿವೇ ಪ್ರಾಣಲಿಂಗ. ಆ ಅರಿವೇ ಆರಾಧ್ಯ ದೈವ. ಅರಿವಿನ ನೆರವಿನಿಂದ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಎನ್ನುವ ಅವಗುಣಗಳನ್ನು ಕಳೆದುಕೊಳ್ಳಬೇಕು. ಇದೇ ಪುನರ್‌ಜನ್ಮ ! ಹೀಗೆ ಮರು ಹುಟ್ಟು ಪಡೆದ ಬಳಿಕ ಮತ್ತೆ ಅರಿಷಡ್ವರ್ಗಗಳೆಂಬ ಬಂಧುಗಳನ್ನು ಎನ್ನವರೆನ್ನಬಹುದೆ?

ತನು ಕಾಮದೊಂದಿಗೆ ಸಂಸಾರ ಹೂಡಬೇಕೆ? ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಬಂಧುಗಳನ್ನಾಗಿ ಮಾಡಿಕೊಳ್ಳಬೇಕೆ? ಈ ನೆಂಟತನದ ನಂಟು ಭಕ್ತಿ ನಾಯಕ ನರಕ! ಇಂತೆಂದುದು ಅರಿವಿನ ಆರಾಧ್ಯದೈವ! ಒಡಲೊಳಗಿದ್ದು ಒಡಲ ಸೋಂಕದ ಒಡಲೊಡೆಯ ಕೂಡಲಸಂಗನ ವಚನ!

90

ತಾಳಮರದ ಕೆಳಗೆ ಒಂದು ಹಾಲಹರವಿಯಿದ್ದಡೆ,
ಅದ ಹಾಲಹರವಿಯೆನ್ನರು; ಸುರೆಯ ಹರವಿಯೆಂಬರು.
ಈ ಭಾವನಿಂದೆಯ ಮಾಣಿಸಾ,
ಕೂಡಲಸಂಗಮದೇವಾ.

ತಾಳಮರದಿಂದ ಒಸರುವ ಜಲ ಹೆಂಡ ಎಂದು ಕಣ್ಣಿನ ಅರಿವಿಗೆ ತಿಳಿದಿದೆ. ಹಸುವಿನಿಂದ ಬರುವುದು ಹಾಲು ಎನ್ನುವ ಅರಿವು ಕಣ್ಣಿಗೆ ಇದೆ. ತಾಳಮರದಿಂದ ಬಂದ ದ್ರವ ಹರವಿಯಲ್ಲಿ

ಸಂಗ್ರಹವಾದರೇನು, ಹಸುವಿನಿಂದ ಬಂದ ಹಾಲು ಹರವಿಯಲ್ಲಿ ಸಂಗ್ರಹವಾದರೇನು? ಕಣ್ಣಿನಲ್ಲಿ ಇರುವ ಅರಿವು ನೋಡಿ ಉದಾಸೀನ ಮಾಡುತ್ತದೆ. ಆದರೆ ಕಣ್ಣಿನಲ್ಲಿ ಬೆರೆತ ಮನ ಹೆಂಡದ ರುಚಿ ಅದರ ಚೇಷ್ಟೆಯನ್ನು ಸಂಗ್ರಹ ಮಾಡಿಕೊಂಡಿದೆ. ಹಾಲು ಮತ್ತು ಅದರ ರುಚಿ ಕೂಡಾ ಸಂಗ್ರಹ ಮಾಡಿಕೊಂಡಿದೆ.

ಮನ ಸ್ನೇಹಿತನನ್ನು ಸದ್ಭಾವದಿಂದ ಕಾಣುತ್ತದೆ; ಆತ ತಾಳಮರದ ಕೆಳಗೆ ಕುಳಿತು ಹಾಲು ಕುಡಿದರೆ ಹೆಂಡ ಕುಡಿದನೆಂದು ನಿರ್ಧರಿಸಿ ದುರ್ಭಾವದಿಂದ ಕಾಣುತ್ತದೆ. ಹಲವಾರು ವರ್ಷಗಳಿಂದ ಸ್ನೇಹದಿಂದ ಭಾವಿಸಿದ ಮನ ದುರ್ಭಾವದಿಂದ ತೆಗಳುತ್ತದೆ. ಕುಡಿದ ತನು ಸುಖದಿಂದಲೇ ಇದೆ. ನೋಡಿದ ತನು ದುರ್ಭಾವದಿಂದ ಕುದಿಯುತ್ತದೆ. ಕುಡಿಯುವ ತನುವನ್ನು ಸರಿಮಾಡಲು ಬರುವುದಿಲ್ಲ. ನೋಡುವ ತನುವಿನ ಭಾವ - ದುರ್ಭಾವ ಎರಡೂ ಅಳಿದು ನಿರ್ಭಾವವಾಗಬಾರದೆ?

ತನುವಿನ ಮನದಲ್ಲಿ ಉಂಟಾದ ಭಾವ ದುರ್ಭಾವಗಳನ್ನು ಅರಿವಿನಿಂದಲೇ ಕಳೆದುಕೊಳ್ಳಬೇಕು. ಈ ಉಭಯ ಭಾವನಿಂದೆಯ ಕಳೆಯುವ ಶಕ್ತಿ ಅರಿವೆಂಬ ಸಂಗಯ್ಯನಿಗೆ ಮಾತ್ರ ಇದೆ. ಆತ ಮನ ಮಾಡುವ ಭಾವವನ್ನು ದುರ್ಭಾವವನ್ನು ತನ್ನಲ್ಲಿ ಸಂಗಮ ಮಾಡಿಕೊಂಡು ಅರಿವಿನ ಕಣ್ಣಿನಿಂದ ನೋಡುತ್ತಾನೆ. ತಾಳಮರ, ಕುಡಿಯುವ ವ್ಯಕ್ತಿ ಹರವಿ ಕಾಣುತ್ತದೆ. ಇದು ಭಾವನಿಂದೆ ಮಾಣಿಸುವ ಬಸವಣ್ಣನ ಸೂತ್ರ!

91

ಸುಪಥ ಮಂತ್ರದುಪದೇಶವ ಕಲಿತು ಯುಕ್ತಿಗೆಟ್ಟು ನಡೆವಿರಯ್ಯಾ;
'ತತ್ತ್ವಮಸಿ ' ಎಂಬುದನರಿದು ಕತ್ತಲೆದೊಡವಿರಯ್ಯಾ.
ವೇದವಿಪ್ರರ ವಿಚಾರಿಸಿ ನೋಡಲು
ಉಪದೇಶ ಪರೀಕ್ಷೆ ನಾಯಕ ನರಕ, ಎಂದುದು
.ಕೂಡಲಸಂಗನ ವಚನ ಸೂಚನೆ !

ಮಂತ್ರ ಹೇಳಿದರೆ ಕತ್ತಲೆ ಹೋಗಿ ಬೆಳಕಾಗುವುದಿಲ್ಲ. ದೀಪ ಬೆಳಗಿಸಲೇಬೇಕು. ಕತ್ತಲೆ ಕಳೆಯಲೇ ಬೇಕು. ಮಂತ್ರ ಹೇಳಿ ಅರಿವಿನಿಂದ ನಡೆಯಲೇ ಬೇಕು. ತನುವೇ ಮಂತ್ರ; ತನುವಿನ ಅರಿವೇ ಮಂತ್ರ !

'ತತ್ತ್ವ ಮಸಿ' ತತ್+ತ್ವಮ್+ಅಸಿ ; ತತ್ತ್ವ ನೀನೇ ಇದ್ದೀಯ ಅದನ್ನು ತಿಳಿ ! ಅದ ರಂತೆ ನೀನು ಇರು. ನೀನು ಅರಿವಿನಿಂದ ಇರುವಿಕೆಯೇ ಮಂತ್ರ! ಹೀಗೆನ್ನುವ ಮಂತ್ರವನ್ನು ಕೂಡಾ ಕಲಿತು ಬಾಯಿಯಿಂದ ಬೊಗಳಿ ಯುಕ್ತಿಗೆಟ್ಟು ನಡೆದರೆ ಮಂತ್ರವೇನು ಮಾಡೀತು. ತನುವಿನಿಂದ ಬಂದ ಶಬ್ದ ತನುವೇ ಪಾಲಿಸದಿದ್ದರೆ ತನುವಿಗೂ ಶಬ್ದಕ್ಕೂ ಸಂಬಂಧವಿಲ್ಲ. ಮಂತ್ರ ದಿಂದ ಕತ್ತಲೆ ಕಳೆಯಲು ಬರುವುದಿಲ್ಲ !

ವೇದವಿಪ್ರರ ವಿಚಾರಿಸಿ ನೋಡಲು ಉಪದೇಶ ಪರೀಕ್ಷೆ ನಾಯಕ ನರಕ, ಎಂದುದು ಕೂಡಲಸಂಗನ ವಚನ ಸೂಚನೆ :

ವಿಚಾರಿಸಿ ನೋಡಲು ಉಪದೇಶವೂ ; ಉಪದೇಶ ಮಾಡುವವರನ್ನು ಪರೀಕ್ಷೆಗೊಳಪ

ಡಿಸುವುದೂ ನಾಯಕ ನರಕ !

ತತ್ತ್ವಮಸಿ ಎನ್ನುವ ವಚನದ ಸಾರವು : ತನುವೇ ತತ್ತ್ವ ; ಅದನ್ನು ತನುವಿನ ತತ್ತ್ವದಿಂದಲೇ ತಿಳಿಯಬೇಕು ಎಂದು ಹೇಳುತ್ತಿರುವಾಗ ಒಂದು ತನು ಮತ್ತೊಂದು ತನುವನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುವುದು ನಾಯಕ ನರಕವಲ್ಲವೆ? ಒಂದು ತನು ಮತ್ತೊಂದು ತನುವನ್ನು ಗುರುವನ್ನಾಗಿ ಮಾಡಿಕೊಳ್ಳುವುದು ನಾಯಕ ನರಕವಲ್ಲವೆ?

ತನುವಿನಲ್ಲಿಯೇ ತನ್ಮಯವಾದ ಅರಿವು ಇದೆ. ತತ್ತ್ವ ಇದೆ. ಮನ ಈ ಅರಿವನ್ನೇ ಗುರುವನ್ನಾಗಿ ಮಾಡಿಕೊಳ್ಳಬೇಕು. ಮನ ಈ ಅರಿವೆಂಬ ಗುರುವಿಗೆ ಶಿಷ್ಯನಾಗಿ ಅರಿವಿನ ತತ್ತ್ವ ತಿಳಿಯಬೇಕು. ಇದೇ ಸುಪಥ ಮಂತ್ರದುಪದೇಶ ಎಂದಿದ್ದಾರೆ ಬಸವಣ್ಣನವರು.

92

ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟಡೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ
ಭಕ್ತಿಯೆಂತಹುದು? ಮುನ್ನಿನಂತೆ!
ಕೂಡಲಸಂಗಯ್ಯಾ ,
ಮನ ಹೀನನ ಮೀಸಲ ಕಾಯ್ದಿರಿಸಿದಂತೆ!

ನುಲಿಯಿಂದ ತಯಾರಿಸಲ್ಪಟ್ಟ ನೆಲುವಿನಲ್ಲಿ ಕುಂಬಳ ಕಾಯಿ ಇಟ್ಟರೆ ಕೊಳೆಯುವುದಿಲ್ಲ. ಬಹಳ ದಿನಗಳವರೆಗೆ ಬಾಳುತ್ತದೆ. ಸದ್ಬಳಕೆಗೆ ಬರುತ್ತದೆ. ಇನ್ನೂ ಬಹಳ ದಿನಗಳವರೆಗೆ ಉಪಯೋಗಕ್ಕೆ ಬರಬೇಕೆಂದು ಕಬ್ಬಿಣದ ಸರಳುಗಳಲ್ಲಿ ಬಂಧಿಸಿದರೆ; ಎರಡು ಮೂರುದಿನಗಳಲ್ಲಿಯೇ ಕೊಳೆಯುತ್ತದೆ!

ಅಳಿಮನದವನಿಗೆ ಶಿವದೀಕ್ಷೆಯ ಕೊಟ್ಟಡೆ ಲಿಂಗ, ವಿಭೂತಿ, ರುದ್ರಾಕ್ಷಿಮಾಲೆ, ತನುವಿನ ಮೇಲೆ ಶೋಭಿಸುತ್ತದೆಯೇ ಹೊರತು; ಮನದ ಸ್ವಭಾವ ಹಾಗೇ ಉಳಿಯುತ್ತದೆ.

ತನುವನ್ನು ಆವರಿಸಿರುವ ಮನಕ್ಕೆ ಶಿವ ದೀಕ್ಷೆ ನಿಲ್ಲುವುದಿಲ್ಲ; ತನುವಿನ ಅರಿವೆಂಬ ಶಿವನಿಗೆ ಶಿವದೀಕ್ಷೆಯ ಅವಶ್ಯಕತೆಯಿಲ್ಲ.

ಮನ ಹೀನನ ಮೀಸಲ ಕಾಯ್ದಿರಿಸಿದಂತೆ:

ತನುವನ್ನು ಆವರಿಸಿದ ಹೀನ ಮನ; ತನುವಿನ ಅರಿವನ್ನು ಬಳಕೆ ಮಾಡಿಕೊಳ್ಳಲಿಲ್ಲ. ಅರಿವೆಂಬ ಶಿವನು ತನುವಿನಲ್ಲಿ ಮೀಸಲಾಗಿ ಹಾಗೆಯೇ ಉಳಿದನು. ಮನಕ್ಕೆ ಬೋಧಿಸಿದ ಶಿವದೀಕ್ಷೆ ತನುವಿಗೆ ಬಳಕೆಯಾಗದೆ ಕಬ್ಬಿಣದ ಸರಪಳಿಯಾಯಿತು. ಕುಂಬಳ ಕಾಯಿಯಂತೆ ತನು ಕೊಳೆತು ಹಾಳಾಯಿತು. ತನುವಿನ ಅರಿವು ಮನಕ್ಕೆ ಬಳಕೆಯಾಗದೆ ತನುವಿನೊಂದಿಗೆ ವ್ಯರ್ಥವಾಯಿತು.

93

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ

ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ!
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ,
ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ!
ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟಡೆ,
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ!

ಮನ ಸೆಗಣಿಯಿದ್ದಂತೆ! ಒಣಗಿ ಬೆರಣಿಯಾಗಿ ಭಸ್ಮವಾಗುವ ಬಯಕೆಯಿದ್ದ ಮನಕ್ಕೆ ಅರಿವಿನ ಶಿವದೀಕ್ಷೆಯ ಕೊಟ್ಟರೆ ತನುವಿನ ಹಣೆಗೆ ವಿಭೂತಿಯಾಗುತ್ತದೆ. ಇಲ್ಲದಿದ್ದರೆ ಸೆಗಣಿಯ ಬೆನಕನಿಗೆ ಸಂಪಿಗೆಯ ಹೂಗಳಿಂದ ಪೂಜಿಸಿ ಊದಿನಕಡ್ಡಿ ಬೆಳಗಿದಂತೆ! ಅದರ ಗಂಜಳದ ದುರ್ವಾಸನೆ ಹೋಗುವುದಿಲ್ಲ.

ಮಣ್ಣ ಪುತ್ಥಳಿಯನ್ನು ದೇವರೆಂದು ನಿತ್ಯ ನಿತ್ಯ ಜಲದಲ್ಲಿ ತೊಳೆದು ಪೂಜಿಸಿದರೆ ಕೆಸರು ಬಿಡುವುದಲ್ಲದೆ; ಪುತ್ಥಳಿಯ ಅಚ್ಚಿಗೆ ಕಾರಣವಾದ ಜಲ ಬಿಡುವುದಿಲ್ಲ!

ಜಗದ ತನುಗಳಿಗೆ ಆವರಿಸಿದ ಮನಕ್ಕೆ ಶಿವದೀಕ್ಷೆಯ ಕೊಟ್ಟಡೆ, ಕೆಟ್ಟ ಮನವೇಕೆ ತನುವನ್ನು ಸದ್ಭಕ್ತನನ್ನಾಗಿ ಮಾಡುವುದು. ಅರಿವಿನ ತನುವಿಗೆ ಕೇಡುತಂದು ತನುವಿನೊಂದಿಗೆ ಸುಖಿಸುವುದೇ ಮನದ ಕೆಲಸ!

94

ಕಬ್ಬುನದ ಕೋಡಗವ ಪರುಷ ಮುಟ್ಟಲು,
ಹೊನ್ನಾದಡೇನು ಮತ್ತೇನಾದಡೇನು
ತನ್ನ ಮುನ್ನಿನ ರೂಹ ಬಿಡದನ್ನಕ್ಕ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರಿಗಯ್ಯಾ!

ಕಬ್ಬಿಣದ ಕೋತಿಗೆ ಪರುಷ ತಾಗಿದರೆ ಚಿನ್ನವಾಗುತ್ತದೆ. ಅದರ ರೂಪ ಮಾತ್ರ ಕೋತಿಯದೇ! ಕಬ್ಬಿಣದ ಕೋತಿಯಾದರೇನು ಚಿನ್ನದ ಕೋತಿಯಾದರೇನು? ಕೋತಿ-ಕೋತಿಯೇ! ಅದರ ಮರ್ಕಟ ಸ್ವಭಾವ ಅಳಿಯದು.

ಬೆಳಕಿನ ಕಿರಣಗಳೇ ಕತ್ತಲನ್ನು ಸೃಷ್ಟಿ ಮಾಡಿದಂತೆ; ಅರಿವಿನ ಬೆಳಕಿನಿಂದಲೇ ಮನ ಸೃಷ್ಟಿಯಾಗಿದೆ. ಕತ್ತಲು ನುಂಗಿ ಸೂರ್ಯ ಹುಟ್ಟುತ್ತಾನೆ; ಸೂರ್ಯ ಮುಳುಗಿ ಕತ್ತಲು ಹುಟ್ಟುತ್ತದೆ. ಕತ್ತಲ ಗರ್ಭದಲ್ಲಿ ಸೂರ್ಯ ಅಡಗಲಿಲ್ಲ; ಸೂರ್ಯನ ಬೆಳಕಿನಿಂದ ಉಂಟಾದ ನೆರಳೇ ಕತ್ತಲಾಯಿತು. ಸೂರ್ಯ ಮುಳುಗುವುದಿಲ್ಲ. ತೇಲುವುದಿಲ್ಲ. ಭೂಮಿ ತಿರುಗುವುದುರಿಂದ ಕತ್ತಲು ಬೆಳಕಿನಾಟ!

ಹಾಗೆಯೇ ತನುವಿನಲ್ಲಿ ಅರಿವು ಸೂರ್ಯನಂತೆ ಸದಾ ಬೆಳಗುತ್ತದೆ. ಆ ಬೆಳಕಿನಿಂದಲೇ ಮನವೆಂಬ ಕತ್ತಲು ತನುವಿನಲ್ಲಿಯೇ ಸೃಷ್ಟಿಯಾಗಿದೆ. ಮನ ಒಮ್ಮೆ ಅರಿವಿನ ಬೆಳಕಿಗೆ ಬಂದಾಗ ಅರಿವಿನಂತೆ ಮಾತನಾಡುತ್ತದೆ. ಮತ್ತೊಮ್ಮೆ ಅರಿವಿನ ವೇಷಧರಿಸಿ ಗುರುವಾಗಿ ಮಾತನಾಡುತ್ತದೆ.

ಮನ ತನುವಿನೊಂದಿಗೆ ಯಾವ ವೇಷಧರಿಸಿದರೇನು? ಕಳ್ಳನಾದರೇನು ಗುರುವಾದರೇನು

ಅದು (ಡಂಬಕ) ವೇಷವೇ ಸ್ವತಃ ಅರಿವಲ್ಲ. ಮನ ಅರಿವನ್ನು ನಂಬಿ, ಅರಿವೇ ತಾನಾದಾಗ ವೇಷ ಕಳಚಿ; ಅಪ್ಪಟ ಅಪರಂಜಿಯಾಗುತ್ತದೆ. ಮರ್ಕಟ ತನವಳಿದು ಮಹಾಮಾನವನಾಗುತ್ತದೆ. ಘನದಲ್ಲಿ ಬೆರೆತು ಘನಮನವಾಗುತ್ತದೆ.

95

ತನುವಿನಲೊಂದಿಟ್ಟು ಮನದಲೆರಡಿಟ್ಟಡೆ,
ಬಲ್ಲನೊಲ್ಲನಯ್ಯಾ, ಲಿಂಗವು ಬಲ್ಲನೊಲ್ಲನಯ್ಯಾ.
ಪರಚಿಂತೆಯನೊಲ್ಲನೊಲ್ಲ
ಕೂಡಲಸಂಗಮದೇವ.

ಜಗದ ತನುಗಳೆಲ್ಲ ಅರಿವಿನ ತನುಗಳು! ತನುವಿನಲ್ಲಿರುವ ಅರಿವನ್ನು ಮನ ಸದ್ಬಳಕೆ ಮಾಡುತ್ತಿಲ್ಲ ಅಷ್ಟೆ. ತನುವಿಗೆ ಅರಿವಿನ ವೇಷ ಹಾಕಿ ಮನ ತನ್ನ ಆಸೆ ಆಮಿಷಗಳನ್ನು ತನುವಿನ ಮೂಲಕ ಪೂರೈಸಿಕೊಳ್ಳತ್ತದೆ.

ಪುಸ್ತಕ ಓದಿ ಮನ ತನುವಿಗೆ ಶಾಸ್ತ್ರಿಯ ವೇಷ ಹಾಕುತ್ತದೆ; ವೇಷಕ್ಕೂ ತನುವಿಗೂ ಮನಕ್ಕೂ ಸಂಬಂಧವೇ ಇರುವುದಿಲ್ಲ. ಜಗದ ಚಿಂತೆ ಲೋಕದ ಚಿಂತೆ ಪರಚಿಂತೆಗಾಗಿ ವೇದಿಕೆಯನ್ನು ವೇಷ ವ್ಯವಹಾರಕ್ಕಾಗಿ ಬಳಸಿಕೊಳ್ಳುತ್ತದೆ. ಹೇಳುವ ಉಪನ್ಯಾಸಕ್ಕೂ ತನುವಿನಲ್ಲಿ ನಡೆಯುವ ಹಾದರಕ್ಕೂ ಸಂಬಂಧವೇ ಇರುವುದಿಲ್ಲ. ಪುಸ್ತಕದ ಮಾತು ಬುದ್ಧಿವಾದಕ್ಕೆ ಬಳಕೆಯಾಯಿತು ತನುವಿಗೆ ಬಳಕೆಯಾಗಲಿಲ್ಲ.

ಮನ ಹೇಳುವ ಉಪನ್ಯಾಸ ಅರಿವಿಗೆ ಗೊತ್ತಿದೆ. ಉಪನ್ಯಾಸ ಮಾಡುವ ಮನವೆಂಬ ಮರ್ಕಟವನ್ನು ಅರಿವೆಂಬ ಗುರು ಖಂಡಿಸದೆ ಇರಲಾರ. ಮರ್ಕಟ ಮಾಡುವ ಚೇಷ್ಟೆಯೆಲ್ಲ ಅರಿವು ಬಲ್ಲುದು. ಅದರ ಅವಗುಣಗಳನ್ನು ಅರಿವು ಒಲ್ಲದು.

ಜಗದ ತನುಗಳೆಲ್ಲ ಹೀಗೆ ಇವೆ. ಮನ ಮತ್ತು ಅರಿವಿನ ಜುಗಲ್‌ಬಂದಿ ತನುವಿನಲ್ಲಿ ನಡೆದಿದೆ. ಮನ ಅರಿವು ಹೇಳ ಬಲ್ಲುದು ತನ್ನರಿವು ತಾನೇ ಆಚರಿಸಲೊಲ್ಲುದು. ಸದಾ ಪರರ ಚಿಂತೆಯೇ ಅದಕ್ಕೆ; ತನ್ನ ಚಿಂತೆಯನ್ನು ಬಿಟ್ಟು ಪರರಚಿಂತೆ ಮಾಡುವ ಮನವನ್ನು ಅರಿವೆಂಬ ಸಂಗಮನಾಥನು ಒಲ್ಲ; ತನುವಿನಲೊಂದಿಟ್ಟು ಮನದಲಿ ಆಸೆ ಆಮಿಷಗಳನ್ನಿಟ್ಟುಕೊಂಡ ಮನವನು ಬಲ್ಲನು ; ಅದನ್ನು ಅಪ್ಪಿಕೊಳ್ಳಲು ಒಲ್ಲನು!

96

ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು.
ಅವರು ಸತ್ಪಥಕ್ಕೆ ಸಲ್ಲರು ಸಲ್ಲರಯ್ಯಾ !
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವಾ.

ಮನ ಬಲು ಕುಟಿಲ. ತನುವಿಗೆ ವಿನಯದ ವೇಷಹಾಕಿ ಒಳಗೆ ಹಾದರದ ಕೆಲಸ ಮಾಡುತ್ತದೆ. ಮನದ ಹಾದರವನ್ನು ಅರಿವೆಂಬ ಗುರು ಬಲ್ಲ. ತನುವಿಗೆ ಹಾಕಿದ ಮನದ ಸೋಗು ಸತ್ಪಥಕ್ಕೆ ಸಲ್ಲದು ಸಲ್ಲದು!

ಒಳ ಹೊರಗೊಂದಾಗದ ಮನಕ್ಕೆ ಅಳಿಯಾಸೆಯೇ ಗತಿ. ದುಗ್ಗಾಣಿಯ ಲೋಭಕ್ಕೆ ಕೋಟಿಲಾಭವ ಕಳೆದುಕೊಂಡಂತೆ! ತನುವಿಗೆ ಹಾಕಿದ ವಿನಯದ ವೇಷ ಮನದ ಕುಟಿಲ ತನಕ್ಕೆ ಸರಿದೂಗದೆ ಮುಖವಾಡ ಕಳಚಿ ಬೀಳುವುದು. ಆದರಿಸಿ ಮತ್ತೆ ಮತ್ತೆ ಗೌರವಿಸುವ ಅರಿವೆಂಬ ಜಗದೀಶನು ಕುಟಿಲ ತನದ ತನುವನ್ನು ಬೀಸಾಡದೆ ಬಿಡನು.

ಒಳ ಹೊರಗೊಂದಾದ ಮನದ ತನುವಿಗೆ ಕುಟಿಲ ತನವಿಲ್ಲ, ಭಕ್ತನ ಗುರುವಿನ ವೇಷವೂ ಇಲ್ಲ. ಒಳ ಹೊರಗೂ ವಿನಯ! ಆಸೆ ಆಮಿಷಗಳಿಲ್ಲದೆ ಸತ್ಪಥಕ್ಕೆ ಸಲ್ಲುವುದು. ಜಗದ ಮೆಚ್ಚುಗೆಯ ಜಗದೀಶನ ತನು; ಬುದ್ಧ ಬಸವನ ತನು. ಸದ್‌ವಿನಯದ ಸಂಗಯ್ಯನ ತನು!

97

ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೊ?
ಹೊಸ್ತಿಲೊಳಗೆ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ. ಕೂಡಲಸಂಗಮದೇವಾ !

ಒಡಲೊಳಗೆ ಒಡೆಯನಿದ್ದು, ಒಡಲಿಂಗಾಧಾರವಾಗಿ ಒಡಲು ಸೋಂಕದೆ, ಒಡಲನ್ನು ಬೆಳಗುತ್ತಾನೆ. ಬೆಳಗಿಂಗೆ ಬೆಳಗಾಗಿ ಬೆಳಗುತ್ತಿದ್ದಾನೆ ಎಂದು ಅಲ್ಲಮ ಪ್ರಭುಗಳು ಹೇಳಿದ್ದಾರೆ. ಆದರೆ ಬಸವಣ್ಣನವರು ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೊ ಎಂದು ಪ್ರಶ್ನಿಸಿದ್ದಾರೆ. ಹೊಸ್ತಿಲೊಳಗೆ ಹುಲ್ಲು ಹುಟ್ಟಿದೆ. ಮನೆಯೊಳಗೆ ಕಸ ತುಂಬಿದೆ, ತನುವಿನೊಳಗೆ ಹುಸಿ , ವಿಷಯ ತುಂಬಿದೆ ಹೀಗಿದ್ದ ಮೇಲೆ ಮನೆಯೊಳಗೆ ಮನೆಯೊಡೆಯನಿಲ್ಲವೇ ಇಲ್ಲ ಎನ್ನುತ್ತಾರೆ.

ಜಗದಲ್ಲಿರುವ ಒಡಲುಗಳೆಲ್ಲ ಒಂದೇ . ಕಣ್ಣು , ಕಿವಿ, ಮೂಗು, ನಾಲಿಗೆ, ಚರ್ಮಗಳಲ್ಲಿಯೂ ವ್ಯತ್ಯಾಸವಿಲ್ಲ, ಅವು ಕಾರ್ಯ ನಿರ್ವಹಿಸುವಲ್ಲಿಯೂ ವ್ಯತ್ಯಾಸವಿಲ್ಲ. ಒಂದು ಒಡಲಿನ ಸ್ವಭಾವವಿದ್ದಂತೆ ಮತ್ತೊಂದು ಒಡಲಿನ ಸ್ವಭಾವವಿಲ್ಲ. ಒಡಲಿನ(ಅರಿವು) ಮಾಲೀಕನೂ ಒಬ್ಬನೆ! ಒಡಲಿನ ಒಡೆಯನ ಮನೆಯಲ್ಲಿ ಮನವೆಂಬ ಬಾಡಿಗೆದಾರನಿದ್ದಾನೆ. ಅವನಿಗೂ ಒಡೆಯನಿಗೂ ಅಜಗಜಾಂತರ ವ್ಯತ್ಯಾಸ! ಮನೆಯ ಮಾಲೀಕನನ್ನೇ ಹಿಂದಕ್ಕೆ ತಳ್ಳಿ ಮನೆಯಲ್ಲಿ ಮನೆಯ ಹೊಸ್ತಿಲಲ್ಲಿ ಬಾಡಿಗೆದಾರನದೇ ಅಧಿಕಾರ.

ಒಂಬತ್ತು ಅಂಕಣದ ಚಂದದ ಮನೆ . ಈ ಮನೆಗೆ ತಕ್ಕಂತೆ ಸುಂದರವಾದ ಮಾಲೀಕ! ಈ ಮಾಲೀಕನ ಬೆಳಕಿನಿಂದ ಹುಟ್ಟಿದ ನೆರಳೇ ಮನ! ಮನೆ ತುಂಬಾ ನೆರಳು, ಕತ್ತಲು. ಹೊಸ್ತಿಲನ್ನು ಬಾಗಿಲನ್ನು ಇಡೀ ಒಂಬತ್ತು ಅಂಕಣದ ಮನೆಯನ್ನು ಬಾಡಿಗೆದಾರ ಮನವೆಂಬ ಕತ್ತಲೇ ಆವರಿಸಿದೆ.

ಮನೆಯ ಹೊಸ್ತಿಲ ಭಾಗವಾದ ಕಣ್ಣಿನಲ್ಲಿ ಅಜ್ಞಾನದ ಕಸ ಬಿದ್ದು ಕಾಣದಂತೆ ಮಾಡಿದೆ. ಕಿವಿ ಕೇಳದಂತೆ ಮಾಡಿದೆ. ನಾಲಿಗೆ ರುಚಿಸದಂತೆ, ಮೂಗು ವಾಸಿಸದಂತೆ , ಚರ್ಮ ಸ್ಪರ್ಶಿಸದಂತೆ

ಮಾಡಿದೆ.

ತನುವಿನೊಳಗೆ ಹುಸಿ ತುಂಬಿಕೊಂಡು ವಿಷಯಾದಿ ವಸ್ತುಗಳನ್ನು ನೋಡುತ್ತದೆ. ಕೇಳಿ ರುಚಿಸಿ ಮುಟ್ಟಿ ಮತ್ತೆ ಮತ್ತೆ ಭೋಗಕ್ಕೆಳೆಸುತ್ತದೆ. ಪಶುವಿನಂತೆ ವಾಸಿಸಿ ಮೇಲೆರಗುತ್ತದೆ. ಬೆಳಕಿನ ಮನೆ ತುಂಬಾ ಕತ್ತಲ ಕಸವೇ ತುಂಬಿದೆ.

ಅರಿವಿನ ಮಾಲೀಕನೂ ಮನೆಯಲ್ಲಿಯೇ ಇದ್ದಾನೆ; ಬಾಡಿಗೆದಾರನೆಂಬ ಮನವೂ ಮನೆಯಲ್ಲಿಯೇ ಇದೆ. ಬೆಳಕಿನ ಮನೆಯಲ್ಲಿ ಕತ್ತಲು ಕವಿದಿದೆ. ಮಾಲೀಕ ತೆಪ್ಪಗೆ ಮಲಗಿದ್ದಾನೆ; ಕತ್ತಲಿಗೆ ಬೆಳಕಾಗಬೇಕೆಂಬ ಬಯಕೆಯಾಗುವವರೆಗೆ ಕತ್ತಲದೇ ಕಾರುಬಾರ !

98

ಒಡೆತ್ತ ಬಲ್ಲುದು ಅವಲಕ್ಕಿಯ ಸವಿಯ?
ಕೋಡುಗ ಬಲ್ಲುದೆ ಸೆಳೆಮಂಚದ ಸುಖವ?
ಕಾಗೆ ನಂದನವನದೊಳಗಿದ್ದಡೇನು,
ಕೋಗಿಲೆಯಾಗಬಲ್ಲುದೆ ಹೇಳಾ.
ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು
ಕಳಹಂಸಿಯಾಗಬಲ್ಲುದೆ, ಕೂಡಲಸಂಗಮದೇವಾ?

ಹೆಂಚು ಅವಲಕ್ಕಿಯ ಸುಖವನು ಅರಿಯದು. ಮರ್ಕಟ ತೂಗುಮಣೆಯ ಸುಖವನು ಅರಿಯದು. ಕಾಗೆ ನಂದನವನದಲ್ಲಿದ್ದರೇನು ಕೋಗಿಲೆಯಂತೆ ಕೂಗಲು ಅರಿಯದು. ಕೊಳದ ದಂಡೆಯಲ್ಲಿ ಒಂದು ಬಕ ಕುಳಿತಿದ್ದರೇನು ಹಂಸವಾಗಲು ಅರಿಯದು . ಹೀಗೆ ತನುವಿನಲ್ಲಿ ಅರಿವು ಮತ್ತು ಮನ ಸಂಗಮವಾಗಿದ್ದರೂ ಮನ ಅರಿವೆಂಬ ಸಂಗಮದೇವನನ್ನು ಕಾಣಲು ಅರಿಯದು .

ಮನ ಅರಿವಿನಲ್ಲಿ ಸಂಗಮವಾದ ಸುಖ; ಕೂಡದ ಅಗಲದ ಕೂಟದ ಸುಖ ! ಅವಲಕ್ಕಿ ಹಂಚಿನ ಮೇಲೆ ಹುರಿದು ತಿಂದ ಸುಖ. ಮರ್ಕಟ ಮಾನವನಾಗಿ ತೂಗು ಮಣೆಯ ಮೇಲೆ ಕುಳಿತು ತೂಗಿಕೊಂಡ ಸುಖ. ನಂದನವನ್ನು ನೋಡಿ ಕೋಗಿಲೆ ಆನಂದದಿಂದ ಹಾಡಿದ ಸುಖ . ಕೊಳ ನೋಡಿದ ಹಂಸ ಆನಂದದಿಂದ ವಿಹರಿಸಿ ಕೊಳ ತಾನು ಒಂದಾದ ಸುಖ. ತನು ಮನ ಅರಿವು ಕೂಡಲ ಸಂಗಯ್ಯನಲ್ಲಿ ಕೂಡಿದ ಕೂಟದ ಸುಖ!

99

ಎನಿಸುಕಾಲ ಕಲ್ಲು ನೀರೊಳಗಿರ್ದಡೇನು ,
ನೆನೆದು ಮೃದುವಾಗಬಲ್ಲುದೆ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ ,
ಮನದಲ್ಲಿ ದೃಢವಿಲ್ಲದನ್ನಕ್ಕ ?
ನಿಧಾನವ ಕಾಯ್ದಿರ್ದ ಬೆಂತರನಂತೆ

ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ .

ಜಲದಿಂದಾದ ಮುತ್ತು ಜಲವಾಗದೆ ಥಳ ಥಳನೆ ಹೊಳೆಯುತ್ತದೆ. ಜಲದಿಂದಾದ ಕಲ್ಲು ಜಲದಲ್ಲಿದ್ದರೂ ಮೃದುವಾಗಲು ಅರಿಯದು. ಆ ಕಲ್ಲು ಕಟೆದು ದೇವರ ಮಾಡಿ; ಎಷ್ಟು ಕಾಲ ಜಲದ ಅಭಿಷೇಕ ಮಾಡಿ ಪೂಜಿಸಿದರೇನು ದೇವರು ಪ್ರತ್ಯಕ್ಷವಾಗಲಾರ ! ಸಂಪತ್ತು ಗಳಿಕೆ ಮಾಡಿದ ಜಿಪುಣನು ಅದನ್ನು ಭೋಗಿಸಲಾರ. ಅದರ ವಿಧಿ ಮನಕ್ಕೆ ಆಗಿದೆ:

ತನುವಿಗೂ ಅರಿವಿಗೂ ಮನಕ್ಕೂ ಅಂತರವಿಲ್ಲ. ಬೆಳಕಿನ ನೆರಳೇ ಮನ; ನೆರಳು ಬೆಳಕಾಗಲರಿಯದು. ಎಷ್ಟು ಕಾಲ ದೀಪದ ಕೆಳಗಿದ್ದರೇನು? ದೀಪದಿಂದಲೇ ನೆರಳು ಸೃಷ್ಟಿಯಾದರೇನು ? ನೆರಳು ದೀಪವಾಗಬೇಕಲ್ಲ! ಬೆಳಕೇ ಸೃಷ್ಟಿಸಿದ ನೆರಳು; ಬೆಳಗಲು ಒಲ್ಲದು. ಬೆಳಕಿನಿಂದ ಸೃಷ್ಟಿಯಾದ ನೆರಳು ಬೆಳಕಾಗಲರಿಯದು.

ಕತ್ತಲ ಮೇಲೆಯೇ ಬೆಳಕಿನ ಸಂಪತ್ತಿದೆ; ಬಳಸಲರಿಯದು. ಒಡಲೂ ಇದೆ; ಒಡಲ ಬೆಳಗುವ ಒಡಲೊಡೆಯನೂ ಇದ್ದಾನೆ. ಇದನ್ನು ಅರಿಯದ ಕತ್ತಲ ಮನವೂ ಇದೆ. ಇದು ವಿಧಿಯ ವಿಚಿತ್ರ; ಒಡಲೊಡೆಯ ಅರಿವಿನ ಸಂಗಯ್ಯನ ಲೀಲೆ ! ಮನ ಅರಿತರೆ ಅರಿವಿನಲ್ಲಿ ಸಂಗಮವಾಗುತ್ತದೆ.

100

ಸಂತವಿದ್ದ ಮನೆಗೆ ಕೊಂತವ ತಂದಂತೆ
ಇದನೆಂತು ಸಂತೈಸುವೆನು?
ಸಂತೆಯ ಗುಡಿಲ ಸೂಳೆಗೆ ಕೊಂತವಳವಡುವುದೆ?
ಕೂಡಲಸಂಗಮದೇವರ ಮಹತ್ವ
ಆರಿಗೆಯೂ ಅಳವಡದು !

ಅರಸನಿದ್ದ ಮನೆಗೆ ಸಾಲವ ತಂದಂತೆ ! ಸಂತೆಯ ಗುಡಿಸಲೊಳಗಿದ್ದ ಸೂಳೆಗೆ ಸಾಲವ ಕೊಟ್ಟಂತೆ ! ಇದನೆಂತು ಸಂತೈಸುವದು?

ಅರಸನಿಗೆ ಸಾಲ ಬೇಕಿಲ್ಲ; ಸೂಳೆಗೆ ಸಾಲ ಕೊಟ್ಟರೆ ಮರಳಿ ಬರುವಂತಿಲ್ಲ. ಕೂಡಲಸಂಗಮದೇವರ ಈ ಬೆಡಗಿನ ಮಹತ್ವ ಆರಿಗೆಯೂ ಅಳವಡದು! ಎನ್ನುತ್ತಾರೆ ಬಸವಣ್ಣ.

ದೇಹ ಮತ್ತು ದೇಹದ ಅವಯವಗಳು ಒಂದೇ ಆದರೂ; ಒಬ್ಬ ಶ್ರೀಮಂತ ಮತ್ತೊಬ್ಬ ಬಡವ. ಹೆಣ್ಣು-ಗಂಡು, ಜಾತಿ, ಮತ, ಪಂಥವೆಂಬ ಅಜ್ಞಾನ. ಪಂಡಿತ ಪಾಮರ ಜ್ಞಾನಿ ಎಂಬ ಪಟ್ಟ. ಶರಣ, ದಾಸ, ಬುದ್ದ, ಜಿನ, ಸಂತನೆಂಬ ಹೆಸರಿಲ್ಲದ ಹೆಸರು. ಕಳ್ಳ, ಭ್ರಷ್ಟ, ಲಂಚಕೋರ, ವೇಶ್ಯೆ, ವಿಟ ಎನ್ನುವ ಹಣೆಪಟ್ಟಿ ಕೆಲ ದೇಹಗಳಿಗೆ. ಹೀಗೇಕೆ ಎಂದು ವಿಚಾರಿಸಲು ಹೋದರೆ ಖಂಡಿತ ತಿಳಿಯುತ್ತದೆ.

ದೇಹ ಒಂದೇ; ದೇಹದ ಅರಿವು ಒಂದೇ ; ದೇಹಕ್ಕೆ ಆವರಿಸಿದ ಮನ ಒಂದೇ!

ದೇಹದ ಅರಿವು ಅರಸ! ಆತ ಮಹಾಜ್ಞಾನಿ; ಶರಣ, ದಾಸ, ಬುದ್ಧ, ಜಿನ, ಸಂತನೂ ಹೌದು; ನವನಿಧಿಗಳ ಕುಬೇರನೂ ಹೌದು ! ಆತನಲ್ಲಿರುವ ಸಂಪತ್ತು ಅಪಾರ! ವೇದ , ಉಪನಿಷತ್ತು , ಆಗಮ, ಪುರಾಣಗಳು ಸಕಲ ಜ್ಞಾನ ಪುಸ್ತಕಗಳು ಆತನಿಂದಲೇ ಮುದ್ರಣಗೊಂಡವು.

ಅರಿವು ಮನ ತನು ಒಂದಾಗಿ ಕೂಡಿದ ಕೂಡಲಸಂಗಮನಾಥನು! ಈತ ಜಗದಗಲ ಮುಗಿಲಗಲ. ಈತನ ಪಾದಗಳು ಪಾತಾಳದಿಂದಲೂ ಅತ್ತತ್ತ. ಶ್ರೀಮುಕುಟ ಬ್ರಹ್ಮಾಂಡದಿಂದಲೂ ಅತ್ತತ್ತ. ಗಮನಕ್ಕೂ ಗೋಚರಕ್ಕೂ ಪ್ರಮಾಣಕ್ಕೂ ನಿಲುಕದಾತ. ಈತನಿಗೆ ಯಾರು ಸಾಲಕೊಡಬೇಕು? ಈತನಿಗೆ ಯಾರು ಬೋಧಿಸಬೇಕು? ಈತನ ಮುಂದೆ ಕುಳಿತು ಯಾರು ಪಾಠಮಾಡಬೇಕು? ಈತನ ವಾಸಸ್ಥಾನ ದೇಹ. ದೇಹದ ಶ್ರೀಮಂತ, ಅರಸ, ಪಶುಪತಿ, ಒಡಲೊಡೆಯ, ಮಹಾದೇವ, ಸದಾಶಿವ, ಸದ್ಗುರು, ಸಾಕ್ಷಾತ್ ಪರಬ್ರಹ್ಮನೆಂದು ಕರೆಯುವರು. ಈತನ ಮನೆಗೆ ಯಾರಾದರೂ ಸಾಲಕೊಡಬಹುದೆ!

ಸಂತೆಯ ಗುಡಿಸಲ ಸೂಳೆಗೆ ಸಾಲಕೊಟ್ಟರೆ ಸದ್ಬಳಕೆ ಯಾಗುವುದೆ? ಕೊಟ್ಟ ಸಾಲ ನಿಂತೀತೆ? ಸೂಳೆ ಎಂದರೆ ಹೆಣ್ಣಲ್ಲ; ಗಂಡು ಹೆಣ್ಣು ಎನ್ನುವ ದೇಹ ಆವರಿಸಿದ ಮನ ! ಈ ಮನಕ್ಕೆ ಬಸವಣ್ಣ ಸೂಳೆ ಎಂದಿದ್ದಾರೆ. ದೇಹದಲ್ಲಿ ವಾಸಮಾಡಿದ ಅರಿವೆಂಬ ಅರಸ ಸಂಗಯ್ಯನ ಬೆಳಕಿನಿಂದ ಉಂಟಾದ ನೆರಳು!

ಅರಿವಿಗೆ ಬೋಧೆ ಬೇಕಿಲ್ಲ; ಮನಕ್ಕೆ ಬೋಧೆ ನಿಲ್ಲುವುದಿಲ್ಲ! ಸಕಲ ವೇದ ಶಾಸ್ತ್ರ, ಆಗಮ,ಉಪನಿಷತ್ತುಗಳನ್ನು ಓದಿ ಸಂಗ್ರಹ ಮಾಡಿಕೊಂಡು ಮನ ಪಂಡಿತ ಶಾಸ್ತ್ರಿವೇಷ ಹಾಕುತ್ತದೆ. ಜಾತಿ , ಮತ, ಪಂಥ, ಹೆಣ್ಣು, ಗಂಡು, ಶ್ರೀಮಂತ, ಬಡವ ಎನ್ನುವ ಭೇದ ಕಲ್ಪಿಸಿದೆ. ಮನ ಕರೆನ್ಸಿ ಆಭರಣ ನೋಡಿ ದುಡಿದು ಶ್ರೀಮಂತ ನಾಗುತ್ತದೆ ಇಲ್ಲ ಕಳ್ಳ ಭ್ರಷ್ಟ, ಲಂಚಕೋರನಾಗುತ್ತದೆ. ತನ್ನಂತೆ ಇರುವ ತನುವು ನೋಡಿ ವಿಷಯಾಸಕ್ತಿ ಹೊಂದಿ ಅತ್ಯಾಚರವೆಸಗುತ್ತದೆ. ವಿಟ, ವೇಶ್ಯೆಯಾಗುತ್ತದೆ. ಇಲ್ಲ ಕಣ್ಣಿನಲ್ಲಿಯೇ ಹಾದರ ಮಾಡಿ ಮುಖವಾಡ ಧರಿಸಿ ಸಭ್ಯನೆನಿಸಿಕೊಳ್ಳುತ್ತದೆ. ಬೋಧೆ ಮಾಡಿ ಗುರುವಾಗುತ್ತದೆ; ಬೋಧೆ ತೆಗೆದುಕೊಂಡು ಶಿಷ್ಯನಾಗುತ್ತದೆ. ಮನ ಮಾಡುವುದೆಲ್ಲ ಸಂತೆಯ ವ್ಯವಹಾರ!

ದೇಹದಲ್ಲಿ ಅರಿವಿನ ಅರಸನೆಂಬ ಸರದಾರನೂ ಇದ್ದಾನೆ. ಮನವೆಂಬ ಸಂತೆಯ ಸೂಳೆಯೂ ಇದ್ದಾಳೆ. ಸನ್ನೆ ಮಾಡಿ ಹೊರಗಿನ ವಿಷಯಗಳೊಂದಿಗೆ ಬೆರೆಯುವುದನ್ನು ಬಿಟ್ಟು ಅರಸನೊಂದಿಗೆ ಕೂಡಿದರೆ ಅರಸಿಯಾಗುತ್ತಾಳೆ. ಅರಸ ಮನದ ಸೂಳೆತನವ ಮಾಣಿಸಿ ಪಟ್ಟದರಸಿಯನ್ನಾಗಿ ಮಾಡಿಕೊಳ್ಳುತ್ತಾನೆ.

ತನುವಿನ ತತ್ವ ಪಾಲಿಸಿದ ಮನ ತನುವಿನಲ್ಲಿಯೇ ಅಡಗುವುದು . ಈ ತತ್ವ ಪಾಲಿಸಿದ ತನುಗಳಿಗೆಲ್ಲ ತನುವಿನ ಅರಿವು ತನುವಿಗೆ ಅಳವಡುವುದು !

101

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೆಂಡಡೆ
ಕೂಸಿಂಗಲ್ಲ; ಭೋಜಗಂಗಲ್ಲ!
ಕೂಸನೊಮ್ಮೆ ಸಂತೈಸುವಳು; ಬೊಜಗನನೊಮ್ಮೆ ನೆರೆವಳು.
ಧನದಾಸೆ ಬಿಡದು ಕೂಡಲಸಂಗಮದೇವಾ!

ಮನ ಉಪಜೀವನಕ್ಕಾಗಿ ಅರಿವಿನ ದೇಹವನ್ನು ದಂಡಿಸುವ ಸುಂದರವಾದ ಚಿತ್ರಣ ಇಲ್ಲಿದೆ. ಮನದಲ್ಲಿ ಮೂಡಿದ ವಿಷಯಾಸಕ್ತಿ ಅನ್ಯ ತನುವಿನೊಂದಿಗೆ ಬೆರೆತು ಸುಖಪಟ್ಟಿತು. ಇದು

ಸಮಾಜಬಾಹಿರ ಕೆಲಸವೆಂದು ಮನಕ್ಕೆ ಹೊಳೆಯಲಿಲ್ಲ. ಸುಖದ ಬಯಕೆ ಅಧಿಕವಾಗಿ ತನುವಿಗೆ ವೇಶ್ಯೆಯ ಪಟ್ಟ ಕಟ್ಟಿತು. ಇದೇ ತನುವಿನ ಉಪಜೀವನವಾಯಿತು.

ಮನ ವಿಷಯ ಸುಖಕ್ಕಾಗಿ ಹಿಂದೆ ಅನ್ಯ ತನುವಿನೊಂದಿಗೆ ಕೂಡುತ್ತಿತ್ತು! ಇಂದು ಮನ ಅನ್ಯತನುಗಳನ್ನು ಧನ ದಾಸೆಗಾಗಿ ಕೂಡುತ್ತಲಿದೆ! ಧನದಾಸೆಗಾಗಿಯೇ ವಿಟರನ್ನು ಕೈಮಾಡಿ ಕರೆಯುತ್ತಲಿದೆ! ವೇಶ್ಯೆಗೆ ಒಂದು ಕೂಸು ಕೂಡಾ ಇದೆ.

ವಿಟ ವೇಶ್ಯೆಯೊಂದಿಗೆ ಸುಖಿಸಲು ಬಂದಿದ್ದಾನೆ. ಕೂಸು ಕರಳು ಕಿತ್ತುವಂತೆ ರೋಧಿಸುತ್ತಲಿದೆ. ವೇಶ್ಯೆಗೆ ಧನದ ಮೇಲೆ ಆಸೆ, ಕೂಸಿನ ಮೇಲೆ ಕರುಣೆ! ವಿಟನನೊಮ್ಮೆ ನೆರೆವಳು; ಕೂಸನೊಮ್ಮೆ ಸಂತೈಸುವಳು. ಧನದಾಸೆ ಬಿಡದು ಕೂಡಲ ಸಂಗಮದೇವಾ. ಇದು ದೃಷ್ಟಾಂತದ ಸಾರ.

ತನುವಿನಲ್ಲಿ ಅರಿವಿದೆ. ಮನ ಅರಿವನ್ನು ಬಳಕೆ ಮಾಡದಿದ್ದರೆ ಸೂಳೆಯಾಗುತ್ತದೆ. ಒಮ್ಮೆ ಸುಖದ ಆಸೆಗಾಗಿ ತನುವನ್ನು ಬಳಕೆ ಮಾಡಿಕೊಳ್ಳುತ್ತದೆ. ಮತ್ತೊಮ್ಮೆ ಧನದ ಆಸೆಗಾಗಿ ತನುವನ್ನು ಬಳಕೆ ಮಾಡಿಕೊಳ್ಳುತ್ತದೆ. ಅರಿವು ಇವೆರಡಕ್ಕೂ ಅಡ್ಡಿ ಪಡಿಸುತ್ತದೆ.

ತನು ಸೂಳೆಯೂ ಅಲ್ಲ. ಬೊಜಗ (ವಿಟ)ನೂ ಅಲ್ಲ; ನಿರಪರಾಧಿ! ಮನ ಸೂಳೆಯೂ ಹೌದು; ಬೊಜಗನೂ ಹೌದು; ಅಪರಾಧಿ! ಸುಖಕ್ಕಾಗಿ ತನುವಿಗೆ ವಿಟನ ಪಟ್ಟ ಕಟ್ಟಿ ಸೂಳೆಯ ಮನೆಗೆ ಕರೆದುಕೊಂಡು ಹೋಗುತ್ತದೆ. ಹಣಕೊಟ್ಟು ದೇಹದ ಮೂಲಕ ಸುಖಪಡುತ್ತದೆ.

ಮನ ತನುವಿಗೆ ಸೂಳೆಯ ಪಟ್ಟ ಕಟ್ಟಿ ಹಣದ ಸುಖಕ್ಕಾಗಿ ವಿಟನನ್ನು ಕೈ ಮಾಡಿ ಕರೆಯುತ್ತದೆ. ದೇಹ ವಿಟನಿಗೆ ಕೊಟ್ಟು ಹಣಪಡೆದು ಸುಖಿಸುತ್ತದೆ. ಮನ ಹಣಕೊಟ್ಟು ದೇಹದೊಂದಿಗೆ ಸುಖಿಸಿತು; ದೇಹಕೊಟ್ಟು ಹಣ ಪಡೆದು ಸುಖಿಸಿತು.

ದೇಹದ ಅರಿವು ಒಂದೇ; ದೇಹದ ಮನವೂ ಒಂದೇ; ದೇಹದ ಕೂಸೂ ಒಂದೇ; ಪಾತ್ರ ಮಾತ್ರ ಬೇರೆ ಬೇರೆ. ಬಸವಣ್ಣನವರು ವಚನದ ದೃಷ್ಟಾಂತದಲ್ಲಿ ಅರಿವು ಕೂಸಿನ ಪಾತ್ರದಲ್ಲಿದೆ. ಮನ ವೇಶ್ಯೆ ಹಾಗೂ ವಿಟನ ಪಾತ್ರದಲ್ಲಿದೆ. ಮನ ಸುಖ ಬಯಸಿ ವೇಶ್ಯೆ ಬಳಿ ಹೋಗಿದೆ; ಹಣ ಬಯಸಿ ವಿಟನನ್ನು ಕರೆದಿದೆ. ಇವೆರಡೂ ತನುಗಳಿಗೆ ಅರಿವಿನ (ಕೂಸಿನ) ಆಲಾಪ ಕೇಳುತ್ತಲಿದೆ. ಆದರೆ ಸುಖದಲ್ಲಿ ಮೈ ಮರೆತು ಮಗ್ನವಾಗಿವೆ. ಸುಖವೇ ಪ್ರಧಾನವಾಗಿದೆ.

ಸೂಳೆ ವಿವಸ್ತ್ರಳಾಗಿ ಕೂಸಿನ (ಅರಿವಿನ) ಆಲಾಪಕೇಳಿ ಧನದಾಸೆ ಬಿಟ್ಟು ಸಂತೈಸಲು ಹೋದರೆ ಸಾಕು ಕೂಸು (ಅರಿವು) ಆಲಾಪನಿಲ್ಲಿಸಿ ತಾಯಿಯನ್ನು ಅಪ್ಪಿಕೊಳ್ಳುತ್ತದೆ. ಸೂಳೆ ಧನದಾಸೆ ಬಿಟ್ಟು ಕೂಸ(ಅರಿವು)ನ್ನಪ್ಪಿಕೊಳ್ಳುತ್ತಾಳೆ. ವಿವಸ್ತ್ರತನುವನ್ನು ನೋಡಿ ವಿಟನ ಸುಖದ್ರವ್ಯ ಹೊರಚಿಮ್ಮಿ ಮೈಮನ ಪುಳಕಿತಗೊಳ್ಳುತ್ತದೆ. ಹಣಕೊಟ್ಟು ಸುಖಿಸಲು ಬಂದ ಮನಕ್ಕೆ ಕೂಸು (ಅರಿವು) ಅಡ್ಡಿಪಡಿಸಿತು. ಸೂಳೆ ಹಣ ಪಡೆಯದೆ ಕೂಸನ್ನು ಬಿಗಿದಪ್ಪಿ ಸುಖಿಸಿದಳು. ಮತ್ತೆ ಸೂಳೆಯಾಗಲೇ ಇಲ್ಲ. ವಿಟ ಹಣ ಕೊಡದೆ ತನುವಿನಲ್ಲಿಯೇ ಸುಖಿಸಿದ. ಮತ್ತೆ ವಿಟನಾಗಲೇ ಇಲ್ಲ.

ಸಂತಾನ ಪಡೆಯುವುದಕ್ಕಾಗಿ ಮಾತ್ರ ಒಪ್ಪಂದ ಮಾಡಿಕೊಂಡ ತನು, ತನುವಿನೊಂದಿಗೆ ಮಿಲನ ಬಯಸುತ್ತದೆ. ಆದರೆ ಮನ ಈ ಸುಖವನ್ನು ಸಂಗ್ರಹ ಮಾಡಿಕೊಂಡು ಮತ್ತೆ ಮತ್ತೆ ಹಾದರ ಮಾಡುತ್ತದೆ. ತನುವನ್ನು ದುರ್ಬಳಕೆ ಮಾಡಿಕೊಳ್ಳತ್ತದೆ. ಮನ ತನುವಿಗೆ ಸೂಳೆ ಅಥವಾ ವಿಟನ ಪಟ್ಟ ಕಟ್ಟುತ್ತದೆ. ಮನಕ್ಕೆ ಅರಿವಾದರೆ ಕರೆನ್ಸಿ ಕಾಗದವಾಗಿ ಕೂಸು ಅಧಿಕವಾಗುತ್ತದೆ. ಸೂಳೆತನ ಮಾಣುತ್ತದೆ. ಮನಕ್ಕೆ ಅರಿವಾದರೆ ತನುವಿನ ಸುಖ ತನುವಿನಲ್ಲಿಯೇ ಕಂಡು ವಿಟನತನ ಮಾಣುತ್ತದೆ. ಮನ ಎರಡು ಪಾತ್ರಗಳನ್ನು ಕಳೆದುಕೊಂಡು ತನುವಿನ ಅರಿವಿನಲ್ಲಿ ಸಂಗಮವಾಗಿ

ಕೂಡಲಸಂಗಮದೇವನಾಗುತ್ತದೆ.

102

ಎರದೆಲೆಯಂತೆ ಒಳಗೊಂದು ಹೊರಗೊಂದಾದಡೆ ಮೆಚ್ಚುವನೆ?
ಬಾರದ ಭವಂಗಳಲ್ಲಿ ಬರಿಸುವನಲ್ಲದೆ ಮೆಚ್ಚುವನೆ?
ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ?
ಉಡುವಿನ ನಾಲಗೆಯಂತೆ ಎರಡಾದಡೆ
ಕೂಡಲಸಂಗಯ್ಯ ಮೆಚ್ಚುವನೆ?

ದೇಹ ನೋಡಲು ಒಂದೇ ಆಗಿ ಕಂಡರೂ ಇದಕ್ಕೆ ಇಬ್ಬರು ಚಾಲಕರಿದ್ದಾರೆ. ಒಬ್ಬಳು ಮನವೆಂಬ ಚಂಚಲೆ ಮಹಿಳೆ ಸುಳ್ಳು ಚಾಲಕಿ! ಡ್ರೈವಿಂಗ್ ಲೈಸೆನ್ಸ್ ಇಲ್ಲದವಳು. ದೇಹವನ್ನೇ ವಾಹನವನ್ನಾಗಿ ಮಾಡಿಕೊಂಡು ತನ್ನ ಮನ ಬಂದೆಡೆಗೆ ಹೋಗುತ್ತಾಳೆ. ಇವಳ ಹೆಸರು ಮಾನಸಿ ! ಬಸವಣ್ಣನವರು ಈಕೆಗೆ ಚಂಚಲೆ, ಸೂಳೆ ಎಂದು ಕರೆದರು. ದಾಸರು ತತ್ವಪದಕಾರರು ಕೂಡಾ ಈಕೆಯನ್ನು ಚಂಚಲೆ ಸೂಳೆ, ಹೆಂಡತಿ ಎಂದು ಕರೆದಿದ್ದಾರೆ.

ಬೆಳಿಗ್ಗೆ ದೇಹ ಎನ್ನುವ ವಾಹನಕ್ಕೆ ಮನವೆಂಬ ಚಂಚಲೆ ಶೌಚ ಸ್ನಾನಾದಿಗಳನ್ನು ಮಾಡಿಸಿ ಭಸ್ಮ ಗಂಧ ತಿಲಕಾದಿಗಳನ್ನು ಬಳಿದು ಸಾತ್ವಿಕ ವೇಷ ಹಾಕುತ್ತಾಳೆ. ಆಫೀಸಿನಲ್ಲಿ ಲಂಚ ಪಡೆದು ಅಧಿಕಾರ ಚಲಾಯಿಸಿ ರಾಜಸ ವೇಷ ಹಾಕುತ್ತಾಳೆ. ಸಂಜೆ ಕ್ಲಬ್‌ಗೆ ಹೋಗಿ ಕುಡಿದು ಕುಣಿದು ಕುಪ್ಪಳಿಸಿ ತಾಮಸ ವೇಷ ಹಾಕುತ್ತಾಳೆ. ವಾಹನ ಒಂದೇ ಆದರೂ ವೇಷಗಳು ಮಾತ್ರ ಮೂರು. ದೇಹದಿಂದ ಹೊರ ಹೊಮ್ಮುವ ಭಾವ ದುರ್ಭಾವ ಮಾತ್ರ ಸಾವಿರಾರು! ಇದು ಮಾನಸಿ ಎಂಬ ಸುಳ್ಳು ಚಾಲಕಳ ಕೆಲಸ! ಬಸವಣ್ಣನವರು ಇದಕ್ಕೆ ಎರದೆಲೆ ಮತ್ತು ಉಡುವಿನ ಎರಡು ನಾಲಿಗೆಗಳಿಗೆ ಹೋಲಿಸಿದ್ದಾರೆ.

ಮತ್ತೊಂದೆಡೆ 'ಮನವೆ ಸರ್ಪ, ತನುವೆ ಹೇಳಿಗೆ; ಹಾವಿನೊಡತಣ ಹುದುವಾಳಿಗೆ! ಇನ್ನಾವಾಗ ಕೊಂದಹುದೆಂದರಿಯೆ; ಇನ್ನಾವಾಗ ತಿಂದ ಹುದೆಂದರಿಯೆ! ನಿತ್ಯಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ ಗಾರುಡ. ಕೂಡಲಸಂಗಮದೇವಾ' ಎಂದಿದ್ದಾರೆ. ನಿಂದಲ್ಲಿ ನಿಲಲೀಯದ ಮನ, ಹೊಂದಿದಲ್ಲಿ ಹೊಂದಲೀಯದ ಬೆಂದ ಮನವನ್ನು ನಾನೆಂತು ನಂಬುವೆನಯ್ಯಾ? ನಾನೆಂತು ನಚ್ಚುವೆನಯ್ಯಾ ? ಸುಡು ಸುಡು ಮನವದು ವಿಷಯಕ್ಕೆ ಹರಿವುದು ಮೃಡ ನಿಮ್ಮನನುದಿನ ನೆನೆಯಲೀಯದು ಎನ್ನುತ್ತಾರೆ.

ದೇಹದ ಮತ್ತೊಬ್ಬ ಚಾಲಕ ಗಂಡು! ಈತನನ್ನು ಬಸವಣ್ಣ ಪರಮಪುರುಷ ಕೂಡಲ ಸಂಗಯ್ಯನೆಂದು ಕರೆದಿದ್ದಾನೆ. ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ ಈತನನ್ನು ಶ್ರೀಕೃಷ್ಣನೆಂದು ಸಾರಥಿಯೆಂದು ಕರೆದಿದ್ದಾರೆ. ಈಗ ಅರಿವು ಎಂದು ಕರೆಯಬಹುದು. ಈತ ವಾಹನದ ನಿಜ ಚಾಲಕ! ಈತ ಓಡಿಸುವ ವಾಹನ ವಿಮಾನ; ಓಡುವುದೇ ಗೊತ್ತಾಗುವುದಿಲ್ಲ. ದೇಹವನ್ನು ಪಕ್ಷಿಯಂತೆ (ವಿಹಂಗಮ) ಆಕಾಶ ಮಾರ್ಗದಲ್ಲಿ ಕರೆದುಕೊಂಡು ಹೋಗುತ್ತಾನೆ. ದೇಹಕ್ಕೆ ಇಡೀ ಭೂಮಂಡಲವೇ ತೃಣವಾಗಿ ಕಾಣುತ್ತದೆ. ಕಾಡುಮೇಡು, ದೊಡ್ಡ ದೊಡ್ಡ ಬಂಗಲೆಗಳೆಲ್ಲ ಚಿಕ್ಕ ಚಿಕ್ಕ ಕಲ್ಲುಗಳಾಗಿ ಕಾಣುತ್ತವೆ.

ದೇಹ, ಎನ್ನುವ ವಾಹನಕ್ಕೆ ಇಬ್ಬರು ಚಾಲಕರು. ಅರಿವು ಎನ್ನುವ ಗಂಡ ಮುಖ್ಯ ಚಾಲಕ; ಮನ ಎನ್ನುವ ಹೆಂಡತಿ ಸಹ ಚಾಲಕಿ. 'ಗಂಡ ಶಿವಲಿಂಗ ದೇವರ ಭಕ್ತ , ಹೆಂಡತಿ ಮಾರಿ ಮಸಣೆಯ

ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧವಿಲ್ಲದಿರ್ದೊಡೆ ಹೆಂಡದ ಮಡಕೆ ಹೊರಗೆ ತೊಳೆದಂತೆ ಕೂಡಲಸಂಗಮದೇವಾ'

ಅರಿವು ಎನ್ನುವ ಗಂಡ ಹೇಳಿದಂತೆ ಮನ ಎನ್ನುವ ಹೆಂಡತಿ ವಾಹನ ನಡೆಸಿದರೆ ಆಕಾಶ ಮಾರ್ಗದಲ್ಲಿ ಚಲಿಸುವುದು. ಮನವೆಂಬ ಚಂಚಲೆ ವಾಹನ ನಡೆಸಿದರೆ ಕ್ಲಬ್ಬು, ಬಾರು, ಜೂಜಿನ ಮನೆ, ವೇಶ್ಯೆಗೃಹ, ಲಂಚ, ಭ್ರಷ್ಟಾಚಾರ, ಕಳುವು, ಕೊಲೆ, ಸುಲಿಗೆಯತ್ತ ವಾಹನ ಚಲಿಸುವುದು. ಜನ ಮನವೆಂಬ ಸುಳ್ಳು ಚಾಲಕಳನ್ನು ನೋಡುವುದಿಲ್ಲ! ವಾಹನದೊಡೆಯನನ್ನು ನೋಡುವುದಿಲ್ಲ. ದೇಹವೆಂಬ ವಾಹನಕ್ಕೆ ಕೆಟ್ಟ ಹಣೆಪಟ್ಟಿ ಕಟ್ಟುತ್ತಾರೆ. ಅದು ಕೂಡಲ ಸಂಗಯ್ಯನ ವಾಹನ, ಶ್ರೀಕೃಷ್ಣನ ರಥ, ಕ್ರಿಸ್ತ, ಬುದ್ಧ, ಮಹಾವೀರನ ವಾಹನ, ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನನ ವಾಹನವೆಂದು ಜನಕ್ಕೇನು ಗೊತ್ತು! ಜನ ದೇಹವೆಂಬ ವಾಹನವನ್ನು ಗುರುತಿಸುತ್ತಾರೆಯೇ ಹೊರತು ದೇಹದ ಮಾಲೀಕನನ್ನು ಗುರುತಿಸುವುದಿಲ್ಲ.

103

ಭಕ್ತರ ಕಂಡರೆ ಬೋಳರಪ್ಪಿರಯ್ಯಾ ;
ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ ;
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ ;
ಅವರವರ ಕಂಡಡೆ ಅವರವರಂತೆ.
ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯಾ ;
ಕೂಡಲಸಂಗಮದೇವರ ಪೂಜಿಸಿ, ಅನ್ಯದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ !

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಬೋಳಾದವರು; ಅಷ್ಟ ಮದಗಳಿಂದ ಬತ್ತಲೆಯಾದವರು; ಪರಧನ ಪರಸ್ತ್ರೀ ಕಂಡು ಹಾರುವವರು ಮಾತ್ರ ತನುವಿನ ಅರಿವನ್ನು ಬಳಕೆ ಮಾಡಿಕೊಂಡವರು. ಆ ಅರಿವೇ ತಾವಾದವರು. ಇವರಿಗೆ ಯಾವ ವೇಷಭೂಷಣಗಳ ಅವಶ್ಯಕತೆಯೂ ಇಲ್ಲ. ಹಾಗೆ ಅವರು ಯಾವ ವೇಷಗಳನ್ನು ಹಾಕುವುದಿಲ್ಲ.

ತಲೆ ಬೋಳಿಸಿಕೊಂಡರೆ ಸರ್ವಜ್ಞ-ಶಂಕರನಾಗಲಾರ; ಬೆತ್ತಲೆಯಾದರೆ ಮಹಾವೀರನಾಗಲಾರ; ವೇಷಭೂಷಣಗಳನ್ನು ಧರಿಸಿದರೆ ಮಧ್ವ ರಾಮನುಜನಾಗಲಾರ. ಅವರು ಮನವನ್ನು ಗೆದ್ದ ಮಹಾಂತರು. ಅರಿವೆಂಬ ಗುರುವಿಗೆ ಹುಟ್ಟಿದವರು. ಆ ಅರಿವೇ ತಾವಾದವರು. ಅಂತವರ ದರ್ಶನವನ್ನು ಕರುಣಿಸು ಎಂದಿದ್ದಾರೆ ಬಸವಣ್ಣ.

ಅವರವರ ಕಂಡು ಅವರಂತೆ ವೇಷ ಹಾಕಿ; ಅವರೇ ನಾವೆಂದು ಹೇಳುವವರು ಮನಕ್ಕೆ ಹುಟ್ಟಿದವರು. ಮನ ಚಂಚಲೆ; ಸೂಳೆ. ಕ್ಷಣ ಕ್ಷಣಕ್ಕೂ ವೇಷ ಬದಲಿಸುವ ಊಸರವಳ್ಳಿ. ಒಳಗೊಂದು ಹೊರಗೊಂದು ನುಡಿದು ಅರಿವೆಂಬ ಗುರುದೇವನಿಗೆ ಹುಟ್ಟಿದ ತನುವನ್ನು ಘಾಸಿಗೊಳಿಸುವ ಬೆಲೆವೆಣ್ಣು. ಮಹಾದೇವ ಸದಾಶಿವ ಸಾಕ್ಷಾತ್ ಪರಬ್ರಹ್ಮನಿಗೆ ಹುಟ್ಟಿದ ತನುವಿಗೆ ಭ್ರಮೆಯ ವೇಷಧರಿಸಿ ಅಲೆದಾಡಿಸುವ ವೈಯ್ಯಾರಿ!

ಜ್ಞಾನದ ತನುವಿಗೆ ಅಜ್ಞಾನದ ವೇಷ ಧರಿಸಿ ಅವರವರ ಕಂಡಡೆ ಅವರವರಂತೆ ನುಡಿಯುವ ಮನವೆಂಬ ಸೂಳೆಗೆ ಹುಟ್ಟಿದ ವೇಷದ ತನುಗಳನ್ನು ಎನಗೆ ತೋರದಿರಯ್ಯಾ. ಪ್ರತಿ ತನುವಿನಲ್ಲಿಯೂ

ಅರಿವು ಸಂಗಮವಾಗಿದೆ. ಮನ ತನುವಿಗೆ ಅನ್ಯದೈವದ ವೇಷಹಾಕಿ ಭಕ್ತ ಎನಿಸಿಕೊಂಡು ಅಜ್ಞಾನ ಮೆರೆಯುತ್ತಿದೆ. ಅರಿವನ್ನು ತನುವಿನಲ್ಲಿಟ್ಟುಕೊಂಡು ಅಜ್ಞಾನದಿಂದ ಮೆರೆಯುವ ಮನವೆಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ ಎಂದಿದ್ದಾರೆ ಬಸವಣ್ಣ.

104

ಗಂಡ ಶಿವಲಿಂಗ ದೇವರ ಭಕ್ತ ;
ಹೆಂಡತಿ ಮಾರಿ ಮಸಣೆಯ ಭಕ್ತೆ!
ಗಂಡ ಕೊಂಬುದು ಪಾದೋದಕ-ಪ್ರಸಾದ;
ಹೆಂಡತಿ ಕೊಂಬುದು ಸುರೆ-ಮಾಂಸ!
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲಸಂಗಮ ದೇವಾ!

ಅರಿವು ಮತ್ತು ಮನ ಎನ್ನುವ ಗಂಡ ಹೆಂಡಿರು ದೇಹದ ಮನೆಯಲ್ಲಿ ಸಂಸಾರ ಹೂಡಿದ್ದಾರೆ. ಗಂಡ ಶಿವಲಿಂಗ ದೇವರ ಭಕ್ತ; ಹೆಂಡತಿ ಮಾರಿಮಸಣೆಯ ಭಕೆ ! ಗಂಡನಿಗೆ ಪಾದೋದಕ ಪ್ರಸಾದವೆಂದರೆ ಬಲು ಇಷ್ಟ; ಹೆಂಡತಿಗೆ ಸುರೆ ಮಾಂಸವೆಂದರೆ ಪಂಚಪ್ರಾಣ! ಹೆಂಡತಿಗೆ ಬೇಕಾದದ್ದು ಗಂಡ ಬೇಡವೆನ್ನುತ್ತಾನೆ; ಗಂಡನಿಗೆ ಬೇಕಾದದ್ದು ಹೆಂಡತಿ ಮುಟ್ಟುವುದಿಲ್ಲ.ತಾಳ ಮೇಳವಿಲ್ಲದ ಸಂಸಾರ! ಮನೆ ಬೀಳುವ ವರೆಗೂ ಸಂಸಾರ ಸುಂದರಗೊಳ್ಳದಿದ್ದರೆ ಹೇಗೆ?

ಮನವೆಂಬ ಹೆಂಡತಿ ರಾತ್ರಿ ಸುರೆ ಮಾಂಸ ಸೇವಿಸಿ ಮಲಗಿ ನಿದ್ರಿಸಿ, ಬೆಳಿಗ್ಗೆ ಎದ್ದು ಶೌಚ ಸ್ನಾನ ಪೂಜಾದಿಗಳನ್ನು ಮಾಡಿ ಹಣೆಗೆ ವಿಭೂತಿ ಗಂಧ ತಿಲಕಾದಿಗಳನ್ನು ಧರಿಸಿ ದೇವಾಲಯಗಳನ್ನು ಸುತ್ತಿದರೆ ಅರಿವೆಂಬ ಗಂಡನಿಗೆ ಸಮಾಧಾನವಾದೀತೆ? ಹೆಂಡತಿಯ ಹಾದರ ಗಂಡನಿಗೆ ತಿಳಿಯುವುದಿಲ್ಲವೇ? ಹೆಂಡದ ಮಡಕೆಯನ್ನು ಹೊರಗೆ ತೊಳೆದು ವಿಭೂತಿ ಧರಿಸಿದರೆ ಶುದ್ಧವಾಗುತ್ತದೆಯೇ?

ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ಎನ್ನುವ ಜನಪದರ ಉಕ್ತಿಯಂತೆ ಪ್ರಪಂಚದ ತುಂಬಾ ಹೀಗೇ ನಡೆದಿದೆ. ಗಂಡನನ್ನು ಹೆಂಡತಿ ತಿಳಿದಿಲ್ಲ ಹೆಂಡತಿಯನ್ನು ಗಂಡ ಹಿಡಿದು ಕಟ್ಟುತ್ತಿಲ್ಲ. ಮನಸೆಂಬ ಹೆಂಡತಿ ಅರಿವು ಎಂಬ ಗಂಡನ ಜಗಳ ದೇಹವೆಂಬ ಮನೆಯಲ್ಲಿ ಹೀಗೆ ನಡೆದಿದೆ. ಹಗಲು ಗಂಡ ಹೆಂಡಿರ ಜಗಳ; ರಾತ್ರಿ ಸುಖ ನಿದ್ರೆ!

ಮನವೆಂಬ ಹೆಂಡತಿ ಹಗಲು ಸುರೆ ಮಾಂಸ ಸೇವಿಸುತ್ತಾ, ಶ್ರೀಮಂತ ಬಡವ ಅಧಿಕಾರಿ ಜವಾನ ಎನ್ನುವ ತಾರತಮ್ಯ ಮಾಡುತ್ತ, ದೇಹವೆಂಬ ಮನೆಯೊಂದಿಗೆ ಒಮ್ಮೆ ಸುಖಿಸುತ್ತಾಳೆ ಮತ್ತೊಮ್ಮೆ ನರಕ ಯಾತನೆ ಅನುಭವಿಸುತ್ತಾಳೆ. ಚೀರುತ್ತೆ, ಬಯ್ಯುತ್ತ, ಜಗಳ ಕಾಯುತ್ತಾಳೆ. ರಾತ್ರಿ ಮಲಗಿದ್ದಾಗ ತಾನು ಯಾರು? ತನ್ನ ಹೆಸರೇನು? ತಾನು ಶ್ರೀಮಂತನೊ, ಬಡವನೊ, ಭಿಕ್ಷುಕನೊ? ಹೆಣ್ಣೊ ಅಥವಾ ಗಂಡೊ ಎನ್ನುವ ಪರಿಚಯವಿಲ್ಲದೆ ದೇಹದೊಂದಿಗೆ ಮಲಗಿ ಸುಖವಾಗಿ ನಿದ್ರಿಸುತ್ತಾಳೆ, ಹಗಲಿನ ಅಜ್ಞಾನದ ವ್ಯವಹಾರವನ್ನು ಸಂಪೂರ್ಣ ಕತ್ತರಿಸಿ

ಹಾಕಿ ಅರಿವು ಎನ್ನುವ ಗಂಡ ಮನ ಎನ್ನುವ ಹೆಂಡತಿಯನ್ನು ತನ್ನ ತೋಳ್ತೆಕ್ಕೆಯಲ್ಲಿ ಬಿಗಿದಪ್ಪಿ ಸುಖ ಕೊಡುತ್ತಾನೆ. ಆ ಸುಖದಲ್ಲಿ ಮನಕ್ಕೆ ತಾನು ಯಾರು ಅನ್ನುವುದೇ ಮರೆತುಹೋಗಿರುತ್ತದೆ.

ಈ ಸುಖ ನಿದ್ರೆಯಲ್ಲಿ ಕಳ್ಳನಿಗೆ ಕಳ್ಳ ಎನ್ನುವ ಪರಿಚಯವಿಲ್ಲ ಶಾಸಕನಿಗೆ ಶಾಸಕ ಎನ್ನುವ ಪರಿಚಯವಿಲ್ಲ ಗಂಡ ಹೆಂಡತಿ ಮನ ಎನ್ನುವ ಪರಿಚಯವಿಲ್ಲ. ಅರಿವು ಎನ್ನುವ ಗಂಡನೊಂದಿಗೆ ಮನ ಎನ್ನುವ ಹೆಂಡತಿ ಕೂಡಿದ ಸುಖ ಕೂಡದಗಲದ ಕೂಟದ ಸುಖ! ಆಗ ದೇಹ ಎನ್ನುವುದು ಮನೆಯಲ್ಲ; ಅರಿವು ಎನ್ನುವ ಗಂಡ ವಾಸ ಮಾಡಿದ ಶಿವಾಲಯ. ಮನ ಎನ್ನುವ ಅರ್ಧನಾರೀಶ್ವರನ ಭಾಂಡ ಭಾಜನ ಶುದ್ಧವಿದ್ದ ಜ್ಞಾನದ ಭಂಡಾರ! ಸದಾ ಥಳ ಥಳನೆ ಹೊಳೆಯುುವ ಚಿನ್ನದ ಪಾತ್ರೆ! ತೊಳೆಯುವುದು ಬೇಕಿಲ್ಲ ಬೆಳಗುವುದೂ ಬೇಕಿಲ್ಲ ಕೂಡಲಸಂಗಯ್ಯನ ಅರಿವಿನ ಅಮೃತದ ಪಾತ್ರೆ!

105

ಹಾವಾಡಿಗನು ಮೂಕೊರತಿಯು- ತನ್ನ ಕೈಯಲ್ಲಿ ಹಾವು
ಮಗನ ಮದುವೆಗೆ ಶಕುನವ ನೋಡ ಹೋಹಾಗ,
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ!
ತನ್ನ ಸತಿ ಮೂಕೊರತಿ- ತನ್ನ ಕೈಯಲ್ಲಿ ಹಾವು!
ತಾನು ಮೂಕೊರೆಯ!
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ?

ಹಾವಾಡಿಗ, ಮೂಕೊರತಿ, ಹಾವು, ಮಗನ ಮದುವೆ ಹಾಗೂ ಶಕುನ ಈ ಐದೂ ಶಬ್ದಗಳು ಈ ವಚನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ.

ಮಗನ ಮದುವೆಗೆಂದು ಪಂಚಾಂಗ ಕೇಳಲು ಹೊರಟ ವ್ಯಕ್ತಿಯ ವೃತ್ತಿ ಹಾವಾಡಿಸು ವುದು. ಅವನ ಹೆಂಡತಿ ಮೂಗಿಲ್ಲದವಳು. ಮತ್ತೊಬ್ಬ ಹಾವಾಡಿಗ, ಮೂಕೊರತಿ ಇದಿರು ಬಂದ ರೆಂದು; ಪಂಚಾಂಗ ಕೇಳಲು ಹೊರಟ ತಮಗೆ ಅಪಶಕುನ ವಾಯಿತೆಂದು ಮರಳಿ ಮನೆಗೆ ಹೋದ ಜಾಣರನ್ನು ನೋಡಾ! ಎಂದು ಆಶ್ಚರ್ಯ ವ್ಯಕ್ತ ಪಡಿಸಿದ್ದಾರೆ ಬಸವಣ್ಣ.

ಹಾವಾಡಿಗನ ಹೆಂಡತಿ ಮೂಗಿಲ್ಲದವಳು; ಆತ ಮೂಗಿಲ್ಲದವಳ ಗಂಡ;ಆತನ ಕೈಯಲ್ಲಿ ಹಾವು! ಆತ ಮೂಗಿಲ್ಲದವಳ ಗಂಡನಾಗಿದ್ದೂ ತನ್ನ ಭಿನ್ನವನು ಅರಿಯದೆ ಅನ್ಯರನ್ನು ಮೂಕೊ ರತಿ ಮೂಕೊರೆಯನೆಂದು ಜರಿದು. ಪಂಚಾಂಗವನ್ನು ಕೇಳದೆ ಅಪಶಕುನವಾಯಿತೆಂದು ಮನೆಗೆ ಹೋಗುವ ಕುನ್ನಿಗಳನ್ನು ಏನೆನ್ನಬೇಕು? ಈ ಸಂಪ್ರದಾಯ ಸೂಕ್ತವೆ? ಇಂತಹ ಸಾಮಾನ್ಯ ಸಂಗತಿಯೂ ತಿಳಿಯದಂತಹ ಅಜ್ಞಾನ, ತನುಗಳಿಗೆ ಮುಸುಕಿದೆಯಲ್ಲ. ಇದಕ್ಕೇನು ಕಾರಣವಾ ದೀತು ಎನ್ನುವ ಪ್ರಶ್ನೆಯೇ ಇಲ್ಲಿ ಪ್ರಮುಖವಾದುದು.

ವಿಷದ ಹಾವನ್ನು ಜಾಣತನದಿಂದ ಹಿಡಿದು ಪಳಗಿಸಿ ತನ್ನ ಪುಂಗಿಯ ನಾದಕ್ಕೆ ತಕ್ಕಂತೆ ಕುಣಿಸ ಬಲ್ಲ ಶಕ್ತಿಯುಳ್ಳವನೇ ಹಾವಾಡಿಗ ! ಇವನು ಮೂಗಿಲ್ಲದ ಮನವೆಂಬ ಹೆಂಡತಿಯ

ಗಂಡ! ಇವರಿಬ್ಬರ ವಾಸ ದೇಹವೆಂಬ ಮನೆಯಲ್ಲಿಯೇ. ಮಗನ ಮದುವೆಯ ನೆಪವೊಡ್ಡಿ ಖಣಿ ಕೇಳಲು ಮನ ಪ್ರೇರಣೆ ನೀಡಿತು. ಅರಿವು ದೇಹದೊಂದಿಗೆ ಸಿದ್ಧವಾಯಿತು. ಮನ ಮುಂದೆ ಮುಂದೆ; ಅರಿವು ಹಿಂದೆ ಹಿಂದೆ. ತನುವಿನ ಕೈಯಲ್ಲಿ ಹಾವು !

ತನ್ನ ಭಿನ್ನವನು ಅರಿಯದೆ ಮತ್ತೊಂದು ಹಾವು ಹಿಡಿದ ತನು ಅಡ್ಡ ಬಂದು ಅಪಶಕುನವಾಯಿತೆಂದು ಶಕುನ ಕೇಳುವುದನ್ನೇ ಬಿಟ್ಟು ಮನೆಗೆ ತೆರಳಿದ ಕುನ್ನಿಯನ್ನು ಏನೆನ್ನಬೇಕು?

ಕಚ್ಚಿದರೆ ಕೂಡಲೆ ಸಾಯುವ ಭಯಂಕರವಾದ ವಿಷ ಸರ್ಪವನ್ನು ಹಿಡಿದು ಪಳಗಿಸಿ ತನ್ನಂತೆ ಮಾಡಿಕೊಳ್ಳುವ ಅರಿವು ಉಪ ಜೀವನಕ್ಕೆ ಬಳಕೆಯಾಯಿತು. ಸಾವನ್ನು ಮೆಟ್ಟಿನಿಂತು ಹಾವು ಹಿಡಿಯಲು ಪ್ರೇರಣೆ ನೀಡಿತು. ಹಾಗೆಯೇ ಶುಭಕಾರ್ಯದ ನೆಪವೊಡ್ಡಿ ಕಾಗದದಲ್ಲಿ ಬರೆದ ಶಕುನಕ್ಕೆ ಮರುಳಾಯಿತು. ತನ್ನಂತೆಯೇ ಇರುವ ತನು ಇದಿರು ಬರಲು ಶಕುನ ಬೇಡವೆಂದು ಮರಳಿ ಮನೆಗೆ ಹೋಯಿತು! ಹಾವು ಹಿಡಿಯಲು ಬಳಕೆಯಾದ ಅರಿವು ಶುಭ ಕಾರ್ಯಕ್ಕೆ ಬಳಕೆಯಾಗಲಿಲ್ಲ. ಮನದ ಮಾತು ಕೇಳಿ ಶಕುನಕ್ಕೆ ತನುವಿನೊಂದಿಗೆ ಬಲಿಯಾಯಿತು. ವಿಷದ ಹಾವನ್ನು ಪಳಗಿಸಲು ಸಾಧ್ಯವಾಯಿತು; ಶಾಸ್ತ್ರವನ್ನು ಮೆಟ್ಟಿ ನಿಲ್ಲಲು ಸಾಧ್ಯವಾಗಲಿಲ್ಲ.

106

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು;
ಕಂಗಳಿಚ್ಛೆಗೆ ಪರವಧುವ ನೆರೆವರು;
ಲಿಂಗಲಾಂಛನಧಾರಿಯಾದಲ್ಲಿ ಫಲವೇನು
ಲಿಂಗಪಥವ ತಪ್ಪಿ ನಡೆವರ?
ಜಂಗಮ ಮುಖದಿಂದ ನಿಂದೆ ಬಂದೆಡೆ
ಕೊಂಡ ಮಾರಿಂಗೆ ಹೋಹುದ ತಪ್ಪದು,
ಕೂಡಲಸಂಗಮದೇವಾ!

ಅಂಗ ಅರಿವಿನ ಲಾಂಛನ; ಲಿಂಗ ಲಾಂಛನವೂ ಹೌದು. ಆದರೂ ಮನ ರುಚಿಗಾಗಿ ಮದ್ಯ ಮಾಂಸವನ್ನು ಬಯಸಿ ಅಂಗದೊಂದಿಗೆ ಸೇವಿಸುತ್ತದೆ. ಕಂಗಳ ಮೂಲಕ ಪರ ವಧುವಿನೊಂದಿಗೆ ಹಾದರ ಮಾಡುತ್ತದೆ; ತೃಪ್ತಿಯಾಗುವುದಿಲ್ಲ; ಅಂಗದೊಂದಿಗೆ ಬೆರೆಯುತ್ತದೆ. ಸುಖವಾಯಿತೆಂದು ಭ್ರಮಿಸುತ್ತದೆ.

ಮನದ ಹಾದರವೂ ಅರಿವಿನಲ್ಲಿ ಸಂಗ್ರಹವಾಗುತ್ತದೆ. ಮನ ಮಾಡಿದ ತಪ್ಪನ್ನು ಅರಿವು ಮತ್ತೆ ಮತ್ತೆ ನೆನಪು ಮಾಡಿ ಅಂಗ ಇರುವವರೆಗೂ ಕುಕ್ಕಿ ಕುಕ್ಕಿ ಕೊಲ್ಲುತ್ತದೆ. ಸರಕಾರ ಸಮಾಜ ಮನ ಮಾಡಿದ ತಪ್ಪಿಗೆ ತನುವನ್ನು ಬಂಧಿಸಿ ಕೆಲ ದಿನಗಳವರೆಗೆ ಶಿಕ್ಷೆ ಕೊಡುತ್ತದೆ. ಆದರೆ ಜಂಗಮ ಮುಖದಿಂದ ಬರುವ ನಿಂದೆ ಅಂಗ ಇರುವವರೆಗೆ ಅಂದರೆ ಅಂಗ ಕೊಂಡ ಮಾರಿಂಗೆ ಹೋಗುವವರೆಗೆ ತಪ್ಪದು

ಅಂಗ ಲಿಂಗ ಲಾಂಛನಧಾರಿಯಾದಲ್ಲಿ ಫಲವೇನು ಅರಿವಿನ ದಾರಿ ತಪ್ಪಿ ನಡೆಯುವ ಅಂಗ ಕೊಂಡ ಮಾರಿಗೆ ಹೋಗುವುದು ತಪ್ಪದು.

ಕಣ್ಣಿನಲ್ಲಿ ಬೆರೆತ ಮನಕ್ಕೆ ರೂಪು ಸುಂದರವಾಗಿ ಕಾಣುತ್ತದೆ. ಕೂಡಲೆ ಹಾದರಕ್ಕೆ ಇಳಿಯುತ್ತದೆ. ರೂಪದಲ್ಲಿರುವ ಸತ್ಯ ಮನಕ್ಕೆ ಅನಾವರಣಗೊಳ್ಳುವುದಿಲ್ಲ. ಅಂಗದಲ್ಲಿ ರಾಸಾಯನಿಕ ಕ್ರಿಯೆ ಹುಟ್ಟಿಸಿ ಅಂಗದೊಂದಿಗೆ ಬೆರೆತು ಸುಖಿಸುವಂತೆ ಮನ ಅಂಗಕ್ಕೆ ಪ್ರೇರಣೆ ನೀಡುತ್ತದೆ. ರೂಪು ಹಲವಾದೊಡೇನು ಯೋನಿ ಒಂದೇ ಎನ್ನುವ ಸತ್ಯ ಮನಕ್ಕೆ ಹೊಳೆಯುವುದಿಲ್ಲ. ಕಣ್ಣಿನಲ್ಲಿಯ ಮನ ಬಳಕೆಯಾಗುತ್ತದೆ. ಕಣ್ಣಿನಲ್ಲಿರುವ ಸತ್ಯ ಬಳಕೆಯಾಗದೆ ಹಾಗೇ ಉಳಿಯುತ್ತದೆ.

ಪ್ರತಿ ಅಂಗದಲ್ಲಿಯೂ ಅರಿವಿದೆ. ಆ ಅರಿವನ್ನು ಕಂಡುಕೊಳ್ಳುವ ದಾರಿಯೂ ಇದೆ. ಅದೇ ಲಿಂಗ ಪಥ! ಲಿಂಗಲಾಂಛನಧಾರಿಗೆ ಈ ದಾರಿ ತಿಳಿಯುವುದಿಲ್ಲ. ಅಂಗದಲ್ಲಿಯ ಅರಿವನ್ನು ತಿಳಿಯಬೇಕೆಂಬ ಬಯಕೆಯುಳ್ಳ ಅಂಗಕ್ಕೆ ತಪ್ಪದೆ ತಿಳಿಯುತ್ತದೆ. ಲಿಂಗ ಅಂಗ ಒಂದಾಗಿ ಲಿಂಗಾಂಗವಾಗುತ್ತದೆ. ಅರಿವು ಮನ ಅಂಗದಲ್ಲಿ ಕೂಡಿ ಕೂಡಲ ಸಂಗಮವಾಗುತ್ತದೆ.

107

ಶಿವ ಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ, ತಮ್ಮಂಗದ ಮೇಲೆ ಲಿಂಗವಿರುತಿರಲು
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ ಅನ್ಯರ ವಚನವ ಕೊಂಡಾಡಲು,
ಕರ್ಮ ಬಿಡದು; ಭವ ಬಂದನ!
ಶ್ವಾನ ಯೋನಿಯಲ್ಲಿ ಬಪ್ಪುದು ತಪ್ಪದು!
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರಿಗೆ
ಮಳಲಗೋಡೆಯನಿಕ್ಕಿ, ನೀರಲ್ಲಿ ತೊಳೆದಂತಾಯಿತ್ತಯ್ಯಾ!

ಪ್ರತಿಯೊಂದು ಅಂಗವೂ ಅರಿವಿನ ಜನ್ಮದಲ್ಲಿ ಹುಟ್ಟಿದೆ. ಅರಿವು ಅಂಗದ ಕಣ ಕಣದಲ್ಲಿ ಐಕ್ಯವಾಗಿದೆ. ಆದರೂ ಅಂಗ ಮತ್ತೊಂದು ಅಂಗ ಬಿತ್ತರಿಸುವ ಉಪನ್ಯಾಸಕ್ಕೆ ಮರುಳಾಗಿ ಆ ಅಂಗವನ್ನು ಹೊಗಳುತ್ತದೆ. ತಲೆ ದೂಗಿ ಕುಣಿಕುಣಿದಾಡುತ್ತದೆ. ಜೀವನ ಪರ್ಯಂತ ಅಂಗ ಮತ್ತೊಂದು ಅಂಗಕ್ಕೆ ದಾಸನಾಗುತ್ತದೆ.

ಆನಂದದ ನುಡಿಗಳನ್ನು ನುಡಿದ ಅಂಗವೂ ಅಂಗವೇ,ಆ ನುಡಿಗಳನ್ನು ಆನಂದದಿಂದ ಕೇಳಿ ತಲೆದೂಗಿದ ಅಂಗವೂ ಅಂಗವೇ. ಒಂದು ತಲೆದೂಗುವಂತೆ ನುಡಿಯುವುದರಲ್ಲಿ ಮಗ್ನವಾಗಿದೆ; ಹಲವಾರು ಅಂಗಗಳು ಕೇಳಿ ತಲೆದೂಗುವಲ್ಲಿ ಮಗ್ನವಾಗಿವೆ. ಅಂದ ಮೇಲೆ ಹೇಳುವ ಕೇಳುವ ಅಂಗಗಳ ಅರಿವು ಶಿವಮಯವಾಗಲಿಲ್ಲವೇ?

ಕ್ರಿಸ್ತ ಕೃಷ್ಣ ಬುದ್ಧ ಶಂಕರ ಬಸವಾದಿ ಶರಣರ ದಾಸವರೇಣ್ಯರ ಅಂಗವೂ ಅಂಗವೇ. ಉಳಿದ ಅಂಗಗಳೂ ಅಂಗವೇ. ಅಂಗದೊಳಗೆ ಐಕ್ಯವಾದ ಅರಿವು ಬಳಕೆ ಮಾಡಿದ ಅಂಗಗಳು; ಅಂಗದೊಳಗೆ ಐಕ್ಯವಾದ ಅರಿವು ಬಳಕೆ ಮಾಡದ ಅಂಗಗಳೆಂದು ಹೇಳಬಹುದು.

ಅಂಗದ ಅರಿವಿನ ಉಪನ್ಯಾಸ ಕೇಳಲು ಸಾಧ್ಯವಾಯಿತು; ಅಂಗದ ಮೂಲಕ ಪ್ರಾಯೋಗಿಕವಾಗಿ ಬಳಕೆ ಮಾಡಲು ಸಾಧ್ಯವಾಗಲಿಲ್ಲ. ಹಾಗೆ ಬಳಕೆ ಮಾಡಿದ ಕ್ರಿಸ್ತ ಕೃಷ್ಣ ಬುದ್ಧ ಶಂಕರ ಬಸವಾದಿ ಶರಣರ ದಾಸವರೇಣ್ಯರ ವಚನಗಳನ್ನು ಕೊಂಡಾಡಿದರೆ ಅಂಗದ

ಕರ್ಮ ಬಿಡಲು ಸಾಧ್ಯವೇ? ಅವರಿಗೆ ಗುಡಿ ಗುಂಡಾರ ಪ್ರಾರ್ಥನಾ ಮಂದಿರಗಳನ್ನು ಕಟ್ಟಿ ಉತ್ಸವಗಳನ್ನು ಆಚರಿಸಿದಲ್ಲಿ ಅಂಗಕ್ಕೆ ಅಂಟಿದ ಅಜ್ಞಾನ ತೊಲಗುವುದಿಲ್ಲ.

ಮಠ ಮಂದಿರ ಸಂತರ ಸಮಾಧಿಗಳ ಮುಂದೆ ನಿಂತು ತಿಳಿಯದ ಮಾತುಗಳಿಂದ ಬೊಗಳಿದರೆ ತನಗೇನಾಯಿತು ಎಂದು ತನಗೆ ತಿಳಿಯಬೇಡವೇ? ಅಂಗದ ಕಣ ಕಣದಲ್ಲಿ ಅರಿವಿದ್ದು; ಆ ಅರಿವನ್ನು ನಂಬಿಯೂ ನಂಬದ ಡಂಬಕರಿಗೆ ಮಳಲಗೋಡೆಯನ್ನಿಕ್ಕಿ ನೀರಲ್ಲಿ ತೊಳೆದಂತಾಯಿತು.

ಸಮಾಧಿ, ಮಠ, ಮಂದಿರ, ಮೂರ್ತಿಗಳನ್ನು ತೊಳೆದರೆ ಅದಕ್ಕಂಟಿದ ಧೂಳು ಕೆಸರು ದಕ್ಕುವುದಲ್ಲದೆ ಅವರ ತಿರುಳು ದಕ್ಕುವಂತಿಲ್ಲ. ಅವರಂತಯೇ ಅಂಗದ ಕಣಕಣದಲ್ಲಿ ಸಂಗಮವಾದ(ಲಿಂಗ)ಅರಿವು ಅಂಗಕ್ಕೆ ಬಳಕೆಯಾಗುವಂತಿಲ್ಲ ಎಂದು ಬಸವಣ್ಣನವರು ಮಹಾ ಸೂತ್ರವನ್ನೇ ಕರುಣಿಸಿದ್ದಾರೆ.

108

ಅರ್ಥರೇಖೆ ಇದ್ದಲ್ಲಿ ಫಲವೇನು; ಆಯುಷ್ಯರೇಖೆ ಇಲ್ಲದನ್ನಕ್ಕ?
ಹಂದೆಯ ಕೈಯ್ಯಲ್ಲಿ ಚಂದ್ರಾಯುಧವಿದ್ದು ಫಲವೇನು ?
ಅಂಧಕನ ಕೈಯ್ಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯ್ಯಲ್ಲಿ ಮಾಣಿಕ್ಯವಿದ್ದು ಫಲವೇನು?
ನಮ್ಮ ಕೂಡಲ ಸಂಗನ ಶರಣರನರಿಯದವರ ಕೈಯ್ಯಲ್ಲಿ
ಲಿಂಗವಿದ್ದು, ಫಲವೇನು, ಶಿವ ಪಥವನರಿಯದನ್ನಕ್ಕ!

ಅರಿವು ಮತ್ತು ಅರಿವಿನ ದಾರಿ ತಿಳಿಯಲೇ ಬೇಕು. ಆ ಅರಿವನ್ನು ಬಳಕೆ ಮಾಡುವ ವಿಧಾನ ಅರಿಯಲೇ ಬೇಕು. ಮನ ಆ ಕಾತುರದಲ್ಲಿ ಕ್ಷಣ ಕ್ಷಣವೂ ತವಕಿಸುತ್ತಿರಬೇಕು. ದಾರಿ ತೋರುವ ಸಮರ್ಥನನ್ನು ಹುಡುಕಲೇ ಬೇಕು. ಶಿವ ಪಥದ ದಾರಿ ತೋರುವ ಶರಣರು ತನಗಿಂತ ಭಿನ್ನರಿರುವುದಿಲ್ಲ. ಅವರನ್ನು ತಿಳಿಯುವ ಶಕ್ತಿ ತನಗಿರಬೇಕು. ಆ ಶಕ್ತಿ ತನಗಿಲ್ಲದಿದ್ದರೆ ತನುವಿನಲ್ಲಿ ಅರಿವಿದ್ದರೇನು ಫಲ; ಅರಿವಿನ ದಾರಿ ತಿಳಿಯದ ತನು ಮರೆವಿನ ಕಾರ್ಯದಲ್ಲಿಯೇ ಅವಸಾನ ಹೊಂದುವುದು!

ಅರಿವಿದ್ದೂ ಆ ಅರಿವನ್ನು ಬಳಕೆ ಮಾಡಲರಿಯದ ತನು ಅರ್ಥ ರೇಖೆ ಇದ್ದೂ ಆಯುಷ್ಯರೇಕೆ ಇಲ್ಲದಂತೆ! ಹೇಡಿಯ ಕೈಯ್ಯಲ್ಲಿ ಚಂದ್ರಾಯುಧವಿದ್ದಂತೆ! ಕುರುಡನ ಕೈಯ್ಯಲ್ಲಿ ಕನ್ನಡಿ ಇದ್ದಂತೆ ! ಮರ್ಕಟನ ಕೈಯ್ಯಲ್ಲಿ ಮಾಣಿಕ್ಯವಿದ್ದಂತೆ.

ಅರಿವು ಮನ ತನುವಿನಲ್ಲಿ ಸಂಗಮವಾಗಿ ಅರಿವಿಗೆ ಶರಣು ಹೋದ ಶರಣರನು ಅರಿಯದ ತನುವಿನಲ್ಲಿ ಅರಿವಿದ್ದು ಫಲವೇನು, ಆ ಅರಿವಿಗೆ ಹೋಗುವ ದಾರಿಯನು ತಿಳಿಯದನ್ನಕ್ಕ! ಎಂದಿದ್ದಾರೆ ಬಸವಣ್ಣನವರು.

109

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,

ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದಡೇನೊ, ಶಿವ ಶಿವಾ ಹೋದಡೇನೋ?
ಕೂಡಲಸಂಗಮದೇವಯ್ಯಾ ,
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ!

ಗಂಡನದೂ ದೇಹವೇ, ಹೆಂಡತಿಯದೂ ದೇಹವೇ. ಗಂಡನ ಮೇಲೆ ಹೆಂಡತಿಗೆ ಸ್ನೇಹವಿರಬೇಕು: ಹೆಂಡತಿಯ ಮೇಲೆ ಗಂಡನಿಗೆ ಸ್ನೇಹವಿರಬೇಕು. ಇದು ಬಾಳಸಂಗಾತಿಗಳ ಆದ್ಯ ಕರ್ತವ್ಯ. ಇಬ್ಬರೂ ಇದನ್ನು ಪಾಲಿಸಬೇಕು ಗಂಡ ಹೆಚ್ಚು ಹೆಂಡತಿ ಕಮ್ಮಿ ಎನ್ನುವ ತಾರತಮ್ಯ ವಿರಬಾರದು.

ಸ್ನೇಹವಿಲ್ಲದ ಹೆಂಡತಿ, ನಿಷ್ಠೆಯಿಲ್ಲದ ಭಕ್ತ ಇದ್ದಡೇನೊ, ಶಿವ ಶಿವಾ ಹೋದಡೇನೊ? ಕೂಡಲಸಂಗಮದೇವಯ್ಯಾ , ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ ಎಂದಿದ್ದಾರೆ ಬಸವಣ್ಣನವರು.

ಹೆಂಡತಿ ಗಂಡನಿಗೆ ಸದಾ ಸ್ನೇಹಿಯಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಗಂಡ ವ್ಯಕ್ತಿ; ಲಿಂಗ ದೇವರು ಎಂದರೆ ತಪ್ಪಾಗುತ್ತದೆ. ಹೆಂಡತಿ ಮಾತ್ರ ಸ್ನೇಹಿಯಾಗಿರಬೇಕು ಗಂಡ ಬೇಡವೆಂದು ಅರ್ಥವಾಗುತ್ತದೆ. ಭಕ್ತ ಲಿಂಗಕ್ಕೆ ಸದಾ ನಿಷ್ಠನಾಗಿರಬೇಕು ಎಂದರೆ ಲಿಂಗ ವ್ಯಕ್ತಿಯೋ, ದೇವರೊ ಅಥವಾ ಪೂಜಿಸುವ ಲಿಂಗವೋ? ಪೂಜಿಸುವ ಲಿಂಗಕ್ಕೆ ನಿಷ್ಠನಾಗಿರಬೇಕೆನ್ನುವುದು ಅರ್ಥವಿಲ್ಲದ ಮಾತು. ಎರೆದರೆ ನೆನೆಯದ ಮರೆತರೆ ಬಾಡದ ಲಿಂಗಕ್ಕೆ ಭಕ್ತ ನಿಷ್ಠನಾಗಲು ಬರುತ್ತದೆಯೆ? ಒಂದು ವೇಳೆ ಭ್ರಮೆಯಿಂದ ನಿಷ್ಠನಾಗಿ ಬಹಳ ಕಾಲದವರೆಗೆ ಪೂಜಿಸಿದರೆ ಪ್ರತ್ಯಕ್ಷವಾಗುವುದೇ? ಅಥವಾ ಭಕ್ತನ ಮೇಲೆ ಕರುಣೆ ತೋರುವುದೆ? ಇವೆರಡೂ ಸಾಧ್ಯವಿಲ್ಲ. ಹೀಗೆ ಮಾಡಿದವರಿಗೆ ಮಾಡುವವರಿಗೆ ಯಾವ ಭಾಗ್ಯವೂ ದೊರೆತಿಲ್ಲ. ಏಕೆಂದರೆ ಲಿಂಗ ಜಡ; ಪೂಜಿಸುವ ತನು ಚೇತನ!

ಗಂಡನಾದರೇನು ಹೆಂಡತಿಯಾದರೇನು ಇವರಿಬ್ಬರೂ ದೇಹ ಉಳ್ಳವರು. ಬಾಳಸಂಗಾತಿಗಳು. ಇವರಿಬ್ಬರಿಗೂ ಮನವಿದೆ; ಹಾಗೆಯೇ ಅರಿವೂ ಇದೆ. ಅರಿವು ಮನ ಬೇರೆ ಬೇರೆ ಎಂದು ತಿಳಿದಿಲ್ಲ. ಗಂಡ ಎನ್ನುವುದು ಅರಿವು; ಹೆಂಡತಿ ಎನ್ನುವುದು ಮನ! ಅರಿವಿನ ಮೇಲೆ ಸ್ನೇಹವಿಲ್ಲದ ಮನ ಇದ್ದಡೇನೋ ಶಿವ ಶಿವಾ ಹೋದಡೇನೊ?

ಆಹಾರ ನಿದ್ರೆ ಭಯ ಮೈಥುನ, ಕಣ್ಣು ಕಿವಿ ಮೂಗು ನಾಲಿಗೆ ಚರ್ಮ, ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಇವು ಹೆಣ್ಣು ಅಲ್ಲ ಗಂಡೂ ಅಲ್ಲ. ದೇಹಕ್ಕೆ ಆವರಿಸಿದ ಮನ ; ತಾನು ಹೆಣ್ಣೆಂದು ಗಂಡೆಂದುಭಾವಿಸಿದೆ. ಹೆಣ್ಣೆಂದು ಸಂಕುಚಿತ ಭಾವವನ್ನು ಹೊಂದಿದೆ ಗಂಡೆಂದು ಅಧಿಕಾರ ಭಾವವನ್ನು ತಳೆದಿದೆ. ಅರಿವಿನ ಮೇಲೆ ಮನ ಸ್ನೇಹ ಮಾಡಿದರೆ ಆ ಅರಿವೆ ತಾನಾಗುತ್ತದೆ. ಅರಿವಿನಿಂದ ನೋಡಿದರೆ ತನು ಹೆಣ್ಣು ಅಲ್ಲ ಗಂಡು ಅಲ್ಲ. ಹೆಣ್ಣು ಎನ್ನುವ ದೇಹದಲ್ಲಿಯೂ ಅರಿವಿದೆ; ಗಂಡು ಎನ್ನುವ ದೇಹದಲ್ಲಿಯೂ ಅರಿವಿದೆ. ದೇಹವನ್ನು ಆವರಿಸಿದ ಮನಕ್ಕೆ ದೇಹದ ಕಣಕಣದಲ್ಲಿರುವ ಅರಿವೇ ಗಂಡ! ಆ ಅರಿವಿಗೆ ಮನ ಸ್ನೇಹ ಮಾಡಬೇಕು.

ಆ ಅರಿವೇ ಗಂಡ; ಆ ಗಂಡನೇ ಲಿಂಗ! ಆ ಲಿಂಗವೆಂಬ ಅಂಗದ ಅರಿವಿಗೆ ಹೆಂಡತಿಯೆಂಬ ಮನ ನಿಷ್ಠೆಯಿಂದ ಭಕ್ತಿ ಮಾಡಬೇಕು.

ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ :

ಅರಿವು ಎನ್ನುವ ತಾಯಿ ತಾನಾಗಿಯೇ ಮಗುವಿಗೆ ಹಾಲು ಕೊಡುವುದಿಲ್ಲ. ಅರಿವಿನ ಹಸಿವಿಗಾಗಿ ಕರುವು ಗೋಗರೆಯಬೇಕು. ಹಸು ಹಾಲು ಕೊಟ್ಟು ಹಸಿದ ಮಗುವನ್ನು ಸಂತೈಸುವುದು. ಇವೆರಡೂ ಕೆಲಸಗಳು ಪ್ರತಿ ತನುವಿನಲ್ಲಿಯೇ ನಡೆಯಬೇಕು. ಅರಿವು ತನುವಿನಲ್ಲಿಯೇ ಸಂಗಮವಾಗಿದೆ; ಮನವೂ ತನುವಿನಲ್ಲಿಯೇ ಸಂಗಮವಾಗಿದೆ; ಆದರೂ ಇವೆರಡು ಉತ್ತರ-ದಕ್ಷಿಣ. ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆಯುತ್ತದೆ. ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ!

110

ಅವಳ ವಚನ ಬೆಲ್ಲದಂತೆ; ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ !
ಕಂಗಳಲೊಬ್ಬನ ಕರೆವಳು; ಮನದಲೊಬ್ಬನ ನೆನೆವಳು!
ಕೂಡಲಸಂಗಮದೇವಾ ಕೇಳಯ್ಯಾ ,
ಮಾನಿಸಗಳ್ಳೆಯ ನಂಬದಿರಯ್ಯಾ !

ಮೊಲೆ ಮುಡಿ ಬಂದರೆ ಹೆಣ್ಣೆಂಬರಯ್ಯಾ, ಮೀಸೆ ಕಾಸೆ ಬಂದರೆ ಗಂಡೆಂಬರಯ್ಯಾ, ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡು ಅಲ್ಲ; ಸಾಕ್ಷತ್ ಕಪಿಲ ಸಿದ್ಧ ಮಲ್ಲಿಕಾರ್ಜುನ. ಎಂದು ಸಿದ್ಧರಾಮ ಶಿವಯೋಗಿಗಳು ಹೇಳಿದ್ದಾರೆ. ಶರಣರು ದಾಸರು ಮನಸ್ಸಿಗೆ ಹೆಣ್ಣು ಎಂದು ಕರೆದಿದ್ದಾರೆ. ಬಸವಣ್ಣನವರು ಮಾನಸಗಳ್ಳಿ ಎಂದಿದ್ದಾರೆ.

ಮನದ ಮಾತು ಬೆಲ್ಲದಂತೆ. ನುಡಿದಂತೆ ನಡೆಯಬೇಕಾದಾಗ ಬರೀ ನಂಜು ಚೆಲ್ಲುತ್ತದೆ. ನೋಡುವ ನೋಟದಲ್ಲಿ ಹಾದರ ; ಕೂಡುವ ಕೂಟದಲ್ಲಿಯೂ ಹಾದರ! ನೋಡುವುದು ಒಂದು ; ಕೂಡುವುದು ಮತ್ತೊಂದು . ತನುಗಳ ಕೂಟದ ವೃತ್ತಿ ಒಂದಾದರೂ ಮನದ ಪ್ರವೃತ್ತಿ ಬೇರೆ ಬೇರೆ .

ಮನ ಮಾಡುವ ಹಾದರ ತನುವಿನ ಮೂಲಕ ಪ್ರದರ್ಶನವಾಗುತ್ತದೆ. ಸಮಾಜ ಸರಕಾರ ಪೊಲೀಸರು ತನುವಿಗೆ ಶಿಕ್ಷೆ ಕೊಡುತ್ತಾರೆ ಹೊರತು ಮನಕ್ಕೆ ಶಿಕ್ಷೆ ಕೊಡುವುದಿಲ್ಲ. ಅದು ಮಾನಸಗಳ್ಳಿ. ಮನಕ್ಕೆ ಶಿಕ್ಷೆ ಕೊಡುವ ಶಿಕ್ಷಣ ಶಾಲೆಗಳಲ್ಲಿ ಇಲ್ಲ. ಶಿಕ್ಷಕರಿಗೆ ಕಲಿತುಕೊಳ್ಳಬೇಕೆಂಬ ತವಕ ಇಲ್ಲ.

ತನುವನ್ನು ಗೌರವಿಸಿ ಮನಕ್ಕೆ ಶಿಕ್ಷೆ ಕೊಡುವ ಶಿಕ್ಷಣ ಮಹಾಜ್ಞಾನಿಗಳಿಗೆ ಮಾತ್ರ ಗೊತ್ತು.

ಸಿದ್ದಾರ್ಥ ಅಂಗುಲಿಮಾಲನನ್ನು ಗಲ್ಲಿಗೆ ಹಾಕುತ್ತಿದ್ದ.ಆತನ ರುಂಡ ಚೆಂಡಾಡುತ್ತಿದ್ದ. ಬುದ್ಧ ಹಾಗೆ ಮಾಡಲಿಲ್ಲ. ತನುವನ್ನು ಗೌರವಿಸಿದ ; ತನುವನ್ನು ಆವರಿಸಿದ ಅಂಗುಲಿಮಾಲನೆಂಬ ಮನವನ್ನು ಕೊಂದ ಆ ತನುವಿನಲ್ಲಿ ಬುದ್ಧ ಪ್ರಕಟವಾದ . ತನು ಬುದ್ಧನದು; ಬಸವಣ್ಣನದು; ಕ್ರಿಸ್ತ ಕೃಷ್ಣ ದಾಸರದು. ಮನ ಮಾಡಿದ ಹಾದರಕ್ಕೆ ತನುವನ್ನು ದಂಡಿಸುವುದು ಮಹಾ ಅಪರಾಧ! ಬ್ರಹ್ಮ ಹತ್ಯೆ ಮಾಡಿದ ಪಾಪ ಸುತ್ತಿಕೊಳ್ಳುತ್ತದೆ.

ಕಣ್ಣಿನಲ್ಲಿ ಒಬ್ಬನನ್ನು ಕರೆಯುವ, ಮನದಲ್ಲಿ ಒಬ್ಬನನ್ನು ನೆನೆಯುವ ಮಾನಸಗಳ್ಳಿಯನ್ನು ನಂಬದೆ ಕೂಡಲಸಂಗಮದೇವನ ಅರಿವಿನ ತನುವನ್ನು ಗೌರವಿಸುವ ಶಿಕ್ಷಣ ಪಡೆಯಬೇಕು.

111

ಹಾದರಕ್ಕೆ ಹೋದಡೆ, ಕಳ್ಳದಮ್ಮವಾಯಿತು:

ಹಾಳುಗೋಡೆಗೆ ಹೊದಡೆ, ಚೇಳೂರಿತ್ತು;
ಅಬ್ಬರವ ಕೇಳಿ ತಳವಾರ ಉಟ್ಟ ಸೀರೆಯ ಸುಲಿದ;
ನಾಚಿ ಹೋದಡೆ ಮನೆಯ ಗಂಡ ಬೆನ್ನಬಾರನೆತ್ತಿದ;
ಅರಸು ಕೂಡಲಸಂಗಮದೇವ ದಂಡವ ಕೊಂಡ!

ಮನ ಮಾಡುವ ಹಾದರ ತನುವಿಗೆ ಬಲು ಸುಖ; ಹಾಗೆಯೇ ಆಪಮಾನ ಕೂಡಾ! ಹಾದರದ ಸುಖ ದುಃಖಗಳಲ್ಲಿ ತನುವಿನ ಅಂತಿಮ ಯಾತ್ರೆ ಮುಗಿಯುತ್ತದೆ.

ತನುವಿಗೆ ಮನದ ಹಾದರದ ಸುಖ ದುಃಖಗಳು ತಿಳಿಯುತ್ತವೆಯೇ ಹೊರತು; ತನ್ನದೇ ಆದ ಅರಿವಿನ ಅಖಂಡ ಸುಖ ತಿಳಿಯುವುದಿಲ್ಲ. ಹಾಗೆ ತಿಳಿಯಲೂ ಬರುವುದಿಲ್ಲ! ಏಕೆಂದರೆ ತನು ಜಡ! ಹಾದರದ ಸುಖಕ್ಕಾಗಿ ತನುವನ್ನು ದುರ್ಬಳಕೆ ಮಾಡಿಕೊಳ್ಳುವ ಮನವೇ ತನುವಿನ ಅಖಂಡ ಅರಿವನ್ನು ತಿಳಿಯಬೇಕು. ಇದು ಮನಕ್ಕೆ ಬಲು ಜಟಿಲ! ಇನಸ್ಟ್ಯಾಂಟ್ ಸುಖವೆಂದರೆ ಮನಕ್ಕೆ ಬಲು ಇಷ್ಟ. ಅದು ಹೊರಗೆ ಹೇರಳವಾಗಿ ಸಿಗುತ್ತದೆ. ಮನ ಅರಿವಿನ ಸುಖ ಪಡೆದು ಹೊರಗಿನ ವಸ್ತುಗಳನ್ನು ನೋಡಿದರೆ ಅದು ಬರೀ ಭ್ರಮೆ ಎಂದು ಅರಿವಾಗುತ್ತದೆ. ಮನದ ಹಾದರ ನಿಲ್ಲುತ್ತದೆ.

ರೂಪ ಹಾದರಕ್ಕೆ ಕಾರಣ; ನಿರೂಪ ರೂಪಕ್ಕೆ ಕಾರಣ! ನಿರೂಪವಿಲ್ಲದಿದ್ದರೆ ರೂಪ ಶವ. ಶವದೊಂದಿಗೆ ಯಾರ ಕಣ್ಣು ಹಾದರ ಮಾಡುವುದಿಲ್ಲ. ಆದರೆ ಮನ ರೂಪ ಇರುವವರೆಗೆ ರೂಪಕ್ಕೆ ಕಾರಣವಾದ ನಿರೂಪ ನೋಡುವುದಿಲ್ಲ. ನಿಜ ಕಣ್ಣು ನಿರೂಪ ನೋಡಿದರೆ; ಕಣ್ಣಿನಲ್ಲಿ ಆವರಿಸಿದ ಮನ ರೂಪ ನೋಡಿ ಹಾದರ ಮಾಡುತ್ತದೆ. ಮನ ರೂಪ ನೋಡುವ ಮುನ್ನ ನಿಜ ಕಣ್ಣಿನ ಮೂಲಕ(ಒಳಕಣ್ಣು) ನೋಡಿದರೆ ನಿರೂಪವೇ ಕಾಣುತ್ತದೆ. ರೂಪಕ್ಕೆ ಕಾರಣವಾದ ನಿರೂಪ ಹೆಣ್ಣು ಅಲ್ಲ ಗಂಡೂ ಅಲ್ಲ. ಸಾಕ್ಷಾತ್ ಕೂಡಲಸಂಗಮದೇವನೆಂಬ ಅರಿವಿನ ಅರಸ!.

ಹಾದರಕ್ಕೆಂದು ಹಾಳುಗೋಡೆಗೆ ಹೋದಡೆ ಇದು ತಪ್ಪೆಂದು ಚೇಳಿನಂತೆ ಕುಟುಕುತ್ತಾನೆ. ಅಬ್ಬರಿಸಿದರೆ ತಳವಾರನಂತೆ ಉಟ್ಟ ಸೀರೆಯನ್ನೇ ಸುಲಿಯುತ್ತಾನೆ. ನಾಚಿದರೆ ಮನೆಯ ಗಂಡನಾಗಿ ಬೆನ್ನಬಾರನೆತ್ತುತ್ತಾನೆ. ತಿಳಿದರೆ ಮನದ ಸಕಲ ಅಪರಾಧಗಳನ್ನು ಮನ್ನಿಸಿ ಮನದನ್ನೆಯನ್ನಾಗಿಸಿಕೊಳ್ಳತ್ತಾನೆ; ಅರಸು ಕೂಡಲಸಂಗಮದೇವ!

112

ಗರಿ ತೋರಿ ಗಂಡರೆಂಬವರ ಕಾಣೆ;
ನಿರಿ ಸೋಂಕಲು ಮುನಿಯಿಲ್ಲ ನೋಡಯ್ಯ-
ನಂಟುತನವೇನವನ? ಬಂಟತನವೇನವನ?
ಹುಲ್ಲ ಕಿಚ್ಚು- ಹೊಲೆಯನ ಮೇಳಾಪ!
ಅಲ್ಲಿ ಹುರುಳಿಲ್ಲ, ಕೂಡಲಸಂಗಮದೇವಾ.

ಗರಿ ತೋರಿ ಗಂಡರೆಂಬವರ ಕಾಣೆ; ಹುಲ್ಲು ಕಡ್ಡಿಯಲ್ಲಿ ಸತ್ಯ ಹೇಗೆ ಅಡಗಿದೆ ಎಂದು ಸೂತ್ರ ಬದ್ಧವಾಗಿ ತಿಳಿಯುವಂತೆ ಹೇಳುವ ಹೌದೌದೆಂದು ತಲೆ ದೂಗುವಂತೆ ಕೇಳಿ ತನಗೆ ಅರಿವಿಲ್ಲದಂತೆ ಸತ್ಯಪಾಲಿಸುವಲ್ಲಿ ತೊಡಗುವಂತೆ ಮಾಡುವ ಅರಿವಿನ ಶೂರನೊಬ್ಬನನ್ನು ಕಾಣೆ

ನಿರಿ ಸೋಂಕಲು ಮುನಿಯಿಲ್ಲ ನೋಡಯ್ಯ;

ಅಣು ರೇಣು ತೃಣ ಕಾಷ್ಠದಲ್ಲಿ ಭಗವಂತನೇ ಇದ್ದಾನೆ. ಆತ ಸರ್ವಾಂತರ್ಯಾಮಿ ಎಂದು ಪಾಠ ಮಾಡುವ ಮುನಿ ವೇಷದ ಶೂರನಿಗೆ ಸೀರೆಯ ನಿರಿಗೆ ಕಂಡರೆ ಸಾಕು ಅದರ ಹಿಂದೆ ಬೀಳುತ್ತಾನೆ. ಅರಿವೆಯ ತುಂಡು ಅರಿವಿನ ವೇಷವನ್ನು ಬಿಡಲಿಲ್ಲ.

ಗರಿಯಿಲ್ಲದ ಅರಿವು ಕಾಣಲಿಲ್ಲ. ಸೀರೆಯ ನಿರಿಗೆಯಲ್ಲಿದ್ದ ಸೋಂಕು ಸೆಳೆಯದೆ ಬಿಡಲಿಲ್ಲ.

ನಂಟುತನವೇನವನ? ಬಂಟತನವೇನವನ? : ಅರಿವೆಯ ನಂಟುತನವೂ ಬಿಡದು, ನಿರಿಗೆಯ ಬಂಟತನವೂ ಬಿಡದು. ಏನೀ ಮಾಯೆ ಎಂದು ಅರಿವೆ ಉಟ್ಟುಕೊಂಡ ಮುನಿಗೆ ಅರಿವಾಗಬೇಕಲ್ಲ. ಅರಿವೆಯ ಮೇಲೆ ಆಸೆಯೂ ಇದೆ; ಸೀರೆಯ ನಿರಿಗೆಯೂ ಕೈಮಾಡಿ ಕರೆಯುತ್ತಿದೆ. ಗರಿಯ ಸತ್ಯ ಕಾಣುತ್ತಿಲ್ಲ; ನಿರಿಗೆಯ ಕಾಮ ಬಿಡುತ್ತಿಲ್ಲ; ಅರಿವಿನ ಅರಿವೆ ಅಣುಕಿಸದೆ ಬಿಡುತ್ತಿಲ್ಲ; ಗರಿ ತೋರಿ ಸತ್ಯ ಪರಿಚಯಿಸುವ ಒಬ್ಬ ಗಂಡನೂ ಕಾಣಿಸುತ್ತಿಲ್ಲ. ಏನೀ ಮಾಯೆಯ ನಂಟುತನ! ಏನೀ ಮಾಯೆಯ ಬಂಟತನ!

ಹುಲ್ಲ ಕಿಚ್ಚು- ಹೊಲೆಯನ ಮೇಳಾಪ :

ತನುವಿನಲ್ಲಿ ಅರಿವಿನ ಕಿಚ್ಚು ಇದೆ; ಅದನ್ನು ತಿಳಿಯಗೊಡದ ಮನವೆಂಬ ಹೊಲೆಯನ ಮೇಳಾಪವೂ ಇದೆ. ಮನವೆಂಬ ಹೊಲೆಯನಿಗೆ ಸೀರೆಯ ನಿರಿಗೆಯೆಂದರೆ ಇಷ್ಟ. ಅದನ್ನು ಸುಟ್ಟು ಭಸ್ಮ ಮಾಡಿ ಧರಿಸುವುದೆಂದರೆ ಅರಿವಿನ ಅರಿವಿಗೆ ಬಲು ಇಷ್ಟ!

ಮನವೆಂಬ ಹೊಲೆಯ ಅರಿವೆ ಧರಿಸಿದರೆ ಮುನಿಯಾಗಬಲ್ಲನೇ? ಗರಿಯಲ್ಲಿಯ ಸತ್ಯ ತೋರಿ ಗಂಡನಾಗಬಲ್ಲನೆ? ನಿರಿ ಸೋಂಕಲು ಮುನಿಯಿಲ್ಲ! ಅರಿವಿನ ಕಿಚ್ಚು ಹೊಲೆಯನ ಮೇಳಾಪವಿದ್ದ ತನುವಿನಲ್ಲಿ ಹುರುಳಿಲ್ಲ. ಹುಲ್ಲ ಕಿಚ್ಚಿನಿಂದಲೇ ಹೊಲೆಯನ ಸುಟ್ಟು ಭಸ್ಮ ಧರಿಸಿದಾಗಲೇ ಕೂಡಲಸಂಗಮದೇವನ ಮೇಳಾಪ!

113

ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ ?
ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ?
ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ?
ಕೂಡಲಸಂಗಮದೇವಾ, ಅರಸರಿಯದ ಬಿಟ್ಟಿಯೋ!

ಸಿದ್ಧಾರ್ಥ, ವರ್ಧಮಾನ ಇವರಿಬ್ಬರೂ ಬಲು ಜಾಣರು. ಅರಸರಾಗಿದ್ದರೂ ಮುತ್ತು ರತ್ನ ನಾಣ್ಯಗಳನ್ನು ಅಳೆದು ಅಳೆದು ಭಂಡಾರವನ್ನು ಭರ್ತಿ ಮಾಡಲಿಲ್ಲ. ರಾಜ್ಯ ವಿಸ್ತಾರಕ್ಕಾಗಿ, ಸ್ತ್ರೀಗಾಗಿ, ಸಂಪತ್ತಿಗಾಗಿ, ಭೂಮಿ ಧನಕನಕಾದಿಗಳಿಗಾಗಿ ಯುದ್ಧ ಮಾಡಲಿಲ್ಲ. ಸಾವು ನೋವುಗಳಿಗೆ ದಾರಿ ಮಾಡಲಿಲ್ಲ. ಮತ್ತೊಬ್ಬ ರಾಜನನ್ನು ಕೊಂದು ಸೈ ಅನ್ನಿಸಿಕೊಳ್ಳಲಿಲ್ಲ. ಹೀಗೆ ಮಾಡಿದ್ದರೆ ಎಲ್ಲ ರಾಜರೊಂದಿಗೆ ಮಣ್ಣು ಸೇರುತ್ತಿದ್ದರು. ಯುಗಪುರುಷ ರೆನ್ನಿಸಿಕೊಳ್ಳುತ್ತಿರಲಿಲ್ಲ.

ಅಳೆಯುವ ಕೊಳಗವೂ ಲೋಹವೇ, ತುಂಬುವ ನಾಣ್ಯವೂ ಲೋಹವೇ! ಲೋಹ ಲೋಹದಲ್ಲಿ ತುಂಬಿ ಅಳೆದೂ ಅಳೆದೂ ವ್ಯರ್ಥ ಸಮಯ ಕಳೆಯುವುದು. ಅಳತೆ ಸರಿದೂಗಲಿಲ್ಲ ವೆಂದು ಯುದ್ಧ ಮಾಡಿ ಕೊಂದು ಸಂಗ್ರಹಿಸಿ ದೋಚಿ ಪುನಃ ಅಳೆಯುವುದು.

ಸಾಯುವವರೆಗೆ ಅಳೆದರೂ ಅಳತೆ ಪೂರ್ತಿಗೊಳ್ಳವುದೇ ಇಲ್ಲ. ಅಳೆದೂ ಅಳೆದೂ ತಾನು ಬಳಲುತ್ತಾನಲ್ಲದೆ ಕೊಳಗ (ಸೇರು) ಬಳಲುವುದೇ ಇಲ್ಲ!

ತನುವನ್ನು ಆವರಿಸಿದ ಮನ ಅಳೆಯಲು ಹಚ್ಚಿತು; ತನುವಿನಲ್ಲಿ ಅರಿವು ಬಳಕೆಯಾಗಲೇ ಇಲ್ಲ. ಸಿದ್ಧಾರ್ಥ, ವರ್ಧಮಾನರಿಬ್ಬರಿಗೂ ಅರಿವು ಬಳಕೆಯಾಯಿತು. ಅಳೆದೂ ಅಳೆದೂ ಬಳಲುವ ಮನ ಅಳಿದು ಹೋಯಿತು. ಅವರಿಬ್ಬರೂ ಬುದ್ಧರಾದರು; ಮಹಾವೀರರಾದರು!

ನಡೆದು ನಡೆದು ಕಾಶಿಗೆ ಹೋದರೇನು ಶ್ರೀಶೈಲಕ್ಕೆ ಹೋದರೇನು? ತನು ಬಳಲುವುದಲ್ಲದೆ ದಾರಿ ಬಳಲುವುದಿಲ್ಲ. ಯುದ್ಧದ ವರಸೆ ಕಲಿಯಲು ಸಾಮ ಮಾಡುವಾಗ ತನು ಬಳಲುವುದಲ್ಲದೆ ಕೋಲು ಬಳಲುವುದಿಲ್ಲ. ನಿಜವನರಿಯದೆ ಕಾಶಿ ಶ್ರೀಶೈಲ ಹಿಮಾಲಯ ಪುಣ್ಯ ಕ್ಷೇತ್ರಗಳಿಗೆ ಹೋದರೇನು ತನು ಬಳಲುವುದಲ್ಲದೆ ಅರಿವು ಬಳಲುವುದಿಲ್ಲ.

ನಿಜವನರಿಯದ ಮನ ತನುವನ್ನು ಬಳಲಿಸಿ ಬಳಲಿಸಿ ವ್ಯರ್ಥ ಕೊಂದು ಅರಿವೆಂಬ ಅರಸನನ್ನು ಅರಿಯದೆ ಸಾಯುವುದು. ಅರಿವಿನ ಅರಸನ ವಾಸವೂ ತನುವಿನಲ್ಲಿಯೇ; ಮನದ ವಾಸವೂ ತನುವಿನಲ್ಲಿಯೇ! ಆದರೂ ಮನ ತನುವನ್ನು ಅಳೆಯುತ್ತ ಅಳೆಯುತ್ತ ಬಳಲಿಸುವುದು.

ಭಕ್ತನಜ್ಞಾನಿಸ್ಥಲ

114

ಒಲೆಯ ಬೂದಿಯ ಬಿಲಿಯಲು ಬೇಡ;
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ ?
ಒಂದನಾಡಹೋಗಿ ಒಂಬತ್ತನಾಡುವ ಡಂಬಕರ ಮೆಚ್ಚ
ನಮ್ಮ ಕೂಡಲಸಂಗಮದೇವ !

ಒಲೆಯ ಬೂದಿಯನ್ನು ಖರೀದಿಸಿ ಭಸ್ಮವೆಂದು ಹಚ್ಚಿಕೊಳ್ಳುವ ಅವಶ್ಯಕತೆಯಿಲ್ಲ. ಒಲೆ ಹೂಸಿಕೊಂಡಿಲ್ಲವೇ ತನಗೆ ತಿಳಿಯದಂತೆ ! ಕ್ಷಣ ಕ್ಷಣವೂ ತನುವನ್ನು ಘಾಸಿಗೊಳಿಸಿ ಸೆಗಣಿಯಂತೆ ಮಾಡುವ ಮನವನ್ನು ಸುಟ್ಟು ಬೂದಿ ಮಾಡಬೇಕು . ಅದನ್ನೇ ಭಸ್ಮವಾಗಿ ಧರಿಸಬೇಕು ಎನ್ನುವ ಸೂತ್ರ ಈ ವಚನದಲ್ಲಿದೆ.

ತನುವಿಗೆ ಭಸ್ಮ ಹೂಸಿದರೇನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ ? ನೋಡುವ ಕಣ್ಣಿನಲ್ಲಿ, ಕೇಳುವ ಕಿವಿಯಲ್ಲಿ ಮೂಸಿಸುವ ಮೂಗಿನಲ್ಲಿ, ರುಚಿಸುವ ನಾಲಿಗೆಯಲ್ಲಿ, ಸ್ಪರ್ಶಿಸುವ ಚರ್ಮದಲ್ಲಿ ಅಜ್ಞಾನ ತೊಲಗುವುದಿಲ್ಲ. ಒಂದನಾಡುವ ಅರಿವೆಂಬ ಸತ್ಯ ತನುವಿನಲ್ಲಿಯೇ ಉಳಿದು, ಒಂಬತ್ತನಾಡುವ ಅಜ್ಞಾನದ ಮನ ಬಳಕೆಯಾಗುತ್ತದೆ. ಈ ಅಜ್ಞಾನದ ಮನ ಅರಿವಿನಿಂದ ಸುಟ್ಟು ಆ ಭಸ್ಮ ತನುವಿಗೆ ಹೂಸಿದರೆ ತನುವಿನಲ್ಲಿ ಅರಿವು ಒಂದೇ ಉಳಿಯುತ್ತದೆ.

ಒಂಬತ್ತನಾಡಿ ಕ್ಷಣ ಕ್ಷಣಕ್ಕೂ ಘಾಸಿಗೊಳಿಸುವ ಮನ ತನುವಿಗೆ ಭಸ್ಮವಾಗಿ ಶೋಭಿಸುತ್ತದೆ. ತನುವಿನಲ್ಲಿ ಮನ ಸಂಗಮವಾಗಿ ಕೂಡಲ ಸಂಗಮನಾಗಿ ಮೆರೆಯುತ್ತದೆ.

115

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ,
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ,
ಒಮ್ಮನವಾದಡೆ ಒಡನೆ ನುಡಿವನು;
ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ.
ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವಾ!

ಗಡಿ ಬೇರೆ ಬೇರೆಯಾಗಿರಬಹುದು ಭೂಮಿಯೆಲ್ಲಾ ಒಂದೇ. ಜಲ ಒಂದೇ. ಭಾಷೆ ಹಲವಿರಬಹುದು ಭೂಮಿಯ ಮೇಲಿರುವ ತನುಗಳೆಲ್ಲ ಒಂದೇ. ವ್ಯಾಪಾರಿಯೂ ಒಬ್ಬನೇ. ಗ್ರಾಹಕನೂ ಒಬ್ಬನೇ. ಈ ಮಾತು ವಿಚಿತ್ರ ; ತಿಳಿದು ನೋಡಿದರೆ ಸತ್ಯ.

ತನುವಿನ ಅರಿವೇ ವ್ಯಾಪಾರಿ. ಆತನನ್ನು ಬಸವಣ್ಣನವರು ಮಹಾದೇವಸೆಟ್ಟಿ ಎಂದು ಕರೆದಿದ್ದಾರೆ. ತನುವಿನ ಮನವೇ ಗ್ರಾಹಕ ! ಗ್ರಾಹಕ ಕೊಳ್ಳುಬಾಕ ಹೊರಗಿನ ವಸ್ತುಗಳನ್ನು ಕೊಂಡು ಕೊಂಡು ಗುಡ್ಡೆ ಹಾಕಿಕೊಳ್ಳುತ್ತಾನೆ. ಅವುಗಳಲ್ಲಿ ಹುರುಳಿಲ್ಲ; ಜಲ ಕುದ್ದು ಮಣ್ಣಾಗಿದೆ; ಆ ಮಣ್ಣಿನಲ್ಲಿಯೇ ಖನಿಜ ಹುಟ್ಟಿದೆ. ಅದು ಬರೀ ಲೋಹ. ಜಲ, ಮಣ್ಣು, ಮಣ್ಣಿನಿಂದ ಬಂದದ್ದೆಲ್ಲ ದೊಡ್ಡದಲ್ಲ. ನೀನು ದೊಡ್ಡವನು. ನಿನ್ನ ವ್ಯಾಪಾರವೇನಿದ್ದರೂ ನನ್ನೊಂದಿಗೆ ಎಂದು ಹೇಳಿದರೂ ಮನ ಕೇಳುವುದಿಲ್ಲ. ಏಕೆಂದರೆ ಮನ ಮಣ್ಣಿಗಾಗಿ, ಹೊನ್ನಿಗಾಗಿ, ತನ್ನ ತನುವಿನಂತೆಯೇ ಇರುವ ಹೆಣ್ಣಿಗಾಗಿ ಇಮ್ಮನವಾಗಿದೆ. ಹೊಂಚು ಹಾಕಿ ಹಾಕಿ ಹಗಲಿರುಳೂ ಇವುಗಳಿಗಾಗಿ ಹಪಹಪಿಸುತ್ತಿದೆ.

ಧರಣಿಯ ಮೇಲಿರುವ ತನುಗಳೆಲ್ಲ ಹೊನ್ನು ಮಣ್ಣು, ವಿಷಯವೆಂಬ ಮನದ ವ್ಯಾಪಾರದಿಂದ ಕತಕತನೆ ಕುದಿಯುತ್ತಲಿವೆ. ಮನ ಕದ್ದು ನೋಡಿದ್ದನ್ನು, ಕೇಳಿದ್ದನ್ನು, ರುಚಿಸಿದ್ದನ್ನು, ಮೂಸಿಸಿ ಸ್ಪರ್ಶಿಸಿದ್ದನ್ನು ಇವುಗಳ ಆಸೆಗಾಗಿ ಕೊಲೆ ಕಳುವು ಅತ್ಯಾಚಾರ ಭ್ರಷ್ಟಚಾರ ಮಾಡಿದ ಕುಕೃತ್ಯಗಳನ್ನು ಮಹಾದೇವ ಸೆಟ್ಟಿ ತನ್ನ ಲೆಕ್ಕದಲ್ಲಿ ಒಂದಂಕೆಯೂ ಬಿಡದಂತೆ ನಷ್ಟವಾಗದಂತೆ ತನುವಿನ ಪುಸ್ತಕದಲ್ಲಿಯೇ ದಾಖಲಿಸಿದ್ದಾನೆ .

ಮನ ಎಂದೋ ಮಾಡಿದ ದುರ್ವ್ಯವಹಾರವನ್ನು ಮಹಾದೇವಸೆಟ್ಟಿ ನೆನಪಿಸಿ ಇಡೀ ತನುವನ್ನೇ ದುಃಖಕ್ಕೆ ತಳ್ಳುತ್ತಾನೆ. ತನ್ನ ಸುಖಕ್ಕಾಗಿ ಮಾಡಿದ ಮನದ ಹಾದರದ ವ್ಯವಹಾರ ಮಹಾದೇವಸೆಟ್ಟಿಯ ಲೆಕ್ಕದ ಪುಸ್ತಕದಲ್ಲಿ ಭದ್ರವಾಗಿವೆ. ಅವು ಕೆಡುವುದಿಲ್ಲ, ಯಾರೂ ಅಳಿಸಲು ಬರುವುದಿಲ್ಲ; ಆತನ ಲೆಕ್ಕದ ಪುಸ್ತಕದಲ್ಲಿ ಅಜ್ಞಾನದ ಬಾಕಿ ಏರುತ್ತಲೇ ಹೋಗುತ್ತದೆ.

ಮನ ಸೆಟ್ಟಿಯೊಂದಿಗೆ ಒಮ್ಮನದಿಂದ ವ್ಯವಹಾರ ಮಾಡಿದಾಗ ಮಾತ್ರ ಬಾಕಿ ತೀರುತ್ತದೆ. ಮನ ಮಾಡಿದ ಅಪರಾಧಗಳೆಲ್ಲ ಒಂದು ಬೊಟ್ಟಿಲೆ ತೊಡೆದು ಮನವನ್ನೇ ಮಹಾದೇವ ಸೆಟ್ಟಿಯನ್ನಾಗಿ ಮಾಡಿ ಒಮ್ಮನದ ವ್ಯಾಪಾರಕ್ಕೆ ತಳ್ಳುತ್ತಾನೆ. ಆತ ಬಲು ಜಾಣ; ಕಾಣೆಯ ಸೋಲ ಅರ್ಧಗಾಣಿಯ ಗೆಲ್ಲ.

116

ನಂಬರು ನಚ್ಚರು ಬರಿದೆ ಕರೆವರು,

ನಂಬಲರಿಯರೀ ಲೋಕದ ಮನುಜರು!
ನಂಬಿ ಕರೆದಡೆ, ಓ ಎನ್ನನೇ ಶಿವನು?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ!

ತನುವಿನ ಅರಿವಿನಿಂದ ಬಂದ ವೇದ, ಆಗಮ, ಉಪನಿಷತ್ತು, ಪುರಾಣದ ಪುಸ್ತಕಗಳನ್ನು, ಭಗವದ್ಗೀತೆ, ಬೈಬಲ್‌ಗಳನ್ನು ನಂಬಿದ್ದೇವೆ; ತನುವಿನ ಅರಿವನ್ನು ನಂಬಿಲ್ಲ. ತನುವಿನ ಅರಿವಿನಿಂದ ಕಟ್ಟಿದ ಮಠ ಮಂದಿರ ದೇವಸ್ಥಾನ ಚರ್ಚ್‌ಗಳನ್ನು ನಂಬಿದ್ದೇವೆ; ತನುವಿನ ಅರಿವನ್ನು ನಂಬಿಲ್ಲ. ತನುವಿನ ಅರಿವಿನಿಂದ ಬಂದ ಪುಸ್ತಕಗಳಿಗೆ ತನುವಿನ ಮನ ತನುವಿನೊಂದಿಗೆ ಶರಣು ಹೋಗಿ ಅವುಗಳಿಗೆ ದಾಸನಾಗಬಹುದೇ? ಕಲ್ಲು ಕಟೆದು ಮಾಡಿದ ಮೂರ್ತಿಗಳನ್ನು . ಕಲ್ಲೆಂದು ತಿಳಿಯದೆ ದೇವರೆಂದು ನಂಬಿ ಮನ ತನುವಿನೊಂದಿಗೆ ಶರಣು ಹೋಗಬಹುದೆ? ಪುಣ್ಯ ಕ್ಷೇತ್ರಗಳನ್ನು ದೇವಸ್ಥಾನಗಳನ್ನು ಧರ್ಮ ಗ್ರಂಥಗಳನ್ನು ನಂಬಿ ಕರೆದರೆ ಅವು ಎಂದಾದರೂ ಓ ಎನ್ನಬಹುದೇ?

ನಂಬರು ನಚ್ಚರು ಬರಿದೆ ಕರೆವರು, ನಂಬಲರಿಯರೀ ಲೋಕದ ಮನುಜರು! ಆನಂದಕ್ಕಾಗಿ ಕಲಾವಿದ ಅರಿವಿನಿಂದ ಮಾಡಿದ ಆಲಯಗಳು; ಅವು ದೇವರೆಂದು ಹೆಸರಿಸಲ್ಪಟ್ಟ ಕಲ್ಲಿನ ಮೂರ್ತಿಗಳು! ಕಲ್ಲಿನ ಪರಿಕರಗಳೆಂದು ನೋಡಿ ಆನಂದ ಪಡಬಹುದು; ಭ್ರಮೆಯಿಂದ ದೇವರೆಂದು ನಂಬಿ ಕೂಗಿ ಕರೆದರೆ ಆ ಕಲ್ಲು ಓ ಎನ್ನಬಹುದೇ? ಇದು ತನುವಿನ ಮನಕ್ಕೆ ತಿಳಿಯುವುದಿಲ್ಲ; ತನುವಿನ ಅರಿವು ಹೀಯಾಳಿಸದೆ ಬಿಡುವುದಿಲ್ಲ. ಸಾವಿರಾರು ವರ್ಷಗಳ ಪರ್ಯಂತ ಜಗತ್ತಿನಾದ್ಯಂತ ಹೀಗೆ ನಡೆದಿದೆ. ಅರಿವು ತಿಳಿಯಲು ಹೇಳಿದವನನ್ನೇ ದೇವರೆಂದು ನಂಬುವುದು; ಅವನ ಮೂರ್ತಿ ಮಾಡುವುದು. ಅವನಿಗೊಂದು ದೇವಾಲಯ ಕಟ್ಟುವುದು. ಇದು ತನುವಿನ ಮನದ ಭ್ರಮೆ!

ತನುವಿನ ಅರಿವನ್ನು ತನುವಿನ ಮನದಿಂದ ನಂಬು. ಆ ಅರಿವೇ ಗುರುದೇವನೆಂದು ಮನದಿಂದ ನಂಬು. ಆ ಗುರುದೇವನೇ ಮಹಾದೇವನೆಂದು ಮನದಿಂದ ನಂಬು. ಆ ಮಹಾದೇವನೇ ಸದಾಶಿವನೆಂದು ಮನದಿಂದ ನಂಬು. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮನೆಂದು ಮನದಿಂದ ನಂಬಿ ಕರೆದಡೆ ಓ ಎನ್ನನೇ ಶಿವನು?

ಅರಿವನ್ನು ನಂಬದೆ ಆ ಅರಿವನ್ನು ನಚ್ಚದೇ ಬರಿದೆ ಕಲ್ಲಿಗೆ ಕೂಗಿ ಕರೆವವರ ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮ ದೇವ! ಜನಪದರು ಹೇಳುವಂತೆ ಗುಡ್ಡಕ್ಕೆ ಒದರಿದ ನಾಯಿ ಗೂದಿ ಆಗಿ ಸತ್ತಂತೆ. ತನು ಕಲ್ಲಿಗೆ ಒದರಿ ಒದರಿ ವ್ಯರ್ಥ ಸಾಯುತ್ತದೆ!

117

ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ ?
ಅಘೋರ ತಪವ ಮಾಡಿದಡೇನು?
ಅಂತರಂಗ - ಆತ್ಮ ಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ?

ವಿಷದ ಹಾವು ಹುತ್ತದ ಆಶ್ರಯ ಪಡೆದು ಅವಿತುಕೊಂಡಿದೆ. ಹೋಗಿ ಬರುವ ಜನರ

ಕಣ್ಣೆಲ್ಲ ಹುತ್ತದ ಕಡೆಗೆಯೇ ಇದೆ. ಹಾವು ಸಿಗುವುದಿಲ್ಲ ; ಹುತ್ತ ದಕ್ಕುವುದಿಲ್ಲ. ಹುತ್ತಕ್ಕೆ ಹೊಡೆದರೆ ಹಾವು ಸಾಯುವುದಿಲ್ಲ. ಹಾವು ಮಾಡಿದ ಅಪರಾಧಕ್ಕೆ ಗೆದ್ದಲು ಕಟ್ಟಿದ ಹುತ್ತವನ್ನು ನೆಲಸಮ ಮಾಡುವುದು ನ್ಯಾಯವೆ? ದೇಹದ ಕತೆಯೂ ಇದಕ್ಕೆ ಹೊರತಾಗಿಲ್ಲ.

ಮನ ಹಾವಿನಂತೆ ದೇಹದ ಕಣ ಕಣದಲ್ಲಿ ಆವರಿಸಿಕೊಂಡಿದೆ. ಮನ ಮಾಡಿದ ಅಪರಾಧಕ್ಕೆ ತನುವನ್ನು ದಂಡಿಸುವುದು ನ್ಯಾಯವೇ? ತನುವಿಗಂಟಿದ ಮನದ ವ್ಯಾಧಿಯನ್ನು ಕಳೆದುಕೊಳ್ಳಲು ಅಘೋರ ತಪವ ಮಾಡಿದಡೇನು? ತನು ದೇವಸ್ಥಾನ ಪುಣ್ಯಕ್ಷೇತ್ರಗಳಿಗೆ ಅಲೆದಡೇನು? ಘೋರ ತಪವ ಮಾಡಿ, ದೇವಸ್ಥಾನ ಪುಣ್ಯಕ್ಷೇತ್ರಗಳಿಗೆ ಸುತ್ತಿ, ಹೋಮ, ಯಜ್ಞ ಮಾಡಿಯೂ ಅಪರಾಧ ಮಾಡುವ ವಿಷದ ಮನವನ್ನು ಎಂತು ನಂಬುವುದು?

ಮನ ಮಾಡಿದ ಅಪರಾಧಕ್ಕೆ ತನುವನ್ನು ದಂಡಿಸುವುದು ಸರಿಯೆ? ಮನ ಮಾಡಿದ ಅಪರಾಧಕ್ಕೆ ತನುವನ್ನು ಸೆರೆ ಮನೆಯಲ್ಲಿಡುವುದು ಸರಿಯೆ? ವಿಷದ ಹಾವನ್ನು ಹೊಡೆಯಲು ಹೋಗಿ ಹುತ್ತವನ್ನು ನೆಲಸಮ ಮಾಡಿದಂತಾಗಲಿಲ್ಲವೆ? ತನುವಿನ ಅಂತರಂಗದ ಅರಿವನ್ನು ತಿಳಿಯದ ಶುದ್ಧಿಯಿಲ್ಲದ ಮನವನ್ನು ತನುವಿನ ಕಣ ಕಣದಲ್ಲಿರುವ ಅರಿವಿನ ಸಂಗಯ್ಯ ನಂಬುವುದಾದರೂ ಹೇಗೆ?

ಮನ ತಾನು ಮಾಡಿದ ತಪ್ಪಿಗಾಗಿ ದೇಹವನ್ನು ಜಪ ತಪಗಳಿಗೆಳೆಸುವುದು ಬಿಟ್ಟು ತನುವಿನಲ್ಲಿಯೇ ಸಂಗಮವಾದ ಆತ್ಮ(ಅರಿ)ವನ್ನು ನೆನೆದು ಆ ಆತ್ಮದಲ್ಲಿಯೇ ಸಂಗಮವಾಗುವುದು; ಆ ಆತ್ಮ (ಅರಿ)ವನ್ನೇ ನಂಬುವುದು ಉಚಿತವೆಂದು ಹೇಳಿದ್ದಾರೆ ಬಸವಣ್ಣನವರು.

118

ಕಾಮವೇಕೊ, ಲಿಂಗ ಪ್ರೇಮಿಯೆನಿಸುವಂಗೆ !
ಕ್ರೋಧವೇಕೊ, ಶರಣವೇದ್ಯನೆನಿಸುವಂಗೆ !
ಲೋಭವೇಕೊ, ಭಕ್ತಿಯ ಲಾಭವ ಬಯಸುವಂಗೆ !
ಮೋಹವೇಕೊ, ಪ್ರಸಾದವೇದ್ಯನೆನಿಸುವಂಗೆ !
ಮದ ಮತ್ಸರವುಳ್ಳವಂಗೆ ಹೃದಯ ಶುದ್ಧವೆಲ್ಲಿಯದೊ !
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲಸಂಗಮದೇವ!

ತನುವಿನ ಕಣಕಣದಲ್ಲಿದ್ದ ಅರಿವನ್ನು ಉಂಡು ಆ ಅರಿವನ್ನೇ ಪ್ರೀತಿಸುವ ಪ್ರೇಮಿಗೆ ಕಾಮವಿಲ್ಲ. ಆ ಅರಿವೆಂಬ ಲಿಂಗಕ್ಕೆ ಶರಣು ಹೋಗಿ ಶರಣನಾದವನಿಗೆ ಕ್ರೋಧವಿಲ್ಲ. ಅರಿವಿಗೆ ಭಕ್ತಿ ಮಾಡಿ ಭಕ್ತನಾದವನಿಗೆ; ಅಂಗದಲ್ಲಿದ್ದ ಲಿಂಗ ಸಾಮರಸ್ಯದ ಲಾಭ ಪಡೆದುಕೊಂಡವನಿಗೆ ಹೊನ್ನು ಹೆಣ್ಣು (ವಿಷಯ) ಮಣ್ಣಿನ ಮೇಲೆ ಲೋಭವಿಲ್ಲ . ದುಗ್ಗಾಣಿಯ ಲೋಭಕ್ಕಾಗಿ ಕೋಟಿಲಾಭವ ಕಳೆದುಕೊಂಡಂತೆ ಎಂದು ಶರಣರು ಹೇಳಿದಂತೆ !

ಮೋಹವೇಕೊ, ಪ್ರಸಾದವೇದ್ಯನೆನಿಸುವಂಗೆ :

ಕಣ್ಣಿನ ನೋಟಕ್ಕೆ ತುತ್ತಾದ ವಸ್ತುಗಳೆಲ್ಲ ಕಣ್ಣಿನ ಅರಿವಿಗೆ ಪ್ರಸಾದವಾದಾಗ ಆ ವಸ್ತುವಿನ ಮೇಲೆ ಮೋಹವೇ ಇರುವುದಿಲ್ಲ. ಶಬ್ದ ಹೊರ ಕಿವಿಯಲ್ಲಿ ಅನಾವರಣವಾಗಿ ಒಳಕಿವಿಗೆ ಪ್ರಸಾದವಾದಾಗ ಆ ಶಬ್ದದ ಮೇಲೆ ಮೋಹವಿಲ್ಲ; ರೋಷ-ಸೇಡುಗಳಿಲ್ಲ . ಸ್ಪರ್ಶ ಹೊರ ಚರ್ಮಕ್ಕೆ

ಪ್ರಸಾದವಾಗಿ ಒಳ ಚರ್ಮ ಅರಿವಿನಿಂದ ಮುಟ್ಟಿ ತನ್ನಂತೆಯೇ ಭಾವಿಸುತ್ತದೆ. ಆ ಚರ್ಮಕ್ಕೆ ಮೋಹವಿಲ್ಲ .ರುಚಿ ಹೊರ ನಾಲಿಗೆಗೆ ತಾಕಿ ಅನಾವರಣಗೊಂಡಾಗ ಒಳನಾಲಿಗೆಗೆ ಕಹಿ ಕೂಡಾ ಪ್ರಸಾದದಂತೆ ವೇದ್ಯವಾಗುತ್ತದೆ. ಅದಕ್ಕೆ ರುಚಿ-ಅರುಚಿಗಳ ಮೋಹವಿಲ್ಲ ಮೂಗು ಸುಗಂಧವನ್ನು ಮೋಹಿಸುತ್ತದೆ ; ದುರ್ಗಂಧವನ್ನು ತಿರಸ್ಕರಿಸುತ್ತದೆ. ಇದು ಮೂಗಿನಲ್ಲಿರುವ ಮನದ ಅಜ್ಞಾನ. ಇದಕ್ಕೆ ಅರಿವಿನ ದರ್ಶನವಾದಾಗ ಮೂಗಿನಲ್ಲಿಯೇ ಮಲ ಅನಾವರಣಗೊಂಡು; ತಾನು ಸ್ವೀಕರಿಸಿದ ಬೆಳಗಿನ ಪ್ರಸಾದದ ಮತ್ತೊಂದು ರೂಪದ ಮಾಹಿತಿ ತಿಳಿಯುತ್ತದೆ. ಹೀಗೆ ಮೂಗು ದುರ್ಗಂಧ ಸುಗಂಧಗಳೆರಡರ ಮೋಹ ಕಳೆದುಕೊಂಡು ಪ್ರಸಾದವೆಂದು ವೇದ್ಯವಾಗುತ್ತದೆ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಲ್ಲ ಅರಿವಿಗೆ ಪ್ರಸಾದವಾಗಿ ತನುವಿನ ಕಣಕಣದಲ್ಲಿ ಆವರಿಸಿದ ಮನ ಶುದ್ಧವಾಗುತ್ತದೆ. ತನುವಿನ ಹೃದಯವೆಲ್ಲ ಶುದ್ಧವಾಗಿ ಮನ ಹದುಳಿಗನಾಗಿ ತನುವಿನಲ್ಲಿಯೇ ಸಂಗಮವಾಗಿ ಕೂಡಲಸಂಗಯ್ಯನಾಗುತ್ತದೆ. ಲಿಂಗ ಪ್ರೇಮಿಯಾಗುತ್ತದೆ; ಅರಿವಿಗೆ ಶರಣು ಹೋಗಿ ಶರಣನಾಗುತ್ತದೆ. ಮನ ಅರಿವಿಗೆ ಭಕ್ತಿ ಮಾಡಿ; ಆ ಭಕ್ತಿಯ ಲಾಭವನ್ನು ಹೊಂದುತ್ತದೆ. ಶಬ್ದ ನೋಟ ಸ್ಪರ್ಶ ರಸ ಗಂಧಾದಿಗಳೆಲ್ಲ ಪ್ರಸಾದವಾಗುತ್ತದೆ ಎಂದಿದ್ದಾರೆ ಬಸವಣ್ಣನವರು.

119

ಸಾರ ! ಸಜ್ಜನರ ಸಂಗವ ಮಾಡುವುದು ;
ದೂರ ! ದುರ್ಜನರ ಸಂಗ ಬೇಡವಯ್ಯಾ,
ಆವ ಹಾವಾದಡೇನು, ವಿಷವೊಂದೆ:
ಅಂತವರ ಸಂಗ ಬೇಡವಯ್ಯಾ ,
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ ಕಾಳಕೂಟ ವಿಷವೊ, ಕೂಡಲಸಂಗಮದೇವಾ.

ಸಜ್ಜನರ ಸಂಗ ಮಾಡಬೇಕು; ದುರ್ಜನರ ಸಂಗ ಬಿಡಬೇಕು-ಎಂದಿದ್ದಾರೆ ಬಸವಣ್ಣನವರು, ಇಲ್ಲಿ ಸಜ್ಜನರು ಯಾರು? ದುರ್ಜನರು ಯಾರು? ಸಾತ್ವಿಕರು, ಸದಾ ದಾನ ಧರ್ಮ ಪರೋಪಕಾರ ಮಾಡುವವರು, ಕೆರೆ-ಬಾವಿಗಳನ್ನು ಕಟ್ಟಿಸಿ ಅರವಟ್ಟಿಗೆಗಳನ್ನು ಇಡುವವರು ಸಜ್ಜನರೊ? ಮಠಾಧಿಪತಿಗಳು - ಆಶ್ರಮ ವಾಸಿಗಳು-ಅಧಿಕಾರಿಗಳು ಉನ್ನತ ಹುದ್ದೆಯಲ್ಲಿರುವವರು ಸಜ್ಜನರೊ? ಶಾಸಕರು ಸಚಿವರು ಸಜ್ಜನರೊ?

ಹಗಲಿರುಳೆನ್ನದೆ ಕುಡಿವವರು ದುರ್ಜನರೊ? ಸದಾ ಗೂಂಡಾ ಪ್ರವತ್ತಿಯಲ್ಲಿರುವವರು, ಅಧಿಕಾರದ ಅಹಂಕಾರದಲ್ಲಿ ಮೆರೆವವರು ದುರ್ಜನರೊ? ಲಂಚ ಭ್ರಷ್ಟಚಾರದಲ್ಲಿ ತೊಡಗಿಸಿಕೊಂಡವರು ದುರ್ಜನರೊ? ಹಲ್ಲೆ ಅತ್ಯಾಚಾರ ಕೊಲೆ ಸುಲಿಗೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ದುರ್ಜನರೊ? ಅಸಾತ್ವಿಕರು ಮದೋನ್ಮತ್ತರು ಅಧಿಕಾರವಿದ್ದು ದುರ್ಬಳಕೆ ಮಾಡಿಕೊಳ್ಳುವವರು ದುರ್ಜನರೊ?

ಸಜ್ಜನ ವಿರುದ್ಧ ಪದವೇ ದುರ್ಜನ ! ಒಂದು ತನುವಿನಲ್ಲಿರುವ ಮನ ದುರ್ಜನರನ್ನು ನೋಡಿ ತಾನು ಸಜ್ಜನನಾಗಿರಬೇಕೆಂದು ರೂಢಿಸಿಕೊಂಡಿದೆ. ಹಾಗೆಯೇ ಮತ್ತೊಂದು ತನುವಿನಲ್ಲಿ ಆವರಿಸಿದ ಮನ ಸಜ್ಜನನನ್ನು ನೋಡಿ ದುರ್ಜನನಾಗಿರಬೇಕೆಂದು ರೂಢಿಸಿಕೊಂಡಿದೆ. ಮನಕ್ಕೆ

ಇವೆರಡು ಕೆಲಸಗಳು ಒಂದೇ. ಒಮ್ಮೆ ಸಜ್ಜನನಾಗುತ್ತದೆ; ಈ ಕೆಲಸ ಇಷ್ಟವಾಗದಿದ್ದರೆ ಮತ್ತೊಮ್ಮೆ ದುರ್ಜನನಾಗುತ್ತದೆ. ಸಜ್ಜನನಾಗಿದ್ದ ಕೃಷಿಕ ಅಂಗುಲಿಮಾಲನಾಗಲಿಲ್ಲವೆ? ಹಾಗೆಯೇ.

ಸಜ್ಜನ ರಾವಣ, ಸೀತೆಯನ್ನು ನೋಡಿ ದುರ್ಜನನಾದಂತೆ. ಶೂರ್ಪನಖಿಗೆ ಸೀತೆ-ರಾವಣ-ರಾಮ-ನರಹಂತಕ ವೀರಪ್ಪನ್-ಉಪಕಾರಿ ವೀರಪ್ಪನ್ ಒಂದು ಹುದ್ದೆಯಿಂದ ಬಡ್ತಿ ಪಡೆದು ಮತ್ತೊಂದು ಹುದ್ದೆಗೆ ಹೋದಂತೆ ! ಎರಡೂ ಕೆಲಸಗಳಾದರೂ ತಿಳಿಯದ ಮನಕ್ಕೆ ಒಂದು ಕಮ್ಮಿ ಮತ್ತೊಂದು ಹೆಚ್ಚು.

ಆವ ಹಾವಾದಡೇನು, ವಿಷವೊಂದೆ : ಅಂತವರ ಸಂಗ ಬೇಡವಯ್ಯಾ ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳ ಕೂಟ ವಿಷವೊ, ಕೂಡಲಸಂಗಮದೇವಾ:

ಮನ ತನುವಿಗೆ ದುರ್ಜನ-ಸಜ್ಜನನ- ವೇಷಹಾಕಿದರೇನು? ಅದರಲ್ಲಿರುವ ವಿಷವೊಂದೇ. ಸಾತ್ವಿಕ ಸಜ್ಜನನ ವೇಷ ಧರಿಸಿ ಅಂತರಂಗದಲ್ಲಿ ಹಾದರ ಮಾಡುತ್ತದೆ. ಮನದ ಸಂಗ ಮಾಡುವುದು ಸಿಂಗಿ ಕಾಳ ಕೂಟ ವಿಷ ಪ್ರಾಶನ ಮಾಡಿದಂತೆ. ಇಂತಹ ಮನವನ್ನು ಹಿಡಿದು ಅರಿವಿನ ಸಂಗಯ್ಯನ ಸಂಗ ಮಾಡಿಸಬೇಕು; ಈತ ತನುವಿನಲ್ಲಿರುವ ಹಿರಿಯ. ಸಜ್ಜನ ದುರ್ಜನ ವೇಷ ಹಾಕುವ ಮನದ ವಿಷದ ಹಲ್ಲು ಕಿತ್ತಿ ತನ್ನ ತನುವಿನಲ್ಲಿಯೇ ತನ್ಮಯ ಮಾಡಿಕೊಳ್ಳುತ್ತಾನೆ. ವೇಷದ ಎರಡೂ ಕೆಲಸಗಳಿಗೆ ನಿವೃತ್ತಿ ನೀಡುತ್ತಾನೆ.

120

ಹಸಿದು ಎಕ್ಕೆಯ ಕಾಯ ಮೆಲಬಹುದೆ?
ನೀರಡಿಸಿ ವಿಷವ ಕುಡಿಯಬಹುದೆ?
ಸುಣ್ಣದ ತುಯ್ಯಲ ಬಣ್ಣವೊಂದೆ ಎಂದಡೆ,
ನಂಟುತನಕ್ಕೆ ಉಣ್ಣಬಹುದೆ?
ಲಿಂಗಸಾರಾಯ ಸಜ್ಜನರಲ್ಲದವರ
ಕೂಡಲಸಂಗಮದೇವನೆಂತೊಲಿವನು?

ಹಸಿವಾದವನಿಗೆ ಎಕ್ಕೆಯ ಕಾಯಿ ಸಿಕ್ಕರೆ ತಿನ್ನುವುದಿಲ್ಲ. ಅದು ನೋಡಲು ಮಾವಿನಕಾಯಿಯಂತಿದ್ದರೂ ಒಡೆದರೆ ಹರಳೆಯಂತಿರುವ ಊಬು ಬರುವುದಲ್ಲದೆ ಅದು ತಿನ್ನಲು ಯೋಗ್ಯವಲ್ಲ.

ನೀರಡಸಿದವನು ವಿಷ ಕುಡಿಯಲಾರ.

ಸುಣ್ಣದ ಬಣ್ಣ ಪಾಯಸದ ಬಣ್ಣ ಒಂದೇ ಆದರೂ ಸುಣ್ಣದ ನೀರು ಪಾಯಸವೆಂದು ಕುಡಿಯಲು ಬರುವುದಿಲ್ಲ.

ಮಾವಿನ ಕಾಯಿ ಎಕ್ಕೆಕಾಯಿ ಒಂದೇಯಾಗಿ ಕಂಡರೂ ನೀರು-ವಿಷ ಎರಡೂ ಜಲವಾಗಿಕಂಡರೂ, ಸುಣ್ಣ-ಪಾಯಸದ ಬಣ್ಣ ಒಂದೇ ಆಗಿ ಕಂಡರೂ ಪ್ರಸಾದವಾಗುವುದಿಲ್ಲ.

ತನುವಿನಲ್ಲಿ ಅರಿವೆಂಬ ಸಂಗಯ್ಯನೂ ಇದ್ದಾನೆ; ಮನವೆಂಬ ಊಸರವಳ್ಳಿಯೂ ಇದೆ. ನಂಟುತನಕ್ಕೆ ಇವೆರಡನ್ನೂ ಒಂದೇ ಎನ್ನಲು ಸಾಧ್ಯವಿಲ್ಲ. ಅರಿವಿನ ಸಂಗಯ್ಯ ಮನವೆಂಬ ಮಾನಸಗಳ್ಳಿಗೆ ಎಂದೂ ಒಲಿಯುವುದಿಲ್ಲ.

ಮಾವಿನ ಕಾಯಿ ಎಕ್ಕೆಯ ಕಾಯಿಯ ಭೇದವನ್ನು ಮನ ತಿಳಿಯುತ್ತದೆ. ಸುಣ್ಣದನೀರು-ಪಾಯಸದ ಭೇದವನ್ನು ಮನ ತಿಳಿಯುತ್ತದೆ. ನೀರು ಮತ್ತು ವಿಷದ ಭೇದವನ್ನು ಮನ ತಿಳಿಯುತ್ತದೆ. ಆದರೆ ತನುವಿನಲ್ಲಿರುವ ಅರಿವು ಮತ್ತು ಮನದ ಭೇದವನ್ನು ಮನ ತಿಳಿಯುವುದಿಲ್ಲ. ತನ್ನ ಹೀನ ಕೃತ್ಯವನ್ನು ತಾನು ತಿಳಿಯುವುದು ಬಲು ಜಟಿಲ. ದುಷ್ಟ ಮನ ಸಜ್ಜನನಾದಾರೆ ತನುವಿನಲ್ಲಿರುವ ಲಿಂಗಸಾರಾಯವ ತಿಳಿದು ಅರಿವಿನ ಸಂಗಯ್ಯನೇ ಆಗುತ್ತದೆ. ಅರಿವು ಸಜ್ಜನ ಮನವನ್ನು ಮಾತ್ರ ಕೂಡುತ್ತದೆ. ಕೂಡಿ ಕೂಡಲಸಂಗಮನಾಗುತ್ತದೆ.

121

ಎಲವದ ಮರ ಹೂತು ಫಲವಾದ ತೆರನಂತೆ:
ಸಿರಿಯಾದಡೇನು, ಶಿವ ಭಕ್ತಿಯಿಲ್ಲದನ್ನಕ್ಕ?
ಫಲವಾದಡೇನು ಹೇಳಾ, ಹಾವು ಮೆಕ್ಕೆಯ ಕಾಯಿ?
ಕುಲವಿಲ್ಲದ ರೂಹು ಎಲ್ಲಿದ್ದಡೇನು?
ಬಚ್ಚಲನೀರು ತಿಳಿದಲ್ಲಿ ಫಲವೇನು?
ಅವಗುಣಿಗಳ ಮೆಚ್ಚ ಕೂಡಲಸಂಗಮದೇವ !

ಬೂರುಗದ ಮರವನ್ನು ಯಾರೂ ಹೂಳಲು ಹೋಗುವುದಿಲ್ಲ. ಅದರ ಬೀಜಗಳನ್ನು ತಂದು ಯಾರೂ ಹೊಲ-ಮನೆಗಳ ಮುಂದೆ ಹೂತು ನೀರು ಹಾಯಿಸುವುದಿಲ್ಲ. ಅದರ ಫಲ ಸೀಳಿ ಗಾಳಿಯಲ್ಲಿ ಹಿಂಜಿಯಂತೆ ಹಾರಿ ಎಲ್ಲಂದರಲ್ಲಿ ಬಿದ್ದು ಮತ್ತೆ ಮರವಾಗುತ್ತದೆ.

ಆದರೆ ಎಲುಬಿನ ಮರ ಹಾಗಲ್ಲ. ಇಡೀ ಪ್ರಪಂಚದ ತುಂಬಾ ಜನ ಹೂಳುತ್ತಾರೆ. ಯಾಕೆ ಹೂಳುತ್ತೇನೆ ಎಂಬ ಅರಿವಿಲ್ಲದೆ ಹೂಳುತ್ತಾರೆ. ಉಡಿಯಲ್ಲಿ ಬೀಜ ಕಟ್ಟಿಕೊಂಡು ಭೂಮಿ ಹದಗೊಳಿಸಿ ಅರಿವಿನ ಫಲ ಬಿತ್ತುತ್ತೇನೆ; ಅರಿವಿನ ಫಲವನ್ನೇ ಪಡೆಯುತ್ತೇನೆ; ಅರಿವಿನಿಂದಲೇ ಶ್ರೀಮಂತಗೊಳಿಸುತ್ತೇನೆ ಎಂದು ಆನಂದದಿಂದ ಬೀಜ ಬಿತ್ತಬೇಕು. ಬಿತ್ತಿದ್ದು ಫಲಕೊಡುವವರೆಗೆ, ಬಿತ್ತಿಸಿಕೊಂಡ ತನು ಬಿತ್ತಿದ ತನು ಅರಿವಿನ ಫಲದ ನಿರೀಕ್ಷೆಯಲ್ಲಿ ತನ್ಮಯವಾಗಿರಬೇಕು.

ಒಂದು ಪ್ರಾಣಿ ಮತ್ತೊಂದು ಪ್ರಾಣಿಗೆ ಜನ್ಮ ಕೊಡಬೇಕೆಂಬ ಬಯಕೆ ಪ್ರಾಣಿಗೆ ಆದಾಗಲೇ ಎರಡೂ ಪ್ರಾಣಿಗಳು ಬಿತ್ತಿಗೆ ಕ್ರಿಯೆಗೆ ತೊಡಗುತ್ತವೆ. ಬಿತ್ತಿಗೆ ಕ್ರಿಯೆ ಮುಗಿದ ಮೇಲೆ ಅವೆರಡೂ ಪ್ರಾಣಿಗಳು ಮತ್ತೆಂದು ಕೂಡುವುದಿಲ್ಲ. ಬೀಜ ಬಿತ್ತಿದ ಪ್ರಾಣಿ, ಬೀಜ ಬಿತ್ತಿಸಿಕೊಂಡ ಪ್ರಾಣಿ ಮತ್ತೊಂದು ಪ್ರಾಣಿಯನ್ನು ಬಯಕೆ ಮಾಡುವುದಿಲ್ಲ. ವಾಸನೆಯಿಂದ ಈಗಾಗಲೇ ಬೀಜ ಬಿತ್ತಿದ, ಬಿತ್ತಿಗೆಯಾದ ಪ್ರಾಣಿಯೆಂದು ಕಂಡು ಹಿಡಿದು ಗೌರವಿಸುತ್ತದೆ.

ಮನುಷ್ಯ ಹಾಗಲ್ಲ. ತನ್ನ ಭೂಮಿಯಲ್ಲಿ ನಿತ್ಯ ಬಿತ್ತುತ್ತಾನೆ. ನೋಡಿದ ತನುಗಳಲ್ಲಿ ಹಾದರದಿಂದ ಬಿತ್ತುತ್ತಾನೆ. ಅದಕ್ಕಾಗಿಯೇ ಬಸವಣ್ಣನವರು ತನುವಿಗೆ ಎಲುಬಿನ ಮರ ಎಂದು ಕರೆದಿದ್ದಾರೆ. ಎಲುಬಿನ ಮರ ಎಲುಬಿನ ಮರದೊಂದಿಗೆ ಕೂಡಿ ಅರಿವಿನ ಬೀಜವೆಂದು ತಿಳಿಯದೆ ಹೂತು ಎಲುಬಿನ ಮರ ಪಡೆದಂತೆ. ಅದು ಎಷ್ಟು ಸಿರಿವಂತನಾದಡೇನು ಅರಿವಿಗೆ ಭಕ್ತಿ ಮಾಡಲು ತಿಳಿಯದನ್ನಕ್ಕ ಎಂದಿದ್ದಾರೆ.

ಅರಿವಿನ ಕುಲವಿಲ್ಲದ ರೂಪ ಎಲ್ಲಿದ್ದಡೇನು? ಅದು ಎಲುಬಿನ ಮರ. ಅರಿವಿನ ಭಕ್ತಿಯಿಲ್ಲದ ಅವಗುಣಿಯ ಮನವನ್ನು ತನುವಿನ ಅರಿವಿನ ಸಂಗಯ್ಯ ಮೆಚ್ಚಲಾರ ಎಂದಿದ್ದಾರೆ ಬಸವಣ್ಣ.

122

ಬಚ್ಚಲ ನೀರು ತಿಳಿದಡೇನು?
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು?
ಆಕಾಶದ ಮಾವಿನ ಫಲವೆಂದಡೇನು?
ಕೊಯ್ಯಲಿಲ್ಲ ಮೆಲ್ಲಲಿಲ್ಲ !
ಕೂಡಲಸಂಗನ ಶರಣರ ಅನುಭಾವವಿಲ್ಲದವರು
ಎಲ್ಲಿದ್ದಡೇನು, ಎಂತಾದಡೇನು?

ಬಚ್ಚಲ ನೀರು, ಸಲ್ಲದ ಹೊನ್ನು, ಆಕಾಶದ ಮಾವಿನ ಫಲ ಇವು ಬಳಕೆಗೆ ಬಾರದವು. ಹಾಗೆಯೇ ತನುವಿನಲ್ಲಿದ್ದ ಅನುಭಾವ ಕೂಡಾ ಬಳಕೆಗೆ ಬರುತ್ತಿಲ್ಲ. ಇದು ತನುವಿನಲ್ಲಿಯೇ ಇದೆ ಎಂದು ತಿಳಿಯುವುದು ಕೂಡಾ ಬಲು ಜಟಿಲ; ತಿಳಿದ ಮೇಲೆ ಬಳಕೆ ಮಾಡುವುದು ಕೂಡಾ ಬಲು ಜಟಿಲ; ತನುವಿನಲ್ಲಿರುವ ಅನುಭಾವ ತಿಳಿದು ಆ ಅನುಭಾವಕ್ಕೆ ಶರಣು ಹೋಗಿ ಶರಣನಾಗುವುದು ಕೂಡಾ ಬಲು ಜಟಿಲ.

ತನುವಿನ ಅನುಭಾವ ತನುವೇ ತಿಳಿಯದ ಮೇಲೆ ಆ ತನು ಪಲ್ಲಕ್ಕಿಯಲ್ಲಿ ಕುಳಿತರೇನು; ಪೀಠದ ಮೇಲೆ ಕುಳಿತರೇನು; ಶಾಸಕ, ಸಂಸದ, ಸಚಿವನಾದರೇನು? ದೊಡ್ಡ ಹುದ್ದೆಯಲ್ಲಿದ್ದು ಹೆಸರು ಪಡೆದರೇನು? ದಾನ, ಧರ್ಮ, ಪರೋಪಕಾರದ ಸಜ್ಜನನ ಸೋಗು ಹಾಕಿದರೇನು? ಕಳ್ಳ ಸುಳ್ಳ ಕೊಲೆಗಡುಕನಾದಡೇನು? ಅನುಭಾವವಿಲ್ಲದ ತನು ವ್ಯರ್ಥ. ಒಮ್ಮೆ ಅರಿವಿಡಿದು ಮಾತನಾಡುತ್ತದೆ; ಮತ್ತೊಮ್ಮೆ ಅಜ್ಞಾನಕ್ಕೆ ಬಲಿಯಾಗುತ್ತದೆ. ಸಾತ್ವಿಕ, ತಾಮಸ, ರಾಜಸ ಎಂಬ ಮೂರು ಅವತಾರಗಳು ಒಂದೇ ತನುವಿನಲ್ಲಿ ಕಾಣುತ್ತದೆ. ಸಾಯುವವರೆಗೆ ಈ ಮೂರು ಗುಣಗಳು ತನುವನ್ನು ಕಾಡುತ್ತಲೇ ಇರುತ್ತವೆ. ಕಳೆದುಕೊಳ್ಳಬೇಕೆಂಬ ಬಯಕೆಯಾದ ತನು ಮಾತ್ರ ಅರಿವಿನ ಅನುಭಾವ ಹುಡುಕಲು ಅಲೆದಾಡುತ್ತದೆ. ಸರಿಯಾಗಿ ತೋರುವ ಗುರು ದಕ್ಕಿದರೆ ತನ್ನ ತನುವಿನಲ್ಲಿಯೇ ಅನುಭಾವ ಕಂಡು ಅಮರನಾಗುತ್ತದೆ. ಅಜ್ಞಾನದ ಕೆಸರಿನಲ್ಲಿದ್ದ ತನು ಜ್ಞಾನದ ಕಮಲವಾಗಿ ಅರಳುತ್ತದೆ.

ಜಲದಿಂದಲೇ ಕೆಸರು, ಕೆಸರಿನಿಂದಲೇ ಕಮಲ ! ಜಲ ಕೆಸರು ಕಮಲ ಒಂದನ್ನು ಬಿಟ್ಟು ಮತ್ತೊಂದಿಲ್ಲ. ಹಾಗೆಯೇ ತನು, ಅರಿವು, ಮನ ಒಂದನ್ನು ಬಿಟ್ಟು ಮತ್ತೊಂದಿಲ್ಲ. ತಿಳಿದರೆ ಕಮಲ; ತಿಳಿದರೆ ಅನುಭಾವದ ಅರಿವು. ಮೂರು ಒಂದರಲ್ಲಿಯೇ ಸಂಗಮವಾಗಿವೆ; ತಿಳಿಯುವುದಿಲ್ಲ; ತಿಳಿಯುವ ಗೊಡವೆಗೂ ಹೋಗುವುದಿಲ್ಲ.

123

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.
ಜಗವೆಲ್ಲವ ಕಾಂಬ ಕಣ್ಣು,
ತನ್ನ ಕೊಂಬ ಕೊಯ್ಲೆಯ ಕಾಣಲರಿಯದು.
ಇದಿರ ಗುಣವ ಬಲ್ಲೆವೆಂಬರು,

ತಮ್ಮ ಗುಣವ ತಾವರಿಯರು, ಕೂಡಲಸಂಗಮದೇವಾ.

ಮಾತು ಕಲಿಸಿ ಗಿಳಿಯನ್ನು ಪಂಜರದೊಳಗಿಟ್ಟುಕೊಂಡರೆ, ಅದು ಕಲಿಸಿದ ಮಾತುಗಳನ್ನು ಆಡುತ್ತದೆಯೇ ಹೊರತು, ತನ್ನನ್ನು ತಿನ್ನಲು ಬಂದ ಬೆಕ್ಕಿನ ಬಗ್ಗೆ ಹೇಳಲು ಅರಿಯದು.

ಜಗವೆಲ್ಲಕ್ಕೆ ಬೆಳಕು ಚೆಲ್ಲುವ ಸೂರ್ಯನಿಗೆ ರಾಹು ಅಡ್ಡ ಬಂದು ನುಂಗಿ ಹಾಕುವಾಗ ಅದರ ಮೇಲೆಯೂ ಬೆಳಕು ಚೆಲ್ಲಿ ತಾನು ಪಾರಾಗುವುದನ್ನು ಸೂರ್ಯನೂ ಕೂಡಾ ಅರಿಯ.

ಜಗದ ತಪ್ಪು ಕಳ್ಳನಿಗೆ, ಸುಳ್ಳನಿಗೆ, ಲಂಚಕೋರನಿಗೆ, ಭಷ್ಟಾಚಾರಿಗೆ, ಹಾದರಿಗ, ವಿಟನಿಗೆ ಕೂಡಾ ಹೊಳೆಯುತ್ತದೆ. ಇತರರ ತಪ್ಪುಗಳನ್ನು ತಾನು ಎಣಿಕೆ ಮಾಡುತ್ತಾನೆ. ತನ್ನ ಗುಣವ ತಾನರಿಯ.

ಬಸವಣ್ಣನವರು ಮೂರು ಉದಾಹರಣೆಗಳನ್ನು ಕೊಡುವ ಮೂಲಕ ತನುವಿನಲ್ಲಿ ಗಿಳಿಗೂ ಮೀರಿದ ಸೂರ್ಯನಿಗೂ ಮೀರಿದ, ತನುವಿನ ಮನಕ್ಕೂ ಮೀರಿದ ಮಹಜ್ಞಾನವನ್ನು ಸರಳವಾಗಿ ಸಕಲರೂ ಬಳಸಿಕೊಳ್ಳುವಂತೆ ಸೂತ್ರದ ಮೂಲಕ ಹೇಳಿದ್ದಾರೆ.

ಮನ ಗಿಳಿಯಿದ್ದಂತೆ. ಅದು ಮಹಾನ್ ಗ್ರಂಥಗಳನ್ನು ಓದಿ ಶಾಸ್ತ್ರಿ ಪಂಡಿತ ಪಾದ್ರಿಯಾದರೇನು? ಶಿಕ್ಷಕ ಪ್ರಾಧ್ಯಾಪಕ ಪ್ರಾಚಾರ್ಯನಾದರೇನು? ಓದಿ ಕಲಿತದ್ದನ್ನೆ ಬೊಗಳುತ್ತದೆ. ಓದಿ ಕಲಿತ ಗ್ರಂಥಗಳನ್ನೇ ಸಂಗ್ರಹ ಮಾಡಿಕೊಂಡು ಉದಾಹರಿಸುತ್ತದೆ. ತನಗೆ ಆಪತ್ಕಾಲ ಬಂದಾಗ ಪಾರಾಗಲು ಅರಿಯದು.

ಮನ ಓದಿ, ನೋಡಿ, ಕೇಳಿ, ಮುಟ್ಟಿ, ರುಚಿಸಿ ಕಲಿತು ತನುವಿನಲ್ಲಿ ಸಂಗ್ರಹಿಸಿಕೊಳ್ಳುತ್ತದೆ.

ಕಣ್ಣು ಸುಂದರಿಯನ್ನು ನೋಡುವಾಗ ಮನ ತನುವಿಗೆ ಭೋಗಿಸುವ ಸಂದೇಶ ಕಳಿಸುತ್ತದೆ. ಆಭರಣವನ್ನು ನೋಡಿದಾಗ ಖರೀದಿ ಇಲ್ಲ ಕಳುವು ಮಾಡಿ ಪಡೆಯಲು ಸಂದೇಶ ಕಳಿಸುತ್ತದೆ. ಇವೆರಡು ತನುವಿಗೆ ಸುಖವನ್ನು ಆಪತ್ಕಾಲವನ್ನು ತಂದೊಡ್ಡುತ್ತವೆ. ಕಲಿತ ಮನಕ್ಕೆ ಹೆಣ್ಣೆಂದರೇನೆಂದು ತಿಳಿಯದು, ಹೊನ್ನೆಂದರೇನೆಂದು ತಿಳಿಯದು.

ಕಣ್ಣಿನಲ್ಲಿ ಬೆರೆತ ಮನ ಭೋಗಿಸಲು ಪ್ರೇರೇಪಿಸುತ್ತದೆ. ಭೋಗಿಸಿದರೆ ಅದಕ್ಕೆ ಸುಖ. ಮತ್ತೊಂದು ತನುವಿನ ಕಣ್ಣಿನಲ್ಲಿ ಬೆರೆತ ಮನ ಭೋಗಿಸುವುದನ್ನು ನೋಡುತ್ತದೆ. ತಡೆದು ಹೊಡೆಯುತ್ತದೆ. ಹೊಡೆದು ಕೊಂದು ಹಾಕಿದರೆ ಅದಕ್ಕೆ ಸುಖ. ಒಂದಕ್ಕೆ ಸುಖ ಮತ್ತೊಂದಕ್ಕೆ ಕ್ರೋಧ ಸಿಟ್ಟು , ದ್ವೇಶ, ಅಸೂಯೆ.

ಎರಡೂ ತನುಗಳು ಒಂದೇ; ಆವರಿಸಿದ ಮನ ಒಂದೇ; ಮನದ ಗುಣಗಳೂ ಒಂದೇ. ನೋಡಿ ಸುಖಿಸಲು ತನುವನ್ನು ಅಣಿಗೊಳಿಸಿದ ಮನ ಆಪತ್ಕಾಲವನ್ನು ಅರಿಯದು. ನೋಡಿದ್ದನ್ನು ಸಹಿಸಲು ಸಾಧ್ಯವಾಗದೆ ಹೊಡೆಯಲು ತನುವನ್ನು ಅಣಿಗೊಳಿಸಿದ ಮನವೂ ಆಪತ್ಕಾಲವನ್ನು ಅರಿಯದು. ನೋಡಿ, ಓದಿ, ಕೇಳಿ, ಕಲಿತ ಮನದ ಗುಣಗಳೇ ಹೀಗೆ. ಹೊರಗಿನದು ತಿಳಿಯುತ್ತದೆ; ತನ್ನದು ತಿಳಿಯುವುದಿಲ್ಲ.

ಕಣ್ಣಿನಲ್ಲಿ ನೋಡುವ ಅರಿವಿನ ಬೆಳಕಿದೆ. ಅದು ಸೂರ್ಯನಂತೆ ಬೆಳಗುತ್ತದೆ. ಆದರೂ ಮನವೆಂಬ ರಾಹು ಅಡ್ಡ ಬಂದು ತನ್ನನ್ನೇ ತಿಂದು ಹಾಕುವುದು ತನಗೆ ತಿಳಿಯುವುದಿಲ್ಲ; ಆದರೂ ಬೆಳಗುವುದನ್ನು ಬಿಡುವುದಿಲ್ಲ. ನೋಡಿ ಬೆಳಗುವ ಅರಿವು ಏನೂ ಬೇಡುವುದಿಲ್ಲ.

ಅದು ಬೆಳಕು. ಬೆಳಕಿಗೆ ಯಾವ ಗುಣಗಳೂ ಇಲ್ಲ.

ಅರಿವು ಬೆಳಗಿದ ಯಾವ ವಸ್ತುಗಳನ್ನು ಮನ ಬಿಡುವುದಿಲ್ಲ. ಅದು ಕತ್ತಲು. ಅರಿವಿನ ಸೂರ್ಯ ಬೆಳಗಿದ ಸಕಲ ವಸ್ತುಗಳನ್ನು ಮನ ತನ್ನ ಗರ್ಭದಲ್ಲಿ ಕಾಣದಂತೆ ಅಡಗಿಸಿಕೊಳ್ಳುತ್ತದೆ.

ಮನ ಭಗವದ್ಗೀತೆ, ಬೈಬಲ್, ವೇದ, ಆಗಮ, ಉಪನಿಷತ್‌ಗಳನ್ನು ಓದಿದರೇನು ಅದನ್ನು ಕತ್ತಲ ಕೆಲಸಗಳಿಗೆ ಬಳಸಿಕೊಳ್ಳುತ್ತದೆ; ಕಲಿತು ಅದು ತನುವಿನಿಂದ ಬಂದ ಪುಸ್ತಕಗಳೆಂದು ತಿಳಿಯುವುದಿಲ್ಲ.

ತನುವಿನಲ್ಲಿ ಬೆಳಗುವ ಅರಿವೂ ಸಂಗಮವಾಗಿದೆ. ಬೆಳಗಿದ್ದನ್ನು ಭೋಗಿಸುವ ಮನವೂ ಸಂಗಮವಾಗಿದೆ. ಅರಿವು ಬೆಳಗಿದ್ದನ್ನು ನೋಡದೆ ಬೆಳಗುವ ಅರಿವನ್ನು ನೋಡುವ ಶಿಕ್ಷಣ ಮನಕ್ಕೆ ದೊರೆತರೆ ಸಾಕು ತನ್ನ ಗುಣಗಳನ್ನು ಕಳೆದುಕೊಂಡು ನಿರ್ಗುಣಿಯಾಗುತ್ತದೆ. ನೋಡುವ ಕಣ್ಣಿನಲ್ಲಿ ಬೆಳಕು ಮಾತ್ರ ಉಳಿಯುತ್ತದೆ.

ಜಗತ್ತನ್ನ ಬೆಳಗುವ ಸೂರ್ಯನಿಗೆ ತನಗೆ ಕತ್ತಲು ಉಂಟು ಮಾಡುವ ರಾಹುವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ತನುವನ್ನು ಬೆಳಗುವ ಅರಿವಿನ ಸೂರ್ಯನ ಪರಿಚಯ ಮನಕ್ಕೆ ವೇದ್ಯವಾಗಿ ಆ ಬೆಳಕಿನಲ್ಲಿ ಲೀನವಾಗಿ ಬೆಳಕೇ ಆಗುತ್ತದೆ. ಸೂರ್ಯನನ್ನೂ ಬೆಳಗುವ ಬೆಳಕಾಗುತ್ತದೆ.

124

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ.
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆ ಮನೆಯ ದುಃಖಕ್ಕೆ ಅಳುವರ ಮೆಚ್ಚ
ಕೂಡಲ ಸಂಗಮದೇವಾ !

ಲೋಕದ ಡೊಂಕು ಎಣಿಸುವುದು ಮನ. ಮನದ ಡೊಂಕು ಎಣಿಸಿ ಎಚ್ಚರಿಸುವುದು ಅರಿವು ! ಮನ ತನುವಿನೊಂದಿಗೆ ತನುವಿನ ಇಂದ್ರಿಯಗಳೊಂದಿಗೆ ಹಾದರ ಮಾಡುತ್ತಲೇ ಇರುತ್ತದೆ. ತಾನು ಮಾಡುವ ಹಾದರ ತಾನು ಎಣಿಸಿಕೊಳ್ಳುವುದಿಲ್ಲ. ಇತರರ ಹಾದರ ಎಣಿಸುವುದರಲ್ಲಿಯೇ ಕಾಲ ಕಳೆಯುತ್ತದೆ.

ಮನ ಡೊಂಕಾಗಿದ್ದು ಲೋಕದ ಡೊಂಕು ತಿದ್ದಲು ಹೋಗಿ ತನುವಿಗೆ ಸಂಕಟವನ್ನು ಒಡ್ಡುತ್ತದೆ. ತನುವಿನೊಂದಿಗೆ ಹಾದರ ಮಾಡಿ ತನುವಿನಿಂದಲೇ ಡೊಂಕು ತಿದ್ದಲು ಹೋಗುತ್ತದೆ. ಮನ ತನ್ನನ್ನು ತಾನು ಸಂತೈಸಿಕೊಳ್ಳವುದು ಹೇಗೆ? ಲೋಕದ ಡೊಂಕು ಎಣಿಸುವುದರಲ್ಲಿ ಸುಖಿಸುತ್ತದೆ; ಹಾದರದಿಂದಲೂ ಸುಖಿಸುತ್ತದೆ. ನೆರೆಮನೆಯ ದುಃಖ ನೋಡಿ ಸಂಕಟ ಪಡುತ್ತದೆ; ಹಾದರ ಮಾಡಿ ತನುವಿಗೂ ಸಂಕಟವನ್ನೊಡ್ಡುತ್ತದೆ.

ತನುವೆಂಬುದು ಮನದ ಮನೆ; ಅದರ ವಾಸಸ್ಥಾನ. ತನ್ನ ಮನೆಗೆ ಬೆಂಕಿ ಹಚ್ಚಿಕೊಂಡು, ನೆರೆಮನೆಯ ಬೆಂಕಿ ಆರಿಸಲು ಹೋಗುವುದು ನ್ಯಾಯವೆ?

ರೂಪ ನೋಡಿ ಕಣ್ಣಿನಲ್ಲಿಯೇ ಹಾದರ ಮಾಡುತ್ತದೆ. ಹಾದರಿಗರನ್ನು ಕಂಡು ಕಲ್ಲಿಲೆ

ಹೊಡೆಯುತ್ತದೆ. ಇವೆರಡೂ ಕೆಲಸಗಳಿಗೆ ಮನ ತನುವನ್ನೇ ಬಳಸಿಕೊಳ್ಳುತ್ತದೆ.

ರೂಪ ನೋಡಿ ಮನ ಸುಖಿಸುವುದನ್ನು ಅರಿವಿನ ಸಂಗಯ್ಯ ಅಡ್ಡಿ ಪಡಿಸಿದ; ಮೆಚ್ಚಲಿಲ್ಲ. ಹಾಗೆಯೇ ಹಾದರಿಗರನ್ನು ಕಂಡು ಕಲ್ಲಿಲೆ ಹೊಡೆಯುವ ಮನವನ್ನು ಮೆಚ್ಚಲಿಲ್ಲ. ಹಾದರದ ಸುಖಕ್ಕಾಗಿ ನೆರೆಮನೆಯ ದುಃಖಕ್ಕಾಗಿ ಅಳುವ ಮನವನ್ನು ಅರಿವಿನ ಸಂಗಯ್ಯ ಮೆಚ್ಚಲಿಲ್ಲ !

ಮಂಗದಂತಿರುವ ಮನ ಅರಿವಿನ ಸಂಗಯ್ಯನಲ್ಲಿ ಬೆರೆತು ನೋಡಿದರೆ ಲೋಕ ಸುಂದರವಾಗಿ ಕಾಣುತ್ತದೆ. ತನ್ನ ಅರಿವಿನ ಮನೆಯಂತೆಯೇ ನೆರೆಮನೆಯೂ ಅರಿವಿನಿಂದ ಭರಿತವಾಗಿದೆ. ಸುಖಿಸುವುದು ದುಃಖಿಸುವುದು ಮನದ ಚೇಷ್ಟೆ. ಮನ ಸತ್ತು ಮಹಾದೇವನಾದಾಗ ಸಕಲವೂ ಶಿವಮಯವೇ. ಸಕಲವೂ ಸುಂದರವೇ.

125

ಏತ ತಲೆವಾಗಿದಡೇನು, ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈ ಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೆ?
ಕೂಡಲಸಂಗನ ಶರಣರು ಬಂದ ಬರವ, ನಿಂದ ನಿಲವ
ಅನಂಗ ಸಂಗಿಗಳೆತ್ತ ಬಲ್ಲರು!

ಕಲಾವಿದನ ಸುಂದರವಾದ ಹಾಡುಗಾರಿಕೆಯನ್ನು, ಪಕ್ಕವಾದ್ಯಗಳನ್ನು ಟೇಪ್ ರೆಕಾರ್ಡರ್ ಚಾಚೂ ತಪ್ಪದೆ ರೆಕಾರ್ಡ್ ಮಾಡಿಕೊಳ್ಳುತ್ತದೆ. ಅದರಂತೆಯೇ ಹಾಡುತ್ತದೆ. ಕೇಳಿ ಜನ ಬೆರಗಾಗುತ್ತಾರೆ. ಆದರೆ ಹಾಡಿನ ಆನಂದ ಅದರ ಒಳ ಹೊರಗಿನ ಸಂಗತಿಗಳನ್ನು ಟೇಪು ಅನುಭವಿಸಲು ಸಾಧ್ಯವಾಗುವುದಿಲ್ಲ.

ಟೇಪು ಹಾಡಿದರೆ ಭೀಮಸೇನ ಜೋಷಿಯಾಗುವುದಿಲ್ಲ, ಗಂಗೂಬಾಯಿ ಹಾನಗಲ್, ಪಂ. ರವಿಶಂಕರ್ ಆಗಲಾರದು. ಟೇಪು ಟೇಪೆ; ಹಾಡುಗಾರರು ಹಾಡುಗಾರರೇ. ಸಂಗೀತಗಾರರಿಗೆ ಟೇಪು ಸರಿಸಾಟಿಯಾಗಲಾರದು. ಅದು ಹಾಡಿದರೆ ಹಾಡಿದವರು ನೆನಪಿಗೆ ಬರುತ್ತಾರೆ, ಟೇಪು ಗೌಣವಾಗುತ್ತದೆ. ಹಾಗೆಯೇ ಬಸವಣ್ಣನವರು ಏತ, ಇಕ್ಕುಳ, ಗಿಳಿಯನ್ನು ತಮ್ಮ ವಚನದಲ್ಲಿ ಉದಾಹರಿಸಿದ್ದಾರೆ. ಇದರಂತೆಯೇ:

ತನುವಿನಲ್ಲಿ ಅರಿವೆಂಬ ಗುರುದೇವನಿದ್ದಾನೆ. ಆತ ಮಹಾನ್ ಗಾರುಡಿಗ ; ಮಂತ್ರ ಮುಗ್ಧ ಹಾಡುಗಾರ. ತನುವಿನೊಂದಿಗೆ ಬೆರೆತಿದ್ದಾನೆ. ತನಗೆ ಇಷ್ಟವಾದಾಗ ತನುವನ್ನೇ ಕೊಳಲು ಮಾಡಿ ಊದುತ್ತಾನೆ; ತನುವನ್ನೇ ತಂತಿ ಮಾಡಿ ನುಡಿಸುತ್ತಾನೆ. ತನುವನ್ನ ಸಪ್ತಸ್ವರವನ್ನಾಗಿ ಮಾಡಿ ಹಾಡಿ ತನುಗಳನ್ನೆಲ್ಲ ಪುಳಕಿತಗೊಳಿಸುತ್ತಾನೆ. ತನುವನ್ನೇ ತಬಲಾ ಮಾಡಿ ಬಾರಿಸುತ್ತಾನೆ. ಆಡಿ ಹಾಡಿ ನುಡಿಸಿ ಬಾರಿಸುವ ಆ ಜಾದೂಗಾರನೆತ್ತ ! ಬಾರಿಸಿದ್ದನ್ನು ಸಂಗ್ರಹ ಮಾಡಿಕೊಂಡು ಪ್ರಚಾರಪಡಿಸುವ ಮನವೆತ್ತ? ಆತ ಅಂಗದ ಕಣ ಕಣದಲ್ಲಿ ಬೆರೆತ ಅರಿವಿನ ಸಂಗಯ್ಯ ! ಇದು ಅರಿವಿನ ಅಂಗವನ್ನು ಆವರಿಸಿದ ಮನವೆಂಬ ಮಂಗ ! ಇದು ಅನಂಗ ಸಂಗಿ; ಆತ ಅರಿವಿನ ಸಂಗಯ್ಯ.

126

ಒಲವಿಲ್ಲದ ಪೂಜೆ ! ನೇಹವಿಲ್ಲದ ಮಾಟ !
ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ !
ಚಿತ್ರದ ಕಬ್ಬು ಕಾಣಿರಣ್ಣಾ !
ಅಪ್ಪಿದಡೆ ಸುಖವಿಲ್ಲ ! ಮೆಲಿದಡೆ ರುಚಿಯಿಲ್ಲ !
ಕೂಡಲಸಂಗಮದೇವಾ, ನಿಜವಿಲ್ಲದವನ ಭಕ್ತಿ!

ತನು ಅರುವೆಂಬ ರೂಪ ಉಳ್ಳ ಗುರುದೇವನ ಕಾಯ. ಈ ಕಾಯದಲ್ಲಿ ಅರಿವಿದೆ. ಈ ಅರಿವೇ ಗುರು. ಈ ಗುರುದೇವನೇ ಮಹಾದೇವ; ಈ ಮಹಾದೇವನೇ ಸದಾಶಿವ, ಈ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ. ಕಾಯ ಚಿತ್ರದ ರೂಪವಲ್ಲ ; ಚಿತ್ರದ ಕಬ್ಬೂ ಅಲ್ಲ, ಅಪ್ಪಿದಡೆ ಅರಿವಿನ ಪರಮಾಮೃತದ ಸುಖ . ಆಡಿದ ಮಾತು ಮೆಲಿದಡೆ ರುಚಿಯ ಪರಿಮಳ !

ಕಾಯಕ್ಕೆ ಎರೆದರೆ ನೆನೆದು ಪುಳಕಿತಗೊಳ್ಳುತ್ತದೆ. ಮರೆತರೆ ಬಾಡುತ್ತದೆ. ಪೂಜಿಸಿದರೆ ಆನಂದದಿಂದ ಮೈ ಮರೆಯುತ್ತದೆ. ವಿಭೂತಿ, ಪತ್ರಿ, ಪುಷ್ಪ, ಗಂಧ, ಧೂಪ, ದೀಪದ ಬೆಳಕಿನಿಂದ ಬೆಳಗುತ್ತದೆ. ಆದರೆ

ಕಾಯಕ್ಕೆ ಇಲ್ಲದ ಮನ ಆವರಿಸಿದೆ. ಮನದ ಭ್ರಾಂತಿಯ ಮಾತು ಕೇಳಿ ಒಲವಿಲ್ಲದ ಪೂಜೆ ಮಾಡುತ್ತಲಿದೆ. ಕಲ್ಲು ತೊಳೆದು ಪತ್ರಿ ಪುಷ್ಪಗಳನ್ನಿಟ್ಟು, ವಿಭೂತಿ, ಗಂಧಾದಿಗಳನ್ನು ಬಳಿದು, ಧೂಪದೀಪಾದಿಗಳನ್ನು ಬೆಳಗಿ, ಕಾಯ ಕಲ್ಲಿನ ಮೂರ್ತಿಯನ್ನೆ ದೇವರೆಂದು ಪೂಜಿಸುತ್ತದೆ. ಆಡಿ ಹಾಡಿ ದಣಿಯುತ್ತದೆ. ಸ್ನೇಹ ಮಾಡುತ್ತದೆ. ದೇವರೆಂದೇ ಪೂಜಿಸುತ್ತದೆ. ಅದು ಶಿಲ್ಪಿ ಕೆತ್ತಿದ ಕಲ್ಲಿನ ರೂಪವೆಂದು ತಿಳಿಯುವುದಿಲ್ಲ.

ಚಿತ್ರದ ರೂಪು ಚಿತ್ರದ ಕಬ್ಬು ಅಪ್ಪಿದಡೆ ಸುಖವಿಲ್ಲ ; ಮೆಲಿದಡೆ ರುಚಿಯಿಲ್ಲ ! ನಿಜ ತಿಳಿಯದಿದ್ದರೆ ಕಲ್ಲಿಗೆ ಮಾಡಿದ ಭಕ್ತಿಗೆ ಆಯುಷ್ಯ ಕಡಿಮೆಯಾಗುತ್ತದೆಯೇ ಹೊರತು ಸುಖವಾಗುವುದಿಲ್ಲ.

ತನುವಿನಲ್ಲಿ ನಿಜವನು ಅರಿಯುವ ಅರಿವಿನ ಸುಖವಿದೆ. ಅದನ್ನು ದೇವರೆಂದು ತಿಳಿದು ಮನದಿಂದಲೇ ಪೂಜಿಸಬೇಕು.

127

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೆ ಅಯ್ಯಾ ?
ಹೂ ಬಾಡಿದಲ್ಲಿ ಪರಿಮಳವನರುಸುವರೆ ಅಯ್ಯಾ ?
ಎನ್ನ ತಂದೆ ಕೂಡಲ ಸಂಗಮದೇವಾ,
ತೊರೆ ಇಳಿದಡೆ ಅಂಬಿಗಂಗೇನುಂಟು?

ತನುವಿನಲ್ಲಿ ಮನ ಪ್ರಾಣ ಅರಿವು ಸಂಗಮವಾಗಿವೆ. ಮನ ತನ್ನುವನ್ನು ಪ್ರೀತಿಸಿ ತನುವಿನ ಗುಣ ಅವಗುಣಗಳನ್ನು ಪ್ರಕಟಿಸುತ್ತದೆ. ತನುವಿನ ಭಾವ ಅರಳಿ ಒಮ್ಮೆ

ಆನಂದವನ್ನುಂಟು ಮಾಡಿದರೆ ಮತ್ತೊಮ್ಮೆ ಭಾವ ಕೆರಳಿ ದುರ್ಭಾವದ ಗುಣಗಳನ್ನು ಹೊರ ಚೆಲ್ಲುತ್ತದೆ. ತನುವಿನ ಪ್ರಾಣ ಕಾಯದಿಂದ ತಪ್ಪಿದ ಮೇಲೆ ಕಾಯದಲ್ಲಿ ಗುಣವ ನರಸಲು ಸಾಧ್ಯವಾಗುವುದಿಲ್ಲ. ಮನ ಅರಿವಿನ ಸ್ನೇಹ ಮಾಡದೆ ತನುವಿನ ಸ್ನೇಹ ಮಾಡಿದ ಫಲವಿದು.

ಸಸಿಯಲ್ಲಿ ಹೂ ಇರುವಾಗಲೇ ಪರಿಮಳ ಸೂಸುವುದು. ಸಸಿ ಕಳಚಿ ಹೂ ಕೆಳಗೆ ಬಿದ್ದಾಗ ಅದನ್ನು ಯಾರೂ ಮುಟ್ಟುವುದಿಲ್ಲ; ಅದರಿಂದ ಪರಿಮಳವೂ ನುಸುಳುವುದಿಲ್ಲ

ನದಿ ಬತ್ತಿದ ಮೇಲೆ ಅಂಬಿಗನನ್ನು ಯಾರೂ ಮಾತನಾಡಿಸುವುದಿಲ್ಲ. ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವುದಿಲ್ಲ ; ಬಾಡಿದ ಹೂವಿನಲ್ಲಿ ಪರಿಮಳವನರಸುವುದಿಲ್ಲ. ಬಸವಣ್ಣನವರು ಈ ಮೂರೂ ದೃಷ್ಟಾಂತಗಳನ್ನು ನೀಡಿ ಮನದ ಕೈ ಹಿಡಿದುಕೊಂಡು ಅರಿವಿನ ದರ್ಶನ ಮಾಡಿಸಿದ್ದಾರೆ.

ಪ್ರಾಣವಿದ್ದಾಗಲೇ ಮನ ಅರಿವೆಂಬ ಗುರುವಿನ ಸ್ನೇಹ ಮಾಡಿ ನಿರ್ಗುಣದ ಸುಖವನ್ನುಣ್ಣಬೇಕು. ಅರಿವಿನ ಪರಿಮಳವನ್ನು ಆಸ್ವಾದಿಸಬೇಕು. ಅಂಬಿಗನ ಗೆಳೆತನ ಮಾಡಬೇಕು. ತನುವಿನ ಜಲ ಇದ್ದಾಗಲೇ ಅಜ್ಞಾನದ ಅಲೆ ಏಳದಂತೆ ಅರಿವೆಂಬ ಅಂಬಿಗನ ಸ್ನೇಹ ಮಾಡಿ ನದಿ ದಾಟಬೇಕು.

ಜಲದ ತನುವಿನಲ್ಲಿ ಮನ , ಅರಿವು, ಪ್ರಾಣ, ಸಂಗಮವಾಗಿವೆ. ತೊರೆ ಇಳಿಯದ ಮುನ್ನ, ಜಲ ಬತ್ತದ ಮುನ್ನ, ಮನ ಅರಿವಿನ ಸಂಗಯ್ಯನ ಸ್ನೇಹ ಮಾಡಬೇಕು.

128

ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು
ಪುಣ್ಯ ಪದವಿಯ ಬಯಸಿದಡೆ,
ಭವಮಾಲೆಯ ಭರವು ತಪ್ಪದು,
ಬೇಡಲು ಹುಟ್ಟಿದ ಪ್ರಾಣಿಗೆ, ಬೇಡಲು ವಿಧಿಯೆ?
ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ?
ಲಿಂಗ - ಉದಯ, ಶರಣ - ವಿಸ್ತಾರವು ಬಯಸಿದಡೊಳವೆ
ಕೂಡಲ ಸಂಗಮದೇವಾ ನಿಮ್ಮಲ್ಲಿ?

ಮನ ತನುವಿನ ಅರಿವಿನಿಂದ ಹುಟ್ಟಿ ಅರಿವನ್ನು ಮರೆತು ತನುವನ್ನು ಆಸೆಗೆ ಹಚ್ಚಿ ತನುವಿನಲ್ಲಿಯೇ ವಾಸವಾಗಿದೆ. ಮನ ತನುವನ್ನು ಆವರಿಸಿದ ಆಸೆಯ ಪ್ರಾಣಿಯಾಗಿ ಪರಿವರ್ತನೆಯಾಗಿದೆ. ತನುವಿನಲ್ಲಿರುವ ಮನ ತನುವನ್ನು ನೋಡಿ ತನ್ನಂತೆಯೇ ಇರುವ ತನುವೆಂದರಿಯದೆ ಭೋಗಿಸಿ ಹರಿದು ತಿನ್ನುತ್ತದೆ. ದ್ವೇಶ ಮಾಡುತ್ತದೆ. ಹಣ ಆಭರಣಕ್ಕಾಗಿ ಆಸೆ ಮಾಡಿ ತನುವನ್ನು ಕೊಲ್ಲುತ್ತದೆ. ತನ್ನಂತೆಯೇ ಇರುವ ತನುವನ್ನು ಭಿಕ್ಷುಕನೆಂದು ತಿಳಿದು ತಾನು ದಾನಿಯೆನ್ನಿಸಿಕೊಂಡು ಪುಣ್ಯದ ಪದವಿ ಪಡೆಯುತ್ತದೆ. ಬೇಡಲು ಹುಟ್ಟಿದ ಪ್ರಾಣಿಗೆ ನೀಡಲು ಬರುವುದೆ? ತನುವಿನಲ್ಲಿರುವ ಅರಿವಿನ ಸಂಗಯ್ಯನನ್ನು ಪೂಜಿಸಿ ಬೇಡಲು ಬರುವುದೆ? ಬೇಡಿದರೆ ಎನ್ನೊಡೆಯನನ್ನು ಬೇಡವೆ, ಹಾಡಿದರೆ ಎನ್ನೊಡೆಯನನ್ನು ಹಾಡುವೆ ಎನ್ನಲು ಸಾಧ್ಯವೆ? ತನುವನ್ನು ಬೇಡಲು ಬಂದೀತೆ ಹೊರತು ತನುವಿನಲ್ಲಿರುವ ಅರಿವನ್ನು ಬೇಡಲು ಬರುವುದೆ?

ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ ಲಿಂಗ-ಉದಯ, ಶರಣ-ವಿಸ್ತಾರವು ಬಯಸಿದಡೊಳವೆ ಕೂಡಲ ಸಂಗಮದೇವಾ ನಿಮ್ಮಲ್ಲಿ ?:

ಅರಿವಿಗೆ ಹುಟ್ಟಿದ ಮನ ಅಜ್ಞಾನವಾಗಿ ಮಾರ್ಪಟ್ಟಿದೆ. ಮತ್ತೆ ಅರಿವಿಗೆ ಸತಿ ಹೋಗಿ ಗರತಿಯಾಗಲು ಸಾಧ್ಯವೆ? ತನು ಹೆಣ್ಣೂ ಅಲ್ಲ, ಗಂಡೂ ಅಲ್ಲ ! ಅದು ಅರಿವಿನ ಪರಿಕರ ! ಅರಿವು ಗಂಡು ಮನ ಹೆಣ್ಣು ಹೀಗೆ ನಿಜ ತಿಳಿಯುವುದು ಹಿತಕರ. ಈ ನಿಜ ಸಜ್ಜನ ತನುವಿನಲ್ಲಿಯೇ ಇದ್ದಾನೆ. ಈತನನ್ನು ಕೂಡಿ ಸಜ್ಜನಳಾಗದ ಸತಿ ಗರತಿಯಾಗುವುಳೆ? ಸೂಳೆ ಸಜ್ಜನಳಾದಾಳೆಯೆ?

ತನುವಿನಲ್ಲಿ ಉದಯವಾದ ಅರಿವೆಂಬ ಲಿಂಗವನ್ನು ಪತಿಯನ್ನಾಗಿಸಿಕೊಂಡು ; ತನುವಿನಲ್ಲಿ ಆವರಿಸಿದ ಮನವನ್ನು ಸತಿಯನ್ನಾಗಿಸಿಕೊಂಡು ; ಅರಿವಿಗೆ ಶರಣು ಹೋಗಿ ಶರಣ ಸತಿ ಲಿಂಗ ಪತಿಯಾಗುವ ವಿಸ್ತಾರವನ್ನು ಬಾಯಿ ಮಾತಿನಿಂದ ಬಯಸಿದರೆ ದಕ್ಕುವುದೆ ?

ಕೊರಳಲ್ಲಿ ಲಿಂಗ ಕಟ್ಟಿಕೊಂಡು ಪೂಜಿಸಿ ಪುಣ್ಯ ಪದವಿಯ ಬಯಸಿದಡೆ ಭವ ಮಾಲೆಯ ಭರವು ತಪ್ಪುವುದೆ? ಎಂದು ಬಸವಣ್ಣನವರು ತನುವಿನಲ್ಲಿರುವ ಮನವನ್ನು ಪ್ರಶ್ನಿಸಿದ್ದಾರೆ. ಆ ಮನಕ್ಕೆ ಸೂಳೆ ಎಂದು ಹೆಸರಿಸಿ; ಗರತಿಯಾಗಲು ಸೂಚಿಸಿ ಸೂತ್ರ ಹೆಣೆದಿದ್ದಾರೆ.

129

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು,
ಕೊಂದಹರೆಂಬುದನ್ನರಿಯದೆ
ಬೆಂದ ಒಡಲ ಹೊರೆಯ ಹೋಯಿತ್ತು.
ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು.
ಕೊಂದವರುಳಿದರೆ ಕೂಡಲ ಸಂಗಮದೇವಾ?

ಮನಕ್ಕೆ ತನುವಿನೊಂದಿಗೆ ಸುಖ ಪಡುವುದೆಂದರೆ ಬಲು ಇಷ್ಟ. ನೋಡಿ ಹಾದರ ಮಾಡಿ ಭೋಗಿಸಿ ಸುಖಿಸಲು ಅಣಿಯಾಗುತ್ತದೆ. ನೋಡಿದರೆ ಕೊಲ್ಲುತ್ತಾರೆಂಬ ಭಯವಿಲ್ಲ. ತನುವಿನಲ್ಲಿ ಹುಟ್ಟಿದ ಕಾಮದ ಹಸಿವು ಇಂಗಿಸಲು ದಣಿವಾರೆ ಮೇಯಬೇಕೆಂಬುದೊಂದೆ ಗುರಿ. ತನು ತನುವಿನೊಂದಿಗೆ ಕೂಡಿ ಸುಖಿಸಿ ಕಾಮದ ಹಸಿವು ಇಂಗಿಸಲು ಹೋದರೆ ಕೊಲ್ಲುತ್ತಾರೆಂಬುದನ್ನು ಅರಿಯದು. ತನುವಿನಲ್ಲಿ ಬೇಯುವ ಕಾಮದ ಹಸಿವನ್ನು ಇಂಗಿಸಲು ಹೋದ ತನುವನ್ನು ಕೊಂದವರು ಉಳಿದರೆ? ಉಳಿಯಲಿಲ್ಲ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಹಸಿವು ತೀರಿಸಿಕೊಳ್ಳುವುದಕ್ಕಾಗಿ ಮನ ಒಡಲಲ್ಲಿ ಹುಟ್ಟಿತು. ಹುಟ್ಟಿದ ಒಡಲನ್ನು ಕಾಮಕ್ಕಾಗಿ ಬೇಯಿಸಿತು; ಕ್ರೋಧಕ್ಕಾಗಿ ಸುಟ್ಟಿತು; ಲೋಭಕ್ಕಾಗಿ ಮರುಗಿತು. ಮೋಹಕ್ಕಾಗಿ ತವಕಪಟ್ಟಿತು. ಮದ ಮತ್ಸರಗಳಿಗಾಗಿ ಕತಕತನೆ ಕುದಿಯಿತು.

ಒಡಲ ಒಡೆಯನನ್ನು ನೋಡದೆ, ಬೆಂದ ಒಡಲ ಹೊರೆಯ ಹೋಯಿತ್ತು. ಮನ ಒಡಲಲ್ಲಿ ಸುಖಕ್ಕಾಗಿಯೇ ಹುಟ್ಟಿತ್ತು ; ಸುಖಕ್ಕಾಗಿಯೇ ಸತ್ತಿತ್ತು . ಕೊಂದವರುಳಿದರೆ ಕೂಡಲಸಂಗಮದೇವ

ಮನ ಒಡಲಲ್ಲಿ ಸೇರಿ ಒಡಲನ್ನೇ ಕುರಿಯನ್ನಾಗಿಸಿದೆ. ಮನಕ್ಕೆ ಹಸಿವಾದಾಗ ಒಡಲು ಅದರ ಆದೇಶ ಕುರಿಯಂತೆ ಪಾಲಿಸುತ್ತದೆ. ಮೇಯಲು ಹೋದದ್ದು ಕುರಿಯೇ ಅದನ್ನು ತಡೆಯಲು ಹೋದದ್ದು ಕುರಿಯೇ. ಇವೆರಡೂ ಹಸಿದು ಹಬ್ಬದ ಊಟಕ್ಕಾಗಿ ಒಡಲು ಸೇರಿದ ಹರಕೆಯ ಕುರಿಗಳು; ತೋರಣಕ್ಕಾಗಿ ತಂದ ತಳಿರ ಮೇಯುವುದರಲ್ಲಿಯೇ ಕಾಲ ಕಳೆಯುತ್ತವೆ. ಕೊಲ್ಲುವರೆಂಬುದನ್ನು ಅರಿಯದೆ ಬೆಂದ ಒಡಲಿಗಾಗಿ ಸಾಯುತ್ತವೆ.

ಇದು ಬಸವಣ್ಣನವರ ಸುಂದರವಾದ ಅರಿವಿನ ಪರಿಮಳದ ಸೂತ್ರ. ಮನ ಜಗತ್ತಿನ ತನುಗಳನ್ನು ಕುರಿಗಳನ್ನಾಗಿಸಿಕೊಂಡು ಬೆಂದ ಒಡಲ ಹೊರೆಯುತ್ತದೆ. ಮನಕ್ಕೆ ಒಡಲೊಡೆಯನೆಂಬ ಅರಿವು ಪರಿಚಯವಾದರೆ ಒಡಲ ಬೆಳಕಿನಲ್ಲಿಯೇ ಮನ ಬೆಂದು ಬೆಳಕಾಗುತ್ತದೆ. ಒಡಲು ಅರಿವಿನ ಒಡೆಯನ ಬೆಳಕಿನ ಉಪಕರಣವಾಗುತ್ತದೆ.

130

ಹಾವಿನ ಬಾಯ ಕಪ್ಪೆ ಹಸಿದು, ಹಾರುವ ನೊಣಕ್ಕೆ ಆಸೆ ಮಾಡುವಂತೆ,
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸುಕಾಲ ಬದುಕುವನೊ?
ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು ಒಡಲ ಹೊರೆವರ
ಕೂಡಲಸಂಗಮದೇವನವರನೊಲ್ಲ ಕಾಣಿರಣ್ಣಾ !

ಮನ ತನುವಿನಲ್ಲಿ ಆವರಿಸಿಕೊಂಡು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಹಸಿವಿನಿಂದ ತನುವನ್ನು ಬಳಸಿಕೊಂಡು ಬೇಟೆಗೆ ಹೋಗುತ್ತದೆ. ಹಸಿವಿಗಾಗಿ ಬೇಟೆಯಾಡುವುದೇ ಮನದ ಧರ್ಮ ! ಕಾಮದ ಹಸಿವಾಗಿ ಮನ ತನುವಿನೊಂದಿಗೆ ಮತ್ತೊಂದು ತನುವಿನ ಮೇಲೆ ಆಸೆ ಮಾಡುತ್ತದೆ. ಆ ತನುವಿನ ಮೇಲೆ ಹಾರುತ್ತದೆ. ಕಾಮದ ಹಸಿವುಳ್ಳ ತನುವಿಗೆ ಸುಖವಾಗುತ್ತದೆ. ಇದನ್ನು ನೋಡಿದ ತನುವಿನ ಮನ ಕ್ರೋಧದ ಹಸಿವಿನಿಂದ ಹಾವಿನಂತೆ ಬುಸುಗುಡುತ್ತ ಕಾಮದ ಹಸಿವಿನ ತನುವಿನ ಮೇಲೆ ಬೀಳುತ್ತದೆ.

ವಿಷಯದ ಹಸಿವಿನಿಂದ ಬಳಲಿ, ಹಾರುವ ನೊಣಕ್ಕೆ ಆಸೆ ಮಾಡುವ ಕಪ್ಪೆ ಎಂಬ ಮನವು ತನುವಿನಲ್ಲಿದೆ. ಕ್ರೋಧದಿಂದ ನೋಡಿ ಕೊಂದು ಹಾಕುವ ಹಾವು ಕೂಡಾ ತನುವಿನಲ್ಲಿಯೇ ಆಶ್ರಯ ಪಡೆದಿದೆ. ವಿಷಯ ಸುಖವನ್ನು ಬಯಸುವ ಮನ, ನೋಡಿ ಕ್ರೋಧದಿಂದ ಕೊಂದು ಹಾಕುವ ಮನ ಇವರಿಬ್ಬರು ಶೂಲವನೇರಲಿರುವ ಕಳ್ಳರು.

ವಿಷಯ ಸುಖ ಬಯಸಿ ಸುಖಿಸುವವನಿಗೂ ಸುಖ, ಇದನ್ನು ನೋಡಿ ಕೊಂದು ಹಾಕುವವನಿಗೂ ಸುಖ. ಇವರಿಬ್ಬರೂ ಹಾಲು ತುಪ್ಪವ ಉಂಡಂತೆ ಆ ಕ್ಷಣದಲ್ಲಿ ಸುಖಿಸುತ್ತಾರೆ. ಈ ಸುಖ ತನುವಿನಲ್ಲಿ ಎಷ್ಟು ಕಾಲ ಉಳಿಯಬಹುದು? ಉಳಿದರೂ ಸುಖಕ್ಕೆ ಕಾರಣವಾದ ಒಡಲು ಎಷ್ಟು ಕಾಲ ಉಳಿಯಬಹುದು? ಇದು ಬಸವಣ್ಣನವರ ಪ್ರಶ್ನೆ.

ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು ಒಡಲ ಹೊರೆವರ ಕೂಡಲಸಂಗಮದೇವರವರನೊಲ್ಲ ಕಾಣಿರಣ್ಣಾ :

ಒಡಲಿನ ಮಾಲೀಕ ಅರಿವಿನ ಸಂಗಯ್ಯನಾಗಿದ್ದರೂ ಆತನೊಂದಿಗೆ ವ್ಯವಹಾರ ಮಾಡದ ಮನ, ಕೆಡುವ ಒಡಲನ್ನು ಮೆಚ್ಚಿಕೊಂಡಿದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಹಸಿವಿನಿಂದ ಕಡು ಹುಸಿಯನೇ ಹುಸಿದು ಒಡಲ ಹೊರೆಯುತ್ತದೆ. ಒಡಲೊಳಗಿದ್ದ

ಒಡಲೊಡೆಯ ಅರಿವಿನ ಸಂಗಮನಾಥನು ಅಂಥವರನೊಲ್ಲನು.

ಒಡಲಿನಲ್ಲಿ ಹಸಿದ ಹಾವು ಇದೆ. ಅದರ ಬಾಯಲ್ಲಿಯ ಕಪ್ಪೆಯೂ ಹಸಿದಿದೆ. ಹಾರಾಡುವ ನೊಣವೂ ಇದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ತಮ್ಮ ಸುಖಕ್ಕಾಗಿ ಒಡಲ ಆಶ್ರಯ ಪಡೆದುಕೊಂಡು ಒಡಲನ್ನೇ ಕೆಡಿಸುತ್ತವೆ. ಇವು ಹಸಿದು ಕಡು ಹುಸಿಯನೆ ಹುಸಿದು ಒಡಲ ಹೊರೆವ ಕುನ್ನಿಗಳು. ಈ ಕುನ್ನಿಗಳು ಒಡಲೊಡೆಯ ಸಂಗಮನಾಥನನ್ನು ಎತ್ತ ಬಲ್ಲವು? ಒಡಲೊಡೆಯ ಸಂಗಮನಾಥನನು ಅರಿಯದ ಕುನ್ನಿಗಳನೊಲ್ಲ ಕಾಣಿರಣ್ಣಾ ಎಂದಿದ್ದಾರೆ ಅಣ್ಣ ಬಸವಣ್ಣ!

131

ಆರತವಡಗದು, ಕ್ರೋಧ ತೊಲಗದು
ಕ್ರೂರ ಕುಭಾಷೆ, ಕುಹಕ ಬಿಡದನ್ನಕ್ಕ
ನೀನೆತ್ತಲು ಶಿವನೆತ್ತಲು ಹೋಗತ್ತ ಮರುಳೆ !
ಭವರೋಗವೆಂಬ ತಿಮಿರ ತಿಳಿಯದನ್ನಕ್ಕ
ಕೂಡಲಸಂಗಯ್ಯನೆತ್ತ, ನೀನೆತ್ತ ಮರುಳೆ !

ಆಸೆ ಅಡಗುವವರೆಗೆ, ಕ್ರೋಧ ತೊಲಗುವವರೆಗೆ, ಕ್ರೂರ ಕಠಿಣವಾದ ಭಾಷೆ ನಿಲ್ಲುವವರೆಗೆ, ಕುಹಕದ ಮಾತುಗಳನ್ನು ಬಿಡುವವರೆಗೆ ನೀನೆತ್ತ ಶಿವನೆತ್ತ ಹೋಗತ್ತ ಮರುಳೆ ಎಂದು ಬಸವಣ್ಣನವರು ಸೋಗು ಹಾಕಿ ಪೂಜಿಸುವ ಮನವನ್ನು ಜಾಲಾಡಿದ್ದಾರೆ.

ತನು ಸತ್ಯವಾದುದು, ಶಿವಮಯವಾದುದು, ಸುಂದರವಾದುದು ಎಂದು ಮನಕ್ಕೆ ತಿಳಿಯಬೇಕಾದರೆ ಮನದ ಆಸೆ ಅಡಗಬೇಕು. ಕ್ರೋಧ ತೊಲಗಬೇಕು, ಕ್ರೂರ ಕುಭಾಷೆ, ಕುಹಕ ಬಿಡಬೇಕು ಎನ್ನುತ್ತಾರೆ ಬಸವಣ್ಣನವರು.

ಜನನ ಮರಣಗಳೆನ್ನುವುದೇ ಭವರೋಗ. ಈ ಹುಟ್ಟು ಸಾವುಗಳ ಸಂಕಟ ತಿಳಿಯದನ್ನಕ್ಕ ಮನಕ್ಕೆ ತನುವಿನ ಕಣಕಣದಲ್ಲಿರುವ ಸತ್ಯ, ಶಿವಮಯವಾದ ಸೌಂದರ್ಯ ತಿಳಿಯದು. ಅದೇನಿದ್ದರೂ ಬಾಹ್ಯ ಸೌಂದರ್ಯಕ್ಕಾಗಿ ಹಪಹಪಿಸುವುದಲ್ಲದೆ ಅಂತರಾಳದ ಸೌಂದರ್ಯಕ್ಕೆ ತಲುಪುವುದೇ ಇಲ್ಲ.

ಆಸೆ, ಕ್ರೋಧ, ಕ್ರೌರ್ಯ, ಕುಭಾಷೆ, ಕುಹಕಗಳು ಬಿಡಬೇಕಾದರೆ ಮನಕ್ಕೆ ತನುವಿನ ಕಣಕಣದಲ್ಲಿರುವ ಅರಿವು ತಿಳಿಯಬೇಕು. ಅರಿವು ತಿಳಿಯದಿದ್ದರೆ ತನುವಿಗಂಟಿದ ಭವರೋಗ ತೊಲಗುವುದಿಲ್ಲ.

ಮನದಿಂದಲೇ ಭವರೋಗ ತಿಳಿಯಬೇಕು ; ಮನದಿಂದಲೇ ಅರಿವು ತಿಳಿದು, ಆ ಅರಿವಿನಿಂದಲೇ ಮನಕ್ಕಂಟಿದ ಭವ ರೋಗ ಕಳೆಯಬೇಕು. ಆಗ ಅರಿವು, ಅರಿವು ಬೆರೆತ ತನು, ಅರಿವು ತಿಳಿದ ಪರಿಶುದ್ಧವಾದ ಮನ ಉಳಿಯುತ್ತದೆ. ಮನದ ಆಸೆ ಅಡಗಿ, ಕ್ರೋಧ ತೊಲಗಿ, ಕ್ರೂರ ಕುಭಾಷೆ, ಕುಹಕ ಬಿಡುತ್ತದೆ.

ಮನ ಅರಿವೆಂಬ ಗುರುವನ್ನು ಮಹದೇವನನ್ನು ಅರಿತು ತಾನೇ ಶಿವಮಯಗುತ್ತದೆ. ಭವರೋಗದ ತಿಮಿರ ತಿಳಿದು ಕೂಡಲಸಂಗಯ್ಯನಾಗುತ್ತದೆ. ತನುವಿನೊಳಗೆ ತನ್ಮಯವಾದ ಅರಿವ ತಿಳಿದು, ತನ್ನೊಳಗೆ ಶಿವನೊ ಶಿವನೊಳಗೆ ತಾನೊ ಎಂದು ತಿಳಿಯದೆ ಮೌನವಾಗುತ್ತದೆ.

132

ಹಾವ ತಿಂದವರ ನುಡಿಸಬಹುದು ;
ಗರ ಹೊಡೆದವರ ನುಡಿಸಬಹುದು ;
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ !
ಬಡತನವೆಂಬ ಮಂತ್ರವಾದಿ ಹೊಗಲೊಡನೆ
ನುಡಿವರಯ್ಯಾ ಕೂಡಲಸಂಗಮದೇವಾ !

ಅರಿವಿನ ಸಂಪತ್ತು ಪರಿಚಯವಾಗದಿದ್ದರೆ ಮಣ್ಣು ಮತ್ತು ಅದರ ಗರ್ಭದಲ್ಲಿದ್ದ ಲೋಹಗಳೇ ಸಂಪತ್ತಾಗಿ ತೋರುತ್ತವೆ. ಅದರ ಸಂಗ್ರಹದಲ್ಲಿಯೇ ಆಯುಷ್ಯ ಕಳೆದು ಹೋಗುತ್ತದೆ. ಸಂಗ್ರಹವಾದಂತೆಲ್ಲ ಅದರ ದಾಹ ತೀರುವುದಿಲ್ಲ. ಇನ್ನೂ ಸಂಗ್ರಹ ಮಾಡಬೇಕೆಂಬ ಬಯಕೆ ಅಧಿಕವಾಗಿ ಎಲ್ಲೆಲ್ಲೂ ಸಂಪತ್ತಿನ ವಿಚಾರಗಳೇ ಹೊಳೆದು ಅರಿವಿನ ವಿಚಾರ ಸುಳಿಯುವುದೇ ಇಲ್ಲ.

ಒಬ್ಬ ಊರಿಗೆ ಹೋಗುವ ದಾರಿ ಕೇಳಿದ.

ಉದಾ : ಆತ ಕಾಣುವ ಹೊಲಗಳೆಲ್ಲ ನನ್ನವೇ ಎಂದ. ನಾನು ಹೊಲ ಕೇಳಲಿಲ್ಲ ಊರ ದಾರಿ ಕೇಳಿದೆನೆಂದು ಹೇಳಿದ ಆತ. ಪಕ್ಕದ ಊರ ಹೊಲಗಳನ್ನೂ ಕೊಂಡಿದ್ದೇನೆ ರಜಿಸ್ಟರ್ ಆಗಬೇಕು ಎಂದ. ಆತನ ಹೆಂಡತಿ ಹೊರಗೆ ಬಂದು ಏನೆಂದು ಕೇಳಿದಳು: ನಾನು ಊರ ದಾರಿ ಕೇಳಿದರೆ ನಿಮ್ಮ ಯಜಮಾನ ತನ್ನ ಹೊಲದ ಬಗ್ಗೆ ಹೇಳುತ್ತಾನೆ. ತಾವಾದರೂ ಊರ ದಾರಿ ಹೇಳಿ ಎಂದ. ನನ್ನ ಕೊರಳಲ್ಲಿದ್ದ ಆಭರಣಗಳೆಲ್ಲ ನನ್ನವೇ ಎಂದಳು ಆಕೆ. ಆಭರಣ ಕೇಳಲಿಲ್ಲ ತಾಯಿ ಊರ ದಾರಿ ಹೇಳಿ ಎಂದ ಆತ. ಅವಲಕ್ಕಿಸರ ಮಾಡಿಸಲು ಹಾಕಿದ್ದೇನೆ ಬಂಗಾರದ ಡಾಬು ಕೂಡಾ ನನ್ನದೇ ಎಂದಳು ಆಕೆ.

ಸಿರಿಗರ ಬಡಿದವರನ್ನು ನುಡಿಸಲು ಪ್ರಯತ್ನಿಸಿದರೆ ಮಣ್ಣು ಹೊನ್ನಿನ ಬಗ್ಗೆ ಹೇಳುತ್ತಾರೆಯ ಹೊರತು ಅನ್ಯ ಮಾತು ಆಡುವುದೇ ಇಲ್ಲ.

ಬಡತನವೆಂಬ ಮಂತ್ರವಾದಿ ಹೊಕ್ಕರೆ ಒಡನೆ ನುಡಿವರು. ನುಡಿದದ್ದನ್ನು ನುಡಿದಂತೆ ಕೇಳಿ ನುಡಿವರು.

ಹಾವು ಕಚ್ಚಿದವರನ್ನು ನುಡಿಸಬಹುದು, ಗರಬಡಿದವರನ್ನೂ ನುಡಿಸಬಹುದು, ಸಿರಿಗರ ಬಡಿದವರನ್ನು ಯಾರಿಂದಲೂ ನುಡಿಸಲಾಗದು. ಬಡತನವೆಂಬ ಮಂತ್ರವಾದಿ ಮಾತ್ರ ಸಿರಿಗರ ಬಡಿದವರನ್ನು ನುಡಿಸಬಲ್ಲ ಎಂದಿದ್ದಾರೆ ಬಸವಣ್ಣನವರು.

133

ಅರೆಭಕ್ತರಾದವರ ನೆರೆಬೇಡ, ಹೊರೆ ಬೇಡ.
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ.
ಕೂಡಲಸಂಗನ ಶರಣರಲ್ಲಿ
ಅಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ.

ಅರೆಭಕ್ತರಾದವರ ನೆರೆಬೇಡ, ಹೊರೆ ಬೇಡ. ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ :

ಅರೆಭಕ್ತನೇ ಭಕ್ತನಾಗುತ್ತಾನೆ. ಒಮ್ಮೆ ಅರೆಭಕ್ತ ಮತ್ತೊಮ್ಮೆ ಭಕ್ತ. ಹೀಗೆ ದೇಹದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ಅರೆಭಕ್ತ ಭಕ್ತನಾಗಲು ಪ್ರಯತ್ನಿಸಿದರೆ; ಆತನಿಗೆ ಶರಣರ ಸಂಗ ಲಭ್ಯವಾದರೆ ಭಕ್ತನಾಗುತ್ತಾನೆ. ಎಂದೆಂದಿಗೂ ಭವಿಯಾಗಲಾರ; ಮತ್ತೆ ಅರೆಭಕ್ತನಾಗಲಾರ.

ಶರಣ ಅರೆಭಕ್ತನನ್ನು ಕರೆದುಕೊಂಡು ಹೋಗಿ ಭಕ್ತನ ಜಾಗಕ್ಕೆ ಬಿಡುತ್ತಾನೆ. ಪುನಃ ಆ ಭಕ್ತನನ್ನು ಕರೆದುಕೊಂಡು ಹೋಗಿ ಅರಿವೆಂಬ ಲಿಂಗಯ್ಯನಿದ್ದ ಜಾಗಕ್ಕೆ ಬಿಡುತ್ತಾನೆ. ಭಕ್ತ ಅರಿವಿನಲ್ಲಿ ಐಕ್ಯನಾಗಿ ಅರಿವಿನ ತೊತ್ತಾಗುತ್ತಾನೆ. ಆ ಅರಿವಿಗೆ ಶರಣು ಹೋಗಿ ಶರಣನಾಗುತ್ತಾನೆ.

ಅರೆಭಕ್ತ ಅರಿವಿನ ತವಕದಲ್ಲಿದ್ದ ಭಕ್ತನಲ್ಲಿ ಕೂಡಿದ. ಭಕ್ತ ಅಂಗದ ಕಣ ಕಣದಲ್ಲಿ ಬೆರೆತ ಲಿಂಗವೆಂಬ ಸಂಗಯ್ಯನಲ್ಲಿ ಐಕ್ಯನಾದ. ಕೂಡಲಸಂಗಯ್ಯನಲ್ಲಿ ಕೂಡಿ ಭಕ್ತ ಆತನಿಗೆ ತೊತ್ತಾದ.

134

ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ.
ದೂರ ದುರ್ಜನರ ಸಂಗ ಭಂಗವಯ್ಯಾ!
ಸಂಗವೆರಡುಂಟು : ಒಂದ ಹಿಡಿ; ಒಂದ ಬಿಡು.
ಮಂಗಳ ಮೂರ್ತಿ ನಮ್ಮ ಕೂಡಲಸಂಗನ ಶರಣರ.
ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ ದೂರ ದುರ್ಜನರ ಸಂಗ ಭಂಗವಯ್ಯಾ :

ಸಜ್ಜನ ದುರ್ಜನ ಎಂದು ವ್ಯಕ್ತಿಯನ್ನು ಗುರುತಿಸುವುದು ಸಲ್ಲದು. ವ್ಯಕ್ತಿಯ ದೇಹ ತೋರಿಕೆಯ ಸಜ್ಜನನದೂ ಅಲ್ಲ ; ತೋರಿಕೆಯ ದುರ್ಜನನದೂ ಅಲ್ಲ. ತನುವಿನ ಅರಿವು ತನುವಿನ ಮನಕ್ಕೆ ತಿಳಿಯದ ನಿಮಿತ್ಯ ಮನ ತನುವನ್ನೇ ಸಜ್ಜನ ದುರ್ಜನ ಎಂದು ಸಂಬೋಧಿಸುತ್ತದೆ. ಮನ ತನುವಿಗೆ ಹಾಕಿದ ವೇಷವದು. ಪಾತ್ರ ಮಾಡುವವ ಭೀಮನಾದರೇನು ಕೀಚಕನಾದರೇನು ದುರ್ಯೋಧನನಾದರೇನು ಕ್ರಿಷ್ಣನಾದರೇನು? ಅದು ಪಾತ್ರವೇ ಹೊರತು ತಾನಾಗಲಾರ. ಹಾಗೆಯೇ ಮನ ತನುವಿಗೆ ಒಮ್ಮೆ ಸಜ್ಜನನ ವೇಷ ಹಾಕುತ್ತದೆ ; ಸಾಕಾದಾಗ ಮತ್ತೊಮ್ಮೆ ದುರ್ಜನನ ವೇಷ ಹಾಕುತ್ತದೆ. ಇವೆರಡೂ ಮನಕ್ಕೆ ಪಾತ್ರಗಳೇ. ತನುವಿನಲ್ಲಿರುವ ಅರಿವಿನ ಸಂಗತಿ ಮನಕ್ಕೆ ತಿಳಿಯದ ನಿಮಿತ್ತ ಹೀಗಾಗುತ್ತದೆ.

ಬಸವಣ್ಣನವರು ಸುಂದರವಾದ ಸೂತ್ರ ಕಂಡುಹಿಡಿದಿದ್ದಾರೆ. ಪ್ರತಿದಿನ ಹಲವಾರು ವೇಷ ಹಾಕುವ ಊಸರವಳ್ಳಿ ಮನಕ್ಕೆ ಶಾಶ್ವತ ಸಜ್ಜನನ ದರ್ಶನ ಮಾಡಿಸಿದ್ದಾರೆ.

ಸಂಗವೆರಡುಂಟು : ಒಂದ ಹಿಡಿ; ಒಂದ ಬಿಡು, ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ :

ತನುವನ್ನು ಆವರಿಸಿದ ಮನ ತನುವಿನೊಂದಿಗೆ ಯಾವ ಪಾತ್ರವನ್ನಾದರೂ ಹಾಕಬಹುದು. ಒಮ್ಮೆ ಸಜ್ಜನನ ಪಾತ್ರ ಮತ್ತೊಮ್ಮೆ ದುರ್ಜನನ ಪಾತ್ರ. ಉದಾಹರಣೆಗೆ ಡಿಸೆಂಬರ್ 16, 2012 ರಂದು ದೆಹಲಿಯಲ್ಲಿ ಒಂದು ಹುಡುಗಿ ಸ್ನೇಹಿತನೊಂದಿಗೆ ರಾತ್ರಿ ಬಸ್

ಹತ್ತಿದಳು. ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಆರು ಜನ ಹುಡುಗಿಯನ್ನು ನೋಡಿ ದುರ್ಜನರಾದರು. ಸ್ನೇಹಿತನನ್ನು ಹೊಡೆದು, ಹುಡುಗಿಯ ಮೇಲೆ ಅತ್ಯಾಚಾರ ಮಾಡಿದರು. ಬರ್ಬರವಾಗಿ ದೇಹವನ್ನು ಚುಚ್ಚಿ ಚುಚ್ಚಿ ಆನಂದ ಪಟ್ಟರು. ಹುಡುಗಿ ಚೀರಿದಂತೆಲ್ಲ ದುರ್ಜನರಿಗೆ ಆನಂದವಾಯಿತು. ಈ ಚಿತ್ರ ಮಾಧ್ಯಮದಲ್ಲಿ ಕಂಡ ದೇಶದ ಜನ ಮರುಗಿದರು. ದುರ್ಜನರಿಗೆ ಛೀ ಥೂ ಎಂದರು. ಸದನ ಬೊಬ್ಬೆ ಹಾಕಿತು. ದುರ್ಜನರಿಗೆ ಗಲ್ಲು ಶಿಕ್ಷೆ ಹಾಕಲು ಒಕ್ಕೊರಲಿನಿಂದ ಕೂಗಿತು.

ಆರು ಜನ ಡಿಸೆಂಬರ್ 15/2012 ರಂದು ಸಜ್ಜನರಾಗಿದ್ದರು. ಸಜ್ಜನ ಪಾತ್ರದಲ್ಲಿದ್ದರು: ಡಿ. 16 ರಂದು ಹುಡುಗಿಯನ್ನು ನೋಡಿ ದುರ್ಜನರಾದರು; ದುರ್ಜನ ಪಾತ್ರದಲ್ಲಿದ್ದರು. ತನುವನ್ನು ಹಿಡಿದು ಸಜ್ಜನ - ದುರ್ಜನ ಪಾತ್ರ ಹಾಕುವ ಮನಕ್ಕೆ ಸಹಜ ಸಜ್ಜನನ ಜಾಡು ತಿಳಿಯದು. ಸಜ್ಜನ - ದುರ್ಜನ ಪಾತ್ರ ಹಾಕುವ ತನು ಅರಿವಿನ ಸಜ್ಜನನ ಸ್ವತ್ತೆಂದು ಮನ ಅರಿಯದು.

ಆರು ಜನರ ಮನ ತನುವಿಗೆ ಹಾಕಿದ ಪಾತ್ರ ಡಿ. 15ರ ವರೆಗೆ ಸೊಗಸಾಗಿತ್ತು. ಆರು ಜನರ ಮನ ಡಿ. 16 ರಂದು ತನುವಿಗೆ ಹಾಕಿದ ಪಾತ್ರ ಅಸಹ್ಯವಾಗಿತ್ತು, ಇದು ಪಾತ್ರವೆಂದು ತಿಳಿಯಲು ದೇಶದ ತನುಗಳ ಮನಕ್ಕೆ ಸಾಧ್ಯವಾಗಲಿಲ್ಲ.

ಇದು ನಿರ್ಭಯ ಪ್ರಕರಣ ಎಂದು ಪ್ರಪಂಚದಲ್ಲಿಯೇ ಪ್ರಸಿದ್ಧಿ ಪಡೆಯಿತು. ಆರು ಜನರಿಗೆ ಜೀವಾವಧಿ ಶಿಕ್ಷೆಯಾಯಿತು. ಅವರಲ್ಲಿಯ ಮೂರು ಜನ ಆತ್ಮಹತ್ಯೆ ಮಾಡಿಕೊಂಡರು. ರಾಡುಗಳಿಂದ ಗುಪ್ತಾಂಗಕ್ಕೆ ಚುಚ್ಚಿ ಚುಚ್ಚಿ ಸುಖಿಸಿದ್ದರು. ಕೇಕೆ ಹಾಕಿದರು. ಅದು ತಪ್ಪೆಂದು ತಿಳಿದು ಆತ್ಮಹತ್ಯೆ ಮಾಡಿಕೊಂಡರು.

ಇದನ್ನೇ ಜ್ಞಾನಿಗಳು ಪರಕಾಯ ಪ್ರವೇಶ ಎಂದು ಕರೆದರು. ಮನ ಅರಿವಿನ ಸಜ್ಜನ, ಮಂಗಳಮೂರ್ತಿಯ ಕಾಯವನ್ನು ಪ್ರವೇಶ ಮಾಡಿ ಆತನನ್ನೇ ಮರೆಮಾಚಿ ಆತನ ಕಾಯಕ್ಕೆ ಸಜ್ಜನ ಮತ್ತು ದುರ್ಜನನ ವೇಷ ಹಾಕುತ್ತದೆ. ಸಜ್ಜನನ ವೇಷ ಹಾಕಿದಾಗ ಉತ್ತಮನೆನ್ನಿಸಿಕೊಳ್ಳುತ್ತಾನೆ. ದುರ್ಜನನ ವೇಷ ಹಾಕಿದಾಗ ರಾಕ್ಷಸನೆನ್ನಿಸಿಕೊಳ್ಳುತ್ತಾನೆ. ಆದರೆ ಇದು ಮಾನಸಗಳ್ಳಿಯ ಕೆಲಸವೆಂದು ತನಗೂ - ನೆರೆ ಹೊರೆಯವರಿಗೂ ತಿಳಿಯುವುದಿಲ್ಲ. ಸರಕಾರಕ್ಕೂ, ಸಚಿವರಿಗೂ, ನ್ಯಾಯಾಲಯಗಳಿಗೂ ತಿಳಿಯುವುದಿಲ್ಲ.

ನಾಟಕದಲ್ಲಿ ಪಾತ್ರ ಮಾಡಿದ ಕೀಚಕನನ್ನು ಪ್ರೇಕ್ಷಕರು ಹೊಡೆದಂತೆ ! ಘಟನೆ ನಡೆದೇ ಹೋಗುತ್ತದೆ. ಪಾತ್ರವೆಂದು ಹೊಡೆದವನು ತಿಳಿಯುವುದಿಲ್ಲ. ನಂತರ ಮನವರಿಕೆಯಾಗದಿರುವುದಿಲ್ಲ. ಹೀಗೆ ತನುವಿನ ಸಜ್ಜನನನ್ನು ತನುವಿನ ಮನ ತಿಳಿಯಬೇಕು. ಆತನ ಸಂಗ ಮಾಡಿ ಆತನನ್ನೇ ಹಿಡಿದು ಮಂಗಳ ಮೂರ್ತಿಯಾಗಬೇಕು.

ಅರಿವಿನ ತನುವಿಗೆ ಆವರಿಸಿದ ಮನದಿಂದಲೇ ಮನವೆಂಬ ದುರ್ಜನನನ್ನು ತಿಳಿಯಬೇಕು; ಮಂಗಳಮೂರ್ತಿ ಸಜ್ಜನನ ಸಂಗ ಮಾಡಿ ತನುವಿನಲ್ಲಿ ಸಂಗಮನಾಗಬೇಕು. ಇದು ಜ್ಞಾನ ಭಂಡಾರಿ ಬಸವಣ್ಣನ ಸಾರ ಸಜ್ಜನನ ಪ್ರಸಂಗ.

135

ಹೊಲೆಯ ಹೊಲಬಿಗನಾದಡೆ,

ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ.
ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ.
ಹೊಲಬುಗೆಡದೆ ಶಿವಶರಣೆನ್ನಿರಯ್ಯಾ.
ನಮ್ಮ ಕೂಡಲಸಂಗನ ಮಹಾಮನೆಯಲು
ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ.

ಕುರಿ ಕೋಳಿ ಕಿರಿಮೀನು ತಿಂಬುವವರನೆಲ್ಲ ಕುಲಜ ಕುಲಜರೆಂದೆಂಬರು. ಶಿವಗೆ ಪಂಚಾಮೃತವ ಕರೆವ ಪಶುವ ತಿಂಬುವವನ ಮಾದಿಗನೆಂಬರು, ಅವರೆಂತು ಮಾದಿಗರಾದರು? ಜಾತಿಗಳು ನೀವೇಕೆ ಕೀಳಾಗಿರೊ? ಬ್ರಾಹ್ಮಣನುಂಡ ಪುಲ್ಲಿಗೆ ನಾಯಿಗೆ ಶೋಭಿತವಾಯಿತು. ಮಾದಿಗನುಂಡ ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು. ಅದೆಂತೆಂದಡೆ: ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು. ಸಿದ್ದಲಿಕೆಯ ತುಪ್ಪವನ್ನು ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ ಉರಿಲಿಂಗ ಪೆದ್ದಿಗಳರಸು ಒಲ್ಲನವ್ವಾ. ಇದು ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ಸೂತ್ರ. ಹೊಲೆಯ ಅನ್ನುವವನಿಗೆ ಭಾಟಿಯೇಟನು ಕೊಟ್ಟು ಉತ್ತರ ನೀಡಿದ್ದಾಳೆ. ಈಕೆ ಬ್ರಹ್ಮಜ್ಞಾನಿ; ನಿಜ ಬ್ರಾಹ್ಮಣೆ. ಹೊಲಬಿಗಳು; ಸರಿಯಾದುದನ್ನು ತಿಳಿದ ಮಹಾಶಿವಶರಣೆ.

ದೇಹ ಯಾವ ಕಸುಬಿನಲ್ಲಿ ನಿರತವಾದರೇನು? ಆ ದೇಹದಲ್ಲಿ ಬ್ರಹ್ಮಜ್ಞಾನವಡಗಿದೆ. ಅದನ್ನು ದೇಹದ ಮನದಿಂದಲೇ ತಿಳಿಯಬೇಕು. ಹಾಗೆ ತಿಳಿದು ಆನಂದದಲ್ಲಿರುವವನಿಗೆ ಬ್ರಹ್ಮ ಜ್ಞಾನಿ ಎಂದು ಕರೆದರು. ತಿಳಿಹೇಳುವವನಿಗೆ ಬ್ರಾಹ್ಮಣ ಶಿಕ್ಷಕ ಗುರು ಎಂದು ಕರೆದರು.

ಜ್ಞಾನ ತಿಳಿಯುವುದಕ್ಕಾಗಿ ಆಶ್ರಮ, ಮಠ, ಮಂದಿರ, ದೇವಾಲಯಗಳನ್ನು ಕಟ್ಟಿಸಿ, ಅರವಟ್ಟಿಗೆ, ಪ್ರಸಾದನಿಲಯಗಳನ್ನು ಮಾಡಿ ಕಾರ್ಯನಿರ್ವಹಿಸುವವನಿಗೆ ಕ್ಷತ್ರಿಯ, ರಾಜ, ರಾಜಕಾರಣಿ, ಮುತ್ಸದ್ದಿ ಎಂದು ಕರೆದರು.

ಇವರಿಗೆ ಆಹಾರ ಅನ್ನಾದಿಗಳನ್ನು ಒದಗಿಸುವ ಕೃಷಿಯಲ್ಲಿ ತೊಡಗಿದವನಿಗೆ, ಬೇಕಾದ ಪರಿಕರಗಳನ್ನು ಒದಗಿಸುವವನಿಗೆ ಕಮ್ಮಾರ, ಚಮ್ಮಾರ, ಶೂದ್ರನೆಂದು ಕರೆದರು.

ಬೆಳೆದುದನ್ನು ವ್ಯವಸ್ಥಿತವಾಗಿ ವಿತರಿಸುವವನಿಗೆ ವೈಶ್ಯನೆಂದು ಕರೆದರು.

ಈ ನಾಲ್ಕೂ ಕೆಲಸಗಳಲ್ಲಿ ನಿರತವಾದ ದೇಹ ಒಂದೇ. ತಿಳಿಯುವ ಕಣ್ಣು ಮೂಗು, ನಾಲಿಗೆ, ಕಿವಿ, ಚರ್ಮಗಳಲ್ಲಿ ವ್ಯತ್ಯಾಸವಿಲ್ಲ. ಯಾವ ಕೆಲಸದಲ್ಲಿದ್ದರೇನು ಅರಿವನ್ನು ತಿಳಿಯುವ ಕೌತುಕದಲ್ಲಿದ್ದವನೇ ಭಕ್ತ. ಅರಿವನ್ನು ತಿಳಿದವನೇ ಶಿವಶರಣ. ತಿಳಿಯುವುದಕ್ಕೆ ಅವನ ಆಶ್ರಯದಲ್ಲಿರುವುದೇ ಲೇಸು ! ತಿಳಿಯುವುದನ್ನು ಬಿಡದೆ ಸದಾ ಶಿವಶರಣೆನ್ನಿರಯ್ಯಾ. ದೇಹ ಅರಿವಿನ ಮನೆ; ಮನ ಆ ಅರಿವಿನಲ್ಲಿ ಕೂಡಿ ಮಹಾ ಮನೆಯನ್ನಾಗಿ ಮಾಡಿಕೊಂಡ ಮಾದಾರ ಚೆನ್ನಯನನ್ನು ಹೊಲಬಿಗನೆಂದು ಕರೆದಿದ್ದಾರೆ ಬಸವಣ್ಣ.

ಕಾಯಕವನ್ನೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯನೆಂದು ಬೀಗುವ ಅಜ್ಞಾನಿ ದೇಹಗಳಿಗೆ ಪುಣ್ಯಸ್ತ್ರೀ ಕಾಳವ್ವೆ ಭಾಟಿ ಏಟನು ಕೊಟ್ಟು ತಿಳಿಹೇಳಿ ಬ್ರಹ್ಮ ಜ್ಞಾನಿಯಾಗಿ ಮೆರೆದಿದ್ದಾಳೆ.

ಕುರಿ ಕೋಳಿ ಮೀನು ತಿನ್ನುವವರು ಕುಲಜರು. ಶಿವನಿಗೆ ಪಂಚಾಮೃತ ಕರೆವ ಪಶುವ ತಿನ್ನುವವನು ಮಾದಿಗನೆ? ಕುಲಜನೆಂದು ಹೇಳಿಕೊಳ್ಳುವ ದೇಹ ಉಂಡ ಹೋಳಿಗೆಯ ಎಂಜಲು ಎಲೆ ನಾಯಿಗೆ ಶೋಭಿತವಾಯಿತು. ಹೊಲೆಯನೆಂದು ಕರೆಯುವ ದೇಹ ಉಂಡ

ಹೋಳಿಗೆಯ ಎಂಜಲು ಎಲೆ ಕುಲಜನೆಂದು ಹೇಳಿಕೊಳ್ಳುವ ದೇಹಕ್ಕೆ ಶೋಭಿತವಾಯಿತು. ಹೇಗೆಂದಡೆ:

ತೊಗಲಿನ (ಸಿದ್ದಲಿಕೆ) ಚೀಲದಲ್ಲಿ ಸಂಗ್ರಹಿಸಿದ ತುಪ್ಪವನ್ನು ತೊಗಲಿನ(ಸಗ್ಗಳೆ) ಚೀಲದಿಂದ ಹೊರತಂದ ನೀರನ್ನು ಶುದ್ಧವೆಂದು ಕುಡಿಯುವ ಬುದ್ಧಿಗೇಡಿ ಕುಲಜ ದೇಹಗಳಿಗೆ ನಾಯಕ ನರಕ ತಪ್ಪದು.

ಬಾವಿಯ ನೀರೆತ್ತಲು ಮಾಡಿದ ಮಾಟೆ, ತುಪ್ಪ ಸಂಗ್ರಹಿಸಲು ಮಾಡಿದ ಚೀಲ ತೊಗಲಿನವು. ಈ ತೊಗಲು ಶಿವನಿಗೆ ಪಂಚಾಮೃತವನ್ನ ಕರೆದ ಪಶುವಿನದು. ಸತ್ತ ಪಶುವಿನ ಮಾಂಸವೇ ಹೊಲೆಯನ ಹೋಳಿಗೆ ಮೃಷ್ಠಾನ್ನ; ಅದನ್ನು ಉಂಡು ಬೀಸಾಡಿದ ತೊಗಲಿನ ಎಲೆಯ ಚೀಲಗಳೇ ಕುಲಜರಿಗೆ ತುಪ್ಪ ಸಂಗ್ರಹಿಸಲು ಬಾವಿಯ ಶುದ್ಧವಾದ ನೀರೆತ್ತಲು ಶ್ರೇಷ್ಠವಾಯಿತು. ತೊಗಲ ಚೀಲದಲ್ಲಿ ತುಪವನ್ನು ಶುದ್ಧೋದಕವನ್ನು ಸಂಗ್ರಹಿಸಿದರು. ಅವರೆಂತು ಮಾದಿಗರಾದರು? ಮಾದಿಗನುಂಡ ಎಂಜಲೆಲೆಯಲ್ಲಿಯ ತುಪ್ಪ ನೀರು ಕುಡಿದ ನೀವೆಂತು ಕುಲಜರಾದಿರಿ ಎಂದು ಉರಿಲಿಂಗ ಪೆದ್ದಿಯ ಹೆಂಡತಿ ಬ್ರಹ್ಮಜ್ಞಾನಿ ಕಾಳವ್ವೆ ಕುಲಜರೆಂದು ಹೇಳಿಕೊಳ್ಳುವವರನ್ನು ಪ್ರಶ್ನಿಸಿದ್ದಾಳೆ.

136

ದೂಷಕನವ ನೊಬ್ಬ ದೇಶವ ಕೊಟ್ಟಡೆ,
ಆಶೆಮಾಡಿ ಅವನ ಹೊರೆಯಲಿರಬೇಡ ;
ಮಾದಾರ ಶಿವಭಕ್ತನಾದಡೆ,
ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು, ಕರಲೇಸಯ್ಯಾ !
ತೊತ್ತಾಗಿಪ್ಪುದು ಕರಲೇಸಯ್ಯಾ!
ಕಾಡಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟು
ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ.

ದೇಶಕ್ಕಾಗಿ ಆಸೆ ಮಾಡಿದ ಕರ್ಣ ತನ್ನನ್ನು ತಾನೇ ದೂಷಿಸಿಕೊಳ್ಳುವ ದುರ್ಯೋಧನನ ಆಶ್ರಯ ಪಡೆದ. ದೇಶದಾಸೆಗಾಗಿ, ದ್ರೌಪದಿಯ ಸೀರೆ ಸೆಳೆಯುವಾಗಲೂ ಸುಮ್ಮನಿದ್ದ. ಪಗಡೆಯಾಟದಲ್ಲಿ ಪಾಂಡವರನ್ನು ಒಕ್ಕಲೆಬ್ಬಿಸಿದಾಗಲೂ ಸುಮ್ಮನಿದ್ದ. ಅರಗಿನ ಮನೆಯಲ್ಲಿ ಐವರನ್ನು ಸುಡುವಾಗಲೂ ಸುಮ್ಮನಿದ್ದ. ಸಾತ್ವಿಕರೆಂದೇ ಹೆಸರು ಪಡೆದ ಪಾಂಡವರನ್ನು ವನವಾಸಕಟ್ಟಿದಾಗಲೂ ಸುಮ್ಮನಿದ್ದ. ದೇಶದ ಆಸೆಗಾಗಿ ದುರ್ಯೋಧನನ ಕೈಯಲ್ಲಿ ಸಿಕ್ಕಿಹಾಕಿಕೊಂಡ ಕರ್ಣ ಅಧರ್ಮವೆಂದು ತಿಳಿದೂ ವಿಲ ವಿಲನೆ ಒದ್ದಾಡಿದ.

ದೂಷಕನನ್ನು ದೂಷಣೆ ಮಾಡಲಿಲ್ಲ. ಆದರೆ ದುರ್ಯೋಧನನ ಹೊರೆಯಲಿದ್ದರೂ ವಿಧುರನಿಗೆ ಸಹಿಸಲಾಗಲಿಲ್ಲ.

ದೇಹ ದಾಸಿಯ ಕೆಲಸದಲ್ಲಿದ್ದವಳದಾದರೇನು ವೇಶ್ಯೆಯ ಕೆಲಸದಲ್ಲಿದ್ದವಳ ದಾದರೇನು ಅದು ಅರಿವಿನ ಸೊತ್ತು. ಅರಿವಿನ ಆಭರಣ. ದೇಹ ಅರಿವಿನ ಮಾತು ಕೇಳಿ ಅರಿವು ಹೇಳಿದಂತೆ ನಡೆಯಬೇಕು. ಮನದ ಮಾತು ಕೇಳಿ ದೇಶಕ್ಕೆ ಆಶೆಮಾಡಿ ದೂಷಕನ ಹೊರೆಯಲಿರಬೇಡ ವೆಂದು

ಬಸವಣ್ಣನವರು ದೇಹಗಳಿಗೆ ಆಜ್ಞೆ ಮಾಡಿದ್ದಾರೆ.

ಮಾದಾರ ಚೆನ್ನಯ್ಯ ಮಹಾಜ್ಞಾನಿ. ಆತನ ಕಾಯಕ ಓಡಾಡುವ ಅರಿವಿನ ದೇಹಗಳಿಗೆ ಪಾದರಕ್ಷೆ ತಯಾರು ಮಾಡುವುದಾಗಿತ್ತು. ಎಲೆ ಮನವೇ ಸಾಧ್ಯವಾದರೆ ಚೆನ್ನಯ್ಯನ ಮನೆಯಲ್ಲಿ ಅಂಬಲಿಯನುಂಡು ಆತನ ಸೇವೆ ಮಾಡು; ಆತನಿಗೆ ಭೃತ್ಯನಾಗಿರು, ಆತ ಹೇಳಿದ್ದನ್ನು ಕೇಳುವ ದಾಸನಾಗು, ತೊತ್ತಾಗು ನಿನ್ನ ದೇಹ ಅರಿವಿನ ದೇಹವಾಗುತ್ತದೆ, ದೇವರ ದೇವ ಮಹದೇವನ ದೇಹವಾಗುತ್ತದೆ.

ಕಾಡಿನಲ್ಲಿ ಬೆಳೆದ ಸೊಪ್ಪು ತಂದು; ಹಂಚಿನಲ್ಲಿ ಹುರಿದುಕೊಂಡು ತಿಂದು; ಚೆನ್ನಯ್ಯನ ಸಹವಾಸ ಮಾಡಿ ಚೆಂದವಾಗಿ ಬಾಳು; ದೇಹದ ಆಸೆಗಾಗಿ ಅರಿವಿನ ದೇಹವನ್ನು ಮರೆಯಬೇಡ. ಅದು ಅರಿವಿನ ಸಂಗಯ್ಯನ ಮಹಾಮನೆ; ದೇಶದ ಆಸೆ ಮಾಡುವ ಮನಕ್ಕೆ ದೇಹದ ಅರಿವಿನ ಸಂಗಯ್ಯನಿಗೆ ದಾಸನಾಗುವುದನ್ನು ಕಲಿಸು; ಶರಣು ಹೋಗಿ ಶರಣನಾಗುವುದನ್ನು ಕಲಿಸು ಎಂದಿದ್ದಾರೆ ಮಹಾಜ್ಞಾನಿ ಬಸವಣ್ಣ.

137

ಪರುಷ ಮುಟ್ಟಿದ ಬಳಿಕ, ಕಬ್ಬುನವಾಗದು ನೋಡಾ!
ಲಿಂಗ ಮುಟ್ಟಿದ ಬಳಿಕ, ಕುಚಿತ್ತಾಚಾರವಾಗದು ನೋಡಾ
ಕೂಡಲಸಂಗನ ಶರಣರು ಅನ್ಯವನರಿಯರಾಗಿ.
ಪರುಷ ಮುಟ್ಟಿದ ಬಳಿಕ, ಕಬ್ಬುನವಾಗದು ನೋಡಾ:

ಕಬ್ಬಿಣ ತುಕ್ಕು ಹಿಡಿದು ಸವೆಯುತ್ತದೆ. ಚಿನ್ನಕ್ಕೆ ತುಕ್ಕು ಹಿಡಿಯುವದಿಲ್ಲ, ಸೆಗಣಿಯಲ್ಲಿ, ತಿಪ್ಪೆಯಲ್ಲಿ, ಬಿದ್ದರೂ ಥಳಥಳನೆ ಹೊಳೆಯುತ್ತದೆ, ಎರಡೂ ಲೋಹಗಳೇ, ಒಂದೇ ಭೂಮಿಯ ಮಣ್ಣಿನಲ್ಲಿ ಜನ್ಮ ತಳೆದಿವೆ! ಒಂದು ಲೋಹವನ್ನು ಕಬ್ಬಿಣವೆಂದು ಕರೆಯುತ್ತೇವೆ; ಮತ್ತೊಂದು ಲೋಹವನ್ನು ಚಿನ್ನವೆಂದು ಕರೆಯುತ್ತೇವೆ.

ಪೂರ್ವಜರು ದೇಹವನ್ನು ಪುರ ಪಟ್ಟಣ ದೇಶ, ಕೈಲಾಸ ಪರ್ವತವೆಂದು ಬೆಡಗಿನಿಂದ ಕರೆದರು. ಈ ದೇಹವನ್ನು ಶಂಕರರು ಹಿಮಾಲಯಕ್ಕೆ ಹೋಲಿಸಿದರು. ಬಸವಣ್ಣನವರು ಕಾಲನ್ನೇ ಕಂಬಮಾಡಿ ದೇಹವನ್ನೇ ದೇಗುಲಮಾಡಿ ಶಿರವನ್ನೇ ಹೊನ್ನ ಕಳಶ ಮಾಡಿ ಕರುಳನ್ನೇ ತಂತಿಯ ಮಾಡಿ ಬೆರಳನ್ನು ಕಡ್ಡಿಯ ಮಾಡಿ; ಬತ್ತೀಸರಾಗ ಹಾಡಿ ಕುಣಿ ಕಣಿದಾಡಿದರು.

ದೇಹವೆಂಬ ಭೂಮಿಯಲ್ಲಿ ಅರಿವೆಂಬ ಪರುಷವೂ ಇದೆ; ಮನವೆಂಬ ಕಬ್ಬಿಣವೂ ಇದೆ. ಪರುಷಕ್ಕೆ ದೋಷವಿಲ್ಲ, ಸಾವಿಲ್ಲ, ಕೇಡಿಲ್ಲ, ಅದು ರೂಹಿಲ್ಲದ ಚೆಲುವು ಥಳಥಳನೇ ಹೊಳೆಯುವ ಲಿಂಗ !

ಕಬ್ಬಿಣ ಮಣ್ಣಿನಲ್ಲಿ ಹುಟ್ಟಿ ಮಣ್ಣಿನಿಂದಲೇ ಕೊಳೆತು, ತನಗಂಟಿದ ಮಣ್ಣನ್ನು ಕೊಳೆಸಿ ನೋಯಿಸುತ್ತದೆ. ಈ ಕಬ್ಬಿಣಕ್ಕೆ ಮನ ಎಂದಿದ್ದಾರೆ ಬಸವಣ್ಣ!

ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಅರಿವೆಂಬ ಪರುಷವನ್ನು ಮನವೆಂಬ ಕಬ್ಬಿಣ ಮುಟ್ಟಿದ ಬಳಿಕ ಅರಿವೆ ತಾನಾಗುವುದು; ಕಬ್ಬಿಣ ಕೆಡದ ಚಿನ್ನವಾಗಿ ರೂಪು ತಾಳುವುದು. ಅರಿವೆಂಬ ಲಿಂಗ ಮುಟ್ಟಿದ ಮನದ ಚಿತ್ತ ಕುಚಿತ್ತಾಗದೇ ಅರಿವಿನಲ್ಲಿಯೇ ಸಿಲುಕಿ ಆ ಅರಿವಿಗೆ ಶ

ರಣು ಹೋಗುವುದು. ದೇಹದಲ್ಲಿ ಹುಟ್ಟಿದ ಮನ ದೇಹದ ಅರಿವಿನಲ್ಲಿ ಕೂಡಿ ಅನ್ಯವನರಿಯದೆ ಅರಿವಿಗೆ ಶರಣು ಹೋಗಿ ಶರಣನಾಗುವುದು.

138

ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ ?
ಲಿಂಗದೇವನ ಪೂಜಿಸಿ ಕುಲವನರಸುವರೆ, ಅಯ್ಯಾ ?
ಕೂಡಲಸಂಗಮದೇವ
ಭಕ್ತಕಾಯ ಮಹಾಕಾಯವೆಂದನಾಗಿ !

ದೇಶದ ಪ್ರಧಾನಿಗೆ ಸಚಿವ ಶಾಸಕರಿಗೆ, ಸಂಸದರಿಗೆ ಪಟ್ಟ ಕಟ್ಟಿದ ಬಳಿಕ ಅವರ ಲಕ್ಷಣವನ್ನು ಹುಡುಕುವುದು ತಪ್ಪು. ಪಟ್ಟ ಕಟ್ಟುವ ಮುನ್ನ ಯೋಚಿಸಬೇಕಾದುದನ್ನು ಪಟ್ಟ ಕಟ್ಟಿದ ಬಳಿಕ ಯೋಚಿಸುವುದು ಸಲ್ಲದು. ಏನಿದ್ದರೂ ಸರಿಮಾಡಿಕೊಳ್ಳಬೇಕು ಇಲ್ಲ ಸರಿಹೋಗಬೇಕು.

ರೈತ ಅವಸರದಲ್ಲಿ ಭೂಮಿಗೆ ಬೀಜ ಬಿತ್ತುವುದಿಲ್ಲ. ಬಿತ್ತಬೇಕಾದಾಗ ಜಾತಿ ಬೀಜ ಬಿತ್ತುತ್ತಾನೆ. ಜಾತಿ ಬೆಳೆ ಬೆಳೆಯುತ್ತಾನೆ. ಭೂಮಿಯನ್ನು ಮೈದಡವಿ ಹದಗೊಳಿಸುತ್ತಾನೆ.

ರೈತ ಉತ್ತಮ ಫಸಲಿಗಾಗಿ ಬೀಜ ಬಿತ್ತುವಂತೆ, ತನುವಿನಿಂದ ಅರಿವಿನ ಫಲ ಪಡೆಯುವದಕ್ಕಾಗಿಯೇ ಯೋಚಿಸಿ ಗರ್ಭದಲ್ಲಿ ಬೀಜ ಬಿತ್ತಬೇಕು.

ಬಿತ್ತಿಗೆಯಾದಮೇಲೆ ಲಕ್ಷಣವನರಸುವುದು ಸಲ್ಲದು, ಸಕಲ ಅರಿವಿನ ಲಕ್ಷಣಗಳು ತನುವಿನ ಗರ್ಭದಲ್ಲಿ ಪಟ್ಟ ಕಟ್ಟಿಕೊಂಡೇ ಬಂದಿವೆ.

ತನುವಿನ ಗರ್ಭದಿಂದ ಬಂದ ತನುಗಳೆಲ್ಲ ಅರಿವಿನ ತನುಗಳೇ; ಲಿಂಗ ತನುಗಳೇ ಆಗಿವೆ. ಲಿಂಗ ದೇಹವನ್ನು ಪೂಜಿಸಿ ತನುವಿನಲ್ಲಿ ಕುಲವನ್ನು ಹುಡುಕುವುದು ತಪ್ಪಲ್ಲವೆ?

ಕಾಯದಲ್ಲಿಯ ಅರಿವನ್ನು ಪೂಜಿಸಿ ; ಆ ಅರಿವಿಗೆ ಭಕ್ತಿ ಮಾಡಿದ ಮೇಲೆ ಅದು ಭಕ್ತ ಕಾಯ; ಮಹಾಕಾಯ , ಮಹಾದೇವನ ಕಾಯವೆಂದು ನುಡಿದಿದ್ದಾರೆ ಬಸವಣ್ಣ.

139

ದೇವಲೋಕ ಮರ್ತ್ಯಲೋಕ ವೆಂಬುದು ಬೇರೆ ಮತ್ತುಂಟೆ?
ಈ ಲೋಕದೊಳಗೆ ಮತ್ತೆ ಅನಂತ ಲೋಕ !
ಶಿವಲೋಕ ಶಿವಾಚಾರವಯ್ಯಾ.
ಶಿವಭಕ್ತನಿದ್ದ ಠಾವೆ ದೇವಲೋಕ,
ಭಕ್ತ ನಂಗಳವೆ ವಾರಣಾಸಿ; ಕಾಯವೇ ಕೈಲಾಸ !
ಇದು ಸತ್ಯ , ಕೂಡಲಸಂಗಮದೇವಾ.

ದೇವಲೋಕ ಮರ್ತ್ಯಲೋಕ ವೆಂಬುದು ಬೇರಿಲ್ಲ ; ದೇಹವೇ ದೇವಲೋಕ. ದೇಹವೇ ಮರ್ತ್ಯಲೋಕ! ತಿಳಿಯದಿದ್ದರೆ ದೇಹದಲ್ಲಿಯೇ ಅನಂತಲೋಕ.

ಕಾಯದೊಳಗೆ ಕಾಮ, ಕ್ರೊಧ, ಲೋಭ, ಮೋಹ, ಮದ, ಮತ್ಸರಗಳು ಬಳಕೆಯಾದರೆ, ಅನಂತ ಹೆಸರು ಜಾತಿ ಮತಗಳಿಂದ ಗುರುತಿಸಿಕೊಳ್ಳುತ್ತದೆ.

ಕಾಯದೊಳಗಿನ ಅರಿವು ಬಳಕೆಯಾದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಲ್ಲ. ಮನ ಕಾಯದ ಅರಿವನ್ನು ಬಳಕೆ ಮಾಡಿಕೊಂಡು, ಕಾಯವನ್ನೇ ಶಿವ ಲೋಕವನ್ನಾಗಿ ಮಾಡುತ್ತದೆ. ಅರಿವಿನ ಆಚಾರದಲ್ಲಿದ್ದ ತನುವಿಗೆ ಸರ್ವವು ಸತ್ಯವೂ ಶಿವಮಯವೂ ಸುಂದರಮಯವೂ ಆಗಿ ಕಾಣುತ್ತದೆ. ಶಿವಾಚಾರದಲ್ಲಿ ತೊಡಗಿ, ಅರಿವೆಂಬ ಶಿವನಿಗೆ ಭಕ್ತಿ ಮಾಡುತ್ತದೆ.

ಶಿವಭಕ್ತನಾದ ಮನ ಅತ್ತ ಇತ್ತ ಸುಳಿಯದೆ ತನುವನ್ನೇ ತಾನಿರಲು ಬಿಳಿಯ ಠಾವನ್ನಾಗಿ ಮಾಡಿಕೊಂಡು ದೇವಲೋಕವನ್ನಾಗಿ ಮಾಡುತ್ತದೆ.

ಕಾಯದ ಅಂಗಳವೇ ವಾರಣಾಸಿ; ಕಾಯವೇ ಕೈಲಾಸ ಇದು ಸತ್ಯ, ತನುವಿನ ಅರಿವಿನಲ್ಲಿ ಕೂಡಿದ ಮನಕ್ಕೆ ತನುವೇ ಕೈಲಾಸವೆಂದು ಸತ್ಯವಾಗಿ ಹೊಳೆಯುತ್ತದೆ. ಬುದ್ಧ ಬಸವ ಮಹಾವೀರ ದಾಸವರೇಣ್ಯರ ತನುವಾಗುತ್ತದೆ. ಮನ ತನುವಿನ ಅರಿವಿನಲ್ಲಿ ಕರಗಿ ಕೂಡಲ ಸಂಗಯ್ಯನೇ ತಾನಾಗುತ್ತದೆ.

140

ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು
ದೃಷ್ಟಿಯಾರೆ ಶರಣೆಂದಡೆ,
ಹುಟ್ಟೇಳು ಜನ್ಮದ ಪಾಪ ಬಿಟ್ಟು ಹೋಹುದು ನೋಡಾ !
ಮುಚ್ಚಿಟ್ಟ ಚರಣಕೆರಗಿದಡೆ,
ತನುವೊಪ್ಪಿದಂತೆ ಅಹುದು ಪರುಷ ಮುಟ್ಟಿದಂತೆ.
ಕರ್ತೃಕೂಡಲಸಂಗನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ!

ಮನ ಅರಿವಿಗೆ ಭಕ್ತನಾಗಬೇಕಿತ್ತು; ವಸ್ತುಗಳಿಗೆ ಭಕ್ತನಾಗಿದೆ; ದಾಸನಾಗಿದೆ . ಅದಕ್ಕಾಗಿಯೇ ಮನಕ್ಕೆ ತನ್ನಂತೆಯೇ ಇರುವ ತನುಗಳನ್ನು ನೋಡಲು ಬರುವುದಿಲ್ಲ. ವಸ್ತುಗಳನ್ನು ನೋಡುವ ಜಾಣತನ ತನುಗಳ ಚೈತನ್ಯ ನೋಡುವುದಕ್ಕೆ ಬಳಕೆಯಾಗುತ್ತಿಲ್ಲ. ಹೀಗಾಗಿ ನೋಡುವ ಕಣ್ಣಿನಲ್ಲಿ ಮನದ ಪೊರೆ ಆವರಿಸಿ ತನುವನ್ನು ಜಾತಿ, ಹೆಣ್ಣು, ಗಂಡು, ಶ್ರೀಮಂತ, ಬಡವ, ಅಧಿಕಾರಿ ಶಾಸಕ ಸಚಿವನೆಂದು ವಿಭಾಗ ಮಾಡಿ ನೋಡುತ್ತದೆ.

ಮನ ಅರಿವಿನಲ್ಲಿ ಬೆರೆತು, ಅರಿವಿನಿಂದ ದೃಷ್ಟಿಯಾರೆ ತನುಗಳನ್ನು ನೋಡಿದರೆ, ಸಕಲ ತನುಗಳು ಅರಿವನ್ನ ಆರಾಧಿಸುವ ಮನದ ತನುಗಳೇ! ಕಾಯದ ಕಾಯಕ ಯಾವುದಾದಡೇನು? ಕಾಯದ ಯಜಮಾನನನ್ನು ಕಂಡು ಶರಣೆಂದೆಡೆ ಏಳು ಜನ್ಮದ ಪಾಪ ಬಿಟ್ಟು ಹೋಗುವುದು. ಮುಟ್ಟಿ ಚರಣಕೆರಗಿದಡೆ ತನು ತನುವಿಗೆ ಒಪ್ಪಿದಂತಾಗುವುದು. ಮನವೆಂಬ ಲೋಹ ಅರಿವೆಂಬ ಪರುಷ ಮುಟ್ಟಿ ಚಿನ್ನದಂತಾಗುವುದು.

ಕಾಯದ ಅರಿವಿನ ಕರ್ತೃ ಕೂಡಲಸಂಗನ ಶರಣರ ಸಂಗವನ್ನು ಮಾಡಿದ ಮನ, ಜನನ ಮರಣಗಳನ್ನು ಕಳೆದುಕೊಂಡು ಹುರಿದ ಬೀಜದಂತಾಗುವುದು.

141

ಆರಾರ ಸಂಗವೇನೇನ ಮಾಡದಯ್ಯಾ ?
ಕೀಡೆ ಕುಂಡಲಿಗನಾಗದೇ ಅಯ್ಯಾ ?
ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ,
ಬೇವು, ಬೊಬ್ಬುಲಿ, ತರೆಯ ಗಂಧಂಗಳಾಗವೇ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ?

ಕಡಜರ ಹುಳು ತೆವಳುವ ಕೀಟವನ್ನು ತಂದು ತನ್ನ ಮಣ್ಣಿನ ಗೂಡಿನಲ್ಲಿಟ್ಟು ಕುಕ್ಕಿ ಕುಟುಕಿ ಶಬ್ದಮಾಡಿ ತನ್ನ ಜಾತಿಯ (ಕಡಜರ) ಕುಂಡಲಿಗನನ್ನಾಗಿ ಮಾಡುತ್ತದೆ. ಕುಂಡಲಿಗನ ಸಂಗಮಾಡಿದ ಕೀಟ ಕುಂಡಲಿಗನಾಯಿತು. ಸಂಗಮಾಡುವವ ಸದೃಢನಾಗಿದ್ದರೆ ಅನ್ಯರನ್ನ ತನ್ನಂತೆಯೇ ಮಾಡಿಕೊಳ್ಳುತ್ತಾನೆ.

ಚಂದನದ ಸನ್ನಿಧಿಯಲ್ಲಿದ್ದ ಬೇವು ಜಾಲಿಕೂಡ ಚಂದನದ ಪರಿಮಳತಾಗಿ ಚಂದನದ ಕಂಪು ಸ್ವಲ್ಪ ಮಟ್ಟಿಗೆ ಹೊರಹಾಕುತ್ತದೆ. ಅಂತೆಯೇ ಅರಿವನರಿಯದ ಮನ ತನುವನ್ನೇ ಹುಳುವನ್ನಾಗಿ ಮಾಡಿಕೊಂಡಿದೆ. ಒಮ್ಮೆ ಕಚ್ಚುತ್ತದೆ, ಚೀರುತ್ತದೆ, ಕುಡಿಯದಿದ್ದರೂ ಕುಡಿದಂತೆ ಒದ್ದಾಡುತ್ತದೆ. ಅರಿವಿನ ಸಂಗಮಾಡಿದ ಶರಣರ ಸಂಗದಲ್ಲಿದ್ದರೆ ಅವರ ಸನ್ನಿಧಿಯಿಂದ ಮನದ ಕರ್ಮ ನಿರ್ಮಳವಾಗದಿಹುದೆ ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಕೀಡೆ ಕುಂಡಲಿಗನಾಯಿತು; ಚಂದನ ತಾಗಿದ ಬೇವು ಜಾಲಿ ಅದರ ಪರಿಮಳವನ್ನೇ ಬೀರಿತು ಹಾಗೆಯೇ ಕೂಡಲಸಂಗನ ಶರಣರ ಸಂಗಮಾಡಿದ ಮನ ತನ್ನ ತನುವಿನ ಅರಿವೆಂಬ ಗುರುವನ್ನು ಕೂಡಿ ಆ ಗುರುವಿಗೆ ಶರಣು ಹೋಗಿ ತಾನೇ ಶರಣನಾಯಿತು.

142

ಎಂತಹವನಾದಡೇನು, ಲಿಂಗಮುಟ್ಟದವನೇ ಕೀಳುಜಾತಿ.
ಕುಲವಹುದು ತಪ್ಪದು ಲಿಂಗಮುಟ್ಟಲೊಡನೆ
ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ,
ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ.

ಅರಿವು ಮುಟ್ಟದ ಮನವೇ ಕೀಳು ಜಾತಿ. ಅರಿವಿನ ಅಂತರಾಳ ತಾಕಿದ ಮನವೇ ಉತ್ತಮ ಜಾತಿ. ಅರಿವೇ ಗುರು ; ಗುರುದೇವನೇ ಮಹಾದೇವ; ಮಹಾದೇವನೇ ಸದಾಶಿವ; ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ ! ಆ ಪರಬ್ರಹ್ಮವೇ ಲಿಂಗ. ಆ ಲಿಂಗವೇ ಪರುಷ. ಆ ಪರುಷ ಮುಟ್ಟಲೊಡನೆ ಮನ ಹೊನ್ನಿನಂತೆ ಥಳಥಳನೇ ಹೊಳೆಯುವುದು.

ಕಬ್ಬಿಣ ಎಲ್ಲಿ ಬಿದ್ದರೂ ಕೊಳೆಯುತ್ತದೆ. ಹೊನ್ನು ಎಲ್ಲಿ ಬಿದ್ದರೂ ಹೊಳೆಯುತ್ತದೆ. ಹಾಗೆಯೇ ಸಂದೇಹದ ಮನ ಅರಿವನು ಮುಟ್ಟಲರಿಯದು. ಅರಿವು ಗ್ರಂಥದಲ್ಲಿದೆಯೆಂದು ಓದಿ ಪಂಡಿತನಾಗುತ್ತದೆ. ಓದುವ ಸಕಲ ಗ್ರಂಥಗಳೂ ತನುವಿನಿಂದಲೇ ಬಂದದ್ದೆಂದು ಸಂದೇಹಿ

ಮನಕ್ಕೆ ತಿಳಿಯುವುದೇ ಇಲ್ಲ.ಸಂದೇಹಿ ಮನವನ್ನು ಅರಿವು ತನ್ನತ್ತ ಸುಳಿಯಗೊಡವುದಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ತನುವಿನಲ್ಲಿ ಹುಟ್ಟಿದ ಮನ ತನುವನ್ನೇ ತುಕ್ಕು ಹಿಡಿಸಿ ತನುವಿನೊಂದಿಗೆ ಇಲ್ಲವಾಗುತ್ತದೆ.

143

ಓದಿದಡೇನು, ಕೇಳಿದಡೇನು, ಶಿವಪಥವನರಿಯದನ್ನಕ್ಕ ?
ಓದಿತ್ತು ಕಾಣಿರೋ ಶುಕನು' ಶಿವಜ್ಞಾನವನರಿಯದನ್ನಕ್ಕ;
ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು.
ಕೂಡಲಸಂಗಮದೇವಾ.

ಓದಿದರೆ ಪಂಡಿತನಾಗುತ್ತಾನೆ, ಶಾಸ್ತ್ರಿಯಾಗುತ್ತಾನೆ. ಓದಿನಿಂದ ಮಾಹಿತಿ ಸಿಗುತ್ತದೆಯೇ ಹೊರತು ಅರಿವಿಗೆ ಹೋಗುವ ದಾರಿ ಗಮನಕ್ಕೆ ಬರುವುದಿಲ್ಲ, ಅರಿವು ಪುಸ್ತಕದಲ್ಲಿದೆಯೆಂದು ಓದುವುದೇ ತಪ್ಪಾಗಿದೆ. ಪುಸ್ತಕದಲ್ಲಿದ್ದ ಸಾಹಿತ್ಯವೆಲ್ಲ ಬಂದಿರುವುದು ದೇಹದಿಂದಲೇ!

ಕೇಳಿದರೂ ಅರಿವಾಗುವುದು ಸಾಧ್ಯವಾಗುವುದಿಲ್ಲ; ಹೇಳಿದ ದೇಹಗಳನ್ನು ಹೊಗಳುವುದಕ್ಕೆ ಸಮಯ ಮೀಸಲಾಗುತ್ತದೆ. ಒಂದಿಷ್ಟು ಮಾಹಿತಿ ಲಭ್ಯವಾಗಿ ಹೇಳುವುದಕ್ಕೂ ಅನುಕೂಲವಾಗುತ್ತದೆ. ಸಾಕಿದಗಿಳಿಗೆ ಮಾತು ಕಲಿಸಿದರೆ ಅದು ಕೂಡಾ ಹಾಡುತ್ತದೆ; ಆಡುತ್ತದೆ. ಆದರೆ ಬೆಕ್ಕು ಬಂದಾಗ ತನ್ನ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಓದಿದ ಓದು, ಕೇಳಿದ ಮಾತುಗಳಿಂದ ದೇಹಕ್ಕೆ ಬಂದ ಆಪತ್ಕಾಲಗಳನ್ನು ದೂರಸರಿಸಲು ಸಾಧ್ಯವಾಗುವುದಿಲ್ಲ. ಡಿಸೆಂಬರ್ 16, 2012 ರಂದು ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ನಿರ್ಭಯಿಯೆಂಬ ಹುಡುಗಿಯೊಬ್ಬಳು ಬಲಿಯಾದಳು. ಸುದ್ದಿ ದೇಶ ವ್ಯಾಪ್ತಿ ಹರಡಿತು. ಅದಕ್ಕೆ ಆರು ಯುವಕರು ಕಾರಣರಾದರು. ಯುವಕರ ಕಣ್ಣಿಗೆ ಹುಡುಗಿಯ ರೂಪ ಆಪತ್ಕಾಲ ತಂದೊಡ್ಡಿತು. ಹುಡುಗಿಗೆ ಆರು ಯುವಕರ ಕಾಮ ಆಪತ್ಕಾಲ ತಂದೊಡ್ಡಿತು. ಕಲಿತ ಶಿಕ್ಷಣದಿಂದ ದೇಹಕ್ಕೆ ಬಂದ ಆಪತ್ಕಾಲವನ್ನು ಎದುರಿಸಲು ಸಾಧ್ಯವಾಗಲಿಲ್ಲ. ಅವರು ಪಡೆದ ಮಾಹಿತಿಯಿಂದ ಯುವಕರು ಅತ್ಯಾಚಾರದಲ್ಲಿ ಭಾಗಿಯಾಗಿ ಜೇಲಿಗೆ ಹೋದರು. ಆತ್ಮಹತ್ಯೆ ಮಾಡಿಕೊಂಡರು. ಯುವತಿ ವ್ಯರ್ಥವಾಗಿ ಪ್ರಾಣ ಕಳೆದುಕೊಂಡಳು. ದೇಹದಲ್ಲಿರುವ ಅರಿವು ಯುವಕರಿಗೂ ಯುವತಿಗೂ ಬಳಕೆಯಾಗಲೇ ಇಲ್ಲ.

ವೇದ ಉಪನಿಷತ್ತು ಭಗವದ್ಗೀತೆ, ಕುರಾನ್, ಬೈಬಲ್‌ಗಳು ಅರಿವಿನ ಸೂತ್ರಗಳು. ಅದರ ಜಾಡು ಹಿಡಿದು ಅರಿವಿಗೆ ಹೋಗಬೇಕು. ಆಪತ್ಕಾಲವನ್ನು ಎದುರಿಸಲು ದೇಹ ಅಣಿಯಾಗಬೇಕು.

ಕಣ್ಣಿನಲ್ಲಿ ಹುಟ್ಟಿದ ಕಾಮವನ್ನು ಕಣ್ಣಿನ ಅರಿವಿನಿಂದಲೇ ಭೇದಿಸಬೇಕು. ಕಿವಿಯಲ್ಲಿ ಹುಟ್ಟಿದ ಶಬ್ದದ ಅಜ್ಞಾನವನ್ನು ಕಿವಿಯಲ್ಲಿಯ ಜ್ಞಾನದಿಂದಲೇ ಭೇದಿಸಬೇಕು. ಚರ್ಮದಲ್ಲಿ ಹುಟ್ಟಿದ ಅಜ್ಞಾನವನ್ನು ಚರ್ಮದ ಜ್ಞಾನದಿಂದಲೇ ಭೇದಿಸಬೇಕು. ನಾಲಿಗೆ ಹಾಗೂ ಮೂಗಿನಲ್ಲಿ ಹುಟ್ಟಿದ ಅಜ್ಞಾನವನ್ನು ಅವುಗಳ ಜ್ಞಾನದಿಂದಲೇ ಭೇದಿಸಬೇಕು.

ದೇಹದಲ್ಲಿ ಹುಟ್ಟಿದ ಅಜ್ಞಾನ ಭೇದಿಸುವ ಅಸ್ತ್ರ ದೇಹದಲ್ಲಿದೆಯೇ ಹೊರತು ಪುಸ್ತಕದಲ್ಲಿ ಇಲ್ಲ. ಹಾಗೆಯೇ ಕೇಳುವ ಶಬ್ದಗಳಲ್ಲಿಯೂ ಇಲ್ಲ. ಹೀಗೆ ಓದಿದ ಫಲ ಮಾದಾರ

ಚೆನ್ನಯ್ಯನೆಂಬ ಶಿವಶರಣರಿಗಾಯಿತು; ದೇಹದ ಅರಿವಿನೊಂದಿಗೆ ಸಂಗ ಮಾಡಿದ ಶಿವ ಶರಣರಿಗಾಯಿತು. ಓದಿದವರಿಗೆ ಕೇಳಿದವರಿಗೆ ಸಾಧ್ಯವಾಗುವುದಿಲ್ಲ; ಪ್ರಯೋಗಕ್ಕೆ ಹೋದವರಿಗೆ ಸಾಧ್ಯವಾಗದೇ ಇರುವುದಿಲ್ಲ.

144

ಹಾವಿನ ಡೊಂಕು ಹುತ್ತಕ್ಕೆ ಸಸಿನ;
ನದಿಯ ಡೊಂಕು ಸಮುದ್ರಕ್ಕೆ ಸಸಿನ;
ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.

ಹಾವು ಹೊರಗಡೆ ಡೊಂಕು ಡೊಂಕಾಗಿ ಕಂಡರೂ ಹುತ್ತದಲ್ಲಿ ಹೋದಾಗ ಕಾಣವುದಿಲ್ಲ. ಅದನ್ನು ಹುಡುಕುವುದಕ್ಕೂ ಸಾಧ್ಯ ವಾಗುವುದಿಲ್ಲ. ಹುತ್ತ ಹೊಡೆದರು ಹಾವು ಸಿಕ್ಕು ವುದಿಲ್ಲ; ಸಾಯುವುದಿಲ್ಲ . ಹಾವು ತನಗೆ ಬಂದ ಆಪತ್ಕಾಲವನ್ನು ಹುತ್ತದಲ್ಲಿ ಹೊಕ್ಕು ಎದುರಿಸುತ್ತದೆ.

ನದಿ ಡೊಂಕು ಡೊಂಕಾಗಿ ಹರಿದರೂ ಅದು ಸಂಗಮವಾಗುವುದು ಸಮುದ್ರದಲ್ಲಿ, ಅದಕ್ಕೆ ಡೊಂಕುಗಳಿಲ್ಲ, ಎಲ್ಲೆಲ್ಲೂ ಸಮುದ್ರವೇ ಸಮುದ್ರ. ಎತ್ತ ನೋಡಿದಡತ್ತ ಜಲರಾಶಿ! ನದಿಯ ಡೊಂಕು ಸಮುದ್ರದಲ್ಲಿ ಸಂಗಮವಾಗಿ ತನ್ನ ಹೆಸರು ಕಳೆದುಕೊಂಡು ಅನಂತವಾಯಿತು! ಸಮುದ್ರವಾಯಿತು. ಹಾಗೆಯೇ ಹಾವಿನ ಡೊಂಕು ಹುತ್ತದಲ್ಲಿ ಸಂಗಮವಾಗಿ ಹಾವು ಮತ್ತು ಅದರ ಡೊಂಕು ಹುತ್ತದ ಗರ್ಭದಲ್ಲಿ ಅಡಗಿತು.

ದೇಹದ ಅಜ್ಞಾನದ ಡೊಂಕು ದೇಹದ ಜ್ಞಾನದಲ್ಲಿ ಸಂಗಮವಾಗಿ ಜ್ಞಾನವೇ ತಾನಾಯಿತು.

ಹಾವು ಹುತ್ತದಲ್ಲಿ ಹೋಯಿತು; ಹುತ್ತ ಹೊಡೆದು ನೋಡಿದರೂ ಹಾವು ಕಾಣಲಿಲ್ಲ ಹರಿಯುವ ನದಿ ಸಮುದ್ರ ಸೇರಿ ತನ್ನ ಡೊಂಕು ಮತ್ತು ನದಿಯ ಹೆಸರು ಕಳೆದುಕೊಂಡು ಸಮುದ್ರವೇ ಆಯಿತು. ಹಾಗೆಯೇ ದೇಹದ ಅಜ್ಞಾನದ ಡೊಂಕು ದೇಹದ ಜ್ಞಾನದಲ್ಲಿಯೇ ಸಂಗಮವಾಗಿ ಜ್ಞಾನಿಯಾಯಿತು.

ಸಾತ್ವಿಕತನ ಕಳೆದುಕೊಂಡು ಅಂಗುಲಿಮಾಲನಾದ; ಎರಡೂ ಹೆಸರು ಕಳೆದುಕೊಂಡು ಬುದ್ಧನಾದ.

145

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು,
ಭಕ್ತ ದೇಹಿಕ ದೇವ ಅನಿಮಿಷನಾಗಿ !
ಕೂಡಲ ಸಂಗಮದೇವ
ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು.

ಗುರು ಶಿಷ್ಯ ಸಂಪ್ರದಾಯಗಳು ಮನುಷ್ಯನನ್ನು ಬಹಳ ದೂರ ಕರೆದುಕೊಂಡು ಹೋಗುತ್ತವೆ. ಶಿಷ್ಯನ ಸೇವೆಯ ಆನಂದದಲ್ಲಿ ಗುರು ಮಗ್ನನಾಗಿ ಗುರುವಿಗೆ ಗುರುವೆಂಬ

ಅರಿವಿನ ರುಚಿಯೇ ಹತ್ತುವುದಿಲ್ಲ. ಗುರು ಅರಿವಿನ ಆನಂದ ಸವಿಯದೇ ಸಾಯುತ್ತಾನೆ.

ಗುರುವಿನ ಮಾತುಗಳು ಶಿಷ್ಯನನ್ನು ಮೈಮರೆಸಿ, ಗುರು ಸೇವೆಯಲ್ಲಿಯೇ ಕಾಲ ಕಳೆದು ವ್ಯರ್ಥ ಸಾಯುತ್ತಾನೆ. ಅರಿವೆಂಬ ಗುರುತನದ ಆನಂದ ಶಿಷ್ಯನು ಕಾಣುವುದೇ ಇಲ್ಲ.

ಭಕ್ತನ ಮುಖದಲ್ಲಿ ಅರಿವಿನ ದರ್ಪಣವಿದೆ. ಅದರಲ್ಲಿ ಗುರು ತನ್ನ ದರ್ಶನ ತಾನೇ ಮಾಡಿಕೊಂಡು ಭಕ್ತನನ್ನು ಬಿಟ್ಟು ತಾನು ಹಿಂದೆ ಸರಿಯಬೇಕು. ಹಾಗೆಯೇ ಗುರುವಿನ ಮಖದಲ್ಲಿಯೂ ಅರಿವಿನ ದರ್ಪಣವಿದೆ. ಅದರಲ್ಲಿ ತನ್ನ ಅರಿವಿನ ದರ್ಶನ ಮಾಡಿಕೊಂಡು ಹಿಂದೆ ಸರಿಯಬೇಕು. ಅರಿವೇ ಗುರು. ಆ ಗುರುದೇವನೆ ಮಹಾದೇವ! ಗುರು ಶಿಷ್ಯರಿಬ್ಬರೂ ಅರಿವುಳ್ಳವರೇ. ಅರಿವಿನ ಕೆಲಸಕ್ಕೆ ಬಂದು ವೇಷ ಹಾಕಿದ್ದಾರೆ. ಅರಿವಾದ ಮೇಲೆ ಅರಿವು ಮಾತ್ರ ಉಳಿಯಬೇಕು. ಭಕ್ತನಿಲ್ಲ- ಗುರುವಿಲ್ಲ. ಅರಿವಿನ ತನು ಮಾತ್ರ ಗೋಚರಿಸಬೇಕು.

ಬಸವಣ್ಣನಿಗೆ ಅನಿಮಿಷ ಭಕ್ತನಾಗಿದ್ದ. ಅಲ್ಲಮನಿಗೆ ಗುರುವಾದ. ಅಲ್ಲಮ ಬಸವಣ್ಣನಿಗೂ ಸಕಲರಿಗೂ ಗುರುವಾದ. ಸಕಲ ಶರಣರಲ್ಲಿಯೂ ಗುರುವನ್ನು ಕಂಡ.

ಅರಿವಿನ ತನುಗಳಿಗೆ ಕಾಣುವ ತನುಗಳೆಲ್ಲಾ ಅರಿವಿನ ತನುಗಳೇ. ನುಡಿದ ನುಡಿ, ಕೇಳಿದ ಮಾತು, ನೋಡುವ ನೋಟವೆಲ್ಲಾ ಅಮೃತವೇ. ಎಲ್ಲಿ ನೋಡಿದರೂ ಅಮೃತದ ರಾಶಿಯೇ!

146

ಭಕ್ತಿ ಎಂತಹದಯ್ಯಾ ?
ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ?
ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ?
ಸಿಂಧು ಬಲ್ಲಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ? ಕೂಡಲಸಂಗಮದೇವಾ,
ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ.
ಭಕ್ತಿ ಎಂತಹದಯ್ಯಾ ? ದಾಸಯ್ಯ ಮಾಡಿದಂತಹದಯ್ಯಾ.

ದೇವರ ದಾಸೀಮಯ್ಯ, ಸಿರಿಯಾಳ, ಸಿಂಧುಬಲ್ಲಾಳ ಹಾಗೂ ಬಾಣನನ್ನು ಬಸವಣ್ಣನವರು ತಮ್ಮ ವಚನದಲ್ಲಿ ಬಳಸಿಕೊಂಡಿದ್ದಾರೆ. ಇವರು ಅರಿವಿಗೆ ಭಕ್ತಿ ಮಾಡಿದ ಮಹಾಜ್ಞಾನಿಗಳು!

ದೇವರ ದಾಸೀಮಯ್ಯನವರನ್ನು ತವನಿಧಿಯ ದಾಸೀಮಯ್ಯನೆಂದೂ ಕರೆಯುತ್ತಾರೆ. ತನು ಅರಿವಿನ ಸಿಂಹಾಸನ, ಉನ್ನತವಾದ ಪೀಠ, ನವನಿಧಿಯ ಮೇರುಪರ್ವತ; ತವನಿಧಿಯೂ ಹೌದು.

ದಾಸೀಮಾರ್ಯರು ವಸ್ತ್ರ ನೇಯುವ ಕಾಯಕ ಮಾಡುತ್ತಿದ್ದರು. ಸುಂದರವಾದ ವಸ್ತ್ರ ನೇಯ್ದು ಅದನ್ನು ಸಂತೆಗೆ ಮಾರಲು ಹೋದರು. ದುಬಾರಿ ಬೆಲೆಯ ವಸ್ತ್ರವನ್ನು ಯಾರು ಕೊಳ್ಳಲಿಲ್ಲ, ದಾರಿಯಲ್ಲಿ ವಸ್ತ್ರಗಳೇ ಇಲ್ಲದ ಒಬ್ಬ ಬೇಡಿದ ; ಕೂಡಲೇ ಅದನ್ನು ಕೊಟ್ಟು ಬಿಟ್ಟರು. ವಸ್ತ್ರ ಪಡೆದ ಆತ ಪರ ಪರನೆ ಹರಿದು ಧರಿಸಿಕೊಂಡ. ದಾಸೀಮಯ್ಯ ಅದನ್ನು ನೋಡುತ್ತಾ ಆನಂದ ಪಟ್ಟು ಮನೆಗೆ ಮರಳಿದರು.

ವಸ್ತ್ರ ಕೊಟ್ಟು ಆಗಿದೆ. ತನಗೆ ತೋಚಿದಂತೆ ಧರಿಸಿದ. ಅದು ಆತನ ಸೊತ್ತು. ಅದು ಆತನ ಆನಂದ. ಆ ಆನಂದವನ್ನು ಅಡ್ಡಿ ಪಡಿಸುವುದು ಉಚಿತವಲ್ಲ.

ಇದು ಎಲ್ಲರಿಗೂ ಸಾಧ್ಯವಾಗುವದಿಲ್ಲ. ತನುವಿನಲ್ಲಿರುವ ಅರಿವಿಗೆ ದಾಸೀಮಯ್ಯ ಭಕ್ತಿ ಮಾಡಿದ್ದರು. ಆ ಅರಿವು ಅವರಿಗೆ ಒಲಿದಿತ್ತು ಹೀಗಾಗಿ ವಸ್ತ್ರ ಹರಿದರೂ ಸಂಕಟವಾಗಲಿಲ್ಲ. ಅರಿವಿನಿಂದ ನೋಡಿ ಆನಂದ ಪಟ್ಟರು.

ಭಕ್ತಿ ಎಂತಹದಯ್ಯಾ ? ಸಿರಿಯಾಳ ಮಾಡಿದಂತಹದಯ್ಯಾ :

ಧೃತರಾಷ್ಟ ದುರ್ಯೋಧನನ ಮೇಲಿದ್ದ ಕುರುಡು ಪ್ರೇಮದಿಂದ ಹದಿನೆಂಟು ಅಕ್ಷೋಹಿಣಿಸೈನ್ಯ ನಾಶವಾಯಿತು. ನೂರಾಒಂದು ಮಕ್ಕಳು ಬಂಧು ಬಾಂಧವರು ಸತ್ತು ಹೋದರು. ಆದರೂ ಮೋಹ ಮುರಿಯಲಿಲ್ಲ. ಮಗನನ್ನು ಕೊಂದ ಭೀಮನನ್ನಾದರೂ ಅಪ್ಪಿ ಕೊಲ್ಲಬೇಕೆಂದು ಹತ್ತಿರ ಕರೆದ. ಶ್ರೀಕೃಷ್ಣನ ಸಹಾಯದಿಂದ ಭೀಮ ಹಿಂದೆ ಸರಿದ. ಭೀಮನಂತಿರುವ ಲೋಹದ ಪುತ್ಥಳಿಯನ್ನು ಅಪ್ಪಿ ಕುರಡ ಪುಡಿ ಪುಡಿ ಮಾಡಿದ. ಇದನ್ನು ಅರಿತ ಸಿರಿಯಾಳ ಮಗನ ರೂಪದಲ್ಲಿ ಮೋಸಮಾಡುವ ಮೋಹವನ್ನು ಕುಟ್ಟಿ ಅರಿವೆಂಬ ಜಂಗಮನಿಗೆ ಉಣ ಬಡಿಸಿದ.

ಭಕ್ತಿ ಎಂತಹದಯ್ಯಾ ? ಸಿಂಧುಬಲ್ಲಾಳ ಮಾಡಿದಂತಹದಯ್ಯಾ :

ಸಿಂಧು ಬಲ್ಲಾಳ ಅರಿವಿನ ಪ್ರೇಮಿ. ಜಂಗಮ ಪ್ರೇಮಿಯೂ ಹೌದು. ಜಂಗಮ ವಿಷಯದ ಹಸಿವಿನಿಂದ ಬಳಲುತ್ತ ಬಲ್ಲಾಳನ ಹೆಂಡತಿಯನ್ನೇ ಕೇಳಿದ. ಹಸಿದವನಿಗೆ ಅನ್ನ ನೀಡುವುದು ಶ್ರೇಯಸ್ಸು! ವಿಷಯದ ಹಸಿವಿನಿಂದ ಬಳಲುವವನಿಗೆ ಸತಿಯನ್ನೇ ನೀಡುವುದೆಂದರೇನು ಸಣ್ಣ ಕೆಲಸವೇ?

ತನುವಿನಲ್ಲಿ ಅರಿವೆಂಬ ಗಂಡನಿದ್ದಾನೆ, ಮನವೆಂಬ ಹೆಂಡತಿಯಿದ್ದಾಳೆ. ಅರಿವೆಂಬ ಗಂಡನಿದ್ದರೂ ಹೆಂಡತಿಯೆಂಬ ಮನ ಹಾದರ ಮಾಡುವುದು ಬಿಡುವುದಿಲ್ಲ. ಪರಸತಿ ಪರಪುರುಷನೊಂದಿಗೆ ಭೋಗಿಸುವ ವಿಕೃತ ಬಯಕೆ ಅದಕ್ಕೆ. ವಿಕೃತ ಮನವೆಂಬ ತನ್ನ ಹೆಂಡತಿಯನ್ನು ಸಿಂಧು ಬಲ್ಲಾಳ ಅರಿವೆಂಬ ಜಂಗಮನಿಗೆ ಕೊಟ್ಟು ಹೊರಗೆ ಕುಳಿತು ಆನಂದದಿಂದ ಕುಣಿಕುಣಿದಾಡಿದ.

ಭಕ್ತಿ ಎಂತಹದಯ್ಯಾ ?ಕೂಡಲ ಸಂಗಮದೇವಾ ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ

ಬಾಣನಿಗೆ ಸಾವಿರ ಕೈಗಳು. ಪೂಜಾನಿಷ್ಠ ! ಈತನನ್ನು ನೋಡಲು ಸಾವಿರ ಜನ ಬರುತ್ತಿದ್ದರು. ಪೂಜೆಗೆ ಅಡ್ಡಿ ಪಡಿಸುತ್ತಿದ್ದರು. ಇದರಿಂದ ಬೇಸತ್ತ ಬಾಣ ಶಿವನನ್ನೇ ಬಾಗಿಲು ಕಾಯಲು ಹಚ್ಚಿದ. ಇದು ಬಸವಣ್ಣನವರು ಹೆಣೆದ ಬಾಣನ ಕಥೆ.

ಭಕ್ತಿ ಎಂತಹದಯ್ಯಾ ? ದಾಸಯ್ಯ ಮಾಡಿದಂತಹದಯ್ಯಾ

ದೇಹಕ್ಕೆ ತನು, ಕರ, ಕೈ, ಅಂಗೈ ಎನ್ನುವ ಹೆರುಗಳು ಇವೆ. ಪೂಜಿಸುವ ತನು ಒಂದೇ ಆದರೂ ಪೂಜೆಯನ್ನು ಅಡ್ಡಿ ಪಡಿಸುವ ತನುಗಳು ಸಾವಿರಾರು. ದೇವರ ಪೂಜೆ ಎನ್ನುವುದು ಒಂದು ಸಂಪ್ರದಾಯವಾಗಿದೆ. ಅದನ್ನು ಬೇರೊಬ್ಬರಿಂದಲೂ ಮಾಡಿಸುತ್ತಾರೆ. ಇಲ್ಲ ಅದೊಂದು ಕೆಲಸವೆಂದು ತಾವೇ ಮಾಡಿ ಮುಗಿಸುತ್ತಾರೆ. ಈ ಅವಧಿಯಲ್ಲಿ ಮನ ತನುವಿನೊಂದಿಗೆ ಸಾವಿರಾರು ಕಡೆ ಸುತ್ತಿ ಬರುತ್ತದೆ. ಹೀಗೆ ಸಾವಿರಾರು ಕಡೆ ಸುತ್ತಿ ಬರುವ ಪೂಜೆಗೆ ಅಡ್ಡಿಪಡಿಸುವ ತನುಗಳನ್ನು ಹೊರಬಿಡದಂತೆ, ಒಳಗೆ ಸುಳಿಯದಂತೆ ಕಾವಲು ಕಾಯಲು ಬಾಣಾಸುರ ಅರಿವೆಂಬ

ಶಿವನನ್ನೇ ನಿಯಮಿಸಿದ. ಈ ನಾಲ್ಕು ಸುಂದರವಾದ ಅರಿವಿನ ಕಥೆಗಳನ್ನು ಬಸವಣ್ಣನವರು ನಾಲ್ಕು ಸಾಲಿನಲ್ಲಿ ಹೇಳಿದ್ದಾರೆ.

147

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ!
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯಕಾಣಿರಣ್ಣಾ !
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ !
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ !
ಅಘಟಿತ ಘಟಿತರು ವಿಪರೀತ ಚರಿತರು
ಕೂಡಲಸಂಗನ ಶರಣರು ನಡೆದ ದಾರಿ ಭಯಕಾಣಿರಣ್ಣಾ!
ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ :

ಸಿಂದುಬಲ್ಲಾಳನ ವಧುವಿನೊಡನೆ ಸರಸವಾಡಿದ ಅಂದಿನ ದಿನ ಭಯ ಕಾಣಿರಣ್ಣಾ! ಸಿರಿಯಾಳ ಸೆಟ್ಟಿ ಚೆಂಗಳವ್ವೆಯರ ಮಗನ ಬೇಡಿ ಕುಟ್ಟಿ ಬಾಣಸವಮಾಡಿ ಉಂಡ ಅಂದಿನ ದಿನ ಭಯ ಕಾಣಿರಣ್ಣಾ!

ದಾಸಿಮಯ್ಯ ನೇಯ್ದ ಸುಂದರವಾದ ವಸ್ತ್ರವನು ಪರಪರನೆ ಹರಿದು ಉಟ್ಟುಕೊಂಡ ಅಂದಿನ ದಿನ ಭಯ ಕಾಣಿರಣ್ಣಾ ! ಅಘಟಿತ ಘಟಿತರು, ವಿಪರೀತ ಚರಿತರು ಕೂಡಲಸಂಗನ ಶರಣರು ನಡೆದ ಅಂದಿನ ದಾರಿ ಭಯಕಾಣಿರಣ್ಣಾ!

ತನ್ನ ಸತಿಯನ್ನು ಅರಿವಿನ ಪತಿಗೆ ಸರಸವಾಡಲು ನೀಡಿ ಸತಿ ಪತಿಗಳೊಂದಾಗಿ ಅಪ್ಪಿಕೊಂಡು ಆನಂದ ಪಡುವುದನ್ನು ನೋಡುತ್ತಾ ಮೈಮರೆತು ನಿಂತ ಸಿಂಧು ಬಲ್ಲಾಳನು ಸಾಮಾನ್ಯನೆ?

ಮಗನ ಮೋಹವನ್ನು ಅರಿವಿನ ಜಂಗಮನಿಗೆ ಕೊಟ್ಟು ಕುಟ್ಟಿ ಅಡಿಗೆ ಮಾಡಿ ನೀಡಿದ ಸಿರಿಯಾಳ ಚೆಂಗಳೆಯರು ಸಾಮಾನ್ಯರೆ?

ದಿನಗಟ್ಟಲೆ ನೇಯ್ದ ಅಮೂಲ್ಯ ವಸ್ತ್ರವನ್ನು ಅರಿವಿನ ಜಂಗಮನಿಗಿತ್ತುದು ಸಾಮಾನ್ಯವೆ? ದಾಸಯ್ಯನಿಂದಲೇ ದಾನ ಪಡೆದು ಪರಪರನೆ ಹರಿದು ಚಿಂದಿಮಾಡಿದ ಜಂಗಮನನ್ನು ನೋಡಿ ನಗು ನಗುತ್ತಾ ನಿಂತ ದಾಸಿಮಯ್ಯನ ಸಮಚಿತ್ತ ಸಾಮಾನ್ಯವೆ?

ಮುನ್ನಿನ ಪುರಾತನರು ಮಹಾಜ್ಞಾನಿಗಳು, ಸರ್ವವನ್ನು ಅರಿವಿನಿಂದ ನೋಡಿ ಆನಂದದಿಂದ ಬದುಕಿದವರು. ಅವರು ನಡೆದ ದಾರಿ ಭಯ ಕಾಣಿರಣ್ಣಾ! ಕೂಡಲ ಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ!

148

ದೇವನೊಳ್ಳಿದನೆಂದು ಮುಯ್ಯಾನಲು ಬೇಡ;
ತರಕಟ ಕಾಡಿದನೊಳ್ಳಿದನೆ?
ಅಳಿಸುವ ನಗಿಸುವನೊಳ್ಳಿದನೆ?

ಬೆಚ್ಚದೆ ಬೆದರದೆ ತೊತ್ತುತನವ ಮಾಡಲು,
ತನ್ನ ನೀವನು ಕೂಡಲಸಂಗಮದೇವ!

ದೇವನೊಳ್ಳಿದನೆಂದು ಮುಯ್ಯಾನಲು ಬೇಡ; ತರಕಟ ಕಾಡಿದನೊಳ್ಳಿದನೆ? ಅಳಿಸುವ ನಗಿಸುವನೊಳ್ಳಿದನೆ:

ದೇವರೊಂದಿಗೆ ಸರಸವಾಡಿದ ಬಲ್ಲಾಳನ ಹೆಂಡತಿಯನ್ನೇ ಬೇಡಿದ. ದೇವರೊಂದಿಗೆ ಸರಸವಾಡಿದ ದಾಸನ ವಸ್ತ್ರವನ್ನೇ ಬೇಡಿದ.ದೇವರೊಂದಿಗೆ ಸರಸವಾಡಿದ ಸಿರಿಯಾಳ ಸಟ್ಟಿ ಚೆಂಗಳವ್ವೆಯರ ಮಗನನ್ನೇ ಬೇಡಿದ. ಸರಸವಾಡಿದವರನ್ನೇ ವಿಪರೀತವಾಗಿ ಕಾಡಿದ ಇವರನ್ನು ಅಳಿಸಿದ; ನಗಿಸಿದ. ಅಳಿಸುವ ನಗಿಸುವ ದೇವರು ಒಳ್ಳೆಯವನೆ?

ದೇವರೆಂದರೆ ಯಾರು? ಅವನು ಹೇಗಿದ್ದಾನೆ? ದೇವಸ್ಥಾನದಲ್ಲಿದ್ದಾನೊ ಪುಣ್ಯಕ್ಷೇತ್ರದಲ್ಲಿದ್ದಾನೊ? ಕಲ್ಲು ಮಣ್ಣು ಲೋಹಗಳಿಂದ ಮಾಡಿದ ದೇವರು ದೇವರೊ? ಇವನೊಂದಿಗೆ ಸರಸವಾಡಲು ಬರುವುದೆ ಹೇಗೆ? ಹೀಗೆ ಪ್ರಶ್ನೆ ಹಾಕಿಕೊಂಡರೆ ದೇಶದಲ್ಲಿರುವ ದೇವರ ಪೂಜೆಗಳೆಲ್ಲಾ ನಿಲ್ಲುತ್ತವೆ. ದೇವರನ್ನು ಮಾರುವ ಸರಾಫರ ಅಂಗಡಿಗಳಿಗೆ ಬೀಗ ಬೀಳುತ್ತದೆ. ದೇವರನ್ನು ಮಾಡುವ ಕಲಾವಿದರಿಗೆ ಪೂಜಾರಿಗಳಿಗೆ ಊಟಕ್ಕಿಲ್ಲದಂತಾಗುತ್ತದೆ.

ಹಾಗಾದರೆ ದೇವರು ಯಾರು? ಸರಸವಾಡಲು ಹೋದವನನ್ನೇ ಅಳಿಸಿ ಕಾಡಿಸಿ ನಗಿಸುವ ದೇವರು ಎಲ್ಲಿದ್ದಾನೆ. ಅವನಿಗೆ ಬೆಚ್ಚದೆ ಬೆದರದೆ ತೊತ್ತು ತನವ ಮಾಡುವುದು ಹೇಗೆ? ಹಾಗೆ ಮಾಡಿದರೆ ತನ್ನನ್ನೇ ಸಮರ್ಪಿಸಿಕೊಳ್ಳುವ ದೇವರು ಎಲ್ಲಿದ್ದಾನೆ. ಆತನನ್ನು ಕಂಡು ಹಿಡಿಯುವದಾದರೂ ಹೇಗೆ?

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ. ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ. ಕಾಲೇ ಕಂಬ, ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯಾ ಎನ್ನುತ್ತಾರೆ ಬಸವಣ್ಣನವರು,

ದೇಹದಲ್ಲಿರುವ ಸತ್ಯವೇ ದೇವರು; ದೇಹದಲ್ಲಿರುವ ಸುಳ್ಳೇ ಮರ್ತ್ಯ-ನರಕ. ದೇಹದಲ್ಲಿರುವ ಅರಿವೇ ಗುರು; ಆ ಗುರುದೇವನೇ ಮಹಾದೇವ; ಆ ಮಹಾದೇವನೆ ಸಾಕ್ಷಾತ್ ಪರಬ್ರಹ್ಮ.

ದೇಹದಲ್ಲಿರುವ ಅರಿವೆಂಬ ಗುರುವಿಗೆ ; ದೇಹದಲ್ಲಿರುವ ಮನವೆಂಬ ಭಕ್ತನು ಬೆಚ್ಚದೆ ಬೆದರದೆ ದಾಸನಾಗಿ ಪೂಜಿಸಿದರೆ ತನ್ನ ನೀವನು. ಇಲ್ಲದಿದ್ದರೆ ಒಮ್ಮೆ ಅಳಿಸುವನು ಮತ್ತೊಮ್ಮೆ ನಗಿಸುವನು.

ತನ್ನ ಅರಿವಿಗೆ ತನ್ನ ಮನವೇ ದಾಸನಾಗುವುದು ಹೇಗೆ?;

ದೇವರನ್ನು ಆರಾಧಿಸಲು ಮನ ದೇಹವನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತದೆ. ಹಣ ನೀಡಿ ಚೀಟಿ ಪಡೆದು ಆರಾಧಿಸಿ ಅರ್ಚನೆ ಮಾಡಲು ಮನ ದೇಹಕ್ಕೆ ಆದೇಷಿಸುತ್ತದೆ. ಮನ ಹೇಳಿದಂತೆ ದೇಹ ಕೇಳುತ್ತದೆ. ಪೂಜಿಸಿ ಅರ್ಚಿಸಿ ಛತ್ರಿ ಚಾಮರ ಬೀಸಿ, ಕಲ್ಯಾಣೋತ್ಸವ ಮಾಡಿ ದೇವರನ್ನು ಶಯನ ಗೃಹಕ್ಕೆ ಕಳಿಸಿ ಆನಂದ ಪಡುತ್ತದೆ. ಸಂಕಟ ಒದಗಿದಾಗ ಅಳುತ್ತದೆ ದುಃಖಿಸುತ್ತದೆ. ಸುಖವಾದಾಗ ನಗುತ್ತದೆ ಆರಾಧಿಸುತ್ತದೆ.

ಮನ ದೇವಸ್ಥಾನದಲ್ಲಿರುವ ದೇವರಿಗೆ ದಾಸನಾಯಿತು. ದೇಹದಲ್ಲಿರುವ ಅರಿವಿಗೆ ದಾಸನಾಗಲಿಲ್ಲ, ಅರಿವಿಗೆ ದಾಸನಾಗಿ ದೇವಸ್ಥಾನವನ್ನು, ದೇವರನ್ನು ನೋಡಬೇಕು. ಆಗ

ದೇವಸ್ಥಾನದ ಅಂಗಳದಲ್ಲಿ ಹಾಕಿದ್ದು ಕಲ್ಲು, ದೇವಸ್ಥಾನ ಕಟ್ಟಿದ್ದು ಕಲ್ಲು, ದೇವರನ್ನು ಕೆತ್ತಿದ್ದು ಕಲ್ಲು! ಮನಕ್ಕೆ ಅರಿವಾಗಿ ಕಲ್ಲು ದೇವರೊಂದಿಗೆ ದೇಹವನ್ನು ಸರಸವಾಡಲು ಬಿಡುವುದಿಲ್ಲ, ಪ್ರದಕ್ಷಿಣೆ ಹಾಕಿ ಅರ್ಚಿಸಿ ಆರಾಧಿಸಲು ಬಿಡುವುದಿಲ್ಲ. ಕಲ್ಲೆಂದು ಉದಾಸೀನ ಮಾಡಿ ಕೈಮುಗಿಯಲು ಬಿಡುವುದಿಲ್ಲ, ಮತ್ತೊಬ್ಬರು ಹೆದರುವುದನ್ನು ನೋಡಿ ತಾನು ಹೆದರುವುದಿಲ್ಲ ಬೆದರಿವುದಿಲ್ಲ. ಮನ ಅರಿವನ್ನು ಆರಾಧಿಸಿ ಅರಿವನ್ನೇ ಕೂಡಿ ಕೂಡಲಸಂಗಮನಾಗುತ್ತದೆ: ಅರಿವು ಮನಕ್ಕೆ ಒಲಿತು ಅಜ್ಞಾನಿ ಮನ ಘನ ಮನವಾಗುತ್ತದೆ.

ಮನಕ್ಕೆ ಇನಸ್ಟಾಂಟ್ ಸುಖವೆಂದರೆ ಬಲುಹಿಗ್ಗು. ಕಳುವು ಮಾಡಿದರೆ ತೀಕ್ಷ್ಣ ಸುಖ ಹೊಂದುತ್ತದೆ. ಅರಿವು ಮನಕ್ಕೆ ನೀ ಕಳ್ಳನೆಂದು ದೇಹ ಇರುವವರೆಗೆ ನೆನಪಿಸಿ ನೆನಪಿಸಿ ಕೊಲ್ಲುತ್ತದೆ. ಮನ ಮಾಡಿದ ಹಾದರಗಳನೆಲ್ಲ ಅರಿವು ಸಂಗ್ರಹ ಮಾಡಿಕೊಂಡು ಹಗಲಿರುಳೆನ್ನದೆ ಚುಚ್ಚಿ ಚುಚ್ಚಿ ಕೊಲ್ಲುತ್ತದೆ. ಅಳಿಸುತ್ತದೆ ನಗಿಸುತ್ತದೆ. ಅದು ಅರಿವಿನ ಕೆಲಸವೆಂದು ತಿಳಿಯದೆ ಮನ ಮೈ ಮರೆಯುತ್ತದೆ.

ಸದಾ ಸತ್ಯವನ್ನೇ ಹೇಳಿ ಸರಿದಾರಿಗೆ ಕರೆದುಕೊಂಡು ಹೋಗುವ ಅರಿವು ದೇಹದ ಕಣ ಕಣದಲ್ಲಿದೆ. ಅದು ದೇಹದ ದೇವರು ಹೌದು ಮಹಾದೇವನೂ ಹೌದು. ದೇಹದಲ್ಲಿ ಕೂಡಿದ ಕೂಡಲ ಸಂಗಮನೂ ಹೌದು. ಹಾಗೆಯೇ ದೇಹವನ್ನು ಸದಾ ಅಡ್ಡ ದಾರಿಗೆ ಕರೆದುಕೊಂಡು ಹೋಗಿ ಒಮ್ಮೆ ಸುಖಿಸಿ ಮತ್ತೊಮ್ಮೆ ದುಃಖಕ್ಕೆ ಒಳಗೆ ಮಾಡುವ ಮನವೂ ದೇಹದಲ್ಲಿ ಇದೆ; ಇದನ್ನು ಭ್ರಮೆ ಎಂದು ಕರೆಯುತ್ತಾರೆ. ಅರಿವನ್ನು ಮನದಿಂದ ಅರಿತರೆ ಬ್ರಹ್ಮ ತಾನೇ. ಜನ ಕಟೆದ ಕಲ್ಲನ್ನು ದೇವರೆಂದು ಪೂಜಿಸುತ್ತಾರೆ. ಜನ ಪೂಜಿಸುವ ದೇವರನ್ನು ಬ್ರಹ್ಮಜ್ಞಾನಿ ಕಲ್ಲೆಂದು ಹೇಳಿದರೆ ಕಲ್ಲಿಲೆ ಹೊಡೆಯುತ್ತಾರೆ, ಅದಕ್ಕೆ ಜ್ಞಾನಿ ಬೆಚ್ಚುವುದಿಲ್ಲ ಬೆದರುವುದಿಲ್ಲ,ಸತ್ಯವನ್ನೇ ನೋಡುತ್ತಾನೆ; ಸತ್ಯವನ್ನೇ ನುಡಿಯುತ್ತಾನೆ . ಮನ ಅರಿವಿಗೆ ವಶವಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತದೆ.

149

ನೆರೆ ನಂಬೋ ನೆರೆ ನಂಬೋ, ಧರಧುರವಿಲ್ಲದೆ ಸಾಮವೇದಿಗಳಂತೆ;
ನೆರೆ ನೆಂಬೋ ನೆರೆ ನಂಬೋ, ದಾಸ- ದುಗ್ಗಳೆಯಂತೆ;
ನೆರೆ ನಂಬೋ ನೆರೆ ನಂಬೋ ಸಿರಿಯಾಳ- ಚೆಂಗಳೆಯಂತೆ;
ನೆರೆ ನೆಂಬೋ ನೆರೆ ನಂಬೋ ಸಿಂಧು ಬಲ್ಲಾಳನಂತೆ;
ನಂಬಿದೆಯಾದಡೆ ತನ್ನ ನೀವ ಕೂಡಲಸಂಗಮದೇವ!

ಆಕಾಶಗಮನ ಅನ್ನುವುದು ಅಷ್ಟ ಸಿದ್ಧಿಗಳಲ್ಲಿ ಒಂದು. ಇದನ್ನು ಸಾಮವೇದಿಗಳು ಸಾಧಿಸಿ ಪಡೆದುಕೊಂಡಿರುತ್ತಾರೆ. ಹಾಗೆ ಸಿದ್ಧಿ ಪಡೆದುಕೊಂಡು ಆಕಾಶ ಮಾರ್ಗವಾಗಿ ಹೋಗುತ್ತಿರಬೇಕಾದರೆ ಕೆಳಗೆ ಶ್ವಪಚಯ್ಯ ಎನ್ನುವ ಶರಣ ಊಟಕ್ಕಾಗಿ ನಾಯಿಮಾಂಸವನ್ನು ಬೇಯಿಸುತ್ತಿರುತ್ತಾನೆ.

ಪಕ್ಕದಲ್ಲಿ ಹರಿದಾಡುವ ಸಾಮವೇದಿಯ ನೆರಳು ನೋಡಿ ತಾನು ಉಣ್ಣುವ ಅಡಿಗೆಯ ಮೇಲೆ ಆ ನೆರಳು ಬೀಳದಿರಲೆಂದು ತನ್ನ ಕೆರವು ಗಡಿಗೆಯ ಮೇಲೆ ಅಡ್ಡ ಇಡುತ್ತಾನೆ.

ನಾಯಿ ಮಾಂಸ ಬೇಯಿಸಿ ತಿನ್ನುವ ಅಸ್ಪೃಶ್ಯ ನಿಗೆ ಸಾಮವೇದಿಯಾದ ನನ್ನ ನೆರಳು

ಅಸ್ಪೃಶ್ಯವಾಯಿತೆ? ಎಂದು ಕೆಂಡಾಮಂಡಲವಾಗಿ ಶ್ವಪಚಯ್ಯನನ್ನು ನಿಂದಿಸಲು ಕೆಳಗಿಳಿಯುತ್ತಾನೆ, ವಾದದಲ್ಲಿ ಸೋತು ಶರಣಾಗತನಾಗುತ್ತಾನೆ, ಅಜ್ಞಾನದ ಕೆಲಸದಿಂದ ನಿವೃತ್ತಿ ಹೊಂದಿ ಅರಿವಿಗೆ ಭಕ್ತಿ ಮಾಡುವ ಶಿವ ಭಕ್ತನಾಗಿ ಮಾರ್ಪಡುತ್ತಾನೆ. ಸಂಶಯ ಶಂಕೆಗಳಿಲ್ಲದೆ ಅರಿವನ್ನೆ ನಂಬಿ ಅರಿವಿನ ಗುರುವಿಗೆ ಭಕ್ತನಾಗುತ್ತಾನೆ ಸಾಮವೇದಿ!

ಎಲೆ ಮನವೆ ದಾಸ - ದುಗ್ಗಳೆಯಂತೆ , ಸಿರಿಯಾಳ- ಚಂಗಳೆಯಂತೆ, ಸಿಂಧು - ಬಲ್ಲಾಳನಂತೆ ಅರಿವಿಗೆ ನಂಬಿದೆಯಾದಡೆ ಅರಿವೇ ನಿನಗೆ ಒಲಿತು ಅರಿವನ್ನೇ ನಿನಗಿತ್ತು ನಿನ್ನಲ್ಲಿಯೇ ಸಂಗಮವಾಗುತ್ತದೆ. ನೆರೆ ನಂಬೋ ನೆರೆ ನಂಬೋ, ಧರಧುರವಿಲ್ಲದೆ; ಸಂಶಯ ಶಂಕೆಗಳಿಲ್ಲದೆ ನೆರೆನಂಬೋ ನೆರೆನಂಬೋ ಎಂದಿದ್ದಾರೆ ಬಸವಣ್ಣ. ಹೆಚ್ಚಿನ ವಿಷಯಕ್ಕಾಗಿ ಹಿಂದಿನ ಎರಡು ವಚನಗಳನ್ನು ನೋಡಿ.

150

ಬಲ್ಲಿದರೊಡನೆ ಬವರವಾದಡೆ ಗೆಲಲುಂಟು , ಸೋಲಲುಂಟು ;
ಕಳ್ಳನೊಡನೆ ಭಾಷೆ ಪೂರಾಯವೆ ಅಯ್ಯಾ ?
ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ,
ಧನ ಸವೆದು ಬಡವನಾದಡೆ
ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು.

ಭೂಮಿ ಹೇಮ ವಿಷಯ ಸುಖಕ್ಕಾಗಿ ಬಡಿದಾಡುವುದು, ಅದಕ್ಕಾಗಿ ಸಂಗ ಮಾಡುವುದು ಸಹಜ. ಜ್ಞಾನಕ್ಕಾಗಿ ಸಂಗ ಮಾಡುವುದು ಅಪರೂಪ. ಭೂಮಿ ಹೇಮ ವಿಷಯ ಸುಖಕ್ಕಾಗಿ ಯುದ್ಧ ಮಾಡಿದರೆ ಗೆಲ್ಲಬಹುದು ಸೋಲಬಹುದು. ಇವೆರಡೂ ದುಃಖಕ್ಕೆ ಕಾರಣವೆಂದು ತನಗೆ ತಿಳಿಯುವುದೇ ಇಲ್ಲ. ಒಮ್ಮೆ ಗೆದ್ದರೆ ಮತ್ತೊಮ್ಮೆ ಸೋಲಬಹುದು. ಇವು ಮೂರೂ ಜಗಕ್ಕೆ ಇಕ್ಕಿದ ವಿಧಿ. ಹಾಗೆಯೇ ತನ್ನ ಜ್ಞಾನ ತಾನು ಪಡೆದರೆ ತನಗಿಂತ ಅಧಿಕವಾದ ಶ್ರೀಮಂತ ಬೇರಾರೂ ಇಲ್ಲವೆಂದು ತನಗೆ ಭಾಸವಾಗವುದೇ ಇಲ್ಲ.

ಜ್ಞಾನ ಶ್ರೀಮಂತಿಕೆಗಾಗಿ ಜ್ಞಾನಿಗಳ ಸಂಗ ಮಾಡುವ ತವಕ ಮನಕ್ಕೆ ಹುಟ್ಟಿದರೆ ಸಾಕು ; ಮನ ದೇಹವನ್ನು ಶರಣರ ಸಂಗ ಮಾಡಲು ಕರೆದುಕೊಂಡು ಹೋಗುತ್ತದೆ. ಅವರೊಂದಿಗೆ ಮಾತಿನ ಯುದ್ಧ ಮಾಡುವುದು ಬಲು ಸರಸ. ಗೆದ್ದರೆ ಸುಖದ ಸುಖ ; ಸೋತರೂ ಸುಖ. ಗೆದ್ದರೆ ತನ್ನಿಂದ ತಾನು ತಿಳಿಯುತ್ತಾನೆ. ಸೋತರೆ ಶರಣರಿಂದ ತಾನು ತನ್ನ ಅಂತರಾಳಕ್ಕೆ ಹೋಗಿ ತಿಳಿಯುತ್ತಾನೆ.

ಶರಣರಿಗೆ ಮಾಡಿ ಮಾಡಿ, ತಾನು ಸಂಪಾದಿಸಿದ ಹೆತ್ತಿರಿವೆಂಬ ಧನ ಸವೆಸಿ ಬಡವನಾದ ಭಕ್ತ ತನ್ನ ಅರಿವಿನ ಶ್ರೀಮಂತಿಕೆಗೆ ಹತ್ತಿರವಾಗುತ್ತಾನೆ. ಅರಿವಿನ ಪೂಜೆಗೆ ಅರ್ಹನಾಗುತ್ತಾನೆ.

ಜಗಕ್ಕೆ ವಿಧಿಯಾಗಿ ಕಾಡುತ್ತಿರುವ ಭೂಮಿ ಹೇಮ ವಿಷಯವನ್ನು ಅರಿವಿನಿಂದ ನೋಡುತ್ತಾನೆ. ಭೂಮಿ ಅದರ ಗರ್ಭದಲ್ಲಿ ಹುಟ್ಟಿದ ಹಳದಿ ಲೋಹ, ತನ್ನ ಗರ್ಭದಲ್ಲಿ ಹುಟ್ಟಿದ ವಿಷಯ, ಇವುಗಳನ್ನು ಪಡೆದು ಹಗಲಿರುಳು ಸುಖಿಸುವ ದುಃಖಿಸುವ ಮನವೆಂಬ ಕಳ್ಳ ಇಲ್ಲವಾಗುತ್ತಾನೆ. ಇಮ್ಮನದ ಈ ಮನ ಒಮ್ಮನವಾಗಿ ತನ್ನ ಅರಿವಿನ ಪೂಜೆಗೆ ಆಯ್ಕೆಯಾಗಿ ಆ

ಅರಿವೇ ತಾನಾಗುತ್ತಾನೆ.

151

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು,
ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.
ಕೂಡಲಸಂಗಮದೇವಯ್ಯಾ,
ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾಗರೆ ?

ಈ ವಚನದಲ್ಲಿ ಜ್ಞಾನಕ್ಕೆ ಹೋಗುವ ಮೂರು ದೃಷ್ಟಾಂತಗಳಿವೆ.

ಗಿರಿಗಳ ಮೇಲಿದ್ದ ಹಲವು ಮರಗಳು ಶ್ರೀಗಂಧದ ಸಂಗದಿಂದ ಪರಿಮಳ ಬೀರವೆ ?

ಅರು ಹಿರಿಯರ ಸಂಗದಿಂದ ದುಸ್ಸಂಗ ಕೆಡುವುದು.

ಭಕ್ತ ಸಿರಿಯಾಳನನು ಅನುಸರಿಸಿದ ನರರೆಲ್ಲ ಸುರರಾಗರೇ? ಎನ್ನುವ ಈ ಮೂರು ಸಂಗತಿಗಳ ಮೂಲಕ ಅಣ್ಣನವರು ಓದುಗರಿಗೆ ಜ್ಞಾನದ ಸೂತ್ರ ಹೇಳಿದ್ದಾರೆ.

ದೇಹ ಅರಿವಿನ ಮರ . ಅರಿವಿನ ಮೇರು ಪರ್ವತವೂ ಹೌದು! ಮನದ ಸಹಾಯದಿಂದ ಪರಿಮಳ ಬೀರದ ಕಾಮ, ಕ್ರೋಧ ,ಲೋಭ, ಮೋಹ, ಮದ, ಮತ್ಸರವೆಂಬ ನೂರಾರು ಜಾತಿಯ ಮರಗಳು ದೈತ್ಯಾಕಾರದಲ್ಲಿ ಬೆಳದಿವೆ. ಮನಕ್ಕೆ ಅರಿವಿನ ಪರಿಮಳ ತಾಗಿದರೆ ಸಾಕು ಅರಿವೆ ತಾನಾಗುತ್ತದೆ. ತನ್ನ ಜಾತಿಯ ಮರಗಳನ್ನೆಲ್ಲ ಶ್ರೀಗಂಧದ ಮರಗಳನ್ನಾಗಿ ಕ್ಷಣಾರ್ಧದಲ್ಲಿ ಮಾಡುತ್ತದೆ. ನಡೆದಾಡುತ್ತಾ ಅರಿವಿನ ಪರಿಮಳ ಬೀರುತ್ತ ಬುದ್ಧನಂತೆ ಬೋಧಿವೃಕ್ಷವೇ ತಾನಾಗುತ್ತದೆ! ಅರಿವಿನ ಮಾತುಗಳನ್ನೇ ಆಡುವ ಮರವಾಗುತ್ತದೆ.

ಮನ ದೇಹದೊಂದಿಗೆ ಹೋಗಿ ಸುಖಕ್ಕಾಗಿ ಹಲವರ ಸಂಗ ಮಾಡುವ ದುಸ್ಸಂಗಿ. ಇದು ಅರಿವಿನ ಅಂಗ ಸೇರಿದ ಮಂಗ. ಅರಿವಿನೊಂದಿಗಿದ್ದರೂ ಅರಿವಿನ ಸಂಗವರಿಯದ ದುಸ್ಸಂಗಿ. ಅಂಗದ ಕಣ ಕಣದಲ್ಲಿರುವ ಅರಿವೇ ಲಿಂಗ. ಅಂಗ ಲಿಂಗ ಸಮರಸವಾಗಿ ಬೆರತಿದೆ. ಅರಿವಿನ ಲಿಂಗವನ್ನು ಯಾರು ಕಟ್ಟಲು ಬರುವುದಿಲ್ಲ; ಕೆಡವಲೂ ಬರುವದಿಲ್ಲ, ಲಿಂಗವಿಲ್ಲದ ತನುವೇ ಇಲ್ಲ. ಅಂಗದಲ್ಲಿರುವ ಲಿಂಗದೊಂದಿಗೆ ಮನ ಸಂಗ ಮಾಡಿದರೆ ದುಸ್ಸಂಗ ಕೆಡುವುದು. ಲಿಂಗ ಅಂಗದಲ್ಲಿ ಮನ ಬೆರೆತು ಕೂಡಲಸಂಗಯ್ಯನೇ ತಾನಾಗುವುದು.

ಸಿರಿಯಾಳ- ಚೆಂಗಳೆಯರು ಮನದ ಮೋಹವೆಂಬ ಮಗನ ಅಜ್ಞಾನ ಕಳೆದುಕೊಳ್ಳಲು ಹಗಲಿರುಳು ಪ್ರಯೋಗಕ್ಕೆ ಇಳಿದರು.

ಮಹಾಭಾರತದ ಧೃತರಾಷ್ಟ ಕುರುಡನಾಗಿರಲಿಲ್ಲ. ಮಗನ ಪ್ರೇಮ ಅವನನ್ನು ಕುರುಡನನ್ನಾಗಿಸಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ಸತ್ತು ರಕ್ತದ ಕಾಲುವೆ ಹರಿದರೂ ಕುರುಡು ಪ್ರೇಮಕ್ಕೆ ಭಂಗ ಬರಲಿಲ್ಲ. ಬದಲಾಗಿ ಇನ್ನೂ ಅಧಿಕವಾಯಿತು. ಇಂತಹ ಕುರುಡು ಪ್ರೇಮದ ಮೋಹವನ್ನು ಸಿರಿಯಾಳ ಚೆಂಗಳೆಯರು ಕಳೆದುಕೊಂಡರು. ಅದನ್ನು ಮನುಕುಲಕ್ಕೆ ಸಾರಿದರು. ಆ ಸೂತ್ರದಂತೆ ನಡೆದರೆ ನರರು ಸುರರಾಗರೆ ಎಂದು ಜ್ಞಾನಭಂಡಾರಿ ಬಸವಣ್ಣನವರು ಮೂರು ಸಾಲಿನ ಸಂಕ್ಷಿಪ್ತ ಸೂತ್ರವನ್ನು ತಮ್ಮ ವಚನದಲ್ಲಿ ಬಂಧಿಸಿದ್ದಾರೆ. ಮಠಗಳು ಈ ನಿಟ್ಟಿನಲ್ಲಿ ಪ್ರಯೋಗ ಶಾಲೆಗಳಾಗಬೇಕಿದೆ.

152

ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ; ನೋಡಿರೆ !
ಅವ್ವಾ ಚಂಗಳೆ, ನೀ ನಿದ್ದೇಳು ಕೇರಿಯವರು
ಲಿಂಗದ ನೋಂಪಿಯ ನೋಂತರೆ, ಹೇಳಾ?
ಕೂಡಲಸಂಗಮದೇವಂಗೆ,
ಚೀಲಾಳನೆಂಬ ಬಾಯಿನವನಿಕ್ಕಿದರೆ,ಹೇಳಾ!
ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ; ನೋಡಿರೆ! :

ದೇಹವೆಂಬುದು ಅರಿವಿನ ಅಕ್ಷಯಪಾತ್ರೆ; ಪರುಷದ ಮಂತ್ರ ದಂಡ! ಅರಿವೆಂಬ ಪರುಷದ ಹೊರೆಯಲ್ಲಿದ್ದ ಮನಕ್ಕೆ ಮನವರಿಕೆಯಾದರೆ ಕೂಡಲೇ ಹೊನ್ನಾಗುವುದು! ಆಗದಿದ್ದರೆ ಅದು ಏಳು ಕೇರಿಯ ಬಸವಿ! ಅರಿವೆಂಬ ಲಿಂಗದ ಆಶ್ರಯದಲ್ಲಿದ್ದು, ಅರಿವು ಕಾಣದೆ ಅರಿವಿನ ನುಲಿಯ ನೂಲಲರಿಯದು. ಅರಿವಿನ ಸಿರಿಯಾಳನ ಕೂಡಿದ ಚಂಗಳೆ ' ಚೀಲಾಳನೆಂಬ ಮಗನ ಮೋಹವನು ಕಳೆದುಕೊಳ್ಳಲರಿಯಳು.

ರಸ, ರಕ್ತ, ಮಾಂಸ, ಮೇಧಸ್ಸು, ಅಸ್ತಿ, ಮಜ್ಜೆ ಮತ್ತು ಶುಕ್ಲ ವೆಂಬ ಏಳು ಕೇರಿಗಳ ಚೀಲವೆ ದೇಹವೆಂದೆನಿಸಿಕೊಂಡಿದೆ, ಈ ಚೀಲದ ಆಳದಲ್ಲಿ ತನು ವ್ಯಸನ, ಮನವ್ಯಸನ, ಧನವ್ಯಸನ, ರಾಜವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ ಹಾಗೂ ಸ್ತ್ರಿ ವ್ಯಸನಗಳೇ ತುಂಬಿವೆ. ಇದರಿಂದ ಬೇಟೆ, ಜೂಜು, ಹಗಲು ನಿದ್ರೆ, ಸದಾ ಪರನಿಂದೆ, ಸ್ತ್ರೀ ಲಾಲನೆ, ಮದ್ಯಪಾನ ನೃತ್ಯ ಗಾನವಾದನಗಳಲ್ಲಿ ಅಭಿರುಚಿ ಹೊಂದಿ ಸಮಯ ಕಳೆದು, ದೇಹ ಕೃಶವಾಗಿ ಒಮ್ಮೆ ಇಲ್ಲವಾಗುತ್ತದೆ.

ಅರಿವಿನ ಪರುಷದ ಹೊರೆಯಲ್ಲಿದ್ದು ಚಿನ್ನವೇ ಆಗಬೇಕಾದ ಮನ ಏಳು ಕೇರಿಯ ಸುಖಬಯಸಿ ರಕ್ಕಸಿಯಾಗಿದೆ. ಈ ಏಳು ಎಸಳುಗಳನ್ನು ಒಟ್ಟಾಗಿ ಹಿಡಿದು ನುಲಿಮಾಡಿ ನೂತು ಅರಿವಿನ ಲಿಂಗಕ್ಕೆ ನೋಂಪಿ ಮಾಡಿ ನೋನುವುದು ಸಾಧ್ಯವೆ? ರಸ, ರಕ್ತ ,ಮಾಂಸ , ಮೇದಸ್ಸು, ಎಲಬು, ಮಜ್ಜೆ, ಶುಕ್ಲ ತುಂಬಿದ ಸಿರಿಯಾಳ ಚೆಂಗಳೆಯ ಮಗ ಚೀಲಾಳನೆಂಬ ಮಾಂಸದ ಮುದ್ದೆಯ ಚೀಲದ ಬಾಯಿನವ ಅರಿವಿನ ಸಂಗಯ್ಯನಿಗಿಕ್ಕಲು ಸಾಧ್ಯವೆ, ಹೇಳಾ ಎಂದು ಅಣ್ಣನವರು ಪ್ರಶ್ನಿಸಿದ್ದಾರೆ.

153

ಗೀತವ ಬಲ್ಲಾತ ಜಾಣನಲ್ಲ; ಮಾತ ಬಲ್ಲಾತ ಜಾಣನಲ್ಲ.
ಜಾಣನು, ಜಾಣನು–
ಆತ ಜಾಣನು: ಲಿಂಗವ ನೆರೆನಂಬಿದಾತ;
ಆತ ಜಾಣನು : ಜಂಗಮಕ್ಕೆ ಧನವ ಸವೆಸುವಾತ ;
ಆತ ಜಾಣನು; ಜವನ ಬಾಯಲು ಬಾಲವ ಕೊಯ್ದು ಹೋದಾತ;
ಆತ ಜಾಣನು : ನಮ್ಮ ಕೂಡಲಸಂಗನಶರಣನು !

ಬೈಬಲ್ ಬಲ್ಲಾತ ಜಾಣನಲ್ಲ; ವೇದ ಆಗಮ ಉಪನಿಷತ್‌ಗಳ ಮಾತ ಬಲ್ಲಾತನೂ ಜಾಣನಲ್ಲ. ಭಗವದ್ಗೀತೆ ಬೈಬಲ್‌ವೇದ ಉಪನಿಷತ್ ಆಗಮ ಗ್ರಂಥಗಳನ್ನು ದೊಡ್ಡದು ಮಾಡಿ ತನುವನ್ನು ಸಣ್ಣದನ್ನಾಗಿ ಮಾಡಿ ಹೇಳುತ್ತಾನೆ. ಅದಕ್ಕಾಗಿ ಆತ ಜಾಣನಲ್ಲ .

ಜಾಣನು, ಜಾಣನು- ಆತ ಜಾಣನು: ಲಿಂಗವ ನೆರೆನಂಬಿದಾತ:

ವೇದ ಉಪನಿಷತ್ತು ಸಕಲ ಪುರಾಣಗಳನ್ನು ಹಾಗೂ ಭಗವದ್ಗೀತೆ ಬೈಬಲ್‌ಗಳನ್ನು ಅಂಗದಲ್ಲಿರುವ ಅರಿವೆಂಬ ಲಿಂಗ ಮುದ್ರಿಸಿದೆ. ಅಂದಮೇಲೆ ಅಂಗ ಮತ್ತು ಅಂಗದಲ್ಲಿರುವ ಅರಿವು ದೊಡ್ಡದೋ ಅಂಗದಿಂದಲೇ ಬಂದ ಪುಸ್ತಕಗಳು ದೊಡ್ಡವೋ?

ಅಂಗದಲ್ಲಿರುವ ಅರಿವಿನ ಗೀತೆಯೇ ಭಗವದ್ಗೀತೆ . ಅದು ಇತರ ಅಂಗಕ್ಕೆ ಅನೂಕೂಲವಾಗಲೆಂದು ಅರಿವಿನಿಂದ ಪುಸ್ತಕದಲ್ಲಿ ಮಸಿಯಿಂದ ಮುದ್ರಿಸಿದೆ. ಮುದ್ರಿಸಿದ ಗೀತೆ ಬಗ್ಗೆ ಮಾತನಾಡುವವ ಪಂಡಿತನಾದನೇ ಹೊರತು ಅರಿವಿನ ಜಾಣನಾಗಲಾರ, ಗೀತಾ ಪುಸ್ತಕ ನಂಬಿದಾತ ಪಂಡಿತ; ಅಂಗದಲ್ಲಿರುವ ಅರಿವಿನ ಭಗವದ್ಗೀತೆಯನ್ನು ನೆರೆನಂಬಿದಾತ ಜಾಣನು!

ಆತ ಜಾಣನು: ಜವನ ಬಾಯಲು ಬಾಲವ ಕೊಯ್ದು ಹೋದಾತ :

ಪುಸ್ತಕದ ಕತೆ ಹೇಳಿದರೆ ಯೌವನದ ಮದ ಅಡಗುವುದಿಲ್ಲ, ಅಂಗದಲ್ಲಿರುವ ಅರಿವಿನಿಂದ ಅಂಗದ ಯೌವನದ ಬಾಲ ಕೊಯ್ಯಲು ಸಾಧ್ಯ ; ಅಂಗದಲ್ಲಿರುವ ಯೌವನದ ಮನವನ್ನು ಸತಿಯನ್ನಾಗಿ ಮಾಡಿ, ಅಂಗದಲ್ಲಿರುವ ಹೆತ್ತ ಅರಿವನ್ನೇ ಅರಿವಿನ ಸಂಗಯ್ಯನಿಗಿತ್ತು ಧಾರೆಯೆರೆದಾತ ಜಾಣ; ಮಹಾಜಾಣನು ಕೂಡಲಸಂಗನಶರಣ ಎಂದಿದ್ದಾರೆ ಬಸವಣ್ಣ!

154

ಲೇಸೆನಿಸಿಕೊಂಡು ಅಯ್ದುದಿನ ಬದುಕಿದಡೇನು ?
ಲೇಸೆನಿಸಿಕೊಂಡು ನಾಲ್ಕುದಿನ ಬದುಕಿದಡೇನು ?
ಲೇಸೆನಿಸಿಕೊಂಡು ಮೂರುದಿನ ಬದುಕಿದಡೇನು ?
ಲೇಸೆನಿಸಿಕೊಂಡು ಎರಡುದಿನ ಬದುಕಿ ದಡೇನು ?
'ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ !
ಅಜಕಲ್ಪಸಹಸ್ರೇಭ್ಯೋ ಭಕ್ತಿಹೀನಸ್ಯ ಶಾಂಕರಿ ॥ ಎಂಬುದಾಗಿ
ಕೂಡಲಸಂಗನಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದಡೇನು !

ಮನ ಲೇಸೆನಿಸಿಕೊಂಡು ಐದು ದಿನ ಬದುಕಿದಡೇನು? ಅರಿವು ಹೌದೆನ್ನದಿದ್ದರೆ! ಮನ ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು? ಅರಿವಿನ ಸಂಗಯ್ಯಾ ಹೌದೆನ್ನದಿದ್ದರೆ ! ಮನ ಲೇಸೆನ್ನಿಸಿಕೊಂಡು ಅಂಗ ಮೂರು ದಿನ ಬದುಕಿದರೇನು. ಲಿಂಗ ಹೌದೆನ್ನದಿದ್ದರೆ! ಮನ ಲೇಸೆನ್ನಿಸಿಕೊಂಡು ಎರಡು ದಿನ ಬದುಕಿದಡೇನು? ಬ್ರಹ್ಮನ ಆಯ್ಯುಷ್ಯದ ಒಂದು ದಿನ; ಅಜಕಲ್ಪ ವರ್ಷಗಳ (432 ಕೋಟಿ ವರ್ಷಗಳು) ಪರ್ಯಂತ ದೇಹ ಬದುಕಿದಡೇನು ? ದೇಹದ ಅರಿವಿನ ಮೂರ್ತಿ ಲಿಂಗಯ್ಯನಿಗೆ ಹೌದೆನಿಸಿಕೊಂಡು ಮನ ಅಂಗದೊಂದಿಗೆ ಒಂದು ದಿನ ಬದುಕಿದರೆ ಸಾಲದೆ !

155

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ;
ಕೂಡಲಸಂಗಮದೇವಾ.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ. ಸತ್ಯ ನುಡಿವುದು ದೇವಲೋಕ; ಮಿಥ್ಯನುಡಿಯುವುದು ಮರ್ತ್ಯಲೋಕ :

ದೇಹದಲ್ಲಿ ದೇವಲೋಕವೂ ಇದೆ ; ಮರ್ತ್ಯಲೋಕವು ಇದೆ. ಮನ ಮರ್ತ್ಯಲೋಕ ಆಯ್ಕೆ ಮಾಡಿಕೊಂಡರೆ ಅಲ್ಲಿಯೇ ಸಾಯುವುದು. ದೇವಲೋಕ ಆಯ್ಕೆಮಾಡಿಕೊಂಡರೆ ಹುಟ್ಟು ಸಾವುಗಳಿಲ್ಲದ ಹುರಿದ ಬೀಜದಂತಾಗುವುದು. ಮರ್ತ್ಯಲೋಕದ ತನುಗಳಿಂದ ತುಂಬಿದ ಕರ್ತಾರನ ಕಮ್ಮಟವಾಗುವುದು.

ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ :

ತನುವಿನ ಅರಿವಿಗೆ ಹೌದೆನಿಸಿಕೊಂಡ ಮನ ಹೊರಗಡೆ ಹೌದೆನ್ನಿಸಿಕೊಳ್ಳುವುದು. ತನುವಿನ ಅರಿವಿನ ಪರಿಚಯವಿಲ್ಲದ ಮನ ಅರಿವಿಗೂ ಹೊರಗಿನ ಲೋಕಕ್ಕೂ ಅಲ್ಲ ಎನ್ನಿಸಿಕೊಳ್ಳುವುದು. ಕತ್ತೆ ಹಳ್ಳ ಕಾಯಲಿಲ್ಲ ಮನೆ ಕಾಯಲಿಲ್ಲ ಎನ್ನುವ ಗಾದೆಯಂತೆ!

ಅರಿವಿನಿಂದ ಕೇಳಿದರೆ ಶಬ್ದ ನಪುಂಸಕವಾಗುತ್ತದೆ. ಕೇಳಿದ ತನುವಿಗೆ ಆನಂದವಾಗುತ್ತದೆ. ಸಂಕಟವಾಗುವುದಿಲ್ಲ. ಮನದಿಂದ ಕೇಳಿದರೆ ಕೇಳಿದ ತನುವಿಗೂ ನುಡಿದ ತನುವಿಗೂ ಸಂಕಟವಾಗುತ್ತದೆ. ಕರ್ತಾರನ ಕಮ್ಮಟವಾಗಬೇಕಾದ ತನು ಮರ್ತ್ಯಲೋಕದ ಮರ್ಕಟವಾಗುತ್ತದೆ, ಮನ ತನುವಿನ ಅರಿವಿಗೂ ಸಲ್ಲುವುದಿಲ್ಲ ; ಜನಕ್ಕೂ ಸಲ್ಲುವುದಿಲ್ಲ. ಜನ ಮನಕ್ಕೂ ಸಲ್ಲವುದಿಲ್ಲ.

ತನು ಅರಿವಿನ ಕರ್ತಾರನ ಕಮ್ಮಟ ; ಅರಿವಿನಿಂದಾದ ಟಂಕಸಾಲೆ! ಅಜ್ಞಾನಿ ಮನವನ್ನು ಅರಿವಿನಿಂದ ಕಾಸಿ ಕಾಸಿ ಸೋಸಿ ಬಡಿದು, ಒರೆಗಲ್ಲಿಗೆ ತಿಕ್ಕಿ ತಿಕ್ಕಿ ಅಪ್ಪಟ ಅಪರಂಜಿ ಚಿನ್ನದ ನಾಣ್ಯವನ್ನಾಗಿ ಮಾಡುವ ಅರಿವಿನ ಸಂಗಯ್ಯನ ಪುಣ್ಯ ಕ್ಷೇತ್ರ. ಅಜ್ಞಾನಿ ಮನ ಅಂಗದ ಕ್ಷೇತ್ರದಲ್ಲಿಯೇ ಸಂಗಮವಾಗಿ ಪುನೀತನಾಗಬೇಕಿದೆ.

156

ಶಿವ ಚಿಂತೆ ಶಿವ ಜ್ಞಾನವಿಲ್ಲದ ಮನುಜರು
ಸಗಣಕ್ಕೆ ಸಾವಿರ ಹುಳು ಹುಟ್ಟವೆ, ದೇವಾ?
ಕಾಡ ಮೃಗವೊಂದಾಗಿರಲಾಗದೆ, ದೇವಾ?
ಊರ ಮೃಗ ಒಂದಾಗಿರಲಾರದೆ, ದೇವಾ?
ನಮ್ಮ ಕೂಡಲಸಂಗನ ಶರಣರಿಲ್ಲದ ಊರು,ದೇಶ-
ವನವಾಸ, ನರವಿಂಧ್ಯ ಕಾಣಿರಣ್ಣಾ!

ಅರಿವಿನ ಚಿಂತೆ ಅರಿವಿನ ಜ್ಞಾನವಿಲ್ಲದ ತನುಗಳೇ ಅಧಿಕ. ಅವು ಸೆಗಣಿಯಲ್ಲಿ ಹುಟ್ಟಿದ

ಸಾವಿರಾರು ಹುಳುಗಳಂತೆ. ಅದು ಒಣಗಿ ಬೆರಣಿಯಾಗಿ ಬೆಂಕಿ ತಾಗಿದ ಮೇಲೆ ಸೆಗಣಿಯ ಗುಣ ಕಳೆದುಕೊಂಡು ಭಸ್ಮವಾಗುತ್ತದೆ. ಆಗ ಅದನ್ನು ಯಾರು ಸೆಗಣಿ ಎನ್ನುವುದಿಲ್ಲ; ಭಸ್ಮ ವೆನ್ನುತ್ತಾರೆ. ಹಾಗೆಯೇ ಸೆಗಣಿಯನ್ನು ಯಾರೂ ಭಸ್ಮವೆನ್ನುವುದಿಲ್ಲ.

ಸೆಗಣಿಯಲ್ಲಿ ಭಸ್ಮ ಅಡಗಿದೆ. ತನುವಿನಲ್ಲಿ ಅರಿವು ಅಡಗಿದೆ. ಮನಕ್ಕೆ ಅರಿವಾಗದಿದ್ದರೆ; ಅರಿವಿನ ಪರಿಚಯವಾಗದಿದ್ದರೆ ತನು ಕಾಡು; ಅದರಲ್ಲಿ ವಾಸವಾದ ಮನ ಮೃಗ. ತನು ಊರು ; ಅದರಲ್ಲಿ ವಾಸವಾದ ಮನ ಮೃಗ. ಅದು ಕಾಡ ಮೃಗವಾದರೇನು? ಊರ ಮೃಗವಾದರೇನು ಮೃಗವೇ!

ಅರಿವು ತಿಳಿದು; ತಿಳಿಹೇಳುವ ತಜ್ಞ ಶರಣರಿಲ್ಲದ ಊರು ದೇಶ ಅದು ದೇಶವಲ್ಲ ವನವಾಸ! ದಟ್ಟಾರಣ್ಯ, ನರರು ವಾಸಿಸುವ ನರವಿಂಧ್ಯ!

157

ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿಯಾರೆ ನೋಡದವನ ಸಂಸಾರವೇನವನ ?
ಬಾಳುವೆಣನ ಬೀಳುವೆಣನ ಸಂಸಾರವೇನವನ ?
ನಡೆವೆಣನ ನುಡಿವೆಣನ ಸಂಸಾರವೇನವನ ?
ಕರ್ತು ಕೂಡಲಸಂಗಮದೇವಾ,
ನಿಮ್ಮ ತೊತ್ತು ಗೆಲಸವ ಮಾಡದವನ ಸಂಸಾರವೇನವನ ?

ನೋಡುವ ನೋಟದಲ್ಲಿ ಅರಿವಿನ ಬೆಳಕಿದೆ. ನೋಡುವಾಗ ಆ ನೋಟ ಬಳಕೆಯಾದರೆ ಅದು ಸತ್ಯ, ಸುಂದರ, ಶಿವಮಯವಾದ ಶಿವಲಿಂಗ ! ಪ್ರತಿ ನೋಟದಲ್ಲಿಯೂ ತನುವಿಗೆ ಆನಂದವಾಗುತ್ತದೆ. ನೋಡುವ ನೋಟದಲ್ಲಿ ಅರಿವು ಬಳಕೆಯಾಗದಿದ್ದರೆ ತನುವಿನಲ್ಲಿ ಸಂಕಟವಾಗುತ್ತದೆ. ಜಾತಿ ಮತ ಪಂಥ ವೈರಿ ಮಿತ್ರ ಸಂಬಂಧಿ ಗಂಡು ಹೆಣ್ಣು ಮಾತ್ರ ದೃಷ್ಟಿಗೆ ಪರಿಚಯವಾಗಿ ಸುಖ ಇಲ್ಲ ದುಃಖ ಉಂಟಾಗುತ್ತದೆ.

ನೋಡಿ ಸುಖಿಸುವ ಇಲ್ಲ ದುಃಖಿಸುವ ಸಂಸಾರ ಹೆಣದ ಸಂಸಾರವಿದ್ದಂತೆ. ದೃಷ್ಟಿಗೆ ಸತ್ಯ ಗೋಚರಿಸುವುದಿಲ್ಲ . ಸಂಬಂಧ ಗೋಚರಿಸಿ ಸುಖವಾಯಿತು ಇಲ್ಲ ದುಃಖವಾಯಿತು. ಸಂಬಂಧ ಅಜ್ಞಾನವಾದರೆ ಸಂಬಂಧದ ಮೂಲ ಸತ್ಯ!

ಹೊತ್ತಾರೆ ಎದ್ದು ದೇವರ ಪಟಕ್ಕೆ ನಮಸ್ಕರಿಸುವುದು ಸಂಪ್ರದಾಯ. ಮನೆದೇವರ ಚಿತ್ರಪಟ ತೂಗುಹಾಕಿ ಅದನ್ನು ನೋಡಿ ಭಾವದಿಂದ ದೇವರೆಂದು ಕಣ್ಣಿಗೆ ಒತ್ತಿಕೊಂಡು ದೈನಂದಿನ ಕ್ರಿಯೆಯಲ್ಲಿ ತೊಡಗುವುದು ರೂಢಿ. ಮಾಡುವ ಕಾಯಕದಲ್ಲಿ ಹಾನಿಯಾದರೆ ದೇವರ ಪಟ ಬದಲಿಯಾಗುತ್ತದೆ.

ಚಿತ್ರ ಬದಲಿಯಾದರೇನು ಬಣ್ಣ ಒಂದೇ ಕಾಗದ ಒಂದೇ, ನೇತು ಹಾಕಿದ ಕಟ್ಟು ಅದರ ಗಾಜು ಕೂಡಾ ಒಂದೇ. ಇವು ಯಾವೂ ದೇವರು ಅಲ್ಲ! ಕಣ್ಣಿಗೆ ಈ ಸತ್ಯ ಹೊಳೆಯುವುದೇ ಇಲ್ಲ.

ಹೊತ್ತಾರೆ ಎದ್ದು ದೃಷ್ಟಿಯಾರೆ ಸತ್ಯ ನೋಡದವನ ಸಂಸಾರ ವೇನವನ? ಕ್ಷಣ ಕ್ಷಣಕ್ಕೂ ಬೀಳುವ ಬಾಳುವೆ ಏನವನ? ನಡೆಯುವಾಗಲೂ ನುಡಿಯುವಾಗಲೂ ಬೀಳುವ ಬಾಳುವೆ

ಏನವನ? ಸತ್ಯದ ಕರ್ತೃ ತನುವಿನ ಕಣ ಕಣದಲ್ಲಿ ಕೂಡಿದ ಅರಿವೆಂಬ ಸಂಗಮನಾಥನನ್ನು ಕಾಣದ, ಅವನಿಗೆ ತೊತ್ತಾಗಿ ಕೆಲಸ ಮಾಡದವನ ಸಂಸಾರವೇನವನ?

158

ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ದನ ಹೆಣನೆಂದಡೆ ಒಂದಡಿಕೆಗೆ ಕೊಂಬವರಿಲ್ಲ ನೋಡಯ್ಯಾ !
ಮೊಲನಿಂದ ಕರಕಷ್ಟ ನರನ ಬಾಳುವೆ!
ಸಲೆ ನಂಬೊ ನಮ್ಮ ಕೂಡಲಸಂಗಮದೇವನ.

ಮನುಷ್ಯ ತನ್ನ ಅರಿವನ್ನು ತಾನು ನಂಬಬೇಕು. ಅರಿವೇ ಗುರು. ಆ ಗುರುವೇ ಸಂಗಮನಾಥ! ಹೀಗೆ ಅರಿವನ್ನೇ ನಂಬಿ; ಅರಿವಿನಿಂದ ಮಾತನಾಡಿದ ಮನುಷ್ಯ ಬುದ್ಧನಾದ; ಮಹಾವೀರನಾದ; ಕ್ರಿಸ್ತ, ಕ್ರಿಷ್ಣನಾದ. ದಾಸ, ಶರಣನಾದ; ಯುಗಪುರುಷನೇ ತಾನಾದ.

ಪ್ರತಿ ಮಾತನ್ನು ನಂಬಿ ಅರಿವಿನಿಂದ ನುಡಿಯಬೇಕು; ನುಡಿದುದನ್ನು ನಂಬಿ ಅರಿವಿನಿಂದ ಕೇಳಬೇಕು . ಮಾತು ಅಮೃತ; ವಿಷವಾಗಬಾರದು, ಮಾತುಗಳಿಂದಲೇ ಬುದ್ಧ ಬಸವಾದಿ ಶರಣರು ದಾಸವರೇಣ್ಯರು ಇಂದಿಗೂ ಬದುಕಿದ್ದಾರೆ. ಅವರಿಗೆ ಸಾವಿಲ್ಲ!

ಮೊಲಕ್ಕೆ ಚರ್ಮ ಅದರ ಮಾಂಸವೇ ಸಂಪತ್ತು. ಉಣಬಡಿಸಿ ಧನ್ಯತೆ ಮೆರೆಯುತ್ತದೆ. ಮನುಷ್ಯನಿಗೆ ಮಾತೇ ಸಂಪತ್ತು ಉಣ ಬಡಿಸಿ ಕೇಳಿ ಧನ್ಯತೆ ಮೆರೆಯಬೇಕು. ಸಿದ್ಧಾರ್ಥ ರಾಜನಾಗಿ ದಾನ ಧರ್ಮ ಮಾಡಲಿಲ್ಲ. ತನ್ನಂತೆ ಇರುವ ಮನುಷ್ಯನಿಗೆ ದಾನ ಧರ್ಮ ಮಾಡುವುದೆಂದರೇನು? ಅನ್ನ, ಚಿನ್ನ, ಭೂಮಿ, ಕರೆನ್ಸಿ ಅದು ತನುವಿನ ಪ್ರೊಡೆಕ್ಟ್ ಅಲ್ಲ, ತನ್ನದಲ್ಲದ್ದನ್ನು ತನ್ನದೆಂದು ಕೊಡುವುದು ಧರ್ಮವಲ್ಲ. ಭೂಮಿ, ಹೇಮ, ಕರೆನ್ಸಿ ಕೊಟ್ಟು ದಾನಿ ಎನ್ನಿಸಿಕೊಂಡ ರಾಜನ ಹೆಣವಾದಡೇನು ಅದನ್ನು ಯಾರೂ ಒಂದಡಿಕೆಗೂ ಕೊಳ್ಳುವುದಿಲ್ಲ. ತನ್ನರಿವನ್ನೇ ತಾನು ನಂಬದ ನರನ ಬಾಳುವೆ ಮೊಲಕ್ಕಿಂತ ಕರಕಷ್ಟ, ಸಲೆ ನಂಬೊ ಎಂದಿದ್ದಾರೆ ಬಸವಣ್ಣ.

159

ಉತ್ಪತ್ತಿ ಶುಕ್ಲ- ಶೋಣಿತದಿಂದಾದ ಲಜ್ಜೆ ಸಾಲದೆ?
ಮತ್ತೆ ದುರಿತಂಗಳ ಹೆರುವ ಹೇಗತನವೇಕಯ್ಯಾ?
ಮೃತ್ಯುವಿನ ಬಾಯಿಗೆ ಒಳಗಾಗಲೇಕಯ್ಯಾ ?
ಒತ್ತೊತ್ತೆಯ ಜನನವ ಗೆಲುವಡೆ ಕರ್ತನ ಪೂಜಿಸು
ನಮ್ಮ ಕೂಡಲಸಂಗಮದೇವನ.

ಶುಕ್ಲ ಶೋಣಿತದಿಂದ ಹುಟ್ಟಿದ ತನುವಿನ ಜ್ಞಾನ ಬಳಕೆಯಾಗದ ಈ ಲಜ್ಜೆ ಸಾಲದೆ? ಮತ್ತೆ ದುರಿತಂಗಳ ಹೆರುವ ಕಷ್ಟವೇಕೆ? ಹುಟ್ಟಿ ಮೃತ್ಯುವಿನ ಬಾಯಿಗೆ ಒಳಗಾಗಲೇಕೆ? ಹುಟ್ಟಿ ಸಾಯುವವರೆಗೆ ಯಾತನೆ ಉಂಟುಮಾಡುವ ಸುಖ ದುಃಖಗಳನ್ನು ಸರಿಸಿ; ಗೆಲುವ ಸಾಧಿಸುವ ಛಲ ಹೊಂದಬಾರದೆ? ಹಾಗಾದರೆ ಪೂಜಿಸು ತನುವಿನ ಕರ್ತ ಅರಿವೆಂಬ ಕೂಡಲಸಂಗಮದೇವನ.

ಶುಕ್ಲ ಶೋಣಿತದಿಂದ ಹುಟ್ಟಿದ ತನು ಜ್ಞಾನದ ಮೇರು ಪರ್ವತ. ಆದರೂ ನೋಡುವಲ್ಲಿ, ಕೇಳುವಲ್ಲಿ , ಮುಟ್ಟುವಲ್ಲಿ, ಸ್ಪರ್ಶಿಸುವಲ್ಲಿ, ಮೂಸಿಸುವಲ್ಲಿ ಎಡವಿ ನರಕಯಾತನೆ ಅನುಭವಿಸುತ್ತದೆ. ಕ್ಷಣ ಕ್ಷಣಕ್ಕೂ ಮೃತ್ಯುವಿನ ಬಾಯಿಗೆ ಒಳಗಾಗುತ್ತದೆ. ಜನನದಿಂದ ಮರಣದವರೆಗೆ ತನುವಿನ ಜ್ಞಾನ ತನುವಿಗೆ ಬಳಕೆಯಾಗದೆ ವ್ಯರ್ಥ ಕಾಲ ಕಳೆಯುತ್ತದೆ.

ಭೂಮಿ ಹೇಮ ವಿಷಯಸುಖ ಪಡೆಯಲು ಮನ ತನುವಿನೊಂದಿಗೆ ಹಗಲಿರುಳು ಪ್ರಯತಿಸುತ್ತದೆ. ದಕ್ಕಿದರೆ ಇನ್ನಷ್ಟು ಪಡೆಯಬೇಕೆಂಬ ದುಃಖ ; ದಕ್ಕದಿದ್ದರೂ ದುಃಖ. ಭೂಮಿ, ಹೇಮ, ವಿಷಯ ಸುಖಕ್ಕಾಗಿ ಪ್ರಯತ್ನಿಸುವ ಮನ ಜ್ಞಾನಕ್ಕಾಗಿ ಪ್ರಯತ್ನಿಸುತ್ತಿಲ್ಲ. ಅದನ್ನು ಪಡೆಯುವ ಹಂಬಲವೂ ಇಲ್ಲ. ತನ್ನ ಜ್ಞಾನವನ್ನು ತಾನು ಹೇಗೆ ಪೂಜಿಸಿ ಪಡೆಯಬೇಕೆಂಬ ತಂತ್ರಗಾರಿಕೆಯೂ ಮನಕ್ಕೆ ತಿಳಿದಿಲ್ಲ- ತಿಳಿದರೆ ಮನಕ್ಕೆ ಜನನ ಮರಣಗಳಿಲ್ಲ. ಮೃತ್ಯುವಿನ ಭಯವೂ ಇಲ್ಲ.

160

ಮನವೆ ಸರ್ಪ, ತನುವೆ ಹೇಳಿಗೆ;
ಹಾವಿನೊಡತಣ ಹುದುವಾಳಿಗೆ ?
ಇನ್ನಾವಾಗ ಕೊಂದಹುದೆಂದರಿಯೆ;
ಇನ್ನಾವಾಗ ತಿಂದಹುದೆಂದರಿಯೆ !
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ,
ಅದೆ ಗಾರುಡ, ಕೂಡಲಸಂಗಮದೇವಾ.

ಮನವೆ ಸರ್ಪ. ತನುವೇ ಅದರ ಬುಟ್ಟಿ. ಹಾವಿನೊಡನೆ ಹೊಂದಿಕೊಂಡು ಬಾಳುವುದೇ ಬದುಕು! ಯಾವಾಗ ಕಚ್ಚಿ ಕೊಲ್ಲುತ್ತದೆಂದು ತಿಳಿಯೆ. ಯಾವಾಗ ವಾಸ ಮಾಡಿದ ತನುವನ್ನೇ ಕಚ್ಚಿ ತಿನ್ನುತ್ತದೆಂದು ಅರಿಯೆ !

ನಿತ್ಯ ನಿತ್ಯ ಅರಿವೆಂಬ ದೇವನಾದ ನಿಮ್ಮನ್ನು ಪೂಜಿಸುತ್ತಿದ್ದರೆ ಅದೇ ಹಾವಿನ ಮಂತ್ರ.

ಮನವೆಂಬುದೇ ಹಾವು. ಅದರ ವಿಷ ಕಣ್ಣಿನಲ್ಲಿ ಬೆರೆತಾಗ ತನುವಿನ ಬುಟ್ಟಿಯಿಂದ ಸಿಡಿದು ಕಾಮಕ್ಕಾಗಿ ತನುವಿನ ಮೇಲೆ ಎರಗುತ್ತದೆ. ಒಪ್ಪದಿದ್ದರೆ ವಿಷಯದ ವಿಷ ಚೆಲ್ಲಿ ಕಚ್ಚಿ ಕಚ್ಚಿ ತಿನ್ನುತ್ತದೆ. ತನ್ನ ವಿಷಯದ ದ್ರವ ತಾನೇ ಉಗುಳಿ ಸುಖವಾದುದನ್ನು ತಿಳಿಯದೆ ಅನ್ಯತನುವನ್ನು ಕೊಲ್ಲುತ್ತದೆ. ಕೊಂದ ತನು ಉಳಿಯಲಿಲ್ಲ; ಕೊಲ್ಲಲ್ಪಟ್ಟ ತನು ಉಳಿಯಲಿಲ್ಲ! ಇದು ಸರ್ಪದ ಸಹವಾಸ. ಮನವೆಂಬ ಹಾವು ತನುವೆಂಬ ಬುಟ್ಟಿಯಲ್ಲಿ ಸೇರಿದ ಬದುಕಿನ ಸಹವಾಸ!

ಯಾವಾಗ ಕೊಲ್ಲುತ್ತದೊ ಯಾವಾಗ ತಿನ್ನುತ್ತದೊ ಎಂದು ಮನದ ಸಹವಾಸ ಮಾಡಿದ ತನು ಅರಿಯದು. ಮನ ತನುವಿನಲ್ಲಿರುವ ಅರಿವೆಂಬ ಸಂಗಮನಾಥನನ್ನು ನಿತ್ಯ ನಿತ್ಯ ಪೂಜಿಸಿ ಅರಿವಿನಿಂದ ನೋಡಬಲ್ಲಡೆ ಅದೇ ಹಾವಿನ ಮಂತ್ರ! ಮನಕ್ಕೆ ಮದ್ದು; ತನುವಿಗೆ ಅರಿವಿನ ಸುಖ !

161

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವನ.

ಭಕ್ತ ಸಿರಿಯಾಳ ಯೌವನವಿದ್ದಾಗಲೇ ಅರಿವಿನ ಶ್ರೀಮಂತನಾದ. ಮನವೆಂಬ ಚೆಂಗಳೆಯನ್ನು ಅರಿವಿನ ಶ್ರೀಮಂತಿಕೆಯಲ್ಲಿ ಬಂಧಿಸಿದ. ಸತಿ ಚೆಂಗಳೆ ಕೂಡಾ ಅರಿವಿಗೆ ಭಕ್ತಿ ಮಾಡಿ ಅರಿವಿಗೆ ಸತಿ ಹೋದಳು. ಮನ ಸತಿಯಾಯಿತು; ಅರಿವು ಪತಿಯಾಯಿತು. ಸತಿ - ಪತಿಗಳೊಂದಾಗಿ ತನುವಿನಲ್ಲಿ ಸಂಸಾರ ಹೂಡಿದರು.

ತನು ಒಂದು ಮಾಂಸದ ಚೀಲ ಹಾಗೆಯೇ ಅರಿವಿನ ಚೀಲ ! ತನುವಿನಲ್ಲಿ ಮನ ಆವರಿಸಿರುವುದರಿಂದ ಅದು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಮಾರು ಹೋಗಿ ಅಜ್ಞಾನಕ್ಕೆ ಬಲಿಯಾಗುತ್ತದೆ.

ಮಾಂಸದ ಚೀಲದ ಆಳದಿಂದ ಹೊರಬಂದ ಚೀಲಾಳನೆಂಬ (ಮಗು) ಮಾಂಸದ ಮುದ್ದೆಯ ಮೋಹಕ್ಕೆ ಬಲಿಯಾಗುತ್ತದೆ.

ಮಗ ದುರ್ಯೋಧನನ ಮೋಹಕ್ಕೆ ಬಲಿಯಾದ ಧೃತರಾಷ್ಟ್ರ ಕುರುಡನಾಗಿ ಇಡೀ ರಾಷ್ಟವನ್ನೇ ಬಲಿಗೊಟ್ಟ. ಅರಿವೆಂಬ ಸಿರಿಯಾಳ ಮನವೆಂಬ ಚೆಂಗಳೆ ಮಾಂಸದ ತನುವಿನಲ್ಲಿ ಒಂದಾದರು. ಮೋಹವೆಂಬ ಅಜ್ಞಾನದ ಮಗ ಚೀಲಾಳನನ್ನು ಬಲಿಕೊಟ್ಟು ಮಹಾಜ್ಞಾನಿಗಳಾಗಿ ಮೆರೆದರು. ಮೃತ್ಯು ಮುಟ್ಟದ ಮುನ್ನ ತನುವಿನಲ್ಲಿರುವ ಅರಿವನ್ನು ಮನ ಹೇಗೆ ಪಡೆಯಬೇಕೆನ್ನುವ ಜಾಣತನದ ಕತೆ ಇದು . ಒಂದು ಫಾರ್ಮುಲಾ ಅಷ್ಟೆ !

ಕೆನ್ನೆ ಮುದುಡುವ ಮುನ್ನ ತನುವಿಗೆ ಅರಿವಾಗಬೇಕು. ಶರೀರ ಗೂಡು ಹೋಗಿ ಬೆನ್ನು ಬಾಗಿ ಹಲ್ಲು ಉದುರುವ ಮುನ್ನ ಅರಿವಾಗಬೇಕು. ಅನ್ಯರಿಗೆ ಹಂಗಾಗಿ, ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ ಅರಿವಾಗಬೇಕು. ಮುಪ್ಪಿನಿಂದ ತನುವಿನ ಒಪ್ಪ ಅಳಿಯದ ಮುನ್ನ ಅರಿವಾಗಬೇಕು. ಮೃತ್ಯು ಮುಟ್ಟದ ಮುನ್ನ ತನುವಿನ ಅಜ್ಞಾನಿ ಮನ ತನುವಿನ ಅರಿವನ್ನು ಪೂಜಿಸಿ ಅರಿವಿನಲ್ಲಿಯೇ ಸಂಗಮವಾಗಬೇಕು.

162

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು
ಸುರಕ್ಷಿತವ ಮಾಡುವ ಭರವ ನೋಡಾ !
ಮಹಾದಾನಿ ಕೂಡಲಸಂಗಮದೇವನ ಪೂಜಿಸಿ
ಬದುಕು ಓ ಕಾಯವ ನಿಶ್ಚೈಸದೆ.

ಜಗದ ದೇಹಗಳೆಲ್ಲ ನೀರ ಮೇಲಿನ ಗುಳ್ಳೆಗಳಿದ್ದಂತೆ . ಅದನ್ನು ಹೆಚ್ಚು ಹೊತ್ತು ಕಬ್ಬಿ

ಣದ ಸರಳುಗಳಿಂದ ಬಂಧಿಸಲು ಆಗುವುದಿಲ್ಲ. ನೀರಿನಿಂದಲೇ ಹುಟ್ಟಿ ನೀರಲ್ಲಿಯೇ ಲೀನವಾಗಿ ನೀರಾಗಿ ಮಾಯವಾಗುತ್ತದೆ.

ತನು ಜಲಬಿಂದುವಿನಿಂದ ಹುಟ್ಟಿದ ನೀರಗುಳ್ಳೆ. ಜಲಬಿಂದು ತನುವಿನ ಗರ್ಭ ಪ್ರವೇಶಮಾಡಿ ರಕ್ತ , ಮಾಂಸ ,ಮೂಳೆ, ಮಜ್ಜೆ , ಮೇದಸ್ಸು ಆಗಿ ಚರ್ಮದ ಕವಚ ಹೊಂದಿ ತನುವಾಗಿ ಜಲ ಗರ್ಭದಿಂದ ಹೊರಬಂದಿದೆ. ಮನ ತನುವನ್ನು ಆವರಿಸಿದೆ. ಅರಿವು ತನುವಿನ ಗರ್ಭದಲ್ಲಿದೆ.

ಕಬ್ಬಿಣದ ಕಟ್ಟಿನಂತೆ ಆವರಿಸಿದ ಮನದ ಒಡೆತನದಲ್ಲಿ ತನು ಬದುಕಿದೆ. ಸಾತ್ವಿಕ, ರಾಜಸ, ತಾಮಸವೆಂಬ ಪಾತ್ರದಲ್ಲಿ ತನು ಗೋಚರಿಸಿ ಇಲ್ಲವಾಗುತ್ತದೆ. ಇವು ಮೂರು ಮನ ತನುವಿಗೆ ಕಟ್ಟಿದ ಕಬ್ಬಿಣದ ಕಟ್ಟುಗಳು ಮನ ತನುವಿಗೆ ಸಾತ್ವಿಕನ ಪಾತ್ರ ಹಾಕಿ ರಾಜಸ ತಾಮಸನ ಗುಣದಲ್ಲಿ ಹಾದರ ಮಾಡುತ್ತದೆ. ಸೇವೆಯ ಸೋಗಿನ ಮೂಲಕ ರಾಜಸನ ಪಾತ್ರ ಹಾಕಿ ತಾಮಸನ ಗುಣದಲ್ಲಿ ಕೇಕೆ ಹಾಕುತ್ತ ತನುಗಳನ್ನು ಹಿಂಸಿಸುತ್ತದೆ. ತನುಗಳನ್ನೆ ಹಿರಿದು ತಿಂದು ತನುಗಳಿಗೆ ದಾನ ಮಾಡುವ ಸಾತ್ವಿಕನ ಕೃತ್ರಿಮತೆಯಿಂದ ಮೆರೆಯುತ್ತದೆ.

ಕಳ್ಳ , ವಿಷಯಲಂಪಟ, ಕುಡುಕ, ಜೂಜುಕೋರ, ಭ್ರಷ್ಟ , ವಿಕೃತ ಕಾಮಿ ಅತ್ಯಾಚಾರಿ ವಿಟ ವೇಶ್ಯೆ ಮುಂತಾದ ಹಣೆಪಟ್ಟಿಗಳಿಂದ ಮನ ತನುವಿಗೆ ಪಾತ್ರಹಾಕಿ ತನುವಿನ ಮೂಲಕ ವಿಷಯ ಸುಖ ಅನುಭವಿಸುತ್ತದೆ.

ಮನ ತನುವಿಗೆ ಸಾತ್ವಿಕ ರಾಜಸ ತಾಮಸ ಗುಣದ ಯಾವ ಕಟ್ಟು ಕಟ್ಟಿದರೂ ತನು ನೀರಮೇಲಿನ ಗುಳ್ಳೆ ಇದ್ದಂತೆ, ಬಹಳ ದಿನಗಳವರೆಗೆ ಬದುಕಲಾರದು.

ಮಹಾದಾನಿ ಕೂಡಲಸಂಗಮದೇವನ ಪೂಜಿಸಿ ಬದುಕು ಓ ಕಾಯವ ನಿಶ್ಚೈಸದೆ :

ತನುವನ್ನು ನಿಶ್ಚೈಸಿ ಮನ ಯಾವ ಪಾತ್ರದಲ್ಲಿದ್ದರೇನು? ಅದು ಬಹಳ ದಿನಗಳವರಗೆ ಬದುಕಲಾರದು. ಒಮ್ಮೆ ತನುವಿನ ಅರಿವನ್ನು ನಂಬಿ; ಆ ಅರಿವನ್ನು ಪೂಜಿಸಿ ಬದುಕು. ಆ ಅರಿವು ನಿನ್ನನ್ನು ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವೆಯನ್ನಾಗಿ ಮಾಡಿಕೊಂಡು ಬರಸೆಳೆದು ಅಪ್ಪಿಕೊಳ್ಳುತ್ತದೆ. ಮರುಜವಣಿಯ ಹಣ್ಣು ತಿನ್ನಿಸಿ ಅರ್ಧನಾರೀಶ್ವರನನ್ನಾಗಿ ಮಾಡುತ್ತದೆ.

163

ಹಂಜರ ಬಲ್ಲಿತ್ತೆಂದು, ಅಂಜದೆ ಓದುವ ಗಿಳಿಯೆ,
ಎಂದೆಂದೂ ಅಳಿಯೆನೆಂದು
ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ!
ಮಾಯಾಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ
ಕೂಡಲಸಂಗಮದೇವನಲ್ಲದೆ ?

ಪಂಜರದ ರಕ್ಷಣೆಯಲ್ಲಿದ್ದ ಗಿಳಿ ಎಂದೆಂದಿಗೂ ಬೆಕ್ಕಿನ ಬಾಯಿಗೆ ತುತ್ತಾಗಲಾರೆ ಎಂದು ಅಂಜದೆ ಅಳುಕದೆ ಆನಂದಿಂದ ಹಾಡುತ್ತದೆ. ಬೆಕ್ಕು ಬಂದು ಪಂಜುಹಾಕಿ ಪಂಜರದಿಂದ ಹೊರಸೆಳೆದು ಕೊಂದು ತಿನ್ನುವಾಗ ಗಿಳಿಯನ್ನು ರಕ್ಷಣೆಯಲ್ಲಿಟ್ಟುಕೊಂಡು ಪಂಜರ ಕಾಯಲರಿಯದು.

ತನುವಿನ ರಕ್ಷಣೆಗಾಗಿ ಮನ ಭೂಮಿ, ಕರೆನ್ಸಿ, ಮನೆ, ಆಭರಣ ಆಹಾರ ಸಾಮಗ್ರಿಗಳನ್ನು

ಹೊಂದಿಸಿಕೊಂಡು ಹಾಡುತ್ತಾ ಆಡುತ್ತಾ ಬೀಗುತ್ತದೆ. ಮರಣವನ್ನು ಮರೆತು ಏನೆಲ್ಲಾ ಮಾಡುತ್ತದೆ. ಮೃತ್ಯು ಸಮೀಪಿಸಿದಾಗ ಕಾಯ್ದಿಟ್ಟ ಸಂಪತ್ತು ತನುವನ್ನು ರಕ್ಷಿಸಲರಿಯದು.

ಎಲೆ ಮನವೆ, ತನುವಿನ ಕಣಕಣದಲ್ಲಿ ಕೂಡಿದ ಅರಿವಿನ ದೇವ ಕೂಡಲಸಂಗಮದೇವನಲ್ಲದೆ ಕೂಡಿಟ್ಟ ಸಂಪತ್ತು ತನುವನ್ನು, ತನುವನ್ನು ಆವರಿಸಿದ ಮನವನ್ನು ಬದುಕಿಸಲು ಅರಿಯದು.

164

ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ !
ಇದ ನಚ್ಚಿ ಕೆಡಬೇಡ – ಸಿರಿಯೆಂಬುದ !
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

ಸಂಸಾರವೆಂಬುದು ತಿಳಿದರೆ ಬಲು ಸಾರ. ತಿಳಿಯದಿದ್ದರೆ ಗಾಳಿಗಿಟ್ಟ ದೀಪ. ಸಂಪತ್ತು ಎನ್ನುವುದು ಸಂತೆಯಲ್ಲಿಯ ಜನದಂತೆ ಬಲು ಗಲಿ ಬಿಲಿ. ತಿಳಿಯದೆ ನಚ್ಚಿ ಕೆಡಬೇಡ ಎನ್ನುತ್ತಾರೆ ಅಣ್ಣ ಬಸವಣ್ಣ.

ಕೆಲವರಿಗೆ ಕರೆನ್ಸಿ ಎಂದರೆ ಬಲು ಪ್ರೀತಿ. ವ್ಯತ್ಯಾಸವಾದರೆ ಮಕ್ಕಳನ್ನು, ಹೆಂಡತಿಯನ್ನು , ಬಂಧುಗಳನ್ನು, ನೆರೆಹೊರೆಯವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ಯಾವ ಕೆಲಸ ಮಾಡಲೂ ಹೇಸುವದಿಲ್ಲ. ಕೆಲವರಿಗೆ ಚಿನ್ನಾಭರಣಗಳೆಂದರೆ ಬಲುಪ್ರೀತಿ; ಕೆಲವರಿಗೆ ಭೂಮಿ, ಆಸ್ತಿ ಎಂದರೆ ಬಲು ಪ್ರೀತಿ. ಕೆಲವರಿಗೆ ವೃತ್ತಿ, ಸಾಹಿತ್ಯ, ಸೇವೆ, ರಾಜಕೀಯ, ಅಧಿಕಾರ, ದೇಶಸೇವೆ ಎಂದರೆ ಬಲು ಪ್ರೀತಿ. ಅದನ್ನೇ ಅವರು ಸಂಸಾರವನ್ನಾಗಿ ಮಾಡಿಕೊಂಡಿರುತ್ತಾರೆ. ಇನ್ನೂ ಕೆಲವರು ಜೂಜು, ಕುಡಿತ, ವಿಷಯ ಸುಖವನ್ನೇ ಸಂಸಾರವನ್ನಾಗಿ ಮಾಡಿಕೊಂಡಿರುತ್ತಾರೆ. ಇನ್ನು ಕೆಲವರು ಹೆಂಡತಿ ಮಕ್ಕಳ ಹೊರತು ಅನ್ಯ ವಿಚಾರಗಳನ್ನು ಮಾಡುವುದಿಲ್ಲ. ಹಲವಾರು ಜನ ತಮ್ಮ ತಮ್ಮ ಸಂಸಾರವನ್ನೇ ಮೆಚ್ಚಿ, ಅದನ್ನೇ ಸಂಪತ್ತೆಂದು ಭಾವಿಸಿ ಕೆಡುತ್ತಾರೆ.

ಈ ಎಲ್ಲಾ ಸಂಸಾರಕ್ಕೆ ಸಂಪತ್ತಿಗೆ ಕಾರಣವಾದದ್ದು ಮನ. ಇದನ್ನು ಅರಿವಿನಿಂದ ನೋಡಿದಾಗ ಕರೆನ್ಸಿ ಅದೊಂದು ಕಾಗದ; ಚಿನ್ನ ಹಳದಿ ಲೋಹ; ಜಲ ಕುದ್ದು ಗಟ್ಟಿಗೊಂಡದ್ದೇ ಭೂಮಿ. ಅದರ ಗರ್ಭದಲ್ಲಿ ಬಂದ ಖನಿಜ ಸಂಪತ್ತು ಕೂಡಾ ಜಲದಿಂದಲೇ ನಿರ್ಮಾಣ. ದೇಹಕೂಡಾ ಜಲ ಬಿಂದುವಿನಿಂದಲೇ ನಿರ್ಮಾಣವಾದದ್ದು !

ದೇಹದಲ್ಲಿ ಅರಿವಿದೆ; ಮನವೆಂಬ ಅಜ್ಞಾನವೂ ಇದೆ. ಮನ ಅರಿವನ್ನು ಪೂಜಿಸಿ, ಅರಿವಿನಿಂದ ನೋಡಿದರೆ ಎಲ್ಲವೂ ಗಾಳಿಗಿಟ್ಟ ಸೊಡರು! ಸಿರಿ ಎಂಬುದು ಅರಿವು ಮಾತ್ರ.

ಜಲದಲ್ಲಿ ಜಲಜನಕವೂ ಇದೆ ಆಮ್ಲಜನಕವೂ ಇದೆ. ಇವೆರಡೂ ಕೂಡಿ ಜಲವಾಯಿತು . ಹತ್ತಿಯ ಬೀಜಕ್ಕೆ ಜಲ ಹರಿದು ಸಸಿಯಾಯಿತು; ಹೂ- ಕಾಯಿ ಆಗಿ ಟಿಸಿಲೊಡೆದು ಹತ್ತಿಯಾಯಿತು; ಬೇರ್ಪಟ್ಟು ರಂಜಕ- ಮತಾಪು ಆಯಿತು. ಗೀಚಿದರೆ ಬತ್ತಿ ಉರಿದು ದೀಪವಾಯಿತು. ಜಲದಲ್ಲಿದ್ದ ಜಲಜನಕ ಉರಿದು ದೀಪ ಬೆಳಗಿತು ! ಜಲದಲ್ಲಿದ್ದ ಆಮ್ಲಜನಕ ಬೀಸಿ ದೀಪ ನಂದಿತು !

ಸಂತೆಯ ಮಂದಿಯಿಂದ ಬಂದ ಮಾತುಗಳನ್ನೇ ಮೆಚ್ಚಿ ಸಿರಿಯೆಂದು ಕೆಡಬೇಡ; ಅದನ್ನು ಅನುಭವದ ಒರೆಗಲ್ಲಿಗೆ ಹಚ್ಚಿ ಅರಿವಿನಿಂದ ಮಥಿನಿಸಿ ನೋಡು. ಎಲೆ ಮನವೇ ದೇಹದಲ್ಲಿರುವ ಅರಿವೆಂಬ ಸಿರಿಯನ್ನು ಮರೆಯದೆ ಪೂಜಿಸು. ಆತ ಸಾಕ್ಷಾತ್ ಕೂಡಲಸಂಗಮದೇವ !

165

ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಳ ಬೆಳುದಿಂಗಳು ಸಿರಿ ಸ್ಥಿರವಲ್ಲ !
ಕೇಡಿಲ್ಲದ ಪದವಿ
ಕೂಡಲಸಂಗಮದೇವನ ಮರೆಯದೆ ಪೂಜಿಸು.

ಮನುಷ್ಯ ಅತಿ ಆಸೆಯಿಂದ ಅನೇಕ ಪದವಿಗಳನ್ನು ಪಡೆಯುತ್ತಾನೆ. ಶ್ರೀಮಂತ, ರಾಜಕಾರಣಿ, ಮಹಾದಾನಿ, ಪಂಡಿತ ಇವು ಅಲ್ಲದೆ ವಿಶ್ವವಿದ್ಯಾಲಯಗಳಿಂದಲೂ ಪದವಿಗಳನ್ನು ಪಡೆಯುತ್ತಾನೆ. ಈ ಎಲ್ಲ ಪದವಿಗಳನ್ನು ಪಡೆದರೂ ಕೇಡು ತಪ್ಪಿದ್ದಲ್ಲ.

ಮನ ಪಡೆಯುವ ಪದವಿಗಳೆಲ್ಲ ಕಾಳ ಬೆಳದಿಂಗಳಂತೆ. ಶುಕ್ಲಪಕ್ಷದಲ್ಲಿ ಚಂದ್ರನ ಬೆಳಕು ಬೆಳೆಯುತ್ತ ಬೆಳೆಯುತ್ತಾ ಹುಣ್ಣಿಮೆಯಂದು ಪೂರ್ಣ ಪ್ರಮಾಣದಲ್ಲಿ ಹೊಳೆಯುತ್ತದೆ. ಹಾಗೆಯೇ ಕೃಷ್ಣಪಕ್ಷದಲ್ಲಿ ಕೃಷ ಹೊಂದುತ್ತಾ ಹೊಂದುತ್ತಾ ಅಮವಾಸ್ಯೆಯಂದು ಇಲ್ಲವಾಗುತ್ತದೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಬೆಳಕು ಒಡಲೊಳಗಿದ್ದರೂ ಮನಕ್ಕೆ ಈ ಪದವಿ ಪರಿಚಯವಾಗಿಲ್ಲ. ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಬೆಳಗುವ ಪದವಿ ಮನಕ್ಕೆ ಪರಿಚಯವಾಗಿಲ್ಲ. ಅದಕ್ಕಾಗಿಯೇ ಬಸವಣ್ಣನವರು ಎಲೆ ಎಲೆ ಮನವೇ, ತನುವನ್ನು ಆವರಿಸಿದ ಮನವೆ; ಸ್ಥಿರವಲ್ಲದ ಕಾಳಬೆಳದಿಂಗಳ ಪದವಿಯನ್ನು ನಚ್ಚಬೇಡ. ಪದವಿ ಒಮ್ಮೆ ಮನುಷ್ಯನನ್ನು ಅತಿ ಎತ್ತರಕ್ಕೆ ಕೊಂಡೊಯ್ಯುತ್ತದೆ; ಮತ್ತೊಮ್ಮೆ ಪ್ರಪಾತಕ್ಕೆ ತಳ್ಳುತ್ತದೆ.

ಎಲೆ ಮನವೆ ಕೇಡಿಲ್ಲದ ಅರಿವಿನ ಪದವಿಯನ್ನು ಹೊಂದಿ ಸದಾ ಬೆಳಗಿಂಗೆ ಬೆಳಗಾಗಿ ಬೆಳಗು. ಬೆಳಗಿದ ಸಂಗಯ್ಯನನ್ನು ಕೂಡಿ ಆ ಬೆಳಗುವ ಬೆಳಗಿನಂತೆ ಬೆಳಗೇ ನೀನಾಗು ಎಂದಿದ್ದಾರೆ ಬಸವಣ್ಣನವರು.

166

ಎಂತಕ್ಕೆ ಎಂತಕ್ಕೆ –
ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು ಓ !
ಬೆರಣೆಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣು ಓ !
ಮರಳಿ ಭವಕ್ಕೆ ಬಹೆ – ಬಾರದಿಹೆ :
ಕರ್ತು ಕೂಡಲಸಂಗಂಗೆ ಶರಣೆನ್ನು ಓ !
ಎಂತಕ್ಕೆ ಎಂತಕ್ಕೆ – ಪಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು ಓ :

ಮನಕ್ಕೆ ಬಸವಣ್ಣನವರು ಈ ಸೂತ್ರದ ಮೂಲಕ ಸಂತಸದ ಸುದ್ದಿಯನ್ನು ರವಾನೆ ಮಾಡಿದ್ದಾರೆ. ಎಲೆ

ಮನವೆ ಮರುಳ ಮನವೆ ಮತ್ತೆ ಈ ಭೂಮಿಯ ಮೇಲೆ ಕಾಯಹೊಂದಿ ಬರುವೆಯೋ ಬರಲಾರೆಯೋ ತಿಳಿಯದು. ಈ ಕಾಯ ಅರಿವಿನ ಕಾಯ, ಇರುವಾಗಲೇ ಅಂದರೆ ಬಿದ್ದುಹೋಗದ ಮುನ್ನ, ಬೆರಣಿ ಇದ್ದಲ್ಲಿ ಕಾಯದಲ್ಲಿದ್ದ ಅರಿವಿನ ಅನುಭಾವದ ಅಡುಗೆಯನ್ನು ಮಾಡಿ ಆನಂದದಿಂದ ಉಣ್ಣು.

ಎಲೆ ಮನವೆ ಕಾಯದಲ್ಲಿ ಅರಿವಿದೆ ಅದನ್ನು ತಿಳಿಯದೆ ಕಾಮ,ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗಾಗಿ ಬಳಸಿಕೊಳ್ಳುತ್ತಿರುವೆ. ಅದು ಬರೀ ಸೆಗಣಿ ಒಮ್ಮೆ ಅರಿವಿನೆಡೆಗೆ ಮುಖ ಮಾಡು ! ಒಣಗಿ ಬೆರಣಿಯಾಗುತ್ತದೆ. ಅರಿವಿನ ಅಗ್ನಿ ತಾಗಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಸುಟ್ಟು ಭಸ್ಮವಾಗುತ್ತವೆ. ಸೆಗಣಿಯ ಕಾಯ ವಿಭೂತಿ ಕಾಯವಾಗುತ್ತದೆ. ಎಲೆ ಮನವೆ ನೀ ಪಡೆದ ಕಾಯ ಪ್ರಸಾದ ಕಾಯವಾಗುತ್ತದೆ. ಕಾಯವಿದ್ದಾಗಲೇ ಜನನ ಮರಣದ ಬಾಧೆಗಳನ್ನು ಕಳೆದುಕೊಂಡು ಹುರಿದ ಬೀಜದಂತೆ ಆಗುತ್ತದೆ. ಮರಳಿ ಭವಕ್ಕೆ ಬರದೆ ಅರಿವಿನ ಕರ್ತು ಕೂಡಲ ಸಂಗನಿಗೆ ಶರಣೆಂದು ಬದುಕಿ ಅಮರನಾಗುತ್ತದೆ.

167

ಶಕುನವೆಂದೆಂಬೆ, ಅಪಶಕುನವೆಂದೆಂಬೆ-
ನಿಮ್ಮವರು ಅಳಲಿಕೆ ಅಂದೇಕೆ ಬಂದೆ?
ನಿಮ್ಮವರು ಅಳಲಿಕೆ ಇಂದೇಕೆ ಹೋದೆ?
ನೀ ಹೋಹಾಗಳಕ್ಕೆ! ನೀ ಬಾಹಾಗಳಕ್ಕೆ !
ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ

ಹುಟ್ಟುವಾಗಲೂ ಶಕುನ, ಸಾಯುವಾಗಲೂ ಶಕುನ. ಶಕುನ ನೋಡಿ ಹುಟ್ಟಿದಾಗಲೂ ಅಳುವರು. ಶಕುನ ನೋಡಿ ಸತ್ತಾಗಲೂ ಅಳುವರು. ತಾನು ಬರೆದ ಶಾಸ್ತ್ರ ತನಗೇ ಮುಳುವಾಯಿತು. ತಾನು ಬರೆದ ಶಕುನ ತನಗೇ ಪ್ರಧಾನ ವಾಯಿತು.

ಅಳುತ್ತಾರೆಂದು ಹುಟ್ಟುವುದು ನಿಲ್ಲುವುದಿಲ್ಲ. ಅಳುತ್ತಾರೆಂದು ಸಾಯುವುದೂ ನಿಲ್ಲುವುದಿಲ್ಲ. ಸಾವು ಬಾರದ ಮುನ್ನ ಮನಕ್ಕೆ ಅರಿವಾಗಬೇಕು. ಆಗ ತಾನು ಬರೆದ ಶಕುನವ ತಾನೇ ಹರಿದು ಸುಟ್ಟು ಬೂದಿ ಮಾಡುತ್ತಾನೆ. ಜನನ ಮರಣಗಳನ್ನು ಜಯಿಸಿ, ಸುಖ ದುಃಖಗಳನ್ನು ಸರಿಸಿ, ಶಾಶ್ವತ ಸುಖವನು ಪಡೆಯುತ್ತಾನೆ. ಅರಿವನ್ನು ಪೂಜಿಸಿ, ಅರಿವಿನಿಂದಲೇ ಬದುಕಿ, ಅರಿವಿಗೆ ಶರಣು ಹೋಗಿ ಶರಣನಾಗುತ್ತಾನೆ.

168

ನಿಮಿಷದ ನಿಮಿಷಂ ಬೊ, ಕ್ಷಣದೊಳಗರ್ಧಂ ಬೊ,
ಕಣ್ಣಮುಚ್ಚಿಬಿಚ್ಚುವೈಸು ಬೇಗಂ ಬೋ :
ಸಂಸಾರದಾಗುಂ ಬೋ ! ಸಂಸಾರದ ಹೋಗುಂ ಬೋ !
ಸಂಸಾರದೊಪ್ಪಂ ಬೋ !
ಕೂಡಲಸಂಗಮದೇವಾ,
ನೀ ಮಾಡಿದ ಮಾಯಂ ಬೋ, ಅಭ್ರಚ್ಛಾಯಂ ಬೋ !

ಸೂರ್ಯನ ಬೆಳಕು ಪ್ರಖರವಾದುದು ; ನಿರಂತರವಾದುದು. ಹಗಲು ರಾತ್ರಿಗಳೆನ್ನದೆ ಬೆಳಗುವ. ಆದರೆ ಸೂರ್ಯನ ಬೆಳಕಿನಿಂದಲೇ ರಾತ್ರಿಯಾಗುತ್ತದೆ. ಇದು ವಿಜ್ಞಾನ. ಎಲ್ಲರಿಗೂ ತಿಳಿದಿದೆ.

ಸೂರ್ಯ ಬೆಳಗುವ ಬೆಳಕಿನ ಶಾಖದಿಂದಲೇ ನೀರು ಬಿಸಿಯಾಗಿ ಆವಿಯಾಗಿ ಮೋಡವಾಗಿ ಕರಿನೆರಳಿನಂತೆ , ಸೂರ್ಯ ಕಾಣದಂತೆ -ಮುಸುಕುತ್ತದೆ . ಮತ್ತೆ ಜಲವಾಗಿ ಕೆಳಗೆ ಬಿದ್ದು ಸೃಷ್ಟಿಯ ರಚನೆಗೆ ಕಾರಣವಾಗುತ್ತದೆ. ಇದು ಸೂರ್ಯನ ಬೆಳಕು ಮಾಡಿದ ಮಾಯೆ ಅಭ್ರಚ್ಛಾಯೆ !

ಆ ಬೆಳಕಿನಿಂದ ಚಿಮ್ಮಿದ ಜೀವಜಲಬಿಂದುವೇ ಗರ್ಭ ಹೊಕ್ಕು ತನುವಾಗಿ ಹೊರಬಂದು ಕೋಟಿ ಸೂರ್ಯಂ ಸಮಪ್ರಭ ಎನ್ನುವಂತೆ ಸೂರ್ಯನನ್ನೂ ಬೆಳಗುವ ಬೆಳಕಾಗಿದೆ . ಸೂರ್ಯನ ಬೆಳಕಿನಿಂದ ಕುದ್ದ ಜಲ ಆವಿಯಾಗಿ ಅಭ್ರಚ್ಛಾಯೆ (ಮೋಡ) ಆಗಿ ಸೂರ್ಯನನ್ನೇ ಮುಸುಕಿ ಕಾಣದಂತೆ ಮಾಡಿದೆ. ಹಾಗೆಯೇ ತನುವಿನಲಿದ್ದ ಅರಿವಿನ ಬೆಳಕಿನಿಂದ ಮನವೆಂಬ ನೆರಳು ಸೃಷ್ಟಿಯಾಗಿದೆ. ಅರಿವಿನ ತನುವಿನಲ್ಲಿಯೇ ಸಂಸಾರ ಹೂಡಿದೆ .

ನೋಡುವ ನೋಟದಲ್ಲಿ ಮನವೆಂಬ ಕರಿನೆರಳು ಬೆರತು ನಿಮಿಷ ನಿಮಿಷಕ್ಕೂ ಕ್ಷಣ ಕ್ಷಣಕ್ಕೂ ಕಾಣದಂತೆ ಮಾಡುತ್ತದೆ. ಅರಿವಿನಿಂದ ನೋಡಿದರೆ ತನ್ನಂತೆ ಇರುವ ತನು. ಮನವೆಂಬ ಮೋಡ ಬೆರೆತಿರುವುದರಿಂದ ಹೆಣ್ಣು, ಗಂಡು, ಜಾತಿ, ಮತ, ಪಂಥವಾಗಿ ಬಡವ, ಶ್ರೀಮಂತ, ರಾಜ, ತಿರುಕನಾಗಿ ಕಂಡು. ಭೂಮಿ, ಖನಿಜ ವಸ್ತುಗಳೆಲ್ಲ ಸಂಪತ್ತಾಗಿ ಕಂಡು ತನುವಿನಲ್ಲಿ ಅಜ್ಞಾನದ ರಸಾಯನಿಕ ಕ್ರಿಯೆ ಹುಟ್ಟುತ್ತದೆ. ಗುಡುಗು ಸಿಡಿಲಿನಂತೆ ತನುವಿಗೆ ಬಡಿದು ನೋವುಂಟು ಮಾಡುತ್ತದೆ. ಹಾಗೆಯೇ ಸುಖವನ್ನುಂಟುಮಾಡುತ್ತದೆ.

ಸೂರ್ಯನ ಬೆಳಕು ಸೃಷ್ಟಿಯ ರಚನೆಗಾಗಿ ನಿರಂತರ ಬಳಕೆಯಾದರೆ, ತನುವಿನ ಅರಿವು ತನುವಿಗೆ ಬಳಕೆಯಾಗದೆ ತನುವಿನಲ್ಲಿಯೇ ಉಳಿಯುತ್ತದೆ. ಅರಿವಿನಿಂದ ಹುಟ್ಟಿದ ಮನ ಮಾತ್ರ ನಿರಂತರ ಬಳಕೆಯಾಗಿ ಕ್ಷಣ ಕ್ಷಣಕ್ಕೂ ತನುವಿಗೆ ಅಜ್ಞಾನದ ಸುಖ- ದುಃಖಗಳ ಕತ್ತಲನ್ನುಂಟು ಮಾಡುತ್ತದೆ.

ಲೋಹದ ಬಣ್ಣಕ್ಕೆ , ಹೊಳೆಯುವ ಗಾಜಿಗೆ, ತನ್ನಂತೆ ಇರುವ ಚರ್ಮಕ್ಕೆ, ಕರೆನ್ಸಿಗೆ, ಅದಿಕಾರಕ್ಕೆ ಮನ ಮರುಳಾಗುತ್ತದೆ. ಹಗಲಿರುಳು ಇವುಗಳಿಗೆ ಹಪಹಪಿಸಿ ದುಡಿದು ಪಡೆದು ಶ್ರೀಮಂತನೆನ್ನಿಸಿಕೊಳ್ಳುತ್ತದೆ. ಕದ್ದು ಪಡೆದು ಕಳ್ಳನೆನ್ನಿಸಿಕೊಳ್ಳುತ್ತದೆ. ಕೊಂದು ಪಡೆದು ರಾಜನೆನ್ನಿಸಿಕೊಳ್ಳುತ್ತದೆ. ಇವುಗಳಿಗಾಗಿಯೇ ಸಂಸಾರ ಹೂಡಿ ಸಲ್ಲದ ಸುಖ ದುಃಖಗಳ ಸಂಸಾರವನ್ನು ಮನ ತನುವಿನ ಹೆಗಲಿಗೆ ಹಾಕುತ್ತದೆ.

ಮನ ಸೂಚಿಸಿದ ಹೆಣ ಭಾರವನ್ನು ಹೊತ್ತು ಮನ ಹೇಳಿದ ಕೆಲಸಗಳನ್ನು ಮಾಡುತ್ತ ಕಳ್ಳ , ಶ್ರೀಮಂತ, ವಿಷಯ ಲಂಪಟ ಬಡವ ದರಿದ್ರ, ರಾಜಕರಣಿ, ದಾನಿ, ಪೀಠಾಧಿಪತಿಯ ವೇಷದಲ್ಲಿ ತನು ಒಮ್ಮೆ ಇಹ ಲೋಕವನ್ನು ತ್ಯಜಿಸುತ್ತದೆ.

ಈ ಎಲ್ಲ ಸುಖ- ದುಃಖಗಳನ್ನು ಅನುಭವಿಸುವ ಮನ ತನುವಿನಲ್ಲಿ ಆವರಿಸಿಕೊಂಡಿದೆ. ಈ ಎಲ್ಲವನ್ನು ಅಲ್ಲ ಗಳೆಯುವ ಅರಿವು ತನುವಿನಲ್ಲಿಯೇ ಇದೆ. ಅರಿವಿಗೆ ಬಸವಣ್ಣನವರು ಕೂಡಲ ಸಂಗಯ್ಯ ಎಂದು ಕರೆದರು.

ಒಂದು ನಿಮಿಷವಾದರೂ, ಅಷ್ಟೇಕೆ ಕ್ಷಣದೊಳಗೆ ಅರ್ಧಕ್ಷಣವಾದರೂ ಮನ ಅರಿವಿನ ಸಂಗಯ್ಯನನ್ನು ನೆನೆದರೆ ಸಾಕು; ಆತನಿಂದಾದ ಕರಿನೆರಳು ಕರಗಿ ನೀರಾಗುವುದು. ಆತನಿಂದಾದ ಮಾಯೆ ಸರಿದು ಬೆಳಕಾಗುವುದು.

169

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ ;
ನೆರೆಯದ ವಸ್ತು ನೆರೆವುದು ನೋಡಯ್ಯಾ ;
ಅರಸು ಪರಿವಾರ ಕೈವಾರ ನೋಡಯ್ಯಾ !
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ, ಕೂಡಲಸಂಗಮದೇವಾ.
ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು:

ಸಿದ್ಧಾರ್ಥ, ವರ್ಧಮಾನ, ನಿಜಗುಣರು ಅರಸರಾಗಿದ್ದರು. ಅರಿವಿನ ಸಿರಿ ಅವರಿಗೆ ಒಲಿಯದಿದ್ದರೆ ಅರಸರಾಗಿಯೇ ಮುಂದುವರೆಯುತ್ತಿದ್ದರು. ತನ್ನಂತೆಯೇ ಇರುವ ಇತರ ರಾಜರನ್ನು ಅಮಾಯಕ ಸೈನಿಕರನ್ನು ಹೆಂಡಿರು ಮಕ್ಕಳನ್ನು ಕೊಂದು ರಾಜ್ಯ ವಶಪಡಿಸಿಕೊಳ್ಳುತ್ತಿದ್ದರು. ಕೀರಿಟ, ಸಿಂಹಾಸನವಿದ್ದರೂ ಅದಕ್ಕಾಗಿ ರಕ್ತದ ಕಾಲುವೆಯನ್ನೇ ಹರಿಸುತ್ತಿದ್ದರು.

ರಾಜ್ಯ ವಿಸ್ತಾರವೇ ಅರಸನ ಗುರಿ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೇ ಅರಸನ ಪರಿವಾರ ! ಈ ಪರಿವಾರ ನಷ್ಟವಾಗದಿದ್ದರೆ ಮನುಷ್ಯನ ರಕ್ಷಣೆಗಾಗಿ ಮನುಷ್ಯನನ್ನೇ ಕೊಲ್ಲುವ ರಾಕ್ಷಸ ಪ್ರವೃತ್ತಿಯೇ ಅರಸನ ಸಂವಿಧಾನವಾಗುತ್ತದೆ.

ಸಿದ್ಧಾರ್ಥ, ವರ್ಧಮಾನ, ಅಶೋಕ, ನಿಜಗುಣರೆಂಬ ಅರಸರಿಗೆ ಅರಿವಿನ ಸಿರಿ ಒಲಿಯಿತು. ಕೂಡಲೇ ಬುದ್ಧ, ಮಹಾವೀರ, ನಿಜಗುಣ ಶಿವಯೋಗಿಗಳಾದರು, ಜ್ಞಾನದ ಕೆರೆ ತುಂಬಿ ಮಹಾಪೂರವೇ ಆಯಿತು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೇ ಮನವೆಂಬ ಅರಸನಿಗೆ ಪರಿವಾರ. ಇವು ಅರಿವೆಂಬ ಜ್ಞಾನಿಯ ಕೈವಶವಾದವು. ಆಗ ತನು ಜ್ಞಾನ ತುಂಬಿದ ಅರಿವಿನ ಅಮೃತದ ಹರವಿಯಾಯಿತು. ಜ್ಞಾನದ ಬಿಂದಿಗೆಯಾಯಿತು.

170

ಹೊಯ್ದಡೆ ಹೊಯ್ಗಳು ಕೈಯಮೇಲೆ ;
ಬೈದಡೆ ಬೈಗಳು ಕೈಯ ಮೇಲೆ ;
ಹಿಂದಣ ಜನನವೇನಾದಡಾಗಲಿ
ಇಂದಿನ ಭೋಗವು ಕೈಯಮೇಲೆ.
ಕೂಡಲಸಂಗಮದೇವಯ್ಯಾ
ನಿಮ್ಮ ಪೂಜಿಸಿದ ಫಲ ಕೈಯ ಮೇಲೆ.

'ಮಾಡಿದ್ದುಣ್ಣೋ ಮಹಾರಾಯ', 'ತಾನು ಮಾಡಿದ ಪಾಪ ತನ್ನಮೇಲೆ,
'ನೋಡಿದವನ ಪಾಪ ಆಡಿದವನ ನಾಲಿಗೆ ಮೇಲೆ', 'ತಾಮಾಡಿದ್ದು
ತನ್ನನ್ನೇ ತಿನ್ನುತ್ತದೆ' ಎನ್ನುವ ಮಾತುಗಳು ಬಳಕೆಯಲ್ಲಿವೆ. ಅಣ್ಣ ಬಸವಣ್ಣನವರ ವಚನದ ಸೂತ್ರವೂ ಇದನ್ನೇ ಧ್ವನಿಸುತ್ತದೆ.

ತನು ಒಂದು ವಿಶಿಷ್ಟವಾದ ಜ್ಞಾನ ಭಂಡಾರ. ಅದು ಎಲ್ಲವನ್ನೂ ಸೃಷ್ಟಿಮಾಡಿದ ಬ್ರಹ್ಮ . ಪುಸ್ತಕಗಳನ್ನು ಸೃಷ್ಟಿ ಮಾಡಿತು ; ಅದನ್ನು ಕಲಿಯಲು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳನ್ನೂ ಸೃಷ್ಟಿಮಾಡಿತು, ಭೂಮಿ ಕೊರೆದು ಚಿನ್ನ ಬೆಳ್ಳಿ ತಾಮ್ರ ಕಂಚು ಹಿತ್ತಾಳೆ ಮುಂತಾದ ಖನಿಜ ಪದಾರ್ಥಗಳನ್ನು ಸೃಷ್ಟಿ ಮಾಡಿತು ಅದನ್ನು ಸಂಗ್ರಹ ಮಾಡಿತು , ಸಂಗ್ರಹ ಮಾಡಿದ್ದನ್ನು ಕಳುವು ಮಾಡಿತು. ಶ್ರೀಮಂತ,ಬಡವ, ಕಳ್ಳ ಎನ್ನುವ ಹಣೆಪಟ್ಟಿಯನ್ನು ಕಟ್ಟಿಕೊಂಡಿತು. ತಾನೇ ಸೃಷ್ಟಿ ಮಾಡಿ , ತಿಳಿಯದೆ ತಾನೇ ಭೋಗಕ್ಕೆ ಒಳಗಾಗಿ, ದಕ್ಕದಿದ್ದರೆ ಕೊಂದು ಪಡೆದು ಕೊಲೆಗಡುಕ ಎನ್ನುವ ಪಟ್ಟವನ್ನೂ ಕಟ್ಟಿಕೊಂಡಿತು .

ತನು ಸೃಷ್ಟಿ ಮಾಡಿದ ವಸ್ತುಗಳೇ ತನುವಿನ ಹೆಗಲೇರಿ ಕಾಡುತ್ತಲಿವೆ , ತನು ಸೃಷ್ಟಿ ಮಾಡಿದ ಶಬ್ದಗಳೇ ತನುವನ್ನು ಸುಟ್ಟು ಬೂದಿಮಾಡುತ್ತಲಿವೆ. ಆದರೂ ತನುವಿಗೆ ತಿಳಿಯಲು ಸಾಧ್ಯವಾಗುತ್ತಿಲ್ಲ.

ಹೊಯ್ದಡೆ ಹೊಯ್ಗಳು ಕೈ ಮೇಲೆ ; ಬೈದಡೆ ಬೈಗಳು ಕೈಯಮೇಲೆ ; ಹಿಂದಣ ಜನನವೇನಾದಡಾಗಲಿ ಇಂದಿನ ಭೋಗವು ಕೈಯ ಮೇಲೆ :

ಹೊಡೆದ ಏಟುಗಳು , ಬೈದ ಶಬ್ದಗಳು ಕೈಮೇಲೆ : ಇದೊಂದು ವಿಚಿತ್ರ ಮಾತು ; ಆದರೂ ಸತ್ಯ. ತಾನು ಅನ್ಯರಿಗೆ ಹೊಡೆದದ್ದು, ತಾನು ಅನ್ಯರಿಗೆ ಬೈದದ್ದು ತನ್ನ ಕೈಯ ಮೇಲೆ ಎಂದು ಅರ್ಥವಾಗುತ್ತದೆ.

ಕರ, ಅಂಗ ಎಂದರೆ ದೇಹ ; ಅಂಗೈ ಎಂದರೂ ದೇಹ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಎನ್ನುವ ಜ್ಞಾನದ ಐದು ಭಾಗಗಳುಳ್ಳ ಅಂಗವೇ ಅಂಗೈ ! ಹಾಗೆಯೆ ಕೈ ಎಂದರೂ ಅಂಗವೆ ಆಗಿದೆ.

ಅಂಗ ಮತ್ತೊಂದು ಅಂಗವನ್ನು ಹೊಡೆದರೆ ಆ ಹೊಡೆತಗಳು ಹೊಡೆದ ಅಂಗದ ಮೇಲೆಯೇ ಮೂಡುತ್ತವೆ. ಅಂಗ ಮತ್ತೊಂದು ಅಂಗವನ್ನು ಬೈದರೆ ಆ ಬೈಗಳು ಬೈದ ಅಂಗದ ಮೇಲೆಯೇ ಅಚ್ಚಳಿಯದಂತೆ ಮೂಡುತ್ತವೆ ಎಂದು ಅರ್ಥವಾಗುತ್ತದೆ.

ಬಸವಣ್ಣನವರ ಈ ಸೂತ್ರ ಅರ್ಥವಾದರೆ ಜಗತ್ತಿನಲ್ಲಿರುವ ಯಾವ ಅಂಗವೂ ಮತ್ತೊಂದು ಅಂಗವನ್ನು ಬೈಯುವುದಿಲ್ಲ ; ಹೊಡೆಯುವುದಿಲ್ಲ . ಕಾದಾಟಾ ಬಡಿದಾಟ , ಯುದ್ಧಗಳು ಆಗುವುದೇ ಇಲ್ಲ. ಆದರೆ ಬಸವಣ್ಣನವರ ಈ ಮಾತು ಅಂಗಕ್ಕೆ ಮನದಟ್ಟಾಗಬೇಕು. ಸ್ವತಃ ಅಂಗ ಈ ಮಾತಿನೊಂದಿಗೆ ಪ್ರಯೋಗಕ್ಕೆ ಇಳಿಯಬೇಕು ಅಂದರೆ ಮಾತ್ರ ಸಾಧ್ಯವಾಗುತ್ತದೆ.

ಅಂಗ ಮತ್ತೊಂದು ಅಂಗವನ್ನು ಹೊಡೆದರೆ ಆ ಹೊಡೆತಗಳು ಹೊಡೆದ ಅಂಗದಲ್ಲಿ ಅಚ್ಚಳಿಯದೆ ಮೂಡುತ್ತವೆ. ಹೊಡೆಸಿಕೊಂಡ ಅಂಗ ಸತ್ತರೂ ಹೊಡೆದ ಅಂಗದಲ್ಲಿ ಮೂಡಿದ ಪೆಟ್ಟುಗಳು ಮಾಯುವುದೇ ಇಲ್ಲ . ಆಗಾಗ ಹೊಡೆದ ಅಂಗವನ್ನು ಚುಚ್ಚಿ ಚುಚ್ಚಿ ಕೊಲ್ಲುತ್ತದೆ . ತಾನು ಹೊಡೆದದ್ದು ತಪ್ಪು ತಪ್ಪು ಎಂದು ಸಾರಿ ಹೇಳುತ್ತದೆ . ಹಾಗೆಯೇ ಬೈದ ಬೈಗಳು ಸಹಿತ ಅಂಗದಲ್ಲಿ ಮತ್ತೆ ಮತ್ತೆ ಸುಳಿದು ಬೈಸಿಕೊಂಡ ಅಂಗ ಸಮೀಪವಿಲ್ಲದಿದ್ದರೂ ನೆನಪಿಸಿ ನರಕಯಾತನೆ ಉಂಟು ಮಾಡುತ್ತದೆ. ಸರಕಾರ , ಸಮಾಜ ಸಣ್ಣ ಶಿಕ್ಷೆ ಕೊಡಬಹುದು ಆದರೆ ತನ್ನ ಅಂಗದಲ್ಲಿ ಮೂಡಿದ ಘಟನೆಯ ನೆನಪು ಅದು ತನಗೆ ಕೊಡುವ ಘೋರ ಶಿಕ್ಷೆ .

ಹಿಂದಣ ಜನನವೇನಾದಾಡಾಗಲಿ ಇಂದಿನ ಭೋಗವು ಕೈಯ ಮೇಲೆ :

ಹಠಮಾರಿತನ , ಸಿಟ್ಟು , ಸ್ವಾರ್ಥ , ದಾನದ ಗುಣಗಳು ತನುವಿನಲ್ಲಿ ಜನ್ಮದಿಂದಲೇ ಬರುತ್ತವೆ . ತನುವಿನ ಭಾವ ಅರಳಿ ಪ್ರೀತಿಸುತ್ತದೆ ; ಭಾವ ಕೆರಳಿ ಸಿಟ್ಟು ಮಾಡಿಕೊಳ್ಳುತ್ತದೆ.

ಭಾವ -ದುರ್ಭಾವಗಳೆರಡು ತನುವಿನಲ್ಲಿ ಸಂಗ್ರಹವಾಗಿ ನೆನಪಾದಾಗ ರಸಾಯನಿಕ ಕ್ರಿಯೆಗಳು ಉಂಟಾಗಿ ತನು ಅರಳುವುದು- ಕೆರಳುವುದು ಗೋಚರಕ್ಕೆ ಬರುತ್ತದೆ. ತಿಳಿಯದಿದ್ದರೆ ತನು ಸಂಕಟದಲ್ಲಿಯೇ ತನ್ನ ಇಹ ಯಾತ್ರೆ ಮುಗಿಸುತ್ತದೆ.

ಕೂಡಲಸಂಗಮದೇವಯ್ಯಾ ನಿಮ್ಮ ಪೂಜಿಸಿದ ಫಲ ಕೈಯ ಮೇಲೆ ;

ತನುವಿನಲ್ಲಿರುವ ಅರಿವನ್ನು ಮನ ತಿಳಿದು , ಅರಿವು ಹೇಳಿದಂತೆ ನುಡಿದಾಗ , ಅರಿವು ಹೇಳಿದಂತೆ ನುಡಿಯ ಕೇಳಿದಾಗ , ಅರಿವು ಹೇಳಿದಂತೆ ನೋಡಿದಾಗ , ಅರಿವು ಹೇಳಿದಂತೆ ಮುಟ್ಟಿದಾಗ, ಅರಿವು ಹೇಳಿದಂತೆ ಮೂಸಿಸಿದಾಗ , ಅರಿವು ಹೇಳಿದಂತೆ ರುಚಿಸಿದಾಗ ಅರಿವಿನ ಈ ಐದು ಇಂದ್ರಿಯಗಳ ಫಲಗಳು ತನುವಿನಲ್ಲಿ ಕಾರ್ಯನಿರ್ವಹಿಸುವುದು ಮನದ ಗಮನಕ್ಕೆ ಬರುತ್ತದೆ . ತನುವಿನಲ್ಲಿರುವ ಹಿಂದಿನ ಜನನದ ದೋಷಗಳು, ಇಂದಿನ ಅಜ್ಞಾನದ ದೋಷಗಳು ಅಳಿದು, ಜ್ಞಾನದ ಫಲ ಮಾತ್ರ ತನುವಿನಲ್ಲಿ ಉಳಿಯುತ್ತದೆ.

171

ಆದ್ಯರ ವಚನ ಪರುಷ ಕಂಡಣ್ಣಾ :
ಸದಾಶಿವನೆಂಬ ಲಿಂಗವ ನಂಬುವುದು :
ನಂಬಲೊಡನೆ ನೀ ವಿಜಯ ಕಂಡಣ್ಣಾ .
ಅಧರಕ್ಕೆ ಕಹಿ ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ .
ಆದ್ಯರ ವಚನ ಪರುಷ ಕಂಡಣ್ಣಾ:

ಅಂದು ಇಂದು ಎಂದೆಂದೂ ಇದ್ದವರೇ ಆದ್ಯರು ; ಪುರಾತನರು. ಅವರ ವಚನ ಕೋಡುಗನನ್ನು ಆಂಜನೇಯನನ್ನಾಗಿ ಮಾಡುತ್ತದೆ . ಅವರ ವಚನ ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವ ಪರುಷ.

ಸದಾಶಿವನೆಂಬ ಲಿಂಗವ ನಂಬುವುದು :

ಆದ್ಯರ ವಚನ ಸದಾಶಿವನೆಂಬ ಅರಿವಿನ ಲಿಂಗವನ್ನು ನಂಬುವಂತೆ ಮಾಡುವ ಸೂತ್ರ. ಇದನ್ನು

ನಂಬಲೊಡನೆ ನೀ ವಿಜಯ ಕಂಡಣ್ಣಾ:

ಇದು ಅಧರಕ್ಕೆ ಕಹಿ, ಉದರಕ್ಕೆ ಸಿಹಿ ; ಕೂಡಲಸಂಗನ ಶರಣರ ವಚನ ಬೇವ ಸವಿದಂತೆ .

ಜಗತ್ತಿನ ತುಂಬಾ ಮರ್ಕಟಗಳಿವೆ .ಅವು ಆಂಜನೇಯನಾಗುವುದಿಲ್ಲ.

ಶ್ರೀರಾಮನ ದರ್ಶನವಾದ ಮರ್ಕಟ ಮಾತ್ರ ಆಂಜನೇಯನಾಗುತ್ತದೆ. ತನುವಿನಿಂದ ಶ್ರೀರಾಮ, ಆಂಜನೇಯ ಎಂದು ಗುರುತಿಸುವಂತಿಲ್ಲ . ಬಿಲ್ಲು ಬಾಣ ಬತ್ತಳಿಕೆ ಹೊಂದಿದ ತನು ಶ್ರೀರಾಮನಲ್ಲ. ಬಾಲ ಹೊಂದಿದ ತನು ಆಂಜನೇಯನೂ ಅಲ್ಲ.

ತನುವನ್ನು ಆವರಿಸಿದ ಮನವೇ ಮರ್ಕಟ . ತನುವಿನ ಕಣ ಕಣದಲ್ಲಿದ್ದ ಅರಿವೇ ಆದ್ಯ , ಪುರಾತನ, ಸದಾಶಿವನೆಂಬ ಮಹಾ ಮಾಂತ್ರಿಕ, ತ್ರೇತಾಯುಗದ ಶ್ರೀರಾಮ !

ತನುವಿನಲ್ಲಿದ್ದ ಮನವೆಂಬ ಮರ್ಕಟಕ್ಕೆ ತನುವಿನಲ್ಲಿಯೇ ಇದ್ದ ಶ್ರೀರಾಮನ ಪರಿಚಯವಾಗಬೇಕು . ಆತನನ್ನು ಮರ್ಕಟ ನಂಬಬೇಕು . ನಂಬಿದ ಕೂಡಲೇ ಮರ್ಕಟ ಆಂಜನೇಯನಾಗಿ ವಿಜಯದ ಪತಾಕೆಯನ್ನು ಹಾರಿಸುವುದು . ಸದಾಶಿವನ ದರ್ಶನಕ್ಕೆ ಹೋಗುವ ವಚನದ ಸೂತ್ರ ಕಹಿಯಾದರೇನಂತೆ ? ಅದು ಉದರಕ್ಕೆ ಬೇವು- ಬೆಲ್ಲದ ಪಾಕ !

ಮನವೆಂಬ ಮರ್ಕಟಕ್ಕೆ ಸದಾಶಿವನ ದರ್ಶನಕ್ಕೆ ಹೋಗುವ ಬಯಕೆಯಾಗಬೇಕು ; ಸೂತ್ರ ಹಿಡಿದು ಸೂಚಿಸುವ ಆದ್ಯರನ್ನು ದೀಪ ಹಚ್ಚಿ ಹುಡಕಬೇಕು. ಸಿಕ್ಕರೆ ಸಾಕು ; ಹುಡುಕುವ ಮನಕ್ಕೆ ತನುವಿನಲ್ಲಿಯೇ ಸದಾಶಿವನ ದರ್ಶನ ಮಾಡಿಸಿ ವಿಜಯಿಯನ್ನಾಗಿ ಮಾಡುತ್ತಾರೆ .

ಹುಡುಕುವ ಮನಗಳಿಗೆ ಬಸವಣ್ಣನವರ ಈ ಸೂತ್ರ ಆದ್ಯರ ವಚನ ; ಪರುಷದಖಣಿ; ವಿಜಯದ ಪತಾಕೆಯೂ ಹೌದು !

172

ಹೊತ್ತಾರೆ ಎದ್ದು ಅಗ್ಘವಣೆ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ .
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು ?
ಹೊತ್ತು ಹೋಗದ ಮುನ್ನ , ಮೃತ್ಯುವೊಯ್ಯದ ಮುನ್ನ
ತೊತ್ತು ಗೆಲಸವ ಮಾಡು ಕೂಡಲ ಸಂಗಮದೇವನ.

ಹಗಲು ಸೂರ್ಯ ಬೆಳಗುವುದರ ಮೂಲಕ ಎಲ್ಲರಿಗೂ ಕಾಣುತ್ತಾನೆ. ತಾನು ಬೆಳಗಿದ ಬೆಳಕಿನಿಂದಲೇ ಕತ್ತಲೆ ನಿರ್ಮಿಸಿ ಯಾರಿಗೂ ಕಾಣದಂತೆ , ಯಾರಿಗೂ ಏನನ್ನೂ ತೋರದಂತೆ ಮಾಡುತ್ತಾನೆ. ಇದು ಸೂರ್ಯನ ಬೆಳಕು-ಕತ್ತಲಿನ ಆಟ .

ಹಾಗೆಯೇ ಮನುಷ್ಯ ಸೂರ್ಯ ಬೆಳಗಿದ ಬೆಳಕಿನಿಂದ ತನ್ನ ಕಣ್ಣ ಬೆಳಕಿನ ಮೂಲಕ ಎಲ್ಲವನ್ನೂ ನೋಡುತ್ತಾನೆ . ಬೆಳಕು ಮುಸುಕಾಗಿ ಕತ್ತಲಾಗುವುದೊಂದೆ ತಡ ನಿದ್ರೆಗೆ ಜಾರುತ್ತಾನೆ .

ಕಣ್ಣ ಬೆಳಕಿನಿಂದ ಮನುಷ್ಯ ಸೂರ್ಯನ ಬೆಳಕನ್ನು ತನ್ನನ್ನು , ತನ್ನ ಮನೆತನ, ಹೆಂಡತಿ ಮಕ್ಕಳನ್ನೂ ಆಸ್ತಿಯನ್ನೂ ಪರಿಚಯಿಸಿದ. ತನ್ನ ಸಂಪತ್ತು , ಅಧಿಕಾರ, ಪದವಿಗಳನ್ನು ಪರಿಚಯಿಸಿದ ತನ್ನ ಬಂಧು ಬಳಗವನ್ನು ಗೆಳೆಯರನ್ನು ಪರಿಚಯಿಸಿದ.

ತಾನು ಹೆಣ್ಣೆಂದು ಗಂಡೆಂದೂ ಪರಿಚಯಿಸಿಕೊಂಡ.

ನಿದ್ರೆಗೆ ಜಾರುವುದೊಂದೇ ತಡ ತಾನು ಯಾರೆಂದು ತನಗೆ ಪರಿಚಯವಾಗಲೇ ಇಲ್ಲ. ತಾನು ಹೆಣ್ಣು ಅಲ್ಲ ಗಂಡೂ ಅಲ್ಲ . ಶ್ರೀಮಂತ ಬಡವ ಭಿಕ್ಷುಕ, ರಾಜನೂ ಅಲ್ಲ . ಶಾಸಕ, ಸಚಿವ, ಅಧಿಕಾರಿ ಕೂಡಾ ಅಲ್ಲ. ಹಗಲು ಎಚ್ಚರದಲಿದ್ದ ; ರಾತ್ರಿ ಪ್ರಾಣವಿದ್ದರೂ ಪರಿಚಯವಿಲ್ಲದ ಹೆಸರಿಲ್ಲದ ಹೆಣದಂತೆ ಮಲಗಿದ್ದ .

ಹಗಲು ತಾನು ಏನೆಲ್ಲಾ ಆಗಿದ್ದೆ ; ರಾತ್ರಿ ತಾನು ಯಾರೂ ಅಲ್ಲ . ರಾತ್ರಿ ಇದ್ದಂತೆ ಹಗಲು ಇರಬಾರದೆ . ಹಗಲು ತಾನು ನಿಜವಾಗಿಯೂ ಯಾರೂ ಅಲ್ಲ ; ಆದರೆ ಏನೆಲ್ಲ ಸಂಪತ್ತಿಗೆ ಒಡೆಯ ! ಹೆಂಡತಿಗೆ ಗಂಡ, ಮಕ್ಕಳಿಗೆ ತಂದೆ, ತಂದೆ ತಾಯಿಗೆ ಮಗ, ಬಂಧು ಬಳಗಕ್ಕೆ ನೆಂಟ ; ಸಮಾಜಕ್ಕೆ ಶ್ರೀಮಂತ, ಶಾಸಕ, ಸಚಿವ, ಅಧಿಕಾರಿಯಾಗಿ ಕಂಡು ದರ್ಪದಿಂದ ಬೀಗುತ್ತಾನೆ. ರಾತ್ರಿ ನಿದ್ರೆ ಹತ್ತುವುದೊಂದೆ ತಡ ತಾನು ಹಗಲು ಏನಾಗಿದ್ದನೊ

ರಾತ್ರಿ ಅದು ಅಲ್ಲ. ಹಗಲಿನ ವೇಷ ರಾತ್ರಿ ಇಲ್ಲ, ರಾತ್ರಿಯ ಸತ್ಯ ಹಗಲು ಒಮ್ಮೆಯೂ ತೋಚುವುದಿಲ್ಲ.

ಮೃತ್ಯು ಬರುವವರೆಗೆ ತನ್ನ ಸತ್ಯ ತನಗೆ ಗೋಚರವಾಗದಿದ್ದರೆ ಹೇಗೆ? ಗಿಡ ಮರ ಬಳ್ಳಿ ಪಶು ಪಕ್ಷಿಗಳು ಸಹಜವಾಗಿಯೇ ಜೀವಿಸುತ್ತವೆ. ಅವುಗಳ ಹೆಸರು ಅವು ಹೇಳುವುದೇ ಇಲ್ಲ.

ತಾನು ಅವುಗಳಿಗೆ ಹಗಲಿನಲ್ಲಿ ಹೆಸರಿಟ್ಟು, ತಾನೇ ಆರೋಪಿಸಿಕೊಂಡು ಹಗಲು ಕುದಿಯುತ್ತಾನೆ. ಆ ನೆನಪು ರಾತ್ರಿಯೂ ಕಾಡಿ ನಿದ್ರೆ ಹತ್ತದೆ ಚಡಪಡಿಸುತ್ತಾನೆ. ನಿದ್ರೆ ಹತ್ತಿದ ಮೇಲೆ ತನ್ನ ಪರಿಚಯ ತನಗೆ ಇಲ್ಲದೆ ಹೆಣದೋಪಾದಿಯಲ್ಲಿ ಮರೆಯಾಗುತ್ತಾನೆ.

ಹೊತ್ತಾರೆ ಎದ್ದು ರಾತ್ರಿಯಂತೆ ಹಗಲು ತಾನಾರೆಂದು ಅರಿವಿನಿಂದ ತಿಳಿಯಬಾರದೆ? ಅಗ್ಘವಣಿ ಪತ್ರೆಯ ತಂದು ಪೂಜಿಸುವ ದೇವರು ಯಾರೆಂದು ಅರಿವಿನಿಂದ ತಿಳಿಯಬಾರದೆ ?

ಹೊತ್ತು ಹೋಗದ ಮುನ್ನ ಅರಿವಿನಿಂದ ತಿಳಿದು ಆ ಅರಿವಿನ ದೇವರನ್ನು ಅರಿವಿನಿಂದ ಪೂಜಿಸಬಾರದೆ ?

ಹೊತ್ತು ಹೋಗಿ ಕತ್ತಲಾದ ಬಳಿಕ ನಿದ್ರೆಯಲ್ಲಿ ಜಾರಿ ಏನೂ ತಿಳಿಯದ ಹೆಣದಂತಾಗುವ ತನುವಿಗೆ ಮತ್ತೆ ಹಗಲಾಗುವುದೊ ಇಲ್ಲವೊ ಎಂದು ಯಾರು ಬಲ್ಲರು?

ಹೊತ್ತು ಹೋಗದ ಮುನ್ನ , ಮೃತ್ಯು ಕೊಂಡೊಯ್ಯದ ಮುನ್ನ ಈ ಎಲ್ಲವನ್ನು ಪರಿಚಯಿಸುವ ಅರಿವಿನ ಸಂಗಯ್ಯನೆಂಬ ತೆತ್ತಿಗನಿಗೆ ತೊತ್ತು ಕೆಲಸವ ಮಾಡುತ್ತ ಬದುಕು; ಎಲೆ ಮನವೆ ಎಂದು ಅಣ್ಣ ಬಸವಣ್ಣನವರು ಅರಿವಿಗೆ ಹೋಗುವ ಮಾರ್ಗವನ್ನು ಮನಕ್ಕೆ ಸೂಚಿಸಿದ್ದಾರೆ. ಅರಿವನ್ನು ಪೂಜಿಸಿ ಅರಿವಿನಿಂದ ಬದುಕಲು ಹೇಳಿದ್ದಾರೆ.

173

ಅಚ್ಚಿಗ ವೇಕಯ್ಯಾ ಸಂಸಾರದೊಳಗೆ ?
ನಿಚ್ಚನಿಚ್ಚ ಶಿವರಾತ್ರಿಯ ಮಾಡುವುದು ;
ಬೇಗ ಬೇಗ ಅರ್ಚನೆ - ಪೂಜನೆಯ ಮಾಡುವುದು,
ಕೂಡಲಸಂಗನ ಕೂಡುವುದು.

ರಾತ್ರಿ ಮಲಗಿದಾಗ ಏನೂ ತಿಳಿಯುವದಿಲ್ಲ . ಹಗಲು ಎಲ್ಲವೂ ತಿಳಿಯುತ್ತಾನೆ. ಎಲ್ಲವನ್ನೂ ಹೆಸರಿಸಿ ಅವುಗಳಿಗೆ ದಾಸನಾಗುತ್ತಾನೆ. ಅನಾವರಣ ಮಾಡಿ ನೋಡುವ ತನುವಿನಲ್ಲಿರುವ ಬೆಳಕು ಬಳಕೆಯಾಗುವುದಿಲ್ಲ . ಹೀಗಾಗಿ ರಾತ್ರಿಯೂ ಕತ್ತಲೇ ; ಹಗಲೂ ಕತ್ತಲೇ!

ದೇವರು, ಆಭರಣ , ಕರೆನ್ಸಿ, ಅಧಿಕಾರ, ವ್ಯಾಮೋಹಕ್ಕೆ ತನು ಮರುಳಾಗುತ್ತದೆ . ಅದು ಏನೆಂದು ಅನಾವರಣ ಮಾಡಿ ನೋಡುವುದೇ ಇಲ್ಲ. ಅದನ್ನು ಪಡೆಯುವುದಕ್ಕಾಗಿ ಹಗಲು ಕುದಿಯುತ್ತದೆ ; ರಾತ್ರಿ ಮಲಗುತ್ತದೆ. ಹೀಗಾಗಿ ಹಗಲು ಕತ್ತಲೇ, ರಾತ್ರಿ ಕೂಡಾ ಕತ್ತಲೇ !

ಅರಿವಿನಿಂದ ನೋಡಿದರೆ ರಾತ್ರಿಯೂ ಬೆಳಕೆ ; ಹಗಲೂ ಬೆಳಕೇ ಆಗಿ

ಆನಂದವಾಗುತ್ತದೆ. ಚಿನ್ನ ಎನ್ನುವುದು ಹಳದಿ ಬಣ್ಣದ ಲೋಹ . ತಿಳಿಯದೆ ವಿನಿಮಯಕ್ಕಾಗಿ ಬೆಲೆ ಕಟ್ಟಿದ . ಸರ ಮಾಡಿಸಿ ಕೊರಳಲ್ಲಿ ಧರಿಸಿದ . ಕಾಲಕ್ರಮೇಣ ಚಿನ್ನದ ಬಣ್ಣ, ಅದರ ಮಾಟ, ಬೆಲೆ ಕಣ್ಣು ಕುಕ್ಕಿತು. ಒಬ್ಬ ಹಗಲಿರುಳು ದುಡಿದು ಖರೀದಿಸಿದ. ಮತ್ತೊಬ್ಬ ಹಗಲಿರುಳು ಹೊಂಚು ಹಾಕಿ ಕಳುವು ಮಾಡಿದ . ಖರೀದಿದಾರ ಹಾಗೂ ಕಳ್ಳರಿಬ್ಬರೂ ಬಣ್ಣಕ್ಕೆ ಬೆಲೆಗೆ ಮಾರು ಹೋದರು . ಇಬ್ಬರಿಗೂ ಲೋಹವೆಂಬ ಬೆಳಕು ಪರಿಚಯವಾಗಲೇ ಇಲ್ಲ. ಹಗಲು ರಾತ್ರಿಗಳೆರಡೂ ಇಬ್ಬರಿಗೂ ಕತ್ತಲಾದವು. ಕಣ್ಣಿನ ಈ ಕತ್ತಲು ಒಬ್ಬನಿಗೆ ಕಳ್ಳನ ಪಟ್ಟ ಕಟ್ಟಿತ್ತು, ಮತ್ತೊಬ್ಬನಿಗೆ ಪ್ರಾಮಾಣಿಕನ ಪಟ್ಟ ಕಟ್ಟಿತು.

ಲೋಹವೆಂದು, ಬಣ್ಣವೆಂದು ತಿಳಿದರೆ ಚಿನ್ನ ಖರೀದಿಸುವುದಿಲ್ಲ, ಕದಿಯುವುದಿಲ್ಲ. ಇಬ್ಬರಿಗೂ ನಿತ್ಯ ನಿತ್ಯ ಶಿವರಾತ್ರಿ : ಬೆಳಕಿನರಾತ್ರಿ ! ಹಗಲೂ ಬೆಳಕೇ , ರಾತ್ರಿಕೂಡಾ ಬೆಳಕೇ ! ಬೇಗ ಬೇಗ ತಿಳಿಯಬೇಕು. ಬೇಗ ಬೇಗ ಅರಿವಿನ ಪೂಜೆಯಲ್ಲಿ ಭಾಗವಹಿಸಬೇಕು , ಕಳ್ಳ - ಖರೀದಿದಾರ ಎನ್ನುವ ಹಣೆಪಟ್ಟಿ ಕಿತ್ತೊಗೆದು ಅರಿವಿನ ಸಮಾಜ ನಿರ್ಮಿಸಬೇಕು. ಅರಿವಿನಿಂದ ನೋಡಬೇಕು; ಅರಿವಿನಿಂದ ಕೂಡಬೇಕು. ತನುವಿನ ಅರಿವಿನಲ್ಲಿ ಮನ ಸಂಗಮವಾಗಿ ಕೂಡಲಸಂಗಯ್ಯನೆ ತಾನಾಗಬೇಕು .

174

ಅಂದು ಇಂದು ಮತ್ತೊಂದೆನ ಬೇಡ ;
ದಿನವಿಂದೇ ಶಿವಶರಣೆಂಬವಂಗೆ !
ದಿನವಿಂದೇ ಹರಶರಣೆಂಬವಂಗೆ !
ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ !

ತನುವಿನಲ್ಲಿ ಅದ್ಭುತವಾದ ಅರಿವಿನ ಬೆಡಗು ತುಂಬಿದೆ , ಮನ ಮಾತ್ರ ಬಳಕೆಯಾಗಿ ಅರಿವು ಒಂದಂಶವೂ ತನುವಿಗೆ ಬಳಕೆಯಾಗದಿರುವುದು ಒಂದು ವಿಚಿತ್ರವೇ ಸರಿ. ಅದಕ್ಕಾಗಿಯೇ ಅನೇಕ ಅರಿವಿನ ಆಶ್ರಮಗಳು ವ್ಯವಹಾರಕ್ಕಾಗಿ ಹುಟ್ಟಿಕೊಂಡಿವೆ. ಒಂದೊಂದು ಆಶ್ರಮಗಳೂ ಸಾವಿರಾರು ಕೋಟಿ ರೂ. ಗಳ ವ್ಯವಹಾರದಲ್ಲಿ ತೊಡಗಿರುವುದು ಈ ದೇಶದಲ್ಲೊಂದೇ ಅಲ್ಲ ಇಡೀ ಪ್ರಪಂಚದಲ್ಲಿಯೇ ಗೋಚರಕ್ಕೆ ಬರುತ್ತಲಿದೆ.

ಒಂದು ತನು ಮತ್ತೊಂದು ತನುವಿಗೆ ಪಾಠ ಮಾಡುವುದರಿಂದ ಕೇಳಿದ ತನು ಶಿಷ್ಯನಾಗಬೇಕು . ಹೇಳಿದ ತನು ಗುರುವಾಗಬೇಕು . ಇವೆರಡೂ ವ್ಯವಹಾರಕ್ಕೆ ಕಾರಣವಾಗುತ್ತದೆ ಎಂದು ಎರಡೂ ತನುಗಳಿಗೆ ಹೊಳೆಯುತ್ತಿಲ್ಲ.

ಹೇಳುವವನಿಗೆ ತಿಳಿದರೆ ತನುವಿನಲ್ಲಿ ಬೆಡಗು ಹೇಗಿದೆ ಎಂದು ಸೂಚಿಸಿ, ಗುರುವಾಗದೆ ಶಿಷ್ಯನನ್ನಾಗಿ ಮಾಡಿಕೊಳ್ಳದೆ ಸುಮ್ಮನಾಗಬಹುದಲ್ಲ. ಇದು ಸದ್ಗುರು ವಿದ್ಯಾನಂದರಿಗೆ, ಶರಣರಿಗೆ ದಾಸರಿಗೆ ಮಾತ್ರ ಸಾಧ್ಯವಾಯಿತು .

ಇವರು ತನುಗಳಿಗೆ ಗುರುವಾಗಲಿಲ್ಲ. ತನುವಿನಲ್ಲಿರುವ ಅರಿವು ಹೇಗೆ ಮನಕ್ಕೆ ಗುರುವಾಗಬೇಕು ಎಂದು ಸೂಚಿಸಿದರು. ಆ ಅರಿವಿಗೆ ಮನ ಹೇಗೆ ಶರಣು ಹೋಗಬೇಕು ಎಂದು ಸೂಚಿಸಿದರು . ಆ ಅರಿವಿಗೆ ಮನ ಹೇಗೆ ದಾಸನಾಗಬೇಕು ಎಂದು ಸೂಚಿಸಿದರು .

ಬಸವಣ್ಣನವರು ತನುವಿನಲ್ಲಿ ಸಂಗಮವಾದ ಅರಿವಿಗೆ ಕೂಡಲಸಂಗಯ್ಯ ಎಂದು ನಾಮಕರಣ ಮಾಡಿದರು . ಅಂದು ಇಂದು ಮತ್ತೊಂದು ಎನ್ನದೆ ತನುವಿನೊಡೆಯ ಸಂಗಯ್ಯನನ್ನು ನೆನೆಯಲು ದಿನವಿಂದೇ ಎಂದು ಹಾಡಲು ಮನಕ್ಕೆ ಆದೇಶ ನೀಡಿದರು .

ಅರಿವೇ ಶಿವ ; ಆ ಶಿವನಿಗೆ ಶರಣುಹೋಗಿ ಶರಣೆಂದು ಹಾಡುವ ಮನಕ್ಕೆ ದಿನವಿಂದೆ! ಅರಿವೇ ಹರ ಆ ಹರನಿಗೆ ಶರಣು ಹೋಗಿ ಶರಣೆಂದು ಹಾಡುವ ಮನಕ್ಕೆ ದಿನವಿಂದೇ ! ಅಂದು ಇಂದು ಮತ್ತೊಂದೆನ್ನದೆ ತನುವಿನಲ್ಲಿ ಸಂಗಮವಾದ ಸಂಗಯ್ಯನನ್ನು ಮರೆಯದೆ ನೆನೆವಂಗೆ ದಿನವಿಂದೇ !

175

ಅಷ್ಟವಿಧಾರ್ಚನೆ ಷೋಢಶೋಪಚಾರವ ಮಾಡುವುದು ;
ಮಾಡಿದ ಪೂಜೆಯ ನೋಡುವುದಯ್ಯಾ.
ಶಿವತತ್ವಗೀತವ ಹಾಡುವುದು ;
ಶಿವನ ಮುಂದೆ ನಲಿದಾಡುವುದಯ್ಯಾ.
ಭಕ್ತಿ ಸಂಭಾಷಣೆಯ ಮಾಡುವುದು ;
ನಮ್ಮ ಕೂಡಲಸಂಗನ ಕೂಡುವುದು.

ಅಷ್ಟವಿಧಾರ್ಚನೆ ಷೋಢಶೋಪಚಾರವ ಮಾಡುವುದು ; ಮಾಡಿದ ಪೂಜೆಯ ನೋಡುವುದಯ್ಯಾ ! :

ಜಲ, ವಿಭೂತಿ, ಗಂಧಾಕ್ಷತೆ, ಪತ್ರ- ಪುಷ್ಪ, ಧೂಪ, ದೀಪ, ನೈವೇದ್ಯ ,ವಂದನೆ ಇವು ಅಷ್ಟವಿಧಾರ್ಚನೆ .

ಷೋಡಶೋಪಚಾರ : ಅಭಿಷೇಕ, ವಿಭೂತಿ, ಗಂಧ, ಅಕ್ಷತೆ, ರುದ್ರಾಕ್ಷಿ, ಪತ್ರ , ಪುಷ್ಪ, ಧೂಪ, ದೀಪ, ಘಂಟಾನಾದ, ನೈವೇದ್ಯ , ಗೀತ, ಫಲತಾಂಬೂಲ, ಸ್ತೋತ್ರ, ಪ್ರದಕ್ಷಿಣ , ನಮಸ್ಕಾರ.

ಪ್ರಾತಃ ಕಾಲದಲ್ಲಿ ಎದ್ದು ಶೌಚಾದಿಕ್ರಿಯೆಗಳನ್ನು ಮುಗಿಸಿ, ಸ್ನಾನ ಮಾಡಿ, ಶುದ್ಧೋದಕದಿಂದ ದೇವರನ್ನು ತೊಳೆದು, ವಿಭೂತಿ ಗಂಧಾದಿಗಳನ್ನು ಧರಿಸಿ ಪತ್ರ ಪುಷ್ಪಗಳನ್ನು ಇಟ್ಟು ಧೂಪ ದೀಪ ನೈವೇದ್ಯ ಮಾಡಿ ನಮಸ್ಕರಿಸುವುದು. ಹೀಗೆ ಮಾಡಿದ ಪೂಜೆಯ ನೋಡಿದಾಗ ಮಾಡಿದಾತ ಭ್ರಮೆಯಿಂದ ಆನಂದಪಟ್ಟನೇ ಹೊರತು ಪೂಜೆ ಮಾಡಿಸಿಕೊಂಡ ದೇವರು ಆನಂದ ಪಡಲಿಲ್ಲ. ಆದರೆ ಅಣ್ಣನವರು ಹೇಳಿದಂತೆ ಮಾಡಿದ ಪೂಜೆಯ ನೋಡುವುದು ಹೇಗೆ ? ಶಿವತತ್ವ ಗೀತವ ಹಾಡುವುದು ಹೇಗೆ ? ನಿಜ ಶಿವನ ಮುಂದೆ ನಲಿದಾಡುವುದು ಹೇಗೆ ? ಆತನ ಮುಂದೆ ಭಕ್ತಿ ಸಂಭಾಷಣೆಯ ಮಾಡುವುದು ಹೇಗೆ ? ಕೂಡಲ ಸಂಗನ ಕೂಡಿ ಕೊಳ್ಳುವುದು ಹೇಗೆ ಎನ್ನುವುದು ತಿಳಿಯಲಿಲ್ಲ . ಉರಿಲಿಂಗದೇವರು ಈ ಕೆಳಗಿನಂತೆ ಮೈಮರೆತು ಹಾಡಿದ್ದಾರೆ .

'' ಎನ್ನಂಗದಲ್ಲಿ ನಿನಗೆ ಮಜ್ಜನ . ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ, ಎನ್ನ ತುರುಬಿನಲ್ಲಿ ನಿನಗೆ ಕುಸುಮ ಪೂಜೆ ಎನ್ನ ನೇತ್ರದಲ್ಲಿ ನಿನಗೆ ನಾನಾರೂಪು ವಿಚಿತ್ರ ವಿನೋದ. ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾ ವಾದ್ಯಕೇಳಿರೇ. ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ

ಪರಿಮಳ. ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ. ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ, ಎನ್ನ ಸಚ್ಚಿದಾನಂದವೆಂಬ ಸೆಜ್ಜೆಗೃಹದಲ್ಲಿ ನೀನು ಸ್ಪರ್ಶನಂಗೈದು ನೆರೆದಿಪ್ಪೆಯಾಗಿ, ನೀ ನಾ ನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ. ''

ಒಂದು ಕಲ್ಲಿನಲ್ಲಿ ಹಲವಾರು ದೇವರನ್ನು ಕೆತ್ತಿ ಮಜ್ಜನ ಮಾಡಿದರೆ, ನಾನು ಬೆವೆಯ ಬೇಕೆ ಹೊರತು ದೇವರು ನೆನೆದು ಮೃದುವಾಗುವುದಿಲ್ಲ. ಪುಳಕಿತಗೊಳ್ಳುವುದಿಲ್ಲ , ನನಗೆ ನಾನೇ ಮಜ್ಜನ ಮಾಡಿಕೊಂಡರೆ ನನ್ನೊಳಗಿದ್ದ ಅರಿವು ಸ್ಪಂದಿಸಿ ಇಡೀ ತನು ಪುಳಕಿತಗೊಳ್ಳುತ್ತದೆ. ತುರಬಿಗೆ ಇಟ್ಟುಕೊಂಡ ಪುಷ್ಪದಿಂದ ಮೈನವಿರೇಳುತ್ತದೆ. ಅದರ ಸುವಾಸನೆಯ ಪರಿಮಳ ಮೂಗಿಗೆ ಬಡಿದು ತನುವಿಗೆ ಸುಖದ ಸಂದೇಶ ಕಳಿಸುತ್ತದೆ.

ನಾಲಿಗೆಗೆ ಅರ್ಪಿಸಿದ ಷಡ್ರಸಾನ್ನವು ತನುವಿಗೆ ನೈವೇದ್ಯವಾಗುತ್ತದೆ. ಕಿವಿಗೆ ಬಡಿದ ಪಂಚಮಹಾವಾದ್ಯಗಳಿಂದ ತನು ಆನಂದ ಹೊಂದಿ ಆಡಿ ಹಾಡಿ ನಲಿದಾಡುತ್ತದೆ. ಕಣ್ಣುಗಳು ಹಲವಾರು ರೂಪು ವಿಚಿತ್ರ ವಿನೋದಗಳನ್ನು ನೋಡಿ ತನುವಿಗೆ ಸತ ಚಿತ್ ಆನಂದವನ್ನೇ ಉಂಟು ಮಾಡುತ್ತದೆ.

ಅರಿವೆಂಬ ಸಂಗಮನಾಥನು ಚರ್ಮದ ಕಣಕಣದಲ್ಲಿ ವಾಸಮಾಡಿ ಸದಾ ಸ್ಪರ್ಶದ ಸುಖವನ್ನೇ ನೀಡುತ್ತಿದ್ದಾನೆ. ಅವನು ಎನ್ನುವ ಅರಿವು, ನಾನು ಎನ್ನುವ ಮನ ಅಳಿದು , ತಾನು ತಾನೇ ಆಗಿ ತನುವಿನಲ್ಲಿ ಕೂಡಿದ ಸಂಗಯ್ಯನೆಂಬ ಘನವನು ಪೂಜಿಸುವ ಸೂತ್ರವನ್ನು ಅಣ್ಣ ಬಸವಣ್ಣನವರು ನೀಡಿದ್ದಾರೆ .

176

ಆಳಿಗೊಂಡಹರೆಂದು ಅಂಜಲದೇಕೆ ?
ನಾಸ್ತಿಕವಾಡಿಹರೆಂದು ನಾಚಲದೇಕೆ ?
ಆರಾದಡಾಗಲಿ ಶ್ರೀ ಮಹಾದೇವಂಗೆ ಶರಣೆನ್ನಿ .
ಏನೂ ಅರಿಯೆನೆಂದು ಮೌನಗೊಂಡಿರಬೇಡ ,
ಕೂಡಲಸಂಗಮದೇವರ ಮುಂದೆ ದಂದಣ ದತ್ತಣ ಯೆನ್ನಿ

ಆಳಿಗೊಂಡಹರೆಂದು ಅಂಜಲದೇಕೆ ? ನಾಸ್ತಿಕವಾಡಿಹರೆಂದು ನಾಚಲದೇಕೆ ? :

ಕಲ್ಲು ಕೆತ್ತಿ ಆವರಣಕ್ಕೆ ಹಾಕಿ, ಪೌಳಿ ದೇವಾಲಯ ಕಟ್ಟಿ , ಶಿಖರ ನಿರ್ಮಿಸಿ, ಆ ಕಲ್ಲಿನಿಂದಲೇ ದೇವರನ್ನು ಮಾಡಿ, ಗರ್ಭಗುಡಿಯಲ್ಲಿಟ್ಟು ಪತ್ರೆ ಪುಷ್ಪಗಳಿಂದ, ಧೂಪ ದೀಪಗಳಿಂದ, ಷಡ್ರಸಾನ್ನ ನೈವೇದ್ಯಗಳಿಂದ , ಮಂತ್ರ ತಂತ್ರಗಳಿಂದ ದೇವರೆಂದು ಪೂಜಿಸುವವರನ್ನು ನೋಡಿ ಅಂಜುವಿಯೇಕೆ ? ಇದನ್ನು ತಿಳಿದು ಪೂಜೆ ಮಾಡಿದ ನಿನ್ನನ್ನು ಅವರು ನಾಸ್ತಿಕರೆಂದು ಜರಿದರೆಂದು ನಾಚಿಕೆಯೇಕೆ ?

ಎಲೆ ಮನವೇ ಕಲ್ಲೆಂದು ತಿಳಿಯದೆ ಪೂಜೆ ಮಾಡುವವರನ್ನು ಕಂಡು ಅಂಜಬೇಡ ! ಅವರು ನಾಸ್ತಿಕರೆಂದು ನಿಂದೆ ಮಾಡಿದರೆ ನಾಚಬೇಡ ! ಏನೂ ಅರಿಯೆನೆಂದು ಮೌನಗೊಂಡಿರಬೇಡ . ಅದು ಕಲ್ಲೆಂದು ನಿನಗೆ ತಿಳಿದಿಲ್ಲವೆ?.

ಎಲೆ ಮನವೆ , ಯಾರಾದರಾಗಲಿ ಅರಿವೆಂಬ ಶ್ರೀ ಮಹಾದೇವನಿಗೆ ಶರಣೆನ್ನಬೇಕು. ಅರಿವಿನ ಸಂಗಯ್ಯನೆಂಬ ದೇವರ ಮುಂದೆ ಯಾವ ಮಂತ್ರ ತಂತ್ರ ಪೂಜಾವಿಧಾನಗಳನ್ನು

ಅನುಸರಿಸದೆ ನಿನಗೆ ತಿಳಿದಂತೆ ಕುಣಿ ಕುಣಿದು ಹಾಡಬೇಕು .

177

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ,
ತಪ್ಪುವುವು ಅಪಮೃತ್ಯು ಕಾಲಕರ್ಮಂಗಳಯ್ಯ ,
ದೇವ ಪೂಜೆಯ ಮಾಟ, ದುರಿತ ಬಂಧನದೋಟ !
ಶಂಭು ನಿಮ್ಮಯ ನೋಟ, ಹಿಂಗದ ಕಣ್ಬೇಟ !
ಸದಾ ಸನ್ನಹಿತನಾಗಿ ಶರಣೆಂಬುವುದು, ನಂಬುವುದು.
ಜಂಗಮಾರ್ಚನೆಯ ಮಾಟ ಕೂಡಲಸಂಗನ ಕೂಟ !

ಮಲಗಿದಾಗ ಮನುಷ್ಯ ಹೆಣ್ಣಲ್ಲ, ಗಂಡಲ್ಲ. ಶ್ರೀಮಂತ ಬಡವ ಶಾಸಕ ಸಚಿವ ಅಧಿಕಾರಿ ಭಿಕ್ಷುಕನೂ ಅಲ್ಲ. ಕಳ್ಳನಲ್ಲ, ಪಂಡಿತನಲ್ಲ . ಇವು ಯಾವೂ ತಾನಲ್ಲದೆ ರಾತ್ರಿ ಸುಂದರ ವಾಗಿ ನಿದ್ರೆಯಲ್ಲಿ ಕಾಲ ಕಳೆಯುತ್ತಾನೆ. ಬೆಳಕು ಹರಿದರೆ ಸಾಕು ; ಇವೆಲ್ಲವೂ ತನಗೆ ಧುತ್ತೆಂದು ಕಾಡುತ್ತವೆ.

ಅರಿವು ಮರೆಯಾದದ್ದಕ್ಕೆ ಮನುಷ್ಯ ಹಾಕಿದ ಪಾತ್ರಗಳು ಮನುಷ್ಯನನ್ನೇ ತಿಂದು ಹಾಳುಮಾ ಡುತ್ತವೆ. ಇದು ಮನದ ಕೆಲಸ. ಮನದಿಂದ ಹೆಣ್ಣು ನೋಡಿ ರಸಾಯನಿಕ ಕ್ರಿಯೆ ಉಂಟಾಗಿ ಭೋಗಿಸಲು ಮುಂದಾದರೆ ತನುಗಳಿಗೆ ಅಪಮೃತ್ಯು. ಅರಿವಿನಿಂದ ನೋಡಿದರೆ ಚರ್ಮ ಹೆಣ್ಣಲ್ಲ, ಗಂಡಲ್ಲ ! ಅದರೊಳಗಿದ್ದ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಕೂಡಾ ಹೆಣ್ಣಲ್ಲ ಗಂಡಲ್ಲ. ಮನ ಅರಿವನ್ನು ಬಳಕೆ ಮಾಡಿ ನೋಡಿದರೆ ಅದು ತನ್ನಂತೆ ಇರುವ ತನು. ಮನ ತನುವನ್ನು ಬಳಕೆ ಮಾಡಿ ನೋಡಿದರೆ ಅದು ಹೆಣ್ಣಾಗಿ ಗಂಡಾಗಿ ಕಾಣುತ್ತದೆ. ತನುವಿಗೆ ಆಪ ತ್ಕಾಲ ಶುರು ಆಗುತ್ತದೆ. ಅಪಮೃತ್ಯು ತನಗೆ ತಾನೇ ತಂದುಕೊಳ್ಳುತ್ತದೆ.

ಸುಪ್ರಭಾತ ಸಮಯದಲ್ಲಿ ಎದ್ದು ಮನ ಅಂಗದಲ್ಲಿರುವ ಅರಿವೆಂಬ ಲಿಂಗದ ಸಂಬಂಧ ಬೆಳೆಸಿ ಅರಿವಿನಿಂದ ನೋಡಿದರೆ ಅಪಮೃತ್ಯುಗಳೆಲ್ಲ ಕ್ಷಣಾರ್ಧದಲ್ಲಿ ತಪ್ಪುವವು. ಮನ ಅರಿವಿನ ಪೂಜೆಯಲ್ಲಿ ನಿರತವಾದರೆ ಪಾಪದ ಕ್ರಿಯೆಗಳು ತೊಲಗುವವು. ಅರಿವಿನ ನೋಟ ಹಿಂಗದ ಕೂಟ ; ಕೂಡದ ಅಗಲದ ಕೂಟ.

ಮನ ಸದಾ ಅರಿವಿನಿಂದ ಅಗಲದೆ ಅರಿವಿನಲ್ಲಿ ಬೆರೆತು ಅರಿವಿಗೆ ಶರಣೆನ್ನಬೇಕು. ಅರಿ ವನ್ನೇ ನಂಬಬೇಕು. ಅರಿವೆ ಗುರು ; ಅರಿವೇ ಜಂಗಮ. ಅರಿವಿನಲ್ಲಿ ಮನ ಸಂಗಮವಾಗಿ ತನು ವಿನ ಮಾಟದಲ್ಲಿ ಹೊರಬಂದಿದೆ. ಈ ಮೂರರ ಕೂಟವೇ ಕೂಡಲಸಂಗನ ಕೂಟ !

178

ಅಂಕ ಕಳನೇರಿ ಕೈಮರೆದಿರ್ದಡೆ
ಮಾರಂಕ ಬಂದಿರುವುದ ಮಾಬನೆ?
ನಿಮ್ಮ ನೆನಹ ಮತಿ ಮರೆದಿರ್ದಡೆ,
ಪಾಪ ತನುವನಂಡಲೆವುದ ಮಾಬುದೆ?

ಕೂಡಲಸಂಗಯ್ಯನ ನೆನೆದಡೆ,
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ.

ಅಂಕ ಕಳನೇರಿ ಕೈ ಮರೆದಿರ್ದಡೆ, ಮಾರಂಕ ಬಂದಿರುವುದು ಮಾಬನೆ :

ತನು ಎಂಬುದು ಒಂದು ಯುದ್ಧ ಭೂಮಿ. ಇದಕ್ಕೆ ಜ್ಞಾನಿಗಳು ಅಂಗ, ಅಂಗೈ, ಕರ, ಕೈ ಎಂದೂ ಕರೆದಿದ್ದಾರೆ. ಈ ಅಂಗದಲ್ಲಿ ಐದು ಜ್ಞಾನದ ಬಾಗಿಲುಗಳು ಇವೆ. ಅದಕ್ಕಾಗಿಯೇ ಶರಣರು ಇದನ್ನು ಅಂಗೈ, ಕೈ ಎಂದು ಕರೆದಿದ್ದಾರೆ. ಇದರಲ್ಲಿ ಮನವೆಂಬ ಮಾರಂಕ ವಾಸವಾಗಿದ್ದಾನೆ. ಇವನು ಜ್ಞಾನದ ಐದು ಬಾಗಿಲುಗಳನ್ನು ಬಳಸಿಕೊಂಡು ಜ್ಞಾನದಿಂದ ಯುದ್ಧ ಮಾಡಿದರೆ ಯೋಧ ಮಹಾವೀರ ಎಂದೆನ್ನಿಸಿಕೊಳ್ಳುತ್ತಾನೆ. ಜ್ಞಾನ ಮರೆತು ತನು ಬಳಸಿಕೊಂಡು ಯುದ್ಧ ಮಾಡಿದರೆ ಖಳನಾಯಕ, ಅಂಗುಲಿಮಾಲ, ಬ್ರಹ್ಮರಕ್ಕಸನೆಂದು ಅನ್ನಿಸಿಕೊಳ್ಳುತ್ತಾನೆ. ಆಗ ಮಹಾಜ್ಞಾನಿ ಮಾರಾಂಕನೇ ಬಂದು ಮನವೆಂಬ ಅಜ್ಞಾನವನ್ನು ಇರಿದು ಕೊಲ್ಲುತ್ತಾನೆ.

ನಿಮ್ಮ ನೆನಹ ಮಿತಿ ಮರೆದಿರ್ದಡೆ ಪಾಪ ತನುವನಂಡಲೆವುದು ಮಾಬುದೆ :

ಮನ ತನುವಿನಲ್ಲಿರುವ ಅರಿವನ್ನು ಮರೆತು ಆ ಅರಿವನ್ನು ನೆನೆದು ಬಳಸದಿರ್ದಡೆ; ತನುವಿನ ಮನವೇ ಅಜ್ಞಾನವಾಗಿ ತನುವಿಗೆ ವೈರಿಯಾಗಿ ತನುವನ್ನೇ ಉಂಡು ಅಲೆಯುತ್ತದೆ. ತನುವಿನ ಅರಿವೇ ಬ್ರಹ್ಮ; ತನುವಿನ ಮನವೇ ಭ್ರಮೆ. ಭ್ರಮೆಯೇ ತನುವನ್ನು ಆಳಿದರೆ ಬ್ರಹ್ಮ ತನು ಉಳಿದೀತೆ?

ಕೂಡಲಸಂಗಯ್ಯನ ನೆನೆದಡೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ:

ಮನ ಅರಿವಿನ ಬೆಳಕಿನಿಂದ ಹುಟ್ಟಿ ತನುವನ್ನು ಅರಗಿನಂತೆ ಮೆತ್ತಿಕೊಂಡಿದೆ. ಅರಿವೆಂಬ ಸಂಗಯ್ಯನನ್ನು ಮನ ನೆನೆಯುವುದೊಂದೇ ತಡ, ಮನ ಮಾಡಿದ ಪಾಪ ಅರಿವಿನ ಉರಿಗೆ ಒಡ್ಡಿದ ಅರಗಿನಂತೆ ಕರಗುವುದು. ಅರಿವಿನ ತನುವೊಂದೇ ಉಳಿಯುವುದು.

179

ಆಡಿಹರಯ್ಯಾ ಹಾಡಿಹರಯ್ಯಾ ಮನಬಂದ ಪರಿಯಲ್ಲಿ!
ಶಿವಶರಣರ ಮುಂದೆ ಆಡಿಹರಯ್ಯ ಹಾಡಿಹರಯ್ಯಾ !
ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತನೀವ,
ನಮ್ಮ ಕೂಡಲಸಂಗಮದೇವ.

ಶಿವಶರಣರೆಂದರೆ ಮಹಾಜ್ಞಾನಿಗಳು, ಅವರಿಗೆ ಎಲ್ಲರು ಸಮಾನರೆ,ಅರಿವು ತನುವಿನೊಳಗೆ ಇದ್ದು ಬಳಕೆ ಮಾಡದೆ ಒಬ್ಬ ಕಳ್ಳನ ಆಟ ಆಡುತ್ತಾನೆ, ಕೊಲೆಗಡುಕ ಕ್ರೂರಿ ಗೂಂಡಾನ ಆಟ ಆಡುತ್ತಾನೆ. ವೇಶ್ಯೆ ವಿಟ ಪ್ರಾಮಾಣಿಕ, ಅಧಿಕಾರಿ ಜವಾನನ ಆಟ ಆಡುತ್ತಾನೆ. ರಾಜ ಮಂತ್ರಿ ಶಾಸಕ ಸಚಿವನ ಆಟ ಆಡುತ್ತಾನೆ. ಮತ್ತೊಬ್ಬ ಪುಸ್ತಕಗಳನ್ನು ಓದಿ ಪಂಡಿತ ಉಪನ್ಯಾಸಕ ಸಾಹಿತಿಯ ಆಟ ಆಡಿ ಹಾಡುತ್ತಾನೆ.

ಮಹಾಜ್ಞಾನಿ ಶಿವಶರಣರ ಮುಂದೆ ಆಡಿದ ಆಟ, ಹಾಡಿದ ಹಾಡುಗಳೆಲ್ಲ ಕೋಡಂಗಿ ಮಾಡಿದ ಹಾಸ್ಯದ ಪಾತ್ರಗಳು.

ತನು ಒಂದು ರಂಗಭೂಮಿ, ಮನ ಪಾತ್ರಧಾರಿ, ಅರಿವು ಅದರ ಸೂತ್ರಧಾರಿ! ಆದರೂ

ಮನಕ್ಕೆ ಸೂತ್ರಧಾರಿಯ ಪರಿಚಯವಿಲ್ಲ, ಕೋಡಂಗಿಯ ಪಾತ್ರವು ನಿಲ್ಲುವುದಿಲ್ಲ, ಶಿವಶರಣರು ಕೋಡಂಗಿಯನ್ನು ಕೈಹಿಡಿದು ಕರೆದುಕೊಂಡು ಹೋಗಿ ಸೂತ್ರಧಾರಿಗೆ ಒಪ್ಪಿಸುತ್ತಾರೆ. ಆತ ಕೋಡಂಗಿಯ ಆಟವನೆಲ್ಲ ಮರೆಸಿ ಅರಿವನಿತ್ತು ಕರುಣಿಸಿ ತನ್ನಂತೆ ಮಾಡಿಕೊಳ್ಳುತ್ತಾನೆ, ಬಸವಣ್ಣನವರು ಆ ಸೂತ್ರಧಾರಿಯನ್ನು ಬೇಡಿದ್ದನ್ನು ಕೊಡುವ ಕೂಡಲ ಸಂಗಮದೇವ ಎಂದು ಕರೆದಿದ್ದಾರೆ.

180

ಹೊಲಬು ಗೊಂಡರಸಬೇಡ , ಬಲಿತು ತರಬೇಡ ;
ಒಲಿದೊಮ್ಮೆ ಶಿವಶರಣೆನ್ನಿರಯ್ಯಾ ,
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ ,
ಕೂಡಲಸಂಗಮದೇವ ಭಕ್ತಿಲಂಪಟನಾಗಿ !

ಹೊಲಬುಗೊಂಡರಸಬೇಡ , ಬಲಿತು ತರಬೇಡ , ಒಲಿದೊಮ್ಮೆ ಶಿವಶರಣೆನ್ನಿರಯ್ಯಾ :

ಪಂಡಿತನೆಂದು, ತಿಳಿದವನೆಂದು, ಮಹಾಜ್ಞಾನಿಯೆಂದು ಪುಸ್ತಕದಲ್ಲಿ, ಪುಣ್ಯ ಕ್ಷೇತ್ರದಲ್ಲಿ ದೇವಸ್ಥಾನದಲ್ಲಿ ಜ್ಞಾನವನ್ನು ಹುಡುಕಬೇಡ , ಹಣ ಕೊಟ್ಟು ತಂದು ಪೂಜಿಸಬೇಡ. ಜ್ಞಾನ ಪುಸ್ತಕದಲ್ಲಿ , ಪುಣ್ಯ ಕ್ಷೇತ್ರದಲ್ಲಿ ದೇವಸ್ಥಾನದಲ್ಲಿ, ಪಂಡಿತನಲ್ಲಿ ಸಿಗುವ ವಸ್ತುವಲ್ಲ. ಅದು ತನುವಿನಲ್ಲಿಯೇ ತನ್ಮಯವಾದದ್ದು . ಆದರೂ ಮನಕ್ಕೆ ಪರಿಚಯವಿಲ್ಲ.

ತನ್ನ ತಾನರಿಯದ ಮುನ್ನ ಅರಿವು ತನುವಿನಲ್ಲಿಯೇ ತನ್ಮಯವಾಗಿದೆ . ತನ್ನ ತಾನು ಅರಿತರೆ ಅರಿವು ತನುವಿನಲ್ಲಿಯೇ ತನ್ಮಯವಾಗಿದೆ ಎಂದು ತಿಳಿಯುತ್ತದೆ . ತನ್ನ ತನುವಿನಲ್ಲಿ ಇರುವ ಅರಿವು ತನ್ನ ಮನಕ್ಕೆ ಹೊಳೆದು ಕರಗತವಾದರೆ ಆ ಅರಿವೇ ತಾನಾಗುತ್ತದೆ , ಎಂದು ಆದಯ್ಯ ಶರಣರು ಹೇಳಿದ್ದಾರೆ. ಹಾಗೆಯೇ ಬಸವಣ್ಣನವರು ತನುವಿನಲ್ಲಿರುವ ಅರಿವು ಮನಕ್ಕೆ ತಿಳಿದು ಒಮ್ಮೆ ಕೂಗಿದರೆ ಸಾಕು ಮನ ತನ್ನ ಅಜ್ಞಾನ ಕಳೆದುಕೊಂಡು ಮುಕ್ತನಾಗುತ್ತದೆ ಎಂದಿದ್ದಾರೆ .

ಕೂಡಲಸಂಗಮದೇವ ಭಕ್ತಿಲಂಪಟನಾಗಿ :

ಮನಕ್ಕೆ ಭೂಮಿ ಅದರ ಗರ್ಭದಲ್ಲಿದ್ದ ಹೇಮ ಹಾಗೂ ತನುವಿನ ವಿಷಯದ ಸುಖದ ಅರಿವು ಇದೆ . ಹೀಗಾಗಿ ಮನಕ್ಕೆ ಶರಣರು ವಿಷಯಲಂಪಟವೆಂದು ಕರೆದಿದ್ದಾರೆ . ಹಾಗೆಯೇ ಮನಕ್ಕೆ-ತನುವಿನ ಅರಿವಿನ ಸುಖದ ಅರಿವಾಗಿ ಒಲಿದರೆ ಅದಕ್ಕೆ ಬಸವಣ್ಣನವರು ಭಕ್ತಿಲಂಪಟನೆಂದು ಕರೆದಿದ್ದಾರೆ. ಈತ ತನ್ನನ್ನು ನೆನೆದವರನ್ನು ತನಗೆ ಭಕ್ತಿ ಮಾಡಿದವರನ್ನು ತನ್ನಂತೆಮಾಡಿಕೊಳ್ಳುತ್ತಾನೆ. ಕಟ್ಟಿಗೆಯಲ್ಲಿ ಬೆಂಕಿ ಇದೆ ; ಕಟ್ಟಿಗೆಗೆ ತಿಳಿದಿಲ್ಲ . ಕಟ್ಟಿಗೆಯಲ್ಲಿದ್ದ ಬೆಂಕಿ ಕಟ್ಟಿಗೆಯನ್ನು ಘರ್ಷಿಸಬೇಕು . ಕಟ್ಟಿಗೆ ಬೆಂಕಿಯಾಗಿ ಬೆಳಕಾಗಿ ಬಯಲಾಗುವುದು . ಹಾಗೆಯೇ ತನುವಿನಲ್ಲಿ ಆವರಿಸಿದ ಮನ ತನುವಿನ ಅರಿವನ್ನು ಅರಿಯಬೇಕು. ಆ ಅರಿವೇ ತಾನಾಗಿ ತನುವಿದ್ದಾಗಲೇ ಬೆಳಗಿ ಬಯಲಾಗಬೇಕು. ಮನಕ್ಕೆ ಮನದಟ್ಟಾಗಲು ಬಲವಾದ ಅರಿವಿನ ಒಂದು ಕೂಗು ಸಾಕು !

181

ನಾದಪ್ರಿಯ ಶಿವನೆಂಬರು , ನಾದಪ್ರಿಯ ಶಿವನಲ್ಲವಯ್ಯಾ .
ವೇದಪ್ರಿಯ ಶಿವನೆಂಬರು , ವೇದಪ್ರಿಯ ಶಿವನಲ್ಲವಯ್ಯಾ .
ನಾದವ ಮಾಡಿದ ರಾವಣಂಗೆ ಅರೆ ಆಯುಷ್ಯವಾಯಿತ್ತು .
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು .
ನಾದಪ್ರಿಯನೂ ಅಲ್ಲ , ವೇದಪ್ರಿಯನೂ ಅಲ್ಲ ,
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.

ನಾದದಿಂದ , ವೇದ ಮಂತ್ರಗಳಿಂದ ಶಿವನನ್ನು ಪೂಜಿಸುವುದು , ಆರಾಧಿಸುವುದು , ಭ್ರಮೆಯಿಂದ ಒಲಿಸಿಕೊಳ್ಳುವುದು ರೂಢಿಯಲ್ಲಿದೆ . ಸಂಗೀತದಿಂದ ವೇದ ಮಂತ್ರಗಳ ಘೋಷಣೆಯಿಂದ ಶಿವ ಪ್ರತ್ಯಕ್ಷನಾಗುವುದಿಲ್ಲ . ಶಿವನೆಂದರೆ ವ್ಯಕ್ತಿಯಲ್ಲ . ತನ್ನದೇ ಆದ ಅವ್ಯಕ್ತ ಶಕ್ತಿ ! ಅರಿವು ! ಆ ಅರಿವೇ ಗುರು . ಆ ಗುರುದೇವನೇ ಮಹಾದೇವ . ಆ ಮಹಾದೇವನೇ ಸದಾಶಿವ . ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ . ಹೀಗೆಂದ ಮೇಲೆ ನಾದದಿಂದ ವೇದದಿಂದ ಶಿವ ಹೇಗೆ ಒಲಿಯುತ್ತಾನೆ . ನಾದಪ್ರಿಯನೂ ಅಲ್ಲ ; ವೇದಪ್ರಿಯನೂ ಅಲ್ಲ . ಭಕ್ತಿಪ್ರಿಯ .

ಶಿವ ಒಲಿಯುವುದೆಂದರೆ ತನುವಿನಲ್ಲಿರುವ ಮನ ತನುವಿನಲ್ಲಿರುವ ಅರಿವಿಗೆ ವಿಶ್ವಾಸಮಾಡಬೇಕು . ಆ ಅರಿವೇ ಶಿವ ; ಸಾಕ್ಷಾತ್ ಪರಬ್ರಹ್ಮನೂ ಹೌದು.

ಸಕಲ ಸಂಗೀತಗಳಿಗೆ , ರಾಗಗಳಿಗೆ , ವಾದ್ಯಗಳಿಗೆ ತನು ಜನ್ಮ ನೀಡಿದೆ . ತನುವಿನಿಂದಲೇ ಬಂದ ಸುಶ್ರಾವ್ಯ ಸಂಗೀತ ತನುವೇ ಕಲಿತು ರೂಢಿಮಾಡಿಕೊಳ್ಳುತ್ತದೆ . ಹಾಗೇ ತನುವಿನಿಂದಲೇ ಸಕಲ ವೇದ ಆಗಮ ಉಪನಿಷತ್‌ಗಳು ಜನ್ಮ ತಳೆದಿವೆ . ಓದಿ ರೂಢಿಸಿಕೊಂಡು, ತಾಳೋಲೆ ಕಾಗದದಲ್ಲಿ ಬರೆದು, ಕಂಠದಲ್ಲಿ ಉಳಿಸಿಕೊಂಡು, ವೇದ ಶಾಸ್ತ್ರ ಆಗಮ ಉಪನಿಷತ್‌ಗಳು ಎನ್ನಿಸಿಕೊಂಡಿವೆ .

ಅರಿವಿನಿಂದ ಹೊರಬಂದ ನಾದ ವೇದಗಳ ಮೂಲಕ ಅರಿವು ಒಲಿಯುವುದಿಲ್ಲ . ಬದಲಾಗಿ ಮನ ಅವುಗಳನ್ನು ಸಂಗ್ರಹಿಸಿಕೊಂಡು ಪಂಡಿತ ವಿದ್ವಾಂಸ ಶಾಸ್ತ್ರಿ ಎನ್ನಿಸಿಕೊಂಡು ಬೀಗುತ್ತದೆ .

ನಾದದಿಂದಲೂ ವೇದದಿಂದಲೂ ಅರಿವನ್ನು ಒಲಿಸಿಕೊಳ್ಳಲು ಮನಕ್ಕೆ ಸಾಧ್ಯವಾಗುವುದಿಲ್ಲ. ತನುವಿನಲ್ಲಿರುವ ಅರಿವಿಗೆ ವಿಶ್ವಾಸ (ಭಕ್ತಿ) ಮಾಡಿ ಆ ಅರಿವಿನಲ್ಲಿ ಲೀನವಾಗಿ ಆ ಅರಿವನ್ನೇ ಬಳಕೆ ಮಾಡಬೇಕು.

182

ಹಸಿವಾದಡುಂಬುದನು, ಸತಿಯ ಸಂಭೋಗವನು
ಆನಾಗಿ ನೀ ಮಾಡೆಂಬುವರುಂಟೆ ?
ಮಾಡುವುದು, ಮಾಡುವುದು ಮನ ಮುಟ್ಟಿ ;
ಮಾಡುವುದು, ಮಾಡುವುದು ತನು ಮುಟ್ಟಿ .
ತನು ಮುಟ್ಟಿ ಮನ ಮುಟ್ಟದಿರ್ದಡೆ
ಕೂಡಲಸಂಗಮದೇವನೆತರಲ್ಲಿಯೂ ಮೆಚ್ಚ !

ಸಾರಾಯದ ಮಾರ್ಗವನು ಯಾರು ತೋರಿದಡೇನು? ಅವರು ಸಂಪೂರ್ಣ ಗೌಣ ! ಊರಿಗೆ ಹೋಗುವ ಮಾರ್ಗ ಯಾರು ತೋರಿದಡೇನು? ಅವರು ಕೂಡಾ ನೆನಪಿಲ್ಲದಂತೆ ಮರೆಯಾಗುತ್ತಾರೆ. ನಡೆದು ಊರು ಸೇರಿ ಗುರಿಮುಟ್ಟಿದವನು ಮಾತ್ರ ವಿರಮಿಸಿ ಸುಖಪಡುತ್ತಾನೆ. ಹಸಿವಾದಾಗ ಅಡಿಗೆ ಮಾಡಿ ಉಣಬಡಿಸಿದವರು ಕೂಡಾ ಗೌಣ . ಉಣ್ಣುವಾಗ, ಮೆಲುಕು ಹಾಕುವಾಗ ಸಿಗುವ ಆನಂದದಲ್ಲಿ ಅಡಿಗೆ ನೀಡಿದವರು ಪಾಲುದಾರರಲ್ಲ. ಹಾಗೆಯೇ ತನುವನ್ನು ಹಿಡಿದು ಮನದೊಂದಿಗೆ ಅರಿವಿನತ್ತ ಪಯಣಿಸಿ ಪರಮಾನಂದ ಸುಖ ಅನುಭವಿಸುವ ಮಾರ್ಗ ಸೂಚಿಸಿದವರು ಕೂಡಾ ಆ ಸುಖದ ಸುಖದಲ್ಲಿ ಪಾಲುದಾರರಲ್ಲ . ಅವರು ಕೂಡಾ ಗೌಣ !

ಈ ಯಾವ ಸುಖಗಳನ್ನೂ ನಾನಾಗಿ ನೀ ಮಾಡು ಎನ್ನಲು ಬರುವುದಿಲ್ಲ.

ಜಗದ ತನುಗಳಿಗೆಲ್ಲ ಈ ಮಾತಿನಿಂದ ಕೂಡಲೇ ಅರಿವಾಗಿ ಆ ಅರಿವಿನ ಸುಖ ಸರ್ವ ತನುಗಳಿಗೆ ದಕ್ಕಲಿ ಎಂದು ಅಣ್ಣ ಬಸವಣ್ಣನವರು ಖಾರವಾಗಿಯೇ ಹೇಳಿದ್ದಾರೆ.

ಅರಿವಿನ ಮಾರ್ಗ ಮನಕ್ಕೆ ದಕ್ಕಿದಾಗ , ಮನ ಅರಿವನ್ನು ಮುಟ್ಟಿ ಮಾಡುವುದು . ಮನ ಅರಿವಿನೊಂದಿಗೆ ನೋಡುವುದು. ಮನ ಅರಿವಿನೊಂದಿಗೆ ಕೇಳುವುದು. ಮನ ಅರಿವಿನೊಂದಿಗೆ ರುಚಿಸಿವುದು .

ಮನ ಅರಿವನ್ನು ಮುಟ್ಟಿ ಅನ್ಯ ತನು ಮುಟ್ಟಿದಾಗ ಅದು ತನ್ನಂತೆಯೇ ಇರುವ ಬ್ರಹ್ಮ ತನು. ಚರ್ಮ, ರಕ್ತ , ಮೂಳೆ, ಮಾಂಸ , ಮಜ್ಜೆ, ಮೇದಸ್ಸು ಒಂದೇ. ಹೆಣ್ಣು ಗಂಡು ಎನ್ನುವ ಭೇದ ಅಡಗಿ ಮನ ತನುವನ್ನು ಅರಿವಿನಿಂದ ಮುಟ್ಟುವುದು. ವೈರಿ -ಮಿತ್ರ ಬಂಧು-ನೆಂಟ, ಅಧಿಕಾರಿ -ಶಾಸಕ, ಸಚಿವ ಎನ್ನುವ ಅಜ್ಞಾನದ ಭೇದಗಳು ಅಡಗಿ ಆನಂದದಿಂದ ಮುಟ್ಟುವುದು .

ಸೂಚಿಸಿದ ಗುರುವನ್ನು ಬಿಟ್ಟು , ಸಮಾಜದ ಗುರು - ಶಿಷ್ಯ ಸಂಪ್ರದಾಯ ಕಳಚಿ ಮನ ಮುಟ್ಟಿ ನಡೆದು, ದಣಿದು ಗುರಿಸೇರಿ ಪರಮಾನಂದದ ಸುಖವ ಅನುಭವಿಸುವುದು.

ಮನ ಹೆಂಡತಿಯಾಗಿ, ಅರಿವನ್ನೇ ಗಂಡನನ್ನಾಗಿ ಮಾಡಿಕೊಂಡು ಆ ಗಂಡನೊಂದಿಗೆ ಸುಖ ಅನುಭವಿಸಲು ಒಂಟಿ ಸಲಗದಂತೆ ನಡೆಯಬೇಕು . ತನು ತನುವಿನೊಂದಿಗೆ ಕೂಡುವ ಕೂಟ ; ಕೂಡಿ ಅಗಲುವ ಕೂಟ. ಬಸವಣ್ಣ ಹೇಳಿದ ಕೂಟ; ಕೂಡದ ಅಗಲದ ಕೂಟ !

ತನುವನ್ನೇ ಮನೆ ಮಾಡಿಕೊಂಡು ಮನವನ್ನು ಹೆಂಡತಿಯಾಗಿಸಿ ಅರಿವಿನ ಗಂಡನೊಂದಿಗೆ ಮನೆಯಲ್ಲಿ ಮನ ಮುಟ್ಟಿ ಸಂಸಾರ ಹೂಡಬೇಕು. ಕೂಡದ ಅಗಲದ ಕೂಟದಿಂದ ರತಿಸುಖವನ್ನು ಅನುಭವಿಸಬೇಕು .

ತನು ಮುಟ್ಟಿ ಮನ ಮುಟ್ಟದಿದ್ದರೆ ಅರಿವಿನ ಗಂಡ ಕೂಡಲ ಸಂಗಯ್ಯ ಮೆಚ್ಚುವುದಿಲ್ಲ, ಮಾಡುವ ಮಾಟವೆಲ್ಲ ಸುಳ್ಳು , ನೋಡುವ ನೋಟವೆಲ್ಲ ಸುಳ್ಳು, ಕೇಳುವ ಶಬ್ದ ವೆಲ್ಲ ಸುಳ್ಳು , ರುಚಿಸುವ ಪದಾರ್ಥವೆಲ್ಲ ಸುಳ್ಳು, ಮೂಸಿಸುವ ಗಂಧವೆಲ್ಲ ಸುಳ್ಳು ಆಗಿ ; ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟಾಗುವುದು, ಸುಖ - ದುಃಖಗಳ ಆಚೆನ ಶಾಶ್ವತ ಸುಖ ; ನಿಜ ರತಿ ಸುಖ ಮನಕ್ಕೆ ದಕ್ಕುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ .

ತನ್ನಾಶ್ರಯದ ರತಿ ಸುಖವನು, ತಾನುಂಬ ಊಟವನು ,
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ,
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ ?

ತನ್ನಾಶ್ರಯದ ರತಿ ಸುಖವನು, ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?

ತಾನು ರತಿ ; ತನ್ನಾಶ್ರಯದಲ್ಲಿದ್ದ ಅವನೆಂಬ ಅರಿವು ಪತಿ . ಈ ಸತಿ-ಪತಿಗಳ ರತಿ-ಸುಖವನು ಬೇರೆ ಮತ್ತೊಬ್ಬ ಗುರುವಿನಿಂದ ಮಾಡಿಸಬಹುದೆ ? ಆತ ಸುಖಿಸುವುದು ಹೇಗೆ ಎನ್ನುವ ಗುಟ್ಟು ಹೇಳಬಹುದು ; ಆತನ ಕೈಯಲ್ಲಿ ಮಾಡಿಸಲು ಬರುವುದಿಲ್ಲ . ಆತ ಮಾಡಲಾರನು ಕೂಡಾ.

ನೆತ್ತಿಯ ಹಸಿವು, ತುತ್ತಿನ ಹಸಿವು, ತನುವಿನ ಹಸಿವಿನ ಬಾಧೆಯನ್ನು ಸ್ವತಹ ತಾನೇ ತೀರಿಸಿಕೊಳ್ಳಬೇಕು. ನೆತ್ತಿಯ ಹಸಿವು ತೀರಿದರೆ ತನು ಸದಾ ಸಮಾಧಾನಿಯಾಗಿ ಬುದ್ಧನಾಗಿರುತ್ತದೆ. ತುತ್ತಿನ ಹಸಿವು, ತನುವಿನೊಂದಿಗೆ ಸುಖಿಸುವ ತನುವಿನ ಹಸಿವು ಮತ್ತೊಂದು ತನುವಿನ ಸೃಷ್ಟಿಗೆ ಮಾತ್ರ ಬಳಕೆಯಾಗುತ್ತದೆ. ಪಶು ಪಕ್ಷಿ ಪ್ರಾಣಿಗಳಲ್ಲಿ ಸೃಷ್ಟಿಯ ಕ್ರಿಯೆಗಾಗಿ ಮಾತ್ರ ರತಿ ಸುಖದ ರಸಾಯನಿಕ ಕ್ರಿಯೆ ಹುಟ್ಟುತ್ತದೆ. ಆದರೆ ಅರಿವುಳ್ಳ ತನುವಿನಲ್ಲಿ ನೋಡಿದರೆ, ಕೇಳಿದರೆ, ಮುಟ್ಟಿದರೆ, ಮೂಸಿಸಿದರೆ ರಸಾಯನಿಕ ಸಂಚಲನ ಹಬ್ಬಿ, ನೆನಪಿಸಿಕೊಂಡರೆ ಕಾಮದಿಂದ ತನು ಮದೋನ್ಮತ್ತನಾಗುತ್ತದೆ. ಆಗ ತನುವಿನ ಜ್ಞಾನ ಬಳಕೆಯಾಗುವುದೇ ಇಲ್ಲ .

ಮನ ಮತ್ತೊಂದು ತನುವಿನ ಸೌಂದರ್ಯ ಸವಿದು ಅಜ್ಞಾನದ ಹಸಿವು ತೀರಿಸಿಕೊಳ್ಳಲು ಹಾತೊರೆಯುತ್ತದೆ. ಮನದಲ್ಲಿ ರತಿ ಹುಟ್ಟಿ ತನ್ನ ತನುವಿನ ಅರಿವಿನ ಪುರುಷನೊಂದಿಗೆ ಕೂಡಿ ಜ್ಞಾನದ ರತಿ ಸುಖವ ಸವಿದರೆ ಮನದ ಅಜ್ಞಾನ ನಷ್ಟವಾಗುತ್ತದೆ. ಕೂಡದ ಅಗಲದ ಕೂಟದ ರತಿಸುಖದ ಸವಿಯನು ಸದಾ ಸವಿಯುತ್ತ ಆನಂದದಲ್ಲಿ ಓಲಾಡುತ್ತದೆ.

ತನು ಮತ್ತೊಂದು ತನುವನ್ನು ನೋಡಿದರೆ ತನ್ನಂತೆ ಅರಿವುಳ್ಳ ತನು ಎಂಬುದು ಅರಿವಿಗೆ ಬರುತ್ತದೆ.

ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡ ಬೇಕಲ್ಲದೆ ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ :

ಮನ , ತನ್ನ ತನುವಿನಲ್ಲಿರುವ ಅರಿವೆಂಬ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾನೇ ಮಾಡಬೇಕು. ತನುವಿನ ಅರಿವನ್ನು ಬಳಕೆ ಮಾಡಿಕೊಂಡು ಸುಖದಿಂದಿರಬೇಕು.

ಮನ, ತನ್ನಾಶ್ರಯದ ಅರಿವಿನ ರತಿ ಸುಖ ಅನುಭವಿಸಿ ಅರಿವಿನಿಂದ ನೋಡಿದರೆ, ನೋಡಿದ ತನುಗಳೆಲ್ಲ ಅರಿವಿನ ತನುಗಳೇ. ನೋಡಿದ ಆಭರಣಗಳೆಲ್ಲ ಬರೀ ಲೋಹ ! ಕೇಳಿದ ಶಬ್ದಗಳೆಲ್ಲ ಅರಿವಿನ ಶಬ್ದಗಳು. ನೋಡಿದ ನೋಟವೆಲ್ಲ ಬ್ರಹ್ಮಮಯ !

ಮನ, ತನ್ನ ತನುವಿನಲ್ಲಿರುವ ಅರಿವಿನ ಲಿಂಗಕ್ಕೆ ತಾನೇ ಮಾಡುವ ನಿತ್ಯ ನೇಮದ ಪೂಜೆ. ಇದನ್ನು ಹೇಳುವ ಗುರುವಿನಿಂದ ಮಾಡಿಸಲು ಬರುವುದಿಲ್ಲ.ಗುರು ಪೂಜೆ ಮಾಡಿದರೆ ಗುರುವಿಗೆ ಆನಂದವಾಯಿತು. ಕೇಳಿದ ತನಗೆ ಅರಿವಿನ ರತಿ ಕ್ರಿಯೆ ಹುಟ್ಟಬಹುದು. ಆದರೆ ಮನ, ಹೇಳಿದ ಗುರುವಿನಲ್ಲಿ ಸಿಲಕುತ್ತದೆ ; ಮತ್ತೆ ಮತ್ತೆ ಕೇಳಿ ಮನದಲ್ಲಿ ಆನಂದಿಸುತ್ತದೆ. ನೆನೆಪಾದಾಗೊಮ್ಮೆ ಗುರುವಿನಲ್ಲಿಗೆ ಹೋಗುತ್ತದೆ, ಗುರುವಿನಿಂದಲೇ ಅರಿವು ಕೇಳಿ ಆನಂದ ಪಡುತ್ತದೆ.

ಮನ, ಗುರುವಿನ ಅರಿವಿನಲ್ಲಿ ಸಿಲುಕಿ ರತಿ ಸುಖ ಅನುಭವಿಸಿತೇ ಹೊರತು ; ತನ್ನ ತನುವಿನಲ್ಲಿರುವ ಅರಿವೆಂಬ ಗುರುವಿನಲ್ಲಿ ಸಿಲುಕಿ ರತಿ ಸುಖ ಅನುಭವಿಸಲಿಲ್ಲ. ಇದು ಸಾಧ್ಯವಾದಾಗ ಮನಕ್ಕೆ ತನ್ನಾಶ್ರಯದ ರತಿ ಸುಖ ತನಗೆ ಲಭಿಸುತ್ತದೆ. ತಾನೇ ಸುಖಿಸುತ್ತದೆ !

ಮನ, ತನ್ನ ಅರಿವಿನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾನೇ ಮಾಡುತ್ತದೆ. ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸುವುದಿಲ್ಲ.

ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ, ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ :

ಮನ, ಉಪದೇಶ ಪಡೆದುಕೊಂಡು ಸಂಪ್ರದಾಯದಂತೆ ಗುರುಸೇವೆ ಮಾಡುತ್ತದೆ. ಪುಣ್ಯ ಕ್ಷೇತ್ರ, ದೇವಸ್ಥಾನ, ಉಪನ್ಯಾಸ, ಪ್ರವಚನಗಳಿಗೆ ಅಲಿಯುತ್ತದೆ. ದಾನ ಧರ್ಮ ಪರೋಪಕಾರ ಮಾಡುತ್ತದೆ. ಪುಣ್ಯದ ಕಾರ್ಯದಲ್ಲಿ ಭಾಗಿಯಾಗುತ್ತದೆ. ಧರ್ಮಗ್ರಂಥಗಳನ್ನು ಅಭ್ಯಾಸಮಾಡಿ ಉಪನ್ಯಾಸ ನೀಡುತ್ತದೆ. ಇವೆಲ್ಲ ಕೆಮ್ಮನೆ .ಉಪಚಾರಕ್ಕೆ ಮಾಡುವ ಕ್ರಿಯೆಗಳು . ಮನ ತನುವನ್ನು ಹಿಂಸಿಸುವ ಹೊರಗಿನ ಪೂಜೆಗಳು.

ಮನ, ತನ್ನ ತನುವಿನ ಆಶ್ರಯದಲ್ಲಿಯೇ ಇರುವ ಅರಿವಿನ ಗುರುವಿನೊಂದಿಗೆ ಸುಖಿಸುವ ರತಿಸುಖವ ಬಲ್ಲಡೆ ಅಲ್ಲಿಯೇ ಕೂಡಿ ಕೂಡಲಸಂಗಮದೇವನೇ ತಾನಾಗುವುದು .

184

ಬಂಡಿ ತುಂಬಿ ಪತ್ರೆಯ ತಂದು ಕಂಡ ಕಂಡಲ್ಲಿ ಮಜ್ಜನಕ್ಕೆರೆವಿರಿ :
ತಾಪತ್ರಯವ ಕಳೆದು ಪೂಜಿಸಿ;
ತಾಪತ್ರಯವ ಲಿಂಗನೊಲ್ಲ.
ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ?

ಪೂಜೆಗಾಗಿ ಬಿಲ್ವ ಪತ್ರಿ ಗಿಡಗಳೇ ನಾಶವಾಗುತ್ತಲಿವೆ. ಕೆಲ ಮನೆಗಳಲ್ಲಿ ಪೂಜೆಗಾಗಿ ಬಿಲ್ವ ಪತ್ರಿ ತರುವುದಕ್ಕಾಗಿಯೇ ಸಂಬಳ ಕೊಟ್ಟು ಮನುಷ್ಯನನ್ನು ನೇಮಿಸಿರುತ್ತಾರೆ.

ಹೊರದೇಶಗಳಲ್ಲಿ ನೆಲೆಸಿದ ಜನಕ್ಕೆ ದೇಶದಿಂದಲೆ ಬಿಲ್ವ ಪತ್ರಿ ರಫ್ತಾಗುತ್ತದೆ. 30 ದಳಗಳ ಒಂದು ರೆಂಬೆಗೆ 10 ಡಾಲರ್ ಹಣವಂತೆ ! ಇದನ್ನು ಪೂಜೆ ಎನ್ನಲು ಬಂದೀತೆ? ಜಡವಸ್ತುವಿಗೆ ಉದಕ ಹಾಕಿದರೆ ನೆನೆಯುವುದಿಲ್ಲ, ಚೈತನ್ಯ ಉಳ್ಳ ಮರವನ್ನು ತರೆದು ಬಿಲ್ವ ಧರಿಸಿದರೆ ಲಿಂಗ ಮಾತನಾಡುವುದಿಲ್ಲ.

ತಾನೇ ಹೇರಿಕೊಂಡ ತಾಪತ್ರಯ ಕಳೆದುಕೊಳ್ಳುವುದುಕ್ಕಾಗಿ ಪೂಜೆ ಎನ್ನುವ ಮತ್ತೊಂದು ಭ್ರಮೆಯ ತಾಪವನ್ನು ಹೇರಿಕೊಂಡಂತೆ !

ಆಧ್ಯಾತ್ಮಿಕ, ಮಾನಸಿಕ, ದೈಹಿಕ ಇವು ಮೂರು ದೇಹಕ್ಕೆ ತಾಪವನ್ನುಂಟು ಮಾಡುತ್ತವೆ.

ಇವು ಕಳೆದುಕೊಳ್ಳುವುದಕ್ಕಾಗಿ ದೇವರನ್ನು ಪೂಜಿಸಲು ಕೆಲವರು ಹಣ ಪಡೆದು ಸಲಹೆ ನೀಡುತ್ತಾರೆ. ಸಾಯುವವರೆಗೆ ಪೂಜಿಸಿದರು ತಾಪಗಳು ಹೋಗುವುದೇ ಇಲ್ಲ. ಬದಲಾಗಿ ಇಂದು ಪೂಜಿಸಿದೆ, ಪೂಜಿಸಲಿಲ್ಲ, ಪೂಜೆಗೆ ಪತ್ರಿ ಪುಷ್ಪಗಳು ದೊರೆಯಲಿಲ್ಲ. ಮಡಿಗೆ ಭಂಗವಾಯಿತು. ಎನ್ನುವ ತಾಪಗಳು ನಿತ್ಯ ದೇಹದಲ್ಲಿ ಸಂಗ್ರಹಗೊಂಡು ದೇಹ ತಾಪದಿಂದ ಕುದಿಯುವ ಬಾಯ್ಲರ್ ಆಗುತ್ತದೆಯೇ ಹೊರತು ಪೂಜಿಸಿದರೆ ತಾಪ ನಿಲ್ಲುವುದಿಲ್ಲ .

ಆಧ್ಯಾತ್ಮಕ ತಾಪ : ಆತ್ಮ ಎಂದರೆ ಅರಿವು . ಅದು ಎಂದೂ ತಪ್ಪು ಮಾಡುವುದಿಲ್ಲ. ದೇಹ ಆತ್ಮಕ್ಕೆ ಸಂಬಂಧಪಟ್ಟದ್ದು. ಈ ಆತ್ಮ ಎನ್ನುವ ಅರಿವಿನಿಂದಲೇ ದೇಹ ಜ್ಞಾನಿ, ಮಹಾತ್ಮ, ಸಂತ, ಸತ್ಪುರುಷ, ಶರಣ, ದಾಸ, ಬುದ್ಧ, ಮಹಾವೀರ, ಕ್ರಿಸ್ತ, ಕ್ರಿಷ್ಣ, ಎನ್ನಿಸಿಕೊಂಡಿದೆ. ಭಗವದ್ಗೀತೆ, ಬೈಬಲ್, ತತ್ವ ಪದಗಳು, ವಚನಗಳು, ಮುಂತಾದ ಸೂತ್ರಪ್ರಾಯ ಗ್ರಂಥಗಳು ಅರಿವಿನ ದೇಹದಿಂದಲೆ ಮುದ್ರಿಸಲ್ಪಟ್ಟಿವೆ. ತಾಪ ಕಳೆದು ಕೊಳ್ಳಲು ಅರಿವಿನ ಗ್ರಂಥಗಳು ಕಳಶಪ್ರಾಯವಾಗಿವೆ. ಆದರೆ ಅವು ಶ್ರೇಷ್ಠ ಇವು ಕನಿಷ್ಠ ಎಂದು ದೇಹಕ್ಕೆ ತಾಪವನ್ನುಂಟು ಮಾಡಿವೆ. ಬೈಬಲ್ ಓದಿದ ದೇಹ ಕ್ರಿಷ್ಚನ್ ಎಂದು, ಭಗವದ್ಗೀತೆ ಓದಿದ ದೇಹ ಹಿಂದು ಎಂದು, ತ್ರಿಪಿಟಿಕ ಓದಿ ಬೌದ್ಧ ಎಂದು, ವಚನ ಓದಿ ವೀರಶೈವನೆಂದು, ದಾಸರ ಪದಗಳನ್ನು ಓದಿ ಆಯಾ ಜಾತಿಯೆಂದು ದೇಹ ಆಧ್ಯಾತ್ಮಿಕ ತಾಪವನ್ನು ಉಂಟು ಮಾಡಿಕೊಂಡಿದೆ. ಹಾಗೆಯೇ ಆಯಾ ಅರಿವಿನ ಪ್ರತಿಪಾದಕ ಜ್ಞಾನಿಗಳನ್ನು ದೇವರನ್ನಾಗಿಸಿ ಪತ್ರಿ ಪುಷ್ಪಗಳಿಂದ ಪೂಜಿಸುತ್ತದೆ. ಇದು ದೇಹಕ್ಕೆ ಉಂಟಾದ ಆಧ್ಯಾತ್ಮಿಕ ತಾಪ. ಪೂಜೆಯಲ್ಲಿ ವ್ಯತ್ಯಾಸವಾದರೆ ಮನ ತನುವಿಗೆ ತೊಂದರೆ ಒಡ್ಡುತ್ತದೆ.

ತನು ಒಂದೇ. ಚರ್ಮ, ರಕ್ತ, ಮೂಳೆ, ಮಾಂಸ, ಮಜ್ಜಾ, ಮೇದಸ್ಸು, ಇವು ತನುವಿನ ಭಾಗಗಳು. ತನು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಜಾತಿ, ಮತ, ಪಂಥ, ಧರ್ಮ, ಎನ್ನುವುದು ತನುವಿನ ಯಾವ ಅವಯವಗಳಿಗೂ ಇಲ್ಲ. ಆದರೆ ಮನ ತನುವಿನಲ್ಲಿ ಈ ಎಲ್ಲ ಅಜ್ಞಾನವನ್ನು ಸೃಷ್ಠಿ ಮಾಡಿದೆ. ತನು ಹುಟ್ಟಿದಂದಿನಿಂದ ಸಾಯುವವರೆಗೆ ಈ ತಾಪದಿಂದಲೇ ನರಳಿ ನರಳಿ ಸಾಯುತ್ತದೆ.

ತನು ಅದಕ್ಕೆ ಉಂಟಾಗುವ ಕಾಯಿಲೆಗಳಿಂದಲೂ ಮಾನಸಿಕವಾಗಿ ನರಳುತ್ತದೆ. ಅದರ ನಿವಾರಣೆಗಾಗಿ ಔಷಧೋಪಚಾರ ಮಾಡದೆ , ಪೂಜಾ ವಿಧಾನಗಳನ್ನು ಅನುಸರಿಸುತ್ತದೆ. ಮನಸ್ಸಿನ ಈ ಗೊಂದಲಗಳು ತನುವಿಗೆ ತಾಪವನ್ನೊಡ್ಡಿ ಅರ್ಚನೆ ಪೂಜನೆ ಅಭಿಷೇಕಗಳಿಗೆ ತನುವನ್ನು ತೊಡಗಿಸಿಕೊಳ್ಳುತ್ತದೆ.

ತನುವಿಗೆ ತಾಪ ಒಡ್ಡುವ ಮನ ತಾ ಒಡ್ಡಿದ ತಾಪಗಳನ್ನು ಅರಿವಿನಿಂದ ಅನಾವರಣ ಮಾಡಿಕೊಳ್ಳುವುದೇ ತನುವಿನಲ್ಲಿ ಬೆರೆತ ಅರಿವಿನ ಸಂಗಯ್ಯನ ಪೂಜೆ. ಈತ ಬರಿ ಉದಕದಲ್ಲಿ ನೆನೆವನೇ? ಮನ ಅರಿವಿನ ಪೂಜೆಗೆ ಅಣಿಗೊಳ್ಳಬೇಕು. ತನುವಿಗೊಡ್ಡಿದ ತಾಪತ್ರಯಗಳು ತಾನೇ ಕಳಚಿ ಬೀಳುವವು. ಬಿಲ್ವ ಮರಗಳು ಮುಗಿಲೆತ್ತರಕ್ಕೆ ಚಾಚಿ ಹುಲುಸಾಗಿ ಬೆಳೆಯುವವು.

185

ಭಕ್ತನಾಗಿ ಲಿಂಗ ಜಂಗಮವ ಪೂಜಿಸಬೇಕು ,
ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ

ಸ್ವಾಮಿ ಭೃತ್ಯ ಸಂಬಂಧವೆಂತಯ್ಯಾ ಪೂರಯಿಸುವುದು ?
ಕೂಡಲಸಂಗಮದೇವಾ, ಕಣ್ಣ ಕಟ್ಟಿ ಕನ್ನಡಿಯ ತೋರುವಂತೆ !

ಭಕ್ತನಾಗಿ ಲಿಂಗಜಂಗಮವ ಪೂಜಿಸಬೇಕು. ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ :

ಮನ ತನುವಿಗೆ ಸ್ನಾನ ಮಾಡಿಸಿ ವಿಭೂತಿ ಗಂಧಾದಿಗಳನ್ನು ಧರಿಸಿ ಪೂಜಿಸಿಕೊಳ್ಳುತ್ತದೆ. ಪೂಜಿಸಿಕೊಂಡ ತನು ನೋಡುಗರಿಗೆ ಆಡಂಬರವಾಗಿ, ಗಂಭೀರವಾಗಿ ಕಾಣುತ್ತದೆ. ಶರಣೆಂದು ನಮಸ್ಕರಿಸಿದಾಗ, ಮನ ತನುವನ್ನು ಜಂಬದಿಂದ ಮೆರೆಸುತ್ತದೆ . ಪೂಜಿಸಿದರೂ ತನುವಿನ ದುರ್ಗುಣಗಳು ಅಳಿಯಲಿಲ್ಲ. ಪೂಜೆಗೊಂಡ ತನುವಿಗೆ ಇತರರು ವಂದಿಸಿದರೂ ದುರ್ಗುಣಗಳು ಅಳಿಯಲಿಲ್ಲ ,

ಮನ ತನ್ನ ದುರ್ಗುಣಗಳನ್ನು ಕಳೆದುಕೊಳ್ಳಬೇಕಾದರೆ ಭಕ್ತನಾಗಬೇಕು. ತನುವಿನ ಕಣ ಕಣದಲ್ಲಿ ಬೆರೆತ ಅರಿವೆಂಬ ಲಿಂಗಯ್ಯನನ್ನು ಭಕ್ತಿಯಿಂದ ಪೂಜಿಸಬೇಕು. ಅರಿವನ್ನು ಚಾಚೂ ತಪ್ಪದೆ ಛಲದಿಂದ ಆಚರಿಸುವ ಜಂಗಮನನ್ನು ಪೂಜಿಸಬೇಕು. ಮನ ಭೃತ್ಯನಾಗಿ ಲಿಂಗಜಂಗಮನೆಂಬ ಅರಿವಿನ ಸ್ವಾಮಿಯ ಸಂಬಂಧ ಮಾಡಬೇಕು. ಆಗ ಕೂಡಲಸಂಗಯ್ಯನೆಂಬ ಲಿಂಗಜಂಗಮ ಮನಕ್ಕೆ ಕಣ್ಣ ಕಟ್ಟಿ ಸತ್ಯದ ಕನ್ನಡಿಯ ತೋರುತ್ತಾನೆ .

186

ಭೂಮಿಯೊಳಗೆ ನಿಧಾನವಿದ್ದುದ
ಅಂಜನ ವುಳ್ಳವರು ತೋರಿರಯ್ಯಾ .
ಅಂಜಲುಬೇಡ ಕಂಡಾ ;
ಮನದಲ್ಲಿ ಸಂದೇಹವ ಮಾಡದಿರಾ .
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ
ತೋರುವ ಕೂಡಲಸಂಗಯ್ಯ !

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋರಿರಯ್ಯಾ:

ಯಾವ ತನುವಿನಲ್ಲಿ ಅರಿವಿಲ್ಲ ? ಅರಿವಿಲ್ಲದ ತನುಗಳೇ ಇಲ್ಲ . ತನುವಿಗೆ ಅರಿವೇ ಸಂಪತ್ತು . ಅರಿವೇ ಭೂಷಣ. ಅದು ಜನ್ಮದಿಂದಲೇ ಬಂದಿದೆ. ತನುವಿನ ಭೂಮಿಯಲ್ಲಿ ಅರಿವು ಮತ್ತು ಮನ ಚಿನ್ನದಂತೆ ತನ್ಮಯವಾಗಿ ಬೆರೆತಿದೆ.

ಅಂಜನ ಹಾಕುವವರನ್ನು ಹುಡುಕಿ ಭೂಮಿಯಲ್ಲಿದ್ದ ಚಿನ್ನ ಹೊರ ತೆಗೆಯುವ ಪ್ರಯತ್ನ ಮಾಡುತ್ತೇವೆ. ಅವರು ಹೇಳಿದ ಪೂಜಾ ವಿಧಾನಗಳನ್ನು ಮಾಡಿ ಪ್ರಾಣಿ ಬಲಿ, ನರ ಬಲಿ ಕೊಡುತ್ತೇವೆ. ಹಗಲಿರುಳು ಪ್ರಯತ್ನಿಸುತ್ತೇವೆ. ಆದರೆ ಚಿನ್ನ ಒಂದು ಹಳದಿ ಬಣ್ಣದ ಲೋಹವೆಂದು ಮನಕ್ಕೆ ಹೊಳೆಯುವುದೇ ಇಲ್ಲ.

ಭೂಮಿಯ ಗರ್ಭದಲ್ಲಿದ್ದ ಚಿನ್ನ ಅಂಜನ ಹಾಕಿ ಹುಡುಕಿದಂತೆ , ತನುವಿನ ಗರ್ಭದಲ್ಲಿದ್ದ ಅರಿವನ್ನು ಹುಡುಕಲು ಮನ ಬಯಸುವುದೇ ಇಲ್ಲ.

ತನುವಿನ ಗರ್ಭದಲ್ಲಿರುವ ಅರಿವಿನ ಸಂಪತ್ತನ್ನು ಹುಡುಕಲು ಹೊರಟರೆ , ಅಂಜನ

ಹಾಕಿ ತೋರಿಸುವವರು ಸಿಗುತ್ತಾರೆ. ಮನದಲ್ಲಿ ಸಂದೇಹ ಮಾಡದೆ ತನುವ ನೋಡಿದರೆ ಅರಿವಿನ ಜಂಗಮನೆಂಬ ಲಿಂಗಯ್ಯನೇ ಇದ್ದಾನೆ . ಮನ ನಂಬುಗೆಯಿಂದ ಲಿಂಗಯ್ಯನ ಮಾತು ಆಲಿಸಿದರೆ ಚಿನ್ನದ ಮೇಲೆ ಅರಿವಿನ ಅಂಜನ ಹಾಕುತ್ತಾನೆ.

ಎಲೆ ಮನವೇ ಸರಿಯಾಗಿ ನೋಡು ಚಿನ್ನವಲ್ಲ ; ಇದು ಲೋಹ ! ಹಳದಿ ಬಣ್ಣ ಲೋಹವನ್ನು ಬೇರ್ಪಡಿಸದಂತೆ ಆವರಿಸಿದೆ. ಅದಕ್ಕಾಗಿಯೇ ಅದು ಚಿನ್ನ ! ಹಾಗೆಯೇ ತನುವಿನಲ್ಲಿ ಅರಿವು ಕಣಕಣದಲ್ಲಿ ಬೇರ್ಪಡಿಸದಂತೆ ಆವರಿಸಿದೆ. ಅದು ನಾನು ; ಅದಕ್ಕೆ ಮೆರಗು ಕೊಡುವ ಬಣ್ಣ ನೀನು ! ನಾನು - ನೀನು ಬೇರಲ್ಲ . ತಿಳಿಯದ್ದಕ್ಕಾಗಿ ಲೋಹವನ್ನೇ ಚಿನ್ನವೆಂದೆ ; ತಿಳಿದರೆ ಅದನ್ನು ಗುರುತಿಸಿದ ನೀನೇ ಚಿನ್ನ !

187

ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೆ ;
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತವಾಗಿಪ್ಪ .
'ಸ್ಥಾವರ ಜಂಗಮ ಒಂದೆ ' ಎಂದುದು ಕೂಡಲಸಂಗನ ವಚನ.

ದೇಹದಲ್ಲಿರುವ ಜ್ಞಾನ ಭಂಡಾರವನ್ನು ಮನದಿಂದ ಹೇಗೆ ಪಡೆಯ ಬಹುದೆಂದು ಪೂರ್ವಜರು ವೇದ ಆಗಮ ಉಪನಿಷತ್ತು , ರಾಮಾಯಣ, ಮಹಾಭಾರತದ ಮೂಲಕ ಪ್ರತಿಪಾದಿಸಿದ್ದಾರೆ. ಹಾಗೆಯೇ ಇನ್ನೂ ಸರಳವಾಗಿ ಶರಣರು ಮನಕ್ಕೆ ತಿಳಿಯುವಂತೆ ಹೇಳಿ ವಚನಗಳ ಮೂಲಕ ಸೂತ್ರ ರಚಿಸಿದ್ದಾರೆ.

ಜಂಗಮ, ಲಿಂಗ, ಭಕ್ತ, ಪಾದೋದಕ, ಪ್ರಸಾದಿ, ಪ್ರಾಣಲಿಂಗಿ, ಐಕ್ಯ ಎನ್ನುವ ಪದಗಳು ತಿಳಿಯದೆ ಜಾತಿ, ವ್ಯಕ್ತಿ ಸೂಚಕ ಪದಗಳಾಗಿ ಬಳಕೆಯಾಗುತ್ತಿರುವುದು ದೇಹದ ಒಂದು ದುರ್ದೈವವೇ ಸರಿ. ಮನದ ಅಜ್ಞಾನದ ಒಂದು ಪರಮಾವಧಿಯೇ ಸರಿ .

ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೆ ; ಜಂಗಮದೊಳಗೆ ಲಿಂಗಯ್ಯ ಸನ್ನಹಿತವಾಗಿಪ್ಪ :

ಕನ್ನಡಿ ತನ್ನ ತನುವನ್ನು ತೋರಿಸುವ ಒಂದು ಸಾಧನ. ಅದರಲ್ಲಿ ತನುವಿನ ಅಜ್ಞಾನ ಕಾಣುವುದಿಲ್ಲ . '' ಅಂಗೈ ಹುಣ್ಣಿಗೆ ಕನ್ನಡಿ ಬೇಕೆ '' ಎಂದು ಜನಪದರು ಕೇಳುತ್ತಾರೆ. ಅಂಗದ ಐದು ಜ್ಞಾನದ ಇಂದ್ರಿಯಳಿಗೆ ಅಜ್ಞಾನದ ಹುಣ್ಣು ಬಿದ್ದಾಗ ಅದನ್ನು ಕನ್ನಡಿಯಲ್ಲಿ ನೋಡಿಕೊಂಡು ಮುಲಾಮು ಅಂಟಿಸಿಕೊಳ್ಳಲು ಸಾಧ್ಯವೆ ?

ಅಂಗದ ಕಣ ಕಣದಲ್ಲಿ ಜ್ಞಾನಿ ಜಂಗಮನಿದ್ದಾನೆ. ಆ ಜಂಗಮದೊಳಗೆ ಲಿಂಗಯ್ಯನೆಂಬ ಅರಿವು ಇದೆ. ಜಂಗಮ ಕಾಣುವುದಿಲ್ಲ ; ಅರಿವು ಕಾಣುವುದಿಲ್ಲ. ಅಂಗ ಕಾಣುತ್ತದೆ. ಕಾಣುವ ಅಂಗವೇ ಸ್ಥಾವರ. ಈ ಸ್ಥಾವರದಿಂದಲೇ ಲಿಂಗಜಂಗಮ ! ಅಂಗ ಎನ್ನುವುದು ಲಿಂಗ ಜಂಗಮ ಹಾಗೂ ಮನ ಸಮರಸವಾಗಿ ಬೆರೆತ ಜ್ಞಾನದ ಕನ್ನಡಿ !

ಅಂಗಕ್ಕೆ ಗೊತ್ತಿಲ್ಲದ ವಿಷಯಗಳೇ ಇಲ್ಲ ! ಅಂಗ ಪ್ರಪಂಚದ ಸರ್ವ ಪದಾರ್ಥಗಳ ಹೆಸರುಗಳನ್ನು ದಾಖಲಿಸಿದೆ. ಸರ್ವ ಜ್ಞಾನ ಗ್ರಂಥಗಳನ್ನು ಮುದ್ರಿಸಿದೆ. ಅಂಗಕ್ಕೆ ಆವರಿಸಿದ ಮನ ಅಂಗದ ಅರಿವನ್ನೇ ಮರೆಯಿಸಿ; ಬರೆಯಲ್ಪಟ್ಟ ಗ್ರಂಥಗಳನ್ನು ಶ್ರೇಷ್ಟವೆಂದು, ಅಧ್ಯಯನ ಮಾಡುತ್ತದೆ. ಕರೆನ್ಸಿ, ಆಭರಣ ಶ್ರೇಷ್ಟವೆಂದು ತನ್ನಂತೆಯೇ ಇರುವ ಅಂಗವನ್ನು ಕೊಂದಾದರೂ

ಪಡೆಯುತ್ತದೆ. ಭ್ರಷ್ಟಾಚಾರ, ಕೊಲೆ, ದರೋಡೆ, ಕಳವು, ಹಾದರದಲ್ಲಿ ಮನ ಭಾಗಿಯಾಗಿ ಅರಿವಿನ ಅಂಗಕ್ಕೆ ಪಾಪದ ಕೆಸರು ಮೆತ್ತುತ್ತದೆ. ಮನದ ಪಾಪ ಕನ್ನಡಿಯಲ್ಲಿ ಕಾಣುವುದಿಲ್ಲ ; ಅಂಗದಲ್ಲಿ ಭರಿತವಾದ ಸಂಗಯ್ಯನೆಂಬ ಅರಿವಿಗೆ ಶರಣು ಹೋಗಬೇಕು.

188

ಗೀತವ ಹಾಡಿದಡೇನು, ಶಾಸ್ತ್ರ-ಪುರಾಣವ ಕೇಳಿದಡೇನು
ವೇದ ವೇದಾಂತವ ನೋದಿದಡೇನು ?
ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು
ಎಲ್ಲರು ಅನುಭಾವಿಯಾದಡೇನು ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ !

ಮನ ಬಲು ಕ್ರೂರಿ. ತನುವಿನ ಆಶ್ರಯ ಪಡೆದು ತನುವನ್ನೇ ಮೋಸಕ್ಕೆ ಗುರಿಮಾಡುವ ಹೆಮ್ಮಾರಿ. ತನುವಿನ ಅರಿವಿನಿಂದಲೇ ಮುದ್ರಣಗೊಂಡ ಗೀತೆ , ಶಾಸ್ತ್ರ, ಪುರಾಣ , ವೇದ , ವೇದಾಂತಗಳನ್ನು ಓದುತ್ತದೆ. ಪುನಃ ತನುವಿಗೆ ಭೋಧಿಸುವ ಗುರುವಿನ ವೇಷ ಹಾಕಿ ಪಲ್ಲಕ್ಕಿಯಲ್ಲಿ ಮೆರೆಯುತ್ತದೆ. ಸಿಂಹಾಸನದ ಮೇಲೆ ಕುಳಿತು ಆಶೀರ್ವದಿಸುತ್ತದೆ. ತನ್ನಂತೆಯೇ ಇರುವ ತನುವನ್ನು ಶಿಷ್ಯನೆಂದು ಕರೆಯುತ್ತದೆ. ತನ್ನಂತೆಯೇ ಇರುವ ತನುವನ್ನು ಗುರುವೆಂದು ಕರೆಯುತ್ತದೆ.

ಮನಕ್ಕೆ ಅರಿವಾಗಿ, ಮನ ತನುವಿನ ಅರಿವಿಗೆ ಒಲಿದು ಆ ಅರಿವನ್ನೆ ಗುರುವಾಗಿ ಮಾಡಿಕೊಂಡಾಗ ಅನುಭಾವಿಯಾಗಲು ಸಾಧ್ಯ. ವೇಷ ಹಾಕಿ ಗೀತೆ, ಶಾಸ್ತ್ರ, ಪುರಾಣ, ವೇದ ಆಗಮಗಳನ್ನು ಓದಿ ಹೇಳಿದರೆ ಅದು ಪುಸ್ತಕದ ಮಾತಾಗುತ್ತದೆ.

ಅರಿವು ಪುಸ್ತಕಗಳಲ್ಲಿ ಇಲ್ಲ. ಸರ್ವಪುಸ್ತಕಗಳು ಪ್ರಕಟವಾದದ್ದು ತನುವಿನ ಅಂತರಂಗದ ಅರಿವಿನಿಂದಲೇ. ಮನ ಅಂತರಂಗದ ಅರಿವೆಂಬ ಗುರುವನ್ನು ವಿಶ್ವಾಸ ಮಾಡಲು ತಿಳಿಯದಿದ್ದರೆ ಅದಕ್ಕೆ ಅನುಭಾವ ನಿಲುಕದು.

ಮನ ಅನುಭಾವಿಯಾದಡೇನು ? ಅಂತರಂಗದ ಅರಿವೆಂಬ ಗುರುವಿಗೆ ಭಕ್ತಿಮಾಡದ ಮನವನ್ನು ಅರಿವಿನ ಕೂಡಲಸಂಗಯ್ಯ ಹತ್ತಿರವಿದ್ದರೂ ಬಹುದೂರ. ಅಂತವರನೊಲ್ಲ ಎಂದಿದ್ದಾರೆ ಜ್ಞಾನ ಭಂಡಾರಿ ಬಸವಣ್ಣ .

ಅಣ್ಣನ ಈ ಸೂತ್ರ ಹಿಡಿದು ಅರಿವಿಗೆ ಹೋದರೆ ಗೀತೆ, ಶಾಸ್ತ್ರ, ಪುರಾಣ, ವೇದ, ವೇದಾಂತಗಳನ್ನು ಓದುವ ಅವಶ್ಯಕತೆ ಇಲ್ಲ. ಸಕಲ ತನುಗಳು ಅನುಭಾವಿ ತನುಗಳೇ ಆಗಿವೆ.

189

ಲಿಂಗವ ಪೂಜಿಸಿದ ಬಳಿಕ, ಜಂಗಮಕ್ಕೆ ಅಂಜಲೆ ಬೇಕು ;
ದಕ್ಕ ನುಂಗಿದಂತೆ ಬೆರೆತುಕೊಂಡಿರಬೇಡ .
ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದಡೆ ,
ಬೇಡಿದ ಪದವಿಯನೀವ ಕೂಡಲಸಂಗಮದೇವ .

ಲಿಂಗ ಪೂಜಿಸಿ ಜಂಗಮಕ್ಕೆ ಅಂಜದಿದ್ದರೆ ಉಪಯೋಗವಿಲ್ಲ . ಬಸವಣ್ಣನವರು ಹೇಳಿದ ಲಿಂಗ ಅದು ಇಷ್ಟಲಿಂಗ ! ಅರಿವು ಬಿಂದುವಾಗಿ ಗರ್ಭ ಪ್ರವೇಶ ಮಾಡಿ, ತನುವಾಗಿ ಹೊರಬಂದು, ತನುವಿನ ಕಣಕಣದಲ್ಲಿದ್ದು , ಜ್ಞಾನಿ ತನುವನ್ನಾಗಿ ಲೋಕಕ್ಕೆ ಪರಿಚಯಿಸಿದ ಅರಿವೇ ಇಷ್ಟಲಿಂಗ!

ಇಷ್ಟಲಿಂಗವೆಂಬ ಅರಿವನ್ನು ಮನ ಪೂಜಿಸಿದ ಬಳಿಕ, ಆ ಅರಿವಿನಲ್ಲಿ ಮೂಡಿದ ಜಂಗಮಕ್ಕೆ ಅಂಜಲೇಬೇಕು. ಜಂಗಮ ವೆಂದರೆ ವ್ಯಕ್ತಿಯಲ್ಲ, ಪ್ರತಿ ತನುವಿನಲ್ಲಿ ಅರಿವು ನುಡಿದಂತೆ ನಡೆಯಲು ಆಜ್ಞಾಪಿಸುವ ಅವ್ಯಕ್ತ ! ಮನ ನುಡಿದಂತೆ ನಡೆಯದಿದ್ದರೆ, ಅದನ್ನೆಲ್ಲ ತನ್ನ ಲೆಕ್ಕದಲ್ಲಿ ಬರೆದಿಟ್ಟುಕೊಂಡು, ತನು ಇರುವವರೆಗೆ ಮನಕ್ಕೆ ಮತ್ತೆ ಮತ್ತೆ ನೆನಪಿಸಿ ಅದರ ಅಲ್ಲದ ಕೆಲಸಗಳಿಗೆ ಹೀಯಾಳಿಸಿ, ಜಂಕಿಸಿ, ಬಿರುನುಡಿಗಳಿಂದ ಸರಿದಾರಿಗೆ ತರುವ ಶೂರ ; ವೀರ.

ಈ ಜಂಗಮನಿಗೆ ವರ್ಧಮಾನ ಎನ್ನುವ ರಾಜಕುಮಾರ ಮಹಾವೀರನೆಂದು ಹೆಸರಿಟ್ಟ. ಸಿದ್ಧಾರ್ಥ ಎನ್ನುವ ರಾಜ ಬುದ್ಧನೆಂದು ಕರೆದ . ಶಂಕರರು, ಉಪನಿಷತ್‌ಕಾರರು ಬ್ರಹ್ಮನೆಂದು ಹೆಸರಿಟ್ಟು ಕರೆದರು. ಶರಣರು ಈತನನ್ನು ಜಂಗಮನೆಂದ ಕರೆದರು.

ತನುವಿನ ಕಣಕಣದಲ್ಲಿರುವ ಅರಿವು ಬುದ್ಧ, ಮಹಾವೀರ, ಜಂಗಮ, ಬ್ರಹ್ಮನಾದರೆ, ತನುವನ್ನು ಆವರಿಸಿದ ಅರಿವಿನ ನೆರಳೇ ಭ್ರಮೆ. ಇದು ಮನವೂ ಹೌದು. ಜ್ಞಾನ ತನುವನ್ನು ಹಾಳುಗೆಡವುವ ಬ್ರಹ್ಮನನ್ನು ಆವರಿಸಿದ ಬ್ರಹ್ಮರಕ್ಕಸನೂ ಹೌದು ! ಈ ರಕ್ಕಸ, ಜಂಗಮನಿಗೆ ಅಂಜಲೇ ಬೇಕು. ಆದರೆ ಕೊರಳಿಗೆ ಕಟ್ಟಿಕೊಂಡ ಲಿಂಗಕ್ಕೆ ಪುಷ್ಪ ಪತ್ರಿಗಳನ್ನಿಟ್ಟು ಪೂಜಿಸುತ್ತದೆ. ವೇಷದ ಜಂಗಮನಿಗೆ ಪಾದ ಪೂಜಿಸಿ ನಮಸ್ಕರಿಸುತ್ತದೆ. ಆದರೆ ತನುವಿನ ಕಣಕಣದಲ್ಲಿದ್ದ ಅರಿವಿನ ಜಂಗಮನಿಗೆ ಹೆದರುವುದಿಲ್ಲ . ಆತ ಹೇಳಿದಂತೆ ನಡೆಯುವುದಿಲ್ಲ . ಅದಕ್ಕಾಗಿಯೇ ಬಸವಣ್ಣನವರು ಮನಕ್ಕೆ ಬುದ್ಧಿಮಾತು ಹೇಳಿದ್ದಾರೆ.

ದಕ್ಕ ನುಂಗಿದಂತೆ ಬೆರೆತುಕೊಂಡಿರಬೇಡ. ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿ ಕೊಂಡಿದ್ದಡೆ, ಬೇಡಿದ ಪದವಿಯನೀವ ಕೂಡಲಸಂಗಮದೇವ :

ದಕ್ಕ : ನೇಣುಗಂಬ ದುಂಡಗೆ ಇದ್ದು ಸೆಟೆದುಕೊಂಡಿರುತ್ತದೆ. ಅದನ್ನು ನೋಡಿದರೆ ಭಯ. ಇದರಂತೆಯೇ ದುಂಡಗೆ ಕಂಡುಬರುವ ಬೀಗಿ ಬೆಳೆದ ಬಾಳೆಯ ಮಾತೇ ಬೇರೆ. ಎರಡೂ ದಿಂಡುಗಳಂತೆ ಕಂಡರೂ ಒಂದು ದಿಂಡು ತನುವಿಗೆ ಮೃತ್ಯುವಿನ ಆಮಂತ್ರಣ ಕೊಡುತ್ತದೆ. ಮತ್ತೊಂದು ತನುವಿಗೆ ಫಲಭರಿತ ಸಿಹಿ ಬಾಳೆಯ ಫಲಕೊಟ್ಟು ಧನ್ಯನಾಗುತ್ತದೆ. ಕಣ್ಣಿಗೆ ಕಾಣುವ ದಿಂಡು ಸುಲಿದು ನೋಡಿದರೆ ಇಂಬಿಲ್ಲದಂತೆ ಮಾಯವಾಗುತ್ತದೆ.

ತನುಗಳೆಲ್ಲ ಒಂದೇ ಆಗಿ ಕಂಡರೂ ತನುವಿನ ಕಣಕಣದಲ್ಲಿ ಬೆರೆತ ಅರಿವಿನ ಜಂಗಮನ ಕೆಲಸವೇ ಬೇರೆ. ತನುವಿನಲ್ಲಿ ಆವರಿಸಿದ ಮನವೆಂಬ ಮರ್ಕಟನ ಕೆಲಸವೇ ಬೇರೆ. ಮರ್ಕಟ ಆಂಜನೇಯನಂತೆ ಬಾಗಿ ಅರಿವೆಂಬ ರಾಮನನ್ನು ಪೂಜಿಸಿದರೆ, ಬೇಡಿದ ಪದವಿಯನ್ನು ಆಂಜನೇಯನಿಗಿತ್ತು ತನ್ನಂತೆ ಮಾಡಿಕೊಳ್ಳುತ್ತಾನೆ. ಬೀಗಿ ಬೆಳೆದ ಬಾಗಿದ ಸಿಹಿ ಬಾಳೆಯ ತಿನ್ನಿಸಿ ಮತ್ತೆ ಮರ್ಕಟಕ್ಕೆ ಜನ್ಮವಿಲ್ಲದಂತೆ ಮಾಡುತ್ತಾನೆ.

190

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು ;
ಮರ್ಮವನರಿಯದ ಮಾಟ ಸಯಿದಾನದ ಕೇಡು.

ಬಂದ ಸಮಯೋಚಿತವ ನರಿಯದಿದ್ದಡೆ
ನಿಂದಿರಲೊಲ್ಲ ಕೂಡಲಸಂಗಮದೇವ.

ನಿರಹಂಕಾರ , ನಿರ್ಮಲ ತತ್ವಭರಿತವಾದ ತನು, ಮನದ ಅಹಂಕಾರಕ್ಕೆ ವಿಷಯಲಂಪಟ ತನಕ್ಕೆ ಒಳಗಾಗಿ ಕರ್ಮಕ್ಕೆ ಗುರಿಯಾಗಿದೆ . ಅಜ್ಞಾನಿ ಪಟ್ಟ ಕಟ್ಟಿಕೊಂಡಿದೆ.

ಮನ ಇನಸ್ಟಾಂಟ್ ಸುಖಕ್ಕೆ ಬಲಿಯಾದಂತೆ, ತನುವಿನ ಕಣ ಕಣದಲ್ಲಿರುವ ಶಾಶ್ವತ ಸುಖದ ಅರಿವಿನ ಮರ್ಮವನು ಅರಿಯದು. ಸಂಗ್ರಹ ಬುದ್ಧಿ ಮನದ ಕೇಡು, ಸೆಗಣಿ ಹುಳದಂತೆ, ಸಕ್ಕರೆಯ ರುಚಿಯನರಿಯದು.

ಮನವನ್ನು ಯಾರೂ ಗುರುತಿಸುವುದಿಲ್ಲ ; ತನು ಅರಿವಿನ ಅಮೃತದ ಕುಂಡ. ಮನ ಇದರ ಹೊರಾವರಣ. ಸುಧೆ ಉಣ್ಣಲು ಬಂದ ಮರ್ಕಟ ಸಮಯೋಚಿತವನು ತಿಳಿಯದಿದ್ದರೆ; ಸುಧೆಯ ಪಾತ್ರೆ ಅದರ ಸೊತ್ತಲ್ಲ ; ಅದು ಲಿಂಗ ಜಂಗಮನೆಂಬ ಅರಿವಿನ ಆಭರಣ.

ಮನ ಅರಿಯದಿದ್ದರೆ ತನ್ನ ಮನೆಯ ಸುಧೆಯ ಪಾತ್ರೆ ವ್ಯರ್ಥ. ತಾನೂ ವ್ಯರ್ಥ. ಮನ ಮರ್ಮವನು ಅರಿತು, ಲಿಂಗ ಜಂಗಮರೀರ್ವರು ಸಂಗಮಗೊಂಡ ಅಂಗದಲ್ಲಿ ಕೂಡಿ ಕೂಡಲಸಂಗಯ್ಯನಾಗಬೇಕು. ಇದು ಬಸವಣ್ಣನವರ ಬಯಕೆ.

191

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ -
ನಮ್ಮ ಶರಣರಿಗೆ ಉರಿಗೆ ಅರಗಾಗಿ ಕರಗದನ್ನಕ್ಕ ,
ಸ್ಥಾವರ ಜಂಗಮ ವೊಂದೆ ಎಂದು ನಂಬದನ್ನಕ್ಕ ?
ಕೂಡಲಸಂಗಮದೇವಾ,
ಬರಿಯ ಮಾತಿನ ಮಾಲೆಯು ಲೇನಹುದು ?

ಭಗವದ್ಗೀತೆ, ಬೈಬಲ್, ವೇದ ಉಪನಿಷತ್‌ಗಳು, ದ್ವೈತ , ಅದ್ವೈತ ಗ್ರಂಥಗಳನೆಲ್ಲಾ ಓದಿ ಪಂಡಿತ -ಶಾಸ್ತ್ರಿ ಆಗಬಹುದು. ಪ್ರವಚನ ಮಾಡಿ ಹಣ ಒಡವೆ ಸಂಪಾದಿಸಬಹುದು. ಒಂದು ಪೀಠದ ಮೇಲೆ ಕುಳಿತು ಗುರುವಾಗಬಹುದು. ಆದರೆ ಸ್ಥಾವರ ಜಂಗಮ ಒಂದೇ ಎಂದು ತಿಳಿಯುವುದು ಜಟಿಲ.

ಸಕಲ ಗ್ರಂಥಗಳಿಗೆ ಜನ್ಮ ನೀಡಿದ್ದು ತನು. ತನುವಿನ ಕಣಕಣದಲ್ಲಿ ಬೆರೆತವನೇ ಅರಿವೆಂಬ ಗುರು. ಈ ಗುರುದೇವನನ್ನು ತಿಳಿದವರು ಶಿವಶರಣರು. ಇವರು ಗ್ರಂಥಗಳಿಗೆ ದಾಸರಾಗಲಿಲ್ಲ. ಗ್ರಂಥಗಳಿಗೆ ಜನ್ಮ ನೀಡಿದ ಅರಿವಿಗೆ ದಾಸರಾದರು ; ಶರಣು ಹೋದರು. ಈ ಶರಣರ ಅರಿವಿನ ಉರಿಗೆ ಮನ ಅರಗಾಗಿ ಕರಗಲು ಬಾರದಿದ್ದರೆ ಏನು ಪ್ರಯೋಜನ !

ಜಗದಲ್ಲಿರುವ ತನುಗಳೆಲ್ಲ ಒಂದೇ ; ಅದರಲ್ಲಿರುವ ಅರಿವು ಕೂಡಾ ಒಂದೇ. ಓದಿದವರು ಒಂದೇ ; ಅದನ್ನು ಕೇಳಿದವರು ಒಂದೇ. ಈ ಸರಳ ಸೂತ್ರ ಅರಿಯದಿದ್ದರೆ ಓದಿದವರು ಬರಿ ಮಾತಿನ ಮಾಲೆಯನು ಹೆಣೆದವರು. ಅದರಿಂದ ಏನೂ ಸಾಧಿಸಿದಂತಾಗುವುದಿಲ್ಲ ಎಂದು ಬಸವಣ್ಣನವರು ಓದಿದವರನ್ನು ಎಚ್ಚರಿಸಿದ್ದಾರೆ.

192

ಲಾಂಛನ ಹೊರಗೆ ಬಂದಿರಲು, ಒಳಗೆ ಲಿಂಗಾರ್ಚನೆಯೆಂತಯ್ಯಾ ?
ಮುಖದಲ್ಲಿ ಕಟ್ಟಿದ ಕನ್ನಡಿ, ಮೂಗಿನ ಮೇಲಣ ಕತ್ತಿ !
ಸಮಯಾಚಾರ ವೆಂತುಟಯ್ಯಾ ?
ಕೂಡಲಸಂಗಮದೇವಯ್ಯ ಮೂಗ ಕೊಯ್ಯದೆ ಮಾಣ್ಬನೆ ಹೇಳಯ್ಯಾ .

ಲಾಂಛನ ಹೊರಗೆ ಬಂದಿರಲು ಒಳಗೆ ಲಿಂಗಾರ್ಚನೆಯೆಂತಯ್ಯಾ :

ತನು ಅರಿವಿನ ಲಾಂಛನ ! ತನುವಿನ ಅರಿವೇ ಗುರುದೇವ ; ತನುವಿನ ಮನವೇ ಶಿಷ್ಯ ! ಶಿಷ್ಯ ಅರಿವೆಂಬ ಲಾಂಛನ ತನುವಿನ ಮೂಲಕ ಹೊದ್ದಿದ್ದಾನೆ. ಆತನಿಗೆ ಮತ್ತೆ ಲಾಂಛನದ ಅವಶ್ಯಕತೆಯಿಲ್ಲ. ಆದರೆ ತನ್ನ ತನುವಿನ ಅರಿವೆಂಬ ಗುರುಲಾಂಛನವನ್ನು ಮರೆತಿದ್ದಾನೆ. ಅರಿವಿನ ಲಾಂಛನವೆಂಬ ಕಾವಿ ಬಟ್ಟೆ ತನುವಿಗೆ ಹಾಕಿ ಗುರುವಾಗಿ ಮೆರೆಯುತ್ತಿದ್ದಾನೆ. ಕೊರಳಿಗೆ ಲಿಂಗ ಕಟ್ಟಿಕೊಂಡು ಪೂಜೆ ಮಾಡುತ್ತಿದ್ದಾನೆ .

ಅರಿವಿನ ಲಾಂಛನ ತನುವಿನ ಒಳಗೆ ಉಳಿದಿದೆ. ತನುವಿನ ಹೊರಗೆ ಬಟ್ಟೆಯ ಲಾಂಛನ ಬಂದಿದೆ. ಅದರ ಮೇಲೆ ಲಿಂಗ ಕಟ್ಟಿಕೊಂಡು ಆ ಲಿಂಗಕ್ಕೆ ಲಿಂಗಾರ್ಚನೆ ಮಾಡಿದರೆ ಜನ ನಂಬಬಹುದು. ಗುರು ಎಂದು ಪಾದ ತೊಳೆದು ನೀರು ಕುಡಿಯಬಹುದು. ಆದರೆ ಮುಖದಲ್ಲಿ ಕಟ್ಟಿದ ಅರಿವಿನ ಕನ್ನಡಿ, ಮೂಗಿನ ಮೇಲಣ ಅರಿವಿನ ಕತ್ತಿ ; ಮನ ಮಾಡುವ ಈ ಅಪರಾಧ ತನುವನ್ನೇ ಸೀಳುತ್ತದೆ.

ಗುರುವೆಂದು ಮನ ತನುವಿಗೆ ವೇಷಧರಿಸಿ ಮತ್ತೊಬ್ಬರಿಗೆ ಮೋಸ ಮಾಡಬಹುದು. ಆದರೆ ಅರಿವೆಂಬ ಗುರುವಿಗೆ ಮೋಸ ಮಾಡಲು ಬರುವುದಿಲ್ಲ . ಮನಕ್ಕೆ ಅರಿವಾದರೆ ತನ್ನಂತೆ ಇರುವ ಸಕಲ ತನುಗಳೆಲ್ಲ ಅರಿವಿನ ತನುಗಳು. ಗುರುತನುಗಳು ! ಆ ತನುಗಳನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಲು ಬರುವುದಿಲ್ಲ .

ಮನ ಅರಿವ ಅರಿಯದೆ ತನುವಿಗೆ ಗುರುಲಾಂಛನ ಹಾಕಿದರೆ, ತನುವಿನಲ್ಲಿರುವ ಅರಿವಿನ ಸಂಗಯ್ಯ, ಮೂಗ ಕೊಯ್ಯದೆ ಬಿಡುವನೆ ? ಎಲೆ ಮನವೆ, ಸಕಲ ತನುಗಳು ಅರಿವೆಂಬ ಗುರುವಿನ ಲಾಂಛನಗಳು, ಆ ಲಾಂಛನಗಳಿಗೆ ಬಾಗಿ ಒಮ್ಮೆ ಶರಣೆನ್ನು ಗುರುವಿಗೆ ಗುರುವಾಗಲು ಸಾಧ್ಯವೆ ? ಹೇಳು ಮನವೇ ! ಗುರುವಾಗಲು ಹೊರಟ ಮನಕ್ಕೆ ಬಸವಣ್ಣನವರು ಬುದ್ಧಿವಾದ ಹೇಳಿ ಅರಿವಿನತ್ತ ಚಲಿಸಲು ದಾರಿ ತೋರಿಸಿದ್ದಾರೆ .

193

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ :
ಅದು ಬೇಡದು, ಬೆಸಗೊಳ್ಳದು –
ತಂದೊಮ್ಮೆ ನೀಡಬಹುದು .
ಕಾಡುವ ಬೇಡುವ ಜಂಗಮ ಬಂದಡೆ,
ನೀಡಲು ಬಾರದು ಕೂಡಲಸಂಗಮದೇವಾ.

ನೀತಿ ಕತೆಗಳಿಂದ, ರಾಮಾಯಣ, ಮಹಾಭಾರತ, ಭಗವದ್ಗೀತೆಗಳಿಂದ ತನು

ಸುಧಾರಿಸುವುದಿಲ್ಲ . ಮನದ ರೋಗಗಳು ನಿವಾರಣೆಯಾಗುವುದಿಲ್ಲ. ತನುವಿನ ಮನ ಸುಧಾರಿಸಲು ತನುವಿನಲ್ಲಿಯೇ ಅರಿವಿನ ಅಮೃತ ಅಡಗಿದೆ. ಅದನ್ನು ಪಾನ ಮಾಡಲು ಮನಕ್ಕೆ ಒಂದಿಷ್ಟು ಸೂತ್ರ ಬೇಕು. ತಂತ್ರಗಾರಿಕೆ ಬೇಕು. ಆ ತಂತ್ರಗಾರಿಕೆಯನ್ನು ಬಸವಣ್ಣನವರು ಈ ವಚನದಲ್ಲಿ ಹೇಳಿದಿದ್ದಾರೆ.

ಕಟ್ಟಿ ಕೊಂಡ ಲಿಂಗಕ್ಕೆ ಭಕ್ತಿ ಮಾಡಿ ಹಾಡಿದರೆ ಆಡಿದರೆ ಅದು ಕೇಳುವುದಿಲ್ಲ ; ಏನನ್ನೂ ಹೇಳುವುದಿಲ್ಲ . ಬಸವಣ್ಣ ಇದನ್ನು ಲಿಂಗವೆನ್ನಲಿಲ್ಲ.

ಕಾಣುವ ಅಂಗಗಳೆಲ್ಲ ಅರಿವಿನ ಲಿಂಗಗಳೇ. ಮನ ಅಂಗದ ಅರಿವೆಂಬ ಲಿಂಗಯ್ಯನಿಗಾಗಿ ಆಡಿ ಹಾಡಿ ಭಕ್ತಿ ಮಾಡಿದರೆ ಆತ ಯಾವುದನ್ನೂ ಬೇಡುವುದಿಲ್ಲ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ. ಸಕಲವನ್ನೂ ಸೃಷ್ಟಿ ಮಾಡಿದ ಅರಿವೆಂಬ ಗುರುವಿಗೆ ಮತ್ತೇನು ಬೇಕು ? ಮನದ ಅಜ್ಞಾನವೊಂದೇ ಸಾಕು ! ಅದನ್ನು ನೀಡಿದರೆ ಆತ ತೃಪ್ತ.

ಮನ ತನುವಿಗೆ ಜಂಗಮ ವೇಷ ಧರಿಸಿ ಕಾಡಿ ಬೇಡಿದರೆ ನೀಡಲು ಬಾರದು. ಅದು ಮಾರಿ ; ಮನ ತನುವಿಗೆ ಉಪಜೀವನಕ್ಕಾಗಿ ಹಾಕಿದ ವೇಷ ಎಂದಿದ್ದಾರೆ ಬಸವಣ್ಣ .

194

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು ;
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದಡೆ ನಡೆಯೆಂಬರು ;
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಕಲ್ಲನಾಗರಕ್ಕೆ ನಾಗ ಪಂಚಮಿಯಂದು ಹಾಲನೆರೆಯುತ್ತಾರೆ. ಲಿಂಗಕ್ಕೆ ನಿತ್ಯ ನೀರೆರೆದು ಎಡೆಮಾಡುತ್ತಾರೆ. ದಿಟದ ನಾಗರ ಬಂದರೆ ಕೊಲ್ಲು ಎನ್ನುತ್ತಾರೆ. ಉಂಬ ಜಂಗಮ ಬಂದರೆ ನಡೆ ಎನ್ನುತ್ತಾರೆ. ಇದು ರೂಢಿ !

ಶರಣರನ್ನು ಕಂಡು ಈ ಬಗ್ಗೆ ಉದಾಸೀನ ಮಾಡದೆ ಗಂಭೀರವಾಗಿ ಕೇಳಿದರೆ ಸಕಲವನ್ನೂ ಹೇಳುತ್ತಾರೆ. ಅವರಿಗೆ ತಿಳಿಯದ ಮಾತೇ ಇಲ್ಲ. ಬ್ರಹ್ಮಜ್ಞಾನಿಗಳವರು. ತನುವಿಗಂಟಿದ ಭ್ರಮೆಯನ್ನು ಓಡಿಸಿ ಬ್ರಹ್ಮನನ್ನಾಗಿ ಮಾಡುತ್ತಾರೆ.

ತತ್ತಿಯಿಂದ ಜನ್ಮ ಪಡೆದ ಉರುಗ, ಕೀಟ, ಪಕ್ಷಿಗಳಿಗೆ ಅಂಡಜ ಎನ್ನುತ್ತಾರೆ. ಇವು ಹಾಲು ಕುಡಿಯುವುದಿಲ್ಲ. ಗರ್ಭದಿಂದ ಹೊರಬಂದ ಮನುಷ್ಯ ಇತರ ಪ್ರಾಣಿಗಳು ಮಾತ್ರ ಹಾಲು ಕುಡಿದು ಬದುಕುತ್ತವೆ. ಮನುಷ್ಯನಿಗೆ ಇದು ಗೊತ್ತಿದ್ದರೂ ಕಲ್ಲ ನಾಗರಕ್ಕೆ ಹಾಲು ಎರೆಯುತ್ತಾನೆ. ಇದು ಸಂಪ್ರದಾಯವಾಗಿದೆ. ಏಕೆ ಎಂದು ಯಾರೂ ಕೇಳುವುದಿಲ್ಲ. ತನ್ನನು ತಾ ಕೇಳಿಕೊಳ್ಳುತ್ತಿಲ್ಲ, ಉದಾಸೀನವ ಮಾಡದೆ ಮಹಾಜ್ಞಾನಿ ಶರಣರನ್ನು ಕೇಳಿದರೆ ಕೂಡಲೇ ಸಮಸ್ಯೆ ಪರಿಹರಿಸುತ್ತಾರೆ. ಕಲ್ಲಿಗೆ ಮಣ್ಣಿನ ಹೆಂಟೆ ತಾಗಿದರೆ ಪುಡಿ ಪುಡಿಯಾಗುವಂತೆ ಕೂಡಲೇ ತಿಳಿದು ನೀರಂತಾಗುತ್ತಾರೆ. ಕೂಡಲ ಸಂಗನಶರಣರಲ್ಲಿ ಮಹಾಜ್ಞಾನಿಗಳಾಗುತ್ತಾರೆ.

ಹಾವಿನ ದ್ವೇಷ ಹನ್ನೆರಡು ವರುಷ , ತನುವಿನ ದ್ವೇಷ ನೂರು ವರುಷ ! ಹಾವಿಗೆ ತಿಳಿಯುವುದಿಲ್ಲ. ರಕ್ಷಣೆಗಾಗಿ ಕಚ್ಚಿ ವಿಷ ಉಗುಳುತ್ತದೆ. ದೇಹ ಹಾಗಲ್ಲ ; ತಿಳಿಯುತ್ತದೆ. ಆದರೂ ಶಬ್ದಕ್ಕಾಗಿ, ರುಚಿ, ಸ್ಪರ್ಷ,ವಾಸನೆ, ದೃಶ್ಯಕ್ಕಾಗಿ ದೇಹದಲ್ಲಿ ವಿಷ ತುಂಬಿಕೊಳ್ಳುತ್ತದೆ .

ರಾವಣ ಸೀತೆಯನ್ನು ನೋಡಿ ಹಾವಿನಂತಾದ. ತನ್ನ ವಿಷ ತನಗೂ, ರಾಜ್ಯಕ್ಕೂ, ಸಂಬಂಧಿಕರಿಗೂ, ವಾನರ ಸೇನೆಗೂ ಮುಳುವಾಯಿತು. ದ್ರೌಪದಿಯ ಶಬ್ದ ವಿಷವಾಗಿ, ದುರ್ಯೋಧನ ಕೌರವ ಸೇನೆಗೂ ಪಾಂಡವರಿಗೂ ಮುಳುವಾಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ನಾಷವಾಯಿತು. ಕೈಕೇಯಿಯ ಎರಡು ಶಬ್ದಗಳು ರಾಮ ಸೀತೆ ಲಕ್ಷ್ಮಣರನ್ನು ವನವಾಸಕ್ಕೆ ಕಳುಹಿಸಿತು. ಸುಖಕ್ಕಾಗಿ ನುಡಿದ ಕೈಕೇಯಿಗೆ ಸಾಯುವವರೆಗೂ ವಿಷವಾಯಿತು.

ತಿಳಿಯದ ಮನದಿಂದಾಗಿ ತನುವಿಗೆ ವಿಷವಾಗುತ್ತದೆ. ಕೇಳಿ, ಮುಟ್ಟಿ , ರುಚಿಸಿ ಮೂಸಿಸಿದರೂ ವಿಷವಾಗುತ್ತದೆ. ತನು ತನುಕುಲಕ್ಕೆ ವೈರಿಯಾಗುತ್ತದೆ. ಹಾವು ಹಾವನ್ನು ಕೊಲ್ಲುವುದಿಲ್ಲ; ಆಹಾರಕ್ಕಾಗಿ ಬಳಸಬಹುದು. ಆದರೆ ವಿಷಪೂರಿತ ಮನುಷ್ಯ , ಮನುಷ್ಯ ಕುಲವನ್ನೇ ಕೊಲ್ಲುತ್ತಾನೆ. ತನು ತನುಗಳಿಗೆ ಮೋಸಮಾಡುತ್ತದೆ. ವಿಷಯದಿಂದ ವಿಷಭರಿತವಾದ ತನುವಿಗೆ ಅರಿವಿನ ಹಾಲೆರೆಯಬೇಕು ! ಜಾಣತನದಿಂದ ಕರೆದು ಹಾಲುಸಕ್ಕರೆ ಬೆರೆಸಿ, ಆನಂದದಿಂದ ಕುಡಿಸಿ ಅರಿವಿನ ಮಾತುಗಳಿಂದ ವಿಷಯದ ಹಲ್ಲು ಕಿತ್ತಬೇಕು. ಈ ಕಾಯಕ ಮಹಾಜ್ಞಾನಿ ಶರಣನಿಗೆ ಮಾತ್ರ ಗೊತ್ತು. ಉದಾಸೀನ ಮಾಡದೆ ಶಿವಶರಣರಿಗೆ ಭಕ್ತಿ ಮಾಡಿದರೆ ಸರ್ವರಿಗೂ ಜ್ಞಾನದ ಈ ಕಲೆಯನ್ನು ಕಲಿಸಬಲ್ಲರು !

ಅಜ್ಞಾನದ ತನು ವಿಷದ ಹಾವಿಗೆ ಸಮ, ಜ್ಞಾನಿ ತನು ಜಂಗಮ ! ಕಟ್ಟಿಕೊಂಡ ಲಿಂಗವನ್ನು ಪೂಜಿಸುವ ದೇವರನ್ನು ಅರಿವಿನಿಂದ ನೋಡಿದರೆ ಅದು ಕಲ್ಲು. ಕಲ್ಲಿನ ಮೇಲೆ ನಿಂತ ತನು, ಕಲ್ಲನ್ನು ಕಲ್ಲೆಂದು ಹೇಳುತ್ತದೆ. ಕಟೆದ ಕಲ್ಲನ್ನು ದೇವರೆಂದು, ಲಿಂಗವೆಂದು ಹೇಳುತ್ತದೆ. ಮೂರೂ ಹೊತ್ತು ಸ್ನಾನ ಮಾಡಿ ಪೂಜಿಸುತ್ತದೆ. ಕಲ್ಲನ್ನು ಕಲ್ಲೆಂದು ಹೇಳುವ ತನು ಜಂಗಮ ತನು; ಅರಿವಿನ ತನು! ಕಟೆದ ಕಲ್ಲನ್ನು ಕಲ್ಲೆಂದರಿಯದೆ ದೇವರೆಂದು, ಲಿಂಗವೆಂದು ಪೂಜಿಸುವ ತನು ಅಜ್ಞಾನಿ ತನು! ಕಟೆದ ಕಲ್ಲಿನಲ್ಲಿ ಕಲ್ಲು ಮರೆಯಾದಂತೆ, ತನುವಿನಲ್ಲಿ ಜ್ಞಾನ ಮರೆಯಾಗಿದೆ. ಮನ ಕಟೆದ ಕಲ್ಲನ್ನೆ ದೇವರೆಂದು ಪೂಜಿಸುತ್ತದೆ; ಕಲ್ಲನ್ನು ತಿಳಿಯುವ ಅರಿವೆಂಬ ಜಂಗಮನನ್ನು ಪೂಜಿಸುವುದಿಲ್ಲ. ಈ ತಂತ್ರಗಾರಿಕೆ ಮಹಾಜ್ಞಾನಿ ಶರಣರಿಗೆ , ದಾಸರಿಗೆ ತಿಳಿದಿದೆ. ಅವರು ಜ್ಞಾನಕ್ಕೆ ಶರಣು ಹೋಗಿ, ದಾಸರಾದರು. ಉಳಿದವರು ಕಲ್ಲಿಗೆ ಶರಣು ಹೋಗಿ, ಆ ಕಲ್ಲಿಗೆ ದಾಸರಾದರು. ಎರೆದರೆ ನೆನೆಯದು ಮರೆತರೆ ಬಾಡದು ಹುರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ ಎಂದು ತಿಳಿದು ಕಲ್ಲ ಪೂಜಿಸಲಿಲ್ಲ. ಎರೆದರೆ ನೆನೆದು ಆನಂದದಿಂದ ಕುಣಿ ಕುಣಿದಾಡುವ, ಮರೆತರೆ ಬಾಡುವ ಅಂಗವೆಂಬ ಲಿಂಗಕ್ಕೆ ಅಮೃತ ಸಮಾನವಾದ ಜ್ಞಾನದ ಹಾಲು ಎರೆದರು. ಉಣ್ಣುವ ಲಿಂಗಕ್ಕೆ ಶರಣರು ಬೋನವ ಉಣ್ಣಿಸಿ, ಉಣ್ಣದ ಲಿಂಗಕ್ಕೆ ಉದಾಸೀನವ ಮಾಡಿದರು.

195

ನಾಗಂಗೆ ಹೊಸತನಿಕ್ಕಿಹೆ ವೆಂಬರು ;
ನಾಗ ಬಂದಡೆ ಕೋಲ ಕಳೆದುಕೊಂಬರು !

ಆಗದಯ್ಯಾ ! ಜಂಗಮ ಲಿಂಗವೆಂಬ ಶಬ್ದವಾಗದಯ್ಯಾ !
ಕೂಡಲಸಂಗಮದೇವರಲ್ಲಿ ಸಿಂಧುಬಲ್ಲಾಳಂಗಲ್ಲದೆ ಆಗದಯ್ಯಾ.

ಕಲ್ಲ ನಾಗಕ್ಕೆ ಪೂಜೆ ಮಾಡುವುದು ; ದಿಟದ ನಾಗರವನ್ನು ಕೊಲ್ಲುವುದು. ಅಂತೆಯೇ ಜಂಗಮ ಪೂಜೆ, ಲಿಂಗಪೂಜೆ ಎನ್ನುವ ಶಬ್ದಾಡಂಬರದ ಮಾತು ಕೂಡಾ ಸಲ್ಲದು.

ಮನ ಕಲ್ಲನಾಗರಕ್ಕೆ ಹಾಲೆರೆಯಲು ತನುವನ್ನು ಬಳಕೆಮಾಡಿ ಕೊಳ್ಳುತ್ತದೆ. ದಿಟದ ನಾಗರ ಬಂದರೆ ಸಾಯಿಸಲು ಕೋಲು ಕಳೆದುಕೊಳ್ಳುತ್ತದೆ. ತನು ಒಂದೆ ; ಮನದ ಪಾತ್ರ ಎರಡು. ಕಲ್ಲ ನಾಗರ ಪೂಜಿಸಿದ್ದು ತನುವೇ. ದಿಟದ ನಾಗರವನ್ನು ಕೊಲ್ಲಲು ಅಣಿಯಾದದ್ದು ತನುವೇ.

ಮನಕ್ಕೆ ಸತ್ಯ ತಿಳಿಯದ್ದರಿಂದ ಪೂಜೆ ಎನ್ನುವ ಶಬ್ದ ; ಕೊಲ್ಲು ಎನ್ನುವ ಶಬ್ದ ಸಂಗ್ರಹ ಮಾಡಿಕೊಂಡು ಒಂದೇ ತನುವನ್ನು ಎರಡು ಕೆಲಸಗಳಿಗೆ ಬಳಕೆ ಮಾಡಿಕೊಳ್ಳು ತ್ತದೆ.

ಹಬ್ಬಕ್ಕೊಮ್ಮೆ ಜಂಗಮನನ್ನು ಕರೆದು ಊಟ ಮಾಡಿಸಿ ಪೂಜಿಸುತ್ತದೆ. ಹಾಗೆಯೇ ನಿತ್ಯ ಶುಚಿರ್ಭೂತನಾಗಿ ಕೊರಳಿಗೆ ಕಟ್ಟಿಕೊಂಡ ಲಿಂಗವನ್ನು ಪತ್ರಿ ಪುಷ್ಪಗಳಿಂದ ಪೂಜಿಸುತ್ತದೆ.

ಕಲ್ಲ ನಾಗರ, ದಿಟ ನಾಗರ ತಿಳಿಯಲಿಲ್ಲ. ಲಿಂಗ, ಜಂಗಮವನ್ನೂ ತಿಳಿಯಲಿಲ್ಲ. ಪೂಜೆ ಎನ್ನುವ ಶಬ್ದಾಡಂಬರಕ್ಕೆ ಮನ ಮರುಳಾಗಿ ತನುವನ್ನು ಪೂಜೆಗೆ ಸಿದ್ಧಪಡಿಸಿತು.

ಸಿಂಧುಬಲ್ಲಾಳನೆಂಬ ಜ್ಞಾನಿಯಂತೆ ಈ ನಾಲ್ಕು ಶಬ್ದಗಳನ್ನು ತಿಳಿಯಲಿಲ್ಲ. ಸಿಂಧುಬಲ್ಲಾಳ ಮಹಾರಾಜ ! ಜಂಗಮನ ಬಯಕೆಯಂತೆ ತನ್ನ ಸತಿಯನ್ನು ಜಂಗಮನಿಗಿತ್ತು ತೃಪ್ತಿ ಪಡಿಸಿದ ಶರಣ ! ಇದು ಸಾಮಾನ್ಯರಿಗೆ ಸಾಧ್ಯವಾಗದ ಮಾತು. ತಿಳಿದರೆ ಸರ್ವರಿಗೂ ಸಾಧ್ಯವಾಗುವ ಮಾತು.

ನಾಗಪಂಚಮಿಯಂದು ಎಲ್ಲರೂ ಕಲ್ಲ ನಾಗಕ್ಕೆ ಹಾಲೆರೆಯುತ್ತಾರೆ. ಅಂತೆಯೇ ದಿಟ ನಾಗರ ಬಂದರೆ ಕೋಲು ಹಿಡಿದು ಕೊಲ್ಲುತ್ತಾರೆ. ಒಬ್ಬರಿಗೂ ಇದು ತಿಳಿಯುವುದಿಲ್ಲ.

ಪ್ರತಿ ದಿನ ಎಲ್ಲರೂ ಲಿಂಗ ಅಥವಾ ಜಗಲಿಯ ದೇವರಿಗೆ ನೀರು ಎರೆದು ಪೂಜಿಸುತ್ತಾರೆ. ಗುರು- ಜಂಗಮರು ಬಂದರೆ ಊಟ ಮಾಡಿಸುತ್ತಾರೆ. ಆದರೆ ಒಬ್ಬರಿಗೂ ಲಿಂಗ- ಜಂಗಮದ ಅರಿವಾಗಲಿಲ್ಲ. ಮನ ಹೇಳಿದಂತೆ ತನುಗಳು ಕೇಳಿದವು.

ಸಿಂಧುಬಲ್ಲಾಳ ತನುವಿನ ಮನವನ್ನು ಸತಿಯಾಗಿಸಿದ. ತನುವಿನಲ್ಲಿರುವ ಅರಿವನ್ನು ಜಂಗಮವಾಗಿಸಿದ. ಶಯನ ಗೃಹಕ್ಕೆ ಮನವೆಂಬ ತನ್ನ ಸತಿಯನ್ನು ಕಳುಹಿಸಿ ಅರಿವೆಂಬ ಜಂಗಮನನ್ನು ತೃಪ್ತಿಪಡಿಸಿದ. ತನುವಿನ ಮನೆಯಲ್ಲಿ ಸತಿ- ಪತಿಗಳೊಂದಾದರು. ಮನ - ಅರಿವು ಒಂದಾಯಿತು. ಅರಿವಿನ ತನುವಾಯಿತು.

ಅರಿವಿನಿಂದ ನೋಡಿದ; ಹಾಲೆರೆಯುವ ನಾಗರ ನಾಗರವಲ್ಲ. ಅದು ಬರೀ ಕಲ್ಲಾಗಿ ಕಂಡಿತು, ಹಾಲೆರೆಯಲಿಲ್ಲ ! ನೆರೆದ ಜನ ಹಾಲೆರೆಯುವುದನ್ನು ಕಂಡು ಮರುಗಿದ. ದಿಟದ ನಾಗರ ಕೊಲ್ಲುವುದನ್ನು ಕಂಡು ಮರುಗಿದ. ಲಿಂಗ ಕೂಡಾ ಕಲ್ಲು ; ಅದಕ್ಕೆ ನಿತ್ಯ ನೀರೆರೆದರೂ ನೆನೆಯುವುದಿಲ್ಲ. ಏನೂ ಹೇಳುವುದಿಲ್ಲ. ಪೂಜಿಸುವ ತನುಗಳ ಕಂಡು ಮರುಗಿದ.

ತನ್ನಂತೆಯೇ ಇರುವ ತನುವನ್ನು ಕಟ್ಟುವ ಇಲ್ಲ ಜಂಗಮನೆಂದು ಪೂಜಿಸುವ ಮನವನ್ನು ಕಂಡು ಮರುಗಿದ. ಮನವೆಂಬ ಮರ್ಕಟ , ತನುಗಳಿಗೆ ವೇಷ ಹಾಕಿ ತನ್ನಂತೆ ಮಾಡಿಕೊಂಡಿರುವ ಮನದ ಹುಚ್ಚಾಟವನ್ನು ಕಂಡು ಮರುಗಿದ.

ಲಿಂಗವೆಂಬ ಅರಿವು ತಾನೇ, ಅದನ್ನು ಆಚರಿಸುವ ಜಂಗಮ ತಾನೇ ! ಇವೆರಡೂ ತನುವಿನಲ್ಲಿ ಸಂಗಮವಾಗಿವೆ ! ತನುವನ್ನು ಆವರಿಸಿದ ಮರ್ಕಟ ಇವರಿಬ್ಬರನ್ನೂ ತಿಳಿಯದೆ ಅರಿವಿನ ತನುವಿಗೆ ಅಜ್ಞಾನದ ಪಾತ್ರ ಹಾಕುವುದು ಸರಿಯೇ ? ಸಲ್ಲದು ಎಂದು ತಿಳಿಯದು. ಸಿಂಧು ಬಲ್ಲಾಳನಿಗಲ್ಲದೆ ಇದು ಎಲ್ಲರಿಗೂ ಸಾಧ್ಯವಿಲ್ಲದ ಮಾತು ಮನವೆಂಬ ನಾಗಕ್ಕೆ ಹೊಸತನಿಕ್ಕಿದ್ನ, ಅದನ್ನು ಸತಿಯನ್ನಾಗಿಸಿ ಅರಿವೆಂಬ ಜ್ಞಾನಿ ಜಂಗಮನಿಗಿತ್ತ ಎಂದಿದ್ದಾರೆ ಬಸವಣ್ಣನವರು.

196

ಎರೆದಡೆ ನನೆಯದು; ಮರೆದಡೆ ಬಾಡದು.
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ.
ಕೂಡಲಸಂಗಮದೇವಾ,
ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು.

ಲಿಂಗ, ದೇವರು, ಶಿವ ಎನ್ನುವ ಶಬ್ದವನ್ನು ಪುರಾತನರು ತನುವಿನಲ್ಲಿ ತನ್ಮಯವಾದ ಅರಿವಿಗೆ ಬಳಕೆ ಮಾಡಿದರು. ಆ ಅರಿವನ್ನೇ ಗುರುದೇವ ಎಂದು ಕರೆದರು. ಆ ಅರಿವನ್ನೇ ಸದಾಶಿವ, ಮಹಾದೇವ, ಸಾಕ್ಷಾತ್ ಪರಬ್ರಹ್ಮ ಎಂದು ಕರೆದರು. ಅದೇಕೋ ದಿನ ಕಳೆದಂತೆಲ್ಲ ಕಲಾವಿದ ಕಟೆದು ಮೂರ್ತಿ ಮಾಡಿದ ಕಲ್ಲೇ ದೇವರಾಯಿತು; ಲಿಂಗವಾಯಿತು.

ಲಿಂಗಕ್ಕೆ ಎರೆದಡೆ ನನೆಯದು; ಮರೆದಡೆ ಬಾಡದು. ಇದು ತಿಳಿದರೂ ಹುರುಳಿಲ್ಲದ ಲಿಂಗಾರ್ಚನೆ ; ಬಿಡಲು ಸಾಧ್ಯವಾಗುತ್ತಿಲ್ಲ. ಸಂಪ್ರದಾಯವಾಗಿ ಉಳಿದುಬಿಟ್ಟಿದೆ.

ಅಂಗಕ್ಕೆ ಎರೆದಡೆ ಅಂಗದಲ್ಲಿಯ ಅರಿವೆಂಬ ಲಿಂಗಕ್ಕೆ ರೋಮಾಂಚನವಾಗುತ್ತದೆ. ಅಂಗಕ್ಕೆ ಆನಂದವಾಗುತ್ತದೆ. ಅಂಗದಲ್ಲಿಯ ಜಂಗಮಕ್ಕೆ ಎರೆದಡೆ ಅಂಗವೆಂಬ ಸ್ಥಾವರ ನೆನೆದು ವದ್ದೆಯಾಗುತ್ತದೆ. ಅರಿವಿನ ಮುದ್ದೆಯಾಗುತ್ತದೆ.

ಅಂಗ ಅರಿವಿನಿಂದ ಭರಿತವಾಗಿದ್ದರೂ ಅಂಗದಲ್ಲಿರುವ ಮನವೆಂಬ ಮಂಗ ಅರಿಯದೆ ಕಟೆದ ಕಲ್ಲನ್ನೇ ಲಿಂಗವೆಂದು ತಿಳಿದು ಎರೆಯುತ್ತದೆ. ಅದು ಕಲ್ಲು; ಎರೆದರೆ ನನೆಯುವುದಿಲ್ಲ ಮರೆತರೆ ಬಾಡುವುದಿಲ್ಲ ಎನ್ನುವುದು ಮನವೆಂಬ ಮಂಗಕ್ಕೆ ತಿಳಿಯುವುದಿಲ್ಲ. ತಿಳಿಯುವ ಜಂಗಮ ಅಂಗದಲ್ಲಿದ್ದು ತಿಳಿಹೇಳಿದರೂ ಮಂಗವೆಂಬ ಮನ ಕೇಳುವುದಿಲ್ಲ. ತಿಳಿಹೇಳುವ ಜಂಗಮನಿಗೆ ಎರೆಯುವ ಶಕ್ತಿ ಮನಕ್ಕೆ ಬಂದಾಗ ; ಸ್ಥಾವರವೆಂಬ ಅಂಗ ನೆನೆದು ನೀರಾಗುತ್ತದೆ.

197

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ ;
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ ;
ಜಂಗಮ ವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ ;
ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ಚ ಜಂಗಮಃ ।
ಅಹಂ ತುಷ್ಟೋಸ್ಮ್ಯುಮಾದೇವಿ ಉಭಯೋರ್ಲಿಂಗ ಜಂಗಮಾತ್ ॥
ಇದು ಕಾರಣ ಕೂಡಲಸಂಗಮದೇವರಲ್ಲಿ

ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿ.

ಜಗದ ತನುಗಳೆಲ್ಲ ಸರಳವಾಗಿ ಅರಿವು ಬಳಕೆ ಮಾಡಿಕೊಂಡು ಸುಖೀಜೀವನ ನಡೆಸಬೇಕೆಂದು ಜ್ಞಾನಭಂಡಾರಿ ಬಸವಣ್ಣನವರು ಸೂಕ್ಷ್ಮಾತಿ ಸೂಕ್ಷ್ಮ ಸೂತ್ರಗಳನ್ನು ರಚಿಸಿದ್ದಾರೆ. ಅವರ ಕರುಣೆ ಅಪಾರವಾದುದು.

ಕಬ್ಬಿಣ ಒಂದು ಆಕಾರಕ್ಕೆ ಬರಬೇಕಾದರೆ ಅದಕ್ಕೆ ಅಗ್ನಿ ಸ್ಪರ್ಶ ಬೇಕೇ ಬೇಕು. ಅಗ್ನಿಯ ಆಧಾರದಲ್ಲಿದ್ದ ಕಬ್ಬಿಣಕ್ಕೆ ನೀರುಣಿಸಿದಾಗ ಅದರ ಆಕಾರ ಸದೃಢವಾಗಿ ನಿಲ್ಲುವುದು. ಕಬ್ಬಿಣ ತನ್ನ ಮೂಲ ಹೆಸರು ಕಳೆದುಕೊಂಡು ಕಠಾರಿ, ಖಡ್ಗ, ಕುಂಟೆ, ರಂಟೆ, ಮುಂತಾದ ಹೆಸರು ಪಡೆದುಕೊಂಡು ಸೇವೆಗೆ ಅಣಿಗೊಳ್ಳುವುದು.

ಬೀಜದಲ್ಲಿ ವೃಕ್ಷವಿದೆ. ಭೂಮಿಗೆ ನೀರೆರೆದಾಗ ಅದರ ಆಧಾರದಲ್ಲಿದ್ದ ಬೀಜ ಸಸಿಯಾಗಿ, ಮರವಾಗಿ, ಭೂಮಿಯಲ್ಲಿಯೇ ಬೇರು ಬಿಟ್ಟು , ನೀರು ಉಂಡು ಮಹಾವೃಕ್ಷವಾಗಿ ಫಲಕೊಡುತ್ತದೆ. ಬೀಜದ ಸೊಟ್ಟೆ ಹೊರಚೆಲ್ಲಿ ಅಂಕುರವಾಗಿ ವೃಕ್ಷವಾಗಿ ಭೂಮಿಯನ್ನು ಮಿದುಗೊಳಿಸಿ ಗಟ್ಟಿಯಾಗಿ ಹಿಡಿದುಕೊಂಡು ಅದರ ಆಧಾರದಲ್ಲಿಯೇ ನೀರುಣ್ಣುತ್ತ ಬೆಳೆಯುತ್ತದೆ. ಜೀವನ ಪರ್ಯಂತ ಕೀಟ, ಪಶು, ಪಕ್ಷಿ ಪ್ರಾಣಿ ಸಂಕುಲಕ್ಕೆ ಚಿಗುರು, ಎಲೆ, ಹೂ, ಕಾಯಿ, ಹಣ್ಣನಿತ್ತು ಬೀಜದಲ್ಲಿ ಮರದ ಸದ್ಗುಣಗಳನ್ನು ತುಂಬಿ ಧನ್ಯತೆ ಮೆರೆಯುತ್ತದೆ. ಕೊನೆಗೆ ಕಾಂಡವನ್ನಿತ್ತು ತುಂಡು, ತೊಲೆ, ದಿಂಡು, ಫರ್ನಿಚರ್ ಆಗಿ ಕಾಣಿಸಿಕೊಳ್ಳುತ್ತದೆ. ಇದು ಭೂಮಿಯಾಧಾರದಲ್ಲಿ ವೃಕ್ಷ ನೀರನುಂಡು ಬೆಳೆದು ಬೇರು ಬಿಟ್ಟು ಹೆಮ್ಮರವಾದುದರ ಫಲ !

ಜಂಗಮವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ :

ತನುವಿಗೆ ಆಧಾರವಾದದ್ದು ಅರಿವು. ಆ ಅರಿವೇ ಗುರು. ಗುರು ದೇವನ ಆದೇಶ ಚಾಚೂ ತಪ್ಪದೇ ಪಾಲಿಸುವವನೇ ಜಂಗಮ. ಈ ಜಂಗಮ ಕೂಡಾ ತನುವಿನ ಆಧಾರದಲ್ಲಿಯೇ ಇದ್ದಾನೆ. ತನುವಿಡಿದು ತನುವಿಂಗೆ ತನುವಾಗಿದ್ದಾನೆ. ಹಾಗೆಯೇ ಅಂಗದ ಕಣ ಕಣದಲ್ಲಿ ಲಿಂಗವೆಂಬ ಅರಿವಿದೆ. ಅರಿವಿಡಿದು ನುಡಿದು ಹೇಳುವವನೇ ಗುರು. ಅದನ್ನು ಚಾಚೂ ತಪ್ಪದೆ ಪಾಲಿಸುವವನೇ ಜಂಗಮ.

ತನುವನ್ನು ಆವರಿಸಿದ ಮನ ಜಂಗಮಕ್ಕೆ ಉಣ ಬಡಿಸಿದರೆ ತನುವಿನ ಕಣಕಣದಲ್ಲಿದ್ದ ಅರಿವೆಂಬ ಲಿಂಗ ಸಂತುಷ್ಟಿಯಾಗುವುದು. ಇಡೀ ತನು ಜಂಗಮತನು ಆಗುವುದು. ಬುದ್ಧ ತನು ಆಗುವುದು.

ಭೂಮಿ ಆಧಾರವಿಡಿದ ಬೇರಿದ್ದ ವೃಕ್ಷ ನೀರನುಂಡು ಚಿಗುರು, ಎಲೆ, ಹೂ, ಕಾಯಿ, ಹಣ್ಣನಿತ್ತು ಕೀಟ, ಪಶು, ಪಕ್ಷಿ, ಪ್ರಾಣಿ ಸಂಕುಲವನ್ನು ತೃಪ್ತಿ ಪಡಿಸುತ್ತದೆ.

ತನು ಬೇರಿಲ್ಲದ ಮಹಾಜ್ಞಾನದ ಭೋದೀವೃಕ್ಷ ! ಅಮೃತ ಸಮಾನವಾದ ನುಡಿಗಳನ್ನು ಚೆಲ್ಲುತ್ತ, ನಡೆದಾಡುತ್ತ ಮಾತನಾಡುವ ಬೇರಿಲ್ಲದ ಜ್ಞಾನದ ಮರ. ಅಂಗದಲ್ಲಿಯೇ ಸಂಗಮಾಡಿದ ಅರಿವಿನ ಸಂಗಯ್ಯನ ಮರ !

198

ಭಂಢವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ

ವಿರಹಿತ ಹೋಗಬಾರದು.

ಕಳ್ಳ ನಾಣ್ಯ ಸಲುಗೆಗೆ ಸಲ್ಲದು,
ಕಳ್ಳನಾಣ್ಯವ ಸಲ್ಲಲೀಯರಯ್ಯಾ.
ಭಕ್ತಿಯೆಂಬ ಭಂಡಕ್ಕೆ ಜಂಗಮವೆ ಸುಂಕಿಗ
ಕೂಡಲಸಂಗಮದೇವಾ.

ಬೆಳೆದ ಧಾನ್ಯ ಮಾರಾಟ ಮಾಡಲು ಆಡಳಿತಕ್ಕೆ ಸುಂಕ ಕಟ್ಟಲೇ ಬೇಕು. ಆದರೆ ಮನ ಒಪ್ಪುವುದಿಲ್ಲ. ತಪ್ಪಿಸಿಕೊಳ್ಳಬೇಕು ಇಲ್ಲ ನಕಲಿ ನಾಣ್ಯ ಕೊಡಬೇಕೆಂಬ ಹೊಂಚುಹಾಕುತ್ತದೆ.

ಮನ ತನುವನ್ನು ವಂಚಿಸಲು ಬಳಕೆ ಮಾಡಿಕೊಂಡರೆ, ಅರಿವು ವಂಚನೆಗೆ

ಆಸ್ಪದ ಕೊಡುವುದಿಲ್ಲ. ಮನ ತನುವನ್ನು ಪಾಪದ ಕೆಲಸಗಳಿಗೆ ಬಳಕೆ ಮಾಡಿಕೊಂಡರೆ, ಅರಿವು ತನುವನ್ನು ಸತ್ಯದೆಡೆಗೆ ಸೆಳೆಯುತ್ತದೆ. ಸತ್ಯದೆಡೆಗೆ ಸೆಳೆಯುವ ಅರಿವೇ ಗುರುವಾದರೆ, ಆ ಗುರುವಿನ ಮಾತು ಪಾಲಿಸುವವನೆ ಜಂಗಮ.

ಮನ ತನುವಿನ ಅರಿವಿಗೆ ಭಕ್ತಿ ಮಾಡಲು ಸಾಧ್ಯವಾದಾಗ ಜಂಗಮ ಮನದ ಮೈದವಿ ಸುಂಕಿಗನಾಗುತ್ತಾನೆ. ತನುವನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯುವ ಸಂಗಮನಾಥನಾಗುತ್ತಾನೆ,

199

ಮಾಡಿ ನೀಡಿ ಲಿಂಗವ ಪೂಜಿಸಿಹೆನೆಂಬವರು ನೀವೆಲ್ಲಾ ಕೇಳಿರಣ್ಣಾ;
ಹಾಗದ ಕೆರಹ ಹೊರಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ.
ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು.
ಕೂಡಲಸಂಗನ ಶರಣರಿಗೆ ಸವೆಸಲೇಬೇಕು.

ದೇವರು ಎಂದರೆ ಸತ್ಯ ! ಅದು ಕೈವಶ ಆಗಬೇಕಾದರೆ ಜಪ ತಪ ಪೂಜೆ ಆರಾಧನೆಗಳ ಅವಶ್ಯಕತೆಯಿಲ್ಲ. ಅದೇನಿದ್ದರೂ ಅನಾವರಣಗೊಳ್ಳಬೇಕು.

ನೋಡುವ ದೃಷ್ಯ, ಕೇಳುವ ಶಬ್ದ ಅನಾವರಣಗೊಳ್ಳಬೇಕು. ಅದು ಒಂದೇ ಆಗಿ ಕಾಣಲುಬರಬೇಕು. ಶಬ್ದ ಒಂದೇ ಸಂಕಟ-ಸುಖಗಳಿಲ್ಲದೆ ಅರಿವಿನ ಒಂದೇ ಶಬ್ದವಾಗಿ ಕೇಳಲು ಬರಬೇಕು. ಅದು ಸತ್ಯದ ದರ್ಶನ !

ಹಣಕೊಟ್ಟು ದೇವಾಲಯ ಕಟ್ಟಿಸುವುದಲ್ಲ. ಪತ್ರಿ ಪುಷ್ಪಾರ್ಚನೆ ಮಾಡಿ ಪೂಜಿಸುವುದಲ್ಲ. ಇದು ತನ್ನ ಭಾವ ಮೂರ್ತಿಯಲ್ಲಿ ನೆಟ್ಟು ದೇವರೆಂದು ಭ್ರಮಿಸಿ ಆರಾಧಿಸಿದಂತೆ. ಅದೇ ಭಾವ ಹೊರಗೆ ಬಿಟ್ಟ ಕೆರವಿನ ಮೇಲೆ ಹರಿದು ದುರ್ಭಾವ ಆದಂತೆ. ದೇವರ ಮೇಲೆ ಹರಿದ ಧ್ಯಾನ ಕ್ಷಣಾರ್ಧದಲ್ಲಿ ಕೆರವಿನ (ಚಪ್ಪಲಿ) ಮೇಲೆ ಹರಿಯಲಿಲ್ಲವೆ ?

ದೇವಸ್ಥಾನ ಕಟ್ಟಲು ವ್ಯಯ ಮಾಡುವ ಕರೆನ್ಸಿ ಅನಾವರಣಗೊಳ್ಳಬೇಕು. ಅದರಲ್ಲಿಯ ಸತ್ಯದರ್ಶನವಾಗಬೇಕು. ಕಟೆದು ದೇವರು ಮಾಡುವ ಕಲ್ಲಿನ ಅನಾವರಣವಾಗಬೇಕು; ಅದರಲ್ಲಿಯ ಸತ್ಯದರ್ಶನವಾಗಬೇಕು.

ಕರೆನ್ಸಿ ಕೊಟ್ಟು ದೇವರನ್ನು ನಿರ್ಮಿಸಿ, ದೇವಾಲಯ ಕಟ್ಟಿಸಿ, ಪೂಜಿಸಿ, ನಮಸ್ಕರಿಸಿ, ಧ್ಯಾನಿಸುವಾಗ ಆ ಧ್ಯಾನ ಹೊರಗೆ ಬಿಟ್ಟ ಚಪ್ಪಲಿಯ ಮೇಲೆ ಹರಿದರೆ ಕರೆನ್ಸಿ, ದೇವರು, ದೇವಾಲಯಕ್ಕಿಂತ ಚಪ್ಪಲಿ ಶ್ರೇಷ್ಠವಾಗಲಿಲ್ಲವೆ ? ಈ ನಾಲ್ಕರ ಹಿಂದೆ ಅಡಗಿದ ವಸ್ತುವೇ ಸತ್ಯ !

ಕರೆನ್ಸಿ ವಿನಿಮಯಕ್ಕಾಗಿ ಇದ್ದ ಒಂದು ಅಧಿಕೃತವಾದ ಕಾಗದ. ಇದು ಸತ್ಯ!

ಕಲಾವಿದ ಕೆತ್ತಿದ ಒಂದು ಮೂರ್ತಿ ದೇವರಲ್ಲ ; ಅದರಲ್ಲಿ ಕಲ್ಲು ಅಡಗಿದೆ.ದೇವಾಲಯ ಕಟ್ಟಿದ್ದು ಕಲ್ಲು, ಅದರ ಗರ್ಭಗುಡಿ - ಶಿಖರವೂ ಕಲ್ಲು . ಅದರ ಒಂದು ತುಂಡೇ ದೇವರು; ಇದು ಸತ್ಯ !

ದೇವಾಲಯದ ಹೊರಗೆ ಬಿಟ್ಟ ಮೆಟ್ಟುವ ಕೆರ ಚರ್ಮದ್ದು. ಚಪ್ಪಲಿಯಲ್ಲಿ ಚರ್ಮ ಅಡಗಿದೆ; ಇಡೀ ದೇಹದ ಭಾರ ಹೊರುವ ಪಾದದ ಸೇವೆ ಮಾಡುವ ಒಂದು ಸಾಧನ. ಇದು ಸತ್ಯ !

ದೇವರನ್ನು ತಾನೇ ಮಾಡಿ, ತಾನೇ ನೀಡಿ, ತಾನೇ ಪೂಜಿಸಿ ಅರ್ಚಿಸಿ, ದೇವಾಲಯಕ್ಕೆ ಹೋಗಿ ನಮಸ್ಕರಿಸಿ ಧ್ಯಾನಿಸುವಾಗ ತನ್ನ ಕೆರವಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ. ಹೀಗೆ ಅನುದಿನ ಮಾಡುವುದರಿಂದ ತನುವಿಗೆ ಮುಪ್ಪು ಆವರಿಸಿ ಒಂದು ದಿನ ಸಾವು ಬರುವುದಲ್ಲದೆ ಸತ್ಯದರ್ಶನ ಸಾಧ್ಯವಿಲ್ಲ. ಹೀಗೆ ದೇಹ ಸವೆಸುವ ಬದಲು ಕೂಡಲ ಸಂಗನೆಂಬ ಸತ್ಯದರ್ಶನ ಪಡೆದ ಶರಣರಿಗೆ ದೇಹ ಸವೆಸಲೇಬೇಕೆಂದು ಬಸವಣ್ಣನವರು ಸೂತ್ರದ ಮೂಲಕ ಸಾರಿದ್ದಾರೆ.

200

ಉಂಡುದು ಬಂದಿತ್ತೆಂಬ ಸಂದೇಹಿ ಮಾನವ ನೀ ಕೇಳಾ :
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ !
ಉಂಡುದು ಆಗಳೆ ಅಪೇಯವಾಯಿತ್ತು.
ಆ ಉಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಆನು ಮರುಗುವೆನಯ್ಯಾ ಕೂಡಲಸಂಗಮದೇವಾ.

'ಉಂಡುದ್ದೇ ಬಂತು, ತಿಂದದ್ದೇಬಂತ' ಎನ್ನುವ ಗಾದೆಯೊಂದಿದೆ. ಏನಾದರೂ ಮಾಡಿ ಉಣ್ಣುವುದಲ್ಲ, ಏನಾದರೂ ಮಾಡಿ ತಿನುವುದಲ್ಲ. ಕೂಡಿಟ್ಟರೆ ಉಪಯೋಗವಿಲ್ಲ; ಇದ್ದಾಗಲೇ ತಿನ್ನು ಎಂದು ಜಿಪುಣನಿಗೆ ಹೇಳಿದ ಮಾತಿದು.

ಉಣ್ಣುವುದಕ್ಕಾಗಿಯೇ ಬದುಕಿದ್ದು ಎಂದು ತಿಳಿದರೆ ತೊಂದರೆ ತಪ್ಪಿದ್ದಲ್ಲ. ಉಣ್ಣುವಾಗ ಇದ್ದ ಕಾತುರ; ಉಂಡುದನು ಬೆಳಿಗ್ಗೆ ಹೊರ ಚೆಲ್ಲಿದಾಗ ಇರುವುದಿಲ್ಲ. ಉಂಡಾಗ ಆಪ್ಯಾಯಮಾನವಾಯಿತು; ಹೊರಚೆಲ್ಲಿದಾಗ ಅಪೇಯವಾಯಿತು. ಹಂದಿಗೆ ಆಪ್ಯಾಯಮಾನವಾಯಿತು.

ತನುವಿಗೆ ಜ್ಞಾನವಿದೆ. ಅದು ಸಂಪೂರ್ಣ ಬಳಕೆಯಾಗಬೇಕು. ತನು ಹೊರಚೆಲ್ಲಿದ್ದು ಹಂದಿಗೆ ಅಮೃತ. ತನು ಚೆಲ್ಲಿದ್ದು ತನುವಿಗೆ ಆಹಾರವಾಗಬಾರದು. ತನು ದುಡಿದು ಸಂಗ್ರಹಿಸಿದ ಆಹಾರ ತನುವಿಗೆ ಅಮೃತ. ದುಡಿದದ್ದನ್ನು ಕದ್ದು ತಿಂದರೆ ಕದ್ದು ತಿಂದ ತನು ಹಂದಿಯಾಗಲಿಲ್ಲವೆ? ಉಂಡುದೇನಾಯಿತೆಂದು ಒಮ್ಮೆ ತಿಳಿದು ನೋಡು ! ಉಂಡುದು ಉಣ್ಣುವಾಗಲೇ ಮಲವಾಯಿತು.

ತನುವಿನ ಮಲ ಹಂದಿಗೆ ಪ್ರಸಾದವಾಯಿತು. ಹಂದಿಯ ಮಲ ಹಂದಿ ತಿನ್ನುವುದಿಲ್ಲ. ಆದರೆ ತನುವಿನ ಮಲ ತನು ತಿನ್ನುತ್ತದೆ ! ಇದೇನಾಶ್ಚರ್ಯ ಎಂದು ಕೇಳಬೇಡಿ ತಿಳಿದು ನೋಡಿ :

ದುಡಿದು ತಿನ್ನುವುದಕ್ಕಾಗಿ ತಂದ ಪದಾರ್ಥ ಕದ್ದು ತಿಂದರೆ ತನುವಿನ ಮಲ ತನು ತಿಂದಂತಾಗಲಿಲ್ಲವೆ? ಲಂಚ, ಭ್ರಷ್ಟಾಚಾರದಿಂದ ಬಂದ ಹಣ ಉಣ್ಣುವುದಕ್ಕೆ ಬಳಕೆಯಾದರೆ ತನುವಿನ ಮಲ ತನು ತಿಂದಂತಾಗಲಿಲ್ಲವೆ? ಅದಕ್ಕಾಗಿ ಬಸವಣ್ಣನವರು ಉಂಡುದನುಣಬಂದ ಹಂದಿಯ ಬಾಳುವೆಯವರ ಕಂಡು ಆನು ಮರುಗುವೆನಯ್ಯಾ ಎಂದಿದ್ದಾರೆ.

ಒಮ್ಮೆ ಬಸವಣ್ಣನವರಂತೆ ತಿಳಿದು ನೋಡಿ, ಬಸವಣ್ಣನಾಗಬಹುದು.

201

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ;
ಆಯುಷ್ಯವು ತೀರಿ ಪ್ರಳಯ ಬಂದಡೆ ಅರ್ಥವನುಂಬುವರಿಲ್ಲ.
ನೆಲನನಗೆದು ಮಡಗದಿರಾ - ನೆಲನುಂಗಿದಡುಗುಳುವುದೆ ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ !
ನಿನ್ನ ಮಡದಿಗಿರಲೆಂದಡೆ ಮಡದಿಯ ಕೃತಕ ಬೇರೆ;
ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿ ಗಡಕದೆಮಾಬಳೆ ?
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ
ಕೂಡಲಸಂಗನ ಶರಣರಿಗೆ ಒಡನೆ ಸವೆಸುವುದು.

ಸಂಪತ್ತು ಸತ್ಪಾತ್ರಕ್ಕೆ ಸಲ್ಲಬೇಕು. ಆಪತ್ಕಾಲದಲ್ಲಿ ಹೆಂಡತಿ ಮಕ್ಕಳಿಗೆ ಇರಲೆಂದು ಕೂಡಿಟ್ಟರೆ; ಆಯುಷ್ಯ ತನ್ನ ಕೈಯಲ್ಲಿ ಇಲ್ಲ. ಮೃತ್ಯು ಹೇಳಿ ಕೇಳಿ ಬರುವುದಿಲ್ಲ.

ಕೊಟ್ಟಿದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ ಎನ್ನುವ ಗಾದೆಯಂತೆ ಕೂಡಲಸಂಗನ ಶರಣರಿಗೆ, ಮಹಾಜ್ಞಾನಿಗಳಿಗೆ, ಸಾದು ಸಂತ ಸತ್ಪುರುಷರಿಗೆ ಸವೆಸಿದ ಸಂಪತ್ತು ಸತ್ಪಾತ್ರಕ್ಕೆ ಸಲ್ಲುತ್ತದೆ ಎಂದು ಹೇಳಿದ್ದಾರೆ ಬಸವಣ್ಣನವರು.

ಶರಣರು ಲೋಕ ಕಲ್ಯಾಣಕ್ಕಾಗಿ ಹುಟ್ಟಿದವರು. ಲೋಕಕ್ಕೆ ತಿಳುವಳಿಕೆ ನೀಡುವವರು. ಕೋಟಿಗೊಬ್ಬ ಶರಣ, ಲಕ್ಷಕೊಬ್ಬ ಭಕ್ತ ಎಂದು ಹೇಳುವಂತೆ, ಶರಣರಿಗೆ ಸಂಪತ್ತು ಸವೆಸುವುದು ಲೋಕದ ಕರ್ತವ್ಯ .

ಸಂಪತ್ತು ಸಂಗ್ರಹಮಾಡುವ ತನುವಿಗೆ ತನ್ನ ಆಯುಷ್ಯ ನೆನಪಿಗೆ ಬರುವುದಿಲ್ಲ. ಪ್ರಳಯದ ಭೀತಿಯೂ ಇರುವುದಿಲ್ಲ. ನೆಲನಗೆದು ಸಂಪತ್ತು ಮಡುಗಿದಾಗ, ನೆಲನುಂಗಿದರೆ ಉಗುಳುವುದೆ ? ಕಣ್ಣಿನಲ್ಲಿ ನೋಡಿ ಬಳಕೆ ಮಾಡದೆ, ಮಣಿನಲ್ಲಿ ಹೂತರೆ ಉಣ್ಣಲು ಬರುವುದೆ? ಮಡದಿಗಿರಲೆಂದಡೆ ಆಕೆಯ ಕೃತಕ ಬೇರೆ; ಒಡಲು ಕೆಡವುದೊಂದೇ ತಡ ಮೆತ್ತೊಬ್ಬರಿಗೆ ಧಾರೆ ಎರೆಯುವಳು. ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ ಕೂಡಲಸಂಗನ ಶರಣರಿಗೆ ಕೂಡಲೆ ಸವೆಸು ಎಂದಿದ್ದಾರೆ ಬಸವಣ್ಣನವರು.

202

ತನು ಮನ ಧನವ ಹಿಂದಿಕ್ಕಿಕೊಂಡು
ಮಾತಿನ ಬಣಬೆಯ, ಒಳಲೊಟೆಯ ನುಡಿವರು, ನೀವೆಲ್ಲ ಕೇಳಿರೆ.

ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ
ಗುರಿಯ ತಾಗಬಲ್ಲುದೆ ?
ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ್ಕ
ಕೂಡಲಸಂಗಮದೇವನೆಂತೊಲಿವನಯ್ಯಾ ?

ಮನ ತನುವನ್ನು ಹಿಡಿದು ಭೂಮಿ ಹೇಮ ಮುಂತಾದ ಸಂಪತ್ತನ್ನು ಸಾಧಿಸಬಹುದು. ಪಾಂಡಿತ್ಯದ ಮಾತುಗಳಿಂದ ಜನ ತಲೆ ದೂಗಬಹುದು. ಆದರೆ ಅದು ಬರೀ ಮಾತಿನ ಬಣವೆ. ಸಂಗ್ರಹದ ಮಾತುಗಳು. ಇವು ಪುಸ್ತಕಗಳಿಂದ, ಸಮಾಜದಿಂದ, ಪಂಡಿತರಿಂದ ಕದ್ದ ಮಾತುಗಳು. ಜೊಳ್ಳು ಮಾತುಗಳು. ತಲೆ ಇಲ್ಲದ ಬಾಣದಂತೆ ಗುರಿಯನ್ನು ತಾಕಲಾರವು. ಅಂತರಂಗದ ಆಳಕ್ಕೆ ಹೋಗಿ ಅರಿವನ್ನು ಮೀಂಟಲಾರವು.

ತನುವಿಗೆ ಅಂಟಿದ ಅಜ್ಞಾನದ ಮಾಯಾಪಾಶವನು ಹಿಂಗಿಸಲಾರವು. ತನುವಿಗೆ ಆವರಿಸಿದ ಮನದ ಅಜ್ಞಾನದ ಗಂಟನ್ನು ಬಿಚ್ಚಲಾರವು. ಅಂತರಾಳದ ಸತ್ಯವನ್ನು ಮೀಂಟಲಾರವು. ಹೀಗಿದ್ದ ಮೇಲೆ ಮನ ಏನು ಸಂಗ್ರಹ ಮಾಡಿಕೊಂಡರೂ ವ್ಯರ್ಥ. ತನುವಿಗೆ ಮುಪ್ಪು ತರುವುದಲ್ಲದೆ ಕೂಡಲಸಂಗಯ್ಯನೆಂಬ ಅರಿವು ಒಲಿಯುವುದಿಲ್ಲ.

ಮನ, ತನು ಹಿಡಿದು ಧನ ಸಂಗ್ರಹ ಮಾಡುವ ಬದಲು, ತನು ಹಿಡಿದು ಅದರ ಅಂತರಾಳ ಪ್ರವೇಶಮಾಡಿ, ಅರಿವಿನೊಂದಿಗೆ ಕೂಡಿ ಧನವನ್ನು ನೋಡಬೇಕು; ಮಾತಿನ ಬಣವೆಗೆ ಕಾರಣವಾದ ಪುಸ್ತಕಗಳನ್ನು ನೋಡಬೇಕು; ಎಲ್ಲ ತನುವಿನ ಅರಿವಿನಿಂದಲೇ ಬಂದದ್ದೆಂದು ಮನಕ್ಕೆ ವೇದ್ಯವಾಗುತ್ತದೆ. ಸಂಗ್ರಹಿಸುವ ಧನ, ಆಡುವ ಪಾಂಡಿತ್ಯದ ಮಾತು ಒಳಲೊಟೆಯಾಗಿ ಕಾಣುತ್ತದೆ. ಮಾಯಾಪಾಶ ಹಿಂಗಿ, ಮನದ ಗಂಟು ಕೂಡಲೇ ಬಿಚ್ಚುತ್ತದೆ.

203

ತನು ಮನ ಧನವೆಂಬ ಮೂರು ಕತ್ತಿಯಿವೆ,
ಸಲೆ ಮೂಗಿನ ಮೇಲೆ ಅಯ್ಯಾ ,
ಲಿಂಗ ಜಂಗಮಕ್ಕೆ ಮಾಡಿಹೆನೆಂಬವಂಗೆ !
ಇದು ಕಾರಣ ಕೂಡಲಸಂಗನ ಶರಣರಿಗೆ ಅಂಜಲೇಬೇಕು.

ಅರಿವಿನ ಮಾರ್ಗ ಬಲು ಜಟಿಲ; ಹಾಗೆಯೇ ಬಲು ಸರಳ. ಹೊರಗಣ ಲಿಂಗ ಜಂಗಮಕ್ಕೆ ಮಾಡುವುದು ಸಕಲರಿಗೂ ತಿಳಿದಿದೆ. ಅದು ಲಿಂಗವಲ್ಲ; ಜಂಗಮವಲ್ಲ. ''ತನ್ನ ಕಾಲು ತೊಳೆದ ಬಳಿಕ ಲಿಂಗಕ್ಕೆ ಮಜ್ಜನವ ಮಾಡುವರು. ತಾನು ಲಿಂಗವೋ ಲಿಂಗ ಲಿಂಗವೋ ಬಲ್ಲಡೆ ನೀವು ಹೇಳಿರೆ '' ಎಂದು ಪ್ರಭುದೇವರು ಪ್ರಶ್ನಿಸಿದ್ದಾರೆ. ಲಿಂಗ ಎರೆದರೆ ನೆನೆಯುವುದಿಲ್ಲ; ಮರೆತರೆ ಬಾಡುವುದಿಲ್ಲ ; ತನುವಿಗೆ ಎರೆದರೆ ನೆನೆಯುತ್ತದೆ; ಮರೆತರೆ ಬಾಡುತ್ತದೆ. ತನು ಲಿಂಗ ; ತನುವಿನ ಕಣ ಕಣದಲ್ಲಿ ತನ್ಮಯವಾದ ಅರಿವು ಲಿಂಗ !

ಮನ, ತನು ಹಿಡಿದು ಭ್ರಮೆಯಿಂದ ಲಿಂಗವನ್ನು ಪೂಜಿಸಿದರೆ; ಅದಕ್ಕೆ ಧನಕನಕಾದಿಗಳನ್ನು ವ್ಯಯಿಸಿದರೆ, ತನುವಿನಲ್ಲಿಯೇ ಇದ್ದ ಅರಿವು ಪೂಜೆಗೆ ಆಸ್ಪದ ಕೊಡುವುದಿಲ್ಲ. ಅರಿವಿನ ಕತ್ತಿ ಝುಳಪಿಸುತ್ತದೆ. ಎಲೆ ಮನವೆ, ಸ್ವಲ್ಪ ನೋಡು, ಅದು ಕಲ್ಲೆಂದು ಎಚ್ಚರಿಸುತ್ತದೆ.

ಜಂಗಮಕ್ಕೆ ಮಾಡಿಹೆನೆಂದರೆ ಅದು ತನ್ನಂತೆಯೇ ಸಕಲ ಶಕ್ತಿಯುಳ್ಳ ತನು. ತಾನು ಸವೆಸುವ ಧನ ತನ್ನದಲ್ಲ. ನೀಡುವ ಅನ್ನ ತನ್ನದಲ್ಲ; ಭೂಮಿಯಿಂದ ಪಡೆದದ್ದು. ಜಲ ಗಾಳಿ ಬೆಳಕೂ ತನ್ನದಲ್ಲ. ತನು ಮತ್ತೊಂದು ತನುವಿಗೆ ಸಹಾಯ ಮಾಡುವೆನೆಂಬ ಕ್ರಿಯೆ ಕಪಟ ನಾಟಕವಾಗಿ ಕಾಣುತ್ತದೆ.

ತನುವಿನಿಂದ ತನುವಿಗೆ ಮಾಡುವುದೆ? ಮನದಿಂದ ತನುವಿಗೆ ಮಾಡುವುದೆ? ಧನದಿಂದ ತನುವಿಗೆ ಮಾಡುವುದೆ? ತಿಳಿದು ನೋಡಿದರೆ ಇವು ಮೂರೂ ತನುವನ್ನೇ ತಿವಿಯುವ ಕತ್ತಿಗಳಾಗಿ ಹೊಳೆಯುತ್ತವೆ.

ತನುವಿನಲ್ಲಿಯೇ ತನ್ಮಯವಾದ ಅರಿವಿದೆ; ತನುವಿನಲ್ಲಿಯೇ ಮನವಿದೆ. ಮನ ಅರಿವಿನ ಪೂಜೆ ಮಾಡಬೇಕು. ಅರಿವಿನಿಂದ ನೋಡಿದರೆ ಸಕಲ ತನುಗಳು ಅರಿವಿನ ತನುಗಳೇ. ಸಕಲ ತನುಗಳು ಲಿಂಗ ತನುಗಳೇ. ಸಕಲ ತನುಗಳು ಜಂಗಮ ತನುಗಳೇ ಆಗಿವೆ.

ಯಾರಿಗೆ ಮಾಡಬೇಕು, ಯಾರಿಗೆ ನೀಡಬೇಕು? ಎಲ್ಲರೂ ಕೂಡಲಸಂಗನ ಶರಣರೇ ಆಗಿದ್ದಾರೆ. ಮೂಗಿನ ಮೇಲೆ ನೇತಾಡುವ ಮೂರು ಅಜ್ಞಾನದ ಕತ್ತಿಗಳು ಅರಿವಿಗೆ ಬಳಕೆಯಾಗಬೇಕು, ಇದನ್ನು ಮಹಾಜ್ಞಾನಿ ಕೂಡಲಸಂಗನ ಶರಣರಿಂದಲೇ ತಿಳಿಯಬೇಕು. ತನುವಿನಲ್ಲಿ ತನ್ಮಯವಾದ ಅರಿವು ತಿಳಿಸುವ ಶರಣರಿಗೆ ಮಾಡಬೇಕು. ಶರಣರಿಗೆ ನೀಡಬೇಕು.

204

ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು :
ತನು - ಮನ - ಧನವ ಸವೆಸಲೇಬೇಕು.
ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು.

ಇಡೀ ಜಗತ್ತು ಕ್ರಿಸ್ತ ಕ್ರಿಷ್ಣ ಬುದ್ಧರನ್ನು ಆರಾಧಿಸುತ್ತದೆ. ಅವರು ದೇವರನ್ನು ಕಂಡವರು; ಸತ್ಯವನ್ನು ಪರಿಚಯಿಸಿದವರು. ಸರ್ವಭೂತಾತ್ಮನೆಂದು ದೇವರನ್ನು ಕರೆದು ಬರೀ ಮಾತಿನ ಮಾತಿನಲ್ಲಿ ಹೋಗಲಿಲ್ಲ. ತನು - ಮನ - ಧನ ಸವೆಸಿದರು; ತನುವಿನಲ್ಲಿಯೇ ತನ್ಮಯವಾದ ಸರ್ವಭೂತಾತ್ಮನೆಂಬ ಸತ್ಯದ ದೇವರನ್ನು ಕಂಡರು.

ಶರಣರು ಕಲ್ಲು ಕಟೆದು ಆಲಯ ಕಟ್ಟಿ ದೇವರನ್ನು ಆರಾಧಿಸಲಿಲ್ಲ. ಕೆತ್ತಿದ ದೇವರನ್ನು ಆರಾಧಿಸುವ ಜನರನ್ನು ನೋಡಿದರು. ದೇವರ ಆಕಾರದಲ್ಲಿರುವ ಸರ್ವಭೂತಾತ್ಮನೆಂಬ ಮರೆಯಾದ ಕಲ್ಲಿನ ಸತ್ಯವನ್ನು ತೋರಿದರು. ಎಲ್ಲ ಮಾತುಗಳನ್ನು ಅರಿವಿನ ಮಾತೆಂದು ಅನಾವರಣ ಮಾಡಿ ಕೇಳಿದರು. ಕೇಳುವ ಬಗೆಯನ್ನು ವಿವರಿಸಿದರು. ನೋಡುವ ಬಗೆಯನ್ನು ವಿವರಿಸಿದರು. ತಿಳಿದು ಸ್ಪರ್ಶಿಸುವ ಬಗೆಯನ್ನು, ತಿಳಿದು ಮೂಸಿಸಿ ರುಚಿಸುವ ಬಗೆಯನ್ನು ವಿವರಿಸಿದರು.

ತನುವಿನಲ್ಲಿರುವ ಅರಿವನ್ನೇ ದೇವರೆಂದರು ದೇವರು ಸತ್ಯವೆಂದು, ಬ್ರಹ್ಮನೆಂದು, ಸರ್ವಭೂತಾತ್ಮನೆಂದು ತೋರಿದರು. ಹೀಗೆ ತೋರಿದ ಕ್ರಿಸ್ತ, ಕ್ರಿಷ್ಣ, ಬುದ್ಧರನ್ನೇ ಸರ್ವಭೂತಾತ್ಮರೆಂದು ಮನ ಮಾತಿನ ಮಾತಿನಲ್ಲಿಯೇ ಆರಾಧಿಸಿತು. ಸ್ತೂಪ, ದೇವಾಲಯ, ಪ್ರಾರ್ಥನ ಮಂದಿರಗಳನ್ನು ಕಟ್ಟಿಸಿತು.ಅವರ ಮಾತುಗಳನ್ನು ಪುಸ್ತಕದಲ್ಲಿ ಮುದ್ರಿಸಿತು. ಅವುಗಳನ್ನೇ ಸರ್ವಭೂತಾತ್ಮನೆಂದು ಕಣ್ಣಿಗೆ ಒತ್ತಿಕೊಂಡು, ಕೋರ್ಟ್ ಕಚೇರಿಗಳಲ್ಲಿ ಧರ್ಮಗ್ರಂಥವೆಂದು

ಕರೆದು ಆರಾಧಿಸಿತು. ಗ್ರಂಥಗಳು ಆಣೆ ಮಾಡಲು ಸಾಕ್ಷಿಯಾದವು.

ಗ್ರಂಥಗಳನ್ನು ಓದಿ, ಮಹನೀಯರನ್ನು ನೆನೆದು, ಶರಣರ ಕ್ಷೇತ್ರದರ್ಶನ ಮಾಡುವುದಕ್ಕೆ ತನು - ಮನ- ಧನ ವ್ಯಯವಾಯಿತು. ಇದು ಸಲ್ಲದು. ಮನದೊಂದಿಗೆ ತನುವಿನಲ್ಲಿ ತನ್ಮಯವಾದ ಅರಿವಿನತ್ತ ಹೋಗಲೇ ಬೇಕು. ತನುವಿನಲ್ಲಿ ತನ್ಮಯವಾದ ಅರಿವೆಂಬ ಸಂಗಯ್ಯನನ್ನು ಕೂಡಿ ಮಹಾಜ್ಞಾನಿಗಳಾದ ಶರಣರ ದರ್ಶನವನ್ನು ಮನ ಮಾಡಲೇಬೇಕು. ಅವರು ಹೇಳಿಕೊಡುವ ಮಹಾಜ್ಞಾನಕ್ಕೆ ಅಂಜಲೇಬೇಕು. ತನು - ಮನ- ಧನವನ್ನು ಜ್ಞಾನದ ಕಾಯಕಕ್ಕಾಗಿ ಸವೆಸಲೇಬೇಕು.

205

ಹಲವು ಮಣಿಯ ಕಟ್ಟಿ ಕುಣಿ ಕುಣಿದಾಡಿ ,
ಹಲವು ಪರಿಯಲಿ ವಿಭೂತಿಯ ಹೂಸಿ,
ಗಣಾಡಂಬರದ ನಡುವೆ ನಲಿ ನಲಿದಾಡಿ,
ಉಂಡು ತಾಂಬೂಲವಗೊಂಡು ಹೋಹುದಲ್ಲ.
ತನು ಮನ ಧನವ ಸಮರ್ಪಿಸದವರ
ಕೂಡಲಸಂಗಮದೇವನೆಂತೊಲಿವನು ?

ತನುವಿನ ಅರಿವು ತನುವಿಗೆ ಒಲಿಯುವುದು ಸರಳವಿಲ್ಲ. ಮನಕ್ಕೆ ಬಯಕೆಯಾಗಬೇಕು. ಅರಿವಿಗಾಗಿ ಮನ ಹಗಲಿರುಳು ಪರಿತಪಿಸಬೇಕು. ಅರಿವು ಬಹಳ ದೂರವಿಲ್ಲ . ಪುಸ್ತಕ, ಪುಣ್ಯ ಕ್ಷೇತ್ರದಲ್ಲಿಲ್ಲ. ಕಾವಿ ವಸ್ತ್ರಧರಿಸುವುದರಿಂದ ಅದು ಒಲಿಯುವುದಿಲ್ಲ. ರುದ್ರಾಕ್ಷಿ, ಭಸ್ಮ ಧರಿಸಿ, ಮಣಿಯನೆಣಿಸಿ ಕುಣಿ ಕುಣಿದಾಡುವುದರಿಂದ ಅರಿವು ಒಲಿಯುವುದಿಲ್ಲ.

ತನುವಿನ ಕಣ ಕಣದಲ್ಲಿದ್ದ ಅರಿವು ಮನಕ್ಕೆ ಒಲಿಯಬೇಕಾದರೆ, ಮನ ತನುವಿನ ಅರಿವಿಗೆ ಸಮರ್ಪಿಸಬೇಕು. ಮನ ತನ್ನನ್ನು ತಾನೇ ತನ್ನ ಹೆತ್ತರಿವಿನೊಂದಿಗೆ ಅರಿವಿಗೆ ಸಮರ್ಪಿಸಿಕೊಳ್ಳಬೇಕು. ಇದು ಮನಕ್ಕೆ ಸಾಧ್ಯವಾಗುವುದಿಲ್ಲ ; ತನುವಿಗೆ ಕಾವಿ ಉಡಿಸುತ್ತದೆ. ರುದ್ರಾಕ್ಷಿ, ಭಸ್ಮ ಧರಿಸಿ ಮಣಿಯನ್ನು ತನುವಿನ ಕೈಯಲ್ಲಿ ಕೊಟ್ಟು ಜಪಿಸುತ್ತ ಕೂಡಲು ಹೇಳುತ್ತದೆ. ಮನಕ್ಕೆ ರುಚಿ ಕಂಡ ಸ್ಥಳದಲ್ಲಿ ಸುತ್ತಾಡುತ್ತದೆ.

ಮನ ತನುವಿಗೆ ಅರಿವಿನ ವೇಷ ಹಾಕುವುದು ಭೂಮಿ ಹೇಮ ವಿಷಯದ ರುಚಿಗಾಗಿ. ಇದನ್ನು ಅರಿವಿಗೆ ಸಮರ್ಪಿಸಿ, ತನ್ನನ್ನು ಸಮರ್ಪಿಸಿಕೊಂಡಾಗ ಅರಿವು ಮನಕ್ಕೆ ಒಲಿಯುವುದು. ತನು ಅರಿವಿನತ್ತ ಉಲಿಯುವುದು. ತನು ಮನ ಅರಿವು ಒಂದೇ ಆಗಿ ಅರಿವಿನ ತನುವಾಗುವುದು.

206

ತನುವ ಕೊಟ್ಟು ಗುರುವನೊಲಿಸಬೇಕು ;
ಮನವ ಕೊಟ್ಟು ಲಿಂಗವನೊಲಿಸಬೇಕು ;
ಧನವ ಕೊಟ್ಟು ಜಂಗಮವನೊಲಿಸಬೇಕು.
ಈ ತ್ರಿವಿಧವ ಹೊರಗು ಮಾಡಿ,

ಹರೆಯ ಹೊಯಿಸಿ ಕುರುಹ ಪೂಜಿಸುವರ ಮೆಚ್ಚ
ಕೂಡಲಸಂಗಮದೇವ.

ಗುರುವು ಅಂದರೆ ಒಬ್ಬ ವ್ಯಕ್ತಿಯಲ್ಲ. ತನುವಿನ ಕಣ ಕಣದಲ್ಲಿರುವ ಅರಿವು ! ಆ ಅರಿವೇ ಗುರು ; ಸದ್ಗುರು ! ಈ ಗುರುದೇವನನ್ನು ಹೇಗೆ ಒಲಿಸಿಕೊಳ್ಳಬೇಕೆಂದು ಸೂತ್ರದ ಮೂಲಕ ಸೂಚಿಸುವಾತ ಶ್ರೀಗುರು.

ಸದ್ಗುರುವನ್ನು ಒಲಿಸಿಕೊಂಡಾತ ಶ್ರೀಗುರು. ತನುವಿನಲ್ಲಿರುವ ಅರಿವೆಂಬ ಸತ್ಯದ ಗುರುವನ್ನು ಹೇಗೆ ಒಲಿಸಿಕೊಳ್ಳಬೇಕೆಂದು ಶಿಷ್ಯನ ಕೈಹಿಡಿದು ಆತನಿದ್ದ ಸ್ಥಾನದಲ್ಲಿ ಬಿಡುತ್ತಾನೆ. ಹೀಗೆ ಶಿಷ್ಯನ ಕೈಹಿಡಿದು ಸತ್ಯದರ್ಶನ ಮಾಡಿಸುವ ಶ್ರೀಗುರು ಸಿಕ್ಕುವುದು ಕೂಡಾ ದುರ್ಲಭ. ಸಿಕ್ಕರೂ ಆತನನ್ನು ಒಲಿಸಿಕೊಳ್ಳುವುದು ಕೂಡಾ ದುರ್ಲಭವೆ !

ಮನ ಕೊಟ್ಟು ಲಿಂಗವನೊಲಿಸಬೇಕು ;

ಸರ್ವಾಂಗದಲ್ಲಿ ಅರಿವೆಂಬ ಲಿಂಗವಿದೆ. ಅಂಗ ಕಾಣುತ್ತದೆ. ಲಿಂಗ ಕಾಣುವುದಿಲ್ಲ. ಮನದ ಗಮನಕ್ಕೆ ನಿಲ್ಲುತ್ತದೆ. ಆದರೆ ಮನಕ್ಕೆ ಲಿಂಗದರ್ಶನ ಮಾಡಿಕೊಳ್ಳುವ ಬಯಕೆಯಾಗಬೇಕು. ಲಿಂಗಕ್ಕೆ ಮನ ಸಮರ್ಪಿಸಿಕೊಳ್ಳಬೇಕು. ಲಿಂಗದಲ್ಲಿ ಲೀನವಾದ ಮನ ಘನ ಮನವಾಗುತ್ತದೆ.

ಧನವ ಕೊಟ್ಟು ಜಂಗಮವನೊಲಿಸಬೇಕು ;

ತನು ಪ್ರಾಣದಿಂದ ಕೂಡಿದೆ ; ಲೋಕದ ಅರಿವು ತನುವಿನಲ್ಲಿ ಸಂಗ್ರಹವಾಗಿದೆ. ಇದೇ ಧನ ! ಪ್ರಾಣ ಅರಿವು ಜಂಗಮ ಮನ ತನುವಿನಲ್ಲಿಯೇ ಸಂಗಮವಾಗಿವೆ. ಆದರೂ ಪ್ರಾಣದ ಗಮನಕ್ಕಿಲ್ಲ. ತನುವನ್ನು ಸತ್ಯದ ಹಾದಿಯಲ್ಲಿ ನಡೆಸುವವನೇ ಜಂಗಮ. ಇವನಿಗೆ ಹೆತ್ತರಿವು ಸಮರ್ಪಣೆಯಾದಾಗ ಅರಿವಿನ ತನುವಾಗುತ್ತದೆ. ಶರಣ ತನುವಾಗುತ್ತದೆ.

ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯಿಸಿ ಕುರುಹ ಪೂಜಿಸುವರ ಮೆಚ್ಚ ಕೂಡಲಸಂಗಮದೇವ :

ತನು ಮನ ಧನವನ್ನು ಸ್ಥಾವರಕ್ಕೆ ಸವೆಸಿ ತಮಟೆ ಜಾಗಟೆ ಮದ್ದಳೆ ಬಡಿದು ಕುರುಹು ಪೂಜಿಸುವವರನ್ನು, ಗುಡಿ, ಗುಂಡಾರ,ಮಠ, ಮಂದಿರ, ಆಶ್ರಮ ಕಟ್ಟಿ ಉತ್ಸವ ಮಾಡುವ ಮನವನ್ನು ಅರಿವೆಂಬ ಗುರುದೇವ ಸಾಕ್ಷಾತ್ ಸಂಗಮನಾಥ ಮೆಚ್ಚುವುದಿಲ್ಲ. ಆ ಮನ ತನುವಿನ ಅರಿವೆಂಬ ಗುರುವಿನ ಸತ್ಪಾತ್ರಕ್ಕೆ ಸಲ್ಲುವುದಿಲ್ಲ ಎಂದಿದ್ದಾರೆ ಬಸವಣ್ಣ.

207

ಆಡಿದಡೇನು, ಹಾಡಿದಡೇನು, ಓದಿದಡೇನು,
ತ್ರಿವಿಧ ದಾಸೋಹವಿಲ್ಲದನ್ನಕ್ಕ ?
ಆಡದೆ ನವಿಲು ? ಹಾಡದೆ ತಂತಿ ? ಓದದೆ ಗಿಳಿ ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

ತನ್ನ ಆಟ ತಾನೇ ಆಡಲಿಲ್ಲ ; ತನ್ನ ಹಾಡು ತಾನೇ ಹಾಡಲಿಲ್ಲ ; ತನ್ನ ಓದು ತಾನೇ ಓದಲಿಲ್ಲ. ಮನ ಮತ್ತೊಬ್ಬರಿಂದ ಕಲಿತ ಆಟವನ್ನೇ ತನುವಿನೊಂದಿಗೆ ಆಡಿ ಕುಣಿಯುತ್ತದೆ ; ಇದು ನನ್ನ ಆಟವೆಂದು ! ಇದು ನನ್ನ ಹಾಡೆಂದು ಮತ್ತೊಬ್ಬರಿಂದ ಕಲಿತ ಹಾಡು ಆಡುತ್ತದೆ.

ಮತ್ತೊಬ್ಬರಿಂದ ಅಕ್ಷರ ಕಲಿತು ; ಮತ್ತೊಬ್ಬರು ಬರೆದ ಪುಸ್ತಕ ಓದುತ್ತದೆ. ಮನ ತನು ಇರುವವರೆಗೂ ಆಡಿ ಹಾಡಿ ಓದಿ ತನುವನ್ನು ಕೊಂದು ತಾನೂ ಇಲ್ಲವಾಗುತ್ತದೆ.

ಮನ ತನುವನ್ನು , ತನುವಿನಲ್ಲಿರುವ ಹೆತ್ತರಿವನ್ನು , ತನುವಿನ ಕಣಕಣದಲ್ಲಿರುವ ಅರಿವೆಂಬ ಅಕ್ಷರೋತ್ತಮನಿಗೆ ಅರ್ಪಿಸಲು ಅರಿಯದು. ತನ್ನನ್ನು ತಾನು ಅರಿವೆಂಬ ಗುರುವಿಗೆ ಸಮರ್ಪಿಸಿಕೊಳ್ಳಲು ಅರಿಯದು. ಇದು ತ್ರಿವಿಧ ದಾಸೋಹ.

ಅನ್ನ ವಸ್ತ್ರ ಆಭರಣ ಭೂಮಿ ಆಕಳು ದಾನಮಾಡಿ ದಾಸೋಹಿ ಎಂದು ಅನ್ನಿಸಿಕೊಳ್ಳಬಹುದು. ಇದು ಲೋಕ ತನುವಿಗೆ ಕೊಡುವ ಬಿರುದು. ಈ ಬಿರುದಿನಿಂದ ಮನ ಹಿರಿ ಹಿರಿ ಹಿಗ್ಗಬಹುದು. ಅನ್ನ ವಸ್ತ್ರ ಆಭರಣ ಭೂಮಿ ಆಕಳು ತನ್ನವಲ್ಲ ; ತನುವಿನ ಪ್ರೊಡೆಕ್ಟ್ ಕೂಡಾ ಅಲ್ಲ. ತನ್ನದಲ್ಲದ್ದನ್ನು ಕೊಟ್ಟು ದಾಸೋಹಿ ಅಂದುಕೊಳ್ಳುವುದು ಅಹಂಕಾರದ ಮಾತು. ತನು, ಮನ, ಪ್ರಾಣ ಮಾತ್ರ ತನ್ನದು. ಮನದಿಂದಾಗಿ ತನು ಅಹಂಕಾರ ಪ್ರದರ್ಶಿಸುತ್ತದೆ, ತನ್ನದಲ್ಲದ್ದನ್ನು ತಾನು ಕೊಟ್ಟು ದಾಸೋಹಿ ಎಂದು ಬೀಗುತ್ತದೆ. ಮನದ ಅಹಂಕಾರ ಮುರಿಯಬೇಕಾದರೆ, ಮನ ತನುವಿನಲ್ಲಿರುವ ಅರಿವೆಂಬ ಗುರುವಿಗೆ ಶರಣಾಗಬೇಕು. ಹೆತ್ತರಿವೆಂಬ ಧನ ಕೂಡಾ ಅರಿವೆಂಬ ಗುರುವಿಗೆ ಶರಣಾಗತನಾಗಬೇಕು;

ಭಕ್ತಿ ಮಾಡಬೇಕು. ಆಗ ಮನ ಘನಮನವಾಗುತ್ತದೆ. ಆಡುವ ಆಟ ನಿಂತು, ಅರಿವಿನ ತನ್ನ ಆಟ ಆಡುತ್ತದೆ. ಹಾಡುವ ಹಾಡು ನಿಂತು ಅರಿವಿನ ಹಾಡು ಹಾಡುತ್ತದೆ. ಓದುವ ಗ್ರಂಥಗಳ ಓದು ನಿಂತು, ತನುವಿನ ಗ್ರಂಥ ಓದುತ್ತದೆ. ತನು ಅಕ್ಷರೋತ್ತಮ ! ಆಟ ಹಾಡು ಓದು ಬಂದದ್ದು ತನುವಿನಿಂದಲೇ! ಮನದ ದೆಸೆಯಿಂದ ಮರೆತು ತನು ಅನ್ಯ ಕಾಯಕಕ್ಕೆ ಸೆರೆಯಾಳಾಗಿದೆ. ಮನಕ್ಕೆ ಅರಿವಾದರೆ ಸಾಕು ಅರಿವೆಂಬ ಗುರುವಿಗೆ ಭಕ್ತಿ ಮಾಡಿ ಕೂಡಲ ಸಂಗಯ್ಯನಾಗುತ್ತದೆ.

208

ಶಾಸ್ತ್ರ ಘನವೆಂಬನೆ ? ಕರ್ಮವ ಭಜಿಸುತ್ತಿದೆ !
ವೇದ ಘನವೆಂಬನೆ ? ಪ್ರಾಣವಧೆಯ ಹೇಳುತ್ತಿದೆ !
ಶ್ರುತಿ ಘನವೆಂಬನೆ? ಮುಂದಿಟ್ಟರಸುತ್ತಿದೆ !
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು
ಕೂಡಲಸಂಗಮದೇವನ !

ಶಾಸ್ತ್ರ , ವೇದ, ಶ್ರುತಿಗಳು ಘನವಲ್ಲ. ಇವು ತನುವಿನಿಂದ ಹೊರಬಂದು ತಾಳೋಲೆ, ಕಾಗದದಲ್ಲಿ ಉಳಿದು ಮತ್ತೆ ತನುವಿನಲ್ಲಿ ಸಂಗ್ರಹಗೊಂಡಿವೆ. ತನುವಿನಿಂದ ಹೊರಬಂದದ್ದೆಲ್ಲ ತನುವಿನ ಪ್ರೊಡೆಕ್ಟ್. ಮನದ ದೆಸೆಯಿಂದ ಶಾಸ್ತ್ರ ವೇದ ಶ್ರುತಿಗಳು ದೊಡ್ಡವಾಗಿವೆ. ಮನ ಅರಿವಿಗೆ ಹೋಗಿ ಅನುಭಾವದಿಂದ ವಿಚಾರಿಸಿದಾಗ ಅವುಗಳಲ್ಲಿ ಅರಿವಿಲ್ಲವೆಂದು, ಅರಿವು ಭೋದಿಸುವ ಸಂಗಮನಾಥನು ಅಲ್ಲಿ ಇಲ್ಲವೆಂದು ಭಾಸವಾಗುತ್ತದೆ. ಮನ ಘನ ಮನವಾಗುತ್ತದೆ.

ಕಣ್ಣು , ಕಿವಿ, ಮೂಗು, ಚರ್ಮ, ನಾಲಿಗೆ ಇವು ತನುವಿನ ಅರಿವಿನ ಕೇಂದ್ರಗಳು. ಇವುಗಳಿಗೆ ಶಾಸ್ತ್ರ ವೇದ ಶ್ರುತಿಗಳ ಅವಶ್ಯಕತೆಯಿಲ್ಲ. ಇವು ಜ್ಞಾನೇಂದ್ರಿಯಗಳಿಗೆ ಪಾಠ

ಮಾಡಲಾರವು. ಏಕೆಂದರೆ ಕಣ್ಣು ನೋಡಿದ್ದನ್ನು ತನು ಶಾಸ್ತ್ರ ರೂಪದಲ್ಲಿ ರಚಿಸಿದೆ. ವೇದ ರೂಪದಲ್ಲಿ ರಚಿಸಿದೆ, ಕಿವಿ ಕೇಳಿದ್ದನ್ನು ತನು ಶ್ರುತಿ ರೂಪದಲ್ಲಿ ರಚಿಸಿದೆ.

ತನು ಬರೆದದ್ದನ್ನೇ ಮನ ಓದಿ ಗ್ರಂಥಗಳೇ ಸತ್ಯವೆಂದು ಪಾಲನೆ ಮಾಡಿದರೆ ತನುವಿನಲ್ಲಿರುವ ಸತ್ಯ ಬಳಕೆಯಾಗದೆ ಹಾಗೇ ಉಳಿಯಲಿಲ್ಲವೇ? ತನು ಋಷಿವರ್ಯನದಾದರೇನು, ಶರಣ ದಾಸ ಸಂತ ಸಾಧು ಸತ್ಪುರುಷನದಾದರೇನು ತನು ಒಂದೇ, ತನುವಿನಲ್ಲಿರುವ ಮನ ಒಂದೇ. ತನುವಿನಲ್ಲಿರುವ ಪ್ರಾಣ ಒಂದೇ. ತನುವಿನಲ್ಲಿರುವ ಅರಿವೆಂಬ ಗುರುದೇವನೊಬ್ಬನೆ ಆಗಿದ್ದಾನೆ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವ ಶಾಸ್ತ್ರ ವೇದ ಶ್ರುತಿಗಳಲ್ಲಿಲ್ಲದ ಕಾರಣ ಅಲ್ಲಿ ಹುಡುಕುವ ಅವಶ್ಯಕತೆಯಿಲ್ಲ. ಆ ಅರಿವೆಂಬ ಗುರುದೇವನನ್ನು ತನುವಿನಲ್ಲಿ, ಮನದಲ್ಲಿ, ಪ್ರಾಣದಲ್ಲಿ ಹುಡಿಕಿದರೆ ಕೂಡಲೇ ಲಭ್ಯವಾಗುತ್ತಾನೆ. ಆ ಸಂಗಮನಾಥನೇ ತಾನಾಗುತ್ತಾನೆ.

209

ವೇದದಂತುಟಲ್ಲ , ಶಾಸ್ತ್ರದಂತುಟಲ್ಲ , ಗೀತಮಾತಿನಂತುಟಲ್ಲ ಕೇಳಯ್ಯಾ.
ಮಾತಿನ ಮಾತಿನ ಕವುಳುಗೋಲ ಶ್ರವದಲ್ಲಿ
ಸತ್ತವರೊಳರೆ ಅಯ್ಯಾ ?
ದಿಟದಲಗಿನ ಕಾಳೆಗವಿತ್ತಲಿದ್ದುದೆ ಕೂಡಲಸಂಗನ ಶರಣರು ಬಂದಲ್ಲಿ!

ವೇದ, ಶಾಸ್ತ್ರ, ಭಗವದ್ಗೀತೆಯಲ್ಲಿ ತನುವನ್ನು ತನ್ಮಯಮಾಡುವ ಆನಂದದ ಮಾತುಗಳಿವೆ. ಕೇಳಿದರೆ ನುಡಿದರೆ ಪರಮಾನಂದ ! ಆದರೆ ಪ್ರಯೋಗಕ್ಕೆ ನಿಲುಕುವುದಿಲ್ಲ. ಕೇಳಿ ಆಚರಣೆಗೆ ಬಾರದ ಮಾತು; ನುಡಿದು ಆಚರಣೆಗೆ ಬಾರದ ಮಾತು ಎಷ್ಟು ಕೇಳಿದರೇನು; ಎಷ್ಟು ನುಡಿದರೇನು ? ಕೇಳುವಾಗ ನುಡಿಯುವಾಗ ಕೊಡಕೊಳ್ಳುವ ವ್ಯವಹಾರವೊಂದೇ ಬಳಕೆಗೆ ಬರುತ್ತದೆ ವಿನಹ ಪ್ರಯೋಗಕ್ಕೆ ಸಾಧ್ಯವಾಗುವುದಿಲ್ಲ.

ವೇದ ಶಾಸ್ತ್ರ ಭಗವದ್ಗೀತೆಯನ್ನು ಕೇಳಿದ ಕಿವಿ ಅರಿವಿನ ಕಿವಿಯಾಗಬೇಕಿತ್ತು.ಅನ್ಯ ಶಬ್ದಗಳನ್ನು ಕೇಳಿದರೆ ತನುವನ್ನು ಕತಕತನೆ ಕುದಿಸಿ ಕೆಂಡದ ಮಾತುಗಳನ್ನು ಹೊರಚೆಲ್ಲುವಂತೆ ಮಾಡುತ್ತದೆ. ಗೀತೆ ಕೇಳಿದರೂ ಕಿವಿಯ ಅಜ್ಞಾನ ತೊಲಗಲಿಲ್ಲ. ಓದಿದರೂ ಕಣ್ಣಿನ ಅಜ್ಞಾನ ತೊಲಗಲಿಲ್ಲ.

ವೇದ ಶಾಸ್ತ್ರ ಗೀತೆಯ ಮಾತುಗಳು ಮಾತಿನ ಮಾತಿನ ಕವುಳ ಗೋಲ. ಶ್ರವದಲ್ಲಿ ; ಸೀಳಿದ ಬಾಣಗಳು ಮನುಷ್ಯನನ್ನು ಘಾಸಿಗೊಳಿಸಲಾರವು. ಅದು ಕೇವಲ ಪ್ರದರ್ಶನ ! ಗೀತೆಯ ಈ ಹುಸಿ ಬಾಣಗಳಿಂದ ತನುವಿನ ಅಜ್ಞಾನ ಸಾಯಬಲ್ಲುದೆ ?

ಅಜ್ಞಾನ ತನುವಿನಲ್ಲಿದೆ; ಅದನ್ನು ಸೀಳುವ ಸತ್ಯದ ಅರಿವಿನ ಖಡ್ಗವೂ ತನುವಿನಲ್ಲಿಯೇ ಇದೆ. ಅರಿವು ಮತ್ತು ಮನದ ಯುದ್ಧ ತನುವಿನಲ್ಲಿಯೇ ನಡೆಯಬೇಕು. ಅದು ಶರಣರ ಸಹಾಯದಿಂದ ಮಾತ್ರ ಸಾಧ್ಯವೆನ್ನುತ್ತಾರೆ ಬಸವಣ್ಣ.

210

ಮಾತಿನ ಮಾತಿನಲಪ್ಪುದೇ ಭಕ್ತಿ ?
ಮಾಡಿ ತನು ಸವೆಯದನ್ನಕ್ಕ ಮನ ಸವೆಯದನ್ನಕ್ಕ ,
ಧನ ಸವೆಯದನ್ನಕ್ಕ ಅಪ್ಪುದೆ ಭಕ್ತಿ ?
ಕೂಡಲಸಂಗಮದೇವನೆಲುದೋರೆ ಸರಸವಾಡುವನು ;
ಸೈರಿಸದನ್ನಕ್ಕ ಅಪ್ಪುದೆ ಭಕ್ತಿ ?

ಮಾತು ತನುವಿನ ಸಂಪತ್ತು ! ಅದು ಎಂದೂ ವಿಷವಾಗಬಾರದು. ಅನ್ಯ ತನುಗಳಿಗೆ ಸಂಕಟವನ್ನುಂಟು ಮಾಡಬಾರದು. ಈ ಟೆಕ್ನಿಕ್ ತನುವಿನಲ್ಲಿಯೇ ಇದೆ. ಸುಲಭವಾಗಿ ಕೈಗೆಟಕುವುದಿಲ್ಲ. ಇದನ್ನು ಪಡೆಯಲು ಪ್ರಯತ್ನ ಮಾಡದಿದ್ದರೆ ದೊರೆಯುವುದೂ ಇಲ್ಲ.

ಮಾತಿಗೆ ಪ್ರತಿ ಮಾತನಾಡಿ ತನುಗಳು ಸಂಕಟಕ್ಕೆ ಗುರಿಯಾಗುತ್ತವೆ. ನುಡಿದ ಮಾತು ಕೇಳಿದ ಮಾತುಗಳು ತನುವಿನಲ್ಲಿ ಸಂಗ್ರಹವಾಗಿ ಮತ್ತೆ ಮತ್ತೆ ತನುವಿಗೆ ನರಕಯಾತನೆಯನ್ನುಂಟು ಮಾಡುತ್ತವೆ. ಅರಿವಿನ ತನು; ಆದರೂ ತನುವಿಗೆ ಅರಿವು ದೊರೆಯುವುದು ದುರ್ಲಭ. ಇದೊಂದು ಸೋಜಿಗವೇ ಸರಿ. ಈ ನಿಟ್ಟಿನಲ್ಲಿ ಪ್ರಯತ್ನಿಸದಿದ್ದರೆ ತನು ರಾಜಸ ತಾಮಸ ಸಾತ್ವಿಕನಾಗಿ ಒಮ್ಮೆ ಅಸು ನೀಗುತ್ತದೆ.

ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು ಎನ್ನುತ್ತಾರೆ ಬಸವಣ್ಣನವರು. ಆದರೆ ಇವು ಮೂರೂ ನುಡಿಯುವುದಿಲ್ಲ. ಜಲದಲ್ಲಿ ಹುಟ್ಟಿದ ಮುತ್ತು ಮಾಣಿಕ್ಯ ಸ್ಪಟಿಕ ಬೆಳಗು ವುದರ ಮೂಲಕ ನುಡಿಯುತ್ತವೆ.

ತನು ಕೂಡಾ ಜಲಬಿಂದುವಿನಿಂದಲೇ ಜನ್ಮ ತಳೆದಿದೆ. ನುಡಿಯುವುದರ ಮೂಲಕ ಬೆಳಗಬೇಕಾಗಿದೆ. ತನು ಮನ ಪ್ರಾಣ ಸವೆಯದನ್ನಕ್ಕ ಸಾಧ್ಯವಾಗುವುದಿಲ್ಲ. ತನುವಿನಲ್ಲಿ ತನ್ಮಯವಾದ ಅರಿವೆಂಬ ಸಂಗಮನಾಥನು ಮನದ ಅಪರಾಧ ತನುವಿಗೆ ತೋರಿ ಸರಸವಾಡುವನು.

ಆತ ಸೈರಿಸದಿದ್ದರೆ ಇದು ಸಾಧ್ಯವಾಗುವುದಿಲ್ಲ.

211

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತೆ ಮುಟ್ಟಬಾರದಯ್ಯಾ ;
ನುಡಿದಂತೆ ನಡೆಯಲು ಬಾರದಯ್ಯಾ ;
ಕೂಡಲಸಂಗನ ಶರಣರ ಭಕ್ತಿ , ಬಾಳ ಬಾಯಿಧಾರೆ !

ಮನ ನುಡಿಯುತ್ತದೆ ; ನುಡಿದಂತೆ ನಡೆಯುವುದಿಲ್ಲ. ಮನಕ್ಕೆ ನುಡಿಯುವಾಗ ಸಂತೋಷವಾಗುತ್ತದೆ. ನುಡಿದಂತೆ ನಡೆಯದೇ ಇರುವಾಗ ಇನ್ನೂ ಸಂತೋಷವಾಗುತ್ತದೆ. ಇದು ಮನದ ಕೆಲಸವೆಂದು ನುಡಿಯುವ ಮನಕ್ಕೂ ಇತರ ತನುಗಳಿಗೂ ತಿಳಿಯುವುದಿಲ್ಲ. ಆದರೆ ನುಡಿದ ತನುವನ್ನು ಗುರುತಿಸಿ ಹೀಯಾಳಿಸುತ್ತಾರೆ. ಅರಿವು ನುಡಿದಂತೆ ನಡೆಯಲು ಮನಕ್ಕೆ

ಆದೇಶಿಸುತ್ತದೆ. ನಡೆಯದಿದ್ದಾಗ ಮತ್ತೆ ಮತ್ತೆ ನೆನಪಿಸಿ ಮನದ ಹೀನ ಬುದ್ಧಿಯನ್ನು ತೆಗಳಿ ಎಚ್ಚರಿಸುತ್ತದೆ.

ನುಡಿದಂತೆ ನಡೆಯುವುದು ಸರ್ವರಿಗೂ ಸರಳವಲ್ಲ. ತನು ಮನ ಅರಿವಿನ ಕೆಲಸಗಳನ್ನು ತಿಳಿದು ಅರಿವಿನ ಶಿಕ್ಷಣ ಪಡೆದ ಜ್ಞಾನಿಗಳಿಗೆ ಮಾತ್ರ ಸಾಧ್ಯವಾಗುತ್ತದೆ. ನುಡಿದಂತೆ ನಡೆಯುವುದೆಂದರೆ ಹರಿಯುವ ನೀರಿನಲ್ಲಿ ಪಾಚಿಗಟ್ಟಿದ ಕಲ್ಲಿನ ಮೇಲೆ ಕಾಲನಿಟ್ಟು ದಡ ಸೇರಿದಂತೆ. ಹರಿತವಾದ ಕತ್ತಿಯ ಅಲಗಿನ ಮೇಲೆ ಕಾಲನಿಟ್ಟು ನಡೆದಂತೆ ಎಂದಿದ್ದಾರೆ ಬಸವಣ್ಣನವರು.

ಅರಿವಿನ ಮಾತನ್ನು ಪಾಲಿಸಿ ನುಡಿಯಬೇಕು. ಅರಿವಿನ ಮಾತನ್ನು ಪಾಲಿಸಿ ನಡೆಯಬೇಕು, 'ನುಡಿದಂತೆ ನಡೆಯದಿರ್ದಡೆ ಹಿಡಿದಿರ್ಪಲಿಂಗ ಘಟಸರ್ಪವಯ್ಯಾ' ತನುವನ್ನು ಹಿಡಿದ ಅರಿವು ನುಡಿದಂತೆ ನಡೆಯದಿದ್ದರೆ ತನುವನ್ನೇ ಸರ್ಪದಂತೆ ಕಚ್ಚುತ್ತದೆ. ನೆನಪಿಸಿ ನೆನಪಿಸಿ ಬುಸುಗುಡುತ್ತದೆ.

212

ಭಕ್ತಿಯೆಂಬುದ ಮಾಡಬಾರದು
ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು.
ಘಟಸರ್ಪನಲ್ಲಿ ಕೈದುಡುಕಿದಡೆ ಹಿಡಿವುದ ಮಾಣ್ಬುದೆ ಕೂಡಲಸಂಗಮದೇವಾ ?

ತನುವಿನಲ್ಲಿರುವ ಅರಿವು ಮತ್ತು ಮನದ ಕೆಲಸಗಳ ಬಗ್ಗೆ ತಿಳಿಯದಿದ್ದರೆ, ಕಳ್ಳ ಕಳ್ಳನಾಗಿಯೇ ಉಳಿಯುತ್ತಾನೆ. ಸುಳ್ಳ, ಭ್ರಷ್ಟಾಚಾರಿ, ಲಂಚಬಡಕ, ವಿಷಯ ಲಂಪಟ, ಅತ್ಯಾಚಾರಿ, ಕುಡುಕ, ಜೂಜುಕೋರ ಆಯಾ ಕೆಲಸದಲ್ಲಿ ಆನಂದ ಪಡುತ್ತಾ ಹಾಗೆ ಉಳಿದು ಅರಿವಿನ ಭಗವಂತನ (ಸತ್ಯದ) ತನುವನ್ನು ವ್ಯರ್ಥ ಕಳೆದುಕೊಳ್ಳುತ್ತಾನೆ.

ಅರಿವು ಎಂದರೆ ತನುವಿನ ಕಣಕಣದಲ್ಲಿದ್ದ ಗುರು. ಮನ ಗುರುವಿನ ತನುವನ್ನು ತನ್ನ ಸುಖಕ್ಕಾಗಿ ದುರ್ಘಟಗಳಲ್ಲಿ ತೊಡಗಿಸಿಕೊಳ್ಳುತ್ತದೆ. ಅರಿವೆಂಬ ಗುರು ಮನಕ್ಕೆ ಪರಿಚಯವಾದರೆ ಅರಿವು ಹೇಳಿದಂತೆ ಕೇಳಲು ಪ್ರಯತ್ನಿಸುತ್ತದೆ. ಮನ ತಾನು ಮಾಡುವ ಅಜ್ಞಾನದ ಕೆಲಸಗಳನ್ನು ಅರಿವಿನಿಂದ ನೋಡಲು ಪ್ರಯತ್ನಿಸುತ್ತದೆ. ಅರಿವಿಗೆ ಭಕ್ತಿ ಮಾಡುತ್ತದೆ; ಅರಿವಿನ ಮಾತು ಕೇಳುತ್ತದೆ. ಇದು ಕರಗಸದಂತೆ. ನುಡಿದಾಗ ಕೊರೆಯುತ್ತದೆ; ನಡೆಯದಿದ್ದಾಗ ಕೊರೆಯುತ್ತದೆ. ಮನ ಘಟಸರ್ಪದ ಬಾಯಲ್ಲಿ ಕೈ ತುರಿಕಿದಂತೆ. ಅದನ್ನು ಕಚ್ಚಿ ತಿಂದು ಹಾಕುತ್ತದೆ. ಇನ್ನು ಉಳಿದುದೊಂದೇ ಅರಿವು ಮತ್ತು ತನು. ಅರಿವೆಂಬ ಗುರು ಹೇಳಿದಂತೆ ಕೇಳಿದ ತನು ಗುರುತನುವಾಗಿ ಮಾರ್ಪಡುತ್ತದೆ. ಬುದ್ಧ ಮಹಾವೀರ ಬಸವಣ್ಣನಂತಾಗುತ್ತದೆ. ಮನಕ್ಕೆ ಅರಿವಿನ ದರ್ಶನವಾಗಬೇಕು.

213

ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು
ಒಂದು ಮಿಡುಕುರಲ್ಲಿ ಬೇವಂತೆ
ಸಲೆ ನೆಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ

ಒಂದನಾಯತದಿಂದ ಕೆಡುವುದು.
ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ
ಅಧರ್ಮದಲ್ಲಿ ಕೆಡಿಸುವ ಸುತನಂತೆ-
ಶಿವನ ಸೊಮ್ಮು ಶಿವಂಗೆ ಮಾಡದೆ ಅನ್ಯಕ್ಕೆಮಾಡಿದಡೆ
ತನ್ನ ಭಕ್ತಿ ತನ್ನನೆ ಕೆಡಿಸುವುದು ಕೂಡಲಸಂಗಮದೇವಾ !

ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು ಒಂದು ಮಿಡುಕುರಲ್ಲಿ ಬೇವಂತೆ :

ಬೀಜ ಭೂಮಿಯಲ್ಲಿ ಬಿತ್ತಿ ತೇವಗೊಂಡು ಸಸಿಯಾಗಿ ಬೆಳೆದು ಕಾಳು ಗಟ್ಟಿ ತನುವಿಗೆ ಆಹಾರವಾಗಲು ಕಣಜ ಸೇರುತ್ತದೆ. ದನಕ್ಕೆ ಆಹಾರವಾಗಲು ದಂಟು ಬಣವೆ ಸೇರುತ್ತದೆ. ಹಲವು ಕಾಲ ಧಾವತಿಗೊಂಡು ಒಟ್ಟಿದ ಮೇಲೆ ಬಣವೆಯಾಯಿತು. ಒಂದು ಚಿಕ್ಕ ಕಿಡಿ ಬಿದ್ದರೆ ಇಡೀ ಬಣವೆಯೆಲ್ಲ ಸುಟ್ಟು ಭಸ್ಮವಾಗುತ್ತದೆ.

ತನು ಕೂಡಾ ಬಾಲ್ಯದಿಂದ ಅರಿವಿನ ಅವಸ್ಥೆಗೆ ಬರುವುದರೊಳಗೆ ಸಾಕಷು ಶ್ರಮ ಪಡಬೇಕಾಗುತ್ತದೆ. ಅರಿವಿನ ತನುವಿಗೆ ಒಂದು ಚಿಕ್ಕ ಅಜ್ಞಾನದ ವಿಷಯ ಆವರಿಸಿದರೆ ಸಾಕು ಒಟ್ಟಿದ ಬಣವೆಯಂತೆ ಅಜ್ಞಾನದ ಕಿಚ್ಚು ತನುವನ್ನು ಬೇಯಿಸುತ್ತದೆ.

ಅರಿವಿನ ಧರ್ಮದಿಂದ ಬಲಿಷ್ಟವಾದ ತನು ಮನದ ಮಾತಿಗೆ ಓಗೊಟ್ಟು ಕೆಟ್ಟಂತೆ. ತಂದೆ ಗಳಿಸಿದ ಆಸ್ತಿ ಮಗ ದುರ್ಬಳಕೆ ಮಾಡಿಕೊಂಡಂತೆ. ತನು ಅರಿವಿನ ಸಂಪತ್ತು. ಮನ ಅರಿವೆಂಬ ಶಿವನ ಆಳು. ಶಿವನ ಸಂಪತ್ತನ್ನು ತನುವಿಗೆ ಬಳಸದೆ ಅನ್ಯ ವಿಷಯಗಳಿಗೆ ಬಳಸಿದಡೆ ಮನ ಮಾಡಿದ ವಿಷಯದ ಸುಖದ ಬಯಕೆ ತನುವಿಗೆ ಸುತ್ತಿ ಅರಿವಿನ ಸಂಪತ್ತಾದ ತನುವನ್ನು ತನುವಿನಲ್ಲಿ ವಾಸಮಾಡಿದ ಮನವನ್ನು ಕೆಡಿಸುವುದಲ್ಲದೆ ಅನ್ಯರನ್ನು ಕೆಡಿಸದು.

ಮನ ತನು ಹಿಡಿದು ವಿಷಯಕ್ಕೆ ಹೋಗುವ ಮುನ್ನ ಅರಿವು ಹಿಡಿದು ವಿಚಾರಿಸಿ ವಿಷಯವೆಂಬ ವಿಷಯವನ್ನು ಬಿಡಬೇಕು. ಅರಿವಿನ ಅಮೃತ ಉಂಡು ಸುಖಿಸಬೇಕು ಎಂದಿದ್ದಾರೆ ಬಸವಣ್ಣನವರು.

214

ನಚ್ಚಿದೆನೆಂದಡೆ ಮೆಚ್ಚಿದೆನೆಂದಡೆ ಸಲೆ ಮಾರುವೋದೆನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕಂಜದಿದ್ದಡೆ ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವ .

ಮನ ತನ್ನ ಸುಖಕ್ಕಾಗಿ ತಾನು ವಾಸಮಾಡಿದ ತನುವನ್ನೇ ಹಾಳುಮಾಡುವ ರಕ್ಕಸ !

ಮನಕ್ಕೆ ಶಾಶ್ವತ ಸುಖಕ್ಕೆ ಹೋಗುವ ಮಾರ್ಗ ತಿಳಿಯುವುದೇ ಇಲ್ಲ. ಒಂದು ವೇಳೆ ಅರಿವಿಗೆ ಹೋಗುವ ಮಾರ್ಗ ಮನಕ್ಕೆ ತಿಳಿದರೆ ಅರಿವಿನ ಸುಖವನ್ನು ಬಯಸುತ್ತದೆ. ಹೀಗೆ ಅರಿವಿನ ಸುಖವನ್ನು ನಚ್ಚಿ ಮೆಚ್ಚಿ ಮಾರುಹೋಗಿ ಸುಖಿಸಬೇಕೆಂದು ಮನ ಹಗಲಿರುಳು ಬಯಸಿದಾಗ ಅರಿವೆಂಬ ಗುರುದೇವನು ಮನಕ್ಕೆ ಸರಳವಾಗಿ ಒಲಿಯುವುದಿಲ್ಲ.

ಮನ ಹಿಡಿದ ತನುವನ್ನು ಅಲ್ಲಾಡಿಸಿ ನೋಡುತ್ತಾನೆ. ಸತ್ಯದರ್ಶನ ಸುಲುಭವಾಗಿ ಅನುಗ್ರಹಿಸುವುದಿಲ್ಲ. ಮನವನಲ್ಲಾಡಿಸಿ ನೋಡುತ್ತಾನೆ. ಅರಿವನು ಹಿಡಿಯ ಹೋಗುವ ಮನವನ್ನು ಮತ್ತೆ ಮತ್ತೆ ಪರೀಕ್ಷೆಗೆ ಒಳಪಡಿಸುತ್ತಾನೆ. ತನುವನ್ನು ಹಿಡಿದ (ಧನ) ಪ್ರಾಣವನ್ನು ಅಲ್ಲಾಡಿಸಿ ನೋಡುತ್ತಾನೆ. ಇವುಗಳಿಗೆ ಮನ ಅಂಜದೆ ಅರಿವಿನ ದರ್ಶನ ಮಾಡಿಯೇ ತೀರುತ್ತೇನೆ; ಅರಿವಿನ ಸುಖ ಉಂಡು ಸುಖಿಯಾಗುತ್ತೇನೆ ಎಂದು ದೃಢ ನಿರ್ಧಾರ ಮಾಡಿದಾಗ ಮನದ ಭಕ್ತಿಗೆ ಮರುಳಾಗಿ ಅರಿವು ಮನವನ್ನು ಘನಮನವನ್ನಾಗಿಸುತ್ತದೆ. ತನು ಮನ (ಧನ) ಪ್ರಾಣ ಒಂದೇ ಆಗಿ ಕೂಡಲಸಂಗಯ್ಯನ ಅರಿವಿನ ತನುವಾಗುತ್ತದೆ.

215

ಕವಳುಗೋಲ ಹಿಡಿದು ಶ್ರವವ ಮಾಡಬಹುದಲ್ಲದೆ
ಕಳನೇರಿ ಕಾದುವುದರಿದು ನೋಡಾ.
ಬಣ್ಣವಿಟ್ಟು ನುಡಿದಲ್ಲಿ ಫಲವೇನು ?
ಚಿನ್ನಗೆಯ್ಯವನಾಡುವನಂತೆ
ಬಂದ ಸಮಯುವನರಿತು ಇದ್ದುದ ವಂಚಿಸದಿದ್ದಡೆ,
ಕೂಡಲಸಂಗಮದೇವ ನೊಲಿದು ಸಲಹುವನು.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ವೈರಿಗಳು ತನುವಿನಲ್ಲಿಯೇ ಇದ್ದಾರೆ. ಮೊಂಡು ಕತ್ತಿಹಿಡಿದು ಹೋರಾಡಿದರೆ ಅವರು ಸಾಯುವುದಿಲ್ಲ. ತನು ಬಂದ ಸಮಯವನರಿತು, ತನುವಿನಲ್ಲಿದ್ದ ಅರಿವೆಂಬ ಮಹಾಶೂರನೊಂದಿಗೆ ಮನ ಬೆರೆತು ವೈರಿಗಳನ್ನು ಸಂಹರಿಸಬೇಕು.

ಬಣ್ಣವಿಟ್ಟು ನುಡಿದಲ್ಲಿ ಫಲವೇನು ? ಚಿನ್ನಗೆಯ್ಯವನಾಡುವಂತೆ :

ಬಣ್ಣದ ಮಾತುಗಳನ್ನು ನುಡಿದಲ್ಲಿ ಫಲವೇನು? ನಡೆಯದಿದ್ದಲ್ಲಿ.

ಅಕ್ಕಸಾಲಿಗ ಚಿನ್ನವನು ನೋಡಿ ಬಣ್ಣದ ಮಾತುಗಳನಾಡಿದಂತೆ, ಚಿನ್ನ ಕದಿಯುವ ವಂಚನೆ ಹೋಗುವುದಿಲ್ಲ. ಕದಿಯುವುದಕ್ಕಾಗಿಯೇ ಮನ ಬಣ್ಣದ ಮಾತುಗಳನ್ನಾಡುತ್ತದೆ. ತನು ಜನ್ಮ ತಳೆದ ಉದ್ದೇಶವನು ಅರಿಯದು. ಮನ ತನುವನಾವರಿಸಿಕೊಂಡ ಉದ್ದೇಶವನೂ ಅರಿಯದು.

ಬಂದ ಸಮಯವನರಿತು ಮನ ತನುವಿನಲ್ಲಿದ್ದ ಅರಿವಿಗೆ ವಂಚಿಸದಿದ್ದಡೆ, ತನುವಿನಲ್ಲಿಯೇ ಇದ್ದ ಅರಿವೆಂಬ ಸಂಗಮನಾಥನು ಮನಕ್ಕೆ ಒಲಿದು ಸಲಹುವನು.

216

ಧನಕ್ಕೆ ಮನವನೊಡ್ಡಿದಡೇನು ? ಮನಕ್ಕೆ ಧನವನೊಡ್ಡಿದಡೇನು ?
ತನು, ಮನ, ಧನವ ಮೀರಿ ಮಾತಾಡಬಲ್ಲಡೆ,
ಆತ ನಿಶ್ಶೀಮನು ; ಆತ ನಿಜೈಕ್ಯನು.
ತನು, ಮನ, ಧನವನುವಾದಡೆ,

ಕೂಡಲಸಂಗಮ ದೇವನೊಲಿವ !

ಧನಕ್ಕೆ ಮನ ಸೋಲುವುದು ; ಮನಕ್ಕೆ ಧನವನೊಡ್ಡುವುದು ಇವೆರಡೂ ಒಂದೇ. ಮನ ಧನವನರಿಯಲಿಲ್ಲ ; ಅದನ್ನು ಮೀರಿ ಮಾತನಾಡಲಿಲ್ಲ. ಮನ ತನುವನ್ನು ಸೆರೆಯಾಳನ್ನಾಗಿಸಿಕೊಂಡು ಚಿನ್ನವನ್ನು ಖರೀದಿಸುತ್ತದೆ; ಚಿನ್ನವನ್ನು ಕದಿಯುತ್ತದೆ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

ತನು ಒಂದೇ. ಮನ ಚಿನ್ನಕ್ಕೆ ಒಲಿದು ಖರೀದಿಸಿ ಶ್ರೀಮಂತ ಎನಿಸಿ ಕೊಂಡಿತು. ಚಿನ್ನಕ್ಕೆ ಒಲಿದು ಕಳುವುಮಾಡಿ ಕಳ್ಳ ಎನ್ನಿಸಿಕೊಂಡಿತು. ವೃತ್ತಿಗಳು ಎರಡಾದರೂ ಮನ ಮೋಹಗೊಂಡದ್ದು ಬಣ್ಣಕ್ಕೆ ! ಬಣ್ಣದ ಮೋಹದಿಂದಾಗಿ ಮನ ತನು ಹಿಡಿದು ಖರೀದಿಸಿ ಶ್ರೀಮಂತನೆಂದು ಹೆಸರು ಪಡೆಯಿತು. ಅದರ ಮೋಹದಿಂದಾಗಿಯೇ ಕಳುವು ಮಾಡಿ ಕಳ್ಳನೆನ್ನಿಸಿಕೊಂಡಿತು.

ಬಣ್ಣ ಮೀರಿ ನೋಡಬಲ್ಲಡೆ ಅದು ಬರೀ ಲೋಹ. ಚಿನ್ನವೆಂದು ಖರೀದಿಸಲಿಲ್ಲ, ಕಳುವು ಮಾಡಲಿಲ್ಲ. ಮನ ತನುವಿನ ಅರಿವಿಗೆ ಒಲಿಯಿತು. ಅರಿವಿನಿಂದ ಚಿನ್ನ ನೋಡಿತು; ಅದು ಮನಕ್ಕೆ ಬರೀ ಲೋಹವಾಗಿ ಕಂಡಿತು. ತನು ಮನ ಧನವನ್ನು ಮೀರಿ ಮಾತನಾಡಿತು. ಧನ ಮನಕ್ಕೆ ತೃಣವಾಗಿ ಕಂಡಿತು, ಧನದ ಸೀಮೆ ದಾಟಿ ನಿಶ್ಶೀಮನಾಯಿತು. ತನುವಿನ ಅರಿವನು ಕಂಡು ಆ ನಿಜದರುವಿನಲಿ ಐಕ್ಯವಾಯಿತು.

217

ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಯಾಚಾರ.
ಜಂಗಮವೆ ಲಿಂಗವೆಂಬುದಕ್ಕೆ ಏನು ಗುಣ
ಮನದ ಲಂಪಟತನ ಹಿಂಗದಾಗಿ ?
ಒಡೆಯನ ಬರವಿಂಗೆ ಕುನ್ನಿ ಬಾಲವ ಬಡಿದಡೆ
ವೆಚ್ಚವೇನು ಹತ್ತುವುದು ಕೂಡಲಸಂಗಮದೇವಾ ?

ಮನೆಗೆ ಗುರುಗಳನ್ನು ಜಂಗಮರನ್ನು ಪೀಠಾಧಿಪತಿಗಳನ್ನು ಕರೆದು ಪೂಜೆಮಾಡಿಕೊಳ್ಳುವುದು ಸಂಪ್ರದಾಯ; ಗೆಳೆಯರನ್ನು , ಆತ್ಮೀಯರನ್ನು ಪೂಜೆಗೆ ಬನ್ನಿ ಎಂದು ಅಭಿಮಾನದಿಂದ ಕರೆಯುವುದು ಸಂಪ್ರದಾಯ ಹೀಗೆ ಕರೆಯುವುದರಲ್ಲಿ ವ್ಯವಹಾರದ ಗುಟ್ಟು ಅಡಗಿದೆ; ವಂಚನೆ ಅಡಗಿದೆ; ಅರ್ಥ ಸಂಪತ್ತಿನ ಅಭಮಾನವೂ ಅಡಗಿದೆ.

ಮನ, ಪೂಜೆಗಾಗಿ ಕರೆದ ಗುರುವನ್ನು ಜಂಗಮನನ್ನು ತಿಳಿಯಲಿಲ್ಲ. ಅರ್ಥ ಅಭಿಮಾನಕ್ಕೆ ಕಾರಣವಾದುದನ್ನು ತಿಳಿಯಲಿಲ್ಲ. ಮನದ ಲಂಪಟತನವೂ ಹಿಂಗಲಿಲ್ಲ.

ಗುರುಗಳು ಮನೆಗೆ ಬಂದರೆ ಶಿಷ್ಯನಿಗೆ ಲಿಂಗ ಜಂಗಮದ ಅರಿವಿನ ದರ್ಶನ ಮಾಡಿಸಬೇಕು. ಶಿಷ್ಯನ ಲಂಪಟತನ ಹಿಂಗಿ ಅರಿವಿನ ದರ್ಶನ ಸಾಧ್ಯವಾಗಬೇಕು. ಇಲ್ಲದಿದ್ದರೆ ಮಾಲೀಕನನ್ನು ನೋಡಿ ಕುನ್ನಿ ಬಾಲ ಅಲುಗಾಡಿಸಿದಂತೆ.

ಅರ್ಥಪ್ರಾಣಾಭಿಮಾನದಲ್ಲಿ ವಂಚನೆ ಮುಂದುವರಿಯಲು ವ್ಯವಹಾರಕ್ಕಾಗಿ ಗುರುವಿನ ಪೂಜೆ ನಡೆಯುತ್ತದೆ. ಗೆಳೆಯರು, ಆತ್ಮೀಯರು ಬಂದು ಉಂಡುಹೋಗುತ್ತಾರೆ. ಗುರುವನ್ನು ಕರೆಯಿಸಿ ಪೂಜೆ ಮಾಡಿಸಿದೆ ಎನ್ನುವ ಅಭಿಮಾನ ಉಳಿಯುತ್ತದೆ. ಶಿಷ್ಯನ ಅಜ್ಞಾನ ಕಳೆಯಲು

ಬರಬೇಕಾದ ಗುರು ಕಾಣಿಕೆ ಪಡೆದು ಸಂತುಷ್ಟನಾಗಿ ಹೋಗುತ್ತಾನೆ. ವ್ಯವಹಾರಕ್ಕಾಗಿ ಬಂದ ಗುರುವಿಗೆ ವೆಚ್ಚವಾಗಲಿಲ್ಲ. ವ್ಯವಹಾರಕ್ಕಾಗಿ ಕರೆಯಿಸಿದ ಶಿಷ್ಯನಿಗೂ ವೆಚ್ಚವತ್ತಲಿಲ್ಲ.

218

ಹಸಿದು ಬಂದ ಗಂಡಂಗೆ ಉಣಲಿಕ್ಕದೆ,
ಬಡವಾದನೆಂದು ಮರಗುವ ಸತಿಯ ಸ್ನೇಹದಂತೆ –
ಬಂದುದನರಿಯಳು, ಇದ್ದುದ ಸವಸಳು –
ದುಃಖವಿಲ್ಲದ ಅಕ್ಕಿ ಹಗರಣಿಗನ ತೆರನಂತೆ
ಕೂಡಲಸಂಗಮದೇವಾ.

ತನುವೆಂಬುದು ಒಂದು ಅರಿವಿನ ಮನೆ . ಆ ಮನೆಯಲ್ಲಿ ಅರಿವಿನ ಗಂಡನಿದ್ದಾನೆ. ಮನವೆಂಬ ಹೆಂಡತಿಯಿದ್ದಾಳೆ. ಅರಿವಿನ ಗಂಡನ ಮಾತು ಕೇಳಿದರೆ ಆಕೆ ಬಲುಶ್ರೀಮಂತೆ. ಆದರೆ ಹಣ ಆಭರಣ ಭೂಮಿ ವಿಷಯಕ್ಕಾಗಿ ಹಗಲಿರುಳು ಹಪಹಪಿಸಿ ಬಡವಳಾಗಿದ್ದಾಳೆ.

ಹೆಂಡತಿಯ ಅಜ್ಞಾನ ಉಣಲು ಬಂದ ಅರಿವಿನ ಗಂಡನಿಗೆ ಉಣಲಿಕ್ಕದೆ ಗಂಡ ಬಡವಾಗಿದ್ದಾನೆ ಎಂದು ಕನವರಿಸಿ ಹೆಂಡತಿ – ಬಡವಾಳಾಗಿದ್ದಾಳೆ. ಅರಿವಿನ ಗಂಡ,ಸದಾ ಮರ ಗುವ ಸತಿಯ ಸ್ನೇಹದಂತೆ. ಸತಿ ಪತಿ ಬಂದುದನು ಅರಿಯಳು ; ಇದ್ದ ಅಜ್ಞಾನವನು ಅರಿವೆಂಬ ಗಂಡನಿಗೆ ಇಕ್ಕಿ ಅರಿವನು ಉಂಡು ತೃಪ್ತಳಾಗಳು. ಅರಿತರೆ ದುಃಖವಿಲ್ಲ ; ಅರಿಯಲು ಇಷ್ಟವಿಲ್ಲ. ಕಾರಣ ತನುವೆಂಬ ಮನೆ ಸದಾ ಹಗರಣಿಗನ ತವರಾಗಿದೆ.

219

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು ;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರ ಕಠಿಣವಾಯಿತ್ತು .
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು ;
ಕಡೆಯಲ್ಲಿ ಜಂಗಮ ಭಕ್ತಿ ಕಠಿಣವಾಯಿತ್ತು .
ಇದು ಕಾರಣ ಕೂಡಲಸಂಗಮದೇವನವರಬಲ್ಲನಾಗಿ ಒಲ್ಲನಯ್ಯಾ !

ಉದಯ ಮಧ್ಯಾಹ್ನ ರಾತ್ರಿ ಎನ್ನುವುದು ಒಂದೇ. ಸೂರ್ಯೋದಯ, ಮಧ್ಯಾಹ್ನ ಸೂರ್ಯಾಸ್ತವೆನ್ನುವುದು ಭ್ರಮೆ. ಭೂಮಿ ಸೂರ್ಯನ ಸುತ್ತು ಸುತ್ತುವುದರಿಂದ ಉದಯ ಮಧ್ಯಾಹ್ನ ರಾತ್ರಿಗಳಾಗುತ್ತವೆ. ಹೊರಗೆ ಬದಲಾವಣೆ ಕಾಣುವುದು ಸಹಜ. ಅರಿವಾದರೆ ಸೂರ್ಯೋದಯವಿಲ್ಲ, ಸೂರ್ಯಾಸ್ತವಿಲ್ಲ ! ದಿನ ರಾತ್ರಿಗಳೊಂದೆ !

ಉದಯದಲ್ಲೆದ್ದು ಶೌಚಾದಿ ಕರ್ಮಗಳನ್ನು ತೀರಿಸಿ, ಪೂಜೆಮಾಡಿ ಸಾತ್ವಿಕನಾಗುತ್ತಾನೆ. ಮಧ್ಯಾಹ್ನದಲ್ಲಿ ಮತ್ತು ರಾತ್ರಿಯಲ್ಲಿ ಈ ಸಾತ್ವಿಕತನ ತನುವಿನಲ್ಲಿರಬೇಕಲ್ಲ. ಹೀಗಾಗುವುದೇ ಇಲ್ಲ. ಬೆಳಿಗ್ಗೆ ಸಾತ್ವಿಕ ; ಆಫೀಸಿನಲ್ಲಿ ಲಂಚ, ಭ್ರಷ್ಟಾಚಾರ, ಅಧಿಕಾರದ ದುರ್ಗುಣಗಳು ತನುವನ್ನು ಮಧ್ಯಾಹ್ನದ ಮಾಗಿ ಬಿಸಿಲಿನಂತೆ ಸುಡುತ್ತವೆ. ರಾತ್ರಿ ತಾಮಸ ಗುಣಗಳು ; ಕುಡಿತ, ಜೂಜು, ಮೋಜಿನಿಂದ ತನು ತಾಮಸದಿಂದ ಬಳಲುತ್ತದೆ.

ಕೂಡಲಸಂಗಯ್ಯನೆಂಬ ತನುವಿನ ಅರಿವು; ತನುವಿನ ತಾಮಸ, ರಾಜಸ, ಸಾತ್ವಿಕ ಗುಣಗಳನು ಬಲ್ಲದು. ಅದಕ್ಕಾಗಿ ತನುವಿನಲ್ಲಿದ್ದರೂ ತನುವನು ತನುವಿನ ಮನವನು ಒಲ್ಲದು ಎಂದಿದ್ದಾರೆ ಬಸವಣ್ಣನವರು.

220

ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ,
ಮೊದಲ ದಿನ ಹಣೆ ಮುಟ್ಟಿ, ಮರುದಿನ ಕೈ ಮುಟ್ಟಿ
ಮೂರೆಂಬ ದಿನಕ್ಕೆ ತೊಕಡಿಕೆ ಕಾಣಿರಣ್ಣಾ!
ಹಿಡಿದುದ ಬಿಡದಿದ್ದಡೆ, ಕಡೆಗೆ ಚಾಚುವ;
ಅಲ್ಲದಿದ್ದಡೆ ನಡು ನೀರಲ್ಲದ್ದುವ ನಮ್ಮ ಕೂಡಲಸಂಗಮದೇವ !

ಮನೆಗೆ ಮನೆ ಗುರುಗಳು ಬಂದಾಗ ಮೊದಲ ದಿನ ಪಾದತೊಳೆದು ಮನೆಗೆಲ್ಲ ಚಿಮುಕಿಸಿ ಮನೆ ಮಂದಿಯೆಲ್ಲ ಸ್ವೀಕರಿಸುತ್ತಾರೆ. ಗುರುಗಳ ಸೇವೆ ಮಾಡುತ್ತಾರೆ. ಗೆಳೆಯರನ್ನು ಬಂಧುಗಳನ್ನು ಕರೆದು ಗುರುಗಳ ಗುಣಗಾನ ಮಾಡಿ ಆಶೀರ್ವಾದ ಪಡೆಯಲು ಪಾದ ತೋರಿಸುತ್ತಾರೆ.

ಎರಡನೆಯ ದಿನಕ್ಕೆ ಸೇವೆಯಲ್ಲಿ ಸಂಪೂರ್ಣ ಕೊರತೆಯಾಗುತ್ತದೆ. ಕೈಮುಟ್ಟಿ ನಮಸ್ಕರಿಸುತ್ತಾರೆ.

ಮೂರನೆಯ ದಿನಕ್ಕೆ ಗುರುಗಳೊಂದಿಗೆ ಸಿಡಿಮಿಡಿ ಶುರುವಾಗುತ್ತದೆ. ಮುಖದಲ್ಲಿ ತಮ್ಮ ಮುಂದಿನ ಪ್ರಯಾಣ ಎಲ್ಲಿಗೆ ಎನ್ನುವ ಸೂಚನೆಗಳು ಶುರುವಾಗುತ್ತವೆ.

ಹೀಗೆ ಗುರುವನ್ನು ಹಿಡಿಯುವುದು, ಹಿಡಿದ ಶಿಷ್ಯನನ್ನು ಗುರು ಬಿಡುವುದು ಕಾಯ ಇರುವವರೆಗೆ ಮುಂದುವರೆಯುತ್ತದೆ. ಗುರುವಿನ ವೇಷ ಭೂಷಣ ನೋಡಿ ಶಿಷ್ಯನಾದ. ಶಿಷ್ಯನ ಭಕ್ತಿ ವ್ಯವಹಾರ ಹಣ ನೋಡಿ ಗುರುವಾದ. ಶಿಷ್ಯನ ಅಂತರಾಳದ ಅರಿವನ್ನು ಗುರು ನೋಡಲಿಲ್ಲ. ಅದನ್ನು ಪಡೆಯುವ ಬಗೆ ಶಿಷ್ಯನಿಗೆ ಬೋಧಿಸಲಿಲ್ಲ. ಗುರುವಿನ ಅಂತರಾಳದ ಅರಿವನ್ನು ಶಿಷ್ಯ ನೋಡಲಿಲ್ಲ. ಇಬ್ಬರೂ ಹಿಡಿದ ಅಜ್ಞಾನವನು ಬಿಡಲೊಲ್ಲರು. ಕಡೆಗಾಣುವ ಬಗೆಯನು ಇಬ್ಬರೂ ಅರಿಯಲೊಲ್ಲರು.

ತಾನು ಮಾಡುವುದು ಅಜ್ಞಾನವೆಂದು ಗುರುವಿಗೆ ತಿಳಿಯುತ್ತದೆ. ಹಾಗೆಯೇ ಶಿಷ್ಯನಿಗೂ ತಿಳಿಯುತ್ತದೆ. ತಾವು ಹಿಡಿದ ಅಜ್ಞಾನವನು ತಾವೇ ಬಿಡದಿದ್ದಡೆ, ತನುವಿನಲ್ಲಿ ತನ್ಮಯನಾದ ಸಂಗಮದೇವನೆಂಬ ಅರಿವು ನಡು ನೀರಲ್ಲದ್ದುವ ಎಂದಿದ್ದಾರೆ ಜ್ಞಾನಭಂಡಾರಿ ಬಸವಣ್ಣ.

221

ಬಿದಿರಲಂದಣವಕ್ಕು, ಬಿದಿರಲ್ಲಿ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗುಂಡಾರವಕ್ಕು,
ಬಿದಿರಲ್ಲಿ ಸಕಲ ಸಂಪದವೆಲ್ಲವು.
ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವ.

ಗುರುಗಳು ಕೊಡುವ ಪಲ್ಲಕ್ಕಿ , ರಾಜ ಕೊಡುವ ಸಿಂಹಾಸನ, ಗುಡಿ ಗುಂಡಾರ ಕೇರುವ ಮರ ಹಿಡಿಯುವ ಬೆತ್ತ, ಚಾಮರ ಬಿದಿರಲ್ಲಿಯೇ ಆಗುತ್ತದೆ.

ಹಾಗೆಯೇ ತನುವಿನ ಅರಿವು ಮನಕ್ಕೆ ಬಳಕೆಯಾದರೆ ರಾಜ, ಪ್ರಧಾನಿ, ರಾಷ್ಟ್ರಪತಿ, ಮಂತ್ರಿ, ಸಚಿವ, ಶಾಸಕ, ಅಧಿಕಾರಿಯಾಗುತ್ತಾನೆ.

ಬುದ್ಧ, ಮಹಾವೀರ, ಕ್ರಿಸ್ತ, ಕ್ರಿಷ್ಣ, ಬಸವಾದಿ ಶರಣನಾಗುತ್ತಾನೆ. ತನುವಿನ ಅರಿವು ಮನಕ್ಕೆ ಒಲಿದರೆ ಶಂಕರ, ಪುರಂದರ, ರಾಮಾನುಜ, ಕನಕರಂತೆ ಅರಿವಿಗೆ ದಾಸನಾಗುತ್ತಾನೆ.

ಅಜ್ಞಾನದ ಮನ ಬಿದಿರಿನಂತೆ ಬಾಗದಿದ್ದರೆ ತನುವಿನಲ್ಲಿ ತನ್ಮಯವಾದ ಅರಿವೆಂಬ ಸಂಗಮನಾಥನು ಮೆಚ್ಚುವುದಿಲ್ಲ ಎಂದಿದ್ದಾರೆ ಬಸವಣ್ಣನವರು.

222

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತನರಿಗೆ ಇಲ್ಲೆಂಬ ,
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ, -
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಕೂಡಲಸಂಗಮದೇವಾ ?

ಮನಕ್ಕೆ ಉಣ್ಣುವ ಬಯಕೆಯಾದಾಗ ತನಗೆ ಬೇಕಾದುದನ್ನು ತನುವಿನೊಂದಿಗೆ ಉಣ್ಣುತ್ತದೆ. ಉಡುವಾಗ ತನಗೆ ಬೇಕಾದುದನ್ನು ತನುವಿಗೆ ಉಡಿಸುತ್ತದೆ. ಬಂಧುಗಳು ಬಂದಾಗ ಅವರಿಗೆ ಬೇಕಾದ ಸತ್ಕಾರ ಮಾಡುತ್ತದೆ. ಉಣ್ಣುವಾಗ, ಉಡುವಾಗ, ಬಂಧುಗಳು ಬಂದಾಗ ಮನ ಇಲ್ಲವೆನ್ನದೆ ಸಾಲ ತಂದಾದರೂ ತೃಪ್ತಿಪಟ್ಟುಕೊಳ್ಳುತ್ತದೆ. ತನುವಿನಲ್ಲಿರುವ ಅರಿವೆಂಬ ಗುರುವಿನ ಮಾತಿಗೆ ಅಡ್ಡಿಪಡಿಸುತ್ತದೆ.

ಅಂಗದಲ್ಲಿರುವ ಅರಿವೆಂಬ ಲಿಂಗ ಹಾಗೂ ಜಂಗಮದ ಮಾತು ಕೇಳಬೇಕಾದ ಮನ ಅಂಗದೊಂದಿಗೆ ತನಗೆ ಬೇಕಾದಂತೆ ಸುಖಿಸುತ್ತದೆ. ಲಿಂಗ ಜಂಗಮದ ಮಾತಿಗೆ ತಲೆ ಕೊಡುವುತ್ತದೆ. ಲಿಂಗ ಜಂಗಮರನ್ನು ತೋರಿಸಿ ಪುನೀತನನ್ನಾಗಿ ಮಾಡಲು ಬಂದ ಪುರಾತನರ ಮಾತೂ ಕೇಳುವುದಿಲ್ಲ. ಉಣ್ಣುತ್ತ, ಉಡುತ್ತ ಸಾವು ಸಮೀಪಿಸಿದಾಗ ಮನ ತಾನು ದೇವಸ್ಥಾನದಲ್ಲಿ ಸಾಯಬೇಕೆಂದು ಹಠ ಮಾಡುತ್ತದೆ. ತನುವಿನ ಆಯುಷ್ಯವಿದ್ದಾಗ ದೇವನೆಂಬ ಅರಿವಿನ ಸತ್ಯ ದರ್ಶನ ಮಾಡಿಕೊಳ್ಳಲಿಲ್ಲ. ಸತ್ಯದರ್ಶನ ಮಾಡಿಸಲು ಬಂದ ಪುರಾತನರ ಜ್ಞಾನಿಗಳ ಮಾತಿಗೂ ಬೆಲೆ ಕೊಡಲಿಲ್ಲ. ಅವರನ್ನು ಆದರಿಸಿ ಸತ್ಕರಿಸಲಿಲ್ಲ. ಅರಿವೆಂಬ ಗುರುದೇವನು ತನುವಿನಲ್ಲಿಯೇ ಇದ್ದ. ಆ ಗುರುದೇವನೆಂಬ ಮಹಾದೇವನೂ ತನುವಿನಲ್ಲಿಯೇ ಇದ್ದ. ಮಹಾದೇವನೆಂಬ ಸದಾಶಿವನೂ ತನುವಿನಲ್ಲಿಯೇ ಇದ್ದ. ಸದಾಶಿವನೆಂಬ ಸಾಕ್ಷಾತ್ ಪರಬ್ರಹ್ಮನೂ ತನುವಿನಲ್ಲಿಯೇ ಇದ್ದ. ಹೀಗಿದ್ದೂ ದೇವನ ದರ್ಶನ ಮಾಡಿಕೊಳ್ಳದ ಮನ ಸಾವು ಸಮೀಪಿಸಿದಾಗ ದೇಗುಲಕ್ಕೆ ಹೋಗಲು ದೇವರೇನು ಪುಕ್ಕಟೆ ಸಿಗುವನೆ ? ಎಂದು ಪ್ರಶ್ನಿಸಿದ್ದಾರೆ ಅಣ್ಣನವರು.

223

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ !
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ !
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ.

ತನುವಿನಲ್ಲಿಯ ಸಹಜ ಜ್ಞಾನ ಮತ್ತೆ ಮತ್ತೆ ಮನಕ್ಕೆ ಪಾಠ ಮಾಡಿದರೂ ಅದರ ಮತಿಗೆ ಹೊಳೆಯದೆ ತನುವಿನೊಂದಿಗೆ ಪಾಪದ ಕೆಲಸಕ್ಕೆ ಇಳಿಯುತ್ತದೆ.

ಹಣ ಆಭರಣವನ್ನು ಅರಿವಿನಿಂದ ನೋಡಿದರೆ ಅವು ಬರೀ ಲೋಹ ಮತ್ತು ಕಾಗದ ! ಆದರೆ ಅವುಗಳನ್ನೇ ಮನ ಪ್ರಧಾನ ವಾಗಿಟ್ಟುಕೊಂಡು ಅರಿವಿನ ತನುವಿನ ಕುಲವನ್ನೇ ತುಚ್ಛವನ್ನಾಗಿ ನೋಡುತ್ತದೆ. ಗಳಿಕೆಮಾಡಿ ಶ್ರೀಮಂತನಾಗಿ ಮೆರೆದು ಗಳಿಕೆಯಿಲ್ಲದವರನ್ನು ಹೀನಾಯವಾಗಿ ನೋಡುತ್ತದೆ. ಹಣ ಆಭರಣಕ್ಕಾಗಿ ಹಗಲಿರುಳೂ ದುಡಿಯುತ್ತದೆ ; ಹಗಲಿರುಳೂ ಕುದಿಯುತ್ತದೆ. ಕಳುವು ಕೊಲೆ ದರೋಡೆ ಬ್ರಷ್ಟಾಚಾರದಲ್ಲಿ ತನುವನ್ನು ಪಾಲುದಾರನನ್ನಾಗಿ ಮಾಡುತ್ತದೆ. ತನು ಕುಲವನ್ನೇ ಮರೆಯುತ್ತದೆ.

ಮನ ತನುವನ್ನು ಆಶ್ರಯಿಸಿದ ಪಾಪಿ. ಅದು ಗಳಿಸಿದ ಹಣ ದ್ರವ್ಯ ಸತ್ಪಾತ್ರಕ್ಕೆ ಸಲ್ಲುವುದಿಲ್ಲ , ಏಕೆಂದರೆ ಅರಿವಿನ ತನುವನ್ನು ಮರೆತು, ಹಣ ದ್ರವ್ಯಕ್ಕೆ ಮಾತ್ರ ಪ್ರಾಧಾನ್ಯತೆ ಕೊಡುತ್ತದೆ. ಅದೇನಿದ್ದರೂ ತನುವಿನ ಏಳ್ಗೆಗಾಗಿ, ವಿನಿಮಯಕ್ಕಾಗಿ ಎಂದು ಮನ ಕೊನೆಯವರೆಗೂ ತಿಳಿಯುವುದಿಲ್ಲ.

ಕಾಡು ಕಡಿದು ಕಾಗದ ಮಾಡಿ ಅದರ ಮೇಲೆ 10, 20, 100, 500, 1000 ಎಂದು ಮುದ್ರಿಸಿದ ಮಾತ್ರಕ್ಕೆ ಅದು ಪ್ರಧಾನವಾಗುವುದಿಲ್ಲ. ಅರಿವಿನಿಂದ ಕರೆನ್ಸಿ ಮಾಡಿದ ತನು ಪ್ರಧಾನವಾದುದು. ಮನ ತನುವನ್ನು ಮರೆತು, ತನುವಿನಲ್ಲಿ ವಾಸಮಾಡಿ ತನುವನ್ನು ಅಜ್ಞಾನದೆಡೆಗೆ ಸೆಳಯುವ ನಾಯಿ. ಮನ ತನು ಹಿಡಿದು ಗಳಿಕೆ ಮಾಡಿದ ಹಣ ದ್ರವ್ಯ ಮನವೆಂಬ ನಾಯಿಗೆ ಸಲ್ಲುವುದಲ್ಲದೆ ಅರಿವಿನ ತನುವಿಗೆ ಸಲ್ಲುವುದಿಲ್ಲ. ನಾಯಿ ಹಾಲು ನಾಯಿಗೆ ಸಲ್ಲುವುದಲ್ಲದೆ ಪಂಚಾಮೃತಕ್ಕೆ ಸಲ್ಲುವುದಿಲ್ಲ.

ತನು ಎಂಬುದು ಮಹಾಜ್ಞಾನಿ ವಾಸಮಾಡಿದ ಅರಿವಿನ ಕ್ಷೇತ್ರ. ತನು ತನುವಿಗಾಗಿ ಕಾಯಕ ಮಾಡುವುದು. ತನು ತನುವಿಗಾಗಿ ಅರಿವಿನ ಬದುಕು ಬದುಕುವುದು. ಕಾಯಕ್ಕಾಗಿ ಮಾಡುವ ಕಾಯಕ ಶ್ರೇಷ್ಟ. ಕಾಯಕ ಮಾಡಿಸಿಕೊಳ್ಳುವ ಕಾಯ , ಕಾಯಕ ಮಾಡುವ ಕಾಯಗಳೆರಡೂ ತೃಪ್ತಿಪಡಬೇಕು. ಎರಡೂ ಕಾಯಗಳಲ್ಲಿ ಅರಿವಿನ ಸಂಗಯ್ಯ ವಾಸ ಮಾಡಿದ್ದಾನೆ. ಅರಿವಿನ ಕಾಯಕ್ಕಾಗಿ ಮಾಡದ ಕಾಯಕ ವ್ಯರ್ಥ. ಅರಿವಿನ ಕಾಯಕ್ಕಾಗಿ ಬಳಕೆಯಾಗದ ಅರ್ಥ ವ್ಯರ್ಥ ಕಂಡಯ್ಯಾ ಎಂದಿದ್ದಾರೆ ಜ್ಞಾನ ಭಂಡಾರಿ ಬಸವಣ್ಣನವರು.

ಕಾಯದಲ್ಲಿರುವ ಸಹಜ ಅರಿವು ಕಲಿತು ಸಹಜವಾಗಿ ಬದುಕದಿದ್ದರೆ ಆ ಕಾಯ ಅರಿವಿನ ಕಾಯವಲ್ಲ. ಮನವೆಂಬ ನಾಯಿ ವಾಸಮಾಡಿದ ಪಾಪದ ಕಾಯ. ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು.

ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ,
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ.
ಶಿವಭಕ್ತಿ ಮತಿ ಕ್ರಮ್ಯ ಯದ್ದಾನಂ ಚ ವಿಧೀಯತೆ !
ನಿಷ್ಫಲಂ ತು ಭವೇದ್ದಾನಂ ರೌರವಂ ನರಕಂ ವ್ರಜೇತ್ ॥
ಇಂತೆಂದುದಾಗಿ, ಕೂಡಲ ಸಂಗನ ಶರಣರನರಿಯದೆ
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ!

ಬಸವಣ್ಣನವರು ತಮ್ಮ ನಾಲ್ಕು ಸಾಲಿನ ವಚನದಲ್ಲಿ ಪ್ರಸಿದ್ಧ ದಾನಿಗಳೆನಿಸಿಕೊಂಡ ನಾಲ್ಕು ವ್ಯಕ್ತಿಗಳನ್ನು ಉದಾಹರಿಸಿದ್ದಾರೆ. ಬಲಿ, ಕರ್ಣ, ಖಚ, ಶಿಬಿ, ಇವರು ಲೋಕದಲ್ಲಿ ಮಹಾದಾನಿಗಳೆನ್ನಿಸಿಕೊಂಡವರು. ಲೋಕದ ಹೊಗಳಿಕೆಗೆ ಮರುಳಾಗಿ ದಾನ ಮಾಡಿ; ದಾನಿಗಳೆನ್ನಿಸಿಕೊಂಡವರು.

ವಿಷ್ಣು ವಾಮನನಾಗಿ ಬಲಿಯನ್ನು ದಾನ ಕೇಳಲು ಬಂದ. ಏನಾದರೂ ಕೇಳು ಕೊಡುವುದಾಗಿ ನುಡಿದ . ವಾಮನ ಮೂರು ಪಾದಗಳನ್ನು ಇಡುವಷ್ಟು ಭೂಮಿ ಕೇಳಿದ. ಬಲಿ ಸಂತೋಷವಾಗಿ ಒಪ್ಪಿಕೊಂಡ.

ಭೂಮಿ ತನ್ನದಲ್ಲ, ಹೇಮ ತನ್ನದಲ್ಲ, ಕಾಮಿನಿ ತನ್ನವಳಲ್ಲ. ಇವು ಜಗಕ್ಕೆ ಇಕ್ಕಿದ ವಿಧಿ ಯೆಂಬುದನ್ನು ಬಲಿ ತಿಳಿದಿರಲಿಲ್ಲ. ತನ್ನ ಒಂದು ಪಾದ ಇಡುವಷ್ಟು ಭೂಮಿ ಕೇಳಿದ. ಬಲಿ ತೆಗೆದುಕೊಳ್ಳಿ ಎಂದ. ವಾಮನ ಇಡೀ ಭೂಮಂಡಲವನ್ನೇ ವ್ಯಾಪಿಸಿಕೊಂಡ. ಒಂದು ಪಾದವನ್ನು ಭೂಮಿಯ ಮೇಲೆ ಇಟ್ಟ. ಒಂದು ಚೂರೂ ಭೂಮಿ ಉಳಿಯಲಿಲ್ಲ. ಮತ್ತೊಂದು ಪಾದವನ್ನು ಆಕಾಶದ ತುಂಬಾ ಇಟ್ಟ. ಮೂರನೇ ಪಾದವನ್ನು ಎಲ್ಲಿ ಇಡಲಿ ಎಂದು ಬಲಿಯನ್ನು ಕೇಳಿದ. ಬಲಿ ತನ್ನ ನೆತ್ತಿಯನ್ನು ತೋರಿಸಿದ. ಮಹಾದಾನಿ ನಾನು ಎಂಬ ಬಲಿಯ ಅಹಂಕಾರ ಸಂಪೂರ್ಣ ಅಡಗಿ ಹೋಯಿತು.

ಬಲಿ ಚಕ್ರವರ್ತಿ ಕಾಯ ಉಳ್ಳವನು. ವಾಮನ ಕೂಡಾ ಕಾಯ ಉಳ್ಳವನು. ಕಾಯ ಕಾಯಕ್ಕೆ ದಾನ ಮಾಡುವುದು ಎಂದರೇನು. ಕಾಯದಲ್ಲಿ ಅರಿವಿದೆ. ಅದು ''ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ. ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ ; ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀಮುಕುಟ. ಅಗಮ್ಯ ಅಗೋಚರ ಅಪ್ರಮಾಣ ಅಪ್ರತಿಮ ಲಿಂಗವೇ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ ಕೂಡಲಸಂಗಮದೇವಾ ''

ವಾಮನನ ಕಾಯ ಕಿರಿದಾದರೂ ಅದರಲ್ಲಿರುವ ಬ್ರಹ್ಮಜ್ಞಾನ ದೊಡ್ಡದು. ಅದು ಜಗದಗಲ ಮುಗಿಲಗಲ. ಪಾತಾಳದಿಂದಲೂ ಬ್ರಹಾಂಡದಿಂದಲೂ ಅತ್ತತ್ತ. ಗಮನಕ್ಕೂ ಗೋಚರಕ್ಕೂ ಪ್ರಮಾಣಕ್ಕೂ ನಿಲುಕದ ಅಪ್ರತಿಮವಾದ ಅರಿವು ಕಾಯದಲ್ಲಿ ಚುಳಕಾಗಿ ಬ್ರಹ್ಮಕಾಯವಾಗಿತ್ತು. ವಾಮನನ ಮನ ಬ್ರಹ್ಮವನ್ನು ತಿಳಿದು ಬ್ರಹ್ಮಾಂಡವೇ ತಾನಾಗಿತ್ತು. ಬಲಿಯ ಮನ ಬ್ರಹ್ಮನನ್ನು ತಿಳಿಯದೇ ಭ್ರಮಾಧೀನನಾಗಿ ಭೂಮಿ ಹೇಮ ವಿಷಯವನ್ನು ತನ್ನದಾಗಿಸಿಕೊಂಡಿತ್ತು. ಭೂಮಿ, ಹೇಮ, ಹೊಂದಿದ ಬಲಿ ಬ್ರಹ್ಮಾಂಡದ ಒಂದು ತೃಣವಾಗಿದ್ದ; ತೃಣದಲ್ಲಿಯೇ ಅಡಗಿದ ಬ್ರಹ್ಮಾಂಡವಾಗಿದ್ದ. ಬಲಿ ತಿಳಿಯಲಿಲ್ಲ. ಇದು ಘನಕ್ಕೆ ಹೇಗೆ ಸರಿ ಹೊಂದೀತು? ಬಲಿಯ

ಅಜ್ಞಾನ ವಾಮನನ ಜ್ಞಾನಕ್ಕೆ ಬಲಿಯಾಯಿತು. ಭೂಮಿ ಹೇಮ ಜಗಕ್ಕೆ ಇಕ್ಕಿದ ವಿಧಿಯೆಂದು ಬಲಿಗೆ ಅರಿವಾಯಿತು. ಕರ್ಣನ ಕವಚ, ಖಚರನ ಅಸ್ಥಿ, ಶಿಬಿಯ ಮಾಂಸ ಕೂಡಾ ಇದಕ್ಕೆ ಭಿನ್ನವಾದದ್ದಲ್ಲ. ಲೋಕದ ಕೀರ್ತಿ ವಾರ್ತೆಗಾಗಿ ಮಾಡಿದ ಧನವೆಲ್ಲ ವೃಥಾ ಹೋಯಿತ್ತು.

ಕೂಡಲಸಂಗನ ಶರಣನರಿಯದೆ ಕೀರ್ತಿ ವಾರ್ತೆಗೆ ಮಾಡಿದ ಧನವೆಲ್ಲ ವೃಥಾ ಹೋಯಿತ್ತಲ್ಲಾ:

ಶರಣರು ಕಾಯದ ಅರಿವನರಿತು ಮಹಾ ಕಾಯವಾದವರು. ಇತರ ಕಾಯದಲ್ಲಿರುವ ಅರಿವಿನ ಮಾಹಿತಿಯನ್ನು ಮನಕ್ಕೆ ಸೂಚಿಸಿ ಘನ ಮನವನ್ನಾಗಿಸುವವರು. ಅಂತಹ ಮಹಾನುಭಾವಿಗಳಿಗಾಗಿ ಸವೆಸದ ತನು ಮನ ಧನ ವೃಥಾ ಹೋಯಿತ್ತು ಎಂದಿದ್ದಾರೆ ಬಸವಣ್ಣನವರು.

225

ಹತ್ತು ಮತ್ತರ ಭೂಮಿ, ಬತ್ತದ ಹಯನು, ನಂದಾದೀವಿಗೆಯ
ನಡೆಸಿಹೆವೆಂಬುವರ ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೋ ?
ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು ಎಂಬುವನ
ಬಾಯಲ್ಲಿ ಮೆಟ್ಟ ಹುಡಿಯ ಹೊಯ್ಯದೆ ಮಾಣ್ಬನೆ
ಕೂಡಲಸಂಗಮದೇವ ?

ಸೃಷ್ಟಿಗೆ ಕಾರಣವಾದ ಅನಂತ ಶಕ್ತಿ ; ಕಣ್ಣಿಗೆ ಕಾಣುವ ಎಲ್ಲ ವಸ್ತುಗಳಲ್ಲಿ ಚುಳುಕಾಗಿದೆ. ಹಾಗೆಯೇ ತನುವಿನಲ್ಲಿ ತನ್ಮಯವಾಗಿದೆ. ಅರಿವಿನ ಮಹಾಕುಲವೆಂದು ಹೆಸರು ಪಡೆದಿದೆ. ದೇವರು, ದೈವ, ಗುರು, ವಿಷ್ಣು, ರುದ್ರ, ಮಹಾದೇವ, ಸದಾಶಿವ, ಸಾಕ್ಷಾತ್ ಪರಬ್ರಹ್ಮವೆಂದು ಅನ್ನಿಸಿಕೊಂಡಿದೆ.

ಅನಂತ ಶಕ್ತಿ ಬಿಂದುವಾಗಿ ತತ್ತಿಯಿಂದ ಹೊರಬಂದಿದೆ. ಬೆವರಿನಿಂದ ಹೊರಬಂದಿದೆ. ಭೂಮಿಯ ಗರ್ಭದಿಂದ ಗಿಡ, ಮರ, ಬಳ್ಳಿಯಾಗಿ ಹೊರಬಂದಿದೆ. ದೇಹದ ಗರ್ಭದಿಂದ ಹೊರಬಂದು ಅರಿವಿನ ತನುವಾಗಿ,ಅನಂತ ಶಕ್ತಿಯಾಗಿ,ದಿವ್ಯ ಚೈತನ್ಯವಾಗಿ ಒಡಮೂಡಿದೆ.

ತನುವನ್ನು ಆವರಿಸಿದ ಮನ ಇದನ್ನು ತಿಳಿಯದೆ ಇವೆಲ್ಲವನ್ನು ಸೃಷ್ಟಿಸಿದ ಕಲ್ಲಿನಲ್ಲಿ ಕೆತ್ತಿದ ಮೂರ್ತಿಯೇ ದೇವರೆಂದು ಭ್ರಮಿಸಿ, ಆ ದೇವರಿಗೆ ಭೂಮಿ, ಹಯನು, ಸದಾ ಉರಿಯುವ ನಂದಾದೀವಿಗೆ ಕೊಡುತ್ತೇನೆಂದು ಹೇಳುತ್ತದೆ. ಭೂಮಿ, ಅದರಲ್ಲಿ ಬೆಳೆಯುವ ಬೆಳೆ, ಸುಳಿದು ಬೀಸುವ ಗಾಳಿ,ಹರಿಯುವ ಜಲವೆಲ್ಲ ಅನಂತಶಕ್ತಿ ನೀಡಿದ ದಾನ.

ಹೀಗಿದ್ದೂ ಅಜ್ಞಾನಿ ಮನ ಭೂಮಿ, ಹಯನು, ನಂದಾದೀವಿಗೆ ಕೊಟ್ಟು ದಾನಿ ಎಂದು ಕರೆಯಿಸಿಕೊಂಡು ಬೀಗುತ್ತದೆ. ಕೆರೆಯ ನೀರು ಕೆರೆಗೆ ಚೆಲ್ಲುವುದೊಂದು ಸಾಧನೆಯೆ? ಅದೊಂದು ಪೂಜೆಯೆ ?

ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ ಅಲ್ಲವೆ? ಎನ್ನಿಂದಲೆ ಆಯಿತ್ತು, ಎನ್ನಿಂದಲೆ

ಹೋಯಿತ್ತು ಎಂಬುವನ ಬಾಯಲ್ಲಿ ಮೆಟ್ಟಿ ಹುಡಿಯು ಹೊಯ್ಯದೆ ಮಾಣ್ಬನೆ ಕೂಡಲಸಂಗಮದೇವಾ ?

ಅನಂತ ಶಕ್ತಿಯೆಂಬ ಅಪಾರವಾದ ಜ್ಞಾನಭಂಡಾರದಿಂದ ಜನಿಸಿದ ತಾನು ಅದರ ಒಂದು ತುಣುಕು ಮುರಿದಿಕ್ಕಿ ಅನಂತ ಶಕ್ತಿಗೆ ನೈವೇದ್ಯ ಮಾಡಿದಂತಾಗಲಿಲ್ಲವೆ? ಇಂತಹ ಕುನ್ನಿಗಳನ್ನು ಆ ಶಕ್ತಿ ಸೈರಿಸುವುದಾದರೂ ಹೇಗೆ?

ಅನಂತಶಕ್ತಿ ತನುವಿನಲ್ಲಿ ತನ್ಮಯವಾಗಿದೆ. ಮನ ತನುವನ್ನು ಆವರಿಸಿ ಅಜ್ಞಾನದೆಡೆಗೆ ತನುವನ್ನು ಕೊಂಡೊಯ್ಯುತ್ತದೆ. ಕಟೆದ ಕಲ್ಲನ್ನು ದೇವರೆಂದು ಆರಾಧಿಸಿ ಆಲಯ ಕಟ್ಟಿಸುತ್ತದೆ. ಅದಕ್ಕಿಷ್ಟು ಭೂಮಿ ಬಿಟ್ಟು , ಅಭಿಷೇಕಕ್ಕಾಗಿ ಹಯನುಗಳನ್ನು ಕೊಡುತ್ತದೆ. ಅದರಿಂದ ಬಂದ ತುಪ್ಪವನ್ನು ನಿರಂತರ ಉರಿಯುವ ನಂದಾದೀವಿಗೆಗಾಗಿ ಕೊಡುತ್ತದೆ. ಎನ್ನಿಂದಲೆ ಆಯಿತು ಎನ್ನಿಂದಲೆ ಹೋಯಿತು ಎಂದು ಬೀಗುವ ಅಜ್ಞಾನಿ ಮನದ ಬಾಯಿಯನ್ನು ಯಾರು ಮುಚ್ಚಿಸಬೇಕು? ಅದರ ಬಾಯಲ್ಲಿ ಯಾರು ಮಣ್ಣು ಹಾಕಬೇಕು ? ಕೂಡಲಸಂಗಯ್ಯನೆಂಬ ಅರಿವು ಮನಕ್ಕೆ ಪರಿಚಯವಾಗಬೇಕು.

226

ಅನವರತ ಮಾಡಿಹನೆಂದು ಉಪ್ಪರ ಗುಡಿಯ ಕಟ್ಟಿ ಮಾಡುವ
ಭಕ್ತನ ಮನೆಯದು ಲಂದಣಗಿತ್ತಿಯ ಮನೆ !
ಸರ್ವಜೀವ ದಯಾಪಾರಿಯೆಂದು ಭೂತದಯಕಿಕ್ಕುವನ ಮನೆ
ಸಯಿದಾನದ ಕೇಡು !
ಸೂಳೆಯ ಮಗ ಮಾಳವ ಮಾಡಿದಡೆ ತಾಯ ಹೆಸರಾಯಿತ್ತಲ್ಲದೆ
ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ !

ಧ್ವಜಸ್ಥಂಬ ನಿಲ್ಲಿಸಿ ಅನವರತ ಮಾಡುವ ಪೂಜೆಯ ಮನೆಯದು ಅಂದಣಗಿತ್ತಿಯ ಮನೆ. ತಳಿರು ತೋರಣಗಳಿಂದ ಅಲಂಕೃತಗೊಂಡು ಸಕಲರನ್ನು ಸೆಳೆಯುವ ಪ್ರದರ್ಶನದ ಮನೆ, ಪೂಜಾನಿಷ್ಟ ಮನೆಯೆಂದು ತೋರಿಸುವ ತೋರಿಕೆಯ ಮನೆ, ಪೂಜೆಗಾಗಿ ಪಡಿ ಪದಾರ್ಥಗಳನ್ನು ಹಾಳು ಮಾಡುವ ಮನೆ. ಯಜ್ಞ, ಯಾಗ, ಹೋಮ ಹಯನಗಳಿಗಾಗಿ ತಿನ್ನುವ ಅನ್ನವನ್ನು ಬೆಂಕಿಗಿಕ್ಕುವ ಮನೆ.

ಮನೆಯ ಒಡೆಯನಿಗೆ ತನ್ನ ತನುವೇ ಅರಿವಿನ ಮನೆಯೆಂಬುದು ಪರಿಚಯವಿಲ್ಲ. ಗೌಂಡಿ ಕಟ್ಟಿದ ಮನೆಗೆ ಧರ್ಮ ಧ್ವಜ ಕಟ್ಟಿ, ತಳಿರು ತೋರಣಗಳನ್ನು ಬಿಗಿದು, ಯಜ್ಞ ಯಾಗಾದಿಗಳನ್ನು ಮಾಡಿ, ವ್ಯರ್ಥ ಸಮಯ ಕಳೆಯುವವನು ಸೂಳೆಯ ಮಗ ತನ್ನ ತಂದೆಯ ಶ್ರಾದ್ಧವ ಮಾಡಿದಂತೆ.

ಸೂಳೆ ಎಂದರೆ ಹೆಣ್ಣಲ್ಲ , ಹೆಣ್ಣು ಅಂದರೆ ಹೆಣ್ಣಲ್ಲ , ಗಂಡು ಅಂದರೆ ಗಂಡಲ್ಲ , ಹೆಣ್ಣು ಗಂಡು ಎನ್ನುವುದು ಕಣ್ಣಿನ ಅಜ್ಞಾನ ! ಮನವೆಂಬುದೇ ಹೆಣ್ಣು ! ಇದು ಕಣ್ಣಿನಲ್ಲಿ ಬೆರೆತಿರುವುದರಿಂದ ಅಜ್ಞಾನದ ದೃಷ್ಟಿ ಬಳಸಿಕೊಂಡು ನೋಡುತ್ತದೆ. ಮನದ ಅಜ್ಞಾನದ ನೋಟಕ್ಕೆ ತನು ಹೆಣ್ಣಾಗಿ ಕಾಣುತ್ತದೆ. ಗಂಡಾಗಿ ಕಾಣುತ್ತದೆ.

ಮನ ಕಣ್ಣಿನಲ್ಲಿರುವ ಅರಿವು ಬಳಕೆ ಮಾಡಿಕೊಂಡು ನೋಡಿದರೆ ತನು ಹೆಣ್ಣಲ್ಲ ,

ಗಂಡಲ್ಲ , ತನುವಿನ ಚರ್ಮ ಹೆಣ್ಣಲ್ಲ ಗಂಡಲ್ಲ, ತನುವಿನ ಕಿವಿ, ಮೂಗು, ನಾಲಿಗೆ, ಹೆಣ್ಣಲ್ಲ ಗಂಡಲ್ಲ, ತನುವಿನ ಕಣ್ಣು ಕೂಡಾ ಹೆಣ್ಣಲ್ಲ ಗಂಡಲ್ಲ, ರಕ್ತ, ಮೂಳೆ ಮಾಂಸ, ಮಜ್ಜೆ ಮೇದಸ್ಸು ಕೂಡಾ ಹೆಣ್ಣಲ್ಲ ಗಂಡಲ್ಲ, ತನುವಿನ ಯಾವ ಭಾಗ ಹೆಣ್ಣು ಯಾವ ಭಾಗ ಗಂಡು ಎಂದು ಅರಿವಿನಿಂದ ವಿಚಾರಿಸಿದರೆ ಮನದ ಮಾತು ಅರಿವಿನಲ್ಲಿ ನಿಲ್ಲುವುದಿಲ್ಲ.

ಮನ ಎನ್ನುವುದು ತನುವಿನಲ್ಲಿ ಇಲ್ಲವೇ ಇಲ್ಲ . ಇಲ್ಲದ ಈ ಮನಕ್ಕೆ ಶರಣರು ಸೂಳೆ ಎಂದು ಕರೆದರು. ಹೆಣ್ಣು ಹೆಂಡತಿ ಎಂದು ಕರೆದರು. ಈ ಹೆಂಡತಿಯನ್ನೇ ಸತಿಯಾಗಿಸಿದರು. ತನುವಿನ ಅರಿವನ್ನು ಪತಿಯನ್ನಾಗಿಸಿದರು. ಶರಣ ಸತಿ ಎಂದರು, ಲಿಂಗಪತಿ ಎಂದರು. ಸತಿಪತಿಗಳೊಂದಾಗಿ ತನುವಿನ ಮನೆಯಲ್ಲಿ ಸಂಸಾರ ಹೂಡಿದರು. ಆ ಮನೆಯನ್ನೇ ಅರಿವಿನ ತನುವಾಗಿಸಿದರು.

ಅರಿವಿನಿಂದ ನೋಡಿದರು; ತನು ಹೆಣ್ಣು ಗಂಡು ಎನ್ನುವ ಜಾತಿ ಕಳೆದುಕೊಂಡು ಅರಿವಿನ ಮಾನವ ಜಾತಿಯಾಯಿತು. ಶರಣ (ಜ್ಞಾನಿ) ನೋಡಿದ ತನುಗಳೆಲ್ಲ ಅರಿವಿನ ತನುಗಳೇ ಆದವು.

ಹೀಗೆ ಮನ ಅರಿವನ್ನು ಬಳಕೆ ಮಾಡಿಕೊಂಡರೆ ಗರತಿಯಾಗುತ್ತದೆ. ಅರಿವಿನ ಪತಿಗೆ ಸತಿಯಾಗುತ್ತದೆ. ಅಜ್ಞಾನ ಬಳಕೆ ಮಾಡಿಕೊಂಡರೆ ಸೂಳೆಯಾಗುತ್ತದೆ. ಈ ಸೂಳೆಗೆ ಹುಟ್ಟಿದ ಮಗ ಶ್ರಾದ್ಧ ಮಾಡಿದರೆ ಅಜ್ಞಾನವೆಂಬ ತಾಯಿಯ ಹೆಸರು ಹೇಳುತ್ತಾನೆಯೇ ಹೊರತು ಅರಿವೆಂಬ ತಂದೆಯ ಪರಿಚಯವೇ ಇರುವುದಿಲ್ಲ. ಸೂಳೆಯ ಮಗ ಶ್ರಾದ್ಧ ಮಾಡಿದರೆ ತಾಯಿ ಹೆಸರಾಯಿತಲ್ಲದೆ ತಂದೆಯ ಹೆಸರಾಗಲಿಲ್ಲ. ತನುವಿನ ಕಣ ಕಣದಲ್ಲಿರುವ ಅರಿವೆಂಬ ತಂದೆ ಬಳಕೆಯಾಗದೆ ಹಾಗೆ ಉಳಿದುಕೊಂಡ. ಅರಿವು ಬಳಸಿಕೊಂಡರೆ ಮನ ಸತಿಯಾಗುತ್ತದೆ. ಬಳಕೆಯಾಗದಿದ್ದರೆ ಸೂಳೆಯಾಗುತ್ತದೆ.

227

ಕಾಲಾಗ್ನಿ ರುದ್ರನ ಮೇಳಾಪವನರಿಯದವರು
ಕಾಳು ಬೇಳೆಯೆನುತಿಪ್ಪರಯ್ಯಾ ;
ಕಾನನದಡವಿಯಲ್ಲಿ ಕಿಚ್ಚು ಬಾಳುವೆಯಾಗಿ
ಮಿಕ್ಕದೊರಲುವ ಬಳ್ಳುವಿನಂತೆ ಇಪ್ಪರಯ್ಯಾ ,
ಮನುಜರು ನರವಿಂಧ್ಯದೊಳಗೆ.
ತತ್ಕಾಲ ಪ್ರೇಮವನರಿಯದೆ ವಿಭವಕ್ಕೆ ಮಾಡಿದವನ ಭಕ್ತಿ
ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ ಕೂಡಲಸಂಗಮದೇವಾ.

ಸೇರು ಕೆಲಸಕ್ಕೆ ಬಾರದ ಲೋಹದ ತಗಡಿನದು. ಆದರೆ ಅಳೆಯುವುದು ಮಾತ್ರ ಮುತ್ತು, ರತ್ನ ಮಾಣಿಕ್ಯ, ಹವಳ, ಅಮೂಲ್ಯವಾದ ಅಮೃತ ಸಮಾನವಾದ ಬೇಳೆ ಕಾಳುಗಳನ್ನು. ಅಂತೆಯೇ ತನು ಕೂಡಾ ರಕ್ತ, ಮಾಂಸ,ಮೂಳೆ, ಮಜ್ಜೆ ,ಮಾಂಸ, ಚರ್ಮದ ಕವಚದಿಂದ ಕೂಡಿದ್ದು, ಅರಿವೆಂಬ ಬ್ರಹ್ಮಾಂಡವೇ ಈ ತನುವಿನಲ್ಲಿ ಅಡಗಿದೆ. ಇದನ್ನರಿತ ಬುದ್ಧ ಮಹಾವೀರ ಬಸವಾದಿ ಶರಣರು ದಾಸಾವರೇಣ್ಯರು ಅಳೆದು ಅಳೆದು ತೂಗಿ ಆನಂದದಿಂದ ಓಲಾಡಿದರು.

ಮುತ್ತು, ರತ್ನ , ಮಾಣಿಕ್ಯ, ವಜ್ರ, ಆಭರಣ, ಕಣ್ಣಿನ ಅರಿವಿನ ಬೆಳಕಿಗೆ ಗುರಿಯಾಗಿ ಗಾಜು ಲೋಹಗಳಾಗಿ ಕಂಡವು.

ಬುದ್ಧ ತನುಗಳು ಇರುಳು ಹಗಲುಗಳೆನ್ನದಂತೆ ಬೆಳಕಿಗೆ ಬೆಳಕಾಗಿ ಬೆಳಗಿದವು. ಸೂರ್ಯ ನಾಚಿ ನೀರಾಗುವಂತೆ ಬೆಳಗಿದವು.

228

ಹರಸಿ ಮಾಡುವುದು ಹರಕೆಯ ದಂಡ!
ನೆರಹಿ ಮಾಡುವುದು ಡಂಬಿನ ಭಕ್ತಿ!
ಹರಸಬೇಡ, ನೆರಹಬೇಡ,
ಬಂದ ಬರವನರಿದಡೆ ಕೂಡಿಕೊಂಡಿಪ್ಪ
ನಮ್ಮ ಕೂಡಲಸಂಗಮದೇವಾ.

ಪಾಪದ ಮನ ತನುವನ್ನು ತನುವಿನ ಅರಿವನ್ನು ತಿಳಿಯದಂತೆ ಮಾಡುವ ರಕ್ಕಸ. ಪಾಪದ ಮನಕ್ಕಾಗಿ ಬಳಕೆಯಾಗುವ ತನು ಮನದ ಸಾಧನವಾಗಿದೆ. ಮನ ತನುವನ್ನು ಯಾವುದಕ್ಕಾಗಿ ಬಳಸಿಕೊಳ್ಳುತ್ತದೆಯೋ ಅದರ ಹರಕೆಯಂತೆ ಚಾಚೂ ತಪ್ಪದೆ ಅದರ ಮಾತು ಕೇಳುತ್ತದೆ.

ಉದಾ : ಮನ ತಾನು ಬಯಸಿದ ಬಯಕೆ ಈಡೇರಿದರೆ ದೇವರಿಗೆ ತನು ಹಿಡಿದು ದೀಡನಮಸ್ಕಾರ ಹಾಕಿಸುತ್ತದೆ. ಜ್ಯೋತಿ ಹೊರೆಸುತ್ತದೆ, ಉರುಳು ಸೇವೆ ಮಾಡಿಸುತ್ತದೆ. ಬೇವಿನ ಸೊಪ್ಪು ತನುವಿಗೆ ಕಟ್ಟಿ ಬೆತ್ತಲೆ ಕುಣಿಸುತ್ತದೆ. ತನು ಹಿಡಿದು ಕುರಿ, ಕೋಳಿ, ಕೋಣಗಳ ಬಲಿ ಕೊಡಿಸುತ್ತದೆ. ಹೀಗೆ ಮನ ತನು ಹಿಡಿದು ಹರಸಿ ಹರಕೆಯ ದಂಡ ತೀರಿಸುತ್ತದೆ.

ಹೀಗೆಯೇ ಬಂಧು ಬಳಗ ಆತ್ಮೀಯರನ್ನು ಕರೆದು, ಮನ ತನು ಹಿಡಿದು ರುದ್ರಾಭಿಷೇಕ, ಸತ್ಯನಾರಾಯಣ, ವರಶಂಕರ ಕತೆ ಹೇಳಿಸಿ ಪೂಜೆ ಮಾಡಿಸಿ ಊಟ ಹಾಕಿಸುತ್ತದೆ. ನಾನು ಮಾಡಿದೆನೆಂದು ಬೀಗುತ್ತದೆ. ಇವೆರಡು ವ್ಯರ್ಥವೆಂದು ತಿಳಿಯದೆ ತನು ಹಿಡಿದು ಪೂಜಿಸುತ್ತದೆ.

ಅರಿವಾದರೆ ಪೂಜೆ ಮಾಡುವ ವಸ್ತುಗಳೆಲ್ಲ ಕಲ್ಲುಗಳೇ, ಏನೂ ತಿಳಿಯದ ಕಲ್ಲಿಗೆ ತಿಳಿಯುವ ತನುವಿನಿಂದ ದೀಡನಮಸ್ಕಾರ, ಉರುಳುಸೇವೆ, ಪ್ರಾಣಿ ಬಲಿಯಂತಹ ಹರಕೆಯ ದಂಡ ! ಏನೂ ತಿಳಿಯದ ದೇವರೆಂಬ ಕಲ್ಲಿಗೆ ಪೂಜೆಯ ನೆಪದಲ್ಲಿ ಜನರನ್ನು ಸೇರಿಸಿ ಊಟ ಹಾಕಿಸುವ ಶ್ರಮ.

ತನು ಬಂದದ್ದು ಅರಿವಿನ ಕೆಲಸಕ್ಕಾಗಿ. ಮನ ಅರಿವನ್ನು ಮರೆಯಿಸಿ ತನ್ನ ಸುಖಕ್ಕಾಗಿ ಮರೆವಿನ ಕೆಲಸದಲ್ಲಿ ತನುವನ್ನು ಬಂಧಿಸಿದೆ. ಅಜ್ಞಾನದ ಕೆಲಸದಲ್ಲಿ ತನುವನ್ನು ತೊಡಗಿಸಿಕೊಂಡಿದೆ. ಮನ ತನುವಿನಲ್ಲಿರುವ ಅರಿವನು ಅರಿತು, ಅರಿವಿನಿಂದ ನೋಡಿದಡೆ ಮಾಡುವ ಮರೆವಿನ ಕೆಲಸಗಳಿಗೆಲ್ಲ ವಿರಾಮ. ಹರಕೆ ಹೋರುವುದಿಲ್ಲ ; ಹರಸಿ ಮಾಡುವುದಿಲ್ಲ. ಮನ ತನು ಬಂದ ಬರವನರಿತು ಅರಿವಿನ ಸಂಗಯ್ಯನೊಂದಿಗೆ ಬೆರೆತು ಸಂಗಯ್ಯನೇ ತಾನಾಗುತ್ತದೆ.

229

ಹಡೆದೊಡವೆ ವಸ್ತುವನು ಮೃಢಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ,
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದು:ಖವಿಲ್ಲ,
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು.

ತನುವಿನಲ್ಲಿದ್ದ ಅರಿವು ಮನದ ಗಮನಕ್ಕೆ ಬಂದು ಆಚರಣೆಯಲ್ಲಿ ತೊಡಗಿದರೆ ಮಾತ್ರ ಸರಳವಾಗಿ ಬದುಕಲು ಸಾಧ್ಯ. ಇಲ್ಲದಿದ್ದರೆ ತನು ಕಳ್ಳ, ವಿಷಯಲಂಪಟ, ಹಾದರಿಗ, ಭ್ರಷ್ಟಾಚಾರಿ, ಲಂಚಕೋರ, ಶ್ರೀಮಂತ, ಬಡವ, ಸ್ವಾಮಿ, ಸಮಾಜಸೇವಕ, ಮುಂತಾದ ವೇಷಗಳಲ್ಲಿ ಕಾಣಿಸಿಕೊಳ್ಳುತ್ತದೆ. ಒಮ್ಮೆ ಇದ್ದ ವೇಷ ಮತ್ತೊಮ್ಮೆ ಇರುವುದಿಲ್ಲ. ಊಸರವಳ್ಳಿಯಂತೆ ತನುವಿನ ಕಾಯಕಗಳು ಬದಲಾಗುತ್ತ ಹೋಗುತ್ತವೆ. ಇದು ಮನದ ಕೆಲಸ. ಮನ ತನುವಿಗೆ ಹಾಕುವ ವೇಷ.

ಹಡೆದೊಡವೆ ಎಂದರೆ ತನು. ಇದನ್ನು ಅರಿವು ಹಡೆದಿದೆ. ತನುವಿನ ಕಣಕಣದಲ್ಲಿ ಅರಿವು ತಾನಿದ್ದು, ತನುವನ್ನು ಅರಿವು ತನ್ನ ಒಡವೆಯನ್ನಾಗಿ ಮಾಡಿಕೊಂಡಿದೆ. ತನುವನ್ನು ಮಹಾಜ್ಞಾನಿಗಳ ಸತ್ಸಂಗಕ್ಕಾಗಿ ಸವೆಸಬೇಕು. ತನು ಬುದ್ಧ ಬಸವಾದಿ ಶರಣರ, ದಾಸವರೇಣ್ಯರ ವಿಚಾರಗಳಿಗಾಗಿ ಬಳಕೆಯಾಗಬೇಕು.

ತನು ಗರ್ಭದಿಂದ ಬಂದ ಮೇಲೆ ಅದು ಅರಿವಿನ ಕಾಯಕದಲ್ಲಿ ಓಲಾಡುವುದೇ ಲೇಸು. ಬಾರದಿದ್ದಡೆ ಬಯಲಲಿ ಬಯಲಾಗಿರುವುದು ಅತಿ ಲೇಸು. ತನು ಅರಿವಿನ ಒಡವೆ; ಇದು ಲಿಂಗದೊಡವೆ ! ಅಂಗದ ಕಣಕಣದಲ್ಲಿ ಅರಿವೆಂಬ ಲಿಂಗವೇ ಬೆರೆತಿರುವುದರಿಂದ ಇದು ಲಿಂಗಾಂಗ ! ಲಿಂಗ ಅಂಗದಲ್ಲಿ ಸಮರಸವಾಗಿ ಬೆರೆತಿದೆ. ಅದಕ್ಕಾಗಿ ಇದನ್ನು ಶರಣರು ಲಿಂಗಾಂಗ ಸಾಮರಸ್ಯವೆಂದು ಕರೆದಿದ್ದಾರೆ.

ಬಿಂದು ರೂಪದ ಬಯಲು ಗರ್ಭ ಪ್ರವೇಶಮಾಡಿ ಅಂಗವಾಗಿ ಹೊರಬಂದರೂ ಅದು ಅರಿವಿನ ಲಿಂಗವೇ ಆಗಿದೆ. ಅಂಗವೆಂಬ ಲಿಂಗ ಗೋಚರಿಸಿ ಇಲ್ಲಿದ್ದಡೂ ಅದಕ್ಕೆ ಅರಿವಿನ ಬೋನ ! ಅಂಗ ಬಯಲಲ್ಲಿ ಬಯಲಾಗಿ, ಬಯಲು ಸೇರಿ, ಬಯಲ ಲಿಂಗವಾದಡೂ ಅದಕ್ಕೆ ಅರಿವಿನ ಬೋನ !

ಅಂಗ ಲಿಂಗವೆಂಬ ಅರಿವಿನೊಡವೆ. ಅರಿವಿನೊಡವೆ ಅರಿವಿನಲ್ಲಿ ಸೇರಿ ಅರಿವೇ ಸಾರಿತ್ತಾಗಿ ಅಂಗ ಬಂದಿತ್ತೆಂಬ ಪರಿಣಾಮವಿಲ್ಲ; ಬಾರದೆಂಬ ದುಃಖವಿಲ್ಲ.

ಇದು ಸೂಕ್ಷ್ಮಾತಿಸೂಕ್ಷ್ಮ ವಿಷಯ. ಅಂಗದಲ್ಲಿ ಅರಿವೆಂಬ ಲಿಂಗ ಅಡಗಿದ ವಿಷಯ. ಈ ಶಿಕ್ಷಣ ತಿಳಿಯಲು ಬಯಕೆಯಾದ ತನುಗಳಿಗೆ ಮಾತ್ರ ಗಮನಕ್ಕೆ ಬರುವುದಲ್ಲದೆ ಅನ್ಯ ತನುಗಳಿಗೆ ತಿಳಿಯದ ವಿಷಯ. ಅದಕ್ಕಾಗಿಯೇ ಅಣ್ಣ ಬಸವಣ್ಣನವರು ನಿಮ್ಮ ಶರಣರಿಗಲ್ಲದೆ

ಕಡಬಡ್ಡಿಯ ಕೊಡಲಾಗದು ಎಂದಿದ್ದಾರೆ.

230

ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ,
ಮಾಡಲಾಗದು ಭಕ್ತ, ಕೊಳಲಾಗದು ಜಂಗಮು ;
ಹಿರಿಯರು ನರಮಾಂಸವ ಭುಂಜಿಸುವರೆ ?
ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತಿಯ,
ಮಾಡಿಸಿಕೊಳಬೇಕು ಜಂಗಮು, ಕೂಡಲಸಂಗಮದೇವಾ.

ಓಡಲಾರದ ಪ್ರಾಣಿ ಬೇಟೆ ನಾಯಿಗೆ ತನ್ನ ಮಾಂಸ ನೀಡಿ ಪ್ರಾಣ ಕಳೆದುಕೊಳ್ಳುವಂತೆ; ಅರಿವಾಗದಿದ್ದರೆ ದೇಹ ಮನವೆಂಬ ಅಜ್ಞಾನಿ ರಕ್ಕಸನಿಗೆ ವ್ಯರ್ಥ ತುತ್ತಾಗುತ್ತದೆ. ಮನಕ್ಕೆ ಬಲಿಯಾದ ತನು ಅರಿವಿಗೆ ಭಕ್ತಿ ಮಾಡಿ ಭಕ್ತನ ಸ್ಥಾನವನ್ನು ಹೊಂದಲಾರದು. ಜಂಗಮನೆಂಬ ನಿಪುಣನ ಸ್ಥಾನವನ್ನೂ ಹೊಂದಲಾರದು.

ಬ್ರಹ್ಮ ಜ್ಞಾನದ ನೈಪುಣ್ಯತೆಯನ್ನು ಅರಿಯದ ವೇಷದ ಗುರುವು ಶಿಷ್ಯನನ್ನೇ ಹರಿದು ತಿನ್ನುವ ನರಮಾಂಸ ಭಕ್ಷಕ. ವ್ಯವಹಾರಕ್ಕಾಗಿ ಗುರುವಾದ. ವ್ಯವಹಾರಕ್ಕಾಗಿ ಶಿಷ್ಯನಾದ. ಅರಿವಿನ ಸೂಕ್ಷ್ಮತೆಯನ್ನು ಅರಿತು ಓಡಲಾರದೆ ಸೊಣಗಂಗೆ ಮಾಂಸವ ನೀಡಿ ತನುವಿನ ಆಯುಷ್ಯ ಅಜ್ಞಾನಕ್ಕಾಗಿ ಕಳೆದುಕೊಂಡ. ಮಾಂಸತಿಂದ ವೇಷದ ಗುರು ನರಮಾಂಸ ಭಕ್ಷಕನೆನಿಸಿಕೊಂಡ. ಬ್ರಹ್ಮ ಜ್ಞಾನವೆಂದರೆ ಏನೆಂದು ತಿಳಿಯದೆ ಬರೀಶಬ್ದದಲ್ಲಿ ನುಡಿದು ಆಯುಷ್ಯ ಕಳೆದ ಗುರು, ನರಮಾಂಸ ಭಕ್ಷಕನಲ್ಲವೆ ? ಗುರುವೆನ್ನಿಸಿಕೊಂಡ ತನಗೂ ತಿಳಿಯಲಿಲ್ಲ. ಶಿಷ್ಯನಿಗೂ ತಿಳಿಹೇಳಲಿಲ್ಲ.

ಹಿರಿಯರು ನರಮಾಂಸ ಭುಂಜಿಸುವರೆ ? :

ಪುರಾತನರು, ಹಿರಿಯರು, ಶರಣರು, ದಾಸವರೇಣ್ಯರು ಮಠ ಆಶ್ರಮಗಳನ್ನು ಕಟ್ಟಲಿಲ್ಲ. ಕಟ್ಟೆಯ ಮೇಲೆ ಕುಳಿತು, ಮನೆ ಮನೆಗೆ ತಿರುಗಿ, ಸಂತೆಯಲ್ಲಿ ಕೂಗಿ ಅರಿವಿನ ಕಲ್ಲು ಸಕ್ಕರೆ ಮಾರಿದರು. ಕೊಳ್ಳುವ ಗಿರಾಕಿಗಳಿಲ್ಲದೆ ಅವರೇ ಮೆದ್ದು ಆನಂದದಿಂದ ಓಲಾಡಿದರು. ಸಾಧ್ಯವಾದರೆ ಅರಿವಾಗಲಿ ಎಂದು ಸಕ್ಕರೆ ರೂಪದ ಅರಿವಿನ ಅಕ್ಷರಗಳನ್ನು ಕಾಗದದಲ್ಲಿ, ಜನಪದರ ಹೃದಯದಲ್ಲಿ ಬರೆದರು.

ಹಿರಿಯರು ಹಣ ಪಡೆದು ಅರಿವು ಮಾರಲಿಲ್ಲ. ಹಣಕ್ಕಾಗಿ ಭಕ್ತನನ್ನು ಹರಿದು ತಿನ್ನಲಿಲ್ಲ. ನರಮಾಂಸ ಭಕ್ಷಕರೆನ್ನಿಸಿಕೊಳ್ಳಲಿಲ್ಲ. ತನುವುಕ್ಕಿ, ಮನವುಕ್ಕಿ ಅರಿವಿನ ತನುವಿಗೆ ಸೇವೆ ಮಾಡಿದರು. ತನುವುಕ್ಕಿ ಮನವುಕ್ಕಿ ಜಂಗಮವಾಸಸ್ಥಾನದ ತನುವಿಗೆ ಭಕ್ತಿಯ ಮಾಡಿದರು. ಕೂಡಲಸಂಗಯ್ಯನಿದ್ದ ಪ್ರತಿ ತನುವಿಗೆ ಕೈ ಮುಟ್ಟಿ ಶರಣು ಹೋಗಿ ಶರಣನನ್ನಾಗಿ ಮಾಡಿದರು. ತನುವಿನ ಭ್ರಮೆ ಕಳೆದುಕೊಳ್ಳುವ ಬಗೆ ಶಿಷ್ಯನಿಗೆ ಹೇಳಿ ಬ್ರಹ್ಮನನ್ನಾಗಿಸಿದರು .

231

ಬಂದುದ ಕೈ ಕೊಳ್ಳ ಬಲ್ಲಡೆ ನೇಮ,
ಇದ್ದುದ ವಂಚನೆಯ ಮಾಡದಿದ್ದಡೆ ಅದುನೇಮ,

ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ
ನಮ್ಮ ಕೂಡಲಸಂಗನ ಶರಣರು ಬಂದಡೆ
ಒಡೆಯರಿಗೊಡವೆಯ ನೊಪ್ಪಿಸುವುದೆ ನೇಮ.

ಮಹಾಜ್ಞಾನಿಗಳು ಮನೆಗೆ ಬಂದರೆ ಅಥವಾ ಜ್ಞಾನಿಗಳಿದ್ದಲ್ಲಿಗೆ ನಾವು ಹೋದರೆ ತನು ಎನ್ನುವ ಒಡವೆಯನ್ನು ಅವರಿಗೆ ಒಪ್ಪಿಸಬೇಕು. ಮನ ಶರಣರಿಗೆ ಶರಣು ಹೋಗಬೇಕು. ಶರಣರೆಂಬ ಮಹಾಜ್ಞಾನಿಗಳ ಮಾತು ಚಿತ್ತವಿಟ್ಟು ಕೇಳಬೇಕು. ಮನ ಚಿತ್ತ ಅವರ ಮಾತಿನಲ್ಲಿ ನೆಟ್ಟಿರಬೇಕು. ದೃಷ್ಟಿ ಅವರನ್ನೇ ದಿಟ್ಟಿಸುತ್ತಿರಬೇಕು.

ಶರಣರ ಒಂದೊಂದು ಮಾತಿನಿಂದ ಮನ ಚಿತ್ತ ತನು ಗುಣಗಳು ಶರಣರ ತನುವಿನಲ್ಲಿ ನೆಟ್ಟು ಅರಿವೊಂದೇ ಉಳಿಯುತ್ತದೆ. ಭಕ್ತನ ಮನ ಚಿತ್ತ ಅರಿವಿನ ಮಾತಿಗೆ ಮರುಳಾಗಿ ತನ್ನ ತನುವಿನಲ್ಲಿ ನೆಟ್ಟುದನ್ನು ಶರಣ ಗಮನಿಸುತ್ತಾನೆ. ಪುನಃ ಭಕ್ತನ ಮನ ಚಿತ್ತವನ್ನು ಆತನ ತನುವಿನಲ್ಲಿಯೇ ಇರುವ ಅರಿವಿನಲ್ಲಿ ಬೆರೆಸಿ ಭಸ್ಮವಾಗುವಂತೆ ಮಾಡುತ್ತಾನೆ.

ಮನ ಚಿತ್ತ ಅರಿವಿನಲ್ಲಿ ನೆಟ್ಟು ಸುಟ್ಟು ಭಸ್ಮವಾದ ಮೇಲೆ ಉಳಿದದ್ದು ಭಕ್ತನ ಅಂಗ. ಆ ಅಂಗದಲ್ಲಿರುವ ಲಿಂಗ. ಆ ಲಿಂಗದಲ್ಲಿರುವ ಜಂಗಮ ಮಾತ್ರ ಉಳಿಯುತ್ತಾನೆ. ಈ ಜಂಗಮ ತನ್ನ ಲಿಂಗಾಂಗ (ಅರಿವಿನ ಅಂಗ)ಕ್ಕೆ ಬರುವ ಸರ್ವವಿಪತ್ತುಗಳನ್ನು ಸರಳವಾಗಿ ಕಳೆದುಕೊಳ್ಳುವ ನೇಮದ ನಿಸ್ಸೀಮನೀತ, ಅಂಗದಲ್ಲಿರುವ ಅರಿವೆಂಬ ಲಿಂಗಕ್ಕೆ ವಂಚನೆ ಮಾಡದ ನೇಮದ ನಿಸ್ಸೀಮ, ನಡೆದು ತಪ್ಪದ ನೇಮವನ್ನು ಆಚರಿಸುವ ನಿಸ್ಸೀಮ, ನುಡಿದಂತೆ ನಡೆಯುವ ನೇಮದ ನಿಸ್ಸೀಮನೀತ.

ಮಹಾಜ್ಞಾನಿಗಳೆಂಬ ಶರಣರು ಮನೆಗೆ ಬಂದರೆ ಅರಿವಿನ ಒಡವೆಯಾದ ಅಂಗವನ್ನೇ ಅವರಿಗೆ ಒಪ್ಪಿಸುವ ನೇಮದ ನಿಸ್ಸೀಮ !

ಅಂಗ ಅರಿವೆಂಬ ಲಿಂಗದ ಒಡವೆ. ಇದನ್ನು ಮನವೆಂಬ ಮಂಗ ಆವರಿಸಿದೆ. ಮಂಗಕ್ಕೆ ನುಡಿದಂತೆ ನಡೆಯಲು ಬರುವುದಿಲ್ಲ. ನುಡಿಯುವಲ್ಲಿ, ನಡೆಯುವಲ್ಲಿ ತಪ್ಪುತ್ತದೆ. ಮನವೆಂಬ ಮಂಗ ಅರಿವಿನ ಲಿಂಗದಲ್ಲಿ ಲೀನವಾದರೆ ನಷ್ಟವಾಗುತ್ತದೆ. ಅಂಗ ಲಿಂಗಾಂಗವಾಗುತ್ತದೆ.

ಈ ಕೆಲಸವನ್ನು ನೈಪುಣ್ಯತೆ ಹೊಂದಿದ ಶರಣರು ಮಾತ್ರ ಮಾಡಬಲ್ಲರು. ಅವರು ಒಡೆಯರು ! ಭಕ್ತನಾದವನು ಒಡೆಯರಿಗೆ ಒಡಲು ಒಪ್ಪಿಸಿ ಅರಿವಿನ ಒಡವೆಯನ್ನು ತನ್ನದಾಗಿಸಿಕೊಳ್ಳಬೇಕು. ಆಗ ಮಾತ್ರ ನುಡಿದಂತೆ ನಡೆಯಲು ಬರುತ್ತದೆ.

232

ಹಾಲ ನೇಮ, ಹಾಲ ಕೆನೆಯ ನೇಮ ;
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ ;
ಬೆಣ್ಣೆಯ ನೇಮ,ಬೆಲ್ಲದ ನೇಮ !
ಅಂಬಲಿಯ ನೇಮದವರಾರನೂ ಕಾಣೆ .
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ.

ಮನ ತನ್ನ ರುಚಿಗಾಗಿ ತನುವಿನೊಂದಿಗೆ ಹಲವಾರು ಸಂಪ್ರದಾಯಗಳನ್ನು ಹಾಕಿಕೊಳ್ಳುತ್ತದೆ. ದೇವರ ಪೂಜೆಗಾಗಿ ಹಾಲ ನಿಯಮ, ಕೆನೆಯ ನೈವೇದ್ಯ, ಕಿಚ್ಚಡಿ, ಬೆಣ್ಣೆಯ ನೈವೇದ್ಯ ! ಬೆಲ್ಲದ ನೈವೇದ್ಯ.

ದೇವರು ಉಣ್ಣುವುದಿಲ್ಲ; ತಾನು ರುಚಿಕರವಾದ ಪದಾರ್ಥ ತಿನ್ನುವುದಕ್ಕಾಗಿ ನೇಮ, ನೈವೇದ್ಯ. ಸಾಲ ಮಾಡಿಯಾದರೂ ಆಯಾ ಪದಾರ್ಥಗಳನ್ನು ತಂದು ಅಡಿಗೆ ತಯಾರು ಮಾಡಿ ನೈವೇದ್ಯ ಹಿಡಿದು ತಿನ್ನುವುದು. ಅಪ್ಪಿ ತಪ್ಪಿ ಈ ನಿಯಮ ಮುರಿಯುವುದಿಲ್ಲ. ರೊಟ್ಟಿ, ಅಂಬಲಿಯ ನೈವೇದ್ಯವನ್ನು ಯಾರೂ ಮಾಡುವುದಿಲ್ಲ.

ಹಾಲು, ಕೆನೆ, ಕಿಚ್ಚಡಿ, ಬೆಣ್ಣೆ, ಬೆಲ್ಲ, ಅಂಬಲಿಯನ್ನು ಬಸವಣ್ಣನವರು ಈ ವಚನದಲ್ಲಿ ಬಳಕೆ ಮಾಡಿದ್ದಾರೆ. ರುಚಿಯ ಸೂತ್ರ ತಿಳಿದರೆ ಹಾಲಿಗೆ ಹಾತೊರೆಯುವುದಿಲ್ಲ ; ಅಂಬಲಿಗೆ ಮೂಗು ಮುರಿಯುವುದಿಲ್ಲ. ಮಾದಾರ ಚೆನ್ನಯ್ಯನಿಗೆ ಮಾತ್ರ ರುಚಿಯ ಸೂತ್ರ ತಿಳಿದಿತ್ತು. ಆತ ಅಂಬಲಿಯ ನೈವೇದ್ಯ ಹಿಡಿದು ಪ್ರಸಾದ ಸ್ವೀಕರಿಸುತ್ತಿದ್ದ.

ಹಾಲು, ಕೆನೆ, ಕಿಚ್ಚಡಿ, ಬೆಣ್ಣೆ, ಬೆಲ್ಲ ಮತ್ತು ಅಂಬಲಿಗಳಲ್ಲಿ ವ್ಯತ್ಯಾಸವಿಲ್ಲ. ಆದರೂ ನಾಲಿಗೆ ಅಂಬಲಿ ಬೇಡುವುದಿಲ್ಲ. ಜ್ಞಾನಿಯ ನಾಲಿಗೆಗೆ ಮಾತ್ರ ಅಂಬಲಿ ಅಮೃತಕ್ಕೆ ಸಮಾನವಾದುದು. ಹಾಲನ್ನು ಹೇಗೆ ಸೇವಿಸುತ್ತಾನೆಯೋ ಅಂಬಲಿಯನ್ನು ಹಾಗೇ ಸ್ವೀಕರಿಸುತ್ತಾನೆ.

ಆಕಳು ಜೋಳದ ದಂಟುತಿಂದು ಅಮೃತಕ್ಕೆ ಸಮಾನವಾದ ಹಾಲು ಕೊಡುತ್ತದೆ. ಅದರಿಂದಲೇ ಕೆನೆ, ಬೆಣ್ಣೆ. ಕಬ್ಬಿನ ದಂಟಿನಿಂದಲೇ ಬೆಲ್ಲ!

ದಂಟಿನಿಂದ ಉತ್ಪನ್ನವಾದ ಜೋಳದಿಂದಲೇ ಅಂಬಲಿ ! ರುಚಿ ಎನ್ನುವುದು ಮನದಲ್ಲಿ ಸೃಷ್ಟಿಯಾದ ಸುಳ್ಳು! ಉದಾ : ಬೆಲ್ಲ ಮೊದಲ ತುತ್ತಿಗೆ ಸಿಹಿ ಆದರೆ, ಎರಡನೆ ಮೂರನೆ ತುತ್ತಿಗೆ ಸಿಹಿ ಕಡಿಮೆಯಾಗುತ್ತದೆ. ನಂತರದ ಎಲ್ಲ ತುತ್ತುಗಳಲ್ಲಿ ಸಿಹಿ ನಿರ್ನಾಮವಾಗುತ್ತದೆ. ಹಾಗಾದರೆ ಸಿಹಿ ಬೆಲ್ಲದಲ್ಲಿತ್ತೋ ? ನಾಲಿಗೆಯಲ್ಲಿತ್ತೋ ?

ಸಸಿಗೆ ಜಲ ಹರಿದು ಸಿಹಿಕಬ್ಬಾಯಿತು; ಸಸಿಗೆ ಜಲಹರಿದು ದಂಟಾಯಿತು; ಜೋಳವಾಯಿತು. ಸಸಿಯಿಂದಲೇ ಕಬ್ಬಾಯಿತು; ಸಸಿಯಿಂದಲೇ ಜೋಳದ ಅಂಬಲಿಯಾಯಿತು.

ತಿಳಿದರೆ ಹಾಲು, ಕೆನೆ, ಕಿಚ್ಚಡಿ, ಬೆಣ್ಣೆ, ಬೆಲ್ಲ ಜಲದಿಂದಲೇ ಸೃಷ್ಟಿಯಾಯಿತು. ಅಂಬಲಿಯೂ ಜಲದಿಂದಲೇ ಸೃಷ್ಟಿಯಾಯಿತು. ಇವುಗಳನ್ನು ರುಚಿಸುವ ನಾಲಿಗೆ ಹಾಗು ತನು ಕೂಡಾ ಜಲದಿಂದಲೇ ಸೃಷ್ಟಿಯಾಗಿದೆ. ಜಲ ಜಲದಲ್ಲಿ ಬೆರೆತು ರುಚಿ ಕಳೆದುಕೊಂಡು ಜಲವಾಗಲು ಸಮಯಬೇಕು ಅಷ್ಟೇ.

ಜಲಕ್ಕೆ ರುಚಿ ಇಲ್ಲ ; ಬಣ್ಣವಿಲ್ಲ ; ವಾಸನೆಯಿಲ್ಲ. ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ. ಆದರೆ ಜಲದಿಂದಾದ ತನುವಿನಲ್ಲಿ ರುಚಿ - ಅರುಚಿಗಳು ಸೃಷ್ಟಿಯಾಗಿವೆ. ರುಚಿಗಾಗಿ ಅದರ ಸುಖಕ್ಕಾಗಿ ತನು ಏನೆಲ್ಲ ಮಾಡಿಸುತ್ತದೆ. ಇದು ಮನದ ಕೆಲಸವೆಂದು ಅರಿವಿಗೆ ಬರುತ್ತದೆ. ಆದರೆ ಮನಕ್ಕೆ ದೃಢವಾಗುವುದಿಲ್ಲ. ಮನಕ್ಕೆ ಅರಿವಾದರೆ ರುಚಿ - ಅರುಚಿಗಳೆರಡೂ ಇಲ್ಲ, ಅಂಬಲಿಯಾದರೂ ಅಷ್ಟೆ ; ಹಾಲಾದರೂ ಅಷ್ಟೆ.

ರುಚಿಯ ಈ ಸೂತ್ರವನ್ನು ಮಾದಾರ ಚೆನ್ನಯ್ಯ ಮಾತ್ರ ಬಲ್ಲ. ಅಂಬಲಿಯ ನೇಮವನ್ನು ಆನಂದದಿಂದ ಸ್ವೀಕರಿಸಿದ. ಕೂಡಲ ಸಂಗನ ಶರಣರಲ್ಲಿ ಶರಣು ಹೋಗಿ ಅರಿವಿನ ಸೂತ್ರವನ್ನು ಸಕಲರಿಗೂ ತಿಳಿಹೇಳಿದ.

233

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ;
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ !
ಮಾಡುವ ನೀಡುವ ನಿಜಗುಣವುಳ್ಳಡೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ !

ಮನವೆನ್ನುವುದೇ ಸುಳ್ಳು ; ಮನವಿಲ್ಲ. ಮನ ನಿಜವಲ್ಲ. ಮನ ಮಾಡುವ ಕೆಲಸಗಳೆಲ್ಲ ಸುಳ್ಳು. ಆದರೂ ಮನ ತನು ಹಿಡಿದು ಮಾಡಿ ಮಾಡಿ ತನುವನ್ನು ಕೆಡಿಸುತ್ತದೆ. ತನು ಹಿಡಿದು ನೀಡಿ ನೀಡಿ ತನುವನ್ನು ಕೆಡಿಸುತ್ತದೆ.

ಕಲಾವಿದನಿಗೆ ಕಲ್ಲು ಕೊಟ್ಟು, ಮೂರ್ತಿ ಕೆತ್ತಲು ಹೇಳಿ, ಅದನ್ನೇ ದೇವರೆಂದು ತಿಳಿದು ದೇವಾಲಯ ಕಟ್ಟಿಸುತ್ತದೆ. ಆ ದೇವರಿಗೆ ಪೂಜೆ ಮಾಡಿ ಮಾಡಿ ಮನ ತನುವಿನೊಂದಿಗೆ ಇಲ್ಲವಾಗುತ್ತದೆ. ಕಲ್ಲನ್ನು ಕಲ್ಲು ಎಂದು ಹೇಳಿದ ಮನ ; ಮೂರ್ತಿಯನ್ನು ದೇವರೆಂದು ಹೇಳುತ್ತದೆ. ಆ ದೇವರಲ್ಲಿ ಮನಕ್ಕೆ ಕಲ್ಲಿನ ದರ್ಶನ ಆಗುವುದೇ ಇಲ್ಲ.

ಕಲ್ಲನ್ನೇ ದೇವರೆಂದು ಭ್ರಮಿಸಿ, ಅಭಿಷೇಕ, ಕುಂಕುಮಾರ್ಚನೆ, ಬಿಲ್ವಾರ್ಚನೆ ಮಾಡುತ್ತದೆ. ಪಟ್ಟು ಪೀತಾಂಬರಗಳನ್ನು ಉಡಿಸಿ, ಛತ್ರಿ ಚಾಮರಗಳನ್ನು ಬೀಸಿ, ಕಲ್ಯಾಣ ಉತ್ಸವ ಮಾಡಿ ಮನ ಸಂಭ್ರಮಿಸುತ್ತದೆ. ಆ ಕಲ್ಲನ್ನೇ ಶಯನ ಗೃಹಕ್ಕೆ ಕಳಿಸಿ ಸೋಬಾನ ಪದ ಹಾಡಿ ದಣಿಯುತ್ತದೆ; ಪೂಜೆ ಮಾಡಿ ಮಾಡಿ ಕೆಡುತ್ತದೆ.

ಕಲ್ಲು ಕೆತ್ತಿ ದೇವರು ಮಾಡುವುದಕ್ಕಾಗಿ ದಾನ ನೀಡುತ್ತದೆ. ಪೌಳಿ ಶಿಖರ ದ್ವಾರಬಾಗಿಲು ಗರ್ಭಗುಡಿ ಕಟ್ಟುವುದಕ್ಕಾಗಿ ದಾನ ನೀಡಿ ನೀಡಿ ಕೆಡುತ್ತದೆ.

ಉಂಡ ತನು, ಹಸಿದ ತನುಗಳೆರಡೂ ತನುಗಳೇ. ಹಸಿದ ತನುವಿಗೆ ಉಂಡ ತನು ನೀಡುವುದು ದಾನವಲ್ಲ. ಉಂಡ ತನುವಿನಿಂದ ಹಸಿದ ತನು ಪಡೆಯುವುದು ಭಿಕ್ಷೆಯಲ್ಲ. ಆದರೂ ತನುಗಳಿಗೆ ದಾನಿ ಭಿಕ್ಷುಕ ಎಂಬ ಕಳಂಕ! ನಿಜವನರಿಯದ ಮನ ನೀಡಿ ನೀಡಿ ಕೆಡುತ್ತದೆ.

ಮನಕ್ಕೆ ಗುಣವಿಲ್ಲ. ಒಮ್ಮೆ ತನುವನ್ನು ಗುಣಿಯನ್ನಾಗಿಸುತ್ತದೆ ಮತ್ತೊಮ್ಮೆ ದುರ್ಗುಣಿಯನ್ನಾಗಿಸುತ್ತದೆ. ಮಾಡುವ ನೀಡುವ ನಿಜವನು ಅರಿತರೆ ನಿಜಗುಣಿಯಾಗುತ್ತದೆ; ನಿರ್ಗುಣಿಯಾಗುತ್ತದೆ.

ಅರಿವಿನ ಬೆಳಕಿನಿಂದ ಹುಟ್ಟಿದ ಕತ್ತಲೆಂಬ ಮನ, ಅರಿವಿನ ಬೆಳಕಿನಲ್ಲಿಯೇ ಲೀನವಾಗಿ ಅರಿವಾಗುತ್ತದೆ. ಮಾಡುವ ನೀಡುವ ನಿಜವನು ಅರಿತು ; ಆ ಅರಿವೆಂಬ ಸಂಗಯ್ಯನಲ್ಲಿ ಬೆರೆತು ಕೂಡಲಸಂಗಮದೇವನಾಗುತ್ತದೆ.

234

ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ,
ಏಡಿಸಿ ಕಾಡಿತ್ತು ಶಿವನ ಡಂಗುರ.
ಮಾಡಿದೆ ನೆನ್ನದಿರಾ ಲಿಂಗಕ್ಕೆ , ಮಾಡಿದೆನೆನ್ನದಿರಾ ಜಂಗಮಕ್ಕೆ ,

ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ,
ಬೇಡಿತ್ತನೀವ ಕೂಡಲಸಂಗಮದೇವ.

ಮಾಡಬೇಕು ನೀಡಬೇಕು ಎನ್ನುವುದೇ ಪ್ರಧಾನವಾದವರಿಗೆ ಈ ಮಾತು ರುಚಿಸುವುದಿಲ್ಲ. ಏನಾದರೂ ಮಾಡಿ ಹೆಸರು ಪಡೆದು ಸಾಯಬೇಕು ಎನ್ನುವುದು ಮನದಲ್ಲಿ ಅಳಿಸಲು ಬಾರದಂತೆ ಉಳಿದಿದೆ. ಹಿಂದಿನ ವಚನದಲ್ಲಿ ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ಎಂದು ಹೇಳಿದರೆ ಈ ವಚನದಲ್ಲಿ ಅಣ್ಣನವರು ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ , ಮಾಡಿದೆನೆನ್ನದಿರಾ ಜಂಗಮಕ್ಕೆ ಎಂದಿದ್ದಾರೆ.

'ಶಿವ' ಎಂದರೆ ಯಾರು? ತನ್ನನ್ನು ತಾನು ತಿಳಿದವನೇ ಶಿವ. ತಿಳಿಯದಿದ್ದಡೆ ಶಿವನಿದ್ದೂ ಶಿವನನ್ನು ತಿಳಿಯದ ಶವ. ತಾನು ಶಿವನೆಂದಮೇಲೆ ತನ್ನಂತೆಯೇ ಇರುವ ತನ್ನನ್ನು ಬೇಡುವವನೂ ಶಿವ. ಬೇಡುವವನಿಗೆ ಕೊಡುವವನು ಶಿವ. ಕೊಡುವ ಶಿವ ದಾನಿಯಲ್ಲ, ಬೇಡುವ ಶಿವ ಭಿಕ್ಷುಕನಲ್ಲ. ನೀಡುವ ಬೇಡುವ ಪದಗಳು ಅಜ್ಞಾನದಿಂದ ಸೃಷ್ಟಿಯಾಗಿವೆ. ಈ ಅಜ್ಞಾನವನ್ನು ಮುರಿಯಲೆಂದೇ ವಾಮನ ಬಲಿಯನ್ನು ಬೇಡಿದ. ಬೇಡಿದ್ದನ್ನು ಕೊಡುವ ದಾನಿ ಎನ್ನುವ ಅಹಂಕಾರದಿಂದ ಮೆರೆಯುವ ಬಲಿ ವಾಮನ ಬೇಡಿದ್ದನ್ನು ಕೊಡಲಾಗದೆ ತನ್ನನ್ನು ತನ್ನ ಅಹಂಕಾರವನ್ನೂ ಕಳೆದುಕೊಂಡ.

ಭೂಮಿಯ ಮೇಲೆ ತನು ಆಧಾರವಾಗಿ ನಿಂತು ; ಭೂಮಿಯನ್ನು, ಭೂಮಿಯೊಳಗಿದ್ದ ಹೇಮವನ್ನು, ಭೂಮಿಯ ಮೇಲೆ ಬೆಳೆಯು ಆಹಾರವನ್ನು, ಅದರೊಳಗಿದ್ದ ಖನಿಜ ಸಂಪತ್ತನ್ನು ತನ್ನದೆನ್ನುವುದು ಅಹಂಕಾರದ ಮಾತಲ್ಲವೆ ? ತನ್ನಂತೆಯೇ ಭೂಮಿಯ ಮೇಲೆ ಬೇಡುವವನೂ ನಿಂತಿದ್ದಾನೆ. ನೀಡುವವನ ಸೊತ್ತು ಹೇಗೊ ಅದು ಬೇಡುವವನ ಸ್ವತ್ತೂ ಆಗಿದೆ. ಅಂದ ಮೇಲೆ ನೀಡುವುದು ಬೇಡುವುದು ಅಜ್ಞಾನದ ಮಾತಾಗಲಿಲ್ಲವೇ ?

ತಿಳಿದರೆ ನೀಡುವುದಿಲ್ಲ. ತಿಳಿದರೆ ಬೇಡುವುದಿಲ್ಲ, ಇಬ್ಬರೂ ಜ್ಞಾನದ ಮಹಾತ್ಕಾರ್ಯಕ್ಕೆ ಬಂದ ಮಹನೀಯರು. ಮಾಡಿದೆನನ್ನುವವನೂ ಲಿಂಗ ಜಂಗಮನೇ. ಬೇಡಿದೆನೆನ್ನುವವನೂ ಲಿಂಗ ಜಂಗಮನೇ ಆಗಿದ್ದಾನೆ. ಮಾಡುವ ನೀಡುವ ಅಜ್ಞಾನದ ಕೆಲಸದಲ್ಲಿ ಮನ ತನುವನ್ನು ತೊಡಗಿಸಿಕೊಂಡಿದೆ. ಇದನ್ನು ತಿಳಿಯುವ ಅರಿವು ತನುವಿನಲ್ಲಿಯೇ ಇದೆ. ಮಾಡುವ ಬೇಡುವ ಅಜ್ಞಾನವೂ ತನುವಿನಲ್ಲಿಯೇ ಇದೆ.

ಮನ ತನುವಿನಲ್ಲಿ ತನ್ಮಯವಾದ ಅರಿವನ್ನು ಅರಿತರೆ ಮಾಡುವ ಬೇಡುವ ಕೆಲಸಗಳಿಗೆ ವಿರಾಮ ! ಮಾಡಿದೆನೆಂಬ ಮನದ ಕೆಲಸವನ್ನು ಬೇಡಿದೆನೆಂಬ ಮನದ ಕೆಲಸವನ್ನು ಕತ್ತರಿಸಿ, ಮನವನ್ನು ಅರಿವು ಘನ ಮನವನ್ನಾಗಿ ಮಾಡುತ್ತದೆ. ಇಮ್ಮನವನ್ನು ಅಳಿದು ಒಮ್ಮನವನ್ನಾಗಿ ಮಾಡುತ್ತದೆ.

235

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ;
ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ,ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,

ಇದೇ ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ.

ತನುವಿನಲ್ಲಿರುವ ಜ್ಞಾನ ಬಳಕೆಯಾಗದ ನಿಮಿತ್ತ ತನುವಿನಲ್ಲಿ ಕಳುವು, ಕೊಲೆ, ಸುಳ್ಳು, ಸಿಟ್ಟು, ಅಸಹ್ಯ ಮತ್ತು ಬಣ್ಣನೆ ಎಂಬ ಏಳು ವಿಕಾರಗಳು ಉಂಟಾಗುತ್ತವೆ. ಕಳವು ಮತ್ತು ಕೊಲೆ. ಇವೆರಡು ಒಂದಕ್ಕೊಂದು ಸಂಬಂಧವಿರುವ ಅಜ್ಞಾನದ ಕೊಂಡಿಗಳು. ಒಂದು ಕಳಚಿದರೆ ಆರೂ ಸರಳವಾಗಿ ಕಳಚಿ ಬೀಳುವುವು. ಇವೆರಡು ದೇಹದಿಂದ ಕಳಚಿ ಬೀಳಲು ದೇಹದ ಜ್ಞಾನ ಬಳಕೆಯಾದರೆ ಮಾತ್ರ ಸಾಧ್ಯ.

ಚಿನ್ನ ಮತ್ತು ಕರೆನ್ಸಿಯ ಮೇಲಿನ ವ್ಯಾಮೋಹದಿಂದ ದೇಹ ಕಳ್ಳ ಎಂದು, ಶ್ರೀಮಂತ ಎಂದು ಗುರುತಿಸಿಕೊಳ್ಳುತ್ತದೆ. ಚಿನ್ನ ಎನ್ನುವ ಲೋಹದ ಬಣ್ಣ ಹಾಗೂ ಕಾಗದದ ಮೇಲಿನ ವಿನಿಮಯಕ್ಕಾಗಿ ಇರುವ ಮುದ್ರಣ ಮೋಹಕ್ಕೆ ಕಾರಣವಾಗುತ್ತದೆ. ಹಳದಿ ಬಣ್ಣ ಇಲ್ಲದ ಲೋಹವನ್ನು ಶ್ರೀಮಂತ ಖರೀದಿಸುವುದಿಲ್ಲ; ಕಳ್ಳ ಕಳುವು ಮಾಡುವುದಿಲ್ಲ. ಹೀಗಾಗಿ ಎರಡು ದೇಹಗಳು ಬಣ್ಣಕ್ಕಾಗಿ ಮೋಹಗೊಂಡ ದೇಹಗಳು. ಒಂದು ದೇಹ ಶ್ರೀಮಂತ ಎಂದು ಗುರುತಿಸಿಕೊಂಡರೆ ಮತ್ತೊಂದು ದೇಹ ಕಳ್ಳ ಎಂದು ಗುರುತಿಸಿ ಕೊಂಡಿದೆ; ಈ ಎರಡೂ ದೇಹಗಳು ಬಣ್ಣಕ್ಕೆ ಮರುಳಾದ ದೇಹಗಳು.

ಕಳ್ಳ ಎಂದು ಗುರುತಿಸಿಕೊಂಡ ದೇಹ ಚಿನ್ನದ ಮೇಲಿನ ಮೋಹಕ್ಕಾಗಿ ಕೊಂದಾದರೂ ಚಿನ್ನ ಪಡೆಯುತ್ತದೆ. ಶ್ರೀಮಂತ ಎಂದು ಗುರುತಿಸಿ ಕೊಂಡ ದೇಹ ಪ್ರಾಣ ಕಳೆದುಕೊಂಡರೂ ಅಡ್ಡಿ ಇಲ್ಲ ಕಳ್ಳನಿಗೆ ಚಿನ್ನ ಕೊಡಬಾರದೆಂದು ನಿರ್ಧರಿಸುತ್ತದೆ. ಸಿಕ್ಕಿಹಾಕಿ ಕೊಂಡರೆ ಕಳ್ಳನ ದೇಹ ಪ್ರಾಣ ಕಳೆದುಕೊಳ್ಳುತ್ತದೆ. ಸಿಗದಿದ್ದರೆ ಶ್ರೀಮಂತನ ದೇಹ ಪ್ರಾಣ ಕಳೆದುಕೊಳ್ಳುತ್ತದೆ.

ಈ ಎರಡೂ ದೇಹಗಳು ಲೋಕದ ಜ್ಞಾನವನ್ನು ಕಳವು ಮಾಡಿ ಚಿನ್ನಕ್ಕೆ ಬೆಲೆ ಕಟ್ಟಿ ಬಣ್ಣಕ್ಕೆ ಮೋಹಗೊಂಡಿವೆ. ಈ ಎರಡೂ ದೇಹಗಳಲ್ಲಿಯ ಜ್ಞಾನ ಈ ಎರಡೂ ದೇಹಗಳಿಗೆ ಬಳಕೆಯಾಗುವುದಿಲ್ಲ. ಒಂದು ದೇಹ ಬಣ್ಣಕ್ಕೆ ಮೋಹಗೊಂಡು ಜೀವನ ಪರ್ಯಂತ ಚಿನ್ನ ಖರೀದಿಸಿ ಶ್ರೀಮಂತನೆನಿಸಿಕೊಂಡು ಕಳ್ಳನ ದೇಹಕ್ಕೆ ಬಲಿಯಾಗುತ್ತದೆ. ಮತ್ತೊಂದು ದೇಹ ಕೂಡಾ ಬಣ್ಣಕ್ಕೆ ಮರುಳಾಗಿ ಕಳ್ಳನೆನ್ನಿಸಿಕೊಂಡು ಸಮಾಜಕ್ಕೆ ಸರಕಾರಕ್ಕೆ ಬಲಿಯಾಗುತ್ತದೆ.

ದೇಹದಲ್ಲಿರುವ ಜ್ಞಾನ ಬಳಸಿಕೊಂಡು ಚಿನ್ನ ನೋಡಿದರೆ ಅದೊಂದು ಹಳದಿ ಬಣ್ಣದ ಲೋಹ. ಬಣ್ಣ ಮತ್ತು ಲೋಹ ಪರಿಚಯವಾದರೆ ಕಳ್ಳ ಕದಿಯುವುದಿಲ್ಲ ; ಕೊಲ್ಲುವುದಿಲ್ಲ. ಶ್ರೀಮಂತ ಖರೀದಿ ಸುವುದಿಲ್ಲ. ದೇಹಕ್ಕೆ ಜ್ಞಾನವೆಂಬ ರತ್ನವೇ ಅಮೂಲ್ಯವಾದದ್ದು. ಆ ಜ್ಞಾನ ದೇಹದಲ್ಲಿಯೇ ಇದೆ ; ಅದನ್ನು ಪುಸ್ತಕದಿಂದ, ಸಮಾಜದಿಂದ, ಗುರುಗಳಿಂದ ಎರವಲು ಪಡೆಯಬೇಕಿಲ್ಲ ; ಕಳವು ಮಾಡಿ ನನ್ನದೇ ಜ್ಞಾನ ಎಂದು ಬಳಕೆ ಮಾಡುವಂತೆಯೂ ಇಲ್ಲ. ಕಳುವು ಮಾಡಿದ ಸಾಹಿತ್ಯಕ ಜ್ಞಾನ ವೇದಿಕೆಗೆ ಬಳಕೆಯಾಗುತ್ತದೆ ; ತನುವಿನ ಆಪತ್ಕಾಲಕ್ಕೆ ಬಳಕೆಯಾಗುವುದಿಲ್ಲ. ಹೀಗಾಗಿ ತನುವಿನಲ್ಲಿರುವ ಮನ ಕಳುವಿನಲ್ಲಿ ಇಲ್ಲ ಸಂಗ್ರಹದಲ್ಲಿ ತನುವಿನೊಂದಿಗೆ ತೊಡಗಿ ಒಮ್ಮೆ ವ್ಯರ್ಥ ಪ್ರಾಣ ಕಳೆದುಕೊಳ್ಳುತ್ತದೆ.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ; ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ ಕಾಣಾ. ಅದನ್ನು ಅಲಂಕರಿಸಿದೆಯಾದಡೆ ಗುಹೇಶ್ವರ ಲಿಂಗದಲ್ಲಿ ನಿನ್ನಂತಹ ಸಿರಿವಂತರು ಯಾರೂ ಇಲ್ಲ ಎಲೆ ಮನವೆ ಎಂದು ಅಲ್ಲಮಪ್ರಭುಗಳು ಜಗದ ತನುಗಳಿಗೆ ಜ್ಞಾನದ ಸೂತ್ರವನ್ನು ಕರುಣಿಸಿದ್ದಾರೆ.

ದೇಹದಲ್ಲಿದ್ದ ಜ್ಞಾನವನ್ನು **ಕೆಡಗೊಡಬೇಡ** ಎಲೆ ಮನವೆ ಎಂದು ಪ್ರಭುಗಳು ಹೇಳಿದರೆ, ಬಸವಣ್ಣನವರು, ಜ್ಞಾನವನ್ನು **ಕಳುವು ಮಾಡಬೇಡ;** ತನುವಿನಲ್ಲಿದ್ದ ಜ್ಞಾನವನ್ನು ಬಳಸದೆ **ಕೊಲ್ಲಬೇಡ** ಎಂದು ಹೇಳಿದ್ದಾರೆ.

ಸರಕಾರ ಮತ್ತು ಸಮಾಜ, ಚಿನ್ನ ಬೆಲೆ ಬಾಳುವ ವಸ್ತು ಅದು ಅಮೂಲ್ಯವಾದದ್ದು ಎಂದು ಸಾರಿದ್ದಕ್ಕಾಗಿ ಮನ ಆ ಜ್ಞಾನವನ್ನು ನಂಬಿ ತನುವಿಗೆ ಖರೀದಿ ಮಾಡಲು ಇಲ್ಲ ಕಳವು ಮಾಡಲು ಆದೇಶ ನೀಡುತ್ತದೆ. ಸಮಾಜದ ಈ ಜ್ಞಾನವೇ ತನುವಿಗೆ ಹಾಗೂ ಜಗದ ತನುಗಳಿಗೆ ವಿಧಿಯಾಗಿ ಕಾಡುತ್ತದೆ. ಶ್ರೀಮಂತ ಬಡವ ಕಳ್ಳ ಎಂದು ಗುರುತಿಸಿಕೊಳ್ಳಲು ತನುವಿನ ಮನದ ಅಜ್ಞಾನವೇ ಕಾರಣವಾಗುತ್ತದೆ. ತನುವಿನ ಜ್ಞಾನ ತನುವಿಗೆ ಬಳಕೆಯಾಗದೆ ತನು ವ್ಯರ್ಥ ಕೆಟ್ಟು ಹೋಗುತ್ತದೆ.

ತನುವಿನಲ್ಲಿರುವ ಜ್ಞಾನ ತನುವಿಗೆ ಬಳಕೆಯಾಗದ್ದಕ್ಕಾಗಿ ತನು ಕಳುವು, ಕೊಲೆಗಳಲ್ಲಿ ಭಾಗಿಯಾಗುತ್ತದೆ. ತನುವಿನಲ್ಲಿ ಸುಳ್ಳು, ಸಿಟ್ಟು, ಅಸಹ್ಯಗಳು ಸಂಗ್ರಹವಾಗಿ ಬಣ್ಣನೆ ಮಾಡಿಕೊಂಡು ಹಿಗ್ಗುತ್ತದೆ. ಪ್ರತಿ ಮಾತುಗಳಿಂದ ಕುಗ್ಗುತ್ತದೆ. ಇಲ್ಲ ಹಿಗ್ಗುತ್ತದೆ. ತನುವಿನಲ್ಲಿ ರಸಾಯನಿಕ ಕ್ರಿಯೆಗಳು ಉಂಟಾಗಿ ಜ್ಞಾನಿಯಾಗಬೇಕಾದ ತನು ರಕ್ಕಸ ತನುವಾಗಿ ಮಾರ್ಪಡುತ್ತದೆ.

ತನುವಿನ ಅಂತರಂಗದ ಜ್ಞಾನ ತನುವಿನ ಮನಕ್ಕೆ ಒಲಿಯಲಿಲ್ಲ. ಬಹಿರಂಗದ ವಸ್ತುಗಳ ಸತ್ಯ ತನುವಿನ ಮನಕ್ಕೆ ಅನಾವರಣಗೊಳ್ಳಲಿಲ್ಲ.

ಮನಕ್ಕೆ ಅರಿವಾದರೆ ಅಂತರಂಗವೂ ಶುದ್ಧಿಯಾಗಿದೆ. ಬಹಿರಂಗವೂ ಶುದ್ಧಿಯಾಗಿದೆ. ಕಳುವು, ಕೊಲೆ, ಸುಳ್ಳು, ಸಿಟ್ಟು, ಅಸಹ್ಯಗಳಿಗೆ ಕೂಡಲೇ ಕಡಿವಾಣ ಬೀಳುವುದು. ತನುವಿನ ಜ್ಞಾನ ಜಗದಗಲ ಮುಗಿಲಗಲ, ಮಿಗೆಯಗಲವಾದ ಜ್ಞಾನ ತನುವಿನಗಲಕ್ಕೆ ಬಂದು ಚುಳುಕಾಗಿದೆ. ಶಿವಮಯವಾಗಿದೆ. ತನುವಿನ ಶ್ರೀಚರಣ ಪಾತಾಳದಿಂದತ್ತತ್ತ ಚಾಚಿ ಕೊಂಡಿದೆ. ತನುವಿನ ಶ್ರೀಮುಕುಟ ಬ್ರಹ್ಮಾಂಡದಿಂದತ್ತತ್ತ ಬಾಚಿಕೊಂಡಿದೆ. ಗಮನಕ್ಕೆ ನಿಲುಕದ, ಗೋಚರಕ್ಕೆ ನಿಲುಕದ, ಪ್ರಮಾಣಕ್ಕೆ ನಿಲುಕದ, ಅಪ್ರತಿಮವಾದ ಜ್ಞಾನ ತನುವಿನಲ್ಲಿ ಬಂದು ಚುಳುಕಾಗಿದೆ. ಇಂತಹ ದಿವ್ಯ ತನುವನ್ನು ಯಾರು ಬಣ್ಣಿಸಬೇಕು ! ಬಣ್ಣಿಸಲಸದಳವಾದ ತನು ಅಜ್ಞಾನದ ವಿಧಿಗೆ ಗುರಿಯಾಗಿ ತನ್ನ ಜ್ಞಾನವನ್ನು ತಾನೇ ಮರೆತು ಕಳುವು, ಕೊಲೆ, ಸುಳ್ಳು, ಸಿಟ್ಟು, ಅಸಹ್ಯಕ್ಕೆ ತುತ್ತಾಗುತ್ತದೆ. ಬಣ್ಣಿಸಲಸದಳವಾದ ದೇಹ ಬಣ್ಣನೆಗೆ ಗುರಿಯಾಗುತ್ತದೆ.

ಅಜ್ಞಾನಿ ಮನಕ್ಕೆ ತನುವಿನ ಅರಿವು ಒಲಿತರೆ ಸಾಕು ಅದರ ಅಂತರಂಗವೂ ಶುದ್ಧಿ, ಬಹಿರಂಗವೂ ಶುದ್ಧಿಯಾಗುವುದು. ತನು ಮತ್ತು ಅರಿವಿನಲ್ಲಿ ಮನ ಸಂಗಮವಾಗಿ ಕೂಡಲ ಸಂಗಯ್ಯನೇ ತಾನಾಗುವುದು.

236

ಕೆಡೆ ನಡೆಯದೆ, ಕೆಡೆ ನುಡಿಯದೆ, ಅನ್ಯರ ಪ್ರತಿ ಪಾದಿಸದಿದ್ದಡೆ
ಏನ ಮಾಡನಯ್ಯಾ ಲಿಂಗವು, ಏನ ಕೊಡನಯ್ಯಾ ಲಿಂಗವು ?
ತಾನು ಏನ ಬೇಡಿದುದನೀವನಾಗಿ ನಂಬುಗೆಯುಳ್ಳ ಶಿವಭಕ್ತಂಗೆ
ಇದೇ ದಿಬ್ಬ , ಕೂಡಲಸಂಗಮದೇವಾ.

ಕೇಡು ಮಾಡುವುದು, ಕೇಡು ನುಡಿಯುವುದು ಮಾಡದಿದ್ದಡೆ ಏನಾದರೂ ಸಾಧಿಸಲು

ಸಾಧ್ಯವಾಗುವುದು. ತನುವಿಗೆ ಏನೆಲ್ಲ ಸಂಪತ್ತು ದಕ್ಕುವುದು. ಏನ ಬೇಡಿದಡೂ ಕೈಗೆಟಕುವುದು. ಆದರೆ ನುಡಿದಂತೆ ನಡೆಯುವ, ಕೇಡ ಬಗೆಯದೆ, ಕೇಡ ನುಡಿಯದೆ ಇರುವುದು ಸರಳ ಮಾತಲ್ಲ.

ಮನ ತನುವನ್ನು ಕೇಡ ನುಡಿಯುವಂತೆ, ನಡೆಯುವಂತೆ ಪ್ರೇರಣೆ ನೀಡಿ ತನುವಿನ ತೆರೆಮರೆಯಲ್ಲಿ ಅವಿತುಕೊಳ್ಳುತ್ತದೆ. ನುಡಿಯಲು, ನಡೆಯಲು ಕಾರಣ ವಾದ ತನು ದೂಷಣೆಗೆ ಒಳಗಾಗುತ್ತದೆ. ಅರಿವಿನ ಸಂಗಯ್ಯನನ್ನು (ಕೆಡೆನುಡಿಯುವ) ಮನ ನಂಬಿದರೆ ಬೇಡಿದುದನು ನೀಡಿ ಹರಸುತ್ತಾನೆ.

ಮನ ಅರಿವಿನ ಮೇಲೆ ಭಕ್ತಿ ಮಾಡುವುದೆ ಸಾಕ್ಷಿ. ತನ್ನ ಅಹಂಕಾರ ತನಗೆ ನಷ್ಟವಾದುದೇ ಸಾಕ್ಷಿ. ಅರಿವಿನ ಮೇಲೆ ಭಕ್ತಿ ಮಾಡಿ ಅಜ್ಞಾನ ನಷ್ಟವಾದುದೇ ಸಾಕ್ಷಿ. ಆಗ ತನುವಿನಲ್ಲಿ ಉಳಿದದ್ದು ಕೆಡೆ ನಡೆಯದ, ಕೆಡೆ ನುಡಿಯದ, ಅನ್ಯರ ಪ್ರತಿಪಾದಿಸದ ಲಿಂಗವೆಂಬ ಅರಿವು ಮಾತ್ರ ಉಳಿಯುತ್ತದೆ. ತನು ಥಳ ಥಳ ಹೊಳೆಯುವ ಅರಿವಿನ ಸೂರ್ಯನಾಗಿ ಬೆಳಗುತ್ತದೆ. ಸದಾ ಬೇಡುವ ಮನವನ್ನು ತನ್ನೊಳಗೆ ಮಾಡಿಕೊಂಡು ಬೆಳಗುತ್ತದೆ. ನೋಡುವ ವಸ್ತುವನ್ನು ಬೆಳಗುತ್ತದೆ; ರುಚಿಸುವ ಆಹಾರ ವನ್ನು ಬೆಳಗುತ್ತದೆ; ವಾಸಿಸುವ ಪರಿಮಳವನ್ನು; ಸ್ಪರ್ಶಿಸುವ ಪದಾರ್ಥವನ್ನು ಬೆಳಗುತ್ತದೆ. ಕೇಳುವ ಶಬ್ದವನ್ನು ಬೆಳಗುತ್ತದೆ. ಇವು ಬೆಳಗುವ ತನುವಿಗೆ ಪ್ರಸಾದವಾಗಿ ತನು ಅರಿವಿನಿಂದ ನಳ ನಳಿಸುತ್ತದೆ.

ನಂಬುಗೆಯುಳ್ಳ ಶಿವಭಕ್ತನ ತನು ಅರಿವಿನ ಶಿವ ತನುವಾಗುತ್ತದೆ. ಬುದ್ಧ, ಮಹಾವೀರ, ದಾಸವರೇಣ್ಯ ಶಿವಶರಣ ಮಹಾಜ್ಞಾನಿಯ ತನುವಾಗುತ್ತದೆ. ನಂಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ ; ಇದೇ ಸಾಕ್ಷಿ.

237

ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದುಪಥವೆಂದಡೆ
ದಿಟವ ನುಡಿವುದು ನುಡಿದಂತೆ ನಡೆವುದು,
ನುಡಿದು ಹುಸಿವ ನಡೆದು ತಪ್ಪುವ
ಪ್ರಪಂಚಿಯ ನೊಲ್ಲ ಕೂಡಲಸಂಗಮದೇವ.

ಸ್ವಾಮಿ – ಸೇವಕ ಇವರಿಬ್ಬರ ಸಂಬಂಧಗಳು ಬೇರೆ ಬೇರೆ. ಸ್ವಾಮಿಯ ಪಥವೇ ಬೇರೆ; ಸೇವಕನ ಪಥವೇ ಬೇರೆ. ಸ್ವಾಮಿ ಹೇಳಿದಂತೆ ಕೇಳುವುದು ಸದಾ ಆತನ ಸೇವೆ ಮಾಡುವುದು ಸೇವಕನ ಕರ್ತವ್ಯ. ಇವರಿಬ್ಬರು ವ್ಯಕ್ತಿಗಳಾದರೂ ಒಬ್ಬರನ್ನು ಮತ್ತೊಬ್ಬರು ಹೋಲುವಂತಿದ್ದರೂ ಉಡುಗೆ ತೊಡುಗೆಗಳು ಬೇರೆ ಬೇರೆ. ನೋಡಿದರೆ ಒಬ್ಬ ಸ್ವಾಮಿಯಾಗಿ ಕಾಣುತ್ತಾನೆ, ಮತ್ತೊಬ್ಬ ಸೇವಕನಾಗಿ ಕಾಣುತ್ತಾನೆ. ಆದರೆ ಸ್ವಾಮಿಗೆ ಸ್ವಾಮಿಯ ಪರಿಚಯವಿಲ್ಲ ; ಸೇವಕನಿಗೆ ಸೇವಕನ ಪರಿಚಯ ವಿಲ್ಲ.

ಸ್ವಾಮಿ ಮತ್ತು ಸೇವಕ ಸಂಬಂಧ ಎರಡು ತನುಗಳಿಗೆ ಸಂಬಂಧಿಸಿದ್ದಲ್ಲ. ಒಂದೇ ತನುವಿಗೆ ಸಂಬಂಧಿಸಿದ್ದು. ತನುವಿನಲ್ಲಿ ಸ್ವಾಮಿಯೆಂಬ ಗುರು ಇದ್ದಾನೆ; ಮನವೆಂಬ ಸೇವಕನೂ ಇದ್ದಾನೆ. ಮನ ತನುವಿನಲ್ಲಿ ಸಂಸಾರ ಹೂಡಿ ನುಡಿಯುತ್ತದೆ ; ನುಡಿದಂತೆ ನಡೆಯುವುದಿಲ್ಲ. ಮನಕ್ಕೆ ನುಡಿಯುವಾಗ ಆನಂದ ; ನುಡಿದಂತೆ ನಡೆಯದಿರುವಾಗಲೂ ಆನಂದ. ನುಡಿದು

ಹುಸಿಯುತ್ತದೆ ; ನಡೆದು ತಪ್ಪುತ್ತದೆ. ನುಡಿದಾಗ ತನು ಪುಳಕಿತಗೊಳ್ಳುತ್ತದೆ ; ನಡೆಯದಿದ್ದಾಗ ತನುವಿಗೆ ನೋವಾಗುತ್ತದೆ. ಮನ ಅರಿವಿನ ಹಾದಿ ತಿಳಿಯದೆ ತನುವಿನ ಮನೆಯಲ್ಲಿ ಮನೆ ಮಾಡಿ ಸುಳ್ಳಿನ ಸಂಸಾರ ಹೂಡಿ ಪ್ರಪಂಚ ಸಾಗಿಸುತ್ತಿದೆ.

ಮನಕ್ಕೆ ನುಡಿಯುವ, ನುಡಿದಂತೆ ನಡೆಯುವ ಅರಿವಿನ ದಾರಿ ಗೊತ್ತಿಲ್ಲ. ಅದಕ್ಕಾಗಿ ಮನ ವೇಷ ಹಾಕಿಕೊಂಡು ಸ್ವಾಮಿಯ ಸಂಬಂಧ ಬೆಳೆಸುತ್ತದೆ. ಸ್ವಾಮಿಯಾಗುತ್ತದೆ. ಸೇವಕನ ವೇಷ ಹಾಕಿಕೊಂಡು ಸ್ವಾಮಿಯ ತನುವಿಗೆ ಪೂಜೆ ಮಾಡುತ್ತದೆ. ಸ್ವಾಮಿಯದು ತನು, ಸೇವಕನದೂ ತನು ಎಂದು ಎರಡೂ ತನುಗಳಿಗೆ ತಿಳಿಯುವುದಿಲ್ಲ. ನುಡಿದು ಹುಸಿಯುತ್ತದೆ; ನಡೆದು ತಪ್ಪುತ್ತದೆ. ಮನ ಎರಡೂ ತನುಗಳಲ್ಲಿ ಸ್ವಾಮಿ ಮತ್ತು ಸೇವಕನ ಪಾತ್ರದಲ್ಲಿದ್ದು ದಿಟದ ಹಾದಿಯನ್ನು ಮರೆತು ಸಂಸಾರ ಹೂಡಿದೆ.

ದಿಟವೆಂಬ ಅರಿವು ತನುವಿನಲ್ಲಿದೆ ; ಮನವೆಂಬ ಸುಳ್ಳು ತನುವನ್ನು ಆವರಿಸಿದೆ. ಮನಕ್ಕೆ ದಿಟದ ಪಥ ತಿಳಿಯದೆ ಕಾವಿ ವಸ್ತ್ರ ಧರಿಸಿ ಸ್ವಾಮಿಯಾಗಿದೆ ; ಆ ತನುವನ್ನು ಪೂಜಿಸಿ ಸೇವಕನಾಗಿದೆ. ದಿಟ ತನುವಿನಲ್ಲಿದ್ದರೂ ಆ ದಿಟದ ತನುವಿನೊಂದಿಗೆ ಮನ ಕಾಶಿ – ಹಿಮಾಲಯಕ್ಕೆ ಪ್ರಯಾಣ ಮಾಡುತ್ತದೆ.

ನುಡಿದು ಹುಸಿಯುವ, ನಡೆದು ತಪ್ಪುವ ಪ್ರಪಂಚಿಯನೊಲ್ಲ :

ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನು, ತನುವನ್ನು ಆವರಿಸಿದ ಮನವೆಂಬ ಸ್ವಾಮಿಯನೂ ಒಲ್ಲ ; ಸೇವಕನನ್ನೂ ಒಲ್ಲ !

238

ಸತ್ಯವುಳ್ಳ ಭಂಡವ ತುಂಬುವುದಯ್ಯಾ ,
ಸುಯಿಧಾನವಯ್ಯಾ, ಸುಯಿಧಾನವಯ್ಯಾ !
ಮನ ಧಾರೆವಟ್ಟಲು–
ಕೂಡಲ ಸಂಗನ ಶರಣರು ಹಿಡಿಯದ ಭಂಡವನು
ಆರಾದಡಾಗಲಿ ಹೋಗಲೀಯರಯ್ಯಾ!

ತನು ಸತ್ಯ ತುಂಬಿದ ಭಂಡಾರ. ಅಮೃತದ ಸಾಗರ. ಕಣ್ಣಿನಲ್ಲಿ ಕಿವಿಯಲ್ಲಿ ಚರ್ಮ ಮತ್ತು ನಾಲಿಗೆಯಲ್ಲಿ ಮೂಗಿನಲ್ಲಿ ಸತ್ಯವೇ ತುಂಬಿದೆ. ಸತ್ಯದ ಸುಧೆ ಧಾರಾಕಾರವಾಗಿ ಹರಿಯುತ್ತಿದೆ; ಮನ ಅದರ ಧಾರೆ ಬಟ್ಟಲು.

ಕಣ್ಣಿನಲ್ಲಿರುವ ಸುಧೆಯನ್ನು ಮನ ಬಗೆದು ನೋಡುವ ಮೂಲಕ ಸವಿದಂತೆಲ್ಲ ಧಾರಾಕಾರವಾಗಿ ಹರಿಯುವುದು. ಆದರೆ ಎಚ್ಚರದಿಂದ ನೋಡಬೇಕು. ಮನ ತನುವಿನ ಕಣ್ಣಿನಲ್ಲಿರುವ ಸುಧೆ ಪಾನ ಮಾಡಿ ನೋಡಬೇಕು. ನೋಡಿದ ನೋಟ ತನುವಿನಲ್ಲಿ ಪ್ರಸಾದವಾಗುವುದು. ಅಮೃತಮಯವಾದ ನೋಟ; ಅಮೃತಮಯವಾದ ತನು; ನೋಟದ ಬೆಳಕಿಗೆ ವಸ್ತು ತುತ್ತಾಗಿ ಬೆಳಕಿಂಗೆ ಬೆಳಕಾಗುವುದು. ಆ ಬೆಳಕಿಗೆ ಬೇಕು ಬೇಡಗಳಿಲ್ಲ.

ಸೂರ್ಯನ ಬೆಳಕು ಹೂವಿನ ಮೇಲೆ ಚೆಲ್ಲಿ ಅದನ್ನು ಬೇಕೆಂದು ಪಡೆಯುವುದಿಲ್ಲ. ತನುವಿನ ಮೇಲೆ ಬೆಳಕು ಬೀರಿ ಅಪ್ಪಿಕೊಂಡು ತನ್ನದಾಗಿಸಿಕೊಳ್ಳುವುದಿಲ್ಲ. ಹಾಗೆಯೇ ತನುವಿನ ನೋಟ ಕೂಡ ಹೂವನ್ನು ಬೆಳಗಿ ಆ ಹೂವೇ ಕಣ್ಣಾಯಿತು. ಅದರ ಪರಿಮಳ ಮೂಗಿನಲ್ಲಿ

ಅರಳಿ ಹಿರಿಹಿರಿ ಹಿಗ್ಗಿತು. ಅದರ ಕಾಂಡ, ಎಲೆ ಬೇರು, ತನುವಿನಲ್ಲಿ ಮೂಡಿ ಪ್ರಸಾದವಾಯಿತು. ಸತ್ಯದ ಭಂಡಾರದಲ್ಲಿ ಬೆರೆತು ಆ ಸತ್ಯವೇ ತಾನಾಯಿತು. ಹೂವಿನ ಸೃಷ್ಟಿ ಭೂಮಿಯ ಮೇಲಾದರೂ ತನುವಿನ ಸತ್ಯದಲ್ಲಿ ಮತ್ತೆ ಸೃಷ್ಟಿಯಾಗಿ ಮರುಸೃಷ್ಟಿ ಪಡೆಯಿತು.

ಸೂರ್ಯನ ಬೆಳಕು ಹೂವಿನ ಮೇಲೆ ಬಿದ್ದರೂ ಈ ಸುಧೆಯ ಆನಂದ ಅದರ ಪರಿಮಳ, ಸೌಂದರ್ಯ ಸೂರ್ಯನಿಗಾಗುವುದಿಲ್ಲ. ಅದಕ್ಕಾಗಿಯೇ ತನು ''ಕೋಟಿ ಸೂರ್ಯಂ ಸಮಪ್ರಭಾ'' ಕೋಟಿ ಸೂರ್ಯರಿಗೆ ಒಂದು ತನು ಸಮಾನವಾದುದು. ಆದರೆ ಮನ ಎಚ್ಚರದಿಂದ ತಿಳಿಯಬೇಕು.

ಮಹಾಜ್ಞಾನಿಗಳಾದ ಶರಣರು ಹೇಳುವ ಮಾತು ಆಲಿಸದ ತನು ಜಗದ್ಗುರುವಿನದಾದರೇನು? ಪೀಠದ ಒಡೆಯನದಾದರೇನು? ಶಾಸಕ, ಸಚಿವ, ಮಂತ್ರಿ, ಪ್ರಧಾನಿಯದಾದರೇನು? ಅಧಿಕಾರಿ, ಶ್ರೀಮಂತನ ದಾದರೇನು? ಯಾರದಾದರೇನು? ಮನ ತನುವಿನ ಸುಧೆಯನು ಧಾರೆಯ ಬಟ್ಟಲಾಗಿ ತಾನೇ ಸವಿಯಲೀಯದು.

ಪ್ರತಿ ತನುವಿನಲ್ಲಿ ಸತ್ಯವುಳ್ಳ ಸುಧೆಯ ಭಂಡಾರವೇ ಅಡಗಿದೆ. ಆದರೆ ಎಚ್ಚರದಿಂದ ಮನ ಶರಣರ ಮಾತು ಕೇಳಲೊಲ್ಲದು. ತನ್ನ ತನುವಿನ ಭಂಡಾರದ ಸುಧೆಯನು ತಾನೇ ಸವಿಯಲೊಲ್ಲದು. ತನ್ನ ತನುವಿನಾಳಕ್ಕೆ ತಾನೇ ಪಯಣಿಸುವ ಸೂತ್ರವನು ಶರಣರಿಂದ ತಿಳಿಯಲೊಲ್ಲದು. ಇಂತಹ ತನು ಯಾರದಾದರೇನು. ಸುಧೆಯ ಭಂಡಾರವನು ತಲುಪಲಾಗದು. ತಾಯಿ ಗರ್ಭದಲ್ಲಿದ್ದ ಶಿಶು ತಾಯಿಯನು ತಿಳಿಯದಂತೆ, ಆ ತಾಯಿ ಶಿಶುವನು ತಿಳಿಯದಂತೆ, ವಸ್ತುವಿನ ಮೋಹದಲ್ಲಿದ್ದ ಮನ ತನುವಿನಲ್ಲಿ ತನ್ಮಯವಾದ ಅರಿವಿನ ಅಮೃತವನು ಅರಿಯದು.

239

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ!
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ.
ಆಚಾರವೇ ಸ್ವರ್ಗ, ಅನಾಚಾರವೇ ನರಕ –
ಕೂಡಲಸಂಗಮದೇವಾ, ನೀವೇ ಪ್ರಮಾಣು.

ತನು ದೇವಲೋಕವೂ ಹೌದು, ಮರ್ತ್ಯ ಲೋಕವೂ ಹೌದು. ಮನ ತನಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅದಕ್ಕೆ ಮರ್ತ್ಯಲೋಕದ ಇಚ್ಚೆಯಾದರೆ ಹೊಲ, ಮನೆ, ಮಠ, ಆಭರಣ, ಮಂದಿರ, ಹೆಂಡತಿ, ಮಕ್ಕಳು, ಆಡಳಿತ ಅಧಿಕಾರವನ್ನು ತನುವಿನ ಮೂಲಕ ಪಡೆದು ಆಚಾರದಿಂದ ಅಥವಾ ಅನಾಚಾರದಿಂದ ತನುವಿನ ಮೂಲಕ ಸುಟ್ಟುಕೊಳ್ಳುತ್ತದೆ. ಮನದ ಸುಖಕ್ಕಾಗಿ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ತನುವಿನ ಅರಿವಿನಿಂದ ಸೃಷ್ಟಿಯಾದ ಚಿನ್ನ, ಕರೆನ್ಸಿ, ಖನಿಜ ಪದಾರ್ಥಗಳಿಗಾಗಿ ಕಳುವು ದರೋಡೆ ಹತ್ಯೆ ಮಾಡಿ ತನುವಿಗೆ ಕಳ್ಳ, ಕೊಲೆಗಡುಕ, ಅತ್ಯಾಚಾರಿ, ವೇಶ್ಯೆ, ವಿಟನ ಪಟ್ಟ ಕಟ್ಟಿ ಮರ್ತ್ಯಲೋಕದ ರಕ್ಕಸನನ್ನಾಗಿ ಮಾಡುತ್ತದೆ. ಇಲ್ಲ ಆಗರ್ಭ ಶ್ರೀಮಂತನನ್ನಾಗಿ ಮಾಡುತ್ತದೆ.

ಮಿಥ್ಯ ನುಡಿದು ಕ್ಷಣಿಕ ಸುಖ ಅನುಭವಿಸುವ ಮನ ರಕ್ಕಸ ತನುವೆಂದು ಹೆಸರು ಪಡೆಯುತ್ತದೆ. ಕಾಮ, ಕ್ರೋದ, ಲೋಭ, ಮೋಹ, ಮದ, ಮತ್ಸರಗಳು ತನುವಿನಲ್ಲಿ

ವಾಸಮಾಡುತ್ತವೆ. ವಸ್ತುಗಳ ಮೇಲಿನ ಪ್ರೀತಿಯಿಂದಾಗಿ ತನುವಿನ ಸತ್ಯ ತನುವಿನ ಕಣಕಣದಲ್ಲಿಯೇ ಮರೆಯಾಗುತ್ತದೆ. ಮನಕ್ಕೆ ತನುವಿನಲ್ಲಿರುವ ಸತ್ಯ ಬಳಕೆ ಮಾಡುವ ಇಚ್ಛೆಯಾಗುವುದಿಲ್ಲ.

ಮನಕ್ಕೆ ಸತ್ಯ ಬಳಕೆ ಮಾಡುವ ಇಚ್ಛೆಯಾದರೆ ತನು ದೇವಲೋಕವಾಗುತ್ತದೆ. ಮನ ತನುವಿನಲ್ಲಿರುವ ಸತ್ಯ (ಅರಿ) ವನ್ನು ಬಳಕೆ ಮಾಡಿ ಚಿನ್ನ ನೋಡಿದರೆ ಅದು ಹಳದಿ ಬಣ್ಣದ ಲೋಹವಾಗಿ ಕಾಣುತ್ತದೆ. ಚಿನ್ನಕ್ಕಾಗಿ ಹಗಲಿರುಳು ದುಡಿಯುವುದಿಲ್ಲ. ಲಂಚ, ಭ್ರಷ್ಟಾಚಾರ ಮಾಡುವುದಿಲ್ಲ, ಕಳವು ಕೊಲೆ ದರೋಡೆಯಲ್ಲಿ ಪಾಲ್ಗೊಳ್ಳುವುದಿಲ್ಲ, ಖನಿಜ ಪದಾರ್ಥಗಳಿಗೆ ಜನ್ಮ ನೀಡಿದ್ದು ಭೂಮಿ. ಅದನ್ನು ಅರಿವಿನಿಂದ ಬಳಕೆ ಮಾಡಿದ್ದು ತನು. ಹೀಗಾಗಿ ಅವುಗಳಿಗೆ ತನು ಮಾರು ಹೋಗುವುದಿಲ್ಲ.

ಸಂತಾನ ಬೇಕಾದರೆ ಮಾತ್ರ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟುತ್ತದೆ. ಮಗು ಪಡೆಯುವುದಕ್ಕಾಗಿ ತನು ತನುವಿನೊಂದಿಗೆ ಬೆರೆಯುತ್ತದೆ. ಈ ಮಹತ್ಕಾರ್ಯ ಮುಗಿದ ಮೇಲೆ ತನು ತನುವಿನೊಂದಿಗೆ ಸುಖಿಸುವುದು ವ್ಯರ್ಥ. ಮನ ತನ್ನ ರುಚಿಗಾಗಿ ತನುವನ್ನು ಕಾಮಕೇಳಿಯಲ್ಲಿ ತೊಡಗಿಸಿ ಅತ್ಯಾಚಾರಿಯ ಪಟ್ಟ ಕಟ್ಟುತ್ತದೆ. ಮನ ಕಾಮದ ರೂಪದಲ್ಲಿ ತನುವನ್ನು ಆವರಿಸಿದಾಗ ಅದು ಸಂಬಂಧವನ್ನು ಲೆಕ್ಕಿಸುವುದಿಲ್ಲ. ಮನ ತಾಯಿ, ಮಗಳು, ಅಕ್ಕ, ತಂಗಿ, ಮುದುಕಿ, ಮಗುವನ್ನು ಸಹ ಬಿಡುವುದಿಲ್ಲ. ಅಣ್ಣ, ತಮ್ಮ, ತಂದೆ, ಮಾವ, ಸಂಬಂಧವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮನದ ಬಯಕೆ ತನುವಿನೊಂದಿಗೆ ಈಡೇರಿಸಿಕೊಂಡು ತನುವಿಗೆ ರಕ್ಕಸನ ಪಟ್ಟ ಕಟ್ಟುತ್ತದೆ. ಮನಕ್ಕೆ ಅರಿವಾದರೆ ತನುವಿನ ಅರಿವನ್ನು ಬಳಕೆ ಮಾಡಿಕೊಂಡು ತನುವನ್ನು ನೋಡುತ್ತದೆ. ತನುವಿನಲ್ಲಿ ಹುಟ್ಟಿದ ಕಾಮದ ದ್ರವ್ಯ ತನುವಿನಿಂದಲೇ ಹೊರಚೆಲ್ಲಿ ; ತನುವಿಗೆ ಅನ್ಯ ತನುವಿನಿಂದ ಸುಖವಾಯಿತೆಂಬ ಸುಳ್ಳು ಮನಕ್ಕೆ ವೇದ್ಯವಾಗುತ್ತದೆ. ಆಗ ಮನದಲ್ಲಿ ಹುಟ್ಟಿದ ಕಾಮ ಅರಿವಿನಲ್ಲಿ ಮರೆಯಾಗುತ್ತದೆ. ತನುವಿನಲ್ಲಿಯ ಸತ್ಯ ಬಳಕೆ ಮಾಡಿಕೊಂಡ ಮನಕ್ಕೆ ತನು ದೇವಲೋಕವಾಗಿ, ಸ್ವರ್ಗವಾಗಿ ಕಾಣುತ್ತದೆ.

ಮನಕ್ಕೆ ತಾನು ವಾಸ ಮಾಡಿದ ತನು ದೇವಲೋಕ, ಅನ್ಯ ತನುಗಳೂ ದೇವಲೋಕವಾಗಿ ಕಾಣುತ್ತವೆ.

ಕಲ್ಲು ಕಟೆದ ಮಾತ್ರಕ್ಕೆ ಅದು ದೇವರಲ್ಲ ! ಮನದ ಭ್ರಮೆಯಿಂದ ದೇವರಾಯಿತು. ಮನದ ಭ್ರಮೆಯಿಂದಲೇ ಲೋಹ ಚಿನ್ನವಾಯಿತು. ಕಾಗದ ಕರೆನ್ಸಿಯಾಯಿತು. ಭ್ರಮೆ ಕಳಚಿದ ಮನ ಘನಮನವಾಯಿತು, ಬ್ರಹ್ಮನಾಯಿತು. ಈ ಘನ ಮನಕ್ಕೆ ತನು ದೇವಲೋಕವಾಯಿತು, ಸ್ವರ್ಗಲೋಕವಾಯಿತು.

ಕಾಮ, ಕ್ರೋದ, ಲೋಭ, ಮೋಹ, ಮದ, ಮತ್ಸರಗಳಿಗೆ ಬಲಿಯಾದ ಮನ ತನುವಿನ ಅರಿವಿನಲ್ಲಿ ಸುಟ್ಟು ಭಸ್ಮವಾಯಿತು. ಆ ಭಸ್ಮ ಧರಿಸಿದ ತನು ಬುದ್ಧ,ಮಹಾವೀರ, ಕ್ರಿಸ್ತ, ಕ್ರಿಷ್ಣನಾಯಿತು, ದಾಸನಾಯಿತು, ಬಸವಣ್ಣನಾಗಿ ಮರ್ತ್ಯಲೋಕವನ್ನೆ ದೇವಲೋಕವನ್ನಾಗಿ ಮಾಡಿತು. ಅರಿತರೆ ದೇವಲೋಕ, ಮರೆತರೆ ಮರ್ತ್ಯಲೋಕ. ತನುವಿನ ಅರಿವೆಂಬ ದೇವಲೋಕ ಬಳಕೆ ಮಾಡಿದ ಮನಕ್ಕೆ ಮರ್ತ್ಯಲೋಕವೆಲ್ಲ ದೇವಲೋಕವೆ !

240

ಪುಣ್ಯ ಪಾಪವೆಂಬುದು ತಮ್ಮ ಇಷ್ಟವು ಕಂಡಿರೆ !

ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ !
ದೇವಾ, ಭಕ್ತ ಜಯಾ ಜೀಯಾ, ಎಂಬ ನುಡಿಯೊಳಗೆ
ಕೈಲಾಸಮೈದುವುದೇ ಕೂಡಲಸಂಗಮದೇವಾ.

ಪುಣ್ಯ ಪಾಪ ಎಂಬುದು ಮನದ ಇಷ್ಟ; ತನುವಿನ ಸಹಜ ಗುಣವಲ್ಲ. ಮನದಲ್ಲಿ ವಂಚನೆ ಇಟ್ಟುಕೊಂಡು ಅಯ್ಯಾ ಎಂದು ನುಡಿದರೆ ಕೇಳಿದ ತನುವಿಗೆ ಸ್ವರ್ಗ ಆನಂದ ಉಂಟಾಗುತ್ತದೆ. ನುಡಿದ ತನುವಿಗೆ ನರಕ !

ಮನದಲ್ಲಿ ವಂಚನೆ ಇಟ್ಟುಕೊಂಡು ಎಲವೂ ಎಂದು ನುಡಿದರೆ ನುಡಿದ ತನುವಿಗೆ, ನರಕ ಕೇಳಿದ ತನುವಿಗೆ ನರಕ ! ಎರಡೂ ತನುಗಳು ಶಬ್ದ ತಿಳಿಯಲಿಲ್ಲ. ಸಂಗ್ರಹವಾದ ಶಬ್ದಗಳು ಬಳಕೆಯಾದವು. ಬಳಕೆಯಾದ ಶಬ್ದಗಳು ತನುವಿನಲ್ಲಿ ಅನಾವರಣಗೊಳ್ಳಲಿಲ್ಲ. ಅರಿವಿನಿಂದ ಶಬ್ದ ಬಳಕೆಯಾಗಲಿಲ್ಲ ! ಅರಿವಿನಿಂದ ನುಡಿಯಲಿಲ್ಲ ! ಅರಿವಿನಿಂದ ಕೇಳಲಿಲ್ಲ.

ಶಬ್ದದಲ್ಲಿ ಅರಿವಿದೆ. ಬರೆದರೆ ನಪುಂಸಕವಾಗುತ್ತದೆ. ಓದಿದರೆ ಅರಿವಾಗುತ್ತದೆ. ಹಚ್ಚಿಕೊಂಡರೆ ಸುಖ ಇಲ್ಲ ದುಃಖವಾಗುತ್ತದೆ. ಕೈಕೇಯಿ ತನ್ನ ಸುಖಕ್ಕಾಗಿ ಶ್ರೀರಾಮನಿಗೆ ನುಡಿದ ಶಬ್ದ ಜೀವನ ಪರ್ಯಂತ ತನಗೆ ದು:ಖವಾಯಿತು. ಶ್ರೀರಾಮ ಶಬ್ದವನ್ನು ಅರಿವಿನಿಂದ ಕೇಳಿದ! ಶಬ್ದದಲ್ಲಿ ಲೋಕದ ವಾರ್ತೆ ಅಡಗಿತ್ತು. ಅದನ್ನು ಪಾಲಿಸಿ ಮರ್ಯಾದಾಪುರುಷ ಶ್ರೀರಾಮ ಎಂದು ಬಿರುದು ಪಡೆದ. ತಂದೆ ತಾಯಿಯ ಮಾತು ಪಾಲನೆ ಮಾಡಿದರೆ ಪುಣ್ಯ; ಪಾಲಿಸದಿದ್ದರೆ ಪಾಪ. ಇದು ಸದಾ ಸಿದ್ದವಾದ ಲೋಕದ ವಾರ್ತೆ. ಇದನ್ನು ತಿಳಿದು ಅರಿವಿನಿಂದ ಶಬ್ದ ಕೇಳಬೇಕು ಎಂದು ಅನ್ನಿಸುವುದೇ ಇಲ್ಲ. ಪುಣ್ಯ ಪಾಪ ಎನ್ನುವುದು ಲೋಕದಲ್ಲಿ , ಅದನ್ನು ಕೇಳುವ ಮನದಲ್ಲಿ ಅಚ್ಚೊತ್ತಿರುತ್ತದೆ. ತನು ಮನದ ಮಾತಿಗೆ ಒಳಗಾಗಿ ಪುಣ್ಯ ಪಾಪಗಳನ್ನು ನಿರ್ಮಿಸಿಕೊಂಡಿದೆ. ಆ ಮನಕ್ಕೆ ತನು ತುತ್ತಾಗಿದೆ. ಮನ ತನುವಿನ ಸಾಮ್ರಾಜ್ಯಕ್ಕೆ ಸರ್ವಾಕಾರಿಯಾಗಿದೆ.

ದೇವಾ ಭಕ್ತ ಜಯಾ ಜೀಯಾ ಎಂಬ ನುಡಿಯೊಳಗೆ ಕೈಲಾಸ ಮೈದುವುದೇ ಕೂಡಲಸಂಗಮದೇವಾ! :

ಸುಂದರವಾದ ಮಾತುಗಳನ್ನು ಆಡುವುದರಿಂದ, ಕೇಳುವುದರಿಂದ ಪುಣ್ಯದ ಕೈಲಾಸ ದಕ್ಕುವುದೆಂದಾದರೆ ಎಲ್ಲರೂ ಹಾಗೆಯೇ ನುಡಿಯುತ್ತಿದ್ದರು. ಇದು ಸಾಧ್ಯವಾಗುವುದಿಲ್ಲ. ಮಾತಿನಲ್ಲಿ ಪುಣ್ಯದ ಮಾತು, ಪಾಪದ ಮಾತು ಎನ್ನುವುದು ಇಲ್ಲ. ಮಾತಿನಲ್ಲಿ ಸ್ವರ್ಗ ನರಕಗಳೆರಡೂ ಇಲ್ಲ. ಮನಕ್ಕೆ ತಿಳಿಯದ ನಿಮಿತ್ತ ಮಾತನ್ನೇ ಸ್ವರ್ಗ ನರಕವೆಂದು ಬೇರ್ಪಡಿಸಿದೆ.

ತನುವಿಗೆ ಅರಿವು ಬಳಕೆಯಾದರೆ ಪ್ರತಿ ಮಾತಿನಲ್ಲಿ ಪ್ರತಿ ಶಬ್ದದಲ್ಲಿ ಅರಿವು ತುಂಬಿದೆ. ಅರಿವಿಲ್ಲದ ಶಬ್ದವೇ ಇಲ್ಲ. ಅದು ಬ್ರಹ್ಮ! ತನುವಿಗೆ ಬಡಿದ ಶಬ್ದವನ್ನು ನಿಶಬ್ದ ಮಾಡಿ ಕೇಳಿದರೆ ಅದು ಅರಿವಾಗುತ್ತದೆ. ನಿಃಶಬ್ದಂ ಬ್ರಹ್ಮಮುಚ್ಚತೆ ಕೇಳಿದಾತ ಬ್ರಹ್ಮನಾಗುತ್ತಾನೆ. ಭ್ರಮೆಯಿಂದ ನುಡಿದಾತ ನಾಚಿ ನೀರಾಗುತ್ತಾನೆ. ಉತ್ತಮ ನುಡಿಗಳಿಂದ ಕೈಲಾಸ ದಕ್ಕುವುದಿಲ್ಲ. ಶಬ್ದದಲ್ಲಿ ಅರಿವಿದೆ. ಕೇಳಿ ನಪುಂಸಕಗೊಳಿಸಿ ತನುವಿನಲ್ಲಿ ಶಬ್ದ ಜೀರ್ಣವಾದರೆ ಆ ತನುವೇ ಸ್ವರ್ಗದ ತನು. ಆ ತನುವಿನಲ್ಲಿ ಸ್ವರ್ಗವಿದೆ. ಅಯ್ಯಾ ಎಲವೋ ಎನ್ನುವ ಎರಡು ಶಬ್ದಗಳನ್ನು ಆನಂದದಿಂದ ಕೇಳಿ ದೇವಾ, ಭಕ್ತ, ಜಯಾ, ಜೀಯಾ ಎಂದು ಮರು ನುಡಿಯುತ್ತದೆ. ತನುವಿನಲ್ಲಿರುವ ಕೈಲಾಸ ತನುವಿಗೆ ಸಿದ್ಧಿಯಾಗುತ್ತದೆ.

0241

ಏನಿ ಬಂದಿರಿ, ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿ ಹೋಹುದೆ?
ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ?
ಕೊಡಲಿಲ್ಲ ದಿದ್ದಡೊಂದು ಗುಣವಿಲ್ಲದಿದ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ
ಕೂಡಲಸಂಗಮದೇವರು.

ಆತ್ಮೀಯವಾಗಿ ಮಾತನಾಡದ ಸಹನೆಯಿಲ್ಲದ ಮನಕ್ಕೆ ಬಸವಣ್ಣನವರು ಮೂಗು ಕೊಯ್ಯುವ ಶಿಕ್ಷೆಯನ್ನು ಘೋಷಣೆ ಮಾಡಿದ್ದಾರೆ.

ಯಾವಾಗ ಬಂದ್ರಿ, ಆರೋಗ್ಯವೆ? ದಯವಿಟ್ಟು ಕುಳಿತುಕೊಳ್ಳಿ ಎಂದು ಆತ್ಮೀಯವಾಗಿ ವಿಚಾರಿಸಿದರೆ ತನುವಿನ ಸಂಪತ್ತು ಹಾಳಾಗುವುದೆ? ಶಿರ ಹೊಟ್ಟೆ ಹೊಡೆದು ಹೋಗುವುದೆ? ಕುಳಿತುಕೊಳ್ಳಿ ಎಂದರೆ ನಿಮ್ಮ ನೆಲ ಕುಳಿಬೀಳುವುದೆ?

ಒಂದು ತಂಬಿಗೆ ನೀರು ಕೊಡದಿದ್ದರೂ ಅಡ್ಡಿಯಿಲ್ಲ, ಸದ್ಗುಣದಿಂದ ಮಾತನಾಡದಿದ್ದರೆ ಘೋರ ಶಿಕ್ಷೆಯುಂಟು. ಈ ಶಿಕ್ಷೆಯನ್ನು ಯಾರು ಕೊಡುತ್ತಾರೆ? ಅಪಮಾನಕ್ಕೆ ಈಡಾದವರು ಕೊಡುವುದಿಲ್ಲ, ಮನೆಯಲ್ಲಿದ್ದವರೂ ಕೊಡುವುದಿಲ್ಲ, ಮರ್ತ್ಯಲೋಕದವರು, ಸ್ವರ್ಗಲೋಕದವರು ಕೊಡುವುದಿಲ್ಲ, ಪೂಜೆಗೆ ಒಳಪಡುವ ದೇವರು ಕೊಡುವುದಿಲ್ಲ, ಬೋಧೆ ಮಾಡಿದ ಶ್ರೀಗುರುವೂ ಕೊಡುವುದಿಲ್ಲ.

ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವರು:

ಕೂಡಲಸಂಗಮ ದೇವರು ಕೆಡಹಿ ಮೂಗು ಕೊಯ್ಯುವ ಶಿಕ್ಷೆ ನೀಡುತ್ತಾನೆ. ತನು ಅರಿವಿನ ಸಂಪತ್ತು. ಅದು ತನುವಿನಲ್ಲಿ ಕೂಡಿಕೊಂಡು ಸಂಗಮವಾಗಿದೆ. ಈತನನ್ನು ಸಂಗಮನಾಥ ಎಂದು ಕರೆದಿದ್ದಾರೆ ಬಸವಣ್ಣ. ಮನ ತನುವನ್ನು ತನ್ನ ಸ್ವಾಧೀನ ಮಾಡಿಕೊಂಡಿದೆ. ಮನೆಗೆ ಬಂದವರನ್ನು ಕುಳಿತುಕೊಳ್ಳಿ ಎನ್ನುವುದಿಲ್ಲ, ಆರೋಗ್ಯವೇ ಎಂದು ಕೇಳುವುದಿಲ್ಲ. ಬಂದ ದಾರಿಗೆ ಸುಂಕವಿಲ್ಲ ಎಂದು ಬಂದವರು ಹೊರಟು ಹೋಗುತ್ತಾರೆ. ಅವರಿಗೆ ಆದ ಅಪಮಾನವನ್ನು ಅರಿವೆಂಬ ಗುರು ದೇವನಾದ ಸಂಗಮನಾಥನು ರೆಕಾರ್ಡ ಮಾಡಿಕೊಳ್ಳುತ್ತಾನೆ. ತನು ಇರುವವರೆಗೆ ತನುವನ್ನು ಆವರಿಸಿದ ಮನವನ್ನು ತನುವನ್ನು ಕುಕ್ಕಿ ಕುಕ್ಕಿ ಹಿಂಸಿಸುತ್ತಾನೆ, ಕೆಡವಿ ಮೂಗು ಕೊಯ್ಯುತ್ತಾನೆ.

ಮನೆಗೆ ಬಂದ ಅತಿಥಿಯನ್ನು ಮಾತನಾಡಿಸದಿದ್ದಕ್ಕಾಗಿ, ಒಡನೆ ನುಡಿಯದಿದ್ದಕ್ಕಾಗಿ, ಕುಳಿತುಕೊಳ್ಳಿ ಎಂದು ಹೇಳದಿದ್ದಕ್ಕಾಗಿ ಶಿರ ಹೊಟ್ಟೆ ಒಡೆಯುವಂತಹ ಯಾತನೆಯನ್ನುಂಟು ಮಾಡುತ್ತಾನೆ. ಕೊಡದಿದ್ದರು ಅಡ್ಡಿಯಿಲ್ಲ ಗುಣವಿಲ್ಲದ್ದಕ್ಕಾಗಿ ಕೆಡಹಿ ಮೂಗು ಕೊಯ್ಯುತ್ತಾನೆ.

ಮನ ತಾನು ಮಾಡಿದ ತಪ್ಪನ್ನು ಸರಕಾರದಿಂದ, ನೆರೆಹೊರೆಯವರಿಂದ, ಮನೆಯವರಿಂದ ತಪ್ಪಿಸಿಕೊಳ್ಳಬಹುದು, ಆದರೆ ಅರಿವೆಂಬ ಕೂಡಲಸಂಗಮ ದೇವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

242

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯ ?
ನಗುವುದು ನುಡಿವುದು ಶಿವಭಕ್ತರೊಡನೆ.
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯ ?
ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ !
ಗುರಾವಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ !!
ಇಂತೆಂದುದಾಗಿ, ನಮ್ಮ ಕೂಡಲಸಂಗನ ಶರಣರೊಡನೆ
ಮನದೆರೆದು ಮಾತನಾಡುವುದಯ್ಯಾ.

ತನುವಿನಲ್ಲಿ ಅರಿವಿದೆ, ತನುವಿನಲ್ಲಿ ಮನವೆಂಬ ಮರೆವೂ ಇದೆ. ಮನದಿಂದ ಅರಿತರೆ ಅರಿವಿನ ಸಂಸಾರ! ಸುಖೀ ಸಂಸಾರ! ಹಮ್ಮು ಬಿಮ್ಮು ಬಿಗುಮಾನಗಳಿಲ್ಲದ ಸಂಸಾರ. ಅರಿವೆಂಬ ಗುರುವಿನೊಂದಿಗೆ ಮನವೆಂಬ ಶಿಷ್ಯ ಸಂಬಂಧ ಬೆಳೆಸಿದ ನಗುವಿನ ಸಂಸಾರ.

ಅರಿವೆಂಬ ಗಂಡನೊಂದಿಗೆ ಮನವೆಂಬ ಹೆಂಡತಿ ತನುವಿನಲ್ಲಿ ಹೂಡಿದ ಸುಖೀ ಸಂಸಾರ! ಸತಿಪತಿಗಳೊಂದಾಗಿ ಶಿವನಿಗೆ ಹಿತ ಉಂಟುಮಾಡಿದ ಹಮ್ಮು ಬಿಮ್ಮಿಲ್ಲದ ಸಂಸಾರ.

ಮಣ್ಣಲ್ಲಿ ಹುಟ್ಟಿದ ಹೊನ್ನಿಗಾಗಿ ನಗುವುದೆ! ಕಾಗದದಲ್ಲಿ ಹುಟ್ಟಿದ ಕರೆನ್ಸಿಗಾಗಿ ನಗುವುದೆ! ಅರಿವಿನ ಸಂಸಾರದಲ್ಲಿ ಹುಟ್ಟಿ ಮತ್ತೊಂದು ಬಯಸುವುದೇಕಯ್ಯಾ? ನಗುವುದು ನುಡಿವುದು ಶಿವಭಕ್ತರೊಂದಿಗೆ.

ತನುವಿನಲ್ಲಿ ಅರಿವೆಂಬ ಶಿವನಿದ್ದಾನೆ. ಮನವೆಂಬ ಭಕ್ತನಿದ್ದಾನೆ. ಹಮ್ಮು ಬಿಮ್ಮಾಗಿರಲೇಕಯ್ಯಾ ನಗುವುದು ನುಡಿವುದು ಶಿವಭಕ್ತರೊಡನೆ.

ತನು ಮನದಿಂದ ಹಾದರಿಗ ಕಳ್ಳ ಭ್ರಷ್ಟ ಲಂಚಕೋರನೆಂದೆನಿಸಿಕೊಂಡರೇನು? ಅದು ಶಿವನ ಸಂಪತ್ತು, ಅದು ಅರಿವೆಂಬ ಗುರುವಿನ ಸಂಪತ್ತು. ಕೂಡಲಸಂಗಯ್ಯನ ವಾಸಸ್ಥಾನ. ಆತನೊಂದಿಗೆ ಮನದೆರೆದು ಅರಿವಿನಿಂದ ಮಾತನಾಡುವುದಯ್ಯಾ. ಸಂಸಾರದಲ್ಲಿ ಹುಟ್ಟಿ ಮತ್ತೊಂದು ಬಯಸಲೇಕಯ್ಯಾ? ನಗುವುದು ನುಡಿವುದು ಶಿವಭಕ್ತರೊಡನೆ.

243

ಭಕ್ತಿಯೆಂಬ ನಿಧಾನವ ಸಾಧಿಸುವಡೆ
ಶಿವಪ್ರೇಮವೆಂಬ ಅಂಜನವ ನೆಚ್ಚಿಕೊಂಬುದು.
ಭಕ್ತನಾದವಂಗೆ ಇದೇ ಪಥವಾಗಿರಬೇಕು.
ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ.

ಭೂಮಿಯಲ್ಲಿದ್ದ ಹೇಮ ಪಡೆಯಬೇಕಾದರೆ ಅದರ ಸುಳುವಿನ ಜಾಡು ಹಿಡಿದು ಅಂಜನ ಹಾಕಿ ಭೂಮಿ ಅಗಿಯಲೇಬೇಕು. ಹಾಗೆಯೇ ತನುವಿನಲ್ಲಿ ತನ್ಮಯವಾದ ಅರಿವೆಂಬ ಶಿವನನ್ನು ತಿಳಿಯಬೇಕಾದರೆ ಮನಕ್ಕೆ ಶಿವಪ್ರೇಮದ ಬಯಕೆಯಾಗಬೇಕು. ಆ ಶಿವನನ್ನು ನೆಚ್ಚಿ ಮನ ಮಾರು ಹೋಗಬೇಕು. ಆ ಮನವೇ ಅರಿವೆಂಬ ಶಿವನ ಮೇಲೆ ಭಕ್ತಿ ಮಾಡಬೇಕು.

ಭಕ್ತನಾದವನಿಗೆ ಇದೊಂದೇ ದಾರಿ.

ಕಣ್ಣಿನ ನೋಟದಲ್ಲಿ ಅರಿವೆಂಬ ಶಿವನಿದ್ದಾನೆ. ಚರ್ಮದ ಸ್ಪರ್ಷದಲ್ಲಿ, ಜಿಹ್ವೆಯ ರುಚಿಯಲ್ಲಿ, ಕಿವಿಯ ಶಬ್ದದಲ್ಲಿ, ಮೂಗಿನ ಪರಿಮಳದಲ್ಲಿ ಅರಿವೆಂಬ ಶಿವನಿದ್ದಾನೆ. ಮನ ಈ ಪಂಚ ಮುಖದ ಶಿವನನ್ನು ಅರಿವಿನ ಅಂಜನ ಹಾಕಿ ಹುಡುಕಬೇಕು. ತನುವಿನಲ್ಲಿ ಈ ಐದೂ ಮುಖಗಳ ಗರ್ಭದಲ್ಲಿ ಅಡಗಿದ ಅರಿವಿನ ಹೇಮವನ್ನು ಪಡೆಯುವ ಬಯಕೆ ಪ್ರೇಮದಿಂದ ಮನದಲ್ಲಿ ಅಂಕುರಿಸಬೇಕು. ಭಕ್ತನಾದವನಿಗೆ ಇದೇ ಪಥ, ದಾರಿಯಾಗಬೇಕು.

ಅಂಗದಲ್ಲಿ ಸಂಗಮವಾದ ಸಂಗನನ್ನು ಪಡೆಯಲು ಕೂಡಲಸಂಗನ ಶರಣರ ಅನುಭಾವವೇ ಗಜ ವೈದ್ಯ.

244

ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ
ಮೃದು ವಚನವೆ ಸಕಲ ಜಪಂಗಳಯ್ಯಾ,
ಮೃದು ವಚನವೆ ಸಕಲ ತಪಂಗಳಯ್ಯಾ,
ಸದುವಿನಯವೆ ಸದಾಶಿವನ ಒಲುಮೆಯಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ : ಇದು ಸರಳ ಮಾತಲ್ಲ. ಈ ಮಾತಿಗಾಗಿ ಹಗಲಿರುಳು ಅರಿವಿಗಾಗಿ ಪರಿತಪಿಸಿ ಅರಿವೇ ತಾನಾದ ತನುವಿನಿಂದ ಮಾತ್ರ ಈ ಮಾತು ಬರಲು ಸಾಧ್ಯ, ಬುದ್ಧ ಅಂಗುಲಿಮಾಲನನ್ನು ನೋಡಿ ''ನೀನು ಸಾಕ್ಷಾತ್ ಬುದ್ಧನೇ ಆಗಿರುವಿ ಅದು ನಿನಗೆ ತಿಳಿಯದಿದ್ದರೇನಂತೆ'' ಎಂದು ಬಿಗಿದಪ್ಪಿಕೊಂಡ; ಸಕಲ ತನುಗಳು ಬುದ್ಧನ ತನುಗಳು; ಬುದ್ಧನ ಹೊರತಾದ ತನುಗಳೇ ಇಲ್ಲವೆಂದು ಬುದ್ಧ ಸಾರಿ ಹೇಳಿದ.

ತನುವಿನ ಅರಿವು ತನುವಿಗೆ ದಕ್ಕಿದರೆ ಆ ತನು ಹೇಗಾಗುತ್ತದೆ ಎನ್ನುವುದಕ್ಕೆ ಬಸವಣ್ಣನವರ ಒಂದು ವಚನವನ್ನೇ ಗಮನಿಸೋಣ: ''ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯಾ '' ಮತ್ತಾರೂ ಇಲ್ಲವಯ್ಯಾ, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮಲಿಂಗ, ನೀನೆ ಅಯ್ಯಾ ; ಕೂಡಲಸಂಗಮದೇವಾ.

ಅರಿವಾದ ತನುವಿಗೆ ಒಂದು ತನು ಕಂಡರೆ ಸಾಕು ; ಆ ತನುವಿನಲ್ಲಿ ಅರಿವೆಂಬ ಗುರುದೇವನು ಭರಿತವಾಗಿದ್ದಾನೆ. ಆತ ಸದಾಶಿವನೂ ಹೌದು ; ಮಹಾದೇವನೂ ಹೌದು ; ಸಾಕ್ಷಾತ್ ಪರಬ್ರಹ್ಮನೂ ಹೌದು. ಮಹಾಜ್ಞಾನಿ ಸಕಲ ತನುಗಳಿಗೂ ಕೈ ಮುಗಿಯುತ್ತಾನೆ; ಏಕೆಂದರೆ ಸಕಲ ತನುಗಳಲ್ಲಿಯೂ ಮಹಾಜ್ಞಾನವೆ ಭರಿತವಾಗಿದೆ.

ತನು ಅಂಗುಲಿಮಾಲನದಾದರೇನು, ಕೊಲೆಗಡುಕ, ಕಳ್ಳ, ವಿಟ, ವೇಶ್ಯೆ, ಭ್ರಷ್ಟಾಚಾರಿಯದಾದರೇನು ? ಇದು ಮನದ ಕೆಲಸ. ಮನ ಒಂದು ತನುವನ್ನು ದಾನಿಯನ್ನಾಗಿಸುತ್ತದೆ ; ಮತ್ತೊಂದು ತನುವನ್ನು ಜಿಪುಣ, ಕಳ್ಳನನ್ನಾಗಿಸುತ್ತದೆ. ಆದರೆ ತನುವಿನಲ್ಲಿ ಅರಿವು ಭರಿತವಾಗಿದೆ. ಅರಿವಿಗೆ ಭಕ್ತನಾಗಿ, ದಾಸನಾಗಿ ಅರಿವೇ ತಾನಾದ ತನುವಿಗೆ ಕಳ್ಳ, ಕೊಲೆಗಡುಕ, ದಾನಿ ಎಂಬುದು ಕಾಣುವುದಿಲ್ಲ, ಅರಿವು ಮಾತ್ರ ಕಾಣುತ್ತದೆ. ಆ ಅರಿವೆಂಬ ಗುರುದೇವನಿಗೆ ಬಾಗುತ್ತಾನೆ. ಅವನೊಂದಿಗೆ ಮೃದು ವಚನಗಳಿಂದ, ಸದುವಿನಯದಿಂದ ಮಾತನಾಡುತ್ತಾನೆ. ತನುವಿನಲ್ಲಿ

ಭರಿತವಾದ ಸದಾಶಿವನನ್ನು ಸಂದರ್ಶಿಸುತ್ತಾನೆ. ಆತನಿಗೆ ಕೈ ಮುಗಿಯುತ್ತಾನೆ.

ಜ್ಞಾನಿಯ ನೋಟ ದಿವ್ಯ ನೋಟ. ಜ್ಞಾನಿಯ ಮಾತುಗಳೆ ಜಪ ತಪಗಳು. ಜ್ಞಾನಿಯ ವಿನಯವೇ ಸದಾಶಿವನ ಒಲುಮೆ. ಆತನ ನೋಟಕ್ಕೆ ಆತನ ಮಾತಿಗೆ ಆತನ ವಿನಯಕ್ಕೆ ಮರುಳಾದ ತನು ಮಹಾಜ್ಞಾನಿಯೇ ತಾನಾಗುವುದು. ತನುವಿನಲ್ಲಿ ಸಂಗಮವಾದ ಅರಿವಿಗೆ ಮರುಳಾಗದ ತನುಗಳನೊಲ್ಲ ಸಂಗಯ್ಯ ಎಂದಿದ್ದಾರೆ ಬಸವಣ್ಣ.

245

ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು
ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ
ಕಿರಿದಾಗಿ ಭೃತ್ಯಾಚಾರವ ನುಡಿದು ವಿನಯ ತದ್ಧ್ಯಾನವುಳ್ಳಡೆ
ಎತ್ತಿಕೊಂಬನಯ್ಯಾ ಕೂಡಲಸಂಗಮದೇವಾ ಪ್ರಮಥರ ಮುಂದೆ.

ಜ್ಞಾನಿಗಳ ಸಭೆಯೇ ಹಾಗೆ ! ಮೇಲು ಕೀಳುಗಳೇ ಇಲ್ಲ ! ಆನಂದದಿಂದ ತುಂಬಿದ ದಿವ್ಯ ನೋಟ ! ಮೇಲೆ ಕುಳಿತರೂ ಕೆಳಗಿನವರಿಗೆ ಆನಂದ, ಕೆಳಗೆ ಕುಳಿತರೂ ಮೇಲೆ ಕುಳಿತವರಿಗೆ ಆನಂದ. ಹೇಳುವವರೂ ಕೇಳುವವರೂ ಒಂದೇ. ಹೇಳುವಾಗಲೂ ನುಡಿಯ ಆನಂದ ಅನುಭವಿಸಿ ಹೇಳುತ್ತಾನೆ. ಕೇಳುವಾಗಲೂ ನುಡಿಯ ಆನಂದ ಅನುಭವಿಸಿ ಕೇಳುತ್ತಾನೆ ಶರಣ. ಹೇಳುವ ಕೇಳುವ ತನುಗಳೆಲ್ಲ ಆನಂದದಲ್ಲಿ ತನ್ಮಯವಾದಾಗ; ಕೆಳಗೆ ಕುಳಿತರೇನು ಮೇಲೆ ಕುಳಿತರೇನು? ಹೇಳುವ ತನು ತನ್ಮಯವಾದ ತನುವನ್ನು ನೋಡಿ ನುಡಿ ಕೇಳಿ ಆ ನುಡಿಯಲ್ಲಿಯೇ ತನ್ಮಯವಾಗುತ್ತದೆ. ಹೇಳುವ-ಕೇಳುವ ಇಬ್ಬರೂ ಕಿರಿಯರೇ. ಈ ಕಿರಿಯರಿಗೆ ಅರಿವೆಂಬ ಗುರು ಮಾತ್ರ ಹಿರಿಯ.

ಕೇಳುವ ಹೇಳುವ ತದ್ಧ್ಯಾನವುಳ್ಳ ಕಿರಿಯನನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಹಿರಿಯ ಎತ್ತಿಕೊಳ್ಳುವ, ಇತ್ತ ಬಾರಯ್ಯ ಇತ್ತ ಬಾರಯ್ಯ ಎಂದು ತನುವಿನಲ್ಲಿಯೇ ಬಿಗಿದಪ್ಪಿ ತನ್ಮಯಗೊಳಿಸುವ.

246

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು !
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ !
ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲಸಂಗಮದೇವನು.

ಗುರು, ಜಂಗಮ, ಮಾಹೇಶ್ವರ, ಐಕ್ಯಸ್ಥಲಿ, ಪ್ರಾಣಲಿಂಗಿ ಎಂದು ಶರಣರು ತನುಗಳಿಗೆ

ಹೆಸರಿಟ್ಟಿಲ್ಲ. ಅರಿವಿಗೆ ಹಾಗೆಂದು ಕರೆದರು. ಬದಲಾಗಿ ಮನಕ್ಕೆ ಭಕ್ತ ಎಂದು ನಾಮಕರಣ ಮಾಡಿದರು. ಭವಿಯಾಗಿದ್ದ ಮನ ಭಕ್ತನಾಗಿ ಹೇಗೆ ಅರಿವಿಗೆ ಹೋಗಿ ಪರಿವರ್ತನೆಯಾಗಬೇಕೆಂದು ಪಾಠ ಮಾಡಿದರು.

ತನುಗಳೆಲ್ಲ ಒಂದೇ. ಅದು ಗುರುವಿನದಾದರೂ ಆಗಿರಲಿ, ಜಂಗಮನದಾದರೂ ಆಗಿರಲಿ, ಮಾಹೇಶ್ವರ, ಭಕ್ತನದಾದರೂ ಆಗಿರಲಿ. ಪ್ರತಿ ತನುವಿನಲ್ಲಿ ಅರಿವಿನ ಸಂಪತ್ತು ಇದೆ. ಅದಕ್ಕೆ ಮನ ಭಕ್ತನಾಗಿ, ದಾಸನಾಗಿ, ಕಿಂಕರನಾಗಿ, ಹೇಗೆ ಬಳಕೆ ಮಾಡಿಕೊಳ್ಳಬೇಕೆನ್ನುವ ಚಾಕ ಚಾಕ್ಯತೆಯೇ ಪ್ರಮುಖವಾದುದು. ಮನಕ್ಕೆ ಆ ಸುಳುಹು ಹೊಳೆದು ಪ್ರಯೋಗಕ್ಕೆ ಇಳಿದರೆ ಸಾಕು ತಾನೇ ಜಂಗಮ, ತಾನೇ ಮಾಹೇಶ್ವರ, ತಾನೇ ಕೂಡಲಸಂಗಮ.

ಪ್ರತಿ ತನುವಿನಲ್ಲಿರುವ ಮನವೆಲ್ಲ ಭಕ್ತ. ಆ ಮನ ತನುವನ್ನು ಬಳಕೆ ಮಾಡಿಕೊಂಡು ಅರಿವಿಗೆ ಭಕ್ತನಾಗಬೇಕು. ತನು ಜಂಗಮವೇಷದಲ್ಲಿದ್ದರೂ ಭಕ್ತ ! ಭಕ್ತನ ಮನೆಗೆ ಭಕ್ತ ಹೋದರೆ ಸೇವೆ ಮಾಡಬೇಕು. ನಾನು ಜಂಗಮನೆಂದು ಕಾಲು ತೊಳೆಯಿಸಿಕೊಂಡರೆ ಅರಿವಿಗೆ ಮಾಡಿದ ಭಕ್ತಿ ಹಾನಿಯಾಗುತ್ತದೆ.

ಪ್ರತಿ ತನುವಿನಲ್ಲಿ ಅರಿವೆಂಬ ಗುರುವಿದ್ದಾನೆ. ಆ ಗುರುವಿನಿಂದ ಜಂಗಮ ವೇಷ ಧಾರಿ ತನು ಕಾಲು ತೊಳೆಯಿಸಿಕೊಂಡರೆ ತನಗೇ ಹಾನಿ.

ಅರಿವಿನ ವಿಚಾರ ವಿನಿಮಯ ಮಾಡಿಕೊಳ್ಳಲು ಲಕ್ಷಗಾವುದ ದಾರಿ ಸವೆಸಿ ಆತ್ಮೀಯರನ್ನು ಕಾಣುವುದೇ ಸದಾಚಾರ. ಅವರೊಂದಿಗೆ ಕೂಡಿ(ದಾಸೋಹ)ಅರಿವಿನ ಸಿಹಿ ಅಡಿಗೆ ಉಣ್ಣುವುದೇ ಭೃತ್ಯಾಚಾರ. ಹೀಗಾದಾಗ ತನುವಿನಲ್ಲಿರುವ ಅರಿವು ತನುವಿನ ಮನಕ್ಕೆ ಸಿದ್ಧವಾಗಿ ಕೂಡಿಕೊಂಬ ಕೂಡಲಸಂಗಯ್ಯ ಎಂದಿದ್ದಾರೆ ಜ್ಞಾನ ಭಂಡಾರಿ ಬಸವಣ್ಣ.

247

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು.
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ .

ಅರಿವು ತನುವಿನ ಧರ್ಮ. ಇದು ಸದಾ ದಯೆಉಳ್ಳದ್ದು. ಒಮ್ಮೆ ದಯಿ ಮತ್ತೊಮ್ಮೆ ನಿರ್ದಯಿ ಎಂದು ಬದಲಾಗುವುದಿಲ್ಲ. ಅದಕ್ಕಾಗಿಯೇ ಹಿರಿಯರು ತನುವಿನ ಮೂಲವನ್ನು ದಯಾಮಯಿ ಎಂದು ಕರೆದರು.

ಜಗದ ಸಕಲ ತನುಗಳೆಲ್ಲಾ ಒಂದೇ. ಅದರ ಮೂಲವೂ ಒಂದೇ. ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ ಕೂಡಾ ಒಂದೇ. ಜಪಾನಿ, ಚೀನಿ, ಪಾಕಿಸ್ತಾನಿ, ಅಮೇರಿಕಾ, ದುಬಾಯಿ ದೇಶದ ತನುವಾದರೇನು ಅದರ ಮೂಲ ಧರ್ಮ ಅರಿವು ಮಾತ್ರ.

ತನುವಿನಲ್ಲಿ ಹೆಣ್ಣು, ಗಂಡು ಎನ್ನುವ ಜಾತಿಯನ್ನು ವಿಂಗಡಿಸಲು ಬರುವುದಿಲ್ಲ. ಏಕೆಂದರೆ ತನುವಿನ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವು ಹೆಣ್ಣು ಗಂಡುಗಳಲ್ಲ, ರಕ್ತ, ಮೂಳೆ, ಮಾಂಸ, ಮಜ್ಜಾ, ಮೇದಸ್ಸುಗಳು ಜಾತಿಯಾಗಿ ತನುವಿಗೆ ಅಂಟಿಕೊಂಡಿಲ್ಲ. ಇದು ಮನದ ರೋಗ! ತನುವಿನ ಮೂಲ ಅರಿವು ಮಾತ್ರ. ಆ ಅರಿವೇ ಮಹಾದೇವ, ಸದಾಶಿವನೂ ಆಗಿದ್ದಾನೆ.

ಅಜ್ಞಾನದ ಭ್ರಮೆ ಕಳಚಿದರೆ ಸಾಕು ತನುವಿನಲ್ಲಿ ತನ್ಮಯವಾದ ಆ ಅರಿವೇ ಸಾಕ್ಷಾತ್ ಪರಬ್ರಹ್ಮವೇ ಆಗಿದೆ.

ಸಿದ್ಧಾರ್ಥನದೂ ತನುವೇ ! ಅಂಗುಲಿಮಾಲನದೂ ತನುವೇ. ಸಿದ್ಧಾರ್ಥನಿಗೆ ಅಂಗುಲಿಮಾಲ ದೊರೆತಿದ್ದರೆ ಅವನನ್ನು ಸಾವಿರ ಬಾರಿ ಗಲ್ಲಿಗೆ ಹಾಕುತ್ತಿದ್ದ. ಸಿದ್ಧಾರ್ಥ ತನ್ನ ತನುವಿನ ಮೂಲವನ್ನು ಅರಿತು ಬುದ್ಧನಾದ. ಬುದ್ಧ ಅಂಗುಲಿಮಾಲನ ತನುವಿಗೆ ಅರಿವಿನ ಮೂಲವನ್ನು ಮನವರಿಕೆ ಮಾಡಿಸಿದ. ಆತನೂ ಬುದ್ಧನಾದ. ನಿರ್ದಯಿ ತನುಗಳೆರಡೂ ತನುವಿನ ಧರ್ಮವನು ಅರಿತು ದಯವೇ ಧರ್ಮದ ಮೂಲವೆಂದು ಸಾರಿದವು. ಇದು ಸಕಲ ತನುಗಳಿಗೂ ಸಾಧ್ಯವೆಂದು ಅರಿವಿನ ಸೂತ್ರಗಳನ್ನು ರಚಿಸಿದವು.

248

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ ?
ತನಗಾದ ಆಗೇನು ? ಅವರಿಗಾದ ಚೇಗೆಯೇನು ?
ತನುವಿನ ಕೋಪ ತನ್ನ ಹಿರಿತನದ ಕೇಡು !
ಮನದ ಕೋಪ ತನ್ನ ಅರಿವಿನ ಕೇಡು !
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ,
ನೆರೆಮನೆಯ ಸುಡುವುದೇ ಕೂಡಲಸಂಗಮದೇವಾ!

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ;

ಇದು ನಿಃಶಬ್ದವೇದಿಗೆ ಮಾತ್ರ ಸಾಧ್ಯ. ಉಳಿದವರಿಗೆ ಅಸಾಧ್ಯ ! ತನುವಿನಿಂದ ಹುಟ್ಟಿದ ಶಬ್ದ ತನು ತಿಳಿಯದಿದ್ದಕ್ಕಾಗಿ, ಕೋಪ ತಾಪಗಳು ಸುಖ ದುಃಖಗಳು.

ಶಬ್ದದಲ್ಲಿ ಅರಿವು ಮಾತ್ರ ಇದೆ, ಸುಖ ದುಃಖಗಳು ಇಲ್ಲವೇ ಇಲ್ಲ ! ಶಬ್ದ ಬರೆದರೆ ನಪುಂಸಕವಾಗುತ್ತದೆ ! ಓದಿದರೆ, ತಿಳಿದರೆ, ಕೇಳಿದರೆ ಅರಿವಾಗುತ್ತದೆ ! ಹಚ್ಚಿಕೊಂಡರೆ ಸುಖ ಇಲ್ಲ ದುಃಖವಾಗುತ್ತದೆ.

ಶಬ್ದ ಮನದಿಂದ ಕೇಳಿದರೆ ತನುವಿಗೆ ಸುಖ ಅಥವಾ ಸಂಕಟವನ್ನು ಒಡ್ಡುತ್ತದೆ. ಏಕೆಂದರೆ ಮನಕ್ಕೆ ಶಬ್ದ ತಿಳಿಯುವ ಶಕ್ತಿ ಇಲ್ಲ.

ಉದಾ : ಒಬ್ಬ ಶಿಕ್ಷಕ ಬೋರ್ಡ್ ಮೇಲೆ ಕತ್ತೆ ಎಂದು ಬರೆದರೆ ಅದು ನಪುಂಸಕವಾಯಿತು. ಹುಡುಗರು ಅದನ್ನು ಕಾಪಿಯಲ್ಲಿ ಬರೆದುಕೊಂಡರೂ ನಪುಂಸಕವಾಯಿತು! ಹುಡುಗರ ಕಾಪಿ ಶಿಕ್ಷಕ ಪರಿಶೀಲಿಸಿದರೂ ನಪುಂಸಕವಾಯಿತು ! ಒಬ್ಬ ಹುಡುಗ ಒತ್ತಕ್ಷರ ಮರೆತು ಕತೆ ಎಂದು ಬರೆದಿದ್ದ ! ಆ ಬರಹ ಶಿಕ್ಷಕನಿಗೆ ಸಿಟ್ಟು ಬರಸಿತು. ಕತ್ತೆಯಂಥವನೇ ನೋಡಿ ಬರೆಯಲೂ ಬರುವುದಿಲ್ಲವೆ ಎಂದು ಶಿಕ್ಷಕ ಗದರಿಕೊಂಡ. ಈ ಮಾತು ಕೇಳಿದ ಹುಡುಗರಿಗೆ ನಗು ! ಇದನ್ನು ಹಚ್ಚಿಕೊಂಡ ಹುಡುಗನಿಗೆ ಅಪಮಾನ !

ಆತ್ಮಹತ್ಯೆ ಮಾಡಿಕೊಳ್ಳಲೆ, ಶಾಲೆ ಬಿಡಲೆ, ಅಥವಾ ಶಿಕ್ಷಕನನ್ನು ಬಯ್ದು ಸೇಡು ತೀರಿಸಿಕೊಳ್ಳಲೆ ಎಂದು ಹುಡುಗ ಯೋಚಿಸಿದ. ಕತ್ತೆ ನಾನಲ್ಲ ಸಾರ್ ನೀವೇ ಕತ್ತೆ ಎಂದು ಧೈರ್ಯದಿಂದ ಹುಡುಗ ನುಡಿದ. ಹುಡುಗರ ನಗು ಕೂಡಲೇ ನಿಂತು ಕೋಣೆ ನಿಃಶಬ್ದವಾಯಿತು. ಹುಡುಗ ಹುಡುಗರಿಗೆ ನಾಯಕನಾಗಿದ್ದ. ಹುಡುಗನ ಶಬ್ದ ಕೇಳಿ ಶಿಕ್ಷಕನಿಗೆ ಸಿಡಿಲು

ಬಡಿದಂತಾಯಿತು. ಕೈಗೆ ಸಿಕ್ಕ ಕೋಲು ಹಿಡಿದು ಹುಡುಗನ ಚರ್ಮ ಸುಲಿಯುವಂತೆ ಹೊಡೆದ. ಪಾಠ ಮಾಡುವ ಶಿಕ್ಷಕನಿಗೆ ಶಬ್ದ ಅರಿವಿಗೆ ಬರಲಿಲ್ಲ. ಹುಡುಗರಿಗೂ ಅರಿವಿಗೆ ಬರಲಿಲ್ಲ. ಹುಡುಗನಿಗೂ ಅರಿವಿಗೆ ಬರಲಿಲ್ಲ.

ಶಬ್ದ ಬೋರ್ಡ್ ಮೇಲೆ ಬರೆದಾಗ ನಪುಂಸಕವಾಗಿತ್ತು, ಹುಡುಗರು ಕಾಪಿಯಲ್ಲಿ ಬರೆದುಕೊಂಡಾಗಲೂ ನಪುಂಸಕವಾಗಿತ್ತು, ಕಾಪಿ ನೋಡಿದಾಗ ಶಬ್ದ ಶಿಕ್ಷಕನಿಗೆ ಸಿಟ್ಟು ಬರಿಸಿತು. ಕೇಳಿದ ಹುಡುಗರಿಗೆ ನಗು ಬರಿಸಿತು. ಹಚ್ಚಿಕೊಂಡ ಹುಡುಗನಿಗೆ ಅಪಮಾನವಾಯಿತು. ಕೇಳಿದ ಶಿಕ್ಷಕನನ್ನು ರಕ್ಕಸನನ್ನಾಗಿ ಮಾಡಿತು.

ಕತ್ತೆ, ಹಂದಿ, ನಾಯಿ, ಕುದುರೆ, ದನ, ಎನ್ನುವ ಶಬ್ದಗಳು ಕೆಟ್ಟವಲ್ಲ. ಈ ಎಲ್ಲ ಶಬ್ದಗಳಲ್ಲಿ ಅರಿವು ತುಂಬಿದೆ. ಕತ್ತೆಗೆ ಕತ್ತೆ ಎಂದರೆ ಸಿಟ್ಟು ಬರುವುದಿಲ್ಲ. ಅದು ಕತ್ತೆ ಅಲ್ಲ. ಹಾಗೆಂದು ಮನುಷ್ಯ ಕರೆಯುವುದಕ್ಕಾಗಿ ಒಂದು ಪ್ರಾಣಿಗೆ ನಾಮಕರಣ ಮಾಡಿದ್ದಾನೆ. ಅದು ಕತ್ತೆ ಅಲ್ಲ ಅಂದಮೇಲೆ ತಾನು ಹೇಗೆ ಕತ್ತೆ ಎನ್ನುವ ಜ್ಞಾನ ದೇಹದಲ್ಲಿ ಬಳಕೆಯಾಗದೆ ಹಾಗೆ ಉಳಿದಿದೆ. ಕತ್ತೆ ಅನ್ನುವುದನ್ನು ಮನ ಕೇಳಿ ದೇಹಕ್ಕೆ ಘಾಸಿಗೊಳಿಸಿತು. ಹಾಗೆಯೇ ಸುಖ ದುಃಖವನ್ನುಂಟು ಮಾಡಿತು. ಏಕಕಾಲಕ್ಕೆ ಸುಖ ದುಃಖ ಅಪಮಾನಗಳನ್ನುಂಟು ಮಾಡುವ ಒಂದು ಶಬ್ದವನ್ನು ಶಬ್ದ ಸೃಷ್ಟಿ ಮಾಡಿದ ಮನುಷ್ಯನೇ ತಿಳಿಯಲು ಸಾಧ್ಯವಾಗದಿದ್ದರೆ ಹೇಗೆ ?

ಶಿಕ್ಷಕನಾದವನು ಸರಿ ತಪ್ಪುಗಳನ್ನು ಬರೆಯಲು ತಿಳಿಸುವನೇ ವಿನಃ ! ಶಬ್ದ ಅನಾವರಣ ಮಾಡಿ ಅದನ್ನು ನಿಶಬ್ದಗೊಳಿಸಿ ಸ್ವೀಕರಿಸುವ ವಿಧಾನವನ್ನು ಹೇಳಿಕೊಡುವುದಿಲ್ಲ. ಏಕೆಂದರೆ ಆತ ನಿಶಬ್ದವೇದಿಯಲ್ಲ, ಇದು ನಿಃಶಬ್ದವೇದಿಗೆ ಮಾತ್ರ ಸಾಧ್ಯವಾಗುತ್ತದೆ.

ಬಸವಣ್ಣನವರು ನಿಃಶಬ್ದವೇದಿಯಾಗಿ ಶರಣರಿಗೆ ಪಾಠ ಮಾಡಿದರು. ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ ? ಶಬ್ದದಿಂದ ತನಗಾದ ಆಗೇನು ? ಅವರಿಗಾದ ಬೇಗೆಯೇನು ? ತನುವಿನ ಕೋಪ ಹಿರಿತನದ ಕೇಡು ! ಮನದ ಕೋಪ ಅರಿವಿನ ಕೇಡು ! ಶಬ್ದ ಕೇಳುವಾಗ, ಆ ಶಬ್ದದಿಂದ ಶಬ್ದ ನುಡಿಯುವಾಗ ತನುವಿನೊಳಗಣ ಕಿಚ್ಚು ಕಲಕಿ ತನುವನ್ನು ಸುಟ್ಟಲ್ಲದೆ ಅನ್ಯ ತನುವನ್ನು ಸುಡುವುದೆ ಕೂಡಲಸಂಗಮದೇವಾ.

ಶಬ್ದ ಅರಿವಿನಿಂದ ಕೇಳಿದರೆ ಕತ್ತೆ ಕತ್ತೆಯಲ್ಲ, ತಾನೂ ಕತ್ತೆಯಲ್ಲ. ಒಂದು ಪ್ರಾಣಿಗೆ ಕರೆಯುವುದಕ್ಕಾಗಿ ಇಟ್ಟ ಶಬ್ದ. ಆ ಶಬ್ದದಲ್ಲಿ ಅರಿವಿದೆ ಎಂದು ತಿಳಿದು ಕೇಳಿದರೆ ತನಗೆ ಮುನಿಯುವವನಿಗೆ ತಾನು ಮುನಿಯಲಿಲ್ಲ. ಕೇಳಿದವನ ತನುವಿನಲ್ಲಿ ಶಬ್ದ ಪ್ರಸಾದವಾಯಿತು. ನುಡಿದವನು ನಾಚಿ ನೀರಾದ, ಕೇಳಿದವನ ತನುವಿನಲ್ಲಿ ಶಬ್ದ ನಿಃಶಬ್ದವಾಗಿ ನಿಃಶಬ್ದವೇದಿಯಾದ.

249

ಅರ್ಥಕ್ಕೆ ತಪ್ಪಿದಡೇನು ಪ್ರಾಣಕ್ಕೆ ತಪ್ಪಿದಡೇನು,
ಅಭಿಮಾನಕ್ಕೆ ತಪ್ಪಿದಡೇನು ?
ಶರಣರು ಶರಣರಲ್ಲಿ ಗುಣವನರಸುವರೆ ?
ಕೂಡಲಸಂಗನ ಶರಣರು ನೊಂದು ಸೈರಿಸಬೇಕು.

ಶರಣರು ಮಹಾಜ್ಞಾನಿಗಳು. ಅರ್ಥ ಪ್ರಾಣ ಅಭಿಮಾನವನ್ನು ಅರಿವಿನಿಂದ ಕಳೆದು ಕೊಂಡವರು. ಗುಣರಹಿತರು; ನಿರ್ಗುಣಿಗಳು.

ಜ್ಞಾನಿಗಳ, ಶರಣರ ಸಭೆ ನಡೆದಾಗ ಅರ್ಥ ಪ್ರಾಣ ಅಭಿಮಾನದಲ್ಲಿ ದೋಷ ಕಂಡು ಬಂದರೆ ಶರಣರಾದವರು ಶರಣರಲ್ಲಿ ಗುಣವನರಸಬಾರದು. ಒಂದು ವೇಳೆ ಗುಣವನು ಹುಡುಕಿ ಬಿರುಸಿನ ಮಾತನಾಡಿದಾಗ ಶರಣರಾದವರು ಅವರ ಬಿರುನುಡಿಯನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ನುಡಿಗೆ ಪ್ರತಿನುಡಿ ನುಡಿಯುವುದಿಲ್ಲ. ಅವರ ಮೌನವೇ ಅದಕ್ಕೆ ಉತ್ತರವಾಗುತ್ತದೆ.

ತನುವಿನಲ್ಲಿ ಗುಣವೆನ್ನುವುದು ಒಮ್ಮೆ ಅರಳುತ್ತದೆ ಮತ್ತೊಮ್ಮೆ ಕೆರಳುತ್ತದೆ. ಅರಳಿದಾಗ ಸುಗುಣಿ ಎನ್ನುತ್ತಾರೆ ; ಕೆರಳಿದಾಗ ದುರ್ಗುಣಿ ಎಂದು ತನುವಿಗೆ ಪಟ್ಟ ಕಟ್ಟುತ್ತಾರೆ. ಇದು ಮನದ ಕೆಲಸವೆಂದು ಇತರರಿಗೆ ಗೊತ್ತಾಗುವುದಿಲ್ಲ.

ಶರಣ ಸುಗುಣವನ್ನು ದುರ್ಗುಣವನ್ನು ಕಳೆದುಕೊಂಡು ನಿರ್ಗುಣಿಯಾದ ತಂತ್ರಜ್ಞ ; ಟೆಕ್ನೀಸಿಯನ್. ಈತ ಪ್ರತಿ ಶಬ್ದವನ್ನು ಅರಿವಿನಿಂದ ಕೇಳಿ ಆ ಶಬ್ದವನ್ನು ನಪುಂಸಕ ಮಾಡಿ ಸ್ವೀಕರಿಸುತ್ತಾನೆ. ನುಡಿ ಕೇಳಿ ಕೆರಳಿ ದುರ್ಗುಣಿಯಾಗುವುದಿಲ್ಲ. ಹೊಗಳಿಕೆ ಶಬ್ದ ಕೇಳಿ ತನು ಅರಳುವುದಿಲ್ಲ. ಶಬ್ದ ಅನಾವರಣ ಮಾಡಿ ಕೇಳುತ್ತಾನೆ. ಇದು ನಿರ್ಗುಣಿಗೆ ಮಾತ್ರ ಸಾಧ್ಯ, ಸ್ವಲ್ಪ ನೋವು ಆ ಕ್ಷಣದಲ್ಲಿ ಕಾಣಿಸಬಹುದು, ಅದು ಹಾಗೇ ಉಳಿಯುವುದಿಲ್ಲ. ತನುವಿನಲ್ಲಿ ಸಂಗ್ರಹವೂ ಆಗುವುದಿಲ್ಲ.

ಭಕ್ತನ ಭಕ್ತಸ್ಥಲ

250

ಕಾಣದ ಠಾವಿನಲ್ಲಿ ಜರಿದರೆಂದಡೆ ಕೇಳಿ ಪರಿಣಾಮಿಸಬೇಕು.
ಅದೇನು ಕಾರಣವೆಂದಡೆ
ಕೊಳ್ಳದೆ ಕೊಡದೆ ಅವರಿಗೆ ಸುಖವಹುದಾಗಿ !
ಎನ್ನ ಮನದ ತದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಲಸಂಗಮದೇವಾ .

ಇಲ್ಲದವನನ್ನು ಆಡಿಕೊಂಡು ಸುಖಪಡುವುದೇ ಮನದ ಗುಣ. ಇತರರು ಹಾಗೆಯೇ ಮಾಡಿದಾಗ ಶರಣನಾದವನು ಅದನ್ನು ಕೇಳಿ ಸುಖಪಡುತ್ತಾನೆ. ತನ್ನನ್ನು ಆಡಿಕೊಂಡರೆ ಆತನಿಗೆ ಸುಖವಾಗುವುದಿದ್ದರೆ ಇದಕ್ಕಿಂತ ಸಂತೋಷ ಮತೊಂದಿಲ್ಲ. ಕೊಡಲಿಲ್ಲ ಕೊಳ್ಳಲಿಲ್ಲ ಸುಖವಾಗುವುದಿದ್ದರೆ ತನಗೇಕೆ ದುಃಖ ? ಇದು ಶರಣನ ಉವಾಚ.

ಸಕಲ ಶಬ್ದಗಳನ್ನು ಅರಿವಿನಿಂದ ಕೇಳಿ; ಶರಣ ತನ್ನ ತನುವಿನ ಮನದ ದ್ವೇಷ ಕಳೆದುಕೊಂಡಾತ. ಶಬ್ದಗಳು ಆತನನ್ನು ಬಾಧಿಸಲಾರವು. ಬಿರು ನುಡಿದವನನ್ನು ಬಾಧಿಸಲಾರದೆ ಇರಲಾರವು. ಬಿರು ನುಡಿಯ ನುಡಿದವನಿಗೆ ಶರಣೆನ್ನುವ ಶರಣ ಅಪಾರ ಕರುಣಾಮಯಿ.

ಶರಣನ ತನುವಿನಲ್ಲಿರುವ ಮನ; ತನುವಿನಲ್ಲಿರುವ ಅರಿವನ್ನೇ ಕೂಡಿಕೊಂಡು ಸಂಗಮನಾಥನಾಗಿದೆ. ಆ ಅರಿವಿಗೆ ಶರಣು ಹೋಗಿ ಶರಣನಾಗಿದೆ. ಅದು ಸಕಲ ದ್ವೇಷಗಳನ್ನು ಅಳಿದುಕೊಂಡು ಪರಿಣಾಮಿಯಾಗಿದೆ. ಕಾರಣ ಸಕಲ ಬಿರು ನುಡಿಗಳನ್ನು ಕೇಳಿದರೂ ಸುಖದ

ಸುಖಿಯಾಗಿ ಅರಿವಿಗೆ ಅರ್ಪಿಸಿ ಆ ಅರಿವಿಗೆ ಶರಣು ಹೋಗಿದೆ.

251

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ ;
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ.
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ ,
ಕೂಡಲಸಂಗಮದೇವಾ !

ಬಸವಣ್ಣನವರು ಕೂಡಲಸಂಗಮದೇವರೊಂದಿಗೆ ಮಾತನಾಡಿದ್ದಾರೆ. ಜ್ಞಾನಿಗಳ ಮಾತೇ ಹಾಗೆ ! ಸಕಲರಿಗೂ ತಿಳಿಯುವ ಮಾತಲ್ಲ. ಮಾತಲ್ಲದ ಮಾತನ್ನು ಮಾತಿನ ಮೂಲಕವೇ ಸರ್ವರಿಗೂ ತಿಳಿಸಬೇಕು. ಈ ಜಾಡು ಅರಿತವನು ಕೇಳಿ ಆನಂದ ಪಡುತ್ತಾನೆ. ಅರಿಯದವನು ಓದಿ ಸಂಗ್ರಹಿಸಿ ವೇದಿಕೆಗೆ ಬಳಸುತ್ತಾನೆ. ಆದರೆ ಪಂಡಿತ ಜ್ಞಾನಿ ಎಂದು ಅನ್ನಿಸಿಕೊಳ್ಳಬಹುದು ; ಅನುಭಾವಿಯಾಗಲಾರ.

ಏನೂ ತಿಳಿಯದ ಭವಿಯಾಗಿದ್ದ ಮನ ಭಕ್ತನಾಗಿದೆ. ಆದರೂ ಅರಿವಿನ ಸಂಪತ್ತು ಅಷ್ಟಾಗಿ ಒಲಿತಿಲ್ಲ. ಹೊರಗಿನ ಸಂಪತ್ತೆಲ್ಲ. ಮನಕ್ಕೆ ತೃಣವಾಗಿ ಕಾಣುತ್ತಲಿದೆ. ಒಳಗಿನ ಸಂಪತ್ತೆಲ್ಲ ಬಾಚಿಕೊಂಡು ಮಹಾಜ್ಞಾನಿಯಾಗಿ ಆನಂದಪಡಬೇಕೆಂದಂತೆಲ್ಲ ಅದು ತನುವಿನಾಳಕ್ಕೆ ಇಳಿಯುತ್ತಲಿದೆ.

ತನು ಏನು ಸಾಮಾನ್ಯವೆ ? ಅದರ ವಿಸ್ತಾರ ಜಗದಗಲ ಮುಗಿಲಗಲ. ಅದರ ಆಳ ಪಾತಾಳದಿಂದ ಅತ್ತತ್ತ. ಅರದ ಎತ್ತರ ಬ್ರಹ್ಮಾಂಡದಿಂದ ಅತ್ತತ್ತ. ತನುವಿನ ಜ್ಞಾನ ಗಮನಕ್ಕೂ ಗೋಚರಕ್ಕೂ ನಿಲುಕದ್ದು.ಯಾವ ವಿಶ್ವವಿದ್ಯಾಲಯಗಳೂ ಪ್ರಮಾಣಿಸಲು ಬಾರದಂತದ್ದು. ಅಪ್ರತಿಮವಾದ ಲಿಂಗ ತನುವಿನ ಕಣಕಣದಲ್ಲಿ ಬೆರೆತು ವಿರಾಟ ಸ್ವರೂಪವಾಗಿದೆ. ಕೂಡಲಸಂಗಮದೇವನಾಗಿದೆ.

ತನುವಿನ ಒಡೆಯನಾದ ಕೂಡಲಸಂಗಮದೇವನೊಂದಿಗೆ ಮನ ಭಕ್ತನಾಗಿ ಹೇಗೆ ಮಾತನಾಡಬೇಕೆಂದು ಬಸವಣ್ಣನವರು ತಮ್ಮ ವಚನದ ಮೂಲಕ ಸರ್ವರಿಗೂ ಈ ಸೂತ್ರವನ್ನು ಹೇಳಿದ್ದಾರೆ.

ಮನಕ್ಕೆ ಅಜ್ಞಾನದ ಕೆಸರು ಮೆತ್ತಿದೆ. ಅದು ಅಪ್ಪಟ ಚಿನ್ನವೆಂದು ಅದಕ್ಕೆ ಹೊಳೆದಿಲ್ಲ. ನೀನು ಜಗದೊಡೆಯ ; ಅಕ್ಕ ಸಾಲಿಗ ! ಇದನ್ನು ಕರಗಿಸಿ ಒರೆಗೆ ಬಣ್ಣಕ್ಕೆ ತಂದು ಪುಟವಿಕ್ಕಿ ನೋಡು. ಕಡಿದು ಬಡಿದು ಕಾಲುಕಡಗವ ಮಾಡು. ಮಹಾಜ್ಞಾನಿಗಳಾದ ಶರಣರ ಪಾದಕ್ಕೆ ತೊಡಿಗೆಯ ಮಾಡು. ಅತ್ತಿತ್ತ ಚಲಿಸದಂತೆ ಸಲಹು ಕೂಡಲ ಸಂಗಮದೇವಾ ! ಎನ್ನುವ ಈ ಮಾತು ಸ್ವಗತವಲ್ಲ ; ಸಾಕ್ಷಾತ್ ಸಂಗಮನಾಥನೊಂದಿಗೆ ಆಡುವ ಮಾತಲ್ಲದ ಮಾತು !

252

'' ವೇದಾದಿ ನಾಮ ನಿರ್ನಾಮ ಮಹತ್ತತ್ತ್ವಂ ಮದೀಶ್ವರಃ ''

ಗುರೂಕ್ತ ಮಂತ್ರ ಮಾರ್ಗೇಣ ಇಷ್ಟಲಿಂಗಂ ತು ಶಾಂಕರಿ ॥
ಎಂದುದಾಗಿ, ವಚನಪಾತಕವೆನ್ನ ವಚನದೋಷಂಗಳೆನ್ನ
ಕಾಡಿ ಕಾಡಿ ಕೆಡಿಸಿಹವೆನ್ನ !
ಕೂಡಲಸಂಗಮದೇವಾ,
ಅಹಂ ಎಂಬ ಅಹಂಕಾರವೆನ್ನ !

ಮನ ಬಹಳ ಅಹಂಕಾರಿ. ಅದು ದುರ್ಬಲವೂ ಆಗಿದೆ. ' ತತ್ತ್ವಮಸಿ ' ಎನ್ನುವ ಮಂತ್ರ ಕಲಿತು ಸಾಯುವವರೆಗೂ ಹೇಳುತ್ತದೆ. ತತ್ವ ವೇದಗಳಿಗೂ ಉಪನಿಷತ್‌ಗಳಿಗೂ ಭಗವದ್ಗೀತೆಗೂ ಆದಿಯಾಗಿದೆ. ಅದು ನಾಮರಹಿತವಾದಂತಹ ತತ್ತ್ವ. ತನುವಿನ ಕಣ ಕಣದಲ್ಲಿ ತನ್ಮಯವಾಗಿದೆ. ಗುರುವಿನ ಅನುಗ್ರಹದಿಂದ ತನ್ನ ತನುವಿನ ತತ್ತ್ವ, ತನಗೇ ಒಲಿತಿದೆ. ಹೀಗೆಂದು ಹೇಳುವ ವಚನದ ಸೂತ್ರವನ್ನು ಹಗಲಿರುಳೂ ಹೇಳಿ ಸಾಯುತ್ತದೆ.

ಮನ ಸೂತ್ರವನ್ನು ಅರಿಯದೆ ವಚನವೇ ಅದಕ್ಕೆ ಪಾತಕವಾಗಿ, ದೋಷವಾಗಿ ಕಾಡುತ್ತದೆ. ವೇದ, ಉಪನಿಷತ್ತು, ಭಗವದ್ಗೀತೆ , ಬೈಬಲ್‌ಗಳನ್ನು ಓದಿ ಓದಿ ಸಾಯುತ್ತದೆ. ಗ್ರಂಥಗಳನ್ನೇ ದೊಡ್ಡದು ಮಾಡಿ ಅದರ ಸಾರ ಅರಿಯುತ್ತದೆ. ಗ್ರಂಥಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ಮೆರವಣಿಗೆ ಮಾಡುತ್ತದೆ.

'ತತ್ತ್ವಮಸಿ' ಎನ್ನುವ ಉಕ್ತಿ 'ವೇದಾದಿ' ತತ್ತ್ವ ವೇದಕ್ಕೂ ಆದಿಯಾದದ್ದು ಎನ್ನುವ ಉಕ್ತಿ ಒಂದೇ. ತತ್ತ್ವ ವೇದಕ್ಕೂ ಆದಿಯಾದದ್ದು.

'ತತ್ತ್ವಮಸಿ' ಆ ತತ್ತ್ವ ನೀನೇ ಇದ್ದೀಯ ಎಂದು ಹೇಳಿದರೂ ಮನ ಆ ವಚನಗಳನ್ನೇ ನುಡಿದು ನುಡಿದು ಸಾಯುವುದೆಂದರೇನು. ಆ ವಚನ ಹೊತ್ತ ಪುಸ್ತಕಗಳನ್ನು ಪೂಜಿಸು ವುದೆಂದರೇನು ?

ಸಕಲ ತತ್ತ್ವಗಳೂ ತನುವಿನಿಂದ ಬಂದು ಪುಸ್ತಕ ಸೇರಿವೆ . ಪುಸ್ತಕಗಳೆಲ್ಲ ತನುವಿನಿಂದ ಬಂದ ಎಂಜಲು. ತನುವಿನಲ್ಲಿ ಅಪಾರ ಜ್ಞಾನವಿದೆ ಅದು ಜಗದಗಲ ಮುಗಿಲಗಲ. ಇಂತಹ ತನುವನ್ನು ತಿಳಿಯುವುದು ಬಿಟ್ಟು ಪುಸ್ತಕವನ್ನು ಪುಸ್ತಕದ ಮಂತ್ರವನ್ನು ಜಪಿಸಿ ಸಾಯು ವುದೆ? ಮನ ಅಹಂಕಾರಿ. ತನಗೆ ಬೇಕಾದ ಪುಸ್ತಕಗಳನ್ನು ಓದಿ ಅದನ್ನೇ ದೊಡ್ಡದೆನ್ನುತ್ತದೆ. ತನಗೆ ಬೇಕಾದ ವ್ಯಕ್ತಿಯನ್ನು ಪೂಜಿಸಿ ಅವನನ್ನೇ ದೊಡ್ಡವನೆಂದು ಪುಸ್ತಕಕ್ಕೆ ವ್ಯಕ್ತಿಗೆ ತಿಳಿಯದೇ ದಾಸನಾಗುತ್ತದೆ ?

ತನುವಿನ ಕಣ ಕಣದಲ್ಲಿ ತನ್ಮಯವಾದ ಅರಿವೆಂಬ ಗುರುದೇವನಾದ ಸಂಗಮನಾಥನನ್ನೇ ಮರೆಯುತ್ತದೆ. ಆತ 24 X 7 ನಿರಂತರ ಭೋದೆ ಮಾಡುವ ಮಹಾಗುರು. ಮನದೊಂದಿಗೆ ಮಾತನಾಡುತ್ತಾನೆ ; ಮನ ಆತನ ಮಾತು ಕೇಳುವುದಿಲ್ಲ. ಆತನನ್ನು ಪರಿಚಯ ಮಾಡಿಸುವಂತಹ ಬಸವಣ್ಣನಂತಹ, ವಿದ್ಯಾನಂದ ಶರಣರಂತಹ ಮಾತನ್ನು , ನಂಬುವುದಿಲ್ಲ. ಹೀಗಾಗಿ ಮನ ಬಹಳ ದುರುಳ, ಅಹಂಕಾರಿ. ತನ್ನ ಅಹಂಕಾರ ತನಗೆ ಮುಳುವಾಗಿ ಜ್ಞಾನದ ಸಂಪತ್ತನ್ನು, ತನ್ನ ತತ್ತ್ವವನ್ನು ತಾನೇ ಅನುಭವಿಸದೆ ಒಮ್ಮೆ ಸಾಯುತ್ತದೆ.

253

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬೆರೆವೆ ನಾನು ; ಕೆಚ್ಚು ಬೆಳೆಯಿತ್ತಯ್ಯಾ !
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರದಂತೆ ಮಾಡು ಕೂಡಲಸಂಗಮದೇವಾ .

ಮನ ಸೂಕ್ಷ್ಮಾತಿ ಸೂಕ್ಷ್ಮವಾದದ್ದು. ಅರಿವಿಗೆ ಹೋಗಿ ಅರಿವೇ ತಾನಾದ ತನುವನ್ನು ಇತರ ತನುಗಳು ಜ್ಞಾನಿ ತನುವೆಂದು, ಶರಣ, ಸಂತ, ಮಹಾಂತನ ತನುವೆಂದು ; ಗುರು ಹಿರಿಯರ ಜಂಗಮ ತನುವೆಂದು ಗೌರವಿಸಿ ಪಾದಕ್ಕೆ ನಮಸ್ಕರಿಸುತ್ತವೆ. ಇಷ್ಟಾದರೆ ಸಾಕು ಮನ ಹಿರಿತನದ ಪಟ್ಟಕ್ಕೆ ಹಿರಿಹಿರಿ ಹಿಗ್ಗುತ್ತದೆ. ಶಿರ ಬಾಗದೆ ತನುವಿನಲ್ಲಿರುವ ಮನದ ಕೆಚ್ಚು ಅಹಂಕಾರ ನೆತ್ತಿಗೇರುತ್ತದೆ. ತನುವಿನಲ್ಲಿ ಹಿರಿಯ, ಗುರು ಎನ್ನುವ ಕಿಲುಬು ಸಂಗ್ರಹವಾಗುತ್ತ ಹೋಗುತ್ತದೆ.

ಬಳಕೆ ಮಾಡದ ಪಾತ್ರೆಗೆ ಕಿಲುಬು ಬಂದರೆ ಕಲಾಯಿಗಾರನಿಗೆ ಕೊಟ್ಟು ಪಾತ್ರೆ ಬೆಳ್ಳಗೆ ಮಾಡಿಸಿ ಬಳಕೆ ಮಾಡುತ್ತೇವೆ. ಕಿಲುಬು ಬಲು ವಿಷ .

ಹಾಗೆಯೇ ಮನ ಹಿರಿತನದ ಕೇಡನ್ನು ತನುವಿನಲ್ಲಿ ಉಂಟು ಮಾಡುತ್ತದೆ. ತಾನು ಗುರು ಹಿರಿಯ ಜಂಗಮ ಎಂದು ಬಿಗ್ರನೆ ಬೀಗುತ್ತದೆ. ತನುವಿನಲ್ಲಿ ಮನ ಉಂಟು ಮಾಡಿದ ಕಿಲುಬು ಇತರ ತನುಗಳಿಗೆ ಗೊತ್ತಾಗುವುದಿಲ್ಲ.

ತನುವಿನ ಅರಿವಿಗೆ ಗೊತ್ತಾಗದೇ ಇರುವುದಿಲ್ಲ. ಬೆಳೆದ ಕೆಚ್ಚೆಂಬ ಕಿಲುಬಿಗೆ ಕಿಚ್ಚನ್ನಿಕ್ಕಿ ಸುಟ್ಟು ತನುವಿನ ಪಾತ್ರೆಯನ್ನು ಬೆಳ್ಳಗೆ ಮಾಡುತ್ತಾನೆ. ಮನ ತನುವನ್ನು ಆವರಿಸಿ ಇರುವವರೆಗೆ ತನುವೆಂಬ ಪಾತ್ರೆ ತಾಮ್ರದ್ದು ಆಗಿರುತ್ತದೆ. ಅದಕ್ಕೆ ಮತ್ತೆ ಮತ್ತೆ ಕಿಲುಬು ಸೇರುತ್ತದೆ. ತನುವಿನ ಕಣಕಣದಲ್ಲಿದ್ದು ಸದಾ ಎಚ್ಚರಿಸುವ ಅರಿವೆಂಬ ಗುರುದೇವನ ಪರಿಚಯವಾಗಿ ಆತನ ಸಂಗವನ್ನು ಮನ ಮಾಡಿದರೆ ಸಾಕು ಕಿಲುಬು ಸುಟ್ಟು ಬೂದಿ ಮಾಡುತ್ತಾನೆ. ತನುವಿಗೆ ಮತ್ತೆ ಕಿಲುಬು ಸೇರುವುದಿಲ್ಲ. ಆವರಿಸಿದ ಮನವೆಂಬ ಕಿಲುಬು ಕಳೆದುಕೊಂಡ ತನು ಚಿನ್ನದ ಪಾತ್ರೆ ಯಾಗುತ್ತದೆ. ತಿಪ್ಪೆಯಲ್ಲಿ ಬಿದ್ದರೂ ಸದಾ ಥಳಥಳನೆ ಹೊಳೆಯುತ್ತದೆ. ಅರಿವೆಂಬ ಸಂಗಯ್ಯನನ್ನು ಕೂಡಿಕೊಂಡು ಸಂಗಮನಾಥನೇ ಆಗುತ್ತದೆ.

254

ನಡೆಯೆ ಕಂಡಾ ನಂಬಿ : ನುಡಿಯೆಲ್ಲಾ ಉಪಚಾರ !
ಮಿಗಿಲೊಂದು ಮಾತು ಬಂದೆಡೆ ಸೈರಿಸಲಾರೆನು .
ತುಯ್ಯಲಾದಡೆ ಉಂಬೆ ; ಹುಯ್ಯಲಾದಡೆ ಓಡುವೆ !
ಆಳು ಬೇಡಿದಡೆ ಆಳ್ದನೇನೀವನಯ್ಯಾ ?
ಆಳಾಗಿ ಹೊಕ್ಕು ಅರಸನಾಗಿ ನಡೆದಡೆ,
ಆಳಿಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ !

ಬಸವಣ್ಣನವರು ಈ ವಚನದಲ್ಲಿ ಆಳು-ಅರಸ ಎನ್ನುವ ಎರಡು ಪದಗಳನ್ನು ಬಳಸಿದ್ದಾರೆ. ಆಳಾಗಿ ದುಡಿದು ಅರಸನಾಗಿ ಉಣ್ಣು, ಎನ್ನುವ ನಾಣ್ಣುಡಿಯೂ ಇದೆ. ಇದು ಹೊರಗಿನ ಮಾತೂ ಹೌದು, ಒಳಗಿನ ಮಾತೂ ಹೌದು. ಮಾಲೀಕ ಹೇಳಿದಂತೆ ಕೇಳಿ ಆತನಿಗೆ ವಿಶ್ವಾಸಿಕನಾಗಿ ದುಡಿದರೆ, ತನ್ನ ಎಲ್ಲ ಜವಾಬ್ದಾರಿಗಳನ್ನು ಆಳಿನ ಮೇಲೆ ಬಿಡುತ್ತಾನೆ. ಆಳು ಮಾಲೀಕನ ಸಕಲ ವರಸೆಗಳನ್ನೂ ಕಲಿತು ಒಮ್ಮೆ ಮಾಲೀಕರ್ನಾಗುತ್ತಾನೆ. ಮಾಲೀಕನ ಪ್ರೀತಿಗೆ ಪಾತ್ರನಾಗುತ್ತಾನೆ. ಇದು ಹೊರಗಿನ ಮಾತು.

ಅರಸ ಅಂದರೆ ಅರಿವು ; 'ಮನ ಅಂದರೆ ಆಳು.ಇದು ಒಳಗಿನ ಮಾತು. ಅರಸನನ್ನು ನಂಬಿ, ಅರಸ ಹೇಳಿದಂತೆ ಕೇಳಿ, ಅರಸ ಹೇಳಿದ ಸಕಲ ಕೆಲಸಗಳನ್ನು ಆಳಾದವನು ಆಳಾಗಿ ಮಾಡಬೇಕು. ಆಳು ದುಡಿದದ್ದು ಅರಸನಿಗೆ ಕಾಣಬೇಕು. ಆಳಿಗೂ ತೃಪ್ತಿಯಾಗಬೇಕು. ಆ ಆಳೇ ಅರಸನಾಗುತ್ತಾನೆ. ಕಾಲಾಳಾಗಿ ಸೇರಿಕೊಂಡ ನೆಪೋಲಿಯನ್ ಚಕ್ರವರ್ತಿಯಾದಂತೆ ! ಅರಿವು ಎಂಬ ಅರಸನನ್ನು ನಂಬಿ ಮನ ಎಂಬ ಆಳು ನಡೆಯಬೇಕು.

ಮನಕ್ಕೆ ಸ್ವಾತಂತ್ರ್ಯವಿಲ್ಲ; ಅದಕ್ಕೆ ಅರಿವಿಲ್ಲ. ಮನ ಹೇಳಿದಂತೆ ತನು ಕೇಳಿದರೆ ಅದು ಸದಾ ಆಳಾಗಿ ಉಳಿಯುತ್ತದೆ. ಕೇಳಿದಂತೆ ಕೆಲಸ ನಟಿಸಿ ಮಾಡದಿದ್ದರೂ ಅದು ಸದಾ ಆಳಾಗಿ ಉಳಿಯುತ್ತದೆ. ಅರಿವಿನ ಮಾತು ಕೇಳಿ ಅರಿವು ಹೇಳಿದಂತೆ ಮನ ತನುವಿನೊಂದಿಗೆ ನಡೆಯಬೇಕು.

ಶ್ರೀಕ್ರಿಷ್ಣ ಮಹಾಜ್ಞಾನಿ; ಆದರೂ ಅರ್ಜುನನ ರಥಕ್ಕೆ ಸಾರಥಿಯಾದ. ಶ್ರೀಕ್ರಿಷ್ಣ ಹೊಡೆಯೆಂದಲ್ಲಿ ಅರ್ಜುನ ಬಾಣ ಹೊಡೆದ ; ಹದಿನೆಂಟು ಅಕ್ಷೋಹಿಣಿ ಸೈನ್ಯ ಅರ್ಜುನನ ಬಾಣಕ್ಕೆ ನೆಲಕಚ್ಚಿತು; ರಥಗಳು ಪುಡಿ ಪುಡಿಯಾದವು ; ಆನೆಗಳು ಘೀಳಿಟ್ಟವು. ದ್ರೋಣ, ಭೀಷ್ಮ, ಕರ್ಣ, ದುರ್ಯೋಧನ, ದುಶ್ಯಾಸನರೆಂಬ ವೀರರು ಸತ್ತುಹೋದರು, ಶ್ರೀಕ್ರಿಷ್ಣ ಹೇಳಿದಂತೆ ಪಾಂಡವರು ಕೇಳಿ ಪಟ್ಟಕ್ಕೆ ಬಂದರು.

ಶ್ರೀ ಕ್ರಿಷ್ಣನೆಂದರೆ ಅರಿವು ; ಮನ ಎಂದರೆ ಅರ್ಜುನ, ದೇಹವೆಂದರೆ ರಥ ! ಮನ ಹೇಳಿದಂತೆ ದೇಹ ಕೇಳಿದರೆ ಅದು ಸರಾಯಿ ಅಂಗಡಿಗೆ, ವೇಶ್ಯಾಗೃಹಕ್ಕೆ, ಜೂಜಿನ ಮನೆಗೆ ಹೋಗುತ್ತದೆ. ಅರಿವು ಹೇಳಿದಂತೆ ದೇಹ ಕೇಳಿದರೆ ಅರಿವೇ ತಾನಾಗುತ್ತದೆ. ಶ್ರೀಕ್ರಿಷ್ಣ ಅರಿವಾಗಿ ತನುವೆಂಬ ರಥವನ್ನು ಓಡಿಸಿದ ; ಅರ್ಜುನ ಮನವಾಗಿ ಶ್ರೀಕ್ರಿಷ್ಣ ಹೇಳಿದಂತೆ ಹಿಂದೆ ನಿಂತು ಕೇಳಿದ.

ಎಲೆ ಮನವೆ, ಅರಿವಿನ ಮಾತು ಕೇಳಿ, ಅರಿವನ್ನೇ ನಂಬಿ ಅರಿವಿನಿಂದ ನಡೆ, ಸುಖಕ್ಕೆ ಹಿಗ್ಗಿ ದುಃಖಕ್ಕೆ ಕುಗ್ಗಿದರೆ ಆಳು ಬೇಡಿದ್ದು ಅರಸ ಕೊಡುವುದಿಲ್ಲ. ಆಳಾಗಿ ನಟಿಸಿ ಬರೀ ಮಾತಿನಿಂದ ಅರಸನಾಗಲು ಬರುವುದಿಲ್ಲ ಎಂದು ಬಸವಣ್ಣನವರು ಮನಕ್ಕೆ ಪಾಠ ಮಾಡಿದ್ದಾರೆ.

255

ಇರಿಸಿಕೊಂಡು ಭಕ್ತರಾದರೆಮ್ಮವರು.
ತರಿಸಿಕೊಂಡು ಭಕ್ತರಾದರೆಮ್ಮವರು.
ಕೊರೆಸಿಕೊಂಡು ಭಕ್ತರಾದರೆಮ್ಮವರು.
ಜರಿಸಿಕೊಂಡು ಭಕ್ತರಾದರೆಮ್ಮವರು.

ಕೂಡಲಸಂಗನ ಶರಣರಿಗೆ ಮುಳಿಸ ತಾಳಿ
ಎನ್ನ ಭಕ್ತಿ ಅರೆಯಾಯಿತ್ತು !

ತನ್ನ ಅರಿವು ತನಗೆ ಪರಿಚಯವೇ ಇಲ್ಲ. ತನುವಿನ ಅರಿವೇ ತನುವಿಗೆ ಗುರು ! ಆ ಅರಿವೇ ತನುವಿಗೆ ದೇವರು ! ತನುವಿನ ಅರಿವೆಂಬ ದೇವರಿಗೆ ಮುನಿಸಿಕೊಂಡ ಮನದ ಭಕ್ತಿ ಅರೆಯಾಯಿತು.

ಪುರಾತನರು ಆ ಅರಿವೆಂಬ ಗುರುದೇವನಿಗೆ ಹೇಗೆ ಭಕ್ತಿ ಮಾಡಿದರು ಎಂಬುದಕ್ಕೆ ಬಸವಣ್ಣನವರು ತಮ್ಮ ವಚನದ ಮೂಲಕ ನಾಲ್ಕು ಸತ್ಯ ಕತೆಗಳನ್ನು ಹೇಳಿದ್ದಾರೆ.

ಇರಿಸಿಕೊಂಡು ಭಕ್ತರಾದರೆಮ್ಮವರು :

ಸೇದಿರಾಜನೆಂಬ ಮಹಾಶರಣನಿದ್ದ. ಚೋಳ ಮಂಡಲದ ತಿರುನಾವಲೂರು ಆತನ ಕಾರ್ಯಕ್ಷೇತ್ರವಾಗಿತ್ತು. ಈ ಕ್ಷೇತ್ರ ಜಂಗಮರದು ಎಂದು ಘೋಷಿಸಿದ್ದ. ಜ್ಞಾನಿಗಳು ಮಾತ್ರ ಈ ಕ್ಷೇತ್ರದ ಅಧಿಪತಿಗಳಾಗಬೇಕೆಂದು ತೀರ್ಮಾನಿಸಿದ್ದ.

ಸೇದಿರಾಜನೆಂಬ ಶರಣನಿಗೆ ಮುಕ್ತಿನಾಥನೆಂಬ ಒಬ್ಬ ತಮ್ಮನಿದ್ದ. ಆತನಿಗೆ ರಾಜ್ಯದಲ್ಲಿ ಪಾಲುಕೊಡದಿರಲು ತೀರ್ಮಾನಿಸಿದ. ಆತ ಯುದ್ಧಕ್ಕೆ ಬಂದು ಸೋತು ಹಿಂತಿರುಗಿದ. ಮತ್ತೆ ಅವನು ಜಂಗಮವೇಷದಿಂದ ಬಂದು ಶೈವಾಗಮಗಳನ್ನು ಭೋದಿಸುವ ನೆಪದಲ್ಲಿ ಸೇದಿರಾಜನನ್ನು ಖಡ್ಗದಿಂದ ಇರಿದ. ಗಾಯದ ಯಾತನೆಯನ್ನು ತೋರಿಸಿಕೊಳ್ಳದೆ ರಾಜನು ಮಂತ್ರಿಗೆ ಅಪ್ಪಣೆ ಮಾಡಿದ. ಜಂಗಮರೂಪಿಯಾದ ಅವರನ್ನು ಸಕಲ ಗೌರವಾದರಗಳಿಂದ ಕಳುಹಿಸುವಂತೆ ತಿಳುಹಿಸಿದ.

ಧ್ಯಾನಕ್ಕೆ ಕುಳಿತು, ಜ್ಞಾನಿಯೊಬ್ಬರನು ಕರೆದು ಇರಿದ ಅಲಗನ್ನು ತೆಗೆಯುವಂತೆ ಹೇಳಿದ. ಆಗ ತನುವಿನಲ್ಲಿ ತನ್ಮಯವಾದ ಅರಿವೆಂಬ ಶಿವನು ಚುಚ್ಚಿದ ಗಾಯಕ್ಕೆ ನೋಯದ ಮನಕ್ಕೆ ಘನಪದವಿಯನ್ನಿತ್ತು ಸತ್ಕರಿಸಿದ. ಹೀಗೆ ಸೇದಿರಾಜನೆಂಬ ಶರಣ ಇರಿಸಿಕೊಂಡು ಅರಿವಿಗೆ ಭಕ್ತನಾದ.

ತರಿಸಿಕೊಂಡು ಭಕ್ತರಾದರೆಮ್ಮವರು :

ಮೊನೆಯಾಂಡನೆಂಬ ಶರಣ ಅಪ್ರತಿಮ ಶೂರ; ಮಹಾಜ್ಞಾನಿ; ಜಂಗಮ ಪ್ರೇಮಿ. ಯುದ್ಧದಿಂದ ಬಂದ ಹೊನ್ನನ್ನು ಮಹಾಜ್ಞಾನಿಗಳಿಗೆ ಜಂಗಮರಿಗೆ ವಿನಿಯೋಗಿಸುತ್ತಿದ್ದ. ಒಮ್ಮೆ ಈತ ಪಗಲ್‌ಚೋಳನ ಪರವಾಗಿ ಯುದ್ಧ ಮಾಡುತ್ತಿದ್ದ. ಪಾಂಡ್ಯ ರಾಜನ ಕಡೆಯ ಕಪಟ ಜಂಗಮ ವೇಷದ ರಾವುತನು ಯುದ್ಧ ಮಾಡಲು ಬಂದು ನಿಂತ. ಜಂಗಮ ವೇಷದವನೊಂದಿಗೆ ಮೊನೆಯಾಂಡ ಯುದ್ಧ ಮಾಡದೆ ಆಯುಧ ಚೆಲ್ಲಿ ಕೈಮುಗಿದು ನಿಂತ. ಜಂಗಮ ವೇಷದ ಕಪಟಿ ಮೊನೆ ಯಾಂಡನ ಎರಡೂ ಕೈಗಳನ್ನು ತರಿದ (ಕತ್ತರಿಸಿ ಹಾಕಿದ). ಸ್ವಲ್ಪವೂ ವಿಚಲಿತನಾಗದೆ ತನ್ನ ವ್ರತವನ್ನು ಸಮಾಧಾನದಿಂದ ಆಚರಿಸಿದ. ಜ್ಞಾನಿ ಜ್ಞಾನಿಯನ್ನು ಕೊಲ್ಲಬಾರದೆಂಬ ಅರಿವಿನ ಭಕ್ತಿಯನ್ನು ತನ್ನ ಎರಡೂ ಕೈಗಳನ್ನು ತರಿಸಿಕೊಂಡು ಮೆರೆವ.

ಕೊರೆಸಿಕೊಂಡು ಭಕ್ತರಾದರೆಮ್ಮವರು :

ಸಿಂಧೂದೇಶದ ರಾಜನಾಗಿದ್ದ ಸಿಂಧುಮರಾಳನು ತನ್ನ ತನು ಮನ ಧನವೆಲ್ಲ ಜಂಗಮಾರ್ಪಿತ ಎಂದು ಸಾರಿದ್ದ. ಇದನ್ನು ಅರಿತ ಜಂಗಮನೊಬ್ಬ ಆತನಿಂದ ರಾಜ್ಯ ಬೇಡಿ ಪಡೆದ. ರಾಜ್ಯ ಜಂಗಮನಿಗೆ ನೀಡಿ ಹೊರನಡೆದ . ಈ ವೃತ್ತಾಂತ ಕೇಳಿದ ಜಂಗಮನೊಬ್ಬ ಬಂದು ನಿಮ್ಮ ದೇಹದ ಅರ್ಧ ಭಾಗವನ್ನು ನನಗೆ ಕೊಡಿ ಎಂದು ಕೇಳಿದ. ಅದಕ್ಕೆ ಸಿಂಧುಮರಾಳ

ಸಂತೋಷದಿಂದ ಒಪ್ಪಿ, ತನ್ನ ದೇಹ ಗರಗಸ ದಿಂದ ಕೊಯ್ದು ಕೊಡುವಾಗ ಆತನ ಎಡಗಣ್ಣಿನಿಂದ ನೀರು ಸುರಿಯಿತು. ''ಅಳುತ್ತಾ ಕೊಡುವ ದೇಹ ನನಗೆ ಬೇಡವೆಂದು ಜಂಗಮ ಹೇಳಲು'' ಬಲಭಾಗ ತಮಗೆ ಅರ್ಪಿತವಾಗುತ್ತದೆ. ಎಡಭಾಗ ವ್ಯರ್ಥವಾಗುತ್ತದಲ್ಲಾ ಎಂದು ಕಣ್ಣೀರು ಬಂದಿತ್ತು '' ಎಂದನಂತೆ. ಹೀಗೆ ಕೊರೆಸಿಕೊಂಡು ಭಕ್ತರಾದರೆಮ್ಮವರು.

ಜರಿಸಿಕೊಂಡು ಭಕ್ತರಾದರೆಮ್ಮವರು :

ತಿರುನೀಲಕಂಠ ಎನ್ನುವ ಶರಣ ಅರವತ್ಮೂರು ಪುರಾತನರಲ್ಲಿ ಮೊದಲಿಗ. ಕತ್ತಲಲ್ಲಿ ಈತ ಬರುವುದು ಕಾಣದೆ ವಿಲಾಸಿನಿಯೊಬ್ಬಳು ತಳಿಗೆಯ ಎಂಜಲು ನೀರು ಚೆಲ್ಲಿದಳು. ತಿಳಿಯದೇ ಮಾಡಿದ ಅಪರಾಧಕ್ಕೆ ಮರುಗಿದಳು. ಶರಣರನ್ನು ಕರೆದು ಮಜ್ಜನಕ್ಕೆರೆದು ಪರಿಮಳ ದ್ರವ್ಯ ಹಚ್ಚಿ ಪೂಜಿಸಿ ಕಳುಹಿಸಿದಳು.

ಮನೆಗೆ ಬಂದ ಪತಿಯನ್ನು ನೋಡಿ ದಾರಿ ತಪ್ಪಿದನೆಂದು ತಿಳಿದ ಸತಿ ಸಿಡಿಮಿಡಿಗೊಂಡು ಮುಟ್ಟದಿರಲು ಶಿವನಾಣೆ ಇಟ್ಟಳು. ಹೀಗೆ ತೊಂಬತ್ತು ವರುಷ ಒಬ್ಬರನ್ನೊಬ್ಬರು ಮುಟ್ಟದೆ ಕಳೆದರು. ಜಂಗಮನೊಬ್ಬ ತಿಳಿದು; ಅವರಿಗೆ ತನ್ನ ಜೋಳಿಗೆ ಜೋಪಾನವಾಗಿಡಲು ಕೊಟ್ಟನಂತೆ. ಅದು ಕಾಣದಿರಲು ತನ್ನ ಜೋಳಿಗೆ ಕೊಡಲು ರಾದ್ಧಾಂತ ಮಾಡಿ ಪಂಚಾಯಿತಿಗೆ ಕರೆದ. ಎಲ್ಲರೆದುರಿಗೆ ಬಾಯಿಗೆ ಬಂದಂತೆ ದಂಪತಿಗಳನ್ನು ಜರೆದ. ಕಳೆದು ಹೋದ ಜೋಳಿಗೆ ಬದಲಿಗೆ ಬೇರೆ ವಸ್ತು ಸ್ವೀಕರಿಸದೆ ತನ್ನದೇ ಬೇಕೆಂದು ಹಠ ಹಿಡಿದ. ಕೊನೆಗೆ ಸತಿ ಪತಿಗಳಿಬ್ಬರೂ ಕೈಹಿಡಿದು ನಾವೇ ಕಳೆದೆವೆಂದು ಕೊಳದಲ್ಲಿ ಮುಳುಗಿದರೆ ಬಿಡುವುದಾಗಿ ನುಡಿದ. ಶಿವನಾಣೆ ನೆನಪಿಗೆ ಬಂದು ದಂಪತಿಗಳು ಮುಳುಗಲು ಒಪ್ಪಲಿಲ್ಲ. ಕೊನೆಗೆ ಕೋಲು ಹಿಡಿದು ಮುಳುಗಿ ಎಂದ. ಅದಕ್ಕೆ ಒಪ್ಪಿದ ದಂಪತಿಗಳು ಕೋಲು ಹಿಡಿದು ಕೊಳದಲ್ಲಿ ಮುಳುಗಿದರು. ಸತಿ ಪತಿಗಳು ಒಂದಾದರು. ಜಂಗ ಮನಿಂದ ಜರಿಸಿಕೊಂಡು ಆ ಜಂಗಮನಿಗೆ ಭಕ್ತರಾದರು. ಜಂಗಮನೆಂದರೆ ಅರಿವು. ಆ ಅರಿವಿಗೆ ಭಕ್ತಿ ಮಾಡಿದರು.

ತನು ಜಲಬಿಂದುವಿನಿಂದ ಹುಟ್ಟಿ ಆ ಜಲವೇ ಗಟ್ಟಿಯಾಗಿ ತನುವಾಗಿದೆ. ಜಲಕ್ಕೆ ಸುಖ ದುಃಖಗಳಿಲ್ಲ. ಜಲ, ಜಗಳ ಕಾಯುವುದಿಲ್ಲ. ಜಲ, ಜಲದೊಂದಿಗೆ ಯುದ್ಧ ಮಾಡುವುದಿಲ್ಲ ಸಿಟ್ಟಾಗುವುದಿಲ್ಲ, ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ, ಜಲ ತನ್ನ ಸಮತೋಲನ ಕಾಯ್ದುಕೊಳ್ಳತ್ತದೆ. ಆದರೆ ಆ ಜಲ ಬಿಂದು ತಂದೆ ಎನ್ನುವ ತನುವಿನ ಮೂಲಕ ತಾಯಿ ಎನ್ನುವ ತನುವಿನ ಗರ್ಭಸೇರಿ ರಕ್ತವಾಗಿ ಪಿಂಡವಾಗಿ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚವಾಗಿ ಅರಿವಿನ ತನುವಾಗಿ ಹೊರಬಂದಿದೆ. ಈ ಜಲಕ್ಕೆ ಮುನಿಸೇಕೆ ? ಆಣೆ ಪ್ರತಿಜ್ಞೆಗಳೇಕೆ ? ಜಲ ಜಲದಲ್ಲಿ ಮುಳುಗಿ ಜಲವಾಯಿತು. ತನುವಿನ ಅರಿವು ತನುವಿಗೆ ತಿಳಿದರೆ ಅದು ಜಗದಗಲ ಮುಗಿಲಗಲವಾಯಿತು. ವಿರಾಟ ಸ್ವರೂಪವೇ ಆಯಿತು. ದೇಹ ಒಂದು ತೃಣವಾಗಿ ದೇಹದ ಅರಿವೇ ಘನವಾಯಿತು. ಅದು ಸದಾ ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವಾಯಿತು.

ತನು ಇರಿಸಿಕೊಂಡರೇನು ? ತರಿಸಿಕೊಂಡರೇನು ? ಕೊರೆಸಿಕೊಂಡರೇನು ? ಜರಿಸಿ ಕೊಂಡರೇನು ? ತಿಳಿದ ತನು ಅರಿವಿನ ತನು. ಅರಿವಿನ ತನುವಿಗೆ ಮುನಿಯಬಾರದು. ಏಕೆಂದರೆ ಶರಣರು ಮಹಾಜ್ಞಾನಿಗಳು ! ತನುವನ್ನು ವಿರಾಟ ಸ್ವರೂಪನನ್ನಾಗಿ ಮಾಡುವ ಬುದ್ಧ ಮಹಾವೀರರು; ಮಹಾಂತ ಸಂತರು; ದಾಸವರೇಣ್ಯರು. ಕ್ರಿಸ್ತ, ಕ್ರಿಷ್ಣರು. ಮನ ಅವರನ್ನು

ಮುನಿಸಿಕೊಂಡರೆ ಆ ಮನವನ್ನು ಘನ ಮನವನ್ನಾಗಿ ಮಾಡುವವರು ಯಾರು ?

256

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ !
ಕುಂದು - ಹೆಚ್ಚ ನುಡಿವೆ,
ಒಂದು ಮಾತಿನ ಗೆಲ್ಲಕ್ಕೆ ಹಿಡಿದು ಹೋರುವೆ ;
ಕೂಡಲಸಂಗನ ಶರಣರೆನ್ನಾಳ್ದರೆಂಬೆ !

ತನು ನುಡಿದದ್ದೆಲ್ಲ ವಚನವೇ. ತನುವಿಗೆ ನುಡಿಯುವ ಅವಸರವೇ ಇಲ್ಲ. ಆದರೂ ತನುವನ್ನು ಆವರಿಸಿಕೊಂಡ ಮನ ನುಡಿಯುವಂತೆ ಮಾಡುತ್ತದೆ. ನುಡಿದಂತೆ ನಡೆಯದೆ ಇರುವಂತೆ ಆದೇಶಿಸುತ್ತದೆ. ಮನಕ್ಕೆ ನುಡಿಯುವುದು ಸುಖ; ನುಡಿದಂತೆ ನಡೆಯದೇ ಇರುವುದು ಬಲು ಸುಖ! ನುಡಿಯುವಾಗಲೂ ನಾಚಿಕೆಯಿಲ್ಲ; ನಡೆಯುವಾಗಲೂ ನಾಚಿಕೆ ಇಲ್ಲ.

ನುಡಿದ ಮಾತು ; ನುಡಿದಂತೆ ನಡೆಯದ ಮಾತುಗಳನ್ನು ಕೇಳಿದ ತನುಗಳು ನಿರ್ಧರಿಸಿ ಹೌದು ಅಲ್ಲ ಎನ್ನುವುದಕ್ಕಿಂತ ಮೊದಲು ತನ್ನ ತನುವಿನಲ್ಲಿರುವ ಅರಿವಿನ ಒರೆಗಲ್ಲಿಗೆ ಹಚ್ಚಿ ಕೇಳಲು ಬರುವುದಿಲ್ಲವೇ ? ನುಡಿಯುವ ತನು ನುಡಿಯಬೇಕೊ ನುಡಿಯಬಾರದೊ ಎಂದು ನಿರ್ಧರಿಸಲು ಬರುವುದಿಲ್ಲವೆ ? ಬರುತ್ತದೆ ; ಆದರೆ ಮನಕ್ಕೆ ಇದು ಹಿತವೆನಿಸುವುದಿಲ್ಲ. ತನುವಿಗೆ ಕುಂದು ಉಂಟು ಮಾಡುವುದೇ ಮನದ ಕೆಲಸ !

ಮನ ತನುವನ್ನು ಮಾತಾನಾಡಿಸಿ ಸುಖಿಸುತ್ತದೆ. ಮಾತು ತಪ್ಪುವಂತೆ ಮಾಡಿ ಸುಖಿಸುತ್ತದೆ. ಮಾತಿನಿಂದಲೇ ಗೆಲ್ಲುವುದಕ್ಕೆ ತನುವನ್ನೇ ಗುರಿಯಾಗಿಟ್ಟುಕೊಂಡು ಹೌದು ಅಲ್ಲ ಎನ್ನುವ ನಿರ್ಧಾರಗಳನ್ನು ತನುವಿನ ಮೇಲೆ ಹೇರುತ್ತದೆ.

ಮನ ತನುವನ್ನು ಹಿಡಿದು ಹೌದೆನ್ನಿಸಿಕೊಂಡರೂ ಅಲ್ಲ ; ಅಲ್ಲ ಎನ್ನಿಸಿಕೊಂಡರೂ ಅಲ್ಲ. ಹೌದು ಅಲ್ಲಗಳು ಮನದ ರುಚಿಯೇ ಹೊರತು ಅರುವಿನ ಸಹಜಕ್ರಿಯೆ ಅಲ್ಲ.

ಮನ ತನುವಿನಿಂದ ನುಡಿದ ಹೌದು ಅಲ್ಲವನ್ನು ಕಳೆದು; ತನುವಿನ ಕಣ ಕಣದಲ್ಲಿರುವ ಅರಿವೆಂಬ ಗುರುವಿಗೆ ನಿರ್ಧರಿಸಲು ಬರುತ್ತದೆ. ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ನಾಲಿಗೆಯಿಂದ ರುಚಿಸಿ, ಮೂಗಿನಿಂದ ಮೂಸಿಸಿ, ಚರ್ಮದಿಂದ ಸ್ಪರ್ಶಿಸಿ ಮಾತನಾಡದೆ ನಿರ್ಧರಿಸಲು ಬರುತ್ತದೆ. ಅರಿವು ತನುವಿನ ಸರ್ವಾಧಿಕಾರಿ ! ಮನ ತನುವನ್ನು ಆವರಿಸಿದ ದುರಹಂಕಾರಿ !

ಮನವೆಂಬ ದುರಹಂಕಾರಿ ತನುವನ್ನು ಆಳುವುದಕ್ಕಿಂತ ಮಹಾಜ್ಞಾನಿಗಳಾದ ನಿರಹಂಕಾರಿ ಕೂಡಲಸಂಗನ ಶರಣರ ಕೈಯಲ್ಲಿ ತನುವನ್ನು ಕೊಡುವುದು ಹಿತ. ಅವರಿಗೆ ಶರಣಾಗಿ ದುರಹಂಕಾರವೆಂಬ ಮನ ಕಳೆದುಕೊಂಡು ಅರಿವಿನ ಮೂಲಕ್ಕೆ ಹೋಗುವುದು ಬಲುಹಿತ.

257

ಇಲ್ಲವೆಯ ಮೇಲೆ ಕಂಚೊಡೆದಂತೆ ಬಡಮನವೆನ್ನ ಕಾಡಿತ್ತಯ್ಯಾ.
ಮತಿಯಿಲ್ಲದ ಮರುಳ ನಾನಯ್ಯ ;
ಭಕ್ತಿಯಿಲ್ಲದ ಬಡವ ನಾನು.

ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ.
ಎನಗೆ ನೀ ಕರುಣಿಸಾ ಕೂಡಲಸಂಗಮದೇವಾ.

ಇಲ್ಲವೆಯ ಮೇಲೆ ಕಂಚೊಡೆದಂತೆ ಬಡಮನವೆನ್ನ ಕಾಡಿತ್ತಯ್ಯಾ :

ಇಡೀ ವಚನದಲ್ಲಿಯ ಇದೊಂದು ಸಾಲಿನಲ್ಲಿ ಅದ್ಭುತವಾದ ಶಕ್ತಿಯನ್ನು ಅಡಗಿಸಿದ್ದಾರೆ ಜ್ಞಾನಭಂಡಾರಿ ಅಣ್ಣ ಬಸವಣ್ಣನವರು. ಇಲ್ಲವೆಯ ಮೇಲೆ ಅಂದರೆ ಯಾವುದು ಇಲ್ಲವೊ ಅದು ಇದೆ ; ಅದನ್ನು ಹೇಗಾದರೂ ಮಾಡಿ ಬಾಚಿಕೊ ಎಂದು ಕಂಚೊಡೆದಂತೆ ಅಂದರೆ ಗಂಟೆ ಹೊಡೆದಂತೆ ಮನ ತನುವನ್ನು ಕಾಡಿಸುತ್ತದೆ.

ತನು ಇಲ್ಲ ; ತನು ಹೆಣ್ಣಲ್ಲ ಗಂಡಲ್ಲ ; ತನು ಇದ್ದಂತೆ ಇಲ್ಲ. ಬಾಲ್ಯದಲ್ಲಿ ,ಪ್ರೌಢದಲ್ಲಿ, ಯೌವ್ವನದಲ್ಲಿ, ಮುಪ್ಪಿನಲ್ಲಿ ಬದಲಾವಣೆಗಳನ್ನು ಕಂಡುಕೊಂಡು ಒಮ್ಮೆ ಇಲ್ಲವಾಗುತ್ತದೆ. ಬಾಲ್ಯದಿಂದ ಹಿಡಿದು ಮುಪ್ಪಾಗಿ ಇಲ್ಲವಾಗುವವರೆಗೂ ಮನಕ್ಕೆ ತನುವಿನಲ್ಲಿರುವ ಅರಿವು ಗೊತ್ತಾಗುವುದೇ ಇಲ್ಲ. ಮನ ತನುವನ್ನು ಹೆಣ್ಣೆಂದು ಬಾಚಿಕೊಳ್ಳುತ್ತದೆ; ಗಂಡೆಂದು ಬಾಚಿಕೊಳ್ಳತ್ತದೆ.ಶ್ರೀಮಂತನೆಂದು ಆದರಿಸುತ್ತದೆ; ಬಡವನೆಂದು ತುಚ್ಛೀಕರಿಸುತ್ತದೆ. ಯೌವ್ವನ, ಅಧಿಕಾರಿ, ಗೌರವ, ಪಾಂಡಿತ್ಯಕ್ಕೆ ಮಣೆ ಹಾಕುತ್ತದೆ. ತನುವಿನ ಕಣ್ಣು ಇವು ಯಾವೂ ಅಲ್ಲ. ಅದರಲ್ಲಿ ಅರಿವು ಮಾತ್ರ ಇದೆ. ಅದು ಹೆಣ್ಣಲ್ಲ ಗಂಡಲ್ಲ. ಪಂಡಿತ ಪಾಮರ, ಮೊದಲೇ ಅಲ್ಲ. ಆರೂ ಇಲ್ಲವೆಯ ಮೇಲೆ ಮನ ಗಂಟೆ ಹೊಡೆದಂತೆ ಅದೇ ಸರ್ವಸ್ವವೆಂದು ಸಾರಿ ಹೇಳುತ್ತದೆ. ಮತಿಯಿಲ್ಲದ ತನುವಿಗೇನು ಗೊತ್ತು ಮನ ಹೇಳಿದಂತೆ ಕೇಳುತ್ತದೆ.

ಚಿನ್ನ ಎನ್ನುವುದು ಇಲ್ಲ. ಅದು ಬರೀ ಹಳದಿ ಲೋಹ ! ಹಳದಿ ಬಣ್ಣಕ್ಕೆ ಮರುಳಾದ ಮನ ಅದನ್ನು ಪಡೆಯಲು ತನುವನ್ನು ಹಗಲಿರುಳು ದುಡಿಯುವಂತೆ ಮಾಡುತ್ತದೆ . ಸಂಗ್ರಹಿಸಿ ಹಗಲಿರುಳು ಕಾಯುವಂತೆ ಮಾಡುತ್ತದೆ. ಲೋಹಕ್ಕೆ ಮೆತ್ತಿದ ಬಣ್ಣವನ್ನು ಮನ ತನುವಿರುವವರೆಗೂ ತಿಳಿಯುವುದೇ ಇಲ್ಲ. ಮನ ತನುವನ್ನು ಚಿನ್ನ ಮಾರಲು, ಕೊಳ್ಳಲು, ಕದಿಯಲು ಹಚ್ಚುತ್ತದೆ. ಕೊಂಡವರು, ಮಾರುವವರು ಶ್ರೇಷ್ಟರೆಂದು, ಕದ್ದವರನ್ನು ಕಳ್ಳರೆಂದು ಮನ ಘಂಟೆ ಹೊಡೆದು ಸಾರುತ್ತದೆ.

ತನುವಿನ ಕಣ ಕಣದಲ್ಲಿ ಅರಿವಿದೆ. ಅದನ್ನು ಅರಿಯದ ಬಡ ತನು ಏನು ಮಾಡೀತು? ಮನವನ್ನು ಬೇತಾಳದಂತೆ ಬೆನ್ನಿಗೆ ಹಾಕಿಕೊಂಡಿದೆ.

258

ಲಿಂಗವ ನಚ್ಚದೀ ಮನವು, ಜಂಗಮವ ನಂಬದೀ ಮನವು,
ಕೂಪರ ಕಂಡಡೆ ಒಲ್ಲದೀ ಮನವು.
ಈ ಮನದ ಭ್ರಮೆಯನೆಲ್ಲವ ಮರೆಸಿ
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು
ಕೂಡಲಸಂಗಮದೇವಾ.

ಯಾವ ವ್ಯಕ್ತಿಯೂ ತನ್ನ ಶಕ್ತಿಯಿಂದ ತನುವಿನ ಭ್ರಮೆಯನ್ನು ತೊಲಗಿಸಲಾರ. ಲಿಂಗ ಹಾಕಿಕೊಂಡು ಜಂಗಮ ವೇಷದಲ್ಲಿರುವ ಗುರುವಿಗೂ ತನುವಿನ ಭ್ರಮೆಯನ್ನು ಕಳೆಯಲು ಸಾಧ್ಯವಾಗುವುದಿಲ್ಲ, ಬದಲಾಗಿ ತನುವಿನ ಕಣಕಣದಲ್ಲಿ ಲಿಂಗಯ್ಯನೆಂಬ ಅವ್ಯಕ್ತ ವ್ಯಕ್ತಿಯಿದ್ದಾನೆ;

ಆತನನ್ನು ನಚ್ಚಬೇಕು. ಹಾಗೆಯೇ ಜಂಗಮನೆಂಬ ಛಲದಂಕ ಮಲ್ಲನಿದ್ದಾನೆ. ಆತನನ್ನು ನಂಬಬೇಕು.

ಕೂಪರ ಕಂಡಡೆ ಒಲ್ಲದೀ ಮನವು :

ಲಿಂಗಯ್ಯನನ್ನು; ಜಂಗಮನೆಂಬ ಛಲದಂಕಮಲ್ಲನನ್ನು ಮನದಿಂದ ಒಲಿಸಿಕೊಂಡ ನಿಪುಣ ತಂತ್ರಗಾರಿಕೆಯ ಅನುಭಾವಿಗಳಿದ್ದಾರೆ; ಅವರು ಯಾವ ವೇಷವನ್ನೂ ಹಾಕಿ ಕೊಂಡಿರುವುದಿಲ್ಲ.ಆದರೆ ಅಂಥವರ ಕಂಡರೆ ಮನಕ್ಕೆ ಹಿತವಾಗುವುದಿಲ್ಲ! ಅವರು ತನುವಿನಲ್ಲಿರುವ ಅರಿವೆಂಬ ಲಿಂಗಯ್ಯನನ್ನು ಹಾಗೂ ಅದನ್ನು ಪಾಲಿಸುವ ಛಲದಂಕ ಮಲ್ಲನೆಂಬ ಜಂಗಮನನ್ನೂ ತೋರಿಸುವ ಕರುಣಾಮಯಿಗಳು. ಅವರು ಮನದಿಂದ ಅರಿವೆಂಬ ಗುರುವನ್ನು ಒಲಿಸಿಕೊಂಡು ಆ ಗುರುವಿಗೆ ಶರಣಾದವರು.

ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲ ಸಂಗಮದೇವಾ :

ತನುವಿನ ಕಣಕಣದಲ್ಲಿದ್ದ ಅರಿವೆಂಬ ಗುರುದೇವನೇ; ನೀನು ಎನಗೆ ಒಲಿಯದಿದ್ದರೂ ಅಡಿಯಿಲ್ಲ. ನಿನ್ನನ್ನು ಒಲಿಸಿಕೊಂಡು ನಿನಗೆ ಶರಣಾದ ಶರಣರಿಗೆ ಶರಣೆಂಬುದನ್ನಾದರೂ ಈ ಹಾಳು ಮನಕ್ಕೆ ಕರುಣಿಸು ತಂದೆ; ಕೂಡಲ ಸಂಗಮನಾಥನೆ ಎಂದು ಆಲಾಪ ಮಾಡುವ ಸೂತ್ರವನ್ನು ಅಣ್ಣ ಬಸವಣ್ಣನವರು ಜಗದ ತನುಗಳಿಗೆ ಕರುಣಿಸಿದ್ದಾರೆ.

259

ಅಶನ ಕುಂದದು, ವ್ಯಸನ ಮಾಣದು.
ಆರತವಡಗದು ಬೆವಹಾರ ವುಡುಗದು.
ಮಜ್ಜನಕ್ಕೆರೆವೆನಯ್ಯಾ : ಕಾಯವಿಕಾರಿಯಾನು .
ಮಜ್ಜನಕ್ಕೆರೆವೆನಯ್ಯಾ : ಜೀವವಿಕಾರಿಯಾನು.
ಮಜ್ಜನಕ್ಕೆರೆವೆನಯ್ಯಾ : ಶರಣನಲ್ಲ, ಲಿಂಗೈಕ್ಯನಲ್ಲ!
ಕೂಡಲಸಂಗಮದೇವರಲ್ಲಿ
ಅಂತರ ಬೆಂತರ ನಾನಯ್ಯಾ.

ಮಜ್ಜನಕ್ಕೆರೆವೆನಯ್ಯಾ : ಕಾಯವಿಕಾರಿಯಾನು :

ಲಿಂಗಕ್ಕೆ ಮಜ್ಜನಕ್ಕೆರೆದರೆ ಕಾಯ ವಿಕಾರ ತೊಲಗಿರಬೇಕು. ಅಂದರೆ ಮಾತ್ರ ಪ್ರತಿದಿನ ಲಿಂಗಕ್ಕೆ ಮಜ್ಜನಕ್ಕೆರೆಯಬಹುದು. ಲಿಂಗಕ್ಕೆ ನೀರು ಹಾಕಿ ಪೂಜಿಸುವಾಗಲು ಕಾಯ ಲಿಂಗದಲ್ಲಿ ಮಗ್ನವಾಗದೆ, ಮನ ಕಾಯವನ್ನು ಎಲ್ಲೆಂದರಲ್ಲಿ ಕೊಂಡೊಯ್ಯುತ್ತದೆ. ಲಿಂಗ ಪೂಜಿಸಿದರೂ ಕಾಮಕ್ಕೆಳಿಸಿ ಕಾಯವಿಕಾರ ಮಾಡುತ್ತದೆ. ಕಳುವಿಗೆಳಿಸಿ ಕಾಯವಿಕಾರ ಮಾಡುತ್ತದೆ. ಅನ್ಯರನ್ನು ನಿಂದಿಸಿ ಕಾಯವಿಕಾರ ಮಾಡುತ್ತದೆ. ಸಲ್ಲದ ವ್ಯವಹಾರದಲ್ಲಿ ತೊಡಗಿಸಿ ಕಾಯವಿಕಾರಮಾಡುತ್ತದೆ. ಕಾಯದ ಹಸಿವಿಗಾಗಿ ವ್ಯಸನ ಮಾಡುತ್ತದೆ.

ಲಿಂಗಕ್ಕೆ ಎನಿಸುಕಾಲ ನೀರು ಹಾಕಿದರೂ ಕಾಯದ ಅಶನ ಕುಂದದು, ವ್ಯಸನ ಮಾಣದು, ಕಾಯವಿಕಾರವು ಅಡಗದು, ಅವ್ಯವಹಾರಗಳು ಉಡುಗವು. ಆದರೂ ಮನ ಕಾಯವನ್ನು ಲಿಂಗಕ್ಕೆ ಮಜ್ಜನ ಮಾಡಿಸುವ ಕಾಯಕಕ್ಕೆ ಹಚ್ಚಿದೆ. ಪೂಜಿಸುವ ಕಾಯಕ್ಕೂ ಲಿಂಗಕ್ಕೂ ಸಂಬಂಧವೇ ಇಲ್ಲದಂತೆ ಪೂಜೆ ಅನುದಿನ ನಡೆದಿದೆ. ಪೂಜಿಸುವ ಪೂಜೆಯಿಂದ ಕಾಯದ ವಿಕಾರವೂ ನಿಂತಿಲ್ಲ; ಪೂಜೆಯೂ ನಿಂತಿಲ್ಲ. ಪೂಜೆಯೇ ಬೇರೆ, ವ್ಯವಹಾರವೇ ಬೇರೆ ಎನುವಂತೆ ನಿತ್ಯವೂ ಮಜ್ಜನದೊಂದಿಗೆ ಲಿಂಗಪೂಜೆ

ನಡೆದಿದೆ.

ಮಜ್ಜನಕ್ಕೆರೆವೆನಯ್ಯಾ : ಜೀವವಿಕಾರಿಯಾನು :

ಲಿಂಗಕ್ಕೆ ಮಜ್ಜನಕ್ಕೆರೆದರೆ ಶಬ್ದದಿಂದ, ಸ್ಪರ್ಶದಿಂದ, ರುಚಿಯಿಂದ, ದೃಶ್ಯದಿಂದ, ವಾಸನೆಯಿಂದ ಕಾಯ ಮತ್ತು ಕಾಯದ ಜೀವ ವಿಕೃತವಾಗಬಾರದು. ಅನ್ಯ ಕಾಯಗಳನ್ನೂ ವಿಕೃತಗೊಳಿಸಬಾರದು. ಆದರೆ ನಿತ್ಯ ಲಿಂಗಕ್ಕೆ ಮಜ್ಜನ ಮಾಡುವುದರಿಂದ ಇವು ಯಾವೂ ತನುವಿಗೆ ಸಾಧ್ಯವಾಗುವುದಿಲ್ಲ; ಇತರ ಕಾಯಗಳನ್ನು ಸಂತೃಪ್ತಿಗೊಳಿಸಲೂ ಸಾಧ್ಯವಾಗಿಲ್ಲ, ಆದರೂ ಮಜ್ಜನಕ್ಕೆರೆಯುವುದು ನಿಂತಿಲ್ಲ. ಜೀವ ವಿಕಾರಿಯಾಗುವುದನ್ನು ಲಿಂಗಯ್ಯನಿಗೆ ನಿಲ್ಲಿಸಲು ಸಾಧ್ಯವಾಗಿಲ್ಲ!

ಮಜ್ಜನಕ್ಕೆರೆವೆನಯ್ಯಾ : ಶರಣನಲ್ಲ, ಲಿಂಗೈಕ್ಯನಲ್ಲ!

ಕೊರಳಲ್ಲಿ ಕಟ್ಟಿಕೊಂಡ ಲಿಂಗಕ್ಕೆ ತನು ನಿತ್ಯ ಮಜ್ಜನಕ್ಕೆರೆಯುತ್ತದೆ.ಆದರೂ ಶರಣನಾಗಲು ತನುವಿಗೆ ಸಾಧ್ಯವಾಗಿಲ್ಲ. ಹಾಗೆಯೇ ಲಿಂಗಕ್ಕೆರೆದರೂ ಲಿಂಗೈಕ್ಯನಾಗಲೂ ಸಾಧ್ಯವಾಗಿಲ್ಲ. ''ಎರೆದರೆ ನೆನೆಯದು ಮರೆತರೆ ಬಾಡದು ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ '' ನಿತ್ಯ ಮಜ್ಜನಕ್ಕೆರೆದರೆ ನೆನೆಯದ, ಮರೆತರೆ ಬಾಡದ ಲಿಂಗ ; ಅಂಗಕ್ಕೆ ಏನಾದರೂ ಹೇಳಬಲ್ಲುದೆ? ಎನ್ನುವುದು ಅಂಗವನ್ನು ಆವರಿಸಿಕೊಂಡ ಮನವೆಂಬ ಅಂತರ ಪಿಶಾಚಿಗೆ ಹೊಳೆಯುವುದಿಲ್ಲ. ಅದು ಅಂಗವನ್ನು ಹಿಡಿದು ಲಿಂಗಕ್ಕೆ ಮಜ್ಜನಕ್ಕೆರೆಯುತ್ತದೆ, ಅದು ಅಂಗವನ್ನು ಹಿಡಿದು ಅಂಗ (ವಿಷಯ)ದೊಂದಿಗೆ ಸರಸವಾಡುತ್ತದೆ, ಅದು ಅಂಗವನ್ನು ಹಿಡಿದು ಅಂಗವನ್ನು ನಿಂದಿಸಿ ನಿಂದನೆಗೆ ಒಳಗಾಗುತ್ತದೆ. ಅದು ಅಂಗವನ್ನು ಹಿಡಿದು ಅಶನಕ್ಕಾಗಿ ಕುದ್ದು ವ್ಯಸನಮಾಡುತ್ತದೆ. ಅದರ ಕಾಮವಡಗದು, ವ್ಯವಹಾರ ವಡಗದು ಹಾಗೆಯೇ ಎರೆದರೆ ನೆನೆಯದ ಮರೆತರೆ ಬಾಡದ ಲಿಂಗಕ್ಕೆ ನಿತ್ಯ ಮಜ್ಜನಕ್ಕೆರೆಯುವುದೂ ನಿಲ್ಲದು. ಒಂದಕ್ಕೊಂದು ಸಂಬಂಧವಿಲ್ಲದಂತೆ ಮನವೆಂಬ ಅಂತರಪಿಶಾಚಿ ಅಂಗವನ್ನು ಮಂಗವನ್ನಾಗಿ ಕುಣಿಸಿ ಕುಣಿಸಿ ಕೊಲ್ಲುವುದು.

ಅಂಗದ ಕಣಕಣದಲ್ಲಿ ಅರಿವೆಂಬ ಲಿಂಗವಿದೆ. ಈ ಅಂಗಕ್ಕೆ ಎರೆದರೆ ಪುಳಕಿತಗೊಂಡು ನೆನೆದು ಆನಂದ ಪಡುತ್ತದೆ. ಮರೆತರೆ ಬಾಡುತ್ತದೆ. ಅರಿವಿನಿಂದ ಅಂಗ ಅಂಗದೊಂದಿಗೆ ಬೆರೆತು ಮತ್ತೊಂದು ಲಿಂಗಾಂಗವನ್ನು ಪಡೆಯುವ ಬಯಕೆಯ ಸುಖವನ್ನೇ ಮನ ತನ್ನ ದವಡೆಯಲ್ಲಿಟ್ಟುಕೊಂಡು ಕಾಮಪಿಶಾಚಿಯಾಗಿದೆ. ಈ ಪಿಶಾಚಿಯೆಂಬ ಮನ ಅಂಗಕ್ಕೆ ಲಿಂಗ ಹಾಕಿ ನಿತ್ಯ ಪೂಜಿಸಿದರೂ ಪಿಶಾಚಿಯೇ. ಮಂಡೆ ಬೋಳಿಸಿ ವೇಷಹಾಕಿ ಪೀಠದ ಮೇಲೆ ಕೂಡಿಸಿದರೂ ಅದು ಶರಣನಲ್ಲ, ಲಿಂಗೈಕ್ಯನಲ್ಲ!

ಅಂಗದಲ್ಲಿರುವ ಅರಿವೆಂಬ ಲಿಂಗಕ್ಕೆ; ಹರಿದಾಡುವ ಮನವನ್ನು ಹಿಡಿದು ಶರಣು ಹೋಗುವವನೇ ಶರಣ. ತನುವೇ ಅಂಗ ; ಅಂಗದ ಅರಿವೇ ಲಿಂಗ ; ಅದನ್ನು ಪೂಜಿಸುವ ಮನವೇ ಶರಣ; ಅವನೇ ಲಿಂಗೈಕ್ಯ !ಅರಿವಿನಿಂದ ನೋಡಿದರೆ ನೋಡ ೨ವ ತನುಗಳೆಲ್ಲ ಲಿಂಗಗಳೇ. ಜಾತಿ ಮತ ಪಂಥಗಳಿಲ್ಲ ; ಹೆಣ್ಣಿಲ್ಲ ಗಂಡಿಲ್ಲ, ದೇಶ ಭಾಷೆ ಗಡಿ ಸೀಮೆಗಳಿಲ್ಲ. ಸೀಮಾತೀತ ತನುವನ್ನು ಪಿಶಾಚಿಯಾಗಿ ಕಾಡಿದ ಮನ ಅಂಗದ ಲಿಂಗದಲ್ಲಿ ಐಕ್ಯವಾಗಿ ಘನಲಿಂಗವೇ ತಾನಾಗಿದೆ.

260

ಕುದುರನೇಸು ಕಾಲ ತೊಳದಡೆಯೂ ಕೆಸರು ಮಾಬುದೆ ?
ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯಾ .

ಕಂಬಳಿಯಲ್ಲಿ ಕಣಕವ ನಾದಿದಂತೆ, ಕಾಣಿರೇ ಎನ್ನಮನ !
ಕೂಡಲಸಂಗಮದೇವಾ, ನಿಮಗೆ ಶರಣೆಂದು ಶುದ್ಧ, ಕಾಣಯ್ಯಾ .

ಅಂಗವನ್ನು ಶ್ರೀಗಂಧದ ಸಾಬೂನಿನಿಂದ ಎಷ್ಟು ತೊಳೆದರೇನು ಅಂಗದಲ್ಲಿ ಬೆರೆತ ಮನವೆಂಬ ಮಂಗನ ಗುಣಗಳು ಕಳೆಯುವುದಿಲ್ಲ. ಮನವೆಂಬುದು ಕಂಬಳಿಯಲ್ಲಿ ಕಣಕವ ನಾದಿದಂತೆ ! ಮನ ಹಿಡಿದು ಒಳ್ಳೆಯ ಕೆಲಸಗಳನ್ನು ಮಾಡಿದ ಕಾಯ ಒಮ್ಮೆ ಗುಣಿ ಎನಿಸಿಕೊಳ್ಳುತ್ತದೆ ಮತ್ತೊಮ್ಮೆ ದುರ್ಗುಣಿ ಎನಿಸಿಕೊಳ್ಳುತ್ತದೆ.

ಹಸಿದ ಅಂಗಕ್ಕೆ ಅನ್ನ ನೀಡಿ ದಾನಿ ಎನ್ನಿಸಿಕೊಳ್ಳುತ್ತದೆ. ನೀಡಿದ ಅನ್ನವನ್ನು ಉಣ್ಣುವ ಅಂಗಕ್ಕೆ ಭಿಕ್ಷುಕ ಎಂದು ಕರೆಯುತ್ತದೆ. ಅನ್ನ ಮನದ ಆಸ್ತಿಯಲ್ಲ. ಅದು ತನುವಿನ ಸಂಪತ್ತು. ತನುವಿಗಾಗಿ ಸಿದ್ಧವಾದ ಆಹಾರ. ಆದರೂ ದಾನಿ ಭಿಕ್ಷುಕ ಎಂದು ಕರೆಸಿಕೊಳ್ಳುವ ದುರ್ಗುಣಿ ಮನಕ್ಕೆ ಇದು ಹೊಳೆಯುವುದೇ ಇಲ್ಲ. ಕಂಬಳಿಯ ಮೇಲೆ ಕುಳಿತರೆ ಶ್ರೇಯಸ್ಸು, ಗೌರವ ! ಕಂಬಳಿಯಲ್ಲಿ ಕಣಕ ನಾದಿದರೆ ವಿಪತ್ತು ಎಂದು ದುರ್ಗುಣಿ ಮನಕ್ಕೆ ತಿಳಿಯುವುದೇ ಇಲ್ಲ.

ಭಿಕ್ಷುಕ ಅಂಗ, ದಾನಿ ಅಂಗ ಎನ್ನುವುದೇ ಇಲ್ಲ! ಅಂಗಗಳೆಲ್ಲ ಅರಿವಿದ್ದ ಲಿಂಗಗಳೇ. ಆದರೆ ಅವಗುಣಿಯೆಂಬ ಮನವಿದ್ದ ಅಂಗ ಹಾಳುಮಣ್ಣಿನಿಂದ ನಿರ್ಮಿಸಿದ ಗೋಡೆಯಂತೆ .ಅದನ್ನು ಎಷ್ಟು ಬಾರಿ ತೊಳೆದರೂ ಕೆಸರು ಬರುವುದಲ್ಲದೆ ಶುದ್ಧ ಜಲ ಒಸರುವುದಿಲ್ಲ.

ಅಂಗ ಹಿಡಿದು ಗುಣ ಅವಗುಣಗಳನ್ನು ಸೃಷ್ಟಿ ಮಾಡಿಕೊಂಡ ಮನ; ಅಂಗದಲ್ಲಿದ್ದ ಅರಿವೆಂಬ ಲಿಂಗ ಹಿಡಿದು ನಿರ್ಗುಣಿಯಾಗಬೇಕು. ಆಗ ಅಂಗ ದಾನಿಯಲ್ಲ ; ಭಿಕ್ಷುಕನೂ ಅಲ್ಲ! ಅಂಗದಲ್ಲಿ ಅರಿವೆಂಬ ಲಿಂಗಯ್ಯನಿದ್ದಾನೆ ಆತ ಹೇಗೆ ಭಿಕ್ಷುಕನಾದಾನು ? ಅನ್ನದಾನ ನೀಡಿದ ತಾನು ಹೇಗೆ ದಾನಿಯಾದಾನು ? ಹೀಗೆ ಅರಿವೆಂಬ ಲಿಂಗಕ್ಕೆ ಶರಣು ಹೋದ ಮನ ಅಂಗದಲ್ಲಿ ಸಂಗಮವಾಗಿ ಸಂಗಮನಾಥನೇ ತಾನಾಯಿತು .

261

ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯಾ .
ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ ?
ಹಿಂದಣ ಜನ್ಮದ ಚಿನ್ಹ ಬಿಡದನ್ನಕ್ಕ
ನಿಮ್ಮುವ ಪೂಜಿಸಿ ಏವೆನಯ್ಯಾ ?
ಎನ್ನ ಮನದ ಅವಗುಣವ ಕಳೆದು
ನಿಮ್ಮ ಶರಣರಿಗೆ ಶರಣೆಂಬುದು ಕರುಣಿಸು
ಕೂಡಲಸಂಗಮದೇವಾ.
ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯಾ !

ಬೇಡಿದ್ದನ್ನು ಕೊಡುವ ಕಾಮಧೇನು ಎನ್ನುವ ಪ್ರಾಣಿ ಪುರಾಣ ಕಾಲದ್ದು, ಕಾಲಘಟ್ಟದಲ್ಲಿ ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವಿಗೆ ಕಾಮಧೇನು ಎಂದು ಹೆಸರಿಟ್ಟು ಗೌರವದಿಂದ ಕರೆದಿದ್ದಾರೆ ಪುರಾತನರು.

ಮನ ತನುವನ್ನು ಹಿಡಿದು ಚಿನ್ನ ಬೇಡಿದರೆ, ಕಾಮಧೇನುವೆಂಬ ಅರಿವು ಅದನ್ನು ಪಡೆಯಲು

ತನುವನ್ನು ಹಗಲಿರುಳು ಶ್ರಮಿಕನಂತೆ ದುಡಿಯಲು ಹಚ್ಚುವುದಿಲ್ಲ; ಕಳ್ಳನಂತೆ ಕದಿಯಲು ಹಚ್ಚುವುದಿಲ್ಲ, ರಾಜನಂತೆ ಯುದ್ಧ ಮಾಡಿ ಕೊಂದು ಪಡೆಯಲೂ ಹಚ್ಚುವುದಿಲ್ಲ. ಭ್ರಷ್ಟ ವಂಚಕನಂತೆ ದೋಚಲೂ ಹಚ್ಚುವುದಿಲ್ಲ. ಬದಲಾಗಿ ಅರಿವೆಂಬ ಕಾಮಧೇನು ಮನಕ್ಕೆ ಒಲಿದರೆ ತನುವಿನ ವಿರಾಟ ಸ್ವರೂಪವನ್ನೇ ತೋರಿಸುತ್ತದೆ. ಚಿನ್ನ ತನುವಿನಿಂದ ಸೃಷ್ಟಿಯಾದದ್ದು. ಅದಕ್ಕೆ ಹಳದಿ ಬಣ್ಣ ಮೆತ್ತಿಕೊಂಡಿದೆ. ಅದು ಬರೀ ಲೋಹ. ಹಳದಿ ಬಣ್ಣಕ್ಕಾಗಿ ತನು ಶ್ರಮಿಕನಾಗಿ ಹಗಲಿರುಳು ದುಡಿಯಬೇಕಿಲ್ಲ: ಖರೀದಿಸಿ ತನು ಶ್ರೀಮಂತನಾಗಬೇಕಿಲ್ಲ ; ಮಾರಾಟ ಮಾಡಿ ತನು ವ್ಯವಹಾರಿಯಾಗಬೇಕಿಲ್ಲ. ಚಿನ್ನಕ್ಕಾಗಿ ಯುದ್ಧ ಮಾಡಿ ತನು ರಾಜನೆನ್ನಿಸಿಕೊಂಡು ಸಾವು ನೋವುಗಳಿಗೆ ಕಾರಣನಾಗಬೇಕಿಲ್ಲ ; ಚಿನ್ನ ಕದ್ದ ತನು ಕಳ್ಳನೆನಿಸಿಕೊಳ್ಳಬೇಕಿಲ್ಲ ; ಬಣ್ಣ ಬೇರ್ಪಟ್ಟ ಚಿನ್ನ ಲೋಹವಾಯಿತು. ಇದು ತಿಳಿದರೆ ಅರಿವು ಬೇರ್ಪಡಿಸಲು ಬಾರದ ತನು ಚಿನ್ನವಾಯಿತು ! ವಿರಾಟ ಸ್ವರೂಪವೇ ತಾನಾಯಿತು.

ಆದರೂ ತನು ಅವಗುಣಿ. ಮನದ ರೂಢಿಯಿಂದ ಹಿಂದಿನ ಅಜ್ಞಾನ ಅಷ್ಟು ಸರಳವಾಗಿ ಬಿಡುವುದಿಲ್ಲ. ಆ ಮನದಿಂದಲೇ ತನುವಿನಲ್ಲಿರುವ ಅರಿವನ್ನು ಪೂಜಿಸಿ ಪೂಜಿಸಿ ಆ ಅರಿವಿನಿಂದಲೇ ಮನದ ಅವಗುಣಗಳನ್ನು ಕಳೆದುಕೊಳ್ಳಬೇಕು. ಈ ತಂತ್ರಗಾರಿಕೆಯನ್ನು ಅರಿತು ಅರಿವಿಗೆ ಶರಣುಹೋದ ಶರಣರಿಗೆ ಶರಣೆಂಬುದನ್ನು ಕಲಿಯಬೇಕು. ಅಂಗದಲ್ಲಿಸಂಗಮವಾದ ಅರಿವೆಂಬ ಸಂಗಮನಾಥನೆ ಇದನ್ನು ಕರುಣಿಸು ತಂದೆ ಎಂದು ಅನವರತ ಬೇಡಬೇಕು.

262

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ
ಎನ್ನ ಲಿಂಗವ್ಯಸನಿ ಜಂಗಮ ಪ್ರೇಮಿ ಎಂದೆನಿಸಯ್ಯಾ .
'ಅವಶ್ಯಮನುಭೋಕ್ತವ್ಯಂ' ಎಂದೆನಿಸದಿರಯ್ಯಾ ,
ಕೂಡಲ ಸಂಗಮದೇವಾ ಸೆರಗೊಡ್ಡಿ ಬೇಡುವನು

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ :ಈ ವಚನದಲ್ಲಿ ಅಣ್ಣನವರು ದುರ್ವ್ಯಸನಿ, ದುರಾಚಾರಿ, ಲಿಂಗ ವ್ಯಸನಿ, ಜಂಗಮಪ್ರೇಮಿ ಎನ್ನುವ ಶಬ್ದಗಳನ್ನು ಬಳಸಿದ್ದಾರೆ.

ಮನ ಕ್ಷಣಾರ್ಧದಲ್ಲಿ ಸುಖ ಪಡೆಯಬೇಕೆಂದು ಬಯಸಿದಾಗ ಅದು ತನುವಿನೊಂದಿಗೆ ಸುಖ ಪಡೆಯಲು ಸಮಾಜ ವಿರೋಧಿ ಆಲೋಚನೆಗಳನ್ನು ಮಾಡುತ್ತದೆ. ದುರಾಚಾರಿಯಾಗಿ ಅಂದರೆ ವೇಶ್ಯೆ, ವಿಟನಾಗಿ ತನುವಿನೊಂದಿಗೆ ಸುಖಿಸುತ್ತದೆ. ಕಳ್ಳ, ಭ್ರಷ್ಟನಾಗಿ ತನುವಿನೊಂದಿಗೆ ಕದಿಯುತ್ತದೆ. ಕಾಮುಕನಾಗಿ ತನುವಿನೊಂದಿಗೆ ಅನ್ಯ ತನುವನ್ನು ಬಾಧಿಸುತ್ತದೆ. ಸೇವೆಯ ನೆಪದಲ್ಲಿ ಅಧಿಕಾರಿಯಾಗಿ ಶಾಸಕನಾಗಿ ಧರ್ಮಾಧಿಕಾರಿಯಾಗಿ ಹಣಮಾಡಿಕೊಂಡು ಮನ ತನುವಿನೊಂದಿಗೆ ದುರಾಚಾರಿಯಾಗಿ ಮೆರೆಯುತ್ತದೆ. ಜನಕ್ಕೆ ದುಃಖ ಮನಕ್ಕೆ ಸುಖ. ಜನ ತನುವನ್ನು ಗುರುತಿಸುತ್ತಾರೆ. ಆದರೆ ದುರಾಚಾರಿಯಾಗಿ ತನು ಹಿಡಿದು ಸುಖ ಪಡುವುದು ಮಾತ್ರ ಮನ! ಜನಕ್ಕೆ ಇದು ಮನದ ತಪ್ಪೆಂದು ತಿಳಿಯುವುದೇ ಇಲ್ಲ, ಏಕೆಂದರೆ ಜನ ಮನದ ಹೊರತಾಗಿ ಜೀವಿಸುತ್ತಿಲ್ಲ. ಅದಕ್ಕಾಗಿಯೇ ಇತರ ತನುಗಳಿಗೆ ಸದಾ ದುಃಖ. ಹಿಂಸಿಸುವ ಮನಕ್ಕೆ ಸದಾ ಸುಖ! ಅದು ದುಃಖವಲ್ಲ, ತನ್ನದು ಸುಖವಲ್ಲ ಎಂದು ಮನಕ್ಕೆ ತಿಳಿಯದೆ ದುರಾಚಾರದಲ್ಲಿ ತೊಡಗುತ್ತದೆ.

ಎನ್ನ ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ :

ದುರ್ವ್ಯಸನ, ದುರಾಚಾರದಲ್ಲಿ ಭಾಗಿಯಾದ ಮನವೇ ಲಿಂಗ ವ್ಯಸನಿ ಜಂಗಮ

ಪ್ರೇಮಿಯಾಗಿ ಮಾರ್ಪಡಬೇಕು. ಇದು ಜಟಿಲ; ಆದರೆ ಶಾಶ್ವತ ಸುಖ. ಹಿಂದಿನ ಕರ್ಮಫಲ ಅನುಭವಿಸಲೇಬೇಕು ಎನ್ನುವುದನ್ನು ಕೊಡವಿಕೊಂಡು ಮನ ವಿಚಾರಮಾಡಬೇಕು. ಕ್ಷಣಿಕ (ಇನಸ್ಟಾಂಟ್) ಸುಖದಿಂದ ಆಗುವ ಶಾಶ್ವತ ದುಃಖವನ್ನು ವಿಚಾರಿಸಿಕೊಂಡು ಹೊರಬರಬೇಕು. ಮನದ ವೃತ್ತಿ ನಿವೃತ್ತಿಯಾಗಿ ತನುವಿನ ಕಣ ಕಣದಲ್ಲಿರುವ ಅರಿವೆಂಬ ಲಿಂಗವನ್ನು ಪೂಜಿಸಬೇಕು. ಅರಿವಿನಿಂದ ನಡೆಯುವಂತೆ ಎಚ್ಚರಿಸುವ ಛಲಗಾರ ಜಂಗಮವನ್ನು ಮನ ಪ್ರೇಮಿಸಬೇಕು. ಮನಕ್ಕೆ ಈ ಕೆಲಸ ಹಾಸಲುಂಟು ಹೊದೆಯಲುಂಟು.

ಅರಿವಿನ ಪ್ರೇಮ ಮನಕ್ಕೆ ಹೆಚ್ಚಾದಂತೆಲ್ಲ , ದುರ್ವ್ಯಸನ, ದುರಾಚಾರಗಳು ಕಳಚಿ ಬೀಳುವವು. ಮನ ತನುವಿನ ಅರಿವು ಬಳಸಿಕೊಂಡು ನೋಡಿದಾಗ; ಕಾಮ ಹುಟ್ಟುವುದಿಲ್ಲ. ಆಗ ತನುವಿನ ಅರಿವನ್ನು ಆರಾಧಿಸುತ್ತದೆ. ತನ್ನಂತೆ ಇರುವ ತನುವಿಗೆ ಭಕ್ತಿಯಿಂದ ನಮಿಸುತ್ತದೆ.

ಮನ ತನುವಿನಲ್ಲಿರುವ ಅರಿವಿನ ಪ್ರೇಮಿಯಾಗಿರುವುದರಿಂದ ಹಿಂದಣ ಜನ್ಮದ, ಇಂದಿನ ಜನ್ಮದ ತನುವಿನ ಅಜ್ಞಾನವನ್ನು ಅರಿವು ಸುಟ್ಟು ಭಸ್ಮ ಮಾಡುತ್ತದೆ.

ಮನದಿಂದಾಗಿ ತನು ಸೆಗಣಿಯಾಗಿತ್ತು, ಅರಿವಿನ ಪ್ರೇಮದಿಂದಾಗಿ ಒಣಗಿ ಕುರುಳಾಗಿ ಸುಟ್ಟು ಭಸ್ಮವಾಯಿತು. ಭಸ್ಮದಲ್ಲಿ ಸೆಗಣಿಯಿಲ್ಲ. ಆದರೆ ಸೆಗಣಿಯಲ್ಲಿ ಕುರುಳು, ಅಗ್ನಿ, ಭಸ್ಮ ಸಂಗಮವಾಗಿದೆ. ಹಾಗೆಯೇ ತನುವಿನಲ್ಲಿ ಅರಿವು, ಮನ ಸಂಗಮವಾಗಿದೆ. ಬಸವಣ್ಣನವರು ತನುವನ್ನು ಕೂಡಲಸಂಗಮ ಎಂದು ಕರೆದಿದ್ದಾರೆ. ಆ ಅರಿವಿಗೆ ಮನದಿಂದ ಸೆರಗೊಡ್ಡಿ ಬೇಡುವಂತೆ ಜಗದ ತನುಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಈ ಸೂತ್ರ ನೀಡಿದ ಅಣ್ಣ ಬಸವಣ್ಣ ಕರುಣಾಮಯಿ. ಇದನ್ನು ಪಾಲಿಸಿದ ಮನದ ತನುಗಳೆಲ್ಲ ಜ್ಞಾನಭಂಡಾರಗಳೇ ಆಗುತ್ತವೆ.

263

ಧೃತಿಗೆಟ್ಟು ಅನ್ಯರ ಬೇಡದಂತೆ,
ಮತಿಗೆಟ್ಟು ಪರರ ಹೊಗಳದಂತೆ,
ಪರಸತಿಯರ ರತಿಗೆ ಮನ ಹಾರದಂತೆ,
ಶಿವಪಥವೊಲ್ಲದವರೊಡನಾಡದಂತೆ,
ಅನ್ಯ ಜಾತಿಯ ಸಂಗವ ಮಾಡದಂತೆ,
ಎನ್ನ ಪ್ರತಿಪಾಲಿಸು, ಕೂಡಲಸಂಗಮದೇವಾ.

ಧೃತಿಗೆಟ್ಟು ಅನ್ಯರ ಬೇಡದಂತೆ :

ತನುವಿನಲ್ಲಿರುವ ಅರಿವೆಂಬ ಗುರುದೇವನನ್ನು ಬೇಡುವ ಧೈರ್ಯ ಮನಕ್ಕೆ ಹೊಳೆಯದಿದ್ದಕ್ಕಾಗಿ ಅನ್ಯರನ್ನು ಭಿಕ್ಷುಕನಾಗಿ ಬೇಡುತ್ತದೆ. ಅವನು ಬೇಡಿದ್ದನ್ನು ಕೊಡುವ ಕಾಮಧೇನು. ಅವನು ಕೊಟ್ಟುದ್ದನ್ನೇ ನೀಡಿ ದಾನಿ ಎನ್ನಿಸಿಕೊಳ್ಳುತ್ತಾನೆ. ಅವನು ಕೊಟ್ಟುದ್ದನ್ನೇ ಪಡೆದು ಭಿಕ್ಷುಕನೆನ್ನಿಸಿಕೊಳ್ಳುತ್ತಾನೆ. ಬೇಡುವುದು ನೀಡುವುದು ಅಜ್ಞಾನವೆಂದು ಎರಡೂ ತನುಗಳಿಗೆ ತಿಳಿಯುವುದಿಲ್ಲ. ನೀಡಿದ್ದು ತನುವಿನ ಪ್ರೊಡೆಕ್ಟ್ ಅಲ್ಲ , ಬೇಡಿದ್ದು ನೀಡಿದವನ ಪ್ರೊಡೆಕ್ಟ್ ಅಲ್ಲ. ಆದರೂ ಮನಕ್ಕೆ ತಿಳಿಯದೆ ತನ್ನಂತೆ ಇರುವ ತನುವನ್ನು ದಾನಿ ಎನ್ನುತ್ತದೆ. ತನ್ನನ್ನು ಭಿಕ್ಷುಕ ಎಂದು ಕರೆದುಕೊಳ್ಳುತ್ತದೆ. ಅರಿವೆಂಬ ಗುರುದೇವನೆ ಸಕಲ ತನುಗಳಿಗೂ ಮಹಾದಾನಿಯೆಂದು ಮನಕ್ಕೆ ಹೊಳೆಯಬೇಕು. ಆಗ ಬೇಡಿದರೆ ಮಹಾದಾನಿ ಅರಿವೆಂಬ ಕೂಡಲಸಂಗಮನಾಥನನ್ನೇ

ಧೈರ್ಯದಿಂದ ಬೇಡುತ್ತದೆ.

ಮತಿಗೆಟ್ಟು ಪರರ ಹೊಗಳದಂತೆ :

ಮನಕ್ಕೆ ಮತಿ ಇಲ್ಲದೆ ಪರರನ್ನು ಹೊಗಳುತ್ತದೆ. ತನುವಿನ ಕಣ ಕಣದಲ್ಲಿ ಅರಿವೆಂಬ ಸಂಗಮನಾಥನೆ ಬೆರೆತಿದ್ದಾನೆ. ಆತನಿದ್ದ ತನುವಿನ ವಿಸ್ತಾರ ಜಗದಗಲ ಮುಗಿಲಗಲಕ್ಕೆ ಪಸರಿಸಿದೆ. ಆತನ ಶ್ರೀಚರಣ ಪಾತಾಳದಿಂದತ್ತತ್ತಲೂ ಚಾಚಿಕೊಂಡಿದೆ.ಆತನ ಶ್ರೀಮುಕುಟ ಬ್ರಹ್ಮಾಂಡದಿಂದತ್ತತ್ತಲೂ ಬೆಳೆದಿದೆ, ಗುರುದೇವನಿದ್ದ ತನು ಪ್ರಮಾಣಿಸಲು ಬಾರದಂತಹದ್ದು. ಗಮನಕ್ಕೆ ನಿಲುಕಲಾರದ್ದು. ಗೋಚರಕ್ಕೂ ನಿಲುಕಲಾರದ್ದು. ಅಪ್ರತಿಮವಾದ ಅರಿವೆಂಬ ಲಿಂಗವೇ ತನುವಿನಲ್ಲಿ ಬಂದು ಚುಳುಕಾಗಿದೆ; ಡಿಜಿಟಲ್ ಆಗಿದೆ; ನ್ಯಾನೋ ಆಗಿದೆ. ಹೀಗಿದ್ದಾಗ ಮತಿಗೆಟ್ಟು ತನ್ನ ತನುವನ್ನು ಮನ ಕೀಳಾಗಿ ಕಂಡು ಅನ್ಯತನುಗಳನ್ನು ಹೊಗಳುವುದೆ ? ಹೊಗಳಿಕೆ ತೆಗಳಿಕೆಗೆ ಮೀರಿದ ಘನವೇ ತಾನಿರುವಾಗ ಯಾರನ್ನು ಹೊಗಳುವುದು ? ಯಾರನ್ನು ತೆಗಳುವುದು ?

ಪರಸತಿಯರ ರತಿಗೆ ಮನ ಹಾರದಂತೆ :

ಇದು ಬಹಳ ಸೂಕ್ಷ್ಮಾತಿ ಸೂಕ್ಷ್ಮ ವಿಷಯ. ಪರಸತಿ: ತನುವಿನಲ್ಲಿ ಮನವೆಂಬ ಅಜ್ಞಾನಿ ಸತಿ ಇದ್ದಾಳೆ ; ಅರಿವೆಂಬ ಪತಿಯೂ ಇದ್ದಾನೆ. ತನು ಹೆಣ್ಣೂ ಅಲ್ಲ; ಗಂಡೂ ಅಲ್ಲ; ಅದು ಅರಿವೆಂಬ ಪತಿಯ ಉಪಕರಣ! ಸತಿ ಪತಿಗಳಿದ್ದ ತನುವೆಂಬ ಮನೆಯನ್ನೇ ಶರಣರು ಲಿಂಗ ಎಂದು ಕರೆದಿದ್ದಾರೆ. ಇದು ಅರಿವಿನ ಲಿಂಗದ ಮನೆ. ಈ ಮನೆಯಲ್ಲಿ ಅರಿವೆಂಬ ಪತಿ ಇದ್ದಾನೆ. ಮನವೆಂಬ ಸತಿ ಇದ್ದಾಳೆ. ಶರಣ ಸತಿಯಾದರೆ ಲಿಂಗ ಪತಿ! ಸತಿಪತಿಗಳೊಂದಾದ ಭಕ್ತಿ ಬಲುಹಿತ. ಈ ಅರಿವಿನ ತನುವಿನಿಂದ ನೋಡಿದರೆ ಅರಿವಿನ ತನುವೇ ಕಾಣುತ್ತದೆ. ಲಿಂಗದ ಮನೆಯೇ ಕಾಣುತ್ತದೆ. ಆದರೆ ಅಜ್ಞಾನಿ ಮನಕ್ಕೆ ತಾನು ಹೆಣ್ಣಾಗಿದ್ದರೂ ತನು ಹೆಣ್ಣಾಗಿ ಗಂಡಾಗಿ ಕಾಣುತ್ತದೆ. ಮನ ತಾನು ಲಿಂಗದ ಮನೆಯ ಅರಿವೆಂಬ ಗಂಡನ ಸತಿಯಾಗಿದ್ದು ಮತ್ತೊಂದು ಲಿಂಗದ ಮನೆಯ ಸತಿಯನ್ನು ಬಯಸಿದರೆ; ಮನ ಪರಸತಿಯ ರತಿಗೆ ಹಾರಿದಂತಾಗಲಿಲ್ಲವೆ ! ಅಂದರೆ ತಾನು (ಮನ) ಸತಿಯಾಗಿದ್ದು ಪರಸತಿಯ ಸಂಗ ಮಾಡಿದಂತಾಗಲಿಲ್ಲವೆ ! ಮನ ಹೆಣ್ಣಾಗಿದ್ದು ಪರ ಹೆಣ್ಣಿನೊಂದಿಗೆ ಕೂಡುವ ಬಯಕೆ ಮಾಡಿದಂತಾಗಲಿಲ್ಲವೆ ? ಹೆಣ್ಣು ಹೆಣ್ಣು ಕೊಡುವ ಕೂಟ ಶರಣರಿಗೆ ಶೋಭೆಯಲ್ಲ! ಎಂದಿದ್ದಾರೆ ಬಸವಣ್ಣ.

ಶಿವ ಪಥವೊಲ್ಲದವರೊಡನಾಡದಂತೆ, ಅನ್ಯ ಜಾತಿಯ ಸಂಗವ ಮಾಡದಂತೆ ಎನ್ನ ಪ್ರತಿಪಾಲಿಸು ಕೂಡಲ ಸಂಗಮದೇವಾ :

''ಮಡಕೆಯ ಮಾಡುವಡೆ ಮಣ್ಣೆ ಮೊದಲು. ತೊಡುಗೆಯ ಮಾಡುವಡೆ ಹೊನ್ನೆ ಮೊದಲು. ಶಿವಪಥವನರಿವೊಡೆ ಗುರುಪಥವೇ ಮೊದಲು'' : ಶಿವ ಎಂದರೆ ಪುರಾಣಕಾಲದ ದೇವರಲ್ಲ. ತನುವಿನಲ್ಲಿರುವ ಅರಿವೇ ಗುರು. ಆ ಗುರುದೇವನೇ ಶಿವ. ಈ ಶಿವನಲ್ಲಿಗೆ ಹೋಗುವ ದಾರಿ ಚಿಂತಿಸುವ ಚಿಂತಕರ ಜಾತಿಯ ಸಂಗವನು ಮಾಡುವಂತೆ ಎನ್ನನ್ನು ಪಾಲಿಸು ಎಂದಿದ್ದಾರೆ.

ಮಣ್ಣಿನಿಂದ ಮಡಕೆ, ಹೂಜಿ, ಮುಚ್ಚುಳ, ಪ್ರಣತಿ, ಪೊಡಗಗಳನ್ನು ಮಾಡಿ ಮಣ್ಣನ್ನು ಮರೆತು ಆಯಾ ಹೆಸರಿನಿಂದ ಕರೆಯುತ್ತೇವೆ. ಅವು ಹೊಡೆದುಹೋದ ಮೇಲೆ ಬೋಕಿ ಎನ್ನುತ್ತೇವೆ. ಮಣ್ಣು ಎನ್ನುವ ಸತ್ಯವನ್ನು ಮರೆಯುತ್ತೇವೆ. ಮಣ್ಣಿನಿಂದ ಪಾರ್ವತಿ ಪರಮೇಶ್ವರ ಬ್ರಹ್ಮ ವಿಷ್ಣು ರುದ್ರ ವೆಂಕಟೇಶ ಪದ್ಮಾವತಿಯನ್ನು ಮಾಡಿದ ಮೇಲೆ ಅವುಗಳಿಗೆ ಆಯಾ ದೇವರ ಹೆಸರಿನಿಂದ ಕೂಗಿ ಆರಾಧಿಸುತ್ತೇವೆ. ಮಣ್ಣು ಎನ್ನುವ ಸತ್ಯವನ್ನೇ ಮರೆಯುತ್ತೇವೆ.

ಹೊನ್ನಿನಿಂದ ನೆಕ್ಲೆಸ್, ತಾಳಿ, ಬೆಂಡೋಲೆ, ಉಂಗುರ ಮಾಡಿ ಆಯಾ ಹೆಸರಿನಿಂದ ಕರೆದು ಮನ ಹಳದಿ ಬಣ್ಣಕ್ಕೆ ಮೋಹಗೊಳ್ಳುತ್ತದೆ. ಅದರಲ್ಲಿಯ ಲೋಹವನ್ನೇ ಮರೆಯುತ್ತದೆ.

ಹಾಗೆಯೇ, ಮನಕ್ಕೆ ತನುವಿನಲ್ಲಿಯ ಶಿವನನ್ನು ಹುಡುಕಲು ಆಸೆಯಾದರೆ ಆ ಶಿವಪಥದ ಚಿಂತನೆಯಲ್ಲಿರುವ ಶರಣರ ಸಂಗ ಮಾಡಲೇಬೇಕು.

264

ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ,
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ
ಇರಿಸಯ್ಯಾ , ಕೂಡಲಸಂಗಮದೇವಾ.

ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ : ಸದಾ ಅರಿವಿನ ಚಿಂತನೆಯಲ್ಲಿರುವ ಅರಿವಿಗೆ ಶರಣು ಹೋದ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆ ಎಳೆಸದಂತೆ ಮನವನ್ನು ಹೆಳವನನ್ನಾಗಿರಿಸು ಕೂಡಲಸಂಗಮದೇವಾ ಎಂದು ಅಣ್ಣನವರು ಅರಿವನ್ನೇ ಸೆರಗೊಡ್ಡಿ ಬೇಡುವ ಸಂದೇಶವನ್ನು'ದಾಖಲಿಸಿದ್ದಾರೆ.

ಮನಕ್ಕೆ ವಸ್ತುವಿನಲ್ಲಿರುವ ಸತ್ಯ ಕಾಣದ್ದಕ್ಕಾಗಿ ವಸ್ತುವನ್ನು ಕಂಡು ಪಡೆದು, ಇಲ್ಲ ದೋಚಿ ಸುಖಿಸುತ್ತದೆ. ಇಲ್ಲ ದುಃಖಿಸುತ್ತದೆ. ಮನಕ್ಕೆ ಶಬ್ದ ಅನಾವರಣ ಮಾಡಿ ಕೇಳುವ ಶಕ್ತಿ ಇಲ್ಲದ್ದಕ್ಕಾಗಿ ಶಬ್ದ ಕೇಳಿ ಸುಖಿಸುತ್ತದೆ ಇಲ್ಲ ದುಃಖಿಸುತ್ತದೆ. ಭೂಮಿ, ಹೇಮ, ವಿಷಯ ಸುಖಗಳು ಅದರಿಂದಾಗುವ ದುಃಖಗಳು ಮನಕ್ಕೆ ಹೊಳೆಯುವುದಿಲ್ಲ ; ಹೀಗಾಗಿ ತನುವನ್ನು ವಿಷಯ ಸುಖಕ್ಕಾಗಿ ಎಳೆಯುತ್ತದೆ. ಸಿಗದಿದ್ದರೆ ದುಃಖ; ಸಿಕ್ಕರೆ ಸುಖ; ಆ ಸುಖದಿಂದಾಗುವ ದುಃಖಕ್ಕೆ ತನು ಭಾಜನವಾಗುತ್ತದೆ.

ಇದನ್ನು ತಿಳಿಯುವ ಶಕ್ತಿ ತನುವಿನಲ್ಲಿರುವ ಜ್ಞಾನಕ್ಕೆ ಮಾತ್ರ ಇದೆ. ಮನ ವಿಷಯಕ್ಕೆಳೆಯುವ ಮುನ್ನ ಜ್ಞಾನದಿಂದ ವಸ್ತುವನ್ನು ಕಂಡರೆ, ಕೇಳಿದರೆ ಮನ ತನುವನ್ನು ವಿಷಯಕ್ಕೆಳೆಸದಂತೆ ಜ್ಞಾನ ಅಡ್ಡಿಪಡಿಸುತ್ತದೆ. ಜ್ಞಾನ ತನುವಿನ ರತ್ನ.

ಮನಕ್ಕೆ ತನುವಿನ ಜ್ಞಾನ ಬಳಸುವ ವಿಧಾನ ಗೊತ್ತಾಗಬೇಕು. ಇದು ಮನಕ್ಕೆ ಸಾಧ್ಯವಾಗುವುದಿಲ್ಲ. ಜ್ಞಾನ ಬಳಕೆ ಮಾಡುವ ತಂತ್ರಗಾರಿಕೆ ಶರಣರಿಗೆ ಮಾತ್ರ ಗೊತ್ತು. ಅವರು ಸದಾ ಜ್ಞಾನಕ್ಕೆ ಶರಣುಹೋಗಿ ಶರಣರಾದವರು. ಆ ಶರಣರ ಪಾದಸೇವೆ ಮಾಡುವಂತೆ ಮನಕ್ಕೆ ಪ್ರೇರಣೆ ನೀಡು ಸಂಗಮನಾಥನೇ ಎಂದು ಜ್ಞಾನವನ್ನು ಬೇಡುವ ಸೂತ್ರವನ್ನು ಅಣ್ಣನವರು ಸಕಲ ತನುಗಳಿಗೆ ಕರುಣಿಸಿದ್ದಾರೆ.

265

ಮತಿಮಂದನಾಗಿ ಗತಿಯ ಕಾಣದೆ ಇದ್ದೆನಯ್ಯಾ ;
ಹುಟ್ಟುಗುರುಡನ ಕೈಯ ಕೋಲ ಕೊಟ್ಟು
ನಡೆಸುವಂತೆ ನಡೆಸಯ್ಯಾ ಎನ್ನ.
ನಿಮ್ಮ ಅಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮಚ್ಚಿಸು

ಕೂಡಲಸಂಗಮದೇವಾ.

ಮನ ತನುವಿನೊಂದಿಗೆ ಹುಟ್ಟಿ ಇಡೀ ತನುವನ್ನೇ ಆಶ್ರಯಿಸಿಕೊಂಡು ತನುವನ್ನೇ ತನ್ನತ್ತ ಸೆಳೆದುಕೊಂಡ ಮತಿ ಇಲ್ಲದ ಮಂದ ಮತಿಯಾಗಿದೆ. ಕಣ್ಣಿನಲ್ಲಿ ಬೆರೆತು ಕಾಣುವ ಕಣ್ಣೆ ಸತ್ಯ ಕಾಣದಂತೆ ಹುಟ್ಟು ಕುರುಡನನ್ನಾಗಿಸಿದೆ. ಕೇಳುವ ಕಿವಿಗೆ ಸತ್ಯ ಕೇಳದಂತೆ ಹುಟ್ಟು ಕಿವುಡನನ್ನಾಗಿಸಿದೆ. ಜ್ಞಾನದ ಬಾಗಿಲುಗಳಾದ ಚರ್ಮ, ನಾಲಿಗೆ ಹಾಗು ಮೂಗಿನ ಮೂಲಕ ಅರಿವಿನ ಪರಿಮಳ ಅರಿಯದಂತೆ ಮಾಡಿದೆ. ಮನಕ್ಕೆ ಅರಿವಿನ ಗತಿ ಕಾಣುತ್ತಿಲ್ಲ. ಅರಿವೆಂಬ ಸಂಗಮನಾಥನೇ; ಮತಿ ಇಲ್ಲದ ಮಂದ ಮತಿ ಮನ ಅದು ಹುಟ್ಟು ಕುರುಡು, ನೀನು ಅದರ ಊರುಗೋಲಾಗಿ ಕೈಯಲ್ಲಿ ಅರಿವಿನ ಕೋಲು ಕೊಟ್ಟು ನಡೆಸು ತಂದೆ !

ಅರಿವೆಂಬ ಗುರುದೇವನನ್ನು ಆರಾಧಿಸುವ ಅಚ್ಚ ಶರಣರು ಉಂಡು ಮಿಕ್ಕುದನ್ನು ಎನಗೆ ಕರುಣಿಸುವಂತೆ ಮಾಡು ತಂದೆ. ಅದಕ್ಕೆ ಮನ ಮೆಚ್ಚುವಂತೆ ಮಾಡು ತಂದೆ. ಕೂಡಲಸಂಗಮನಾಥನೆ.

266

ಕಾಣದುದನೆಲ್ಲವ ಕಾಣಲಾರೆನಯ್ಯಾ ,
ಕೇಳದುದನೆಲ್ಲವ ಕೇಳಲಾರೆನಯ್ಯಾ .
ದ್ರೋಹವಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ .
ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರನೊಲ್ಲನಯ್ಯಾ
ಕೂಡಲಸಂಗಮದೇವಾ.

ಕಾಣದುದನೆಲ್ಲವ ಕಾಣಲಾರೆನಯ್ಯಾ :

ಮನುಷ್ಯ ಜನ್ಮವೇ ಶ್ರೇಷ್ಠ. ಮನುಷ್ಯ ತಿಳಿದಂತೆ ಮತ್ತಾವ ಪ್ರಾಣಿ ಪಶು ಪಕ್ಷಿ ಕೀಟ ಉರುಗ ಸಸ್ಯ ಮರಗಳು ತಿಳಿಯಲು ಅರಿಯವು. ಆದರೂ ಮನುಷ್ಯ ಸಂಕಟ ತಂದುಕೊಳ್ಳುವುದರಲ್ಲಿ ಜಾಣ. ಕಾಣುವುದನ್ನು ಕಾಣಬಾರದ ವಸ್ತುವನ್ನಾಗಿ ಮಾಡಿ ಮತ್ತೊಂದು ಕಾಣಲು ಪ್ರಯತ್ನಿಸುತ್ತಾನೆ. ಕಾಣಬೇಕಾದುದು ಕಾಣಲಿಲ್ಲವೆಂದು ಹಗಲಿರುಳು ಹಪಹಪಿಸಿ ಸಾಯುತ್ತಾನೆ.

ಕಲಾವಿದನ ಕೈಗೆ ಕಲ್ಲು ಕೊಟ್ಟು ವೆಂಕಟೇಶನನ್ನು ಕೆತ್ತಲು ಹೇಳುತ್ತಾನೆ. ಅದಕ್ಕೊಂದು ದೇವಾಲಯ ಕಟ್ಟಿ ಉತ್ಸವ ಮಾಡುತ್ತಾನೆ. ಪದ್ಮಾವತಿಯನ್ನು ಕೆತ್ತಿಸಿ ಮದುವೆಮಾಡುತ್ತಾನೆ. ಶಯನ ಗೃಹಕ್ಕೆ ಕಳಿಸಿ ಛತ್ರಿ ಚಾಮರ ಬೀಸಿ ಸೋಬಾನೆ ಹಾಡುತ್ತಾನೆ. ಇಷ್ಟು ಮಾಡಿದರೂ ದೇವರು ಕಾಣಲಿಲ್ಲವೆಂದು ಹಪಹಪಿಸಿ ಸಾಯುತ್ತಾನೆ. ಕೆತ್ತಿದ ಕಲ್ಲಿನಲ್ಲಿ ದೇವರನ್ನು ಹುಡುಕುವ ಮನಕ್ಕೆ ಏನೆನ್ನಬೇಕು? ಕೆತ್ತಿದ ಮೂರ್ತಿಯಲ್ಲಿ ದೇವರು ಕಾಣುವುದಿಲ್ಲ. ಹಾಗೆಯೇ ಕಲ್ಲು ಕೂಡಾ ಕಾಣುವುದಿಲ್ಲ !

ಕೇಳದುದನೆಲ್ಲವ ಕೇಳಲಾರೆನಯ್ಯಾ :

ಶಬ್ದದಲ್ಲಿ ಅರಿವಿದೆ . 'ನಿಶ್ಯಬ್ದಂಬ್ರಹ್ಮಮುಚ್ಚತೆ ' ಶಬ್ದಕ್ಕೆ ಅರಳಿಸುವ ಕೆರಳಿಸುವ ಗುಣಗಳಿಲ್ಲ. ಕಿವಿಯಲ್ಲಿ ಮನ ಅಜ್ಞಾನದ ಪೊರೆ ಸೃಷ್ಟಿ ಮಾಡಿರುವುದರಿಂದ ಶಬ್ದ ಕೇಳಿದರೆ ತನುವಿಗೆ ಸುಖದುಃಖಗಳುಂಟಾಗುತ್ತವೆ. ಅರಿವು ಬಳಕೆಗೆ ಬಾರದೆ ತನುವಿನಲ್ಲಿಯೇ ಉಳಿಯುತ್ತದೆ. ಅರಿವು (ಶಿವ) ಎನ್ನುವ ಸತ್ಯ ಯಾವ ತನುವಿಗೂ ದ್ರೋಹ ಬಗೆಯುವುದಿಲ್ಲ. ಮನ ಎನ್ನುವ ಅಜ್ಞಾನ

ಯಾವ ತನುವನ್ನೂ ಉದ್ಧಾರ ಮಾಡುವುದಿಲ್ಲ. ಏಕೆಂದರೆ ಅದು ಸತ್ಯ ಕಾಣುವುದನ್ನು ಕಡೆಗಣಿಸಿ ನೋಡುತ್ತದೆ; ಕೇಳುವುದನ್ನು ಕಡೆಗಣಿಸಿ ಕೇಳುತ್ತದೆ. ಅದನ್ನು ಶರಣರು ಮತಿ ಭ್ರಷ್ಟ ಮಂದ ಮತಿ ಮನ ಎಂದು ಕರೆದಿದ್ದಾರೆ.

ದ್ರೋಹವಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ :

ಶಿವ (ಅರಿವು) ಯಾವ ತನುಗಳಿಗೂ ದ್ರೋಹ ಮಾಡುವುದಿಲ್ಲ. ನೋಡುವ ಕಣ್ಣಿನಲ್ಲಿ, ಮನ ತನ್ನ ಅಜ್ಞಾನದ ರೇಖೆಯನ್ನು ಎಳೆದಿದೆ. ಅದಕ್ಕಾಗಿಯೇ ಕಣ್ಣಿಗೆ ನೋಡುವುದನ್ನು ನೋಡಲು ಬರುತ್ತಿಲ್ಲ. ಕಲ್ಲು ಕೆತ್ತಿ ಮೂರ್ತಿ ಮಾಡಿ ಅದರಲ್ಲಿಯ ದೇವರನ್ನು ಹುಡುಕಿದರೆ ಸಿಕ್ಕಾನೆಯೇ ? ದೇವರೆಂದರೆ ಸತ್ಯ ; ಮೂರ್ತಿಯಲ್ಲಿ ಕಲ್ಲು ಎನ್ನುವ ದೇವರು ಅಡಗಿದ್ದಾನೆ. ಕಣ್ಣಿನಲ್ಲಿಯ ಅಜ್ಞಾನದ ಪೊರೆ ಹರಿದಾಗ ದೇವರು ಕಾಣುತ್ತಾನೆ.

''ನೋಡೂದ ನೋಡಲರಿಯದೆ ಕಟ್ಟಿತ್ತಲ್ಲ ಜಗವೆಲ್ಲ ; ನೋಡೂದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನು ಗುಹೇಶ್ವರಾ ನಿಮ್ಮ ಶರಣ ಮಾತ್ರ ಬಲ್ಲ'' ಶರಣ ಮಹಾಜ್ಞಾನಿ ! ಆತನಿಗೆ ಮಾತ್ರ ಶಿವ ಪ್ರತ್ಯಕ್ಷನಾಗುತ್ತಾನೆ. ಆತ ನೋಡಬೇಕಾದುದನ್ನೇ ನೋಡುತ್ತಾನೆ.

ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರನೊಲ್ಲನಯ್ಯಾ ಕೂಡಲಸಂಗಮದೇವಾ ;

ಮನ ತನುವನ್ನು ದೇವರ ಮುಂದೆ ನಿಲ್ಲಿಸಿ ಸತ್ಯ ಎನ್ನುವ ದೇವರನ್ನು ನೋಡುವುದಿಲ್ಲ. ಹಾಗೆಯೇ ಶಬ್ದದಲ್ಲಿಯ ಇಲ್ಲದ ಸುಖ ದುಃಖಗಳನ್ನು ಅಳಿದು ಅರಿವಿನಿಂದ ಶಬ್ದ ಕೇಳುವುದಿಲ್ಲ. ಒಲೆಯ ಮುಂದಿದ್ದರೂ ಇಲ್ಲದ ಅಡಿಗೆಯ ಕನಸು ಕಾಣುವ ಮನಕ್ಕೆ ತನುವಿನಲ್ಲಿರುವ ಅರಿವೆಂಬ ಸಂಗಮನಾಥನು ಒಲಿಯಲಾರ.

ದ್ರೋಹವಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ .

ಮನ ತನುವಿನಲ್ಲಿಯ ಘನವನು ಅರಿಯದು. ತನುವಿನಲ್ಲಿಯ ಘನ ಮನವನ್ನು ಬಿಗಿದಪ್ಪಿ ಚುಂಬಿಸಲೊಲ್ಲದು. ಮನದ ಸೀಮೆ, ಘನ ಸೇರುವುದಕ್ಕೆ ತೊಡಕಾಗಿದೆ. ಸೀಮೆ ಕಳಚಿದರೆ ಸಾಕು ಮನ ಘನ ಮನ !

267

ಕಾಣಬಹುದೆ ಪರುಷದ ಗಿರಿ ಅಂಧಕಂಗೆ ?
ಅರಿಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ ?
ತೆಗೆಯಬಹುದೆ ಕಡವರವು ದರಿದ್ರಂಗೆ ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ ?
ಹೊನ್ನ ಹುಳವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡಡೆ ಹೋಲಬಹುದೆ ?
ಎನ್ನೊಡೆಯ ಕೂಡಲಸಂಗನ ಶರಣನು
ಪುಣ್ಯವಿಲ್ಲದೆ ಕಾಣಬಹುದೆ ?

ತನು ಪರುಷದ ಗಿರಿ. ರಸದ ಬಾವಿ, ಅಮೃತದ ಬುಗ್ಗೆ. ಸಕಲ ಸಂಪತ್ತು ಉಳ್ಳ ಕಡವರ ದ್ರವ್ಯ. ಬೇಡಿದ್ದನ್ನು ಕೊಡುವ ಶಕ್ತಿ ಉಳ್ಳ ಕಾಮಧೇನು. ತನು ಸಂಗಮನಾಥನ ವಾಸಸ್ಥಾನ.

ಸಕಲ ಶಕ್ತಿ ಉಳ್ಳ ತನುವಿನಲ್ಲಿ ಮನ ಎಂಬ ಅಂಧಕ ಆವರಿಸಿ ಕೊಂಡಿದ್ದಾನೆ. ಈ ಅಂಧಕನಿಗೆ ಬೆಳಕಿನ ಪರುಷದ ಗಿರಿ ಕಾಣಬಹುದೆ ? ಮನವೆಂಬ ನಿರ್ಭಾಗ್ಯನು ರಸದ ಬಾವಿಯನ್ನು ತಿಳಿಯಲು ಸಾಧ್ಯವೆ ? ದರಿದ್ರ ಮನಕ್ಕೆ ತನುವಿನ ಸಂಪತ್ತು (ಕಡವರ) ನಿಲುಕಬಲ್ಲುದೆ ? ಮನವೆಂಬ ಅಶುದ್ಧನಿಗೆ ಕಾಮಧೇನು ಕರೆಯಬಲ್ಲುದೆ ? ಮನ ಕೆಚ್ಚಲಿನಲ್ಲಿದ್ದ ಉಣ್ಣೆಯಂತೆ. ಕೆಚ್ಚಲಿನ ರಕ್ತದ ರುಚಿ ಗೊತ್ತೆ ಹೊರತು ಅದಕ್ಕೆ ಅಮೃತದ ಸವಿ ಬಲು ದೂರು.

ಹೊನ್ನ (ಬೆಂಕಿ) ಹುಳವನ್ನು ಕಂಡು ಆನಂದಪಟ್ಟ ನರಿ ತನ್ನ ಬಾಲಕ್ಕೆ ಬೆಂಕಿ ಇಟ್ಟುಕೊಂಡು ಹುಣ್ಣು ಮಾಡಿಕೊಂಡಂತೆ. ಅದು ಹೊನ್ನ ಹುಳವನ್ನು ಹೋಲಲರಿಯದು. ಪುಣ್ಯವಿಲ್ಲದ ಮನಕ್ಕೆ ತನುವಿನಲ್ಲಿರುವ ಸ್ವಸ್ವರೂಪವನ್ನು ಹೇಳಿಕೊಡುವ, ತನುವಿನ ವಿರಾಟ ಸ್ವರೂಪವನ್ನು ತೋರಿಸಿಕೊಡುವ, ಬ್ರಹ್ಮಜ್ಞಾನದ ತಂತ್ರಗಾರಿಕೆಯನ್ನು ಕಲಿಸಿಕೊಡುವ ನಿಪುಣ ಶರಣನನ್ನು ಕಾಣಲು ಸಾಧ್ಯವಿಲ್ಲ.

ಅರಿವು ಮತ್ತು ಮನ ತನುವಿನಲ್ಲಿ ಸಂಗಮವಾಗಿದ್ದರೂ ಮನ ತನುವಿನ ಅರಿವನ್ನು ತಿಳಿಯುವುದು ಬಹಳ ದೂರದ ಮಾತು. ಮನವೆಂಬ ಅಂಧಕ ಅರಿವನ್ನು ಪುಸ್ತಕದಲ್ಲಿ ಹುಡುಕುತ್ತಾನೆ; ಪಂಡಿತನಾಗುತ್ತಾನೆ. ಮನವೆಂಬ ನಿರ್ಭಾಗ್ಯ ರಸದ ರುಚಿಯನ್ನು ಪದಾರ್ಥದಲ್ಲಿ, ಹೆಂಡದಲ್ಲಿ, ತನುವಿನ ರೂಪದಲ್ಲಿ ಹುಡುಕಿ ಹುಡುಕಿ, ಸಿಗದೆ ನಿರ್ಭಾಗ್ಯನಾಗಿ ಸಾಯುತ್ತಾನೆ. ಅದು ತನುವಿನಲ್ಲಿ ತನ್ಮಯವಾಗಿದೆ ಎಂದು ತಿಳಿಯುವುದೇ ಇಲ್ಲ.

ಶ್ರೀಮಂತ ಅಥವಾ ಕಳ್ಳನಾದವನು ದ್ರವ್ಯವನ್ನು ಲೋಹದಲ್ಲಿ , ಗಾಜಿನಲ್ಲಿ, ಮಣ್ಣಿನಲ್ಲಿ, ಕಾಗದದಲ್ಲಿ ಹುಡುಕುತ್ತಾನೆ. ಅದು ತನುವಿನಲ್ಲಿ ತನ್ಮಯವಾಗಿದೆಯೆಂದು ತಿಳಿಯುವುದಿಲ್ಲ,

ಬೇಡಿದ್ದನ್ನು ಕೊಡುವ ಕಾಮಧೇನು ತನುವಿನಲ್ಲಿಯೇ ತನ್ಮಯವಾಗಿದೆ. ತಂತ್ರಗಾರಿಕೆಯನ್ನು ಬಲ್ಲ ಮಹಾಜ್ಞಾನಿ ಶರಣನಿಂದ ತಿಳಿದು ಹಿಂಡಬೇಕು. ಆದರೆ ಅಶುದ್ಧ ಮನಕ್ಕೆ ಇದು ಹೊಳೆಯುವುದಿಲ್ಲ. ತನುವನ್ನು ಹಿಡಿದು ಕಾಮಧೇನುವಿಗಾಗಿ ಹಗಲಿರುಳು ಜಪಮಾಡುತ್ತದೆ.

ಎನ್ನೊಡೆಯ ಕೂಡಲಸಂಗನ ಶರಣನು ಪುಣ್ಯವಿಲ್ಲದೆ ಕಾಣಬಹುದೆ :

ಎನ್ನೊಡೆಯನೆಂದರೆ ಒಡಲೊಡೆಯ ! ಆತ ಒಡಲೊಳಗೆ ಇದ್ದಾನೆ. ಒಡಲಿಗೆ ಆಧಾರವಾಗಿದ್ದಾನೆ. ಆದರೆ ಒಡಲು ಸೋಂಕದೆ ಒಡಲನ್ನು ಬೆಳಗುತ್ತಿದ್ದಾನೆ ಅರಿವೆಂಬ ಗುರುದೇವನು!

ಹಾಗೆಯೇ ಮನ ಕೂಡಾ ಒಡಲಲ್ಲಿಯೇ ಹುಟ್ಟಿದೆ. ಒಡಲೊಡನೆ ಹುಟ್ಟಿದ ಭ್ರಮೆ ತನ್ನನ್ನು ಅರಿಯದ ಕಾರಣ ಬೃಹದಾಕಾರವಾಗಿ ತನುವಿನೆತ್ತರಕ್ಕೂ ಬೆಳೆದಿದೆ.

ಈ ತಂತ್ರಜ್ಞಾನವನ್ನು ಬಲ್ಲ (ಟೆಕ್ನೀಸಿಯನ್) ಶರಣ ತಿಳಿಹೇಳಿದರೆ ಸಾಕು ಮನವೇ ಮಹಾದೇವನಾಗುತ್ತದೆ. ಆದರೆ ಅಂತಹ ಶರಣನನ್ನು ಹುಡುಕಲು ಮನಕ್ಕೆ ಪುಣ್ಯವಿಲ್ಲದೆ ಸಾಧ್ಯವಿಲ್ಲ ಎನ್ನುತ್ತಾರೆ ಬಸವಣ್ಣನವರು. ಅಂದರೆ ಮನಕ್ಕೆ ಅರಿವಿನ ಬಯಕೆಯಾಗದಿದ್ದರೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ.

268

ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು ?
ಇಂತಾಗಿ ನೀವೆನ್ನ ನಾರೆಂದರಿಯಿರಿ !
ನಂಬಲರಿಯೆ, ನಂಬಿಸಲರಿಯೆ,
ಒಲಿಯಲರಿಯೆ, ಒಲಿಸಲರಿಯೆ !

ಯಥಾ ಭಾವಸ್ತಥಾ ಲಿಂಗಂ ಸತ್ಯಂ ಸತ್ಯಂ ನ ಸಂಶಯಃ ।
ಯಥಾ ಭಕ್ತಿ ಸ್ತಥಾ ಸಿದ್ಧಿಃ ಸತ್ಯಂ ಸತ್ಯಂ ನ ಸಂಶಯಃ ।। ಎಂದುದಾಗಿ
ಕೂಡಲಸಂಗಮದೇವಾ ಕೇಳಯ್ಯಾ,
ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯಾ !

ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು ? :

ಹೆಂಡತಿ ಮಕ್ಕಳ ಸುಖಕ್ಕಾಗಿ ದೇವರೆಂದು ತಿಳಿದೆನೆ ? ಭೂಮಿ ಹೇಮಕ್ಕಾಗಿ ದೇವರೆಂದು ತಿಳಿದೆನೆ ? ಮನೆ ಮಠ ಮಂದಿರಕ್ಕಾಗಿ ದೇವರೆಂದು ತಿಳಿದೆನೆ ? ವಿದ್ಯೆ ಅಧಿಕಾರ ಸಂಪತ್ತಿಗಾಗಿ ದೇವರೆಂದು ತಿಳಿದೆನೆ ? ಅದು ದಕ್ಕಿದ ಮೇಲೆಯೂ ದೇವರೆಂದು ಅರಿಯುವ ದಾಹ ತೊಲಗಲಿಲ್ಲ.

ಇಂತಾಗಿ ನೀವೆನ್ನನಾರೆಂದರಿಯಿರಿ :

ಹೀಗಾಗಿ ನೀವು ನನ್ನನು ಯಾರೆಂದು ಅರಿಯಿರಿ ! ನಾನು ಯಾವುದಕ್ಕಾಗಿ ನಿಮ್ಮನ್ನು ದೇವರೆಂದು ಬೇಡಿದೆನೊ ; ಅದನ್ನಿತ್ತು ತಥಾಸ್ತು ಎಂದಿರಿ. ಬೇಡುವ ನನ್ನ ಬಯಕೆ ಕರಗಲೇ ಇಲ್ಲ. ಯಾವುದಕ್ಕಾಗಿ ನಾನು ನಿಮ್ಮನು ದೇವರೆಂದು ತಿಳಿದೆನೊ ಅದಕ್ಕಾಗಿ ನೀವು ನನ್ನನು ಯಾರೆಂದು ತಿಳಿಯಲಿಲ್ಲ.

ನಂಬಲರಿಯೆ, ನಂಬಿಸಲರಿಯೆ, ಒಲಿಯಲರಿಯೆ, ಒಲಿಸಲರಿಯೆ :

ನಂಬರು ನಚ್ಚರು ಬರಿದೆ ಕರೆವರು ; ನಂಬಲರಿಯರೀ ಲೋಕದ ಮನುಜರು ಎನ್ನುವಂತೆ ನಾನು ನಿಮ್ಮನ್ನು ನಂಬಿಸುವುದು ಹೇಗೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ನೀವು ನನ್ನನ್ನು ನಂಬಿಸುವುದು ಹೇಗೆಂದು ಅರಿಯಿರಿ. ನಾನು ನಿಮ್ಮನ್ನು ಒಲಿಸಿಕೊಳ್ಳುವುದು ಹೇಗೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ನೀವು ನನ್ನನು ಒಲಿಸಿಕೊಳ್ಳುವುದು ಹೇಗೆಂದು ಅರಿಯಲು ಸಾಧ್ಯವಾಗುತ್ತಿಲ್ಲ.

ಭೂಮಿ ಹೇಮ ವಿಷಯಾದಿಗಳಿಗೆ ಭಾವ ಮಾಡಿದೆ ತಥಾಸ್ತು ಎಂದಿರಿ. ಅದಕ್ಕಾಗಿಯೇ ನಿಮಗೆ ಭಕ್ತಿ ಮಾಡಿದೆ ತಥಾಸ್ತು ಎಂದಿರಿ. ಸಂಶಯವಿಲ್ಲದೆ ಕೊಟ್ಟಿರಿ. ಇದಕ್ಕಾಗಿ

ಕೋಟಿ ಕೋಟಿವರ್ಷ ಕೋಟಲೆಗೊಂಡೆನಯ್ಯಾ ಕೂಡಲಸಂಗಮ ದೇವಾ ಕೇಳಯ್ಯಾ :

ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು ? ಇಂತಾಗಿ ನೀವೆನ್ನನು ಆರೆಂದು ಅರಿಯಿರಿ. ನಾ ನಿಮ್ಮ ನಂಬಲು ಅರಿಯೆ ; ನೀವು ಎನ್ನನು ನಂಬಿಸಲು ಅರಿಯಿರಿ. ನಾನು ನಿಮಗೆ ಒಲಿಯಲು ಅರಿಯೇ; ನೀವು ಎನ್ನನು ನಿಮ್ಮತ್ತ ಒಲಿಸಲು ಅರಿಯಿರಿ ! ಕೋಟಿ ವರುಷ ಕಳೆದು ಕೋಟಲೆಗೊಂಡೆನಯ್ಯಾ .

269

ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ,
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ ನಿಮ್ಮೊಲವಿಲ್ಲದಂತೆ ಆಗಿದ್ದೆನಯ್ಯಾ .
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯಾ ಕೂಡಲಸಂಗಮದೇವಾ.

ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು :

ಅರಿಸಿನ ಕೊಂಬನು ಎಲ್ಲಿ ಕಡಿದರೂ ಚಿನ್ನದಂತಹ ಹಳದಿ ಬಣ್ಣವೆ ಹೊರ ತೇಲುತ್ತದೆ. ಅದು ಹೊನ್ನಿನ ಉಡಿಗೆಯನು ತೊಟ್ಟಿದ್ದಂತೆ ಭಾಸವಾಗುತ್ತದೆ. ಹಾಗೆಯೇ ಮನ ಹೊನ್ನಿನಂತಿದ್ದರೂ ತನುವಿನಲ್ಲಿರುವ ಅರಿವೆಂಬ ಪುರುಷನ ಒಲವಿಲ್ಲದ ಲಲನೆಯಂತೆ ಇದ್ದಾಳೆ.

ಪುರುಷನ ಒಲವಾದರೆ ಮನ ವಿಭೂತಿಯೂ ಹೌದು ; ರುದ್ರಾಕ್ಷಿಯೂ ಹೌದು. ಮನಕ್ಕೆ ಮೈತುಂಬಾ ಕಣ್ಣು. ಆದರೆ ಅರಿವೆಂಬ ಪುರುಷನ ಒಲವಿಲ್ಲದ ನಿಮಿತ್ಯ ಅಜ್ಞಾನದ ಕಣ್ಣುಗಳಾಗಿವೆ. ಏನು ನೋಡಿದರೂ ನೋಟದಲ್ಲಿ ಅಜ್ಞಾನ ತುಂಬಿದ ನಿಮಿತ್ಯ ತನಗೆ ಬೇಕೆಂದು ಬಾಚಿಕೊಳ್ಳುತ್ತದೆ. ಮನ ವಿಭೂತಿಯಾದರೂ ಅದರ ಸೆಗಣಿಯ ಮೂಲ ಗುಣವನ್ನು ಮರೆತಿಲ್ಲ. ಇದಕ್ಕೆ ಅರಿವೆಂಬ ಪುರುಷನ ಒಲವು ಬೇಕೆ ಬೇಕು ; ಆತನ ಒಲವು ಮನವೆಂಬ ಲಲನೆಯ ಮೇಲಿಲ್ಲ; ಲಲನೆಯ ಒಲವು ಅರಿವಿನ ಚೆಲುವ ಚೆನ್ನಿಗನ ಮೇಲಿಲ್ಲ. ಆತ ರೂಹಿಲ್ಲದ ಕೇಡಿಲ್ಲದ ಸಾವಿಲ್ಲದ ಚೆಲುವ ಚೆನ್ನಿಗನೆಂದು ಮನ ಅರಿತಿಲ್ಲ.

ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ , ನೀನೊಲಿದಂತೆ ಸಲಹಯ್ಯಾ ಕೂಡಲಸಂಗಮದೇವಾ :

ಮನ ಅರಿವೆಂಬ ಚೆಲುವ ಚೆನ್ನಿಗನನು ಮರೆತು ಕೆಟ್ಟಿದೆ. ಅದು ಸೂಳೆ ಅನ್ನಿಸಿಕೊಂಡಿದೆ. ಸಮಾಜ ಬಾಹಿರ ಕೆಲಸಗಳಲ್ಲಿ ತೊಡಗಿದೆ. ಜನ ತಿರಸ್ಕರಿಸಿದ್ದಾರೆ. ಆದರೆ ಜ್ಞಾನಿ ಶರಣರು ಕುಲಜರು! ಅವರ ಕುಲ ಜಾತ್ಯಾತೀತ ಕುಲ . ಕೆಟ್ಟವರನ್ನು ಆದರದಿಂದ ನೋಡುವ ಕುಲ. ಬುದ್ಧ ಅಂಗುಲಿ ಮಾಲನನ್ನು ನೋಡಿದಂತೆ ಶರಣರ ಕೃಪಾ ದೃಷ್ಟಿ; ಕೆಟ್ಟು ಬಾಳುವವರ ಮೇಲಿದೆ. ಶರಣರಿಗೆ ಯಾರೂ ಕೆಟ್ಟವರೇ ಅಲ್ಲ.

ಶರಣರ ಕೃಪಾದೃಷ್ಟಿ ಮನವೆಂಬ ನನ್ನ ಮೇಲಿರುವುದರಿಂದ ನೀನು ಒಲಿದಂತೆ ಸಲಹು ಕೂಡಲಸಂಗಮದೇವಾ. ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟಿದ್ದರೂ ಹೊನ್ನಿಗಾಗಿ ಹಪಹಪಿಸಲು ಹಚ್ಚಿದೆ. ಎನ್ನ ಮನ ಇದು ಕೂಡಾ ನಿನ್ನ ಕೃಪಾದೃಷ್ಟಿಯೇ ಎಂದು ಸ್ವೀಕರಿಸುವೆ. ನೀನಿದ್ದೂ ನಿನ್ನನು ತಿಳಿಯದ ಅಧಮ ನಾನು, ನಿನಗೊಲಿಯದ ಮೂರ್ಖಳು ನಾನು, ನೀನೊಲಿದಂತೆ ಸಲಹು ಎಂದು ಮನವನ್ನು ಲಲನೆಯನ್ನಾಗಿಸಿ ಅರಿವನ್ನು ಪರಮಪುರುಷನನ್ನಾಗಿಸಿ ಬೇಡುವ ಆಲಾಪದ ಸೂತ್ರವನ್ನು ಬಸವಣ್ಣನವರು ಓದುಗರಿಗೆ ಕರುಣಿಸಿದ್ದಾರೆ.

270

ಉದಯಾಸ್ತ ಮಾನವೆನ್ನ ಬಂದ ಬಸುರಿಂಗೆ ಕುದಿಯಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲಯ್ಯಾ .
ಎಂತೊ ! ಲಿಂಗ ತಂದೆ, ಎಂತಯ್ಯಾ ಎನ್ನ ಪೂರ್ವಲಿಖಿತ ?
ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲೆನಗೆ ;
ನೀ ಕರುಣಿಸು ಕೂಡಲಸಂಗಮದೇವಾ.

ಅರಿವೇ ಗುರು. ಗುರುದೇವನೆ ಮಹಾದೇವ. ಆ ಮಹಾದೇವನಾದ ನಿನ್ನನು ನೆನೆಯಲೊಲ್ಲದು ಈ ಹಾಳು ಮನ. ಉದಯದಿಂದ ಹಿಡಿದು ಅಸ್ತಮಾನದವರೆಗೆ ಬಸಿರಿನಿಂದ

ಬಂದ ತನುವಿನ ಹಸಿವಿಗಾಗಿ ಕುದಿಯಿತಲ್ಲದೆ ನಿಮ್ಮನು ನೆನೆಯಲಿಲ್ಲ ತಂದೆ. ತನುವಿನ ಕಾಮಕ್ಕಾಗಿ ಕುದಿಯಿತು. ಕ್ರೋಧ, ಲೋಭ, ಮೋಹ, ಮದ, ಮತ್ಸರಕ್ಕಾಗಿ ಕುದಿಯಿತು. ನಿಮ್ಮನ್ನು ನೆನೆಯಲಿಲ್ಲ ತಂದೆ !

ನಿಮ್ಮನ್ನು ನೆನೆಯಲು ನೀವೇನು ಬಲು ದೂರವೆ ? ಏನು ಸಮೀಪವೇ ? ಅರಿತು ನೋಡಲು ತೆರಹಿಲ್ಲದಂತೆ ಸಂದಿಲ್ಲದಂತೆ ತನುವಿನ ಕಣಕಣದಲ್ಲಿ ತನ್ಮಯನಾಗಿರುವಿ. ಆದರೂ ಮನವೆಂಬ ನನ್ನ ಪೂರ್ವಲಿಖಿತವೆ ಇದು ? ಎಂತಯ್ಯಾ ನಿನ್ನನು ಕಾಣದೆ ಕಂಗೆಟ್ಟಿದೆ.

ಮನವೆಂಬ ನಾನು ಅಡಿಗೆ ಮಾಡಿ ಉಣ್ಣಲು ಸೆಗಣಿಯಿಂದಾದ ಕುರುಳನು ಆಯುವುದರಲ್ಲಿಯೇ ಕಾಲಕಳೆದೆ ; ವೇದ, ಉಪನಿಷತ್ತು , ಗೀತೆ, ಪುರಾಣ, ಆಗಮಾದಿಗಳನ್ನು ಓದಿ ಸಂಗ್ರಹಿಸುವುದರಲ್ಲಿಯೇ ಕಾಲ ಕಳೆದೆ. ಅವು ಕುರುಳು! ಕುರುಳ ಕಣಕಣದಲ್ಲಿ ತೆರಹಿಲ್ಲದಂತಿದ್ದ ಅಗ್ನಿಯನು, ಭಸ್ಮವನು ನೋಡಲರಿಯದು ಮನ. ಸೆಗಣಿಯಂತಿದ್ದ ಈ ಮನವನು ನೀ ಕರುಣಿಸು ಕೂಡಲಸಂಗಮದೇವಾ .

271

ತಾಮಸದ ಮುಸುಕು ಕಂಗಳ ಕೆಡಿಸಿತ್ತೆನ್ನ ಭಕ್ತಿ ;
ಕಾಮವೆಂಬ ಅಗ್ನಿಗೆ ಮುರಿದಿಕ್ಕಿತ್ತೆನ್ನ ಭಕ್ತಿ ;
ಉದರಕ್ಕೆ ಕುದಿ ಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ ;
ಇದಿರನಾಶ್ರಯಿಸಲು ಹೋಯಿತ್ತೆನ್ನ ಭಕ್ತಿ !
ಹೆಣಮೂಲ ನಾನು ಕೂಡಲಸಂಗಮದೇವ ,
ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿತ್ತೆನ್ನ ಭಕ್ತಿ .

ತಾಮಸದ ಮುಸುಕು ಕಂಗಳ ಕೆಡಿಸಿತ್ತೆನ್ನ ಭಕ್ತಿ :

ಮನವೆಂಬ ತಾಮಸದ ಮುಸುಕು; ಕಂಗಳ ಮೇಲೆ ಚೆಲ್ಲಿ; ನೋಡುವ ಕಣ್ಣನ್ನು ನೋಡದಂತೆ ಕುರುಡನನ್ನಾಗಿಸಿತು. ನೋಡುವ ಕಣ್ಣಿನಲ್ಲಿ ತಾಮಸದ ಕಾಮ ಮುಸುಕಿ; ತನುವನ್ನು ಅಗ್ನಿಗೆ ಮುರಿದಿಕ್ಕಿತ್ತು . ತನು ತನುವಿನ ಮೇಲೆ ಎಗರಿ ತನುವನ್ನೇ ಹರಿದು ತಿನ್ನುವ ನಾಯಿಯಂತೆ ಕಾಮುಕನನ್ನಾಗಿ ಮಾಡಿತ್ತು ಮನ. ಉದರಕ್ಕೆ ಕುದಿ ಕುದಿದು ಮುಂದುಗೆಡಿಸಿತ್ತು ಮನ.

ಕಣ್ಣಿನಲ್ಲಿ ಕಾಮದ ಹಸಿವು, ತನುವಿನಲ್ಲಿ ತನುವನ್ನು ಪಡೆದು ಸುಖಿಸುವ ಹಸಿವು. ಪದಾರ್ಥ ನೋಡಿ ತನುವಿನ ಉದರದ ಹಸಿವು ! ಮುಂದುಗೆಡಿಸಿತ್ತೆನ್ನ ಬಯಕೆಯ ಬೇಡಿಕೆ. ಇದಿರಿನಲ್ಲಿರುವ ವಸ್ತುವನ್ನು ಆಶ್ರಯಿಸಿ ಸುಖಿಸಲು ಹೋಯಿತೆ ವಿನಹ; ತನುವಿನಲ್ಲಿ ಉಂಟಾದ ವಿಕಾರವನು ಅರಿಯಲಿಲ್ಲ.

ತನುವಿನಲ್ಲಿ ಅರಿವೆಂಬ ಗುರುವಿದ್ದರೇನು ? ತನು ಮನ ಹೇಳಿದಂತೆ ಕೇಳುವ ಹೆಣ. ಮನ ಒಯ್ದತ್ತಲ್ಹೋಗುವ ಕುರಿ. ತನ್ನ ಕೊರಳಿಗೆ ಕಟ್ಟಿದ ಮೃತ್ಯುವನ್ನೇ ಅಮೃತವೆಂದು ಮೆಲ್ಲುವುದಕ್ಕಾಗಿಯೇ ಹುಟ್ಟಿದ ಅವಿವೇಕಿ.

ತಾಮಸ ಕಣ್ಣಿನಿಂದ ನೋಡಿದ ತನುವಿನ ಅಧರವನ್ನೂ ಹೀರುತ್ತದೆ. ಪೂರೆಭರಿತ ಕಿವಿಯಿಂದ ಕೇಳಿದ ಶಬ್ದಕ್ಕೂ ಬಾಯಿ ಹಾಕುತ್ತದೆ. ಅಜ್ಞಾನದ ಸ್ಪರ್ಶಕ್ಕೂ ಬಾಯಿ ಚಪ್ಪರಿಸಿ ಮೆಲುಕುಹಾಕುತ್ತದೆ. ವಾಸನೆಗೂ ರುಚಿಗೂ ಹಗಲಿರುಳೂ ಸುಮ್ಮನಿರದ ಇದರ ಬಾಯಿ ಟೊಣೆದು ಹೋಗಬಾರದೆ ?

ತನುವಿನಲ್ಲಿಯೇ ಸಂಗಮವಾದ ಹೇ ಸಂಗಮನಾಥನೆ ಹಗಲಿರುಳೂ ತನುವನ್ನು ಹಿಂಸಿಸುವ ಈ ಮನವನ್ನು ರಕ್ಷಿಸು ತಂದೆ !

272

ಏನಿದ್ದಡೇನಿದ್ದಡೊಲ್ಲದು ನಿಮ್ಮನುಭಾವಕ್ಕೆನ್ನ ಮನವು
ಡಂಬಕನೆಂಬವ ನಾನು ಕಂಡಯ್ಯಾ
ಕೂಡಲಸಂಗಮದೇವರ ಪೂಜಿಸಿ ಮಾನವರಾಸೆ ಬಿಡದಾಗಿ.

ಹೆಂಡತಿ ಮಕ್ಕಳು ಹೊಲ ಮನೆ ಒಡವೆ ಅಧಿಕಾರ ದಕ್ಕಿದರೂ ಮನ ನಿಶ್ಚಲವಾಗದು; ನಿಂತಲ್ಲೆ ನಿಲ್ಲದು. ಮತ್ತಷ್ಟು ಮತ್ತಷ್ಟು ಬೇಕೆಂದು ಹಗಲಿರುಳು ಪರಿತಪಿಸುತ್ತದೆ. ಸಂಗ್ರಹಿಸಿ ಕಾವಲು ಕಾಯುತ್ತದೆ. ಸಂಪತ್ತಿದ್ದರೂ ಸುಖವಿಲ್ಲ ; ಇಲ್ಲದಿದ್ದರೂ ಸುಖವಿಲ್ಲ. ಹೀಗೇಕೆ ಎಂದು ಮನವನ್ನು ಮನವೇ ಕೇಳಿಕೊಳ್ಳಲು ಮನಕ್ಕೆ ಪುರಸೊತ್ತಿಲ್ಲ.

ಸುಖಕ್ಕಾಗಿ ಹಗಲಿರುಳು ದುಃಖಿಸುತ್ತದೆ. ಅದು ಸಿಕ್ಕಾಗ ಅನುಭವಿಸದೆ ಮತ್ತೆ ದುಃಖಿಸುತ್ತದೆ. ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ; ಆದರೆ ಸುಖ ದುಃಖಗಳಿಗೆ ಮೀರಿದ ಸುಖವನ್ನು ತಿಳಿಯಲು ಮನವೇ ಸಿದ್ಧವಾಗಬೇಕು. ಆ ಸುಖ ಕೂಡಾ ತನುವಿನ ಕಣ ಕಣದಲ್ಲಿದೆಯೆಂದು ಮನಕ್ಕೆ ಮನದಟ್ಟಾಗಬೇಕು.

ಶರಣರ ಸಂಗ ಮಾಡಿದಾಗ ಮನಕ್ಕೆ ತನುವಿನಲ್ಲಿರುವ ಅರಿವು ಅನುಭವವಾಗುತ್ತದೆ. ತನುವಿನಲ್ಲಿಸಂಗಮವಾದ ಅರಿವೆಂಬ ಗುರುದೇವನನ್ನು ಪೂಜಿಸಿದಾಗ; ಆ ಅರಿವಿನಿಂದ ಆಸೆಪಟ್ಟ ವಸ್ತುವನ್ನು ಮನ ವೀಕ್ಷಿಸಿದಾಗ ; ಅದರಲ್ಲಿ ಹುರುಳಿಲ್ಲವೆಂದು ವೇದ್ಯವಾಗುತ್ತದೆ. ಹೀಗೆ ತಿಳಿದರಾಗದು; ಪ್ರಯೋಗಕ್ಕೆ ಹೋಗದ ವಿನಹ ! ನುಡಿದರಾಗದು ಅನುಭವಿಸಿ ಒರೆಗಲ್ಲಿಗೆ ತಿಕ್ಕದ ವಿನಹ ಮನದ ಆಸೆ ಬಿಡದು ಎಂದು ಅಣ್ಣನವರು ಸ್ಪಷ್ಟಪಡಿಸಿದ್ದಾರೆ.

273

ಬೆಲ್ಲವ ತಿಂದ ಕೋಡಗದಂತೆ ಸಿಹಿಯ ನೆನೆಯದಿರಾ, ಮನವೆ.
ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೆ.
ಗಗನವಡರಿದ ಕಾಗೆಯಂತೆ ದೆಸೆ ದೆಸೆಗೆ ಹಂಬಲಿಸದಿರಾ, ಮನವೆ.
ಕೂಡಲಸಂಗನ ಶರಣರ ಕಂಡು ಲಿಂಗವೆಂದೆ ನಂಬು ಮನವೆ.

ಮಂಗ, ನರಿ, ಕಾಗೆಯನ್ನು ಅಣ್ಣನವರು ಈ ವಚನದಲ್ಲಿ ಉದಾಹರಿಸಿದ್ದಾರೆ. ಇವುಗಳಿಗೆ ಅರಿವಿನ ಕೋಶಗಳಿಲ್ಲ. ಇವು ಅರಿವಿನ ಆಶ್ರಯದಲ್ಲೂ ಇಲ್ಲ. ರುಚಿಯನ್ನು ಮೆಲುಕು ಹಾಕಿ, ಮತ್ತೆ ಮತ್ತೆ ಆ ರುಚಿಯನ್ನೇ ಬಯಸಿ ತಿಂದು ತಿಂದು ಒಮ್ಮೆ ಇಲ್ಲವಾಗುತ್ತವೆ. ರುಚಿಯೆಂದರೇನು? ಅದು ಎಲ್ಲಿ ಹುಟ್ಟುತ್ತದೆ ; ಪದಾರ್ಥದಲ್ಲಿ ರುಚಿ ಇದೆಯೋ ಅಥವಾ ತಿನ್ನುವ ನಾಲಿಗೆಯಲ್ಲಿ ರುಚಿ ಇದೆಯೋ ಎಂದು ತಿಳಿಯುವ ಸಾಮರ್ಥ್ಯ ಇವುಗಳಿಗೆ ಇಲ್ಲ.

ಬೆಲ್ಲ ತಿನ್ನಲು ಹೋದ ಮಂಗ ಬಡಿಗೆ ಏಟು ತಿನ್ನುತ್ತದೆ. ಕಬ್ಬು ತಿನ್ನಲು ಹೋದ ನರಿ ಬಲೆಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತದೆ. ಗಗನದಲ್ಲಿ ಹಾರುವ ಕಾಗೆ ತಿನ್ನುವುದಕ್ಕಾಗಿಯೆ ಕೆಳಗೆ

ನೋಡುತ್ತದೆ. ತಿನ್ನುವುದಕ್ಕಾಗಿಯೇ ಮೇಲೆ ಹಾರುತ್ತದೆ. ಅವುಗಳ ಶಕ್ತಿ ತಿನ್ನುವುದಕ್ಕಾಗಿಯೇ ವ್ಯಯವಾಗುತ್ತದೆ. ಪ್ರಾಣಿ, ಪಕ್ಷಿ ಜಾತಿಗೆ ಸೇರಿದ'- ಅವುಗಳಿಗೆ ಜ್ಞಾನ ಇಲ್ಲ. ಇದ್ದರೂ ಪ್ರಾಣದ ಭಯವಿಲ್ಲದೆ ತಿನ್ನವುದಕ್ಕಾಗಿ ಮಾತ್ರ ಬಳಕೆಯಾಗುತ್ತದೆ.

ತನು, ಮಂಗ ನರಿ ಕಾಗೆಯಂತಲ್ಲ. ತನುವಿನ ಕಣಕಣದಲ್ಲಿ ಅರಿವಿದೆ. ಅದನ್ನು ತನುವಿನ ಅಭ್ಯುದಯಕ್ಕಾಗಿ ಬಳಕೆ ಮಾಡುವ ಮನವಿದೆ. ಆದರೆ ಮನ ಜ್ಞಾನದ ಎಚ್ಚರವಿಲ್ಲದೆ ತಿನ್ನುವುದಕ್ಕಾಗಿ ನಾಲಿಗೆಯಲ್ಲಿ ಆವರಿಸಿಕೊಂಡಿದೆ. ಆ ರುಚಿ ಸವಿಯಲು ಬಾರು, ಕ್ಲಬ್ಬು , ಹೊಟೆಲ್‌ಗಳಿಗೆ ತನುವನ್ನು ಕರೆದುಕೊಂಡು ಹೋಗುತ್ತದೆ. ಕುಡಿಯುವುದರಲ್ಲಿ ತಿನ್ನುವುದರಲ್ಲಿ ಜ್ಞಾನ ತನುವನ್ನು ಮೈ ಮರೆಸುತ್ತದೆ. ರುಚಿ ನೆನೆ ನೆನೆದು ತನುವನ್ನು ಹಿಂಸಿಸುತ್ತದೆ.

ತನು ಮತ್ತೊಂದು ಜ್ಞಾನಿ ತನುವಿಗೆ ಜನ್ಮ ನೀಡಲು ಮಾತ್ರ ತನುವಿನೊಂದಿಗೆ ಕೂಡುತ್ತದೆ. ಆದರೆ ತನುವನ್ನು ಆವರಿಸಿದ ಮನ ಈ ಕೂಟದ ರುಚಿಯನ್ನು ಕಣ್ಣಿನಲ್ಲಿ ಚರ್ಮದಲ್ಲಿ ನಾಲಿಗೆಯಲ್ಲಿ ತುಟಿ, ಎದೆ, ನಿತಂಬ, ಜನನೇಂದ್ರಿಯಗಳಲ್ಲಿ ಸಂಗ್ರಹಿಸಿಕೊಂಡು ಮತ್ತೆ ಮತ್ತೆ ತನುವಿನೊಂದಿಗೆ ಕಾಮುಕನಾಗಿ ಪೈಶಾಚಿಕ ಕ್ರಿಯೆಯಲ್ಲಿ ತೊಡಗುತ್ತದೆ. ಜ್ಞಾನಿ ತನುವಿಗೆ ಸಂಕಟವನ್ನೊಡ್ಡುತ್ತದೆ. ತನುವಿನಲ್ಲಿರುವ ಅರಿವೆಂಬ ಗುರುವಿನ ಮಾತುಗಳು ಮನಕ್ಕೆ ರುಚಿಸುವುದಿಲ್ಲ.

ಹಳದಿ ಲೋಹಕ್ಕೆ ಚಿನ್ನದ ಹೆಸರು ಕೊಟ್ಟು , ಮುದ್ರಿತ ಕಾಗದಕ್ಕೆ ಕರೆನ್ಸಿ ಎಂಬ ಹೆಸರು ಕೊಟ್ಟು ಮನ ತನುವನ್ನು ಹಗಲಿರುಳೂ ಹಿಂಸಿಸುತ್ತದೆ. ಇವುಗಳ ಆಸೆಗಾಗಿ ಕೊಲೆ ಮಾಡಲು ಪ್ರಾಣ ಕಳೆದುಕೊಳ್ಳಲೂ ಹೇಸುವುದಿಲ್ಲ. ಏಕೆಂದರೆ ಪ್ರಾಣ ತನ್ನದಲ್ಲ. ಅದು ಅರಿವಿನ ಸಂಪತ್ತು !

ಎಲೆ ಮನವೆ, ಮಂಗದಂತೆ ಸಿಹಿಯನ್ನು ನಾಲಿಗೆಯಲ್ಲಿಟ್ಟುಕೊಂಡು ಬೆಲ್ಲಕ್ಕಾಗಿ ಅರಿವಿನ ತನುವನ್ನು ಮತ್ತೆ ಮತ್ತೆ ಹಿಂಸಿಸಬೇಡ. ಕಬ್ಬಿನ ರುಚಿಗಾಗಿ ನರಿಯಂತೆ ತನುವನ್ನು ಅನ್ಯರ ತೋಟಕ್ಕೆಳೆದೊಯ್ಯಬೇಡ. ಗಗನದೆತ್ತರಕ್ಕೆ ಹಾರಿದರೂ ಕಾಗೆಯಂತೆ ತಿನ್ನುವುದಕ್ಕಾಗಿ ಕೆಳಗೆನೋಡಬೇಡ.

ಎಲೆ ಮನವೇ ನೀನು ತನುವಿನ ಕಣಕಣದಲ್ಲಿರುವ ಅರಿವೆಂಬ ಗುರುದೇವನ ನೆರಳಲ್ಲಿದ್ದ ಘನಮನ. ಮಂಗದಂತೆ, ನರಿಯಂತೆ, ಕಾಗೆಯಂತೆ ರುಚಿಗಾಗಿ ಹಂಬಲಿಸದೆ ಅರಿವಿನ ರುಚಿಗಾಗಿ ಹಂಬಲಿಸು, ತನುವಿನಲ್ಲಿ ತನ್ಮಯವಾದ ಅರಿವಿನ ರುಚಿಯನುಂಡು ಕೂಡಲಸಂಗನ ಶರಣರ ಕಂಡು ಲಿಂಗವೆಂದೆ ನಂಬು ಮನವೆ.

ಶರಣರು ಮಹಾಜ್ಞಾನಿಗಳು ! ಹರಿದಾಡುವ ಮನವೆಂಬ ಮಂಗವನ್ನು ಹಿಡಿದು ಅದಕ್ಕೆ ಅರಿವಿನ ಲಿಂಗವನ್ನು ಕಟ್ಟುವರು. ಲಿಂಗ ಕಟ್ಟಿಸಿಕೊಂಡ ಮನ ಸರ್ವತನುಗಳನ್ನು ಅರಿವಿನ ಲಿಂಗತನುಗಳನ್ನಾಗಿ ನೋಡುವುದು. ರುಚಿ - ಅರುಚಿ ಕಳೆದುಕೊಂಡ ಮನ ಅರಿವಿನ ರುಚಿ ಹೊಂದಿ ಅರಿವಿನ ರುಚಿಯನ್ನೇ ಸದಾ ನೆನೆನೆನೆದು ಘನಮನವಾಗುವುದು.

274

ಒಡೆಯನ ಕಂಡಡೆ ಕಳ್ಳನಾಗದಿರಾ, ಮನವೆ,
ಭವದ ಬಾರಿಯ ತಪ್ಪಿಸಿಕೊಂಬಡೆ
ನೀನು ನಿಯತನಾಗಿ, ಭಯ ಭರಿತನಾಗಿ
ಅಹಂಕಾರಿಯಾಗದೆ ಶರಣೆನ್ನು, ಮನವೆ,

ಕೂಡಲಸಂಗನ ಶರಣರಲ್ಲಿ ಭಕ್ತಿಯನೊಲುವಡೆ,
ಕಿಂಕಿಲನಾಗಿ ಬದುಕು ಮನವೆ.

ಕಳ್ಳ ಅನಂತಕಾಲ ಕಳುವು ಮಾಡಿ ಶಿಕ್ಷೆಗೆ ಗುರಿಯಾಗದೆ ಇರಬಹುದು. ಆದರೆ ಕಳ್ಳನ ಜೀವ ಹುಳ್ಳುಳ್ಳಗೆ ಎನ್ನುವ ಗಾದೆಯಿದೆ. ಮನದ ಚಿತ್ತ ವಸ್ತುವಿನ ಮೇಲೆ ನೆಟ್ಟಾಗ ಅದನ್ನು ಪಡೆಯಲು ತನುವನ್ನು ಬಳಸಿಕೊಳ್ಳುತ್ತದೆ ಮನ. ತನು ಅರಿವಿನ ಸಂಪತ್ತು ; ಆ ಅರಿವೆಂಬ ಗುರುದೇವ ಮನವೆಂಬ ಕಳ್ಳನಿಗೆ ಕದಿಯಬೇಡವೆಂದು ಹೇಳುತ್ತಾನೆ. ಆದರೂ ಮನವೆಂಬ ಕಳ್ಳನಿಗೆ ಗುರುದೇವನೆಂಬ ಒಡಲೊಡೆಯನ ಮಾತು ಹಿಡಿಸುವುದಿಲ್ಲ. ವಸ್ತುವನ್ನು ಕದಿಯುತ್ತಾನೆ. ಯಾರೂ ನೋಡಲಿಲ್ಲ ದಕ್ಕಿದೆನೆಂದು ಕ್ಷಣಿಕ ಸುಖ ಅನುಭವಿಸುತ್ತಾನೆ. ಆದರೆ ಒಡಲೊಡೆಯ ನೋಡಿದ್ದಾನೆ. ಮನ ಕದ್ದ ವಸ್ತುಗಳ ಪಟ್ಟಿಯನ್ನೆಲ್ಲ ಒಡಲಿನಲ್ಲಿಯೇ ಎಫ್.ಐ.ಆರ್. ಮೂಲಕ ದಾಖಲಿಸಿದ್ದಾನೆ ! ಮನಕ್ಕೆ ಮತ್ತೆ ಮತ್ತೆ ನೀನು ಕಳ್ಳ ನೀನು ಕಳ್ಳನೆಂದು ಒಡಲಿರುವವರೆಗೆ ಶಿಕ್ಷಿಸುತ್ತಾನೆ.

ಸರಕಾರ, ಸಮಾಜ, ಕಳೆದುಕೊಂಡ ಮಾಲೀಕ ಕಳ್ಳನನ್ನು ನೋಡಿದರೆ ಹಿಡಿದು ಬಂಧಿಸುತ್ತಾರೆ; ಒಡಲಿಗೆ ಶಿಕ್ಷೆ ಕೊಡುತ್ತಾರೆ. ಕಳುವು ಮಾಡಿದ್ದು ಮನವೆಂದು, ಒಡಲು ಒಡಲೊಡೆಯನೆಂಬ ಗುರುವಿನ ಸಂಪತ್ತೆಂದು ಸರಕಾರಕ್ಕೇನು ಗೊತ್ತು ? ವಸ್ತು ಕಳೆದುಕೊಂಡ ಮಾಲೀಕ ಮತ್ತು ಜನಕ್ಕೇನು ಗೊತ್ತು ? ಒಡಲಿಗೆ ಶಿಕ್ಷೆ ಕೊಟ್ಟರೆ ಮನವೆಂಬ ಕಳ್ಳ ಹಾಗೇ ಉಳಿದ. ಬಿಡುಗಡೆಯಾದ ಮೇಲೆ ಮತ್ತೊಂದು ವರಸೆಯಲ್ಲಿ ಮನವೆಂಬ ಕಳ್ಳ ಒಡೆಯನ ಒಡಲನ್ನು ಕಳ್ಳತನಕ್ಕೆ ಬಳಸಿಕೊಳ್ಳುತ್ತಾನೆ. ಮತ್ತೆ ಮತ್ತೆ ಕಳುವು ಮಾಡುತ್ತಾನೆ.

ಪೊಲೀಸರು ದಾಖಲಿಸಿದ ಎಫ್. ಐ.ಆರ್. ಪತ್ರ ಹರಿದು ಹೋಗಬಹುದು ; ಆದರೆ ಒಡಲೊಡೆಯ ದಾಖಲಿಸಿದ ಪತ್ರ ಹರಿಯುವುದಿಲ್ಲ. ಮನದ ತಪ್ಪು ಅನಂತಕೋಟಿ ; ಅರಿವೆಂಬ ಗುರುದೇವನ ಸ್ಮರಣೆಗೆ ಲೆಕ್ಕವಿಲ್ಲ. ಮನದ ಜನನ ಮರಣಗಳನ್ನು ತಪ್ಪಿಸಲು ನಿರಂತರ ಶ್ರಮಿಸುತ್ತಾನೆ; ಮೈದಡುವುತ್ತಾನೆ; ಮಾಡಿದ ಎಲ್ಲ ತಪ್ಪುಗಳನ್ನು ಹಗಲಿರುಳೆನ್ನದೆ ನೆನೆಪಿಸುತ್ತಾನೆ. ತನ್ನ ತೋಳ್ತೆಕ್ಕೆಗೆ ಬರಲು ಮನವನ್ನು ಪರಿಪರಿಯಿಂದ ಆಲಾಪಿಸಿ ಕೈಮಾಡಿ ಕರೆಯುತ್ತಾನೆ. ಬಾರದಿದ್ದರೆ ಮನ ಮಾಡಿದ ಅಪರಾಧಗಳನ್ನು ಮನಕ್ಕೆ ಚಾಚುತಪ್ಪದೆ ವರದಿ ನೀಡಿ ಚಿನ್ನದ ಕತ್ತಿಯಿಂದ ಹಿರಿಯುತ್ತಾನೆ. ಎಣ್ಣೆಯೇ ಇಲ್ಲದ ಬಾಣಲೆಗೆ ಹಾಕಿ ಕರಿಯುತ್ತಾನೆ. ಹುಚ್ಚನನ್ನಾಗಿಸಿ ಜನ ಕಲ್ಲಿಲೆ ಹೊಡೆಯುವಂತೆ ಮಾಡುತ್ತಾನೆ. ಅದಕ್ಕಾಗಿ....

ಎಲೆ ಮನವೆ ಒಡಲೊಡೆಯನ ಕಂಡಡೆ ಕಳ್ಳನಾಗದಿರು . ಜನನ ಮರಣದ ಬಾಧೆಯನ್ನು ತಪ್ಪಿಸಿಕೊಳ್ಳಬೇಕೆಂದು ಬಯಸಿದರೆ ನೀನು ನಿರಂತರ ಭಯ ಭರಿತನಾಗಿರು. ಅಹಂಕಾರಿಯಾಗದೆ ಅರಿವೆಂಬ ಗುರುದೇವನಾದ ಒಡಲೊಡೆಯನಿಗೆ ಶರಣೆನ್ನು. ಆತನಿಗೆ ಶರಣು ಹೋಗಿ ಶರಣರಾದ ಮಹಾಜ್ಞಾನಿಗಳ ಸಂಗ ಮಾಡು. ಅವರಿಗೆ ಕಿಂಕಿಲನಾಗಿ ಬದುಕು ಮನವೆ. ಶರಣರು ನಿನಗೆ ನಿನ್ನ ಒಡಲೊಡೆಯನೆಂಬ ಗುರುವಿನ ಸನ್ಮಾರ್ಗದ ಅರಿವಿನ ಹಾದಿಯನ್ನು ತೋರುವರು ಮನವೆ ! ಎಂದು ಬಸವಣ್ಣನವರು ಜಗದ ಸಕಲ ಮನಗಳಿಗೆ ಸನ್ಮಾರ್ಗದ ಹಾದಿಯನ್ನು ಒಡಲಿನಲ್ಲಿಯೇ ತೋರಿದ್ದಾರೆ.

275

ಕೋಟ್ಯಾನು ಕೋಟಿ ಜಪವ ಮಾಡಿ ಕೋಟಲೆಗೊಳ್ಳಲದೇಕೆ ಮನವೆ ?
ಕಿಂಚಿತು ಗೀತವೊಂದನಂತ ಕೋಟಿ ಜಪ !

ಜಪವೆಂಬುದೇಕೆ, ಮನವೆ ?
ಕೂಡಲಸಂಗನ ಶರಣರ ಕಂಡು
ಆಡಿ ಹಾಡಿ ಬದುಕು ಮನವೆ !

ಜಗದಗಲ ಮುಗಿಲಗಲ ಪಸರಿಸಿದ, ಪಾತಾಳದಿಂದತ್ತತ್ತ ಬ್ರಹ್ಮಾಂಡದಿಂದ ಅತ್ತತ್ತ ಬೆಳೆದ, ವಿರಾಟಸ್ವರೂಪನಾದ ಅಖಂಡ ಭಗವಂತನೆ ತನುವಿನಗಲಕ್ಕೆ ಬಂದು ಚುಳುಕಾಗಿದ್ದಾನೆ. ಮಾತಲ್ಲದ ಮಾತನು ಗೀತೆಯ ಮೂಲಕ ನಿನಗೆ ಹೇಳುತ್ತಿದ್ದಾನೆ. ಅದು ಮಾತಲ್ಲ ; ಭಗವದ್ಗೀತೆ ! ಎಲೆ ಮನವೆ ಸರಿಯಾಗಿ ಆಲಿಸು. ಆ ಗೀತೆಯ ಬೆಳಕಿನಿಂದ ಸೃಷ್ಟಿಯಾದ ನೆರಳು ನೀನು. ನಿನ್ನ ಅನಂತ ಕಾಲದ ಕತ್ತಲು ತೊಲಗುವುದು ಆ ಮಹಾ ಬೆಳಕಿನಿಂದಲೇ.

ಹೀಗಿದ್ದೂ ಕೋಟ್ಯಾನು ಕೋಟಿ ಜಪವ ಮಾಡಿ ಕೋಟಲೆಗೊಳ್ಳಲದೇಕೆ ಮನವೆ ? ಕೊಂಕುಳದಲ್ಲಿಯೇ ವಿರಾಟ ಸ್ವರೂಪವಾದ ಅರಿವಿನ ಕೂಸನ್ನಿಟ್ಟುಕೊಂಡು ಕೂಸಿಗಾಗಿ ಊರ ತುಂಬ ಅಲಿಯುವುದು ನಿನಗೆ ಶ್ರೇಯಸ್ಸು ತಂದುಕೊಡುವುದೆ ? ವೇದ ಉಪನಿಷತ್ತು ಪುರಾಣ ಭಗವದ್ಗೀತೆ ಬೈಬಲ್‌ಗಳು ಬಂದದ್ದಾದರೂ ಎಲ್ಲಿಂದ ? ಎಂದು ಕ್ಷಣ ಹೊತ್ತಾದರೂ ಯೋಚಿಸು ಮನವೆ ! ಓದಿ ಕೆಟ್ಟ ಕೂಚು ಭಟ್ಟ ಎಂದು ವರಲಿ ವರಲಿ ಸಾಯಬೇಡ ಮನವೆ. ಅನಂತಕೋಟಿ ಜಪ ಮಾಡಿದರೇನು? ತನುವಿನಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಕುರಿತು ಆಡಿ ಹಾಡಿ ಬದುಕು ಮನವೆ !

276

ಮನವೆ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ ಮನವೆ !
ಲಿಂಗವ ನಂಬು ಕಂಡಾ, ಮನವೆ !
ಜಂಗಮವ ನಂಬು ಕಂಡಾ, ಮನವೆ !
ಕೂಡಲಸಂಗಮದೇವರ ಬಿಡದೆ ಬೆಂಬತ್ತು ಕಂಡಾ ಮನವೆ !

ಎಲೆ ಮನವೆ, ನಿನ್ನ ಜನನ ಮರಣಕ್ಕೆ ಕಾರಣವಾದ ಅರಿವಿನ ತಂದೆಯನ್ನೆ ಮರೆದೆಯಲ್ಲಾ ಮನವೆ ! ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ . ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ಎಂದು ಪರಿ ಪರಿಯಿಂದ ಬೇಡಿದರೂ; ನಿನ್ನ ಮರೆವು ನಷ್ಟವಾಗಿ ನಿನಗೆ ಜನ್ಮನೀಡಿದ ಅರಿವೆಂಬ ತಂದೆಯ ಮೇಲೆ ನಿನಗೆ ಇಷ್ಟವಾಗುತ್ತಿಲ್ಲವಲ್ಲಾ ಮನವೆ !

ಅಂಗದ ಕಣಕಣದಲ್ಲಿರುವ ; ಸೂಜಿ ಮೊನೆ ಇಡಲೂ ಸಂದಿಲ್ಲದಂತೆ ಇರುವ ಅರಿವೆಂಬ ಲಿಂಗವನ್ನು ನಂಬು ಕಂಡಾ ಮನವೆ ! ಅಂಗ ಲಿಂಗ ಒಂದೇ ಆದ ಲಿಂಗಾಂಗ ಸಾಮರಸ್ಯವನು ನಂಬು ಕಂಡಾ ಮನವೆ !

ಲಿಂಗಾಂಗದಲ್ಲಿಯೇ ಇದ್ದು ಲಿಂಗ ನುಡಿಯನು ಪಾಲಿಸುವ ಛಲಗಾರನಾದ ಜಂಗಮ ಮೂರ್ತಿಯನು ನಂಬು ಕಂಡಾ ಮನವೆ ! ಅಂಗ ಲಿಂಗ ಕೂಡಿ ಕೂಡಲಸಂಗಮನಾಥನೇ ತಾನಾದ ದೇವರ ಪಾದವನು ಬಿಡದೆ ಬೆಂಬತ್ತು ಕಂಡಾ ಮನವೆ !

277

ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ
ಬರಿದೆ ಧೃತಿಗೆಡಬೇಡ ಮನವೆ !
ಆರನಾದಡೆಯೂ ಬೇಡಿ ಬೇಡಿ
ಬರಿದೆ ಧೃತಿಗೆಡ ಬೇಡ ಮನವೆ
ಕೂಡಲಸಂಗಮದೇವನಲ್ಲದೆ,
ಆರ ಬೇಡಿದಡಿಲ್ಲ ಮನವೆ !

ಮನ, ತಾನು ಸುಖಪಡಬೇಕೆಂದು ತನುವನ್ನು ಕರೆದುಕೊಂಡು ಹೋಗದ ಜಾಗಗಳೇ ಇಲ್ಲ. ಆದರೂ ಅದಕ್ಕೆ ಶಾಶ್ವತ ಸುಖವಿಲ್ಲ. ಸುಖವಾಗುತ್ತದೆಂದು ತನುವನ್ನು ಮನ ತಿರುಪತಿ, ಶ್ರೀಶೈಲ, ಕಾಶಿ, ಕೇದಾರ, ಹರದ್ವಾರ, ಬದರಿ, ಕಂಚಿ, ಕಾಳಹಸ್ತಿ ಎಂಬ ಸುಕ್ಷೇತ್ರಗಳಿಗೆ ಮತ್ತೆ ಮತ್ತೆ ಕರೆದುಕೊಂಡು ಹೋಗುತ್ತದೆ. ಆದರೆ ಸುಖವಾಗುವುದೇ ಇಲ್ಲ.

ತನಗೆ ಸುಖವಾಗುತ್ತದೆಂದು ಮನ ತನುವನ್ನು ಕ್ಲಬ್, ಬಾರ್, ಜೂಜಿನ ಮನೆ, ವೇಶ್ಯಾಗೃಹಕ್ಕೆ ಕರೆದುಕೊಂಡು ಹೋಗುತ್ತದೆ. ಆದರೂ ಸುಖವಾಗುವುದೇ ಇಲ್ಲ.

ತನಗೆ ಸುಖವಾಗುವುದೆಂದು ಮನ ತನುವನ್ನು ಮಠ, ಪೀಠ, ಪ್ರಾರ್ಥನಾ ಮಂದಿರ, ಚರ್ಚ್‌ಗಳಿಗೆ ಕರೆದುಕೊಂಡು ಹೋಗುತ್ತದೆ ಆದರೂ ಸುಖವಾಗುವುದೇ ಇಲ್ಲ.

ತನಗೆ ಸುಖವಾಗುವುದೆಂದು ಮನ ತನುವಿಗೆ ಯಜ್ಞ ಹೋಮ ಯಾಗಾದಿಗಳನ್ನು ಮಾಡಿಸುತ್ತದೆ ಆದರೂ ಸುಖವಾಗುವುದೇ ಇಲ್ಲ. ತನಗೆ ಸುಖವಾಗುವುದೆಂದು ಮನ ತನುವನ್ನು ಗುರುವಿನ ಪಾದಕ್ಕೆ ಹಾಕುತ್ತದೆ. ಕಾಲು ತೊಳೆದು ನೆತ್ತಿಯ ಮೇಲೆ ಚೆಲ್ಲಿಕೊಂಡು ಸುಖವಾಯಿತೆಂದು ಪುಳಕಿತಗೊಳ್ಳುತ್ತದೆ. ವೇಷದ ಗುರುವಿಗೆ ಶಿಷ್ಯನಾಗಿ ಆಡಿ ಹಾಡಿ ಹೊಗಳುತ್ತದೆ. ಮಠ ಮಂದಿರ ಸಮಾದಿ ಕಟ್ಟಿಸಿ, ತೇರು ಎಳೆದು ಭ್ರಮೆಯಿಂದ ಸಂಭ್ರಮಿಸುತ್ತದೆ. ಆದರೂ ಬ್ರಹ್ಮ ಸುಖ ದೊರೆಯುವುದೇ ಇಲ್ಲ.

ಆವ ದೇವರನ್ನು ಬೇಡಿದಡಿಲ್ಲ , ಆವ ಮಾನವನನ್ನು ಬೇಡಿದಡಿಲ್ಲ. ಬರಿದೆ ಧೃತಿಗೆಡಬೇಡ ಮನವೆ ! ಆರನಾದಡೂ ಬೇಡಿ ಬೇಡಿ ಬರಿದೆ ಧೃತಿಗೆಡ ಬೇಡ ಮನವೆ. ಎಲೆ ಮನವೆ ನೀನು ವಾಸ ಮಾಡಿದ ತನುವಿನಲ್ಲಿಯೇ ನಿನ್ನ ಅರಿವೆಂಬ ದೇವರು ತನ್ಮಯವಾಗಿದ್ದಾನೆ.

''ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು. ತನ್ನ ತಾನರಿದ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು. ಆ ಅರಿವೆ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ ''

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ದೇವರನ್ನು ಇಟ್ಟುಕೊಂಡು ; ಧೃತಿಗೆಟ್ಟು ಮತಿಗೆಟ್ಟು ಸುರರನ್ನು ನರರನ್ನು ಬೇಡುವುದೇ ? ಎಲೆ ಮನವೆ ಆತ ನೀನು ವಾಸ ಮಾಡಿದ ತನುವಿನಲ್ಲಿಯೇ ಸಂಗಮವಾಗಿದ್ದಾನೆ. ಬೇಡಿದರೆ ಆ ಸಂಗಮನಾಥನನ್ನೇ ಸೆರಗೊಡ್ಡಿ ಬೇಡು ; ಬೇಡಿದ್ದನ್ನು ಕೊಡುವ ಕಾಮಧೇನುವು ಆತನೆಂದು ಧೃತಿಗೆಡದೆ ನಂಬು ನಂಬೆಲೆ ಮನವೆ.

278

ಆಡಿ ಅಳುಪದಿರಾ, ಲೇಸಮಾಡಿ ಮರುಗದಿರಾ, ಎಲೆ ಮನವೆ.

ಕೂಡಿ ತಪ್ಪದಿರಾ, ಬೇಡಿದವರಿಗಿಲ್ಲೆನದಿರು ಕಂಡಾ.
ನಾಡ ಮಾತು ಬೇಡ ಸೆರಗೊಡ್ಡಿ ಬೇಡು
ಕೂಡಲಸಂಗನ ಶರಣರ.

ಆಡಿ ಅಳುಪದಿರಾ ಮನವೆ: ಮನ ನುಡಿಯುವಾಗ ಅರಿವಿನೊಂದಿಗೆ ಬೆರೆತು ನುಡಿಯುತ್ತದೆ. ಕೇಳಿದಾತ, ಕೇಳಿದವರು ಸುಖಿಸುತ್ತಾರೆ. ನುಡಿದ ಮನ ಕೂಡಾ ತನುವಿನೊಂದಿಗೆ ಸುಖಿಸುತ್ತದೆ. ನುಡಿದಂತೆ ನಡೆಯುವ ಕಾಲ ಬಂದಾಗ ಮನ ನಡೆಯುವುದಿಲ್ಲ. ಆಗ ನುಡಿದ ಮನವನ್ನು ಅರಿವು ಶಿಕ್ಷಿಸದೆ ಬಿಡುವುದಿಲ್ಲ. ಮನ ನುಡಿಯುವಾಗ ಅರಿವಿನಿಂದ ತನುವನ್ನು ಹಿಡಿದು ನುಡಿದು ಸುಖಿಸಿತ್ತು. ನುಡಿದಂತೆ ನಡೆಯುವಾಗ ಅರಿವನ್ನು ಮರೆತು ತನುವನ್ನು ಹಿಡಿದು ನುಡಿಯಿತು: ತನು ದು:ಖಕ್ಕೆ ಈಡಾಯಿತು ! ನುಡಿದಂತೆ ನಡೆಯಲಿಲ್ಲವೆಂದು ಜನ ತನುವನ್ನು ಗುರುತಿಸಿ ನಿಂದೆ ಮಾಡಿದರು. ನಿಂದೆಯ ಮಾತುಗಳನ್ನು ಕೇಳಿದ ಮನ ಸಹಿಸದೆ ನಿಂದಿಸಿದವರನ್ನು ಕೊಂದುಹಾಕಲು, ಆತ್ಮಹತ್ಯೆ ಮಾಡಿಕೊಳ್ಳಲು ಸಂಚು ಹೂಡಿತೆ ಹೊರತು ಅರಿವೆಂಬ ಗುರುವನ್ನು ಸೆರಗೊಡ್ಡಿ ಬೇಡಲಿಲ್ಲ. ಮನ ಅರಿವಿನೊಂದಿಗೆ ಆಡಿದ ಮಾತನ್ನು ಅರಿವಿನೊಂದಿಗೆ ಬೆರೆತು ಈಡೇರಿಸಲಿಲ್ಲ. ಮಾತು ಕೇಳಿಸಿಕೊಂಡವರು ಸುಮ್ಮನಾಗಬಹುದು: ಆದರೆ ಆಡಿ ನೆರವೇರಿಸದ ಮಾತು ಅರಿವಿನಲ್ಲಿಯೇ ಉಳಿದು ಮನ ಆಡಿ ನೆರವೇರಿಸದೆ ಅಳುಕಿತು. ಅರಿವೆಂಬ ಗುರು ತನು ಮನ ಇರುವವರೆಗೆ ಅಣಿಕಿಸುವುದನ್ನು ಬಿಡಲಿಲ್ಲ.

ಲೇಸಮಾಡಿ ಮರುಗದಿರಾ, ಎಲೆ ಮನವೆ : ಮನ ಅರಿವಿನಿಂದ ಮಾಡಿದ ಕೆಲಸವನ್ನು ಮಾಡಬಾರದಿತ್ತು ಮಾಡಿದೆನಲ್ಲಾ ಎಂದು ಮಾಡಿದ ಕೆಲಸವನ್ನೇ ಮತ್ತೆ ಮತ್ತೆ ಮಾಡಿದೆನೆಂದು ಹೊಗಳಿಕೊಳ್ಳುವುದು. ಇವೆರಡೂ ಮನ ಮತ್ತು ತನುವಿಗೆ ಹಿಂಸೆಯನ್ನೇ ತಂದುಕೊಡುತ್ತವೆ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ.

ಭೂಮಿ ನಿನ್ನ ಪ್ರೊಡೆಕ್ಟ್ ಅಲ್ಲ, ಭೂಮಿಯೊಳಗಿದ್ದ ಹೇಮವೂ ನಿನ್ನ ಪ್ರೊಡೆಕ್ಟ್ ಅಲ್ಲ , ಭೂಮಿ ಬೆಳೆದ ಬೆಳೆಯೂ ನಿನ್ನದಲ್ಲ, ಅಂದಮೇಲೆ ನೀನು ಲೇಸು ಮಾಡಿದ್ದಾದರೂ ಏನು ? ನೀನು ಇತರರಿಗೆ ಕೊಟ್ಟು ನಿನ್ನದೇ ಎಂದು ಬಗೆದದ್ದಾದರೂ ಏನು, ಕೆರೆಯ ನೀರು ಕರೆಗೆ ಚೆಲ್ಲಿ ನನ್ನದೆಂದರೆ ಹೇಗೆ ? ನಾನು ಮಾಡಿದೆ, ನಾನು ನೀಡಿದೆ ಎಂದು ಮರುಗಿದರೆ ಹೇಗೆ ? ಮರುಗದಿರಾ ಎಲೆ ಮನವೆ.

ಕೂಡಿ ತಪ್ಪದಿರಾ, ಬೇಡಿದವರಿಗೆ ಇಲ್ಲೆನದಿರು ಕಂಡಾ : ಎಲೆ ಮನವೇ, ಮನವೆಂಬ ನೀನು, ಅರಿವೆಂಬ ಗುರುದೇವನೊಂದಿಗೆ ತನುವೆಂಬ ಮನೆಯಲ್ಲಿ ಕೂಡಿರುವಿ. ತನು ಗುರುವಿನ ಸಂಪತ್ತು. ಆತ ಹೇಳಿದಂತೆ ಕೇಳುವುದು ನಿನ್ನ ಧರ್ಮ! ಅರಿವೆಂಬ ಗುರುದೇವನನ್ನು ಕೂಡಿದ ನೀನು ಆತ ಹೇಳಿದ ಮಾತುಗಳನ್ನೆಲ್ಲ ತಪ್ಪದೆ ಪರಿಪಾಲಿಸು. ಏಕೆಂದರೆ ಮನವಿದ್ದ ತನುಗಳೆಲ್ಲ ಅರಿವೆಂಬ ಗುರುದೇವನಿದ್ದ ಮನೆ ಆ ಗುರುದೇವನಿದ್ದ ತನುಗಳು ಬೇಡಿದಾಗ ಇಲ್ಲ ಎನ್ನಬೇಡ ಕಂಡಾ.

ನಾಡ ಮಾತು ಬೇಡ ಸೆರಗೊಡ್ಡಿ ಬೇಡು ಕೂಡಲಸಂಗನ ಶರಣರ : ತನುವಿನಲ್ಲಿಯೇ ಅರಿವಿದೆ. ಆ ಅರಿವೆ ಗುರು. ಆ ಗುರುದೇವನಿಗೆ ಶರಣು ಹೋದ ಮನದ ತನುಗಳೆಲ್ಲ ಶರಣ ತನುಗಳು. ಇಂತಹ ಶರಣರನ್ನು ನಾಡು ಮೆಚ್ಚುವುದಿಲ್ಲ, ಲೋಕ ವಿರಹಿತ ಶರಣ: ಶರಣವಿರಹಿತ

ಲೋಕ. ಎಲೆ ಮನವೆ, ಈ ನಾಡ ಮಾತು ಬೇಡ ನಿನಗೆ! ಈ ನಾಡಿನ ಜನರನ್ನು ಬೇಡದಿರು ನೀನು. ಬೇಡಿದರೆ ಶರಣರನ್ನು ಬೇಡು, ಅರಿವೇ ಗುರುವೆಂದು ಆ ಗುರುವಿಗೆ ಶರಣು ಹೋದ ಕೂಡಲಸಂಗನ ಶರಣರನ್ನು ಸೆರಗೊಡ್ಡಿ ಬೇಡು ಎಂದಿದ್ದಾರೆ ಮಹಾಜ್ಞಾನಿ ಬಸವಣ್ಣನವರು. ಮನ ತಾನಾಗಿ ಅರಿವಿನೊಂದಿಗೆ ಹೇಗೆ ಮಾತನಾಡಬೇಕೆಂದು ಅಕ್ಷರ ರೂಪೀ ವಚನದಲ್ಲಿ ದಾಖಲಿಸಿದ್ದಾರೆ.

279

ಹೃದಯ ಕತ್ತರಿ ತುದಿನಾಲಗೆ ಬೆಲ್ಲಂ ಬೊ !
ಆಡಿಹೆನು ಏಂ ಬೊ, ಹಾಡಿಹೆನು ಏಂ ಬೊ !
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನು ಏಂ ಬೊ !
ಆನು ಎನ್ನಂತೆ, ಮನ ಮನದಂತೆ ;
ಕೂಡಲಸಂಗಮದೇವ ತಾನು ತನ್ನಂತೆ !

ದೇಹದ ಕಣಕಣದಲ್ಲಿ ದೇವನಿದ್ದಾನೆ. ಮನ ದೇವನನ್ನು ಅರಿಯದು. ದೇಹ ದೇವನನ್ನು ಮನವನ್ನು ಅರಿಯದು. ಮಹಾದೇವನ ಧ್ವನಿ ಇಲ್ಲದ ಮಾತಲ್ಲದ ಮಾತು ದೇಹ ಮನಗಳೆರಡು ಕೇಳಲರಿಯವು. ದೇಹ ದೇಹದಂತೆ, ಮನ ಮನದಂತೆ, ದೇವ ದೇಹದಲ್ಲಿ ಬೇರ್ಪಡಿಸದಂತೆ ಕೂಡಿದ್ದರೂ ತಾನು ತನ್ನಂತೆ ! ಹೇಗಿದೆ ತನುವಿನ ಚಮತ್ಕಾರ ! ಅದರ ಪಾಡು ನಡೆದಾಡುವ ಹೆಣದಂತೆ !

ದೇವನಿದ್ದ ತನುವಿನಲ್ಲಿ ವಾಸ ಮಾಡಿದ ಮನದ ನಾಲಿಗೆ ಬೆಲ್ಲ; ಅದರ ಹೃದಯ ಮಾತ್ರ ಕತ್ತರಿ. ಅದು ಆಡಿದರೆ ಹೊಟ್ಟೆಯೊಳಗಿನ ಕೂಸು ಉಚ್ಚಿಬೀಳ ಬೇಕು! ಆದರೆ ಆಡಿದಂತೆ ನಡೆಯುವುದಿಲ್ಲ.

ಮನ, ಆಡುವುದೇನು ಹಾಡುವುದೇನು ತನುವಿಡಿದು ನಿತ್ಯ ನಿತ್ಯ ಗೋಚರದ ಶಿವರಾತ್ರಿಯನು ಆಚರಿಸುವುದೇನು ? ಕಂಬ ಮುಟ್ಟಿ ಕೈ ತೊಳೆದುಕೊಳ್ಳುತ್ತದೆ. ಆದರೆ ಅದು ಅಗೋಚರದ ಆಚಾರದಲ್ಲಿ ಮಾತ್ರ ಶೂನ್ಯ . ಕಲ್ಲುದೇವರನ್ನು ಪೂಜಿಸುತ್ತದೆ ; ಕಲ್ಲೆಂದು ತಿಳಿಯುವುದಿಲ್ಲ, ದೇವರಿದ್ದ ದಿಟದ ದೇಹಕ್ಕೆ ಕತ್ತರಿ ಹಾಕುತ್ತದೆ.

ತನು ಒಂದಾಗಿ ಕಂಡರೂ ಅದು ಒಂದಾಗಿಲ್ಲ. ತನು ಬೇರೆ, ಮನ ಬೇರೆ, ಅರಿವು ಬೇರೆ. ಇವು ಮೂರು ಒಂದಾಗುವ ಶಿಕ್ಷಣ ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ಇಲ್ಲವೇ ಇಲ್ಲ! ಇದೊಂದು ವಿಜ್ಞಾನ; ಇದಕ್ಕೆ ಆಧ್ಯಾತ್ಮದ ಸೋಗಿನ ಬಣ್ಣ ಬಳಿಯಬೇಕಿಲ್ಲ; ಕಾವಿ ಧರಿಸಿ ನಾಟಕ ಮಾಡುವ ಅಗತ್ಯವೂ ಇಲ್ಲ. ಯಾವ ಸರಕಾರದ ಸಹಾಯವೂ ಇಲ್ಲದೆ ಬುದ್ಧ, ಮಹಾವೀರ, ಕ್ರಿಸ್ತ, ಕ್ರಿಷ್ಣರು ಹಾಗೂ ಶರಣರು, ದಾಸರು, ತತ್ವಪದಕಾರರು, ಜನಪದರು ತನು ಮನ ಅರಿವು ಒಂದು ಮಾಡಿಕೊಂಡು ಕೇಡು ಬಗೆಯದಂತೆ ಬದುಕಿದರು. ಸಂತೋಷದಿಂದ ಬದುಕುವುದಕ್ಕಾಗಿ ಸರಳ ಸೂತ್ರ ರಚಿಸಿದರು.

280

ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು,
ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯಾ !

ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ
ಆಯಿತ್ತಯ್ಯಾ ಎನ್ನ ಮತಿ ಕೂಡಲಸಂಗಮದೇವಾ.

ರಕ್ತ, ಮಾಂಸ, ಮೂಳೆ, ಮಜ್ಜಾ, ಮೇದಸ್ಸನ್ನು ಚರ್ಮದಲ್ಲಿ ಹೊಲಿದುಕೊಂಡ ದೇಹ ನೋಡಲು ಬಲು ಸುಂದರ. ವಿಶಾಲವಾದ ಎದೆ, ರೋಮ, ಕೇಶರಾಶಿ, ಉಬ್ಬು ತಗ್ಗುಗಳು, ದಂತಪಂಕ್ತಿ, ನೀಳವಾದ ಮೂಗು, ಹೊಳೆಯುವ ನಕ್ಷತ್ರದಂತಹ ಕಣ್ಣುಗಳು, ಕಿವಿಗಳು, ಹಣೆ, ಹುಬ್ಬು ದೇಹದ ನೋಟ ದೇಹವನ್ನೇ ತಬ್ಬಿಬ್ಬುಗೊಳಿಸಿದೆ.

ಹೊರಾವರಣ ಸುಂದರವಾದರೂ ಒಳಾವರಣ ಅಸಹ್ಯ ! ದೇಹದ ಹೊರಾವರಣ ಚರ್ಮ, ಒಳಾವರಣ ರಕ್ತ, ಮೂಳೆ, ಮಾಂಸ. ಆದರೂ ದೇಹಕ್ಕೆ ದೇಹ ಎನ್ನುವ ಅರಿವಿಲ್ಲ. ಹೆಣ್ಣು ಗಂಡು ಎನ್ನುವ ಭೇದವಿದೆ. ಮತ್ತೊಂದು ಉತ್ತಮ ಅರಿವಿನ ದೇಹ ಪಡೆಯಲು ಮಾತ್ರ ದೇಹ ದೇಹದೊಂದಿಗೆ ಕೂಡಬೇಕು. ಆದರೆ ದೇಹ ಮತ್ತೊಂದು ದೇಹವನ್ನು ಪೈಶಾಚಿಕ ಕಾಮದಿಂದ ಹರಿದು ತಿನ್ನುತ್ತದೆ.

ದೇಹವೆಲ್ಲ ಒಂದೇ ಎನ್ನುವ ಅರಿವು ದೇಹಕ್ಕಿದ್ದರೂ ಅದು ಬಳಕೆಯಾಗದೆ ದೇಹ ದೇಹವನ್ನು ಕೊಲ್ಲುತ್ತದೆ. ಹಿಂಸಿಸಿ ಘಾಸಿಗೊಳಿಸುತ್ತದೆ. ಜಡ ವಸ್ತುಗಳಿಗಾಗಿ ಜೀವ ಕಳೆಯುತ್ತದೆ, ಜೀವ ಕಳೆದುಕೊಳ್ಳುತ್ತದೆ. ಸ್ವಾಮಿಯೆಂದು, ಪೀಠಾಧಿಪತಿಯೆಂದು ಗುರುವೆಂದು ವೇಷ ಹಾಕಿ ದೇಹ ದೇಹದೊಂದಿಗೆ ಪೂಜಿಸಿಕೊಳ್ಳುತ್ತದೆ. ಪಲ್ಲಕ್ಕಿಯಲ್ಲಿ ಕೂಡುವದು ದೇಹವೇ; ಅದನ್ನು ಹೊರುವುದೂ ದೇಹವೇ ಆದರೂ ದೇಹದ ಮತಿಗೆ ದೇಹವೆಂದು ಹೊಳೆಯುತ್ತಿಲ್ಲ.

ದೇಹದ ಹೊರಗಣ ಬಣ್ಣ ಬಲು ಲೇಸು; ಮೈಲಾರ ಹಾಕಿಕೊಂಡ ಬಣ್ಣದ ಬಟ್ಟೆಯ ಚಿತ್ತಾರದಂತೆ ! ಆದರೆ ಒಳಗೆಲ್ಲ ಬರಿ ಸಣಬು ಹೂಬಿನ ಕಸದಂತೆ. ನಾಯಿಯ ನಿದ್ರೆಯಂತೆ; ಅಜ್ಞಾನಿಯ ತಪದಂತೆ ಆಯಿತ್ತು ಮಂದ ಮತಿಯ ಮನದ ಮತಿ. ಹೊರಗೆ ಮೈಲಾರ; ಒಳಗೆ ಸಣಬು.

ದೇಹದಲ್ಲಿದ್ದ ಮನ ದೇಹದಲ್ಲಿದ್ದ ಅರಿವನ್ನು ಬಳಕೆ ಮಾಡಿಕೊಂಡು ತಾನು ದೇಹ ; ಇತರ ದೇಹಗಳೂ ದೇಹವೆಂದು ತಿಳಿಯಬೇಕಿದೆ. ಕಾಮ, ಕ್ರೋದ, ಲೋಭ, ಮೋಹ, ಮದ, ಮತ್ಸರಗಳಿಂದ ವಿಕೃತಗೊಳ್ಳುವ ದೇಹವನ್ನು ಅರಿವಿನಿಂದ ತಿಳಿದು ಶಾಶ್ವತವಾಗಿ ಶಾಂತನಾಗಬೇಕಿದೆ.

281

ಲೊಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ ;
ಮನದ ತಾಮಸ ಬಿಡದು, ಮನದ ಕಪಟ ಬಿಡದು !
ಶಿವಶರಣೆಂಬುದು ಅಳವಡದಯ್ಯಾ.
ಎನ್ನ ಮನದಲ್ಲಿ ಎರಡುಳ್ಳನ್ನಕ್ಕ
ಕೂಡಲಸಂಗಮದೇವನೆಂತೊಲಿವ ?

ಎರೆದರೆ ನೆನೆಯದ ಮರೆತರೆ ಬಾಡದ ಲಿಂಗಕ್ಕೆ ಇಡೀ ಲೋಕವೇ ಮೂರೂ ಕಾಲಗಳಲ್ಲಿ ಪೂಜಿಸುತ್ತದೆ . ಪತ್ರಿ ಪುಷ್ಪಗಳನ್ನಿಟ್ಟು ಆರಾಧಿಸುತ್ತದೆ. ಆದರೂ ಅಂಗದ ತಾಮಸ ಗುಣಗಳನ್ನು ಬಿಡದು. ಮನದ ಕಪಟ ಬಿಡದು. ಶಿವಶರಣೆಂಬುದ ತನುವಿನಲ್ಲಿ ಅಳವಡದು. ಕಾಮ, ಕ್ರೋಧ,

ಲೋಭ, ಮೋಹ, ಮದ, ಮತ್ಸರಗಳನ್ನು ಇಟ್ಟುಕೊಂಡು ಮನ ನಿತ್ಯ ನಿತ್ಯ ಲಿಂಗಕ್ಕೆ ಮಜ್ಜನಕ್ಕೆರೆಯುತ್ತದೆ. ಲಿಂಗವೆಂದರೇನೆಂದು ಅರಿಯದ ಮನಕ್ಕೆ ಕೂಡಲಸಂಗಮದೇವ ಹೇಗೆ ಒಲಿಯುತ್ತಾನೆ.

ಎರೆದರೆ ನೆನೆಯುವ ಮರೆತರೆ ಬಾಡುವ ಸರ್ವಾಂಗವೇ ಲಿಂಗವೆಂದು ಮನ ಅರಿಯದು. ಕಪಟ ಬುದ್ದಿಯುಳ್ಳ ತಾಮಸ ಮನ ; ಅರಿತವರ ಸಂಗವನೂ ಮಾಡಲರಿಯದು.

ಉದಕ ಗಟ್ಟಿಗೊಂಡು ತನುವಾಗಿದೆ. ಈ ತನುವಿನಲ್ಲಿ ಮನ ಹುಟ್ಟಿ; ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಸುಖಕ್ಕಾಗಿ ಅಳವಡಿಸಿಕೊಂಡಿದೆ. ತಾಮಸ ಗುಣದಿಂದ ಕಪಟ ಬುದ್ಧಿಯಿಂದ ಮನ ತಾನು ವಾಸಮಾಡಿದ ತನುವನ್ನು , ತನ್ನ ಸುಖಕ್ಕಾಗಿ ಇತರ ತನುಗಳನ್ನು ಸದಾ ವಂಚಿಸುತ್ತದೆ.

ಮನ ವಾಸ ಮಾಡಿದ ಅಂಗದ ಕಣಕಣದಲ್ಲಿ ಅರಿವೆಂಬ ಲಿಂಗವಿದ್ದರೂ ಆ ಲಿಂಗಕ್ಕೆ ಮಜ್ಜನ ಮಾಡಲರಿಯದು. ಅರಿವೆಂಬ ಗುರು ಲಿಂಗ ಜಂಗಮವನ್ನು ನೋಡಲರಿಯದು.

ಲೋಕೋಪಚಾರಕ್ಕಾಗಿ ಲಿಂಗಕ್ಕೆ ಮಜ್ಜನಕ್ಕೆರೆದರೆ ಮನದ ತಾಮಸ ಬಿಡದು, ಮನದ ಕಪಟಕೂಡಾ ತೊಲಗದು.

ಎರೆದರೆ ನೆನೆಯುವ ಮರೆತರೆ ಬಾಡುವ ಅಂಗವೆಂಬ ಲಿಂಗಕ್ಕೆ ಮಜ್ಜನಕ್ಕೆರೆದರೆ ಅಂಗದೊಳಗಣ ಕಿಚ್ಚು ನೆನೆದಿರಬೇಕು. ಕಿಚ್ಚಿನೊಳಗಿರುವ ತೇಜ ಬೆಂದಿರಬೇಕು.

ಅಂಗಕ್ಕೆ ಮಜ್ಜನಕ್ಕೆರೆಯುವಾಗ ಲಿಂಗದ ಕೀಲ ತಿಳಿಯಬೇಕು ಇಲ್ಲ ತಿಳಿದವರ ಸಂಗ ಮಾಡಬೇಕು. ಮನದಲ್ಲಿ ಎರಡುಳ್ಳನ್ನಕ್ಕ ಅಂಗದಲ್ಲಿರುವ ಅರಿವೆಂಬ ಲಿಂಗ ಮನಕ್ಕೆ ಒಲಿಯುವುದಿಲ್ಲವೆಂದು ಅಣ್ಣನವರು ಡಂಗುರ ಹೊಡೆದು ಸಾರಿದ್ದಾರೆ.

282

ಮಜ್ಜನಕ್ಕೆರೆವೆನಲ್ಲದಾನು, ಸಜ್ಜನವೆನ್ನಲ್ಲಿಲ್ಲಯ್ಯಾ !
ಎನ್ನಲ್ಲೇನನರಸುವೆ ?
ನಂಬಿಯೂ ನಂಬದ ಡಂಬಕ ನಾನಯ್ಯಾ ;
ಹಾವ ತೋರಿ ಹವಿಯ ಬೇಡುವಂತೆ,
ಕೂಡಲಸಂಗಮದೇವಾ.

ಹಾವತೋರಿ ಹವಿಯಬೇಡುವಂತೆ :

ಅಂಗದಲ್ಲಿರುವ ಮನ, ವಿಷದ ಹಾವನ್ನು ಹಿಡಿದು, ಅದರ ಹಲ್ಲುಕಿತ್ತಿ , ಪುಂಗಿಯನೂದಿ ಜನರಿಂದ ಹಣ ಪಡೆಯಲು ಬಲ್ಲದು ! ಆದರೆ ಮನದ ವಿಷಯವೆಂಬ ವಿಷವನ್ನು ಕಿತ್ತೆಸೆಯಲು ಅರಿಯದು. ಅಂಗದಲ್ಲಿದ್ದು ಅಂಗವನ್ನೇ ವಿಷಯದ ಹಾವನ್ನಾಗಿಸಿ ಕ್ಷಣ ಕ್ಷಣಕ್ಕೂ ಬುಸುಗುಡುತ್ತದೆ.

ಪೂಜಿಸುತ್ತದೆ, ಮಜ್ಜನಕ್ಕೆರೆಯುತ್ತದೆ ಆದರೂ ಮನ ಸಜ್ಜನನಲ್ಲ! ಅಂಗದಲ್ಲಿದ್ದು ಲಿಂಗವನ್ನು ಅರಿಯದ ಡಂಬಕ ಮನದಲ್ಲಿ ಇನ್ನೇನು ಹುಡುಕುವುದು ?

ಅಂಗದಲ್ಲಿದ್ದು ಅರಿವೆಂಬ ಲಿಂಗವನು ಅರಿಯದ ಮನ ಲಿಂಗಕ್ಕೆ ಮಜ್ಜನಕ್ಕೆರೆದರೇನು? ಅದು ನೆನೆಯದು, ಬಾಡದು ! ಅಂಗವೇ ಲಿಂಗವೆಂದು ನಂಬಿ ಮಜ್ಜನಕ್ಕೆರೆದಮನ ಸಜ್ಜನನಾಗುವುದರಲ್ಲಿ ಸಂದೇಹವೇ ಇಲ್ಲ ಎಂದಿದ್ದಾರೆ ಅಣ್ಣನವರು.

ಕೆಲಕ್ಕೆ ಶುದ್ಧ ನಾನಲ್ಲದೆ, ಎನ್ನ ಮನಕ್ಕೆ ಶುದ್ಧ ನಾಗೆನೇಕಯ್ಯಾ,
ಕೈ ಮುಟ್ಟಿ ಪೂಜಿಸುವಡೆ, ಎನ್ನ ಕೈ ಶುದ್ಧವಲ್ಲಯ್ಯಾ ,
ಮನ ಮುಟ್ಟಿ ಪೂಜಿಸುವೊಡೆ, ಎನ್ನ ಮನ ಶುದ್ಧವಲ್ಲಯ್ಯಾ ,
ಭಾವ ಶುದ್ಧವಾದಡೆ, ಕೂಡಲಸಂಗಯ್ಯನು
ಇತ್ತ ಬಾಯೆಂದೆತ್ತಿಕೊಳ್ಳನೇಕಯ್ಯಾ ?

ಕೆಲಕ್ಕೆ ಶುದ್ಧ ನಾನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ ;

ಕೆರೆ ಬಾವಿಗಳನ್ನು ಕಟ್ಟಿ ಅರವಟಿಗೆಗಳನ್ನಿಟ್ಟು ಹೌದೆನ್ನಿಸಿಕೊಳ್ಳಬಹುದು. ಮಠ ಮಂದಿರಗಳನ್ನು ಕಟ್ಟಿ ಹೌದೆನ್ನಿಕೊಳ್ಳಬಹುದು. ಭೂಮಿ ಹೇಮ ವಸ್ತ್ರಗಳನ್ನು ಕೊಟ್ಟು ದಾನಿ ಎನ್ನಿಸಿಕೊಳ್ಳಬಹುದು. ಪ್ರಸಾದ ನಿಲಯಗಳನ್ನು ಕಟ್ಟಿ ನಿತ್ಯ ಅನ್ನದಾನವನು ಮಾಡಿ ಪುಣ್ಯವಂತ ಎಂದು ಜನರಿಂದ ಹೊಗಳಿಸಿ ಕೊಳ್ಳಬಹುದು. ಆದರೆ ಇದೆಲ್ಲ ಮಾಡುವ ಮನ ತನಗೆ ತಾನು ಶುದ್ಧನಾಗಲು ಬರುವುದಿಲ್ಲ. ತನುವನ್ನು ಶುದ್ಧ ಎಂದು ಜನ ಗುರುತಿಸಬಹುದು.

ಕೈ ಮುಟ್ಟಿ ಪೂಜಿಸುವಡೆ, ಎನ್ನ ಕೈ ಶುದ್ಧವಲ್ಲವಯ್ಯಾ :

ಕೈ ಎಂದರೆ ಐದು ಬೆರಳುಗಳುಳ್ಳ ಹಸ್ತ . ಇದನ್ನು ಕರ, ಅಂಗೈ ಎಂದು ಕರೆದಿದ್ದಾರೆ ಶರಣರು. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಜ್ಞಾನದ ಬಾಗಿಲುಗಳುಳ್ಳ ಅಂಗವೇ ಅಂಗೈ ; ಇವು ಮಹಾಜ್ಞಾನದಲಿಂಗಗಳು. ಅಂಗದಲ್ಲಿರುವ ಐದು ಸಂಕೇತ ಲಿಂಗಗಳನ್ನು ಸೂಚಿಸಿ ನೆನಪು ಮಾಡಿಕೊಡುವುದೇ ಐದು ಬೆರಳುಗಳುಳ್ಳ ಕೈ .

ಕೈ (ಅಂಗ) ಮುಟ್ಟಿ ಹೊಳೆಯುವ ಕಂಗಳೆಂಬ ಲಿಂಗವ ಪೂಜಿಸಬೇಕೆಂದರೆ ಕಂಗಳಲ್ಲಿ ಮನಬೆರೆತು ಕುರುಡಾಗಿದೆ. ಅಂಗವನ್ನು ಅರಳಿಸುವ ಕೆರಳಿಸುವ ಕಣ್ಣಿನ ಬೆಳಕು ಶುದ್ಧವಿಲ್ಲವಯ್ಯಾ .

ಕೈ ಮುಟ್ಟಿ , ಕೇಳುವ ಕಿವಿಯಲ್ಲಿಯ ನಿಃಶಬ್ದ ಬ್ರಹ್ಮನನ್ನು ಪೂಜಿಸಬೇಕೆಂದರೆ ಅರಳಿಸುವ ಕೆರಳಿಸುವ ಕಿವುಡು ಕಿವಿ ಶುದ್ದವಿಲ್ಲವಯ್ಯಾ .

ಕೈ ಮುಟ್ಟಿ , ಮೂಸಿಸುವ ನಾಸಿಕಲಿಂಗವನ್ನು ಪೂಜಿಸಬೇಕೆಂದರೆ ಅರಳಿಸುವ ಕೆರಳಿಸುವ ಮೂಗು ಶುದ್ಧವಿಲ್ಲವಯ್ಯಾ .

ಕೈ ಮುಟ್ಟಿ, ಸ್ಪರ್ಶಿಸುವ ಚರ್ಮವನ್ನು ಪೂಜಿಸಬೇಕೆಂದರೆ ಒಮ್ಮೆ ಅರಳಿಸಿ ಮತ್ತೊಮ್ಮೆ ಕೆರಳಿಸುವ ಚರ್ಮ ಶುದ್ಧವಿಲ್ಲವಯ್ಯಾ .

ಕೈ ಮುಟ್ಟಿ , ರುಚಿಸುವ ಜಿಹ್ವೆಯನ್ನು ಪೂಜಿಸಬೇಕೆಂದರೆ ರುಚಿಸಿ ಅರಳಿಸುವ ಕೆರಳಿಸುವ ನಾಲಿಗೆ ಶುದ್ಧವಿಲ್ಲವಯ್ಯಾ .

ಐದು ಮಹಾಜ್ಞಾನದ ಬಾಗಿಲುಗಳನ್ನು ಹೊಂದಿದ ಗ್ರಂಥಾಲಯವೆಂಬ ಅಂಗವನ್ನು ಮನ ಮುಟ್ಟಿ ಪೂಜಿಸಲು ಹೋದರೆ ಮನ ಶುದ್ಧವಿಲ್ಲವಯ್ಯಾ.

ಭಾವ ಶುದ್ಧವಾದಡೆ, ಕೂಡಲಸಂಗಯ್ಯನು ಇತ್ತಬಾಯೆಂದೆತ್ತಿ ಕೊಳ್ಳನೇಕಯ್ಯಾ:

ಅಂಗದಲ್ಲಿ ಭಾವವಿದೆ. ಅದು ಒಮ್ಮೆ ಅಂಗವನ್ನು ಕೆರಳಿಸುತ್ತದೆ ; ಮತ್ತೊಮ್ಮೆ ಅರಳಿಸುತ್ತದೆ. ಕೆರಳಿ ಅರಳಿಸುವ ಭಾವ ನಿರ್ಭಾವವಾದಡೆ ಅದು ಶುದ್ಧ ಭಾವ. ಸರ್ವಾಂಗದಲ್ಲಿ ಬೆರೆತ ಸಂಗಮ ನಾಥನು ಹರಿದಾಡುವ ಮನದ ಅರಳಿ ಕೆರಳಿಸುವ ಭಾವಕ್ಕೆ ನಿರ್ಭಾವದ ಬರೆಯನಿಟ್ಟು ಮೈದಡವಿ

ಮುತ್ತನಿಟ್ಟು ಎತ್ತಿ ಕೊಳ್ಳುವನು.

284

ಕುಲಮದಕ್ಕೆ ಹೋರಿ ಜಂಗಮ ಭೇದವ ಮಾಡುವೆ ; ಫಲವೇನು ?
ನಿತ್ಯ ಲಿಂಗಾರ್ಚನೆ ಪ್ರಾಯಶ್ಚಿತ್ತ !
ಛಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ.
ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ !
ತನು ಭಕ್ತ ನಾಯಿತ್ತು ; ಎನ್ನ ಮನ ಭವಿ
ಕೂಡಲಸಂಗಮದೇವಾ.

ಜಂಗಮ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂದು ಸೃಷ್ಟಿಯಾದ ಕಾಯಕ ಆಧಾರಿತ ವರ್ಗ ಕುಲಮದಕ್ಕೆ ಕಾರಣವಾಯಿತು. ಫಲವೇನು ? ಅರಿವಿನಿಂದ ನೋಡಿದರೆ ತನುಗಳೆಲ್ಲ ಒಂದೇ. ಅರಿವಿನ ಕ್ರಿಯೆ ತನುವಿನಲ್ಲಿ ನಿತ್ಯ ಪ್ರಾಯಶ್ಚಿತ್ತದ ನೆನಪು ಮಾಡುತ್ತ ಹಾಗೆಯೇ ಉಳಿಯಿತು. ಮನ ಕುಲಮದವನ್ನು ಬಿಡಲೇ ಇಲ್ಲ. ಅದು ತನುವನ್ನೇ ಕುಲಮದಕ್ಕೆ ಈಡುಮಾಡಿಕೊಂಡಿತು.

ಛಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ :

ಭಗವದ್ಗೀತೆ, ಬೈಬಲ್, ವೇದ, ಉಪನಿಷತ್ತು, ಆಗಮ ಹಾಗೂ ಸಕಲ ಅರಿವಿನ ಗ್ರಂಥಗಳ ಸಾರ ಒಂದೇ. ಆದರೂ ಅರಿವಿನ ಭೇದ ಸೃಷ್ಟಿ ಮಾಡಿಕೊಂಡು ಮನ ತನುವನ್ನು ಅರಿವಿನ ಛಲಮದಕ್ಕೆ ಗುರಿ ಮಾಡಿಕೊಂಡಿತು.

ಜಂಗುಳಿಯ ಕಾವ ಗೋವ ಹಲವು ಪಶುವ ನಿವಾರಿಸುವಂತೆ :

ತನುವಿನಲ್ಲಿ ಅರಿವೆಂಬ ಗುರುವಿದ್ದಾನೆ ; ಮನವೆಂಬ ಪಶುವೂ ಇದೆ. ತನುವನ್ನು ಆವರಿಸಿದ ಮನವೆಂಬ ಪಶುವನ್ನು ಗುರುವೆಂಬ ಗೋಪಾಲನು ಅನುದಿನವೂ ತನುವಿರುವವರೆಗೂ ಕಾಯುತ್ತಾನೆ. ಇದರಿಂದ ಮನದ ಪಶುತನವು ತನುವಿನಲ್ಲಿ ಸುಪ್ತವಾಗಿ ಹಾಗೇ ಉಳಿಯಿತು. ಆಗ ತನುವಿಗೆ ಉತ್ತಮ ಕುಲದ ತನುವೆಂದು ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಜಂಗಮ, ಲಿಂಗಾಯತವೆಂದು ತನುವಿಗೆ ಗೌರವ ದೊರೆಯುತ್ತದೆ. ಆದರೆ ಫಲವೇನು ?

ತನು ಭಕ್ತನಾಯಿತ್ತು ; ಎನ್ನ ಮನ ಭವಿ ಕೂಡಲಸಂಗಮದೇವಾ :

ಮನ ತನುವನ್ನು ಕುಲಮದಕ್ಕೆ, ಛಲಮದಕ್ಕೆ ಗುರಿಮಾಡಿತು. ಕುಲದ ಆಚಾರ ದಂತೆ ತನು ಗೋಚರದ ಆಚಾರಕ್ಕೆ ಭಕ್ತನಾಯಿತು. ಮೂರು ವೇಳೆ ಲಿಂಗಾರ್ಚನೆ ಮಾಡಿತು. ಈಶ್ವರ ವೆಂಕಟರಮಣ, ಶ್ರೀಶೈಲ, ಕಾಶಿ, ಕೇದಾರ, ಜ್ಯೋತಿರ್ಲಿಂಗ ದರ್ಶನ ಮಾಡಿಕೊಳ್ಳುತ್ತ ಭಕ್ತನಾಯಿತು. ಉಪವಾಸ ಮಾಡುತ್ತಾ ಮಠ, ಮಂದಿರ, ಚರ್ಚ್‌ಗಳಿಗೆ ದಾಸನಾಯಿತು. ಆದರೆ ಮನ ತನುವಿನಲ್ಲಿರುವ ಅರಿವೆಂಬ ಗುರುದೇವನಿಗೆ ಭಕ್ತನಾಗಲಿಲ್ಲ; ದಾಸನಾಗಲಿಲ್ಲ ; ಶರಣುಹೋಗಿ ಶರಣನಾಗಲಿಲ್ಲ. ತನು ಭಕ್ತನಾದರೇನು ? ಮನ ಅರಿವಿಗೆ ಶರಣು ಹೋಗದೆ ; ಅಗೋಚರದ ಆಚಾರದಲ್ಲಿ ಭಾಗಿಯಾಗದೇ ಭವಿಯಾಗಿ ಹಾಗೆಯೇ ಉಳಿಯಿತು. ತನುವಿನ ಕಣಕಣದಲ್ಲಿದ್ದ ಅರಿವು ಮನಕ್ಕೆ ಬಳಕೆಯಾಗಲೇ ಇಲ್ಲ !

285

ಲಿಂಗದಲ್ಲಿ ಕಠಿಣವುಂಟೆ ? ಜಂಗಮದಲ್ಲಿ ಕುಲವುಂಟೆ ?
ಪ್ರಸಾದದಲ್ಲಿ ಅರುಚಿಯುಂಟೆ ?
ಈ ತ್ರಿವಿಧದಲ್ಲಿ ಭಾವಭೇದವನರಸುವೆನು ;
ಕೂಡಲಸಂಗಮದೇವಾ, ಧಾರೆವಟ್ಟಲೆನ್ನ ಭಕ್ತಿ !

ಲಿಂಗದಲ್ಲಿ ಕಠಿಣವುಂಟೆ ? ಜಂಗಮದಲ್ಲಿ ಕುಲವುಂಟೆ ?

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನು ಸದಾ ಕರುಣಾಮಯಿ. ಆತನಲ್ಲಿ ಕಾಠಿಣ್ಯವೆಂಬ ಪದವೇ ಇಲ್ಲ. ಎನ್ನ ಅಪರಾಧ ಅನಂತಕೋಟಿ ತಮ್ಮ ಸೈರಣೆಗೆ ಲೆಕ್ಕವಿಲ್ಲವೆಂದು ಅಣ್ಣನವರು ಹಾಡಿದಂತೆ ; ಮನದ ಅಪರಾಧಗಳು ಅನಂತಕೋಟಿಯಾದರೂ ಅರಿವೆಂಬ ಗುರುದೇವನ ಸೈರಣಗೆ ಲೆಕ್ಕವಿಲ್ಲ. ಹಾಗೆಯೇ ಗುರುದೇವನ ಮಾತು ಪಾಲಿಸುವ ಛಲದಂಕ ಮಲ್ಲನೆಂಬ ಜಂಗಮ ಮೂರ್ತಿಗೂ ಕುಲವಿಲ್ಲ.

ತನುವಿನಲ್ಲಿ ತನ್ಮಯವಾದ ಗುರುದೇವನಿಗೆ ಆತನ ಮಾತು ಪಾಲಿಸುವ ಜಂಗಮನಿಗೆ ಕುಲವಿಲ್ಲ, ಕಾಠಿಣ್ಯವೂ ಇಲ್ಲ. ತನುವನ್ನು ಆವರಿಸಿಕೊಂಡ ಮನಕ್ಕೆ ಕುಲವುಂಟು, ಕಾಠಿಣ್ಯ ಉಂಟು,

ಪ್ರಸಾದದಲ್ಲಿ ಅರುಚಿಯುಂಟೆ ? ಈ ತ್ರಿವಿಧದಲ್ಲಿ ಭಾವ ಭೇದವರಸುವೆನು ; ಕೂಡಲ ಸಂಗಮದೇವಾ, ಧಾರೆವಟ್ಟಲೆನ್ನ ಭಕ್ತಿ :

ಪ್ರಸಾದದಲ್ಲಿ ಅರುಚಿಯುಂಟೆ : ತನುವಿನಲ್ಲಿರುವ ಪಂಚಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಚರ್ಮದಲ್ಲಿ ಅರಿವೆಂಬ ಗುರುದೇವ ನೆಲೆಸಿದ್ದಾನೆ. ಇವು ಆತನ ವಾಸಸ್ಥಾನ. ಆತ ನೋಡುವ ನೋಟವೆಲ್ಲ ಪ್ರಸಾದ. ಆತ ಕೇಳುವ ಶಬ್ದವೆಲ್ಲ ಪ್ರಸಾದ. ಆತ ಮೂಸಿಸುವ ಗಂಧವೆಲ್ಲ ಪರಿಮಳ. ಆತ ರುಚಿಸುವ ಪ್ರಸಾದವೆಲ್ಲ ಬಲುರುಚಿ. ಆತ ಸ್ಪರ್ಶಿಸುವ ವಸ್ತುಗಳೆಲ್ಲ ಬಲು ಕೋಮಲ. ಇವುಗಳಲ್ಲಿ ಗುರುದೇವನಿಗೆ ಅರುಚಿ ಎನ್ನುವುದೇ ಇಲ್ಲ. ಆದರೆ ಮನಕ್ಕೆ ಮಾತ್ರ ಅರುಚಿ; ರುಚಿ.

ಮನ, ಅರಿವಿನಲ್ಲಿ ಭೇದ ಮಾಡುತ್ತದೆ, ತನುಗಳಲ್ಲಿ ಕುಲ ಎಣಿಸುತ್ತದೆ, ಪ್ರಸಾದದಲ್ಲಿ ರುಚಿಯನೆಣಿಸುತ್ತದೆ. ಈ ತ್ರಿವಿಧದಲ್ಲಿ ಭೇದ ಭಾವವನು ಹುಡುಕಿ ಹುಡುಕಿ ತನುವನ್ನು ಸಂಕಟಕ್ಕೆ ಒಡ್ಡುತ್ತದೆ.

ಮನ, ಧಾರೆವಟ್ಟಲು : ಧಾರೆ ಬಟ್ಟಲಿಗೆ ನೀರು ತುಂಬಿದರೆ ಮಾತ್ರ ದೇವರ ಮೂರ್ತಿಯ ಮೇಲೆ ಜಲ ಚೆಲ್ಲುತ್ತದೆ. ನಂತರ ನಿಲ್ಲುತ್ತದೆ. ಅರಿವೆಂಬ ಗುರುದೇವನ ತನು ನಿರಂತರ ಅಮೃತದ ಧಾರಾಕಾರದ ಬಟ್ಟಲು. ತನು ಇರುವವರೆಗೆ ಅರಿವಿನ ಅಮೃತ ಸುರಿಯುವ ಕರುಣಾಮಯಿ. ಮನ, ಭಾವ ಭೇದವನು ಮಾಡದೆ ಅರಿವೆಂಬ ಗುರುದೇವನಿಗೆ ಮನ ಶರಣು ಹೋಗಬೇಕು. ಅರಿವಿನಿಂದ ಅಜ್ಞಾನ ಅನಾವರಣವಾಗಿ ಸಕಲವೂ ಪ್ರಸಾದವಾಗುತ್ತದೆ.

286

ಲೌಕಿಕರ ಕಂಡು ಆಡುವೆ, ಹಾಡುವೆ ;
ತಾರ್ಕಿಕರ ಕಂಡು ಆಡುವೆ, ಹಾಡುವೆ ;
ಸಹಜಗುಣವೆನ್ನಲಿಲ್ಲಯ್ಯಾ ;

ನಿಜಭಕ್ತಿಯೆನಗಿಲ್ಲ, ತಂದೆ.
ಏಕೋಭಾವ ಎನಗುಳ್ಳಡೆ, ಏಕೆ ನೀ ಕರುಣಿಸೆ
ಕೂಡಲಸಂಗಮದೇವಾ.

ಮನ ಅಸಹಜ; ಅರಿವು ಸಹಜ; ಮನ ತನುವನ್ನು ಲೌಕಿಕಕ್ಕೆ ಎಳೆದು ಲೋಕದ ಮಾತನ್ನು ಆಡಿ,ಹಾಡಿ ಹೌದೆನ್ನಿಸಿಕೊಳ್ಳುತ್ತದೆ. ತರ್ಕಕ್ಕೆ ಎಳೆದು ಆಡಿ, ಹಾಡಿ ಹೌದೆನ್ನಿಸಿಕೊಳ್ಳುತ್ತದೆ. ಆದರೆ ಮನದಲ್ಲಿ ಸಹಜ ಗುಣ ವಿಲ್ಲ ; ನಿಜ ಭಕ್ತಿಯೂ ಇಲ್ಲ ! ಅಸಹಜ ಮನಕ್ಕೆ ನಿತ್ಯ ಪಾಠಮಾಡುವ ಸಹಜ ಅರಿವನ್ನು ಕರುಣಿಸುವ ಗುರುದೇವನನ್ನು, ಕೂಡಲಸಂಗಮನಾಥನೆಂದು ಅಣ್ಣನವರು ಕರೆದಿದ್ದಾರೆ. ಆತನಿಗಾಗಿ ಆಡಿದ್ದಾರೆ, ಹಾಡಿ ದ್ದಾರೆ. ತನು ಆತನ ಸಂಪತ್ತು. ತನುವಿಗೆ ಜನ್ಮ ನೀಡಿದ ತಂದೆಯನ್ನು ಕುರಿತು ಏಕೋಭಾವದಿಂದ ಹಾಡುವಂತೆ; ಸಹಜಗುಣವನ್ನು ಕರುಣಿಸುವಂತೆ ಗುರುದೇವನನ್ನು ಪ್ರಾರ್ಥಿಸುವ ಸುಳಿವನ್ನು ಮನಕ್ಕೆ ನೀಡಿದ್ದಾರೆ.

287

ಓತಿ ಬೇಲಿವರಿದಂತೆ ಎನ್ನ ಮನವಯ್ಯಾ.
ಹೊತ್ತಿಗೊಂದು ಪರಿಯಪ್ಪ ಗೋಸುಂಬಿಯಂತೆನ್ನ ಮನವು;
ಬಾವುಲ ಬಾಳುವೆಯಂತೆನ್ನ ಮನವು !
ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ –
ನಾನಿಲ್ಲದ ಭಕ್ತಿಯ ಬಯಸಿದಡುಂಟೆ
ಕೂಡಲಸಂಗಮದೇವಾ?

ಓತಿ ಬೇಲಿಯ ಮೇಲೆ ಸರಾಗವಾಗಿ ಹರಿದಾಡುವಂತೆ ಮನ ತನುವನ್ನು ವಿಷಯದೆಡೆಗೆ ಸರಳವಾಗಿ ಕರೆದುಕೊಂಡು ಹೋಗುತ್ತದೆ. ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರದಿರು ತಂದೆ ಪಶುವೇನು ಬಲ್ಲದು ಹಸುರೆಂದೆಳೆಸುವುದು. ಎಂದು ಬೇಡುವ ಶಕ್ತಿ ಮನಕ್ಕೆ ಬೇಕಲ್ಲ ! ಕಾಮ ವೆಂದರೆ ಮನಕ್ಕೆ ಸುಖ! ತನುವನ್ನು ಕರೆದುಕೊಂಡು ಹೋಗಿ ತನುವಿನೊಂದಿಗೆ ಸುಖಿಸುತ್ತದೆ. ಆ ಮನವೇ ತನುವಿನಲ್ಲಿರುವ ಅರಿವನ್ನು ಬೇಡಬೇಕಲ್ಲ ! ಕಾಮ ಬೇಲಿಯೆಂದು ಮನ ತಿಳಿಯಬೇಕಲ್ಲ, ಕಾಮವೆಂಬ ಬೇಲಿಯ ಮೇಲೆ ಮನ ಓತಿಯಂತೆ ಸರಳವಾಗಿ ಓಡಾಡುತ್ತ ಬೇಟೆಯಾಡುತ್ತದೆ.

ಮನ ಗೋಸುಂಬೆಯಂತೆ ಹೊತ್ತಿಗೊಂದು ಬಣ್ಣ ಬದಲಿಸುತ್ತದೆ. ಬೆಳಿಗ್ಗೆ ಮನ ತನುವಿಗೆ ಸ್ನಾನ ಶೌಚಾದಿಗಳನ್ನು ಮಾಡಿಸಿ, ಮಡಿಯುಡಿಗೆ ಉಡಿಸಿ, ಹಣೆಗೆ ಗಂಧ, ವಿಭೂತಿ, ತಿಲಕ ಧರಿಸಿ ಮಂದಿರಕ್ಕೆ ಕರೆದುಕೊಂಡು ಹೋಗುತ್ತದೆ. ನಂತರ ಶೂಟು ಕೋಟು ಧರಿಸಿ ಕಚೇರಿಗೆ ಕರೆದುಕೊಂಡು ಹೋಗಿ ಅಧಿಕಾರ ಮೆರೆಯುತ್ತದೆ. ಲಂಚ ಪಡೆದು ಭ್ರಷ್ಟಾಚಾರದ ಹಣೆಪಟ್ಟಿ ತನುವಿಗೆ ಕಟ್ಟುತ್ತದೆ. ರಾತ್ರಿ ಕ್ಲಬ್, ಬಾರಿಗೆ ಹೋಗಿ ಸೆರೆ ಕುಡಿಸಿ ಜೂಜಾಡಿಸುತ್ತದೆ. ತಾಮಸಗುಣ ಹೊತ್ತು ರಾತ್ರಿ ಮನೆಗೆ ಬಂದು ಮನೆಮಂದಿಯನೆಲ್ಲ ಹಿಂಸಿಸುತ್ತದೆ. ಪುನಹ ಬೆಳಿಗ್ಗೆ ಮನ ಬಣ್ಣ ಬದಲಿಸುವ ಗೋಸುಂಬೆಯಂತೆ ಮಡಿ ಉಡಿಗೆ ಉಟ್ಟು ಮಂದಿರಕ್ಕೆ ಹೋಗುತ್ತದೆ.

ಮನ ಬಾವುಲಿಯಂತೆ. ಕತ್ತಲೆ ಲೋಕವೇ ಅದಕ್ಕೆ ಸುಖ! ಬೆಳಕೆಂದರೆ ಬಾವುಲಿಗೆ ಆಗುವುದೇ

ಇಲ್ಲ, ಅದಕ್ಕೆ ಬಾಯಿಯೇ ಸರ್ವಸ್ವ ಬಾಯಿಯಿಂದಲೇ ತಿನ್ನುತ್ತದೆ. ಬಾಯಿಯಿಂದಲೇ ವಿಸರ್ಜಿಸುತ್ತದೆ ಕಾಲು ಮೇಲೆ ಮಾಡಿ ತಲೆಕೆಳಗೆ ಮಾಡಿ ಜೋತಾಡುತ್ತದೆ.

ಕುರುಡನಿಗೆ ಇರುಳು ಹಗಲೆನ್ನವುದೇ ತಿಳಿಯುವದಿಲ್ಲ, ಸದಾ ಇರುಳೆ! ಹಾಗೆಯೇ ಮನಕ್ಕೆ ಹಗಲೂ ಇರುಳೇ; ಇರುಳು ಕೂಡಾ ಇರುಳೆ. ಕತ್ತಲೂ ಇದೆ, ಬೆಳಕೂ ಇದೆ, ಇದೇನು ಚೋದ್ಯವೊ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ. ಕತ್ತಲಿದ್ದಲ್ಲಿ ಬೆಳಕು ಇರುವುದಿಲ್ಲ; ಬೆಳಕು ಇದ್ದಲ್ಲಿ ಕತ್ತಲೂ ಇರುವದಿಲ್ಲ ಆದರೆ ತನುವಿನಲ್ಲಿ ಅರಿವೆಂಬ ಬೆಳಕು ಇದೆ ; ಕತ್ತಲೆಂಬ ಮನವೂ ಇದೆ. ಎರಡೂ ತನುವೆಂಬ ತಟ್ಟೆಯನ್ನು ಬಳಕೆಮಾಡಿಕೊಂಡು ಉಣ್ಣುತ್ತವೆ. ಇದೊಂದು ಸೋಜಿಗವೇ ಸರಿ. ತಿಳಿದರೆ ಕತ್ತಲ ಮನ ಬೆಳಕಾಗಿ ಪರಿವರ್ತನೆಯಾಗುತ್ತದೆ . ಆದರೆ ನಾನು ಎನ್ನುವ ಅಹಂಕಾರ ತೊಲಗದೆ ಅರಿವೆಂಬ ಅಮೃತವನ್ನು ಬಯಸಿದರೆ ಮನಕ್ಕೆ ದಕ್ಕುವುದಿಲ್ಲ.

288

ಸತ್ಯ ಸಂಬಂಧ ಸಯವಾದ ಭೃತ್ಯಾಚಾರವೆನಗಿಲ್ಲವಯ್ಯಾ ,
ಅನುದಿನ ನಿಮ್ಮ ನೆನೆಯಲು ಭಕ್ತಿಯಿಲ್ಲವಯ್ಯಾ ಎನಗೆ ,
ಕೂಡಲ ಸಂಗಮದೇವಾ,
ಕರುಣಿ, ಕೃಪೆಯ ಮಾಡಯ್ಯಾ .

ಸ್ವಾಮಿ ಮತ್ತು ಸೇವಕನ ಸಂಬಂಧಕ್ಕೆ ಯಾವುದು ದಾರಿ ಎಂದರೆ ಸತ್ಯ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿಯುವ, ನಡೆದು ತಪ್ಪುವ ಪ್ರಪಂಚಿಯೆಂಬ ಮನವನು ಒಲ್ಲ ಕೂಡಲಸಂಗಮದೇವ ಎಂದು ಅಣ್ಣನವರು ಅರಿವು ಮತ್ತು ಮನದ ಸಂಬಂಧದ ಬಗ್ಗೆ ಹೇಳಿದ್ದಾರೆ.

ಅರಿವು ಮತ್ತು ಮನದ ಸಂಬಂಧ ಹೇಗಿರಬೇಕೆಂದರೆ ಸ್ವಾಮಿ ನೀನು, ಶಾಶ್ವತ ನೀನು, ಎತ್ತಿದೆ ಬಿರಿದ ಜಗವೆಲ್ಲ ಅರಿಯಲು. ಮಹಾದೇವ, ಮಹಾ ದೇವ, ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೇಕೋ ದೇವ, ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ಕೂಡಲಸಂಗಮ ದೇವಾ ಎಂದು ಸ್ವಾಮಿ ಸೇವಕನ ಸಂಬಂಧವನ್ನು ಸ್ಪಷ್ಟಪಡಿಸಿದ್ದಾರೆ.

ಸ್ವಾಮಿ ಎಂದರೆ ಅರಿವು, ಸೇವಕನೆಂದರೆ ಮನ. ಅರಿವಿನ ಸಂಬಂಧಿಯಾಗಲು ಮನ ಅರಿವನ್ನು ಪುಸ್ತಕಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಹುಡುಕುತ್ತಿದೆಯೇ ಹೊರತು ಅರಿವಿನಿಂದಲೇ ಪುಸ್ತಕಗಳು ಹುಟ್ಟಿವೆ ಎಂದು ಮನ ತಿಳಿಯುತ್ತಿಲ್ಲ. ಅರಿವಿನಿಂದ ಹುಟ್ಟಿದ ಪುಸ್ತಕಗಳು ಅರಿವಿಗೇನು ಬೋಧಿಸಬಲ್ಲವು ಎಂದು ಮನಕ್ಕೆ ಮನವರಿಕೆಯಾಗುತ್ತಿಲ್ಲ, ಹೀಗಾಗಿ ಮನ ಸತ್ಯದೊಂದಿಗೆ ಸಂಬಂಧ ಮಾಡುತ್ತಿಲ್ಲ. ತನುವಿನ ಸತ್ಯ ತನುವಿನ ಮನವನ್ನು ಅನುದಿನವೂ ಕೈ ಮಾಡಿ ಕರೆಯುತ್ತಿರುವುದು ಮನಕ್ಕೆ ತಿಳಿಯುತ್ತಿಲ್ಲ. ಹೀಗಾಗಿ ಮನ ಭಗವದ್ಗೀತೆ, ಬೈಬಲ್‌ಗಳ ಸಂಬಂಧಿಯಾಯಿತು; ಅದನ್ನು ಬರೆದವರ ಸಂಬಂಧಿಯಾಯಿತು ; ಮಂದಿರ, ಚರ್ಚ್‌ಗಳಿಗೆ ಸಂಬಂಧಿಯಾಯಿತು. ಸತ್ಯ ಸಂಬಂಧಿಯಾಗಲು ಅರಿಯಲಿಲ್ಲ. ಆದೆಲ್ಲ ಅರಿವಿನೆಂಜಲೆಂದು ಮನ ತಿಳಿಯಲಿಲ್ಲ.

ಸ್ವಾಮಿ ಇಲ್ಲದೆ ಸೇವಕನಿಲ್ಲ. ಸೇವಕನಿಲ್ಲದಿದ್ದರೆ ಸ್ವಾಮಿ ಇಲ್ಲ. ಸ್ವಾಮಿ ಸೇವಕನಿಗೆ ಅವಿನಾಭಾವಸಂಬಂಧ ! ಬೆಳಕು ನೆರಳಿಗೆ ಅವಿನಾಭಾವ ಸಂಬಂಧ. ಎಲ್ಲಿ ಬೆಳಕೊ ; ಅಲ್ಲಿ ನೆರಳು!

ಬೆಳಕಿದ್ದಲ್ಲಿಗೆ ನೆರಳು ಸರಿದರೂ ಬೆಳಕು. ನೆರಳಿದ್ದಲ್ಲಿಗೆ ಬೆಳಕು ಸರಿದರೂ ಬೆಳಕು.

ನೆರಳಿಗೆ ಬೆಳಕಾಗಲು ಭಗವದ್ಗೀತೆ ಬೈಬಲ್‌ಗಳು ಬೇಕೆ? ಮಠ, ಮಂದಿರ, ಚರ್ಚ್‌ಗಳು ಬೇಕೆ ? ತಿಳಿದರೆ ಬೆಳಕು ತನುವಿನಲ್ಲಿಯೇ ಇದೆ ; ನೆರಳೂ ತನುವಿನಲ್ಲಿಯೇ ಇದೆ. ಮನವೆಂಬ ನೆರಳು ಬೆಳಕಿನ ಸಂಬಂಧ ಬೆಳೆಸಬೇಕು ಅಷ್ಟೇ !

289

ಶಬ್ದ ಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ ;
ತೊಡಹದ ಕೆಲಸದ ಬಣ್ಣದಂತೆ
ಕಡಿಹಕ್ಕೆ ಒರಗೆ ಬಾರದು, ನೋಡಾ !
ಎನ್ನ ಮನದಲೊಂದು ಹೃದಯದಲೊಂದು,
ವಚನದಲೊಂದು ನೋಡಾ .
ಕೂಡಲಸಂಗಮದೇವಾ,
ಆನು ಭಕ್ತನೆಂಬ ಹುಸಿಯ ಮಸಕವನೇನು ಬಣ್ಣಿಸುವೆನಯ್ಯಾ ?

ಓದಿ, ಕೇಳಿ ಸಂಗ್ರಹವಾದ ಶಬ್ದಸಂಭಾಷಣೆ ಆನಂದವನ್ನುಂಟು ಮಾಡಬಹುದು ಆದರೆ ಅದು ಲೋಹಕ್ಕೆ ಮೆತ್ತಿದ ಬಣ್ಣದಂತೆ ! ಕಡಿದು ಒರೆಗೆ ಹಚ್ಚಿ ನೋಡಿದರೆ ಬರೀ ಲೋಹದ ಹುಡಿಯಂತೆ !

ಮನದಲೊಂದು, ಹೃದಯದಲೊಂದು, ವಚನದಲೊಂದು ನೋಡಾ ! ಬಣ್ಣದೊಂದಿಗೆ ಬಂದ ಚಿನ್ನ ಅಪರಂಜಿ. ಆಭರಣವೂ ಸುಂದರ ! ಎಲ್ಲಿ ಕಡಿದರೂ ಒರೆಗಲ್ಲಿಗೆ ಹಾಕಿ ತಿಕ್ಕಿದರೂ ಬರೀ ಬಣ್ಣವೇ ಬಣ್ಣ ! ಹೊಂಬಣ್ಣದ ಚಿನ್ನ. ಆಭರಣವೂ ಚಿನ್ನ ; ಚಿನ್ನವೂ ಚಿನ್ನ. ಅಕ್ಕಸಾಲಿಗ ಚಿನ್ನದ ಬಣ್ಣ ಬೇರ್ಪಡಿಸಲು ಸಾಧ್ಯವೇ ಇಲ್ಲ.

ತನುವಿನ ಕಣಕಣದಲ್ಲಿ ಬೇರ್ಪಡಿಸಲು ಬಾರದಂತಹ ಅರಿವಿದ್ದರೂ ಮನ ಅರಿಯದ್ದರಿಂದ; ತನು ಬೇರೆ, ಮನ ಬೇರೆ, ಅರಿವು ಬೇರೆ ಬೇರೆಯಾಗಿ, ಮನದಲೊಂದು, ಹೃದಯದಲೊಂದು ವಚನದಲೊಂದು ಕಂಡು ; ಕಡಿದು ನೋಡಲು ಒರೆಗೆ ಬಾರದಂತಾಗಿದೆ. ತನುವಿನಲ್ಲಿ ತನ್ಮಯವಾದ ಅಪರಂಜಿ ಅರಿವು ಮನಕ್ಕೆ ಗೋಚರಿಸದಂತಾಗಿದೆ. ನಾನು ಭಕ್ತನೆಂಬ ಮನದ ಕೃತಕ ತನುವನು ಬಣ್ಣಿಸಲು ಬಾರದಂತಾಗಿದೆ.

290

ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ, ಉಪ್ಪನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ.

ತನುವಿನಲ್ಲಿರುವ ಅರಿವಿನ ಅಮೃತ ಪಾನ ಮಾಡಲು ಮನಕ್ಕೆ ಬಯಕೆಯಾಗಬೇಕು. ಅದು ಅರಿವಿನಗಳಿಕೆಗೆ ಅತ್ತ ಇತ್ತ ಸುಳಿಯಬೇಕಿಲ್ಲ. ಆದ್ಯರ ವಚನ ಹಾಲ ತೊರೆಯಂತೆ ತನುವಿನ

ಮುಂದೆಯೇ ಸುಳಿಯುತ್ತದೆ. ಬೆಲ್ಲದ ಕೆಸರು, ಸಕ್ಕರೆಯ ಮಳಲು ತವರಾಜ ಬೆರೆತ (ಮಿಲ್ಕ್‌ಷೇಕ್) ನೊರೆಯುಕ್ತ ಹಾಲು ಮನವನ್ನು ಅಮೃತಾತ್ಮನತ್ತ ಕೊಂಡೊಯ್ಯುತ್ತದೆ. ಇದಕ್ಕೆ ಮತ್ತಾರ ಅವಶ್ಯಕತೆಯೂ ಇಲ್ಲ.

ಮನ, ಆದ್ಯರ ವಚನ ಕೇಳಿ ಅರಿವಿನ ಹಾಲ ತೊರೆಗೆ ಜಿಗಿದರೆ ಸಾಕು ; ಅರಿವೆಂಬ ಗುರುದೇವ ಎತ್ತಿಕೊಂಡು ತನ್ನಂತೆ ಮಾಡಿಕೊಳ್ಳುತ್ತಾನೆ. ಆದ್ಯರ ವಚನವೆಂಬ ಹಾಲತೊರೆಯ ಬಿಟ್ಟು ಬೇರೆ ಬಾವಿಯ ತೋಡಿ ದಣಿಯುವ ಮಂದ ಮತಿ ಮನಕ್ಕೆ ಉಪ್ಪು ನೀರೆ ಗತಿ ಕೂಡಲಸಂಗಮದೇವಾ.

ಆದ್ಯರ ವಚನ ಪರುಷ ಕಂಡಣ್ಣಾ ; ಸದಾಶಿವನೆಂಬ ಲಿಂಗವ ನಂಬುವುದು ; ನಂಬಲೊಡನೆ ನೀ ವಿಜಯಕಂಡಣ್ಣಾ. ಅಧರಕ್ಕೆ ಕಹಿ ಉದರಕ್ಕೆ ಸಿಹಿ ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

ಮನವೆಂಬ ಕಸ ಬೆರೆತ ತನುವನ್ನು ಶುದ್ಧೀಕರಿಸಿ ಚೊಕ್ಕ ಚಿನ್ನದಂತೆ ಮಾಡುತ್ತದೆ ಪರುಷ ! ಪರುಷ ತಾಕಿದ ಲೋಹ ಚಿನ್ನವಾಗುತ್ತದೆ.

291

ಜನ್ಮ ಹೊಲ್ಲೆಂಬೆನೆ ಜನ್ಮವ ಬಿಡಲಹೆನು ;
ಭಕ್ತರೊಲವ ಪಡೆವೆನೆ ಭಕ್ತಿಯ ಪಥವನರಿವೆನು ,
ಲಿಂಗವೆಂದು ಬಲ್ಲೆನೆ ಜಂಗಮವೆಂದು ಕಾಬೆನು ;
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ ಕೈಲಾಸವ ಕಾಣಬಲ್ಲೆನು !
ಎನ್ನಲ್ಲಿ ನಡೆಯಿಲ್ಲಾಗಿ ನಾನು ಭಕ್ತನೆಂತಹೆನಯ್ಯಾ ,
ಕೂಡಲಸಂಗಮದೇವಾ !

ಸರ್ವ ತನುಗಳಲ್ಲಿಯೂ ಲಿಂಗವೆಂಬ ಅರಿವು ಭರಿತವಾಗಿದೆ. ಅದನ್ನು ಮಹಾಜ್ಞಾನಿ ಶರಣರ ವಚನಗಳ ಅನುವಿನಿಂದ ಪಡೆಯುತ್ತೇನೆ ಎಂಬ ಛಲಬೇಕು. ಅಜ್ಞಾನಿ ಜನ್ಮ ಒಲ್ಲೆನೆಂಬ ಛಲಬೇಕು. ಜ್ಞಾನ ಮಾರ್ಗದಲ್ಲಿ ನಡೆಯುವವರ ಜ್ಞಾನಕ್ಕೆ ವಿಶ್ವಾಸಮಾಡುವವರ ಮೇಲೆ ಒಲವು ಬೇಕು.

ಮನ ತನುವನ್ನು ದುರ್ಬಳಕೆ ಮಾಡುತ್ತಿರುವುದರಿಂದ ತನುವಿನ ಅರಿವು ಮನಕ್ಕೆ ತಿಳಿಯುತ್ತಿಲ್ಲ. ಅರಿವಿನ ಅಂಗವೇ ಲಿಂಗ. ಇದು ಮನಕ್ಕೆ ಹೊಳೆದರೆ ತನುವಿನಲ್ಲಿರುವ ಅರಿವನ್ನು ಸದ್ಬಳಕೆ ಮಾಡುವ ಛಲಗಾರ ಜಂಗಮನನ್ನೂ ಮನ ಕಾಣಬಹುದು. ಆಗ ಮನದ ಕೆಲಸ ನಿಂತು ಅಂಗದಲ್ಲಿ ಲಿಂಗ ಜಂಗಮದ ಕೆಲಸ ಪ್ರಾರಂಭವಾಗುತ್ತದೆ.

ನಿತ್ಯ ನಿತ್ಯ ಲಿಂಗದ ನಡೆ, ನಿತ್ಯ ನಿತ್ಯ ಜಂಗಮದ ನುಡಿ, ನಿತ್ಯ ನಿತ್ಯ ಶಿವ ರಾತ್ರಿ, ಮನ ನಷ್ಟವಾಗಿ, ಅಂಗ ಲಿಂಗ ಜಂಗಮರೊಂದಾಗಿ ಕಾಯವೇ ಕೈಲಾಸವಾಗುತ್ತದೆ. ಆದರೆ ಮನ ಅರಿವಿನ ಯಾತ್ರೆಗೆ ಸಿದ್ಧವಾಗದಿದ್ದರೆ ಅಂಗದಲ್ಲಿರುವ ಲಿಂಗ ಜಂಗಮರನ್ನು ಕೂಡಲು ಸಾಧ್ಯವಾಗುವುದಿಲ್ಲ.

292

ಉಡುವಿನ ಭಾವದಲ್ಲಿ ಹಡೆದರೆಮ್ಮವರು
ಊಸರವಳ್ಳಿಯಂತೆ ಎನ್ನ ಇರವು,
ಬಾವುಲ ಬಾಳುವೆಯ ತೆರನಂತೆ !

ಹೊತ್ತಾರೆ ಎದ್ದ ಕುರುಡಂಗೆ
ಅಗುಸೆಯಲ್ಲಿ ಅಸ್ತ ಮಾನವಾದಂತೆ-
ಆನು ಭಕ್ತಿಯ ಬಯಸಿದಡಹುದೆ
ಕೂಡಲಸಂಗಮದೇವಾ ?

ತನುವಿನಲ್ಲಿ ಅರಿವಿನ ಬ್ರಹ್ಮಾಂಡವೇ ಅಡಗಿದೆ. ಮನದಿಂದಾಗಿ ತನುವಿಗೆ ಅರಿವಿನ ದರ್ಶನವಾಗುತ್ತಿಲ್ಲ. ಇದಕ್ಕೆ ಹಡೆದ ತಂದೆ ತಾಯಿಗಳೂ ಕಾರಣ ರಾಗಿದ್ದಾರೆ.

ತಂದೆ ತಾಯಿಗಳಿಗೆ ಮನ ನಷ್ಟವಾಗಿ ಅರಿವಿನ ದರ್ಶನವಾಗಿದ್ದರೆ ಅರಿವಿನ ಮತ್ತೊಂದು ತನುವಿನ ಬಯಕೆಗಾಗಿ ಕೂಡುತ್ತಿದ್ದರು. ಸತಿ ಪತಿಗಳ ಕೂಟ ಮತ್ತೊಂದು ಅರಿವಿನ ಕುಡಿಗೆ ಕಾರಣವಾಗಿ ಗರ್ಭದಲ್ಲಿ ಬೆಳೆಯುತ್ತಿತ್ತು. ಬುದ್ಧ, ಮಹಾವೀರ, ಅಕ್ಕಮಹಾದೇವಿ, ನೀಲಮ್ಮ, ಬಸವಣ್ಣ, ಕ್ರಿಸ್ತ, ಕ್ರಿಷ್ಣ , ಮೀರಾಳಂತಹ ಜ್ಞಾನಿಗಳಿಗೆ ಜನ್ಮ ನೀಡುತ್ತಿದ್ದರು. ಮಹಾಜ್ಞಾನಿಗಳೆ ನಾಡಿನ ತುಂಬಾ ಬೆಳಗುತ್ತಿದ್ದರು.

ಮತ್ತೊಂದು ಅರಿವಿನ ಜನ್ಮಕ್ಕಾಗಿ ಮಾತ್ರ ಸತಿಪತಿಗಳ ಕೂಟವಿದ್ದರೂ ಮನಕ್ಕೆ ಇದು ತಿಳಿಯುತ್ತಿಲ್ಲ. ತನುವನ್ನು ಮನ ವಿಕೃತ ಕಾಮದ ಸುಖಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತದೆ. ಸತಿಯನ್ನು ಕೂಡುತ್ತಾ ಪರಸತಿಯರೊಂದಿಗೆ ಕಾಮ ಕ್ರೀಡೆಯ ಹಾದರದಲ್ಲಿ ತೊಡಗುತ್ತದೆ. ಹೀಗೆ ಹಾದರದೊಂದಿಗೆ ವಿಸರ್ಜನೆಯಾದ ಬಿಂದುವಿನ ಬೀಜದಲ್ಲಿ ಅರಿವೂ ಇದೆ; ಹಾದರದ ಮನವೂ ಬೆರೆತಿದೆ. ಹೀಗೆ ಹಾದರದ ಉಡುವಿನ ಭಾವದಲ್ಲಿ ಹಡೆದ ತನುಗಳಲ್ಲಿ ವಿಕೃತ ಮನವೂ ಇದೆ ಅರಿವೂ ಇದೆ.

ಬೆಳೆದ ತನುವನ್ನು ಆವರಿಸಿದ ಮನ ಊಸರವಳ್ಳಿಯಂತೆ ಕ್ಷಣಕ್ಕೊಮ್ಮೆ ತನುವಿನಲ್ಲಿ ಬಣ್ಣ ಬದಲಿಸುತ್ತದೆ. ಕಳ್ಳ, ಹಾದರಿಗ, ಭ್ರಷ್ಟ, ರಾಜಕಾರಣಿ, ಸಾತ್ವಿಕ, ತಾಮಸಿಗ, ವಿಟ, ವೇಶ್ಯೆ , ದಾನಿ, ಸ್ವಾಮಿ, ಮುಂತಾದ ವೇಷಗಳನ್ನು ತನುವಿಗೆ ಹಾಕಿ ವ್ಯವಹಾರಕ್ಕೆ ನಿಲ್ಲುತ್ತದೆ.

ತೋಳ್ಬಾವುಲಿಯಂತೆ ಕತ್ತಲ ಲೋಕವೇ ಮನಕ್ಕೆ ಸುಖ ನೀಡಿ ತನುವನ್ನು ದುರ್ಬಳಕೆ ಮಾಡಿಕೊಳುತ್ತದೆ.

ಕಾಮದ ಕಣ್ಣು ಜಾಗ್ರತವಾಗಿ ಅರಿವಿನ ಕಣ್ಣು ಕಣ್ಣಿನಲ್ಲಿಯೇ ಉಳಿದು ಹಗಲು ಕುರುಡನಾಗುತ್ತದೆ.

ತಂದೆ ತಾಯಿಗಳಿಂದಾದ ಜನ್ಮದ ದೋಷ ಹುಸಿ ವೇಷ ಧರಿಸಿದರೆ ತೊಲಗುವುದಿಲ್ಲ. ಅದು ಮನದ ಮತ್ತೊಂದು ಕಪಟತನ.

ಹಾದರದಲ್ಲಿ ಸದಾ ಸುಖಿಸುವ ಮನ ಅರಿವಿನ ಸುಖಕ್ಕಾಗಿ ಹಾತೊರೆದರೆ ಕೂಡಲೆ ನಷ್ಟವಾಗುತ್ತದೆ. ಆಗ ಅಂಗ ಅಂಗದಲ್ಲಿರುವ ಅರಿವೆಂಬ ಲಿಂಗ ಅದನ್ನು ಪಾಲಿಸುವ ಜಂಗಮ ಮಾತ್ರ ಉಳಿಯುತ್ತಾನೆ. ಇದೇ ಲಿಂಗಾಂಗ ಸಾಮರಸ್ಯ ! ಬುದ್ಧ ಬಸವ ಕ್ರಿಸ್ತ ಕ್ರಿಷ್ಣರ ಮಹಾಜ್ಞಾನದ ಸಾಮರಸ್ಯ !

293

ಬಸುರ ಬಾಳುವೆಗೆ ನಿಮ್ಮಲ್ಲಿ

ಮಸಿಯ ಹೂಸಿ ನೇರಿಲಹಣ್ಣ ಮಾರುವಂತೆ
ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಹೊಕ್ಕೆನಯ್ಯಾ .
ಆವುದ ಹುಸಿಯಂಬೆ ? ಆವುದ ಕಿರಿದೆಂಬೆ ?
ಇದ ನೀನೆ ಬಲ್ಲೆಯಯ್ಯಾ ,
ಕೂಡಲಸಂಗಮದೇವಾ, ನಾನು ಉದರಪೋಷಕನಯ್ಯಾ !

ಉದರ ಪೋಷಣೆಗಾಗಿ ತನುವಿನ ಬಸಿರಲ್ಲಿ ಬಂದ ಮನ, ಹಾಲಲ್ಲಿ ನೀರು ಬೆರಸಿ ಹಾಲು ಮಾರಿ ಬದುಕುತ್ತದೆ. ಬೆಣ್ಣೆಯಲ್ಲಿ ಗ್ರೀಸ್ ಬೆರೆಸಿ ಬೆಣ್ಣೆ ಮಾರಿ ಬದುಕುತ್ತದೆ. ಅಕ್ಕಿಯಲ್ಲಿ ಹರಳು ಬೆರೆಸಿ, ಸಕ್ಕರೆಯಲ್ಲಿ ಕಬ್ಬಿಣದ ಹುಡಿ ಬೆರೆಸಿ ಮಾರಿ ಬದುಕುತ್ತದೆ. ಬದುಕು ಬರ್ಬರವಾದಾಗ, ನರಕವಾದಾಗ, ಕಾಲ ಸಾಲ ದಾರಿದ್ರ್ಯವೆಂಬ ನರಕಕ್ಕಂಜಿ ದೇವರ ಮೊರೆ ಹೋಗುತ್ತದೆ.

ಮನದಿಂದಾದ ಕಲ್ಲದೇವರು ತನುವಿನ ದುಃಖ ಕಳೆಯಬಲ್ಲನೆ ? ಬಸುರ ಬಾಳುವೆಗಾಗಿ ಮಸಿಯ ಹೂಸಿ ಬಸುರ ಕುಡಿಗೆ ನೇರಿಲಹಣ್ಣೆಂದು ಮಾರಿ ಬದುಕುವ ಮನ ದಾರಿದ್ರ್ಯಕ್ಕಂಜಿ ದೇವರ ಮೊರೆ ಹೋಯಿತಲ್ಲದೆ ದೇವರನ್ನು ತಿಳಿಯಲಿಲ್ಲ.

ಉದರ ಪೋಷಣೆಗಾಗಿ ತನುವಿನಲ್ಲಿ ತನ್ಮಯವಾದ ಅರಿವೆಂಬ ದೇವರಿಗೆ ವಿಷ ಉಣ್ಣಿಸಿ ಬದುಕುವ ಮನ ; ಆವುದು ಹುಸಿಯೆಂದು ಅರಿಯುತ್ತಿಲ್ಲ , ಆವುದು ಕೀಳೆಂದು ಅರಿಯುತ್ತಿಲ್ಲ. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನೇ ತಿಳಿಯಬೇಕು. ವಂಚನೆಯೂ ನಡೆದಿದೆ, ಪೂಜೆಯೂ ನಡೆದಿದೆ. ಉದರಪೋಷಣೆಯೂ ನಡೆದಿದೆ. ಆವುದು ಮೇಲು ? ಆವುದು ಕೀಳೆಂದು ಅರಿವೆಂಬ ಗುರುದೇವನೇ ತಿಳಿಯಬೇಕು. ಅರಿವು ಅರಿಯದೆ ಉದರ ಪೋಷಿಸುವುದು ಮನದ ಕಾಯಕ. ಇದು ಅರಿವಿಗೆ ತಿಳಿಯದ ಮಾತೇನಲ್ಲ. ನೀನೆ ಬಲ್ಲೆಯಯ್ಯಾ ಕೂಡಲಸಂಗಮದೇವಾ.

294

ಮೂಗ ಕಂಡ ಕನಸಿನಂತಾಯಿತ್ತೆನ್ನ ಭಕ್ತಿ ,
ಗುಣವ ಹೇಳಬಾರದಾರಿಗೆಯೂ ; ಕೇಳಲೆಂತೂ ಬಾರದು !
ಎನ್ನ ಹೇಗತನವ ಮಾಣಿಸು, ಕೂಡಲಸಂಗಮದೇವಾ.

ಮನ ಗುಣಿಯೂ ಹೌದು, ದುರ್ಗುಣಿಯೂ ಹೌದು. ತನುವನ್ನು ಆವರಿಸಿ ಅರಿವನ್ನು ಅರಿಯದೆ ಮಾಡುವ ದಡ್ಡತನವನ್ನು ಯಾರು ಹೋಗಲಾಡಿಸಬೇಕು? ಮನದ ಗುಣವನು ತನುವೇ ಅನುಭವಿಸಬೇಕು ; ಹೇಳಲು ಬಾರದು ಯಾರಿಗೆಯೂ:

ಮನ ತನುವನ್ನು ಹಿಡಿದು ಅಕ್ಕ ಅತ್ತಿಗೆ ತಾಯಿ ತಂಗಿ ಎಂದು ಬೊಗಳುತ್ತದೆ; ಹಾದರವನೂ ಮಾಡುತ್ತದೆ ! ಮನದ ದುರ್ಗುಣ ಹೇಳಿದರೆ ತನುವನ್ನು ಬಡಿಯುತ್ತಾರೆ ! ಹೇಳಬಾರದು ಆರಿಗೆಯೂ; ಕೇಳಲಂತೂಬಾರದು!

ಪಾಠ ಕೇಳಲು ಹೋದ ಚಂದ್ರ ಗುರುವಿನ ಹೆಂಡತಿಯನ್ನೇ ವರಿಸಿದ ! ಗುರು ದೇವನಾದ ಬೃಹಸ್ಪತಿ ಮನವನ್ನು ತಿಳಿಯಲಿಲ್ಲ ; ಚಂದ್ರನಿಗೆ ಶಿಕ್ಷೆ ಕೊಟ್ಟ ! ಮನ ಹೇಳಿದಂತೆ ಕೇಳುವ ಮೂಗ ತನುವೇನು ಮಾಡೀತು ಎಂದು ಗುರು ಬೃಹಸ್ಪತಿ ಅರಿಯಲೇ ಇಲ್ಲ.

ಮನ ತೋರಿಕೆಗಾಗಿ ಸಂಬಂಧ ಬೆಳೆಸುತ್ತದೆ. ಹಾದರದಲ್ಲಿ ಸಂಬಂಧ ಕಳೆದುಕೊಳ್ಳುತ್ತದೆ.

ಅದು ಗುಣಿಯೂ ಹೌದು ; ದುರ್ಗುಣಿಯೂ ಹೌದು.

ಅರಿವಿಗೆ ಪಾಠ ಬೇಕಿಲ್ಲ; ಮನಕ್ಕೆ ಪಾಠ ನಿಲ್ಲುವುದಿಲ್ಲ. ನಿರಂತರ ನಡೆಯುತ್ತಿರುವ ಶಾಲಾ ಕಾಲೇಜುಗಳಿಗೂ ಬರವಿಲ್ಲ. ಮನದ ಗುಣ ಮೂಗ ಕಂಡ ಕನಸಿನಂತೆ. ಹೇಳಬಾರದಾರಿಗೂ, ಕೇಳಲಂತೂಬಾರದು.

ಕಾಲೇಜಿನಲ್ಲಿ ಪಾಠ ಮಾಡಲು ಹೋದ ಗುರುವಿನ ಮನ; ಶಿಷ್ಯಳ ತನುವಿನೊಂದಿಗೆ ಹಾದರಕ್ಕೆ ಹೋದರೆ ಪಾಠ ಹೇಳುವುದಾದರೂ ಹೇಗೆ? ಮನದ ಈ ದುರ್ಗುಣವನು ಯಾರಿಗೆ ಹೇಳಬೇಕು. ಹೇಳಿದರೆ ಕೇಳಲೂಬಾರದು. ಮನದ ಮೂರ್ಖತನವನ್ನು ಮನವೇ ಕಳೆದುಕೊಳ್ಳಲು ಮನ ಸಿದ್ಧವಾಗಬೇಕಲ್ಲ? ಮನದ ಗುಣ ದುರ್ಗುಣ ಕಳೆದು ನಿರ್ಗುಣಿಯನ್ನಾಗಿ ಮಾಡಬಲ್ಲ ಸಮರ್ಥ ಗುರು ಮನಕ್ಕೆ ದಕ್ಕಬೇಕಲ್ಲ. ಇದು ಬಲು ಜಟಿಲ; ಮನ ಪ್ರಯತ್ನಿಸಿದರೆ ಬಲು ಸರಳ !

295

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯಾ.
ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯಾ.
ಕೂಡಲಸಂಗನ ಶರಣರ ಸಂಗದಿಂದ ಅರಿದಡೆ
ನಾನು ಬದುಕುವೆನಯ್ಯಾ.

ಸಿದ್ಧಾರ್ಥನಿಗೆ ಅರಸೊತ್ತಿಗೆ ಎನ್ನುವುದು ದುಗ್ಗಾಣಿಯ ಲೋಭವಾಯಿತು. ಅದರ ಲಾಭ ಪಡೆಯಲು ಹೋದರೆ ಸಿದ್ಧಾರ್ಥ ಮತ್ತೊಬ್ಬ ರಾಜನನ್ನು ಕೊಲ್ಲುತ್ತಿದ್ದ ! ಹೆಂಡತಿ ಮಕ್ಕಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಿದ್ದ, ಸಿಂಹಾಸನ, ಕಿರೀಟಕ್ಕಾಗಿ ಅನ್ಯ ರಾಜ್ಯದ ಪ್ರಧಾನಿ, ಸೇನಾಧಿಪತಿ, ಸೈನಿಕರನ್ನು, ಅಮಾಯಕ ಪ್ರಜೆಗಳನ್ನು ಸಾವು ನೋವಿಗೆ ಈಡುಮಾಡುತ್ತಿದ್ದ. ಇದೆಲ್ಲ ಸಿದ್ಧಾರ್ಥನಲ್ಲಿದೆ. ಆದರೆ ರಾಜ್ಯದ ಅಭ್ಯುದಯಕ್ಕಾಗಿ ಇದೆಲ್ಲವನ್ನೂ ಮಾಡಲೇಬೇಕು. ಸಿದ್ಧಾರ್ಥ ಯೋಚಿಸಿದ; ಇದೆಲ್ಲ ಆತನಿಗೆ ದುಗ್ಗಾಣೆ ಲೋಭವಾಗಿ ಕಂಡಿತು. ಕೂಡಲೇ ಕೋಟಿಲಾಭಕ್ಕಾಗಿ ಅಣಿಯಾದ; ಸಿದ್ಧಾರ್ಥನಲ್ಲಿದ್ದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೊಂದಿಗೆ ಯುದ್ಧಕ್ಕೆ ಸಿದ್ಧಾರ್ಥನೇ ಸನ್ನದ್ಧನಾದ. ಅವೆಲ್ಲವುಗಳನ್ನು ಕೊಂದು ಮಹಾವೀರನಾದ ! ಬುದ್ಧನಾದ ! ದುಗ್ಗಾಣಿಯ ಲೋಭವನು ಬಿಟ್ಟು ಕೋಟಿಲಾಭವ ಪಡೆದುಕೊಂಡ.!

ಸಿದ್ಧಾರ್ಥ ಜನರೇಟರ್‌ನಿಂದ ಬೆಳಗುವ ಬೆಳಕು.ಆತನಿಗೆ ಇಂಧನ ಬೇಕೇಬೇಕು. ಬುದ್ಧ ತನ್ನಿಂದ ತಾನೇ ಬೆಳಗುವ ಬೆಳಕು. ಜಗದಗಲ ಮುಗಿಲಗಲ ಬೆಳಗುವ ಬೆಳಕು. ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕು !

ತನ್ನಿಂದ ತಾನೇ ಬೆಳಗುವ ಕೋಟಿ ಲಾಭದ ಬೆಳಕು ಬೇಕೋ; ಆ ಬೆಳಕಿನಿಂದ ಉಂಟಾದ ನೆರಳೇ ಬೆಳಕಾಗಿ ಬೆಳಗುವ ಮಂದ ಬೆಳಕು ಬೇಕೋ? ಎಂದು ಮನ ಯೋಚಿಸಲೇಬೇಕು. ಈ ಬೆಳಕಿನ ದಾರಿ ತೋರಿಸುವ ಕುಲವನು ಮತಿಗೆಟ್ಟ ಮನ ಅರಿಯಲೇಬೇಕು. ನಾನು ಅರಿಯುವುದೆಂತಯ್ಯಾ ಎಂದು ಹಗಲಿರುಳೂ ಯೋಚಿಸಲೇಬೇಕು. ಬೆಳಗನರಿತು ಬೆಳಗಿಂಗೆ ಬೆಳಗಾಗಿ ಬೆಳಗುವ ಶರಣರ ಸಂಗದಿಂದ ಅರಿದಡೆ ಮನ ಘನ ಮನವಾಗುವುದೆಂದು ಅಣ್ಣ ಬಸವಣ್ಣನವರು ಸರಳ ಸೂತ್ರದ ಮೂಲಕ ಮನಕ್ಕೆ ವಿವರಿಸಿದ್ದಾರೆ.

296

ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು,
ನಿಮ್ಮವರೊಲಿಯದನ್ನಕ್ಕ ?
ಶಿವ ಶಿವ, ಮಹಾದೇವಾ,
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ.
ಕೂಡಲಸಂಗಮದೇವಾ.

ಏನ ಓದಿದರೂ ಫಲವಿಲ್ಲ! ಏನ ಕೇಳಿದರೂ ಫಲವಿಲ್ಲ! ಏನ ಮಾಡಿದರೂ ಫಲವಿಲ್ಲ! ತನುವಿನ ಅರಿವು ಮನಕ್ಕೆ ಒಲಿಯದಿದ್ದರೆ, ಅರಿವು ಭರಿತವಾದ ತನು ಅರಿವಿನ ಪುಸ್ತಕಗಳನ್ನು ಓದುವುದಿಲ್ಲ. ಅದು ತನಗೆ ಬೇಡವೆಂದು ಧಿಕ್ಕರಿಸುತ್ತದೆ. ಮನ ಓದಿ ಪಂಡಿತನಾಗುತ್ತದೆ ; ಅಹಂಕಾರಿಯಾಗುತ್ತದೆ. ಓದಿದ ಕೆಲ ಭಾಗ ಮಾತ್ರ ಮನಕ್ಕೆ ದಕ್ಕುತ್ತದೆ. ಓದಿದ ಓದಿಗೂ ನಡತೆಗೂ ಸಂಬಂಧವೇ ಇರುವುದಿಲ್ಲ. ಮನ ಓದಿ ಆಡುವುದೊಂದು ಮಾಡುವುದೊಂದು ! ತನು ಇರುವವರೆಗೂ ಮನ ಪಂಡಿತನೆಂದೇ ಬೀಗಿ ಅಹಂಕಾರದಿಂದ ಸಾಯುತ್ತದೆ.

ಕೇಳಿದ ಶಾಸ್ತ್ರ ಪುರಾಣ ಪ್ರವಚನಗಳು ಮನಕ್ಕೆ ಇಷ್ಟವಾಗಿ ತನು ಹಿಡಿದು ಆಚಾರದಲ್ಲಿ ತೊಡಗುತ್ತದೆ. ಮಾಡುವ ಆಚಾರಕ್ಕೂ ನುಡಿದು ನಡೆಯುವ ನಡೆತೆಗೂ ಸಂಬಂಧವೇ ಇರುವುದಿಲ್ಲ. ಮನ ಗೋಚರದ ಆಚಾರದಲ್ಲಿ ತೊಡಗಿ ತನುವನ್ನು ಬಂಧಿ ಮಾಡುತ್ತದೆ. ಅರಿವಿನ ಅಗೋಚರದ ಆಚಾರ ಮನಕ್ಕೆ ಇಷ್ಟವಾಗುವುದಿಲ್ಲ.

ಅರಿವಿನಿಂದ ಬಂದ ಪುಸ್ತಕಗಳಿಗೆ, ಅರಿವಿನಿಂದ ಬಂದ ಶಾಸ್ತ್ರಕ್ಕೆ , ಮನ ತನು ಹಿಡಿದು ಸೆರೆಯಾಳಾಗುತ್ತದೆ ಹೊರತು ತನುವಿನಲ್ಲಿಯೇ ಇದ್ದ ಅರಿವೆಂಬ ಗುರುದೇವನಿಗೆ ಸೆರೆಯಾಳಾಗುವುದಿಲ್ಲ.

ಶಿವ ಶಿವ, ಮಹಾದೇವಾ ಬಾಳಲ್ಲದವಳ ಓಲೆಯಂತಾಯಿತ್ತೆನಗೆ ಕೂಡಲಸಂಗಮದೇವಾ :

ತನುವಿಗೆ ಧರಿಸಿಕೊಂಡ ಮಾಂಗಲ್ಯ , ಮುತ್ತು ನೋಡಿ ಜನ ಮುತ್ತೈದೆ ಎಂದು ಗುರುತಿಸಬಹುದು ! ಆದರೆ ಬಾಳುಕೊಡುವ ಗಂಡನೇ ಇಲ್ಲವೆಂದ ಮೇಲೆ ಆ ಓಲೆಗಳಿದ್ದು ಫಲವೇನು ?

ಏನ ಓದಿ ಏನ ಕೇಳಿ, ಏನ ಮಾಡಿಯೂ ಫಲವಿಲ್ಲ. ತನುವಿನಲ್ಲಿ ತನ್ಮಯವಾದ ಅರಿವಿನ ಗಂಡನಿಗೆ ಮನವೆಂಬ ಹೆಂಡತಿ ಒಲಿಯದಿದ್ದರೆ ತನು ಅರ್ಧನಾರೀಶ್ವರನಾಗಲರಿಯದು. ಮನ ಮನದಂತೆ, ತನು ತನುವಿನಂತೆ, ಅರಿವೆಂಬ ಕೂಡಲಸಂಗಮದೇವಾ ತಾನು ತನ್ನಂತೆ.

297

ಮುನ್ನೂರರುವತ್ತು ದಿನ ಶ್ರವವ ಮಾಡಿ,
ಕಳನೇರಿ ಕೈ ಮರೆದಂತಾಯಿತ್ತೆನ್ನ ಭಕ್ತಿ !
ಎನಿಸು ಕಾಲ ಲಿಂಗಾರ್ಚನೆಯ ಮಾಡಿ, ಏವೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕ ?
ಕೊಡನ ತುಂಬಿದ ಹಾಲ ಕೆಡಹಿ,

ಉಡುಗಲೆನ್ನಳವೆ ಕೂಡಲಸಂಗಮದೇವಾ ?

ಮುನ್ನೂರರುವತ್ತು ದಿನ ಶ್ರವವ ಮಾಡಿ, ಕಳನೇರಿ ಕೈ ಮರೆದಂತಾಯಿತ್ತೆನ್ನ ಭಕ್ತಿ :

ವರ್ಷಪೂರ್ತಿ ಸಾಧನೆ ಮಾಡಿ ರಣರಂಗದಲ್ಲಿ ಆಯುಧ ಮರೆತು ಯುದ್ಧಕ್ಕೆ ಅಣಿಯಾದಂತೆ ಆಯಿತ್ತು ಎನ್ನ ಭಕ್ತಿ ! ತನು ಅರಿವಿನ ಶಸ್ತ್ರಾಸ್ತ್ರಗಳ ಭಂಡಾರ. ಅದನ್ನು ಬಳಸಿಕೊಂಡು ರಣರಂಗದಲ್ಲಿ ಯುದ್ಧ ಮಾಡಿದ ಸಿದ್ಧಾರ್ಥ ಬುದ್ಧನೆಂದು ಹೆಸರು ಪಡೆದು ವೀರನಾಗಿ ವಿಜಯ ಪತಾಕೆಯನ್ನು ಹಾರಿಸಿದ. ವರ್ಧಮಾನ ಮಹಾವೀರನಾದ. ಬಸವಾದಿ ಪ್ರಮಥರು ವೀರಾದಿ ವೀರರಾಗಿ ವೀರಶೈವರೆನ್ನಿಸಿಕೊಂಡರು.

ಮನದ ಅಜ್ಞಾನದಿಂದಾಗಿ ತನು ಕ್ಷಣ ಕ್ಷಣಕ್ಕೂ ಶತ್ರುಗಳನ್ನು ಎದುರಿಸಬೇಕಾಗುತ್ತದೆ. ಮನ ಕಣ್ಣಿನಲ್ಲಿ ಬೆರೆತು ನೋಡುವುದರ ಮೂಲಕ ತನುವನ್ನು ಸಂಕಟಕ್ಕೆ ತಳ್ಳುತ್ತದೆ. ಅರಿವಿನ ಅಸ್ತ್ರ ಹಿಡಿದು ಪಾರಾಗದಿದ್ದರೆ ತನುವಿಗೆ ಮೃತ್ಯು ತಪ್ಪಿದ್ದಲ್ಲ. ಕೇಳುವುದರ ಮೂಲಕ ತನುವನ್ನು ಯುದ್ಧಕ್ಕೆಳೆಸುತ್ತದೆ. ನಿಃಶಬ್ದವೇದಿ ಅಸ್ತ್ರ ಹಿಡಿದು ಹೋರಾಡದಿದ್ದರೆ ತನುವಿಗೆ ಮೃತ್ಯು ತಪ್ಪಿದ್ದಲ್ಲ.

ಕಳನೇರಿ ಕೈ ಮರೆದಂತಾಯಿತ್ತೆನ್ನ ಭಕ್ತಿ : ತನುವನ್ನು ಶರಣರು ಕರ, ಕರಸ್ಥಲ, ಷಟಸ್ಥಲ, ಅಂಗ, ಅಂಗೈ , ಕೈ ಎಂದು ಕರೆದರು. ಕೈ ಎಂದರೆ ಐದು ಮಹಾ ಜ್ಞಾನದ ಆಯುಧಗಳುಳ್ಳ ತನು. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ, ಇವು ಐದು ಜ್ಞಾನ ಶಸ್ತ್ರಗಳು. ಮರೆತರೆ ತನುವನ್ನೇ ಸೀಳಿ ಹಾಕುವ ಆಯುಧಗಳು ! ಮೃತ್ಯು ಕೂಪಗಳು.

ಎನಿಸು ಕಾಲ ಲಿಂಗಾರ್ಚನೆಯ ಮಾಡಿ, ಏವೆನಯ್ಯಾ ಮನದಲ್ಲಿ ದೃಢವಿಲ್ಲದನ್ನಕ್ಕ :

ಅಂಗದಲ್ಲಿಯೇ ಇದ್ದ ಐದು ಜ್ಞಾನ ಲಿಂಗಗಳನ್ನು ಅರ್ಚನೆ ಮಾಡುವುದು ಬಿಟ್ಟು ಎನಿಸು ಕಾಲ ಲಿಂಗಾರ್ಚನೆಯ ಮಾಡಿದರೇನು, ಎರೆದರೆ ನೆನೆಯದು, ಮರೆತರೆ ಬಾಡದು, ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ ಎಂದು ಮನಕ್ಕೆ ದೃಢವಾಗದಿದ್ದರೆ ಹೇಗೆ ?

ಕೊಡನ ತುಂಬಿದ ಹಾಲ ಕೆಡಹಿ, ಉಡುಗಲೆನ್ನಳವೆ, ಕೂಡಲಸಂಗಮದೇವಾ:

ಅಂಗ ಎಂಬುದು ಜ್ಞಾನಾಮೃತವೇ ತುಂಬಿದ ಕೊಡ. ಅದರಲ್ಲಿ ಐದು ಮಹಾ ಜ್ಞಾನಲಿಂಗಗಳೇ ಭರಿತವಾಗಿವೆ. ಇಂತಹ ಜ್ಞಾನಾಮೃತ ತುಂಬಿದ ಕೊಡವನ್ನು ಕೆಡವಿ ಮತ್ತೆ ಕೊಡದಲ್ಲಿ ಅಮೃತ ತುಂಬಬಹುದೆ ? ಎಲೆ ಮನವೆ ಅದು ನಿನ್ನಿಂದ ಸಾಧ್ಯವೆ ? ಮುನ್ನೂರರವತ್ತು ದಿನವೂ ಸಾಧನೆ ಮಾಡಿ ಸಾಯಬೇಡ ! ಜ್ಞಾನದ ಶಸ್ತ್ರಗಳನ್ನು ಹಿಡಿದು ಅರಿವಿನಿಂದ ಹೋರಾಡು ! ಮಹಾವೀರನಾಗು, ಮಹಾದೇವನೇ ನೀನಾಗು.

298

ಶಬ್ದ ಸುಖಕ್ಕೆ ಮಚ್ಚಿ ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ !
ಅನುಭಾವ ಅಕ್ಕವೆಯಾಗದೆ, ಬೆಬ್ಬನೆ ಬೆರೆತೆನಯ್ಯಾ !
ಅಮೃತವ ಕೊಡನ ತುಂಬಿ ಒಡೆಯ ಹೊಯ್ದು ಅರಸಲುಂಟೇ?
ಸ್ವಾಮಿ ಭೃತ್ಯ ಸಂಬಂಧವೆ ಎನ್ನ ಭಕ್ತಿ ?
ಪ್ರತ್ಯುತ್ತರ ನಾಯಕ ನರಕ ಕೂಡಲಸಂಗಮದೇವಾ !

ಶಬ್ದ ಟಂಕಿಸಿದ ತನು, ಶಬ್ದ ತಿಳಿಯದ್ದಕ್ಕಾಗಿ ಒಮ್ಮೆ ಶಬ್ದ ಸುಖವನ್ನು ಕೊಡುತ್ತದೆ. ಮತ್ತೊಮ್ಮೆ

ದುಃಖವನ್ನು ಕೊಡುತ್ತದೆ. ಶಬ್ದ ಸುಖವೂ ಅಲ್ಲ, ದುಃಖವೂ ಅಲ್ಲ. ಅದು ಬ್ರಹ್ಮವೆಂದು, ಅರಿವೆಂದು ತಿಳಿಯುವ ಅರಿವು ಕೂಡಾ ತನುವಿನಲ್ಲಿಯೇ ತನ್ಮಯವಾಗಿದೆ.

ಮನ, ಶಬ್ದ ಸುಖ ಮೆಚ್ಚಿ ಮಾತು ಕೊಡುತ್ತದೆ. ಕೊಟ್ಟ ಮಾತಿನಂತೆ ನಡೆಯದೆ ಕೆಡುತ್ತದೆ. ಮಾತನಾಡಿ ಮಾತು ಕೊಡುವಾಗ ಮನ ತನುವನ್ನು ಅರಳಿಸುತ್ತದೆ. ಕೊಟ್ಟ ಮಾತಿನಂತೆ ನಡೆದುಕೊಳ್ಳುವಾಗ ಮನ ತನುವನ್ನು ಕೆರಳಿಸುತ್ತದೆ. ಮನಕ್ಕೆ ಶಬ್ದ ಸುಖ ಗೊತ್ತು , ಶಬ್ದದಿಂದಾಗುವ ದುಃಖ ಗೊತ್ತು . ಶಬ್ದ ಎಂದರೆ ಅರಿವೆಂದು, ಅದು ಬ್ರಹ್ಮವೆಂದು ಗೊತ್ತಿಲ್ಲ.

ಶಬ್ದ ತನುವಿಗೆ ಪ್ರಸಾದವಾಗದೆ ಮನ ತನುವನ್ನು ಬೆಬ್ಬನೆ ಬೆವೆಯುವಂತೆ ಮಾಡುತ್ತದೆ. ಮನ, ಶಬ್ದವನ್ನು ಅರಿವಿನಿಂದ ಕೇಳದೆ, ತನ್ನ ಮೂಗಿನ ನೇರಕ್ಕೆ ಕೇಳಿ, ತನುವಿನಲ್ಲಿ ರಸಾಯನಿಕ ಕ್ರಿಯೆಯನ್ನುಂಟು ಮಾಡಿ ಸುಖಿಸುತ್ತದೆ. ಇಲ್ಲ ದುಃಖಿಸುತ್ತದೆ. ಕೈಕೇಯಿಯ ಎರಡು ಮಾತುಗಳು ರಾಮನನ್ನು ಹದಿನಾಲ್ಕುವರ್ಷ ವನವಾಸಕ್ಕೆ ತಳ್ಳಿದವು. ಆ ಎರಡು ಮಾತುಗಳಿಂದಲೇ ಕೈಕೇಯಿ ಜೀವನ ಪರ್ಯಂತ ನರಕಯಾತನೆ ಅನುಭವಿಸಿದಳು.

ಕೈಕೇಯಿಯ ಎರಡು ಮಾತುಗಳನ್ನು ಲೋಕ ಮೆಚ್ಚಿಸಲು ಸ್ವೀಕರಿಸಿದ ಶ್ರೀರಾಮ ಮರ್ಯಾದಾ ಪುರುಷನೆನ್ನಿಸಿಕೊಂಡು ಇತಿಹಾಸ ಸೇರಿದ. ಶಬ್ದ ಸಂಪತ್ತಿನಿಂದ ತುಂಬಿದ ತನುವಿನ ಶಬ್ದವನ್ನು ಮನ ಸುಖ ದುಃಖ, ಪಾಂಡಿತ್ಯ, ಸಾಹಿತ್ಯಕ್ಕೆ ಬಳಸಿಕೊಂಡು ಕ್ಷಣ ಕ್ಷಣಕ್ಕೂ ಭ್ರಮನಿರಸನಕ್ಕೆ ಒಳಗಾಗುತ್ತದೆಯೇ ವಿನಹ ಶಬ್ದ ಅನಾವರಣ ಮಾಡಿ ಕೇಳಿ ಬ್ರಹ್ಮನಾಗುತ್ತಿಲ್ಲ.

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವಿನ ಅನುಭಾವ ಮನಕ್ಕೆ ಜೀರ್ಣವಾಗುತ್ತಿಲ್ಲ. ಶಬ್ದ ಕೇಳಿ ಸುಖಿಸುತ್ತದೆ ಇಲ್ಲ ದುಃಖಿಸುತ್ತದೆ. ಶಬ್ದ ಪರೀಕ್ಷಿಸಿ ಸ್ವೀಕರಿಸುವ ಶಕ್ತಿ ಮನಕ್ಕೆ ಹೊಳೆಯುತ್ತಿಲ್ಲ.

ಸುಶಬ್ದವೂ ಕುಶಬ್ದವೂ ಶಬ್ದದಲ್ಲಿಯೇ ಕಾಣಿರೋ. ಇದ್ದವರು ಇದ್ದ ಸ್ಥಲವನೆ ನುಡಿವರು, ಅದಕದು ಸಹಜ. ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ, ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ. ಅಂಗದ ಕಣಕಣದಲ್ಲಿ ಅರಿವೆಂಬ ಲಿಂಗ ಭರಿತವಾಗಿರುವುದರಿಂದ ಅಂಗದಿಂದ ಬಂದ ನುಡಿ ಅದು ಲಿಂಗದ ನೋಟ, ಲಿಂಗದ ನಡೆ, ಲಿಂಗದ ನುಡಿ ! ಸುಶಬ್ದವೂ ಕುಶಬ್ದವೂ ಶಬ್ದದಲ್ಲಿಯೇ ಅಡಗಿದೆ. ಮನಕ್ಕೆ ಸುಶಬ್ದ ಕುಶಬ್ದ ತಿಳಿದಿದೆಯೇ ಹೊರತು ಶಬ್ದ ತಿಳಿದಿಲ್ಲ. ಮನಕ್ಕೆ ಇದು ಸಹಜ. ಶಬ್ದವನ್ನು ಅರಿವಿಗೆ ಹೋಗಿ ಕೇಳುವ ಪ್ರಯತ್ನ ಮನ ಮಾಡುತ್ತಿಲ್ಲ. ಏಕೆಂದರೆ ಅದು ಕಿವಿಯಲ್ಲಿ ಬೆರೆತು ಎಂಜಲು ಪದವನ್ನಾಗಿ ಕೇಳುತ್ತದೆ. ತನುವಿಗೆ ಸುಖ ಇಲ್ಲ ದುಃಖವನ್ನುಂಟು ಮಾಡುತ್ತದೆ. ಮನ ಶಬ್ದದ ಎಂಜಲು ಜ್ಞಾನ ತಿಳಿದಿದೆಯೇ ಹೊರತು ಅದರ ಮೀಸಲು ಜ್ಞಾನ ತಿಳಿದಿಲ್ಲ. ಶಬ್ದದಲ್ಲಿರುವ ಮೀಸಲು ಜ್ಞಾನ ತಿಳಿಯುವ ಶಕ್ತಿ ಒಳಕಿವಿಗೆ ಇದೆ. ಸುಶಬ್ದ ಕುಶಬ್ದವನ್ನು ಒಳಕಿವಿ ನಪುಂಸಕ ಮಾಡಿ ಅರಿವಿನಿಂದ ಕೇಳುತ್ತದೆ. ಲೋಕವನ್ನು ನಡುಗಿಸುವ ಶಬ್ದಗಳೆಲ್ಲ ಒಳಕಿವಿಗೆ ಪ್ರಸಾದವಾಗಿ ತನುವಿಗೆ ಆನಂದ ಉಂಟು ಮಾಡುತ್ತದೆ.

ಶಬ್ದ ಸಂಭ್ರಮದಲ್ಲಿ ಹಿಂದುಗಾಣರು ಮುಂದುಗಾಣರು, ತಮ್ಮ ತಾವರಿಯರು. ಇದು ಕಾರಣ ಮೂರು ಲೋಕವೆಲ್ಲವೂ ಬರುಸೂರೆವೋಯಿತ್ತು ಗುಹೇಶ್ವರಾ. ದ್ರೌಪದಿಯ ''ಕುರುಡನ ಮಗ ಕುರುಡ '' ಎಂದು ಹೇಳಿದ ಒಂದು ಸಂಭ್ರಮದ ನಗು ದುರ್ಯೋಧನನ ಝುಂಗಾಬಲವನ್ನೇ ಉಡಗಿಸಿತು. ಬಂಧು ಬಳಗ ಸಹೋದರರೆಲ್ಲರು ಸತ್ತರು. ಕುರು ಸಂತಾನವೇ ನಾಶವಾಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ಸತ್ತು ಹೋಯಿತು. ರಕ್ತದ ಕಾಲುವೆಯೇ ಹರಿಯಿತು. ಆದರೂ ದುರ್ಯೋಧನನ ಎದೆಯಲ್ಲಿ ಸಂಗ್ರಹವಾದ ದ್ರೌಪದಿಯ ಆ ನಗು ನಾಶವಾಗಲಿಲ್ಲ.

ದುರ್ಯೋಧನನ ವಜ್ರ ಶರೀರ ಒಂದು ಶಬ್ದವನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಹಿಂದು ಮುಂದುಗಾಣದೆ ತನ್ನ ತಾನರಿಯದೆ ದ್ರೌಪದಿಯಿಂದ ಹೊರಬಂದ ಸಂಭ್ರಮದ ಒಂದು ಧ್ವನಿ ಮಹಾಭಾರತವನ್ನೇ ಸೃಷ್ಠಿ ಮಾಡಿತು. ಶಬ್ದತಿಳಿಯುವ ಸರಳ ಶಿಕ್ಷಣವೂ ಜಾರಿಯಲ್ಲಿಲ್ಲ.ಇದನ್ನು ತಿಳಿಯಬೇಕೆಂಬ ಇಚ್ಚೆಮನದಲ್ಲಿಸುಳಿಯು ವುದೇ ಇಲ್ಲ.

ಎಂಜಲು ಮಾತ ನುಡಿವ ರಂಜಕರೆಲ್ಲರೂ ಮಿಗೆ ಮಿಗೆ ಮೀಸಲ ತಾವೆತ್ತ ಬಲ್ಲರೊ ? ಮೀಸಲು ಎಂಜಲಹುದೇ, ಎಂಜಲು ಮೀಸಲಹುದೇ ? ಮಾತಿನ ಬಣಮೆಯ ಮೇದ ಪಶು ಪ್ರಾಣಿಯಂತೆ ಎಂಜಲ ಮಾತ ನುಡಿಯುತ್ತಿಹರು, ಲಿಂಗಸಕೀಲ ಸಂಯೋಗದ ವರ್ಮಸ್ಥಲವನು ಅವರೆತ್ತ ಬಲ್ಲರು ? ಕೂಡಲಚೆನ್ನಸಂಗಯ್ಯನಲ್ಲಿ ಶಬ್ದ ಸೂತಕರೆಲ್ಲರೂ ರೌರವ ನರಕಿಗಳು.

ಕಣ್ಣಿನಲ್ಲಿನೋಡುವ ಸಂಪತ್ತಿದೆ. ಅದು ಬಾಯಿಗೆ ಬಂದಾಗ ಎಂಜಲಾಗುತ್ತದೆ. ಕಿವಿಯಲ್ಲಿ ಕೇಳುವ ಸಂಪತ್ತಿದೆ, ಅದು ಬಾಯಿಗೆ ಬಂದಾಗ ಎಂಜಲಾಗುತ್ತದೆ. ನಾಲಗೆಯಲ್ಲಿರುಚಿಸುವ ಸಂಪತ್ತಿದೆ, ಅದು ಬಾಯಿಗೆ ಬಂದಾಗ ಎಂಜಲಾಗುತ್ತದೆ. ಮೂಗಿನಲ್ಲಿಮೂಸಿಸುವ ಸಂಪತ್ತಿದೆ, ಅದು ಬಾಯಿಗೆ ಶಬ್ದವಾಗಿ ಬಂದಾಗ ಎಂಜಲಾಗುತ್ತದೆ. ಚರ್ಮದಲ್ಲಿಸ್ಪರ್ಶಿಸುವ ಸಂಪತ್ತಿದೆ, ಅದು ಬಾಯಿಗೆ ಬಂದಾಗ ಎಂಜಲಾಗುತ್ತದೆ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ನುಡಿಯುವುದಿಲ್ಲ. ಇವು ಮಿಗೆ ಮಿಗೆ ಮೀಸಲು ಜ್ಞಾನವನ್ನು ಹೊಂದಿವೆ. ನೋಡಲು ಬಾರದ ಬಾಯಿ ನೋಡಿದೆನೆಂದು ನುಡಿದರೆ ಅದು ನಿಜ ಹೇಗಾದಿತು ? ಕೇಳಲು ಬಾರದ ಬಾಯಿ ಕೇಳಿದೆನೆಂದು ನುಡಿದರೆ ಅದು ದಿಟ ಹೇಗಾದೀತು? ಮುಟ್ಟಲು ಬಾರದ ಬಾಯಿ ಮುಟ್ಟಿದೆನೆಂದು , ಸ್ಪರ್ಶಿಸಲು ಬಾರದ ಬಾಯಿ , ರುಚಿಸಲು ಬಾರದ ಬಾಯಿ ಇವೆಲ್ಲನಾನೇ ಮಾಡಿದೆನೆಂದು ನುಡಿದರೆ ನುಡಿದ ಶಬ್ದ ಎಂಜಲಾಗಲಿಲ್ಲವೆ ? ಮೀಸಲು ಶಬ್ದ ಆಯಾ ಭಾಗದಲ್ಲಿಯೇ ಲಿಂಗವಾಗಿ ಉಳಿಯಲಿಲ್ಲವೆ ? ಕಣ್ಣುನೋಡಿದ್ದುಬಾಯಿಗೆ ಬರುವುದರ ಲ್ಲಿಯೇ ಶಬ್ದ ಸೋರಿಹೋಗುತ್ತದೆ.

ದ್ರೌಪದಿ ಕಣ್ಣಿನಿಂದ ನೋಡಿ ಕಣ್ಣಿನಿಂದಲೇ ನುಡಿದಿದ್ದರೆ ಯುದ್ಧವೇ ಆಗುತ್ತಿರಲಿಲ್ಲ. ಕಣ್ಣಿನಲ್ಲಿದ್ದ ಶಬ್ದಮುಗ್ದ ಸಂಪತ್ತು ಬಾಯಿ ಪಡೆಯಲಿಲ್ಲ. ಸಂಭ್ರಮದಿಂದ ನುಡಿದ ಶಬ್ದ ಅನಾಹುತಕ್ಕೆ ದಾರಿಯಾಯಿತು. ದ್ರೌಪದಿ ನುಡಿದ ಶಬ್ದದಿಂದ ದ್ರೌಪದಿ ಸಂಭ್ರಮಿಸಿದರೆ, ದುರ್ಯೋಧನನ ವಜ್ರಶರೀರಕ್ಕೆ ಖಡ್ಗದಿಂದ ಹಿರಿದಂತಾಯಿತು. ಸಾವಿರಾರು ಅಣುಬಾಂಬಗಳನ್ನು ಒಂದೇ ಒಂದು ಶಬ್ದ ದಿಂದ ಸಿಡಿಸಿದಂತಾಯಿತು.

ತನು ಎಂಬುದು ಶಬ್ದಗಳಿದ್ದ ಅಮೃತದ ಕೊಡ. ತನು ಇದ್ದಾಗಲೇ ಶಬ್ದವನ್ನು ನಿಃಶಬ್ದ ಮಾಡಿ ಅದು ಹೇಗೆ ಅಮೃತವೆಂದು ತಿಳಿದು, ತನುವಿಗೆ ಬಡಿದ ಸಕಲ ಶಬ್ದಗಳನ್ನು ಅರಳದಂತೆ, ಕೆರಳದಂತೆ ಅರಿವಿನಿಂದ ಕೇಳಿ ಪ್ರಸಾದ ಮಾಡಿ ಕೊಳ್ಳಬೇಕು. ತನುವೆಂಬ ಅರುವಿನ ಕೊಡ ಒಡೆದು ಹೋದ ಮೇಲೆ ಇದು ಸಾಧ್ಯವಾಗುವುದೇ ಇಲ್ಲ.

ಸ್ವಾಮಿ ಭೃತ್ಯ ಸಂಬಂಧವೆ ಎನ್ನ ಭಕ್ತಿ ; ಪ್ರತ್ಯುತ್ತರ ನಾಯಕನರಕ ಕೂಡಲಸಂಗಮದೇವಾ :

ತನುವಿನ ಅರಿವೇ ಸ್ವಾಮಿ, ತನುವಿನ ಮನವೇ ಸೇವಕ. ಸಕಲ ಶಬ್ದಗಳಲ್ಲಿ ಅರಿವೇ ತುಂಬಿದೆ. ಅರಿವಿನಿಂದಲೇ ಶಬ್ದದ ಜನನವಾಗಿದೆ. ಕುಶಬ್ದ ಸುಶಬ್ದವೆಂದು ಪಟ್ಟಿ ಮಾಡಲು ಹೋದರೆ ಒಂದು ಶಬ್ದವೂ ಪಟ್ಟಿಯಲ್ಲಿ ಸೇರುವುದಿಲ್ಲ. ಶಬ್ದ ಓದಿದರೆ ಅರಿವಾಗುತ್ತದೆ. ಬರೆದರೆ ನಪುಂಸಕವಾಗುತ್ತದೆ. ನುಡಿದರೆ ತನಗೆ ಮೊದಲು ಸಿಟ್ಟು ಬರುತ್ತದೆ. ತನ್ನ ಮನೆಯ ಕಿಚ್ಚು ತನ್ನ ಸುಟ್ಟಲ್ಲದೆ, ಅನ್ಯರನು ಸುಡುವುದೇ? ಶಬ್ದ ನುಡಿದವನನ್ನು ಮೊದಲು ಸುಟ್ಟು ನಂತರ ಅಪ್ಪ್ಯ ಮಾಡಿಕೊಂಡವನಿಗೆ ಸಿಟ್ಟು

ಬರುತ್ತದೆ.

ಶಬ್ದ ಕಿವಿಗೆ ಬಡಿದಾಗ ಮನ ಸ್ವೀಕರಿಸದೆ ಒಳ ಕಿವಿಯಿಂದ ಸ್ವೀಕರಿಸಿ ಅನಾವರಣ ಮಾಡಿ ಕೇಳಿದರೆ ಶಬ್ದ ಅರಿವಾಗುತ್ತದೆ. ಮನ ಅರಿವಿಗೆ ಹೋಗಿ ಅರಿವಿನಿಂದ ಶಬ್ದ ಕೇಳುತ್ತದೆ. ಅದು ತನುವಿಗೆ ಪ್ರಸಾದವಾಗುತ್ತದೆ.

ಮನ ಶಬ್ದ ಸ್ವೀಕರಿಸಿದರೆ ತನು ಸಂಕಟಕ್ಕೆ ಗುರಿಯಾಗಿ ದುರ್ಯೋಧನನಂತೆ ತೊಳಲಾಡಿ ಪ್ರತ್ಯುತ್ತರ ಕೊಟ್ಟು ನಾಯಕನರಕಕ್ಕೆ ಭಾಜನವಾಗುತ್ತದೆ.

ಶಬ್ದ ಅರಿವು ಸ್ವೀಕರಿಸಿದರೆ ಅರಿವು ಮತ್ತು ಮನದ ಸಂಬಂಧ ಏಕವಾಗಿ, ಮನ ಘನಮನವಾಗಿ ಶಬ್ದ ಕೇಳಿ ತನುವಿನಲ್ಲಿಯೇ ನಪುಂಸಕವಾಗಿ ತನುವಿಗೆ ಶಬ್ದ ಪ್ರಸಾದವಾಗುತ್ತದೆ. ಆಗ ಪ್ರತ್ಯುತ್ತರವಿಲ್ಲ. ಶಬ್ದವನ್ನು ಹಸನ್ಮುಖಿಯಾಗಿ ಸ್ವೀಕರಿಸಿದ. ನುಡಿ ಕೇಳಿದ ತನು ಪ್ರಸಾದತನುವಾಯಿತು. ನುಡಿದ ತನುವಿನ ಮನ ನರಕಕ್ಕೆ ಭಾಜನವಾಯಿತು.

ಶಬ್ದದಲ್ಲಿ ಅರಿವಿನ ಸುಖವಿದೆ: ತಿಳಿಯದೇ ಮನದಲ್ಲಿ ಹೌದು ಅಲ್ಲವೆಂದು ಸಂಗ್ರಹವಾಗಿದೆ. ಮಾತಿಂಗೆ ಮಾತು ಬೆಳೆದು ಮನ ತನುವಿನಲ್ಲಿ ಸಂಕಟವನ್ನುಂಟು ಮಾಡುತ್ತದೆ. ಮನಕ್ಕೆ ಅರಿವಿನ ಅನುಭಾವದ ಆಳಕ್ಕೆ ಹೋಗಿ ಶಬ್ದ ಕೇಳುವ ಅರಿವಾದರೆ ಬೆಬ್ಬನೆ ಬೆರಗಾಗುತ್ತದೆ. ಸ್ವಾಮಿ ಭೃತ್ಯ ಸಂಬಂಧವೇರ್ಪಡುತ್ತದೆ. ತನು ಅಮೃತದ ಕೊಡವೆಂದು ಮನಕ್ಕೆ ವೇದ್ಯವಾಗುತ್ತದೆ. ತನು ಇದ್ದಾಗಲೇ ಅರಿವಿನ ಅಮೃತ ಸವಿದು ಜನನ ಮರಣಗಳಿಂದ ನಿವೃತ್ತನಾಗುತ್ತದೆ. ಶಬ್ದದಿಂದ ಹುಟ್ಟಿ ಶಬ್ದದಿಂದಲೇ ಸಾಯುವ ನರಕಯಾತನೆ ಮನಕ್ಕೆ ಮರೆಯಾಗುತ್ತದೆ.

299

ಅಂಕ ವೋಡಿದಡೆ ತೆತ್ತಿಗಂಗೆ ಭಂಗವಯ್ಯಾ ,
ಕಾದಿ ಗೆಲಿಸಯ್ಯಾಎನ್ನನು.
ಕಾದಿ ಗೆಲಿಸಯ್ಯಾ ಕೂಡಲಸಂಗಮದೇವಯ್ಯಾ
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ.

ತನು ಒಂದು ಯುದ್ಧ ಭೂಮಿ ! ಮನ ಸೇನಾಧಿಪತಿ ! ಅರಿವೆಂಬ ರಾಜನೆ ತನುವೆಂಬ ಭೂಮಿಯ ಒಡೆಯ ! ಸೇನಾಧಿಪತಿ ರಾಜನ ಆಳು. ಯುದ್ಧ ಭೂಮಿಯಲ್ಲಿ ಪಾಂಡವ ಸೈನ್ಯವೂ ಬೀಡು ಬಿಟ್ಟಿದೆ. ಕೌರವ ಸೈನ್ಯವೂ ಬೀಡು ಬಿಟ್ಟಿದೆ. ಹದಿನೆಂಟು ಅಕ್ಷೋಹಿಣಿ ಸೈನ್ಯದೊಂದಿಗೆ ಸೇನಾಧಿ ಪತಿ ಯುದ್ಧ ಮಾಡಿ ಗೆಲ್ಲಲೇ ಬೇಕಿದೆ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆ ಈ ಭೂಮಿಯ ವೈರಿಗಳು. ಯುದ್ಧ ಮಾಡಿ ಜಯಿಸಬೇಕಾದ ಸೇನಾಧಿಪತಿಯೇ ಮರುಳಾಗಿದ್ದಾನೆ. ಇವುಗಳ ಬೆನ್ನತ್ತಿ ಓಡಿ ಹೋದರೆ ರಾಜನಿಗೆ ಭಂಗ.

ತನು ಎಂಬ ಈ ಭೂಮಿಯಲ್ಲಿ ವೀರಾಧಿವೀರರಾದ ಪಾಂಡವರೂ ಇದ್ದಾರೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮವನ್ನು ರಕ್ಷಿಸುವ ಭಾರ ಅವರದು. ತನುವಿಗೆ ಒಡೆಯ ಶ್ರೀಕೃಷ್ಣ. ತನುವನ್ನೇ ರಥ ಮಾಡಿಕೊಂಡು ತಾನು ಸಾರಥಿಯಾಗಿ ಯುದ್ಧ ಮಾಡಿ ಗೆಲ್ಲಬೇಕಾದ ಅರ್ಜುನನ್ನು ಹಿಂದೆ ಕೂಡಿಸಿಕೊಂಡು, ಬಾಣ ಬಿಡು ಎಂದಾಗ ಬಿಟ್ಟರೆ ಯುದ್ಧ ಗೆಲ್ಲಲು ಸಾಧ್ಯ !

ಯುದ್ಧಕ್ಕೆ ಅಣಿಯಾದ ಅರ್ಜುನ ಕಾದಿಗೆಲಿಸಯ್ಯಾ ಎನ್ನನು; ಕಾದಿ ಗೆಲಿಸಯ್ಯಾ ಎನ್ನನು;

ಎಂದು ವಂಚನೆಯಿಲ್ಲದೆ ಪ್ರಾರ್ಥಿಸಿದರೆ ಪಾಂಡವರನ್ನು ಅವರು ವಾಸಮಾಡಿದ ಭೂಮಿಯನ್ನು ಮನವೆಂಬ ಸತಿ ದ್ರೌಪದಿಯನ್ನು ಖಂಡಿತವಾಗಿಯೂ ರಕ್ಷಿಸುತ್ತಾನೆ.

ಶ್ರೀಕೃಷ್ಣಅರ್ಜುನನಿಗೆ ಹೂಡು ಎಂದು ಹೇಳಿದ ಒಂದೊಂದು ಬಾಣಕ್ಕೂ ಅಜ್ಞಾನದ ಕುದುರೆ ಆನೆ ರಥಗಳು ಪುಡಿ ಪುಡಿಯಾಗುತ್ತವೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ದುರ್ಯೋಧನನ ಹದಿನೆಂಟು ಅಕ್ಷೋಹಿಣಿ ಸೈನ್ಯವೆಲ್ಲ ನಾಶವಾಗುತ್ತದೆ. ಆತನ ಬಂಧು ಬಳಗ ಗುರುಕುಲವೆಲ್ಲ ನಾಶವಾಗುತ್ತದೆ.

ಶ್ರೀಕೃಷ್ಣ ವಿರಾಟ ಸ್ವರೂಪಿ.ತನುವಿನಲ್ಲಿ ಚುಳುಕಾಗಿ ಸಂಗಮಗೊಂಡು ಸಂಗಮ ನಾಥನಾಗಿದ್ದಾನೆ. ಆತ ಮುಂದೆ ನಿಂತು ರಥ ಓಡಿಸಿದರೆ ಅರ್ಜುನನ ಬಾಣಗಳೆಲ್ಲ ಹುಲುಕಡ್ಡಿಗೆ ಸಮಾನ. ಶ್ರೀಕೃಷ್ಣ ಅರ್ಜುನನಿಗೆ ಎದೆಯೇರಿಸಿ ಹೂಡೆಂದರೆ ಸಾಕು ಹುಲುಕಡ್ಡಿಯೇ ಬ್ರಹ್ಮಾಸ್ತ್ರವಾಗಿ ಸರ್ವ ಶತ್ರು ಸೈನ್ಯವನ್ನೇ ನಾಶಮಾಡುತ್ತದೆ.

ಕಾದುವವನು ಅರ್ಜುನ ! ಕಾದಿ ಗೆಲಿಸುವವನು ಶ್ರೀಕೃಷ್ಣ. ಕಾದುವ ಅರ್ಜುನ ವೋಡಿದಡೆ ಶ್ರೀಕೃಷ್ಣನಿಗೆ ಭಂಗವಯ್ಯಾ . ಕಾದುವವನು ಅರ್ಜು ನನಾದರೂ ಕಾದಿಗೆಲ್ಲಿಸಯ್ಯಾ ಕಾದಿಗೆಲ್ಲಿಸಯ್ಯಾ ಎಂದು ಅರ್ಜುನ ಶ್ರೀಕೃಷ್ಣನಿಗೆ ವಂಚನೆ ಇಲ್ಲದೆ ಬೇಡಿದರೆ ಕ್ಷಣಾರ್ಧದಲ್ಲಿ ಅಜ್ಞಾನದ ಯುದ್ಧಕ್ಕೆ ಅಂತ್ಯ ಹಾಡುವನು. ತನು ಮನದಲ್ಲಿ ಅರಿವಿನ ಬೀಜ ಬಿತ್ತಿ ಜ್ಞಾನದ ಬೆಳೆ ಬೆಳೆಯುವನು. ಅದರ ಸಿಹಿ ಫಲವನ್ನು ಸಕಲರಿಗೂ ಹಂಚುವನು.

300

ಹೇಡಿ ಬಿರಿದ ಕಟ್ಟಿದಂತೆ ಆಯಿತೆನ್ನ ವೇಷ !
ಕಾದಬೇಕು, ಕಾದುವಡೆ ಮನವಿಲ್ಲ
ಆಗಳೆ ಹೋಯಿತ್ತು ಬಿರಿದು,
ಹಗರಣ ನಗೆಗೆಡೆಯಾಯಿತ್ತು !
ಮಾರಾಂಕ ಜಂಗಮ ಮನೆಗೆ ಬಂದಡೆ
ಕಾಣದಂತಡ್ಡಮುಸುಡಿಟ್ಟಡೆ
ಕೂಡಲಸಂಗಮದೇವ ಜಾಣ ಹಲುದೋರೆ ಮೂಗಕೊಯ್ವ.

ಹೇಡಿ ಬಿರಿದ ಕಟ್ಟಿದಂತೆ ಆಯಿತೆನ್ನ ವೇಷ :

ಅರಿವು ತನುವಿಗೆ ಯಾವ ವೇಷವನ್ನು ಹಾಕಲು ಇಚ್ಚಿಸುವುದಿಲ್ಲ. ಮನ ತನುವಿಗೆ ಯಾವ ವೇಷವನ್ನು ಹಾಕಲು ಹೇಸುವುದಿಲ್ಲ. ಅರಿವು ಸಹಜ ! ಜಗದಗಲ ಮುಗಿಲಗಲ ಮಿಗೆಯಗಲ ಇದ್ದ ಬಯಲಿಗೆ ಯಾವ ವೇಷ ಹಾಕಬೇಕು? ಆ ಬಯಲೇ ಅರಿವಾಗಿ ತನುವಿನಗಲಕ್ಕೆ ಬಂದು ಚುಳುಕಾಗಿದೆ. ಅರಿವೆಂಬ ಗುರುದೇವನಿದ್ದ ತನುವಿನ ಶ್ರೀಚರಣ ಪಾತಾಳದಿಂದಲೂ ಅತ್ತತ್ತ ಚಾಚಿಕೊಂಡಿದೆ. ಬ್ರಹ್ಮಾಂಡದಿಂದಲೂ ಅತ್ತತ್ತ ಬೆಳೆದಿದೆ. ಗಮನಕ್ಕೂ ಗೋಚರಕ್ಕೂ ಪ್ರಮಾಣಕ್ಕೂ ನಿಲುಕದ ವಿರಾಟ ಸ್ವರೂಪವು ತನುವಿನಲ್ಲಿ ಡಿಜಿಟಲ್ ಆಗಿದೆ ! ನ್ಯಾನೋ ಆಗಿದೆ. ಇಂತಹ ವಿರಾಟ ಸ್ವರೂಪದ ತನುವಿಗೆ ಏನೆಂದು ಬಿರುದು ಕೊಡಬೇಕು ? ಯಾವ ವೇಷ ಹಾಕಬೇಕು ?

ಕಾದಬೇಕು ಕಾದುವಡೆ ಮನವಿಲ್ಲ ಆಗಳೆ ಹೋಯಿತ್ತು ಬಿರಿದು ! ಹಗರಣ

ನಗೆಗೆಡೆಯಾಯಿತು :

ವಿರಾಟ ಸ್ವರೂಪವೇ ತಾನಾದ ಅರಿವು ತನುವಿನ ಕಣ ಕಣದಲ್ಲಿದ್ದರೂ, ಮನ ಅರಿಯದೆ ಆ ತನುವನ್ನು ಕಳುವಿಗೆ ಹಚ್ಚುತ್ತದೆ. ಕೊಲೆ ಮಾಡಲು ಹಚ್ಚುತ್ತದೆ. ಹುಸಿಯ ನುಡಿಯಲು ಹಚ್ಚುತ್ತದೆ.ಮನದಲ್ಲಿ ದ್ವೇಷ, ಅಸೂಯೆಗಳು ಹುಟ್ಟಿ ಅರಿವಿನ ತನುವನ್ನು ಕತಕತನೆ ಕುದಿಯಲು ಹಚ್ಚುತ್ತದೆ. ಅನ್ಯ ತನುಗಳನ್ನು ಆಡಿಕೊಳ್ಳಲು ಹಚ್ಚುತ್ತದೆ. ಬಣ್ಣನೆಗೆ ನಿಲುಕದ ತನುವಿಗೆ ಹೇಡಿ ಬಿರುದುಗಳನ್ನು ಕಟ್ಟಿ ಕಡಗ, ಪದಕ, ಕಂಠೀಸರ ತೊಡಿಸಿ ವೇಷಹಾಕಿ ಮೆರೆಯುತ್ತದೆ.

ಅರಿವಿನ ತನುವಿಗೆ ವೇಷ ಹಾಕಿ ಸುಖಿಸುವ ಮನ, ತನ್ನ ಅಜ್ಞಾನದೊಂದಿಗೆ ತಾನೇ ಯುದ್ಧ ಮಾಡಬೇಕಲ್ಲ ! ಕಾದಬೇಕು ಕಾದುವಡೆ ಮನವಿಲ್ಲ. ಆಗಳೆ ಹೋಯಿತ್ತು ಬಿರಿದು. ಹಗರಣ ನಗೆಗೆಡೆಯಾಯಿತ್ತು !

ತನುವಿನೊಂದಿಗೆ ಸುಖಿಸಿ ತನುವನ್ನೇ ಕಾಡುವ ಮನದೊಂದಿಗೆ ಮನವೇ ಯುದ್ಧ ಮಾಡುವುದೆಂದರೆ ಸುಲಭದ ಮಾತಲ್ಲ. ಅಜ್ಞಾನದೊಂದಿಗೆ ಯುದ್ಧ ಮಾಡಲು ಅರಿವಿನ ಸಹಾಯ ಪಡೆದರೆ ಸಾಕು ಕೂಡಲೇ ತೊಲಗುತ್ತದೆ; ತನುವಿಗಂಟಿದ ಬಿರುದು ಬಿಮ್ಮಾನಗಳು. ಮನ ತನುವಿನೊಂದಿಗೆ ಹೂಡಿದ ಹಗರಣಗಳೆಲ್ಲನಗೆಗೆಡೆಯಾಗಿ ಮಾಯವಾಗುತ್ತವೆ. ಮಾದ ಗಾಯದಂತೆ ಹಕ್ಕಳೆ ಉದುರಿ ಬಿದ್ದು ನೆನಪಿಲ್ಲದಂತಾಗುತ್ತದೆ.

ಮಾರಾಂಕ ಜಂಗಮ ಮನೆಗೆ ಬಂದಡೆ ಕಾಣದಂತಡ್ಡ ಮುಸುಡಿಟ್ಟಡೆ ಕೂಡಲಸಂಗಮದೇವ ಜಾಣ ಹಲುದೋರೆ ಮೂಗ ಕೊಯ್ವ :

ಮನದ ಅಜ್ಞಾನ ಮನಕ್ಕೆ ಮನದಟ್ಟು ಮಾಡಲು ಮನದ ವೈರಿ ಜಂಗಮ ಮನೆಗೆ ಬಂದಡೆ ಆತನಿಗೆ ಕಾಣದಂತೆ ಮನ ಅಡ್ಡ ಮುಸುಕನಿಟ್ಟಡೆ, ಅದು ಅರಿವೆಂಬ ಗುರುವಿಗೆ ವೇದ್ಯವಾಗದ್ದೇನಲ್ಲ. ತನುವಿನಲ್ಲಿಯೇ ಸಂಗಮವಾದ ಕೂಡಲಸಂಗಮನಾಥ ಬಲು ಜಾಣ ! ಮನದ ಕುಚೇಷ್ಟೆಗಳನ್ನೆಲ್ಲ ಬಲ್ಲ ಗುರುದೇವನಾತ. ಮನದ ಹಲ್ಲು ಕಿತ್ತಿ ಮೂಗು ಕೊಯ್ಯದೆ ಬಿಡಲಾರನು.

ತನುವಿನ ಅರಿವು ಮನಕ್ಕೆ ವೇದ್ಯವಾಗಿ ಕಾದುವಡೆ ಆಗಳೇ ಹೋಯಿತ್ತು ಬಿರಿದು.

301

ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು;
ಬಚ್ಚಬರಿಯ ಮಾತನಾಡುವೆನು.
ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯದು ನಿಮ್ಮ !
ಮೆಚ್ಚರು ನಿಮ್ಮವರು ಎನ್ನನು ಕೂಡಲಸಂಗಮದೇವಾ.

ಅಚ್ಚ ಶರಣರು ಮಹಾ ಜ್ಞಾನಿಗಳು : ತನುವಿನ ಕ್ಷೇತ್ರದಲ್ಲಿ ವೈಜ್ಞಾನಿಕವಾಗಿ ಕಾರ್ಯ ನಿರ್ವಹಿಸಿದ ವಿಜ್ಞಾನಿಗಳು. ಅವರು ಮಾತ್ರ ತನುವೆಂದರೇನು ? ತನುವಿನ ಕಣ ಕಣದಲ್ಲಿರುವ ಅರಿವೆಂದರೇನು ? ತನುವನ್ನು ಆವರಿಸಿದ ಮನವೆಂದರೇನು ಎಂದು ಬಲ್ಲ ನಿಪುಣರು ಅವರು.

ಶರಣರು ಮಾತ್ರ ಮನವನ್ನು ಅರಿವಿಗೆ ದಾಸನನ್ನಾಗಿ ಮಾಡಿ, ಆ ಅರಿವಿಗೆ ಶರಣು ಹೋಗಿ, ತನುವನ್ನೇ ಅರಿವಿನ ಕಾರ್ಯಕ್ಷೇತ್ರವನ್ನು ಆಗಿಸಿಕೊಂಡು, ಅರಿವೆಂಬ ಗುರುದೇವನನ್ನು ನಿತ್ಯ ನಿತ್ಯ ನೆನೆಯುವರು. ನೋಡಿದರೆ ಗುರುದೇವನನ್ನೇ ನೋಡುವರು, ಕೇಳಿದರೆ ಗುರುದೇವನ ಮಾತು

ಕೇಳುವರು, ಮುಟ್ಟಿದರೆ ಗುರುದೇವನನ್ನೇ ಮುಟ್ಟುವರು, ರುಚಿಸಿದರೆ ಗುರುದೇವನಿತ್ತ ಪ್ರಸಾದವನ್ನೇ ರುಚಿಸುವರು, ಮೂಸಿಸಿದರೆ ಅರಿವಿನ ಪರಿಮಳವನ್ನೇ ಮೂಸಿಸುವರು. ಜಾಗ್ರತ್ ಸ್ವಪ್ನ ಸುಷಪ್ತಿಯಲ್ಲಿ ಗುರುದೇವನನ್ನೇ ನೆನೆವರು. ತನುವಿನ ವಿಜ್ಞಾನ ವಿಷಯದಲ್ಲಿ ಶರಣರು ತಂತ್ರಜ್ಞಾನಿಗಳು.

ಈ ತಂತ್ರಜ್ಞಾನ ಉಳಿದ ತನುಗಳಲ್ಲಿ ಇಲ್ಲವೆಂದಲ್ಲ. ತನುವಿನ ಕಣ ಕಣದಲ್ಲಿ ತಪ್ಪಿ ನಡೆದರೆ ಬೋಧಿಸುವ ಗುರುವಿದ್ದಾನೆ. ಆದರೆ ತನುವನ್ನು ಆವರಿಸಿಕೊಂಡ ಮನಕ್ಕೆ ಆತನ ಮಾತು ಕೇಳುವ ಇಚ್ಛೆ ಇಲ್ಲ. ಮನ ಗುರುದೇವನ ತನುವನ್ನು ಸೆರೆ ಅಂಗಡಿಗೆ ಕರೆದುಕೊಂಡು ಹೋಗುತ್ತದೆ. ಗುರುದೇವ ಬೇಡವೆಂದರೂ ನಾಲಿಗೆಯ ರುಚಿಗಾಗಿ ಗುರುದೇವನ ತನುವಿಗೆ ಕುಡಿಸುತ್ತದೆ. ವೇಶ್ಯಾಗೃಹ, ಕ್ಲಬ್, ಜೂಜಿನ ಮನೆಗೆ ಹೋಗುತ್ತದೆ. ಹಣ ಆಭರಣ ಮನೆ ಹೊಲದ ಬಯಕೆಗಾಗಿ ಭ್ರಷ್ಟಾಚಾರವೆಸಗಿ ಲಂಚಕ್ಕಾಗಿ ಗುರುವಿನ ತನುವನ್ನೇ ಬಳಕೆ ಮಾಡಿಕೊಳ್ಳುತ್ತದೆ.

ಮನ ಮಾಡಿದ ಅಪರಾಧಗಳು ಗುರುದೇವ ದಾಖಲಿಸಿ ಆಗಾಗ ನೆನಪಿಸುತ್ತಾನೆ. ಆ ಸಂಕಟ ತಡೆಯದೆ ಮನ ದೇವಸ್ಥಾನಕ್ಕೆ , ಮಠಕ್ಕೆ , ಚರ್ಚ್‌ಗೆ ತನುವನ್ನು ಕರೆದುಕೊಂಡು ಹೋಗಿ ಪ್ರಾರ್ಥಿಸುತ್ತದೆ. ಮಠ ಮಂದಿರ ಚರ್ಚ ಕಟ್ಟಿಸಲು ಪಾಪದ ಒಂದು ಭಾಗ ಕೊಡುತ್ತದೆ. ಧನ್ಯನಾದೆನೆಂದು ಮನ ಬೀಗುತ್ತದೆ.

ವೇದ ಆಗಮ ಉಪನಿಷತ್ ಭಗವದ್ಗೀತೆ ಬೈಬಲ್‌ಗಳನ್ನು ಓದಿ ಕೇಳಿ ಮನ ಸಂತುಷ್ಟನಾಗುತ್ತದೆ. ಇದೆಲ್ಲ ಅರಿವೆಂಬ ಗುರುದೇವನ ರಚನೆ ಎಂದು ತಿಳಿಯದೆ ಬಚ್ಚಬರಿಯ ಮಾತನಾಡುತ್ತದೆ. ಪಂಡಿತ ಶಾಸ್ತ್ರಿ ಪ್ರವಚನ ಪಟುವೆಂದು ಬಿರುದು ಪಡೆದು ಬೀಗುತ್ತದೆ. ಒಂದು ಕ್ಷಣವಾದರೂ ತನುವಿನಲ್ಲಿಯೇ ತನ್ಮಯವಾದ ಗುರುದೇವನನ್ನು ನೆನೆಯಲೀಯದು ಮನ.

ಮನ ವಾಸ ಮಾಡಿದ ತನು ಗುರುದೇವನದು. ಗುರುವಿನ ತನುವನ್ನೇ ಭ್ರಷ್ಟಗೆಡುವುವ ಮನವನ್ನು ಶರಣರು ಮೆಚ್ಚರು. ಮನಕ್ಕೆ ಗುರುವಿನ ಗುಲಾಮನಾಗಬೇಕೆಂದು ಬಯಕೆಯಾಗಿ ಶರಣರಿಗೆ ಶರಣು ಹೋದಲ್ಲಿ, ಮನ ತಾನು ವಾಸ ಮಾಡಿದ ತನುವಿನಲ್ಲಿಯೇ ಶ್ರೀ ಗುರುವನ್ನು ತೋರಿಸಿ ಮನವನ್ನು ಘನಮನವನ್ನಾಗಿಸುವರು.

302

ಆಡುವುದಳವಟ್ಟಿತ್ತು , ಹಾಡುವುದಳವಟ್ಟಿತ್ತು ,
ಅರ್ಚನೆಯಳವಟ್ಟಿತ್ತು , ಪೂಜನೆಯಳವಟ್ಟಿತ್ತು ,
ನಿತ್ಯ ಲಿಂಗಾರ್ಚನೆ ಮುನ್ನವೆಯಳವಟ್ಟಿತ್ತು .
ಕೂಡಲಸಂಗನ ಶರಣರು ಬಂದಡೆ,
'ಏಗುವುದು, ಏ ಬೆಸನೆ'ಂಬುದು ಒಪ್ಪಚ್ಚಿ ಅಳವಡದು !

ವೇದ ಉಪನಿಷತ್ತು ಭಗವದ್ಗೀತೆ-ಬೈಬಲ್‌ಗಳ ಬಗ್ಗೆ ವಿಸ್ತರಿಸಿ ಮಾತನಾಡುವುದು ಕರಗತವಾಗಿದೆ. ಕೇಳುವ ಜನ ತಲೆದೂಗುವಂತೆ, ಮರಳು ಮಾಡುವಂತೆ ಆಡುವುದು ಕರಗತವಾಗಿದೆ. ಹಾಗೆಯೇ ಶಬ್ದಗಳನ್ನು ಲೀಲಾಜಾಲವಾಗಿ ಪೋಣಿಸಿ, ರಾಗಗಳನ್ನು ರಚಿಸಿ ವಾದ್ಯಗಳೊಂದಿಗೆ ಹಾಡುವುದು ಕರಗತವಾಗಿದೆ. ಒಂದೇ ಒಂದು ಕಂಠದಲ್ಲಿ ಸಪ್ತರಾಗಗಳನ್ನು ಹಾಡಿ ಸಭಿಕರನ್ನು ಸಮ್ಮೋಹನ ಗೊಳಿಸುವ ಕಲೆ ವಶವಾಗಿದೆ.

ಕಲ್ಲನ್ನೇ ಕೆತ್ತಿ ಆಲಯ ಮಾಡಿ ! ಕಲ್ಲಿನ ತುಂಡಿನಲ್ಲಿಯೇ ತನಗೆ ಬೇಕಾದ ದೇವರ ಕೆತ್ತಿ ! ಆ

ಕಲ್ಲಿಗೆ ಪ್ರಾಣ ಪ್ರತಿಷ್ಠಾನದ ಸೋಗು ಹಾಕಿ, ದೇವರ ಮಾಡಿ, ನಿರಂತರ ಬಿಲ್ವಾರ್ಚನೆ, ಕುಂಕುಮಾರ್ಚನೆ, ಪುಷ್ಪಾರ್ಚನೆ ಮಾಡುವುದೂ ಕರಗತವಾಗಿದೆ.

ಕೆತ್ತಿದ ದೇವರಲ್ಲಿಯ ಕಲ್ಲನ್ನು ಸಂಪೂರ್ಣ ಮರೆತು, ಆ ಕಲ್ಲನ್ನೇ ದೇವರೆಂದು ತಿಳಿದು, ವಿಭೂತಿ ಗಂಧ ಹೂ ಜಲದಿಂದ ತೊಳೆದು ರುದ್ರಾಭಿಷೇಕ ಮಾಡಿ, ಹಾಲು ತುಪ್ಪ ಜೇನು ಮೊಸರು ಗೋಮೂತ್ರಗಳಿಂದ ಎರೆದು ಪೂಜಿಸುವುದೂ ರೂಢಿಯಲ್ಲಿದೆ. ಇದು ನಿರಂತರ ನಡೆಯುತ್ತಲಿದೆ.

ಅಂಗಕ್ಕೂ ಲಿಂಗಕ್ಕೂ ಸಂಬಂಧವೇ ಇಲ್ಲದ ಲಿಂಗವನ್ನು ಅಂಗದ ಮೇಲೆ ಧರಿಸಿಕೊಂಡು ! ಪತ್ರೆ ಪುಷ್ಪಗಳನ್ನು ಧರಿಸಿ ! ಹಸ್ತದ ಮೇಲಿಟ್ಟುಕೊಂಡು ದಿಟ್ಟಿಸಿ ನೋಡುವ ಲಿಂಗಾರ್ಚನೆಯೂ ನಿತ್ಯವೂ ನಡೆದಿದೆ.

ಆದರೂ ತನು ಏಗುವುದು ನಿಂತಿಲ್ಲ ! ತನುವಿನಲ್ಲಿ ಉಂಟಾಗುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ಕಡಿವಾಣ ಬಿದ್ದಿಲ್ಲ. ಆಡಿದರೂ, ಹಾಡಿದರೂ, ಅರ್ಚನೆ, ಪೂಜನೆ, ಲಿಂಗಾರ್ಚನೆ ಮಾಡಿದರೂ ತನುವಿನ ವ್ಯಸನಗಳು ನಿಂತಿಲ್ಲ.

ತನು ಯಾರಿಗಾಗಿ ಆಡುತ್ತದೆ, ಯಾರಿಗಾಗಿ ಹಾಡುತ್ತದೆ, ಯಾರಿಗಾಗಿ ಅರ್ಚನೆ ಪೂಜನೆ ಲಿಂಗಾರ್ಚನೆ ಮಾಡುತ್ತದೆ ಎನ್ನುವುದು ಮನಕ್ಕೆ ತಿಳಿಯುತ್ತಿಲ್ಲ. ಮನ ತನು ಹಿಡಿದು ಈ ಪೂಜೆ ದೇವರಿಗೆಂದು ಮಾಡಿದರೂ ಮನದ ತನುವಿನ ಬೇಗುದಿ ಬೆಸನಗಳು ನಿಲ್ಲುವುದಿಲ್ಲ. ಅಂದ ಮೇಲೆ ಮನ ಒಮ್ಮೆಯಾದರೂ ಆಡುವುದು ಹಾಡುವುದು ಅರ್ಚಿಸುವುದು ಪೂಜಿಸುವುದನ್ನು ನಿಲ್ಲಿಸಿ ಪ್ರಶ್ನೆ ಹಾಕಿಕೊಳ್ಳಬೇಕಲ್ಲ !

ತನುವಿನಿಂದಲೇ ಬಂದ ವೇದ ಆಗಮ ಉಪನಿಷತ್ ಭಗವದ್ಗೀತೆ ಬೈಬಲ್‌ಗಳ ಬಗ್ಗೆ ತನು ಹಿಡಿದು ಆಡಿ ! ತನುಗಳಿಂದಲೇ ಹೌದೆನ್ನಿಸಿಕೊಳ್ಳುವುದು ಸರಿಯೇ. ತನು ಅರಿವಿನ ಗಣಿ, ಅಗೆದಂತೆಲ್ಲ ಅರಿವಿನ ಅಮೃತವೇ ಧಾರಾಕಾರವಾಗಿ ಚಿಮ್ಮುವುದು. ಆಡುವುದು ಹಾಡುವುದು, ಅರ್ಚನೆ ಪೂಜೆಗಳು ತನುವಿನಿಂದಲೇ ಹುಟ್ಟಿದವು, ಮನದಿಂದ ತನು ಹಿಡಿದು ಪೂಜಿಸುವುದಕ್ಕಿಂತ, ಮನ ತನುವಿನ ಅರಿವನ್ನು ಸುಖಿಸುವ ಯೋಚನೆ ಒಮ್ಮೆಯಾದರೂ ಮಾಡಬಾರದೆ ! ಇದು ಅಣ್ಣ ಬಸವಣ್ಣನವರ ಅಳಲು.

303

ಒಡೆಯರಿಗೆ ಒಡವೆಯನೊಪ್ಪಿಸಲಾರದೆ
ಮೊರೆಯಿಡುವ ಮನವ ನಾನೇನೆಂಬೆ ?
ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ
ವೇದನೆಯಹುದೆನಗೆ !
ಕೊಯ್ದ ಮೂಗಿಂಗೆ ಕನ್ನಡಿಯ ತೋರುವಂತಪ್ಪ
ವೇದನೆಯಹುದೆನಗೆ !
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ
ವೇದನೆಯಹುದೆನಗೆ !
ಕೂಡಲಸಂಗಮದೇವ ಮಾಡಿ ನೋಡುವ ಹಗರಣವ
ನಾ ಮಾಡಿಹೆನೆಂದಡೆ ಮನಕ್ಕೆ ಮನ ನಾಚದೆ ಅಯ್ಯಾ ?

ಒಡವೆ ಕಳೆದುಕೊಂಡವನಿಗೆ ಹೇಳತೀರದಷ್ಟು ವೇದನೆಯಾಗುವುದು. ತೂಗುವ ಕತ್ತಿ ನೆತ್ತಿಯಲ್ಲಿ ತಿರುಗುವ ವೇದನೆ, ಕೊಯ್ದ ಮೂಗಿಂಗೆ ಕನ್ನಡಿ ತೋರುವ ವೇದನೆ, ಬೆಂದ ಹುಣ್ಣು ಕಟ್ಟಿಗೆಯಿಂದ ಗೀರಿದ ವೇದನೆ, ಕಳ್ಳನಿಗೆ ಸಂತೋಷ! ಕಳೆದುಕೊಂಡವನಿಗೆ ದುಃಖ. ಕಳುವು ಮಾಡಲು ಬಂದ ಕಳ್ಳನಿಗೆ ಉಪಚರಿಸಿ ! ಒಡೆಯಾ ಈ ಒಡವೆಗಳು ನಿನ್ನವು ಇವುಗಳನ್ನು ನೀನೆ ತೆಗೆದುಕೋ ಎಂದು ಮೊರೆಯಿಟ್ಟು ಒಪ್ಪಿಸಲು ಸಾಧ್ಯವೆ ?

ಇಂತಹ ಒಂದು ಪ್ರಸಂಗ ಮಹಾಮನೆಯಲ್ಲಿ ನಡೆಯಿತು : ಕನ್ನಮಾರಿ ಮಾರಯ್ಯ ತನ್ನ ತಂಡದೊಂದಿಗೆ ಕನ್ನ ಹಾಕಲು ಮಹಾಮನೆಗೆ ಬಂದ. ಶರಣರೆಲ್ಲರೂ ಗಾಢ ನಿದ್ರೆಯಲ್ಲಿದ್ದರು. ಬಸವಣ್ಣನವರ ಪತ್ನಿಯ ಕೊರಳಲ್ಲಿದ್ದ ಒಡವೆಗೆ ಮಾರಯ್ಯ ಕೈ ಹಾಕಿದ. ಕೂಡಲೇ ಆತನ ಕೈ ಹಿಡಿದು ಕಳ್ಳ ಕಳ್ಳ ಎಂದು ಬೊಬ್ಬಿಟ್ಟಳು. ಶರಣರೆಲ್ಲ ಸೇರಿ ಕಳ್ಳನನ್ನು ಹಿಡಿದರು. ಬಸವಣ್ಣ ಬಂದು ಎಲ್ಲಿ ಕಳ್ಳ ? ಆತ ಕಳ್ಳನಲ್ಲ! ಕೂಡಲಸಂಗಯ್ಯ. ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲಸಂಗಯ್ಯನಲ್ಲದೆ ಬೇರಲ್ಲ. ಕೊಡು ಕೊಡೆಲೆ ಚಾಂಡಾಲಗಿತ್ತಿ ಎನ್ನಯ್ಯನ ಕೈ ನೊಂದಾವು ಎಂದ.

ಕಳ್ಳನಿಗೆ, ಶರಣರಿಗೆ, ಹೆಂಡತಿಗೆ, ಮಹಾ ಮನೆಯಲ್ಲಿದ್ದವರಿಗೆಲ್ಲ ಬಸವಣ್ಣನವರ ಈ ಮಾತು ಕೇಳಿ ಆಶ್ಚರ್ಯವಾಯಿತು. ಆತ ಕಳ್ಳನಲ್ಲ ! ಎನ್ನ ಒಡೆಯ ! ಒಡೆಯನಿಗೆ ಒಡವೆಯನು ಒಪ್ಪಿಸಲಾರದೆ ಒಡವೆ ಹೋಯಿತೆಂದು ಮೊರೆ ಇಡುವುದೆಂದರೇನು ? ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿಗಳಿಗಿಲ್ಲದ ಒಡವೆಯ ಚಿಂತೆ ಅರಿವಿನ ತನುವಿಗೆ ಬೇಕೆ ? ಅರಿವಿನಿಂದ ನೋಡು ಒಡವೆಯಲ್ಲಿ ಏನಿದೆಯೆಂದು, ಒಡವೆಯ ಮಾಟ ಇಷ್ಟವಾಯಿತೆ? ಅದರ ಬಣ್ಣ ಇಷ್ಟವಾಯಿತೆ ? ಬಣ್ಣವಿಲ್ಲದ್ದನ್ನು ಒಡವೆ ಎನ್ನಬಹುದೆ ?

ಬಣ್ಣ ಮಾಟಕ್ಕೆ ಸೆರೆಯಾಳಾಗಿ ಒಡವೆ ಒಡವೆ ಎಂದು ರೋಧಿಸುವ ನಿನ್ನ ಅಜ್ಞಾನವನ್ನು ಕದಿಯಲು ಬಂದ ಒಡೆಯನಿಗೆ ಒಡವೆಯನ್ನು ಕೊಡಬಾರದೆ? ಬಣ್ಣವಿದ್ದ ಲೋಹಕ್ಕೆ ಚಿನ್ನವೆಂದು ಮರುಳಾಗಿ ಒಡವೆಯನ್ನು ಮಾಡಿಸುವುದೆ? ಲೋಹವನ್ನೂ, ಚಿನ್ನವನ್ನೂ ಮರೆತು ಹಳದಿ ಲೋಹಕ್ಕೆ ಬೆಂಡೋಲೆ, ವಂಕಿ, ಸರ,ಮೂಗುತಿ, ನೆಕ್ಲೆಸ್, ಉಂಗುರು, ಡಾಬ, ನಾಗರ, ಕಾಸಿನಸರ, ಬೋರ ಮಳ, ನಾನ್‌ಚೈನ್, ಗುಂಡಿನಟೀಕಿ, ಎಂದು ಹಲವಾರು ಹೆಸರಿನಿಂದ ಕರೆಯುವುದೆ?

ಒಂದೊಂದು ಗಳಿಸುವುದಕ್ಕೂ ದುಃಖ ! ಒಂದೊಂದು ಕಳೆದುಕೊಂಡಾಗಲೂ ದುಃಖ !

ಲೋಹ ಮತ್ತು ಬಣ್ಣ ಒಡಲಿಗೆ ಇಷ್ಟೊಂದು ದುಃಖ ಕೊಡುವುದೆಂದರೇನು ? ಒಡವೆಯ ಬಣ್ಣ ನಿನ್ನನ್ನು ಖರೀದಿಸುವಂತೆ ಮಾಡಿತು, ಕಳ್ಳನನ್ನು ಕದಿಯುವಂತೆ ಮಾಡಿತು, ಇಬ್ಬರೂ ಒಂದು ನಾಣ್ಯದ ಎರಡು ಮುಖಗಳಲ್ಲವೆ? ಬಣ್ಣ ಮತ್ತು ಲೋಹ ಅರಿಯದ ಇಬ್ಬರೂ ಅಜ್ಞಾನಕ್ಕೆ ಬಲಿಯಾಗಲಿಲ್ಲವೆ?

ಕೂಡಲಸಂಗಮದೇವ ಮಾಡಿ ನೋಡುವ ಹಗರಣವ ನಾ ಮಾಡಿಹೆನೆಂದಡೆ ಮನಕ್ಕೆ ಮನ ನಾಚದೆ ಅಯ್ಯಾ :

ಕೂಡಲಸಂಗಮದೇವನೆಂದರೆ ಒಡಲೊಡೆಯ! ಒಡಲಿನಲ್ಲಿ ಒಡಲೊಡೆಯನೆಂಬ ಅರಿವು ಪ್ರಧಾನವಾಗಿದ್ದರೂ ಮನ ಒಡೆಯನ ಮಾತು ಕೇಳದೆ ಒಡವೆ ಖರೀದಿಸಿ ಧರಿಸುತ್ತದೆ. ಧರಿಸಿದ ಒಡವೆಯನ್ನು ದರೋಡೆ ಮಾಡುತ್ತದೆ. ಇವೆರಡೂ ಒಡಲೊಡೆಯ ಸಂಗಯ್ಯ ಮಾಡಿ ನೋಡುವ ಹಗರಣಗಳು. ನಾ ಮಾಡಿದೆನೆಂದಡೆ ಮನಕ್ಕೆ ಮನ ನಾಚದೆ ಅಯ್ಯಾ ? ಕೇವಲ ಬಣ್ಣಕ್ಕೆ ಮಾಟಕ್ಕೆ ಲೋಹಕ್ಕೆ ಮರುಳಾದ ಮನಕ್ಕೆ ಅರಿವಾದರೆ ನಾಚಿ ನೀರಾಗುತ್ತದೆ. ಖರೀದಿಗೂ, ಕಳುವಿಗೂ ಕತ್ತರಿ

ಬೀಳುತ್ತದೆ.

304

ಹೊರೆಸಿಕೊಂಡು ಹೋದ ನಾಯಿ; ಮೊಲನನೇನ ಹಿಡಿವುದಯ್ಯಾ ?
ಇರಿಯದ ವೀರ; ಇಲ್ಲದ ಸೊಬಗುವ ಹೇಳುವುದೆ ನಾಚಿಕೆ !
ಆನು ಭಕ್ತನೆಂತೆಂಬೆನಯ್ಯಾ ಕೂಡಲಸಂಗಮದೇವಾ ?

ತನುವಿನಲ್ಲಿ ಅರಿವಿದೆ ! ಆ ಅರಿವೇ ಗುರುದೇವ ! ಆ ಅರಿವೇ ಮಹಾದೇವ ! ಆ ಅರಿವೇ ಸದಾಶಿವ ! ಆ ಅರಿವೇ ಸಾಕ್ಷಾತ ಪರಬ್ರಹ್ಮ. ಹಾಗೆಯೇ ತನುವಿನಲ್ಲಿ ಮನವಿದೆ ! ಆ ಮನವನ್ನು ಭಕ್ತನನ್ನಾಗಿಸಿ ಗುರುದೇವನನ್ನು ಮಹಾದೇವನನ್ನು ಸದಾಶಿವನನ್ನು ಸಾಕ್ಷಾತ ಪರಬ್ರಹ್ಮನನ್ನು ಒಲಿಸಿಕೊಳ್ಳಬೇಕಿದೆ.

ಗುರುದೇವ ತಾನಾಗಿಯೇ ಮನಕ್ಕೆ ಒಲಿಯಲಾರ. ಮನವೇ ಗುರುವಿನ ಗುಲಾಮನಾಗಿ ಆತನನ್ನು ಒಲಿಸಿಕೊಳ್ಳಬೇಕು. ಗುರುವಿನ ಗುಲಾಮನಾಗದ ತನಕ ಒಲಿಯದಣ್ಣ ಮುಕುತಿ ಎಂದು ಹಾಡಿದಂತೆ ಮನಕ್ಕೆ ಆ ಗುರುದೇವನನ್ನು ಸೇರುವ ಬಯಕೆಯಾಗಬೇಕು.

ಗುರುದೇವನನ್ನು ಒಲಿಸಿಕೊಂಡ ಮನ ಘನಮನವಾಗಿ ತನುವಿನೊಂದಿಗೆ ಸುಖಿಸುತ್ತದೆ. ತನುವಿನಲ್ಲಿಯೇ ಸೂಚಿಸಿ ಹಿಂದಕ್ಕೆ ಸರಿಯುತ್ತದೆ. ತನು ಜನ್ಮ ತಳೆದಿರುವುದೇ ಅರಿವಿನ ಸುಖ ಉಣ್ಣುವುದಕ್ಕಾಗಿ.

ಈ ತಂತ್ರಗಾರಿಕೆ ಭಗವದ್ಗೀತೆಯಲ್ಲಿ , ಬೈಬಲ್‌ನಲ್ಲಿ, ತತ್ವ ಪದಗಳಲ್ಲಿ , ವಚನಗಳಲ್ಲಿ ಹೆಣೆಯಲಾಗಿದೆ. ದಾಸರ ಪದಗಳಲ್ಲಿ ಮುಂಡಿಗೆಗಳಲ್ಲಿ ಬಂಧಿಸಲಾಗಿದೆ. ವೇದ ಆಗಮ ಉಪನಿಷತ್‌ಗಳು ತನುವಿನ ಅರಿವಿಗೆ ಮನವನ್ನು ಕೊಂಡೊಯ್ಯುವ ಪ್ರಧಾನ ಸೂತ್ರಗಳಾಗಿವೆ.

ಮನ ಈ ಎಲ್ಲ ಶಾಸ್ತ್ರ ಗ್ರಂಥಗಳನ್ನು ಓದಿ, ತನುವಿಗೆ ಗುರುವೇಷ ಹಾಕಿ, ತಾನೇ ಗುರುವೆಂದು ಸಾರಿಕೊಳ್ಳುತ್ತದೆ. ಅನೇಕ ತನುಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡು ಸೇವೆ ಮಾಡಿಸಿಕೊಳ್ಳುತ್ತದೆ. ಅನೇಕ ಶಿಷ್ಯರನ್ನು ಬೇಡಿ ಕಾಡಿ ಮಠ ಮಂದಿರ ಕಟ್ಟಿ ಉತ್ಸವ ಮಾಡುತ್ತದೆ. ಪಲ್ಲಕ್ಕಿಯಲ್ಲಿ ಹೊರೆಸಿಕೊಂಡು ಮೆರವಣಿಗೆ ಮಾಡಿಸಿಕೊಳ್ಳುತ್ತದೆ.

ಪೂರ್ಣಕುಂಭ, ಕಳಸ ಕನ್ನಡಿ ಹೊತ್ತ ಮಹಿಳೆಯರನ್ನು ಹರಿದು ತಿನ್ನುವಂತೆ ಹಾದರ ಮಾಡುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ಬಲಿಯಾದ ಮನ ತನುವಿಗೆ ಗುರುವಿನ ವೇಷ ಹಾಕಿದ ಮಟ್ಟಿಗೆ ಅರಿವಿನೊಂದಿಗೆ ಖಡ್ಗ ಹಿಡಿದು ಹೋರಾಡುವುದೆ ? ಇರಿಯದ ವೀರ; ವೇದ ಆಗಮ ಉಪನಿಷತ್ ಭಗವದ್ಗೀತೆ ಬೈಬಲ್‌ಗಳ ಸೊಬಗು ಹೇಳಿದಂತೆ ! ಹೊರೆಸಿಕೊಂಡು ಹೋದ ನಾಯಿ ಮೊಲನ ಹಿಡಿಯಲು ಸಾಧ್ಯವೆ ?

305

ಎನ್ನ ಭಕ್ತನೆಂದೆಂಬರು ;
ಎನ್ನ ಹೊರಹಂಚೆ ಕುಳಬೊಳ್ಳೆತನವರಿಯರಾಗಿ.
ಎನ್ನ ಮಾನಾಪಮಾನವು ಶರಣರಲ್ಲಿ, ಜಾತಿವಿಜಾತಿಯೂ ಶರಣರಲ್ಲಿ,

ತನುಮನಧನವು ಶರಣರಲ್ಲಿ
ವಂಚನೆಯುಳ್ಳ ಡಂಭಕ ನಾನು,
ತಲೆಯೊಡೆಯಂಗೆ ಕಣ್ಣ ಬೈಚಿಡುವೆ ಕೂಡಲಸಂಗಮದೇವಾ.

ಮನ ಆವರಿಸಿದ ತನು ವೇಷ ಹಾಕಿಕೊಂಡರೆ ಭಕ್ತನೆಂದು ಕರೆಯುವರು. ಆಲಯದ ಶಿಖರಕ್ಕೆ ಇಟ್ಟ ಕಳಶ ಥಳ ಥಳ ಮಿಂಚಿದರೇನಂತೆ ? ಅದರ ಹೊರ ಹಂಚೆ ಕುಳಬೊಳ್ಳೆತನವರಿಯರಾಗಿ. ಕಳಶದ ಹೊರಮಿಂಚು ಹೊನ್ನಿನ ಬಣ್ಣ ದಿಂದ ಲೇಪಿಸಿದ್ದು, ಹೊನ್ನಲ್ಲವೆಂದು ಕಣ್ಣಿಗೆ ಹೊಳೆಯಬೇಕಲ್ಲ.

ಭಕ್ತನ ವೇಷ ನೋಡುವ ಕಣ್ಣುಗಳಿಗೆ ತಿಳಿಯುವುದಿಲ್ಲ, ಭಕ್ತನೆಂದೇ ಗೌರವಿಸುವವು. ವೇಷವೆಂದು ತಿಳಿಯದಿದ್ದರೆ ಗೌರವ, ತಿಳಿದರೆ ಅಪಮಾನ. ತನುವಿನ ಮಾನ ಅಪಮಾನಗಳು ಶರಣರಲ್ಲಿ , ತನುವಿನ ಜಾತಿ ವಿಜಾತಿಯೂ ಶರಣರಲ್ಲಿ, ಕೊನೆಗೆ ತನುಮನಧನಗಳನ್ನು ಜ್ಞಾನಕ್ಕೆ ಶರಣುಹೋದ ಶರಣರಿಗೆ ಅರ್ಪಿಸುವೆ.

ಒಡಲ ಆವಿರಿಸಿದ ಅಜ್ಞಾನಿ ಮನ ವಂಚಿಸಿದರೆ ಒಡಲೊಡೆಯನಿಗೆ ತಿಳಿಯದೆ ? ತಲೆಯ ಭಾಗದಲ್ಲಿದ್ದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಇವು ಮಹಾಜ್ಞಾನಿ ತಲೆಯೊಡೆಯನ ಸಂಪತ್ತು.

ಕಣ್ಣು ಮಾನಾಪಮಾನದ ಸಂಕೇತ ತನುವಿಗೆ ಕಳಿಸಿದರೇನು ? ಜಾತಿ ವಿಜಾತಿ ಸಂಕೇತ ತನುವಿಗೆ ಕಳಿಸಿದರೇನು ? ತಲೆಯೊಡೆಯನ ಕಣ್ಣಲ್ಲಿ ಬೈಚಿಟ್ಟು ಆತನಿಗೆ ಅಜ್ಞಾನ ಅರ್ಪಿಸಿ ಆ ಮಹಾಜ್ಞಾನದಲ್ಲಿ ಸಂಗಮಿಸುವೆ ತಂದೆ ಕೂಡಲಸಂಗ ಮದೇವಾ.

306

ನೋಡುವರುಳ್ಳಡೆ ಮಾಡುವೆ ದೇಹಾರವ.
ಎನಗೊಂದು ನಿಜವಿಲ್ಲ, ಎನಗೊಂದು ನಿಷ್ಪತ್ತಿಯಿಲ್ಲ!
ಲಿಂಗವ ತೋರಿ ಉದರವ ಹೊರೆವ
ಭಂಗಗಾರ ನಾನು, ಕೂಡಲಸಂಗಮದೇವಾ !

ಅರಿವು ಮನಗಳೆರಡೂ ತನುವಿನಲ್ಲಿಯೇ ಇವೆ. ಆದರೂ ಮನಕ್ಕೆ ಅರಿವಿನ ಪರಿಚಯವೇ ಇಲ್ಲ. ಅದಕ್ಕಾಗಿಯೇ ಮನ ಭ್ರಮೆ ಎನಿಸಿಕೊಂಡಿದೆ. ಅರಿವು ಬ್ರಹ್ಮ ಎನ್ನಿಸಿಕೊಂಡಿದೆ.

ಭ್ರಮೆಯೆಂಬ ಮನಕ್ಕೆ ಏನು ಸುಖವೋ ಅದನ್ನೆ ತನುವನ್ನು ಹಿಡಿದು ಮಾಡುತ್ತದೆ. ಜನ ಹೊಗಳುತ್ತಾರೆಂದು ಮನ ತನು ಹಿಡಿದು ಪೂಜೆ ಮಾಡುತ್ತದೆ. ಪತ್ರೆ , ಪುಷ್ಪಗಳು ಪೂಜೆಗೆ ಬೇಕು, ಧೂಪ ದೀಪ ಗಂಧ ಭಸ್ಮಗಳೂ ಬೇಕು, ಒಂದು ಹಂಡೆ ಬಿಸಿನೀರು ತನುವಿಗೆ ಸುರುವಿಕೊಂಡು ಪೂಜೆಗೆ ಕುಳಿತರೆ ಒಂದು ಗಂಟೆಯಾದರೂ ಸರಿ, ಹೊಗಳಿದರೆ ಎರಡು ಗಂಟೆಯಾದರೂ ಸರಿ, ಪೂಜಾ ಗೃಹದಿಂದ ಹೊರ ಬರುವುದಿಲ್ಲ. ಇನ್ನೂ ಹೊಗಳಿದರೆ ಮೂರು ವೇಳೆಯೂ ಪೂಜಿಸುತ್ತದೆ ಮನ.

ಕೆಲ ಗುರುಗಳು ಮನೆಗಳಿಗೆ ಪೂಜೆಗೆ ಹೋಗುತ್ತಾರೆ. ಅದನ್ನು ನೋಡಿ ಆಶೀರ್ವಾದ ಪಡೆಯಲು ಆತ್ಮೀಯರನ್ನು ಬಂಧುಗಳನ್ನು ಕರೆಯುತ್ತಾರೆ. ದೊಡ್ಡ ಗುರುಗಳನ್ನು ಕರೆದು ಪೂಜೆ ಮಾಡಿಸಿದೆನೆಂದು ಹೆಗ್ಗಳಿಕೆ ಹೆಡ್ಡ ಮನಕ್ಕೆ. ಕಾಣಿಕೆಗಾಗಿ ಪೂಜಿಸಲು ಬಂದ ಗುರುವೇಷದ ಮನ, ಪೂಜಿಸಿ ಪಾದೋದಕ ಸ್ವೀಕರಿಸಿದ ಶಿಷ್ಯ ವೇಷದ ಮನಗಳೆರಡೂ ಲಿಂಗವ ತೋರಿ ಉದರವ ಹೊರೆವ

ಭ್ರಮೆಯ ಮನಗಳು. ಕಾಣಿಕೆಗಾಗಿ ಪೂಜೆಗೆ ಹೋಗುತ್ತದೆ, ವ್ಯವಹಾರಕ್ಕಾಗಿ ಗೆಳೆಯರನ್ನು ಪೂಜೆಗೆ ಕರೆಯುತ್ತದೆ.

ಪೂಜಿಸಿಕೊಂಡು ಭ್ರಮಿಸಿ ಸುಖಿಸಿದ, ಪೂಜೆಗೆ ಕರೆದು ಭ್ರಮಿಸಿ ಸುಖಿಸಿದ. ಪೂಜೆಯ ನೆಪದಲ್ಲಿ ದೇಹ ಆಹಾರ ಸೇವಿಸಿ ಸುಖಿಸಿತೇ ವಿನಹ, ದೇಹಕ್ಕೆ ಅರಿವಾಗಲಿಲ್ಲ. ಮುಕ್ತಿ ದೊರೆಯಲಿಲ್ಲ. ಭ್ರಮಾಧೀನ ಭಂಗಗಾರ ಮನಕ್ಕೆ ಬ್ರಹ್ಮಸುಖ ದೊರೆಯಲಿಲ್ಲ.

307

ಭಕ್ತಿ ಎಳ್ಳನಿತಿಲ್ಲ, ಯುಕ್ತಿ ಶೂನ್ಯನಯ್ಯಾ ನಾನು,
ತನುವಂಚಕ, ಮನವಂಚಕ, ಧನವಂಚಕ ನಾನಯ್ಯಾ.
ಕೂಡಲಸಂಗಮದೇವಾ,
ಒಳಲೊಟ್ಟೆ ಎನ್ನ ಮಾತು !

ಭಕ್ತಿ ಎಂದರೆ ವಿಶ್ವಾಸ. ತನ್ನ ಅರಿವಿನ ಮೇಲೆ, ತನ್ನ ತನುವಿನ ಮೇಲೆ ಮನಕ್ಕೆ ವಿಶ್ವಾಸವೇ ಇಲ್ಲ. ತನು ತನ್ನದೆ, ಮನ ತನ್ನದೆ, ಅದನ್ನು ಉಪಯೋಗಿಸುವ ಜಾಣತನವೂ ತನ್ನದೆ. ಆದರೂ ತನುವು ವಂಚನೆಗೊಳಗಾಗಿದೆ, ಮನವೂ ವಂಚನೆಗೊಳಗಾಗಿದೆ, ಧನವೂ ವಂಚನೆಗೆ ಒಳಗಾಗಿದೆ.

ನೋಡಿದರೆ, ನುಡಿದರೆ, ಕೇಳಿದರೆ, ರುಚಿಸಿದರೆ, ಮುಟ್ಟಿದರೆ, ಮೂಸಿಸಿದರೆ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ವಿಕೃತವಾಗುತ್ತದೆ. ಎಂದ ಮೇಲೆ ತನುವಿನಲ್ಲಿಯ ಅರಿವು ಬಳಕೆ ಮಾಡಲು ಬರಲಿಲ್ಲವೆಂದಂತಾಗಲಿಲ್ಲವೆ ? ಆ ಅರಿವಿನಿಂದ ತನು ವಂಚನೆಯಾಯಿತು. ಆ ಅರಿವಿನಿಂದ ಮನ ವಂಚನೆಯಾಯಿತು. ಆ ಅರಿವಿನಿಂದ ಧನ ವಂಚನೆಯಾಯಿತು. ಅರಿವು ತನುವಿನಲ್ಲಿ ಹಾಗೆಯೇ ಉಳಿಯಿತು. ನನ್ನನ್ನು ಬಳಕೆ ಮಾಡು ಎಂದು ಜಾಗ್ರತ್ ಸ್ವಪ್ನ ಸುಷುಪ್ತಿಯ ಮೂರು ಸಮಯದಲ್ಲಿ ನುಡಿದು ಹೇಳಿದರೂ ಮನ ತನ್ನನ್ನು ವಂಚಿಸಿಕೊಂಡುದುದಲ್ಲದೆ ತನುವನ್ನು ಹಾಗೂ ಅದಕ್ಕೆ ಸಂಬಂಧ ಪಟ್ಟ ಅರಿವಿನ ಸಂಪತ್ತಿನ ವಂಚನೆಗೆ ಕಾರಣವಾಯಿತು.

ಮನ ತನುವನ್ನು ಬಳಕೆ ಮಾಡಿಕೊಂಡು ಉಪದೇಶಿಸುವ ಭಗವದ್ಗೀತೆ, ಬೈಬಲ್, ವೇದ, ಆಗಮ, ಉಪನಿಷತ್‌ಗಳ ಮಾತುಗಳೆಲ್ಲ ಬರೀ ಲೊಳಲೊಟ್ಟೆ. ಅಂತರಾಳದ ಅರಿವಿನ ಮಾತುಗಳಲ್ಲ, ಪುಸ್ತಕದಿಂದ ಸಂಗ್ರಹಗೊಂಡ ಮಾತು ಮನ ಎರವಲು ಪಡೆದು ವೇದಿಕೆಗೆ ಬಳಕೆಮಾಡಿತು. ತನುವಿನಿಂದ ಹೊರ ಬಂದ ಅರಿವು ಪುಸ್ತಕ ಸೇರಿದೆ ಎನ್ನುವ ಯುಕ್ತಿ ಮನಕ್ಕೆ ಶೂನ್ಯವಾಯಿತು. ವಿಶ್ವಾಸ ಎಳ್ಳನಿತಿಲ್ಲ! ತನ್ನರಿವು ತಾನೇ ಬಳಕೆ ಮಾಡುವ ಬಗೆ ಹೇಗೆ ಎಂದು ವಿಚಾರಿಸಲು ಪುರಸೊತ್ತಿಲ್ಲ. ವಿಶ್ವಾಸವಿಲ್ಲದ ಕ್ರೂರಿ ಮನ ತನ್ನನ್ನಲ್ಲದೆ ತನುವನ್ನು ಧನವನ್ನೂ ವಂಚಿಸುತ್ತದೆ. ಬರೀ ಒಳಲೊಟ್ಟೆ ಅದರ ಮಾತು.

308

ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ,
ಮತ್ತೆಯೂ ವಂಚನೆ ಮಾಣದಯ್ಯಾ.
ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ,

ಮತ್ತೆಯೂ ವಂಚನೆ ಮಾಣದಯ್ಯಾ.
ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ
ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ !

ಲಿಂಗದೀಕ್ಷೆ ಪಡೆದು ಲಿಂಗ ಕಟ್ಟಿಕೊಂಡು ತನು ಮೂರೂ ವೇಳೆ ಲಿಂಗಯ್ಯನನ್ನು ಪೂಜಿಸಿ, ಈ ತನು ನಿನ್ನದೇ ಲಿಂಗಯ್ಯ, ಈ ಮನ ನಿನ್ನದೇ ಲಿಂಗಯ್ಯ, ಸಂಪಾದಿಸಿದ ಧನವೆಲ್ಲ ನಿನ್ನದೇ ಲಿಂಗಯ್ಯಾ ನೀನು ಇಟ್ಟಂತೆ ಇರುವೆ ಎಂದು ಪ್ರಾರ್ಥಿಸುತ್ತದೆ ಮನ.

ಮನೆಗೆ ಬಂದ ಜಂಗಮನನ್ನು ಸ್ವಾಗತಿಸಿ, ಪಾದಪೂಜೆ ಮಾಡಿ ಮನೆಮಂದಿಗೆಲ್ಲ ಕೊಟ್ಟು, ಮನೆಯೆಲ್ಲ ಚಿಮುಕಿಸುತ್ತದೆ. ಕಟ್ಟಿಕೊಂಡ ಲಿಂಗಯ್ಯ ಬೇರಲ್ಲ, ಮನೆಗೆ ಬಂದ ಜಂಗಮ ಬೇರಲ್ಲಎಂದು ಜಂಗಮನ ಮುಂದೆ ಹಾಡಿ ಹೊಗಳುತ್ತದೆ. ತನು ಮನ ಧನ ಲಿಂಗ ಜಂಗಮರ ಸೊತ್ತೆಂದು ಮನ ಜಪಿಸುತ್ತದೆ. ಆದರೂ ವಂಚಿಸುವದು ವಂಚನೆಗೆ ಒಳಗಾಗುವುದು ತಪ್ಪಿಲ್ಲ. ಅದು ತನುವಿನ ಮನದಿಂದ ಶಾಶ್ವತವಾಗಿ ಅಳಿದು ಹೋಗಿಲ್ಲ.

ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ:

ಒಡಲು, ಕಟ್ಟಿಕೊಂಡ ಲಿಂಗದ್ದೂ ಅಲ್ಲ, ಮನೆಗೆ ಬಂದ ಜಂಗಮನದೂ ಅಲ್ಲ. ಒಡಲೆಂಬುದು ಸಂಪದ್ಭರಿತವಾದ ಅರಿವಿನ ಒಡವೆ. ಒಡಲೊಡೆಯನೆಂಬ ಗುರುದೇವನೇ ಒಡಲನ್ನು ಹಡೆದು ; ಒಡಲಿನ ಕಣಕಣದಲ್ಲಿ ಭರಿತವಾಗಿದ್ದಾನೆ. ಲಿಂಗ ಜಂಗಮನೆಂಬ ಹೆಸರನ್ನು ಪಡೆದಿದ್ದಾನೆ. ಅಂತಹ ಒಡಲೊಡವೆ ಹಡೆದರ್ಥವನು ನಿಮ್ಮದು ಎಂದು ಅರಿಯದೆ ಮನ ಕೆಮ್ಮನೆ ಹೋಗುತ್ತಲಿದೆ. ಒಡಲಲ್ಲಿಯೇ ಸಂಗಮವಾದ ಸಂಗಮನಾಥನನ್ನು ಅರಿಯದೆ ಒರಲಿ ಒರಲಿ ಸುಮ್ಮನೆ ಸಾಯುತ್ತಲಿದೆ.

309

ಊರ ಸೀರೆಗೆ ಅಗಸ ತಡಬಡಿವಡೆದಂತೆ
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ಮರುಳಾದೆ,
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ,
ಕೂಡಲಸಂಗಮದೇವಾ.

ಆಯಗಾರ ಮಡಿವಾಳ ಊರ ಸೀರೆಯನ್ನೇ ತನ್ನದೆಂದು ತಡಬಡಿಸುವಂತೆ, ಮನ ಹೊನ್ನಿಗಾಗಿ, ವಿಷಯಕ್ಕಾಗಿ, ಮಣ್ಣಿಗಾಗಿ ತನುವಿನೊಂದಿಗೆ ಮರುಳಾಗಿದೆ.

ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ:

ನಾನು ಆಯಗಾರ, ಸೀರೆಯ ಮಾಲಿಕ ಬೇರಿಯೇ ಇದ್ದಾನೆ. ಅದು ನನ್ನದಲ್ಲ, ತೊಳೆಯುವುದಕ್ಕಾಗಿ ಕೊಟ್ಟುದನು ಉಟ್ಟಿದ್ದೇನೆ, ತೊಳೆದು ಕೊಡಲೇಬೇಕು ಎಂದು ಮನ ಅರಿಯದು. ನಾನೇ ವಸ್ತ್ರದ ಮಾಲೀಕ ಎನ್ನುವಂತೆ ಬೀಗುತ್ತದೆ. ತನುವಿನಲ್ಲಿ ಅರಿವಿದೆ. ಅದು ತನುವಿನ ಒಡೆಯ, ಕೂಡಲಸಂಗಮದೇವ. ಆತನನ್ನು ಮನ ಅರಿತರೆ, ಅರಿವಿನ ಮನ, ಅರಿವಿನಿಂದ ವಸ್ತ್ರನೋಡಿದರೆ ತಾನು ಆಯಗಾರ, ನನ್ನದು ಎನ್ನುವ ತಳಮಳವಿಲ್ಲ.

ಅರಿವಿನಿಂದ ಹೊನ್ನ ನೋಡಿದರೆ ಅದು ಮಣ್ಣಿನ ಗರ್ಭದಿಂದ ಬಂದ ಹಳದಿ ಲೋಹ. ಮಣ್ಣಿನ ಪಾತ್ರೆಯಲ್ಲಿ ಕುದ್ದು ಶುದ್ಧ ಹೊನ್ನೆಂದು ಹೆಸರು ಪಡೆದದ್ದು ಮನದಿಂದಲೇ. ಅಷ್ಟು ಮಾತ್ರಕ್ಕೆ

ಮನ ತನುವಿನೊಂದಿಗೆ ಹೊನ್ನಿಗಾಗಿ ಹಗಲಿರುಳು ದುಡಿಯಬೇಕಿಲ್ಲ. ಅದನ್ನು ಮಾರಿ ಜೀವಿಸಬೇಕಿಲ್ಲ. ಹೊನ್ನು ಕಳುವು ಮಾಡಿ ಕಳ್ಳನೆನ್ನಿಸಿಕೊಳ್ಳಬೇಕಿಲ್ಲ. ಒಬ್ಬ ರಾಜ ಮತ್ತೊಬ್ಬ ರಾಜನ ಮೇಲೆ ಹೊನ್ನಿಗಾಗಿ ಯುದ್ಧ ಮಾಡಬೇಕಿಲ್ಲ. ಹೊನ್ನಿನ ಕಡಗದ ಆಸೆಗಾಗಿ ವೀರನಾದವನು ವೀರನೊಂದಿಗೆ ಮಲ್ಲಯುದ್ಧ ಮಾಡಬೇಕಿಲ್ಲ. ಆದರೂ ಮನ ತನುವನ್ನು ಹೊನ್ನಿಗಾಗಿ ತಡಬಡಿಸಿದಂತಾಗಲಿಲ್ಲವೇ ?

ತನು ತನುವಿನೊಂದಿಗೆ ಮಿಲನ ಹೊಂದುವುದು ಅರಿವಿನ ಮತ್ತೊಂದು ತನುವಿನ ಜನ್ಮಕ್ಕಾಗಿ ಮಾತ್ರ. ಆ ಕ್ಷಣದಲ್ಲಿ ಹುಟ್ಟುವ ವಿಷಯವಾಸನೆಯ ಸುಖ ಅರಿವಿನ ಜನ್ಮಕ್ಕೆ ಹಾದಿ ಮಾಡಿಕೊಡುತ್ತದೆ. ಆ ಸುಖವನ್ನೇ ಮನ ತನ್ನ ದವಡೆಯಲ್ಲಿಟ್ಟುಕೊಂಡು ವಿಷಯವಾಸನೆಗೆ ತನುವನ್ನು ಮತ್ತೆ ಮತ್ತೆ ಎಳೆಸಿದರೆ ಮನ ಹೆಣ್ಣಿಗಾಗಿ ತಡಬಡಿಸಿದಂತಾಗಲಿಲ್ಲವೆ.

ಜಲ ಕುದ್ದು ಗಟ್ಟಿಯಾದದ್ದೇ ಮಣ್ಣು. ಆ ಮಣ್ಣಿನ ಗರ್ಭದಿಂದಲೇ ಹೊನ್ನು. ಆ ಜೀವ ಜಲಬಿಂದುವಿನಿಂದಲೇ ತನು ! ಅದರಿಂದಲೇ ಅರಿವು ! ಅದರಿಂದಲೇ ಮನ ! ಜಲಕ್ಕೆ ಜೀವ ಬಂದು ಅದರ ಕಣಕಣದಲ್ಲಿ ಅರಿವು ಭರಿತವಾಗಿ ತನುವಾಯಿತು. ತನುವನ್ನು ಆವರಿಸಿದ ಮನವಾಯಿತು. ಈ ಮನ ಅರಿವನ್ನು ಅರಿತು, ಅರಿವಿನ ಮನವಾದರೆ ಆಯಗಾರನಾಗುವುದಿಲ್ಲ. ಒಡೆಯನೇ ಆಗುತ್ತದೆ.

ಅರಿವಿನಿಂದ ಸೃಷ್ಟಿಯಾದ ಹೊನ್ನಿಗೆ ಅರಿವು ಮರುಳಾಗುವುದಿಲ್ಲ. ಅರಿವಿನಿಂದ ಸೃಷ್ಟಿಯಾದ ಮಣ್ಣಿಗೆ ಅರಿವು ಮರುಳಾಗುವುದಿಲ್ಲ. ಅರಿವಿನ ಜನ್ಮಕ್ಕಾಗಿ ಸೃಷ್ಟಿಯಾದ ವಿಷಯಕ್ಕೆ ಅರಿವು ಮರುಳಾಗುವುದಿಲ್ಲ. ಹೊನ್ನು ಹೆಣ್ಣು ಮಣ್ಣಿಗಾಗಿ ಮರುಳಾಗುವ ಮನ ಅರಿತರೆ ಅರಿವಿಗೆ ಮರುಳಾಗುತ್ತದೆ. ಮನ ಘನಮನವಾಗುತ್ತದೆ.

310

ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ :
ಮತ್ತೆಯೂ ಆಸೆ ಬಿಡದನ್ನಕ್ಕ ಭಕ್ತನೆಂತಪ್ಪೆನಯ್ಯಾ ?
ಶರಣನೆಂತೆನಿಸುವೆನಯ್ಯಾ.
ಕೂಡಲಸಂಗನ ಶರಣರ ಸಕಲರತಿಗೆ ಸಲ್ಲದನ್ನಕ್ಕ ?

ಅರ್ಥ ಪ್ರಾಣ ಅಭಿಮಾನವನ್ನು ತನುವಿನಲ್ಲಿ ಸೃಷ್ಟಿ ಮಾಡಿದ ಅರಿವೆಂಬ ಮಹಾದೇವನದೆಂದು ಹೇಳಿದರೂ ಅದರ ಮೇಲಿನ ಮೋಹ ಆಸೆ -ಕಡಮೆಯಾಗುತ್ತಿಲ್ಲ. ಅರ್ಥ ಪ್ರಾಣ ಅಭಿಮಾನವನ್ನು ಅರಿವೆಂಬ ದೇವನಿಗೆ ಅರ್ಪಿಸಿ ಭಕ್ತನಾಗುವುದೆಂತು ? ಆ ಅರಿವೆಂಬ ಗುರುದೇವನಿಗೆ ಶರಣುಹೋಗಿ ಶರಣನಾಗುವುದೆಂತು ?

ಕೂಡಲಸಂಗನ ಶರಣರ ಸಕಲರತಿಗೆ ಸಲ್ಲದನ್ನಕ್ಕ :

ಶರಣ ಸತಿಯಾದ, ಅರಿವೆಂಬ ಲಿಂಗವೇ ಪತಿಯಾದ. ಅರ್ಥವನ್ನು ಪತಿಗೆ ಅರ್ಪಿಸಿ ಶರಣ ಅರಿವಿನ ರತಿಸುಖದಲ್ಲಿ ಮಗ್ನನಾದ. ಪ್ರಾಣವನ್ನು ಪತಿಗೆ ಅರ್ಪಿಸಿ ಶರಣ ಅರಿವಿನ ರತಿಸುಖದಲ್ಲಿ ಮಗ್ನನಾದ. ಅಭಿಮಾನವನ್ನು ಪತಿಗೆ ಅರ್ಪಿಸಿ ಶರಣ ಅರಿವಿನ ರತಿಸುಖದಲ್ಲಿ ಮಗ್ನನಾದ.

ಶರಣ ಮಹಾಜ್ಞಾನಿ. ಕೂಡದ ಅಗಲದ ಕೂಟದ ಸಕಲ ರತಿಸುಖವನ್ನು ಬಲ್ಲ ನಿಪುಣನಾತ. 'ಎಮ್ಮ ಗಂಡನು ಏಕಾಂತಂಬೊಕ್ಕನು, ಬೇಗ ಬೇಗ ಹೊರ ನಡಿಯಿರಣ್ಣಗಳಿರಾ, ಆತ ಒಬ್ಬನಿದ್ದಪ್ಪೂ

ಸೈರಿಸ' ಎಂದು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಹೊರಗಟ್ಟಿ ಅರಿವಿನ ಗಂಡನೊಂದಿಗೆ ಮಲಗಿ ರತಿ ಸುಖವನು ಅನುಭವಿಸುವ ನೈಪುಣ್ಯತೆ, ಅರಿವಿಗೆ ಶರಣುಹೋದ ಶರಣನಿಗೆ ಮಾತ್ರ ತಿಳಿದಿದೆ.

ಅರ್ಥ ಪ್ರಾಣ ಅಭಿಮಾನ ನಿಮ್ಮದು ಎನ್ನುವ ಶರಣರ ಸೂತ್ರ ಬರಿ ಮಾತಿಗೆ ಮಣೆ ಹಾಕುವುದಿಲ್ಲ. ಪ್ರಯೋಗಕ್ಕೆ ಹೋಗದ ವಿನಹ ಕೈಗೆಟಕುವುದಿಲ್ಲ. ಅರಿವಿನ ರತಿಸುಖ ದಕ್ಕುವುದಿಲ್ಲ.

311

ನಿಮ್ಮ ಭಕ್ತಿಯಲ್ಲಿ ಧರಧುರನೆಂಬೆ,
ದಿಟಕ್ಕೆ ಬಂದಡೆ ಅಡ್ಡಮುಖವನಿಕ್ಕುವೆ-
ಗರುಡಂಗೆ ಘಟಸರ್ಪನ ತೋರುವಂತೆ !
'ಶಿವಶರಣೆ'ಂದಡೆ ಕಿವಿ ಕೇಳದಂತಿಹೆನು,
ಮನಕ್ಕೆ ಮನವೇ ಸಾಕ್ಷಿಯಯ್ಯಾ, ಕೂಡಲಸಂಗಮದೇವಾ.

ಮನ ತನುವನ್ನು ತೋರಿಕೆಗಾಗಿ ಭಕ್ತಿ ಕೆಲಸದಲ್ಲಿ ತೊಡಗಿಸುತ್ತದೆ. ಬೆಳಿಗ್ಗೆ ಇಷ್ಟ ದೇವರನ್ನು ಪೂಜಿಸಿ ಭಕ್ತನೆನ್ನಿಸಿಕೊಳ್ಳುತ್ತದೆ. ಅದು ಹಾಗೇ ಮುಂದುವರಿಯುವುದಿಲ್ಲ. ಕಾರ್ಯಾಲಯದಲ್ಲಿ ಲಂಚ ಪಡೆಯುತ್ತದೆ, ತನುವಿನ ಅರಿವು ಬೆಳಿಗ್ಗೆ ಪೂಜಿಸಿದ್ದನ್ನು ನೆನಪಿಸಿದರೆ ಮನ ಅರಿವಿಗೆ ಅರಿವೆ ಹಾಕಿ ಲಂಚಪಡೆದು ತನುವಿನ ಮೂಲಕ ಸುಖಪಡುತ್ತದೆ.

ಮನ ವಿಷದ ಹಾವು, ನೋಡಿದ್ದನ್ನೆಲ್ಲ ತನುವನ್ನು ಬಳಸಿ ಕಚ್ಚಿ ತಿನ್ನುತ್ತದೆ. ಅರಿವು ಗರುಡ ! ಮನದ ವಿಷಯವೆಂಬ ಘಟಸರ್ಪವನ್ನು ತಿನ್ನಲು ಹೋಗುತ್ತದೆ. ಗರುಡ ಕಂಡರೆ ಹಾವು ಮರೆಯಾಗುತ್ತದೆ. ಆದರೂ ಭಕ್ತಿಯ ಸೋಗು ಕಮ್ಮಿಯಾಗಿಲ್ಲ, ಮನದ ಹಾದರವೂ ನಿಂತಿಲ್ಲ.

ತನುವಿನಲ್ಲಿ ತನ್ಮಯವಾದ ಅರಿವೆಂಬ ಶಿವನಿಗೆ ಶರಣು ಹೋಗು ಎಂದು ಶರಣರು ಉಪದೇಶಿಸಿದರೂ ಮನದ ಕಿವಿ ಕೇಳದಂತಿಹದು. ಮನಕ್ಕೆ ಮನವೇ ಸಾಕ್ಷಿಯಾಗಿ ತನುವಿನಲ್ಲಿಯೇ ಸಂಗಮವಾದ ಸಂಗಮನಾಥನನ್ನು ನೋಡಿದಾಗಲೇ ಮನ ಘನಮನವಾಗುವುದು.

312

ಆದ್ಯರ ವಚನ ಪರುಷವೆಂಬೆನು,
ಆ ಪರುಷವೆನಗೆಂತು ದೊರೆಕೊಂಬುದಯ್ಯಾ ?
ತನುಮನ ಧನವ ವಿವರಿಸಿ ನುಡಿವೆ-
ಸೋಂಕಿಂಗೆ ಸೈರಿಸಲಾರೆ.
ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯಾ ,
ಕೂಡಲಸಂಗಮದೇವಾ.

ತನು, ರಕ್ತ ಮೂಳೆ ಮಾಂಸ ಒಳಗಿಟ್ಟುಕೊಂಡ ಚರ್ಮದ ಮದ್ದಳೆ. ಅರಿವಿದ್ದೂ ಮನ ನುಡಿಸಿದಂತೆ ನುಡಿಯುವ ಡಂಬಕ. ಆದ್ಯರ, ಶರಣರ, ಪುರಾತನರ, ಸಂತರ ವಚನವೆಂದರೆ ಪರುಷ, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಅಮೃತ ! ಅದನ್ನು ಪಡೆಯುವ ಬಗೆ ಹೇಗೆಂದು ಮನಕ್ಕೆ

ವೇದ್ಯವಾಗುತ್ತಿಲ್ಲ.

ತನು ಮನ ಧನವ ವಿವರಿಸಿ ನುಡಿಯಲು ಸಾಧ್ಯವಾಗುತ್ತದೆ. ಜಲದ ಆಳಕ್ಕೂ ಆಕಾಶದೆತ್ತರಕ್ಕೂ ಹಾರಲು ಸಾಧ್ಯವಾಗುತ್ತದೆ. ಸ್ಪರ್ಶ, ರುಚಿ, ವಾಸನೆಯ ನೋಟದ ಸೋಂಕಿಗೆ ತನು ಅರಳಿ-ಕೆರಳುತ್ತದೆ.(ಹೊಲೆಯರ) ಚರ್ಮದ ಮದ್ದಳೆಯಂತೆ ನುಡಿಯುವ ಡಂಬಕ ಮನ !

ಆದ್ಯರ ವಚನವನ್ನು ಪರುಷವೆಂದು ನುಡಿದರೇನು ? ಆ ಪರುಷ ತನುವಿಗೆ ದೊರಕದಿದ್ದರೆ ನುಡಿದ ನುಡಿ ವ್ಯರ್ಥವಲ್ಲವೆ ?

ಚರ್ಮದ ಮದ್ದಳೆಯು ಬಡಿದಂತೆ ನುಡಿಯುತ್ತದೆ. ಅದು ಸೋಂಕಿಗೆ ನುಡಿಯುವ ಉಪಕರಣ. ತನು ಹಾಗಲ್ಲ, ಅದು ಅರಿವಿನ ಉಪಕರಣ, ಪರುಷ ಮಣಿ ! ನೋಡುವ ಕಣ್ಣಿನಲ್ಲಿ ಅರಿ(ಪರುಷ)ವಿದೆ. ಅರಿವಿನ ನೋಟ ತನುವಿಗೆ ಸೋಂಕಿ ಪ್ರಸಾದವಾಗಬೇಕು. ಆಗ ತನು ಚರ್ಮದ ಮದ್ದಳೆಯಂತೆ ಮರು ನುಡಿ ನುಡಿಯುವುದಿಲ್ಲ. ಹಾಗೆಯೇ ಕಿವಿ, ಚರ್ಮ, ಮೂಗು, ನಾಲಿಗೆಯಲ್ಲಿ ಕೂಡಾ ಪರುಷದ ಮಣಿಯಿದೆ. ಅದು ಬಳಕೆ ಮಾಡುವ ವಿಧಾನ ಮನವೆಂಬ ಡಂಬಕನಿಗೆ ಹೊಳೆದರೆ ಇಡೀ ತನು ಪರುಷದ ಮಣಿಯಾಗುತ್ತದೆ.

313

ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆದೆನಯ್ಯಾ ,
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ.
ಹಡಿಕೆಗೆ ಮಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ ?

ಬಸವಣ್ಣನವರು, ಮನದ ಒಂದೊಂದು ಅಜ್ಞಾನದ ಸಂಗತಿಯನ್ನು ಸುಟ್ಟು ಹಾಕಲು ಜ್ಞಾನದ ಸೂತ್ರವನ್ನು ರಚಿಸಿದ್ದಾರೆ. ಅಜ್ಞಾನದ ಜಾಡು ಹಿಡಿದು ಅವರ ಸೂತ್ರ ಪಡೆದು ಸುಟ್ಟುಕೊಳ್ಳಬೇಕಿದೆ.

ಕರೆನ್ಸಿ ಎಂಬ ನಾಯಿಯನ್ನು ನಚ್ಚಿ ಮನ ಅದರ ಹಿಂದೆ ಬಿದ್ದಿದೆ. ಇದ್ದ ಸಮಯವೆಲ್ಲ ಕರೆನ್ಸಿ ಗಳಿಕೆಗಾಗಿ ಮೀಸಲಾಗಿದೆಯೆ ಹೊರತು ಅರಿವಿಗೆ ಹೋಗಲು ವೇಳೆಯೇ ಇಲ್ಲ.

ಹೊಲಸಿಗೆ ಮೆಚ್ಚಿದ್ದ ನಾಯಿ ಅಮೃತದ ರುಚಿಯನು ಬಲ್ಲುದೆ ?

ಮನದಿಂದ ಕರೆನ್ಸಿಯನ್ನು ನೋಡಿದರೆ ಹಗಲಿರುಳೆನ್ನದೆ ತನುವನ್ನು ಅದರ ಗುಲಾಮನನ್ನಾಗಿ ಮಾಡುತ್ತದೆ. ಕರೆನ್ಸಿಗಾಗಿ ಹಗಲಿರುಳು ದುಡಿಯುತ್ತದೆ, ತೃಪ್ತಿಯಾಗದಿದ್ದರೆ ಕಳವು ಮಾಡುತ್ತದೆ, ಕೊಲೆ ಸುಲಿಗೆ ದರೋಡೆ ಮಾಡಿ ಕರೆನ್ಸಿ ಪಡೆಯುತ್ತದೆ. ಕಾಗದದಲ್ಲಿ ಮುದ್ರಿಸಿದ ಕರೆನ್ಸಿಗಾಗಿ ದೇಹಕ್ಕೆ ಕಳ್ಳ, ಕೊಲೆಗಡುಕನ ಪಟ್ಟ ಕಟ್ಟುತ್ತದೆ. ಮನದ ಹೊಲಸು ಆದೇಶ ತನುವಿಗೆ ಅಮೃತ ಸವಿದಂತೆ.

ಬಾಲ್ಯದಲ್ಲಿ ಕಾಗದವನ್ನೇ ಕರೆನ್ಸಿ ಮಾಡಿ ಆಟ ಆಡಿದ್ದು ನೆನಪಿದೆ. ಆಟ ಮುಗಿದ ಮೇಲೆ ಕಾಗದದ ಕರೆನ್ಸಿಯನ್ನು ಹರಿದುಹಾಕಿ ಮನೆಗೆ ಹೋದದ್ದು ನೆನಪಿದೆ. ಆದರೆ ಈಗ ಹಾಗಲ್ಲ , ಕರೆನ್ಸಿಗಾಗಿಯೇ ಹಗಲಿರುಳು ಬೆವರಿಳಿಸಿ ದುಡಿಯುವ ಆಟ, ಕೊಲೆ ದರೋಡೆ ಕಳುವಿನ ಆಟ ಆಡಿ ಪಡೆದ ಕರೆನ್ಸಿ ಹರಿಯುವುದಿಲ್ಲ, ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಬೀಗ ಜಡಿದು ಹಗಲಿರುಳು ತನು ಕಾಯುತ್ತದೆ. ಈ ನಾಯಿ ಕೆಲಸ ತನಗೆ ಬೇಕೆ ಎಂದು ಯೋಚಿಸಲು ಸಮಯವೇ ಇಲ್ಲ. ಮಲಕ್ಕೆ ಮೆಚ್ಚಿದ ಮನವೆಂಬ ನಾಯಿ ಅರಿವಿನ ಅಮೃತದ ರುಚಿ ಬಲ್ಲುದೆ ?

ತನುವಿನಲ್ಲಿ ಮನವೆಂಬ ನಾಯಿಯೂ ಇದೆ, ಅರಿವಿನ ಅಮೃತ ಉಣ್ಣಿಸುವ ಗುರುವೂ ಇದ್ದಾನೆ. ಆಯ್ಕೆ ಮನಕ್ಕೆ ಬಿಟ್ಟದ್ದು.

314

ಒಲಿವ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವಾ.
ತಪ್ಪೆನ್ನದು ತಪ್ಪೆನ್ನದು !
ತನು ಮನ ಧನದಲ್ಲಿ ಮಾಟಕೂಟವೆಂದರಿಯದ
ತಪ್ಪೆನ್ನದು ತಪ್ಪೆನ್ನದು !
ಕಡೆಯಿಲ್ಲದ ಹುಸಿ ಎನ್ನದು ಕೂಡಲಸಂಗಮದೇವಾ

ಅರಿವು ಮತ್ತು ಮನ ತನುವಿನಲ್ಲಿ ಸಂಗಮವಾಗಿದ್ದರೂ ಮನಕ್ಕೆ ಮನದಟ್ಟಾಗದ ನಿಮಿತ್ತ ಅರಿವಿನ ಸುಖಕ್ಕಾಗಿ ಅನ್ಯ ತನುಗಳ ಆಶ್ರಯ ಬಯಸುತ್ತದೆ. ಪುಸ್ತಕ ಪುಣ್ಯ ಕ್ಷೇತ್ರಗಳ ಆಶ್ರಯ ಬಯಸುತ್ತದೆ.

ಅರಿವು ತನುವಿನ ಮಾಟದಲ್ಲಿ ಕೂಟಸ್ಥವಾಗಿದೆಯೆಂದು ಹೊರಗೆ ಹುಡುಕುವ ಮನಕ್ಕೆ ತಪ್ಪೆನ್ನದು ತಪ್ಪೆನ್ನದು ಎಂದು ಅರಿವಾಗಬೇಕಿದೆ.

ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣೆಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆಮಾಂಸ. ಭಾಂಡ ಭಾಜನ ಶುದ್ಧವಿಲ್ಲದಿದ್ದರೆ ಅರಿವಿನ ಗಂಡ ಒಲಿಯುವುದಾದರೂ ಎಂತೆಂದು ತಿಳಿಯದ ಮನವೆಂಬ ಹೆಂಡತಿಗೆ ತಪ್ಪೆ ತಪ್ಪೆನ್ನದು ಎಂದು ಅರಿವಾಗಬೇಕಿದೆ !

'ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದಡೇನೊ, ಶಿವ ಶಿವಾ ಹೋದಡೇನೊ ? ಕೂಡಲಸಂಗಮದೇವಯ್ಯಾ ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ ! ಎಂದು ಮನಕ್ಕೆ ಅರಿವಾಗಬೇಕಿದೆ.

315

ಕಾಣುತ್ತ ಕಡೆಗಣಿಸಿ ಕೆಡೆಸಿ ಅರಸುವ ಮತಿಭ್ರಷ್ಟನಾನು ಲಿಂಗಯ್ಯಾ .
ತನುಲೋಭ, ಮನಲೋಭ, ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ.
ತನುಮನ ಧನವ ನಿವೇದಿಸಿದವರ ಮನೆಯ ಮಗ ನಾನಯ್ಯಾ .
ಕೂಡಲಸಂಗಮದೇವಾ.

ಕಾಣುತ್ತ ಕಡೆಗಣಿಸಿ ಕೆಡಿಸಿ ಅರಸುವ ಮತಿಭ್ರಷ್ಟನಾನು ಲಿಂಗಯ್ಯಾ :

ತನುವಿನಲ್ಲಿ ತನ್ಮಯವಾದ ಅರಿವನ್ನು ಗುರುವಾಗಿಸಿಕೊಂಡು ಮನ ಶಿಷ್ಯನಾಗಿ ಹೇಗೆ ಪ್ರಾರ್ಥಿಸಬೇಕೆಂದು ಅಣ್ಣನವರು ವಿವರಿಸಿದ್ದಾರೆ.

ಕಲ್ಲನ್ನು ನೋಡಿದೆ, ಅದನ್ನು ಕಲ್ಲೆಂದೆ ಕಡೆಗಣಿಸಿದೆ. ಆ ಕಲ್ಲನ್ನೇ ಹಿಡಿದು ಕೆಡಿಸಿ ಮೂರ್ತಿ ಮಾಡಿದೆ. ಕಲ್ಲಿನಿಂದಲೇ ಮಂದಿರ ಕಟ್ಟಿ ಮೂರ್ತಿಯನ್ನು ಕೂಡಿಸಿದೆ. ಆ ಮೂರ್ತಿಯನ್ನೇ ದೇವರೆಂದು ಆರಾಧಿಸಿದೆ.

ಕಲ್ಲು ಕಂಡು, ಕಡೆಗಣಿಸಿ, ಆ ಕಲ್ಲನ್ನೇ ಕೆಡಿಸಿ ದೇವರ ಮಾಡಿ, ಆ ಕಲ್ಲಿನಲ್ಲಿ ದೇವರ ಹುಡುಕುವ ಮತಿಭ್ರಷ್ಟ ನಾನು ಲಿಂಗಯ್ಯಾ.

ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ :

ತನುವಿನಲ್ಲಿ ತನ್ಮಯವಾದ ಅರಿವಿದೆ. ಅದು ತನುವಿನ ಸಂಪತ್ತು . ಮನ ಪೂಜಿಸುವ ದೇವರು ದೇವರಲ್ಲವೆಂದು ಅರಿವಿಗೆ ತಿಳಿದಿದೆ, ಆದರೆ ತನುವಿನ ಅರಿವಿನ ಸಂಪತ್ತನ್ನು ಬಳಕೆ ಮಾಡಬೇಕೆಂದು ಲೋಭಿಮನಕ್ಕೆ ತಿಳಿಯಬೇಕಲ್ಲ, ತಿಳಿಯುವುದಿಲ್ಲ! ಹೀಗಾಗಿ ಮನ, ತನು ಲೋಭಿ !

ಕಲ್ಲು ಕಟೆದು ಮೂರ್ತಿ ಮಾಡಿ ದೇವರೆಂದು ಆರಾಧಿಸುವ ಮನದಲ್ಲಿ ಅದು ಕಲ್ಲೆಂದು ತಿಳಿಯುವ ಅರಿವೂ ಇದೆ. ಅದನ್ನು ಬಳಕೆ ಮಾಡದ್ದಕ್ಕಾಗಿ ಮನಲೋಭಿ.

ತನು ಅರಿವಿನ ಸಂಪತ್ತು. ಅದನ್ನು ಶರಣರು ಧನವೆಂದು ಕರೆದಿದ್ದಾರೆ. ಈ ಧನವನ್ನು ಬಳಕೆ ಮಾಡದ ಮನ ಧನ ಲೋಭಿ. ಈ ತನು ಮನ ಧನವೇ ಮುಂದಾಳತ್ವವಹಿಸಿ ಅರಿವಿನ ತನುಗಳನ್ನು ಮುಗ್ಗುಲು ಮಾಡಿವೆ.

ತನು ಮನ ಧನವನ್ನು ನೀವಾಳಿಸಿ ಅರಿವಿಗೆ ಇಕ್ಕಿ ಅರಿವೇ ತಾವಾದ ಶರಣರ ಮನೆಯ ಮಗನನ್ನಾಗಿರಿಸು; ಅರಿವಿನ ಮನೆಯ ಆಳನ್ನಾಗಿರಿಸು ಕೂಡಲಸಂಗಮ ದೇವಾ ಎಂದು ಪ್ರಾರ್ಥಿಸಿ ಜ್ಞಾನ ಪಡೆಯುವ ಸುಳುಹು ನೀಡಿದ್ದಾರೆ ಅಣ್ಣ ಬಸವಣ್ಣನವರು.

316

ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಕುವರೆ ?
ಕೋಳದ ಮೇಲೆ ಸಂಕೋಲೆಯನಿಕ್ಕುವರೆ ?
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೆ ?
ಕೂಡಲಸಂಗಯ್ಯ ಕಾಡುವ ಕಾಟ
ಸಿರಿಯಾಳಂಗಲ್ಲದೆ ಸೈರಿಸಬಹುದೆ ?

ದೇಹಕ್ಕೆ ಯಾರೂ ಅರಿವು ಕೊಡಲು ಸಾಧ್ಯವಾಗುವುದಿಲ್ಲ. ಅರಿವು ದೇಹದಲ್ಲಿಯೇ ಇದೆ. ಆ ಅರಿವಿಗೆ ಪುರಾತನರು ಗುರುದೇವನೆಂದು, ಮಹಾದೇವ-ಸದಾಶಿವ-ಸಾಕ್ಷಾತ್ ಪರಬ್ರಹ್ಮನೆಂದು ಕರೆದರು. ದೇಹದಲ್ಲಿರುವ ಅರಿವನ್ನು ಹೇಗೆ ಪಡೆಯಬಹುದೆಂದು ಸೂಚಿಸಬಹುದು. ಆತ ಸೂಚಕ ಗುರುವಾಗುತ್ತಾನೆ, ಆತನನ್ನು ಶ್ರೀಗುರುವೆಂದು ಕರೆಯುತ್ತಾರೆ. ಆತ ದೇಹದ ಕಣ ಕಣದಲ್ಲಿರುವ ಸತ್ಯದ ಅರಿವಿನ ಗುರುವನ್ನು ತೋರಿಸಿ ಹಿಂದೆ ಸರಿಯುತ್ತಾನೆ. ಏಕೆಂದರೆ ಆ ಸದ್ಗುರುವಿನೊಂದಿಗೆ ತಾನೊಂದೆಅಲ್ಲದೆ ಇತರ ತನುಗಳು ಕೂಡಾ ಆನಂದ ಪಡುವ ಕೆಲಸ ಸಾಕಷ್ಟಿರುತ್ತದೆ.

ವೇದ ಆಗಮ ಉಪನಿಷತ್‌ಗಳು, ಭಗವದ್ಗೀತೆ ಬೈಬಲ್‌ಗಳು, ತತ್ವಪದ, ಮುಂಡಿಗೆ, ದಾಸರ ಕೀರ್ತನೆಗಳು, ಶಿವಶರಣರ ವಚನಗಳು ಸದ್ಗುರುವಿನೊಂದಿಗೆ ಸಂಬಂಧ ಬೆಳೆಸುವ ಸೂತ್ರಗಳಾಗಿವೆ.

ಸದ್ಗುರುವಿನೊಂದಿಗೆ ಸಂಬಂಧ ಬೆಳೆಸಿದ ಮೇಲೆಯೂ ಮನದ ಹಿಂದಿನ ಅಜ್ಞಾನ ದೇಹ ಬಿಟ್ಟು ಸರಳವಾಗಿ ಸಡಿಲುವುದಿಲ್ಲ. ಆಗ ಸಾಧಕ ಮನವನ್ನು ಭಕ್ತನನ್ನಾಗಿ ಮಾಡಿಕೊಂಡು ತನುವಿನ ಜ್ಞಾನವನ್ನೇ ಮಹಾದೇವನನ್ನಾಗಿ ಮಾಡಿಕೊಂಡು ಪ್ರಾರ್ಥಿಸುತ್ತಾನೆ.

ಹೇ ಮಹಾದೇವನೇ ನೀನು ತಿನ್ನಲು ಕೊಟ್ಟ ಪದಾರ್ಥವನ್ನು ಹಂಚಿ ತಿನ್ನದೆ ಮುಂದೆ ಬಂದೀತೆಂದು ಹಗೇವಿನಲ್ಲಿ ಬಚ್ಚಿಟ್ಟೆ. ಜೋಳ ಹೊರತರಬೇಕೆಂದು ಇಳಿದಾಗ ಒರಳಕಲ್ಲು

ನೂಕಬಹುದೆ ?

ಹಸಿವಿಗಾಗಿ ದುಡಿದು ತಿನ್ನುವ ಆದೇಶ ಕೊಡಲಿಲ್ಲ. ಸಂಗ್ರಹಿಸಿ ತಿನ್ನುವ ಅಜ್ಞಾನದ ಸಂಕೋಲೆ ಬಿಗಿದೆ. ಒಳ ಇಳಿದು ತಂದು ತಿನ್ನಬೇಕೆನ್ನುವಾಗಲೇ ಒರಳಕಲ್ಲ ನೂಕಬಹುದೆ ? ಕೋಳದ ಮೇಲೆ ಸಂಕೋಲೆಯನ್ನಿಕ್ಕುವರೆ ? ಎನ್ನ ಅಜ್ಞಾನಿ ಮನದ ಮಹಾದೇವ ನೀನು. ನಾನು ಮಾಡುವ ಮುನ್ನ ನೀನೇ ನನಗೆ ಈ ಜ್ಞಾನ ಕರುಣಿಸಬಾರದೆ ? ನೀನೇ ಈ ಕೆಲಸ ಮಾಡಬಾರದೆ ?

ಅಜ್ಞಾನದ ಸುಟ್ಟ ಗಾಯದಿಂದ ದೇಹ ಬೆಂದು ಹುಣ್ಣಾಗಿದೆ. ಅದಕ್ಕೆ ಜ್ಞಾನದ ಮುಲಾಮು ಸವರುವುದು ಬಿಟ್ಟು ಬಿದಿರಿನ ಸಿಬಿರಿನಿಂದ ಸವರುವುದೆ ? ಅಜ್ಞಾನದ ಗಾಯ ಮಾಯುವುದಾದರೂ ಹೇಗೆ ತಂದೆ ?

ತನುವಿನಲ್ಲಿ ತನ್ಮಯವಾದ ಮಹಾದೇವ ನೀನು, ನೀನು ಕಾಡುವ ಕಾಟ ಅಷ್ಟಿಷ್ಟಲ್ಲ , ಮಗನನ್ನು ಕೊಂದು ಅಡಿಗೆ ಮಾಡಿ ಉಣಬಡಿಸಿದ ಸಿರಿಯಾಳನಿಗಲ್ಲದೆ ಎನಗೆ ಅದು ಸೈರಿಸಲು ಸಾಧ್ಯವೆ ತಂದೆ ?

ಮಗ ನಾನು; ತಂದೆ ನೀನು, ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಎನಗೆ. ಹಾಲಲ್ಲಾದರೂ ಅದ್ದು , ನೀರಲ್ಲಾದರೂ ಅದ್ದು ಅದು ನಿಮ್ಮ ಧರ್ಮ! ಎಂದು ಮನ ಮಹಾಜ್ಞಾನಿ ಮಹಾದೇವನನ್ನು ಒಲಿಸಿಕೊಳ್ಳುವ ಸೂತ್ರ ಕರುಣಿಸಿದ್ದಾರೆ ಬಸವಣ್ಣನವರು.

317

ಸೋಲಬಲ್ಲರು ಅವರು ಗೆಲಲರಿಯರಯ್ಯಾ .
ತನು ಮನ ಧನದಲ್ಲಿ ವಂಚನೆಯನರಿಯರಯ್ಯಾ .
ದಾಸ ಸಿರಿಯಾಳನವರು.
ಕೂಡಲಸಂಗನ ಶರಣರು ಉಪಚಾರವನರಿಯರಯ್ಯಾ.

ಸೋಲಬಲ್ಲರು ಅವರು ಗೆಲಲರಿಯರಯ್ಯಾ :

ದ್ರೋಣ ಕರ್ಣ ಭೀಷ್ಮರು ದುರ್ಯೋಧನನ ಅನ್ನಕ್ಕಾಗಿ ಹಂಗಿಗರಾಗಿದ್ದರು. ದ್ರೌಪದಿಯ ಸೀರೆ ಸೆಳೆಯುವಾಗ ಇಡೀ ಸಭೆ ಮೌನವಾಗಿತ್ತು . ದುರ್ಯೋಧನನ ಅಜ್ಞಾನಕ್ಕೆ ಕೈ ಕೈ ಹಿಚುಕಿಕೊಂಡು, ದ್ರೌಪದಿಯ ಅಳಲಿಗೆ ಮರುಗಿದರೆ ಹೊರತು ಅಚಾತುರ್ಯವನ್ನು ತಡೆಯಲಿಲ್ಲ. ಅಜ್ಞಾನಕ್ಕೆ ಸೋತು ಶರಣಾದರೆ ಹೊರತು ಗೆಲ್ಲಲರಿಯಲಿಲ್ಲ.

ದ್ರೋಣ ಕರ್ಣ ಅನ್ನದ ಹಂಗಿಗರಾದರು. ಭೀಷ್ಮ ವಚನದ ಹಂಗಿಗನಾದ. ಧೃತರಾಷ್ಟ್ರ ಮಗನ ಮೋಹಕ್ಕೆ ಹಂಗಿಗನಾದ. ಪಾಂಡವರು ಪಗಡೆಯ ಸೋಲಿಗೆ ಹಂಗಿಗರಾದರು. ತೋಳ್ಬಲದಿಂದ ಶೂರರೆನ್ನಿಸಿಕೊಂಡರೂ ಅಜ್ಞಾನವನು ಗೆಲ್ಲಲರಿಯಲಿಲ್ಲ. ತನು ಮನ ಅರಿವು ಅಜ್ಞಾನದ ವಂಚನೆಗೆ ಒಳಗಾದವು. ಜ್ಞಾನಕ್ಕೆ ಸೋತು ಅಜ್ಞಾನವ ಗೆಲ್ಲಲರಿಯಲಿಲ್ಲ. ತನುಮನಗಳೆರಡು ಅರಿವಿಗೆ ಬಳಕೆಯಾಗಲೇ ಇಲ್ಲ.

ತನು ಮನ ಧನದಲ್ಲಿ ವಂಚನೆಯನರಿಯರಯ್ಯಾ ದಾಸ ಸಿರಿಯಾಳನವರು ಕೂಡಲಸಂಗನ ಶರಣರು ಉಪಚಾರವನರಿಯರಯ್ಯಾ :

ದಾಸೀಮಾರ್ಯರು ರೇಷ್ಮೆ ವಸ್ತ್ರ ನೇಯ್ದು ಮಾರಲು ಸಂತೆಗೆ ಹೋದರು. ದುಬಾರಿ

ಬೆಲೆಯ ವಸ್ತ್ರವನ್ನು ಯಾರೂ ಕೊಳ್ಳಲೇ ಇಲ್ಲ. ಮನೆಗೆ ಮರಳುವಾಗ ದಾರಿಯಲ್ಲಿದ್ದ ಭಿಕ್ಷುಕ ವಸ್ತ್ರ ತನಗೆ ಬೇಕೆಂದು ಕೇಳಿದ. ಕೂಡಲೇ ವಸ್ತ್ರ ಬಿಚ್ಚಿ ಸಂತೋಷದಿಂದ ಕೊಟ್ಟ. ಅದನ್ನು ಪರಪರನೆ ಹರಿದು ಮೈಮೇಲೆ ಹಾಕಿಕೊಂಡ. ದಾಸೀಮಾರ್ಯರು ತುಟಿ ಪಿಟಕ್ಕೆನ್ನಲಿಲ್ಲ. ದೃಶ್ಯ ನೋಡಿ ಹಸನ್ಮುಖಿಗಳಾದರು. ತನು ಮನಗಳೆರಡೂ ಅಜ್ಞಾನಕ್ಕೆ ಸೆರೆಯಾಗಲಿಲ್ಲ, ಅರಿವಿನಿಂದ ಮೆರೆದವು.

ಧೃತರಾಷ್ಟ್ರ ಮಗನ ಮೋಹಕ್ಕೆ ಮನಸೋತು ಕುರುಡನಾಗಿದ್ದ. ಸಭೆಯಲ್ಲಿ ದ್ರೌಪದಿಯ ಸೀರೆ ಸೆಳೆದರೂ ಮಗನ ಮೇಲಿನ ಮೋಹದಿಂದಾಗಿ ಅಡ್ಡಿಪಡಿಸಲಿಲ್ಲ. ಕಣ್ಣಿದ್ದರೆ ಎಲ್ಲರಂತೆ ತಾನೂ ನೋಡಬಹುದಿತ್ತಲ್ಲ ಎಂದು ಮನದಲ್ಲಿಯೇ ಮಂಡಿಗೆ ತಿಂದ. ಹದಿನೆಂಟು ಅಕ್ಷೋಹಿಣಿ ಸೈನ್ಯ ಮಡಿದು ರಕ್ತದ ಕಾಲುವೆಯೇ ಹರಿಯಿತು. ಮಕ್ಕಳೆಲ್ಲರೂ ಸತ್ತರು. ಆದರೂ ಮಗನ ಮೇಲಿನ ಮೋಹ ಅಡಗಲಿಲ್ಲ. ದುರ್ಯೋಧನನನ್ನು ಕೊಂದ ಭೀಮನನ್ನಾದರೂ ಅಪ್ಪಿಕೊಳ್ಳುವ ನೆಪದಲ್ಲಿ ಕೊಲ್ಲಬೇಕೆಂದು ಹತ್ತಿರ ಕರೆದ. ಶ್ರೀಕೃಷ್ಣನ ಸಹಾಯದಿಂದ ಸಾಧ್ಯವಾಗಲಿಲ್ಲ.

ಮಗನ ಮೋಹಕ್ಕೆ ಮನಸೋತ ಧೃತರಾಷ್ಟ್ರ ಸರ್ವಸ್ವವನ್ನು ಕಳೆದುಕೊಂಡ. ಜ್ಞಾನಕ್ಕೆ ಸೋಲಲಿಲ್ಲ, ಅಜ್ಞಾನವನು ಗೆಲ್ಲಲರಿಯಲಿಲ್ಲ.

ಮಹಾಜ್ಞಾನಿ ಸಿರಿಯಾಳ ಸೆಟ್ಟಿ ಚೆಂಗಳೆಯರು ಮಗನ ಮೇಲಿನ ಮೋಹವನ್ನು ಕುಟ್ಟಿ ಅಡಿಗೆ ಮಾಡಿ ಅರಿವೆಂಬ ಜಂಗಮನಿಗೆ ಉಣಬಡಿಸಿದರು. ಮಹಾಜ್ಞಾನಕ್ಕೆ ಸೋತು ಅಜ್ಞಾನವನು ಗೆದ್ದರು. ಅರಿವಿಗೆ ಶರಣು ಹೋದ ಶರಣರು ಸೋಲರಿಯದ ಸರದಾರರು, ಅವರು ಉಪಚಾರವನರಿಯರು.

318

ಮಾತಿನಲ್ಲಿ ಶ್ರೋತ್ರ ಸುಖವ ನುಡಿಯಬಹುದಲ್ಲದೆ
ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲು ಬಾರದು.
ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು,
ಲಿಂಗಮುಖದಲುದಯವಾದ ಶರಣಂಗಲ್ಲದೆ ಅಯ್ಯಾ .
ಕೂಡಲಸಂಗನಶರಣರ ಭಕ್ತಿಭಂಡಾರವು
ಎನಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೆ.

ಸಭಿಕರ ಕಿವಿಗೆ ಇಂಪಾಗುವ ಶಬ್ದ ನುಡಿಯಬಹುದು. ಆದರೆ ನುಡಿಯುವ ತನು ಅರಿವಿನಿಂದ ತಂಪಾಗಲರಿಯದು. ಮಾಡುವ ಸತ್ಕ್ರಿಯೆಗಳು ಕೂಡಾ ತನುವಿಗೆ ಸಂತೋಷ ತರಲರಿಯವು. ಮಾತಿಗೂ ಕ್ರಿಯೆಗೂ ತನುವಿನಲ್ಲಿ ಸಂಬಂಧವಿಲ್ಲದ್ದು ಅರಿವಿನಿಂದ ವೇದ್ಯವಾಗುತ್ತದೆ.

ಅರಿವು ತನುವಿನದೇ, ಪ್ರಾಣವೂ ತನುವಿನದೆ, ಅಭಿಮಾನವೂ ತನುವಿನದೇ. ಆದರೂ ತನುವಿನಲ್ಲಿ ಸಮನಿಸದು. ಅರಿವು ಸಕಲವನ್ನು ಅನಾವರಣಗೊಳಿಸಿದರೆ ಮನ ತನುವನ್ನು ಅಭಿಮಾನ ದುರಭಿಮಾನದಿಂದ ಕಾಡುವುದು. ಮನ ತನುವಿಗೆ ಅಧಿಕಾರ, ಹಣ, ಅಭಿಮಾನ, ಭೂಮಿ, ಹೇಮ, ವಿಷಯದ ರುಚಿಯಿಂದ ನಿರಂತರ ತಲ್ಲಣಗೊಳಿಸುತ್ತಿದೆಯೇ ಹೊರತು ಅರಿವಿನಿಂದ ಅನಾವರಣಗೊಳಿಸಲು ಸಾಧ್ಯವಾಗುತ್ತಿಲ್ಲ. ಮನ ಅರಿವಿನತ್ತ ವಾಲುತ್ತಿಲ್ಲ.

ಅರ್ಥ ಪ್ರಾಣ ಅಭಿಮಾನ ಆರಿಗೆಯೂ ಸಮನಿಸದು ಲಿಂಗಮುಖದಲುದಯವಾದ ಶರಣಂಗಲ್ಲದೆ ಅಯ್ಯಾ :

ಪ್ರಾಣ, ಅರಿವು, ಮನದಿಂದಲೇ ತನುವಿಗೆ ಶೋಭೆ. ಇವು ಮೂರು ಇಲ್ಲದ ತನು ಶವ. ಪ್ರಾಣ ಅರಿವು ಮನ ತನುವಿನಲ್ಲಿ ಶಿವಮಯವಾಗಿವೆ. ಬೇರೆ ಮಾಡದಂತೆ ಬೆರೆತಿವೆ. ಆದರೂ ತನುವಿನಲ್ಲಿ ಸಮರಸವಿಲ್ಲ. ಕಣ್ಣಿನಲ್ಲಿ ಅರಿವಿದೆ, ಬಳಕೆಯಾಗುತ್ತಿಲ್ಲ. ಅನ್ಯತನುವನ್ನು ನೋಡಿದರೆ ಸಾಕು ತನುವಿನಲ್ಲಿ ಕಾಮದ ವಿಕೃತ ರಸಾಯನವನ್ನುಂಟು ಮಾಡಿ ತಲ್ಲಣಗೊಳಿಸುತ್ತದೆ. ಶ್ರೀಮಂತ ಬಡವ ಕೆಳಜಾತಿಯೆಂದು ಅಭಿಮಾನದಿಂದ ಮೆರೆಯುತ್ತದೆ. ಪಂಡಿತ ಪಾಮರನೆಂದು ಮದದಿಂದ ಮೆರೆಯುತ್ತದೆ. ಆಡುವ ಮಾತು, ಮಾಡುವ ಕೆಲಸಗಳಿಂದ ತನುವಿಗೆ ತೃಪ್ತಿ ಸಿಗಲಿಲ್ಲ. ಆದರೂ ಆಡುವ ಮಾತು, ಮಾಡುವ ಕೆಲಸಗಳು ನಿಲ್ಲುತ್ತಿಲ್ಲ. ವಾಗ್ಮಿ, ಶ್ರೀಮಂತ, ದಾನಿ ಎಂದು ತನುವನ್ನು ಗುರುತಿಸಬಹುದು. ಆದರೂ ತನುವಿನಲ್ಲಿಯ ಸಂಕಟ ಶಮನಗೊಳ್ಳುತ್ತಿಲ್ಲ.

ಆರಿಗೆಯೂ ಸಮನಿಸದು ಲಿಂಗಮುಖದಲುದಯವಾದ ಶರಣಂಗಲ್ಲದೆ, ಕೂಡಲಸಂಗನ ಶರಣರ ಭಕ್ತಿ ಭಂಡಾರವು ಎನಗೆಂತು ಸಾಧ್ಯವಪ್ಪದು ಹೇಳೆನ್ನ ತಂದೆ :

ತನುವಿನಲ್ಲಿ ಜ್ಞಾನ ಭರಿತವಾಗಿದೆ. ಅದು ಜ್ಞಾನ ಭಂಡಾರದ ಕಣಜ. ಮನ, ಜ್ಞಾನವನ್ನು ಪುಸ್ತಕದಲ್ಲಿ, ಅನ್ಯರ ಮಾತುಗಳಲ್ಲಿ ಹುಡುಕುತ್ತದೆ. ಸುಖವನ್ನು ಅನ್ಯ ತನುವಿನಲ್ಲಿ ಹುಡುಕುತ್ತಿದೆ. ಶಾಂತಿ ಸಮಾಧಾನವನ್ನು ಪುಣ್ಯ ಕ್ಷೇತ್ರದಲ್ಲಿ, ದೇವಸ್ಥಾನದಲ್ಲಿ ಹುಡುಕುತ್ತಲಿದೆ. ಶ್ರೀಮಂತಿಕೆಯನ್ನು ಕರೆನ್ಸಿಯಲ್ಲಿ, ಆಭರಣದಲ್ಲಿ, ಭೂಮಿಯಲ್ಲಿ ಹುಡುಕುತ್ತಲಿದೆ. ಮನ ತನುವಿನ ಸಹಾಯದಿಂದ ಎಲ್ಲವನ್ನೂ ಪಡೆದರೂ, ತನು ಸಮಾಧಾನದಿಂದ ಇರಲು ಸಾಧ್ಯವಾಗುತ್ತಿಲ್ಲ.

ಭಂಡಾರ ಎಲ್ಲಿದೆಯೆಂದು ಮನಕ್ಕೆ ಹೇಗೆ ಸಾಧ್ಯವಾಗುವುದು ಹೇಳೆನ್ನ ತಂದೆ ? ಮನ ತನು ಹಿಡಿದು ಹೊರಗಿರುವ ನಿಧಿಯನ್ನು ಹುಡುಕಬಹುದೆ ಹೊರತು ತನುವಿನಲ್ಲಿರುವ ನಿಧಿಯನ್ನು , ತನುವನ್ನೆ ಆವರಿಸಿದ ಮನ ಹುಡುಕಲು ಸಾಧ್ಯವೆ ? ಭ್ರಮೆಯಿಂದ ಕೂಡಿದ ಮನ ಬ್ರಹ್ಮನನ್ನು ಹುಡುಕಲು ಸಾಧ್ಯವೆ ? ಇದೊಂದು ಯಕ್ಷಿಣಿ ವಿದ್ಯೆ. ತನುವಿನಲ್ಲಿಯ ಸಂಪತ್ತನ್ನು ಹುಡುಕುವ ತಂತ್ರಜ್ಞಾನ ಮನಕ್ಕೆ ಒಲಿತಾಗ ಮಾತ್ರ ಮನದ ಭ್ರಮೆ ತೊಲಗಿ ಬ್ರಹ್ಮನಾಗುತ್ತದೆ. ಅರ್ಥ ಪ್ರಾಣ ಅಭಿಮಾನ ಸಮರಸವಾಗಿ ಸಮನಿಸುತ್ತದೆ. ಸ್ವಸುಖದ ಅನುಭವ ಸಿದ್ಧಿಸುತ್ತದೆ.

319

ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ ?
ಸಿರಿಯಾಳನಂತೆ ಉಣಲಿಕ್ಕ ಬಲ್ಲನೆ ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ ?
ಉಂಡು ಉಟ್ಟು ಕೊಟ್ಟಡೆ ಮುಯ್ಯಿಗೆ ಮುಯ್ಯೆನಿಸಿತ್ತು ,
ಎನಗೆ ಕೊಟ್ಟಡೆ ಧರ್ಮ, ಕೂಡಲಸಂಗಮದೇವಾ.

ಬಾಣ, ಮಯೂರ ಕಂಧಾರದ ನಂದರಾಜನ ಆಸ್ಥಾನದ ಕವಿಗಳು. ರಾಜ ಬಾಣ ಕವಿಯನ್ನು ಜಲಕ್ರೀಡೆಗೆ ಕರೆದ. ಅವನಿಗೆ ಕುಷ್ಟರೋಗ ನಿಮ್ಮೊಂದಿಗೆ ಬರಲಾರನೆಂದು ಮಯೂರ ಮೂದಲಿಸಿ ನುಡಿದ. ಮಯೂರನ ಮಾತಿಗೆ ನೊಂದ ಬಾಣ, ಸೂರ್ಯಶತಕವನ್ನು ಬರೆದು ಆತನನ್ನು ಒಲಿಸಿಕೊಂಡು, ಚರ್ಮದ ಕಾಂತಿ ಪಡೆದ. ರಾಜನ ಮೆಚ್ಚುಗೆ ಪಡೆದ. ಆಸ್ಥಾನದ ಮಹಾಕವಿ ಎನ್ನಿಸಿಕೊಂಡ.

ಮಯೂರನಿಗೆ ಅಸಮಧಾನವಾಯಿತು. ಆಸ್ಥಾನದಲ್ಲಿ ತನ್ನ ಎರಡು ಕೈ ಕಡೆದುಕೊಂಡು ಶಿವನನ್ನು ಸ್ತುತಿಸಿ ಬಾಣಗದ್ಯ ಹೇಳಿದ. ಶಿವ ಒಲಿದು ಕೈಗಳನ್ನು ಕೊಟ್ಟ.

ಸಿರಿಯಾಳ ಮಹಾಭಕ್ತ. ಉಣ್ಣಲು ಬಂದ ಜಂಗಮನು, ಮಗುವಿನ ಮಾಂಸದೂಟ ಕೇಳಲು ಮಗನನ್ನೇ ಕಡಿದು ಉಣಬಡಿಸಿದ, ಶಿವ ಪ್ರತ್ಯಕ್ಷನಾಗಿ ಮರಳಿ ಮಗನನ್ನು ಕೊಟ್ಟ.

ವಸ್ತ್ರನೇಯ್ದು ಮಾರಲು ಹೋದ ದಾಸಿಮಯ್ಯನನ್ನು ತಿರುಕನೊಬ್ಬ ವಸ್ತ್ರ ಬೇಡಿದ. ಕೂಡಲೇ ಮೈತುಂಬಾ ಹೊದಿಸಿ ಆನಂದ ಪಟ್ಟ. ವಸ್ತ್ರ ಪಡೆದ ತಿರುಕ ಆತನೆದುರಿಗೆ ಪರಪರನೆ ಹರಿದು ಧರಿಸಿಕೊಂಡ. ದಾಸಿಮಯ್ಯನ ಸಂತೋಷಕ್ಕೆ ಚ್ಯುತಿ ಬರಲಿಲ್ಲ. ಶಿವ ಪ್ರತ್ಯಕ್ಷವಾಗಿ ಹರಿಸಿದ.

ಎಲೆ ಶಿವನೆ ಬಾಣ ಮಯೂರನಂತೆ ಎನಗೆ ಬಣ್ಣಿಸಲು ಆಗುವುದಿಲ್ಲ. ಸಿರಿಯಾಳನಂತೆ ಎನಗೆ ಉಣಲಿಕ್ಕುವುದು ಸಾಧ್ಯವಿಲ್ಲ. ದಾಸಿಮಯ್ಯನಂತೆ ಎನಗೆ ದಾನ ಕೊಡಲು ಸಾಧ್ಯವಿಲ್ಲ. ನೀನು ಶಿವ, ಬಾಣ ಮಯೂರರಿಂದ ಬಣ್ಣಿಸಿಕೊಂಡು ಪ್ರತ್ಯಕ್ಷನಾದೆ. ವಸ್ತ್ರಕೊಟ್ಟ ದಾಸಿಮಯ್ಯನಿಗೆ ಪ್ರತ್ಯಕ್ಷನಾದೆ. ಉಂಡು ಉಟ್ಟು ಕೊಟ್ಟವರಿಗೆ ನೀನು ಒಲಿದರೆ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡಂತಾಗಲಿಲ್ಲವೆ ? ಕೊಟ್ಟವರಿಗೆ ಒಲಿದರೆ ಅದು ಲಂಚ ! ಎನಗೆ ಒಲಿದರೆ ಅದು ಧರ್ಮ !

ತನುಗಳೆಲ್ಲ ಅರಿವಿನ ಧರ್ಮದಿಂದ ಮೆರೆಯಬೇಕು. ಅರಿವು ತನುವಿನಲ್ಲಿಯೇ ಸಂಗಮವಾಗಿದೆ. ಅದನ್ನು ಪಡೆಯುವ ಮನವೂ ತನುವಿನಲ್ಲಿಯೇ ಸಂಗಮವಾಗಿದೆ. ಆದರೂ ಅರಿವಿನ ತನುವಿಗೆ ಅರಿವಿನಿಂದ ನಡೆಯುವುದು ಎಷ್ಟೊಂದು ಕಠಿಣ ! ತಿರುಪತಿ ಶ್ರೀಶೈಲ ಕಾಶೀ ಕೇದಾರ ಹರದ್ವಾರ ಅಮರನಾಥ ಶಬರಿಮಲೆಗೆ ಪಾದಯಾತ್ರೆ ಮಾಡುತ್ತದೆ. ದೇವರನ್ನು ಕಲ್ಲು ಮಣ್ಣಿನಿಂದ ನಿರ್ಮಿಸಿ; ಅದನ್ನೇ ದೇವರೆಂದು ಅರ್ಚಿಸಿ ಪೂಜಿಸುತ್ತದೆ. ಮಣ್ಣಿನಿಂದ ಬಂದ ಹೊನ್ನು ಪಡಿ ಪದಾರ್ಥಗಳನ್ನು ಮಣ್ಣಿನ ಮೂರ್ತಿಗೆ ಅರ್ಪಿಸಿ ಧನ್ಯನಾದೆನೆಂದು ಮೆರೆಯುತ್ತದೆ. ಇದು ಧರ್ಮ ಹೇಗಾದೀತು ? ತನುವಿನ ಅರಿವು ತನುವಿಗೆ ಒಲಿಯುವುದೇ ಧರ್ಮ ! ಕೊಡ ಕೊಳ್ಳುವ ವ್ಯವಹಾರವಿಲ್ಲದೆ ಅರಿವು ತಾನಾಗಿಯೇ ಮನಕ್ಕೆ ಒಲಿಯುವುದೇ ಧರ್ಮ ! ಈ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ! ವಿಶ್ವದ ತನುಗಳಿಗೆ ಶಾಂತಿ !

320

ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ.
ಸಿರಿಯಾಳ ತನ್ನ ಮಗನಿತ್ತು ಪ್ರಾಣ ಪ್ರಸಾದವ ಪಡೆದ.
ಬಲ್ಲಾಳದೇವ ತನ್ನ ವಧುವನಿತ್ತು ಸಮತೆ ಪ್ರಸಾದವ ಪಡೆದ.
ಇವರೆಲ್ಲರೂ ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯನು.
ನಾನೇನನೂ ಅರಿಯದ ಭಕ್ತಿಯ ಬಡವಂಗೆ ಕರುಣಿಸು
ಕೂಡಲಸಂಗಮದೇವಾ.

ಪುಸ್ತಕಗಳಿಂದ ಪ್ರವಚನಗಳಿಂದ ಶಾಲಾಕಾಲೇಜುಗಳ ಉಪನ್ಯಾಸಗಳಿಂದ ಮಾಹಿತಿ ಪಡೆಯಬಹುದು, ಜ್ಞಾನ ಪಡೆಯುವುದು ಸಾಧ್ಯವಿಲ್ಲ, ಮಾಹಿತಿ ಜ್ಞಾನವಲ್ಲ! ಜ್ಞಾನ ತನುವಿನಲ್ಲಿಯೇ ಇದೆ. ಇದನ್ನು ಪಡೆಯುವ ತಂತ್ರಗಾರಿಕೆ ಮನಕ್ಕೆ ದಕ್ಕಬೇಕು. ಮನ ಈ ಬಗ್ಗೆ ಹಗಲಿರಳೂ ಚಿಂತಿಸಬೇಕು.

ದಾಸಿಮಯ್ಯ, ಸಿರಿಯಾಳ, ಬಲ್ಲಾಳದೇವರು ಜ್ಞಾನ ಪಡೆಯುವ ತಂತ್ರಜ್ಞಾನ ಬಲ್ಲ ನಿಪುಣರು. ಮನದ ಅಜ್ಞಾನವನ್ನು ಮನದಿಂದಲೇ ಕೊಂದು ಅರಿವಿನ ಸುಖ ಉಂಡು ತೃಪ್ತರಾದವರು.

ತನುವಿನಲ್ಲಿ ಅರಿವೆಂಬ ಗುರುವಿದ್ದಾನೆ. ಮನವೆಂಬ ಶಿಷ್ಯನೂ ಇದ್ದಾನೆ. ಶಿಷ್ಯ ನಿಪುಣನಲ್ಲದಿದ್ದರೇನಂತೆ ತನು ಗುರುವಿನದಲ್ಲವೆ ? ಅರಿವನ್ನು ಬಳಕೆ ಮಾಡದ ಮನ, ತನುವನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ ಭಕ್ತಿ ಮಾಡುತ್ತದೆ. ಭಗವದ್ಗೀತೆ, ಬೈಬಲ್ ಓದಿ ಭಕ್ತಿ ಮಾಡುತ್ತದೆ. ಶಿವಪುರಾಣ, ದೇವಿಪುರಾಣ ಪಾರಾಯಣ ಮಾಡಿ ಭಕ್ತಿ ಮಾಡುತ್ತದೆ. ಅರಿವೆಂಬ ಗುರುವಿನ ಸಮೀಪ ಹೋಗುವುದು ಮಾತ್ರ ಸಾಧ್ಯವಾಗಿಲ್ಲ. ಆದರೇನಾಯಿತು ? ತನು ನಿನ್ನದೆ, ಮನವೂ ನಿನ್ನದೆ, ಅದು ನೀನು ಸಾಕಿದ ಬಡವ. ಕರುಣಿಸಿ ಕೃಪೆ ಮಾಡಿ ನಿನ್ನತ್ತ ಸೆಳೆದು ನಿನ್ನಂತೆ ಮಾಡಿಕೊ ನನ್ನಪ್ಪ ಎಂದು ಗುರುದೇವನನ್ನು ಪ್ರಾರ್ಥಿಸುವ ಸುಳುಹು ನೀಡಿದ್ದಾರೆ ಬಸವಣ್ಣನವರು.

321

ತ್ರಿವಿಧ ತ್ರಿವಿಧದಲಿ ತಪ್ಪಿದ ತಪ್ಪುಕ ನಾನಯ್ಯ.
ಒಮ್ಮಿಂಗೆ ಕರುಣಿಸಯ್ಯಾ.
ಇದನರಿದು ಇನ್ನು ತಪ್ಪಿದೆನಾದಡೆ
ನೀವು ಮಾಡಿತ್ತೆ ಸಲುವುದು ಕೂಡಲಸಂಗಮದೇವಾ.

ತನು ಒಂದಾಗಿ ಕಂಡರೂ ಅದರಲ್ಲಿ ಇನ್ನೆರಡು ತನುಗಳಿವೆ. ಅರಿವಿನ ತನು: ಇದನ್ನು ಕಾರಣ ತನುವೆಂದು ಕರೆಯುತ್ತಾರೆ. ಮನದ ತನು: ಇದನ್ನು ಸೂಕ್ಷ್ಮ ತನುವೆಂದು ಕರೆಯುತ್ತಾರೆ. ಸ್ಥೂಲ ತನು: ಇದನು ಜಡ ತನು ಎಂದು ಕರೆಯುತ್ತಾರೆ. ಕಾರಣ ಮತ್ತು ಮನದ ಆದೇಶ ಪಾಲಿಸುವ ಕೆಲಸ ಮಾತ್ರ ಸ್ಥೂಲ ತನುವಿನದು. ಇದಕ್ಕೆ ಯಾವ ಸ್ವಾತಂತ್ರ್ಯವೂ ಇಲ್ಲ.

ಸ್ಥೂಲ ಸೂಕ್ಷ್ಮ ಕಾರಣ ತನುಗಳನ್ನು ಸ್ಪಷ್ಟವಾಗಿ ಸೂಕ್ಷ್ಮ ತನುವಿನಿಂದ ತಿಳಿದರೆ ಬ್ರಹ್ಮವೂ ತಾನೇ, ವಿಷ್ಣುವೂ ತಾನೇ, ರುದ್ರನೂ ತಾನೇ. ತಿಳಿಯದಿದ್ದರೆ ಬ್ರಹ್ಮ ವಿಷ್ಣು ರುದ್ರರನ್ನು ಕಲ್ಲಲ್ಲಿ ಕೆತ್ತಿ, ಕಾಗದದಲ್ಲಿ ಚಿತ್ರಿಸಿ, ಅಕ್ಷರದಲ್ಲಿ ಬರೆದು ಆರಾಧಿಸುವ ತಪ್ಪು ಕೂಡಾ ತನುವಿನದೇ !

ತನುವೆಂದರೇನು ? ತನುವಿನಲ್ಲಿರುವ ಅರಿವೆಂಬ ಗುರುದೇವನೆಂದರೆ ಯಾರು ? ಮನವೆಂದರೇನು ? ಆ ಮನದಿಂದಲೇ ಅರಿವೆಂಬ ಗುರುದೇವನನ್ನು ಒಲಿಸಿಕೊಳ್ಳುವ ಬಗೆ ಹೇಗೆ ಎಂದು ಒಮ್ಮೆ ಕರುಣಿಸು.

ತನು ಮನ ಅರಿವು ಎಂಬ ತ್ರಿವಿಧವನು ಮನದಿಂದಲೇ ಅರಿತು ಗುರು ಕರುಣೆಯಾದ ಮೇಲೆ ಮತ್ತೆ ತಪ್ಪಿದೆನಾದಡೆ ನಿಮಗೆ ತಿಳಿದಂತೆ ಈ ತನುವನ್ನು ಸಲಹು ಗುರುದೇವ ಎಂದು ತನುವಿನ ಅರಿವೆಂಬ ಗುರುದೇವನನ್ನು ಬೇಡುವ ಸೂತ್ರ ಅರುಹಿದ್ದಾರೆ ಅಣ್ಣನವರು.

322

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ.
ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೆ ದಿಬ್ಯ.
ಕೂಡಲಸಂಗಮದೇವಯ್ಯಾ,

ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣ ಸಾಕ್ಷಿ.

ಅರಿವಿಗೆ ಕಣ್ಣುಗಳಿವೆ. ಅರಿವಿಗೆ ಕಿವಿ, ಮೂಗು, ನಾಲಿಗೆ, ಚರ್ಮವಿದೆ. ಅರಿವಿಗೆ ತನುವಿದೆ. ಇದೆಲ್ಲ ಅರಿವಿನ ಸೊತ್ತು. ಈ ಅರಿವು ಗುರುದೇವನ ರೂಪದಲ್ಲಿ ತನುವಿನ ಮೂಲಕ ಕೆಲಸ ಮಾಡುತ್ತದೆ. ತನು ಅರಿವಿನ ವಿರಾಟ ಸ್ವರೂಪ !

ಅರಿವಿನ ಕಣ್ಣುಗಳಲ್ಲಿ ಮನ ಆವರಿಸಿದೆ. ಅರಿವಿನ ಕಿವಿಗಳಲ್ಲಿ ಮನ ಆವರಿಸಿದೆ. ಅರಿವಿನ ಮೂಗು, ನಾಲಿಗೆ, ಚರ್ಮದಲ್ಲಿ ಮನ ಆವರಿಸಿದೆ. ಇಡೀ ಅರಿವಿನ ತನುವಿನಲ್ಲಿ ಮನ ಆವರಿಸಿ, ರಕ್ಕಸನಂತೆ ಕೆಲಸ ಮಾಡುತ್ತದೆ. ಮನ ಅರಿವಿನಿಂದ ತನುವನ್ನು ರಕ್ಕಸ ತನುವನ್ನಾಗಿ ಮಾಡಿದೆ. ಕಣ್ಣುಗಳಲ್ಲಿ ವಾಸ ಮಾಡಿದ ಅರಿವೆಂಬ ಗುರುದೇವ :

ನೋಡುವ ಸತ್ಯವನ್ನು ನೋಡು, ನೋಡಬಾರದ ಅಸತ್ಯವನ್ನು ನೋಡಬೇಡವೆಂದರೂ ಮನ ಕೇಳುವುದಿಲ್ಲ. ಅಸತ್ಯವಾದುದನ್ನೇ ನೋಡಿ, ತನುವಿನೊಂದಿಗೆ ಅನಂತಕೋಟಿ ತಪ್ಪು ಮಾಡುತ್ತದೆ. ಮನ ಅಸತ್ಯವಾದುದನ್ನೇ ಕೇಳಿ ಅನಂತಕೋಟಿ ತಪ್ಪು ಮಾಡುತ್ತದೆ. ಮನ ಮೂಗಿನಿಂದ ಮೂಸಿಸಿ, ನಾಲಿಗೆಯಿಂದ ರುಚಿಸಿ, ಚರ್ಮದಿಂದ ಸ್ಪರ್ಶಿಸಿ ಅರಿವಿನ ತನುವಿನ ಮೂಲಕ ಅನಂತಕೋಟಿ ತಪ್ಪು ಮಾಡಿಸುತ್ತದೆ.

ತನುವಿನ ಕಣ ಕಣದಲ್ಲಿ ತನ್ಮಯವಾದ ಅರಿವೆಂಬ ಗುರುದೇವನ ಸೈರಣೆ ಅಪಾರ ! ತಪ್ಪು ಮಾಡಿದಂತೆಲ್ಲ ಮನಕ್ಕೆ ಮೈದಡವಿ, ಕಂದಾ ಮತ್ತೊಮ್ಮೆ ತಪ್ಪೆಸಗಬೇಡ. ನನ್ನ ತನುವಿನಲ್ಲಿ ಅನಂತಕೋಟಿ ಜನ್ಮದಿಂದಲೂ ತಪ್ಪು ಮಾಡುತ್ತಾ ವಾಸ ಮಾಡಿರುವಿ, ಇನ್ನಾದರೂ ತಪ್ಪೆಸಗಬೇಡ, ನೋಡುವ ಬೆಳಕಿನಲ್ಲಿ ಅರಿವಿದೆ. ಕೇಳುವ ಶಬ್ದದಲ್ಲಿಯೂ ಅರಿವಿದೆ. ಮೂಸಿಸುವ ವಾಸನೆಯಲ್ಲಿ, ರುಚಿಸುವ ನಾಲಿಗೆಯಲ್ಲಿ, ಸ್ಪರ್ಶಿಸುವ ಚರ್ಮದಲ್ಲಿ ಅರಿವಿದೆ. ಆ ಅರಿವು ಬ್ಯಾರಾರು ಅಲ್ಲ. ನಿನ್ನನ್ನು ಹಡೆದ ತಂದೆ. ನೀನು ನನ್ನ ಮಗು ! ನಿನಗೆ ಹೊಸ ಜನ್ಮ ನೀಡುವ ಗುರು ನಾನು, ನೀನು ನನಗೆ ಶಿಷ್ಯ ! ನೀನು ಗಂಡಲ್ಲ, ಮನವೆಂಬ ಮದನಾಂಗಿ ನೀನು. ನಾನು ನಿನ್ನ ಗಂಡ, ಪರಮ ಪುರುಷ ನಾನು !

ನೋಡಿದರೆ ತಂದೆಯೊಂದಿಗೆ ಮಗುವಾಗಿ ನೋಡು. ಕೇಳಿದರೆ ತಂದೆಯೊಂದಿಗೆ ಮಗುವಾಗಿ ಕೇಳು. ರುಚಿಸಿದರೆ, ಮೂಸಿಸಿದರೆ, ಸ್ಪರ್ಶಿಸಿದರೆ ತಂದೆಯೊಂದಿಗೆ ಮಗುವಾಗಿ ಅನುಕರಣೆ ಮಾಡು. ಪತಿಯೊಂದಿಗೆ ಸತಿಯಾಗಿ ಅನುಕರಣೆ ಮಾಡು. ಗುರುವಿನೊಂದಿಗೆ ಶಿಷ್ಯನಾಗಿ ಅನುಕರಣೆ ಮಾಡು! ಗಂಡಗಂಜಿ ಬದುಕು ಮಾಡು, ಮುತ್ತೈದೆಯಾಗು ! ಗುರುವಿನ ಗುಲಾಮನಾಗು, ತಂದೆಯ ಮಾತು ಪಾಲಿಸಿ ತಂದೆಯೊಂದಿಗೆ ಹೆಜ್ಜೆ ಹಾಕು ! ನೀನು ಮಾಡಿದ ಅನಂತಕೋಟಿ ತಪ್ಪುಗಳನ್ನು ಒಂದು ಬೊಟ್ಟಿಲೆ ತೊಡೆವೆ. ನೀನು ಮಾಡಿದ ಬೆಟ್ಟದಷ್ಟು ಪಾಪವನು ಒಂದು ಬೆಟ್ಟಿಲೆ ಗೋವರ್ಧನ ಗಿರಿಯಂತೆ ಬೀಸಾಡುವೆ.

ಎಲೆ ಮನವೆ, ಪ್ರೇಯಸಿ ನೀನು ಪ್ರಿಯಕರ ನಾನು. ನಿನಗೂ ನನಗೂ ಅವಿನಾಭಾವ ಸಂಬಂಧ, ರಾಧಾ ಕ್ರಿಷ್ಣನಂತೆ ! ಎಲೆಮನವೆ, ನಾರಿ ನೀನು, ಈಶ್ವರ ನಾನು ನನಗೂ ನಿನಗೂ ಅವಿನಾಭಾವ ಸಂಬಂಧ, ಅರ್ಧನಾರೀಶ್ವರನಂತೆ !

ಇದೆಲ್ಲವನ್ನು ತಿಳಿದ ಕಿನ್ನರ ಬೊಮ್ಮಣ್ಣ ಮಹಾಜ್ಞಾನಿ. ಅರಿವಿನ ಮಹಾಮನೆಯ ಮನದ ಕಾವಲುಗಾರ. ಮನವನ್ನು ಮಹಾದೇವನಿಗೆ ಅರ್ಪಿಸಿದ ಮಹಾತ್ಮ. ಆದರೂ ಒಂದು ಕ್ಷಣ ಮೈಮರೆತ. ಅಕ್ಕಮಹಾದೇವಿಯ ನಿರೂಪು ನೋಡಲು ಸಾಧ್ಯವಾಗಲಿಲ್ಲ. ರೂಪು ನೋಡಿ ಅರೆಕ್ಷಣ ವಿಚಲಿತನಾದ. ಅರಿವಿನ ನಿಮ್ಮ ಮಹಾಮನೆಯ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣ ಸಾಕ್ಷಿಯಾಗಿ ಇನ್ನು

ತಪ್ಪಿದೆನಾದಡೆ ನಿಮ್ಮ ಪಾದವೆ ದಿಬ್ಯ ಸಂಗಮನಾಥನೆ.

ಬಸವಣ್ಣನವರು ಅರಿವಿನ ಭಂಡಾರವನ್ನು ಬಾಚಿಕೊಳ್ಳುವ ಸರಳ ಸೂತ್ರವನ್ನು ಸಕಲ ತನುಗಳಿಗಾಗಿ ಹೆಣೆದಿದ್ದಾರೆ.

323

ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯಾ ,
ಬಡವನೆಂದೆನ್ನ ಕಾಡದಿರಯ್ಯಾ .
ಎನಗೆ ಒಡೆಯರುಂಟು ಕೂಡಲಸಂಗನ ಶರಣರು.

ಅರಿವು ಮತ್ತು ಮನವನ್ನು ಸಾಕ್ಷೀಕರಿಸಿ ನೋಡುವ ಸೂತ್ರವನ್ನು ಅಣ್ಣನವರು ಈ ವಚನದಲ್ಲಿ ಹೆಣೆದಿದ್ದಾರೆ. ಮನ ತನುವನ್ನು ಹಿಡಿದು ಚಿಕ್ಕ ಚಿಕ್ಕ ತಪ್ಪುಗಳನ್ನು ಮಾಡುವುದ ಸಹಜ. ಅರಿವು ಅಡಿಗಡಿಗೆ ಮನವನ್ನು ಜಡಿದು ದಂಡಿಸುವುದೂ ಸಹಜ. ಈ ಎರಡೂ ವೃತ್ತಿಗಳನ್ನು ತನುವಿನಲ್ಲಿ ಅರಿವಿನಿಂದ ನೋಡುವುದು ಒಂದು ಅದ್ಭುತವಾದ ಕಲೆ.

ಜ್ಞಾನಕ್ಕೆ ಮನ ಮರುಳಾಗುವ ಕಲೆಯನ್ನು ಶ್ರೀಗುರು ಸೂಚಿಸುತ್ತಾನೆ. ಅಡಿಗಡಿಗೆ ತಪ್ಪಿದಾಗ ಮನದ ಮೈದಡವಿ ಸವಿ ಮಾತುಗಳನ್ನಾಡುತ್ತಾ ಪ್ರೀತಿಸುತ್ತಾನೆ. ತನುವಿನಲ್ಲಿರುವ ಅರಿವೆಂಬ ಸದ್ಗುರು ಹಾಗಲ್ಲ. ತಪ್ಪು ಮಾಡುವುದಕ್ಕಾಗಿಯೇ ಹುಟ್ಟಿದ ಬಡ ಮನವನ್ನು ಅಡಿಗಡಿಗೆ ಜಡಿದು ನೋಡುತ್ತಾನೆ. ನೋಡಿದರೆ, ಕೇಳಿದರೆ, ಮುಟ್ಟಿದರೆ, ರುಚಿಸಿದರೆ ತಪ್ಪು ಕಂಡು ಹಿಡಿಯುತ್ತಾನೆ. ಮನಕ್ಕೆ ಅರಿವಿನ ಮನವರಿಕೆಯಾಗಿ ಅರಿವಾದ ಮೇಲೆಯೂ ಗುರುರಾಯ ಕಾಡುವುದು ಬಿಡುವುದಿಲ್ಲ.

ಅರಿವೆಂಬ ಗುರುವಿನ ಬೋಧೆ ಮನವೆಂಬ ಶಿಷ್ಯನ ಅಳಲು ಸಾಕ್ಷೀಕರಿಸಿ ನೋಡಿ ಕಾಡದಿರಯ್ಯಾ , ನಿನ್ನನ್ನು ಸಂಪೂರ್ಣ ಬಲ್ಲ ಶರಣರೆಂಬ ಒಡೆಯರುಂಟು ನನಗೆ ! ಅವರು ನಿನ್ನನ್ನು ಕೂಡಿ, ನಿನ್ನಲ್ಲಿಯೇ ಸಂಗಮವಾಗಿ, ನಿನಗೆ ಶರಣು ಹೋದ ಶರಣರವರು.

324

ಭಕ್ತಿ ವಿಶೇಷವ ಮಾಡುವಡೆ ಹತ್ತು ಬೆರಳುಂಟು,
ಹಾಸಿ ದುಡಿವಡೆ ತನಗುಂಟು, ತನ್ನ ಪ್ರಮಥರಿಗುಂಟು.
ಮಾರಿತಂದೆಗಳಂತೆ ಎನಗೇಕಹುದಯ್ಯಾ ?
ರತ್ನದ ಸಂಕಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ,
ಶಿವಧೋ ಶಿವಧೋ !

ಮೋಳಿಗೆಯ ಮಾರಿತಂದೆ ಎನ್ನುವ ಶರಣ ಕಾಶ್ಮೀರದ ಅರಸ. ಆತನ ಹೆಸರು ಮಹಾದೇವ ಭೂಪಾಲ ! ಅರಸ ಅಭಿವೃದ್ಧಿ ಹೊಂದಬೇಕಾದರೆ ಮತ್ತೊಬ್ಬ ರಾಜನನ್ನು ಕೊಲ್ಲಬೇಕು. ಆ ರಾಜ್ಯದ ಪ್ರಧಾನಿಯನ್ನು ಸೈನ್ಯವನ್ನು ಕೊಂದು, ಹೆಂಡತಿ ಮಕ್ಕಳನ್ನು ಕೊಂದು, ಕಿರೀಟ, ಸಿಂಹಾಸನ, ಆಭರಣ ಪಡೆಯಬೇಕು. ಆ ರಾಜ್ಯವನ್ನು ತನ್ನದಾಗಿಸಿಕೊಂಡು ಆ ಪ್ರಜೆಗಳಿಗೆ ನ್ಯಾಯ ಒದಗಿಸುವ ನಾಟಕ ಆಡಬೇಕು.

ತನಗೆ ರಾಜ್ಯ, ಸಿಂಹಾಸನ, ಹೆಂಡತಿ ಮಕ್ಕಳಿದ್ದಾರೆ, ಸಂಪತ್ತಿದೆ. ಆ ರಾಜನಿಗೂ ಸಿಂಹಾಸನ,

ಹೆಂಡತಿ, ಮಕ್ಕಳು, ಸಂಪತ್ತಿದೆ. ನಾನು ನನ್ನ ರಾಜ್ಯದಲ್ಲಿ ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತೇನೆ. ಆ ರಾಜನೂ ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಾನೆ. ಆದರೂ ರಾಜನನ್ನು ಕೊಂದು ರಾಜ್ಯ ಪಡೆಯಬೇಕೆಂಬ ಬೇಗುದಿಯೇಕೆ ಬರುತ್ತದೆ ? ಬಣ್ಣ ಮೆತ್ತಿದ ಲೋಹದ ಆಭರಣ, ಕಿರೀಟ, ಸಿಂಹಾಸನ ತನುಗಳಿಗಿಂತ ಶ್ರೇಷ್ಟವೆ ? ಈ ಬೇಗುದಿ ರತ್ನದ ಸಂಕಲೆಯಂತೆ ಕಾಡುತ್ತಿದೆಯಲ್ಲಾ ಎಂದು ಕಾಶ್ಮೀರದ ಅರಸ ದಂಪತಿಗಳಾದ ಮಹಾದೇವ ಭೂಪಾಲ ಮಹಾದೇವಿ ಯೋಚಿಸಿದರು. ಕಲ್ಯಾಣದ ಬಸವಣ್ಣನ ವಾರ್ತೆ ಕೇಳಿದರು. ಕೂಡಲೇ ರತ್ನದ ಸಂಕಲೆಯನ್ನು ಕೊಡವಿ ಕಲ್ಯಾಣಕ್ಕೆ ಬಂದರು. ಅರಿವಿನ ಮಹಾಮನೆಯ ಸದಸ್ಯರಾದರು.

ಉಪಜೀವನಕ್ಕಾಗಿ ಹತ್ತು ಬೆರಳುಗಳಿಗೂ ಕಟ್ಟಿಗೆ ಕಡಿಯುವ ಕಾಯಕ ದೊರೆಯಿತು. ತಮಗೂ ಆಯಿತು, ಮನೆಗೆ ಬಂದ ಜಂಗಮರಿಗೂ ಆಯಿತು. ಶರಣ ದಂಪತಿಗಳು ಅರಿವಿಗೆ ಭಕ್ತಿ ಮಾಡಿ ಅರಿವಿನಿಂದ ಮೆರೆದರು.

ಎಲೆ ಮನವೆ, ಮಾರಿತಂದೆಗಳಂತೆ ರತ್ನದ ಸಂಕಲೆಗಳನ್ನು ಕೊಡವಿ ಅರಿವಿನ ಜ್ಞಾನರತ್ನವನು ಅಲಂಕರಿಸಬಾರದೆ ? ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಇದು ಜಗಕ್ಕಿಕ್ಕಿದ ವಿಧಿಯೆಂದು ನಿನಗೆ ತಿಳಿಯಬಾರದೆ ? ನಿನ್ನದೆಂಬುದು ಜ್ಞಾನ ರತ್ನ ! ಅದನ್ನು ಕೆಡಗೊಡದೆ ಅಲಂಕರಿಸಿ ಭೂಮಿಯನ್ನು ಹೇಮವನ್ನು ವಿಷಯವನ್ನು ಒಮ್ಮೆ ಜ್ಞಾನದಿಂದ ನೋಡು.

ಜಲ ಕುದ್ದು ಗಟ್ಟಿಯಾದದ್ದೇ ಮಣ್ಣು. ಅದರ ಗರ್ಭದಲ್ಲಿದ್ದ ಹಳದಿ ಲೋಹವೇ ಹೇಮ. ಮಣ್ಣಿನಲ್ಲಿ ಹುಟ್ಟಿ ಮಣ್ಣಿನ ಮಡಕೆಯಲ್ಲಿ ಬೆಂದ ಹೇಮ ನಿನಗಿಂತ ಶ್ರೇಷ್ಟವೆ ?

ಎಲೆ ಮನವೆ ನೀನು ವಾಸ ಮಾಡಿದ ತನು ಕೂಡಾ ಜಲ ಬಿಂದುವಿನಿಂದ ಸೃಷ್ಟಿಯಾಗಿದೆ. ಜಲಬಿಂದು ಗರ್ಭ ಹೊಕ್ಕು ಆ ಜಲಬಿಂದುವೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮದ ಕವಚ ಹೊಂದಿ ಅರಿವಿನ ತನುವಾಗಿದೆ. ಅರಿವಿನಿಂದ ಒಮ್ಮೆ ಯೋಚಿಸು, ಜಲದಿಂದಲೇ ಭೂಮಿ ! ಜಲದಿಂದಲೇ ಹೇಮ ! ಜಲದಿಂದಲೇ ಅರಿವಿನ ತನು ! ಅಂದ ಮೇಲೆ ಭೂಮಿ ಹೇಮ ನಿನ್ನ ಸ್ವರೂಪ ಆಗಲಿಲ್ಲವೆ ? ತನುವಿನಲ್ಲಿ ಮನದಿಂದಾಗಿ ಹುಟ್ಟಿದ ವಿಷಯದ ಆಸೆ ಹುಸಿಯಾಗಲಿಲ್ಲವೆ ?

ಅರಿವಿನ ತನುವಿಗೊಂದು ಮನ ಮಾಡಿ, ಆ ಮನಕ್ಕೆ ರತ್ನದ ಆಸೆಯನ್ನು ಹುಟ್ಟಿಸಿ, ಆ ಮನ ತನುವನ್ನು ರತ್ನದ ಸಂಕೋಲೆಯಲ್ಲಿ ಬಿಗಿದು ಕಾಡುತ್ತಿರುವ ಅರಿವೆಂಬ ಸಂಗಮನಾಥನೆ ಶಿವಧೋ ಶಿವಧೋ ಎಂದು ಬೇಡುವೆ ತಂದೆ, ರತ್ನದ ಬೇಡಿಗಳಿಂದ ಮನವನ್ನು ಬಿಡುಗಡೆಗೊಳಿಸು ನನ್ನಪ್ಪ !

325

ಮನೆ ನೋಡಾ ಬಡವರು, ಮನ ನೋಡಾ ಘನ.
ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ, ಬಂದ ತತ್ಕಾಲಕ್ಕುಂಟು,
ಕೂಡಲಸಂಗನ ಶರಣರು ಸ್ವತಂತ್ರಧೀರರು.

ಸರ್ವಾಂಗ ಕಲಿಗಳು: ಶರಣರು ಸರ್ವಾಂಗ ಕಲಿಗಳು. ಸೋಂಕಿನಲ್ಲಿ ಸುಖಿಗಳು. ನೋಡುವ ಕಣ್ಣು ನೋಡುವ ಸೌಂದರ್ಯವನ್ನು ನೋಡಿ ಸುಖಿಸುತ್ತದೆ. ದೇಹದೊಂದಿಗೆ ಬೇಡಿಕೆಯನ್ನೊಡ್ಡಿ

ಸಂಕಟ ಪಡುವುದಿಲ್ಲ. ಕಣ್ಣಿನಲ್ಲಿ ಅಜ್ಞಾನದೊಂದಿಗೆ ಕಾದುವ ಕಲಿತನವಿದೆ. ಜ್ಞಾನದೊಂದಿಗೆ ಸುಖಿಸುವ ಆನಂದವೂ ಇದೆ.

ಕಣ್ಣು ಲೋಹಕ್ಕೆ ಮೆತ್ತಿದ ಬಣ್ಣ ನೋಡಿ ಚಿನ್ನವೆಂದು ಮರುಳಾದರೆ ಇಡೀ ಅಂಗದ ಒಂದು ಭಾಗ ಕಲಿಯಾಗಲಿಲ್ಲ. ನೋಟದ ಸೋಂಕು ಅಂಗಕ್ಕೆ ಸುಖ ನೀಡಲಿಲ್ಲ.

ಪಸರಕ್ಕನುವಿಲ್ಲ : ಸರ್ವಾಂಗದಲ್ಲಿಯೂ ಅರಿವಿದೆ. ಮನಕ್ಕೆ ಅದನ್ನು ಬಳಕೆ ಮಾಡುವ ಕಲಿತನ ಬೇಕು, ಸುಳುಹು ಬೇಕು. ಮನ, ಅಂಗದ ಅರಿವು ಬಳಕೆ ಮಾಡಿ ಚಿನ್ನ ನೋಡಿದರೆ ಅದು ಹಳದಿ ಬಣ್ಣದ ಲೋಹ, ನೋಡಿದ ಸೋಂಕಿನಿಂದ ಸುಖಿಸುತ್ತದೆ, ಸಂಗ್ರಹಿಸುವುದಿಲ್ಲ.

ಹಾಗೆಯೇ ಕಿವಿಗೆ ಸೋಂಕಿದ ಶಬ್ದ ಅರಿವಿನಿಂದ ಅನಾವರಣಗೊಂಡು ಅಂಗದಲ್ಲಿಯೇ ಕರಗುತ್ತದೆ. ಅರಿವಿನಿಂದಾದ ಶಬ್ದ ಅರಿವಿನಲ್ಲಿಯೇ ಸಂಗಮವಾಗುತ್ತದೆ, ಅಂಗದಲ್ಲಿ ಸಂಗ್ರಹಗೊಳ್ಳುವುದಿಲ್ಲ.

ರುಚಿ ನಾಲಿಗೆಯಲ್ಲಿ ಜಲವಾಗಿ ತನು ಸೇರಿಕೊಳ್ಳುತ್ತದೆ. ಪದಾರ್ಥದಲ್ಲಿ ರುಚಿ-ಅರುಚಿ ಹುಡುಕದೆ ಮನ ಘನ ಮನವಾಗುತ್ತದೆ. ನಾಲಿಗೆಗೆ ಸೋಂಕಿದ ರುಚಿ ತನುವಿನಲ್ಲಿ ಸಂಗ್ರಹವಾಗುವುದಿಲ್ಲ.

ಚರ್ಮಕ್ಕೆ ಸೋಂಕಿದ ಸ್ಪರ್ಶ ಚರ್ಮದಲ್ಲಿಯೇ ಕರಗಿ ತನುವಿನಲ್ಲಿ ಸಂಗ್ರಹಗೊಳ್ಳುವುದಿಲ್ಲ.

ಮೂಗಿಗೆ ಸೋಂಕಿದ ವಾಸನೆ ಮೂಗಿನಲ್ಲಿಯೇ ಕರಗಿ ತನುವಿಗೆ ಪ್ರಸಾದವಾಗುತ್ತದೆ. ಅದು ಮತ್ತೆ ಮೂಸಿಸಬೇಕೆಂದು ಬಯಸುವುದಿಲ್ಲ. ತನುವಿನಲ್ಲಿ ಸಂಗ್ರಹಗೊಳ್ಳುವುದಿಲ್ಲ.

ಶರಣ ಮಹಾಜ್ಞಾನಿ, ಸಮಾಜದ ದೃಷ್ಟಿಯಲ್ಲಿ ಮನೆ ನೋಡಾ ಬಡವ. ಮನ ನೋಡಾ ಘನ. ಕಣ್ಣು ಕಿವಿ ಮೂಗು ಚರ್ಮ ನಾಲಿಗೆಯುಳ್ಳ ಸರ್ವಾಂಗವೂ ಮಹಾಜ್ಞಾನದ ಭಂಡಾರ. ಅಜ್ಞಾನದ ಯಾವ ಸಂಗ್ರಹಕ್ಕೂ ಅಂಗದಲ್ಲಿ ಅವಕಾಶವಿಲ್ಲ. ಆದರೆ ಬಂದ ತತ್ಕಾಲಕ್ಕೆ ಉಂಟು.

ನೋಡಿದರೆ ಬೇಡುವ ಬಯಕೆಯಿಲ್ಲ, ಕೇಳಿದರೆ ಸೇಡಿನ ಭಾವವಿಲ್ಲ, ಮುಟ್ಟಿದರೆ ಅಪ್ಪಿಕೊಳ್ಳುವ ಅಜ್ಞಾನವಿಲ್ಲ, ಮೂಸಿಸಿದರೆ ಸಿಡುಕು-ಆನಂದದ ಪುಳಕವಿಲ್ಲ. ರುಚಿಸಿದರೆ ಸುಖಿಸಿ-ಸಿಡಿದೇಳುವ ಗುಣಗಳಿಲ್ಲ. ಸಂಗ್ರಹಕ್ಕಿಲ್ಲ, ತತ್ಕಾಲಕ್ಕುಂಟು. ಅರಿವಿಗೆ ಶರಣು ಹೋದ ಶರಣ ಸ್ವತಂತ್ರ ! ಯಾರ ಹಂಗಿಗನೂ ಅಲ್ಲ, ಸರ್ವಾಂಗದಕಲಿ ! ಮನೆ ನೋಡಾ ಬಡವ, ಮನ ನೋಡಾ ಘನ !

326

ತತ್ತ್ವವನರಿದಿಹೆನೆಂದು ಮೃತ್ಯುವ ಕರೆಕೊಂಡೆನಯ್ಯಾ .
ನಾನೆತ್ತ ಬಲ್ಲೆ ನಿಮ್ಮ ಶರಣರಂತುವನು ?
ನಾನೆತ್ತ ಬಲ್ಲೆ ನಿಮ್ಮ ಪ್ರಮಥರಂತುವನು ?
ಸರ್ವಾಪರಾಧಿ ನಾನು.
ಎನ್ನ ಮನದ ಕೊನೆಯ ಸೂತಕ ಹಿಂಗದು,
ಕೂಡಲಸಂಗಮದೇವಾ.

ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳ ತತ್ತ್ವ ತಿಳಿಯುವುದೆಂದರೆ ಮನ

ತನುವಿನೊಂದಿಗೆ ಮೃತ್ಯು ಕೂಪದಲ್ಲಿ ಹಾರಿದಂತೆ. ಪುಸ್ತಕಗಳಲ್ಲಿರುವ ತತ್ತ್ವ ಅರಿತು, ಓದಿ ವಾದಿಸಿ ಚರ್ಚಿಸಿ ಪಂಡಿತನೆನ್ನಿಸಿಕೊಂಡು ಒಮ್ಮೆ ತನುವಿನೊಂದಿಗೆ ಮನ ಇಲ್ಲವಾಗುತ್ತದೆ. ಆದರೆ ತನುವಿನಲ್ಲಿರುವ ತತ್ತ್ವ ತಿಳಿದು ಮನ ಘನ ಮನವಾಗಲರಿಯದು.

ಶರಣರು ತನುವಿನಲ್ಲಿರುವ ತತ್ತ್ವಕ್ಕೆ ಶರಣು ಹೋದವರು. ಅಹಂಕಾರಿ ಮನ ಅವರ ಸೂಕ್ಷ್ಮತೆಯ ತಂತ್ರಜ್ಞಾನವನ್ನು ತಿಳಿಯಲರಿಯದು. ಪ್ರಮಥರ ಜ್ಞಾನ ರಹಸ್ಯವನ್ನು ಕೂಡಾ ತಿಳಿಯಲರಿಯದು.

ಮನ ಸರ್ವಾಪರಾಧಿ ! ಅದು ಅರಿವೆಂಬ ಗುರುವಿನ ದರ್ಶನ ಪಡೆಯಲರಿಯದು. ಮನದಲ್ಲಿ ಅರಿವಿನ ಸಂಗ್ರಹವಿದೆಯೇ ಹೊರತು ಅದು ಸ್ವತಂತ್ರವಲ್ಲ. ಅದು ನೋಡಿದರೆ ಕಣ್ಣಿಗೆ ಸೂತಕ. ಕೇಳಿದರೆ ಕಿವಿಗೆ ಸೂತಕ. ಮುಟ್ಟಿದರೆ ಚರ್ಮಕ್ಕೆ ಸೂತಕ. ರುಚಿಸಿದರೆ ನಾಲಿಗೆಗೆ, ಮೂಸಿಸಿದರೆ ಮೂಗಿಗೆ ಸೂತಕ. ಮನದ ಕೊನೆಯ ಮೊನೆಯ ಮೇಲಿನ ಸೂತಕ ಹಿಂಗದು. ಅರಿವಿನ ಸಂಗಯ್ಯನೊಂದಿಗೆ ಕೂಡಿ ಸಂಗಮವಾಗಲರಿಯದು. ಸರ್ವಾಪರಾಧಿ ಮನ ಶರಣರ ಪ್ರಮಥರ ರಹಸ್ಯ ಜ್ಞಾನವನೆತ್ತ ಬಲ್ಲುದು ?

327

ಆ ಮಿಹಲಾಳು ಭೋಜ ದೇವುಲಾಳು.
ಆನು ಸೂಳೆ, ನಮ್ಮಕ್ಕನೂ ಸೂಳೆ.
ಬೆಳಗೆ ಆವೆಂದಡೆ ಬಳ್ಳವಾಲ ಕರೆವುದೆ ?
ಕೂಡಲಸಂಗನ ಶರಣರ ಮುಂದೆ ನಾನು ಕಾದೆಹೆ ಬಾ ಬಿಸಲೆ.

ಬಸವಣ್ಣನವರು ಮಹಾಜ್ಞಾನಿಗಳು. ನಾಲ್ಕು ಸಾಲಿನ ಈ ವಚನದಲ್ಲಿ ಎರಡು ಜ್ಞಾನದ ಕತೆಗಳನ್ನು ಹೆಣೆದಿದ್ದಾರೆ. ಈ ಎರಡೂ ಕತೆಗಳನ್ನು ಅಜ್ಞಾನದ ಕಾಮದಾಸೆ ತೀರಿಸುವ (ಸೂಳೆ) ತನುವಿನ ಮೂಲಕ ಹೇಳಿಸಿದ್ದಾರೆ.

ಭೋಜರಾಜನಲ್ಲಿ ಆಮಿಹಲಾಳು ದೇವಲಾಳು, ಎಂಬ ಇಬ್ಬರು ಸೇನಾಧಿಕಾರಿಗಳಿದ್ದರು. ದೀಪಕ್ಕೆ ಕುಡಿ ಬಂದಾಗ ರಾಜ ಆಮಿಹನನ್ನು ಕರೆದು ಕುಡಿ ತೆಗೆಯಲು ಹೇಳಿದ. ಅದು ಚಿಕ್ಕ ಕೆಲಸ. ನಾನು ಮಾಡುವುದಿಲ್ಲ. ಯಾರಿಂದಲಾದರೂ ಮಾಡಿಸಿ ಎಂದ. ದೇವನನ್ನು ಕರೆದು ಕುಡಿ ತೆಗೆಯಲು ಹೇಳಿದ. ಕೂಡಲೆ ಕುಡಿ ತೆಗೆದು ದೀಪ ಬೆಳಗಿಸಿದ. ಕೆಲಸ ಚಿಕ್ಕದು ದೊಡ್ಡದು ಎನ್ನುವ ಭೇದ ವ್ಯಕ್ತಪಡಿಸಲಿಲ್ಲ.

ನೆರೆಯ ರಾಜ ರಾಜ್ಯದ ಮೇಲೆ ಯುದ್ಧ ಸಾರಿದ. ಭೋಜರಾಜ ಆಮಿಹನನ್ನು ಕರೆದು ಸೈನ್ಯದೊಂದಿಗೆ ಯುದ್ಧಕ್ಕೆ ಹೋಗಲು ಆದೇಶಿಸಿದ. ಅಂದು ದೀಪದ ಕುಡಿ ಚಿವುಟದ ನಾನು ಇಂದು ಯುದ್ಧ ಮಾಡಲು ಹೇಗೆ ಸಾಧ್ಯ ? ಆಗುವುದಿಲ್ಲವೆಂದ. ದೇವನನ್ನು ಕರೆದು ಯುದ್ಧಕ್ಕೆ ಹೋಗಲು ಹೇಳಿದ. ದೀಪದ ಕುಡಿ ಚಾಚುವುದಾದರೇನು, ಯುದ್ಧ ಮಾಡುವುದಾದರೇನು ಎರಡೂ ಕೆಲಸಗಳೇ. ರಾಜನಿಗೆ ನಮಸ್ಕರಿಸಿ ಯುದ್ಧಕ್ಕೆ ಹೋಗಿ ಗೆದ್ದು ಬಂದ.

ರಾಜ, ಆಮಿಹನನ್ನು ಕರೆದು : ಒಂದು ಕೆಲಸ ಚಿಕ್ಕದೆಂದು ಮಾಡಲಿಲ್ಲ, ಮತ್ತೊಂದು ಕೆಲಸ ನಿನ್ನದಾದರೂ ಅದು ದೊಡ್ಡದೆಂದು ಮಾಡಲಿಲ್ಲ. ಆಳುಗಳನ್ನು ಕರೆಯಿಸಿ, ಆಮಿಹನನ್ನು ಕಂಬಕ್ಕೆ

ಕಟ್ಟಿಸಿ, ಕೊರಡದಿಂದ ಹೊಡೆಯಿಸಿದ.

ಇಬ್ಬರೂ ಅಧಿಕಾರಗಳೇ ಆಮಿಹಲಾಳು ಅಹಂಕಾರಿ ! ರಾಜ ಹೇಳಿದ ಕೆಲಸ ಮಾಡಲಿಲ್ಲ. ದೇವ ನಿರಹಂಕಾರಿ ! ರಾಜ ಹೇಳಿದ ಎಲ್ಲ ಕೆಲಸಗಳನ್ನು ಮಾಡಿದ.

ಆನು ಸೂಳೆ, ನಮ್ಮಕ್ಕಳೂ ಸೂಳೆ, ಬೆಳ್ಳಂಗೆ ಆವೆಂದೊಡೆ ಬಳ್ಳ ಹಾಲ ಕರೆವುದೆ ? ಕೂಡಲಸಂಗನ ಶರಣರ ಮುಂದೆ ನಾನು ಕಾದಿಹೆ ಬಾ ಬಿಸಿಲೆ:

ಇದು ಅಕ್ಕ ಮತ್ತು ತಂಗಿಯ ಕತೆ ಕಲ್ಯಾಣದಲ್ಲಿ ಕಾಮದ ಆಸೆ ತೀರಿಸುವ (ವೇಶ್ಯೆ) ಕಾಯಕದಲ್ಲಿದ್ದರು. ಅಕ್ಕ ಜಂಗಮನನ್ನು ಬಿನ್ನಕ್ಕೆ ಕರೆದಳು. ಜಂಗಮ ಆಗುವುದಿಲ್ಲ, ಪಕ್ಕದ ಊರಿಗೆ ಹೊತ್ತು ಮುಳುಗುವುದರಲ್ಲಿಯೇ ಹೋಗಬೇಕು ಎಂದ. ಆಗಲಿ ಹಾಗೆಯೇ ಕಳಿಸುವೆ ಎಂದು ಆದರದಿಂದ ಬರಮಾಡಿಕೊಂಡು ಸ್ನಾನಕ್ಕೆ ಕಳಿಸಿದಳು. ಮುಳುಗದಿರಲು ಸೂರ್ಯನಿಗೆ ಆಣೆ ಇಟ್ಟಳು. ಜಂಗಮನಿಗೆ ಸತ್ಕರಿಸಿ, ಪೂಜಿಸಿ, ಭಕ್ಷ ಭೋಜ್ಯಗಳನ್ನು ಉಣಬಡಿಸಿದಳು. ಸೂರ್ಯ ಮುಳುಗಲೇ ಇಲ್ಲ. ಬಿಜ್ಜಳನ ಆಸ್ಥಾನದಲ್ಲಿ ಗಳಿಗೆ ಘಳಗಳು ಲೆಕ್ಕಕ್ಕೆ ಸಿಗಲಿಲ್ಲ.

ಶಿವಶರಣೆ ಮುಳುಗದಿರಲು ಸೂರ್ಯನಿಗೆ ಆಣೆ ಇಟ್ಟಿದ್ದಾಳೆ ಎಂದು ಬಸವಣ್ಣ ಹೇಳಿದ. ಬಿಜ್ಜಳನ ಆಸ್ಥಾನದ ವಿದ್ವಾಂಸರೊಂದಿಗೆ ತೆರಳಿ ಗೌರವಗಳಿಂದ ಹಣೆ ಮಣಿದು ಆಣೆ ಬಿಡಲು ಬೇಡಿಕೊಂಡ. ಜಂಗಮರನ್ನು ಬೀಳ್ಕೊಟ್ಟು ಕಾದಿಹೆ ಬಾ ಬಿಸಿಲೆ ಎಂದು ಹೇಳಲು ಸೂರ್ಯ ತನ್ನ ದಿನದ ಕೆಲಸ ನಿರ್ವಹಿಸಿದ. ಬಿಜ್ಜಳ ವಿದ್ವಾಂಸರೊಂದಿಗೆ ಶರಣೆಯನ್ನು ಸತ್ಕರಿಸಿ ಆಸ್ಥಾನಕ್ಕೆ ನಡೆದರು.

ಆನು ಸೂಳೆ, ನಮ್ಮಕ್ಕಳೂ ಸೂಳೆ :

ಅಕ್ಕಳಂತೆ ನಾನು ಕೂಡಾ ಅದೇ ಕಾಯಕದಲ್ಲಿದ್ದವಳು ಎಂಬ ಅಹಂಕಾರದಿಂದ ಜಂಗಮನನ್ನು ಕರೆದು ಸೂರ್ಯನಿಗೆ ಆಣೆ ಇಟ್ಟು ಆಸ್ಥಾನಕ್ಕೆ ಹೇಳಿ ಕಳುಹಿಸಿದಳು. ಸೂರ್ಯ ಯಥಾರೀತಿ ಮುಳುಗಿದ. ಬಿಜ್ಜಳ ತನ್ನ ಆಳುಗಳಿಂದ ಕಂಬಕ್ಕೆ ಬಿಗಿದು ಕೊರಡದಿಂದ ನನ್ನನ್ನು ಹೊಡೆಯಿಸಿದ.

ಬೆಳ್ಳಂಗೆ ಆವೆಂದೊಡೆ ಬಳ್ಳಹಾಲ ಕರೆವುದೆ :

ಬೆಳ್ಳಗಿರುವ ಹಸುಗಳೆಲ್ಲ ಕಾಮಧೇನುವಿನಂತೆ ಹಾಲು ಕರೆಯಲಾರವು. ನಾನು ಸೂಳೆ, ಕಾಮದಾಸೆಯಿಂದ ಬಂದ ಅಂಗವನ್ನು ಬಗೆ ಬಗೆಯಿಂದ ತೃಪ್ತಿ ಪಡಿಸುತ್ತೇನೆ. ಆ ಅಂಗ ನನ್ನ ಅಂಗಕ್ಕೆ ದಾಸನಾಗಿ ಮತ್ತೆ ಮತ್ತೆ ಬರುವಂತೆ ಮಾಡುತ್ತೇನೆ. ಬಂದ ಅಂಗಗಳೆಲ್ಲ ನನ್ನ ಅಂಗಕ್ಕೆ ಮಾರು ಹೋಗುತ್ತವೆ.

ನಮ್ಮಕ್ಕಳೂ ಸೂಳೆ : ಅಕ್ಕ ಹಾಗಲ್ಲ, ಬಸವಣ್ಣನಿಂದ ಅರಿವಿನ ದೀಕ್ಷೆ ಪಡೆದು ವೃತ್ತಿಯಲ್ಲಿದ್ದಾಳೆ. ಒಮ್ಮೆ ಬಂದವರು ಮತ್ತೆಂದೂ ಆಕೆಯ ಹತ್ತಿರ ಬರುವುದಿಲ್ಲ.

ಅಕ್ಕ ಬೆಳ್ಳನೆಯ ರಂಭೆ; ಊರ್ವಶಿಯ ಚೆಲುವುಳ್ಳವಳು ! ಅಂಗವೊಂದು ಕಾಮದಾಸೆ ತೀರಿಸಿಕೊಳ್ಳಲು ಅಕ್ಕನ ಮನೆಗೆ ಬಂದಾಗ; ಅಕ್ಕ ಕಾಮದಿಂದ ಬಳಲುವ ಅಂಗಕ್ಕೆ ತನ್ನ ಅಂಗ ತೋರಿಸುತ್ತಾಳೆ. ವಿವಸ್ತ್ರಳಾಗುತ್ತಾಳೆ. ಅಂಗವನ್ನು ಹತ್ತಿರ ಬರಗೊಡುವುದಿಲ್ಲ. ಕಾಮದ ದ್ರವ್ಯ ಹೊರಬಂದು ಅಂಗಕ್ಕೆ ತೃಪ್ತಿಯಾಗುತ್ತದೆ. ಆಗ ಅಂಗವನ್ನು ಹತ್ತಿರ ಕರೆದು ಮೈದಡವಿ ಸುಖವಾಯಿತೆ ಎಂದು ಕೇಳುತ್ತಾಳೆ. ನಿನ್ನ ಅಂಗದಲ್ಲಿದ್ದ ದ್ರವ್ಯ ನಿನ್ನಿಂದಲೇ ಹೊರಬಂದು ನಿನಗೇ ಸುಖವಾಗಲಿಲ್ಲವೇ? ಅರಿವಿನ ಮತ್ತೊಂದು ಅಂಗಕ್ಕೆ ಜನ್ಮ ನೀಡಬೇಕಾದ ನಿನ್ನ ಅಂಗದ ಸಂಪತ್ತು ವೃಥಾ ಹೋಯಿತಲ್ಲಾ ಎಂದು ಅಕ್ಕ ತಿಳಿ ಹೇಳಿದಾಗ; ಕಾಮದ ಸುಖಕ್ಕಾಗಿ ಬಂದ ಅಂಗ ಬಸವಣ್ಣನ ಅರಿವಿನ ಮಹಾಮನೆಯ ಸದಸ್ಯನಾಗುತ್ತಿತ್ತು . ಭಕ್ತನಾಗಿ ಶರಣನಾಗಿ ಮಹಾಜ್ಞಾನಿಯೇ ಆಗುತ್ತಿತ್ತು .

ಸೂಳೆ ಕೆಲಸದಲ್ಲಿದ್ದ ನಾನೆತ್ತ ? ಅದೇ ಕೆಲಸದಲ್ಲಿದ್ದ ನನ್ನ ಅಕ್ಕಳೆತ್ತ ? ಬೆಳ್ಳಂಗೆ ಆವೆಂದೊಡೆ ಬಳ್ಳ ಹಾಲ ಕರೆವುದೆ ?

ತನುವಿನಲ್ಲಿ ಅರಿವೆಂಬ ಅರಸನಿದ್ದಾನೆ. ಅರಸನ ಮಾತು ಪಾಲಿಸುವ ಸೇವಕನೆಂಬ ಮನವಿದೆ. ಅವನು ದೇವ. ಅರಸನ ಮಾತು ಪಾಲಿಸದ ಅಜ್ಞಾನಿ ಮನವಿದೆ. ಅವನು ಆಮಿಹ, ಅಹಂಕಾರಿ. ಹಾಗೆಯೇ ಅರಸನ ಮಾತು ಕೇಳುವ ಮನವೆಂಬ ದಾಸಿಯೂ ಇದ್ದಾಳೆ. ಆಕೆ ಅರಸನ ಮನದನ್ನೆ ! ಅರಸನ ಮಾತು ಎಳ್ಳನಿತೂ ಕೇಳದ ಮನವೆಂಬ ದಾಸಿಯೂ ಇದ್ದಾಳೆ. ಆಕೆ ಕುಂತಲ್ಲಿ ಕೂಡುವುದಿಲ್ಲ, ನಿಂತಲ್ಲಿ ನಿಲ್ಲುವುದಿಲ್ಲ. ಇಂದು ಬೇಕಾದದ್ದು ನಾಳೆ ಬೇಡ. ವಿವಿಧ ರುಚಿಗಳ ಆಸಕ್ತಿಯುಳ್ಳ ಮನವೆಂಬ ಆಕೆಯೆ ಸೂಳೆ. ತನುವನ್ನು ಮನ ತನ್ನ ರುಚಿಗಾಗಿ ಬಳಕೆ ಮಾಡಿಕೊಂಡು ಅರಸನ ಅರಮನೆಯೆಂಬ ತನುವಿಗೆ ಸೂಳೆ ಪಟ್ಟ ಕಟ್ಟುತ್ತಾಳೆ. ಅರಿವಿನ ದರ್ಶನವಾದರೆ ಸೂಳೆಯೇ ಅರಸಿಯಾಗುತ್ತಾಳೆ ! ಆಮಿಹನೆಂಬ ಅಹಂಕಾರಿ, ದೇವನೆಂಬ ಮಹಾದೇವನಾಗುತ್ತಾನೆ !

328

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ,
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲುಬಹುದೆ ?
ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ
ಹೇಳಾ, ಕೂಡಲಸಂಗಮದೇವಾ ?

ಅರಿವಿಗೆ ಭಕ್ತಿ ಮಾಡುವ ಶರಣ, ಅರಿವೆಂಬ ಗುರುವಿಗೆ ಸೇವೆ ಮಾಡುವ ಶಿಷ್ಯ , ಅರಿವೆಂಬ ಗಂಡನಿಗೆ ಬದುಕು ಮಾಡುವ ಹೆಂಡತಿ, ಇವರು ಯಾರಾದರೇನು ? ಅವರೆಲ್ಲ ಶ್ರೇಷ್ಟರೇ ! ಅವರು ನಡೆಯುವ ದಾರಿಯೇ ರಹದಾರಿ. ಅವರು ನಡೆಯುವ ಮಾರ್ಗವೇ ರಾಜ ಮಾರ್ಗ. ಆನೆ ನಡೆದದ್ದೇ ದಾರಿ, ಆ ದಾರಿಯಲ್ಲಿ ಆಡು ನಡೆಯಬಹುದೆ ? ಉಳಿದವರೆಲ್ಲ ತೃಣ, ಶರಣರು ಮಾತ್ರ ಘನ. ಅಂಗಗಳೆಲ್ಲ ಒಂದೇ, ಆದರೇನಂತೆ ? ಅಂಗದಲ್ಲಿರುವ ಸಂಗಯ್ಯ ಅಂಗಕ್ಕೆ ಪರಿಚಯವಿಲ್ಲವಲ್ಲ! !

ಅಂಗದಲ್ಲಿ ಲಿಂಗಯ್ಯನೂ ಇದ್ದಾನೆ, ಸಂಗಯ್ಯನೂ ಇದ್ದಾನೆ, ಜಂಗಮಯ್ಯನೂ ಇದ್ದಾನೆ. ಇವರೆಲ್ಲರನ್ನು ತಿಳಿಯುವ ಮನವೂ ಇದೆ. ಮನ ಲಿಂಗಯ್ಯನ ಸಂಗಮಾಡಿ ಜಂಗಮಯ್ಯನಾಗಬೇಕಲ್ಲ? ಈ ಜಂಗಮನ ಸಂಗ ಮಾಡಿದ ಶರಣರಿಗೆ ಆನು ಎನ್ನುವ ಅಹಂಕಾರಿ ಮನ ನಾನು ಸಮನೆಂದು ಸರಿಗಟ್ಟಬಹುದೆ ?

ಅಂಗ ತನ್ನದೆ, ಮನ ತನ್ನದೆ, ಲಿಂಗ ತನ್ನದೆ, ಜಂಗಮವೂ ತನ್ನವನೆ ಆದರೆ ತನುವಿನಲ್ಲಿ ತನ್ಮಯವಾಗಿ ಸಂಗಮವಾದದ್ದು ಮನಕ್ಕೆ ತಿಳಿಯಬೇಕಲ್ಲ ?

ಅರಿವೇ ಆನೆ, ಮನವೇ ಆಡು. ಆಡು ಆನೆಯಾಗಲರಿಯದು. ಅರಿತರೆ ಆಡೇ ಆನೆ ! ಆನೆ ತುಳಿದದ್ದೇ ಹಾದಿ. ಆನೆಯು ಆಡೂ ಅಂಗದಲ್ಲಿ ಸಂಗಮವಾಗಿ ಸಂಗಮನಾಥನಾಗಿದೆ. ಆನೆಯೂ ಇಲ್ಲ, ಆಡೂ ಇಲ್ಲ. ಬರೀ ಸಂಗಮನಾಥನೊಬ್ಬನೇ !

329

ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ
ಆ ಕರಿಯಾಗಲರಿವುದೆ ?
ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದಡೆ
ವ್ಯಾಳೇಶನಾಗಲರಿವುದೆ ?
ನಾನು ಭಕ್ತನಾದಡೇನಯ್ಯಾ ,
ನಮ್ಮ ಕೂಡಲಸಂಗಮದೇವನ ಸದ್ಭಕ್ತರ ಹೋಲಲರಿವನೆ ?

ಹಂದಿ ಆನೆಯಂತೆ ಇದ್ದರೂ ಅದು ಆನೆಯಲ್ಲ. ಎರೆಹುಳು ಹಾವಿನಂತೆ ಇದ್ದರೂ ಅದು ಹಾವಲ್ಲ. ಭಕ್ತ ಸದ್ಭಕ್ತರ ವೇಷ ಧರಿಸಿದರೂ ಅವರು ಸದ್ಭಕ್ತರಲ್ಲ.

ತನುಗಳೆಲ್ಲ ಒಂದೇ, ತನುಗಳಲ್ಲಿ ತನ್ಮಯವಾದ ಅರಿವೆಲ್ಲಾ ಒಂದೇ, ತನುಗಳಲ್ಲಿ ಆವರಿಸಿದ ಮನವೆಲ್ಲಾ ಒಂದೇ. ಆದರೆ ಮನ ಅರಿವಿಗೆ ಭಕ್ತಿ ಮಾಡಿ, ಅರಿವು, ತನು ಮತ್ತು ಮನ ಒಂದಾದ ತನುವನ್ನು ಉಳಿದ ತನುಗಳಿಗೆ ಹೋಲಿಸಲು ಬರುವುದಿಲ್ಲ.

ಬುದ್ಧ ತನುವನ್ನು ಬುದ್ಧನ ಅನುಯಾಯಿ ತನುಗಳಿಗೆ ಹೋಲಿಸಲಾದೀತೆ ? ಬಸವಣ್ಣನ ತನುವನ್ನು ಲಿಂಗ ಕಟ್ಟಿದ ಅನುಯಾಯಿ ತನುಗಳಿಗೆ ಹೋಲಿಸಲಾದೀತೆ ? ಏಸುವಿನ ತನುವನ್ನು ಶಿಲುಬೆ ಹಾಕಿದ ತನುಗಳಿಗೆ ಹೋಲಿಸಲಾದೀತೆ ? ರಾಮಾನುಜ ಶಂಕರ ಮಾಧ್ವರ ತನುವನ್ನು ಜನಿವಾರ ಹಾಕಿದ ತನುಗಳಿಗೆ ಹೋಲಿಸಲಾದೀತೆ? ಕನಕರ ತನುವನ್ನು ಅವರನ್ನು ಆರಾಧಿಸುವ ತನುಗಳಿಗೆ ಹೋಲಿಸಲಾದೀತೆ ?

ಅಕ್ಕಮಹಾದೇವಿ ಮುಕ್ತಾಯಕ್ಕ ನೀಲಮ್ಮ ಕಾಳವ್ವೆ ಸಂಕವ್ವೆ ಮೀರಾಳ ತನುಗಳನ್ನು ಉಳಿದ ತನುಗಳಿಗೆ ಹೋಲಿಸಲಾದೀತೆ ? ಆಗುವುದಿಲ್ಲ.

ಕಣ್ಣುಗಳೆಲ್ಲ ಒಂದೇ, ಕಣ್ಣ ಮುಂದಿನ ಕಾಮ ಕೊಂದ ಕಣ್ಣೆತ್ತ ? ಕಣ್ಣ ಮುಂದಿನ ಕಾಮ ಹಾದರದಿಂದ ಭೋಗಿಸುವ ಕಣ್ಣೆತ್ತ ? ಕಂಡರೂ ಸತ್ಯ ತಿಳಿಯದ ಕುರುಡು ಕಣ್ಣು ಒಂದು, ಮತ್ತೊಂದು ಎತ್ತ ನೋಡಿದರೂ ಸತ್ಯವೇ ಕಾಣುವ ಅರಿವಿನ ಕಣ್ಣು.

ಮನಗಳೆಲ್ಲ ಒಂದೇ, ಒಂದು ಮನದ ಮುಂದಣ ಆಸೆಯ ಕೊಂದ ಮನ, ಮತ್ತೊಂದು ಮನದ ಮುಂದಣ ಆಸೆಯನು ತನುವಿನೊಂದಿಗೆ ಭೋಗಿಸುವ ಮನ. ಒಂದು ಘನಮನ. ಮತ್ತೊಂದು ರಕ್ಕಸ ಮನ.

ಘನ ಮನ ವೇಷವನರಿಯದು. ಮತ್ತೊಂದು ಮನ ತನುವಿಗೆ ಭಕ್ತನ ವೇಷ ಹಾಕಿ ಸದ್ಭಕ್ತನಿಗೆ ಹೋಲಿಸಿಕೊಳ್ಳುತ್ತದೆ. ಆದರೆ ಕಣ್ಣ ಮುಂದಿನ ಕಾಮ ಕಳೆಯಲರಿಯದು, ಮನದ ಮುಂದಣ ಆಸೆಯನು ತೊರೆಯಲರಿಯದು.

ಮನ ತನುವಿಗೆ ಹಾಕಿದ ಭಕ್ತನ ವೇಷ ಮತ್ತೊಂದು ತನುವಿಗೆ ಹೊಳೆಯದಿದ್ದರೇನಂತೆ? ಮನ ತನುವಿಗೆ ಹಾಕಿದ ವೇಷವನ್ನು ತನುವಿನ ಅರಿವು ಸೈರಿಸಲರಿಯದು, ತನು ಮನ ಒಂದಾಗ ದನ್ನಕ್ಕ !

ಮೋಟನ ಮೌಳಿ, ಮೂಕೊರತಿಯ ಶೃಂಗಾರ,
ಬೇಟ ಕುರುಡಂಗೆ ನಗೆಗೆಡೆಯಾಯಿತ್ತು.
ನಮ್ಮ ಕೂಡಲಸಂಗನ ಶರಣರ ಮುಂದೆ
ಆನು ಭಕ್ತನೆಂಬ ನಾಚಿಕೆ ಸಾಲದೆ ?

ಅಂಗವಿಕಲನಿಗೆ ಕಿರೀಟವಿಟ್ಟಂತೆ, ಮುತ್ತೈದೆಯಲ್ಲದ ಮೂಗಿಲ್ಲದವಳಿಗೆ ಶೃಂಗಾರ ಮಾಡಿದಂತೆ, ಕುರುಡ ಪ್ರಣಯಲಾಪದಲ್ಲಿ ಭಾಗಿಯಾದಂತೆ. ಈ ಮೂರೂ ದೃಷ್ಟಾಂತಗಳು ನಗೆಗೀಡುಮಾಡುತ್ತವೆ. ಆದರೆ ಅಂಗವಿಕಲ ಕಿರೀಟವಿಟ್ಟುಕೊಂಡು ನಾನು ಸುರಸುಂದರ ಎಂದು ಬೀಗುತ್ತಾನೆ. ಮೂಕೊರತಿ ಶೃಂಗಾರ ಮಾಡಿಕೊಂಡು ನಾನು ಸುಂದರಿ ಎಂದು ಬೀಗುತ್ತಾಳೆ, ಏನು ಕಾಣದ ಕುರುಡ ಪ್ರಣಯಲಾಪದಲ್ಲಿ ತೊಡಗಿ ನಗೆಗೀಡಾಗುತ್ತಾನೆ.

ನಮ್ಮ ಕೂಡಲಸಂಗನ ಶರಣರ ಮುಂದೆ ಆನು ಭಕ್ತನೆಂಬ ನಾಚಿಕೆ ಸಾಲದೆ:

ಅಂಗವಿದ್ದೂ ವಿಕಲಾಂಗನಾದವನು, ಮೂಗಿದ್ದೂ ಮೂಕೊರತಿಯಾದವಳು, ಕಣ್ಣಿದ್ದೂ ಕುರುಡನ ಪ್ರಣಯದ ಪ್ರಲಾಪವನ್ನು ಬಸವಣ್ಣನವರು ಚಿತ್ರಿಸಿದ್ದಾರೆ.

ಅಂಗ ಅರಿವಿನ ಅಂಗವಾದರೂ ಮನ ಕಣ್ಣಿನಲ್ಲಿ ಪ್ರವೇಶ ಮಾಡಿ ನೋಡುವುದರ ಮೂಲಕ ವಿಕಲಾಂಗನನ್ನಾಗಿ ಮಾಡುತ್ತದೆ. ಕೇಳುವುದರ ಮೂಲಕ, ಮೂಸಿಸುವುದರ ಮೂಲಕ, ಸ್ಪರ್ಶಿಸಿ ರುಚಿಸುವುದರ ಮೂಲಕ ವಿಕಲಾಂಗನನ್ನಾಗಿ ಮಾಡುತ್ತದೆ. ಮನ ಅಂಗಕ್ಕೆ ಕಿರೀಟ, ರುದ್ರಾಕ್ಷಿ ಧರಿಸಿ, ಪಲ್ಲಕ್ಕಿಯ ಮೇಲೆ ಕುಳ್ಳಿರಿಸಿ, ನೋಡುವುದರ ಮೂಲಕ ಅಂಗದಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ವಿಕಲಾಂಗನಾಗುತ್ತಾನೆ. ಶೃಂಗಾರದ ಕಿರೀಟ, ಗೌರವದ ಕಾಶಾಯ, ಪಲ್ಲಕ್ಕಿಯನ್ನು ಅಂಗ ಲೆಕ್ಕಕ್ಕೆ ತೆಗೆದುಕೊಳ್ಳದೆ ಮರ್ಕಟನಂತೆ ವಿಷಯಾಸಕ್ತನಾಗಿ ಬುಸುಗುಡುತ್ತದೆ. ಸುಂದರವಾದ ಅಂಗ ವಿಕಲಾಂಗವಾಗುತ್ತದೆ.

ಸುಂದರವಾದ ಸಹಜ ಅರಿವಿನ ಅಂಗಕ್ಕೆ ಗುರುವಿನ ವೇಷ ಹಾಕಿ ವಿಕಲಾಂಗನನ್ನಾಗಿ ಮಾಡಿ ನಾನು ಗುರುವೆಂದು ಬೀಗುವ ಮನಕ್ಕೆ ನಾಚಿಕೆ ಬೇಡವೆ ?

ಮುತ್ತೈದೆಯಾಗಿದ್ದೂ ಅರಿವಿನ ವಾಸನೆಯನು ಅರಿಯದ ಮೂಗಿಗೆ ಶೃಂಗಾರ ಬೇರೆ ಕೇಡು. ಘಮಘಮಿಸುವ ಮೃಷ್ಟಾನ್ನದ ಪರಿಮಳವನು ಉಂಡ ಮೂಗು ಅದರ ಮತ್ತೊಂದು ರೂಪವನು ಅಸಹ್ಯ ಪಟ್ಟುಕೊಳ್ಳುತ್ತದೆ. ಮೃಷ್ಟಾನ್ನ ಅಂಗದ ಮೂಗಿಗೆ ಪರಿಮಳ ನೀಡಿದರೆ, ಮಲ ಹಂದಿಯ ಮೂಗಿಗೆ ಪರಿಮಳ ನೀಡಿತು. ಮಲ, ನಾಯಿ ಹಂದಿ ಹಸುವಿಗೆ ಮೃಷ್ಟಾನ್ನವಾಯಿತು. ಮೂಗಿದ್ದೂ ಅರಿವಿನ ವಾಸನೆ ಮೂಸಿಸಲು ಅರಿಯದ ಮೂಗಿಲ್ಲದ ಮೂಕೊರತಿಯ ಮೂಗಿಗೆ ಅಲಂಕಾರ ಮಾಡಿದರೆ ಅದು ಹಾದರಗಿತ್ತಿ ಅನ್ನಿಸಿಕೊಳ್ಳುತ್ತದೆಯಲ್ಲದೆ ಮುತ್ತೈದೆ ಅನ್ನಿಸಿಕೊಳ್ಳಬಲ್ಲುದೆ ?

ಕಣ್ಣಿದ್ದ ಕುರುಡನ ಪ್ರಣಯ ಹಾಸ್ಯಾಸ್ಪದ, ಮಾನವ ಕುಲಕ್ಕೇ ಅಪಮಾನ !

ಡಿಸೆಂಬರ್ 16, 2012 ರಂದು ದೆಹಲಿಯಲ್ಲಿ ಕಣ್ಣಿದ್ದ ಕುರುಡರ ಒಂದು ದುರ್ಘಟನೆ ಜರುಗಿತು. ಆರು ಜನ ಯುವಕರು ಒಬ್ಬ ಯುವತಿಯನ್ನು ಓಡುವ ಬಸ್‌ನಲ್ಲಿಯೇ ಪ್ರಣಯಕ್ಕೆಳೆದರು. ಯುವತಿ ಒಪ್ಪಲಿಲ್ಲ, ವಿಕೃತವಾಗಿ ಭೋಗಿಸಿ ಪೈಶಾಚಿಕ ಪ್ರವೃತ್ತಿ ಮೆರೆದರು. ಕಣ್ಣಿದ್ದ ಕುರುಡರ ಪ್ರಣಯಕ್ಕೆ ಕಣ್ಣಿದ್ದ ಕುರುಡಿ ಬಲಿಯಾದಳು. ದೇಶದ ಮಾಧ್ಯಮಗಳು ಚಿತ್ರಿಸಿದವು. ಆರು ಅಂಗಗಳನ್ನು

ದೇಶದ ಅಂಗಗಳು ಶಪಿಸಿದವು. ಹನ್ನೆರಡು ಜನ ಬುದ್ಧಿವಂತರಂತೆ; ಆದರೆ ತಮ್ಮನ್ನು ಎಣಿಸಿಕೊಳ್ಳಲೇ ಇಲ್ಲ.

ಕಾಣುವ ಅರಿವಿನ ಕಣ್ಣುಗಳಲ್ಲಿ ಮನವೆಂಬ ಮಂಗ ಪ್ರವೇಶಿಸಿ ಕಾಣದಂತೆ ಮಾಡಿ ಪ್ರಣಯಕ್ಕೆಳೆದವು. ಜನ, ಸರಕಾರ ಅರಿವಿನ ಅಂಗಕ್ಕೆ ಗಲ್ಲು ಶಿಕ್ಷೆ ಕೊಟ್ಟವು, ಮಂಗ ಕಾಣಲೇ ಇಲ್ಲ! ಅಂಗಕ್ಕೆ ಶಿಕ್ಷೆ ಕೊಟ್ಟರೆ ಅಂಗುಲಿಮಾಲ ಸಾಯುವುದಿಲ್ಲವೆಂದು ಸರಕಾರಕ್ಕೇನು ಗೊತ್ತು ?

ಸಿದ್ಧಾರ್ಥ ರಾಜ, ಅಂಗಕ್ಕೆ ಶಿಕ್ಷೆ ಕೊಡುವುದೇ ಅವನ ಕೆಲಸ. ಬುದ್ಧರಾಜಾಧಿರಾಜ, ಸಿದ್ಧಾರ್ಥನ ಮುಖವಾಡ ಕಳಚಿ ರಾಜಾಧಿರಾಜನಾದವನು. ಅರಿವಿನ ಅಂಗದಲ್ಲಿರುವ ಬುದ್ಧನನ್ನು ಅಪ್ಪಿಕೊಂಡು ಅಂಗುಲಿಮಾಲನೆಂಬ ಮಂಗಕ್ಕೆ ಶಿಕ್ಷೆ ಕೊಡುವುದೇ ಅವನ ಕೆಲಸ. ಮಂಗ ವೇಷ ಕಳಚಿದ ಮನ ಘನಮನವಾಯಿತು. ಬುದ್ಧನಲ್ಲಿ ಕೂಡಿ ಕೂಡಲ ಸಂಗಮನಾಥನಾಯಿತು.ಬುದ್ಧನೇ ತಾನಾಯಿತು.

331

ಮೂಗಿಲ್ಲದ ಮುಖಕ್ಕೆ ಶೃಂಗಾರವೆ ?
ವಿಕೃತ ವೇಷಧಾರಿಯಾನು: ಭಂಡನು ! ಲಜ್ಜೆಭಂಡನು !
ಕೂಡಲಸಂಗನ ಶರಣರಲ್ಲಿ
ಹಾವ ತೋರಿ ಹವಿಯ ಬೇಡುವಂತೆ

ಮನ ತನುವಿಗೆ ಹಲವಾರು ವೇಷ ಹಾಕಿ ತನ್ನ ರುಚಿ ನೀಗಿಸಿಕೊಳ್ಳುತ್ತದೆ. ಹಾವಾಡಿಗನ ವೇಷ ಹಾಕಿ, ಹಲವಾರು ಜಾತಿಯ ವಿಷದ ಹಾವುಗಳನ್ನು ಹಿಡಿದು, ಹಾವು ತೋರಿ ಹಾಲುಣ್ಣುತ್ತದೆ. ಮನದ ಹಾಲಿನ ರುಚಿಗಾಗಿ ತನುವನ್ನು ಹಾವಾಡಿಗನನ್ನಾಗಿ ಮಾಡುತ್ತದೆ. ಹಾವಾಡಿಸುವ ತನು ಒಂದಾದರೆ ಹಾವಿನ ಆಟ ನೋಡಿ ಹಾಲುಕೊಡುವ ತನುಗಳು ಹಲವು.

ಅರಿವಿನಿಂದ ತನ್ಮಯವಾದ ಸುಂದರವಾದ ತನು, ಶೃಂಗಾರ ತನು ! ಮನ ಒಂದು ತನುವಿಗೆ ಹಾವಾಡಿಗನ ವೇಷ ಹಾಕಿದರೆ ಮತ್ತೊಂದು ತನುವಿಗೆ ಕಳ್ಳನ ವೇಷ ಹಾಕುತ್ತದೆ, ಭಿಕ್ಷುಕನ ವೇಷ ಹಾಕುತ್ತದೆ. ವೈದ್ಯ, ಅಭಿಯಂತ, ಶಾಸಕನ ವೇಷ ಹಾಕುತ್ತದೆ. ಗುರು ಶಿಷ್ಯ ಸ್ವಾಮಿಯ ವೇಷ ಹಾಕುತ್ತದೆ.

ಮನದ ವಿಕೃತ ರುಚಿಗಾಗಿ ತನುವಿಗೆ ವೇಷಹಾಕಿ, ತನುವಿನಿಂದಲೇ ರುಚಿ ನೀಗಿಸಿಕೊಳ್ಳಬೇಕೆ? ತನು ತನುವನ್ನು ದ್ವೇಷಿಸುವುದು, ತನು ತನುಗಳನ್ನು ಮೋಸ ಮಾಡುವುದು ಮನಕ್ಕೆ ಬಲುಹಿತ !

ಮೂಗಿಲ್ಲದ ಮನ ಅರಿವಿನಶೃಂಗಾರ ತನುವನ್ನು ರಕ್ಕಸನಂತೆ ಆವರಿಸಿದೆ. ತನುವಿಗೆ ಯಾವ ವೇಷ ಹಾಕಿದರೂ ಮನಕ್ಕೆ ಮೂಗಿಲ್ಲ. ಅದು ಅರಿವಿನ ಗಂಡನನ್ನು ಕಾಣದ ಹಾದರಗಿತ್ತಿ ; ಮೂಕೊರತಿ ವೈದ್ಯನ ವೇಷ ಹಾಕಿ ತನುಗಳಿಗೆ ಮೋಸ ಮಾಡುತ್ತದೆ. ಶಾಸಕನ ವೇಷ, ಗುರುವಿನ ವೇಷ, ಶ್ರೀಮಂತನ ವೇಷ, ಭಿಕ್ಷುಕನ ವೇಷ ಹಾಕಿ ತನುಗಳಿಗೆ ಮೋಸ ಮಾಡಿ ಉದರ ಪೋಷಣೆ ಮಾಡಿಕೊಳ್ಳುತ್ತದೆ.

ವಿಕೃತ ವೇಷಧಾರಿ ಭಂಡ ಮನ, ಲಜ್ಜೆ ಇಲ್ಲದ ಭಂಡ ಮನ, ಹಾವು ತೋರಿ ಹಾಲು ಬೇಡುವ ಮನ, ತನುವಿನಾಶ್ರಯದಲ್ಲಿದ್ದು, ಅರಿವಿನ ತನುವನ್ನೇ ಕಚ್ಚಿ ಕಚ್ಚಿ ತಿನ್ನುವ ಮನ, ಒಮ್ಮೆ ಶರಣರಿಗೆ ಹಾವ ತೋರಿ ಅರಿವಿನ ಅಮೃತದ ಹಾಲು ಬೇಡಬೇಕಾಗಿದೆ.

332

ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ .
ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ !
ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ ?

ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ:

ಮಾವಿನ ಕಾಯಿಎಕ್ಕೆಯ ಕಾಯಿ (ಕೇರು ಅಥವಾ ಎಕ್ಕೆ) ಒಂದನ್ನೊಂದು ಹೋಲುತ್ತದೆ. ಆದರೆ ತಿನ್ನಲು ಬರುವುದಿಲ್ಲ. ಎಕ್ಕೆಯ ಕಾಯಿಒಡೆದು ನೋಡಿದರೆ ಬರೀ ಊಬು. ಹಾಗೆಯೇ ಮನ ಸರಿ ಇಲ್ಲ, ಸಂಕಟವಾಗುತ್ತದೆ, ಚಂಚಲವಾಗುತ್ತದೆ, ನಾನಾ ರೀತಿಯ ನೆನಪುಗಳು ಕಾಡುತ್ತವೆ, ಭಯ, ಭುಗಿಲು, ಸಂತೋಷ, ಸಮಾಧಾನ, ಉಲ್ಲಾಸವಾಗಿರುತ್ತದೆ. ಇದೆಲ್ಲ ತನುವಿನ ಅನುಭವಕ್ಕೆ ಬರುತ್ತದೆ. ಮನಸ್ಸು ಚಂಚಲವಾಗಿದೆ ಮನಸ್ಸು ಸಮಾಧಾನಿಯಾಗಿದೆ ಎಂದು ಹೇಳುತ್ತೇವೆಯೇ ಹೊರತು ಅರಿವು ಚೆನ್ನಾಗಿಲ್ಲ, ಚೆನ್ನಾಗಿದೆ ಎಂದು ಹೇಳುವುದಿಲ್ಲ. ಏಕೆಂದರೆ ಅರಿವು ಇದ್ದಂತೆ ಇರುತ್ತದೆ. ಅದಕ್ಕೆ ಕೃತಕ ಸಮಾಧಾನ, ಸಂತೋಷಗಳು, ದುಃಖ ದುಮ್ಮಾನಗಳು ಬೇಕಿಲ್ಲ. ಅರಿವಿಗೆ ಸಕಲವನ್ನೂ ಅನಾವರಣ ಮಾಡಿ ನೋಡಬಲ್ಲ ಸಹಜ ಸದ್ಗುಣಗಳಿವೆ.

ಅರಿವು ಮಾವಿನ ಕಾಯಿಯಾದರೆ, ಮಾವಿನ ಕಾಯೊಳಗೊಂದು (ಕೇರು) ಎಕ್ಕೆಯ ಕಾಯಿಯೇ ಮನ. ಅದನ್ನು ಸೀಳಿದರೆ ಹಿಂಜಿಯಾಕಾರದ ಸಾವಿರಾರು ಊಬುಗಳು ! ಗಾಳಿಯಲ್ಲಿ ತೇಲಾಡುತ್ತ ಎಲ್ಲಿ ಬಿದ್ದರಲ್ಲಿಯೇ ಎಕ್ಕೆಯ ಸಂತಾನ ! ಕಣ್ಣಿಗೆ ತಾಗಿದರೆ ಕುರುಡು, ಮೈಗೆ ತಾಗಿದರೆ ಹುಣ್ಣು. (ಕೇರು) ಎಕ್ಕೆಯ ಹಾಲು ಸಿಡಿದರೆ ಹೆಣ್ಣು ! ಮಾವಿನ ರಸ ಅಮೃತ; ಅದು ಹಣ್ಣುಗಳ ರಾಜ !

ಮನ ತನುವಿನೊಂದಿಗೆ ಎಂದೂ ಸಮಾಧಾನಿಯಾಗಿರಲು ಸಾಧ್ಯವಿಲ್ಲ ! ತನುವಿಗೆ ಸಮಾಧಾನದ ವೇಷ ಹಾಕಬಹುದು. ಆದರೆ ಭಕ್ತನಾಗಲು ಅರಿಯದು. ಗುರುವಿಗೆ ಶಿಷ್ಯನಾಗಬಹುದು, ತನುವಿಗೆ ಗುರುವಿನ ವೇಷ ಹಾಕಬಹುದು ಆದರೆ ಅರಿವಿನ ಗುರುವಾಗಲರಿಯದು.

ಅರಿಯದ ಕಣ್ಣುಗಳಿಗೆ ಎರಡೂ ಒಂದೇ ಆಗಿ ಕಂಡರೂ ಅವೆರಡೂ ಒಂದಲ್ಲ. ಮನವೇ ಬೇರೆ, ಅರಿವೇ ಬೇರೆ ! ಅರಿವೆಂಬ ಗುರುದೇವ ತನುವಿನಲ್ಲಿ ತನ್ಮಯವಾಗಿ ಅರಿವೆಂಬ ಅಮೃತ ಸಿಂಚನ ಮಾಡುತ್ತಾನೆ. ಸಾಧ್ಯವಾದರೆ ಮನ ಆತನಿಗೆ ಭಕ್ತನಾಗಿ ಅಮೃತ ಪಾನಮಾಡಬೇಕು.

ಮನ ತನುವಿಗೆ ಹಾಕಿದ ಭಕ್ತನ ಕಪಟವೇಷ ಕಿತ್ತೆಸೆದು ಅರಿವಿನ ಹಾದಿ ಸೂಚಿಸುವ ಶರಣರಿಗೆ ಶರಣಾಗತನಾಗಬೇಕು. ಭಕ್ತ, ಗುರು, ಶಿಷ್ಯ, ಜಂಗಮ, ರಾಜ, ಮಂತ್ರಿ, ಶಾಸಕ, ಉಪನ್ಯಾಸಕ, ಪಂಡಿತ ಎನ್ನುವ ಹಂಗು ಬಿಡಬೇಕು.

333

ಮರನ ನೆರಳಲ್ಲಿದ್ದು ತನ್ನ ನೆಳಲನರಸಬಹುದೆ ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ ?

ಆನು ಭಕ್ತನೆಂಬ ನುಡಿ ಸುಡದೆ ಕೂಡಲಸಂಗಮದೇವಾ ?

ಮರನ ನೆಳಲಲ್ಲಿದ್ದು ತನ್ನ ನೆಳಲನರಸಬಹುದೆ :

ಜ್ಞಾನದ ಬೆಳಕಿನಲ್ಲಿದ್ದ ತನುವಿಗೆ ಮನದ ನೆರಳೆ ಅದಕ್ಕೆ ಪ್ರಧಾನವಾದರೆ ಹೇಗೆ ? ಅದು ಉಚಿತವಲ್ಲ ಎಂದು ಮನಕ್ಕೆ ತಿಳಿಯಬೇಕು. ಶರಣರು ಜ್ಞಾನದ ಬೆಳಕಿನ ವಿಜ್ಞಾನಿಗಳು. ಬೆಳಕನುಂಡು ಅರಿವಿನ ಬೆಳಗ ಬೆಳಗುವವರು. ತನುವಿನ ಜ್ಞಾನದ ಬೆಳಕನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆಂದು ಮನಕ್ಕೆ ಪಾಠ ಮಾಡುವ ತಂತ್ರಜ್ಞರು. ಅವರ ಮುಂದೆ ಮನ ನಾನು ಭಕ್ತನೆಂಬ ಅಹಂಕಾರ ಬೀರಿದರೆ, ಮನದ ನುಡಿ ತನುವನ್ನು ಸುಡದೆ ಬಿಟ್ಟೀತೆ ?

ಅರಿವೆಂಬ ಗುರುದೇವ ಕೋಟಿ ಸೂರ್ಯರು ನಾಚುವಂತೆ ಇಡೀ ತನುವನ್ನು ಬೆಳಗುವ ನಿಪುಣ ! ಆತನನ್ನು ಪರಿಚಯಿಸುವ ಶರಣರಿಗೆ ಮನ ತಿರುಮಂತ್ರ ಹಾಕುವುದೆಂದರೇನು ? ಶರಣರ ಮುಂದೆ ಮನ ತನುವಿಗೆ ಭಕ್ತನ ವೇಷ ಹಾಕಿ ತಾನು ಭಕ್ತ ಎಂದು ಬೀಗಿದರೆ, ಮನಕ್ಕೆ ಮನ ಆಶ್ರಯಿಸಿದ ತನುವಿಗೇ ನಷ್ಟವೆಂದು ಮನ ತಿಳಿಯಬೇಕಲ್ಲ !

ಮನ ತಾನು ಭಕ್ತನೆಂದು ಕೊಚ್ಚಿಕೊಳ್ಳುವ ನುಡಿ ಸುಟ್ಟು, ತನುವಿನಲ್ಲಿಯೇ ಸಂಗಮವಾದ ಸಂಗಮನಾಥನೆಂಬ ಗುರುವಿನೊಂದಿಗೆ ಬೆರೆತು ಒಂದಾಗಬೇಕಲ್ಲ!

ತನು ಒಂದು ಅರಿವಿನ ಮರ ! ಬುದ್ಧ ಈ ಮರವನ್ನು ಬೋಧೀ ವೃಕ್ಷವೆಂದು ಕರೆದ. ತನುಗಳು ಬೋಧೀ ವೃಕ್ಷವಾಗಲಿಲ್ಲ. ಹಾಗೆ ಕರೆದ ತನುವನ್ನೇ ಬುದ್ಧನೆಂದು ಪೂಜಿಸಿದರು. ಬುದ್ಧನಿಗೆ ಭಕ್ತನಾದರು. ಮನ ಬುದ್ಧನ ವೇಷ ತನುವಿಗೆ ಹಾಕಿ ಬೌದ್ಧನಾಯಿತು, ಬುದ್ಧನಾಗಲಿಲ್ಲ.

ತನುವಿನ ಅರಿವಿನ ನೆರಳಲ್ಲಿದ್ದ ಮನ ತನ್ನ ನೆರಳನ್ನು ಹುಡುಕಬಹುದೆ ? ಅರಿವಿನ ನೆರಳ ಮುಂದೆ ಅದೇತರ ಮನದ ನೆರಳು ? ಸಹಜ ಅರಿವಿನ ಮುಂದೆ ಮನ ತನುವಿಗೆ ಅರಿವಿನ ವೇಷ ಹಾಕಬಹುದೆ ? ಸಹಜ ಅರಿವಿನ ಮುಂದೆ, ಮನದ ವೇಷದ ನುಡಿ ಸುಡದೆ ಅರಿವು ಒಲಿಯದು.

334

ಎನಗಿಂದ ಕಿರಿಯರಿಲ್ಲ ಶಿಭಕ್ತರಿಗಿಂದ ಹಿರಿಯರಿಲ್ಲ.
ನಿಮ್ಮ ಪಾದಸಾಕ್ಷಿ, ಎನ್ನ ಮನ ಸಾಕ್ಷಿ!
ಕೂಡಲಸಂಗಮದೇವಾ, ಎನಗಿದೇ ದಿಬ್ಯ.
ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂದ ಹಿರಿಯರಿಲ್ಲ:

ಎಲ್ಲ ನಾನೇ, ನಾನು ದೊಡ್ಡವನು, ನನಗಿಂತ ಮಿಗಿಲಾದ ದಾನಿಗಳಿಲ್ಲ ಎಂದು ಹಿರಿತನದಲ್ಲಿ ಮೆರೆದ ಬಲಿ ಚಕ್ರವರ್ತಿ ವಾಮನನ ಪಾದಕ್ಕೆ ತುತ್ತಾದ. ದಾನಿ ಎಂದು ಹಿರಿತನದಲ್ಲಿ ಬೀಗಿದ ಕರ್ಣ ಯುದ್ಧಭೂಮಿಯಲ್ಲಿ ಪ್ರಾಣ ಕಳೆದುಕೊಂಡ.

ಜ್ಞಾನಭಂಡಾರಿ ಬಸವಣ್ಣನವರ ಒಂದು ಸಾಲಿನ ಈ ವಚನ ಸೂಕ್ಷ್ಮಾತಿ ಸೂಕ್ಷ್ಮ ಜ್ಞಾನದ ಸೂತ್ರವಾಗಿದೆ. ಹಿರಿಯ ಯಾರು ಕಿರಿಯ ಯಾರು ಎಂದು ತಿಳಿದರೆ ಎಲ್ಲರೂ ಹಿರಿಯರೇ, ಎಲ್ಲರೂ ಕಿರಿಯರೇ ! ತಿಳಿಯದ್ದಕ್ಕಾಗಿ ಹಿರಿಯ ಹಾಗೂ ಕಿರಿಯ ಶಬ್ದಗಳು ಹುಟ್ಟಿಕೊಂಡಿವೆ.

ನಾನು ಎನ್ನುವವನು ಅಹಂಕಾರಿ, ಅವನಿಗೆ ಯಾರೂ ದೊಡ್ಡವರಲ್ಲ, ತಾನೇ ದೊಡ್ಡವನು. ಆದರೆ ಯಾರಿಗೂ ಅವನು ದೊಡ್ಡವನಲ್ಲ. ಎಲ್ಲರ ಬಾಯಲಿದ್ದ ಕುಬ್ಜ. ಅಹಂಕಾರಿ ತನಗೆ ತಾನೇ

ಹಿರಿಯನಾದರೆ ಎಲ್ಲರಿಗೂ ಕಿರಿಯ !

ದೇಹ ಅರಿವಿನ ಮನೆ, ಈ ಮನೆಯಲ್ಲಿ ಅರಿವಿನ ಒಡೆಯನಿದ್ದಾನೆ. ಸದಾ ಅವನನ್ನು ಪೂಜಿಸುವ ಮನವೆಂಬ ಭಕ್ತನಿದ್ದಾನೆ. ಹಾಗೆಯೇ ಒಡೆಯನೆಂದರೆ ಯಾರೆಂದು ತಿಳಿಯದ ಮನವೆಂಬ ಅಜ್ಞಾನಿಯೂ ಇದ್ದಾನೆ. ಅರಿವಿನ ಮನೆಯಲ್ಲಿಯೇ ವಾಸವಾಗಿರುವ ಅರಿವಿನ ಒಡೆಯನನ್ನು ತಿಳಿಯದ ಅಜ್ಞಾನಿ ಮನ, ಅರಿವಿನ ಮನೆಯನ್ನೇ ಅಜ್ಞಾನದ ಹಂದಿಯ ಗೂಡನ್ನಾಗಿ ಮಾಡಿಕೊಂಡು ನಾನು ದಾನಿ, ನಾನು ಶ್ರೀಮಂತ, ನಾನು ಜ್ಞಾನಿ, ನಾನು ಜಿಲ್ಲಾಧಿಕಾರಿ, ನಾನು ಶಾಸಕ, ನಾನು ಸಚಿವ, ನಾನು ಮುಖ್ಯಮಂತ್ರಿ , ನಾನು ಪ್ರಧಾನಿ, ನಾನು ಪಂಡಿತ, ನಾನು ಪ್ರವಚನ ಪಟು, ನಾನು ಸಾಹಿತಿ, ನಾನು ಜಗದ್ಗುರು, ನಾನು ಪೀಠಾಧಿಪತಿ ಎಂದು ಮೆರೆಯುವ ಅಜ್ಞಾನಿ ಮನವೇ ದುರಹಂಕಾರಿ!

ಅರಿವಿನ ಮನೆ ಅನುಭವದ ಮಂಟಪವೂ ಹೌದು. ಜ್ಞಾನದಾಸೋಹದ ಖಜಾನೆಯೂ ಹೌದು. ಹೀಗಿದ್ದೂ ನಾನು ಬಡವ, ನಾನು ಭಿಕ್ಷುಕ, ನಾನು ಕೂಲಿಯವ ಎಂದು ತನ್ನನ್ನು ತಾನೇ ಹೀಯಾಳಿಸಿಕೊಳ್ಳುವ ಅಜ್ಞಾತಮನ ಅದು ಪರದೇಶಿ.

ನಾನು ಸಮಾನತೆಯ ಹರಿಕಾರ, ಹೋರಾಟಗಾರ, ಸರ್ವತನುಗಳಿಗೂ ನ್ಯಾಯ ಒದಗಿಸುವ ಧೀಮಂತ ಎನ್ನುವ ಅಹಂಕಾರಿ ಮನವದು ಪರದೇಶಿ.

ಅರಿವಿನ ಮನೆಯಲ್ಲಿದ್ದ ಮನ, ಅರಿವನ್ನು ತಿಳಿದರೆ ಅವನು ಯಾರಾದರೇನು ಅವನೇ ಶಿವಭಕ್ತ , ಅವನೇ ಮಹಾಜ್ಞಾನಿ. ಅವನಿಗಿಂತ ಯಾರೂ ಹಿರಿಯರಿಲ್ಲ.

ಅರಿವಿನ ತನುವಿನ ಮನೆಯಲ್ಲಿದ್ದ ಮನ ಅರಿವನ್ನು ತಿಳಿಯದಿದ್ದರೆ ಅವನು ಯಾರಾದರೇನು? ಆ ತನು ಯಾರದಾದರೇನು ? ಆ ತನುವಿಗೆ ನೂರು ವರುಷಗಳಾಗಿದ್ದರೇನು? ಗುರು, ಶಾಸಕ, ಉಪನ್ಯಾಸಕನದಾಗಿದ್ದರೇನು ? ಅವನು ಅನಾಥ. ನಾಥನನ್ನು ತಿಳಿಯದವ.

ಹಿರಿಯನನ್ನು ಸಕಲ ತನುಗಳು ತಿಳಿಯಲೆಂದು, ವ್ಯಾಸ ಮಹರ್ಷಿ ಮಹಾಭಾರತವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಯುದ್ಧಭೂಮಿಯಲ್ಲಿ ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು ಬೀಡುಬಿಟ್ಟಿದ್ದಾರೆ. ಇಡೀ ಸೈನ್ಯದ ಮಧ್ಯ ಶ್ರೀಕೃಷ್ಣನನ್ನು ಆತನ ರಥವನ್ನು ಅರ್ಜುನನ್ನು ಕಾಣುವಂತೆ ಮಾಡಿದ್ದಾರೆ.

ಶ್ರೀಕೃಷ್ಣ ವಿರಾಟ ಸ್ವರೂಪ ! ಆತನ ತನುವೇ ರಥ !ಆತನ ತನುವಿನ ಮನವೇ ಅರ್ಜುನ! ತನುವಿನಲ್ಲಿಯ ಮನವೆಂಬ ಅರ್ಜುನ, ತನುವಿನಲ್ಲಿಯ ಶ್ರೀಕೃಷ್ಣನೆಂಬ ಅರಿವಿಗೆ ಭಕ್ತನಾಗಿ ಕಿರಿಯನಾಗಿದ್ದಾನೆ. ಶ್ರೀಕೃಷ್ಣನ ವಿರಾಟ ಸ್ವರೂಪದ ರುಚಿಯನ್ನು ಅನುಭವಿಸಿ ಮೈ ಮರೆತಿದ್ದಾನೆ.

ಹದಿನೆಂಟು ಅಕ್ಷೋಹಿಣಿ ಸೈನ್ಯ ದೊಡ್ಡದು. ಅದರ ಸಾರಥ್ಯ ವಹಿಸಿಕೊಂಡ ಭೀಷ್ಮ, ದ್ರೋಣ, ಕರ್ಣರು ಕೂಡಾ ದೊಡ್ಡವರೆ. ಆದರೆ ಶ್ರೀಕೃಷ್ಣನೆಂದರೆ ಯಾರೆಂದು ತಿಳಿಯದವರು. ಅರ್ಜುನ ಅವರಿಗಿಂತ ಕಿರಿಯನಾದರೂ ಶ್ರೀಕೃಷ್ಣನನ್ನು ತಿಳಿದ ಕಿರಿಯ !

ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ ? ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ. ಇನ್ನು ಜಂಗಮವೆ ಲಿಂಗವೆಂದು ನಂಬಿದೆ, ಕೂಡಲಸಂಗಮದೇವಾ.

ದೇಹದ ರಚನೆಯೇ ವಿಚಿತ್ರ ! ಅರಿವು ಮತ್ತು ಮನದಿಂದ ಭರಿತವಾದ ದೇಹಕ್ಕೆ ಅರಿವಾದರೆ ಅದು ಬುದ್ಧ ದೇಹ, ಮಹಾವೀರನ ದೇಹ ! ಅರಿವು ಮನ ಸಂಗಮವಾದ ಸಂಗಮನಾಥನ ದೇಹ !

ಮನಕ್ಕೆ ಅರಿವಾಗದಿದ್ದರೆ ಅದು ಹಿರಿಯದಾದರೇನು ಕಿರಿಯದಾದರೇನು ಅದಕ್ಕಿಂತ ಅರಿವಿದ್ದೂ ಅರಿಯದ ದೇಹ; ಅರಿವುಳ್ಳ ಹಿರಿಯಾದೇಹ. ಅರಿವಾದರೆ ಆ ದೇಹ ವಿಟನದಾದರೇನು, ದಾಸಿಯದಾದರೇನು, ಕಳ್ಳ ಸುಳ್ಳ ಕೊಲೆಗಡುಕನದಾದರೇನು, ರಾಜನದಾದರೇನು ಅದು ಬುದ್ಧ ದೇಹ ! ಮಹಾವೀರ, ಬಸವಾದಿ ಶರಣರ, ದಾಸವರೇಣ್ಯರ ದೇಹ ! ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ! ಕೂಡಲಸಂಗಮದೇವಾ, ಎನಗಿದೇ ದಿಬ್ಯ.

ಅರಿವಿದ್ದೂ ಅರಿಯದ ದೇಹ ಕಿರಿಯಾದಾದರೇನು ಹಿರಿಯದೆ. ಅರಿವನು ಅರಿತು ಕಿರಿಯದಾದರೇನು ಆ ದೇಹ ಕೂಡಾ ಹಿರಿಯದೆ. ಹೀಗಾಗಿ ಜಗದ ದೇಹಗಳೆಲ್ಲ ಹಿರಿಯ ದೇಹಗಳೇ ಆಗಿವೆ. ಇದನ್ನು ಅರಿತಿರುವುದರಿಂದ ನಾನೊಬ್ಬನೆ ಕಿರಿಯ! ನನಗಿಂತ ಕಿರಿಯರು ಯಾರೂ ಇಲ್ಲ. ಇಡಲೊಡಯನೆ ನಿಮ್ಮ ಪಾದ ಸಾಕ್ಷಿ, ಎನ್ನ ಮನಸಾಕ್ಷಿ. ಎನಗಿದೇ ದಿಬ್ಯ !

335

ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯಯ್ಯಾ,
ಕಾಟುಗ, ಕೆತ್ತುಗ, ಪೋಲುಗನೆಂಬುದು ಎನ್ನ ಹೆಸರು !
ಕೂಡಲಸಂಗಮದೇವಾ,
ನಿಮ್ಮ ಶರಣರ ಮನೆಯ ಮಗ ನಾನಯ್ಯಾ.

ತನುವನ್ನು ಹೆಣ್ಣು ಗಂಡೆನ್ನದೆ, ಜಾತಿ ಮತ ಪಂಥಗಳೆನ್ನದೆ, ಶ್ರೀಮಂತ ಬಡವ ಅಧಿಕಾರಿ ಎನ್ನದೆ ಸಹಜವಾಗಿ ಅರಿವಿನ ತನುವೆಂದು ಗುರುತಿಸುವ ಅರಿವು ತನುವಿನಲ್ಲಿ ಬಳಕೆ ಆಗದೆ ಹಾಗೆಯೇ ಉಳಿದಿರುವುದರಿಂದ ಬಸವಣ್ಣನವರು ಹಲವಾರು ಸೂತ್ರಗಳ ಮೂಲಕ ಸಹಜ ಅರಿವನ್ನು ಬಳಸಿ ಸದಾ ಸುಖಿಯಾಗಿರುವ ಮಾರ್ಗ ಹೇಳಿದ್ದಾರೆ.

ತನುವಿನಲ್ಲಿರುವ ಅರಿವಿನತ್ತ ಪಯಣಿಸಿದ ಮನವೇ ಭಕ್ತ ! ಇಂತಹ ಮನ ತನುವಿಗೆ ಯಾವ ವೇಷವನ್ನೂ ಹಾಕುವುದಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತದೆ. ಸಕಲ ತನುಗಳಲ್ಲಿ ಅರಿವನ್ನೇ ಕಾಣುತ್ತದೆ. ಕಳ್ಳ ಸುಳ್ಳ, ವಿಷಯ ಲಂಪಟ, ವಿಟ, ವೇಶ್ಯಾ ವೃತ್ತಿಗೆ ಕಾರಣವಾದ ಮನಸ್ಸು ಸಹಜ ಅರಿವಿನ ತನುವಿಗೆ ಕಾಣುವುದಿಲ್ಲ. ಮನ ತನುವಿಗೆ ಹಾಕಿದ ವೇಷವೆಂದು ತಿಳಿದು ಅರಿವಿನ ತನುವನ್ನು ಗೌರವಿಸುತ್ತದೆ. ಹಾಗೆಯೇ ಮನ ಸಂಪನ್ನನೆಂದು ಹೊಗಳಿಸಿಕೊಳ್ಳುವ ಸುಖಕ್ಕಾಗಿ ತನುವಿಗೆ ಗುರುವಿನ ವೇಷ, ಭಕ್ತನ ವೇಷ, ಶಾಸಕ ಸಚಿವ, ಅಧಿಕಾರಿಯ ವೇಷ ಹಾಕುತ್ತದೆ. ವೇಶ್ಯಯ ವೇಷವಾದರೇನು? ಗುರುವಿನ ವೇಷವಾದರೇನು? ವೇಷ ವೇಷವೆ !ತನುವನ್ನು ಸುಖಿಯಾಗಿಡಲು ಬಿಡುವುದಿಲ್ಲ.

ಮನ ತನುವಿಗೆ ಗುರುವಿನ ವೇಷ ಹಾಕುತ್ತದೆ. ಪೂಜಿಸಲು ಬಂದ ಶಿಷ್ಯಳನ್ನೇ ಕಟುಕನಂತೆ ಹರಿದು ತಿನ್ನುತ್ತದೆ. ಪೂಜಿಸಲು ಬಂದ ಶಿಷ್ಯನ ಸಂಪತ್ತೆಲ್ಲ ಬಡಿಗನಂತೆ ಕೆತ್ತಿ ಕೆತ್ತಿ ತಿನ್ನುತ್ತದೆ. ಪೋಲುಗನಂತೆ ಹಾಳು ಮಾಡುತ್ತದೆ.

ತನುವಿನ ಸಹಜ ಅರಿವು ತಿಳಿದ ಸಹಜ ಮನವೇ ನಿಜಭಕ್ತ ! ಅವನು ವೇಷ ಧಾರಿಯಲ್ಲ, ಅವನಿಗೆ ಯಾವ ಪದವಿ ಪುರಸ್ಕಾರಗಳ ಅವಶ್ಯಕತೆಯೇ ಇಲ್ಲ. ಅವನಿಗೆ ಯಾವ ಹೆಸರೂ ಇಲ್ಲ. ಅದು ಮಾತನಾಡುವ ಹೆಸರಿಲ್ಲದ ಮರ, ಬೋಧೀವೃಕ್ಷ !

ಮನ ತನುವಿಗೆ ಮಹಾವೀರ ಬುದ್ಧ ದಾಸ ಶರಣರ ವೇಷ ಹಾಕಿದರೇನು ? ಅದು ವೇಷಧಾರಿ ಮನ ! ಕಾಟುಗ, ಕೆತ್ತುಗ, ಪೋಲುಗನೆಂಬುದೇ ಅದರ ಹೆಸರು ! ಆಯ್ಕೆ ಮನಕ್ಕೆ ಬಿಟ್ಟಿದ್ದು. ತನು

ಮಾತ್ರ ಅರಿವಿನ ಮನೆ, ಕೂಡಲಸಂಗಯ್ಯನ ಸುಕ್ಷೇತ್ರ . ಮನ ತನುವಿನೊಂದಿಗೆ ಅಪರಾಧವೆಸಗಿದರೆ ಮನ ಅಪರಾಧಿ, ತನು ನಿರಪರಾಧಿ !

336

ಡಂಬು ಡಳಹು ಎನ್ನದಯ್ಯಾ , ಡಂಭಕನೆಂಬವ ನಾನಯ್ಯಾ .
ಎನ್ನಲೇ ನನರಸುವಿರಿ ?
ನಿಮ್ಮ ನಂಬಿ ನಂಬದ ಡಂಭಕ ನಾನು,
ಹಾವ ತೋರಿ ಹವಿಯ ಬೇಡುವಂತೆ ಎನ್ನಭಕ್ತಿ ,
ಕೂಡಲಸಂಗಮದೇವಾ.

ತಿಳಿಯದ ಮನಕ್ಕೆ ಅರಿವನ್ನು ತಿಳಿಯಲು ಪರಿಪರಿಯಾಗಿ ಬೇಡಿದ್ದಾರೆ, ಅರಿವನ್ನು ಪರಿಪರಿಯಾಗಿ ಹಾಡಿ ಹೊಗಳಿದ್ದಾರೆ, ಮನದಿಂದಲೇ ಮನವನ್ನು ಪರಿಪರಿಯಾಗಿ ನಿಂದಿಸಿದ್ದಾರೆ. ಡಂಬು ಡಳಹು, ಡಂಭಕನೆಂದು ಜರಿದಿದ್ದಾರೆ. ಸೂಳೆ, ಚಂಚಲೆ ಎಂದು ಟೀಕಿಸಿದ್ದಾರೆ. ಅರಿವನ್ನು ಗಂಡನನ್ನಾಗಿಸಿ, ಮನವನ್ನು ಹೆಂಡತಿಯನ್ನಾಗಿ ಮಾಡಿ ಸತಿಪತಿಗಳನ್ನು ಒಂದು ಮಾಡುವ ಬಗೆಯನ್ನು ಸಕಲ ತನುಗಳಿಗೆ ವಿವರಿಸಿದ್ದಾರೆ.

ಅಣ್ಣ ಬಸವಣ್ಣನವರ ವಚನಗಳು ಅರಿವಿಗೆ ಹೋಗುವ ಸೂತ್ರಗಳು. ಓದುಗರಿಗೆ ತಮ್ಮನ್ನೇ ನಿಂದಿಸಿಕೊಳ್ಳುವಂತೆ ಕಂಡರೂ ಅದು ಹಾಗಲ್ಲವೆಂದು ನಿಧಾನವಾಗಿ ತಿಳಿಯಬೇಕಿದೆ. ಇಲ್ಲ ಗುರುವಿನ ಮೂಲಕ ತಿಳಿದುಕೊಳ್ಳಬೇಕಿದೆ.

ತನುವಿನಲ್ಲಿರುವ ಅರಿವನ್ನು , ತನುವನ್ನು ಆವರಿಸಿದ ಮನವೇ ತಿಳಿಯಬೇಕು. ಅರಿವು ತಿಳಿಯುವ ಮನವೇ ಅರಿವಿನ ವೇಷ ಧರಿಸಿ ತಿಳಿದೆನೆಂದು ಡಂಭಕತನದಿಂದ ಮೆರೆದರೆ ಅದನ್ನು ಯಾರು ರಕ್ಷಿಸಬೇಕು ? ತನುವಿನಲ್ಲಿ ಅಮೃತವಿದ್ದೂ ವಿಷದ ಹಾವು ತೋರಿ ಹಾಲುಬೇಡಿ ಹೊಟ್ಟೆ ಹೊರೆಯುವ ಡಂಬು ಡಳಹುವಿನ ಮನವನ್ನು ಯಾರು ರಕ್ಷಿಸಬೇಕು ?

ಈ ತಾಂತ್ರಿಕತೆಯನ್ನು ಮನ ತಿಳಿದು ಅರಿವಿನತ್ತ ಪ್ರಯಾಣ ಮಾಡಬೇಕಿದೆ. ತನುವಿನಲ್ಲಿಯೇ ಇರುವ ಅರಿವನ್ನು ಕೂಡಿ ಕೂಡಲಸಂಗಮನಾಗಬೇಕಿದೆ.

337

ಚನ್ನ ಚೇರಮರ ಬಂಟ ನಾನಯ್ಯಾ .
ಎನ್ನ ಚಾಗುಬೊಲ್ಲನ ಕಾವ ಗೋವನೆಂಬರು.
ಕೂಡಲಸಂಗನ ಶರಣರೊಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು.

ಎನ್ನ ಚಾಗುಬೊಲ್ಲನ ಕಾವ ಗೋವನೆಂಬರು :

ಮಾದಾರ ಚನ್ನಯ್ಯ ಶಿವಶರಣ ಚೇರಮರಾಜನ ಬಂಟ ನಾನು. ಕೂಡಲಸಂಗನ ಶರಣರ ತೊತ್ತಿನ ಮಗ ನಾನು. ಇವರೆಲ್ಲ ಜಗದ ತನುಗಳು ಜ್ಞಾನಕ್ಕೆ ಹೋಗುವ ಮಾರ್ಗವನ್ನು ಸೂಚಿಸಿದ ಒಡೆಯರು. ಅಷ್ಟೇ ಏಕೆ ?

ನನ್ನ ಒಡಲು ಅರಿವೆಂಬ ಒಡೆಯನ ಕುದುರೆ. ಅದರ ತನು ಉಜ್ಜಿ, ಮೈದಡವಿ ಸದಾ ಅದನ್ನು ಕಾಯುವ ಮನವೆಂಬ ಗೊಲ್ಲನಾನು.

ಅರಿವೆಂಬ ಒಡೆಯನ ಕುದುರೆಯೇತನುವು; ಅದನ್ನು ಕಾಯುವ ಮನವೆಂಬ ಗೊಲ್ಲ ಹತ್ತಿದರೆ ಹೇಗೆ ? ಅದು ಪಂಚ ಕಲ್ಯಾಣಿಯ ಕಪ್ಪು ಚುಕ್ಕೆಗಳೇ ಇಲ್ಲದ ಬೆಳ್ಳನೆಯ ಕುದುರೆ ! ಚಾಗುಬೊಲ್ಲನ ಅಂದರೆ ಒಡೆಯನ ಒಳ್ಳೆಯ ಕುದುರೆ ! ಆತ ಹತ್ತಿದರೆ ಯಾರಿಗೂ ಕಾಣದಂತೆ ನಾಗಾಲೋಟಕ್ಕೆ ಓಡುತ್ತದೆ.

ಮನವೆಂಬ ಗೊಲ್ಲನಿಗೆ ತನುವೆಂಬ ಕುದುರೆ ಕಾಯಲು ಮಾತ್ರ ಗೊತ್ತು. ಕುದುರೆಯ ಮೇಲೆ ಅರಿವೆಂಬ ಒಡೆಯ ಮಾತ್ರ ಸವಾರಿ ಮಾಡಬೇಕು. ಆದರೆ ಅದನ್ನು ಕಾಯುವ ಗೊಲ್ಲ ಸವಾರಿ ಮಾಡಿದರೆ ಕುದುರೆಯ ಪಂಚ ಕಲ್ಯಾಣದ ಗುಣಗಳು ಕೂಡಲೇ ದುರ್ಗುಣಗಳಾಗುತ್ತವೆ. ಕಣ್ಣುನೋಡಿದೆಡೆಗೆ, ಕಿವಿ ಕೇಳಿದೆಡೆಗೆ, ಮೂಗು ಮೂಸಿಸಿದೆಡೆಗೆ, ಚರ್ಮ ಬಯಸಿದೆಡೆಗೆ ತನುವೆಂಬ ಕುದುರೆ ಓಡುತ್ತದೆ, ಕುದುರೆ ನಾಲಿಗೆಯ ರುಚಿಗೆ ಮಾರು ಹೋಗಿ ಅದು ಬಯಸಿದೆಡೆಗೆ ಓಡುತ್ತದೆ. ಹೆಂಡದ ಅಂಗಡಿಗೆ, ವೇಶ್ಯಾಗೃಹಕ್ಕೆ, ಲಂಚ, ಭ್ರಷ್ಟಾಚಾರ, ಕಳುವಿನೆಡೆಗೆ ಓಡುತ್ತದೆ.

ಗೊಲ್ಲಕುದುರೆ ಕಾಯುವವನೆ ಹೊರತು ಸವಾರನಲ್ಲ! ಮನವೆಂಬ ಗೊಲ್ಲನಿಗೆ ಅರಿವಿನ ಕುದುರೆ ನಡೆಸುವ ಯಾವ ವರಸೆಗಳೂ ಗೊತ್ತಿಲ್ಲ. ತನುವೆಂಬ ಕುದುರೆ ಅರಿವೆಂಬ ಒಡೆಯನದು. ಆತ ಲಗಾಮ ಹಾಕಿದತ್ತ ಪಯಣಿಸುವುದು ಅದರ ಧರ್ಮ. ಆತನ ಬಂಟ ನಾನು. ಆತ ನನಗೆ ಒಡೆಯ. ಆತನ ತೊತ್ತಿನ ಮಗ ನಾನು, ಆತ ಒಲಿದಂತೆ ನುಡಿಯುವ ಮನ ನಾನು !

338

ಕಾಲಲೊದೆದು ಬಡಿದು ಜಡಿವರಯ್ಯಾ,
ಭಕ್ತಿಯಯ್ದದೆಂದೆನ್ನ.
ಜರಿವರಯ್ಯಾ, ನುಡಿವರಯ್ಯಾ
ಕೂಡಲಸಂಗನ ಶರಣರೊಡೆಯರಾಗಿ.

ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನೆ ಸಂಗಮನಾಥ. ಆತನನ್ನು ಗುರುದೇವನನ್ನಾಗಿ ಸ್ವೀಕರಿಸುವ ಮನವೇ ಭಕ್ತ. ತನುವಿನಲ್ಲಿಯ ಸಂಗಮನಾಥನನ್ನು ಮನವೆಂಬ ಭಕ್ತನಿಗೆ ಸೂಚಿಸುವ ಶರಣರೇ ಮನಕ್ಕೆ ಪ್ರಾಥಮಿಕ ಒಡೆಯರು.

ಮನವೆಂಬ ಭಕ್ತನಿಗೆ ಈ ದೃಷ್ಟಾಂತ ತಿಳಿದ ಮೇಲೆಯೂ ತನುವಿನೊಂದಿಗೆ ಸುಖಿಸುವ ತನ್ನ ಅವಗುಣಗಳನ್ನು ಬಿಡುವುದಿಲ್ಲ. ಹಾಗೆಯೇ ತನುವಿನೊಂದಿಗೆ ದುಃಖಿಸುವ ತನ್ನ ಅವಗುಣಗಳನ್ನು ಬಿಡುವುದಿಲ್ಲ.

ಮನಕ್ಕೆ ಕಾಮ ಸುಖದ ಬಯಕೆಯಾದಾಗ, ತನುವಿಗೆ ಹಾಕಿದ ಭಕ್ತನ ವೇಷ ಅಡ್ಡಿಯಾಗುತ್ತದೆ. ಆಗ ಮನ ಕಣ್ಣಿನಲ್ಲಿ ಬೆರೆತು ತನುವಿನಲ್ಲಿಯೇ ಮಾನಸಿಕ ಹಾದರ ಮಾಡುತ್ತದೆ. ಶರಣರೆಂಬ ಒಡೆಯರಿಂದ ಪರಿಚಯವಾದ ಸಂಗಮನಾಥ ಮನಕ್ಕೆ ನಾಯಿ ಎಂದು ಜರಿದು ಕಾಲಿಲೆ ಒದೆಯುತ್ತಾನೆ. ಬಡಿದು ಜಡಿಯುತ್ತಾನೆ.

ಚಿನ್ನ, ಕರೆನ್ಸಿ, ಭೂಮಿಯ ಬಯಕೆ ಮನಕ್ಕೆ ಉಂಟಾದಾಗ ಚಿನ್ನದಲ್ಲಿಯ ಲೋಹ ತೋರಿ,

ಕರೆನ್ಸಿಯಲ್ಲಿಯ ಕಾಗದ ತೋರಿ, ಭೂಮಿಯಲ್ಲಿಯ ಮಣ್ಣು ತೋರಿ ಅರಿವೆಂಬ ಸಂಗಮನಾಥ ಜರಿದು ನುಡಿಯುತ್ತಾನೆ.

ಯಾವ ವಿಶ್ವವಿದ್ಯಾಲಯದಲ್ಲಿಯೂ ಉಪನ್ಯಾಸ ನೀಡದ ಪಾಠವನ್ನು ಅರಿವೆಂಬ ಗುರುದೇವ ಮನವೆಂಬ ಶಿಷ್ಯನಿಗೆ ತನುವಿನಲ್ಲಿಯೇ(24X7) ನೀಡುತ್ತಾನೆ. ಆತ ತನುವನ್ನು, ತನುವಿನ ಮನವನ್ನು ಒಡೆದು, ಜಡಿದು, ಜರಿದು ನುಡಿಯುವ ಒಡಲೊಡೆಯ ! ಈತನಿಗೆ ಒಡಲೊಪ್ಪಿಸಿ ಶಾಶ್ವತ ಸುಖಿಗಳಾಗಬಾರದೆ ಎನ್ನುವ ಕಳಕಳಿ ಅಣ್ಣನವರಿಗೆ.

339

ನಡೆವರಯ್ಯಾ ಒಡೆಯರು ತನು-ಮನ-ಧನದ ಮೇಲೆ,
ನುಡಿವರಯ್ಯಾ ಒಂದು ನಿಮಿಷ ಬಾರದಿದ್ದಡೆ,
ಜರಿವರಯ್ಯಾ ಒಡೆಯರು ಮನ ಬಂದ ಪರಿಯಲಿ,
ಶಿವ ಶಿವಾ ! ಅಣೆವರಯ್ಯಾಮಂಡೆಯನೂರಿ.
ಪ್ರಾಣದ ಒಡೆಯರಯ್ಯಾ .
ಕೂಡಲಸಂಗಮದೇವಾ, ನಿಮ್ಮ ಶರಣರು.

ಗಿಡ ಮರ ಬಳ್ಳಿ ಪಶು ಪಕ್ಷಿ ಪ್ರಾಣಿಗಳು, ಜಲಚರ ಉರುಗಗಳು, ಕೀಟಗಳು ಸಹಜ ಸುಖದಿಂದ ಬದುಕುತ್ತಲಿವೆ. ಮನುಷ್ಯ ಮಾತ್ರ ಸಹಜ ಸುಖದಿಂದ ವಂಚಿತನಾಗಿದ್ದಾನೆ. ತನುವಿನಲ್ಲಿರುವ ಸಹಜ ಶಿಕ್ಷಣ ತನುವಿನಲ್ಲಿಯೇ ಇರುವ ಮನ ಪಡೆದು ಸಹಜವಾಗಿ ಬದುಕುವುದೇ ಸಹಜ ಶಿಕ್ಷಣ ! ಸರಕಾರ ತನುಗಳಿಗೆ ಮಾಹಿತಿ ಒದಗಿಸುವ (Information) ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದೆ. ಅವುಗಳಿಂದ ಯಾವ ತನುಗಳೂ ಸುಖಿಯಾಗಿರಲು ಸಾಧ್ಯವಿಲ್ಲ. ಅದು ತನುಗಳಿಗೆ ಭ್ರಮೆಯನ್ನುಂಟುಮಾಡುವ ಶಿಕ್ಷಣವೆಂದು ಸರಕಾರಕ್ಕೆ ತಿಳಿಯುತ್ತಿಲ್ಲ.

ಶರಣರು ಮಹಾಜ್ಞಾನಿಗಳು ! ತನುವಿನ ಮೇಲೆ ತನು ಹಾರಿ, ವಿಕೃತ ಕಾಮದಿಂದ ಸುಖಿಸುವ ತನುವಿನ ಮೈದಡವಿ, ಕೊಬ್ಬಿದ ಆ ತನುವಿನ ಮೇಲೆ ಜ್ಞಾನದ ಪಾದವಿಟ್ಟು ನಡೆದರು. ತನ್ನಂತೆಯೇ ಇರುವ ಆ ತನುವನ್ನು ನೋಡಿ, ತನುವಿಗೆ ಕಾಮ ಹುಟ್ಟಿಸಿ ಸುಖಿಸುವ ಮನದ ಮೇಲೆ ಜ್ಞಾನದ ಪಾದವಿಟ್ಟು ನಡೆದರು. ಅರಿವಿದ್ದೂ ಬಳಕೆಯಾಗದ (ಧನ) ಅರಿವಿನ ಮೇಲೆ ಸುಜ್ಞಾನದ ಪಾದವಿಟ್ಟು ನಡೆದರು. ಕೈಹಿಡಿದು ತನುವಿಗೆ ಜ್ಞಾನದ ನಡಿಗೆಯನು ನಡೆಯಲು ಕಲಿಸಿದರು.

ತನುವಿಗೆ ತನುವಿನ ಜ್ಞಾನ ಸೂಚಿಸಲು ಅಧ್ಯಾಪಕನಿಗೆ ಕೂಲಿಬೇಕೆ ? ತನುವಿಗೆ ತನುವಿನ ಜ್ಞಾನ ಮನವರಿಕೆಯಾಗುವುದೇ ಶರಣನಿಗೆ ಕೂಲಿ ! ಜ್ಞಾನದ ಶಿಕ್ಷಣಕ್ಕೆ ಒಂದು ನಿಮಿಷ ತಡವಾಗಿ ಬಂದರೆ ಶಿಷ್ಯನನ್ನು ಜರಿದು ನುಡಿವರು. ಮನವೆಂಬ ಶಿಷ್ಯ ತನ್ನ ಸುಖಕ್ಕೆ ತನುವನ್ನು ಬಲಿಕೊಟ್ಟಾಗ ತನುವಿನ ಒಡೆಯನೆಂಬ ಗುರುದೇವ ಹೇಗೆ ಮನವನ್ನು ಜರಿದು ನೋಡುತ್ತಾನೆ ಎಂಬುದನ್ನು ಕೈಹಿಡಿದು ಕಲಿಸುತ್ತಾರೆ. ತಿಳಿಯದಿದ್ದರೆ ಶರಣರು ಮನಬಂದ ಪರಿಯಲಿ ಜರಿಯುತ್ತಾರೆ. ಮಂಡೆಯ ಮೇಲೆ ಅಣೆದು ಮನವನ್ನು ಅರಿವೆಂಬ ಗುರುದೇವನಿಗೆ ಒಪ್ಪಿಸುತ್ತಾರೆ.

ತನುವಿನ ಅರಿವೆಂಬ ಒಡೆಯನನ್ನು ಮನಕ್ಕೆ ಪರಿಪರಿಯಿಂದ ಪರಿಚಯಿಸುವ ಶರಣರು, ತನುವಿನ ಪ್ರಾಣದ ಒಡೆಯರೂ ಹೌದು.

ಹಲವಾರು ಗ್ರಂಥಗಳನ್ನು ಬರೆದ ತನುವಿಗೆ ಗ್ರಂಥಗಳನ್ನೇ ಭೋಧಿಸಿ ಕಲಿಸುವುದೆಂದರೇನು? ಸಕಲ ಗ್ರಂಥಗಳನ್ನು ಬರೆದ ತನುವಿನೊಡೆಯನನ್ನು ಮನಕ್ಕೆ ಪರಿಚಯಿಸುವ ಶರಣರ ಶಿಕ್ಷಣ ಜಾರಿಗೆ ಬರಲೆಂಬುದೆ ಶರಣರ ದಾಸವರೇಣ್ಯರ ಆಶಯ !

340

ಅರ್ಥಪ್ರಾಣಾಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ
ಎನಗಾರೂ ಇಲ್ಲವಯ್ಯಾ .
ಭೃತ್ಯಾಪರಾಧಃ ಸ್ವಾಮಿನೋದಂಡಃ
ಕೂಡಲಸಂಗಮದೇವಾ, ನೀವೇ ಪ್ರಮಾಣು.

ಅರ್ಥಪ್ರಾಣಾಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ ಎನಗಾರೂ ಇಲ್ಲವಯ್ಯಾ :

ನೋಡೂದನ್ನು ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ. ನೋಡೂದನ್ನು ನೋಡಲು ಅರಿತವರೆ ಜಗದೊಡೆಯರು. ಬುದ್ಧ ಮಹಾವೀರ ಜರಾತುಷ್ಟ್ರ ಕ್ರಿಸ್ತ ಕೃಷ್ಣ ಶಂಕರ ರಾಮಾನುಜ ಮಾಧ್ವರು, ದಾಸರು ಬಸವಾದಿ ಶರಣರು ನೋಡೂದನ್ನು ನೋಡಿ ಒಡಲೊಡೆಯರಾದರು. ಜಗದೊಡೆಯರಾದರು. ಅರ್ಥ ಪ್ರಾಣ ಅಭಿಮಾನಕ್ಕೆ ಒಡೆಯರಾದರು.

ಸಿದ್ಧಾರ್ಥ ರಾಜನಾದರೂ ಅರ್ಥಕ್ಕೆ ಆಸೆ ಪಡಲಿಲ್ಲ, ಪ್ರಾಣಕ್ಕೆ ಅಂಜಲಿಲ್ಲ, ಅಭಿಮಾನಕ್ಕೆ ಮಾರು ಹೋಗಲಿಲ್ಲ. ಸಿದ್ಧಾರ್ಥ ಒಡಲೊಡೆಯ ಬುದ್ಧನಿಗೆ ಸದ್ಭಕ್ತನಾಗಿದ್ದ ! ಸಿದ್ಧಾರ್ಥ ರಾಜನೇ ಆಗಿದ್ದರೆ ರಾಜನನ್ನು ಕೊಂದು ಅರ್ಥ ಸಂಗ್ರಹಿಸುತ್ತಿದ್ದ, ಪ್ರಾಣವನ್ನು ರಕ್ಷಿಸಿಕೊಳ್ಳಲು ಸೈನ್ಯವನ್ನು ಬಲಪಡಿಸುತ್ತಿದ್ದ. ರಾಜ್ಯಗಳನ್ನು ಕಬಳಿಸಿ ಅಭಿಮಾನದಿಂದ ಮೆರೆದು ಇತರ ರಾಜರಂತೆ ಮಣ್ಣಲ್ಲಿ ಸೇರಿ ಮಣ್ಣಾಗ್ತುತ್ತಿದ್ದ. ಬುದ್ಧನಂತೆ ಒಡಲೊಡೆಯ ಜಗದೊಡೆಯನಾಗುತ್ತಿರಲಿಲ್ಲ. ಈತ ಜಗದ ನಂಟ. ಸಿದ್ಧಾರ್ಥ ರಾಜನಾದರೂ ಆತನಿಗೆ ಯಾರೂ ಇಲ್ಲ.

ತನುವಿನಲ್ಲಿ ಅರಿವೆಂಬ ಸ್ವಾಮಿಯೂ ಇದ್ದಾನೆ. ಮನವೆಂಬ ಭೃತ್ಯನೂ ಇದ್ದಾನೆ. ಭೃತ್ಯ ತಪ್ಪು ಮಾಡಿದರೆ ಸ್ವಾಮಿ ದಂಡ ತೆರಬೇಕು. ಭೃತ್ಯನೆಂದರೆ ಸ್ವಾಮಿ ಸಲುಹಿದ ಪಶು. ಪಶುವೇನು ಬಲ್ಲದು ಹಸುರೆಂದೆಳೆಸುವುದು, ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ ತಂದೆ ನಿಮ್ಮ ಬಯ್ಯದಂತೆ ಮಾಡು.

ಪಶು ಬೇಲಿ ಹಾರಿ ಹೊಲ ಮೇಯಲು ಹೋದಾಗ ಹೊಲದ ಮಾಲೀಕ ಪಶುವನ್ನು ಹಿಡಿದು ಪಶು ಸಾಕಿದ ಮಾಲೀಕನನ್ನು ಬಯ್ಯುತ್ತಾನೆ. ಆತನಿಗೆ ದಂಡ ವಿಧಿಸುತ್ತಾನೆ. ಹಾಗೆ ಮನಸ್ಸು ಪಶು ! ತನುವನ್ನು ಕರೆದುಕೊಂಡು ವಿಷಯ ಸುಖದ ಹಸಿರು ಮೇಯಲು ಹೋಗುತ್ತದೆ. ಜನಕ್ಕೇನು ಗೊತ್ತು ತನು ಅರಿವಿನ ಒಡೆಯನದೆಂದು ! ಅಪರಾಧೀ ಮನವನ್ನು ಬಿಟ್ಟು ತನುವನ್ನು ಹಿಡಿದು ಜಡಿಯುತ್ತಾರೆ.

ಭೃತ್ಯಾಪರಾಧಃ ಸ್ವಾಮಿನೋದಂಡಃ ಕೂಡಲಸಂಗಮದೇವಾ ನೀವೇ ಪ್ರಮಾಣು: ಎನಗಾರೂ ಇಲ್ಲ. ಮತ್ತೆ ಮತ್ತೆ ತಪ್ಪೆಸಗುವ ಬಾಲಾಪರಾಧವನ್ನು ನೀನೆ ತಡೆದು ನಿನ್ನತ್ತ ಸೆಳೆದುಕೊ ತಂದೆ.

341

ಅರ್ಚಿಸಲರಿಯೆ, ಪೂಜಿಸಲರಿಯೆ,
ನಿಚ್ಚನಿಚ್ಚಶಿವರಾತ್ರಿಯ ನಾ ಮಾಡಲರಿಯೆ !
ಕಪ್ಪಡಿ ವೇಷದಿಂದಾನು ಬಂದಾಡುವೆ,
ಕಪ್ಪಡಿ ವೇಷದಿಂದ !
ಈಶ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ ,
ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ .
ಕೂಡಲಸಂಗಮದೇವಾ,
ನಿಮ್ಮ ಲಾಂಛನವ ಧರಿಸಿಪ್ಪ ಉದರ ಪೋಷಕ ನಾನಯ್ಯಾ .

ಅರ್ಚಿಸಲರಿಯೆ, ಪೂಜಿಸಲರಿಯೆ, ನಿಚ್ಚನಿಚ್ಚಶಿವರಾತ್ರಿಯ ನಾ ಮಾಡಲರಿಯೆ :

ತನುವಿಗೆ ಹಿಂಸೆಕೊಡುವುದರಲ್ಲಿ ಮನಕ್ಕೆ ಬಲು ಸುಖವಿದೆ. ವೆಂಕಟೇಶನನ್ನು ಪೂಜಿಸಲು ಮನ ತನುವನ್ನು ತಿರುಪತಿಗೆ ಕರೆದುಕೊಂಡು ಹೋಗುತ್ತದೆ. ಮಲ್ಲಿಕಾರ್ಜುನನನ್ನು ಪೂಜಿಸಲು ಶ್ರೀಶೈಲಕ್ಕೆ, ವಿಶ್ವನಾಥನನ್ನು ಪೂಜಿಸಲು ಕಾಶಿಗೆ, ಅಯ್ಯಪ್ಪನನ್ನು ಪೂಜಿಸಲು ಶಬರಿಮಲೆಗೆ, ನೇಪಾಳ, ಕೇದಾರ, ಅಮರನಾಥಕ್ಕೂ ಕರೆದುಕೊಂಡು ಹೋಗುತ್ತದೆ.

ಅರ್ಚಿಸಿ ಪೂಜಿಸಿ ಭ್ರಮೆಯಿಂದ ಸಂಭ್ರಮಿಸಿ, ಮನ ತನುವಿನೊಂದಿಗೆ ಮರಳಿ ಗೂಡು ಸೇರುತ್ತದೆ. ಅಲ್ಲಿಯ ಒಂದೊಂದು ದೇವರನ್ನು ತಂದು ಜಗಲಿಯ ಮೇಲಿಟ್ಟು ನಿತ್ಯ ನಿತ್ಯ ಅರ್ಚಿಸಿ ಪೂಜಿಸುತ್ತದೆ.

ಮನ ತನುವಿಗೆ ಮಡಿಯ ವೇಷ ಧರಿಸಿ ಅರ್ಚಿಸುವುದು, ಪೂಜಿಸುವುದು ಅದಕ್ಕೊಂದು ಕೆಲಸ. ಅರ್ಚಿಸಿ ಪೂಜಿಸಿದರೂ ಪೂಜಿಸಿಕೊಂಡ ದೇವರು ಏನಾದರೂ ಹೇಳಿದನೆ ? ತನುವಿನಲ್ಲಿ ಏನಾದರೂ ಬದಲಾವಣೆ ಆಗಿದೆಯೆ ? ನೋಡುವ ಕಣ್ಣಿನಲ್ಲಿ ಹಾದರ ನಿಂತಿದೆಯೆ ? ತನುವಿನಲ್ಲಿ ಸಿಟ್ಟು, ಸೆಡವು, ಅಹಂಕಾರ ಇಲ್ಲವಾಗಿದೆಯೆ ? ಭ್ರಷ್ಟಾಚಾರ, ಲಂಚ, ಮೋಸಮಾಡುವುದು ನಿಂತಿದೆಯೆ ? ತನುವಿನಲ್ಲಿ ಬೆರೆತ ತನ್ನ ದುರ್ಗುಣಗಳನ್ನು ಮನ, ದೇವರಿಗೆ ಅರ್ಪಿಸಿ ಪೂಜಿಸಲು ಬರುತ್ತದೆಯೆ ?

ವೇಷಧಾರಿ ಮನಕ್ಕೆ ದೇವರನ್ನು ನೋಡಲು ಕೂಡಾ ಬರುವುದಿಲ್ಲ. ತಿರುಪತಿಗೆ ಹೋಗಿ ಸಾಲಿನಲ್ಲಿ ಎರಡುದಿನ ನಿಂತು ಮನ ವೆಂಕಟೇಶನ ದರ್ಶನ ಮಾಡಿಕೊಳ್ಳುತ್ತದೆ, ಅದಕ್ಕೆ ಕಲ್ಲಿನ ದರ್ಶನ ಆಗುವುದೇ ಇಲ್ಲ ! ಪದ್ಮಾವತಿಯ ದರ್ಶನ ಮಾಡಿಕೊಳ್ಳುತ್ತದೆ ಕಲ್ಲಿನ ದರ್ಶನ ಆಗುವುದೇ ಇಲ್ಲ ! ಮಲ್ಲಿಕಾರ್ಜುನ ಭ್ರಮರಾಂಭ ಕಾಶಿ ವಿಶ್ವನಾಥ ವಿಶಾಲಾಕ್ಷಿಯ ದರ್ಶನ ಮಾಡಿಕೊಳ್ಳುತ್ತದೆ, ಕಲ್ಲಿನ ದರ್ಶನ ಆಗುವುದೇ ಇಲ್ಲ! ಅಮರನಾಥ, ಕೇದಾರೇಶ್ವರನ ದರ್ಶನ ಮಾಡಿಕೊಳ್ಳುತ್ತದೆ, ಕಲ್ಲಿನ ದರ್ಶನ ಆಗುವುದೇ ಇಲ್ಲ.

ಕಲ್ಲು ಒಂದೇ, ಎಷ್ಟೊಂದು ದೇವರು ! ಕಲ್ಲೊಳಗಣ ಬೆಲ್ಲ ಮೆಲ್ಲಲು ಸಾಧ್ಯವಾಗದ ಮನ, ತನುವಿಗೆ ಎಷ್ಟೊಂದು ಹಿಂಸೆ ಕೊಡುತ್ತದೆ ! ತನು ಹಿಡಿದು, ತನುವಿನೊಳಗಣ ಅರಿವೆಂಬ ಗುರುದೇವನಿಗೆ ಅರ್ಚಿಸಲರಿಯದು, ಅರಿವೆಂಬ ಮಹಾದೇವನನ್ನು ಪೂಜಿಸಲರಿಯದು ! ಮನ ತನು ಹಿಡಿದು ನಿತ್ಯ ನಿತ್ಯ ತನುವಿನೊಡೆಯ ಶಿವನನ್ನು ಪೂಜಿಸಿ ಶಿವರಾತ್ರಿಯ ಮಾಡಲರಿಯದು.

ಮನ, ತನುವಿಗೆ ಹೊದಿಸಿದ ಮಡಿಯ ವೇಷ ಬೇರೆ ಕೇಡು. ಪೂಜಿಸಲರಿಯದು, ಅರ್ಚಿಸಲರಿಯದು !

ಕಪ್ಪಡಿ ವೇಷದಿಂದಾನು ಬಂದಾಡುವೆ, ಕಪ್ಪಡಿ ವೇಷದಿಂದ ! :

ಎಲೆ ಮನವೆ, ತನು ಅರಿವಿನ ಲಾಂಛನ ! ಅದಕ್ಕೆ ಯಾವ ಕಾವಿ-ಕಾಷಾಯ ವೇಷದ ಅವಶ್ಯಕತೆಯೂ ಇಲ್ಲ ! ಆದರೂ ದುಷ್ಟ ನೀನು. ತನುವಿಗೆ ಅರಿವಿನ ಬಣ್ಣದ ಗುರುತಿನ ಕಾವಿ ಹೊದಿಸಿ ವೇಷದ ಗುರುವನ್ನಾಗಿ ಮಾಡುವೆ. ಪೀಠದ ಮೇಲೆ ಕೂಡಿಸಿ ಜಗದ್ಗುರುವನ್ನಾಗಿ ಮಾಡುವೆ. ತನುವಿಗೆ ಕಪ್ಪಡಿ ವೇಷ ಧರಿಸಿ ಕಪಟ ನಾಟಕ ಆಡುವೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ಸರಸವಾಡುವೆ. ಅದು ಗುರುವಿನ ತನುವೆಂದು, ಆ ತನುವಿನ ಕಣ ಕಣದಲ್ಲಿ ಅರಿವೆಂಬ ಗುರುದೇವ ತನ್ಮಯವಾಗಿದ್ದಾನೆ, ಆತನೇ ಮಹಾದೇವ, ಆತನೇ ಸದಾಶಿವನೆಂದು, ಆತನೇ ಸಾಕ್ಷಾತ್ ಪರಬ್ರಹ್ಮನೆಂದು ಅರಿಯದ ಮುಠ್ಠಾಳ ನೀನು ! ಕಪ್ಪಡಿ(ಕಾವಿ) ವೇಷದ ಕಪಟಿ ನೀನು ! ನಿನ್ನನ್ನು ನೀನೇ ಮೋಸ ಮಾಡಿಕೊಳ್ಳುವ, ಸದ್ಗುರುವಿನ ತನುವನ್ನು ಮೋಸಮಾಡುವ ವಂಚಕ ನೀನು ! ನಾನು ಗುರುವೆಂದು, ಪೀಠಾಧಿಪತಿಯೆಂದು ಅನೇಕ ಅರಿವಿನ ತನುಗಳನ್ನು ವಂಚಿಸುವ ವಂಚಕ ನೀನು ! ಕಪಟ ವೇಷದಿಂದ ನಿನಗೆ ನೀನು ಮೋಸ ಮಾಡಿಕೊಳ್ಳುವುದಲ್ಲದೆ, ಇತರ ಅರಿವಿನ ತನುಗಳನ್ನು ಮೋಸ ಮಾಡುವುದೆ ? ಕಪ್ಪಡಿ ವೇಷದಿಂದ ಬಂದಾಡುವುದು ನಿನಗೆ ತಿಳಿಯದೆ ? ಗುರು ವೇಷ ಹಾಕಿದ ನಿನಗೆ ಯಾರು ಗುರುವಾಗಬೇಕು ?

ಎಲೆ ಮನವೇ ಗುರು ವೇಷದ ನೀನು : ಈಶ, ತನುವಿನಲ್ಲಿ ತನ್ಮಯನಾದ ಜಗದೀಶನೆ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯ ಎಂದು ಹೇಳಲು ನಿನಗೆ ಸಾಧ್ಯವೆ ?

ಎಲೆ ಮನವೆ: ಅರಿವಿನ ಮನೆಗೆ ಕಾವಿ ವೇಷ ಧರಿಸಿ, ಅದು ನಿತ್ಯ ನಿತ್ಯ ಶಿವರಾತ್ರಿಯ ಸುಕ್ಷೇತ್ರವೆಂದು ಅರಿಯಲಿಲ್ಲ. ಆ ಮನೆಯ ಪಂಗುಳ(ಹೆಳವ) ನಾನೆಂದು ಅರಿಯಲಿಲ್ಲ.

ತನು ಅರಿವಿನ ಮನೆ ! ಅದಕ್ಕೆ ಮತ್ತೆ ಅರಿವಿನ ಕಾವಿ ಬೇಕೆ ? ನಿಮ್ಮ ತನುವೆಂಬ ಅರಿವಿನ ಮನೆಯಲ್ಲಿದ್ದ ಮನವೆಂಬ ಉದರ ಪೋಷಕ ನಾನು ! ನಿಮ್ಮ ತನುವಿಗೆ ಕಾವಿ ಧರಿಸಿ ಉದರ ಪೋಷಣೆ ಮಾಡಿಕೊಳ್ಳುವ ನಯವಂಚಕ ನಾನಯ್ಯಾ !

ಅರ್ಚಿಸಲರಿಯೆ, ಪೂಜಿಸಲರಿಯೆ, ನಿಚ್ಚನಿಚ್ಚ ಶಿವರಾತ್ರಿಯ ನಾ ಮಾಡಲರಿಯೆನಯ್ಯಾ! ಕಾವಿ ವೇಷದಿಂದ ನಾನು ಬಂದಾಡುವೆ. ಮನವೆಂಬ ನಾನು ಕಾವಿ ವೇಷದ ಕಪಟಿ ! ಈಶ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ, ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ. ಕೂಡಲಸಂಗಮದೇವಾ, ಅರಿವಿನ ಲಾಂಛನ ಧರಿಸಿಪ್ಪ ಉದರ ಪೋಷಕನೆಂಬ ಮನ ನಾನಯ್ಯಾ !

342

ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚನ್ನಯ್ಯನಾದಡೆ
ಆನು ಬದುಕೆನೆ ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್ಗುಣವ ನಾನರಿವೆನಯ್ಯಾ .
ಕಷ್ಟ ಜಾತಿಯ ಜನ್ಮದಲ್ಲಿ ಜನಿಸಿದೆ,

ಎನಗಿದು ವಿಧಿಯೆ ! ಕೂಡಲಸಂಗಮದೇವಾ.

ಕಷ್ಟ ಜಾತಿಯ ಜನ್ಮದಲ್ಲಿ ಜನಿಸಿದೆ, ಎನಗಿದು ವಿಧಿಯೆ ! :

ಮನೆಯಲ್ಲಿ ನಿತ್ಯ ವೇದಾಧ್ಯಯನ, ಶಾಸ್ತ್ರ , ಪುರಾಣ, ರಾಮಾಯಣ, ಮಹಾಭಾರತದ ಪಾರಾಯಣಗಳಿದ್ದರೂ ಅದು ಉತ್ತಮ ಜಾತಿಯೆಂದು ತೋರಿಕೆಗೆ ಮಾತ್ರ ಸಾಧ್ಯವಾಯಿತು. ಜ್ಞಾನ ಎನ್ನುವುದು ತನುವಿಗೆ ಬಳಕೆಯಾಗಲೇ ಇಲ್ಲವೆಂದಾಗ ಅದು ಉತ್ತಮ ಜಾತಿಯಾದರೂ ಕಷ್ಟ ಜಾತಿಯಾಗಲಿಲ್ಲವೆ ?

ದೇವೇಂದ್ರ ದೇವತೆಗಳ ರಾಜನಾದರೂ ಋಷಿ ಪತ್ನಿಯನ್ನು ಭೋಗಿಸಲು ಯತ್ನಿಸಿದ, ಆತ ಕಷ್ಟ ಜಾತಿಯವನಾಗಲಿಲ್ಲವೆ ? ಗುರು ಪತ್ನಿಯನ್ನು ಬಯಸಿದ ಚಂದ್ರ ಕಷ್ಟ ಜಾತಿಯವನಾಗಲಿಲ್ಲವೆ? ತನುವಿನ ಅರಿವು ತನುವಿಗೆ ಬಳಕೆಯಾಗದಿದ್ದರೆ ಅದು ಉತ್ತಮ ಜಾತಿಯದಾದರೂ ಕಷ್ಟ ಜಾತಿಯಾಗಲಿಲ್ಲವೆ ? ತನುವಿನ ಅರಿವು ತನುವಿಗೆ ಬಳಕೆಯಾಗದಿದ್ದರೆ ಅದು ಉತ್ತಮ ಜಾತಿಯಾದರೇನು ? ಕಷ್ಟ ತಪ್ಪಿದ್ದಲ್ಲ.

ಡೋಹರ ಕಕ್ಕಯ್ಯ , ಮಾದರ ಚೆನ್ನಯ್ಯ , ಶ್ವಪಚಯ್ಯ ಮುಂತಾದ ಶರಣರು, ನಿತ್ಯ ವೇದಾಧ್ಯಯನ, ರಾಮಾಯಣ, ಮಹಾಭಾರತ ಪಾರಾಯಣ ಮಾಡುವ ಕಷ್ಟ ಜಾತಿಯ ಜನ್ಮದಲ್ಲಿ ಜನಿಸಲಿಲ್ಲ. ವೇದ ಉಪನಿಷತ್ತು ರಾಮಾಯಣ ಮಹಾಭಾರತ ಭಗವದ್ಗೀತೆಗಳಿಗೆ ಜನ್ಮಕೊಟ್ಟುದೇ ತನು ! ಆ ತನುಗಳನ್ನು ಪ್ರೀತಿಸಿದರು. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವನ್ನು ಪರಿಚಯಿಸಿದರು. ಸಕಲ ತನುಗಳನ್ನು ಗುರು ತನುಗಳನ್ನಾಗಿ ಮಾಡಿದರು. ಅವರ ಸನ್ನಿಧಿಯಲ್ಲಿದ್ದ ಯಾರಿಗಾದರೂ ಆ ಸದ್ಗತಿ ದೊರೆಯದೇ ಇರದು. ನಾನು ಅವರ ಸನ್ನಿಧಿಯಲ್ಲಿದ್ದು ಅರಿವಿಗೆ ಭಕ್ತಿ ಮಾಡುವ ಸದ್ಗುಣವನ್ನು ಅರಿತೆ ! ಡೋಹರ ಕಕ್ಕಯ್ಯನನ್ನೇ ತಂದೆಯನ್ನಾಗಿಸಿಕೊಂಡೆ. ಮಾದಾರ ಚೆನ್ನಯ್ಯನನ್ನು ಮುತ್ತಯ್ಯನನ್ನಾಗಿಸಿಕೊಂಡೆ. ನಿರಂತರ ಶ್ವಪಚಯ್ಯನ ಸನ್ನಿಧಿಯಲ್ಲಿದ್ದು ತನುವಿನಲ್ಲಿರುವ ಅರಿವೆಂಬ ಗುರುದೇವನನ್ನು ಅರಿತೆ , ಆ ಗುರುದೇವನಿಗೆ ಭಕ್ತಿ ಮಾಡಿದೆ ಎಂದಿದ್ದಾರೆ ಅಣ್ಣ ಬಸವಣ್ಣ !

343

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ ,
ಕಕ್ಕಯ್ಯನೊಕ್ಕುದನಿಕ್ಕ , ನೋಡಯ್ಯಾ
ದಾಸಯ್ಯ ಶಿವದಾನವನೆರೆಯ, ನೋಡಯ್ಯಾ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ ಕೂಡಲಸಂಗಮದೇವಾ, ಶಿವಧೋ! ಶಿವಧೋ!!

ದೇಹದಲ್ಲಿರುವ ಅರಿವಿನ ಸಂಪತ್ತು ಮನಕ್ಕೆ ಬಳಕೆಯಾಗದಿದ್ದರೆ ಅದು ಉತ್ತಮ ಕುಲದಲ್ಲಿ ಹುಟ್ಟಿದರೂ ಕಷ್ಟತನದ ಹೊರೆ ತನುವಿಗೆ ತಪ್ಪಿದ್ದಲ್ಲ. ತನು ಶ್ರೀಮಂತ ಬಡವ ಉತ್ತಮಕುಲ ಕಷ್ಟ ಕುಲದ್ದಾದರೇನು ? ತನುವಿನಲ್ಲಿರುವ ಅರಿವಿನ ಸಂಪತ್ತು ಬಳಕೆ ಮಾಡಿಕೊಂಡ ಮನಸ್ಸಿನ ತನುವೇ ಉತ್ತಮ ಅತ್ಯುತ್ತಮ ಕುಲದ್ದು.

ತನು ಉತ್ತಮ ಕುಲದಲ್ಲಿ ಹುಟ್ಟಿದರೇನು ? ಅದಕ್ಕೆ ವಸ್ತುವಿನಲ್ಲಿರುವ ಸತ್ಯ ನೋಡಲು ಬರಬೇಕಲ್ಲ ! ಶಬ್ದದಲ್ಲಿರುವ ಸತ್ಯ ಕೇಳಲು ಕಿವಿಗೆ ಬರಬೇಕಲ್ಲ, ಸ್ಪರ್ಶಜ್ಞಾನದ ಸತ್ಯ ತಿಳಿಯಲು ಚರ್ಮಕ್ಕೆ ಬರಬೇಕಲ್ಲ. ವಾಸನೆಯಲ್ಲಿರುವ ಸತ್ಯವನ್ನು ಮೂಗು ಮೂಸಿಸಲು ಅರಿಯಬೇಕಲ್ಲ, ರುಚಿಯಲ್ಲಿರುವ ಸತ್ಯ ನಾಲಿಗೆಗೆ ಮನದಟ್ಟಾಗಬೇಕಲ್ಲ. ಈ ಸತ್ಯ ತನುವಿಗೆ ತಿಳಿಯದಿದ್ದರೆ ಅದು ಉತ್ತಮ ಕುಲದಲ್ಲಿ ಹುಟ್ಟಿ ವೇದ, ಉಪನಿಷತ್ತು, ಭಗವದ್ಗೀತೆ ಬೈಬಲ್‌ಗಳನ್ನು ಅಭ್ಯಸಿಸಿದರೇನು ? ತನುವಿನ ಬಾಯಿಗೆ ಕೆಲಸವಾಯಿತೆ ಹೊರತು, ತನುವಿನ ಸಂಪತ್ತು ಮನಕ್ಕೆ ತಿಳಿಯಲಿಲ್ಲ.

ಡೋಹರ ಕಕ್ಕಯ್ಯ ತನುವಿನಲ್ಲಿರುವ ಅರಿವಿನ ಅಮೃತವನ್ನೇ ಉಂಡ ಮಹಾಶರಣ. ದಾಸೀಮಾರ್ಯರು ಅರಿವೆಂಬ ಶಿವಸಂಪತ್ತನುಂಡು ತನುವನ್ನೇ ಅರಿವಿನ ಅಕ್ಷಯ ಪಾತ್ರೆಯನ್ನಾಗಿಸಿಕೊಂಡು ಅರಿವಿನ ದಾಸೋಹದಲ್ಲಿದ್ದ

ಶಿವಸಂಪನ್ನರು, ತಂತ್ರಜ್ಞರು ! ಮಾದಾರ ಚೆನ್ನಯ್ಯ ನಾಲಿಗೆಯ ತಜ್ಞರು, ರುಚಿ-ಅರುಚಿಯನ್ನು ಕಳೆದು ಅರಿವಿನ ರುಚಿಯ ತತ್ತ್ವ ಬೋಧಿಸುವ ಮಹಾನಿಪುಣರು.

ಡೋಹರ ಕಕ್ಕಯ್ಯ, ಜೇಡರ ದಾಸಯ್ಯ, ಮಾದಾರ ಚೆನ್ನಯ್ಯ ಅರಿವಿನ ಮಹಾ ಮನೆಯ ಪ್ರಾಧ್ಯಾಪಕರು. ಅರಿವಿನ ಆಸಕ್ತಿ ಹೊಂದಿದ ತನುಗಳ ಮನಕ್ಕೆ ಮಾತ್ರ ಬೋಧಿಸುವವರು ! ಉತ್ತಮ ಕುಲದಲ್ಲಿ ಹುಟ್ಟಿದ ಅಹಂಕಾರಿ ಮನವನ್ನು ವಿನಯದಿಂದ ಗೌರವಿಸಿ ಮನೆಗೆ ಮರಳಿ ಕಳಿಸುವವರು. ಅದಕ್ಕೆ ಬೋಧಿಸುವುದಿಲ್ಲ. ಬೋಧಿಸಿದರೂ ಅಹಂಕಾರಿ ಮನಕ್ಕೆ ಬೋಧೆ ನಿಲ್ಲುವುದಿಲ್ಲ, ಶರಣರ ಮನ್ನಣೆಯೂ ದಕ್ಕುವುದಿಲ್ಲ.

ಉನ್ನತ ಮಹಿಮ ಕೂಡಲಸಂಗಮದೇವಾ, ಶಿವಧೋ ! ಶಿವಧೋ !

ತನುವಿನ ಕಣ್ಣು ಕಿವಿ ಮೂಗು ನಾಲಿಗೆ ಚರ್ಮದಲ್ಲಿ ಉನ್ನತ ಮಹಾ ಮಹಿಮನಾದ ಶಿವ ಸಂಗಮವಾಗಿದ್ದಾನೆ. ಆತನನ್ನು ಸೇರುವ ಬಯಕೆಯುಳ್ಳ ಮನಕ್ಕೆ ಮಾತ್ರ ಮಹಾಜ್ಞಾನಿಗಳು ದಾರಿ ಸೂಚಿಸುತ್ತಾರೆ. ಅಹಂಕಾರಿ ಮನವನ್ನು ಉತ್ತಮ ಕುಲದ ತನುವೆಂದು ಗೌರವಿಸಿ ಮನೆಗೆ ಕಳುಹಿಸುತ್ತಾರೆ. ಎಲೆ ಅಹಂಕಾರಿ ಮನವೆ ಶಿವಧೋ ಶಿವಧೋ ಎಂದು ಶರಣರಲ್ಲಿ ಮೊರೆಯಿಡು. ಅವರು ಮಾತ್ರ ನಿನಗೆ ನಿರಹಂಕಾರಿ ಪ್ರಭುವಿನ ದರ್ಶನ ಮಾಡಿಸಬಲ್ಲರು. ಅವರುಂಡುದನು ನಿನಗಿಕ್ಕಿ ಸಲಹುವ ಮಹಾಜ್ಞಾನಿಗಳವರು.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬುದು ಕಷ್ಟತನದ ಹೊರೆ. ಅದನ್ನೆಸೆದು ಬೇಡು, ಬೇಡಿದುದನು ಕೊಡುವ ಮಹಾ ದಾನಿಗಳವರು ಎಂದು ಬಸವಣ್ಣನವರು ಮನಕ್ಕೆ ಮಹಾಜ್ಞಾನದ ಮಾರ್ಗ ಸೂಚಿಸಿದ್ದಾರೆ.

344

ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚೆನ್ನಯ್ಯನ ?
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ .

ಹೊಲೆ ಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ. ಅರಿವಿನ ತನು ಗರ್ಭದಿಂದ ಹೊರ ಬರುವುದಕ್ಕಾಗಿ ಎರಡು ತನುಗಳು ಬೇಕು. ಎರಡು ತನುಗಳ ಮಿಲನದಿಂದ ಅರಿವಿನ ತನು ಜನ್ಮ ತಾಳುತ್ತದೆ. ಅರಿವಿನ ತನುವಿಗೆ ಜನ್ಮ ಕೊಡುವುದಕ್ಕಾಗಿ ಮಾತ್ರ ಮಿಲನ. ಆದರೆ ಮನ ಮರೆತು, ಮಿಲನದ ಸುಖವನ್ನು ತನ್ನ ದವಡೆಯಲ್ಲಿಟ್ಟುಕೊಂಡು, ಮತ್ತೆ ಮತ್ತೆ ತನುವಿನೊಂದಿಗೆ ಮಿಲನ ಬಯಸುತ್ತದೆ. ಅದು ಮನದ ಅಜ್ಞಾನ !

ಮನ ತನ್ನ ಸುಖಕ್ಕಾಗಿ ಜಾತಿ ಮತ ಪಂಥಗಳನ್ನು ಹೆಣ್ಣು ಗಂಡು ಎಂಬ ಅಜ್ಞಾನವನ್ನು ಸೃಷ್ಟಿಸಿಕೊಂಡಿದೆ. ಮನದಿಂದಲೇ ತನುವಿನ ಅರಿವನ್ನು ತಿಳಿದು ಆ ಅರಿವಿನಿಂದಲೇ ತನುವನ್ನು ನೋಡಿದಾಗ, ತನುವಿನ ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಹೆಣ್ಣಲ್ಲ; ಗಂಡೂ ಅಲ್ಲ ತನುವಿನ ಚರ್ಮದೊಳಗಿದ್ದ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಹೆಣ್ಣಲ್ಲ; ಗಂಡೂ ಅಲ್ಲ. ತನುವಿನ ಕಣ ಕಣದಲ್ಲಿರುವ ಅರಿವು ಗಂಡಾದರೆ, ತನುವನ್ನು ಆವರಿಸಿಕೊಂಡ ಮನ ಹೆಣ್ಣು!

ಅರಿವನ್ನೇ ಗಂಡನ್ನಾಗಿಸಿಕೊಂಡು, ಮನವನ್ನೇ ಸತಿಯನ್ನಾಗಿಸಿಕೊಂಡು; ತನುವಿನಲ್ಲಿಯೇ ಅರಿವಿನಿಂದ ಸಂಸಾರ ಹೂಡಿದವರೆ ಸಿರಿಯಾಳ ಸೆಟ್ಟಿ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ , ಮಾದಾರ ಚೆನ್ನಯ್ಯನೆಂಬ ಶರಣರು ! ಇವರು ಮಹಾಜ್ಞಾನಿಗಳು, ಮನದಿಂದಲೇ ಜ್ಞಾನವನ್ನು ತಿಳಿದವರು. ಇಂತಹ ಮಹಾಶರಣರನ್ನು ಜಾತಿಹಿಡಿದು ಕರೆಯಬಹುದೆ ? ಅವರಿಂದ ಜ್ಞಾನದ ನೈಪುಣ್ಯತೆಯನ್ನು ಹೊಂದಿದ ನನ್ನನ್ನು ಹಾರುವವನೆಂದು ಕರೆದುಕೊಳ್ಳಬಹುದೆ ? ಹೀಗೆ ಮರೆತು ಮಾತನಾಡಿದರೆ ತನುವಿನಲ್ಲಿ ತನ್ಮಯನಾದ ಅರಿವಿನ ಸಂಗಯ್ಯ ನಗಲಾರನೆ ?

345

ಚನ್ನಯ್ಯನ ಮನೆಯ ದಾಸನ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣೆಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ .

ಜಾಬಾಲಿ ಮಹರ್ಷಿ ದಾಸಿ ಜಬಲಾಳ ಮಗ, ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ, ಕರ್ಣ ಇವರು ಕುಂತಿಯ ಮಕ್ಕಳು. ಒಂದು ಅರಿವಿನ ತನುವಿಗೆ ಜನ್ಮ ಕೊಡಲು ಎರಡು ತನುಗಳು ಬೇಕು. ಅರಿವಿನ ತನು ಈ ನಾಡಿಗೆ ಬೇಕೆಂದು ಆಸೆ ಪಟ್ಟು ಒಪ್ಪಂದ ಮಾಡಿಕೊಂಡ ಎರಡು ತನುಗಳು ಕೂಡಿದರೆ ಜಾಬಾಲಿ ಮಹರ್ಷಿಯಂತಹ ಋಷಿ ಹುಟ್ಟುತ್ತಾನೆ. ಪಾಂಡವರಂತಹ ವೀರ ಪುತ್ರರು ಹುಟ್ಟುತ್ತಾರೆ. ಕರ್ಣನಂತಹ ಮಹಾದಾನಿ ಜನಿಸುತ್ತಾನೆ.

ಹೊಲೆ ಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ, ಜಲಬಿಂದುವಿನ ವ್ಯವಹಾರ ಒಂದೇ, ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ, ಏನಕೇಳಿ, ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ ? ಸಪ್ತಧಾತು ಸಮಂ ಪಿಂಡಂ ಸಮಯೋನಿಸಮುದ್ಭವಂ ಆತ್ಮ ಜೀವ ದಮಾ ಯುಕ್ತಂ ವರ್ಣಾನಾಂ ಕಿಂಪ್ರಯೋಜನಂ ಎಂದುದಾಗಿ. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ. ಕರ್ಣದೊಳು

ಜನಿಸಿದವರುಂಟೆ ಜಗದೊಳಗೆ ? ಇದು ಕಾರಣ ಕೂಡಲಸಂಗಮದೇವಾ, ಲಿಂಗಸ್ಥಲವನರಿದವನೆ ಕುಲಜನು !

ಒಂದು ಅರಿವಿನ ತನುವಿನ ಜನ್ಮಕ್ಕಾಗಿ ಎರಡು ತನುಗಳ ಸಂಗ ಅವಶ್ಯ. ಆ ಸಂಗದಿಂದ ಹೊರಬಂದ ತನು, ತನುವಿನ ಅರಿವನು ಮನದಿಂದಲೇ ಅರಿತು; ಆ ಅರಿವಿನಿಂದ ನಡೆಯುವ ತನುವೇ ಅರಿವಿನ ತನು. ಉತ್ತಮ ಕುಲಜ ತನು ! ವೇದ ಓದಿ ಅರಿವನು ಅರಿಯದಿದ್ದರೆ ಆ ತನು ವೇದದ ವ್ಯಾಧಿಯಾಗುತ್ತದೆ, ಅರಿವು ತನುವಿನಲ್ಲಿಯೇ ಮರೆಯಾಗಿ, ವೇದ ಮಾತ್ರ ಬಾಯಿಂದ ಹೊರಬಂದು ಪಂಡಿತನಾಗುತ್ತದೆ.

ಒಂದು ತನು ಮತ್ತೊಂದು ತನುವಿನ ಸಂಗಮದಿಂದ ಅರಿವಿನ ತನು ಹುಟ್ಟುತ್ತದೆ. ತನು ಯಾವ ಜಾತಿಯಿಂದ ಕರೆಸಿಕೊಂಡರೇನು ? ಅದು ಹೊರಚೆಲ್ಲುವ ಬಿಂದುವೊಂದೇ ! ಆಸೆ ಆಮಿಷ ರೋಷಗಳೊಂದೇ ! ಹರುಷ ವಿಷಯಾದಿಗಳೆಲ್ಲಾ ಒಂದೇ !

ಮಹಾಭಾರತ ರಚಿಸಿದ ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಕೌಂಡಿನ್ಯ ನಾವಿದನ ಮಗ, ಅಗಸ್ತ್ಯಮಹರ್ಷಿ ಕಿಬ್ಬಿಲ, ದುರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ. ಇವರೆಲ್ಲ ತನುವಿನಲ್ಲಿರುವ ಮಹಾಜ್ಞಾನವನು ಸಕಲ ತನುಗಳಿಗೆ ತೋರಿಸಿದರು. ತನುವಿನ ಜ್ಞಾನವನ್ನು ತನು ಹೇಗೆ ಪಡೆಯಬೇಕೆಂದು ಸೂತ್ರ ರಚಿಸಿದರು. ತನುವಿನಲ್ಲಿಯ ಸಪ್ತ ವ್ಯಸನಗಳೊಂದಿಗೆ, ಅಷ್ಟಮದಗಳೊಂದಿಗೆ, ಅರಿಷಡ್ವರ್ಗಗಳೊಂದಿಗೆ ಅರಿವಿನಿಂದ ಹೋರಾಟ ಮಾಡಿ ಮಹಾವೀರರೆನ್ನಿಸಿಕೊಂಡರು.

ಗಂಡು ಹೆಣ್ಣು ಎನ್ನುವ ಕುಲದ ಸಂಗದಿಂದ ಬಿಂದು ಸಂಚಯವಾಗಿ ಅರಿವಿನ ಕುಲದ ಸಂಗಯ್ಯ ಹುಟ್ಟುತ್ತಾನೆ. ಇದಕ್ಕೆ ಅರಿವೇ ಸಾಕ್ಷಿ! ಹೊಲೆಗಂಡೆಂಬ ಪಿಂಡದ ನೆಲೆಗೆ ಹುಟ್ಟಿದ ಲಿಂಗಯ್ಯನೇ ಸಾಕ್ಷಿ ! ಈ ಸಂಗಮದಿಂದ ಹುಟ್ಟಿದ ಸಂಗಯ್ಯನೇ ಸಾಕ್ಷಿ !

346

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ ಅಯ್ಯಾ ಅಯ್ಯಾ ಎನಲಾರೆ.
ಚೆನ್ನಯ್ಯ ನೆಮ್ಮಯ್ಯನು, ಚೆನ್ನಯ್ಯನ ಮಗ ನಾನು,
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವಣ್ಣನು !

ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ ಅಯ್ಯಾ ಎನಲಾರೆ:

ಎರಡು ತನುಗಳು ಸಂಗಮವಾಗಿ ಬಿಂದುವಿನ ಸಂಚಲನಗೊಂಡು ಪಿಂಡದ ನೆಲೆಗೆ ಆಶ್ರಯವಾಯಿತು. ನವಮಾಸಗಳು ತುಂಬಿದ ಬಳಿಕ ತನು ಜನ್ಮ ತಾಳಿತು.

ತನುಗಳು ಸಂಗಮವಾಗಿ ಜಲಬಿಂದು ಸಂಚಯನವಾದದ್ದು ತನುವಿನ ಬೇಡಿಕೆಗಾಗಿಯೋ ಅಥವಾ ವಿಷಯದ ಸುಖಕ್ಕಾಗಿಯೋ ಎಂದು ವಿಚಾರಿಸಲು ಹೋದರೆ ಇದು ಬಹಳ ಸೂಕ್ಷ್ಮವಾದ ವಿಷಯವೆಂದು ಗಮನಕ್ಕೆ ಬರುತ್ತದೆ.

ಜಬಲಾ ಎನ್ನುವವಳು ದಾಸಿ : ಋಷಿಗಳ ಆಶ್ರಮದಲ್ಲಿ ಜ್ಞಾನಿಗಳ ಸೇವೆಗಾಗಿ ಕೆಲಸಕ್ಕಿದ್ದವಳು. ಆಶ್ರಮಕ್ಕೆ ಬಂದ ಅತಿಥಿ ಜ್ಞಾನಿಯೊಬ್ಬರ ಸೇವೆ ಮಾಡಲು ಹೋದಳು. ಆ ಜ್ಞಾನಿ, ಮತ್ತೊಂದು

ಜ್ಞಾನದ ತನುವಿಗೆ ಜನ್ಮ ನೀಡಬೇಕೆಂದು ಜಬಲಾಳನ್ನು ಒಪ್ಪಿಸಿದ. ಎರಡೂ ತನುಗಳು ಜ್ಞಾನಿಯ ತನುವಿಗಾಗಿ ಬಿಂದುವಿನ ಸಂಚಲನ ಮಾಡಿದವು. ನವಮಾಸಗಳು ತುಂಬಿದವು. ಜಬಲಾ ಜಾಬಾಲಿಗೆ ಜನ್ಮ ನೀಡಿದಳು. ವಿಷಯ ಸುಖಕ್ಕಾಗಿ ಕೂಡಲಿಲ್ಲ. ಮತ್ತೊಂದು ಅರಿವಿನ ತನು ಜನ್ಮ ನೀಡುವುದಕ್ಕಾಗಿ ಕೂಡಿದವು. ಜಬಲಾ ಜಾಬಾಲಿ ಮಹರ್ಷಿಯನ್ನು ಪಡೆದಳು.

ಸೂಳೆಗೆ ಹುಟ್ಟಿದ ಕೂಸಿನಂತೆ: ವಿಷಯ ಸುಖ ಮತ್ತೆ ಮತ್ತೆ ಬಯಸಿ ವಿಷಯ ಸುಖಕ್ಕಾಗಿ ಕೂಡುವ ಕೂಟ, ಕೂಡಿ ಅಗಲುವ ಕೂಟ. ಎರಡು ತನುವಿನೊಳಗಿದ್ದ ಮನಗಳೆರಡು ಸೂಳೆಗಳೆ ! ಅಂತಹ ತನುಗಳಿಗೆ ಹುಟ್ಟಿದ ತನು, ಹಡೆದ ತನುಗಳನ್ನೆ ತಂದೆ ತಾಯಿ ಎಂದು ಕರೆಯುತ್ತದೆ. ಆದರೆ ಆ ತನುಗಳು ನಿಜ ತಂದೆ ತಾಯಿಗಳಲ್ಲ.

ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ, ಕೂಡಲಸಂಗಮದೇವಾ ಹಾಲಲಾದರೂ ಅದ್ದು ನೀರಲಾದರೂ ಅದ್ದು ನಿಮ್ಮ ಧರ್ಮ ಎಂದು ಮನಕ್ಕೆ ಮನವರಿಕೆಯಾಗಿ ಆ ಮನ, ತನುವಿನೊಳಗೆಯೇ ಇದ್ದ ಅರಿವಿನ ತಂದೆಯನ್ನು ತಂದೆ ಎಂದು ಕರೆಯುವುದೇ ಧರ್ಮ !

ಚೆನ್ನಯ್ಯ ನೆಮ್ಮಯ್ಯನು, ಚೆನ್ನಯ್ಯನ ಮಗ ನಾನು, ಕೂಡಲಸಂಗನ ಮಹಾ ಮನೆಯಲ್ಲಿ ಧರ್ಮ ಸಂತಾನ ಭಂಡಾರಿ ಬಸವಣ್ಣನು :

ಒಡಲೊಳಗಣ ಅರಿವಿನ ತಂದೆಯನ್ನು ಸೂಚಿಸಿದ ಚೆನ್ನಯ್ಯನೇ ಎನ್ನಯ್ಯನು ! ಆತನ ಮಗ ನಾನು ! ಒಡಲೊಳಗಣ ಜ್ಞಾನಕ್ಕೆ ಜನ್ಮ ನೀಡಿದ ನಿಜ ಜನ್ಮ ದಾತನೇ ಚೆನ್ನಯ್ಯನು ! ತನುವಿನ ಮಹಾ ಮನೆಯಲ್ಲಿ ಸಂಗಮವಾದ ಅರಿವಿನ ಸಂತಾನ ನಾನು, ಧರ್ಮಸಂತಾನ ಜ್ಞಾನಭಂಡಾರಿ ಬಸವಣ್ಣ ನಾನು ! ಎಂದು ಜಗದ ತನುಗಳಿಗೆ ನಿಜ ಹೇಳಿದ್ದಾರೆ,ಸೂಳೆಗೆ ಹುಟ್ಟಿದ ಕೂಸು ಯಾರು ? ಹಡೆದ ನಿಜ ತಂದೆ ಯಾರೆಂದು ಡಂಗುರ ಹೊಡೆದು ಸಾರಿದ್ದಾರೆ ಅಣ್ಣ ಬಸವಣ್ಣ !

347

ಹರನು ಮೂಲಿಗನಾಗಿ, ಪುರಾತರೊಳಗಾಗಿ,
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯಾ.
ಕಳೆದ ಹೊಲೆಯನೆಮ್ಮಯ್ಯ : ಜಾತಿ ಸೂತಕ.
ಮಾದಾರನ ಮಗ ನಾನಯ್ಯಾ.
ಪನ್ನಗಭೂಷಣ ಕೂಡಲಸಂಗಯ್ಯಾ,
ಚೆನ್ನಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ.

ಕಳೆದ ಹೊಲೆಯನೆಮ್ಮಯ್ಯ : ಜಾತಿ ಸೂತಕ :

ತನುವಿಗೆ ಮೆತ್ತಿದ ಅಜ್ಞಾನವೇ ಹೊಲಸು. ಅದನ್ನು ತನುವಿನ ಅರಿವಿನಿಂದ ಹೇಗೆ ಕಳೆದುಕೊಳ್ಳಬೇಕೆಂದು ಸೂಚಿಸಿದ ತನುವನ್ನು ಬಸವಣ್ಣ ಎಮ್ಮಯ್ಯ-ತಂದೆ-ಆತನ ಮಗ ನಾನು ಎಂದಿದ್ದಾರೆ. ಸಮಾಜದ ದೃಷ್ಟಿಯಲ್ಲಿ ಆ ತನು ಯಾವ ಕಾಯದಲ್ಲಿದ್ದರೇನು ಜ್ಞಾನದ ಬಳ್ಳಿ ಬೆಳೆಯಲು ಬಂದ ತನು. ಜಾತಿ ಸೂತಕ ಕಳೆದುಕೊಳ್ಳಲು ಶರಣೆ ಕಾಳವ್ವೆ ಸುಂದರವಾದ ಸೂತ್ರ ಒಂದು ನೀಡಿದ್ದಾಳೆ:

ಕುರಿ ಕೋಳಿ ಕಿರಿಮೀನು ತಿಂಬುವವರಿಗೆಲ್ಲ ಕುಲಜ ಕುಲಜರೆಂದೆಂಬರು. ಶಿವಗೆ

ಪಂಚಾಮೃತವ ಕರೆವ ಪಶುವ ತಿಂಬುವವರನ್ನು ಮಾದಿಗರೆಂಬರು. ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ ? ಬ್ರಾಹ್ಮಣರುಂಡ ಪುಲ್ಲಿಗೆ ನಾಯಿಗೆ ಶೋಭಿತವಾಯಿತು. ಮಾದಿಗರುಂಡ ಪುಲ್ಲಿಗೆ ಬ್ರಾಹ್ಮಣರಿಗೆ ಶೋಭಿತವಾಯಿತು. ಅದೆಂತೆಂದಡೆ : ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು. ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ . ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ.

ತನುಗಳೇ ಹೀಗೆ. ತನುವಿನ ಜ್ಞಾನ ತನುವಿಗೆ ಬಳಕೆಯಾಗದಿದ್ದರೆ ತನುಗಳಲ್ಲಿಯೇ ಜಾತಿಯನ್ನು ಸೃಷ್ಟಿಸಿಕೊಂಡು ಅಜ್ಞಾನದಿಂದ ಮೆರೆಯುತ್ತದೆ. ಕುರಿ ಕೋಳಿ ಮೀನು ತಿನ್ನುವವರದು ಉತ್ತಮ ಕುಲ, ನಿತ್ಯ ಪಂಚಾಮೃತ ಕರೆವ ಪಶುವ ತಿನ್ನುವವರದೊಂದು ಕೀಳು ಕುಲ. ಅದು ಹೇಗೆ ಉತ್ತಮ ಜಾತಿ ? ಇದು ಹೇಗೆ ಕೀಳು ಜಾತಿ ? ಉತ್ತಮ ಜಾತಿಯವನೆಂದು ಹೇಳಿಕೊಳ್ಳುವ ಬ್ರಾಹ್ಮಣನು ಉಂಡ ಎಲೆ ನಾಯಿಗೆ ಶೋಭಿತವಾಯಿತು. ಕೀಳು ಜಾತಿಯವನೆಂದು ಹೇಳಿಕೊಳ್ಳುವವನು ಉಂಡ ಎಲೆ ಬ್ರಾಹ್ಮಣನಿಗೆ ಶೋಭಿತವಾಯಿತು. ಅದು ಹೇಗೆಂದರೆ :

ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು, ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರನಿಗೆ ನಾಯಕ ನರಕ ತಪ್ಪದು:

ಬ್ರಾಹ್ಮಣ ಉಂಡ ಬಾಳೆ ಎಲೆ ನಾಯಿಗೆ ಶೋಭಿತವಾಯಿತು. ಮಾದಿಗನಿಗೆ ಉಣ್ಣಲು ಬಾಳೆ ಎಲೆಯಿಲ್ಲ, ಪಂಚಾಮೃತ ಕರೆವ ಸತ್ತ ಪಶುವಿನ ಚರ್ಮವೇ ಆತನಿಗೆ ಬಾಳೆಯ ಎಲೆ. ಆ ಎಲೆಯಲ್ಲಿ ಮಾಂಸ ಉಣ್ಣುತ್ತಾನೆ. ಅದನ್ನು ಬೀಸಾಡದೆ ಆ ಎಲೆಯಲ್ಲಿಯೇ ತುಪ್ಪ ಸಂಗ್ರಹಿಸುವ (ಸಿದ್ದಲಿಕೆ) ಚರ್ಮದ ಚೀಲ ಮಾಡುತ್ತಾನೆ. ಆ ಎಲೆಯಲ್ಲಿಯೇ ಬಾವಿಯಿಂದ ಶುದ್ಧ ನೀರು ಎತ್ತುವ (ಸಗ್ಗಳೆ) ಚರ್ಮದ ಚೀಲ (ಬೊಕ್ಕಣಿ) ಮಾಡುತ್ತಾನೆ.

ಮಾದಿಗನುಂಡು ಬೀಸಾಡಿದ ಚರ್ಮದಲ್ಲಿ ತುಪ್ಪವನು ಸಂಗ್ರಹಿಸಿ ತಿನ್ನುತ್ತಾನೆ. ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರನಿಗೆ ನಾಯಕ ನರಕ ತಪ್ಪದು ಎಂದು ಹೇಳುವ ಮೂಲಕ ಕಾಳವ್ವೆ ತನುವಿನ ಜ್ಞಾನವನ್ನು ತನುಗಳಿಗೆ ಅರುಹಿದ್ದಾಳೆ. ಉತ್ತಮ ಜಾತಿಯೆಂದು ಅಜ್ಞಾನದಿಂದ ಮೆರೆಯುವ ತನುಗಳಿಗೆ ಇದೊಂದು ದಿವ್ಯ ಸೂತ್ರ .

ಮನ ತನುವಿಗೆ ಅಂಟಿಸಿಕೊಂಡ ಹೊಲಸು ಜಾತಿ ಸೂತಕವನು, ಆ ಮನ, ತನುವಿನ ಅರಿವಿನಿಂದಲೇ ಕಳೆದುಕೊಳ್ಳಬೇಕು.

ಹರನು ಮೂಲಿಗನಾಗಿ, ಪುರಾತರೊಳಗಾಗಿ:

ತನುವಿಗೆ ಅರಿವೆ ಮೂಲ, ಆ ಅರಿವೆ ಹರ ! ಅರಿವನ್ನು ತಿಳಿದು ಅರಿವಿನಿಂದಲೇ ಬದುಕಿದ ಅರಿವಿನ ವಂಶಾವಳಿಯ ಮಾದಾರನ ಮಗ ನಾನು. ನನ್ನ ಅಜ್ಞಾನದ ಹೊಲಸು ಜಾತಿ ಸೂತಕವನು ಕಳೆದನು ಎನ್ನಯ್ಯನು. ಆತನ ಜ್ಞಾನದ ಕುಡಿ ನಾನು. ಜಾತಿ ಎನ್ನುವ ವಿಷದ ಹಾವನ್ನೇ ಆಭರಣವನ್ನಾಗಿ ಮಾಡಿಕೊಂಡ ಹರನ ಮೂಲಿಗ ನಾನು. ಪನ್ನಗ ಭೂಷಣ ಕೂಡಲಸಂಗಯ್ಯನ ಮಗ ನಾನು. ಚೆನ್ನಯ್ಯನು ನನ್ನ ಮುತ್ತಯ್ಯನ ಅಜ್ಜನು, ಆ ಅರಿವಿನ ವಂಶದ ಮಗ ನಾನು ಎಂದು ಜಾತಿ ಸೂತಕವನ್ನು ಕಳೆಯುವ ಸೂತ್ರ ಹೇಳಿದ್ದಾರೆ ಬಸವಣ್ಣ!

348

ಅಪ್ಪನು ನಮ್ಮ ಮಾದಾರ ಚನ್ನಯ್ಯ ,

ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ,
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ ,
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ-
ಎನ್ನನೇತಕರಿಯಿರಿ ಕೂಡಲಸಂಗಯ್ಯಾ ?

ಮನಸ್ಸು ರಕ್ತ ಸಂಬಂಧವನ್ನು ಮಾಡಿಕೊಳ್ಳುತ್ತದೆ. ಹಾಗೆಯೇ ಸ್ನೇಹ ಸಂಬಂಧ, ಸಂಪ್ರದಾಯದ ಗುರು ಸಂಬಂಧ, ನೆರೆಹೊರೆಯವರ ಸಂಬಂಧವನ್ನು ಮಾಡಿಕೊಳ್ಳುತ್ತದೆ. ಮನ ಸುಖ ಬಯಸಿದಾಗ ತನುವಿನೊಂದಿಗೆ ಸಂಬಂಧಗಳನ್ನು ಧಿಕ್ಕರಿಸಿ ಸುಖಿಸುತ್ತದೆ. ಅಣ್ಣ ಅತ್ತಿಗೆ ತಾಯಿ ಮಾವ ತಂಗಿ ತಂದೆ ಮಗಳು ನಾದಿನಿ ಸೊಸೆ ಈ ಸಂಬಂಧಗಳು ತನುವಿನ ಸುಖಕ್ಕೆ ಅಡ್ಡಿ ಬರುವುದಿಲ್ಲ. ಹಾಗೆಯೇ ಸ್ನೇಹ ಸಂಬಂಧ, ಗುರು ಸಂಬಂಧ, ನೆರೆಹೊರೆಯ ಸಂಬಂಧಗಳೂ ಅಡ್ಡಿ ಬರುವುದಿಲ್ಲ, ಮನ ಸುಖಕ್ಕಾಗಿ ಸಂಬಂಧ ಬೆಳೆಸುತ್ತದೆ, ಸುಖಕ್ಕಾಗಿಯೇ ಸಂಬಂಧ ಮುರಿಯುತ್ತದೆ.

ಮನ ಅರಿವಿನ ಸಂಬಂಧ ಹೊಂದಿದಾಗ ಮಾತ್ರ ಅದು ವಿಶ್ವ ಸಂಬಂಧಿಯಾಗುತ್ತದೆ. ಅಜ್ಞಾನದ ಸಂಬಂಧಗಳು ಕಳಚಿ ಬೀಳುತ್ತವೆ. ಶ್ರೀರಾಮ ಕೈಕೇಯಿಗೆ ಮಗನಾದರೂ ತಾಯಿ ಹದಿನಾಲ್ಕು ವರ್ಷ ವನವಾಸಕ್ಕೆ ಕಳುಹಿಸಿ ಸುಖಿಸಲು ಯತ್ನಿಸಿದಳು. ದ್ರೌಪದಿ ಸಹೋದರರ ಹೆಂಡತಿಯಾದರೂ ದುರ್ಯೋಧನ ಆಕೆಯ ಸೀರೆ ಸೆಳೆದು ಸುಖಿಸಲು ಯತ್ನಿಸಿದ. ಸಂಬಂಧಿಗಳೊಂದಿಗೆ ಕಾಮ ಸಂಬಂಧ ಬೆಳೆಸಿ ಸುಖಿಸಿ ದುಃಖಕ್ಕೀಡಾಗುವ ತನುಗಳ ಸುದ್ದಿ ನಿತ್ಯ ಮಾಧ್ಯಮದ ಮುಖ ಪುಟದಲ್ಲಿಯೇ ಗೋಚರಕ್ಕೆ ಬರುತ್ತದೆ.

ತನುವಿನೊಳಗಿದ್ದ ಅರಿವೆಂಬ ಗುರುದೇವನು ತನು ಆವರಿಸಿದ ಮನಕ್ಕೆ ದರ್ಶನವಿತ್ತು ಅಪ್ಪ ಮಾದಾರ ಚೆನ್ನಯ್ಯನನ್ನು ಸಲಹಿದ. ಬೊಪ್ಪ ಡೋಹರ ಕಕ್ಕಯ್ಯನನ್ನು ಅಪ್ಪಿಕೊಂಡ. ಚಿಕ್ಕಯ್ಯನಿಗೆ, ಅಣ್ಣ ಕಿನ್ನರಿ ಬೊಮ್ಮಯ್ಯನಿಗೆ ಬ್ರಹ್ಮಪದವಿಯನಿತ್ತು ಸಲಹಿದ.

ತನುವಿನಲ್ಲಿಯೇ ಸಂಗಮವಾದ ಕೂಡಲಸಂಗಯ್ಯನೇ ನಿನ್ನ ತನುವನ್ನು ಆವರಿಸಿದ ಅಹಂಕಾರಿ ಮನವನ್ನೇಕೆ ತಿಳಿಯುತ್ತಿಲ್ಲ ?

ಚೆನ್ನಯ್ಯ , ಕಕ್ಕಯ್ಯ , ಚಿಕ್ಕಯ್ಯ , ಬೊಮ್ಮಯ್ಯನಿಗಿತ್ತ ಬ್ರಹ್ಮ ಸುಖವನ್ನು ನಿನ್ನದೇ ಆದ ಅಹಂಕಾರಿ ಮನಕ್ಕೆ ಏಕೆ ಕರುಣಿಸುತ್ತಿಲ್ಲ ? ಭ್ರಮಾದೀನ ಮನ ಬ್ರಹ್ಮ ತನುವನ್ನು ಕ್ಷಣ ಕ್ಷಣಕ್ಕೂ ಘಾಸಿಗೊಳಿಸುತ್ತಿರುವುದು ನಿನಗೆ ತಿಳಿದಿಲ್ಲವೆ ? ನಿನ್ನೊಳಗಿದ್ದು ನಿನ್ನನರಿಯದ ನಿನ್ನ ಕಂದನಿಗೆ ನಿನ್ನ ಕರುಣೆಯೇ ಬೇಡವಾಗಿದೆ, ಅದಕ್ಕಾಗಿಯೇ ಅಜ್ಞಾನದ ಸುಖ ಬಯಸುತ್ತಲಿದೆ. ನನ್ನ ಸಂಬಂಧಿಗಳಿಗೆ ಕರುಣಿಸಿದಂತೆ ನನ್ನನ್ನೂ ಕರುಣಿಸು ತಂದೆ ಎಂದು ಬಸವಣ್ಣ ಜಗದ ತನುಗಳ ಪರವಾಗಿ ಅರಿವೆಂಬ ಗುರುದೇವನನ್ನು ಪ್ರಾರ್ಥಿಸಿದ್ದಾರೆ.

349

ಭಕ್ತಿಯಿಲ್ಲದ ಬಡವ ನಾನಯ್ಯಾ
ಕಕ್ಕಯ್ಯನ ಮನೆಯಲು ಬೇಡಿದೆ.
ಚೆನ್ನಯ್ಯನ ಮನೆಯಲು ಬೇಡಿದೆ.
ದಾಸಯ್ಯನ ಮನೆಯಲು ಬೇಡಿದೆ.
ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ

ಎನ್ನ ಪಾತ್ರೆ ತುಂಬಿತ್ತು , ಕೂಡಲಸಂಗಮದೇವಾ.

ಅರಿವಿನ ಸುಖ ಪಡೆದು ಆನಂದಿಸಬೇಕೆಂಬ ಎಳ್ಳನಿತೂ ಆಸೆಯಿಲ್ಲದ ಮನವೆಂಬ ಅಜ್ಞಾನಿ ನಾನು.

ಅರಿವು ಮತ್ತು ಮನ ತನುವಿನಲ್ಲಿಯೇ ಸಂಗಮವಾಗಿದ್ದರೂ ಅರಿವಿನ ಸುಖ ಮನಕ್ಕೆ ಗೊತ್ತಿಲ್ಲ. ಮನದ ಸಂಕಟ ಅರಿವು ನಿವಾರಿಸುತ್ತಿಲ್ಲ. ಅರಿವು ಪುಸ್ತಕದಲ್ಲಿದೆಯೆಂದು ಮನ ವೇದ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳಲ್ಲಿ ಬೇಡಿ ಅದರ ಸಾರವನ್ನು ತನುವಿನ ಪಾತ್ರೆಯಲ್ಲಿ ತುಂಬಿಕೊಳ್ಳುತ್ತದೆ.

ತನುವಿನಲ್ಲಿಯ ಅರಿವನ್ನು ತಿಳಿಯದು, ಆ ಅರಿವೆಂಬ ಗುರುದೇವನಿಗೆ ಭಕ್ತಿ ಮಾಡುವ ಗೋಜಿಗೆ ಹೋಗದ ಬಡ ಮನ, ಅಜ್ಞಾನಿ ಮನ, ಜ್ಞಾನಿಗಳ ಮನೆ ಬಾಗಿಲು ತಟ್ಟುತ್ತದೆ. ಜ್ಞಾನಕ್ಕೆ ಭಕ್ತಿ ಮಾಡಿ ಆ ಜ್ಞಾನವೇ ತಾನಾದ ಕಕ್ಕಯ್ಯನ ಮನೆಯಲ್ಲಿ ಬೇಡುತ್ತದೆ. ಚೆನ್ನಯ್ಯನ ಮನೆಯಲ್ಲು ಬೇಡುತ್ತದೆ. ದಾಸಯ್ಯನ ಮನೆಯಲ್ಲೂ ಬೇಡುತ್ತದೆ.

ಎಲ್ಲಾ ಪುರಾತನರು ತಮ್ಮ ತನುವಿನ ಅರಿವೆಂಬ ಗುರುದೇವನಿಗೆ ಮನದಿಂದ ಭಕ್ತಿ ಮಾಡಿ ಘನಮನರಾದ ಅರಿವಿನ ಸಂಪನ್ನರು. ಅರಿವಿನಿಂದ ತುಂಬಿದ ತನುವಿನ ಅಮೃತ ಪಾತ್ರೆಯನ್ನು ಮನದಿಂದ ನೋಡಿ ಆ ಅರಿವಿಗೆ ಭಕ್ತಿ ಮಾಡಿದವರು. ಆ ಅರಿವಿನ ಅಮೃತವನ್ನು ಸವೆದು ಆನಂದದಿಂದ ಕುಣಿ ಕುಣಿದಾಡಿದವರು.

ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು , ಕೂಡಲಸಂಗಮದೇವಾ :

ಬಸವಣ್ಣನವರ ವಚನದ ಮೊದಲ ಸಾಲು, ನಂತರದ ಮೂರು ಸಾಲುಗಳು, ನಂತರದ ಎರಡು ಸಾಲುಗಳನ್ನು ಜ್ಞಾನದ ಬಯಕೆಯುಳ್ಳ ಓದುಗರು ಸೂಕ್ಷ್ಮಾತಿ ಸೂಕ್ಷ್ಮದಿಂದ ಗಮನಿಸಬೇಕು.

ಭಕ್ತಿಯಿಲ್ಲದ ಬಡವ ನಾನಯ್ಯಾ : ಕಕ್ಕಯ್ಯ ಚೆನ್ನಯ್ಯ ದಾಸಯ್ಯನ ಮನೆಯಲ್ಲಿ ಬೇಡಿದೆ, ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷವ ನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು ಎನ್ನುತ್ತಾರೆ.

ತನು ಅರಿವಿನ ಅಕ್ಷಯ ಪಾತ್ರೆ. ಅದಕ್ಕೆ ಭಿಕ್ಷೆಯ ಅವಶ್ಯಕತೆಯಿಲ್ಲ. ಕಕ್ಕಯ್ಯ ಚೆನ್ನಯ್ಯ ದಾಸಯ್ಯನವರು ತನುವೇ ಅರಿವಿನ ಅಕ್ಷಯ ಪಾತ್ರೆ ಎಂದು ಅರಿತ ಮಹಾಜ್ಞಾನಿಗಳು. ಒಕ್ಕುದನು ಯಾರಿಗೂ ಇಕ್ಕದ ಜಿಪುಣ ಕಕ್ಕಯ್ಯನನ್ನು, ಮನೆಗೆ ಬಂದ ಶಿವನಿಗೆ ಅಂಬಲಿಯನಿಕ್ಕಿದ ಚೆನ್ನಯ್ಯನನ್ನು, ತನುವನ್ನೇ ತವನಿಧಿಯ ಜ್ಞಾನದ ಕಣಜವನ್ನಾಗಿಸಿಕೊಂಡ ದಾಸಯ್ಯನನ್ನು ಬೇಡಿದರೆ ಅವರೇನು ನೀಡುತ್ತಾರೆ ? ಬೇಡಲು ಬಂದ ಭಿಕ್ಷುಕನಿಗೆ ತುಂಬಿದ ಪಾತ್ರೆ ತೋರಿಸಿ ಕಳುಹಿಸುತ್ತಾರೆ.

ತನುವೇ ಅರಿವಿನ ಅಕ್ಷಯ ಪಾತ್ರೆ ಇದ್ದಾಗ ಅದಕ್ಕೆ ಅರಿವಿನ ಭಿಕ್ಷೆ ಬೇಕೆ ? ತನ್ನ ತಾನರಿಯದ ಮುನ್ನ ತನುವಿನಲ್ಲಿಯೇ ತನ್ಮಯವಾದ ಅರಿವು. ತನ್ನ ತಾನರಿದ ಬಳಿಕ ಅರಿವು ತನುವಿನಲ್ಲಿಯೇ ತನ್ಮಯವೆಂದು ಅರಿತ ಅರಿವು. ತನುವಿನಲ್ಲಿರುವ ಅರಿವು ತನುವಿಗೆ ಕರಗತವಾದ ಬಳಿಕ ಆ ತನುವೇ ಸೌರಾಷ್ಟ್ರ ಸೋಮೇಶ್ವರಾ.

ತನುವಿನಲ್ಲಿಯೇ ಇದ್ದ ಬಡ ಮನ, ತನುವಿನಲ್ಲಿರುವ ಅರಿವನ್ನು ಪಡೆಯದೆ ಅನ್ಯರ ಮನೆಯಲ್ಲಿ ಅರಿವಿನ ಭಿಕ್ಷೆ ಪಡೆಯುವ ಭಿಕ್ಷುಕನ ಸೋಗು ಹಾಕಿದರೆ ಅವರೇನು ಮಾಡಿಯಾರು ? ಅರಿತವರಾದರೆ ಬೇಡಲು ಬಂದವನಿಗೆ ಭಿಕ್ಷೆಯನ್ನಿಕ್ಕದೆ ಅರಿವಿನ ಅಕ್ಷಯ ಪಾತ್ರೆ ತೋರಿಸಿ ಮನೆಗೆ ಕಳುಹಿಸುತ್ತಾರೆ. ಅರಿವಿನ ಬಟ್ಟೆ ಹಾಕಿಕೊಂಡು ಅರಿವನು ಅರಿಯದವರು ಅರಿವಿನ ಭಿಕ್ಷೆ ನೀಡುತ್ತಾರೆ, ಅರಿಯದವರಿಂದ ಹಣದ ಭಿಕ್ಷೆ ಪಡೆಯುತ್ತಾರೆ. ಇವರಿಬ್ಬರೂ ಭಿಕ್ಷುಕರೇ !

ತನುವೇ ಅರಿವಿನ ಪಾತ್ರೆ , ಆ ಅರಿವಿಗೆ ಮನ ಭಕ್ತಿ ಮಾಡಿ, ತುಂಬಿದ ; ಎಂದೆಂದೂ ಬತ್ತದ

ಅರಿವಿನ ಅಡಿಗೆಯನ್ನು ಉಣ್ಣುತ್ತ ಆನಂದದಿಂದ ನಲಿ ನಲಿದಾಡುತ್ತ ಮನ ಘನಮನವಾಗಿ ಯಾರನ್ನೂ ಬೇಡದೆ ತನುವಿನಲ್ಲಿಯೇ ವಿರಮಿಸಬೇಕು.

350

ಹಿರಿಯಯ್ಯ ಶ್ವಪಚಯ್ಯ , ಕಿರಿಯಯ್ಯ ಡೋಹರ ಕಕ್ಕಯ್ಯ ,
ಅಯ್ಯಗಳಯ್ಯನು ನಮ್ಮ ಮಾದಾರ ಚೆನ್ನಯ್ಯ ,
ಕೂಡಲಸಂಗಮದೇವಾ,
ನಿಮ್ಮ ಶರಣರು ಎನ್ನ ಸಲಹುವರಾಗಿ.

ನಾಯಿ ಮಾಂಸವನ್ನೇ ಬೇಯಿಸಿಕೊಂಡು ತಿನ್ನುವ ಶ್ವಪಚಯ್ಯ , ಒಂದಗುಳ ದಾನವನೂ ಮಾಡದ ಒಕ್ಕುದನಿಕ್ಕದ ಕಕ್ಕಯ್ಯ , ಶಿವನಿಗೆ ಅಂಬಲಿ ನೈವೇದ್ಯ ಮಾಡಿ ಅದನ್ನೇ ಕುಡಿಯುವ ಮಾದಾರ ಚೆನ್ನಯ್ಯನವರು ಅರ್ಥಸಚಿವರಾದ ಬಸವಣ್ಣನವರಿಗೆ ಏನು ಕೊಟ್ಟು ಸಲಹಿದರು ?

ತನುವಿಗೆ ಹೊರಗಿನ ಅರಿವಿನ ಆಹಾರ ಮುಖ್ಯವೊ ? ತನುವಿನಲ್ಲಿರುವ ಅರಿವಿನ ಆಹಾರ ಮನ ಬಳಕೆ ಮಾಡಿಕೊಂಡು ತನುವಿನೊಂದಿಗೆ ಉಣ್ಣುವುದು ಮುಖ್ಯವೊ ?

ಮನ ತನ್ನ ವಿವಿಧ ರುಚಿಗಾಗಿ ತನ್ನ ತನುವನ್ನೇ ಆಹಾರಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತದೆ.

ಗಾಳಕ್ಕೆ ಸಿಕ್ಕ ಹುಳು ತಿನ್ನಲು ಹೋಗಿ ಮೀನು ಸಾಯುತ್ತದೆ. ಶಬ್ದ ಸುಖ ಬಯಸಿ ಜಿಂಕೆ ಸಾಯುತ್ತದೆ. ಮಕರಂದದ ಸುಖ ಬಯಸಿ ದುಂಬಿ ಕಮಲದ ಪಕಳೆಗಳಲ್ಲಿ ಸಿಕ್ಕು ಸಾಯುತ್ತದೆ. ಸ್ಪರ್ಶ ಸುಖ ಬಯಸಿ ಆನೆ ಖೆಡ್ಡಕ್ಕೆ ಬಿದ್ದು ಸಾಯುತ್ತದೆ. ಇವೆಲ್ಲ ಪ್ರಾಣಿ ಕೀಟ ಜಲಚರಗಳು. ಮನುಷ್ಯ ಜ್ಞಾನಿ, ತಿಳಿಯಬಲ್ಲ, ಆದರೆ ಮನ ಪ್ರಾಣಿ ಕೀಟ ಜಲಚರಗಳ ಸುಖವನ್ನು ತನ್ನ ದವಡೆಯಲ್ಲಿ ಸಂಗ್ರಹ ಮಾಡಿಕೊಂಡಿದೆ. ಬಯಕೆಯಾದಂತೆಲ್ಲ ತನುವಿನೊಂದಿಗೆ ಸುಖಿಸುತ್ತದೆ. ತನುವಿಗೆ ಸಂಕಟ ಒಡ್ಡುತ್ತದೆ.

ಮನ ತನ್ನ ಅಜ್ಞಾನದ ರುಚಿ ಸವಿಯಲು ನಾಲಿಗೆಯನ್ನು ಆಶ್ರಯಿಸಿಕೊಂಡಿದೆ. ಅಜ್ಞಾನದ ಸೌಂದರ್ಯ ಸುಖಕ್ಕಾಗಿ ಕಣ್ಣಿನಲ್ಲಿ ಆಶ್ರಯ ಪಡೆದಿದೆ. ಸ್ಪರ್ಶ ಸುಖಕ್ಕಾಗಿ ಚರ್ಮದಲ್ಲಿ, ಶಬ್ದ ಸುಖಕ್ಕಾಗಿ ಕಿವಿಯಲ್ಲಿ, ಪರಿಮಳದ ಸುಖಕ್ಕಾಗಿ ಮೂಗಿನಲ್ಲಿ ಆಶ್ರಯ ಪಡೆದಿದೆ. ಈ ಐದೂ ಜ್ಞಾನೇಂದ್ರಿಯಗಳ ಮೂಲಕ ಮನ ಅಜ್ಞಾನದ ಸುಖವನ್ನು ತನುವಿನೊಂದಿಗೆ ಅನುಭವಿಸುತ್ತದೆ.

ಮನ ಸುಖ ಬಯಸಿ ತನುವಿಗೆ ದುಃಖವನ್ನೊಡ್ಡುತ್ತದೆ. ಬಯಸಿದ ಸುಖ ದೊರೆಯದಿದ್ದರೂ ತನುವಿಗೆ ದುಃಖವನ್ನೊಡ್ಡುತ್ತದೆ. ತನುವಿನಲ್ಲಿರುವ ಜ್ಞಾನದ ಸುಖ ಮನಕ್ಕೆ ದೊರೆಯುವುದೇ ಇಲ್ಲ.

ತನು ಒಂದೇ ಆದರೂ, ಕಣ್ಣಿನಲ್ಲಿ ನೋಡುವ ಜ್ಞಾನವಿದೆ. ಕಿವಿಯಲ್ಲಿ ಕೇಳುವ ಜ್ಞಾನವಿದೆ. ಮೂಗಿನಲ್ಲಿ ಮೂಸಿಸುವ ಜ್ಞಾನವಿದೆ. ಚರ್ಮದಲ್ಲಿ ಸ್ಪರ್ಶಿಸುವ ಜ್ಞಾನವಿದೆ. ನಾಲಿಗೆಯಲ್ಲಿ ರುಚಿಸುವ ಜ್ಞಾನವಿದೆ. ತನುವಿನ ಜ್ಞಾನದ ಬೆಳಕಿನ ನೆರಳಾಗಿ ಮನ ಹುಟ್ಟಿದೆ, ಜ್ಞಾನದ ತನುವನ್ನೇ ಆವರಿಸಿಕೊಂಡು ಬೆಳಕು ಕಾಣದಂತೆ ಮೋಡದಂತೆ ಕತ್ತಲೆ ಮುಸುಕಿದೆ.

ಕಣ್ಣಿನಲ್ಲಿ ಆವರಿಸಿದ ಮನ, ತನ್ನಂತೆಯೇ ಇರುವ ತನುವನ್ನು ತನ್ನಂತೆಯೇ ನೋಡಲು ಸಾಧ್ಯವಾಗದೆ ವಾಸಮಾಡಿದ ತನುವಿಗೆ ಕಾಮ ಹುಟ್ಟಿಸುತ್ತದೆ, ಪೈಶಾಚಿಕ ವೃತ್ತಿ ಮೆರೆಯುತ್ತದೆ. ಶಬ್ದ ಕೇಳಿ ತನುವಿಗೆ ಬೆಂಕಿ ಹಚ್ಚಿಕೊಲ್ಲುವಂತೆ ಮಾಡುತ್ತದೆ. ಮೂಸಿಸಿ ಮೂಗು ಮುರಿಯುತ್ತದೆ. ಸ್ಪರ್ಶಿಸಿ ಸುಖಿಸುವುದಕ್ಕಾಗಿ ತನುವನ್ನೇ ಹಾದರಿಗನನ್ನಾಗಿಸುತ್ತದೆ. ರುಚಿಸಿ ಸುಖಿಸುತ್ತದೆ, ದುಃಖವನ್ನುಂಟು ಮಾಡುತ್ತದೆ.

ತನುವಿನ ಅರಿವಿನ ಸಂಪತ್ತು ತನುವಿಗೆ ಬಳಕೆಯಾಗದೆ ಬಾಹ್ಯ ಸಂಪತ್ತಿಗಾಗಿ ಅಂದರೆ ತನುವಿನಿಂದಲೇ ಸೃಷ್ಟಿಯಾಗಿ ಹೆಸರು ಪಡೆದ ಹಳದಿ ಲೋಹವನ್ನು ಚಿನ್ನವೆಂದು ತನುವಿಗೆ ಭ್ರಮೆ ಹುಟ್ಟಿಸಿ ಆ ಚಿನ್ನಕ್ಕಾಗಿ ಹಗಲಿರುಳು ತನುವನ್ನು ಬಳಲುವಂತೆ ಮಾಡುತ್ತದೆ. ಕಳ್ಳನನ್ನಾಗಿ ಮಾಡುತ್ತದೆ. ಕೊಂದು ಪಡೆಯುವುದಕ್ಕಾಗಿ ರಾಜನನ್ನಾಗಿ ಮಾಡುತ್ತದೆ.

ತನುವಿನ ಅರಿವಿನಿಂದಲೇ ಸೃಷ್ಟಿಯಾದ ಕಾಗದದಲ್ಲಿ ಕರೆನ್ಸಿಯನ್ನು ಮುದ್ರಿಸಿ ಅದನ್ನು ಪಡೆದು ಶ್ರೀಮಂತನಾಗುತ್ತದೆ, ಕಳ್ಳನಾಗುತ್ತದೆ, ಭ್ರಷ್ಟಾಚಾರ, ಲಂಚದ ಹಗರಣದಲ್ಲಿ ಸಿಲುಕಿಸಿ ತನುವಿಗೆ ಸಂಕಟವನ್ನೊಡ್ಡುತ್ತದೆ.

ಕೂಡಲಸಂಗಮದೇವಾ ನಿಮ್ಮ ಶರಣರು ಎನ್ನ ಸಲಹುವರಾಗಿ:

ತನುವಿನಲ್ಲಿ ಜ್ಞಾನದ ಸಂಪತ್ತು ಇದೆ, ಅದನ್ನು ಮನದಿಂದಲೇ ಪಡೆದು ಹೇಗೆ ಉಣ್ಣಬೇಕೆಂದು ತನುವಿಗೆ ತನುವಿನಲ್ಲಿಯೇ ಇರುವ ಅರಿವಿನ ಆಹಾರ ನೀಡಿ ಸಲಹಿದ ಶ್ವಪಚಯ್ಯ(ಹಿರಿಯಯ್ಯ)ದೊಡ್ಡಪ್ಪನಲ್ಲವೆ ? ಡೋಹರ ಕಕ್ಕಯ್ಯ (ಕಿರಿಯಯ್ಯ)ಚಿಕ್ಕಪ್ಪನಲ್ಲವೆ ? ಅಯ್ಯಗಳ ಅಯ್ಯ ನಮ್ಮ ಮಾದಾರ ಚೆನ್ನಯ್ಯನಲ್ಲವೆ ? ಎನಗೊಂದೇ ಅಲ್ಲ, ಜಗದ ತನುಗಳಿಗೆಲ್ಲ ಜ್ಞಾನದ ಆಹಾರವನ್ನು ಉಣಬಡಿಸಿದ ಮಹಾಂತರಿವರು ಎಂದು ಕೊಂಡಾಡಿದ್ದಾರೆ ಬಸವಣ್ಣ.

351

ಎಮ್ಮ ತಾಯಿ ನಿಂಬವ್ವೆ, ನೀರನೆರೆದುಂಬಳು,
ಎಮ್ಮಯ್ಯ ಚನ್ನಯ್ಯ , ರಾಯಕಂಪಣವ ಹೊರುವ
ಎಮಗಾರೂ ಇಲ್ಲವೆಂಬಿರಿ–
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು,
ಎಮಗಾರೂ ಇಲ್ಲವೆಂಬಿರಿ.
ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಕೂಡಲಸಂಗಮದೇವಾ.

ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ ಕೂಡಲಸಂಗಮದೇವಾ:

ತನುವಿನಲ್ಲಿರುವ ಅರಿವನ್ನು ಬಳಕೆ ಮಾಡಿ ಸುಖಿಸಿದವರ ಪರಂಪರೆಯೇ ಇದೆ. ಅವರಿಗೆ ಯಾರ ಸಹಾಯವೂ ಸಹಕಾರವೂ ಬೇಡ. ಅವರು ಬೇರಿಲ್ಲದ ಮರ, ಜ್ಞಾನದ ಮಾತುಗಳನ್ನಾಡುತ್ತಾ ತಿರುಗಾಡುವ ಮರ.(talking tree) ಬೋಧೀವೃಕ್ಷ !

ಭೂಮಿಗೆ ಬಿದ್ದ ಬೀಜ ಸಸಿಯಾಗಿ, ಮರವಾಗಿ, ಪಶು ಪಕ್ಷಿ ಕೀಟಗಳಿಗೆ ಆಶ್ರಯವನಿತ್ತು, ಋತುಗಳನುಸಾರವಾಗಿ ತನಿರಸದ ಫಲ ನೀಡುತ್ತದೆ. ಅದರ ಎಲೆಗಳನ್ನು ತರೆದು ತಿಂದರೂ ನೋವಿಲ್ಲ, ಕಡಿದು ಕಟ್ಟಡ ಕಟ್ಟಿದರೂ ನೋವಿಲ್ಲ, ಒಲೆಯೊಳಗಿಟ್ಟರೆ ಅಡಿಗೆಯಾಗಿ ತನುವಿಗೆ ಸುಖ ನೀಡುತ್ತದೆ.

ಹಾಗೆಯೇ ತನುವಿನ ಜ್ಞಾನ ತನುವಿಗೆ ಒಲಿದ ಎಮ್ಮ ತಾಯಿ ನಿಂಬವ್ವೆ ಕಲ್ಯಾಣದ ಶರಣರ ದಾಸೋಹಕ್ಕೆ ನೀರನೆರೆದು ಉಂಡಳು. ಎಮ್ಮಯ್ಯ ಮಾದಾರ ಚೆನ್ನಯ್ಯ ಚೋಳರಾಜನ ಕುದುರೆಗಳಿಗೆ ಹುಲ್ಲನುಣಿಸಿ ಅಂಬಲಿಯನುಂಡ. ಎಮ್ಮಕ್ಕ ಚಂಗಳೆ ಕಂಚಿಯಲ್ಲಿ ತನ್ನ ಮೋಹವೆಂಬ ಮಗನನ್ನೇ ಕೊಂದು ಅಡುಗೆ ಮಾಡಿ ಉಣಿಸುವ ಕಾಯಕದಲ್ಲಿದ್ದಾಳೆ.

ಎನಗೆ ಯಾರೂ ಇಲ್ಲವೆಂದರೆ ಹೇಗೆ ? ಎನ್ನ ತಾತ ಮುತ್ತಾತಂದಿರು ಪಾಲಿಸಿಕೊಂಡು ಬಂದ ಅರಿವಿನ ಸೂತ್ರವನು ತನುವಿನೊಡೆಯನಾದ ಅರಿವೆಂಬ ಗುರುದೇವನೆ ಅದನು ನಿಮ್ಮಿಂದ ಪಡೆದೆ. ನಿಮ್ಮ (ತನು) ಕೈಯಲು ಪಡೆಯುತ್ತಿರುವೆ.

ಎಲೆ ಅರಿವಿನ ಒಡೆಯನೆ ನಿಮ್ಮ ಕಾಯ ಅದೆಷ್ಟು ಸುಂದರ ! ಕಾಯದ ಕಣ್ಣು, ಕಾಯದ ಕಿವಿ, ಕಾಯದ ಮೂಗು, ಕಾಯದ ನಾಲಿಗೆ, ಇವೆಲ್ಲವುಗಳನ್ನು ಓರಣವಾಗಿ ಬಂಧಿಸಿದ ಚರ್ಮ ! ಎನ್ನ ತಾತ ಮುತ್ತಾತಂದಿರು ಹಡೆದ ಭಕ್ತಿ ಕಾಯದ ಐದು ಭಾಗಗಳಲ್ಲಿ ಕಾರಂಜಿಯಾಗಿ ಚಿಮ್ಮುತ್ತಿದೆ. ತನುವಿನಲ್ಲಿಯೇ ಸಂಗಮವಾದ ಅರಿವಿನೊಡೆಯನೇ ಅರಿವಿನ ಸುಧೆಯನ್ನು ನಿಮ್ಮಿಂದ ಪಡೆದೆ. ತಾಯಿ ತಂದೆ ಅಕ್ಕ ಅಜ್ಜರಜ್ಜರು ಉಂಡ ಪಾಲು ನನಗೆ ನಿನ್ನಿಂದ ದೊರೆತಿದೆ.

ದೇಹದಲ್ಲಿರುವ ಜ್ಞಾನವನ್ನು ಹೇಗೆ ಪಡೆಯಬಹುದೆಂದು ಬಸವಣ್ಣನವರು ಹಲವಾರು ವರಸೆಗಳಲ್ಲಿ ಹೇಳಿದ್ದಾರೆ. ಓದುಗರು ಅವರು ತಿಳಿಹೇಳಿದ ಆಳಕ್ಕೆ ಹೋಗಿ ಅರಿವಿನ ಸುಧೆ ಸವಿಯಬೇಕಿದೆ. ಇಲ್ಲಿ ವ್ಯಾಕರಣ, ಭಾಷೆ, ಪಾಂಡಿತ್ಯ ಅನವಶ್ಯವೆಂದು ಭಾವಿಸುವೆ. ತನುವಿನಲ್ಲಿಯೇ ನುಡಿದು ಹೇಳುವ ಅರಿವಿಗೆ ಭಾಷೆಯಿಲ್ಲ, ಅದು ಪಾಂಡಿತ್ಯಕ್ಕೆ ಮೀರಿದ್ದು . ಸಾಹಿತ್ಯ ಸಂಗೀತಕ್ಕೂ ಮೀರಿದ್ದು. ತಿಳಿಯುವ ಮೂಲಕ ಅಕ್ಷರೋತ್ತಮ ಭೋದಿಸುವ ಜ್ಞಾನದ ಸುಧೆಯನ್ನು ಹೀರಬೇಕು.

352

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು ,
ಬಾಣನವ ನಾನು, ಮಯೂರನವ ನಾನು.
ಕಾಳಿದಾಸನವ ನಾನು !
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚೆನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲಸಂಗಯ್ಯಾ.

ಅರಿವಾದರೆ ಸಕಲರನ್ನೂ ಪ್ರೀತಿಸಲು ಬರುತ್ತದೆ. ಬಂಧು ಬಳಗದ ಪ್ರೀತಿ ಬಲುಬೇಗ ದೂರವಾಗುತ್ತದೆ. ಸಕಲರನ್ನೂ ಪ್ರೀತಿಸುವ ಕಲೆ ತನುವಿನಲ್ಲಿರುವ ಅರಿವಿನಿಂದ ಮಾತ್ರ ಸಾಧ್ಯ. ಅದನ್ನು ಮನದಿಂದ ಹೇಗೆ ಪಡೆಯಬೇಕೆಂಬ ತಂತ್ರಗಾರಿಕೆಯನ್ನು ಬಾಣ, ಮಯೂರ, ಕಾಳಿದಾಸ, ಕಕ್ಕಯ್ಯ, ಚಿಕ್ಕಯ್ಯ ಶರಣರು ಸಂಜ್ಞೆಗಳಿಂದ ಸೂಚಿಸಿದರು.

ಮನಕ್ಕೆ ತನುವಿನಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಪರಿಚಯವಾದರೆ ಸಾಕು, ಆತ ಎತ್ತಿ ಮುದ್ದಾಡುವ. ಮನ ಮಗುವಾಗಿ ಅರಿವಿನ ತಂದೆಯ ಬಳಿ ಸಾರಬೇಕು. ಅಂದರೆ ಮಾತ್ರ ತಂದೆ ಎತ್ತಿ ಮುದ್ದಾಡುತ್ತಾನೆ. ಇಲ್ಲದಿದ್ದರೆ ಒಂದೇ ತನುವಿನಲ್ಲಿ ಎರಡು ಸಂಸಾರ. ತಂದೆಯದೇ ಒಂದು ಅರಿವಿನ ಸಂಸಾರ, ಮಗನದು ಮತ್ತೊಂದು ಅಜ್ಞಾನದ ಸಂಸಾರ !

353

ಅಯ್ಯಾ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ,
ಆತನ ತೊತ್ತಿನ ಮಗ ನಾನಯ್ಯಾ,
ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯಾ !

ಕೂಡಲಸಂಗಮದೇವಾ,
ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತು ತನಕ್ಕೆ ಕೇಡಿಲ್ಲವಯ್ಯಾ.

ಅಯ್ಯಾ, ನಿಮ್ಮ ವಂಶಾವಳಿ ತನುವಿನ ವಂಶಾವಳಿ. ಅದು ಜಗದಗಲ ಮುಗಿಲಗಲ. ಎಲ್ಲಿ ನೋಡಿದರಲ್ಲಿ ಅರಿವಿನ ವಂಶಾವಳಿ ! ತನು ಯಾವ ದೇಶದ್ದಾದರೇನು, ಯಾವ ಭಾಷೆಯದಾದರೇನು? ಅದು ಅರಿವಿನ ತನು ! ಆದರೆ ಅರಿವನು ಅಣಲೊಳಗಿಟ್ಟುಕೊಂಡು ಹುಡುಕುತ್ತದೆ ಜಗವೆಲ್ಲ ! ಅರಿವು ತನುವಿನಲ್ಲಿಯೇ ಇದೆಯೆಂದು ಮನಕ್ಕೆ ತಿಳಿಯುತ್ತಿಲ್ಲ . ಕ್ರಿಸ್ತ, ಕೃಷ್ಣ, ಬಸವಾದಿ ಶರಣರು, ದಾಸವರೇಣ್ಯರು ಅರಿವಿನ ವಂಶಾವಳಿಯಲ್ಲಿ ಹುಟ್ಟಿದವರು.

ಬಸವಣ್ಣನವರು ತನುವಿನಲ್ಲಿ ತನ್ಮಯವಾದ ಅರಿವಿನೊಂದಿಗೆ ಮಾತನಾಡುತ್ತಾ ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ, ಆತನ ತೊತ್ತಿನ ಮಗ ನಾನಯ್ಯ, ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯ ! ತನುವಿನಲ್ಲಿಯೇ ಸಂಗಮವಾದ ಸಂಗಯ್ಯನೆ ನಿಮ್ಮ ಒಡೆತನಕ್ಕೆ ಕೇಡಿಲ್ಲ . ನಾನು ನಿನ್ನ ತೊತ್ತಿನ ಕಾರ್ಯನಿರ್ವಹಿಸುವೆ ಎಂದು ಅರಿವಿನ ಸಂಗಯ್ಯನೊಂದಿಗೆ ಮಾತಾಡಿದ್ದಾರೆ.

354

ಕಯ್ಯ ಬೋಹರಿಗೆ, ಮಂಡೆಯ ಮೇಲೆ ಸಿಂಬಿ,
ಸಿಂಬಕನ ಮನೆಯ ಮಗ ನಾನಯ್ಯಾ.
ಕೂಡಲಸಂಗಮದೇವಯ್ಯಾ,
ಮಂಚದ ಕೋಡೇರಿ ಬಂದ ತೊತ್ತಿನ ಮಗ ನಾನಯ್ಯಾ.

ಕಯ್ಯ ಬೋಹರಿಗೆ, ಮಂಡೆಯ ಮೇಲೆ ಸಿಂಬಿ, ಸಿಂಬಕನ ಮನೆಯ ಮಗ ನಾನಯ್ಯಾ:

ಮಂಡೆಯ ಮೇಲಿರುವ ಅರಿವಿನ ಸಿಂಬಿ ಅರಿಯದಿದ್ದರೆ ಅಂಗವೊಂದು ಅಜ್ಞಾನದ ಪೊರಕೆ. ಐದು ಮಹಾಜ್ಞಾನೇಂದ್ರಿಯಗಳುಳ್ಳ ಅಂಗ. ಈ ಅಂಗಕ್ಕೆ ಶರಣರು ಕೈ, ಅಂಗೈ, ಅಂಗ, ಕರ, ಕಯ್ಯ ಎಂದು ಕರೆದಿದ್ದಾರೆ. ಅಂಗದ ಅರಿವಿನ ಎಲ್ಲ ಸಂಪತ್ತು ಮಂಡೆಯಲ್ಲಿಯೇ ತುಂಬಿಕೊಂಡಿದೆ. ಮಂಡೆ ಇದ್ದೂ ಬಳಕೆಯಾಗದಿದ್ದರೆ ಅದು ಮುಂಡೆ, ಬಾರಿಗೆ !

ಗಂಡ ಶಿವಲಿಂಗದೇವರ ಭಕ್ತ , ಹೆಂಡತಿ ಮಾರಿ ಮಸಣೆಯ ಭಕ್ತೆ.

ಗಂಡ ಕೊಂಬುದು ಪಾದೋದಕ ಪ್ರಸಾದ , ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜಜ ಶುದ್ಧವಿಲ್ಲದಿರ್ದಡೆ ಹೆಂಡದ ಮಡಕೆ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

ಅಂಗದ ಮನೆಯಲ್ಲಿ ಅರಿವೆಂಬ ಗಂಡನಿದ್ದಾನೆ. ಆತ ಶಿವಲಿಂಗದೇವರ ಭಕ್ತ ! ಮನವೆಂಬ ಹೆಂಡತಿಯಿದ್ದಾಳೆ. ಆಕೆ ಮಾರಿ ಮಸಣೆಯ ಭಕ್ತೆ ! ಗಂಡನಿಗೆ ಅರಿವಿನ ಪಾದೋದಕ ಬೇಕು , ಹೆಂಡತಿಗೆ ಸುರೆ ಮಾಂಸ ಬೇಕು. ಇಬ್ಬರೂ ತನುವೆಂಬ ಮಡಕೆಯನ್ನೇ ಬಳಸಿಕೊಳ್ಳುತ್ತಾರೆ. ಬೆಳಿಗ್ಗೆ ತನುವೆಂಬ ಮಡಕೆಗೆ ವಿಭೂತಿ ಕುಂಕುಮ ತಿಲಕ ಬಳಿದು ಹಾಲು ಸುರಿದು ಅಭಿಷೇಕ ಮಾಡಿದರೆ ರಾತ್ರಿ ಮನವೆಂಬ ಹೆಂಡತಿ ತನುವೆಂಬ ಮಡಕೆಗೆ ಹೆಂಡ ಸುರಿಯುತ್ತಾಳೆ. ಮಾಂಸವೆಂಬ ಭ್ರಷ್ಟಾಚಾರ, ಲಂಚದ ನೈವೇದ್ಯ ಮಾಡುತ್ತಾಳೆ.

ಮನವೆಂಬ ಹೆಂಡತಿಗೆ ಮಂಡೆಯೊಳಗಿದ್ದ ಅರಿವಿನ ಗಂಡನ ದರ್ಶನವಾಗದಿದ್ದರೆ ಆಕೆ

ಗಂಡನಿದ್ದೂ ಮುಂಡೆಗೆ ಸಮಾನ !

ಮಂಡೆಯ ಮೇಲೆ ಅರಿವಿನ ಸಿಂಬಿಯಿದೆ. ಅದನ್ನು ಅನುದಿನವೂ ಅನುಭವಿಸಿ ಪೂಜಿಸುವ ಕಾಯಕದಲ್ಲಿದ್ದ ಸೇವಕನ ಮನೆಯ ಮಗ ನಾನಯ್ಯಾ ಎಂದಿದ್ದಾರೆ ಬಸವಣ್ಣ.

ಕೂಡಲಸಂಗಮದೇವಯ್ಯಾ, ಮಂಚದ ಕೋಡೇರಿ ಬಂದ ತೊತ್ತಿನ ಮಗ ನಾನಯ್ಯಾ:

ತಿಳಿಯದಿದ್ದರೆ ತನು ನಾಲ್ಕು ಕಾಲುಗಳ ಪಶುವಿದ್ದಂತೆ. ಹಾಗಯೇ ನಾಲ್ಕು ಕಾಲುಗಳುಳ್ಳ ಮಂಚವಿದ್ದಂತೆ. ಮಂಚದ ಕೋಡೇರಿ ಮಂಡೆಯಲ್ಲಿರುವ ಅರಿವಿನ ಅಮೃತ ಪಾನ ಮಾಡಿದ ಸೇವಕನ ಮಗ ನಾನಯ್ಯಾ ಎಂದಿದ್ದಾರೆ ಬಸವಣ್ಣ . ಇದು ಲಿಂಗ ಮತ್ತು ಅಂಗದ ಲಿಂಗಾಂಗ ಸಾಮರಸ್ಯ ! ಇದನ್ನು ಭೇದಿಸಿ ಮಂಡೆಯಲ್ಲಿರುವ ಅರಿವಿನ ಅಮೃತ ಸಕಲ ತನುಗಳಿಗೂ ದಕ್ಕಲೆಂದು ಜಗದ ಅಣ್ಣ ಬಸವಣ್ಣ ಈ ಸೂತ್ರ ರಚಿಸಿದ್ದಾರೆ.

355

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ,
ತಾರೌ ಅಗ್ಘವಣಿಯ, ನೀಡೌ ಪತ್ರೆಯ
ಲಿಂಗಕ್ಕೆ ಬೋನವ ಹಿಡಿಯೌ ಎಂಬರು,
ಕೂಡಲಸಂಗನ ಮಹಾಮನೆಯಲ್ಲಿ
ಒಕ್ಕುದನುಣ್ಣೌ ತೊತ್ತೇ ಎಂಬರು.

ಅರಸರ ಮನೆಯಲ್ಲಿ ಅರಸಿಯಾಗಿರುವುದಕ್ಕಿಂತ ಜ್ಞಾನಿಗಳ ಮನೆಯಲ್ಲಿ ಸೇವಕನಾಗಿರುವುದು ಲೇಸು ಎಂದು ಹೇಳುತ್ತಾ ಎರಡು ದೃಷ್ಟಾಂತಗಳನ್ನು ಕೊಟ್ಟಿದ್ದಾರೆ:

ಉಳ್ಳವರ ಮನೆಯಲ್ಲಿ ಯಜಮಾನನ ಪೂಜೆ ನಡೆಯುವುದೇ ವಿಶಿಷ್ಟ. ಪೂಜೆಗೆ ಶುದ್ಧೋದಕ ಕೊಡಿ, ಪಾತ್ರೆ ಕೊಡಿ, ಫಲಪುಷ್ಪ ತಾಂಬೂಲ ಕೊಡಿ, ನೈವೇದ್ಯ ಕೊಡಿ ಎನ್ನುವ ಆದೇಶದಿಂದ ಹೆಂಡತಿ, ಸೇವಕರು ತತ್ತರಿಸಿ ಹೋಗುತ್ತಾರೆ. ಪೂಜೆ ಮಾಡುವುದಕ್ಕಿಂತ ಪೂಜಾ ಸಾಮಗ್ರಿ ಕೊಡುವುದರಲ್ಲಿಯೇ ಬೆವರು ಸುರಿಯುತ್ತದೆ.

ಯಾಕೆ ಪೂಜೆ ಮಾಡುತ್ತೇನೆ ? ಪೂಜಿಸಿಕೊಳ್ಳುವ ದೇವರು ನನಗೆ ಏನಾದರೂ ಕೊಡಬಲ್ಲನೆ? ಎಂದು ಯಜಮಾನನಿಗೆ ತಿಳಿಯದೆ ಪ್ರಾಣ ಇರುವವರೆಗೆ ಪೂಜಿಸುತ್ತಾನೆ. ಹೆಂಡತಿ ಮತ್ತು ಸೇವಕರು ಆತನಿಗೆ ನೆರವಾಗುತ್ತಾ ಸವೆಯುತ್ತಾರೆ. ಇದು ಒಂದು ದೃಷ್ಟಾಂತ.

ತನು ಅರಿವಿನ ಅರಸನ ಮನೆ, ಮನ ಆ ಅರಸನಿಗೆ ಅರಸಿಯಾಗದೆ ಆ ಅರಿವಿನ ಅರಸನಿಗೆ ದಾಸಿಯಾಗಬೇಕು. ಬುದ್ಧ , ಮಹಾವೀರ, ಕೃಷ್ಣ , ಕ್ರಿಸ್ತ, ಬಸವಾದಿ ಶರಣರು, ದಾಸವರೇಣ್ಯರು, ನಾಗಭೂಷಣರು, ಸದ್ಗುರು ವಿದ್ಯಾನಂದರು, ನಿಜಗುಣರು ಇವರು ಅರಿವಿನ ಅರಸರು. ಇವರ ಸೇವೆಗಾಗಿ ಇರುವ ಭಕ್ತರ ಮನೆಯಲ್ಲಿ ಸೇವಕನಾಗಿರುವುದು ಕರ ಲೇಸು !

ಅರಿವಿನ ಅರಸರ ಪೂಜೆಗೆ ಶುದ್ಧೋದಕ ಬೇಡ, ಪತ್ರೆ ಫಲ ಪುಷ್ಪ ಬೇಡ, ವಿಭೂತಿ, ಗಂಧ, ಕುಂಕುಮವೂ ಬೇಡ, ಬರೀ ಅರಿವಿನ ಪೂಜೆ ! ಅಗೋಚರ ಆಚಾರದ ಪೂಜೆ !

ಗೋಚರದ ಆಚಾರದ ಪೂಜೆಗೆ ಚಿನ್ನ ಕಬ್ಬಿಣ ಕಟ್ಟಿಗೆ ಕಲ್ಲಿನಿಂದ ಮಾಡಿದ ಒಂದು ವಸ್ತು ಬೇಕು. ಅದನ್ನು ಪೂಜಿಸಲು ಜಲ ಪುಷ್ಪ ಫಲ ತಾಂಬೂಲ ಬೇಕು. ಹಾಲು ಮೊಸರು ತುಪ್ಪ ಜೇನು

ಸಕ್ಕರೆ ಬೇಕು. ಯಜ್ಞಕ್ಕೆ ಗಂಧದ ಕಟ್ಟಿಗೆ ಬೇಕು. ನೆರವಾಗಲು ಸೇವಕರು ಬೇಕು. ಇದು ಸಕಲರಿಗೂ ಗೋಚರಕ್ಕೆ ಬರುವ ಆಚಾರ !

ಅರಿವಿನ ಅರಸರ ಆಚಾರ, ಅಗೋಚರದ ಆಚಾರ ! ಅರ್ಪಿಸಿ ಪೂಜಿಸುವ ದೇವರು ಇವರಿಗೆ ಕಲ್ಲಾಗಿ ಕಾಣುತ್ತದೆ. ಜಾತಿ ಮತ ಪಂಥಗಳು ಕಾಣುವುದೇ ಇಲ್ಲ. ಹೆಣ್ಣು ಗಂಡೆಂಬುದೂ ಕಾಣುವುದಿಲ್ಲ , ಬರೀ ಅರಿವಿನ ತನುಗಳು ಕಾಣುತ್ತವೆ. ಕಣ್ಣು ಕಿವಿ ಮೂಗು ನಾಲಿಗೆ ಇವುಗಳನ್ನು ಬಂಧಿಸಿದ ಚರ್ಮ ಒಂದೇ ಕಾಣುತ್ತದೆ. ಇವು ಹೆಣ್ಣಲ್ಲ ಗಂಡಲ್ಲ ! ತನುವಿನೊಳಗಿರುವ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಕೂಡಾ ಹೆಣ್ಣಲ್ಲ ಗಂಡಲ್ಲ. ಕಣ್ಣಿಗೆ ಗಂಡು ಹೆಣ್ಣು ಎನ್ನುವ ಅಜ್ಞಾನ ಮೆತ್ತಿಕೊಂಡಿದೆ. ಬಡವ ಭಿಕ್ಷುಕ ಶ್ರೀಮಂತ ಅಧಿಕಾರಿ ಜವಾನ ಶಾಸಕ ಸಚಿವ ಎನ್ನುವ ಅಜ್ಞಾನ ಮೆತ್ತಿಕೊಂಡಿದೆ. ಅದನ್ನು ಕಳೆದು ತನುವಿನ ಅರಿವನ್ನು ಆರಾಧಿಸುವ ಅರಸರವರು. ಆ ಅರಸರ ಮನೆಯ ಅರಸಿಯಾಗುವುದಕ್ಕಿಂತ ಅವರನ್ನು ಹಿಂಬಾಲಿಸುವ ಭಕ್ತರ ಮನೆಯಲ್ಲಿ ಸೇವಕನಾಗಿರುವುದು ಉತ್ತಮ, ಅದು ತನುವಿನ ಭಾಗ್ಯವೇ ಸರಿ ಎಂದಿದ್ದಾರೆ ಅಣ್ಣ ಬಸವಣ್ಣ.

356

ಆನು ನಿಮ್ಮ ಶರಣರಿಗೆ,
ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ,
ಕೂಡಲಸಂಗಮದೇವಾ ನಿಮ್ಮ ಶರಣರಿಗೆ.

ಆನು ನಿಮ್ಮ ಶರಣರಿಗೆ ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ :

ಸತಿ ಪತಿಗೆ ಸೇವೆ ಮಾಡಬೇಕು. ಇದು ಭಾರತ ದೇಶದ ಸಾಮಾಜಿಕ ನಿಯಮ. ಪತಿ ಸತ್ತರೆ ಸತಿ ಪತಿಯ ನೆನಪಿನಲ್ಲಿಯೇ ಇದ್ದು ಮಂಡೆ ಬೋಳಿಸಿಕೊಂಡು ಮುಂಡೆಯಾಗಬೇಕು. ಇದು ಸಂಪ್ರದಾಯ.

ಈ ಸಂಪ್ರದಾಯದಲ್ಲಿ ಒಂದು ಬೆಡಗು ಅಡಗಿದೆ. ಮದುವೆಯಾದ ಮಹಿಳೆಯನ್ನು ಸತಿ, ಹೆಂಡತಿ, ಅರ್ಧಾಂಗಿ ಎಂದು ಕರೆಯುತ್ತಾರೆ. ಮದುವೆಯಾದ ಪುರುಷನನ್ನು ಗಂಡ, ಪತಿ, ಅರ್ಧನಾರೀಶ್ವರ ಎಂದು ಕರೆಯುತ್ತಾರೆ.

ಕಲಾವಿದ ಅರ್ಧನಾರೀಶ್ವರನ ಚಿತ್ರ ಬಿಡಿಸಿದ್ದಾನೆ. ಅರ್ಧ ಅಂಗದಲ್ಲಿ ಈಶ್ವರನ ಚಿತ್ರ, ಇನ್ನರ್ಧ ಅಂಗದಲ್ಲಿ ಈಶ್ವರಿಯ ಚಿತ್ರ. ಒಂದೇ ಅಂಗದಲ್ಲಿ ಸತಿ ಮತ್ತು ಪತಿ ಇದ್ದ ಚಿತ್ರವೇ ಅರ್ಧನಾರೀಶ್ವರ ಚಿತ್ರ. ಸತಿ ಪತಿಗಳೊಂದಾದ ಚಿತ್ರ !

ದೇಹದಲ್ಲಿರುವ ಅರಿವು ಪರಮ ಪುರುಷ ಪತಿದೇವನಾದರೆ, ಇನ್ನರ್ಧ ಭಾಗ ಅರಿವು ಎಂಬ ಪತಿಯನ್ನು ಆರಾಧಿಸುವ ಸತಿ ! ಪತಿಯ ಆದೇಶ ಅಣತಿಯಂತೆ ನಡೆಯುವ ಅರ್ಧಾಂಗಿ ! ಅವಳಿಗೆ ಸ್ವಾತಂತ್ರ್ಯವಿಲ್ಲ . ಸ್ವಂತ ವಿಚಾರಗಳು ಬರುವುದೇ ಇಲ್ಲ. ಪರಮ ಪುರುಷನ ಅರಿವಿನ ಬೆಳಕಿನಿಂದ ಹುಟ್ಟಿದ ನೆರಳು; ಕತ್ತಲು. ಇದನ್ನು ಮನ ಎಂದು ಕರೆಯುತ್ತಾರೆ. ಕತ್ತಲಲ್ಲಿ ಬಿದ್ದ ಯಾವ ವಸ್ತುಗಳೂ ಕಾಣುವುದಿಲ್ಲ. ಆ ಸತಿಗೆ ಪುರುಷನ ಬೆಳಕು ಬೇಕು.

ದೇಹ ಹೆಣ್ಣಲ್ಲ , ಗಂಡಲ್ಲ . ದೇಹದಲ್ಲಿರುವ ಅರಿವು ಪತಿಯಾದರೆ ಅರಿವನ್ನು ಸದಾ ಪಾಲಿಸುವ ಮನ ಸತಿ. ಸತಿಯ ಸ್ವಯಂ ನಿರ್ಣಯದ ಅಜ್ಞಾನದಿಂದಲೇ ದೇಹ ಹೆಣ್ಣೆಂದು ಗಂಡೆಂದು ಕರೆಯಲ್ಪಟ್ಟಿತು. ಕಾಲ ಉರುಳಿದಂತೆಲ್ಲ ಹೆಣ್ಣು ಗಂಡೆನ್ನುವುದು ದಿಟವಾಯಿತು. ಅರಿವಿನ ಹಾದಿ

ಜಟಿಲವಾಗಿ ಆಚಾರವೇ ಪ್ರಧಾನವಾಯಿತು. ಅರ್ಧನಾರೀಶ್ವರ ಎನ್ನುವುದು ದೇವರ ಚಿತ್ರವಾಯಿತು. ಜ್ಞಾನದಿಂದ ಚಿತ್ರ ಬರೆದ ಕಲಾವಿದ ಸೋತು ಸುಣ್ಣವಾದ. ಮೀಸೆ ಮೂಡಿದ ದೇಹ ಗಂಡಾಯಿತು. ಅದರ ಮಾತು ಪಾಲಿಸುವ ಮೀಸೆ ಇಲ್ಲದ ದೇಹ ಹೆಣ್ಣಾಯಿತು.

ದೇಹದಲ್ಲಿರುವ ಅರಿವು ಪತಿ. ದೇಹದಲ್ಲಿರುವ ಮನ ಸತಿ. ಪತಿಯ ಮಾತು ಸತಿ ಕೇಳದಿದ್ದರೆ ದೇಹಕ್ಕೆ ತೊಂದರೆ ತಪ್ಪಿದ್ದಲ್ಲ. ದೇಹ ಹೀಗೆ ನಡೆಯದಿದ್ದರೆ, ಗಂಡ ಶಿವಲಿಂಗದೇವರ ಭಕ್ತನಾಗುತ್ತಾನೆ, ಹೆಂಡತಿ ಮಾರಿ ಮಸಣೆಯ ಭಕ್ತಳಾಗುತ್ತಾಳೆ. ದೇಹಕ್ಕೆ ಸೆರೆ ಮಾಂಸದ ಊಟ ಮಾಡಿಸುತ್ತಾಳೆ. ಲಂಚ ಭ್ರಷ್ಟಾಚಾರದ ರುಚಿ ತೋರಿಸುತ್ತಾಳೆ. ಕಾಮದ ಸುಖ ನೀಡಿ ವಿಟ ವೇಶ್ಯೆ ಎಂದು ದೇಹಕ್ಕೆ ಹಣೆಪಟ್ಟಿ ಕಟ್ಟುತ್ತಾಳೆ.

ಅರಿವೆಂಬ ಪತಿಗೆ ಇದಾವುದೂ ಬೇಡ. ಮನವೆಂಬ ಸತಿಗೆ ಇದೆಲ್ಲ ಬೇಕು. ಪತಿಯ ಆದೇಶ ಸತಿ ಪಾಲಿಸುತ್ತಿಲ್ಲ, ಸತಿಯ ಹಾದರ ಪತಿಗೆ ಬೇಕಿಲ್ಲ.

ದೇಹ ಪತಿಯ ಸೊತ್ತು ! ಪತಿಯ ಆದೇಶ ಸತಿ ಪಾಲಿಸದಿದ್ದರೆ ದೇಹ ಬಿಟ್ಟು ಪತಿ ಬಯಲಾಗುತ್ತಾನೆ. ಬಯಲಲ್ಲಿ ಬಯಲಾಗಿ ವಿರಾಟ ಸ್ವರೂಪಿಯಾಗುತ್ತಾನೆ. ಪತಿಯ ಆದೇಶ ಪಾಲಿಸದ ಮನವೆಂಬ ಸತಿಯೂ ನಿರ್ಗಮಿಸುತ್ತಾಳೆ. ಈ ಅರಿವಿನ ಆಚಾರ ಅಗೋಚರದ ಆಚಾರ. ಆದರೂ ಸಹಗಮನ ಪದ್ಧತಿಯ ಸಂಪ್ರದಾಯದ ಆಚಾರವಾಯಿತು. ದೇಹದ ಅರಿವು ದೂರವಾಗಿ ಹೆಣ್ಣುಗಂಡು ಎಂದು ಸಿದ್ಧವಾಯಿತು. ಗಂಡ ಸತ್ತರೆ ಹೆಂಡತಿ ಸಾಯಬೇಕು ಎನ್ನುವುದು (ಸಹಗಮನ) ಸಂಪ್ರದಾಯವಾಯಿತು.

ಸದಾ ಶಿಕ್ಷೆ ಕೊಡುತ್ತಿದ್ದ ಬಾಹ್ಯ ಗಂಡ ಸತ್ತ. ಇನ್ನಾದರೂ ಒಡಲೊಡೆಯನನ್ನು ಆರಾಧಿಸು, ಮಂಡೆ ಬೋಳಿಸಿಕೊಂಡು ಮುಂಡೆ(ಸೇವಕಿ)ಯಾಗಿ ಸಿದ್ಧಳಾಗು. ಎನ್ನುವ ಅರಿವಿನ ಮಾತು ಕೂಡಾ ಈ ದೇಶದಲ್ಲಿಸಂಪ್ರದಾಯವಾಯಿತು.

ಗಂಡಾದರೇನು ಹೆಣ್ಣಾದರೇನು ಮಂಡೆ ಬೋಳಿಸಿಕೊಂಡು ಒಡಲೊಡೆಯನೆಂಬ ಗಂಡನಿಗೆ ಗಂಡು ದೊತ್ತಾದೆನಯ್ಯ. ದೇಹ ಗಂಡಾದರೆ, ಅರಿವೆಂಬ ಗಂಡನಿಗೆ ಮಂಡೆ ಬೋಳಿಸಿಕೊಂಡ ಗಂಡು ದೊತ್ತು. ಸೇವಕ ! ದೇಹ ಹೆಣ್ಣಾದರೆ ಅರಿವೆಂಬ ಗಂಡನಿಗೆ ಮಂಡೆ ಬೋಳೊಸಿಕೊಂಡ ಮುಂಡೆ ಹೆಣ್ಣು ದೊತ್ತು.

ಕೂಡಲ ಸಂಗಮದೇವಾ ನಿಮ್ಮ ಶರಣರಿಗೆ:

ಅರಿವು ಮತ್ತು ಮನ ದೇಹದಲ್ಲಿಯೇ ಕೂಡಿ ದೇಹದಲ್ಲಿಯೇ ಸಂಗಮವಾಗಿದೆ. ಈಶ್ವರ ಮತ್ತು ನಾರಿ ಕೂಡಿ ಅರ್ಧನಾರೀಶ್ವರನಾಗಿದೆ. ನಾರಿ ಈಶ್ವರನನ್ನು ಅರಿಯದಿದ್ದರೆ ನಾರಿಯೇ ಬೇರೆ, ಈಶ್ವರನೇ ಬೇರೆ. ಹೆಂಡತಿ ಗಂಡನನ್ನು ಅರಿಯದಿದ್ದರೆ ಹೆಂಡತಿಯೇ ಬೇರೆ ಗಂಡನೇ ಬೇರೆ. ಸತಿ ಪತಿಯನ್ನು ಅರಿಯದಿದ್ದರೆ ಸತಿಯೇ ಬೇರೆ ಪತಿಯೇ ಬೇರೆ ! ಆದರೆ ದೇಹದಲ್ಲಿ ಅರಿವು ಮತ್ತು ಮನ ಸಂಗಮವಾಗಿವೆ. ಈ ಅರಿವಿನ ಸಂಗಮ ಮನಕ್ಕೆ ಅರಿವಾದರೆ ಸಾಕು ಆ ಮನವೇ ಕೂಡಲಸಂಗಮ !

ಎರಡೂ ನದಿಗಳ ಜಲ ಒಂದೇ ಆದರೂ ಒಂದು ಕೃಷ್ಣೆ ಮತ್ತೊಂದು ಘಟಪ್ರಭ ! ಒಂದು ನದಿ ಮತ್ತೊಂದು ನದಿಯಲ್ಲಿ ಬೆರೆತಾಗ ಅದು ಸಂಗಮ ! ಆ ಸಂಗಮದಲ್ಲಿ ಕೃಷ್ಣೆಯ ಹೆಸರೂ ಇಲ್ಲ, ಘಟಪ್ರಭೆಯ ಹೆಸರೂ ಇಲ್ಲ, ಬರೀ ಸಂಗಮ ಮಾತ್ರ. ಮಂಡೆ ಬೋಳಿಸಿಕೊಂಡು ಅರಿವಿಗೆ ದಾಸನಾಗಿ ಸಿದ್ಧವಾದ ಮನ, ಆ ಅರಿವಿನಲ್ಲಿಸಂಗಮವಾಗಿ ಸಂಗಮನಾಥನೇ ತಾನಾದ ಮನ ಘನಮನ ! ಅಲ್ಲಿ

ಅರಿವೂ ಇಲ್ಲ, ಮನವೂ ಇಲ್ಲ, ಹೆಣ್ಣಿಲ್ಲ ಗಂಡಿಲ್ಲ, ಜಗದ ದೇಹಗಳೆಲ್ಲ ಅರಿವಿನ ದೇಹಗಳು ! ಸಂಗಮನಾಥನ ದೇಹಗಳು !

357

ಅನುದಿನ ಮನಮುಟ್ಟಿ ಧನ್ಯನಯ್ಯಾ ದಮ್ಮಯ್ಯಾ ! ದಮ್ಮಯ್ಯಾ !
ನಿಮ್ಮ ಧರ್ಮದ ಕವಿಲೆಯಾನಯ್ಯಾ
ಕೂಡಲಸಂಗಮದೇವಾ,
ನಿಮ್ಮ ಶರಣರ ಮನೆಯ ಮಗ ನಾನಯ್ಯಾ.

ಪ್ರತಿ ತನುವಿನಲ್ಲಿ ಜ್ಞಾನವಿದ್ದರೂ, ಮನದಿಂದ ಆ ಜ್ಞಾನವನ್ನು ಪಡೆಯುವ ತಂತ್ರಗಾರಿಕೆ ಮನಕ್ಕೆ ಗೊತ್ತಿಲ್ಲದ ನಿಮಿತ್ತ, ಮನ ಜ್ಞಾನಿಗಳ ಸಹವಾಸ ಮಾಡಬೇಕು.

ಜ್ಞಾನಿಗಳು ಮನದಿಂದಲೇ ಜ್ಞಾನಕ್ಕೆ ಶರಣು ಹೋದವರು. ಅವರನ್ನು ಶರಣರೆಂದು ಕರೆದಿದ್ದಾರೆ. ಅಂತಹ ಮಹಾಜ್ಞಾನಿಗಳಾದ ಶರಣರ ಮನೆಯಲ್ಲಿ(ಆಳು) ಮಗನಾಗಿ ದುಡಿದರೆ, ಜ್ಞಾನದ ತಂತ್ರಗಾರಿಕೆಯನ್ನು ಮನ ಸುಲಭವಾಗಿ ಪಡೆಯಬಹುದು. ಆಳಾಗಿ ದುಡಿದರೆ ಅರಸನಾಗಿ ಉಣ್ಣಬಹುದು.

ಅನುದಿನ ಮನಮುಟ್ಟಿ ಧನ್ಯನಯ್ಯಾ ದಮ್ಮಯ್ಯಾ ! ದಮ್ಮಯ್ಯಾ ! ನಿಮ್ಮ ಧರ್ಮದ ಕವಿಲೆಯಾನಯ್ಯಾ:

ಅರಿವಿನ ಧರ್ಮವೆಂದರೆ ಬೆಳಕು. ಅದರಿಂದ ಹುಟ್ಟಿದುದೇ ಕತ್ತಲು. ಅರಿವು ಬೆಳಕಾದರೆ ಮನ ಕತ್ತಲು. ಎಲ್ಲಿ ಬೆಳಕಿದೆಯೋ ಅದರ ನೆರಳಾಗಿ ಕತ್ತಲಿದೆ. ಕತ್ತಲಿಗೆ ಯಾವ ಸ್ವಾತಂತ್ರ್ಯವೂ ಇಲ್ಲ, ಬೆಳಕು ಎಲ್ಲ ವಸ್ತುಗಳನ್ನು ಬೆಳಗುತ್ತದೆ. ಬೆಳಗಿದ ಎಲ್ಲ ವಸ್ತುಗಳನ್ನು ಕತ್ತಲು ತನ್ನ ಗರ್ಭದಲ್ಲಿಟ್ಟುಕೊಳ್ಳುತ್ತದೆ. ಬೆಳಕು ಕತ್ತಲನ್ನು ಬೆಳಗಿ ತನ್ನಂತೆ ಮಾಡಿಕೊಳ್ಳುತ್ತದೆ. ಹಾಗೆಯೇ ಅರಿವು ಮನವನ್ನು ಬೆಳಗಿ ತನ್ನಂತೆ ಮಾಡಿಕೊಳ್ಳುತ್ತದೆ. ಅರಿವೆಂಬ ಬೆಳಕು ಸಾಕಿದ ಕಂದು ಬಣ್ಣದ ಹಸುವೇ(ಕವಿಲೆ) ಮನ.

ಮನ ಅನು ದಿನ ಕ್ಷಣ ಕ್ಷಣಕ್ಕೂ ಅರಿವೆಂಬ ಗುರುದೇವನನ್ನು ಮುಟ್ಟಿ ಧನ್ಯನಾಗಬೇಕು. ದರ್ಶನ ನೀಡು ಗುರುವೇ ದಮ್ಮಯ್ಯಾ ದಮ್ಮಯ್ಯಾ ಎಂದು ಅಂಗಾಲಾಚಬೇಕು. ನೀನು ಸಾಕಿದ ಕವಿಲೆ(ಹಸು) ನಾನಯ್ಯಾ. ನೀನು ಹಾಕಿದರೆ ಮೇಯುತ್ತೇನೆ. ಇಲ್ಲದಿದ್ದರೆ ಹಾಗೆಯೇ ಇರುತ್ತೇನೆ. ಅರಿವಿನ ನಿಮ್ಮ ದರ್ಶನ ವಿಲ್ಲದ ನನ್ನ ನೋಟ ಪಶು ಸಮಾನ ! ಕಣ್ಣು ಕಂಡರೂ ಕುರುಡುಗಣ್ಣು, ಕಿವಿ ಕೇಳಿದರೂ ಕಿವುಡ ಕಿವಿ, ಚರ್ಮದಲ್ಲಿ, ನಾಲಿಗೆಯಲ್ಲಿ, ಮೂಗಿನಲ್ಲಿ ಅಜ್ಞಾನವೇ ತುಂಬಿದೆ. ನಿಮ್ಮ ಜ್ಞಾನದಿಂದ ನೋಡುವ ನೋಟವೆಲ್ಲಸುಂದರ. ನಿಮ್ಮ ಜ್ಞಾನದಿಂದ ಕೇಳುವ ಶಬ್ದವೆಲ್ಲ ಬ್ರಹ್ಮ, ನಿಮ್ಮ ಜ್ಞಾನದಿಂದ ಉಣ್ಣುವ ಊಟವೆಲ್ಲ ಅಮೃತ, ನಿಮ್ಮ ಜ್ಞಾನದಿಂದ ಮೂಸಿಸುವ ಗಂಧವೆಲ್ಲ ಪರಿಮಳ. ನಿಮ್ಮ ಜ್ಞಾನದಿಂದ ಸ್ಪರ್ಶಿಸುವ ಚರ್ಮವೆಲ್ಲ ಅರಿವು.

ನಿಮ್ಮ ಮುಟ್ಟಿದರೆ, ನಾನು ನಿಮ್ಮ ಪಶು-ಪತಿ ವಾಹನ, ಮುಟ್ಟಲರಿಯದಿದ್ದರೆ ಬರೀ ಪಶು, ಬಡಪಶು ! ಅರಿತರೆ ಅರಿವಿನ ಧರ್ಮದ ಕವಿಲೆ ನಾನಯ್ಯಾ ಎಂದು ಅರಿವನ್ನು ಮುಟ್ಟಿ ಆ ಅರಿವೇ ತಾನಾಗುವ ತಂತ್ರಜ್ಞಾನದ ಸೂತ್ರವನ್ನು ನೀಡಿದ್ದಾರೆ ಬಸವಣ್ಣ!

ಕಾಮವ ತೊರೆದಾತ, ಹೇಮವ ಜರಿದಾತ,
ಭಾನುವಿನ ಉದಯಕ್ಕೆ ಒಳಗಾದಾತ ಶರಣನು !
ಆಗಳೂ ನಿಮ್ಮನೆ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು,
ಮಹಾದಾನಿ ಕೂಡಲಸಂಗಮದೇವಾ.

ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾದಾತ ಶರಣನು :

ಶರಣನಿಗೆ ಮಾತ್ರ ಈ ಮೂರೂ ಕೆಲಸಗಳು ಸಾಧ್ಯವಾಗುತ್ತವೆ. ಆತ ಇವುಗಳಲ್ಲಿ ನಿಪುಣ ! ಶರಣನೆಂದರೆ ಜ್ಞಾನಕ್ಕೆ ಶರಣುಹೋದ ಮನ ! ತನುವಿನಲ್ಲಿದ್ದ ಮನ ಜ್ಞಾನಕ್ಕೆ ಶರಣು ಹೋಗದಿದ್ದರೆ, ಜ್ಞಾನದ ತನುವನ್ನು ಕಾಮಕ್ಕೆ ಕರೆದುಕೊಂಡು ಹೋಗುತ್ತದೆ. ಕಾಮದ ರುಚಿ ಮನಕ್ಕೆ ತಿಳಿದಿದೆಯೇ ಹೊರತು ಕಾಮವೆಂದರೇನೆಂದು ತಿಳಿದಿಲ್ಲ, ಹೀಗಾಗಿ ತನು ಹೆಣ್ಣಾದರೇನು ಗಂಡಾದರೇನು ? ಕಾಮದ ಸುಖಕ್ಕಾಗಿ ಮನ ತನುಗಳೆರಡರೊಂದಿಗೆ ಬೆರೆತು ಸುಖಿಸುತ್ತದೆ. ಆ ಸುಖದ ರುಚಿ ತನ್ನ ನೆನಪಿನಲ್ಲಿಟ್ಟುಕೊಂಡು ಜ್ಞಾನದ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ಮನಕ್ಕೆ ಕಾಮದ ಸುಖ ಬಯಕೆಯಾದಾಗ ಅದು ತನುವಿನ ಪದವಿಯನ್ನು ನೋಡುವುದಿಲ್ಲ. ಶಾಸಕ, ಸಚಿವ, ಉಪನ್ಯಾಸಕನಾದರೇನು ಸ್ವಾಮಿ, ಜಗದ್ಗುರು, ಮಠ ಪೀಠಾಧಿಪತಿಯಾದರೇನು ಲೆಕ್ಕಿಸುವುದಿಲ್ಲ. ಕಾಮದ ಸುಖಕ್ಕಾಗಿ ಬಾಲ್ಯ, ಯೌವ್ವನ, ವೃದ್ಧ ತನುಗಳನ್ನು ಗಣಿಸುವುದಿಲ್ಲ. ಗುರು ಶಿಷ್ಯ ಸಂಬಂಧಗಳು, ತಂದೆ ಮಕ್ಕಳ ಅಣ್ಣ ತಂಗಿ ಬಂಧು ಬಳಗದ ಸಂಬಂಧಗಳನ್ನು ಕಡೆಗಣಿಸಿ ಮನ ತನುವಿನೊಂದಿಗೆ ಕಾಮಿಸಿ ಸುಖಿಸುತ್ತದೆ.

ಮನದಲ್ಲಿ ಸಂಗ್ರಹವಾದ ಕಾಮಸುಖದ ತರಂಗಗಳು ಕಣ್ಣಿನಲ್ಲಿ ಬೆರೆತು, ತನುವಿಗೆ ಹರಿದು, ಇಡೀ ತನುವನ್ನು ರಕ್ಕಸ ತನುವನ್ನಾಗಿ ಮಾಡುತ್ತದೆ. ಇದನ್ನು ತಿಳಿಯುವ ತಂತ್ರಜ್ಞಾನ ಶರಣನಿಗೆ ಮಾತ್ರ ಗೊತ್ತು. ಆತ ತನುವಿನಲ್ಲಿರುವ ಮನವನ್ನು , ತನುವನ್ನು ಸೃಷ್ಟಿಸಿದ ಅರಿವೆಂಬ ಗುರುವನ್ನು ಬಲ್ಲ ನಿಪುಣ.

ತನುವಿನಲ್ಲಿ ಅರಿವೆಂಬ ಗುರುವಿದ್ದಾನೆ, ಆತ ಎಲ್ಲವನ್ನೂ ಅರಿವಿನಿಂದ ನೋಡುತ್ತಾನೆ. ತನುವನ್ನು ಮನ ಆವರಿಸಿದೆ. ಅದಕ್ಕೆ ಸುಖ ಮತ್ತು ದುಃಖ ಮಾತ್ರ ಗೊತ್ತು, ಯೋಚಿಸುವ ಶಕ್ತಿ ಇಲ್ಲ. ಕಾಮ ಸುಖಕ್ಕಾಗಿ ತನುವನ್ನೇ ಬಳಕೆ ಮಾಡಿಕೊಳ್ಳುತ್ತದೆ. ಅರಿವಿಲ್ಲದೆ ಮತ್ತೆ ಮತ್ತೆ ಕಾಮಸುಖ ಬಯಸುತ್ತದೆ. ಅದಕ್ಕೆ ಬಯಕೆಯಾದಾಗ ಯಾವ ಸಂಬಂಧಗಳೂ ಅಡ್ಡಿ ಬರುವುದಿಲ್ಲ, ಎಚ್ಚರವಾದಾಗ ತನುವನ್ನು ಉಳಿಯಗೊಡುವುದಿಲ್ಲ.

ಕಾಮವ ತೊರೆದಾತ :

ಉದಾ : ಒಂದು ತನುವಿನ ಮನ ಬಾಹ್ಯ ತನುವನ್ನು ಕಾಮಕ್ಕಾಗಿ ಬಳಸಿಕೊಳ್ಳುತ್ತದೆ. ಯಾರೂ ನೋಡದಿದ್ದರೆ ಸಂಚಿನಿಂದ ಮುಂದುವರೆಯುತ್ತದೆ. ಬಾಹ್ಯ ತನು ಪ್ರತಿಭಟಿಸಿ, ಜನಕ್ಕೆ ತಿಳಿದರೆ ಸುಖಿಸಲು ಕರೆದುಕೊಂಡು ಹೋದ ಮನವೇ ತನುವನ್ನು ಆತ್ಮಹತ್ಯೆಗೆ ಕರೆದುಕೊಂಡು ಹೋಗುತ್ತದೆ.

ಹೀಗೆ ತನುವನ್ನು ಕ್ಷಣ ಕ್ಷಣಕ್ಕೂ ಸುಖಕ್ಕಾಗಿ ಅಜ್ಞಾನದೆಡೆಗೆ ಕರೆದುಕೊಂಡು ಹೋಗುವ ಮನ, ತನುವಿನಲ್ಲಿರುವ ಜ್ಞಾನದೆಡೆಗೆ ಕರೆದುಕೊಂಡು ಹೋಗುವುದು ಬಲು ಜಟಿಲ. ಜ್ಞಾನದ ಸುಖ ಸುಖದುಃಖಗಳಿಗೆ ಮೀರಿದ ಸುಖವೆಂದು ಮನಕ್ಕೆ ಮನವರಿಕೆಯಾದರೆ ಮಾತ್ರ ಇದು

ಸಾಧ್ಯವಾಗುತ್ತದೆ. ಆಗ ಮನ ಸುಖಕ್ಕಾಗಿ ಸ್ವಯಂ ನಿರ್ಧಾರ ತೆಗೆದುಕೊಳ್ಳುವುದಿಲ್ಲ, ತನುವಿನಲ್ಲಿರುವ ಜ್ಞಾನವೆಂಬ ಗುರುದೇವನಿಗೆ ಎರಗಿ ಮನ ಆತನ ಶಿಷ್ಯತ್ವ ಸ್ವೀಕರಿಸುತ್ತದೆ. ಆತ ಹೇಳಿದಂತೆ ಕೇಳುತ್ತದೆ.

ಮನವೆಂಬ ಶಿಷ್ಯ ಅರಿವೆಂಬ ಗುರುದೇವನೊಂದಿಗೆ ಕಾಮವನ್ನು ನೋಡುತ್ತಾನೆ. ಅದು ಸುಖವಲ್ಲ, ಮತ್ತೊಂದು ಅರಿವಿನ ತನುವಿಗೆ ಜನ್ಮ ನೀಡುವ ತನುಗಳ ಕ್ರಿಯೆ ಎಂದು ಮನಕ್ಕೆ ಕಾಮದ ಅನಾವರಣವಾಗುತ್ತದೆ. ಅರಿವಿನ ತನುವಿಗೆ ಜನ್ಮ ನೀಡಬೇಕೆಂದು ಎರಡೂ ತನುಗಳು ಒಡಂಬಡಿಕೆ (mou)(Memorandum of understanding) ಮಾಡಿಕೊಳ್ಳಬೇಕು. ಆಗ ಎರಡೂ ತನುಗಳಲ್ಲಿ ತನುವಿನ ಜನ್ಮಕ್ಕಾಗಿ ಕಾಮ(ಆಸೆ) ಹುಟ್ಟಬೇಕು ಎಂದು ಮನಕ್ಕೆ ಅರಿವಿನ ಮೂಲಕ ಮನವರಿಕೆಯಾಗುತ್ತದೆ. ಮನ ಅರಿವಿಗೆ ಶರಣುಹೋಗಿ, ಸಂಪೂರ್ಣ ಶರಣಾದಾಗ ಅದು ಶರಣ ತನುವಾಗುತ್ತದೆ. ಆ ಶರಣ ಮಾತ್ರ ಜ್ಞಾನದಿಂದ ಕಾಮವನ್ನು ತೊರೆಯಬಲ್ಲ.

ಹೇಮುವ ಜರಿದಾತ : ಮಣ್ಣಿನಲ್ಲಿಯೇ ಜನ್ಮ ಪಡೆದು ಮಣ್ಣಿನ ಪಾತ್ರೆಯಲ್ಲಿ ಬೆಂದು ಹೊಳೆಯುವ ಹಳದಿ ಲೋಹಕ್ಕೆ ಹೇಮ ಎನ್ನುತ್ತೇವೆ. ಮಣ್ಣು ಹಲವಾರು ಲೋಹಗಳಿಗೆ ಜನ್ಮ ನೀಡಿದರೂ ಅವುಗಳಿಗೆ ಹೇಮದ ಬೆಲೆಯಿಲ್ಲ. ಲೋಹಗಳೆಲ್ಲ ಒಂದೇ, ಬಣ್ಣ ಮಾತ್ರ ಬೇರೆ ! ಮನ ತನುವನ್ನು ಹಿಡಿದು ಹಳದಿ ಬಣ್ಣದ ಲೋಹ ಸಂಗ್ರಹಿಸಿ ಶ್ರೀಮಂತನೆನ್ನಿಸಿಕೊಳ್ಳುತ್ತದೆ. ಕದ್ದು ಕಳ್ಳನೆನ್ನಿಸಿಕೊಳ್ಳುತ್ತದೆ. ಯುದ್ಧಮಾಡಿ ಪಡೆದು ರಾಜನೆನ್ನಿಸಿಕೊಳ್ಳುತ್ತದೆ. ಮನ ಬಣ್ಣಕ್ಕೆ ಮರುಳಾಗಿ ತನುವನ್ನು ಕಳ್ಳ, ಭ್ರಷ್ಟ ಲಂಚಕೋರ, ಕೊಲೆಗಡುಕನನ್ನಾಗಿ ಮಾಡುತ್ತದೆ. ಅರಿವಿನಿಂದ ನೋಡಿದರೆ ಚಿನ್ನ ಹಳದಿ ಬಣ್ಣದ ಲೋಹ ! ಬಣ್ಣಕ್ಕಾಗಿ ತನು ತನುವನ್ನು ಕೊಲ್ಲಬೇಕೆ ? ಬಣ್ಣ ಪ್ರಾಣಕ್ಕಿಂತ ದೊಡ್ಡದೆ? ಜಲ ಕುದ್ದು ಮಣ್ಣಾಯಿತು, ಮಣ್ಣೇ ಹೊನ್ನಾಯಿತು. ಜಲಬಿಂದು ಗರ್ಭಸೇರಿ ಅರಿವಿನ ತನುವಾಯಿತು. ಅರಿವು ಮರೆವಾದರೆ ಅರಿವಿನ ತನುವಿಗೆ ಕುತ್ತು ತಪ್ಪಿದ್ದಲ್ಲ. ಅರಿವಾದರೆ ಮಣ್ಣಲ್ಲಿ ಹುಟ್ಟಿದ ಹೊನ್ನು ಕೂಡಾ ಮಣ್ಣೇ ಎಂದು ಶರಣ ಜರಿಯುತ್ತಾನೆ.

ಭಾನುವಿನ ಉದಯಕ್ಕೆ ಒಳಗಾದಾತ ಶರಣ :

ಕತ್ತಲಾದರೆ ತನು ಬಳಲಿ ನಿದ್ರೆಗಿಳಿಯುತ್ತದೆ. ಆಗ ತನು ಹೆಣ್ಣಲ್ಲ ಗಂಡಲ್ಲ. ರಾಜನಲ್ಲ ರಾಣಿಯಲ್ಲ, ಶ್ರೀಮಂತ ಭಿಕ್ಷುಕ, ಮಂತ್ರಿ ಶಾಸಕ, ಸಚಿವನಲ್ಲ, ಜಿಲ್ಲಾಧಿಕಾರಿ ಮೊದಲೇ ಅಲ್ಲ. ರಾತ್ರಿ ತನು ಅಜ್ಞಾನದ ರೋಗವಿಲ್ಲದೆ ನಿದ್ರಿಸುತ್ತದೆ. ಬೆಳಗಾದರೆ ಸಾಕು ಶ್ರೀಮಂತ ಬಡವ ಸುಂದರಿ ಸುಂದರ ಶಾಸಕ ಸಚಿವ ಹೆಣ್ಣುಗಂಡು ಎನ್ನುವ ಮುಂತಾದ ಅಜ್ಞಾನದ ರೋಗದಿಂದ ಬಳಲುತ್ತದೆ. ಕತ್ತಲು ಕಾಣದಂತೆ ಮಾಡಿತು, ಸೂರ್ಯನ ಬೆಳಕು ರೋಗ ಹಚ್ಚಿತು. ಅರಿವಾದರೆ ಸಾಕು ತನು ಸೂರ್ಯನನ್ನು ನಾಚಿಸುವ ಬೆಳಕು ! ಸೂರ್ಯನ ಕತ್ತಲು ಬೆಳಕಿನಾಟಕ್ಕೆ ಒಳಗಾಗದಾತ ಶರಣ ! ಅರಿವಿನ ಬೆಳಕಿಗೆ ಒಳಗಾದಾತ ಶರಣ !!

ಆಗಳೂ ನಿಮ್ಮನೆ ಮಾಣದೆ ನೆನೆವವರ ಮನೆಯಲು ಶ್ವಾನನಾಗಿರಿಸು ಮಹಾದಾನಿ ಕೂಡಲಸಂಗಮದೇವಾ !:

ಅರಿವಿಗೆ ಶರಣು ಹೋಗಿ ಆ ಅರಿವೇ ತಾವಾದ ಜ್ಞಾನಿಗಳ ಮನೆಯನ್ನು ಕಾಯುವ ನಾಯಿಯನ್ನಾಗಿಸು ತಂದೆ ಎಂದು ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನನ್ನು ಮನ ಬೇಡುವಂತಾಗಬೇಕು. ಆ ಶರಣರಿಂದ ಮನ ಸಕಲ ವರಸೆಗಳನ್ನು ಕಲಿತು, ಅರಿವೆಂಬ ಗುರುದೇವನಿಗೆ ಶರಣು ಹೋಗಬೇಕು. ಇದು ಹೊಳೆದರೆ ಸಕಲ ತನುಗಳೆಲ್ಲ ಶರಣ, ಬುದ್ಧ, ದಾಸವರೇಣ್ಯರ ತನುಗಳು !

359

ಮೇಲಾಗಲೊಲ್ಲೆನು ಕೀಳಾಗಲಲ್ಲದೆ,
ಕೀಳಿಂಗಲ್ಲದೆ ಹಯನು ಕರೆವುದೆ ?
ಮೇಲಾಗಿ ನರಕದೊಳೋಲಾಡಲಾರೆನು,
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ, ಕೂಡಲಸಂಗಮದೇವಾ.

ತನಗೆ ತೋಚಿದ್ದು ದೇಹದ ಮೂಲಕ ಅನುಭವಿಸಿ ಸುಖಿಸಬೇಕು ಸಂಗ್ರಹಿಸಬೇಕು ಎನ್ನುವ ಆಸೆಯುಳ್ಳ ಮನಕ್ಕೆ ವಸ್ತುವಿನ ಸತ್ಯ ಗೊತ್ತಾಗುವುದಿಲ್ಲ. ಸುಖಿಸುವುದಕ್ಕಾಗಿ ವಸ್ತುವನ್ನು ಸಂಗ್ರಹಿಸುತ್ತದೆ, ಸಿಗದಿದ್ದರೆ ದುಃಖಿಸುತ್ತದೆ. ಸುಖದುಃಖಗಳಿಗೆ ಅರಿವಿನ ದೇಹವನ್ನು ದಂಡಿಸುತ್ತದೆ.

ಮನಕ್ಕೆ ವಸ್ತುವನ್ನು ಅನಾವರಣ ಮಾಡಿ ನೋಡಿ ಅದರ ನಿಜ ತಿಳಿದು ಉದಾಸೀನ ಮಾಡುವ ಶಕ್ತಿ ಇಲ್ಲ. ಮನ ಅಹಂಕಾರಿ, ಏನೇನೂ ಅರಿಯದ ಅಜ್ಞಾನಿ. ವಸ್ತುಗಳನ್ನೇ ಪ್ರದಾನ ಮಾಡಿಕೊಂಡು ಸಾಯುವವರೆಗೂ ದೇಹವನ್ನು ದುಃಖಕ್ಕೆ ಈಡು ಮಾಡುತ್ತದೆ.

ಮನ ಇತರರು ಹೇಳಿದ್ದು ಕೇಳುತ್ತದೆಯೇ ಹೊರತು ತನ್ನ ಅರಿವಿನ ಅಂತರಾಳಕ್ಕೆ ಹೋಗಿ ಅರಿವಿನ ಸಹಕಾರದೊಂದಿಗೆ ವಸ್ತುವನ್ನು ನೋಡುವುದಿಲ್ಲ. ಹಾಲು ಬೇಕಾದರೆ ಹಸುವಿನ ಅಡಿಯಲ್ಲಿ ಕುಳಿತು ಕರೆಯಬೇಕು. ಕೆಚ್ಚಲಿಗೆ ಸೇವೆ ಮಾಡಬೇಕು. ಇದು ಮನಕ್ಕೆ ಗೊತ್ತಿದೆ, ಹಸುವಿನ ಸೇವೆ ಮಾಡುತ್ತದೆ. ಕರುವಿಗೆ ಹಾಲುಣ್ಣಿಸದೆ ಎಲ್ಲವನ್ನು ಕರೆಯುತ್ತದೆ. ಹಾಲು ಕೊಡದಿದ್ದರೆ ಕಟುಕನಿಗೆ ಮಾರುತ್ತದೆ. ಮನ ತನ್ನ ಸುಖಕ್ಕಾಗಿ ಅಪರಾಧ ಎಸಗುವುದಕ್ಕೂ ಹೇಸುವುದಿಲ್ಲ. ಮನದ ಎಲ್ಲ ಅಪರಾಧಗಳು ತನುವಿನಿಂದ ಗುರುತಿಸಲ್ಪಡುತ್ತದೆ.

ತನು ಹಿಡಿದು ಸುಖಕ್ಕಾಗಿ ನರಕದ ಕೆಲಸಗಳನ್ನು ಮಾಡುವ ಮನಕ್ಕೆ , ತನು ಹಿಡಿದು ಸದಾ ಅಡ್ಡಿಪಡಿಸುವ ಅರಿವಿನ ದರ್ಶನವಾಗಬೇಕು. ಇದು ಮನಕ್ಕೆ ಸಾಧ್ಯವಾಗುವುದಿಲ್ಲ.

ಮೇಲಾಗಲೊಲ್ಲದೆ ಸದಾ ಅರಿವಿಗೆ ಕೀಳಾಗಿ, ಅರಿವಿನ ಅಮೃತವನ್ನೇ ಉಂಡು, ತನುವನ್ನೇ ಸ್ವರ್ಗವನ್ನಾಗಿ ಮಾಡಿಕೊಂಡ, ಮಹಾಜ್ಞಾನಿ ಶರಣರಿಗೆ ಮಾತ್ರ ಈ ತಂತ್ರಜ್ಞಾನ ಗೊತ್ತು. ಅವರು ತನುವಿನ ಅರಿವಿಗೆ ಶರಣು ಹೋದವರು. ತನುವಿನ ಅರಿವನ್ನು ಹೇಗೆ ಪಡೆಯಬೇಕೆಂದು ಮನಕ್ಕೆ ಪಾಠ ಮಾಡುವ ನಿಪುಣರವರು.

ಎಲೆ ಮನವೆ ಮೇಲಾಗಲೊಲ್ಲದೆ ಶರಣರಿಗೆ ಕೀಳಾಗು ! ಮೇಲಾಗಿ ನರಕದಲಿ ಓಲಾಡಬೇಡ. ಶರಣರ ತನು, ಅದು ಮಹಾಜ್ಞಾನದ ಶ್ರೀಪಾದ ! ಎಲೆ ಮನವೆ ನೀನು ವಾಸ ಮಾಡಿದ ತನು ಕೂಡಾ ಅರಿವಿನ ಶ್ರೀಪಾದ ಹೇಗೆ ಎಂಬುದನು ಶರಣರು ಸೂಚಿಸುತ್ತಾರೆ. ಆ ಸ್ವರ್ಗದಲಿ ಓಲಾಡಿ ಅರಿವಿನ ಅಮೃತ ಸವಿಯುತ್ತ ಬದುಕು ಮನವೆ ಎನ್ನುವ ಆಶಯವನ್ನು ಹೊತ್ತಿದೆ ಅಣ್ಣನವರ ಈ ವಚನ.

ಬಸವಣ್ಣನವರು ತಮ್ಮ ಪ್ರತಿಯೊಂದು ವಚನದಲ್ಲಿ ತನುವಿನಲ್ಲಿ ಸಂಗಮವಾದ ಅರಿವನ್ನು ತನುವಿನಲ್ಲಿಯೇ ಸಂಗಮವಾದ ಮನ ಹೇಗೆ ಪಡೆದು ಸುಖಿಸಬೇಕೆಂಬುದನ್ನು ತಮ್ಮ ಮೇಲೆ ಆರೋಪಿಸಿಕೊಂಡು ವಿವರಿಸುತ್ತಾರೆ. ಬಸವಣ್ಣನವರು ಯಾತನೆ ಅನುಭವಿಸಿದ್ದಾರೆ ಎಂದು ಓದುಗರು ಭಾವಿಸಬಾರದು. ಪ್ರತಿ ತನುವಿನ ಮನ ತನ್ನ ಸಂಕಟವನ್ನು ಹೇಗೆ ನಿವಾರಿಸಿಕೊಳ್ಳಬೇಕು ? ಅರಿವಿನ

ಸುಖವನ್ನು ಹೇಗೆ ಪಡೆಯಬೇಕು ? ಎನ್ನುವ ಯೋಚನೆಯಲ್ಲಿ ತೊಡಗಿಸಿಕೊಳ್ಳಬೇಕು.

ಅರಿವಾದರೆ ಶಬ್ದ ತನುವಿಗೆ ಸುಖ ದುಃಖಗಳನ್ನುಂಟು ಮಾಡುವುದಿಲ್ಲ. ಸ್ಪರ್ಶ, ದೃಶ್ಯ, ವಾಸನೆ ಹಾಗೂ ರುಚಿ ಕೂಡಾ ತನುವಿಗೆ ಸುಖದುಃಖಗಳನ್ನುಂಟು ಮಾಡುವುದಿಲ್ಲ.

ಉದಾ : ಚಿನ್ನವನ್ನು ಕಣ್ಣಿನಿಂದ ನೋಡಿ ಮನಕ್ಕೆ ಸುಖವಾಗುತ್ತದೆ. ಅದನ್ನು ಪಡೆಯಲು ತನುವನ್ನು ಬಳಸಿಕೊಂಡು ಹಗಲಿರುಳು ದುಡಿಯುತ್ತದೆ, ಇಲ್ಲ ಕಳ್ಳತನ ಮಾಡುತ್ತದೆ. ಇದರಿಂದ ತನುವಿಗೆ; ತನು ಇರುವವರೆಗೆ ದುಃಖವೂ ಆಗುತ್ತದೆ. ಸುಖವೂ ಆಗುತ್ತದೆ. ಇದು ಮನ ಸುಖದಃಖಗಳನ್ನು ಪಡೆದುಕೊಂಡ ಬಗೆ. ಮನಕ್ಕೆ ಅರಿವಾದರೆ ಚಿನ್ನವನ್ನು ನೋಡುತ್ತದೆ. ಚಿನ್ನದ ಮೂಲ; ಬಣ್ಣ ಮತ್ತು ಲೋಹ. ಇವೆರಡೂ ಪ್ರಾಣಕ್ಕಿಂತ, ಅರಿವಿಗಿಂತ, ತನುವಿಗಿಂತ ದೊಡ್ಡವಲ್ಲ. ಬಣ್ಣದ ಲೋಹವನ್ನು ಚಿನ್ನವೆಂದು ಅರಿವಿನಿಂದ ಗುರುತಿಸಿ ತನು ಹಗಲಿರುಳು ದುಡಿದು ಪಡೆದು ಶ್ರೀಮಂತ ಎನ್ನಿಸಿಕೊಳ್ಳಬೇಕೆ ? ಕಳ್ಳತನ ಮಾಡಿ ಕಳ್ಳ ಎನ್ನಿಸಿಕೊಳ್ಳಬೇಕೆ ? ಇವೆರಡೂ ಹುರುಳಿಲ್ಲದ ವಿಚಾರಗಳು. ಆದರೂ ನೋಡುವುದನ್ನು ನೋಡಲರಿಯದೆ ಮನ ಕಣ್ಣುಗಳಲ್ಲಿ ಆವರಿಸಿ ಇಡೀ ಜಗದ ತನುಗಳನ್ನೇ ಕೆಡಿಸಿದೆ.

ಮನ ಚಿನ್ನ ನೋಡುವ ಮುನ್ನ ಅರಿವಿನ ಸಹಾಯದಿಂದ ಚಿನ್ನ ನೋಡಿದರೆ ಅದು ಹಳದಿ ಬಣ್ಣದ ಲೋಹ ಮಾತ್ರ. ಹಳದಿ ಬಣ್ಣವೂ ಶ್ರೇಷ್ಟವಲ್ಲ, ಲೋಹವೂ ಶ್ರೇಷ್ಟವಲ್ಲ! ಅದನ್ನು ತಿಳಿಯುವ ಅರಿವು ಮಾತ್ರ ಶ್ರೇಷ್ಟ! ಜಗದ ತನುಗಳು ನೋಡೂದನ್ನು ನೋಡಲರಿಯದೆ ಪಡೆಯುವುದಕ್ಕಾಗಿಯೇ ಸುಖದುಃಖಗಳನ್ನು ಅನುಭವಿಸಿ ಕೆಟ್ಟರೆ, ಅರಿವಿನ ತನು ನೋಡೂದನ್ನು ನೋಡಿ ಅರಿವಿನ ಆನಂದ ಪಡುತ್ತದೆ. ಚಿನ್ನ ಮಣ್ಣಿನ ಗರ್ಭದಿಂದ ಅಗೆದು ತೆಗೆದ ಹಳದಿ ಲೋಹ ! ಅದು ಜಡ, ಚಿನ್ನ ತಿಳಿಯುವ ತನು ಚೇತನ ! ಚಿನ್ನ ಪಡೆಯಲು ಚೇತನದ ತನು ಹಗಲಿರುಳು ಬಳಲಬೇಕೆ ? ಚಿನ್ನ ಪಡೆದು ಶ್ರೀಮಂತ ಕಳ್ಳನ ಹಣೆಪಟ್ಟಿ , ಚೇತನದ ತನು ಕಟ್ಟಿಕೊಳ್ಳಬೇಕೆ ? ನಿತ್ಯ ಚೇತನದ ಅರಿವಿನ ತನು ಶ್ರೀಮಂತವೋ ? ಚಿನ್ನ ಶ್ರೀಮಂತವೊ ಎನ್ನುವುದನ್ನು ಅಹಂಕಾರಿ ಮನ ಯೋಚಿಸಬೇಕು. ಮನ ಚಿನ್ನ ನೋಡುವ ಮುನ್ನ ಅರಿವಿನ ಪಾದಕ್ಕೆರಗಿ ಅರಿವಿನಿಂದ ಚಿನ್ನ ನೋಡುವುದನ್ನು ತೀಕ್ಷಣವಾಗಿ ಕಲಿಯಬೇಕು.

360

ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ,
ರುದ್ರ ಪದವಿಯನೊಲ್ಲೆ,
ನಾನು ಮತ್ತಾವ ಪದವಿಯನೊಲ್ಲೆನಯ್ಯಾ.
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ
ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ.

ಸೃಷ್ಟಿಕರ್ತ ನಾನೆಂಬ ಅಹಂಕಾರ ಬ್ರಹ್ಮನಿಗೆ. ರಕ್ಷಣೆ ಮಾಡುವವ ನಾನೆಂಬ ಅಹಂಕಾರ ವಿಷ್ಣುವಿಗೆ, ನಾಷ ಮಾಡುವವ ನಾನೆಂಬ ಅಹಂಕಾರ ರುದ್ರನಿಗೆ. ಬ್ರಹ್ಮನನ್ನು ಸೃಷ್ಟಿಕರ್ತನೆಂದು ಕರೆಯುವುದುಂಟು. ಬ್ರಹ್ಮಾಂಡದಿಂದಲೂ ಅತ್ತತ್ತ ಇರುವ ಸೃಷ್ಟಿಯ ಮೂಲ ನೋಡಿದೆನೆಂದು ಸುಳ್ಳು ಹೇಳಿದ್ದಕ್ಕಾಗಿ ಬ್ರಹ್ಮನ ಒಂದು ತಲೆ ಹೋಯಿತು. ಸೃಷ್ಟಿಯ ಮೂಲ ನೋಡದವನು ಬ್ರಹ್ಮ ಹೇಗಾಗುತ್ತಾನೆ?

ಸೃಷ್ಟಿಯ ಮೂಲದ ಪಾತಾಳ ನೋಡಲು ಹೋದ ವಿಷ್ಣುವಿಗೆ ಅದರ ಕೊನೆ ಕಾಣಲೇ ಇಲ್ಲ. ತನು ಸೃಷ್ಟಿ ಮೂಲದ ಸಹಜ ಸೊಬಗು. ಪಾತಾಳದಿಂದಲೂ ಅತ್ತತ್ತ ಇರುವ ಸೃಷ್ಟಿಯ ಮೂಲ ವಿಷ್ಣುವಿಗೆ ಕಾಣಲಿಲ್ಲ, ಆದರೆ ಕಾಣದಿದ್ದುದನ್ನು ಕಂಡೆನೆಂದು ಬ್ರಹ್ಮನಂತೆ ವಿಷ್ಣು ಸುಳ್ಳು ಹೇಳಲಿಲ್ಲ.

ಸೃಷ್ಟಿ ಮೂಲದ ಶ್ರೀಮುಕುಟ ಬ್ರಹ್ಮಾಂಡದಿಂದಲೂ ಅತ್ತತ್ತ. ಇಂತಹ ಶ್ರೀಮುಕುಟ ನೋಡಲು ಹೋದ ಬ್ರಹ್ಮ ನೋಡದಿದ್ದರೂ ನೋಡಿದೆನೆಂದು ಸುಳ್ಳು ಹೇಳಿದ ! ನೋಡಲು ಸಾಧ್ಯವಾಗಲಿಲ್ಲವೆಂದಿದ್ದರೆ ಬ್ರಹ್ಮ ಪದವಿಗೆ ಚ್ಯುತಿ ಬರುತ್ತದೆಂದು ಭ್ರಮಿಸಿ ಸುಳ್ಳು ಹೇಳಿದ. ಕೂಡಲೇ ಬ್ರಹ್ಮನ ಒಂದು ತಲೆ ಹೋಯಿತು.

ಸೃಷ್ಟಿಯ ಮೂಲ ಬ್ರಹ್ಮಾಂಡದಿಂದಲೂ ಅತ್ತತ್ತ. ಪಾತಾಳದಿಂದಲೂ ಅತ್ತತ್ತ. ಗಮನಕ್ಕೆ ನಿಲುಕದ ಅಗಮ್ಯ. ಗೋಚರಕ್ಕೆ ನಿಲುಕದ ಅಗೋಚರ. ಯಾರೂ ಪ್ರಮಾಣಿಸಲು ಬಾರದಂತಹ ಅಪ್ರಮಾಣದ ಮೂಲವನ್ನು ನಾಶ ಮಾಡಲು ಸಾಧ್ಯವೆ ? ಆದರೆ ನಾಶ ಮಾಡುತ್ತೇನೆಂದು ಮೆರೆದ ಅಹಂಕಾರಿ ರುದ್ರ ಪದವಿ ಯೋಗ್ಯವಾದುದೆ ?

ಇಂತಹ ಬ್ರಹ್ಮ ಪದವಿಯನೊಲ್ಲೆ , ವಿಷ್ಣುಪದವಿಯನೊಲ್ಲೆ , ರುದ್ರಪದವಿಯನೊಲ್ಲೆ. ಕೂಡಲಸಂಗಮದೇವಾ ನಿಮ್ಮ ಸದ್ಭಕ್ತರ ಪಾದವ ನರಿದಿಪ್ಪ ಮಹಾಪದವಿಯ ಕರುಣಿಸಯ್ಯಾ:

ಬ್ರಹ್ಮಾಂಡದಿಂದತ್ತತ್ತಲಿರುವ ಶ್ರೀಮುಕುಟವನು ಪಾತಾಳದಿಂದಲೂ ಅತ್ತತ್ತಲಿರುವ ನಿಮ್ಮ ಶ್ರೀಪಾದವನು ಬ್ರಹ್ಮ ಪದವಿಯನು ಅಲಂಕರಿಸಿದ ಸೃಷ್ಟಿಕರ್ತ ನೋಡಲಿಲ್ಲ. ರಕ್ಷಣೆಯ ಕಾಯಕದಲ್ಲಿದ್ದ ವಿಷ್ಣುವೂ ನೋಡಲಿಲ್ಲ. ನಾಶ ಮಾಡುವ ಕಾಯಕದಲ್ಲಿದ್ದ ರುದ್ರನೂ ನೋಡಲಿಲ್ಲ.

ಜಗದಗಲ ಮುಗಿಲಗಲ ಮಿಗೆಯಗಲವಿದ್ದ ನೀವು ತನುವಿನಗಲಕ್ಕೆ ಬಂದು ಚುಳುಕಾದಿರಿ. ಬ್ರಹ್ಮಾಂಡದಿಂದಲೂ ಅತ್ತತ್ತಲಿರುವ ನಿಮ್ಮ ಶ್ರೀಮುಕುಟ, ಪಾತಾಳದಿಂದಲೂ ಅತ್ತತ್ತಲಿರುವ ನಿಮ್ಮ ಶ್ರೀಚರಣವದು ವಿರಾಟಸ್ವರೂಪ ! ಬ್ರಹ್ಮ ವಿಷ್ಣು ರುದ್ರರಾದಿಯಾಗಿ ಯಾರೂ ಪ್ರಮಾಣಿಸಲು ಬಾರದ ನೀವು, ಯಾರೂ ಗಮನಿಸಲು ಬಾರದ ನೀವು, ಅಪ್ರತಿಮ ಮಹಾ ಮಹಿಮರಾದ ನೀವು ತನುವಿನಲ್ಲಿ ತನ್ಮಯವಾಗಿ ಚುಳುಕಾದಿರಿ ! ನಿಮ್ಮ ಸದ್ಭಕ್ತರ, ನಿಮಗೆ ಶರಣುಹೋದ ಶರಣರಿಗೆ ನಿಮ್ಮ ಶ್ರೀಪಾದವನು ತೋರಿ ಕರುಣಿಸಿದಿರಿ ತಂದೆ. ನಿಮ್ಮ ಶ್ರೀಪಾದವನು ಅರಿತ ಶರಣರ ಪಾದವನು ಎನಗೊಮ್ಮೆ ತೋರಿ ಕರುಣಿಸುವ ಪದವಿಯನ್ನು ಎನಗೆ ಕೊಡು ತಂದೆ ಎಂದು ಬಸವಣ್ಣನವರು ತನ್ಮಯವಾಗಿ ಹಾಡಿದ್ದಾರೆ.

361

ಕಾಗೆ ವಿಷ್ಟಿಸುವ ಹೊನ್ನಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ,
ಅಯ್ಯಾ, ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ !
ಕರ್ಮಾವಲಂಬಿನಃ ಕೇಚಿತ್ ಕೇಚಿತ್ ಜ್ಞಾನಾವಲಂಬಿನಃ
ವಯಂ ತು ಶಿವಭಕ್ತಾನಂ ಪಾದರಕ್ಷಾವಲಂಬಿನಃ
ಕೂಡಲಸಂಗಮದೇವಾ,
ನಿಮ್ಮ ಸೆರಗೊಡ್ಡಿ ಬೇಡುವೆ, ಇದೊಂದೇ ವರವ ಕರುಣಿಸಯ್ಯಾ.

ಕಾಗೆ ವಿಷ್ಟಿಸುವ ಹೊನ್ನಕಳಶವಹುದರಿಂದ ಒಡೆಯರು ಜೋಗೈಸುವ ಚಮ್ಮಾವುಗೆಯ

ಮಾಡಯ್ಯಾ,:

ತನುವಿನಲ್ಲಿರುವ ಅರಿವಿನ ಸಂಪತ್ತನ್ನು ತನುವನ್ನು ಆವರಿಸಿದ ಮನ ತಿಳಿಯದ್ದಕ್ಕಾಗಿ ಶರಣರ ತಾಂತ್ರಿಕ ಶಿಕ್ಷಣ ಬೇಕೆನಿಸುತ್ತದೆ. ಮನ ಅಹಂಕಾರಿ, ಅರಿವು ನಿರಹಂಕಾರಿ ! ಅಹಂಕಾರಿ ಮನ ನಿರಹಂಕಾರಿ ತತ್ತ್ವವನ್ನು ಬಳಸಿಕೊಳ್ಳುವುದು ಬಲು ಜಟಿಲ ! ಈ ತತ್ತ್ವ ತನುವಿನಲ್ಲಿಯೇ ಇದೆ. ಆದರೂ ಮನಕ್ಕೆ ತತ್ತ್ವ ತಿಳಿಯಲು ಭಗವದ್ಗೀತೆ ಬೈಬಲ್‌ಗಳೇ ಆಗಬೇಕು. ಆದರೆ ಅದನ್ನು ಓದಿದ ಮನ ತನುವಿನೊಂದಿಗೆ ಪಂಡಿತನೆಂಬ ಅಹಂಕಾರದಿಂದ ಮೆರೆಯುತ್ತದೆ. ಯಾವುದೋ ಒಂದು ಧಾರ್ಮಿಕ ಸಂಸ್ಥಾನಕ್ಕೆ ಹೊನ್ನ ಕಿರೀಟವನ್ನಿಟ್ಟುಕೊಂಡು ಪೀಠಾಧಿಪತಿಯಾಗಿ ಜಗದ್ಗುರುವಾಗಿ ಅಲಂಕರಿಸುತ್ತದೆ. ಕಿರೀಟ ಮತ್ತು ಪದವಿಗಳಿಂದ ಅಹಂಕಾರ ಶಮನಗೊಳ್ಳುವುದಿಲ್ಲ, ಅದಕ್ಕೆ ನಿರಹಂಕಾರಿ ತತ್ವ ಹೊಳೆಯುವುದಿಲ್ಲ ಎನ್ನುವುದಕ್ಕೆ ಒಂದು ಚಿಕ್ಕ ದೃಷ್ಟಾಂತ ಇಲ್ಲಿದೆ.

ಒಬ್ಬ ಜ್ಞಾನಿ ರಸ್ತೆಯಲ್ಲಿ ಹೋಗುತ್ತಿದ್ದ. ಒಂದು ಚಿಕ್ಕ ನಾಯಿ ಆತನ ಹಿಂದೆ ಹಿಂದೆ ಹೋಗುತ್ತಿತ್ತು. ಕಾಲಲ್ಲಿ ಸಿಕ್ಕು ಸತ್ತೀತೆಂದು ಧ್ವನಿ ಮಾಡಿ ಕೈತೋರಿಸಿ ದೂರ ಸರಿಸುತ್ತಾ ನಡೆದ. ಆದರೂ ಅದು ಹಾಗೆ ಬೆನ್ನು ಹತ್ತಿತು. ಜ್ಞಾನಿ ಒಂದು ಚಿಕ್ಕ ಕಲ್ಲಿನಿಂದ ನಾಯಿ ಮರಿಯನ್ನು ದೂರ ಸರಿಸಲು ಹೊಡೆದ. ಅದಕ್ಕೆ ಗಾಯವಾಗಿ ರಕ್ತ ಸುರಿಯ ಹತ್ತಿತು. ಜ್ಞಾನಿ ಉಪಚರಿಸಲು ಹೋದ, ನಾಯಿ ತಿರಸ್ಕರಿಸಿ ಗಾಯಗೊಳಿಸಿದ ನಿನಗೆ ಶಿಕ್ಷೆಯಾಗಬೇಕು. ನನಗೆ ನ್ಯಾಯಬೇಕು. ರಾಜನಲ್ಲಿಗೆ ನಡೆಯಿರಿ ಎಂದು ಜ್ಞಾನಿಗೆ ಚೀರಿ ಚೀರಿ ಹೇಳಿತು. ಹೊಡೆದದ್ದು ತಪ್ಪಾಯಿತು, ಎಂದು ಹೇಳಿದರೂ ನಾಯಿ ಕೇಳಲಿಲ್ಲ, ರಾಜನ ಹತ್ತಿರ ಇಬ್ಬರೂ ಹೋದರು. ನಡೆದ ವೃತ್ತಾಂತವನ್ನು ಹೇಳಿ ನಾಯಿ ಮರಿ ನ್ಯಾಯ ಕೇಳಿತು. ರಾಜ ಜ್ಞಾನಿಯನ್ನು ಇದು ನಿಜವೇ ಎಂದು ಕೇಳಿದ. ನಿಜ ಮಹಾರಾಜರೆ, ನಾನು ರಕ್ತ ಸುರಿಯುವಂತೆ ಹೊಡೆಯಲಿಲ್ಲ, ಕಾಲಲ್ಲಿ ತೊಡಕಿ ಸಾಯಬಾರದೆಂದು ದೂರ ಸರಿಸಲು ಚಿಕ್ಕ ಕಲ್ಲಿನಿಂದ ಹೊಡೆದೆ. ನಾಯಿಮರಿಗೆ ರಕ್ತದ ಗಾಯವಾಯಿತು. ತಪ್ಪಾಗಿದೆ, ತಮಗೆ ತೋಚಿದ ಶಿಕ್ಷೆ ಕೊಡಿ ಎಂದ ಜ್ಞಾನಿ.

ಜ್ಞಾನಿಗೆ ಯಾವ ಶಿಕ್ಷೆ ಕೊಡಬೇಕು ನೀನೇ ಹೇಳು ನಡೆಸಿಕೊಡುವೆ ಎಂದು ರಾಜ ನಾಯಿಮರಿಗೆ ಮಾತು ಕೊಟ್ಟ. ಮಹಾರಾಜರೇ ಈ ಸಂಸ್ಥಾನದ ಜಗದ್ಗುರು ಸತ್ತಿರುವುದರಿಂದ ಆ ಸ್ಥಾನ ಕಾಲಿಯಾಗಿ ಹಾಗೇ ಉಳಿದಿದೆ. ನನ್ನನ್ನು ಹೊಡೆದ ಜ್ಞಾನಿಯನ್ನು ಈ ಸಂಸ್ಥಾನದ ಜಗದ್ಗುರುಗಳನ್ನಾಗಿ ಮಾಡಿ ಎಂದಿತು ನಾಯಿ. ರಾಜನಿಗೆ ಆಶ್ಚರ್ಯವಾಯಿತು. ಹೊಡೆದವನನ್ನು ಜೈಲಿಗೆ ಹಾಕಿ, ಜೀವಾವಧಿ ಶಿಕ್ಷೆ ಕೊಡಿ ಎಂದು ಕೇಳಬಹುದು. ಆದರೆ ನೀನು ಕೇಳಿದ್ದು ಶಿಕ್ಷೆಯಲ್ಲ, ಹೀಗೆ ಕೇಳಲು ಕಾರಣವೇನು ಎಂದು ರಾಜ ಪ್ರಶ್ನಿಸಿದ. ಮಹಾರಾಜರೇ ಹಿಂದಿನ ಜನ್ಮದಲ್ಲಿ ನಾನು ಈ ಸಂಸ್ಥಾನದ ಜಗದ್ಗುರುವಾಗಿದ್ದೆ ಎಂದಿತು ನಾಯಿಮರಿ !

ಗರ್ಭಗುಡಿಯೊಳಗಿದ್ದ ದೇವನಿಗೆ ಪಂಚಾಮೃತದ ಅಭಿಷೇಕ, ಫಲಪುಷ್ಪ ತಾಂಬೂಲ, ಷಡ್ರಾಸನ್ನದ ನೈವೇದ್ಯ ಮಾಡುತ್ತೇವೆ ! ಗುಡಿಯ ಶಿಖರಕ್ಕೆ ಥಳ ಥಳ ಹೊಳೆಯುವ ಹೊನ್ನ ಕಳಶವಿಟ್ಟು ಶೃಂಗಾರ ಮಾಡುತ್ತೇವೆ. ಆದರೂ ಅದು ಪೂಜೆಗೆ ನಿಲುಕದೆ ಕಾಗೆ ಹದ್ದುಗಳ ಮಲ ವಿಸರ್ಜನೆಗೆ ಬಳಕೆಯಾಯಿತು.

ತನು ಒಂದು ದೇವಾಲಯ. ಅದರ ಒಳಾವರಣ ದೇವರಾದರೆ, ಹೊರಾವರಣ ದೇವಾಲಯ! ಹೊರಾವರಣ ಪೀಠವಾದರೆ ಅದರ ಅಧಿಪತಿ ದೇವರು. ಮನಕ್ಕೆ ಅರಿವು ಸೂಚಿಸುವುದಕ್ಕಾಗಿಯೇ ದೇವಾಲಯಗಳು, ಸಂಸ್ಥಾನಗಳು ನಿರ್ಮಾಣವಾದವು. ಆದರೆ ತನುವಿನ ಶೋಷಣೆಗೆ ತನುವೇ ಕಾರಣವಾಯಿತು. ತನುಗಳಲ್ಲಿಯ ಮನ ತನುಗಳನ್ನು ಮೂರು ಭಾಗಗಳಾಗಿ

ಸೀಳಿಕೊಂಡಿತು. ತನುವಿನಲ್ಲಿ ಜ್ಞಾನವಿದ್ದು ಮನ ಅದನ್ನು ಬಳಸಿಕೊಳ್ಳದೆ ಕಾಯಕವೇ ಶ್ರೇಷ್ಠವೆಂದು ಕರ್ಮಯೋಗಿಯೆಂದು ಗುರುತಿಸಿಕೊಂಡಿತು. ತನುವಿನಲ್ಲಿ ಜ್ಞಾನವಿದ್ದು ಆ ಜ್ಞಾನದಿಂದಲೇ ಪುಸ್ತಕಗಳು ಹೊರ ಬಂದಿದ್ದರೂ ಅದನ್ನು ಬಳಸಿಕೊಳ್ಳದ ಮನ ಜ್ಞಾನ ಗ್ರಂಥಗಳನ್ನು ಓದಿ ಆ ಗ್ರಂಥಗಳಿಗೆ ಅವಲಂಬಿಯಾಯಿತು. ಇವೆರಡನ್ನು ನೋಡಿ ಬೇಸರಗೊಂಡ ಮನ ತನುವಿನಲ್ಲಿರುವ ಜ್ಞಾನಕ್ಕೆ ಮರುಳಾಯಿತು. ಆ ಜ್ಞಾನಕ್ಕೆ ಭಕ್ತನಾಯಿತು. ತನು ಮನ ಅರಿವು ಒಂದಾಯಿತು. ಈ ತನುವಿಗೆ ಜಗದ ತನುಗಳೆಲ್ಲ ಒಂದಾಗಿ ಕಂಡವು. ಹೆಣ್ಣುಗಂಡು, ಗಡಿ ಸೀಮೆ ದೇಶ, ಜಾತಿ-ಮತ ಪಂಥಗಳು ಕಾಣಲೇ ಇಲ್ಲ. ಇಂತಹ ಜ್ಞಾನಕ್ಕೆ ಶರಣುಹೋದ ಶರಣರ ಪಾದಕ್ಕೆ ಮನವನ್ನು ಚಪ್ಪಲಿಯನ್ನಾಗಿಸು ತಂದೆ ಎಂದಿದ್ದಾರೆ ಬಸವಣ್ಣ.

ತನುವಿನಲ್ಲಿರುವ ಅರಿವಿನ ತಂದೆಯನ್ನು ತನುವಿನಲ್ಲಿಯೇ ಇರುವ ಮನ ಮಗನಾಗಿ ಹೇಗೆ ಬೇಡಬೇಕು, ತನುವಿನಲ್ಲಿಯೇ ಇರುವ ದೇವರನ್ನು ತನುವನ್ನು ಆವರಿಸಿದ ಮನ ಭಕ್ತನಾಗಿ ಹೇಗೆ ಬೇಡ ಬೇಕು, ಈ ಮಹಾಜ್ಞಾನವನ್ನು ಪಡೆದು ಸ್ವಸುಖದಲ್ಲಿ ವಿರಮಿಸಿದ ಶರಣರನ್ನು ಹೇಗೆ ಬೇಡ ಬೇಕು ಎನ್ನುವ ಸೂತ್ರ ಇದಾಗಿದೆ.

362

ಆವಾವ ಭಾವದಲ್ಲಿ ಮಾಡಿಕೂಡಿಹೆವೆಂಬವರ ಬಾಗಿಲ ತೋರಯ್ಯಾ.
ತನುವನೊಪ್ಪಿಸಿದವರ ಮನವನೊಪ್ಪಿಸಿದವರ ಧನವನೊಪ್ಪಿಸಿದವರ
ಬಾಗಿಲ ತೋರಯ್ಯಾ.
ಇವನೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆಂಬವರ
ಕೆರಹ ಹೊತ್ತಿರಿಸೆನ್ನ ಕೂಡಲಸಂಗಮದೇವಾ.

ತನುವನ್ನು ಪುಸ್ತಕಗಳಿಂದ ಶ್ರೀಮಂತಗೊಳಿಸಬೇಕೆಂದು ರಾಜ್ಯ ದೇಶ ಹಾಗೂ ಜಗತ್ತಿನ ಶಿಕ್ಷಣ ತಜ್ಞರು ನಿರ್ಧರಿಸಿದ್ದಾರೆ. ಇದು ಸಾಧ್ಯವಾಗದ ಮಾತು. ಇದರಿಂದ ತನುವಿನಲ್ಲಿರುವ ಅರಿವೇ ಪುಸ್ತಕದಲ್ಲಿ ಬಂದು ಅದು ಮನದಲ್ಲಿ ಸಂಗ್ರಹವಾಗುತ್ತದೆಯೇ ಹೊರತು ತನುವಿಗೆ ಬಳಕೆಯಾಗುವುದಿಲ್ಲ.

ಸೇವಾ ನೆಪದಲ್ಲಿದ್ದ ಪ್ರಜಾಪ್ರತಿನಿಧಿಗಳು, ಸೇವೆಯಲ್ಲಿದ್ದ ಅಧಿಕಾರಿಗಳು ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿದ್ದ ಶಿಕ್ಷಕರನ್ನು ಗಮನಿಸಿದರೆ ಅರಿವಾಗುವುದಿಲ್ಲವೆ ? ಕಲಿತವರು ಕಲಿಯದವರನ್ನು ಶೋಷಣೆ ಮಾಡುತ್ತಿರುವುದು ಗಮನಿಸಿದರೆ ಕೂಡಲೇ ಅರ್ಥವಾಗುತ್ತದೆ. ಇದು ಕಲಿತವರ ತಪ್ಪಲ್ಲ. ಕಲಿತದ್ದು ಕಡೆಯವರೆಗೂ ಉಳಿಯುವುದಿಲ್ಲ, ಬಳಕೆಯೂ ಆಗುವುದಿಲ್ಲವೆಂದು ಕಲಿತ ತನುಗಳಿಗೆ ತಿಳಿಯುವುದಿಲ್ಲ.

ತನುವನ್ನು ಬಳಕೆ ಮಾಡಿಕೊಂಡು ಮನ ಓದಿ ಪದವೀಧರನಾಗುತ್ತದೆ, ಹಣಗಳಿಸಿ ಶ್ರೀಮಂತನಾಗುತ್ತದೆ, ಕೊಟ್ಟು ದಾನಿ ಎನ್ನಿಸಿಕೊಳ್ಳುತ್ತದೆ, ಕಳವು ಮಾಡಿ ಕಳ್ಳ, ಕೊಲೆ ಮಾಡಿ ಕೊಲೆಗಡುಕ, ಉಗ್ರವಾದಿ ಎನ್ನಿಸಿಕೊಳ್ಳುತ್ತದೆ. ಮನ ಮಾಡಿದ ಈ ಎಲ್ಲ ಕೆಲಸಗಳನ್ನು ಜನ ತನುವಿನಿಂದಲೇ ಗಮನಿಸುತ್ತಾರೆ. ತನುವಿಗೆ ಒಳ್ಳೆಯ ಮತ್ತು ಕೆಟ್ಟ ಪಟ್ಟ ಕಟ್ಟುತ್ತಾರೆ. ಮನ ಮಾಡಿದ ಕೆಲಸಕ್ಕೆ ತನು ಭಾಜನವಾಗುತ್ತದೆ. ಹೀಗಿದ್ದ ಮೇಲೆ ಮನ ತನುವಿಗೆ ಯಾವ ಪದವಿ ನೀಡಿದರೂ ಅದನ್ನು ಕೂಡಲೇ ಸುಳ್ಳಾಗಿಸುತ್ತದೆ. ಇಂತಹ ಮನಕ್ಕೆ ಶಿಕ್ಷಣ ನೀಡುವುದು ಹೇಗೆ ಎನ್ನುವ ಯೋಚನೆ ರಾಜ್ಯ ಸರಕಾರಕ್ಕೆ ಕೇಂದ್ರ ಸರಕಾರಕ್ಕೆ ಹೊಳೆದಿಲ್ಲ, ಜಗತ್ತಿಗೂ ಹೊಳೆದಿಲ್ಲ. ಇದು ಅರಿವಿನ ಶಿಕ್ಷಣ !

ಬುದ್ಧ, ಮಹಾವೀರ, ಕೃಷ್ಣ, ಕ್ರಿಸ್ತರಿಗೆ ಮಾತ್ರ ಹೊಳೆದಿತ್ತು ! ಶಂಕರ, ರಾಮಾನುಜ, ಬಸವಾದಿ ಶರಣರಿಗೆ ಮಾತ್ರ ಹೊಳೆದಿತ್ತು ! ದಾಸವರೇಣ್ಯರಿಗೆ ಮಾತ್ರ ಹೊಳೆದಿತ್ತು.

ಸರಕಾರ ಮತ್ತು ಆಯಾ ಸಮಾಜ, ಜ್ಞಾನಿಗಳನ್ನು ಪೂಜಿಸಿ ಅವರ ದಿನಾಚರಣೆ ಆಚರಿಸುತ್ತದೆ. ಶಿಕ್ಷಣ ತಜ್ಞರು ಅವರ ಚರಿತ್ರೆ ಮತ್ತು ವಿಚಾರಗಳನ್ನು ಪುಸ್ತಕಗಳಲ್ಲಿ ಬಂಧಿಸಿ ಮನಕ್ಕೆ ಬೋಧಿಸುತ್ತಾರೆ.

ಮನಕ್ಕೆ ಪಾಠ ನಿಲ್ಲುವುದಿಲ್ಲ, ಅರಿವಿಗೆ ಪಾಠ ಬೇಕಿಲ್ಲ. ಎನ್ನುವುದು ಸರಕಾರಕ್ಕೆ ಶಿಕ್ಷಣ ತಜ್ಞರಿಗೆ ತಿಳಿಯುವುದಿಲ್ಲ. ಹೀಗೆಯೇ ಕಾಲಾನುಕಾಲದಿಂದ ಶಿಕ್ಷಣದ ಬೋಧೆ ನಡೆದಿದೆ. ತನುಗಳು ಶಿಕ್ಷಣ ಕಲಿತು ಪದವಿ ಪಡೆಯುತ್ತವೆ. ಪಾಲಿಸುವಲ್ಲಿ ಎಡವುತ್ತವೆ. ಇದಕ್ಕೆ ಮನ ಕಾರಣವೆಂದು ಕಲಿಯುವವರಿಗೂ ಕಲಿಸುವವರಿಗೂ ಹೊಳೆಯುತ್ತಿಲ್ಲ. ಇದು ಮನದ ಲೀಲೆ !

ಆವಾವ ಭಾವದಲ್ಲಿ ಮಾಡಿಹೆವೆಂಬವರ ಬಾಗಿಲ ತೋರಯ್ಯಾ:

ತನುವಿನಲ್ಲಿದ್ದ ಅರಿವನ್ನು ಪಡೆಯಲು ಮನ ಯಾವ ಭಾವದ ಸೂತ್ರವನ್ನು ಬಳಸಿತು ? ಯಾವ ತಂತ್ರಗಾರಿಕೆಯನ್ನು ಬಳಸಿ ಮನ ತನುವಿನಲ್ಲಿದ್ದ ಅರಿವಿನೊಂದಿಗೆ ತನ್ಮಯವಾಯಿತು, ಆ ಅರಿವು ತಾನೇ ಆಯಿತು ಎಂದು ತಿಳಿದ ತಂತ್ರಜ್ಞಾನಿಗಳ ಬಾಗಿಲು ತೋರಯ್ಯಾ ಎಂದು ಕೇಳಿದ ಮನವೇ ಸಮರ್ಥ !

ತನುವನೊಪ್ಪಿಸಿದವರ ಮನವನೊಪ್ಪಿಸಿದವರ ಧನವನೊಪ್ಪಿಸಿದವರ ಬಾಗಿಲ ತೋರಯ್ಯಾ:

ತನುವಿನಲ್ಲಿದ್ದ ಅರಿವನ್ನು ಮನದಿಂದಲೇ ತಿಳಿದು, ತನುವಿನಲ್ಲಿದ್ದ ಅರಿವಿಗೆ ಆ ಮನದಿಂದಲೇ ತನುವನ್ನು ಒಪ್ಪಿಸುವ ಶಿಕ್ಷಣ ತಿಳಿದರೆ ತನುವನೊಪ್ಪಿಸಿದವರು.

ತನುವಿನಲ್ಲಿ ಅರಿವಿದೆ. ತನುವಿನಲ್ಲಿ ಮನವಿದೆ. ತನು ಮನದ ಸಂಪತ್ತಲ್ಲ, ತನು ಅರಿವಿನ ಸಂಪತ್ತು. ಇದನ್ನು ಮನದಿಂದಲೇ ತಿಳಿದು ಮನವನ್ನು ಅರಿವಿಗೆ ಒಪ್ಪಿಸುವವರೆ ಮನವನೊಪ್ಪಿಸಿದವರು.

ತನುವಿನಲ್ಲಿ ಮನ ಸಂಗ್ರಹಿಸಿದ ಧನ(ಅರಿ)ವಿದೆ. ಧನವೆಂದರೆ ಅರಿವು. ತನುವಿನಲ್ಲಿದ್ದ ಅರಿವು ಜನ್ಮದಿಂದಲೇ ಬಂದದ್ದು ಅದು ಬೇರೆ ! ಮನ ಸಂಪಾದಿಸಿದ ಅರಿವು ಬೇರೆ. ಭಗವದ್ಗೀತೆ ಬೈಬಲ್ ವೇದ ಉಪನಿಷತ್ ಆಗಮ ಪುರಾಣ ಪುಣ್ಯ ಕತೆಗಳ ಅರಿವನ್ನು ಮನ ಸಂಪಾದಿಸಿ, ಮನದಲ್ಲಿ ಸಂಗ್ರಹ ಮಾಡಿಕೊಂಡು ಪಂಡಿತನೆನ್ನಿಸಿಕೊಳ್ಳುತ್ತದೆ. ಇದರಿಂದ ಜನ್ಮದಿಂದಲೇ ಬಂದ ಅರಿವಿನ ನಿಜ ಸುಖ ಮನಕ್ಕೆ ದಕ್ಕುವುದಿಲ್ಲವೆಂದು ಮನಕ್ಕೆ ಮನದಟ್ಟಾಗಬೇಕು. ಮನ ಸಂಗ್ರಹಿಸಿದ ಧನವನ್ನು ಮನದಿಂದಲೇ ಜನ್ಮದಿಂದ ಬಂದ ಅರಿವಿಗೆ ಒಪ್ಪಿಸಿ ಖಾಲಿಯಾಗಬೇಕು. ಇವರೇ ಧನವನೊಪ್ಪಿಸಿದವರು. ಈ ಮೂವರೂ ತಂತ್ರಜ್ಞಾನಿಗಳು. ಇವರ ಬಾಗಿಲ ತೋರಯ್ಯಾ.

ಇವೆಲ್ಲವನೊಪ್ಪಿಸಿ ಜಂಗಮುವೆನ್ನವರೆನ್ನವರೆಂಬವರ ಕೆರಹ ಹೊತ್ತಿರಿಸೆನ್ನ ಕೂಡಲಸಂಗಮದೇವಾ :

ತನು ಮನ ಧನವನು ಮನದಿಂದಲೇ ತನುವಿನಲ್ಲಿ ತನ್ಮಯವಾದ ಅರಿವಿಗೆ ಒಪ್ಪಿಸಿದ ಮೇಲೆ ತನುವಿನಲ್ಲಿ ಅರಿವನ್ನು ಬಿಟ್ಟು ಏನೂ ಉಳಿಯಲಿಲ್ಲ, ಉಳಿದದ್ದು ತನು, ತನುವಿನ ನಿಜ ಅರಿವು ಮತ್ತು ತನುವನ್ನು ಸದಾ ಅರಿವಿನಿಂದ ಕಾಯುವ ಅರಿವಿನ ಕಾವಲುಗಾರ ಜಂಗಮ ಮಾತ್ರ. ಜಂಗಮನೆಂದರೆ ವ್ಯಕ್ತಿಯಲ್ಲ, ಆತ ತನುವಿನ ಅರಿವಿನ ಶಕ್ತಿ. ತನುವಿನ ಮೂಲ ,ಆತನೇ ತನುವಿನ ಬಯಲುದೇವ !

ಬಯಲಲ್ಲಿದ್ದ ಜಲಜನಕ ಆಮ್ಲಜನಕವನ್ನು ಬಯಲು ದೇವ ಬಂಧಿಸಿ

ಜಲಬಿಂದುವನ್ನಾಗಿಸುತ್ತಾನೆ. ಜೀವ ಜಲಬಿಂದುವಾಗಿಸುತ್ತಾನೆ. ಗರ್ಭದಲ್ಲಿ ಹೊಕ್ಕು ರಕ್ತ ಮಾಂಸ ಮೂಳೆ ಮಜ್ಜಾ ಮೇದಸ್ಸು ಆಗಿ, ಚರ್ಮವಾಗಿ ತನುವಾಯಿತು. ಆ ಬಯಲು ತನುವಿನಲ್ಲಿ ತನ್ಮಯವಾಗಿ ಅರಿವಾಯಿತು. ಅದರ ಬೆಳಕಿನ ನೆರಳೇ ಮನವಾಯಿತು ! ತನು ಮನ ಅರಿವು ಅರಿವಿನ ಸಂಗಮವಾಗಿ ಅರಿವಿನ ತನುವಾಯಿತು. ಗುರುದೇವನ, ಮಹಾದೇವನ, ಸದಾಶಿವನ, ಸಾಕ್ಷಾತ ಪರಬ್ರಹ್ಮನ ತನುವಾಯಿತು.

ಮನಕ್ಕೆ ತನುವಿನ ಜ್ಞಾನ ತಿಳಿದರೆ ಬ್ರಹ್ಮ ತನು, ತಿಳಿಯದಿದ್ದರೆ ಭ್ರಮೆ ತನು ! ಹೀಗೆ ತಿಳಿದು ಆ ಸುಖವನುಂಡು ಅದರಲ್ಲಿ ತೇಲಾಡುವವನೇ ಜಂಗಮ. ಅಂತಹ ತಂತ್ರಜ್ಞಾನಿಗಳ ಕೆರಹುಗಳನ್ನು ಹೊರುವ ಕಾಯಕದಲ್ಲಿ ಮನವನ್ನು ಇರಿಸು ಎಂದು ತನುವಿನಲ್ಲಿ ಸಂಗಮವಾದ ಸಂಗಯ್ಯನನ್ನು ಬೇಡಿದ್ದಾರೆ ಬಸವಣ್ಣ. ಮನ ಅರಿವಿಗೆ ಹೋಗಿ ಅರಿವೇ ಆಗುವ ಸೂತ್ರ ಸಕಲ ತನುವಿನ ಮನಗಳಿಗೆ ಕರುಣಿಸಿದ್ದಾರೆ.

363

ಆಯತ, ಸ್ವಾಯತದನುಭಾವವ ನಾನೆತ್ತ ಬಲ್ಲೆನು ?
ಲಿಂಗ ಜಂಗಮಕ್ಕೆ ಮಾಡಿ ನೀಡುವ
ಅಚ್ಚ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ ,
ಇದು ಕಾರಣ, ಕೂಡಲಸಂಗನ ಶರಣರಲ್ಲದೆ ಅನ್ಯವನರಿಯೆನಾಗಿ.

ಆಯತ, ಸ್ವಾಯತದನುಭಾವವ ನಾನೆತ್ತ ಬಲ್ಲೆನು ? :

ಲಿಂಗ + ಆಯತ ಲಿಂಗ ಕಟ್ಟಿಕೊಂಡು ಲಿಂಗಾಯತನಾದುದು ತಿಳಿಯುತ್ತದೆ. ಅದನ್ನು ನಿತ್ಯ ನಿತ್ಯ ಪೂಜಿಸಿ, ತನುವಿನ ಮೇಲೆ ಅಳವಡಿಸಿಕೊಳ್ಳುವುದು ಕೂಡಾ ತಿಳಿಯುತ್ತದೆ. ಇದು ಆಯತ, ಸ್ವಾಯತದ ಅನುಭವ, ತೋರಿಕೆಯ, ಸಂಪ್ರದಾಯದ ಅನುಭವ.

ಒಬ್ಬ ಪೂಜಾ ನಿಷ್ಠ ಜಂಗಮ ಬಂದು ಗರ್ಭಕ್ಕೆ ಲಿಂಗ ಕಟ್ಟುತ್ತಾನೆ. ತನು ಗರ್ಭದಿಂದ ಹೊರಬಂದಮೇಲೆ ನಾಮಕರಣ ಸಂದರ್ಭದಲ್ಲಿ ವಿಧಿವಿಧಾನದಿಂದ ಪೂಜಿಸಿ ಲಿಂಗ ಕಟ್ಟಿ ದೀಕ್ಷೆ ಕೊಡುತ್ತಾನೆ. ಹೀಗೆ ಲಿಂಗ ಕಟ್ಟಿಕೊಂಡ ತನುಗಳು ಲಿಂಗಾಯತ ತನುಗಳೆಂದು ಕರೆಯಲ್ಪಡುತ್ತವೆ. ಉಳಿದ ತನುಗಳು ಲಿಂಗಾಯತ ತನುಗಳು ಅಲ್ಲವೆ ? ಲಿಂಗ ಧರಿಸಿಕೊಂಡು ಅದನ್ನು ಸ್ವಂತದ್ದನ್ನಾಗಿ ಮಾಡಿಕೊಳ್ಳಲು ಬರುತ್ತದೆಯೆ ? ಲಿಂಗ ಕಟ್ಟಲು ಬರುತ್ತದೆಯೆ ? ಕಟ್ಟಿಕೊಂಡ ಲಿಂಗ, ಲಿಂಗವೆ ? ಜನ್ಮದಿಂದ ಬಂದ ಲಿಂಗ, ಲಿಂಗವೆ ?

ತನುವಿನಲ್ಲಿ ತನ್ಮಯವಾದ ಅರಿವೇ ಲಿಂಗ ! ತನು, ತನುವಿನ ಗರ್ಭದಲ್ಲಿಯೇ ಕಣ್ಣಿನ ಮೂಲಕ ನೋಡುವ ಜ್ಞಾನವನ್ನು ಧರಿಸಿಕೊಂಡಿದೆ. ಕೇಳುವ ಜ್ಞಾನವನ್ನು ಕಿವಿಯ ಮೂಲಕ, ಮೂಸಿಸುವ ಜ್ಞಾನವನ್ನು ಮೂಗಿನ ಮೂಲಕ, ರುಚಿಸುವ ಜ್ಞಾನವನ್ನು ನಾಲಿಗೆಯ ಮೂಲಕ, ಸ್ಪರ್ಶಿಸುವ ಜ್ಞಾನವನ್ನು ಚರ್ಮದ ಮೂಲಕ ಧರಿಸಿಕೊಂಡು, ಅದನ್ನು ಸ್ವಂತ ಮಾಡಿಕೊಂಡು ಹೊರಬಂದಿದೆ. ತನು ಈ ಐದೂ ಜ್ಞಾನದ ಒಡೆಯ ! ತನುವಿಗೆ ಹೊರಗಿನ ಜ್ಞಾನವನ್ನು ಆಯತ ಮಾಡಿಕೊಂಡು ಅದನ್ನು ಸ್ವಂತ ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ತನು, ನೋಡುವ ಕೇಳುವ ಮುಟ್ಟುವ ರುಚಿಸುವ ಮೂಸಿಸುವ ಜ್ಞಾನ ತುಂಬಿಕೊಂಡ ಅಮೃತದ ಕೊಡ !

ತನುವನ್ನು ತನುವಿನಂತೆಯೇ ನೋಡಲು ತನುವಿಗೆ ಯಾರಾದರೂ ಬೋಧಿಸಬೇಕೆ ? ಅಥವಾ ಲಿಂಗಕಟ್ಟಿ ಕಾವಿ ಹೊದ್ದರೆ ತನುವಿಗೆ ತನುವಿನಂತೆಯೇ ನೋಡಲು ಬರುತ್ತದೆಯೆ ? ಹೆಣ್ಣಾದರೇನು ಗಂಡಾದರೇನು ? ತನು ಒಂದೇ ! ತನುವಿನ ಹೊರಾವರಣ, ಒಳಾವರಣಗಳೂ ಒಂದೇ ಎಂದು ನೋಡಿ ತಿಳಿದುಕೊಳ್ಳುವುದಕ್ಕೆ ಕಣ್ಣಿಗೆ ಭಗವದ್ಗೀತೆ ಬೈಬಲ್‌ಗಳು ಬೇಕೆ ? ವೇದ ಆಗಮ ಉಪನಿಷತ್‌ಗಳು ಬೇಕೆ ? ಜುಟ್ಟು, ಗಡ್ಡ ಬಿಟ್ಟು, ನಾಮ ವಿಭೂತಿಗಳನು ಬರೆದು, ಲಿಂಗ ಜನಿವಾರ ಶಿಲುಬೆಗಳನ್ನು ಹಾಕಿದರೆ ಕಣ್ಣಿಗೆ ಸರಿಯಾಗಿ ನೋಡಲು ಬರುತ್ತದೆಯೆ ?

ತನುವಿಗೆ ಹೆಣ್ಣೆಂದು, ಗಂಡೆಂದು ಕೂಗಿ ಕರೆದು, ನಾಮಕರಣ ಮಾಡಿ ಬೋಧಿಸಿ, ಲಿಂಗ ಕಟ್ಟಿದ್ದಾರೆ. ನಾಮಕರಣ ಮಾಡಿ ಬೋಧಿಸಿದ ಮಾತು ಶ್ರೇಷ್ಟವಾಗಿದೆ. ನೋಡುವ ಕಣ್ಣು, ಕೇಳುವ ಕಿವಿ, ಸ್ಪರ್ಶಿಸುವ ಚರ್ಮ, ಮೂಗು ನಾಲಿಗೆ ಇವು ಹೆಣ್ಣಲ್ಲಗಂಡಲ್ಲ. ಇದನ್ನು ತಿಳಿಯುವ ಮಹಾಜ್ಞಾನ ಹೆಣ್ಣಲ್ಲಗಂಡಲ್ಲ. ಇದನ್ನು ತಿಳಿಯಲೇಬೇಕಾದ ಮನ ಮಾತ್ರ ತಾನು ಹೆಣ್ಣೆಂದು ಗಂಡೆಂದು ಬೋಧಿಸಿದ ಬೋಧೆಯ ಮುದ್ರೆಯನ್ನು ತನುವಿಗೆ ಒತ್ತಿಕೊಂಡಿದೆ. ವಿಭೂತಿ ನಾಮಗಳನ್ನು ಬರೆದುಕೊಂಡು ಕಾವಿ ಹೊದ್ದುಕೊಂಡಿದೆ. ಜುಟ್ಟು ಗಡ್ಡ ಬಿಟ್ಟು ಲಿಂಗ ಜನಿವಾರ ಶಿಲುಬೆಗಳನ್ನು ಆಯತ ಮಾಡಿಕೊಂಡು ತನುವಿಗೆ ಹಾಕಿಕೊಂಡಿದೆ. ಸ್ವಾಯತದ ಅರಿವಿನ ತನುವಿಗೆ ಆಯತದ ಅಜ್ಞಾನದ ವೇಷ !

ತನು ಜ್ಞಾನದ ಲಾಂಛನವೆಂದು, ಜ್ಞಾನ ತನುವಿನೊಂದಿಗೆ ಬಂದಿದೆ ಎಂದು, ನಿಜ ಜ್ಞಾನವನ್ನು ಆಯತ ಮಾಡಿಕೊಂಡು ಸ್ವಾಯತ ಮಾಡಿ ಧರಿಸಲು ಬರುವುದಿಲ್ಲವೆಂದು ನಿಜ ಕಣ್ಣಿಗೆ ಮಾತ್ರ ಗೊತ್ತಿದೆ. ಕಣ್ಣಿನಲ್ಲಿ ಆವರಿಸಿದ ಮನಕ್ಕೆ ಗೊತ್ತಿಲ್ಲ. ಏಕೆಂದರೆ ಮನ ತನುವಿನಲ್ಲಿಯೇ ಇರುವ ಅರಿವಿನ ಬೋಧೆಯನ್ನು ಬಿಟ್ಟು ಇತರರಿಂದ ಬೋಧೆ ಪಡೆದಿದೆ. ಮನ ಪಡೆದ ಬೋಧೆಯನ್ನು ಮನವೇ ಹರಿದುಹಾಕಿ ಜನ್ಮದಿಂದಲೇ ಬಂದ ಅರಿವಿನಲ್ಲಿ ಕೂಡಿದಾಗ ಸ್ವಾಯತ, ಆಯತದ ಅನುಭವವಾಗುತ್ತದೆ.

ಲಿಂಗ ಜಂಗಮಕ್ಕೆ ಮಾಡಿ ನೀಡುವ, ಅಚ್ಚ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ , ಇದು ಕಾರಣ, ಕೂಡಲಸಂಗನ ಶರಣರಲ್ಲದೆ ಅನ್ಯವನರಿಯೆನಾಗಿ:

ಲಿಂಗವೆಂದರೆ ತನುವಿನ ಜನ್ಮದಿಂದಲೇ ಬಂದ ಅರಿವು. ಅದನ್ನು ಬಳಕೆ ಮಾಡಿಕೊಂಡು ಪಾಲಿಸಿ ನಿಜ ಸುಖದ ಅರಿವನ್ನುಣ್ಣುವವನೆ ಜಂಗಮ. ಇಂತಹ ಅರಿವಿಗೆ ಶರಣು ಹೋದ ಅಚ್ಚ ಶರಣರ ಮನೆಯಲ್ಲಿ ಸೇವಕನಾಗಿರಿಸು. ತನುವಿನಲ್ಲಿ ಸಂಗಮವಾದ ಅರಿವಿನಲ್ಲಿ, ತನುವಿನಲ್ಲಿಯೇ ಇದ್ದ ಮನವನ್ನು ಸಂಗಮಗೊಳಿಸುವ ಕಾಯಕದಲ್ಲಿರುವಂತೆ ಮಾಡು. ಮನಕ್ಕೆ ಅನ್ಯವನು ಅರಿಯದಂತೆ ಮಾಡು ಎಂದು ಅರಿವೆಂಬ ಗುರುದೇವನನ್ನು ಪ್ರಾರ್ಥಿಸಿದ್ದಾರೆ ಬಸವಣ್ಣ.

364

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ,
ಅಂಬುಜಕೆ ಭಾನುವಿನ ಉದಯದ ಚಿಂತೆ ,
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ ,
ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ.

ಚಕೋರ ಪಕ್ಷಿ ಚಂದ್ರನ ಪೂರ್ಣ ಬೆಳಕು ಸವಿಯಲು ಒಂದು ತಿಂಗಳವರೆಗೂ ಕಾಯುತ್ತದೆ. ಚಂದ್ರನ ಬೆಳಕು ಚಕೋರ ಪಕ್ಷಿಗೆ ಬಲು ಆನಂದವನ್ನುಂಟು ಮಾಡುತ್ತದೆ. ಚಂದ್ರ ಕ್ಷೀಣಿಸುತ್ತ ಬಂದಂತೆಲ್ಲ

ಚಿಂತಿಸುತ್ತದೆ, ಚಂದ್ರ ಬೆಳೆಯುತ್ತ ಬಂದಂತೆಲ್ಲ ತವಕಿಸುತ್ತದೆ. ಇದು ಜೀವನ ಪರ್ಯಂತ ನಡೆಯುತ್ತದೆ. ಪಕ್ಷಿ ಪ್ರಕೃತಿಯನ್ನು ಸವೆಯುವ ಬಗೆ. ಬೆಳಕನ್ನು ಕಾತುರದಿಂದ ಆಲಂಗಿಸಿಕೊಂಡು ಅದರ ಪರಮಾನಂದದಲ್ಲಿ ಮುಳುಗುವ ಒಂದು ಅರಿವಿನ ದೃಷ್ಟಾಂತ.

ಕಮಲದ ಹೂವಿಗೂ ಸೂರ್ಯನ ಬೆಳಕಿಗೂ ಬಲು ನಂಟು. ಸೂರ್ಯ ಉದಯವಾದಂತೆಲ್ಲ ಕಮಲದ ಮೊಗ್ಗು ಆ ಬೆಳಕಿನ ಕಿರಣಗಳನ್ನು ಬಾಯಿ ತೆರೆದು ಹೀರುತ್ತ ತನ್ನ ಸೌಂದರ್ಯವನ್ನು ಬೆಳಕಿಗಾಗಿ ಮುಡಿಪಿಡುತ್ತದೆ. ಸೂರ್ಯನ ಬೆಳಕು ಸರಿದಂತೆಲ್ಲ ತಾನೂ ಆ ಬೆಳಕಿನೊಂದಿಗೆ ತನ್ನನ್ನು ತಾನು ಬಂಧಿಸಿಕೊಳ್ಳುತ್ತಾ ಸೂರ್ಯನಂತೆ ತಾನೂ ಕಾಣದಂತಾಗುತ್ತದೆ. ಕಮಲದ ಹೂವು ಬೆಳಕನ್ನು ಆಲಂಗಿಸಿಕೊಂಡು ಬೆಳಕಿನೊಂದಿಗೆ ನಾಟ್ಯವಾಡಿ ನಳನಳಿಸಿ, ಬೆಳಕಿನೊಂದಿಗೆ ಸರಿಯುವ ದೃಶ್ಯ.

ಕಮಲದ ಹೂವು ಬೆಳಕಿನೊಂದಿಗೆ ಸರಸವಾಡಿದರೆ ಆ ಬೆಳಕಿನಲ್ಲಿ ಭ್ರಮರ ಅದರ ಪರಿಮಳದೊಂದಿಗೆ ಸರಸವಾಡುತ್ತದೆ. ಭ್ರಮರದ ಜಿನುಗು ಕಣ್ಣಿಗೆ ಜಿನುಗು ಮೂಗಿಗೆ ತಾವರೆಯ ಮಕರಂದದ ಪರಿಮಳ ತಾಗುವುದಾದರೂ ಹೇಗೆ ? ಇದೊಂದು ವಿಚಿತ್ರವಾದ ಪರಿಮಳ ಮತ್ತು ಭ್ರಮರದ ನಂಟು.

ಭ್ರಮರವಿದ್ದಲ್ಲಿಗೆ ಪರಿಮಳ ಪಯಣಿಸಿ ತನ್ನನ್ನು ಉಣ್ಣುವಂತೆ ಮಾಡಿತೊ ಅಥವಾ ಪರಿಮಳದ ಸವಿಯನು ಮೂಸಿಸಿ ತಾವರೆಯಿದ್ದಲ್ಲಿಗೆ ಭ್ರಮರ ಪಯಣಿಸಿ ಪರಿಮಳ ಉಣ್ಣುತ್ತಾ ಮರೆಯಿತೊ ? ಎರಡೂ ಒಂದೇ, ಒಂದಕ್ಕೊಂದು ಅವಿನಾಭಾವ ಸಂಬಂಧ. ಬೆಳಕು ಉಣ್ಣುತ್ತಾ ತಾವರೆ ಮೈಮರೆತರೆ ಮಕರಂದ ಉಣ್ಣುತ್ತಾ ಭ್ರಮರ ಮೈಮರೆಯುತ್ತದೆ.

ಬೆಳಕು ಮುದುರಿದಂತೆಲ್ಲ ತಾವರೆ ಆ ಬೆಳಕಿನ ಊಟ ತನ್ನ ಪಕಳೆಗಳಲ್ಲಿ ಬಂಧಿಸಿಕೊಂಡು ತಾನೂ ಮುದುರುತ್ತದೆ. ಮಕರಂದ ಉಣ್ಣಲು ಬಂದ ಭ್ರಮರ ಅದರ ರುಚಿ ಸವೆಯುತ್ತಾ ಸವೆಯುತ್ತಾ ತಾವರೆಯ ಪಕಳೆಗಳಲ್ಲಿಯೇ ಬಂಧಿಯಾಗಿ ಇಲ್ಲವಾಗುತ್ತದೆ.

ಬೆಳದಿಂಗಳ ಬೆಳಕನುಣ್ಣಲು ಚಿಂತಿಸುವ ಚಕೋರ, ಸೂರ್ಯನ ಬೆಳಕನುಣ್ಣಲು ಚಿಂತಿಸುವ ತಾವರೆ, ಬೆಳಕನುಂಡು ಅರಳಿದ ತಾವರೆಯ ಮಕರಂದದ ಪರಿಮಳವನುಣ್ಣಲು ಚಿಂತಿಸುವ ಭ್ರಮರ. ಒಂದಕ್ಕೊಂದು ಅವಿನಾಭಾವ ಸಂಬಂಧ ! ಉಣ್ಣಲಿ ಎಂದು ಸೂರ್ಯ ಬೆಳಕು ಚೆಲ್ಲಿದ, ಉಣ್ಣುವುದಕ್ಕಾಗಿಯೇ ಕಾದು ಕುಳಿತು ಪರಮಾನಂದದ ಬೆಳಕಿನ ಪರಿಮಳವನುಂಡವು !

ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೇ ಚಿಂತೆ :

ಅರಿವಿನ ಬೆಳಕಿನೂಟವೇ ಹೀಗೆ. ಅರಿವಿನ ಬೆಳಕು, ಬೆಳಗುವ ಕೋಟಿ ಸೂರ್ಯರನ್ನು ನಾಚಿಸುತ್ತದೆ. ಅದು ತನುವಿನಲ್ಲಿಯೇ ಸಂಗಮವಾಗಿದೆ. ಚಕೋರ ಬೆಳದಿಂಗಳ ಊಟಕ್ಕಾಗಿ ಚಿಂತಿಸಿದಂತೆ, ತಾವರೆ ಸೂರ್ಯನ ಬೆಳಕಿಗಾಗಿ ಚಿಂತಿಸಿದಂತೆ, ದುಂಬಿ ತಾವರೆಯ ಪರಿಮಳಕ್ಕೆ ಚಿಂತಿಸಿದಂತೆ ಮನ ಅರಿವಿನ ಬೆಳಕಿನೂಟ ಉಣ್ಣುವುದಕ್ಕಾಗಿ ಚಿಂತಿಸಬೇಕು.

ಚಕೋರ ಪಕ್ಷಿ ಬೆಳದಿಂಗಳ ಬೆಳಕನುಣ್ಣಲು ಒಂದು ತಿಂಗಳು ಕಾಯಬೇಕು. ತಾವರೆ ಭಾನುವಿನ ಬೆಳಕನುಣ್ಣಲು ಹನ್ನೆರಡು ತಾಸು ಕಾಯಬೇಕು. ಭ್ರಮರ ಪರಿಮಳದ ಬೆಳಕನುಣ್ಣಲು ರಾತ್ರಿ ಇಡೀ ಕಾಯಬೇಕು. ಆದರೆ ಮನ ಅರಿವಿನ ಬೆಳಕನುಣ್ಣಲು ಕಾಯುವದೇ ಬೇಕಿಲ್ಲ, ಅರಿವು ಮನಗಳೆರಡೂ ತನುವಿನಲ್ಲಿಯೇ ಸಂಗಮವಾಗಿವೆ. ಅದನ್ನು ತಿಳಿದು ನೆನೆಯಬೇಕಷ್ಟೆ !

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ,
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು ,
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು .
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ.

ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ :

ಸೂರ್ಯೋದಯವಾಗದಿದ್ದರೆ ಕಮಲ ಅರಳುವುದಿಲ್ಲ. ಕಮಲಕ್ಕೂ ಸೂರ್ಯನಿಗೂ ಅವಿನಾಭಾವ ಸಂಬಂಧ. ಇದಕ್ಕೆ ಸಮಯ ಬೇಕು. ಸಸಿ ಕಾಂಡವಾಗಿ ಎಲೆಯಾಗಿ ಮೊಗ್ಗಾಗಿ ಸೂರ್ಯನುದಯವಾದಾಗ ಕಮಲ ಅರಳುತ್ತದೆ. ಹಾಗೆಯೇ ಮಲ್ಲಿಗೆ ಸಸಿಯಾಗಿ, ಕಾಂಡವಾಗಿ ರೆಂಬೆಗಳ ಮೂಲಕ ನಳ ನಳಿಸಿ ಯೌವ್ವನಕ್ಕೆ ಬಂದು ಮೊಗ್ಗಾಗಿ ಅರಳಬೇಕಾದರೆ ಸಮಯ ಬೇಕು. ಗಾಳಿ ಬೆಳಕು ಭೂಮಿ ಜಲ ಬಳಸಿಕೊಂಡು ಹೂವಾಗಿ ಅರಳಿ ಪರಿಮಳ ಬೀರುತ್ತದೆ.

ತನು ಸದೃಢವಾಗಿ ಅರಿವಿನಿಂದ ಬೆಳೆಯಲು ಗಾಳಿ ಬೆಳಕು ಜಲ ಭೂಮಿ ಇದೆ. ಇದನ್ನು ಬಳಕೆ ಮಾಡಿಕೊಂಡು ಬೆಳಕಿಂಗೆ ಬೆಳಕಾಗಿ ಪ್ರಕಾಶಿಸಲು ತನುವಿನಲ್ಲಿ ಅರಿವು ಇದೆ, ಅದನ್ನು ಸಶಕ್ತವಾಗಿ ಬಳಕೆಮಾಡಿಕೊಳ್ಳುವ ಮನವೂ ಇದೆ. ಆದರೂ ಮನ ಅರಿವಿಗೆ ಶರಣು ಹೋದ ಶರಣರನ್ನು ಹುಡುಕುತ್ತದೆ. ಅರಿವಿಗೆ ದಾಸರಾದ ದಾಸರನ್ನು ಹುಡುಕುತ್ತದೆ. ಸಾದು ಸಂತರನ್ನು ಸತ್ಪುರುಷರನ್ನು ಅವರು ಬರೆದ ಗ್ರಂಥಗಳನ್ನು ಹುಡುಕುತ್ತದೆ. ಸತ್ಪುರುಷರಿಗೆ, ಅವರು ಬರೆದ ಗ್ರಂಥಗಳಿಗೆ ಮನ ದಾಸನಾಗುತ್ತದೆಯೇ ಹೊರತು ಅರಿವಿಗೆ ದಾಸನಾಗುವುದಿಲ್ಲ.

ದಾರಿ ತಪ್ಪಿಸಿಕೊಂಡ ಶಿಶುವಿಗೆ ತಾಯಿ ದೊರೆತರೆ ಸಂತೋಷವಾಗುತ್ತದೆ. ಹಿಂಡನಗಲಿದ ಪಶುವಿಗೆ ಹಿಂಡು ದೊರೆತರೆ ಸಂತೋಷವಾಗುತ್ತದೆ. ಇವು ದೂರವಾಗಿ ಸಮೀಪವಾಗುತ್ತವೆ. ಆದರೆ ತನುವಿನಲ್ಲಿ ಅರಿವು ಮತ್ತು ಮನ ದೂರವಿಲ್ಲ , ಸಮೀಪವೂ ಇಲ್ಲ , ಸಂಗಮವಾಗಿವೆ. ಆದರೂ ಮನ ಅರಿವೆಂಬ ಗುರುದೇವನನ್ನು ಬಳಸಿಕೊಳ್ಳುತ್ತಿಲ್ಲ. ಬೆಳಗುವ ಸೂರ್ಯನನ್ನು ಪ್ರಾರ್ಥಿಸಿದರೆ ಮನ ಬೆಳಗುವುದಿಲ್ಲ , ತಾವರೆಯಂತೆ ಅರಳುವುದಿಲ್ಲ. ದಾಸರನ್ನು ಶರಣರನ್ನು ಕ್ರಿಸ್ತ ಬುದ್ಧ ಮಹಾವೀರನನ್ನು ಪ್ರಾರ್ಥಿಸಿದರೂ ಬೆಳಗುವುದಿಲ್ಲ , ಅವರು ಬರೆದ ಗ್ರಂಥಗಳನ್ನು ಓದಿದರೂ ಮನ ಬೆಳಗಿ ಅರಳುವುದಿಲ್ಲ. ಕಮಲದ ಹೂ ಅದರ ಸಸಿಯಲ್ಲಿದ್ದಂತೆ ಪರಿಮಳದ ಮಲ್ಲಿಗೆಯೂ ಅದರ ಸಸಿಯಲ್ಲಿದ್ದಂತೆ, ಅರಿವು ತನುವಿನಲ್ಲಿಯೇ ಇದೆ, ಮನ ಅದನ್ನು ಬಳಸಿಕೊಳ್ಳಬೇಕು. ತನುವಿನಲ್ಲಿ ಅರಿವು ಸಂಗಮವಾದುದನ್ನು ತಿಳಿದು ಸಂಗಮವಾಗಬೇಕು. ಅರಿವಿನೊಂದಿಗೆ ಸಂಗಮವಾಗಿದ್ದರೂ ಮನಕ್ಕೆ ಮರೆವಾಗಿದೆ. ಅದಕ್ಕಾಗಿಯೇ ಮನ ಮರ್ಕಟವಾಗಿದೆ. ಅರಿವಾದರೆ ಸಂಗಮನಾಥನೂ ತಾನೇ , ಮನವೆಂಬ ಮಹಾದೇವನೂ ತಾನೇ.

ಸೂರ್ಯನ ಉದಯ ತಾವರೆಗೆ ಜೀವಾಳ ,
ಚಂದ್ರಮನುದಯ ನೈದಿಲೆಗೆ ಜೀವಾಳ ,
ಕೂಪರ ತಾವಿನಲ್ಲಿ ಕೂಟ ಜೀವಾಳ ,
ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯಾ .
ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ .

ಸೂರ್ಯನ ಉದಯ ತಾವರೆಗೆ ಜೀವಾಳ : ಸೂರ್ಯನ ಕಿರಣಗಳು ಕಮಲದ ಮೊಗ್ಗಿಗೆ ತಾಗುವುದೊಂದೇ ತಡ ಹೂವಾಗಿ ಅರಳಿ ಮಕರಂದ ಬೀರುತ್ತದೆ. ಸೂರ್ಯನ ಕಿರಣಗಳು ಮೊಗ್ಗಿನ ಮೇಲೆ ಬೀಳದಿದ್ದರೆ ಕಮಲ ಅರಳುವುದಿಲ್ಲ. ಅದಕ್ಕೆ ಸೂರ್ಯನ ಕಿರಣಗಳು ಬೇಕೇ ಬೇಕು.

ಚಂದ್ರಮನುದಯ ನೈದಿಲೆಗೆ ಜೀವಾಳ :

ಚಂದ್ರನ ಬೆಳಕಿನಿಂದ ನೈದಿಲೆ ಅರಳುತ್ತದೆ. ಅದು ಜಲದಲ್ಲಿಯೇ ಬೆಳೆದು ಚಂದ್ರನ ಬೆಳಕಿನಿಂದ ಅರಳುವ ಕುಮುದ.

ಒಂದನ್ನೊಂದು ಪ್ರೀತಿಸುವ ಎರಡು ತನುಗಳಿಗೆ ಕೂಟವೇ ಜೀವಾಳ. ಕೂಟದ ಸುಖಕ್ಕಾಗಿಯೇ ಎರಡು ತನುಗಳು ಪ್ರೀತಿಸುತ್ತವೆ. ಸುಖದ ನಂತರ ಎರಡು ತನುಗಳು ಅಗಲುತ್ತವೆ. ಒಂದು ನೆಲೆಯಲ್ಲಿ ಒಂದಾಗಿ ಕೂಡಿದ ಎರಡು ತನುಗಳ ಕೂಟ ಕೂಡಿ ಅಗಲುವ ಕೂಟ. ಹುರುಳಿಲ್ಲದ ಕೂಟ.

ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯಾ :

ತನು ಒಂದೇ, ನೋಡುವ ಕಣ್ಣುಗಳೊಂದೇ ಆದರೂ ನೋಡುವ ನೋಟಗಳೆರಡು ! ಕಣ್ಣಿನ ಒಂದು ನೋಟಕ್ಕೆ ತನುವಿನ ಚರ್ಮ, ಉಬ್ಬು ತಗ್ಗುಗಳು, ವಿಶಾಲವಾದ ಎದೆ, ಕೇಶರಾಶಿ, ನಯನ, ತುಟಿ, ಮೂಗು, ಸೊಂಟ ಹೀಗೆ ತನುವಿನ ಸೌಂದರ್ಯ ಕಾಣುತ್ತದೆ. ಅದರೊಂದಿಗೆ ಕಾಮದ ಸುಖಕ್ಕಾಗಿ ಕೂಡುವ ತವಕದ ಪ್ರೀತಿ ಹುಟ್ಟುತ್ತದೆ. ಈ ನೋಟ ಕೂಟದ ಸುಖಕ್ಕಾಗಿ ತವಕಿಸುವ ನೋಟ. ಈ ನೋಟಕ್ಕೆ ತನುಗಳು ಅನೇಕ ರೂಪದಿಂದ ಕಂಗೊಳಿಸುತ್ತವೆ. ತನುವಿನ ಚರ್ಮ ಒಂದೇ, ನೋಡುವ ನಯನ ಒಂದೇ, ಕೂದಲು ತುಟಿ ಮೂಗು ಒಂದೇ, ಅದರೊಳಗಿದ್ದ ರಕ್ತ ಮಾಂಸ ಮೂಳೆ ಮಜ್ಜಾ ಮೇದಸ್ಸು ಒಂದೇ ಎಂದು ಕಾಮದ ಸುಖಕ್ಕಾಗಿ ಕೂಡುವ ಕಾತುರದ ನೋಟಕ್ಕೆ ಕಾಣುವುದಿಲ್ಲ.

ತಾವರೆ ಅರಳುವುದಕ್ಕೆ ಸೂರ್ಯ ಬೇಕು, ನೈದಿಲೆ ಅರಳುವುದಕ್ಕೆ ಚಂದಿರಬೇಕು, ಪ್ರೇಮದ ಕೂಟಕ್ಕೆ ಮತ್ತೊಂದು ತನು ಬೇಕು. ಒಲಿದು ಒಲಿಸಿಕೊಳ್ಳುವ ಕೂಟಕ್ಕೆ ನೋಟ ಬೇಕು. ಒಂದು ಮತ್ತೊಂದನ್ನು ಆಶ್ರಯಿಸದಿದ್ದರೆ ಸುಖವಿಲ್ಲ. ಇದಕ್ಕಾಗಿ ತಾವರೆ ಒಂದು ದಿನ ಕಾಯುತ್ತದೆ, ನೈದಿಲೆ ಒಂದು ತಿಂಗಳು ಕಾಯುತ್ತದೆ. ತನು ತನುವಿನೊಂದಿಗೆ ಕೂಡಿ ಸುಖಿಸುವುದಕ್ಕಾಗಿ ಅನೇಕ ಕಾಲ ಕಾಯುತ್ತದೆ. ನೋಟ ಪ್ರೀತಿಯ ಬೇಟೆಗಾಗಿ ಕಾಯುತ್ತದೆ.

ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ :

ಕೂಡದ ಅಗಲದ ಕೂಟದ ಸುಖದ ಸವಿಯನುಂಡ ಶರಣ ಮಹಾಜ್ಞಾನಿ ! ಆತ ತಾವರೆಯಂತೆ ಸೂರ್ಯನಿಗಾಗಿ ಕಾಯುವುದಿಲ್ಲ. ನೈದಿಲೆಯಂತೆ ಚಂದ್ರನ ಬೆಳಕಿಗೂ

ಕಾಯುವುದಿಲ್ಲ. ಪ್ರಿಯಕರನಂತೆ ಪ್ರೇಯಸಿಗಾಗಿ ಕಾಯುವುದಿಲ್ಲ. ಒಲಿದ ನೋಟಕ್ಕಾಗಿ ನಯನ ಪರಿತಪಿಸುವುದಿಲ್ಲ. ಆತನ ಸುಖ ಸ್ವಸುಖ ! ತನುವಿನ ನೆಲೆಯಲ್ಲಿಯೇ ಅರಿವಿನ ಗಂಡನೊಂದಿಗೆ ಮಲಗಿ ರತಿ ಸುಖವನು ಅನುಭವಿಸಿದಾತ. ಕೂಡದ ಅಗಲದ ಕೂಟದಲ್ಲಿ ತನ್ಮಯನಾದಾತ !

ತನುವಿನಲ್ಲಿ ಅರಿವೆಂಬ ಸೂರ್ಯನಿದ್ದಾನೆ. ಆತ ಹಗಲಿರುಳೆನ್ನದೆ ಬೆಳಗುತ್ತಾನೆ. ಅದನ್ನು ಗಮನಿಸಿ ಆಲಂಗಿಸಿಕೊಳ್ಳುವ ಮನವೆಂಬ ತಾವರೆಯೂ ಇದೆ. ಈ ಕೂಟಕ್ಕೆ ಹೊರಗಿನ ಸೂರ್ಯ ಬೇಕಿಲ್ಲ.

ಶರಣ ಗಂಡಾದರೂ ಹೆಣ್ಣಾಗಿ ಗಂಡನೊಂದಿಗೆ ಮಲಗಿ ಸುಖಿಸಿ ವಿರಮಿಸುವ ಉದಾಹರಣೆಯೊಂದು ಇಲ್ಲಿದೆ. ಎಮ್ಮ ಗಂಡನು ಏಕಾಂತಂ ಬೊಕ್ಕನು, ಬೇಗ ಬೇಗ ಹೊರನಡಿಯಿರಣ್ಣಗಳಿರಾ. ಒಬ್ಬನಿದ್ದಡೂ ಸೈರಿಸ ಕಪಿಲ ಸಿದ್ದ ಮಲ್ಲಿಕಾರ್ಜುನ ಎಂದು ಸಿದ್ಧರಾಮ ಶಿವಯೋಗಿ ತನುವಿನ ನೆಲೆಯಲ್ಲಿದ್ದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಪರ ಪುರುಷರನ್ನು ಹೊರಗೆ ತಳ್ಳಿದ್ದಾನೆ. ತನುವಿನ ನೆಲೆಯಲ್ಲಿಯೇ ಅರಿವಿನ ಗಂಡನಿಗೆ ಶರಣು ಹೋಗಿದ್ದಾನೆ. ಕೂಡದ ಅಗಲದ ಕೂಟದ ಸವಿಯನು ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಕಪಿಲಸಿದ್ಧ ಮಲ್ಲಯ್ಯನೊಂದಿಗೆ ಸವಿದಿದ್ದಾನೆ.

ತನು ಗಂಡಲ್ಲ ಹೆಣ್ಣಲ್ಲ , ಅದೊಂದು ಅರಿವಿನ ತಾಣ ! ಅಲ್ಲಿ ಅರಿವೆಂಬ ಪರಮ ಪುರುಷನಿದ್ದಾನೆ. ಆತನನ್ನೇ ಬಯಸಿ ಬಿಗಿದಪ್ಪಿ ಆತನೊಂದಿಗೆ ವಿರಮಿಸುವ ಮನವೆಂಬ ಸತಿ ಇದ್ದಾಳೆ. ಇವರಿಬ್ಬರೂ ತನುವಿನಲ್ಲಿಯೇ ನೆಲೆಯೂರಿ ಸಂಗಮವಾಗಿದ್ದಾರೆ.

ಬುದ್ಧ ಮಹಾವೀರ ಕ್ರಿಸ್ತ ಕ್ರಿಷ್ಣ ಶಂಕರ ರಾಮಾನುಜ ಮಾಧ್ವರು ಬಸವಾದಿ ಶರಣರು ದಾಸವರೇಣ್ಯರು ತನುವಿನಲ್ಲಿರುವ ಸಂಗನ ಅರಿವಿನ ಸುಖವನುಂಡವರು. ತನುವಿನ ಅರಿವನ್ನು ಬಳಕೆ ಮಾಡಿಕೊಂಡು ತನುವಿನಲ್ಲಿಯೇ ಅರಿವಿನಿಂದ ವಿರಮಿಸಿದವರು. ಅಂತಹ ತಂತ್ರಜ್ಞಾನಿಗಳ ಬರವೆಮಗೆ ಪ್ರಾಣ ಜೀವಾಳವಯ್ಯಾ . ಅವರು ತನುವಿನಲ್ಲಿರುವ ಅರಿವಿನ ಸುಖವನು ತನುವಿಗೆ ಸೂಚಿಸಿ ಮರೆಯಾಗುವ ವೀರರು.

367

ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ !
ಗಣತಿಂಥಿಣಿಯೊಳಗಿರಿಸೆನ್ನನು, ಲಿಂಗವೆ
ಶಿವ ಶಿವಾ, ಕೂಡಲಸಂಗಮದೇವಾ
ಸೆರಗೊಡ್ಡಿ ಬೇಡುವೆನು.
ಜಲವ ತಪ್ಪಿದ ಮತ್ಸ್ಯ ಬದುಕುವುದೆ ಸೋಜಿಗ ! :

ಜಲಬಿಂದುಗಳಿಂದ ಹುಟ್ಟಿದ ಮತ್ಸ್ಯ, ಜಲದಲ್ಲಿಯೇ ತನ್ನ ಸುಖ ದುಃಖಗಳನ್ನು ಕಂಡುಕೊಳ್ಳಬೇಕು. ಜಲ ತಪ್ಪಿದ ಮತ್ಸ್ಯಕ್ಕೆ ಮೃತ್ಯು ಕಟ್ಟಿಟ್ಟ ಬುತ್ತಿ . ಜಲಬಿಂದುವಿನ ಬೀಜದಿಂದ ಹುಟ್ಟಿದ ತನುವಿಗೆ ಜಲವೇ ಆಧಾರ ! ಜಲದಲ್ಲಿ ಹುಟ್ಟಿದ ಮತ್ಸ್ಯ ಜಲದಲ್ಲಿಯೇ ಸುಂದರವಾಗಿ ಬದುಕುತ್ತದೆ. ಜಲದಲ್ಲಿ ಹುಟ್ಟಿದ ತನು ಜಲ ತಪ್ಪಿ ಕ್ಷಣ ಕ್ಷಣಕ್ಕೂ ಸಾಯುತ್ತದೆ. ನರಕಯಾತನೆ ಅನುಭವಿಸುತ್ತದೆ. ಆದರೂ ಜಲ ತಪ್ಪಿ ಬದುಕಿರುವುದು ಮಾತ್ರ ಸೋಜಿಗವೇ ಸರಿ !

ಮತ್ಸ್ಯ ಜಲದಿಂದಾದ ಜಲದ ಮುದ್ದೆ. ತನು ಕೂಡಾ ಜಲದಿಂದಾದ ಜಲದ ಮುದ್ದೆ !

ಜಲದಲ್ಲಿ ಹುಟ್ಟಿದ ಮೀನು ಜಲದಲ್ಲಿಯೇ ವಾಸಮಾಡುತ್ತದೆ. ಜಲದಲ್ಲಿ ಹುಟ್ಟಿದ ತನು ಜಲತಪ್ಪಿ ಬಂದಿದೆ.

ತನು ಮಲಗಿ ನಿದ್ರಿಸುವಾಗ ಅದಕ್ಕೆ ಹೆಣ್ಣೆಂದು ಗಂಡೆಂದು ಪರಿಚಯವಿಲ್ಲ. ಶ್ರೀಮಂತ ಬಡವ ಭಿಕ್ಷುಕ ಶಾಸಕ ಸಚಿವ ಜಿಲ್ಲಾಧಿಕಾರಿಯೆಂದು ಪರಿಚಯವಿಲ್ಲ. ತನ್ನ ಹೆಸರು, ತಾನು ಮಾಡುವ ಕೆಲಸದ ಪರಿಚಯವೂ ತನುವಿಗಿಲ್ಲ. ರಾತ್ರಿ ಜಲದ ತನು ಜಲರಾಶಿಯಲ್ಲಿಯೇ ಮಲಗಿ ನಿದ್ರಿಸುತ್ತದೆ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಅದನ್ನು ತುಂಬಿಕೊಂಡ ಚರ್ಮ ಕೂಡಾ ಜಲದಿಂದ ನಿರ್ಮಾಣವಾಗಿದೆ. ನೋಡಲ್ಪಡುವ, ನೋಡುವ ತನುಗಳೆಲ್ಲ ಜಲದ ತನುಗಳೇ ! ಆದರೂ ಹೆಣ್ಣು ಗಂಡು ಶ್ರೀಮಂತ ಬಡವ ಭಿಕ್ಷುಕ ರಾಜಕಾರಣಿ ನೌಕರ, ಅಕ್ಷರಸ್ಥ ಅನಕ್ಷರಸ್ಥ ಎಂದು ಹಗಲಿಡೀ ಸಂಕಟಕ್ಕೆ ಈಡಾಗುತ್ತದೆ. ಇದೆಲ್ಲ ತನುವಿನ ಜಲ ತಪ್ಪಿದ ನೋಟ.

ನೂರು ವರ್ಷ ಆಯುಷ್ಯವುಳ್ಳ ತನುವಿನ ಬದುಕಿನಲ್ಲಿ, ಐವತ್ತು ವರ್ಷ ರಾತ್ರಿ ಚಿಂತೆಯಿಲ್ಲದೆ ಜಲದಲ್ಲಿ ನಿದ್ರೆ ಮಾಡುತ್ತದೆ. ಇನ್ನೈವತ್ತು ವರ್ಷ ಹಗಲು ಜಲತಪ್ಪಿದ ಯಾತನಾಮಯ ಅಜ್ಞಾನದ ಬದುಕು ಬದುಕುತ್ತದೆ ! ಇದೊಂದು ಸೋಜಿಗವೇ ಸರಿ.

ಗಣತಿಂಥಿಣಿಯೊಳಗಿರಿಸೆನ್ನನು, ಲಿಂಗವೆ ಶಿವ ಶಿವಾ :

ಜಲದ ತನುವೆಂದು ತಿಳಿಯದ ಅಜ್ಞಾನದ ಬದುಕಿನಿಂದ ದೂರ ಉಳಿಸಿ ತನುವಿನ ಮಹಾಜ್ಞಾನವನು ತಿಳಿದ ಗಣ ತಿಂಥಿಣಿಯೊಳಗಿರಿಸು ಎನ್ನನು ಎಂದು ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನನ್ನು ಮನ ಪ್ರಾರ್ಥಿಸಬೇಕು.

ಕೂಡಲಸಂಗಮದೇವಾ ಸೆರಗೊಡ್ಡಿ ಬೇಡುವೆನು :

ತನುವಿನ ಜ್ಞಾನ ಶಿಕ್ಷಣವನ್ನು ತಿಳಿದ ಶರಣರ ಸಮೂಹದೊಳಗೆ ಇರಿಸು ಎಂದು ತನುವಿನಲ್ಲಿ ಸಂಗಮವಾದ ಸಂಗಮನಾಥನನ್ನು ಪ್ರಾರ್ಥಿಸಿದ್ದಾರೆ ಬಸವಣ್ಣ..

368

ಅಯ್ಯಾ , ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು,
ಶಿವಧೋ, ಶಿವಧೋ, ಕಂಗಳಶ್ರುಗಳಲ್ಲಿ ಮುಂದುಗಾಣೆನು,
ಲಿಂಗಸಂಗಿಗಳನಗಲಿ ನಾನೆಂತು ಬದುಕುವೆ
ಕೂಡಲಸಂಗಮದೇವಾ ?

ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು, ಶಿವಧೋ, ಶಿವಧೋ, ಕಂಗಳಶ್ರುಗಳಲ್ಲಿ ಮುಂದುಗಾಣೆನು :

ಅಯ್ಯಾ, ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನೆ, ತನು ವನ್ನೇ ಮಹಾಜ್ಞಾನದ ಮನೆಯನ್ನಾಗಿ ಮಾಡಿಕೊಂಡ ಮಹಾದೇವನೇ, ಮನಕ್ಕೆ ಸನ್ಮಾರ್ಗದಲ್ಲಿ ನಡೆಯಲು ಬೋಧಿಸುವ ಸದಾಶಿವನೇ, ಮನದ ಭ್ರಮೆಯನ್ನು ಕಳೆದು ಬ್ರಹ್ಮನನ್ನಾಗಿಸುವ ಸಾಕ್ಷಾತ್ ಪರಬ್ರಹ್ಮನೇ ಆದ ನಿನ್ನನ್ನು ಪರಿಚಯಿಸಿದ ಶರಣರ ಹಿಂಡನ್ನು ಅಗಲಿ ಬದುಕಲಾರೆನು ಗುರುವೆ.

ಅಯ್ಯಾ , ನೀನು ನಿರಾಕಾರವಾಗಿದ್ದು , ಜ್ಞಾನವೆಂಬ ಸಾಕಾರ ತನುವೇ ನಿನ್ನ ವಾಹನವೆಂದು ಸೂಚಿಸಿದ ಮಹಾವ್ರತಿಗಳನಗಲಿ ಬದುಕಲಾರೆನು ಶಿವನೆ. ಅಯ್ಯಾ ,ನೀನು ಆಕಾರವಾಗಿದ್ದಾಗ ತಿಳಿಯದ ನನ್ನನ್ನು ವೃಷಭನೆಂಬ ವಾಹನವೇ ನೀನು ಎಂದು ಸೂಚಿಸಿದ ಮಹಾಶರಣರನಗಲಿ

ಬದುಕುವುದೆಂತು ಶಿವನೆ ?

ಅಯ್ಯಾ , ತನುವಿನ ಜನನ ಮರಣಗಳನ್ನು ಕೊಲ್ಲಬೇಕೆಂದು ತನುವಿನ ಲ್ಲಿಯೇ ಜಂಗಮ ಲಾಂಛನವಾಗಿ ಬಂದಾಗ, ಆ ಜಂಗಮನಿಗೆ ನನ್ನನ್ನು ಭಕ್ತ ನೆಂಬ ವಾಹನವಾಗಿ ಪರಿಚಯಿಸಿದ ಲಿಂಗ ಸಂಗಿಗಳನಗಲಿ ನಾನೆಂತು ಬದುಕುವೆನು ತಂದೆ ?

ಅಯ್ಯಾ , ಶರಣರ ಬರವೆನಗೆ ಸಸಿಯ ಮೇಲೆ ಸಾಗರ ತುಂತುರು ಹನಿಗಳಾಗಿ ಹರಿದಂತಾಗಿತ್ತು. ಆನಂದದಿಂದ ಕುಣಿ ಕುಣಿದಾಡಿದೆ, ಆನಂದದಿಂದ ನಲಿ ನಲಿದಾಡಿದೆ. ಉಬ್ಬಿ ಕೊಬ್ಬಿ ಹರುಷದಲೋಲಾಡಿದೆ. ಆದರೆ ಅವರು ತಮ್ಮ ಕಾರ್ಯ ಕ್ಷೇತ್ರಕ್ಕೆ ಹೊರಟು ನಿಂತಾಗ ಕಂಗಳಶ್ರುಗಳಲ್ಲಿ ಮುಂದಗಾಣೆನು, ಶಿವಧೋ ಶಿವಧೋ ನಾನೆಂತು ಬದುಕುವೆ ಸಂಗಮನಾಥನೆ ?

369

ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ನೋಡಯ್ಯಾ !
ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು ನೋಡಯ್ಯಾ !
ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು
ಕೂಡಲಸಂಗಮದೇವಾ, ನಿಮ್ಮ ಶರಣರನಗಲಿದ ಕಾರಣ !

ಜಗದಗಲ ಮುಗಿಲಗಲ ಮಿಗೆಯಗಲವಿದ್ದ ಮಹಾಜ್ಞಾನ ಎನ್ನ ತನುವಿನಗಲದಲ್ಲಿ ಬಂದು ಚುಳುಕಾದುದನ್ನು ಕಂಡು ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ ! ನಿಮ್ಮ ನೋಟವು ಎನಗೆ ಅನಂತ ಸುಖವಾಗಿ, ನಿಮ್ಮ ಜ್ಞಾನದ ಕೂಟ ಪರಮ ಸುಖವಾಗಿ, ಎನ್ನ ತನುವಿನ ಅನಂತಕೋಟಿ ರೋಮಗಳು ಕಣ್ಣುಗಳಾಗಿ ಮಹಾಜ್ಞಾನವೆಂಬ ನಿಮ್ಮನ್ನು ನೋಡಿ ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ !

ತನುವಿನಲ್ಲಿಯೇ ಮಹಾಜ್ಞಾನ ಕೂಡಿ ಸಂಗಮನಾಥನೆಂದು ನಾಮ ಪಡೆದ ನಿಮ್ಮ ನಾಮಾಮೃತದಿಂದ ಬಿರಿಮುಗುಳಂದದಿ ಎನ್ನ ಹೃದಯ ಬಿಬ್ಬನೆ ಬಿರಿದು ಬಿಬ್ಬನೆ ಬಿರಿದು, ಬಿಬ್ಬನೆ ಬಿರಿದು ನಿಮ್ಮ ಶ್ರೀ ಚರಣದ ಮೇಲೆ ಬಿದ್ದರಳಿದೆ ನೋಡಯ್ಯಾ !

ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು ಕೂಡಲಸಂಗಮದೇವಾ, ನಿಮ್ಮ ಶರಣನಗಲಿದ ಕಾರಣ :

ಮಹಾಜ್ಞಾನವನುಂಡು ಮಹಾಜ್ಞಾವನೇ ಡೇಗಿದ ಶರಣರು ಸಾಮಾನ್ಯರೆ ? ತನುವಿನ ಜುಟ್ಟು ಹಿಡಿದು ಅದರಲ್ಲಿಯೇ ಮಹಾಜ್ಞಾನವೆಂಬ ಸಂಗಮನಾಥನನ್ನು ತೋರಿದರು. ಆ ತನುವಿನಲ್ಲಿಯೇ ಮನವನ್ನು ತೋರಿ ಸಂಗಮನಾಥನ ಕೈಯಲ್ಲಿ ಕೊಟ್ಟು ಎನ್ನ ಬಿಟ್ಟು ಅಗಲಿದರು. ಸಂಗಮನಾಥನು ಮನವನ್ನು ತನ್ನಲ್ಲಿಯೇ ಸಂಗಮಗೊಳಿಸಿ ಘನಮನವನ್ನಾಗಿ ಮಾಡಿದ ಕಾರಣ ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನನೊಬ್ಬನೆ ಉಳಿದೆನು.

ಶರಣ ಮಹಾಜ್ಞಾನಿ ! ತನುವೊಂದರಲ್ಲಿ ಎರಡು ತೋರಿದ, ಆ ಎರಡನು ಒಂದು ಮಾಡಿದ. ಏನೆಂಬೆ, ಏನೆಂಬೆ ಒಂದೆರಡಾದುದ ! ಏನೆಂಬೆ, ಏನೆಂಬೆ, ಎರಡೊಂದಾದುದ ! ಏನೆಂಬೆ, ಏನೆಂಬೆ, ಅವಿರಳ ಘನವ, ಮಹಾ ದಾನಿ ಕೂಡಲಸಂಗಮದೇವಯ್ಯ ತಾನೇ ಬಲ್ಲನಯ್ಯಾ !

ಕಂಡಡೆ ಮನೋಹರವಯ್ಯಾ, ಕಾಣದಿದ್ದಡೆ ಅವಸ್ಥೆ ನೋಡಯ್ಯಾ !
ಹಗಲಿರುಳಹುದು, ಇರುಳು ಹಗಲಹುದು !
ಎಂತಯ್ಯಾ, ಆಳವಾಡಿ ಕಳೆವೆನು ?
ಒಂದು ಜುಗ ಮೇಲೆ ಕೆಡೆದಂತೆ !
ಕೂಡಲಸಂಗನ ಶರಣರನಗಲುವ ದಾವತಿಯಿಂದ
ಮರಣವೆ ಲೇಸು ಕಂಡಯ್ಯಾ.
ಕಂಡಡೆ ಮನೋಹರವಯ್ಯಾ :

ತನುವಿನಲ್ಲಿರುವ ತನ್ನ ಮಹಾಜ್ಞಾನವನು ತಾನು ಕಂಡಡೆ ತಾನೇ ವಿರಾಟ ಸ್ವರೂಪ. ಜಗದಗಲ ಮುಗಿಲಗಲವಿದ್ದ ಬ್ರಹ್ಮಾಂ ಡವೇ ತನುವಿನಲ್ಲಿ ಬ್ರಹ್ಮವಾಗಿ ಚುಳುಕಾದುದು ಮನಸ್ಸಿನ ಗೋಚರಕ್ಕೆ ಬಂದು ಪುಳಕಿತನಾಗಿ ಮನ ಘನಮನವಾಗುತ್ತದೆ. ಆ ಮನವೇ ಮಹಾದೇವನಾಗುತ್ತದೆ.

ಕಾಣದಿದ್ದಡೆ ಅವಸ್ಥೆ ನೋಡಯ್ಯಾ ! ಹಗಲಿರುಳಹುದು, ಇರುಳು ಹಗಲಹುದು ಎಂತಯ್ಯಾ, ಆಳವಾಡಿ ಕಳೆವೆನು. ಒಂದು ಜುಗ ಮೇಲೆ ಕೆಡೆದಂತೆ :

ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಜ್ಞಾನ ಕಾಣದಿದ್ದರೆ ಹಗಲಿನಲ್ಲಿಯೇ ಏನೂ ಕಾಣದಂತಹ ಕತ್ತಲೆ ಭಾಸವಾಗುತ್ತದೆ. ನೋಡುವ ಕಣ್ಣುಗಳಿಗೆ ವಸ್ತುವಿನ ಸತ್ಯ ಗೋಚರಿಸುವುದಿಲ್ಲ. ಕಲಾವಿದ ಕೆತ್ತಿದ ಮೂರ್ತಿಯನ್ನು ದೇವರೆಂದು ತಿಳಿದು ಆಯುಷ್ಯವಿಡೀ ಪೂಜಿಸುತ್ತದೆ. ಮಂದಿರ ನಿರ್ಮಿಸಿ ಕಳಶವಿಟ್ಟು ಜಾತ್ರೆ ಮಾಡುತ್ತದೆ. ಮತ್ತೊಂದು ಮೂರ್ತಿ ಮಾಡಿಸಿ, ಗಂಡು ದೇವರಿಗೆ ಹೆಂಡತಿಯನ್ನಾಗಿಸುತ್ತದೆ. ಕಲ್ಯಾಣೋತ್ಸವ ಮಾಡಿ, ಚತ್ರಿ ಚಾಮರವ ಬೀಸಿ ದೇವರನ್ನು ಶಯನ ಗೃಹಕ್ಕೆ ಕಳಿಸುತ್ತದೆ. ತನಗೆ ಕೇಡಾದರೆ ದೇವರ ಮಹಿಮೆಯೆಂದು ಕಪ್ಪ ಕಾಣಿಕೆ ನೀಡುತ್ತದೆ.

ಮನ ಕಲ್ಲನ್ನು ಕಲ್ಲೆಂದು ಹೇಳುತ್ತದೆ, ಕಲ್ಲಿನಲ್ಲಿ ಕೆತ್ತಿದ ಮೂರ್ತಿಯನ್ನು ಹೆಣ್ಣು ದೇವರೆಂದು ಗಂಡು ದೇವರೆಂದು ಹೇಳುತ್ತದೆ.

ಕಲ್ಲಿನಲ್ಲಿ ಕಲ್ಲು ಕಂಡಡೆ ಮನೋಹರ ! ಪೂಜಿಸಲಿಲ್ಲ ಆರಾಧಿಸಲಿಲ್ಲ ; ಮಂದಿರ ನಿರ್ಮಿಸಲಿಲ್ಲ ; ಕಪ್ಪ ಕಾಣಿಕೆ ಕೊಡಲಿಲ್ಲ. ಕಲ್ಲನ್ನು ಕಲ್ಲೆಂದು ನೋಡಿದ ಕಣ್ಣಿಗೆ ದೇವರ ರೋಗ ಹಿಡಿಯಲಿಲ್ಲ. ಹಗಲು ನೋಡಿದರೂ ಕಲ್ಲು, ಇರುಳು ನೋಡಿದರೂ ಕಲ್ಲು.

ರಾತ್ರಿ ಮಲಗಿದಾಗ, ತಾನು ಯಾರು ? ತನ್ನ ಹೆಸರೇನು ? ತಾನು ಶ್ರೀಮಂತನೊ ಬಡವನೊ ? ಶಾಸಕನೊ ಸಚಿವನೊ ? ಅಧಿಕಾರಿಯೋ ? ಸುಂದರವಾದ ಹೆಣ್ಣೊ ಗಂಡೊ? ಅಥವಾ ಮಂದಿರ ನಿರ್ಮಿಸಿ ಅನ್ನ ಸಂತರ್ಪಣೆ ಮಾಡಿದ ದಾನಿಯೋ ಎನ್ನುವ ಪರಿಚಯವೂ ಇಲ್ಲ, ಬೆಳಕಾದರೆ ಸಾಕು ರೋಗ ! ರಾತ್ರಿ ಕಂಡದ್ದು ಹಗಲು ಕಾಣಲಿಲ್ಲ , ಹಗಲು ಕಂಡ ರೋಗ ರಾತ್ರಿ ಬಿಡಿಯಲಿಲ್ಲ ! ಕತ್ತಲಿನಲ್ಲಿ ಏನೂ ಕಾಣಲಿಲ್ಲ , ಬರೀ ಕತ್ತಲು. ಹಗಲಿನಲ್ಲಿ ನೋಡುವ ಸತ್ಯವನ್ನು ನೋಡಲಿಲ್ಲ , ಕಣ್ಣಿದ್ದೂ ಕುರುಡುಗಣ್ಣು.

ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಹೆಣ್ಣು ಅಲ್ಲ, ಗಂಡು ಅಲ್ಲ. ಆದರೂ ಕಣ್ಣು ಹೆಣ್ಣಾಗಿ, ಗಂಡಾಗಿ ಅಜ್ಞಾನದಿಂದ ನೋಡುತ್ತದೆ. ಒಂದನ್ನೊಂದು ಕೂಡುವುದಕ್ಕಾಗಿ, ಕೂಡಿ ಕೇಡ

ನುಡಿ ಯುವುದಕ್ಕಾಗಿ, ಅಣಕವಾಡಿ ಬಿರುನುಡಿಗಳನ್ನು ನುಡಿಯುವುದಕ್ಕಾಗಿ ಮನ ಯುಗ ಯುಗಾಂತರದಿಂದ ತನುವನ್ನು ವ್ಯರ್ಥ ಕಳೆಯುತ್ತದೆ. ಮನಕ್ಕೆ ಸತ್ಯ ಪರಿಚಯವಾದರೆ ಮನೋಹರನಾಗುತ್ತದೆ. ಯುಗ ಪುರುಷನಾಗುತ್ತದೆ. ಯುಗ ಯುಗಗಳವರೆಗೂ ಜ್ಞಾನದ ಬೆಳಕು ಬೆಳಗುತ್ತದೆ.

ಕೂಡಲಸಂಗನ ಶರಣರನಗಲುವ ದಾವತಿಯಿಂದ ಮರಣವೆ ಲೇಸು ಕಂಡಯ್ಯಾ :

ತನುವಿನಲ್ಲಿ ತನ್ಮಯವಾದ ಮಹಾಜ್ಞಾನವನ್ನು ಕಂಡ ಮನವೇ ಮನೋಹರ. ಆತ ಕೂಡಲಸಂಗಯ್ಯನನ್ನು ಕೂಡಿದ ಸಂಗಮನಾಥ. ಮನಕ್ಕೆ ಸರಳವಾಗಿ ಮನೋಹರನನ್ನು ಪರಿಚಯಿಸುವ ಶರಣ. ಆತನ ದರುಶನಕ್ಕಾಗಿ ಮನ ಹಗಲಿರುಳು ತಪಿಸಬೇಕು. ಆತನನ್ನು ಕೂಡಿದ ಮೇಲೆ, ಕೂಡಿ ಅಗಲುವ ದಾವತಿಗಿಂತ ಮರಣವೇ ಲೇಸು.

371

ಅಂಗೈ ತಿಂದುದೆನ್ನ, ಕಂಗಳು ಕೆತ್ತಿಹವಯ್ಯಾ ,
ಬಂದಹರಯ್ಯಾ ಪುರಾತರೆನ್ನ ಮನೆಗೆ ,
ಬಂದಹರಯ್ಯಾ ಶರಣರೆನ್ನ ಮನೆಗೆ ,
ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದಡೆ
ಶಿವಾರ್ಚನೆಯ ಮಾಡಿಸುವೆ ,
ಕೂಡಲಸಂಗಮದೇವಾ , ನಿಮ್ಮ ಮುಂದೆ.
ಅಂಗೈ ತಿಂದುದೆನ್ನ:

ಅಂಗ ತಿನ್ನುವ ಮನ, ಅಂಗದ ಐದು ಜ್ಞಾನೇಂದ್ರಿಯಗಳಾದ ಕಣ್ಣು ಕಿವಿ ಮೂಗು ನಾಲಿಗೆಯನ್ನೇ ತಿನ್ನುವ ಮನ ! ಅಂಗೈ ತಿನ್ನುವ ರಕ್ಕಸ ಮನ ! ಅಂಗಕ್ಕೂ ಲಿಂ(ಅರಿವು) ಗಕ್ಕೂ ವ್ಯತ್ಯಾಸವಿಲ್ಲ. ಅಂಗವೆಂದರೆ ಲಿಂಗ, ಲಿಂಗವೆಂದರೆ ಅಂಗ, ಅಂಗದಲ್ಲಿ ಲಿಂಗ ಸಂಗಮವಾಗಿ, ಲಿಂಗದಲ್ಲಿ ಅಂಗ ಸಂಗಮವಾಗಿ ಲಿಂಗಾಂಗವಾಗಿದೆ. ಲಿಂಗ ಕಣ್ಣಿನಲ್ಲಿ ಸಂಗಮವಾಗಿ ನೋಟವಾಗಿದೆ. ಕಿವಿಯಲ್ಲಿ ಸಂಗಮವಾಗಿ ಶಬ್ದವಾಗಿದೆ. ಮೂಗಿನಲ್ಲಿ ಸಂಗಮವಾಗಿ ಪರಿಮಳವಾಗಿದೆ. ಚರ್ಮದಲ್ಲಿ ಸಂಗಮವಾಗಿ ಸ್ಪರ್ಶವಾಗಿದೆ. ನಾಲಿಗೆಯಲ್ಲಿ ಸಂಗಮವಾಗಿ ರುಚಿಯಾಗಿದೆ.

ಲಿಂಗವೇ ಸಂಗಮವಾದ ಅಂಗೈಯಲ್ಲಿ ಮನ ಆವರಿಸಿಕೊಂಡಿದೆ. ನೋಡಿ ಅಂಗವನ್ನು ಸುಡುತ್ತದೆ. ಕೇಳಿ ಅಂಗವನ್ನು ತಿನ್ನುತ್ತದೆ. ಮುಟ್ಟಿ ಅಂಗಕ್ಕೆ ಕೇಡು ಬಗೆಯುತ್ತದೆ. ಮೂಸಿಸಿ ಅಂಗವನ್ನು ರೊಚ್ಚಿಗೇಳಿಸುತ್ತದೆ. ರುಚಿಸಿ ಅಂಗಕ್ಕೆ ಸಂಕಟವನ್ನುಂಟು ಮಾಡುತ್ತದೆ. ಲಿಂಗಾಂಗದಲ್ಲಿ ಸಂಗಮವಾಗಿ ಬ್ರಹ್ಮನಾಗಬೇಕಾದ ಮನ, ಅಂಗೈ ತಿನ್ನುವ ಬ್ರಹ್ಮ ರಾಕ್ಷಸನಾಗಿದೆ. ಮಹಾದೇವನ ಮನೆಯಾಗಬೇಕಾದ ಅಂಗ, ಮನದಿಂದಾಗಿ ಮಾರಿಯ ಮನೆಯಾಗಿದೆ. ಬ್ರಹ್ಮನ ಮನೆಯಾಗಬೇಕಾದ ಅಂಗ, ಭ್ರಮೆಯ ಮನೆಯಾಗಿದೆ.

ಕಾಗದವನ್ನು ಕರೆನ್ಸಿಯೆಂದು ನೋಡಿ ತನುವನ್ನು ಕಳ್ಳನನ್ನಾಗಿಸುವ ಕಣ್ಣನ್ನು ಯಾರು ಕೆತ್ತಬೇಕು? ತನುವನ್ನು ತನುವೆಂದು ನೋಡದೆ ವಿಕೃತ ಕಾಮಿಯಾಗಿ ನೋಡಿ ತನುವನ್ನೇ ಹರಿದು ತಿನ್ನುವ ಕಣ್ಣನ್ನು ಯಾರು ಕೆತ್ತಬೇಕು ? ಲೋಹವನ್ನು ಚಿನ್ನವೆಂದು ನೋಡಿ ತನುವನ್ನು ಕೊಂದು ಪಡೆಯುವ ಅಜ್ಞಾನಿ

ಕಣ್ಣನ್ನು ಯಾರು ಕೆತ್ತಬೇಕು ? ಕಲ್ಲನ್ನು ಕಲ್ಲೆಂದು ನೋಡದೆ ಕಲ್ಲಿನಿಂದಲೇ ಈಶನನ್ನು ಏಸುವನ್ನು ಮಾಡಿ ಹಿಂದು ಇಸಾಯಿ ಎಂದು ಬಡಿದಾಡಿ ಸಾಯುವ ಕಂಗಳ ಅಜ್ಞಾನವನ್ನು ಯಾರು ಕೆತ್ತಬೇಕು ?

ಕಣ್ಣು ಕಿವಿ ಮೂಗು ನಾಲಿಗೆ ಚರ್ಮವುಳ್ಳ ಅಂಗಕ್ಕೆ ಅಂಟಿಕೊಂಡು ತಿನ್ನುವ ಬ್ರಹ್ಮರಕ್ಕಸನನ್ನು ಕೊಲ್ಲಲು ಯಾರಿಗಾದರೂ ಸಾಧ್ಯವೆ ? ಕಣ್ಣಿಗೆ ಮೆತ್ತಿಕೊಂಡ ಈ ರಕ್ಕಸನನ್ನು ಕೆತ್ತಲು ಯಾರಿಗಾದರೂ ಸಾಧ್ಯವೆ ?

ಬಂದಹರಯ್ಯಾ ಪುರಾತನರೆನ್ನ ಮನೆಗೆ, ಬಂದಹರಯ್ಯಾ ಶರಣರೆನ್ನ ಮನೆಗೆ ! ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದಡೆ ಶಿವಾರ್ಚನೆಯ ಮಾಡಿಸುವೆ, ಕೂಡಲಸಂಗಮದೇವಾ ನಿಮ್ಮ ಮುಂದೆ :

ಅಂಗದ ಮನೆಯಲ್ಲಿ ಬ್ರಹ್ಮಾಂಡವೇ ಅಡಗಿದೆ. ಈ ಮನೆಯಲ್ಲಿ ಕ್ರಿಸ್ತ ಕ್ರಿಷ್ಣ ಬುದ್ಧ ಮಹಾವೀರರು ದಾಸವರೇಣ್ಯರು ಜನ್ಮವೆತ್ತಿದ್ದಾರೆ. ಈ ತನುವಿನ ಮನೆಗೆ ಸಾದು ಸಂತರು ಸತ್ಪುರುಷರು ಬಂದು ಹೋಗಿದ್ದಾರೆ. ಇಂತಹ ತನುವಿನ ಮನೆಗೆ ಪುರಾತನರು ಶರಣರು ಬಂದ ಕನಸು ಬೀಳಲು ಅದು ದಿಟವಾಯಿತು.

ಬುದ್ಧ ಕ್ರಿಷ್ಣ ಕ್ರಿಸ್ತ ಬಸವಾದಿ ಶರಣರು ದಾಸವರೇಣ್ಯರು ಅಂಗೈ ತಿನ್ನುವ ಮನವೆಂಬ ಮಂಗವನ್ನು ಕೊಂದು ಜಂಗಮವಾಗಿ ಬದುಕಿದರು. ಭ್ರಮೆಯನ್ನು ಕೊಂದು ಬ್ರಹ್ಮನನ್ನಾಗಿಸಿ ಬ್ರಹ್ಮನ ಮನೆಯಲ್ಲಿಯೇ ಬದುಕಿದರು.

ಅಂಗವೆಂಬುದು ಬ್ರಹ್ಮನ ಅರಿವಿನ ಮನೆ. ನವರತ್ನಗಳುಳ್ಳ ಕುಬೇರನ ಮನೆ. ಜ್ಞಾನದ ಮನೆಯನ್ನು ಆವರಿಸಿದ ಮನ ಹೊರಗಿನ ರುಚಿಗಾಗಿ ಮನೆಯಿಂದ ಮನೆಗೆ ಹಾರುತ್ತದೆ. ಇದನ್ನು ಹಿಡಿದು ಕಟ್ಟಲು ಯಾರಿಂದಲೂ ಸಾಧ್ಯವಿಲ್ಲ. ವಾಸ ಮಾಡಿದ ಮನೆಗೆ ದ್ರೋಹ ಬಗೆಯುವ ಮಂಗಕ್ಕೆ ಯಾರೂ ಬೋಧಿಸಲರಿಯರು.

ಅಂಗದಲ್ಲಿಯೇ ಇರುವ ಅರಿವಿನ ರುಚಿಯನ್ನು ಅಂಗದಲ್ಲಿಯೇ ಇರುವ ಮನವೆಂಬ ಮಂಗ ಸವಿಯಲು ಬಂದಾಗ ಮಂಗ ಸತ್ತು ಮನ ಘನಮನವಾಗುತ್ತದೆ. ಅಂಗ ಲಿಂಗದಲ್ಲಿ ಮನ ಸಂಗಮವಾಗಿ ಲಿಂಗಾಂಗವಾಗುತ್ತದೆ. ಅಂಗವನ್ನು ಲಿಂಗವನ್ನು ಸದ್ಬಳಕೆ ಮಾಡುವ ಜಂಗಮನೊಬ್ಬನೆ ಉಳಿಯುತ್ತಾನೆ. ನಡೆದಾಡುತ್ತಾ ಬೋಧಿಸುವ ಅಂಗ(ಬೋಧೀ ವೃಕ್ಷ) ಬುದ್ಧನ ಸೊತ್ತಾಗುತ್ತದೆ. ಕಂಡ ಕನಸು ದಿಟವಾಗುತ್ತದೆ.

372

ಲಿಂಗವ ಪೂಜಿಸುತ್ತಾ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು ಕಂಡಾ, ಲಿಂಗವೆ.
ಪರಮ ಸುಖವ ಕೊಡು ಕಂಡಾ ಲಿಂಗವೆ.
ಕೂಡಲಸಂಗಮದೇವಾ,
ಇದೇ ವರವ ನಿಮ್ಮಲ್ಲಿ ಬೇಡುವೆ.

ಬ್ರಹ್ಮ ಪದವಿಯನು ಬೇಡಲಿಲ್ಲ, ವಿಷ್ಣು ಪದವಿಯನ್ನೂ ಬೇಡಲಿಲ್ಲ, ರುದ್ರ ಪದವಿಯನ್ನು ಬೇಡಲಿಲ್ಲ. ತನುವಿನಲ್ಲಿ ತನ್ಮಯವಾದ ಮಹಾ ಜ್ಞಾನವನ್ನು ಪೂಜಿಸುತ್ತಾ, ಆ ಜ್ಞಾನವನ್ನು ಬಳಕೆ

ಮಾಡುವ ಜಂಗಮದ ಮುಖವನ್ನು ನೋಡುವ ಸುಖವನ್ನು ಕರುಣಿಸು ಲಿಂಗ ತಂದೆಯೆ.

ಲಿಂಗವ ಪೂಜಿಸುವುದೆಂದರೆ ಅಂಗದ ಕಣ ಕಣದಲ್ಲಿ ಬೇರ್ಪಡಿಸದಂತೆ ಬೆರೆತ ಲಿಂಗಾಂಗಕ್ಕೆ ಮಜ್ಜನವ ಮಾಡುವುದು.

ಎನ್ನಂಗದಲ್ಲಿ ನಿನಗೆ ನಿತ್ಯ ಮಜ್ಜನ, ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ. ಎನ್ನ ತುರುಬಿನಲ್ಲಿ ನಿನಗೆ ಕುಸುಮ ಪೂಜೆ. ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪ ವಿಚಿತ್ರ ವಿನೋದ. ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾವಾದ್ಯ ಕೇಳಿರೇ. ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ ಪರಿಮಳ. ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ . ಎನ್ನ ತ್ವಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ. ಎನ್ನ ಸಚ್ಚಿದಾನಂದವೆಂಬ ಸೆಜ್ಜೆ ಗೃಹದಲ್ಲಿ ನೀನು ಸ್ಪರ್ಶನಂಗೈದು ನೆರೆದಿಪ್ಪೆಯಾಗಿ, ನೀ ನಾನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಾದ ಲಿಂಗ ಉಳ್ಳ ಲಿಂಗಾಂಗವನ್ನು , ಅದನ್ನು ಸದ್ಬಳಕೆ ಮಾಡುವ ವೀರಾಧಿವೀರ ಜಂಗಮನನ್ನು ನೋಡುತ್ತ ಅಂಗ ಪೂಜಿಸುವ ವಿಧಾನವನ್ನು ಉರಿಲಿಂಗ ಪೆದ್ದಿಗಳು ಸುಂದರವಾಗಿ ಹೇಳಿದ್ದಾರೆ.

ಅಂಗದಲ್ಲಿ ಲಿಂಗಯ್ಯನಿದ್ದಾನೆ. ಆತನಿಗೆ ನಿತ್ಯ ಸ್ನಾನ ಮಾಡಿಸಬೇಕು. ಆತನ ಹಣೆಗೆ ಗಂಧಾಕ್ಷತೆಯನ್ನು ಧರಿಸಬೇಕು. ಆತನ ತುರುಬಿಗೆ ವಿಧ ವಿಧದ ಕುಸುಮಗಳನಿಟ್ಟು ಪೂಜಿಸಬೇಕು. ಆತನ ನೇತ್ರದಲ್ಲಿ ಕಾಣುವ ವಿವಿಧ ರೂಪು ವಿಚಿತ್ರ ವಿನೋದಗಳನ್ನು ಸವಿಯುತ್ತಾ ಪೂಜಿಸಬೇಕು. ಆತನ ಕಿವಿಗಳಿಗೆ ಪಂಚ ಮಹಾ ವಾದ್ಯಗಳನ್ನು ನುಡಿಸುತ್ತಾ ಪೂಜಿಸಬೇಕು. ಆತನ ಮೂಗಿಗೆ ಸುಗಂಧ ಧೂಪ ಪರಿಮಳದಿಂದ ಪೂಜಿಸಬೇಕು. ಆತನ ನಾಲಿಗೆಗೆ ಷಡ್ರಾಸನ್ನ ನೈವೇದ್ಯ ಮಾಡಿ ಉಣ್ಣಿಸುವುದರ ಮೂಲಕ ಪೂಜಿಸಬೇಕು. ಆತನ ಚರ್ಮಕ್ಕೆ ವಿವಿಧ ವಸ್ತ್ರಾಲಂಕಾರ ಮಾಡಿ ಪೂಜಿಸಬೇಕು. ಏಕೆಂದರೆ ಅಂಗದಲ್ಲಿ ಲಿಂಗಯ್ಯನಿದ್ದು ಆ ಲಿಂಗವನ್ನೇ ಆತ ತನ್ನ ಆಲಯವನ್ನಾಗಿ ಮಾಡಿಕೊಂಡಿರುವುದರಿಂದ, ಆತನನ್ನು ಪೂಜಿಸುವ ಮನವೆಂಬ ನಾನೂ ಆ ಆಲಯದಲ್ಲಿಯೇ ಇರುವುದರಿಂದ, ಆತ ನನ್ನನ್ನು ಸ್ಪರ್ಶಿಸಿ ಬಿಗಿದಪ್ಪಿಕೊಂಡಿರುವುದರಿಂದ, ನೀನು ನಾನು ಎನ್ನುವ ಅಹಂಕಾರವನು ಅಳಿದು, ತಾನು ತಾನೇ ಆದ ಘನ ಸುಖದ ಪೂಜೆಯನು ಪೂಜಿಸುತ್ತಾ , ಪರಮ ಸುಖವ ಕೊಡು ಕಂಡಾ ಲಿಂಗವೆ. ಬೇಡಿದರೆ ಇದೇ ವರವ ನಿಮ್ಮಲ್ಲಿ ಸೆರಗೊಡ್ಡಿ ಬೇಡುವೆ ಸಂಗಮನಾಥನೇ.

373

ಮನೆದೈವ, ಕುಲದೈವ ಎನಗೆ ನಿಮ್ಮವರಯ್ಯಾ !
ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನ ,
ಕೂಡಲಸಂಗಮದೇವಾ, ನಿಮ್ಮ ಶರಣರಿಗೆ.

ಈ ಮೂರು ಸಾಲಿನ ವಚನ ಮನ ಪಾಲಿಸಿದರೆ ಸಾಕು, ತನುಗಳೆಲ್ಲ ಧನ್ಯ . ತನುವಿನ ಸತ್ಯ ಮನಕ್ಕೆ ಗೋಚರವಾಗಿ ಬುದ್ಧ ಬಸವ ಶರಣ ದಾಸವರೇಣ್ಯರ ತನುಗಳಾಗುತ್ತವೆ.

ಮನೆ ದೈವ, ಕುಲ ದೈವ ಎನಗೆ ನಿಮ್ಮವರಯ್ಯಾ :

ಜಗದಲ್ಲಿ ವಾಸ ಮಾಡಿದ ತನುಗಳಿಗೆಲ್ಲ ಮನೆ ದೈವ ಒಂದೇ, ಕುಲ ದೈವ ಒಂದೇ ! ತನುವೇ ಒಂದು ಮನೆ. ಆ ಮನೆಯಲ್ಲಿ ಅರಿವೆಂಬ ಗುರುದೇವನಿದ್ದಾನೆ. ಆತ ಮನೆ ದೈವ ! ಮನೆಯಲ್ಲಿದ್ದ

ಮನವೆಂಬ ಭಕ್ತ ತಿಳಿದರೆ ಸಾಕು ಆತ ಮಹಾದೇವನೂ ಹೌದು, ಸದಾಶಿವನೂ ಹೌದು, ಸಾಕ್ಷಾತ್ ಪರಬ್ರಹ್ಮನೂ ಹೌದು !

ಅರಿವೆಂಬ ಗುರುದೇವನಿದ್ದ ತನುವಿನ ಮನೆಯಲ್ಲಿಯೇ ಜಂಗಮನಿದ್ದಾನೆ. ಗುರುದೇವನ ಮಾತು ಜಂಗಮನಿಗೆ ವೇದ ವಾಕ್ಯ. ಆತ ನುಡಿಯುವ ನುಡಿಯಲ್ಲದ ನುಡಿಯನ್ನು ಚಿಚ್ಚುಗತ್ತಿ ಹಿಡಿದು ಪಾಲಿಸುತ್ತಾನೆ. ತನುವಿನ ಮನೆಗೆ ವಿರಾಟ ಸ್ವರೂಪದ ದರ್ಶನ ಮಾಡಿಸಿ, ಜಗದಗಲ ಮುಗಿಲಗಲಕ್ಕೆ ಪಸರಿಸುತ್ತಾನೆ. ತನುವಿನ ಶ್ರೀಚರಣವನ್ನು ಪಾತಾಳದಿಂದತ್ತತ್ತ ಕೊಂಡೊಯ್ಯುತ್ತಾನೆ. ತನುವಿನ ಶ್ರೀಮುಕಟನ್ನು ಬ್ರಹ್ಮಾಂಡದಿಂದತ್ತತ್ತಲೂ ವಿಸ್ತರಿಸಿ ಪುನಹ ತನುವಿನಗಲಕ್ಕೆ ತಂದು ಚುಳುಕಾಗಿಸುತ್ತಾನೆ. ತನುವಿನ ಸ್ವ ಸುಖವನ್ನು ಮನಕ್ಕೆ ಉಣ್ಣಿಸಿ ಚಲನೆಯಿಲ್ಲದ ಹೆಳವನನ್ನಾಗಿ ಮಾಡುತ್ತಾನೆ. ಹೀಗಾಗಿ ಮನಕ್ಕೆ ತನುವಿನಲ್ಲಿರುವ ಅರಿವೇ ಮನೆ ದೈವ. ಅರಿವನ್ನು ಪಾಲಿಸುವ ಜಂಗಮನೇ ಕುಲ ದೈವ.

ತನು ಮೀಸಲು, ಮನ ಮೀಸಲು, ನಯನ ಮೀಸಲು :

ತನು ಅರಿವೆಂಬ ಗುರುದೇವನ ಸೊತ್ತು , ಮನ ಗುರುದೇವನನ್ನು ಪೂಜಿಸಲು ತನುವಿನ ಮನೆಗೆ ಬಂದ ತೊತ್ತು. ಗುರುದೇವನ ಸೇವೆಗಾಗಿ ಇದ್ದ ಆಳು, ಎಂದು ತಿಳಿಯದೆ ಗುರುವಿನ ಮನೆಯನ್ನೇ ಹೆಂಡದ ಅಂಗಡಿಗೆ ಕರೆದುಕೊಂಡು ಹೋಗಬಹುದೆ ? ಭ್ರಷ್ಟಾಚಾರಕ್ಕೆ ಬಲಿಯಾಗಿಸಬಹುದೆ ? ಲಂಚಕ್ಕೆ ಕೈ ಒಡ್ಡಬಹುದೆ ? ಅರಿವೆಂಬ ಗುರುದೇವನ ತನುವೆಂದು ತಿಳಿಯದೆ, ಕಾಮದ ಆಸೆಗಾಗಿ ಅತ್ಯಾಚಾರವೆಸಗಬಹುದೆ ? ಹಣ, ಆಭರಣಕ್ಕಾಗಿ ಗುರುವಿನ ತನುವಿಗೆ ಕಳ್ಳನ ಪಟ್ಟ ಕಟ್ಟಬೇಕೆ ? ಇದರ ಆಸೆ ಆಮಿಷಕ್ಕಾಗಿ ರೋಷ ಸೃಷ್ಟಿಸಬೇಕೆ ? ಗುರುವಿನ ತನುವಿಗೆ ಅಜ್ಞಾನದ ಬೆಂಕಿ ಹಚ್ಚಬೇಕೆ ? ಎಲೆ ಅಜ್ಞಾನಿ ಮನವೆ, ಗುರುವಿನ ತನುವನ್ನು ಅರಿವೆಂಬ ಗುರುದೇವನಿಗಾಗಿಯೇ ಮೀಸಲಿಡಬಾರದೆ ? ಹಾಗೆ ಮಾಡಲು ನಿನಗೇನು ಕೇಡು !

ಮನ ಮೀಸಲು : ಎಲೆ ಮನವೆ, ಅರಿವೆಂಬ ಗುರುದೇವನೇ ನಿನಗೆ ಮಾಲೀಕ ! ಆತ ಸಾಕಿದ ನಾಯಿ ನೀನು ! ಸದಾ ಅರಿವಿನ ಪಲ್ಲಕ್ಕಿಯಲ್ಲಿ ಕುಳಿತು ಮೆರೆಯಬೇಕಾದ ಗುರುವಿನ ತನುವನ್ನು, ಎಲುಬಿನ ಆಸೆಗಾಗಿ ತಿಪ್ಪೆಗೆ ಕರೆದುಕೊಂಡು ಹೋಗುವುದೆ ? ಗುರುದೇವ ಏನೂ ತಿನ್ನುವುದಿಲ್ಲ, ನೀನು ಏನೂ ಬಿಡುವುದಿಲ್ಲ. ಗುರುದೇವನನ್ನು ಪೂಜಿಸಲು ಬಂದ ಆತನ ತೊತ್ತು ನೀನು ! ಎಲೆ ಮನವೆ ನಿನ್ನ ಸರ್ವಸ್ವವನ್ನು ಅರಿವೆಂಬ ಗುರುದೇವನಿಗೆ ಒಪ್ಪಿಸು. ಆತ ಹೇಳಿದಂತೆ ನೀನು ಕೇಳು. ಆತ ನಿನ್ನನ್ನು ತನ್ನಂತೆ ಮಾಡಿಕೊಳ್ಳುತ್ತಾನೆ.

ನಯನ ಮೀಸಲು : ಎಲೆ ಮನವೆ, ಸೂರ್ಯ ಚಂದ್ರನ ಬೆಳಕನ್ನೂ ನಾಚಿಸಿ ಬೆಳಗುವ ಆತನ ಕಣ್ಣುಗಳಲ್ಲಿ ನೀನು ವಾಸ ಮಾಡುವುದೆ ? ನಿನಗೆ ಕಾಗದ ಕರೆನ್ಸಿಯಾಗಿ ಕಾಣುತ್ತದೆ, ಲೋಹ ಚಿನ್ನವಾಗಿ ಕಾಣುತ್ತದೆ, ಅರಿವಿನ ತನುಗಳು ರಂಭೆ, ಊರ್ವಶಿ, ಮೇನಕೆ, ಮನ್ಮಥ, ದೇವೇಂದ್ರನಂತೆ ಕಾಣುತ್ತಾರೆ. ಕರೆನ್ಸಿಯನ್ನು ಪಡೆಯಲು ಕಳ್ಳನಾಗಲೂ ಹೇಸುವುದಿಲ್ಲ , ಲಂಚ ಪಡೆದು ಭ್ರಷ್ಟಾಚಾರಿಯಾಗಲು ಹೇಸುವುದಿಲ್ಲ. ಹತ್ಯೆ ಮಾಡಲು ಹೇಸುವುದಿಲ್ಲ. ಏಕೆಂದರೆ ಅದು ನಿನ್ನ ತಪ್ಪಲ್ಲ, ನಿನಗೆ ಕಾಗದ ಲೋಹಗಳು ಕಾಣುವುದೇ ಇಲ್ಲ. ಆತನ ಕಣ್ಣಿನಿಂದ ನಿನಗೆ ನೋಡಲು ಬರುವುದಿಲ್ಲ! ನಿನಗೆ ಕಣ್ಣುಗಳೇ ಇಲ್ಲ! ಗುರುವಿನ ಕಣ್ಣುಗಳನ್ನು ಗುರುವಿಗೆ ಒಪ್ಪಿಸು. ಆತನ ಆದೇಶವನ್ನು ಮಾತ್ರ ಪಾಲಿಸು. ಅರಿವೆಂಬ ಗುರುದೇವನ ತೊತ್ತು ನೀನು.

ಎಲೆ ಮನವೇ, ತನುವಿನಲ್ಲಿ ಅರಿವೆಂಬ ಗುರುದೇವನಿದ್ದಾನೆ, ಆತ ತನುವಿನ ದೈವ ! ಆತನ

ಮಾತುಗಳನ್ನು ಪಾಲಿಸುವ ಜಂಗಮನಿದ್ದಾನೆ, ಆತನೇ ತನು ಕುಲದ ದೈವ ! ನೀನು ಕರೆನ್ಸಿ ನೋಡಿ ಪಡೆಯಲು ಜೊಲ್ಲು ಸುರಿಸಿದರೆ, ಅರಿವಿನ ಮಾತು ಪಾಲಿಸುವ ಜಂಗಮ ಕರೆನ್ಸಿ ಹರಿದು ಹಾಕಿ ಕಾಗದ ತೋರಿಸಿ ನಿನ್ನನ್ನು ಹೆಳವನಾಗಿಸುತ್ತಾನೆ. ನೀನು ಚಿನ್ನದ ಆಭರಣ ಪಡೆಯಲು ಜೊಲ್ಲು ಸುರಿಸಿದರೆ, ಆತ ಆಭರಣ ಛೇದಿಸಿ ಸತ್ಯ ಪರಿಚಯಿಸಿ ಲೋಹದ ದರ್ಶನ ಮಾಡಿಸುತ್ತಾನೆ. ನಿನ್ನನ್ನು ಹೆಳವನನ್ನಾಗಿಸುತ್ತಾನೆ. ಎಲೆ ಮನವೇ ನಿನಗೆ ಕರೆನ್ಸಿಯಾದರೆ, ಜಂಗಮನಿಗೆ ಅದು ಕಾಗದ ! ನಿನಗೆ ಚಿನ್ನದ ಆಭರಣವಾದರೆ ಜಂಗಮನಿಗೆ ಅದು ಲೋಹ !

ಎಲೆ ಮನವೆ ತನು ನಿನಗೆ ರಂಭೆಯಾಗಿ, ಮನ್ಮಥನಾಗಿ ಕಾಣುತ್ತದೆ. ಪೈಶಾಚಿಕ ಕಾಮಕ್ಕಾಗಿ ಹಾತೊರೆಯುವ ನಿನ್ನನ್ನು ಜಂಗಮ ತಡೆದು ತನುವಿನ ಚರ್ಮ ಮೂಳೆ ಮಾಂಸ ಅದರಲ್ಲಿ ಹರಿಯುವ ರಕ್ತ ಮಜ್ಜೆ ಮೇದಸ್ಸಿನ ದರ್ಶನ ಮಾಡಿಸುತ್ತಾನೆ. ಇವು ಹೆಣ್ಣು ಅಲ್ಲ ಗಂಡೂ ಅಲ್ಲವೆಂದು ಹೇಳುತ್ತಾನೆ. ಅರಿವೆಂಬ ಗುರುದೇವನ ಮತ್ತೊಂದು ತನು ಪಡೆಯಲು ಮಾತ್ರ ತನುಗಳು ಮಿಲನವಾಗಬೇಕೆಂದು ಪಾಠ ಮಾಡುತ್ತಾನೆ. ಗುರುದೇವ ಜಂಗಮನಿಗೆ ಹೇಳಿದರೆ, ಜಂಗಮ ಮನವನ್ನು ಹೆಳವನ್ನನ್ನಾಗಿಸಿ ಆತನ ಆದೇಶ ಪಾಲಿಸುತ್ತಾನೆ. ಅಂದ ಮೇಲೆ ಅರಿವೆಂಬ ಗುರುದೇವನೇ ಮನೆ ದೈವ, ಜಂಗಮನೇ ಕುಲ ದೈವನಾಗಲಿಲ್ಲವೆ ? ತನುವಿನ ಮನೆಯ ತೊತ್ತು ನೀನಾಗಿ ತನುವಿನಲ್ಲಿಯೇ ಸಂಗಮಗೊಂಡಿಲ್ಲವೆ ? ತನು ಅರಿವಿನ ಸೊತ್ತು , ನಯನ ಅರಿವಿನ ಸೊತ್ತು , ಮನವೂ ಅರಿವಿನ ಸೊತ್ತು , ನೀನು ಅರಿವಿನ ತೊತ್ತು . ಅರಿವಿಗೆ ಸಕಲವೂ ಮೀಸಲಾಗಿರಲಿ.

374

ಗಿಳಿಯ ಪಂಜರವನಿಕ್ಕಿ, ಸೊಡರಿಂಗೆಣ್ಣೆಯ ನೆರೆದು, ಬತ್ತಿಯನಿಕ್ಕಿ,
ಬರವ ಹಾರುತ್ತಿದ್ದೆನೆಲಗವ್ವಾ,
ತರಗೆಲೆ ಗಿರುಕೆಂದಡೆ ಹೊರಗನಾಲಿಸುವೆ,
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ!
ಕೂಡಲಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು
ಶಿವಾ ಎಂದಡೆ ಸಂತೋಷ ಬಟ್ಟೆ.ನೆಲಗವ್ವಾ

ಗಿಳಿಯ ಪಂಜರವನಿಕ್ಕಿ , ಸೊಡರಿಂಗೆಣ್ಣೆಯ ನೆರೆದು, ಬತ್ತಿಯನಿಕ್ಕಿ ಬರವ ಹಾರುತ್ತಿದ್ದೆನೆಲಗವ್ವಾ:

ಅರಿವು ಮರೆವು ಆದ ಕಾರಣ, ಅರಿವನೆ ತನುವಿನ ಪಂಜರದೊಳಗೆ ಇಟ್ಟು, ಬತ್ತಿಯನಿಕ್ಕಿ, ಎಣ್ಣೆಯನೆರೆದು, ದೀಪ ಹಚ್ಚಿ ಬೆಳಗಿ, ಹೊರಗೆ ನೋಡಿ ಕರೆದರೆ ತನುವಿನೊಳಗಿದ್ದ ಬೆಳಕು ತನುವನ್ನು ಬೆಳಗುವುದೆ ? ತನುವಿನ ಬೆಳಕಿಗೆ ಕತ್ತಲೆಯ ಮನದ ಮುಸುಕು ಹಾಕಿ ಹೊರಗೆ ಬತ್ತಿಗೆ ಎಣ್ಣೆಸುರಿದು ದೇವನ ಬರುವಿಕೆಗಾಗಿ ಶಬರಿಯಂತೆ ಕಾದು ತನುವಿನ ಆಯುಷ್ಯವನು ಮನ ವ್ಯರ್ಥ ಕಳೆಯುತ್ತದೆ.

ಅರಿವನ್ನು ಅಣಲೊಳಗಿಕ್ಕಿ, ಬತ್ತಿಗೆ ಎಣ್ಣೆಯ ಸುರಿದು ದೀಪ ಬೆಳಗಿ ಅರಿವಿನ ನಲ್ಲನ ಬರುವಿಕೆಗಾಗಿ ಎದುರು ನೋಡುತ್ತಿದ್ದೆನೆಲಗವ್ವಾ , ಸುಳಿದು ಬೀಸುವ ತಂಪನೆಯ ಗಾಳಿಗೆ ತರಗೆಲೆಗಳು ಗಿರುಕೆಂದು ಶಬ್ದ ಮಾಡಿದೊಡೆ ಅರಿವಿನ ನಲ್ಲ ಬಂದನೆಂದು ಹೊರಗನಾಲಿಸುವೆ. ನಲ್ಲನ ಅಗಲುವಿಕೆಯಿಂದ ನಲ್ಲೆ ರೋಧಿಸಿದಂತೆ ಮನ ಧಿಗಿಲೆಂದಿತ್ತೆಲೆಗವ್ವಾ !

ಕೂಡಲಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು ಶಿವಾ ಎಂದಡೆ ಸಂತೋಷಬಟ್ಟೆ ನೆಲಗವ್ವಾ:

ಅರಿವನರಸುವ ನಲ್ಲೆ, ಅರಿವಿನ ನಲ್ಲನನು ಕೂಡಿ, ಕೂಡದ ಅಗಲದ ಕೂಟದ ಸವಿಯನುಂಡು, ಸಂಗಮನಾಥನೇ ತಾವಾದ ಶರಣರು ಬಂದು, ತನುವಿನ ಜ್ಞಾನದ ಬಾಗಿಲ ಮುಂದೆ ಬಂದು ನಿಂದು ಶಿವಾ ಎಂದು ಬಡಿದೆಬ್ಬಿಸಲು, ಕೂಡಲೇ ಹೊರಗೆ ಮರೆತು ಅರಿವಿನ ನಲ್ಲನೊಂದಿಗೆ ಬೆರೆತು ಸುಖದ ಕೋಡಿ ಹರಿದು ಸಂತೋಷ ಪಟ್ಟೆನೆಲಗವ್ವಾ.

ಅರಿವನು ತನುವಿನೊಳಗಿಟ್ಟುಕೊಂಡು, ಮನ ಹೊರಗೆ ಆರಾಧಿಸಿದರೆ ತನುವಿನ ಅರಿವು ಒಲಿಯುವುದಿಲ್ಲ. ತನುವಿನಲ್ಲಿಯೇ ಅರಿವಿದೆಯೆಂದು, ಅರಿವಿಗೆ ಶರಣು ಹೋದ ಶರಣರು ಬಂದು, ತನುವಿನ ಜ್ಞಾನದ ಕದ ತಟ್ಟಲು, ಕೂಡಲೇ ಅರಿವಾಗಿ ಅರಿವಿಗೆ ಶರಣು ಹೋಗಿ ಶರಣನಾದೆ ಎನ್ನುವ ಮಾತನ್ನು ವಿವರಿಸಿದ್ದಾರೆ ಬಸವಣ್ಣನವರು.

375

ಅಡವಿಯಲೊಬ್ಬ ಕಡು ನೀರಡಿಸಿ
ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ !
ಕುರುಡ ಕಣ್ಣ ಹಡೆದಂತೆ ,
ಬಡವ ನಿಧಾನವ ಕಂಡಂತಾಯಿತ್ತಯ್ಯಾ !
ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ

ಕುರುಡ ಕಣ್ಣ ಹಡೆದಂತೆ, ಬಡವ ನಿಧಾನವ ಕಂಡಂತಾಯಿತ್ತಯ್ಯಾ :

ಕುಬೇರ ಲಂಕೆಯ ಅಧಿಪತಿ ! ಆತ ದೇವೇಂದ್ರನಿಗಿಂತಲೂ ಶ್ರೀಮಂತ ! ನವನಿಧಿಯ ಸಂಪತ್ತುಗಳನ್ನು ಉಳ್ಳಾತನೆಂದು ಮೂರೂ ಲೋಕಗಳಿಗೆ ಪ್ರಸಿದ್ಧಿ ಹೊಂದಿದಾತ.

ತಿಳಿದರೆ ತನು ನವ ನಿಧಿಗಳ ಸಂಪತ್ತು ! ಆನಂದದ ಬ್ರಹ್ಮಾಂಡವನ್ನು ನೋಡುವ ಎರಡು ಕಣ್ಣುಗಳು, ಶಬ್ದ ಸುಖವನು ಸವಿಯುವ ಎರಡು ಕಿವಿಗಳು, ಆನಂದದ ಪರಿಮಳ ಸವಿಯುವ ಮೂಗಿನ ಎರಡು ಹೊಳ್ಳೆಗಳು, ಅಮೃತದ ರುಚಿ ಸವಿಯುವ ಬಾಯಿ, ನವನಿಧಿಯ ಅರಿವಿನ ತನುವಿಗೆ ಜನ್ಮ ನೀಡುವ ಸೃಷ್ಟಿಯ ಸೊಬಗಿನ ಜನನೇಂದ್ರಿ, ಉಂಡ ಅನ್ನವನ್ನು ಹಿಂಡಿ ಇತರ ಚೇತನಗಳಿಗೆ ಅಮೃತ ರೂಪದಲ್ಲಿ ಹೊರ ಚೆಲ್ಲುವ ಗುದದ್ವಾರ ! ಇವು ತನುವಿನಲ್ಲಿರುವ ಕುಬೇರನ ನವನಿಧಿಗಳು !

ತನು ಒಂದೇ. ತಿಳಿದರೆ ಅದು ಕುಬೇರನ ಆಸ್ಥಾನ ! ತಿಳಿಯದಿದ್ದರೆ ತನು ರಾವಣನ ಲಂಕೆ! ಕುಬೇರ ರಾವಣ ಅಣ್ಣ ತಮ್ಮಂದಿರು. ಒಂದೇ ತನುವಿನ ಮಕ್ಕಳು ! ಕುಬೇರ ಕಣ್ಣುಳ್ಳ ಜ್ಞಾನಿ, ಮೂರು ಲೋಕಗಳಿಗೂ ತನ್ನ ಸಂಪತ್ತು ಹಂಚಿದ. ರಾವಣ ಕಣ್ಣಿದ್ದೂ ಕುರುಡ ! ಮೂರು ಲೋಕಗಳಿಗೂ ರಕ್ಕಸನಾದ. ಬಡವನಿಗೆ ತನುವಿನಲ್ಲಿರುವ ನಿಧಾ(ಸಂಪತ್ತು)ನ ಕಾಣಲೇ ಇಲ್ಲ.

ಮಂಡೋದರಿಯ ಚರ್ಮ, ತನ್ನ ಚರ್ಮ, ಸೀತೆಯ ಚರ್ಮ ಒಂದೇ ಆದರೂ ಕಣ್ಣಿದ್ದೂ ಕುರುಡ ರಾವಣ ಚರ್ಮಕ್ಕೆ ಮೋಹಗೊಂಡು ಸೀತೆಯನ್ನು ಹಿಡಿದು ತಂದ. ಶ್ರೀರಾಮ ರಾವಣನನ್ನು ಕೊಂದು ಮಹಾಜ್ಞಾನವನ್ನು ಮೆರೆದ.

ಅರಿತರೆ ಮಹಾಜ್ಞಾನಕ್ಕೆ ಮೊರೆಯಾದ ಮರ್ಕಟವೂ ಆಂಜನೇಯನಾಗುತ್ತದೆ. ಮರೆತರೆ ಕುಬೇರನಾಗಿ ಜ್ಞಾನದಿಂದ ಮೆರೆಯಬೇಕಾದ ತನು ರಾವಣನಾಗುತ್ತದೆ.

ತನು ಮನ ಜ್ಞಾನ ಸಂಗಮವಾಗಿ ತನುವಿನ ಮೂಲಕ ಜ್ಞಾನಿಗಳಿಗೆ ಜ್ಞಾನ ತನುವಾಗಿ ಕಾಣುತ್ತದೆ. ಮನದಿಂದ ಜ್ಞಾನ ತಿಳಿದರೆ ಬಡವ ನಿಧಾನ(ಸಂಪತ್ತು)ವ ಕಂಡು ಕುಬೇರನಾಗುತ್ತಾನೆ. ಮನದಿಂದ ಜ್ಞಾನದ ಪುಸ್ತಕಗಳನ್ನು ಓದಿದರೆ ಪಂಡಿತನಾಗುತ್ತಾನೆ. ಸಕಲ ಶಾಸ್ತ್ರಗಳ ಅಭ್ಯಾಸ ಮಾಡಿ ಅರವತ್ನಾಲ್ಕು ವಿದ್ಯೆಗಳನ್ನು ಕಲಿತು ನಿಪುಣನಾಗುತ್ತಾನೆ. ರಾವಣನಂತೆ ಕಲಿಯಾಗುತ್ತಾನೆ ! ಇವೆಲ್ಲ ಭ್ರಮಾ ವಿದ್ಯೆಗಳೆಂದು ಮನ ಅರಿಯದೆ, ಅರಿವು ತನುವಿನಲ್ಲಿಯೇ ಉಳಿಯುತ್ತದೆ. ತನುವಿನಲ್ಲಿ ಹೂತಿಟ್ಟ ನಿಧಾನ ಕುರುಡು ಕಣ್ಣಿಗೆ ಕಾಣುವುದಿಲ್ಲ. ರಾವಣನ ಕುರುಡು ಕಣ್ಣಿಗೆ ಸೀತೆಯ ರೂಪ ಕಾಣುತ್ತದೆ. ರೂಪವನ್ನು ಹೊತ್ತ ನವನಿಧಿಯ ನಿರೂಪ ಕಾಣುವುದಿಲ್ಲ.

ಜ್ಞಾನಕ್ಕೆ ಶರಣು ಹೋದ ಶರಣರು ಮಾತ್ರ ಮಹಾಜ್ಞಾನವನ್ನು ಬಯಕೆಯಾದ ಮನಕ್ಕೆ ಸೂಚಿಸಬಲ್ಲರು. ಅಂತಹ ಶರಣರ ಬರವಿಗಾಗಿ ಅಥವಾ ಅವರಿದ್ದಲ್ಲಿಗೆ ಹೋಗಿಯಾದರೂ ಮನ ತನುವಿನಲ್ಲಿರುವ ಮಹಾಜ್ಞಾನದ ನವನಿಧಿಯ ಅರಿವಿನ ಸಂಪತ್ತು ಅರಿತುಕೊಳ್ಳಬೇಕು.

376

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು
ಗುಡಿ ತೋರಣವ ಕಟ್ಟಿ, ಷಡು ಸಮ್ಮಾರ್ಜನೆಯ ಮಾಡಿ,
ರಂಗಾವಲಿಯನಿಕ್ಕಿ ಉಘೇ ಚಾಂಗು, ಭಲಾ ಎಂದೆ
ಕೂಡಲಸಂಗನ ಶರಣರು
ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ.
ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ :

ಜ್ಞಾನಿಗಳು ಮನೆಗೆ ಬರುವರೆಂದು ಸಾರಿಸಿ ರಂಗವಲಿಯನ್ನು ಹಾಕಿ, ತೋರಣ ಕಟ್ಟಿ ಜಯಕಾರ ಮಾಡಿ ಸ್ವಾಗತಿಸುವೆ. ಅವರು ಅರಿವಿನ ಮನೆಯ ಒಡೆಯರು. ತನುವಿನಲ್ಲಿಯೇ ಅರಿವನ್ನು ಸೂಚಿಸಿ, ಅರಿವಿನ ಮನೆಯ ಒಡೆಯನನ್ನಾಗಿಸುವ ಧೀರರು.

ತನು ಅರಿವಿನ ಮನೆ, ಅರಿವು ಬೆಳೆಯುವ ಭೂಮಿಯೂ ಹೌದು. ಬೆಳೆದ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚರಲೀಯದು. ಎನ್ನವಗುಣವೆಂಬ ಕಸವಕಿತ್ತು ಸಲಹಯ್ಯಾ ಲಿಂಗತಂದೆ, ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

ಒಕ್ಕುದನಿಕ್ಕಿ ಸಲಹುವರಾಗಿ : ಕಸವ ಕಿತ್ತಿ ಸಲಹುವರಾಗಿ. ಒಕ್ಕು ಎನ್ನುವ ಶಬ್ದ ಬೆಳೆಯಿಂದ ಕಸವನ್ನು ಬೇರ್ಪಡಿಸು ಎನ್ನುವ ಅರ್ಥ ಕೊಡುತ್ತದೆ. ಬಸವಣ್ಣನವರು ಒಕ್ಕು ಶಬ್ದವನ್ನು ತಮ್ಮ ವಚನದಲ್ಲಿ ಸುಂದರವಾಗಿ ಬಳಸಿಕೊಂಡಿದ್ದಾರೆ.

ಒಂದು ತನುವಿಗೆ ಮತ್ತೊಂದು ತನು ಜ್ಞಾನ ಕೊಡಲು ಬರುವುದಿಲ್ಲ, ತೆಗೆದುಕೊಳ್ಳಲೂ ಬರುವುದಿಲ್ಲ. ಪುಸ್ತಕದಿಂದ, ಮತ್ತೊಂದು ತನುವಿನಿಂದ ಪಡೆದು ಸಂಗ್ರಹಿಸಿಕೊಂಡ ಜ್ಞಾನ ಆಪತ್ಕಾಲದಲ್ಲಿ ಬಳಕೆ ಮಾಡಿಕೊಳ್ಳಲು ಬರುವುದಿಲ್ಲ. ಏನಿದ್ದರೂ ಅದು ವೇದಿಕೆಗೆ ಬಳಕೆಯಾಗಿ

ಪಂಡಿತ ಎನ್ನಿಸಿಕೊಳ್ಳಲು ಸಹಾಯವಾಗುತ್ತದೆ.

ತನು, ಜ್ಞಾನ ಬೆಳೆಯುವ ಭೂಮಿ ! ಅದರಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಅಜ್ಞಾನದ ಕಸ ಹುಟ್ಟಿದೆ. ಮನ ತಿಳಿಯುತ್ತಿಲ್ಲ. ವಿಷಯ ಸುಖಕ್ಕಾಗಿ ಜ್ಞಾನದ ತನುವನ್ನೇ ಬಳಕೆ ಮಾಡಿಕೊಂಡು ಪಶುವಿನಂತೆ ತನುವಿನ ಮೇಲೆ ಹಾರುತ್ತದೆ. ದಕ್ಕದಿದ್ದರೆ ಕ್ರೋಧ ! ದಕ್ಕಿದರೆ ಲೋಭ ! ತನ್ನಂತೆಯೇ ಇರುವ ತನುವಿನ ಮೇಲೆ ಮೋಹ, ಲೋಹದ ಮೇಲೆ ಮೋಹ, ಕರೆನ್ಸಿ, ಮಣ್ಣು, ಪಡಿ ಪದಾರ್ಥಗಳ ಮೇಲೆ ಮೋಹ. ಇತರರಲ್ಲಿ ಇಲ್ಲದ್ದು ತನ್ನಲ್ಲಿದೆಯೆಂದು ಮದ. ಇತರರಲ್ಲಿದ್ದದ್ದು ತನ್ನಲ್ಲಿಲ್ಲವೆಂದು ಮತ್ಸರ.

ತನುವಿನ ಭೂಮಿಯಲ್ಲಿ ಬೆಳೆಯುವ ಜ್ಞಾನದ ಬೆಳೆಗೆ ಅರಿಷಡ್ವರ್ಗಗಳ ಕಸ, ಅಷ್ಟಮದಗಳ ಕಸ, ಸಪ್ತ ವ್ಯಸನಗಳ ಪ್ರಳಯದ ಕಸ ಮುಸುಕಿದೆ. ಮನವೆಂಬ ಪಶುವೇನು ಬಲ್ಲುದು ಹಸುರೆಂದೆಳೆಸುವುದು, ತಿಳಿಯಲೀಯದು ಎಚ್ಚರಲೀಯದು. ಎನ್ನವಗುಣವೆಂಬ ಕಸವಕಿತ್ತು ಸಲಹಯ್ಯಾ ಸುಳಿದೆಗೆದು ಬೆಳೆವೆನು ಲಿಂಗ ತಂದೆ.

ತನು ಜ್ಞಾನದ ಭೂಮಿ, ಪ್ರಳಯದ ಕಸ ಸರಿಸಿ ಸಲಹುವ ಶರಣರು ಬಂದರೆ ಸಾಕು ಸುಳಿದೆಗೆದು ಜ್ಞಾನದ ಬೆಳೆ ಬೆಳೆಯುತ್ತದೆ.

377

ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯಾ ,
ಆನಂದದಿಂದ ನಲಿನಲಿದಾಡುವೆ ,
ಆನಂದದಿಂದ ಕುಣಿಕುಣಿದಾಡುವೆ ,
ಕೂಡಲಸಂಗನ ಶರಣರು ಬಂದಡೆ ,
ಉಬ್ಬಿ, ಕೊಬ್ಬಿ, ಹರುಷದಲೋಲಾಡುವೆ !

ಸಸಿಯ ಮೇಲೆ ಸಾಗರ ಹರಿದರೆ ಬದುಕುವುದಿಲ್ಲ. ಸಸಿ, ಸಾಗರ ಹರಿದು ಬರಲೆಂದು ಹಗಲಿರುಳೂ ಕಾಯುತ್ತದೆ. ಬಾಯಾರಿ ಒಣಗಿ ಬೆಂಡರಿದ ಸಸಿಯ ಮೇಲೆ, ಸಾಗರ ಆವಿಯಾಗಿ ಮೇಲೆ ಹೋಗಿ ಮೋಡವಾಗಿ ಹೆಪ್ಪುಗಟ್ಟಿ ತುಂತುರು ಮಳೆ ಹನಿಗಳಾಗಿ ಸುರಿಯುತ್ತದೆ. ಆಗ ಸಸಿಗೆ ಆಗುವ ಆನಂದ ಅಷ್ಟಿಷ್ಟಲ್ಲ. ಆನಂದದಿಂದ ನಲಿನಲಿದಾಡುತ್ತದೆ. ಆನಂದದಿಂದ ಕುಣಿಕುಣಿದಾಡುತ್ತದೆ.

ಸಸಿಯಲ್ಲಿದ್ದ ಜಲ ಒಣಗಿ ಸಸಿಗೆ ಬಾಯಾರಿದಾಗ, ಸಾಗರ ರೂಪ ಜಲರಾಶಿಯೇ ತುಂತುರು ಹನಿಯಾಗಿ ಸಸಿಯ ಮೇಲೆ ಧುಮುಕಿದಾಗ ಸಸಿ ಆನಂದದಿಂದ ಕುಣಿಕುಣಿದಾಡುತ್ತದೆ. ಜಲದೊಂದಿಗೆ ಬೆರೆತು ಜಲವಾಗಿ, ಜಲದಿಂದಲೇ ಉಬ್ಬಿ, ಕೊಬ್ಬಿ, ಹರುಷದಿಂದಲಿ ಓಲಾಡುತ್ತದೆ.

ತನು ಜಲದಿಂದ ನಿರ್ಮಾಣವಾಗಿದೆ. ತನು ಇರುವವರೆಗೆ ತನುವಿಗೆ ಜಲ ಕಾಣುವುದೇ ಇಲ್ಲ. ಜಲಜನಕ, ಆಮ್ಲಜನಕವನ್ನು ಬಯಲುದೇವ ತನ್ನ ಗರ್ಭದಲ್ಲಿ ಬಂಧಿಸಿ, ಜಲಬಿಂದುವಾಗಿ, ತಾಯಿ ಗರ್ಭದಲ್ಲಿ ಹೊಕ್ಕು ತನುವಾಗುತ್ತಾನೆ. ತನುವಿನಲ್ಲಿಯ ಅರಿವಾಗಿ, ಆ ಅರಿವೇ ನೋಟವಾಗಿ, ಶಬ್ದವಾಗಿ, ಮೂಗಿನಲ್ಲಿ ಬೆರೆತು ಪರಿಮಳವಾಗಿ, ಚರ್ಮದಲ್ಲಿ ಬೆರೆತು ಸ್ಪರ್ಶರೂಪಿ ಜ್ಞಾನದ ತನುವಾಗಿದ್ದಾನೆ. ಸರ್ವಾಂಗದಲ್ಲಿ ಬೆರೆತು ಲಿಂಗವಾಗಿದ್ದಾನೆ. ಅದನ್ನು ತಿಳಿಯುವ ಭಕ್ತನಾಗಿದ್ದಾನೆ. ಅರಿವನ್ನು ಪಾಲಿಸುವ ಜಂಗಮನಾಗಿದ್ದಾನೆ. ಆದರೆ ಈತನ ಪರಿಚಯ ಮನಕ್ಕಿಲ್ಲ. ಇದನ್ನು ಪರಿಚಯ ಮಾಡಿಸುವ ಕೂಡಲಸಂಗನನ್ನು ಕೂಡಿದ ಶರಣರು ಬಂದರೆ ಆನಂದದಿಂದ ನಲಿ ನಲಿದಾಡುವೆ.

ಆನಂದದಿಂದ ಕುಣಿ ಕುಣಿದಾಡುವೆ. ಉಬ್ಬಿ ಕೊಬ್ಬಿ ಹರುಷದಿಂದಲಿ ಓಲಾಡುವೆ ಎಂದಿದ್ದಾರೆ ಅಣ್ಣನವರು.

ಬಸವಣ್ಣನವರು ಕರುಣಾಮಯಿಗಳು. ತಾವು ಉಂಡ ಅರಿವಿನ ಊಟ ಇತರರಿಗೂ ದೊರೆಯಲೆಂದು ಅರಿವಿನ ಅಮೃತದ ಬುತ್ತಿ ಬಿಟ್ಟು ಹೋಗಿದ್ದಾರೆ. ಯುಗ ಯುಗಗಳವರೆಗೂ ಜಗದ ತನುಗಳೆಲ್ಲ ಉಂಡರೂ ಸವೆಯದ ಬುತ್ತಿ . ಇಚ್ಛೆಯಾಗಿ ಉಣ್ಣಬೇಕು ಅಷ್ಟೆ.

378

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ ,
ಸೋಂಕಿನಲ್ಲಿ ಪುಳಕಂಗಳು ಹೊರ ಹೊಮ್ಮದಿದ್ದಡೆ ,
ಕಂಡಾಗಳಶ್ರು ಜಲಂಗಳು ಸುರಿಯದಿದ್ದಡೆ ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ ,
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನವೆ ?
ಎನ್ನಲ್ಲಿ ಇಲ್ಲಾಗಿ, ಆನು ಡಂಭಕ ಕಾಣಿರೆ !

ಮನ ಮನ ಬೆರೆಸಿದಲ್ಲಿ ತನು ಕರಗದಿದ್ದಡೆ :

ತನು, ಮನ, ಘನ ಇವು ಮೂರು ಬೇರೆ ಬೇರೆ ಇಲ್ಲ. ಒಂದರೊಳಗೆ ಮತ್ತೊಂದು ಬೆರೆತು ಒಂದೇ ಆಗಿ ಕಾಣುತ್ತದೆ. ನೋಡಲು ತನು ಒಂದೇ ಆಗಿ ಕಂಡರೂ ತನುವಿನಲ್ಲಿರುವ ಅರಿವು ತನುವಿಗೆ ಸಂಬಂಧವಿಲ್ಲ, ತನುವಿನಲ್ಲಿರುವ ಮನ ತನುವಿಗೆ ಸಂಬಂಧವಿಲ್ಲ , ತನು ಇವೆರಡಕ್ಕೂ ಸಂಬಂಧವಿಲ್ಲದಂತೆ ತನ್ನ ನೂರು ವರ್ಷದ ಆಯುಷ್ಯ ವ್ಯರ್ಥ ಕಳೆಯುತ್ತದೆ.

ಸೋಂಕಿನಲ್ಲಿ ಪುಳಕಂಗಳು ಹೊರ ಹೊಮ್ಮದಿದ್ದಡೆ :

ತನುವಿಗೆ ತನು ಸ್ಪರ್ಶಿಸಿದರೆ ಜೀವ ಜಲರಾಶಿಗಳ ಬುಗ್ಗೆ ಎರಡೂ ತನುಗಳಿಂದ ಹೊರ ಚಿಮ್ಮುತ್ತದೆ. ತನುವಿಗೆ ಹಳದಿ ಲೋಹ ತಾಗಿದರೂ ಆನಂದವಾಗುತ್ತದೆ. ಕರೆನ್ಸಿ ತಾಗಿದರೂ ಆನಂದವಾಗುತ್ತದೆ. ಸ್ಪರ್ಶಸುಖ ದಕ್ಕದಿದ್ದರೆ ದುಃಖವಾಗುತ್ತದೆ. ಸ್ಪರ್ಶದಿಂದ ಸುಖದುಃಖ ನಿರ್ಮಾಣವಾಗುತ್ತದೆ. ಆದರೆ ಇದು ಸುಖವೂ ಅಲ್ಲ ದುಃಖವೂ ಅಲ್ಲ ಸುಖದುಃಖಗಳಿಗೆ ಮೀರಿದ ಶಾಶ್ವತ ಪುಳಕದ ಪರಿಚಯ ಮನಕ್ಕೆ ಸರಳವಾಗಿ ಆಗುವುದಿಲ್ಲ. ಅದು ತನುವಿನಲ್ಲಿ ಒಮ್ಮೆ ಸುಖಿಸಿ ಮತ್ತೊಮ್ಮೆ ದುಃಖಿಸಿ ನೂರು ವರುಷ ಕಳೆಯುತ್ತದೆ. ತನುವಿನ ಕಣ ಕಣದಲ್ಲಿದ್ದ ಘನದೊಂದಿಗೆ ಮನ ಬೆರೆತಿದ್ದರೂ ಅದರ ಅನುಭವ ಮನಕ್ಕೆ ಆಗುವುದಿಲ್ಲ. ಸೋಂಕಿನ ಪುಳಕದ ಶಾಶ್ವತ ಸುಖ ಮನಕ್ಕೆ ಸಿಗುವುದಿಲ್ಲ.

ಕಂಡಾಗಳಶ್ರು ಜಲಂಗಳು ಸುರಿಯದಿದ್ದಡೆ :

ತನುವಿನೊಂದಿಗೆ ತನು ಬೆರೆಯಲು ತನುವನ್ನು ಕರೆದುಕೊಂಡು ಹೋಗುವ ಅಜ್ಞಾನಿ ಮನಕ್ಕೆ ತನುವಿನಲ್ಲಿಯೇ ಇದ್ದ ಘನ ದೇವನ ದರ್ಶನ ಆಗುವುದಿಲ್ಲ. ಆ ಗುರುದೇವನನ್ನು ಕಂಡು ಆನಂದ ಭಾಷ್ಪಗಳು ಉಕ್ಕಿ ಹರಿಯದಿದ್ದಡೆ ತನು ಅರಿವಿನ ಕುಲವೆಂದು ಕರೆಸಿಕೊಳ್ಳಲೂ ನಾಚಿಕೆಯಾಗುತ್ತದೆ.

ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ :

ಭಗವದ್ಗೀತೆಯಲ್ಲಿ , ಬೈಬಲ್‌ನಲ್ಲಿ , ಪುರಾಣ ಪುಣ್ಯ ಕತೆಗಳಲ್ಲಿ , ವೇದ ಆಗಮ ಉಪನಿಷತ್‌ಗಳಲ್ಲಿ, ಪುಣ್ಯ ಕ್ಷೇತ್ರಗಳಲ್ಲಿ, ಸಾದು ಸಂತ ಸತ್ಪುರುಷರಲ್ಲಿ, ಮಠ ಚರ್ಚ್ ಮಂದಿರಗಳಲ್ಲಿ ಹುಡುಕಿದರೂ ಮನಕ್ಕೆ ಮಹಾದೇವನ ದರ್ಶನ ಆಗುವುದಿಲ್ಲ. ಮನಕ್ಕೆ ಮಹಾದೇವ ತನುವಿನಲ್ಲಿಯೇ ದರುಶನವಿತ್ತು ನುಡಿದು ಹೇಳುವಲ್ಲಿ, ನುಡಿ ಕೇಳಿ ಗದ್ಗದಂಗಳು ಹೊರಸೂಸದಿದ್ದರೆ ಅರಿವಿನ ಮೇಲಿಟ್ಟ ಭಕ್ತಿಗಿದು ಚಿಹ್ನವೆ ?

ತನುವಿನಲ್ಲಿಯೇ ಇರುವ ಅರಿವೆಂಬ ಗುರುದೇವನನ್ನು ಹುಡುಕುವ ಛಲ ಮನದಲ್ಲಿ ಇಲ್ಲವಾಗಿ, ಮನ ಡಂಭಕ ಕಾಣಿರೆ ! ತನುವಿನಲ್ಲಿಯೇ ಇದ್ದು ತನು ವನ್ನು ಹಗಲಿರುಳೆನ್ನದೆ ಸಂಕಟ ವೊಡ್ಡುವ ಮನ ತನುವಿನ ಕಡು ವೈರಿ ಕಾಣಿರೆ !

ತನುವಿನಲ್ಲಿಯೇ ತನ್ಮಯವಾದ ಘನದಲ್ಲಿ ಮನ ಬೆರೆತು ಮಹಾದೇವನ ತನುವಿನೊಂದಿಗೆ ಕರಗಬೇಕು. ಮನಕ್ಕೆ ಇದು ಕರಗತವಾಗಬೇಕು.

379

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು
ಅರಸರಿಯದ ಬಿಟ್ಟಿಯ ಮಾಡುವೆನು.
ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲರಿಯದ ಉಪಚಾರಿಯಾನು ,
ಸ್ಥಾವರ ಜಂಗಮವರಿಯದ ಪೂಜಕ ನಾನು ,
ಮತ್ತೆ ನಾಚದೆ, ಕೂಡಲಸಂಗಮದೇವಯ್ಯಾ ,
ಜಂಗಮವೆನ್ನ ಪ್ರಾಣಲಿಂಗವೆಂಬೆನು.

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು ಅರಸರಿಯದೆ ಬಿಟ್ಟಿಯ ಮಾಡುವೆನು :

ಬೆಟ್ಟದ ಕಲ್ಲನ್ನು ತಂದು ಕಲಾವಿದನಿಗೆ ಕೊಟ್ಟು , ದೇವರನ್ನು ಮಾಡಿಸಿ, ಪೂಜಿಸುವ ಅಜ್ಞಾನಿ ನಾನು. ಹಾಲು ತುಪ್ಪ ಜೇನು ಮೊಸರು ಹಣ್ಣು ಬೆರೆಸಿ ಕಲ್ಲನ್ನೇ ದೇವರೆಂದು ತಿಳಿದು ನಿತ್ಯ ಅಭಿಷೇಕ ಮಾಡುವ ಅಜ್ಞಾನಿ ನಾನು. ಕಲ್ಲಿನಲ್ಲಿಯೇ ಹೆಣ್ಣು ದೇವರನ್ನು ಕೆತ್ತಿಸಿ, ಗಂಡು ದೇವರೊಂದಿಗೆ ಕಲ್ಯಾಣೋತ್ಸವ ಮಾಡಿ ಚತ್ರಿ ಚಾಮರವ ಬೀಸಿ ಶಯನ ಗೃಹಕ್ಕೆ ಕಳಿಸುವ ಅಜ್ಞಾನಿ ನಾನು. ಕಲ್ಲನ್ನು ಕಲ್ಲು ಎಂದು ಹೇಳುವ ಅರಿವಿನ ಅರಸನನ್ನು ತಿಳಿಯದೆ, ಕೆತ್ತಿದ ಕಲ್ಲನ್ನು ದೇವರೆಂದು ಪೂಜಿಸುವ ಅಜ್ಞಾನಿ ನಾನು. ಕಲ್ಲಿನ ಮೇಲೆ ನಿಂತು ಕಲ್ಲನ್ನು ಪೂಜಿಸುವ ಬಿಟ್ಟಿಯ ಪೂಜೆಯನ್ನು ಅರಿವಿನ ಅರಸನನ್ನು ಅರಿಯದೆ ನೂರು ವರುಷಗಳವರೆಗೂ ಮಾಡುವುದೆ ?

ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲರಿಯದ ಉಪಚಾರಿಯಾನು:

ಕಾಲಿಗೆ ತಾಗಿದ ಕಲ್ಲಿನ ಸುಖವನ್ನು ಅರಿವೆಂಬ ಜಂಗಮನಿಗೆ ಅರ್ಪಿಸಲರಿಯದೆ ಮತ್ತೆ ಲಿಂಗ ಜಂಗಮನನ್ನು ಪೂಜಿಸುವ ಉಪಚಾರದ ಪೂಜಕ ನಾನು. ಕಣ್ಣಿಗೆ ತಾಗಿದ ಲೋಹದ ಸುಖವನು ಅರಿವೆಂಬ ಜಂಗಮನಿಗೆ ಅರ್ಪಿಸದೆ ಚಿನ್ನದ ಕಿರೀಟ ಮಾಡಿಸಿ ದೇವರಿಗೆ ಅರ್ಪಿಸಿದ ಉಪಚಾರಿಯಾನು. ಸ್ಥಾವರಕ್ಕಳಿವುಂಟು, ಅರಿವಿಗೆ ಅಳಿವಿಲ್ಲವೆಂದು ಅರಿತರೂ ಅರಿಯದೆ ಸ್ಥಾವರ ಪೂಜಿಸುವ ಪೂಜಕ ನಾನು. ಮತ್ತೆ ನಾಚಿಕೆ ಇಲ್ಲದೆ ಕೂಡಲಸಂಗಮದೇವಯ್ಯಾ ಜಂಗಮ ಎನ್ನ ಪ್ರಾಣ ಜೀವಾಳ ವೆಂಬೆನು.

380

ಆವಗೆಯ ಲೊದಗಿದ ಕಪ್ಪಿನಂತೆ
ಅಮೃತದೊಳಗಿದ್ದ ಸರ್ಪನ ತನುವಿನಂತೆ
ಇರ್ದೆನಯ್ಯಾ ಹೊರಗೆ ನುಂಪಾಗಿ ,
ಸಿಂಹಕ್ಕೊಲಿದ ಮದಕರಿಯಂತೆ
ಆನು ಜಂಗಮಕ್ಕೊಲಿದೆನಯ್ಯಾ , ಕೂಡಲಸಂಗಮದೇವಾ.

ಹಸಿ ಮಡಕೆಗಳನ್ನು ಸುಡಲು ರಚಿಸಿದ ಆವಗೆಯಲ್ಲಿ ಅಗ್ನಿ ಸದಾ ಉರಿಯುತ್ತಿರುತ್ತದೆ. ಆ ಅಗ್ನಿಯಿಂದಲೇ ಹುಟ್ಟಿದ ಕಪ್ಪು ಶ್ರೇಷ್ಟವಲ್ಲ. ಅದನ್ನು ಯಾರೂ ನೋಡುವುದಿಲ್ಲ. ಆವಗೆಯನ್ನು ಮಡಕೆಯನ್ನು ಮಾತ್ರ ಗಮನಿಸುತ್ತಾರೆ.

ತನುವಿನಲ್ಲಿ ಅಮೃತದ ಅರಿವಿನ ಬೆಳಕಿದೆ. ಮನವೆಂಬ ಸರ್ಪವೂ ಇದೆ. ಅದು ಅರಿವಿನ ಬೆಳಕಿನಿಂದ ಹುಟ್ಟಿದ್ದ ನೆರಳು. ಅರಿವಿನ ತನು ಕಾಣುತ್ತದೆಯೇ ಹೊರತು ತನುವನ್ನು ತಲ್ಲಣಗೊಳಿಸುವ ಮನವೆಂಬ ಸರ್ಪ ಕಾಣುವುದಿಲ್ಲ. ಸರ್ಪ ಅರಿವೆಂಬ ಅಮೃತ ಹೀರುತ್ತಾ ತನುವಿನಲ್ಲಿ ಇಂಪಾಗಿದ್ದರೆ ಅದು ತನುವಿಗೆ ಶೋಭೆ.

ತನುವಿನಲ್ಲಿ ಅರಿವೆಂಬ ಸಿಂಹವೂ ಇದೆ. ಅಜ್ಞಾನವೆಂಬ ಮದ ತುಂಬಿದ ಮದ್ದಾನೆಯೂ ಇದೆ. ಆನೆಯ ಮದ ಅದನ್ನು ಹೊತ್ತ ತನುವನ್ನು ಲೆಕ್ಕಿಸುವುದಿಲ್ಲ. ಆದರೆ ಸಿಂಹದ ಮುಂದೆ ಆನೆಯ ಆಟ ನಡೆಯುವುದಿಲ್ಲ.

ಆವಗೆಯಲೊದಗಿದ ಕಪ್ಪು ಆವಗೆಯಲ್ಲಿದ್ದಂತೆ, ತನುವಿನೊಳಗಿದ್ದ ಮನವೆಂಬ ಸರ್ಪ ತನುವಿನ ಘನದಾಶ್ರಯದಲ್ಲಿ ಸೊಂಪಾಗಿರುವಂತೆ, ಸಿಂಹಕ್ಕೆ ಒಲಿದ ಮದಕರಿಯಂತೆ, ಆನು ಎನ್ನುವ ಅಹಂಕಾರಿ ಮನ ಅರಿವಿನ ಜಂಗಮನಿಗೆ ಒಲಿದು ತನುವಿನಲ್ಲಿಯೇ ಸಂಗಮವಾಗಿ ಕೂಡಲಸಂಗಯ್ಯನಾದಂತೆ.

381

ಸ್ಥಾವರ ಜಂಗಮ ಒಂದೇ ಎಂದು ಇದಿರ ನುಡಿವೆ
ನಾನೆಡುವುತಿಪ್ಪೆ ಸಹಜನಲ್ಲಯ್ಯಾ !
ಆನು ಸಮ್ಯಕ್ಕನಲ್ಲಯ್ಯಾ !
ಆನು ಭಯ ಲಿಂಗಸಂಗಿ ಎಂಬೆನು.
ಈ ನುಡಿ ಸುಡದಿಹುದೆ ಕೂಡಲಸಂಗಮದೇವಾ ?

ಸ್ಥಾವರ ಜಂಗಮ ಒಂದೇ ಎಂದು ಇದಿರ ನುಡಿವೆ ನಾನೆಡುವುತಿಪ್ಪೆ ಸಹಜನಲ್ಲಯ್ಯಾ !:
ತನು ಸ್ಥಾವರವಾದರೆ, ತನುವಿನ ಅರಿವನ್ನು ಚಾಚೂ ತಪ್ಪದೆ ಪಾಲಿಸುವವ ಜಂಗಮ. ಅಂಗ ಸ್ಥಾವರ, ಅಂಗದ ಕಣ ಕಣದಲ್ಲಿರುವ ಲಿಂಗವೇ ಅರಿವು. ಆ ಅರಿವನ್ನು ಚಾಚೂ ತಪ್ಪದೆ ಪಾಲಿಸುವವನೇ ಜಂಗಮ ! ಅಂಗವೆಂದರೇನು, ಲಿಂಗವೆಂದರೇನು, ಜಂಗಮವೆಂದರೇನು ? ಎಂದು ತಿಳಿಯದೆ ಅಂಗದಲ್ಲಿಯೇ ವಾಸವಾಗಿ ಅಂಗವನ್ನು ದುರ್ಬಳಕೆ ಮಾಡಿಕೊಳ್ಳುವುದೇ ಮನ, ಈ ಮನವೆಂಬ

ಅಹಂಕಾರಿ ಮರ್ಕಟ ಸಹಜವಲ್ಲ!

ಅಂಗವೆಂಬ ಸ್ಥಾವರದ ಮನೆಯ ಮಾಲೀಕನಾದ ಲಿಂಗಯ್ಯನನ್ನು ಹಾಗೂ ಜಂಗಮನನ್ನು ಮನೆಯಲ್ಲಿಯೇ ಬಂಧಿಸಿ, ಮನ ಸ್ಥಾವರವೆಂಬ ಅಂಗದೊಂದಿಗೆ ಸರಸವಾಡುತ್ತದೆ. ಅಂಗಕ್ಕೆ ಒಮ್ಮೆ ವಿಟನ ವೇಷ, ಮತ್ತೊಮ್ಮೆ ವೇಶ್ಯೆಯ ವೇಷ. ಕಳ್ಳ ವಿಷಯಲಂಪಟ ಭ್ರಷ್ಟಾಚಾರಿಯ ವೇಷ. ಅಹಂಕಾರಿ ಅಧಿಕಾರಿಯ ವೇಷ ಹಾಕುತ್ತದೆ. ಜನ, ಪೊಲೀಸ್, ಸರಕಾರ, ಕೋರ್ಟ್‌ಗಳು ಸ್ಥಾವರವೆಂಬ ಅಂಗವನ್ನು ಗುರುತಿಸಿ ಶಿಕ್ಷೆ ಕೊಡುತ್ತಾರೆ. ಯಾವ ತಪ್ಪನ್ನು ಮಾಡದ, ವೇದ ಉಪನಿಷತ್ ಭಗವದ್ಗೀತೆ ಬೈಬಲ್‌ಗಳಿಗೆ ಜನ್ಮವಿತ್ತ ; ಕ್ರಿಸ್ತ, ಕ್ರಿಷ್ಣ, ಬಸವಾದಿ ಶರಣರನ್ನು ದಾಸವರೇಣ್ಯರನ್ನು ಬೆಳಗಿದ ಸಹಜ ಲಿಂಗಯ್ಯ ಮತ್ತು ಜಂಗಮನನ್ನು ನೋಡುವುದೇ ಇಲ್ಲ. ಇವುಗಳಿಗೆ ತನುವಿನ ಇವರಿಬ್ಬರು ಯಾರೆಂದು ಪರಿಚಯವೂ ಇಲ್ಲ.

ಆನು ಸಮ್ಯಕ್ಕನಲ್ಲಯ್ಯಾ :

ಅರಿವಿನ ಸಂಗಯ್ಯನಿದ್ದ, ಅದನ್ನು ಪಾಲಿಸುವ ಜಂಗಮನಿದ್ದ ಅಂಗದಲ್ಲಿ, ಅಹಂಕಾರಿ ಮನವೆಂಬ ನಾನು, ಅವರಿಬ್ಬರನ್ನು ಸಮರ್ಥವಾಗಿ ಸಹಜವಾಗಿ ಬಳಸಿಕೊಳ್ಳದ ಅಯೋಗ್ಯ ನಾನು. ಅಷ್ಟೇಕೆ ಅವರೆಂದರೆ ಯಾರು ? ಅಂಗದಲ್ಲಿ ಅವರದೇನು ಕೆಲಸ ? ಅವರು ಹಗಲಿರುಳೂ ಮನವೆಂಬ ನನಗೆ ಹೇಗೆ ಭೋದಿಸುತ್ತಾರೆ ಎನ್ನುವುದನ್ನು ತಿಳಿಯದ ಸಾಮರ್ಥ್ಯ ಇಲ್ಲದವ ನಾನು.

ಆನುಭಯ ಲಿಂಗಸಂಗಿ ಎಂಬೆನು. ಈ ನುಡಿ ಸುಡದಿಹುದೆ ಕೂಡಲ ಸಂಗಮದೇವಾ ?:

ಶರಣರು ಸಮರ್ಥರು. ಅಂಗವನ್ನು, ಲಿಂಗ ಅದರಲ್ಲಿರುವ ಜಂಗಮನನ್ನು, ಅಂಗದಲ್ಲಿರುವ ಮನದಿಂದಲೇ ತಿಳಿದುಕೊಂಡು ಲಿಂಗ ಜಂಗಮನಿಗೆ ಶರಣುಹೋದರು.ಅಂಗದಲ್ಲಿರುವ ಲಿಂಗ ಜಂಗಮರೆಂಬ ಉಭಯರ ಸಂಗ ಮಾಡಿದವರು. ಅವರು ಮಾತ್ರ ಅಂಗ ಲಿಂಗ ಜಂಗಮರನ್ನು ತಿಳಿದು ಅಂಗದಲ್ಲಿಯೇ ಸಂಗಮವಾದವರು. ಅವರು ಮಾತ್ರ ಲಿಂಗ ಜಂಗಮ ಎನ್ನುವ ನುಡಿಯನ್ನು ನುಡಿಯಲು ಅರ್ಹರು. ಅಂಗದ ಮೇಲೆ ಲಿಂಗ ಧರಿಸಿದವರು, ಶರಣರು ನುಡಿದ ಲಿಂಗ ಜಂಗಮವೆಂಬ ನುಡಿಯನ್ನು ನುಡಿಯಬಹುದೆ ? ಲಿಂಗವೆಂದರೇನು ? ಜಂಗಮವೆಂದರೇನು ಎಂದು ಅರಿಯದೆ ಲಿಂಗ ಧರಿಸಿ ಲಿಂಗವೆಂದರು, ಲಿಂಗ ಧರಿಸಿ ಜಂಗಮವೆಂದರು !

ಧರಿಸಿದ ಲಿಂಗದ ಪರಿಚಯವಿಲ್ಲ, ಜಂಗಮನ ಪರಿಚಯವಿಲ್ಲದವರು ನುಡಿಯಿಂದ ಉಭಯ ಸಂಗಿ ಎಂದು ನುಡಿಯಬಹುದೆ ? ನುಡಿದ ಈ ನುಡಿ ನುಡಿದವರನ್ನು ಸುಡದಿಹುದೆ ?

382

ಮಸಿಯನೇಸು ಕಾಲ ಬೆಳಗಿದಡೆ, ಬಿಳಿದಾಗಬಲ್ಲುದೆ ?
ಕರ್ಮಸ್ಥಿತಿ ಬೆನ್ನಬಿಡದು.
ಅನಂತ ಕೋಟಿ ಸನ್ಮಾನವ ಮಾಡಿದಡೇನು ?
ನಿಮಿಷದ ಉದಾಸೀನ ಕೆಡಿಸಿತ್ತು !
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯಾ !

ಮಸಿಯನೇಸು ಕಾಲ ಬೆಳಗಿದಡೆ, ಬಿಳಿದಾಗ ಬಲ್ಲುದೆ ಕರ್ಮಸ್ಥಿತಿ ಬೆನ್ನ ಬಿಡದು:

ಬೆಂಕಿಯಿಂದ ಹುಟ್ಟಿದ ಮಸಿಯನ್ನು ಬೆಳಕಿನಿಂದ ಬೆಳಗಿದಡೆ ಅದು ಬಿಳಿದಾಗಲು ಸಾಧ್ಯವಿಲ್ಲ. ಬೆಂಕಿಯಿಂದ ಬೆಳಕು ಹುಟ್ಟಿದೆ, ಅದು ಬೆಂಕಿಯಲ್ಲ. ಬೆಂಕಿಯಿಂದ ಮಸಿ ಹುಟ್ಟಿದೆ ಅದು ಬೆಳಕಿನಂತೆ ಬೆಳಗುವುದಿಲ್ಲ. ಅದನ್ನು ಬೆಳಗಿದರೂ ಬೆಳಕು ಕೊಡುವುದಿಲ್ಲ. ಲಾಂದ್ರದ ಗಾಜಿಗೆ ತಾಗಿದ ಮಸಿಯನ್ನು ಬೆಳಗಬಹುದು, ಮಸಿಯನ್ನೇ ಬೆಳಗಲು ಬರುವುದಿಲ್ಲ.

ಬೆಂಕಿ, ಬೆಳಕಿಗೂ ಮಸಿಗೂ ಜನ್ಮ ಕೊಟ್ಟಿದೆ. ಬೆಳಕು ಬೆಂಕಿಯಲ್ಲ, ಮಸಿಯೂ ಬೆಂಕಿಯಲ್ಲ. ಹಾಗೆ ತನು ಅರಿವಿಗೆ ಜನ್ಮ ಕೊಟ್ಟಿದೆ, ಮನಕ್ಕೂ ಜನ್ಮ ಕೊಟ್ಟಿದೆ ! ಅರಿವು ಬೆಳಕಾದರೆ, ಮನ ಅರಿವಿನ ಬೆಳಕಿನಿಂದ ಹುಟ್ಟಿದ ಕತ್ತಲು. ಸೂರ್ಯ ಬರೀ ಬೆಳಕು ಚೆಲ್ಲುತ್ತಾನೆ, ಆ ಬೆಳಕಿನ ನೆರಳಿನಿಂದಲೇ ಕತ್ತಲೆ ಸೃಷ್ಠಿಯಾಗಿದೆ ! ಕತ್ತಲು ಬೆಳಗುವ ಸೂರ್ಯನನ್ನೇ ಕಾಣ ಗೊಡುವುದಿಲ್ಲ, ಸೂರ್ಯ ಬೆಳಗಿದ ವಸ್ತುಗಳನ್ನೂ ಕಾಣಗೊಡುವುದಿಲ್ಲ. ಸೂರ್ಯನನ್ನೂ ಸೂರ್ಯ ಬೆಳಗಿದ ವಸ್ತುಗಳನ್ನು ಕತ್ತಲು ತನ್ನ ಗರ್ಭದಲ್ಲಿಟ್ಟುಕೊಳ್ಳುತ್ತದೆ. ಇದು ಸೋಜಿಗ, ಆದರೂ ಸತ್ಯ ! ಬೆಳಕಿನಿಂದ ಹುಟ್ಟಿದ ಕತ್ತಲಿಗೆ ಬೆಳಕನ್ನು ಬಂಧಿಸುವ ಶಕ್ತಿಯಿದೆ.

ಬೆಳಗುವ ಸೂರ್ಯನ, ಉರಿಯುವ ಲಾಂಧ್ರದ ಕರ್ಮಸ್ಥಿತಿ, ಬೆಳಕಿನ ಬೆನ್ನಬಿಡದ ಕರ್ಮಸ್ಥಿತಿ.

ಅನಂತಕೋಟಿ ಸನ್ಮಾನವ ಮಾಡಿದಡೇನು ? ನಿಮಿಷದ ಉದಾಸೀನ ಕೆಡಿಸಿತ್ತು :

ತನುವಿನಲ್ಲಿರುವ ಅರಿವು ಬೆಳಗುತ್ತದೆ. ಆ ಬೆಳಕಿನಿಂದ ಮನ ಹುಟ್ಟಿದೆ. ತನು ಅರಿವಿನ ಸಂಪತ್ತು. ಆ ಬೆಳಕಿನ ಸಂಪತ್ತಿನಿಂದ ಹುಟ್ಟಿದ ಮನ ಕತ್ತಲು ! ಕತ್ತಲ ಮನ ಬೆಳಗಿದ ತನುವನ್ನೇ ಮುಸುಕಿ ಏನೇನೂ ಕಾಣದಂತೆ ಮಾಡಿದೆ.

ಕಲ್ಲನ್ನು ನೋಡಿ, ಕಲ್ಲು ಎಂದು ಹೇಳುವ ಮನ, ಅದೇ ಕಲ್ಲನ್ನು ಕೆತ್ತಿ ದೇವರನ್ನಾಗಿಸುತ್ತದೆ. ತನುವಿನಿಂದಲೇ ನಿರ್ಮಿಸಿದ ದೇವಸ್ಥಾನವನ್ನು ತನುವಿನಿಂದಲೇ ಆರಾಧಿಸುವಂತೆ ಮಾಡುತ್ತದೆ. ಒಂದೇ ಕಲ್ಲಿನಲ್ಲಿ ಎರಡು ದೇವರನ್ನು ಮಾಡಿ, ಒಂದನ್ನು ಹೆಣ್ಣು ದೇವರೆಂದು ಮತ್ತೊಂದನ್ನು ಗಂಡುದೇವರೆಂದು ಕರೆಯುತ್ತದೆ. ಸಾಲಿಡಿದು ನಿಂತು ನಿತ್ಯ ಕಲ್ಯಾಣೋತ್ಸವ ಮಾಡಿ ಶೋಬಾನೆ ಪದ ಹಾಡುತ್ತದೆ. ಕೆತ್ತಿದ ಎರಡು ಕಲ್ಲಿನ ತುಂಡುಗಳನ್ನು ಶಯನಗೃಹಕ್ಕೆ ಕಳಿಸುತ್ತದೆ. ತಾನು ದೇವಸ್ಥಾನ ನಿರ್ಮಿಸಿದ ಮಹಾದಾನಿಯೆಂದು ಅನಂತಕೋಟಿ ಸನ್ಮಾನ ಮಾಡಿಸಿಕೊಳ್ಳುತ್ತದೆ.

ಅರಿವಿನ ತನುವಿನಿಂದಲೇ ಜನ್ಮ ತಾಳಿದ ಮನ, ಅರಿವಿನ ತನುವಿಗೆ ಅಜ್ಞಾನದ ಮುಸುಕು ಹಾಕಿ ಅರಿವಿನ ತನುವನ್ನೇ ಹಂತ ಹಂತವಾಗಿ ಕೊಲ್ಲುತ್ತದೆ. ಪೂಜಿಸುವ ದೇವರನ್ನು ಕಲ್ಲೆಂದು ತಿಳಿಯಲು ನಿಮಿಷದ ಉದಾಸೀನ ಸಾಕು. ಮಾಡಿಸಿಕೊಂಡ ಅನಂತಕೋಟಿ ಸನ್ಮಾನಗಳು ನೆಲಕಚ್ಚುತ್ತವೆ. ಕಲ್ಲು ಕಲ್ಲೇ, ಕೆತ್ತಿದ ಕಲ್ಲು ಕೂಡಾ ಕಲ್ಲೇ; ಎಂದು ಮನ ಅರಿವಿನ ತಾಣಕ್ಕೆ ಪಯಣಿಸಿ ಅರಿವಾಗುತ್ತದೆ. ಪುನಃ ಜಂಗಮನ ಸ್ಥಾನಕ್ಕೆ ಪಯಣಿಸಿ ಕಲ್ಲೆಂದು ನಿರ್ಧರಿಸುತ್ತದೆ.

ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಬಕ ನಾನಯ್ಯಾ :

ತನುವಿನ ಕಣ ಕಣದಲ್ಲಿದ್ದ ಅರಿವು ಕಣ್ಣಿಗೆ ಹರಿದು ಕಲ್ಲೆಂದು ಹೇಳಿತು, ಕಣ್ಣಿನ ಬೆಳಕಿನಿಂದಲೇ ಹುಟ್ಟಿದ ಮನ ದೇವರೆಂದು ಹೇಳಿತು, ಬೆಳಗಿದ ಕಣ್ಣಿಗೆ ಕತ್ತಲೆಯ ಮುಸುಕು ಹಾಕಿತು. ಕಲ್ಲನ್ನು ದೇವರೆಂದು ನೋಡುವ ಮನ ಕಣ್ಣಿನಲ್ಲಿದ್ದ ಅರಿವನ್ನು ಬಳಸಿಕೊಂಡು ನೋಡಿದರೆ ಅದು ದೇವರಲ್ಲ! ಬರೀ ಕಲ್ಲು, ಕೆತ್ತಿದ ಕಲ್ಲು ! ಕಣ್ಣಿನಲ್ಲಿಯೇ ಇದ್ದ ಜಂಗಮನನ್ನು ಬಳಸಿಕೊಂಡು ನೋಡಿದರೆ ಪೂಜಿಸಲಿಲ್ಲ, ಆರಾಧಿಸಲಿಲ್ಲ. ಕಲ್ಲನ್ನು ಕಲಾವಿದನಿಗೆ ಕೊಟ್ಟು ದೇವರನ್ನಾಗಿ ಮಾಡಲಿಲ್ಲ. ಚರ್ಚ್ ಮಂದಿರ ನಿರ್ಮಿಸಲಿಲ್ಲ. ಕಲ್ಲೊಳಗಣ ಬೆಲ್ಲ ಮೆದ್ದವನೇ ಜಾಣ ! ಕಲ್ಲು ಕೊಟ್ಟು ದೇವರನ್ನಾಗಿ ಮಾಡಿ

ಆ ದೇವರಿಗೆ ಬೆಲ್ಲದ ನೈವೇದ್ಯ ಹಿಡಿದ ಮನವೇ ಕೋಣ !

383

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ !
ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ !
ಕೂಡಲಸಂಗಮದೇವಾ,
ಆನು ಮಾಡಿದೆನೆಂಬ ಕಿಚ್ಚು ಸಾಲದೆ ?

ಆನು ಮಾಡಿದೆನು ಎಂಬ ಕಿಚ್ಚು ಸಾಲದೆ ?:

ಎಳ್ಳಿಲ್ಲದ ಗಾಣವನು ಓಡಿಸಿದರೆ ತನಗೂ ಶ್ರಮ, ಎತ್ತಿಗೂ ಶ್ರಮ, ಗಾಣವೂ ಮುರಿದು ಹೋಗುವುದು. ಹಾಗೆಯೇ ಅನ್ನದಾನ, ಭೂದಾನ, ಧನಕನಕಾದಿಗಳ ದಾನ, ಮಠ ಮಂದಿರ ಚರ್ಚ್‌ಗಳ ನಿರ್ಮಾಣಕ್ಕಾಗಿ ಧನ ದಾನ ಶ್ರಮದಾನ ಮಾಡುವುದು, ಎಳ್ಳಿಲ್ಲದ ಗಾಣವನಾಡಿದಂತೆ.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ, ಮಾಡುವ ನೀಡುವ ನಿಜಗುಣವುಳ್ಳಡೆ ಕೂಡಿಕೊಂಬ ನಮ್ಮ ಕೂಡಲಸಂಗಮದೇವ. ಮಾಡುವ ಕೆಲಸದ ನಿಜವನು ಅರಿಯದೆ ಮಾಡುವುದು ; ಮಾಡಿದೆನೆಂಬ ಅಜ್ಞಾನದ ಕಿಚ್ಚನ್ನು ಎದೆಯಲ್ಲಿಟ್ಟುಕೊಂಡು; ಮಾಡಿದೆ ಮಾಡಿದೆನೆಂದು ಡಂಗುರ ಹೊಡೆಯುತ್ತ ಬದುಕುವುದು. ಇದು ಅಜ್ಞಾನದ ಕೆಲಸವೆಂದು ಮನಕ್ಕೆ ಅರಿವಾಗುವುದೇ ಇಲ್ಲ.

ಮಂದಿರ ನಿರ್ಮಾಣ ಮಾಡಿದ್ದು ತನು ; ಚರ್ಚ್ ನಿರ್ಮಾಣ ಮಾಡಿದ್ದು ತನು; ಇವುಗಳ ಹೆಸರು ಬೇರೆ ಬೇರೆಯಾದರೂ ಬಳಕೆಯಾದ ಕಲ್ಲು ಸಿಮೆಂಟ್ ಮರಳು ಮಾತ್ರ ಒಂದೇ. ಕಟ್ಟಿದ ತನು ಒಂದೇ ; ಕಟ್ಟಿಸಿದ ತನು ಒಂದೇ. ನಾನು ಕಟ್ಟಿದೆ ನಾನು ದಾನ ಮಾಡಿದೆ ಎನ್ನುವ ಅಹಂಕಾರವೂ ಒಂದೇ. ಮಂದಿರಕ್ಕೆ ಹೋದ ತನು ಚರ್ಚಿಗೆ ಹೋಗುವುದಿಲ್ಲ ; ಚರ್ಚಿಗೆ ಹೋದ ತನು ಮಂದಿರಕ್ಕೆ ಹೋಗುವುದಿಲ್ಲ. ಮಂದಿರ ನೋಡಿದರೆ ಒಂದು ತನುವಿಗೆ ಸಂಕಟವಾಗುತ್ತದೆ. ಚರ್ಚ್ ನೋಡಿದರೆ ಮತ್ತೊಂದು ತನುವಿಗೆ ಸಂಕಟವಾಗುತ್ತದೆ. ಕಲ್ಲು ಮರಳು ಸಿಮೆಂಟ್ ನೋಡಿದರೆ ಯಾವ ತನುವಿಗೂ ಸಂಕಟವಾಗುವುದಿಲ್ಲ. ಮಾಡಿದರೆ ಕಿಚ್ಚು, ಮಾಡಿದ್ದನ್ನು ನೋಡಿದರೆ ಕಿಚ್ಚು.

ಮಾಡಿದ್ದಾದರೂ ಏನು ? ಮರಳು ತನ್ನದಲ್ಲ, ಕಲ್ಲು ತನ್ನದಲ್ಲ, ಸಿಮೆಂಟ್ ತನ್ನದಲ್ಲ, ಕರೆನ್ಸಿಯೂ ತನ್ನದಲ್ಲ, ಧನಕನಕಾದಿಗಳೂ ತನ್ನವಲ್ಲ, ದಾನ ಮಾಡುವ ಅನ್ನವು ತನ್ನ ಪ್ರೊಡೆಕ್ಟ್ ಅಲ್ಲ! ಹಗಲಿರುಳೂ ದುಡಿದು ಸಂಗ್ರಹಿಸಿದ, ಹೆಚ್ಚಾದುದನ್ನು ಬೇಕಾದವರಿಗೆ ಹಂಚಿದ. ಬೇಡಿದವನು ಭಿಕ್ಷುಕನಾದ ; ನೀಡಿದವನು ದಾನಿಯಾದ. ಮಾಡಿದೆ ಬೇಡಿದೆನೆಂಬ ಕಿಚ್ಚು ಮಾತ್ರ ತನುಗಳಲ್ಲಿ ಉಳಿಯಿತು.

ತನ್ನಂತೆಯೇ ಇರುವ ತನುವಿಗೆ ನೀಡಿ ಭಿಕ್ಷುಕನೆಂದು ಕರೆಯುವುದೇ ? ತನ್ನಂತೆಯೇ ಇರುವ ತನುವನ್ನು ಬೇಡಿ ದಾನಿ ಎಂದು ಕರೆಯುವುದೆ ? ಮರಳು, ಕಲ್ಲು , ಚಿನ್ನ ಭೂಮಿಯ ದಾನ ; ಅನ್ನವೂ ಭೂಮಿಯ ದಾನವೇ, ತೊಡುವ ವಸ್ತ್ರವೂ ಭೂಮಿ ನೀಡಿದ ದಾನವೇ ಆಗಿದೆ. ನೀಡಿದವನು, ಬೇಡಿದವನು ಭೂಮಿಯಿಂದ ಪಡೆದ ವಸ್ತುಗಳೇ ಆಗಿವೆ.

ಇಳೆ ನಿಮ್ಮ ದಾನ ; ಬೆಳೆ ನಿಮ್ಮ ದಾನ ; ಸುಳಿದು ಬೀಸುವ ಗಾಳಿ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ. ಭೂಮಿ ಬಯಲಿನಿಂದ

ಸೃಷ್ಟಿಯಾಗಿದೆ, ಬೆಳೆಯೂ ಬಯಲಿನಿಂದಲೇ ಸೃಷ್ಟಿಯಾಗಿದೆ. ತನು ಕೂಡಾ ಬಯಲು ಬೀಜದಿಂದಲೇ ಸೃಷ್ಟಿಯಾಗಿದೆ. ತನುವಿನೊಳಗೆ ಸುಳಿದು ಬೀಸುವ ಗಾಳಿ ಕೂಡಾ ಬಯಲಿನಿಂದಲೇ ಸೃಷ್ಟಿಯಾಗಿದೆ. ನೋಡುವ ಕಣ್ಣು, ಕೇಳುವ ಕಿವಿ, ಸ್ಪರ್ಶಿಸುವ ಶಕ್ತಿ ಉಳ್ಳ ಚರ್ಮ, ಪರಿಮಳದ ಆನಂದ ಹೀರುವ ಮೂಗು, ರುಚಿಸುವ ನಾಲಿಗೆಯನ್ನು ತನು ಬಯಲ ಬೀಜದಿಂದ ದಾನ ಪಡೆದಿದೆ. ಆ ಬಯಲೇ ತನುವಿನಲ್ಲಿ ಚುಳುಕಾಗಿ ಅರಿವಾಗಿದೆ. ಈ ಅರಿವಿನ ಬೆಳಕಿನಿಂದಲೇ ಮನ ಸೃಷ್ಟಿಯಾಗಿದೆ. ಈ ಎಲ್ಲ ಆನಂದ ಅನುಭವಿಸಬೇಕಾದ ಮನಕ್ಕೆ ಮರೆವು ಆಗಿದೆ. ಅರಿವಿನ ತನುವನ್ನು ಸದಾ ದುರ್ಬಳಕೆ ಮಾಡಿಕೊಳ್ಳುವ ಮನ ಎಳ್ಳಿಲ್ಲದ ಗಾಣಕ್ಕೆ ತನುವೆಂಬ ಎತ್ತನು ಬಿಗಿದು ಹಗಲಿರುಳೂ ಓಡಿಸುತ್ತದೆ. ಎಣ್ಣೆಯೂ ಬರುವುದಿಲ್ಲ; ಅರಿವಿನ ದೀಪವೂ ಬೆಳಗುವುದಿಲ್ಲ.

384

ಅಷ್ಟವಿಧಾರ್ಚನೆ ಷೋಡಶೋಪಚಾರವ
ಮಾಡುವ ಹಮ್ಮಿನಲ್ಲಿ ಬೆಂದೆನಯ್ಯಾ.
ಗುರುವೆಂದರಿಯೆ, ಲಿಂಗವೆಂದರಿಯೆ,
ಜಂಗಮವೆಂದರಿಯೆ, ಪ್ರಸಾದವೆಂದರಿಯೆ !
ಆನು ಬೆಂದೆನಯ್ಯಾ, ಕೂಡಲಸಂಗಮದೇವಾ
ಆನು ಮಾಡುವುದೆಲ್ಲ ಬರಿಯ ಉಪಚಾರವಯ್ಯಾ !

ಅಷ್ಟವಿಧಾರ್ಚನೆ : ಜಲ, ವಿಭೂತಿ, ಗಂಧಾಕ್ಷತೆ, ಪತ್ರಿ-ಪುಷ್ಪ, ಧೂಪ, ದೀಪ, ನೈವೇದ್ಯ, ವಂದನೆ.

ಷೋಡಶೋಪಚಾರ : ಅಭಿಷೇಕ, ವಿಭೂತಿ, ಗಂಧ, ಅಕ್ಷತೆ, ರುದ್ರಾಕ್ಷಿ, ಪತ್ರೆ, ಪುಷ್ಪ, ಧೂಪ, ದೀಪ, ಘಂಟನಾದ, ನೈವೇದ್ಯ, ಗೀತ, ಫಲ-ತಾಂಬೂಲ, ಸ್ತೋತ್ರ, ಪ್ರದಕ್ಷಿಣೆ, ನಮಸ್ಕಾರ. ಹೀಗೆ ಅಷ್ಟ ವಿಧದಿಂದ, ಷೋಡೋಶೋಪಚಾರದಿಂದ ದಣಿಯುತ್ತ ನಿತ್ಯ ಪೂಜಿಸಿ ಪೂಜಿಸಿ ಆಯುಷ್ಯವಿಡೀ ವ್ಯರ್ಥ ಕಳೆಯುತ್ತೇನೆ. ಶಬ್ದದಿಂದ, ದೃಶ್ಯದಿಂದ, ರುಚಿಯಿಂದ ಮುಕ್ತನಾಗುವುದು ಸಾಧ್ಯವಾಗುವುದಿಲ್ಲ.

ಗುರುವೆಂದರಿಯೆ, ಲಿಂಗವೆಂದರಿಯೆ, ಜಂಗಮವೆಂದರಿಯೆ, ಪ್ರಸಾದವೆಂದರಿಯೆ ! ಆನು ಬೆಂದೆನಯ್ಯಾ :

ತನುವಿನಲ್ಲಿ ನುಡಿಯಲು ಬಾರದ ನುಡಿಯಿಂದ ನುಡಿದು ಹೇಳುವ ಅರಿವೆಂಬ ಗುರುವಿದ್ದಾನೆ. ಆತನನ್ನು ತಿಳಿಯಲಿಲ್ಲ. ತನುವಿನ ಕಣ ಕಣದಲ್ಲಿ ಅರಿವೆಂಬ ಲಿಂಗವಿದೆ. ಅದನ್ನು ತಿಳಿಯಲಿಲ್ಲ. ಗುರುವಿನ ವಾಕ್ಯ ಪಾಲಿಸುವ ಜಂಗಮನಿದ್ದಾನೆ. ಆತನನ್ನು ತಿಳಿಯಲಿಲ್ಲ.

ಪ್ರಸಾದವೆಂದರಿಯೆ : ಸ್ಪರ್ಶಿಸಿದರೆ ದೇಹ ಕಾಮದಿಂದ ತಲ್ಲಣಗೊಳ್ಳುತ್ತದೆ. ಸ್ಪರ್ಶ, ದೇಹಕ್ಕೆ ಅರಿವಾಗಿ ಪ್ರಸಾದವಾಗಲಿಲ್ಲ. ನೋಡಿದರೆ ಕಣ್ಣು ಬೆಂಕಿ ಉಗುಳುತ್ತದೆ. ನೋಟದ ಬೆಳಕು ಕಣ್ಣಿಗೆ ಪ್ರಸಾದವಾಗಲಿಲ್ಲ. ರುಚಿಸಿದರೆ ತನು ಕೆಂಡಕಾರುತ್ತದೆ. ಪದಾರ್ಥ ನಾಲಿಗೆಗೆ ಪ್ರಸಾದವಾಗಲಿಲ್ಲ. ಮೂಸಿಸಿದರೆ ದೇಹ ನರಕ ಬಾಧೆಯಿಂದ ನರಳುತ್ತದೆ. ವಾಸನೆ ಮೂಗಿಗೆ ಪ್ರಸಾದವಾಗಲಿಲ್ಲ. ಶಬ್ದ ಬಡಿದರೆ ದೇಹ ಕಿಡಿ ಕಾರುತ್ತದೆ. ಶಬ್ದ ಕಿವಿಗೆ ಪ್ರಸಾದವಾಗಲಿಲ್ಲ.

ಊಟ ತನುವಿಗೆ ಪ್ರಸಾದವಾಗಿ ರಕ್ತ ಮೂಳೆ ಮಾಂಸ ಗಟ್ಟಿಗೊಂಡು ಚರ್ಮಕ್ಕೆ ಕಾಂತಿ ನೀಡುತ್ತದೆ. ಅಜೀರ್ಣವಾದರೆ ತನುವಿಗೆ ಸಂಕಟವನ್ನೊಡ್ಡುತ್ತದೆ. ಹೀಗೆಯೇ ನೋಡುವ ನೋಟ, ಕೇಳುವ ಕಣ್ಣು, ಮೂಸಿಸುವ ವಾಸನೆ, ಮುಟ್ಟುವ ಸ್ಪರ್ಶ, ರುಚಿಸುವ ಪದಾರ್ಥದ ರುಚಿಗಳೆಲ್ಲ ತನುವಿಗೆ ಪ್ರಸಾದವಾಗಬೇಕಲ್ಲ!

ಮನ, ಕೃತ್ರಿಮ ಸುಖ ದುಃಖಗಳನ್ನು ಸೃಷ್ಟಿಸಿಕೊಂಡು ಒಮ್ಮೆ ತನುವನ್ನು ಅರಳಿಸುತ್ತದೆ ಮತ್ತೊಮ್ಮೆ ಕೆರಳಿಸುತ್ತದೆ. ಅರಳುವುದು ಕೆರಳುವುದು ಅಜೀರ್ಣವೆಂದು ಮನಕ್ಕೆ ತಿಳಿಯುವುದಿಲ್ಲ. ಸುಖ ದುಃಖಗಳು ತನುವಿನಲ್ಲಿ ಜೀರ್ಣವಾಗದೆ ಉಳಿದು ತನು ಇರುವವರೆಗೆ ನೆನಪಿಗೆ ಬಂದು, ತನುವನ್ನು ಸುಖದುಃಖಕ್ಕೆ ಈಡುಮಾಡುತ್ತದೆ. ಅಂದಮೇಲೆ ರುಚಿಸಿದ್ದು, ಮೂಸಿಸಿದ್ದು, ಮುಟ್ಟಿದ್ದು, ನೋಡಿದ್ದು, ಕೇಳಿದ್ದು ತನುವಿಗೆ ಪ್ರಸಾದವಾಗಲಿಲ್ಲ.

ಅಷ್ಟ ವಿಧಾರ್ಚನೆ, ಷೋಢಶೋಪಾಚಾರದಿಂದ ದೇವರನ್ನು ಪೂಜಿಸಿದರೂ ಆ ದೇವರು ದೇಹದ ಬಾಧೆ ನಿಲ್ಲಿಸಲಿಲ್ಲ ! ನಿತ್ಯ ನಿತ್ಯ ಪೂಜಿಸುವೆನೆಂಬ ಅಹಂಕಾರದಿಂದ ದೇಹ ಬೆಂದು ಸುಣ್ಣವಾಯಿತು. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವನ್ನು ಅರಿಯಲಿಲ್ಲ. ಅಂಗದಲ್ಲಿಯೇ ಸಮರಸವಾಗಿ ಬೆರೆತ ಲಿಂಗವನ್ನು ಅರಿಯಲಿಲ್ಲ. ಸುಖ ದುಃಖಗಳನ್ನು ಸ್ವೀಕರಿಸಿ, ಅಂಗಕ್ಕೆ ಸುಖದ ಸುಖವನ್ನುಂಟುಮಾಡುವ ಜಂಗಮನನ್ನು ಮನ ಅರಿಯದಿದ್ದಕ್ಕಾಗಿ ತನು ಕ್ಷಣ ಕ್ಷಣಕೂ ಬಳಲುತ್ತದೆ, ಬೇಯುತ್ತದೆ. ಮನ ಮಾಡುವುದೆಲ್ಲ ಬರೀ ಉಪಚಾರಕ್ಕೆಂದು ಮನಕ್ಕೆ ತಿಳಿಯದೆ ತನುವನ್ನು ಸಂಕಟಕ್ಕೀಡು ಮಾಡುತ್ತದೆ.

385

ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ;
ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು !
ನಾನೇನು ಪಾಪವ ಮಾಡಿದೆನೋ ;
ಬೆಳೆಯದ ಮುನ್ನವೆ-ಕೊಯಿವರೆ ? ಹೇಳಾ, ಅಯ್ಯಾ !
ಇರಿಯದ ವೀರ ! ಇಲ್ಲದ ಸೊಬಗುವ
ಎಲ್ಲಾ ಒಡೆಯರು ಏರಿಸಿ ನುಡಿವರು !
ಎನಗಿದು ವಿಧಿಯೆ ಕೂಡಲಸಂಗಮದೇವಾ ?

ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ ; ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿ ಯೆಂಬರು ; ನಾನೇನು ಪಾಪವ ಮಾಡಿದೆನೋ :

ಮನ ತನುವಿನಲ್ಲಿಯೇ ಇದೆ ; ಅರಿವು ಕೂಡಾ ತನುವಿನಲ್ಲಿಯೇ ಇದೆ. ಆದರೂ ಮನ ಅರಿವಿನತ್ತ ಸಾಸವೆಯ ಷಡ್ಭಾಗದಷ್ಟೂ ಹೆಜ್ಜೆ ಹಾಕಿಲ್ಲ ! ಅರಿವೆಂದರೇನೆಂದು ಮನಕ್ಕೆ ಪರಿಚಯವಾಗಲಿಲ್ಲ. ನೋಡಿ, ಕೇಳಿ ತನುವಿಗೆ ಭಕ್ತನ ವೇಷ ಹಾಕಿ, ಸೇವೆಯ ಸೋಗಿನ ವೇಷ ಹಾಕಿ ಹೊಗಳಿಸಿಕೊಳ್ಳುತ್ತದೆ. ಆದರೆ ವೇಷದ ಮರೆಯಲ್ಲಿ ಮಾಡಿದ ಪಾಪ ಮನಕ್ಕೆ ತಿಳಿಯುತ್ತದೆ. ಆದರೂ ಹೊಗಳಿಕೆಯಿಂದ ಉಬ್ಬಿಕೊಬ್ಬಿ ಬಿಬ್ಬನೆ ಬಿರಿಯುವ ಮನವೇನು ಪಾಪ ಮಾಡಿದೆಯೊ?

ಮನ ಅರಿವಿನತ್ತ ಹೆಜ್ಜೆ ಹಾಕಿ ಅರಿವಾಗಿ ಆ ಅರಿವಿನಲ್ಲಿ ಲೀನವಾಗದ ಮುನ್ನ ಅರು

ಹಿರಿಯರು ಮನದ ಕತ್ತು ಕೊಯ್ಯಬಹುದೆ ? ತನುವಿನಲ್ಲಿ ಹುಟ್ಟಿದ ಮನಕ್ಕೆ , ತನುವಿನಲ್ಲಿಯೇ ಹುಟ್ಟಿದ ವೈರಿಗಳನ್ನು ಸಂಹರಿಸಲು ತಿಳಿದಿಲ್ಲ ! ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ರಕ್ಕಸರನ್ನು ಇರಿಯದ ಹೇಡಿಗೆ ಇಲ್ಲದ ಸೊಬಗಿನ ಪಟ್ಟ ಕಟ್ಟಬೇಕೆ ?

ತನು, ತನುವನ್ನು ಹೊಗಳಿದರೆ ಹಿರಿ ಹಿರಿ ಹಿಗ್ಗುವುದು ವಿಧಿಯೆಂದು ಮನ ಅರಿಯುವುದು ಬೇಡವೆ ? ಬೆಳೆಯದ ಮುನ್ನವೆ ಕತ್ತು ಕೊಯ್ದರೆ ಬೆಳೆ ತಿನ್ನಲು ಬರುವುದೆ ?

386

ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ, ಹೊಗಳಿ !
ಎನ್ನ ಹೊಗಳತೆ ಎನ್ನ ನಿಮ್ಮೈಗೊಂಡಿತ್ತಲ್ಲಾ!
ಅಯ್ಯೋ , ನೊಂದೆನು, ಸೈರಿಸಲಾರೆನು !
ಅಯ್ಯಾ , ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲಾ!
ಅಯ್ಯೋ , ನೊಂದೆನು, ಸೈರಿಸಲಾರೆನು :
ಕೂಡಲಸಂಗಮದೇವಾ, ನೀನೆನಗೊಳ್ಳಿದನಾದಡೆ,
ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ !

ಬರಹಕ್ಕೂ ಮಾತಿಗೂ ನಿಲುಕದೆ, ಅನುಭಾವದ ಆನಂದಕ್ಕೆ ಕೊಂಡೊಯ್ಯುವ ಅದೆಷ್ಟೊ ಸೂತ್ರಗಳನ್ನು ಅಣ್ಣನವರು ರಚಿಸಿದ್ದಾರೆ. ಅನುಭವಿಸಿದವರಿಗೆ ಮಾತ್ರ ಅರಿವಿನ ಆನಂದದ ರುಚಿ ತಿಳಿಯುತ್ತದೆ.

ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ, ಹೊಗಳಿ :

ಎನ್ನವರು : ತನುವಿಗೆ ಒಬ್ಬ ಅರಿವಿನ ತಂದೆಯಿದ್ದಾನೆ. ಆತನಿಗೆ ಅರಿಷಡ್ವರ್ಗಗಳೆಂಬ ಆರು ಮಕ್ಕಳಿದ್ದಾರೆ. ಮಕ್ಕಳು ತಮ್ಮ ಸುಖಕ್ಕಾಗಿ ತಂದೆಯ ಮಾತನ್ನು ಕೇಳದೆ ಆತ ಕಟ್ಟಿದ ತನುವಿನ ಅರಿವಿನ ಮನೆಯನ್ನು ಬಲಿಕೊಡುವುದಕ್ಕೆ ಹೇಸುವುದಿಲ್ಲ ! ತಂದೆಯ ಅರಿವಿನ ಮಾತು ರುಚಿಸಿದರೆ, ಮಕ್ಕಳು ಮನೆಯ ಮಕ್ಕಳಾಗುತ್ತಾರೆ ; ಮನೆಯವರಾಗುತ್ತಾರೆ. ಹೊಗಳಿದರೆ ಸಾಕು ಅರಿವಿನ ತಂದೆಯನ್ನು ಮರೆತು, ಹಿರಿ ಹಿರಿ ಹಿಗ್ಗುತ್ತಾರೆ. ತನು ಸಂತೋಷದಿಂದ ಬಲೂನಿನಂತೆ ದಪ್ಪವಾಗುತ್ತದೆ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದಿಂದ ಮಕ್ಕಳು ಹಿಂದೆ ತನುವನ್ನು ಕೆರಳಿಸುತ್ತಿದ್ದರು. ಇಂದು ತನುವನ್ನು ಅರಳಿಸುತ್ತಾರೆ. ಇವೆರಡೂ ಒಂದೇ ಎಂದು ಮನೆಯ ಮಕ್ಕಳಿಗೆ ತಿಳಿಯುವುದಿಲ್ಲ.

ಎನ್ನ ಹೊಗಳತೆ ಎನ್ನ ನಿಮ್ಮೈಗೊಂಡಿತ್ತಲ್ಲಾ:

ನಿಮ್ಮೈಎಂದರೆ ನಿಮ್ಮ ಮೈ ; ನಿಮ್ಮ ತನುವಿನಲ್ಲಿರುವ ಕಣ್ಣು ಕಿವಿ ಮೂಗು ನಾಲಿಗೆ ಚರ್ಮವೆಂಬ ಐದು ಮಹಾ ಜ್ಞಾನೇಂದ್ರಿಯಗಳ ಮೈ. ಹಿಂದೆ ತೆಗಳಿಕೆಯಿಂದಾಗಿ ನಿಮ್ಮ ಅರಿವಿಗೆ ಮನವೆಂಬ ನನ್ನ ಅಜ್ಞಾನ ಮುಸುಕಿತ್ತು ; ಇಂದು ಹೊಗಳಿಕೆಯಿಂದಾಗಿ ನಿಮ್ಮ ಅರಿವಿಗೆ ನನ್ನ ಅಜ್ಞಾನದ ಅರಿವು ಮುಸುಕಿದೆ ! ಹೊಗಳಿಕೆ ತೆಗಳಿಕೆಗಳೆರಡು ಅಜ್ಞಾನವೆಂದು ಅರಿಯಲಿಲ್ಲ. ತೆಗಳಿಕೆಯಿಂದ ನಿನ್ನ ಅರಿವಿನ ಮನೆಯನ್ನು ಕುಗ್ಗಿಸಿದೆ ; ಹೊಗಳಿಕೆಯಿಂದ ನಿನ್ನ ಅರಿವಿನ ಮನೆಯನ್ನು ಹಿಗ್ಗಿಸಿದೆ !

ಅಯ್ಯೋ ನೊಂದೆನು, ಸೈರಿಸಲಾರೆನು ! ನಿಮ್ಮ ಮನ್ನಣೆಯ ಮಸೆದಲಗಾಗಿ ತಾಗಿತ್ತಲ್ಲಾ:

ನಿನ್ನ ಅರಿವಿನ ಮನೆಯ ವಾರಸುದಾರರಾದ, ನಿಮ್ಮವರೇ ಆದ ನಮ್ಮ ತೆಗಳಿಕೆಯಿಂದ ನಿಮ್ಮ

ಮನೆ ಬೇಯುವಂತಾಯಿತು. ಆದರೂ ಮನ್ನಣೆಯಿತ್ತು ಸೈರಿಸಿದಿರಿ ನೀವು. ಹೊಗಳಿಕೆಯಿಂದ ನಿಮ್ಮ ಅರಿವಿನ ಮನೆ ಹಿಗ್ಗುವಂತಾಯಿತು. ಆದರೂ ಮನ್ನಣೆಯಿತ್ತು ಸೈರಿಸಿದಿರಿ ನೀವು. ತೆಗಳಿಕೆ ಹೊಗಳಿಕೆಗಳನ್ನು ನಿಮ್ಮ ಅರಿವಿನಿಂದ ನೋಡಲಾಗಿ ಇವೆರಡೂ ಸುಳ್ಳೆಂದು ತಿಳಿದು, ಇದುವರೆಗಿನ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ ತಂದೆ ! ಅಯ್ಯೋ, ನೊಂದೆನು ಸೈರಿಸಲಾರೆನು ತಂದೆ ನಿಮ್ಮ ಈ ಪರಿಯ ಮನ್ನಣೆಯನು.

ತನುವೆಂಬ ಅರಿವಿನ ಮನೆಯಲ್ಲಿದ್ದು ನೋಡಿ ಕೆರಳುವುದೆಂದರೇನು, ಅರಳುವುದೆಂದರೇನು ? ಕಣ್ಣಿನಲ್ಲಿ ಅರಿವಿದ್ದರೂ ಅದು ಬಳಕೆಗೆ ಬಾರದಿರುವುದೆಂದರೇನು ? ಕೇಳಿ ಕುಗ್ಗುವುದು ಹಿಗ್ಗುವುದೆಂದರೇನು ? ಕಿವಿಯಲ್ಲಿ ಶಬ್ದ ಕೇಳುವ ಅರಿವಿದ್ದರೂ ಅದು ಬಳಕೆಗೆ ಬಾರದಿರುವುದೆಂದರೇನು ? ಸ್ಪರ್ಶಿಸಿದರೆ, ಮೂಸಿಸಿದರೆ, ರುಚಿಸಿದರೆ ತನು ಕೆರಳಿ ಅರಳುವುದೆಂದರೇನು. ಸುಖದ ಬಯಕೆಗಾಗಿ ದುಃಖ ; ಸುಖಿಸಿದರೂ ದುಃಖ ! ಸಾಸಿವೆಯ ಸುಖಕ್ಕಾಗಿ ಸಾಗರದಷ್ಟು ದುಃಖ ಪಡಬೇಕೆ ? ಅಯ್ಯೋ ನೊಂದೆನು ಸೈರಿಸಲಾರೆನು ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ.

ಕೂಡಲಸಂಗಮದೇವಾ ನೀನೆನಗೊಳ್ಳಿದನಾದಡೆ ಎನ್ನ ಹೊಗಳತೆಗಡ್ಡಬಾರಾ ಧರ್ಮಿ :

ನೋಡಿದರೆ ವಸ್ತು ತನುವನ್ನು ಅರಳಿಸಿ ಕೆರಳಿಸುವ ಮುನ್ನ ವಸ್ತುವನ್ನು ಅರಿವಿನಿಂದ ನೋಡುವ ನೋಟದ ಶಕ್ತಿ ಕಣ್ಣಿನಲ್ಲಿದೆ. ಅದು ತನುವಿನಲ್ಲಿರುವ ಅರಿವಿನ ಧರ್ಮ. ಅಜ್ಞಾನದ ನೋಟಕ್ಕೆ ತನು ತುತ್ತಾದರೆ ಒಮ್ಮೆ ಅರಳುತ್ತದೆ, ಮತ್ತೊಮ್ಮೆ ಕೆರಳುತ್ತದೆ. ಜ್ಞಾನದ ನೋಟಕ್ಕೆ ವಸ್ತುವಿನ ಸತ್ಯ ಅನಾವರಣವಾಗುತ್ತದೆ. ಆಗ ತನು ಅರಳುವುದಿಲ್ಲ. ಕೆರಳುವುದಿಲ್ಲ. ಅರಿವಿನ ಧರ್ಮ ಪಾಲಿಸುತ್ತದೆ.

ದಾರಿಯಲ್ಲಿ ಬಿದ್ದ ಆಭರಣ ನೋಡಿ ಕಣ್ಣು ತನುವನ್ನು ಅರಳುವಂತೆ ಮಾಡುತ್ತದೆ. ಮತ್ತೊಬ್ಬ ನೋಡಿ ಪಡೆಯಲು ಹೋದರೆ ಕೆರಳುತ್ತದೆ. ದಾರಿಯಲ್ಲಿ ಬಿದ್ದ ಲೋಹದ ತುಂಡು ನೋಡಿ ಎರಡೂ ತನುಗಳು ಉದಾಸೀನ ಮಾಡುತ್ತವೆ. ಅರಳಲಿಲ್ಲ ಕೆರಳಿಲ್ಲ. ಆಭರಣದಲ್ಲಿದ್ದ ಸತ್ಯವೇ ಲೋಹ. ಅದಕ್ಕೆ ಮೆತ್ತಿದ ಬಣ್ಣವೇ ಮೋಹ ! ಕಣ್ಣಿನಲ್ಲಿದ್ದ ಮೋಹ ತನುವನ್ನು ಅರಳುವಂತೆ ಕೆರಳುವಂತೆ ಮಾಡುತ್ತದೆ. ಕಣ್ಣಿನಲ್ಲಿದ್ದ ಅರಿವು ತನುವಿಗೆ ಸಹಜ ದರ್ಶನವಿತ್ತು ಸಹಜ ಧರ್ಮಿಯನ್ನಾಗಿ ಮಾಡುತ್ತದೆ.

ತನುವಿನಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನೆ ಮನವೆಂಬ ನನಗೆ ನೀನು ಒಳ್ಳಿದನಾದಡೆ ಎನ್ನ ಹೊಗಳತೆಗೆ ಅಡ್ಡ ಬಾರಾ, ಧರ್ಮಿ; ಸಕಲ ತನುಗಳಿಗೂ ಅರಿವಿನ ದರುಶನವ ನೀಡಾ ಧರ್ಮಿ. ಎಂದಿದ್ದಾರೆ ಜ್ಞಾನಭಂಡಾರಿ ಬಸವಣ್ಣನವರು.

387

ಎನ್ನವರೆನಗೊಲಿದು ಹೊನ್ನಶೂಲದಲಿಕ್ಕಿದರಯ್ಯಾ !
ಅಹಂಕಾರ ಪೂರಾಯ ಘಾಯದಲ್ಲಿ
ಆನೆಂತು ಬದುಕುವೆ ನೆಂತು ಜೀವಿಸುವೆ ?
ಜಂಗಮವಾಗಿ ಬಂದು ಜರಿದು ಶೂಲವನಿಳುಹಿ
ಪ್ರಸಾದದ ಮದ್ದನಿಕ್ಕಿ, ಸಲಹು ಕೂಡಲಸಂಗಮದೇವಾ.

ಎನ್ನವರೆನಗೊಲಿದು ಹೊನ್ನಶೂಲದಲಿಕ್ಕಿದರಯ್ಯಾ ಅಹಂಕಾರ ಪೂರಾಯ ಘಾಯದಲ್ಲಿ ಆನೆಂತು ಬದುಕುವೆ ನೆಂತು ಜೀವಿಸುವೆ :

ಬೀಜದೊಂದಿಗೆ ಅಜ್ಞಾನವನ್ನು ತಂದುಕೊಂಡ ಮನಕ್ಕೆ , ಜ್ಞಾನದ ಬಯಕೆಯಾದರೆ ಸಾಕು ಶರಣರು ಒಲಿದು , ಜ್ಞಾನದ ಮಾರ್ಗ ಸೂಚಿಸುತ್ತಾರೆ. ಮನಕ್ಕೆ ಅರಿವಾಗುತ್ತದೆ ; ಅರಿವೆಂದರೇನೆಂದು ತಿಳಿದು ಸಂತೋಷವಾಗುತ್ತದೆ. ಅದು ತನ್ನ ತನುವಿನಲ್ಲಿಯೇ ಬೆಳಗುತ್ತಿರುವ ಅರಿವು ಕಂಡು ಹಿರಿ ಹಿರಿ ಹಿಗ್ಗುತ್ತದೆ. ಅರಿವಿನ ಮಾತುಗಳನ್ನಾಡುತ್ತದೆ. ಉಪನ್ಯಾಸ ನೀಡುತ್ತದೆ. ಆಶ್ರಮ ಕಟ್ಟಿಕೊಂಡು, ಅದನ್ನು ದೊಡ್ಡದು ಮಾಡಿ ಅರಿವಿನ ವ್ಯವಹಾರದಲ್ಲಿ ತೊಡಗುತ್ತದೆ.

ಮನಕ್ಕೆ ಅರಿವಾಯಿತು ; ಅರಿವಿನ ಮಾತುಗಳನ್ನು ಆಡಿತು. ಅರಿವಿನ ತನುವೆಂದು ಗುರುತಿಸಿಕೊಂಡು ಹಿರಿಹಿರಿ ಹಿಗ್ಗಿತು. ಆದರೆ ಆಡಿದ ಮಾತು ತನುವಿಗೆ ಬಳಕೆಯಾಗುವುದಿಲ್ಲ. ಹೇಳುವುದಕ್ಕೆ ಮಾತ್ರ ಬಳಕೆಯಾಗಿ ; ತನು ಅರಿವಿನ ಅಹಂಕಾರದಲ್ಲಿ ಮೆರೆಯುವಂತೆ ಮನ ಪ್ರೇರಣೆ ನೀಡುತ್ತದೆ. ಮನಕ್ಕೆ ಅರಿವಾದರೂ ಅದರ ಜನ್ಮದಿಂದ ಬಂದ ದೋಷಗಳು ಹೊಗಳಿಕೆಯ ಹೊನ್ನ ಶೂಲದಲ್ಲಿರಿಸುತ್ತವೆ. ತನುವಿಗೆ ಮನದಿಂದಾಗಿ ಬಂದ ಅಹಂಕಾರ ಇಂದು ನಿನ್ನೆಯದಲ್ಲ ! ಪೂರ್ವಕಾಲದಿಂದಲೂ ಬಂದ ಗಾಯ ! ಅರಿವಾಗಿದೆ. ತಿಳಿಯುತ್ತಿದೆ. ಆದರೂ ಪಾಲಿಸಲು ಸಾಧ್ಯವಾಗುತ್ತಿಲ್ಲ. ಅರಿವಾದರೂ ಜೀವನ ಬರ್ಬರವಾಗುತ್ತಲಿದೆ. ಇದು ಜೀವನವೆ ? ಇದೊಂದು ಬದುಕೆ ? ಎಂದು ಮನ ವಿಲಿವಿಲಿ ಒದ್ದಾಡುತ್ತದೆ.

''ಕಾರ ಮೇಘವೆದ್ದು ಧಾರಾವರ್ತೆ ಸುರಿವಾಗ, ಧಾರುಣಿಯೆಲ್ಲವೂ ಮುಳುಗಿತ್ತು ನೋಡಾ!
ಕಾರಿರುಳ ಕಣ್ಣೊಳಗೆ ಸೂರ್ಯರನೇಕರು ಮೂಡಿ ದಾರಿಯ ಹೊಲಬೆಂಬುದು ಕೆಟ್ಟಿತ್ತು ನೋಡಾ!
ಪೂರಾಯ ಗಾಯದಲ್ಲಿ ಸಾಯೆಕೊಂದಲ್ಲದೆ ಸೂರ್ಯರನೇಕರು ಮಡಿಯರು ಗುಹೇಶ್ವರಾ.''

ದೇವಸ್ಥಾನ ಕಟ್ಟಲು ಮನ ಚಂದಾ ಕೊಡುತ್ತದೆ. ಕಲ್ಲು ತಂದು ಒಟ್ಟುತ್ತಾರೆ. ಕಲ್ಲಿನಲ್ಲಿ ಪೌಳಿ ನಿರ್ಮಿಸುತ್ತಾರೆ ; ನೆಲಕ್ಕೆ ಹಾಸುತ್ತಾರೆ. ಗರ್ಭಗುಡಿ, ಶಿಖರ ನಿರ್ಮಿಸುತ್ತಾರೆ. ಅದೇ ಕಲ್ಲಿನಲ್ಲಿ ದೇವರನ್ನು ಕೆತ್ತಿ ಪ್ರಾಣ ಪ್ರತಿಷ್ಠಾನ ಮಾಡಿಸಿ ಪೂಜೆಗೆ ಅಣಿಗೊಳಿಸುತ್ತಾರೆ. ಹಣ ಕೊಟ್ಟು , ಕಲ್ಲು ತಂದು , ಕಲ್ಲಿನಲ್ಲಿಯೇ ನಿರ್ಮಿಸಿದ ದೇವರನ್ನು ಕಲ್ಲೆಂದು ತಿಳಿಯದೇ ದೇವರೆಂದು ಆರಾಧಿಸಲು ಮನ ತನುವಿಗೆ ಆಜ್ಞಾಪಿಸುತ್ತದೆ. ಬೆಳಕು ಚೆಲ್ಲುವ ಕಣ್ಣಿಗೆ ಪೂರ್ವಕಾಲದಿಂದಲೂ ಅಜ್ಞಾನದ ಗಾಯವಾಗಿದೆ.

ಕಲ್ಲಲ್ಲಿ ಕೆತ್ತಿದ ಮೂರ್ತಿಯನ್ನು ಕಲ್ಲೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ಚಿನ್ನಕ್ಕೆ ಮೆತ್ತಿದ ಹಳದಿ ಬಣ್ಣವನ್ನು ಕಳೆದು ಲೋಹವೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ಕರೆನ್ಸಿಯನ್ನು ಕಾಗದದಲ್ಲಿ ಮುದ್ರಿಸಿದ ಬಣ್ಣವೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ತನುವನ್ನು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳನ್ನು ಬಂಧಿಸಿದ ಅರಿವುಳ್ಳ ಸಂಪದ್ಭರಿತ ಚರ್ಮದ ಕವಚವೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ಅರಿವಿನ ತನುವಿಗೆ ಪೂರ್ವಕಾಲದಿಂದಲೂ ಬಂದ ಅಜ್ಞಾನದ ಘಾಯವನ್ನು ಸಾಯೆಕೊಂದಲ್ಲದೆ ಸೂರ್ಯರನೇಕರು ಮಡಿಯರು ಗುಹೇಶ್ವರಾ.

ಜಂಗಮವಾಗಿ ಬಂದು ಜರಿದು ಶೂಲವನಿಳುಹಿ ಪ್ರಸಾದದ ಮದ್ದನಿಕ್ಕಿ, ಸಲಹು ಕೂಡಲಸಂಗಮದೇವಾ :

ತನುವಿನಲ್ಲಿ ಅರಿವಿದೆ ; ಅರಿವನ್ನು ತಿಳಿಯುವ ಮನವಿದೆ ; ಅರಿವನ್ನು ಪಾಲಿಸುವ ಜಂಗಮನಿದ್ದಾನೆ. ಮನ ತನುವಿನಲ್ಲಿರುವ ಅರಿವನ್ನು ಬಳಕೆಮಾಡಿ ದೇವಾಲಯವನ್ನು ನೋಡುತ್ತದೆ. ದೇವಾಲಯವೂ, ದೇವರೂ, ದೇವರಲ್ಲ. ಅದು ಬರೀ ಕಲ್ಲೆಂದು ಪಾಠ ಮಾಡುತ್ತದೆ. ಹಾಗೆಯೇ ತನುವನ್ನು ದೇವಾಲಯಕ್ಕೆ ಕರೆದುಕೊಂಡುಹೋಗಿ ಅರ್ಚಿಸಿ ಪೂಜಿಸಲು ಆದೇಶ ನೀಡುತ್ತದೆ. ಮನ ಮಾತನಾಡುವುದನ್ನು ಬಿಡುವುದಿಲ್ಲ ; ಪೂಜಿಸುವುದನ್ನು ಬಿಡುವುದಿಲ್ಲ. ಕಲ್ಲೆಂದು ಅರಿವಾದರೂ

ಮರೆವಾಗಿ ; ಮನ ತನುವಿನೊಂದಿಗೆ ದೇವರನ್ನು ಪೂಜಿಸುತ್ತದೆ. ಮನಕ್ಕೆ ಇದು ಸಾಧ್ಯವಾಗುವುದಿಲ್ಲ.

ತನುವಿನಲ್ಲಿ ಜಂಗಮನಿದ್ದಾನೆ. ತನುವಿನಲ್ಲಿರುವ ಅರಿವೆಂಬ ಗುರುದೇವನ ಮಾತನ್ನು ಜಂಗಮ ಚಾಚೂತಪ್ಪದೆ ಪಾಲಿಸುತ್ತಾನೆ. ಈತನನ್ನು ಸಿದ್ದಾರ್ಥ ಬುದ್ಧನೆಂದು ಕರೆದ. ವರ್ಧಮಾನ ಮಹಾವೀರನೆಂದು ಕರೆದ. ಕ್ರಿಷ್ಣ ವಿರಾಟಸ್ವರೂಪಿಯೆಂದು ಕರೆದ. ಕ್ರಿಸ್ತ ಗಾಡ್ ಎಂದು ಕರೆದ. ಬಸವಣ್ಣ ಜಂಗಮನೆಂದು ಕರೆದಿದ್ದಾನೆ.

ದೇವರು, ಕರೆನ್ಸಿ, ಚಿನ್ನ, ಭೂಮಿ, ಕಾಮುಕ್ಕಾಗಿ ಕ್ಷಣ ಕ್ಷಣಕ್ಕೂ ತನುವನ್ನು ಸಂಕಟಕ್ಕೀಡುಮಾಡುವ ಮನಕ್ಕೆ ತನುವಿನಲ್ಲಿರುವ ಅರಿವೆಂಬ ಗುರುದೇವನು ಒಲಿಯುತ್ತಾನೆ. ಹಾಗೆಯೇ ಆ ಗುರುದೇವನ ಅರಿವನ ಮಾತುಗಳನ್ನು ವೇದವಾಕ್ಯದಂತೆ ಚಾಚೂತಪ್ಪದೆ ಪಾಲಿಸುವ ಜಂಗಮನೂ ಒಲಿಯುತ್ತಾನೆ. ಆ ಜಂಗಮನಿಗೆ ಮನ ತನ್ನ ಸರ್ವಸ್ವವನ್ನು ಒಪ್ಪಿಸಿ ಹೆಳವನಾಗುತ್ತದೆ. ಆಗ ತನುವಿನಲ್ಲಿ ಅರಿವೆಂಬ ಗುರುದೇವ ಉಳಿಯುತ್ತಾನೆ. ಆತನ ಮಾತು ಪಾಲಿಸುವ ಜಂಗಮ ಉಳಿಯುತ್ತಾನೆ. ತನು ಅರಿವಿನ ಮನೆಯಾಗುತ್ತದೆ. ಜಂಗಮನ ವಿರಾಟಸ್ವರೂಪದ ಮಹಾಮನೆಯಾಗುತ್ತದೆ.

ಕಲ್ಲಿನಲ್ಲಿ ಕೆತ್ತಿದ ಮೂರ್ತಿಯನ್ನು ದೇವರೆಂದು ನೋಡುವ ಕಣ್ಣನ್ನು, ಹಳದಿ ಬಣ್ಣ ಮೆತ್ತಿದ ಲೋಹವನ್ನು ಚಿನ್ನವೆಂದು ನೋಡುವ ಕಣ್ಣನ್ನು, ತನುವನ್ನು ಜ್ಞಾನದ ತನುವೆಂದು ನೋಡದ ಅಜ್ಞಾನಿ ಕಣ್ಣನ್ನು ಜಂಗಮ ತನ್ನ ಅರಿವಿನ ಖಡ್ಗದಿಂದ ಸೀಳುತ್ತಾನೆ. ಅಜ್ಞಾನದ ಕಣ್ಣಿಗೆ ಅರಿವೆಂಬ ಗುರುವಿನ ಮದ್ದು ಜಂಗಮನಿಂದ ಲೇಪವಾಗಿ ಅಜ್ಞಾನ ಅರಿವಿಗೆ ಪ್ರಸಾದವಾಗುತ್ತದೆ. ತನುವಿನಲ್ಲಿ ಅರಿವೆಂಬ ಗುರುದೇವ, ಮನವೆಂಬ ಭಕ್ತ, ಜಂಗಮನೆಂಬ ವೀರನಿದ್ದರೂ ತನುವಿಗೆ ಪರಿಚಯವಾಗದ ನಿಮಿತ್ತ, ತನು ಸಾಮಾನ್ಯ ಅಸಾಮಾನ್ಯ, ಬಡವ ಶ್ರೀಮಂತ, ಹೆಣ್ಣು ಗಂಡು, ಜಾತಿ-ಮತ, ಪಂಡಿತ ಪಾಮರ, ಗುರು ಶಿಷ್ಯ ಎಂದು ಪರಿಚಯಿಸಿಕೊಂಡು ಸಂಕಟಕ್ಕೆ ಗುರಿಯಾಗುತ್ತದೆ. ಮನಕ್ಕೆ ತನುವಿನಲ್ಲಿರುವ ಸಂಪತ್ತು ಅರಿವಾದರೆ ಸಹಜ ತನುವಾಗುತ್ತದೆ, ಬುದ್ಧ ಮಹಾವೀರ ವಿರಾಟ ಸ್ವರೂಪೀ ಜಂಗಮ ತನುವಾಗುತ್ತದೆ.

388

ಎಡದ ಕೈಯಲು ಹಾಲ ಬಟ್ಟಲು ಬಲದ ಕೈಯಲು ಓಜುಗಟ್ಟಿಗೆ ;
ಆವಾಗ ಬಂದಾನೊ ನಮ್ಮಯ್ಯ ಬಡಿದು ಹಾಲ ಕುಡಿಸುವ ತಂದೆ ?
''ದಂಡ ಕ್ಷೀರ ದ್ವಯಾಹಸ್ತೋ ಜಂಗಮೋ ಭಕ್ತಿ ಮಂದಿರಂ
ತದ್ಭಕ್ತ್ಯಾ ಲಿಂಗ ಸಂತುಷ್ಟಿರಪಹಾಸ್ಯಾದ್ಯಮು ದಂಡನಮ್''
ಎಂದುದಾಗಿ, ಕೂಡಲಸಂಗಮದೇವಯ್ಯ ತಾನೆ
ಭಕ್ತಿಪಥವ ತೋರುವ ತಂದೆ !

ಮನೆ ಕೆಲಸಗಳನ್ನೆಲ್ಲ ಮಾಡಿ, ಮನೆಮಂದಿಗೆಲ್ಲ ಊಟಕ್ಕೆ ನೀಡುವುದು ತಾಯಿಗೆ ದೊಡ್ಡ ಕೆಲಸವೇನಲ್ಲ. ತಾನು ಉಸಿರಾಡಿದಷ್ಟೇ ಸರಳ. ಆದರೆ ತನ್ನ ಮಗುವಿಗೆ ಊಟ ಮಾಡಿಸುವುದು ಮಾತ್ರ ಬಲು ಜಟಿಲ. ಪ್ರತಿ ಊಟದ ಬಟ್ಟಲಿನಲ್ಲಿಯೂ ಬೇರೆ ಬೇರೆ ರುಚಿಕರವಾದ ಊಟ ತಯಾರಿಸಿದರೂ ಮಗು ಊಟ ಮಾಡುವುದಕ್ಕೆ ಮಾತ್ರ ರಂಪ ಮಾಡುತ್ತದೆ. ಚುಕ್ಕಿ ಚಂದ್ರ ಹಸು ಕರು ವಾಹನ ಮುಂತಾದವುಗಳನ್ನು ಮಗುವಿಗೆ ತೋರಿಸಿದರೂ ಅದು ಊಟ ಮಾಡುವುದು ಮಾತ್ರ

ಅಷ್ಟಕಷ್ಟೆ. ಊಟದ ಬಟ್ಟಲು ಹಿಡಿದ ತಾಯಿ ಹಿಂದೆ ಹಿಂದೆ ಓಡಿದರೆ ಊಟ ಮಾಡುವ ಮಗು ಮುಂದೆ ಮುಂದೆ ಓಡುತ್ತದೆ.

ತನುವಿನಲ್ಲಿರುವ ತಾಯಿ ಸಮಾನವಾದ ಅರಿವೆಂಬ ಗುರುದೇವನು ಉಣಬಡಿಸುವ ಅಮೃತಸಮಾನವಾದ ಅರಿವಿನ ಊಟಮಾಡದೆ, ಮನವೆಂಬ ಮಗು ಮುಂದೆ ಮುಂದೆ ಓಡುತ್ತದೆ. ಊಟದ ಬಟ್ಟಲು ಹಿಡಿದ ಗುರು ಹಿಂದೆ ಹಿಂದೆ ಓಡುತ್ತಾನೆ. ಮಗುವಾಗಿದ್ದಾಗ ತಾಯಿ ಉಣಬಡಿಸುವ ಊಟ ಮಾಡಲಿಲ್ಲ. ದೊಡ್ಡವನಾದ ಮೇಲೆ ಅರಿವೆಂಬ ಗುರು ಊಟ ಬಡಿಸುವ ಊಟ ಮಾಡಲಿಲ್ಲ. ಬಾಲ್ಯ ವ್ಯರ್ಥ ಕಳೆಯಿತು. ಯೌವ್ವನ ಮುಪ್ಪು ಕೂಡಾ ವ್ಯರ್ಥ ಕಳೆಯಿತು. ಹಡೆದ ತಾಯಿಯ ಊಟದಿಂದ, ಅರಿವಿನ ತಾಯಿಯ ಊಟದಿಂದ ತನು ವಂಚಿತವಾಯಿತು.

ವ್ಯಾಸ ಮಹರ್ಷಿಗಳು ಬಲು ಜಾಣರು. ಭಾರತದೇಶದ ತನುಗಳಿಗೆ ಸದ್ಗುರು ಉಣಬಡಿಸುವ ಅರಿವಿನ ಊಟ ತಿಳಿಯಲೆಂದು ಮಹಾಭಾರತ ರಚಿಸಿದರು. ಅಂಗೈಯಲ್ಲಿ ಬಟ್ಟಲು ಹಿಡಿದು ತಾಯಿ ಕುಂತಿ ಐದೂ ಮಕ್ಕಳಿ(ಪಾಂಡವರಿ)ಗೆ ಸಮನಾಗಿ ಉಣ್ಣಿಸಿದಳು. ನೆತ್ತಿಯನ್ನು ಊಟದಲ್ಲಿ ನೆಟ್ಟು ಆನಂದದಿಂದ ಉಂಡವ ಹಿರಿಯಮಗ ಧರ್ಮದಿಂದ ನಡೆದು ಧರ್ಮರಾಯನೆನ್ನಿಸಿಕೊಂಡ. ದೇಹವನ್ನೇ ಊಟದಲ್ಲಿ ನೆಟ್ಟು ಪ್ರೀತಿಯ ಊಟ ಉಂಡ ಬಲಭೀಮನೆನ್ನಿಸಿಕೊಂಡ. ಕಣ್ಣನ್ನು ಬಟ್ಟಲಲ್ಲಿ ನೆಟ್ಟು ಊಟ ಮಾಡಿದ ಮಗ ಪಶುಪತಿಯನ್ನೇ ಗೆದ್ದು ಪಾರ್ಥನೆನ್ನಿಸಿಕೊಂಡ. ತಾಯಿಯ ಕೈ ತುತ್ತು ಉಂಡ ನಕುಲ ಸಹದೇವರು ಕರ್ಮಯೋಗಿಗಳೆನ್ನಿಸಿಕೊಂಡರು. ಮುಂದೆ ಶ್ರೀಗುರುವಾದ ಶ್ರೀಕೃಷ್ಣ ಪಾಂಡವರೈವರಿಗೆ ಹಸ್ತಲಾಘವ ನೀಡಿ ಐವರನ್ನು ಅರಿವಿನ ಲೋಕಕ್ಕೆ ಕರೆದುಕೊಂಡು ಹೋದ.

ಶ್ರೀಕೃಷ್ಣ ಸಾರಥಿಯಾಗಿ ಅರಿವಿನ ದಾರಿ ತೋರಿದ. ಅರ್ಜುನ ಬಿಲ್ಲು ಬಾಣಗಳ ಹಿಡಿದು ಹಿಂದೆ ನಿಂತ. ಶ್ರೀಕೃಷ್ಣ ಬಾಣ ಹೊಡಿ ಎಂದಾಗಲೆಲ್ಲ ಅರ್ಜುನ ಬಾಣ ಹೊಡೆದ. ಹುಲ್ಲುಕಡ್ಡಿಯೇ ಬ್ರಹ್ಮಾಸ್ತ್ರವಾಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ಅಜ್ಞಾನದ ಬಂಧು ಬಳಗ-ಅಣ್ಣತಮ್ಮಂದಿರು-ಗುರುವರ್ಗ ನಾಶವಾಯಿತು. ಅಂಗೈ ಬಟ್ಟಲಲ್ಲಿ ಅರಿವಿನ ತುತ್ತು ಉಂಡ ಅಂಗ ದೇವಾಂಗವಾಯಿತು. ವಿರಾಟಸ್ವರೂಪಿಯಾಗಿ ಜಗದಗಲ ಮುಗಿಲಗಲಕ್ಕೂ ತನ್ನ ಸ್ವರೂಪವನ್ನು ಪಸರಿಸಿತು. ತನುವಿನಲ್ಲಿ ಸಂಗಮವಾದ ಅರಿವಿನ ಸಂಗಯ್ಯ ಸಹಾಯಕ್ಕೆ ಬಂದು ಅಂಗದಲ್ಲಿಯೇ ನಿಂತು ಅಂಗದೊಂದಿಗೆ ಅಗೋಚರನಾದ. ಯಾರೂ ಪ್ರಮಾಣಿಸಲು ಬಾರದಂತಹ ಅಪ್ರಮಾಣ ಸಂಗಮನಾಥನಾದ.

389

ಎನ್ನ ಆಪತ್ತು , ಸುಖ-ದುಃಖವನಿನ್ನಾರಿಗೆ ಹೇಳುವೆ ?
ಶರಣಸ್ಥಲದವರಿಗೆ ಹೇಳಿದಡೆ ಮತ್ಸರ !
ಸವತಿ-ಸಕ್ಕರೆ ಬೇವು-ಬೆಲ್ಲ ಉಂಟೆ ?
ಇನ್ನಾರಿಗೆ ಹೇಳುವೆ ?
ಕೂಡಲಸಂಗಮದೇವಾ, ಜಂಗಮವಾಗಿ ಬಂದು
ಎನ್ನ ಮನದ ಸೂತಕವ ಕಳೆಯಾ.

ಮನ ಸುಖ ಬಯಸಿ ತನುವಿಗೆ ದುಃಖವನ್ನುಂಟುಮಾಡುತ್ತದೆ. ಚಿನ್ನವೆಂದರೆ ಮನಕ್ಕೆ ಸುಖ!

ಅದನ್ನು ಪಡೆಯಲು ಕಳುವುಗಿಳಿದರೆ ತನುವಿಗೆ ಆಪತ್ತು ! ಮನ ಚಿನ್ನವನ್ನು ಅರಿವಿನಿಂದ ನೋಡಿದರೆ ಅದು ಹಳದಿ ಲೋಹ ! ಖರೀದಿಸಲಿಲ್ಲ; ಕಳುವು ಮಾಡಲಿಲ್ಲ! ಮನಕ್ಕೆ ಅರಿವಿನ ಸುಖವಾಯಿತು. ಲೋಹದಿಂದ ಸುಖವಾಗಲಿಲ್ಲ ದುಃಖವಾಗಲಿಲ್ಲ.

ಅಜ್ಞಾನವೆಂಬ ಮನದಿಂದ ಆಗುವ ಸುಖ ದುಃಖಗಳನ್ನು ತನುವಿಗೆ ಒದಗುವ ಆಪತ್ತನ್ನು ಯಾರಿಗೆ ಹೇಳಲಿ ? ಸುಖ ಸುಖವೂ ಅಲ್ಲ ; ದುಃಖ ದುಃಖವೂ ಅಲ್ಲ ; ಸುಖ ದುಃಖಗಳಿಗೆ ಮೀರಿದ ಅರಿವಿನ ಸುಖದ ಸುಖವನ್ನು ಇನ್ನಾರಿಗೆ ಹೇಳಲಿ ? ಇದು ಶರಣಸ್ಥಲದಿಂದಾದ ಸುಖ ! ಶರಣಸ್ಥಲದವರಿಗೆ ಹೇಳಿದರೆ ಮತ್ಸರ !

ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲವೆಂದು ಒಂದಂಗದಲ್ಲಿ ಆರು ಸ್ಥಲಗಳಿವೆ.

ಭಕ್ತಸ್ಥಲ : ಅಂಗದಲ್ಲಿ ಲಿಂಗವೆಂಬ ಅರಿವಿದೆ ; ಅದನ್ನು ಧರಿಸಿ ಪೂಜಿಸುವ ಮನವೆಂಬ ಭಕ್ತನಿದ್ದಾನೆ. ಆತ ನೋಡಿದ ನೋಟವೆಲ್ಲ ಅರಿವು. ಕೇಳುವ ಶಬ್ದವೆಲ್ಲ ಅರಿವು. ರುಚಿಸುವ ಪದಾರ್ಥವೆಲ್ಲ ಪ್ರಸಾದ. ಸ್ಪರ್ಶಿಸುವ ಚರ್ಮವೆಲ್ಲ ಲಿಂಗ ಈ ಅರಿವನ್ನು ಹೊಂದಿದಾತನೆ ಭಕ್ತ ; ಭಕ್ತಸ್ಥಲದ ನಿಪುಣ !

ಮಾಹೇಶ್ವರಸ್ಥಲ : ಅಂಗದಲ್ಲಿರುವ ಅರಿವೆಂಬ ಲಿಂಗವನ್ನು ತಿಳಿದು ಭಕ್ತನಾಗುತ್ತಾನೆ. ಅಂಗದಲ್ಲಿರುವ ಅಜ್ಞಾನವನ್ನು ಕೊಂದು ಅರಿವನ್ನು ಬಳಕೆ ಮಾಡಿ ಮಾಹೇಶ್ವರನಾಗುತ್ತಾನೆ. ಅಂಗದಲ್ಲಿರುವ ಅರಿವನ್ನು ಬಳಕೆ ಮಾಡುವ ನಿಪುಣನಾಗುತ್ತಾನೆ. ತನ್ನಲ್ಲಿರುವ ಅರಿವು ಕರಿಗೊಂಡು ತಾನೇ ಸೌರಾಷ್ಟ್ರ ಸೋಮೇಶ್ವರನಾಗುತ್ತಾನೆ.

ಪ್ರಸಾದಿಸ್ಥಲ : ಕಣ್ಣು ನೋಡಿದ ಅಜ್ಞಾನ, ಅರಿವಿನ ಕಣ್ಣಿಗೆ ಜೀರ್ಣವಾಗಿ ಪ್ರಸಾದವಾಗುತ್ತದೆ. ಕಿವಿ ಕೇಳಿದ ಅಜ್ಞಾನ, ಕಿವಿಯಲ್ಲಿಯೇ ಜೀರ್ಣವಾಗಿ ಪ್ರಸಾದವಾಗುತ್ತದೆ. ಮೂಗು, ನಾಲಗೆ, ಚರ್ಮಕ್ಕೆ ತಾಗಿದ ಅಜ್ಞಾನ, ಅಲ್ಲಲ್ಲಿಯೇ ಜೀರ್ಣವಾಗಿ ಪ್ರಸಾದವಾಗುತ್ತದೆ. ಅಜ್ಞಾನವನ್ನು ಅರಿವಿನಿಂದ ಪ್ರಸಾದವಾಗಿ ಸ್ವೀಕರಿಸುವ ನಿಪುಣನೇ ಪ್ರಸಾದಿ ಸ್ಥಲದಲ್ಲಿದ್ದವನು.

ಪ್ರಾಣಲಿಂಗಿ ಸ್ಥಲ : ಮನ ಅಂಗದೊಂದಿಗೆ ಸುಖಿಸುವಾಗ ಪ್ರಾಣ ಲೆಕ್ಕಕ್ಕಿಲ್ಲ. ದುಃಖವಾದಾಗ ಪ್ರಾಣಕ್ಕೆ ಸಂಕಟವಾಗುತ್ತದೆ. ಸರ್ವಾಂಗವೂ ಪ್ರಾಣವಾಗಿ ವಿಲಿವಿಲಿ ಒದ್ದಾಡುತ್ತದೆ. ಮನ ಬಯಸುವ ಸುಖ ಅನಾವರಣವಾದಾಗ ಸುಖವಿಲ್ಲ ದುಃಖವಿಲ್ಲ! ಮನ ಅರಿವಿನಿಂದ ನೋಡಿ ಲಿಂಗವಾಯಿತು. ಭೋಗಿಸುವ ಅಂಗವೂ ಲಿಂಗವಾಯಿತು. ಅಂಗದ ಕಣ ಕಣದಲ್ಲಿರುವ ಪ್ರಾಣ ಅರಿವಿನ ಪ್ರಸಾದ ಉಂಡು ಪ್ರಾಣಲಿಂಗಿಯಾಯಿತು. ಇದನ್ನು ಅನುಭವಕ್ಕೆ ತಂದುಕೊಂಡವನೇ ಪ್ರಾಣಲಿಂಗಿಸ್ಥಲದಲ್ಲಿದ್ದ ನಿಪುಣ.

ಶರಣಸ್ಥಲ : ಸರ್ವಾಂಗದಲ್ಲಿರುವ ಅರಿವೆಂಬ ಗುರುದೇವನಿಗೆ ಮನವೆಂಬ ಭಕ್ತನಾಗಿ ಹೋದವನು. ಲಿಂಗವೇ ಪತಿಯಾಗಿಸಿಕೊಂಡು ; ಶರಣ ಸತಿಯಾಗಿ ಅರಿವಿನ ರತಿ ಸುಖವನು ಪಡೆದುಕೊಂಡವನು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಪರ ಪುರುಷರನ್ನು ಹೊರಗೆ ತಳ್ಳಿ ಅರಿವಿಗೆ ಶರಣು ಹೋಗಿ ಅರಿವಿನ ಸಂಗ ಮಾಡಿದವನೇ ಶರಣಸ್ಥಲದ ನಿಪುಣ!

ಶರಣಸ್ಥಲದವರಿಗೆ ಹೇಳಿದಡೆ ಮತ್ಸರ ! ಸವತಿ-ಸಕ್ಕರೆ ಬೇವು-ಬೆಲ್ಲ ಉಂಟೆ ? ಇನ್ನಾರಿಗೆ ಹೇಳುವೆ ? ಕೂಡಲಸಂಗಮದೇವಾ ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯಾ :

ಪೀಠಕ್ಕೆ ಶರಣು ಹೋಗಿ ಶರಣರಾದವರ ಮುಂದೆ ಅಂಗದ ಈ ನೈಪುಣ್ಯತೆಯನ್ನು ಹೇಳಿದರೆ ಮತ್ಸರ ! ಸವತಿಗೆ ಸಕ್ಕರೆಯ ಮಾತುಗಳು ಹಿಡಿಸುವುದಿಲ್ಲ ! ಬೇವು ಎಂದೂ ಬೆಲ್ಲವಾಗುವುದಿಲ್ಲ !

ಇನ್ನಾರಿಗೆ ಹೇಳುವುದು ? ತನುಗಳೆಲ್ಲ ಒಂದೇ. ತನುಗಳಲ್ಲಿರುವ ಮನ ಕೂಡಾ ಒಂದೇ. ತನುವಿನಲ್ಲಿರುವ ಅರಿವು ಕೂಡಾ ಒಂದೇ. ಹೀಗಿರುವಾಗ ಅರಿವಿನ ತನುವಿಗೆ ತನುಗಳೆಲ್ಲ ಸವತಿ ತನುಗಳೆ. ಅರಿವಿನ ಸಕ್ಕರೆಯ ಮಾತುಗಳು ಸವತಿಗೆ ಸಿಹಿಯಾಗುವುದಿಲ್ಲ. ಮನ ಬೇವು ; ಅದರಲ್ಲಿ ಬೆಲ್ಲಹುಡುಕಲು ಬರುವುದಿಲ್ಲ. ಅಂಗಗಳಲ್ಲಿರುವ ಅರಿವೆಂಬ ಸಂಗಮನಾಥನೆ ಜಂಗಮವಾಗಿ ಬಂದು ಮನದ ಸೂತಕ ಕಳೆಯಯ್ಯಾ ಎಂದು ಸರ್ವ ಅಂಗಗಳಲ್ಲಿರುವ ಲಿಂಗಯ್ಯನನ್ನು ಬೇಡಿ ಅಂಗವನ್ನು ಐಕ್ಯಸ್ಥಲಕ್ಕೆ ಅಣಿಗೊಳಿಸಿದ್ದಾರೆ ಬಸವಣ್ಣನವರು.

390

ನಾನಾ ಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೆ, ಅಯ್ಯಾ ?
ಉಭಯ ಕುಳಕ್ಕಲ್ಲದೆ ತೆರಳದು.
ಬೀದಿಯಲ್ಲಿ ಬಿದ್ದ ಶಿಶುವನು
ಹೆತ್ತ ತಾಯಿ ಹತ್ತಿರ ಬಂದು ಎತ್ತುವಂತೆ
ಎನ್ನನಾರು ಜನ್ಮಕ್ಕೆ ತಂದು ಅಘೋರ ನರಕದಲ್ಲಿಕ್ಕಿದುದ ನಾ ಬಲ್ಲೆ.
ಕೂಡಲಸಂಗಮದೇವಾ, ನಿಮ್ಮ ಹಂಗೇನು ? ಹರಿಯೇನು ?
ಆನು ಉಭಯ ಲಿಂಗ ಜಂಗಮದ ಮರೆಹೊಕ್ಕು ಬದುಕಿದೆನು.

ನಾನಾ ಸ್ಥಾನಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೆ, ಅಯ್ಯಾ :

ತನು ನಡೆದಾಡುವ ಅರಿವಿನ ಬೋಧೀ ವೃಕ್ಷ! ವೃಕ್ಷಕ್ಕೆ ರೆಂಬೆ ಕೊಂಬೆಗಳಿದ್ದಂತೆ ತನುವಿಗೂ ನಾನಾ ಬ್ರಾಂಚ್ (ಶಾಖೆ)ಗಳಿವೆ. ಮರದಲ್ಲಿಸಂಪೂರ್ಣ ಸಹಜಗುಣಗಳಿವೆ. ಬೇರು ರೆಂಬೆಕೊಂಬೆ ಕಾಂಡ ಚಿಗುರು ಎಲೆ ಕಾಯಿ ಹಣ್ಣು ಇವೆಲ್ಲವುಗಳೊಂದಿಗೆ ಒಂದು ಪರಿಪೂರ್ಣ ಮರವಾಗಿದೆ. ಇವಿಲ್ಲದೆ ಮರವಿಲ್ಲ; ಮರವಿಲ್ಲದೆ ಇವಿಲ್ಲ!

ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ, ಬಾಯಿ, ಹಲ್ಲು, ದವಡೆ, ಕುತ್ತಿಗೆ, ತಲೆ, ಹುಬ್ಬು, ಕೈ, ಬೆರಳು, ಮುಂಗೈ, ಹಸ್ತ, ಬೆನ್ನು, ಹೊಟ್ಟೆ, ಎದೆ, ಭುಜ, ಪೃಷ್ಠ, ತೊಡೆ, ಮೊಣಕಾಲು, ಕಾಲು, ಪಾದ, ಉಂಗುಷ್ಠ , ಕಾಲ್ಬೆರಳು, ಜನನೇಂದ್ರಿ ಹೀಗೆ ಇನ್ನೂ ನಾನಾ ಸ್ಥಾನಂಗಳು ಸೇರಿ ಒಂದು ಪರಿಪೂರ್ಣ ತನುವಾಗಿದೆ. ಇವಿಲ್ಲದೆ ತನುವಿಲ್ಲ ; ತನುವಿಲ್ಲದೆ ಇವಿಲ್ಲ. ಒಂದು ಪರಿಪೂರ್ಣ ಅರಿವಿನ ತನುವೆಂದರೆ ಇವೆಲ್ಲವುಗಳಿರಬೇಕು.

ಮರದ ನಾನಾ ಸ್ಥಾನಂಗಳಿಗೆ ಭೇದವಿಲ್ಲ. ಆದರೆ ತನುವಿನ ನಾನಾ ಸ್ಥಾನಂಗಳಲ್ಲಿ ಅಜ್ಞಾನ ಪ್ರಧಾನವಾಗಿ ಕುಳಿತಿದೆ. ಆಯಾ ಸ್ಥಾನಗಳಲ್ಲಿದ್ದ ಜ್ಞಾನ ; ಆಯಾ ಸ್ಥಾನದಲ್ಲಿಯೇ ಮರೆಯಾಗಿ ; ಅರಿವಿನ ಬಳಕೆಗೆ ಬಾರದಂತಾಗಿದೆ. ತನು ಇರುವವರೆಗೆ ಕಾಲು ಕಾಲೇ ! ಅದು ತನುವಿನ ಭಾರವನ್ನು ಅರಿವಿನಿಂದ ಮುನ್ನಡೆಸುವ ಜ್ಞಾನದ ಚಕ್ರವಲ್ಲ. ಕಾಲಿನ ಸ್ಥಾನದಲ್ಲಿ ಕುಳಿತ ಅಜ್ಞಾನ ಮಾತ್ರ ಬಳಕೆಯಾಗುತ್ತದೆ. ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮದ ಸ್ಥಾನಗಳಲ್ಲಿ ಬಂದು ಕುಳಿತ ಅಜ್ಞಾನ ತೆರಳುವುದೆಂತು ? ಆಯಾ ಸ್ಥಾನಗಳಲ್ಲಿದ್ದಜ್ಞಾನ ಬಳಸುವುದೆಂತು ಎಂದು ಯೋಚಿಸಲು ಸಹ ತನುವಿಗೆ ಪುರುಸೊತ್ತಾಗಿಲ್ಲ; ಅದರ ಸಮಯವೆಲ್ಲ ಅಜ್ಞಾನಕ್ಕೆ ಧಾರಾಳವಾಗಿ ಬಳಕೆಯಾಗುತ್ತದೆ.

ಬಾಯಿಯಿಂದ ಒದೆಯುತ್ತೇನೆ ಎನ್ನುವ ಶಬ್ದ , ಏನೂ ಮಾತನಾಡದ ತನುವನ್ನು , ಮಾತನಾಡದೆ ತುಂಬಿದ ತೇರಿನಂತೆ ಮುನ್ನಡೆಸುವ ಜ್ಞಾನಚಕ್ರಗಳಿಗೆ ಬಡಿದು ಘಾಸಿಗೊಳಿಸುತ್ತದೆ. ಬಾಯಿ ನುಡಿದರೆ ಏನನ್ನು ನುಡಿಯದ ಕಾಲಿಗೆ, ಇಡೀ ದೇಹಕ್ಕೆ ಶಿಕ್ಷೆ!

ಕಣ್ಣು ನೋಡುವ ಜ್ಞಾನವನ್ನು ಹೊಂದಿದ್ದರೂ, ಜ್ಞಾನ ಕಣ್ಣಿಗೆ ಬಳಕೆಯಾಗದೆ, ಆ ಸ್ಥಾನದಲ್ಲಿ ಕುಳಿತ ಅಜ್ಞಾನ ಮಾತ್ರ ಬಳಕೆಯಾಗುತ್ತದೆ. ಆಭರಣ ನೋಡಿ ಅದನ್ನು ಪಡೆಯುವುದಕ್ಕಾಗಿ ತನುವನ್ನು ಹಗಲಿರುಳು ದುಡಿಯಲು ಹಚ್ಚುತ್ತದೆ ; ಭ್ರಷ್ಟಾಚಾರ ಲಂಚ ಪಡೆಯಲು ಹಚ್ಚುತ್ತದೆ. ಇಲ್ಲ ಕದ್ದು, ದೊರೆಯದಿದ್ದರೆ ಕೊಂದು ಅರಿವಿನ ತನುವನ್ನು ಜೇಲಿಗೆ ತಳ್ಳುತ್ತದೆ. ಮತ್ತೊಂದು ತನುವನ್ನು ನೋಡಿ ; ತನುವಿನಲ್ಲಿ ಕಾಮ ಹುಟ್ಟಿಸಿ ತನುವನ್ನೇ ಹರಿದು ತಿಂದು ಸುಖಿಸಿ ಅರಿವಿನ ತನುವಿಗೆ ಪೈಶಾಚಿಕ ಪಟ್ಟ ಕಟ್ಟುತ್ತದೆ.

ಸೀತೆಯನ್ನು ನೋಡಿದ ರಾವಣ ತನ್ನನ್ನು ರಾಜ್ಯವನ್ನು ಕಳೆದುಕೊಂಡ. ದ್ರೌಪದಿಯನ್ನು ನೋಡಿದ ಕೀಚಕ ಸತ್ತ . ಸುಖಕ್ಕಾಗಿ ನುಡಿದ ಕೈಕೇಯಿ ನರಳಿ ನರಳಿ ಸತ್ತಳು. ದ್ರೌಪದಿಯ ಹಾಸ್ಯಾಸ್ಪದದ ನಗುವಿನಿಂದ, ದುರ್ಯೋಧನನ ವಜ್ರ ಶರೀರ ಕತಕತನೆ ಕುದಿಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ನಾಶವಾಯಿತು. ತನುವಿನ ನಾನಾ ಸ್ಥಾನಂಗಳಲ್ಲಿ ಬಂದು ಕುಳಿತ ಅಜ್ಞಾನ ತೆರಳುವುದೆ ಅಯ್ಯಾ?

ಉಭಯ ಕುಳಕ್ಕಲ್ಲದೆ ತೆರಳದು. ಬೀದಿಯಲ್ಲಿ ಬಿದ್ದ ಶಿಶುವನ್ನು ಹೆತ್ತ ತಾಯಿ ಹತ್ತಿರ ಬಂದು ಎತ್ತುವಂತೆ ಎನ್ನನಾರು ಜನ್ಮಕ್ಕೆ ತಂದು ಘೋರನರಕದಲ್ಲಿಕ್ಕಿದುದ ನಾ ಬಲ್ಲೆ ಕೂಡಲಸಂಗಮದೇವಾ, ನಿಮ್ಮ ಹಂಗೇನು ? ಹರಿಯೇನು ? ಆನು ಉಭಯ ಲಿಂಗಜಂಗಮದ ಮರೆಹೊಕ್ಕು ಬದುಕಿದೆನು :

ತನು ಒಂದು ಅರಿವಿನ ಕುಲ. ಶರಣರು ಇದನ್ನು ಲಿಂಗದ ಕುಲವೆಂದು ಕರೆದಿದ್ದಾರೆ. ತನುವಿನಲ್ಲಿ ಅರಿವೆಂಬ ಗುರುವೂ ಇದ್ದಾನೆ. ಆತನ ಮಾತು ಪಾಲಿಸುವ ತನುವಿನ ಕುಲದೈವನಾದ ಜಂಗಮನೂ ಇದ್ದಾನೆ. ಇವರಿಬ್ಬರಿಗಲ್ಲದೆ ತನುವಿನ ನಾನಾ ಸ್ಥಾನಂಗಳಲ್ಲಿ ಬಂದು ಕುಳಿತ ಅಜ್ಞಾನ ತೆರಳುವುದಿಲ್ಲ. ಇವರ ಕೃಪಾದೃಷ್ಟಿಗೆ ಉಳಿಯುವುದಿಲ್ಲ.

ಅರಿವಿನ ತನುವನ್ನು ಹಡೆದ ತಾಯಿ ಹತ್ತಿರ ಬಂದು ನೇವರಿಸಿದರೂ ಹೋಗದ ಅಜ್ಞಾನ ; ತನುವಿನ ಕಣ ಕಣದಲ್ಲಿದ್ದು ಜನ್ಮಕ್ಕೆ ಕಾರಣವಾಗಿ ತನುವಿನಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೇ ಈ ತನುವನ್ನು ಆರು ಜನ್ಮಕ್ಕೆ ತಂದು ಅಘೋರ ನರಕದಲ್ಲಿ ಇಟ್ಟಿದ್ದು ನನಗೆ ತಿಳಿದಿದೆ. ಅರಿವಿನ ತನುವನ್ನು ಸೃಷ್ಟಿಮಾಡಿ, ಆ ತನುವಿನ ನಾನಾ ಸ್ಥಾನಂಗಳಲ್ಲಿ **ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ**ಗಳೆಂಬ ಅಜ್ಞಾನವನ್ನು ತುಂಬಿ ; ಜ್ಞಾನದ ಒಂದು ಜನ್ಮವನ್ನು ಅಜ್ಞಾನದ ಆರು ಜನ್ಮಗಳಿಂದ ಬಿಡಿಸಿಕೊಳ್ಳಲು ಅಘೋರ ನರಕದಲ್ಲಿ ತುಳಿದ. ಅದು ಕೂಡಾ ನನಗೆ ತಿಳಿದಿದೆ. ಕೂಡಲಸಂಗಮದೇವನೆ ; ಅರಿವಿನೊಂದಿಗೆ ಅರಿಷಡ್ವರ್ಗಗಳಿಗೂ ಜನ್ಮಕೊಟ್ಟ ತಂದೆಯೇ ! ನಿನ್ನ ಹಂಗೇನು ? ಹರಿಯೇನು ? ತನುವಿನಲ್ಲಿ ಅರಿವು ಹೇಳುವ ಲಿಂಗತಂದೆಯಿದ್ದಾನೆ. ಅದನ್ನು ಪಾಲಿಸುವ ಜಂಗಮನೆಂಬ ಬುದ್ಧನಿದ್ದಾನೆ. ಅವರಿಬ್ಬರಿಗೆ ಮೊರೆಹೊಕ್ಕು ನಾನು ಬದುಕಿದೆನು.

ಸೂರ್ಯ ಬೆಳಕಿಗೊಂದೇ ಜನ್ಮ ಕೊಡಲಿಲ್ಲವೆಂಬುದು ನಾನು ಬಲ್ಲೆ. ಬೆಳಕಿನೊಂದಿಗೆ ಕತ್ತಲಿಗೂ ಜನ್ಮಕೊಟ್ಟನೆಂದು ನನಗೆ ತಿಳಿದಿದೆ. ಸದಾ ಸೂರ್ಯ ಬೆಳಗಿದರೇನು ? ಆ ಸೂರ್ಯನ ಬೆಳಕಿನ ನೆರಳಿನಿಂದಲೇ ಸದಾ ಕತ್ತಲು. ಬೆಳಗುವುದೂ ತಪ್ಪಲಿಲ್ಲ; ಬೆಳಕಿನಿಂದ ಸೃಷ್ಟಿಯಾದ ಕತ್ತಲು ಚೆಲ್ಲುವುದೂ ತಪ್ಪಲಿಲ್ಲ. ಹಾಗೆಯೇ ನೀನು ಅರಿವಿನ ಬೆಳಕಾಗಿ ತನುವ ಬೆಳಗಿದರೇನು ? ನಿನ್ನ ಬೆಳಕಿನಿಂದ ಸೃಷ್ಟಿಯಾದ ಅರಿಷಡ್ವರ್ಗಗಳೆಂಬ ಆರು ಪದರಿನ ಕತ್ತಲು ನಿನ್ನ ಬೆಳಕನ್ನೂ ತೋರಗೊಡದೆ

ತನುವನ್ನು ಮುಸುಕಿದವು. ಹಾಗಿದ್ದ ಮೇಲೆ ನಿನ್ನ ಹಂಗೇನು ? ಹರಿಯೇನು ? ಲಿಂಗ ಜಂಗಮದ ಮೊರೆಹೊಕ್ಕು ಬದುಕಿದೆನು.

391

ಅಯ್ಯಾ , ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ,
ಮೀನಜ ರೋಮಜ ಮಹಾ ಮುನಿಗಳ
ಲಯವ ಮಾಡಿದುದ ನಾ ಬಲ್ಲೆನಾಗಿ.
ಅಯ್ಯಾ , ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ,
ನವಕೋಟಿ ಬ್ರಹ್ಮರಿಗೆ
ಪ್ರಳಯವ ಮಾಡಿದುದ ನಾ ಬಲ್ಲೆನಾಗಿ.
ಅಯ್ಯಾ , ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ,
ದಶಕೋಟಿ ನಾರಾಯಣರಿಗೆ
ಮರಣವ ಮಾಡಿದುದ ನಾ ಬಲ್ಲೆನಾಗಿ.
ಅಯ್ಯಾ , ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ,
ಅನಂತಕೋಟಿ ರುದ್ರರಿಗೆ
ಲಯವ ಮಾಡಿದುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ,
ಎನ್ನ ನೇಳೇಳು ಭವಕ್ಕೆ ತಂದಲ್ಲಿ.
ಆನುಭಯ ಲಿಂಗಜಂಗಮದ ಮರೆಹೊಕ್ಕು
ಭವಂ ನಾಸ್ತಿಯಾಗಿ ಬದುಕಿದೆನಯ್ಯಾ
ಕೂಡಲಸಂಗಮದೇವಾ.

ದೇವರೆಂದು ನಂಬಿ ಪೂಜಿಸಿದ ಮಹಾಮುನಿಗಳು ಲಯವಾದರು. ದೇವರೆಂದು ನಂಬಿ ಪೂಜಿಸಿದ ನವಕೋಟಿ ಬ್ರಹ್ಮ ಪ್ರಳಯಕ್ಕೆ ತುತ್ತಾದರು. ದೇವರೆಂದು ನಂಬಿ ಪೂಜಿಸಿದ ದಶಕೋಟಿ ನಾರಾಯಣರು ಮರಣಕ್ಕೆ ತುತ್ತಾದರು. ದೇವರೆಂದು ನಂಬಿ ಪೂಜಿಸಿದುದಕ್ಕಾಗಿ ಪೂಜಿಸಿದ ಮನವನ್ನು ಏಳೇಳು ಭವಕ್ಕೆ ತಂದಿರಿ. ಜನನ ಮರಣಗಳ ಬಾಧೆಯನ್ನು ಉಂಟು ಮಾಡಿದಿರಿ.

ದೇವರೆಂದು ಪೂಜಿಸಿ ಆ ದೇವರೆ ಸಕಲವೆಂದು ನಂಬಿದ ಮನಕ್ಕೆ ಅರಿವಾಗಿ ; ತನುವಿನಲ್ಲಿ ತನ್ಮಯವಾದ ಲಿಂಗವೆಂಬ ಅರಿವೆ ಗುರುವೆಂದು ನಂಬಿದೆ. ಆ ಗುರುದೇವ ನುಡಿದು ಹೇಳಿದುದನ್ನು ಪಾಲಿಸುವ ತನುವಿನಲ್ಲಿ ತನ್ಮಯವಾದ ಜಂಗಮನೇ ಸಕಲವೆಂದು ನಂಬಿ ಅವರಿಬ್ಬರಿಗೆ ಮರೆಹೊಕ್ಕ ಕಾರಣ ಜನನ ಮರಣಗಳು ನಾಸ್ತಿಯಾಗಿ ಬದುಕಿದೆನಯ್ಯಾ ಕೂಡಲಸಂಗಮದೇವಾ.

ಸಕಲ ತನುಗಳಲ್ಲಿ ಸಂಗಮುಗೊಂಡ ಸಂಗಮನಾಥನು ; ತಾನು ಸಕಲ ತನುಗಳಿಗೊಡೆಯನಾದರೂ ದೇವರನ್ನು ಪೂಜಿಸಲು ಪ್ರೇರಣೆ ನೀಡಿ ಮಹಾಮುನಿಗಳನ್ನು ಲಯವ ಮಾಡಿದ. ನವಕೋಟಿ ಬ್ರಹ್ಮರೇ ತಾವಾಗಬೇಕಾದವರು ಅರಿಯದೆ ಬ್ರಹ್ಮನನ್ನು ಪೂಜಿಸಿ ಪ್ರಳಯಕ್ಕೆ ತುತ್ತಾದರು.

ದಶಕೋಟಿ ನಾರಾಯಣರು ತಾವೆಂದರಿಯದೆ ನಾರಾಯಣನನ್ನು ಪೂಜಿಸಿ ಮರಣ ಹೊಂದಿದರು. ಅನಂತಕೋಟಿ ರುದ್ರರು ತಾವೆಂದರಿಯದೆ ರುದ್ರನನ್ನು ಪೂಜಿಸಿ ಲಯವಾದರು.

'ಅರಿವೇ ಗುರು', 'ಗುರುದೇವನೇ ಮಹಾದೇವ', 'ಮಹಾದೇವನೇ ಸದಾಶಿವ', 'ಸದಾಶಿವನೇ ಸಾಕ್ಷಾತ್ ಪರಬ್ರಹ್ಮ', 'ಆ ಪರಬ್ರಹ್ಮನೇ ತಾನು'. ಹೀಗೆ ತಿಳಿಯಬೇಕಾದ ಮನವೆಂಬ ಭ್ರಮೆ ದೇವರನ್ನು ಪೂಜಿಸುವುದು ಬಿಟ್ಟು ಅರಿವೆಂಬ ಲಿಂಗಕ್ಕೆ ಅರಿವನ್ನು ಪಾಲಿಸುವ ಜಂಗಮಕ್ಕೆ ಮರೆಹೋದ ಕಾರಣ ಕೂಡಲೇ ಜನನ ಮರಣಗಳು ನಾಸ್ತಿಯಾಗಿ ಬದುಕಿದೆನು.

ಭವಂ ನಾಸ್ತಿಯಾಗಿ ಬದುಕಿದೆನಯ್ಯಾ ಕೂಡಲಸಂಗಮದೇವಾ :

ಭವಂ ಎಂದರೆ ಜನನ ಮರಣ. ಅಜ್ಞಾನದಿಂದ ನೋಡಿದರೆ ಮರಣ. ಅಜ್ಞಾನದಿಂದ ಕೇಳಿದರೆ ಮರಣ. ಅಜ್ಞಾನದಿಂದ ಮುಟ್ಟಿದರೆ ಮರಣ. ಅಜ್ಞಾನದಿಂದ ರುಚಿಸಿದರೆ ಮರಣ. ಅಜ್ಞಾನದಿಂದ ಮೂಸಿಸಿದರೆ ಮರಣ. ಭಾವ ಅರಳಿದರೆ ಮರಣ ; ಭಾವ ಕೆರಳಿ ದುರ್ಭಾವವಾದರೆ ಮರಣ. ಜನನಕ್ಕೆ ಕಾರಣವಾದ ವಿಷಯಸುಖಕ್ಕೂ ಮರಣ. ಅನ್ನಕ್ಕೆ ಕಾರಣವಾದ ಮಣ್ಣಿಗೂ ಮರಣ. ಕಾಗದದಲ್ಲಿ ಅರಳಿದ ಕರೆನ್ಸಿಗೂ ಮರಣ. ಲೋಹದಲ್ಲಿ ಅರಳಿದ ಆಭರಣಕ್ಕೂ ಮರಣ. ಜಲಹರಿದು ಆ ಜಲವೇ ಕುದ್ದು ಪಾಕಗಟ್ಟಿದ ಭೂಮಿಗಾಗಿ ಮರಣ. ಭೂಮಿಯ ಗರ್ಭದಲ್ಲಿದ್ದ ಖನಿಜಕ್ಕಾಗಿ ಮರಣ. ಜಲಹರಿದು ಪ್ರಸಾದಕ್ಕಾಗಿ ಬೆಳೆದ ಪದಾರ್ಥಕ್ಕೂ ಮರಣ. ಜಲಹರಿದು ಸಸಿಯಾಗಿ ಅರಳಿದ ಸುಗಂಧಕ್ಕಾಗಿ ಮರಣ. ಜಲಹರಿದು ಸಸಿಯಾಗಿ ಅರಳಿದ ಸಿಹಿಗಾಗಿ ಮರಣ. ಜಲಹರಿದು ಬಿಂದುವಾಗಿ ಗರ್ಭದಲ್ಲಿ ಹೊಕ್ಕು ಅರಿವೇ ತಾನಾಗಿ ಜನ್ಮ ತಾಳಿದ ಬ್ರಹ್ಮತನುವಿಗೆ ತಟ್ಟುವ ಜನನ ಮರಣಗಳ ಭ್ರಮೆಯ ಬಾಧೆ ಅಷ್ಟಿಷ್ಟಲ್ಲ!

ಅರಿತರೆ, ತನು ಅರಿವಿನ ಜಲದ ಮುದ್ದೆ. ಅರಿತರೆ, ತನು ಜಲವೂ ಜಲವಲ್ಲ. ಆಮ್ಲಜನಕ ಜಲಜನಕ ಕೂಡಿದರೆ ಜಲವಾಗಿ ಕಾಣುತ್ತದೆ. ಆಮ್ಲಜನಕವೂ ಜಲವಲ್ಲ; ಜಲಜನಕವೂ ಜಲವಲ್ಲ. ಇವೆರಡೂ ಕೂಡಲು ಕಾರಣವಾದ ಬಯಲೂ ಜಲವಲ್ಲ. ಜಲಜನಕಕ್ಕೆ ಉರಿಯುವ ಗುಣವಿದೆ. ಆಮ್ಲಜನಕಕ್ಕೆ ಉರಿಸುವ ಗುಣವಿದೆ. ಇವೆರಡೂ ಕೂಡಿದ ಜಲಕ್ಕೆ ತಂಪೆರೆಯುವ ಗುಣವಿದೆ. ಇವೆರಡನ್ನೂ ಕೂಡಿಸಿ ಸೃಷ್ಟಿಗೆ ಜಲಜೀವಿಗಳಿಗೆ, ರೋಮಜ, ಮೀನಜ, ಅಂಡಜ, ಪಿಂಡಜ ಮಹಾಮುನಿಗಳ ಜನನಕ್ಕೆ ಕಾರಣವಾದ ಬಯಲಿಗೆ ಮಾತ್ರ ಜನನವಿಲ್ಲ ಮರಣವಿಲ್ಲ. ಭೋರ್ಗರೆಯುವ ಪ್ರಳಯಕ್ಕೆ, ಬಿರಿದು ಬೆಂಕಿ ಉಗುಳುವ ಭೂಮಿಗೆ, ಧಾರಾಕಾರವಾಗಿ ಸುರಿಯುವ ಕುಂಭದ್ರೋಣ ಮಳೆಗೆ, ಬಿರುಗಾಳಿಗೆ, ಗುಡುಗು ಸಿಡಿಲಿಗೆ, ಕೆನ್ನಾಲಿಗೆ ಚಾಚಿ ಉರಿಯುವ ಅಗ್ನಿಗೆ ಬಯಲು ತುತ್ತಾಗುವುದಿಲ್ಲ; ಸುಟ್ಟು ಮರಣ ಹೊಂದುವುದಿಲ್ಲ. ಜಲಜನಕಕ್ಕೂ ಆಮ್ಲಜನಕಕ್ಕೂ ಜಲಕ್ಕೂ ಜನ್ಮ ನೀಡಿ ಆ ಜಲದಲ್ಲಿ ಬಯಲು ಬಚ್ಚಿಟ್ಟುಕೊಂಡು ಸಕಲ ಬ್ರಹ್ಮಾಂಡವನ್ನು ಸೃಷ್ಟಿಸಿದ ಬಯಲ ಬ್ರಹ್ಮನಿಗೆ ಜನನವಿಲ್ಲ ಮರಣವಿಲ್ಲ, ಇದನ್ನು ರೋಮಜ ತಿಳಿಯುವುದಿಲ್ಲ ; ಮೀನಜ ತಿಳಿಯುವುದಿಲ್ಲ ; ಅಂಡಜನೂ ತಿಳಿಯುವುದಿಲ್ಲ ; ಪಿಂಡದಿಂದ ಬಂದ ಮನುಷ್ಯ ಮಾತ್ರ ತಿಳಿಯಬಹುದು. ತಿಳಿದರೆ ಬಯಲಬ್ರಹ್ಮ ತಾನೆ ! ಆತನಿಗೆ ಜನನವಿಲ್ಲ ಮರಣವಿಲ್ಲ !

392

ಲಿಂಗದರುಶನ ಕರಮುಟ್ಟಿ ಜಂಗಮದರುಶನ ಶಿರಮುಟ್ಟಿ
ಆವುದು ಘನವೆಂಬೆ, ಆವುದು ಕಿರಿದೆಂಬೆ ?

ತಾಳಸಂಪುಟಕ್ಕೆ ಬಾರದ ಘನವ ಅರ್ಪಿಸಹೋದಡೆ,
ಅರ್ಪಣ ಮುನ್ನವೆ ಇಲ್ಲ, ಗಮನ ನಿರ್ಗಮನವಾಯಿತ್ತು !
ಈ ಉಭಯದ ಭೇದವನರಿಯರಾಗಿ
ಜಂಗಮವೆ ಲಿಂಗ, ಕೂಡಲಸಂಗಮದೇವಾ.

ಅರಿವೆಂಬ ಗುರುದೇವನು ತನುವಿನಲ್ಲಿ ತನ್ಮಯಗೊಂಡುದು ತಿಳಿದು ಆತನ ದರುಶನದಿಂದ ಇಡೀ ತನುವೆ ಪುಳಕಿತಗೊಂಡಿತು. ಅರಿವೆಂಬ ಗುರುದೇವನು ನುಡಿದ ನುಡಿಮುತ್ತುಗಳನ್ನು ಶಿರಸಾವಹಿಸಿ ಪಾಲಿಸಿ ಕಾರ್ಯರೂಪಕ್ಕೆ ತರುವ ಜಂಗಮನು ತನುವಿನಲ್ಲಿಯೇ ದರುಶನವಿತ್ತುದನು ಕಂಡು ಹರುಷದಿಂದ ಓಲಾಡಿ ಮನದ ಅಜ್ಞಾನವೆಲ್ಲ ಅವರಿಗೆ ಕೊಟ್ಟು ಶರಣು ಹೋದೆನು. ಅವರಿಬ್ಬರಲ್ಲಿ ಯಾರನ್ನು ಹಿರಿಯರೆನ್ನಲಿ ; ಯಾರನ್ನು ಕಿರಿಯರೆನ್ನಲಿ ? ಇಬ್ಬರೂ ಘನಕ್ಕೆ ಘನವಾದವರು.

ಕಣ್ಣಿನ ನೋಟದಲ್ಲಿ ಬೆರೆತ ಜ್ಞಾನದ ಸಂಪತ್ತನ್ನು , ಕಿವಿಯ ಶಬ್ದದಲ್ಲಿ ಬೆರೆತ ಅರಿವಿನ ಸಂಪತ್ತನ್ನು , ಮೂಗಿನಲ್ಲಿ ಬೆರೆತ ವಿವಿಧ ಪರಿಮಳದ ಅರಿವಿನ ಸಂಪತ್ತನ್ನು , ಚರ್ಮದಲ್ಲಿ ಬೆರೆತ ಅವರೀರ್ವರ ಅರಿವಿನ ಸ್ಪರ್ಶಸುಖವನ್ನು , ನಾಲಿಗೆಯಲ್ಲಿ ಬೆರೆತ ಅರಿವಿನ ರುಚಿಯ ಸಂಪತ್ತನ್ನು ತಾಳಸಂಪುಟಕ್ಕೆ (ಬರವಣಿಗೆಗೆ) ತಂದು ಅರ್ಪಿಸಬಹುದೆ ? ತನುವಿನಿಂದ ಬಂದ ಅರಿವಿನ ಅಕ್ಷರಗಳನ್ನು ಪುನಹ ತನುವಿಗೆ ಅರ್ಪಿಸುವುದೆಂದರೆ ಹಾಸ್ಯಾಸ್ಪದವೇ ಸರಿ. ಅರ್ಪಿಸಹೋದಡೆ ಅರ್ಪಣೆ ಮುನ್ನವೇ ಇಲ್ಲ.

ಗಮನ ನಿರ್ಗಮನವಾಯಿತ್ತು :

ತನುವಿನ ನೋಟದಿಂದ ಹುಟ್ಟಿದ ಆಭರಣದಿಂದಾಗಿ ತನು ತಲ್ಲಣಗೊಂಡಿತು. ಆಭರಣ ಅರಿವಿನ ನೋಟಕ್ಕೆ ತುತ್ತಾಗಿ ಲೋಹವಾಯಿತು. ಹರಿದ ಅಜ್ಞಾನದ ಗಮನ; ಜ್ಞಾನದ ನೋಟಕ್ಕೆ ತುತ್ತಾಗಿ ನಿರ್ಗಮನವಾಯಿತು.

ಈ ಉಭಯದ ಭೇದವನರಿಯರಾಗಿ ಜಂಗಮವೆ ಲಿಂಗ, ಕೂಡಲಸಂಗಮದೇವಾ :

ತನುವಿನಲ್ಲಿ ತನ್ಮಯವಾದ ಅಜ್ಞಾನಿ ಮನ, ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನೇ ಲಿಂಗವೆಂದು ತಿಳಿಯದ್ದಕ್ಕಾಗಿ ; ತನುವಿನಲ್ಲಿಯೇ ತನ್ಮಯವಾದ ಗುರುದೇವನ ಮಾತನ್ನು ಪಾಲಿಸುವಾತನೇ ಜಂಗಮನೆಂದು ತಿಳಿಯದ್ದಕ್ಕಾಗಿ ಅರಿವಿನ ತನುಸಂಪುಟ ಚಿಕ್ಕದಾಗಿದೆ. ತಾಳಸಂಪುಟ ಗ್ರಂಥವೇ ದೊಡ್ಡದಾಗಿದೆ.

393

ಶಿವಭಕ್ತರೆ ಅಧಿಕರು, ನೋಡಯ್ಯಾ
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ
ಈ ದ್ವಿವಿಧವನೊಂದೇ ಎಂದು ನಂಬಿದ
ಕೂಡಲಸಂಗಮದೇವಾ.

''ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದಸಾಕ್ಷಿ ಎನ್ನ ಮನಸಾಕ್ಷಿ! ಕೂಡಲಸಂಗಮದೇವಾ ಎನಗಿದೇ ದಿಬ್ಯ'' ಶಿವಭಕ್ತರು-ಅರಿವನ್ನು ಆರಾಧಿಸುವವರು. ತನುವಿನಲ್ಲಿ ಅರಿವಿದೆ; ಅದನ್ನು ಆರಾಧಿಸುವ ಮನವೂ ಇದೆ. ತನುವಿನಲ್ಲಿ ಅರಿವಿದೆ ; ಅದನ್ನು ಪಾಲಿಸುವ

ಜಂಗಮನೂ ಇದ್ದಾನೆ.

ಅರಿವೇ ಗುರು. ಗುರುದೇವನೇ ಮಹಾದೇವ. ಮಹಾದೇವನೇ ಸದಾಶಿವ. ಆ ಗುರುದೇವನಿಗೆ ಭಕ್ತಿ ಮಾಡುವ ಮನವೇ ಶಿವಭಕ್ತ. ಶಿವನೆಂದರೆ ಯಾರೆಂದು ತಿಳಿಯದ ಮನಕ್ಕಿಂತ; ಶಿವನೆಂದರೆ ಅರಿವೆಂದು ತಿಳಿದು, ಆ ಶಿವನಿಗೆ ಭಕ್ತಿ ಮಾಡುವ ಮನವೇ ಅಧಿಕ !

ಅರಿವಿಗೆ ಭಕ್ತಿ ಮಾಡುವ ಮನಕ್ಕಿಂತ ಅಧಿಕವಾಗಿ, ಅರಿವನ್ನು ಪಾಲಿಸುವ ಜಂಗಮನನ್ನು ಕಂಡೆ. ಆ ಜಂಗಮನೆ ಶಿವ ಭಕ್ತನಿಗಿಂತ ಅಧಿಕವಾಗಿ ಕಂಡ. ಇವರಿಬ್ಬರೂ ಅರಿವಿನ ಒಂದೇ ತನುವಿನ ಕುಡಿಗಳು ಎಂದು ನಂಬಿದೆ. ಕೂಡಲಸಂಗಮದೇವಾ. ತನುವಿನಲ್ಲಿ ಶಿವನೂ ಸಂಗಮವಾಗಿದ್ದಾನೆ. ಆತನನ್ನು ಆರಾಧಿಸುವ ಭಕ್ತನೂ ಸಂಗಮವಾಗಿದ್ದಾನೆ. ಶಿವನ ಆದೇಶವನ್ನು ಪಾಲಿಸುವ ಜಂಗಮನೂ ಸಂಗಮವಾಗಿದ್ದಾನೆ. ಶಿವಮಯವಾದ ತನುವನ್ನು ಮನ ನಂಬಲೇಬೇಕು ಅಷ್ಟೆ!

394

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ ;
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ ;
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ ;
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ ;
ಈ ನಾಲ್ಕೂ ಮೂಲಸ್ಥಾನ.
ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲಸಂಗಮದೇವಾ.

ಕೃತಯುಗದಲ್ಲಿ ಕೇತಾರದ ಕೇತಾರೇಶ್ವರ ; ತ್ರೇತಾಯುಗದಲ್ಲಿ ವಾರಣಾಸಿಯ ವಿಶ್ವೇಶ್ವರ ; ದ್ವಾಪರದಲ್ಲಿ ವಿರೂಪಾಕ್ಷೇಶ್ವರ ; ಕಲಿಯುಗದಲ್ಲಿ ಶ್ರೀಶೈಲ ಪರ್ವತದ ಮಲ್ಲಿಕಾರ್ಜುನ ! ಈ ನಾಲ್ಕೂ ಮೂಲಸ್ಥಾನಗಳು ಒಂದೇ.

ಕೃತಯುಗದಲ್ಲಿ ಕೇತಾರೇಶ್ವರನನ್ನು ಕಲ್ಲಿನಲ್ಲಿ ಕೆತ್ತಿ ಕೇತಾರದಲ್ಲಿ ಪ್ರತಿಷ್ಠಾಪಿಸಿದರು. ಜನ ಕಲ್ಲು ಮರೆತು ಸಾವಿರ ಕಿ.ಮೀ.ಗಳನ್ನು ಕ್ರಮಿಸಿ ಕೇತಾರೇಶ್ವರನನ್ನು ಆರಾಧಿಸಿದರು. ಮೂಲಸ್ಥಾನ ಕಲ್ಲೆಂದು ಅರಿಯಲಿಲ್ಲ.

ತ್ರೇತಾಯುಗದಲ್ಲಿ ವಿಶ್ವೇಶ್ವರನನ್ನು ಕಲ್ಲಿನಲ್ಲಿ ಕೆತ್ತಿ ವಾರಣಾಸಿಯಲ್ಲಿ ಪ್ರತಿಷ್ಠಾಪಿಸಿದರು. ದೇಶದ ಜನ ಭಕ್ತಿಯಿಂದ ಸಾವಿರಾರು ಕಿ.ಮೀ. ಕ್ರಮಿಸಿ ವಿಶ್ವೇಶ್ವರನನ್ನು ಆರಾಧಿಸಿದರು. ಮೂಲಸ್ಥಾನ ಕಲ್ಲೆಂದು ತಿಳಿಯಲಿಲ್ಲ.

ದ್ವಾಪರ ಯುಗದಲ್ಲಿ ವಿರೂಪಾಕ್ಷೇಶ್ವರನನ್ನು ಕಲ್ಲಿನಿಂದ ಕೆತ್ತಿ ಪ್ರತಿಷ್ಠಾಪಿಸಿದರು. ಸಾಕ್ಷಾತ್ ದೇವರೆಂದು ಪೂಜಿಸಲು ದೇಶದ ಜನ ಸಾವಿರಾರು ಕಿ.ಮೀ. ಪಯಣಿಸಿದರು. ವಿರುಪಾಕ್ಷೇಶ್ವರನ ಮೂಲಸ್ಥಾನ ಕಲ್ಲೆಂದು ಅರಿಯಲಿಲ್ಲ.

ಕಲಿಯುಗದಲ್ಲಿ ಮಲ್ಲಿಕಾರ್ಜುನನನ್ನು ಕಲ್ಲಿನಲ್ಲಿಯೇ ಕೆತ್ತಿ ಸಾಕ್ಷಾತ್ ದೇವರೆಂದು ಭಕ್ತಿಯಿಂದ ಆರಾಧಿಸಲು ದೇಶದ ಜನ ಶ್ರೀಶೈಲಕ್ಕೆ ಸಾವಿರಾರು ಕಿ.ಮೀ. ಕ್ರಮಿಸಿದರು. ಮಲ್ಲಿಕಾರ್ಜುನನ ಮೂಲಸ್ಥಾನ ಕಲ್ಲೆಂದು ತಿಳಿಯಲಿಲ್ಲ. ಅದೇ ಕಲ್ಲಿನಲ್ಲಿ ಹೆಣ್ಣು ದೇವರನ್ನು ಕೆತ್ತಿ ಈ ನಾಲ್ಕೂ ದೇವರಿಗೆ ಮದುವೆ ಮಾಡಿದರು. ಸತಿ ಪತಿಗಳೆಂದರೆ ಯಾರೆಂದು ಅರಿಯಲಿಲ್ಲ. ಕಲ್ಲಿನಲ್ಲಿ ಕಲ್ಲನ್ನೇ ನೋಡಬೇಕಾದ

ಬ್ರಹ್ಮ ಕಣ್ಣಿನಲ್ಲಿಯೇ ಉಳಿದ. ಕೆತ್ತಿದ ಕಲ್ಲಿನಲ್ಲಿ ದೇವರನ್ನು ನೋಡಿ ಆರಾಧಿಸುವ ಮನವೆಂಬ ಭ್ರಮೆ ಕಣ್ಣನ್ನು ಆವರಿಸಿತು.

ತನುವಿಗೆ ಆವರಿಸಿದ ಭ್ರಮೆ ತನುವನ್ನು ಕಾಶಿಗೆ ಕರೆದುಕೊಂಡು ಹೋಗಿ ಕೆತ್ತಿದ ಕಲ್ಲನ್ನೇ ವಿಶ್ವೇಶ್ವರನೆಂದು ಆರಾಧಿಸಲು ಆಜ್ಞಾಪಿಸಿತು. ಮತ್ತೊಂದು ಕಲ್ಲಿನಲ್ಲಿ ಕೆತ್ತಿದ ಮೂರ್ತಿಯನ್ನು ವಿಶಾಲಾಕ್ಷಿಯೆಂದು ಆರಾಧಿಸಿತು.

ಹೀಗೆ ನಾಲ್ಕು ದಿಕ್ಕುಗಳಿಗೆ ತನು ಕ್ರಮಿಸಿ ದೇವರುಗಳನ್ನೇ ನೋಡಿತು ; ಅದರ ಮೂಲಸ್ಥಾನ ಕಲ್ಲು ನೋಡಲೇ ಇಲ್ಲ. ನಾಲ್ಕೂ ಸ್ಥಾನಗಳಲ್ಲಿ ಮುಟ್ಟಿ ತಿಳಿಯುವ ಸಂಪ್ರದಾಯವಿದ್ದರೂ, ಮುಟ್ಟಿದಾಗ ಕೈಗೆ ಕಲ್ಲು ತಾಗಲೇ ಇಲ್ಲ. ಕೃತಯುಗದಿಂದಲೂ ತನು ಕೇದಾರಕ್ಕೆ ಪಯಣಿಸಿ ಕೇದಾರನಾಥನನ್ನೇ ಮುಟ್ಟಿತೆ ಹೊರತು, ಕೈಗೆ ಕಲ್ಲಿನ ದರ್ಶನವಾಗಲೇ ಇಲ್ಲ.

ಕೃತಯುಗದ ಹದಿನೇಳುಲಕ್ಷ ಇಪ್ಪತ್ತೆಂಟು ಸಾವಿರ ವರುಷಗಳು ಕಳೆದುಹೋದವು. ತ್ರೇತಾಯುಗದ ಹನ್ನೆರಡು ಲಕ್ಷ ತೊಂಬತ್ತಾರು ಸಾವಿರ ವರುಷಗಳು ಕಳೆದುಹೋದವು. ದ್ವಾಪರ ಯುಗದ ಎಂಟು ಲಕ್ಷ ಅರವತ್ನಾಲ್ಕು ಸಾವಿರ ವರ್ಷಗಳು ಕಳೆದುಹೋದವು. ಕಲಿಯುಗದ ನಾಲ್ಕು ಲಕ್ಷ ಮೂವತ್ತೆರ ಡುಸಾವಿರ ವರ್ಷಗಳು ಕಳೆದು ಹೋಗುತ್ತಲಿವೆ.

ಈ ನಾಲ್ಕೂ ಯುಗಗಳ ನಲವತ್ಮೂರು ಲಕ್ಷ ಇಪ್ಪತ್ತು ಸಾವಿರ ವರ್ಷಗಳು ಕಳೆಯುತ್ತ ಬಂದು ಮಾಹಾಯುಗಕ್ಕೆ ಕಾಲಿಡುತ್ತಿದ್ದರೂ ತನುವಿಗೆ ಮೂಲಸ್ಥಾನ ನೋಡಲು ಸಾಧ್ಯವಾಗಲಿಲ್ಲವೆಂದರೇನು ?

ನಾನಾ ಸ್ಥಾನಗಳಿಗೆ ಹೋಗಿ ಕಲ್ಲು ಮುಟ್ಟಿ ದೇವರೆಂದು ಪೂಜಿಸದೆ ; ಕಲ್ಲನ್ನು ಕಲ್ಲೆಂದು ತಿಳಿಯುವುದೇ ತನುವಿನ ಅರಿವಿನ ಮೂಲಸ್ಥಾನ. ತನುವಿನ ಅರಿವನ್ನು ತಿಳಿದು ಆ ಅರಿವನ್ನು ನಂಬಿ, ಆ ಅರಿವನ್ನು ಪಾಲಿಸುವಾತನೇ ಜಂಗಮ !

395

ಭಕ್ತ ದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ ,
ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು ಗುಣವೆ ? ಹೇಳಾ.
ಕೂಡಲಸಂಗಮದೇವಾ ,
ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ !

ತನು ಎಂಬುದು ಅರಿವೆಂಬ ಗುರುದೇವನು ಕುಳಿತುಕೊಳ್ಳುವ ಮಂಚ. ತನುವನ್ನು ತನ್ನ ಆಳಿನಂತೆ ನಡೆಸಿಕೊಳ್ಳುವ ಶಕ್ತಿ ಆ ದೇವನಿಗೆ ಮಾತ್ರ ಇದೆ. ಆದರೆ ತನುವಿನೊಂದಿಗೆ ತನುವನ್ನು ಆವರಿಸಿದ ಮನ ಗುರುದೇವನಿಗೂ ಆತನ ತನುವಿಗೂ ಆಳಾಗಬೇಕಿತ್ತು. ಆದರೆ ಅಹಂಕಾರಿ ಮನ, ಅರಿವೆಂಬ ಗುರುದೇವ ಕುಳಿತುಕೊಳ್ಳುವ ತನುವಿನ ಮಂಚದ ಮೇಲೆ ಕುಳಿತುಕೊಂಡಿದೆ.

ಆಳ್ದನು ಬರಲು ಆಳು ಮಂಚದ ಮೇಲೆ ಇಪ್ಪುದು ಗುಣವೆ ? ಹೇಳಾ :

ಆಳು ಮಂಚದ ಮೇಲೆ ಕುಳಿತರೆ ಒಡೆಯ ಬರುವುದಾದರೂ ಹೇಗೆ ? ಮನಕ್ಕೆ ತಿಳಿಯಬೇಡವೆ. ನಾನು ಕುಳಿತ ಮಂಚ ಗುರುದೇವನದೆಂದು ? ಮನ ಅರಿತು, ಮೈತುಂಬಾ ಕಣ್ಣಾಗಿ,

ತನುವಿನ ಮಂಚ ಅರಿವೆಂಬ ಗುರುದೇವನ ಪೀಠವೆಂದು ತಿಳಿದು, ಜಂಗಮ ರೂಪಾಗಿ ಅರಿವಿನ ಸಂಗಯ್ಯ ಇಂದಿಲ್ಲ ನಾಳೆ ಬಂದಾನೆಂದು ಅರಿತು, ಎಂದೆಂದೂ ಮಂಚವನು ಏರದ ಭಾಷೆ ಮನ ತನಗೆ ತಾನೆ ಕೊಟ್ಟುಕೊಳ್ಳಬೇಕು.

396

ಜಂಗಮದ ಸನ್ನಿಧಿಯಲ್ಲಿ
ವಾಹನವನೇರಲಮ್ಮೆ , ಏರಿದಡೆ ಭವ ಹಿಂಗದು.
ಏನು ಕಾರಣ :
ಮುಂದೆ ಶೂಲವನೇರುವ ಪ್ರಾಪ್ತಿಯುಂಟಾದ ಕಾರಣ !
ಜಂಗಮ ಬರಲಾಸನದಲ್ಲಿರಲಮ್ಮೆ , ಇದ್ದಡೆ ಭವ ಹಿಂಗದು !
ಏನು ಕಾರಣ :
ಮುಂದೆ ಹೆಡಗುಡಿಯ ಕಟ್ಟಿ ಕಾಯ್ದಿಟ್ಟಿಗೆಯ ಮೇಲೆ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ !
ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆನು ,
ನಿಂದಡೆ ಭವ ಹಿಂಗದಾಗಿ
ಏನು ಕಾರಣ :
ಮುಂದೆ ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ !
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ.
ನಿಮ್ಮವರ ಸುಳುಹ ನೀವೆಂದೆ ಭಾವಿಸಿ,
ತೊತ್ತು-ಭೃತ್ಯನಾಗಿಪ್ಪೆನಯ್ಯಾ , ಕೂಡಲಸಂಗಮದೇವಾ.

ಈ ವಚನದಲ್ಲಿ ಬಸವಣ್ಣನವರು ಜಂಗಮನನ್ನು ದೊಡ್ಡವನನ್ನಾಗಿ ಮಾಡಿದ್ದಾರೆ. ಅವನಿಗೆ ಮನ, ಸದಾ ಸೇವಕನಾಗಿ ತೊತ್ತಾಗಿರಬೇಕೆಂದಿದ್ದಾರೆ. ಜಂಗಮನ ಸನ್ನಿಧಿಯಲ್ಲಿ ವಾಹನ ಏರಿದರೆ ಜನನ ಮರಣಗಳು ತಪ್ಪಿದ್ದಲ್ಲ; ಬದುಕಿದ್ದಾಗಲೇ ಶೂಲ ಪ್ರಾಪ್ತಿಯಾಗುತ್ತದೆ.

ಜಂಗಮನ ಮುಂದೆ ತಲೆ ಎತ್ತಿ ದಿಟ್ಟತನದಿಂದ ನಿಂತಿರಲಾರೆನು ; ನಿಂತರೆ ಕಾಯ್ದಿಟ್ಟಿಗೆಯ ಮೇಲೆ ಕುಳ್ಳಿರಿಸುವ ಪ್ರಾಪ್ತಿಯಾಗುತ್ತದೆ. ಜನನ ಮರಣದ ಬಾಧೆಯೂ ಹಿಂಗುವುದಿಲ್ಲ. ಹಿಂದಕ್ಕೆ ಎರಡು ಕೈಗಳನ್ನು ಕಟ್ಟಿ ಎದೆ ಬಿರಿಯುವ ಹಾಗೆ ಕುಳ್ಳಿರಿಸುವ ಬಾಧೆ ಉಂಟಾಗುತ್ತದೆ. ಇಂತಹ ಜನನ ಮರಣಂಗಳ ಬಾಧೆಗೆ ಅಂಜುವೆ. ಜಂಗಮನೆದುರಿಗೆ ಕುಳಿತುಕೊಳ್ಳಲಾರೆ , ವಾಹನವನ್ನು ಏರಲಾರೆ, ಜಂಗಮ ಬರಲು ಆಸನದಲ್ಲಿ ಇರಲಾರೆ. ಇದ್ದಡೆ ಜನನ ಮರಣಗಳ ಬಾಧೆ ತಪ್ಪದು.

ಜಾತಿಯಿಂದ ಹುಟ್ಟಿದ ಜಂಗಮ ; ಜಾತಿಯಿಂದ ಹುಟ್ಟಿದ ಸೇವಕ ಇವರಿಬ್ಬರೂ ಜಂಗಮರಾಗಲರಿಯರು. ಸೇವಕರೂ ಆಗಲರಿಯರು. ಜಾತಿಯಿಂದ ಜಂಗಮನಾದವನಿಗೆ ವೇಷ ತಪ್ಪದು ; ಜಾತಿಯಿಂದ ಸೇವಕನಾದವನಿಗೂ ವೇಷ ತಪ್ಪದು.

ತನುವಿನಲ್ಲಿ ತನ್ಮಯವಾದ ಅರಿವನ್ನು ಸದಾ ಸದ್ಬಳಕೆ ಮಾಡುವವನೇ ಜಂಗಮ ! ಬಸವಣ್ಣ ಈತನನ್ನು ಜಂಗಮನೆಂದು ಕರೆದು ಮನವನ್ನು ಈತನಿಗೆ ಸೇವಕನಾಗಿಸಿದ್ದಾನೆ. ತನುವನ್ನೇ ಕುದುರೆ

ಮಾಡಿಕೊಂಡು ಜಂಗಮ ನಡೆದರೆ ನೋಡಿದ ನೋಟವೆಲ್ಲ ಜಂಗಮ. ಕೇಳಿದ ಶಬ್ದವೆಲ್ಲ ಜಂಗಮ. ಸ್ಪರ್ಶಿಸಿದ ತನುಗಳೆಲ್ಲ ಜಂಗಮ. ಮೂಸಿಸಿದ ಗಂಧವೆಲ್ಲ ಪರಿಮಳ. ರುಚಿಸಿದ ಪದಾರ್ಥವೆಲ್ಲ ಪ್ರಸಾದದಂತೆ ಜಂಗಮ ಸ್ವೀಕರಿಸುತ್ತಾನೆ. ಈತನಿಗೆ ಸೇವಕನಾಗಿ ಈತನ ಹೆಜ್ಜೆಯ ಹಿಂದೆ ನಡೆಯಬೇಕಾದ ಮನ ; ಜಂಗಮ ಕೂಡುವ ತನುವಿನ ಆಸನದ ಮೇಲೆ ಕುಳಿತರೆ ; ಕುಳಿತ ತನುವನ್ನೇ ರಾಕ್ಷಸ ತನುವಾಗಿ ಮಾರ್ಪಡಿಸುತ್ತಾನೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗಾಗಿ ತನುವನ್ನು ಬಳಕೆ ಮಾಡುತ್ತಾನೆ. ತನು ನೋಡಿದರೆ ಸುಡುತ್ತದೆ. ಕೇಳಿದರೂ ಸುಡುತ್ತದೆ. ಮುಟ್ಟಿದರೂ ಸುಡುತ್ತದೆ. ಮೂಸಿಸಿ ರುಚಿಸಿದರೂ ಸುಡುತ್ತದೆ.

ತನುವಿನಲ್ಲಿರುವ ಅರಿವನ್ನು ತನುವಿನಲ್ಲಿರುವ ಜಂಗಮನಿಗೆ ಮಾತ್ರ ಬಳಕೆ ಮಾಡಲು ಬರುತ್ತದೆ. ಕಾರಣ ತನುವಿನಲ್ಲಿರುವ ಮನ ತನುವಿನಲ್ಲಿಯೇ ಇರುವ ಜಂಗಮನಿಗೆ ಸದಾ ತೊತ್ತಾಗಿರಬೇಕು ; ಸದಾ ಸೇವಕನಾಗಿರಬೇಕು. ಇದು ಸಾಧ್ಯವಾಗದಿದ್ದರೆ ತನು ಬದುಕಿರುವಾಗಲೆ ಕ್ಷಣ ಕ್ಷಣಕ್ಕೂ ಸಂಕಟಕ್ಕೀಡಾಗಿ ಬಾಧೆ ಅನುಭವಿಸಿ ಜನನ ಮರಣಗಳ ದುಃಖವನ್ನು ಒಡ್ಡಿಕೊಳ್ಳುತ್ತದೆ.

ಟಿ.ವಿ. ಪೆಟ್ಟಿಗೆಗೆ ವಿದ್ಯುತ್ ಬೇಕು. ಹಾಗೆಯೇ ಚಾನೆಲ್ ಬೇಕು. ಇವೆರಡರಲ್ಲಿ ಒಂದಿಲ್ಲದಿದ್ದರೆ ಟಿ.ವಿ.ಗೆ ಬೆಲೆಯಿಲ್ಲ, ಅದೊಂದು ಬರೀ ಪೆಟ್ಟಿಗೆ ಮಾತ್ರ. ಅದನ್ನು ಯಾರೂ ಬಳಕೆ ಮಾಡುವುದಿಲ್ಲ.

ತನುವಿಗೆ ಅರಿವು ಪ್ರಧಾನ ! ಅದನ್ನು ನಿಷ್ಠೆಯಿಂದ ಸೇವಕನಾಗಿ ಮನ ಬಳಕೆ ಮಾಡಿಕೊಂಡ ಜಂಗಮನಿಗೆ ಕೊಟ್ಟರೆ ಆತ ವೀರಾಧಿ ವೀರರಂತೆ ಅಜ್ಞಾನವನ್ನು ಕೊಂದು ಜ್ಞಾನದಿಂದ ತನುವಿನಲ್ಲಿ ಅರಿವಿನ ಸಾಮ್ರಾಜ್ಯವನ್ನು ಕಟ್ಟುತ್ತಾನೆ.

ಬಸವಣ್ಣ ಜಂಗಮನನ್ನು ಬಳಸಿ ಜ್ಞಾನ ಭಂಡಾರಿಯಾದ. ಸಿದ್ಧಾರ್ಥ ಜಂಗಮನನ್ನು ಬಳಸಿ ಬುದ್ಧನಾದ. ವರ್ಧಮಾನ ಜಂಗಮನನ್ನು ಬಳಸಿ ಮಹಾವೀರನಾದ.

ಮನ ಅರಿವಿನ ಸುಳುಹನ್ನು ಜಂಗಮನೆಂದು ಭಾವಿಸಿ ; ಅರಿವಿನಲ್ಲಿ ಬೆರೆತು ಅರಿವಾಗಿ ; ಅರಿವಿಗೆ ತೊತ್ತಾದರೆ ಸಾಕು ಅರಿವಿನ ತನು ಜಂಗಮನ ಸೊತ್ತಾಗುತ್ತದೆ !

397

ಜಂಗಮವಿರಹಿತ ಲಿಂಗಾರ್ಚನೆ ಓಡ ಬಿಲದಲೆರೆದ ಜಲದಂತೆ.
ಜಂಗಮ ಸನ್ನಹಿತ ಲಿಂಗಾರ್ಚನೆ , ಇದೆ ಭಕ್ತಿಗೆ ಪಥವಯ್ಯಾ.
ಜಂಗಮಪ್ರಸಾದ ಬೋಗೋಪ ಬೋಗವು , ಎನಗಿದೆ ಲಿಂಗಾರ್ಚನೆ.
ಬೇರೆ ಮತ್ತೊಂದನರಿದೆನಾದಡೆ
ಕೂಡಲಸಂಗಮದೇವ ನರಕದಲ್ಲಿಕ್ಕುವ.

ಜಂಗಮನ ಪರಿಚಯವಿಲ್ಲದ ಲಿಂಗಾರ್ಚನೆ ತೂತುಬಿದ್ದ ಹಂಚಿನ ಮೇಲೆ ನೀರನೆರೆದಂತೆ. ಲಿಂಗವೆಂದರೆ ಬೇರಲ್ಲ ; ಅಂಗವೆಂದರೆ ಬೇರಲ್ಲ, ಅಂಗದ ಮೇಲೆ ಕಟ್ಟಿಕೊಂಡ ಲಿಂಗಕ್ಕೆ ಅಂಗದ ಪರಿಚಯವೂ ಇಲ್ಲ; ಲಿಂಗದ ಪರಿಚಯವೂ ಇಲ್ಲ.

ಅಂಗಕ್ಕೆ ರೂಪು ಇದೆ ; ಅರಿವೆಂಬ ಲಿಂಗಕ್ಕೆ ರೂಪು ಇಲ್ಲ, ಅಂಗ ಲಿಂಗದ ಸಂಪತ್ತು ; ಲಿಂಗ ಅಂಗದ ಸಂಪತ್ತು ! ಅಂಗಕ್ಕೆ ರೂಪಿಲ್ಲದ ಲಿಂಗ ಕಂಡುಬರಲೆಂದು ರೂಪಿಲ್ಲದ ಹೆಸರಿನ ವಸ್ತುವೊಂದನ್ನು ಪರಿಚಯಿಸಲಾಯಿತು. ಅದಕ್ಕೆ ಲಿಂಗ ಎಂದು ಹೆಸರಿಸಲಾಯಿತು. ಲಿಂಗ ಅಂಗದ ಮೇಲೆ ಧರಿಸಿ ಅದನ್ನೇ ಲಿಂಗವೆಂದು ಭಾವಿಸಿ ಅಂಗ ಇರುವವರೆಗೆ ಲಿಂಗಾರ್ಚನೆ ಮಾಡುತ್ತಾ ಲಿಂಗದ ಮೇಲೆ ಜಲ

ಸುರಿದರೆ ತೂತುಬಿದ್ದ ಹಂಚಿನ ಮೇಲೆ ಜಲ ಸುರಿದಂತೆ ; ಅರ್ಚಿಸಿಯೂ ಫಲವಿಲ್ಲ.

ಜಂಗಮ ಸನ್ನಹಿತ ಲಿಂಗಾರ್ಚನೆ, ಇದೆ ಭಕ್ತಿಗೆ ಪಥವಯ್ಯಾ :

ಅಂಗದಲ್ಲಿ ಅರಿವೆಂಬ ಲಿಂಗವಿದೆ ; ಅಂಗದಲ್ಲಿರುವ ಅರಿವನ್ನು ಪಾಲಿಸುವ ಜಂಗಮನೂ ಅಂಗದಲ್ಲಿಯೇ ಇದ್ದಾನೆ. ಇದನ್ನು ಅರಿಯುವ ಮನವೂ ಲಿಂಗದಲ್ಲಿಯೇ ಇದೆ. ಮನ ಅರಿವಿಗೆ ಭಕ್ತಿ ಮಾಡಿ ; ಜಂಗಮನಿದ್ದ ಅಂಗವನ್ನೇ ಲಿಂಗವೆಂದು ಅರ್ಚಿಸಿದಲ್ಲಿ ಇದೇ ಭಕ್ತಿಗೆ ಪಥವಯ್ಯಾ.

ಜಂಗಮ ಪ್ರಸಾದ ಭೋಗೋಪಭೋಗವು , ಎನಗಿದೆ ಲಿಂಗಾರ್ಚನೆ :

ಜಂಗಮ : ಈತ ಲಿಂಗಾಂಗದ ಅರಿವನ್ನು ಬಳಕೆ ಮಾಡುವ ಸಮರ್ಥ. ಕಣ್ಣಿನಲ್ಲಿ ಕತ್ತಿ ಹಿಡಿದ ಜಂಗಮನ ನೋಟ ಅಜ್ಞಾನವನ್ನೇ ಕೊಂದು ಪ್ರಸಾದ ಮಾಡಿಕೊಂಡು ಭೋಗಿಸುತ್ತದೆ. ಅಜ್ಞಾನದ ಕಣ್ಣು ಅಂಗವನ್ನು ಕಾಮದ ವಾಸನೆಯಿಂದ ಹರಿದು ತಿನ್ನುವಂತೆ ನೋಡಿದರೆ ; ಜ್ಞಾನದ ಜಂಗಮನ ಕಣ್ಣು ಅಜ್ಞಾನದ ಕಣ್ಣನ್ನು ಕೊಂದು ಅರಿವಿನ ಅಂಗವನ್ನು ನೋಡುತ್ತದೆ. ಜಂಗಮನ ಕಣ್ಣಿಗೆ ಅಂಗದ ಅಜ್ಞಾನ ಪ್ರಸಾದವಾಗುತ್ತದೆ.

ಬೇರೆ ಮತ್ತೊಂದನರಿದೆನಾದಡೆ ಕೂಡಲಸಂಗಮದೇವ ನರಕದಲ್ಲಿಕ್ಕುವ:

ಅರಿವಿಗೆ ಹೋದೇನೊ ಇಲ್ಲವ್ೋ ಎನ್ನುವ ಕೆಲಸ ಹಾಸಲುಂಟು ಹೊದೆಯಲುಂಟು. ಆದರೆ ಮನ ಹಗಲಿರುಳು ತನ್ನ ಸುಖಕ್ಕಾಗಿ ದೇಹವನ್ನು ಸದಾ ದುರ್ಬಳಕೆ ಮಾಡುತ್ತದೆ. ಅರಿವನು ಅರಿತ ಮೇಲೆ ಮನ ಅರಿವಿನಿಂದ ನೋಡುತ್ತದೆ ; ಅರಿವಿನಿಂದಲೇ ಕೇಳುತ್ತದೆ. ಬೇರೆ ಮತ್ತೊಂದನು ಅರಿಯುವುದಿಲ್ಲ; ಅಜ್ಞಾನದ ಹಾದಿ ತುಳಿಯುವುದಿಲ್ಲ; ಅಜ್ಞಾನದಿಂದ ನೋಡಿದರೆ ತನುವಿನಲ್ಲಿ ತನ್ಮಯರಾದ ಲಿಂಗ ಜಂಗಮರು ನರಕದಲ್ಲಿಕ್ಕುವರು.

398

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ ?
ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ ?
ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ ?
ರೂಢೀಶ್ವರನ ಭೇಧಿಸಬಹುದೆ ?
ಒಡಲಿಲ್ಲದ ನಿರಾಳ ಕರ್ತೃ , ಕೂಡಲಸಂಗಮದೇವ
ಜಂಗಮ ಮುಖ ಲಿಂಗವಾದನಾಗಿ ಮತ್ತೊಂದನರಿಯೆನಯ್ಯಾ.

ಭಿತ್ತಿಯಲ್ಲದೆ ಬರೆಯಬಹುದೆ ಚಿತ್ತಾರವ :

ಕಲಾವಿದ ಬರೆಯುವ ಚಿತ್ರಕ್ಕೆ ಭಿತ್ತಿ ಬೇಕೇ ಬೇಕು. ರೈತ ಬೆಳೆಯುವ ಬೆಳೆಗೆ ಭೂಮಿ ಬೇಕೇ ಬೇಕು. ಇದು ರೂಢಿಯಲ್ಲಿದ್ದದ್ದು . ಇದನ್ನು ಭೇದಿಸುವ ಅವಶ್ಯಕತೆಯಿಲ್ಲ. ಕ್ಯಾನ್‌ವಾಸ್ ಇಲ್ಲದೆ ಚಿತ್ರ ನಿಲ್ಲುವುದಿಲ್ಲ; ಭೂಮಿ ಇಲ್ಲದೆ ಬೀಜ ಮೊಳಕೆ ಬರುವುದಿಲ್ಲ.

ಒಡಲಿಗೆ ಭಿತ್ತಿಯಿಲ್ಲ. ಇದು ಭಿತ್ತಿ ಇಲ್ಲದ ಚಿತ್ರ.

'' ಭಿತ್ತಿ ಮೂರರ ಮೇಲೆ ಚಿತ್ರ ಬರೆಯಿತ್ತು ; ಪ್ರಥಮ ಭಿತ್ತಿಯ ಚಿತ್ರ ಚಿತ್ರದಂತೆ ಇದ್ದಿತ್ತು ; ಎರಡನೆಯ ಭಿತ್ತಿ ಚಿತ್ರ ಹೋಗುತ್ತ ಬರುತ್ತ ಇದ್ದಿತ್ತು , ಮೂರನೆಯ ಭಿತ್ತಿ ಚಿತ್ರ ಹೋಯಿತ್ತು ಮರಳಿ ಬಾರದು. ಗುಹೇಶ್ವರಾ-ನಿಮ್ಮ ಶರಣ ತ್ರಿವಿಧದಿಂದತ್ತತ್ತಲೆ ''

ಬಿಂದು ಬಿಂದುವಿನೊಂದಿಗೆ ಬೆರೆತು ಗರ್ಭದಲ್ಲಿ ನಿರ್ಮಾಣವಾದ ಒಡಲಿಗೆ ಒಡಲೇ

ಕ್ಯಾನವಾಸ್ ಎನ್ನಲು ಬರುವುದಿಲ್ಲ. ಬಿಂದು ಒಂದರಿಂದ ಭಿತ್ತಿ ಮೂರರ ಮೇಲೆ ಮೂರು ಚಿತ್ರಗಳು ಬರೆದಿವೆ. ಒಂದು ಚಿತ್ರ ಕಾಣುತ್ತದೆ ; ಅದು ಒಡಲು ; ಅದರ ಭಿತ್ತಿ ಕಾಣುವುದಿಲ್ಲ ; ಚಿತ್ರವೂ ಕಾಣುವುದಿಲ್ಲ. ಅದು ಹೋಗುತ್ತಲೂ ಬರುತ್ತಲೂ ಇರುತ್ತದೆ. ಮೂರನೆಯ ಭಿತ್ತಿ ಚಿತ್ರ ಅರಿವೆಂಬ ಗುರುದೇವ. ಆತನೇ ಚಿತ್ರ ಬರೆದು ಒಳ ಹೊರಗೂ ಪ್ರಜ್ವಲಿಸುತ್ತಿದ್ದಾನೆ. ಭಿತ್ತಿಯೂ ಕಾಣುವುದಿಲ್ಲ ಚಿತ್ರವೂ ಕಾಣುವುದಿಲ್ಲ. ಹೋಗುತ್ತಲೂ ಬರುತ್ತಲೂ ಇದ್ದ ಮನ ಮೂರನೆಯ ಅರಿವಿನ ಚಿತ್ರದಲ್ಲಿ ಲೀನವಾದರೆ ಮತ್ತೆ ಮರಳಿ ಬಾರದು. ಇದನ್ನು ತಿಳಿದ ಶರಣ ವಿಜ್ಞಾನಿ ; ಮಹಾಜ್ಞಾನಿ ! ಆತ ಈ ಮೂರೂ ಭಿತ್ತಿಯಿಲ್ಲದ ಚಿತ್ರಗಳಿಂದತ್ತತ್ತ. ಶರಣ ರೂಢಿಯಿಂದ ಉಪಜೀವನ ಮಾಡುವ ರೂಢೀಶ್ವರನಲ್ಲ ; ರೂಢಿಯನ್ನು ಭೇದಿಸಿ ಜಗದಗಲ ಮುಗಿಲಗಲ ಬೆಳಗುವ ಆರೂಢೀಶ್ವರ. ಒಡಲಿಲ್ಲದ ನಿರಾಳ ಕರ್ತೃ.

ಅರಿವೆಂಬ ಗುರುದೇವನು, ಆ ಗುರುದೇವನ ಆಜ್ಞೆ ಪಾಲಿಸುವ ಜಂಗಮರಿಬ್ಬರು ಕೂಡಿ ಒಡಲಿಲ್ಲದ ನಿರಾಳ ಚಿತ್ರ ಬರೆದ ಕರ್ತೃಗಳಾದ ಕಾರಣ ಜಗದಗಲ ಮುಗಿಲಗಲವಿದ್ದ ಭಿತ್ತಿ ಒಡಲಗರ್ಭದಲ್ಲಡಗಿ ಪಾತಾಳದಿಂದತ್ತತ್ತ ಒಡಲ ಶ್ರೀಚರಣ ; ಬ್ರಹ್ಮಾಂಡದಿಂದತ್ತತ್ತ ಒಡಲ ಶ್ರೀಮುಕುಟ ಪಸರಿಸಿ ; ವಿರಾಟ ಸ್ವರೂಪವಾಗಿದೆ. ಗೋಚರಿಸುವ ಭಿತ್ತಿಯಿಲ್ಲದ ಒಡಲೆ ಬ್ರಹ್ಮ ಬರೆದ ಚಿತ್ರ !

399

ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತಿಪ್ಪ ನಾ ಸದ್ಭಕ್ತನು ;
ಮಾಡಿದಡೆ ಮಾಡಲಿ, ಮಾಡಿದಡೆ ತಪ್ಪೇನು ?
ಆ ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈ ದುಡುಕಿದಡೆ
ಅದು ಪ್ರಸಾದವಲ್ಲ, ಕಿಲ್ಬಿಷ !
ಆ ಸಮಯೋಚಿತದಲ್ಲಿ ಬಂದ ಜಂಗಮದ ಶಬ್ದವ ಕೇಳಿ
ಪ್ರಸಾದಕ್ಕೆ ಕೈದೆಗೆದಡೆ , ಅದು ಲಿಂಗಕ್ಕೆ ಬೋನ.
ಇದು ಕಾರಣ ಕೂಡಲಸಂಗಮದೇವಾ,
ಇಂತಪ್ಪ ಸದಾಚಾರಿಗಳನೆನಗೆ ತೋರಾ !

ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತಿಪ್ಪ ನಾ ಸದ್ಭಕ್ತನು :

ಕೆಲವರು ಸ್ನಾನ ಮಾಡಿ ಬೆಳಿಗ್ಗೆ ಪೂಜಿಸಿ ಸಂಜೆ ಸಂಧ್ಯಾವಂದನೆ ಮಾಡುತ್ತಾರೆ ; ಕೆಲವರು ದೇವಸ್ಥಾನಕ್ಕೆ ಹೋಗಿ ಪೂಜಿಸುತ್ತಾರೆ. ಕೆಲವರು ತ್ರಿಕಾಲವೂ ಲಿಂಗಪೂಜೆ ಮಾಡುತ್ತಾರೆ. ಮಾಡಿದರೆ ತಪ್ಪಿಲ್ಲ. ಪೂಜೆ ಮಾಡಿಯೂ ನೋಡಿದರೆ, ನೋಡಿದ ನೋಟ ಕಣ್ಣಿಗೆ ಪ್ರಸಾದವಾಗದಿದ್ದರೆ , ಕೇಳಿದ ಶಬ್ದ ಕಿವಿಗೆ ಪ್ರಸಾದವಾಗದಿದ್ದರೆ, ಗಂಧ ಮೂಗಿಗೆ ಪ್ರಸಾದವಾಗದಿದ್ದರೆ, ಸ್ಪರ್ಶ ಚರ್ಮಕ್ಕೆ ಪ್ರಸಾದವಾಗದಿದ್ದರೆ, ರುಚಿ ನಾಲಗೆಗೆ ಪ್ರಸಾದವಾಗದಿದ್ದರೆ ತನುವಿಗೆ ಸಂಕಟವಾಗುತ್ತದೆ. ದೇವರನ್ನು ಪೂಜಿಸಿದ ಫಲ ತನುವಿಗೆ ದಕ್ಕದಿದ್ದರೆ ಮಾಡುವ ಪೂಜೆಗೂ ತನುವಿಗೂ ಸಂಬಂಧವಿಲ್ಲದಂತಾಗುತ್ತದೆ. ನೋಡಿ, ಕೇಳಿ, ರುಚಿಸಿ, ಸ್ಪರ್ಶಿಸಿ, ಮೂಸಿಸಿ ತನು ದುಡುಕಿದಡೆ ಪೂಜಿಸಿ ಸ್ವೀಕರಿಸಿದ ಪ್ರಸಾದ ಪ್ರಸಾದವಲ್ಲ; ಅದು ವಿಷ !

ಆಯಾ ಸಮಯದಲ್ಲಿ ಪೂಜಿಸಿದ ಫಲ ತನುವಿಗೆ ಸಿಗದಿದ್ದರೇನಂತೆ ? ಆಯಾ ಸಮಯದಲ್ಲಿ

ನೋಡಿದ ನೋಟ ; ಕಣ್ಣಿನಲ್ಲಿ ಜೀರ್ಣವಾಗುವುದೇ ಪೂಜೆ ! ಅದು ಕಣ್ಣಿಗೂ ತನುವಿಗೂ ಪ್ರಸಾದ ! ಆಯಾ ಸಮಯದಲ್ಲಿ ಕೇಳಿದ ಶಬ್ದ ; ಕಿವಿಗೂ ತನುವಿಗೂ ಜೀರ್ಣವಾಗಿ ಪ್ರಸಾದವಾಗುವುದೇ ಪೂಜೆ. ಆಯಾ ಸಮಯದಲ್ಲಿ ಸ್ಪರ್ಶಿಸಿದ ಚರ್ಮ; ಚರ್ಮದಲ್ಲಿ ಜೀರ್ಣವಾಗಿ ತನುವಿಗೆ ಪ್ರಸಾದವಾಗುವುದೇ ಪೂಜೆ. ರುಚಿ ಅರುಚಿಯೆನ್ನದೆ ರುಚಿಯ ಮೂಲಕ್ಕೆ ಹೋಗಿ ರುಚಿಸುವುದೇ ಪ್ರಸಾದ. ಗಂಧ ದುರ್ಗಂಧವೆನ್ನದೆ ಮೂಗಿಗೆ ಬಡಿದ ಗಾಳಿ ಪರಿಮಳದಿಂದ ಪ್ರಸಾದೀಕರಿಸುವುದೇ ಪೂಜೆ. ತನುವಿಗೆ ಬಂದ ಸಮಯೋಚಿತ ಆಪತ್ಕಾಲವನ್ನು ಅರಿವಿನಿಂದ ಪ್ರಸಾದೀಕರಿಸುವುದೇ ಪೂಜೆ.

ಅಂಗವೇ ಅರಿವಿನ ಲಿಂಗ. ಲಿಂಗಕ್ಕೆ ಬಂದ ಆಪತ್ಕಾಲವೇ ಅರಿವಿನ ಬೋನವಾಗಿ ಅದೇ ಅಂಗಕ್ಕೆ ಪ್ರಸಾದವಾಗುವುದೇ ಪೂಜೆ. ಇಂತಪ್ಪ ಪೂಜೆಯಲ್ಲಿ ನಿರತವಾದ ಸದಾಚಾರಿಗಳನು ಎನಗೊಮ್ಮೆ ತೋರಾ.

ಸದಾಚಾರಿಗಳು ದುರಾಚಾರಿಗಳು ಎಂದು ಎರಡು ತನುಗಳಿಲ್ಲ. ತನುವಿನಲ್ಲಿರುವ ಕಣ್ಣಿನ ಅರಿವಿನ ನೋಟವನ್ನು ದುರ್ಬಳಕೆ ಮಾಡಿಕೊಂಡು ವಸ್ತುವನ್ನು ನೋಡುವ ಮನವೇ ದುರಾಚಾರಿ ! ದುರಾಚಾರಿ ಮನಕ್ಕೆ ವಸ್ತು ಪ್ರಧಾನವಾದರೆ, ಸದಾಚಾರಿ ಮನಕ್ಕೆ ವಸ್ತುವಿನ ಸತ್ಯ ಪ್ರಧಾನವಾಗುತ್ತದೆ.

400

ಉತ್ತಮ, ಮಧ್ಯಮ, ಕನಿಷ್ಠವೆಂದು ಬಂದ ಜಂಗಮವೆಂದೆನಾದಡೆ
ನೊಂದೆನಯ್ಯಾ ಬೆಂದೆನಯ್ಯಾ , ಎನ್ನ ಕಿಚ್ಚು ಎನ್ನ ಸುಟ್ಟಿತ್ತು.
ಸುಖಿ ಜಂಗಮು , ಸಾಮಾನ್ಯ ಜಂಗಮವೆಂದುಂಟೆ ,
ಕೂಡಲಸಂಗಮದೇವಾ ?

ಉತ್ತಮ, ಮಧ್ಯಮ, ಕನಿಷ್ಠವೆಂದು ತನುಗಳನ್ನು ವಿಂಗಡಿಸುವಂತಿಲ್ಲ. ಯಾವ ತನುವಾದರೇನು ? ತನು ಉತ್ತಮ ; ಅತ್ಯುತ್ತಮ ; ಅರಿವು ಉತ್ತಮ ಅತ್ಯುತ್ತಮ ! ಮನ ಉತ್ತಮ; ಅತ್ಯುತ್ತಮ ! ತನುವಿನಲ್ಲಿರುವ ಅರಿವೆಂದರೇನು ? ಅದು ಹೇಗೆ ಕೆಲಸ ಮಾಡುತ್ತದೆ ? ಆ ಅರಿವನ್ನು ಮನಕ್ಕೆ ಬಳಕೆ ಮಾಡಲು ಬಾರದಿದ್ದಡೆ ಆ ಮನವೇ ಕನಿಷ್ಠ ! ತನು ಉತ್ತಮ ; ತನುವಿನಲ್ಲಿರುವ ಅರಿವು ಅತ್ಯುತ್ತಮ ! ಮನಕ್ಕೆ ತಿಳಿಯದ್ದಕ್ಕಾಗಿ ತನು ಉತ್ತಮ, ಮಧ್ಯಮ, ಕನಿಷ್ಠವೆಂದು ನಿರ್ಧರಿಸುತ್ತದೆ.

ತನು ಅರಿವಿನ ಲಾಂಛನ ! ಅದಕ್ಕೆ ಅರುವೆ(ಬಟ್ಟೆ)ಯಿಂದ ಅರಿವಿನ ಲಾಂಛನವೆಂದು ತೋರಿಸಿಕೊಳ್ಳುವ ಅವಶ್ಯಕತೆಯಿಲ್ಲ. ತನುವೇ ಅರಿವಿನ ಲಾಂಛನ ವಿರುವಾಗ ; ಕಾವಿ ವಸ್ತ್ರದಿಂದ ಅರಿವನ್ನು ಪ್ರದರ್ಶಿಸಿಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಮನಕ್ಕೆ ತನುವಿನಲ್ಲಿರುವ ಅರಿವು ನಿಲುಕದಿದ್ದಾಗ ಅರಿವಿನ ವಸ್ತ್ರ ಹೊದ್ದು ಅರಿವಿನ ಅಧಿಪತಿಯೆಂದು ಘೋಷಿಸಿಕೊಳ್ಳುತ್ತದೆ. ಇದು ಕನಿಷ್ಠ ಮನದ ವ್ಯವಹಾರವೇ ಹೊರತು ಅರಿವು, ಅರಿವಿನ ತನುವನ್ನು ದೂಷಿಸುವಂತಿಲ್ಲ. ತನು ಅರಿವಿನ ಸೊತ್ತಾದರೂ ಅರಿವು ತನುವನ್ನು ನೇರವಾಗಿ ಬಳಸಿಕೊಳ್ಳುವುದಿಲ್ಲ. ಮನ ಅರಿವಿನ ಸಂಗ ಮಾಡಿ ; ಆ ಅರಿವಿನಿಂದ ತನುವನ್ನು ಬಳಸಿಕೊಳ್ಳಲಿ ಎನ್ನುವ ಉತ್ಕಟ ಇಚ್ಛೆ ಅರಿವಿನದಾಗಿದೆ.

ಮನ-ತನು-ಅರಿವನ್ನು ಏಕೀಕರಿಸುವ ಶಿಕ್ಷಣ ಆಧುನಿಕ ಸರಕಾರಕ್ಕೆ ಇಲ್ಲದ ನಿಮಿತ್ಯ ತನುವಿನ ಅರಿವಿನ ಶಿಕ್ಷಣ ತನುವಿಗೆ ದೊರೆಯುವುದು ಸಾಧ್ಯವಾಗುತ್ತಿಲ್ಲ. ಹೀಗಾಗಿ ತಾನು ಅರಿವಿನ ತನುವಾಗಿ; ಅರಿವಿನ ತನುವನ್ನೇ ಉತ್ತಮ, ಮಧ್ಯಮ, ಕನಿಷ್ಠವೆಂದು ನಿರ್ಧರಿಸಿ ತನು ತನುವನ್ನೇ ಹೀಯಾಳಿಸುತ್ತದೆ.

ಮನದಿಂದ ಉತ್ತಮವೆಂದು ಪ್ರಮಾಣೀಕರಿಸಿದ ತನು ಉತ್ತಮವಲ್ಲ ; ಮಧ್ಯಮವಲ್ಲ ;

ಕನಿಷ್ಠವೂ ಅಲ್ಲ. ಮನ ನಿರ್ಧರಿಸಿದ ಶಬ್ದ ವಾಸ ಮಾಡಿದ ತನುವನ್ನು ಸುಡುವುದಲ್ಲದೆ ಪ್ರಮಾಣೀಕರಿಸಿದ ತನುವನ್ನು ಸುಡುವುದಿಲ್ಲ. ಏಕೆಂದರೆ ಸುಖೀ ಜಂಗಮ, ಸಾಮಾನ್ಯ ಜಂಗಮನೆಂದಿರುವುದಿಲ್ಲ. ಮೋಡ ಮುಸುಕಿದಾಗ ಇರುಳು ಕವಿದಾಗ ಸೂರ್ಯ ಕಾಣಲಿಲ್ಲವೆಂದರೆ ಬೆಳಗಲಿಲ್ಲವೆಂದಲ್ಲ. ಸೂರ್ಯ ಸದಾ ಬೆಳಗುವುದು ಕಣ್ಣಿಗೆ ಕಾಣದಿದ್ದರೂ ಅರಿವಿಗೆ ಕಾಣುತ್ತದೆ. ಬೆಳಗುವ ಸೂರ್ಯನನ್ನು ಹಿಡಿದಿಟ್ಟ ಬಯಲನ್ನು ಉತ್ತಮ, ಮಧ್ಯಮ, ಕನಿಷ್ಠವೆಂದು ಹೇಳಲು ಬರುವುದಿಲ್ಲ. ಹಾಗೆಯೇ ಬೆಳಗುವ ಅರಿವನ್ನು, ಅರಿವನ್ನು ಹಿಡಿದಿಟ್ಟ ತನುವನ್ನು ಉತ್ತಮ, ಮಧ್ಯಮ, ಕನಿಷ್ಠವೆಂದು ಹೇಳಲು ಬರುವುದಿಲ್ಲ. ಹಾಗೆ ಹೇಳುವ ತನುವನ್ನು ತನುವಿನ ಕಿಚ್ಚು ಸುಟ್ಟು ತನುವನ್ನೇ ಬಾಧಿಸದೇ ಬಿಡುವುದಿಲ್ಲ.

401

ಲಾಂಛನವ ಕಂಡು ನಂಬುವೆ ; ಅವರಂತರಂಗವ ನೀವೇ ಬಲ್ಲಿರಿ !
ತೊತ್ತಿಂಗೆ ತೊತ್ತು ಕೆಲಸವಲ್ಲದೆ ಅರಸರ ಸುದ್ದಿ ಎನಗೇಕಯ್ಯಾ ?
ರತ್ನ ಮೌಕ್ತಿಕದಚ್ಚು, ಕೂಡಲಸಂಗಮದೇವಾ, ನಿಮ್ಮ ಶರಣರು

ಲಾಂಛನವ ಕಂಡು ನಂಬುವೆ ; ಅವರಂತರಂಗವ ನೀವೇ ಬಲ್ಲಿರಿ :

ಅರಿವು ಅನುಭವಕ್ಕೆ ಬರುವುದು ; ಅದನ್ನು ಬಳಸುವುದು ಒಂದು ಅದ್ಭುತ ಕಲೆ. ಈ ಕಲೆಯನ್ನು ಕೆಲವರು ಮಾತ್ರ ಕರಗತ ಮಾಡಿಕೊಂಡಿದ್ದಾರೆ. ಅವರಿಗೆ ಇಡೀ ಜಗತ್ತೇ ಮರುಳಾಗಿದೆ. ಅವರನ್ನು ಆರಾಧಿಸುತ್ತದೆ. ಹಾಡುತ್ತದೆ. ದೊಡ್ಡ ಸ್ತೂಪಗಳನ್ನು , ಬಸದಿಗಳನ್ನು ಚರ್ಚ್, ಮಂದಿರ, ಸಮಾಧಿಗಳನ್ನು , ಮೂರ್ತಿಗಳನ್ನು ನಿರ್ಮಿಸಿ ಮೈಮರೆತು ಜನ ತಲ್ಲೀನಗೊಳ್ಳುತ್ತದೆ.

ಅರಿವು ಅನುಭವಕ್ಕೆ ಬಂದು ಅದನ್ನು ಹೇಗೆ ಬಳಕೆ ಮಾಡಬೇಕೆಂದು ಅವರು ಹೇಳಿದರೆ ಹೊರತು ; ಪೂಜಿಸಲು ಆರಾಧಿಸಲು ಹೇಳಲಿಲ್ಲ. ಸಂತ ಮಹಾಂತರು, ಅನುಭವದಿಂದ ತನುವಿನಲ್ಲಿರುವ ಅರಿವನ್ನು ಪಡೆದರು. ಅದು ಹೇಗೆ ಅರಿವಿನ ಲಾಂಛನವೆಂದು ಹೇಳಿದರು.

ಲಾಂಛನ : ಪೂಜೆಗೆ ಕಾರಣವಾದ ಲಿಂಗ ಲಾಂಛನವಲ್ಲ. ತನುವಿಗೆ ಧರಿಸಿದ ವಸ್ತ್ರವೂ ಲಾಂಛನವಲ್ಲ. ಸಂತ ಮಹಾಂತರನ್ನು ಕೆತ್ತಿದ ಮೂರ್ತಿಗಳೂ ಲಾಂಛನವಲ್ಲ. ಚರ್ಚ್ ಮಠ ಮಂದಿರ ಸಮಾಧಿಗಳೂ ಲಾಂಛನವಲ್ಲ. ತನು ಅರಿವಿನ ಲಾಂಛನ !

ಆಭರಣಗಳ ಮೇಲೆ ಮೋಹಗೊಂಡು ಅದನ್ನು ಕದಿಯುವುದಕ್ಕಾಗಿ ಮನ ತನುವನ್ನು ದುರ್ಬಳಕೆ ಮಾಡಿಕೊಂಡರೆ ಜನ ಆ ತನುವನ್ನು ಕಳ್ಳನೆಂದು ಗುರುತಿಸುತ್ತಾರೆ. ಸರಕಾರ ಆ ತನುವನ್ನು ಕಾರಾಗೃಹಕ್ಕೆ ತಳ್ಳುತ್ತದೆ. ಶಿಕ್ಷೆ ಪೂರ್ಣಗೊಂಡು ಹೊರ ಬಂದರೂ ಆ ತನುವಿಗೆ ಜನ ಗೌರವಿಸುವುದಿಲ್ಲ.

ತನುವಿನಲ್ಲಿರುವ ಅರಿವಿನ ಮೇಲೆ ಮೋಹಗೊಂಡು ಅದನ್ನು ಬಳಕೆ ಮಾಡಲು ಮನ ಹಗಲಿರುಳು ಆಸೆ ಪಟ್ಟರೆ; ಅರಿವು ಅನುಭವಕ್ಕೆ ಬಂದು, ಸದಾ ಆನಂದದಿಂದ, ತನು ಅರಿವಿನ ಮಾತು ಹೇಳಿದರೆ, ಜನ ಆ ತನುವನ್ನು ಸಂತ ಎಂದು ಕರೆದು ಗೌರವಿಸುತ್ತಾರೆ.

ಜನತೆಯಿಂದ ಕಳ್ಳ ಎಂದು ಕರೆಯಿಸಿಕೊಳ್ಳುವ ತನು, ಅದೇ ಜನತೆಯಿಂದ ಸಂತ ಎಂದು ಕರೆಯಿಸಿಕೊಳ್ಳುವ ತನು ಒಂದೇ ಆದರೂ ; ಒಂದು ತನುವಿಗೆ ಗೌರವ ; ಮತ್ತೊಂದು ತನುವಿಗೆ ಅಪಮಾನ !

ಒಂದು ತನುವಿನ ಮನ ತನುವಿನಲ್ಲಿರುವ ಅರಿವನ್ನು ಮೋಹ ಮಾಡಿತು. ಆ ಅರಿವನ್ನು ಬಳಕೆ ಮಾಡಿಕೊಂಡು ಆಭರಣ ನೋಡಿತು. ಆಭರಣಗಳೆಲ್ಲ ಹಳದಿ ಲೋಹದಿಂದಾದ ವಸ್ತುಗಳೆಂದು ನಿರ್ಧರಿಸಿ ಅವುಗಳನ್ನು ಮೋಹ ಮಾಡಲಿಲ್ಲ. ಉಳಿದ ತನುಗಳು ಆಭರಣಗಳನ್ನು ಮೋಹ ಮಾಡಿದವು. ಸೈನ್ಯ ಕಟ್ಟಿಕೊಂಡು ಯುದ್ಧ ಮಾಡಿ ಅನೇಕ ತನುಗಳನ್ನು ಕೊಂದು ಆಭರಣ ಪಡೆದ ತನುವಿಗೆ ಮಹಾರಾಜನ ಪಟ್ಟ! ಕಳುವು ಮಾಡಿ ಆಭರಣ ಪಡೆದ ತನುವಿಗೆ ಕಳ್ಳನ ಪಟ್ಟ! ಹಗಲಿರುಳೂ ದುಡಿದು ಬಡ್ಡಿ ವ್ಯವಹಾರ ಮಾಡಿ ಆಭರಣ ಸಂಪಾದಿಸಿದ ತನುವಿಗೆ ಶ್ರೀಮಂತನ ಪಟ್ಟ! ದುಡಿಯದೇ ಆಭರಣ ಸಂಪಾದಿಸದ ತನುವಿಗೆ ಬಡವನ ಪಟ್ಟ. ಲಂಚ ಭ್ರಷ್ಟಾಚಾರದಿಂದ ಆಭರಣ ಪಡೆದ ತನುವಿಗೆ ಭ್ರಷ್ಟಾಚಾರದ ಪಟ್ಟ!

ತನುಗಳೆಲ್ಲ ಒಂದೇ. ಒಂದು ತನುವಿನಲ್ಲಿರುವ ಮನ ತನುವಿನಲ್ಲಿರುವ ಅರಿವಿನ ಮೇಲೆ ಮೋಹ ಮಾಡಿತು ; ಸಂತ ಮಹಾಪುರುಷನ ಪಟ್ಟ ಕಟ್ಟಿಕೊಂಡಿತು ! ಮತ್ತೊಂದು ತನುವಿನಲ್ಲಿರುವ ಮನ ಆಭರಣಕ್ಕೆ ಮೋಹಗೊಂಡು ಅದನ್ನು ನಾನಾ ವಿಧಾನಗಳಿಂದ ಪಡೆದು ತನುವಿಗೆ ಕಳ್ಳ ಶ್ರೀಮಂತ ಭ್ರಷ್ಟಾಚಾರಿ ಎಂದು ನಾನಾ ಹೆಸರಿನ ಪಟ್ಟ ಕಟ್ಟಿತು. ಈ ತನುವಿನ ಮನಕ್ಕೆ ತನುವಿನಲ್ಲಿರುವ ಅರಿವು ಬಳಕೆಯಾಗಲೇ ಇಲ್ಲ! ಅಂದ ಮಾತ್ರಕ್ಕೆ ಅದು ಅರಿವಿನ ಲಾಂಛನ ಅಲ್ಲವೆ ಹೇಗೆ ?

ಲಾಂಛನವ ಕಂಡು ನಂಬುವೆ ; ಅವರಂತರಂಗವ ನೀವೇ ಬಲ್ಲಿರಿ ! ತೊತ್ತಿಂಗೆ ತೊತ್ತು ಕೆಲಸವಲ್ಲದೆ ಅರಸರ ಸುದ್ದಿ ಎಮಗೇಕಯ್ಯಾ ? ರತ್ನ ಮೌಕ್ತಿಕದಚ್ಚು, ಕೂಡಲಸಂಗಮದೇವಾ, ನಿಮ್ಮ ಶರಣರು.

ಈ ಮಾತು ಹೇಳಿದ ಬಸವಣ್ಣನವರು ಬಿಜ್ಜಳನ ಸರಕಾರದಲ್ಲಿ ಅರ್ಥ ಸಚಿವರಾಗಿದ್ದರು. ಕನ್ನಮಾರಿ ಮಾರಯ್ಯ ಎನ್ನುವ ಕಳ್ಳ ಬಿಜ್ಜಳನ ಅರಮನೆಯಲ್ಲಿ ಕಳವು ಮಾಡಿದ್ದ . ಕಳ್ಳನನ್ನು ಹಿಡಿದುಕೊಟ್ಟವರಿಗೆ ಅರಸ ಲಕ್ಷ ವರಹ ಘೋಷಿಸಿದ್ದ.

ಕನ್ನಮಾರಿ ಮಾರಯ್ಯ ಬಿಜ್ಜಳನ ಅರಮನೆಯಲ್ಲಿ ಕಳುವು ಮಾಡಿ, ತನ್ನ ತಂಡದೊಂದಿಗೆ ಶರಣರ ವೇಷದಲ್ಲಿ ಬಸವಣ್ಣನವರ ಮಹಾಮನೆಗೂ ಕಳುವು ಮಾಡಲು ಹೋದ.ರಾತ್ರಿ ಬಸವಣ್ಣನವರ ಪತ್ನಿಯ ಕೊರಳಲ್ಲಿದ್ದ ಚಿನ್ನದ ಸರಕ್ಕೆ ಕೈ ಹಾಕಿದ. ಕಳ್ಳನ ಕೈ ಹಿಡಿದು ಕಳ್ಳ ಕಳ್ಳ ಎಂದು ಕೂಗಿದಳು ಪತ್ನಿ. ಮನೆಯಲ್ಲಿ ಮಲಗಿದ್ದ ಶರಣರೆಲ್ಲ ಎಚ್ಚತ್ತು ಕಳ್ಳನನ್ನು ಹಿಡಿದರು. ಬಿಜ್ಜಳನಿಗೆ ದೂರು ಹೋಯಿತು. ಮಲಗಿದ್ದ ಬಸವಣ್ಣ ಎದ್ದು ಬಂದು ಕಳ್ಳ ಎಲ್ಲಿ ಎಂದು ಪ್ರಶ್ನಿಸಿದ. ಇವನೇ ಕಳ್ಳ ಎಂದು ತೋರಿಸಿದರು. ಆತ ಕಳ್ಳನಲ್ಲ. ನಮ್ಮನ್ನು ಎಚ್ಚರಿಸಲು ಬಂದ ಕೂಡಲ ಸಂಗಮದೇವ ! ಆತನನ್ನು ಕಳ್ಳ ಎನ್ನಬಹುದೆ?

ಕಳ್ಳನ ಕೈ ಹಿಡಿದ ಪತ್ನಿಯನ್ನು ಕುರಿತು ''ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲ ಸಂಗಯ್ಯನಲ್ಲದೆ ಬೇರಲ್ಲ; ಕೊಡು ಕೊಡೆಲೇ ಚಾಂಡಾಲಗಿತ್ತಿ ಎನ್ನಯ್ಯನ ಕೈ ನೊಂದಾವು '' ಎಂದ. ಕಳ್ಳ, ಕಳ್ಳನನ್ನು ಹಿಡಿದ ಶರಣರು, ಪತ್ನಿ ಗಂಗಮ್ಮ ಅವಕ್ಕಾದರು.

ಬಸವಣ್ಣನವರೇ, ನಾನು ಕಳ್ಳ. ಗಂಗಮ್ಮ ತಾಯಿಯನ್ನು ನಿಂದಿಸಬೇಡಿ. ನಿಮ್ಮ ಮನೆಗೆ ಬರಬಾರದಾಗಿತ್ತು; ಬಿಜ್ಜಳನಿಗಿಂತಲೂ ಸಂಪತ್ತು ಇಲ್ಲಿ ಹೆಚ್ಚಿದೆ ಎಂದು ಬಂದೆ. ನನ್ನನ್ನು ಹಿಡಿದ ತಾಯಿಯನ್ನೇ ಜರಿದು ನಿಂದಿಸುವುದೆಂದರೇನು? ಕಳ್ಳ ಸಿಕ್ಕರೆ ಜನ ರಾಜನಿಗೆ ಒಪ್ಪಿಸುತ್ತಾರೆ ; ಇಲ್ಲ ಕೊಂದು ಬಿಡುತ್ತಾರೆ. ತಾವು ಕಳ್ಳನನ್ನು ಸಂಗಯ್ಯ ಎಂದು ಗೌರವಿಸಿ ಹಿಡಿದುಕೊಟ್ಟ ಪತ್ನಿಯನ್ನೇ ಕಳ್ಳನ ಸ್ಥಾನದಲ್ಲಿ ನಿಲ್ಲಿಸುವುದೆಂದರೇನು?

ಚಿನ್ನ ಒಂದು ಲೋಹ ! ಅದಕ್ಕೆ ಮೆತ್ತಿಕೊಂಡ ಹಳದಿ ಬಣ್ಣಪ್ರಧಾನವಲ್ಲ. ಅದು ಪ್ರಾಣಕ್ಕಿಂತ ದೊಡ್ಡದಲ್ಲ. ಅದನ್ನು ಪಡೆಯಲು ಹಗಲಿರಳು ದುಡಿಯಬೇಕಿಲ್ಲ. ಸಂಗ್ರಹಿಸಬೇಕಿಲ್ಲ, ಧರಿಸಬೇಕಿಲ್ಲ. ಅರಿವಿನ ತನುವಿಗಿಂತಲೂ ಲೋಹ ದೊಡ್ಡದಲ್ಲ; ಬಣ್ಣಕ್ಕೆ ಮರುಳಾಗಿ ಕೊರಳಲ್ಲಿ ಧರಿಸಿಕೊಂಡವಳನ್ನು ಎಚ್ಚರಿಸಲು ಬಂದ ಸಂಗಮನಾಥ ನೀನು '' ಎಂದ ಬಸವಣ್ಣ.

''ತಂದೆ ನನಗೆ ಇದಾವುದು ತಿಳಿದಿಲ್ಲ. ತಿಳಿದಿದ್ದರೆ ಈ ಲೋಹಕ್ಕಾಗಿ, ಇದಕ್ಕೆ ಮೆತ್ತಿದ ಬಣ್ಣಕ್ಕಾಗಿ ಮೋಹಗೊಂಡು ಸಾವಿರಾರು ಜನರನ್ನು ಕೊಂದು ಚಿನ್ನ ಕದ್ದು ಕಳ್ಳನಾಗುತ್ತಿರಲಿಲ್ಲ. ನಾನು ಕಳ್ಳ ನನ್ನ ತಂಡದೊಂದಿಗೆ ಮಹಾಮನೆಗೆ ಬಂದಿದ್ದೆ. ಕೊರಳಲ್ಲಿ (ಅರಿವಿನ ಚಿಹ್ನೆ) ಲಿಂಗವಿಲ್ಲದ್ದಕ್ಕಾಗಿ ಒಳಗೆ ಬಿಡಲು ಅನುಮತಿ ಕೊಡಲಿಲ್ಲ. ಬದನೆಕಾಯಿ ವಸ್ತ್ರದಲ್ಲಿ ಸುತ್ತಿ ಕೊರಳಲ್ಲಿ ಕಟ್ಟಿಕೊಂಡು ಬಂದಿದ್ದೇವೆ. ದಯವಿಟ್ಟು ನಮಗೆ ಶಿಕ್ಷೆಕೊಡಿ'' ಎಂದು ಅಂಗಲಾಚಿದ ಮಾರಯ್ಯ.

ಲಿಂಗವನ್ನು ಕಲ್ಲೆಂದು ತಿಳಿದು ಕೊಳ್ಳುವ ಜನ ಇದ್ದಾರೆ. ಬದನೆ ಕಾಯಿಯನ್ನೇ ಲಿಂಗವೆಂದು ತಿಳಿದುಕೊಂಡ ಸಂಗಮನಾಥರು ನೀವು ಎಂದು ಕನ್ನಮಾರಿ ಮಾರಯ್ಯನಿಗೆ ಬಸವಣ್ಣನವರು ಕಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಲೋಹಕ್ಕೆ ಮೆತ್ತಿಕೊಂಡ ಬಣ್ಣಕ್ಕೆ ಮೋಹಗೊಂಡ ಹೆಂಡತಿಯ ಅಜ್ಞಾನದ ಮನ, ಮಾರಯ್ಯನ ಅಜ್ಞಾನದ ಮನೆಗಳೆರಡೂ ಸತ್ತು ಹೋದವು. ತನುವಿನಲ್ಲಿರುವ ಅರಿವಿಗೆ ಶರಣುಹೋಗಿ ಶರಣರಾದರು.

ತನು ಅರಿವಿನ ಲಾಂಛನ ! ಮಾರಯ್ಯನ ತನುವಿನಲ್ಲಿರುವ ಮನ ಆತನನ್ನು ಕಳ್ಳನ ವೃತ್ತಿಯಲ್ಲಿಟ್ಟಿತ್ತು. ಆ ಮನದ ಅಂತರಂಗವನ್ನು ತನುವಿನಲ್ಲಿರುವ ಅರಿವು ಬಲ್ಲುದು. ತನುವಿನ ವೃತ್ತಿ ನೋಡಿ ಬಸವಣ್ಣ ನಿಂದಿಸುವಂತಿಲ್ಲ. ಏಕೆಂದರೆ ಆತ ಅರಿವಿನ ಶಿಕ್ಷಣದ ನಿಪುಣ. ಮಹಾಜ್ಞಾನಿ! ತನು ಅರಿವಿನ ಲಾಂಛನವೆಂದು ಬಲ್ಲ ತಂತ್ರಜ್ಞಾನಿ; ಟೆಕ್ನಿಷಿಯನ್ !

ಚಿನ್ನದ ಕಳ್ಳತನಕ್ಕೆ ಕಾರಣವಾದ ಮಾರಯ್ಯನ ಮನಕ್ಕೆ ಶಿಕ್ಷೆ ಬೇಕಿತ್ತು. ಚಿನ್ನದ ಸಂಗ್ರಹಕ್ಕೆ ಕಾರಣವಾದ ಪತ್ನಿಯ ಮನಕ್ಕೆ ಶಿಕ್ಷೆ ಬೇಕಿತ್ತು. ಇವರಿಬ್ಬರ ಮನ ಬಣ್ಣದ ಮೇಲಿನ ಮೋಹಕ್ಕೆ ಬಲಿಯಾಗಿತ್ತು. ಒಂದು ಮನ ಲೋಹವೆಂದು ಅರಿಯದೆ ಚಿನ್ನ ಸಂಗ್ರಹಿಸಿದರೆ, ಮತ್ತೊಂದು ಮನ ಲೋಹವೆಂದರಿಯದೆ ಕದಿಯುತ್ತಿತ್ತು. ಎರಡೂ ಅಪರಾಧಿ ಮನಗಳು. ಅರಿವಿನ ದೇಹಕ್ಕೆ ಅರಸನಾಗಿದ್ದವು. ಅರಸನಿಗೆ ಚಿನ್ನವೆಂದರೆ ಪ್ರಾಣ. ! ರಾಜ ಚಿನ್ನಕ್ಕಾಗಿ ನೆರೆಯ ರಾಜನನ್ನು, ಪ್ರಧಾನಿ ಸೈನಿಕರನ್ನು, ನಿರಪರಾಧಿ ಪ್ರಜೆಗಳನ್ನು ಕೊಲ್ಲಲೂ ಹೇಸುವುದಿಲ್ಲ. ಆ ಅರಸನ ಸುದ್ದಿ ನಮಗೇಕೆ ಎಂದು ತಿಳಿದ ಬಸವಣ್ಣ ತನುವಿನಲ್ಲಿರುವ ಅರಿವಿನೊಂದಿಗೆ ಮಾತನಾಡಿದ ! ತನುವನ್ನು ಆವರಿಸಿದ ಮನವೆಂಬ ಕಳ್ಳ ಹಾಗೂ ಕನ್ನ ಮಾರಿ ಮಾರಯ್ಯನೆಂಬ ಕಳ್ಳ ಸತ್ತು ಹೋದ. ಮಹಾಜ್ಞಾನಿ ಮಾರಯ್ಯ ಶರಣ ಹೊರಬಂದ. ತನು ಅರಿವಿನ ಲಾಂಛನ; ಅದು ಜ್ಞಾನ ರತ್ನದ ಸಿಂಹಾಸನ.

ಬುದ್ಧ ಅಂಗುಲಿಮಾಲನೊಂದಿಗೆ ಮಾತನಾಡಿದ್ದರೆ ಬುದ್ಧನ ಬೆರಳು ಅಂಗುಲಿಮಾಲನ ಕೊರಳಲ್ಲಿರುತ್ತಿತ್ತು. ಬುದ್ಧ ಬುದ್ಧನೊಂದಿಗೆ ಮಾತನಾಡಿದ ; ಅಂಗುಲಿಮಾಲ ಸತ್ತ ; ಬುದ್ಧ ಹೊರಬಂದ. ಸಿದ್ಧಾರ್ಥನಾಗಿದ್ದರೆ ಅಂಗುಲಿಮಾಲನನ್ನು ಗಲ್ಲಿಗೆ ಹಾಕುತ್ತಿದ್ದ. ಅಂಗುಲಿ ಮಾಲನೊಂದಿಗೆ ನಿರಪರಾಧೀ ಬುದ್ಧನೂ ಸಾಯುತ್ತಿದ್ದ.

ತನುಗಳಿಂದ ಕರಪಡೆದು ; ತನುಗಳ ಸೇವಾ ನೆಪದಲ್ಲಿದ್ದ ಸರಕಾರ ಒಂದು ತನುವನ್ನು ಗೌರವಿಸುತ್ತದೆ ; ಮತ್ತೊಂದು ತನುವನ್ನು ಶಿಕ್ಷಿಸುತ್ತದೆ. ಅರಿವಿನ ತರಬೇತಿ ಪಡೆದ ತನು ಸರಕಾರ ರಚಿಸಿದರೆ ಮಾತ್ರ ಸಕಲ ತನುಗಳಿಗೆ ಗೌರವ ದಕ್ಕುತ್ತದೆ. ಸಕಲ ತನುಗಳಿಗೆ ತನುವಿನಲ್ಲಿರುವ ಅರಿವು

ಬಳಕೆ ಮಾಡುವ ಶಿಕ್ಷಣ ದೊರಕುತ್ತದೆ.

ತನು ಬುದ್ಧನ ಲಾಂಛನ ; ತನು ಅರಿವಿನ ಲಾಂಛನವೆಂದು ತಿಳಿದ ಜ್ಞಾನಿ ತನುಗಳು ಸರಕಾರ ರಚಿಸುವ ಅವಶ್ಯಕತೆಯಿದೆ. ಅರಿವಿನ ತಂತ್ರಜ್ಞಾನವುಳ್ಳ ಪಠ್ಯಗಳ ರಚನೆಯ ಅವಶ್ಯಕತೆಯಿದೆ. ಜ್ಞಾನ ಶಿಕ್ಷಣಬೇಕು ಎನ್ನುವ ಬಯಕೆಯುಳ್ಳ ತನುಗಳ ಅವಶ್ಯಕತೆ ಇದೆ. ತನುವಿನಲ್ಲಿರುವ ಜ್ಞಾನ ಸೂಚಿಸುವ ಎಷ್ಟೋ ಜ್ಞಾನಿಗಳಿದ್ದಾರೆ. ಆದರೆ ಬಯಸುವ ಮನಗಳ ಕೊರತೆಯಿದೆ. ತನು ಅರಿವಿನ ಮಂತ್ರದಂಡ. ಮನ ಎಚ್ಚರದಿಂದ ಬಳಸಬೇಕು.

402

ಆರಾರ ಮನದಲ್ಲಿ ಏನೇನಿಹುದೆಂದರಿಯೆ ,
ಒಳ್ಳಿಹರೆಂದೆನಲಮ್ಮೆ ; ಹೊಲ್ಲಹರೆಂದೆನಲಮ್ಮೆ ಶಿವಭಕ್ತರಾದಕಾರಣ ,
ಜಂಗಮವೇ ಲಿಂಗ ಕೂಡಲಸಂಗಮದೇವಾ.

ಮನವೇ ಮರ್ಕಟ ! ಅರಿವೇ ಲಿಂಗಜಂಗಮ ! ತನು ಲಿಂಗಜಂಗಮದ ಸಂಪತ್ತು ! ತನುವಿನಿಂದ ಒಳ್ಳೆಯವರು ಕೆಟ್ಟವರು ಎಂದು ತಿಳಿದು ತನುವನ್ನು ಶಿಕ್ಷಿಸುವುದಾಗಲಿ; ಪ್ರಮಾಣೀಕರಿಸುವುದಾಗಲಿ ಕೂಡದು. ಮನದ ದುರ್ಬಳಕೆಯಿಂದಾಗಿ ತನು ಕೆಟ್ಟದ್ದು ಒಳ್ಳೆಯದು!

ತನುವಿನಲ್ಲಿ ಅರಿವಿದೆ ; ಅದನ್ನು ಬಳಕೆ ಮಾಡುವ ಜಂಗಮನೂ ಇದ್ದಾನೆ. ತನು ಅವರಿಬ್ಬರ ಸಂಪತ್ತು. ಆದರೆ ಮನವೆಂಬ ಮರ್ಕಟ, ಅವರಿಬ್ಬರನ್ನೂ ತಳ್ಳಿ , ತನುವಿಗೆ ಅಮರಿಕೊಂಡು, ಮರದಿಂದ ಮರಕ್ಕೆ ಜಿಗಿಯುತ್ತದೆ ! ತನ್ನ ರುಚಿಗಾಗಿ ಅರಿವಿನ (ಜಂಗಮಲಿಂಗ) ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ಹೊರಗೆ ಸುಖವಿಲ್ಲ; ಸುಖದ ಸುಖವೆಂಬುದು ತನುವಿನೊಳಗೆ ಇದೆಯೆಂದು ಮನವೆಂಬ ಮರ್ಕಟ ಅರಿತು, ಜಂಗಮ ಲಿಂಗಕ್ಕೆ ಭಕ್ತನಾದರೆ ಆ ಮರ್ಕಟವೇ ಆಂಜನೇಯನಾಗುತ್ತದೆ. ಈ ಜ್ಞಾನ ತಿಳಿದ ತಂತ್ರಜ್ಞಾನಿ; ತನುವನ್ನು ಒಳ್ಳೆಯದು ಕೆಟ್ಟದ್ದು ಎಂದು ನಿರ್ಧರಿಸುವುದಿಲ್ಲ; ಜಂಗಮಲಿಂಗ ತನುವೆಂದು ಸಕಲ ತನುಗಳನ್ನು ಗೌರವಿಸುತ್ತಾನೆ. ಅರಿವಿನ ಲಾಂಛನಕ್ಕೆ ವಂದಿಸುತ್ತಾನೆ.

403

ಸಂಗ ಸಹಿತ ಶರಣರು ಬಂದಡೆ
ನಂಬುವುದೆನ್ನ ಮನವು , ನಚ್ಚುವುದೆನ್ನ ಮನವು.
ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು ?
ಅಂಗ ಲಿಂಗಸಹಿತವಾಗಿ ಬಂದಡೆ ಸಂಗ ನೀನೆಂದು
ಮತ್ತೆ ಮನದಲ್ಲಿ ಸಂದೇಹ ಹೊಳೆದಡೆ ಬೆಂದೆನಲ್ಲಾ ನಾನು
ಕೂಡಲಸಂಗಮದೇವಾ.

ತನುವಿನಲ್ಲಿ ತನ್ಮಯವಾದ ಅರಿವನ್ನು , ತನುವನ್ನು ಆವರಿಸಿಕೊಂಡ ಮನ ಪಡೆಯುವುದು ಅದರ ಜನ್ಮಸಿದ್ಧ ಹಕ್ಕು. ಮನ, ಸೂಕ್ಷ್ಮಾತಿ ಸೂಕ್ಷ್ಮ ಜ್ಞಾನದಿಂದ ಹೊರಗಿನ ವಸ್ತುಗಳನ್ನು ಸಂಗ್ರಹಿಸಿ ತನುವಿನೊಂದಿಗೆ ಸುಖ ಪಡುತ್ತದೆ. ಆದರೆ ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಪಡೆಯುವುದು

ಮನಕ್ಕೆ ಸಾಧ್ಯವಾಗುವುದಿಲ್ಲ.

ಬಸವಣ್ಣನವರು ತಮ್ಮ ಸೂತ್ರದ ಈ ವಚನದಲ್ಲಿ ಮನಕ್ಕೆ ಅರಿವು ಪಡೆಯುವ ಸುಂದರವಾದ ಸುಳುಹು ನೀಡಿದ್ದಾರೆ.

ಅಂಗ, ಲಿಂಗ (ಅರಿ) ವನ್ನು ಸಂಗ ಮಾಡಿಕೊಂಡು ಗರ್ಭದಿಂದ ಹೊರಗೆ ಬಂದಿದೆ. ಇಂತಹ ಅಂಗವನ್ನು ಹೆಣ್ಣು ಗಂಡು ಶ್ರೀಮಂತ ಬಡವ ಉತ್ತಮ ಅಧಮ ಜಾತಿಯದೆಂದು ಸಂದೇಹ ಮಾಡಿಕೊಂಡು ಅಂಗಕ್ಕೆ ಭಂಗ ತಂದುಕೊಳ್ಳುವುದು ಎಷ್ಟು ಸೂಕ್ತ !

ಅಂಗದೊಂದಿಗೆ ಬಂದ ಕಣ್ಣು ಯಾವ ಜಾತಿಯದು ? ಕಿವಿ, ಚರ್ಮ, ನಾಲಗೆ, ಮೂಗು, ಯಾವ ಜಾತಿಯದು ? ಸಂದೇಹ ತಳೆದ ಅಂಗಕ್ಕೂ , ಜನ್ಮ ಪಡೆದ ಅಂಗಕ್ಕೂ ಬೇಧವಿಲ್ಲದಿದ್ದರೂ ಭ್ರಾಂತಿ ಅಂಗವನ್ನು ಕಾಡುತ್ತಲಿದೆ. ಗರ್ಭದಿಂದ ಹೊರಬಂದ ಅಂಗಕ್ಕೆ ಕೂಡಲೆ ಹೆಣ್ಣುಗಂಡು, ಜಾತಿ ಮತ ಪಂಥದ ಭ್ರಾಂತಿಯ ಪಟ್ಟವನ್ನು ಹೆಸರಿಟ್ಟ ಅಂಗಗಳೇ ಕಟ್ಟುತ್ತವೆ. ಅಂಗ ಈ ಭ್ರಾಂತಿಯನ್ನು ಕಿತ್ತೊಗೆಯದೆ ರೂಢಿಸಿಕೊಳ್ಳುತ್ತಾ ಹಂತ ಹಂತವಾಗಿ ಬೆಳೆಯುತ್ತದೆ.

ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು :

ನಸು ಕತ್ತಲಲ್ಲಿ ಪ್ರಯಾಣ ಮಾಡುವ ದಾರಿಯಲ್ಲಿ ಒಂದು ಹಾವು ಕಂಡಿತು. ಪ್ರಯಾಣಿಸುವ ನಾಲ್ಕೈದು ಜನ ಭಯದಿಂದ ಹೌಹಾರಿದರು. ಒಬ್ಬ ಓಡಿ ಹೋಗಿ ಟಾರ್ಚ್ ಹಾಗೂ ಕೋಲು ತಂದ. ಹಾವಿನ ಮೇಲೆ ಬೆಳಕು ಚೆಲ್ಲಿದ. ಅದು ಹಾವಾಗಿರಲಿಲ್ಲ. ಹಗ್ಗದ ತುಂಡೊಂದು ರಸ್ತೆಯ ಮೇಲೆ ಬಿದ್ದಿತ್ತು. ಎಲ್ಲರೂ ನಿರಾಳರಾದರು. ಹಗ್ಗ ಹಾವಾಗಿ ಎಲ್ಲರಿಗೂ ಕಂಡಿತು. ಬೆಳಕು ಬಿದ್ದ ಮೇಲೆ ಅದೇ ಹಾವು ಹಗ್ಗವಾಯಿತು. ಹಗ್ಗದಲ್ಲಿ ಹಾವು ಸಂಗಮಾಡಿಲ್ಲ; ಆದರೂ ಭ್ರಾಂತಿಯಿಂದ ಹಾವಾಗಿ ಕಂಡಿತು. ಟಾರ್ಚ್ ಬೆಳಕು ಹಾವಿನ ಮೇಲೆ ಬಿದ್ದ ಬಳಿಕ ಹಗ್ಗವಾಗಿ ಕಂಡಿತು. ಭ್ರಾಂತಿ ಕಳೆದುಕೊಂಡು ಹಗ್ಗವನ್ನು ಮನೆಗೆ ತಂದರು.

ಸಂಗ ಸಹಿತ ಶರಣರು ಬಂದಡೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು :

ಅರಿವಿನ ಸಂಗ ಸಹಿತ ಅಂಗ ಜನ್ಮ ಪಡೆದ ಮೇಲೆ, ಅದು ಅರಿವಿನ ಅಂಗ. ಅರಿವಿದ್ದ ಅಂಗವನ್ನು; ಅರಿವಾದ ಮನ, ಅರಿವಿನ ಅಂಗವೆಂದೇ ನಂಬುವುದು. ಲಿಂಗಾಂಗವೆಂದೇ ನಚ್ಚುವುದು. ಅಂಗದಲ್ಲಿ ಅರಿವು ಸಂಗಮವಾಗಿ, ಅದು ಕೂಡಲಸಂಗಯ್ಯನ ಅರಿವಿನ ಅಂಗವೆಂದು ದೃಢವಾಗಿ ನಂಬುವುದು.

404

ಕೆಂಡದಲ್ಲಿಟ್ಟಡೆ ಮೆಯ್ಬೆಂದುದೆಂಬರು.
ಕೊಂಡಿಟ್ಟವನ ಕೈ ಮುನ್ನವೇ ಬೆಂದುದು.
ನೊಂದೆ ನಾನು, ನೊಂದೆನಯ್ಯಾ ; ಬೆಂದೆ ನಾನು, ಬೆಂದೆನಯ್ಯಾ .
ಕೂಡಲಸಂಗನ ಶರಣರ ಕಂಡು ಕಾಣದಂತಿದ್ದಡೆ
ನಾನಂದೆ ಬೆಂದೆನಯ್ಯಾ .

ತನುವಿನಲ್ಲಿರುವ ಭಾವ ಅರಳಿ, ತನು ಮತ್ತೊಂದು ತನುವಿನ ಗೆಳೆತನ ಮಾಡುತ್ತದೆ. ತನುವಿನಲ್ಲಿರುವ ಭಾವ ಕೆರಳಿ ; ದುರ್ಭಾವವಾಗಿ, ಗೆಳೆತನ ಮಾಡಿಕೊಂಡ ತನುವೇ, ತನುವಿನೊಂದಿಗೆ

ವೈರತ್ವ ಬೆಳೆಸುತ್ತದೆ. ಭಾವದಿಂದಾಗಿ ಒಂದು ತನು ಮತ್ತೊಂದು ತನುವಿನ ಗುಣಗಾನ ಮಾಡುತ್ತಿತ್ತು. ದುರ್ಭಾವದಿಂದಾಗಿ ಒಂದು ತನು ಮತ್ತೊಂದು ತನುವಿನ ಮೇಲೆ ಕೆಂಡ ಕಾರುತ್ತದೆ. ಎರಡು ತನುಗಳು ದುರ್ಭಾವದಿಂದ ಬೆಂದು ಕರಕಲಾಗುತ್ತವೆ. ಇದು ಸಹಜ. ಎರಡು ತನುಗಳ ಭಾವ ದುರ್ಭಾವ ಆಗಲು ಕಾರಣವಾದ, ಈ ಎರಡೂ ತನುಗಳಿಗೆ ಕೊಂಡಿ ಇಟ್ಟ ಕೈ ಮುನ್ನವೇ ಬೇಯುತ್ತದೆ.

ತನುವಿನ ಅರಿವು ತನುವಿನಲ್ಲಿರುವ ಮನ ತಿಳಿಯದಿದ್ದರೆ, ತನು ನೋಯುತ್ತದೆ ; ತನುವೇ ಬೇಯುತ್ತದೆ. ತನುವಿನಲ್ಲಿ ಸಂಗಮವಾದ ಅರಿವನ್ನು ಕಂಡೂ ಕಾಣದಂತಿದ್ದ ಮನ, ನಿತ್ಯ ನಿತ್ಯ ನೋಯುತ್ತದೆ, ನಿತ್ಯ ನಿತ್ಯ ಬೇಯುತ್ತದೆ.

ಮನ ಶಬ್ದ ಕೇಳಿ ತನುವಿನಲ್ಲಿ ಭಾವ ಸೃಷ್ಟಿ ಮಾಡಿ, ಅರಳುವಂತೆ ಮಾಡುತ್ತದೆ. ಮನ ಶಬ್ದ ಕೇಳಿ ತನುವಿನಲ್ಲಿ ದುರ್ಭಾವ ಸೃಷ್ಟಿ ಮಾಡಿ ಕೆರಳುವಂತೆ ಮಾಡುತ್ತದೆ. ಭಾವ ದುರ್ಭಾವಗಳ ಶಬ್ದವನ್ನು ಮನ ಸಂಗ್ರಹ ಮಾಡಿಕೊಂಡು ತನ್ನಿಚ್ಛೆಯಂತೆ ಕೇಳಿ ತನುವಿನಲ್ಲಿ ರಸಾಯನಿಕ ಕ್ರಿಯೆಯನ್ನುಂಟು ಮಾಡುತ್ತದೆ. ಶಬ್ದ ಕೇಳಿ ತನು ಅರಳುವುದು, ಕೆರಳುವುದು ಮನ ಸೃಷ್ಟಿಸಿದ ಒಂದು ರಸಾಯನಿಕ ಕ್ರಿಯೆಯೇ ಹೊರತು ಅದು ಸತ್ಯವಲ್ಲ. ಶಬ್ದದ ಸತ್ಯ ಅರಿವಿಗೆ ಮಾತ್ರ ತಿಳಿದಿದೆ. ಮನ ಅರಿವಿಗೆ ಪ್ರಯಾಣ ಮಾಡಿ ಶಬ್ದ ಕೇಳಿದರೆ ಶಬ್ದಗಳೆಲ್ಲ ಅರಿವಿನಿಂದ ಕೂಡಿವೆ.

ಶಬ್ದ ಬರೆದು ಓದಿದರೆ ಅರಿವಾಗುತ್ತದೆ. ಕೇಳಿ ಅಪ್ಲೈ ಮಾಡಿಕೊಂಡರೆ ಸುಖ ಅಥವಾ ದುಃಖವಾಗುತ್ತದೆ. ಅರಿವಿನಿಂದ ಕೇಳಿದರೆ, ಶಬ್ದ ನಪುಂಸಕವಾಗಿ, ತನುವಿಗೆ ಶಬ್ದದ ಅರಿವಾಗುತ್ತದೆ. ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟಾಗುವುದಿಲ್ಲ. ಶಬ್ದ ಟಂಕಿಸಿದ ಅರಿವು ಶಬ್ದ ಸ್ವೀಕರಿಸಿ ತನುವಿಗೆ ಅರಿವಿನ ಸುಖವನ್ನುಂಟು ಮಾಡುತ್ತದೆ.

405

ಎಡದ ಕೈಯಲಿ ನಿಗಳವನಿಕ್ಕಿ
ಬಲದ ಕೈಯ ಕಡಿದುಕೊಂಡಡೆ ನೋಯದಿಪ್ಪುದೆ ?
ಪ್ರಾಣವೊಂದಾಗಿ ದೇಹ ಬೇರಿಲ್ಲ!
ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದಡೆ
ಬೆಂದೆನಯ್ಯಾ ನಾನು ಕೂಡಲಸಂಗಮದೇವಾ !

ತನು ಒಂದೇ. ಅದನ್ನು ಆಳುವ ಮನಸ್ಸು ಒಂದೇ. ತನುವಿನ ಕಣ ಕಣದಲ್ಲಿದ್ದ ಅರಿವೂ ಒಂದೇ. ಒಂದು ತನುವಿಗೆ ಅರಿವು ಮತ್ತು ಮನ ಎಡ ಬಲ ಕೈಗಳಿದ್ದಂತೆ. ಒಂದು ಕೈ ಮತ್ತೊಂದು ಕೈಯನ್ನು ತಿಳಿದರೆ ತನುವಿನಲ್ಲಿ ಎರಡೂ ತನ್ಮಯವಾಗಿವೆ !

ಎಡಗೈ ಶ್ರಿಂಗರಿಸಿಕೊಂಡು ಬಲಗೈ ಕಡಿದುಕೊಂಡರೆ ತನು ಊನವಾಗುತ್ತದೆ. ಬಲಗೈ ಎಂದರೆ ಎಡಗೈಯನ್ನು ಸದಾ ಆನಂದದಲ್ಲಿಟ್ಟು ದುಡಿಯುವ ಬಲವುಳ್ಳ ಅರಿವಿನ ಕೈ.

ಅರಿವು ಮತ್ತು ಮನಕ್ಕೆ ಪ್ರಾಣ ಒಂದೇ ; ದೇಹ ಒಂದೇ. ಆದರೂ ಒಂದನ್ನು ಮತ್ತೊಂದು ಮರೆತು ಸದಾ ದೇಹವನ್ನು ಘಾಸಿಗೊಳಿಸುತ್ತವೆ. ಮನ ಅರಿವನ್ನು ತಿಳಿದು ಆ ಅರಿವಿನಲ್ಲಿ ಲೀನವಾಗುತ್ತಿಲ್ಲ. ಅರಿವು, ಅಜ್ಞಾನಿ ಮನವನ್ನು ಬರಸೆಳೆದು ತನ್ನ ಬಾಹುಗಳಲ್ಲಿ ಅಪ್ಪಿಕೊಳ್ಳುತ್ತಿಲ್ಲ.

ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದಡೆ ಬೆಂದೆನಯ್ಯಾ ನಾನು

ಕೂಡಲಸಂಗಮದೇವಾ :

ಮನ ತನುವನ್ನು ಹಿಡಿದು, ಅದರ ಎಡದ ಕೈ (ರೆಟ್ಟೆ) ಗೆ ಲಿಂಗ ಕಟ್ಟಿ ; ಆ ಲಿಂಗವನ್ನು ತೊಳೆದು, ಪೂಜಿಸಿ, ಅದರ ನೀರು ಕುಡಿದು ತನುವಿನ ತುಂಬಾ ಸವರಿಕೊಳ್ಳುವುದೂ ಬಿಟ್ಟಿಲ್ಲ. ಆದರೆ ತನುವಿನಲ್ಲಿ ತನ್ಮಯವಾದ ಅರಿವೆಂಬ ಬಲಗೈ ದೇವರನ್ನೇ ಮರೆತಿದೆ. ಗೇರುಬೀಜದಿಂದ ಮಾಡಿದ ಲಿಂಗವನ್ನು ಇಷ್ಟಲಿಂಗವೆಂದು ಎಡರೆಟ್ಟೆಗೆ, ಕೊರಳಿಗೆ, ಎದೆಯ ಮೇಲೆ, ಎಡಕ್ಕೆ, ಬಲಕ್ಕೆ, ಕಟ್ಟಿಕೊಂಡು ತ್ರಿಕಾಲದಲ್ಲಿ ಅಥವಾ ಪ್ರಾಥಃಕಾಲದಲ್ಲಿ ಪೂಜಿಸಿ ಆರಾಧಿಸುವುದು ರೂಢಿಯಲ್ಲಿದೆ. ಅಣ್ಣನವರು ರೂಢಿಯಲ್ಲಿರುವ ಒಂದು ಉದಾಹರಣೆಯನ್ನೇ ವಚನದಲ್ಲಿ ಸೂತ್ರರೂಪವಾಗಿ ತೆಗೆದುಕೊಂಡಿದ್ದಾರೆ. ಎಡದ ಕೈಗೆ ಆಭರಣ ತೊಡಿಸಿ, ಬಲದ ಕೈಕಡಿದುಕೊಂಡರೆ ನೋಯುವುದಿಲ್ಲವೆ ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.

ಅಲ್ಲಮ ಪ್ರಭುಗಳು '' ಲಿಂಗ ಬಲನೊ ಎಡನೊ ಬಲ್ಲಡೆ ನೀವು ಹೇಳಿರೆ ? ಲಿಂಗ ಒಳಗೊ ಹೊರಗೊ ಬಲ್ಲಡೆ ನೀವು ಹೇಳಿರೆ ? '' ಎಡಬಲ ಒಳಹೊರಗೆನ್ನದೆ ತನುವಿನ ತುಂಬಾ ತನ್ಮಯವಾಗಿ ತುಂಬಿಕೊಂಡ ಗುಹೇಶ್ವರ ಲಿಂಗವನ್ನು ಎಡಬಲ ಎನ್ನಲು ಬರುವುದೆ ಎಂದು ಪ್ರಶ್ನಿಸುತ್ತಾರೆ.

406

ತನುವ ನೋಯಿಸಿ ಮನವ ಬಳಲಿಸಿ,
ನಿಮ್ಮ ಪಾದಪಿಡಿದವರೊಳರೆ ? ಈ ನುಡಿ ಸುಡದಿಹುದೆ ?
ಕೂಡಲಸಂಗಮದೇವಾ,
ಶಿವಭಕ್ತರ ನೋವೆ ಅದು ಲಿಂಗದ ನೋವು !

ತನುವಿನಲ್ಲಿರುವ ಜ್ಞಾನವನ್ನು ಮನ ಬಳಸಿಕೊಂಡು ಮಹಾ ಜ್ಞಾನಿಯಾಗುವುದಕ್ಕೆ ಜಪ ತಪಗಳನ್ನು ಮಾಡಬೇಕಿಲ್ಲ. ಕಷಾಯ ಧರಿಸಿ ಜಡೆ ಗಟ್ಟಿಸಿಕೊಂಡು ಮನೆ ಬಿಟ್ಟು ತೊಲಗಬೇಕಿಲ್ಲ. ತನು ನೋಯಿಸಿ, ಮನ ಬಳಲಿಸಿ, ಜ್ಞಾನ ಸಂಪಾದನೆ ಮಾಡಿಕೊಂಡವರು ಈ ಜಗದೊಳಗೆ ಯಾರೂ ಇಲ್ಲ.

ತನುವಿನಲ್ಲಿರುವ ಜ್ಞಾನ ತನು ಸಂಪಾದಿಸುವುದಕ್ಕಾಗಿ ಅನ್ಯ ತನುಗಳನ್ನು ನಿಂದಿಸಬೇಕಿಲ್ಲ ; ಅನ್ಯ ತನುಗಳ ಮನ ಬಳಲಿಸಬೇಕಿಲ್ಲ. ಪೂಜೆ ಪುನಸ್ಕಾರ ಯಜ್ಞಗಳನ್ನು ಆಚರಿಸುವುದು ಬೇಕಿಲ್ಲ. ಇದರ ಸಹಾಯಕ್ಕಾಗಿ ಅನ್ಯ ತನುಗಳನ್ನು ನೋಯಿಸಿ ಬಳಲಿಸುವ ಗೋಸುಗ ಬಳಸುವ ನುಡಿ, ಬಳಸುವ ತನುವನ್ನು , ಸ್ವೀಕರಿಸಿದ ತನುವನ್ನು ಸುಡುವುದಿಲ್ಲವೆ ?

ತನುವಿನಿಂದ ಹೊರಬಂದ ನುಡಿ ತನು ಸುಡುವುದು. ಅದುವೆ ಲಿಂಗದ ನೋವು ! ತನುವಿನ ದೃಶ್ಯ , ನುಡಿ, ಶಬ್ದ, ಸ್ಪರ್ಶ, ವಾಸನೆಗಳು ತನುವಿಗೆ ಪ್ರಸಾದವಾಗುವುದೆ ಮಹಾಜ್ಞಾನ !

ಶಿಭಕ್ತರ ನೋವೆ ಅದು ಲಿಂಗದ ನೋವು :

ತನುಗಳಲ್ಲಿ ಅರಿವು ತನ್ಮಯವಾಗಿರುವುದರಿಂದ, ತನುಗಳೆಲ್ಲ ಅರಿವಿನ ತನುಗಳು ! ಗುರುತನುಗಳು. ಮನ ಇಂದಿಲ್ಲ ನಾಳೆ ತನುವಿನಲ್ಲಿ ತನ್ಮಯವಾದ ಗುರುವಿಗೆ ಭಕ್ತಿ ಮಾಡಿ ಅರಿವಿನೊಳಗೆ ಲೀನವಾಗುತ್ತದೆ. ಅಂದಮೇಲೆ ಪ್ರತಿ ತನು ಶಿವಭಕ್ತನ ತನು ಆಗಲಿಲ್ಲವೆ ? ಹೀಗಾಗಿ ಅದು ಲಿಂಗದ ನೋವು. ಅಂಗವೆಂಬ ಲಿಂಗಕ್ಕೆ ನುಡಿದ ಬಿರುನುಡಿ, ನುಡಿದ ಅಂಗವನ್ನೇ ಸುಡುವುದು.

ತನುವನ್ನು ನೋಯಿಸಿ, ಮನವನ್ನು ಬಳಲಿಸಿ, ಅರಿವೆಂಬ ಮಹಾಜ್ಞಾನವನ್ನು ಪಡೆದವರು ಈ ಜಗದೊಳಗೆ ಯಾರೂ ಇಲ್ಲ. ಇದು ಅಣ್ಣನವರ ನಿರ್ಧಾರದ ಮಾತು.

407

ಆತ್ಮ ಸ್ತುತಿ ಪರನಿಂದೆಯ ಕೇಳಿಸದಿರಯ್ಯಾ ನಿಮ್ಮ ಧರ್ಮ.
ಆನು ಭಕ್ತ ನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದಡೆ,
ನಿಮಗಾನು ದ್ರೋಹಿಯಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ.

ಆತ್ಮ ಸ್ತುತಿ ಮಾಡಿಕೊಳ್ಳಲರಿಯದು, ಪರನಿಂದೆ ಮಾಡಲರಿಯದು. ಅದು ಆತ್ಮದ ಧರ್ಮ. ಸ್ತುತಿ ನಿಂದೆಗಳೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಮನ ತನುವಿನ ಸ್ತುತಿ ಮಾಡಿಕೊಳ್ಳುತ್ತದೆ. ಹಾಗೂ ಪರ ತನುವಿನ ನಿಂದೆ ಮಾಡುತ್ತದೆ. ತನುವಿನಲ್ಲಿಯೇ ಹುಟ್ಟಿ; ತನುವಿಗೆ ಕೇಡು ಬಗೆಯುವುದೇ ಮನದ ಧರ್ಮ.

ನಾನು ಅರಿವುಳ್ಳವ ; ನನಗಿಂತ ಯಾರೂ ಶ್ರೇಷ್ಠರಲ್ಲ; ಶ್ರೇಷ್ಠ ತನುಗಳನ್ನು ಕನಿಷ್ಠ ಮಾಡಿ ; ತನ್ನ ತನುವನ್ನು ಸ್ತುತಿ ಮಾಡುವುದು ಮನ. ಇದು ಆತ್ಮಕ್ಕೆ ಬಗೆಯುತ್ತಿರುವ ದ್ರೋಹ.

ಆತ್ಮ ತನುವಿನ ಧರ್ಮವನ್ನು ಕಾಪಾಡುತ್ತದೆ. ಅದಕ್ಕೆ ಸ್ವತನು, ಪರತನುಗಳೆಂದಿಲ್ಲ. ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು, ಶಿವಚಿತ್ತವೆಂಬ ಕೂರಲಗ ಕೊಂಡು, ಶರಣಾರ್ಥಿಯೆಂಬ ಶ್ರವವ ಕಲಿತಡೆ ಆಳುತನಕ್ಕೆ ದೆಸೆಯಪ್ಪೆ ನೋಡಾ ಎನ್ನುವ ಸೂತ್ರ ಒಲಿದಲ್ಲಿ ಆತ್ಮವನ್ನು ಬಳಸುವ ವಿಧಾನ ಮನಕ್ಕೆ ದಕ್ಕುತ್ತದೆ. ಇಲ್ಲದಿದ್ದಲ್ಲಿ ಮನಕ್ಕೆ ಆತ್ಮವೆಂದರೇನೆಂದು ತಿಳಿಯದು. ಆತ್ಮದ ಬೆಳಕಿನಿಂದ ಹುಟ್ಟಿದ್ದ ಮನ ಆತ್ಮಕ್ಕೆ ದ್ರೋಹ ಬಗೆಯುವುದನ್ನು ಬಿಡದು.

ಶರಣರು ಆತ್ಮಕ್ಕೆ ಶರಣು ಹೋದವರು. ಅವರಿಗೆ ಲೇಸು ಬಗೆಯುತ್ತಾ ಅವರ ಸೇವೆಯಲ್ಲಿರುವುದು ಕಡುಲೇಸು ಎಂದಿದ್ದಾರೆ ಅಣ್ಣನವರು.

408

ನಡೆಯಲರಿಯದೆ ನುಡಿಯಲರಿಯದೆ
ಲಿಂಗವ ಪೂಜಿಸಿ ಫಲವೇನು ?
ಅವರ ಸುಖವೆನ್ನ ಸುಖ, ಅವರ ದುಃಖವೆನ್ನ ದುಃಖ.
ಕೂಡಲಸಂಗನ ಶರಣರ ಮನ ನೊಂದಡೆ ಆನು ಬೆಂದೆನಯ್ಯಾ.

ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು?:

ಕಲಿತ ನಡೆಯನ್ನೇ ನಡೆಯುವುದು, ಕಲಿತ ನುಡಿಯನ್ನೇ ನುಡಿಯುವುದು ತನುವಿನ ಧರ್ಮವಲ್ಲ. ತನುವಿನ ಧರ್ಮವೆಂದರೆ ಅರಿವಿನ ಧರ್ಮ. ಅದು ತನುವಿನ ಸಹಜ ಧರ್ಮ. ತನುವಿನ ಸಹಜ ಲಿಂಗ ಧರ್ಮ.ಲಿಂಗಾಂಗ ಧರ್ಮ!

ಲಿಂಗವೆಂದರೆ ಅಂಗದ ಸಹಜ ಅರಿವು. ಅದು ಲಿಂಗ ಪೂಜಿಸಿದರೆ ಅಂಗಕ್ಕೆ ಹೇಗೆ ದಕ್ಕುವುದು.

ಸರ್ವಾಂಗದಲ್ಲಿ ಲಿಂಗ ಬೆರೆತಿರುವಾಗ ಕಲ್ಲಲಿಂಗ ಪೂಜಿಸಿದರೆ ಅಂಗದಲ್ಲಿದ್ದ ಲಿಂಗ ಒಲಿಯುವುದೆ?

ಅವರ ಸುಖವೆನ್ನ ಸುಖ, ಅವರ ದುಃಖವೆನ್ನ ದುಃಖ. ಕೂಡಲಸಂಗನ ಶರಣರ ಮನ ನೊಂದಡೆ ಆನು ಬೆಂದೆನಯ್ಯಾ :

ಅಂಗದಲ್ಲಿದ್ದ ಅರಿವೆಂಬ ಗುರುದೇವರ ಸುಖವೇ ಎನ್ನ ಸುಖ. ಆ ಗುರುದೇವನ ದುಃಖವೇ ಎನ್ನ ದುಃಖ. ಸುಖ ದುಃಖಗಳಾಚೆ ಇರುವ ಲಿಂಗ ಸುಖವನ್ನು ಸೂಚಿಸುವಾತನೇ ನಿಜ ಶರಣ. ಅವರ ಮನ ನೊಂದಡೆ ಆನು ಬೆಂದೆನಯ್ಯಾ.

ಶರಣರು ಸೂಚಿಸಿದ ನಿಜಸುಖದೆಡೆಗೆ ನಡೆಯುವುದೆ ಅರಿವಿನ ನಡೆ. ಅವರು ಸೂಚಿಸಿದ ನುಡಿಗನುಗುಣವಾಗಿ ಅರಿತು ನಡೆಯುವುದೆ ಅರಿವಿನ ನುಡಿ. ಅದು ಲಿಂಗನುಡಿ. ಅಂಗದ ಮೇಲೆ ಕಟ್ಟಿಕೊಂಡ ಲಿಂಗವ ಪೂಜಿಸಿದರೆ, ಅಂಗಕ್ಕೆ ಸದಾ ಅರಿವಿನ ಫಲ. ಇದುವೆ ನಿಜದ ನಡೆ ; ನಿಜದ ನುಡಿ. ಅಂಗ ಪೂಜಿಸಿದ ಫಲ ಅಂಗೈ ಮೇಲೆ. ಅಂಗದ ಐದು ಜ್ಞಾನದ ಭಾಗಗಳಾದ ಕಣ್ಣು ಕಿವಿ ಮೂಗು ನಾಲಗೆ ಚರ್ಮಕ್ಕೆ ಪೂಜಾಫಲ ದಕ್ಕುತ್ತದೆ.

409

ಬಂಜೆ ಬೇನೆಯನರಿಯದಂತೆ
ಒಬ್ಬರೊಂದ ನುಡಿವಿರಿ ಕೇಳಿರಯ್ಯಾ.
ಎನಗೆ ಆಯುಷ್ಯ ಭವಿಷ್ಯ ಎನ್ನ ಭಕ್ತರು ಕಂಡಯ್ಯಾ.
ಎನಗೆ ಆಯುಷ್ಯ ಭವಿಷ್ಯ ಎನ್ನ ಪ್ರಮಥರು ಕಂಡಯ್ಯಾ.
ಕೂಡಲ ಸಂಗನ ಶರಣರು ಮುಖಲಿಂಗಿಗಳಯ್ಯಾ.

ಬಂಜೆ ಬೇನೆಯನರಿಯದಂತೆ ಒಬ್ಬರೊಂದ ನುಡಿವಿರಿ ಕೇಳಿರಯ್ಯಾ :

ವೇದ ಉಪನಿಷತ್‌ಗಳಿಂದಲೇ ಜ್ಞಾನ ಹುಟ್ಟಿತೆಂದು ಒಬ್ಬರು ಹೇಳಿದರೆ ಮತ್ತೊಬ್ಬರು ಭಗವದ್ಗೀತೆಯಿಂದಲೇ ಜ್ಞಾನ ಹುಟ್ಟಿತೆಂದು ಹೇಳುತ್ತಾರೆ. ಧ್ಯಾನ ಜಪತಪದಿಂದ ಯೋಗದಿಂದಲೇ ಜ್ಞಾನ ಹುಟ್ಟಿತೆಂದು ಹೇಳುವವರೂ ಇದ್ದಾರೆ. ಶಾಸ್ತ್ರಗ್ರಂಥಗಳು ಜ್ಞಾನಕ್ಕೆ ಜನ್ಮ ಕೊಡಲಿಲ್ಲ. ಜ್ಞಾನದಿಂದಲೇ ಸರ್ವ ಶಾಸ್ತ್ರಗ್ರಂಥಗಳು ಹುಟ್ಟಿದವು.

ಬೇನೆಯರಿಯದ ಬಂಜೆಗೆ ಮಗು ಹುಟ್ಟಿ ಅದರ ನಾಮಕರಣಕ್ಕೆ ಹೋದಂತೆ. ಎಲ್ಲಿಗೆ ಹೋಗಿದ್ದಿರಿ ಎಂದು ಸಾಲು ಹಿಡಿದು ಬರುವ ಜನಕ್ಕೆ ಕೇಳಿದರೆ ಬಂಜೆಯ ಮನೆಗೆ ನಾಮಕರಣಕ್ಕೆ ಹೋಗಿದ್ದೆವು. ಇದೀಗ ಊಟ ಮಾಡಿ ಬರುತ್ತಿದ್ದೇವೆ ಎಂದು ಹೇಳಿದರೆ, ಕೇಳಿದ ಮನುಷ್ಯ ಸುಮ್ಮನಾಗುತ್ತಾನೆ. ಉಂಡ ಮನುಷ್ಯ ಉತ್ತರ ಕೊಡುತ್ತಾನೆ. ಬಂಜೆ ಮಗುವಿನ ನಾಮಕರಣಕ್ಕೆಂದು ಕರೆದು ಊಟಕ್ಕೆ ಬಡಿಸುತ್ತಾಳೆ. ಪ್ರಶ್ನೆ ಇಲ್ಲದೆ ಎಲ್ಲ ಕ್ರಿಯೆಗಳು ಸಾಂಗೋಪಾಂಗವಾಗಿ ನಡೆಯುತ್ತವೆ.

ಹುಟ್ಟುತ್ತಲೇ ಬಂಜೆಯಾದವಳು, ಹೆರಿಗೆಯ ಬೇನೆಯನೆ ಅರಿಯದವಳು, ಮಗುವನ್ನು ಹೇಗೆ ಹಡೆದಳು ? ಆ ಮಗು ಯಾರದು ? ಇವಳು ಹೇಳುವುದು ಸರಿಯೆ ? ಎಂದು ಯಾರೂ ಪ್ರಶ್ನೆ ಕೇಳುವುದಿಲ್ಲ.

ಜ್ಞಾನ ತಿಳಿಯುವುದೂ ಕೂಡಾ ಹೀಗೇ ಆಗಿದೆ. ನಿಜಗುಣರ ಶಾಸ್ತ್ರದ ಆಧಾರದಿಂದ ಮಾತ್ರ ಬೇಗ ಜ್ಞಾನ ತಿಳಿಯುತ್ತದೆ, ದಾಸ ಸಾಹಿತ್ಯದಿಂದ, ತತ್ವ ಪದಕಾರರಿಂದ, ಶರಣರ ವಚನಗಳಿಂದ ಮಾತ್ರ ತಿಳಿಯುತ್ತದೆ. ಇಂತಹ ಗುರುಗಳಿಗೆ ಶಿಷ್ಯರಾದರೆ ಮಾತ್ರ ತಿಳಿಯುತ್ತದೆ ಎಂದು ಹೇಳುವವರೆ

ಅಧಿಕವಾಗಿದ್ದಾರೆ. ಇವರು ಬೇನೆಯಯನರಿಯದ ಬಂಜೆಯರು.

ಜ್ಞಾನ ತನುವಿನಲ್ಲಿಯೇ ಇದೆ. ತನುವಿನಿಂದಲೇ ತಿಳಿಯಬೇಕು. ತನು ಮಹಾಜ್ಞಾನದ ಕುಲ. ಬಸವಣ್ಣ ಬುದ್ಧ ಮಹಾವೀರ ಕ್ರಿಸ್ತ ಕ್ರಿಷ್ಣ ಮುಂತಾದ ಜ್ಞಾನಿಗಳು ತನುಕುಲದ ವಾರಸುದಾರರು. ಸಾದು ಸಂತರು ಸತ್ಪುರುಷರು ಶರಣರು ದಾಸವರೇಣ್ಯರು ತನುಕುಲದ ವಾರಸುದಾರರು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಯುಗಪುರುಷರು. ಮಹಾಜ್ಞಾನ ಎನ್ನುವುದು ತನುವಿನ ಮುಖಲಿಂಗ. ಜ್ಞಾನದ ದ್ಯೋತಕ. ಆ ಮಹಾಜ್ಞಾನವು ತನುವಿನಲ್ಲಿಯೇ ತನ್ಮಯವಾಗಿದೆ. ಸರ್ವಾಂಗದಲ್ಲಿ ಸಂಗಮವಾಗಿ ಲಿಂಗವಾಗಿ ಬೆರೆತಿದೆ. ತನುಗಳೆಲ್ಲ ಲಿಂಗಗಳೇ. ಮಹಾಜ್ಞಾನಕ್ಕೆ ಶರಣುಹೋದ ಶರಣ ಮಾತ್ರ ಬಲ್ಲ. ಆತ ಆಯುಷ್ಯವನ್ನು ಭವಿಷ್ಯವನ್ನು ಬರೆಯುವ ಪ್ರಮಥ !

410

ಬೇರೂರಲಿದ್ದು ಬಂದ ಜಂಗಮವೇ ಲಿಂಗವೆಂದು
ಮನೆಯಲ್ಲಿದ್ದ ಜಂಗಮವನುದಾಸೀನವ ಮಾಡಿದಡೆ ನಾನು ಬೆಂದೆನಯ್ಯಾ .
ಆನು ಬೆಂದ ಬೇಗೆಯನರಿಯೆ ಕಾಣಾ
ಕೂಡಲಸಂಗಮದೇವಾ.

ಜಂಗಮನೆಂದರೆ ಯಾರೆಂದು ತಿಳಿಯದೆ ; ಹುಟ್ಟಿನಿಂದ ಜಂಗಮನಾದ ವ್ಯಕ್ತಿಯನ್ನು ಹಬ್ಬ ಹರಿದಿನಗಳಲ್ಲಿ, ಹುಣ್ಣಿಮೆ ಅಮವಾಸ್ಯೆ ತಿಥಿಗಳಲ್ಲಿ ಕರೆದು ಗೌರವಿಸಿ, ಅವರ ಪ್ರಸಾದವಾದ ಮೇಲೆ ಮನೆ ಮಂದಿಯೆಲ್ಲ ಪ್ರಸಾದ ಮಾಡುವುದು ಸಂಪ್ರದಾಯವಾಗಿದೆ. ಅದು ಈಗಲೂ ಸಾಂಗವಾಗಿ ಸಾಗಿದೆ. ಸಮಾರಂಭಗಳಲ್ಲಿ ಕರೆದು ಗೌರವಿಸುವ ಜಂಗಮ ಹೊರಗಿನಾತ. ಆತನನ್ನು ಗೌರವಿಸಿದರೆ ಆತನಿಗೆ ಸಂತೋಷವಾಗುತ್ತದೆ. ಇದು ಸಂಪ್ರದಾಯದ ಸುಖ. ಆದರೆ ತನುವಿನ ಮನೆಯಲ್ಲಿರುವ ಜಂಗಮ ಸಂತುಷ್ಟನಾಗಲಿಲ್ಲ. ಆತ ಯಾರೆಂದು ಜಂಗಮನನ್ನು ಆರಾಧಿಸುವ ಭಕ್ತನಿಗೂ ತಿಳಿಯಲಿಲ್ಲ; ಆರಾಧಿಸಿಕೊಳ್ಳುವ ಜಂಗಮನಿಗೂ ತಿಳಿಯಲಿಲ್ಲ. ಜಂಗಮನಲ್ಲಿಯೂ ಜಂಗಮನಿದ್ದಾನೆ ; ಭಕ್ತನಲ್ಲಿಯೂ ಜಂಗಮನಿದ್ದಾನೆ. ಪ್ರತಿ ಅಂಗದಲ್ಲಿಯೂ ಲಿಂಗಜಂಗಮನಿದ್ದಾನೆ.

ಹೊರಗಿನ ಜಂಗಮವೇ ಲಿಂಗವೆಂದು ಮನೆಯಲ್ಲಿದ್ದ ಜಂಗಮವನು ಉದಾಸೀನವ ಮಾಡಿದಡೆ ನಾನು ಬೆಂದೆನಯ್ಯಾ . ನಾನು ಬೆಂದ ಬೇಗೆಯನೂ ಅರಿಯೆನು.

ಜಂಗಮನೆಂದು ಮನೆಗೆ ಕರೆದ ಅಂಗದಲ್ಲಿ ಜಂಗಮನಿದ್ದಾನೆ. ಜಂಗಮನೆಂದು ಪೂಜಿಸುವ ಭಕ್ತನ ಅಂಗದಲ್ಲಿ ಜಂಗಮನಿದ್ದಾನೆ. ಪೂಜಿಸಿಕೊಳ್ಳುವ ಪೂಜಿಸುವ ಅಂಗಗಳು ಜಂಗಮನನ್ನು ಮರೆತಿವೆ. ಯಾಕೆ ಈ ಪೂಜೆ ? ಎಂದು ಉದಾಸೀನಕ್ಕೊಳಗಾದ ಜಂಗಮನ ಅರಿವಿನ ಧ್ವನಿ ; ಪೂಜಿಸುವ ಪೂಜೆಗೊಳಗಾದ ಅಂಗಗಳಲ್ಲಿ ರಿಂಗಣಿಸುತ್ತಿರುವುದು ಗಮನಕ್ಕೆ ಬರುತ್ತಿಲ್ಲ.

ಜಂಗಮ ದರ್ಶನವಿಲ್ಲದ ಅಂಗಗಳೆರಡೂ ಅಜ್ಞಾನದಲ್ಲಿ ಬೇಯುತ್ತಲಿವೆ. ಬೆಂದ ಬೇಗೆಯನೂ ಅರಿಯದೆ ಬೇಯುತ್ತಲಿವೆ. ಎರಡೂ ಅಂಗಗಳಲ್ಲಿ ಲಿಂಗ ಜಂಗಮನಿದ್ದುದು ಪರಿಚಯವಿಲ್ಲದೆ ಬೇಯುತ್ತಲಿವೆ.

ಪ್ರತಿ ಅಂಗದಲ್ಲಿ ಅರಿವೆಂಬ ಲಿಂಗವಿದೆ. ಆ ಅರಿವನ್ನು ಬಳಸುವ ಜಂಗಮನೂ ಇದ್ದಾನೆ. ಮನಕ್ಕೆ ಈ ಮಹನೀಯರ ಪರಿಚಯವಾಗಬೇಕು. ಅಲ್ಲಿಯವರೆಗೂ ಸಂಪ್ರದಾಯದ

ಜಂಗಮ–ಸಂಪ್ರದಾಯದ ಭಕ್ತನ ಬೇಗೆ ತಪ್ಪಿದ್ದಲ್ಲ. ಇದು ಬಸವಣ್ಣನವರ ಸ್ವಯಂ ಲಿಂಗ ಜಂಗಮ ದರ್ಶನದ ಸೂತ್ರ.

411

ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮ ವಿಶೇಷವೆಂದು
ಕಂಥೆ ಬೊಂತೆಯ ಜಂಗಮ ಬಂದಡೆ ಹೀನವೆಂದು
ಕಂಡೆನಾದಡೆ ಪಂಚ ಮಹಾಪಾತಕ !
ಇದು ಕಾರಣ, ಅನ್ನ ವಸ್ತ್ರ ಧನ ಮಾಟದಲ್ಲಿ
ಎರಡಾಗಿ ಕಂಡೆನಾದಡೆ ನರಕದಲ್ಲಿಕ್ಕುವ
ಕೂಡಲಸಂಗಮದೇವಾ.

ನೋಟದಲ್ಲಿ ಅಜ್ಞಾನ ಅಡಗಿರುವುದರಿಂದ ; ಜಂಗಮ ಒಬ್ಬನೇ ಆದರೂ, ವೇಷ ಭೂಷಣಗಳಿಂದ ಬಂದ ಜಂಗಮನು ವಿಶೇಷವಾಗಿ ಕಾಣುತ್ತಾನೆ. ಹರಕು ಬಟ್ಟೆ ಧರಿಸಿದ ಜಂಗಮ ಹೀನನಾಗಿ ಕಾಣುತ್ತಾನೆ. ತನುವಿನಲ್ಲಿ ವ್ಯತ್ಯಾಸವಿಲ್ಲ. ಆದರೆ ತೊಟ್ಟ ಬಟ್ಟೆಯಲ್ಲಿ ವ್ಯತ್ಯಾಸವಿದೆ. ನೂಲಿನಲ್ಲಿ ವ್ಯತ್ಯಾಸವಿಲ್ಲ ನೇಯ್ಗೆಯಲ್ಲಿ ವ್ಯತ್ಯಾಸವಿದೆ. ಒಂದು ಚಿತ್ತಾರದಿಂದ ಕಂಡು ಕಣ್ಣಿಗೆ ಮೋಸ ಮಾಡಿದರೆ ಮತ್ತೊಂದು ಹೀನಾಯವಾಗಿ ಕಂಡು ಕಣ್ಣಿಗೆ ಮೋಸ ಮಾಡುತ್ತದೆ. ಎರಡೂ ತನುಗಳಲ್ಲಿ ವ್ಯತ್ಯಾಸವಿಲ್ಲ. ಎರಡು ತನುಗಳು ಧರಿಸಿದ ಬಟ್ಟೆಗಳಲ್ಲಿ ವ್ಯತ್ಯಾಸ ಕಂಡು ಒಂದು ತನುವಿಗೆ ಬಟ್ಟೆಯಿಂದ ಗೌರವ ದಕ್ಕಿತು. ಮತ್ತೊಂದು ತನುವಿಗೆ ಧರಿಸಿದ ಬಟ್ಟೆಯಿಂದಲೇ ಹೀನಾಯದ ಪಟ್ಟ ಕಟ್ಟಿಕೊಂಡಿತು.

ಉಣ್ಣುವ ಅನ್ನ, ಉಡುವ ವಸ್ತ್ರ, ಬಳಸುವ ಧನವ ಮಾಟದಲ್ಲಿ ಎರಡಾಗಿ ಕಂಡ ತನು, ಮೋಸಕ್ಕೊಳಗಾದ ತನು ! ಅದು ನರಕಕ್ಕೆ ಭಾಜನ !

ಉಣ್ಣುವ ಅನ್ನ ಯಾವುದಾದರೇನು ? ಉಡುವ ವಸ್ತ್ರ ಯಾವುದಾದರೇನು ? ಅನ್ನದಲ್ಲಿ ಪ್ರಸಾದ, ವಸ್ತ್ರದಲ್ಲಿ ನೂಲು, ಭಾಷೆಯಲ್ಲಿ ಅರಿವು ಕಾಣದಾತ ಕುರುಡ, ಕಿವುಡ. ಆ ತನು ನರಕಕ್ಕೆ ಭಾಜನ. ಒಂದು ತನು ವಿಶೇಷವೆಂದು ಮತ್ತೊಂದು ತನು ಹೀನವೆಂದು ಕಂಡ ತನುವಿಗೆ ಪಂಚ ಮಹಾಪಾತಕ ತಪ್ಪಿದ್ದಲ್ಲ.

ನೋಡಿದ ಎರಡು ತನುಗಳಲ್ಲಿ ಅರಿವೆಂಬ ಗುರುವಿದ್ದಾನೆ. ಆ ಗುರುದೇವನನ್ನು ನೋಡದೆ ತೊಟ್ಟಬಟ್ಟೆ ನೋಡಿ ಗೌರವಿಸಿದ್ದಕ್ಕಾಗಿ ; ಹೀನನೆಂದು ಖಂಡಿಸಿದ್ದಕ್ಕಾಗಿ ಗುರುದ್ರೋಹವೆಂಬ ಪಾತಕ! ಸರ್ವಾಂಗದಲ್ಲಿರುವ ಅರಿವೆಂಬ ಲಿಂಗ ಕಾಣದ್ದಕ್ಕಾಗಿ ಲಿಂಗದ್ರೋಹವೆಂಬ ಪಾತಕ ! ಲಿಂಗಾಂಗದಲ್ಲಿರುವ ಜಂಗಮ ಕಾಣದ್ದಕ್ಕಾಗಿ ಜಂಗಮದ್ರೋಹವೆಂಬ ಪಾತಕ ! ಎರಡು ಅಂಗಗಳನ್ನು ನೋಡಿ ಲಿಂಗಾಂಗವೇ ಎಂದು ಆಚರಣೆಗೆ ತಾರದ್ದಕ್ಕಾಗಿ ಆಚಾರದ್ರೋಹವೆಂಬ ಮಹಾಪಾತಕ ! ಉಟ್ಟು ತೊಟ್ಟು ಜಂಗಮನೆಂದು, ಕಂತೆ ಬೊಂತೆಯ ಹೊದ್ದ ಜಂಗಮನೆಂದು ಉಪಚರಿಸಿದ ಅಂಗಕ್ಕೆ, ಎರಡೂ ಅಂಗಗಳೂ ಒಂದೇ; ಅಂಗಗಳಲ್ಲಿ ಲಿಂಗ ಜಂಗಮನಿದ್ದಾನೆ ಎಂದು ಕಣ್ಣಿಗೆ ಗೋಚರಿಸಲಿಲ್ಲ. ನೋಡಿದ ನೋಟ ಕಣ್ಣಿಗೆ ಪ್ರಸಾದವಾಗಲಿಲ್ಲ. ಹೀಗಾಗಿ ಪ್ರಸಾದ ದ್ರೋಹವೆಂಬ ಮಹಾಪಾತಕ ಉಂಟಾಯಿತು ! ಎರಡು ಅಂಗಗಳು ಲಿಂಗಾಂಗವುಳ್ಳ ಅಂಗವೆಂದು ಕಾಣದ್ದಕ್ಕಾಗಿ ಅಂಗದಲ್ಲಿ ಅರಿವಿದ್ದು ಆ ಅರಿವು ಅಂಗಕ್ಕೆ ಬಳಕೆಯಾಗದ ನಿಮಿತ್ಯ ಅಂಗ ನರಕಕ್ಕೆ ಭಾಜನವಾಯಿತು.

ಅಡ್ಡ ದೊಡ್ಡ ನಾನಲ್ಲಯ್ಯಾ : ದೊಡ್ಡ ಬಸುರು ಎನಗಿಲ್ಲಯ್ಯಾ .
ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ .
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ
ಬೋಧಿಸಲು ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ .
ದೊಡ್ಡತನವೆನಗಿಲ್ಲ : ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ.
ಅನಾಥ ನಾನಯ್ಯಾ , ಕೂಡಲಸಂಗಮದೇವಾ.

ದೊಡ್ಡವರು ಚಿಕ್ಕವರು ಎನ್ನುವ ಬೇಧ ಶರಣರು ಮಾಡುವುದಿಲ್ಲ. ಅಂಗವುಳ್ಳವರೆಲ್ಲ ಶರಣರಿಗೆ ಲಿಂಗವಂತರೆ !

ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ ಬೋಧಿಸಲು ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ :

ಸೂಳೆ ಎಂದರೆ ಮನಸ್ಸು. ಕಾಯಕ ಮಾಡಿ ಊಟ ಮಾಡುವ ಮಹಿಳೆಗೆ ಹೇಳಿದ ಮಾತಲ್ಲ. ಕಾಯಕ ಮಾಡದೆ ಗುರುವಿನ ವೇಷ ಹಾಕಿ ಹಣವಿದ್ದವರನ್ನು ಹುಡುಕಿ ಬೋಧಿಸುವಾತ ಸೂಳೆ. ಧನ ಉಳ್ಳ ಶಿಷ್ಯನಿಂದ ಹಣ ಪಡೆದು ಬೋಧಿಸಿ ಉಣ್ಣುವಾತ ಹಳಸಿದ ಹಂದಿಯ ಮಾಂಸವನು ಉಂಡಂತೆ ! ಬೋಧೆಯನು ಆಲಿಸಿ ಪ್ರಾರ್ಥಿಸುವ ಭಕ್ತನು ಕೂಡಾ ಹಡೆದುಂಬ ಸೂಳೆಯಂತೆ.

ಬೋಧಿಸಲು ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ . ದೊಡ್ಡತನ ವೆನಗಿಲ್ಲ : ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ. ಅನಾಥ ನಾನಯ್ಯಾ ಕೂಡಲಸಂಗಮದೇವಾ :

ಪ್ರತಿ ಅಂಗದಲ್ಲಿಯೂ ಅರಿವೆಂಬ ಲಿಂಗಯ್ಯನಿದ್ದಾನೆ. ಆ ಅರಿವೆಂಬ ಲಿಂಗಯ್ಯನನ್ನು ತಿಳಿಯಬೇಕಾದ ಮನವೆಂಬ ಭಕ್ತನೂ ಇದ್ದಾನೆ. ಒಂದಂಗದಲ್ಲಿಯೇ ಬೋಧಿಸುವಾತ ಬೋಧೆ ಕೇಳುವಾತ ಇಬ್ಬರೂ ಇದ್ದಾಗ ಬೋಧಿಸುವಾತ ಮತ್ತೊಬ್ಬನು ಬೇಕೆ ? ಇದನ್ನು ತಿಳಿದಾತ ಶರಣ. ಆತನಿಗೆ ದೊಡ್ಡತನವಿಲ್ಲ ;ತನುವುಳ್ಳವರೆಲ್ಲ ಲಿಂಗಯ್ಯನೆಂಬ ಗುರುದೇವನಿದ್ದ ತನುಗಳೇ ಆಗಿವೆ. ವೇಷ ಹಾಕಿಕೊಂಡು ನಾನು ಗುರುದೇವನೆಂದು ನೀನು ಶಿಷ್ಯನೆಂದು ಹಣ ಪಡೆದು ಸಾಕ್ಷಾತ್ ಗುರುದೇವನಿಗೆ ಬೋಧಿಸಲು ಸಾಧ್ಯವೆ ? ಹೀಗೆ ಬೋಧಿಸುವ ವೇಷದ ಗುರು ಹಡೆದುಂಬ ಸೂಳೆಯಂತೆ ! ಹಣ ಪಡೆಯುವವ, ಹಣವನ್ನು ನೀಡಿದವರಿಬ್ಬರು ಹಳಸಿದ ಹಂದಿಯ ಮಾಂಸವನ್ನು ಉಂಡಂತೆ.

ಗುರುದೇವನೆಂದರೆ ಯಾರೆಂದು ತಿಳಿಯದೆ ಗುರುವಾಗಿ ಶಿಷ್ಯನಾಗಿ ಬೋಧಿಸಿದ ; ಗುರುದೇವನೆಂದರೆ ಯಾರೆಂದು ತಿಳಿಯದೆ ಗುರುವಿದ್ದೂ ಗುರುವಿಗೆ ಶಿಷ್ಯನಾದ. ಇವರಿಬ್ಬರೂ ಒಬ್ಬರಿಗೊಬ್ಬರು ಅಂಜಲಿಲ್ಲ. ಹಣಕೊಟ್ಟು ಗುರುವನ್ನು ಕೊಂಡುಕೊಂಡ. ಹಣ ಪಡೆದು ತನ್ನನ್ನು ಶಿಷ್ಯನಿಗೆ ಮಾರಿಕೊಂಡ. ಬೇಡುವವ ಜಂಗಮನಲ್ಲ ; ಕೊಡುವಾತ ಭಕ್ತನಲ್ಲ ! ಇವರಿಬ್ಬರೂ ಹಡೆದುಂಬ ಸೂಳೆಯರಂತೆ ! ಧನವುಳ್ಳ ಗುರು ಧನವುಳ್ಳ ಶಿಷ್ಯನನ್ನು ಹುಡುಕುತ್ತಾನೆ. ಧನವುಳ್ಳ ಶಿಷ್ಯ ಧನವುಳ್ಳ ಗುರುವನ್ನು ಹುಡುಕುತ್ತಾನೆ.

ಶರಣ ಇವರಿಬ್ಬರನ್ನೂ ಹುಡುಕುವುದಿಲ್ಲ. ಆತ ಅನಾಥ. ಆತನಿಗೆ ಅಂಗವುಳ್ಳ ನಾಥ ಬೇಕಿಲ್ಲ. ಸರ್ವಾಂಗಗಳಲ್ಲಿ ಅರಿವೆಂಬ ಲಿಂಗಯ್ಯ ತಾನೇ ಆಗಿರುವ ನಾಥನನ್ನು ಹುಡುಕುತ್ತಾನೆ. ಹೀಗಾಗಿ

ಶರಣ ಅನಾಥ ; ಎಲ್ಲ ಅಂಗಗಳಲ್ಲಿರುವ ಅರಿವೆಂಬ ಗುರುದೇವನಿಗೆ ಅಂಜುವ ಅನಾಥ ! ಈತ ಯಾರಿಗೂ ಗುರುವಲ್ಲ. ಯಾವ ಅಂಗಗಳೂ ಈತನಿಗೆ ಗುರುವಲ್ಲ. ಸರ್ವಾಂಗಗಳಲ್ಲಿರುವ ಅರಿವೆಂಬ ಗುರುದೇವನೆ ಅಂಗಕ್ಕೆ ಗುರುವಾಗಿರುವಾಗ ಯಾರು ಯಾರಿಗೆ ಗುರು ? ಯಾರು ಯಾರಿಗೆ ಶಿಷ್ಯ ? ಅಂಜುವೆ ಅಂಜುವೆ ಅರಿವೆಂಬ ಗುರುದೇವನನ್ನು ಸೂಚಿಸಿದ ಪ್ರಮಥರಿಗೆ ಮಾತ್ರ ! ಎಂದಿದ್ದಾರೆ ಬಸವಣ್ಣ.

ಇದು ಗುರು ವರ್ಗಕ್ಕೂ ಶಿಷ್ಯ ವರ್ಗಕ್ಕೂ ಸೂಚಿಸಿದ ಅರಿವಿನ ಮಹಾಸೂತ್ರ !

413

ಕುದುರೆ ಸತ್ತಿಗೆಯವರ ಕಂಡಡೆ ಹೊರಳಿಬಿದ್ದು ಕಾಲು ಹಿಡಿವರು ;
ಬಡ ಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸನ್ನಿ ಯೆಂಬರು ;
ಎನ್ನೊಡೆಯ ಕೂಡಲಸಂಗಯ್ಯನವರ
ತಡೆಗೆಡಹಿ ಮೂಗ ಕೊಯ್ಯದೆ ಮಾಣ್ಬನೆ ?

ದೊಡ್ಡ ದೊಡ್ಡ ಗುರುಗಳು ದೊಡ್ಡ ದೊಡ್ಡ ಶಿಷ್ಯರನ್ನೇ ಆದರಿಸಿ ಹರಸುತ್ತಾರೆ ; ಆದರಿಸುತ್ತಾರೆ. ಬಡ ಭಕ್ತರೆಂದರೆ ದೊಡ್ಡ ಗುರುಗಳಿಗೆ ಆಗುವುದಿಲ್ಲ. ಇವರು ಬೇಡಲು ಬಂದವರು. ಅವರು ಬೇಡಲು ನಿಂತವರು. ಇವರು ಕೊಡಲು ಬಂದ ಭಕ್ತರಿಗೆ ಮಾತ್ರ ಹೊರಳಿ ಕಾಲು ಹಿಡಿಯುತ್ತಾರೆ.

ಗುರುವಾದವನು ಭಕ್ತನಿಗೆ ಜ್ಞಾನ ಹೀಗಿದೆ ಎಂದು ; ಆತನ ತನುವನ್ನು ಸೂಚಿಸಿ ಅರಿವಿನ ಸುಳುಹನ್ನು ಕೊಡಬೇಕು. ತನುಗಳೆಲ್ಲ ಒಂದೇ ; ಶ್ರೀಮಂತ ಬಡವ ಹೆಣ್ಣು ಗಂಡು ಎನ್ನುವ ಬೇಧಗಳಿಲ್ಲದೆ ಕಣ್ಣು ಕಿವಿ ಮೂಗು ನಾಲಗೆ ಚರ್ಮ ಎಂಬ ಐದು ಮಹಾಜ್ಞಾನದ ಬಾಗಿಲುಗಳನ್ನು ತನು ಹೊಂದಿದೆ. ಈ ತನುವಿನಲ್ಲಿ ಜ್ಞಾನ ಹೇಗೆ ಸಂಗಮವಾಗಿದೆ ಎಂದು ಗುರುವಾದಾತ ಸೂತ್ರಗಳ ಮೂಲಕ ಬೇಡಲು ಬಂದ ಅಂಗಕ್ಕೆ ಸೂಚಿಸಿ ಸುಳುಹು ನೀಡಬೇಕು. ಈತ ನಿಜವಾದ ಗುರು.

ಶ್ರೀಮಂತ ಬಡವ ಎಂದು ಭೇದ ಮಾಡಿ, ಶ್ರೀಮಂತರನ್ನು ಆದರದಿಂದ ಬರಮಾಡಿಕೊಂಡು ಜ್ಞಾನ ನೀಡುವ ನೆಪದಲ್ಲಿ ಬೇಡುವ ಗುರುವನ್ನು ಗುರುವೆನ್ನಲು ಬರುವುದಿಲ್ಲ. ನೀಡಬೇಕಾದಾತ ಬೇಡಿದ ; ಬೇಡಬೇಕಾದಾತ ನೀಡಿದ. ಇವರಿಬ್ಬರಿಗೂ ಜ್ಞಾನದ ದಾಹವಿಲ್ಲ. ಇವರಿಬ್ಬರೂ ವ್ಯವಹಾರಿಗಳು.

ಎನ್ನೊಡೆಯ ಕೂಡಲಸಂಗಯ್ಯನವರ ತಡೆಗೆಡಹಿ ಮೂಗ ಕೊಯ್ಯದೆ ಮಾಣ್ಬನೆ ? :

ಬೇಡುವ ಗುರುವಿನಲ್ಲಿ ಅರಿವಿದೆ ; ಅರಿವೆಂದರೇನೆಂದು ತಿಳಿದಿಲ್ಲ. ನೀಡುವ ಭಕ್ತನಲ್ಲಿ ಅರಿವಿದೆ ; ಆದರೆ ಅರಿವೆಂದರೇನೆಂದು ತಿಳಿದಿಲ್ಲ. ಇವರಿಬ್ಬರೂ ಅರಿವೆಂಬ ಗುರುದೇವನನ್ನು ಅರಿಯದೆ ಬೇಡುವ ನೀಡುವ ವ್ಯವಹಾರದಲ್ಲಿ ಮಗ್ನರಾಗಿದ್ದಾರೆ. ಇವರಿಬ್ಬರ ತನುವಿನಲ್ಲಿದ್ದ ಗುರುದೇವ ಮಾತ್ರ ಇವರಿಬ್ಬರ ವ್ಯವಹಾರವನು ಬಲ್ಲ. ಇವರಿಬ್ಬರ ವ್ಯವಹಾರವನು ತಡೆ ತಡೆದು ಕೆಡಹಿ ಮೂಗು ಕೊಯ್ಯುತ್ತಾನೆ. ನಾಚಿಕೆ ಬರುವಂತೆ ಇವರಿಬ್ಬರನ್ನು ಛೀ ಥೂ ಎಂದು ಉಗಿಯುತ್ತಾನೆ.

ತನುವಿನಲ್ಲಿ ತನ್ಮಯವಾದ ಸಂಗಯ್ಯನೆಂಬ ಅರಿವನ್ನು ಅರಿತರೆ ವ್ಯವಹಾರವನ್ನು ಮರೆಯುತ್ತಾರೆ.

414

ದೂರದಿಂದ ಬಂದ ಜಂಗಮುವನಯ್ಯಗಳೆಂದು
ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯಾ
ಸಾರಿದವರು ದೂರದವರೆಂದು ಬೇರು ಮಾಡಿ ಕಂಡಡೆ
ಕೂಡಲಸಂಗಮದೇವಾ ಸಿಂಗಾರದ ಮೂಗ ಕೊಯ್ಯದೆ ಮಾಣ್ಬನೆ ?

ದೂರದಿಂದ ಬಂದ ಜಂಗಮನು ಜಾತಿ ಜಂಗಮ. ಸಾರಿದ್ದ ಜಂಗಮನೂ ಜಾತಿ ಜಂಗಮನೆ. ಇವರಿಬ್ಬರೊಳಗಿದ್ದ ಜಂಗಮನೇ ನಿಜ ಜಂಗಮ.ಇವರಿಬ್ಬರೂ ಆ ಜಂಗಮವನು ಅರಿಯರು. ದೂರದಿಂದ ಬಂದ ಜಂಗಮ, ಬಳಿಯಿದ್ದ ಜಂಗಮನೆಂದು ಭೇದ ಮಾಡುವವನು ಕೂಡಾ ಜಂಗಮವನು ಅರಿಯನು. ಈ ಮೂರೂ ಅಂಗಗಳು ಅಂಗದಲ್ಲಿರುವ ಜಂಗಮವನರಿಯದೆ ಕೇಡಿಂಗೆ ತುತ್ತಾದವರು.

ಅಂಗ ಒಂದೇ ; ಅಂಗದಲ್ಲಿರುವ ಲಿಂಗವೂ ಒಂದೇ. ಆ ಅಂಗದಲ್ಲಿರುವ ಜಂಗಮನೂ ಒಬ್ಬನೇ. ಈತ ಸರ್ವಾಂಗಗಳಲ್ಲಿರುವ ಜ್ಞಾನಿ. ಈತನನ್ನು ಅರಿಯದ ಲಿಂಗಕ್ಕೆ ಕೇಡು ತಪ್ಪಿದ್ದಲ್ಲ. ಸಮೀಪದಿಂದ ಬಂದ ದೂರದಿಂದ ಬಂದ ಜಂಗಮವೆಂದು ಬೇರೆ ಮಾಡಬಹುದೆ ? ಇದೊಂದು ಅರಿವಿನ ಸೂತ್ರ. ಈ ಸೂತ್ರ ದಕ್ಕದ ಅಂಗಕ್ಕೆ ಕೇಡು ತಪ್ಪಿದ್ದಲ್ಲ.

ಸಾರಿದವರು ದೂರದವರೆಂದು ಬೇರು ಮಾಡಿ ಕಂಡಡೆ ಕೂಡಲಸಂಗಮದೇವಾ ಸಿಂಗಾರದ ಮೂಗ ಕೊಯ್ಯದೆ ಮಾಣ್ಬನೆ ? :

ಪ್ರತಿ ಅಂಗದಲ್ಲಿ ಅರಿವಿದೆ. ಅರಿವೆಂಬ ಗುರುದೇವನು ತಿಳಿ ಹೇಳದ ಅಂಗಗಳೇ ಇಲ್ಲ. ತಿಳಿ ಹೇಳುವ ಆ ಗುರುದೇವನನ್ನು ಹುಡುಕುವ ಭಕ್ತನೆಂಬ ಮನವೂ ಅಂಗದಲ್ಲಿಯೇ ಇದೆ. ಗುರುದೇವನ ನುಡಿಗಳನ್ನು ಪಾಲಿಸುವ ಜಂಗಮನೂ ಅಂಗದಲ್ಲಿಯೇ ಇದ್ದಾನೆ. ಹೀಗಿದ್ದೂ ಭಕ್ತನಾದವನು ಜಂಗಮನನ್ನು ಹುಡುಕುತ್ತಾನೆ. ಊರ ಜಂಗಮ ಹೊರಗಿನ ಜಂಗಮನೆಂದು ಭೇದ ಮಾಡುತ್ತಾನೆ.

ಭೇದ ಮಾಡಿ ಪೂಜಿಸುವ ಭಕ್ತನೂ ಭಕ್ತನಲ್ಲ. ಊರ ಜಂಗಮನೂ ಜಂಗಮನಲ್ಲ. ಹೊರಗಿನ ಜಂಗಮನೂ ಜಂಗಮನಲ್ಲ. ಅರಿಯದೇ ಅಂಗದಲ್ಲಿಯೇ ಕೂಡಿ ಕೂಡಲ ಸಂಗಯ್ಯನಾದವನೇ ನಿಜ ಜಂಗಮ ! ಈ ನಿಜ ಜಂಗಮನು, ಭಕ್ತನ, ಊರ ಜಂಗಮನ, ಪರ ಊರಿನ ಜಂಗಮನ ಮೂಗು ಕೊಯ್ಯುತ್ತಾನೆ. ಅಂಗದಲ್ಲಿರುವ ಜಂಗಮ ; ಅಂಗ ಆಚರಿಸುವ ಅಜ್ಞಾನವನ್ನು ಕತ್ತರಿಸುವಾತ !

415

ಹಿಡಿವೆಡೆಯನೆ ಕಾಸಿ ಹಿಡಿವ ಕೈ ಬೆಂದು
ಮಿಡುಮಿಡನೆ ಮಿಡುಕುವ ಮರುಳುಮಾನವನೆ,
ಬಡವನೆಂದೆನಬೇಡ ಲಾಂಛನಧಾರಿಯನು.
ಕಡು ನೇಹದಿಂದ ಅವರ ಪೂಜೆಯ ಮಾಡುವುದು.
ನಿಜವಡಗಿದ ರೂಪು, ನಿರ್ವಯಲ ಸ್ಥಾನ,

ನಡೆಲಿಂಗ ಜಂಗಮು ಕೂಡಲಸಂಗಮದೇವ.

ಬಡವನೆಂದೆನಬೇಡ ಲಾಂಛನಧಾರಿಯನು :

ತನುವಿನ ಲಾಂಚನದಲ್ಲಿ ಬಂದ ಅರಿವೆಂಬ ಗುರುದೇವನನು ಬಡವ ನೆನಬೇಡ ; ಬಡವನೆಂದುಕೊಳ್ಳಲೂಬೇಡ. ಕಡು ನೇಹದಿಂದ ತನುವಿನೊಡೆಯನನು ಪೂಜೆ ಮಾಡು. ಆ ತನುವಿನಲ್ಲಿಯೇ ನಿಜವಡಗಿದೆ. ತನು ನಿಜವಡಗಿದ ರೂಪು. ನಿರ್ಬಯಲಸ್ಥಾನ, ತನು ನಿಜವಡಗಿದ ನಡೆ, ಅದು ಲಿಂಗ ಜಂಗಮು. ತನುವಿನಲ್ಲಿಯೇ ಕೂಡಿದ ಕೂಡಲಸಂಗಮದೇವ.

ತನುವೆಂಬುದೇ ಕಾಸಿ ಹಿಡಿದ ಪಂಚ ಮಹಾಜ್ಞಾನವುಳ್ಳ ಕೈ. ಹೀಗಿದ್ದೂ ಅರಿವಿನ ಲಾಂಛನಕ್ಕೆ ಕಾವಿ ಸುತ್ತುವುದೆ ? ಅದು ಬೆಂದು ಮಿಡು ಮಿಡನೆ ಮಿಡುಕುವ ಮರುಳು ಮಾನವನೆ ಬಡವನೆಂದೆನಬೇಡ ಲಾಂಛನಧಾರಿಯನು.

ಪಂಚ ಮಹಾಜ್ಞಾನವುಳ್ಳ ಅರಿವಿನ ತನುವಿಗೆ ಅರಿವಿನ ವಸ್ತ್ರವೆನ್ನುವ ಕಾವಿಯನು ಸುತ್ತುವುದೆ? ಅದು ಸುತ್ತಿಯೂ ಬಡವನೆಂದು ಮಿಡು ಮಿಡನೆ ಮಿಡುಕುವುದೆ ? ವಸ್ತ್ರ ಹೊದ್ದು ಬಡವನೆನ್ನುವ ನೀನು ಶ್ರೀಮಂತ ಹೇಗಾದೆ ? ಹಣದಿಂದ ಶ್ರೀಮಂತನಾದವ ಶ್ರೀಮಂತನಲ್ಲ. ಹಣವಿಲ್ಲದವನ ತನುವನ್ನು ಬಡವನೆನ್ನಲೂ ಬರುವುದಿಲ್ಲ. ಶ್ರೀಮಂತ ಬಡ ತನುಗಳೆರಡೂ ಅರಿವಿನ ಲಾಂಛನಗಳು. ತನುವಿನಲ್ಲಿ ನಿಜವನು ನೋಡದ ನೀನು ಶ್ರೀಮಂತ ಹೇಗಾಗುವಿ ? ಕಾವಿ ಹಿಡಿದು ತನುವಿಗೆ ಬರಬರನೆ ಸುತ್ತಿಕೊಂಡರೆ ಅರಿವಿನ ತನು ಆಗಲು ಸಾಧ್ಯವೆ ?

ಅರಿವಿನಿಂದ ತನುವನು ನೋಡಲಾಗಿ ನಿಜವಡಗಿದ ರೂಪು ! ನಿರ್ಬಯಲ ನಿರೂಪದ ಸ್ಥಾನವದು. ಅದರ ನಡೆ ಲಿಂಗ ; ಅದರ ನುಡಿ ಲಿಂಗ ; ಅದರ ಜಂಗಮದ ನಿಜ ನಿವಾಸ ಸ್ಥಾನ. ತನುವಿನಲ್ಲಿ ಅರಿವೆಂಬ ಗುರುದೇವನು ಸಂಗಮವಾದ ಸಂಗಮನಾಥನ ಸುಕ್ಷೇತ್ರ. ಮಿಡು ಮಿಡನೆ ಮಿಡುಕುವ ಮರುಳು ಮಾನವನೆ ಬಡವನೆಂದೆನಬೇಡ ಅರಿವಿನ ಲಾಂಛನ ಧಾರಿಯನು.

416

ಹಾಲ ಕಂದಲು ತುಪ್ಪದ ಮಡಕೆಯ ಬೋಡು ಮುಕ್ಕಿನಬೇಡ
ಹಾಲು ಸಿಹಿ, ತುಪ್ಪ ಕಮ್ಮನೆ, ಲಿಂಗಕ್ಕೆ ಬೋನ !
ಕೂಡಲಸಂಗನ ಶರಣರ
ಅಂಗಹೀನರೆಂದಡೆ ನಾಯಕ ನರಕ !

ಕೂಡಲಸಂಗನ ಶರಣರ ಅಂಗಹೀನರೆಂದಡೆ ನಾಯಕ ನರಕ :

ಒಮ್ಮೆ ಜನಕ ಮಹಾರಾಜ ದೇಶ ವಿದೇಶಗಳಲ್ಲಿರುವ ಬ್ರಹ್ಮಜ್ಞಾನಿಗಳಿಗೆ ಆಮಂತ್ರಣ ನೀಡಿ ಬ್ರಹ್ಮ ಸಭೆಯನ್ನು ಏರ್ಪಡಿಸಿದ. ಬ್ರಹ್ಮಜ್ಞಾನದಿಂದ ತನ್ನ ರಾಜ್ಯದ ಪ್ರಜೆಗಳೆಲ್ಲ ಸಂತೋಷ ಮತ್ತು ನೆಮ್ಮದಿಯಿಂದಿರಲೆಂದು ಬಯಸಿದ್ದ. ಬ್ರಹ್ಮಸಭೆ ನಡೆದಿತ್ತು. ಕಿವಿಗಳು ಮಾತ್ರ ತೆರೆದುಕೊಂಡು ಇಡೀ ಸಭೆ ಮೌನವಹಿಸಿತ್ತು. ಪಂಡಿತರು ಸಭೆಗೆ ಬಂದು ತಮ್ಮ ವಿಚಾರ ಮಂಡಿಸುತ್ತಿದ್ದರು.

ನಾಲ್ಕು ಅಡಿ ಎತ್ತರ, ಗೂನು ಬೆನ್ನು, ವಕ್ರ ಕಾಲು ಮೆಳ್ಳೆಗಣ್ಣು, ಕಟ್ಟಿದ ಜಡೆ, ಉಬ್ಬಿದ ಎದೆ, ವಾಲಿದ ನಡು, ಡೊಂಕು ಕೈಗಳುಳ್ಳ ವ್ಯಕ್ತಿಯೊಬ್ಬ ಬ್ರಹ್ಮ ಸಭೆಯನ್ನು ಸೀಳಿಕೊಂಡು ನೇರವಾಗಿ ವೇದಿಕೆಗೆ ಬಂದುನಿಂತ. ಸಭಾಧ್ಯಕ್ಷತೆಯನ್ನು ವಹಿಸಿದ್ದ ಜನಕ ಮಹಾರಾಜನ

ಅಪ್ಪಣೆಯನ್ನೂ ಪಡೆಯಲಿಲ್ಲ. ಆತನನ್ನು ನೋಡಿ ಬ್ರಹ್ಮಜ್ಞಾನಿಗಳೆಲ್ಲ ಗಹಗಹಿಸಿ ಹೊಟ್ಟೆ ಹುಣ್ಣಾಗುವಂತೆ ನಕ್ಕರು.

ಬ್ರಹ್ಮಜ್ಞಾನಿಗಳ ನಗು ನಿಂತ ಮೇಲೆ, ವೇದಿಕೆಗೆ ಬಂದ ವಿಕಲಾಂಗ ಗಹಗಹಿಸಿ ನಕ್ಕ. ಆ ನಗುವಿನಿಂದ ಸಭೆಯಲ್ಲಿ ಮೌನ ಆವರಿಸಿತು.

ಆಗ ಜನಕ ಮಹಾರಾಜ ''ನಿಮ್ಮ ವಕ್ರ ದೇಹ ನೋಡಿ ಬ್ರಹ್ಮಜ್ಞಾನಿಗಳು ನಕ್ಕರು. ಅದು ಸರಿ. ಆದರೆ ತಾವು ಏಕೆ ನಕ್ಕದ್ದು ಎಂದು ನಮಗೆ ತಿಳಿಯಲಿಲ್ಲ. ದಯವಿಟ್ಟು ವಿವರಿಸಿ'' ಎಂದ.

ಆಗ ಅಷ್ಟಾವಕ್ರ ''ಬ್ರಹ್ಮಜ್ಞಾನಿಗಳು ನನ್ನ ವಿಕಲಾಂಗ ನೋಡಿ ನಕ್ಕರು. ನಾನು ಕೂಡಾ ಅದನ್ನೇ ನೋಡಿ ನಕ್ಕದ್ದು'' ಎಂದ.

ಆಗ ಜನಕ ''ನಿಮಗೆ ವಿಕಲಾಂಗವಿದೆ ; ಅವರಿಗೆ ವಿಕಲಾಂಗ ವಿಲ್ಲವಲ್ಲ ? ದಯ ವಿಟ್ಟು ವಿವರಿಸಿ ಹೇಳಿ. ಇದು ಬ್ರಹ್ಮ ಸಭೆ '' ಎಂದು ನೆನಪಿಸಿದರು.

ಆಗ ಅಷ್ಟಾವಕ್ರ ''ಎಲೈ ಮೂರ್ಖ ರಾಜನೆ, ವಿಕಲಾಂಗ ಎನ್ನು ವುದು ಅಂಗದ ಗುಣಧರ್ಮ. ಬಾಲ್ಯದಲ್ಲಿ ಇದ್ದದ್ದು ಪ್ರೌಢದಲ್ಲಿರುವುದಿಲ್ಲ. ಪ್ರೌಢದಲ್ಲಿದ್ದುದು ಯೌವ್ವನದಲ್ಲಿ ರುವುದಿಲ್ಲ. ಯೌವ್ವನದಲ್ಲಿದ್ದುದು ಮುಪ್ಪಿನಲ್ಲಿರುವುದಿಲ್ಲ. ಒಮ್ಮೆ ಇದ್ದು ಇಲ್ಲದಂತಾಗುವ ಈ ಅಂಗ ಶ್ರೇಷ್ಠವೋ? ಸರ್ವಾಂಗದಲ್ಲಿರುವ ಜ್ಞಾನಕ್ಕೆ ಬಾಲ್ಯ, ಪ್ರೌಢ, ಯೌವ್ವನ, ಮುಪ್ಪು ಸಾವುಗಳಿಲ್ಲ. ಈ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಜ್ಞಾನ ಶ್ರೇಷ್ಠವೋ? ನೀನು ಆಮಂತ್ರಣ ಕೊಟ್ಟು ಕರೆಯಿಸಿದ ಬ್ರಹ್ಮಜ್ಞಾನಿಗಳೆಲ್ಲ ಅಂಗವಿಕಲರು. ಅವರಿಗೆ ಜ್ಞಾನದ ಪರಿಚಯವೇ ಇಲ್ಲ. ಚರ್ಮದ ಪರಿಚಯವಿದೆ. ನಿನ್ನ ಜ್ಞಾನದ ದಾಹವನ್ನು ಅವರು ತೀರಿಸಲರಿಯರು. ಶಾಸ್ತ್ರ ಹೇಳಬಲ್ಲರೇ ಹೊರತು ಶಾಸ್ತ್ರಗಳಿಗೆ ಜನ್ಮ ನೀಡಿದ ಅಂಗದಲ್ಲಿರುವ ಜ್ಞಾನದ ಸುಳುಹು ಅವರಿಗೆ ತಿಳಿದಿಲ್ಲ. ಹೀಗಾಗಿ ಹೇಳುವ ಅವರು, ಕೇಳುವ ನೀವು ಇಬ್ಬರೂ ವಿಕಲಾಂಗರು. ಈ ವಿಕಲಾಂಗರನ್ನು ನೋಡಿ ನಾನು ನಕ್ಕದ್ದು ಎಂದ ಅಷ್ಟಾವಕ್ರ''.

ಹಾಲ ಕಂದಲು ತುಪ್ಪದ ಮಡಕೆಯ ಬೋಡು ಮುಕ್ಕೆನಲುಬೇಡ :

ಹಾಲು ಸಿಹಿ. ತುಪ್ಪ ಬಲು ಕಂಪು. ಅಂಗ ಹೇಗಿದ್ದರೇನು? ಹಾಲಿನಿಂದಾದ ಪದಾರ್ಥಗಳೆಲ್ಲ ಅಂಗಕ್ಕೆ ಪ್ರಸಾದವಾಗುತ್ತದೆ. ಹಾಲು ಕಾಸುವ ಮಡಕೆ ಬೋಡಾದರೇನು? ಅಂಗಕ್ಕೂ ಲಿಂಗಕ್ಕೂ ಅದು ಗೌಣ ; ಅಂಗ ಹೇಗಿದ್ದರೇನು? ಲಿಂಗ (ಅರಿವು) ತಿಳಿದ ಅಂಗಕ್ಕೆ ಅಂಗವದು ಲಿಂಗ! ಈ ಲಿಂಗಾಂಗವನು ಅಂಗಹೀನರೆಂದಡೆ ನಾಯಕ ನರಕ ತಪ್ಪದು.

417

ಆಚಾರವನರಿಯಿರಿ ವಿಚಾರವನರಿಯಿರಿ ;
ಜಂಗಮಸ್ಥಲ ಲಿಂಗ ಕಾಣಿರಯ್ಯಾ,
ಜಾತಿ ಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ!
ನುಡಿದಂತೆ ನಡೆಯದಿದ್ದಡೆ ಕೂಡಲಸಂಗಯ್ಯ ಮೆಚ್ಚ ಕಾಣಿರಯ್ಯಾ.

ಅಂಗದಲ್ಲಿ ಅಗೋಚರದ ಆಚಾರವನು ಅರಿಯುವ ವಿಚಾರವಿದೆ. ಆ ವಿಚಾರದ ಆಚಾರ

ಅಂಗಕ್ಕೆ ಬಳಕೆಯಾಗದ ನಿಮಿತ್ತ ಗೋಚರದ ಆಚಾರಕ್ಕೆ ಕಟ್ಟುಬಿದ್ದಿದೆ. ಅಂಗದಲ್ಲಿರುವ ವಿಚಾರವೇ ಜಂಗಮ ; ಅದುವೇ ಲಿಂಗ. ಈ ಅರಿವಿನ ಲಿಂಗವಿರುವ ಅಂಗಕ್ಕೆ ಜಾತಿ ಮತ ಧರ್ಮಗಳಿಲ್ಲ. ಸೂತಕಗಳಿಲ್ಲದ ಅಜಾತ ಅಂಗಕ್ಕೆ ಕುಲ ಎನ್ನುವುದು ಮೊದಲೇ ಇಲ್ಲ.

ಅಂಗದಲ್ಲಿರುವ ಕಣ್ಣುಗಳಿಗೆ ಸತ್ಯ ನೋಡುವುದು ಒಂದು ಧರ್ಮ. ಅದನ್ನು ಬಳಕೆ ಮಾಡುವುದು ಒಂದು ಧರ್ಮ. ಇದಕ್ಕೆ ಜಾತಿ ಮತ ಸೂತಕವಿಲ್ಲ. ಸತ್ಯದ ನೋಟ ಅಜಾತ ನೋಟ; ಕುಲವಿಲ್ಲದ ನೋಟ. ಅದು ಅಗೋಚರದ ಆಚಾರದ ನೋಟ.

ಜಂಗಮನನ್ನು ಕರೆದು ಪೂಜಿಸುವುದು ಎಲ್ಲರಿಗೂ ಗೋಚರಕ್ಕೆ ಕಾಣುತ್ತದೆ. ಹಾಗೆಯೇ ಲಿಂಗಕ್ಕೆ ನೀರು ಹಾಕಿ ಪತ್ರಿ ಫಲ ಪುಷ್ಪಗಳಿಂದ ಆರಾಧಿಸುವುದು ಎಲ್ಲರಿಗೂ ಕಾಣುತ್ತದೆ. ಇದು ಗೋಚರದ ಆಚಾರ. ಜಾತಿ ಜಂಗಮನ ಅಂಗ ಮತ್ತು ಲಿಂಗ ಇವು ಪೂಜೆಗೆ ಮಾತ್ರ ಬಳಕೆಯಾಯಿತು. ಪತ್ರಿ ಫಲ ಪುಷ್ಪ ಉದಕ ಕೂಡಾ ಪೂಜೆಗೆ ಬಳಕೆಯಾಗುತ್ತದೆ. ಇದೆಲ್ಲ ಗೋಚರಕ್ಕೆ ಬರುವ ಆಚಾರ.

ಅಗೋಚರದ ಆಚಾರದ ಪೂಜೆಗೆ ಜಾತಿ ಜಂಗಮನಿಲ್ಲ; ಲಿಂಗವಿಲ್ಲ; ಪತ್ರಿ ಫಲ ಪುಷ್ಪಗಳು ಮೊದಲೇ ಇಲ್ಲ. ಉದಕವೂ ಬೇಡ. ಬರೀ ಜ್ಞಾನದ ನೋಟವೊಂದೇ ಸಾಕು !

ಪ್ರತಿ ಅಂಗದಲ್ಲಿಯೂ ಅರಿವಿದೆ. ಅರಿವು ಹೆಣ್ಣು ಅಲ್ಲ ; ಗಂಡೂ ಅಲ್ಲ. ಜಾತಿ ಮತ ಪಂಥಗಳೂ ಅದಕ್ಕಿಲ್ಲ. ಕುಲವಿಲ್ಲ. ಈ ಆಚಾರವನು ಅರಿತು ವಿಚಾರಿಸಲು ಹೋದರೆ ಸರ್ವಾಂಗಗಳು ಲಿಂಗಗಳೇ. ಅಂಗ ಎಂಬುದು ಅರಿವೆಂಬ ಜಂಗಮನು ವಾಸಿಸುವ ಜಂಗಮಸ್ಥಲ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮಕ್ಕೆ ಕುಲಗಳಿಲ್ಲ. ಇವೆಲ್ಲವುಗಳಿದ್ದ ಅಂಗಗಳೆಲ್ಲ ಲಿಂಗಗಳೇ ಇರುವಾಗ; ಲಿಂಗ ಜಂಗಮವೇ ಇರುವಾಗ ; ಗೋಚರಕ್ಕೆ ಬರುವ ಲಿಂಗವನು ಆಚಾರದಿಂದ ಪೂಜಿಸಬಹುದ?

ಅರಿವು ತನ್ಮಯವಾಗಿದ್ದ ಅಂಗಗಳೆಲ್ಲ ಲಿಂಗ ಜಂಗಮವೇ ಆಗಿರುವುದರಿಂದ ಜಾತಿ ಭೇದವಿಲ್ಲ, ಸೂತಕವಿಲ್ಲ. ಅಜಾತಂಗೆ ಕುಲವಿಲ್ಲ. ನುಡಿದಂತೆ ನಡೆಯುವ ಅರಿವು ಲಿಂಗಾಂಗದಲ್ಲಿ ತನ್ಮಯವಾಗಿರುವಾಗ ; ವಿಚಾರದಿಂದ ಅರಿತು, ಅಗೋಚರ ಆಚಾರದಿಂದ ಪೂಜಿಸುವುದೇ ಶ್ರೇಷ್ಠ ಲಿಂಗಪೂಜೆ. ಈ ಪೂಜೆಗೆ ಜಾತಿ ಭೇದವಿಲ್ಲ, ಸೂತಕವಿಲ್ಲ.

418

ಸ್ಥಾವರ-ಭಕ್ತಂಗೆ ಸೀಮೆಯಲ್ಲದೆ
ಘನಲಿಂಗ ಜಂಗಮಕ್ಕೆ ಸೀಮೆಯಲ್ಲಿಯದು ?
ಅಂಬುಧಿಗೆ ಸೀಮೆಯಲ್ಲದೆ
ಹರಿವ ನದಿಗೆ ಸೀಮೆಯಲ್ಲಿಯದು ?
ಭಕ್ತಂಗೆ ಸೀಮೆಯಲ್ಲದೆ
ಜಂಗಮಕ್ಕೆ ಸೀಮೆಯುಂಟೆ , ಕೂಡಲಸಂಗಮದೇವಾ ?

ಸ್ಥಾವರ-ಭಕ್ತಂಗೆ ಸೀಮೆಯಲ್ಲದೆ ಘನಲಿಂಗ ಜಂಗಮಕ್ಕೆ ಸೀಮೆಯಲ್ಲಿಯದು :

ಫಲಾಪೇಕ್ಷೆಯನ್ನಿಟ್ಟುಕೊಂಡು ಸ್ಥಾವರ ಲಿಂಗವನ್ನು ಪೂಜಿಸುವ ಭಕ್ತನು ಒಬ್ಬನಾದರೆ, ಘನಲಿಂಗ ಜಂಗಮವೆಂಬ ಅರಿವನ್ನು ಆರಾಧಿಸಿ ಆ ಅರಿವು ಹೇಳಿದಂತೆ ನಡೆಯುವ ಭಕ್ತನೊಬ್ಬ. ಸ್ಥಾವರ ಲಿಂಗವನ್ನು ಪೂಜಿಸುವ ಭಕ್ತರು ಹೇರಳವಾಗಿ ಸಿಗುತ್ತಾರೆ. ಅಂಗದಲ್ಲಿರುವ ಅರಿವನ್ನು

ಲಿಂಗಜಂಗಮರೆಂದು ಪೂಜಿಸಿ ಮಹಾಜ್ಞಾನಕ್ಕೆ ಶರಣು ಹೋಗಿ ಶರಣರಾಗುವ ಭಕ್ತರು ವಿರಳವಾಗಿ ಸಿಗುತ್ತಾರೆ.

ಬಸವಣ್ಣನವರು ಕಲ್ಯಾಣದಲ್ಲಿ ಎಂಟು ವರ್ಷಗಳ ಪರ್ಯಂತ ನಿರಂತರವಾಗಿ ಪ್ರಯತ್ನಿಸಿದಾಗ ಏಳುನೂರಾ ಎಪ್ಪತ್ತು ಜನ ಮಹಾಜ್ಞಾನದ ತರಬೇತಿ ಪಡೆದರು. ಒಂದುಲಕ್ಷ ತೊಂಬತ್ತಾರು ಸಾವಿರ ಜನ ಈ ಜ್ಞಾನ ಶಿಬಿರಗಳಲ್ಲಿ ಪಾಲ್ಗೊಂಡಿದ್ದರು. ಆದರೆ ತರಬೇತಿ ಹೊಂದಿದವರು ಮಾತ್ರ **ಏಳುನೂರಾ ಎಪ್ಪತ್ತು ಅಮರಗಣಂಗಳು.** ಇವರು ಜನನ ಮರಣಗಳ ಬಾಧೆಯಿಂದ ದೂರವಾದವರು. ಫಲಾಪೇಕ್ಷೆ ಇಲ್ಲದೆ ಅರಿವಿನ ಪೂಜೆ ಮಾಡಿದವರು. ಇವರು ನಿಸ್ಸೀಮರು ; ಸೀಮಾತೀತರು ; ಎಲ್ಲ ಸೀಮೆಗಳನ್ನು ಮೀರಿದವರು ; ಘನಲಿಂಗ ಜಂಗಮರು !

ಚಲಿಸದೆ ನಿಂತ ಸಮುದ್ರಕ್ಕೆ ಸೀಮೆಯಲ್ಲದೆ ಹರಿಯುವ ನದಿಗೆ ಸೀಮೆ ಎಲ್ಲಿಯದು ? ಸ್ಥಾವರವನ್ನು ಪೂಜಿಸುವ ಭಕ್ತ ಶ್ರೀಮಂತನಾಗಿರಬಹುದು, ರಾಜ ಪ್ರಧಾನಿ ಸೇನಾಧಿ ಪತಿಯಾಗಿರಬಹುದು. ಜಗದ್ಗುರು, ಪೀಠಾಧಿಪತಿಯಾಗಿರಬಹುದು. ಆದರೆ ಸ್ಥಾವರ ದೇವರನ್ನು ಪೂಜಿಸುವವರೆಲ್ಲ ಸೀಮೆಯುಳ್ಳವರು. ತಾನು ಮಾಡಿದ ದೇವರನ್ನು ತಾನು ಪೂಜಿಸುವವ, ಕಲ್ಲು ಕೊಟ್ಟು ಮೂರ್ತಿ ಮಾಡಿ ದೇವರೆಂದು ಪೂಜಿಸುವವ ಸೀಮೆಯುಳ್ಳ ಭಕ್ತ .

ಕಲ್ಲನ್ನು ಕಲ್ಲೆಂದು ತಿಳಿದವ ; ಕಲ್ಲು ದೇವರನ್ನು ಪೂಜಿಸುವ ಭಕ್ತನನ್ನೇ ದೇವರೆಂದು ತಿಳಿದವ ನಿಸ್ಸೀಮ ಭಕ್ತ . ಈತ ಜಗದಗಲ ಮುಗಿಲಗಲ. ತನುವಿನಲ್ಲಿ ತನ್ಮಯವಾದ ಜಗದೀಶನ ಚರಣವದು ಪಾತಾಳದಿಂದಲೂ ಅತ್ತತ್ತ . ಆತನ ಶ್ರೀಮುಕುಟ ಬ್ರಹ್ಮಾಂಡದಿಂದಲೂ ಅತ್ತತ್ತ . ಗಮನಕ್ಕೆ ನಿಲುಕದ ಅಗಮ್ಯ. ಗೋಚರಕ್ಕೆ ನಿಲುಕದ ಅಗೋಚರ. ಪ್ರಮಾಣಕ್ಕೆ ನಿಲುಕದ ಅಪ್ರಮಾಣ ಅಪ್ರತಿಮ ಅರಿವೆಂಬ ಲಿಂಗವು ತನುವಿನಲ್ಲಿ ಬಂದು ಚುಳುಕಾಗಿದೆ ಎಂದು ತಿಳಿದು ಭಕ್ತನಾದಾತ. ಇದನ್ನು ತಿಳಿದು ಅದೇ ವಸ್ತು ತಾನಾಗಿರುವಾಗ ಅಂದರೆ ನಿಸ್ಸೀಮನೆ ತಾನಾಗಿರುವಾಗ ಆತನಿಗೆ ಸೀಮೆ ಎಲ್ಲಿಯದು ?

ಭಕ್ತಂಗೆ ಸೀಮೆಯಲ್ಲದೆ ಜಂಗಮನಿಗೆ ಸೀಮೆಯುಂಟೆ ಕೂಡಲಸಂಗಮದೇವಾ :

ಒಬ್ಬ ಭಕ್ತ ಕಲ್ಲಿನಿಂದ ಮಾಡಿದ ಮೂರ್ತಿಯನ್ನೇ ದೇವರೆಂದು ಪೂಜಿಸಿ ಪೂಜಿಸಿ ಭಕ್ತನಾಗಿದ್ದಾನೆ. ಆತನಿಗೆ ಅದು ಕಲ್ಲೆಂದು ತಿಳಿಯುತ್ತಿಲ್ಲ. ಮತ್ತೊಬ್ಬ ಭಕ್ತ ಮೂರ್ತಿಯ ಮೂಲ ವಸ್ತುವನ್ನು ತಿಳಿದು ಕಲ್ಲೆಂದು ಪೂಜಿಸಲಿಲ್ಲ. ಆದರೆ ಕಲ್ಲೊಳಗಣ ಬೆಲ್ಲಮೆದ್ದು ಜಂಗಮನಾದ. ನಿಸ್ಸೀಮನಾದ. ಈತನಿಗೆ ಪೂಜೆ ಬೇಕಿಲ್ಲ ; ಪತ್ರಿ ಪುಷ್ಪಗಳು ವಿಭೂತಿ ಗಂಧ ಧೂಪ ದೀಪಗಳು ಬೇಕಿಲ್ಲ. ನೋಡಿ ಕೇಳಿ ಮುಟ್ಟಿ ರುಚಿಸಿ ಮೂಸಿಸುವ ಮೂಲಕ ಆ ಪ್ರಸಾದವನ್ನು ಜಂಗಮನಿಗೆ ಅರ್ಪಿಸುತ್ತಾನೆ. ಜಂಗಮ ಸ್ವೀಕರಿಸಿ ತೃಪ್ತನಾಗುತ್ತಾನೆ.

ಅಂಗದೊಳಗೆ ಭಕ್ತ , ಅಂಗದೊಳಗೆ ಲಿಂಗ, ಅಂಗದೊಳಗೆ ಜಂಗಮನಿದ್ದಾನೆ. ಕಲ್ಲು ಪೂಜಿಸದೆ ಮನಕ್ಕೆ ಅರಿವಾಗಿ ಭಕ್ತನಾಗಬೇಕು. ಆಗ ಅಂಗದೊಳಗಿದ್ದ ಲಿಂಗ ಜಂಗಮರು ಪೂಜಿಸುವ ಪೂಜಕನನ್ನು ಅಂದರೆ ಭಕ್ತನನ್ನು ಹೆಳವನನ್ನಾಗಿಸುತ್ತಾರೆ. ಕೂಡಲಸಂಗಮದೇವನನ್ನಾಗಿಸುತ್ತಾರೆ.

419

ಎತ್ತಿಕೊಳ್ಳಲೇಕೆ, ಮತ್ತಿಳಹಲೇಕಯ್ಯಾ ?
ಧರಧುರದ ಭಕ್ತಿಯ ಮಾಡಲೇಕಯ್ಯಾ ?
ನಿಂದಿಸಲೇಕೆ, ಸ್ತುತಿಸಲೇಕೆ ?

ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ
ಕೂಡಲಸಂಗಮದೇವ.

ತನುಗಳೆಲ್ಲ ಒಂದೇ ಆಗಿರುವುದರಿಂದ ; ಒಂದು ತನು ಮತ್ತೊಂದು ತನುವನ್ನು ಆದರದಿಂದ ಬರಮಾಡಿಕೊಂಡು ಗೌರವಿಸುತ್ತದೆ. ಅದು ಜಂಗಮ ತನುವೆಂದು ಪೂಜಿಸುತ್ತದೆ. ಮಾತಿನಿಂದಲೇ ಎತ್ತಿಕೊಂಡು ಆರಾಧಿಸುತ್ತದೆ. ಅದು ಕಾಣದಾದಾಗ ; ಅದರ ಚಟುವಟಿಕೆ ಕುರಿತು ಆಡಿಕೊಳ್ಳುತ್ತದೆ. ಜಂಗಮನೆಂದು ಆರಾಧಿಸುವುದೇಕೆ ? ಅದು ಕಾಣದಾದಾಗ ನಿಂದಿಸುವುದೇಕೆ ? ಏನು ನೋಡಿ ಆರಾಧಿಸುವಿ ? ಏನು ನೋಡಿ ನಿಂದಿಸುವಿ ? ಆರಾಧನೆಗೂ ನಿಂದೆಗೂ ಕಾರಣವಾದದ್ದು ನಿನ್ನ ಮನವಲ್ಲದೆ ನಿಂದನೆಗೆ ಒಳಗಾದ ಆ ತನುವಿನ ಚಟುವಟಿಕೆಯಲ್ಲ.

ತನುವಿನಲ್ಲಿ ತನ್ಮಯವಾದ ಅರಿವಿನ ಸಂಗಯ್ಯನ ಪಾತ್ರ ಒಂದಲ್ಲ; ಅನೇಕ. ಆತನ ಅರಿವೇ ನೆರಳಾಗಿ ಮನವಾಗಿದೆ. ಆ ಮನ ತನುವಿಗೆ ಅನೇಕ ಪಾತ್ರ ಹಾಕುತ್ತದೆ. ತನುಗಳೆಲ್ಲ ಒಂದೇ ಆದರೂ ಹೆಣ್ಣು ಗಂಡಿನ ಪಾತ್ರ. ಜಾತಿ ಮತ ಪಂಥಗಳ ಪಾತ್ರ !

ಭಕ್ತನಾಗಿ ಜಂಗಮನನ್ನು ಸ್ತುತಿಸಿ ಪ್ರಸಾದಕ್ಕಾಗಿ ಆಮಂತ್ರಣಕೊಟ್ಟ, ಜಂಗಮ ಉಂಡು ಹೋದಮೇಲೆ ಆತನನ್ನು ನಿಂದಿಸಿದ. ಮುಂದೆ ಸ್ತುತಿಸುವುದು, ಬೆನ್ನಹಿಂದೆ ನಿಂದಿಸುವುದು ; ಇದು ತನುವಿನಲ್ಲಿರುವ ಮನದ ರೋಗ.

ತನುವಿಗೆ ಅರಿವೆಂಬ ಜಂಗಮನ ಪರಿಚಯವಾಗಿದ್ದರೆ ಜಂಗಮನ ವೇಷ ಧರಿಸುತ್ತಿರಲಿಲ್ಲ. ಜಾತಿ ಜಂಗಮನೂ ಆಗುತ್ತಿರಲಿಲ್ಲ. ಭಕ್ತನಿಗೆ ಜಂಗಮನ ಪರಿಚಯವಾಗಿದ್ದರೆ ಜಾತಿ ಜಂಗಮನನ್ನು ಊಟಕ್ಕೆ ಕರೆಯುತ್ತಿರಲಿಲ್ಲ. ಬದಲಾಗಿ ಹಸಿದ ತನು ಯಾವುದಾದರೇನು ? ಆ ತನುವಿಗೆ ಆಮಂತ್ರಣ ಕೊಟ್ಟು ಪ್ರಸಾದ ನೀಡಿ ಆನಂದ ಪಡುತ್ತಿದ್ದ.

ಧರಧುರದ ಭಕ್ತಿ ಮಾಡುತ್ತಲೇ ಭಕ್ತನ ಅವಸಾನವಾಗುತ್ತದೆ. ; ಸ್ತುತಿನಿಂದನಗೆ ಕಾರಣನಾಗಿ ಉಣ್ಣುತ್ತಲೇ ಜಂಗಮನ ಅವಸಾನ. ಇವರಿಬ್ಬರಿಗೂ ತೊಂದರೆ ತಪ್ಪಿದ್ದಲ್ಲ. ಅರಿವಾದರೆ ಸ್ತುತಿ ನಿಂದೆಗಳಿಗೆ ಕಾರಣವಾದ ಮನ ಹೆಳವನಾಗುತ್ತದೆ. ಅರಿವಿನ ಕ್ರಿಯೆ ಮುಂದುವರೆಯುತ್ತದೆ. ಲಿಂಗಜಂಗಮನಾಗುತ್ತದೆ.

420

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ !
ಲಿಂಗದ ಬಾಯಿ ಜಂಗಮವೆಂದು ಪಡಿ ಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವ ನೀವನು.
ಆ ಜಂಗಮ ಹರನೆಂದು ಕಂಡು ನರನೆಂದು ಭಾವಿಸಿದಡೆ
ನರಕ ತಪ್ಪದು, ಕಾಣಾ, ಕೂಡಲಸಂಗಮದೇವಾ.

ಅಂಗ ಯಾವುದಾದರೇನು ? ಅದು ಲಿಂಗ ಜಂಗಮರಿದ್ದ ಅಂಗ. ಹರನ ಅಂಗ. ಅದನ್ನು ಲಿಂಗಜಂಗಮರಿದ್ದ ಅಂಗವೆಂದೇ ಕಾಣಬೇಕು. ಆ ಸತ್ಯ ನೋಡುವ ಕಣ್ಣಿನಲ್ಲಿ ಗೋಚರಿಸಬೇಕು.

ಆಗ ಕಣ್ಣು ಕಣ್ಣಾಗಿಯೇ ನೋಡುತ್ತದೆ. ಕಿವಿ ಶಬ್ದವನ್ನು ಕಿವಿಯಾಗಿಯೇ ಕೇಳುತ್ತದೆ. ಕೈ ಸತ್ಯವನ್ನೇ ಮುಟ್ಟುತ್ತದೆ. ನಾಲಿಗೆಗೆ ಹುಳಿ ಸಿಹಿ ಉಪ್ಪು ಖಾರ ಒಗರು ಕಹಿಯ ಸತ್ಯ ಗೋಚರಕ್ಕೆ ಬಂದು ದ್ರವವಾಗಿ ತನುವನ್ನು ತಲ್ಲಣಗೊಳಿಸದೆ ಪದಾರ್ಥ ಪ್ರಸಾದವಾಗುತ್ತದೆ. ಮೂಸಿಸಿದ ವಾಸನೆಯೆಲ್ಲ ಮೂಗಿಗೆ ಪರಿಮಳವಾಗಿ ಬಡಿಯುತ್ತದೆ. ತನು ವಿಕೃತವಾಗುವುದಿಲ್ಲ.

ಮರಕ್ಕೆ ಬಾಯಿ ಬೇರೆಂದು ಬೇರಿಗೆ ನೀರು ಎರೆದಾಗ ಮರದ ಮೇಲೆ ಅನಂತ ಸಿಹಿಫಲ ಪಲ್ಲವಿಸುತ್ತದೆ. ಒಗರು, ಹುಳಿ, ಖಾರ, ಕಹಿ ಫಲಗಳು, ಜನ್ಮ ತಳೆದು ಚೇತನದ ತನುಗಳಿಗೆ ಜೀವ ತುಂಬುತ್ತದೆ. ಮರದ ಬೇರಿಗೆ ಹರಿದದ್ದು ಕೇವಲ ಜಲ ಮಾತ್ರ . ಪಲ್ಲವಿಸಿದ್ದು ನಾನಾ ರುಚಿತುಂಬಿದ ಷಡ್ರಸ ಫಲಗಳು ! ಜಲಕ್ಕೆ ರುಚಿಯಿಲ್ಲ ವಾಸನೆಯಿಲ್ಲ ಬಣ್ಣವಿಲ್ಲ. ಆದರೆ ಬೇರಿಗೆ ಹರಿದು ಮರದ ಮೇಲೆ ಪಲ್ಲವಿಸಿದ್ದು ಷಡ್ರಸದ ರುಚಿಗಳ ಫಲ ! ರುಚಿ ಇಲ್ಲದ ಜಲಕ್ಕೆ ರುಚಿ ಬಂತು. ಬಣ್ಣವಿಲ್ಲದ ಜಲಕ್ಕೆ ಬಣ್ಣ ಬಂತು. ವಾಸನೆಯಿಲ್ಲದ ಜಲಕ್ಕೆ ವಾಸನೆ ಬಂತು ! ಮರದ ಎಲ್ಲ ಗುಣಗಳನ್ನು ಹಣ್ಣಿನೊಳಗೆ ತುಂಬಿ ತೊಟ್ಟು ಕಳಚಿ ಕೆಳಗೆ ಬಿದ್ದು ಚೇತನಗಳಿಗೆ ಪ್ರಸಾದವಾಯಿತು ! ಬೀಜ ಮರಕ್ಕೆ ಮರುಜನ್ಮ ನೀಡಿತು.ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನು ಎರೆದುದರ ಫಲವಿದು !

ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ ಮುಂದೆ ಸಕಳಾರ್ಥವ ನೀವನು. ಆ ಜಂಗಮ ಹರನೆಂದು ಭಾವಿಸಿದಡೆ ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ :

ಅಂಗದಲ್ಲಿ ಶಬ್ದ ನುಡಿಯುವ ಅರಿವಿನ ಬಾಯಿ ಇದೆ. ಅದು ಮಹಾಜ್ಞಾನದ ದ್ವಾರ. ಲಿಂಗ ಜಂಗಮವೂ ಹೌದು. ಈ ಅಂಗದಲ್ಲಿಯೇ ಬುದ್ಧ, ಮಹಾವೀರ, ಕ್ರಿಸ್ತ , ಕ್ರಿಷ್ಣ, ಕನಕ, ಜನಕ, ಶಂಕರ, ಬಸವಾದಿ ಶರಣರು, ರಾಮಾನುಜರು ಜನಿಸಿದ್ದಾರೆ. ಇವರೆಲ್ಲ ಅಂಗದಲ್ಲಿರುವ ಲಿಂಗ ಜಂಗಮರನ್ನು ಬಳಕೆ ಮಾಡಿದವರು.

ಬಾಯಿ ಕಿವಿ ಕಣ್ಣು ಮೂಗು ಒಂದೇ ಸ್ಥಳದಲ್ಲಿದ್ದು ಚರ್ಮದ ಕವಚವನ್ನು ಹೊದ್ದಿವೆ. ಕಿವಿ ಕಣ್ಣು ಮೂಗು ಬಾಯಿ ಮಾತ್ರ ತೆರೆದಿದೆ. ನೋಡಿ ಕೇಳಿ ಮುಟ್ಟಿ ಮೂಸಿಸಿ ರುಚಿಸಿದ ಅನುಭವದ ನುಡಿಗಳೆಲ್ಲ ಬಾಯಿಯಿಂದಲೆ ಹೊರಬರುತ್ತದೆ. ಹೀಗೆ ಹೊರಬಂದ ನುಡಿ ಪ್ರಸಾದವನು ಉಂಡ ಅಂಗುಲಿಮಾಲ ಬುದ್ಧನಾದ. ಕನ್ನ ಮಾರಿ ಮಾರಯ್ಯ ಶರಣನಾದ.

ಬುದ್ಧ ಶರಣ ದಾಸವರೇಣ್ಯರಿಗೆ ನೀಡುವ ಪ್ರಸಾದವದು ಹರನಿಗೆ ನೀಡಿದ ಪ್ರಸಾದ. ಅಂಗದ ಕಣಕಣದಲ್ಲಿರುವ ಲಿಂಗಯ್ಯನಿಗೆ ನೀಡಿದ ಪ್ರಸಾದ. ಹರನಿಗೆ ಪ್ರಸಾದ ನೀಡಿ ನರನೆಂದು ಭಾವಿಸಿದಡೆ, ಮನದಲ್ಲಿ ಮರುಗಿದಡೆ ನರಕ ತಪ್ಪದು.

ಬುದ್ಧ ಅಂಗುಲಿಮಾಲನನ್ನು ನರನೆಂದು ಭಾವಿಸಲಿಲ್ಲ. ಹರನೊಂದಿಗೆ ಮಾತನಾಡಿದ. ಅಂಗುಲಿಮಾಲನಿಗೆ ಅದು ಪ್ರಸಾದವಾಯಿತು. ಬಸವಣ್ಣ ಕನ್ನ ಮಾರಿ ಮಾರಯ್ಯನನ್ನು ನರನೆಂದು ಭಾವಿಸಲಿಲ್ಲ. ಹರನೊಂದಿಗೆ ಮಾತನಾಡಿದ. ಅದು ಮಾರಯ್ಯನಿಗೆ ಪ್ರಸಾದವಾಯಿತು. ಶರಣನಾದ.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ ಮೇಲೆ ತನಿವಣ್ಣುಗಳನ್ನು ನೀಡಿ ಸಾರ್ಥಕತೆಯನು ಮೆರೆಯಿತು. ಲಿಂಗದ ಬಾಯಿ ಜಂಗಮವೆಂದು ಗೌರವಿಸಿ ಸೇವೆಯನು ಮಾಡಿ ಪಡಿಪದಾರ್ಥವನು ನೀಡಿದಡೆ ; ಅಂಗದ ಮುಖೇನ ಲಿಂಗವೇ ನುಡಿದು ನೀಡಿದ ಅಂಗವನ್ನು ಲಿಂಗವನ್ನಾಗಿಸುವುದು. ಅಂಗ ಅಂಗಕ್ಕೆ ನೀಡಲಿಲ್ಲ; ಲಿಂಗ ಲಿಂಗಕ್ಕೆ ನೀಡಿ ಧನ್ಯತೆಯನ್ನು ಮೆರೆದವು.

''ಅಂಗದ ಹಸಿವೆಗೆಂದು ತರು ಮರಾದಿಗಳನ್ನು ತರೆ ತರೆದು ತಿಂದೆ ನಾನು ; ಲಿಂಗಕ್ಕೆಂದು ನೀಡಿ ಧನ್ಯರಾದಿರಿ ನೀವು '' ಎಂದು ಅಕ್ಕ ಮರವನ್ನು ಕುರಿತು ಧನ್ಯತಾಭಾವ ಮೆರೆದಿದ್ದಾಳೆ.

ಕೆಳಗಿನ ಬೇರಿಗೆ ನೀರೆರೆದಡೆ ಮೇಲೆ ಅನಂತ ಫಲಕೊಡುವ ಮರನೆತ್ತ ? ಬಾಯಿಯಿಂದಲೇ ಉಂಡು ಬಾಯಿಯಿಂದಲೇ ಬೊಗಳುವ ಅಂಗವೆತ್ತ ? ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವು ಅಂಗದ ಸಂಪತ್ತಲ್ಲ, ಅಂಗದಲ್ಲಿರುವ ಲಿಂಗ(ಅರಿವಿನ)ಯ್ಯನ ಸಂಪತ್ತು. ಬಾಯಿ ಲಿಂಗಯ್ಯನ ಮಾಧ್ಯಮ ಮಾತ್ರ. ಹಸಿವಾದಾಗ ಬೇಡುತ್ತಾನೆ. ಉಂಡು ತೃಪ್ತಿಯಾಗಿ ಅಮೃತಸಮಾನವಾದ ಅರಿವಿನ ನುಡಿಗಳಿಂದ ಬೆಳಗುತ್ತಾನೆ. ನೀಡಿದವನೂ ಉಂಡು ತೃಪ್ತನಾಗುತ್ತಾನೆ. ನೀಡಿದ್ದು ಅಲ್ಪ; ಉಂಡದ್ದು ಅನಂತ ! ಮರದ ಬೇರಿಗೆ ಎರೆದ ಜಲವೂ ತನ್ನದಲ್ಲ; ಲಿಂಗಯ್ಯನಿಗೆ ನೀಡಿದ ಅನ್ನವೂ ತನ್ನದಲ್ಲ. ಪಡೆದದ್ದು ಮಾತ್ರ ಸಕಳಾರ್ಥ.

421

ಆರಾಧನೆಯ ಮಾಡಿದಡೆ ಅಮೃತದ ಬೆಳಸು ;
ವಿರೋಧಿಸಿದಡೆ ವಿಷದ ಬೆಳಸು.
ಇದು ಕಾರಣ ಲಿಂಗಜಂಗಮಕ್ಕೆ ಅಂಜಲೆಬೇಕು.
ಸ್ಥಾವರ ಜಂಗಮ ಒಂದೆಂದರಿದಡೆ
ಕೂಡಲಸಂಗಮದೇವ ಶರಣಸನ್ನಿಹಿತ.

ಮಾನವ ಕುಲವದು ಅರಿವಿನ ಕುಲ. ಅರಿವಿನ ಆರಾಧನೆ ಮಾಡಿದರೆ ಅಮೃತದ ಬೆಳಸು. ಅರಿವನ್ನು ವಿರೋಧಿಸಿದಡೆ ವಿಷದ ಬೆಳಸು ! ಅಂಗಗಳೆಲ್ಲ ಅರಿವಿನ ಕುಲವಾದರೂ, ಅಂಗ ಅರಿವನ್ನು ವಿರೋಧಿಸುವುದಕ್ಕಾಗಿ ಒಂದು ಅಂಗಕ್ಕೆ ಕಳ್ಳನ ಪಟ್ಟ, ಮತ್ತೊಂದು ಅಂಗಕ್ಕೆ ಶ್ರೀಮಂತನ ಪಟ್ಟ. ಇವೆರಡೂ ಅಂಗಗಳು ಅರಿವನ್ನು ವಿರೋಧಿಸಿದ ಅಂಗಗಳು . ಇವುಗಳಿಗೆ ವಿಷದ ಬೆಳಸು.

ಚಿನ್ನ, ಕರೆನ್ಸಿ ಇವೆರಡೂ ಅಂಗಗಳಿಗೆ ಪ್ರಧಾನ. ಇವುಗಳ ವ್ಯಾಮೋಹದಿಂದ ಒಂದು ಅಂಗ ಶ್ರೀಮಂತ. ಮತ್ತೊಂದು ಅಂಗ ಕಳ್ಳ. ಚಿನ್ನ ಒಂದು ಹಳದಿ ಬಣ್ಣದ ಲೋಹ. ಬಣ್ಣ ಇರದಿದ್ದರೆ ಅದು ಬರೀ ಲೋಹ. ಬಣ್ಣದ ಮೇಲೆ ಮೋಹಗೊಂಡ ಅಂಗ ಹಗಲಿರುಳು ದುಡಿದು, ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡಿ, ಪೀಡಿಸಿ ಕಾಡಿಸಿ ಬಣ್ಣಕ್ಕೆ ಮರುಳಾಗಿ ಚಿನ್ನ ಕೊಳ್ಳುತ್ತದೆ. ಆಭರಣ ಮಾಡಿಸಿ ಧರಿಸಿಕೊಂಡು ಆನಂದ ಪಡುತ್ತದೆ. ಮತ್ತೊಂದು ಅಂಗ ಅದೇ ಆಭರಣಕ್ಕೆ ಮೋಹಗೊಂಡು ಧರಿಸಿದ ಆಭರಣವನ್ನು ಕಳುವು ಮಾಡುತ್ತದೆ. ಕೊಡದಿದ್ದರೆ ಕೊಂದು ಆಭರಣ ತೆಗೆದುಕೊಳ್ಳುತ್ತದೆ. ಕಳ್ಳ ಮತ್ತು ಶ್ರೀಮಂತ ಎಂದು ಗುರುತಿಸಿಕೊಂಡ ಅಂಗಗಳಿಗೆ ಆಭರಣವೆಂದರೆ ಎಲ್ಲಿಲ್ಲದ ಮೋಹ. ಆಭರಣಕ್ಕಾಗಿ ಪ್ರಾಣ ಕಳೆದುಕೊಳ್ಳಲು, ಪ್ರಾಣ ತೆಗೆಯಲು ಸಿದ್ಧವಾಗುತ್ತವೆ. ಇವೆರಡೂ ಅರಿವನ್ನು ವಿರೋಧಿಸಿದ ಅಂಗಗಳು.

ಆರಾಧನೆಯ ಮಾಡಿದಡೆ ಅಮೃತದ ಬೆಳಸು ; ವಿರೋಧಿಸಿದಡೆ ವಿಷದ ಬೆಳಸು :

ಅಂಗದಲ್ಲಿರುವ ಅರಿ(ಲಿಂಗಜಂಗಮ)ವನ್ನು ಆರಾಧನೆ ಮಾಡಿ, ಕಳ್ಳ ಮತ್ತು ಶ್ರೀಮಂತ ಎಂದು ಗುರುತಿಸಿಕೊಂಡ ಅಂಗಗಳು ಆ ಅರಿವಿಗೆ ಅಂಜಿ ಅರಿವನ್ನು ಬಳಕೆ ಮಾಡಿದ್ದರೆ ಪ್ರಾಣ ಕಳೆದುಕೊಳ್ಳುತ್ತಿರಲಿಲ್ಲ.

ಚಿನ್ನ ಮಣ್ಣಿನ ಗರ್ಭದಿಂದ ಅಗೆದು ತೆಗೆದ ಹಳದಿ ಲೋಹ ! ಅದನ್ನು ಹೊರತಂದದ್ದು ಕೂಡಾ ಅಂಗ ! ಅದಕ್ಕೆ ಚಿನ್ನವೆಂದು ಹೆಸರಿಟ್ಟದ್ದು ಕೂಡಾ ಅಂಗ ! ಮೋಹಗೊಂಡು ಹಳದಿ ಬಣ್ಣದ ಲೋಹಕ್ಕೆ ಮರುಳಾದದ್ದು ಕೂಡಾ ಅಂಗ ! ಕಳ್ಳ ಮತ್ತು ಶ್ರೀಮಂತನ ಹಣೆ ಪಟ್ಟಿ ಕಟ್ಟಿಕೊಂಡು ಪ್ರಾಣ

ಕಳೆದುಕೊಂಡಿದ್ದು ಕೂಡಾ ಅಂಗವೇ.

ಅಂಗದಲ್ಲಿರುವ ಅರಿ(ಲಿಂಗ)ವನ್ನು ವಿರೋಧಿಸಿದಡೆ ಅಂಗಕ್ಕೆ ವಿಷದ ಬೆಳಸು. ಅಂಗದಲ್ಲಿರುವ ಅರಿವನ್ನು ಆರಾಧಿಸಿದಡೆ ಅಂಗಕ್ಕೆ ಅಮೃತದ ಬೆಳಸು ! ಇದು ಕಾರಣ ಲಿಂಗಜಂಗಮಕ್ಕೆ (ಅರಿವಿಗೆ) ಅಂಜಲೇಬೇಕು.

ಸ್ಥಾವರ ಜಂಗಮ ಒಂದೆಂದರಿದಡೆ ಕೂಡಲಸಂಗಮದೇವ ಶರಣ ಸನ್ನಿಹಿತ:

ಅಂಗಕ್ಕೆ ಅರಿವು ಬಳಕೆಯಾಗದಿದ್ದಡೆ ಅದು ಅಂಗುಲಿಮಾಲ. ಅಂಗಕ್ಕೆ ಅರಿವು ಬಳಕೆಯಾದಡೆ ಅದು ಬುದ್ಧ. ಮನ ಅರಿವು ಇವೆರಡು ಬಳಕೆಯಾಗದಿದ್ದಡೆ ಅಂಗವದು ಸ್ಥಾವರ. ಮನ ಅರಿವಿನ ಆರಾಧನೆ ಮಾಡಿದಡೆ ಅರಿವು ಅಂಗ ಒಂದಾದ ಲಿಂಗಜಂಗಮ. ಇದನ್ನು ಅರಿತು ಅರಿವಿಗೆ ಶರಣುಹೋದ ಅಂಗವೇ, ಅಂಗದಲ್ಲಿ ಕೂಡಿದ ಕೂಡಲಸಂಗಮದೇವ. ಈತ ಶರಣ ; ಅರಿವಿಗೆ ಸನ್ನಿಹಿತ.

422

ಹೊಸತಿಲ ಪೂಜಿಸಿ ಹೊರವಂಟು ಹೋದ
ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ .
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು ಉದಾಸೀನವ ಮಾಡಿದಡೆ
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ !
ಕೂಡಲಸಂಗಮದೇವ ಅಘೋರ ನರಕದಲ್ಲಿಕ್ಕುವ.

ಒಕ್ಕಲಿತಿ ಬೆಳಿಗ್ಗೆ ಹೊಸ್ತಿಲ ಪೂಜಿಸಿ ದಾಟಿ ನಡೆಯುತ್ತಾಳೆ. ಪೂಜಿಸುವುದೂ ಬಿಡುವುದಿಲ್ಲ; ದಾಟುವುದೂ ಬಿಡುವುದಿಲ್ಲ. ಹಾಗೆಯೇ ಕಲ್ಲು ಮಣ್ಣಿನಿಂದಾದ ಮೂರ್ತಿಗಳನ್ನು ದೇವರೆಂದು ಪೂಜಿಸುವುದೂ ಬಿಡುವುದಿಲ್ಲ; ಕಲ್ಲು ಮಣ್ಣನ್ನು ತುಳಿಯುವುದೂ ಬಿಡುವುದಿಲ್ಲ.

ಜಂಗಮ ಎನ್ನೊಡೆಯನೆಂದು ಉಳಿದುದನ್ನೇ ನೀಡಿ ಉದಾಸೀನವ ಮಾಡಿದಡೆ ಇಹಲೋಕಕ್ಕೂ ಪರಲೋಕಕ್ಕೂ ದೂರ ! ಕೂಡಲಸಂಗಮದೇವ ಅಘೋರ ನರಕದಲ್ಲಿಕ್ಕುವ.

ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ಜಂಗಮವೆನ್ನುವವ ಒಬ್ಬ ವ್ಯಕ್ತಿಯಲ್ಲ. ಅವನೊಬ್ಬ ಅಂಗದಲ್ಲಿರುವ ಅವ್ಯಕ್ತ. ಎಲ್ಲ ಅಂಗಗಳಲ್ಲಿಯೂ ಈ ಅವ್ಯಕ್ತ ಇದ್ದಾನೆ. ಮನವೇ ಅಂಗಕ್ಕೆ ಆವರಿಸಿರುವ ಅವ್ಯಕ್ತ ಜಂಗಮನ ಬೆಳಕಿನ ಕಿರಣಗಳಿಂದಾದ ನೆರಳು. ಬೆಳಕಿನ ಮಾತುಗಳನ್ನೇ ಬೆಳಕಿನಿಂದಾದ ಕತ್ತಲೆಯ ಮನ ತನ್ನದೇ ನುಡಿ ಎನ್ನುವಂತೆ ನುಡಿಯುತ್ತದೆ. ಜಂಗಮ ಒಕ್ಕುದನು ಕೊಂಡು ಆತನನ್ನೇ ಉದಾಸೀನವ ಮಾಡುತ್ತದೆ.

ಸ್ವರ್ಗಲೋಕ ಮರ್ತ್ಯಲೋಕ ಎನ್ನುವುದು ಬೇರಿಲ್ಲ ಕಾಣಿಭೋ ಸತ್ಯವ ನುಡಿವುದೇ ಸ್ವರ್ಗಲೋಕ ; ಮಿಥ್ಯವ ನುಡಿವುದೇ ಮರ್ತ್ಯಲೋಕ. ಅಂಗ ಎನ್ನುವುದು ಸ್ವರ್ಗಲೋಕವೂ ಹೌದು; ಅದು ಮರ್ತ್ಯ(ನರಕ)ಲೋಕವೂ ಹೌದು. ಸಿದ್ಧಾರ್ಥನಲ್ಲಿಯೇ ಬುದ್ಧನಿದ್ದ. ಆತನೇ ಜಂಗಮ. ಸಿದ್ಧಾರ್ಥ ಬುದ್ಧ ಒಕ್ಕುದನು ಕೊಂಡು ಬುದ್ಧನಾದ. ಸಿದ್ಧಾರ್ಥ ; ರಾಜನಾಗಿ ಅಹಂಕಾರದಿಂದ ಮೆರೆಯಲಿಲ್ಲ. ಅಂಗವನ್ನು ನರಕ ಮಾಡಿಕೊಳ್ಳಲಿಲ್ಲ ; ಬದಲಾಗಿ ಸ್ವರ್ಗಲೋಕವನ್ನಾಗಿಸಿದ. ಅಂಗುಲಿಮಾಲನಿಗೂ ಆತನ ಅಂಗದಲ್ಲಿರುವ ಬುದ್ಧನ ಊಟಮಾಡಿಸಿ ಬುದ್ಧನಾಗಿಸಿದ. ಇವರಿಬ್ಬರೂ ಇಹಲೋಕ ಪರಲೋಕಗಳೆರಡನ್ನೂ ದೂರೀಕರಿಸಿ ಅಂಗದಲ್ಲಿಯೇ ಸ್ವರ್ಗದ ಸಿಹಿಸುಖವನುಂಡರು.

ಜಂಗಮ ಎನ್ನೊಡೆಯನೆಂದು ಆತನ ನುಡಿಪ್ರಸಾದವನ್ನು ಕೊಂಡರು. ಎಂದೂ ಉದಾಸೀನ ಮಾಡಲಿಲ್ಲ. ಸ್ವರ್ಗ ನರಕಗಳನ್ನು ತ್ಯಜಿಸಿ ಅಂಗದಲ್ಲಿಯೇ ಅರಿವಿನ ಸ್ವರ್ಗಸುಖವನು ಕಂಡರು.

423

ಲಿಂಗವ ಪೂಜೆಯ ಮಾಡಿ ಜಂಗಮವ ಕಂಡು ಉದಾಸೀನವ ಮಾಡಿದಡೆ
ಆ ಲಿಂಗಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ.
ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದ.
ಇದು ಕಾರಣ ಲಿಂಗಜಂಗಮವನೊಂದೆಂದರಿಯದವರ
ಎನಗೆ ತೋರದಿರಯ್ಯಾ ಕೂಡಲಸಂಗಮದೇವಾ.

ಒಂದು ಲೌಕಿಕ ಪೂಜೆ. ಮತ್ತೊಂದು ಪಾರಮಾರ್ಥ(ಅರಿವಿನ)ದ ಪೂಜೆ. ಲೌಕಿಕ ಪೂಜೆ ಇಡೀ ಲೋಕಕ್ಕೆ ಗೊತ್ತಿದೆ. ಲಿಂಗವುಳ್ಳವರು ಲಿಂಗಕ್ಕೆ ನೀರೆರೆದು ವಿಭೂತಿ ಪತ್ರಿ ಪುಷ್ಪ ಗಂಧದಿಂದ ಪೂಜಿಸುತ್ತಾರೆ. ಜಂಗಮನಿಗೆ ಉಣಬಡಿಸಿ ಆನಂದ ಪಡುತ್ತಾರೆ. ಉಳಿದವರು ಮೂರ್ತಿಯನ್ನು ದೇವರೆಂದು ನೀರಿನಿಂದ ತೊಳೆದು ಪತ್ರಿ ಪುಷ್ಪಗಂಧದಿಂದ ಅಲಂಕರಿಸಿ ಪೂಜಿಸಿ ಆನಂದಪಡುತ್ತಾರೆ. ಇವರಿಬ್ಬರೂ ಪೂಜಕರು. ಇವರಿಗೆ ಪೂಜೆ ಗೊತ್ತೆ ವಿನಹ ದೇವ(ಅರಿವು) ರೆಂದರೆ ಯಾರೆಂದು ತಿಳಿದಿಲ್ಲ.

ಲಿಂಗಪೂಜೆಯ ಮಾಡಿ ಜಂಗಮವ ಕಂಡು ಉದಾಸೀನವ ಮಾಡಿದಡೆ ಆ ಲಿಂಗಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ :

ಈ ಮಾತು ಪಾರಮಾರ್ಥಿಕ ತಿಳಿದವರಿಗೆ ಸಂಬಂಧಿಸಿದ್ದು. ಪಾರಮಾರ್ಥ (ಅರಿವು) ತಿಳಿದು ಕೇಳಿ ಆನಂದ ಪಡುವುದೊಂದೇ ಅಲ್ಲ. ಅದನ್ನು ಆಚರಣೆಗೆ ತರುವುದೇ ನಿಜವಾದ ಪೂಜೆ. ಜಂಗಮನ ಪೂಜೆ.

ಅಂಗದಲ್ಲಿ ಲಿಂಗ(ಅರಿವು)ಇದೆ. ಅದನ್ನು ಆಚರಣೆಗೆ ತರುವ ಜಂಗಮವೂ ಇದೆ. ಮನಸ್ಸು ಲಿಂಗವೆಂದರೇನೆಂದು ತಿಳಿದು ಕೇಳಿ ಕೇಳಿ ಸಂತೋಷ ಪಡುತ್ತದೆ. ಬ್ರಹ್ಮ ಸಭೆಯಲ್ಲಿ ಕುಳಿತು, ಪ್ರವಚನ, ಗೋಷ್ಠಿಗಳಲ್ಲಿ ಕುಳಿತು ಕೇಳಿ ಕೇಳಿ ಸಂತೋಷ ಪಡುತ್ತದೆ. ಭಗವದ್ಗೀತೆ, ಉಪನಿಷತ್ತು , ನಿಜಗುಣ ಶಾಸ್ತ್ರಗಳನ್ನು , ತತ್ತ್ವಪದ, ಕೀರ್ತನೆ, ಮುಂಡಿಗೆ, ಉಗಾಭೋಗಗಳನ್ನು ಓದಿ ಓದಿ ಸಂತೋಷ ಪಡುತ್ತದೆ. ಆದರೆ ನೋಡುವಾಗ ಹಾದರ, ಕೇಳುವಾಗ ಸಿಡುಕು, ಮುಟ್ಟಿದಾಗ ವಿಕೃತ, ರುಚಿಸುವಾಗ ಸಿಟ್ಟು, ಮೂಸಿಸಿದಾಗ ನರಕ ಅನುಭವಿಸುತ್ತದೆ. ಮಾತನಾಡುವಾಗ ಕೆಂಡಾಮಂಡಲಾವಾಗುತ್ತದೆ. ಅಂಗದಲ್ಲಿ ವಿಕೃತದ ರಸಾಯನ ಕಲುಕಿ ತಳಮಳಗೊಳ್ಳುತ್ತದೆ. ಪಾರಮಾರ್ಥ(ಅರಿವು)ಕೇಳಿ ಆರಾಧಿಸುವುದಕ್ಕೆ ಮಾತ್ರ ಸೀಮಿತವಾಯಿತೇ ಹೊರತು ಪ್ರಯೋಗಕ್ಕೆ ಹೋಗಿ ನೋಡಿ ಸಂತೋಷ ಪಡಲಿಲ್ಲ. ಕೇಳಿ ಮುಟ್ಟಿ ರುಚಿಸಿ ಮೂಸಿಸಿ ಆನಂದಪಡಲಿಲ್ಲ.

ಮನ ಪಾರಮಾರ್ಥ(ಅರಿ)ವನ್ನು ಕೇಳಿ ಆನಂದ ಪಟ್ಟಿತೇ ಹೊರತು ಅರಿವಿನಲ್ಲಿ ಲೀನವಾಗಲಿಲ್ಲ. ಅಜ್ಞಾನದ ನೋಟ, ಸ್ಪರ್ಷ, ರುಚಿ, ವಾಸನೆಗಳನ್ನು ಪ್ರಸಾದವಾಗಿ ಸ್ವೀಕರಿಸುವ ಜಂಗಮನ ದರ್ಶನವು ಮನಕ್ಕೆ ಆಗಲಿಲ್ಲ.

ಮನಕ್ಕೆ ಅರಿವಿನ ರುಚಿ ಲಭಿಸಲಿಲ್ಲ; ಅದನ್ನು ಕಾರ್ಯರೂಪಕ್ಕೆ ತಂದು ಪಾಲಿಸುವ ಜಂಗಮನ

ರುಚಿ ಲಭಿಸಲಿಲ್ಲ. ಹೀಗಾಗಿ ಮನ ಗುರುವಾಗಿ ಅಂಗಕ್ಕೆ ಕಾವಿಯ ವೇಷ ಧರಿಸಿ ಲಿಂಗಕಟ್ಟಿಕೊಂಡು ಅದನ್ನು ಪೂಜಿಸಿ ಪ್ರವಚನ ಮಾಡುವ ವ್ಯವಹಾರದಲ್ಲಿ ಸೀಮಿತವಾಯಿತು. ಅರಿವಿನ(ಅಂಗ)ಲಾಂಛನಕ್ಕೆ ಮೋಸದ ವೇಷ ಧರಿಸಿ ಮನ ಮೋಸಕ್ಕೊಳಗಾಯಿತು. ಅಂಗದಲ್ಲಿದ್ದು ಅಂಗಕ್ಕೂ ಲಿಂಗಜಂಗಮರಿಗೂ ಮೋಸ ಮಾಡಿತು. ಈ ಮನಕ್ಕೆ ಶಿವದೂತರ ದಂಡ. ಇವರು ಕೂಡಾ ಯಮದೂತರಿಗೆ ಸಮಾನರು.

ಮನ ಆವರಿಸಿದ ಅಂಗ, ಕಲಾವಿದನಿಗೆ ಕಲ್ಲುಕೊಟ್ಟು, ಮೂರ್ತಿ ಮಾಡಿಸಿ, ಅದಕ್ಕೆ ಹೆಣ್ಣು ದೇವರೆಂದು ಗಂಡು ದೇವರೆಂದು ನಾಮಕರಣ ಮಾಡಿ, ಪೂಜಕ(ವೈದಿಕ)ರಿಂದ ಪ್ರಾಣ ಪ್ರತಿಷ್ಠಾಪನೆ ಮಾಡಿಸಿ, ನಿತ್ಯ ಪಂಚಾಮೃತದಿಂದ ಮೂರ್ತಿಯನ್ನು ತೊಳೆದು ಭಸ್ಮ ಗಂಧ ಪುಷ್ಪ ಫಲಗಳಿಂದ ಅಲಂಕರಿಸಿ ಏನೆಂದು ತಿಳಿಯದೆ ಪೂಜಿಸುವ ಪೂಜಕರಿಗೆ ಯಮದೂತರ ದಂಡ. ಇದು ಕಾರಣ ಲಿಂಗಜಂಗಮವ ಒಂದೆಂದರಿಯದವ ಎನಗೆ ತೋರದಿರಯ್ಯಾ ಕೂಡಲಸಂಗಮದೇವಾ.

424

ಜಂಗಮ ನಿಂದೆಯ ಮಾಡಿ,ಲಿಂಗವ ಪೂಜಿಸುವ ಭಕ್ತನ ಅಂಗವಣೆಯೆಂತೋ?
ಶಿವ ಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು.
ಗುರುವಿನ ಗುರು ಜಂಗಮ-
ಇಂತೆಂದುದು ಕೂಡಲಸಂಗನ ವಚನ.

ಅಂಗದ ಜನ್ಮವದು ಅರಿವಿನ ಜನ್ಮ. ಅಂಗದಲ್ಲಿ ಅರಿವೆಂಬ ಅವ್ಯಕ್ತ ಗುರುವಿದ್ದಾನೆ. ಅರಿವನ್ನು ಪಾಲಿಸುವ ಅವ್ಯಕ್ತ ಜಂಗಮನೂ ಇದ್ದಾನೆ. ಅಂಗವನ್ನು ಆವರಿಸಿದ ಮನ, ಅಂಗದಲ್ಲಿಯೇ ವಾಸ ಮಾಡಿದ ಅರಿವೆಂಬ ಅವ್ಯಕ್ತ ಗುರುವಿನಲ್ಲಿ ಲೀನವಾಗಬೇಕು. ಆ ಗುರುದೇವ ಹೇಳಿದಂತೆ ಅವ್ಯಕ್ತ ಜಂಗಮ ಪಾಲಿಸುತ್ತಾನೆ.

ಅಂಗ ಮಾತ್ರ ಕಾಣುತ್ತದೆ ; ಅವ್ಯಕ್ತ ಮನ ಅಂಗವನ್ನೇ ಕುದರೆ ಮಾಡಿಕೊಂಡು ತಾನು ಬಯಸಿದಡೆ ಅಂಗವನ್ನು ಕರೆದೊಯ್ದು ಮನ ಭೋಗಿಸುತ್ತದೆ. ಆ ಕೇಡನ್ನು ಅರಿವಿನ ಅಂಗಕ್ಕೆ ಮೆತ್ತುತ್ತದೆ.

ಅಂಗದೊಂದಿಗೆ ಸವಾರಿ ಮಾಡುವ ಮನವೇ ಅರಿ(ಲಿಂಗ)ವೆಂಬ ಗುರುದೇವನನ್ನು ಪೂಜಿಸಿ ಅದನ್ನು ಪಾಲಿಸುವ ಅವ್ಯಕ್ತ ಜಂಗಮನ ನಿಂದೆಯ ಮಾಡುವ ಭಕ್ತ(ಮನದ)ನ ಎದೆಗಾರಿಕೆಯೆಂತೊ ಶಿವ ಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು.

ಗುರುವಿನ ಗುರು ಜಂಗಮ- ಇಂತೆಂದುದು ಕೂಡಲಸಂಗನ ವಚನ :

ಅರಿವೇ ಗುರುವಾದಾಗ ಅದನ್ನು ಪಾಲಿಸುವ ಜಂಗಮ ಗುರುವಿನ ಗುರು ಆಗಲೇ ಬೇಕಲ್ಲ. ಅಂಗ, ಬ್ರಹ್ಮ ಸಭೆಗೆ ಹೋಗಿ ಕೇಳಿ ಆನಂದ ಪಟ್ಟರೆ ಅದು ಲಿಂಗ(ಅರಿವಿನ)ಪೂಜೆಯಾಯಿತು. ಹೊರಗೆ ಬಂದು ತನಗೆ ಆಗದ ಅಂಗವನ್ನು ನಿಂದಿಸಿದರೆ ಅದು ಜಂಗಮ ನಿಂದೆಯಾಯಿತು. ಏಕೆಂದರೆ ಪ್ರತಿ ಅಂಗದಲ್ಲಿಯೂ ಭಕ್ತ(ಮನ)ಲಿಂಗ(ಅರಿವು)ಪಾಲಿಸುವ ಜಂಗಮರಿದ್ದಾರೆ. ಅಂದಮೇಲೆ ಬ್ರಹ್ಮಸಭೆಗೆ ಹೋಗಿ ಅರಿವಿನ ಮಾತು ಕೇಳಿ ಆನಂದ ಪಟ್ಟು ಅದನ್ನು ಪ್ರಯೋಗದಿಂದ ಪಾಲಿಸಲಿಲ್ಲವೆಂದಮೇಲೆ ಶಿವ ಶಿವಾ, ಒಮ್ಮೆ ನಿಂದಿಸುವ ಮತ್ತೊಮ್ಮೆ ಪೂಜಿಸುವ ಪಾತಕವಾಗಲಿಲ್ಲವೆ. ಇದು ಕೇಳಲಾಗದು. ಗುರುವಿನ ಗುರು ಜಂಗಮ-ಇಂತೆಂದುದು ಕೂಡಲಸಂಗನ ವಚನ.

ಉದಾ: ಒಂದು ಅಂಗದ ಭಾವನೆಗಳು ಅರಳಿ ಮತ್ತೊಂದು ಅಂಗದ ಗೆಳೆತನ ಮಾಡುತ್ತದೆ.

ಆ ಅಂಗದಿಂದ ಕಠೋರ ಶಬ್ದಗಳನ್ನು ಕೇಳಿದಾಗ ಭಾವನೆಗಳು ಕೆರಳಿ ಅಂಗ ಮತ್ತೊಂದು ಅಂಗವನ್ನು ನಿಂದಿಸುತ್ತದೆ. ಮನ ಶಬ್ದ ಕೇಳಿ ಅದರ ಭಾವ ಅರಳಿ ಅಂಗದೊಂದಿಗೆ ಗೆಳೆತನ ಮಾಡಿತು. ಪುನಃ ಶಬ್ದ ಕೇಳಿ ಅರಳಿದ ಭಾವ ಕೆರಳಿ ಹಗೆತನ ಮಾಡಿತು. ಅಂಗದ ಭಾವ ಅರಳಿ ಮತ್ತೊಂದು ಅಂಗವನ್ನು ಪೂಜಿಸಿತು. ಭಾವ ಕೆರಳಿ ಪೂಜಿಸಿದ ಲಿಂಗವನ್ನೇ ನಿಂದಿಸಿತು. ಒಮ್ಮೆ ಪೂಜಿಸಿ ಮತ್ತೊಮ್ಮೆ ನಿಂದಿಸುವುದು ಪಾತಕವಲ್ಲವೆ ?

ಪ್ರತಿ ಶಬ್ದದಲ್ಲಿಯೂ ಅರಿವಿದೆ. ಮನ, ಶಬ್ದಕೇಳಿ ತನುವನ್ನು ಅರಳಿಸುತ್ತದೆ. ಶಬ್ದದಲ್ಲಿ ಅರಿವಿದೆಯೆಂದು ಮನಕ್ಕೆ ತಿಳಿಯುವುದಿಲ್ಲ. ಹೀಗಾಗಿ ಮನ ಅರಿವೆಂಬ ಗುರುವಿಗೆ ಹಾಗೂ ಜಂಗಮನಿಗೆ ದ್ರೋಹ ಬಗೆಯುತ್ತದೆ. ನರಕಕ್ಕೆ ಭಾಜನವಾಗುತ್ತದೆ.

425

ಅರಸನ ಕಂಡು ತನ್ನ ಪುರುಷನ ಮರೆದಡೆ
ಮರನನೇರಿ ಕಯ್ಯಬಿಟ್ಟಂತಾದೆನಯ್ಯಾ .
ಇಹಲೋಕಕ್ಕೆ ದೂರ ಪರಲೋಕಕ್ಕೆ ದೂರ !
ನಮ್ಮ ಕೂಡಲಸಂಗಮದೇವಯ್ಯ
ಜಂಗಮ ಮುಖಲಿಂಗವಾದ ಕಾರಣ !

ಅಂಗ ಎನ್ನುವುದು ಅರಿವಿನ ಮನೆ. ಆ ಮನೆಯಲ್ಲಿ ಅರಿವೆಂಬ ಪುರುಷನಿದ್ದಾನೆ. ಮನವೆಂಬ ಸತಿ ಇದ್ದಾಳೆ. ಈ ಸತಿ ಅರಿವೆಂಬ ಪುರುಷನೊಂದಿಗೆ ಸಂಸಾರ ಹೂಡಿದರೆ ಗರತಿಯಾಗುತ್ತಾಳೆ. ಇಲ್ಲ ಸೂಳೆಯಾಗುತ್ತಾಳೆ.

ಅರಸನ ಕಂಡು ತನ್ನ ಪುರುಷನ ಮರೆದಡೆ ಮರನನೇರಿ ಕಯ್ಯ ಬಿಟ್ಟಂತಾದೆನಯ್ಯಾ :

ಉದಾ: ಅರುವತ್ತು ವರ್ಷಕ್ಕೂ ಮೀರಿದ ತೆಹಲ್ಕಾ ಸಂಪಾದಕ ತೇಜಪಾಲನ, ಹಾದರ, ಆಂಧ್ರಪ್ರದೇಶದ ರಾಜ್ಯಪಾಲನಾಗಿದ್ದ ಎಂಬತ್ತೈದು ವರ್ಷದ ಎನ್.ಡಿ.ತಿವಾರಿ ಮೂವತೆರಡು ವರ್ಷದ ಯುವತಿಯೊಂದಿಗೆ ನಡೆಸಲು ಯತ್ನಿಸಿದ ಲೈಂಗಿಕ ವ್ಯವಹಾರ, ಹಾಗೂ ಡಿಸೆಂಬರ್ 16,2012ರಂದು ಆರು ಯುವಕರು ದೆಹಲಿಯ ಬಸ್‌ನಲ್ಲಿ ಒಬ್ಬ ಯುವತಿಯೊಂದಿಗೆ ನಡೆಸಿದ ಅತ್ಯಾಚಾರ ಮತ್ತು ನಿವೃತ್ತ ನ್ಯಾಯಾಧೀಶರು ಯುವತಿಯೊಂದಿಗೆ ನಡೆಸಿದ ಅಶ್ಲೀಲ ಕ್ರಿಯೆ ಇವು ಬೆಚ್ಚಿ ಬೀಳಿಸುವ ದುರ್ಘಟನೆಗಳು. ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಇವೆಲ್ಲವುಗಳಿಗೆ ಮನವೇ ಕಾರಣ. ಅದು ಮರ್ಕಟ. ಗರತಿ ತನ್ನ ಅರಿವಿನ ಪುರುಷನನ್ನು ಮರೆತು ಅರಸನ ಬೆನ್ನುಹತ್ತಿ ಹಾದರ ಮಾಡಿದಂತೆ.

ಮನವೆಂಬ ಸತಿ ಅರಿವೆಂಬ ಪುರುಷನೊಂದಿಗೆ ಸಮಾಗಮವಾಗಿ, ಅರಿವಿನಿಂದ ಯಾವ ಅಂಗ ನೋಡಿದರೂ ಹಾದರ ಮಾಡುವುದಿಲ್ಲ; ಉದ್ರೇಕಗೊಳ್ಳುವುದಿಲ್ಲ. ಏಕೆಂದರೆ ತನ್ನ ಅಂಗದ ಚರ್ಮವೂ ಚರ್ಮವೇ; ಇತರ ಅಂಗದ ಚರ್ಮವೂ ಚರ್ಮವೇ ಆಗಿದೆ. ಚರ್ಮದೊಳಗಿದ್ದ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳಿಗೂ ಭೇದವಿಲ್ಲ. ಹೀಗಾಗಿ ಅಂಗವನ್ನು ನೋಡುವ ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುವುದಿಲ್ಲ. ಬದಲಾಗಿ ತನ್ನಂಗದಂತೆಯೇ ಇರುವ ಮತ್ತೊಂದು ಅರಿವೆಂಬ ಗುರುದೇವನಿದ್ದ ಲಿಂಗಾಂಗ ಎಂದು ಆದರಿಸುತ್ತದೆ. ಪೂಜಿಸುತ್ತದೆ. ಅಂಗದಲ್ಲಿರುವ ಯೌವ್ವನದ ಅರಸನೆಂಬ ಶ್ರೀಮಂತಿಕೆ ಅರಿವಿಗೆ ತುತ್ತಾಗಿ ಪ್ರಸಾದವಾಗುತ್ತದೆ. ಮನ

ಮರ್ಕಟವಾಗುವುದಿಲ್ಲ. ಬದಲಾಗಿ ಆಂಜನೇಯನಾಗುತ್ತದೆ.

ಅಂಗದಲ್ಲಿರುವ ಮನವೆಂಬ ಮರ್ಕಟ ಇಹಲೋಕಕ್ಕೆ ದೂರ ! ಪರಲೋಕಕ್ಕೆ ದೂರ ! ಅಂಗದಲ್ಲಿಯೇ ಇರುವ ಅರಿವೆಂಬ ಗುರು ಲಿಂಗ ಜಂಗಮನನ್ನು ಮನ ಅರಿತು ಆರಾಧಿಸಿದ ಕಾರಣ ಇಹ ಪರ ಲೋಕಗಳನ್ನೆರಡೂ ದೂರೀಕರಿಸಿ ಅರಿವಿನ ಲೋಕಕ್ಕೆ ಹತ್ತಿರವಾಗುತ್ತದೆ. ಅಂಗದಲ್ಲಿಯೇ ಕೂಡಿದ ಕೂಡಲಸಂಗಯ್ಯನನ್ನು ಕೂಡಿ ಒಂದಾಗುತ್ತದೆ.

426

ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ,
ಹಿಂಗಿತ್ತು ಶಿವಲೋಕ ಇನ್ನೆಲ್ಲಿಯದಯ್ಯಾ .
ಲಿಂಗಕ್ಕೆ ಮಾಡಿದ ಬೋನ ಸಿಂಬಕ ತಿಂಬಂತೆ
ಸಮಯೋಚಿತವನರಿಯದೆ ಉದರ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ ಕೂಡಲಸಂಗಮದೇವ.

ತನುವಿನಲ್ಲಿ ತನ್ಮಯವಾದ ಅರಿವು ಕಂಡುಕೊಳ್ಳಬೇಕಾದರೆ ಈ ಐದು ಸಾಲಿನ ವಚನ ಸಾಕು. ಮನ ಕಣ್ಣಿನಲ್ಲಿ, ಕಿವಿ, ಮೂಗು, ಚರ್ಮ, ನಾಲಿಗೆಯಲ್ಲಿ ಆವರಿಸಿರುವುದರಿಂದ ಅವು ಸರಿಯಾಗಿ ಅರಿವಿನ ಕೆಲಸ ಮಾಡದೆ ಮನದ ಮಾತು ಕೇಳುತ್ತವೆ. ಕಣ್ಣುಗಳು ಕಾಣುತ್ತವೆ. ಆದರೆ ಮನ ಆವರಿಸಿರುವುದರಿಂದ ಅಂಗವೆಂಬ ಲಿಂಗ ಕಾಣುವುದಿಲ್ಲ; ಅಂಗನೆ ಕಾಣುತ್ತಾಳೆ. ಅಂಗ ಅಂಗವನ್ನೇ ಭೋಗಿಸಲು ಹೋದಾಗ ಹಿಂಗಿತ್ತು ಶಿವಲೋಕ ; ಇನ್ನೆಲ್ಲಿಯದಯ್ಯಾ .

ಹಳದಿ ಲೋಹಕ್ಕೆ ಜೊಲ್ಲು ಸುರಿಸಿ ಬಾಚಿಕೊಳ್ಳುವ ಅಂಗಕ್ಕೆ ಇನ್ನೆಲ್ಲಿಯದಯ್ಯಾ ಶಿವಲೋಕ! ಶಿವಲೋಕವೆಂದರೆ ಸದಾಚಾರದ ಲೋಕ. ಅಂಗದ ಆಚಾರ ಅರಿವಿನ ಆಚಾರ. ಅರಿವು-ಸುಜ್ಞಾನ ಎನ್ನುವುದು ಅಂಗದಲ್ಲಿರುವ ಲಿಂಗಕ್ಕೆ ಮಾಡಿದ ಬೋನ. ಮನ, ಲಿಂಗಕ್ಕೆ ಮಾಡಿದ ಬೋನವನ್ನು ತಾನು ಬುಂಜಿಸಿದರೆ ಅದು ಸಿಂಬಕ ತಿಂಬಂತೆ.

ಅಂಗದಲ್ಲಿ ಲಿಂಗವಿದ್ದು, ಸಕಲ ಪದಾರ್ಥವನ್ನು ಮನ, ಅರಿವಿನಿಂದ ನೋಡಿ ಸ್ವೀಕರಿಸಬೇಕು. ಲಿಂಗ(ಅರಿವು)ಅಪ್ಪಣೆ ಕೊಟ್ಟರೆ ಅದನ್ನು ಪಡೆದು ಲಿಂಗಕ್ಕರ್ಪಿಸಿ ಲಿಂಗಕ್ಕೆಂದೇ ಸ್ವೀಕರಿಸಬೇಕು. ಅರಿವನ್ನು ಕಂಗಳೊಳಗಿಟ್ಟುಕೊಂಡು, ಅಂಗದ ಮೇಲಿರುವ ಆಭರಣ ನೋಡಿ, ಅಂಗವನ್ನು ಕೊಂದು ಆಭರಣ ಪಡೆದರೆ ಇನ್ನೆಲಿಯದಯ್ಯಾ ಶಿವಲೋಕ ! ಅದು ಜಂಗಮವಿಲ್ಲದ ಮಾಟ ; ಕಂಗಳಿಲ್ಲದ ನೋಟ. ಅಂಗದಲ್ಲಿದ್ದ ಶಿವಲೋಕ ಹಿಂಗಿತ್ತು. ಲಿಂಗಕ್ಕಾಗಿ ಮಾಡಿದ ಅರಿವಿನ ಬೋನ ಭಕ್ತಿಯಿಲ್ಲದ ಮನ ಬುಂಜಿಸಿತ್ತು. ಸಮಯೋಚಿತವನು ಅರಿಯದೆ ಉದರ ಹೊರೆಯುವ ಮನವನ್ನು ಲಿಂಗತಂದೆ ನರಕದಲ್ಲಿಕ್ಕದೆ ಮಾಣ್ಬನೆ ?

ಹಾದರ, ಕಳವು, ಅತ್ಯಾಚಾರ, ಲಂಚ, ಭ್ರಷ್ಟಾಚಾರ ಮಾಡುವುದನ್ನು ಯಾರೂ ನೋಡದಿದ್ದರೆ ಏನಾಯಿತು. ಅಂಗದಲ್ಲಿರುವ ಅರಿವೆಂಬ ಲಿಂಗ ಜಂಗಮರು ನೋಡಿಲ್ಲವೆ ? ಅಂಗದಲ್ಲಿ ಅರಿವೆಂಬ ಲಿಂಗ ತಂದೆಯೂ ಇದ್ದಾನೆ ; ಕುರುಡ - ಕಳ್ಳನೆಂಬ ಮನವೂ ಇದೆ. ಕುರುಡನಿಗೆ ಕದ್ದು ಉಣ್ಣುವ ಬಯಕೆ. ಲಿಂಗ ತಂದೆಗೆ ಎಚ್ಚರಿಸುವ ಕೆಲಸ. ಮನ ಕುರುಡೊಂದೇ ಅಲ್ಲ ; ಅದು ಲಿಂಗಯ್ಯನ ಮಾತು ಕೇಳುವ ವ್ಯವಧಾನವೂ ಇಲ್ಲದ ಕಿವುಡು.

ಅಂಗದಲ್ಲಿ ಲಿಂಗಯ್ಯನಿದ್ದರೂ, ಆತ ಹೇಳುವ ಹಿತವಚನ ಕೇಳದೆ ಮನ ದುಡುಕಿದರೆ ; ಆ ಬಾಧೆ ಮನ ಮತ್ತು ಅಂಗಕ್ಕಲ್ಲದೆ ಲಿಂಗಯ್ಯನಿಗಲ್ಲ! ಆತ ನರಕದಲ್ಲಿಕ್ಕದೆ ಮಾಣ್ಬನೆ.

427

ಲಿಂಗದಲ್ಲಿ ದಿಟವನರಸುವಡೆ ಜಂಗಮವ ನೆರೆನಂಬುವುದು ;
ನಡೆಲಿಂಗ, ನುಡಿಲಿಂಗ, ಮುಖಲಿಂಗವೆಂದೆ ನಂಬೋ !
'ಯತ್ರ ಮಾಹೇಶ್ವರಸ್ತತ್ರ ಸನ್ನಿಹಿತ'ನಾಗಿ
ಅಧರ ತಾಗಿದ ರುಚಿಯನುದರ ತಾಗಿದ ಸುಖವ
ಉಂಬ ಉಡುವ ಕೂಡಲಸಂಗಮದೇವ ಜಂಗಮ ಮುಖದಲ್ಲಿ.

ಅಂಗದಲ್ಲಿ ಮನವಿದೆ. ಅಂಗದಲ್ಲಿ ಲಿಂಗ(ಅರಿವು)ಇದೆ ; ಅಂಗದಲ್ಲಿಯೇ ಜಂಗಮನಿದ್ದಾನೆ. ಆತ ಸತ್ಯದ ಪರಿಪಾಲಕ. ಲಿಂಗದಲ್ಲಿ ದಿಟವನರಸುವಡೆ ಜಂಗಮವನ್ನೆ ನೆರೆನಂಬುವುದು. ಈ ಕೆಲಸ ಅಂಗವನ್ನು ಆವರಿಸಿರುವ ಮನದಿಂದಲೇ ಆಗಬೇಕು.

ಮನಕ್ಕೆ ಚಿನ್ನ, ಕರೆನ್ಸಿ, ಭೂಮಿ, ವಾಹನ ಸಂಗ್ರಹಿಸುವ ಆಸೆ ಹುಟ್ಟುತ್ತದೆ. ಅದನ್ನು ಅಂಗಹಿಡಿದು ಪೂರೈಸಿಕೊಳ್ಳುತ್ತದೆ. ಮನಕ್ಕೆ ಪದವಿಯ ಆಸೆ ಹುಟ್ಟುತ್ತದೆ. ಅದನ್ನು ಕೂಡಾ ಮನ ಅಂಗಹಿಡಿದು ಪಡೆಯುತ್ತದೆ. ಆದರೆ ಇದೆಲ್ಲ ಎಂದೂ ತೀರದ ಆಸೆ. ಪಡೆದಂತೆಲ್ಲ ಪಡೆಯಬೇಕೆನ್ನುವ ಆಸೆ. ಅಂಗ ಇರುವವರೆಗೆ ಈ ಆಸೆ ಅಧಿಕವಾಗುತ್ತಲೇ ಇರುತ್ತದೆ. ಇದರಲ್ಲಿ ಹುರುಳಿಲ್ಲ ಎಂದು ತಿಳಿಯಬೇಕಾದರೆ ಮನ ಅಂಗದಲ್ಲಿರುವ ಅರಿವೆಂಬ ಲಿಂಗಯ್ಯನಿಗೆ ಮೊರೆಹೋಗಬೇಕು. ಈ ಸತ್ಯವನ್ನು ಪಾಲಿಸುವ ಜಂಗಮನನ್ನು ಮನ ನೆರೆನಂಬಬೇಕು.

ಮನ, ಅಂಗದಲ್ಲಿರುವ ಜಂಗಮನನ್ನು ನಂಬಿ, ಆತನಿಗೆ ಶರಣು ಹೋದರೆ ಸಾಕು ಅಂಗವದು ಲಿಂಗವಾಗಿ ; ಅರಿವಿನ ಅಂಗವಾಗಿ ಮಾರ್ಪಡುವುದು. ಆಗ ಅಂಗದ ನಡೆ ಲಿಂಗ, ನುಡಿ ಲಿಂಗ, ಸರ್ವಾಂಗದ ಮುಖಲಿಂಗವೆಂದೆ ನಂಬೋ !

'ಯತ್ರ ಮಾಹೇಶ್ವರಸ್ತತ್ರ ಸನ್ನಿಹಿತ'ನಾಗಿ ಅರಿವೆಂಬ ಗುರುದೇವನು ಏನು ಹೇಳುತ್ತಾನೊ ಅದನ್ನು ಜಂಗಮ ಮಾಹೇಶ್ವರನಾಗಿ ಚಾಚೂತಪ್ಪದೆ ಪಾಲಿಸುತ್ತಾನೆ. ಮನಕ್ಕೆ ಈ ಕೆಲಸ ಸಾಧ್ಯವಾಗುವುದಿಲ್ಲ. ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆದಂತೆ ಮನದ ಬುದ್ಧಿ. ಮನ, ತಾನು ಬಯಸಿದ ಸುಖವನ್ನು ಅಂಗದೊಂದಿಗೆ ಭೋಗಿಸುತ್ತದೆ. ಅರಿವು ಅಡ್ಡಿಪಡಿಸಿದರೂ ಮನ ಕೇಳುವುದಿಲ್ಲ. ಏಕೆಂದರೆ ಮನಕ್ಕೆ ಅರಿವೆಂಬ ಗುರುದೇವನ ಮಾತನ್ನು ಪಾಲಿಸುವ ಜಂಗಮನ ಪರಿಚಯವಾಗಿರುವುದಿಲ್ಲ.

ಮನಕ್ಕೆ ಅರಿವು ಮತ್ತು ಅದನ್ನು ಪಾಲಿಸುವ ಜಂಗಮನ ಪರಿಚಯವಾದರೆ, ತುಟಿಗೆ ತಾಗಿದ ರುಚಿ ಉದರಕ್ಕೆ ಸುಖವನ್ನುಂಟು ಮಾಡುವಂತೆ ; ಅರಿವೆಂಬ ಗುರುದೇವ, ಆ ಗುರುದೇವನ ಮಾತು ಪಾಲಿಸುವ ಜಂಗಮನು ಅಂಗದಲ್ಲಿ ಸಂಗಮವಾಗಿ ಅರಿವಿನ ಅಂಗವಾಗುತ್ತದೆ. ಅರಿವನ್ನು ಉಂಡು, ಅರಿವನ್ನೇ ಹೊದ್ದ ಕೂಡಲಸಂಗಯ್ಯನ ಅಂಗವಾಗುತ್ತದೆ.

428

ಜಂಗಮದ ಮನ-ಭಾವದಲ್ಲಿ ಭಕ್ತನೆ ಭೃತ್ಯನೆಂದು,

ಭಕ್ತನ ಮನ-ಭಾವದಲ್ಲಿ ಜಂಗಮವೆ ಕರ್ತನೆಂದು ಇದ್ದ ಬಳಿಕ,
ಬಂದುದು ಬಾರದು ಇದ್ದುದು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು.
ಹೋಯಿತ್ತೆಂಬ ಗುಣವುಳ್ಳನ್ನಕ್ಕ
ನಿಮಗೆ ದೂರ, ನಿಮ್ಮವರಿಗೆ ಮುನ್ನವೆ ದೂರ !
ಶಿವಾಚಾರಕ್ಕಲ್ಲಿಂದತ್ತ ದೂರ !
ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲವು,
ಜಂಗಮದ ಗಳಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ
ನೀನಂದೆ ಮೂಗು ಕೊಯ್ಯಿ , ಕೂಡಲಸಂಗಮದೇವಾ !

ಜಂಗಮದ ಮನ-ಭಾವದಲ್ಲಿ ಭಕ್ತನೆ ಭೃತ್ಯನೆಂದು, ಭಕ್ತನ ಮನ-ಭಾವದಲ್ಲಿ ಜಂಗಮವೆ ಕರ್ತನೆಂದು ಇದ್ದ ಬಳಿಕ, ಬಂದುದು ಬಾರದು ಇದ್ದುದು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು :

ಅಂಗದಲ್ಲಿ ಅರಿವೆಂಬ ಗುರುದೇವನ ಮಾತು ಪಾಲಿಸುವ ಜಂಗಮನಿದ್ದಾನೆ. ಈತನಿಗೆ ಮನವೆಂಬ ಭಕ್ತನೆ ಸೇವಕನಾಗಬೇಕು. ಮನವೆಂಬ ಭಕ್ತ ನನಗೆ ಸೇವಕನೆಂದು ಜಂಗಮ ತಿಳಿಯಬೇಕು. ಹೀಗಿದ್ದ ಬಳಿಕ ಬಂದುದು ಬಾರದು ಮತ್ತು ಇದ್ದುದು ಹೋದುದು ಎಂಬ ಸಂದೇಹವಿರುವುದಿಲ್ಲ.

ಮನವೇ ತನಗೆ ಸೇವಕ ಎಂದು ಜಂಗಮ, ಜಂಗಮನೇ ನನಗೆ ಕರ್ತನೆಂದು ಭಕ್ತ ನಿರ್ಧರಿಸಿದ ಮೇಲೆ ; ಅಂಗದಲ್ಲಿ ಈ ಎರಡೂ ಕ್ರಿಯೆಗಳು ಘಟಿಸಿದ ಮೇಲೆ ; ಅಂಗ ಇನ್ನು ನಿರಾಳ. ಅಜ್ಞಾನದ ಕ್ರಿಯೆಗಳಿಂದ ಸಂಪೂರ್ಣ ದೂರ ! ಬಂದುದು ಬಾರದು ಎನ್ನುವ ಚಿಂತೆಯಿಲ್ಲ. ಇದ್ದುದು ಹೋದುದು ಎನ್ನುವ ಸಂದೇಹವಿಲ್ಲ! ಅಂಗ ಸಂಪೂರ್ಣ ಜಂಗಮನ ಸ್ವಾಧೀನವಾಗುತ್ತದೆ. ಅಂಗ ಪಕ್ಷಿಯಂತೆ ಹಗಲು ಆಹಾರಕ್ಕಾಗಿ ಕಾಯಕ ಮಾಡುತ್ತದೆ. ರಾತ್ರಿ ನಿದ್ರಿಸುತ್ತದೆ. ಬೆಳಿಗ್ಗೆ ಕಲರವ ಮಾಡುತ್ತ ಪಕ್ಷಿಯಂತೆ ಆನಂದದಿಂದ ಹಾಡುತ್ತದೆ. ಮನದ ಸಂಗ್ರಹ ಭಾವನೆಗಳು ಅಳಿದು ಅಂಗ ಜಂಗಮನ ಸ್ವಾಧೀನವಾಗುತ್ತದೆ.

ಜಂಗಮ ಚಿನ್ನವನ್ನು ಅರಿವಿನಿಂದ ನೋಡುತ್ತಾನೆ ; ಆತನಿಗೆ ಅದೊಂದು ಹಳದಿ ಲೋಹವಾಗಿ ಕಾಣುತ್ತದೆ. ಅದನ್ನು ಕೊಳ್ಳುವುದಿಲ್ಲ , ಧರಿಸುವುದಿಲ್ಲ , ಮುಟ್ಟುವುದಿಲ್ಲ , ಸಂಗ್ರಹಿಸುವುದಿಲ್ಲ , ಕಳುವು ಮಾಡುವುದಿಲ್ಲ. ಇದ್ದುದು ಹೋದರೆ ಪರಿತಪಿಸುವುದಿಲ್ಲ.

ಮನಕ್ಕೆ ಚಿನ್ನ ಹಳದಿ ಬಣ್ಣದ ಲೋಹ ವಾಗಿ ಕಾಣುತ್ತದೆ. ಹೀಗೆ ಕಾಣುವ ಮನ ಅಂಗದಲ್ಲಿರುವ ಅರಿವಿನ ಮಾತು ಪಾಲಿಸಲೇಬೇಕಲ್ಲ. ಹೀಗೆ ಪಾಲಿಸಿದ ಮನ ಹೆಳವನಾಗುತ್ತದೆ. ಜಂಗಮನಿಗೆ ಗುಲಾಮನಾಗುತ್ತದೆ. ಆಗ ಹೋದುದನರಿಯದು, ಬಂದುದನರಿಯದು.

ಹೋಯಿತ್ತೆಂಬ ಗುಣವುಳ್ಳನ್ನಕ್ಕ ನಿಮಗೆ ದೂರ, ನಿಮ್ಮವರಿಗೆ ಮುನ್ನವೆ ದೂರ ! ಶಿವಾಚಾರಕ್ಕಲ್ಲಿಂದತ್ತ ದೂರ :

ಬಂದಿತ್ತು ಹೋಯಿತ್ತೆಂಬ ಗುಣ ಮನಕ್ಕೆ ಇರುವವರೆಗೆ, ಆ ಮನಕ್ಕೆ ಅಂಗದಲ್ಲಿಯೇ ಇರುವ ಅರಿವೆಂಬ ಗುರುವಿನ ದರ್ಶನವಾಗುವುದಿಲ್ಲ. ಆ ಗುರುವಿನ ಮಾತು ಪಾಲಿಸುವ ಜಂಗಮನ ದರ್ಶನವಾಗುವುದಿಲ್ಲ!

ಮನಕ್ಕೆ ಇನ್ನೂ ಗುಣ ಅವಗುಣಗಳು ತೊಲಗಿ ನಿರ್ಗುಣಿಯಾಗಿರುವುದಿಲ್ಲ. ಆಗ ಅಂಗಕ್ಕೆ ಎಷ್ಟು ವಯಸ್ಸಾದರೇನು ? ಆ ಅಂಗ ಭಗವದ್ಗೀತೆ, ಬೈಬಲ್, ಆಗಮ ಉಪನಿಷತ್ತುಗಳನ್ನು ಪಠಿಸಿದರೇನು? ಮಠಾಧಿಪತಿ, ಪೀಠಾಧಿಪತಿಯಾದರೇನು ? ಕಾವಿ ಕೌಪೀನ ಧರಿಸಿದರೇನು ?

ಮನ, ಗುರುಲಿಂಗಜಂಗಮನಿಗೆ ದೂರ, ಇದನ್ನು ಪಾಲಿಸುವ ಶರಣರಿಗೆ ಮುನ್ನವೇ ದೂರ ! ಶಿವಾಚಾರಕ್ಕಲ್ಲಿಂದತ್ತ ದೂರ. ಶಿವಾಚಾರವೆಂದರೆ ಅರಿವಿನ ಆಚಾರ.

ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲವು, ಜಂಗಮದ ಗಳ ಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿರ್ದಡೆ ನೀನಂದೆ ಮೂಗು ಕೊಯ್ಯಿ ಕೂಡಲಸಂಗಮದೇವಾ :

ಜಂಗಮದ ಹರಿದ ಹರಿವು ಜಗದಗಲ ಮುಗಿಲಗಲ. ಜಂಗಮದ ನಿಂದ ನಿಲವು ಪಾತಾಳದಿಂದತ್ತತ್ತ, ಬ್ರಹ್ಮಾಂಡದಿಂದಲೂ ಅತ್ತತ್ತ. ಆತನ ಗಳಗರ್ಜನೆ ಅಗಮ್ಯ ಅಗೋಚರ ಅಪ್ರಮಾಣ! ಇಂತಹ ಸಂದೇಶವನ್ನು ಮನಕ್ಕೆ ಅರುಹಿದಾಗಲೂ ಅದು ಸ್ವೀಕರಿಸದೆ ಜಂಗಮದ ಸೇವಕನಾಗದಿದ್ದರೆ ನೀನಂದೆ ಕೆಡಹಿ ಮೂಗು ಕೊಯ್ದು ಮೂಕೊರತಿಯನ್ನಾಗಿ ಮಾಡಿ ಆಲಿಸಿಕೊ ಸಂಗಮನಾಥನೆ ; ಇದು ನಿನ್ನ ಕರ್ತವ್ಯ ಎಂದು ಮನ ಗುರುಲಿಂಗಜಂಗಮನಿಗೆ ಬೇಡುವ ಸೂಚನೆಯನ್ನು ಓದುಗರಿಗೆ ನೀಡಿದ್ದಾರೆ ಜ್ಞಾನಭಂಡಾರಿ ಬಸವಣ್ಣ.

429

ನಯನದಾಹಾರವ ಜಂಗಮವ ನೋಡಿಸುವೆನು
ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು
ಘ್ರಾಣದಾಹಾರವ ಜಂಗಮವ ವಾಸಿಸುವೆನು
ಜಿಹ್ವೆಯಾಹಾರವ ಜಂಗಮವ ನೂಡಿಸುವೆನು
ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು
ಸಕಲ ಪದಾರ್ಥಂಗಳನೀಡುವೆನು
ಕೂಡಲಸಂಗಾ ನಿಮ್ಮ ಶರಣರಿಗೆ

ನಯನದಾಹಾರವ ಜಂಗಮವನೋಡಿಸುವೆನು :

ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವು ಐದು ಅಂಗದಲ್ಲಿರುವ ಕರ್ಮೇಂದ್ರಿಯಗಳು. ಇವುಗಳಲ್ಲಿ ಮಹಾಜ್ಞಾನಿಯೆಂಬ ಜಂಗಮನು ವಾಸವಾಗಿದ್ದಾನೆ. ಮನವೆಂಬ ಅಜ್ಞಾನವೂ ವಾಸವಾಗಿದೆ.

ಮನದಿಂದ ಅಂಗವನ್ನು ನೋಡಿದರೆ, ಮನಕ್ಕೆ ಅಂಗನೆ ಕಾಣುತ್ತಾಳೆ. ರೂಪು ಯೌವ್ವನ ಉಬ್ಬು ತಗ್ಗುಗಳು ಕಣ್ಣಿಗೆ ರಾಚುತ್ತವೆ. ಮನ ಅಂಗಕ್ಕೆ ವಿಷಯಾಸಕ್ತಿಯನ್ನು ರವಾನಿಸಿ ವಿಕೃತಗೊಳಿಸಿ ಭೋಗಿಸುವ ಆಸೆಯನ್ನು ಹುಟ್ಟಿಸುತ್ತದೆ. ಮನಕ್ಕೆ ನೋಟ ಆಹಾರವಾದರೆ, ಅದು ರಕ್ಕಸನ ಅಂಗವೆಂದು ಹೆಸರು ಪಡೆಯುತ್ತದೆ. ಆದರೆ ಕಣ್ಣಿನಲ್ಲಿರುವ ಅಜ್ಞಾನದ ನೋಟವನ್ನು ಉಂಡು ಜ್ಞಾನದ ನೋಟವನ್ನು ಬೀರುವ ಜಂಗಮನು ಇದ್ದಾನೆ. ಮನಕ್ಕೆ ಜಂಗಮ ಪರಿಚಯವಾದರೆ ಮನದ ಅಜ್ಞಾನದ ನೋಟವನ್ನು ತಿಂದು ಜ್ಞಾನದ ನೋಟವನ್ನು ಅಂಗದ ಮೇಲೆ ಬೀರುತ್ತಾನೆ. ಕಣ್ಣು ಜ್ಞಾನದಿಂದ ಹೊಳೆಯುತ್ತದೆ. ಜ್ಞಾನದ ಕಣ್ಣಿಗೆ ತನ್ನಂತೆಯೇ ಇರುವ ಚರ್ಮದ ಹೊದಿಕೆಯ ಅಂಗ ಮಾತ್ರ ಕಾಣುತ್ತದೆ. ಚರ್ಮ ಚರ್ಮವೇ. ತನ್ನದೂ ಚರ್ಮ, ಮತ್ತೊಂದು ಅಂಗದ್ದೂ ಚರ್ಮ. ಚರ್ಮ ಹೆಣ್ಣೂ ಅಲ್ಲ; ಗಂಡೂ ಅಲ್ಲ. ಅದರೊಳಗೆ ಅಡಗಿದ ರಕ್ತ ಮಾಂಸ ಮೂಳೆ ಮಜ್ಜಾ ಮೇದಸ್ಸು ಹೆಣ್ಣೂ ಅಲ್ಲ; ಗಂಡೂ ಅಲ್ಲ. ನೋಟಕ್ಕೆ ಅಂಗದಲ್ಲಿರುವ ಸತ್ಯ ಬಳಕೆಯಾಗುತ್ತದೆ. ಕಣ್ಣಿನಲ್ಲಿ ಆವರಿಸಿದ ಮನದ ಅಜ್ಞಾನ, ಕಣ್ಣಿನ ಒಡೆಯ ಮಹಾಜ್ಞಾನಿ ಜಂಗಮನಿಗೆ ಆಹಾರವಾಗುತ್ತದೆ. ಆಗ ಕಣ್ಣು ನೋಡುವ ಸತ್ಯವನ್ನೇ

ನೋಡುತ್ತದೆ.

ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು :

ಶಬ್ದದಲ್ಲಿ ಅರಿವು ಮಾತ್ರ ಇದೆ. ಕೇಳುವ ಕಿವಿಯಲ್ಲಿ ಜ್ಞಾನವೂ ಇದೆ. ಅಜ್ಞಾನವೂ ಇದೆ. ಕಿವಿ ಜ್ಞಾನಕ್ಕೆ ಮಾತ್ರ ಸಂಬಂಧಪಟ್ಟಿದ್ದು, ಮನವೆಂಬ ಅಜ್ಞಾನ ಕಿವಿಯನ್ನು ಆವರಿಸಿಕೊಂಡಿದೆ. ಮನ ಶಬ್ದವನ್ನು ಸ್ವೀಕರಿಸಿ ಅಂಗಕ್ಕೆ ರವಾನೆ ಮಾಡುವುದರಿಂದ ; ಅಂಗದಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ಶಬ್ದ ಅಂಗಕ್ಕೆ ಸುಖ ಇಲ್ಲ ದುಃಖವನ್ನುಂಟು ಮಾಡುತ್ತದೆ. ಸಿಟ್ಟು , ದುರಭಿಮಾನವನ್ನು ಉಂಟು ಮಾಡುತ್ತದೆ.

ದ್ರೌಪದಿಯ ನಗು ದುರ್ಯೋಧನನಿಗೆ ತಲ್ಲಣವನ್ನುಂಟುಮಾಡಿ ಯುದ್ಧಕ್ಕೆ ಕಾರಣವಾಯಿತು.

ಹದಿನೆಂಟು ಅಕ್ಷೋಹಿಣಿ ಸೈನ್ಯಕ್ಕೆ ಸಾವು ನೋವುಗಳುಂಟಾಗಿ ರಕ್ತದ ಕಾಲುವೆ ಹರಿಯಿತು. ದುರ್ಯೋಧನನ ಕಿವಿಯಲ್ಲಿ ಆವರಿಸಿದ ಮನ ಶಬ್ದ ಸ್ವೀಕರಿಸಿದ ಕಾರಣ ಕೌರವ ಸಂತತಿ ಸಂಪೂರ್ಣ ನಾಶವಾಯಿತು. ಕಿವಿಯಲ್ಲಿದ್ದ ಜಂಗಮ(ಅರಿವು)ಮನಕ್ಕೆ ಪರಿಚಯವಾಗಿದ್ದರೆ ಶಬ್ದದ ಅಜ್ಞಾನವನ್ನು ಉಂಡು, ಶಬ್ದವನ್ನು ನಪುಂಸಕಗೊಳಿಸಿ ಅಂಗಕ್ಕೆ ರವಾನಿಸುತ್ತಿದ್ದ. ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುತ್ತಿರಲಿಲ್ಲ. ಆಗ ಅಂಗ ನಿಃಶಬ್ದ ವೇದಿಯಾಗುತ್ತದೆ. ಪ್ರತಿ ಶಬ್ದವನ್ನು ಅನಾವರಣ ಮಾಡಿ ಸ್ವೀಕರಿಸುತ್ತದೆ.

ಶಬ್ದಗಳಲ್ಲಿ ಕು ಶಬ್ದ-ಸು ಶಬ್ದಗಳೆಂದಿಲ್ಲ. ಪಟ್ಟಿ ಮಾಡಲು ಹೋದರೆ ಶಬ್ದ ಯಾವ ಪಟ್ಟಿಯಲ್ಲೂ ನಿಲ್ಲುವುದಿಲ್ಲ. ಶಬ್ದದಲ್ಲಿ ಅರಿವಿದೆ. ಮನ ತನ್ನ ಮೂಗಿನ ನೇರಕ್ಕೆ ಶಬ್ದ ಸ್ವೀಕರಿಸುವುದರಿಂದ ಅಂಗಕ್ಕೆ ಸುಖ ದುಃಖಗಳುಂಟಾಗುತ್ತವೆ. ಕಿವಿಯಲ್ಲಿರುವ ಜಂಗಮನ ಪರಿಚಯ ಮನಕ್ಕೆ ಆದರೆ ಮನ ಜಂಗಮನಿಗೆ ದಾಸನಾಗುತ್ತದೆ. ಶಬ್ದದಲ್ಲಿ ಉಂಟಾದ ಅಜ್ಞಾನ ಜಂಗಮನಿಗೆ ಆಹಾರವಾಗುತ್ತದೆ. ಆಗ ಅಂಗ ನಿಃಶಬ್ದ ಬ್ರಹ್ಮನಾಗುತ್ತದೆ.

ಪ್ರಾಣದಾಹಾರವ ಜಂಗಮವ ವಾಸಿಸುವೆನು :

ಮೂಗಿನಲ್ಲಿ ಬರೀ ಜ್ಞಾನದ ಪರಿಮಳವನ್ನು ಆಸ್ವಾದಿಸುವ ಜಂಗಮನ ಶಕ್ತಿಯಿದೆ. ಆದರೆ ಆವರಿಸಿದ ಮನದಿಂದಾಗಿ ದುರ್ಗಂಧ ಸುಗಂಧವೆಂದು ಅಜ್ಞಾನ ನಿರ್ಮಾಣವಾಗಿದೆ. ಮನಕ್ಕೆ ಬೆಳಿಗ್ಗೆ ಊಟಮಾಡುವ ಆಹಾರ ಸುಗಂಧ. ಅದನ್ನು ಲವಲವಿಕೆಯಿಂದ ಮೃಷ್ಟಾನ್ನವೆಂದು ಉಣ್ಣುತ್ತದೆ. ತಾನು ಉಂಡ ಅನ್ನ ಹೊಟ್ಟೆಯಲ್ಲಿ ಜೀರ್ಣವಾಗಿ ಹೊರಬಂದಾಗ ಮನಕ್ಕೆ ಅದು ಮಲ ; ಮೂಗಿಗೆ ದುರ್ಗಂಧ. ಇತರ ಪ್ರಾಣಿಗಳಿಗೆ ಅದು ಮೃಷ್ಟಾನ್ನ ! ಮಲದ ವಾಸನೆ ಹಂದಿ ನಾಯಿ ಹಸುಗಳಿಗೆ ಸುಗಂಧ ! ಪ್ರಾಣಿಗಳಿಗೆ ಸಹಜ ವಾಸನೆಯ ಜ್ಞಾನವಿದೆ. ಹೀಗಾಗಿ ಸುಗಂಧ. ಅಂಗಕ್ಕೆ ಸಹಜ ವಾಸನೆ ಮೂಗಿನಲ್ಲಿದೆ ; ಅಸಹಜ ವಾಸನೆ ಮೂಗನ್ನು ಆವರಿಸಿದೆ ಹೀಗಾಗಿ ಮಲ ದುರ್ಗಂಧ.

ಮೂಗಿನಲ್ಲಿರುವ ಜಂಗಮನ ಪರಿಚಯ ಮನಕ್ಕೆ ಆದರೆ ಮನದ ಅಜ್ಞಾನದ ವಾಸನೆ ಜಂಗಮನಿಗೆ ಆಹಾರವಾಗುತ್ತದೆ. ಸುಗಂಧ ದುರ್ಗಂಧಗಳು ಕರಗಿ, ಸಹಜ ಪರಿಮಳದ ವಾಸನೆ ಮೂಗಿಗೆ ಅರಿವಾಗುತ್ತದೆ.

ಜಲವನುಂಡ ಸಸಿಗಳು ಮಲ್ಲಿಗೆ ಗುಲಾಬಿ ಚಂಪಕ ಕಮಲ ಸೇವಂತಿಗೆ ಹೂಗಳನ್ನು ನೀಡಿದವು. ಜಲವನುಂಡ ಸಸಿಗಳು ಬಾಳೆ ತೆಂಗು ಮಾವು ಹಲಸು ನೇರಲ ಪೇರಲ ಮೋಸಂಬಿ ಕಲ್ಲಂಗಡಿ ಕರಬೂಜ ಫಲಗಳನ್ನು ನೀಡಿದವು. ಇವು ಮೂಗಿಗೆ ಸುಗಂಧ, ನಾಲಿಗೆಗೆ ರುಚಿ, ಅಂಗಕ್ಕೆ

ಆಹಾರ. ಅಂಗದಿಂದ ಹೊರಬಂದ ಮತ್ತೊಂದು ವಸ್ತು ಕಣ್ಣಿಗೆ ಮಲ, ಮೂಗಿಗೆ ದುರ್ಗಂಧ.

ಸಸಿಗಳಿಗೆ ಹರಿದ ಜಲಕ್ಕೆ ವಾಸನೆಯಿಲ್ಲ, ಬಣ್ಣವಿಲ್ಲ, ರುಚಿಯಿಲ್ಲ. ಇದು ಮೂಗಿನಲ್ಲಿರುವ ಅರಿವಿಗೆ ಮಾತ್ರ ತಿಳಿದಿದೆ. ಅದಕ್ಕೆ ಸುಗಂಧ ದುರ್ಗಂಧವೆಂಬುದಿಲ್ಲ. ಬರೀ ಅರಿವಿನ ಪರಿಮಳ !

ಜಿಹ್ವೆಯಾಹಾರವ ಜಂಗಮವ ನೂಡಿಸುವೆನು :

ನಾಲಿಗೆಯಲ್ಲಿ ಜ್ಞಾನಿ ಜಂಗಮನಿದ್ದಾನೆ ; ಅಜ್ಞಾನವೆಂಬ ಮನವೂ ಆವರಿಸಿದೆ. ಮನಕ್ಕೆ ಖಾರ ಸಿಹಿ ಒಗರು ಹುಳಿ ಸಪ್ಪೆ ಕಹಿಗಳ ಪರಿಚಯವಿದೆ. ಇವುಗಳಲ್ಲಿ ಯಾವುದು ಅತಿಯಾದರೂ ಮನ ತನುವಿಗೆ ಸಂಕಟದ ಸಂದೇಶ ಕಳುಹಿಸಿ ಕೆರಳಿಸುತ್ತದೆ. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ ಎಂದು ಮನಕ್ಕೆ ತಿಳಿಯುವುದಿಲ್ಲ. ಜಂಗಮ ನಾಲಿಗೆಯಲ್ಲಿದ್ದ ಅಜ್ಞಾನದ ಪೊರೆಯನ್ನು ಹರಿಯುತ್ತಾನೆ. ಪದಾರ್ಥ ರುಚಿ ಅರುಚಿ ಕಳೆದುಕೊಂಡು ಜಂಗಮನಿಗೆ ಪ್ರಸಾದವಾಗಿಸುತ್ತದೆ.

ಸಕಲ ಪದಾರ್ಥಗಳು ಜಲದಿಂದ ಗಟ್ಟಿಯಾಗಿವೆ. ತನು ಕೂಡಾ ಜಲದಿಂದ ಗಟ್ಟಿಯಾದ ಅರಿವುಳ್ಳ ಜಲದ ಮೂಟೆ. ಮೆಣಸಿನಕಾಯಿ ಸಸಿಗೆ ಜಲ ಹರಿದು ಖಾರವಾಗಿದೆ. ಕಬ್ಬಿಗೆ ಜಲ ಹರಿದು ಸಿಹಿಯಾಗಿದೆ. ಅರವತ್ತರಿಂದ ನೂರು ಕಿಲೊ ತೂಕದ ಜಲದ ತನುವಿಗೆ ಹತ್ತು ಗ್ರಾಮಿನ ಸಿಹಿ ಕಹಿಗಳು ಕ್ಷಣ ಮಾತ್ರ ಸುಖ ದುಃಖಗಳನ್ನುಂಟುಮಾಡುತ್ತವೆ ; ನಂತರ ತನುವಿನಲ್ಲಿರುವ ಹೇರಳ ಜಲದಲ್ಲಿ ಕರಗಿ ತನ್ನ ರುಚಿ ಕಳೆದು ಕೊಳ್ಳುತ್ತದೆ. ನಂತರ ತಿನ್ನುವ ತುತ್ತುಗಳಲ್ಲಿ ಹುಳಿ ಸಿಹಿ ಕಹಿ ಖಾರ ಒಗರು ಸಪ್ಪೆಗಳಿರುವುದಿಲ್ಲ. ಬರೀ ಜಲಮಾತ್ರ. ನಾಲಿಗೆಯಲ್ಲಿದ್ದ ಜಲ, ಪದಾರ್ಥದಲ್ಲಿದ್ದ ಜಲವನ್ನು ಹೀರುತ್ತದೆ. ಜಲಕ್ಕೆ ರುಚಿಯಿಲ್ಲ ಎನ್ನುವ ತತ್ವ ನಾಲಿಗೆಗೆ ತನ್ನಿಂದ ತಾನೇ ಹೊಳೆಯುತ್ತದೆ.

ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು :

ಚರ್ಮ, ತನುವಿನ ರಕ್ಷಾಕವಚ ! ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳನ್ನು ಹೊರಗೆ ಚೆಲ್ಲದಂತೆ ತನ್ನ ಗರ್ಭದಲ್ಲಿಟ್ಟುಕೊಂಡು ಸುಂದರವಾಗಿ ಕಾಣುವಂತೆ; ಚರ್ಮ ತನುವಿನ ಪದಾರ್ಥಗಳನ್ನು ಪ್ಯಾಕ್ ಮಾಡಿದೆ. ಈ ಚರ್ಮದ ರೋಮ ರೋಮದಲ್ಲಿ ಮಹಾಜ್ಞಾನಿ ಜಂಗಮನಿದ್ದಾನೆ. ಮನವೆಂಬ ಅಜ್ಞಾನವೂ ಅದನ್ನು ಹೊದ್ದಿದೆ. ಚರ್ಮ ; ಚರ್ಮವನ್ನು ಭೋಗಿಸುವುದೆಂದರೇನು ? ಮನಕ್ಕೆ ಈ ಅಜ್ಞಾನ ತಿಳಿದಿಲ್ಲ. ಭೋಗದ ಆಸೆ ಹುಟ್ಟಿಸಿ ಚರ್ಮಕ್ಕೆ ಅಜ್ಞಾನದ ಪಟ್ಟವನ್ನು ಕಟ್ಟುತ್ತದೆ ಮನ ! ಇದು ಭೋಗದ ಆಸೆ ಉಳ್ಳ ಮನಕ್ಕೆ ತಿಳಿದರೆ ಜಂಗಮ ಮನದ ಅಜ್ಞಾನವನ್ನೇ ಪ್ರಸಾದ ಮಾಡಿಕೊಳ್ಳುತ್ತಾನೆ. ಆಗ ಚರ್ಮ ಹೊದ್ದ ಅಂಗ ಜಂಗಮನ ಸೊತ್ತು ; ಬುದ್ಧನ ಸೊತ್ತು . ತಿಳಿದರೆ ಬುದ್ಧ! ತಿಳಿಯದಿದ್ದರೆ ಅಂಗುಲಿ ಮಾಲ !

ಸಕಳ ಪದಾರ್ಥಂಗಳ ನೀಡುವೆನು ಕೂಡಲಸಂಗಾ ನಿಮ್ಮ ಶರಣರಿಗೆ :

ನೋಡಿ, ಕೇಳಿ, ಮುಟ್ಟಿ, ಮೂಸಿಸಿ, ರುಚಿಸಿ ಅಂಗ ಅಜ್ಞಾನದಿಂದ ವಿಕೃತಗೊಳ್ಳುತ್ತದೆ. ಹೀಗೆ ಅಂಗಕ್ಕೆ ಭಂಗವನ್ನುಂಟು ಮಾಡುವ ಮನದ ಅಜ್ಞಾನ ಮನಕ್ಕೆ ತಿಳಿದರೆ; ಮನ ಅರಿವಿನ ಹುಡುಕಾಟಕ್ಕೆ ಅಂಗವನ್ನು ಮೀಸಲಿಡುತ್ತದೆ. ಮಹಾಜ್ಞಾನಕ್ಕೆ ಶರಣು ಹೋದ ಶರಣರು ದೊರೆತರೆ ಅಜ್ಞಾನದ ಸಕಲ ಸುಖ ದುಃಖಗಳನ್ನು ಅವರಿಗೆ ಅರ್ಪಿಸುತ್ತದೆ. ಅಂಗದಲ್ಲಿರುವ ಜ್ಞಾನಿ ಜಂಗಮನಿಗೆ ಮೊರೆಹೋಗಿ ಹೆಳವನಾಗುತ್ತದೆ. ಅಂಗ ಲಿಂಗ ಜಂಗಮನ ಸ್ವತ್ತಾಗುತ್ತದೆ. ಲಿಂಗಾಂಗವಾಗುತ್ತದೆ.

430

ಎಂಬತ್ತು ನಾಲ್ಕು ಲಕ್ಷ ಮುಖದೊಳಗೊಂದೆ ಮುಖವಾಗಿ
ಕಾಡಿ ನೋಡೆನ್ನನು, ಬೇಡಿ ನೋಡೆನ್ನನು.
ಬೇಡದಿದ್ದಡೆ, ಅಯ್ಯಾ , ನಿಮಗೆ ಪ್ರಮಥರಾಣೆ !
ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು,
ಕೂಡಲಸಂಗಮದೇವಾ.

ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಿವೆ. ಆ ಜೀವಕುಲಗಳೆಲ್ಲ ನಿನ್ನ ಚೇತನವನ್ನೇ ಹೊಂದಿವೆ. ಹಾಗೆ ತಿಳಿಯುವ ಅರಿವು, ನಿನ್ನ ಪ್ರಸಾದದಿಂದ ಈ ಅಂಗಕ್ಕೆ ಲಭಿಸಿದೆ.

''ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ ಅಜಾಂಡಕಾಂಡ ಹರಿವಿರಂಚಿಗಳು ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ ! ಕೂಡಲಸಂಗನ ಮಹಾ ಮನೆಯಲ್ಲಿ ಅಸ್ತಿ ಗ್ರಾಹಕನೆಂಬ ಗಣೇಶ್ವರನ ಇಚ್ಛಾ ಮಾತ್ರದಿಂದ ಜಗ ಜುಗವಯ್ಯಾ''

ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳು ಜಲಬಿಂದುವಿನಿಂದಲೇ ಹುಟ್ಟಿವೆ. ಜಲವೇ ಈ ಜೀವಿಗಳಿಗೆ ಆಧಾರ. ಜಲದಿಂದಲೇ ಚೇತನ. ಜಲಕುದ್ದು, ಭೂಮಿ ಕಲ್ಲು ಖನಿಜವಾಗಿ ಗಟ್ಟಿಗೊಂಡಿದೆ. ಜಲದಿಂದಲೇ ನಾಗ ಹುಟ್ಟಿತು. ಸಪ್ತ ಸಾಗರಗಳು ಹುಟ್ಟಿದವು. ಭೂಮಿ ಹುಟ್ಟಿತು. ಈ ಭೂಮಂಡಲವನ್ನು ನಾಗಶೇಷ ತನ್ನ ಹೆಡೆಯಲ್ಲಿ ಹೊತ್ತ . ಈ ನಾಗಶೇಷನನ್ನು ನಾಗಾಭರಣನಾದ ನಾಗಭೂಷಣ ಧರಿಸಿದ. ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳು, ಅದು ವಾಸ ಮಾಡುವ ಜಲ ಭೂಮಿ ನಾಗನ ತಲೆಯ ಮೇಲೆ. ಆ ನಾಗ, ನಾಗಭೂಷಣನ ಕೊರಳೊಳಗೆ ಒಂದು ಮುಖವಾಗಿ ಪವಡಿಸಿದೆ. ಅಸ್ತಿ ಗ್ರಾಹಕನೆಂಬ ಲಿಂಗವುಳ್ಳ ಅಂಗದ ಇಚ್ಛಾ ಮಾತ್ರದಿಂದ ಈ ಜಗ ನಿರ್ಮಾಣವಾಗಿದೆ. ಲಿಂಗ ಮಧ್ಯೆ ಸರ್ವ ಜಗಂ.

ಅರಿದಡೆ ಸೃಷ್ಟಿಕರ್ತ ತಾನೇ. ಅರಿಯದಿದ್ದಡೆ ಪ್ರಳಯಕರ್ತನೂ ತಾನೇ. ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳ ಜನನಕ್ಕೆ ಕಾರಣ. ಆ ಜಲಬಿಂದುವೇ ಅಸ್ತಿ ಗ್ರಾಹಕನೆಂಬ ಅರಿವಿನ ಅಂಗವುಳ್ಳ ಲಿಂಗಯ್ಯನ ಜನನಕ್ಕೂ ಕಾರಣ. ಅಂಗವೆಂಬ ಅರಿವಿನ ಮುಖವುಳ್ಳ ಲಿಂಗಯ್ಯನ ಮುಖದೊಳಗೆ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳು ಏಕಮುಖವಾಗಿ ಅಡಗಿವೆ. ಅವು ಅಂಗದ ಕಣ ಕಣದಲ್ಲಿರುವ ಅರಿವಿನ ಲಿಂಗಗಳೇ ಆಗಿವೆ.

ತಿಳಿದರೆ, ಕಾಡಿ ನೋಡಿದರೂ; ಬೇಡಿ ನೋಡಿದರೂ ಅವು ಅರಿವಿನ ಲಿಂಗಗಳೇ ಆಗಿವೆ. ಎಂಬತ್ತು ನಾಲ್ಕು ಲಕ್ಷ ಮುಖದೊಳಗೊಂದು ಮುಖವಾಗಿ ಕಾಡಿ ನೋಡು ಎನ್ನನು : ನೀನೇ ಎಂದು ಗುರುತಿಸುವೆ. ಬೇಡಿ ನೋಡು ಎನ್ನನು : ನಿನ್ನ ಸ್ವರೂಪವೆ ಎಂದು ಪ್ರಮಾಣಿಸುವೆ. ಬೇಡದಿದ್ದಡೆ ಅಯ್ಯಾ ನಿಮಗೆ ಪ್ರಮಥರಾಣೆ ! ನೀನಾವ ಮುಖದಲ್ಲಿ ಬಂದು ಬೇಡಿದಡೀವೆನು. ನಿನ್ನ ಸೊಮ್ಮು ನಿನಗೆ ಕೊಡಲು ನನಗಾವ ಅಡ್ಡಿಯೂ ಇಲ್ಲ!

431

ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ ;
ಕಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ ;
ಬಡವಾದೆನಯ್ಯಾ ಎನ್ನ ತನು ಮನ ಧನವ ಬೇಡುವರಿಲ್ಲದೆ.
ಕಾಡುವ ಬೇಡುವ ಶರಣರ ತಂದು
ಕಾಡಿಸು ಬೇಡಿಸು ಕೂಡಲಸಂಗಮದೇವಾ.

ಅಂಗದಲ್ಲಿ ಅರಿವೆಂಬ ಗುರುದೇವನಿದ್ದರೂ ಆತನನ್ನು ಒಲಿಸಿಕೊಂಡ ಶರಣರ ಕೃಪಾಕಟಾಕ್ಷವಿಲ್ಲದೆ ಕರ್ರನೆ ಕಂದಿದೆ. ಅಂಗದಲ್ಲಿರುವ ಲಿಂಗದೊಂದಿಗೆ ನುಡಿಯುವ ಶರಣರಿಲ್ಲದೆ ಕರ್ರನೆ ಕಂದಿದೆ. ಅಂಗವನ್ನು , ಅಂಗದಲ್ಲಿರುವ ಮನವನ್ನು , ಅಂಗದಲ್ಲಿರುವ ಅರಿವನ್ನು ಬೇಡುವ ಶರಣರಿಲ್ಲದೆ ಅಂಗ ಮೂರೂ ವಿಧದಲ್ಲಿ ಬಡವಾಗಿದೆ.

ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸು ಕೂಡಲಸಂಗಮದೇವಾ :

ಜ್ಞಾನಿಗಳು ಕಾಡದಿದ್ದರೆ ಅಂಗದಲ್ಲಿ ಜ್ಞಾನ ಪ್ರಕಟವಾಗುವುದು ಸಾಧ್ಯವಾಗುವುದಿಲ್ಲ. ಬುದ್ಧ ಅಂಗುಲಿಮಾಲನಿಗೆ ದರ್ಶನ ನೀಡದಿದ್ದರೆ ಅಂಗುಲಿಮಾಲ ಬುದ್ಧನಾಗುತ್ತಿರಲಿಲ್ಲ. ಅಥವಾ ಅಂಗಕ್ಕೆ ಶರಣರ ದರ್ಶನವಾಗದಿದ್ದರೆ ಅಂಗ ಅರಿವಿಗೆ ಶರಣುಹೋಗಿ ಶರಣನಾಗಲು ಸಾಧ್ಯವಾಗುವುದಿಲ್ಲ.

ಮಹಾಜ್ಞಾನಿ ಶರಣರನ್ನು ಹುಡುಕಿ ಅವರನ್ನು ಕಾಡಿ ಬೇಡದ ವಿನಹ ಅಂಗದಲ್ಲಿದ್ದ ಅರಿವು ಅಂಗಕ್ಕೆ ಬಳಕೆಯಾಗುವುದಿಲ್ಲ. ಅಂಗದಲ್ಲಿರುವ ಅರಿವು ಅಂಗಕ್ಕೆ ಬಳಕೆಯಾಗದ ಅಂಗಗಳು ಮುಖವಾಡದ ಅಂಗಗಳು. ಮನ ಅಂಗಕ್ಕೆ ಅರಿವಿನ ವೇಷ ಹಾಕಿ ವ್ಯವಹಾರ ಮಾಡುತ್ತದೆ. ಅವಕಾಶ ಸಿಕ್ಕರೆ ಕಳ್ಳ, ಭ್ರಷ್ಟ , ಲಂಚಕೋರ, ಹಾದರಿಗ, ಅತ್ಯಾಚಾರಿಯೆಂದು ಹಣೆ ಪಟ್ಟಿ ಕಟ್ಟಿಕೊಳ್ಳಲೂ ಹೇಸುವುದಿಲ್ಲ.

ಜ್ಞಾನ ಭಂಡಾರಿ ಬಸವಣ್ಣನವರು, ಮನ ಅರಿವಿನಿಂದ ಪಳಗಲು, ಅರಿವಿಗೆ ಹೋಗಲು ಅದಕ್ಕೆ ಕಾಡುವ ಬೇಡುವ ಜ್ಞಾನಿಗಳ ಅವಶ್ಯಕತೆಯಿದೆ ಎಂದಿದ್ದಾರೆ.

432

ವೇಷ ಅವಿಚಾರದಲ್ಲಿ ನಡಹಿತ್ತೆಂದು
ಆಸುರದಲ್ಲಿ ಬಗುಳುವ ಕುನ್ನಿ, ನೀ ಕೇಳಾ ;
ಹರಿಯನೆ ದಾಸನ ವಸ್ತ್ರವ ? ಉಣ್ಣನೆ ಚೆನ್ನಯ್ಯನ ಸಂಗಾತ ?
ಪರವಧುವ ಕೊಳ್ಳನೆ ಸಿಂಧು ಬಲ್ಲಾಳನ ?
ಬೇಡನೆ ಸಿರಿಯಾಳನ ಮಗನ ?
ನಡೆವುದು ನುಡಿವುದು ಅವಿಚಾರವೆಂದು,
ಭಾವ ವಿಭಾವವೆಂದು ಕಂಡೆನಾದಡೆ ತಪ್ಪೆನ್ನದು ಮೂಗ ಕೊಯ್ಯಿ !
ಕೂಡಲಸಂಗಮದೇವಾ.

ಅಂಗದಲ್ಲಿರುವ ಮನಕ್ಕೆ ಸಹಜ ಅರಿವು ಪರಿಚಯವಾಗದಿದ್ದರೆ ಅದು ವೇಷ-ಭೂಷಣ,

ವಿಚಾರ-ಅವಿಚಾರ, ಭಾವ-ವಿಭಾವದಿಂದ ನಡೆದು ಕೊಳ್ಳುತ್ತದೆ. ಒಮ್ಮೆ ತನುವನ್ನು ವಿಚಾರವಂತನನ್ನಾಗಿ ಕರೆಯಿಸಿಕೊಳ್ಳುತ್ತದೆ ; ಮತ್ತೊಮ್ಮೆ ಅವಿಚಾರಿಯನ್ನಾಗಿಸುತ್ತದೆ. ಒಮ್ಮೆ ಭಾವ ಅರಳಿ ಮೈ ಮರೆಸುತ್ತದೆ; ಮತ್ತೊಮ್ಮೆ ದುರ್ಭಾವಿಯನ್ನಾಗಿ ಮಾಡುತ್ತದೆ. ಮನ, ತನುವಿನಲ್ಲಿ ಸಹಜ ಅರಿವನ್ನು ಹುಡುಕುವುದು ಸರಳವಲ್ಲ. ಅದು ದೇ(ಅರಿವಿನ)ವನ ಅನೇಕ ಪರೀಕ್ಷೆಗಳಿಗೆ ಗುರಿಯಾಗಬೇಕಾಗುತ್ತದೆ. ಜ್ಞಾನ ತಂತ್ರಗಾರಿಕೆ ತಿಳಿದ ಶರಣರ ಪರಿಚಯವೂ ಮನಕ್ಕೆ ಬೇಕಾಗುತ್ತದೆ.

ಅಣ್ಣನವರು ತನುವಿನಲ್ಲಿರುವ ಮನಕ್ಕೆ , ಅವಸರದಲ್ಲಿ ಬಗುಳುವ ಕುನ್ನಿಯೇ ನೀನು ಸರಿಯಾಗಿ ಕೇಳು : ಒಮ್ಮೆ ತನುವಿಗೆ ವೇಷ ಹಾಕುವೆ, ಮತ್ತೊಮ್ಮೆ ಭಾವದಿಂದ ನುಡಿದು ದುರ್ಭಾವಿಯಾಗುವೆ. ವಿಚಾರ ಅವಿಚಾರಗಳು ನಿನ್ನಿಂದಾಗಿ ತನುವಿನ ಮೂಲಕ ಪ್ರಕಟವಾಗಿ ತನು ಘೂಷಣೆಗೆ ಒಳಗಾಗುವುದು. ಎಲೆ ಕುನ್ನಿಯೆ ನಾಲ್ಕು ಮಹಾನುಭಾವರು ಮೆರೆದ ಸತ್ಯ ಕತೆಯನ್ನು ಹೇಳುವೆ ಸರಿಯಾಗಿ ಕೇಳು :

ಹರಿಯನೆ ದಾಸನ ವಸ್ತ್ರವ :

ದಾಸಿಮಾರ್ಯರು ಸುಂದರವಾದ ಬೆಲೆಬಾಳುವ ವಸ್ತ್ರವ ನೆಯ್ದರು. ಮಾರಲೆಂದು ಸಂತೆಗೆ ಹೋದರು. ಯಾರೂ ಕೇಳಲಿಲ್ಲ. ದಾರಿಯಲ್ಲಿ ಕುಳಿತಿದ್ದ ವಸ್ತ್ರವಿಲ್ಲದಾತನಿಗೆ ಅದನ್ನು ಹೊದಿಸಿದರು. ಅದನ್ನು ಆತ ಪರಪರನೆ ಹರಿದು ಧರಿಸಿಕೊಂಡ. ದಾಸಿಮಾರ್ಯರು ಆನಂದದಿಂದ ಹೊದಿಸಿದರು. ಹರಿದುದನ್ನು ಕೂಡಾ ಆನಂದದಿಂದ ನೋಡಿದರು. ಅವರ ಭಾವ ದುರ್ಭಾವವಾಗಲಿಲ್ಲ. ಅವರು ನಿರ್ಭಾವಿ ತತ್ತ್ವಜ್ಞಾನಿಗಳು. ಎಲೆ ಮನವೆಂಬ ಕುನ್ನಿಯೇ ಸಹಜತೆ ಎಂದರೆ ಇದು. ಸರಿಯಾಗಿ ಕೇಳಿ, ಸಹಜ ಅರಿವೆಂಬ ಗುರುವಿನ ಮೊರೆಹೋಗು !

ಉಣ್ಣನೆ ಚೆನ್ನಯ್ಯನ ಸಂಗಾತ :

ಮಾದಾರ ಚೆನ್ನಯ್ಯ ಸಹಜ ಅರಿವುಳ್ಳ ಮಹಾಜ್ಞಾನಿ. ಆತ ಉಣ್ಣುವುದು ನಿತ್ಯ ಅಂಬಲಿ. ಅದನ್ನೇ ಜಂಗಮನಿಗೆ ನೀಡಿ ಉಣ್ಣುತ್ತಿದ್ದ. ಜಂಗಮ ಉಂಡು ತೃಪ್ತಿಯಿಂದ ತೇಗಿದ. ಚೆನ್ನಯ್ಯ ತತ್ತ್ವವನ್ನು ತಿಳಿದ ಮಹಾಜ್ಞಾನಿ.

ತಿನ್ನುವ ಪ್ರತಿ ಪದಾರ್ಥವೂ ಜಲದಿಂದ ಗಟ್ಟಿಯಾಗಿದೆ. ತನು ಕೂಡಾ ಜಲದಿಂದ ಭರಿತವಾಗಿದೆ. ಸಿಹಿಯ ತನಿವಣ್ಣಾದರೇನು? ಹುಳಿ ಮಜ್ಜಿಗೆಯಾದರೇನು? ಅಂಬಲಿಯಾದರೇನು? ಇದೆಲ್ಲ ಜಲದಿಂದಲೇ ಆಗಿದೆ. ತನುವಿನ ಜಲದಲ್ಲಿ ಪದಾರ್ಥದ ಜಲ ಬೆರೆತು ಕ್ಷಣಾರ್ಧದಲ್ಲಿ ರುಚಿ ಕಳೆದುಕೊಳ್ಳುತ್ತದೆ. ರುಚಿ-ಅರುಚಿಯನ್ನು ಮೀರಿದ ಚೆನ್ನಯ್ಯ ಶರಣರ ಪ್ರಸಾದ ತತ್ವವನ್ನು ತಿಳಿದು ಧನ್ಯನಾಗು ; ಎಲೆ ಕುನ್ನಿಯೆ.

ಪರವಧುವ ಕೊಳ್ಳನೆ ಸಿಂಧು ಬಲ್ಲಾಳ :

ಕಾವಿ ವೇಷ ಹಾಕಿಕೊಂಡು ನಿಷ್ಕಾಮಿಯೆಂದು ಬೊಗಳುವ ಕುನ್ನಿಯೇ ಸಿಂಧು ಬಲ್ಲಾಳರ ಸಹಜ ನಿಷ್ಕಾಮ ಸೂತ್ರವನ್ನು ಸಾಧ್ಯವಾದರೆ ಪಾಲಿಸು : ಸಿಂಧುಬಲ್ಲಾಳರು ಮಹಾರಾಜರು. ಸಹಜ ನಿಷ್ಕಾಮ ಸೂತ್ರ ಅರಿತು ಪಾಲಿಸಿದ ಮಹಾವೀರರು ಅವರು. ಒಮ್ಮೆ ಮಹಾಜ್ಞಾನಿ ಸಹಜ ಜಂಗಮ, ಪರೀಕ್ಷೆ ಮಾಡಲು ಸಿಂಧುಬಲ್ಲಾಳರ ಹೆಂಡತಿಯನ್ನು ಕೇಳಿದರು. ಆಗ ಸಿಂಧುಬಲ್ಲಾಳ ಆಗಲಿ ತಮ್ಮಿಚ್ಛೆಯೆಂದರು.

ಶರಣ ಸತಿ ಲಿಂಗ ಪತಿ : ಅಂಗವೆಂಬುದು ಒಂದು ಮನೆ. ಆ ಮನೆಯಲ್ಲಿ ಅರಿವೆಂಬ ಲಿಂಗ ಪತಿದೇವನಾಗಿ, ಮನವೆಂಬ ಶರಣ ಸತಿಯಾಗಿ ವಾಸಮಾಡಿದ್ದಾಳೆ. ಮನವೆಂಬ ನಾನು ಸತಿ, ಅರಿವೆಂಬ

ಲಿಂಗ(ಅವನು)ವೇ ಪತಿಯೆಂದು ತಿಳಿಯದಿದ್ದರೆ ಸತಿ ಹಾದರಗಿತ್ತಿ. ಈ ಮನದ ಹಾದರಗಿತ್ತಿಯ ವೇಷಗಳು ಅನೇಕ. ಈಕೆ ಪತಿ ವಾಸವಿದ್ದ ಅಂಗವೆಂಬ ಮನೆಗೆ ಅನೇಕ ವೇಷ ಹಾಕಿ ಗರತಿಯಂತೆ ಮೆರೆಯುತ್ತಾಳೆ. ಈ ಅಜ್ಞಾನದ ಹೆಂಡತಿಯನ್ನು ಸಿಂಧುಬಲ್ಲಾಳ ಅರಿವಿನ ಕಾಮದಾಹ ತೀರಿಸಿಕೊಳ್ಳಲು ಬಂದ ಜಂಗಮನಿಗೆ ನೀಡಿ ಕೃತಾರ್ಥನಾದ. ಎಲೆ, ಮನವೆಂಬ ಹಾದರಗಿತ್ತಿಯೇ ಆತುರದಲ್ಲಿ ಬೊಗಳುವ ಕುನ್ನಿಯೇ, ಇದು ನಿನಗೆ ಸಾಧ್ಯವಾದರೆ ಮಾಡು, ಧನ್ಯನಾಗುವಿ ; ಸಿಂಧುಬಲ್ಲಾಳನಂತೆ!

ಬೇಡನೆ ಸಿರಿಯಾಳನ ಮಗನ :

ಸಿರಿಯಾಳ ಚಂಗಳೆಯರಿಬ್ಬರು ಶರಣ ದಂಪತಿಗಳು. ಮಗನೆಂಬ ಮೋಹವನ್ನು ಜಂಗಮನಿಗಿತ್ತ ಮಹಾ ತತ್ವಜ್ಞಾನಿಗಳು. ಅಂಗದಲ್ಲಿ ಆವರಿಸಿದ ಮಗನೆಂಬ ಮೋಹವನ್ನು ಅರಿವೆಂಬ ಜಂಗಮನಿಗೆ ಕೊಡಲು ಸಾಧ್ಯವೇ? ಎಲೆ ಮನವೆ ಸಾಧ್ಯವಾದರೆ ಇವರಿಂದ ಕಲಿತುಕೋ.

ಧೃತರಾಷ್ಟ್ರ ಕುರುಡನಲ್ಲ! ಮಗನ ಮೇಲಿನ ಪ್ರೇಮ ಕುರುಡು, ಈ ಪ್ರೇಮ ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು ಬಲಿ ಪಡೆಯಿತು. ನೂರಾ ಒಂದು ಜನ ಮಕ್ಕಳು, ಬಂಧು ಬಳಗ ಸತ್ತು ಹೋಯಿತು. ಆದರೂ ಮಗನ ಮೇಲಿನ ಮೋಹದ ದಾಹ ಧೃತರಾಷ್ಟ್ರನಿಗೆ ತಗ್ಗಲಿಲ್ಲ. ಭೀಮನನ್ನು ಕೊಂದಾದರೂ ಸತ್ತ ಮಗನಿಗೆ ಉಡುಗೊರೆ ಕೊಡಲು ತೀರ್ಮಾನಿಸಿದ. ಕ್ರಿಷ್ಣನ ಸಹಾಯದಿಂದ ಭೀಮ ಬದುಕಿ ಉಳಿದ. ಇಂತಹ ಕುರುಡು ಮೋಹವೆಂಬ ಮಗನನ್ನು ಅರಿವಿನ ಜಂಗಮನಿಗೆ ಕುಟ್ಟಿ ಉಣಬಡಿಸಿದರು ಸಿರಿಯಾಳ ಚಂಗಳೆಯರು. ಎಲೆ ಮನವೆಂಬ ಕುನ್ನಿಯೇ ಅಂಗದಲ್ಲಿದ್ದು ಅಂಗದೊಂದಿಗೆ ಬೊಗಳುವುದು ಬಿಟ್ಟು ಸಾಧ್ಯವಾದರೆ ಸಹಜತೆಯತ್ತ ಸಾಗು. ಆ ಸಹಜತೆಯೆಂಬ ಸಂಗಮನಾಥನು ಕೂಡಾ ಅಂಗದಲ್ಲಿಯೇ ಪವಡಿಸಿದ್ದಾನೆ.

433

ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳಡೆ
ಸಂಗಾ, ನಿಮ್ಮ ತೊತ್ತು ತನಕ್ಕೆ ದೂರವಯ್ಯಾ.
ಕದ್ದು ತಂದಡೆ ಕೈ ಹಿಡಿದೊಮ್ಮೆ ಬಡಿದು
ತುಡುಗುಣಿತನವ ಬಿಡಿಸಯ್ಯ.
ಜಂಗಮ ಮನೆಗೆ ಬಂದಲ್ಲಿ ಓಸರಿಸಿದಡೆ
ಹಿಡಿದು ಮೂಗು ಕೊಯ್ಯಯ್ಯಾ,
ಕೂಡಲಸಂಗಮದೇವಾ!

ನೀನಿಕ್ಕಿದ ತನುವಿನ ಮನೆಯಿದು. ವಂಚನೆಯಿಲ್ಲದ ಮನೆ. ಈ ಮನೆಯಲ್ಲಿ ವಂಚನೆ ಎಂಬುದೇ ಇಲ್ಲ. ಇದು ಸಂಗಯ್ಯನ ಮನೆ, ಅರಿವಿನ ಮನೆ ! ನೀವು ಪ್ರಸಾದಿಸಿದ ಈ ಅರಿವಿನ ಮನೆಯ ತೊತ್ತಿಗ-ಸೇವಕ ನಾನಯ್ಯಾ. ಈ ಮನೆಯಲ್ಲಿ ವಂಚನೆಯುಳ್ಳಡೆ ನಿಮ್ಮ ತೊತ್ತು(ಸೇವಕ) ತನಕ್ಕೆ ದೂರವಯ್ಯಾ.

ಕದ್ದು ತಂದಡೆ ಕೈ ಹಿಡಿದೊಮ್ಮೆ ಬಡಿದು ತುಡುಗುಣಿ ತನವ ಬಿಡಿಸಯ್ಯಾ:

ತನುವಿನ ಮನೆಯಲ್ಲಿ ಏನೆಲ್ಲ ಸಂಪತ್ತಿದೆ. ಈ ಮನೆಗೆ ಏನೆಂದು ಕದ್ದು ತರಲಿ ? ಕದ್ದು ತರುವ ವಸ್ತುಗಳೆಲ್ಲ ಈ ತನುವಿನ ಮನೆಯಿಂದಲೇ ಸೃಷ್ಟಿಯಾಗಿವೆ. ಭೂಮಿಯೊಳಗಿದ್ದ ಹೇಮವನ್ನು

ಹೊರತಂದದ್ದು ಈ ಮನೆಯಿಂದಲೇ. ಹೇಮ ಅರಿವಿನ ಮನೆಗೆ ತೃಣ ಸಮಾನ. ಕಾಮಿನಿ (ವಿಷಯ) ಯನ್ನು ಕದ್ದು ತರುವುದೆಂದರೆ ಅದು ಕೂಡಾ ಈ ಮನೆಯಿಂದಲೇ ಉದಯಿಸಿದ್ದು. ಭೂಮಿಯನ್ನು ಕದಿಯಲು ಹೋದರೆ ಅದು ಕೂಡಾ ಅಂಗದಂತೆ ಜಲದಿಂದಲೇ ಗಟ್ಟಿಯಾಗಿ ಭೂಮಿ ಎನ್ನಿಸಿಕೊಂಡಿದೆ. ಇನ್ನು ಪಾಂಡಿತ್ಯವನ್ನು ಕದ್ದು ತರಲು ಹೋದರೆ ಭಗವದ್ಗೀತೆ, ಬೈಬಲ್, ವೇದ, ಆಗಮ, ಉಪನಿಷತ್ತು, ರಾಮಾಯಣ, ಮಹಾಭಾರತ ಗ್ರಂಥಗಳು ಕೂಡಾ ಈ ತನುವಿನ ಮನೆಯಿಂದಲೇ ಜನಿಸಿವೆ.

ಈ ತನುವಿನ ಮನೆಯಲ್ಲಿ ವಾಸಿಸುವ ಅರಿವೆಂಬ ಪಶುಪತಿ ನೀನು. ನಿನ್ನ ವಾಹನ ಮನವೆಂಬ ಪಶು ನಾನು. ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದರೆ ಪಶುವೇನು ಬಲ್ಲುದು ? ಹಸುರೆಂದೆಳೆಸುವುದು. ತುಡುಗುಣಿಯೆಂದು ಹಿಡಿದು ಬಡಿಯದ ಮುನ್ನ ತಂದೆ ನಿಮ್ಮ ಬಯ್ಯದಂತೆ ಮಾಡು.

ಅರಿವಿನ ಮನೆಯಲ್ಲಿ ಅರಿವಿನ ತಂದೆಗೆ ಹುಟ್ಟಿದ ಅಜ್ಞಾನಿ ಮಗ ನಾನು. ನೀವು ಮನೆಗೆ ಬಂದಲ್ಲಿ ಆದರಿಸದಿದ್ದರೆ ಹಿಡಿದು ಮೂಗು ಕೊಯ್ಯಿ ಕೂಡಲಸಂಗಯ್ಯ ಸರ್ವ ನಿವಾಸಿ ನೀನು. ನಿನ್ನ ತೊತ್ತು ನಾನು. ನಿಮ್ಮ ಮಾತು ಕೇಳದಿದ್ದರೆ ತೊತ್ತು ತನಕ್ಕೆ ದೂರವಯ್ಯಾ.

434

ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ ;
ಬಲ್ಲಾಳನ ವಧುವ ಬೇಡಿದಾತ ನೀ ದೇವ !
ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ ;
ದಾಸನ ವಸ್ತ್ರವ ಬೇಡಿದಾತ ನೀ ದೇವ !
ದೇವನಿಂತಹನೆಂದು ತೋರಿಕೊಡುವೆನು ಗಣಂಗಳಿಗೆ ;
ಸಿರಿಯಾಳನ ಮಗನ ಬೇಡಿದಾತ ನೀ ದೇವ !
ಕೂಡಲಸಂಗಮದೇವ ಜಂಗಮ ಮುಖ ಲಿಂಗವಾಗಿ,
ಕಾಡಿ ನೋಡುವ, ಬೇಡಿ ನೋಡುವ !

ದೇವರೆಂದರೆ ಅರಿವು. ಅಂಗದಲ್ಲಿರುವ ಅರಿವೇ ಗುರುದೇವನು. ಆ ಗುರುದೇವನೇ ಮಹಾದೇವನು. ಆ ಮಹಾದೇವನೇ ಸದಾಶಿವನು. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮನು. ಬ್ರಹ್ಮನಿದ್ದ ಅಂಗದಲ್ಲಿ ಆತನ ಅರಿವಿನ ಕಿರಣಗಳಿಂದ ಮನ ಮತ್ತು ಅದರ ಭ್ರಮೆಯೂ ಸೃಷ್ಟಿಯಾಗಿದೆ. ಅಂಗಕ್ಕೆ (ಭ್ರಮೆ) ಮನವೇ ಹೆಚ್ಚು ಬಳಕೆಯಾಗುತ್ತಲಿದೆ.

ಭ್ರಮೆಯನ್ನು ಸೃಷ್ಟಿ ಮಾಡಿದ ಮನ ಅನೇಕ ಮಾತಿಲ್ಲದ ದೇವರನ್ನು ಮಣ್ಣು ಕಲ್ಲು ಕಟ್ಟಿಗೆ ಲೋಹಗಳಿಂದ ಸೃಷ್ಟಿ ಮಾಡಿ, ಭ್ರಮೆಯಿಂದ ಅದನ್ನೇ ದೇವರೆಂದು ಅಂಗವನ್ನು ಹಿಡಿದು ಪೂಜಿಸುತ್ತಲಿದೆ. ಆ ದೇವರನ್ನು ಪೂಜಿಸುವ ಮನಕ್ಕೆ ದೇವರು ಎಂದೂ ಕಾಣುವುದಿಲ್ಲ. ಕಲ್ಲುದೇವರನ್ನು ಸೃಷ್ಟಿಸಿದ ಮನಕ್ಕೆ ನಿಜ ದೇವರ(ಅರಿವ)ನ್ನು ಪೂಜಿಸುವ ಬಯಕೆ ಆದರೆ ಆಗ ಅದು ನಿಜದೇವರನ್ನು ಹುಡುಕಲು, ಅರಿವಿನ ದೇವನನ್ನು ಕಂಡ ಶರಣರನ್ನು ಹುಡುಕಲು ತೊಡಗುತ್ತದೆ. ಹೀಗೆ ದೇವರ(ಅರಿವ)ನ್ನು ಹುಡುಕುತ್ತ ಬಂದ ಬಯಕೆಯುಳ್ಳ ಗಣಂಗಳಿಗೆ ಬಸವಣ್ಣನವರು ಈ

ಸೂತ್ರವನ್ನು ಕರುಣಿಸಿದ್ದಾರೆ.

ಬಲ್ಲಾಳನ ವಧುವ ಬೇಡಿದಾತ ನೀ ದೇವ :

ಅಂಗವನ್ನೇ ಮನೆ ಮಾಡಿಕೊಂಡು ಲಿಂಗ(ಅರಿ)ವೆಂಬ ಪತಿದೇವ ಅಂಗದಲ್ಲಿಯೇ ವಾಸವಾಗಿದ್ದಾನೆ. ಆತನ ನೆರಳಾಗಿ ಮನವೆಂಬ ಸತಿಯೂ ಅಂಗವನ್ನೇ ಆಶ್ರಯಿಸಿದ್ದಾಳೆ. ಮನವೆಂಬ ಸತಿ ತನಗೆ ರುಚಿಸಿದೆಡೆಗೆ ಅರಿವೆಂಬ ಪತಿಯಿದ್ದ ಅಂಗವನ್ನೆ ಕರೆದುಕೊಂಡು ಹೋಗಿ ಅಂಗದೊಂದಿಗೆ ಭೋಗಿಸುತ್ತಾಳೆ. ಅದನ್ನು ಅರಿವೆಂಬ ಪತಿಯ ಗಮನಕ್ಕೆ ತರುವುದಿಲ್ಲ. ಹೆಂಡ ಮಾಂಸ ಹಾದರ ಜೂಜು ಕೀಟಲೆ ಎಂದರೆ ಮನಕ್ಕೆ ಇಷ್ಟ ! ಆಭರಣ ಭೂಮಿ ವಸ್ತ್ರ ಅಧಿಕಾರ ಪದವಿಗಳೆಂದರೆ ಈಕೆಗೆ ಬಲು ಇಷ್ಟ ! ಅರಿವಿನ ಗಂಡನಿಗೆ ಇದಾವುದೂ ಬೇಡ. ಹೀಗೆ ಗಂಡನಿದ್ದ ಮನೆಯನ್ನೇ (ಅಂಗ) ತನಗೆ ಬೇಕಾದ ಜಾಗಕ್ಕೆ ಕರೆದೊಯ್ಯುತ್ತಾಳೆ. ಅವು ಸಿಗದಿದ್ದರೆ ಕಳುವು ಯುದ್ಧ ಕಪಟ ಮೋಸ ತನದಿಂದ ಪಡೆಯುತ್ತಾಳೆ. ತಾನು ಮಾಡಿದ ಈ ಕೆಲಸವನ್ನು ಅರಿವಿ(ಗಂಡ)ನ ಅಂಗಕ್ಕೆ ಹಣೆಪಟ್ಟಿಯಾಗಿ ಕಟ್ಟುತ್ತಾಳೆ. ಇಂತಹ ಅಂಗನೆಯನ್ನು ಅಂಗದಲ್ಲಿಯೇ ಇರುವ ಅರಿವಿನ ಮಾತು ಪಾಲಿಸುವ ಜಂಗಮನಿಗೆ ಒಪ್ಪಿಸಿದ ವೀರಬಲ್ಲಾಳ !

ಅಂಗ ಹೆಣ್ಣಾದರೇನು ? ಗಂಡಾದರೇನು ? ಅದು ಅಂಗ ಮಾತ್ರ ! ಮನವೆಂಬುದು ಹೆಣ್ಣು; ಅರಿವು ಎಂಬುದು ಗಂಡು. ಬಲ್ಲಾಳನೆಂಬ ಶರಣ ಸತಿಯಾಗಿ ; ಜಂಗಮನನ್ನು ಪತಿಯನ್ನಾಗಿ ಮಾಡಿಕೊಂಡಿದ್ದ ತನ್ನ ಸತಿಯನ್ನು ಜಂಗಮನಿಗೆ ಒಪ್ಪಿಸಿದ.

ಅರಿವನ್ನು ತಿಳಿಯಲು ಬಂದ ಗಣಂಗಳೇ ತಾವು ಇದನ್ನು ಪಾಲಿಸಿದರೆ ತಮಗೆ ತೋರಿಸುವೆನು ದೇವನಿಂತಹನೆಂದು ! ಆತ ವೀರಬಲ್ಲಾಳನ ವಧುವನ್ನೇ ಬೇಡಿದಾತ. ಇದಕ್ಕೆ ತಾವು ಸಿದ್ಧರಿದ್ದರೆ ಅವಶ್ಯ ದೇವ ನಿಮ್ಮೆಲ್ಲರಿಗೆ ಕಾಣುತ್ತಾನೆ ಎನ್ನುತ್ತಾರೆ ಬಸವಣ್ಣ.

ದಾಸನ ವಸ್ತ್ರವ ಬೇಡಿದಾತ ನೀ ದೇವ :

ದೇವರ ದಾಸೀಮಯ್ಯನವರು ನೇಯ್ಗೆಯ ಕಾಯಕ ಮಾಡುತ್ತಿದ್ದರು. ಸುಂದರವಾದ ವಸ್ತ್ರಕ್ಕೆ ಸಂತೆಯಲ್ಲಿ ಯಾರೂ ಬೆಲೆಕಟ್ಟಿಕೊಳ್ಳಲಿಲ್ಲ. ಮನೆಗೆ ಬರುವಾಗ ದಾರಿಯಲ್ಲಿ ಜಂಗಮನೊಬ್ಬ ಬೇಡಿದ. ಅದನ್ನು ಸದ್ಭಾವದಿಂದ ಕೂಡಲೇ ತನುವಿಗೆ ಹೊದಿಸಿದ. ಜಂಗಮ ಪರಪರನೆ ಹರಿದು ಮೈ ಮೇಲೆ ಧರಿಸಿಕೊಂಡ. ಆಗ ದಾಸೀಮಯ್ಯ ಮತ್ತಷ್ಟು ಸಂತುಷ್ಟಗೊಂಡ. ಹಣಪಡೆಯದೆ ಭಾವದಿಂದ ಜಂಗಮನಿಗೆ ವಸ್ತ್ರ ನೀಡಿದ. ಜಂಗಮ ವಸ್ತ್ರ ಹರಿದು ಧರಿಸಿದಾಗ ದಾಸೀಮಯ್ಯನವರ ಭಾವ ದುರ್ಭಾವಗೊಳ್ಳಲಿಲ್ಲ. ಗಣಂಗಳೆ, ತಮ್ಮ ಭಾವ ದುರ್ಭಾವಗೊಳ್ಳದಿದ್ದರೆ ದೇವನಿಂತಹನೆಂದು ತೋರಿಕೊಡುವೆ.

ಸಿರಿಯಾಳನ ಮಗನ ಬೇಡಿದಾತ ನೀ ದೇವ :

ಗರ್ಭದಿಂದ ಬಂದ ಪ್ರತಿ ತನುವಿನಲ್ಲಿ ಅರಿವಿದೆ. ಪಂಚ ಜ್ಞಾನೇಂದ್ರಿಯಗಳು ಸಮನಾಗಿ ಇವೆ. ಆದರೂ ಮಕ್ಕಳ ಮೇಲಿನ ಮೋಹದಿಂದಾಗಿ ತನು ರಕ್ಕಸನಾಗುತ್ತದೆ. ಮತ್ತೊಬ್ಬರನ್ನು ಕೊಲ್ಲಲೂ ಹೇಸುವುದಿಲ್ಲ. ಧೃತರಾಷ್ಟ್ರ ಮಕ್ಕಳ ಮೇಲಿನ ಮೋಹದಿಂದಾಗಿ ಕುರುಡನಾಗಿದ್ದ. ಮಗನ ಮೇಲಿನ ಆತನ ಮೋಹಕ್ಕಾಗಿ ಹದಿನೆಂಟು ಅಕ್ಷೋಹಿಣಿ ಸೈನ್ಯ ಸತ್ತು ಹೋಯಿತು. ನೂರಾ ಒಂದು ಮಕ್ಕಳೂ ಸತ್ತು ಹೋದರು. ಮಕ್ಕಳಿದ್ದಾಗ ಅವರ ಮೋಹಕ್ಕಾಗಿ ಮರುಗಿದ. ಮಕ್ಕಳು ಸತ್ತಾಗಲೂ ಮೋಹಕ್ಕಾಗಿ ಮರುಗಿದ. ಇಂತಹ ಮಗನೆಂಬ ವ್ಯಾಮೋಹವನ್ನು ಕುಟ್ಟಿ ಜಂಗಮನಿಗೆ ನೀಡಿ ಉಣಬಡಿಸಿದರು. ಜಂಗಮನೆಂದರೆ ಬೇಡಲು ಬಂದ ಜಂಗಮನಲ್ಲ. ಅಂಗದೊಳಗಿದ್ದ ನಿಜ ಜಂಗಮನಿಗೆ ಅಜ್ಞಾನವೆಂಬ

ಮೋಹ ನೀಡಿ ಉಣಬಡಿಸಿದ. ಮಗ ಉಳಿದ ; ಮೋಹಗೆದ್ದ !

ಅರಿವು ಎನ್ನುವ ಗುರುಲಿಂಗ ಜಂಗಮ ಮತ್ತು ಮನ ಎನ್ನುವ ಭಕ್ತ ಬೇರೆ ಬೇರೆಯಾಗಿದ್ದರೂ ಅವೆರಡೂ ಅಂಗದಲ್ಲಿಯೇ ಸಂಗಮವಾಗಿವೆ. ಸಂಗಮನಾಥನಾಗಿ ಜಂಗಮ ಮುಖ ಲಿಂಗವಾಗಿವೆ. ತಿಳಿಯದಿದ್ದರೆ ಒಮ್ಮೆ ಕಾಡಿ ನೋಡುವ, ಮತ್ತೊಮ್ಮೆ ಬೇಡಿ ನೋಡುವ ! ಗಣಂಗಳೆ, ನಿಮಗೆ ತಿಳಿಯುವ ಬಯಕೆಯಾದಲ್ಲಿ ದೇವನಿಂತಹನೆಂದು ಅರಿವಿಗೆ ಬರುತ್ತದೆ. ಆ ದೇವನೇ ನೀವಾಗುತ್ತೀರಿ ಎಂದಿದ್ದಾರೆ ಬಸವಣ್ಣ.

435

ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗುಳ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ,
ನಿಮ್ಮಾಣೆ ನಿಮ್ಮ ಪುರಾತನರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ,
ಕೂಡಲಸಂಗಮದೇವಾ.

ಹೊನ್ನು ಮತ್ತು ವಸ್ತ್ರ ಅಂಗಕ್ಕೆ ಶೋಭೆ ! ಆದರೆ ಅಂಗಕ್ಕೆ ಮಾರಕವಾಗಿದೆ. ಹೊನ್ನು ವಸ್ತ್ರದಿಂದಲೇ ಅಂಗ ಮತ್ತೊಂದು ಅಂಗವನ್ನು ಗೌರವಿಸುತ್ತದೆ. ಅಂಗ ಧರಿಸಿದ ಹೊನ್ನು ಮತ್ತು ವಸ್ತ್ರ ಶ್ರೇಷ್ಟವೋ ? ಅಂಗ ಶ್ರೇಷ್ಟವೋ ಎಂದು ಅಂಗಕ್ಕೆ ತಿಳಿಯುತ್ತಿಲ್ಲ. ವಿಚಾರಿಸಲು ಹೋದರೆ ಅಂಗ ಶ್ರೇಷ್ಟವೆಂದು ಅಂಗವೇ ಹೇಳುತ್ತದೆ. ಆದರೆ ಪ್ರಯೋಗಕ್ಕೆ ಹೋಗಿ ನಿರ್ಧರಿಸಿ ಅರಿವಿನಿಂದ ಸದೃಢವಾಗಿ ನಿಲ್ಲಲು ಮನಕ್ಕೆ ಸಾಧ್ಯವಾಗುತ್ತಿಲ್ಲ.

ಹೊನ್ನು ಮತ್ತು ವಸ್ತ್ರವನ್ನು ಮೋಹಿಸಿ ಒಂದು ಅಂಗ ಖರೀದಿಸಿ, ಅದನ್ನು ಧರಿಸುತ್ತದೆ. ಮತ್ತೊಂದು ಅಂಗ ಅದನ್ನು ಮೋಹಿಸಿ ಧರಿಸಿದ ಅಂಗವನ್ನು ಕೊಂದು ಪಡೆಯುತ್ತದೆ.

ಹೊನ್ನಿನ ಹೊರ ಒಳಗೆ ಹಳದಿ ಬಣ್ಣವಿದೆ. ವಸ್ತ್ರದೊಳಗೆ ನೂಲು ಇದೆ. ಬಣ್ಣವಿಲ್ಲದ್ದು ಬರೀ ಲೋಹ ! ಅಂಗ ಅದನ್ನು ಖರೀದಿಸುವುದಿಲ್ಲ. ಕಳುವು ಕೂಡಾ ಮಾಡುವುದಿಲ್ಲ ! ಅದನ್ನು ಧರಿಸುವುದೂ ಇಲ್ಲ ! ವಸ್ತ್ರ ನೇಯುವ ಮುಂಚೆ ಅದು ಬರೀ ಹತ್ತಿ ; ಹತ್ತಿಯ ನೂಲು. ನೂಲಿನ ಎಳೆಯನ್ನು ಅಂಗ ಖರೀದಿಸುವುದಿಲ್ಲ ಅದನ್ನು ಧರಿಸುವುದಿಲ್ಲ, ಕಳುವು ಕೂಡಾ ಮಾಡುವುದಿಲ್ಲ. ಕೊಂದು ಪಡೆಯುವುದಿಲ್ಲ. ನೂಲಿನ ಮೇಲೆ ಅಂಗಕ್ಕೆ ಮೋಹವಿಲ್ಲ. ಬಣ್ಣವಿಲ್ಲದ ಲೋಹದ ಮೇಲೆಯೂ ಅಂಗಕ್ಕೆ ಮೋಹವಿಲ್ಲ. ಈ ಲೋಹದ ಒಂದೊರೆಯೂ ; ನೂಲಿನ ಒಂದೆಳೆಯೂ ಅಂಗಕ್ಕೆ ಬೇಕಿಲ್ಲ.

ಲೋಹಕ್ಕೆ ಮೆತ್ತಿಕೊಂಡ ಹಳದಿ ಬಣ್ಣಕ್ಕಾಗಿ ರಾಜ ಮತ್ತೊಬ್ಬ ರಾಜನನ್ನು ಆ ರಾಜ್ಯದ ಪ್ರಜೆಗಳನ್ನು ಕೊಲ್ಲಲು ಹೇಸುವುದಿಲ್ಲ. ಬಣ್ಣದ ಲೋಹವನ್ನು ಮಕ್ಕಳಿಗೆ ಸಮಪಾಲು ಕೊಡದಿದ್ದರೆ ತಂದೆ ತಾಯಿಯನ್ನು ಕೊಂದು ಪಡೆಯಲೂ ಮಗನ ಪಾತ್ರದ ಅಂಗ ಹೇಸುವುದಿಲ್ಲ !

ಬಣ್ಣದ ಲೋಹ ಮಾರುವವ ವ್ಯಾಪಾರಿ, ಕೊಂಡವ ಶ್ರೀಮಂತ ; ಕೊಂದು ಪಡೆದವ ರಾಜ. ಬಣ್ಣದ ಲೋಹ ಇಲ್ಲದವನು ಬಡವ. ಇದನ್ನು ಕದ್ದವನು ಕಳ್ಳ. ಹಿಡಿದು ದಂಡಿಸುವವ ಪೊಲೀಸ್,

ನ್ಯಾಯ ಹೇಳುವವ ನ್ಯಾಯಾಧೀಶ. ಈ ಆರು ಅಂಗಗಳು ಬಣ್ಣಕ್ಕೆ ಮೋಹಗೊಂಡು ಅರಿಯದೆ ಒಂದೊಂದು ವೃತ್ತಿಯಲ್ಲಿ ತೊಡಗಿವೆ. ಅಂಗಕ್ಕೆ ಆಯಾ ಹಣೆಪಟ್ಟಿ ಹಚ್ಚಿಕೊಂಡಿವೆ. ತಿಳಿಯಲು ಹೋದರೆ ಬಯಲಾಗುತ್ತದೆ. ಈ ಸತ್ಯ ಎಲ್ಲ ಅಂಗಗಳಲ್ಲಿಯೂ ಇದ್ದು ಬಳಕೆಯಾಗುವುದಿಲ್ಲ. ಬಸವಣ್ಣ ಜ್ಞಾನ ಬಳಕೆ ಮಾಡಿದ ; ತಿಳಿಯಲು ಬಂದ ಅಂಗಗಳಿಗೆ ಅದನ್ನು ತಿಳಿ ಹೇಳಿದ. ತಿಳಿದವರು ಅಂಗವೇ ಲಿಂಗವೆಂದು ಜ್ಞಾನಕ್ಕೆ ಶರಣುಹೋದರು ; ಶರಣರಾದರು. ಶರಣರೆಲ್ಲರೂ ಒಂದೆಡೆ ಕೂಡಿ ಮತ್ತೊಂದನರಿಯದೇ ಮತ್ತೊಂದನು ನೋಡದೆ, ಮತ್ತೊಂದನು ಕೇಳದೆ ಅಂಗದಲ್ಲಿರುವ ಅರಿವೆಂಬ ಲಿಂಗಕ್ಕೆ ಶರಣು ಹೋದರು.

ಅರಿವಿನ ಆಚರಣೆಯಲ್ಲಿದ್ದ ಪುರಾತನರ ಮೇಲೆ ಆಣೆ ಇಟ್ಟರು ; ಅಂಗದಲ್ಲಿರುವ ಲಿಂಗವೆಂಬ ಅರಿವಿನ ಮೇಲೆ ಆಣೆ ಇಟ್ಟರು ; ಮಹಾಜ್ಞಾನವನು ಉಂಡು ಮಹಾಜ್ಞಾನವನೇ ತೇಗಿದದರು. ಹೊನ್ನಿನೊಳಗೊಂದು ಒರೆಯ ಮುಟ್ಟಲಿಲ್ಲ. ಸೀರೆಯೊಳಗೊಂದು ಎಳೆಯ ಮುಟ್ಟಲಿಲ್ಲ. ಅನ್ನದೊಳಗೊಂದು ಅಗುಳ ಇಂದಿಂಗೆ ನಾಳಿಂಗೆ ಎನ್ನಲಿಲ್ಲ. ಅಂದಂದಿಗೆ ಕಾಯಕದಿಂದ ಸಿದ್ಧವಾದ ಅಡುಗೆಯನುಂಡು ಕುಣಿ ಕುಣಿದಾಡಿದರು. ಜ್ಞಾನದ ಅಮಲಿನಲ್ಲಿ ನಲಿ ನಲಿದಾಡಿದರು.

436

ಆಲುತ್ತಲು ಹರೆಯ ಹೊಯಿಸಿ ಅಂಕವ ಮಾಡಿದೆನೆಲ್ಲರ ಕಂಡು !
ಆನು ಬೇಡೆಂದಡೂ ಮಾಣೆ, ಕಲಿತನವ ಮಾಡಿದೆನೆಲ್ಲರ ಕಂಡು !
ಅಲ್ಲಿ ಹೋಯಿತ್ತು ಗಳೆಯೆಂದಡೆ
ಆಸೆ ಮಾಡೆನು, ಕೂಡಲಸಂಗಮದೇವಾ.

ಯುದ್ಧದ ತರಬೇತಿ ಪಡೆದ ವೀರ ರಣರಂಗದಲ್ಲಿ ಪ್ರಾಣ ಲೆಕ್ಕಕ್ಕೆ ತಂದುಕೊಳ್ಳದೆ ಯುದ್ಧ ಮಾಡುತ್ತಾನೆ. ಬಾಣಗಳೆಲ್ಲ ಮುಗಿದು, ಖಡ್ಗ ಮುರಿದು ಹೋದರೂ ನಿರ್ಭಯದಿಂದ ಹೋರಾಡುತ್ತಾನೆ. ಯುದ್ಧದಲ್ಲಿ ಬಾರಿಸುವ ರಣಕಹಳೆ ಆತನಿಗೆ ಉತ್ತೇಜನ ಕೊಡುತ್ತದೆ. ಬೇಡವೆಂದರೂ ಮನಸ್ಸು ಕಲಿತನದ ಪದವಿಗೆ ಆಸೆ ಪಡುತ್ತದೆ.

ಪುರಾತನರು, ಜ್ಞಾನಿ ಮಹಾಪುರುಷರು ಅರಿವಿನ ಕಲಿತನವನ್ನು ಬಿಟ್ಟು ಹೋಗಿದ್ದಾರೆ. ತನುವಿನಲ್ಲಿರುವ ಮನದ ಅಜ್ಞಾನದೊಂದಿಗೆ ತನುವಿನಲ್ಲಿಯೇ ಇರುವ ಜ್ಞಾನ ಹೇಗೆ ಹೋರಾಡಬೇಕೆಂದು ಸೂತ್ರಗಳನ್ನು ಬರೆದಿಟ್ಟು ಹೋಗಿದ್ದಾರೆ. ಹಾಗೆಯೇ ಮಹಾ ಪುರುಷರು ಜ್ಞಾನ ಯುದ್ಧ ಮಾಡಿದ ಉದಾಹರಣೆಗಳೂ ಇವೆ. ತನುವಿಗಂಟಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಅಷ್ಟ ಮದಗಳು, ಸಪ್ತ ವ್ಯಸನಗಳೆಂಬ ವೈರಿಗಳೊಂದಿಗೆ ತನುವಿನಲ್ಲಿರುವ ಜ್ಞಾನಿ ಮಹಾವೀರ ಹೋರಾಡಲೇ ಬೇಕಾಗಿದೆ.

ಬುದ್ಧ, ಮಹಾವೀರ, ನಿಜಗುಣರು ರಾಜ್ಯವನ್ನು ತೃಣ ಮಾಡಿ ತನ್ನ ತನುವಿನ ವೈರಿಗಳೊಂದಿಗೆ ಯುದ್ಧ ಮಾಡಿ ಜಯಿಸಿದರು. ಅಶೋಕ ಸಾಮ್ರಾಟನಾದರೂ ಸಾಮ್ರಾಜ್ಯದ ಸುಖ ಆತನಿಗೆ ಮುಳ್ಳ ಹಾಸಿಗೆಯಾಯಿತು. ಅರಿವಿನ ಸಾಮ್ರಾಜ್ಯಕ್ಕೆ ಲಗ್ಗೆ ಹಾಕಿದರು. ಅರಿವಿನ ಸಾಮ್ರಾಜ್ಯದಲ್ಲಿ ಸೈನಿಕರಿಲ್ಲ, ಸೇನಾಧಿಪತಿಯಿಲ್ಲ, ಮಂತ್ರಿ ಮಾಗಧರಿಲ್ಲ. ತನುವೇ ಅರಿವಿನ ಸಾಮ್ರಾಜ್ಯ ! ಅದಕ್ಕೆ ಆತನೆ ಒಡೆಯ. ತನು ಬ್ರಹ್ಮ ಪೀಠ ; ತನುವಿನಲ್ಲಿ ತನ್ಮಯವಾದ ಮಹಾಜ್ಞಾನಿ ; ಮಹಾವೀರನೆ ಪೀಠಾಧಿಪತಿ !

ಅರಿವಿನ ಯುದ್ಧದ ಒರಸೆಗಳನ್ನು ಓದಿ, ನೋಡಿ, ಕೇಳಿ, ತಿಳಿದು ಕಲಿಯಬಹುದಾಗಿದೆ. ಬಾಣಗಳು ಮುಗಿದರೇನಾಯಿತು ? ಪುರಾತನರು ಮಾಡಿದ ಕಲಿತನವ ಕಂಡು ಅಜ್ಞಾನದೊಂದಿಗೆ ಯುದ್ಧ ಮಾಡಲೇ ಬೇಕು. ಅರಿವಿನ ರಣಕಹಳೆ ಕೇಳಿ ಯುದ್ಧ ಗೆಲ್ಲಲೇಬೇಕು.

437

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವೆಲ್ಲವ ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ !

ಕಾಗೆ ಒಂದಗುಳ ಕಂಡರೆ ಅನ್ನವಿದೆಯೆಂದು ಕೂಗುವುದು ಅದರ ಸಹಜ ಸ್ವಭಾವ. ಕೋಳಿ ಒಂದು ಕುಟುಕ ಕಂಡಡೆ ಆಹಾರವಿದೆಯೆಂದು ಕೂಗುವುದು ಅದರ ಸಹಜ ಸ್ವಭಾವ.

ತನುವಿನಲ್ಲಿ ಅರಿವಿದೆ. ಅದಕ್ಕೆ ದೊರೆತ ಆಹಾರವನ್ನು ಹಂಚಿ ತಿನ್ನುವುದು ತನುವಿನ ಸಹಜ ಸ್ವಭಾವವಾಗಬೇಕಿತ್ತು. ಆದರೆ ಸಹಜ ತನುವನ್ನು ಮನ ಆವರಿಸಿರುವುದರಿಂದ ಹಂಚಿ ತಿನ್ನುವುದು ಅದಕ್ಕೆ ಸಾಧ್ಯವಾಗುವುದಿಲ್ಲ. ಆಹಾರ ತನ್ನದಲ್ಲವೆಂದು ಕಾಗೆ ಕೋಳಿಗಳಿಗೆ ಗೊತ್ತಿದೆ. ಅರಿವಿನಿಂದ ನೋಡಿದರೆ ಆಹಾರ ತನುವಿನದೂ ಅಲ್ಲ. ಕೋಳಿ ಒಂದು ಸ್ವತಂತ್ರ ಪಕ್ಷಿ. ತನು ಅದನ್ನು ಸಾಕಿ ಅದನ್ನೇ ಆಹಾರ ಮಾಡಿಕೊಂಡು ತನ್ನದೆನ್ನುತ್ತದೆ. ಜಲಚರ, ಭೂಚರಗಳನ್ನು ಪಳಗಿಸಿ ಆಹಾರ ಮಾಡಿಕೊಂಡು ತನ್ನದೆನ್ನುತ್ತದೆ. ಭೂಮಿಯಲ್ಲಿ ಸಹಜವಾಗಿ ಬೆಳೆದ ಬೆಳೆಗಳನ್ನು ತನು ತನ್ನದೆನ್ನುತ್ತದೆ. ಅರಿವಿನಿಂದ ನೋಡಿದರೆ ತಾನು ತಿನ್ನುವ ಆಹಾರ ತನುವಿನದಲ್ಲ. ಅರಿವಿನಿಂದ ನೋಡುವುದಕ್ಕೆ ಕಣ್ಣಿನಲ್ಲಿ ಮನ ತನ್ನ ಅಜ್ಞಾನದ ಸಾಮ್ರಾಜ್ಯ ಸ್ಥಾಪನೆ ಮಾಡಿದೆ. ಅರಿವು ಅಜ್ಞಾನದೊಂದಿಗೆ ತಾನಾಗಿಯೇ ಯುದ್ಧ ಮಾಡುವುದಿಲ್ಲ. ಸದಾ ಅಜ್ಞಾನಕ್ಕೆಳೆಸುವ ಮನವೇ ಕಣ್ಣಿನಲ್ಲಿದ್ದ ಅರಿವಿನೆಡೆಗೆ ಹೋಗಬೇಕು. ಅದು ಸಾಧ್ಯವಾದರೆ ಮನಕ್ಕೆ ಸಹಜ ಜ್ಞಾನ ಲಭ್ಯವಾಗುತ್ತದೆ.

ಮನ ಬಯಸಿ, ತನುವಿನೊಂದಿಗೆ ಪಡೆದ ಆಹಾರ, ಅನಂತ ಕಾಲಕ್ಕೆ ಆಗಲೆಂದು ಸಂಗ್ರಹಿಸಿಡುತ್ತದೆ. ಕಾಗೆ ಕೋಳಿಯಂತೆ ಇತರರನ್ನು ಕರೆದು ಉಣ್ಣಲು ಸಂಗ್ರಹ ಬುದ್ಧಿಯ ಮನಕ್ಕೆ ಸಾಧ್ಯವಾಗುವುದಿಲ್ಲ. ಅರಿವಿನ ತನುವಿಗೆ ಜಿಪುಣನ ಪಟ್ಟ ಕಟ್ಟಿ, ಮನ ತನುವಿನ ಮೂಲಕ ಆಹಾರದ ಸವಿಯನ್ನು ರುಚಿಸುತ್ತದೆ. ತನುವನ್ನು ಆವರಿಸಿದ ಮನ ಸ್ವಾರ್ಥಿ ; ತನುವಿನ ಕಣಕಣದಲ್ಲಿ ತನ್ಮಯವಾದ ಅರಿವೆಂಬ ಗುರುದೇವನ ಮಾತು ಪಾಲಿಸುವ ಜಂಗಮ ನಿಸ್ವಾರ್ಥಿ !

ಅರಿವೇ ಗುರು ; ಆ ಗುರುದೇವನೇ ಸದಾಶಿವ. ಈ ಶಿವನಿಗೆ ಸ್ವಾರ್ಥಿ ಎಂಬ ಮನ ಭಕ್ತಿ ಮಾಡಿ ಆತನ ಪಕ್ಷ ವಹಿಸಿದರೆ ಅರಿವೆಂಬ ಗುರುದೇವನ ಮಾತು ಜಂಗಮ ಪಾಲಿಸುತ್ತಾನೆ.

ತನುವಿನಲ್ಲಿರುವ ಅರಿವೆಂಬ ಗುರುದೇವನಿಗೆ ಭಕ್ತಿ ಮಾಡುವುದು ಅಜ್ಞಾನಿ ಮನಕ್ಕೆ ಬಲು ಕರಕಷ್ಟ. ಹೀಗಾಗಿ ತನ್ನದಲ್ಲದ ವಸ್ತುವನ್ನು ಸಂಗ್ರಹಿಸಿ ತನ್ನಂತೆಯೇ ಇರುವ ತನುವಿಗೆ ಕೊಟ್ಟು ದಾನಿ ಎನ್ನಿಸಿಕೊಳ್ಳುತ್ತದೆ. ಪಡೆದ ತನು ಬಿಕ್ಷುಕ ಎನ್ನಿಸಿಕೊಳ್ಳುತ್ತದೆ. ಕಸಿದುಕೊಂಡ ತನು ಕಳ್ಳ ಎನ್ನಿಸಿಕೊಳ್ಳುತ್ತದೆ. ಯುದ್ಧ ಮಾಡಿ ಕೊಂದು ಪಡೆದ ತನು ರಾಜ ಎನ್ನಿಸಿಕೊಳ್ಳುತ್ತದೆ. ನ್ಯಾಯ ಹೇಳಿದ ತನು ನ್ಯಾಯವಾದಿ ಎನ್ನಿಸಿಕೊಳ್ಳುತ್ತದೆ. ಶಿಕ್ಷೆ ಕೊಡುವ ತನು ಪೊಲೀಸ್ ಎನ್ನಿಸಿಕೊಳ್ಳುತ್ತದೆ. ಇವು ಕೋಳಿ ಕಾಗೆಗಳಂತೆ ಸಹಜ

ಜ್ಞಾನದಿಂದ ಬಲು ದೂರ ! ಅರಿತರೆ ಅಂಗದ ಅಂಗೈಯಲ್ಲಿಯೇ ಜ್ಞಾನ ! ಮರೆತರೆ ತನುವಿಗೆ ನಾನಾ ವೇಷಗಳ ಪಾತ್ರ !

438

ಆವನೇವನಾದಡೇನು ? ಹೇಮವಿಲ್ಲದಂಗೈಸಬಹುದೆ ?
ಕೊಡಲಿಲ್ಲೆಂಬುದರಿಂದ ಸಾಯಲುಬಹುದು ; ಸೈರಿಸಬಾರದು !
ಬೇಡುವವರ ನೋಡಿ ನೋಡಿ-ಈಯಲಿಲ್ಲದ ಜೀವನವದೇಕೆ,
ಕೂಡಲಸಂಗಮದೇವಾ ?

ಆವನೇವನಾದಡೇನು ? ಹೇಮವಿಲ್ಲದಂಗೈಸಬಹುದೆ ? ಕೊಡಲಿಲ್ಲೆಂಬುದು ರಿಂದ ಸಾಯಲು ಬಹುದು ; ಸೈರಿಸಬಾರದು :

ಆವನೇವನಾದಡೇನು ? ಯಾವ ಅಂಗವಾದಡೇನು ? ಅಂಗದ ಐದು ಭಾಗಗಳಾದ ಕಣ್ಣು ಕಿವಿ ಮೂಗು ನಾಲಿಗೆ ಚರ್ಮವೆಂಬ ಚೊಕ್ಕ ಚಿನ್ನದಂತಹ ಐದು ಜ್ಞಾನ ಇಂದ್ರಿಯಗಳಿಲ್ಲದ ಅಂಗವನ್ನು ಅಂಗ ಎನ್ನಬಹುದೆ ? ಆದರೂ ಒಂದು ಅಂಗ ಬೇಡುತ್ತದೆ. ಮತ್ತೊಂದು ಅಂಗ ಕೊಡುತ್ತದೆ. ಎಂದೆಂದಿಗೂ ಕೆಡದ, ಚೊಕ್ಕ ಚಿನ್ನದ ಅರಿವಿನ ಅಂಗವೆಂದು ಅಂಗಕ್ಕೆ ಪರಿಚಯವಿಲ್ಲ ! ಅಂಗದಿಂದಲೇ ಹೊರಬಂದ ಭೂಗರ್ಭದಲ್ಲಿದ್ದ ಹೇಮ ದೊಡ್ಡದೋ ? ಅಂಗ ದೊಡ್ಡದೊ ?

ಕೊಡಲಿಲ್ಲೆಂಬುದರಿಂದ ಸಾಯಲುಬಹುದು ; ಸೈರಿಸಬಾರದು ! ಬೇಡಲು ಬಂದ ಅಂಗದಲ್ಲಿಯೂ ಹೊರ ಒಳಗೆನ್ನದೆ ಥಳ ಥಳನೆ ಹೊಳೆಯುವ ಅರಿವಿನ ಹೇಮವನ್ನು ಕೊಡುವುದಿಲ್ಲ ಎನ್ನುವುದಕ್ಕಿಂತ ಸಾಯುವುದು ಲೇಸು ; ಸೈರಿಸಬಾರದು !

ವೇಷ ಧರಿಸಿಕೊಂಡು ಅರಿವಿನ ಮಾತು ಹೇಳಿ ಬೇಡುವ ಜಂಗಮನಿಗೆ ಇದು ಸಾಧ್ಯವಾಗುವುದಿಲ್ಲ. ಅರಿವಿನ ಮಾತು ಕೇಳಲು ಹೋಗಿ ಜಂಗಮನಿಗೆ ಭಿಕ್ಷೆ ನೀಡುವ ಭಕ್ತನಿಗೂ ಇದು ಸಾಧ್ಯವಾಗುವುದಿಲ್ಲ. ''ಬೇಡುವವ ಜಂಗಮನೇ ? ನೀಡುವವ ಭಕ್ತನೇ ? ಬೇಡುವವನಿಗೂ ಬೇಡಿಸಿಕೊಂಬುವವನಿಗೂ ಮುಕ್ತಿಯಿಲ್ಲ'' ಕಾಳಗುರಕಿ ಗುರುವಿಗೆ ಕಾಳಗುರಿಕಿ ಶಿಷ್ಯ ಎಂದು ಶರಣರು ಜರಿದು ನುಡಿದಿದ್ದಾರೆ.

ಅಂಗ ಎನ್ನುವುದು ಐದು ಜ್ಞಾನ ಸಂಪತ್ತುಳ್ಳ ಮಹಾ ಭಂಡಾರ. ಬೇಡುವ ಅಂಗವಾದರೇನು? ನೀಡುವ ಅಂಗವಾದರೇನು ? ಇವೆರಡು ಅಜ್ಞಾನದ ಎರಡು ಪಾತ್ರಗಳೇ ಆಗಿವೆ. ಅಂಗದಿಂದಲೇ ಭೂಗರ್ಭದಲ್ಲಿರುವ ಹೇಮ ಸೃಷ್ಟಿಯಾಯಿತು. ಅದನ್ನು ಮರೆತು ಅಂಗ ನೀಡಿ ದಾನಿ ಎನಿಸಿಕೊಳ್ಳುವುದೆಂದರೇನು ? ಬೇಡಿ ಭಿಕ್ಷುಕ ಅನ್ನಿಸಿಕೊಳ್ಳುವುದೆಂದರೇನು ? ಇವೆರಡು ಅಂಗಗಳು ಅರಿವೆಂಬ ಸಂಪತ್ತನ್ನು ಮರೆತ ಭಿಕ್ಷುಕ ಅಂಗಗಳು. ಈ ಎರಡೂ ಅಂಗಗಳಿಗೆ ಹೊರ ಒಳಗೆ ಥಳ ಥಳ ಹೊಳೆಯುವ ಅರಿವೆಂಬ ಹೇಮ ಕೊಡಲಿಲ್ಲೆಂಬುದಕ್ಕಿಂತ ಸಾಯುವುದೇ ಲೇಸು. ಸಾಯಲು ಬಹುದು; ಸೈರಿಸಬಾರದು !

ಬೇಡುವವರ ನೋಡಿ ನೋಡಿ-ಈಯಲಿಲ್ಲದ ಜೀವನವದೇಕೆ, ಕೂಡಲಸಂಗಮದೇವಾ:

ಕಾವಿ ಎನ್ನುವುದು ಅರಿವಿನ ಸಂಕೇತ. ಅಂಗ ಇದನ್ನು ಧರಿಸಿಕೊಂಡು ಅರಿವನ್ನು ಪಡೆಯದಿದ್ದರೆ ಹೇಗೆ ? ಬೇಡಲು ಬಂದ ಅಂಗವನ್ನು ಜಂಗಮನಾಗಿ ಬೇಡುವುದೆ ? ಬೇಡುವವರನ್ನು ನೋಡಿ

ನೋಡಿ ಅಂಗದಲ್ಲಿದ್ದ ಅರಿವನ್ನು ಈಯಲಿಲ್ಲದ ಜೀವನವದೇಕೆ ? ಸಾಯಲು ಬಹುದು ಸೈರಿಸಬಾರದು!

ಪ್ರತಿ ಅಂಗದಲ್ಲಿಯೂ ಅರಿವು ಸಂಗಮವಾಗಿದೆ. ಆದರೂ ಬೇಡುವ ನೀಡುವ ಎರಡು ಪಾತ್ರಗಳು ಸೃಷ್ಟಿಯಾಗಿರುವುದನ್ನು ಕಂಡು ಬಸವಣ್ಣ ಈ ಎರಡೂ ಅಂಗಗಳ ಗರ್ಭದಲ್ಲಿ ಅರಿವಿನ ಹೇಮ ಹೂತಿರುವುದನ್ನು ಸೂಚಿಸಿ ಉತ್ಖನನ ಮಾಡಲು ಹೇಳಿದ್ದಾರೆ.

439

ಹರಗಣ ಪಙ್ತಿಯ ನಡುವೆ ಕುಳ್ಳಿರ್ದು
ನಾನು-ಒಡೆತನದ ನಾಯಿತೇಜವ ಹೊತ್ತುಕೊಂಡು
ಮಡದಿಯೆನ್ನಗಲೊಳಗೆ ಸಕಲ ದೇವಾನ್ನವ
ಒಡೆಯರಿಂದಲೂ ಮೇಲಾಗಿ ಇಕ್ಕಲು, ತೆಗೆದಿರಿಸಿದೆನು !
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು !
ಕರುಣಿ ಚನ್ನಬಸವಣ್ಣನ ಮರೆದು ಕೊಂಡೆನಾದಡೆ
ಒಡೆಯ ಕೂಡಲಸಂಗಯ್ಯ ಕೆಡಹಿ ನರಕದಲ್ಲಿಕ್ಕುವ

ಪಂಕ್ತಿಯಲ್ಲಿ ಪರಪಂಕ್ತಿ ಮಾಡುವುದು ತರವಲ್ಲ ಎಂದು ಜನಪದರ ನುಡಿಗಟ್ಟು ಇದೆ. ಸಹಭೋಜನದಲ್ಲಿ ಕುಳಿತಾಗ ಹರಗಣರಿಗಿಂತ ಹೆಚ್ಚು ಪ್ರಸಾದ ಮಡದಿಯಾದವಳು ತಟ್ಟೆಯಲ್ಲಿ ಬಡಿಸಿದಾಗ ಅದು ಪ್ರಸಾದವಲ್ಲ; ಕಿಲ್ಬಿಷ-ಪಾಪ. ಅದು ಆಕೆಗೆ ತಿಳಿಯಬೇಕು.

ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು :

ಸಹ ಪಂಕ್ತಿಯಲ್ಲಿ ಕುಳಿತು ಉಣ್ಣುವಾಗ ತಟ್ಟೆಗಳನ್ನು ನೋಡುವುದು ; ತಟ್ಟೆಯಲ್ಲಿ ಹೆಚ್ಚು ಕಮ್ಮಿ ಇರುವ ಪ್ರಸಾದ ಕಣ್ಣಿಗೆ ಕಾಣುವುದು ಕೂಡಾ ; ಕಣ್ಣಿನ ದೃಷ್ಟಿ , ಮೋಸದ ಸೋಂಕಿಗೆ ಒಳಗಾಗಿದೆಯೆಂದು ತಿಳಿಯಬೇಕು.

ಹೆಂಡತಿ ತಟ್ಟೆ ತಟ್ಟೆಗೆ ತಾರತಮ್ಯ ಮಾಡುವುದು ಅದು ಆಕೆಯ ಗುಣಧರ್ಮವಾಗಿರಬಹುದು. ಆದರೆ ಹರಗಣ ಪಂಕ್ತಿಯಲ್ಲಿಕುಳಿತು ಒಡೆತನದ ತೇಜವ ಹೊತ್ತು; ಹರಗಣರ ತಟ್ಟೆ ನೋಡುವುದು ನಾಯಿ ನೋಟದ ಅಪರಾಧ. ಕಣ್ಣಿನಲ್ಲಿ ಸತ್ಯ ಕಂಡುಕೊಂಡವರ ಕೆಲಸವಲ್ಲ. ಕಣ್ಣಿಗೆ ನಾಲಿಗೆಗೆ ಇನ್ನೂ ಪ್ರಸಾದದ ಸತ್ಯ ಅರಿವಾಗಿಲ್ಲ.

ಈ ಪರಿಯ ಆಯ(ಮೋಸ)ಕಣ್ಗೆ ತೋರಲು ಕಿಲ್ಬಿಷವಾದವು :

ಕಣ್ಣು ಸತ್ಯದ ನೋಟದಿಂದ ದೂರ ಸರಿದು ಪಾಪದಲ್ಲಿ ಬೆರೆತವು. ಅದು ಅಜ್ಞಾನದ ನೋಟ. ಕಣ್ಣು ತನ್ನ ತಟ್ಟೆಯಲ್ಲಿರುವ ಪದಾರ್ಥ ಮಾತ್ರ ನೋಡಬೇಕು. ತಾರತಮ್ಯ ಮಾಡದೆ ಕಣ್ಣಿಗೂ ನಾಲಿಗೆಗೂ ತಟ್ಟೆಯ ಪದಾರ್ಥ ಪ್ರಸಾದವಾಗಬೇಕು. ಹೆಚ್ಚುಕಮ್ಮಿ ಎನ್ನದೆ, ರುಚಿ-ಅರುಚಿ ಎನ್ನದೆ, ಕಣ್ಣು ನಾಲಿಗೆ ತನ್ನ ನಿಜ ಕೆಲಸದಲ್ಲಿ ತೊಡಗಿ ತನುವಿಗೆ ರಸದೌತಣ ನೀಡಬೇಕು.

ಕರುಣಿ ಚನ್ನಬಸವಣ್ಣ ಈ ಕ್ರಿಯೆಯಲ್ಲಿನಿಪುಣ. ಸೂಕ್ಷ್ಮಾತಿ ಸೂಕ್ಷ್ಮಗ್ರಾಹಿ ಆತ. ಆತನನ್ನು ನೆನೆದು ತನ್ನ ತಟ್ಟೆಯನ್ನು ಮಾತ್ರ ತಾನು ನೋಡಿ ನಾಲಿಗೆ ಕಣ್ಣು ಜ್ಞಾನ ಪ್ರಸಾದದಲ್ಲಿ ತನ್ಮಯವಾಗಬೇಕು. ಇಲ್ಲದಿದ್ದಡೆ ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನು ಕಿಲ್ಬಿಷ

ಮನವನ್ನು ಕೆಡಹಿ ನರಕದಲ್ಲಿಕ್ಕುವ.

440

ಭಕ್ತಿ ಸುಭಾಷಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ.
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ;
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ.

ತನುವಿನಲ್ಲಿ ತನ್ಮಯವಾದ ಜ್ಞಾನವನ್ನು ಸಂಪೂರ್ಣವಾಗಿ ಪಡೆದುಕೊಂಡ ತಂತ್ರಜ್ಞಾನಿಗೆ ಮಾತ್ರ ಇದು ಸಾಧ್ಯ. ಉಳಿದವರಿಗೆ ಅಸಾಧ್ಯ ; ಪ್ರಯತ್ನಿಸಿದರೆ ಸರ್ವರಿಗೂ ಸಾಧ್ಯ !

ಭಕ್ತಿ ಸುಭಾಷಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ :

ಭವಿ ಮನ ಭಕ್ತನಾಗಿ, ಅರಿವನ್ನೇ ಗುರುವನ್ನಾಗಿ ಮಾಡಿಕೊಂಡು, ಆ ಗುರುದೇವ ನುಡಿದ ನುಡಿಯೇ ಶುಭ ನುಡಿ. ಗುರುದೇವ ನುಡಿದ ನುಡಿಯನ್ನು ನಡೆದು ಪಾಲಿಸುವಾತನೇ ಜಂಗಮ ! ಈತ ನಡೆಯೊಳಗೆ ಗುರುವಿನ ನುಡಿಯ ಪೂರೈಸುವಾತ.

ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ; ಒಂದು ಜವೆ ಕೊರತೆಯಾದಡೆ ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ :

ಮನ ಭಕ್ತನಾಗಿ ಸಂಪೂರ್ಣ ಪರಿವರ್ತನೆಗೊಂಡ ಬಳಿಕ ಭಕ್ತ ಅರಿವೆಂಬ ಗುರುವಿನ ಸೇವೆಯಲ್ಲಿ ನಿರತನಾದ. ಗುರುವಿನ ಮಾತು ಪಾಲಿಸುವ ಜಂಗಮ ತನುವಿನಲ್ಲಿಯೇ ಉದಯವಾದ. ಅರಿವೆಂಬ ಗುರುದೇವ ವ್ಯವಹಾರದ ತಕ್ಕಡಿ ಹಿಡಿದು ಒಂದು ತಟ್ಟೆಯಲ್ಲಿ ಭಕ್ತನನ್ನು ಕೂಡಿಸಿದ ; ಮತ್ತೊಂದು ತಟ್ಟೆಯಲ್ಲಿ ಜಂಗಮನನ್ನು ಕೂಡಿಸಿದ. ದಂಡಿಗೆ ಹಿಡಿದ ಗುರುದೇವನು, ಒಂದು ತಟ್ಟೆಯಲ್ಲಿ ಕುಳಿತ ಭಕ್ತನಿಂದ ಶುಭಾಷಯ ನುಡಿಯ ನುಡಿಸಿದ ; ಭಕ್ತ ನುಡಿದುದನ್ನು ಮತ್ತೊಂದು ತಟ್ಟೆಯಲ್ಲಿ ಕುಳಿತ ಜಂಗಮ ಪಾಲಿಸಿದ. ನಡೆಯೊಳಗೆ ಗುರುವಿನ ನುಡಿಯ ಪೂರೈಸಿದ.

ತೂಕದಲ್ಲಿ ಒಂದು ಗೋದಿ ಕಾಳಿನಷ್ಟೂ ಕೊರತೆಯಾಗಲಿಲ್ಲ. ಕೊರತೆಯಾದರೆ ಜನನ ಮರಣವೆಂಬ ಭವ ಭವಾಂತರದಲ್ಲಿ ಎನ್ನನು ಅದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ.

ತತ್ವ ಜ್ಞಾನವೊಂದು ವಿಜ್ಞಾನ ; ಅದು ಮಹಾಜ್ಞಾನ. ನಿಪುಣ ಮಹಾ ಜ್ಞಾನಿಗಳಿಂದ ಕಲಿಯದ ಹೊರತು ನುಡಿದಂತೆ ನಡೆಯಲು ಯಾವ ಅಂಗಕ್ಕೂ ಸಾಧ್ಯವಾಗುವುದಿಲ್ಲ. ಅಂಗ ಹುಟ್ಟಿದಾಗಿನಿಂದಲೂ ಒಮ್ಮೆ ಹುಟ್ಟುತ್ತಾ ಮತ್ತೊಮ್ಮೆ ಸಾಯುತ್ತಾ ಸದಾ ದುಃಖವನ್ನೇ ಅನುಭವಿಸಿ ಸಾಯುತ್ತದೆ. ಗುರುವಾದರೇನು ? ಶಿಷ್ಯನಾದರೇನು ? ಪ್ರಧಾನಿ ಸಚಿವ ಶಾಸಕನಾದರೇನು ? ಅಧಿಕಾರಿಯಾದರೇನು ? ಶ್ರೀಮಂತ ಬಡವನಾದರೇನು ? ಹೆಣ್ಣು ಗಂಡಾದರೇನು ? ಜ್ಞಾನಿಯಾಗದ ವಿನಹ ಅಂಗಕ್ಕೆ ದುಃಖ ತಪ್ಪಿದ್ದಲ್ಲ.

441

ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ;
ಓಡಲಾಗದು ಲೆಂಕನು, ಬೇಡಲಾಗದು ಭಕ್ತನು.
ಓಡೆನಯ್ಯಾ , ಬೇಡೆನಯ್ಯಾ ,
ಕೂಡಲಸಂಗಮದೇವಾ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳ ಬೆನ್ನು ಬಿದ್ದು ಓಡುವಾತ ಯೋಧನಲ್ಲ, ಅವುಗಳಿಗಾಗಿ ಬೇಡುವಾತ ಭಕ್ತನಲ್ಲ. ಓಡಲಾರದವನು ಯೋಧ ; ಮಹಾವೀರ, ಬುದ್ಧ. ಬೇಡಲಾರದವನೇ ಭಕ್ತ.

ಓಡೆನಯ್ಯಾ , ಬೇಡೆನಯ್ಯಾ ಕೂಡಲಸಂಗಮದೇವಾ :

ಅರಿಷಡ್ವರ್ಗದ ಬಾಧೆಯಿಂದ ತನುವನ್ನು ಮನ ತನ್ನ ಇಚ್ಛೆ ಬಂದೆಡೆ ಕರೆದುಕೊಂಡು ಹೋಗುತ್ತದೆ. ಮನ ಕರೆದೆಡೆಗೆ ತನು ಓಡುತ್ತದೆ. ಅರಿವೆಂಬ ಗುರುದೇವ ಬೇಡವೆಂದರೂ ಮನ ತನುವನ್ನು ಓಡಿಸಿಕೊಂಡು ಹೋಗಿ ರುಚಿಗೆ ದಾಸನನ್ನಾಗಿಸುತ್ತದೆ. ಮನವೆಂಬ ಭವಿ ಓಡುತ್ತಾನೆ ; ಅರಿವೆಂಬ ಗುರುವಿಗೆ ಮೊರೆಹೋದ ಭಕ್ತ ಓಡುವುದಿಲ್ಲ. ಆತ ಪರಮವೀರ. ಒಂದುವೇಳೆ ಓಡಿದರೆ ಆತ ಭಕ್ತನಲ್ಲ ; ವೇಷ ಧರಿಸಿದ ಭಕ್ತ .

ಅಂಗಗಳೆಲ್ಲ ಒಂದೇ ಇರುವಾಗ ; ಒಂದು ಅಂಗವನ್ನು ಮತ್ತೊಂದು ಅಂಗ ದಾನಿ ಎಂದು ಬೇಡಿ ಪಡೆಯುವುದರಲ್ಲಿ ಅಥವಾ ಒಂದು ಅಂಗಕ್ಕೆ ಮತ್ತೊಂದು ಅಂಗ ಭಿಕ್ಷುಕನೆಂದು ನೀಡುವುದರಲ್ಲಿ ಅರ್ಥವಿಲ್ಲ. ಭೂಮಿಯ ಮೇಲೆ ತನ್ನದೆಂದು ಹೇಳುವ ಅಂಗದ ಪ್ರೊಡೆಕ್ಟ್ ಯಾವುದೂ ಇಲ್ಲ. ಹಸು ಹಾಲು ಕೊಡುತ್ತದೆ. ಭೂಮಿಯ ಮೇಲಿದ್ದ ಪ್ರಾಣಿ ಪಶು ಪಕ್ಷಿಗಳು ಅಂಗಗಳಿಗೆ ಆಹಾರ ರೂಪದಲ್ಲಿ ನೆರವಾಗುತ್ತವೆ. ಇನ್ನು ಅಂಗಕ್ಕೆ ತನ್ನ ಸಂಪತ್ತು ಎನ್ನುವುದು ಯಾವುದಿದೆ ?

ಜ್ಞಾನ ಮಾತ್ರ ಅಂಗದ ಸಂಪತ್ತು . ಅದು ಅಂಗಕ್ಕೆ ಬಳಕೆಯಾಗದ್ದಕ್ಕಾಗಿ ದಾನಿ ಮತ್ತು ಭಿಕ್ಷುಕನ ಪಾತ್ರದಲ್ಲಿದೆ. ಜ್ಞಾನ ಪರಿಚಯವಾದರೆ ಸಾಕು ಅಂಗ ತನ್ನಲ್ಲಿದ್ದ ಪದಾರ್ಥವನ್ನು ಕೋಳಿ ಕಾಗೆಯಂತೆ ಇತರ ಅಂಗಗಳನ್ನು ಕರೆದು ಉಣ್ಣುತ್ತದೆ.

ಅಂಗದಲ್ಲಿರುವ ಅರಿವು, ಅಂಗದಲ್ಲಿರುವ ಮನಕ್ಕೆ ಒಲಿದರೆ ಅಂಗ ಹೇಡಿಯಂತೆ ಓಡುವುದಿಲ್ಲ, ಭಿಕ್ಷುಕನಂತೆ ಬೇಡುವುದಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಯ್ಯನಾಗಿ ಅಂಗ ಅನಂತ ಶಕ್ತಿಯನ್ನು ಪಡೆಯುತ್ತದೆ.

442

ಚಂದ್ರನ ಶೈತ್ಯದಲು ಬೆಳೆವ ಕಾಯಕ್ಕೆ
ಬೆಳದಿಂಗಳ ಬಯಸುವ ಹಂಗೇಕಯ್ಯಾ ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ ?
ಕೂಡಲಸಂಗನ ಶರಣರು ಬಂದು
ತಮ್ಮವನೆಂದಡೆ ಸಾಲದೆ ಅಯ್ಯಾ?

ಅರಿವು ಮತ್ತು ಮನ ಬೇರೆ ಬೇರೆ ಇಲ್ಲ. ತನು ಅರಿವೆಂಬ ಗುರುವಿನ ಸಂಪತ್ತು. ಆತನ ನಿವಾಸವೂ ಹೌದು. ಹೀಗಿರುವಾಗ ಮನ ಆತನ ಕಿರಣಗಳಿಂದ ಹೊರಸೂಸುವ ಬೆಳಕಿನ ನೆರಳು. ಮನ ಇದನ್ನು ಅರಿಯದೆ ತಾನು ಶ್ರೀಮಂತನಾಗಬೇಕೆಂದು ಹೊನ್ನು ಮಣ್ಣು ವಿಷಯದ ಹಿಂದೆ ಬಿದ್ದಿದೆ. ಇವು ಮೂರೂ ವಸ್ತುಗಳು ಅರಿವೆಂಬ ಗುರುದೇವನಿಂದಲೇ ನಿರ್ಮಾಣವಾದವು. ಅದಕ್ಕೆ ಹಾಗೆ ಹೆಸರು ಕೊಟ್ಟು ಬೆನ್ನು ಬಿದ್ದದ್ದು ಮಾತ್ರ ಮನ ! ಅವುಗಳ ಹಂಗಿನಲ್ಲಿಯೇ ಮನ ತನುವಿನೊಂದಿಗೆ ಹಗಲಿರುಳು ಕಾಯುತ್ತಲಿದೆ.

''ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ ಕಾಣಾ ಅದನ್ನು ಅಲಂಕರಿಸಿದೆಯಾದಡೆ ನಿನ್ನಂತ ಸಿರಿವಂತರು ಯಾರೂ ಇಲ್ಲ ಎಲೆ ಮನವೆ'' ಎಂದು ಅಲ್ಲಮ ಪ್ರಭುಗಳು ಹೇಳಿದ್ದಾರೆ. ಜ್ಞಾನದ ಬೆಳಕಿನಿಂದ ಭೂಮಿ ಹೇಮ ವಿಷಯವನ್ನು ನೋಡಿದರೆ ಮನಕ್ಕಂಟಿದ ವಿಧಿ ಆ ಬೆಳಕಿನಲ್ಲಿ ಬಯಲಾಗುವುದು.

ಮನ ತನುವಿನೊಂದಿಗೆ ಚಿನ್ನವನ್ನು ನೇರವಾಗಿ ನೋಡದೆ, ತನುವಿನಲ್ಲಿರುವ ಜ್ಞಾನದೊಂದಿಗೆ ನೋಡಿದರೆ, ಚಿನ್ನ ಹಳದಿ ಬಣ್ಣದ ಲೋಹವಾಗಿ ಕಾಣುತ್ತದೆ. ಜಲ ಕುದ್ದು ಆ ಜಲವೇ ಮಣ್ಣಾಗಿದ್ದು ಗೋಚರಕ್ಕೆ ಬರುತ್ತದೆ. ಕಾಮದ ದ್ರವ್ಯ ಕೂಡಾ ತನುವಿನಲ್ಲಿಯೇ ಹುಟ್ಟಿ, ತನುವಿನಿಂದಲೇ ಹೊರಬಂದು, ತನುವಿಗೆ ಸುಖ ನೀಡಿ, ಗಂಡಿನಿಂದ ಸುಖವಾಯಿತೆಂದು ಹೆಣ್ಣು, ಹೆಣ್ಣಿನಿಂದ ಸುಖವಾಯಿತೆಂದು ಗಂಡು ಮನದಿಂದ ಭ್ರಮಿಸಿ ಸಂಭ್ರಮಿಸುತ್ತದೆ. ಪುನಃ ಜ್ಞಾನದಿಂದ ವಿಚಾರಿಸಲು ಹೋದರೆ ಅರಿವಿನ ತನು ಜನ್ಮ ಪಡೆಯಲು ಮಾತ್ರ ಕಾಮದ ದ್ರವ್ಯ ಬೇಕು ; ಇಲ್ಲದಿದ್ದರೆ ವ್ಯರ್ಥ ! ಸತಿ ಪತಿಗಳ ಮಿಲನ, ಅರಿವಿನ ತನು ಪಡೆಯುವುದಕ್ಕಾಗಿ ಆಗಬೇಕು. ಇಲ್ಲದಿದ್ದರೆ ತನುವನ್ನು ಮನವೆಂಬ ವಿಧಿ ಆವರಿಸುವುದು ತಪ್ಪುವುದಿಲ್ಲ.

ಇಂತಹ ಸೂಕ್ಷ್ಮಾತಿ ಸೂಕ್ಷ್ಮ ಸುಳುಹು ನೀಡಿ, ತನುವನ್ನು ಜ್ಞಾನದಿಂದ ಉದ್ಧರಿಸುವ ಶರಣರ ಸಂಗದಲ್ಲಿದ್ದು, ಪುನಃ ಶಿವನನ್ನು ಬೇಡುವ ಹಂಗೇಕಯ್ಯಾ. ಶರಣರು ಬಂದು, ತನುವಿನ ಮೈದಡವಿ, ತಮ್ಮವನೆಂದಡೆ ಸಾಲದೆ ಅಯ್ಯಾ ಎಂದಿದ್ದಾರೆ.

443

ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ.
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯ ಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವರೆಂಬೆ.
ಬಲ್ಲಾಳನ ವಧುವ ಬೇಡದ ಮುನ್ನ
ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂಬೆ.
ದೇಹಿ ನೀನು, ವ್ಯಾಪಾರಿಗಳು ನಮ್ಮವರು !
ಬೇಡು, ಕೂಡಲಸಂಗಮದೇವಾ, ಎಮ್ಮವರ ಕೈಯಲು !

ದಾಸಿಮಾರ್ಯರ ವಸ್ತ್ರ ಬೇಡದ ಮುನ್ನ ಆತನಿಗೆ ದೇವರು ಒಲಿದು ಜ್ಞಾನಧಾರೆ ಎರೆದಿದ್ದರೆ

ಆತನನ್ನು ದೇವರೆಂದು ಹೇಳಬಹುದಿತ್ತು. ಸಿರಿಯಾಳ ಚಂಗಳೆಯರ ಮಗನಾದ ಚೀಲಾಳನನ್ನು ಬೇಡಿ ಅಡಿಗೆ ಮಾಡಿ ಉಣ ಬಡಿಸದ ಮುನ್ನ ಆ ದಂಪತಿಗಳಿಗೆ ಒಲಿದಿದ್ದರೆ ಆತನನ್ನು ದೇವರೆಂದು ಹೇಳಬಹುದಿತ್ತು. ಸಿಂಧು ಬಲ್ಲಾಳನ ವಧುವ ಬೇಡಿ ಕಂಚೀಪುರವನ್ನು ಕೈಲಾಸಕ್ಕೆ ಒಯ್ಯದ ಮುನ್ನ ಆತನಿಗೆ ಜ್ಞಾನ ಒಲಿದಿದ್ದರೆ ಆತನನ್ನು ದೇವರೆಂದು ಹೇಳಬಹುದಿತ್ತು. ದಾಸಿಮಯ್ಯ, ಸಿರಿಯಾಳ, ಬಲ್ಲಾಳರನ್ನು ಬೇಡಿ, ಅವರಿಗೆ ಪುನಃ ನೀಡಿದ ನೀನೆತ್ತಣ ದೇವ !

ದೇಹಿ ಎಂದು ಬೇಡುವವ ನೀನು. ನೀನು ಬೇಡಿದೆ ; ಅವರು ನೀಡಿದರು.

ಶರಣರು ವ್ಯಾಪಾರಿಗಳು ! ಸಾಧ್ಯವಾದರೆ ನೀನು ಅವರನ್ನು ಬೇಡು ! ನೀನು ವಸ್ತ್ರ ಬೇಡಿದರೆ ಅವರು ನೂಲೆಂದು ಕೊಡುತ್ತಾರೆ. ನೀನು ಚಿನ್ನ ಬೇಡಿದರೆ ಅವರು ಲೋಹವೆಂದು ಕೊಡುತ್ತಾರೆ. ನೀನು ಭೂಮಿ ಬೇಡಿದರೆ ಅವರು ಮಣ್ಣೆಂದು ಕೊಡುತ್ತಾರೆ. ನೀನು ಮಗನನ್ನು ಬೇಡಿದರೆ ಅವರು ಮೋಹವೆಂದು ಕೊಡುತ್ತಾರೆ. ನೀನು ವಧುವ ಬೇಡಿದರೆ ಅದು ಮನದ ಅಜ್ಞಾನವೆಂದು ಕೊಡುತ್ತಾರೆ. ಕೈಲಾಸದ ಆಸೆ ನೀನು ತೋರಿದರೆ, ಕಾಯದಲ್ಲಿಯೇ ಕೈಲಾಸ ಶರಣರು ತೋರಿ ನಿನ್ನನ್ನು ಕಾಯದಲ್ಲಿಯೇ ಬಂಧಿಸುತ್ತಾರೆ. ನಿನ್ನ ವ್ಯಾಪಾರ ನಮ್ಮ ಶರಣರ ಮುಂದೆ ನಡೆಯುವುದಿಲ್ಲ. ನೀನು ಸೆಟ್ಟಿಯಾದರೆ ನಮ್ಮವರು ಮಹಾದೇವ ಶೆಟ್ಟರು. ಬೇಡು ಕೂಡಲಸಂಗಮದೇವಾ ನಮ್ಮವರ ಕೈಯಲು !

444

ಎಲ್ಲರೂ ವೀರರು, ಎಲ್ಲರೂ ಧೀರರು ;
ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು ;
ಕಾಳಗದ ಮುಖದಲ್ಲಿ ಕಾಣಬಾರದು,
ಓಡುವ ಮುಖದಲ್ಲಿ ಕಾಣಬಹುದು !
ನಮ್ಮ ಕೂಡಲಸಂಗನ ಶರಣರು ಧೀರರು,
ಉಳಿದವರೆಲ್ಲಾ ಅಧೀರರು !

ಅಲೆಕ್ಝಾಂಡರ್, ನೆಪೋಲಿಯನ್, ಅಶೋಕ ಮುಂತಾದವರೆಲ್ಲ ವೀರರು, ಧೀರರು ; ಮಹಿಮರು, ಪ್ರಮಥರು. ಆದರೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ತನುವಿನ ಅಜ್ಞಾನದ ಕಾಳಗದಲ್ಲಿ ಕಾಣಬಾರದು. ಇದರ ಬೆನ್ನತ್ತಿ ಓಡುವ ಮುಖದಲ್ಲಿ ಕಾಣಬಹುದು ! ಭೂಮಿಗಾಗಿ, ಹೇಮಕ್ಕಾಗಿ, ಕಾಮದ ವಿಷಯಕ್ಕಾಗಿ ಯುದ್ಧ ಮಾಡಿ ಸಾಮ್ರಾಟ, ಚಕ್ರವರ್ತಿ, ವಿರಾಧಿ ವೀರರೆನ್ನಿಸಿಕೊಂಡರು.

ಸಾಮ್ರಾಟ, ಚಕ್ರವರ್ತಿ ಎನ್ನಿಸಿಕೊಂಡವರು ತನುವಿನಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ವೈರಿಗಳನ್ನು ಕೊಲ್ಲಲು ಇವರಿಗೆ ಸಾಧ್ಯವಾಗಲೇ ಇಲ್ಲ.

ಕ್ರಿಷ್ಣ, ವರ್ಧಮಾನ, ಸಿದ್ಧಾರ್ಥ, ಜನಕ, ನಿಜಗುಣರು ವೀರರೂ ಧೀರರೂ, ಸಾಮ್ರಾಟ-ಸಾಮಂತರಾದರೂ, ಸೈನ್ಯದೊಂದಿಗೆ ಯುದ್ಧ ಮಾಡಲಿಲ್ಲ. ತನುವಿನಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೊಂದಿಗೆ, ಸಪ್ತ ವ್ಯಸನಗಳೊಂದಿಗೆ, ಅಷ್ಟಮದಗಳೊಂದಿಗೆ ಯುದ್ಧ ಮಾಡಿ ಜಯಸಿ ಮಹಾ ವೀರರೆನ್ನಿಸಿಕೊಂಡರು ; ಜ್ಞಾನ ಚಕ್ರವರ್ತಿಗಳೆನ್ನಿಸಿಕೊಂಡರು. ಕ್ರಿಸ್ತ

ಕ್ರಿಷ್ಣ ಬುದ್ಧ ಬಸವಾದಿ ಶರಣರೆನ್ನಿಸಿಕೊಂಡರು, ದಾಸವರೇಣ್ಯರೆನ್ನಿಸಿಕೊಂಡರು. ಇವರು ಧೀರರು, ಉಳಿದವರೆಲ್ಲಾ ಅಧೀರರು !

445

ಎಲ್ಲಿನೋಡಿದಡಲ್ಲಿ ಮನವೆಳಿಸಿದಡೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಪರವಧುವನು ಮಹಾದೇವಿಯೆಂಬೆ,
ಕೂಡಲಸಂಗಮದೇವಾ.

ತನು ಮೂರ್ತಸ್ವರೂಪವಾದರೆ ಅರಿವು ಮತ್ತು ಮನ ಅಮೂರ್ತ ಸ್ವರೂಪ. ಸಾಹಿತಿಗಳು, ವಿಚಾರವಾದಿಗಳು, ವಿಜ್ಞಾನಿಗಳು ಅಮೂರ್ತ ಸ್ವರೂಪವನ್ನು ಒಪ್ಪುವುದಿಲ್ಲ. ಒಬ್ಬ ವಿಜ್ಞಾನಿ ಸಸ್ಯ ಉಸಿರಾಡುವುದನ್ನು ಮೂರ್ತ ಸ್ವರೂಪಕ್ಕೆ ತಂದು ತೋರಿಸುತ್ತಾನೆ. ಹಾಗೆಯೇ ಶರಣರು ಅಮೂರ್ತ ಸ್ವರೂಪ ಅರಿವು ಮತ್ತು ಮನವನ್ನು ತನುವಿಗೆ ತಂದು ಮೂರ್ತ ಸ್ವರೂಪವನ್ನಾಗಿಸಿ ತೋರಿಸುತ್ತಾರೆ.

ತನು ಅರಿವಿಗೆ ಸಂಬಂಧಿಸಿದ್ದು, ಮನ ಅರಿವಿನೊಂದಿಗೆ ಬೆರೆತಾಗ ಮಾತ್ರ ತನು ನಿಶ್ಚಲ ! ಇಲ್ಲದ್ದಿದ್ದರೆ ತನು ಮನಕ್ಕೆ ಇಷ್ಟವಾದ ಸ್ಥಳಕ್ಕೆ ಮನದೊಂದಿಗೆ ಪ್ರಯಾಣಿಸುತ್ತದೆ. ಕೆಲವೊಂದು ತನುವಿಗೆ ಮಾತ್ರ ಈ ಸಹಜ ಕೆಲಸ ಹುಟ್ಟಿದಂದಿನಿಂದಲೇ ಸಾಧ್ಯವಾಗಬಹುದು. ಆದರೆ ಹಲವಾರು ತನುಗಳ ಸಂಬಂಧ ಮನದೊಂದಿಗೆ ಇರುತ್ತದೆ. ಮನದ ಆದೇಶದಂತೆ ತನು ಸಂಚರಿಸುತ್ತದೆ.

ತನು ಮತ್ತು ತನುವಿಗೆ ಸಂಬಂಧಿಸಿದ ಅರಿವಿನ ಶಿಕ್ಷಣ ಮನಕ್ಕೆ ದೊರೆತರೆ ಎಲ್ಲ ತನುಗಳು ಸಹಜವಾಗಿರಲು ಸಾಧ್ಯವಾಗುತ್ತದೆ. ಎಲ್ಲಿ ನೋಡಿದಡಲ್ಲಿ ಮನವೆಳಿಸಿದಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ ! ಪರವಧುವನು ಮಹಾದೇವಿಯೆಂಬೆ, ಕೂಡಲಸಂಗಮದೇವಾ ಎಂದಿದ್ದಾರೆ ಬಸವಣ್ಣ.

ತನುವಿನ ಕಣ ಕಣದಲ್ಲಿರುವ ಅರಿವು ತನುವನ್ನು ಅಪರಾಧಿ ಕೆಲಸದಲ್ಲಿ ತೊಡಗಿಸುವುದಿಲ್ಲ. ಅದು ಸದಾ ತನುವಿನ ಹಿತ ಬಯಸುತ್ತದೆ. ತನುವನ್ನು ಪ್ರಶಾಂತವಾಗಿಸುತ್ತದೆ. ಅಂತಹ ಅರಿವನ್ನು ಮಹಾದೇವ ಎಂದು ಕರೆದಿದ್ದಾರೆ ಬಸವಣ್ಣ. ಹಾಗೆಯೇ ತನುವನ್ನು ಸದಾ ಚಲನೆಯಲ್ಲಿಡುವ ಮನವನ್ನು ಮಹಾದೇವಿ ಎಂದು ಕರೆದು, ಮಹಾದೇವನಿಗೆ ಸತಿಯನ್ನಾಗಿಸಿದ್ದಾರೆ. ಶರಣ ಸತಿ, ಲಿಂಗಪತಿಯಾದ ಮೇಲೆ ತನುವಿಗೆ ಚಲನೆಯಿಲ್ಲ. ಕಾಯ ಕೈಲಾಸವಾಯಿತು !

ಅನ್ಯ ಕಾಯಗಳು, ಅದರಲ್ಲಿರುವ ಅರಿವೆಂಬ ಮಹಾದೇವ, ಮನವೆಂಬ ಮಹಾದೇವಿ ಕೂಡಾ ಒಂದೇ ಆಗಿರುವಾಗ ಯಾರನ್ನು ನೋಡುವುದು ? ಮನ ತಾನು ಕಲ್ಪಿಸಿಕೊಂಡ ಭ್ರಮೆ ಅಳಿದಾಗ ಬ್ರಹ್ಮ ಮಾತ್ರ ಉಳಿಯುತ್ತಾನೆ. ಬ್ರಹ್ಮ ಎನ್ನುವುದು ನಿಶ್ಚಲ ; ಚಲನೆಯಿಲ್ಲದ್ದು. ಅದು ಹೆಣ್ಣೂ ಅಲ್ಲ ಗಂಡೂ ಅಲ್ಲ. ಮನ ಕಲ್ಪಿಸಿಕೊಂಡ ಎರಡೂ ತನುಗಳಲ್ಲಿ ಹೆಣ್ಣು ಗಂಡೆನ್ನುವುದು ಇತ್ತು. ಅದರ ಭ್ರಮೆ ಕಳಚಿದಾಗ ಅರಿವು ಮಾತ್ರ ಬಳಕೆಯಾಯಿತು. ಅರಿವಿನಿಂದ ತನುವನ್ನು ನೋಡಿದಾಗ ಅದು ತನ್ನಂತೆಯೇ ಇರುವ ಚರ್ಮದ ಕವಚ ಹೊಂದಿದ ಅರಿವಿನ ಮಹಾದೇವಿಯ ತನು ಎಂದು ನಿರ್ಧಾರವಾಗುತ್ತದೆ.

ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ !
ಒಂದಕ್ಕಂಜುವೆ, ಒಂದಕ್ಕಳುಕುವೆ ;
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ !
ಮುನ್ನಂಜದ ರಾವಳನೆ ವಿಧಿಯಾದ !
ಅಂಜುವೆನಯ್ಯಾ , ಕೂಡಲಸಂಗಮದೇವಾ.

ಹರಿಯುವ ಹಾವು, ಉರಿಯುವ ಬೆಂಕಿ, ಕತ್ತಿಯ ಮೊನೆ ಇವು ಪ್ರಾಣವನ್ನು ಕಳೆಯುತ್ತವೆ. ಇದಕ್ಕೆ ನಾನು ಅಂಜುವುದಿಲ್ಲ.

ಒಂದಕ್ಕಂಜುವೆ, ಒಂದಕ್ಕಳುಕುವೆ ; ಪರ ಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ ! ಮುನ್ನಂಜದ ರಾವಳನೆ ವಿಧಿಯಾದ :

ಪರಸ್ತ್ರೀ ಪರಧನ : ರಾವಣ ಕುಬೇರ ಒಂದೇ ತನುವಿನ ಕುಡಿಗಳು. ತನುವಿನ ನವನಿಧಿಯ ಸಂಪತ್ತನ್ನು ಬಳಕೆ ಮಾಡಿಕೊಂಡ ಕುಬೇರ ಆಗರ್ಭ ಶ್ರೀಮಂತನಾದ. ಲಂಕೆಯ ಒಡೆಯನಾದ.

ನೋಡುವ ಕಣ್ಣುಗಳೆರಡು ಸಾಮಾನ್ಯವೆ ? ನಾನಾ ವಿಧದ ಶಬ್ದಗಳನ್ನು ಕೇಳಿ ಆನಂದ ಪಡುವ ಕಿವಿಗಳೆರಡು ಸಾಮಾನ್ಯವೆ ? ನಾನಾ ವಿಧದ ಪರಿಮಳಗಳನ್ನು ಮೂಸಿಸಿ ಆನಂದ ಪಡುವ ಮೂಗಿನ ಹೊಳ್ಳೆಗಳೆರಡು ಸಾಮಾನ್ಯವೆ ? ನಾನಾ ವಿಧದ ಪದಾರ್ಥಗಳನ್ನು ರುಚಿಸಿ ಆನಂದ ಪಡುವ ನಾಲಗೆ ಸಾಮಾನ್ಯವೆ ? ನಾನಾ ವಿಧದ ಪುಷ್ಪ ಪದಾರ್ಥಗಳನ್ನು ಸ್ಪರ್ಶಿಸಿ ಆನಂದಪಡುವ ಚರ್ಮ ಸಾಮಾನ್ಯವೆ ? ಇವು ತನುವಿನ ನವನಿಧಿಯ ಸಂಪತ್ತುಗಳಲ್ಲಿ ಎಂಟು. ಅಷ್ಟದಿಕ್ಪಾಲಕರ ವಾಸವೂ ಇಲ್ಲಿಯೇ. ಇಂದ್ರ, ಅಗ್ನಿ, ಯಮ, ನಿರುತ, ವರುಣ, ಈಶಾನ, ವಾಯುಗಳುಳ್ಳ ಕುಬೇರನೆ ಈ ತನು. ಇವರು ತನುವಿನಲ್ಲಿರುವ ಎಂಟು ಜನ ದಿಕ್ಪಾಲಕರು.

ತನುವಿನ ಒಡೆಯ ಕುಬೇರನಿಗೆ ಮತ್ತೊಬ್ಬ ಕುಬೇರನನ್ನು ಪಡೆಯುವ ದೇವಾಂಗವೊಂದಿದೆ. ಒಡಂಬಡಿಕೆಯಾದ (MoU)ಎರಡು ತನುಗಳ ಕುಬೇರರು ಮತ್ತೊಬ್ಬ ಕುಬೇರನನ್ನು ಪಡೆಯುವುದಕ್ಕಾಗಿ ಮಾತ್ರ ದೇವಾಂಗವನ್ನು ಬಳಸುತ್ತಾರೆ. ಇಲ್ಲದಿದ್ದರೆ ಅಷ್ಟದಿಕ್ಪಾಲಕರೇ ಬಂದು ಕುಬೇರನ ತನುವನ್ನು ಮುತ್ತಿಗೆ ಹಾಕಿ ರಾವಣನ ತನುವನ್ನಾಗಿಸುತ್ತಾರೆ.

ಕುಬೇರ ಮಾತ್ರ ತನುವಿನಲ್ಲಿರುವ ನವನಿಧಿಯ ಸಂಪತ್ತನ್ನು ಸದ್ಬಳಕೆ ಮಾಡಿಕೊಂಡು ಅಷ್ಟದಿಕ್ಪಾಲಕರಲ್ಲಿಯೇ ಶ್ರೀಮಂತನೆನ್ನಿಸಿಕೊಂಡ.

ರಾವಣ ಮತ್ತು ಕುಬೇರ ಒಂದೇ ತಂದೆಯ ವಿಶ್ರವತ ಋಷಿಯ ಮಕ್ಕಳು. ರಾವಣ ಕುಬೇರನ ಸಂಪತ್ತಿಗೆ ಲಗ್ಗೆಹಾಕಿದ. ಲಂಕೆಗೆ ಒಡೆಯನಾದ ! ನವನಿಧಿಗಳು ಒಲಿತರೆ ತನು ಕುಬೇರನೂ ಹೌದು; ಸಿಂಹವೂ ಹೌದು. ಒಲಿಯದಿದ್ದ ತನು ಒಂದು ಲಂಕೆ. ಅದರ ಅಧಿಪತಿ ರಾವಣ ! ನವನಿಧಿಗಳು ಒಲಿತರೆ ತನು ಕುಬೇರ ; ಅದು ಸಿಂಹ !

ರಾವಣನ ಒಡನಾಡಿ ಮಂಡೋದರಿ. ಪಂಚ ಪತಿವ್ರತೆಯರಲ್ಲಿ ಈಕೆ ಒಬ್ಬಳು. ಅಪ್ಪಟ ಸೌಂದರ್ಯವತಿ ; ರಾವಣನ ಮನದನ್ನೆ ! ಹೀಗಿದ್ದೂ ರಾವಣ ಸೀತೆಯನ್ನು ನೋಡಿದ. ರಾವಣನ ಕಣ್ಣುಗಳೇ ರಾವಣನಿಗೆ ಮೋಸ ಮಾಡಿದವು. ಮಂಡೋದರಿ ಚರ್ಮ, ಸೀತಾಮಾತೆಯ ಚರ್ಮದಲ್ಲಿ

ವ್ಯತ್ಯಾಸವಿರಲಿಲ್ಲ. ಚರ್ಮದೊಳಗಿನ ಪದಾರ್ಥಗಳೂ ಒಂದೇ ಆಗಿದ್ದವು. ಆದರೂ ರಾವಣ ಸೀತಾಮಾತೆಯನ್ನು ಕಾಮುಕನಾಗಿ ರಕ್ಕಸನಾಗಿ ನೋಡಿದ. ಅಷ್ಟದಿಕ್ಪಾಲಕರು ರಾವಣನ ತನುವಿಗೆ ಮುತ್ತಿಗೆ ಹಾಕಿದರು. ರಾವಣ ರಕ್ಕಸನಾದ. ತನ್ನ ಚರ್ಮದಂತೆ ತನ್ನ ತನುವಿನಂತೆಯೇ ಇರುವ ಸೀತಾಮಾತೆಯ ನವನಿಧಿಯ ಸಂಪತ್ತನ್ನು ಭೋಗಕ್ಕಾಗಿ ಎಳೆದೊಯ್ದನು. ತನ್ನ ತನುವಿನಂತೆಯೇ ಇರುವ ಮತ್ತೊಂದು ತನುವಿನಲ್ಲಿ ಕಾಮದ ಶ್ರೀಮಂತಿಕೆಯನ್ನು ಕಂಡು ರಾವಣ ಶ್ರೀರಾಮನ ಬಾಣಕ್ಕೆ ತುತ್ತಾದನು.

ರಾವಣ ಸ್ವತಹ ನವನಿಧಿಯುಳ್ಳ ಕುಬೇರನಾಗಿದ್ದರೂ ತಾನು ಹೇಗೆ ಕುಬೇರನೆಂದು ಅರಿಯಲಿಲ್ಲ. ಅಣ್ಣ ಕುಬೇರನ ಸಂಪತ್ತಿಗಾಗಿ ಕರುಬಿದ. ಆತನನ್ನು ಸೋಲಿಸಿ ಇಂದ್ರ, ಅಗ್ನಿ, ಯಮ, ನಿರುತ, ವರುಣ, ವಾಯು, ಕುಬೇರನೆಂಬ ಎಂಟು ದೇವತೆಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ರಕ್ಕಸ ರಾಜ್ಯದ ಸಿಂಹಾಸನದ ಅಧಿಪತಿಯಾದ.

ತನುವನ್ನು ಆವರಿಸಿದ ಮನ ತನುವಿನಲ್ಲಿರುವ ಅರಿವಿನ ಸಂಪತ್ತು ಅರಿಯದಿದ್ದರೆ, ತನುವಿನಿಂದ ನಿರ್ಮಿಸಿದ ವಸ್ತುವೇ ತನುವಿಗೆ ಮುಳುವಾಗಿ, ಅದೇ ಸಂಪತ್ತಾಗುತ್ತದೆ. ಚಿನ್ನದ ಆಭರಣಗಳಿಗಾಗಿ, ಮಣ್ಣಿಗಾಗಿ, ತನ್ನಂತೆಯೇ ಇರುವ ತನುವಿನ ಮೋಹಕ್ಕಾಗಿ ತನು ಯುದ್ಧಮಾಡಿ ಕೊಂದು ಪಡೆಯುತ್ತದೆ. ರಾವಣನಂತೆ ರಕ್ಕಸ ತನುವಾಗುತ್ತದೆ. ಪರಸ್ತ್ರೀ ಪರಧನವೆಂಬ ವ್ಯಾಮೋಹದ ಮೋಸಕ್ಕೆ ಅಂಜದೆ ರಾವಣನಂತೆ ಬಲಿಯಾಗುತ್ತದೆ.

ಪರಸ್ತ್ರೀ ಪರಧನ ಎಂಬುದು ಪಿಶಾಚಿ, ದೆವ್ವ, ಸೈತಾನ, ಇದಾವುದೂ ಇಲ್ಲದ್ದು. ಆದರೆ ಮನ ದೆವ್ವ, ಸೈತಾನ, ಪಿಶಾಚಿಯೆಂಬ ಶಬ್ದಗಳನ್ನು ಹುಟ್ಟು ಹಾಕಿದೆ. ತನು ಬದುಕಿರುವಾಗಲೇ ಮನ ಬಯಕೆ ಮಾಡಿದ ತನು ದಕ್ಕದಿದ್ದರೆ, ಅದು ಬಯಕೆ ಮಾಡಿದ ಭೂಮಿ, ಹೇಮ ದಕ್ಕದಿದ್ದರೆ ಭ್ರಮೆಯಿಂದಾಗಿ ದೆವ್ವ, ಪಿಶಾಚಿ ಸೈತಾನನಾಗುತ್ತದೆ. ತನು, ತನುವನ್ನೇ ಹರಿದು ತಿನ್ನುತ್ತದೆ. ಭಯಗ್ರಸ್ತನಾಗುತ್ತದೆ. ಇಲ್ಲ ರಕ್ಕಸನಾಗುತ್ತದೆ.

ಪಶು ಪಕ್ಷಿ ಪ್ರಾಣಿಗಳು ಸತ್ತರೆ ತನು ಅಂಜುವುದಿಲ್ಲ. ಅವು ದೆವ್ವ ಭೂತ ಸೈತಾನನಾಗುವುದಿಲ್ಲ. ತನು ಸತ್ತರೆ ಮಾತ್ರ ತನುವಿಗೆ ಅಂಜಿಕೆಯಾಗುತ್ತದೆ. ಅರಿವು ಬಳಕೆಯಾಗದಿದ್ದರೆ ರಾವಣ. ಅರಿವು ಬಳಕೆಯಾದ ತನು ಶ್ರೀರಾಮ.

ಸೀತಾಮಾತೆಯ ತನು ರಾವಾಣನ ತನುವಿನಂತಿದ್ದರೂ, ರಾವಣನ ಕಣ್ಣುಗಳಿಗೆ ಆವರಿಸಿದ ವಿಧಿ, ಸೀತಾಮಾತೆಯನ್ನು ನೋಡಿತು. ಆ ವಿಧಿಯೇ ತನುವಿಗೆ ಸಂದೇಶ ಕಳುಹಿಸಿ ಭೋಗಕ್ಕಾಗಿ ಸೀತಾದೇವಿಯನ್ನು ಅಪಹರಿಸಿತು. ಯಾರ ನೀತಿ ಪಾಠಗಳೂ ವಿಧಿಗೆ ತಟ್ಟಲಿಲ್ಲ. ಶ್ರೀರಾಮನ ಬಾಣಕ್ಕೆ ತುತ್ತಾಗಿ ತನುವಿನೊಂದಿಗೆ ಇಲ್ಲವಾಯಿತು. ತನು ನಿಷ್ಕಪಟಿ ; ಆವರಿಸಿದ ವಿಧಿ ಕಪಟಿ. ವಿಧಿ ತನುವಿನ ಕಣ ಕಣದಲ್ಲಿರುವ ಅರಿವಿನ ಬಾಣಕ್ಕೆ ಮಾತ್ರ ಸಾಯುತ್ತದೆ. ಆಗ ಪರಸ್ತ್ರೀ ಸೀತಾಮಾತೆಯಾಗಿ ಕಾಣುತ್ತಾಳೆ. ಪರಧನ ಲೋಹ-ಕಾಗದಗಳಾಗಿ ಕಾಣುತ್ತವೆ. ಇದು ಸತ್ಯ ಎಂದು ಅರಿವಿನ ಗಮನಕ್ಕೆ ಬಂದು ತನು ಅರಿವಿನ ಅಗೋಚರದ ಆಚರಣೆಯಲ್ಲಿ ತೊಡಗುತ್ತದೆ.

447

ಒಂದಕ್ಕೊಂಬತ್ತ ನುಡಿದು, ಕಣ್ಣ ಕೆಂಚನೆ ಮಾಡಿ, ಗಂಡುಗೆದರಿ,
ಮುಡುಹಿಕ್ಕಿ ಕೆಲವರ ಕಂಡಡಂಜುವೆ, ಓಸರಿಸುವೆ !

ಓಡಿದೆನೆಂಬ ಭಂಗವಾದಡಾಗಲಿ ;
ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ !
ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ ಹೊಲಮೇರೆಯ ಹೊಂದೆ,
ಹೊಲನ ಬಿಟ್ಟೋಡುವೆ :

ಪಂಡಿತರು ಮತ್ತು ಶಾಸ್ತ್ರ ಪಾರಂಗತರು ಊರಿಗೊಬ್ಬರು, ಪಟ್ಟಣದಲ್ಲಿ ಹಲವಾರು ಜನರಿರುತ್ತಾರೆ. ಇವರು ಉಪಜೀವನಕ್ಕಾಗಿ ಶಾಸ್ತ್ರ ಕಲಿತವರು. ಭಗವದ್ಗೀತೆ, ಬೈಬಲ್‌ಗಳನ್ನು ಓದಿದವರು. ಉಪನಿಷತ್ತುಗಳನ್ನು ಉದಾಹರಿಸಿ ಪ್ರವಚನ ಮಾಡುವವರಾಗಿರುತ್ತಾರೆ. ಒಂದಕ್ಕೆ ಒಂಬತ್ತು ಪುಸ್ತಕಗಳನ್ನು ಉದಾಹರಿಸಿ, ಕಣ್ಣು ಕೆಂಪಗೆ ಮಾಡಿ, ಮೈ ಉಬ್ಬಿಸಿ, ಭುಜ ಚಪ್ಪರಿಸಿ ತೊಡೆ ತಟ್ಟಿ ಸವಾಲು ಹಾಕುತ್ತಾರೆ. ಇವರನ್ನು ಕಂಡು ಜ್ಞಾನಿ ವಾದಮಾಡುವುದಿಲ್ಲ. ಅಲ್ಲಿ ಕೂಡುವುದೂ ಇಲ್ಲ. ಓಡಿದೆನೆಂಬ ಹಣೆಪಟ್ಟಿ ಬಂದರೂ ಅಡ್ಡಿಯಿಲ್ಲ ಆನಂದದಿಂದ ದೂರ ಸರಿಯುತ್ತಾರೆ.

ಪಂಡಿತ, ಶಾಸ್ತ್ರಿ ಮಾತನಾಡುವ ಮಾತಿಗೂ ಆತನ ಕ್ರಿಯೆಗೂ ತಾಳೆಯಾಗುವುದಿಲ್ಲ. ಅಂಗದ ಅರಿವು ಪುಸ್ತಕದಲ್ಲಿ ಬಂದಿದೆ. ಅದನ್ನು ಹೊಗಳುವ ಅವಶ್ಯಕತೆಯಾದರೂ ಯಾಕೆ ಬೇಕು ? ಎನ್ನುವುದು ಪಂಡಿತನ ಅನುಭವಕ್ಕೆ ಬಾರದೆ ಹೋಗುತ್ತದೆ.

ಅಂಗುಲಿಮಾಲ, ಉರಿಲಿಂಗ ಪೆದ್ದಿ, ಕನ್ನಮಾರಿ ಮಾರಯ್ಯ ಇವರು ವೃತ್ತಿಯಲ್ಲಿ ಕೊಲೆಗಡುಕ, ಕಳ್ಳರಾದರೂ ಕೂಡಾ ಅನುಭಾವಿಗಳಾದರು. ಬುದ್ಧಾದಿ ಶರಣರಾದರು. ಆದರೆ ಶಾಸ್ತ್ರಿ ಪಾಂಡಿತ್ಯದ ವೃತ್ತಿಯಲ್ಲಿದ್ದರೂ, ಅದರಿಂದಲೇ ಉಪಜೀವನ ಮಾಡುತ್ತಿದ್ದರೂ, ಜೀವನದ ಪರಮಾನಂದದ ಅನುಭಾವ ಇವರಿಗೆ ಸಾಧ್ಯವಾಗುವುದೇ ಇಲ್ಲ.

ಶಾಸ್ತ್ರಿಗಳು, ಪಂಡಿತರು ವೇದ ಉಪನಿಷತ್ ಆಗಮ ಪುರಾಣ ಭಗವದ್ಗೀತೆ ಬೈಬಲ್‌ಗಳನ್ನು ಉಪಜೀವನಕ್ಕಾಗಿ ಬಳಸಿಕೊಂಡವರು. ಅದು ಅಂಗದ ಅರಿವಿ(ಅನುಭಾವ)ನಿಂದಲೇ ಬಂದರೂ ಮನದಲ್ಲಿ ಸಂಗ್ರಹವಾಗಿ, ಆ ಅರಿವಿನ ಸಂಪತ್ತಿನ ಮೇಲೆ ಮನ ಸವಾರಿ ಮಾಡುತ್ತದೆ.

ಕಳ್ಳ, ಕೊಲೆಗಡುಕ, ದರೋಡೆಕೋರ ವೃತ್ತಿಯಲ್ಲಿದ್ದ ಅಂಗಕ್ಕೆ ಅನುಭಾವಿಯ ದರ್ಶನವಾದರೆ ಆತನ ಸಂಗದಿಂದ ಕೂಡಲೇ ಅನುಭಾವಿಗಳಾಗುತ್ತಾರೆ. ಆದರೆ ಪಾಂಡಿತ್ಯ, ಶಾಸ್ತ್ರಿಯ ವೃತ್ತಿಯಲ್ಲಿ ತೊಡಗಿದ ಅಂಗಕ್ಕೆ ಅನುಭವ ಸಾಧ್ಯವಾಗುವುದಿಲ್ಲ; ಅವರಿದ್ದ ಹೊಲ ಬಿಟ್ಟು ಓಡುವೆ ಎಂದು ಸಕಲ ತನುಗಳನ್ನು ಅನುಭಾವದೆಡೆಗೆ ಸೆಳೆದಿದ್ದಾರೆ ಬಸವಣ್ಣ.

448

ಒಡೆಯರು ಬಂದಡೆ ಗುಡಿತೋರಣವ ಕಟ್ಟಿ ;
ನಂಟರು ಬಂದಡೆ ಸಮಯವಿಲ್ಲೆನ್ನಿ !
ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊರಗಾದಂದು ?
ಸಮಯಾಚಾರಕ್ಕೆ ಒಳಗಾದಂದು ?
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು ;
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ !

ಅಂಗದಲ್ಲಿ ಸ್ವಾನುಭವ ಹೇಳುವ ಒಡೆಯನೂ ಇದ್ದಾನೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಸೃಷ್ಟಿಸಿ ಅವುಗಳೊಂದಿಗೆ ಗೆಳೆತನ ಬೆಳೆಸುವ ನಂಟನೂ ಇದ್ದಾನೆ. ಅನುಭಾವಿಗಳು ಅಂಗದಲ್ಲಿರುವ ಈ ಭೇದವನ್ನು ಮನಕ್ಕೆ ಮನದಟ್ಟು ಮಾಡಿ ತಿಳಿ ಹೇಳಿದಾಗ ಮನ, ಮನದೊಡೆಯನನ್ನು ಗೌರವಿಸಿ ಆತನೊಂದಿಗೆ ವಿರಮಿಸಬೇಕು. ಒಡೆಯನನ್ನು ಪರಿಚಯಿಸಿದ ಒಡೆಯ, ಅನುಭಾವಿ ಬರುವನೆಂದು ಸುದ್ದಿ ಬಂದರೆ ಗುಡಿ ತೋರಣ ಕಟ್ಟಿ ಆದರಿಸಬೇಕು.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಂದ ತತ್ತರಿಸಿ ಅಪಮಾನಕ್ಕೊಳಗಾದ ತನು ಗ್ರಾಮದ ಜನರಿಂದ ಬಹಿಷ್ಕಾರಕ್ಕೊಳಗಾಗಿ ನೀರಿಗೂ ಹೊರಗಾಗುತ್ತದೆ ; ನೇಣಿಗೆ ಹತ್ತಿರವಾಗುತ್ತದೆ. ಆಗ ತನ್ನವರೆನ್ನುವವರೂ ಯಾರೂ ಇಲ್ಲವಾಗುತ್ತಾರೆ. ತಂದೆ ತಾಯಿ ಹೊರಗೆ ಹಾಕುತ್ತಾರೆ. ಬಂಧು ಬಳಗ ದೂರವಾಗುತ್ತಾರೆ. ಅನುಭಾವಿ ಒಡೆಯ ಮಾತ್ರ ಹತ್ತಿರ ಕರೆದುಕೊಂಡು ಮೈದಡುವುತ್ತಾನೆ. ತನುವನ್ನು ನೇವರಿಸಿ ಅದರಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ಅರಿವಿನ ಜಲ ಸಿಂಪಡಿಸಿ ಅನುಭಾವಿಯನ್ನಾಗಿಸುತ್ತಾನೆ.

ಅರಿವೆಂಬ ಗುರುದೇವನ ಸ್ಪರ್ಶದಿಂದಾಗಿ ಅರಿಷಡ್ವರ್ಗಗಳಿಂದಾಗಿ ಕಬ್ಬಿಣದಂತಿದ್ದ ಅಂಗ ಚಿನ್ನವಾಗುತ್ತದೆ. ಬಳಿಕ ಅಂಗದಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಬಂಧುಗಳುಂಟೆ ? ಅಂಗದ ಅರಿವಿನಲ್ಲಿ ಅರಿಷಡ್ವರ್ಗಗಳು ಸಂಗಮವಾಗಿ ಸಂಗಮನಾಥನೇ ತಾವಾದವು.

449

ಒಡೆಯರಾಡುವ ಮಾತ ಕಡೆಪರಿಯಂತರ ಕೇಳಿ,
ಇದಿರುವೋಗಿ ಕಿಂಕರನಾಗಿ ನಡಗುತ್ತ ಬಿನ್ನಹವ ಮಾಡುವ
ಸದ್ಭಕ್ತರ ತೋರಯ್ಯಾ !
ಒಡೆಯರಾಡುವ ಮಾತ ಕಂಡು ಕರೆದಲ್ಲಿ
ಕೆಡೆಮೆಟ್ಟಿ ಬಾಯಿ ಘನವೆಂದು ಆಡುವವನ ತೋರದಿರಯ್ಯಾ !
ಅವನ ಸಂಗದಲ್ಲಿರಿಸದಿರಯ್ಯಾ ,
ಅವನ ಸಹ ಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ !
ಕೂಡಲಸಂಗಮದೇವಯ್ಯಾ ನಿಮ್ಮ ಬೇಡುವುದೊಂದೆ ವರವು.

ಅಂಗಕ್ಕೆ ಒಡೆತನದ ಸುಳುಹು ನೀಡುವವನೆ ಒಡೆಯ. ಅಂತಹ ಒಡೆಯನ ಮಾತು ಅಂಗ ಇರುವವರೆಗೆ ಕೇಳಿ ಒಡೆಯನಾಗಬೇಕು. ಆತನಿಗೆ ಇದಿರುವೋಗಿ ಕಿಂಕರನಾಗಿ ನಡಗುತ್ತ ಬರಮಾಡಿಕೊಳ್ಳುವ ಸದ್ಭಕ್ತರನ್ನು ತೋರಿಸಯ್ಯಾ .

ಅವರ ಎದುರಿಗೆ ನಿಂತು ಧ್ವನಿಮಾಡಿ ನುಡಿಯುವವರ ಸಂಗದಲ್ಲಿ ಇರಿಸದಿರಯ್ಯಾ. ಅವರ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ .

ಸತ್ಯದೊಂದಿಗೆ ಸಂಗಮಾಡುವವರೇ ಒಡೆಯರು. ಅವರನ್ನು ಬ್ರಹ್ಮ ಜ್ಞಾನಿಗಳು, ಸ್ವಸ್ವರೂಪಿಗಳು, ಶ್ರೋತ್ರೀಯ ಬ್ರಹ್ಮನಿಷ್ಠರು, ಶರಣರು, ದಾಸರು ಎಂದು ಕರೆದಿದ್ದಾರೆ. ಇಂತಹ ಒಡೆಯರು ಅಂಗಕ್ಕೆ ಸಿಗುವುದು ದುರ್ಲಭ. ಬಯಕೆ ಮಾಡಿದ ಅಂಗಕ್ಕೆ ಮಾತ್ರ ಇಂತಹ ಒಡೆಯರು

ಸಿಗುತ್ತಾರೆ. ಅವರು ಅಂಗದಲ್ಲಿಯೇ ಇರುವ ಮಹಾಜ್ಞಾನದ ಸುಳುಹನ್ನು ಅಂಗಕ್ಕೆ ಆವರಿಸಿರುವ ಮನಕ್ಕೆ ನೀಡಿ ದೂರ ಸರಿಯುತ್ತಾರೆ. ಇಂತಹ ಮಹಾತ್ಮರನ್ನು ಅತ್ಯಂತ ವಿನಯದಿಂದ ಬರಮಾಡಿಕೊಳ್ಳುವುದು ಅಂಗದ ಕರ್ತವ್ಯ.

ಸತ್ಯದ ಸುಳುಹನ್ನು ಸೂಚಿಸುವವ ಆವನಾದಡೇನು ಶ್ರೀ ಮಹಾದೇವನ ನೆನೆವವನ ಬಾಯ ತುಂಬಲವ ಮೆಲುವೆ, ಬೀಳುಡುಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ, ಕೂಡಲಸಂಗಮದೇವಾ ಎಂದು ಬಸವಣ್ಣನವರು ಹಾಡಿ ಹೊಗಳಿದ್ದಾರೆ.

450

ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ !
ಮಾಲೆಗಾರನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ !
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ !
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ !
ನಾನಾವ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ ,
ಕೂಡಲಸಂಗಮದೇವಾ !

ಹಾರುವ, ಮಾಲೆಗಾರ, ಬಣಜಿಗ, ಕಂಚುಗಾರ ಇವರೆಲ್ಲರಿಗೂ ಒಬ್ಬ ದೇವನಿದ್ದಾನೆ. ಆಯಾ ಜಾತಿಗೆ ಸಂಬಂಧಿಸಿದ ದೇವರು ಅವರಿಗೆ ಪ್ರಮುಖ. ಆ ದೇವರನ್ನು ಬಿಟ್ಟು ಅರಿವಿಗೆ ಹೋಗಲರಿಯರು. ಇದು ಮನದ ಸ್ವಭಾವ. ಇದರ ಸಂಪ್ರದಾಯ ಕೂಡಾ.

ಕೊರಳಿಗೆ ಸುತ್ತಿಕೊಂಡ ದಾರ ಅರಿವನ್ನು ಸೂಚಿಸುವ ದಿಕ್ಸೂಚಿಯಾಗಿದ್ದರೂ ಅದು ಅಂಗಕ್ಕೆ ನೇಣಾಗಿ ಮಾರ್ಪಟ್ಟಿದೆ. ಇದು ಕೊರಳಿಗೆ ಧರಿಸಿಕೊಂಡ ಆರೆಳೆಯ ಮನದ ಪ್ರಭಾವ.

ಅಂಗ ಯಾವ ದೇವರನ್ನು ಪೂಜಿಸುವ ಸಂಪ್ರದಾಯಕ್ಕೆ ಒಳಪಟ್ಟಿದ್ದರೂ ಅದು ಕಲ್ಲು ಕಟ್ಟಿಗೆ ಪಂಚ ಲೋಹಗಳಿಂದ ನಿರ್ಮಾಣ ಮಾಡಲಾಗಿದೆ. ವಸ್ತುವನ್ನು ತೆಗೆದುಕೊಂಡು, ದೇವರ ಮೂರ್ತಿ ಮಾಡಿ, ಮೂಲ ವಸ್ತುವನ್ನೇ ಮರೆತು, ಮೂರ್ತಿಯನ್ನೇ ದೇವರೆಂದು ಪೂಜಿಸುವ ರೂಢಿಯಿಟ್ಟುಕೊಂಡ ಮನ, ಅಂಗವನ್ನು ದೇವರ ಹಂಗಿಗನನ್ನಾಗಿ ಮಾಡುವುದು. ಇದು ಮನದ ಸ್ವಭಾವ.

ಅಜ್ಞಾನಿ ಮನಕ್ಕೆ , ಅನುಭಾವಿಗಳಾದ ಶರಣರ ಪ್ರಭಾವ ಬಿದ್ದರೆ, ಅದು ಅಂಗದಲ್ಲಿರುವ ಅರಿವಿನೆಡೆಗೆ ಎಳೆಸುವುದು. ಆಗ ಮನ ಯಾರ ಹಂಗಿಗನೂ ಆಗದೆ ಶರಣರ ಹಂಗಿನಲ್ಲಿರುವುದು. ಮನ ಅಂಗದಲ್ಲಿರುವ ಸ್ವಾನುಭವದ ಹಂಗಿಗೆ ಒಳಗಾಗುವುದು. ಅಂಗದಲ್ಲಿರುವ ಅರಿವಿನೊಂದಿಗೆ ಸಂಗಮವಾಗುವುದು.

451

ಶ್ರೀ ವಿಭೂತಿ ರುದ್ರಾಕ್ಷಿಯಿದ್ದವರ ಲಿಂಗವೆಂಬೆ,
ಇಲ್ಲದವರ ಭವಿಯೆಂಬೆ.
ಕೂಡಲಸಂಗಮದೇವಾ,

ಸದ್ಭಕ್ತರ ನೀನೆಂಬೆ.

ಅಂಗದ ಕಣ ಕಣದಲ್ಲಿ ಅರಿವಿನ ಕಣ್ಣುಗಳಿವೆ. ಅವು ಅಜ್ಞಾನವನ್ನು ನಾಶಪಡಿಸಿ ನೋಡುವ ರುದ್ರನ ಕಣ್ಣುಗ್ಗಳು ; ರುದ್ರಾಕ್ಷಿ. ಹಾಗೆಯೇ ಅಂಗ ಶ್ರೀ ವಿಭೂತಿಯೂ ಹೌದು.

ಸೆಗಣಿ ಒಣಗಿದರೆ ಬೆರಣಿಯಾಗುತ್ತದೆ. ಒಣಗಿದ ಬೆರಣಿ ಸೆಗಣಿಯಲ್ಲ. ಸೆಗಣಿಯಲ್ಲಿ ಬೆರಣಿಯಿಲ್ಲ. ಬೆರಣಿಯಲ್ಲಿ ಸೆಗಣಿಯೂ ಇಲ್ಲ. ಬೆರಣಿಗೆ ಅಗ್ನಿ ತಾಗಿದರೆ ವಿಭೂತಿಯಾಗುತ್ತದೆ. ವಿಭೂತಿಯಲ್ಲಿ ಬೆರಣಿ ಇಲ್ಲ; ಸೆಗಣಿ ಹುಡುಕಿದರೂ ದೊರೆಯುವುದಿಲ್ಲ.

ಅಂಗದಲ್ಲಿರುವ ಅರಿವಿನಿಂದ ಅಜ್ಞಾನವೆಂಬ ಸೆಗಣಿ ಬೆರಣಿಯಾಗಿ ಬೆಂದು ಅರಿವಿನ ವಿಭೂತಿಯಾಗದ ಮುನ್ನ, ಅದು ಅಂಗ ಮಾತ್ರ ; ಅರಿವಿನ ಲಿಂಗಾಂಗವಲ್ಲ. ಅರಿವಿನ ಅಂಗ ಲಿಂಗವೂ ಹೌದು, ಶ್ರೀ ವಿಭೂತಿಯೂ ಹೌದು ; ರುದ್ರಾಕ್ಷಿಯೂ ಹೌದು.

ಅಂಗದಲ್ಲಿರುವ ಅಜ್ಞಾನ ಬೆಂದು ಅರಿವಿನ ಲಿಂಗವಾಗದ ಮುನ್ನ ಶ್ರೀ ವಿಭೂತಿ ಧರಿಸಿದರೇನು? ರುದ್ರಾಕ್ಷಿ ಮಾಲೆ ಹಾಕಿಕೊಂಡರೇನು ? ಲಿಂಗ ಹಾಕಿಕೊಂಡು ತ್ರಿಕಾಲ ಪೂಜಿಸಿದರೇನು? ಅರಿವಿನ ಚಿಹ್ನೆಯ ಕಾವಿ ಧರಿಸಿದರೇನು ? ಅಂಗದಲ್ಲಿಯೇ ಮರೆಯಾದ ಅರಿವಿನ ಲಿಂಗವನ್ನು ಮನ ಅರಿಯದಿದ್ದರೆ ಅದು ಭವಿ. ಅರಿತರೆ ಅದು ಅರಿವಿನ ಲಿಂಗ.

ಅಂಗದ ಅರಿವನ್ನು ಅರಿತು ; ಆ ಅರಿವೆಂಬ ಗುರುವಿಗೆ ಭಕ್ತಿ ಮಾಡಿದ ಮನವೇ ಭಕ್ತ ಮನ. ಸದ್ಭಕ್ತರ ಮನ. ಲಿಂಗದಲ್ಲಿ ಲೀನವಾದ ಘನಮನ.

452

ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ,
ನಿಮ್ಮಾಣೆ ! ನಿಮ್ಮ ಪುರಾತನರಾಣೆ ! ತಲೆದಂಡ ! ತಲೆದಂಡ !
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ !

ಅಂಗವೆನ್ನುವುದು ಅರಿವಿನ ಲಿಂಗಯ್ಯನಿರುವ ರಾಣಿವಾಸದ ಮನೆ. ಹೀಗಿರುವಾಗ ಪ್ರತಿ ಅಂಗವೂ ಲಿಂಗಯ್ಯನ ಮನೆ ; ದೇವನೊಂದಿಗೆ ವಾಸವಿರುವ ಭಕ್ತನ ಮನೆ. ಇಂತಹ ಭಕ್ತ ದೇವ ಸಹಿತ ಮನೆಗೆ ಬಂದಡೆ ; ಭಕ್ತನ ಕಾಯಕವಾವುದೆಂದು ಕೇಳಿದೆನಾದಡೆ ನಿಮ್ಮಾಣೆ ! ನಿಮ್ಮ ಪುರಾತನರಾಣೆ, ತಲೆದಂಡ ! ತಲೆದಂಡ ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ !

ಸೂಕ್ಷ್ಮಾತಿ ಸೂಕ್ಷ್ಮ ಜ್ಞಾನದಿಂದ ಈ ವಚನ ನೋಡಿದಡೆ ನಿಧಾನವಾಗಿ ಅರಿವಿಗೆ ಬರುತ್ತದೆ. ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಕೇಳುವುದಿಲ್ಲ. ಕಾಯ ಆವುದಾದಡೇನು? ಅದು ಲಿಂಗಯ್ಯನ ರಾಣಿವಾಸ. ಯಾವ ಕಾಯಕವೆಂದು ಕೇಳುವ ಕಾಯ ಒಂದೇ, ಮನೆಗೆ ಬಂದ ಕಾಯ ಒಂದೇ ! ಇವೆರಡೂ ಕಾಯಗಳು ಲಿಂಗಯ್ಯನ ರಾಣಿ ವಾಸಗಳೇ ಇರುವಾಗ ಕಾಯವನ್ನು ಯಾವ ಕಾಯಕವೆಂದು ಕೇಳಿದರೆ ತಪ್ಪಾಗುವುದಿಲ್ಲವೆ ? ಕಾಯದ ಕುಲದಲ್ಲಿ ಕುಲವನರಸುವುದೆ ? ಅದು ಅರಿವಿನ ಕುಲ ; ಅರಿವಿನ ಲಿಂಗಯ್ಯನ ರಾಣಿವಾಸದ ಕುಲ. ಹೀಗಾಗಿ ಬಸವಣ್ಣನವರು

ರಾಣಿವಾಸದ ಮೇಲೆ ಆಣೆ ಇಟ್ಟು ನುಡಿದಿದ್ದಾರೆ.

453

ಲಿಂಗಾಂಗಿಗಳಲ್ಲದವರ ಶರಣರ ಸಂಗವಿಲ್ಲದವರ
ಕಂಡಡೆ ನಾಚುವೆ.
ಅವರ ನುಡಿ ಎನಗೆ ಸಮನಿಸದಯ್ಯಾ
ಕೂಡಲಸಂಗಮದೇವಾ, ನೀನು ಅಲ್ಲಿಲ್ಲದ ಕಾರಣ.

ಲಿಂಗವಿಲ್ಲದ ಅಂಗವೇ ಇಲ್ಲ. ಅದು ಶರಣರ ಸಂಗದಿಂದ ಮಾತ್ರ ಲಭಿಸುತ್ತದೆ. ಶರಣರು ಮನಕ್ಕೆ ಅಂಗದಲ್ಲಿರುವ ಲಿಂಗದೆಡೆಗೆ ಪಯಣಿಸಲು ಸುಳುಹು ನೀಡುತ್ತಾರೆ. ಅವರು ಮಹಾಜ್ಞಾನಿಗಳು.

ಶರಣರ ಸಂಗವಿಲ್ಲದ ಅಂಗಗಳ ಕಂಡಡೆ ನಾಚುವೆ. ಅವರ ನುಡಿ ಎನಗೆ ಸಮನಿಸದಯ್ಯಾ ಕೂಡಲಸಂಗಮದೇವಾ ನೀನು ಅಲ್ಲಿಲ್ಲದ ಕಾರಣ.

ಶರಣರ ನುಡಿ ನುಡಿಯಲ್ಲದ ನುಡಿ. ನುಡಿಗೆಡೆಗೊಡದ ನುಡಿ. ಅದನ್ನು ನುಡಿ ಎನ್ನಲು ಬರುವುದಿಲ್ಲ. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ಮುತ್ತು ಮಾಣಿಕ್ಯ ಸ್ಫಟಿಕಗಳು ನುಡಿಯುವುದಿಲ್ಲ. ಅವು ಉದಕ ಗಟ್ಟಿಗೊಂಡು ಮುತ್ತು ಮಾಣಿಕ್ಯ ಸ್ಫಟಿಕಗಳಾಗಿ ಬೆಳಗುವ ಮೂಲಕ ನುಡಿಯುತ್ತವೆ. ಈ ಬೆಳಗನ್ನು ನುಡಿ ಎನ್ನಲು ಬರುವುದಿಲ್ಲ.

ಶರಣರ ಸಂಗದಿಂದ ಅಂಗ ಕೂಡಾ ಲಿಂಗವಾಗಿ ನುಡಿದು ಬೆಳಗುತ್ತದೆ. ಜಲಬಿಂದು ಗರ್ಭದಲ್ಲಿ ಹೊಕ್ಕು ಪಿಂಡವಾಗಿ ಪಿಂಡಾಂಡವಾಗಿ, ಅಂಗವಾಗಿ ಲಿಂಗದೊಂದಿಗೆ ಹೊರ ಬಂದಿದೆ. ಶರಣರ ಸಂಗದಿಂದ ಅಂಗ ಬೆಳಗುವ ಲಿಂಗವಾಗಿ ಪರಿವರ್ತನೆಯಾಗುತ್ತದೆ. ಅಂತಹ ಲಿಂಗಾಂಗದ ನುಡಿಯನ್ನು ನುಡಿ ಎನ್ನಲು ಬರುವುದಿಲ್ಲ. ಲಿಂಗ ನುಡಿಗೆ ಅಂಗಗಳ ನುಡಿ ಸಮನಿಸದು. ಏಕೆಂದರೆ ಲಿಂಗ ಅಲ್ಲಿಲ್ಲದ ಕಾರಣ. ಅಂಗದಲ್ಲಿ ಲಿಂಗವಿದೆಯೆಂದು ಮನಕ್ಕೆ ಗೊತ್ತಿರದ ಕಾರಣ, ಮನದ ನುಡಿ ಲಿಂಗ ನುಡಿ ಎನ್ನಿಸದು.

454

ಶ್ರೀ ವಿಭೂತಿಯ ಹೂಸದವರ ಶ್ರೀ ರುದ್ರಾಕ್ಷಿಯ ಧರಿಸದವರ,
ನಿತ್ಯ ಲಿಂಗಾರ್ಚನೆಯ ಮಾಡದವರ,
ಜಂಗಮವೇ ಲಿಂಗವೆಂದರಿಯದವರ,
ಸದ್ಭಕ್ತರ ಸಂಗದಲ್ಲಿರದವರ ಎನಗೊಮ್ಮೆ ತೋರದಿರಯ್ಯಾ ,
ಕೂಡಲಸಂಗಮದೇವಾ, ಸೆರಗೊಡ್ಡಿ ಬೇಡುವೆನು !

ವಿಭೂತಿ, ರುದ್ರಾಕ್ಷಿ, ಲಿಂಗ ಜಂಗಮರಿಲ್ಲದ ಅಂಗಗಳೇ ಭೂಮಿಯ ಮೇಲೆ ಇಲ್ಲ. ಸಕಲ ಅಂಗಗಳಲ್ಲಿಯೂ ಅಣ್ಣನವರು ಹೇಳಿದ ಈ ಎಲ್ಲವೂ ಇವೆ. ಆದರೆ ಅಂಗವನ್ನು ಮೋಡದಂತೆ ಆವರಿಸಿದ ಮನಕ್ಕೆ ಹೀಗೆಂದರೇನೆಂದು ತಿಳಿದಿಲ್ಲ. ಅಂಗದ ಕಣ ಕಣದಲ್ಲಿರುವ ರುದ್ರನ ದರ್ಶನ ಮನಕ್ಕೆ ಆಗಿಲ್ಲ. ಅಕ್ಷಿಗಳ ಪಟಲದ ಅಜ್ಞಾನದ ಪೊರೆ ಹರಿಯದಿದ್ದರೆ ಅದು ರುದ್ರಾಕ್ಷಿಯಾಗುವುದಿಲ್ಲ.

ಅಂಗದ ಅಜ್ಞಾನದ ಸೆಗಣಿ ಒಣಗಿ ಸುಟ್ಟು ಬೂದಿಯಾಗದಿದ್ದರೆ ಅದು ವಿಭೂತಿಯಾಗುವುದಿಲ್ಲ.

ಅಂಗದ ಕಣ ಕಣದಲ್ಲಿರುವ ಅರಿವೆಂಬ ಗುರುದೇವನ ದರ್ಶನ ಮನಕ್ಕೆ ಆಗದಿದ್ದರೆ ಅಂಗವದು ಲಿಂಗ ಆಗಲು ಸಾಧ್ಯವಿಲ್ಲ. ಮನಕ್ಕೆ ಗುರುದೇವನ ದರ್ಶನವಾಗಿ, ಆತನ ನುಡಿ ಚಾಚೂ ತಪ್ಪದೆ ಪಾಲಿಸುವ ಜಂಗಮನ ದರ್ಶನವಾಗದಿದ್ದರೆ ಮನವದು ಘನಮನವಾಗುವುದಿಲ್ಲ.

ವಿಭೂತಿ, ರುದ್ರಾಕ್ಷಿ, ಲಿಂಗ, ಜಂಗಮರಿದ್ದ ಅಂಗಕ್ಕೆ ಮನ ಭಕ್ತಿ ಮಾಡದಿದ್ದರೆ ಅದು ಸದ್ಭಕ್ತನಾಗುವುದಿಲ್ಲ. ಇಂತಹ ಸದ್ಭಕ್ತರ ಸಂಗದಲ್ಲಿರುವ ಅಂಗವನ್ನು ಎನಗೆ ತೋರಿ ಕೃಪೆ ಮಾಡು ಲಿಂಗವೇ ಎಂದು ಅಣ್ಣನವರು ಅಂಗದಲ್ಲಿರುವ ಸಂಗಯ್ಯನನ್ನು ಸೆರಗೊಡ್ಡಿ ಬೇಡುವಂತೆ ಜಗದ ಅಂಗಗಳಿಗೆ ಸುಳುಹು ನೀಡಿದ್ದಾರೆ.

455

ಕೂತವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ
ಕೂರದವರಿಗೆ ಹೇಳಿ ನಾನೇವೆ ಶಿವನೆ ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರು ಎನ್ನ ಸುಖ-ದುಃಖವ ?
ಅಂಗತ ವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ !
ಇದು ಕಾರಣ, ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು.

ಕೂತವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ ಕೂರದವರಿಗೆ ಹೇಳಿ ನಾನೇವೆ ಶಿವನೆ :

ಮನ ಏನು ಬಯಸುತ್ತದೊ ಅದು ಅಂಗದೊಂದಿಗೆ ಪಡೆದು ಸುಖಿಸುತ್ತದೆ. ಮನಕ್ಕೆ ಬಯಕೆಯಾಗದಿದ್ದರೆ ಅದು ಅಂಗದೊಂದಿಗೆ ಜ್ಞಾನ ಕೇಳಲು ಹೋಗುವುದಿಲ್ಲ. ಅಂತಹ ಅಂಗಕ್ಕೆ ಜ್ಞಾನ ಹೇಳಿದರೆ, ಜ್ಞಾನದ ಸುಳುಹು ಮನಕ್ಕೆ ನೀಡಿದರೆ ಅದಕ್ಕೆ ರುಚಿಸುವುದಿಲ್ಲ. ಅಂಗ ಕುಳಿತರೂ ಮನಕ್ಕೆ ಜ್ಞಾನ ರುಚಿಸುವುದಿಲ್ಲ. ಅಂತಹ ಮನಕ್ಕೆ ಪಾಠ ಮಾಡುವುದು ಕರಲ ಭೂಮಿಯಲ್ಲಿ ಕರೆದ ಮಳೆಯ ತೆರನಂತೆ. ಮನವೆತ್ತ ಬಲ್ಲುದು ಅರಿವಿನ ಸುಖವನು ? ಬಯಕೆಯಾದ ಮನಕ್ಕೆ ಜ್ಞಾನ ಲಭಿಸದಿದ್ದರೆ ಬಯಸದ ಮನವೆತ್ತ ಬಲ್ಲುದು ಅದರ ದುಃಖವನು ?

ಅಂಗವನ್ನು ಆವರಿಸಿರುವ ಮನಕ್ಕೆ ಅದು ಬಯಸಿದರೆ ಅಂಗದ ಹೊರಗಿದ್ದ ವಸ್ತುಗಳೆಲ್ಲ ದಕ್ಕುತ್ತವೆ. ಆದರೆ ಅಂಗದಲ್ಲಿರುವ ಲಿಂಗವೆಂಬ ಮಹಾಜ್ಞಾನ ದಕ್ಕುವುದು ಬಲು ಜಟಿಲ. ಇಂತಹ ಜ್ಞಾನವನ್ನು ಮನ ಬಯಸಿ ಅಂಗದೊಂದಿಗೆ ಕುಳಿತರೆ ಅದರ ಕುಳಸ್ಥಳಂಗಳನೆಲ್ಲವನು ಹೇಳುವೆ ಎಂದಿದ್ದಾರೆ ಅಣ್ಣನವರು.

ಅಂಗದೊಂದಿಗೆ ಕೂಡದ ಮನಕ್ಕೆ ಲಿಂಗಯ್ಯನ ಸುದ್ದಿಯನು ನಾನೇನು ಹೇಳಲಿ ಶಿವನೆ ? ಹೇಳಿ ಹೇಳಿ ದಣಿಯ ಬಹುದೇ ಹೊರತು ಮನಕ್ಕೆ ಅರಿವಿನ ಮಾತು ರುಚಿಸುವುದಿಲ್ಲ ಶಿವನೇ ನಿಮ್ಮ ಶರಣರಿಗಲ್ಲದೆ ಬಾಯ್ದೆರೆಯೆನು ಎಂದಿದ್ದಾರೆ ಅಣ್ಣನವರು.

456

ಒಡೆದೋಡು ಎನ್ನ ಮನೆಯಲಿಲ್ಲದಂತೆ ಮಾಡಯ್ಯಾ ;
ಕೊಡುದೇವ, ಎನ್ನ ಕೈಯಲೊಂದು ಕರಿಕೆಯನು,
'ಮೃಡದೇವಾ, ಶರಣೆ'ಂದು ಭಿಕ್ಷಕ್ಕೆ ಹೋದಡೆ,
ಅಲ್ಲಿ 'ನಡೆ ದೇವಾ' ಎಂದೆನಿಸು ಕೂಡಲಸಂಗಮದೇವಾ !

ಹೊರಗಿರುವ ಎಲ್ಲ ವಸ್ತುಗಳು ತನು ಹೆಸರಿಸಿ, ಅವು ತನುವಿನಿಂದಲೇ ಸೃಷ್ಟಿಯಾಗಿವೆ. ಆದರೂ ತನುವಿನ ಮನಕ್ಕೆ ವಸ್ತುಗಳ ನಿಜರೂಪ ತಿಳಿಯದ್ದಕ್ಕಾಗಿ ತನುವಿನೊಂದಿಗೆ ಮನ ವಸ್ತುಗಳಿಗೆ ಸೆರೆಯಾಳು ಆಗಿದೆ. ಅರಿವಾದರೆ ಪ್ರತಿ ವಸ್ತು ಮನಕ್ಕೆ ತೃಣವಾಗಿ ಕಾಣುತ್ತದೆ.

ಮನಕ್ಕೆ ತನುವಿನಲ್ಲಿರುವ ಅರಿವು ತಿಳಿದ ಮೇಲೂ ಮನದ ಹಿಂದಿನ ಛಾಳಿ ಬಿಡುವುದಿಲ್ಲ. ಪುನಃ ಪುನಃ ಮನ ಪ್ರಯೋಗಕ್ಕೆ ಹೋಗಿ ವಸ್ತುವನ್ನು ಅನಾವರಣ ಮಾಡಿ ವಸ್ತುವಿನ ಸತ್ಯ ತಿಳಿದು ತೃಣವಾಗಿ ಕಂಡುಬಿಡುವ ರೂಢಿ ಬೆಳೆಸಿಕೊಳ್ಳಬೇಕು.

ಮನ ಅರಿವಿನ ಅಗ್ನಿಯಿಂದ ಬೆಂದ ಬಳಿಕವೂ ಅದರ ಛಾಯೆ ಹಾಗೆ ಉಳಿಯುತ್ತದೆ. ನಾರಿನಿಂದ ಹೊಸೆದ ಹಗ್ಗ ಸುಟ್ಟ ಬಳಿಕವೂ ಹಗ್ಗವಾಗಿ ಕಾಣುವುದು. ಆದರೆ ಅದು ಹಗ್ಗವಲ್ಲ ; ಬೂದಿ ಮಾತ್ರ. ಹಗ್ಗವೆಂದು ಮುಟ್ಟಲು ಹೋದರೆ ಬೂದಿ ಕೈಗೆ ಬರುತ್ತದೆ.

ಅಂಗದಲ್ಲಿರುವ ಅರಿವೆಂಬ ಸಂಗಯ್ಯನನ್ನು ಮನ ಹೇಗೆ ಬೇಡಬೇಕೆಂದು, ತನುವಿನೊಂದಿಗೆ ಮನ ಹೇಗೆ ಪ್ರಯೋಗಕ್ಕಿಳಿಯಬೇಕೆಂದು ಅಣ್ಣನವರು ಈ ವಚನದಲ್ಲಿ ದೃಷ್ಟಾಂತದೊಂದಿಗೆ ಕೊಟ್ಟಿದ್ದಾರೆ.

ಕೊಡು ದೇವಾ ಎಂದು ಬೇಡಲು ಎನ್ನ ಮನೆಯಲ್ಲಿ ಒಡೆದ ಮುಚ್ಚಳವೂ ಇಲ್ಲದಂತೆ ಮಾಡು. ಎನ್ನ ಕೈಯಲೊಂದು ಕರಿಕೆಯನು ಕೊಟ್ಟು ಮೃಡದೇವಾ ಶರಣೆಂದು ಭಿಕ್ಷಕ್ಕೆ ಹೋದಡೆ, ಅಲ್ಲಿ 'ನಡೆ ದೇವಾ' ಎಂದೆನಿಸು ತಂದೆ ಎಂದಿದ್ದಾರೆ ಬಸವಣ್ಣನವರು.

457

ಭವವಿರಹಿತ ಭಕ್ತನಾದ ಬಳಿಕ
ಭಕ್ತಿ ಭಾಜನದಲ್ಲಿ ಮಾಡಿ ಭವಿಗಿಕ್ಕಲಾಗದಯ್ಯಾ ;
ಯುಕ್ತಿ ಶೂನ್ಯರಿಗೆ ಮುಂದೆ ಪ್ರಸಾದ ದೂರ, ಮುಕ್ತಿಯಿಲ್ಲ !
ಮುಂದೆ ನಾಯ ಬಸುರಲ್ಲಿ ಬಪ್ಪುದು ತಪ್ಪದು ಪೃಥ್ವಿಯೊಳಗೆ !
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದೆ,
ಅನಾಚಾರಕ್ಕೆಲ್ಲಿಯದೊ ?

ಮನಕ್ಕೆ ಅರಿವಾಗದಿದ್ದರೆ ತನುವನ್ನು ಕ್ಷಣ ಕ್ಷಣಕ್ಕೂ ಸುಖ-ದುಃಖಗಳ ಮರಣ ಶಯ್ಯೆಯಲ್ಲಿ ದೂಡುತ್ತದೆ. ಇಂತಹ ಮನಕ್ಕೆ ಭವಿ ಎಂದು ಹೆಸರು. ಮನ ತನುವಿನ ಅರಿವಿನಲ್ಲಿ ಲೀನವಾದ ಬಳಿಕ ಭಕ್ತನಾಗುತ್ತದೆ. ಭಕ್ತನ ಆಚರಣೆ ಅಗೋಚರದ ಆಚರಣೆ. ಭವಿಯ ಆಚರಣೆ ಗೋಚರದ ಆಚರಣೆ.

ಗೋಚರದ ಆಚರಣೆಯೆಂದರೆ ನಿತ್ಯ ಮೂರು ವೇಳೆಯಲ್ಲಿ ಸ್ನಾನ ಮಾಡಿ ಲಿಂಗಪೂಜಾನಿಷ್ಠನಾಗಿ ಜಂಗಮನನ್ನು ಕರೆಸಿ ಪಾದೋದಕ ಸ್ವೀಕರಿಸಿ ಪ್ರಸಾದ ತೆಗೆದುಕೊಳ್ಳುವುದು. ಮಠ ಮಂದಿರ ಪುಣ್ಯ ಕ್ಷೇತ್ರಗಳಿಗೆ ಹೋಗಿ ರಥೋತ್ಸವಗಳಲ್ಲಿ ಪಾಲ್ಗೊಂಡು ಪುನೀತನಾದೆನೆಂದು ಹೇಳುವುದು. ಮಡಿ ಮೈಲಿಗೆ ಮುಟ್ಟು ತಟ್ಟುಗಳ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು; ಗೋಚರದ ಆಚರಣೆ. ಭವಿಯು ಪೂಜಾ ನಿಷ್ಠ ; ಈತ ಮಾಡುವ ಆಚಾರದ ಪೂಜೆ ಸಕಲರಿಗೂ ಲಭ್ಯ. ಆದರೆ ಅರಿವಿನ ಪ್ರಸಾದ ಬಲುದೂರ. ಭವಿ ಮನಕ್ಕೆ ಅಜ್ಞಾನದಿಂದ ಮುಕ್ತಿಯಿಲ್ಲ! ಮುಂದೆ ಪೃಥ್ವಿಯೊಳಗೆ ಮನಕ್ಕೆ ದುಃಖ ತಪ್ಪುವುದಿಲ್ಲ. ನಾಯಿತನ ಮಾಣದು. ಏಕೆಂದರೆ ತೋರುವ ಆಚರಣೆ ಅನಾಚಾರದ ತನುವನ್ನು ಸೇರುವುದಿಲ್ಲ. ಮುಟ್ಟುವುದಿಲ್ಲ. ನಾಯಿತನ ತನುವಿನಲ್ಲಿ ಮನೆ ಮಾಡಿಕೊಳ್ಳುತ್ತದೆ.

ತನುವಿನಲ್ಲಿರುವ ಅರಿವಿಗೆ ಮೊರೆ ಹೋಗಿ ಅರಿವೇ ತಾನಾದ ಮನವದು ಭಕ್ತ ತನು. ಈ ತನುಗಳಿಗೆ ಆಚಾರಗಳೇ ಇಲ್ಲ. ಯುಕ್ತಿಯಿಂದ ಆಭರಣ ನೋಡಿ ಹಳದಿ ಲೋಹವೆಂದೆಳಿಸಿ ಖರೀದಿಸುವುದಿಲ್ಲ, ಕಳವು ಮಾಡುವುದಿಲ್ಲ, ಧರಿಸುವುದಿಲ್ಲ. ತನುವನ್ನು ನೋಡಿ ತನ್ನಂತೆಯೇ ಇರುವ ಅರಿವಿನ ತನುವೆಂದು, ಗುರುವಿನ ತನುವೆಂದು ಆದರಿಸಿ ಸಕಲ ತನುಗಳನ್ನೂ ಗೌರವಿಸುತ್ತದೆ.

ದೇವಸ್ಥಾನ, ದೇವರನ್ನು ನೋಡಿ ಅದು ಕಲ್ಲಿನಿಂದ ನಿರ್ಮಾಣ ಮಾಡಿದ ಮೂರ್ತಿಯೆಂದು ತಿಳಿಯುತ್ತದೆ. ಪೂಜಿಸುವುದಿಲ್ಲ. ಅಭಿಷೇಕ ಮಾಡುವುದಿಲ್ಲ. ಸಾಲಾಗಿ ನಿಂತು ಚೀಟಿ ಪಡೆದು ದೇವರೆಂದು ಕೈ ಮುಗಿಯುವುದಿಲ್ಲ. ಹುಂಡಿಯಲ್ಲಿ ಹಣ ಹಾಕುವ ತನುಗಳನ್ನು ನೋಡಿ ಹಸನ್ಮುಖಿಯಾಗುತ್ತದೆ. ಯುಕ್ತಿಯಿಲ್ಲದ ತನುವೆಂದು ಭಾವಿಸಿ ಸುಮ್ಮನಾಗುತ್ತದೆ.

ಪುಣ್ಯ ಕ್ಷೇತ್ರಗಳಿಗೆ ಅಲಿಯುವುದಿಲ್ಲ ; ತ್ರಿಕಾಲ ಪೂಜಿಸುವುದಿಲ್ಲ. ಜನನ ಮರಣಗಳು ಸಹಜ ಕ್ರಿಯೆಯೆಂದು ತಿಳಿದು ಸುಖ ದುಃಖಗಳಿಂದ ದೂರವಿರುತ್ತದೆ. ದೇಶ ಭಾಷೆ ಗಡಿಗಳಾಚರಣೆಯಲ್ಲಿ ತೊಡಗುವುದಿಲ್ಲ. ತನುವನ್ನು ಹೆಣ್ಣೆಂದು ಗಂಡೆಂದು ಕೂಡಾ ನೋಡುವುದಿಲ್ಲ. ಸರ್ವ ತನುಗಳು ತನ್ನಂತೆಯೇ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳನ್ನು ಚರ್ಮದಲ್ಲಿ ಬಂಧಿಸಿಕೊಂಡ ಚೈತನ್ಯದ ತನುಗಳೆಂದು ಅರಿವಿನಿಂದ ನೋಡುತ್ತದೆ. ಜಾತಿ ಮತ ಪಂಥಗಳು ಸೋಂಕುವುದಿಲ್ಲ. ಇಂತಹ ತನುಗಳನ್ನು ಶರಣರು ಭಕ್ತ ತನುವೆಂದು ಕರೆದಿದ್ದಾರೆ.

ಸದಾ ಗೋಚರದ ಆಚಾರದಲ್ಲಿ ಭಕ್ತಿನಿರತ ಪೂಜಾನಿರತ ತನುಗಳನ್ನು ಅನಾಚಾರದ ತನುಗಳೆಂದು ಕರೆದಿದ್ದಾರೆ.

ಬಸವಣ್ಣನವರು ಒಪ್ಪಿಕೊಂಡು ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ ಅನಾಚಾರಕ್ಕೆಲ್ಲಿಯದೊ ? ಎಂದು ಪ್ರಶ್ನಿಸಿದ್ದಾರೆ. ಗೋಚರದ ಆಚಾರವಂತರು ಇಂತಹ ಅಗೋಚರದ ಆಚಾರದಲ್ಲಿ ತೊಡಗಬೇಕಾದರೆ ಯುಕ್ತಿ ಬೇಕಾಗುತ್ತದೆ. ಯುಕ್ತಿ ಇಲ್ಲದವರು ಗೋಚರದ ಆಚಾರಿಗಳು. ಯುಕ್ತಿ ಬಳಕೆ ಮಾಡುವವರು ಶರಣರು, ಅನಾಚಾರಿಗಳು, ಅಗೋಚರದ ಆಚಾರಿಗಳು !

ಯುಕ್ತಿ ಶೂನ್ಯರಿಗೆ ಮುಂದೆ ಪ್ರಸಾದ ದೂರ, ಮುಕ್ತಿಯಿಲ್ಲ :

ಯುಕ್ತಿವಂತ ಸಕಲವನ್ನು ಅರಿವಿನಿಂದ ನೋಡುತ್ತಾನೆ. ಯಾವ ವಸ್ತುಗಳೂ ಆತನನ್ನು ತಲ್ಲಣಗೊಳಿಸುವುದಿಲ್ಲ. ಯುಕ್ತಿ ಶೂನ್ಯ ಕಲ್ಲಿನಿಂದ ಕೆತ್ತಿದ ಮೂರ್ತಿಯನ್ನು ದೇವರೆಂದು ಆರಾ

ಧಿಸಿ ಭಜಿಸಿ ಗೋಚರದ ಆಚಾರದಲ್ಲಿ ತೊಡಗುತ್ತಾನೆ. ಇವನಿಗೆ ಕಲ್ಲು ಕಾಣುವುದೇ ಇಲ್ಲ. ಒಂದೇ ಕಲ್ಲಿನಲ್ಲಿ ಕೆತ್ತಿದ ಅನಂತ ದೇವರ ಆರಾಧನೆ ಜೀವನ ಪರ್ಯಂತ ಮಾಡಿ ಮಾಡಿ ಯುಕ್ತಿ ಬಳಸದೆ ದೇವರು ಕರುಣಿಸಲಿಲ್ಲವೆಂದು ಸಾಯುತ್ತಾನೆ. ಇವನ ಕಣ್ಣಿಗೆ ಕಲ್ಲು ಪ್ರಸಾದವಾಗುವುದಿಲ್ಲ. ಕಲ್ಲಿನ ಮೂರ್ತಿಗೆ ದೇವರೆಂದು ಆಭರಣ ಕಿರೀಟ ತೊಡಿಸಿ ಉತ್ಸವಗಳನ್ನು ಮಾಡುತ್ತಾನೆ. ಲೋಹ ಪ್ರಸಾದವಾಗುವುದಿಲ್ಲ. ಕಲ್ಲಿಗೆ ಲೋಹ ತೊಡಿಸಿ ಆನಂದ ಪಡುವುದು ಯುಕ್ತಿ ಶೂನ್ಯ ತನುವಿನ ಕೆಲಸ. ಇದಕ್ಕೆ ಅರಿವಿನ ಪ್ರಸಾದ ಬಲು ದೂರ. ಇದರಿಂದ ಮುಕ್ತಿಯೂ ಇಲ್ಲ.

ಭಕ್ತಪ್ರಸಾದಿ ಸ್ಥಲ

458

ಅಯ್ಯಾ ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನ ವಲಸದಂತೆ ಮಾಡಯ್ಯಾ.
ತನು ದಾಸೋಹಕ್ಕೆ ಉಬ್ಬುವಂತೆ ಮಾಡು,
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ ಹಾಡಿ, ನೋಡಿ ಕೂಡಿ, ಭಾವಿಸಿ ಸುಖಿಸಿ,
ಪರಿಣಾಮಿಸುವಂತೆ ಮಾಡು, ಕೂಡಲಸಂಗಮದೇವಾ.

ದಾಸೋಹ ಮತ್ತು ಪ್ರಸಾದ ಇವೆರಡು ವಿಶಿಷ್ಟವಾದ ಪದಗಳು. ದಾಸೋಹವೆಂದರೆ ಅನುಭಾವಿಗಳು ಸೂತ್ರಗಳ ಮೂಲಕ ಅರಿವಿಗೆ ಹೋಗುವ ವಿಧಾನಗಳನ್ನು ಹೇಳಿಕೊಡುತ್ತಾರೆ. ಬಯಸಿ ಕೇಳಲು ಬಂದ ಆಸಕ್ತ ಅದನ್ನು ಪ್ರಸಾದ ಮಾಡಿಕೊಳ್ಳುತ್ತಾನೆ. ಈ ಮಹಾ ದಾಸೋಹದಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಆಸಕ್ತರು ಭಾಗಿಯಾಗಿದ್ದರು. ಕಲ್ಯಾಣದಲ್ಲಿ ನಡೆದ ಈ ಕಾಯಕದಲ್ಲಿ ಜ್ಞಾನ ಭಂಡಾರಿ ಬಸವಣ್ಣನವರು ಅತ್ಯಂತ ಕಿರಿಯರಾಗಿ ಈ ನೇತೃತ್ವವನ್ನು ವಹಿಸಿಕೊಂಡಿದ್ದರು. ಭಾಗವಹಿಸಿದ ಸಕಲರಿಗೂ ಅರಿವಿನ ಪ್ರಸಾದವನ್ನು ಬಡಿಸಿದರು. ಆದರೆ ಉಂಡು ಪ್ರಸಾದವಾದದ್ದು ಏಳು ನೂರಾ ಎಪ್ಪತ್ತು ತನುಗಳಿಗೆ ಮಾತ್ರ ! ಈ ತನುಗಳು ಬಸವ ಕ್ರಿಸ್ತ, ಕ್ರಿಷ್ಣ , ಮಹಾವೀರನಿಗೆ ಸಮಾನ !

ಅನ್ನ ನೀಡುವುದು ದಾಸೋಹವಲ್ಲ; ಉಣ್ಣುವುದು ಪ್ರಸಾದವಲ್ಲ. ಉಂಡ ಅನ್ನ ದೇಹದಲ್ಲಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಚರ್ಮಕ್ಕೆ ಹೇಗೆ ಕಾಂತಿ ನೀಡುತ್ತದೆಯೋ ಹಾಗೆಯೇ ಕೇಳಿದ ಅರಿವಿನ ಸೂತ್ರಗಳು, ವಚನಗಳು, ಅನುಭಾವ ಗೋಷ್ಠಿಗಳು ತನುವಿಗೆ ಪ್ರಸಾದವಾಗಬೇಕು.

ಬ್ರಹ್ಮಸಭೆಯಲ್ಲಿ ಕುಳಿತು ಅನುಭಾವ ಕೇಳಿದರೆ ತನುಗಳಿಗೆ ಸಂತೋಷವಾಗುತ್ತದೆ ; ಅದು ಪ್ರಸಾದವಲ್ಲ. ಅನುಭಾವದ ಪ್ರಸಾದವನು ಉಂಡ ತನು, ನೋಡಿದರೆ ನೋಡಿದ ಅಜ್ಞಾನದ ನೋಟ ಕಣ್ಣಿಗೆ ಪ್ರಸಾದವಾಗಬೇಕು. ಆ ನೋಟ ತನುವಿಗೆ ಸಂಕಟವನ್ನೊಡ್ಡಬಾರದು. ಸುಖ ದುಃಖದ ರಸಾಯನವನ್ನುಂಟು ಮಾಡಬಾರದು. ಇದು ಉಂಡ ಅನುಭವದ ಮಾತುಗಳು ದೇಹಕ್ಕೆ

ಪ್ರಸಾದವಾದ ಲಕ್ಷಣ.

ದಾಸೋಹದಲ್ಲಿ ಉಂಡ ಅನುಭಾವದ ಪ್ರಸಾದ ; ಕೇಳುವ ಕಿವಿಗಳಲ್ಲಿ ಪ್ರಸಾದವಾಗಬೇಕು. ಕು ಶಬ್ದ, ಸು ಶಬ್ದವೆಂದು ಕೇಳಿ ತನುವಿನಲ್ಲಿ ರಸಾಯನ ಉಂಟಾಗಬಾರದು. ಸುಖ ದುಃಖಗಳುಂಟಾಗಬಾರದು. ಶಬ್ದ ಕಿವಿಗೆ ಅರಿವಿನ ಪರಿಮಳವಾಗಿ ತನುವಿನಲ್ಲಿ ಪ್ರಸಾದವಾಗಬೇಕು. ಶಬ್ದ ಸಂಗ್ರಹವಾಗದೆ ಕೇಳಿದ ಶಬ್ದಗಳೆಲ್ಲ ಅರಿವಿನಿಂದ ಕೇಳಿ ಜೀರ್ಣವಾಗಬೇಕು.

ಬ್ರಹ್ಮಸಭೆಯಲ್ಲಿ ಅನುಭಾವ ಕೇಳಿದ ಮೇಲೆ ಹೂ ಮತ್ತು ಮಲದ ವಾಸನೆಗಳೆರಡೂ ಮೂಗಿಗೆ ಅರಿವಿನ ಪರಿಮಳವಾಗಬೇಕು. ಸುಗಂಧ ದುರ್ಗಂಧವೆಂಬ ರಸಾಯನ ತನುವಿನಲ್ಲಿ ಉಂಟಾಗಬಾರದು. ಇದು ದಾಸೋಹ ಮತ್ತು ಪ್ರಸಾದದ ಲಕ್ಷಣ !

ಬ್ರಹ್ಮಸಭೆಯಲ್ಲಿ ಕುಳಿತು ಅನುಭಾವ ಕೇಳಿದ ಮೇಲೆ ಮುಟ್ಟಿದರೆ ಚರ್ಮದಲ್ಲಿ ರಸಾಯನ ಉಂಟಾಗಿ ರಾವಣನಾಗಬಾರದು. ಬದಲಾಗಿ ತನ್ನಂತೆಯೇ ಇರುವ ಅರಿವಿನ ತನು ತಾಗಿದ ಆನಂದ ಉಂಟಾಗಬೇಕು. ಇದು ಪ್ರಸಾದಿಕನ ಲಕ್ಷಣ.

ಪ್ರಸಾದಿಕನೆಂದರೆ ತಟ್ಟೆಯಲ್ಲಿ ಏನೂ ಬಿಡದೆ ಉಣ್ಣುವುದಲ್ಲ. ತಟ್ಟೆಯಲ್ಲಿದ್ದ ಪ್ರಸಾದದಲ್ಲಿ ಖಾರ, ಉಪ್ಪುಹೆಚ್ಚಿದ್ದರೆ ನಾಲಿಗೆ ತನುವಿನೊಂದಿಗೆ ತಳಮಳಗೊಳ್ಳಬಾರದು. ನೀಡಿದವರನ್ನು , ಪ್ರಸಾದ ಮಾಡಿದವರನ್ನು ನಿಂದಿಸಬಾರದು. ನಾಲಿಗೆ, ಖಾರ ಮತ್ತು ಉಪ್ಪಿನ ರಸದ ರುಚಿಯನ್ನು ಆನಂದದಿಂದ ಅನುಭವಿಸಬೇಕು. ಇದು ಒಂದು ಜ್ಞಾನದ ವಿಜ್ಞಾನ. ಈ ವಿಜ್ಞಾನ ತನುವಿನಲ್ಲಿಯೇ ತನ್ಮಯವಾಗಿದೆ.

ದಾಸೋಹ ಮತ್ತು ಪ್ರಸಾದದ ಮಹತ್ವದ ಜ್ಞಾನ ತನುವಿನಲ್ಲಿದೆ ; ತನುವೇ ಪಡೆಯಬೇಕು; ತನುವೇ ತನುವಿನಲ್ಲಿದೆಯೆಂದು ತನು ಸೂಚಿಸಬೇಕು.

ತನುವಿನಿಂದಲೇ ಜ್ಞಾನದ ಪ್ರಸಾದ ಪಡೆದ ಅನುಭಾವಿ ಮತ್ತೊಂದು ತನುವಿಗೆ ಸೂಚಿಸುತ್ತಾನೆ. ಇದನ್ನು ಶರಣರು ದಾಸೋಹ ಎಂದು ಕರೆದರು. ಸೂಚಿಸುವ ಶರಣ ದಾಸೋಹಿ, ಉಣ್ಣುವ ಕ್ರಿಯೆ ಪ್ರಸಾದ, ಉಂಡವನು ಪ್ರಸಾದಿಕ.

ಅನುಭಾವ ಗೋಷ್ಠಿಯಲ್ಲಿ ಜ್ಞಾನ ಪ್ರಸಾದವನ್ನು ಉಂಡವನು ಮಹಾ ಜ್ಞಾನಿಯೇ ಆಗುತ್ತಾನೆ. ಅವನ ಕಣ್ಣು ಅಸತ್ಯವನ್ನು ಉಂಡು ಸತ್ಯವನ್ನು ಮಾತ್ರ ನೋಡುತ್ತದೆ.

ಉದಾ : ಆಭರಣ ನೋಡಿ ಕೊಳ್ಳುವುದಿಲ್ಲ, ವ್ಯವಹಾರ ಮಾಡುವುದಿಲ್ಲ, ಕಳುವು ಮಾಡುವುದಿಲ್ಲ, ಕೊಂದು ಪಡೆಯುವುದಿಲ್ಲ, ತಳಮಳಗೊಳ್ಳುವುದಿಲ್ಲ, ಲೋಹ ನೋಡಿ ಸುಮ್ಮನಾಗುತ್ತಾನೆ. ಕಣ್ಣಿನ ಚೇಷ್ಟೆಗೆ ಮರುಗುತ್ತಾನೆ.

ಆಭರಣ ನೋಡಿ ಚೇಷ್ಟೆ ಮಾಡುವ ಕಣ್ಣು ಕಣ್ಣಿನಲ್ಲಿಯೇ ಇದೆ. ಸತ್ಯ ನೋಡಿ ಉದಾಸೀನ ಮಾಡುವ ಕಣ್ಣು ಕಣ್ಣಿನಲ್ಲಿಯೇ ಇದೆ. ಅನುಭಾವಿ ಮಾತ್ರ ಸತ್ಯ ಬಳಕೆ ಮಾಡುತ್ತಾನೆ.

ಅಯ್ಯಾ , ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನ ವಲಸದಂತೆ ಮಾಡಯ್ಯಾ :

ತನು ಮನ ಅಂದರೆ ತಿಳಿಯುತ್ತದೆ. ಧನ ಅಂದರೆ ತಿಳಿಯುವುದಿಲ್ಲ. ಕರೆನ್ಸಿ, ಆಭರಣ, ಭೂಮಿ, ಮುತ್ತು ರತ್ನಗಳತ್ತ ಮನ ಕೊಂಡೊಯ್ಯುತ್ತದೆ. ಶರಣರು ವಸ್ತುಗಳಿಗೆ ಧನ ಎನ್ನಲಿಲ್ಲ. ಧನವೆಂದರೆ ಅರಿವು ; ತನುವಿನಲ್ಲಿ ತನ್ಮಯವಾದದ್ದು. ಇದನ್ನು ಮನ ಬಳಕೆ ಮಾಡಿಕೊಳ್ಳಬೇಕು.

ಶರಣರ ದಾಸೋಹಕ್ಕೆ ತನು ಮನ ಮತ್ತು ಅರಿವು ಆಲಸ್ಯಗೊಳ್ಳದಂತೆ ತನುವಿನಲ್ಲಿ

ಸಂಗಮಗೊಂಡು ಅರಿವಿನ ಸಂಗಯ್ಯನನ್ನಾಗಿಸು ತಂದೆ ಎಂದು ಮನದಿಂದಲೇ ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನನ್ನು ಬೇಡುವ ಸುಳುಹನ್ನು ನೀಡಿದ್ದಾರೆ ಬಸವಣ್ಣ.

ತನು ದಾಸೋಹಕ್ಕೆ ಉಬ್ಬುವಂತೆ ಮಾಡು. ಅರಿವಿನ ಗೋಷ್ಠಿಗಳಿಗೆ ಹುರಿದುಂಬಿಸುವಂತೆ ತನುವಿಗೆ ಪ್ರೇರೇಪಣೆ ನೀಡು.

ಮನ ದಾಸೋಹದಲ್ಲಿ ಲೀಯವಹಂತೆ ಮಾಡು :

ಮನ ತನುವನ್ನು ಬ್ರಹ್ಮಸಭೆಗೆ ಕರೆದುಕೊಂಡು ಹೋಗುತ್ತದೆ. ಅದು ರುಚಿಸದಿದ್ದರೆ ತನುವನ್ನು ಅಲ್ಲಿಯೇ ಬಿಟ್ಟು ಮತ್ತೆಲ್ಲಿಗೊ ಸುಳಿದಾಡಲು ಹೋಗುತ್ತದೆ. ತನು ಬ್ರಹ್ಮ ಸಭೆಯಲ್ಲಿದ್ದರೂ ವ್ಯರ್ಥ; ಮನವಿಲ್ಲದ ಕಾರಣ ತನುವೂ ಅಲ್ಲಿಲ್ಲ. ಮನ ಅರಿವಿನಲ್ಲಿ ಲೀಯವಾಗಿ ತನುವಿನೊಂದಿಗೆ ಅನುಭಾವ ಕೇಳುವಂತೆ ಮಾಡು ತಂದೆ.

ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ ಹಾಡಿ, ನೋಡಿ ಕೂಡಿ, ಭಾವಿಸಿ ಸುಖಿಸಿ, ಪರಿಣಾಮಿಸುವಂತೆ ಮಾಡು, ಕೂಡಲಸಂಗಮದೇವಾ :

ತನುವಿನಲ್ಲಿರುವ ಅರಿವು ತನುವಿನೊಂದಿಗೆ ಶರಣರ ಗೋಷ್ಠಿಗಾಗಿ ಸವೆಯಲಿ. ಆಡಿದರೆ ಅರಿವಿನಿಂದ ಆಡಲಿ; ಅರಿವಿನಿಂದಲೇ ಹಾಡಲಿ. ಅರಿವಿನಿಂದ ನೋಡಿ; ಅರಿವಿನಿಂದಲೇ ಕೂಡಿ; ಅರಿವಿನಿಂದಲೇ ಭಾವಿಸಿ ಸುಖಿಸಿ; ಪರಿಣಾಮಿಯಾಗಲಿ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೇ ಇದು ನಿನ್ನಿಂದಲೇ ಸಾಧ್ಯ.

459

ಹಾರುವ ಹಾರುವನಪ್ಪೆ ನಾನು ಸದ್ಭಕ್ತರೆನ್ನವರೆಂದು ;
ಹಾರುವ ಹಾರುವನವ್ವಾ ನಾನು ಶರಣರು ಎನ್ನವರೆನ್ನವರೆಂದು,
ಕೂಡಲಸಂಗನ ಶರಣರು ಒಕ್ಕುದನಿಕ್ಕಿ ಸಲಹುವರೆಂದು.

ಹಾರುವನೆಂದು ಹರುಷದಿಂದ ಹೇಳುತ್ತಾ ಸದ್ಭಕ್ತರೆನ್ನವರೆಂದು ಹಾರುತ್ತಾ ಹಾರುತ್ತಾ, ಕುಣಿ ಕುಣಿದಾಡುತ್ತಾ, ಕೇಳಿದವರಿಗೆ ತಕ್ಕ ಉತ್ತರ ನೀಡಿದ್ದಾರೆ. ಜಾತಿ ಮತ ಪಂಥಗಳು ಇಲ್ಲ. ತನುವಿಗೆ ತಾನೇ ಅಂಟಿಸಿಕೊಂಡ ಜಾತಿ ಸುಲಭವಾಗಿ ಹೋಗುವುದಿಲ್ಲ. ಅರಿವಿನಿಂದ ನೋಡಿಕೊಂಡು, ಅರಿವಿನ ಶಿಕ್ಷಣ ಪಡೆದರೆ, ತನುವಿಗಂಟಿದ ಜಾತಿಯ ಭವಿತನ ತೊಲಗುತ್ತದೆ. ತನುವಿನ ಕಣ ಕಣದಲ್ಲಿರುವ ಅರಿವಿನ ಸತ್ಯದೆಡೆಗೆ ಮನ ವಾಲುತ್ತದೆ. ಆ ಸತ್ಯಕ್ಕೆ ಭಕ್ತಿ ಮಾಡಿ; ಭಕ್ತನೆನ್ನಿಸಿಕೊಳ್ಳುತ್ತದೆ. ಸದ್ಭಕ್ತರೆನ್ನಿಸಿಕೊಳ್ಳುತ್ತದೆ ! ಬ್ರಾಹ್ಮಣ್ಯ ತೊಲಗಿ ಬ್ರಹ್ಮನಾಗುತ್ತದೆ ! ಕಾಣುವ ತನುಗಳೆಲ್ಲ ಅರಿವಿನ ತನುಗಳೇ. ಅರಿವಿನ ಸದ್ಬಳಕೆ ಮಾಡಿಕೊಳ್ಳಲು ಬಂದ ಸತ್ಯದ ತನುಗಳು. ಮನ ಮರೆತುದಕ್ಕಾಗಿ ಜಾತಿ ಮತ ಪಂಥಗಳನ್ನು ಪ್ರೀತಿಸುವ ದ್ವೇಶಿಸುವ ಕೆಲಸದಲ್ಲಿ ತೊಡಗಿದೆ.

ಮನಕ್ಕೆ ಸತ್ಯ ತಿಳಿದರೆ ಸಾಕು, ಹಾರುವನಪ್ಪೆ, ಹಾರುವನವ್ವಾ ಎಂದು ಕುಣಿ ಕುಣಿದಾಡುತ್ತದೆ.

ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯಾ, ಆನಂದದಿಂದ ನಲಿ ನಲಿದಾಡುವೆ, ಆನಂದದಿಂದ ಕುಣಿ ಕುಣಿದಾಡುವೆ, ಕೂಡಲಸಂಗನ ಶರಣರು ಬಂದಡೆ, ಉಬ್ಬಿ, ಕೊಬ್ಬಿ, ಹರುಷದಲೋಲಾಡುವೆ !

ಸಸಿಯ ಮೇಲೆ ಸಾಗರ ಹರಿದರೆ ಸಸಿ ಬದುಕುವುದಿಲ್ಲ. ಸಾಗರ ಆವಿಯಾಗಿ ತುಂತುರು

ಹನಿಗಳ ರೂಪದಲ್ಲಿ ಸಸಿಯ ಮೇಲೆ ಹರಿದರೆ ಅದು ಉಬ್ಬಿ ಕೊಬ್ಬಿ ಓಲಾಡುತ್ತದೆ. ಆನಂದದಿಂದ ನಲಿ ನಲಿದಾಡಿ ಕುಣಿ ಕುಣಿದಾಡುತ್ತದೆ.

ಜಾತಿ ಹಿಡಿದು ಕೂಗಿದರೆ ತನುವಿಗೆ ದುಃಖ; ಜಾತಿ ಹಿಡಿದು ಎದೆ ಮುಟ್ಟಿ ಹೇಳಿಕೊಂಡರೆ ತನುವಿಗೆ ಸುಖ. ಈ ಸುಖದುಃಖಗಳನ್ನು ಅರಿವಿನಿಂದ ನೋಡಿಕೊಂಡರೆ ಹಾರುತ್ತೆ ಹಾರುತ್ತಾ ಹಾರುವ ಬ್ರಹ್ಮನಾಗಿ ಬಯಲಾಗಬಹುದು. ಜಾತಿ-ಮತ-ಪಂಥಗಳಿಂದ ಮುಕ್ತನಾಗಬಹುದು.

ಕೂಡಲಸಂಗನ ಶರಣರು ಒಕ್ಕುದನಿಕ್ಕಿಸಲಹುವರೆಂದು :

ಶರಣರು ಮಹಾಜ್ಞಾನಿಗಳು. ಅವರ ಸಂಗದಿಂದ ತನುವಿನ ಅರಿವಿನ ಭಾಗ್ಯ ತನುವಿಗೆ ಲಭಿಸುತ್ತದೆ. ಶರಣರು ನೋಡಿ ಸುಖಿಸುತ್ತಾರೆ. ಕೇಳಿ ಮುಟ್ಟಿ ರುಚಿಸಿ ಮೂಸಿಸಿ ಅರಿವಿನ ಪರಿಮಳದ ಆನಂದವನ್ನು ಸವಿಯುತ್ತಾರೆ. ಅವರ ಗೋಷ್ಠಿಗಳಲ್ಲಿ ಭಾಗಿಗಳಾದರೆ ಉಳಿದುದನ್ನು ಧಾರೆ ಎರೆಯುತ್ತಾರೆ. ಬಂದ ತನುವಿನ ಕೈ ಹಿಡಿದು ಅರಿವಿನ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ.

ತನುವಿನಲ್ಲಿ ಅರಿವು ಮತ್ತು ಮನ ಸಂಗಮವಾಗಿವೆ. ತನುಗಳೆಲ್ಲ ಸಂಗಮನಾಥನ ತನುಗಳೇ ಆಗಿವೆ. ಮನಕ್ಕೆ ಅರಿವಿನಲ್ಲಿ ಸಂಗಮವಾದದ್ದು ಪರಿಚಯವಿಲ್ಲದ್ದಕ್ಕೆ ತನುಗಳನ್ನು ಜಾತಿ ಮತ ಪಂಥ ಹೆಣ್ಣು ಗಂಡುಗಳನ್ನಾಗಿ ವಿಭಜಿಸಿ ನೋಡುತ್ತದೆ. ಮನಕ್ಕೆ ಇದು ಪರಿಚಯವಾದರೆ ತನುವಿನಲ್ಲಿ ಸಂಗಮವೇ ಆಗಿದೆ ! ಕೂಡಲೇ ಜಾತಿ ಮತ ಪಂಥಗಳ ಬೇಧದಿಂದ ದೂರ ಸರಿದು ಕುಣಿ ಕುಣಿದಾಡಿ ಹೇಳುತ್ತದೆ ; ಸಕಲ ತನುಗಳು ಸತ್ಯದ ದರುಶನಕ್ಕಾಗಿ ಬಂದ ಸದ್ಭಕ್ತ ತನುಗಳೆಂದು!

460

ಒಕ್ಕುದ ಮಿಕ್ಕುದನುಂಡು ಕಿವಿವಿಡಿದಾಡುವೆ ;
ಶರಣರ ಮನೆಯ ಲೆಂಗಿಯ ಡಿಂಗರಿಗ ನಾನು,
ಕೂಡಲಸಂಗನ ಶರಣರ ಮನೆಯ
ಭಕ್ತಿಯ ಮರುಳ ನಾನು.

ಶರಣರು ವಾಸ ಮಾಡುವ ಮನೆಯದು ಜ್ಞಾನದ ಮನೆ. ಮಹಾಮನೆ. ಆ ಮನೆಯಲ್ಲಿ ಬರೀ ಜ್ಞಾನದ ಮಾತುಗಳೆ ನಡೆಯುತ್ತವೆ. ಅವುಗಳನ್ನು ಮಾತೆನ್ನಲು ಬರುವುದಿಲ್ಲ; ಮಾತಲ್ಲದ ಮಾತು. ಅಜ್ಞಾನದ ಮಾತುಗಳನು ನಷ್ಟ ಮಾಡುವ ಮಾತು.

ಕಿವಿಯ ಸೂತಕ ಕಳೆಯುವ ಮಾತು; ಕಂಗಳ ಅಜ್ಞಾನದ ಸೂತಕ ಹರಿಯುವ ಮಾತು; ಕಾಯದ ಸೂತಕ ಕಳೆದು ಕೈಲಾಸವನೆ ಮಾಡುವ ಮಾತು. ಅವರು ಉಂಡು ಉಳಿದುದನು ಉಂಡು ಕಿವಿವಿಡಿದಾಡುವೆ.

ಶರಣರ ಮನೆಯ ಸೇವಕರ ಸೇವಕ ನಾನು. ಕೂಡಲಸಂಗನ ಶರಣರ ಮನೆಯ ಭಕ್ತಿಯ ಮರುಳ ನಾನು.

ಹೆಣ್ಣುಗಂಡು ಎನ್ನುವ ಭೇದವಿಲ್ಲದೆ ಸಕಲ ತನುಗಳು ಕೂಡಲಸಂಗನ ಶರಣರ ಮನೆಯ ಮಕ್ಕಳೇ. ಇದು ಅತ್ಯಂತ ಸೂಕ್ಷ್ಮವಾದ ಮಾತು. ತಿಳಿದು ನೋಡಬೇಕು ಅಷ್ಟೆ.

ಅಂಗದಲ್ಲಿ ಅರಿವಿದೆ ; ಮನವೂ ಇದೆ. ಇವೆರಡು ಸಂಗಮವಾಗಿವೆ. ಮನ ನೋಡುವ ಮುನ್ನ ಅರಿವಿನಿಂದ ನೋಡಿ ಅದು ಉಂಡು ಹೆಚ್ಚಾದುದನು ಮನ ಉಂಡು ಸಾಧ್ಯವಾದರೆ

ನೋಡಬೇಕು. ಇಲ್ಲದಿದ್ದರೆ ಅರಿವಿನ ಕಣ್ಣಿನಿಂದ ನೋಡಿ ಅದು ಉಂಡುದನ್ನೇ ಉಂಡು ನೋಡದೆ ಸುಮ್ಮನಾಗಬೇಕು. ಅದು ಮನ ಅರಿವೆಂಬ ಗುರುದೇವನಿಗೆ ಶರಣುಹೋದ ಲಕ್ಷಣ. ಆ ಶರಣನುಂಡುದನು ಭಕ್ತ ಉಣ್ಣುವ ಲಕ್ಷಣ.

ಭಕ್ತನಾ(ಅರಿವು)ಗದ ಮುನ್ನ ಕಣ್ಣಿಗೆ ನೋಡಲು ಬರುವುದಿಲ್ಲ. ಕಿವಿಗೆ ಕೇಳಲು ಬರುವುದಿಲ್ಲ. ಮೂಗಿಗೆ ಮೂಸಿಸಲು ಬರುವುದಿಲ್ಲ. ಚರ್ಮಕ್ಕೆ ಸ್ಪರ್ಶಿಸಲು ಬರುವುದಿಲ್ಲ. ನಾಲಿಗೆಗೆ ರುಚಿಸಲೂ ಬರುವುದಿಲ್ಲ. ಅರಿವಾಗದ ಮುನ್ನ ಮನ ಭವಿಯಾಗಿರುತ್ತದೆ. ಕಣ್ಣಿನ ತುಂಬಾ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೇ ತುಂಬಿರುತ್ತವೆ. ಅದರ ಅತ್ತಾಚೆ ಅರಿವಿನ ನೋಟವಿರುತ್ತದೆ. ಮನಕ್ಕೆ ಅತ್ತ ಪಯಣಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಸೂತಕದ ಕಣ್ಣಿನಿಂದ ನೋಡಿದರೆ ತನುವಿನಲ್ಲಿ ಅರಿಷಡ್ವರ್ಗಗಳನ್ನು ಸೃಷ್ಟಿಮಾಡುತ್ತದೆ. ಜ್ಞಾನದ ಕಣ್ಣು ಕಣ್ಣಿನಲ್ಲಿಯೇ ಉಳಿಯುತ್ತದೆ. ಬಳಕೆಯಾಗುವುದೇ ಇಲ್ಲ.

ಒಕ್ಕುದ ಮಿಕ್ಕುದನುಂಡು ಕಿವಿವಿಡಿದಾಡುವೆ :

ಅರಿವೆಂಬ ಗುರುದೇವನುಂಡುದನು ಉಂಡು ಆತನ ಹೆಸರು ಹೇಳದೆ ಕಿವಿ ಹಿಡಿದುಕೊಂಡು ಕುಣಿಕುಣಿದಾಡುವೆ.

ಕಂಗಳಲ್ಲಿ ಜ್ಞಾನ ತುಂಬಿದ ಬಳಿಕ ಅಜ್ಞಾನವನು ನೋಡಲಿಲ್ಲ ; ಕಿವಿಗಳಲ್ಲಿ ಜ್ಞಾನ ತುಂಬಿದ ಬಳಿಕ ಅಜ್ಞಾನವ ಕೇಳಲಿಲ್ಲ. ಚರ್ಮದಲ್ಲಿ ಜ್ಞಾನ ತುಂಬಿದ ಬಳಿಕ ಅನ್ಯವನು ಮುಟ್ಟಲಿಲ್ಲ. ಜ್ಞಾನದತ್ತ ಮನ ಪಯಣಿಸಿ ಜ್ಞಾನವೇ ಮನದಲ್ಲಿ ತುಂಬಿದ ಬಳಿಕ ಅನ್ಯವ ನೆನೆಯಲಿಲ್ಲ. ಅಂಗದಲ್ಲಿಯ ಅರಿವಿನಲ್ಲಿ ಸಂಗಮವಾದ ಮನ ಬಳಿಕ ಅಂಗವದು ಸಂಗಯ್ಯನ ಅಂಗ. ಅಂಗದಲ್ಲಿಯ ಅರಿವಿನೊಂದಿಗೆ ಮನ ಸಂಗಮವಾದ ಕೂಡಲಸಂಗನ ಶರಣರ ಮನೆ. ಆ ಅರಿವಿನ ಮನೆಯ ಭಕ್ತಿಯ ಮರುಳ ನಾನು ಎನ್ನುವ ಸೂತ್ರದ ಮೂಲಕ ಓದುಗರನ್ನು ಅರಿವಿನ ಮನೆಗೆ ಕರೆಯುತ್ತಾರೆ ಬಸವಣ್ಣನವರು. ಅವರು ಅರಿವಿನ ಲೀಲಾ ಪುರುಷರು. ಅವರಿಗೆ ಮಾತ್ರ ಇದು ಸಾಧ್ಯ. ತಿಳಿದರೆ ಅರಿವಿಗೆ ಶರಣುಹೋಗುವ ಸಕಲರಿಗೂ ಸಾಧ್ಯ.

461

ಗುರುಲಿಂಗ ಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು.
ಆ ಭಾವವೆ ಮಹಾ ಪ್ರಸಾದವಾಗಿ-
ಎನಗೆ ಬೇರೆ ಪ್ರಸಾದವೆಂಬುದಿಲ್ಲ
ಕೂಡಲಸಂಗಮದೇವಾ.

ಗುರುಲಿಂಗ ಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು:

ಗುರುವೆಂದರೆ ಯಾರು ? ಲಿಂಗವೆಂದರೆ ಏನು ? ಜಂಗಮ ಎಂದರೆ ಯಾರು ? ಪಾದೋದಕವೆಂದರೇನು ? ಪ್ರಸಾದವೆಂದರೇನು ಎಂದು ತಿಳಿಯದಿದ್ದರೆ ಶರಣರ ಸೂತ್ರಗಳು ಅರ್ಥವಾಗುವುದಿಲ್ಲ. ಅರಿವಿನಿಂದ ನಡೆಯಲೂ ಬರುವುದಿಲ್ಲ. ಅರಿವಿನಿಂದ ನಡೆಯುವುದೆಂದರೆ ಮುಖವಾಡವಲ್ಲ. ತೋರಿಕೆಗೆ ಸುಂದರವಾದ ಮಾತುಗಳು ; ವೇಷ ಭೂಷಣ ! ಮನದಲ್ಲಿ ಬರೀ ಹಾದರ ! ಅರಿವಾಗದ ಮುನ್ನ ಪ್ರತಿ ಅಂಗದಲ್ಲಿ ಅಜ್ಞಾನದ ಯುದ್ಧ ನಡೆದೇ ಇರುತ್ತದೆ. ಇದು ಅಂಗಕ್ಕೆ ತಿಳಿಯುತ್ತದೆ ಕೂಡಾ. ಆದರೆ ಸಹಜವಾಗಿ ಇರಲು ಬರುವುದಿಲ್ಲ. ಏಕೆಂದರೆ ಮನ

ಹೊಗಳಿಸಿಕೊಳ್ಳುವುದಕ್ಕಾಗಿ ಅರಿವಿನ ನಾಟಕ ಅಂಗದೊಂದಿಗೆ ಆಡಿ ; ಆ ಅಂಗದೊಂದಿಗೆ ಅಜ್ಞಾನದ ಸಕಲ ಭೋಗವನ್ನು ಹಾದರ ಮಾಡಿ ಭೋಗಿಸುತ್ತದೆ. ಈ ಹಾದರ ಮತ್ತೊಬ್ಬರಿಗೆ ಕಾಣುವುದಿಲ್ಲ. ತನ್ನರಿವಿಗೆ ಕಾಣದೆ ಇರುವುದಿಲ್ಲ.

ಅಂಗದಲ್ಲಿರುವ ಅರಿವೇ ಗುರುದೇವ ; ಈತ ಅಂಗದಲ್ಲಿದ್ದು ಅಂಗದೊಂದಿಗೆ ಹಾದರ ಮಾಡುವ ಮನಕ್ಕೆ ಬೇಡವೆಂದು ನುಡಿದು ಉಪದೇಶ ಮಾಡುತ್ತಾನೆ.

ಅಂಗದ ಕಣ ಕಣದಲ್ಲಿರುವ ಅರಿವೇ ಲಿಂಗ. ಅಂಗ ಅರಿವಿನ ಲಿಂಗ ರೂಪದಲ್ಲಿದೆ. ಅರಿವೆಂಬ ಗುರುದೇವನ ಮಾತು ಕೇಳುತ್ತದೆ ; ಮನದ ಮಾತೂ ಕೇಳುತ್ತದೆ. ಈ ಅಂಗವನ್ನೇ ಶರಣರು ಲಿಂಗವೆಂದು ಕರೆದಿದ್ದಾರೆ.

ಅರಿವೆಂಬ ಗುರುದೇವನ ಮಾತು ಕೇಳಿ ಪಾಲಿಸುವಾತನೇ ಜಂಗಮ. ಈತ ಕೂಡಾ ಅಂಗದಲ್ಲಿಯೇ ವಾಸ ಮಾಡಿದ್ದಾನೆ. ಈತನನ್ನು ಶರಣರು ಜಂಗಮ ಎಂದು ಕರೆದಿದ್ದಾರೆ.

ಅಂಗವೆಂಬ ಲಿಂಗವನ್ನು ಆವರಿಸಿದ ಮನ ಭವಿ. ಅದು ಅರಿವೆಂಬ ಗುರುವಿದ್ದೆಡೆಗೆ ಪಯಣಿಸಿ ಅಲ್ಲಿ ಲೀನವಾದರೆ ಅದು ಭಕ್ತನಾಗುತ್ತದೆ. ಈ ಮನವನ್ನು ಶರಣರು ಭಕ್ತ ಎಂದು ಕರೆದಿದ್ದಾರೆ.

ಲಿಂಗವೆಂಬ ಅಂಗದಲ್ಲಿಯೇ ಸುಜ್ಞಾನವೆಂಬ ಸುಧೆಯಿದೆ ; ಅದನ್ನು ಕೋಶಪಾನ ಪಾದೋದಕವೆಂದು ಹೆಸರಿಟ್ಟು ಕರೆದಿದ್ದಾರೆ ಶರಣರು.

ಪ್ರಸಾದವೆಂದರೆ ಪದಾರ್ಥವಲ್ಲ ! ಊಟವೂ ಅಲ್ಲ. ಎಡೆಯೂ ಅಲ್ಲ .

ಮನ, ಭಕ್ತನಾಗದ ಮುನ್ನ ಭವಿಯಾಗಿರುತ್ತದೆ. ಇದು ಕಣ್ಣಿನಿಂದ ನೋಡಿದರೆ ತನುವಿನಲ್ಲಿ ವಿಷಯದ ವಾಸನೆ ಹುಟ್ಟಿ ತಲ್ಲಣಗೊಳಿಸುತ್ತದೆ. ಭೋಗಿಸಲೆಳೆಸುತ್ತದೆ. ಅತ್ಯಾಚಾರದಲ್ಲಿ ತೊಡಗಿ, ಭವಿ ಮನ ಅರಿವಿನ ಅಂಗವೆಂಬ ಲಿಂಗಕ್ಕೆ ರಕ್ಕಸನ ಪಟ್ಟ ಕಟ್ಟುತ್ತದೆ. ಕಣ್ಣಿನಲ್ಲಿ ಆವರಿಸಿರುವ ಭವಿ ಮನಕ್ಕೆ ಅಂಗ ಮಾತ್ರ ಕಾಣುತ್ತದೆ. ಕಣ್ಣಿನಲ್ಲಿಯೇ ವಾಸ ಮಾಡಿದ ಗುರು ಲಿಂಗ ಜಂಗಮನತ್ತ ಪಯಣಿಸಿ ಲೀನವಾದರೆ ಭಕ್ತನಾಗುತ್ತದೆ. ಆ ಕಣ್ಣಿನಿಂದ ಅಂಗ ನೋಡಿದರೆ ತನ್ನಂತೆಯೇ ಇರುವ ಅಂಗ ಅರಿವಿನ ಲಿಂಗವಾಗಿ ಕಾಣುತ್ತದೆ. ಅಂಗದಲ್ಲಿರುವ ಅಜ್ಞಾನ ಅಂಗದಲ್ಲಿಯೇ ಇರುವ ಗುರು ಲಿಂಗ ಜಂಗಮನಿಗೆ ಪಾದೋದಕ ಪ್ರಸಾದವಾಗುತ್ತದೆ.

ಅಂಗಕ್ಕೆ ಮಹಾಜ್ಞಾನದ ಸದ್ಭಾವವೇ ಮಹಾ ಪ್ರಸಾದವಾಗಿ ಅಜ್ಞಾನವೆಂಬುದು ಸುಳಿಯುವುದಿಲ್ಲ. ಅಂಗ, ಗುರು ಲಿಂಗ ಜಂಗಮವಾಗಿ ಪಾದೋದಕ ಪ್ರಸಾದದ ಜ್ಞಾನ ಭಂಡಾರದಿಂದ ತುಂಬಿ ತುಳುಕುತ್ತದೆ.

462

ಅಹುದೆಂದರಿಯೆ, ಆಗದೆಂದರಿಯೆ,
ಆದಿಪಥವ ತೋರಲರಿಯೆ,
ಸತ್ಯವನರಿಯೆ, ಸಹಜವನರಿಯೆ,
ಸಜ್ಜನ ಶುದ್ಧವ ಮುನ್ನವೆ ಅರಿಯೆ !
ನಿಮ್ಮ ಶರಣರ ಒಕ್ಕುದನುಂಡಿಪ್ಪೆ,
ಕೂಡಲಸಂಗಮದೇವಾ.

ಜ್ಞಾನ ಆಗುವುದೆಂದು ಅರಿಯಲು ಸಾಧ್ಯವಾಗುವುದಿಲ್ಲ. ಆಗದೆಂದು ಅರಿಯಲೂ ಸಾಧ್ಯವಾಗುವುದಿಲ್ಲ. ಜ್ಞಾನ ಆಗಲು ಸಾಧ್ಯವೆಂದು ಆದಿ ಅನಾದಿ ಕಾಲದ ದಾರಿ ಹಿಡಿದು ತೋರಲೂ ಸಾಧ್ಯವಾಗುವುದಿಲ್ಲ.

ಸತ್ಯವನು ಅರಿಯೆ: ಸತ್ಯ ಅಸತ್ಯದ ಮತ್ತೊಂದು ಮುಖ ! ಸಹಜವನ್ನು ಅರಿಯೆ : ಸಹಜ ಅಸಹಜದ ಮತ್ತೊಂದು ಮುಖ ! ಸಜ್ಜನನನೂ ಅರಿಯೆ : ಸಜ್ಜನ ದುರ್ಜನದ ಮತ್ತೊಂದು ಮುಖ ! ಶುದ್ಧವನೂ ಅರಿಯೆ : ಶುದ್ಧ ಅಶುದ್ಧದ ಮತ್ತೊಂದು ಮುಖ !

''ಮನದ ಮೊನೆಯ ಕೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ. ಆದಿವಿಡಿದು ಬಂದಾತನೆ ಭಕ್ತ. ಅನಾದಿವಿಡಿದು ಬಂದಾತನೆ ಜಂಗಮ. ಆದಿ ಗುರು, ಅನಾದಿ ಶಿಷ್ಯ. ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗ ಸಂಬಂಧಿ.''

ತನುವಿನ ಕಣಕಣದ ಕೊನೆಯ ಮೊನೆಯಲ್ಲಿ ಜ್ಞಾನವೇ ಭರಿತವಾಗಿದೆ. ಆತನನ್ನು ಗುರುದೇವನೆಂದು ಮಹಾದೇವನೆಂದು ಸದಾಶಿವನೆಂದು ಕರೆದಿದ್ದಾರೆ. ಶರಣರು, ತನುವಿನ ಮನದ ಕೊನೆಯ ಮೇಲಿರುವಾತನನ್ನು ದಾಸೋಹಿ ಎಂದು ಕರೆದಿದ್ದಾರೆ. ಹೀಗಿದ್ದಾಗ ಜ್ಞಾನ ಯಾರಿಗಾಗಬೇಕು ? ಯಾರಿಗಾಗುವುದಿಲ್ಲ, ಮನಕ್ಕೆ ಜ್ಞಾನವಾಗಬೇಕೆ ? ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ಅದು ಭವಿ ; ತೋರಿಕೆಯ ಭಕ್ತ , ತನು, ಗುರು ಶಿಷ್ಯ ಜಂಗಮನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತದೆ. ಬ್ರಹ್ಮನ ಪಾತ್ರದಲ್ಲಿಯೂ ಕಾಣಿಸಿಕೊಳ್ಳುತ್ತದೆ.

''ಬ್ರಹ್ಮಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತ್ವವಡೆದು, ತಮ್ಮ ವಚನ ಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು-ತಮ್ಮ ದೈವವ ಬಿಡುವುದಾವುದುಚಿತ ?......'' ''ಹುಸಿವನೆ ಹೊಲೆಯನೆಂದು ವಚನವುಂಟು ಲೋಕದಲ್ಲಿ, ಹುಸಿದಜನ ಶಿರ ಹೋಯಿತ್ತಾದಿಯಲ್ಲಿ. ಎಸವೋದ ಕಿರುಪಶುವನುಸರಲೀಯದೆ ವಿಚಾರಿಸದೆ ತಿಂಬ ಜನ್ಮ ಅದಾವ ಫಲವೊ? '' ಎನ್ನುತ್ತಾರೆ ಅಣ್ಣ ಮತ್ತೊಂದು ವಚನದಲ್ಲಿ.

ಭವಿ ತೋರಿಕೆಯ ಭಕ್ತನಾದರೇನು, ಗುರು ಶಿಷ್ಯ ಜಂಗಮನ ಪಾತ್ರದಲ್ಲಿದ್ದರೇನು ? ಅವನು ತನಗೆ ಜ್ಞಾನ ಆಗುವುದೆಂದು ಅರಿಯ, ಆಗದೆಂದು ಅರಿಯ. ಆದಿ ಅನಾದಿ ಕಾಲದಿಂದಲೂ ನಂಬುತ್ತಲೇ ಸಾಗಿದ ಶಾಸ್ತ್ರವನ್ನು ಹಿಡಿಯುತ್ತಾನೆ; ತನ್ನನು ದೂರೀಕರಿಸುತ್ತಾನೆ.

ಆದಿಯಲ್ಲಿ ಬ್ರಹ್ಮ ಶಿವನ ಮುಖ ನೋಡಲು ಬ್ರಹ್ಮಾಂಡದಿಂದತ್ತತ್ತಲೂ ಹಾರಿದ. ಕಾಣಲೇ ಇಲ್ಲ. ಕಂಡೆನೆಂದು ಸುಳ್ಳು ಹೇಳಿದ್ದಕ್ಕಾಗಿ ಅವನ ಒಂದು ಶಿರ ಹೋಯಿತು. ಸತ್ಯ ಅಂದರೆ ಆದಿ ಅನಾದಿ ಕಾಲದ ವಿಚಾರಗಳನ್ನು ಅರಿಯುವುದಲ್ಲ. ಅದು ತನುವಿನಲ್ಲಿಯೇ ಇರುವ ಸಹಜತೆ. ಸತ್ಯ ಸಜ್ಜನನೂ ಅಲ್ಲ, ಶುದ್ಧನೂ ಅಲ್ಲ. ಆತ ತನುವಿನ ಮನದ ಮೊನೆಯ ಕೊನೆಯ ಮೇಲೆ ಮನೆ ಮಾಡಿಕೊಂಡಿರುವ ದಾಸೋಹಿ. ಆತನೆಡೆಗೆ ಪಯಣಿಸಿ ಆತನುಂಡು ಹೆಚ್ಚಾದುದನು ಉಣ್ಣುವುದೇ ಮನದ ಕೆಲಸವಾಗಬೇಕು.

ಎಲೆ ದಾಸೋಹಿಯೇ ಎನ್ನನು ನಿನ್ನೊಳಗೆ ಅದ್ದಿ ನೀನೆದ್ದು ಹೋಗು ಎಂದು ಮನ ಆ ಜ್ಞಾನ ದಾಸೋಹಿಯನ್ನು ಬೇಡಬೇಕು.

463

ಆವನಾದಡೇನು ಶ್ರೀ ಮಹಾದೇವನ ನೆನೆವನ

ಬಾಯ ತುಂಬಲಿವ ಮೆಲುವೆ, ಬೀಳುಡಿಗೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲಸಂಗಮದೇವಾ.

ದೇಹ ಆವುದಾದರೇನು ? ಅದು ಒಂದೇ ; ಭವಿ, ಭಕ್ತ, ಗುರುದೇವ, ಮಹಾದೇವ ಎಂದು ಬದಲಾವಣೆ ಮಾಡಿಕೊಳ್ಳಲು ಬರುತ್ತದೆ. ದೇಹದಲ್ಲಿ ವಾಸ ಮಾಡಿದ ಭವಿಯ ಕೆಲಸ ಬೇರೆ, ಭಕ್ತನ ಕೆಲಸ ಬೇರೆ, ಗುರುದೇವನ ಕೆಲಸವೂ ಬೇರೆ. ಹಾಗೆಯೇ ಮಹಾದೇವನ ಕೆಲಸವೂ ಬೇರೆ ಬೇರೆಯಾಗಿರುತ್ತದೆ.

ದೇಹಕ್ಕೆ ಆವರಿಸಿದ ಭವಿ(ಮನ)ತನ್ನ ರುಚಿಗಾಗಿ ಕಣ್ಣು ಕಿವಿ ಮೂಗು ಚರ್ಮ ನಾಲಿಗೆಯನ್ನು ಬಳಸಿಕೊಳ್ಳುತ್ತದೆ. ಆ ರುಚಿಯ ಸ್ವಾದವನ್ನು ಆಯಾ ಸ್ಥಾನದಲ್ಲಿಯೇ ಸಂಗ್ರಹಿಸಿಕೊಂಡು ಬೇಕೆನಿಸಿದಾಗ ದೇಹದೊಂದಿಗೆ ಭೋಗಿಸುತ್ತದೆ.

ಉದಾ : ಆಭರಣದ ಮೇಲೆ ಮೋಹಗೊಂಡ ಭವಿ, ಅದನ್ನು ಖರೀದಿಸಿ ದೇಹಕ್ಕೆ ಶ್ರೀಮಂತನ ಪಟ್ಟ ಕಟ್ಟುತ್ತದೆ. ಕೊಳ್ಳಲು ಸಾಧ್ಯವಾಗದಿದ್ದರೆ ಕದ್ದು ದೇಹಕ್ಕೆ ಕಳ್ಳನ ಪಟ್ಟ ಕಟ್ಟುತ್ತದೆ. ದೇಹ ಮಹಾದೇವನದು. ಭವಿ ಆತನ ದೇಹವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ಮೋಹ ಮಾಡಿ ವಸ್ತುಗಳನ್ನು ದೇಹದಿಂದ ಪಡೆದು ಸಂಗ್ರಹಿಸುವುದು ಮಾತ್ರ ತಿಳಿಯುತ್ತದೆ. ವಸ್ತುಗಳ ಸತ್ಯವೇನು ? ಅದು ದೇಹಕ್ಕೆ ಏಕೆ ಬೇಕು ? ಅದು ಇಲ್ಲದಿದ್ದರೆ ನಡೆಯುವುದಿಲ್ಲವೆ ಹೇಗೆ ಎಂದು ಆಲೋಚಿಸುವ ಶಕ್ತಿ ಭವಿ(ಮನ)ಗೆ ಇರುವುದಿಲ್ಲ.

ಭವಿಯ ಕೆಲಸವೇ ವಿಚಿತ್ರ. ಒಂದು ದೇಹದಲ್ಲಿ ವಾಸ ಮಾಡಿದ ಭವಿಗೆ ಚಿನ್ನ ಕೊಂಡು ಶ್ರೀಮಂತನೆನ್ನಿಸಿಕೊಳ್ಳುವ ಇಚ್ಛೆಯಾದರೆ, ಮತ್ತೊಂದು ದೇಹದಲ್ಲಿ ವಾಸ ಮಾಡಿದ ಭವಿ ನೋಡಿ ಕರುಬುತ್ತದೆ, ಕದಿಯುತ್ತದೆ, ಅಕ್ರಮವೆಂದು ದೂರು ನೀಡುತ್ತದೆ. ಕಸಿದುಕೊಳ್ಳುತ್ತದೆ, ವಿಷ ಉಣಿಸಿ ಕೊಂದು ಪಡೆಯುತ್ತದೆ. ಹೀಗೆ ಭವಿಯ ನೂರಾರು ಲಕ್ಷಣಗಳು ದೇಹದ ಮೂಲಕ ಗುರುತಿಸಬಹುದಾಗಿದೆ. ಭವಿ ಹೆಣ್ಣೂ ಅಲ್ಲ ಗಂಡೂ ಅಲ್ಲ, ಅದು ದೇಹವನ್ನು ಆವರಿಸಿದ ರಕ್ಕಸ. ಮೃದು, ಕೋಮಲ, ಸೌಮ್ಯ, ವಿಕೃತ, ಸಿಟ್ಟು, ಅಹಂಕಾರ, ಯುದ್ಧ, ಹಲ್ಲೆ, ಅತ್ಯಾಚಾರ, ದರೋಡೆ, ಕಳ್ಳತನ, ಕೊಲೆ, ಸುಲಿಗೆ, ನಾನಾ ವಿಧದ ವೇಷ ಭೂಷಣಗಳು ಕೂಡಾ ಭವಿಯ ಒಳಸಂಚುಗಳಾಗಿವೆ.

ಆವ ದೇಹವಾದಡೇನು ಭವಿ ವಾಸ ಮಾಡಿದ ದೇಹಕ್ಕೆ ಈ ಶಿಕ್ಷೆ ತಪ್ಪಿದ್ದಲ್ಲ.

ವಸ್ತುಗಳ ಮೇಲೆ ಆಸೆ ಪಡುವ ಭವಿಯೇ ದೇಹದ ಕಣಕಣದಲ್ಲಿರುವ ಅರಿವೆಂಬ ಗುರುದೇವನ ಮೇಲೆ ಆಸೆ ಪಟ್ಟರೆ, ವಸ್ತುವನ್ನು ಅನಾವರಣಗೊಳಿಸಿ, ವಸ್ತುವಿನ ಸತ್ಯವನ್ನು ಭವಿಗೆ ತಿಳಿಸುತ್ತಾನೆ. ಅಂದಿನಿಂದ ಭವಿತನ ತೊಲಗಿ ಆ ಭವಿಯೇ ಗುರುವಿಗೆ ಭಕ್ತನಾಗುತ್ತಾನೆ. ಚಿನ್ನವೆಂದರೆ ಹಳದಿ ಲೋಹವೆಂದು ಅರಿವೆಂಬ ಗುರುದೇವ ಭಕ್ತನಿಗೆ ಹೇಳುತ್ತಾನೆ. ಪುನಹ ಭಕ್ತ ಮಹಾದೇವನಿಗೆ ಶರಣು ಹೋಗುತ್ತಾನೆ. ಆ ಮಹಾದೇವ ಭಕ್ತನಿಗೆ ಚಿನ್ನ ತೋರಿಸಿ ಇದು ನಿನ್ನ ಸ್ವ ಸ್ವರೂಪ ಎಂದು ವಿವರಿಸುತ್ತಾನೆ.

ಜಲಬಿಂದು ಗರ್ಭದಲ್ಲಿ ಹೊಕ್ಕು ಅರಿವಿನ ತನುವಾಯಿತು. ಜಲಬಿಂದುವೇ ಕುದ್ದು ಗಟ್ಟಿಯಾಗಿ ಮಣ್ಣು ಕಲ್ಲು ಖನಿಜವಾಯಿತು. ಹೊನ್ನಾಯಿತು. ಹೊನ್ನು ಮತ್ತು ಅರಿವಿನ ತನು ಒಂದೇ ಬಿಂದುವಿನ ವಸ್ತುಗಳು ಎಂದು ಮಹಾದೇವ ತನುವಿನಲ್ಲಿಯೇ ವಿವರಿಸಿ ಭಕ್ತನಿಗೆ ಹೇಳುತ್ತಾನೆ.

ಭಕ್ತ ಆ ಮಹಾದೇವನಿಗೆ ಸದಾ ಮೊರೆ ಹೋಗುತ್ತಾನೆ.

ಅರಿವೇ ಗುರು, ಆ ಗುರುದೇವನೇ ಮಹಾದೇವ. ಹೀಗೆ ಶ್ರೀ ಮಹಾದೇವನನ್ನು ಬಲ್ಲ ನಿಪುಣ ದೇಹ ಆವುದಾದಡೇನು ? ಆ ದೇಹದ ಬಾಯ ತುಂಬಲಿವ ಮೆಲುವೆ, ಬೀಳುಡುಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ. ಅದು ಬರೀ ಅಂಗವಲ್ಲ ; ಗುರುದೇವ, ಮಹಾದೇವನು ಸಂಗಮವಾದ ಕೂಡಲಸಂಗಮ ಎಂದಿದ್ದಾರೆ ಬಸವಣ್ಣ.

464

ಒಂದುವನರಿಯದ ಸಂದೇಹಿ ನಾನಯ್ಯ ;
ನಂಬುಗೆಯಿಲ್ಲದ ಡಂಬಕ ನಾನಯ್ಯ ;
ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ,
ಕೂಡಲಸಂಗಮದೇವಾ.

ಸತ್ಯವನು ಅರಿಯದ ಮನಕ್ಕೆ ಯಾರ ಮೇಲೆಯೂ, ಯಾವ ವಸ್ತುವಿನ ಮೇಲೆಯೂ ನಂಬಿಕೆಯಿರುವುದಿಲ್ಲ. ಏಕೆಂದರೆ ಮನಕ್ಕೆ ಸತ್ಯವೆಂದರೇನೆಂದು ತಿಳಿದಿಲ್ಲ. ಸತ್ಯದ ದರ್ಶನವೂ ಆಗುವುದಿಲ್ಲ. ಸತ್ಯದ ರುಚಿ ಇಲ್ಲದ ನಿಮಿತ್ತ ಅದು ಸತ್ಯದೆಡೆಗೆ ಪಯಣಿಸುವುದೂ ಇಲ್ಲ.

ಕತ್ತಲ ಗರ್ಭದಲ್ಲಿದ್ದ ಯಾವ ವಸ್ತುಗಳೂ ಕಾಣುವುದಿಲ್ಲ. ಮನ ಕತ್ತಲು. ಅದು ಬೆಳಕಿನೆಡೆಗೆ ಪಯಣಿಸುವುದಿಲ್ಲ. ಪಯಣಿಸಿದರೆ ಬೆಳಕಾಗುತ್ತದೆ. ಬೆಳಕಾಗುವುದು ಅದಕ್ಕೆ ಇಷ್ಟವಿಲ್ಲ. ಹೀಗಾಗಿ ಯಾವ ವಸ್ತುವಿನ ಸತ್ಯವನು ಅರಿಯದೆ ಸಂದೇಹ ಪಡುವುದೇ ಅದರ ಕೆಲಸ.

ಪಂಚ ಲೋಹಗಳಿಂದ ಮಾಡಿದ ದೇವರನ್ನು, ಕಲ್ಲು, ಕಟ್ಟಿಗೆಯಿಂದ ಮಾಡಿದ ದೇವರನ್ನು ಪೂಜಿಸುತ್ತದೆ. ಇದು ದೇವರಲ್ಲ; ಮೂರ್ತಿಯಲ್ಲಿರುವ ವಸ್ತುವೇ ಸತ್ಯ ಎಂದು ಹೇಳಿದ ಜ್ಞಾನಿಯನ್ನು ಸಂದೇಹದಿಂದ ನೋಡುತ್ತದೆ.

ಏನೂ ಅರಿಯದ ಸಂದೇಹಿ ಮನ ; ಎಲ್ಲವನ್ನೂ ಅರಿತ ಅರಿವೆಂಬ ಗುರುದೇವ ; ಇವರಿಬ್ಬರ ವಾಸವೂ ಅಂಗದಲ್ಲಿಯೇ ! ಹೀಗಿದ್ದರೂ ನಂಬುಗೆಯಿಲ್ಲದ ಮನ ಗುರುದೇವನ ಮಾತು ಕೇಳಿ ಸತ್ಯ ನೋಡುವುದಿಲ್ಲ.

ಕತ್ತಲು ಬೆಳಕು ಒಂದೆಡೆ ವಾಸ ಮಾಡಿದ್ದನ್ನು ಕತ್ತಲಿಗೆ ಮನದಟ್ಟು ಮಾಡುವಾತನೇ ಮಹಾಜ್ಞಾನಿ ಶರಣ. ಮನ ಆತನ ಸೇವಕನಾದರೆ ಸಾಕು ; ಅಂಗದಲ್ಲಿಯೇ ಇದ್ದ ಬೆಳಕಿನಲ್ಲಿ ಕತ್ತಲನ್ನು ಅದ್ದಿ ಸಂಗಮಗೊಳಿಸುತ್ತಾನೆ.

ಬಸವಣ್ಣ ಕರುಣಾಮಯಿ ಓದುಗರಿಗೆ ತಿಳಿಯಲೆಂದು ಆರೋಪ ಮಾಡಿಕೊಂಡು ಹೇಳುತ್ತಾರೆ.

465

ಬಿಡದೆ ಬಾಗಿಲ ಎಂಜಲು ಕಾಯ್ದಿಪ್ಪೆನು ; ಕಿಂಕರನು ;
ಕಿಂಕರರ ಮನೆಯಲ್ಲಿ ಕಿಂಕಲವನು ಆನು ಹಾರುತಿಪ್ಪೆನು.
ನಮ್ಮ ಕೂಡಲಸಂಗನ ಶರಣರ ಒಕ್ಕುದ ಮಿಕ್ಕುದನುಂಬ

ಕಿಂಕರ ನಾನು !

ಅಂಗದ ಮನೆಗೆ ಸಂಗಯ್ಯ ಒಡೆಯನಾದರೆ, ಎಡೆಬಿಡದೆ ಆತನ ಬಾಗಿಲ ಬಳಿ ಎಂಜಲಿಗಾಗಿ ಕಾಯುವ ಮನವೇ ಸೇವಕ. ಮನಕ್ಕೆ ಯಾವ ಅಸ್ತಿತ್ವವೂ ಇಲ್ಲ. ತನುವಿನ ಮನೆ ಒಡೆಯನದು. ತನುವಿನ ಕಣ್ಣು , ಕಿವಿ, ಮೂಗು, ನಾಲಿಗೆ, ಚರ್ಮ ಕೂಡಾ ಒಡೆಯನದೇ.

ಮನಕ್ಕೆ ನೋಡಬೇಕಾದಾಗ ತನುವಿನಲ್ಲಿರುವ ಅರಿವಿನ ಒಡೆಯ ಸಂಗಯ್ಯನ ಕಣ್ಣಿನಿಂದ ನೋಡಬೇಕು. ಅಂದರೆ ಮಾತ್ರ ಸತ್ಯ ಗೋಚರಿಸುತ್ತದೆ. ಕೇಳಬೇಕಾದರೆ ಒಡೆಯನ ಕಿವಿಯಿಂದ ಕೇಳಬೇಕು ; ಅಂದರೆ ಮಾತ್ರ ಸತ್ಯ ಗೋಚರಿಸುತ್ತದೆ. ಅದು ನಿಶಬ್ದ ಪ್ರಸಾದವಾಗುತ್ತದೆ. ಮುಟ್ಟಿದರೆ ಒಡೆಯನ ಚರ್ಮದಿಂದಲೇ ಮುಟ್ಟಬೇಕು. ರುಚಿಸಿದರೆ ಒಡೆಯನ ನಾಲಿಗೆಯಿಂದಲೇ ರುಚಿಸಬೇಕು ; ಮೂಸಿಸಿದರೆ ಒಡೆಯನ ಮೂಗಿನಿಂದಲೇ ಮೂಸಿಸಬೇಕು ಅಂದರೆ ಮಾತ್ರ ಮೂಸಿಸಿದ್ದೆಲ್ಲ ಪರಿಮಳವಾಗುತ್ತದೆ.

ನುಡಿದರೆ ಅರಿವಿನ ಒಡೆಯ ಸಂಗಯ್ಯ ನುಡಿದು ಹೇಳಿದುದನ್ನೇ ನುಡಿಯಬೇಕು ; ಅದು ಮುತ್ತಿನ ಹಾರದಂತೆ ಬೆಳಗುತ್ತದೆ ; ಮಾಣಿಕ್ಯದ ದೀಪ್ತಿಯಂತೆ ಹೊಳೆಯುತ್ತದೆ. ಸ್ಫಟಿಕದ ಸಲಾಕೆಯಂತೆ ಬೆಳಗಿಂಗೆ ಬೆಳಗಾಗಿ ಬೆಳಗುತ್ತದೆ. ಬೆಳಗಿನ ಎಂಜಲನುಂಡು ಬೆಳಗುವ ಕಿಂಕರನಾಗುತ್ತದೆ. ಕುಣಿ ಕುಣಿದು ಹಾರುತ್ತದೆ. ಕೂಡಲಸಂಗನ ಶರಣರು ಉಂಡು ಬಿಟ್ಟ ಅರಿವಿನ ಬೆಳಕನುಂಡು ಮನ ಬೆಳಕೇ ಆಗುತ್ತದೆ.

466

ತೊತ್ತಿಂಗೇಕೆ ಲಕ್ಷಣ ? ಬಂಟಂಗೇಕೆ ಆಚಾರ ?
ಆಗಮವೇಕೆ ಡಿಂಗರಿಗಂಗೆ,ಒಕ್ಕುದನುಂಬುವಂಗಯ್ಯಾ ?
ಕೂಡಲಸಂಗಮದೇವಾ,
ನಿಮ್ಮ ನಂಬುವುದಾಚಾರವಯ್ಯಾ .

ತೊತ್ತಿಗ, ಬಂಟ, ಡಿಂಗಿರಿಗ ಇವರು ಸೇವಕರು. ಸೇವಕನಲ್ಲಿ ಲಕ್ಷಣವನ್ನು ಯಾರೂ ಹುಡುಕುವುದಿಲ್ಲ. ಬಂಟನಲ್ಲಿ ಆಚಾರವನ್ನು ಯಾರೂ ಹುಡುಕುವುದಿಲ್ಲ. ಡಿಂಗಿರ ಪ್ರತಿದಿನ ಆಗಮ ಓದಬೇಕೆಂದು ಯಾವ ಮಾಲೀಕನು ಬಯಸುವುದಿಲ್ಲ. ಮಾಲೀಕನುಂಡು ಹೆಚ್ಚಾದುದನುಣ್ಣುವ ಸೇವಕರಿವರು. ಮಾಲೀಕ ಹೇಳಿದ್ದನ್ನು ಕೇಳುವುದು ಮಾತ್ರ ಇವರ ಕೆಲಸ. ಸೇವಕ ಮಾಲೀಕನಿಗೆ ವಿಧೇಯಕನಾಗಿದ್ದರೆ ಮಾಲೀಕ ಸೇವಕನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಸೇವಕನಿಗೆ ಊಟಬೇಕು ; ಮಾಲೀಕನಿಗೆ ಸೇವಕನ ವಿಶ್ವಾಸ ನಂಬುಗೆ ಸೇವೆ ಬೇಕು.

ತನುವಿನ ಅರಿವಿನಿಂದಲೇ ಲಕ್ಷಣ, ಆಚಾರ, ವೇದ ಆಗಮ ಉಪನಿಷತ್ತುಗಳ ಹೊತ್ತಿಗೆಗಳು ಬಂದಿರುವಾಗ ಪುನಃ ತನು ಅವುಗಳನ್ನು ಓದಿ ಸಂಗ್ರಹ ಮಾಡಿಕೊಂಡರೆ ಆಚಾರದಲ್ಲಿ ತೊಡಗಬಹುದೇ ಹೊರತು ಅಗೋಚರದ ಆಚಾರದಲ್ಲಿ ತೊಡಗಲಾರದು.

ಗ್ರಂಥಗಳನ್ನು ಓದಿದರೆ ತಿಳಿಯುತ್ತದೆ, ಕೇಳಿದರೂ ತಿಳಿಯುತ್ತದೆ. ನೋಡಿದರೂ

ತಿಳಿಯುತ್ತದೆ. ಓದಿದ್ದು, ಕೇಳಿದ್ದು, ನೋಡಿದ್ದು ನುಡಿಯಲು ಬರುತ್ತದೆ ; ನಡೆಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ಓದುವ ಗ್ರಂಥ ಕಣ್ಣಿನ ಅರಿವಿನಿಂದ ಬಂದಿದೆ. ಕೇಳುವ ಶಬ್ದ ಕಿವಿಯ ಅರಿವಿನಿಂದ ಬಂದಿದೆ. ಪುನಃ ಅಲ್ಲಿಯೇ ಸಂಗ್ರಹವಾಗಿ ನೋಡಲು ಬಾರದ, ಕೇಳಲು ಬಾರದ ಬಾಯಿಯ ಮೂಲಕ ನುಡಿಯುವುದರಿಂದ ನುಡಿಯಲ್ಲಿ ಮಾತ್ರ ಉಳಿದು ನಡೆಯುವಲ್ಲಿ ತನು ತಪ್ಪುತ್ತದೆ.

ತನುವಿನ ಜ್ಞಾನ ಬಲ್ಲ ಶರಣರು ತಂತ್ರಜ್ಞಾನಿಗಳು ; ನಿಪುಣರು. ಜ್ಞಾನ ಸುಖವನ್ನು ಸಂಪೂರ್ಣವಾಗಿ ಉಂಡವರು. ಅವರು ಉಂಡ ಸುಖವನು ಆಸಕ್ತಿಯಿಂದ ಕೇಳಲು ಬಂದವರಿಗೆ ಉಣಬಡಿಸುವರು.

ಜ್ಞಾನ ಬಲ್ಲ ನಿಪುಣ ತನು ; ತನುವಿಗೆ ಸೂಚಿಸುವ ಮೂಲಕ ಜ್ಞಾನ ಮನಕ್ಕೆ ಲಭ್ಯವಾಗುತ್ತದೆ.

ಮನ ಅರಿವಿಗೆ ದಾಸನಾಗದಿದ್ದರೆ, ವೇದ ಆಗಮ ಉಪನಿಷತ್ತುಗಳನ್ನು ಓದಿ ಸಂಗ್ರಹ ಮಾಡಿಕೊಂಡು ತನುವಿಗೆ ಆಚಾರದ ಪಟ್ಟ ಕಟ್ಟುತ್ತದೆ ; ಪಂಡಿತ, ಶಾಸ್ತ್ರಿಯ ಪಟ್ಟ ಕಟ್ಟುತ್ತದೆ.

ಪುಸ್ತಕದಲ್ಲಿದ್ದದ್ದು , ಉಪನ್ಯಾಸ ಕೇಳಿದ್ದು , ಮನ ಹೇಳುತ್ತದೆಯೇ ಹೊರತು ತನುವಿನಲ್ಲಿಯೇ ತನ್ಮಯವಾಗಿರುವ ಜ್ಞಾನ ಭಂಡಾರ ಮನಕ್ಕೆ ಪರಿಚಯವಾಗುವುದೇ ಇಲ್ಲ. ಅದಕ್ಕಾಗಿಯೇ ಅಣ್ಣನವರು ಹೀಗೆ ಹೇಳಿದ್ದಾರೆ: ತೊತ್ತಿಂಗೇಕೆ ಲಕ್ಷಣ ? ಮಹಾಜ್ಞಾನದ ಬಂಟನಿಗೇಕೆ ಆಚಾರ ? ವೇದ ಆಗಮ ಉಪನಿಷತ್ತುಗಳನ್ನೇ ಹೊರಚೆಲ್ಲಿದ ಮಾಲೀಕನಲ್ಲಿ ಡಿಂಗಿರನಾಗಿದ್ದ ಸೇವಕನಿಗೆ ಆ ಗ್ರಂಥಗಳ ಅವಶ್ಯಕತೆಯಾದರೂ ಯಾಕೆ ಬೇಕು ? ಆತ ಉಂಡುದನ್ನು ಉಂಬುವ ಸೇವಕ ನಾನು. ಅಂಗದಲ್ಲಿಯೇ ಮಹಾಜ್ಞಾನ ಲಿಂಗವಾಗಿ ಸಂಗಮವಾದ ನಿಮ್ಮನ್ನು ನಂಬುವುದೇ ನನಗೆ ಆಚಾರವಯ್ಯಾ !

ಸಕಲ ತನುಗಳಲ್ಲಿಗುವ ಮನ ; ತನುಗಳಲ್ಲಿಯೇ ಇರುವ ಅರಿವಿಗೆ ಸೇವಕನಾಗಬೇಕು. ''ಕಳ್ಳ, ಬಂದಿಕಾರ, ಹಾವಾಡಿಗ, ಹಾದರಿಗ, ಬಂಟನೋಲೆಯಕಾರನೆಂದೆನಾದಡೆ, ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿದ್ದಡೆ ಅದೇ ದ್ರೋಹ. ನಡೆನುಡಿ ಹುಸಿಯುಂಟಾದಡೆ, ಕೂಡಲಸಂಗನ ತೋರಿದ ಚೆನ್ನಬಸವಣ್ಣನಾಣೆ ''

ತನು ಯಾವ ವೃತ್ತಿಯಲ್ಲಿದ್ದರೇನು ? ಮನ ತನುವಿನ ಅರಿವಿಗೆ ಸೇವಕನಾಗದ ವಿನಹ ಸುಖಿಯಲ್ಲ. ಜ್ಞಾನವಿದ್ದೂ ಜ್ಞಾನ ಲಭಿಸದ ತನುವಾಗುತ್ತದೆ.

467

ತೊತ್ತಿಂಗೆ ಲಕ್ಷಣವೇಕಯ್ಯಾ ?
ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪುದು.
ಸಾರೆ ಹೊರಸೇಕೆ, ಅವಳಿಗೆ ಮಾರುತ್ತರವೇಕೆ ?
ಕೂಡಲಸಂಗನ ಶರಣರೊಡನೆ
ಇದಿರುತ್ತರವೇಕೆ ಸಿಂಬಕಂಗೆ ?

ತೊತ್ತಿಂಗೆ, ಸೇವಕಿಗೆ ಲಕ್ಷಣವೇಕೆ ? ಒಡೆಯರುಂಡುದನು ಉಂಡು ಹೆಚ್ಚಾದುದನು ಕಾಯ್ದುಕೊಂಡಿರುವುದು ಅವಳ ಧರ್ಮ.

ಸಾರೆ ಹೊರಸೇಕೆ, ಅವಳಿಗೆ ಮಾರುತ್ತರವೇಕೆ ? :

ಅವಳು ಎಂದರೆ : ಏನೂ ಅರಿಯದ ಮನ ; ಭವಿ. ಅದು ಏನೇನೋ ಪ್ರಶ್ನೆಗಳನ್ನು ಕೇಳುತ್ತದೆ ; ಸಮಾಧಾನದ ಉತ್ತರ ಕೊಟ್ಟರು ಕೂಡಾ ಭವಿ ಮನ ಸ್ವೀಕರಿಸುವುದಿಲ್ಲ. ಉತ್ತರದಲ್ಲಿಯೇ ಉಪ ಪ್ರಶ್ನೆ ಕೇಳಿ ಹಿಗ್ಗಿ, ಶರಣರನ್ನೇ ಗೊಂದಲಕ್ಕಚ್ಚಿದೆ ಎಂದು ಸಂತೋಷ ಪಡುತ್ತದೆ. ಇಂಥಹ ಭವಿ ಮನಕ್ಕೆ ಮಹಾಜ್ಞಾನಿಗಳಿಗೆ ಸೇವಕಳಾಗಿರ ಬೇಕಾದ ಸಿಂಬಕಳಿಗೆ, ಹೊರಸು ಹಾಕಿ ಕೂಡಿಸಿ ಆದರಿಸುವುದು ತರವಲ್ಲ. ಅವಳ ಪ್ರಶ್ನೆಗೆ, ಜ್ಞಾನಿಗಳು ಉತ್ತರಿಸುವುದೂ ಬೇಕಿಲ್ಲ.

ಕಂಡಕಂಡವರು ಏರಲ್ಕೆ ಕೈಲಾಸವದು ರಂಡೆಯ ಹೊರಸೆ ಎಂದು ಪ್ರಶ್ನಿಸುತ್ತಾರೆ ಸರ್ವಜ್ಞ.

ಒಡೆತ್ತ ಬಲ್ಲುದು ಅವಲಕ್ಕಿಯ ಸವಿಯ ? ಕೋಡುಗ ಬಲ್ಲುದೆ ಸೆಳೆ ಮಂಚದ ಸುಖವ? ಕಾಗೆ ನಂದನವನದೊಳಗಿದ್ದಡೇನು, ಕೋಗಿಲೆಯಾಗ ಬಲ್ಲುದೆ ಹೇಳಾ ? ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು ಕಳಹಂಸಿಯಾಗ ಬಲ್ಲುದೆ, ಕೂಡಲ ಸಂಗಮದೇವಾ?

ಅವಲಕ್ಕಿ ಹಂಚಿನ ಮೇಲೆ ಉರಿದರೂ ಹಂಚು ಅವಲಕ್ಕಿಯ ಸವಿಯ ಅರಿಯದು. ಕೋತಿ ಸೆಳೆ ಮಂಚದ ಮೇಲೆ ಮಲಗಿದರೇನು ? ಸುಖವನರಿಯದು. ಕಾಗೆ ನಂದನವನದೊಳಗಿದ್ದರೇನು ಕೋಗಿಲೆಯಂತೆ ಹಾಡಲರಿಯದು. ಕೊಳದ ದಡದಲೊಂದು ಪಾರಿ(ಹೊರಸು)ವಾಳ ಕುಳಿತಿದ್ದರೇನು ಹಂಸವಾಗಲರಿಯದು.

ತನು ಮನ ಅರಿವು ಒಂದೆಡೆ ಸಂಗಮವಾಗಿದ್ದರೂ ಒಂದನು ಮತ್ತೊಂದು ಅರಿಯದಂತೆ ತನು ಕ್ಷಣ ಕ್ಷಣಕೂ ಯಾತನೆ ಅನುಭವಿಸುತ್ತದೆ. ಮನ ಕ್ಷಣ ಕ್ಷಣಕ್ಕೂ ಸುಖ ಬಯಸಿ ಸುಖದತ್ತ ತನುವನ್ನು ಕರೆದೊಯ್ಯುತ್ತದೆ. ದೊರೆತರೆ ಒಂದು ಕ್ಷಣ ಸುಖ ; ಮತ್ತೆ ಸುಖಿಸುವ ದುಃಖ. ತನುವಿರುವವರೆಗೆ ಮನಕ್ಕೆ ಸಾರೆ ಚೆಲ್ಲಿದ ಹೊರಸಿನ ಸ್ವರ್ಗದ ಸುಖ ಸಿಕ್ಕರೆ ಸಿಕ್ಕೀತು ಇಲ್ಲದಿದ್ದರೆ ಇಲ್ಲ. ಅಣ್ಣನವರ ಸೂತ್ರಗಳನ್ನು ಹಿಡಿದು, ಮನ ಕಾಯದಲ್ಲಿಯೇ ಹುಡುಕುವ ಕಾಯಕ ಮಾಡಿದರೆ ಕಾಯವೇ ಕೈಲಾಸವಾಗುತ್ತದೆ.

468

ಪಾದೋದಕವ ಕೊಂಬೆ, ಪ್ರಸಾದವ ಕೊಂಬೆ,
ಅರ್ಥ ಪ್ರಾಣಾಭಿಮಾನ ನಿಮ್ಮದೆಂಬೆ !
ರಾತ್ರಿಯಲೊತ್ತೆಯ ಕೊಂಬ ಪಾತಕ ಸೂಳೆಯಂತೆ
ಬರಿಯ ಮಾತಿಂಗೊಲಿವನೆ ನಮ್ಮ ಕೂಡಲಸಂಗಮದೇವ !

ಅಂಗದ ಮೇಲೆ ಲಿಂಗ ಧರಿಸಿ, ಜಂಗಮನಿಗೆ ಆಮಂತ್ರಣ ನೀಡಿ, ಪಾದ ತೊಳೆದು ಅದನ್ನು ಮನೆ ತುಂಬಾ ಸಿಂಪಡಿಸಿ, ಮನೆಯವರೊಂದಿಗೆ ಸ್ವೀಕರಿಸುವುದು ಪಾದೋದಕವಲ್ಲ. ನಂತರ ಪ್ರಸಾದ ಸ್ವೀಕರಿಸಿ, ಇಲ್ಲಿಯ ಸಂಪತ್ತು, ಪ್ರಾಣಾಭಿಮಾನವೆಲ್ಲ ತಮ್ಮದೇ ಬುದ್ಧಿ ಎಂದು ಬರೀ ಮಾತಿನಿಂದ ಹೇಳಿದರೆ ; ಪಾದೋದಕ, ಪ್ರಸಾದ, ಅರ್ಥ, ಪ್ರಾಣಾಭಿಮಾನ ನಿನ್ನದು ಎಂದಂತಾಗುವುದಿಲ್ಲ. ಇದೆಲ್ಲ ಬರೀ ಸಂಪ್ರದಾಯದ ಮಾತಾಗುತ್ತದೆ.

ರಾತ್ರಿ ಸುಖಿಸಲು ಬಂದ ಸೂಳೆ ಒಡೆಯನಿಗೆ ಮಾತು ಕೊಟ್ಟಂತೆ ಅದಾವುದೂ ಸತ್ಯವಲ್ಲ.

ಭವಿ ಮನ ಅಂಗದ ಮೇಲೆ ಲಿಂಗ ಧರಿಸಿದರೆ ತೋರಿಕೆಯ ಭಕ್ತನಾಗುತ್ತದೆ. ಅಂಗದ ಮೇಲೆ ಲಿಂಗ ಧರಿಸಿದ ಜಂಗಮನೂ ಜಂಗಮನಲ್ಲ; ಆತ ತೋರಿಕೆಯ ಜಂಗಮ. ಸಂಪ್ರದಾಯದ ಜಂಗಮ. ಪಾದೋದಕ ಪ್ರಸಾದ ತೆಗೆದುಕೊಂಡ ಮೇಲೆ ನಿನ್ನಲ್ಲಿರುವ ಅರ್ಥ ಪ್ರಾಣ ಅಭಿಮಾನ ನಿನ್ನದಲ್ಲ ಎಂದು ಹೇಳಿದಾಗ ; ಹೌದು ಬುದ್ಧಿ ಅದು ತಮ್ಮದೇ ಎಂದು ಮಾತಿನ ಮೂಲಕ ಹೇಳಿ ಮುಂದಿನ ಕೆಲಸಕ್ಕೆ ಅಣಿಗೊಳ್ಳುತ್ತಾರೆ.

ಸುಂದರವಾದ ರೂಪ ನೋಡಿದ ಕಣ್ಣು ದೇಹಕ್ಕೆ ಭೋಗಿಸುವ ಆಸೆಯನ್ನು ರವಾನೆ ಮಾಡುತ್ತದೆ. ಭೋಗಿಸಲು ಹೋದರೆ ದೇಹಕ್ಕೆ ಆಪತ್ಕಾಲ ; ಭೋಗಿಸದಿದ್ದರೆ ದೇಹದಲ್ಲಿ ಹಾದರ ಶುರುವಾಗುತ್ತದೆ. ಹೀಗೇಕೆ ಎಂದು ತಿಳಿಯಲು ಹೋದರೆ ಜಂಗಮನ ಕೆಲಸ ಶುರುವಾಗುತ್ತದೆ. ರೂಪ ನೋಡುವ ಕಣ್ಣಿನಲ್ಲಿ ಭೋಗಿಸುವ ಬಯಕೆಯೂ ಇದೆ. ರೂಪ ತಿಳಿಯುವ ಅರಿವೂ ಇದೆ. ಅರಿವಿನಿಂದ ನೋಡಿದರೆ ರೂಪ ಹೊತ್ತ ದೇಹ ತನ್ನಂತೆಯೇ ಚರ್ಮ, ಅದರೊಳಗೆ ರಕ್ತ ಮಾಂಸ ಮೂಳೆ ಮಜ್ಜೆ ಮೇದಸ್ಸುಗಳು ತುಂಬಿವೆ. ಚರ್ಮ, ಚರ್ಮವನ್ನು ಬಯಸುವುದೆ ? ಈ ಬಯಕೆ ಯಾಕೆ ? ಎಂದು ನೋಡುವ ಕಣ್ಣು ಪ್ರಶ್ನಿಸಿದರೆ ಸಾಕು ಆ ಕಣ್ಣಿನಲ್ಲಿಯೇ ಉತ್ತರ ದೊರೆಯುತ್ತದೆ.

ಪ್ರಶ್ನೆ ಮಾಡುವ ಕಣ್ಣು ಭಕ್ತನಾದರೆ, ಉತ್ತರ ನೀಡುವ ಕಣ್ಣು ಜಂಗಮ ! ಕಣ್ಣಿನ ಅಜ್ಞಾನದ ಪೊರೆಯನ್ನು ಕಣ್ಣಿನಲ್ಲಿರುವ ಜ್ಞಾನಿ ಜಂಗಮ ತನ್ನ ಖಡ್ಗದಿಂದ ಸೀಳಿ ಜ್ಞಾನದ ಉದಕವನ್ನು ಎರೆಯುತ್ತಾನೆ. ಇದೇ ಪಾದೋದಕ ! ಕಣ್ಣಿನಲ್ಲಿ ಹುಟ್ಟಿದ ಅಜ್ಞಾನವನ್ನು ಕಣ್ಣಿನ ಅರಿವಿನಿಂದಲೇ ಪ್ರಸಾದವಾಗಿ ಸ್ವೀಕರಿಸುತ್ತಾನೆ. ಇದೇ ಪ್ರಸಾದ ! ಭೋಗಿಸಲು ಹೊಂಚು ಹಾಕುವ ಅರಿವನ್ನು ಅರಿವಿನಿಂದಲೇ ಬೇಧಿಸುತ್ತಾನೆ ಇದೇ ಅರ್ಥ ! ಹೀಗೆ ಅಂಗದಲ್ಲಿರುವ ಅಜ್ಞಾನದ ಅಭಿಮಾನವನ್ನು ಪ್ರಸಾದವಾಗಿ ಸ್ವೀಕರಿಸುತ್ತಾನೆ.

ಹೀಗೆ ಕಣ್ಣಿನಲ್ಲಿ ಹುಟ್ಟಿದ ಭವಿ, ಕಣ್ಣಿನಲ್ಲಿದ್ದ ಜ್ಞಾನಿ ಜಂಗಮನ ಜ್ಞಾನೋ(ಪಾದೋದಕ)ದಕ, ಪ್ರಸಾದ ಸ್ವೀಕರಿಸಿದಾಗ, ಅಂಗದಲ್ಲಿರುವ ಅರ್ಥ ಪ್ರಾಣಾಭಿಮಾನ ನಿಮ್ಮದೆನ್ನಲು ಬರುತ್ತದೆ. ಇಲ್ಲದಿದ್ದರೆ ರಾತ್ರಿಯಲೊತ್ತೆಯ ಕೊಂಬ ಪಾತಕ ಸೂಳೆಯಂತೆ ಬರಿಯ ಮಾತು !

469

ಪಾತಕ ಮಹಾಪಾತಕವ ಮಾಡಿದವನು
ಸದ್ಭಕ್ತರ ಮನೆಗೆ ಹೋಗಿ
ಅವರೊಕ್ಕ ಪ್ರಸಾದವಾಯ್ದು ಕೊಂಡುಂಡಡೆ
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ
ಒಮ್ಮೆ ಬೇಡಿಕೊಂಡುಂಡಡೆ !
ಪಾತಕೇ ಸಮನುಪ್ರಾಪ್ತೇ ಶಿವಭಕ್ತಂಗೃಹಂವಜೇತ್
ಯಾಚಯೇದನ್ನಮಮೃತಂ ತದಲಾಭೇ ಜಲಂ ಪಿಬೇತ್
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರಿಗೆ 'ನಮೋ ನಮೋ' ಎಂಬೆನು

ಪಾಪ ಮಹಾಪಾಪ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ, ಅವರು ಮಾಡುವ ಸತ್ಸಂಗದಲ್ಲಿ ಭಾಗಿಯಾಗಿ, ಆ ಪ್ರಸಾದವಾಣಿಯನು ಕೊಂಡು ಉಂಡಡೆ ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ.

ಸದ್ಭಕ್ತರ ಉಪನ್ಯಾಸ ಮಹಾಪಾತಕಿಗೆ ಅಮೃತದ ಸಮಾನವಾದ ಮುಲಾಮು. ಅಮೃತ ಸಮಾನವಾದ ಉಪನ್ಯಾಸದ ಊಟ ಲಭ್ಯವಾಗದಿದ್ದರೆ ಒಂದು ಬೊಗಸೆ ನೀರಾದರೂ ಕುಡಿಯಬೇಕು. ಅಂತಹ ಸದ್ಭಕ್ತರಿಗೆ ನಮೋ ನಮೋ ಎಂದು ಬದುಕಬೇಕು.

ಕೊಲೆ ಸುಲಿಗೆ ನಿಂದೆ ವ್ಯಭಿಚಾರ ಸದಾ ಮದ್ಯಪಾನ, ಭ್ರಷ್ಟಾಚಾರ, ಲಂಚಗುಳಿಯಲ್ಲಿ ಭಾಗಿಯಾದ ತನುವಿನ ಮನದಲ್ಲಿ ಸದಾ ಪಾಪ ಪ್ರಜ್ಞೆ ಕಾಡುತ್ತದೆ. ತಪ್ಪಿಗೆ ಶಿಕ್ಷೆಯಾದರೂ ಮನ ಮಾಡಿದ ಅಪರಾಧಗಳು ತನುವನ್ನು ಹಗಲಿರುಳು ಕಾಡದೆ ಬಿಡುವುದಿಲ್ಲ. ಸರ್ಕಾರ ಕೋರ್ಟುಗಳು ಕೊಡುವ ಶಿಕ್ಷೆಯಿಂದ ತನು ನಿರಾಳವಾಗಿರಲು ಮನ ಬಿಡುವುದಿಲ್ಲ.

ತನುವಿನಲ್ಲಿ ಬ್ರಹ್ಮನೂ ಇದ್ದಾನೆ ; ಭ್ರಮೆಯೂ ಆವರಿಸಿದೆ. ಮನ ಭ್ರಮೆಗೆ ಆಧೀನವಾಗಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಸೃಷ್ಟಿಯಾಗಿ ತನುವನ್ನು ಅದರತ್ತ ಕರೆದುಕೊಂಡು ಹೋಗುತ್ತದೆ. ಮನಕ್ಕೆ ಬ್ರಹ್ಮ ಕಾಣುವುದೇ ಇಲ್ಲ; ಬ್ರಹ್ಮನ ಪರಿಚಯ ಆಗುವುದೇ ಇಲ್ಲ.

ಮನ ತನುವನ್ನು ಕಾಮಕ್ಕೆಳಿಸಿದಾಗ, ಕ್ಷಣಕಾಲ ತಡೆದು ಬೇಡ ಎನ್ನುವದೇ ಬ್ರಹ್ಮ. ಇದನ್ನೇ ಶರಣರು ಸದ್ಗುರು ಎಂದು ಕರೆದಿದ್ದಾರೆ. ಮನ ಬ್ರಹ್ಮನೆಡೆಗೆ ವಾಲಿದರೆ ಅದು ಸದ್ಭಕ್ತನಾಗುತ್ತದೆ. ಸದ್ಭಕ್ತನ ತನುವಾಗುತ್ತದೆ. ಪ್ರತಿಯೊಂದನ್ನು ಅರಿವಿನಿಂದ ನೋಡಿ, ಕೇಳಿ, ರುಚಿಸಿ, ಸ್ಪರ್ಶಿಸಿ, ಮೂಸಿಸಿ ತನುವನ್ನು ನಿಶ್ಚಲ ಬ್ರಹ್ಮನನ್ನಾಗಿಸುತ್ತದೆ. ತನುವಿನಲ್ಲಿ ತನ್ಮಯವಾಗಿ ಕ್ಷಣ ಕ್ಷಣಕ್ಕೂ ಪಾಠ ಮಾಡುವ ಬ್ರಹ್ಮನ ಮಾತು ಮನ ಪಾಲಿಸದಿದ್ದರೆ ; ಅದಕ್ಕೆ ಬ್ರಹ್ಮ ಹತ್ಯದ ಪಾತಕ ಲಭಿಸುತ್ತದೆ.

ಭ್ರಮೆಗೆ ಬ್ರಹ್ಮನ ಪರಿಚಯವಿರುವುದಿಲ್ಲ. ಪರಿಚಯ ಮಾಡಿಕೊಳ್ಳುವ ಇಚ್ಚೆ ಭ್ರಮೆಗೆ ಆಗುವುದು ದುರ್ಲಭ. ಒಂದುವೇಳೆ ಇಚ್ಚೆಯಾದರೆ ಬ್ರಹ್ಮನ ಪರಿಚಯವಿರುವ ಸದ್ಭಕ್ತರ ಮನೆಗೆ ತನುವಿನೊಂದಿಗೆ ಪಯಣಿಸಬೇಕು. ಆ ಸದ್ಭಕ್ತರು ತನುವಿನಲ್ಲಿಯೇ ತನ್ಮಯವಾದ ಬ್ರಹ್ಮನ ದರ್ಶನವನ್ನು ಭ್ರಮೆಗೆ ಉಣಿಸಿ ಕೈ ಬಿಡುತ್ತಾರೆ.

ಅಂದಿನಿಂದ ಮನ ಮಾಡಿದ ಪಾತಕ ಮಹಾಪಾತಕಗಳೆಲ್ಲ ಪರಿಹಾರವಾಗುತ್ತವೆ. ಭ್ರಮೆ ಅಳಿದ ಮನ ಸು ಮನವಾಗುತ್ತದೆ. ''ಬೆಟ್ಟದನಿತಪರಾಧವನು ಒಂದು ಬೊಟ್ಟಿಲೆ ತೊಡೆವ'' ಎನ್ನುವಂತೆ. ಬೆಟ್ಟದಷ್ಟು ಪಾಪವನ್ನು ; ಶ್ರೀಕ್ರಿಷ್ಣ ಗೋವರ್ಧನ ಗಿರಿಯನ್ನು ಒಂದು ಕಿಬ್ಬೆರಳಿನಿಂದ ಎತ್ತಿ ದಂತಹ ಸುಖ ಬ್ರಹ್ಮನ ಪರಿಚಯವಾದ ಮನಕ್ಕೆ ಲಭಿಸುತ್ತದೆ.

470

ನಾನು ಹೊತ್ತ ಹುಳ್ಳಿಯನಂಬಲಿಗೆ ಕೊಂಬುವರಿಲ್ಲ , ನೋಡಯ್ಯಾ.
ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿದೆನಯ್ಯಾ.
ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು,
ಕೂಡಲಸಂಗಮದೇವಾ.

ತನುವಿಗೆ ನಾನು ಎನ್ನುವ ಅಹಂಕಾರಿ ಮನ ಬೆನ್ನು ಬಿದ್ದಿದೆ. ಅದು ಏನು ಸಂಪಾದಿಸಿದರೇನು? ಬರೀ ಕಲ್ಲು ಮಣ್ಣು ಲೋಹ ಕಾಗದ ಅದರ ಸಂಪತ್ತು ! ಇದನ್ನು ಹಗಲಿರುಳೆನ್ನದೇ ಬೇಸರವಿಲ್ಲದೆ ಹೊತ್ತು ಕಾದು ಅದನ್ನೇ ಸಂಪತ್ತೆಂದು ಭಾವಿಸುತ್ತದೆ. ಇದು ತನಗೆ ಹೊರೆ ಎಂದು ಮನಕ್ಕೆ ಎಂದೂ ತೋಚುವುದೇ ಇಲ್ಲ. ತಾನು ಹೊತ್ತುಕೊಂಡ ಅಜ್ಞಾನದ ಹೊರೆ ಶರಣರಿಗೆ ತೃಣ ಸಮಾನ.

ಮಣ್ಣಿನ ಗರ್ಭದಿಂದ ಹೊರಬಂದ ಹೊನ್ನಾದರೇನು ? ಶರಣರಿಗೆ ಅದು ಮಣ್ಣು. ಕಾಗದದಲ್ಲಿ ಮುದ್ರಣಗೊಂಡ ಕರೆನ್ಸಿಯಾದರೇನು ? ಶರಣರಿಗೆ ಅದು ಬರೀ ಕಾಗದ. ಮನಕ್ಕೆ ಘನವಾದುದೆಲ್ಲ ಜ್ಞಾನಿಗಳಿಗೆ ತೃಣ. ಮನಕ್ಕೆ ಲೋಕಕ್ಕೆ ಘನವಾದುದನ್ನು ಕೊಟ್ಟರೂ ಅಂಬಲಿಯನ್ನು ಕೊಡರು ಅವರು.

ನಾನು ಎನ್ನುವ ಮನವಾದರೂ ಅವನು ಎನ್ನುವ ಜ್ಞಾನಿಯಿಂದಲೇ ಬಂದುದು. ಇದರ ಮಣ ಭಾರದ ಪಾಪದ ಹೊರೆಯನ್ನು ಜ್ಞಾನಿ ಶರಣ ಮಾತ್ರ ಕಳೆಯಬಲ್ಲ. ಶರಣನುಂಡ ಮಿಕ್ಕ ಜ್ಞಾನ ಪ್ರಸಾದವನು ನಾನು ಎನ್ನುವ ಅಜ್ಞಾನಿ ಉಂಡು ಬದುಕಿದರೆ ಬದುಕಬಹುದು. ಬೆಳಕಿನಿಂದ ಹುಟ್ಟಿದ ನೆರಳು ಬೆಳಕಿನಿಂದಲೇ ಹೋದಂತೆ!

ಹೊಂಬಣ್ಣದ ಬೆಳಕಿನಲ್ಲಿ ಸುಳಿದಾಡುವ ಕಾಗೆ ಬಣ್ಣ ಕಳೆದುಕೊಂಡಂತೆ. ತನುವಿನಲ್ಲಿ ಹುಟ್ಟಿದ ಮನ, ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನಲ್ಲಿ ಸಂಗಮವಾಗಿ ಕೂಡಲಸಂಗಯ್ಯನಾದಂತೆ ಎನ್ನುವ ಅರಿವಿನ ಸೂತ್ರವನ್ನು ಅಣ್ಣನವರು ಈ ವಚನದ ಮೂಲಕ ದಯಪಾಲಿಸಿದ್ದಾರೆ.

471

ಭವ ಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯಾ.
ಅವರುಂಡು ಮಿಕ್ಕುದ ಉಡುಗಿ,
ಒಕ್ಕ ಪ್ರಸಾದವ ನಾಯ್ದುಕೊಂಬ ಮರುಳ ನಾನಯ್ಯಾ.
ನಮ್ಮ ಕೂಡಲಸಂಗನ ಶರಣರ ರಿಣವ ನಾಹಿಂಗಲಾರೆ.

ಅಂಗ ಹುಟ್ಟಿದಂದಿನಿಂದ ಸಾಯುವವರೆಗೆ ಕ್ಷಣ ಕ್ಷಣಕ್ಕೂ ಹುಟ್ಟುತ್ತದೆ ; ಕ್ಷಣ ಕ್ಷಣಕ್ಕೂ ಸಾಯುತ್ತದೆ. ಸುಖವಾದಾಗ ಹುಟ್ಟು ಅಂಗಕ್ಕೆ ಶ್ರೇಷ್ಠವೆನಿಸಿದರೆ ; ದುಃಖವಾದಾಗ ಸಾವು ಅಂಗಕ್ಕೆ ಶ್ರೇಷ್ಠವೆನಿಸುತ್ತದೆ. ಹೀಗೆ ಹುಟ್ಟಿ ಸಾಯುವ ಎಷ್ಟೋ ಜನ್ಮಗಳು ಕಳೆದರೂ ಅಂಗಕ್ಕೆ ಜ್ಞಾನಿಯಾಗುವ ಭಾಗ್ಯ ಬರುವುದಿಲ್ಲ. ಅದು ಸುಲುಭವೂ ಅಲ್ಲ.

ಅಂಗಕ್ಕೆ ಸುಖವೆಂದರೆ ಮಣ್ಣು, ಮಣ್ಣಿನ ಗರ್ಭದಲ್ಲಿದ್ದ ಹೊನ್ನು. ಹಾಗೂ ತನ್ನಂತೆಯೇ ಇರುವ ಅಂಗದೊಂದಿಗಿನ ಕಾಮದ ಸುಖ. ಇವು ದೊರೆತರೆ ಸುಖ, ದೊರೆಯದಿದ್ದರೆ ದುಃಖ. ಅಂಗದಲ್ಲಿ ಅರಿವಿದ್ದರೂ ಹೀಗೇಕೆ ಎನ್ನುವ ಯೋಚನೆ ಸಾಯುವವರೆಗೂ ಹೊಳೆಯುವುದಿಲ್ಲ. ಹೀಗಾಗಿ ಅಂಗದಲ್ಲಿದ್ದ ಜ್ಞಾನಿ ಜಂಗಮನು ಅಂಗಕ್ಕೆ ಲಭ್ಯವಾಗುವುದಿಲ್ಲ. ಅಂಗ ಜಂಗಮನದಾದರೂ ಮನವೆಂಬ ಮರ್ಕಟದ ಸ್ವಾಧೀನದಲ್ಲಿದೆ. ಮಂಗಕ್ಕೆ ಜಂಗಮ ಬೇಡ. ಹೆಣ್ಣು ಮಣ್ಣು ಹೊನ್ನು ಮಾತ್ರ ಬೇಕು.

ಹೆಣ್ಣು ಅಂದರೆ ಮನವೆಂಬ ಮಂಗ. ಅದು ಹೆಣ್ಣು ಎನ್ನುವ ಅಂಗಕ್ಕೆ ಗಂಡಾಗಿ ಕಾಡುತ್ತದೆ, ಗಂಡು ಎನ್ನುವ ಅಂಗಕ್ಕೆ ಹೆಣ್ಣಾಗಿ ಕಾಡುತ್ತದೆ. ಶರಣರು ಇದಕ್ಕೆ ಮನ, ಚಂಚಲೆ, ಸೂಳೆ, ಹೆಂಡತಿ ಎಂದು ಕರೆದಿದ್ದಾರೆ. ಈ ಅಜ್ಞಾನ ಅರಿವಿನಿಂದ ಮಾತ್ರ ಹೋಗುತ್ತದೆ. ಸುಖ ಬಯಸಿ ದುಃಖದಲ್ಲಿ ಓಲಾಡುವ ಮನವೇ ಅರಿವಿನತ್ತ ಹೋಗಬೇಕಲ್ಲ! ಇದು ಮನಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಜನ್ಮ ಜನ್ಮಾಂತರಗಳಲ್ಲಿ ಅಂಗ ಅಂಗವಾಗಿಯೇ ಸಾಯುತ್ತದೆ ; ಲಿಂಗಾಂಗವಾಗುವುದಿಲ್ಲ.

ಅಂಗದಲ್ಲಿದ್ದ ಅರಿವನ್ನು ಅಂಗದಲ್ಲಿದ್ದ ಮನವೇ ತಿಳಿದು ಜಂಗಮನಾಗಬೇಕು. ಇದು ಶರಣನಿಗೆ ಮಾತ್ರ ಸಾಧ್ಯ. ಹೀಗೆ ತಿಳಿಯುವ ಬಯಕೆ ಮನಕ್ಕೆ ಉಂಟಾಗಿ ಶರಣನ ಬೆನ್ನು ಬೀಳಬೇಕು. ಬಯಕೆಯಾದ ಮನದ ಮೈದಡವಿ ಜಂಗಮನ ದರ್ಶನ ಮಾಡಿಸುತ್ತಾನೆ ಶರಣ ! ಇಂತಹ ಶರಣನ ರಿಣವನ್ನು ಜನ್ಮ ಜನ್ಮದಲ್ಲಿಯೂ ತೀರಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಕೊಡಕೊಳ್ಳುವ ವ್ಯವಹಾರವಲ್ಲ. ಅಂಗದಲ್ಲಿಯೇ ಇದ್ದ ಸಂಪತ್ತನ್ನು ಅರಿತ ಜ್ಞಾನಿ, ಅಂಗ ಬಯಕೆ ಮಾಡಿದ ಅಂಗಕ್ಕೆ ತೋರಿಸುವುದು ಸಾಮಾನ್ಯದ ಮಾತಲ್ಲ. ಇದು ಜನ್ಮ ಜನ್ಮದ ಸಂಬಂಧ. ಕೂಡಲ ಸಂಗನನ್ನು ಕೂಡಿದ ಶರಣರ ರಿಣವ ನಾ ಹಿಂಗಲಾರೆ ಎಂದಿದ್ದಾರೆ ಅಣ್ಣನವರು.

ಇಂತಹ ಜ್ಞಾನ ಸಂಬಂಧದ ಮಾತನ್ನು ನಾಲ್ಕು ಸಾಲುಗಳಲ್ಲಿ ಹೇಳಿ ಜಗದ ಸಂಬಂಧಿ ಯಾಗಿದ್ದಾರೆ ಬಸವಣ್ಣ.

472

ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ ;
ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ
ಕಾಲ ಮುಟ್ಟಲಮ್ಮವು ; ಕಲ್ಪಿತ ತೊಡೆಯಿತ್ತು ;
ಎನ್ನ ಭವಬಂಧನ ಹಿಂಗಿತ್ತು, ಕರ್ಮ ನಿರ್ಮಳವಾಯಿತ್ತು ;
ಅವರ ತೊತ್ತಿನ ಮರುದೊತ್ತಿನ ಮಗನೆಂದು
ಕೂಡಲಸಂಗಮದೇವಾ ಇತ್ತ ಬಾ ಎಂದೆತ್ತಿಕೊಂಡನು.

ಹುಟ್ಟು ಬಲು ಸುಖ. ಮರಣವೆಂದರೆ ಬಲು ದುಃಖ. ಜನನ ಮರಣಗಳ ಸುಖ ದುಃಖಕ್ಕೆ ಒಳಗಾಗಿ ಒಂದು ದಿನ ಅಂಗ ಇಲ್ಲವಾಗುತ್ತದೆ. ಅಂಗಕ್ಕೆ ಇದು ಲಿಂಗಾಂಗವೆಂದು ಅರಿವಿಗೆ ಬಾರದೆ ಹೋಗುತ್ತದೆ. ಏಕೆಂದರೆ ಅಂಗ ವಸ್ತುಗಳಿಗೆ ದಾಸನಾಗುತ್ತದೆಯೇ ಹೊರತು ಅಂಗಕ್ಕೆ ದಾಸನಾಗುವುದಿಲ್ಲ. ಅಂಗದಲ್ಲಿರುವ ಅರಿವಿನ ಬೆಡಗು ದಾಸನಾಗದ ನಿಮಿತ್ಯ, ಅಂಗಕ್ಕೆ ಶರಣು ಹೋಗದ ನಿಮಿತ್ಯ ತಿಳಿಯದೇ ಹೋಗುತ್ತದೆ.

ಅಂಗದಲ್ಲಿರುವ ಮನ ಒಮ್ಮೆ ಭಾವಕ್ಕೆ ಒಳಗಾಗುತ್ತದೆ ಮತ್ತೊಮ್ಮೆ ದುರ್ಭಾವಕ್ಕೆ ಒಳಗಾಗುತ್ತದೆ. ಅಂಗದಲ್ಲಿರುವ ನಿರ್ಭಾವ ; ಮನ, ಭಾವ ಮತ್ತು ದುರ್ಭಾವಗಳಿಗೆ ಪರಿಚಯವಾಗುವುದೇ ಇಲ್ಲ. ನಿರ್ಭಾವವೆಂದರೆ ಅಂಗದಲ್ಲಿಯೇ ಸಂಗಮವಾದ ಸಂಗಯ್ಯ ; ಸತ್ಯ. ಈ ಸತ್ಯದ ಪರಿಚಯ ಮನಕ್ಕಾಗಬೇಕು. ಮನ ಸತ್ಯಕ್ಕೆ ದಾಸಿಯಾಗಬೇಕು. ಹೀಗೆ ಸತ್ಯಕ್ಕೆ ಶರಣು ಹೋಗುವ ಶಿಕ್ಷಣ ಕಂಡುಕೊಂಡವರೇ ಶರಣರು. ಆ ಶಿವಶರಣರ ಮನೆಯಲ್ಲಿ ಅವರಾಡುವ ಮಾತುಗಳ ನುಂಡು ಬದುಕುವುದೇ ದಾಸನಾಗುವ ಲಕ್ಷಣ. ಅವರ ಮಾತುಗಳನು ಕೇಳಿ, ತಿಳಿದು

ಆನಂದಿಸಿ, ತಿಳಿಯದಿದ್ದುದನು ಕಾಯ್ದಿಟ್ಟುಕೊಂಡು ಸಂದರ್ಭ ಬಂದಾಗ ವಿನಯದಿಂದ ; ಸೇವೆ ಮಾಡುತ್ತ ಕೇಳುವುದು, ಅನುಭವಿಸುವುದು, ಸತ್ಯದ ಗುರಿ ಮುಟ್ಟಿ ಪ್ರಯೋಗಶೀಲನಾಗುವುದು.

ಅವರ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದು ಕೂಡಲ ಸಂಗಮದೇವ ಇತ್ತ ಬಾ ಎಂದು ಎತ್ತಿಕೊಂಡನು :

ಎನ್ನ ಭವ ಬಂಧನ ಹಿಂಗಿತ್ತು ಕರ್ಮ ನಿರ್ಮಳವಾಯಿತ್ತು ಎನ್ನುವ ಮಾತುಗಳು ಹಾಗೂ ಮೇಲಿನ ಎರಡು ಸಾಲುಗಳು ಶರಣರ ತೊತ್ತಿನ ಮಗನಾದಾಗ ಅರಿವಿಗೆ ಬರುತ್ತದೆ. ಇಲ್ಲದಿದ್ದರೆ ತನು ಭಾವುಕನಾಗಿ ಲಿಂಗ ಹಿಡಿದು ಪೂಜಿಸಿ ಧನ್ಯನಾದೆನೆಂದು ಭ್ರಮಿಸಿ ಸಾಯುತ್ತದೆ.

ಮನಕ್ಕೆ ಇಡೀ ಜಗತ್ತಿನ ವಿಷಯ ತಿಳಿಯಲು ಸಾಧ್ಯವಾಗುತ್ತದೆ. ಆದರೆ ತನ್ನ ತನುವಿನಲ್ಲಿ ತನ್ಮಯವಾದ ಸತ್ಯ ತಿಳಿಯಲು ಸಾಧ್ಯವಾಗುವುದಿಲ್ಲ. ಸತ್ಯ ತಿಳಿದ ಶರಣರ ಸೇವೆ ಮಾಡುತ್ತ ದಾಸಿ ವರ್ಗದಲ್ಲಿಪ್ಪೆನು. ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ ಅಕಾಲ ಮರಣಗಳು ಮುಟ್ಟಲಿಲ್ಲ. ಜನ್ಮ ಜನ್ಮಗಳಿಂದ ಬಂದ ಕರ್ಮ ನಿರ್ಮಲವಾಯಿತು. ತನುವಿನಲ್ಲಿಯೇ ತನ್ಮಯವಾದ ಸತ್ಯ ಎಂಬ ತಂದೆ ತನುವನ್ನು ಆವರಿಸಿದ ಮನವೆಂಬ ಮಗನನ್ನು ಅಪ್ಪಿಕೊಂಡು ಮುದ್ದಾಡಿ ತನ್ನಂತೆ ಮಾಡಿಕೊಂಡನು ಎನ್ನುವ ಸೂತ್ರವನ್ನು ಮನಕ್ಕೆ ಕರುಣಿಸಿದ್ದಾರೆ ಅಣ್ಣ ಬಸವಣ್ಣ.

473

ಜನ್ಮ ಜನ್ಮಕ್ಕೆ ಹೋಗಲೀಯದೆ, 'ಸೋಹಂ' ಎಂದೆನಿಸದೆ,
'ದಾಸೋಹಂ' ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ
ಕೂಡಲಸಂಗಮದೇವಾ.

ಯಾವುದೇ ದಂಪತಿಗಳು ಅತ್ಯುತ್ತಮ ಮಗುವಿನ ಬಯಕೆಯನ್ನಿಟ್ಟುಕೊಂಡು ದಾಂಪತ್ಯ ಮಾಡುವುದಿಲ್ಲ. ಹೀಗಾಗಿ ಅಂಗಕ್ಕೆ ಅಜ್ಞಾನ ಗರ್ಭದಿಂದಲೇ ಬರುತ್ತದೆ. ದಾಸೋಹ ತತ್ವ ತಿಳಿಯದಿದ್ದರೆ ಅಜ್ಞಾನ ಪ್ರತಿ ಜನ್ಮಕ್ಕೂ ಮುಂದುವರೆಯುತ್ತದೆ.

ದಾಸೋಹ ಎಂದರೆ ತನ್ನ ಕಣ್ಣಿನಲ್ಲಿಯೇ ಉಂಟಾದ ಅಜ್ಞಾನಕ್ಕೆ ತನ್ನ ಕಣ್ಣಿನಲ್ಲಿಯೇ ಇರುವ ಜ್ಞಾನಪ್ರಸಾದ ದಕ್ಕುವುದೇ ದಾಸೋಹ.

ಉದಾ:ಕಲ್ಲು ನೋಡಿದ ಕಣ್ಣಿನಲ್ಲಿ ಜಾತಿ, ಮತ, ಧರ್ಮ, ಭಾವ, ದುರ್ಭಾವಗಳು ಹುಟ್ಟುವುದಿಲ್ಲ. ಇದು ಕಣ್ಣಿನಲ್ಲಿರುವ ಜ್ಞಾನ ಪ್ರಸಾದ. ಅದೇ ಕಲ್ಲಿನಲ್ಲಿ ಕಲಾವಿದ, ಕ್ರಿಸ್ತ,ಮಸೀದೆ ಹಾಗೂ ಪರಮೇಶ್ವರನನ್ನು ಕೆತ್ತಿದರೆ ಜಾತಿ ಮತ ಧರ್ಮ ನಮ್ಮ ದೇವರು ಎನ್ನುವ ಭಾವ ಹುಟ್ಟುತ್ತದೆ. ಅನ್ಯ ದೇವರು ಎನ್ನುವ ದುರ್ಭಾವ ಕೂಡಾ ಹುಟ್ಟುತ್ತದೆ. ಕಲ್ಲು ನೋಡಿದ ಕಣ್ಣಿನಲ್ಲಿ ಜಾತಿ ಮತ ಧರ್ಮ ಭಾವ ದುರ್ಭಾವಗಳಿರಲಿಲ್ಲ. ಕಣ್ಣು ಯಾವ ಜಾತಿ ಮತ ಧರ್ಮದ್ದೂ ಅಲ್ಲ. ಅದಕ್ಕೆ ಸತ್ಯ ನೋಡುವ ನಿರ್ಭಾವ ಶಕ್ತಿ ಮಾತ್ರ ಇದೆ. ಆದರೆ ಕಣ್ಣಿಗೆ ಭಾವ ದುರ್ಭಾವಗಳ ಪೊರೆ ಜನ್ಮದಿಂದಲೇ ಆವರಿಸಿರುವುದರಿಂದ ನಿರ್ಭಾವದ ಪರಿಚಯ ಆಗುವುದೇ ಇಲ್ಲ.

ಮಸೀದೆ, ಮಂದಿರ, ಚರ್ಚ್‌ಗಳಾದರೇನು ? ಪಾರ್ವತಿ ಪರಮೇಶ್ವರ ಕ್ರಿಸ್ತ ಬುದ್ಧ ಮಹಾವೀರನ ಮೂರ್ತಿಯಾದರೇನು ? ನೋಡುವ ಕಣ್ಣಿಗೆ ಕಲ್ಲು ಎನ್ನುವ ಸತ್ಯದ ನಿರ್ಭಾವ

ಪರಿಚಯವಾಗದಿದ್ದರೆ ಕಣ್ಣಿದ್ದೂ ವ್ಯರ್ಥ. ಭಾವ ದುರ್ಭಾವಗಳ ಅಜ್ಞಾನದಿಂದಾಗಿ ಜನ್ಮ ಜನ್ಮಗಳು ಕಳೆದರೂ ಕಣ್ಣಿನ ಅಜ್ಞಾನದ ಪೊರೆ ಕಳಚಿ ಬೀಳುವುದಿಲ್ಲ. ಭಾವದಿಂದ ನನ್ನ ಮಸೀದೆ, ನನ್ನ ಮಂದಿರ, ನನ್ನ ಚರ್ಚ್, ನನ್ನ ದೇವರು ಎನ್ನುವ ಸೋಹಂ ಕಣ್ಣಿಗೆ ಕಣ್ಣಿನ ಲ್ಲಿಯೇ ಇರುವ ನಿರ್ಭಾವದ ದಾಸೋಹಂ ಎನ್ನುವ ಜ್ಞಾನಪ್ರಸಾದ ದಕ್ಕುವುದಿಲ್ಲ. ಅಂದರೆ ಕಣ್ಣಿನಲ್ಲಿರುವ ಭಾವವು ಕಣ್ಣಿನಲ್ಲಿಯೇ ಇರುವ ನಿರ್ಭಾವದತ್ತ ಪ್ರಯಾಣಿಸಬೇಕು. ಈ ಶಿಕ್ಷಣವನ್ನು ನುರಿತ ಜ್ಞಾನಿಗಳು ಕಣ್ಣಿನಿಂದಲೇ ಕಣ್ಣಿಗೆ ತೋರಿಸಬೇಕು. ಅಂತಹ ಜ್ಞಾನಿಯ ದರ್ಶನಕ್ಕಾಗಿ ಕಣ್ಣು ಹಪಹಪಿಸಬೇಕು. ಈ ಬಯಕೆ ಕಣ್ಣಿನಲ್ಲಿರುವ ಭಾವಕ್ಕೆ ಆದರೆ ಮಾತ್ರ ಸಾಧ್ಯವಾಗುತ್ತದೆ.

ಕಣ್ಣಿನಲ್ಲಿರುವ ನಿರ್ಭಾವವೇ ಲಿಂಗಜಂಗಮರು. ಈ ಘನಲಿಂಗ ಜಂಗಮರು ವ್ಯಕ್ತಿಗಳಲ್ಲ ; ನೋಡುವ ಕಣ್ಣಿನಲ್ಲಿಯೇ ತನ್ಮಯರಾದ ಅವ್ಯಕ್ತರು.

ಭಾವಿಸುವ ಭಾವ ಒಮ್ಮೆ ಭಾವವಾಗುತ್ತದೆ ; ಮತ್ತೊಮ್ಮೆ ದುರ್ಭಾವವಾಗುತ್ತದೆ. ಇವೆರಡೂ ಅವ್ಯಕ್ತ. ವ್ಯಕ್ತ ತನುವನ್ನು ಮೋಸಕ್ಕೆ ಈಡುಮಾಡುವ ಅಜ್ಞಾನವಿದು. ಕಲ್ಲು ನೋಡಿದರೆ ಜಗದ ಕಣ್ಣುಗಳಿಗೆಲ್ಲ ನಿರ್ಭಾವ. ಕ್ರಿಸ್ತನನ್ನು ಕೆತ್ತಿದರೆ ಒಂದು ಕಣ್ಣಿಗೆ ಭಾವ ; ಮತ್ತೊಂದು ಕಣ್ಣಿಗೆ ದುರ್ಭಾವ. ಜಗದ ಕಣ್ಣುಗಳಿಗೆಲ್ಲ ಭಾವ ದುರ್ಭಾವಗಳ ಅಜ್ಞಾನದ ಪೊರೆ ಬಳಕೆಯಾಗುತ್ತದೆಯೇ ಹೊರತು ನಿರ್ಭಾವ ಬಳಕೆಯಾಗುವುದೇ ಇಲ್ಲ. ಈ ಶಿಕ್ಷಣ ತಿಳಿದ ನಿರ್ಭಾವವೇ ಲಿಂಗ ಜಂಗಮರಾಗಿ ಭಾವ ದುರ್ಭಾವಗಳ ಪೊರೆಯನ್ನು ಕಿತ್ತೆಸೆಯುತ್ತಾರೆ. ಆಗ ಕಣ್ಣಿನಲ್ಲಿ ನಿರ್ಭಾವ ಒಂದೇ ಉಳಿಯುತ್ತದೆ. ಜನ್ಮ ಜನ್ಮಗಳಿಂದಲೂ ಬಂದ ತನುವಿನ ಅಜ್ಞಾನ ತೊಲಗಿ ಜ್ಞಾನಿ ತನುವಾಗುತ್ತದೆ. ಜ್ಞಾನದಿಂದ ನೋಡುತ್ತದೆ, ಜ್ಞಾನದಿಂದ ನುಡಿಯುತ್ತದೆ.

474

ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತು ಮಾಡಿ ಸಲುಹಿದ ಸುಖವು
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯದಂತುಟಲ್ಲ.
ಕೇಳಯ್ಯ, ಕೂಡಲಸಂಗನ ಶರಣರು
ತಮ್ಮ ಒಕ್ಕುದನಿಕ್ಕಿ ಸಲುಹುವ ಸುಖವು.

ಜ್ಞಾನಿಗಳ ಸೇವೆ ಮಾಡುವ ಭಾಗ್ಯ ತನುವಿಗೆ ದಕ್ಕುವುದು ಪೂರ್ವ ಜನ್ಮದ ಪುಣ್ಯ. ಅದು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಪದವಿಗಳಿಗಿಂತಲೂ ಅಧಿಕವಾದದ್ದು. ಜ್ಞಾನಿಗಳ ಗೋಷ್ಠಿಯಲ್ಲಿ ಭಾಗಿಯಾಗುವುದೇ ಒಂದು ಆನಂದ. ಅವರು ಉಣ್ಣುವ ಜ್ಞಾನದ ಊಟವನು ನೋಡಿ ಕೇಳಿ ಉಳಿದುದನು ಸವಿಯುವುದು ಪರಮಾನಂದ.

ಅಂಗದಲ್ಲಿ ಸಂಗಮವಾದ ಜ್ಞಾನ ಕೇಳಿದರೆ ಸುಖ ; ಅನುಭವಿಸಿದರೆ ಪರಮಸುಖ. ಪ್ರಯೋಗಕ್ಕೆ ಹೋಗಿ ತನ್ನದಾಗಿಸಿಕೊಂಡರೆ ಸುಖದ ಸುಖ !

ಚಿನ್ನ ನೋಡಿದರೆ ಸುಖ, ಖರೀದಿಸಿದರೆ ಸುಖ, ಪಡೆಯಲೇಬೇಕೆಂಬ ಆಸೆ ಅತಿಯಾದರೆ ಕಳುವು ಮಾಡಿದರೂ ಸುಖ. ಲಂಚ ಪಡೆದು ಖರೀದಿಸಿದರೂ ಸುಖ. ಇದು ತನುಗಳು ಅನುಭವಿಸುವ ಸುಖದ ಒಂದು ಭಾಗ. ಚಿನ್ನ ಖರೀದಿಸಲು ಆಗದಿದ್ದರೆ ದುಃಖ ; ಲಂಚ ಪಡೆಯುವಾಗ ಸಿಕ್ಕರೆ ದುಃಖ ; ಕಳುವು ಮಾಡುವಾಗ ಸಿಕ್ಕಿಬಿದ್ದರೂ ದುಃಖ. ಇದು ಕೆಲ ತನುಗಳು

ಅನುಭವಿಸುವ ದುಃಖದ ಒಂದು ಭಾಗ. ಇವೆರಡೂ ಒಂದು ವಸ್ತುವಿನ ಮೇಲೆ ಇಟ್ಟ ಮೋಹದಿಂದ ಉಂಟಾಗುವ ಸುಖ ದುಃಖಗಳು. ಸಾಮಾನ್ಯ ಜ್ಞಾನದ ಅಂಗಕ್ಕೆ ಇವೆರಡು ಮಾತ್ರ ಗೊತ್ತಿದೆ.

ಜ್ಞಾನಿಗಳ ಮಾತೇ ಬೇರೆ ; ಅವರ ಚರ್ಚೆಯೇ ಬೇರೆ ; ಅವರ ಸುಖವೇ ಬೇರೆ! ಮಣ್ಣಿನ ಗರ್ಭದಿಂದ ಬಂದು, ಮಣ್ಣಿನ ಕುಡಿಕೆಯಲ್ಲಿ ಬೆಂದು, ಮಣ್ಣನ್ನು ದೂರೀಕರಿಸಿದ ಚಿನ್ನ ಒಂದು ಹಳದಿ ಲೋಹ. ಹಳದಿ ಬಣ್ಣಕ್ಕೆ ಮೋಹ ಮಾಡಬೇಕೊ ಅಥವಾ ಲೋಹಕ್ಕೆ ಮೋಹ ಮಾಡಬೇಕೊ? ಏನು ಮಾಟಕ್ಕೆ ಮೋಹ ಮಾಡಬೇಕೊ ? ಬಣ್ಣವಿಲ್ಲದ ಮಾಟದ ಲೋಹವನ್ನು ಯಾರೂ ಕೊಳ್ಳುವುದಿಲ್ಲ, ಕಳ್ಳ ಕಳುವು ಕೂಡಾ ಮಾಡುವುದಿಲ್ಲ. ಆದರೆ ಬರೀ ಬಣ್ಣಕ್ಕಾಗಿ ದೇಹ ಖರೀದಿ ಮತ್ತು ಕಳುವಿಗೆ ಗುರಿಯಾಗಬೇಕೆ ? ಇದು ಮಹಾಜ್ಞಾನಿ ಶರಣರು ಮಾಡುವ ಮಹಾಜ್ಞಾನದ ಚರ್ಚೆ. ಈ ಜ್ಞಾನದ ಚರ್ಚೆಯ ಸುಖ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಂತಲ್ಲ. ಇದು ತೃಣ. ಘನವಾದ ಜ್ಞಾನಿಗಳ ಜ್ಞಾನ ಘೋಷ್ಠಿಯ ಸುಖದ ಮುಂದೆ ವಸ್ತುಗಳು ಅವರಿಗೆ ತೃಣ ಸಮಾನ. ಹೊನ್ನಾದರೇನು ? ಅದು ಮಣ್ಣಿನ ಕಣಗಳಿಂದ ಕೂಡಿದ ಲೋಹ. ಹಳದಿ ಬಣ್ಣದ ಲೋಹ.

ಶರಣರ ಮಾತುಗಳಿಂದಾಗಿ ಮನ ಅರಿವಿಗೆ ಹೋಗಿ ಲೋಹದಿಂದ ಶ್ರೀಮಂತನಾಗುವ ಬಯಕೆಯನ್ನು ದೂರೀಕರಿಸುತ್ತದೆ. ಕಳ್ಳನಾಗುವ ದುರಾಲೋಚನೆಯಿಂದಲೂ ದೂರೀಕರಿಸುತ್ತದೆ. ಚಿನ್ನಕ್ಕಾಗಿ ಕೊಲೆ ಮಾಡುವ ಹತ್ಯಾಚಾರದಿಂದಲೂ ಬೇರ್ಪಡಿಸುತ್ತದೆ.

ತನುವಿನಲ್ಲಿದ್ದ ಅರಿವಿನ ಸುಖವನ್ನು ಶರಣರು ತನುವಿಗೆ ತೋರಿಸಿ ಸಲಹುತ್ತಾರೆ.

ಭಕ್ತನ ಪ್ರಾಣಲಿಂಗಿಸ್ಥಲ

475

ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೆ ಮಾಣ್ಬನೆ ?
ಜೇಡರ ದಾಸಯ್ಯಂಗೊಲಿದಾತ, ಮತ್ತೊಬ್ಬ ದೇವನೆ, ಅಯ್ಯಾ ?
ಮಾದರ ಚೆನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ,
ತೆಲಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೆ, ಅಯ್ಯಾ ?
ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದಡೆ
ತನ್ನತ್ತ ಮಾಡುವ ಕೂಡಲಸಂಗಮದೇವ.

ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೆ ಮಾಣ್ಬನೆ :

ಮನ ಬಂದೆಡೆಗೆ ತನುವನೊಯ್ದು ರುಚಿಸುವ ಶಕ್ತಿ ಮನಕ್ಕಿದೆ. ಮನ ರುಚಿಗೆ ದಾಸನಾದ ನಿಮಿತ್ಯ ತನುವಿಗೆ ಈ ಶಿಕ್ಷೆ. ಮನದ ರುಚಿಗಾಗಿ ತನುವಿಗೆ ಕಳ್ಳನ ಪಟ್ಟ, ಹಾದರ ಭ್ರಷ್ಟಾಚಾರ ಲಂಚಗುಳಿಯ ಪಟ್ಟ.

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನು ಸಕಲವನೂ ಬಲ್ಲವನು. ತನುವನ್ನು ಆವರಿಸಿದ ಮನಕ್ಕೆ ಈ ಗುರುದೇವನ ಪರಿಚಯವಾದರೆ, ಅವನು ಒಲಿದರೆ ತನುವಿಗೆ ಸಕಲ ಪದವಿಗಳೂ ಲಭ್ಯ. ಭ್ರಮೆಯಿಂದ ವಸ್ತುವಿನೆಡೆಗೆ ತನುವನ್ನು ಕರೆದೊಯ್ದು ಮನಕ್ಕೆ ಬ್ರಹ್ಮನ

ಸುಳಿವು ದೊರೆತು ಬ್ರಹ್ಮನಾಗುತ್ತದೆ. ಬ್ರಹ್ಮ ಪದವಿಗಿಂತಲೂ ದೊಡ್ಡ ಪದವಿ ಈ ಜಗತ್ತಿನಲ್ಲಿ ಯಾವುದೂ ಇಲ್ಲ.

ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ತೆಲುಗ ಜೊಮ್ಮಯ್ಯನಿಗೆ ಒಲಿದಾತ ಕೂಡಾ ಬ್ರಹ್ಮನೇ. ಬ್ರಹ್ಮನಿಗಿಂತ ಮಿಗಿಲಾದ ಮತ್ತೊಬ್ಬ ದೇವನಿಲ್ಲ. ಅಂಗದಲ್ಲಿರುವ ಲಿಂಗವೇ ಬ್ರಹ್ಮ. ಅದು ಅಂಗದಲ್ಲಿರುವ ಐದು ಇಂದ್ರಿಯಗಳಿಗೂ ಪಸರಿಸಿದೆ. ಇಂದ್ರಿಯಗಳನ್ನಾವರಿಸಿದ ಭ್ರಮೆಗೆ ಬ್ರಹ್ಮನ ಪರಿಚಯವಿಲ್ಲದ್ದಕ್ಕಾಗಿ ಮತ್ತೊಬ್ಬ ಕಲ್ಲು ದೇವನಿಗೆ ದಾಸನಾಗಿದೆ.

ಭ್ರಮೆ ಕಳೆದುಕೊಂಡ ಇಂದ್ರಿಯಗಳು ಬ್ರಹ್ಮನತ್ತ ವಾಲಿದರೆ ಬ್ರಹ್ಮನಲ್ಲಿಯೇ ಭ್ರಮೆ ಲೀನವಾಗುತ್ತದೆ. ಅಂಗದಲ್ಲಿರುವ ಸಂಗಯ್ಯನಲ್ಲಿ ಬೆರೆತು ಸಂಗಮನಾಥನಾಗುತ್ತದೆ.

476

ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ ?
ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ ?
ನೂರನೋದಿ ಏವೆನಯ್ಯಾ,
ನಮ್ಮ ಕೂಡಲಸಂಗಮದೇವರ ಮನ ಮುಟ್ಟಿ ನೆನೆಯದನ್ನಕ್ಕ ?

ನಿತ್ಯ ನಿತ್ಯ ಅಂಗಕ್ಕೆ ಸಾಬೂನ ಹಚ್ಚಿ ತೊಳೆದು ಗಂಧ ವಿಭೂತಿ ಧರಿಸಿದರೇನು ? ಕಾವಿ ಹೊದ್ದರೇನು ಒಳಗೆ ಶುದ್ಧವಾಗದನ್ನಕ್ಕ ? ಮಣಿಯ ಕಟ್ಟಿ ಸಾವಿರಾರು ಬಾರಿ ಜಪಿಸಿದರೇನು ಜಪಿಸಿದ ಶಬ್ದ ಮನ ಮುಟ್ಟದನ್ನಕ್ಕ ? ನೂರಾರು ಗ್ರಂಥಗಳನ್ನು ಆಗಮ ಉಪನಿಷತ್ ಭಗವದ್ಗೀತೆ ಬೈಬಲ್‌ಗಳನ್ನು ಓದಿದರೇನು? ಓದಿ ಓದಿ ದೇಹ ಬಳಲುತ್ತದೆಯೇ ಹೊರತು ಓದಿದ ಓದು ಮನಮುಟ್ಟಿ ನೆನೆಯದನ್ನಕ್ಕ ?
ಹೊರಾವರಣದ ಕೆಲಸಗಳಲ್ಲಿ ದೇಹ ಭಾಗಿಯಾದರೆ ಶುದ್ಧವಾಗುವುದಿಲ್ಲ. ಮನ ದೇಹಕ್ಕೆ ಪಾತ್ರಧಾರಿಯ ಕೆಲಸ ಕೊಡುತ್ತದೆಯೇ ಹೊರತು ಮತ್ತೇನೂ ಅಲ್ಲ. ಹೊರಾವರಣದಲ್ಲಿ ವಿಭೂತಿ ಗಂಧ ಹೂಸಿದರೇನು ? ದೇಹದ ಅವಗುಣಗಳು ಸುಟ್ಟು ಭಸ್ಮವಾದ ಲಕ್ಷಣವಲ್ಲ. ಅವಗುಣಗಳು ಸುಟ್ಟು ಭಸ್ಮವಾದರೆ ದೇಹಕ್ಕೆ ಭಸ್ಮ ಹೂಸಬೇಕಿಲ್ಲ. ಭಸ್ಮ ಹೂಸಿದ ಸಂಕೇತ ದುರ್ಗುಣಗಳನ್ನು ಸುಟ್ಟುಕೊಂಡು ಶುಚಿರ್ಭೂತನಾದದ್ದೇ ಹೊರತು ಬೇರೆಯಲ್ಲ. ಆದರೆ ಮನ ವಿಭೂತಿ ಸಂಕೇತ ಬಳಸಿ ಸಂಪ್ರದಾಯಸ್ಥನಾ ಗುತ್ತದೆಯೇ ಹೊರತು ಪ್ರಯೋಗಕ್ಕೆ ಹೋಗುವುದಿಲ್ಲ. ಹೀಗಾಗಿ ಹೂಸಿದ ಭಸ್ಮ, ಧರಿಸಿದ ಕಾವಿಗಳು ಅಂಗದಲ್ಲಿ ಯಾವ ಕೆಲಸವನ್ನೂ ಮಾಡಲರಿಯವು ಎನ್ನುವುದೇ ವಚನದ ಸಾರ.

ಓಂ ನಮಃ ಶಿವಾಯ ಎಂದು ನೂರಾರು ಬಾರಿ ಮಣಿಯನೆಣಿಸಿದರೇನು? ಅದು ಶಬ್ದವಾಗುತ್ತದೆಯೇ ಹೊರತು ಷಡಕ್ಷರಿಯ ಮಂತ್ರದ ಮಹಿಮೆ ತಿಳಿಯುವುದಿಲ್ಲ. ಮಂತ್ರ ತಿಳಿಯುವುದೆಂದರೆ ಮಾಂಸಪಿಂಡವೇ ಮಂತ್ರಪಿಂಡವಾಗುವುದು ; ಮಂತ್ರವೇ ತಾನಾಗುವುದು.

ನೂರಾರು ಪುಸ್ತಕಗಳನ್ನು ಓದಿದರೇನು ? ಪುಸ್ತಕದಲ್ಲಿದ್ದ ಸಕಲ ಅಕ್ಷರಗಳೂ ತನುವಿನಿಂದಲೇ ಬಂದದ್ದು, ತನುವಿನಲ್ಲಿಯೇ ತನ್ಮಯವಾದದ್ದು ತನುವಿಗೆ ತಿಳಿಯದಿದ್ದರೆ, ಓದಿದ ಓದು ವಾದಕ್ಕೆ ವ್ಯಾಧಿಗೆ ಬಳಕೆಯಾಗುತ್ತದೆಯೇ ಹೊರತು ತನ್ನ ಬಳಕೆಗೆ ಬರುವುದಿಲ್ಲ, ತನುವಿನಲ್ಲಿ ತನ್ಮಯವಾದ

ಅರಿವು ತನುವನ್ನು ಆವರಿಸಿದ ಮನದ ಗಮನಕ್ಕೆ ಬಾರದಿದ್ದರೆ ; ತನುವನ್ನು ಮನ ಶುದ್ಧವಾಗಿಡುವ ಪಾತ್ರ ಮಾಡುತ್ತದೆಯೇ ಹೊರತು ಪಾತ್ರದ ಸೂತ್ರಧಾರಿಯಾಗಲು ಅರಿಯದು.

477

ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನವು,
ಎಂತಯ್ಯಾ? ಎನಗಿನ್ನಾವುದು ಗತಿ ?
ಎಂತಯ್ಯಾ? ಎನಗಿನ್ನಾವುದು ಮತಿ ?
ಎಂತಯ್ಯಾ ? ಹರಹರಾ, ಕೂಡಲಸಂಗಮದೇವಾ,
ಮನವ ಸಂತೈಸೆನ್ನ.

ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನವು :

ತನುವಿನಲ್ಲಿ ಚಿತ್ತವು ಇದೆ; ಸುಚಿತ್ತವೂ ಇದೆ. ಚಿತ್ತ ಆಭರಣದಲ್ಲಿ ನೆಟ್ಟರೆ ತನುವನ್ನು ಖರೀದಿಗೆ ಇಲ್ಲ ಆಭರಣದ ಕಳುವಿಗೆ ಹಚ್ಚುತ್ತದೆ. ಆಭರಣವೆಂದರೇನೆಂದು ಚಿತ್ತಕ್ಕೆ ಅರಿವಾಗುವುದಿಲ್ಲ. ಆಭರಣವನ್ನು ಕಳವು ಇಲ್ಲ ಖರೀದಿಸುವುದರ ಮೂಲಕ ಸಂಗ್ರಹಿಸುವುದೇ ಚಿತ್ತದ ಉದ್ದೇಶ. ಚಿತ್ತ ರೂಪದಲ್ಲಿ ನೆಟ್ಟರೆ ತನುವಿನೊಂದಿಗೆ ಮನದಲ್ಲಿ ಹಾದರಕ್ಕೆಳೆಸುತ್ತದೆ ಇಲ್ಲ ತನುವಿನೊಂದಿಗೆ ಭೋಗಿಸಿ ವಿಟ ಅಥವಾ ವೇಶ್ಯೆಯ ಪಟ್ಟ ತನುವಿಗೆ ಕಟ್ಟುತ್ತದೆ. ಇದು ಚಿತ್ತದ ದೋಷವೆಂದು ಯಾರು ತಿಳಿಯುವುದಿಲ್ಲ. ಸಕಲ ಆರೋಪವನ್ನು ತನುವಿನ ಮೇಲೆ ಹಾಕುತ್ತಾರೆ. ಆದರೆ ಶರಣರು ಮಾತ್ರ ತನುವಿನ ಮೈದಡವಿ ಚಿತ್ತಕ್ಕೆ ಶಿಕ್ಷೆ ನೀಡಿ ಸುಚಿತ್ತವನ್ನಾಗಿಸುತ್ತಾರೆ. ಈ ಶಿಕ್ಷಣ ಶರಣರು ಮಾತ್ರ ಬಲ್ಲರು.

ತನುವಿನಲ್ಲಿರುವ ಚಿತ್ತ ತನುವಿನಲ್ಲಿರುವ ಸುಚಿತ್ತವನ್ನು ನೆನೆದರೆ ಚಿತ್ತ ನಷ್ಟವಾಗುತ್ತದೆ. ಇದು ಚಿತ್ತಕ್ಕೆ ಬೇಕಿಲ್ಲ , ಹೀಗಾಗಿ ಅರಿವೆಂಬ ಗುರುದೇವನಿಗೆ ನಿವೇದನೆ ಮಾಡಿ ಚಿತ್ತವನ್ನು ಸುಚಿತ್ತವನ್ನಾಗಿಸು ಎಂದು ಬೇಡುವ ವಿಧಾನವನ್ನು ಬಸವಣ್ಣನವರು ಓದುಗರಿಗೆ ಹೇಳಿದ್ದಾರೆ.

ಚಿತ್ತ ಸುಚಿತ್ತವಾಗಿ ಗುರುದೇವನನ್ನು ನೆನೆಯುವುದು ಎಂತಯ್ಯಾ ? ಎನಗಿನ್ನಾವುದು ಗತಿ? ಎಂತಯ್ಯಾ ಎನಗಿನ್ನಾವುದು ಮತಿ ? ಎಂತಯ್ಯಾ ? ಹರಹರಾ ಕೂಡಲಸಂಗಮದೇವಾ ಎನ್ನ ಮನವನ್ನು ಸಂತೈಸು ತಂದೆ ಎನ್ನುವ ಆಲಾಪದೊಂದಿಗೆ ಬಿನ್ನೈಸುವ ವಿಧಾನವನ್ನು ಬಿತ್ತರಿಸಿದ್ದಾರೆ.

478

ಅಷ್ಟದಳ ಕಮಲವ ಸುತ್ತುವ ಜೀವಾತ್ಮನ
ಮೆಟ್ಟಿದ ದಳವನರಿಯದೆ,
ಆನು ಭಕ್ತನೆಂತೆಂಬೆ ? ಆನು ಶರಣನೆಂತೆಂಬೆ ?
ಆನು ಲಿಂಗೈಕ್ಯನೆಂತೆಂಬೆ ಕೂಡಲಸಂಗಮದೇವಾ,
ಎನ್ನ ಮನವು ಸಮಾಧಾನವಾಗದನ್ನಕ್ಕ ?

ತನು ಒಂದು ಸುಂದರವಾದ ಕಮಲ. ಇದಕ್ಕೆ ಎಂಟು ದಳಗಳಿವೆ. ಇಂದ್ರದಳ, ಅಗ್ನಿದಳ, ಯಮದಳ, ನೈರುತ್ಯದಳ, ವರುಣದಳ, ವಾಯುದಳ, ಕುಬೇರದಳ, ಈಶಾನ್ಯದಳ ಎಂದು

ಅಷ್ಟದಳಗಳ ಹೆಸರು. ಇದಕ್ಕೂ ಸಮೀಪವಾದದ್ದು ಎಂದರೆ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ಚರ್ಮ ಮತ್ತು ನಾಲಿಗೆ. ಇದು ತನುವನ್ನು ಹಿಡಿದು, ತನುವಿಗೆ ಸೌಂದರ್ಯವನ್ನು ತಂದು ಕೊಟ್ಟಿವೆ. ಇವುಗಳಿಂದಲೇ ಅಂಗ ಲಿಂಗಾಂಗವೆಂದು ಹೆಸರು ಪಡೆದಿದೆ. ಇವುಗಳಿಂದಲೇ ತನು ರಕ್ಕಸನೆಂಬ ಮತ್ತೊಂದು ಹೆಸರನ್ನೂ ಪಡೆದಿದೆ.

ತನುವಿನಲ್ಲಿರುವ ಜೀವಾತ್ಮ ಈ ಎಂಟುದಳಗಳನ್ನು ಮೆಟ್ಟಿ ನಿಂತಿದೆ. ಈ ಎಂಟು ದಳಗಳನ್ನು ಅರಿವೆಂಬ ಗುರುದೇವ ಒಂದು ದಾಳವನ್ನಾಗಿ ಕಮಲದಂತೆ ಬಂಧಿಸಿದ್ದಾನೆ. ಎಂಟು ದಳಗಳನ್ನು ಮೆಟ್ಟುವ ಶಕ್ತಿಯುಳ್ಳ ಅರಿವೆಂಬ ಗುರುದೇವನ ಮಹಿಮೆ ಮನಕ್ಕೆ ತಿಳಿಯದಿದ್ದರೆ ಅದು ಎಂದೂ ಭಕ್ತನಾಗಲರಿಯದು. ಭಕ್ತನಿಗೆ ಈ ಶಿಕ್ಷಣ ತಿಳಿಯದಿದ್ದರೆ ಆತ ಎಂದೂ ಶರಣನಾಗಲರಿಯ. ಶರಣನಿಗೆ ಈ ಜ್ಞಾನ ಹೊಳೆಯದಿದ್ದರೆ ಆತ ಎಂದೂ ಲಿಂಗೈಕ್ಯನಾಗಲರಿಯ.

ಮನಕ್ಕೆ ಇದಾವುದೂ ತಿಳಿಯದಿದ್ದರೆ ಅದು ಎಂದೂ ಸಮಾಧಾನಿಯಾಗಲರಿಯದು. ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಇದ್ದ ಅಷ್ಟದಳ ಕಮಲಗಳ ಜ್ಞಾನವನ್ನು ಮೆಟ್ಟುವ ಮಹಾಜ್ಞಾನದ ಜಾಡನು ಅರಿಯುವುದೇ ಭಕ್ತಸ್ಥಲ. ಭಕ್ತ ಆ ಮಹಾಜ್ಞಾನಕ್ಕೆ ಶರಣು ಹೋಗುವುದೇ ಶರಣಸ್ಥಲ. ಜ್ಞಾನಕ್ಕೆ ಶರಣುಹೋದ ಶರಣ ಆ ಮಹಾಜ್ಞಾನದಲ್ಲಿ ಐಕ್ಯವಾಗುವುದೇ ಐಕ್ಯಸ್ಥಲ. ಇದನ್ನರಿಯದ ಮನ ಯಾವ ತನುವಿನಲ್ಲಿದ್ದರೇನು ? ಆ ತನುವನ್ನು ಎಂದೂ ಸಮಾಧಾನಿಯನ್ನಾಗಿಡಲಾರದು.

479

ನಾ ನಿಮ್ಮ ನೆನೆವೆನು, ನೀವೆನ್ನನರಿಯಿರಿ ;
ನಾ ನಿಮ್ಮ ನೋಲೈಸುವೆನು ; ನೀವೆನ್ನ ಕಾಣಿರಿ.
ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ ?
ಕೂಡಲಸಂಗಮದೇವಾ,
ಎನಗೆ ನೀವೆ ಪ್ರಾಣ ಗತಿ ಮತಿ, ನೋಡಯ್ಯಾ.

ದೇವನನ್ನು ನೆನೆಯದ ತನುವೇ ಇಲ್ಲ. ಆದರೂ ತನುವಿಗೆ ದೇವನೊಲುಮೆಯಿಲ್ಲ. ತನು ದೇವನನ್ನು ಓಲೈಸುವುದೂ ಬಿಟ್ಟಿಲ್ಲ ; ದೇವ ಕನಿಕರಪಟ್ಟು ತನುವಿಗೆ ಪ್ರತ್ಯಕ್ಷವೂ ಆಗಿಲ್ಲ. ದೇವನನ್ನು ತನು ಕಂಡಿಲ್ಲ; ತನುವನ್ನು ದೇವ ಕಂಡಿಲ್ಲ. ದೇವ ತನುವನ್ನು ತನ್ನತ್ತ ಆಕರ್ಷಿಸುವುದಕ್ಕಾಗಿ ನಿತ್ಯ ಆತನ ಹೋರಾಟಗಳು ನಡೆದೇ ಇವೆ.

ದೇವನೆಂದರೆ ಯಾರೆಂದು ತನುವಿಗೆ ಗೊತ್ತಿಲ್ಲ ; ತನುವಿನಲ್ಲಿಯೇ ಇದ್ದು ನಾನೇ ದೇವನೆಂದು ಹೇಳುವುದು ತನುವಿಗೆ ಕೇಳುತ್ತಿಲ್ಲ. ಒಬ್ಬರ ಭಾಷೆ ಮತ್ತೊಬ್ಬರರಿಯದೆ ಹೋರಾಟಗಳು ತನುವಿನ ಮೂಲಕ ನಿರಂತರ ತನುವಿನಲ್ಲಿಯೇ ನಡೆದಿವೆ.

ನೀನಿಲ್ಲದೆ ನಾನಿಲ್ಲ; ನಾನಿಲ್ಲದೆ ನೀನಿಲ್ಲ. ಆದರೂ ನೀನಿಲ್ಲದೆ ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ ಎನ್ನುವುದೂ ನಿಂತಿಲ್ಲ . ಎನಗೆ ನೀವೆ ಪ್ರಾಣ ಗತಿ ಮತಿ, ನೋಡಯ್ಯಾ. ಕಣ್ಣಿನಲ್ಲಿಯ ಕಣ್ಣು ನೀನಾದರೆ ; ಕಣ್ಣಿನ ಭಾವ ದುರ್ಭಾವ ನಾನು. ನಿರ್ಭಾವ ನೀನೆಂದು ಅರಿಯದ ದೌರ್ಭಾಗ್ಯ ನಾನು. ನಾ ನಿನ್ನ ಅರಿಯೆ ದೃಷ್ಟಿಯಿತ್ತ ನೀವು ನನ್ನನು ಅರಿಯಿರಿ. ನಾವಿಬ್ಬರೂ

ಒಂದೇ ಕಣ್ಣಿನಲ್ಲಿ ಬೆರೆತಿದ್ದರೂ ನಿಮ್ಮ ನೋಲೈಸುವುದು ನನಗೆ ತಪ್ಪಲಿಲ್ಲ. ನೀವಾಗಿಯೇ ನನ್ನನ್ನು ಕರುಣಿಸಲಿಲ್ಲ. ನಾನೆಂತು ಬದುಕುವೆನು ; ನಾನೆಂತು ಜೀವಿಸುವೆನಯ್ಯಾ ? ಎನಗೆ ನೀವೇ ನೋಟ ; ನಿಮಗೆ ನಾನೇ ಭಾವ, ಎನಗೆ ನೀವೆ ಪ್ರಾಣ ಗತಿ ಮತಿ ದೇವಾ.

480

ತಂದೆ ನೀನು ತಾಯಿ ನೀನು ; ಬಂಧು ನೀನು ಬಳಗ ನೀನು.
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ
ಕೂಡಲಸಂಗಮದೇವಾ,
ಹಾಲಲದ್ದು, ನೀರಲದ್ದು.

ಒಂದು ತನುವಿಗೆ ಜನ್ಮ ಕೊಟ್ಟ ತಂದೆ ತಾಯಿಗಳು, ಬಂಧು, ಬಳಗ ತನು ಇದ್ದಾಗಲೇ ತನುವನ್ನು ಮನೆಯಿಂದ ಬೇರ್ಪಡಿಸುತ್ತಾರೆ. ತಂದೆ ತಾಯಿ ಬಂಧು ಬಳಗ ಎನ್ನಿಸಿಕೊಂಡವರು ವೈರಿಗಳಾಗುತ್ತಾರೆ. ತನು ಇರುವವರೆಗೂ ಈ ಸಂಬಂಧ ಸಂಬಂಧವಾಗಿ ಉಳಿಯುವುದು ದುರ್ಲಭ. ಇದನ್ನು ಎಲ್ಲೆಲ್ಲೂ ಕಾಣಬಹುದಾಗಿದೆ.

ಬಸವಣ್ಣನವರು ಹೇಳಿದ ಸಂಬಂಧ ಹಾಗಲ್ಲ. ಅದು ಹುಟ್ಟಿನೊಂದಿಗೆ ಬಂದಿದೆ. ತನುವಿನ ಜೊತೆ ಜೊತೆಗೆ ಬಂದು ಜೊತೆ ಜೊತೆಗೆ ಹೋಗುತ್ತದೆ.

ತಂದೆ ತಾಯಿಗಳನ್ನು ಕೊಂದ ಮಕ್ಕಳ ಉದಾಹರಣೆಯೂ ಇದೆ ; ಮಕ್ಕಳನ್ನು ಕೊಂದ ತಂದೆ ತಾಯಿಗಳ ಉದಾಹರಣೆಯೂ ಇದೆ. ಕೊಲೆಗಡುಕರಾಗಿ ಬದಲಾದ ಬಂಧು ಬಳಗದ ಉದಾಹರಣೆಗಳೂ ಇವೆ. ಆದರೆ ಬಸವಣ್ಣನವರು ಹೇಳಿದ ತಂದೆ ತಾಯಿ ಬಂಧು ಬಳಗವೇ ಆದ ಅವ್ಯಕ್ತನ ಪರಿಚಯವಾದರೆ ಸಾಕು ; ಆತನೇ ತಂದೆ ತಾಯಿ ಬಂಧು ಬಳಗ ! ಎಲ್ಲವೂ ಆತನೇ.

ಮಗ ತಂದೆ ತಾಯಿಗಳಿಗೆ ಕೇಡು ಬಗೆದರೆ, ಅವರು ಕಟ್ಟಿದ ಮನೆಯಿಂದ ಮಗನನ್ನು ಹೊರಗೆ ಹಾಕುತ್ತಾರೆ. ಆದರೆ ತನುವಿನಲ್ಲಿಯೇ ತನ್ಮಯವಾಗಿ ತನುವಿಗೆ ಜನ್ಮ ನೀಡಿ, ತನುವಿನಲ್ಲಿಯೇ ವಾಸ ಮಾಡಿದ ತಂದೆ ಹಾಗಲ್ಲ. ಮಗನೆಂಬ ಮನವನ್ನು ಮೈದಡವಿ ಮತ್ತೊಮ್ಮೆ ಅಪರಾಧ ಮಾಡಬೇಡವೆಂದು ಸಂತೈಸುತ್ತಾನೆ. ತನುವಿನ ಮನೆಯಿಂದ ಆಚೆ ತಳ್ಳುವುದೇ ಇಲ್ಲ.

ಮನ ತನುವಿನೊಂದಿಗೆ ಅನಂತಕೋಟಿ ಹಾದರ ಅಪರಾಧಗಳನ್ನು ಮಾಡುತ್ತದೆ. ಆದರೆ ತನುವಿನಲ್ಲಿಯೇ ತನ್ಮಯವಾದ ತಂದೆ ಲೆಕ್ಕವಿಲ್ಲದಷ್ಟು ಬಾರಿ ಸೈರಣೆ ಮಾಡುತ್ತಾನೆ. ಎನ್ನ ಅಪರಾಧ ಅನಂತಕೋಟಿ ; ತಮ್ಮ ಸೈರಣೆಗೆ ಲೆಕ್ಕವಿಲ್ಲ. ಈ ವಾಕ್ಯವನ್ನು ತಂದೆ ತಾಯಿ ಬಂಧು ಬಳಗಕ್ಕೂ ಎತ್ತರದ ಸ್ಥಾನದಲ್ಲಿದ್ದ ಶ್ರೀ ಗುರುವಿನಿಂದಲೇ ತಿಳಿಯಬೇಕು. ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಎಂದು ಗುರುವಿಗೆ ಮೊರೆಹೋಗಬೇಕು. ಪಿಂಡಕ್ಕೆ ಜನ್ಮ ಕೊಟ್ಟ ತಂದೆ ತಾಯಿಗಿಂತಲೂ ಅರಿವಿಗೆ ಜನ್ಮಕೊಟ್ಟ ತಂದೆಯೇ ಅಧಿಕವೆಂದು ಅರಿವಿಗೆ ಬರುತ್ತದೆ.

ಶ್ರೀಗುರು ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿಸಿ ನಿಜ ತಂದೆಯ ಪರಿಚಯ ಮಾಡಿಸುತ್ತಾನೆ.

ಅರಿವಿನ ಬಯಲ ಬಿಂದುವೇ ತಂದೆಯ ಮುಖಾಂತರ ಜಲಬಿಂದುವಾಗಿ, ತಾಯಿ ಗರ್ಭ ಪ್ರವೇಶಿಸಿ ಅರಿವಿನ ಪಿಂಡವಾಗಿ, ತನುವಾಗಿ ಹೊರಬಂದಿದೆ. ನೋಡುವ, ಕೇಳುವ, ಮುಟ್ಟುವ, ರುಚಿಸುವ, ಮೂಸಿಸುವ ಜ್ಞಾನ ಅರಿವಿನ ಬಿಂದುವಿನಿಂದಲೇ ಬಂದಿದೆ. ಈ ಬಿಂದುವಿನ ಬೆಳಕೇ ನೆರಳಿನ ಮನವಾಗಿ ಬೆಳಕಿನೊಂದಿಗೆ ವಾಸ ಮಾಡಿದೆ. ಎಲ್ಲಿ ಬೆಳಕೊ ಅಲ್ಲಿ ನೆರಳು !

ಬೆಳಕಿಗೆ ಅರಿವಿನ ಅನುಭವವಿದೆ. ಈ ಬೆಳಕಿನ ಅನುಭವ ಆನಂದಿಸುವ ಶಕ್ತಿ ನೆರಳಿಗಿದೆ. ಬೆಳಕು ಅರಿವಿನ ತಂದೆಯಾದರೆ ಅದರಿಂದ ಸೃಷ್ಟಿಯಾದ ಮಗನೆಂಬ ನೆರಳೇ ಮನ ! ಈ ತಂದೆಗೂ ಮಗನಿಗೂ ಅವಿನಾಭಾವ ನಂಟು. ಹಡೆದ ತಂದೆ ತಾಯಿಗಳು ನೆಪ ಮಾತ್ರ. ತಂದೆ ಜಲಬಿಂದುವನ್ನು ತಾಯಿ ಗರ್ಭದಲ್ಲಿ ಚೆಲ್ಲಿದ. ತಾಯಿ ಫ್ರೀಜ್‌ನಂತೆ ಕಾಪಾಡಿ ಮಾಂಸಪಿಂಡವನ್ನು ಹೊರಹಾಕಿದಳು.

ಬಿಂದುವಿನಲ್ಲಿಯೇ ತಂದೆಯಿದ್ದಾನೆ ; ಬಿಂದುವಿನಲ್ಲಿಯೇ ಮಗನಿದ್ದಾನೆ. ಈ ತಂದೆ ಮಕ್ಕಳಿಬ್ಬರೂ ಒಂದೇ ತಂದೆ ತಾಯಿಗೆ ಹುಟ್ಟಿದ ಕುಡಿಗಳು. ಬಿಂದುವಿನಲ್ಲಿಯೇ ಇದ್ದ ತಂದೆಯನ್ನು ಬಿಂದುವಿನಲ್ಲಿಯೇ ಉದಯಿಸಿದ ಮಗನು ತಿಳಿಯಬೇಕು. ತಿಳಿದರೆ ತಂದೆ ತಾಯಿ ಬಂಧು ಬಳಗವೆಲ್ಲಾ ಆತನೇ. ಆತನಿಗಿಂತ ಮಿಗಿಲಾದ ತಂದೆ ತಾಯಿಗಳೇ ಇಲ್ಲ. ಬಂಧು ಬಳಗವೇ ಇಲ್ಲ.

ತನುವಿನಲ್ಲಿಯೇ ತನ್ಮಯವಾದ ಅರಿವಿನ ತಂದೆ ಕಣ್ಣಿನಲ್ಲಿದ್ದು ಸತ್ಯ ನೋಡುತ್ತಾನೆ. ಕಿವಿಯಲ್ಲಿದ್ದು ಸತ್ಯ ಕೇಳುತ್ತಾನೆ. ಚರ್ಮದಲ್ಲಿದ್ದು ಸತ್ಯ ಸ್ಪರ್ಶಿಸುತ್ತಾನೆ. ನಾಲಿಗೆಯಲ್ಲಿದ್ದು ಸತ್ಯ ರುಚಿಸುತ್ತಾನೆ. ಮೂಗಿನಲ್ಲಿದ್ದು ಸತ್ಯದ ಪರಿಮಳ ಸವಿಯುತ್ತಾನೆ. ಮಗನಿಗೂ ಸರ್ವ ಸತ್ಯದ ಊಟ ಮಾಡಿಸುತ್ತಾನೆ.

ಮನವೆಂಬ ಮಗನಿಗೆ ಸತ್ಯದ ಈ ನಿಜ ಪರಿಚಯವಿಲ್ಲದ ನಿಮಿತ್ತ ತಂದೆ ತಾಯಿಗೆ ಮಗುವಾಗಿದೆ. ತಾನೆ ತಂದೆ ತಾಯಿಯಾಗಿ ಮಗುವನ್ನು ಹೆತ್ತಿದೆ. ತಾತ, ಮುತ್ತಾತ, ಅಕ್ಕ, ತಮ್ಮ, ತಂಗಿ, ಅಣ್ಣ ಅತ್ತೆ ಮಾವ ಬಂಧು ಬಳಗವನ್ನು ಮಾಡಿಕೊಂಡಿದೆ. ಅರಿವಿನ ನಿಜ ತಂದೆಗೆ ಮಗನಾಗುವುದೇ ಮರೆತಿದೆ.

ಪಿಂಡಕ್ಕೆ ಜನ್ಮ ಕೊಟ್ಟ ತಂದೆ ತಾಯಿಗಳು ಆಪತ್ಕಾಲದಲ್ಲಿ ತನುವನ್ನು ರಕ್ಷಿಸಲು ಅರಿಯರು. ಉದಾ: ಕಣ್ಣಿನಲ್ಲಿದ್ದ ಮನವೆಂಬ ಮಗ ರೂಪ ನೋಡಿ ಹಾದರಕ್ಕೆಳೆಸುತ್ತಾನೆ. ಕೂಡಲೇ ತನು ಆಪತ್ಕಾಲಕ್ಕೆ ಒಳಗಾಗುತ್ತದೆ. ಅದನ್ನು ತಡೆಯಲು ಯಾರೂ ಅಡ್ಡಿ ಬರುವುದಿಲ್ಲ. ಆದರೆ ತನುವಿನಲ್ಲಿಯೇ ತನ್ಮಯವಾದ ಅರಿವಿನ ತಂದೆ ಮನವೆಂಬ ಮಗನ ಮೈದಡವಿ ರೂಪದಲ್ಲಿಯೇ ನಿರೂಪ ತೋರಿಸುತ್ತಾನೆ. ತನ್ನಂತೆಯೇ ಇರುವ ಚರ್ಮದೊಂದಿಗೆ ಚರ್ಮ ಭೋಗಿಸಬೇಕೆ ? ಈ ಭೋಗ ಯಾತಕ್ಕಾಗಿ ? ಅರಿವಿನ ಮತ್ತೊಂದು ತನುವಿನ ಜನ್ಮಕ್ಕೆ ಉಪಯೋಗವಾಗುವ ಮಿಲನ; ಕಾಮದ ರುಚಿಗಾಗಿ ಬಳಕೆಯಾಗಬೇಕೆ ? ಎಂದು ಪ್ರಶ್ನಿಸಿ ಮಗನಿಗೆ ಅರಿವುಂಟು ಮಾಡುತ್ತಾನೆ. ಅರಿವಿನ ತಂದೆಯ ಪರಿಚಯ ಮನವೆಂಬ ಮಗನಾದರೆ ಮಾತ್ರ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ತಂದೆಯ ಪರಿಚಯ ಮಗನಿಗೆ ತನುವಿರುವವರೆಗೆ ಸಾಧ್ಯವಾಗುವುದೇ ಇಲ್ಲ.

ಬಸವಣ್ಣನವರ ಈ ಸೂತ್ರದ ವಚನ ಅರ್ಥವಾಗದಿದ್ದರೆ ತನು ವ್ಯರ್ಥವಾಗಿ ವೇದಿಕೆಯಲ್ಲಿ ಬೊಗಳುತ್ತದೆ. ಒಂದಕ್ಕೊಂದು ಸಂಬಂಧವಿಲ್ಲದಂತೆ ಮಗನಿಗೆ ಪರಿಚಯವಾಗುವುದೇ ಇಲ್ಲ.

481

ಎನ್ನ ಆಪತ್ತು ಸುಖ-ದುಃಖ ನೀವೆ ಕಂಡಯ್ಯಾ ;

ಮತ್ತಾರೂ ಇಲ್ಲ ಹರ ಹರಾ, ನೀವೆ ಕಂಡಯ್ಯಾ.
ಎನ್ನ ಮಾತಾ ಪಿತನು ನೀನೆ ಕಂಡಯ್ಯಾ ,
ಕೂಡಲಸಂಗಮದೇವಾ.

ತನುವಿನಲ್ಲಿ ಐದು ಜ್ಞಾನದ ಬಾಗಿಲುಗಳಿವೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವೇ ಐದು ದ್ವಾರಗಳು. ಇವುಗಳಿಗೆ ಐದು ಅಜ್ಞಾನದ ಪೊರೆಗಳೂ ಆವರಿಸಿವೆ. ಕಣ್ಣು ಅಜ್ಞಾನದ ಪೊರೆಯಿಂದ ನೋಡಿ ತನುವಿಗೆ ಆಪತ್ತು ತಂದೊಡ್ಡುತ್ತದೆ.

ಸುಂದರವಾದ ರೂಪು ನೋಡಿ ಹಾದರದ ಆಪತ್ತಿಗೆ ಒಳಗಾಗುತ್ತದೆ. ಭೋಗಿಸುವುದಕ್ಕೆ ಸುಖದ ಕನಸು ಕಾಣುತ್ತದೆ ; ಕೂಡಲೇ ದುಃಖಕ್ಕೆ ಒಳಗಾಗಿ ತನುವಿಗೆ ಆಪತ್ತು ವಿಪತ್ತುಗಳ ಕಂಟಕವನ್ನೊಡ್ಡುತ್ತದೆ. ತನುವಿನ ಆಪತ್ತು ಸುಖ-ದುಃಖಗಳಿಗೆ ನೋಡುವ ಕಣ್ಣು , ಸ್ಪರ್ಶಿಸುವ ಚರ್ಮ, ಕೇಳುವ ಕಿವಿ, ರುಚಿಸುವ ನಾಲಿಗೆ, ಮೂಸಿಸುವ ಮೂಗೇ ಕಾರಣ. ತನುವಿನ ಈ ಐದೂ ಕೇಂದ್ರದಲ್ಲಿ ಜ್ಞಾನ ಭರಿತವಾಗಿದೆ. ಜ್ಞಾನದ ಬೆಳಕಿನ ನೆರಳೇ ಮನವಾಗಿದೆ. ಮನ ಜ್ಞಾನಕ್ಕೆಳಿಸಿದರೆ ಜ್ಞಾನದಿಂದ ನೋಡುತ್ತದೆ. ಮನ ನೇರವಾಗಿ ರೂಪು ನೋಡಿದರೆ ತನುವನ್ನು ಅಜ್ಞಾನದ ಹಾದರಕ್ಕೆಳಿಸಿ ತನುವಿಗೆ ಆಪತ್ತು, ಸುಖ-ದುಃಖಗಳನ್ನು ಉಂಟುಮಾಡುತ್ತದೆ.

ತನುವಿನ ಆಪತ್ತು ಸುಖ-ದುಃಖಕ್ಕೆ ತನುವಿಗೆ ಆವರಿಸಿದ ಅಜ್ಞಾನದ ಪೊರೆಯೇ ಕಾರಣ. ಅದು ಕೂಡಾ ತನಗೆ ತಿಳಿದು ತಡೆಯುವ ಶಕ್ತಿ, ಅನಾವರಣ ಮಾಡಿ ನೋಡುವ ಶಕ್ತಿ ಇದ್ದರೂ ಕೂಡಾ ಮನ ಬಳಕೆ ಮಾಡಿಕೊಳ್ಳುವುದಿಲ್ಲ. ಸುಖದತ್ತ ವಾಲಿ ದುಃಖವನ್ನು ಹೇರಿಕೊಳ್ಳುತ್ತದೆ. ತನುವಿಗೆ ಆಪತ್ತು ತಂದು ಹಾದರದ ಪಟ್ಟ ಕಟ್ಟುತ್ತದೆ.

ತನುವಿನಲ್ಲಿ ತನ್ಮಯವಾದ ಮಹಾಜ್ಞಾನಕ್ಕೆ ತನ್ನದೇ ಆದ ತನುವಿಗೆ ಒದಗುವ ಆಪತ್ಕಾಲವನ್ನು ತಡೆದು ನುಡಿದು ಹೇಳುವ ಶಕ್ತಿಯಿದೆ. ಅಜ್ಞಾನಿ ಮನಕ್ಕೆ ಕಿವಿಹಿಂಡಿ ಬುದ್ದಿ ಹೇಳಿ ತನ್ನಂತೆ ಮಾಡಿಕೊಳ್ಳುವ ಅಗಾಧವಾದ ಶಕ್ತಿಯಿದೆ. ಈ ಶಕ್ತಿಯೇ ಮನಕ್ಕೆ ಮಾತೆಯೂ ಹೌದು ಪಿತನೂ ಹೌದು.

ಮನವನ್ನು ಹಡೆದ ಮಾತಾಪಿತನಾದ ನೀನು ತನುವಿನಲ್ಲಿಯೇ ಇದ್ದು ಅವನನ್ನು ಅಜ್ಞಾನಿ ಕೆಲಸ ಮಾಡುವುದಕ್ಕೆ ಬಿಡುತ್ತಿರುವಿ ಎಂದ ಮೇಲೆ ತನುವಿನ ಸುಖ-ದುಃಖಗಳಿಗೆ ಆಪತ್ತು ವಿಪತ್ತುಗಳಿಗೆ ಕಾರಣನು ನೀನೆ ತಂದೆ.

ತನುವಿಗೆ ಆಪತ್ತು ತಂದೊಡ್ಡುವ ಮನ ಮಹಾದೇವನ ದರ್ಶನ ಪಡೆದು ಮಹಾದೇವನೇ ಆಗುವ ಸೂತ್ರದ ತಿರುಳನ್ನು ಮನಕ್ಕೆ ಅರಿವಾಗುವಂತೆ ಹೇಳಿದ್ದಾರೆ ಬಸವಣ್ಣ.

482

ಎನ್ನ ಜನ್ಮವ ತೊಡೆದ ನೀ ಧರ್ಮಿ,
ಎನ್ನ ಜನ್ಮವ ನತಿಗಳೆದ ಧರ್ಮಿ,
ಎನ್ನ ಭವಬಂಧನವ ನೀಕರಿಸಿದೆಯಾಗಿ,
ಶಿವನೆ ಗತಿಮತಿಯೆಂದು ನಂಬಿದೆನಯ್ಯಾ .

ಎನ್ನ ಅಷ್ಟಮದಂಗಳ ಸುಟ್ಟುರುಹಿದೆಯಾಗಿ,
ಕಟ್ಟುಗ್ರದಿಂದ ನಿಮ್ಮ ಶ್ರೀಚರಣವ ಕಂಡೆ.
ಸೃಷ್ಟಿ ಪ್ರತಿಪಾಲಕಾ, ನಿಮ್ಮ ನಂಬಿದೆ, ಕರುಣಿಸು,
ಕೂಡಲಸಂಗಮದೇವಾ.

ಕುಲಮದ, ಛಲಮದ, ಧನಮದ, ರೂಪಮದ, ಯೌವ್ವನ ಮದ, ವಿದ್ಯಾಮದ, ರಾಜ್ಯಮದ ಮತ್ತು ತಪಸ್ಸಿನ ಮದಗಳನ್ನು ತೊಡೆದುಹಾಕಿ ಧರ್ಮವನ್ನು ಮೆರೆದ ಧರ್ಮಿ ನೀನು. ತನುವಿನ ಜನ್ಮವನು ಅತಿಗಳೆದ ಧರ್ಮಿ ನೀನು. ಜನನ ಮರಣಗಳ ಬಾಧೆಯನೇ ದೂರೀಕರಿಸಿದ ತಂದೆ ನೀನು.

ಪಾತಾಳದಿಂದಲೂ ಅತ್ತತ್ತಲಿರುವ ನಿಮ್ಮ ಶ್ರೀಚರಣವನ್ನು ಎನಗೆ ಮಾತ್ರ ದಯಪಾಲಿಸಿದ ಕರುಣಿ ನೀನು.

ಸೃಷ್ಟಿ ಪ್ರತಿ ಪಾಲಕಾ, ನಿಮ್ಮ ನಂಬಿದೆ, ಕರುಣಿಸು, ಕೂಡಲಸಂಗಮ ದೇವಾ:

ಅರಿವಿನ ಬಿಂದುವಾಗಿ ಗರ್ಭ ಹೊಕ್ಕು ಅರಿವಿನ ತನುವಾಗಿ ಹೊರ ಬಂದೆ. ಜಲಬಿಂದುವಾಗಿ ನೆಲದ ಗರ್ಭ ಸೇರಿ ಹಸಿರು ಬನವಾಗಿ ಹೊರಬಂದೆ. ಜೀವಜಲವಾಗಿ ಪ್ರಾಣಿ ಪಶು ಪಕ್ಷಿ ಗಿಡಮರ ಬಳ್ಳಿಗಳನು ಸಲಹಿದೆ. ಜೀವ ಜಲವಿಲ್ಲದೆ ಏನೂ ಇಲ್ಲ. ಬಯಲಿಲ್ಲದ ಜೀವಜಲವಿಲ್ಲ.

ಬಯಲು ಮೊದಲೊ, ಜಲ ಮೊದಲೊ, ಜಲಜನಕ ಮೊದಲೊ, ಆಮ್ಲಜನಕ ಮೊದಲೊ? ಒಂದೂ ತಿಳಿಯದು. ತಿಳಿಯುವ ಅರಿವಿನೊಳಗೂ ತಿಳಿಜಲ ಬೆರೆತು, ಅದು ನೀವೇ ಎಂದು ನಂಬಿದೆ. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ, ನಿಮ್ಮ ದಾನವನುಂಡು ಬೆಳೆಯಿತೀ ಸೃಷ್ಟಿ. ಆ ಸೃಷ್ಟಿಯ ಪ್ರತಿಪಾಲಕ ನೀನು.

ಜಗದಗಲ, ಮುಗಿಲಗಲ, ಮಿಗೆಯಗಲ ಪಾತಾಳದಿಂದಲೂ ಅತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದಲೂ ಅತ್ತತ್ತ ನಿಮ್ಮ ಶ್ರೀಮುಕುಟ. ಅಗಮ್ಯನು ನೀನು, ಅಪ್ರತಿಮನು ನೀನು, ಅಗೋಚರನು ನೀನು. ಎನ್ನ ತನು(ಕರ) ಸ್ಥಲಕ್ಕೆ ಬಂದು ಚುಳುಕಾದೆಯಯ್ಯಾ ಕೂಡಲಸಂಗಮದೇವಾ. ಅಂಗವನ್ನು ಸೃಷ್ಟಿಸಿ, ಅಂಗದಲ್ಲಿಯೇ ಬಂದು ಸಂಗಮವಾಗಿ, ಅಂಗವೇ ಲಿಂಗಾಂಗವಾಗಿ ಸಂಗಮನಾಥನೇ ನೀನಾಗಿ ಅಂಗವನು ಕರುಣಿಸಿದ ತಂದೆ ನೀನು. ಅರಿವಿನ ಜನ್ಮ ನೀಡಿ ಭವ ಬಂಧನವ ತೊಡೆದ ಬಂಧು ನೀನು. ನೀನೇ ನಾನೆಂದು, ನಾನೇ ನೀನೆಂದು ನೀಕರಿಸು ತಂದೆ, ನೀ ಕರುಣಿಸು ತಂದೆ, ನಿಮ್ಮ ನಂಬಿದೆ ಎಂದು ಸಕಲರಿಗೂ ತಿಳಿಯುವಂತೆ ಹಾಡಿದ್ದಾರೆ ಬಸವಣ್ಣನವರು.

483

ಭವರೋಗ ವೈದ್ಯನೆಂದು ನಾ ನಿಮ್ಮ ಮರೆಹೊಕ್ಕೆ,
ಭಕ್ತಿದಾಯಕ ನೀ ಕರುಣಿಸು ಲಿಂಗತಂದೆ.
ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ
ಜಯ ಜಯ ಶ್ರೀ ಮಹಾದೇವೆನುತಿದ್ದಿ ತೆನ್ನ ಮನವು
ಕೂಡಲಸಂಗಮದೇವ ಶರಣೆಂದಿತ್ತೆನ್ನ ಮನವು.

ಕಣ್ಣು ಕಾಣದಿದ್ದರೆ, ಕಿವಿ ಕೇಳದಿದ್ದರೆ, ತನುವಿಗೆ ಕಾಯಿಲೆ ಬಂದರೆ ವೈದ್ಯನ ಹತ್ತಿರ ಹೋಗುತ್ತೇವೆ. ಇದು ಸಹಜ. ಮಿತ್ರನನ್ನು ಬಂಧುಗಳನ್ನು ನೋಡಿದರೆ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ಸಂತೋಷವಾಗುತ್ತದೆ. ಹಾಗೆ ವೈರಿಗಳನ್ನು ನೋಡಿದರೆ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ದುಃಖ ಸಿಟ್ಟು ರೋಷ ದ್ವೇಷಗಳುಂಟಾಗುತ್ತವೆ.

ಹಾಗೆಯೇ ಶಬ್ದ ಕೇಳಿದರೆ ಸುಖ ಇಲ್ಲ ದುಃಖ ಉಂಟಾಗುತ್ತದೆ. ದೃಶ್ಯ ಹಾಗೂ ಶಬ್ದದಿಂದ ಉಂಟಾದ ಏರು ಪೇರುಗಳನ್ನು ವೈದ್ಯನಿಗೆ ವಿವರಿಸಿದರೆ ಅದು ಅವರಿಗೆ ಅರ್ಥವಾಗುವುದಿಲ್ಲ. ಕಣ್ಣು ಕಿವಿ ಚೆನ್ನಾಗಿವೆ ಅಥವಾ ಇಲ್ಲವೆಂದು ನೋಡಬಲ್ಲರೆ ವಿನಹ ದೃಶ್ಯ ಶಬ್ದದಿಂದ ತನುವಿಗೆ ಉಂಟಾಗುವ ಜನನ ಮರಣಗಳ ಬಾಧೆ ಭವರೋಗದ ವೈದ್ಯನಿಗೆ ಮಾತ್ರ ಅರ್ಥವಾಗುತ್ತದೆ.

ಭವರೋಗದ ವೈದ್ಯರು ಇಬ್ಬರು. ಒಬ್ಬ ಹೊರಗಿದ್ದಾನೆ. ಮತ್ತೊಬ್ಬ ವೈದ್ಯ ತನುವಿನಲ್ಲಿಯೇ ತನ್ಮಯವಾಗಿದ್ದಾನೆ. ಹೊರಗಿನ ವೈದ್ಯನು ಒಳಗಿನ ವೈದ್ಯ ಹೀಗಿದ್ದಾನೆಂದು ವಿವರಿಸಿ ಮನಕ್ಕೆ ಪಾಠ ಮಾಡುತ್ತಾನೆ. ಮನ ಒಳಗಿನ ಭವರೋಗದ ವೈದ್ಯನನ್ನು ತಿಳಿಯಲು ಹೊರಗಿನ ಭವರೋಗದ ವೈದ್ಯನಿಗೆ ಮೊರೆಹೋಗಲೇ ಬೇಕು. ಒಳಗಿನ ವೈದ್ಯನನ್ನು ತಿಳಿದ ಮೇಲೆ ಮನ ಆ ವೈದ್ಯನಿಗೆ ಭಕ್ತನಾಗಿ ಶಾಶ್ವತವಾಗಿ ಮೊರೆಹೋಗಬೇಕು. ಏಕೆಂದರೆ ಆತ ಭಕ್ತಿ ಪ್ರಿಯ. ಜಯ ಜಯ ಶ್ರೀ ಮಹಾದೇವ ಜಯ ಜಯ ಶ್ರೀ ಮಹಾದೇವ ಜಯ ಜಯ ಶ್ರೀ ಮಹಾದೇವ ಎನ್ನುತ್ತ ಮನ ಮಹಾದೇವನನ್ನೇ ಜಪಿಸಬೇಕು.

ತನುವಿನಲ್ಲಿ ತನ್ಮಯವಾದ ಅರಿವೇ ಗುರು ; ಆ ಗುರುದೇವನೇ ಸಾಕ್ಷಾತ್ ಪರಬ್ರಹ್ಮ. ಆತ ತನುವಿನಲ್ಲಿಯೇ ಸಂಗಮವಾದ ಸಂಗಮನಾಥ. ಆತನಿಗೆ ಮನ ಶರಣೆನ್ನುತ್ತಾ ಮೊರೆಹೋಗಬೇಕು. ಆಗ ಅಂಗದಲ್ಲಿಯೇ ಬೆರೆತ ಲಿಂಗತಂದೆ ಮನವೆಂಬ ಭಕ್ತನನ್ನು ಕರುಣೆಯಿಂದ ಎತ್ತಿಕೊಂಡು ತನ್ನಂತೆ ಮಾಡಿಕೊಳ್ಳುತ್ತಾನೆ.

ಭಕ್ತನ ಶರಣಸ್ಥಲ

484

ಅಂಗಯ್ಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ ?
ನೋಟವೆ ಪ್ರಾಣವಾಗಿ ಎಂದಿಪ್ಪೆನೊ ?
ಕೂಟವೆ ಪ್ರಾಣವಾಗಿ ಎಂದಿಪ್ಪೆನೊ ?
ಎನ್ನ ಅಂಗವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗವೆನ್ನುತ್ತ.

ಅಂಗದ ಮೇಲಿದ್ದ ಲಿಂಗವದು ಕಪ್ಪು ಮೊಟ್ಟೆ . ಅದರೊಳಗೊಂದು ಬಿಳಿಯ ಬೆಳಕಿನ ಜ್ಞಾನದ ಮರಿ ಇದೆ. ಕಪ್ಪು ಮೊಟ್ಟೆಗೂ ಮರಿಗೂ ಅವಿನಾಭಾವ ಸಂಬಂಧ. ಈ ಸಂಬಂಧ ನೋಡಲು ಬರುತ್ತದೆ. ತಿಳಿದರೆ ಆನಂದಿಸಿ ಎದೆಯ ಮೇಲಿದ್ದ ಕಪ್ಪು ಮೊಟ್ಟೆಯನು ಸರಿಸಿ, ಅಂಗದ ಅಂಗಯ್ಯೊಳಗಣ ಲಿಂಗವನು ನೋಡಲು ಬರುತ್ತದೆ.

ಅಂಗೈ ಎಂದರೆ ಕೈ ಅಲ್ಲ ; ಅಂಗದ ಐದು ಭಾಗಗಳೇ ಅಂಗೈ ! ಅಂಗದ ಒಂದು ಭಾಗ ಸದ್ಯೋಜಾತ ಲಿಂಗ ; ಬಿಳಿ ಆವರಣದ ಸುತ್ತಲಿರುವ ಕಪ್ಪು ಆಲಿಯ ಕಣ್ಣುಗಳು ! ಎರಡನೇಯ ಭಾಗ ಕೆಂಪಗೆ ಕುಂಕುಮದಂತೆ ಹೊಳೆಯುವ ಎರಡು ಕಿವಿಗಳು ; ವಾಮದೇವ ಲಿಂಗ ಎಂದು ಹೆಸರು ಪಡೆದಿವೆ. ಮೂರನೇಯ ಭಾಗ ಮೂಗು ಅಘೋರ ಲಿಂಗವೆಂದು ಹೆಸರು ಪಡೆದು ಅರಿವಿನ ಪರಿಮಳವನ್ನು ಹೀರುತ್ತದೆ. ನಾಲ್ಕನೆಯ ಭಾಗ ಚರ್ಮ ತತ್ಪುರುಷ ಲಿಂಗವೆಂದು ಹೆಸರು ಪಡೆದಿದೆ ; ಸ್ಪರ್ಶ ಜ್ಞಾನವನ್ನು ಹೊಂದಿದೆ. ಐದನೆಯ ಭಾಗ ನಾಲಿಗೆ ; ರುಚಿಸುವ ನುಡಿಯುವ ಜ್ಞಾನವನ್ನು ಹೊಂದಿ ಈಶಾನ ಲಿಂಗವೆಂದು ಹೆಸರು ಪಡೆದಿದೆ. ನುಡಿಯಲ್ಲದ ನುಡಿಯನ್ನು ನುಡಿದು ಸ್ಫಟಿಕದಂತೆ ಹೊಳೆಯುತ್ತದೆ. ಇವುಗಳನ್ನು ಪಂಚ ಬ್ರಹ್ಮವೆಂದೂ ಕರೆಯುತ್ತಾರೆ. ಇವುಗಳಿಗೆ ಭ್ರಮೆಯ ಪೊರೆ ಆವರಿಸಿರುವುದರಿಂದ ಪಾಷಾಣವೆಂಬ ಕೇರು ತೆಗೆದುಕೊಂಡು, ಹದಮಾಡಿ, ಅದರೊಳಗೆ ಬಿಳಿಯ ಪಾಣಿವಾಟವಿಟ್ಟು, ಲಿಂಗವೆಂದು ಹೆಸರಿಟ್ಟು ಕರೆದು, ಅಂಗೈ ಒಳಗೆ ಇಟ್ಟುಕೊಂಡು ಪೂಜಿಸಿ ಅಂಗದ ಮೇಲೆ ಧರಿಸುವ ರೂಢಿಯನ್ನು ಭ್ರಮೆಯೆಂಬ ಮನ ರೂಢಿಸಿಕೊಂಡಿದೆ.

ಎಷ್ಟು ಬಾರಿ ನೀರು ಎರೆದರೂ, ಹೂ ಪತ್ರೆ ಕೊಯ್ದು ಧರಿಸಿ ಪೂಜಿಸಿದರೂ ಅದು ಮಾತನಾಡುವುದಿಲ್ಲ. ನೋಡಿ ಕಂಗಳು ಸವೆಯುತ್ತವೆ ; ಅಂಗವಿಕಾರ ಅಳಿಯುವುದಿಲ್ಲ. ಪ್ರಾಣ ಪಕ್ಷಿ ಹಾರಿಹೋಗುತ್ತದೆ. ಅಂಗದ ಐದು ಭಾಗಗಳಲ್ಲಿ ಸಂಗಮವಾದ ಅರಿವಿನ ಲಿಂಗಯ್ಯ ಒಲಿಯುವುದಿಲ್ಲ.

ಕಣ್ಣಿನಲ್ಲಿ ಅರಿವಿನಿಂದ ನೋಡುವ ಶಕ್ತಿಯಿದ್ದರೂ ನೋಡಬಾರದ್ದನ್ನು ನೋಡಿ ಅಂಗವನ್ನು ಮನ ಭಂಗಪಡಿಸಿ ಮಂಗನನ್ನಾಗಿ ಮಾಡುತ್ತದೆ. ಅಂಗಯ್ಯೊಳಗಣ ಲಿಂಗ ಮನಕ್ಕೆ ಕಾಣುವುದೇ ಇಲ್ಲ. ಅಂಗ ಲಿಂಗಾಂಗವಾಗುವುದೇ ಇಲ್ಲ. ಕಣ್ಣೊಳಗಿದ್ದ ಲಿಂಗವನ್ನು ಕಣ್ಣನ್ನೇ ಆವರಿಸಿದ ಮನ ನೋಡುತ್ತ ಮನದ ಕಣ್ಣುಗಳ ಕಡೆಗೋಡೆಯೊಡೆದು ಸುರಿಯುತ್ತಾ ಎಂದಿಪ್ಪೆನೊ ಎಂದು ಪರಿತಪಿಸಬೇಕು.

ಮನದ ನೋಟವೇ ಪ್ರಾಣವಾಗಿ ಎಂದಿಪ್ಪೆನೊ ಎಂದು ಪರಿತಪಿಸಬೇಕು. ಮನದ ಕೂಟವೇ ಪ್ರಾಣವಾಗಿ ಎಂದಿಪ್ಪೆನೊ ಎಂದು ಮನ ಪರಿತಪಿಸಬೇಕು. ನೋಡಿ, ಕೇಳಿ, ಮೂಸಿಸಿ, ರುಚಿಸಿ, ಸ್ಪರ್ಶಿಸಿ ಅಂಗವನ್ನೇ ವಿಕೃತಗೊಳಿಸುವ ಮನ ಭ್ರಮೆಯ ಸಂಗವಳಿದು ಅಂಗದಲ್ಲಿರುವ ಸಂಗಯ್ಯನನ್ನೇ ಆಲಿಂಗಿಸಿಕೊಂಡು ಅವನನ್ನೇ ಲಿಂಗವೆನ್ನುತ್ತಾ ಆಡಿ ಹಾಡಿ ಕುಣಿ ಕುಣಿದಾಡಬೇಕು.

485

ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ
ನಾಲಗೆ ನಲಿ ನಲಿದೋಲಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯಾ ,
ಎನಗೆನ್ನ ತಂದೆ !
ಬಿರಿಮುಗುಳಂದದಿ ಎನ್ನ ಹೃದಯ
ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ,
ಕೂಡಲಸಂಗಮದೇವಾ.

ಬೀಜ ನೆಲಕ್ಕೆ ಬಿದ್ದು, ಸಿಪ್ಪೆಯನ್ನು ಎಸೆದು ಅಂಕುರದೊಂದಿಗೆ ಹೊರಬಂದು ; ಬೇರು ಕಾಂಡ ಎಲೆ ಎಸಳಾಗಿ ಮೊಗ್ಗಾಗಿ ಅರಳಿ ಸುಗಂಧದ ಪರಿಮಳ ಬೀರಬೇಕಾದರೆ ತನ್ನದೇ ಆದ ಕಾಲ ಬೇಕಾಗುತ್ತದೆ. ಮೊಗ್ಗರಳಿ ಪರಿಮಳ ಬಂದೇ ಬರುತ್ತದೆ.

ಪರಿಮಳವು ಬೀಜದೊಳಗೆ, ಸಿಪ್ಪೆಯೊಳಗೆ, ಬೇರು, ಕಾಂಡ, ಎಲೆ, ಎಸಳೊಳಗೆ ಹಾಗೂ ಮೊಗ್ಗಿನೊಳಗೆ ಭರಿತವಾಗಿತ್ತು ; ಹೂವಾದ ಮೇಲೆ ಪರಿಮಳ ಹೊರ ಸೂಸುತ್ತದೆ. ಆದರೆ ಮನುಷ್ಯ ಹಾಗಲ್ಲ ತನುವಿನಲ್ಲಿಯೇ ತನ್ಮಯವಾದ ಅರಿವಿನ ಪರಿಮಳ ಹೊರ ಸೂಸುವುದೇ ಇಲ್ಲ.

ಎದೆ ಬಿರಿವನ್ನಕ್ಕ, ಮನದಣಿವನ್ನಕ್ಕ ನಾಲಗೆ ನಲಿ ನಲಿದೋಲಾಡುವನ್ನಕ್ಕ ಸದ್ಗುರುವನ್ನು ನೆನೆಯಲೇ ಬೇಕು. ಮನಕ್ಕೆ, ಅರಿವಿನ ಪರಿಮಳವನ್ನು ಬೀರುತ್ತೇನೆ ಎನ್ನುವ ಬಯಕೆಯಾಗಬೇಕು.

ಶ್ರೀ ಗುರುವಿನ ಚರಣದ ಮೇಲೆ ಬಿದ್ದರೆ ಮಾತ್ರ ಮನದ ಹೃದಯ ಬಿರಿಮುಗಳಂದದಿ ಅರಳಿ ಅರಿವಿನ ಪರಿಮಳ ಬೀರುತ್ತದೆ. ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಂತೆ ಪುಷ್ಪ ಪರಿಮಳದ ಸಂಗ ಮಾಡಿ ಪುಷ್ಪದೊಂದಿಗೆ ಬಂಧಿಯಾದಂತೆ ಮನ ಬಂಧಿಯಾಗುತ್ತದೆ.

486

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು,
ಹಾಡಿ ನಾಲಗೆ ದಣಿಯದು-ಇನ್ನೇವೆ ಇನ್ನೇವೆ ?
ನಾ ನಿಮ್ಮ ಕೈಯಾರೆ ಪೂಜಿಸಿ ಮನ ದಣಿಯಲೊಲ್ಲದಿನ್ನೇವೆನಿನ್ನೇವೆ ?
ಕೂಡಲಸಂಗಮದೇವಾ ಕೇಳಯ್ಯಾ,
ನಿಮ್ಮುದರವ ಬಗಿದಾನು ಹೊಗುವ ಭರವೆನಗೆ.

ಮನುಷ್ಯ ಜನ್ಮ ಶ್ರೇಷ್ಠ ; ಅದನ್ನು ವ್ಯರ್ಥ ಕಳೆದುಕೊಳ್ಳುವುದು ಉಚಿತವಲ್ಲ. ಮನ ಬಂದಲ್ಲಿಗೆ ಕಾಲು ನಡೆಯುತ್ತವೆ. ಮನ ನೋಡಿದ ವಸ್ತುಗಳಿಗಾಗಿ ಕಣ್ಣು ದಣಿಯುತ್ತವೆ. ಮನಕ್ಕೆ ಹಿತವಾದದ್ದನ್ನು ಹಾಡಿ ಉಂಡು ನಾಲಗೆ ದಣಿಯುತ್ತದೆ. ಇಡೀ ತನು ಮನ ಬಂದತ್ತ ವಾಲಿ ದಣಿದು ದಣಿದು ಮುಪ್ಪುರಿಗೊಂಡು ಒಮ್ಮೆ ಸಾಯುತ್ತದೆ. ಆದರೆ ಯಾತಕ್ಕಾಗಿ ನಡೆದೆ, ಕುಣಿದೆ ಎಂದು ಕಾಲು ಪ್ರಶ್ನಿಸಿಕೊಳ್ಳುವುದಿಲ್ಲ. ಏನು ನೋಡುತ್ತೇನೆ ? ನೋಡುವ ನೋಟದಲ್ಲಿ ಇಡೀ ತನುವನ್ನು ಮರುಳು ಮಾಡುವ ವಸ್ತು ಯಾವುದು ? ಅದು ನೋಟಕ್ಕಿಂತ ದೊಡ್ಡದೋ ? ಅದಕ್ಕೆ ಮರುಳಾಗಬೇಕೆ ಎನ್ನುವ ಪ್ರಶ್ನೆ ಹಾಕಿಕೊಳ್ಳದೆ ಕಣ್ಣಿನ ನರಗಳು ದುರ್ಬಲಗೊಳ್ಳುತ್ತವೆ. ನೋಡಿ ನೋಡಿ ಒಮ್ಮೆ ನೋಡಲು ಬಾರದಂತಾಗುತ್ತದೆ.

ನಾಲಗೆ ತನ್ನ ಸ್ವಾರ್ಥಕ್ಕಾಗಿ ಹಾಡಿ, ರುಚಿಸಿ ತನುವಿಗೆ ಕೆಟ್ಟ ಹಣೆಪಟ್ಟಿ ಕಟ್ಟುತ್ತದೆ. ಹೊಗಳುವಿಕೆ ತೆಗಳುವಿಕೆಯಲ್ಲಿ ಏನಿದೆ ಎಂದು ಪ್ರಶ್ನಿಸಿಕೊಳ್ಳುವ ಶಕ್ತಿ ನಾಲಿಗೆಯಲ್ಲಿಯೆ ಹುದುಗಿದೆ. ಕಣ್ಣು, ನಾಲಗೆ, ಕುಣಿಯುವ ಕಾಲುಗಳಲ್ಲಿ ಅರಿವಿನ ಮಹಾದೇವನೇ ತನ್ಮಯವಾಗಿದ್ದಾನೆ.

ಮನ ವ್ಯರ್ಥವಾಗಿ ತನುವನ್ನು ದಣಿಸದೆ ಅರಿವೆಂಬ ಗುರುದೇವನನ್ನು ಕೈಯಾರೆ ಪೂಜಿಸಬೇಕು. ಹೊರಗಿನ ಪೂಜೆಗಾಗಿ ದಣಿಯದೆ ಅದನ್ನು ಪ್ರಶ್ನಿಸಿಕೊಂಡು ಅರಿವಿನಿಂದ ಹೊರ ಪೂಜೆ ನೋಡಿದಾಗ ಮನಕ್ಕೆ ಉತ್ತರ ಸಿಗುತ್ತದೆ.

ಮನ ಭಕ್ತನಾದರೆ ; ನೋಡುವ ವಸ್ತುವನ್ನು ನೇರವಾಗಿ ನೋಡದೆ, ಕಣ್ಣಿನ ಗರ್ಭಕ್ಕೆ ಜಾರಿ ; ಅರಿವಿನ ಕಣ್ಣಿನಿಂದ ನೋಡುತ್ತದೆ. ಆಗ ವಸ್ತುವನ್ನು ಮುಟ್ಟದೆ ಮನ ಅರಿವನ್ನು

ಮುಟ್ಟಿ, ಅರಿವನ್ನು ಪೂಜಿಸುತ್ತದೆ. ಮನ ಅರಿವನ್ನು ನೋಡಿ, ಅರಿವಿನಿಂದಲೇ ವಸ್ತುವನ್ನು ನೋಡಿ ಬೇಕೆಂದು ಬೇಡದೆ ಅರಿವಿಗಾಗಿ ದಣಿದು ಆನಂದ ಪಡುತ್ತದೆ.

ಅಜ್ಞಾನಿ ಮನ ಅರಿವಿನ ತನುವನ್ನೇ ಮೋಸ ಮಾಡುತ್ತದೆ. ವಸ್ತುವಿನಲ್ಲಿ ಮೋಹ ಹುಟ್ಟಿಸುತ್ತದೆ. ಕಲ್ಲಿನ ಮೂರ್ತಿಯಲ್ಲಿ ಭಕ್ತಿ ಹುಟ್ಟಿಸುತ್ತದೆ. ಆಡಿ ಕಾಲು ದಣಿಯುತ್ತವೆ. ನೋಡಿ ಕಣ್ಣು ದಣಿಯುತ್ತವೆ. ಮನ ವಸ್ತುವಿಗೆ ಬಲಿಯಾಗಿ ; ತನು ಮನಕ್ಕೆ ಬಲಿಯಾಗುತ್ತದೆ. . ಇವೆರಡೂ ಒಂದನ್ನು ಒಂದು ಅರಿಯದೆ ದಣಿ ದಣಿದು ಬಲಿಯಾದವು. ಆದರೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ದರ್ಶನವಾಗುವುದಿಲ್ಲ.

ಮೋಹಕ್ಕೆ ಬಲಿಯಾಗಿ, ತನುವನ್ನು ಆವರಿಸಿದ ಮನ, ಒಮ್ಮೆ ತನುವಿನ ಉದರವನ್ನೆ ಬಗಿದು ನೋಡಿದಾಗ ಆ ನೋಟದ ಬೆಳಕಿನಿಂದ ವಸ್ತುವಿನ ಸತ್ಯ ಗೊತ್ತಾಗುತ್ತದೆ. ಆಗ ಆಡಲಿಲ್ಲ, ಹಾಡಲಿಲ್ಲ, ಕುಣಿಯಲಿಲ್ಲ, ನೋಡಲಿಲ್ಲ. ವಸ್ತುವಿನ ಸತ್ಯ ತೋರಿದ ಉದರವನ್ನೇ ಬಗಿದು ಆ ಸತ್ಯವನ್ನೇ ನೋಡಿ ನೋಡಿ ಕಣ್ಣು ದಣಿಯಿತು. ಆಡಿ ಕಾಲು ದಣಿದವು. ಹಾಡಿ ನಾಲಗೆ ದಣಿಯಿತು. ಪೂಜಿಸಿ ಪೂಜಿಸಿ ಮನ ದಣಿದು ಅರಿವಿನ ಮಹಾದೇವನೇ ತಾನಾಯಿತು.

487

ಕಾಯಸಂಗ ನಿಸ್ಸಂಗವಾಗಿ ಇನ್ನಾವ ಸಂಗವನರಿಯೆನಯ್ಯಾ.
ಮಿಗೆ ಒಲಿದೆನಾಗಿ ಅಗಲಲಾರೆ.
ನಗೆ ಮೊಗದರಸ, ಅವಧಾರು.
ಕೂಡಲಸಂಗಮದೇವಾ,
ಬಗಿದು ಹೊಗುವೆನು ನಾ ನಿಮ್ಮ ಮನವನು.

ಮನದ ರುಚಿಗಾಗಿ ಕಾಯವನ್ನು ಕಾಯದೊಂದಿಗೆ ಸಂಗ ಮಾಡಲು ಹಚ್ಚುತ್ತದೆ. ಕಾಯವನ್ನು ಮಣ್ಣಿನೊಂದಿಗೆ ಸಂಗ ಮಾಡಲು ಹಚ್ಚುತ್ತದೆ. ಕಾಯವನ್ನು ಹೊನ್ನಿನೊಂದಿಗೆ ಸಂಗ ಮಾಡಲು ಹಚ್ಚುತ್ತದೆ. ಮನ ಕಾಯವನ್ನು ಮುತ್ತು ಮಾಣಿಕ್ಯ ಸ್ಫಟಿಕ ವಜ್ರದೊಂದಿಗೆ ಸಂಗ ಮಾಡಲು ಹಚ್ಚುತ್ತದೆ. ಮನ ಕಾಯವನ್ನು ಅಧಿಕಾರ, ಪದವಿ, ರಾಜಕೀಯದೊಂದಿಗೆ ಸಂಗ ಮಾಡಲು ಹಚ್ಚುತ್ತದೆ.

ಕಾಯವನ್ನು ಆವರಿಸಿದ ಮನ ಅರಿವಿನೊಂದಿಗೆ ಸಂಗ ಮಾಡಿದರೆ ನಿಸ್ಸಂಗವಾಗುತ್ತದೆ. ಮನ ಸಂಗ ಮಾಡಿದ ವಸ್ತುಗಳನ್ನೆಲ್ಲ ಅರಿವಿನಿಂದ ನೋಡಿದಾಗ ; ಕಾಯ ಅರಿವಿನೊಂದಿಗೆ ಸಂಗವಾಗಿ ವಸ್ತುಗಳ ಸಂಗದಿಂದ ಬೇರ್ಪಡುತ್ತದೆ. ಮನ ಸಂಗ ಮಾಡಿದ ವಸ್ತುಗಳೆಲ್ಲ ನಿಜಕಣ್ಣಿಗೆ ತೃಣವಾಗಿ ತೋರುತ್ತವೆ. ಆಗ ಮನ ಇನ್ನಾವ ಸಂಗವನರಿಯದೆ ಅರಿವೆಂಬ ಗುರುದೇವನಿಗೆ ಮಿಗೆ ಮಿಗೆ ಮೀಸಲಾಗಿ ಒಲಿದು ಅಗಲುವುದಿಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಯ್ಯ ನಗೆಮೊಗದರಸ! ಮನದ ಚಿತ್ತವನ್ನು ತನ್ನತ್ತ ಮಾಡಿಕೊಂಡ ; ಮನ ಕಾಯದ ಒಳಗೆ ಬಗಿದು ಹೊಗುವಂತೆ ಆಶೀರ್ವದಿಸಿದ ಕರುಣಾಮಯಿ. ಮನವನ್ನು ಘನಮನವನ್ನಾಗಿಸಿದ ನಿಸ್ಸೀಮ. ಜ್ಞಾನದ ಸಂಗ ಮಾಡಿ, ಅಜ್ಞಾನದ

ಸಂಗವನು ಅರಿಯದಂತೆ ಮಾಡಿದ ನಗೆಮೊಗದರಸನನ್ನು ಇನ್ನು ಅಗಲಲಾರೆ ಎಂದು ಮನ ಹಾಡುವ ಸೂತ್ರವನ್ನು ಅಣ್ಣನವರು ಓದುಗರಿಗೆ ಕರುಣಿಸಿದ್ದಾರೆ.

488

ನೋಡಿ ನೋಡಿ ಲಿಂಗ ಧ್ಯಾನವೆನ್ನ ಮನ.
ರಾಗರಂಜನೆಯ ಉತ್ಪತ್ತಿ ಸ್ಥಿತಿಲಯ ನಿನಗೆಂದಾದುವು.
ರಾಜರಂಜನೆಯ ಪೂಜೆ ಎನ್ನ ಮನ!
ಕೂಡಲಸಂಗಮದೇವಾ, ಆಹಾ, ಎನ್ನಮನ !

ಲಿಂಗ ಬಿಂದುವಿನ ಬೆಳಕಿನ ನೆರಳೇ ಮನ. ಲಿಂಗದ ಬೆಳಕು ಮನವೆಂಬ ನೆರಳನ್ನು ಸೃಷ್ಟಿಸಿತು. ಇವೆರಡರಿಂದ ಸೃಷ್ಟಿಯಾದದ್ದೇ ಅಂಗ. ನೆರಳಿಗೆ ಅಸ್ಥಿತ್ವವಿಲ್ಲ ; ಲಿಂಗವೇ ಅಂಗವಾಗಿ, ಲಿಂಗಾಂಗವಾಗಿರುವಾಗ ಮನಕ್ಕೆ ರಾಗರಂಜನೆಯ ಉತ್ಪತ್ತಿ ಸ್ಥಿತಿ ಲಯಗಳು ಹೇಗೆ ಉಂಟಾದವು.

ಎಂದು ಬೆಳಕು ಹುಟ್ಟಿದೆಯೋ ಅಂದೇ ನೆರಳು ಹುಟ್ಟಿದೆ. ಬೆಳಕಿನ ಕುಡಿಯೇ ನೆರಳು ಆಗಿರುವಾಗ ನೆರಳು ಬೆಳಕಿನಿಂದಲೇ ಬದುಕಿದೆ. ಬೆಳಕಿಗೆ ಸಾವಿಲ್ಲವೆಂದಮೇಲೆ ನೆರಳಿಗೂ ಸಾವಿಲ್ಲ. ಬೆಳಕನ್ನು ನೋಡಿ ನೋಡಿ ನೆರಳು ಬೆಳಕಿನ ಧ್ಯಾನದಲ್ಲಿ ಮಗ್ನವಾದಾಗ ಅದಕ್ಕೆ ಉತ್ಪತ್ತಿಯಿಲ್ಲ, ಸ್ಥಿತಿ ಇಲ್ಲ, ಲಯವೂ ಇಲ್ಲ.

ಆದರೆ ಮನವೆಂಬ ನೆರಳು ಬೆಳಕಿನ ತನುವಿಗೆ ಆವರಿಸಿದ ತನುವನ್ನು ಸಾವು ನೋವುಗಳಿಗೆ ಈಡು ಮಾಡಿದೆ. ಉತ್ಪತ್ತಿ ಸ್ಥಿತಿ ಲಯಗಳನ್ನು ಸೃಷ್ಟಿಮಾಡಿದೆ. ಜನನ ಮರಣಗಳ ಬಾಧೆಗೆ ಅಂಜಿ ರಾಗರಂಜನೆಯ ಪೂಜೆಗಳನ್ನು ಸೃಷ್ಟಿಮಾಡಿದೆ. ಆಹಾ, ಮನದ ಆಟ ಅಷ್ಟಿಷ್ಟಲ್ಲ.

ನೋಡಿ ನೋಡಿ ಲಿಂಗಧ್ಯಾನದಲ್ಲಿ ಮನ ಮಗ್ನವಾಗಿ ಘನಮನವಾಗ ಬೇಕಾದ ಮನಕ್ಕೆ ರಂಜನೆಯ ಭ್ರಮೆ ಸೃಷ್ಟಿಯಾಗಿದೆ. ಇಲ್ಲದ ವಸ್ತುಗಳಿಗೆ ಹೌದೆಂದು ಬಣ್ಣ ಕಟ್ಟಿದೆ. ಇಲ್ಲದ ಸಾವು ನೋವುಗಳಿಗೆ ರಂಜನೆಯ ಮೆರಗು ಕೊಟ್ಟಿದೆ.

ನೋಡಿದರೆ ಬೆಳಕಿನ ಬಿಂದು, ಬೆಳಕಿನ ಲಿಂಗ, ಬೆಳಕಿನ ಅಂಗ. ಬೆಳಕಿನ ಬಿಂದುವಿನ ನೆರಳೇ ಮನ. ಬೆಳಕಿನ ಧ್ಯಾನ ಮಾಡಿ ಮಾಡಿ, ನೋಡಿ ನೋಡಿ ನೆರಳು ಕಾಲಕಳೆಯ ಬೇಕಾದುದು ಅದರ ಧರ್ಮವಾಗಬೇಕು. ಮನ ಅಲ್ಲಿಯೇ ಮಗ್ನವಾಗಿ ಘನಮನವಾಗ ಬೇಕು ಎನ್ನುವುದೆ ಅಣ್ಣನವರ ಆಶಯ.

489

ವಾರವೆಂದರಿಯೆ, ದಿನವೆಂದರಿಯೆ,
ಏನೆಂದರಿಯೆನಯ್ಯಾ ;
ಇರುಳೆಂದರಿಯೆ, ಹಗಲೆಂದರಿಯೆ,
ಏನೆಂದರಿಯೆನಯ್ಯಾ ;
ನಿಮ್ಮುವ ಪೂಜಿಸಿ ಎನ್ನುವ ಮರೆದೆ,
ಕೂಡಲಸಂಗಮದೇವಾ.

ಬೆಳಕಿನ ಆಟದಿಂದಲೇ ಹಗಲು ರಾತ್ರಿಗಳು. ವಾರ ತಿಂಗಳು ವರ್ಷ ಸಂವತ್ಸರಗಳು. ಮನ, ದಿನ ವಾರ ತಿಂಗಳು ಸಂವತ್ಸರಗಳನು ಎಣಿಕೆ ಮಾಡಿದರೇನು ? ಯಾವುದೇ ಬದಲಾವಣೆಗಳಿಲ್ಲ. ತನ್ನ ಭ್ರಮೆಯಿಂದಾಗಿ ಹಗಲಿರುಳು ವಾರ ದಿನ ಎಂದು ಕಲ್ಪಿಸಿಕೊಂಡಿದೆ.

ನಿಮ್ಮುವ ಪೂಜಿಸಿ ಎನ್ನುವ ಮರೆದೆ ಕೂಡಲಸಂಗಮದೇವಾ :

ಅರಿವಿನಿಂದ ನೋಡಿದರೆ ಸಹಜವಾಗಿರಬಹುದು. ಆದರೆ ಸಾಧ್ಯವಾಗುವುದಿಲ್ಲ. ಮನ ಭ್ರಮೆಗೆ ಒಳಪಟ್ಟು ಶಾಸ್ತ್ರ ಪುರಾಣ ಪಂಚಾಂಗಗಳನ್ನು ರಚನೆ ಮಾಡಿಕೊಂಡಿದೆ. ಲೆಕ್ಕಪತ್ರಗಳನ್ನು ಸಿದ್ಧ ಪಡಿಸಿಕೊಂಡಿದೆ. ಹೀಗಾಗಿ ಅವುಗಳನ್ನು ದಾಟಿ ಹೋಗಲು, ಅವುಗಳನ್ನು ರಚಿಸಿದ ತನಗೆ ಸಾಧ್ಯವಾಗುವುದೇ ಇಲ್ಲ. ಪ್ರಬಲವಾದ ಅರಿವು ಮನಕ್ಕೆ ಒಲಿತಾಗ ಮಾತ್ರ ಸಾಧ್ಯವಾಗುತ್ತದೆ.

ಕಲ್ಲು ತಂದು ಅದನ್ನು ಕೆತ್ತಿ ದೇವರೆಂದು ಆರಾಧಿಸುವ ಮನಕ್ಕೆ ಅರಿವನ್ನೇ ದೇವರೆಂದು ಪೂಜಿಸಲು ಸಾಧ್ಯವಾಗಬೇಕಲ್ಲ. ಇದು ಬಲು ಜಟಿಲ ! ಅರಿವೇ ಗುರು. ಗುರುದೇವನೇ ಮಹಾದೇವ-ಸದಾಶಿವ-ಸಾಕ್ಷಾತ್ ಪರಬ್ರಹ್ಮನೇ ಆಗಿರುವುದು ಮನಕ್ಕೆ ಹೊಳೆದರೆ ಕಲ್ಲು ದೇವರನ್ನು ಕಲ್ಲೆಂದು ತಿಳಿದು ; ಹಾಗೆ ತಿಳಿಯಲು ನೆರವಾದ ಅರಿವನ್ನೇ ದೇವರೆಂದು ಪೂಜಿಸಿ ; ನಾನು ಎನ್ನುವ ಅಹಂಕಾರ ಮರೆಯುತ್ತದೆ ಮನ. ಅರಿವಿನಲ್ಲಿ ಮನ ಸಂಗಮವಾಗಿ, ತನುವೇ ಅರಿವಿನ ಸಂಗಯ್ಯನ ಕ್ಷೇತ್ರವಾಗುತ್ತದೆ. ಆಗ ವಾರ ದಿನ, ಹಗಲಿರುಳುಗಳೇ ಇಲ್ಲವಾಗುತ್ತವೆ.

490

ನಿಮ್ಮ ನೋಟವನಂತ ಸುಖ, ನಿಮ್ಮ ಕೂಟ ಪರಮಸುಖ.
ಅವುಟುಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನಯ್ಯಾ.
ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಳೆಗಳು.

ಸೂರ್ಯನ ಬೆಳಕು ಜಗದ ವಸ್ತುಗಳ ಮೇಲೆ ಸಮಾನವಾಗಿ ಚೆಲ್ಲುತ್ತದೆ. ಈ ಬೆಳಕಿಗೆ ಸುಖವಿಲ್ಲ ದುಃಖವಿಲ್ಲ ಬರೀ ಜಡ. ಕಣ್ಣಿನ ಬೆಳಕು ಸೂರ್ಯನನ್ನು ಮೀರಿಸಿದೆ. 'ಕೋಟಿ ಸೂರ್ಯಂ ಸಮಪ್ರಭ' ಎನ್ನುವಂತೆ.

ಹೂವಿನ ಮೇಲೆ ಕಣ್ಣಿನ ಬೆಳಕು ಚೆಲ್ಲಿ ಅದು ಅರಳಿದ ಪಕಳೆಗಳನ್ನು ಬಣ್ಣವನ್ನು ಅದರ ಮೇಲೆ ಚೆಲ್ಲಿದ ಪರಾಗದ ಹುಡಿಯನ್ನು ಹೂವಿನ ಶಲಾಕೆಯನ್ನು ನೋಡುತ್ತದೆ. ಹೂವನ್ನು ಸೃಷ್ಟಿಸಿದ ಬೇರು ಕಾಂಡ ಎಲೆ ಎಸಳುಗಳನ್ನು ನೋಡಿ ಆನಂದ ಪಡುತ್ತದೆ. ಚರ್ಮದ ರಂಧ್ರಗಳಲ್ಲಿ ಕಣ್ಣಿನ ಬೆಳಕು ಚೆಲ್ಲಿ ರೋಮ ರೋಮಗಳಲ್ಲಿ ಹೂವು ನೋಡಿದ ಸುಖ ಉಂಟಾಗುತ್ತದೆ. ಮೃದುವಾಗಿ ಸ್ಪರ್ಶಿಸಿ ಆನಂದದ ಅನುಭೂತಿ ಉಂಟಾಗುತ್ತದೆ. ಈ ಆನಂದವೇ ಮೂಗಿನ ಹೊಳ್ಳೆಗಳಿಗೆ ಹೋಗಿ ಹೂವಿನ ಪರಿಮಳವನ್ನು ಮೂಗಿನ ನೋಟದಿಂದ ನೋಡಿ ಅದರೊಂದಿಗೆ ಕೂಡುತ್ತದೆ.

ಕಣ್ಣು ಚರ್ಮ ಮೂಗಿನ ನೋಟದಿಂದ ನಾಲಿಗೆ ಕಿವಿಗೆ ಕಣ್ಣುಗಳು ಮೂಡಿ ರುಚಿಯಿಂದ ಶಬ್ದದಿಂದ ಹೂವಿನ ಸೌಂದರ್ಯ ರಸವನ್ನು ಆಸ್ವಾದಿಸುತ್ತದೆ. ಇದು ಅರಿವಿನ ನೋಟ ! ಈ ನೋಟದಿಂದ ಆದ ಅನಂತ ಸುಖ, ಈ ನೋಟದ ಕೂಟದಿಂದಾದ ಪರಮ ಸುಖದ ಭಾಗ್ಯ ಜಗತ್ತಿಗೆ ಬೆಳಕು ಚೆಲ್ಲುವ ಸೂರ್ಯನಿಗೆ ಆಗುವುದೇ ಇಲ್ಲ.

ಜಲಬಿಂದುವಿನಿಂದ ಬೀಜ. ಬೀಜದಿಂದ ಅಂಕುರ, ಬೇರು, ಕಾಂಡ, ಎಲೆ, ಚಿಗುರು, ಎಸಳು, ಮೊಗ್ಗು ,ಹೂ, ಪರಿಮಳ. ಜಲಬಿಂದುವಿನಿಂದಲೆ ಪಿಂಡ, ಜಲಬಿಂದುವಿನಿಂದಲೆ ರಕ್ತ ಮಾಂಸ, ಮೂಳೆ, ಮಜ್ಜೆ ಮೇದಸ್ಸು, ಚರ್ಮದ ಕವಚ. ಜಲಬಿಂದುವಿನಿಂದಲೇ ಕಣ್ಣು, ಕಿವಿ, ಮೂಗು, ನಾಲಗೆ.

ಜಲಬಿಂದು ಅರಳಿ ಹೂವಾಯಿತು. ಜಲಬಿಂದು ಅರಳಿ ಕಣ್ಣಾಗಿ ಹೂವಿನ ಅನಂತ ನೋಟವನು ಹೀರಿ ; ನೋಟದ ಕೂಟದ ಪರಮಸುಖವನು ತನುವಿನಲ್ಲಿರುವ ಅವುಟುಕೋಟಿ ರೋಮಗಳು ಕೂಡಾ ಕಣ್ಣಾಗಿ ಅನುಭವಿಸಿದವು.

ಅಂಗದಲ್ಲಿಯೇ ಬೆರೆತ ಈ ಲಿಂಗದ ಅರಿವನು, ಅಂಗದಲ್ಲಿಯೇ ಹುಟ್ಟಿದ ಮನ ನೋಡಿ ನೋಡಿ ಅರಿವಿನ ರತಿ ಹುಟ್ಟಿ ನೋಟದ ಕೂಟದಲ್ಲಿ ಬೆರೆತು, ಕೂಡದಗಲದ ಕೂಟದ ಪರಮಸುಖವನ್ನೇ ಉಂಡವು. ಮನ ಘನಮನವಾಯಿತು.

491

ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ.

ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ :

ಜ್ಞಾನಿಯ ಬಾಯಿಂದ ಬರುವ ಮಾತು ಸಕಲರನ್ನು ಸಂತುಷ್ಟ ಪಡಿಸುತ್ತದೆ. ಎಲ್ಲರೂ ಅರಳುತ್ತಾರೆ ; ಯಾರೂ ಕೆರಳುವುದಿಲ್ಲ. ಪೂರ್ವಾಶ್ರಯದಿಂದ ನೋಡಿದವರು ಮಾತ್ರ ಕೆರಳುತ್ತಾರೆ. ಅಣ್ಣನವರು ಹೇಳಿದ್ದು ಜ್ಞಾನಿಗಳ ನುಡಿಗೆ ಮಾತ್ರ ಸಂಬಂಧಿಸಿದ್ದಲ್ಲ. ಪ್ರತಿ ತನು ನುಡಿಯುವ ನುಡಿಯಲ್ಲಿ ಅರಿವಿನ ಅಮೃತವೇ ತುಂಬಿದೆ. ಆದರೆ ಕೇಳುವುದಕ್ಕೆ ಬುದ್ಧ ಬಸವ ಮಹಾವೀರರು ಪಡೆದ ಶಿಕ್ಷಣ ಬೇಕು. ಆ ಶಿಕ್ಷಣ ಕೂಡಾ ಪ್ರತಿ ತನುವಿನಲ್ಲೂ ಇದೆ. ಅದನ್ನು ಪಡೆಯುವ ಯುಕ್ತಿ ಬೇಕು. ಶರಣ ಸಂತ ಮಹಾಂತರನ್ನು ಆರಾಧಿಸಿದರೆ ಬರುವುದಿಲ್ಲ. ಜಪ ತಪ ಪೂಜೆ ಮಾಡಿದರೂ ಬರುವುದಿಲ್ಲ.

''ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ'' ಇದು ಸೂತ್ರ. ನಿಮ್ಮ ಅಂದರೆ ದೇವರು ಎಂದು ಊಹಿಸುತ್ತೇವೆ. ಕಾಲಘಟ್ಟದಲ್ಲಿ ಅರಿವಿಗೆ ದೇವರು, ಗುರುದೇವ, ಮಹಾದೇವ, ಸದಾಶಿವ, ಸಾಕ್ಷಾತ್ ಪರಬ್ರಹ್ಮ ಎಂದು ಕರೆದಿದ್ದಾರೆ.

ನುಡಿಯುವ ಶಬ್ದದಲ್ಲಿ, ನೋಡುವ ನೋಟದಲ್ಲಿ, ಕೇಳುವ ಕಿವಿಯಲ್ಲಿ, ಸುಳಿದಾಡುವ ಮನದಲ್ಲಿ ಅರಿವಿನ ಅಮೃತವೇ ತುಂಬಿದೆ. ಇದು ಒಂದು ಶಿಕ್ಷಣ. ಈ ಶಿಕ್ಷಣ ಪಡೆಯಲು ಮನುಷ್ಯನಿಗೆ ಮಾತ್ರ ಸಾಧ್ಯವಾಗುತ್ತದೆ. ಈ ಶಿಕ್ಷಣ ತನುವಿನಲ್ಲಿಯೇ ಇದೆ. ಆದರೆ ಇದನ್ನು ಮನ ಒಪ್ಪುವುದಿಲ್ಲ. ಅರಿವಿನ ಶಿಕ್ಷಣ ಪಡೆದ ಬುದ್ಧ ಮಹಾವೀರ ಬಸವಾದಿ ಶರಣರನ್ನು , ದಾಸವರೇಣ್ಯರನ್ನು ಆರಾಧಿಸುವ ಮೂಲಕ ಮನ ಸಂತೋಷ ಪಡುತ್ತದೆ.

ಶಬ್ದ ಬೋರ್ಡಿನ ಮೇಲೆ ಬರೆದರೆ ಅದು ನಪುಂಸಕವಾಗುತ್ತದೆ.ಯಾರನ್ನೂ ಹಿಂಸಿಸುವುದಿಲ್ಲ ಸಂತುಷ್ಟ ಪಡಿಸುವುದಿಲ್ಲ. ಬರೆದುದನ್ನು ಓದಿದರೆ ಶಬ್ದ ಅರಿವಿಗೆ ಬರುತ್ತದೆ. ಅದು ಕೂಡಾ ಯಾರನ್ನೂ ಸಂತುಷ್ಟ ಪಡಿಸುವುದಿಲ್ಲ ; ಬಾಧೆ ಮಾಡುವುದಿಲ್ಲ. ಆ ಶಬ್ದವನ್ನು ಮನ ತನುವಿಗೆ ಹಚ್ಚಿ (ಅಪ್ಲೈ ಮಾಡಿ) ಕೊಂಡರೆ ಸಂತೋಷವಾಗುತ್ತದೆ. ಇಲ್ಲ ದುಃಖವಾಗುತ್ತದೆ.

ಉದಾ: 'ಕತ್ತೆ' ಶಬ್ದ ಬೋರ್ಡಿನ ಮೇಲೆ ಬರೆದರೆ ನಪುಂಸಕ. ಓದಿದರೆ ಅರಿವಾಗುತ್ತದೆ. ಅದರಲ್ಲಿ ಅರಿವಿನ ಅಮೃತ ತುಂಬಿದೆ. ನೀನು 'ಕತ್ತೆ' ಎಂದು ಸೂಚಿಸಿ ನುಡಿದರೆ ಸಾಕು ಸಿಟ್ಟು ಬರುತ್ತದೆ. ತನು ಇರುವವರೆಗೂ ಶಬ್ದ ಸಂಗ್ರಹವಾಗಿ, ಹಂತ ಹಂತವಾಗಿ ತನುವನ್ನು ಕೊಲ್ಲುತ್ತದೆ. ಶಬ್ದ ನುಡಿದ ತನುವಿನಲ್ಲಿ , ಶಬ್ದ ಕೇಳಿ ಹಚ್ಚಿಕೊಂಡ ತನುವಿನಲ್ಲಿ ಕತ್ತೆ ಶಬ್ದ ಸಂಗ್ರಹವಾಗಿ, ನುಡಿಯ ಬಾರದಾಗಿತ್ತು ಎನ್ನುವ ಪಶ್ಚಾತ್ತಾಪ ; ನುಡಿದನಲ್ಲ ಎನ್ನುವ ಸಂಕಟ ನೆನಪಿಸಿಕೊಂಡಾಗಲೆಲ್ಲಾ ಉಂಟಾಗುತ್ತದೆ.

'ಕತ್ತೆ' ಈ ಶಬ್ದದಲ್ಲಿ ಅರಿವು ಮಾತ್ರ ತುಂಬಿದೆ. ಕತ್ತೆಯೂ ಕತ್ತೆ ಅಲ್ಲ; ಅದೊಂದು ಪ್ರಾಣಿ. ಅದಕ್ಕೆ ಕತ್ತೆ ಎಂದು ಮನುಷ್ಯ ಕರೆದು ಹೆಸರಿಟ್ಟ. ಕತ್ತೆ ; ಕತ್ತೆಯೂ ಅಲ್ಲವೆಂದು ; ತಾನು ಕತ್ತೆ ಅಲ್ಲವೆಂದು ; ತನಗೆ ಗೊತ್ತಿದೆ. ಶಬ್ದದಲ್ಲಿ ಅರಿವು ತುಂಬಿ ಹೆಸರಿಟ್ಟ ; ತನಗೆ ಬೇಕಾದಂತೆ ನುಡಿದ, ತನಗೆ ಬೇಕಾದಂತೆ ಹಚ್ಚಿಕೊಂಡ ! ಆದರೆ ಅರಿವಿನಿಂದ ನುಡಿಯಲಿಲ್ಲ ; ಅರಿವಿನಿಂದ ಕೇಳಲಿಲ್ಲ.

ಒಂದು ತನು ಮತ್ತೊಂದು ತನುವಿಗೆ ಕತ್ತೆ ಎಂದು ನುಡಿದರೆ ; ನುಡಿದ ತನುವಿನಲ್ಲಿ ಸಿಟ್ಟು , ಕೇಳಿದ ತನುವಿನಲ್ಲಿ ದ್ವೇಷ ಮನೆ ಮಾಡಿಕೊಳ್ಳುತ್ತದೆ. ಒಂದು ದೇಶದ ಪ್ರಧಾನಿ ಮತ್ತೊಂದು ದೇಶದ ಪ್ರಧಾನಿಗೆ ಕತ್ತೆ ಎಂದು ನುಡಿದರೆ ಎರಡೂ ದೇಶಗಳ ಜನ ಯುದ್ಧಕ್ಕೆ ಅಣಿಯಾಗುತ್ತವೆ.

ತನು, ಶಬ್ದ ಸೃಷ್ಟಿ ಮಾಡಿ, ಅದರಲ್ಲಿ ಅರಿವಿದೆ ಎನ್ನುವುದನ್ನೆ ಮರೆತಿದೆ. ವಚನದಲ್ಲಿ ಅರಿವಿನ ಅಮೃತವಿದೆ ಎಂದು ಅರಿವನ್ನು ಬಳಕೆ ಮಾಡಿ ನುಡಿದವರು, ನುಡಿದ ಎಲ್ಲ ನುಡಿಗಳನ್ನು ಅರಿವಿನಿಂದ ಕೇಳಿ ಆನಂದ ಪಟ್ಟವರು ಜ್ಞಾನಿಗಳು ಮಾತ್ರ ! ಬುದ್ಧ ಬಸವಾದಿ ಶರಣರು ಅರಿವಿನಿಂದ ನುಡಿದರು. ಇತರರು ನುಡಿದ ಸಕಲ ನುಡಿಗಳನ್ನು ಅರಿವಿನಿಂದ ಕೇಳಿದರು. ಅವರಿಗೆ ಯಾತನೆ ಆಗಲೇ ಇಲ್ಲ. ಜ್ಞಾನಿ ಕೇಳುವ ಪ್ರತಿ ಶಬ್ದಕ್ಕೂ ಅರಿವು ಬಳಕೆಯಾಯಿತು.

ನುಡಿಯುವ ನುಡಿಯಲ್ಲಿ, ಕೇಳುವ ಶಬ್ದದಲ್ಲಿ ಅರಿವಿನ ಅಮೃತ ತುಂಬಿದೆ. ನೋಡುವ ಕಣ್ಣಿನಲ್ಲಿ ಅರಿವಿನ ಬೆಳಕು ತುಂಬಿದೆ. ಕೇಳುವ ಕಿವಿಯಲ್ಲಿ ಅರಿವಿನ ಕೀರುತಿ ತುಂಬಿದೆ. ಕೇಳುವುದಕ್ಕೆ, ನುಡಿಯುವುದಕ್ಕೆ, ನೋಡುವುದಕ್ಕೆ ಸಹಕಾರಿಯಾಗುವ ಮನದಲ್ಲಿಯೂ ಅರಿವೇ ತುಂಬಿದೆ. ಅಂಗದಲ್ಲಿ ಅರಿವು ಸಂಗಮವಾಗಿ, ಸಂಗಮನಾಥನಾಗಿ ಬೇರ್ಪಡಿಸದಂತೆ ಬೆರೆತಿದೆ. ಇದೇ ಲಿಂಗಾಂಗ ಸಾಮರಸ್ಯ .

ಕೂಡಲಸಂಗಮದೇವಾ ನಿಮ್ಮ ಚರಣಕಮಲದೊಳಗಾನು ತುಂಬಿ :

ತನುವೇ ಅರಿವಿನ ಕಮಲ. ಅಜ್ಞಾನ ಸೋಂಕದಂತೆ ಅರಿವೇ ತುಂಬಿದೆ. ಜಲದಲ್ಲಿಯೇ ಹುಟ್ಟಿದ ಕಮಲ, ಜಲದಿಂದಲೇ ಬೆಳೆದು, ಜಲದಲ್ಲಿದ್ದು ಜಲ ಸೋಂಕದೆ ಅರಳಿ ನಿಂತಿದೆ. ಹಾಗೆಯೇ ಇಡೀ ತನುವು ಕೂಡಾ. ಜಲಬಿಂದು ಗರ್ಭದಲ್ಲಿ ಹೋಗಿ ಜಲದಲ್ಲಿಯೇ ಬೆಳೆದು ಜಲಭರಿತ ತನುವಾಗಿದೆ. ನೋಡಲು, ಮಾತನಾಡಲು, ಕೇಳಲು, ಮುಟ್ಟಲು, ಅರಿವಿನಿಂದ ಪರಿಮಳ ವಾಸನೆ ನೋಡಲು ಹುಟ್ಟಿದಂದಿನಿಂದಲೇ ಕಲಿತಿದೆ. ಈ ಎಲ್ಲವನ್ನು ಅರಿವಿನಿಂದ ನುಡಿಯುತ್ತದೆ.

ತನುವಿಗೆ ಮನವೆಂಬ ಅಜ್ಞಾನ ಆವರಿಸಿರುವುದರಿಂದ, ಪಾದ, ಕೈ, ಕಣ್ಣು, ನಾಲಗೆ,

ಕಿವಿ, ಚರ್ಮ, ಮೂಗು, ತಲೆ ಎಂದು ತನುವನ್ನೇ ಬೇರ್ಪಡಿಸಿದೆ. ಅರಿವಿನಿಂದ ನೋಡಿದರೆ, ತನುವಿನಲ್ಲಿ ಅರಿವು ಕಣ ಕಣದಲ್ಲಿ ಸಂಗಮವಾಗಿದೆ. ಸಂಗಮನಾಥನೇ ತಾನಾಗಿದ್ದರೂ ತನು ಹೆಣ್ಣುಗಂಡು, ಜಾತಿ ಮತ, ಕುಲ ದೇಶ ಭಾಷೆಯಿಂದ ತನು ತನುವನ್ನೇ ಬೇರ್ಪಡಿಸಿ ನೋಡುತ್ತದೆ. ಅರಿವು ಮರೆಯಾಗಿ, ಮನ ಮುಂದಾಗಿರುವುದರಿಂದ ತನ್ನ ಪರಿಚಯ ತನಗೆ ಇಲ್ಲವಾಗಿದೆ. ಮನಕ್ಕೆ ಪರಿಚಯವಾದರೆ, ಮನವೇ ಮಹಾದೇವನಾಗುತ್ತದೆ.

492

ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ,
ಕಂಗಳು ಕಡೆಗೋಡಿವರಿದು ವೆನಗಯ್ಯಾ ಎನ್ನ ಅಶ್ರುಜಲಂಗಳು.
ಆಲಿಕಲ್ಲ ರೂಹಿನಂತೆ ಅರಗಿನ ಪುತ್ಥಳಿಯಂತೆ
ತನು ಪುಳಕಿತವಾದ ಬೆಮರ ಬಿಂದುಗಳೆಲ್ಲಾ !
ಕೂಡಲಸಂಗನ ದರ್ಶನ ಸ್ಪರ್ಶನದಿಂದ
ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ !

ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ, ಕಂಗಳು ಕಡೆಗೋಡಿವರಿದ ವೆನಗಯ್ಯಾ ಎನ್ನ ಅಶ್ರುಜಲಂಗಳು :

ಲಿಂಗವೆಂದರೆ ಅಂಗ, ಅಂಗವೆಂದರೆ ಲಿಂಗ. ಅಂಗ ಅರಿವಿನಿಂದ ಲಿಂಗವಾಗದ ಮುನ್ನ ಅಂಗ ಅಂಗವನ್ನು ನೋಡಿದರೆ, ಅಂಗದಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಹುಟ್ಟುತ್ತವೆ. ಜಾತಿ-ಮತ ಪಂಥ ಹೆಣ್ಣು ಗಂಡು ದೇಶ ಭಾಷೆಯ ಅಜ್ಞಾನ ಅಂಗದಲ್ಲಿ ಸೃಷ್ಟಿಯಾಗುತ್ತದೆ. ಅಂಗ ಅರಿವಿನ ಲಿಂಗವಾಗಿ ಅಂಗಕ್ಕೆ ಕಾಣುವುದೇ ಇಲ್ಲ.

ರೂಪ ಮುಖ್ಯವೋ ನಿರೂಪ, ಮುಖ್ಯವೊ ? ನಿರೂಪವಿಲ್ಲದಿದ್ದರೆ ರೂಪು ಶವ ! ನಿರೂಪ ನೋಡಿದರೆ ರೂಪ ಗೌಣ. ನಿರೂಪ, ಕಣ್ಣಿಗೆ ರೂಪು ನೀಡಿ ನೋಡುವ ಜ್ಞಾನವನ್ನು ಕರುಣಿಸಿದೆ. ನೋಡುವ ನೋಟವನ್ನು ತಿಳಿಯುವ ಸೌಂದರ್ಯವನ್ನು ಕರುಣಿಸಿದೆ. ನಿರೂಪ, ಕಿವಿಗೆ ರೂಪು ನೀಡಿ ಕೇಳುವ ಜ್ಞಾನವನ್ನು ಕರುಣಿಸಿದೆ. ನಿರೂಪ, ಮೂಗಿಗೆ ಸೌಂದರ್ಯ ನೀಡಿ ಪರಿಮಳ ಆಸ್ವಾದಿಸುವ ಜ್ಞಾನವನ್ನು ಕರುಣಿಸಿದೆ. ನಿರೂಪ, ನಾಲಿಗೆಗೆ ರುಚಿಯ ಜ್ಞಾನವನ್ನು ನೀಡಿ ರುಚಿಸಿ ಮಾತನಾಡುವ ಶಕ್ತಿಯನ್ನು ಕರುಣಿಸಿದೆ. ನಿರೂಪ ಚರ್ಮಕ್ಕೆ ಕಾಂತಿ ನೀಡಿ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳು ಹೊರ ಚೆಲ್ಲದಂತೆ ಬಂಧಿಸಿ, ಸ್ಪರ್ಶಿಸುವ ಜ್ಞಾನ ನೀಡಿ ಲಿಂಗಾಂಗವನ್ನಾಗಿ ಮಾಡಿದೆ. ನಿರೂಪ, ಇಡೀ ತನುವನ್ನು ಮಾತನಾಡುವ ಜ್ಞಾನದ ಮರವನ್ನಾಗಿ ಮಾಡಿ, ನಡೆದಾಡುವ ಶಕ್ತಿಯನ್ನು ಕರುಣಿಸಿದೆ.

ಇಂತಹ ಲಿಂಗಾಂಗವನ್ನು ಅಡಿಗಡಿಗೆ ನೋಡಿ ನೋಡಿ ಸಂತೋಷದಿಂದ ಕಂಗಳು ಕಡೆಗೋಡಿವರಿದು ಅಶ್ರುಜಲಂಗಳು ಹೊರಬರದಿದ್ದರೆ ಅದು ಲಿಂಗಾಂಗವಲ್ಲ. ಅಂಗದ ಗರ್ಭದಲ್ಲಿಯೇ ಲಿಂಗವಿದ್ದರೂ ಆ ಲಿಂಗವನ್ನು ಅರಿಯದ ಬರೀ ಅಂಗ !

ಆಲಿಕಲ್ಲರೂಹಿನಂತೆ, ಅರಗಿನ ಪುತ್ಥಳಿಯಂತೆ ತನು ಪುಳಕಿತವಾದ ಬೆಮರ ಬಿಂದುಗಳೆಲ್ಲಾ ಕೂಡಲಸಂಗನ ದರ್ಶನ ಸ್ಪರ್ಶದಿಂದ ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ :

ಲಿಂಗಾಂಗ ಅಂಗವನ್ನು ನೋಡುತ್ತಾ ನೋಡುತ್ತಾ ಆಲಿಕಲ್ಲ ರೂಹಿನಂತೆ ಕರಗಿ ಜಲವಾಗಬೇಕು. ಅರಗಿನ ಪುತ್ಥಳಿ ಕರಗಿ ಅರಗಾಗಬೇಕು. ಅಂಗದ ರೂಪೆಲ್ಲ ಕರಗಿ ನಿರೂಪವಾಗಬೇಕು. ತನುವನ್ನು ನೋಡಿದ ತನು ಪುಳಕಿತಗೊಂಡು ತನುವಿನ ಬೆವರ ಬಿಂದುಗಳೆಲ್ಲ ಕೂಡಲಸಂಗಮನಾಥನ ನಿರೂಪ, ಆ ನಿರೂಪವ ನೆರೆವ ಭರವನು ಏನ ಹೇಳುವೆನಯ್ಯಾ !

ತೋರಬಾರದ ನಿರೂಪವೇ ರೂಪಾಗಿ ತೋರುವುದು ಆಶ್ಚರ್ಯವಲ್ಲವೆ ! ತೋರಬಾರದ ಶಬ್ದ ನಿರೂಪವಾಗಿ ರೂಪಕ್ಕೆ ಬಡಿದು ಆನಂದವಾಗುವುದು ಆಶ್ಚರ್ಯವಲ್ಲವೆ ? ತೋರಬಾರದ ಪರಿಮಳ ರೂಪಕ್ಕೆ ಬಡಿದು ಪರಮಾನಂದವಾಗುವುದು ಆಶ್ಚರ್ಯವಲ್ಲವೆ ! ತೋರಬಾರದ ರುಚಿ ನಾಲಗೆಗೆ ಬಡಿದು ಆನಂದವಾಗುವುದು ಆಶ್ಚರ್ಯವಲ್ಲವೆ ? ತೋರಬಾರದ ಚರ್ಮ ಸ್ಪರ್ಶನದಲ್ಲಿ ಉಂಟಾಗಿ ಇಡೀ ತನು ಪುಳಕಿತಗೊಳ್ಳುವುದು ಆಶ್ಚರ್ಯವಲ್ಲವೆ !

ತನುವಿನ ಅರಿವಿಗೆ ತನುವಿನಲ್ಲಿರುವ ಮನ ಒಲಿದರೆ ಇದೆಲ್ಲ ಕ್ಷಣಾರ್ಧದಲ್ಲಿ ಸಾಧ್ಯವಾಗುತ್ತದೆ. ತೋರುವ ಅಂಗವೇ ಅಂಗಕ್ಕೆ ಲಿಂಗವಾಗಿ ತೋರುತ್ತದೆ.

493

ತಾಳಮಾನಸರಿಸವನರಿಯೆ,
ಓಜೆಬಜಾವಣೆಯ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ.

ಹಾಡು ಶಾಸ್ತ್ರೋಕ್ತವಾಗಿ, ತಾಳ ರಾಗ ಬದ್ಧವಾಗಿ ಕಲಿತು ಹಾಡಬಹುದು. ಆದರೆ ಕಲಿತಷ್ಟು ಮಾತ್ರ ಹಾಡಲು ಬರುತ್ತದೆ. ಬರೆದದ್ದೆಲ್ಲ ಹಾಡಲು ಬರುವುದಿಲ್ಲ ; ನುಡಿದದ್ದೆಲ್ಲ ಹಾಡಾಗಿ ಹೊರ ಬರುವುದಿಲ್ಲ. ನಾನು ಹಾಡುವುದೆಲ್ಲ ಸಂಗೀತ. ಅದಕ್ಕೆ ರಾಗ ತಾಳಗಳಿವೆ ; ಸಮಯವೂ ಇದೆ. ತನುವಿನಲ್ಲಿಯೇ ತನ್ಮಯನಾದ ನೀನು ಹಾಡುವುದೆಲ್ಲ ಭಗವದ್ಗೀತೆ ! ಅದಕ್ಕೆ ರಾಗ ತಾಳಗಳ ಸಂಯೋಜನೆ ಬೇಕಿಲ್ಲ. ಚಂದಸ್ಸು ಅಲಂಕಾರಗಳ ರಗಳೆಯೇ ಇಲ್ಲ. ನೀನು ನುಡಿದದ್ದೆಲ್ಲ ಹಾಡೇ.

ನನಗೂ ನಿನಗೂ ಅವಿನಾಭಾವ ಸಂಬಂಧವಿದೆ. ಅಹಂಕಾರ ತೆಜಿಸಿದರೆ ನಿನ್ನ ದರ್ಶನ ನನಗೆ ಸಾಧ್ಯ. ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವ ನೀನು. ನಿನ್ನ ಬೆಳಕಿನ ಕೃಷ್ಣ ಸುಂದರಿ ನಾನು. ನಿನ್ನ ಪರಿಚಯವಾದರೆ ಸಾಕು ನೆರಳು ಬೆಳಕಿನ ಹಾಡೇ ಹಾಡಬೇಕು.

ನೀನು ಹಾಡಿದರೆ ಸಂಗೀತವಾಯಿತು. ನೀನು ನುಡಿದದ್ದೇ ಸಾಹಿತ್ಯವಾಯಿತು. ನೀನು ರಚಿಸಿದ್ದೇ ವೇದ ಆಗಮ ಉಪನಿಷತ್ತು ಆಯಿತು. ನೀನು ಹೆಸರಿಸಿದ ಕಾರಣ ಜಗದ ಸೃಷ್ಟಿಯಾಯಿತು. ನೀನು ಕಣ್ತೆರೆದರೆ ಬೆಳಕು, ನೀನು ಕಣ್ಮುಚ್ಚಿದರೆ ಕತ್ತಲಾಯಿತು. ಅದರಿಂದಲೇ ಕತ್ತಲು ಬೆಳಕುಗಳಾಗಿ ದಿನ ವಾರ ತಿಂಗಳು ವರ್ಷ ಸಂವತ್ಸರಗಳಾದವು. ಅಮೃತ ಗಣ ದೇವಗಣಗಳಾದವು. ನಿನ್ನಿಂದ ಸೃಷ್ಟಿಯಾದ ಎಲ್ಲವುಗಳಿಗೂ ಕೇಡುಂಟು. ನಿನಗೆ ಮಾತ್ರ ಸಾವಿಲ್ಲ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ. ರಾಗ ತಾಳಗಳ ಸಂಯೋಜನೆ ಇಲ್ಲದೆ.

494

ವರಂ ಪ್ರಾಣ ಪರುತ್ಯಾಗಶ್ಛೇದನಂಶಿರಸೋಪಿ ವಾ
ನತ್ವನಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಂ
ಎಂದುದಾಗಿ, ದೇಹಧರ್ಮ ತನ್ನ ಆದಂತೆ ಆಗಲಿ,
ಕೂಡಲಸಂಗನ ಪೂಜಿಸಿದಲ್ಲದೆ ನಿಲಲಾರೆನು.

ಮನಕ್ಕೆ ಅಂಗದಲ್ಲಿರುವ ಅರಿವಿನ ದರ್ಶನವಾಗದಿದ್ದರೂ ಭಾಗ್ಯದಿಂದಾಗಿ ಅಂಗ ರಾಜನಾಗಿ, ಅಧಿಕಾರಿಯಾಗಿ, ಪೀಠಾಧಿಪತಿಯಾಗಿ ಮೆರೆಯುತ್ತದೆ. ಹಾಗೆಯೇ ಸಾವು ನೋವುಗಳು ರೋಗರುಜಿನಿಗಳು ಬಂದೆರಗಿ ದುಃಖದಿಂದ ಬೇಯುತ್ತದೆ.

ಕಳ್ಳ , ವಿಷಯಲಂಪಟ, ಹಾದರಿಗನಾಗಿ ತೋರಿ ಹೀನಾಯ ಬದುಕು ಬದುಕಿ ಸಾಯುತ್ತದೆ. ಅಂಗಕ್ಕೆ ಒಂದಿಲ್ಲೊಂದು ದಿನ ಸಾವು ನಿಶ್ಚಿತ.

ಅಂಗ ಮರ್ಯಾದೆಯಿಂದ ಬದುಕಿದರೇನು, ಅದು ಪ್ರಾರಬ್ಧಕ್ಕೆ ತುತ್ತಾಗಿ ಹೀನಾಯವಾಗಿ ಬದುಕಿದರೇನು ಇವೆರಡೂ ಗೌಣ. ದೇಹದ ಧರ್ಮ. ಅದು ತನ್ನ ಪ್ರಾರಬ್ಧದಲ್ಲಿ ಬದುಕಲಿ. ಆದರೆ ಅಂಗದಲ್ಲಿಯೇ ಕೂಡಿದ ಕೂಡದ ಅಗಲದ ಕೂಡಲಸಂಗಯ್ಯನನ್ನು ಪೂಜಿಸಿದಲ್ಲದೆ ನಿಲಲಾರೆನು.

ಅಂಗ ಭಾಗ್ಯದಿಂದ ಮೆರೆಯುವುದು, ದುಃಖದಿಂದ ಕುಂದುವುದು ಇವೆರಡು ಅಂಗದ ಧರ್ಮ. ಇದರ ಹೊರತಾಗಿ ಮನ ಅಂಗದಲ್ಲಿ ಬೆರೆತ ಲಿಂಗಯ್ಯನನ್ನು ಕೂಡಿ ಕೂಡದಗಲದ ಕೂಟದಲ್ಲಿ ಸುಖಿಸುವುದು ಅದು ಸುಖದ ಸುಖ. ಮೇಲಿನವೆರಡೂ ಬರೀ ದುಃಖ, ಭ್ರಮೆ. ಸುಖದ ಸುಖವದು ಬ್ರಹ್ಮ.

ಬ್ರಹ್ಮ ಸುಖದ ತವಕ ಮನಕ್ಕೆ ಉಂಟಾದರೆ ಸಾಕು ಎರಡು ದುಃಖದ ಕ್ರಿಯೆಗಳನ್ನು ಕೂಡಲೇ ತ್ಯಜಿಸುತ್ತದೆ.

495

ಸುರರು ಕಿನ್ನರರು ಕಿಂಪುರುಷರೆಂಬವರನಾರು ಬಲ್ಲರು ?
ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯ !
ಎನ್ನ ಚಿತ್ತವು ನಿಮ್ಮಲ್ಲಿಯೆ ಲಿಂಗಯ್ಯ .
ಕೂಡಲಸಂಗಮದೇವಾ
ಅನ್ಯವೆಂಬುದನರಿಯೆನಯ್ಯಾ .

ಸುರರು ಕಿನ್ನರರು ಕಿಂಪುರುಷರೆಂಬವರನು ಮನ ಪುರಾಣಗಳಲ್ಲಿ ಸೃಷ್ಟಿ ಮಾಡಿದೆಯೇ ಹೊರತು ಅವರನ್ನು ಯಾರೂ ನೋಡಿಲ್ಲ ; ಅವರು ಇಲ್ಲವೇ ಇಲ್ಲ. ಆದರೆ ಸರ್ವಾಂಗದಲ್ಲಿ ಬೆರೆತ ಅರಿವೆಂಬ ಗುರುದೇವನಿದ್ದಾನೆ. ಆತ ಸಂಗಮನಾಥನೂ ಹೌದು. ಆತನನ್ನೇ ಪುರಾತನರು ದೇವರೆಂದು, ಲಿಂಗಯ್ಯನೆಂದು, ಅರಿವೆಂದು, ಗುರುದೇವನೆಂದು, ಸದಾಶಿವನೆಂದು, ಮಹಾದೇವನೆಂದು, ಸಾಕ್ಷಾತ್ ಪರಬ್ರಹ್ಮನೆಂದು ಕರೆದಿದ್ದಾರೆ.

ಮನದ ಚಿತ್ತವು ಸುರರು, ಕಿನ್ನರರು, ಕಿಂಪುರುಷರ ಮೇಲೆ ನೆಟ್ಟರೆ ಭ್ರಮೆಗೊಳಗಾಗುತ್ತದೆ. ಮನದ ಚಿತ್ತವು ಅರಿವೆಂಬ ಗುರುದೇವನ ಮೇಲೆ ನೆಟ್ಟರೆ ಅನ್ಯವನು ಅರಿಯದೆ, ಭ್ರಮೆಗೊಳಗಾಗದೆ ಬ್ರಹ್ಮನೇ ತಾನಾಗುತ್ತದೆ.

496

ಮಂಡೆಯ ಬೋಳಿಸಿಕೊಂಡು ಗಂಡುದೊತ್ತು ವೊಕ್ಕೆನಯ್ಯಾ,
ಲಜ್ಜೆಗೆಟ್ಟಾದಡೂ ಲಿಂಗವನೊಲಿಸುವೆ.
ನಾಣುಗೆಟ್ಟಾದಡೂ ಲಿಂಗವನೊಲಿಸುವೆ.
ಕೆಲದ ಸಂಸಾರಿಗಳು ನಗುತಿರ್ದಡಿರಲಿ ;
ಕೂಡಲಸಂಗಮದೇವಾ, ಶರಣುಗತಿವೊಕ್ಕೆನಯ್ಯಾ.

ಭೌತಿಕ ಪತಿ ಇದ್ದಾಗ ಹೆಂಡತಿ ಗಂಡನ ಸುಖಕ್ಕಾಗಿ ಶೃಂಗರಿಸಿಕೊಳ್ಳುತ್ತಾಳೆ. ಗಂಡ ಸತ್ತಾಗ ಹೆಂಡತಿ ತನ್ನ ಕೇಶಾಲಂಕಾರವನ್ನು ತೆಜಿಸಿ ಮಂಡೆ ಬೋಳಿಸಿಕೊಂಡು ಮುಂಡೆಯಾಗುತ್ತಾಳೆ.

ಪತಿ ಜೀವಂತವಿರುವವರೆಗೂ ಸತಿ ಪತಿಯ ಸುಖ ಸವಿದಳು. ಪತಿ ಸತ್ತ ಮೇಲೆ ಸತಿ ಅರಿವಿನ ಪತಿಗಾಗಿ ಮಂಡೆ ಬೋಳಿಸಿಕೊಂಡು ಮುಂಡೆಯಾದಳು. ಆಗ ಕಚ್ಚೆ ಬಿಗಿದು ಮಂಡೆ ಬೋಳಿಸಿಕೊಂಡು ಅರಿವಿನ ಪತಿಯ ಸುಖವನ್ನು ಸವಿಯಲು ಸಾಕ್ಷಾತ್ ಪರಸತಿಯಾದಳು. ಆಕೆಗೆ ಪರಪುರುಷರ ಚಿಂತೆಯಿಲ್ಲ! ಮನೆ ಮಂದಿಯ ಚಿಂತೆಯಿಲ್ಲ; ನೆರೆಹೊರೆಯವರ ಚಿಂತೆಯೂ ಇಲ್ಲ. ಸದಾ ಅರಿವಿನ ಪತಿಯಾದ ಈಶ್ವರನ ಧ್ಯಾನವೊಂದೇ. ಒಲಿತಾನೊ ಒಲಿಯನೋ ಎಂಬ ಚಿಂತೆಯೊಂದೇ ಆಕೆಗೆ.

ಪತಿ ಸತ್ತರೆ ಸತಿ ಮಂಡೆ ಬೋಳಿಸಿಕೊಳ್ಳುವುದು ತೋರಿಕೆಗೆ ಸಂಪ್ರದಾಯವಾದರೂ ಅರಿವಿಗೆ ಹೋಗಲು ಹೇಳಿಮಾಡಿಸಿದಂತಿದೆ. ಕೈ ತೊಳೆದುಕೊಂಡು ಜ್ಞಾನದ ಸುಖವನ್ನು ಪಡೆಯುವುದಕ್ಕಾಗಿಯೇ ಬಳಕೆಮಾಡಿಕೊಳ್ಳಬಹುದಾಗಿದೆ.

ಹೀಗೆ ಮಂಡೆಯ ಬೋಳಿಸಿಕೊಂಡು ಪತಿ ಸತ್ತ ಮೇಲೆ ಸತಿ ಮುಂಡೆಯಾಗುವುದನ್ನು ಹೆಣ್ಣುದೊತ್ತು ಎಂದು ಕರೆಯಬಹುದಾಗಿದೆ. ಹಾಗೆಯೇ ಗಂಡು ಮಂಡೆ ಬೋಳಿಸಿಕೊಂಡು ಲಿಂಗಪತಿಯೆಂಬ ಅರಿವಿನ ಪತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಮುಂಡೆಯಾಗಬಹು ದಾಗಿದೆ. ಬಸವಣ್ಣನವರು ಮಂಡೆ ಬೋಳಿಸಿಕೊಂಡು ಶಿವನನ್ನು ಒಲಿಸಿಕೊಳ್ಳಬೇಕೆಂಬ ಅರಿವಿನ ಚಿಂತೆಯಲ್ಲಿದ್ದವರನ್ನು ಗಂಡುದೊತ್ತು ಎಂದು ಕರೆದಿದ್ದಾರೆ.

ಹೊರ ನೋಟಕ್ಕೆ ಹೆಣ್ಣಾಗಿ ತೋರಿದರೂ ಹೆಣ್ಣೇ ; ಅಂಗ ಗಂಡಾಗಿ ತೋರಿದರು ಕೂಡಾ ಹೆಣ್ಣೇ ಆಗಿದೆ. ಗಂಡು ಹೆಣ್ಣೆಂದು ಅಂಗಕ್ಕೆ ಕರೆಯುವುದು ಅವೆರಡೂ ಬೆರೆತು (ಒಪ್ಪಂದದ ಮೇಲೆ) ಒಂದು ಅರಿವಿನ ಅಂಗಕ್ಕೆ ಜನ್ಮ ಕೊಡುವುದಕ್ಕೆ ಮಾತ್ರ ! ಅಂಗ ಅರಿವಿನ ಲಿಂಗವಾಗಬೇಕೆಂದು ಬಯಕೆಯಾದರೆ ; ಮನ ಹೆಣ್ಣಾಗಲೇಬೇಕು. ಅರಿವನ್ನು ಪತಿಯಾಗಿಸಿಕೊಳ್ಳಲೇಬೇಕು. ಅಂಗವನ್ನೇ ಅರಿವಿನ ಮನೆ ಮಾಡಿಕೊಂಡು ಅರಿವನ್ನೇ ಪುರುಷನನ್ನಾಗಿಸಿಕೊಂಡು ಮನ ಸತಿಯಾಗಿ ಮಂಡೆ ಬೋಳಿಸಿಕೊಂಡು ಗಂಡುದೊತ್ತಾಗಿ ಅರಿವೆಂಬ ಗಂಡನೊಳಗೆ ಬೆರೆತು ಸತಿ ಪತಿಗಳೊಂದಾಗಬೇಕು.

ಗಂಡಾದರೇನು ಮಂಡೆ ಬೋಳಿಸಿಕೊಂಡು ಮುಂಡೆಯಾಗಿ ಗಂಡುದೊತ್ತಾಗಿ ಲಜ್ಜೆಗೆಟ್ಟಾದರೂ ಅರಿವಿನ ಲಿಂಗವನೊಲಿಸಿಕೊಳ್ಳಬೇಕು ; ನಾಣುಗೆಟ್ಟಾದರೂ ಅರಿವಿನ ಲಿಂಗಯ್ಯನನ್ನು ಒಲಿಸಿಕೊಳ್ಳಬೇಕು. ಗಂಡು ಹೆಣ್ಣಿನ ಪಾತ್ರ ಧರಿಸಿಕೊಂಡದ್ದಕ್ಕೆ ಸಮಾಜ ನೆರೆಹೊರೆಯವರು ನಗುತಿರ್ದಡೂ ಚಿಂತೆಯಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ಗಂಡ ಸಂಗಯ್ಯನೊಂದಿಗೆ ಕೂಡಿ ; ಆತನಿಗೆ ಶರಣುವೊಕ್ಕೆನಯ್ಯಾ ಎಂದಿದ್ದಾರೆ ಬಸವಣ್ಣನವರು.

497

ಎನಗೆ ನಿಮ್ಮ ನೆನಹಾದಾಗಲೆ ಉದಯ ;
ಎನಗೆ ನಿಮ್ಮ ಮರಹಾದಾಗಲೆ ಅಸ್ತಮ.
ಎನಗೆ ನಿಮ್ಮ ನೆನಹವೆ ಜೀವನ-
ಎನಗೆ ನಿಮ್ಮ ನೆನಹವೆ ಪ್ರಾಣ ಕಾಣಾ ತಂದೆ.
ಸ್ವಾಮಿ, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ ,
ವದನದಲ್ಲಿ ಷಡಕ್ಷರಿಯ ಬರಿಯಯ್ಯಾ ಕೂಡಲಸಂಗಮದೇವಾ.

ಸೂರ್ಯ ಭೂಮಿಯನ್ನು ಬೆಳಗಿದರೂ ತನು ಅರಿವಿನಿಂದ ಬೆಳಗಬೇಕಲ್ಲ? ಅರಿವಾಗದಿದ್ದರೆ ಸೂರ್ಯ ಬೆಳಗಿದರೂ ಕತ್ತಲೆ ಆವರಿಸಿರುತ್ತದೆ. ಅರಿವಾದರೆ ಹಗಲಿರುಳೆನ್ನದೆ ತನು ಬೆಳಕಿಂಗೆ ಬೆಳಕಾಗಿ ಬೆಳಗುತ್ತದೆ.

ಭೂಮಿ ಹೇಮ ವಿಷಯಾದಿಗಳನ್ನು ಅರಿವಿನಿಂದ ನೋಡಿದರೆ ಭೂಮಿ ಮಣ್ಣು; ಹೇಮ ಮಣ್ಣಿನ ಗರ್ಭದಿಂದ ಹುಟ್ಟಿದ ಹಳದಿ ಲೋಹ. ವಿಷಯ ತನುವಿನಲ್ಲಿಯೇ ಹುಟ್ಟಿ ತನುವಿಗೆ ಸುಖ ದುಃಖಗಳನ್ನು ನೀಡಿ ತನುವಿನಲ್ಲಿಯೇ ಮರೆಯಾಗುವ ಅಜ್ಞಾನ.

ತನುವಿನಲ್ಲಿರುವ ಜ್ಞಾನ ಕೆಡಗೊಡದೆ ತನುವಿಗೆ ಬಳಕೆಯಾದರೆ ಸೂರ್ಯ ಹುಟ್ಟಿದರೂ ಉದಯ, ಸೂರ್ಯ ಮುಳುಗಿದರೂ ಬೆಳಕಿನ ಉದಯ. ಜ್ಞಾನ ಬಳಕೆಯಾಗದಿದ್ದರೆ ಉದಯವಾದರೂ ಅಸ್ತಮಾನ. ಅಸ್ತಮಾನವಾದರೂ ಅಸ್ತಮಾನ. ಜ್ಞಾನದ ನೆನಹೇ ಪ್ರಾಣ. ಜ್ಞಾನದ ನೆನಹೆ ಜೀವನ.

ಜ್ಞಾನ ಬಳಕೆಯಾಗದಿದ್ದರೆ ಅಂಗ ಮಂಗ ಕುಣಿದಂತೆ ಕುಣಿಯುತ್ತದೆ. ಅಂಗ ಚಿನ್ನ ನೋಡಿ ಖರೀದಿಸುತ್ತದೆ ಇಲ್ಲ ಕೊಲೆ ಸುಲಿಗೆ ದರೋಡೆ ಮಾಡಿ ಕಳುವು ಮಾಡುತ್ತದೆ. ತನ್ನಂಗದಂತೆ ಇರುವ ಅಂಗದ ಮೇಲೆ ಹಾದರ, ಅತ್ಯಾಚಾರ, ಹತ್ತೆ, ಹಲ್ಲೆ ಮಾಡುತ್ತದೆ. ಅರಿವಾದರೆ ಅಂಗ ಲಿಂಗವಾಗುತ್ತದೆ. ಅಂಗವನ್ನು ಲಿಂಗಾಂಗದಂತೆ ನೋಡುತ್ತದೆ. ಚಿನ್ನ ಅಂಗಕ್ಕೆ ಲೋಹವಾಗಿ ಕಾಣುತ್ತದೆ. ಅದನ್ನು ಖರೀದಿ ಮಾಡುವುದಿಲ್ಲ ಕಳುವು ಮಾಡುವುದಿಲ್ಲ. ಅಂಗದಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಕರಗಿ ಅಂಗವೇ ಅರಿವಿನ ಚರಣದ ಉಂಡಿಗೆಯಾಗುತ್ತದೆ. ಸಿಹಿ ಕಲ್ಲಂಗಡಿಯಾಗುತ್ತದೆ. ಎಲ್ಲಿ ಚುಂಬಿಸಿದರೂ ಅರಿವಿನ ಸಿಹಿ ಪರಿಮಳ ಮನಕ್ಕೆ ದಕುತ್ತದೆ. ಇಡೀ ಅಂಗ ಅರಿವಿನ ಷಡಕ್ಷರಿಯ ಮಂತ್ರ ಪಿಂಡವಾಗುತ್ತದೆ. ಲಿಂಗಾಂಗವಾಗುತ್ತದೆ.

498

ಎನ್ನ ಕಾಯವ ದಂಡಿಗೆಯ ಮಾಡಯ್ಯಾ.
ಎನ್ನ ಶಿರವ ಸೋರೆಯ ಮಾಡಯ್ಯಾ.
ಎನ್ನ ನರವ ತಂತಿಯ ಮಾಡಯ್ಯಾ.
ಎನ್ನ ಬೆರಳ ಕಡ್ಡಿಯ ಮಾಡಯ್ಯಾ.
ಬತ್ತೀಸ ರಾಗವ ಹಾಡಯ್ಯಾ,ಉರದ ಲೊತ್ತಿ ಬಾರಿಸು,
ಕೂಡಲಸಂಗಮದೇವಾ.

ಮೂವತ್ತೆರಡು ಯಮಪಾಶ ಭ್ರಮೆಗಳನ್ನು ಹೊಂದಿದ ಕಾಯವನ್ನು ದಂಡಿಗೆಯನ್ನಾಗಿ ಮಾಡಯ್ಯಾ ತಂದೆ. ಕಾಯದ ಶಿರವನ್ನೇ ಸೋರೆಯನ್ನಾಗಿ ಮಾಡಯ್ಯಾ ತಂದೆ. ಕಾಯದ ನರಗಳನ್ನೇ ಕಿತ್ತಿ ತಂತಿಯನ್ನಾಗಿ ಮಾಡಯ್ಯಾ ತಂದೆ. ಕಾಯದ ಬೆರಳುಗಳನ್ನು ಹರಿದು ಕಡ್ಡಿಯ ಮಾಡಯ್ಯಾ ತಂದೆ. ಬತ್ತೀಸ ರಾಗವ ಹಾಡಿ ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ.

ಕಾಯದ ಮೂವತ್ತೆರಡು ಸದಾಚಾರಗಳಿಗೆ ಮೂವತ್ತೆರಡು ಪಾಶಾಭ್ರಮೆ ತಗುಲಿದೆ. ಇದರಿಂದಾಗಿ ಕೈಲಾಸವೇ ಆಗಬೇಕಾದ ಕಾಯ ನರಕವಾಗಿದೆ. ಈ ಕಾಯ ಪಾಶಗಳನ್ನು ಹರಿದು ರಕ್ಷಿಸು ತಂದೆ ಎಂದು ಮನ ಕಾಯದ ಕಣಕಣದಲ್ಲಿರುವ ಮಹಾದೇವನನ್ನು ಪ್ರಾರ್ಥಿಸಬೇಕು.

ಮಹಾದೇವಿಯಕ್ಕಳ ಒಂದು ವಚನದ ಉದಾಹರಣೆಯನ್ನು ಕೊಡಬಹುದಾಗಿದೆ.

ಕುಲಭ್ರಮೆ,ಜಾತಿಭ್ರಮೆ,ಛಲಬ್ರಮೆ, ನಾಮ ವರ್ಣ ಆಶ್ರಮ ಮತಶಾಸ್ತ್ರಭ್ರಮೆ, ತರ್ಕಭ್ರಮೆ, ರಾಜ್ಯಭ್ರಮೆ, ಧನಧಾನ್ಯ ಪುತ್ರ ಮಿತ್ರ ಭ್ರಮೆ,ಐಶ್ವರ್ಯ , ತ್ಯಾಗ, ಯೋಗ ಭ್ರಮೆ, ವಾಯು ಮನ ಭಾವ ಜೀವ ಮೋಹಭ್ರಮೆ, ನಾಹಂ ಕೋಹಂ ಸೋಹಂ ಮಾಯಾಭ್ರಮೆ ಮೊದಲಾದ ಮೂವತ್ತೆರಡು ಪಾಶ ಭ್ರಮಿತರಾಗಿ ತೊಳಲುವ ವೇಷಧಾರಿಗಳನ್ನು ಕಂಡು ಶಿವಶಕ್ತಿ ಶಿವಭಕ್ತ ಶಿವ ಪ್ರಸಾದಿ ಶಿವಶರಣ ಶಿವೈಕ್ಯ ಶಿವಜಂಗಮ ಎಂದು ನುಡಿಯಲಾರದೆ ಎನ್ನ ಮನ ನಾಚಿ ನಿಮ್ಮ ಪಾದಗಳಿಗೆ ಅಭಿಮುಖವಾಯಿತ್ತು ಎಂದು ಮಹಾದೇವಿಯಕ್ಕ ಹೇಳಿದ್ದಾಳೆ.

499

ಕುರುಳು ಬೆರಳು ಮುಡುಹು ಮುಂಬಲ್ಲ ಕೊಳ್ಳಾ;
ನಿರಿಯನಿಕ್ಕಿ ದಾಂಟಿದಡೆ ಅಂತೆನ್ನ ನಂಬಾ;
ಪರಪುರುಷರ ಮುಖವ ನೋಡದಂತೆ ಮಾಡಾ;
ಬಳಿಕ ನೀನೆಹಗೆಯಿರಿಸಿದಂತೆ ಇರಿಸಾ.
ಎನ್ನ ಉರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ;
ಹರಿಬ್ರಹ್ಮರಿಗೆರಗದಂತೆ ಬಳಿನೀರನೆರೆಯಾ

ಗಂಡನ ಮನೆಗೆ ನಡೆಯಲು ಹೋದ ಹೆಣ್ಣುಮಗಳು ಹೀಗೇ ನಡೆದುಕೊಳ್ಳಬೇಕೆನ್ನುವ ಸಂಪ್ರದಾಯವಿದೆ. ಅದು ಕಡಮೆಯಾಗುತ್ತಾ ಅಲ್ಪ ಸ್ವಲ್ಪ ಮಾತ್ರ ಉಳಿದಿದೆ.

ಮುಂಗುರುಳು, ಬೆರಳು, ಭುಜ, ಮುಂದಿನ ಹಲ್ಲುಗಳು ಪರ ಪುರುಷರಿಗೆ ಕಾಣ ದಂತೆ , ನಿರಿಗೆಯ ದಾಟದಂತೆ, ಪತಿಯ ಹೆಸರನು ಎದೆಯಲ್ಲಿ ಒತ್ತಿಕೊಂಡು ಸತಿ ಅತಿ ಎಚ್ಚರದಿಂದ

ನಡೆಯಬೇಕು.

ಹರಿಬ್ರಹ್ಮಾದಿಗಳಿಗೆ ಎರಗದಂತೆ ಪತಿಯೇ ದೇವರೆಂದು ಸತಿ ನಂಬಿಗೆಯನ್ನು ಹೊಂದಿದ್ದಳು. ಈಗಲೂ ಈ ಸಂಪ್ರದಾಯ ಉಳಿದಿದೆ.

ಈ ಸಂಪ್ರದಾಯ ದೇಶಾದ್ಯಂತ ಎಲ್ಲೆಡೆ ಕಂಡುಬರುತ್ತದೆ. ಇದೊಂದು ಗಂಡು-ಹೆಣ್ಣಿಗೆ ಸಂಬಂಧಿಸಿದ ಆಧ್ಯಾತ್ಮಿಕ ಸಂಪ್ರದಾಯವಾಗಿದ್ದು ಬರುಬರುತ್ತಾ ಹೆಣ್ಣಿಗೊಂದೇ ಮೀಸಲಾಯಿತು.

ಕಲಾವಿದ ಈ ಸಂಪ್ರದಾಯವನ್ನು ಆಧ್ಯಾತ್ಮಕ್ಕೆ ಹೋಲಿಸಿ ಅರ್ಧ ನಾರೀಶ್ವರನ ಚಿತ್ರವನ್ನು ಕೆತ್ತಿ ಜನತೆಗೆ ಸುಲಭವಾಗಿ ತಿಳಿಸಿದ. ದೇಹದಲ್ಲಿ ಮನವಿದೆ; ಅದು ಸತಿ ಅಥವಾ ನಾರಿ; ದೇಹದಲ್ಲಿ ಅರಿವಿದೆ ಅದು ಈಶ್ವರ ಅಥವಾ ಪತಿ ! ಶರಣರು ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂದರು. ಆಧ್ಯಾತ್ಮಿಕ ಕಲಾವಿದ ಅರ್ಧನಾರೀಶ್ವರ, ಅರ್ಧಾಂಗಿ ಎಂದು ಕರೆದ. ಈ ಆಧ್ಯಾತ್ಮಿಕ ಸುಳುಹಿನ ಚಿತ್ರ ಬರು ಬರುತ್ತಾ ಪೂಜೆಗೆ ಮೀಸಲಾಯಿತು. ಮನ ಅರಿವಿಗೆ ತಗ್ಗಿ ಬಗ್ಗಿ ನಡೆಯಬೇಕೆಂದು ಸಾರುವ ಎಲ್ಲ ಉಕ್ತಿಗಳು ಹೆಣ್ಣಿಗೆ ಮೀಸಲಾಯಿತು. ಹೆಣ್ಣು, ಗಂಡು ಹೇಳಿದ ಮಾತುಗಳನ್ನು ಪಾಲಿಸಲೇಬೇಕೆನ್ನುವ ಸಂಪ್ರದಾಯ ಮಾತ್ರ ಉಳಿಯಿತು.

ಅರಿವೆಂಬ ಪತಿ ಹೇಳಿದ ಮಾತನ್ನು ಚಾಚೂ ತಪ್ಪದೇ ಮನ ವೆಂಬ ಸತಿ ಕೇಳಲೇ ಬೇಕೆಂಬುದು ಮಾತ್ರ ದಿಟ. ಗಂಡಾಗಲಿ ಹೆಣ್ಣಾ ಗಲಿ ಅಂಗವೇ ಹೊರತು ಹೆಣ್ಣಲ್ಲ; ಗಂಡೂ ಅಲ್ಲ! ಅಂಗದಲ್ಲಿ ಈಶ್ವ ರನೂ ಇದ್ದಾನೆ; ಈಶ್ವರಿಯೂ ಇದ್ದಾಳೆ. ಬೆಳಕಾದರೆ ಅರಿವಿನ ಬೆಳಕನ್ನು ಹಿಂಬಾಲಿಸುವ ನೆರಳೇ ಮನವೆಂಬ ಈಶ್ವರಿ. ಎಲ್ಲಿ ಬೆಳಕೋ ಅಲ್ಲಿ ನೆರಳು. ಮನ ಮತ್ತು ಅರಿವು ಹೆಣ್ಣಿಗೂ ಇದೆ; ಗಂಡಿಗೂ ಇದೆ. ಆಧ್ಯಾತ್ಮ ಎನ್ನುವುದು ಒಂದು ವ್ಯವಹಾರವಾಗಿರುವುದರಿಂದ ಕೆಲಜನ ಉಪ ಜೀವನಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಬಹುತೇಕ ಜನ ಮೋಸಕ್ಕೆ ಬಲಿಯಾಗುತ್ತಿದ್ದಾರೆ. ಮೋಸ ಮಾಡುವ ವ್ಯಕ್ತಿಯೂ ಸಹ ತಾನು ಬೀಸಿದ ಜಾಲದಲ್ಲಿ ಅರಿಯದೇ ತಾನೇ ಬೀಳುತ್ತಿದ್ದಾನೆ.

ಬಸವಣ್ಣನವರು ಬರೆದು ತಿಳಿಸಿದ ಈ ಸೂತ್ರ ; ಅಂಗದಲ್ಲಿರುವ ಅರಿವಿನತ್ತ ಅಂಗದಲ್ಲಿಯೇ ಇರುವ ಮನ ಪಯಣಿಸಿ ಹೇಗೆ ಪಾಲಿಸ ಬೇಕೆನ್ನುವ ವಿವರ ಮಾತ್ರ ವಿದೆ. ಅಣ್ಣನವರು ಗಂಡಾದರೂ ಹೆಣ್ಣಾಗಿ ಹಾಡಿದ್ದಾರೆ. ಗಂಡೂ ಗಂಡಲ್ಲ, ಹೆಣ್ಣು ಹೆಣ್ಣಲ್ಲ , ಎರಡು ದೇಹ ಗಳಲ್ಲಿರುವ ಮನಕ್ಕೆ ಅರಿವಿನತ್ತ ಹೆಜ್ಜೆ ಇಡಲು ಯುಕ್ತಿ ಬೇಕಷ್ಟೆ.

ತನುವಿನ ಯುಕ್ತಿಯನ್ನು ಮತ್ತೊಬ್ಬರಿಗೆ ಮಾರಲು ಬರುವುದಿಲ್ಲ; ಕೊಳ್ಳಲೂ ಬರುವುದಿಲ್ಲ, ಆದರೂ ಕಾರ್ಪೊರೇಟ್ ಲೆವೆಲ್‌ನಲ್ಲಿ ಅರಿವಿನ ವ್ಯವಹಾರಗಳು ನಡೆದಿವೆ. ದೊಡ್ಡ ದೊಡ್ಡ ಗುರೂಜಿಗಳು ಹುಟ್ಟಿಕೊಂಡಿದ್ದಾರೆ. ಮಂದಿರ ಮಸೀದಿ ಚರ್ಚ್‌ಗಳೆಂದು ಮೂರು ಭಾಗಗಳಾಗಿವೆ. ಇವು ಮಣ್ಣು ಕಲ್ಲುಗಳಿಂದ ನಿರ್ಮಿಸಿದರೂ ಕಣ್ಣು ಮಾತ್ರ ಅಜ್ಞಾನದ ರೋಗದಿಂದಲೆ ನೋಡುತ್ತದೆ. ಧರ್ಮ ಸೃಷ್ಟಿಯಾಗಿದೆ; ಹೆಣ್ಣು ಗಂಡು ಸೃಷ್ಟಿ ಯಾಗಿದೆ. ಇವೆರಡೂ ಒಂದೇ ಎಂದು ತಿಳಿಸುವ ಅರ್ಧನಾರೀಶ್ವರ ಚಿತ್ರ ದೇವರಾಗಿದೆ. ಅರಿವು ಮಾತ್ರ ಬಳಕೆಯಾಗದೆ ದೇಹದಲ್ಲಿ ಹಾಗೆ ಉಳಿದಿದೆ. ಅರಿವಾದರೆ ಸಾಕು ಅದನ್ನು ಎದೆಯಲ್ಲಿ ಬರೆದು ಕೊಂಡು ಮನ ಹರಿಬ್ರಹ್ಮಾದಿಗಳನ್ನು ಪೂಜಿ ಸುವುದಿಲ್ಲ. ತನು ಒಂದೇ. ಕಲ್ಲಿನಿಂದ ನಿರ್ಮಿಸಿದ ಮಂದಿರ ಮಸೀದಿ ಚರ್ಚ್ ಒಂದೇ. ಜಾತಿ ಮತ ಪಂಥಗಳಿಲ್ಲ.ದೇಶ ಭಾಷೆ ಗಡಿಸೀಮೆಗಳಿಲ್ಲ. ಅಂಗದಲ್ಲಿ ಸಂಗಮವಾದ ಅರಿವನ್ನು ಅಂಗದ ಎದೆಯಲ್ಲಿ ಬರೆದುಕೊಂಡು ಸಂಗಮನಾಥನೇ ತಾನಾಗುತ್ತಾನೆ.

500

ಕಂಡ ಕನಸು ನಿಧಾನವ ಕಂಡೆನಯ್ಯಾ
ಬಿಡಲಾರದ ನಿಧಾನವ ಕಂಡೆನಯ್ಯಾ
ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.

ಅಂಗಕ್ಕೆ ಅರಿವಾಗದಿದ್ದರೆ ಭೂಮಿಯಲ್ಲಿ ಹುದುಗಿದ ಹೇಮವನ್ನು ಅಗೆದು ತೆಗೆದು ಅದನ್ನೇ ಸಂಪತ್ತೆಂದು ಭಾವಿಸುತ್ತದೆ. ಸಾಯುವವರೆಗೂ ಚಿನ್ನದ ಬೆನ್ನು ಬಿಡದೆ ಸಂಗ್ರಹಿಸಿ ಯಾರಿಗೂ ಸಿಗದಂತೆ ಪುನಃ ಭೂಮಿಯಲ್ಲಿ ಹುಗಿದು ಸಾಯುತ್ತದೆ. ಇದು ಮನದ ಗುಣ.

ಹೇಮವೇ ಸರ್ವಸ್ವ ಎಂದು ತಿಳಿದ ಮನ, ತನುವನ್ನು ರಾಜನನ್ನಾಗಿಸಿ ಹೇಮಕ್ಕಾಗಿ ಯುದ್ಧ ಮಾಡುತ್ತದೆ. ರಾಜನನ್ನು, ಸೈನಿಕರನ್ನು ಕೊಂದು ಹೇಮ ತನ್ನದಾಗಿಸಿ ಕೊಳ್ಳುತ್ತದೆ. ಮನ ಹೇಮಕ್ಕಾಗಿ ತನುವನ್ನು ಕಳ್ಳನನ್ನಾಗಿಸುತ್ತದೆ. ಕದಿಯಲು ಹೋದಾಗ ಕಳ್ಳನಿಗೆ ಕೊಡದಂತೆ ಮಾಡಿ ಪ್ರಾಣ ಕಳೆಯುತ್ತದೆ. ಹೇಮಕ್ಕಾಗಿ ಕಳ್ಳನಿಗೆ ಪ್ರಾಣ ಕಿತ್ತಿಕೊಳ್ಳುವಂತೆ ಮಾಡುತ್ತದೆ.

ಭೂಮಿಯೊಳಗಿದ್ದ ಹೇಮವನ್ನು ಅಗೆದು ತೆಗೆದವನು ತಾನೇ. ಆ ಲೋಹದ ತುಂಡಿಗಾಗಿ ಮಾರು ಹೋಗಿ ಅದನ್ನೇ ಸಂಪತ್ತೆಂದು ಭಾವಿಸಿ ಖರೀದಿಸಿದವನು ತಾನೇ. ಹೇಮಕ್ಕಾಗಿ ಕಳ್ಳನಾದವನು ತಾನೇ. ಯುದ್ಧ ಮಾಡಿ ಗೆದ್ದು ರಾಜನಾದವನು ತಾನೇ ; ಕೊಂದು ಪಡೆದು ಕೊಲೆಗಡುಕನಾದವನು ತಾನೇ.

ಭೂಮಿಯೊಳಗಿದ್ದ ಹೇಮ ಅಗೆದು ತೆಗೆಯಲು ಮನ ಬಳಕೆಯಾಯಿತು. ಅದೊಂದು ಹಳದಿ ಲೋಹದ ತುಂಡೆಂದು ತಿಳಿಯುವ ಅರಿವು ದೇಹದಲ್ಲಿಯೇ ಉಳಿಯಿತು.

ನಿಜವಾದ ಸಂಪತ್ತು ಯಾವುದು ? ಮನ ಭೂಮಿಯಲಿ ಹುದುಗಿದ ಹಳದಿ ಲೋಹವನ್ನು ಹೊರತೆಗೆದದ್ದೋ ಅಥವಾ ಅದು ಲೋಹವೆಂದು ತಿಳಿದು ಉದಾಸೀನ ಮಾಡುವ ಅಂಗದೊಳಗೆ ಅಡಗಿದ ಅರಿವೋ ? ಅಂಗದೊಳಗೆ ಅಡಗಿದ ಅರಿವು ಮನಕ್ಕೆ ಬಳಕೆಯಾದರೆ ಹೇಮವೆನ್ನುವುದು ಮಣ್ಣಿನಿಂದ ಹುಟ್ಟಿದ ಲೋಹ ದ ಕಣ. ಅರಿವಿಗೆ ಅದು ತೃಣ ! ಇದನ್ನು ತಿಳಿದ ಮನ ತನುವಿಗೆ ಹೇಮ ಕದಿಯಲು ಆದೇಶ ನೀಡಲಿಲ್ಲ. ಕೊಳ್ಳಲು ಆದೇಶ ನೀಡಲಿಲ್ಲ. ಯುದ್ಧ ಮಾಡಿ ಪಡೆಯಲು ಆದೇಶ ನೀಡಲಿಲ್ಲ.

ಅಂಗದ ಗರ್ಭದಲ್ಲಿಯೇ ಹುದುಗಿದ ಅರಿವಿನ ಹೇಮದ ಕನಸು ಕಂಡ ಮನ, ನಿಧಾನವ ಕಂಡೆನಯ್ಯಾ, ಎಂದೆಂದೂ ಬಿಡಲಾರದ ನಿಧಾನವ ಕಂಡೆ ನಯ್ಯಾ,ಅಂಗದಲ್ಲಿಯ ಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ ಎಂಬ ಸೂತ್ರದ ಸುಳುಹನ್ನು ಸಕಲರಿಗೆ ನೀಡಿದ್ದಾರೆ ಅಣ್ಣನವರು.

501

ಹೊನ್ನ ಹಾವುಗೆಯ ಮೆಟ್ಟಿದವ ಮಿಡಿಮುಟ್ಟಿದ ಕೆಂಜೆಡೆಯವನ,
ಮೈಯಲ್ಲಿ ವಿಭೂತಿಯ ಧರಿಸಿದವನ,
ಕರದಲ್ಲಿ ಕಪಾಲವ ಪಿಡಿದವನ,
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ,

ನಂಬಿಗೆ ಕುಂಟಣೆಯಾದವನ,
ಚೋಳಂಗೆ ಹೊನ್ನಮಳೆಯ ಕರೆದವನ,
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯಲ್ಲಿಪ್ಪವನ,
ಮಾಡಿದ ಪೂಜೆಯಲೊಪ್ಪುವನ,
ಕೂಡಲಸಂಗಯ್ಯನೆಂಬವನ.

ತನುವಿನ ಹೊರ ಒಳಗಿದ್ದ ಮಹಾದೇವನ ದರ್ಶನ ಮನಕ್ಕೆ ಆದರೆ ಆ ಮನವೇ ಮಹಾದೇವ. ವಸ್ತುವಿನ ಸತ್ಯ ಒಂದೇ; ಆದರೂ ಮನಕ್ಕೆ ಗೋಚರವಾಗುವುದು ಅನೇಕ. ಮನ ಮತ್ತು ಅರಿವು ಒಂದಾದ ತನುವಿಗೆ ಕಾಣುವ ಸತ್ಯವೇ ಬೇರೆ, ಮನಕ್ಕೆ ಕಾಣುವ ಸತ್ಯವೇ ಬೇರೆ !

ಮನ ತನುವಿನೊಂದಿಗೆ ಮಂದಿರ ಮಸೀದೆ ಚರ್ಚ್ ನೋಡಿದರೆ ಬೇರೆ ಬೇರೆಯಾಗಿ ಕಾಣುತ್ತದೆ. ಕಣ್ಣಿನಲ್ಲಿ ಹಿಂದೂ ಮುಸಲ್ಮಾನ ಕ್ರೈಸ್ತನೆಂಬ ರೋಗಗಳು ಹುಟ್ಟಿಕೊಳ್ಳುತ್ತವೆ. ಮನ ಕಣ್ಣನ್ನು ದುರ್ಬಳಕೆ ಮಾಡಿಕೊಂಡ ಫಲ ತನು ಅನುಭವಿಸುತ್ತದೆ. ಹೀಗೆ ನೋಡಿದ ಕಣ್ಣು ನೋಡುವುದಕ್ಕೆ ಬಂದರೂ ಅದು ಕುರುಡು. ಕಣ್ಣಿಗೆ ಒಳಗಿನ ಸತ್ಯ ಹೊರಗಿನ ಸತ್ಯ ಗೋಚರಕ್ಕೆ ಬರಲಿಲ್ಲ.

ಮಂದಿರ ಮಸೀದಿ ಚರ್ಚ್ ಆಗುವುದಕ್ಕೆ ಮುನ್ನ ಅದು ಕಲ್ಲು. ಕಲ್ಲು ನೋಡಿದರೆ ಕಣ್ಣಿಗೆ ಯಾವ ರೋಗಗಳೂ ಹುಟ್ಟುವುದಿಲ್ಲ. ಕಣ್ಣು ಹಿಂದೂವಲ್ಲ, ಮುಸಲ್ಮಾನನೂ ಅಲ್ಲ. ಕ್ರೈಸ್ತನೂ ಅಲ್ಲ. ಕಲ್ಲು ನೋಡಿದ ಸತ್ಯದ ಕಣ್ಣು, ಕಲ್ಲು ಕೆತ್ತಿ ಮಂದಿರವಾದ ಮೇಲೆ, ಅದು ಕಲ್ಲಲ್ಲ; ಮಂದಿರ ! ಕಣ್ಣಿನಲ್ಲಿ ಭಾವ ಅರಳಿತು; ಸತ್ಯ ಹೊಳೆಯಲಿಲ್ಲ. ಕಣ್ಣು ಹಿಂದೂವಾಗಿ ಪರಿವರ್ತನೆಯಾಯಿತು.

ಅದೇ ಕಲ್ಲಿನಲ್ಲಿ ಮಸೀದೆ, ಚರ್ಚ್ ನಿರ್ಮಿಸಿದಾಗ ಹಿಂದೂ ಎಂದು ನೋಡಿದ ಕಣ್ಣಿನಲ್ಲಿ ದುರ್ಭಾವ ಕೆರಳಿತು. ಕಣ್ಣಿಗೆ ಸತ್ಯ ಮತ್ತು ಭಾವ ಬಳಕೆಯಾಗಲಿಲ್ಲ.

ಕಲ್ಲನ್ನು ಕಲ್ಲೆಂದು ಹೇಳುವ ಕಣ್ಣು ಜಗತ್ತಿನಾದ್ಯಂತ ಇವೆ. ಕಲ್ಲನ್ನೇ ಮಂದಿರ ಮಸೀದೆ ಚರ್ಚ್ ಎಂದು ಹೇಳುವ ಕಣ್ಣುಗಳು ಕೂಡಾ ಜಗತ್ತಿನಾದ್ಯಂತ ಇವೆ. ಕಣ್ಣಿನ ಗರ್ಭದಲ್ಲಿ ಸತ್ಯ ಒಳ ಹೊರಗೆನ್ನದೆ ತನ್ಮಯ ವಾಗಿ ತುಂಬಿದೆ. ಕಣ್ಣಿಗೆ, ಇಡೀ ತನುವಿಗೆ ಮನ ಅಸತ್ಯದ ಪೊರೆಯಾಗಿ ಲೇಪಿಸಿಕೊಂಡಿದೆ.

ಮನ ಅರಿವಿನೊಂದಿಗೆ ಬೆರೆತು ನೋಡಿದವನೇ ಹೊನ್ನಿನ ಹಾವುಗೆಯ ಮೆಟ್ಟಿದವನು. ಮಿಡಿಮುಟ್ಟಿದ ಕೆಂಜೆಡೆಯವನು, ಸೆಗಣಿ ಕಾಯವ ಸುಟ್ಟು ವಿಭೂತಿ ಧರಿಸಿದವನು. ಕೈಯಲ್ಲಿ ಕಪಾಲ ಹಿಡಿದವನು, ಮನ ಮತ್ತು ಅರಿವು ಒಂದಾದ ಅರ್ಧನಾರೀಶ್ವರನು. ಬಾಣನ ಬಾಗಿಲ ಕಾಯ್ದ ವನು, ಅರಿವನು ಅರಿತು ನಂಬಿ ಅಂಬಿಗೆ ಕುಂಟಣೆಯಾದವನು. ಚೋಳಂಗೆ ಹೊನ್ನ ಮಳೆಯ ಕರೆದವನು. ಮನಕ್ಕೆ ಮಹಾದೇವನಾಗಿ ಬಂದವನು. ಅರಿವಿನ ಬಯಕೆಯಾದ ಸದ್ಭಕ್ತರ ಹೃದಯದಲ್ಲಿಪ್ಪವನು. ಅಗೋಚರದ ಅರಿವಿನ ಪೂಜೆಗೆ ಒಪ್ಪುವವನು, ಕೂಡಲಸಂಗಯ್ಯನೆಂಬ ಸರ್ವಾಂಗ ಸಂಗದವನು.

502

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು ಕೇಳವ್ವಾ ಕೆಳದೀ.
ಪನ್ನಗ ಭೂಷಣನಲ್ಲದ ಗಂಡರು
ಇನ್ನೆನಗಾಗದ ಮೊರೆ, ನೋಡವ್ವಾ.
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ,
ನಿಮ್ಮಾಣೆಯಯ್ಯಾ, ಕೂಡಲಸಂಗಮದೇವಾ.

ಗಂಡ ಎಂದರೆ ಗುರು. ಮನ, ಮನೋಹರವಲ್ಲದ ನೂರಾರು ಗಂಡರನ್ನು ಮಾಡಿಕೊಳ್ಳುತ್ತದೆ. ವಿದ್ಯಾಗುರು, ಕಲಿಕೆಯ ಗುರು, ಕುಲಗುರು, ಮನೆತನದ ಗುರು, ದೀಕ್ಷಾಗುರು. ಹೀಗೆ ಜೀವನ ಪರ್ಯಂತ ನೂರಾರು ಗುರುಗಳು ಬಂದು ಹೋಗುತ್ತಾರೆ. ಆದರೂ ಮನದ ಚಲನೆ ನಿಲ್ಲುವುದಿಲ್ಲ. ಮನ ತನ್ನ ಸುಖಕ್ಕಾಗಿ ತನುವನ್ನು ಹಿಂಸಿಸುವುದೂ ಬಿಡುವುದಿಲ್ಲ. ಯಾವ ಗುರುಗಳನ್ನು ಮಾಡಿಕೊಂಡರೂ ಮನ ತನ್ನ ಮೊದಲ ಚಾಳಿ ಬಿಡುವುದಿಲ್ಲ. ತಾನು ಮಾಡಿಕೊಂಡ ಗಂಡನಲ್ಲಿಯೇ ದೋಷ ವನ್ನು ಹುಡುಕುತ್ತದೆ. ಮೊಸರಲ್ಲಿ ಕಲ್ಲು ಹುಡುಕುವುದೇ ಮನದ ಗುಣ.

ದತ್ತಾತ್ರೇಯ ಮಹಾರಾಜರು ಕೂಡಾ ನಲವತ್ನಾಲ್ಕು ಗುರುಗಳನ್ನು ಮಾಡಿ ಕೊಂಡಿದ್ದರಂತೆ. ಗಿಡ ಮರ ನಾಯಿ ಹಸು ಮುಂತಾದ ಪ್ರಾಣಿಗಳು ಕೂಡಾ ಮನವನ್ನು ಮಹಾದೇವನತ್ತ ಕೊಂಡೊಯ್ಯಬಲ್ಲವು. ಅವು ನೀಡುವ ಅರಿವಿನ ಸುಳುಹನ್ನು ಮನ ಸೂಕ್ಷ್ಮವಾಗಿ ಗಮನಿಸಿದರೆ ಅವು ಕೂಡಾ ಗುರುವಾಗಬಲ್ಲವು.

ಪನ್ನಗಭೂಷಣನಿಗೆ ಅವು ಸಮನಾಗಲಾರವು. ಆತ ಮನಕ್ಕೆ ಮನೋಹರವಾದ ಗಂಡ.''ಎಮ್ಮ ಗಂಡನು ಏಕಾಂತಂಬೊಕ್ಕನು ಬೇಗ ಬೇಗ ಹೊರನಡಿಯಿರಣ್ಣಗಳಿರಾ '' ಎಂದು ಶಿದ್ಧರಾಮಶಿವಯೊಗಿ ಹೇಳುವಂತಹ ಸುಖವನ್ನು ಯಾವ ಗಂಡರೂ ಕೊಡಲರಿಯರು.

ಮನ,ಕಾಮ ಎನ್ನುವ ಗಂಡನನ್ನು ಮಾಡಿಕೊಂಡು ತನುವಿನೊಂದಿಗೆ ತನು ಕೂಡಿ ಸುಖ ಅನುಭವಿಸುತ್ತದೆ. ತನು ಹೆಣ್ಣು ಅಲ್ಲ ಗಂಡೂ ಅಲ್ಲ ಅದೊಂದು ದೇಹ ಎಂದು ಮನಕ್ಕೆ ತಿಳಿಯುವುದಿಲ್ಲ. ಅದಕ್ಕಾಗಿಯೇ ಮನದ ಕಾಮದ ಅಗ್ನಿ ತನು ಸಾಯುವವರೆಗೆ ನಿಲ್ಲುವುದೇ ಇಲ್ಲ. ತನು ಮನ ಹೇಳಿದಂತೆ ಕೇಳುತ್ತದೆಯೇ ಹೊರತು ಅರಿವೆಂಬ ಪನ್ನಗಭೂಷಣ ಹೇಳಿದಂತೆ ಕೇಳುವುದಿಲ್ಲ. ಅರಿವಿನ ಗಂಡನಿಗೆ ಕಾಮದ ಆತುರವೇ ಇಲ್ಲ. ಮನಕ್ಕೆ ಕಾಮದ ಬಯಕೆಯಾದಾಗ ಯಾವ ತನುವನ್ನು ಅದು ಬಿಡುವುದಿಲ್ಲ.ತನುವನ್ನೇ ಕಚ್ಚಿ ತಿನ್ನುವ ರಾಕ್ಷಸ ಅದು.

''ತನು ತನುವಿನೊಂದಿಗೆ ಕೂಡುವ ಕೂಟ ಹೆಣ್ಣು ಹೆಣ್ಣು ಕೂಡಿದ ಕೂಟ'' ಮನ ಕನ್ಯೆಯಿರುವಾಗಲೇ ಪನ್ನಗಭೂಷಣನೊಂದಿಗೆ ಲಗ್ನವಾಗಿದೆ. ಅರಿವಿನಿಂದ ಗಮನಿಸಿದರೆ ಮನದನ್ನೆಗೆ ಪನ್ನಗಭೂಷಣನ ಪರಿಚಯವಾಗುತ್ತದೆ. ಚಿಕ್ಕಂದಿನ ಬಾಳುವೆಯಿಂದಲೇ ಮನ ಹಾದರಕ್ಕೆಳೆಸದೆ ಮಹಾದೇವನೊಂದಿಗೆ ಬದುಕುತ್ತದೆ.

ಪನ್ನಗಭೂಷಣನೆಂದರೆ ನಾಗಭೂಷಣ. ಸರ್ಪವನ್ನು ಕೊರಳಲ್ಲಿ ಧರಿಸಿದವನು. ತನುವಿನ ಕೊರಳಿಗೆ ಮನವೆಂಬ ವಿಷದ ಸರ್ಪ ಸುತ್ತಿಕೊಂಡಿದೆ. ನೋಡಿದರೆ ಕಣ್ಣಿನಲ್ಲಿ ಕಾಮ ಹುಟ್ಟಿ ತನುವನ್ನು ಕಚ್ಚುತ್ತದೆ. ಕೇಳಿದರೆ ಕಿವಿಯಲ್ಲಿ ಕ್ರೋಧ ಹುಟ್ಟಿ ತನುವನ್ನು ಕಚ್ಚುತ್ತದೆ. ರುಚಿಸಿದರೆ ನಾಲಿಗೆ

ಯಲ್ಲಿ ಸುಖ ದುಃಖಗಳು ಹುಟ್ಟಿ ತನು ಕೆಂಡದಂತಾಗುತ್ತದೆ. ಮೂಸಿಸಿದರೆ ಮೂಗಿನಲ್ಲಿ ಸುಗಂಧ ದುರ್ಗಂಧಗಳು ಹುಟ್ಟಿ ತನು ಮೂಗು ಮುರಿಯುತ್ತದೆ. ಮುಟ್ಟಿದರೆ ಚರ್ಮದಲ್ಲಿ ಬಯಕೆ ಹುಟ್ಟಿ ತನುವನ್ನು ಹಾದರಕ್ಕೆಳೆಸುತ್ತದೆ. ಮನ ತನ್ನ ತನುವನ್ನೇ ತನು ಇರುವವರೆಗೆ ಹಿಂಸಿಸುವುದೆಂದರೇನು? ಮನಕ್ಕೆ ಅರಿವಾದರೆ ಮಾತ್ರ ತನುವಿನಲ್ಲಿಯೇ ತನ್ಮಯವಾದ ಅರಿವಿನ ನಲ್ಲನೊಂದಿಗೆ ಕೂಡುತ್ತದೆ. ಆತ ಪನ್ನಗ ಭೂಷಣ, ಹರಿದಾಡುವ ಹಾವಿನಂತಹ ಮನವನ್ನು ಸುತ್ತಿಕೊಂಡು ತನ್ನ ಕೊರಳಿಗೆ ಆಭರಣ ಮಾಡಿಕೊಳ್ಳುತ್ತಾನೆ. ಪನ್ನಗಭೂಷಣನಾಗುತ್ತಾನೆ.

ತಿಳಿಯಲು ಹೋದರೆ ಮನ ಮತ್ತು ಅರಿವಿನ ಸಂಬಂಧ ಜನ್ಮ ಜನ್ಮದ ಸಂಬಂಧ. ಚಿಕ್ಕಂದಿನ ಬಾಳುವೆ. ಚಿಕ್ಕಂದಿನಲ್ಲಿಯೇ ಪರಿಚಯ ವಾದರೆ ತನು ಪನ್ನಗ ಭೂಷಣನ ತನು. ಕೂಡಲ ಸಂಗಯ್ಯ ಕೂಡಿದ ಸಂಗಮನಾಥನ ತನು !

503

ಜಗವೆಲ್ಲಾ ಅರಿಯಲು ಎನಗೊಬ್ಬ ಗಂಡನುಂಟು ;
ಆನು ಮುತ್ತೈದೆ ಆನು ನಿಟ್ಟೈದೆ.
ಕೂಡಲಸಂಗಯ್ಯನಂತಪ್ಪ , ಎನಗೊಬ್ಬ ಗಂಡನುಂಟು.

ಜ್ಞಾನಿಯ ಆನಂದವೇ ಬೇರೆ ; ಲೋಕದ ಆನಂದವೇ ಬೇರೆ. ಲೋಕದ ಜನಕ್ಕೆ ಸುಖದುಃಖಗಳುಂಟು ; ಸದಾ ಸಂಭ್ರಮವುಂಟು. ಜ್ಞಾನಿ ತನುವನ್ನು ನೋಡಿ ಅದರ ತುಂಬಾ ತನ್ಮಯವಾದ ಅರಿವನ್ನು ಮಾತ್ರ ತಿಳಿಯಬಲ್ಲ. ಹೆಣ್ಣು ಗಂಡು ಜಾತಿ ಮತ ಪಂಥಗಳು ಆತ ನಿಗೆ ಕಾಣುವುದೇ ಇಲ್ಲ. ಶ್ರೀಮಂತಿಕೆ ಬಡತನಗಳೂ ಕಾಣುವುದಿಲ್ಲ. ತನುವಿನ ಜ್ಞಾನ ಶ್ರೀಮಂತಿಕೆ ಮಾತ್ರ ಕಾಣುತ್ತದೆ.

ತನು ಜ್ಞಾನದಿಂದ ಕೂಡಿದ್ದರೂ ಮನ ಅದನ್ನು ಬೇರ್ಪಡಿಸಿದೆ. ಗುರುವಿನ ಸಹಾಯದಿಂದ ಮನ ತನುವಿನ ಜ್ಞಾನ ಪಡೆದರೆ ಅದು ಗಂಡನನ್ನು ಪಡೆದಂತೆ. ತನುವನ್ನು ಜ್ಞಾನದಿಂದ ಬೇರ್ಪಡಿಸಿದ ಮನ ; ಜ್ಞಾನ ಮನ ಒಂದಾದಂತೆ ; ಗಂಡ ಹೆಂಡತಿ ಒಂದಾದಂತೆ.

ಲೌಕಿಕ ಗಂಡ ಸತ್ತರೂ ಜ್ಞಾನದ ಗಂಡ ಸಾಯುವುದಿಲ್ಲ. ಹೀಗಾಗಿ ಜ್ಞಾನದ ತನು ಸದಾ ಮುತ್ತೈದೆ. ಸಾವಿಲ್ಲದ ರೂಹಿಲ್ಲದ ಕೇಡಿಲ್ಲದ ಚೆಲುವನೇ ಜ್ಞಾನದ ಗಂಡ. ಅದಕ್ಕಾಗಿಯೇ ಅಕ್ಕ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ಹಾಡಿ ಸದಾ ಮುತ್ತೈದೆಯಾದಳು. ಸಾವಿಲ್ಲದ ರೂಹಿಲ್ಲದ ಕೇಡೇ ಇಲ್ಲದ ಜ್ಞಾನಿ ಚೆಲುವನಿಗೆ ಒಲಿದಳು.

ಹೀಗೆ ಅಣ್ಣ ಬಸವಣ್ಣನವರು ಕೂಡಾ ಜಗವೆಲ್ಲಾ ಅರಿಯಲು ಎನಗೊಬ್ಬ ಗಂಡನುಂಟು ; ಆನು ಮುತ್ತೈದೆ ಆನು ನಿಟ್ಟೈದೆ. ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಂತಪ್ಪ ಮಹಾಜ್ಞಾನಿ ಗಂಡ ಎನಗುಂಟು ಎಂದು ಹಾಡಿದ್ದಾರೆ. ತನುವಿನಲ್ಲಿಯೇ ತನ್ಮಯವಾದ ಗಂಡನನ್ನು ನೆರೆಯಲು ಜಗದ ಮನಗಳಿಗೆ ಕರೆ ನೀಡಿದ್ದಾರೆ.

504

ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿರಯ್ಯಾ.

ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ ;
ನೀವಲ್ಲದೆ ಮತ್ತೇನನೂ ಅರಿಯೆನು.
ಕನ್ನೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು,
ಮನ್ನಿಸು ಕಂಡಾ, ಮಹಾಲಿಂಗವೆ.
ಸತಿಯಾನು, ಪತಿ ನೀನು, ಅಯ್ಯಾ.
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀವೆನ್ನ ಮನವ ಕಾಯ್ದಿಪ್ಪ ಗಂಡನು !
ನಿಮಗೋತ ಮನವನನ್ಯಕ್ಕೆ ಹರಿಸಿದಡೆ
ನಿಮ್ಮಭಿಮಾನ ಹಾನಿ, ಕೂಡಲಸಂಗಮದೇವಾ.

ಸಂಸಾರವೆಂಬುದು ಸಮಾಜದ ಬಳುವಳಿ. ತಿಳಿದು, ನೋಡಿ, ಕೇಳಿ ಆಚರಿಸುವ ಕೈಗಡದ ರೀತಿ ನೀತಿಗಳು ಸಂಸಾರದಲ್ಲಿರುತ್ತವೆ. ಅದು ತಪ್ಪಿ ನಡೆಯುವಂತಿಲ್ಲ. ಮುನ್ನುಗ್ಗುವಂತೆಯೂ ಇಲ್ಲ. ತನ್ನರಿವಿಗೆ ಬಂದಂತೆ ನಡೆದರೆ ಸಮಾಜ ಒಪ್ಪುವುದಿಲ್ಲ. ಹಾಗೆ ನಡೆದರೆ ಅರಿವು ಒಪ್ಪುವುದಿಲ್ಲ.

ತನುವಿನ ಅರಿವು ತನುವಿಗೆ ಮೀಸಲು. ಅದು ತನುವಿನಲ್ಲಿಯೇ ಉಳಿದು ತನು ಅಳಿಯುವುದು ಅದಕ್ಕೆ ಇಷ್ಟವಿಲ್ಲ. ಅದನ್ನು ಬಳಕೆ ಮಾಡುವುದು ಮನಕ್ಕೂ ಇಷ್ಟವಾಗುವುದಿಲ್ಲ. ಹೀಗೆ ಉರುಳುತ್ತದೆ ಜೀವನ ಚಕ್ರ.

ಮನದ ಚಿತ್ತ ಅರಿವಿನ ಮೇಲೆ ನೆಟ್ಟರೆ ಮನ ಮೀಸಲೆಂಬ ಅರಿವನ್ನೆ ಬಳಸುತ್ತದೆ. ಅದು ಸತ್ಯ. ಸತ್ಯ ಬಳಕೆ ಮಾಡುವುದಕ್ಕಾಗಿ ಮನ ಸಂಘಟನೆ ಮಾಡಬೇಕಿಲ್ಲ. ಸಂಘಟನೆಯಿಂದ ಬಂದ ಸತ್ಯ ಸತ್ಯವಲ್ಲ. ಅದು ಎಂಜಲು. ಶಬ್ದಗಳು ಹಾಗಿದ್ದರೇನು ? ಅವು ಬಳಕೆಗೆ ಮಾತ್ರ ಯೋಗ್ಯ. ತನುವಿಗೆ ಸಮಾಧಾನ ತರಲಾರವು.

ಅಣ್ಣನವರು ಈ ವಚನದಲ್ಲಿ ಸಂಸಾರವೆಂಬ ನಾಯಿಯಯನು ಅಟ್ಟಿ ಮೀಸಲು ಎಂಜಲು ಮಾಡದಿರಯ್ಯಾ. ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ, ನೀವಲ್ಲದೆ ಮತ್ತೇನನೂ ಅರಿಯೆನು ಎನ್ನುತ್ತಾರೆ. ಎಳೆತನ ದಲ್ಲಿಯೇ ಅರಿವಿನ ಕೈವಿಡಿದೆನು. ನಿಮ್ಮಲ್ಲಿ ನೆರೆದೆನು, ಮನ್ನಿಸು ಕಂಡಾ ಮಹಾಲಿಂಗವೆ. ಸತಿಯಾನು, ಪತಿ ನೀನು ಅಯ್ಯಾ. ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ ನೀವೆನ್ನ ಮನವ ಕಾಯ್ದಿಪ್ಪ ಗಂಡನು ! ನಿಮಗೋತ ಮನವನನ್ಯಕ್ಕೆ ಹರಿಸಿದಡೆ ನಿಮ್ಮಭಿಮಾನ ಹಾನಿ, ಕೂಡಲಸಂಗಮದೇವಾ.

ಮನಸ್ಸು ತನಗೆ ಹಿತವಾದ ಎಂಜಲನ್ನೇ ಬಳಸುವ ನಾಯಿ. ಅದು ಮೀಸಲೆಂದರೇನೆಂದು ಅರಿಯದು. ಮನ ಸತಿಯಾದರೆ ಪತಿ ನೀನು. ಮನೆಯ ಒಡೆಯನಿಗೆ ಇದ್ದ ಕಾಳಜಿ ಮನೆಯ ಆಳಿಗೆ ಇರಲಾರದು. ನಿಮಗೆ ಒಲಿದ ಮನವನ್ನು ಅನ್ಯಕ್ಕೆ ಎಳೆಸಿದಡೆ ನಿಮ್ಮ ಅಭಿಮಾನಕ್ಕೆ ಹಾನಿ ಎಂದಿದ್ದಾರೆ ಅಣ್ಣನವರು.

ಯಾವುದು ಮೀಸಲು ಯಾವುದು ಎಂಜಲು ಎನ್ನುವುದು ಮನಕ್ಕೆ ಮನದಟ್ಟಾಗುವುದು ಜಟಿಲ. ಕಣ್ಣಿನಲ್ಲಿ ಮೀಸಲ ಜ್ಞಾನವಿದೆ ; ಆದರೆ ಎಂಜಲು ಮಾತ್ರ ಬಳಕೆಯಾಗುತ್ತದೆ. ಕಲ್ಲನ್ನು ಕಲ್ಲೆಂದು ನೋಡುವ ಕಣ್ಣಿಗೆ ಮೀಸಲು ಜ್ಞಾನ ಬಳಕೆಯಾಯಿತು. ಕಟೆದ ಕಲ್ಲನ್ನು ದೇವರೆಂದು ನೋಡುವ ಕಣ್ಣು ಎಂಜಲು ಜ್ಞಾನವನ್ನು ಬಳಕೆ ಮಾಡಿತು. ಮೀಸಲು ಎಂಜಲ ಜ್ಞಾನವನ್ನು

ಒಪ್ಪುವುದಿಲ್ಲ. ದೇವರೆಂದು ನೋಡಿದ ಕಣ್ಣು ಎಂದೂ ಕಲ್ಲೆಂದು ನೋಡುವುದಿಲ್ಲ. ಮೀಸಲ ಜ್ಞಾನವನ್ನು ಶಾಲಾ ಕಾಲೇಜುಗಳಿಂದ ಮಠ ಚರ್ಚ್ ಮಂದಿರಗಳಿಂದ ಕಲಿಯಲು ಸಾಧ್ಯವಿಲ್ಲ. ಕಲಿತ ಕಲಿಕೆಯೆಲ್ಲ ಮನಕ್ಕೆ ಎಂಜಲಾಗಿ ಪರಿಣಮಿಸುತ್ತದೆ.

ಭಕ್ತನ ಐಕ್ಯಸ್ಥಲ

505

ನೀನೊಲಿಯಿತ್ತೆ ಪುಣ್ಯ ; ನೀನೊಲ್ಲದುದೆ ಪಾಪ,
ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ.
ನೀನೊಲಿದವನೆ ನಿಮ್ಮ ನರಿವನು.
ಪ್ರಸಾದಾದ್ದೇವತಾ ಭಕ್ತಿಃ ಪ್ರಸಾದೋ ಭಕ್ತಿ ಸಂಭವಃ ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ ॥
ನೀನೊಲಿದವನೆ ಧನ್ಯ , ಜಗಕ್ಕೆ ಪಾವನ, ಕೂಡಲಸಂಗಮದೇವಾ.

ಬೀಜದಿಂದ ಅಂಕುರ ಬಂದು ಬೀಜವೇ ಮರವಾಗಲು ಕಾರಣವಾಗಿದೆ. ಅಂಕುರ ಮರಗಳೆರಡು ಬೀಜದಲ್ಲಿಯೇ ಸತ್ಯವನ್ನು ಹುಡುಕಬೇಕು. ಅಂತೆಯೇ ನೀನೊಲಿಯಿತ್ತೆ ಪುಣ್ಯ ; ನೀನೊಲ್ಲದುದೆ ಪಾಪ, ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ.

ತನುವಿನ ಅರಿವೆ ಮಹಾಬೆಳಕು. ಅದು ತನುವಿನ ಕಣಕಣದಲ್ಲಿ ಬೇರ್ಪಡಿಸದಂತೆ ಬೆರೆತಿದೆ. ಅರಿವಿನ ಬೀಜದ ಬಿಂದುವಿನಿಂದಲೇ ತನುವೆಂಬ ಅಂಕುರ ಹೊರಬಂದು ಜ್ಞಾನದ ಮರವಾಗಿ ನಡೆದಾಡುತ್ತಲಿದೆ. ನೋಡಿ, ಕೇಳಿ, ಮುಟ್ಟಿ, ರುಚಿಸಿ, ಮೂಸಿಸುವ ಮೂಲಕ ಮಾತನಾಡಿ ಆನಂದ ಪಡುತ್ತಲಿದೆ. ಅದರ ಸೊಗಸೆಲ್ಲ ಬಿಂದು ರೂಪದ ಬೀಜದಲ್ಲಿಯೇ ತುಂಬಿತ್ತು . ಮರವಾದ ಮೇಲೆ ನಿನ್ನಿಂದ ಬಂದ ನಾನು ಎಂಬ ಅಹಂಕಾರಿ ಮನ ಬೆಳಕನ್ನೆ ಮರೆತು ಗತ್ತಿನಿಂದ ನುಡಿದು ನಡೆಯುತ್ತಿರುವುದೇ ಮಹಾ ಪಾಪವಾಗಿದೆ. ನೀನೊಲಿದರೆ ಮನಕ್ಕೆ ಪುಣ್ಯ ; ನೀನೊಲಿಯದಿದ್ದರೆ ಅದೇ ಪಾಪ. ಸಕಲ ಜಗದ ತನುಗಳಿಗೆ ಅರಿವಿನ ಬೀಜರೂಪವಾದ ಬಿಂದುವೇ ಕಾರಣ.

ನೀನೊಲಿದವನು ನಿಮ್ಮನರಿವನು :

ಹೆಮ್ಮರವಾಗಿ ಬೆಳೆದ ಮೂರ್ಖ ತನುಗಳು ನಿಮ್ಮನ್ನು ಮಂದಿರ ಮಠ ಚರ್ಚ್‌ನಲ್ಲಿ ಹುಡುಕುತ್ತಿವೆ. ಶಾಸ್ತ್ರಪುರಾಣ ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳಲ್ಲಿ ಹುಡುಕುತ್ತಿವೆ. ಬೀಜದಿಂದಲೇ ಅಂಕುರ ಎನ್ನುವ ಒಂದು ಸಣ್ಣ ತಿರುಳನ್ನು ಮರೆತಿವೆ. ನೀನೊಲಿದವನು ಮಾತ್ರ ನಿಮ್ಮನು ಅರಿಯ ಬಲ್ಲ. ಅರಿವೆಂಬ ನಿಮ್ಮನು ಮನವೆಂಬ ನಾನು ಒಲಿಸಿಕೊಳ್ಳಲು ಬರುವುದಿಲ್ಲ. ಏಕೆಂದರೆ ಅಹಕಾಲಕ್ಕೆ ಆಗುವುದಲ್ಲದೆ ತಾನಾಗಿಯೇ ಆಗಲು ಬರುವುದಿಲ್ಲ. ಮಲ್ಲಿಗೆ ಹೂವಾಗುವುದಕ್ಕೆ ಮುಂಚೆ ಸಸಿಯ ಬೇರಿನಲ್ಲಿತ್ತು, ಅಂಕುರದಲ್ಲಿತ್ತು, ಕಾಂಡ ರೆಂಬೆ ಕೊಂಬೆಗಳಲ್ಲಿತ್ತು, ಎಲೆ ಚಿಗುರು ಎಸಳಿನಲ್ಲಿತ್ತು. ಮೊಗ್ಗಿನಲ್ಲಿದ್ದ ಮಲ್ಲಿಗೆ ಹೂವಾಗಿ ಅರಳಿ ಪರಿಮಳ ಬೀರಿತು. ನೀನೊಲಿದ ಕಾಲಕ್ಕೆ ಮಲ್ಲಿಗೆಯಾಯಿತಲ್ಲದೆ ಮುಂಚೆಯೇ ಆಗಲಿಲ್ಲ.

ಪ್ರಸಾದದಿಂದ ಭಕ್ತಿ ಲಭಿಸುತ್ತದೆ. ಭಕ್ತಿಯಿಂದ ಪ್ರಸಾದ ದೊರೆಯುತ್ತದೆ. ಬೀಜಾಂಕುರ

ನ್ಯಾಯದಂತೆ. ಬೀಜದಿಂದ ಅಂಕುರ, ಅಂಕುರದಿಂದಲೇ ಬೀಜ ಹುಟ್ಟುತ್ತದೆ.

ಅರಿವಿನಿಂದ ಮನ ಅರಳುತ್ತದೆ ; ಮನದ ಪ್ರಾರ್ಥನೆಯಿಂದಲೇ ಅರಿವು ಒಲಿಯುತ್ತದೆ. ಅರಿವು ಒಲಿದ ಮನ ಮಾತ್ರ ಎಲ್ಲವನೂ ಅರಿಯಬಲ್ಲದು. ಅರಿವು ಒಲಿದ ಮನ ಧನ್ಯ. ಅರಿವು ಮನಗಳೆರಡು ಸಂಗಮವಾದ ತನು ಧನ್ಯ. ಜಗಕ್ಕೆ ಪಾವನ.

506

ಅಷ್ಟವಿಧಾರ್ಚನೆ ಷೋಡಶೋಪಚಾರವ
ಅಂದಂದಿನ ಕೃತ್ಯವ ನಂದಂದಿಗೆ ಆನು ಮಾಡಿ ಶುದ್ಧನಯ್ಯಾ.
ಹಂಗು ಹರಿಯಿಲ್ಲದ ಕಾರಣ,
ಕೂಡಲಸಂಗಮದೇವ ನಿಷ್ಫಲದಾಯಕನಾಗಿ,
ಆನು ಮಾಡಿ ಶುದ್ಧನಯ್ಯಾ !

ದೇವರ ಪೂಜೆಯನ್ನು, ಜಲ ವಿಭೂತಿ ಗಂಧಾಕ್ಷತೆ ಪತ್ರಿ ಪುಷ್ಪ ಧೂಪ ದೀಪ ನೈವೇದ್ಯದೊಂದಿಗೆ ಮಾಡಿ ವಂದನೆ ಮಾಡಬೇಕು. ಇದು ಅಷ್ಟವಿಧದಿಂದ ದೇವರನ್ನು ಅರ್ಚಿಸುವ ಬಗೆ. ಪೂಜೆಗೆ ಒಂದು ಸಾಮಗ್ರಿ ಕಡಿಮೆ ಬಿದ್ದರೂ ಮನ ಸಿಡಿಮಿಡಿಗೊಳ್ಳುತ್ತದೆ. ಲಿಂಗದೇವರು ಒಂದೂ ಕೇಳುವುದಿಲ್ಲ ; ಮನ ಮಾಡದೆ ಬಿಡುವುದಿಲ್ಲ. ಏಕೆಂದರೆ ಮನ ಅರ್ಚನೆಗೆ ಒಳಗಾದ ವಸ್ತುವನ್ನೆ ದೇವರೆಂದು ನಂಬಿದೆ. ಹೀಗೆ ಪೂಜಿಸುತ್ತಾ ಬಂದವರ ಮಾತನ್ನು ನಂಬಿದೆ. ಲಿಂಗವೆಂದರೆ ಏನು ? ಇದನ್ನು ಯಾಕೆ ಪೂಜಿಸಬೇಕು ? ಪೂಜೆಗೆ ಈ ಸಾಮಗ್ರಿಗಳು ಬೇಕೆ ಎಂದು ಮನ ಒಮ್ಮೆಯಾದರೂ ಅರಿವೆಂಬ ಲಿಂಗಯ್ಯನನ್ನು ಕೇಳಲಿಲ್ಲ.

ಮನ ಪೂಜಿಸುವ ಪೂಜೆಯಿಂದ ತನುವಿನಲ್ಲಿ ಮನೆ ಮಾಡಿದ ಕುಲ ಮದ, ಛಲ ಮದಗಳು ತೊಲಗಲಿಲ್ಲ. ಧನ ಮದ, ರೂಪ ಮದ, ಯೌವ್ವನ ಮದಗಳು ತೊಲಗಲಿಲ್ಲ. ವಿದ್ಯೆಯ ಮದ, ರಾಜ್ಯ ಮದ ಮತ್ತು ತಪಸ್ಸಿನ ಅಂದರೆ ತಾನು ಮಾಡುವ ಪೂಜಾ ಮದಗಳೂ ತೊಲಗಲಿಲ್ಲ. ಅಂದಮೇಲೆ ತನುವಿನ ಮದಗಳು ತೊಲಗುವ ಅರಿವಿನ ಪೂಜೆ ಬೇಕೊ ಅಥವಾ ಜಲ ವಿಭೂತಿ ಗಂಧಾದಿಗಳಿಂದ ಜಡಲಿಂಗವನ್ನು ಪೂಜಿಸಬೇಕೊ ?

ತನುವಿನಲ್ಲಿಯೇ ಉತ್ಪತ್ತಿಯಾಗುವ ಎಂಟು ಮದಗಳನ್ನು ಮನ ಅರಿವಿನ ಸಹಾಯದಿಂದ ಅಂದಂದಿಗೆ ಅಳಿದುಕೊಂಡು ಶುದ್ಧವಾಗುವ ಪೂಜೆಯೇ ನಿಜವಾದ ಪೂಜೆ. ಇದಕ್ಕೆ ಯಾರ ಹಂಗು ಹರಿಯಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಯ್ಯನಿಗೆ ಅಭಿಷೇಕ ವಿಭೂತಿ ಗಂಧ ಅಕ್ಷತೆ ರುದ್ರಾಕ್ಷಿ ಪತ್ರಿ ಪುಷ್ಪ ಧೂಪ ದೀಪ ಘಂಟಾನಾದ ನೈವೇದ್ಯ ಗೀತ ಫಲ ತಾಂಬೂಲ ಸ್ತೋತ್ರ ಪ್ರದಕ್ಷಿಣೆ ನಮಸ್ಕಾರ ಎನ್ನುವ ಷೋಡಶೋಪಚಾರವೆಂಬ ಪೂಜೆಯ ಅವಶ್ಯಕತೆಯಿಲ್ಲ. ಏಕೆಂದರೆ ಆತ ನಿಷ್ಫಲದಾಯಕ. ಮನ, ತನುವನ್ನು ಹಿಡಿದುಕೊಂಡು ತನುವಿನಲ್ಲಿಯೇ ತನ್ಮಯವಾದ ಅರಿವನ್ನೇ ಗುರುದೇವನನ್ನಾಗಿಸಿಕೊಂಡು, ಆತನನ್ನೇ ಮಹಾದೇವನನ್ನಾಗಿಸಿಕೊಂಡು ಶುದ್ಧನಾಗುವುದೇ ಮಹಾ ಪೂಜೆ.

507

'ಮಾಟ ಕೂಟ, ಫಲ ಪ್ರಾಪ್ತಿ' ಎಂಬ ಮಾತ ಕೇಳಲಾಗದು ಶಿವ ಶಿವಾ !
ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು
ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ,
ಅಲ್ಲಿ ಮಾಡುವರೂ ಮಾಡಿಸಿಕೊಂಬುವರೂ ನೀವೆ
ಕೂಡಲಸಂಗಮದೇವಾ.

ಮಾಯಾ ಮಾಟ ಮಂತ್ರ ತಂತ್ರ ಯಜ್ಞ ಯಾಗಾದಿಗಳಿಂದ ಫಲ ಪ್ರಾಪ್ತಿ ಎಂಬ ಮಾತ ಕೇಳಲಾಗದು. ಅವೆಲ್ಲ ಬರೀ ಸುಳ್ಳ, ವ್ಯವಹಾರ. ಬದುಕುವುದಕ್ಕಾಗಿ, ಭಯಕ್ಕಾಗಿ ಮಾಡುವ ಮಾಟಕೂಟದಿಂದ ಫಲ ಪ್ರಾಪ್ತಿಯಾಗದು.

ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ ಅಲ್ಲಿ ಮಾಡುವರೂ ಮಾಡಿಸಿಕೊಂಬುವರೂ ನೀವೆ :

ಅರಿವೆ ಗುರು. ಆ ಗುರುದೇವನಿಗೆ ಮನವೇ ಭಕ್ತನಾಗಿ ಭಕ್ತಿ ಮಾಡಿದಾತನೇ ಭಕ್ತ. ಇವರಿಬ್ಬರೂ ಒಬ್ಬರನ್ನು ಒಬ್ಬರು ಅರಿತುಕೊಂಡವರು. ಹೀಗೆ ಭಕ್ತಿ ಮಾಡಿದ ತನು ಗುರುದೇವ ಹೇಳಿದಂತೆ ನುಡಿಯುತ್ತದೆ ; ಹಾಗೆಯೇ ನಡೆಯುತ್ತದೆ. ಮಾಟ ಕೂಟದಿಂದ ಫಲ ಪ್ರಾಪ್ತಿಯಾಗುವುದಿಲ್ಲವೆಂದು ತನುವಿಗೆ ಕೂಡಲೇ ತಿಳಿಯುತ್ತದೆ.

ಮಾಟ ಮಂತ್ರ ತಂತ್ರ ಯಜ್ಞ ಯಾಗಾದಿಗಳನ್ನು ಮಾಡಿದೆನೆಂದು ಹೆಗ್ಗಳಿಕೆ ಕೊಚ್ಚಿಕ್ಕೊಳ್ಳುವ ಅಜ್ಞಾನ ತನುವಿನಲ್ಲಿ ಸಂಗ್ರಹವಾಗುತ್ತದೆ. ಮನ ಮಾಡಿದೆನೆಂದು ತನು ಇರುವವರೆಗೆ ಬೊಗಳಿ ಬೊಗಳಿ ಸಾಯುತ್ತದೆ. ಶ್ರೀಗುರುಲಿಂಗಯ್ಯ ಮನಕ್ಕೆ ಒಲಿದ ಕಾರಣ, ಮನ ಭಕ್ತನಾಯಿತು. ಭಕ್ತ ಶ್ರೀಗುರುಲಿಂಗಯ್ಯನಿಗೆ ಮಾಡಿದ ಭಕ್ತಿಯ ಬಗ್ಗೆ ಹೆಗ್ಗಳಿಕೆ ಕೊಚ್ಚಿಕ್ಕೊಳ್ಳುವಂತಿಲ್ಲ. ಏಕೆಂದರೆ ಶ್ರೀಗುರುಲಿಂಗಯ್ಯ ಪೂಜೆ ಮಾಡಿಸಿಕೊಳ್ಳುವಾತ ಮನವೆಂಬ ಭಕ್ತ ಪೂಜೆ ಮಾಡುವಾತ. ಈ ಪೂಜೆ ತನುವಿನಲ್ಲಿಯೇ ನಡೆಯುವುದರಿಂದ ಹೇಳಲು ಬರುವುದಿಲ್ಲ. ಅಲ್ಲಿ ಪೂಜೆ ಮಾಡುವವರೂ ಮಾಡಿಸಿಕೊಂಬುವವರೂ ಒಬ್ಬರೇ ಆದಕಾರಣ ! ತನುವಿನಲ್ಲಿಯೇ ಸಂಗಮವಾದ ಸಂಗಯ್ಯನಿಗೆ ತನುವಿನಲ್ಲಿಯೇ ಸಂಗಮವಾದ ಭಕ್ತ ಪೂಜೆ ಮಾಡುವ ಕಾರಣ !

508

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ,
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ,
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮಭೇದನವಾಯಿತ್ತಯ್ಯಾ,
ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯ
ದಿಟವ ಮಾಡಿ ತೋರಿದರು ಕಾಣಾ, ಕೂಡಲಸಂಗಮದೇವಾ.

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ:

ತನುವಿನ ಸ್ವಾನುಭಾವದಿಂದ ತನುವಿನಲ್ಲಿರುವ ಅಷ್ಟ ಮದಗಳು ಹಾಳಾಗುತ್ತವೆ ; ಸಪ್ತ

ವ್ಯಸನಗಳು ಹಾಳಾಗುತ್ತವೆ. ತನು ಅರಿವಿನ ತನುವಾಗುತ್ತದೆ. ಬುದ್ಧ ಬಸವಾದಿ ಶರಣರ ತನುವಾಗುತ್ತದೆ.

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ :

ಮನಕ್ಕೆ ತನುವಿನಲ್ಲಿರುವ ಅರಿವು ಒಲಿತರೆ ಮರ್ಕಟದಂತಿರುವ ಮನ ಮಹಾದೇವನಾಗುತ್ತದೆ. ಮನ, ಅರಿವನ್ನೇ ಮಹಾದೇವನನ್ನಾಗಿ ಮಾಡಿಕೊಂಡು ತಾನು ಭಕ್ತನಾಗಬೇಕು.

ಮಹಾದೇವ ಸ್ವಾನುಭವಿ. ಸದಾ ತನುಮನಗಳನ್ನು ರಕ್ಷಿಸುವಾತ. ಆತ ಉಸುರಿದ ನುಡಿಗಳಿಂದಲೇ ಭಗವದ್ಗೀತೆ ಬೈಬಲ್ ಸಕಲ ಉಪನಿಷತ್ತುಗಳು ಅಕ್ಷರದಲ್ಲಿ ಮೂಡಿದವು. ಆತ ಅಕ್ಷರೋತ್ತಮ. ಈತನ ಮಾತುಗಳನ್ನು , ಈತ ನುಡಿದ ಎಂಜಲು ಅಕ್ಷರಗಳನ್ನು ಸಂಗ್ರಹಿಸಿಕೊಂಡು ಮನ ನುಡಿದರೆ ಅದು ಪಂಡಿತನ ತನು ಎನ್ನಿಸಿಕೊಳ್ಳುತ್ತದೆ. ಶಾಸ್ತ್ರಿಯಾಗಿ ಜ್ಞಾನದ ನುಡಿಗಳನ್ನು ನುಡಿಯುವ ಅಜ್ಞಾನಿ ಎನ್ನಿಸಿಕೊಳ್ಳುತ್ತದೆ. ಅನುಭಾವಿಯಾಗುವುದಿಲ್ಲ. ಮಹಾದೇವ ಮತ್ತು ಮನ ಬೇರಲ್ಲ. ಮಹಾದೇವ ಬೆಳಕಾದರೆ ಮನ ಆತನ ನೆರಳು.

ನೆರಳು ಬೆಳಕಿನ ಮಾತು ಆಡಿದರೆ ಬೆಳಕಾಗುವುದಿಲ್ಲ. ಅದು ಬೆಳಕಾಗಲು ಬೆಳಕಿನಲ್ಲಿಯೇ ಪ್ರವೇಶ ಮಾಡಬೇಕು. ಬೆಳಕಿಗೆ ಮಾತ್ರ ಕತ್ತಲು ಕಳೆಯುವ ಶಕ್ತಿಯಿದೆ. ಆದರೆ ಕತ್ತಲು ಕೂಡಾ ಬೆಳಕಿನಿಂದಲೇ ಹುಟ್ಟಿದೆ. ಮನ ಸ್ವತಹ ಕತ್ತಲಾಗಿ ತನು ಹಿಡಿದು ಬೆಳಕಿನಿಂದ ಬಂದ ನುಡಿಗಳನ್ನು ನುಡಿದರೆ ಅದು ಬೆಳಕಾಗಲು ಸಾಧ್ಯವಿಲ್ಲ. ಅದು ಬೆಳಕಿನಲ್ಲಿ ಪ್ರವೇಶ ಮಾಡಿ ಸ್ವಾನುಭವಿಯಾಗಬೇಕು.

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ :

ತನುವಿನಲ್ಲಿ ಅರಿವೆಂಬ ಗುರುದೇವನ ಬೆಳಕಿದೆ. ಹಾಗೆಯೇ ತನುವನ್ನು ಮನವೆಂಬ ಕತ್ತಲು ಆವರಿಸಿದೆ. ಕತ್ತಲು ಪುಸ್ತಕಗಳಿಂದ ಬಂದ ಬೆಳಕಿನ ಮಾತನಾಡಿದರೆ ಬೆಳಕಾಗುವುದಿಲ್ಲ. ಅದರ ಕತ್ತಲ ಕರ್ಮದ ಛೇದನವಾಗಬೇಕಾದರೆ ಅರಿವೆಂಬ ಗುರುದೇವನ ಬೆಳಕು ಕತ್ತಲ ಮೇಲೆ ಬೀಳಲೇ ಬೇಕು. ಆಗ ಕತ್ತಲ ಕರ್ಮವಳಿದು ಬೆಳಕಾಗುತ್ತದೆ.

ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ವಡವೆಯ ದಿಟವ ಮಾಡಿ ತೋರಿದರು ಕಾಣಾ ಕೂಡಲಸಂಗಮದೇವಾ :

ಮನದಿಂದ ಅರಿವಿಗೆ ಭಕ್ತಿ ಮಾಡಿ ಅರಿವನ್ನು ಒಲಿಸಿಕೊಂಡ ನಿಪುಣರೇ ಶರಣರು. ಅವರು ಜ್ಞಾನದ ತಂತ್ರವನ್ನು ಬಲ್ಲವರು. ಅವರ ಕಾಯಕ ಅಡಿಗಡಿಗೆ ಭಕ್ತಿ ಮಾಡುವುದು. ಶರಣರು ಮನವನ್ನು ಅರಿವಿಗೆ ವಡವೆ ಮಾಡಿ ತನುವಿಗೆ ಧರಿಸಿಕೊಂಡವರು. ತನುವಿನ ಸೆಗಣಿ ಗುಣಗಳನ್ನು ಸುಟ್ಟು ಇಡೀ ತನುವನ್ನೇ ವಿಭೂತಿ ಕಾಯವನ್ನಾಗಿ ಮಾಡಿಕೊಂಡವರು. ಅವರು ನಿಮ್ಮ ಅರಿವನ್ನು ಪಾಲಿಸುವ ನಿಮ್ಮವರಾಗಿದ್ದಾರೆ. ಅವರ ಸಮೀಪ ಹೋದವರಿಗೆ ಅಡಿಗಡಿಗೆ ಹೇಳಿ ಭಕ್ತಿಯೆಂಬ ಮನವನ್ನೇ ಒಡವೆಯಾಗಿ ಮಾಡಿಕೊಳ್ಳುವ ದಿಟದ ದಾರಿ ತೋರಿಸುತ್ತಾರೆ. ಅಂಗದಲ್ಲಿಯೇ ವಾಸ ಮಾಡಿದ ಅರಿವಿನ ಲಿಂಗಯ್ಯನಿಗೆ ಮನ ವಡವೆಯಾಗಿ ಸಂಗ ಮಾಡುವ ವಿಧಾನವನ್ನು ತೋರಿ ಶರಣರು ಹಿಂದೆ ಸರಿಯುತ್ತಾರೆ. ಹೀಗೆ ನೋಡಿಕೊಂಡು ಸಂಗಯ್ಯನಿಗೆ ವಡವೆಯಾದ ಮನವೇ ಮಹಾದೇವನಾಗುತ್ತದೆ.

509

ಭಕ್ತನೆಂತೆಂಬೆನಯ್ಯಾ-
ಭವಿಯ ಸಂಗ ಬಿಡದನ್ನಕ್ಕ ?
ಮಾಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀ ಪರರಾರ್ಥದಾಸೆ ಬಿಡದನ್ನಕ್ಕ ?
ಪ್ರಸಾದಿಯೆಂತೆಂಬೆನಯ್ಯಾ
ಆಧಿ ವ್ಯಾಧಿ ನಷ್ಟವಾಗದನ್ನಕ್ಕ ?
ಪ್ರಾಣಲಿಂಗಿಯೆಂತೆಂಬೆನಯ್ಯಾ
ಪ್ರಾಣ ಸ್ವಸ್ಥಿರವಾಗದನ್ನಕ್ಕ ?
ಶರಣನೆಂತೆಂಬೆನಯ್ಯಾ
ಪಂಚೇಂದ್ರಿಯ ನಾಶವಾಗದನ್ನಕ್ಕ ?
ಐಕ್ಯನೆಂತೆಂಬೆನಯ್ಯಾ
ಜನನ ಮರಣ ವಿರಹಿತ ವಾಗದನ್ನಕ್ಕ ?
ಇಂತಪ್ಪ ಭಾಷೆ ವ್ರತ ವೇಷಂಗಳ ನಾನರಿಯೆನಯ್ಯಾ,
ಅಘಟಿತ ಘಟಿತ ವರ್ತಮಾನವ ನಾನರಿಯೆನಯ್ಯಾ,
ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ,
ಕೂಡಲಸಂಗಮದೇವಾ.

ಭಕ್ತನೆಂತೆಂಬೆನಯ್ಯಾ ಭವಿಯ ಸಂಗ ಬಿಡದನ್ನಕ್ಕ :

ಭವಿಯ ಸಂಗ ಬಿಟ್ಟು ಭಕ್ತನ ಸಂಗ ಕಟ್ಟು ಎಂದು ಹೇಳಿದ ಮಾತು ಇದಲ್ಲ. ಒಂದು ದೇಹ ಭಕ್ತನೂ ಹೌದು ; ಭವಿಯೂ ಹೌದು. ಆವರಿಸಿದ ಅಜ್ಞಾನಿ ಮನ ಅರಿವಿನ ಜ್ಞಾನ ಪಡೆದು ಜ್ಞಾನಿಯಾಗುವುದೇ ಭಕ್ತ. ಮನ ಅರಿವಿಗೆ ಭಕ್ತನಾಗುವಿಕೆ. ಅರಿವು ಎಂದರೆ ಸತ್ಯ ; ಸತ್ಯದ ಜೊತೆಗೆ ಮನ ಸಂಗ ಮಾಡುವುದು, ಅದಕ್ಕೆ ಭಕ್ತನಾಗುವುದು. ಹೀಗೆ ಭಕ್ತನಾದ ಮನ ಭವಿ ಸಂಗ ಕಳಚಿ ಸತ್ಯದ ಜೊತೆಗೆ ಸಂಗ ಮಾಡುತ್ತದೆ. ಈ ತಂತ್ರಜ್ಞಾನದಿಂದ ಭಕ್ತನಾದ ಮನದ ತನುವನ್ನು ಭಕ್ತ ಎಂದು ಕರೆದಿದ್ದಾರೆ ಬಸವಣ್ಣ.

ಮಾಹೇಶ್ವರನೆಂತೆಂಬೆನಯ್ಯಾ ಪರಸ್ತ್ರೀ ಪರರಾರ್ಥದಾಸೆ ಬಿಡದನ್ನಕ್ಕ :

ಮನ ಸ್ವತಹ ಸ್ತ್ರೀಯಾಗಿದ್ದು, ಅದು ಪರಸ್ತ್ರೀ ಸಂಗವನ್ನು ಬಯಸುತ್ತದೆ. ಈ ಕೂಟ ಹೆಣ್ಣು ಹೆಣ್ಣು ಕೂಡಿದ ಕೂಟ. ಮನ ಹೆಣ್ಣಾಗಿದ್ದು ಅದು ಅರಿವೆಂಬ ಗಂಡನೊಂದಿಗೆ ಕೂಡುವ ಕೂಟವೇ ಕೂಡದ ಅಗಲದ ಕೂಟ. ಇದು ಅರಿವಿನ ಕೂಟ. ಪರರಾರ್ಥದಾಸೆ ಎಂದರೆ ಪರಧನ. ಶರಣರು ತನು ಮನ ಧನಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ತನು ಅಂದರೆ ದೇಹ, ಮನ ಅಂದರೆ ದೇಹವನ್ನು ಆವರಿಸಿದ್ದು, ಧನ ಎಂದರೆ ದೇಹ ಸೃಷ್ಟಿಸಿದ ಅರಿವು. ಇದು ದೇಹವನ್ನು ಸೃಷ್ಟಿಮಾಡಿ ಮನಕ್ಕೆ ಪಾಠ ಮಾಡುತ್ತ ಮಾಹೇಶ್ವರನ ಪಾತ್ರದಲ್ಲಿದೆ.

ಮನ, ಸ್ವತಹ ಅರಿವಿನ ಕಣಜವನ್ನು ಆವರಿಸಿದರೂ ಪರ ತನುವಿನಿಂದ ಬಂದ ಅರಿವನ್ನು ಸಂಗ್ರಹಿಸಿಕೊಳ್ಳುತ್ತದೆ. ಪುಸ್ತಕದಲ್ಲಿದ್ದ ಅರಿವನ್ನು ಕದ್ದು ತನ್ನದಾಗಿಸಿಕೊಂಡು ತನ್ನದೇ ಎನ್ನುವಂತೆ

ಮಾತನಾಡುತ್ತದೆ. ಒಂದು ತನುವಿನಲ್ಲಿ ಅರಿವೂ ಇದೆ ; ಆ ಅರಿವನ್ನು ಬಳಕೆ ಮಾಡುವ ಮನವೂ ಇದೆ. ಅರಿವು ಬಳಕೆ ಮಾಡಿ ಮನ ತನುವನ್ನು ನೋಡಿದರೆ ಅದು ತನ್ನಂತೆಯೇ ಇರುವ ಚರ್ಮದ ಹೊದಿಕೆಯುಳ್ಳ ತನು. ಇದು ಮನಕ್ಕೆ ಮನದಟ್ಟಾದರೆ ತನುವಿಗೆ ಸ್ತ್ರೀ ಬೇಕಿಲ್ಲ ; ಪುರುಷನೂ ಬೇಕಿಲ್ಲ. ಸ್ತ್ರೀ ಆದ ತನು ಕೂಡ ಸ್ತ್ರೀಯಾಗಿ ಅರಿವಿನ ಪುರುಷನೊಂದಿಗೆ ಕೂಡಬೇಕು. ಪುರುಷ ಆದ ತನು ಕೂಡ ಸ್ತ್ರೀ ಆಗಿ ಅರಿವಿನ ಪುರುಷನೊಂದಿಗೆ ಕೂಡಿ ಆ ಅರಿವನ್ನು ಬಳಕೆ ಮಾಡುವವನೇ ಮಾಹೇಶ್ವರ.

ಪ್ರಸಾದಿಯೆಂತೆಂಬೆನಯ್ಯಾ ಆಧಿವ್ಯಾಧಿ ನಷ್ಟವಾಗದನ್ನಕ್ಕ :

ಕಾಯ ಪ್ರಸಾದಿ ಕಾಯವಾಗಬೇಕು. ಅಂದರೆ ಮಾತ್ರ ಅದಕ್ಕೆ ಆದಿ ವ್ಯಾಧಿಗಳು ತಟ್ಟುವುದಿಲ್ಲ. ನೋಡಿದ ನೋಟವೆಲ್ಲ ಕಣ್ಣಿನಲ್ಲಿ ಸಂಗ್ರಹವಾಗಿ ಪುನಃ ಕಾಡದೆ ಅಲ್ಲಿಯೇ ಪ್ರಸಾದವಾಗಬೇಕು. ಶಬ್ದ ಕಿವಿಯಲ್ಲಿ, ಸ್ಪರ್ಶ ಚರ್ಮದಲ್ಲಿ,ರುಚಿ ನಾಲಿಗೆಯಲ್ಲಿ, ವಾಸನೆ ಮೂಗಿನಲ್ಲಿ ಪ್ರಸಾದವಾದ ಕಾಯವೇ ಪ್ರಸಾದಿ ಕಾಯ.

ಪ್ರಾಣಲಿಂಗಿಯೆಂತೆಂಬೆನಯ್ಯಾ ಪ್ರಾಣ ಸ್ವಸ್ಥಿರವಾಗದನ್ನಕ್ಕ :

ಪ್ರಾಣ ಲಿಂಗವೆಂದರೆ ಅರಿವಿನ ಲಿಂಗ. ಅರಿವು ಯಾವ ಅಂಗದಲ್ಲಿ ಇಲ್ಲ. ಎಲ್ಲ ಅಂಗಗಳೂ ಅರಿವೆಂಬ ಲಿಂಗವನ್ನು ಗರ್ಭದಲ್ಲಿಯೇ ಧರಿಸಿಕೊಂಡು ಹುಟ್ಟಿವೆ. ಆದರೂ ಮರೆತು ಲಿಂಗವನ್ನು ಅಂಗದ ಮೇಲೆ ಕಟ್ಟಿಕೊಂಡಿವೆ. ಅಂಗದ ಮೇಲೆ ಧರಿಸಿದ ಲಿಂಗವನ್ನು ತ್ರಿಕಾಲ ಪೂಜಿಸಿದರೂ ಮನ ಪ್ರಾಣಗಳು ಸ್ವಸ್ಥಿರತೆಯನ್ನು ಕಂಡುಕೊಳ್ಳಲು ಅರಿಯವು. ಯಾವ ಮನ ಅರಿವಿನೊಂದಿಗೆ ಸಂಗ ಮಾಡಿ ಅರಿವನ್ನೇ ಲಿಂಗ ಮಾಡಿಕೊಂಡು ಅಂಗವನ್ನು ಪೂಜಿಸುತ್ತದೆಯೋ ಅದೇ ಪ್ರಾಣಲಿಂಗಿ. ಅದಕ್ಕೆ ಚಲನೆಯಿಲ್ಲ. ನೋಡಿದ ವಸ್ತುಗಳೆಲ್ಲ ಲಿಂಗಗಳೇ ಆಗಿ ಕಾಣುತ್ತವೆ.

ಶರಣನೆಂತೆಂಬೆನಯ್ಯಾ ಪಂಚೇಂದ್ರಿಯ ನಾಶವಾಗದನ್ನಕ್ಕ :

ಮನ ಅತ್ತ ಇತ್ತ ಚಲಿಸದೆ ಅಂಗದಲ್ಲಿರುವ ಅರಿವಿನಲ್ಲಿ ಐಕ್ಯವಾಗುವುದೇ ಐಕ್ಯಸ್ಥಲ. ಕಣ್ಣು ಪರ ತನುವನ್ನು ನೋಡಿ ಲಿಂಗವೆಂದು ಆರಾಧಿಸುತ್ತದೆ. ಶಬ್ದ ಕೇಳಿದ ಕಿವಿ ಅದನ್ನು ಸೋಸಿ ಅರಗಿಸಿಕೊಂಡು ನಿಶಬ್ದ ಬ್ರಹ್ಮನಾಗುತ್ತದೆ. ಸುಗಂಧ ದುರ್ಗಂಧಗಳನ್ನು ಪರಿಮಳವೆಂದು ಆಸ್ವಾದಿಸಿ ಮೂಗು ಆನಂದ ಪಡುತ್ತದೆ. ಸಕಲ ಪದಾರ್ಥಗಳನ್ನು ನಾಲಿಗೆ ಅರಿವಿನಿಂದ ಸ್ವೀಕರಿಸಿ ಪ್ರಸಾದ ಮಾಡಿಕೊಳ್ಳುತ್ತದೆ. ಸಕಲ ಸ್ಪರ್ಶವನ್ನು ಚರ್ಮ ಅರಿವೆಂಬ ಗುರುವಿಗೆ ಅರ್ಪಿಸಿ ಸಮಾಧಾನಿಯಾಗುತ್ತದೆ. ಪಂಚ ಇಂದ್ರಿಯಗಳಲ್ಲಿ ವಾಸವಾದ ಮನ ಪಂಚ ಜ್ಞಾನದಲ್ಲಿ ವಾಸವಾಗಿ ಸ್ಥಾನ ಪಲ್ಲಟ ಮಾಡುತ್ತದೆ. ಐದು ಇಂದ್ರಿಯಗಳಲ್ಲಿಯೂ ಬೇರುವ ರುಚಿ ಬೇರೆಯಾದರೂ ಅದು ತನುವಿನಲ್ಲಿ ತನ್ಮಯವಾದ ಅರಿವಿನಿಂದಲೇ ಬಂದದ್ದು ಎಂದು ಮನಕ್ಕೆ ಮನವರಿಕೆಯಾಗಿ, ಅಲ್ಲಿಯೇ ಐಕ್ಯನಾಗುತ್ತದೆ. ಪಂಚೇಂದ್ರಿಯಗಳು ಒಂದೇ ಜ್ಞಾನೇಂದ್ರಿಯವಾಗಿ ಅಂಗ ಲಿಂಗಾಂಗವಾಗುತ್ತದೆ. ಮನ ಆ ಅರಿವಿನ ಗುರುದೇವನಿಗೆ ಶರಣು ಹೋಗಿ ಶರಣನಾಗುತ್ತದೆ. ಇಂತಹ ತಂತ್ರಜ್ಞಾನ ಬಲ್ಲ ಶರಣ ತನುವಿಗೆ ತಟ್ಟಿದ ಬಾಧೆಗಳೆಲ್ಲ ಪ್ರಸಾದವಾಗುತ್ತದೆ.

ಐಕ್ಯನೆಂತೆಂಬೆನಯ್ಯಾ ಜನನ ಮರಣ ವಿರಹಿತ ವಾಗದನ್ನಕ್ಕ :

ಪ್ರತಿ ತನುವಿಗೂ ಜನನ ಉಂಟು ; ಮರಣವುಂಟು. ಶರಣನಿಗೆ ಮಾತ್ರ ಜನನವಿಲ್ಲ ; ಮರಣವಿಲ್ಲ. ಏಕೆಂದರೆ ಶರಣ ಮಹಾಜ್ಞಾನಿ ; ಜನನ ಮರಣ ಗಳನ್ನು ಅರಿವಿನಿಂದ ದಾಟಿದ ಪರಮ ವೀರ. ಅಂಗದ ಸೃಷ್ಟಿಗೆ ಅರಿವಿನ ಬಿಂದು ಬೀಜವೇ ಮೂಲ. ಆ ಬೆಳಕಿನ ಬೀಜದಿಂದಲೇ

ಅಂಗ ಅಂಕುರ ಹೊಡೆದು ಗರ್ಭದ ಭೂಮಿಯಿಂದ ಲಿಂಗಾಂಗವಾಗಿ ಬಂದಿದೆ. ಅರಿವಿನ ಬೆಳಕಿನ ಬೀಜದೊಂದಿಗೆ ನೆರಳಾಗಿ ಮನವೂ ಬಂದಿದೆ. ಎಲ್ಲಿ ಬೆಳಕಿದೆಯೋ ಅಲ್ಲಿಯೇ ನೆರಳು. ಮನವೆಂಬ ನೆರಳು ಬೆಳಕು ಹೊರಗಿದೆಯೆಂದು ಭಾವಿಸಿ ತನುವನ್ನು ಅತ್ತ ಕರೆದೊಯ್ಯುತ್ತದೆ. ತನು ಮನ ಸೆಳೆದಲ್ಲಿಗೆ ಹೋಗಿ ಜನನ ಮರಣದ ಬಾಧೆಯನ್ನು ಹೊರುತ್ತದೆ. ಕಣ್ಣಿನಿಂದ ನೋಡಿದರೆ ತನುವಿಗೆ ಅಪಾಯ, ಕಿವಿಯಿಂದ ಕೇಳಿದರೆ ತನುವಿಗೆ ಅಪಾಯ, ಮುಟ್ಟಿದರೆ, ರುಚಿಸಿದರೆ, ಮೂಸಿಸಿದರೆ ತನು ಮರಣದ ಬಾಧೆಯನ್ನು ಅನುಭವಿಸುತ್ತದೆ.

ತನುವಿಗೆ ಸುಖ ದುಃಖಗಳು ಜನನ ಮರಣಗಳು ಅಜ್ಞಾನಿ ಮನದಿಂದಾಗಿ ಆಗುತ್ತದೆ. ಕತ್ತಲ ಮನ ಅರಿವಿನತ್ತ ಪಯಣಿಸಿದರೆ ಬೆಳಕಾಗುತ್ತದೆ. ಅರಿವಿನ ಬೆಳಕಿಗೆ ಮರಣವಿಲ್ಲ ಜನನವೂ ಇಲ್ಲ. ಹಾಗೆಯೇ ಬೆಳಕಿನ ನೆರಳಿಗೆ ಜನನವಿದೆ ಮರಣವಿದೆ. ಬೆಳಕಿನಿಂದ ನೆರಳು ಹುಟ್ಟುತ್ತದೆ. ಪುನಃ ಅದು ಬೆಳಕಿನಲ್ಲಿಯೇ ಮರಣಹೊಂದಿ ಬೆಳಕಾಗುತ್ತದೆ. ಅರಿವು ಬೆಳಕಾದರೆ ಮನ ಕತ್ತಲು. ತನು ಇದ್ದಾಗಲೇ ಅರಿವಿನ ಬೆಳಕಿನಲ್ಲಿ ಮನ ಲೀನವಾಗಿ ಬೆಳಕಾಗುವುದೆ ಜನನ ಮರಣದ ಬಾಧೆಗಳನ್ನು ಕಳೆದುಕೊಳ್ಳುವುದು.

ಇಂತಪ್ಪ ಭಾಷೆ ವ್ರತ ವೇಷಗಳನು ಮನ ತನುವಿಗೆ ಹಾಕಿಕೊಳ್ಳದೆ, ಅಘಟಿತ ಘಟಿತ ವರ್ತಮಾನವನು ಮನ ಅರಿಯದೆ, ಜ್ಞಾನಿ ಶರಣರ ಸೇವಕನಾಗಿ ಜ್ಞಾನದ ಆಚಾರದಲ್ಲಿ ತೊಡಗಿ ಮಹಾಜ್ಞಾನಿಯಾಗುವುದೇ ಮನದ ಪ್ರಮುಖವಾದ ಕೆಲಸ.

ಅಂಗದಲ್ಲಿರುವ ಅರಿವಿನ ಸಂಗಯ್ಯನನ್ನು ಮನ ಬೆರೆತು ಮಹಾದೇವನಾಗುವುದೇ ಮನದ ಕಾಯಕವಾಗಬೇಕು. ಇಂತಹ ನಿಪುಣ ಕಾಯವೇ ಕೈಲಾಸ. ಇದಕ್ಕೆ ಜನನವಿಲ್ಲ ಮರಣವಿಲ್ಲ.

510

ಅಭ್ಯಾಸವೆನ್ನ ವರ್ತಿಸಿತ್ತಯ್ಯಾ, ಭಕ್ತಿ ಸಾಧ್ಯವಾಗದು,
ನಾನೇವೆನಯ್ಯಾ ?
ಆನು ನಿಮ್ಮ ಮನಂಬೊಗುವನ್ನಕ್ಕ ನೀವೆನ್ನ ಮನಂಬೊಗುವನ್ನಕ್ಕ
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ,
ಕೂಡಲಸಂಗಮದೇವಾ.

ಮನ, ಲಿಂಗವನ್ನು ತ್ರಿಕಾಲ ಪೂಜಿಸುವ, ಧ್ಯಾನಿಸುವ, ಜಪ ತಪಾದಿಗಳನ್ನು ಮಾಡುತ್ತ, ಮಣಿಯನೆಣಿಸುತ್ತಾ ಕಾಲಕಳೆಯುವ ಅಭ್ಯಾಸದಲ್ಲಿ ತೊಡಗಿದೆ. ಜೊತೆಗೆ ಇದರ ಅಹಂಕಾರವನ್ನು ಬೆಳೆಸಿಕೊಂಡು ತನುವನ್ನು ಸಂಕಟದಲ್ಲಿಡುತ್ತದೆ. ಇಂತಹ ದರಿದ್ರ ಕ್ರಿಯೆಯಲ್ಲಿದ್ದ ಮನಕ್ಕೆ ಮನದಟ್ಟಾಗುವುದು ಬಲು ಜಟಿಲ.

ನಾನಾ ಅಭ್ಯಾಸದಲ್ಲಿ ತನುವಿನೊಂದಿಗೆ ತೊಡಗಿದ ಮನ ಅರಿವಿಗೆ ಹೋಗಿ ಆ ಅರಿವಿಗೆ ಭಕ್ತಿಮಾಡುವುದು ಸಾಧ್ಯವಾಗದು. ಹೀಗೆ ಜಪತಪಾದಿಗಳಲ್ಲಿ ತೊಡಗಿದ ಮನವಾದರೂ ಜಾಗ್ರತನಾಗಿ ಅರಿವೆಂಬ ಗುರುದೇವನ ಸನ್ನಿಧಿಗೆ ಸೇರಬೇಕು ; ಇಲ್ಲ ಅರಿವೆಂಬ ಗುರುದೇವನು ಮನದಲ್ಲಿ ಪ್ರವೇಶ ಮಾಡಿ ಆ ಮನವನ್ನು ತನ್ನಂತೆ ಮಾಡಿಕೊಳ್ಳಬೇಕು.

ಕಾಯ ಗುಣಗಳನ್ನು ಕಳೆದುಕೊಂಡ ಶರಣರ ದರ್ಶನ ಮನಕ್ಕೆ ಆಗಬೇಕು; ಅಂತಹ

ಮಹಾಜ್ಞಾನಿಗಳಿಗೆ ಮನ; ತನು ಮನ ಧನದೊಂದಿಗೆ ಶರಣು ಹೋಗಬೇಕು. ಅಂದರೆ ಮಾತ್ರ ಮನ ಘನಮನವಾಗಬಲ್ಲದು. ಅಂಗದಲ್ಲಿಯೇ ಕೂಡಿದ ಕೂಡಲ ಸಂಗಯ್ಯನನ್ನು ಬೆರೆತು ಸಂಗಮನಾಥನೇ ಆಗುವುದು.

511

ತನು ಸಾರಾಯರ, ಮನಸಾರಾಯರ, ಜ್ಞಾನಸಾರಾಯರ
ತೋರಯ್ಯಾ, ನಿಮ್ಮ ಧರ್ಮ.
ಭಾವಸಾರಾಯರ ಭಕ್ತಿಸಾರಾಯರ
ತೋರಯ್ಯಾ, ನಿಮ್ಮ ಧರ್ಮ.
ಕೂಡಲಸಂಗಮ ದೇವಯ್ಯಾ,
ನಿಮ್ಮ ನರಿಯದವಗುಣಿಗಳ
ತೋರದಿರಯ್ಯಾ, ನಿಮ್ಮ ಧರ್ಮ.

ತನು ಸಾರಾಯರ, ಮನಸಾರಾಯರ, ಜ್ಞಾನಸಾರಾಯರ ತೋರಯ್ಯಾ, ನಿಮ್ಮ ಧರ್ಮ:ತನು ಜ್ಞಾನದಿಂದ ಭರಿತವಾಗಿದೆ. ಜ್ಞಾನವನು ಅರಿಯುವ ಯುಕ್ತಿ ಮನಕ್ಕಿದ್ದರೂ ಅರಿಯುತ್ತಿಲ್ಲ. ಜ್ಞಾನ ಹಲವಾರು ಯುಕ್ತಿ ಸಾದನಗಳ ಮೂಲಕ ತನು ಮನಕ್ಕೆ ಪಾಠ ಮಾಡುತ್ತಿದ್ದರು ಸಾರಾಯದ ಮಾರ್ಗವನು ಅರಿಯಲು ಸಾಧ್ಯವಾಗುತ್ತಿಲ್ಲ. ಸಾರಾಯದ ಮಾರ್ಗವನು ತೋರುವುದು ಅರಿವೆಂಬ ಗುರುದೇವನ ಕರ್ತವ್ಯ ; ಅದು ಆತನ ಧರ್ಮವೂ ಆಗಿದೆ. ಗುರುದೇವ ಹೇಳುವುದು ಬಿಟ್ಟಿಲ್ಲ ; ಮನ ಭಕ್ತನಾಗಿ ಕೇಳುವ ಗೊಡವೆಗೆ ಹೋಗುತ್ತಿಲ್ಲ. ತನು ಮನ ಜ್ಞಾನ ಸಾರಾಯದಿಂದ ಭರಿತವಾಗಿದ್ದರೂ ಶಿಕ್ಷಣದ ಸುಳುಹು ಮನಕ್ಕೆ ದಕ್ಕುತ್ತಿಲ್ಲ. ಅದಕ್ಕಾಗಿಯೇ ಕಾಯದ ಗುಣ ಕಾಯ ಮಾಡುತ್ತಿದೆ. ಜ್ಞಾನದ ಗುಣ ಜ್ಞಾನ ಮಾಡುತ್ತಿದೆ, ಮನದ ಗುಣ ಮನ ಮಾಡುತ್ತಲಿದೆ.

ತನುವಿನಲ್ಲಿಯೇ ಇದ್ದ ಸಾರಾಯವನು ತನು ತೋರುವುದೆಂದರೇನು ? ತನು ಮನ ಜ್ಞಾನಗಳು ಒಂದಾಗಬೇಕು. ಅದು ತನುವಿನ ಧರ್ಮ, ಮನದ ಧರ್ಮ ಜ್ಞಾನದ ಧರ್ಮ ;

ಭಾವ ಸಾರಾಯರ ಭಕ್ತಿ ಸಾರಾಯರ ತೋರಯ್ಯಾ,ನಿಮ್ಮ ಧರ್ಮ :

ಅಂಗದಲ್ಲಿ ಭಾವವಿದೆ, ಭಕ್ತಿಯೂ ಇದೆ. ಮನದ ಅಹಂಕಾರದಿಂದಾಗಿ ಭಾವ ದುರ್ಭಾವವಾಗುತ್ತದೆ. ಭಕ್ತ ಭವಿಯಾಗುತ್ತದೆ.

ಉದಾ: ಸ್ನೇಹ ಮಾಡುವುದಕ್ಕಾಗಿ ಭಾವ ಅರಳುತ್ತದೆ ಸ್ನೇಹಿತನ ನಿಂದೆಗಳಿಂದ ಭಾವ ಕೆರಳುತ್ತದೆ. ಭಾವಭಾವವಾಗಿಯೇ ಉಳಿಯುವುದು ಅಂಗದಲ್ಲಿಯೇ ಸಂಗಮವಾದ ನಿರ್ಭಾವ ಪರಿಚಯವಾದಾಗ ಮಾತ್ರ ಸಾಧ್ಯವಾಗುತ್ತದೆ. ಭಾವಕ್ಕೆ ನಿರ್ಭಾವದ ದರ್ಶನವಾಗುವುದೇ ಭಾವದ ಸಾರಾಯ. ಭವಿ ಮನಕ್ಕೆ ಭಕ್ತಿಯ ದರ್ಶನವಾಗುವುದೇ ಭಕ್ತಿ ಸಾರಾಯ. ಇವೆರಡನ್ನೂ ಪರಿಚಯಿಸುವುದು ಅರಿವೆಂಬ ಗುರುದೇವನ ಧರ್ಮವೇ ಆಗಿದೆ.

ಕೂಡಲಸಂಗಮದೇವಯ್ಯಾ ನಿಮ್ಮನರಿಯದ ಅವಗುಣಿಗಳ ತೋರದಿರಯ್ಯಾ, ನಿಮ್ಮ ಧರ್ಮ :

ತನುವಿನಲ್ಲಿರುವ ಅರಿವೆಂಬ ಗುರುದೇವನನ್ನು ಅರಿತ ತನುವಿನ ಮನವೆ ನಿಮ್ಮನರಿತ ಮನ.ಅಂತಹವರೇ ನಿಮ್ಮನರಿತವರು ಅವರು ಮಹಾಜ್ಞಾನಿಗಳು ; ಅರಿವಿಗೆ ಶರಣು ಹೋಗಿ

ಶರಣರಾದವರು.

ಅರಿವೆಂಬ ಗುರುದೇವನೆ, ನೀನು ಹಗಲಿರುಳು ದೇಹದಲ್ಲಿದ್ದು ಪಾಠ ಮಾಡಿದರೂ ಮನಕ್ಕೆ ಮನದಟ್ಟಾಗದು. ಇಂತಹ ಅವಿವೇಕಿ ಮನಕ್ಕೆ ಮಹಾಜ್ಞಾನಿಗಳ ದರ್ಶನ ಮಾತ್ರ ಮಾಡಿಸು. ಅದು ನಿಮ್ಮ ಧರ್ಮ. ಅದು ನಿಮ್ಮ ಕರ್ತವ್ಯ ಕೂಡಾ ಎಂದು ಮನವೇ ಅರಿವಿನ ದರ್ಶನ ಪಡೆದ ತನುವನ್ನು ಹುಡುಕುವುದಕ್ಕಾಗಿ ಅರಿವೆಂಬ ಗುರುದೇವನಿಗೆ ಕರುಣಿಸುವಂತೆ ಆಲಾಪ ಮಾಡಬೇಕು.

512

ಸಂಚಲವಿಲ್ಲದ ಭಕ್ತಿ, ವಂಚನೆಯಿಲ್ಲದ ಮಹಾಂತರ ತೋರಾ,
ತನು ಶುಚಿ ಮನ ಶುಚಿಗಳ ತೋರಾ
ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸು.
ಕೂಡಲಸಂಗಮದೇವಾ.

ಚಲನೆಯಿಲ್ಲದ ಚಂಚಲವಿಲ್ಲದ ಮನದ ತನುವನ್ನು ತೋರಾ. ಭಕ್ತಿಗೆ ವಂಚನೆ ಮಾಡದ ಮನದ ತನುವನ್ನು ತೋರಾ. ತನು ಮನ ಧನ ಒಂದಾದ ಮಹಾಜ್ಞಾನಿಗಳ ತನುವನ್ನು ತೋರಾ ಎಂದು ಮನ ತನುವಿನಲ್ಲಿಯೇ ತನ್ಮಯವಾದ ಮಹಾಂತನನ್ನು ಪ್ರಾರ್ಥಿಸಬೇಕು.

ತನು ಶುಚಿಯಾದವರ, ಮನ ಶುಚಿಯಾದವರ, ಮಹಾ ಜ್ಞಾನಿಗಳ ತೋರಾ ಎಂದು ಮನ ಅರಿವೆಂಬ ಗುರುದೇವನಿಗೆ ಗೋಗರೆಯಬೇಕು.

ಇಂತಪ್ಪ ಶಿವಜ್ಞಾನಿಗಳ, ಶಿವನೊಂದಿಗೆ ಐಕ್ಯವಾದ ಮನದ ತನು ಉಳ್ಳವರನ್ನು ತೋರಿ ಬದುಕಿಸು ತಂದೆ ಎಂದು ಮನ ತನುವಿನಲ್ಲಿಯೇ ತನ್ಮಯವಾದ ಮಹಾದೇವನನ್ನು ಅಂಗಲಾಚಬೇಕು.

ಕೂಡಲಸಂಗಮದೇವಾ :

ಅಂಗದಲ್ಲಿಯೇ ಅರಿವು ಅದರ ನೆರಳಾದ ಮನಗಳೆರಡು ಕೂಡಿ ಸಂಗಮವಾಗಿವೆ. ಕ್ರಿಷ್ಣೆ-ಭೀಮಾ ನದಿಗಳೆರಡೂ ಬೇರೆ ಬೇರೆಯಾಗಿ ಹರಿಯುವಾಗ ಅವೆರಡೂ ನದಿಗಳನ್ನು ಹೆಸರಿಸಲು ಬರುತ್ತದೆ. ಎರಡೂ ನದಿಗಳು ಒಂದೆಡೆ ಕೂಡಿದಾಗ ಭೀಮಾ ನದಿ ಯಾವುದು? ಕೃಷ್ಣಾ ನದಿ ಯಾವುದು ಎಂದು ಗುರುತಿಸಲು ಬರುವುದಿಲ್ಲ. ಹಾಗೆಯೇ ಅರಿವು ಮನ ಅಂಗದಲ್ಲಿಯೇ ಸಂಗಮವಾದದ್ದು ಮನಕ್ಕೆ ಮನದಟ್ಟಾದರೆ ಅದು ಮಹಾದೇವನಾಗುತ್ತದೆ. ಅರಿವಿನ ಮಹಾಂತ ನಾಗುತ್ತದೆ. ಅದಕ್ಕಾಗಿಯೇ ಅರಿವು ಮನ ಸಂಗಮವಾದ ಸಂತರನ್ನು ತೋರಿ ಅದರಂತೆ ನನ್ನನ್ನು ಮಾಡು ದೇವನೆ ಎಂದು ಮನ ಭಕ್ತಿ ಯಿಂದ ಅರಿವೆಂಬ ಗುರುದೇವನನ್ನು ಬೇಡುವ ಚಿತ್ರಣವಿಲ್ಲಿದೆ.

513

ಕಾಮಸಂಗವಳಿದು ಅನುಭಾವಸಂಗದಲುಳಿದವರನು ಅಗಲಲಾರೆನು ;
ಶಿವಂಗೆ ಮಿಗೆ ಒಲಿದವರನು ನಾನಗಲಲಾರೆನು, ಕಾಣಾ,
ಕೂಡಲಸಂಗಮದೇವಾ.

ಕಾಮಸಂಗವಳಿದು ಅನುಭಾವಸಂಗದಲುಳಿದವರನು ಅಗಲಲಾರೆನು :

ಹೇಮ ಭೂಮಿ ವಿಷಯಗಳ ಸಂಗವಳಿದು ಸ್ವಾನುಭವದ ಸಂಗಮಾಡಿದವರನು ಮನ ಹುಡುಕಬೇಕು. ಹೇಮ ಭೂಮಿ ವಿಷಯಗಳ ಸಂಗ ಮಾಡಿದಲ್ಲಿ ಏನು ಫಲ, ಇದು ತನುವಿಗೆ ಬೇಕೊ ಹೇಗೆ ? ಎನ್ನುವ ಪ್ರಶ್ನೆ ಮನದಲ್ಲಿ ಹುಟ್ಟಿದಾಗ ಮನ ಸ್ವಾನುಭವದ ಸಂಗ ಮಾಡಿದವರನ್ನು ಹುಡುಕಲು ತೊಡಗುತ್ತದೆ. ಹೇಮ ಭೂಮಿ ವಿಷಯಗಳಿಗೆ ಸಂಗ ಮಾಡಲು ಮನಕ್ಕೆ ಬಲು ಬೇಗ ಸಾಧ್ಯವಾ ಗುತ್ತದೆ. ಆದರೆ ಈ ಮೂರೂ ಸಂಗ ಅಳಿಯಲು ಸಾಧ್ಯವಾಗುವುದಿಲ್ಲ. ಸ್ವಾನುಭವಿಗಳು ಲಭ್ಯವಾದಾಗ ಮಾತ್ರ ಈ ಮೂರು ಸಂಗ ಅಳಿಯುವುದು ಹೇಗೆ ಎಂದು ತಂತ್ರಜ್ಞಾನದ ಮೂಲಕ ಹೇಳುತ್ತಾರೆ.

ಶಿಷ್ಯನನ್ನಾಗಿಸಿಕೊಂಡು ಗುರುವಾಗಿ ಹೇಳುವವರು ಬಹಳ ಜನ ಸಿಗುತ್ತಾರೆ. ಗುರುತನ ಕಳೆದುಕೊಂಡು ಶಿಷ್ಯನ ಶಿಷ್ಯತನ ಕಳೆದು ಸ್ವಾನುಭವ ಹೇಳುವ ಗುರುಗಳು ಅತಿ ವಿರಳ. ಮನ ಇಂತಹ ಸ್ವಾನು ಭವಿ ಗುರುಗಳನ್ನು ಹುಡುಕಬೇಕು. ಹೇಮ ಭೂಮಿ ವಿಷಯಗಳಿಗೆಳಿಸಿದಷ್ಟೆ ಆಸಕ್ತಿ ಬಯಕೆ ಸ್ವಾನುಭವಿ ಗುರುಗಳನ್ನು ಹುಡುಕಲು ಮನದಲ್ಲಿ ಹುಟ್ಟಬೇಕು. ಹೂ ಮತ್ತು ಪರಿಮಳ ದುಂಬಿಯ ಸಮಾಗಮದಂತೆ ಸ್ವಾನುಭವಿ ಗುರುಗಳ ಸಂಗ ಸಾಧ್ಯವಾಗುತ್ತದೆ.

ದುಂಬಿ ಬಹಳ ದೂರವಿರುತ್ತದೆ. ಆದರೆ ಹೂ ತನ್ನ ಪರಿಮಳ ವನ್ನು ಗಾಳಿಯ ಮೂಲಕ ಹೊರಸೂಸಿ ದುಂಬಿಯನ್ನು ಕರೆತರುತ್ತದೆ. ಹಾಗೆಯೇ ಶಿಷ್ಯನಲ್ಲಿ ಸ್ವಾನುಭವಿ ಗುರುವನ್ನು ಮಾಡಿಕೊಳ್ಳುವ ಬಯಕೆ ಹುಟ್ಟಿದರೆ ಗುರುವೇ ಶಿಷ್ಯನಿದ್ದಲ್ಲಿಗೆ ಬರುತ್ತಾನೆ. ಅಥವಾ ಗುರುವಿನ ಅರಿವಿನ ಪರಿಮಳದ ವಾಸನೆ ಹಿಡಿದು ಶಿಷ್ಯನೇ ಗುರುವಿದ್ದಲ್ಲಿಗೆ ಪ್ರಯಾಣ ಬೆಳೆಸುತ್ತಾನೆ. ದುಂಬಿ ಹೂವಿನ ಪರಿಮಳದಲ್ಲಿ ಮಗ್ನವಾದಂತೆ, ಶಿಷ್ಯ ಗುರುವಿನ ಅರಿವಿನ ಸ್ವಾನುಭಾವದ ಪರಿಮಳದಲ್ಲಿ ಮಗ್ನವಾಗುತ್ತಾನೆ.

ಅರಿವೇ ಗುರು. ಅರಿವಿಲ್ಲದ ತನುಗಳೇ ಇಲ್ಲ. ಅರಿವು ಸತ್ಯ ; ಅದು ಶಿವಮಯವೂ ಸುಂದರವೂ ಹೌದು. ಸತ್ಯವೂ ಶಿವಮಯವೂ ಸುಂದರವೂ ಆದಂತಹ ಸುಖಮಯವಾದ ತಾಣ ಸ್ವಾನುಭಾವಿ ಶ್ರೀಗುರುವಿನಲ್ಲಿ ಹಾಗೂ ತನ್ನ ತನುವಿನಲ್ಲಿ ಮನಕ್ಕೆ ದಕ್ಕಿದಾಗ ಅದು ಗುರುವನ್ನು ಬಿಟ್ಟು ತನ್ನನ್ನು ಬಿಟ್ಟು ಅಗಲಲಾರದು. ಸರ್ವಾಂಗ ಗಳಲ್ಲಿಯೂ ಸತ್ಯಂ ಶಿವಂ ಸುಂದರಂ ಸಂಗಮವಾದುದನ್ನು ನೋಡಿ ಮನಕ್ಕೆ ಸಂತೋಷವಾಗುತ್ತದೆ. ಮನ ಅಂಗದಲ್ಲಿಯೇ ಸಂಗಮವಾಗಿ ಸಂಗಮನಾಥನೇ ಆಗುತ್ತದೆ.

514

ಭಕ್ತಿರತಿಯ ವಿಕಳತೆಯ ಯುಕತಿಯನೇನ ಬೆಸಗೊಂಬಿರಯ್ಯಾ ?
ಕಾಮಿಗುಂಟೆ ಲಜ್ಜೆ ನಾಚಿಕೆ ?
ಕಾಮಿಗುಂಟೆ ಮಾನಾಪಮಾನವು ?
ಕೂಡಲಸಂಗನ ಶರಣರಿಗೊಲಿದ
ಮರುಳನೇನ ಬೆಸಗೊಂಬಿರಯ್ಯಾ ?

ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಒಲಿದ ಮರುಳ ಮನದ ಭಕ್ತಿರತಿಯ

ಮುಕುತಿಯನು ಏನ ಬೆಸಗೊಂಬಿರಯ್ಯಾ ? ಅದು ಶಬ್ದಗಳಿಂದ ವರ್ಣಿಸಲು ಬಾರದ ಸುಖ. ತಾನುಂಬ ಊಟದ ರುಚಿಯ ಸುಖವನು, ತಾ ಕೊಂಬ ರತಿ ಸುಖದ ಆನಂದವನು ತಾನೇ ಅನುಭವಿಸಬಲ್ಲನೆ ಹೊರತು ಆ ಸುಖವನು ಶಬ್ದಗಳಿಂದ ಹೇಳಲು ಬರುವುದಿಲ್ಲ.

ಕಾಮಿಗುಂಟೆ ಲಜ್ಜೆ ನಾಚಿಕೆ ಕಾಮಿಗುಂಟೆ ಮಾನಾಪಮಾನ :

ಕಾಮಿಗೆ ಲಜ್ಜೆ ನಾಚಿಕೆಗಳಿರುವುದಿಲ್ಲ , ಜೀವಭಯವೂ ಇರುವುದಿಲ್ಲ. ಮಾನಾಪಮಾನಗಳೂ ಇರುವುದಿಲ್ಲ. ಬಯಕೆ ಯಾದಾಗ ಮುನ್ನುಗ್ಗುತ್ತಾನೆ. ಕ್ಷಣ ಮಾತ್ರ ವಿರಮಿಸಿ ಮರಳುತ್ತಾನೆ. ಮತ್ತೆ ಬಯಕೆ ಮಾಡುತ್ತಾನೆ. ಇದು ಕಾಮಿಯ ರತಿ ಸುಖ.

ಭಕ್ತಿರತಿ ಹಾಗಲ್ಲ. ಸಿದ್ಧಾರ್ಥನಿಗೆ ಹೆಂಡತಿ, ರಾಜ್ಯ , ಅಪಾರ ಸಂಪತ್ತು ಭೂಮಿ ತೃಣವಾಗಿ ಕಂಡಿತು. ಬುದ್ಧನೊಂದಿಗೆ ರತಿ ಸುಖದಲ್ಲಿ ನಿರತನಾದ ; ಮೈಮರೆತ ; ಸಿದ್ಧಾರ್ಥ ಮತ್ತೆ ರಾಜ್ಯಕ್ಕೆ ಮರಳಲೇ ಇಲ್ಲ. ಸಿದ್ಧಾರ್ಥ ಸಂಪೂರ್ಣವಾಗಿ ಕಳೆದು ಹೋದ ; ಬುದ್ಧನೊಂದಿಗೆ ರತಿ ಸುಖದಲ್ಲಿ ಬೆರೆತು ಬುದ್ಧನೇ ಆದ.

ಸಿದ್ಧಾರ್ಥ ಬುದ್ಧ ಬೇರಲ್ಲ. ಸಿದ್ಧಾರ್ಥನ ಅಂಗದಲ್ಲಿಯೇ ಬುದ್ಧನಿದ್ದ. ಅಂಗದಲ್ಲಿಯೇ ಬುದ್ಧನಿದ್ದಾನೆಂದು ಸಿದ್ಧಾರ್ಥನಿಗೆ ಹೊಳೆಯಿತು. ಬುದ್ಧನೊಂದಿಗೆ ಸಿದ್ಧಾರ್ಥ ಸಮಾಗಮಕ್ಕಿಳಿದ. ಈ ಭಕ್ತಿಯ ರತಿ ಸುಖವನು ವರ್ಣಿಸಲಸದಳ. ಇದು ಕೂಡದ ಅಗಲದ ಕೂಟದ ಸುಖ. ಭಕ್ತಿರತಿಯ ಜ್ಞಾನದ ಪರಮಸುಖ. ರಾಜ್ಯ ಕಳೆದುಕೊಂಡ, ಹೆಂಡತಿ ಮಕ್ಕಳನ್ನು ಕಳೆದುಕೊಂಡ, ಅಪಾರ ಸಂಪತ್ತನ್ನು ತನಗರಿಯದಂತೆ ಕಳೆದುಕೊಂಡ, ಕೊನೆಗೆ ಸಿದ್ಧಾರ್ಥನನ್ನು ಕಳೆದುಕೊಂಡು ಹೆಸರಿಲ್ಲದ ಬುದ್ಧರಸನಾದ.

515

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ.
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ.
ಇದರ ಸಂಗಸುಖದನುಭಾವವನು
ಕೂಡಲಸಂಗಮದೇವಾ ತಾನೇ ಬಲ್ಲ.

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ :

ತನು ಹುಟ್ಟಿ ಸುಮಾರು ವರ್ಷಗಳಾಗಿರಬಹುದು ; ತನುವಿನಲ್ಲಿಯೇ ಇದ್ದ ಜ್ಞಾನವನ್ನು ಮನ ಬಳಕೆ ಮಾಡಿ ಅದು ಪ್ರೌಢಾವಸ್ಥೆಗೆ ಬಾರದಿದ್ದರೆ ತನು ಹುಟ್ಟಿ ವ್ಯರ್ಥ. ಜ್ಞಾನಿಗಳು ಅಂತಹ ತನುವನ್ನು ಇನ್ನೂ ಹುಟ್ಟಿಯೇ ಇಲ್ಲ ಎಂದು ನಿರ್ಧರಿಸುತ್ತಾರೆ.

ತನುವಿನಲ್ಲಿರುವ ಜ್ಞಾನ ಮನಕ್ಕೆ ಲಭ್ಯವಾಗದಿದ್ದರೆ ಅದು ಶೈಶಾವಸ್ಥೆಯಲ್ಲಿಯೇ ಇರುತ್ತದೆ. ಅದಕ್ಕೆ ಜ್ಞಾನದ ಬಯಕೆಯಾಗಿ ಶರಣರನ್ನು ಹುಡುಕ ಹತ್ತಿದರೆ ಆ ಶಿಶು ಕಣ್ಣು ತೆರೆದಂತೆ. ಶರಣರು ಜ್ಞಾನಕ್ಕೆ ಹೋಗುವ ರಹದಾರಿ ಹೇಳಿಕೊಟ್ಟಾಗ ಆ ಶಿಶು ಅಂದೇ ಹುಟ್ಟಿ ಅಂದೇ ಯೌವ್ವನಕ್ಕೆ ಕಾಲಿಟ್ಟಂತೆ.

ಭಗವದ್ಗೀತೆ, ಬೈಬಲ್, ಉಪನಿಷತ್ತುಗಳು ಜ್ಞಾನವಲ್ಲ ; ಅವು ಜ್ಞಾನಕ್ಕೆ ಹೋಗುವ ಸೂತ್ರಗಳು. ಆದರೆ ಶೈಶಾವಸ್ಥೆಯಲ್ಲಿದ್ದ ಮನ ಅದನ್ನೇ ಜ್ಞಾನವೆಂದು ನಂಬಿ ಉರು ಹೊಡೆಯುತ್ತದೆ.

ಶಾಸ್ತ್ರಿ ಪಂಡಿತ ಪ್ರವಚನಕಾರ ಸ್ವಾಮಿ ಮಠಾಧಿಪತಿ ಪೀಠಾಧಿಪತಿ ಆಶ್ರಮವಾಸಿಯಾಗಿ ವ್ಯವಹಾರದಲ್ಲಿ ಕಾಲ ಕಳೆಯುತ್ತದೆ. ಜ್ಞಾನ ತನುವಿನಲ್ಲಿಯೇ ತನ್ಮಯ ವಾಗಿದೆ ; ಪುಸ್ತಕದಲ್ಲಿಲ್ಲವೆಂದು ಮನಕ್ಕೆ ತಿಳಿಯುವುದಿಲ್ಲ.

ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ :

ತನು, ರಾಜ, ಪ್ರಧಾನಿ, ಶ್ರೀಮಂತ, ಅಧಿಕಾರಿ, ಸಚಿವ ವೃತ್ತಿಯಲ್ಲಿದ್ದರೂ ಕೂಡಾ ಜ್ಞಾನ ಲಭ್ಯವಾದ ಕೂಡಲೇ ತನುವಿನ ವೃತ್ತಿಗಳೆಲ್ಲಾ ಗೌಣವಾಗುತ್ತವೆ ; ತೃಣವಾಗುತ್ತವೆ. ಜ್ಞಾನದ ರಹದಾರಿ ಹೇಳಿಕೊಟ್ಟ ಮಹಾಂತನಿಗೆ ವತ್ತೆಗೊಳ್ಳುತ್ತದೆ.

ಇದರ ಸಂಗಸುಖದನುಭಾವವನು ಕೂಡಲಸಂಗಮದೇವ ತಾನೇ ಬಲ್ಲ;

ವರ್ಧಮಾನ ರಾಜಕುಮಾರನಾದರೂ ರಾಜ್ಯದ ಸಂಗವನ್ನು , ತಂದೆ ತಾಯಿ ಬಂಧು ಬಳಗದ ಸುಖವನ್ನು ತೊರೆದ. ಪ್ರಧಾನಿ, ಸೈನ್ಯಾಧಿಪತಿ, ಸೇನೆ ಹಾಗೂ ಸೇವಕರ ಸುಖವನ್ನು ತೊರೆದ. ವಸ್ತ್ರ ಆಭರಣಗಳ ಸಂಗ ಸುಖವನ್ನೂ ತೊರೆದ. ತನುವಿನಲ್ಲಿಯೇ ತನ್ಮಯವಾದ ಮಹಾವೀರನೆಂಬ ಮಹಾಜ್ಞಾನಿಯ ಸಂಗವನ್ನು ವರ್ಧಮಾನ ಮಾಡಿದ. ವರ್ಧಮಾನ ಅಳಿದು ಮಹಾವೀರ ಮಾತ್ರ ಉಳಿದ. ಅಂಗದಲ್ಲಿಯೇ ಕೂಡಿದ ಈ ಸಂಗ ಸುಖವನ್ನು ಮಹಾವೀರನೇ ಬಲ್ಲ; ಮಹಾಜ್ಞಾನಿಯೇ ಬಲ್ಲ. ಇದು ಸುಖದ ಪರಮಸುಖವೆಂದು ಅನುಭವಿಸಿ ಸಂಗ ಮಾಡಿದ ಸತ್ಸಂಗಿಗಳಿಗೆ ಪರಿಚಯವೇ ಹೊರತು ಅನ್ಯರಿಗೆ ಆಗುವುದಿಲ್ಲ. ಬಯಕೆ ಮಾಡಿದರೆ ಸರ್ವರಿಗೂ ಸಾಧ್ಯವಾಗುತ್ತದೆ.

516

ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದಡೆ ರುಚಿಯುಂಟೆ ?
ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ
ಅಕ್ಕಟಾ ! ಸಂಸಾರ ವೃಥಾ ಹೋಯಿತ್ತಲ್ಲಾ !
ಅದೇತರ ಭಕ್ತಿ ? ಅದೇತರ ಯುಕ್ತಿ ?
ಕೂಡಿಕೊ, ಕೂಡಲಸಂಗಮದೇವಾ.

ತನು ಒಂದು ಸಕ್ಕರೆಯ ಕೊಡ. ಷರೀಫ ಸಾಹೇಬರು ಈ ಕೊಡವನ್ನು '' ಏನ್‌ಕೊಡ ಏನ್‌ಕೊಡವೊ ಹುಬ್ಬಳ್ಳಿ ಮಾಟದ ಚಿತ್ತಾರದ ಕೊಡವೊ'' ಎಂದು ಹೃದಯ ತುಂಬಿ ಹಾಡಿದ್ದಾರೆ. ಜ್ಞಾನಿಗಳಿಗೆ ತನು ಸಕ್ಕರೆಯ ಕೊಡದಂತೆ ಸಿಹಿಯಾಗಿ ಕಂಡರೆ, ಕಾಮಿಗಳಿಗೆ ಕಾಮದ ಅಜ್ಞಿ ಜ್ವಾಲೆಯನ್ನು ಸೃಷ್ಟಿ ಮಾಡುವ ಪ್ರಪಾತದಂತೆ ಕಾಣುತ್ತದೆ.

ಕಣ್ಣಿನಲ್ಲಿ ಜ್ಞಾನದ ಸಕ್ಕರೆಯೂ ಇದೆ ; ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೂ ಇವೆ. ಕಣ್ಣು ಜ್ಞಾನಕ್ಕೆ ಮಾತ್ರ ಸಂಬಂಧಪಟ್ಟಿದ್ದರೂ ಅಜ್ಞಾನವೆಂಬ ಅರಿಷಡ್ವರ್ಗಗಳ ಪೊರೆ ಆವರಿಸಿಕೊಂಡಿದೆ. ಈ ಪೊರೆ ಆಚಾರಗಳಿಗೆ ಹರಿಯುವುದಿಲ್ಲ ; ಶಾಸ್ತ್ರ ಪುರಾಣ ಭಗವದ್ಗೀತೆ ಬೈಬಲ್‌ಗಳನ್ನು ಪಠಿಸುವುದರಿಂದ ಹರಿಯುವುದಿಲ್ಲ. ಅರಿಷಡ್ವರ್ಗಗಳಿಗೆ ತುತ್ತಾದ ಮನ ತನುವಿನಲ್ಲಿಯೇ ತನ್ಮಯವಾದ ಜ್ಞಾನದ ಸಕ್ಕರೆ ಮೂಟೆಯನ್ನು ತನ್ನ ಭುಜಬಲದಿಂದ ತಕ್ಕೈಸಿ ಅಪ್ಪಿಕೊಳ್ಳಬೇಕು. ಆಗ ಅಂಗದಲ್ಲಿಯೇ ಇದ್ದ ಲಿಂಗಸ್ಪರ್ಶನ ವಾಗುತ್ತದೆ. ಅಂಗ ಲಿಂಗಾಂಗವಾಗುತ್ತದೆ.

ಅಕ್ಕಟಾ ! ಸಂಸಾರ ವೃಥಾ ಹೋಯಿತ್ತಲ್ಲಾ ! ಅದೇತರ ಭಕ್ತಿ ? ಅದೇತರ ಯುಕ್ತಿ ? ಕೂಡಿಕೊ, ಕೂಡಲಸಂಗಮದೇವನಾ :

ಮನಕ್ಕೆ ಹುಳಿ ಹೆಂಡವೆಂದರೆ ಸುಖ, ಕಲ್ಲು ಸಕ್ಕರೆಯೆಂದರೆ ಮೂಗು ಮುರಿಯುತ್ತದೆ. ಹೆಂಡ ಕುಡಿದು ತನುವಿನ ಆಯುಷ್ಯ ವ್ಯರ್ಥ ಕಳೆಯುತ್ತದೆ. ಯಾರ ಪಾಠವೂ ಮನಕ್ಕೆ ರುಚಿಸುವುದಿಲ್ಲ. ಕುಡಿಯಬಾರದು ಎನ್ನುವುದು ಅದಕ್ಕೆ ಗೊತ್ತಿದೆ. ಇದನ್ನು ಸಾಕ್ಷಾತ್ ಸಂಗಮನಾಥನೆ ಮನಕ್ಕೆ ಬೋಧಿಸುತ್ತಾನೆ. ಆತ ಸಕ್ಕರೆ. ಆತನನ್ನು ಮನ ಅಪ್ಪಿಕೊಳ್ಳುವ ಸಮಯ ಬೇಕು ಅಷ್ಟೆ. ಇಲ್ಲದಿದ್ದರೆ ಅರಿವಿನ ತನು ವ್ಯರ್ಥವಾಗಿ ಆಯುಷ್ಯವನ್ನು ಮುಗಿಸುತ್ತದೆ.

517

ಕಾಳಿದಾಸಂಗೆ ಕಣ್ಣನಿತ್ತೆ, ಓಹಿಲಯ್ಯನ ನಿಜಪುರಕ್ಕೊಯ್ದೆ,
ನಂಬಿ ಕರೆದಡೋ ಎಂದೆ,
ತೆಲಗು ಜೊಮ್ಮಂಗೆ ಒಲಿದೆ, ದೇವಾ,
ಕೂಡಲಸಂಗಮದೇವಾ,
ಎನ್ನನೇಕೆ ಒಲ್ಲೆಯಯ್ಯಾ !

ಕಾಳಿದಾಸ, ಓಹಿಲಯ್ಯಾ, ನಂಬಿ, ತೆಲಗು ಜೊಮ್ಮಯ್ಯರೆಂಬ ಮಹಾಜ್ಞಾನಿಗಳಿಗೆ ಜ್ಞಾನ ಲಭ್ಯ ಮಾಡಿ ಅವರನ್ನು ಅಪ್ಪಿಕೊಂಡೆ. ನನ್ನನ್ನೇಕೆ ಅಪ್ಪಿಕೊಳ್ಳುತ್ತಿಲ್ಲ ಶಿವನೆ ಎಂದು ಮಹಾಜ್ಞಾನವನ್ನು ಕುರಿತು ಮನ ವ್ಯಾಕುಲದಿಂದ ನುಡಿಯುವ ಚಿತ್ರಣವು ಇಲ್ಲಿದೆ.

ಕಾಳಿದಾಸ ತನ್ನ ಅಜ್ಞಾನದ ಕಣ್ಣನ್ನು ಮಹಾಜ್ಞಾನಕ್ಕೆ ಅರ್ಪಿಸಿ ಜ್ಞಾನದ ಕಣ್ಣು ಪಡೆದು ನೋಡುವ ನೋಟದಲ್ಲಿ ನಿಪುಣನಾದ. ಓಹಿಲಯ್ಯ ತನ್ನ ಅಜ್ಞಾನವನ್ನೇ ಜ್ಞಾನಾಗ್ನಿಗೆ ಅರ್ಪಿಸಿ ಆ ಮಹಾಜ್ಞಾನವನ್ನೇ ಪಡೆದು ನಿಪುಣ ಜ್ಞಾನಿ ಎನ್ನಿಸಿಕೊಂಡ. ಬೇಟೆ ಕಾಯಕದಲ್ಲಿದ್ದ ತೆಲಗು ಜೊಮ್ಮಯ್ಯನ ದಿನ ನಿತ್ಯದ ಪ್ರಸಾದ ಮಾಂಸವೇ ಆಗಿತ್ತು. ಆದರೂ ಆತನಿಗೆ ಜ್ಞಾನದರ್ಶನ ನೀಡಿದೆ. ಏನುಂಡರೂ ದೇಹವೇ ಒಂದು ಮಾಂಸದ ಮುದ್ದೆ ; ಅರಿತರೆ ಅದು ಅರಿವಿನ ಮಂತ್ರ ಪಿಂಡವೆಂದು ಜೊಮ್ಮಯ್ಯ ಮಾಂಸಪಿಂಡವನ್ನೆ ಮಂತ್ರಪಿಂಡ ಮಾಡಿಕೊಂಡು ಮಹಾಜ್ಞಾನಿಯಾದ.

ನಂಬಿ ಮಹಾಶರಣ. ಆತನ ಹದಿನಾರನೇ ವಯಸ್ಸಿನಲ್ಲಿಯೇ ಮದುವೆಯಾಗಲು ವಿರೋಧಿಸಿ ಜ್ಞಾನಿಯಾಗಿ ಹಾಗೆಯೇ ಉಳಿದ. ನಂತರ ಪರವೆನಾಚಿ-ಸಂಕಿಲನಾಚಿ-ಎಂಬಿಬ್ಬರನ್ನು ಮದುವೆಯಾದ. ಶಿವ ಕುಂಟಣಿಯಾಗಿ ಅವರ ದಾಂಪತ್ಯ ಜೀವನಕ್ಕೆ ನೆರವಾದನು.

ಶಿವನಿಗೆ ಗಂಗೆ ಮತ್ತು ಗೌರಿ ಎಂಬ ಇಬ್ಬರು ಪತ್ನಿಯರು. ಶಿವ ಪ್ರತಿ ತನುವಿನಲ್ಲಿ ಅರಿವಿನ ಮೂಲಕ ತನ್ಮಯನಾಗಿ ಶಿವ ಎನ್ನಿಸಿ ಕೊಂಡಿದ್ದಾನೆ. ಆ ಪರಶಿವನಿಗೆ ಜಲರೂಪಿಯಾದ ತನು ಒಬ್ಬಳು ಸತಿಯಾದರೆ ಗೌರಿ ಮತ್ತೊಬ್ಬ ಸತಿ ! ಈ ಇಬ್ಬರು ಸತಿಯರನ್ನು ಹೊಂದಿ ಮಹಾಜ್ಞಾನಿಯಾದವನೇ ಶಿವ !

ಇಂತಹ ಮಹಾ ಶಿವನನ್ನು ಒಲಿಸಿಕೊಳ್ಳಲು ತನು ಮನಗಳೆರಡು ಹಗಲಿರುಳೂ ಚಿಂತಿಸಬೇಕು. ನನ್ನನೇಕೆ ಒಲ್ಲೆಯಯ್ಯಾ ಎಂದು ಮತ್ತೆ ಮತ್ತೆ ಪ್ರಾರ್ಥಿಸಬೇಕು.

ಪರರ ಚಿಂತೆ ನಮಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೆ?
ಕೂಡಲಸಂಗಯ್ಯ ಒಲಿದಾನೊ ಒಲಿಯನೊ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು.

ಪರರ ಚಿಂತೆ ನಮಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೆ :

ಸ್ವತಹ ತಾನು ಅರಿವಿಗೆ ಹೋಗದ ವಿನಹ ಈ ಒಂದು ಸಾಲಿನ ವಚನ ಯಾವ ಶಾಸ್ತ್ರ ಜ್ಞಾನಿಗೂ ಪಂಡಿತನಿಗೂ ಅರ್ಥವಾಗದು. ಆನಂದವೂ ಕೊಡದು. ಈ ನಾಡಿನ ಶ್ರೇಷ್ಠ ಜ್ಞಾನಿಗಳೊಬ್ಬರು ಬಸವಣ್ಣನವರು ಹೀಗೇಕೆ ಹೇಳಿದರು ಎಂದು ಸಭೆಯಲ್ಲಿ ಪ್ರಶ್ನೆ ಮಾಡಿದ್ದನ್ನು ಕೇಳಿದ್ದುಂಟು.

ಮನುಷ್ಯ ಪರರ ಚಿಂತೆ ಮಾಡದಿದ್ದರೆ, ಪರರಿಗಾಗಿ ಬದುಕದಿದ್ದರೆ, ಪರರಿಗೆ ಸಹಾಯ ಸಹಕಾರ ಮಾಡದಿದ್ದರೆ ಮತ್ತೇಕೆ ಬದುಕಬೇಕು ಎಂದೆನ್ನಿಸದೆ ಇರದು. ಇಡೀ ಜಗತ್ತಿನ ತುಂಬಾ ಜ್ಞಾನಿ ಯೊಬ್ಬನನ್ನು ಹೊರತುಪಡಿಸಿ ಎಲ್ಲರೂ ಪರರ ಚಿಂತೆಯನ್ನೆ ಮಾಡುತ್ತಾರೆ. ಆದರೆ ಯಾರೂ ಕೊನೆಯವರೆಗೆ ಸಫಲರಾಗುವುದಿಲ್ಲ. ಜ್ಞಾನಿ ಮಾತ್ರ ಸಫಲನಾಗುತ್ತಾನೆ.

ಭೂಮಿಯ ಮೇಲಿದ್ದ ಯಾವ ತನುಗಳೂ ಅಸಹಾಯಸುಕರಲ್ಲ. ಹಾಗೆಯೇ ಯಾವ ತನುಗಳೂ ದಾನಿಗಳಲ್ಲ . ತನ್ನದೇ ಆದ ಪ್ರೊಡಕ್ಟ್‌ನ್ನು ಮತ್ತೊಬ್ಬರಿಗೆ ಕೊಡುವವನನ್ನು ದಾನಿ ಎನ್ನಬಹುದು. ಹಸು ಹಾಲು ಕರೆಯುತ್ತದೆ. ಮನುಷ್ಯ ಅದನ್ನು ಹಿಂಡಿಕೊಳ್ಳುತ್ತಾನೆ. ಜೇನುತುಪ್ಪ ಕೊಡುತ್ತದೆ. ಹೂ ಮಕರಂದ ಬೀರುತ್ತದೆ. ಪ್ರಾಣಿ ಮಾಂಸ ಕೊಡುತ್ತದೆ. ಮನುಷ್ಯ ಅದನ್ನು ಕೊಂದು ಪಡೆಯುತ್ತಾನೆ. ಭೂಮಿ ಜಲದೊಂದಿಗೆ ಸಕಲ ಪದಾರ್ಥಗಳನ್ನು ಕೊಡುತ್ತದೆ. ಮನುಷ್ಯ ಕಿತ್ತುಕೊಳ್ಳುತ್ತಾನೆ. ಬಲವಂತದಿಂದ ತನಗೆ ಬೇಕಾದುದನ್ನು ಬೆಳೆಯುತ್ತಾನೆ. ಚಿನ್ನ, ಸಕಲ ಖನಿಜ ಪದಾರ್ಥಗಳೂ ಭೂಮಿಯ ಗರ್ಭದಿಂದಲೇ ಬಂದದ್ದು ಅದಕ್ಕಾಗಿ ಮನುಷ್ಯ ಅಗೆದು ತೆಗೆದು ಸಂಗ್ರಹ ಮಾಡಿ ಯುದ್ಧ, ಕಳುವು, ಕೊಲೆ, ಅತ್ಯಾಚಾರ, ಹತ್ಯಾಚಾರದಲ್ಲಿ ನಿರತನಾಗಿದ್ದಾನೆ; ಅದನ್ನು ಪಡೆಯಲು.

ಆಹಾರ ತನ್ನದಲ್ಲ, ಜಲವೂ ತನ್ನದಲ್ಲ, ಭೂಮಿ, ಹೇಮವೂ ತನ್ನದಲ್ಲ. ಬಯಸುವ ವಿಷಯ ಸುಖವೂ ತನ್ನದಲ್ಲ ಅಂದಮೇಲೆ ಮನುಷ್ಯ ಮತ್ತೊಬ್ಬ ಮನುಷ್ಯನಿಗೆ ಏನು ಕೊಡಬೇಕೆಂದು ಚಿಂತಿಸಬೇಕು ? ಯಾಕೆ ಚಿಂತೆ ಮಾಡಬೇಕು ? ಪರರ ಸೇವೆ ಮಾಡುವುದಕ್ಕೆ ಯಾಕೆ ಹಾತೊರೆಯುತ್ತಾನೆ? ತನ್ನದೇ ಆದುದನ್ನು ಏನು ಕೊಡಬಲ್ಲ ಎನ್ನುವ ಚಿಂತನೆ ಪ್ರಾರಂಭವಾದರೆ ಪರರ ಚಿಂತೆ ನಮಗೇಕಯ್ಯಾ ಎನ್ನುವ ಅಚ್ಚ ಕನ್ನಡದ ಅಣ್ಣನವರ ಈ ಸಾಲು ಅರ್ಥ ವಾಗುತ್ತದೆ.

ಶಿಬಿ ಮಾಂಸ ಕೊಟ್ಟು ಧನ್ಯನೆನಿಸಿಕೊಂಡ, ದಾಸ ವಸ್ತ್ರ ಕೊಟ್ಟು ತವನಿಧಿಯ ಬೇಡಿದ, ಚೋಳ ಬೇಡಿ ಹೊನ್ನ ಮಳೆಯ ಕರೆಯಿಸಿ ಕೊಂಡ; ಅಂಜದಿರು ಅಂಜದಿರು ಅವರಂದದವ ನಾನಲ್ಲ! ಎನ್ನ ತಂದೆ, ಕೂಡಲಸಂಗಮದೇವನೆ ಸದ್ಭಕ್ತಿಯನೆ ಕರುಣಿಸೆನಗೆ.

ಹಗಲೆಲ್ಲಾ ಬೇಡುವ, ನೀಡುವ ಕಾಯಕದಲ್ಲಿಯೇ ತನುವನ್ನು ತನ್ಮಯಗೊಳಿಸುವ ಅಜ್ಞಾನಿ ಮನಕ್ಕೆ ತನುವಿನಲ್ಲಿಯೇ ಇದ್ದ ಅರಿವಿನ ತಂದೆ ಒಲಿದಾನೊ ಒಲಿಯನೊ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು ಎನ್ನುವ ಚಿಂತೆಯನ್ನು ಒಮ್ಮೆಯೂ ಮಾಡುವುದಿಲ್ಲ.

ತನ್ನಂತೆಯೇ ಇರುವ ಮನುಷ್ಯನನ್ನು ಭಿಕ್ಷುಕನೆಂದು ತಿಳಿದು ಆತನಿಗೆ ತಾನು ಭಿಕ್ಷೆ ನೀಡಿ ದಾನಿ ಎನ್ನಿಸಿಕೊಳ್ಳುವುದು ಸೂಕ್ತವೆ ? ಎಂದು ಮನ ಪ್ರಶ್ನೆ ಮಾಡಿಕೊಂಡರೆ ಉತ್ತರ ತನ್ನಲ್ಲಿಯೇ ದೊರೆಯುತ್ತದೆ. ದಾನ ಮಾಡುವುದು, ದಾನ ಬೇಡುವುದು, ಪರರ ದುಃಖಗಳಿಗಾಗಿ ಚಿಂತಿಸುವುದು ತನುವಿನ ಅಜ್ಞಾನದ ಮಹಾರೋಗ. ಚಿಂತಿಸುವ ಅಥವಾ ಬೇಡುವ ತನುವಿಗೆ ಚಿಂತನೆಯ ಸುಳುಹಿನ ಕೊರತೆಯಿದೆ. ಆ ಚಿಂತನೆ ಕೂಡಾ ತನುವಿನ ಕಣ್ಣು ಮೂಗು ನಾಲಗೆ ಚರ್ಮ ಕಿವಿಯಲ್ಲಿಯೇ ಭರಿತವಾಗಿದೆ. ತನು ಜ್ಞಾನದ ಕಣಜ. ಅದರಲ್ಲಿ ಎಲ್ಲವೂ ಇದ್ದು ಅದನ್ನು ಮರೆತು ಪರರಿಗೆ ಚಿಂತೆ ಮಾಡಿ ದಾನಿ ಎನ್ನಿಸಿಕೊಳ್ಳುತ್ತದೆ. ಭಿಕ್ಷುಕ ಎನ್ನುತ್ತದೆ. ಸರ್ವ ತನುಗಳು ಮಹಾಜ್ಞಾನದ ರಿಸರ್ವ್ ಬ್ಯಾಂಕ ಎನ್ನುವುದನ್ನೆ ಮರೆಯುತ್ತದೆ. ಹೀಗೆ ಚಿಂತನೆ ಮಾಡಿ, ಜ್ಞಾನ ಒಲಿಸಿಕೊಳ್ಳುವುದು ಹಾಸಲುಂಟು, ಹೊದೆಯಲುಂಟು !

519

ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದು,
ಮನಮಚ್ಚಿಮರುಳಾದೆ ನೋಡವ್ವ !
ಕೇಳು, ಕೇಳವ್ವಾ ಕೆಳದಿ,
ಸಖಿಯರಿಲ್ಲದೆ ಸುಖವ ಬಯಸಿದಡೆ
ದೊರಕೊಂಬುದೆ ಹೇಳಾ,
ಎನ್ನ ಮುನಿಸು ಎನ್ನಲ್ಲಿಯೇ ಅಡಗಿತ್ತು ,
ಇನ್ನು ಬಾರಯ್ಯಾ ಕೂಡಲಸಂಗಮದೇವಾ.

ವಸ್ತುವಿನ ಸತ್ಯ ಅರಿಯದದ್ದಕ್ಕಾಗಿ ಕಣ್ಣು ತನುವಿಗೆ ಕೋಪ ತರಿಸುತ್ತದೆ. ಮನ ತನುವನ್ನು ಕರೆದುಕೊಂಡು ಹೋಗಿ ವಸ್ತುವಿಗೆ ಮರಳು ಮಾಡುತ್ತದೆ. ಮನಕ್ಕೆ ಸರಿಯಾದ ಅರಿವಿನ ಗೆಳೆಯ ಸಿಗದಿದ್ದುದೇ ಇದಕ್ಕೆ ಕಾರಣ.

ಸತ್ಯ ಹೇಳುವ ಗೆಳೆಯರು ಮನಕ್ಕೆ ಸಿಗಬಹುದು, ಸಿಗದೆ ಇರಬಹುದು. ಸಿಕ್ಕರೂ ಮನಕ್ಕೆ ತೃಪ್ತಿಯಾಗದಿದ್ದರೆ ಹೊರಗಿನ ಗೆಳೆಯರನ್ನೇ ಸಖನೆಂದು ಭಾವಿಸಿ ವ್ಯರ್ಥ ತನುವಿನ ಆಯುಷ್ಯ ಕಳೆಯುತ್ತದೆ.

ಮನ ಸಖಿಯಾದರೆ, ಮಹಾಜ್ಞಾನವೇ ಸಖ ! ಅರ್ಜುನ ಸಖಿಯಾದರೆ ಶ್ರೀಕೃಷ್ಣ ಸಖನಾದಂತೆ ! ರಥವನ್ನೇ ತನುವನ್ನಾಗಿಸಿಕೊಂಡು ಯುದ್ಧ ಮಾಡಿದಂತೆ ! ತನುವಿನ ಹಾಗೂ ಮನದ ಸರ್ವರೋಗಗಳನ್ನು ಕಳೆದುಕೊಂಡು ವಿರಾಟ ಸ್ವರೂಪದ ಸುಖವನು ಅನುಭವಿಸಿದಂತೆ !

ಮನದ ಸರ್ವ ಮುನಿಸುಗಳು ತನುವಿನ ಜ್ಞಾನದಲ್ಲಿಯೇ ಅಡಗಿ ಅದು ಸಖಿಯಾಗಿ ಸಖನ ಸುಖ ಪಡೆದಾಗ ಅಗಮ್ಯ , ಅಗೋಚರ, ಅಪ್ರಮಾಣ, ಅಪ್ರತಿಮ ಲಿಂಗವೇ ತನುವಿನಲ್ಲಿ ಚುಳುಕಾದುದು ಕೂಡಲೇ ಸಖಿಯ ಗಮನಕ್ಕೆ ಬಂದು ಸುಖದ ಕೋಡಿ ಹರಿದು ಸರ್ವಸುಖಿಯಾಗುತ್ತದೆ. ಕೂಡಲಸಂಗಯ್ಯನಲ್ಲಿ ಕೂಡಿ ಸಖಿಯ ಹೆಸರು ಕಳೆದುಕೊಂಡು ಸಖನೇ ತಾನಾಗುತ್ತದೆ.

520

ಲಜ್ಜೆಗೆಟ್ಟೆನು, ನಾಣುಗೆಟ್ಟೆನು,
ಕುಲಗೆಟ್ಟೆನು, ಛಲಗೆಟ್ಟೆನು ;
ಸಂಗಾ, ನಿಮ್ಮ ಪೂಜಿಸಿ ಭವಗೆಟ್ಟೆನು ನಾನಯ್ಯಾ !
ಕೂಡಲಸಂಗಮದೇವಯ್ಯಾ,
ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು ನಾನು !

ವರ್ಧಮಾನನಿಗೆ ಅರಿವಾದ ಮೇಲೆ ಉಟ್ಟ ಬಟ್ಟೆ ತೊಟ್ಟ ಒಡವೆ ತಾನಿಟ್ಟುಕೊಂಡ ಕಿರೀಟಗಳೆಲ್ಲ ಹೇಸಿಗೆ ಎನಿಸಿತು. ನಾಚಿಕೆಯಿಂದ ತಲೆ ತಗ್ಗಿಸಿ ಮಾಡಿದ ಅಪರಾಧಗಳನ್ನು ಮೆಟ್ಟಿ ನಿಂತು ; ಅವುಗಳನ್ನು ಕೂಡಲೇ ಬಹುದೂರ ಎಸೆದು ಬಿಟ್ಟ. ಲಜ್ಜೆ ನಾಚಿಕೆ ಕುಲ ಛಲಗಳನ್ನು ಕಿತ್ತೆಸೆದು ಉಟ್ಟುಡುಗೆಯಲ್ಲಿಯೇ ಆನಂದದಿಂದ ಜಗವನ್ನು ಸುತ್ತಿದ. ಅಂಗದಲ್ಲಿಯೇ ಇರುವ ಜ್ಞಾನದ ಸಂಗವನ್ನು ಮಾಡಿ ಆ ಮಹಾಜ್ಞಾನವನ್ನೇ ಪೂಜಿಸಿದ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೊಂದಿಗೆ ಸೆಣೆಸಿ ಯುದ್ಧ ಮಾಡಿ ಜಯಿಸಿದ ; ಮಹಾವೀರನಾದ !

ಮನಕ್ಕೆ ಲಜ್ಜೆ ಉಂಟು, ನಾಚಿಕೆ ಉಂಟು, ಕುಲವುಂಟು, ಛಲವುಂಟು. ಜ್ಞಾನಕ್ಕೆ ಲಜ್ಜೆಯಿಲ್ಲ, ನಾಚಿಕೆಯಿಲ್ಲ, ಕುಲವಿಲ್ಲ, ಛಲವಿಲ್ಲ. ಮನ ತನ್ನ ಅಜ್ಞಾನವನ್ನು ಕಳೆದುಕೊಳ್ಳಲು ಹಳ್ಳ ಕೊಳ್ಳ ಸರೋವರಗಳನ್ನು ಸುತ್ತಬೇಕಿಲ್ಲ. ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿಕೊಳ್ಳಬೇಕಿಲ್ಲ. ಮನ ತನುವಿನಲ್ಲಿಯೇ ತನ್ಮಯವಾದ ಜ್ಞಾನವನ್ನು ಮುಟ್ಟಿ ಆ ಜ್ಞಾನವನ್ನೇ ಪೂಜಿಸಿ ತನ್ನ ಅಜ್ಞಾನದ ಹುಟ್ಟು ಕೆಡಿಸಿಕೊಂಡು ಮಹಾಜ್ಞಾನಿಯಾಗಬೇಕಿದೆ.

521

ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು ;
ಮೆಲ್ಲ ಮೆಲ್ಲನೆ ಹೊರೆಯೆತ್ತಿ ನೋಡಿದಡೆ
ಒಳಗೆ ಕಿಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು ;
ಎನಗಿನ್ನಾವ ಭಯವಿಲ್ಲ, ಕಾಣಾ
ಕೂಡಲಸಂಗಮದೇವಾ.

ಎಲ್ಲೆಂದರಲ್ಲಿ ಹರಿದಾಡುವ ಮನ, ಮಹಾಜ್ಞಾನದ ದರ್ಶನವಾದ ಮೇಲೆ ಆ ತನು ಹೇಗಿರುತ್ತದೆ ಎನ್ನುವ ಚಿತ್ರಣ ಇಲ್ಲಿದೆ. ಅಣ್ಣನವರು ಮಹಾಜ್ಞಾನದ ತನುವನ್ನು ಫಲಭರಿತ ಬಾಳೆಗೆ ಹೋಲಿಸಿದ್ದಾರೆ.

ಕಾಯ ಬಾಳೆಯ ದಿಂಬಿನಂತಿರುತ್ತದೆ. ಅದರಲ್ಲಿ ಜಾತಿ ಮತ ಪಂಥ ಶ್ರೀಮಂತ ಬಡವ ಭಿಕ್ಷುಕ ದಾನಿ ರಾಜ ಪ್ರಧಾನಿ ಶಾಸಕ ಅಧಿಕಾರಿ ಎನ್ನುವ ಅಜ್ಞಾನ ಸುಳಿಯುವುದೇ ಇಲ್ಲ. ಬಾಳೆಯ ದಿಂಬನ್ನು ಸುಲಿಯುತ್ತಾ ಹೋದರೆ ಎಳೆ ಎಳೆಯಾಗಿ ಸುಲಿದು ದಂಟಿಲ್ಲದಂತೆ ಖಾಲಿಯಾಗುತ್ತದೆ. ಒಳಗೆ ಕೆಚ್ಚು ಉಳಿಯುವುದೇ ಇಲ್ಲ. ಹಾಗೆಯೇ ಮಹಾಜ್ಞಾನ ಹೊಂದಿದ ಕಾಯದಲ್ಲಿ ಯಾವ

ದುರ್ವಾಸನೆಗಳೂ ಸುಳಿಯುವುದಿಲ್ಲ.

ಹಾಗೆಯೇ ಬಾಳೆಗೆ ಆದ ಫಲದಲ್ಲಿಯೂ ಬೀಜವಿಲ್ಲ. ಬಾಳೆ ಫಲ ಮತ್ತೆ ಹುಟ್ಟದಂತೆ ಬೀಜ ಸಹಿತ ಕಾಯಸೇರಿ ಪ್ರಸಾದವಾಗುತ್ತದೆ. ಅರಿವಿನ ಪ್ರಸಾದಿ ಕಾಯಕ್ಕೆ ಹುಟ್ಟು ಸಾವುಗಳ ಭಯವಿಲ್ಲ. ಕುಲ ಛಲ ಜಾತಿ ಮತ ಪಂಥಗಳ ಹೆಣ್ಣು ಗಂಡು ಭೇದವೂ ಇಲ್ಲದಂತೆ ನಿರ್ಭಯವಾಗಿ ಆನಂದದಿಂದ ಅಲೆದಾಡುತ್ತದೆ.

522

ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಭಕ್ತಂಗೆ.
ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಜಂಗಮಕ್ಕೆ.
ಆ ಜಂಗಮದ ಕರ್ತವ್ಯವೇ ಆ ಭಕ್ತಂಗೆ ದಾಸೋಹ !
ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ !
ಆ ಭಕ್ತನೊಳಗೆ ಜಂಗಮವಡಗಿ,
ಆ ಜಂಗಮದೊಳಗೆ ಭಕ್ತನಡಗಿ-
ಇದೇನೆಂದು ಹವಣಿಸುವೆನಯ್ಯಾ, ಎರಡೊಂದಾದ ಘನವ !
ಇದೇನೆಂದುಪಮಿಸುವೆನಯ್ಯಾ, ತೆರಹಿಲ್ಲದ ಘನವ !
ಈ ಎರಡಕ್ಕೆ ಭವವಿಲ್ಲೆಂದು ಕೂಡಲಸಂಗಯ್ಯಾ,
ನಿಮ್ಮ ಶ್ರುತಿಗಳು ಹೇಳಿದುವಾಗಿ
ನಿಮ್ಮ ಕರುಣವೆನಗಾಯಿತ್ತು.

ಜಂಗಮವ ಕೂಡಿಕೊಂಡು ಭಕ್ತ ಲಿಂಗಾರ್ಚನೆ ಮಾಡಬೇಕು. ಭಕ್ತನ ಕೂಡಿಕೊಂಡು ಜಂಗಮ ಲಿಂಗಾರ್ಚನೆ ಮಾಡಬೇಕು. ಜಂಗಮನ ಕರ್ತವ್ಯವೇ ಭಕ್ತನಿಗೆ ದಾಸೋಹ ! ಭಕ್ತನ ಕಿಂಕಲತ್ವವೇ ಜಂಗಮನಿಗೆ ದಾಸೋಹ ! ಭಕ್ತನೊಳಗೆ ಜಂಗಮನು ಅಡಗಿದ್ದಾನೆ, ಜಂಗಮನೊಳಗೆ ಭಕ್ತ ಅಡಗಿದ್ದಾನೆ. ಜಂಗಮ-ಭಕ್ತ ಬೇರೆ ಬೇರೆ ಅಲ್ಲ.

ಮನ ಭಕ್ತನಾಗಿ ಜಂಗಮನೊಳಗೆ ಅಡಗಬೇಕು ; ಜಂಗಮ ದಾಸೋಹಕ್ಕಾಗಿ ಭಕ್ತನೊಳಗೆ ಅಡಗಬೇಕು. ಇವರಿಬ್ಬರ ಹೆಸರು ಬೇರೆ ಬೇರೆ; ಆದರೆ ಇವರಿಬ್ಬರೂ ಒಬ್ಬರೇ. ಇವರಿಬ್ಬರ ಕರ್ತವ್ಯವೂ ಒಂದೇ ; ಲಿಂಗಾರ್ಚನೆಯ ಮಾಡುವುದು. ಎರಡು ಒಂದಾದ ಘನವನು ಉಪಮಿಸಲು ಅಸಾಧ್ಯ. ಒಂದು ಎರಡಾದ ಘನವನು ಉಪಮಿಸಲು ಅಸಾಧ್ಯ.

ಮನ ಅಜ್ಞಾನಿ. ಅದೊಂದೇ ದಾಸೋಹ ಮಾಡಲರಿಯದು. ತನುವಿನೊಂದಿಗೆ ಭೋಗಿಸುವುದೇ ಮನದ ಕೆಲಸ. ಆ ಮನವೇ ಭಕ್ತನಾದಲ್ಲಿ ಆ ಭಕ್ತನ ಕರ್ತವ್ಯವೇ ಜಂಗಮಕ್ಕೆ ದಾಸೋಹ ! ಆ ಜಂಗಮದ ಕರ್ತವ್ಯವೇ ಭಕ್ತನಿಗೆ ದಾಸೋಹ ! ಭವಿ ಮನ ಭಕ್ತನೊಳಗೆ ಅಡಗುತ್ತಾನೆ ; ಭಕ್ತ ಜಂಗಮನೊಳಗೆ ಅಡುಗುತ್ತಾನೆ ; ಲಿಂಗ ಜಂಗಮರು ಕೂಡಿ ತನುವಿನೊಳಗೆ ಅಡಗಿದ್ದಾರೆ.

ಭಕ್ತ ಜಂಗಮರಿಗೆ ಜನನವಿಲ್ಲ ಮರಣವಿಲ್ಲ ಎಂದು ಶ್ರುತಿಗಳು ಹೇಳುತ್ತವೆ. ಆದರೆ

ಮನದ ತನುವಿಗೆ ಮನದಟ್ಟಾಗಬೇಕಲ್ಲ. ಈ ಸೂತ್ರ ಹೊಳೆದ ಮನವೇ ಲಿಂಗ ಜಂಗಮರ ಕರುಣೆಯಾದ ಕಾರಣ ಶ್ರುತಿ ಯನ್ನು ಬದಿಗಿಟ್ಟು ಲಿಂಗಾಂಗದ ನಿಜಸುಖವನು ಅನುಭವಿಸಿತು. ಜನನ ಮರಣಗಳನ್ನು ದಾಟಿ ಸ್ವಾನುಭವಿಯಾಯಿತು.

523

ಹರಿವ ನದಿಯ ತೆರನ ಹೋಲಬಲ್ಲಡೆ ಭಕ್ತಿ ;
ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ ;
ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ
ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ !

ಹರಿವ ನದಿಗೂ ತನುವಿಗೂ ಅವಿನಾಭಾವ ಸಂಬಂಧ. ನದಿ ಜಲಚರಗಳಿಗೆ ಪಶು ಪಕ್ಷಿಗಳಿಗೆ ಗಿಡಮರಗಳಿಗೆ ಪ್ರಾಣಿಗಳಿಗೆ ಜೀವಜಲವನ್ನು ಒದಗಿಸುತ್ತ ನಿಲ್ಲದೆ ಹರಿಯುತ್ತದೆ. ಜಲದಲ್ಲಿಯೇ ಅಂಡಗಳು ಉತ್ಪತ್ತಿಯಾಗಿ ಜಲಚರಗಳಾಗಿ ಜಲವನ್ನೇ ಮೈಯಲ್ಲಿ ಹೊತ್ತು ಜಲದಲ್ಲಿಯೇ ಜೀವಿಸಿ ಜನನ ಮರಣಗಳನ್ನು ಜಲದಲ್ಲಿ ಹೊಂದಿವೆ. ಜಲವನ್ನು ಪ್ರತ್ಯೇಕಿಸಿದಂತೆ ಕಾಣುತ್ತದೆ. ಆದರೆ ಅರಿವಿ ನಿಂದ ನೋಡಲು ಹೋದರೆ ಜಲಕ್ಕೂ ಜಲಚರಗಳಿಗೂ ಭೇದವಿಲ್ಲ.

ಜಲವೇ ಜೀವ ದ್ರವ್ಯವಾಗಿ, ಜಲವೆ ಬೀಜವಾಗಿ, ಅಂಕುರ ಹೊಡೆದು ಜಲದಿಂದ ಬೇರ್ಪಟ್ಟು ಹೆಮ್ಮರವಾಗಿ ಹೂ ಹಣ್ಣು ಕಾಯಿ ರೆಂಬೆ ಕೊಂಬೆಗಳಿಂದ ಅಲಂಕರಿಸಿವೆ. ಆದರೆ ಅರಿವಿನಿಂದ ನೋಡಿದರೆ ಹರಿಯುವ ನದಿಗೂ ಗಿಡಮರಗಳಿಗೂ ಭೇದವಿಲ್ಲ.

ಪಶು ಪಕ್ಷಿ ಪ್ರಾಣಿ ಕೀಟಗಳ ಉತ್ಪತ್ತಿಗೂ ಜೀವ ಜಲವೇ ದ್ರವ್ಯ ! ಜಲವೇ ಬೀಜ. ಆ ಜಲವೇ ವಿವಿಧ ರೀತಿಯ ಪಕ್ಷಿಗಳಾಗಿ ಕೂಗಿ ನಾಟ್ಯಮಾಡಿ ಜಲದಲ್ಲಿಯೇ ಲೀನವಾಗುತ್ತವೆ. ಒಂದೊಂದು ಪ್ರಾಣಿಗಳೂ ಜಲಕ್ಕೆ ಭಿನ್ನವಾಗಿ ಕಂಡರೂ ಜೀವಜಲವೇ ಮೈವೆತ್ತು ಒಂದೊಂದು ಹೆಸರು ಪಡೆದಿವೆ. ಪುನಹ ಅವುಗಳಿಗೆ ಜಲ ನದಿ ಯಾಗಿ ಹರಿದು ಪೋಷಣೆಯ ವೃತ್ತಿಯಲ್ಲಿ ತೊಡಗಿದೆ.

ಜಲಬಿಂದುವಿನಲ್ಲಿಯೇ ಅರಿವಿನ ಬೆಳಕು ಮೂಡಿ ಬೀಜವಾಗಿ ಗರ್ಭ ಸೇರಿ ವಿರಕ್ತವಾದ ಆ ಜಲವೇ ರಕ್ತವಾಗಿ, ಮಾಂಸ ಮಜ್ಜೆ ಮೇದಸ್ಸು ಆಗಿ, ಆ ಜಲದಿಂದಲೇ ಗರ್ಭದಲ್ಲಿ ಮೂಳೆಗಳು ಮೂಡಿ ಗಟ್ಟಿಗೊಂಡು, ಆ ಜಲವೇ ಸ್ಪರ್ಶಸುಖದ ಚರ್ಮದ ಕವಚವಾಗಿ, ನೋಡುವ ಕಣ್ಣಾಗಿ, ಕೇಳುವ ಕಿವಿಯಾಗಿ ರುಚಿಸುವ ನಾಲಿಗೆ ಯಾಗಿ, ಪರಿಮಳ ಮೂಸಿಸುವ ಮೂಗಾಗಿ, ಗರ್ಭದಿಂದ ಅರಿವಿನ ಶಿಶುವಾಗಿ ಹೊರ ಬಂದಿದೆ. ಅರಿವಿನಿಂದ ನೋಡಲು ಹೋದರೆ ಹರಿಯುವ ನದಿಗೂ ತನುವಿಗೂ ಅವಿನಾಭಾವ ಸಂಬಂಧ. ನದಿ ಹರಿದು ಸಕಲವನ್ನು ಸೃಷ್ಠಿಸಿ, ಏನೂ ಸಂಬಂಧವಿಲ್ಲದಂತೆ ಹರಿಯುವ ಕಾಯಕದಲ್ಲಿಯೇ ನಿರತವಾಗಿದೆ. ಆದರೆ ಜೀವಜಲ ತನುವಿನಲ್ಲಿ ಬಂಧಿಯಾಗಿ ತನುವಾಗಿದೆ. ಭೂಮಿಯ ಮೇಲಿನ ಜಲ ನದಿಯಾಗಿ ಹರಿದರೆ ಆ ಜಲವೇ ತನುವಾಗಿ ನೋಡುತ್ತಾ ಮಾತನಾಡುತ್ತಾ ಮೂಸಿ ಪರಿಮಳದ ಆನಂದ ಹೊಂದುತ್ತಾ ಹರಿಯುವ ನದಿಯನ್ನೇ ಹೋಲುತ್ತದೆ.

ನದಿಯನ್ನೇ ಹೋಲುವ ತನು ಅರಿತು ನದಿಯಂತಿದ್ದರೆ ಭಕ್ತಿ. ಅರಿವಿನಿಂದ ನೋಡಿದರೆ ಸಕಲವೂ ಜಲ ಬಿಂದುವಿನ ಸ್ವರೂಪವೇ ಆಗಿವೆಯೆಂದು ಸಕಲವನ್ನೂ ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ ; ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ ಅಂಗದಲ್ಲಿಯೇ ಅರಿವಿನ ಬೀಜವಾಗಿ

ಕಣ ಕಣದಲ್ಲಿ ಸಂಗಮವಾದ ಕೂಡಲ ಸಂಗಯ್ಯ ಕೂಡಿಕೊಂಡು ದರುಶನ ನೀಡುತ್ತಾನೆ.

524

ಏನ ಮಾಡುವೆ ? ಎನ್ನ ಪುಣ್ಯದ ಫಲವು !
ಶಾಂತಿಯ ಮಾಡ ಹೋದಡೆ ಬೇತಾಳನಾಯಿತ್ತು
ಕೂಡಲಸಂಗಮದೇವರ ಪೂಜಿಸಿಹೆನೆಂದಡೆ
ಭಕ್ತಿಯೆಂಬ ಮೃಗ ಎನ್ನನಟ್ಟಿ ಬಂದು ನುಂಗಿತ್ತಯ್ಯಾ.

ಏನ ಮಾಡುವೆ ? ಎನ್ನ ಪುಣ್ಯದ ಫಲವು ! ಶಾಂತಿಯ ಮಾಡ ಹೋದಡೆ ಬೇತಾಳನಾಯಿತ್ತು:

ತನು ಅರಿವಿನ ಕಣಜವಾಗಿದ್ದರೂ ಅರಿವು ತನುವಿಗೆ ದಕ್ಕುತ್ತಿಲ್ಲ. ಶಾಂತಿ ಸಮಾಧಾನಗಳ ಆಗರವೇ ಆಗಿದ್ದರೂ ಆ ಶಾಂತಿ ತನುವಿಗೆ ಸಿಗುತ್ತಿಲ್ಲ. ತನುವಿನಲ್ಲಿಯೇ ಹುಟ್ಟಿದ ಮನ, ತನುವನ್ನು ಹಿಡಿದು ತಾನೆ ನಿರ್ಮಿಸಿಕೊಂಡ ಯಜ್ಞ ಯಾಗಾದಿಗಳಿಗೆ ತನುವನ್ನು ಬಲಿ ಮಾಡಿದೆ. ಹೋಮ ಹಯನ ಪೂಜಾ ಕ್ರಿಯೆಗಳಿಗೆ ತನು ಒತ್ತೆ ಇಟ್ಟಿದೆ. ಅವುಗಳಿಂದಲೇ ತನುವಿಗೆ ಶಾಂತಿ ಸಮಾಧಾನವೆಂದು ಬೇತಾಳನಂತೆ ಕಾಡುತ್ತಲಿದೆ.

ಸಕಲ ಮಂದಿರ ಮಠ ಚರ್ಚ್ ಬಸದಿಗಳು, ಆಶ್ರಮ ಸಮಾಧಿಗಳು ಮನದಿಂದಲೇ ತನುವನ್ನು ಹಿಡಿದು ನಿರ್ಮಿಸಿಕೊಂಡು, ಬೇತಾಳನಂತೆ ಅವುಗಳಲ್ಲಿಯೇ ತನುವನ್ನು ಬಂಧಿ ಮಾಡಿದೆ. ವೇದ ಉಪನಿಷತ್ತು ಆಗಮ ಸಕಲ ಪುರಾಣಗಳೂ ತನುವಿನಿಂದಲೇ ರಚನೆಯಾದರೂ ತನುವನ್ನೇ ಮನ ಮರೆಯುವಂತೆ ಮಾಡಿ ಬೇತಾಳದಂತೆ ಅವುಗಳನ್ನೇ ಹೊಗಳುವಂತೆ ಮಾಡಿದೆ. ಒಂದು ತನುವಿಗೆ ಒಂದು ಗ್ರಂಥ ಶ್ರೇಷ್ಠವಾದರೆ ಮತ್ತೊಂದು ತನುವಿಗೆ ಮತ್ತೊಂದು ಗ್ರಂಥ ಶ್ರೇಷ್ಠ. ಧರ್ಮ ತನುವಿನಿಂದಲೇ; ಅಧರ್ಮವೂ ತನುವಿನಿಂದಲೇ. ದೇವಾಲಯ ಕಟ್ಟುವುದು ತನುವೇ, ಅದನ್ನು ಕೆಡುವುವ ಕಾಯಕದಲ್ಲಿ ನಿರತವಾದದ್ದೂ ತನುವೇ. ಇವೆರಡಕ್ಕೂ ಮನವೆಂಬ ಬೇತಾಳವೇ ಕಾರಣವೆಂದು ಅರಿವಿಗೆ ಧೃಢವಾಗುತ್ತಿಲ್ಲ. ತನುವಿಗಂಟಿದ ಮಾಯಾ ಮೃಗದ ಬೆನ್ನಟ್ಟಿ ಅರಿವು ಸರ್ವನಾಶ ಮಾಡಲು ಸಾಧ್ಯವಾಗುತ್ತಿಲ್ಲ. ಆ ಮಾಯಾ ಮೃಗಕ್ಕೂ ಕನಿಕರ ಬರುತ್ತಿಲ್ಲ. ಅರಿವಿನತ್ತ ಸಾಗಿ ಸುಖಿಸಬೇಕೆಂಬ ಇಚ್ಛೆ ಮಾಯಾ ಮೃಗಕ್ಕೆ ಹೊಳೆಯುತ್ತಿಲ್ಲ.

525

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು.

ನಿಷ್ಪತ್ತಿಯೆಂಬ ಹಣ್ಣು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

ಬೀಜದಲ್ಲಿ ಅರಿವಿನ ಅಂಕುರವಿದೆ. ಅದು ಭೂಮಿಗೆ ಬೀಳದ ಮುನ್ನ ಬೀಜದಲ್ಲಿಯೇ ಇರುತ್ತದೆ. ಪೃಥ್ವಿ ಭಕ್ತಿಯಾದರೆ, ಅಂಕುರ ಗುರುವು. ತನು ಪೃಥ್ವಿ ರೂಪದಲ್ಲಿ ಕಂಡರೆ, ಅಂಕುರ ನಿರೂಪದ ಅರಿವಿನ ಮೂಲಕ ಅಂಕುರವಾಗಿದೆ. ಅಂಕುರವೇ ಗುರು. ಈತ ಕಣ್ಣಿನ ಮೂಲಕ ನೋಡುವ ವಸ್ತುವನ್ನೇ ನೋಡುತ್ತಾನೆ. ಕಿವಿಯ ಮೂಲಕ ಶಬ್ದವನ್ನು ಅರಿವಾಗಿ ಕೇಳುತ್ತಾನೆ. ಚರ್ಮದ ಮೂಲಕ ಅರಿವಿನಿಂದ ಮುಟ್ಟುತ್ತಾನೆ. ಮೂಗು, ನಾಲಿಗೆಯ ಮೂಲಕ ರುಚಿಸಿ ಮೂಸಿಸುತ್ತಾನೆ.

ತನುವಿಗೆ ಆಚಾರವೇ ಎಲೆ ಹೂ ಕಾಯಿಯಾಗಿ ಗೋಚರಿಸಿ ತನುವಿನಲ್ಲಿಯೇ ಅಪ್ಪಿಕೊಂಡು ಹಣ್ಣಾಗಿ ತೊಟ್ಟು ಬಿಟ್ಟು ಕಳಚಿ ಭೂಮಿಗೆ ಕಳುಹಿಸುತ್ತಾನೆ. ಮರದ ಹಣ್ಣು ಯಾರಾದರೂ ತಿನ್ನಲಿ, ಮರ, ಬೀಜದಲ್ಲಿ ಮರವನಡಗಿಸಿ ಭೂಮಿಗೆ ಚೆಲ್ಲಿದಂತೆ.

ಅರಿವಿನ ಮಹಾಜ್ಞಾನದ ನಡೆದಾಡುವ ಮರ ಎಲ್ಲಿ ಸುಳಿದರೂ ಜ್ಞಾನದ ವಾಸನೆ ಬೀರುತ್ತದೆ. ಪರಿಮಳ ಸದಾ ತನುವಿನಿಂದ ಹೊರ ಚೆಲ್ಲುತ್ತಾ ನುಡಿದದ್ದೇ ವೇದ ವಾಕ್ಯಗಳಾಗುತ್ತವೆ. ಹುಟ್ಟು ಸಾವುಗಳಿಲ್ಲದೆ ತನು ಜ್ಞಾನದ ಮರವಾಗಿ ಕಂಗೊಳಿಸುತ್ತದೆ.

ತನು ಒಂದು ಬೇರಿಲ್ಲದ ಮರ. ಅರಿವಿನ ಬೀಜ ಗರ್ಭದಲ್ಲಿ ಹೋಗಿ ಅಂಕುರವಾಗುತ್ತದೆ. ಈ ಅಂಕುರದಿಂದಲೇ ತನು ಪೃಥ್ವಿಯಾಗಿ ಪೃಥ್ವಿಯ ಮೇಲೆ ಪೃಥ್ವಿರೂಪದ ಬೇರಿಲ್ಲದ ಮರವಾಗಿ ಬೆಳೆಯುತ್ತದೆ. ಮನ ಈ ಮರವನ್ನು ತನ್ನಿಚ್ಛೆ ಬಂದತ್ತ ಸುಳಿಯುವಂತೆ ಮಾಡುತ್ತದೆ. ಮನ ಮಾಡುವ ವಿಚಾರದಲ್ಲಿ ಹುರುಳಿಲ್ಲದಿದ್ದರೂ ಅದಕ್ಕೆ ಬಲಿಯಾಗಬಾರದೆಂದು ಹೊಳೆಯುವುದಿಲ್ಲ. ಮನ ಮಾಗಿ ಎಲೆಯಾಗಿ ಹೂವಾಗಿ ಕಾಯಾಗಿ ಹಣ್ಣಾಗಿ ತನುವೆಂಬ ಮರವನಗಲಿ ತೊಟ್ಟು ಬಿಟ್ಟು ಕಳಚಿ ಕೆಳಗೆ ಬೀಳುವ ಮುನ್ನ ಅರಿವೆಂಬ ಗುರುದೇವ ತನಗೆ ಬೇಕೆಂದು ಎತ್ತಿಕೊಳ್ಳುತ್ತಾನೆ.

ಅಂಗ ಇದ್ದಾಗಲೇ ಮನ ಅಂಗದಲ್ಲಿರುವ ಅರಿವೆಂಬ ಗುರು ದೇವನಲ್ಲಿ ಬೆರೆತು ಲಿಂಗಾಂಗವಾಗುತ್ತದೆ. ಆಗ ಅದು ಬರೀ ಅಂಗ ವಲ್ಲ ; ಲಿಂಗಾಂಗ !

ಮಾಹೇಶ್ವರಸ್ಥಲ

ಮಾಹೇಶ್ವರನ ಜ್ಞಾನಿಸ್ಥಲ

526

ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದೆ ಬಿರಿದ ಜಗವೆಲ್ಲರಿಯಲು
ಮಹಾದೇವ, ಮಹಾದೇವ, ಮಹಾದೇವ
ಇಲ್ಲಿಂದ ಮೇಲೆ ಶಬ್ದವಿಲ್ಲ
ಪಶುಪತಿ ಜಗಕ್ಕೇಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ.

ಸ್ವಾಮಿ ನೀನು ಶಾಶ್ವತ ನೀನು ಮಹಾದೇವ ನೀನು ಪಶುಪತಿ ನೀನು ಸ್ವರ್ಗ ಮರ್ತ್ಯ ಪಾತಾಳದೊಳಗೆ ನೀನೊಬ್ಬನೆ ದೇವ ಎಂದು ಬಸವಣ್ಣ ಹಾಡಿದ್ದಾರೆ. ದೇವನನ್ನು ನೋಡಿ ಅವನೊಂದಿಗೆ ಮಾತನಾಡಿ ಅವನನ್ನು ಒಲಿಸಿಕೊಂಡ ಖಚಿತ ಮಾತಿದು. ಮಹಾದೇವ ಯಾರು? ಪಶುಪತಿ ಯಾರು? ಇಡೀ ಜಗತ್ತಿಗೆ ಹಾಗೂ ಮೂರು ಲೋಕಗಳಿಗೆ ಅವನು ಹೇಗೆ ದೇವನಾಗಿದ್ದಾನೆ ಎಂದು ತಿಳಿಯುವ ಬಯಕೆ ಮನಕ್ಕೆ ಆದರೆ ತನುವನ್ನು ಮನ ಅತ್ತ ಕರೆದೊಯ್ಯುತ್ತದೆ.

ಅರಿವೇ ಗುರು, ಆ ಗುರುದೇವನೇ ಮಹಾದೇವ ! ಮನಕ್ಕೆ ಅರಿವಿನ ದರ್ಶನವಾದರೆ ಸ್ವಾಮಿ ನೀನು ಶಾಶ್ವತ ನೀನು ಎಂದು ಹಾಡುತ್ತದೆ. ಮನ ಪಶುವಾದರೆ ಅರಿವು ಪಶುಪತಿ. ''ಬಡಪಶು ಪಂಕದಲ್ಲಿ ಬಿದ್ದಡೆ ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ ? ಶಿವ ಶಿವ ! ಹೋದೆಹೆ ಹೋದೆಹೆನಯ್ಯಾ. ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ. ಪಶುವಾನು, ಪಶುಪತಿ ನೀನು ! ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ ಒಡೆಯ ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವ''

ಮನ ಭಕ್ತನಾಗಿ ಅರಿವನ್ನೇ ಗುರುವನ್ನಾಗಿ ಮಾಡಿಕೊಂಡು ಭಕ್ತಿಯಿಂದ ಸ್ವಾಮಿ, ಮಹಾದೇವ, ಪಶುಪತಿಯೇ ನೀನೊಲಿದರೆ ಈ ತನುವೇ ಸ್ವರ್ಗ ! ಒಲಿಯದಿದ್ದರೆ ಮರ್ತ್ಯ, ಪಾತಾಳವೂ ಹೌದು. ತನುವಿನ ಮೂರು ಗುಣಗಳನ್ನು ಕಿತ್ತಿ ನಿರ್ಗುಣಿಯನ್ನಾಗಿ ಮಾಡುವ ಸಮರ್ಥ ನೀನೆ ! ಜಗದಲ್ಲಿ ಯಾವುದೂ ಶಾಶ್ವತವಲ್ಲ ; ನಿಮ್ಮ ಹೊರತಾಗಿ !

ಮನ ತನುವನ್ನು ಪಶುವಾಗಿಸಿ ವಿಷಯವೆಂಬ ಹಸಿರು ಮೇಯಲು ಹೋಗುತ್ತದೆ. ವಿಷಯವೆಂಬ ಕೆಸರಲ್ಲಿ ಬಿದ್ದು ಕಾಲು ಬಡಿಯುವಾಗ ಜನ ತುಡುಗುಣಿಯೆಂದು ಹಿಡಿದು ಬಡಿಯುತ್ತಾರೆ ; ಇದು ಯಾರಿಗೆ ಹುಟ್ಟಿದ ಪಶು ಎಂದು ಬಯ್ಯುತ್ತಾರೆ. ಪಶು ನಾನು, ನನ್ನನ್ನು ಸೃಷ್ಟಿ ಮಾಡಿದ ಹಡೆದ ತಂದೆ ನೀನು ! ಏ ತಂದೆಯೇ ಒಡೆಯನೇ ನನ್ನ ಅಪರಾಧಕ್ಕೆ ನಿನ್ನನ್ನು ಬಯ್ಯದಂತೆ ಮಾಡು ಎಂದು ಹಾಡಿದ್ದಾರೆ.

ಮನ, ಪಶು ವೃತ್ತಿಯನ್ನು ಅರಿವಿನ ಒಡೆಯನಾದ ಗುರುದೇವನನ್ನು ಪ್ರಾರ್ಥಿಸಿಯೇ

ಕಳೆದುಕೊಂಡರೆ, ಸ್ವಾಮಿ ನೀನು ಶಾಶ್ವತ ನೀನು ಎಂದು ಹಾಡಲು ಬರುತ್ತದೆ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ; ಅಂಗದಲ್ಲಿಯೇ ಕೂಡಿದ ಕೂಡಲಸಂಗಮದೇವ !

527

ಶ್ರುತಿಗಗಮ್ಯ ದ್ವಾದಶಾದಿತ್ಯನ ಪ್ರತಿಮ ಮಹಿಮಂಗೆ ಪ್ರತಿಯುಂಟೆ ?
'ಸೋಮಃ ಪವತೇ' ಎಂಬ ಶ್ರುತಿಯನರಿತು
'ಶಿವನೇಕೋದೇವರುದ್ರನದ್ವಿತೀಯ'ನೆಂದು
ನಂಬುವುದು ಕಾಣಿರಣ್ಣಾ.
ಕೂಡಲಸಂಗಮನಲ್ಲದಿಲ್ಲೆಂದುದು ವೇದ.

ವೇದ ಆಗಮ ಉಪನಿಷತ್ತುಗಳನ್ನು ಬರೆದಿಟ್ಟಿದ್ದಾರೆ. ಅವು ಅಕ್ಷರಗಳಿಂದ ದಾಖಲಿಸಿದ ಸೂತ್ರಗಳೇ ಹೊರತು ಶಿವನಲ್ಲ. ಶಿವನೆಂದರೆ ಶ್ರುತಿಗಳಿಗೆ ಅಗಮ್ಯನು. ದ್ವಾದಶಾದಿ ಆದಿತ್ಯಂಗೆ ಅಪ್ರತಿಮ ಮಹಿಮನು. ಶಿವನು ರುದ್ರನಿಗೆ ಅದ್ವಿತೀಯನು. ಸತ್ಯಮಯನೂ ಶಿವಮಯನು. ಆ ಶಿವಮಯನಾದವನೇ ಸುಂದರನು. ಅಂಗದಲ್ಲಿಯೇ ಕೂಡಿ ಕೂಡಲಸಂಗಮವಾದವನು.

ವೇದ ಆಗಮ ಉಪನಿಷತ್ತುಗಳು ಶ್ರುತಿ ಸ್ಮೃತಿಗಳು ಸತ್ಯಮಯವಾದ ಶಿವನನ್ನು ಅಂಗದತ್ತಲೇ ತೋರಿಸುತ್ತವೆ.

''ನಿತ್ಯ ನಿರಂಜನ ತಾನೆಂದರಿಯದೆ... ಸತ್ತವರ ಪತ್ರ ಓದಿದಡೆ ನಿನಗೆತ್ತಣ ಮುಕ್ತಿ ಗುಹೇಶ್ವರ'' ಎಂದು ಪ್ರಭುಗಳು ಹೇಳಿದ್ದಾರೆ. ಲಿಂಗಮಯವಾಗಿ ಸರ್ವಾಂಗದಲ್ಲಿಯೇ ಸಂಗಮವಾದ ಸಂಗಮನಾಥನನ್ನು ಮನ ಅಂಗದಲ್ಲಿಯೇ ಹುಡುಕಿ ಲಿಂಗ(ಅರಿವು)ಧರಿಸಿ ನಂಬಿ ಕರೆದಾಗ ಓ ಎಂದು ಪ್ರತ್ಯಕ್ಷನಾಗುತ್ತಾನೆ.

528

ಉಪ್ಪರ ಗುಡಿ ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ
ಸಾರುತ್ತೈದಾವೆ, ನೋಡಾ, ಶ್ರುತಿಗಳು ನಾಲ್ಕು ವೇದವೂ ಹುಸಿಯದೆ
'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ
ಕೂಡಲಸಂಗಮದೇವನಲ್ಲದಿಲ್ಲೆಂದುದು ವೇದ.

ಶಿವನಲ್ಲದೆ ಅನ್ಯ ದೈವವಿಲ್ಲೆಂದು ವೇದಗಳು ಸಾರುತ್ತವೆ. ಶಿವನೇ ಸರ್ವಸ್ವವೆಂದು ಭವ್ಯ ಮಂದಿರ ಕಟ್ಟಿ ನಂದಿಯನ್ನು ಸ್ಥಾಪಿಸಿ, ನಂದೀಧ್ವಜವನ್ನು ನೆಟ್ಟು ಸದ್ಯೋಜಾತ ಶಿವನ ಬಾಗಿಲ ಮುಂದೆ 'ಭರ್ಗೋ ದೇವಸ್ಯ ಧೀಮಹಿ' ಎಂದು ಕಲ್ಲ ಮೇಲೆ ಕೆತ್ತಿ ತಾಮ್ರದ ತಗಡದ ಮೇಲೆ ಬರೆದು ಜಡಿಯುತ್ತೇವೆ.

ಭೂಮಿ ಆಕಾಶ ಸ್ವರ್ಗಗಳಲ್ಲಿ ಶಿವ ಪ್ರಕಾಶರೂಪವಾಗಿದ್ದಾನೆ ಎಂದು ಸಾರಿ ಹೇಳುವ ಗಾಯತ್ರಿ ಮಂತ್ರವನ್ನು ಮಂದಿರಕ್ಕೆ ಬಂದು ಹೋಗುವ ಜನ ಜಪಿಸಿದರೇ ಹೊರತು ಶಿವನಾರೆಂದು ತಿಳಿಯಲಿಲ್ಲ.

ಕೂಡಲಸಂಗಮದೇವನಲ್ಲದೆ ಶಿವನಿಲ್ಲವೆಂದು ಹೇಳುವ ವೇದವು, ವಾದಿಸುವ ಜನಕ್ಕೆ

ಆಹಾರವಾಯಿತೇ ಹೊರತು ಶಿವನಾರೆಂದು ಹೊಳೆಯಲಿಲ್ಲ. ಓಣಿಗೊಂದು, ಹಳ್ಳಿಗೊಂದು ಶಿವ ದೇವಾಲಯಗಳು ಹುಟ್ಟಿ ನಂದಿ ಧ್ವಜಗಳು ಹಾರಿದವೇ ಹೊರತು ಶಿವನು ಯಾರೆಂದು ಪೂಜಿಸುವವರಿಗೆ ಪರಿಚಯವಾಗಲಿಲ್ಲ.

ಅಂಗದ ಕಣ ಕಣದಲ್ಲಿ ಬೆರೆತ ಲಿಂಗವೇ ಶಿವನೆಂದು ವೇದ ಸಾರಿ ಹೇಳಿದರೂ ಅಂಗದ ಮೇಲೆ ಲಿಂಗ ಕಟ್ಟಿಕೊಳ್ಳುವುದನ್ನು ಅಂಗ ಮರೆಯಲಿಲ್ಲ. ಲಿಂಗದ ಪರಿಚಯ ಅಂಗಕ್ಕಿಲ್ಲ ; ಅಂಗದ ಪರಿಚಯ ಲಿಂಗಕ್ಕಿಲ್ಲ. ಲಿಂಗವನ್ನು ಪತ್ರಿ ಪುಷ್ಪ ಧೂಪ ದೀಪಗಳಿಂದ ಪೂಜಿಸಿ ಆರಾಧಿಸುವುದನ್ನು ಅಂಗ ಮರೆತಿಲ್ಲ. ಸರ್ವಾಂಗದಲ್ಲಿ ಸಂಗಮವಾದ ಕೂಡಲಸಂಗಯ್ಯನನ್ನು ಪೂಜಿಸುವ ವಿಧಾನ ಮನಕ್ಕೆ ಪರಿಚಯವಿಲ್ಲ.

ನಾಲ್ಕು ವೇದಗಳು ಶಿವನೇ ಸರ್ವಸ್ವವೆಂದು ಸಾರಿ ಹೇಳಿದವು. ಹೇಳಿದ ವೇದಗಳು ಅಂಗಕ್ಕೆ ದೊಡ್ಡವಾದವೇ ಹೊರತು ಸರ್ವಾಂಗದಲ್ಲಿದ್ದ ಲಿಂಗ ಮನಕ್ಕೆ ಮನದಟ್ಟಾಗಲಿಲ್ಲ.

529

'ವೇದ ಸ್ವಯಂಭು'ವೆಂಬ ವಾದಿ ಕೇಳೆಲವೊ.
'ಏಕೊ ದೇವೋ ರುದ್ರೋ ನ ದ್ವಿತೀಯ'
ಎಂದು ನಂಬುವುದು ಕಾಣಿರಣ್ಣಾ.
'ಓಂ ದ್ಯಾವಾಭೂಮೀ ಜನಯನ್ ದೇವ
ಏಕ ಏವ ರುದ್ರೋ ನ ದ್ವಿತೀಯಃ'
ಎಂದು ನಂಬುವುದು ಕಾಣಿರಣ್ಣಾ.
'ಚಕಿತಮಭಿದತ್ತೇ' ಎಂದು ಶೃತಿ ಸಾರುತ್ತೈದಾವೆ
ಜಗದ ಕರ್ತ ಕೂಡಲಸಂಗಮದೇವನೊಬ್ಬನೆ ಕಾಣಿರಣ್ಣಾ.

'' ನಿತ್ಯ ನಿರಂಜನ ತಾನೆಂದರಿಯದೆ 'ತತ್ತ್ವಮಸಿ' ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿಸಾವ. ತಮ್ಮ ತಾವರಿಯದೆ ಸತ್ತವರ ಪತ್ರವನು ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ'' ವೇದಗಳು ಆಗಮ ಉಪನಿಷತ್ತುಗಳು ಅವು ಸ್ವಯಂಭು ; ತಾವೇ ಹುಟ್ಟಿದವು ಎಂದು ವಾದ ಮಾಡುವ ಮೂರ್ಖ ತನುಗಳು ಇವೆ. ತನುವಿನ ಉದ್ಧಾರಕ್ಕಾಗಿ ತನುಗಳೇ ಬರೆದು ಸತ್ತು ಹೋಗಿವೆ. ವೇದ ಆಗಮ ಉಪನಿಷತ್ತುಗಳು ಸತ್ತ ತನುಗಳು ಬರೆದ ಪತ್ರಗಳು. ಅವು ಸ್ವಯಂಭು ಎಂದು ಓದಿದರೆ ತನು ಸುಧಾರಿಸಬಲ್ಲುದೆ? ಹಾಗೆ ನಂಬುವುದು ಉಚಿತವಾದೀತೆ ?

ಬರೆದದ್ದೆಲ್ಲ ತನುವಿಗೆ ತಿಳಿಯುತ್ತದೆ ಅಂದಮೇಲೆ ಓದಿ, ಕೇಳಿ, ತಿಳಿದುಕೊಂಡ ತನು ಕೂಡಾ ಬರೆದ ತನುವಿನಂತೆಯೇ ಶ್ರೇಷ್ಠ ತನುವಲ್ಲವೆ? ವೇದ ಬರೆದ ತನು ಅಭ್ಯಾಸ ಮಾಡಿರಬಹುದು, ಓದಿ, ಕೇಳಿ, ತಿಳಿದುಕೊಂಡ ತನು ಅಭ್ಯಾಸ ಮಾಡದಿದ್ದರೂ ಕೂಡಲೇ ಆನಂದ ಪಡುತ್ತದೆ ಎಂದ ಮೇಲೆ ಸಕಲ ತನುಗಳಲ್ಲಿಯೂ ಶಿವಮಯವಾದ ಶಕ್ತಿ ಸಂಗಮವಾಗಿದೆ ಎಂದಾಗಲಿಲ್ಲವೆ. ಆದರೂ ಕೂಡಾ ತನುವಿನಿಂದ ಹೊರಬಂದ ವೇದ ಗ್ರಂಥಗಳೆಲ್ಲಾ ''ಸ್ವಯಂಭು'' ಅವು ತಾವೇ ಹುಟ್ಟಿದವೆಂದು ತನು ಹೇಳುವುದು ತನುವಿಗೆ ಸೋಜಿಗವೇ ಸರಿ. ಬರೆದು ಕೇಳಿ ಓದಿ ಆನಂದ ಪಟ್ಟು ಸರಿಯಾಗಿ ಅರ್ಥೈಸಿಕೊಂಡು ಸ್ವಯಂಭು ಎನ್ನುವುದು ಚಕಿತವೇ ಆಗಿದೆ.

ಜಗದ ಕರ್ತ, ಅಂಗದಲ್ಲಿಯೇ ಕೂಡಿದ ಕೂಡಲಸಂಗಯ್ಯನೊಬ್ಬನೆ ದೇವ ಎಂದು ಶರಣ ಮಾತ್ರ ಹೇಳಬಲ್ಲ. ಆ ಸುಖವನು ಅನುಭವಿಸಬಲ್ಲ.

530

ಶೃತಿ-ತತಿಯ ಶಿರದ ಮೇಲೆ ಅತ್ಯತಿಷ್ಠದ್ದ
ಶಾಂಗುಲವ ನಾನೇನೆಂಬೆನಯ್ಯಾ ?
ಘನಕ್ಕೆ ಘನ ಮಹಿಮನ ಮನಕ್ಕಗೋಚರನ !
ಅಣೋರಣಿಯಾನ್ ಮಹತೋಮಹೀಯಾನ್
ಮಹಾದಾನಿ ಕೂಡಲಸಂಗಮದೇವ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಶೃತಿ ವೇದ ಆಗಮ ಉಪನಿಷತ್ತುಗಳನ್ನು ಸೃಷ್ಟಿಸಿದ ಮಹಾಮಹಿಮನು. ಘನಕ್ಕೆ ಘನ ಮಹಿಮನು ಮನಕ್ಕೆ ಅಗೋಚರನು. ದೇಶ ಕಾಲಾದಿಗಳು ಹುಟ್ಟಿದ್ದು ಕೂಡಾ ಇವನಿಂದಲೆ.

ಜಗದಗಲ ಮುಗಿಲಗಲ ಮಿಗೆಯಗಲಕ್ಕೂ ವಿಸ್ತರಿಸಿದ ಆತ ಅಂಗದಗಲದಲ್ಲಿ ಬಂದು ಚುಳುಕಾದವನು. ಅಪ್ರತಿಮನು ಅಗಮ್ಯನು ಓಂಕಾರನು ತಾನೇ ಆದವನು.

ಷಡಕ್ಷರಿ ಪಂಚಾಕ್ಷರಿಯೂ ತಾನೇ ಆದವನು. ಅಂಗದಲ್ಲಿಯೆ ಸಂಗಮವಾಗಿ ಇದೆಲ್ಲ ಆದವನು. ಇದನ್ನೆಲ್ಲ ಅರಿಯಬೇಕಾದ ಈತನ ಬೆಳಕಿನ ಕಿರಣದಿಂದ ಹುಟ್ಟಿದುದೇ ಮನ. ಇದೆಲ್ಲವನು ಬರೆದು ಹಾಡುತ್ತದೆ. ಆದರೆ ಮನ ಪೂಜಿಸಿ, ಮಂದಿರ ಮಸೀದಿ ಚರ್ಚ್ ಕಟ್ಟಿ ಅದರಲ್ಲಿ ಹುಡುಕುತ್ತದೆ.

ಶೃತಿ ವೇದ ಆಗಮ ಉಪನಿಷತ್ತುಗಳನ್ನು ರಚಿಸಿ ಮನ ಈ ಮಹಾ ಮಹಿಮನನ್ನು ಅಕ್ಷರಗಳಲ್ಲಿ ಹುಡುಕುತ್ತಿದೆ. ''ಮಾಯಾಮಲಿನ ಮನದಿಂದಗಲದೆ, ಕಾಯದ ದಂದುಗ ಕಳೆಯಿಂದಗಲದೆ, ಅರಿವು ಬರಿದೆ ಬಪ್ಪುದೆ? ನಿಜವು ಬರಿದೆ ಸಾಧ್ಯವಪ್ಪುದೆ ಮರುಳೆ ? ಗುಹೇಶ್ವರ ಲಿಂಗವನರಿಯ ಬಲ್ಲಡೆ ನಿನ್ನ ನೀ ತಿಳಿದು ನೋಡಾ ''

ಮನಕ್ಕಂಟಿದ ಮಾಯಾಮಲಿನ ತೊಲಗದಿದ್ದರೆ, ಮನ ಹೊರಗೆ ತಾನೆಲ್ಲ ಮಾಡಬಲ್ಲದು, ತಾನೇ ಏನೆಲ್ಲ ಎನ್ನಬಹುದು, ಶೃತಿ ಆಗಮ ವೇದ ಉಪನಿಷತ್ತುಗಳನ್ನು ಕೇಳಿ ಓದಿ ಬರೆಯಿಸಿ ಬರೆದು ಆನಂದ ಪಡಬಹುದು ; ಆದರೆ ಆ ವಸ್ತುವೇ ತಾನೆಂದು ಅರಿಯುವುದು ಸಾಧ್ಯವಾಗುವುದಿಲ್ಲ. ಬರೆದ ಬರೆಯಿಸಿದ ವಸ್ತುವಿನ ನಡುವೆ ಮಾಯಾಮಲಿನದ ಪೊರೆ ಲೇಪಿಸಿದೆ. ಇದನ್ನು ಮಹಾದಾನಿ, ಅಂಗದಲ್ಲಿಯೇ ಸಂಗಮವಾದ ಸಂಗಯ್ಯ ಮಾತ್ರ ಕಿತ್ತೆಸೆಯ ಬಲ್ಲ.

531

ಸಕಳ ನಿಷ್ಕಳವ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೆ ನಿಷ್ಕಳ ನೀನೆ ಅಯ್ಯಾ.
'ವಿಶ್ವತಶ್ಚಕ್ಷು' ನೀನೇ ದೇವಾ, 'ವಿಶ್ವ ತೋಮುಖ' ನೀನೆ ದೇವಾ,
'ವಿಶ್ವ ತೋಬಾಹು' ನೀನೆ ದೇವಾ,

ಕೂಡಲಸಂಗಮದೇವಾ.

ದೇವರು ಸಾಕಾರವೆಂದು ಸಾಕ್ಷಾತ್ಕಾರ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಕಲ್ಲು ಕಟೆದು ಮೂರ್ತಿ ಮಾಡಿ ಆ ಮೂರ್ತಿಗೆ ಭವ್ಯವಾದ ಮಂದಿರ ಕಟ್ಟಿ ಹೊನ್ನಿನ ಬಾಗಿಲು ಕಲಶಗಳನ್ನಿಟ್ಟು ಆ ಮೂರ್ತಿಯ ಮುಂದೆ ಕಣ್ಮುಚ್ಚಿ ಪ್ರಾರ್ಥಿಸುತ್ತಾರೆ. ತನಗೆ ಆರಾಧ್ಯ ದೈವವಾದ ಆ ಮೂರ್ತಿಗೆ ಹೆಸರಿಟ್ಟು ಆತನೇ ಸಕಲನೆಂದು ಹಗಲಿರುಳು ಹಾಡುತ್ತಾರೆ.

ಮೂರ್ತಿ ದೇವರಲ್ಲ ; ದೇವರೆಂದರೆ ನಿರಾಕಾರ. ಆತ ಕಾಣುವುದಿಲ್ಲವೆಂದು ಹೇಳುವ ತನುಗಳು ಕೂಡಾ ಭವ್ಯವಾದ ಪ್ರಾರ್ಥನಾ ಮಂದಿರಗಳನ್ನು ಕಟ್ಟಿ ಆ ಮಂದಿರದಲ್ಲಿ ನಿರಾಕಾರ ದೇವರಿಗಾಗಿ ಪ್ರಾರ್ಥಿಸುತ್ತಾರೆ. ಆತನೇ ದೇವರು, ಗಾಡ್, ಅಲ್ಲಾ ಎಂದು ನೂರಾರು ಭಾಷೆಗಳಲ್ಲಿ ಆಯಾ ಭಾಷೆಯ ತನು ಹಾಡುತ್ತದೆ.

ದೇವರು ಸಾಕಾರನೆಂದು ಯುದ್ಧ ಮಾಡುತ್ತವೆ. ದೇವರು ನಿರಾಕಾರನೆಂದು ಯುದ್ಧ ಮಾಡುತ್ತವೆ. ದೇವರು ಸಾಕಾರ ನಿರಾಕಾರ ಎಂದು ಬಿಂಬಿಸುವ ಗ್ರಂಥಗಳನ್ನೇ ದೇವರೆಂದು ನಂಬಿ ಪೂಜಿಸಿ ಪೂಜಿಸಿ ಏನೂ ಅರಿಯದೆ ಪ್ರಾಣ ಕಳೆದುಕೊಳ್ಳುತ್ತವೆ.

ಸಕಲದಲ್ಲಿಯೂ ವ್ಯಾಪಿಸಿದ ಶಕ್ತಿ ತನುವಿನಲ್ಲಿಯೇ ಚುಳುಕಾಗಿ ಅದು ಹೇಗೆ ನಿಷ್ಕಲವಾಗಿದೆಯೆನ್ನುವ ಸೂಕ್ಷ್ಮವನ್ನು ಮಾತ್ರ ದೇಹ ತಿಳಿದುಕೊಳ್ಳದೆ ಸಾಯುತ್ತದೆ.

ಜಗದಗಲ ಮುಗಿಲಗಲ ಮಿಗೆಯಗಲವಿದ್ದ ಅಗಾಧವಾದ ಶಕ್ತಿ ತನುವಿನಗಲಕ್ಕೆ ಬಂದು ಚುಳುಕಾಗಿದೆ. ಪಾತಾಳದಿಂದಲೂ ಅತ್ತತ್ತ, ಬ್ರಹ್ಮಾಂಡದಿಂದಲೂ ಅತ್ತತ್ತಲಿದ್ದ ಶಕ್ತಿ ಅಂಗದಲ್ಲಿಯೇ ಬಂದು ಚುಳುಕಾಗಿದೆ. ನೆತ್ತಿಯೇ ಬ್ರಹ್ಮಾಂಡವಾದರೆ ಅಂಗದ ಶ್ರೀಪಾದವೇ ಪಾತಾಳವಾಗಿದೆ. ಅಂಗ ಅಗಮ್ಯವೂ ಅಂದರೆ ಗಮನಕ್ಕೆ ನಿಲುಕದ್ದು, ಗೋಚರಕ್ಕೂ ನಿಲುಕದ್ದು ಆಗಿದೆ. ಅಪ್ರತಿಮ ಲಿಂಗವೇ ಬಂದು ಸರ್ವಾಂಗದಲ್ಲಿ ಚುಳುಕಾಗಿ ಅಂಗಧರಿಸಿದ ಲಿಂಗವಾಗಿ ಕಂಗೊಳಿಸುತ್ತಲಿದೆ.

ಅಂಗದಲ್ಲಿದ್ದ ಶಕ್ತಿ ಯಾವ ದೇವಸ್ಥಾನದಲ್ಲಿಯೂ ಇಲ್ಲ; ಪ್ರಾರ್ಥನಾ ಮಂದಿರದಲ್ಲಿಯೂ ಇಲ್ಲ. ಏಕೆಂದರೆ ಅವೆರಡನ್ನೂ ಅಂಗವೇ ನಿರ್ಮಿಸಿ ಅಜ್ಞಾನದಿಂದ ಅವುಗಳಿಗೆ ಮರುಳಾಗಿವೆ. ಸಕಲವೂ ನಿಷ್ಕಲವೂ ; ಸಾಕಾರವೂ ನಿರಾಕಾರವೂ ಅಂಗವೇ ಆಗಿದ್ದರೂ ಅಂಗಕ್ಕೆ ಆವರಿಸಿದ ಕತ್ತಲಿನಿಂದಾಗಿ ಅಂಗದ ಬೆಳಕನ್ನು ಅಂಗಕ್ಕೆ ನೋಡಲು ಸಾಧ್ಯವಾಗುತ್ತಿಲ್ಲ.

ಅಂಗದ ಕಣ್ಣು ಕೈಲಾಸ! ಅದು ಸಾಕಾರವಾದರೂ ಅದರ ದೃಷ್ಟಿ ನಿರಾಕಾರ ! ಈ ನಿರಾಕಾರದ ದೃಷ್ಟಿಯಿಂದ ಸಕಲ ಸಾಕಾರದ ವಸ್ತುಗಳನ್ನು ನೋಡಬಹುದು. ಸಾಕಾರವೂ ನಿರಾಕಾರವೂ ಕಣ್ಣಿನಲ್ಲಿಯೇ ಅಡಗಿದೆ.

ಕಿವಿ ಸಾಕಾರವಾದರೆ ಶಬ್ದ ನಿರಾಕಾರ. ಶಬ್ದ ನಿಃಶಬ್ದಗಳೆರಡು ನಿರಾಕಾರ ಬ್ರಹ್ಮವಾಗಿ ಸಾಕಾರದ ಕಿವಿಯಲ್ಲಿ ಅಡಗಿವೆ. ಒಳ ಕಿವಿ ನಿರಾಕಾರ ಬ್ರಹ್ಮನಾದರೆ ಕಿವಿ ಸಾಕಾರ. ಹೊರ ಕಿವಿಗೆ ಅಜ್ಞಾನ ಆವರಿಸಿರುವುದರಿಂದ 'ಅಹಂಬ್ರಹ್ಮಾಸ್ಮಿ' ಎನ್ನುವುದು ಗೊತ್ತಾಗುತ್ತಿಲ್ಲ.

ಮೂಗು ಸಾಕಾರವಾದರೆ ಪರಿಮಳ ನಿರಾಕಾರ. ಕಣ್ಣು ಸಾಕಾರದ ಹೂ ನೋಡಿದರೆ ಮೂಗು ನಿರಾಕಾರದ ಪರಿಮಳ ಹೀರುತ್ತದೆ. ಅದು ಹೂ ಎಂದು ಶಬ್ದದ ಮೂಲಕ ಕಿವಿಗೆ ನಿರಾಕಾರದ ಸಂದೇಶ ರವಾನೆ ಮಾಡುತ್ತದೆ. ಆದರ ಸ್ಪರ್ಶ ಸುಖವನ್ನು ಸಾಕಾರ ಚರ್ಮದಲ್ಲಿಯೇ ಇದ್ದ ನಿರಾಕಾರ ತತ್ವಕ್ಕೆ ಮನದಟ್ಟು ಮಾಡುತ್ತದೆ.

ನಾಲಿಗೆ ಸಾಕಾರವಾದರೆ ಅದರ ರುಚಿ ನಿರಾಕಾರ. ಪದಾರ್ಥ ನೋಡಿದ ಕಣ್ಣು ಅದರ ರುಚಿಯ ನಿರಾಕಾರ ನಾಲಿಗೆಗೆ ಚರ್ಮದ ಮೂಲಕ ರವಾನೆ ಮಾಡುತ್ತದೆ.ಇವೆಲ್ಲ ಸಾಕಾರ ನಿರಾಕಾರದ ಕೆಲಸಗಳು ಮಾಡುವ ಕಾಯವೆಂಬ ಕೈಲಾಸದಲ್ಲಿ ವಾಸವಾಗಿವೆ. ಅದಕ್ಕಾಗಿಯೇ ಅಣ್ಣನವರು ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯಾ. ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯಾ ಎಂದು ಹಾಡಿದರು.

ಕಾಯದಲ್ಲಿದ್ದ ಶಕ್ತಿ ಕಾಯವೇ ಕಟ್ಟಿದ ಶಿವಾಲಯ, ಪ್ರಾರ್ಥನಾ ಮಂದಿರದಲ್ಲಿದೆಯೇ ಎಂದು ಕಾಯವೇ ಪರೀಕ್ಷೆ ಮಾಡಿಕೊಂಡರೆ ಕಾಯವೇ ಕೈಲಾಸ. ಕಾಯ ಸಕಲವೂ ಹೌದು ನಿಷ್ಕಲವೂ ಹೌದು. ಕಾಯ ಸಾಕಾರವೂ ಹೌದು ನಿರಾಕಾರವೂ ಹೌದು. ಸಕಲ ತತ್ವಗಳು ಕಾಯದಲ್ಲಿಯೇ ಅಡಗಿದ್ದು ಕಾಯದಿಂದಲೇ ಹೊರಗೆ ಬಂದು ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳಾಗಿವೆ. ಕಾಯದ ಮರೆವಿನಿಂದಾಗಿ ಕಾಯ ರಚಿಸಿದ ಪುಸ್ತಕಗಳನ್ನು , ಕಾಯವೇ ನಿರ್ಮಿಸಿದ ಮಂದಿರ ಮಸೀದಿ ಚರ್ಚ್‌ಗಳನ್ನು ಕಾಯವೇ ಪೂಜಿಸಿ ತನ್ನನ್ನು ತಾನೇ ವಿಂಗಡಿಸಿಕೊಂಡು ಕಾಯ ಕಾಯಗಳೇ ಕಾದು ರಕ್ಕಸನಾಗಿವೆ. ಅರಿತರೆ ಅರಿವಿನ ಕಾಯವೇ ವಿರಾಟ ಸ್ವರೂಪ! ಅರಿಯದಿದ್ದರೆ ವಿರಾಟ ಸ್ವರೂಪವನ್ನೇ ಕಾಯದಲ್ಲಿ ಬಂಧಿಸಿಕೊಂಡ ಮರೆವಿನ ಕಾಯ !

532

ಎತ್ತೆತ್ತ ನೋಡಿದಡತ್ತತ್ತ ನೀನೆ ದೇವಾ,
ಸಕಲ ವಿಸ್ತಾರದ ರೂಹು ನೀನೆ ದೇವಾ,
ವಿಶ್ವತಶ್ಚಕ್ಷು ನೀನೆ ದೇವಾ,
ವಿಶ್ವತೊ ಮುಖ ನೀನೆ ದೇವಾ,
ವಿಶ್ವತೊ ಬಾಹು ನೀನೆ ದೇವಾ,
ಕೂಡಲಸಂಗಮದೇವಾ.

ಲಿಂಗವೆಂಬ ಅರಿವೇ ಭರಿತವಾದ ಸರ್ವಾಂಗದಿಂದ ಎತ್ತ ನೋಡಿದರೂ ತನ್ನ ಸ್ವ ಸ್ವರೂಪವೇ ಭರಿತವಾಗಿದೆ. ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ಮೂಗಿನಿಂದ ಪರಿಮಳ ಸುಖವನ್ನು ಆಸ್ವಾದಿಸಿ, ಚರ್ಮದಿಂದ ಸ್ಪರ್ಶ ಸುಖವನ್ನು, ನಾಲಿಗೆಯಿಂದ ರುಚಿಯ ಸುಖವನ್ನು ಆನಂದಿಸುವ ಈ ಕಾಯದಲ್ಲಿ ಕೈಲಾಸವೇ ಅಡಗಿದೆ ; ಅರಿವೆಂಬ ಗುರುದೇವನೂ ಕಾಯದ ಕಣ ಕಣದಲ್ಲಿ ಭರಿತನಾಗಿದ್ದಾನೆ.

ಕಾಯದ ಧರ್ಮವೇ ಕೈಲಾಸದ ಧರ್ಮ. ಅದು ಯಾವ ಭಾಷೆ ಯಾದರೇನು, ಯಾವ ಗಡಿ ಸೀಮೆಯಲ್ಲಿದ್ದರೇನು, ನೋಡುವ ನೋಟವೆಲ್ಲ ಒಂದೇ. ಕೇಳುವ ಶಬ್ದ ಜ್ಞಾನವೆಲ್ಲ ಒಂದೇ. ರುಚಿಸುವ ಜಿಹ್ವೆಯ ರುಚಿಯೆಲ್ಲ ಒಂದೇ. ಸ್ಪರ್ಶಿಸುವ ಚರ್ಮವೆಲ್ಲ ಒಂದೇ. ಮೂಸಿಸುವ ಪರಿಮಳವೆಲ್ಲ ಒಂದೇ. ಇದಕ್ಕೆ ಭಾಷೆ ವೇಷ ಹೆಣ್ಣು ಗಂಡು ಜಾತಿ ಮತ ದೇಶ ಗಡಿ ಸೀಮೆಗಳು ಅಡ್ಡಿ ಬರುವುದಿಲ್ಲ. ಈ ಜ್ಞಾನ ಕಾಯದಲ್ಲಿ ಅಡಗಿದ್ದರೂ ನೋಟಕ್ಕೆ ಸಹಾಯವಾಗುತ್ತಿಲ್ಲ. ಕಿವಿ ಮೂಗು ಚರ್ಮ ನಾಲಿಗೆಗಳಲ್ಲಿ ಅಡಗಿದ್ದರೂ ಆಯಾ ಜ್ಞಾನೇಂ ದ್ರಿಯಗಳಿಗೆ ಸಹಾಯ ಮಾಡದ

ಅರಿವೂ ಆಯಾ ಮೂಲ ಸ್ಥಾನದಲ್ಲಿಯೇ ಅಡಗಿರುವುದರಿಂದ ಕಾಯ ಹೇಗೆ ವಿಶ್ವ ತಶ್ಚಕ್ಷು, ವಿಶ್ವತೋ ಮುಖ, ವಿಶ್ವ ತೋ ಬಾಹು, ವಿಶ್ವ ತೋ ಪಾದ ಎಂದು ಕಾಯಕ್ಕೆ ಅರಿವಾಗುತ್ತಿಲ್ಲ.

ವಿರಾಟ ಸ್ವರೂಪನೇ ತಾನಾಗಬೇಕಾದ ಕಾಯ ಯಕಶ್ಚಿತ್ ಕಾಯವಾಗಿ ಕೈಲಾಸವನ್ನು ಕಾಯದಲ್ಲಿಯೇ ಅಡಗಿಸಿಕೊಂಡಿದೆ. ಮಣ್ಣಿನ ಗರ್ಭದಲ್ಲಿದ್ದ ಚಿನ್ನ ತೆಗೆದು ಅದಕ್ಕೆ ಮರುಳಾಗಿ ಯುದ್ಧ ಮಾಡುತ್ತದೆ. ಸಂಗ್ರಹಿಸಿ ಶ್ರೀಮಂತನಾಗಿದೆ. ಕಳುವು ಮಾಡಿ ಕಳ್ಳನಾಗಿದೆ. ಚಿನ್ನಕ್ಕಾಗಿ ಕೊಲೆ ಮಾಡಿ ಕೊಲೆಗಡುಕನಾಗಿದೆ. ಚಿನ್ನವನ್ನು ಕಾಯವೇ ಹೊರತಂದಿದೆ ; ಅದು ಹಳದಿ ಲೋಹವೆಂದು ಕಾಯವೇ ತಿಳಿಯುತ್ತಿಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ಅಂಗದಲ್ಲಿಯೇ ಆವರಿಸಿದ ಮನ, ಕೂಡಿಕೊಂಡರೆ ಅಂಗವೇ ಲಿಂಗಾಂಗ ! ಮನ ಅರಿವೆಂಬ ಗುರುದೇವನನ್ನು ಅಂಗದಲ್ಲಿಯೇ ಕೂಡಿಕೊಂಡ ಸಂಗಮನಾಥನ ಅಂಗ.

ಶ್ರೀಕೃಷ್ಣ ತಾನು ವಿರಾಟ ಸ್ವರೂಪನೆಂದು ಅರ್ಜುನನಿಗೆ ತೋರಿಸಲು ಬರುವುದಿಲ್ಲ. ಬದಲಾಗಿ ಅರ್ಜುನನೆಂಬ ಮನ, ಅರಿವೆಂಬ ಶ್ರೀಕೃಷ್ಣನನ್ನು ಕೂಡಿಕೊಂಡು ಅರ್ಜುನನೇ ಶ್ರೀಕೃಷ್ಣನಾಗಿ ವಿರಾಟ ಸ್ವರೂಪನಾಗಬಹುದು.

ಕಾಯವೇ ವೈಕುಂಠ ! ಅಲ್ಲಿ ಶ್ರೀಕೃಷ್ಣನೂ ಇದ್ದಾನೆ ; ಅರ್ಜುನನೂ ಇದ್ದಾನೆ ! ಮನ ಅರ್ಜುನನಾದರೆ ಅರಿವು ಶ್ರೀಕೃಷ್ಣ ! ಮನ ಅರಿಯದಿದ್ದರೆ ಅರಿತ ಜ್ಞಾನಿಗೆ ಅದು ಶ್ರೀಕೃಷ್ಣನ ವೈಕುಂಠದ ತನು. ಅದು ಯಾವ ತನುವಾದರೇನು ಮಹಾಜ್ಞಾನಿಗೆ ಸಕಲ ತನುಗಳೂ ವೈಕುಂಠವೇ; ತನ್ನಂತೆಯೇ ವಿರಾಟ ಸ್ವರೂಪದ ತನುಗಳೇ. ಹಾಗೆಂದು ತನುವಿನಲ್ಲಿರುವ ಮನಗಳೆಲ್ಲ ಅರಿತರೆ ಸಕಲ ತನುಗಳಿಗೂ ಈ ಅರಿವಿನ ಆನಂದದ ಭಾಗ್ಯ ದಕ್ಕುತ್ತದೆ.

533

ಜಲ ಕೂರ್ಮ ನಾಗ ಮೇದಿನಿ ಸಪ್ತ ಸಾಗರ
ಅಜಾಂಡಕಾಂಡ ಹರಿವಿರಂಚಿಗಳು
ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ !
ಕೂಡಲಸಂಗನ ಮಹಾ ಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ
ಇಚ್ಛಾ ಮಾತ್ರದಿಂದ ಜಗಜುಗವಯ್ಯಾ !

ಬಯಲು ಜಲಜನಕವನ್ನು ಆಮ್ಲಜನಕವನ್ನು ಬಂಧಿಸಿ, ತಾನು ಅದರಲ್ಲಿ ಬೆರೆತು ಜಲವಾಗಿ ಜೀವ ಜಲವಾಗಿದೆ. ಜಲದಿಂದಲೇ ಕೂರ್ಮ(ಆಮೆ)ನಾಗ ಮೇದಿನಿ ಸಪ್ತ ಸಾಗರಗಳು ಅಜಾಂಡಕಾಂಡ ಹರಿವಿರಂಚಿಗಳು ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ ! ಕೂಡಲಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರದಿಂದ ಜಗಜುಗವಯ್ಯಾ :

ಜಲಬಿಂದುವೇ ಗರ್ಭದಲ್ಲಿ ಹೋಗಿ ರಕ್ತ ಮಾಂಸ ಮಜ್ಜೆ ಮೇದಸ್ಸು ಅಸ್ತಿಗಳಾಗಿ ಚರ್ಮದ ಕವಚವಾಗಿ ಅಂಗವಾಗಿ ಹೊರ ಬಂದಿದೆ. ಇದು ಅಂಗವೂ ಹೌದು ; ಸಕಲವನ್ನು ತಿಳಿದು ಸೃಷ್ಟಿ ಮಾಡಿದ ಲಿಂಗವೂ ಹೌದು. ಅಸ್ತಿಗಳನ್ನು ಹೊತ್ತು ಸಕಲ ಪ್ರಾಣಿಗಳಿಗೆ ಗಣನಾಯಕನೆನ್ನಿಸಿಕೊಂಡ ಗಣೇಶ್ವರನೂ ಹೌದು. ಅಂಗವೆಂಬ ಈ ಅಸ್ತಿಗ್ರಾಹಕ ಗಣೇಶ್ವರನಿಂದಲೇ ಸಕಲ ದೇವಾನು

ದೇವತೆಗಳು ಹುಟ್ಟಿದ್ದಾರೆ. ಸಕಲ ವೇದ ಆಗಮ ಉಪನಿಷತ್ತುಗಳು ಭಗವದ್ಗೀತೆ ಬೈಬಲ್‌ಗಳು ಹುಟ್ಟಿವೆ.

ಮಾತನಾಡುವ ನೋಡುವ ಕೇಳುವ ಮುಟ್ಟುವ ಮೂಸಿಸಿ ರುಚಿಸುವ ಶಕ್ತಿಯನ್ನು ಹೊಂದಿ ಸಕಲವನ್ನು ಭಾಷೆಯಲ್ಲಿ ಬಂಧಿಸಿ ಬರೆಯುವ ಶಕ್ತಿಯನ್ನು ಹೊಂದಿದ್ದಾನೆ ಮನುಷ್ಯ ! ಬಯಲು ದೇವ ಮಾತನಾಡುವ ಅಂಗದಲ್ಲಿ ಲಿಂಗವಾಗಿ ಚುಳುಕಾಗಿದ್ದಾನೆ. ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರಗಳನ್ನು ಜಲದಿಂದಲೇ ಸೃಷ್ಟಿಸಿದ್ದಾನೆ. ತನ್ನ ಇಚ್ಛೆಯಿಂದಲೇ ಇಡೀ ಜಗತ್ತಿಗೆ ಹೆಸರನಿಟ್ಟು ಅದರ ಸೃಷ್ಟಿಕರ್ತನೂ ತಾನೇ ಎನ್ನಿಸಿಕೊಂಡಿದ್ದಾನೆ.

ಅಂಗದಲ್ಲಿಯೇ ಬಂಧಿಯಾಗಿ ಲಿಂಗಾಂಗವೇ ಆದ ಅಂಗದಿಂದಲೇ ಸಕಲವೆಂದು ಅರಿಯಬಲ್ಲ ಶಕ್ತಿ ಅಂಗವನ್ನು ಸೂಕ್ಷ್ಮವಾಗಿ ಗ್ರಹಿಸುವ ಜ್ಞಾನಿಗೆ ಮಾತ್ರ ದಯಪಾಲಿಸಿದ್ದಾನೆ. ಅರಿತರೆ ಸಕಲ ಅಂಗಗಳಿಗೂ ಈ ಶಕ್ತಿಯನ್ನು ದಯಪಾಲಿಸುವ ಕರುಣಾಮಯಿಯೂ ತಾನೇ ಆಗಿ ಅಂಗದಲ್ಲಿಯೇ ಬಂಧಿಯಾಗಿದ್ದಾನೆ.

534

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ,
ಜಂಘೆಯಲ್ಲಿ ಅಜ ಜನನವು,
ಇಂದ್ರ ಪಾದದಲ್ಲಿ ಚಂದ್ರ ಮನದಲ್ಲಿ,
ಚಕ್ಷುವಿನ ಸೂರ್ಯ ಜನನವು.
ಮುಖದಲ್ಲಿ ಅಗ್ನಿಯು ಪ್ರಾಣದಲ್ಲಿ ವಾಯು
ನಾಭಿಯಲ್ಲಿ ಅಂತರಿಕ್ಷವು,
ಸಿರದಲುದಯ ತ್ರೆತ್ತೀಸಕೋಟಿ ದೇವತೆಗಳು.
ಪಾತಾಳದಲ್ಲಿ ಭೂಮಿ ಜನನವು.
ಶ್ರೋತ್ರದಲ್ಲಿ ದಶದಿಕ್ಕುಗ್ಗಳು.
ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು.
ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರಕೈ, ಸಾಸಿರ ಪಾದ,
ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಯ್ಯ.

'ಲಿಂಗ ಮಧ್ಯೆ ಜಗತ್‌ಸರ್ವಂ' ಲಿಂಗದ ಮಧ್ಯೆದಲ್ಲಿ ಜಗವೆಲ್ಲ ಅಡಗಿದೆ ! ಲಿಂಗ ಅಂಗದಲ್ಲಿ ಅಡಗಿದೆ ! ಸರ್ವಾಂಗವೆಲ್ಲ ಲಿಂಗವೇ ಆಗಿದ್ದರೂ ಅಂಗ, ಮನದ ಕಾರಣದಿಂದ ಅರಿಯದಂತಾಗಿದೆ. ಮನದ ಬಯಕೆಯಿಂದಲೇ ಅರಿಯುವಂತಾಗಿದೆ.ಅರಿತರೆ ಶರಣ ಮರೆತರೆ ಮಾನವ !

ಅಂಗ ತನ್ನ ಶಕ್ತಿಯನ್ನು ಮನ ಮರೆಯುವಂತೆ ಮಾಡಿದುದಕ್ಕಾಗಿಯೇ ಅಂಗದ ಮುಖದಲ್ಲಿಯೇ ಉದಯಿಸಿದ ರುದ್ರ ಅಂಗಕ್ಕೆ ದೇವನಾಗಿದ್ದಾನೆ. ಭುಜದಲ್ಲಿ ಹುಟ್ಟಿದ ವಿಷ್ಣು ಕೂಡಾ ದೇವನಾಗಿದ್ದಾನೆ. ಜಂಘೆಯಲ್ಲಿ ಹುಟ್ಟಿದ ಬ್ರಹ್ಮನನ್ನು ಅಂಗವೇ ಕೊಂಡಾಡುತ್ತಿದೆ. ಅಂಗದ ಪಾದದಲ್ಲಿಯೇ ಹುಟ್ಟಿದ ಇಂದ್ರನ ವೈಭವವನ್ನು ಅಕ್ಷರದ ಮೂಲಕ ಅಂಗವೆ ವರ್ಣನೆ ಮಾಡುತ್ತದೆ. ಮನದಲ್ಲಿ ಹುಟ್ಟಿದ ಚಂದ್ರನನ್ನು ಮನವೇ ಕತೆ ಮಾಡಿ ಹೇಳುತ್ತದೆ.

ಕೋಟಿ ಸೂರ್ಯರನ್ನು ಸೃಷ್ಟಿ ಮಾಡುವ ಕಣ್ಣುಗಳಿಂದಲೇ ಹುಟ್ಟಿದ ಸೂರ್ಯನನ್ನು

ಅರಿಯದೇ ಕಣ್ಣುಗಳೇ ಕೊಂಡಾಡುತ್ತಲಿವೆ. ಮುಖದಲ್ಲಿ ಅಗ್ನಿ, ಪ್ರಾಣದಲ್ಲಿ ವಾಯು ಹುಟ್ಟಿದೆ. ನಾಭಿಯಲ್ಲಿ ಅಂತರಿಕ್ಷವೇ ಅಡಗಿದೆ. ಸಿರದಲ್ಲಿ ಮೂವತ್ಮೂರು ಕೋಟಿ ದೇವತೆಗಳು ಹುಟ್ಟಿದ್ದರೂ ದೇವತೆಗಳನ್ನು ಹಡೆದ ಸಿರವೇ ಮರೆತು ಹೋಗಿದೆ. ಪಾದ ತಳದಲ್ಲಿಯೇ ಭೂಮಂಡಲ ಹುಟ್ಟಿದೆ. ಕಿವಿಗಳಲ್ಲಿ ದಶ ದಿಕ್ಕುಗಳು ಹುಟ್ಟಿವೆ. ತನುವಿನ ಕುಕ್ಷಿಯಲ್ಲಿ ಸರ್ವ ಬ್ರಹ್ಮಾಂಡವೂ ಅಡಗಿದೆ. ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತನು ಅಂಗದಲ್ಲಿಯೇ ಕೂಡಿದ ಕೂಡಲ ಸಂಗಯ್ಯನು.

ಜಗತ್ತಿನಲ್ಲಿರುವ ಸರ್ವಾಂಗಗಳು ವಿರಾಟಸ್ವರೂಪದ ಅಂಗಗಳೇ ಆಗಿದ್ದರೂ ಮನಕ್ಕೆ ಮನದಟ್ಟಾಗದ ನಿಮಿತ್ತ ತಾನು ಸೃಷ್ಟಿಸಿದ ಚಿತ್ರವನ್ನೇ ಪೂಜಿಸಿ ದೇವನೆಂದು ಕೊಂಡಾಡುತ್ತದೆ. ಆ ದೇವರಿಗೆ ದೇವಾಲಯ ನಿರ್ಮಿಸಿ ಅದಕ್ಕೆ ಅಲಂಕಾರ ಮಾಡಿ ಮತ್ತೆ ಮತ್ತೆ ಅಭಿಷೇಕ ಮಾಡಿ ಪೂಜಿಸಿ ಪೂಜಿಸಿ ಅಂಗ ಸೋತಿದೆ.

ಅಂಗವೇ ಸೃಷ್ಟಿಸಿದ ದೇವಾನು ದೇವತೆಗಳು ಅಂಗದ ಹೆಗಲೇರಿ ಕಾಳಗ ಮಾಡುತ್ತಿರುವುದನ್ನು ಅರಿಯದೆ ; ಲಿಂಗಾಂಗವೇ ಆಗಬೇಕಾದ ಅಂಗ ಮನದ ಭ್ರಮೆಯಿಂದಾಗಿ ಮಂಗವಾಗಿದೆ. ಅರಿತರೆ 'ಲಿಂಗ ಮಧ್ಯೆ ಜಗತ್ ಸರ್ವಂ'.

535

'ವಿಶ್ವಾಧಿಕೋ ರುದ್ರ'ನ ಹೊಗಳುವ ಶ್ರುತಿಗಳು-
'ವಿಶ್ವರೂಪಾಯ ವೈ ನಮಃ'
'ಪರಮರೂಪನೆ ನಮೋ, ಪರತತ್ವನೆ ನಮೋ,
ಆದಿಯಾರೂಢ ಭಯಕರನೆ ನಮೋ,
ಹರಿಯನು ಹರಿಸಿದನೇ ಎಂದು ಶ್ರುತಿಯು ಸಾರುತ್ತಿರಲು-
ಸಂಹಾರಕಾರಣನೆ ನಮೋ, ನಮ್ಮ ಕೂಡಲಸಂಗಮದೇವಾ,
ಮಹದ್ ಮಹದ್ಭ್ಯೋ ನಮಃ.

ತಿಳಿಯಲು ಹೋದರೆ ಅಂಗದಲ್ಲಿ ಅದ್ಭುತವಾದ ಶಕ್ತಿಯೇ ಅಡಗಿದೆ ಯೆಂದು ಶೃತಿಗಳ ಮೂಲಕ ಅಂಗವೇ ದಾಖಲಿಸಿದೆ. ವೇದ ಆಗಮ ಉಪನಿಷತ್ತುಗಳನ್ನು ಶೃತಿ ಸ್ಮೃತಿಗಳನ್ನು ಅಂಗವೇ ರಚಿಸಿ ಅಂಗದ ಮಹಿಮೆಯನ್ನು ಬೆಡಗಿನಿಂದ ಕೊಂಡಾಡಿದೆ. ಮನ ಆ ಸೂತ್ರಗಳಿಂದಲೇ ಸರ್ವಾಂಗದಲ್ಲಿ ಬೆರೆತ ಲಿಂಗದತ್ತ ಸಾಗಿ ಗಮ್ಯ ಸೇರಬೇಕಾಗಿದೆ.

ವ್ಯವಹಾರ ಬುದ್ಧಿಯ ಮನ ಅರಿವಿನಿಂದ 'ವಿಶ್ವಾಧಿಕ ರುದ್ರ'ನೆಂದು ಅಂಗವನ್ನು ಸಾರಿ ಭ್ರಮೆಯಿಂದಾಗಿ ಆ ರುದ್ರನ ಪೂಜೆಯಲ್ಲಿ ತೊಡಗಿದೆ. ಅಂಗದ ಕಣ ಕಣದಲ್ಲಿ ಸಂಗಮವಾದ ಸಂಗಮನಾಥನು, ವಿಶ್ವಾಧಿಕನೂ, ವಿಶ್ವರೂಪನೂ, ಪರಮ ರೂಪನೂ, ಆದಿಯಾರೂಢ ಅಭಯಕರನು, ಹರಿಯನು ಹರಿಸಿದವನೂ ಹೌದು.

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನು ಮಹತ್ತಿಗೂ ಮಹತ್ತಾದವನು. ಇಂತಹ ಶಕ್ತಿಯನ್ನು ಅಂಗದಲ್ಲಿಯೇ ಸಂಗಮಗೊಳಿಸಿಕೊಂಡ ಮನ ಭ್ರಮೆಯಿಂದಾಗಿ ಅಂಗವಾಗಿದೆ. ಸ್ವಯಂ ಲಿಂಗವಾದುದನೇ ಮರೆತಿದೆ.

536

ಐದುವುದೆ ಬ್ರಹ್ಮನ ಕಪಾಲ ಕರದಲ್ಲಿ ?
ಐದುವುದೆ ವಿಷ್ಣುವಿನ ನಯನ ಪಾದದಲ್ಲಿ ?
ಐದುವುದೆ ಕಾಮನ ಸುಟ್ಟ ಭಸ್ಮ ಮೈಯಲ್ಲಿ ?
ಮುಖ ಮೂದಲೆಯೇಕಯ್ಯಾ ಕೂಡಲಸಂಗಮದೇವಾ !

ಬ್ರಹ್ಮ ಶಿವನನ್ನು ಹುಡುಕಲು ಆತನ ಮುಕುಟವನ್ನು ಅರಸುತ್ತಾ ಮೇಲೆ ಹೋದ. ವಿಷ್ಣು ಶಿವನ ಶ್ರೀಪಾದ ಹುಡುಕುತ್ತಾ ಪಾತಾಳಕ್ಕೆ ಸಂಚರಿಸಿದ ಬ್ರಹ್ಮನಿಗೆ ಶಿವನ ಶ್ರೀಮುಕುಟ ಸಿಗಲಿಲ್ಲ. ವಿಷ್ಣುವಿಗೆ ಶಿವನ ಪಾದ ಸಿಗಲಿಲ್ಲ. ಇವರಿಬ್ಬರಿಗೂ ಶಿವದರ್ಶನ ಸಾಧ್ಯವಾಗಲಿಲ್ಲವೆಂದು ಪುರಾಣಗಳು ಹೇಳುತ್ತವೆ.

ನಾನು ಶಿವನನ್ನು ನೋಡಿಯೇ ತೀರುತ್ತೇನೆ ಎಂದು ಬ್ರಹ್ಮ ವಿಷ್ಣು ಇಬ್ಬರೂ ಪಂಥ ಕಟ್ಟಿದರಂತೆ. ಬ್ರಹ್ಮ ಮುಖವನ್ನು ಆಯ್ದುಕೊಂಡರೆ ವಿಷ್ಣು ಪಾದವನ್ನು ಆಯ್ದುಕೊಂಡನಂತೆ. ಬ್ರಹ್ಮ ಶಿವನ ಮುಕುಟದ ದರ್ಶನಕ್ಕಾಗಿ ಬ್ರಹ್ಮಾಂಡದತ್ತ ಪಯಣಿಸಿ ಸುಸ್ತಾದ. ಶಿವನ ದರ್ಶನ ಬ್ರಹ್ಮನಿಗೆ ಸಾಧ್ಯವಾಗಲಿಲ್ಲ. ಅಲ್ಲಿಯೇ ಇದ್ದ ಕೇದಗೆಯ ಎಸಳೊಂದು ತಂದು ಇದು ಆತನ ಜಟೆಯೆಂದು ಶಿವನ ದರ್ಶನವಾಯಿತೆಂದು ಬ್ರಹ್ಮ ಸುಳ್ಳು ಹೇಳಿದ. ಕೂಡಲೇ ಆತನ ಒಂದು ತಲೆ ಕಳಚಿ ಬಿತ್ತೆಂದು ಪುರಾಣದಲ್ಲಿ ಬರೆಯಲಾಗಿದೆ. ವಿಷ್ಣು ತನ್ನ ಕಣ್ಣುಗಳಿಂದ ಪಾದ ಹುಡುಕಲು ಹೋಗಿ ಶಿವನ ದರ್ಶನವಾಗಲಿಲ್ಲವೆಂದು ಸತ್ಯವನ್ನೇ ನುಡಿದನಂತೆ. ಬ್ರಹ್ಮ ವಿಷ್ಣುವಿಗೆ ಶಿವನ ದರ್ಶನವಾಗಲಿಲ್ಲ!

ಐದುವುದೆ ಕಾಮನ ಸುಟ್ಟ ಭಸ್ಮ ಮೈಯಲ್ಲಿ :

ಕಾಮನ ಹಿಂಸೆ ತಾಳದೆ ರುದ್ರ ತನ್ನ ಹಣೆಗಣ್ಣನ್ನು ತೆರೆದು ಕಾಮನನ್ನು ಸುಟ್ಟು ಭಸ್ಮ ಮಾಡಿದನೆಂದು ಪುರಾಣ ಹೇಳುತ್ತದೆ. ಆದರೆ ತನುವಿನಲ್ಲಿಯ ಕಾಮ ಭಸ್ಮವಾಗಲಿಲ್ಲ.

ಬ್ರಹ್ಮನ ಶಿರ, ವಿಷ್ಣುವಿನ ನಯನ ವ್ಯರ್ಥವಾದವು. ರುದ್ರ ಕಾಮನ ಸುಟ್ಟ ಭಸ್ಮ ವ್ಯರ್ಥವಾಯಿತು. ದೇವಾನು ದೇವತೆಗಳು ಶಿವನನ್ನು ಹೊರಗೆ ಹುಡುಕಿ ಕಾಲಹರಣ ಮಾಡಿದರು. ಶರಣ ತನ್ನ ಸರ್ವಾಂಗದಲ್ಲಿಯೇ ದೇವಾನು ದೇವತೆಗಳು ಅಡಗಿದುದನು ಕಂಡು ಆನಂದಿಸಿದ. ಶರಣನಿಗೆ ಅರಿವೇ ಗುರುವಾದ. ಆ ಗುರುದೇವನೇ ಮಹಾದೇವನಾದ ; ಸದಾಶಿವನಾದ. ಸಾಕ್ಷಾತ್ ಪರಬ್ರಹ್ಮನೇ ತಾನಾದ. ತನುವಿನಲ್ಲಿಯೇ ತನ್ಮಯವಾದ ಶಿವನನ್ನು ಗಮನಿಸಿದ. ತನುವಿಗೆ ಆವರಿಸಿದ ಕಾಮವನ್ನು ಅಲ್ಲಿಯೇ ಸುಟ್ಟು ಭಸ್ಮ ಮಾಡಿ ಆ ಭಸ್ಮವನ್ನೇ ಧರಿಸಿ ತ್ರಿಪುಂಡ್ರ ಧಾರಿಯಾದ.

537

ಹರನ ಕೊರಳಿಲ್ಲಿಪ್ಪ ಕರೋಟಿಮಾಲೆಯ
ಶಿರದ ಲಿಖಿತವ ಕಂಡು ಮರುಳು ತಂಡಗಳು ಓದಿ ನೋಡಲು
ಇವನಜ ಇವ ಹರಿ ಇವ ಸುರಪತಿ ಇವ ಧರಣೀಂದ್ರ
ಇವನಂತಹಕನೆಂದು ಹರುಷದಿಂದ ಸರಸವಾಡಿತ್ತ ಕಂಡು
ಹರಮುಕುಳಿತನಾಗಿ ನಕ್ಕ ನಮ್ಮ ಕೂಡಲಸಂಗಮದೇವಾ.

ಚಿತ್ರದಲ್ಲಿ ರಚಿಸಿದ ಶಿವನ ಕೊರಳಲ್ಲಿಯ ರುಂಡಮಾಲೆಯನು, ಶಿರದ ಲಿಖಿತವನು ಕಂಡು ಮರುಳು ಜನ ಓದಿ ನೋಡಿ, ಇವನು ಬ್ರಹ್ಮ, ಇವನು ಹರಿ, ಇವನು ಸುರಪತಿ, ಇವನು ಧರಣೇಂದ್ರ, ಇವನು ಹಂತಕನೆಂದು ಗುರುತಿಸಿ, ಶಿವ ಮಾತ್ರ ದೊಡ್ಡವನೆಂದು ಕೊಂಡಾಡಿದರು.

ಶಿವನಿಗೆ ಮತ್ತೊಂದು ಹೆಸರು ರುಂಡಮಾಲಿ ಎಂದು. ಪುರಾಣಗಳು ರುಂಡಮಾಲಿಯ ಕತೆ ಬರೆದರೆ, ಕಲಾವಿದ ರುಂಡ ಮಾಲೆಯ ಸುಂದರವಾದ ಚಿತ್ರ ಬಿಡಿಸಿದ. ರುಂಡಮಾಲಿಯ ಕೊರಳಲ್ಲಿ ಸಕಲ ದೇವಾನು ದೇವತೆಗಳು, ರಕ್ಕಸರು ಇದ್ದ ಚಿತ್ರವದು. ಇದೊಂದು ಆಧ್ಯಾತ್ಮದ ಅರಿವಿನ ಚಿತ್ರ. ಒಂದು ತನು ಹೇಗೆ ಸಕಲ ದೇವರೂ ಹೌದು, ಸಕಲ ರಕ್ಕಸನೂ ಹೌದೆಂದು ಹೇಳುವ ಸುಂದರ ಚಿತ್ರ. ಇಂತಹ ಅದ್ಭುತವಾದ ಅರಿವಿನ ಚಿತ್ರವನ್ನು ನೋಡಿದ ಅಂಗಗಳು ಲಿಂಗವೆಂದು ಭಾವಿಸಲಿಲ್ಲ. ರುಂಡಮಾಲಿ ಧರಿಸಿದ ಚಿತ್ರವನ್ನೇ ಶಿವನೆಂದು ಪೂಜಿಸಿ ಹಲವಾರು ತಂಡಗಳನ್ನು ನಿರ್ಮಿಸಿ ಕೊಂಡವು.

ಅರಿವಿಗೆ ಹೋಗುವ ಚಿತ್ರಗಳೆಲ್ಲ ದೇವರ ಚಿತ್ರಗಳಾದವು. ಪುರಾಣಗಳೆಲ್ಲ ದೈವ ಸ್ವರೂಪದ ಸ್ವಯಂಭು ಗ್ರಂಥಗಳಾದವು. ಅಂಗದ ಸ್ವಭಾವವೇ ಹೀಗೆ. ಒಂದು ಅಂಗ ಅರಿವಿಗೆ ಹೋಗಿ ಸಮಾಧಾನ ಪಟ್ಟುಕೊಂಡು, ಅರಿವಿನ ಮಾರ್ಗವನ್ನು ರಚಿಸಿದರೆ ಉಳಿದ ಅಂಗಗಳು ಆ ಜಾಡು ಹಿಡಿದು ನಡೆದು ಅರಿವಿನ ಗುರಿ ತಲುಪಬೇಕು. ಅದನ್ನು ಬಿಟ್ಟು ಚಿತ್ರವನ್ನು, ರಚಿಸಿದ, ಸೂತ್ರವನ್ನು ಬರೆದ ಅಂಗವನ್ನೇ ಪೂಜಿಸುತ್ತಿರುವುದು ಅಂಗದ ದುರ್ದೈವವೆಂದು ಬಸವಣ್ಣನವರು ಮರುಕ ವ್ಯಕ್ತಪಡಿಸಿದ್ದಾರೆ.

538

ಅದುರಿತು ಪಾದಾಘಾತದಿಂದ ಧರೆ,
ಬಿದಿರಿದುವು ಮುಕುಟ ತಾಗಿ ತಾರಕೆಗಳು,
ಉದುರಿದುವು ಕೈ ತಾಗಿ ಲೋಕಂಗಳೆಲ್ಲಾ !
'ಮಹೀಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ'
ಪದಂ ವಿಷ್ಣೋ ರ್ಭ್ರಾಮ್ಯದ್ ಭುಜಪರಿಘರುಗ್ಣ ಗ್ರಹಗಣಃ ॥
ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತ ಜಟಾತಾಡಿತತಟಾ ।
ಜಗದ್ರಕ್ಷಾಯೈ ತ್ವಂ ನಟಸಿ ನನು ವಾಮ್ಯೈವ ವಿಭುತಾ॥
ನಮ್ಮ ಕೂಡಲಸಂಗಮದೇವಾ ನಿಂದು ನಾಟ್ಯವನಾಡೆ.

ಭೂಮಿ ನಕ್ಷತ್ರ ಸೂರ್ಯ ಚಂದ್ರ ಮುಂತಾದ ಗ್ರಹಗಳು, ಗಿಡ ಮರ ಬಳ್ಳಿ ಪಶು ಪಕ್ಷಿ ಕೀಟ ಉರುಗ ಜಲಚರಾದಿಗಳು, ಮನುಷ್ಯ ಪ್ರಾಣಿ ಸಪ್ತಸಾಗರಗಳು, ನದಿ ಹಳ್ಳಗಳೆಲ್ಲ ಬಯಲ ಬೀಜದ ಕುಡಿಗಳು. ಬಯಲ ಬೀಜದ ಫಲದಿಂದಲೇ ನಟರಾಜನಾಗಿ ಜನ್ಮ ತಳೆದು ನಾಟ್ಯ ಮಾಡಿದ. ಆತನ ಪಾದಾಘಾತದಿಂದ ಧರೆ ನಡುಗುತ್ತದೆ. ತಾರೆಗಳು ಉದುರಿ ಬಿದ್ದು ಬಯಲಗರ್ಭ ಸೇರುತ್ತವೆ. ಸಪ್ತಸಾಗರಗಳು ಸುನಾಮಿಯಿಂದ ತತ್ತರಿಸುತ್ತವೆ. ಜಲದಿಂದ ಹುಟ್ಟಿದ ಗಿಡ ಮರ ಬಳ್ಳಿಗಳು, ಜಲದಿಂದಲೇ ಹುಟ್ಟಿದ ಗುಡ್ಡ ಬೆಟ್ಟ ಭೂಮಿ ಗಳು ಜಲವೇ ಆಗಿ ಜಲದಲ್ಲಿ ಕೂಡಿ ಜಲ ಬಯಲಾಗಿ ಬಯಲು ಸೇರುತ್ತದೆ.

ಶೂನ್ಯದಿಂದಲೇ ಬಂದ ಜಲ ಪದಾರ್ಥವಾಗಿ ದ್ರವ್ಯವಾಗಿ ಪುನಃ ಜಲವಾಗಿ ಬಯಲು ಸೇರಿ ಬಯಲಾಗುತ್ತದೆ.

''ಬಯಲು ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಬಯಲು ಜೀವನ, ಬಯಲು ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ'' ಎಂದು ಪ್ರಭುಗಳು ಹಾಡಿದ್ದಾರೆ.

ಅಂಗದಲ್ಲಿಯೇ ಕೂಡಿದ ಕೂಡಲ ಸಂಗಮದೇವ ಬೇರಾರು ಅಲ್ಲ; ಆತ ಬಯಲು ದೇವ. ನಿಂತು ನಾಟ್ಯವನಾಡಿದರೆ ಭೂಮಿಯೆಲ್ಲಾ ಬಿರಿಯುತ್ತದೆ. ನಕ್ಷತ್ರಗಳು ಉದುರಿ ಬೀಳುತ್ತವೆ. ಭೂಮಿ ಆಕಾಶ ಜಲವೆಲ್ಲ ಆಕಾಶಮಯವಾಗಿ ಬಯಲಾಗಿ ಬಯಲು ಸೇರುತ್ತದೆ.

539

ಆರು ಕೋಟಿ ಬ್ರಹ್ಮರು ಮಡಿವಲ್ಲಿ
ನಾರಾಯಣಗೊಂದು ದಿನವಾಯಿತ್ತು.
ನಾರಾಯಣರೊಂದು ಕೋಟಿ ಮಡಿವಲ್ಲಿ
ರುದ್ರನ ಕಣ್ಣೆವೆ ಹಳಚಿತ್ತು.
ಕೂಡಲಸಂಗಮದೇವನೇನೆಂದು ಅರಿಯ.

ಬ್ರಹ್ಮನ ಒಂದು ದಿವಸ ಅಥವಾ ಸಹಸ್ರಮಹಾಯುಗಗಳ ಕಾಲಾವಧಿ ; ಅಂದರೆ ನಾಲ್ಕು ನೂರಾ ಮೂವತ್ತೆರಡು ಕೋಟಿ ಮರ್ತ್ಯರ ವರ್ಷಗಳು. ಹೀಗೆಂದ ಮೇಲೆ ಒಬ್ಬ ಬ್ರಹ್ಮನ ಆಯುಷ್ಯದ ವರ್ಷಗಳನ್ನೇ ಲೆಕ್ಕ ಹಾಕಲು ಸಾಧ್ಯವಾಗುವುದಿಲ್ಲ. ಇಂತಹ ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣನಿಗೆ ಒಂದು ದಿನವಾಗುತ್ತದೆ ಎಂದು ಅಣ್ಣನವರು ಹೇಳಿದ್ದಾರೆ.

ಇಂತಹ ನಾರಾಯಣರು ಒಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು ಎನ್ನುತ್ತಾರೆ. ಇಂತಹ ರುದ್ರಾವತಾರಗಳು ಹಲವು ಅಳಿವಲ್ಲಿ ಕೂಡಲಸಂಗಮದೇವನು ಏನೆಂದು ಅರಿಯ.

ಅಂಗದಲ್ಲಿ ಅದ್ಭುತವಾದ ಶಕ್ತಿಯಿದೆ. ಸರ್ವಾಂಗದಲ್ಲಿದ್ದ ಅರಿವೆಂಬ ಲಿಂಗ ಪರಿಚಯವಾದ ಅಂಗ ಆರು ಕೋಟಿ ಬ್ರಹ್ಮರಿಗಿಂತಲೂ, ನಾರಾಯಣನಿಗಿಂತಲೂ, ರುದ್ರನಿಗಿಂತಲೂ ಅಧಿಕವಾದದ್ದು.

ಬ್ರಹ್ಮ, ನಾರಾಯಣ, ರುದ್ರರನ್ನು ಸೃಷ್ಟಿ ಮಾಡಿ ಅವರ ಪುರಾಣ ಕತೆ ನಾಟಕ ಚಿತ್ರಗಳನ್ನು ಬರೆದದ್ದು ಅಂಗವೇ ಆಗಿದೆ. ಅಂಗದಲ್ಲಿ ಸಂಗಮವಾದ ಲಿಂಗವನ್ನು ಯಾವ ಬ್ರಹ್ಮನೂ ನಾರಾಯಣನೂ ರುದ್ರನೂ ಸೃಷ್ಟಿಸಲಿಲ್ಲ.

ಅರಿತರೆ ಅಂಗವೇ ಲಿಂಗ. ಅದು ಸರ್ವಾಂಗದಲ್ಲಿ ಸಂಗಮ ವಾಗಿದೆ. ಅಂಗದ ಮಹತ್ವ ಅಂಗವೇ ಅರಿಯದೆ ಎಲ್ಲವನ್ನು ತಿಳಿಯುವ ಕುತೂಹಲದ ರೋಗ ಅಂಗಕ್ಕೆ ಬೇತಾಳನಂತೆ ಕಾಡುತ್ತಿದೆ. ಹೀಗಾಗಿ ಅಂಗ ನಿಕೃಷ್ಟವಾಗಿ ಪರಿಚಯವಾಗಿದೆ. ಅಲ್ಲೊಂದು ಇಲ್ಲೊಂದು ಅಂಗ ಮಾತ್ರ ಬುದ್ಧ ಮಹಾವೀರ ಕನಕ ಬಸವಾದಿ ಶರಣರಂತೆ ಕಂಗೊಳಿಸುತ್ತವೆ.

540

ಯುಗ ಜುಗ ಪ್ರಳಯವಹಂದೂ ಕಾಣೆ ನಿಂದೂ ಕಾಣೆ !
ಧಗಿಲು ಭುಗಿಲೆಂದುರಿವಂದೂ ಕಾಣೆನಿಂದೂ ಕಾಣೆ !
ಕೂಡಲಸಂಗಮದೇವನಲ್ಲದೆ ತಲೆದೋರುವ
ದೈವಂಗಳನಂದೂ ಕಾಣೆನಿಂದೂ ಕಾಣೆ.

ಯುಗ ಯುಗಾಂತರಗಳ ಕಾಲ ಎಷ್ಟೊ ಪ್ರಳಯಗಳಾಗಿವೆ. ಅಂಗ ಸೃಷ್ಟಿ ಮಾಡಿದ ದೇವರುಗಳೆಲ್ಲ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಧರೆ ಹತ್ತಿ ಉರಿದು ಲಾವಾರಸ ಚಿಮ್ಮಿದಾಗಲೂ ದೇವಾನು ದೇವತೆಗಳು ಸುಟ್ಟು ಬೂದಿಯಾಗಿದ್ದಾರೆ. ಅವರು ಅಂದೂ ಕಂಡಿಲ್ಲ; ಅವರು ಇಂದೂ ಕಾಣುವುದಿಲ್ಲ. ಅಂಗ ಸೃಷ್ಟಿಸಿದ ದೇವರು, ಅಂಗ ಚಿತ್ರಿಸಿದ ದೇವರು, ಅಂಗವೇ ಪುರಾಣ ಪುಣ್ಯಕತೆಗಳನ್ನು ಬರೆದು ಓದಿ ಆನಂದಿಸಿದ ಅಂಗವೇ ಲಿಂಗವಲ್ಲದೆ ಮತ್ತೊಂದು ದೇವರು ಅಂದೂ ಇರಲಿಲ್ಲ. ಇಂದೂ ಇಲ್ಲ.

ದೇವರೆಂದರೆ ಸತ್ಯ. ಅದು ಸರ್ವಾಂಗದಲ್ಲಿಯೂ ತನ್ಮಯವಾಗಿದೆ. ಧರ್ಮವೆಂದರೆ ಸತ್ಯ. ಅದು ಕೂಡಾ ಅಂಗದಲ್ಲಿಯೇ ತನ್ಮಯವಾಗಿದೆ. ಅಂಗ ಸತ್ಯವೂ ಶಿವಮಯವೂ ಸುಂದರವೂ ಆಗಿದೆ. ಅಂಗವನ್ನು ಬಿಟ್ಟು ದೇವರು ಅಂದೂ ಇಲ್ಲ ಇಂದೂ ಇಲ್ಲ. ಅರಿವೇ ಗುರು ; ಗುರುದೇವನೇ ಮಹಾದೇವ ; ಮಹಾದೇವನೇ ಸದಾಶಿವ ; ಸದಾಶಿವನೇ ಸಾಕ್ಷಾತ್ ಪರಬ್ರಹ್ಮ ಅಂದ ಮೇಲೆ ಭ್ರಮೆಯಿಂದಾಗಿ ಕಾಯ ಬ್ರಹ್ಮನಾಗುತ್ತಿಲ್ಲ.

ಭ್ರಮೆ ತೊಲಗಿದರೆ ಕಾಯವೇ ಕೈಲಾಸ ! ಕಾಯದ ಕೈಲಾಸಕ್ಕಿಂತ ಮಿಗಿಲಾದ ಕೈಲಾಸ ಅಂದೂ ಇಲ್ಲ, ಇಂದೂ ಇಲ್ಲ.

541

ಒಬ್ಬ ಕೆಂಚನೊಬ್ಬ ಕರಿಕನೊಬ್ಬ ಶುದ್ಧ ಧವಳಿತನೆಂತಯ್ಯಾ ಲಿಂಗವೆ ?
ಒಬ್ಬರಿಗೊಬ್ಬರು ಘನವೆಂಬರು ; ಅದೆಂತಯ್ಯಾ ?
ಒಬ್ಬರಿಗೊಬ್ಬರು ಹಿರಿದೆಂಬರು ; ಎಂತಯ್ಯಾ ?
ಬ್ರಹ್ಮಂಗೆ ಪ್ರಳಯ ವಿಷ್ಣುವಿಂಗೆ ಮರಣ ಉಂಟು
ನಮ್ಮ ಕೂಡಲಸಂಗಗಿಲ್ಲ.

ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆದಂತೆ ಎನ್ನುವ ನುಡಿಗಟ್ಟು ಒಂದಿದೆ. ಇವೆರಡೂ ಎಂದೂ ಸಮರಸವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ತನು ಕೆಂಚನಾದರೆ ಮನ ಕರಿಕ ಇವೆರಡೂ ಕೂಡಿ ಶುದ್ಧ ಶುಭ್ರ ತನುವಾಗಲು ಸಾಧ್ಯವೇ ಇಲ್ಲ. ಮನ ಎಳೆಸಿದತ್ತ ತನು ಹಿಂಬಾಲಿ ಸುತ್ತದೆ. ತನು ಮನಗಳೆರಡು ಘನವರಿಯವು.

ಎತ್ತು ಕೋಣಗಳೆರಡನ್ನೂ ಕೂಡಿಸಿ ಚೆಕ್ಕಡಿಗೆ ಹೂಡಿದಂತೆ. ಮನ ತನುವನ್ನು ಶ್ರೀಮಂತಗೊಳಿಸಲು ಯತ್ನಿಸುತ್ತದೆ, ಸಕಲರಲ್ಲಿಯೂ ತಾನು ಶ್ರೇಷ್ಠ ಎಂದು ಬೀಗುತ್ತದೆ. ತನುವಿಗೆ ಮನ ಕಾವಿ ಧರಿಸಿ ಸ್ವಾಮಿಯನ್ನಾಗಿಸುತ್ತದೆ. ಮಠಾಧಿಪತಿ, ಪೀಠಾಧಿಪತಿಯನ್ನಾಗಿಸುತ್ತದೆ.

ಸಾರ್ವಜನಿಕ ಕ್ಷೇತ್ರದ ಅಧಿಪತಿಯನ್ನಾಗಿ ಮಾಡಿ ತನುವನ್ನು ವ್ಯವಹಾರಕ್ಕೆ ಒಡ್ಡುತ್ತದೆ.

ತನು ಶುದ್ಧವಲ್ಲ, ಮನವೂ ಶುದ್ಧವಲ್ಲ. ಮನ ಆಭರಣಕ್ಕೆ ಆಸೆ ಮಾಡಿ ತನುವಿಗೆ ದುಡಿದು ಸಂಗ್ರಹಿಸಲು ಆದೇಶ ನೀಡುತ್ತದೆ. ಸಾಧ್ಯವಾಗದಿದ್ದರೆ ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡುತ್ತದೆ. ಇಲ್ಲ ಕಳ್ಳನನ್ನಾಗಿಸಿ ಸಂಗ್ರಹಿಸಲು ಆದೇಶ ಕೊಡುತ್ತದೆ. ಮನ ಹೀಗೆ ತನುವಿಗೆ ನಾನಾ ವೇಷಗಳನ್ನು ಹಾಕಿ ಆ ಪಾತ್ರದಲ್ಲಿರಿಸಬಹುದು ಆದರೆ ಶುದ್ಧವಾಗಲು ಮಾತ್ರ ಅರಿಯದು.

ಒಬ್ಬರಿಗೊಬ್ಬರು ಹಿರಿದೆಂಬರು, ಎಂತಯ್ಯಾ :

ಇವರಿಬ್ಬರೂ ಹಿರಿಯರಲ್ಲ. ಒಬ್ಬ ಬ್ರಹ್ಮನೆಂದು ಬೀಗಿದರೆ ಮತ್ತೊಬ್ಬ ವಿಷ್ಣುವೆಂದು ಬೀಗುತ್ತಾನೆ. ಬ್ರಹ್ಮನ ತಲೆ ಹೋಯಿತು ಆತನಿಗೆ ಪ್ರಳಯ ಉಂಟು. ವಿಷ್ಣುವಿಗೆ ಮರಣ ಉಂಟು. ನಮ್ಮ ಕೂಡಲಸಂಗಗಿಲ್ಲ.

ತನು ವಿಷ್ಣುವಾದರೆ ಮನ ಬ್ರಹ್ಮ. ಅರಿವೆಂಬ ಗುರುದೇವನು ತನುವಿನಲ್ಲಿ ಸಂಗಮವಾಗಿದ್ದಾನೆ. ತನುವಿಗೆ ಮರಣವಿದೆ. ಆವರಿಸಿದ ಮನಕ್ಕೆ ಪ್ರಳಯವಿದೆ. ತನುವಿನಲ್ಲಿಯೇ ತನ್ಮಯವಾದ ಅರಿವಿಗೆ ಜನನವಿಲ್ಲ ; ಮರಣವಿಲ್ಲ ; ಪ್ರಳಯವೂ ಇಲ್ಲ. ಅದು ಬಯಲು.

ಜಗದಗಲ ಮುಗಿಲಗಲ ಮಿಗೆಯಗಲ ವಿದ್ದ ಬಯಲು ತನುವಿನಗಲಕ್ಕೆ ಬಂದು ಚುಳುಕಾಗಿದೆ. ಪಾತಾಳದಿಂದಲೂ ಅತ್ತತ್ತಲಿದ್ದ ಶ್ರೀಪಾದ ಬ್ರಹ್ಮಾಂಡದಿಂದಲೂ ಅತ್ತತ್ತವಿದ್ದ ಶ್ರೀಮುಕುಟ, ಗಮನಕ್ಕೆ ನಿಲುಕದ, ಗೋಚರಕ್ಕೆ ನಿಲುಕದ ಅಪ್ರತಿಮ ಲಿಂಗವೆಂಬ ಅರಿವು ಅಂಗದಲ್ಲಿ ಬಂದು ಚುಳುಕಾಗಿ ಲಿಂಗಾಂಗವಾಗಿದೆ.

ಇಂತಹ ಲಿಂಗಕ್ಕೆ ಪ್ರಳಯವಿಲ್ಲ, ಮರಣವಿಲ್ಲ, ಜನನವೂ ಇಲ್ಲ. ಅಂಗಕ್ಕೆ, ಅಂಗವನ್ನು ಆವರಿಸಿದ ಮನಕ್ಕೆ ಪ್ರಳಯ ಉಂಟು, ಮರಣ ಉಂಟು, ಜನನ ಉಂಟು.

542

ಹರಿ ಹರನೊಂದೆ ಎಂದಡೆ, ಸುರಿಯವೆ ಬಾಯಲ್ಲಿ ಬಾಲ ಹುಳಗಳು?
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ;
ಹರಂಗೆ ಪ್ರಳಯ ಉಂಟೆಬುದ ಬಲ್ಲಡೆ ನೀವು ಹೇಳಿರೆ?
ಪ್ರಳಯ ಪ್ರಳಯ ಅಂದಂದಿಂಗೆ
ಹಳೆಯ ಕೂಡಲಸಂಗಮದೇವಾ.

ತನು ಅರಿವು ಒಂದೇ ಎನ್ನಲು ಬರುವುದಿಲ್ಲ. ಒಂದೇ ಎನ್ನುವವರ ಬಾಯಲ್ಲಿ ಬಾಲಹುಳಗಳು ಬೀಳವೆ? ಎನ್ನುತ್ತಾರೆ ಬಸವಣ್ಣನವರು. ತನುವಿಗೆ ಹತ್ತು ಕುತ್ತುಗಳು; ಮನಕ್ಕೆ ಅನಂತ ಕುತ್ತುಗಳು!

ಹರಂಗೆ ಪ್ರಳಯ ಉಂಟೆಂಬುದ ಬಲ್ಲಡೆ ನೀವು ಹೇಳಿರೆ:

ಅರಿವು ನಿಶ್ಚಲ. ಅದಕ್ಕೆ ಚಲನೆಯಿಲ್ಲ. ಮನಕ್ಕೆ ಚಲನೆ ಉಂಟು. ತನು ಮನವನ್ನು ಹಿಂಬಾಲಿಸುವುದುಂಟು. ಅರಿವು ಮಾತ್ರ ನಿಶ್ಚಲ!

ಹರಿ, ಹರ, ಬ್ರಹ್ಮ ಎಂಬುವವರು ಹೊರಗಿಲ್ಲ. ಅವರು ದೇವರೂ ಅಲ್ಲ. ಮನ ತನು ಹಿಡಿದು ಅವರನ್ನು ಪೂಜಿಸಿದರೆ ಅವರೆಂದೂ ಪ್ರತ್ಯಕ್ಷವಾಗಲಾರರು. ಇದು ಅರಿವಿನ ಬೆಡಗು.

ಹರಿ ಎಂದರೆ ತನು, ಬ್ರಹ್ಮ ಎಂದರೆ ಮನ, ಹರ ಎಂದರೆ ಅರಿವು. ಈ ಮೂರೂ ಜನ ಒಬ್ಬರಿಗೊಬ್ಬರು ಅರಿತು ಒಂದಾದರೆ ಅದು ಬ್ರಹ್ಮ ಕಾಯ; ಅರಿವಿನ ಕಾಯ. ಬುದ್ಧ ಮಹಾವೀರ ಬಸವಾದಿ ಶರಣರ ಜ್ಞಾನಿಗಳ ಕಾಯ. ಮನ ಅರಿವನ್ನು ಕಾಯವನ್ನು ಅರಿಯದಿದ್ದರೆ ಅದು ಬ್ರಹ್ಮವಲ್ಲ ಬರೀ ಭ್ರಮೆ ಎನ್ನಿಸಿಕೊಳ್ಳುತ್ತದೆ. ಮನ ತನು ಒಂದಾಗಿ ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ಅರಿಯದಿದ್ದರೆ ತನು ನಾನಾ ಸಂಕಷ್ಟಗಳಿಗೆ ತುತ್ತಾಗುತ್ತದೆ.

ಬಯಲಿಗೆ ಪ್ರಳಯವಿಲ್ಲ. ಭೂಮಿಗೆ ಜಲಕ್ಕೆ ಪ್ರಳಯ ಉಂಟು. ಧರೆ ಹತ್ತಿ ಉರಿದಾಗ, ಗಾಳಿ ಬೀಸಿದಾಗ, ಅಗ್ನಿ ತನ್ನ ಕೆನ್ನಾಲಿಗೆಯನ್ನು ಚಾಚಿ ದಹಿಸುವಾಗ, ಜಲಪ್ರಳಯವಾಗಿ ಸುನಾಮಿ ಉಂಟಾದಾಗ ಎಲ್ಲವೂ ತತ್ತರಿಸುತ್ತವೆ. ಆದರೆ ಇವುಗಳನ್ನು ಸೃಷ್ಟಿ ಮಾಡಿದ ಬಯಲು ಮಾತ್ರ ನಿಶ್ಚಲವಾಗಿರುತ್ತದೆ. ಬಸಿರೆ, ತನ್ನ ಗರ್ಭದಲ್ಲಿದ್ದ ಶಿಶುಗಳು ಕೀಟಲೆ ಮಾಡಿದಾಗ ತಾಯಿ ಆನಂದದಿಂದ ಪುಳಕಿತಗೊಳ್ಳುವಂತೆ ಬಯಲು ಅನಂತ ಪ್ರವಾಹ ಪ್ರಳಯಗಳಿಂದ ಪುಳಕಿತಗೊಳ್ಳುತ್ತದೆ.

ಪ್ರಕೃತಿ ದತ್ತವಾದ ಕೊಡುಗೆಯೆ ತನುವಿನಲ್ಲಿ ಚುಳುಕಾಗಿದೆ. ಮನದ ಭ್ರಮೆಯಿಂದಾಗಿ ತನುವಿಗೂ ಮನಕ್ಕೂ ಆ ಶಕ್ತಿ ಲಭ್ಯವಾಗುತ್ತಿಲ್ಲ . ಅದಕ್ಕಾಗಿಯೇ ಶರಣರು ದಾಸರು, ಬುದ್ಧಾದಿ ಸಂತರು ಸರಳ ವೈಜ್ಞಾನಿಕ ಸೂತ್ರಗಳ ಮೂಲಕ ವಚನಗಳನ್ನು ಹೆಣೆದಿದ್ದಾರೆ.

ಮನ ಈ ಸೂತ್ರಗಳನ್ನು ತನ್ನ ಹೆಗ್ಗಳಿಕೆಗೆ ಬಳಸದೆ ತನ್ನ ಪ್ರಶಾಂತತೆಗೆ ಬಳಸಿದರೆ ಮಾತ್ರ ಉಪಯುಕ್ತವಾಗುತ್ತದೆ. ಕಾಯದಲ್ಲಿ ಪ್ರಸನ್ನತೆಯೂ ಇದೆ; ಪ್ರಳಯವೂ ಇದೆ. ಮನಕ್ಕೆ ಯಾವುದು ಬಳಕೆಯಾಗುತ್ತದೊ ತನು ಅದರ ಪ್ರಾವೀಣ್ಯತೆ ಪಡೆಯುತ್ತದೆ.

543

ವಿಷ್ಣು ಕರ್ಮಿ ರುದ್ರ ನಿಷ್ಕರ್ಮಿ: ಕ್ರಮವನರಿಯದೆ ನುಡಿವಿರೊ !
ವೇದ ಶ್ರುತಿಗಳ ತಿಳಿಯಲರಿಯದೆ ವಾದವ ಮಾಡುವರೆಲ್ಲ ಕೇಳಿ ;
ವಿಷ್ಣು ನಾನಾ ಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತಿಪ್ಪ ;
ರುದ್ರನಾವ ಯೋನಿಯಲ್ಲಿ ಬಂದನೆಂದು ನೀವು ಹೇಳಿರೊ !
ಓಂ ತ್ರೀಣಿ ಪದಾನಿ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ ।
ಅತೋ ಧರ್ಮಾಣಿ ಧಾರಯಾನ್ ॥
ವಿಷ್ಣೋಃ ಕರ್ಮಾಣಿ ಪಸ್ಯತ್ ಯತ್ರೋವ್ರತಾನಿ ಪಸ್ಪಶೆ ।
ಇಂದ್ರಸ್ಯಯುಜ್ಯಃ ಸಖಾ ॥
ತದ್ ವಿಷ್ಣೋಃ ಪರಮಂ ಪದಂ ಸದಾ ಪಸ್ಯಂತಿ ಸೂರಯಃ ।
ದಿವೀವ ಚಕ್ಷುರಾತತಂ ॥
ತದ್‌ವಿಪ್ರಾಸೊ ವಿಪನ್ಯವೋ ಜಾಗೃವಾಂ ಸಃ ಸಮಿಂಧತೆ ।
ವಿಷ್ಣೋರ್ಯತ್ಪರಮಂ ಪದಂ ॥
ಎಂಬ ಶ್ರುತಿ ವಚನವ ತಿಳಿಯಿಂ ಭೋ!
ಮರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ ;
ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂದತ್ತತ್ತಲೆ,
ಕೂಡಲಸಂಗಮದೇವಾ.

ತನು ಕರ್ಮಿ ; ಅರಿವು ನಿಷ್ಕರ್ಮಿ. ಸಕಲ ಕರ್ಮಗಳಿಗೂ ಆಧಾರವಾದುದು ಬಯಲು. ಈ ವಚನ ಓದಿ ಎರಡು ಪಂಗಡ ನಿರ್ಮಿಸಿಕೊಂಡು ಬಡಿದಾಡುವ ಅವಶ್ಯಕತೆಯಿಲ್ಲ. ವಿಷ್ಣು ತನು ಪ್ರಧಾನವಾದ ಕಾಯವಾದರೆ, ರುದ್ರ ಕಾಯದ ಸೃಷ್ಟಿಗೆ ಕಾರಣವಾಗಿ, ಕಾಯದಲ್ಲಿಯೇ ಅರಿವೆಂಬ ಗುರುವಿನ ರೂಪದಲ್ಲಿ ತನ್ಮಯವಾಗಿ ಜನನ ಮರಣಗಳಿಗೆ ಅತೀತನಾದವನು.

ವಿಷ್ಣುವಿಗೆ ದಶಾವತಾರಗಳುಂಟು. ತನು ನಾನಾ ಉದರದಲ್ಲಿ ಹುಟ್ಟಿ, ಸಾವು ನೋವುಗಳಿಗೆ ತುತ್ತಾಗಿ ಬೆಂದು ಬೆಂಡಾಗುತ್ತದೆ. ಅದರ ಜನ್ಮದಲ್ಲಿ ಅರಿವಾದರೆ ಆಯಿತು ಇಲ್ಲದಿದ್ದರೆ ಇಲ್ಲ. ಅರಿವಿಗಾಗಿ ಪ್ರಯತ್ನ ಪಡುವ ಶಕ್ತಿ ಅದಕ್ಕಿಲ್ಲ. ಅದು ರುದ್ರನ ಮಾತು ಕೇಳಿದರೆ ರುದ್ರನಾಗುತ್ತದೆ; ಅದರ ಜನ್ಮವೂ ಅರಿವಿನ ಜನ್ಮವಾಗಿ ಹುರಿದ ಬೀಜದಂತಾಗುತ್ತದೆ. ಪುನಃ ಕಾಯಕ್ಕೆ ಜನ್ಮವಿಲ್ಲ.

ಮನವೆಂಬ ಭ್ರಮೆಯು ಅಳಿದು ಅರಿವಿನಲ್ಲಿ ಲೀನವಾದಾಗ ತನು ಮನ ಅರಿವು ಒಂದಾಗಿ ರುದ್ರ ಕಾಯವಾಗುತ್ತದೆ. ಶರಣರ ಬೆಡಗಿನ ಮಾತುಗಳು ಅರ್ಥವಾಗದಿದ್ದರೆ ತನು ಪಂಗಡಗಳನ್ನಾಗಿಸಿಕೊಂಡು ಬ್ರಹ್ಮ ವಿಷ್ಣು ರುದ್ರನನ್ನು ಹಂಚಿಕೊಳ್ಳುತ್ತದೆ.

ರುದ್ರನೇ ದೊಡ್ಡವನೆಂದು ರುದ್ರಾರಾಧಕರು, ವಿಷ್ಣುವೇ ದೊಡ್ಡವನೆಂದು ವಿಷ್ಣುವಿನ ಆರಾಧಕರು, ಬ್ರಹ್ಮನೇ ದೊಡ್ಡವನೆಂದು ಬ್ರಹ್ಮನ ಆರಾಧಕರು ಹುಟ್ಟಿಕೊಂಡು ಯುದ್ಧಗಳು ಕಲಹಗಳು ಆಗುತ್ತವೆ.

ಈ ವಚನ ತನು ಅರಿವಿಗೆ ಹೋಗಲು ಸೂತ್ರವೇ ಹೊರತು ಮತ್ತೇನೂ ಅಲ್ಲ. ಬೆಡಗಿನಿಂದ ಹೇಳಿದರೆ, ಬೆಡಗಿನ ಗುಟ್ಟು ರಟ್ಟಾದರೆ ಮನಕ್ಕೆ ಆನಂದವಾಗಿ ಭ್ರಮೆಗೆ ಎಳಸದೆ ಅದು ಅರಿವಿಗೆ ಹೋಗುತ್ತದೆ. ಈ ಕಾರಣಕ್ಕಾಗಿಯೇ ತತ್ವ ಪದಕಾರರು, ದಾಸರು ಬ್ರಹ್ಮ ವಿಷ್ಣು ಮಹೇಶ್ವರನನ್ನಾಗಿ ಹೆಸರಿಸಿ ತನುವನ್ನು ಕರೆದರು. ತನುವಿನಲ್ಲಿ ಅದ್ಭುತವಾದ ಶಕ್ತಿ ಇದೆಯೆಂದು ಸರ್ವ ತನುಗಳಿಗೂ ಪರಿಚಯಿಸಿದರು.

544

ಅಮೃತವತಿ ಸೋಮ ಶಂಭುವಿಂಗೆ ಹುಟ್ಟಿದಾತ ಇಂದ್ರ.
ಸತ್ಯರುಷಿ ಜೇಷ್ಠಾ ದೇವಿಗೆ ಹುಟ್ಟಿದಾತ ಬ್ರಹ್ಮ.
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು.
ನಾಭಿರಾಜ ಮರುತಾದೇವಿಗೆ ಹುಟ್ಟಿದಾತ ನರುಹ.
ಇವರೆಲ್ಲರು ಯೋನಿಜರೆಂಬುದು ತ್ರೈಜಗ ಬಲ್ಲುದು.
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲಸಂಗಮದೇವಂಗೆ
ಮಾತಾಪಿತರುಳ್ಳಡೆ ಹೇಳಿರೊ !

ಇಂದ್ರ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ತನು ಹಿಡಿದು ಬಂದವರು. ಇವರಿಗೆಲ್ಲ ಮಾತಾಪಿತರುಂಟು. ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಒಳಗಾದವರು. ಅಂಗದಲ್ಲಿಯೇ ಕೂಡಿಕೊಂಡು ಸಂಗಮನಾಥನೇ ಆದ ಮಹಾ ಅರಿವೆಂಬ ಗುರುದೇವನಿಗೆ, ಸದಾಶಿವ, ಮಹಾದೇವನಿಗೆ ಮಾತಾಪಿತರುಗಳಿಲ್ಲ, ಜನನವಿಲ್ಲ ಮರಣವಿಲ್ಲ, ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ದೇವನಾತ.

ಮನ ತನುವಿನಲ್ಲಿರುವ ಜ್ಞಾನಕ್ಕೆ ತಲುಪಿದಾಗ ಹೊರಬರುವ ಮಾತುಗಳಿವು. ಮನದ ಆನಂದಕ್ಕೆ ತನುವಿನ ತನ್ಮಯತೆಗೆ ಕಳಶ ಪ್ರಧಾನವಾದ ನುಡಿಗಳಿವು. ಈ ಆನಂದವನ್ನು ಮನ ತನುವಿನ ಜಾಡು ಹಿಡಿದೇ ಪಡೆಯುತ್ತದೆ. ತನುವಿನಲ್ಲಿಯೇ ಸಂಗಮವಾದ ಸಂಗಮನಾಥನನ್ನು ಕೂಡಿಕೊಂಡು ಹುಟ್ಟು ಸಾವುಗಳನ್ನು ಕಳೆದುಕೊಳ್ಳುತ್ತದೆ. ಉತ್ಪತ್ತಿ ಸ್ಥಿತಿ ಪ್ರಳಯಗಳಿಂದ ಹೊರಗಾಗುತ್ತದೆ.

ಮನ ತನುವನ್ನು ಹಿಡಿದು ಸಕಲ ಭೋಗ ಐಶ್ವರ್ಯಗಳನ್ನು ಹೊಂದಿ ಇಂದ್ರ ಪದವಿಯನ್ನು ಪಡೆಯಬಹುದು. ಸಕಲ ಆಧ್ಯಾತ್ಮ ಜ್ಞಾನ ಹೊಂದಿ ವೇದ ಉಪನಿಷತ್ತುಗಳನ್ನು ಆಗಮಾದಿ ಪುರಾಣಗಳನ್ನು ಪಠಿಸಿ ಬ್ರಹ್ಮ ಪದವಿಯನ್ನು ಹೊಂದಬಹುದು. ಇವೆಲ್ಲ ಪದವಿಗಳು ಮನ ತನು ಹಿಡಿದು ಪಡೆಯುವ ಪದವಿಗಳೇ ಹೊರತು ಮತ್ತೇನೂ ಅಲ್ಲ.

''ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರ ಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯಾ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪೆ ಮಹಾಪದವಿಯ ಕರುಣಿಸಯ್ಯಾ'' ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ಅರಿತು ಆ ಗುರುದೇವನ ಸ್ಮರಣೆಯಲ್ಲಿ ಸದಾ ಇರುವ ಶರಣರ ಪಾದವನು ಅರಿಯುವ ಮಹಾಪದವಿಯ ಕರುಣಿಸು ತಂದೆ ಎಂದಿದ್ದಾರೆ ಅಣ್ಣನವರು. ಸದಾ ಸತ್ಸಂಗದಲ್ಲಿ ನಿರತರಾಗಿರುವ ಶರಣರ ಸಂಗವನ್ನು ಕರುಣಿಸು ಎಂದು ಬೇಡಿದ್ದಾರೆ.

545

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ಒಬ್ಬನೇ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ !
ಕೂಡಲಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ.

ಅಣ್ಣನ ವಚನಗಳು ಅನುಭಾವಕ್ಕೆ ನಿಲುಕುತ್ತವೆಯೇ ಹೊರತು ವಾದ ವಿವಾದ ಚರ್ಚೆಗಳಿಗೆ ನಿಲುಕುವುದಿಲ್ಲ. ಮನದಿಂದ ಓದಿದರೆ ಅದು 'ದೇವನೊಬ್ಬ ನಾಮ ಹಲವು' ಎನ್ನುವ ವಚನಕ್ಕೆ ಹಾರುತ್ತದೆ. ಹೀಗೆ ಚರ್ಚಿಸಲು ಹೋದರೆ ಮನಕ್ಕೆ ಗುರಿ ಮುಟ್ಟಲು ಸಾಧ್ಯವಾಗುವುದಿಲ್ಲ.

ದೇವರು ಇಬ್ಬರಿಲ್ಲ ಮೂವರೂ ಇಲ್ಲ ಮೂವತ್ತೂರು ಕೋಟಿ ದೇವರು ದೇವರಲ್ಲ. ಅವರೆಲ್ಲ ಅಂಗ ಹೊತ್ತ ಸಮರ್ಥರೆ ಆಗಿದ್ದಾರೆ. ಜ್ಞಾನಿಗೆ ದೇವರೊಬ್ಬನೆ. ಮೂವತ್ತೂರು ಕೋಟಿ ಜನಸಂಖ್ಯೆ ಇರುವಾಗ ಬರೆದ ಮಾತಿದು. ಅವರೆಲ್ಲ ಜ್ಞಾನಿಗೆ ದೇವರಾಗಿ ಕಾಣುತ್ತಾರೆ. ಜ್ಞಾನಿ ಮನುಷ್ಯರನ್ನೇ ದೇವರೆಂದು ಬರೆದು ಹಾಡಿದ. ಆದರೆ ಮನುಷ್ಯರಿಗೆ ಜ್ಞಾನಿ ಬರೆದುದೇ ವೇದವಾಕ್ಯವಾಗುತ್ತದೆ. ಜ್ಞಾನಿಯಂತೆ ಇತರರು ಆಳಕ್ಕೆ ಇಳಿಯದ ನಿಮಿತ್ತ ಜ್ಞಾನಿಯನ್ನೇ ದೇವರೆಂದು ಪೂಜಿಸುತ್ತಾರೆ. ಇದು ಜ್ಞಾನಿಗೆ ಮಾಡುವ ಅಪಚಾರ. ಪೂಜಿಸಬಹುದು ; ಮನುಷ್ಯ ಜ್ಞಾನಿಯಾಗದಿದ್ದರೆ ಪೂಜಿಸಿ ಫಲವಿಲ್ಲ. ಆ ಪೂಜೆ ಅಜ್ಞಾನಕ್ಕೆ ದಾರಿ ಮಾಡಿಕೊಡುತ್ತದೆ.

ಕಾಯವನ್ನೇ ಕೈಲಾಸ ಮಾಡಿ, ಅರಿವನ್ನೇ ಗುರುದೇವನನ್ನಾಗಿ ಮಾಡಿ, ಮನ ಸ್ವತಃ ತಾನು ಭಕ್ತನಾಗಿ, ಕೈಲಾಸದಲ್ಲಿ ಗುರುದೇವನನ್ನು ಹಗಲಿರುಳೂ ಪೂಜಿಸುತ್ತಾನೆ. ಆ ಗುರುದೇವನನ್ನೇ ಬಸವಣ್ಣನವರು ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ ಒಬ್ಬನೆ ಕಾಣಿರೊ,

ಇಬ್ಬರೆಂಬುದು ಹುಸಿ ನೋಡಾ ಎಂದರು. ಅಂಗದಲ್ಲಿಯೇ ಲಿಂಗ ಸ್ವರೂಪಿಯಾಗಿ ಸಂಗಮವಾದ ಕೂಡಲಸಂಗಮ ದೇವನಲ್ಲದೆ ಇಲ್ಲವೆಂದಿತ್ತು ವೇದ ಎಂದಿದ್ದಾರೆ.

546

ಹುಟ್ಟಿಸುವಾತ ಬ್ರಹ್ಮನೆಂಬರು ರಕ್ಷಿಸುವಾತವಿಷ್ಣುವೆಂಬರು ನೋಡಾ,
ಬ್ರಹ್ಮ ತನ್ನ ಶಿರವನೇಕೆ ಹುಟ್ಟಿಸಲಾರ?
ವಿಷ್ಣು ತನ್ನ ಮಗನನೇಕೆ ರಕ್ಷಿಸಲಾರ?
ದುಷ್ಟನಿಗ್ರಹ ಶಿಷ್ಟ ಪ್ರತಿಪಾಲಕ ನಮ್ಮ ಕೂಡಲಸಂಗಮದೇವ.

ಶಿವರೂಪವನ್ನು ಕಾಣುತ್ತೇನೆಂದು ಪಂಥಕಟ್ಟಿ, ಶಿವನನ್ನು ನೋಡಲಾಗದೆ ನೋಡಿದೆನೆಂದು ಸುಳ್ಳು ಹೇಳಿದ್ದಕ್ಕಾಗಿ ಬ್ರಹ್ಮ ತನ್ನ ಒಂದು ತಲೆ ಕಳೆದು ಕೊಂಡನೆಂಬ ಕತೆಯಿದೆ. ಹಾಗೆಯೇ ವಿಷ್ಣುವಿನ ಮಗ ಮನ್ಮಥ ತನ್ನ ಬಾಣಗಳಿಂದ ಶಿವನನ್ನು ಎಚ್ಚರಿಸಲು ಹೋಗಿ ಸುಟ್ಟು ಬೂದಿಯಾದ ಕತೆಯೂ ಇದೆ. ಇವೆರಡೂ ಕತೆಗಳು. ಈ ಕತೆಗಳಲ್ಲಿ ಬ್ರಹ್ಮ ಕಳೆದುಕೊಂಡ ಶಿರ ಮತ್ತೇ ಸೃಷ್ಟಿಸಿಕೊಳ್ಳಲು ಆತನಿಗೆ ಸಾಧ್ಯವಾಗಲಿಲ್ಲ. ಆತ ಹೇಗೆ ಸೃಷ್ಟಿಕರ್ತನಾಗಬಲ್ಲ? ಮನ್ಮಥನನ್ನು ಕಳೆದುಕೊಂಡ ವಿಷ್ಣು ಮತ್ತೆ ಆತನನ್ನು ಬದುಕಿಸಲು ಸಾಧ್ಯವಾಗಲಿಲ್ಲ. ಅಂದಮೇಲೆ ವಿಷ್ಣು ಹೇಗೆ ರಕ್ಷಿಸಬಲ್ಲ?

ದುಷ್ಟ ನಿಗ್ರಹ ಶಿಷ್ಟಪ್ರತಿಪಾಲಕ ನಮ್ಮ ಕೂಡಲಸಂಗಮದೇವ:

ಅಂಗದಲ್ಲಿಯೇ ಇದ್ದು ಮಂಗನಂತೆ ಕುಣಿಯುವ ಮನವನ್ನು ಮತ್ತು ಅಂಗವನ್ನು ಶಿಕ್ಷಿಸಬಲ್ಲ. ರಕ್ಷಿಸಬಲ್ಲ. ಮನ ಅಂಗದಲ್ಲಿದ್ದು ಮಾಡುವ ಅಪರಾಧ ಅಂಗದಲ್ಲಿಯೇ ಇದ್ದ ಸಂಗಯ್ಯನಿಗಲ್ಲದೆ ಅನ್ಯರಿಗೆ ತಿಳಿಯದು. ಆ ಸಂಗಮನಾಥನೊಬ್ಬನೆ ದೇವರೆಂದು ತಿಳಿದ ಮನವೇ ಮಹಾದೇವ. ಅನ್ಯದೇವರಿಲ್ಲ.

547

ಕೇಶವನಲ್ಲದೆ ಅತಃಪರದೈವವಿಲ್ಲೆಂದು
ವೇದವ್ಯಾಸಮುನಿ ಭಂಗವಾದುದನರಿಯಿರೆ?
'ಅಹಂ ಸರ್ವಜಗತ್‌ಕರ್ತಾ ಮಮಕರ್ತಾ ಮಹೇಶ್ವರಃ'
ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲಾ !
ಕೂಡಲಸಂಗಮದೇವನು
ದಕ್ಷಯಜ್ಞವ ಕೆಡಿಸಿದುದು ಮರೆದಿರಲ್ಲಾ!

ತನ್ನನ್ನು ಇಡೀ ಜಗತ್ತನ್ನು ನಿರ್ಮಿಸಿದಾತ ಮಹೇಶ್ವರನೆಂದು ಸ್ವತಹ ವಿಷ್ಣುವೇ ಹೇಳಿರುವಾಗ ವೇದವ್ಯಾಸರು ಕೇಶವನ ಮೇಲಿನ ಭಕ್ತಿಗಾಗಿ ಕೇಶವನನ್ನೇ ಮಹೇಶ್ವರನ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಜನನ ಮರಣಗಳಿಲ್ಲದ ಮಹೇಶ್ವರನೆತ್ತ ಜನನ ಮರಣಗಳಿಂದ ಕೂಡಿದ ಕೇಶವನೆತ್ತ? ಮಹೇಶ್ವರನಿಗೆ ಕೇಶವನಿಗೆ ಭಿನ್ನವಿಲ್ಲೆಂದು ಮಹಾಭಾರತದಾದ್ಯಂತ ಕೊಂಡೊಯ್ದು ಕೊನೆಗೆ ಕೇಶವನ ಪ್ರಾಣಪಕ್ಷಿ

ಹಾರಿಹೋಗುವುದನ್ನು ವ್ಯಾಸಮಹರ್ಷಿಗಳೇ ಚಿತ್ರಿಸಿದ್ದಾರೆ. ಇಬ್ಬರೂ ಒಬ್ಬರಲ್ಲ ವೆಂಬುದನ್ನು ತೋರಿಸಿ ದೃಢಪಡಿಸಿದ್ದಾರೆ.

ಒಂದು ದೇಹವನ್ನು ಉದಾಹರಣೆಯನ್ನಾಗಿಟ್ಟುಕೊಂಡು ಪಾಂಡವರನ್ನು ಐದು ಜ್ಞಾನೇಂದ್ರಿಯಗಳಿಗೆ ಹೋಲಿಸಿದ್ದಾರೆ. ಮನ ವೆಂಬ ದ್ರೌಪದಿಯನ್ನು ಐದು ಜ್ಞಾನೇಂದ್ರಿಯಗಳಿಗೆ ಸತಿಯನ್ನಾಗಿಸಿ ಪಾಂಡವರಿಗೆ ಮದುವೆ ಮಾಡಿದ್ದಾರೆ. ಮಹೇಶ್ವರನನ್ನೇ ಕೇಶವನನ್ನಾಗಿ ಮಾಡಿ ದೇಹದಲ್ಲಿರುವ ಮಹಾಜ್ಞಾನದ ಚಿತ್ರಣವನ್ನು ಬಿಂಬಿಸಿದ್ದಾರೆ.

ದೇಹವನ್ನೇ ರಥವನ್ನಾಗಿಸಿ ಕೇಶವನನ್ನು ಜ್ಞಾನಿಯಾಗಿಸಿ ರಥದ ಸಾರಥಿಯನ್ನು ಮಾಡಿದ್ದಾರೆ. ಮನವನ್ನೇ ಅರ್ಜುನನ್ನಾಗಿಸಿ ಕೇಶವ ಹೇಳಿದಂತೆ ಅರ್ಜುನ ಕೇಳುವ ಚಾಕಚಕ್ಯತೆಯನ್ನೂ ಬಿಂಬಿಸಿದ್ದಾರೆ. ಗುರು ಶಿಷ್ಯ, ಬಂಧು ಬಳಗ ಎನ್ನುವ ಅಜ್ಞಾನದ ಸಂಬಂಧವನ್ನು ಯುದ್ಧದ ಮೂಲಕ ಕತ್ತರಿಸಿ ಮಹಾಜ್ಞಾನದತ್ತ ಸಂಚರಿಸುವ ಸೂತ್ರವನ್ನು ಸುಂದರವಾಗಿ ಹೆಣೆದಿದ್ದಾರೆ.

ಮಹೇಶ್ವರನಿಗೆ ಮರಣವಿಲ್ಲವೆಂಬುದನ್ನು ಮರೆತು; ಕೇಶವನಿಗೆ ಮರಣವನ್ನುಂಟುಮಾಡಿ ಮಹಾ ಭಾರತದ ಕತೆಗೆ ನಾಂದಿ ಹಾಡಿದ್ದಾರೆ. ಕೇಶವ ಮಹೇಶ್ವರನಿಗೆ ಸಮನಾಗಲಾರ ಎನ್ನುವುದನ್ನು ವ್ಯಾಸ ಮಹರ್ಷಿಗಳು ಒಪ್ಪಿಕೊಂಡಿದ್ದಾರೆ. ಇದನ್ನೆ ಅಣ್ಣನವರು ಬಹಳ ಸೂಕ್ಷ್ಮವಾದ ಒಂದು ಸಾಲಿನ ವಚನ ಸೂತ್ರದ ಮೂಲಕ ವಿವರಿ ಸಿದ್ದಾರೆ. ಮಹಾಜ್ಞಾನಕ್ಕೆ ಮಹಾಜ್ಞಾನವೇ ಸರಿ; ಮತ್ತೊಂದು ಸಾಟಿ ಯಾಗಲಾರದು ಎನ್ನುವ ತಿರುಳು ಇಲ್ಲಿದೆ.

548

ನಾರಾಯಣನೆಂಬವನ ಕಾಣೆ ಗೀರಾಯಣನೆಂಬವನ ಕಾಣೆ!
ಬೊಮ್ಮನೆಂಬವನ ಕಾಣೆ ಬೊಮ್ಮುಗನೆಂಬವನ ಕಾಣೆ!
ವಿಷವಟ್ಟಿ ಸುಡುವಲ್ಲಿ, ವೀರಭದ್ರ ಕೊಲುವಲ್ಲಿ
ಕೂಡಲಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರೆಲ್ಲರು.

ದೇಹವನ್ನು ರಕ್ಷಣೆ ಮಾಡುವಾತ ನಾರಾಯಣ ; ದೇಹವನ್ನು ಸೃಷ್ಟಿ ಮಾಡುವಾತ ಬ್ರಹ್ಮ ಎನ್ನುತಾರೆ. ಸಮುದ್ರ ಮಥನ ಮಾಡಿದಾಗ ದೇವತರನ್ನು ರಾಕ್ಷಸರನ್ನು ವಿಷವಟ್ಟಿ ಕೊಲ್ಲುವಾಗ ರಕ್ಷಣೆ ಮಾಡುವ ನಾರಾಯಣನೂ ಬರಲಿಲ್ಲ; ಸೃಷ್ಟಿಸುವ ಬ್ರಹ್ಮನೂ ಬರಲಿಲ್ಲ. ಅಂದಮೇಲೆ ನಾರಾಯಣ ನೆಂಬುದೂ ಸುಳ್ಳು; ಬ್ರಹ್ಮನೆಂಬುದೂ ಸುಳ್ಳು.

ದಕ್ಷ ಯಾಗ ಮಾಡಿದಾಗ, ವೀರಭದ್ರ ದಕ್ಷನ ತಲೆ ಕಡಿಯುವಾಗ, ಅಲ್ಲಿಯೇ ಬ್ರಹ್ಮ ನಾರಾಯಣರಿಬ್ಬರೂ ಸುಳಿಯಲಿಲ್ಲ.

ಇವೆರಡೂ ಪುರಾಣ ಪ್ರಸಿದ್ಧ ಆದ್ಯಾತ್ಮ ಕತೆಗಳು: ತನು ಜಲಾವೃತ್ತವಾದ ಒಂದು ಸಮುದ್ರ. ಇದರಲ್ಲಿ ಅಮೃತವೂ ಇದೆ; ವಿಷವೂ ಇದೆ. ದೇವಾನು ದೇವತರೂ ಇದ್ದಾರೆ; ರಾಕ್ಷಸರೂ ಇದ್ದಾರೆ. ಇವರಿಬ್ಬರೂ ಸೇರಿ ತನುವೆಂಬ ಸಮುದ್ರ ಮಥನ ಮಾಡಿದಾಗ ಬೆಣ್ಣೆಯಂತೆ ಒಂದೆಡೆ ಅಮೃತವೂ ಹೊರಬಂತು; ಮತ್ತೊಂದೆಡೆ ವಿಷವೂ ಹೊರಬಂತು! ಆ ಕಾಳಕೂಟ ವಿಷಕ್ಕೆ ದೇವತರೂ ರಾಕ್ಷಸರೂ ಬಲಿಯಾದರು. ವಿಷ ತಡೆಯಲು ಇಬ್ಬರಿಗೂ ಸಾಧ್ಯವಾಗಲಿಲ್ಲ. ದೇವತರು, ರಕ್ಷಸರು ಅಮೃತಕ್ಕೆ ಭಾಗಿಗಳೇ ಹೊರತು ವಿಷಕ್ಕಲ್ಲ.

ಶಿವನಿಗೆ ಅಮೃತವೂ ಒಂದೇ; ವಿಷವೂ ಒಂದೇ! ಅಮೃತವನ್ನು ಹಂಚಿಕೊಂಡ ದೇವತರನ್ನು ರಾಕ್ಷಸರನ್ನು ಮಕ್ಕಳಂತೆ ಕನಿಕರದಿಂದ ನೋಡಿದ. ಮಕ್ಕಳಿಗೆ ತೊಂದರೆ ಕೊಡುವ ವಿಷವನ್ನು ಅಮೃತದಂತೆ ಸ್ವೀಕರಿಸಿ ಕಂಠದಲ್ಲಿ ಸರಳವಾಗಿ ಬಂಧಿಸಿದ. ಕಾಳಕೂಟ ವಿಷದ ಹಾವಳಿ ಸಮಾಪ್ತಿಯಾಯಿತು. ಶಿವ ನೀಲಕಂಠನ ಹೆಸರಲ್ಲಿ ಕರೆಯಿಸಿಕೊಂಡ.

ಶಿವನೆಂದರೆ ಒಂದು ದೇಹದಲ್ಲಿದ್ದ ಮಹಾಜ್ಞಾನ! ಆ ಮಹಾಜ್ಞಾನವೇ ಶಿವ. ಮನ ದೇಹಕ್ಕೆ ದೇವತೆಯ ವೇಷವೂ ಹಾಕುತ್ತದೆ; ರಾಕ್ಷಸನ ವೇಷವೂ ಹಾಕುತ್ತದೆ. ಇವರೆಡೂ ಸುಳ್ಳು. ಶಿವಜ್ಞಾನವೇ ಸತ್ಯ; ಇದು ವೇಷರಹಿತ ಸಹಜಜ್ಞಾನ. ಮನವೆಂಬ ಹಾವು ತನುವಿಗೆ ಬಿಗಿದು ಮಥನಿಸಿದಾಗ ಬರುವುದೇ ಅಮೃತ-ವಿಷ. ಇವೆರಡು ಸಮಾನವಾದುದು ಎಂದು ತಿಳಿಯುವ ಶಕ್ತಿ ಮಹಾದೇವನೆಂಬ ಮಹಾಜ್ಞಾನಕ್ಕೆ ಮಾತ್ರ ಇದೆ. ಇದು ಅಂಗದಲ್ಲಿಯೇ ಸಂಗಮವಾಗಿದೆ. ಈ ಸಂಗಮನಾಥನಿಗೆ ಮೊರೆಯಿಟ್ಟರೆ ಸಕಲರೂ ಧನ್ಯರಾಗುತ್ತಾರೆ.

549

ಅಮೃತವ ಕಡೆವಲ್ಲಿ, ವಿಷವಟ್ಟಿ ಸುಡುವಲ್ಲಿ,
ದೇವರೆಂಬವರೆತ್ತ ಹೋದರೇನಿಂ ಭೋ ?
ಅಂದೊಮ್ಮೆ ಓಡಿಹೋಗಿ ಆ ಶಿವನ ಮೊರೆಹೋಗುವಂದು
ದೇವರೆಂಬವರೆತ್ತ ಹೋದರೇನಿಂ ಭೋ ?
ಕೂಡಲಸಂಗಯ್ಯ ದೇವರಿಗೆ ದೇವನು;
ನೀವೆಲ್ಲಾ ಆಳೆಂಬುದನರಿಯಿರಿಂ ಭೋ !

ಸಮುದ್ರ ಮಥನ ಮಾಡಿದಾಗ ಅಮೃತ ವಿಷಗಳೆರಡೂ ಹೊರ ಚೆಲ್ಲಿದವು. ವಿಷದಿಂದ ಇಡೀ ದೇವಲೋಕವೆಲ್ಲ ತತ್ತರಿಸಿ ಹೋಯಿತು. ಶಿವನ ಮೊರೆಯಿಟ್ಟು ಪ್ರಾರ್ಥಿಸಿತು. ಈ ಕಾಳ ಕೂಟ ವಿಷದಿಂದ ನಮ್ಮನ್ನು ರಕ್ಷಿಸು ತಂದೆ ಎಂದು ಶಿವನನ್ನು ಅಂಗಲಾಚಿ ಬೇಡಿತು.

ಇಡೀ ಜಗತ್ತು ದೇವಲೋಕವೆಂದು ಹೆಸರಿಸಿದರೂ ಆ ದೇವರಿಗೆ ವಿಷ ಸೇವಿಸುವ ತಂತ್ರಜ್ಞಾನ ಗೊತ್ತಿರಲಿಲ್ಲ. ಅವರೇನಿದ್ದರೂ ಅಮೃತವನ್ನು ಸುರೆಯನ್ನು ಸೇವಿಸಿ ದೇವರಾದವರೇ ಹೊರತು ವಿಷವನ್ನು ಎಂದೂ ಸೇವಿಸಿ ದವರಲ್ಲ. ಶಿವನಿಗೆ ಮಾತ್ರ ಅಮೃತ ವಿಷಗಳೆರಡೂ ಸಮಾನ!

ಮಠಾಧಿಪತಿಗಳು, ಪೀಠಾಧಿಪತಿಗಳು, ಜಗದ್ಗುರುಗಳಾದವರು ಕೂಡಾ ದೇವರೆಂದೆನಿಸಿಕೊಂಡರು. ಕಾವಿ ವಸ್ತ್ರವ ಧರಿಸಿಕೊಂಡವರು ಕೂಡಾ ದೇವರೆಂದೆನಿಸಿಕೊಂಡರು. ಅಮೃತ ಸೇವಿಸುವ ಜ್ಞಾನವಿದೆಯೆ ಹೊರತು ವಿಷ ಸೇವಿಸುವ ತಂತ್ರಜ್ಞಾನ ಹೊಂದಿದವರಲ್ಲ.

ಕಣ್ಣಿಗೆ ಸುಂದರವಾದ ಸ್ತ್ರೀ, ಆಭರಣಗಳು ಕಂಡರೆ ಅದು ಅಮೃತ. ದೇವರ ವೇಷದಲ್ಲಿದ್ದ ಕಣ್ಣು ಆ ಸೌಂದರ್ಯವನ್ನು ಸುಖದಿಂದ ಹೀರುತ್ತದೆ. ದೇಹಕ್ಕೆ ದೇವರ ವೇಷ ಹಾಕಿದರೇನು ಕಣ್ಣಿನಲ್ಲಿರುವ ರಾಕ್ಷಸ ಹಾಗೆಯೇ ಇದ್ದಾನೆ. ದೇಹಕ್ಕೆ ಕಾವಿ ಬಟ್ಟೆಯ ಸುಖಬೇಕು; ಮನವೆಂಬ ರಾಕ್ಷಸನಿಗೆ ಹೆಣ್ಣಿನ ಸುಖ ಬೇಕು. ಜನ ನೋಡಿದರೆ ಬೆನ್ನಟ್ಟಿ ಹೊಡೆಯುತ್ತಾರೆ. ಯಾರೂ ನೋಡದಂತೆ ಮಾಡಿದರೆ ತನುವಿನಲ್ಲಿಯೇ ತನ್ಮಯವಾದ ದೇವರ ಕಾಟ ! ಸುಖ ಅನುಭವಿಸದಿದ್ದರೆ ರಾಕ್ಷಸನ ಕಾಟ ! ಅಮೃತವೂ ವಿಷವೇ, ವಿಷಯವೂ ವಿಷವೇ ಆಗಿ ಬೆನ್ನುಬಿದ್ದು ಸುಡುವುದು.

ಆಸ್ತಿ, ಆಭರಣ, ಹಣ, ವಿಷಯವೆಂಬ ವಿಷ ಬೆನ್ನಟ್ಟಿ ದೇವರ ವೇಷದಲ್ಲಿದ್ದ ತನುವನ್ನು ಸುಡುವಾಗ ಯಾವ ದೇವರೂ ರಕ್ಷಿಸಲರಿಯರು.

ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನಿ ಕೂಡಲಸಂಗಯ್ಯ ದೇವರಿಗೆ ದೇವನು.

550

ವಿಷ್ಣು ಬಲ್ಲಿದನೆಂಬೆನೆ ?
ದಶಾವತಾರದಲ್ಲಿ ಭಂಗಬುಟ್ಟುದಕ್ಕೆ ಕಡೆಯಿಲ್ಲ !
ಬ್ರಹ್ಮ ಬಲ್ಲಿದನೆಂಬೆನೆ ?
ಶಿರಹೋಗಿ ನಾನಾ ವಿಧಿಯಾದ !
ವೇದ ಬಲ್ಲಿತ್ತೆಂಬೆನೆ ?
ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ
ಲಿಂಗದ ಸಿಲುಕಡೆಯ ಕಾಣದು !
ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದ ಕ್ರೀ!
ಪುರಾಣ ಬಲ್ಲಿತ್ತೆಂಬೆನೆ? ಪೂರ್ವ ಕ್ರೀ!
ಆಗಮ ಬಲ್ಲಿತ್ತೆಂಬೆನೆ ವಾಯ ಹೊಂದಿತ್ತು !
ಇದು ಕಾರಣ ಕೂಡಲಸಂಗಯ್ಯನೆ ನಿತ್ಯ ;
ಉಳಿದ ದೈವವೆಲ್ಲ ಅನಿತ್ಯ ಕಾಣಿಭೋ !

ವಿಷ್ಣು ದಶಾವತಾರಗಳಲ್ಲಿ ಹುಟ್ಟಿ ನಾನಾ ತೊಂದರೆಗಳನ್ನು ಅನುಭವಿಸಿದ. ಬ್ರಹ್ಮನ ಶಿರಹೋಯಿತು. ಮರಳಿ ಪಡೆಯುವ ಶಕ್ತಿಯಿಲ್ಲದೆ ಹತಾಶನಾದ, ವೇದ ನಾನಾ ಮುಖದಲ್ಲಿ ಸ್ತುತಿ ಮಾಡಿತು. ಆದರೆ ಅರಿವಿಗೆ ನಿಲುಕದೆ ಹೋಯಿತು. ಶಾಸ್ತ್ರ ಶಬ್ದದಲ್ಲಿ ಮಾತ್ರ ತನ್ನ ಶಕ್ತಿಯನ್ನು ಪ್ರದರ್ಶಿಸಿತು; ಕ್ರಿಯೆಯಲ್ಲಿ ನಪುಂಸಕವಾಯಿತು. ಪುರಾಣ ಪೂರ್ವಕಾಲದ, ಗತಕಾಲದ ಕತೆಯನ್ನು ಹೇಳಿತೆ ಹೊರತು ಅದು ಸತ್ಯವಾಗಿ ತೋರಿಸುವಲ್ಲಿ ವಿಫಲವಾಯಿತು. ಆಗಮ ಬಲ್ಲಿತ್ತೆಂಬಲ್ಲಿ ಅದು ಮಾಯೆಯನ್ನು ಹೊಂದಿತ್ತು.

ಬ್ರಹ್ಮ, ವಿಷ್ಣು, ವೇದ, ಆಗಮ, ಶಾಸ್ತ್ರ, ಪುರಾಣಗಳೆಲ್ಲ ಸ್ವರೂಪದ ಅರಿವೆಂಬ ಲಿಂಗಕ್ಕೆ ಸಮವಾಗಲರಿಯವು. ಸ್ವರೂಪದತ್ತ ಮನ ಪಯಣಿಸಲು ಮೇಲಿನವುಗಳು ಸಹಕಾರಿಯಾಗಬಲ್ಲವೇ ಹೊರತು ಸ್ವರೂಪ ಶಕ್ತಿಗೆ ಸಮವಾಗಿ ನಿಲ್ಲಲರಿಯವು.

ಉಳಿದ ದೈವಗಳೆಲ್ಲ ಅನಿತ್ಯ. ಅರಿವೆಂಬ ಸಂಗಮನಾಥನೊಬ್ಬನೆ ನಿತ್ಯ. ಆತನಮುಂದೆ ಆತನೇ ಸೃಷ್ಟಿದ ವೇದ ಆಗಮ ಪುರಾಣ ಶಾಸ್ತ್ರಗಳು ಹೇಗೆ ನಿಲ್ಲಬಲ್ಲವು? ದೇವರೆಂಬ ವೇಷಧಾರಿಗಳೆಲ್ಲ ಆತನಿಗೆ ಆಳೆಂದು ತಿಳಿದು ಸೇವೆ ಮಾಡಿದರೆ ತಪ್ಪದೆ ರಕ್ಷಿಸುವನು.

551

ಮರೆಯಲಾಗದು ಹರಿಯ, ಮರೆಯಲಾಗದು ಬ್ರಹ್ಮನ,
ಮರೆಯಲಾಗದು ತೆತ್ತೀಸಕೋಟಿ ದೇವರ್ಕಳ,

ನಮ್ಮ ಕೂಡಲಸಂಗಮದೇವರ ಮರೆಯಲಹುದು.

ಎಲೆ ಮನವೆ ನೀನು ಹರಿಯನ್ನು ಮರೆಯಲಾರೆ, ಬ್ರಹ್ಮನನ್ನು ಮರೆಯಲಾರೆ, ತೆತ್ತೀಸಕೋಟಿ ದೇವರನ್ನು ಮರೆಯಲಾರೆ; ಆದರೆ ನಿನಗೆ ಜನ್ಮಕೊಟ್ಟ ಸಂಗಯ್ಯನೆಂಬ ತಂದೆಯನ್ನು ಮಾತ್ರ ಕೂಡಲೇ ಮರೆಯುವಿ. ಮರೆತು ನರಕಕ್ಕೆ ಭಾಜನನಾಗುವಿ.

ಹರಿಯೂ ಇಲ್ಲ, ಬ್ರಹ್ಮನೂ ಇಲ್ಲ, ತೆತ್ತೀಸಕೋಟಿ ದೇವತೆಗಳೂ ಇಲ್ಲ; ಇಲ್ಲವೆಂಬುದು ನಿನಗೆ ಪರಿಚಯವಿಲ್ಲವೆ? ಇದ್ದರೆ ಅವರು ಎಲ್ಲಿದ್ದಾರೆ? ಅವರನ್ನು ನೀನು ಸೃಷ್ಟಿಸಿರುವಿ.

ಕಲ್ಲು ಕಟೆದು ದೇವರೆಂದು ಕೆತ್ತಿ ಅದಕ್ಕೆ ಆಲಯ ನಿರ್ಮಿಸಿದ ಮಾತ್ರಕ್ಕೆ ಕಲ್ಲು ದೇವರಾಗುತ್ತದೆಯೆ? ಅದು ದೇವರಾದರೆ ಕಲ್ಲೆತ್ತ ಹೋಯಿತು? ಕಲ್ಲು ಕಳೆದುಕೊಂಡು ಕಲ್ಲನ್ನೆ ದೇವರೆಂದು ಹೇಳುವ ನೀನು ಮೂರ್ಖನಲ್ಲವೆ?

ನಿನ್ನನ್ನು ಸೃಷ್ಟಿಸಿದ ದೇವರು ನಿನಗೆ ನೆನಪಿನಲ್ಲಿ ಉಳಿಯಲಿಲ್ಲ; ನೀನು ಸೃಷ್ಟಿಸಿದ ದೇವರು ಮಾತ್ರ ನಿನಗೆ ನೆನಪಿನಲ್ಲಿ ಉಳಿದನಲ್ಲವೆ? ಒಮ್ಮೆ ಯೋಚಿಸು; ನೀನು ಎಲ್ಲಿಂದ ಬಂದಿರುವಿ ಎಂದು ಎಲೆ ಮನವೆ? ದೇವರೆಂದರೆ ಒಂದು ಸದಾ ಉರಿಯುತ್ತಿರುವ ಜ್ಯೋತಿ! ಅದು ಬಯಲು ಜ್ಯೋತಿ; ನಿನ್ನನ್ನು ಬಿತ್ತಿದ ಜ್ಯೋತಿ. ಪರಾತ್ಪರಂಜ್ಯೋತಿಯ ಬೆಳಕ ಬಿಟ್ಟು ನೀನಿಲ್ಲ. ನಿನ್ನ ಬೆನ್ನಿಗಿದ್ದ ದೇವರನ್ನು ಬಿಟ್ಟು ನೀನೇ ಸೃಷ್ಟಿ ಮಾಡಿದ ದೇವರು ನಿನಗೆ ದೊಡ್ಡವನಾದನೆ?

ಬೆಳಕಿನ ಕೃಪಾದೃಷ್ಟಿಯಿಂದ ಹುಟ್ಟಿದ ಕುನ್ನಿ ನೀನು. ನಿನ್ನನ್ನು ಮನ ಎಂದು ಕರೆಯುತ್ತಾರೆ. ಆ ದೇವರ ಬೆಳಕು ನಿನ್ನ ಮೇಲೆ ಬಿದ್ದರೆ ನೀನೇ ದೇವರಾಗಿ ಬೆಳಗುವಿ. ಅಂತಹ ದೇವರನ್ನು ಮರೆಯಬಹುದೆ? ನೀನು ಸೃಷ್ಟಿಸಿದ ಯಾವ ದೇವರೂ ಮನುಷ್ಯನನ್ನು ದೇವರಾಗಿಸಿಲ್ಲ. ಆದರೆ ನಿನ್ನ ಸೃಷ್ಟಿಸಿದ ದೇವರು ಮಾತ್ರ ನಿನ್ನನ್ನು ತನ್ನಂತೆ ಮಾಡಿಕೊಂಡ. ಅಂತಹ ಕೂಡಲಸಂಗಯ್ಯನೆಂಬ ದೇವರನ್ನು ಮರೆಯಬಹುದೆ? ಮರೆಯಲಾಗದು.

552

ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ,
ರಸವನು ಹಡೆಯಲು ಬಾರದು.
ಮಳಲ ಹೊಸೆದಡೆ ಹೊಸೆಯಬಹುದಲ್ಲದೆ,
ಸರವಿಯ ಹಡೆಯಲು ಬಾರದು.
ನೀರಕಡೆದಡೆ ಕಡೆಯಬಹುದಲ್ಲದೆ,
ಬೆಣ್ಣೆಯ ಹಡೆಯಲು ಬಾರದು.
ನಮ್ಮ ಕೂಡಲಸಂಗಮದೇವನಲ್ಲದೆ
ಅನ್ಯದೈವಕ್ಕೆರಗಿದಡೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಆಯಿತಯ್ಯಾ.

ಬಿದಿರೆಲೆ ಮೆಲಿದರೆ ರಸಬರುವುದಿಲ್ಲ; ಮಣ್ಣು ಹೊಸೆದು ಹಗ್ಗ ತಯಾರಿಸಲೂ ಬರುವುದಿಲ್ಲ; ನೀರು ಕಡೆದು ಬೆಣ್ಣೆ ತೆಗೆಯಲು ಬರುವುದಿಲ್ಲ. ಇದು ಮೂರ್ಖತನದ ಪರಮಾವಧಿ. ಇದನ್ನು ಯಾರೂ ಪ್ರಯತ್ನಿಸಲಾರರು. ಆದರೆ ಅನ್ಯ ದೇವರನ್ನು ಪೂಜಿಸಿ ವ್ಯರ್ಥಕಾಲ

ಕಳೆಯುವುದಂತೂ ನಡೆದೇ ಇದೆ. ದೇವರಿಗಾಗಿ ಕಣ್ಣು ಕಳೆದುಕೊಂಡು ಕುರುಡರಾದವರೂ ಇದ್ದಾರೆ. ಪ್ರಾಣ ಕಳೆದು ಕೊಂಡವರೂ ಇದ್ದಾರೆ. ಅವರಿಗೆ ಕಣ್ಣು ಬಂದಿಲ್ಲ; ಪ್ರಾಣವೂ ಬಂದಿಲ್ಲ. ಜೊಳ್ಳು ಕುಟ್ಟಿ ಕೈ ಬೊಬ್ಬೆ ತಂದುಕೊಂಡಂತೆ ; ಕಾಳು ಎಂದೂ ಬಳಿದುಕೊಳ್ಳಲಾರರು ಅನ್ಯದೈವಕ್ಕೆರಗಿದ ತನುವಿನ ಸ್ಥಿತಿ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗಿಂತ ಅನ್ಯ ದೈವಂಗಳು ಇಲ್ಲ ವೆಂದು ತನುವಿಗೆ ಗೊತ್ತಾಗುವುದು. ದುಸ್ತರದ ಮಾತೇ ಸರಿ. ''ತನ್ನ ತಾನರಿಯದ ಮುನ್ನ ತನ್ಮ ಯವಾದ ಅರಿವು, ತನ್ನ ತಾನರಿದ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು; ತನ್ನಿರುವಿನ ಅರಿವು ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ''.

ಅರಿವೆಂಬ ಗುರುದೇವನು ತನುವಿನಲ್ಲಿಯೇ ತನ್ಮಯನಾಗಿದ್ದಾನೆ. ಆ ಗುರುದೇವನಿಗೆ ಮನ ಗುಲಾಮನಾಗಬೇಕೆಂದು ಶರಣರು ಸೂಕ್ಷ್ಮವಾಗಿ ಹೇಳಿದ್ದಾರೆ. ಆದರೆ ಒಂದು ತನು ಮತ್ತೊಂದು ತನುವಿಗೆ ಗುಲಾಮನಾಗುವುದು ಕಂಡು ಬರುತ್ತದೆ. ಒಂದು ತನು ಮತ್ತೊಂದು ತನುವಿಗೆ ಬೋಧಿಸುವುದು ಕಂಡು ಬರುತ್ತಲಿದೆ. ಗುರುದೇವನಿಗೆ; ಗುರುದೇವನು ಬೋಧಿ ಸಬಹುದೆ? ಆತನನ್ನು ಗುರುದೇವ ಶಿಷ್ಯನನ್ನಾಗಿ ಮಾಡಿಕೊಳ್ಳಬಹುದೆ? ಅರಿವೆಂಬ ಗುರುದೇವನಿಗೆ ಬೋಧಿಸಲು ಸಾಧ್ಯವಾಗುವುದಿಲ್ಲ; ಮನವೆಂಬ ಶಿಷ್ಯನಿಗೆ ಬೋಧೆ ನಿಲ್ಲುವುದಿಲ್ಲ. ಹೀಗೆ ಅನ್ಯ ದೈವಕ್ಕೆರಗಿ ಜೊಳ್ಳು ಕುಟ್ಟಿ ಕೈಗಳಿಗೆ ಬೊಬ್ಬೆ ತಂದುಕೊಳ್ಳುವ ಕೆಲಸ ನಿರಂತರ ನಡೆದಿದೆ.

553

ಆಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು;
ಹೋಗೆಂದಡೆ ಹೋಗವು ಕೆಲವು ದೈವಂಗಳು;
ನಾಯಿಗಿಂದ ಕರಕಷ್ಟ ಕೆಲವು ದೈವಂಗಳು.
ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವವು ಕೂಡಲಸಂಗಮದೇವಾ?

ಒಂದು ತನು ಮತ್ತೊಂದು ತನುವನ್ನು ದೇವರೆಂದು ಬೆದರಿಕೆ ಒಡ್ಡಿ, ವ್ಯವಹಾರ ಮಾಡಿ ಹಣ ಕೀಳುವ ಪರಿಸ್ಥಿತಿಯನ್ನು ತಂದುಕೊಂಡಿದೆ. ತನುವಿನ ಅಪರಾಧ ತನುವಿಗೆ ಗೋಚರಕ್ಕೆ ಬರುತ್ತದೆ. ಆದರೂ ಅದರಲ್ಲಿ ಸುಖವಿರುವುದರಿಂದ ತನುವಿನ ಅಪರಾಧ ತನುವಿಗೆ ಗೋಚರಕ್ಕೆ ಬರುವುದಿಲ್ಲ. ಮತ್ತೊಂದು ತನು ದುಃಖದಲ್ಲಿರುವುದರಿಂದ ಸುಖ ಹುಡುಕಲು ಹೋಗಿ ತನುವಿನಿಂದಲೇ ಶೋಷಣೆಗೆ ಒಳಗಾಗುತ್ತದೆ.

ಒಂದು ತನು ತಾನು ದೇವರೆಂದು ನಾಯಿ ಜೀವನ ಮಾಡುತ್ತಿರುವುದು ಅರಿತರೆ ತನಗೆ ತಾನೇ ಮೋಸ ಮಾಡಿಕೊಂಡಂತೆ. ಅರಿವಿದ್ದೂ ಅದು ಬಳಕೆಯಾಗದೆ ದೇವರು ದೆವ್ವ ಭೂತ ಪಿಶಾಚಿಗಳಿಗೆ ಬಲಿಯಾಗುವುದು ತನು ಮಾತ್ರ. ಇತರ ಪ್ರಾಣಿಗಳಿಗೆ ಅರಿವಿಲ್ಲ. ಅವುಗಳಿಗೆ ದೇವರು ದೆವ್ವ ಭೂತ ಪಿಶಾಚಿಗಳ ಭಯವೂ ಇಲ್ಲ.

ಮನುಷ್ಯ ದೇವರೆಂದು ದೇವಾಲಯ ಕಟ್ಟುತ್ತಾನೆ. ಕಾಗೆ ಗುಬ್ಬಿ ಹಲ್ಲಿ ಇಲಿ ಹಾವು ದೇವ ರ ಮೇಲೆ ಹೊಲಸು ಮಾಡುತ್ತವೆ. ದೇವರ ಮುಂದೆ ಇಟ್ಟ ಪ್ರಸಾದ ನಾಯಿ ತಿಂದು ಹೋಗುತ್ತದೆ.

ನಿಲ್ಲಿಸಿದ ದೇವರ ಮೇಲೆಯೇ ನಾಯಿ ಮೂತ್ರ ಮಾಡುತ್ತದೆ. ಆದರೂ ಮನುಷ್ಯ ನಾಯಿಯನ್ನೆ ದೇವರೆಂದು ಪೂಜಿಸಿ ತನ್ನ ಭ್ರಮೆಯ ಬಲವನ್ನು ಗಟ್ಟಿ ಮಾಡಿಕೊಳ್ಳುತ್ತಾನೆ.

ತಾನೇ ಕೆತ್ತಿದ ಕಲ್ಲು ತನಗೇನು ಕೊಡಬಲ್ಲದೆಂಬ ಅರಿವು ಮರೆವಾಗಿದೆ. ದೇವರ ಮನೆತನ, ಗುರುವಿನ ಮನೆತನವೆಂದು ಮನತನಕ್ಕೆ ಆ ಹೆಸರನ್ನಿಟ್ಟು ಅಂಜಿಸಿ ಬೇಡುವುದನ್ನೇ ಕಾಯಕವನ್ನಾಗಿ ಮಾಡಿಕೊಂಡಿವೆ ಕೆಲ ತನುಗಳು. ತನುವೇ ತನುವಿನ ಶೋಷಣೆ ಮಾಡುತ್ತಿರುವುದನ್ನು ತನುವೇ ಅರಿವಿನಿಂದ ನಿಲ್ಲಿಸಬೇಕಾಗಿದೆ. ಅರಿವಿನ ಶಿಕ್ಷಣದ ಅವಶ್ಯಕತೆಯಿದೆ. ಮೌಢ್ಯ ಸಂಪ್ರದಾಯಗಳಿಗೆ ಬರೆ ಯಿಡುವ ಅವಶ್ಯಕತೆಯೂ ಇದೆ. ಶೋಷಿಸುವ ಶೋಷಣೆಗೆ ಒಳಗಾಗುವ ಎರಡೂ ತನುಗಳು ಅಪರಾಧಿ ಸ್ಥಾನದಲ್ಲಿ ನಿಂತಿವೆ. ಎರಡೂ ತನುಗಳು ಭ್ರಮೆಗೊಳಗಾಗಿವೆ.

554

ಗಾಡಿಗ ಡಿಂಬುಗಂಗೆ ಚೆಕ್ಕು ಮುಟ್ಟಿಗೆ
ಹಸುರಂಬಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ,
ಮನುಷ್ಯರ ಪಿಡಿದು ಪೀಡಿಸಿ, ತಮ್ಮ ಬಸುರ್ಗೆ ಕಾಣದೆ,
ಈಡಾಡಿದ ಕೂಳಂಬಲಿಯ ನಾಯ್ದು ಕುರುಕುವ
ಹೇಸಿದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡೆಲವೊ;
ಕೂಡಲಸಂಗಮದೇವರ ನೆರೆನಂಬುವುದೆಲ್ಲವೊ.

ಮೈ ಮೇಲೆ ಭೂತ ಬರುವುದು, ದೆವ್ವ, ಪಿಶಾಚಿ ಬರುವುದು ; ಅವುಗಳಿಗೆ ಅಂಬಲಿ, ಕಡುಬು, ಸಜ್ಜಿಗೆ ಮೊದಲಾದ ತಿನಿಸುಗಳ ತೆಗೆದು ಬೀಸಾಡುವುದು ; ಇಲ್ಲ ಉಣಿಸುವುದು ಈ ಗಲೂ ನಡೆದಿದೆ. ಇದೊಂದು ಮೌಢ್ಯವೆಂದು ತಾನೇ ತಿಳಿಯಬೇಕಲ್ಲದೆ ಇತರರು ಹೇಳುವ ಅ ವಶ್ಯಕತೆಯಿಲ್ಲ. ಸಂಪ್ರದಾಯವೇ ಮನುಷ್ಯನಿಗೆ ಮಾನಸಿಕ ರೋಗವಾಗಿ ಪೆಡಂಭೂತವಾಗಿ ಕಾ ಡುತ್ತದೆ. ಅವುಗಳ ಸಮಾರಾಧನೆ ಮಾಡಿ ಸಾಲ ಮಾಡಿ ತೀರಿಸುವುದರಲ್ಲಿಯೇ ಸಾವು ಬಂದೆರ ಗುತ್ತದೆ. ಅರಿವಿನ ತನು ಅಜ್ಞಾನದಿಂದಾಗಿ ವ್ಯರ್ಥ ದುಃಖದ ಸಾವು ತಂದುಕೊಳ್ಳುತ್ತದೆ.

ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡೆಲವೊ; ಕೂಡಲಸಂಗಮದೇವರ ನೆ ರೆನಂಬುವುದು ಎಂದಿದ್ದಾರೆ ಅಣ್ಣನವರು.

555

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ ಬಾವಿ ಹೂಗಿಡ ಮರಂಗಳಲ್ಲಿ
ಗ್ರಾಮಮಧ್ಯಂಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕೆರೆವೆಮ್ಮೆ,ಹಸುಗೂಸು, ಬಸುರಿ,ಬಾಣತಿ,
ಕುಮಾರಿ ಕೊಡಗೂಸೆಂಬರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ

ಕಾಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲಸಂಗಮದೇವ ಶರಣೆಂಬುದೊಂದೆ ದಡಿ ಸಾಲದೆ ?

ದೇವತೆಗಳು ಒಂದಲ್ಲ, ಎರಡಲ್ಲ, ನೂರಾರು, ಸಾವಿರಾರು ಹಾಳು ಮೊರಡಿ, ಊರ ದಾರಿಗಳಲ್ಲಿ, ಮೂರು-ನಾಲ್ಕು ದಾರಿಗಳು ಕೂಡಿದಲ್ಲಿ ದೇವರು ಹುಟ್ಟುತ್ತವೆ. ಮನುಷ್ಯ ತನ್ನ ವ್ಯವಹಾರಕ್ಕಾಗಿ ಮನುಷ್ಯನನ್ನೇ ದುರ್ಬಳಕೆ ಮಾಡಿಕೊಳ್ಳುತ್ತಾನೆ. ಬಸುರಿ, ಕೂಸು, ಬಾಣತಿ, ಕುಮಾರಿ ಯರನ್ನೂ ಬಿಡುವುದಿಲ್ಲ. ಮಾರಯ್ಯ ಬೀರಯ್ಯ , ಅಂತರ ಬೆಂತರ ಕಾಳಯ್ಯ ದೂಳಯ್ಯ ಎಂದು ದೇವರಿಗೆ ಮೊರೆ ಹೋಗುತ್ತಾರೆ. ದೇವರಿಗೆ ಕುರಿ ಕೋಣ ಬಲಿ ಕೊಟ್ಟು ಸಾಲ ಸೋಲ ಮಾಡಿಕೊಂಡು ಯಾತನೆ ಅನುಭವಿಸುತ್ತಾರೆ. ಅರಿವಿನ ಮುಖದತ್ತ ಪಯಣಿಸುವುದನ್ನೆ ಮರೆಯುತ್ತಾರೆ.

556

ಅರಗು ತಿಂದು ಕರಗುವ ದೈವವ,
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ ?
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ
ಸಹಜ ಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ.

ಅರಗಿನಿಂದ, ಲೋಹದಿಂದ ಮಾಡಿದ ದೇವರು ಉರಿಯಲ್ಲಿ ಕರಗುತ್ತವೆ. ಬೆಳ್ಳಿ ಬಂಗಾರದಿಂದ ಮಾಡಿದ ದೇವರು ಅವಸರ ಬಂದರೆ ಮಾರಲ್ಪಡುತ್ತದೆ. ಕೆಲ ಭೀಕರ ದೇವತೆಗಳ ಚಿತ್ರ ಅಂಜಿಕೆಯಾದರೆ ಜಲ ಇಲ್ಲ ಭೂಮಿಯಲ್ಲಿ ಹೂಳಲ್ಪಡುತ್ತವೆ. ಇಂತಹ ದೈವಗಳನ್ನು ದೇವರೆಂದು ಹೇಗೆ ಕರೆಯುವುದು ಎಂದು ಮನಕ್ಕೆ ಹೊಳೆದರೆ ಆ ಮನ ತನುವಿನಲ್ಲಿಯೇ ತನ್ಮಯವಾದ ಸಂಗಮನಾಥನ ಸಂಗ ಮಾಡುತ್ತದೆ.

ಒಮ್ಮೆ ಕೊಂಡು ತಂದು ಭಾವದಿಂದ ಪೂಜಿಸಿ, ಮತ್ತೊಮ್ಮೆ ದುರ್ಭಾವ ದಿಂದಾಗಿ ಕೊಂಡು ತಂದ ದೇವರನ್ನೇ ಮಾರುವ ಮನ ಯಾವುದಕ್ಕೂ ಹೇಸುವುದಿಲ್ಲ. ಮನ ದೇವರನ್ನು ಕೊಂಡು ತರಲೂ ಸಿದ್ದವಾಗುತ್ತದೆ. ಮಾರಲೂ ಸಿದ್ದವಾಗುತ್ತದೆ. ಮನದ ಭಾವ ದುರ್ಭಾವಗಳು ಅಳಿದ ಮೇಲೆ ಮನದ ಸಹಜ ಭಾವ ಪ್ರಕಟವಾಗುತ್ತದೆ. ಆಗ ಅಂಗದಲ್ಲಿಯೇ ಸಂಗಮವಾದ ಸಹಜ ನಿಜೈಕ್ಯನೆಂಬ ಸಂಗಯ್ಯನ ಸಂಗ ಮಾಡುತ್ತದೆ.

557

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು,
ಸಾಲಬಟ್ಟಡೆ ಮಾರಿಕೊಂಬರಯ್ಯಾ !
ಸಾಲಬಟ್ಟಡೆ ಅವರನೊತ್ತೆಯಿಟ್ಟುಕೊಂಡುಂಬರಯ್ಯಾ !
ಮಾರುವೋಗನೊತ್ತೆವೋಗ
ನಮ್ಮ ಕೂಡಲಸಂಗಮದೇವ.

ಮಾರಿಕವ್ವೆ, ಉರುಕುಂದಿ ಈರಣ್ಣ ನರಸಿಂಹನ ಹೆಸರಲ್ಲಿ ಕೊರಳಲ್ಲಿ ಬೆಳ್ಳಿ ಜನಿವಾರ ಮಾಡಿಸಿಕೊಂಡು ಹಾಕಿಕೊಳ್ಳುತ್ತಾರೆ. ಊಟ ಮಾಡಿದರೆ, ದೀಪ ನೋಡಿದರೆ, ಗಾಳಿ ಸೋಕಿದರೆ ದೇವರು ಬೆನ್ನು ಬೀಳುತ್ತಾನೆ, ಕಾಡುತ್ತಾನೆ ಎಂದು ಮೈಯಲ್ಲಿ ಬಂದಂತೆ ನಟಿಸಿ ಹೇಳಿಕೆ ನೀಡುವವರು ಎಲ್ಲೆಡೆ ಸಿಗುತ್ತಾರೆ. ಇದು ಅವರ ವ್ಯವಹಾರವೆಂದು ದಿಟ್ಟವಾಗಿ ನಂಬದೆ ಅವರು ಹೇಳಿದಂತೆ ಕೇಳಿ ಜನಿವಾರ ಮಾಡಿಸಿಕೊಂಡು ದೇವರನ್ನು ಕೊರಳಲ್ಲಿ ಧರಿಸುತ್ತಾರೆ. ಕೆಲಸ ಮಾಡದೇ ಕುಡಿತಕ್ಕೆ ಬಲಿಯಾಗಿ ಹಣ ಇಲ್ಲದಾಗ ಕೊರಳಲ್ಲಿದ್ದ ದೇವರ ಜನಿವಾರವನ್ನೇ ಮಾರಿ ದುರ್ಚಟಕ್ಕೆ ಇಲ್ಲ ಸಂಸಾರಕ್ಕೆ ಹೊಂದಿಸಿ ಕೊಳ್ಳುತ್ತಾರೆ. ಹಣ ಕೈಯಲ್ಲಿ ಬಂದಾಗ ಮತ್ತೊಂದು ದೇವರನ್ನು ಕೊಂಡು ಕೊರಳಲ್ಲಿ ಧರಿಸುತ್ತಾರೆ.

ಅಜ್ಞಾನಿಗಳು ಸುಲಭವಾಗಿ ದೇವರನ್ನು ನಂಬಿ ಕೊಳ್ಳುತ್ತಾರೆ, ತೊಂದರೆಯಾದಾಗ ಒತ್ತೆ ಇಡುತ್ತಾರೆ, ಮಾರುತ್ತಾರೆ. ಜ್ಞಾನಿ ಸಂಗಮದೇವ ಮಾರುವೋಗ, ಒತ್ತೆವೋಗ !

558

ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೆ?
ತನ್ನ ಮಗನ ಜವನೊಯ್ದಲ್ಲಿ ಅಂದೆತ್ತ ಹೋದಳಾ ಮಾರಿಕವ್ವೆ?
ಈವ ಕಾವಡೆ ನಮ್ಮ ಕೂಡಲಸಂಗಯ್ಯನಲ್ಲದೆ
ಮತ್ತೊಂದು ದೈವವಿಲ್ಲ.

ಕುರಿ ಕೋಳಿ ಉಣ್ಣುವುದಕ್ಕಾಗಿಯೇ ಮಾರಿಯನ್ನು ಪೂಜಿಸುವ ವಾಡಿಕೆ ಜಾರಿಗೆ ಬಂದಿತು. ಬರುಬರುತ್ತಾ ಕಾಲರಾ, ಪ್ಲೇಗ್, ಸಿಡುಬು, ತಟ್ಟು ರೋಗಗಳು ಕಾಣಿಸಿಕೊಂಡಾಗ ಈ ದೇವತೆಗಳಿಗೆ ಬಲಿ ಕೊಡುವುದು ಸಂಪ್ರದಾಯವಾಯಿತು. ಮನೆ ಮಂದಿಯನ್ನೆಲ್ಲಾ ಕರೆದು ಜಾತ್ರೆ ಮಾಡಿ ಮಾಂಸದ ಊಟ ಮಾಡುವುದು ವಾಡಿಕೆ ಯಾಯಿತು. ಉಣಲು ಉಡಲು ಮಾತ್ರ ಮಾರಿಕಾಂಬೆ ದೇವಿ ಕಾರಣವಾಗದೆ ಕೊಲ್ಲುವುದಕ್ಕಾಗಿಯೂ ಹೆಸರುವಾಸಿಯಾಯಿತು.

ತನ್ನ ಮಗನನ್ನೇ ಬದುಕಿಸಿಕೊಳ್ಳಲು ಸಾಧ್ಯವಾಗದ ಮಾರಿ ಅನ್ಯರನ್ನು ಬದುಕಿಸಲು ಸಾಧ್ಯವೇ? ಎಂದು ಯಾರೂ ಯೋಚಿ ಸುವ ಗೊಡವೆಗೆ ಹೋಗಲಿಲ್ಲ. ಪೂಜಿಸುವುದೂ ಬಿಡಲಿಲ್ಲ, ಮಾರಿ ಕಾಡುವುದೂ ಬಿಡಲಿಲ್ಲ. ಓಣಿಗೊಂದು ಊರಿಗೊಂದು ಗ್ರಾಮ ದೇವತೆಗಳು ಹುಟ್ಟಿದವು. ಇದುವರೆಗೂ ಪ್ರಾಣಿಗಳ ಮಾರಣ ಹೋಮ ನಡೆಯತ್ತದೆ. ಯಾವ ಸರಕಾರಕ್ಕೂ ನಿಲ್ಲಿಸಲು ಸಾಧ್ಯ ವಾಗಿಲ್ಲ.

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನ ಪರಿಚಯ ಮನಕ್ಕೆ ಆಗುವ ವರೆಗೆ ಯಾವ ಸರಕಾರಗಳೂ ಏನೂ ಮಾಡಲು ಬರುವುದಿಲ್ಲ. ಜ್ಞಾನಕ್ಕಿಂತ ಮಿಗಿಲಾದ ವಸ್ತುವೇ ಇಲ್ಲ. ಕೊಡುವವನೂ ಕಾಯುವವನೂ ಸಂಗಮನಾಥನಲ್ಲದೆ ಮತ್ತೊಂದು ದೈವವಿಲ್ಲ. ಮನಕ್ಕೆ ಮನದಟ್ಟಾದರೆ ಪೂಜೆಗೊಳ್ಳುವ ದೈವಗಳೆಲ್ಲ ಪೂಜೆಗೊಳ್ಳದೆ ವ್ಯರ್ಥ ಸತ್ತು ಹೋಗುತ್ತವೆ. ಮಾರಿ ಮಸಣಿಯ ಆಲಯಗಳೆಲ್ಲಾ ವಿದ್ಯಾ ಕೇಂದ್ರಗಳಾಗುತ್ತವೆ.

559

ಮೊರನ ಗೋಟಿಗೆ ಬಪ್ಪ ಕಿರುಕುಳ ದೈವಕ್ಕೆ
ಕುರಿಯನಿಕ್ಕಿಹವೆಂದು ನಲಿ ನಲಿದಾಡುವರು
ಕುರಿ ಸತ್ತು ಕಾವುದೆ ಹರ ಮುಳಿದವರ ?
ಕುರಿಬೇಡ ಮರಿ ಬೇಡ;
ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು
ನಮ್ಮ ಕೂಡಲಸಂಗಮದೇವನ.

ಮಾರಿಯ ವಾಸ ಮರದ ಮೂಲೆಯಲ್ಲಿ; ಸಂದು ಗೊಂದುಗಳಲ್ಲಿ; ಚರಂಡಿಯ ಹೊಲಸು ಜಾಗದಲ್ಲಿ. ಈ ಕ್ಷುದ್ರ ದೇವತೆಯ ಜನನಕ್ಕೆ ತನುವಿನ ಅಜ್ಞಾನವೇ ಕಾರಣ. ಜ್ಞಾನಿ ಸಂಗಮ ದೇವನ ಮುನಿಸೇ ಕಾರಣ. ಈ ಕಾರಣದಿಂದಾಗಿ ಅಂಗ ಚಿಕ್ಕ ಕುರಿಯನ್ನು ತಂದು ಅದನ್ನು ಮೇಸಿ ದೊಡ್ಡದಾದ ಮೇಲೆ ಕುರಿಯನ್ನು ಮಾರಿಗೆ ಬಲಿ ಕೊಟ್ಟು ಕಡಿಯುವುದಕ್ಕಾಗಿ ಕುಣಿಕುಣಿದಾಡುತ್ತದೆ. ಅಂಗ ನಲಿದು ನರ್ತಿಸುತ್ತದೆ. ಕಡಿಯುವುದೇ ಒಂದು ಸಂತೋಷವಾದರೆ, ಹಂಚಿ ತಿನ್ನುವುದು ಮತ್ತೊಂದು ಸಂತೋಷ. ತಿನ್ನುವುದಕ್ಕಾಗಿ ದೇವರು ಬೇಕೆ ? ಆ ಹೆಸರಿನಲ್ಲಿ ಮಾರಣಹೋಮ ಸರಿಯೆ ? ಏನು ತಿಂದರೂ ಮಾಂಸವೇ ಆಗುತ್ತದೆ ಎಂದ ಮೇಲೆ ಹಿಂಸೆ ಯಾಕೆ ? ಈ ದೇವರು ಯಾಕೆ ಎಂದು ಪ್ರಶ್ನಿಸಿಕೊಳ್ಳುವ ಜ್ಞಾನ ತನುವಿನಲ್ಲಿಯೇ ಸಂಗಮವಾಗಿದೆ. ಆ ಅರಿವೆಂಬ ಸಂಗಯ್ಯನ ಪೂಜೆಗೆ ಯಾವ ಪ್ರಾಣಿಯ ವಧೆಯೂ ಬೇಡ ; ಮರದಿಂದ ಉದುರಿಬಿದ್ದ ಒಂದು ದಳ ಪತ್ರೆಯಾದರೆ ಸಾಕು. ಅರಿವಿನ ಪೂಜೆಗಾಗಿ ಹಂಬಲಿಸು ಅಂಗವೇ; ಮರೆಯದೆ ಪೂಜಿಸು ಸಂಗಮನಾಥನನ್ನು .

560

ಬನ್ನಿರೆ ಅಕ್ಕಗಳು, ಹೋಗಿರೆ ಆಲದ ಮರಕ್ಕೆ
ಕಚ್ಚುವುದೇ ನಿಮ್ಮ ಚಿಪ್ಪಿನ ಹಲ್ಲುಗಳು?
ಬೆಚ್ಚಿಸುವವೆ ನಿಮ್ಮ ಬಚ್ಚಣಿಯ ರೂಹುಗಳು?
ನಮ್ಮ ಕೂಡಲಸಂಗಮದೇವನಲ್ಲದೆ
ಪರದೈವಂಗಳು ಮನಕ್ಕೆ ಬಂದುವೆ,
ಬಿಕ್ಕನೆ ಬಿರಿವ ದೈವಂಗಳು?

ಆಲದ ಮರದಲ್ಲಿಟ್ಟ ಮಾರಿ ಮಸಣೆಯ ಬೆದರಿಕೆಯ ರೂಪೊಂದು ರೂಪವೇ? ಆ ರೂಪ ನಿಮ್ಮನ್ನು ಕಚ್ಚುವುದೇ ? ಕೊಲ್ಲುವುದೆ? ಬೆಚ್ಚಿಸುವುದೆ ? ಯೋಚಿಸಿ ನಿರ್ಧರಿಸಿ. ಒಮ್ಮೆ ಚಿಂತಿಸಿದರೆ ಅದು ದೇವರು ಹೌದೊ ಅಲ್ಲವೊ ಎಂಬ ದೃಢ ನಿರ್ಧಾರ ನಿಮ್ಮ ಮನದಲ್ಲಿಯೇ ಮೂಡುವುದು. ಮನದ ಬೆದರಿಕೆಯಿಂದ ದೇವರು ಸೃಷ್ಟಿಯಾದ. ಮನದ ಧೃಡತೆಯಿಂದ ದೇವರು ಇಲ್ಲವಾದ. ದೇವರು ಇದ್ದಾನೆ ಇಲ್ಲ ಎನ್ನುವುದಕ್ಕೆ ಮನವೇ ಕಾರಣ. ಅರಿವು ಮನಕ್ಕೆ ಒಲಿದರೆ, ಅಥವಾ ಮನವೇ ಅರಿವಿಗೆ ದಾಸನಾದರೆ ತನುವಿನಲ್ಲಿ ತನ್ಮಯವಾದ ಅರಿವಿಗಿಂತ ದೊಡ್ಡ ದೇವರು

ಇಲ್ಲವೇ ಇಲ್ಲ. ಇದು ಮನಕ್ಕೆ ಮನವರಿಕೆಯಾಗಬೇಕು ಮನ ಸ್ವಪ್ರಯತ್ನ ದಿಂದ ಹುಡುಕಬೇಕು.

561

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೊ,
ಕೊಳಗ ದೈವ ಗಿಣ್ಣಿಲು ದೈವ ಕಾಣಿರೊ!
ದೈವ ದೈವವೆಂದು ಕಾಲಿಡಲಿಂಬಿಲ್ಲ?
ದೈವ ನೊಬ್ಬನೆ ಕೂಡಲಸಂಗಮದೇವ.

ಮಡಕೆ, ಮೊರ, ಬೀದಿಯ ಕಲ್ಲು ಕೂಡಾ ಈ ನಾಡಿನಲ್ಲಿ ದೇವನ ಸ್ಥಾನ ಪಡೆದಿದೆ. ಬಾಚಣಿಕೆ, ಬಿಲ್ಲು, ಕೊಳಗ, ಗಿಂಡಿ ಕೂಡಾ ಈ ಜಗದಲ್ಲಿ ದೇವರ ಸ್ಥಾನವನ್ನು ಪಡೆದಿದೆ. ಕಾಲಿಡಲು ಇಂಬಿಲ್ಲದಂತೆ ಎಲ್ಲೆಂದರಲ್ಲಿ ದೇವರು, ದೇವರ ಕೋಣೆ ದೇವಸ್ಥಾನಗಳೇ ತುಂಬಿವೆ. ದೇವರನ್ನು ನಂಬಿದಂತೆ ಈ ದೇಶದಲ್ಲಿ ಮನುಷ್ಯ ಮನುಷ್ಯನನ್ನು ನಂಬುವುದಿಲ್ಲ. ಇದಕ್ಕೆ ಕಾರಣ ಅರಿವು ಬಳಕೆ ಮಾಡುವ ವಿಧಾನವೇ ಮನಕ್ಕೆ ಹೊಳೆಯುತ್ತಿಲ್ಲ.

ಮನ ಸಂಪ್ರದಾಯಗಳನ್ನು, ಮಾತುಗಳನ್ನು, ಪುಸ್ತಕಗಳನ್ನು ಸಂಗ್ರಹ ಮಾಡಿಕೊಂಡು ಆ ಜಾಡಿನಲ್ಲಿ ತನುವನ್ನು ಮುಂದುವರಿಸಲು ಪ್ರಯತ್ನ ಮಾಡುತ್ತದೆ; ಮತ್ತೆ ಮತ್ತೆ ಎಡುವುತ್ತಲಿದೆಯೇ ಹೊರತು ಅಂಗದಲ್ಲಿಯೇ ಸೃಷ್ಟಿಯಾಗುವ ಅರಿವನ್ನು ಬಳಕೆ ಮಾಡುತ್ತಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವೇ ಗುರು ಎಂದು ಮನ ದೃಢವಾಗಿ ನಂಬಿದಲ್ಲಿ ಸೃಷ್ಟಿಸಿದ ದೈವಗಳೆಲ್ಲ ಬಟ್ಟಬಯಲಾಗುತ್ತವೆ.

562

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ನಂಟರಲ್ಲಿ
ಜೀವವಿಲ್ಲದ ದೇಹದಲ್ಲಿ ಫಲವೇನೊ?
ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ
ವರವಿಲ್ಲದ ದೈವದಲ್ಲಿ ಫಲವೇನೊ?
ಕಳಿದ ಹೂವಿನಲ್ಲಿ ಕಂಪನಳಿದ ಸೂಳೆಯಲ್ಲಿ ಹೆಂಪ
ಕೊಳಚೆಯ ನೀರಿನಲ್ಲಿ ಗುಂಪನರಸುವಿರಿ ಮರುಳೆ,
ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ,
ಪರಮ ಕಾರಣಿಕ ನಮ್ಮ ಕೂಡಲಸಂಗಮದೇವ.

ಭಾಷೆ ಯಾವುದಾದರೇನು? ದೇಶ ಯಾವುದಾದರೇನು? ತನು ಕುಲವೆಲ್ಲ ಒಂದೆ. ಆ ತನುಗಳ ಮನವೆಲ್ಲ ಒಂದೇ. ಹಾಗೆಯೆ ತನುವಿನಲ್ಲಿ ತನ್ಮಯವಾದ ಅರಿವು ಕೂಡಾ ಒಂದೇ. ಮನಕ್ಕೆ ಅರಿವು ಬಳಕೆಯಾಗ ದಿದ್ದರೆ ಆ ತನು ಸಕಲ ದೇವರನ್ನು ಪೂಜಿಸುತ್ತದೆ, ಸಕಲ ತನುಗಳೊಂದಿಗೆ ಹಾದರಕ್ಕಿಳಿಯುತ್ತದೆ. ಮನಕ್ಕೆ ಸುಖ ಬೇಕು. ಅದು ತನುವನ್ನು ಹಿಡಿದು ಸುಖಿಸುತ್ತದೆ. ಮನಕ್ಕೆ ಅರಿವಾಗಲಿ, ಇಲ್ಲ ಅರಿವೇ ಮನವನ್ನು ತನ್ನ ಕೈವಶ ಮಾಡಿಕೊಳ್ಳಲಿ ಎರಡೂ

ಒಂದೆ. ಆಗ ಮನ ರಿಣ ತಪ್ಪಿದ ಹೆಂಡತಿಯಂತೆ, ಗುಣ ತಪ್ಪಿದ ನಂಟರಂತೆ, ತನ್ನ ಅವಗುಣಗಳನ್ನು ಬಿಟ್ಟು ತೊಲಗುತ್ತದೆ. ಕೂಡಲಸಂಗಮನಲ್ಲಿ ಕೂಡಿಕೊಳ್ಳುತ್ತದೆ.

ಆಳ್ದನೊಲ್ಲದ ಆಳನ್ನು ಮಾಲೀಕ ಕೂಡಲೇ ಕೊಡವಿಕೊಳ್ಳುವಂತೆ, ಸಿರಿ ತೊಲಗಿದ ಅರಸನನ್ನು ಯಾರೂ ಪ್ರೀತಿಸದ ತೆರನಂತೆ ಮನೋವಲ್ಲಭನೊಂದಿಗೆ ಬೆರೆಯುತ್ತದೆ. ತೊಟ್ಟು ಬಿಟ್ಟು ಕಳಿದ ಹೂ ಮುಡಿಗೆ ಸೇರದಂತೆ, ಕಂಪಳಿದ ಸೂಳೆಯೊಂದಿಗೆ ಬೆರೆಯದಂತೆ ವರಗುರು ವಿಶ್ವಕ್ಕೆಲ್ಲ ಗಿರಿಜಾ ಮನೋವಲ್ಲಭನೆ ಪರಮ ದೈವವೆಂದು ಆತನೊಂದಿಗೆ ಬೆರೆದು ಆತನಲ್ಲಿಯೇ ಸಂಗಮವಾಗುತ್ತದೆ.

ಅಂಗವನ್ನೇ ಮಂಗಮಾಡಿ ವಿಶ್ವದ ಅಂಗಗಳನೆಲ್ಲ ತನ್ನಿಚ್ಚೆಯಂತೆ ಕುಣಿಸುವ ಮನ ಅಂಗದಲ್ಲಿಯೇ ಇರುವ ಅರಿವಿನ ಸಂಗಯ್ಯನಲ್ಲಿ ಸಂಗಮವಾಗಿ ಸಂಗಮನಾಥನೇ ತಾನಾಗುತ್ತದೆ.

563

ಲಿಂಗ ಶಿವಾಲಯದ ಮುಂದೆ ಸಿಂಹ ಶೂದ್ರಿಕನಲ್ಲದಿಲ್ಲ,
ನಂದಿಕೇಶ್ವರ ಭೃಂಗಿನಾಟ್ಯ ನಮ್ಮ ಲಿಂಗನ ಮುಂದೆ;
ಇದಕ್ಕೆ ದಿಷ್ಟ ದೀವಿಗೆ ನಮ್ಮ ಲಿಂಗನ ಮುಂದೆ
ಅವು ದೈವವೆಂಬುವ ತೋರಿಯೂ ಕಾಣಬಾರದು.
ನೊಸಲಕಣ್ಣಭವನೊಬ್ಬನೆ ದೈವ ಕೂಡಲಸಂಗಮದೇವ.

ಮಾರಿಕಾಂಬಾ ದೇವತೆ ಭೀಕರವಾಗಿದ್ದು ಅಂಜಿಕೆ ಬರುವಂತ ಚಿತ್ರಣಗಳನ್ನು ಹೊಂದಿದ್ದರೆ, ಲಿಂಗ ಶಿವದೇವಾಲಯ ಹಾಗಲ್ಲ. ಲಿಂಗಕ್ಕೆ ಆಕಾರವೇ ಇಲ್ಲ. ಭೂಮಿ ಆಕಾಶಗಳನ್ನು ಹೊಂದಿದ ಚಿತ್ರವದು. ಅದರ ಮುಂದೆ ಹೆದರಿಕೆ ಬರುವ ಸಿಂಹ ಸಾದೃಶವಾದ ದ್ವಾರಪಾಲಕರ ಚಿತ್ರಣಗಳಿಲ್ಲ. ಶಿವ ದೇವಾಲಯದ ಮುಂದೆ ದ್ವಾರಪಾಲಕರು!

ನಂದಿಕೇಶ್ವರ ಭೃಂಗಿಯೆಂಬ ನಾಟ್ಯದ ಚಿತ್ರಗಳು ಲಿಂಗನ ಮುಂದೆ. ಅನ್ಯ ದೈವಗಳು ಇಲ್ಲಿ ಸೇವಕರು , ಆದರೆ ದೇವರಲ್ಲ ; ಪೂಜೆಯೂಗೊಳ್ಳುತ್ತಿಲ್ಲ.

ನೊಸಲಕಣ್ಣಭವನೊಬ್ಬನೆ ದೈವ ಕೂಡಲಸಂಗಮದೇವಾ:

ತನುವಿಗೆ ಕಣ್ಣುಗಳೆರಡಿದ್ದರೂ ಅವು ಕುರುಡುಗಣ್ಣು. ಕಲ್ಲನ್ನೇ ದೇವರೆಂದು ಪೂಜಿಸಿ ಶರಣು ಹೋಗುವ ಕಣ್ಣು. ನೊಸಲು ಕಣ್ಣು ಅರಿವಿನ ಕಣ್ಣು. ಎರಡು ಕಣ್ಣೊಳಗಣ ಕಣ್ಣು ; ಕಣ್ಣಿನಲ್ಲಿರುವ ಮತ್ತೊಂದು ಕಣ್ಣು. ಕೆತ್ತಿದ ಕಲ್ಲುಗಳೆಲ್ಲ ಜಗದ ಕಣ್ಣುಗಳಿಗೆ ದೇವರಾಗಿ ಕಂಡರೆ ನೊಸಲಕಣ್ಣಿಗೆ ಕಲ್ಲಾಗಿ ಕಾಣುತ್ತದೆ. ಅರಿವಿನ ಕಣ್ಣು ಉಗುಳುವ ಬೆಂಕಿಗೆ ದೇವರು ಸುಟ್ಟು ಬರೀ ಕಲ್ಲು ಉಳಿಯುತ್ತದೆ.

ಜಗದ ಸರ್ವ ಅಂಗಗಳಲ್ಲಿಯೂ ನೊಸಲ ಕಣ್ಣು ಸಂಗಮವಾಗಿದೆ. ಮನಕ್ಕೆ ಅರಿವಾದರೆ ತೆರೆಯುತ್ತದೆ. ಇಲ್ಲ ಕುರುಡು ಕಣ್ಣುಗಳೇ ತನುವನ್ನು ಆಳುತ್ತವೆ. ತಾ ನೋಡಿದ ದೈವ ತನ್ನ ಹೆಗಲೇರುತ್ತದೆ.

564

ಗುಡಿಯೊಳಗಿರ್ದು ಗುಡಿಯ ನೇಣ ಕೊಯ್ದಡೆ
ಗುಡಿಯ ದಡಿ ಬಿದ್ದು ಹಲ್ಲು ಹೋಹುದು, ನೋಡಾ!
ಪೊಡವಿಗೀಶ್ವರನ ಗರ್ಭಾಸನದೊಳಗಿರ್ದು ನುಡಿವರು
ಮತ್ತೊಂದು ದೈವವುಂಟೆಂದು.
ತುಡುಗಿ ನಾಯನು ಪಿಡಿತಂದು ಸಾಕಿದಡೆ
ತನ್ನೊಡೆಯಂಗೆ ಬಗುಳುವಂತೆ, ಕಾಣಾ,
ಕೂಡಲಸಂಗಮದೇವಾ.

ಗುಡಿಯೊಳಗಿದ್ದು ಗುಡಿಯ ಕಲ್ಲು ಸರಿಸಿದರೆ ಗುಡಿಯೊಳಗಿದ್ದ ದಡಿಯಬಿದ್ದು ದೇವರ ಹಲ್ಲು ಉದುರುವುದು. ಕಲ್ಲು ಮೆಟ್ಟಿಲಿಗೆ ಹಾಕಿದರೆ ಮೆಟ್ಟಿಲೆಂದು, ಗುಡಿಗೆ ಹೊಂದಿಸಿದ ಕಲ್ಲು ಆಲಯ, ಶಿಖರವೆಂದು, ಮೂರ್ತಿ ಕಟೆದ ಕಲ್ಲನ್ನೇ ದೇವರೆಂದು ಹೇಳುವ ಮನ ಮತಿಭ್ರ ಮಣೆಯಿಂದ ಕೂಡಿದೆ.

ಅಂಗವೆಂಬ ಆಲಯದೊಳಗಿದ್ದ ಅರಿವಿನ ದೇವರನ್ನು ಪೂಜಿಸದೆ ಅಂಗ ನಿರ್ಮಿಸಿದ ಕಲ್ಲನ್ನೇ ದೇವರೆಂದು ಪೂಜಿಸುವ ಮನ ಬೀದಿ ನಾಯಿಗೆ ಸಮನಾದುದು. ಬೀದಿ ನಾಯಿಯನ್ನು ಹಿಡಿದು ತಂದು ಸಾಕಿ ಸಲಹಿದ ಮಾಲಕನಿಗೆ ಬೊಗಳಿದಂತೆ. ಅಂಗದಲ್ಲಿಯೆ ಇದ್ದ ಸಂಗಮನಾಥನೇ ಮನದ ನಾಯಿಗುಣವ ಮಾಣಿಸು ತಂದೆ.

565

ಅಸಮಾಕ್ಷ ಲಿಂಗಕ್ಕೆ ಅನ್ಯದೈವ ಸರಿಯೆಂಬನ ಬಾಯಲ್ಲಿ
ಮಸೆದ ಕೂರಲಗನಿಕ್ಕದೆ ಮಾಣ್ಬನೆ ?
ಹುಸಿಯಾಗಿ ನುಡಿವವನ ನಾಯಾಗಿ ಬಗುಳಿಸನೆ?
ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ?
ಗುರುಲಘುವೆಂಬವರ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ?
ಪರಸ್ತ್ರೀಗಳುಪಿದವರ ಗಾಣದಲಿಕ್ಕಿ ಹಿಳಿಯನೆ ?
ಪರಧನಕ್ಕಳುಪಿದವರ ಹಿಡಿಖಂಡವ ಕೊಯ್ಯನೆ?
ಎಲೆ ಕೂಡಲಸಂಗಮದೇವಾ, ನಿಮ್ಮ ಹೇಳಿದ ಹೇಳಿಕೆಯಿಂದ
ಪಿಂಬೇರ ಮೈಲಗೆ ಮೇಳವಾಡುತ್ತಿದ್ದ ಕಾಣಾ, ತ್ರೈಜಗದೊಳಗೆ.

ಇದು ತನುಗಳಿಗೆ ಹೇಳಿದ ಮಾತಲ್ಲ. ತನುವನ್ನು ಅನ್ಯ ದೈವಕ್ಕೆರಗುವಂತೆ ಪ್ರೇರೇಪಿಸುವ ಅಜ್ಞಾನಿ ಮನಕ್ಕೆ ಹೇಳಿದ ಮಾತು. ತನು ಈಶ್ವರನ ಸೊತ್ತು. ಮನ ಈಶ್ವರ ಜ್ಯೋತಿಯಿಂದ ಹುಟ್ಟಿದ ನೆರಳಾದರೂ ಆ ದೇವನನ್ನೇ ಮರೆತು ಈಶ್ವರನ ತನುವನ್ನೆ ಅನ್ಯ ದೈವಕ್ಕೆರಗುವಂತೆ ಮಾಡುತ್ತದೆ. ಅಂತಹ ಮನದ ಬಾಯಲ್ಲಿ ಮಸೆದ ಕೂರಲಗನಿಕ್ಕುವನು. ಹುಸಿ ನುಡಿಯುವ ಮನವನ್ನು ನಾಯಾಗಿ ಬಗಳಿಸುವನು. ಗುರು ಲಘುಗಳನ್ನು ಹಾಕಿ ಪ್ರಾಸದಿಂದ ಹಾಡುವ ಮನದ

ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ?

ತನು, ಈಶ್ವರನು ವಾಸಿಸುವ ಮನೆ. ಮನ ಈಶ್ವರನ ಅರ್ಧಾಂಗಿ ; ಅರ್ಧನಾರೀಶ್ವರಳೇ ಆಗಬೇಕಾದ ಮನವೆಂಬ ಸತಿ, ತಾನು ಸ್ವತಹ ಸ್ತ್ರೀಯಳಾಗಿದ್ದು ಪರಸ್ತ್ರೀಯಳೊಂದಿಗೆ ಸಂಗಮಾಡಲು ಸಂಚು ಹೂಡಿದ ಮನವನ್ನು ಗಾಣದಲಿಕ್ಕಿ ತಿರುಗಿಸುವನು.

ತನು ಈಶ್ವರನು ವಾಸಿಸುವ ಜ್ಞಾನ ಭಂಡಾರದ ಮನೆಯಾದರೆ, ತನುವಿನ ಈಶ್ವರನೇ ಸ್ವತಹ ಮಹಾಜ್ಞಾನವಾಗಿದ್ದಾನೆ. ಜ್ಞಾನವೆಂಬ ಧನ ತನ್ನ ತನುವಿನ ಮನೆಯಲ್ಲಿಯೇ ಇದ್ದರೂ ಪರಧನಕ್ಕಳುಪಿದ ಮನ ಹಿಡಿಖಂಡವನ್ನು ಕೊಯ್ಯದ ಬಿಡುವನೆ?

ತಾರುಣ್ಯ ಹಿಂದಕ್ಕೆ ಸರಿದರೇನು ಪ್ರೌಢ ಯೌವನ ಮುಪ್ಪಿನ ಮೂರು ಅವಸ್ಥೆಗಳಲ್ಲಿಯೂ ಹೆಡಮುರಿಗಿ ಕಟ್ಟಿ ಮೇಳಾಪವಾಡನೆ ಕೂಡಲಸಂಗಮದೇವ, ತ್ರೈಜಗದೊಳಗೆ.

566

ಶಿವಮಯ ವಿಷ್ಣುವಲ್ಲ , ವಿಷ್ಣು ಶಿವಮಯನಲ್ಲ , ನುಡಿಯದಿರಿಂಭೋ !
ನಾರಾಯಣ ಹರನಲ್ಲ ನುಡಿಯದಿರಿಂಭೋ!
ಶಿವನು ವಿಷ್ಣುವಲ್ಲ, ವಿಷ್ಣು ಶಿವನಲ್ಲ ನುಡಿಯದಿರಿಂಭೋ!
ನಮ್ಮ ಕೂಡಲಸಂಗಯ್ಯನನರಿಯದ ಸೂನೆಗಾರರೆಲ್ಲ
ನುಡಿಯದಿರಿಂಭೋ!

ಶಿವನೆಂದರೆ ಜಗದಗಲ ಮುಗಿಲಗಲ ವ್ಯಾಪಿಸಿಕೊಂಡ ಚಿಜ್ಯೋತಿ. ಅದು ತನುವಿನಗಲಕ್ಕೆ ಬಂದು ಚುಳುಕಾಗಿದೆ. ವಿಷ್ಣುವೆಂದರೆ ತನು. ಜಲರೂಪಿ ಜಲವೇ ಗಟ್ಟಿಯಾಗಿ ತನುವೆನ್ನಿನಿಸಿಕೊಂಡು ವಿಷ್ಣು ರೂಪದಲ್ಲಿ ಅವತರಿಸಿದೆ. ಶಿವನಿಂದಾಗಿ ಜಲರೂಪೀ ತನುವಿಗೆ ನೋಡುವ ಶಕ್ತಿ, ಕೇಳುವ ಶಕ್ತಿ, ಮಾತನಾಡುವ ಶಕ್ತಿ, ರುಚಿಸುವ ಶಕ್ತಿ, ಸ್ಪರ್ಶಿಸುವ ಶಕ್ತಿ ಬಂದಿದೆ. ಇವರಿಬ್ಬರೂ ಒಬ್ಬರಲ್ಲ. ಇವರಿಬ್ಬರೂ ಬೇರೆ ಬೇರೆಯೇ. ಶಿವನಅನಂತ ಶಕ್ತಿ ಕೂಡಿ ತನುವಾಗಿದೆ.

ನಾರಾಯಣ ಹರನಲ್ಲ ; ಹರ ನಾರಾಯಣನಲ್ಲ ಹೀಗೆಂದು ನುಡಿಯುವಂತೆಯೂ ಇಲ್ಲ. ಜಗದಗಲ ಮುಗಿಲಗಲ, ಪಾತಾಳದಿಂದಲೂ ಅತ್ತತ್ತಲಿದ್ದ ಶಿವನ ಶ್ರೀಪಾದ, ಬ್ರಹ್ಮಾಂಡದಿಂದಲೂ ಅತ್ತತ್ತಲಿದ್ದ ಶಿವನ ಶ್ರೀಮುಕುಟವನ್ನು ವಿಷ್ಣುವೆನ್ನಲು ಬರುವುದಿಲ್ಲ. ವಿಷ್ಣು ಅಂಗವಾದರೆ ಅಂಗದಲ್ಲಿಯೇ ಶಿವಮಯವಾಗಿ ಸಂಗಮವಾದ ಸಂಗಮನಾಥನೇ ಶಿವನಾಗಿದ್ದಾನೆ.

567

ಅವಲಕ್ಷಣ ನಾಯನುಡಿಯ ನಾಲಿಗೆಯ
ಸಡಗರಡೊವಿಗೆ ಮೃತ್ಯುವಿನ ನುಡಿಯೊಳಗಾಯಿತ್ತು.
ಬೇಡವೋ. ಪರವಾದಿಗಳುಹದಿರು.
ಬೇಡವೋ, ದೂಷಕ ಬಗುಳದಿರು !
ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೇ ?
ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ

ನಮ್ಮ ಕೂಡಲಸಂಗನ ಶರಣರನವರಿವರೆಂದಡೆ
ಕುಂಭಿಪಾತಕ ನಾಯಕನರಕ ತಪ್ಪದು ಕಾಣಾ.

ಕಣ್ಣು ಕಿವಿ ಮೂಗು ಚರ್ಮ ಇವು ನಾಲ್ಕು ಜ್ಞಾನೇಂದ್ರಿಯಗಳು ಮಾತನಾಡುವುದಿಲ್ಲ. ನೋಡಿ, ಕೇಳಿ, ಪರಿಮಳ ಮೂಸಿಸಿ, ಸ್ಪರ್ಶಿಸಿ ಆನಂದಪಡುತ್ತವೆ. ಇವು ಶರಣ ಜೀವನವನ್ನು ತನುವಿನಲ್ಲಿಯೇ ನಡೆಸುತ್ತವೆ. ಕಣ್ಣು ನೋಡಿ ಆನಂದ ಪಡುತ್ತದೆಯೇ ಹೊರತು ಎಂದು ಮಾತನಾಡಲು ಹೋಗಿಲ್ಲ. ಕಣ್ಣು ಒಳ್ಳೆಯದು ಕೆಟ್ಟದು ಎಂದು ಹೆಸರಿಸಿ ನುಡಿಯುವ ಗೋಜಿಗೆ ಎಂದೂ ಹೋಗಿಲ್ಲ. ಎರಡನ್ನೂ ಕಣ್ಣಿನಿಂದಲೇ ಸ್ವೀಕರಿಸುವ ಶರಣಗುಣ ಕಣ್ಣಿಗಿದೆ. ಆದರೆ ನಾಲಿಗೆ ಕಣ್ಣಿನ ಉಸಾ ಬರಿಯನ್ನು ವಹಿಸಿಕೊಂಡು ನಾಯಿಯಂತೆ ಬೊಗಳಿ ಸಡಗರದ ತನುವಿಗೆ ಅದರ ತಲೆಗೆ ಮೃತ್ಯುವನ್ನು ತಂದೊಡ್ಡುತ್ತದೆ.

ನೋಡಿದ ಕಣ್ಣು ನುಡಿಯಲಿ ಎಂದು ನಾಲಿಗೆ ಎಂದೂ ಸುಮ್ಮನಿರುವುದಿಲ್ಲ. ತನಗೆ ನೋಡಲು ಕಣ್ಣುಗಳು ಇಲ್ಲದಿದ್ದರೂ ನಾನೇ ನೋಡಿದೆ ಎಂದು ನಾಲಿಗೆ ಸುಳ್ಳು ಬೊಗಳುತ್ತದೆ. ಇದರಿಂದ ಸಡಗರದ ಬುರುಡೆ ಮೃತ್ಯುವಿಗೆ ಒಳಗಾಗುತ್ತದೆ.

ಕಿವಿ ಚರ್ಮ ಮೂಗು ಕೂಡಾ ಮಾತನಾಡುವುದಿಲ್ಲ.ಕೇಳಿ ಕಿವಿ ಆನಂದ ಪಟ್ಟರೆ, ಸ್ಪರ್ಶಿಸಿ ಚರ್ಮ, ಮೂಸಿಸಿ ಮೂಗು ಆನಂದಪಡುತ್ತದೆ. ಆದರೆ ನಾಲಿಗೆ ನಾನು ಕೇಳಿದೆನೆಂದು, ನಾನು ಮುಟ್ಟಿದೆನೆಂದು, ನಾನು ಸ್ಪರ್ಶಿಸಿದೆನೆಂದು ಬೊಗಳುತ್ತದೆ. ನಾಲಿಗೆಗೆ ಕಿವಿಗಳಿಲ್ಲ, ಮೂಗು ಇಲ್ಲ, ಸ್ಪರ್ಶಿಸುವ ಚರ್ಮ ಗುಣವೂ ಇಲ್ಲ.ಆದರೂ ಈ ಮೂರೂ ಕೆಲಸಗಳನ್ನು ತಾನು ಮಾಡಿದೆನೆಂದು ಹೇಳುವ ಮೂಲಕ ಸಡಗರದ ಡೋವಿಗೆಗೆ ಮೃತ್ಯುವನ್ನೊಡ್ಡುತ್ತದೆ.

ಏನು ನೋಡಿದರೂ ಕಣ್ಣು ನೋಡುತ್ತದೆ; ಏನು ಕೇಳಿದರೂ ಕಿವಿ ಕೇಳುತ್ತದೆ; ಏನು ಮೂಸಿಸಿದರೂ ಮೂಗು ಮೂಸಿಸುತ್ತದೆ. ಅವಲಕ್ಷಣದ ನಾಯನುಡಿಯ ನಾಲಿಗೆಯೇ ಪರರ ಚಿಂತೆ ನಿನಗೇಕೆ ? ಬೇಡವೋ ದೂಷಕ ಬಗಳದಿರು! ಭೂಮಿಯ ಮೇಲೆ ಕಾಣುವವರೆಲ್ಲರೂ ಕೂಡಲಸಂಗನ ಶರಣರು. ಆತನ ಪಡಿಯಚ್ಚು! ಅರಿವಿನ ಲಾಂಛನ ಹೊತ್ತವರು. ಅವರನ್ನು ಅವರಿವರೆಂದು ಹೆಸರಿಸಿದೊಡೆ ಕುಂಭೀಪಾತಕ ನಾಯಕನರಕ ತಪ್ಪದು ನಿನಗೆ. ಅರಸರ ಸುದ್ದಿ ನಿನಗೇಕೆಲೆ ನಾಲಿಗೆಯೇ ಅವರಂತರಂಗವ ಕೂಡಲಸಂಗಯ್ಯನೇ ಬಲ್ಲ. ಅವಲಕ್ಷಣವ ನುಡಿಯದಿರು ಎಲೆ ನಾಲಿಗೆಯೇ.

568

ವಿಷ್ಣುವ ಪೂಜಿಸಿ ಮುಡುಹ ನುಡಿಸಿಕೊಂಬುದ ಕಂಡೆ,
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,
ಮೈಲಾರನ ಪೂಜಿಸಿ ನಾಯಾಗಿ ಬಗಳುವುದ ಕಂಡೆ,
ನಮ್ಮ ಕೂಡಲಸಂಗನ ಶರಣರ ಪೂಜಿಸಿ
ದೇವಾ ಭಕ್ತರೆನಿಸಿಕೊಂಬುದ ಕಂಡೆ.

ಕ್ರಿಸ್ತ,ಬುದ್ಧ, ಮಹಾವೀರ, ದಾಸರ ಅನುಯಾಯಿಯಾಗಲು ಬರುತ್ತದೆ. ಅದು ಸರಳ ಕೂಡಾ. ಜ್ಞಾನಿಯಾಗುವುದು ಜಟಿಲ. ಮಹಾವೀರನನ್ನು ಪೂಜಿಸಿ ಬತ್ತಲೆಯಾಗುತ್ತಾರೆ.

ಮಹಾವೀರನಂತೆ ಅರಿಷಡ್ವರ್ಗ ಗಳನ್ನು ಜಯಿಸಲು ಸಾಧ್ಯವಾಗುವುದಿಲ್ಲ. ದಾರ್ಶನಿಕನರ ವೇಷ ಹಾಕಿ ಅವರ ಹಿಂಬಾಲಕರಾಗಬಹುದು ಆದರೆ ಆ ವೇಷ ಅವರಿಗೆ ಮಾಡುವ ದ್ರೋಹ. ಶರಣ ನಾಗಲು ಬರುವುದಿಲ್ಲ. ಸ್ವತಃ ಶರಣನಾದವನು ತನ್ನ ಜ್ಞಾನಕ್ಕೆ ತಾನೇ ಶರಣು ಹೋಗಿ ಆ ಜ್ಞಾನ ಹೇಳಿದಂತೆ ಮನ ಕೇಳಬೇಕು. ಸರ್ವಾಂಗದಲ್ಲಿ ಸಂಗಮವಾದ ಸಂಗಮನಾಥನಿಗೆ ಶರಣು ಹೋಗುವುದು ಸುಲಭದ ಮಾತಲ್ಲ.

ಮನವೆಂಬ ತಾನು ಭಕ್ತನಾಗಿ ; ಆ ಭಕ್ತ ಅಂಗದಲ್ಲಿಯೇ ಸಂಗಮವಾದ ಜಂಗಮನಿಗೆ ಶರಣು ಹೋಗುವುದು. ಆ ಜಂಗಮನನ್ನು ಪೂಜಿಸಿ ಭಕ್ತನೆನ್ನಿಸಿಕೊಳ್ಳುವುದು ತನಗೇ ಅರಿವಾಗಬೇಕು. ಇದು ಅನುಕರಣೆ ಅಲ್ಲ. ಸ್ವಪ್ರೇರಣೆಯಿಂದ ಸಾಧ್ಯ !

569

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಗೌತಮ ಮುನಿಗೆ ಗೋವಧೆಯಾಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿತಲೆಯಾಯಿತ್ತು.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುರಿಯಾದ.
ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೇವಾ ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು.

ಒಂದು ತನು ಅರಿವಿನಿಂದ ಸಶಕ್ತನಾಗಲು ಮತ್ತೊಂದು ಸಶಕ್ತ ತನುವಿನ ಅವಶ್ಯ ಕತೆಯಿಲ್ಲ. ಹಾಗೆ ಮತ್ತೊಂದು ತನುವಿನ ಸಹಾಯ ಪಡೆಯಲು ಹೋದ ಗೌತಮ ಮುನಿ, ಬಲಿ ಚಕ್ರವರ್ತಿ, ಕರ್ಣನ, ದಕ್ಷ, ಪರಶುರಾಮ, ನಾಗಾರ್ಜುನನ ಉದಾಹರಣೆಯನ್ನು ಅಣ್ಣನವರು ಈ ವಚನದಲ್ಲಿ ಕೊಟ್ಟಿದ್ದಾರೆ.

ಜ್ಞಾನ ಒಂದು ತನುವಿಗೆ ಮತ್ತೊಂದು ತನುವಿನಿಂದ ಎರವಲು ಪಡೆಯಲು ಬರುವುದಿಲ್ಲ. ಹಾಗೆ ಕೊಡಲು ತೆಗೆದುಕೊಳ್ಳಲು ಸಾಧ್ಯವಿಲ್ಲ. ಜ್ಞಾನಿ ತನು, ಜ್ಞಾನ ಬಯಸಿದ ತನುವಿಗೆ ಜ್ಞಾನ ತನುವಿನಲ್ಲಿ ಹೇಗಿದೆ ಎಂದು ಸೂಚಿಸಬಹುದೇ ವಿನಹ ಮತ್ತೇನೂ ಮಾಡಲು ಬರುವುದಿಲ್ಲ.

ಜ್ಞಾನಿ ತನುವಿಗೆ ಅನುಯಾಯಿಯಾಗಿ ವ್ಯವಹಾರ ಮಾಡುವುದು ನಡೆದುಕೊಂಡು ಬಂದಿದೆ. ಹಾಗೆ ಅನುಯಾಯಿಯಾಗುವುದು ತನಗೆ ತಾನು ಮೋಸ ಮಾಡಿಕೊಳ್ಳುವ ಸೂಕ್ಷ್ಮ

ಸುಖದ ಭ್ರಮಾಧೀನ ವ್ಯವಹಾರವೇ ಹೊರತು ಮತ್ತೇನೂ ಅಲ್ಲ. ಜ್ಞಾನಿ ಯಾವ ಅನುಯಾಯಿಯನ್ನು ಸೇರುವುದಿಲ್ಲ. ತನಗೆ ಅನುಯಾಯಿಯ ಅವಶ್ಯಕತೆ ಇಲ್ಲ. ತನಗೆ ತಾನೇ ಅಭ್ಯುದಯ ಹೊಂದುವನು. ತನ್ನ ತನುವಿನಲ್ಲಿಯೇ ಸ್ವಯಂ ಶಿಕ್ಷಕನನ್ನು ಕಂಡುಕೊಂಡು ಆ ಶಿಕ್ಷಕನೇ ತಾನಾಗುವುದು. ಇದು ಕಾಯವನ್ನೇ ಕೈಲಾಸವಾಗಿಸಿ ಕೊಂಡ ಕಾಯಕದ ಶ್ರಮ ! ಶರಣರ ಶ್ರಮ.

570

ಆದಿ ಪುರಾಣ ಅಸುರರಿಗೆ ಮಾರಿ,
ವೇದ ಪುರಾಣ ಹೋತಿಂಗೆ ಮಾರಿ.
ರಾಮ ಪುರಾಣ ರಕ್ಕಸರಿಗೆ ಮಾರಿ,
ಭಾರತ ಪುರಾಣ ಗೋತ್ರಕ್ಕೆ ಮಾರಿ,
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ.
ಕೂಡಲಸಂಗಮದೇವಾ.

ಸಕಲ ಪುರಾಣಗಳು ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಿಂದ ರಚಿಸಲ್ಪಟ್ಟವು. ಅಂಗ ರಚಿಸಿದರೆ ಪುರಾಣವಾಯಿತು. ಅಂಗ ಕೇಳಿದರೆ ಪುರಾಣವಾಯಿತು. ರಚಿಸುವ ಕೇಳುವ ಶಕ್ತಿಗಳಲ್ಲಿ ಭಿನ್ನತೆಯಿಲ್ಲ. ಎರಡೂ ಸರಿಸಮಾನ ಅಂಗಗಳು. ಆದರೂ ಸಂಗಮನಾಥನೆಂಬ ಅರಿವಿನ ತಂದೆ ವಾಸ ಮಾಡಿದ ಅಂಗವೆಂದು ಮನವೆಂಬ ಮಂಗ ಮರೆತುದರಿಂದ ಪುರಾಣ ಮಂಗಕ್ಕೆ ಶ್ರೇಷ್ಠ ವಾಯಿತು. ರಚಿಸಲ್ಪಟ್ಟ ಅಂಗವನ್ನೇ ಮರೆತು ಅಂಗದಿಂದಲೇ ಪೂಜಿಸಲ್ಪಟ್ಟಿತು.

ಅಂಗದ ಮೀಸಲು ಶಬ್ದಗಳು ಪುರಾಣದ ಎಂಜಲಾಯಿತು. ಆ ಎಂಜಲೇ ಅಂಗಕ್ಕೆ ಮೀಸಲೆಂದರೆ ಸಂಗಯ್ಯ ಒಪ್ಪಿಕೊಳ್ಳಲಾರ. ಮನ ಸಂಗ್ರಹ ಮಾಡಿಕೊಂಡು; ಆದಿ ಪುರಾಣವನ್ನೇ ದೊಡ್ಡದು ಮಾಡಿದುದಕ್ಕಾಗಿ ಅಸುರರಿಗೆ ಮಾರಿಯಾಯಿತು. ವೇದಪುರಾಣ ಹೋತಿಂಗೆ ಮಾರಿಯಾಯಿತು. ರಾಮ ಪುರಾಣ ರಕ್ಕಸರಿಗೆ ಮಾರಿಯಾಯಿತು. ಭಾರತ ಪುರಾಣ ಗೋತ್ರಕ್ಕೆ ಮಾರಿಯಾಯಿತು. ಅರಿತರೆ ತಿಳಿಯದ್ದು ಏನೂ ಇಲ್ಲ. ಮರೆತರೆ ತನು ರಚಿಸಿದ ಕಾಗದದ ತುಣುಕುಗಳೇ ತನುವಿನ ಪ್ರಾಣಕ್ಕೆ ತುತ್ತಾಗುತ್ತದೆ. ತನುವಿನಲ್ಲಿಯೇ ತನ್ಮಯವಾದ ಅರಿವು ಮರೆತುದಕ್ಕಾಗಿ ಬಲಿ ಚಕ್ರವರ್ತಿ ಬ್ರಾಹ್ಮಣನಿಗೆ ಬಲಿಯಾದ. ರಾವಣ ರಾಮನಿಗೆ ಬಲಿಯಾದ. ದಕ್ಷ ಕೊರಳು ಕತ್ತರಿಸಿಕೊಂಡ. ತನ್ನ ಅರಿವಿನ ಪುರಾಣಕ್ಕೆ ಯಾವ ಪುರಾಣಗಳೂ ಪ್ರತಿಯಿಲ್ಲ.

571

ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು, ನೋಡಾ
ಶಾಸ್ತ್ರದ ವಚನ ಹೋತಿಂಗೆ ಮಾರಿ
ಎಂತು ನಂಬುವೆನಯ್ಯಾ ?

ನಾನು ಕೊಲ್ಲೆ, ನೇಣುಕೊಂದಿತ್ತೆಂಬ ಸೂನೆಗಾರನೇನೆಂಬೆ,
ಕೂಡಲಸಂಗಮದೇವಾ ?

ಇಡೀ ಜಗತ್ತಿಗೆ ಅಂತರಾಳದ ಅರಿವಿನ ಮಾತುಗಳೇ ಹುಸಿಯಾಗಿವೆ. ಶಾಸ್ತ್ರಗಳೇ ದಿಟವಾಗಿವೆ. ಶಾಸ್ತ್ರ ಹೋತಿಂಗೆ ಮಾರಿ ಅದನ್ನು ಎಂತು ನಂಬುವುದು ಎನ್ನುವ ಶಂಕೆ ಮನದಲ್ಲಿ ಒಂಚೂರು ಮೂಡುತ್ತಿಲ್ಲ.

ಕಟುಗ ತಾನು ಎಂದೂ ಪ್ರಾಣಿಗಳನ್ನು ಕೊಂದೇ ಇಲ್ಲ ಎಂದು ಪ್ರಮಾಣ ಮಾಡಿದಂತೆ ; ತನ್ನ ಕೈಯಲ್ಲಿದ್ದ ಕತ್ತಿ ಕೊಲ್ಲುತ್ತದೆ. ಕತ್ತಿಗೂ ನನಗೂ ಸಂಬಂಧವಿಲ್ಲವೆಂದರೆ ಕಟುಗನ ಮಾತು ನಂಬುವುದು ಹೇಗೆ ?

ತಾನು ಮಾಡಿದ ಶಾಸ್ತ್ರ, ತಾನು ಮಾಡಿದ ಖಡ್ಗ! ಕಟುಗನ ಕೈಹಿಡಿಕೆಯಿದ್ದಂತೆ. ಶಾಸ್ತ್ರ ಶಸ್ತ್ರಗಳೆರಡೂ ಬೇಕಾದಂತೆ ಬಳಸುವ ಆಯುಧಗಳು. ತನುವೇ ರಚಿಸಿದರೂ, ತನುವಿನ ಹೆಗಲೇರಿ ನರ್ತನ ಮಾಡುತ್ತಲಿದೆ.

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವರನ್ನು ಮರೆತು ಆತನ ವಾಕ್ಯವೇ ಹುಸಿಯಾಗಿ, ಆತನ ಎಂಜಲೇ ದಿಟವಾಗಿದೆ. ರಚಿಸಿದ ತನುವನ್ನು ಹಂತ-ಹಂತವಾಗಿ ಶಾಸ್ತ್ರರೂಪದಿಂದ ಸೂನೆಗಾರನ ನೇಣಾಗಿ ಕೊಲ್ಲಹತ್ತಿದೆ.

572

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ !
ವೇದವನೋದಿದವರ ಮುಂದೆ ಅಳು ಕಂಡಾ !
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ !
ನೀನತ್ತುದಕ್ಕೆ ತಕ್ಕುದ ಮಾಡುವ
ಕೂಡಲಸಂಗಮದೇವಾ.

ಮನಕ್ಕೆ ರುಚಿಯ ಸುಖ, ಪಾಂಡಿತ್ಯದ ಸುಖ, ಶ್ರೀಮಂತಿಕೆಯ ಸುಖ,ಅಧಿಕಾರದ ಸುಖ,ಪೀಠ-ಗದ್ದುಗೆಯ ಸುಖ,ಒಡೆತನದ ಸುಖಬೇಕು. ಈ ಎಲ್ಲಾ ಸುಖಗಳನ್ನು ಮನ ತನ್ನ ತನು ಹಿಡಿದು ಅನುಭವಿಸುತ್ತದೆ. ಮನ ತನುವಿನ ಈ ಸುಖಗಳಿಗಾಗಿ ಅನ್ಯ ತನುಗಳನ್ನು ಕುರಿಯಂತೆ ಬಳಸಿಕೊಳ್ಳುತ್ತದೆ.

ಕುರಿಗೆ ತಿನ್ನುವುದೆಂದರೆ ಇಷ್ಟ. ಅದು ತಿನ್ನುವುದಕ್ಕಾಗಿ ತನ್ನ ಕೊರಳಿಗೆ ಕಟ್ಟಿದ್ದ ತಳಿರನ್ನೇ ಆನಂದದಿಂದ ಬಳಸಿಕೊಳ್ಳುತ್ತದೆ. ಮಾಲೀಕ ತನ್ನನ್ನು ಕೊಂದು ತಿನ್ನುವುದಕ್ಕಾಗಿ ಕೊರಳಿಗೆ ಕಟ್ಟಿದ ತಳಿರೆಂದು ಅದು ಭಾವಿಸುವುದೇ ಇಲ್ಲ. ಹಾಗೆಯೇ ವೇದ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳನ್ನು ಓದಿ ಪಾಂಡಿತ್ಯ ಸಂಪಾದಿಸಿಕೊಂಡ ತನು ಇತರ ತನುಗಳನ್ನು ಕೊಂದು ತಿನ್ನುವುದಕ್ಕಾಗಿಯೇ ಪುಸ್ತಕಗಳನ್ನು ಬಳಸುತ್ತದೆ.

ಸಾಯುವುದಕ್ಕಾಗಿಯೇ ತಳಿರು ಕಟ್ಟಿಸಿಕೊಂಡ ಕುರಿ ಸಾಯುವ ಚಿಂತೆಯಿಲ್ಲದೆ

ಆನಂದದಿಂದ ತಳಿರು ಮೇಯುತ್ತದೆ. ಹಾಗೆಯೇ ವ್ಯರ್ಥವಾಗಿ ಸಾಯುತ್ತೇನಲ್ಲ ಎನ್ನುವ ಚಿಂತೆಯಿಲ್ಲದೆ ವೇದ, ಉಪನಿಷತ್ತು, ಭಗವದ್ಗೀತೆಗಳನ್ನು ಕೇಳುತ್ತದೆ. ಅವು ಹೇಳುವವನ ಆಯುಧಗಳೆಂದು ಕೇಳುವ ತನುಗಳಿಗೆ ಗೊತ್ತಿಲ್ಲದಂತೆ ಪರವಶವಾಗಿ ಕೇಳುತ್ತವೆ. ಪ್ರಾಣ ಕಳೆದುಕೊಳ್ಳುತ್ತವೆ.

ಕೊಂದು ತಿನ್ನುವುದು ಹೇಳುವವನ ಧರ್ಮ; ಅದು ಅವನ ವ್ಯವಹಾರ. ಹೇಳುವವನಿಗೆ ಆಹಾರವಾಗುವುದೇ ಕೇಳುಗನ ಧರ್ಮ. ಹೇಳುವಷ್ಟೇ ಸಂತೋಷ ಕೇಳುವುದರಲ್ಲಿಯೂ ಇದೆ ಎಂದು ಇಬ್ಬರಿಗೂ ತಿಳಿಯದೇ ಹೋಗುತ್ತದೆ.

ಕುರಿ ಕುರಿಯನ್ನು ತಿಂದಂತೆ ;ಕುರಿ ಕುರಿಯನ್ನು ವ್ಯವಹರಿಸಿದಂತೆ. ಕುರಿಗೋಷ್ಠಿಯಲ್ಲಿ ಕುರಿ ಉಪನ್ಯಾಸ ನೀಡಿದಂತೆ. ಹೇಳುವುದೂ ಕುರಿಯೇ, ಕೇಳುವುದು ಕುರಿಯೇ ಆಗಿದೆ.

ವೇದ ಉಪನಿಷತ್ ಭಗವದ್ಗೀತೆಗಳು ತನುವಿನಿಂದ ಹೊರ ಬಂದ ತಳಿರು ತೋರಣಗಳು ! ಅದನ್ನು ಹೊರಹಾಕಿದ ತನುಗಳೇ ಶ್ರೇಷ್ಠವೆಂದು ತಿಳಿಯದೇ ತನುಗಳ ಕೊರಳಲ್ಲಿ ಬಂಧಿಸಿಕೊಂಡು ಅವುಗಳನ್ನೇ ತನುಗಳ ಕೊರಳಿಗೆ ಹಿರಿ ಕುರಿಗಳು ಕಿರಿ ಕುರಿಗಳ ಮಾರಣ ಹೋಮ ನಡೆಸಿವೆ. ತನುವಿನಿಂದ ಹುಟ್ಟಿದ ಎಂಜಲು ತನುವಿಗೆ ಬೇಕೆ? ಒಂದುವೇಳೆ ಬೇಕಾದರೆ ತನು ತನುವಿನ ಮೀಸಲನ್ನೇ ಉಣ್ಣಬಾರದೆ ?

ಇದು ಮನದ ಕ್ರಿಯೆ ! ತನುವಿನ ಘನವನ್ನು ಅದರ ಅರಿವಿನ ಹಿರಿಮೆಯನ್ನು ಮರೆತು ಮನ ತನುವನ್ನು ಅದರ ಮನವನ್ನೇ ಹಿರಿ ಕುರಿ ಮಾಡಿದ, ಕಿರಿ ಕುರಿಯಾಗಿಸಿಕೊಂಡ ಅಜ್ಞಾನ.

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೆ ಅಳು ಕಂಡಾ! ವೇದವನೋದಿದವರ ಮುಂದೆ ಅಳು ಕಂಡಾ ! ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ! ನೀನತ್ತುದಕ್ಕೆ ತಕ್ಕುದ ಮಾಡುವ ಅಂಗದಲ್ಲಿಯೇ ಇದ್ದ ಸಂಗಮನಾಥನೆಂಬ ಕುರಿಗಾಹಿ.

573

ದಕ್ಷ ಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲಾ
ನೆರೆದು ಬಂದ ಬಾಯ ನೋಡಾ
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ
ಉಣ್ಣದೆ ಉಡದೆ ಹೊಗೆಯ ಕೈಯಲಿ ಸತ್ತ ಅಣ್ಣಗಳ ಕೇಡ ನೋಡಾ
ಕೂಡಲಸಂಗಮದೇವಾ !

ಅಜ್ಞಾನದ ಯಾಗ ಮಾಡುವಾಗ ದಕ್ಷ ಸರ್ವ ಋಷಿ ಮುನಿಗಳನ್ನು ದೇವಾನುದೇವರನ್ನು ಕರೆದು ಮಹಾಜ್ಞಾನಿ ಪರಮೇಶ್ವರನನ್ನೇ ಕರೆಯುವುದನ್ನು ಮರೆಯುತ್ತಾನೆ. ದಕ್ಷನೊಬ್ಬನೇ ಅಲ್ಲ ಈ ವ್ಯವಹಾರದಲ್ಲಿ ನಿರತರಾದ ಸರ್ವರೂ ಹೀಗೆ ಮಾಡುತ್ತಾರೆ.

ಈ ಯಾಗ ಯಾಕೆ ? ಇದರಿಂದ ಉಪಯುಕ್ತವೇನು ? ಎಂದು ಯಾರೂ ಪ್ರಶ್ನಿಸುವುದಿಲ್ಲ. ಎಲ್ಲರೂ ಅಜ್ಞಾನದ ಊಟವನು ಉಣಬಂದವರೇ ಆಗಿರುತ್ತಾರೆ. ಜ್ಞಾನದ ಊಟ ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತು ಹೋಗುತ್ತಾರೆ.

ಯಾಗ ಮಾಡುವವನ ಉದ್ದೇಶ, ಯಾಗ ಮಾಡಿಸುವವರ ಉದ್ದೇಶ ಯಾಗಕ್ಕೆ ಬಂದವರ ಉದ್ದೇಶ ಒಂದೇ. ಅದು ತಮಗರಿಯದೇ ನಡೆಯುವ ಅಜ್ಞಾನದ ವ್ಯವಹಾರ, ಯಾಗ ಮಾಡಿಸಿದ

ದಕ್ಷನಿಗೆ ಕುರಿತಲೆ,ಉಣ ಬಂದವರು ಹೊಗೆಯ ಕೈಯಲಿ ಸತ್ತರು.

574

ಏನಯ್ಯಾ ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ !
ಕೂಡಲಸಂಗಮದೇವಯ್ಯಾ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೆ ದೃಷ್ಟ.

ವೇದವ ನೋದಿದವ ಬ್ರಾಹ್ಮಣನಾದರೆ, ಓದುವ ತನುವಿಗೆ ಜನ್ಮ ನೀಡಿದ ತನು ಶೂದ್ರ ! ಇದೆಂತಯ್ಯಾ ಶಾಸ್ತ್ರಕ್ಕೊಂದು ದಾರಿ , ಅದನ್ನು ಓದಿದ ತನುವಿಗೊಂದು ದಾರಿ, ಆ ತನುವಿಗೆ ಜನ್ಮವಿತ್ತ ಮಾತೆಯ ತನುವಿಗೊಂದು ದಾರಿಯೇ ? ಓದಿದವ ಬ್ರಾಹ್ಮಣನಾದರೆ ಓದಲು ಜನ್ಮವಿತ್ತ ಮಾತೆ ಶೂದ್ರಳೆ ?

ಶೂದ್ರಳ ಬಸುರಲ್ಲಿ ಬ್ರಾಹ್ಮಣ ಹುಟ್ಟಿ ಮಾಂಸದ ಬಾಯಿಂದ ಹುಸಿಯ ನುಡಿಯುವ ತನು ಗೋಮಾಂಸ ತಿಂದರೆ ಮಾತೆಯ ಮಾಂಸವೇ ತಿಂದಂತಾಗಲಿಲ್ಲವೇ ?

ಸ್ತ್ರೀಯಳಿಗೊಂದು ದಾರಿ, ಪುರುಷನಿಗೊಂದು ದಾರಿಯೇ ? ತನು ಸ್ತ್ರೀಯಾದರೇನು ಪುರುಷನಾದರೇನು ಚರ್ಮ ಯಾವ ಜಾತಿಯದು ? ತನುವಿನ ಕಣ್ಣು ಕಿವಿ ಮೂಗು ನಾಲಿಗೆ ಜ್ಞಾನೇಂದ್ರಿಯಗಳಿಗೆ ಜಾತಿ ಇದೆಯೇ ? ಅದು ಬೇರೆ ಬೇರೆ ಕಾಣುತ್ತದೆಯೇ ? ಬೇರೆ ಬೇರೆ ಕೇಳುತ್ತದೆಯೇ?

ಬೇರೆ ಬೇರೆ ಸ್ಪರ್ಶಿಸುತ್ತದೆಯೇ ? ಬೇರೆ ಬೇರೆ ಪರಿಮಳ ಆಸ್ವಾದಿಸುತ್ತದೆಯೇ ? ನಾಲಿಗೆಯ ರುಚಿಯಲ್ಲಿ ಹೆಣ್ಣು ಗಂಡೆಂಬ ವ್ಯತ್ಯಾಸವಿದೆಯೇ ? ಆದರೂ ಅಜ್ಞಾನ ಪ್ರತಿ ತನುವಿನಲ್ಲಿ ತಾನು ಹೆಣ್ಣೆಂದು ಗಂಡೆಂದು ಮನೆ ಮಾಡಿಕೊಂಡಿದೆ. ದೇಶ ಭಾಷೆ ಗಡಿ ಬೇರೆಯಾದರೇನು ? ತನುವಿನ ಜ್ಞಾನ ಭಾಷೆ ಒಂದೇ ಅಲ್ಲವೇ ? ತನುವಿನ ಜ್ಞಾನ ತನುವಿಗೆ ಬಳಕೆಯಾಗದಿದ್ದರೆ ತನುವಿಗೆ ತನುವೇ ಬ್ರಾಹ್ಮಣ; ತನುವಿಗೆ ತನುವೇ ಶೂದ್ರ. ಹೀಗೆಂದು ಹೇಳಿಕೊಳ್ಳುವ ಈ ತನುಗಳೆರಡೂ ಶೂದ್ರ ತನುಗಳೇ ಆಗಿವೆ. ಜ್ಞಾನ ತನುವಿನಲ್ಲಿ ತನ್ಮಯವಾಗಿದೆ. ಬಚ್ಚಿಟ್ಟುಕೊಂಡ ಬ್ರಹ್ಮ ಬಳಕೆಯಾಗದೆ ಹಾಗೇ ಉಳಿದಿದೆ.

575

ಹೊಲೆಯೊಳಗೆ ಹುಟ್ಟಿ ಕುಲವನರಸುವೆ
ಎಲವೋ, ಮಾತಂಗಿಯ ಮಗ ನೀನು !
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ,

ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು
ಕರ್ಮವಿರಹಿತರು , ಶರಣಸನ್ನಿಹಿತರು, ಅನುಪಮ ಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೊ !

ಯಾವ ತನುವಾದರೇನು ಪಿಂಡದ ನೆಲೆಯಿಂದಲೇ ಬಂದಿದೆ. ಪ್ರತಿ ತನುವಿನ ಜನನ ಗರ್ಭದಿಂದಲೇ ಆಗಿದೆ. ಬಂದ ಗರ್ಭವನ್ನೇ ಮರೆತು ಕುಲವನು ಹುಡುಕುತ್ತದೆ. ಹೆಣ್ಣಾದರೇನು ಗಂಡಾದರೇನು ತನುವಿನ ಗರ್ಭದಿಂದಲೇ ಅದರ ಜನನ. ಹೆಣ್ಣಾದರೇನು ಗಂಡಾದರೇನು ಚರ್ಮವೇ ತನುವಿನ ಕವಚ. ಹೆಣ್ಣಾದರೇನು ಗಂಡಾದರೇನು ಕಣ್ಣು ಕಿವಿ ಮೂಗು ನಾಲಿಗೆ ಹಾಗೂ ಬಾಯನ್ನು ಹೊಂದಿದೆ. ತನು ಉಸುರುವ ಧ್ವನಿ ಒಂದೇ ಆದರೂ ಕುಲವನರಸುವ ಅಜ್ಞಾನ ಅದಕ್ಕೆ ಸುತ್ತಿಕೊಂಡಿದೆ. ಈ ಪಾಪದಿಂದ ಮುಕ್ತನಾಗಬೇಕೆಂಬ ಬಯಕೆಯೇ ಅದಕ್ಕಿಲ್ಲದೆ ಹೊಲೆಯೊಳಗೆ ಹುಟ್ಟಿ ಹೊಲೆಯನ್ನೇ ಹುಡುಕುವ ಅವಿವೇಕಿ ವಿದ್ಯೆಯಲ್ಲಿ ತನು ತೊಡಗಿರುವುದು ಒಂದು ವ್ಯಸನದ ಕೆಲಸವೆಂದು ಅದೇ ತಿಳಿದುಕೊಳ್ಳುತ್ತಿಲ್ಲ.

ಹೊಲೆಯೆಂಬ ಚರ್ಮದ ?ಚೀಲದೊಳಗೆ ಹುಟ್ಟಿ ಕುಲವನರಸುವೆ ಎಲವೋ ಮಾತಂಗಿಯ ಮಗ ನೀನು ! ಸತ್ತುದನೆಳೆವನೆತ್ತಣ ಹೊಲೆಯ ಹೊತ್ತು ತಂದು ನೀವು ಕೊಲುವಿರಿ. ಚರ್ಮದ ಗರ್ಭದಲ್ಲಿ ಹುಟ್ಟಿದ ಶಾಸ್ತ್ರ ಚರ್ಮಕ್ಕೆ ಮುಳುವಾಗಿ , ಚರ್ಮದ ತನುವಿಗೆ ಮಾರಿಯಾಯಿತ್ತಲ್ಲ. ತನುವಿನಿಂದ ಹುಟ್ಟಿದ ವೇದ ತನುವಿಗೆ ಕಂಟಕವಾಗಿ ತನುವಿಗೆ ತಿಳಿಯದೇ ಹೋಯಿತ್ತಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನು ಕರ್ಮ ವಿರಹಿತನು. ಶರಣು ಹೋದ ಮನಕ್ಕೆ ಸನ್ನಿಹಿತನು. ಅನುಪಮ ಚರಿತನು, ಆತನಿಗೆ ತೋರಲು ಪ್ರತಿಯಿಲ್ಲವೊ !

576

ಇಟ್ಟಿಯ ಹಣ್ಣನರಿ ತಿಂದು ಸೃಷ್ಮಿ ತಿರುಗಿತ್ತೆಂಬಂತೆ
ಮಟ್ಟಿಯ ನಿಟ್ಟ ದ್ವಿಜರ ಮಾತದೇಕೆ ?
ಹಗಲು ಗಾಣದ ಗೂಗೆ ಇರುಳಾಯಿತೆಂದಂಡೆ,
ಜಗಕ್ಕೆ ಇರುಳಪ್ಪುದೆ ಮರುಳೆ ?
ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು,
ಕೂಡಲಸಂಗಮದೇವಾ .

ಇಟ್ಟಿಯ ಹಣ್ಣ ತಿಂದ ನರಿಯನ್ನು , ಹಗಲಿನ ವೈರಿ ಗೂಗೆಯನ್ನು, ಹೋಮದ ನೇಮಕ್ಕಾಗಿ ಹೋತ ಕೊಲ್ಲುವ ತನುವನ್ನು ಅಣ್ಣನವರು ಈ ವಚನದಲ್ಲಿ ಉದಾಹರಿಸಿದ್ದಾರೆ.

ಇದು ನೇರವಾಗಿ ಜಾತಿ ಮತ್ತು ತನುವನ್ನು ಗುರಿಯಾಗಿಟ್ಟುಕೊಂಡು ಹೇಳಿದ ಮಾತಲ್ಲ. ಮನ ತನುವನ್ನು ಹೇಗೆ ದುರ್ಬಳಕೆ ಮಾಡಿಕೊಂಡು ಸಂಕಟದಲ್ಲಿ ಒಡ್ಡುತ್ತದೆ ; ಅದನ್ನು ಸರಿಪಡಿಸುವ ಬಗೆ ಹೇಗೆ ? ಎನ್ನುವ ಚಿಂತನೆಯಿಂದ ಕೂಡಿದೆ.

ಮನಸ್ಸು ಹಲ್ಲಿಯಿದ್ದಂತೆ. ಅದು ಯಾವ ಬಣ್ಣದ ಗೋಡೆಗೆ ಆನಿಕೊಳ್ಳುತ್ತದೆಯೋ ಆ ಬಣ್ಣವನ್ನು ತನ್ನ ಮೈಗೆ ಬದಲಾಯಿಸಿಕೊಳ್ಳುತ್ತದೆ. ಹಾಗೆಯೇ ತನು ಯಾವ ಸಂಪ್ರದಾಯದಲ್ಲಿ ಜನ್ಮ ತಾಳುತ್ತದೋ ಮನ ಆ ಸಂಪ್ರದಾಯದ ವೇಷವನ್ನು ತನುವಿಗೆ ಹಾಕುತ್ತದೆ. ವೇಷಕ್ಕೂ ಮಾತಿಗೂ ನಡತೆಗೂ ಸಂಬಂಧವಿಲ್ಲದಂತೆ ತನುವನ್ನು ತನ್ನ ಮೂಗಿನ ನೇರಕ್ಕೆ ಬಂಧಿಸುತ್ತದೆ.

ಮನ ಹಾದರದಿಂದ ತನುವಿನೊಂದಿಗೆ ಸುಖಿಸುತ್ತದೆ. ಆದರೆ ಸಂಪ್ರದಾಯದ ಕಟು ನುಡಿಗಳನ್ನು ಹೊರ ಹಾಕುತ್ತದೆ. ಮಾತಿನಲ್ಲಿ ಸತ್ಯ, ಕೃತಿಯಲ್ಲಿ ಹಾದರ ಮನದ ವೃತ್ತಿಯಾಗುತ್ತದೆ. ಮನಕ್ಕೆ ಮಾತು ಬೇಕು. ಆಡಿದ ಮಾತಿನಂತೆ ನುಡಿಯುವುದು ಮಾತ್ರ ಬೇಡ. ನಡತೆಯಲ್ಲಿ ಮನದ ಸಾಧನೆ ಶೂನ್ಯ. ಮಾತಿನಲ್ಲಿ ಮನ ಬಲು ಜಾಣ. ಹಗಲುಗಾಣದ ಗೂಗೆ ಇರುಳಾಯಿತೆಂದಂತೆ, ರುಚಿಗಾಗಿ ಹೋಮದ ನೇಮದಲ್ಲಿ ಹೋತನ ಕೊಂದು ತಿಂದಂತೆ.

ಮನ ಒಂದೇ. ತನುವಿನಲ್ಲಿದ್ದು ಹೋಮ ಮಾಡಿ ಬ್ರಾಹ್ಮಣನ ಪಾತ್ರ ಹಾಕುತ್ತದೆ. ಹೋಮದಲ್ಲಿ ಹೋತನ ಕೊಂದು ತಿಂದು ಶೂದ್ರನ ಪಾತ್ರ ಧರಿಸುತ್ತದೆ. ನಾಮವೇ ಇಲ್ಲದ ಈ ಅನಾಮಿಕ ಮನದೊಂದಿಗೆ ವಾದಿಸುವುದೇಕೆ ? ಕೂಡಲ ಸಂಗನ ಶರಣರ ಸಂಗ ಮಾಡಿ ವಾದಿಸಿದರೆ ಮನದ ವ್ಯಾಧಿ ಹರಿಯುವುದು. ಮನ ಘನಮನವಾಗಿ ಅಂಗದಲ್ಲಿಯೇ ಸಂಗಮವಾಗಿ ಸಂಗಮ ನಾಥವಾಗುವುದು.

577

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ ;
ಬಿಟ್ಟ ಮಂಡೆವೆರಸಿ ಬಾಯ ಮಿಡಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲಸಂಗನನರಿಯದೆ ಮೊರೆಯಿಡುವಂತೆ !

ಹಕ್ಕಿ ನೀರ ತಡಿಯಲ್ಲಿರುವುದು ತನ್ನ ಆಹಾರಕ್ಕಾಗಿ. ಮನ ತನುವನ್ನು ತನ್ನ ವ್ಯವಹಾರಕ್ಕಾಗಿ ನೀರಲ್ಲಿ ಮುಳುಗುವಂತೆ ಮಾಡುತ್ತದೆ. ಕಣ್ಣು ಮುಚ್ಚಿ ಬಾಯಿ ವಟಗುಟ್ಟುತ್ತಾ ಕೆರೆಯ ನೀರು ಬೊಗಸೆಯಲ್ಲಿ ಹಿಡಿದು ಮೇಲೆ ತೋರಿಸಿ ಕೆರೆಯಲ್ಲಿ ಬಿಡುವ ಕೆಲಸವಾದರೂ ಯಾತಕ್ಕೆ ಎಂದು ಮತ್ತೊಬ್ಬರು ಪ್ರಶ್ನಿಸುವುದಲ್ಲ. ಈ ಪ್ರಶ್ನೆಯನ್ನು ಕಾಯಕದಲ್ಲಿದ್ದ ತಾನೇ ಹಾಕಿಕೊಳ್ಳಬೇಕು. ತನಗೆ ತಾನೇ ಮೋಸ ಮಾಡಿಕೊಳ್ಳುವುದನ್ನು ಈ ವ್ಯವಹಾರದಿಂದ ಇತರರಿಗೆ ಮೋಸ ಮಾಡುವುದನ್ನು ನಿಲ್ಲಿಸಿಕೊಳ್ಳಬೇಕು. ದರ್ಬೆ ಹುಲ್ಲನ್ನು ಹಿಡಿದು ನೀರಲ್ಲಿ ಅದ್ದಿ ಚಿಮುಕಿಸುವುದರಿಂದ ಆಗುವ ಲಾಭವೇನು ? ಒಣಹುಲ್ಲು ನೀರನ್ನು ಅರಿಯದು, ನೀರು ಹುಲ್ಲನರಿಯದು. ಹುಲ್ಲು ತನ್ನನರಿಯದು. ಆದರೂ ಈ ವ್ಯವಹಾರ ದೇಶಾದ್ಯಂತ ನಡೆದಿದೆ. ಅರಿವಿನಿಂದ ಮನ ಈ ವೃತ್ತಿಯನ್ನು ಅರಿಯದಿದ್ದರೆ ಸಂಪ್ರದಾಯವೇ ತನುವನ್ನು ಮಣ್ಣಾಗಿಸುತ್ತದೆ.

ಜಲ ಒಂದೇ ಆದರೂ ಹರಿಯುವ ಆ ಜಲವನ್ನು ಗಂಗೆ ಯಮುನೆ ಗೋದಾವರಿ ಸರಸ್ವತಿ ಸಿಂಧು ಎಂದು ಕರೆಯುತ್ತೇವೆ. ಈ ಜಲ ಬಿಂದುವೇ ಗರ್ಭ ಸೇರಿ ರಕ್ತ ಮೂಳೆ ಮಾಂಸ

ಮಜ್ಜೆ ಮೇದಸ್ಸು ಆಗಿ ಚರ್ಮದ ಕವವಚವಾಗಿ ಸುಂದರವಾದ ತನುವಾಗಿದೆ. ಈ ಸುಂದರವಾದ ತನುವೇ ಗಂಗೆ ಯಮುನೆ ಗೋದಾವರಿ ಸರಸ್ವತಿ ಸಿಂಧುವಲ್ಲವೆ? ಈ ತನುವಿನಲ್ಲಿ ಜಲವು ಬಂಧಿಯಾಗಿದೆ. ಈ ಜೀವ ಜಲಕ್ಕಿಂತಲೂ ಮಿಗಿಲಾದ ಜಲವಿದೆಯೆ ? ಈ ದೃಷ್ಟಿಯಿಂದಲೇ ಜಲವನ್ನು ಪೂಜಿಸುವ ವಿಧಾನ ಬಂದಿರಬಹುದು. ತನುವೆಂಬ ಈ ಜೀವ ಜಲವನ್ನು ಪೂಜಿಸುವುದು ಗೌರವಿಸುವುದು ಆದರಿಸುವುದು ಯೋಗ್ಯವಲ್ಲವೆ ಎಂದು ಮನ ಯೋಚಿಸಬೇಕಾಗಿದೆ.

578

ಮಾಣದೆ ಅರಳೆಯ ತಿಟ್ಟನೆ ತಿರುಗುವ ಗಾಣದೆತ್ತಿನಂತೆ
ಪೂರ್ವಲಿಖಿತ ಮುಂದುಗಾಣಲೀಯದು.
ನೀವೆಲ್ಲ ವಾಯಕ್ಕೆ ಕೆಡಬೇಡ ಮನುಜಾ.
ಮಾಣದೆ ಪೂಜಿಸು ಲಿಂಗವ.
ಹೆರರ ಗೋಣ ಕೊಯ್ದೆನೆಂದು ಮಂತ್ರವನೋದುವ
ನೇಣುಗಾರರ ಮೆಚ್ಚ ಕೂಡಲಸಂಗಮದೇವ !

ಅರಿವಾಗದಿದ್ದರೆ ತನುವಿಗೆ ಉಳಿಗಾಲವಿಲ್ಲ. ತನ್ನ ತೊಂದರೆಯನ್ನು ನೀಗಿಸಿಕೊಳ್ಳಲು ಕಾಯಕದಲ್ಲಿ ನಿರತವಾಗಬೇಕೆ ವಿನಹ ಅರಳಿಯ ಮರವನ್ನು ಗಾಣದೆತ್ತಿನಂತೆ ಸುತ್ತಿದರೆ ತನುವಿನ ತೊಂದರೆ ನಿವಾರಣೆಯಾಗುವುದೆ? ಬೇರಿಲ್ಲದ ಜ್ಞಾನದ ಮರ ಬೇರಿದ್ದ ಮರಕ್ಕೆ ಸುತ್ತುವುದೆಂದರೇನು? ಇದು ಹಾಸ್ಯಾಸ್ಪದವಲ್ಲವೆ?

ಮಂತ್ರವನೋದಿ ಉಪಜೀವನ ಮಾಡುವುದು ತನುವು ಇತರ ತನುವಿನ ಗೋಣು ಕೊಯ್ದಂತೆ ಎನ್ನುವುದು ತನಗರಿವಿಲ್ಲವೆ? ತನುವಿನ ಹಸಿವಿನ ಬಾಧೆ ನಿವಾರಿಸಿಕೊಳ್ಳುವುದಕ್ಕಾಗಿ ಮಂತ್ರ ನೆರವಾಯಿತು. ಆ ಮಂತ್ರ ಇತರ ತನುವಿಗೆ ನೆರವಾಗುವುದಿಲ್ಲವೆಂದು ಗೊತ್ತಿದ್ದರೂ ಮಂತ್ರದಿಂದ ಮೋಸ ಮಾಡುವುದು ನಿಂತಿಲ್ಲ. ಮನ ತನುವಿಗೆ ಮಾಡುವ ಮೋಸ ತನುವಿನ ಅರಿವಿಗೆ ನಿಲುಕದ ಮಾತೇನಲ್ಲ. ತನುವಿನ ಅರಿವಿನಲ್ಲಿ ಮನ ಮಾಡುವ ಮೋಸವೆಲ್ಲ ಸಂಗ್ರಹವಾಗಿ ಮೋಸ ಮಾಡುವ ತನುವನ್ನೇ ಚುಚ್ಚಿ ಚುಚ್ಚಿ ಕೊಲ್ಲುವುದು. ಆಗ ಯಾರೂ ಸಹಾಯಕ್ಕೆ ಬರಲಾರರು.

ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಯ್ಯನೆಂಬ ಗುರು ದೇವನು ಸಕಲ ಮೋಸಗಳನ್ನೂ ಬಲ್ಲ ಜಾಣ. ಮನ ಮಾಡುವ ಮೋಸಗಳನ್ನೆಲ್ಲ ತನುವಿನಲ್ಲಿಯೇ ಸಂಗ್ರಹಿಸಿಕೊಂಡು ಮತ್ತೆ ಮತ್ತೆ ನೆನಪಿಸಿ ಚುಚ್ಚಿ ಚುಚ್ಚಿ ಕೊಲ್ಲುತ್ತಾನೆ. ಇತರ ತನುವನ್ನು ಮೋಸದಿಂದ ಕೊಲ್ಲಿದರೆ ಆ ಮೋಸ ತನ್ನ ತನುವನ್ನೇ ಕೊಲ್ಲುವುದೆಂಬ ಅರಿವು ಮನಕ್ಕೆ ಹೊಳೆದಾಗ, ಆ ಅರಿವಿನಲ್ಲಿಯೇ ಮನ ಲೀನವಾಗಿ ಅರಿವೇ ಆಗುವುದು.

579

ನೀರ ಕಂಡಲ್ಲಿ ಮುಳುಗುವರಯ್ಯಾ ,

ಮರವ ಕಂಡಲ್ಲಿ ಸುತ್ತುವರಯ್ಯಾ!
ಬತ್ತುವ ಜಲವ ಒಣಗುವ ಮರವ
ಮಚ್ಚಿದವರು ನಿಮ್ಮನೆತ್ತ ಬಲ್ಲರು,
ಕೂಡಲಸಂಗಮದೇವಾ!

ನೀರು ಕಂಡಲ್ಲಿ ಮುಳುಗುವುದು, ಮರವ ಕಂಡಲ್ಲಿ ಸುತ್ತುವುದು ಮನ ತನುವಿಗೆ ಕೊಡುವ ಅಜ್ಞಾನದ ಶಿಕ್ಷೆ. ಮನ ಮತ್ತೊಂದು ತನುವಿಗೆ ಆಜ್ಞಾಪಿಸುವುದು ಅಜ್ಞಾನದ ವ್ಯವಹಾರ. ಹಾಗೆ ಮಾಡುವುದು ಪರತನುವಿಗೆ ತನ್ನ ತನುವಿಗೆ ಮನ ಮಾಡಿಕೊಳ್ಳುವ ಮೋಸ.

ಬತ್ತುವ ಜಲವ, ಒಣಗುವ ಮರವ ಮೆಚ್ಚಿದ ಮನ, ತನುವಿನಲ್ಲಿಯೇ ಇದ್ದ ಅರಿವೆಂಬ ಗುರುದೇವನನ್ನು ಎತ್ತ ಬಲ್ಲುದು? ಮನ ಇತರ ತನುಗಳನ್ನು ನೋಡಿ ಅನುಕರುಣೆ ಮಾಡುವುದು. ತನುವಿಗಾದ ಸಂಕಟವನ್ನು ಅಜ್ಞಾನದ ಹಾದಿಯಲ್ಲಿ ಹೋಗಿ ನಿವಾರಿಸಿಕೊಳ್ಳಲು ಯತ್ನಿಸುವುದು, ತನುವಿನಲ್ಲಿಯೇ ಇದ್ದ ಅರಿವಿನತ್ತ ಪಯಣಿಸಿ ಯೋಚಿಸಿದರೆ ತನ್ನ ಹಾಗೂ ಇತರ ತನುಗಳ ಅಜ್ಞಾನ ಮನದ ಅರಿವಿಗೆ ಬರುವುದು. ಮನ ಅರಿವಿನಲ್ಲಿಯೇ ಲೀನವಾಗಿ ಘನಮನವಾಗುವುದು.

580

ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ ;
ಇರುಳು ಹಗಲಿನ ನಿದ್ರೆ ಸಾಲದೆ ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೇ ಹೇಳಾ !
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ,
ಕೂಡಲಸಂಗಮದೇವಾ ?

ಮುಕ್ತಿ ಎಂದರೆ ಕೈಲಾಸಕ್ಕೆ ಹೋಗುವುದಲ್ಲ ; ದೇವರನ್ನು ಪ್ರತ್ಯಕ್ಷ ಮಾಡಿಕೊಳ್ಳುವುದು ಅಲ್ಲ. ಕೈಲಾಸವೂ ಇಲ್ಲ ; ದೇವರೂ ಇಲ್ಲ. ಕಾಯವೇ ಕೈಲಾಸ ; ಅರಿವೇ ದೇವರು ; ಅದನ್ನು ಮನ ಒಲಿಸಿಕೊಳ್ಳುವುದೇ ಮುಕ್ತಿ.

ಕಣ್ಣಮುಚ್ಚಿ ಕನ್ನಡಿಯ ತೋರುವಂತೆ ಕೈಲಾಸ ಕಾಯದಲ್ಲಿಯೇ ಇದೆ. ಅರಿವೆಂಬ ದೇವರೂ ಅಲ್ಲಿಯೇ ವಾಸವಾಗಿದ್ದಾನೆ. ಅರಿಯುವ ಅರಿವು ಬೇಕು ಅಷ್ಟೆ.

ಇರುಳು ಹಗಲಿನ ನಿದ್ರೆ ಸಾಲದೆ :

ತನು ಇರುಳಿನಲ್ಲಿ ಮಲಗಿದಾಗ ಅದಕ್ಕೆ ಯಾವ ಹೆಸರೂ ಇಲ್ಲ. ಅದು ಶ್ರೀಮಂತನಲ್ಲ; ಬಡವನೂ ಅಲ್ಲ, ಹೆಣ್ಣು ಅಲ್ಲ; ಗಂಡೂ ಅಲ್ಲ. ಶಾಸಕ ಸಚಿವ ಅಧಿಕಾರಿಯೂ ಅಲ್ಲ. ಜವಾನ ಕಾರಕೂನನು ಅಲ್ಲ. ತನು ಇರುಳಲ್ಲಿ ನಿಶ್ಚಿಂತೆಯಿಂದ ಎಲ್ಲ ಬಾಧೆಗಳನ್ನು ಕಳೆದು ಕೊಂಡು ನಿದ್ರಿಸುತ್ತದೆ. ಎಚ್ಚರವಾದಾಗ ಇನ್ನೂ ಸ್ಫುಟವಾಗಬೇಕಿತ್ತು. ಆದರೆ ತಾನು ಗಂಡು, ಹೆಣ್ಣಾಗಿ ಅಜ್ಞಾನದಿಂದ ವರ್ತಿಸುತ್ತದೆ. ಶ್ರೀಮಂತ, ಬಡವ, ಅಧಿಕಾರದ ಗತ್ತು ತನುವಿಗೆ

ಅಮರಿಕೊಳ್ಳುತ್ತದೆ. ಪಂಡಿತ, ಶಾಸ್ತ್ರಿ, ಸ್ವಾಮಿ, ಪೀಠಾಧಿಪತಿ, ಮಠಾಧಿಪತಿಯ ಅಧಿಕಾರ ತನುವಿಗೆ ಕಾಡುತ್ತದೆ.

ಶಾಸಕ ಸಚಿವ ಅಧಿಕಾರಿಯ ಅಹಂಕಾರದಿಂದ ತನು ಮೆರೆಯುತ್ತದೆ. ಹಗಲು, ಅಹಂಕಾರ ; ರಾತ್ರಿ ನಿಶ್ಚಿಂತ ನಿದ್ರೆ. ಕಣ್ಣಮುಚ್ಚಿ ಅರಿವಿನ ಕನ್ನಡಿಯ ತನುವಿನಲ್ಲಿಯೇ ತೋರಿದರೂ ಮನಕ್ಕೆ ಅರಿವಿಲ್ಲ. ಮತ್ತೆ ಬೆರಳನೆಣಿಸಿ ಮಾಲೆಯ ಧರಿಸಿ, ವಿಭೂತಿ ನಾಮ ಹಾಕಿ, ತಿಲಕವನಿಟ್ಟುಕೊಂಡು, ಕಾವಿ ಹಾಕಿ ಮೋಸದ ವ್ಯವಹಾರದಲ್ಲಿ ಭಾಗಿಯಾಗುತ್ತದೆ. ಬಂಧನ ಮುಕ್ತಿಯ ನಾಟಕವಾಡುತ್ತದೆ. ಇರುಳಿನಲ್ಲಿ ಮುಕ್ತಿ, ಹಗಲಿನಲ್ಲಿ ಬಂಧನ, ನಾಚಿಕೆಯಿಲ್ಲದ ಈ ಅಜ್ಞಾನಿ ಮನಕ್ಕೆ ಯಾರು ಮುಕ್ತಿಯನು ದಯಪಾಲಿಸಬೇಕು. ಮನ ತನ್ನನ್ನು ತಾನೇ ಅಜ್ಞಾನದಿಂದ ಬಂಧಿಸಿಕೊಂಡಿದೆ.

581

ಬ್ರಹ್ಮಸಭೆ ನಡೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತ್ವವಡೆದು,
ತಮ್ಮ ವಚನಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು ;
ತಮ್ಮ ದೈವವ ಬಿಡುವುದಾವುದುಚಿತ ?
ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣನಿತ್ತು
ಹಡೆದನು ಶಿವಭಕ್ತಿಯಿಂದ !
ಕಷ್ಟ ಜಾತಿ ಜೀವಿಗಳಿಗೆ ಮುಟ್ಟಿ ಎಂತು ಬಂದಿತ್ತೋ !
ಮುಟ್ಟರೊಂದುವನು ಮೂವಿಧಿಬಟ್ಟರೊ !
ಹುಸಿವನೆ ಹೊಲೆಯನೆಂದು ವಚನವುಂಟು ಲೋಕದಲ್ಲಿ ;
ಹುಸಿದಜನ ಶಿರ ಹೋಯಿತ್ತಾದಿಯಲ್ಲಿ !
ಎಸವೋದೆ ಕಿರುಪಶುವನುಸರಲೀಯದೆ
ವಿಧಾನಿಸಿ ತಿಂಬ ಜನ್ಮ ಅದಾವ ಫಲವೊ !
ದಕ್ಷಯಾಗವ ಮಾಡಿ ನಿಕ್ಷೇತ್ರನೆರೆದುದ ಕಟಕಟಾ,
ಕೇಳಿಯೂ ಏಕೆ ಮಾಣರೋ ?
ಮಮ ಕರ್ತ ಕೂಡಲಸಂಗನಶರಣರು ಅಕ್ಷಯರಧಿಕರು ;
ವಿಪ್ರರು ಕೀಳು ಜಗವೆಲ್ಲರಿಯಲು !

ಬ್ರಹ್ಮಸಭೆ ನಡೆದಾಗ ಬ್ರಹ್ಮತ್ವವೇ ಮೈದಾಳಿ ವಚನದ ಮೂಲಕ ಬ್ರಹ್ಮಜ್ಞಾನಿಗಳೆನ್ನಿಸಿಕೊಳ್ಳುತ್ತಾರೆ. ಅದಕ್ಕೆ ತಮ್ಮ ದೈವವೇ ಕಾರಣವೆಂದು ಉಸುರುತ್ತಾರೆ. ಆ ದೈವವೂ ಬ್ರಹ್ಮಕ್ಕೆ ಹೋಗದೆ ವಿಧಿಯಿಲ್ಲ ಎನ್ನುವುದನ್ನೇ ಮರೆಯುತ್ತಾರೆ. ಬ್ರಹ್ಮೋಪಾಸಕರಿಗೆ ಉಪಾಸನೆಯೊಂದೇ ಕೆಲಸ. ಒಂದನೂ ಮುಟ್ಟುವುದಿಲ್ಲ, ತಟ್ಟುವುದಿಲ್ಲ. ಆದರೆ ಮುಟ್ಟದೆ ವಿಧಿಯಿಲ್ಲ. ಹುಸಿಯ ನುಡಿಯುವುದೂ ಬಿಡುವುದಿಲ್ಲ. ಹುಸಿದ ಬ್ರಹ್ಮನ ತಲೆ ಹೋಯಿತ್ತು ಎನ್ನುವುದನ್ನು ಮರೆಯುತ್ತಾರೆ. ಕಿರುಪಶುವನು ಉಸರಲೀಯದೆ ತಿಂಬ ಜನ್ಮದ ಅದಾವ ಫಲವೊ ? ಯಾಗ ಮಾಡಿದ ದಕ್ಷನಿಗೆ ಕುರಿತಲೆಯೇ ಗತಿಯಾಯಿತು ಎನ್ನುವುದನ್ನೂ ಮರೆತರೆ ಹೇಗೆ ?

ತನುವನ್ನು ಆವರಿಸಿದ ಮನ ಯಾಗ ಮಾಡಿ ಬ್ರಾಹ್ಮಣನೆನ್ನಿಸಿಕೊಳ್ಳುತ್ತದೆ. ಯಾಗಕ್ಕೆ ಕೊಯ್ದ ಕುರಿಯ ತಿಂದು ಶೂದ್ರನೆನ್ನಿಸಿಕೊಳ್ಳುತ್ತದೆ. ಬ್ರಹ್ಮಸಭೆಯಲ್ಲಿ ಉಸುರಿ ಬ್ರಹ್ಮಜ್ಞಾನಿ ಎನ್ನಿಸಿಕೊಳ್ಳುತ್ತದೆ. ತನು ರೂಪದ ವಿಷ್ಣುವನ್ನು, ಮನ ರೂಪದ ಬ್ರಹ್ಮನನ್ನು ಹೊಗಳಿ ತನುವಿನಲ್ಲಿಯೇ ತನ್ಮಯವಾದ ಶಿವನೆಂಬ ಅರಿವನ್ನೇ ಮರೆತು ಮಾರಿಗೆ ಬಲಿಯಾಗುತ್ತದೆ. ಅರಿತರೆ ಶರಣ, ಮರೆತರೆ ಮಾನವ !

582

ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು ;
ಆರೊ ಮಾಡಿದ ಪಾಪಕ್ಕೆ ತಾನೇ ಕೈಯಾನುವನು !
ಸರಿಯೆ ದೇವ ಭಕ್ತಂಗಿವನು ?
ಸರಿಯೆ ಲಿಂಗಭಕ್ತಂಗಿವನು ?
ಬಡಗಿ ಮಾಚಲದೇವಿಯ ಕುಲಜೆಯ ಮಾಡೆಹೆವೆಂದು
ಹೊನ್ನಕಪಿಲೆಯ ರಾವಣ ಶಾಖದ ಉಚ್ಚಿಷ್ಟದ ಹಾಲಿನಿಂದ
ಕೂಳನಟ್ಟುಂಬುವವರ ನೇನೆಂಬೆ,
ಕೂಡಲಸಂಗಮದೇವಾ ?

ಮನ ತನುವನ್ನು ಹಿಡಿದ ಬ್ರಾಹ್ಮಣನೆಂದು ಇತರ ತನುವನ್ನು ನೋಡಿ ಹಾರುವುದು; ಬ್ರಹ್ಮ ತಾನೇ ಎಂದು ಸಾರುವುದು. ಇತರ ತನು ಮಾಡಿದ ಅಪರಾಧಕ್ಕೆ ಕೈ ಎತ್ತಿ ಸಾರಿ ಆಶೀರ್ವದಿಸುವುದು. ಮನ ತನುವನ್ನು ಶ್ರೇಷ್ಠವೆಂದು ತಿಳಿದು ಇತರ ತನುವನ್ನು ಕನಿಷ್ಠವೆಂದು ತಿಳಿಯುವುದು ಸರಿಯೇ ? ಅದು ಅರಿವೆಂಬ ದೇವರಿದ್ದ ತನುವಲ್ಲವೆ ? ಅದು ಲಿಂಗವೇ ತನ್ಮಯವಾದ ಅಂಗವಲ್ಲವೆ ? ಮನ ಉತ್ತಮನೆಂದು ತಿಳಿದುಕೊಂಡ ತನುವಿಗೆ ಆ ತನುಗಳು ಕನಿಷ್ಠವೆ ? ಹೇಗೆ ಸರಿ ? ಆ ಉತ್ತಮ ತನುಗಳಿಗಿಂತ ಆಶೀರ್ವದಿಸುವ ತನು ಎಂದು ಮನ ತಿಳಿಯಬೇಡವೆ ? ಬಡಗಿ ಮಾಚಲದೇವಿಯನ್ನು ಕುಲಜೆಯನ್ನಾಗಿ ಮಾಡುವೆನೆಂದು ಹೊಲಸು ಮರುಳು ತಂದು ಬೊಂಬೆಯ ಮಾಡಿ ತನ್ನ ಕೂಳು ಸಂಪಾದಿಸಿಕೊಂಡಂತೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನನ್ನು ಮನ ಅರಿಯದಿದ್ದರೆ ಆ ಮನ ತನುವಿಗೆ ಯಾವ ವೇಷವಾದರೂ ಹಾಕಿ ಕೂಳು ಗಿಟ್ಟಿಸಿಕೊಳ್ಳುತ್ತದೆ. ಸ್ವತಹ ಜ್ಞಾನಿಯಾಗಲಾರದು.

583

ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನರಿಯದೆ
ಉದಮದ ಸೊಕ್ಕು ತಲೆಗೇರಿತ್ತೇ ಅಯ್ಯಾ !
ಜೀವೊ ಜೀವೇನ ಭಕ್ಷತೇ ಕರ್ಮ ಕರ್ಮದಲ್ಲಿಪ್ಪೆಯಯ್ಯಾ !
ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ
ಘೋಳಿಡಲಿ ಘೋಳಿಡಲಿ ತಂದಿಕ್ಕೆ ಅಕ್ಕಿತ್ತೆ ! ವೇದಶಾಸ್ತ್ರಂಗಳು

ಮೂರುತಿಗೊಂಡಲ್ಲಿ ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೆ, ಅಯ್ಯಾ !
ನಮ್ಮ ಕೂಡಲಸಂಗಮದೇವನರಿಯದ ಕಾರಣ
ನಾಯಕ ನರಕದಲ್ಲಿಕ್ಕಿತ್ತಯ್ಯಾ .

ತನು ಅರಿವಿನ ಜನ್ಮದಲ್ಲಿ ಹುಟ್ಟಿ ಅರಿವನರಿಯದೆ ಸೊಕ್ಕು ತಲೆಗೇರಿತ್ತು ಅಯ್ಯಾ. ಜೀವವೇ ಜೀವವನ್ನು ತಿನ್ನುವಂತೆ, ತನುವೇ ತನುವನ್ನು ತಿಂದು ತೇಗುತ್ತಲಿದೆ.

ದಕ್ಷ ಯಾಗವ ಮಾಡಿದರೆ ಆತನಿಗೆ ಪುಣ್ಯ ಬರಬೇಕಿತ್ತು. ಆದರೆ ಕುರಿತಲೆ ಪ್ರಾಪ್ತವಾಯಿತು. ವೇದ ಶಾಸ್ತ್ರಗಳು ಮೂರುತಿಯಾಗಿ ಕುರಿ ಘೋಳಿಡುವಲ್ಲಿ ಒಮ್ಮೆಯೂ ಆಶೀರ್ವದಿಸಲಿಲ್ಲ. ಚತುರ್ವೇದಿಗಳು ಅದನ್ನು ಓದುವವರು ಕೇಳುವವರೂ ಆ ಕುರಿಗಳನ್ನು ಉಳಿಸಲಿಲ್ಲ. ಅರಿವಿನ ಪ್ರಾಣಿ, ಪ್ರಾಣಿಯನ್ನು ತಿಂದು ಆನಂದಿಸಿತೇ ವಿನಃ ಹಾಗೇಕೆಂದು ಯೋಚಿಸಲಿಲ್ಲ.

ನರಜನ್ಮದಲ್ಲಿ ಹುಟ್ಟಿ ಅರಿವನರಿಯದಿದ್ದರೆ ಈ ಜನ್ಮವೇಕೆ ? ವೇದ ಉಪನಿಷತ್ತುಗಳನ್ನು ಓದುವಲ್ಲಿ ಜ್ಞಾನ ಲಭಿಸುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವನು, ವೇದವನೋದಿ ಜಾಣನಾಗಬೇಕೆಂದುಕೊಳ್ಳುವ ಮನ ಅರಿತಲ್ಲಿ ವೇದ ಬೇಕಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವೊಂದೇ ಸಾಕು.

584

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ,ಬೀದಿಯ ದೂಳವ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ !
ಕೂಡಲಸಂಗಮದೇವನ ವಂದನೆಯ ಮರೆದು ನಿಂದಿಸುತ್ತಿದ್ದರು.

ಕಿಚ್ಚು ದೈವವೆಂದು ಅದಕ್ಕೆ ಎಣ್ಣೆ ತುಪ್ಪ ಹಾಲು ಬೆಣ್ಣೆ ಮೊಸರು ಪಂಚಾಮೃತವನಿಕ್ಕಿ ಪೂಜಿಸುವರು. ಅದೆ ಕಿಚ್ಚೆದ್ದು ಮನೆಯ ಸುಡುವಾಗ ಬಚ್ಚಲ ನೀರು ಬೀದಿಯ ಮಣ್ಣೆರಚಿ ನಂದಿಸುವರು. ತನುವಿನಲ್ಲಿ ಉಂಟಾಗುವ ಅಗ್ನಿಯನು ಆರಿಸಲರಿಯರು. ಅಗ್ನಿಯನು ಪೂಜಿಸಿದರೆ ತನುವಿನ ಅಗ್ನಿ ನಂದುವುದಿಲ್ಲ.

ಮನ ಉಂಟು ಮಾಡುವ ತನುವಿನ ಅಗ್ನಿಯನು ಅರಿವಿನಿಂದ ಪೂಜಿಸುವ ಸುಳುಹಿಗಾಗಿ ಅರಿವಿನ ಯಜ್ಞ ಮಾಡಬೇಕೇ ವಿನಹ, ಅಗ್ನಿಗೆ ಪೂಜಿಸಿದರೆ ಲಾಭವಿಲ್ಲವೆಂದು ಮನ ಅರಿಯಬೇಕು.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಮರೆದು ಮನ ಯಾವ ಪೂಜೆಯನ್ನು ಮಾಡಿದರೂ ವ್ಯರ್ಥ ವೆಂದು ಹೇಳುವ ಸೂಕ್ಷ್ಮತೆ ಇಲ್ಲಿದೆ.

585

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ !

''ಭರ್ಗೋದೇವಸ್ಯಧೀಮಹಿ'' ಎಂಬರು ;
ಒಬ್ಬರಿಗಾಗಿ ವಿಚಾರವಿಲ್ಲ, ನೋಡಿರೆ !
ಕೂಡಲಸಂಗಮದೇವಾ.

ಗಾಯತ್ರಿ ಮಂತ್ರ. ಈ ಮಂತ್ರದ ಮಹಿಮೆ ಅಗಾಧ ! ಯಾವುದೆ ಮಂತ್ರವು ಅರಿವಿಗೆ ಹೋಗುವ ಸೂತ್ರವೇ ಆಗಿದೆ. ಆದರೆ ಮಂತ್ರವೇ ಪ್ರಧಾನವಾಗಿದೆ. ಅದನ್ನು ಸೃಷ್ಟಿಸಿದ ತನುವಿಗೆ ಮಂತ್ರ ದೊಡ್ಡದಾಗಿದೆ. ತನುವು ಹಲವಾರು ಮಂತ್ರಗಳನ್ನು ಸೃಷ್ಟಿಸಿದ ಮಂತ್ರದ ಕಣಜ. ಅದು ಜ್ಞಾನದ ಭಂಡಾರ. ಹೀಗಿದ್ದೂ ಜ್ಞಾನವನ್ನು ಸೂತ್ರ ಪ್ರಧಾನವಾಗಿ ತನುವಿರುವ ತನಕ ಸೂಚಿಸುವ ಮಂತ್ರವನ್ನೇ ಮನ ದೊಡ್ಡದು ಮಾಡಿ ತನುವಿನೊಂದಿಗೆ ಮನ ಮಂತ್ರಕ್ಕೆ ಶರಣಾಗತನಾಗುತ್ತದೆ.

'ತತ್ವಮಸಿ ' ತತ್ತ್ವ ನೀನೇ ಇದ್ದೀಯ ಎಂದು ತನುವಿನತ್ತ ಬೆಟ್ಟು ಮಾಡಿ ಸೂಚಿಸುವ ಸೂತ್ರವಿದು. ಆದರೆ ಮನ 'ತತ್ತ್ವಮಸಿ ' ಎನ್ನುವ ಮಂತ್ರವನ್ನು ಸಹ ನಾಯಿಯಂತೆ ಬೊಗಳಿ ಅದನ್ನೆ ದೊಡ್ಡದು ಮಾಡಿ ಮನ ತನುಗಳೆರಡೂ ಅದನ್ನು ಪಠಿಸುವ ನಾಯಿಯಾಗಿದೆ.

ಹಲವಾರು ಪುಸ್ತಕಗಳು ಮಂತ್ರಗಳಿರುವುದು ತನು ಶ್ರೇಷ್ಟಾತಿಶ್ರೇಷ್ಟವಾದದ್ದು ಎಂದು ತಿಳಿಯುವುದಕ್ಕಾಗಿ. ಆದರೆ ಮನ ಇದನ್ನು ತಿಳಿಯುವ ಗೋಜಿಗೆ ಹೋಗದೆ ತಿಳಿಯುವ ಓದುವ ಒಂದು ಪಂಗಡ, ತಿಳಿಯದ ಓದದ ಮತ್ತೊಂದು ಪಂಗಡವೆಂದು ವಿಭಾಗಿಸಿದೆ. ಇವೆರಡೂ ಪಂಗಡಗಳು ಮಂತ್ರವೇ ತಾನೆಂದು ಅರಿಯದ ಪಂಗಡಗಳಾಗಿವೆ.

586

ಎನಿಸ ನೋಡಿದಡೇನು ? ಎನಿಸ ಕೇಳಿದಡೇನು ?
ಚತುರ್ವೇದ ಪಾಠ ತೀವ್ರವಾದಡೇನು ?
ಲಿಂಗಾರ್ಚನೆ ಹೀನವಾದಡೆ, ಶಿವಶಿವಾ,
ಬ್ರಾಹ್ಮಣನೆಂಬೆನೆ ? ಎನಲಾಗದು.
ಜನ್ಮನಾಜಾಯತೇ ಶೂದ್ರಃ ಕರ್ಮಣಾದ್ವಿಜ ಉಚ್ಚತೇ ।
ಶ್ರುತೇನ ಶ್ರೋತ್ರಿಯಶ್ಚೈವ ಬ್ರಹಚರತಿ ಬ್ರಾಹ್ಮಣಃ ॥ ಎಂದುದಾಗಿ,
'ಬ್ರಹ್ಮನಾಸ್ತಿ ಶ್ವಪಚರಧಮ' ರೆಂದುದಾಗಿ,
ಇದು ಕಾರಣ, ಕೂಡಲಸಂಗಮದೇವಾ,
ವೇದಭಾರಭರಾಕ್ರಾಂತಾ ಬ್ರಾಹ್ಮಣಾಗಾರ್ದಭಾ
(ಇವ) ಎಂಬೆನು !

ಎಷ್ಟು ಓದಿದಡೇನು? ಎಷ್ಟು ಕೇಳಿದಡೇನು? ವೇದ ಆಗಮ ಉಪನಿಷತ್ತುಗಳ ಪಾಠ ತೀವ್ರವಾದಡೇನು? ಓದುವುದು ತನುವಿನಿಂದ ಹೊರಬಂದ ಅಕ್ಷರಗಳು ; ಕೇಳುವುದು ತನುವಿನಿಂದ ಹೊರಬಂದ ಮಾತುಗಳು. ಇವೆರಡು ವ್ಯರ್ಥ ! ಇವೆರಡು ಮನಕ್ಕೆ ಇಷ್ಟವಾಗಿ ಸಂಗ್ರಹಿಸಿಕೊಂಡಿತೇ ಹೊರತು ತನುವಿನಿಂದ ಜನ್ಯವಾಗಲಿಲ್ಲ. ಇವೆರಡೂ ತನುವಿನಿಂದ ಜನ್ಯವಾದುದೆಂದು ಮನಕ್ಕೆ ತಿಳಿಯಲಿಲ್ಲ. ಮನಕ್ಕೆ ಇಷ್ಟವಾದ ಓದುವ ಕೇಳುವ ಎರಡು ಪದಾರ್ಥಗಳು

ತನುವಿನಲ್ಲಿ ಟೇಪ್‌ನಂತೆ ಸಂಗ್ರಹವಾದವು. ಆಪತ್ಕಾಲಕ್ಕೆ ಬಳಸಲು ಬರುವುದಿಲ್ಲ, ಆಪತ್ಕಾಲಕ್ಕೆ ಬಳಕೆ ಮಾಡಲು ಬಾರದ ಪದಾರ್ಥಗಳು ಎಷ್ಟು ಸಂಗ್ರಹವಾದರೇನು ? ಅದು ವ್ಯರ್ಥವೆಂದು ಮನಕ್ಕೆ ತಿಳಿಯಲಿಲ್ಲ. ಓದಿ ವ್ಯಾಧಿಯಾಯಿತು. ಕೇಳಿ ಪಂಡಿತನಾಯಿತು. ಅಂಗದಲ್ಲಿಯೇ ಇರುವ ಅರಿವೆಂಬ ಲಿಂಗ ಮನಕ್ಕೆ ಹೀನವಾಯಿತು. ಹೀಗಾಗಿ ಮನ ಎಷ್ಟು ಓದಿದಡೂ ಹಲವಾರು ಶಾಸ್ತ್ರ ಪುರಾಣ ಉಪನಿಷತ್ತುಗಳ ಉಪನ್ಯಾಸ ಕೇಳಿದರೂ ಬ್ರಹ್ಮಜ್ಞಾನದ ಅರಿವಾಗಲಿಲ್ಲ. ಇಂತಹ ತನುವನ್ನು ಬ್ರಾಹ್ಮಣ ಎನಲಾಗದು. ಅದು ಹುಟ್ಟಿನಿಂದ ತೋರಿಕೆಯಿಂದ ಬ್ರಾಹ್ಮಣ ತನುವೇ ಹೊರತು ಜ್ಞಾನದಿಂದ ಅಲ್ಲ.

ತನುವಿನಲ್ಲಿಯೇ ತನ್ಮಯವಾದ ಜ್ಞಾನ ಮನಕ್ಕೆ ಬಳಕೆಯಾದ ತನು ಅದು ಶ್ವಪಚನಾದಡೂ ಬ್ರಹ್ಮ ತನು. ಹಲವಾರು ವಿದ್ಯೆಗಳನ್ನು ಸಂಗ್ರಹ ಮಾಡಿಕೊಂಡ ತನು ಬ್ರಾಹ್ಮಣ ವೇಷದ ತನು. ಜನಿವಾರ, ಜುಟ್ಟು, ನಾಮ, ವಸ್ತ್ರಗಳಿಂದ ಪ್ರದರ್ಶನವಾಗುವ ತನುವನ್ನು ಬ್ರಾಹ್ಮಣ ತನುವೆಂದು ಕರೆಯಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ಬಸವಣ್ಣನವರು.

587

ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು !
ನಿಮಗೆರಗದ ಕಾರಣ ಕೊರಳಲ್ಲಿ ನೇಣು !
ಹಿಂಡಲೇಕೋ? ತೊಳೆಯಲೇಕೋ ?
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ ?
ಕೂಡಲಸಂಗನ ಶರಣರಲ್ಲಿ
ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ ?

ತನುವಿನ ಸತ್ಯವನ್ನು ಮನ ಅರಿಯದ ಕಾರಣ ; ಮನ ತನುವಿನ ಕೈಯಲ್ಲಿ ಹುಲ್ಲು ಕೊಟ್ಟಿತು. ಕೊರಳಿಗೆ ದಾರದ ನೇಣು ಬಿಗಿಯಿತು. ತನುವಿಗೆ ಮಡಿವಸ್ತ್ರ ಕಾವಿ ಹೊದಿಸಿ ಬ್ರಾಹ್ಮಣ ಎನ್ನಿಸಿಕೊಂಡಿತು. ಬ್ರಹ್ಮನಾಗಲಿಲ್ಲ ! ವೇಷ ಹುಸಿಯೆಂದು ತಿಳಿಯಲಿಲ್ಲ. ನೀರ ಕಂಡಲ್ಲಿ ತನು ಹಿಡಿದು ಮುಳುಗಿಸಿತು. ಮತ್ತೆ ಮತ್ತೆ ವಸ್ತ್ರ ಹಿಂಡಿ ಹೊರಗಿನ ಕೊಳೆ ತೊಳೆಯುವಂತೆ ಮಾಡಿತು. ಮನದ ಮೈಲಿಗೆ ಹೋಗಲೇ ಇಲ್ಲ.

ಡೋಹರ ಕಕ್ಕಯ್ಯ ಯಾವ ತೊರೆಯಲ್ಲೂ ಮೀಯಲಿಲ್ಲ. ಮನದ ಮೈಲಿಗೆ ಕಿತ್ತೆಸೆದು ತನುವಿನ ಅರಿವಿನಲ್ಲಿ ಬಂಧಿಸಿದ. ತನುವಿಗೆ ಯಾವ ವೇಷವನ್ನೂ ಹಾಕಲಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನ ಜ್ಞಾನದ ಕೆರೆಯಲ್ಲಿ ಮಿಂದು ಆ ಗುರುದೇವನೇ ತಾನಾದ. ಆತ ಒಕ್ಕುದನುಂಡು ಗುರುದೇವನ ಜ್ಞಾನದ ತೇಗನು ತೇಗಿದ. ಬ್ರಹ್ಮಜ್ಞಾನಿಯಾದ. ಬ್ರಾಹ್ಮಣನಾಗಲಿಲ್ಲ ! ಅಂಗದಲ್ಲಿಯೇ ಸಂಗಮವಾದ ಸಂಗಮನಾಥನನ್ನು ಕೂಡಿ ಸಂಗಯ್ಯನೇ ತಾನಾದ !

588

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,

ಮಂಡೋದರಿ ಕಪ್ಪೆಯ ಮಗಳು !
ಕುಲವನರಸದಿರಿಂಭೋ ಕುಲದಿಂದ ಮುನ್ನೇನಾದಿರಿಂಭೋ ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ, ಕಾಣಿಭೋ !
ನಮ್ಮ ಕೂಡಲಸಂಗನ ವಚನವಿಂತೆಂದುದು ;
''ಶ್ವಪಚೋಪಿಯಾದಡೇನು, ಶಿವಭಕ್ತನೇ ಕುಲಜಂ ಭೋ''

ಮಾಡುವ ಕಾಯಕದ ಮೇಲೆ ಹುಟ್ಟಿನಿಂದ ತನುವಿನ ಜ್ಞಾನವನ್ನು ಅಳೆಯಲು ಸಾಧ್ಯವಿಲ್ಲ. ಜ್ಞಾನವೆನ್ನುವುದು ಜಗದಗಲ ಮುಗಿಲಗಲ. ಪಾತಾಳದಿಂದಲೂ ಅತ್ತತ್ತಲಿದ್ದ ಜ್ಞಾನ, ಬ್ರಹ್ಮಾಂಡದಿಂದಲೂ ಅತ್ತತ್ತಲಿದ್ದ ಜ್ಞಾನ ತನುವಿನಗಲಕ್ಕೆ ಬಂದು ಚುಳುಕಾಗಿದೆ. ತನುವಿನಲ್ಲಿಯೇ ಇದ್ದ ಇಂತಹ ಮಹಾಜ್ಞಾನವನ್ನು ಆ ತನುವಿನ ಮನ ಬಳಸಿಕೊಂಡರೆ ಸಾಕು ಆ ತನುವೇ ಶ್ರೇಷ್ಠ ತನು. ಋಷಿ ತನು ಎಂದು ಹೇಳುತ್ತಾ ಬಸವಣ್ಣನವರು ಈ ವಚನದಲ್ಲಿ ಏಳು ಮಹನೀಯರ ಹೆಸರುಗಳನ್ನು ಉದಾಹರಿಸಿದ್ದಾರೆ.

ಶ್ವಪಚೋಪಿಯಾದಡೇನು ಶಿವಭಕ್ತನೇ ಕುಲಜ ಎಂದಿದ್ದಾರೆ. ಹರಿಭಕ್ತ, ಶಿವಭಕ್ತ ಎಂದರೆ ಇಬ್ಬರು ದೇವರನ್ನು ಪೂಜಿಸುವ ಕಾಯಗಳೆಂದು ಭಿನ್ನ ಭಿನ್ನ ನೋಡುವುದಲ್ಲ. ಕಾಯ ಒಂದೇ. ಕಾಯದಲ್ಲಿದ್ದ ಜೀವ ಒಂದೇ. ಕಾಯದಲ್ಲಿದ್ದ ಕೈಲಾಸ ಒಂದೇ. ಕಾಯದ ಅಧಿಪತಿಯೂ ಒಬ್ಬನೆ. ಮನಕ್ಕೆ ಅರಿವಾಗದ ನಿಮಿತ್ತ ಆ ಮನವೇ ಕಾಯವನ್ನು ಹರಿಭಕ್ತ, ಹರಭಕ್ತ ಎಂದು ಎರಡು ಪಂಗಡಗಳನ್ನಾಗಿ ಮಾಡಿಕೊಂಡಿದೆ.

ಹರಿಭಕ್ತನೆಂದರೆ ಕಾಯವನ್ನೇ ಶ್ರೇಷವೆಂದು ನಂಬಿದವನು. ಹರಭಕ್ತನೆಂದರೆ ಕಾಯದ ಜ್ಞಾನವನ್ನೇ ಶ್ರೇಷ್ಠವೆಂದು ನಂಬಿ ಆ ಜ್ಞಾನವೇ ತಾನಾದವನು. ಅರಿವೆಂಬ ಶಿವನಿಗೆ ಭಕ್ತನಾದವನು.

ಕಾಯವನ್ನು ನಂಬಿದ ಹರಿಭಕ್ತ ಶ್ರೀಮಂತನೆನ್ನಿಸಿಕೊಳ್ಳಬಹುದು ; ಜ್ಞಾನಿಯಾಗಲಾರ ! ಹೀಗಾಗಿ ಶಿವಭಕ್ತನೇ ಕುಲಜನು. ಆತ ಹುಟ್ಟಿನಿಂದ ಶ್ವಪಚನಾದಡೇನು ಶಿವಭಕ್ತನು. ಹರಿಭಕ್ತ ಹುಟ್ಟಿನಿಂದ ಬ್ರಾಹ್ಮಣನಾದಡೇನು ಬ್ರಹ್ಮವನರಿಯದವನು.

589

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ,
ಜಲ-ಬಿಂದುವಿನ ವ್ಯವಹಾರ ಒಂದೇ ;
ಆಸೆಯಾಮಿಷರೋಷಹರುಷ ವಿಷಯಾದಿಗಳೆಲ್ಲ ಒಂದೆ.
ಏನನೋದಿ, ಏನಕೇಳಿ, ಏನು ಫಲ ?
ಕುಲಜನೆಂಬುದಕ್ಕೆ ಆವುದು ದೃಷ್ಟ ?
''ಸಪ್ತಧಾತುಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮ ಜೀವ ಸಮಾಯುಕ್ತಂ ವರ್ಣಾನಾಂಕಿಂ ಪ್ರಯೋಜನಂ'' ಎಂದುದಾಗಿ
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ;
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದೊಳಗೆ ಜನಿಸಿದವರುಂಟೆ ಜಗದೊಳಗೆ ?

ಇದು ಕಾರಣ ಕೂಡಲಸಂಗಮದೇವಾ,
ಲಿಂಗಸ್ಥಲವನರಿದವನೆ ಕುಲಜನು.

ತನು ಯಾವ ದೇಶದ್ದಾದರೇನು ? ಯಾವ ಕುಲ ಯಾವ ಭಾಷೆಯದ್ದಾದರೇನು ? ಅದು ಹೆಣ್ಣಾದರೇನು ? ಗಂಡಾದರೇನು ? ತನು ಒಂದೇ. ತನುವಿನ ಕಣ್ಣಿಗೆ ಯಾವ ಜಾತಿಯೂ ಇಲ್ಲ. ಕಿವಿಗೆ ಯಾವ ಜಾತಿಯೂ ಇಲ್ಲ. ಚರ್ಮ ಮೂಗು ನಾಲಿಗೆ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಅವುಗಳಿಗೆ ದೇಶ ಭಾಷೆ ಗಡಿಗಳ ಅವಶ್ಯಕತೆಯೂ ಇಲ್ಲ.

ನೋಡುವುದು ಕಣ್ಣಿನ ಧರ್ಮ, ಕೇಳುವುದು ಕಿವಿಯ ಧರ್ಮ, ಸ್ಪರ್ಶಿಸಿ ನಿಜ ತಿಳಿಯುವುದು ಚರ್ಮದ ಧರ್ಮ ! ಮೂಸಿಸಿ ಪರಿಮಳ ತಿಳಿಯುವುದು ಮೂಗಿನ ಧರ್ಮ, ರುಚಿಸುವುದು ನಾಲಿಗೆಯ ಧರ್ಮ. ದೇಹದ ಈ ಐದೂ ಭಾಗಗಳು ಹೆಣ್ಣೂ ಅಲ್ಲ ; ಗಂಡೂ ಅಲ್ಲ ; ಇವುಗಳಿಗೆ ಜಾತಿ ಮತ ಧರ್ಮ ದೇಶ ಗಡಿಗಳ ಸಂಕೋಲೆಯಿಲ್ಲ. ಇವುಗಳನ್ನು ಹೊತ್ತ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಕೂಡಾ ತನುವಿನ ಭಾಗಗಳೇ ಆಗಿವೆ.

ತನು ತನುವಿನೊಂದಿಗೆ ಕೂಡುವುದು ಮತ್ತೊಂದು ತನು ಪಡೆಯುವ ಬಯಕೆಯಿಂದ ಮಾತ್ರ. ಎರಡು ತನುಗಳು ಕೂಡುವ ಜಲಬಿಂದುವಿನ ವ್ಯವಹಾರ ಒಂದೇ. ತನುವಿನಲ್ಲಿ ಉತ್ಪನ್ನವಾಗುವ ಆಸೆ, ಆಮಿಷ, ರೋಷ, ಹರುಷ, ವಿಷಯಾದಿಗಳೆಲ್ಲ ಒಂದೇ. ಜ್ಞಾನ ಒಂದೇ. ಏನನೋದಿ ಏನಕೇಳಿ, ಏನು ಫಲ ? ಕುಲಜನೆಂಬುವುದಕ್ಕೆ ಯಾವುದು ದೃಷ್ಟಾಂತ ? ಉತ್ತಮ ಅಧಮ ಕುಲವೆಂದು ತನುವಿನಲ್ಲಿ ಗುರುತಿಸುವುದಾದರೂ ಹೇಗೆ ? ಹೇಳುವುದಾದರೂ ಹೇಗೆ?

'' ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ ಆತ್ಮ ಜೀವ ಸಮಾಯುಕ್ತಂ ವರ್ಣಾನಾಂಕಿಂ ಪ್ರಯೋಜನಂ '' ತನುವಿನಲ್ಲಿರುವ ರಸ, ರಕ್ತ, ಮಾಂಸ, ಮೇಧಸ್ಸು, ಮೂಳೆ, ಮಜ್ಜೆ, ಶುಕ್ಲ ಒಂದೆ. ಎಲ್ಲ ತನುಗಳು ಗರ್ಭದ ಮೂಲಕ ಜನಿಸಿವೆ. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಬ್ರಾಹ್ಮಣನಾದ. ಜಗದೊಳಗೆ ಕಿವಿಯ ಮೂಲಕ ಜನಿಸಿದವರು ಯಾರೂ ಇಲ್ಲ.

ಅಂಗದಲ್ಲಿ ಅರಿವೆಂಬ ಲಿಂಗವೇ ತನ್ಮಯವಾಗಿದೆ ಎಂದು ಅರಿತು ಆ ಅರಿವು ತಾನೇ ಆದವನು ಮಾತ್ರ ಕುಲಜನು.

590

ಕೊಲುವನೆ ಮಾದಿಗ, ಹೊಲಸು ತಿಂಬುವನೇ ಹೊಲೆಯ !
ಕುಲವೇನೊ ಆವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು !

ತನು ಎಂಬುದು ಜ್ಞಾನದ ಕುಲ. ಅಜ್ಞಾನದಿಂದಾಗಿ ಜಾತಿ ಮತ ಧರ್ಮ ದೇಶ ಗಡಿ ಹೆಣ್ಣು ಗಂಡು ಎನ್ನುವ ಹೊಲಸು ಸೃಷ್ಟಿ ಮಾಡಿಕೊಂಡಿದೆ. ಕಣ್ಣಿನಿಂದ ನೋಡಿ ಆಪತ್ಕಾಲ ತಂದು ಕೊಂಡು ಹೊಲೆಯನಾಗುತ್ತದೆ. ಚರ್ಮದಿಂದ ಮುಟ್ಟಿ ತನುವಿಗೆ ಆಪತ್ಕಾಲ ತಂದುಕೊಂಡು

ಅತ್ಯಾಚಾರಕ್ಕೆಳಿಸಿ ಹೊಲೆಯನಾಗುತ್ತದೆ. ಸದಾ ಪರಿಮಳ ಮೂಸಿಸಬೇಕಾದ ಮೂಗು ದುರ್ಗಂಧ ಹೀರಿ ಹೊಲೆಯನಾಗುತ್ತದೆ !

ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಜ್ಞಾನದ ತನು ಅಜ್ಞಾನದ ಮನೆಯಾಗಿದೆ. ಅಂಗದಲ್ಲಿಯೇ ಅರಿವು ಸಂಗಮವಾಗಿದೆ. ಅದು ಕಣ್ಣಿನಲ್ಲಿ ಬಂದು ಸುಂದರವಾದ ದೃಷ್ಟಿಯಾಗಿದೆ. ಅರಿವು ಕಿವಿಗೆ ಬಂದು ನಾದಬ್ರಹ್ಮವಾಗಿದೆ. ಅರಿವು ಚರ್ಮದಲ್ಲಿ ತನ್ಮಯವಾಗಿ ಸ್ಪರ್ಶದ ಜ್ಞಾನವನ್ನು ಹೊಂದಿ ತನುವಿನ ರಕ್ಷಾ ಕವಚವಾಗಿದೆ. ಅರಿವು ಮೂಗಿಗೆ ಬಂದು ಸುಗಂಧ-ದುರ್ಗಂಧವನು ಎಣಿಸದೆ ಅರಿವಿನ ಪರಿಮಳವನ್ನು ಸದಾ ಆಸ್ವಾದಿಸಿ ತನುವಿನ ಮುಕುಟಕ್ಕೆ ಕಿರೀಟವಿಟ್ಟು ಕೀರ್ತಿಯ ಧ್ವಜವನ್ನು ಹಾರಿಸಿದೆ.

ಸಕಲ ಪ್ರಾಣಿಗಳಿಗೆ ಒಂದೊಂದೇ ಜ್ಞಾನೇಂದ್ರಿಯಗಳು ಇವೆ. ಇವು ತನುವಿನ ಕ್ಷೇತ್ರದಲ್ಲಿ ಪಂಚ ಜಗದ್ಗುರುಗಳಾಗಿ ತನುವನ್ನು ಅಲಂಕರಿಸಿದೆ. ಈ ಮಹಾತನುವನ್ನು ಈಶಾನ್ಯ ಮುಖದ ಅರಸನೆಂದು ಕರೆಯುತ್ತಾರೆ. ಐದು ಜ್ಞಾನದ ಮುಖಗಳ ದೊರೆಯೆಂದು ಕರೆಯುತ್ತಾರೆ.

ಇಂತಹ ಜ್ಞಾನದ ತನುವನ್ನು ಆವರಿಸಿದ ಮನ ಅರಿಯದಿದ್ದಕ್ಕಾಗಿ ತನುವನ್ನೇ ಕೊಲ್ಲುತ್ತದೆ; ಹೊಲಸು ತಿನ್ನುತ್ತದೆ. ತಾನು ಕೊಂದ ಕೊಲೆಯ ಪಟ್ಟವನ್ನು ತನುವಿಗೆ ಕಟ್ಟುತ್ತದೆ. ತಾನು ಮಾಡಿದ ಹಾದರದ ಕೆಲಸವನ್ನು ತನುವಿಗೆ ಕಟ್ಟುತ್ತದೆ. ತಾನು ಮಾಡಿದ ಕಳುವಿನ ಪಟ್ಟವನ್ನು ತನುವಿಗೆ ಕಟ್ಟುತ್ತದೆ. ಹೊಲೆಯ ಮಾದಿಗನೆಂಬ ಹೆಸರು ಪಡೆಯುತ್ತದೆ. ಅಂಗದಲ್ಲಿ ಸಂಗಮವಾದ ಸಂಗಯ್ಯ ಮನದ ಅರಿವಿಗೆ ನಿಲುಕಿದರೆ ಅದೇ ಕುಲಜ ತನು. ಕೂಡಲಸಂಗಯ್ಯನ ತನು !

591

ಹಾರುವ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ ;
ಕೆಳೆಯಿಂಕೆ ಬೇರೂರದು, ಮೇಲೆ ಫಲವಾಗದು !
ಪ್ರಾಣಲಿಂಗದ ಪ್ರಸಾದ ಮುಂದಿಟ್ಟುಕೊಂಡು
'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯಸ್ವಾಹಾ,
ಉದಾನಾಯ ಸ್ವಾಹ, ಸಮಾನಾಯ ಸ್ವಾಹಾ' ಎಂಬ
ಕರ್ಮಿಗಳನೇನೆಂಬೆ, ಕೂಡಲ ಸಂಗಮದೇವಾ ?

ಪಂಡಿತನ ಭಕ್ತಿ, ಹಂಚಿನೊಳಗೆ ಬೀಜ ಚೆಲ್ಲಿ ಫಲವ ಪಡೆದಂತೆ ! ಕೆಳಗೆ ಬೇರೂ ಇಳಿಯದು, ಮೇಲೆ ಫಲವೂ ಕೊಡದು.

ತನು ಒಂದು ಅಗ್ನಿಕುಂಡ ! ಬಾಯಿಗೆ ಹಾಕಿದ ತುಪ್ಪ ಹಾಲು ಮೊಸರು ಪಂಚಾಮೃತ ಪದಾರ್ಥಗಳೆಲ್ಲ ಸುಟ್ಟು ರಕ್ತಮೂಳೆ ಮಾಂಸವಾಗಿ ತನು ಕಾಂತಿಯಿಂದ ಬೆಳಗುತ್ತದೆ.

ಯಜ್ಞ ಯಾಗ ಮಾಡಿದರೆ ತನುವಿನ ಮೂಲಕ ಮಾಡಬೇಕೇ ವಿನಹ ಬೆಂಕಿ ಹಚ್ಚಿ ಅದರಲ್ಲಿ ಸಕಲ ಪದಾರ್ಥಗಳನ್ನು ಸುರುವಿ ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ, ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ ಎಂದು ಮಂತ್ರದ ಮೂಲಕ ನುಡಿದು ಬೆಂಕಿಗೆ ಪದಾರ್ಥಗಳನ್ನು ಚೆಲ್ಲಿದ ಹಾರುವನ ಭಕ್ತಿ ಹಂಚಿನ ಮೇಲೆ ಸಸಿಯ ಬೆಳೆದಂತೆ !

ಅಂಗವೆಂಬ ಪ್ರಾಣಲಿಂಗವನ್ನೇ ಮುಂದಿಟ್ಟುಕೊಂಡು ಅಗ್ನಿಗೆ ಆಹಾರ

ಸುರಿಯುವುದೆಂದರೇನು ? ತನುವಿನಲ್ಲಿಯೇ ಪಂಚಭೂತಗಳು ತನ್ಮಯವಾಗಿವೆ. ಅಗ್ನಿಗೆ ಸುರಿಯುವ ಪದಾರ್ಥವನ್ನು ತನುವಿನ ಬಾಯಿಗೆ ಸುರಿದು : ಎಲೈ ಅಗ್ನಿಯೇ ತನುವನ್ನು ಸುಡಬೇಡ, ಕೇಳಿ ಶಬ್ಧದಿಂದ ದೇಹವನ್ನು ಸುಡಬೇಡ. ನೋಡಿ ಕಣ್ಣಿನಿಂದ ಅಂಗವನ್ನು ಸುಡಬೇಡ, ಮುಟ್ಟಿ ತನುವಿನಲ್ಲಿ ರಕ್ಕಸವೃತ್ತಿ ತಾಳಬೇಡ, ರುಚಿಸಿ ಮೂಸಿಸಿ ತನುವನ್ನು ಸುಟ್ಟು ಸಂಕಟ ಒಡ್ಡಬೇಡ. ಸರ್ವರನ್ನು ಸರ್ವವನ್ನು ಸಮಾನತೆಯಿಂದ ನೋಡು ಎಂದು, ತನುವೇ ಒಂದು ಯಜ್ಞಕುಂಡವೆಂದು ತಿಳಿದು ಅಗ್ನಿಗೆ ಚೆಲ್ಲದೆ, ಪೂಜಿಸಿ ಪದಾರ್ಥವನ್ನು ತನುವಿಗೆ ಅರ್ಪಿಸಬಾರದೆ ?

592

'ನಾನು ಭಕ್ತ, ನಾನು ಪ್ರಸಾದಿ' ಎಂದು
ವಿಪ್ರ ಕರ್ಮವ ಮಾಡುವೆ ಕರ್ಮೀ ;
ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೈಯಲು
ವಿಪ್ರನ ಕಾಲ ತೊಳೆವೆಡೆ ಲಿಂಗೋದಕ ಹೃದಯದಲ್ಲಿ,
ವಿಪ್ರನ ಕಾಲ ತೊಳೆದ ನೀರು ಮಂಡೆಯ ಮೇಲೆ !
ಶ್ರುತ್ಯತುಕ್ಕಟ ದುರಾಚಾರೀ ಯಜ್ಞಕೂಪಸಘಾತಕಃ ।
ಉದ್ರೇಕೇಣ ಕೃತೇ ಶಾಂತೇ ವಿಪ್ರರೂಪೇಣ ರಾಕ್ಷಸ ಃ ॥
ಇದು ಕಾರಣ ಕೂಡಲಸಂಗಮದೇವಾ,
ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು.

ಅಂಗದಲ್ಲಿರುವ ಲಿಂಗಯ್ಯನೆಂಬ ಅರಿವಿಗೆ ಭಕ್ತಿ ಮಾಡಿದ ಮನವೆಂಬ ಭಕ್ತನೆ ಭಕ್ತ. ಕಣ್ಣು ಕಿವಿ ಮೂಗು ನಾಲಗೆ ಚರ್ಮ ತಾಗಿದ ಸಕಲ ಅಜ್ಞಾನವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುವ ಮನವೇ ಪ್ರಸಾದಿ. ಇಂತಹ ಲಿಂಗದೇವನಿಗೆ ಮುಟ್ಟಿ ಆತನಿಗೆ ಪ್ರಸಾದ ಸಲ್ಲಿಸಿ ಆತನನ್ನೆ ಮರೆತು ವಿಪ್ರವೇಷದ ಅಥವಾ ಜಂಗಮ ವೇಷದ ಒಂದು ಅಜ್ಞಾನದ ತನುವಿನ ಪಾದ ತೊಳೆವಡೆ ಜ್ಞಾನೋದಕ ಹೃದಯಕ್ಕೆ ಸಲ್ಲುತ್ತದೆ. ಕಾಲ ತೊಳೆದ ಹೊಲಸುಜಲ ಮಂಡೆಗೆ ಸಲ್ಲುತ್ತದೆ.

ಅಂಗದಲ್ಲಿ ಸಂಗಮವಾದ ಅರಿವೆಂಬ ಲಿಂಗಯ್ಯ ದೊಡ್ಡವನೇ ಹೊರತು ಅಂಗ ದೊಡ್ಡದಲ್ಲ. ಅಂಗವೇನಿದ್ದರೂ ಲಿಂಗಯ್ಯನ ಲಾಂಛನ. ಅದು ಲಿಂಗಯ್ಯನ ಲಾಂಛನವೆಂದು ತಿಳಿದು ಅಂಗವನ್ನು ಗೌರವಿಸಿದರೆ ಅದರ ಕಾಲ ತೊಳೆದರೆ ಅದು ಕೂಡಾ ಹೃದಯಕ್ಕೆ ಸಲ್ಲುತ್ತದೆ. ಅದರ ಜ್ಞಾನ ಜಲ ಸರ್ವಾಂಗಕ್ಕೂ ಸಲ್ಲುತ್ತದೆ.

593

ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ ?
ಕರ್ಪೂರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ ?
ಶ್ರೀಗಂಧದ ಮರನ ಕಡಿದು ಬೇವಿಂಗೆ ಅಡೆಯನಿಕ್ಕುವರೆ ?
ನಮ್ಮ ಕೂಡಲಸಂಗನ ಶರಣರಿಗಲ್ಲದೆ

ಬೇರೆ ಇಚ್ಛಾಭೋಜನವನಿಕ್ಕಿದಡೆ,
ಕಿಚ್ಚಿನೊಳಗೆ ಉಚ್ಚೆ ಹೊಯಿದು ಹವಿಯ ಬೇಳ್ದಂತಾಯಿತ್ತು!

ಹೊನ್ನ ನೇಗಿಲ ಬಳಸಿ ಎಕ್ಕೆಯ ಬೀಜವನ್ನು ಯಾರೂ ಬಿತ್ತುವುದಿಲ್ಲ. ಕರ್ಪೂರದ ಮರ ಕಡಿದು ಕಳ್ಳಿ ಹೊಲಕ್ಕೆ ಬೇಲಿಯನು ಯಾರೂ ಹಾಕುವುದಿಲ್ಲ. ಶ್ರೀಗಂಧದ ಮರ ಕಡಿದು ಬೇವಿನ ಮರಕ್ಕೆ ಯಾರೂ ಆಸರೆಯನಿಕ್ಕುವುದಿಲ್ಲ. ಇದು ಅವರವರಿಗೆ ತಿಳಿದ ವಿಷಯ. ಸರಳ ಸಹಜ ವಿಷಯ.

ಅಂಗವನ್ನು ಮನವೆಂಬ ರಕ್ಕಸ ಆವರಿಸಿದೆ. ಅದೇ ಅಂಗದಲ್ಲಿ ಅರಿವೆಂಬ ಲಿಂಗಯ್ಯನೂ ವಾಸ ಮಾಡಿದ್ದಾನೆ. ಮನವೆಂಬ ರಕ್ಕಸ ಅಂಗವನ್ನು ಬಳಸಿಕೊಂಡು ಮದ್ಯ ಮಾಂಸ ಸೇವಿಸಿ ಅಂಗ ದೊಂದಿಗೆ ಅಂಗವನ್ನೇ ಕಾಮಕ್ಕೆಳಿಸಿ ವಿಷಯದ ಇಚ್ಛಾಭೋಜನ ಮಾಡುತ್ತದೆ. ಇಂತಹ ಮನ ವೆಂಬ ರಕ್ಕಸನಿಗೆ ಇಚ್ಛಾಭೋಜನವನ್ನು ನೀಡಬಹುದೆ ? ಇದು ಕಿಚ್ಚನಿಕ್ಕಿ ಉಚ್ಚೆಯ ಹೊಯ್ದು ಹವಿಸ್ಸು ಪಡೆದಂತೆ.

ಅಂಗದ ಕಣ ಕಣದಲ್ಲಿ ಅರಿವೆಂಬ ಲಿಂಗಯ್ಯನು ಇದ್ದಾನೆ. ಆತನೇ ಅಂಗದಲ್ಲಿದ್ದ ಜಂಗ ಮನೆಂದು ಅಜ್ಞಾನಿ ಮನದಿಂದಲೇ ಕಂಡುಹಿಡಿದು ಆ ಮನದಿಂದಲೇ ಆ ಜಂಗಮನಿಗೆ ಭಕ್ತಿ ಮಾಡಿ ಇಚ್ಛಾಭೋಜನವನು ಉಣಬಡಿಸುವುದು. ಶ್ರೇಷ್ಠಾತಿಶ್ರೇಷ್ಠ ಕೆಲಸ.

ಇದು ಹೊನ್ನು ನೇಗಿಲಲುತ್ತು ಹೊನ್ನ ಬೆಳೆದಂತೆ. ಕರ್ಪೂರದ ಮನಕ್ಕೆ ಕಳ್ಳಿಯ ಬೇಲಿಯ ನಿಕ್ಕಿದಂತೆ. ಶ್ರೀಗಂಧದ ಮರಕ್ಕೆ ಬೇವಿನ ಮರ ಕಡಿದು ಆಸರೆಯಿಕ್ಕಿದಂತೆ. ಕೂಡಲಸಂಗನ ಶರಣರಿಗಲ್ಲದೆ ಅನ್ಯ ತನುಗಳಿಗೆ ಇಚ್ಛಾಭೋಜನ ಸಲ್ಲದು.

594

ಜಾತಿವಿಡಿದು ಸೂತಕವನರಸುವೆ !
ಜ್ಯೋತಿವಿಡಿದು ಕತ್ತಲೆಯನರಸುವೆ !
ಇದೇಕೋ ಮರುಳು ಮಾನವಾ ?
ಜಾತಿಯಲ್ಲಿ ಅಧಿಕನೆಂಬೆ ;
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನೋ ?
ಭಕ್ತ ಶಿಖಾಮಣಿ'ಎಂದುದು ವಚನ.
ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು.
ಕೆಡಬೇಡ ಮಾನವಾ.

ಅಂಗ ಅರಿವಿನ ಮನೆಯೂ ಹೌದು; ಮನಕ್ಕೆ ತಿಳಿಯದಿದ್ದರೆ ಅದು ಸೂತಕದ ಮನೆಯೂ ಹೌದು. ಮನ ಅಂಗದಲ್ಲಿರುವ ಅರಿವೆಂಬ ಗುರುದೇವನನ್ನು ನಂಬಿ ; ಅರಿವಿನ ಮನೆಯಾಗಿ ಮಾಡುತ್ತದೆ. ಅದೇ ಮನ ಅಂಗದಲ್ಲಿರುವ ಅರಿವೆಂಬ ಲಿಂಗಯ್ಯ ಯಾರೆಂದು ತಿಳಿಯದಿದ್ದರೆ ಆ ಅರಿವಿನ ಮನೆಗೆ ವಿಪ್ರನ ವೇಷ ಧರಿಸಿ ಸೂತಕದ ಮನೆಯನ್ನಾಗಿ ಮಾಡುತ್ತದೆ. ತೋರಿಕೆಗೆ ಅಂಗ ಬ್ರಹ್ಮನ ಮನೆಯಂತೆ ಕಂಡರೂ ಅದು ಜಾತಿ ಸೂತಕವನ್ನು ಸೂಚಿಸುತ್ತದೆ.

ಬ್ರಹ್ಮ ವೇಷ ಧರಿಸಿ ಜಾತಿ-ಸೂತಕವನ್ನು ಮೆರೆಯುವ ಕೋಟಿ ಅಂಗಗಳಿದ್ದರೆ

ಫಲವೇನು ? ಅದು ತೋರಿಕೆಯ ಹೊರಭಕ್ತಿ ಪ್ರದರ್ಶಿಸಿ ಭಕ್ತ ಶಿಖಾಮಣಿ ಎಂದು ವ್ಯಂಗ್ಯದ ಮೂದಲಿಕೆಯ ಮಾತಿನಿಂದ ಕರೆಯಿಸಿಕೊಳ್ಳುತ್ತದೆ.

ಎಲೆ ಮನವೇ ಅಂಗದಲ್ಲಿಯೇ ಇದ್ದ ಅರಿವಿನ ಸಂಗಯ್ಯನನ್ನು ಪೂಜಿಸು. ಆತನ ಪಾದ ಪರುಷವ ನಂಬು. ಆತ ಇಡೀ ಅಂಗದ ಅಜ್ಞಾನವನ್ನು ಕೆಡಿಸಿ, ಮನವೆಂಬ ಮರ್ಕಟವನ್ನು ಕಟ್ಟಿಹಾಕಿ ಅಂಜನೇಯನನ್ನಾಗಿಸುತ್ತಾನೆ.

595

ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ
ಪಂಚಮಹಾ ವಾದ್ಯದಲ್ಲಿ ಸನ್ಮಾನವ ಮಾಡೆನೆ ?
ನೆಲನನುಗ್ಘಡಿಸಿ ಉಘೇ , ಚಾಂಗು, ಭಲಾ ಎಂದು !
ಕುಲಧಿಕ ಹಾರುವಂಗೆ ಸಿದ್ಧಿಗೆಯ್ಯೆಸಲೆ !
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ !
ಎಲೆ ಕೂಡಲಸಂಗಮದೇವಾ, ನಿಮ್ಮ ನಂಬದವನೆ ಹೊಲೆಯ !

ಅಂಗ ಯಾವ ವೃತ್ತಿಯಲ್ಲಿದ್ದರೇನು ? ಅಂಗಕ್ಕೆ ಆವರಿಸಿರುವ ಮನ ಅರಿವಿನ ಸಂಗಯ್ಯನತ್ತ ಮುಖ ಮಾಡಿದರೆ ಸಾಕು ಅದು ಅರಿವಿನ ಅಂಗ. ಅಂಗಕ್ಕೆ ಆವರಿಸಿದ ಮನಕ್ಕೆ ಅರಿವಿನ ಸಂಗಯ್ಯ ಯಾರೆಂದು ತಿಳಿಯದಿದ್ದರೆ ಅದು ಸೊಣಗ ! ಅರಿವಿನ ಸಂಗಯ್ಯ ತಿಳಿದರೆ ಸಾಕು ಆ ಸೊಣಗವನ್ನು ಪಂಚ ಮಹಾ ವಾದ್ಯದಲ್ಲಿ ಸನ್ಮಾನವ ಮಾಡೆನೆ ? ನೆಲವ ಸಾರಿಸಿ, ರಂಗವಲ್ಲಿ ಬಿಡಿಸಿ, ಅಂಗದ ವೃತ್ತಿಯನ್ನು ಮರೆತು ಚಾಂಗು, ಭಲಾ ಎಂದು ಗೌರವಿಸಲಾರೆನೆ !

ಅಂಗದಲ್ಲಿರುವ ಅರಿವಿನ ಲಿಂಗಯ್ಯನನ್ನು ಅರಿತ ಅಂಗ ಅದು ಯಾವುದಾದರೇನು ಹಾರುವ ಕುಲಗಳಿಗೆಲ್ಲ ಅಧಿಕವಾದ ಲಿಂಗಯ್ಯನ ಅಂಗವೆಂದು ಗೌರವಿಸಲಾರೆನೆ ?

ಅಂಗದಲ್ಲಿಯೇ ಇದ್ದ ಅರಿವಿನ ಸಂಗಯ್ಯನನ್ನು ತಿಳಿಯುವುದು ಶರಣರಿಗೆ ಮಾತ್ರ ಸಾಧ್ಯ. ಆತನಿಗೆ ಶರಣು ಹೋಗುವ ಮನಕ್ಕೆ ಮಾತ್ರ ಸಾಧ್ಯ. ಆ ಮನವೇ ಘನ ಮನ. ಅದು ಘನಕ್ಕೆ ಘನ. ಅಂಗದಲ್ಲಿಯೇ ಮನೆ ಮಾಡಿಕೊಂಡ ಅರಿವಿನ ಸಂಗಯ್ಯನೆ, ನಿಮ್ಮ ನಂಬದ ಮನವೇ ಹೊಲೆಯ. ನಿಮ್ಮ ನಂಬಿದ ಘನಮನವೇ ಶ್ರೇಷ್ಠ ಅದು ಕುಲಕ್ಕಧಿಕ.

596

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆರನನರಿಯದೆ ತನಿರಸದ
ಹೊರಗಣೆಲೆಯನೆ ಮೇದವು !
ನಿಮ್ಮನರಿವ ಮದಕರಿಯಲ್ಲದೆ
ಕುರಿ ಬಲ್ಲುದೆ, ಕೂಡಲಸಂಗಮದೇವಾ ?

ಸಾವಿರಾರು ಕುರಿಗಳು ತೋಟ ಹೊಕ್ಕರೂ ಅವು ಏನಿದ್ದರೂ ಕಬ್ಬಿನ ರವುದೆ

ಮೇಯುವವಲ್ಲದೆ ಒಂದು ಕಬ್ಬು ಕೂಡಾ ನುರಿಸಲರಿಯವು. ಕಬ್ಬಿನ ಸಿಹಿಯ ಅನುಭವಿಸಲರಿಯವು.

ಆನೆ ಕಬ್ಬಿನ ತೋಟ ಹೊಕ್ಕರೆ ಒಂದು ಕಬ್ಬು ಕೂಡಾ ಉಳಿಯುವುದಿಲ್ಲ. ಆನೆಗೆ ಕಬ್ಬು ಬೇಕು. ಕುರಿಗೆ ರವುದೆ ಬೇಕು.

ಅಂಗ ಎನ್ನುವುದು ಅರಿವಿನ ಸಂಗಯ್ಯನ ಕಬ್ಬಿನ ತೋಟ. ಮನ ಎನ್ನುವುದೇ ಕುರಿ. ಮನಕ್ಕೆ ಅಂಗದಲ್ಲಿರುವ ಅರಿವಿನ ಸಂಗಯ್ಯ ಪರಿಚಯವಾದರೆ ಆ ಮನ ಕುರಿಯಾಗದೆ ಆನೆಯಾಗುತ್ತದೆ. ಸಿಹಿ ಕಬ್ಬನೆಲ್ಲ ಮೇದು ಆನಂದವನು ಅನುಭವಿಸುತ್ತದೆ.

ಕುರಿ ಹಾಗಲ್ಲ ತನುವನ್ನು ಹಿಡಿದು ಭಗವದ್ಗೀತೆ, ಬೈಬಲ್, ವೇದ, ಉಪನಿಷತ್ತು, ಆಗಮ, ಪುರಾಣಗಳ ರವುದೆ ಮೇಯುತ್ತದೆಯೇ ಹೊರತು ಅವುಗಳಿಗೆ ಜನ್ಮ ನೀಡಿದ ಸಿಹಿ ಮೇಯುತ್ತದೆಯೇ ಆ ಆನೆ ಮಾತ್ರ ಬಲ್ಲುದು ಅಂಗದಲ್ಲಿಯೇ ಇದ್ದ ಸಿಹಿ ಸಂಗಯ್ಯನನ್ನು !ಅದು ಮಾತ್ರ ಮದಕರಿಯಾಗುತ್ತದೆ; ಆನೆಯಾಗುತ್ತದೆ.

597

ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ
ಪ್ರಣವ ಮಂತ್ರವನೋದಿ ಮಂತ್ರಾರ್ಥವನರಿಯರು.
'ಪ್ರಣವ ಓಂನಮಃಶಿವಾಯ ಪ್ರಣವ ಓಂನಮಃಶಿವಾಯ ,
ಪ್ರಣವ ಓಂನಮಃಶಿವಾಯ' ಎಂದುವು ಶೃತಿಗಳೆಲ್ಲಾ;
'ಪ್ರಣವ ಓಂ ಭರ್ಗೋದೇವ ' ಎಂದುವು ಶೃತಿಗಳೆಲ್ಲಾ!
ಕೂಡಲಸಂಗನನರಿಯದ ದ್ವಿಜರೆಲ್ಲ ಭ್ರಮಿತರು !

ಪ್ರಣವವನು ಕೋಟ್ಯಾನು ಕೋಟಿ ಅಂಗಗಳು ಉಚ್ಚರಿಸುತ್ತವೆ. ಆದರೆ ಪ್ರಣವವೆಂದರೆ ಏನು ? ಎಂದು ತಿಳಿಯುವ ಸಾಹಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಆದರೂ ಶಬ್ದ ಮಾಡಿ ಓಂ ನಮಃ ಶಿವಾಯ ಎಂದು ಮಣಿಗಳನ್ನು ಹಿಡಿದು ಜಪ ಮಾಡುವುದು ಮಾತ್ರ ನಿಂತಿಲ್ಲ. ಈ ಅಂಗಗಳು ಪ್ರಣವವನು ಉಚ್ಚರಿಸಿದರೂ ಅಪ್ರಮಾಣಿಕ ಅಂಗಗಳು.

'ಓಂ ನಮಃ ಶಿವಾಯ' ಎಂದು ಮೂರು ಬಾರಿ ಬಳಸಿದ್ದಾರೆ. ಅಂಗದಲ್ಲಿರುವ ಅರಿವು ಓಂ ನಮಃ ಶಿವಾಯ; ಅಂಗವನ್ನು ಆವರಿಸಿರುವ ಮನವೂ ಓಂ ನಮಃಶಿವಾಯ ; ಇವೆರಡನ್ನು ಹೊತ್ತ ಅಂಗವೂ ಓಂ ನಮಃ ಶಿವಾಯವೇ ಆಗಿದೆ. ಅಂಗ ಲಿಂಗ ಅದನ್ನು ಪೂಜಿಸುವ ಮನವೂ ಓಂ ನಮಃ ಶಿವಾಯ ಎಂದ ಮೇಲೆ ಪ್ರಣವವನು ಉಚ್ಚರಿಸುವುದಾದರೂ ಹೇಗೆ ? ಏನೆಂದು ಮಂತ್ರ ಉಚ್ಚರಿಸಬೇಕು ? ಆ ಮಂತ್ರವೇ ತಾನಾಗಿರುವಾಗ ! ಅದನ್ನು ತಿಳಿಯದೆ ಉಚ್ಚರಿಸುವ ಅಂಗಗಳೆಲ್ಲ ಅಪ್ರಮಾಣಿಕ ಅಂಗಗಳು.

ತ್ವಙ್ಮಯವಾಗಿಹುದು ಓಂಕಾರ : ಅಂಗ ಹೊದ್ದ ಚರ್ಮದ ಕವಚವೆಲ್ಲಾ ಓಂಕಾರವೇ ಆಗಿದೆ. ಚರ್ಮ ಹೆಣ್ಣು ಅಲ್ಲ ಗಂಡೂ ಅಲ್ಲ. ಆದರೆ ಹೆಣ್ಣು ಗಂಡು ಎನ್ನುವ ಜಾತಿ ಕಣ್ಣಿನಲ್ಲಿ ಸೃಷ್ಟಿಯಾಗಿದೆ. ಚರ್ಮ ಎನ್ನುವ ಸತ್ಯ ಕಣ್ಣಿನಲ್ಲಿ ಅಡಗಿದೆ. ಕಣ್ಣಿನಲ್ಲಿ ಅಡಗಿದ ಸತ್ಯ ಕಣ್ಣಿಗೆ ಬಳಕೆಯಾಗಿ, ಕಣ್ಣಿಗೆ ಆವರಿಸಿದ ಹುಸಿ ಸತ್ಯದಲ್ಲಿ ಅಡಗಿದೆ. ಆ ಕಣ್ಣು ನೋಡಿದರೆ ನೋಡುವ

ಚರ್ಮವೆಲ್ಲ ಓಂಕಾರವೇ ಆಗಿದೆ. ಚರ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ; ಜಾತಿ ಮತ ಪಂಥ ಪಂಗಡ ದೇಶ ಗಡಿ ಎಂಬ ಅಜ್ಞಾನ ಚರ್ಮಕ್ಕೆ ಮೆತ್ತಿಲ್ಲ. ಕಣ್ಣಿಗೆ ಆವರಿಸಿದ ಅಜ್ಞಾನದ ಪೊರೆ ಕಣ್ಣಿನಲ್ಲಿರುವ ಸತ್ಯದೊಂದಿಗೆ ಕಳೆದುಕೊಂಡು ನೋಡಬೇಕು. ಆಗ ತನುಗಳೆಲ್ಲ ಓಂಕಾರವೇ. ಗಿಡ ಮರ ಬಳ್ಳಿ ಪಶು ಪಕ್ಷಿ ಕೀಟ ಉರಗ ಜಲಚರಗಳೆಲ್ಲ ಓಂಕಾರವೇ.

ಪ್ರಣವ ಓಂ ನಮಃ ಶಿವಾಯ : ರುದಿರಮಯವಾಗಿಹುದು 'ನ'ಕಾರ ಚರ್ಮ ಓಂಕಾರವಾದರೆ, ರಕ್ತ 'ನ'ಕಾರವಾಗಿದೆ. ಮಾಂಸ 'ಮ'ಕಾರವಾಗಿದೆ.ಅಸ್ಥಿ 'ಶಿ' ಕಾರವಾಗಿದೆ. ಮಜ್ಜಾ 'ವಾ'ಕಾರವಾಗಿದೆ. ಮೇದಸ್ಸು 'ಯ'ಕಾರವಾಗಿದೆ ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ. ಹೀಗೆ ತನುವೇ 'ಓಂ ನಮಃ ಶಿವಾಯ' ಆಗಿರುವಾಗ ಪುನಃ ಪಠಿಸುವುದೆಂದರೇನು ? ಆಯುಷ್ಯ ಪರ್ಯಂತ ಪ್ರಣವ ಪಠಿಸಿದರೂ ಅದರ ಸತ್ಯ ತನುವಿಗೆ ಹೊಳೆಯದಿದ್ದರೆ ಪಠಿಸಿ ವ್ಯರ್ಥವಲ್ಲವೆ ? ಜ್ಞಾನ ಭಂಡಾರಿ ಬಸವಣ್ಣನವರು; ತನುವಿನಲ್ಲಿದ್ದ ಸತ್ಯ ತನುವನ್ನು ಆವರಿಸಿದ ಮನ ತಿಳಿದು ಆ ಸತ್ಯವೇ ತಾನಾಗಬೇಕೆಂದು ಹೇಳಿದ್ದಾರೆ.

598

ವೇದವನೋದಿದಡೇನು ? ಶಾಸ್ತ್ರವಕೇಳಿದಡೇನಯ್ಯ?
ಜಪವ ಮಾಡಿದಡೇನು ? ತಪವ ಮಾಡಿದಡೇನಯ್ಯಾ ?
ಏನ ಮಾಡಿದಡೇನು
ನಮ್ಮ ಕೂಡಲಸಂಗಯ್ಯನ ಮನ ಮುಟ್ಟದನ್ನಕ್ಕ ?

ವೇದ ಆಗಮ ಉಪ ನಿಷತ್ತುಗಳನ್ನು ಓದಿದಡೇನು? ಶಾಸ್ತ್ರವ ಕೇಳಿದಡೇನು ? ಓದಿದರೂ ಅರಿವಿಗೆ ಬರುತ್ತದೆ. ಓದಲು ಬಾರದವರು ಕೇಳಿದರೂ ಅರಿವಿಗೆ ಬರುತ್ತದೆ. ಓದಿದ ಓದು, ಓದಲು ಬಾರದವರು ಕೇಳಿದರೂ ಅರಿವಿಗೆ ಬರುತ್ತದೆ. ಓದಿದ ಓದು, ಕೇಳಿದ ಶಾಸ್ತ್ರಗಳು ತನುವಿನಲ್ಲಿರುವ ಅರಿವಿಗೆ ಹೋಗುವ ಸೂತ್ರ ಗಳೆಂದು ಮನ ತಿಳಿಯದಿದ್ದರೆ ; ಆ ಮನ ತನುವನ್ನು ಜಪ ಮಾಡಲು ಹಚ್ಚು ತ್ತದೆ, ತಪ ಮಾಡಲು ಹಚ್ಚುತ್ತದೆ. ಗಡ್ಡ ಜುಟ್ಟು ಬಿಟ್ಟು ತನುವಿಗೆ ಲಿಂಗ, ಜನಿವಾರಗಳನ್ನು ಧರಿಸಲು ಹಚ್ಚುತ್ತದೆ. ಕಾವಿ ಧರಿಸಿ ಆಶ್ರಮ, ಮಠ, ಪೀಠಾಧಿಗಳನ್ನು ಸ್ಥಾಪಿಸಲು ಮನ ತನುವನ್ನು ಪ್ರೇರೇಪಿಸುತ್ತದೆ.

ಹೀಗೆ ಮನ ತನುವಿನಲ್ಲಿರುವ ಅರಿವಿನತ್ತ ಪಯಣಿಸಿ ಆ ಅರಿವೇ ತಾನಾಗದೆ ತನುವನ್ನು ಮೋಸಕ್ಕೀಡು ಮಾಡುತ್ತದೆ. ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳ್ನು ತನು ಹಿಡಿದು ಪಠಿಸುವ ಮನ ತನು ಹಿಡಿದು ಶಾಸ್ತ್ರಗಳನ್ನು ಕೇಳುವ ಮನ, ತನು ಹಿಡಿದು ಕಾವಿ ಧರಿಸಿ ಜಪತಪ ಅನುಷ್ಠಾನಗಳನ್ನು ಆಚರಿಸುವ ಮನ, ತನುವಿಗೆ ಮೋಸ ಮಾಡಿಕೊಳ್ಳುತ್ತದೆ. ಅನ್ಯ ತನುಗಳಿಗೂ ಮೋಸ ಮಾಡುತ್ತದೆ.

ಮನ ಏನು ಮಾಡಿದರೂ ತನುವಿನ ಆಯುಷ್ಯ ಕಡಿಮೆಯಾಗುವುದಲ್ಲದೆ ತನುವಿನಲ್ಲಿಯೇ ಇರುವ ಅರಿವೆಂಬ ಗುರುದೇವನತ್ತ ಪ್ರಯಾಣಿಸಲು ಸಾಧ್ಯವಾಗುವುದಿಲ್ಲ.

ವೇದ ಶಾಸ್ತ್ರಗಳು ತನುವಿನ ಅರಿವೆಂಬ ಗುರುದೇವನಿಂದ ಪ್ರಕಾಶಿತ ಗೊಂಡಿವೆ. ಅರಿವೆಂಬ ಗುರುದೇವನತ್ತ ಮನ ಪ್ರಯಾಣಿಸುವುದಕ್ಕಾಗಿ ವೇದ ಶಾಸ್ತ್ರಗಳು ಸೂತ್ರಗಳೇ ಹೊರತು ಮತ್ತೇನೂ

ಅಲ್ಲ. ಅವುಗಳನ್ನು ಹಿಡಿದು ವ್ಯವಹರಿಸುವುದು ಆ ವ್ಯವಹಾರಕ್ಕೆ ತುತ್ತಾಗುವುದು ಮನದ ಅಜ್ಞಾನ. ತನುವಿನ ದುರ್ದೈವ !

599

ನೀವು ಹಿರಿಯರೆಂಬಿರಿ, ಕರ್ಮಿಗಳು, ನೀವು ಕೇಳಿರೆ;
ನಿಮ್ಮ ವೇದ ಶಾಸ್ತ್ರಂಗಳು ಆರನು ಹೊಗಳುತ್ತಿದ್ದಾವು?
'' ಓಂ ದ್ಯಾವಾ ಭೂಮೀ ಜನಯನ್‌ದೇವ ಏಕೋ ದೇವ ''
ಎಂದು ಶ್ರುತಿ ಸ್ಮೃತಿಗಳು ಸಾರುತ್ತಲಿದ್ದಾವು.
''ವರ್ಣಾನಾಂ ಬ್ರಾಹ್ಮಣೋ ಗುರು ಃ '' ಎಂಬುದು ಹುಸಿ ;
''ವರ್ಣಾನಾಂ ಗುರುಃ '' ನಮ್ಮ ಕೂಡಲಸಂಗನ ಶರಣರು.

ಜ್ಞಾನ ಎನ್ನುವುದು ಸರ್ವಾಂಗಗಳಲ್ಲಿ ಸಂಗಮವಾಗಿದೆ. ಅಂಗಕ್ಕೆ ಆವರಿಸಿದ ಮನ, ಆ ಜ್ಞಾನವನ್ನು ಕಂಡು ಆ ಜ್ಞಾನವೇ ತಾನಾದ ಅಂಗವೇ ಶ್ರೇಷ್ಠ ಅಂಗ. ಅದು ಇತರ ಅಂಗಗಳಲ್ಲಿಯೂ ಜ್ಞಾನ ಸಂಗಮವಾಗಿದೆ ಎಂದು ಹೇಳಬಲ್ಲದು; ಸೂಚಿಸಬಲ್ಲದು. ಸರ್ವ ಅಂಗಗಳನ್ನು ಸಮದೃಷ್ಟಿಯಿಂದ ನೋಡಬಲ್ಲದು. ಆದರೆ ಅಂತಹ ಅಂಗದ ಗರ್ಭದಲ್ಲಿ ಹುಟ್ಟಿದ ಅಂಗ ಹುಟ್ಟಿನಿಂದಾಗಿ ಶ್ರೇಷ್ಠ ಕನಿಷ್ಠ ಅಂಗ ಎಂದು ಅನ್ನಿಸಿಕೊಳ್ಳುವುದು ಒಂದು ದುರಂತವೇ ಆಗಿದೆ. ಜ್ಞಾನದ ಯಾವ ತಂತ್ರಗಾರಿಕೆಯೂ ಗೊತ್ತಿಲ್ಲದ ಜಾತಿ ಅಂಗವನ್ನು, ವೇಷದಿಂದ ಪಾಂಡಿತ್ಯ ಶಾಸ್ತ್ರದಿಂದ ಗುರು ಎಂದು ಗುರುತಿಸುವುದು ಗುರುತಿಸಿಕೊಳ್ಳುವುದು ಅಪರಾಧ ! ಅದಕ್ಕೆ ಅದೇ ಕೇಡು ಬಗೆದುಕೊಂಡಂತೆ.

'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬುದು ಹುಸಿ ; ''ವರ್ಣಾನಾಂ ಗುರು ಃ '' ನಮ್ಮ ಕೂಡಲಸಂಗನ ಶರಣರು:

ಹುಟ್ಟಿನಿಂದ ಬ್ರಾಹ್ಮಣ, ಜಂಗಮ, ಗುರು ಆಗಲಾರ. ಮನ ಅರಿವೆಂಬ ಗುರುದೇವನಿಗೆ ಶರಣು ಹೋಗುವ ತಂತ್ರಗಾರಿಕೆಯನ್ನು ಅರಿತುಕೊಂಡು ಭಕ್ತನಾಗಬೇಕು; ಜಂಗಮನಾಗಬೇಕು; ಮಾಹೇಶ್ವರನಾಗಬೇಕು, ಪ್ರಸಾದಿಯಾಗಬೇಕು; ಪ್ರಾಣಲಿಂಗಿಯಾಗಬೇಕು; ಶರಣನಾಗಿ ಆ ಶರಣನಲ್ಲಿ ಐಕ್ಯವಾಗಬೇಕು. ಈ ಐಕ್ಯನಿಗೆ ಜನನ ಮರಣಗಳಿಲ್ಲ.

ಈ ತಂತ್ರಜ್ಞಾನವನ್ನು ಬಲ್ಲವರಿಂದ ತಿಳಿದು ತನುವಿನಲ್ಲಿಯೇ ಇರುವ ಈ ತಂತ್ರಜ್ಞಾನ ಶಿಕ್ಷಣವನ್ನು ಮನ ಹೊಂದಬೇಕು. ಅಂಗದಲ್ಲಿಯೇ ಇರುವ ಈ ಲಿಂಗಾಂಗ ಸಾಮರಸ್ಯವನ್ನು ಹೊಂದಿದ ಮನವೇ ಘನ ಮನ. ತನುವಿನ ವೇಷದಿಂದ; ಜಪ ತಪದಿಂದ, ನಿರಂತರ ಪೂಜೆಯಿಂದ ಇದು ಸಾಧ್ಯವಾಗುವುದಿಲ್ಲ.

600

ನಿಜಭಾವ ಲಕ್ಷ್ಮಿ ಸರಸ್ವತಿ ಒಲಿದಡೆ ಕುಲವನರಸಲದೇಕೆ ?
ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವದೇಕೋ ?
ಕಾಮಧೇನು ಮನೆಯಲಿರಲು ಬೇರೆ ಹಯನನರಸಲೇಕೆ ?

ಮೋಹವುಳ್ಳ ಠಾವಿನಲ್ಲಿ ಲಜ್ಜೆಯನರಸಲದೇಕೆಯೋ ?
ಮಹಾದಾನಿ ಕೂಡಲಸಂಗಯ್ಯನೊಲಿದು
ಮಾದಾರ ಚೆನ್ನಯ್ಯನ ಮನೆಯಲುಂಡ !
ವೇದವನೋದಿದವರು ಲಿಂಗವನೊಲಿಸಿ ತೋರಿರೋ !

ನಿಜಭಾವ ಎನ್ನುವುದೆ ಲಕ್ಷ್ಮೀ ಸರಸ್ವತಿ. ನಿಜಭಾವ ಬಲಿತ ಮೇಲೆ ಜಾತಿ ಮತ ಪಂಥಗಳಿಲ್ಲ; ಹೆಣ್ಣು ಗಂಡು ದೇಶ ಭಾಷೆ ಗಡಿಗಳಿಲ್ಲ. ನಿಜಭಾವಕ್ಕಿಂತ ಬೇರೆ ದೇವರಿಲ್ಲ; ಮಂತ್ರ ತಂತ್ರಗಳೂ ಇಲ್ಲ. ನಿಜಭಾವವು ಸಕಲ ಸುಖವನ್ನು ನೀಡುವ ಕಾಮಧೇನು; ಕಲ್ಪವೃಕ್ಷ !

ತನುವಿನಲ್ಲಿ ತನ್ಮಯವಾದ ನಿಜಭಾವ, ಭಾವ ದುರ್ಭಾವಗಳಿಗೆ ತಿಳಿಯಬೇಕು. ನಿರ್ಭಾವವೇ ನಿಜ ಭಾವ! ಇದು ಸರ್ವಾಂಗದಲ್ಲಿ ಸಂಗಮವಾಗಿದೆ. ಆದರೆ ಅಂಗಕ್ಕೆ ಭಾವ ದುರ್ಭಾವಗಳು ಬಳಕೆಯಾಗುತ್ತವೆಯೇ ಹೊರತು ನಿಜ ಭಾವ ಎನ್ನುವ ಸಂಪತ್ತು ಬಳಕೆಯಾಗುವುದೇ ಇಲ್ಲ. ಅಂಗವನ್ನು ಆವರಿಸಿರುವ ಭಾವ ದುರ್ಭಾವಕ್ಕೆ ನಿಜಭಾವ ಬಳಕೆ ಮಾಡುವ ಸೂತ್ರ ತಿಳಿಯಬೇಕು.

ಮನ, ಭಾವವನ್ನು ದುರ್ಭಾವವನ್ನು ಕ್ಷಣಾರ್ಧದಲ್ಲಿ ಬಳಸುತ್ತದೆ. ತನುವಿನಲ್ಲಿ ರಸಾಯನ ಉಂಟು ಮಾಡಿ ಸಂಕಟಕ್ಕೆ ಈಡುಮಾಡುತ್ತದೆ; ಇಲ್ಲ ಸುಖ ಕೊಡುತ್ತದೆ. ಈ ಸುಖ ದುಃಖಗಳಿಂದ ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟಾಯಿತೇ ಹೊರತು ನಿಜಭಾವ ತಿಳಿಯಲಿಲ್ಲ.

ಕಣ್ಣಿನಲ್ಲಿ ನಿಜಭಾವವಿದೆ, ಭಾವವಿದೆ, ದುರ್ಭಾವವಿದೆ, ಮನವೂ ಇದೆ. ಕಣ್ಣಿನಲ್ಲಿರುವ ಮನಕ್ಕೆ ಈ ಮೂರನ್ನೂ ಬಳಕೆ ಮಾಡುವ ಶಕ್ತಿಯಿದೆ. ಆದರೆ ಭಾವ ದುರ್ಭಾವಗಳನ್ನು ಮಾತ್ರ ಸರಳವಾಗಿ ಬಳಸಿ ತನುವಿನಲ್ಲಿ ಸದಾ ರಸಾಯನಿಕ ಕ್ರಿಯೆ ಉಂಟು ಮಾಡುತ್ತದೆ.

ಕಣ್ಣಿನಲ್ಲಿರುವ ಮನ ಕಲ್ಲಿನ ತುಂಡನ್ನು ನಿಜಭಾವದಿಂದ ನೋಡುತ್ತದೆ. ತನುವಿನಲ್ಲಿ ಯಾವ ರಸಾಯನಿಕ ಕ್ರಿಯೆಯನ್ನು ಉಂಟು ಮಾಡುವುದಿಲ್ಲ. ಆ ಕಲ್ಲಿನ ತುಂಡು ಕೆತ್ತಿ ಕ್ರಿಷ್ಣನನ್ನು ಮಾಡಿದಾಗ ಕಣ್ಣಿನಲ್ಲಿರುವ ನಿಜಭಾವ ಮರೆಯಾಗುತ್ತದೆ. ಆಗ ದೇವರು ಎನ್ನುವ ಭಾವ ಮೂಡಿ ತನುವಿನಲ್ಲಿ ರಸಾಯನ ಕ್ರಿಯೆ ಹುಟ್ಟಿ, ಅರಳುವಂತೆ ಮಾಡುತ್ತದೆ.

ಕಲ್ಲಿನ ತುಂಡಿನಲ್ಲಿ ಕ್ರಿಸ್ತನನ್ನು ಕೆತ್ತಿದಾಗ, ಕ್ರಿಷ್ಣನನ್ನು ಪೂಜಿಸುವ ಕಣ್ಣಿನಲ್ಲಿರುವ ಭಾವ ದುರ್ಭಾವಕ್ಕೆ ಮರಳುತ್ತದೆ. ಆಗ ತನುವಿನಲ್ಲಿ ನನ್ನ ದೇವರು ಅಲ್ಲ ಎನ್ನುವ ಸಂಕಟ ಉಂಟಾಗುತ್ತದೆ. ತನುವಿನಲ್ಲಿ ಕ್ರಿಷ್ಣನ ಕುಲ, ಕ್ರಿಸ್ತನ ಕುಲ ಎನ್ನುವ ಜಾತಿ ಸೃಷ್ಟಿಯಾಗುತ್ತದೆ. ಕಣ್ಣಿನಿಂದ ಕಲ್ಲು ನೋಡಿದ ನಿಜಭಾವ ಕಣ್ಣಿನಲ್ಲಿಯೇ ಉಳಿಯುತ್ತದೆ.

ಇದು ಮನಸ್ಸಿನ ಗುಣಧರ್ಮ! ಮನಸ್ಸು, ನಿಜಭಾವದತ್ತ ಪಯಣಿಸಿ ಕ್ರಿಷ್ಣ, ಕ್ರಿಸ್ತನ ಮೂರ್ತಿಗಳನ್ನು ನೋಡಿದರೆ ಅವೆರಡೂ ಕಲ್ಲುಗಳೇ ಆಗಿವೆ. ನೋಡುವ ಕಣ್ಣಿಗೆ ನಿಜಭಾವ ಬಳಕೆಯಾಗುತ್ತದೆ. ಕಣ್ಣು ಕಲ್ಲನ್ನೇ ನೋಡುತ್ತದೆ. ತನುವಿಗೆ ಕಲ್ಲಿನ ಸಂದೇಶ ರವಾನೆ ಮಾಡುತ್ತದೆ. ತನುವಿನಲ್ಲಿ ಭಾವ ದುರ್ಭಾವಗಳು ಸೃಷ್ಟಿಯಾಗುವುದಿಲ್ಲ. ಅರಿವಿನ ಶ್ರೀಮಂತ ತನುವಾಗುತ್ತದೆ. ಕುಲವನರಸದ ಕಾಮಧೇನುವಾಗುತ್ತದೆ. ವೇದವನೋದಿದವರು ನಿಜಭಾವವನ್ನು ಒಲಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ವೇದ ಸೃಷ್ಟಿಯಾದದ್ದೇ ನಿಜ ಭಾವದಿಂದ !

601

ಆದ್ಯರಿಗಲ್ಲದೆ ವೇದ್ಯವಾಗದು; ಮಾಣಿಭೋ,ಮಾಣಿಭೋ !
ಶಿವಭಕ್ತನೆ ಕುಲಜ.
ಕೈವರ್ತ ಗರ್ಭಸಂಭೂತ ಮಾರ್ಕಂಡೇಯ ಮಹಾ ಮುನೇಃ ।
ತಪಸಾ ಜಾಯತೇ ವಿಪ್ರಕುಲಂ ಜಾತಿರ್ನವಿದ್ಯತೇ ॥
ಜಾತನಲ್ಲ ಅಜಾತನಲ್ಲ;
ಕೂಡಲಸಂಗನ ಶರಣರು ನಿಸ್ಸೀಮರಯ್ಯಾ !

ಅಂಗದಲ್ಲಿಯೇ ಸಂಗಮವಾದ ಅರಿವಿನ ಅದ್ಭುತವಾದ ಶಕ್ತಿ ಪುರಾತನರಿಗೆ, ಆದ್ಯರಿಗೆಲ್ಲದೆ ಇತರರಿಗೆ ವೈೇದ್ಯವಾಗದು. ಈ ಶಕ್ತಿ ತಿಳಿಯುವ ಹಂಬಲ ಉಳ್ಳವರೆಲ್ಲರೂ ಆದ್ಯರ ಸಾಲಿಗೆ ಸೇರುತ್ತಾರೆ.

ಅರಿವೇ ಗುರು ; ಗುರುದೇವನೇ ಮಹಾದೇವ; ಮಹಾದೇವನೇ ಸದಾಶಿವ. ಈ ಶಕ್ತಿಯನ್ನು ತಿಳಿಯುವವನೆ ಶಿವಭಕ್ತ.ಆತನೇ ಅರಿವಿನ ಕುಲಜ. ಆತ ಯಾವ ಜಾತಿಯವನೂ ಅಲ್ಲ;ಯಾವ ಜಾತಿಯ ಹುಟ್ಟೂ ಆತನಿಗಿಲ್ಲ. ಆತ ಸೀಮೆಯಿಲ್ಲದ ನಿಸ್ಸೀಮ ! ಅಂಗದಲ್ಲಿಯೇ ಇದ್ದ ಅರಿವಿನ ಸಂಗಯ್ಯನನ್ನು ಒಲಿಸಿಕೊಂಡ ಮಹಾನುಭಾವಿ !

ಮಾರ್ಕಂಡೇಯ ಒಬ್ಬ ಮಹರ್ಷಿ, ಈತ ಹುಟ್ಟುವಾಗ ಅಲ್ಪಾಯುಷಿ. ಮೃಕಂಡು ಮರುದ್ವತಿ ದಂಪತಿಗಳ ಮಗ. ಮಹಾ ಶಿವ ಭಕ್ತನಾಗಿ, ಅಂಗದಲ್ಲಿರುವ ಅರಿವೆಂಬ ಶಿವನನ್ನು ಮೆಚ್ಚಿಸಿ ಜನನ ಮರಣಗಳೆರಡನ್ನೂ ಗೆದ್ದ.

ಅಂಗಕ್ಕೆ ಜನನ ಉಂಟು ; ಮರಣ ಉಂಟು. ಸರ್ವಾಂಗದಲ್ಲಿರುವ ಅರಿವಿಗೆ ಜನನ ಮರಣಗಳಿಲ್ಲ ! ಅದನ್ನು ಒಲಿಸಿಕೊಂಡ ಮನಕ್ಕೂ ಜನನ ಮರಣಗಳಿಲ್ಲ.

ಜಲ ಬಿಂದುವಿಗೆ ಜಾತಿಯಿಲ್ಲ. ಈ ಬಿಂದುವನ್ನು ಬಂಧಿಸಿದ ಜಲಜನಕಕ್ಕೂ ಆಮ್ಲಜನಕಕ್ಕೂ ಜಾತಿಯಿಲ್ಲ. ಜಲಜನಕವನ್ನು ಆಮ್ಲಜನಕವನ್ನು ಬಂಧಿಸಿ ಅದರಲ್ಲೊಂದಾದ ಬಯಲಿಗೂ ಜನನವಿಲ್ಲ, ಮರಣವಿಲ್ಲ. ಈ ಜಲಬಿಂದುವಿನಲ್ಲಿದ್ದ ಬಯಲು ಬೀಜವಾಗಿ ಬಿಂದುವನ್ನು ಗರ್ಭಕ್ಕೆ ತಳ್ಳಿ ತನುವಾಗಿದೆ. ಗರ್ಭದಿಂದ ಹೊರ ಬಂದ ಜಲ ನೋಡುವುದನ್ನು, ಕೇಳುವುದನ್ನು, ರುಚಿಸುವುದನ್ನು, ಸ್ಪರ್ಶಿಸಿ, ಪರಿಮಳ ಮೂಸಿಸುವುದನ್ನು ಕಲಿತಿದೆ. ಇವೆಲ್ಲವುಗಳಲ್ಲಿ ಅರಿವೇ ತುಂಬಿದ್ದರೂ ಅರಿವನರಿಯದೆ ಅಲ್ಪಾಯುಷಿಯಾಗಿದೆ. ಜನನ ಮರಣಗಳನ್ನು ಸೃಷ್ಟಿ ಮಾಡಿಕೊಂಡಿದೆ. ಅರಿತರೆ ಅಂಗಕ್ಕೆ ಜನನವಿಲ್ಲ, ಮರಣವಿಲ್ಲ ! ಅದು ಮಾರ್ಕಂಡೇಯ ಮಹರ್ಷಿ ! ಜಾತನೂ ಅಲ್ಲ ಅಜಾತನೂ ಅಲ್ಲ; ಸೀಮೆಯೇ ಇಲ್ಲದ ನಿಸ್ಸೀಮ ಮಹಾಮುನಿ!

602

ಎಮ್ಮವರು ಅಧಿಕರು, ಎಲ್ಲರಿಂದವೂ ಅಧಿಕರು ;
ಪಾಕವ ಮಾಡುವ ಭಾಂಡ ಸೊಣಗನ ಡೊವಿಗೆಯಯ್ಯಾ !
ಕೆರಹಿನಲ್ಲಿ ಮುಚ್ಚುವುದು ಆವ ಆಗಮವಯ್ಯಾ ?
ಕೂಡಲಸಂಗಮದೇವಾ, ನಿಮ್ಮ ವಚನವಿಂತೆಂದುದು ;

“ ಭವಿ ನೋಡಿದ ಲಿಂಗಾರ್ಪಿತವಾಗದೆ ”ಂದು .

ಎಮ್ಮವರು ಎಂದರೆ ಆದ್ಯರು ; ಪುರಾತನರು. ಅರಿವಿನ ಸ್ವಾನುಭವಿಗಳು. ಈ ಆದ್ಯರಲ್ಲಿಯೇ ಒಬ್ಬರಾದ ಶ್ವಪಚಯ್ಯನ ಸತ್ಯಕತೆಯನ್ನು ಬಸವಣ್ಣನವರು ತಮ್ಮ ವಚನದ ಸಾಲುಗಳಲ್ಲಿ ಹೆಣೆದಿದ್ದಾರೆ.

ಶ್ವಪಚಯ್ಯ ಎನ್ನುವ ಶರಣರು ನಾಯಿ ಬುರುಡೆಯಲ್ಲಿ ಅನ್ನ ಕುದಿಸುತ್ತಿದ್ದರು. ಅವರಿಗೆ ಅದು ಪ್ರಿಯವಾದ ಊಟ. ಹೀಗೆ ಅನ್ನ ಮಾಡುತ್ತಿರು ವಾಗ ಬೀದಿಯಲ್ಲಿ ಆಗಮ ವೇದ ಉಪನಿಷತ್ತುಗಳನ್ನು ಪಠಿಸುವವರು ಹೋಗುತ್ತಿದ್ದರು. ಅವರ ನೆರಳು ಅನ್ನದ ಮೇಲೆ ಬೀಳದಿರಲೆಂದು ತಮ್ಮ ಪಾದದಲ್ಲಿದ್ದ ಕೆರವು ತೆಗೆದು ನಾಯಿ ಬುರುಡೆಯ ಮೇಲೆ ಮುಚ್ಚಿದರು. ಭವಿ ನೋಡಿದ ಓಗರ ಅನ್ನ ಅರಿವಿನ ಸಂಗಯ್ಯನ ಅಂಗಕ್ಕೆ ಅರ್ಪಣೆಯಾಗದೆಂದು ಹಾಗೆ ಮಾಡಿದರು.

ವೇದ ಆಗಮ ಉಪನಿಷತ್ತುಗಳನ್ನು ಓದಿದರೂ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೆಂದರೆ ಯಾರೆಂದು ಅರಿಯದ ಭವಿಗಳು. ಇಂತಹವರ ನೆರಳು ಉಣ್ಣುವ ಅನ್ನದ ಮೇಲೆ ಬೀಳದಿರಲೆಂದು ನಿರ್ಧರಿಸಿದರು.

ಅನ್ನ ಮಾಡಲು ಬಳಸಿದುದು ಗಡಿಗೆಯಲ್ಲ ; ಅದು ಸತ್ತ ನಾಯಿ ತಲೆಯ ಬುರುಡೆ ! ಅದು ಆಗಮಕ್ಕಿಂತ ದೊಡ್ಡದೋ ? ಅದನ್ನು ಓದುವವರಿಗಿಂತಲೂ ದೊಡ್ಡದೋ ? ಹಾಗಾದರೆ ಕೆರಹಿನಲ್ಲಿ ಮುಚ್ಚಿದ ಬುರುಡೆ ಆವ ಆಗಮ ?

ಚಿನ್ನದ ಮಡಕೆಯಲ್ಲಿಟ್ಟ ಅನ್ನವೂ ಅನ್ನವೇ ; ನಾಯಿಯ ಬುರುಡೆಯಲ್ಲಿಟ್ಟ ಅನ್ನವೂ ಅನ್ನವೇ ಆಗಿದೆ. ಅನ್ನವೊಂದೇ ಪಾತ್ರೆ ಬೇರೆ ಬೇರೆ. ಅಂಗವೊಂದೇ ಅರಿತ ಅರಿವು ಬೇರೆ ಬೇರೆ.

ಒಂದು ಆಗಮ ಓದಿದ ಅಂಗ. ಮತ್ತೊಂದು ಸಕಲ ಆಗಮವೇ ತಾನೆಂದು ಅರಿತ ಅರಿವಿನ ಅಂಗ ! ಅರಿವಿನ ಅಂಗ ಹೇಗಿದ್ದರೇನು ? ಅದು ಅರಿವಿನ ಅನ್ನ ನೋಡುವುದೇ ವಿನಹ ಪಾತ್ರೆ ನೋಡುವುದಿಲ್ಲ.

603

ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು-
ಸರಿಯಲ್ಲ, ನೋಡಾ
ಕೂಡಲಸಂಗಮದೇವಾ,
ನಿಮ್ಮ ಶರಣರ ಚಮ್ಮಾವುಗೆಗೆ !

ಬ್ರಹ್ಮಜ್ಞಾನಿ ಯಾವ ಕಾಯಕದಲ್ಲಿದ್ದರೇನು? ಯಾರಿಗೂ ಗೊತ್ತಿಲ್ಲದ ಅಪರಿ ಚಿತನಾದಡೇನು ? ಆತ ಇಡೀ ಬ್ರಹ್ಮಾಂಡಕ್ಕೆ ಒಡೆಯ ! ಆತನಿಗೆ ಮಿಗಿಲಾದ ಸಾಮ್ರಾಟ ಚಕ್ರವರ್ತಿಗಳೇ ಇಲ್ಲ. ಆತನಿಗೆ ಮಿಗಿಲಾದದ್ದು ಭೂಮಿಯೂ ಅಲ್ಲ; ಕೈಲಾಸವೂ ಅಲ್ಲ. ಪೃಥ್ವಿಯೊಂದೇ ಅಲ್ಲ ; ಬ್ರಹ್ಮಾಂಡವೂ ಆತನ ಚಮ್ಮಾವುಗೆಗೆ ಸಮಬಾರದು.

ಬ್ರಹ್ಮಜ್ಞಾನಿ ವಿರಾಟ ಸ್ವರೂಪ: ಬೆಳಗಿ ತೋರಿದ ಹನ್ನೆರಡು ಜ್ಯೋತಿಯ, ನಿಲಿಸಿ ತೋರಿದ ಹದಿನಾಲ್ಕು ಭುವನವ ! ಈ ಜಗದ ಜಂಗುಳಿಯ ಕಾಟ ಗೋವಳ ತಾನಾಗಿ, ಚೌರಾಸಿ

ಲಕ್ಷ ಜೀವರಾಶಿಗಳಿಗೆ ರಾಶಿವಾಳ ತಾನಾಗಿ ಸಕಲದ ಅಳಿವಿನಿಂದ ನಿಜದ ನಿಲವ ನೋಡಿ ಕಂಡೆನು ಗುಹೇಶ್ವರಾ. ನಿಮ್ಮ ಶ್ರೀ ಪಾದಕೆ ನಮೊ ನಮೋ ಎನುತಿರ್ದೆನು ಎಂದು ಪ್ರಭುಗಳು ಶರಣರನ್ನು ಕುರಿತು ಹೇಳಿದ್ದಾರೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ. ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ; ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ.ಅಗಮ್ಯ ಅಗೋಚರ ಅಪ್ರಮಾಣ ಅಪ್ರತಿಮವಾದ ಲಿಂಗವೇ ಶರಣನ ತನುವಿನಲ್ಲಿ ಬಂದು ಚುಳುಕಾಗಿದೆ ಎಂದು ಅಣ್ಣನವರು ಹೇಳುತ್ತಾರೆ.

604

ದೇವಾ, ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು ;
ದೇವಾ, ನಿಮ್ಮ ಪೂಜಿಸಿ ದಾಸನ ಕುಲ ದೆಸೆವಡೆಯಿತ್ತು ,
ದೇವಾ, ನಿಮ್ಮಡಿಗೆರಗಿದ್ದ ಮಡಿವಾಳ ಮಾಚಯ್ಯ ನಿಮ್ಮಡಿಯಾಳಾದ.
ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ ಮೇರೆಯುಂಟೇ, ದೇವಾ?
ಶ್ವಪಚೋಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೆ ರತ ಃ ।
ಲಿಂಗಾರ್ಚನ ವಿಹೀನೋಪಿ ಬ್ರಾಹ್ಮಣಃ ಶ್ವಪಚಾಧಮಃ ॥ ಎಂಬುದಾಗಿ
ಜಾತಿ-ವಿಜಾತಿಯಾದಡೇನು ಅಜಾತಂಗೆ ಶರಣೆನ್ನದವನು ?
ಆತನೆ ಹೊಲೆಯ, ಕೂಡಲ ಸಂಗಮದೇವಾ.

ಅಂಗ ಯಾವ ಗರ್ಭದಲ್ಲಿ ಹುಟ್ಟಿದರೇನು? ಅದು ಜ್ಞಾನಿಯಾಗುವ ಸರ್ವ ಸ್ವತಂತ್ರವನ್ನು ಹೊಂದಿದೆ. ಮಾದಾರ ಚೆನ್ನಯ್ಯ ಬ್ರಹ್ಮಜ್ಞಾನಿಯಾದ; ಅಜಾತನಾದ. ಅರಿವೆಂಬ ಗುರುದೇವನನ್ನು ಪೂಜಿಸಿ ಆ ಗುರುದೇವನೇ ತಾನಾದ ದಾಸಿಮಾರ್ಯನ ಕುಲ ಯಾವುದಾದರೇನು ? ಆತನ ದೆಸೆವಡೆದು ಉತ್ತಮ ಕುಲಜನಾದ; ಬ್ರಹ್ಮ ಜ್ಞಾನಿಯಾದ.

ಮೈಲಿಗೆ ತೊಳೆಯುವ ಕಾಯಕದಲ್ಲಿದ್ದ ಮಡಿವಾಳಯ್ಯ ಅರಿವೆಂಬ ಮಹಾ ದೇವನ ಅಡಿಯಾಳಾದ. ಸ್ವಯಂ ಬ್ರಹ್ಮಜ್ಞಾನಿಯೆ ತಾನಾದ.

ಅಂಗದಲ್ಲಿದ್ದ ಅರಿವೆಂಬ ಗುರುದೇವನು ಒಲಿದು ಒಲಿಸಿಕೊಳ್ಳುವ ಬಗೆ ತಿಳಿಯದ ಮನ ಯಾವ ಅಂಗದಲ್ಲಿದ್ದರೇನು ? ಅರಿವೆಂಬ ಗುರುದೇವನು ಒಲಿವ ಅಂಗಕ್ಕೆ ಒಲ್ಲದ ಅಂಗಕ್ಕೆ ಕುಲಮೇರೆಗಳುಂಟೆ ?

ಭ್ರಮೆಯನ್ನು ಕಳೆದುಕೊಂಡು ಬ್ರಹ್ಮಜ್ಞಾನಿಯೇ ತಾನಾದ ಅಂಗ ಶ್ವಪಚ ನಾದರೇನು? ಆತ ಮುನಿಶ್ರೇಷ್ಠ! ಭ್ರಮೆಯನ್ನು ಆವರಿಸಿಕೊಂಡ ಅಂಗ ಉತ್ತಮ ಕುಲದ್ದಾದರೇನು ? ಅದು ಸರ್ವ ಭ್ರಮಾಧೀನದ ಅಂಗ ; ಶ್ವಪಚನಿಗಿಂತ ಕೀಳಾದ ಅಂಗ. ಸರ್ವಾಂಗದಲ್ಲಿ ಸಂಗಮವಾದ ಅರಿವೆಂಬಸಂಗಮನಾಥನನ್ನು ತಿಳಿಯದ ಅಂಗ.

605

ಚತುರ್ವೇದಿಯಾದಡೇನು? ಲಿಂಗವಿಲ್ಲದವನೆ ಹೊಲೆಯ !
ಶ್ವಪಚನಾದಡೇನು? ಲಿಂಗವಿದ್ದವನೆ ವಾರಣಾಸಿ,

ಆತನ ನುಡಿಗಡಣವೇ ಲೇಸು, ಆತ ಜಗಕ್ಕೆ ಪಾವನ,
ಆತನ ಪ್ರಸಾದವೆನಗಮೃತ ಸೇವನೆ !
ನಮೇ ಪ್ರಿಯಶ್ಚತುರ್ವೇದೀ ಮದ್ಭಕ್ತಃ ಶ್ವಪಚೋಪಿ ವಾ ।
ತಸ್ಸ ದೇಯಂ ತತೋ ಗ್ರಾಹ್ಯಂ ಸಚ ಪೂಜ್ಯೋ ಯಥಾಹ್ಯಹಂ ॥ ಎಂದುದಾಗಿ
ಕೂಡಲಸಂಗಮದೇವರನರಿದು ಪೂಜಿಸಿದಾತ ಷಡುದರುಶನಕ್ಕಧಿಕ,
ಜಗಕ್ಕೆ ಪಾವನ, ನೋಡಾ !

ಅಂಗವನ್ನು ಹೆಣ್ಣು ಗಂಡು ಎಂದು ಕೂಡಾ ಭೇದ ಮಾಡಿ ನೋಡಲು ಬರುವುದಿಲ್ಲ. ಅಂದ ಮೇಲೆ ಅದಕ್ಕೆ ಕುಲದಿಂದ ಜಾತಿ ಸಂಕರದಿಂದ ಗುರುತಿಸಿ ಕರೆಯಲು ಸಾಧ್ಯವೇ ? ಅಂಗ ಚತುರ್ವೇದಗಳನ್ನು ಪಠಿಸಿ ರೂಢಿಮಾಡಿಕೊಂಡರೇನು ? ಆ ಅಂಗಕ್ಕೆ ಮತ್ತೊಂದು ಅಂಗವನ್ನು ತನ್ನಂತೆಯೇ ಇರುವ ಜ್ಞಾನದ ಅಂಗ ಎಂದು ನೋಡಲು ಬಾರದಿದ್ದರೆ ಅದು ಅರಿವೆಂಬ ಲಿಂಗವನ್ನು ಬಳಸದ ಅಂಗ ; ಲಿಂಗವಿಲ್ಲದ ಅಂಗ ; ಹೊಲೆಯ ಅಂಗ !

ಅಂಗ ಯಾವ ವೇಷ ಧರಿಸಿದಡೇನು? ಅದು ಶ್ವಪಚನಾದಡೇನು? ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗವನ್ನು ಬಳಸಿ ಮತ್ತೊಂದು ಅಂಗವೆಂಬ ಲಿಂಗವನ್ನು ಪೂಜಿಸುವ ಅಂಗವೇ ವಾರಣಾಸಿ.

ಅ ಅಂಗದ ನುಡಿಗಡಣವೇ ಲೇಸು; ಅದು ಜಗಕ್ಕೆ ಪಾವನ ! ಸದಾ ಬ್ರಹ್ಮರಸವನ್ನೆ ಸ್ಫುರಿಸುವ ಬ್ರಹ್ಮಜ್ಞಾನದ ಅಂಗ! ಅಂತಹ ಅರಿವಿನ ಅಂಗ ಷಡುದರಶನಗಳಿಗೂ

ಅಧಿಕ ! ಆಗಮ ಉಪನಿಷತ್ತುಗಳಿಗೂ ಅಧಿಕ !

606

ಭಕ್ತಿ ಹೀನನ ದಾಸೋಹವ ಸದ್ಭಕ್ತರು ಸವಿಯರು ;
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು.
ಲಿಂಗಸಂಬಂಧವಿಲ್ಲದವರ ನುಡಿ
ಕೂಡಲಸಂಗನ ಶರಣರಿಗೆ ಸಮನಿಸದು.

ಅಂಗದಲ್ಲಿ ಜ್ಞಾನ ಸಂಗಮವಾಗಿದೆ. ಅಂಗವನ್ನು ಆವರಿಸಿದ ಮನವು ಅಂಗದಲ್ಲಿಯೇ ಇರುವ ಮಹಾಜ್ಞಾನಕ್ಕೆ ಶ್ರೀಗುರುವೆಂದು ಮನ್ನಣೆ ನೀಡಿ; ಆ ಗುರುದೇವನನ್ನು ಒಲಿಸಿಕೊಂಡ ಮನವೇ ಸದ್ಭಕ್ತ ! ಅದು ಸ್ವಾನುಭಾವದ ಮೇರುಪರ್ವತ. ಇಂತಹ ಮಹಾಜ್ಞಾನಿ ಅಂಗಕ್ಕೆ ಭಗವದ್ಗೀತೆ ಬೈಬಲ್‌ಗಳ ಅವಶ್ಯಕತೆಯಿಲ್ಲ, ಅಂಗದಲ್ಲಿರುವ ಮಹಾಜ್ಞಾನವನ್ನು ಅಂಗವೇ ಆವರಿಸಿರುವ ಮನ ತಿಳಿದುಕೊಂಡು ಆ ಜ್ಞಾನದಲ್ಲಿ ಸಂಗಮವಾಗಿದೆ. ಇಂತಹ ಜ್ಞಾನ ಸಂಗಮದ ಅಂಗವೇ ಸದ್ಭಕ್ತನ ಅಂಗ !

ಭಕ್ತಿ ಹೀನನ ದಾಸೋಹವ ಸದ್ಭಕ್ತರು ಸವಿಯರು:

ಜ್ಞಾನಕ್ಕೆ ಭಕ್ತಿ ಮಾಡದ ಮನ ವೇದ ಆಗಮ ಉಪನಿಷತ್ತುಗಳನ್ನು ಓದಿ ಅದನ್ನು ಜ್ಞಾನ ದಾಸೋಹವೆಂದು ಉಪನ್ಯಾಸ ಮಾಡಿದರೆ ಅಂತಹ ಉಪನ್ಯಾಸವನ್ನು ಸದ್ಭಕ್ತರು ಮಹಾಜ್ಞಾನಿಗಳು ಸವಿಯರು. ಅವರಿಗೆ ಇದು ರುಚಿಸುವದಿಲ್ಲ. ಏಕೆಂದರೆ ಅದು ಪುಸ್ತಕದಲ್ಲಿರುವ ತಿರುಳೆ ಹೊರತು

ಅಂಗದಲ್ಲಿಯೇ ಇರುವ ಅನುಭವವಲ್ಲ, ಅಂಗದಲ್ಲಿರುವ ಅನುಭವವೇ ಪುಸ್ತಕ ಸೇರಿ ಅಕ್ಷರ ರೂಪದಲ್ಲಿ ಮುದ್ರಣಗೊಂಡಿದೆ. ಅದೊಂದು ಅಂಗ ಹೊರಹಾಕಿದ ಎಂಜಲು. ಅಂತಹ ಉಪನ್ಯಾಸ ಎಂದೂ ಮೀಸಲಾಗಲಾರದು. ಜ್ಞಾನಕ್ಕೆ ಹೋಗುವ ಹಾದಿ ಆ ಉಪನ್ಯಾಸದಲ್ಲಿರುವುದಿಲ್ಲ. ಆದ್ದರಿಂದ ಅಂತಹ ದಾಸೋಹವನ್ನು ಸದ್ಭಕ್ತರು -ಜ್ಞಾನಿಗಳು- ಸ್ವಾನುಭವಿಗಳು- ಶರಣರು ಸವಿಯರು.

ಬೇವಿನ ಹಣ್ಣು ಕಾಗೆಗೆ ಇಷ್ಟವಾಗುವುದೆ ಹೊರತು ಕೋಗಿಲೆಗಲ್ಲ. ಅದೇನಿದ್ದರೂ ಶ್ರೀಗಂಧದ ಹಣ್ಣನ್ನೇ ಮೆಲಿವುದು! ಮಾವಿನ ಬನದಲಿ ಅರಿವಿನ ಸಿಹಿ ಊಟ ಉಂಡು ಉಲಿಯುವುದು ಕೋಗಿಲೆಯ ಧರ್ಮ!

607

ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ, ಅಯ್ಯಾ ?
ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು.
ಚಾಂಡಾಲ ವಾಟಿಕಾಯಾಂ ವಾ ಶಿವಭಕ್ತಃ ಸ್ಥಿತೋ ಯದಿ ।
ತತ್ ಶ್ರೇಣಿಃ ಶಿವಲೋಕಸ್ಯ ತದ್‌ಗೃಹಂ ಶಿವಮಂದಿರಂ ॥ ಎಂದುದಾಗಿ,
ಲೋಕದ ಡಂಬಕರ ಮಾತು ಬೇಡ,
ಕೂಡಲಸಂಗಮದೇವನಿದ್ದುದೆ ಕೈಲಾಸ.

ವೇದ ಆಗಮ ಉಪ ನಿಷತ್ತುಗಳು, ಭಗವದ್ಗೀತೆ ಬೈಬಲ್‌ಗಳು 'ಕಾಯ'ವೇ ಕೈಲಾಸವೆಂದು ಸೂಚಿಸುವ ದಿಕ್ಸೂಚಿಗಳು ! ಕಾಯದಿಂದಲೇ ಹೊರ ಬಂದ ತೃಣಗಳು. ಆದರೂ ಕಾಯದಲ್ಲಿರುವ ಕೈಲಾಸವನ್ನು ಬಿಟ್ಟು ಮನ ಪುಸ್ತಕಗಳನ್ನು ನಂಬುತ್ತದೆ ; ಅದನ್ನು ಪಠಿಸುವವರನ್ನೇ ನಂಬುತ್ತದೆ. ಕಾಯವೆಂಬ ಕೈಲಾಸವನ್ನು ಹೊಲೆಗೇರಿ ಮಾಡಿಕೊಳ್ಳುತ್ತದೆ.

ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ, ಅಯ್ಯಾ :

ರಾಜ-ಚಕ್ರವರ್ತಿ ತನ್ನ ಸೈನ್ಯದೊಂದಿಗೆ ಬಂದು ಕೊಳಚೆ ಪ್ರದೇಶದಲ್ಲಿ- ಹೊಲೆಗೇರಿಯಲ್ಲಿ ಬೀಡು ಬಿಡಲು ಆ ಹೊಲೆಗೇರಿ ಸುಂದರವಾದ ಬನವಾಗುತ್ತದೆ.

ಪ್ರತಿ ಅಂಗದಲ್ಲಿಯೂ ಇದ್ದ ಅರಿವೆಂಬ ಸಂಗಮನಾಥನ ಮನೆಯನ್ನು ಕೈಲಾಸವೆ ಎಂದು ನಂಬಬೇಕು. ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳನ್ನು ಆಧರಿಸಿ ಅವೇ ಎಲ್ಲ ಅವುಗಳನ್ನು ಓದಿ ಹೇಳುವ ನಾವೆ ಬಲ್ಲ ಎಂದು ಹೇಳುವ ಲೋಕದ ಡಂಬಕರ ಮಾತು ಬೇಡ. ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಯ್ಯನಿದ್ದುದೆ ಕೈಲಾಸ.

608

ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ
ಲಿಂಗವಿಲ್ಲದೆ ಉಗುಳ ನುಂಗಿದಡೆ
ಅಂದಂದಿಗೆ ಕಿಲ್ಬಿಷವಯ್ಯಾ
ಏನೆಂಬೆ ಏನೆಂಬೆನಯ್ಯಾ ?
ಲಿಂಗವಿಲ್ಲದೆ ನಡೆವವರ ಲೌಕಿಕ; ಮುಟ್ಟಲಾಗದು;

ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ; ಕೇಳಲಾಗದು!
ಲಿಂಗವಿಲ್ಲದೆ ಗಮನಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ,
ಕೂಡಲಸಂಗಮದೇವಾ !

ಅಂಗದಲ್ಲಿ ಅರಿವೆಂಬ ಲಿಂಗವಿದ್ದು ; ಅಂಗದಲ್ಲಿ ಮನವೆಂಬ ಭಕ್ತನಿದ್ದು; ಅರಿವೆಂಬ ಲಿಂಗವನ್ನು ಹೆಜ್ಜೆ ಹೆಜ್ಜೆಗೆ ಬಳಸದೆ ನಡೆಯುವ ಭಕ್ತ ; ಅರಿವೆಂಬ ಲಿಂಗವನ್ನು ಪ್ರತಿ ನುಡಿಗೂ ಬಳಸದೆ ನುಡಿಯುವ ಭಕ್ತ ; ಅರಿವೆಂಬ ಲಿಂಗವ ಬಳಸದೆ ಉಗುಳ ನುಂಗುವುದೂ ಅಪರಾಧ ವೆಂದು ತಿಳಿಯದ ಭಕ್ತ ಅಂದಂದಿಗೆ ತಿಳಿಯದ ಭಕ್ತ ಆದಂದಿಗೆ ಕಿಲ್ಬಿಷವಯ್ಯಾ.

ಅರಿವೆಂಬ ಲಿಂಗವಿಲ್ಲದೆ ನಡೆಯುವ ಅಂಗವದು ಶುದ್ಧ ಲೌಕಿಕ. ಅಂತಹ ಅಜ್ಞಾನಿ ಲಿಂಗವನ್ನು ಮುಟ್ಟಲಾಗದು. ಅರಿವಿಲ್ಲದ ಅಂಗದ ಶಬ್ದವದು ಸೂತಕ. ಆ ಶಬ್ದವನು ಕೇಳಲಾಗದು.ಅರಿವಿಲ್ಲದೆ ನೋಡುವ ಅಂಗವನ್ನು ಅರಿವಿನ ಅಂಗವೆಂದು, ಅದು ಲಿಂಗಯ್ಯ ವಾಸವಿದ್ದ ಅಂಗವೆಂದು ಹೇಳಲಾಗದು.

ಅರಿವಿಲ್ಲದೆ ಗಮನಿಸುವ ಅಂಗವದು ನೋಡಿದರೆ ವ್ರತಗೇಡಿ, ಮೂಸಿಸಿ- ರುಚಿಸಿದರೆ ವ್ರತಗೇಡಿ,ಮುಟ್ಟಿದರೂ ವ್ರತಗೇಡಿ.

ಅಂಗದ ಮೇಲೆ ಲಿಂಗ ಹಾಕಿಕೊಂಡ ಅಂಗಗಳಿಗೆ ಸರ್ವಾಂಗದಲ್ಲಿದ್ದ ಅರಿವೆಂಬ ಲಿಂಗದ ಪರಿಚಯವಿಲ್ಲ. ಅಂಗದ ಮೇಲೆ ಲಿಂಗ ಇಲ್ಲದ ಅಂಗಗಳಿಗೂ ಅರಿವೆಂಬ ಲಿಂಗದ ಪರಿಚಯವಿಲ್ಲ. ಕಣ್ಣಿಗೆ ಬಂದ ಅಜ್ಞಾನದ ಕಿಲುಬು ಬೆಳಗಿಸಿಕೊಂಡು ಅರಿವಿನಿಂದ ನೋಡಲು ಇವೆರಡೂ ಅಂಗಗ ಳಿಗೆ ಸಾಧ್ಯವಾಗುವುದಿಲ್ಲ. ಕಿವಿಗೆ ಮೆತ್ತಿದ ಅಜ್ಞಾನದ ಕಿಲುಬು ಬೆಳಗಿಸಿಕೊಂಡು ಕೇಳಲು ಬರುವುದಿಲ್ಲ. ಶಬ್ದಸೂತಕದ ಅಂಗಗಳು. ನೋಡಿದರೆ, ಕೇಳಿದರೆ ಮುಟ್ಟಿದರೆ, ರುಚಿಸಿದರೆ, ಮೂಸಿಸಿದರೆ ಅರಿವೆಂಬ ಲಿಂಗ ಮರೆತ ಅಂಗ ಭಂಗಕ್ಕೆ ಗುರಿಯಾಗುತ್ತದೆ. ಅಂಗದ ಅರಿವಿನ ವ್ರತಗೆಟ್ಟು ಲೌಕಿಕದ ಅಂಗವಾಗುತ್ತದೆ, ಸೂತಕದ ಅಂಗವಾಗುತ್ತದೆ. ಲಿಂಗವಿಲ್ಲದೆ ನಡೆವ ಅಂಗಕ್ಕೆ ನಡೆಯಲು ಬರುವುದಿಲ್ಲ, ನುಡಿಯಲೂ ಬರುವುದಿಲ್ಲ, ನೋಡಲೂ ಬರುವುದಿಲ್ಲ, ಮುಟ್ಟಲೂ ಬರುವುದಿಲ್ಲ. ಕೇಳಲು ಕೂಡಾ ಬರುವುದಿಲ್ಲ ಅಂಗದಲ್ಲಿಯೇ ಸಂಗಮವಾದ ಅರಿವು ಬಳಸದ ಅಂಗಕ್ಕೆ !

609

ಇಪ್ಪತ್ನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ-ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತಿಪಾತದಿಂದ ವೆಗ್ಗಳ-
ಸೂಕ್ಷ್ಮ ಶಿಪಥವನರಿದಂಗೆ-
ಹೋಮ-ನೇಮ-ಜಪ-ತಪದಿಂದ ವೆಗ್ಗಳ,
ಕೂಡಲಸಂಗಮದೇವಾ, ನಿಮ್ಮ ಮೂಣದೆ ನೆನೆವಂಗೆ.

ತಿಥಿ ಗ್ರಹಣ ಸಂಕ್ರಾಂತಿ ಏಕಾದಶಿ ವ್ಯತಿಪಾತ ಇವುಗಳನ್ನು ಅಂಗ ಭ್ರಮೆಯಿಂದ

ಆಚರಿಸುತ್ತದೆ. ಅಂಗದಲ್ಲಿಯೇ ಇರುವ ಅರಿವೆಂಬ ಬ್ರಹ್ಮ ಮನಕ್ಕೆ ತಿಳಿದಾಗ ಮನದ ಭ್ರಮೆ ಬಿಟ್ಟು ತೊಲಗುತ್ತದೆ. ಆಗ ಅಂಗ ಯಾವ ಆಚರಣೆಗಳನ್ನು ಮಾಡುವುದಿಲ್ಲ.

ಅರಿವು ಅಗೋಚರ ಆಚಾರ. ಆಚಾರಗಳೆಲ್ಲ ಗೋಚರದ ಆಚಾರ. ಮನ ಭ್ರಮೆಯಿಂದ ಅಂಗವನ್ನು ಹಿಡಿದು ಸಕಲರಿಗೆ ಗೋಚರಿಸುವಂತೆ ತಿಥಿ ಗ್ರಹಣ ಸಂಕ್ರಾಂತಿ ಏಕಾದಶಿಗಳನ್ನು ಮಾಡುತ್ತದೆ. ಇದು ಯಾಕೆ ಮಾಡಬೇಕು? ಇವುಗಳಿಂದ ಬರುವ ಲಾಭವೇನು ? ಎಂದು ಮನ ವಿಚಾರಿಸಿ ನೋಡಿದಾಗ; ಅರಿವಿನಲ್ಲಿ ನಿಂತು ನಿಶ್ಚಯ ಮಾಡಿಕೊಂಡಾಗ ಗೋಚರದ ಆಚಾರಗಳೆಲ್ಲ ನಿಲ್ಲುತ್ತವೆ.

ಕೆತ್ತಿದ ಕಲ್ಲು ನೋಡಿದ ಮನ ಅದನ್ನು ದೇವರೆಂದು ಹೇಳುವುದಿಲ್ಲ ಅದನ್ನು ಪೂಜಿಸುವುದಿಲ್ಲ. ಅದಕ್ಕೆ ಅಭಿಷೇಕ ಮಾಡುವುದಿಲ್ಲ. ಮಂದಿರ ಕಟ್ಟುವುದಿಲ್ಲ. ಕೆತ್ತಿದ ಕಲ್ಲು ನೋಡಿದ ಮನ ಕಲ್ಲೆಂದು ತಿಳಿದು ಉದಾಸೀನ ಮಾಡುತ್ತದೆ. ಹೋಮ ನೇಮ ಜಪತಪದಿಂದ ದೂರ ಉಳಿಯುತ್ತದೆ. ಅಗೋಚರದ ಅರಿವಿನ ಆಚಾರದಲ್ಲಿ ತಲ್ಲೀನವಾಗುತ್ತದೆ.

ಅಂಗದಲ್ಲಿಯೇ ಇರುವ ಅರಿವೆಂಬ ಸಂಗಮನಾಥನನ್ನು ನೆನೆಯುವುದು ಜಪತಪ ಹೋಮನೇಮಗಳಿಗಿಂತಲೂ ಅಧಿಕವಾದದ್ದು.

610

ಅಶ್ವಮೇಧಯಾಗವಂತಿರಲಿ,
ಅಜಪೆಯುಪದೇಶ ಸಮಾಧಿಯಂತಿರಲಿ, ಹೋ !
ಹೋಮ-ನೇಮ-ಗಾಯತ್ರಿಯ ಜಪವಂತಿರಲಿ, ಹೋ !
ಜನಮೋಹನ ಮಂತ್ರವಂತಿರಲಿ, ಹೋ !
ಕೂಡಲಸಂಗನ ಶರಣರ ನುಡಿಗಡಣ
ಎಲ್ಲಕ್ಕೂ ಅಧಿಕ, ನೋಡಾ !

ಅಂಗ ಸದಾ ನಿಶ್ಚಿಂತ ಹಾಗೂ ಸಮಾಧಾನಿಯಾಗಿರಲು ಜಪತಪ ಯಜ್ಞ ಜನಮೋಹನ ಮಂತ್ರವನ್ನು ಜಪಿಸುತ್ತದೆ. ಅಶ್ವಮೇಧ ಯಾಗವನ್ನು ಮಾಡುತ್ತದೆ. ಮಾಡುವ ಕೆಲಸಗಳೆ ಅಂಗಕ್ಕೆ ವಿಧಿಯಾಗಿ ಕಾಡಿದರೆ ಅವುಗಳನ್ನು ಯಾಕಾದರೂ ಆಚರಿಸಬೇಕು ? ಬದಲಾಗಿ ಇವು ಯಾವೂ ಅಂಗಕ್ಕೆ ಸಮಾಧಾನ ಸಂತೋಷವನ್ನು ತರಲಾರವು.

ಅಂಗದಲ್ಲಿಯೇ ಕೂಡಿ ಸಂಗಮವಾದ ಅರಿವನ್ನು ಮನ ಸದಾ ಬಳಕೆ ಮಾಡುವುದರಿಂದ ಮಾತ್ರ ಅದು ಸಮಾಧಾನಿಯಾಗಿರಬಹುದು. ಸಕಲ ಭ್ರಮೆಗಳನ್ನು ಕಳೆದುಕೊಳ್ಳಬಹುದು.

ಅಂಗದಲ್ಲಿ ಸಂಗಮವಾದ ಅರಿವಿನತ್ತ ಮನ ಪಯಣಿಸಿ ಆ ಅರಿವನ್ನು ಭಕ್ತಿಯಿಂದ ಒಲಿಸಿಕೊಳ್ಳಲು ಶರಣರು ದಾಸರು ಸಂತ ಮಹಾಂತರು ಸೂತ್ರಗಳನ್ನು ಕಂಡು ಹಿಡಿದಿದ್ದಾರೆ. ಈ ಸೂತ್ರಗಳನ್ನು ಬಳಸಿಕೊಂಡು ಅರಿವಿಗೆ ಹೋದ ಮಹಾಂತರೇ ಶರಣರು. ಇಂತಹ ಶರಣರು ನುಡಿಯುವಂತಹ ನುಡಿಗಳು ಕೇವಲ ನುಡಿಗಳಲ್ಲ ಅವು ನುಡಿಗಡಣ.

ಕಡೆಗೀಲು ಬಂಡಿಗೆ ಆಧಾರವಿದ್ದಂತೆ. ಒಡಲೆಂಬ ಬಂಡಿಗೆ ಶರಣರ ನುಡಿ ಗಡಣವೇ ಕಡೆಗೀಲು. ಇವು ಅಶ್ವಮೇಧಯಾಗ ಜಪ ತಪ ಸಮಾಧಿಗಿಂತಲೂ ಅಧಿಕ. ಹೋಮ ನೇಮ

ಗಾಯತ್ರಿ ಮಂತ್ರಕ್ಕಿಂತಲೂ ಅಧಿಕ !

611

ವೇದ ಶಾಸ್ತ್ರದವರ ಹಿರಿಯರೆನ್ನೆ,
ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ !
ಇವರು ಹಿರಿಯರುಗಳೇ ? ಯಾಗನಟ್ಟುವಿಗಪಾಣರು !
ಇವರಿಂದಧಿಕವ ಸಾಧಿಸುವರೇನು ಕಿರಿಯರೆ ?
ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ
ನಮ್ಮ ಕೂಡಲಸಂಗನ ಶರಣರು
ಸಾಧಿಸಿದ ಸಾಧನೆಯನೆ ಸಾಧಿಸುವುದು.

ವೇದವನ್ನೋದಿ ಅದನ್ನೆ ಒಂದು ಶಾಸ್ತ್ರವಾಗಿ ಹೇಳುವವರು ಹಿರಿಯರಲ್ಲ, ಅವರು ಮಾಯಾಭ್ರಾಂತಿ ಕವಿದ ಗೀತಜ್ಞರು. ಭಗವದ್ಗೀತೆಯೇ ಶ್ರೇಷ್ಠ ವೆಂದು ಹೇಳುವ ಹಿರಿಯರು ; ಅವರು ಹಿರಿಯರಲ್ಲ. ಯಾಗ ಮಾಡಲು ಅಣಿ ಮಾಡಿದ ಅಗ್ನಿಕುಂಡದ ಮುಂದೆ ನರ್ತನ ಮಾಡಿ ರಾಗಬದ್ಧವಾಗಿ ಸುಲಲಿತವಾಗಿ ಹಾಡಿ ಮರುಳಾಗಿ ಮರುಳು ಮಾಡುವವರು.

ಇವರಿಂದಧಿಕವ ಸಾಧಿಸುವರೇನು ಕಿರಿಯರೆ ?

ವೇದ ಶಾಸ್ತ್ರವನ್ನು ಏನೆಂದು ಅರಿಯದೆ,ಯಜ್ಞ ಯಾಗಾದಿಗಳನ್ನು ಮಾಡಿ ಅಗ್ನಿಕುಂಡದ ಮುಂದೆ ನರ್ತನ ಮಾಡಿ ಹಾಡದವರೇನು ಕಿರಿಯರೆ ? ಅಂಗದಲ್ಲಿಯೇ ಸಂಗಮವಾದ ಸಂಗಮನಾಥನನ್ನು ಒಲಿಸಿಕೊಂಡವರು. ಅವರು ಮಾತ್ರ ಹಿರಿಯರು. ವಿದ್ಯೆ ಗುಣ ಧರ್ಮ ಜ್ಞಾನವನ್ನೇ ಆಚಾರವೆಂದು ತಿಳಿದು ಅಗೋಚರದ ಆಚಾರದಲ್ಲಿ ಪಾಲ್ಗೊಂಡವರೆ ಹಿರಿಯರು. ಕೂಡಲಸಂಗನ ಶರಣರು. ಸಾಧಿಸಿದ ಸಾಧನೆಯನೆ ಸಾಧಿಸುವುದು ಪ್ರತಿಯೊಂದು ಅಂಗದ ಕರ್ತವ್ಯ!

612

ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ
ನಂದಿ ಮುಖವಲ್ಲದೆ ಮಾಡಲಾಗದು ;
ವಿಭೂತಿಯಲ್ಲದೆ ಮತ್ತೇನನೂ ಮಾಡಲಾಗದು;
'ಭರ್ಗೋದೇವ ' ಎಂಬ ಮಂತ್ರವಲ್ಲದೆ
ಮತ್ತೇನನೂ ಮಾಡಲಾಗದು !
ನಿಮ್ಮಿಂದ ಕುಲಜರಾಗಿ ಮತ್ತೆ ಅನ್ಯ ದೈವಕ್ಕೆರಗುವ
ಜಗದ ನ್ಯಾಯಿಗಳನೇನೆಂಬೆ ಕೂಡಲಸಂಗಮದೇವಾ.

ಹುಟ್ಟಿದಂದಿನಿಂದ ಮುಂಜಿಯಾಗದ ಅಂಗ ಶೂದ್ರ ಅಂಗವೆಂದು ಕರೆಯಲ್ಪಡುತ್ತದೆ. ಮುಂಜಿಗೊಳಗಾದ ಅಂಗಗಳೆಲ್ಲ ಕೂಡಿ ಶೂದ್ರ ಅಂಗವನು ತಂದು ಮುಂಜಿ ಮಾಡಿದರೆ ಅದು ಜನಿವಾರ ಧರಿಸಿದ ಹಾರುವ ಅಂಗವಾಗುತ್ತದೆಯೆ ಹೊರತು ಬ್ರಹ್ಮಜ್ಞಾನಿಯಾಗಲಾರದು. ಕಲ್ಲು

ಕಟೆದು ನಂದಿಯನ್ನು ಮಾಡಿದಂತೆ. ಅದು ಕಲ್ಲಲ್ಲದೆ ಮತ್ತೇನೂ ಅಲ್ಲವೆಂದು ಪೂಜಿಸುವವರಿಗೆ ತಿಳಿಯದು.

ವಿಭೂತಿಯಲ್ಲದೆ ಮತ್ತೇನೂ ಮಾಡಲಾಗದು :

ಸೆಗಣಿ ತಂದು ಕುರುಳು ಮಾಡಿ ಅಗ್ನಿಯಲ್ಲಿ ಸುಟ್ಟರೆ ಸೆಗಣಿ ವಿಭೂತಿ ಯಾಗುವುದು. ಸೆಗಣಿ ಗುಣದ ಅಂಗ ವಿಭೂತಿಯಾಗಲರಿಯದು. ವಿಭೂತಿ ಧರಿಸಿದರೆ ಅದು ವಿಭೂತಿ ಕಾಯವಾಗುವುದೆ?

ಭರ್ಗೋದೇವಸ್ಯ ಧೀಮಹಿ ಎಂಬ ಗಾಯತ್ರಿ ಮಂತ್ರವನ್ನು ಪಠಿಸಿದರೆ ಆ ಮಂತ್ರವೇ ಆಗಿ ಅಂಗ ಪರಿವರ್ತನೆಯಾಗಲರಿಯದು.

ಅಂಗದಲ್ಲಿರುವ ಅರಿವೆಂಬ ಸಂಗಮನಾಥನನ್ನು ಬಳಕೆ ಮಾಡಿಕೊಂಡು ಆ ಸಂಗಯ್ಯನೇ ಆಗಬೇಕಾದ ಅರಿವಿನ ಅಂಗಗಳು ಅರಿವು ಮರೆತು ಅನ್ಯದೈವಕ್ಕೆರಗಿದರೆ ಯಾರೇನು ಮಾಡಿಯಾರು? ಅದು ಆಚಾರಕ್ಕೊಳಪಟ್ಟ ಅಂಗದ ದುರ್ದೈವ !

613

ದೇವನೊಬ್ಬ ನಾಮ ಹಲವು ;
ಪರಮ ಪತಿವ್ರತೆಗೆ ಗಂಡನೊಬ್ಬ ;
ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ಯುವನು !
ಹಲವು ದೈವದ ಎಂಜಲ ತಿಂಬುವವರನೇನೆಂಬೆ
ಕೂಡಲಸಂಗಮದೇವಾ ?

ಸರ್ವಾಂಗದಲ್ಲಿರುವ ಅರಿವೆಂಬ ಲಿಂಗವೆ ದೇವರು. ಈ ದೇಹವೆಂಬ ದೇವರಿಗೆ ನಾಮಗಳು ಹಲವು ! ಮನವೆಂಬ ಸತಿಗೆ ದೇಹದಲ್ಲಿರುವ ಅರಿವೆಂಬ ದೇವರೇ ಪತಿ. ಶರಣ ಸತಿ; ಲಿಂಗಪತಿ. ಮನ ಅರಿವೆಂಬ ಪತಿಯನ್ನು ನಂಬಿಕೊಂಡರೆ ಆಕೆ ಪರಮ ಪತಿವ್ರತೆ. ಆಕೆಗೆ ಅರಿವೆಂಬ ಗಂಡನೊಬ್ಬನೆ ದೇವರು.

ಮನ ಕೆತ್ತಿದ ಕಲ್ಲನ್ನು ದೇವರೆಂದು ಭ್ರಮಿಸಿ ಆ ದೇವರಿಗೆ ಪೂಜಿಸಿ ಎರಗಿದಡೆ, ಅರಿವಿನ ನಲ್ಲ ಕಿವಿ ಮೂಗ ಕೊಯ್ಯದೆ ಬಿಡನು. ಕಲ್ಲು ಒಂದೇ. ಅದರಲ್ಲಿ ಕೆತ್ತಲ್ಪಟ್ಟ ಎಷ್ಟೊಂದು ದೇವರುಗಳು. ಮನಕ್ಕೆ ಅರಿವಾದರೆ ಅದು ಬರಿ ಕಲ್ಲು, ಅರಿವಾ ಗದಿದ್ದರೆ ಹಲವು ದೈವದ ಎಂಜಲು ತಿನ್ನುವ ನಾಯಿ. ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಇರುವ ಅರಿವೆಂಬ ದೇವರ ಸಂಗ ಮಾಡಿ ಪರಮ ಪತಿವ್ರತೆಯಾಗಬೇಕು. ಇಲ್ಲದಿದ್ದರೆ ಹಲವು ದೈವದ ಎಂಜಲು ತಿಂದಂತೆ!

614

ಕರ್ತಾರನ ಪೂಜಿಸಿ ಕುಚ್ಚಿತ ದೈವಕ್ಕೆರಗುವರು
ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ !
ಭಕ್ತರೆಂತೆಂಬೆ, ಭೃತ್ಯರೆಂತೆಂಬೆ, ಶರಣನೆಂತೆಂಬೆನವರ ?

ಎರಡುಳ್ಳ ಪ್ರಪಂಚಿಗಳ ಮೆಚ್ಚ
ಕೂಡಲಸಂಗಮದೇವಾ !

ಅಂಗದಲ್ಲಿಯೇ ಸಂಗಮವಾದ ಸರ್ವಾಂಗ ಸುಂದರನೆಂಬ ಕರ್ತಾರನನ್ನು ಸಾಕ್ಷಾತ್ ಶಿವನನ್ನು ಪೂಜಿಸಿ, ಕಲ್ಲಿನಿಂದ, ಲೋಹದಿಂದ, ಗಿಡ ಮರದಿಂದ ಹುಟ್ಟಿದ ಕುಶ್ಚಿತ ವಸ್ತುಗಳನ್ನೇ ದೇವರೆಂದು ಪೂಜಿಸುವ ಅಂಗ; ಅದು ಅರಿವಿನ ಅಂಗವಲ್ಲ. ಕತ್ತೆ ಕುದುರೆ ಸಂಗ ಮಾಡಿದಾಗ ಆ ಗರ್ಭದಿಂದ ಹೊರಬಂದ ಹೇಸರಗತ್ತೆಯಂತೆ . ಅತ್ತ ಕತ್ತೆಯೂ ಸೇರುವುದಿಲ್ಲ ಇತ್ತ ಕುದುರೆಯೂ ಸೇರುವುದಿಲ್ಲ.

ಅಂತಹ ಅಂಗವನ್ನು ಭಕ್ತನೆಂದು,ಭೃತ್ಯನೆಂದು, ಶರಣನೆಂದು ಕರೆಯಲು ಸಾಧ್ಯವೆ? ಅಂಗದಲ್ಲಿಯೇ ಅರಿವೆಂಬ ಸಂಗಮನಾಥನನ್ನು ಇಟ್ಟುಕೊಂಡು, ಕಲ್ಲು, ಮಣ್ಣು , ಲೋಹ, ಕಟ್ಟಿಗೆಗಳಿಂದ ಮಾಡಿದ ದೇವರನ್ನು ಪೂಜಿಸುವ ಪ್ರಪಂಚಿಗಳನ್ನು ಸಂಗಯ್ಯ ಮೆಚ್ಚುವುದಿಲ್ಲ.

615

ಕಂಡಕಂಡವರೆಲ್ಲ ಗಂಡರೆಂದೆಂಬ
ದುಂಡೆಯನವಳ ಸಜ್ಜನೆ ಎಂದೆನ್ನಬಹುದೆ ?
ಲಿಂಗಪ್ರಸಾದವನುಂಡು ಅನ್ಯ ದೈವಂಗಳ ಕೊಂಡಾಡುವವರ-
ನಮ್ಮ ಕೂಡಲಸಂಗಮದೇವನು
ಆ ಭಂಡರಿಗೆ ಮಾಡಿದ ಹುಳುಗೊಂಡವನು !

ಅಂಗ ಹೆಣ್ಣು ಅಲ್ಲ ಗಂಡೂ ಅಲ್ಲ ; ಅಂಗವನ್ನು ಆವರಿಸಿದ ಮನ ಹೆಣ್ಣು ; ಅಂಗದಲ್ಲಿ ಸಂಗಮವಾದ ಅರಿವು ಗಂಡು. ಗಂಡ ಮತ್ತು ಹೆಂಡತಿಯರಿಬ್ಬರು ಅಂಗದಲ್ಲಿಯೇ ಸಂಗ ಮಾಡಿದ್ದಾರೆ. ಸತಿಪತಿಗಳಾಗಿದ್ದಾರೆ. ಅರಿವೆಂಬ ದೇವರನ್ನು ಪತಿದೇವನನ್ನಾಗಿ ಪಡೆದ ಸತಿಯೆ ಸಜ್ಜನೆ. ಈಕೆ ಪತಿಯನ್ನು ಹೊರತುಪಡಿಸಿ ಪರ ಪುರುಷರನ್ನು ಕಣ್ಣೆತ್ತಿಯೂ ನೋಡಲರಿಯಳು.

'ಎಮ್ಮ ಗಂಡನು ಏಕಾಂತಂ ಬೊಕ್ಕನು ಬೇಗ ಬೇಗ ಹೊರನಡಿಯಿರಣ್ಣಗಳಿರಾ, ಒಬ್ಬರಿದ್ದಡೂ ಸೈರಿಸ ಕಪಿಲಸಿದ್ದ ಮಲ್ಲಯ್ಯ' ಎಂದು ಸಿದ್ಧರಾಮ ಶಿವಯೋಗಿಗಳು ಹಾಡಿದ್ದಾರೆ. ಅಂಗದಲ್ಲಿರುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಎಂಬ ಅರಿಷಡ್ವರ್ಗಗಳೇ ಪರಪುರುಷರು. ಮನವೆಂಬ ಸತಿ ಈ ಪರಪುರುಷರೊಂದಿಗೆ ಸಂಗ ಮಾಡಿದರೆ ಅರಿವಿನ ಗಂಡನ ನಿಜ ಸುಖ ಆಕೆಗೆ ಸಿಗುವುದಿಲ್ಲ. ಅದಕ್ಕಾಗಿ ಅರಿಷಡ್ವರ್ಗಗಳೆಂಬ ಪರ ಪುರುಷರನ್ನು ಅಂಗದಿಂದ ಬೇರ್ಪಡಿಸಿ, ಅಂಗದಲ್ಲಿಯೇ ಇರುವ ಅರಿವಿನ ಗಂಡನೊಂದಿಗೆ ಏಕಾಂತ ವಾಸಿಸಿ ನಿಜಸುಖವನು ಹೊಂದುವ ಸೂತ್ರವನು ಬಸವಣ್ಣನವರು ಹೆಣೆದಿದ್ದಾರೆ.

ಲಿಂಗ ಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ ನಮ್ಮ ಕೂಡಲ ಸಂಗಮದೇವನು ಆ ಭಂಡರಿಗೆ ಮಾಡಿದ ಹುಳುಗೊಂಡವನು;

ಅಂಗದಲ್ಲಿಯೇ ಇದ್ದ ಅರಿವಿನ ಲಿಂಗಯ್ಯನೆಂಬ ಪತಿದೇವರು ನೀಡಿದ ಅರಿ ವಿನ ಪ್ರಸಾದವನು ಉಂಡು ಸುಖಿಸಬೇಕಾದ ಮನವೆಂಬ ಸತಿ ಪರಪುರುಷರ ಸಂಗ ಮಾಡಿದರೆ ಆ ಭಂಡರನು ಹುಳುಗಳ ಕೊಂಡದಲ್ಲಿ ಮುಳುಗಿಸಿ ನರಕದ ಶಿಕ್ಷೆ ಕೊಡುವನು. ಕಂಡ ಕಂಡವರನ್ನೆಲ್ಲ ಗಂಡರೆಂದೆಂಬ ದುಂಡನೆಯವಳ ಸಜ್ಜನೆ ಎನ್ನಲುಬಾರದು.

616

ನಂಬಿದ ಹೆಂಡತಿಗೆ ಗಂಡನೊಬ್ಬನೆ, ಕಾಣಿರೋ !
ನಂಬಬಲ್ಲ ಭಕ್ತಂಗೆ ದೇವನೊಬ್ಬನೆ,ಕಾಣಿರೋ !
ಬೇಡ ! ಬೇಡ ! ಅನ್ಯದೈವದ ಸಂಗ ಹೊಲ್ಲ !
ಬೇಡ ! ಬೇಡ ! ಅನ್ಯ ದೈವವೆಂಬುದು ಹಾದರ ಕಾಣಿರೋ !
ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ಯುವ, ಕಾಣಿರೋ !

ಗಂಡನೂ ಹೆಂಡತಿಯೇ ; ಹೆಂಡತಿಯೂ ಹೆಂಡತಿಯೇ ಆಗಿದ್ದಾಳೆ. ಶರಣರ ಬೆಡಗಿನ ಈ ಮಾತು ತಿಳಿಯಬೇಕು ಅಷ್ಟೆ. ಅಂಗ ಆವರಿಸಿರುವ ಮನವೇ ಸತಿ; ಅಂಗದಲ್ಲಿರುವ ಅರಿವೇ ಪತಿ! ಗಂಡ ಹೆಂಡತಿ ಎನ್ನುವ ಎರಡು ಅಂಗಗಳು ಬಾಳ ಸಂಗಾತಿಗಳು !'' ಪುರುಷನೆನ್ನಬಹುದೆ ಬಸವನು ಆನು ? ಸತಿ ಎನ್ನಬಹುದೇ ಬಸವನು ಎನಗೆ ? ಆನು ಬಸವನಿಗೆ ಶಿಶುವಾದೆ; ಬಸವ ಎನಗೆ ಶಿಶುವಾದ '' ಎಂದು ನೀಲಮ್ಮ ತಾಯಿ ಹೇಳುತ್ತಾಳೆ. ಗಂಡಾದರೇನು ಹೆಣ್ಣಾದ್ದರೇನು ಐದು ಜ್ಞಾನೇಂದ್ರಿಯಗಳು ಒಂದೇ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇವು ಗಂಡೂ ಅಲ್ಲ ಹೆಣ್ಣೂ ಅಲ್ಲ. ಈ ಜ್ಞಾನೇಂದ್ರಿಯಗಳಲ್ಲಿರುವ ಅರಿವು ಮನಕ್ಕೆ ಬಳಕೆಯಾಗದ್ದಕ್ಕಾಗಿ ಒಂದು ಅಂಗ ಗಂಡಿನ ಪಾತ್ರದಲ್ಲಿದೆ ಮತ್ತೊಂದು ಹೆಣ್ಣಿನ ಪಾತ್ರದಲ್ಲಿದೆ. ಒಂದು ಅಂಗ ಮತ್ತೊಂದು ಅಂಗವನ್ನು ಗಂಡನನ್ನಾಗಿ ಸ್ವೀಕರಿಸಿದೆ. ಒಂದು ಅಂಗ ಮತ್ತೊಂದು ಅಂಗವನ್ನು ಹೆಂಡತಿಯನ್ನಾಗಿ ಸ್ವೀಕರಿಸಿದೆ. ಅಂಗವೆಂದರೆ ಅಂಗ; ಅದನ್ನು ಆವರಿಸಿದ ಮನ ಹೆಣ್ಣೆಂದು ಗಂಡ ಹೆಂಡತಿ ಪಾತ್ರದಲ್ಲಿದ್ದ ಎರಡು ಅಂಗಗಳೂ ಅರಿಯವು. ಹೀಗೆ ಅರಿಯದೆ ಕೂಡುವ ಕೂಟವನ್ನು ಹೆಣ್ಣುಹೆಣ್ಣುಕೂಡುವ ಕೂಟವೆಂದು ಶರಣರು ಹೇಳಿದ್ದಾರೆ.

ನಂಬಿದ ಹೆಂಡತಿಗೆ ಗಂಡನೊಬ್ಬನೆ, ಕಾಣಿರೋ ! ನಂಬಬಲ್ಲ ಭಕ್ತಂಗೆ ದೇವನೊಬ್ಬನೆ,ಕಾಣಿರೋ! ಬೇಡ! ಬೇಡ ! ಅನ್ಯ ದೈವದ ಸಂಗ ಹೊಲ್ಲ ! ಅನ್ಯ ದೈವವೆಂಬುದು ಹಾದರ ಕಾಣಿರೋ :

ಮನದ ಸ್ವಭಾವವೇ ವಿಚಿತ್ರ . ಅದು ಶಾಂತಿ ಸಮಾಧಾನಕ್ಕಾಗಿ ತನುವಿನಿಂದ ನಿರ್ಮಿಸಿದ ಮೂರ್ತಿಗಳನ್ನೇ ದೇವರೆಂದು ಭಾವಿಸುತ್ತದೆ. ಕಲ್ಲುಕಟ್ಟಿಗೆ ಲೋಹದಿಂದ ದೇವಸ್ಥಾನ ನಿರ್ಮಿಸುತ್ತದೆ. ಅದನ್ನೇ ಪುಣ್ಯಕ್ಷೇತ್ರವೆಂದು ಭಾವಿಸಿ ಅರಿವಿನ ತನುವನ್ನು ಅಲೆದಾಡಿಸುತ್ತದೆ. ಕಲ್ಲುಗಳಿಂದ ಗಂಡು ಹೆಣ್ಣುದೇವರನ್ನು ನಿರ್ಮಿಸಿ ತನ್ನಂತೆ ಮದುವೆ ಮಾಡಿ ದೇವರೆಂದು ಪೂಜಿಸುತ್ತದೆ. ಮನ ಮಾಡುವ ಹಾದರ ಮನಕ್ಕೆ ತಿಳಿದರೆ ಮಾತ್ರ ಅರಿವಿನ ತನು ಉಳಿಯುತ್ತದೆ. ಇಲ್ಲ ಅನ್ಯ ದೇವರಿಗೆರಗಿ, ಅನ್ಯರೊಂದಿಗೆ ಹಾದರ ಮಾಡಿ ಮನ ಹಾದರಗಿತ್ತಿಯಾಗಿ ತನು ವಿನೊಂದಿಗೆ ಸಾಯುತ್ತದೆ.

617

ಊಡುವ ಉಡಿಸುವ ಗಂಡನಿದ್ದಂತೆ,
ಜೋಡೆ ಮಿಂಡನಿಗೆ ಕಣ್ಣ ಚೆಲ್ಲುವಳ
ಕೇಡಿಂಗೆ ಬೆರಗಾದೆ ನಾನು !

ಕೂಡಲಸಂಗಮದೇವನು
ಸಿಂಗಾರದ ಮೂಗ ಬಣ್ಣಿಸಿ ಹಲುದೋರೆ ಕೊಯ್ವ !

ಊಡುವ ಉಡಿಸುವ ಗಂಡನಿದ್ದಂತೆ,ಜೋಡೆ ಮಿಂಡನಿಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು :

ಮನವೆಂಬ ಹೆಣ್ಣಿನ ಮನೋಧರ್ಮವೇ ಹೀಗೆ. ಅಂಗವೆಂಬ ಮನೆಯಲ್ಲಿ ಸದಾ ಅರಿವಿನ ಅಮೃತವನ್ನೇ ಉಣ್ಣಿಸುವ ಗಂಡನಿದ್ದರೂ ಮಿಂಡನಿಗೆ ಕಣ್ಣ ಚೆಲ್ಲಿ ಹಾದರ ಮಾಡುವಳು. ಇಂತಹ ಹಾದರಗಿತ್ತಿ ಮನವೆಂಬ ಹೆಣ್ಣಿಗೆ ಬೆರಗಾದೆನು ಎಂದಿದ್ದಾರೆ ಬಸವಣ್ಣ.

ಹಾದರಗಿತ್ತಿ ಹೆಣ್ಣಿನ ಸಿಂಗಾರದ ಮೂಗ ಬಣ್ಣಿಸಿ ಅರಿವೆಂಬ ನಲ್ಲನು ಹತ್ತಿರ ಕರೆದು ಹಲ್ಲು ಮುರಿದು ಮೂಗ ಕೊಯ್ವನು. ಅಂಗದಲ್ಲಿಯೇ ಮನವೆಂಬ ನಲ್ಲೆಯೊಂದಿಗೆ ಸಂಗ ಅರಿವಿನ ನಲ್ಲ ಮಾಡಿ ಅರಿವಿನ ಸುಖ ನೀಡಿ ಬಿಗಿದಪ್ಪಿಕೊಳ್ಳುವನು.

618

ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ ?
ತಪ್ಪಿತ್ತು ಗಣಪದವಿ ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ !
ಒಬ್ಬರಿಗಾಳಾಗಿ ಒಬ್ಬರನೋಲೈಸುವ
ನಿರ್ಬುದ್ಧಿ ಮನುಜರನೇನೆಂಬೆ ,
ಕೂಡಲಸಂಗಮದೇವಾ ?

ದಿನ ಒಂದೇ. ಅದು ಅಷ್ಟಮಿಯಾದರೇನು, ನವಮಿಯಾದರೇನು, ಅಮವಾಸ್ಯೆ ಆದರೇನು? ಹಗಲು ಒಂದೇ ರಾತ್ರಿ ಕೂಡಾ ಒಂದೇ. ಬಿಸಿಲಿನ ನೆರಳೇ ರಾತ್ರಿಯೆಂದು ಅರಿತ ವಿಜ್ಞಾನಿ ಶರಣನಿಗೆ ಹಗಲಾದರೇನು? ರಾತ್ರಿಯಾದರೇನು ?

ಸೂರ್ಯನಿಂದಾಗುವ ಬೆಳಕೇ ಹಗಲು; ಆ ಬೆಳಕಿನಿಂದಾಗುವ ನೆರಳೇ ರಾತ್ರಿ. ಇದು ಆಧುನಿಕ ಅಕ್ಷರಸ್ಥರಿಗೆಲ್ಲ ತಿಳಿದಿದ್ದರೂ ಅಷ್ಟಮಿ ನವಮಿ ಅಮವಾಸ್ಯೆಗಳ ಎಣಿಕೆ ಮತ್ತು ಅವುಗಳ ಅಜ್ಞಾನದ ಆಚರಣೆ ತಪ್ಪಿಲ್ಲ. ಶರಣ ಹಾಗಲ್ಲ. ಆತ ಅಜ್ಞಾನದ ವಿರೋಧಿ; ಮಹಾಜ್ಞಾನದ ಆಳು !

ಜ್ಞಾನಕ್ಕೆ ಆಳಾಗಿ ಶರಣು ಹೋದ ಶರಣ ಅಜ್ಞಾನವನ್ನು ಓಲೈಸುವುದಿಲ್ಲ. ನಿರ್ಬುದ್ಧಿ ಮನುಜರು ಮಾತ್ರ ಜ್ಞಾನವನ್ನು ಓಲೈಸುತ್ತಾರೆ; ಜ್ಞಾನದ ಮಾತುಗಳನ್ನು ಮಾತ್ರ ಆಡುತ್ತಾರೆ. ಆಡುವ ಮಾತಿಗೂ ನಡೆದು ಕೊಳ್ಳುವ ಆಚಾರಕ್ಕೂ ವ್ಯತ್ಯಾಸವನ್ನೇ ಅರಿಯುವುದಿಲ್ಲ. ಅರಿವಿಗೆ ಆಳಾದಂತೆ ಮಾತನಾಡಿ ಅಜ್ಞಾನವನ್ನು ಓಲೈಸುತ್ತಾರೆ.

ಅಜ್ಞಾನದ ಆಚರಣೆಗೆ ಆಳಾದವರಿಗೆ ಜ್ಞಾನದ ಗಣಪದವಿ ದೂರ. ಅರಿವೆಂಬ ಲಿಂಗದ ಅಗೋಚರ ಆಚಾರಕ್ಕೆ ದೂರ. ಈ ಅಗೋಚರ ಆಚಾರವನ್ನು ಪಾಲಿಸುವ ಅಂಗದಲ್ಲಿಯೇ ಸಂಗಮವಾದ ಜಂಗಮನಿಗೆ ಬಹುದೂರ !

ಜ್ಞಾನದ ಗಣಪದವಿಯನ್ನು ಮಠಪೀಠಗಳು ದಯಪಾಲಿಸುವುದಿಲ್ಲ. ಯಾವ ವಿಶ್ವ ವಿದ್ಯಾಲಯಗಳು ಕೊಡುವುದಿಲ್ಲ. ಸರಕಾರಗಳು ಸನ್ಮಾನಿಸಿ ನೀಡುವ, ಅಕಾಡೆಮಿಗಳು ನೀಡುವ

ಪ್ರಶಸ್ತಿಯೂ ಇದಲ್ಲ.

ಜ್ಞಾನದ ಗಣಪದವಿ ತನಗೆ ತಾನೇ ಪಡೆದುಕೊಳ್ಳಬೇಕು. ಸುಜ್ಞಾನದ ಆಚಾರದಲ್ಲಿ ನಡೆದು ಶರಣ ಪದವಿಯನ್ನು ಪಡೆದುಕೊಳ್ಳಬೇಕು. ಇದು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಮಹಾಜ್ಞಾನದ ವಿಚಾರ. ಅರಿವಿನ ಸುಳುಹು ತಿಳಿದು ಆ ಜಾಡಿನಲ್ಲಿಯೇ ನಡೆದು ತನಗೆ ತಾನೆ ಪಡೆದುಕೊಳ್ಳುವುದೇ ಗಣಪದವಿ!

619

ಎಲವೊ, ಎಲವೊ, ಪಾಪ ಕರ್ಮವ ಮಾಡಿದವನೇ,
ಎಲವೊ, ಎಲವೊ, ಬ್ರಹ್ಮಹತ್ಯೆವ ಮಾಡಿದವನೇ,
ಒಮ್ಮೆ 'ಶರಣೆ'ನ್ನೆಲವೋ !
'ಒಮ್ಮೆ ಶರಣೆ'ಂದಡೆ ಪಾಪ ಕರ್ಮ ಓಡುವವು;
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು;
ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ !

ಎಲವೊ, ಎಲವೊ, ಪಾಪಕರ್ಮವ ಮಾಡಿದವನೇ, ಎಲವೊ, ಎಲವೊ ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ ಶರಣೆನ್ನೆಲವೋ :

ಬ್ರಹ್ಮಜ್ಞಾನವೆಂದರೇನು, ಭ್ರಮೆಯ ಜ್ಞಾನವೆಂದರೇನು ಎಂದು ತಿಳಿದು ಕೊಳ್ಳುವ ಕುತೂಹಲವುಳ್ಳ ತನುಗಳಿಗೆ ಮಾತ್ರ ಈ ವಚನ ವೇದ್ಯವಾಗುತ್ತದೆ. ಹಾಗೆಯೇ ಬ್ರಹ್ಮಜ್ಞಾನವನ್ನು ಸರಳವಾಗಿ ಪಡೆದು ಕೊಂಡು ಅರಿವಿನ ಆಚರಣೆಯಲ್ಲಿ ಮುಂದುವರೆಯಲು ಸಹಕಾರಿಯೂ ಆಗುತ್ತದೆ.

ಬ್ರಹ್ಮಜ್ಞಾನ ತನುವಿನಲ್ಲಿ ತನ್ಮಯವಾಗಿದೆ. ಹೀಗಾಗಿ ತನುವಿನ ಜನ್ಮ ಅರಿವಿನ ಜನ್ಮವೆಂದು ಕರೆಯಿಸಿಕೊಂಡಿದೆ. ತನುವಿಗಿದ್ದಷ್ಟು ಅರಿವು ಯಾವ ಪ್ರಾಣಿಗಳಿಗೂ ಇಲ್ಲ. ಆದರೂ ತನುಗಳು ಭ್ರಮೆಯ ಆಚರಣೆ ಮೂಲಕ ಅಜ್ಞಾನದ ತನುಗಳೆಂದು ಗುರುತಿಸಿಕೊಂಡಿವೆ.

ಕಲ್ಲು ಕಟ್ಟಿಗೆ ಲೋಹಗಳಿಂದ ತನಗೆ ತಿಳಿದ ಮೂರ್ತಿ ಮಾಡಿ, ಅವುಗಳನ್ನೇ ದೇವರೆಂದು ಭ್ರಮಿಸಿ ಅವುಗಳಿಗೆ ಭವ್ಯ ಮಂದಿರ ಚರ್ಚ್ ಸಮಾಧಿಗಳನ್ನು ನಿರ್ಮಿಸಿ ಪೂಜಿಸಿ ಅರ್ಚಿಸಿ ಆರಾಧಿಸಿ ತನುಗಳು ಆನಂದಪಡುತ್ತವೆ. ದೇವರಿಗೆಂದು ಬಳಸಿದ ಕಲ್ಲು ಕಟ್ಟಿಗೆ ಲೋಹಗಳನ್ನು ಮರೆಯುತ್ತವೆ. ಕಲ್ಲುಕಟ್ಟಿಗೆ ಲೋಹಗಳು ಸತ್ಯ. ಸತ್ಯ ಎಂದರೆ ಬ್ರಹ್ಮ ! ಕಲ್ಲುಕಟ್ಟಿಗೆ ಲೋಹಗಳಿಂದ ಮಾಡಿದ ದೇವರು ಅಸತ್ಯ. ಅಸತ್ಯ ವೆಂದರೆ ಭ್ರಮೆ.

ತನು ಭ್ರಮೆಗೆ ಮರುಳಾಗಿ ಆ ಭ್ರಮೆಯನ್ನೇ ದೇವರೆಂದು ಪೂಜಿಸಿ ಅರ್ಚಿಸಿ ಆರಾಧಿಸಿದರೆ ತನುವನ್ನು ಆವರಿಸಿದ ಭ್ರಮೆ ಎಂಬ ಮನ ತನುವಿನಲ್ಲಿದ್ದ ಬ್ರಹ್ಮನನ್ನು ಕೊಂದಂತಾಗಲಿಲ್ಲವೆ ?ಎಲವೋ,ಎಲವೋ, ಬ್ರಹ್ಮಹತ್ಯೆವ ಮಾಡಿದವನೇ, ಒಮ್ಮೆ ಶರಣೆನ್ನೆಲವೋ ! ಒಮ್ಮೆ ಶರಣೆಂದಡೆ ಪಾಪಕರ್ಮ ಓಡುವವು.

ಎಲೈ ಸತ್ಯದ ತನುವನ್ನು ಆವರಿಸಿಕೊಂಡ ಭ್ರಮೆಯೇ, ಸತ್ಯದ ತನುವಿನಲ್ಲಿರುವ ಬ್ರಹ್ಮನಿಗೆ ಒಮ್ಮೆ ಮೊರೆ ಹೋಗು ; ಆತನಿಗೆ ಶರಣಾಗತನಾಗು, ಶರಣು ಹೋಗಿ ಶರಣನೇ ನೀನಾಗು. ಆ

ಪರಬ್ರಹ್ಮನೇ ನೀನಾಗು. ಆ ಬ್ರಹ್ಮನಿಂದಾಗಿ ಪಾಪ ಕರ್ಮಗಳು ಓಡಿ ಹೋಗುವವು.

ಕಲ್ಲನ್ನೇ ದೇವರೆಂದು ಭ್ರಮೆಯಿಂದ ನಂಬಿ ಪೂಜೆ ಮಾಡುತ್ತ ಮಾಡುತ್ತ ತನುವೊಂದು ಪೂಜಾರಿ ವೇಷ ಧರಿಸಿ ಪಾಪಕರ್ಮ ಮಾಡುತ್ತ ಅನೇಕ ತನುಗಳನ್ನು ವಂಚಿಸಿತು. ತನುವನ್ನು ಆವರಿಸಿದ ಭ್ರಮೆಯಿಂದಾಗಿ ತನುವಿನಲ್ಲಿಯೇ ಇದ್ದ ಬ್ರಹ್ಮನನ್ನು ಪೂಜಾರಿ ವೇಷದ ಭ್ರಮೆ ಅರಿಯಲಿಲ್ಲ. ಪೂಜಾರಿ ತನುವಿನ ಭ್ರಮೆಯೇ ಪೂಜಾರಿ ತನುವಿನಲ್ಲಿದ್ದ ಬ್ರಹ್ಮನನ್ನು ಹತ್ಯೆ ಮಾಡಿತು ! ಭ್ರಮೆಯಿಂದಾಗಿ ತನು ಮತ್ತೊಂದು ತನುವನ್ನು ಹತ್ಯೆ ಮಾಡಲಿಲ್ಲ. ತನುವಿನಲ್ಲಿ ತನ್ಮಯವಾದ ಬ್ರಹ್ಮನನ್ನೇ ತನುವನ್ನು ಆವರಿಸಿದ ಭ್ರಮೆ ಹತ್ಯೆ ಮಾಡಿತು. ತಿಳಿದರೆ ಬ್ರಹ್ಮ ತನು; ತಿಳಿಯದಿದ್ದರೆ ಭ್ರಮಾ ತನು ! ಯಾವುದು ಬೇಕೋ ಅದನ್ನು ಆಯ್ದುಕೊಳ್ಳುವ ಶಕ್ತಿ ಮನಕ್ಕಿದೆ. ಆಯ್ಕೆ ತನುವಿನ ಮನಕ್ಕೆ ಸಂಬಂಧಿಸಿದ್ದು. ಆ ಮನವೆ ತನುವಿನ ಹಣೆ ಬರಹವನ್ನು ನಿರ್ಧರಿಸಬೇಕು. ಸದಾ ಬ್ರಹ್ಮ ಹತ್ಯೆಗೆ ಒಳಗಾಗುವ ದುಃಖ ಬೇಕೋ ಬ್ರಹ್ಮ ಸುಖವನ್ನು ಪಡೆಯುವ ಸಂತೋಷ ಬೇಕೋ? ಮನವೇ ನಿರ್ಧರಿಸಬೇಕು.

ಒಮ್ಮೆ ಶರಣೆಂದಡೆ ಪಾಪ ಕರ್ಮ ಓಡುವವು; ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು; ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮ ದೇವಂಗೆ :

ತನು ಐದು ಹೊನ್ನ ಪರ್ವತಗಳನ್ನುಳ್ಳ ಹಿಮಾಲಯ ! ತನುವೆಂಬ ಈ ಹಿಮಾಲಯಕ್ಕೆ ಬ್ರಹ್ಮನೊಬ್ಬನೆ ಒಡೆಯ ! ಆತ ಕಣ್ಣಿನಲ್ಲಿ ವಾಸ ಮಾಡಿ ಸತ್ಯವನ್ನೇ ನೋಡುತ್ತಾನೆ. ಕಿವಿಯಲ್ಲಿ ವಾಸ ಮಾಡಿ ಸತ್ಯವನ್ನೇ ಕೇಳುತ್ತಾನೆ. ಮೂಗಿನಲ್ಲಿ ವಾಸ ಮಾಡಿ ಸತ್ಯದ ಅರಿವಿನ ಪರಿಮಳವನ್ನೇ ಮೂಸಿಸುತ್ತಾನೆ. ಚರ್ಮದಲ್ಲಿ ವಾಸಮಾಡಿ ಅರಿವಿನ ಸ್ಪರ್ಶ ಸುಖವನ್ನು ನೀಡುತ್ತಾನೆ. ನಾಲಗೆಯಲ್ಲಿ ವಾಸ ಮಾಡಿ ಅರಿವಿನ ಪ್ರಸಾದವನ್ನೇ ರುಚಿಸುತ್ತಾನೆ. ಆದರೆ ತನುವಿನಲ್ಲಿ ವಾಸ ಮಾಡಿದ ಬ್ರಹ್ಮನ ಈ ಎಲ್ಲ ಸ್ಥಾನಗಳಲ್ಲಿಯೂ ಭ್ರಮೆ ಆವರಿಸಿಕೊಂಡಿದೆ.

ಕಣ್ಣಿನಲ್ಲಿ ಆವರಿಸಿದ ಭ್ರಮೆಗೆ ಸತ್ಯ ಗೋಚರಿಸುವುದಿಲ್ಲ. ಕಿವಿ, ಮೂಗು, ಚರ್ಮ, ನಾಲಗೆಯಲ್ಲಿ ಆವರಿಸಿದ ಭ್ರಮೆಗೆ ಸತ್ಯ ತಿಳಿಯುವು ದಿಲ್ಲ. ಬ್ರಹ್ಮನಿಗೆ ಸತ್ಯವೆಂದರೆ ಪ್ರಿಯ ; ಭ್ರಮೆಗೆ ಅಸತ್ಯವೆಂದರೆ ಪ್ರಿಯ ! ಐದು ಹೊನ್ನಿನ ಪರ್ವತಗಳನ್ನು ತನುವಿನಲ್ಲಿಟ್ಟುಕೊಂಡಿದ್ದರೂ ಭ್ರಮೆ ಹೊನ್ನನ್ನು ಹೊರಗೆ ಹುಡುಕುತ್ತದೆ. ಅದೊಂದು ಹಳದಿ ಬಣ್ಣದ ಲೋಹವೆಂದು ತಿಳಿಯಲು ಭ್ರಮೆಗೆ ಸಾಧ್ಯವಾಗುತ್ತಿಲ್ಲ. ಕಾರಣ ಹೊನ್ನಿನ ಆಸೆಗಾಗಿ ಹೊನ್ನು ಹೊಂದಿದ ತನುವನ್ನೇ ಹೊನ್ನಿಗಾಗಿ ಹಗಲಿರುಳು ದುಡಿಯಲು ಹಚ್ಚುತ್ತದೆ, ಕಳವು ಮಾಡಿ ತನುವಿಗೆ ಕಳ್ಳನ ಪಟ್ಟ ಕಟ್ಟುತ್ತದೆ. ತನುವನ್ನೇ ಕೊಂದು ತನುವಿಗೆ ಹತ್ಯಾಚಾರದ ಪಟ್ಟ ಕಟ್ಟುತ್ತದೆ. ತನು ಮುಖ್ಯವೊ ಹಳದಿ ಬಣ್ಣದ ಲೋಹ ಮುಖ್ಯವೊ ಎಂಬುದನ್ನು ಭ್ರಮೆ ತಿಳಿಯದಂತೆ ಮಾಡುತ್ತದೆ.

ಭ್ರಮೆ ಬ್ರಹ್ಮನನ್ನು ತಿಳಿದರೆ ತನುವಿನಲ್ಲಿದ್ದ ಐದು ಹೊನ್ನಿನ ಪರ್ವತಗಳು ದಕ್ಕುತ್ತವೆ. ಜೊತೆಗೆ ಬ್ರಹ್ಮಪದವಿಯೂ ಲಭ್ಯವಾಗುತ್ತದೆ. ಬ್ರಹ್ಮಹತ್ಯೆ ಮಾಡಿದ ಪಾಪ ತೊಲಗಿ ಬ್ರಹ್ಮನೇ ತಾನಾಗುತ್ತಾನೆ.

ತನುವಿನಲ್ಲಿಯೇ ತನ್ಮಯವಾದ ಬ್ರಹ್ಮನಿಗೆ ಭ್ರಮೆ ಒಮ್ಮೆ ಶರಣೆನ್ನಬೇಕು. ಶರಣು ಹೋಗಬೇಕು. ಅಂಗದಲ್ಲಿಯೇ ಸಂಗಮವಾದ ಬ್ರಹ್ಮನೆಂಬ ಸಂಗಮನಾಥನು ಅಂಗಕ್ಕೆ ಆವರಿಸಿದ ಭ್ರಮೆಯನ್ನು ತನ್ನಂತೆ ಮಾಡಿಕೊಳ್ಳುವನು.

ಹಲವು ಕೊಂಬಿಂಗೆ ಹಾಯಲುಬೇಡ ;
ಬರಿ ಕಾಯಕ್ಕೆ ನೀಡಲು ಬೇಡ,
ಲೋಗರಿಗೆಡೆಕೊಟ್ಟು ಭ್ರಮಿತನಾಗಬೇಡ !
ಆಚಾರವೆಂಬುದು ಹಾವಸೆಗಲ್ಲು;
ಭಾವತಪ್ಪಿದ ಬಳಿಕ ಏಗೈದಡಾಗದು.
ಅಂಜದಿರು,ಅಳುಕದಿರು,ಪರದೈವಕ್ಕೆರಗದಿರು;
ಕೂಡಲಸಂಗಯ್ಯನ ಕೈಯಲು ಈಸುವುದೆನ್ನ ಭಾರ ?

ಹಲವು ಕೊಂಬಿಂಗೆ ಹಾಯಲುಬೇಡ; ಬರಿ ಕಾಯಕ್ಕೆ ನೀಡಲು ಬೇಡ, ಲೋಗರಿಗೆಡೆಕೊಟ್ಟು ಭ್ರಮಿತನಾಗಬೇಡ :

ಆಚಾರವಿಲ್ಲದ ಅಜ್ಞಾನಿಗಳು ಆರು ಜನ, ಕೈಲಾಸದ ಕಾಯವನ್ನು ವ್ಯಸನಕ್ಕೆ ಹಚ್ಚುವ ಏಳು ಜನ, ಮದ ತುಂಬಿದ ಅಹಂಕಾರ ಉಳ್ಳ ಎಂಟು ಜನ ಕಾಯದಲ್ಲಿಯೇ ಇದ್ದಾರೆ. ಇವರು ಆಚಾರವಿಲ್ಲದವರು. ಶರಣರು ಇವರನ್ನು ಅರಿಷಡ್ವರ್ಗಗಳು, ಸಪ್ತ ವ್ಯಸನಗಳು, ಅಷ್ಟ ಮದಗಳೆಂದು ಹೆಸರಿಸಿದ್ದಾರೆ. ಈ ಇಪ್ಪತ್ತೊಂದು ಜನ ಕಾಯವೆಂಬ ಕೈಲಾಸದಲ್ಲಿದ್ದರೂ ಆಚಾರವಿಲ್ಲದವರು. ಇವರಿಗೆ ತನುವನ್ನು ಕೊಟ್ಟು ಬರಿ ಕಾಯಕ್ಕೆ ಭ್ರಮಿತನಾಗಬೇಡ.

ತನುವನ್ನು ಕಾಮದೆಡೆಗೆ ಕರೆದೊಯ್ಯುವವನೊಬ್ಬ, ರುಚಿಯೆಡೆಗೆ ಕರೆದೊಯ್ಯುವವನೊಬ್ಬ, ಸ್ಪರ್ಶ, ವಾಸನೆ, ಶಬ್ದದೆಡೆಗೆ ಕರೆದೊಯ್ಯುವವನೊಬ್ಬ, ಅಧಿಕಾರ,ಸಂಪತ್ತು,ಪದವಿಯೆಡೆಗೆ ತನುವನ್ನು ಕರೆದೊಯ್ದು ಬ್ರಹ್ಮತನವನ್ನು ಭ್ರಮಿತ ತನುವಾಗಿ ಮಾಡುತ್ತಾರೆ. ಆಚಾರವಿಲ್ಲದ ಅಲ್ಪರ ಮಾತಿಗೆ ಮರುಳಾಗಬೇಡ ಮನವೆ !

ಆಚಾರವೆಂಬುದು ಹಾವಸೆಗಲ್ಲು ; ಭಾವತಪ್ಪಿದ ಬಳಿಕ ಏಗೈದಡಾಗದು :

ಗಟ್ಟಿಯಾಗಿ ನಿಲ್ಲಬೇಕೆಂದು ಪಾಚಿ ತುಂಬಿದ ಬಂಡೆಗಲ್ಲ ಮೇಲೆ ಕಾಲಿಟ್ಟರೆ ನೀರಿಗೆ ಜಾರಿ ಬಿದ್ದು ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. ಜಲಬಿಂದುವೇ ಪಾಚಿಯಾಗಿ ಜಲಬಿಂದುವಿನಿಂದ ಹುಟ್ಟಿದ ತನುವಿಗೆ ಕುತ್ತು ತರುತ್ತದೆ. ಅಂತೆಯೇ ತನುವಿನ ಐದು ಜ್ಞಾನೇಂದ್ರಿಯಗಳಿಂದಲೇ ಅಜ್ಞಾನ ಹುಟ್ಟಿದೆ. ಜ್ಞಾನದ ಭಾವ ತಪ್ಪಿದ ಬಳಿಕ ಕಾಯವನ್ನು ಕಾಯದೊಳಗಿದ್ದ ಇಪ್ಪತ್ತೊಂದು ಜನರೇ ತಿಂದು ಹಾಕುತ್ತಾರೆ. ಆಗ ಜ್ಞಾನೇಂದ್ರಿಯಗಳು ಏನು ಮಾಡಿದರೂ ಆಗದೆ ತನು ಅಜ್ಞಾನಕ್ಕೆ ತುತ್ತಾಗುತ್ತದೆ.

ಅಂಜದಿರು, ಅಳುಕದಿರು, ಪರದೈವಕ್ಕೆರಗದಿರು ; ಕೂಡಲಸಂಗಯ್ಯನ ಕೈಯಲು ಈಸುವುದೆನ್ನ ಭಾರ :

ಅಂಗದಲ್ಲಿಯೇ ಸಂಗಯ್ಯನೆಂಬ ಗುರುದೇವನು ಸಂಗಮವಾಗಿರುವಾಗ ಪರದೈವಕ್ಕೆರಗುವುದು ಏಕೆ ? ಅಲ್ಪರ ಸಂಗ ಮಾಡಿ ಪರದೈವಕ್ಕೆರಗುವ ಮುನ್ನ ಭಾವತಪ್ಪಿ ದುರ್ಭಾವಿಯಾಗದ ಮುನ್ನ , ಬರಿ ಕಾಯಕ್ಕೆ ನೀಡಿ ಹಲವು ಕೊಂಬೆಗೆ ಹಾರುವ ಮುನ್ನ, ಎಲೆ ದೇವಾ ಕೂಡಲಸಂಗಯ್ಯನೆ ನಿನ್ನ ಕೈಯಲು ಈಸುವುದು ಲೇಸು ! ಗೋಚರದ ಆಚಾರಗಳನ್ನೆಲ್ಲ ಬಿಟ್ಟು ನೀನಿಕ್ಕಿದ ಅಗೋಚರದ ಆಚಾರ ದಲ್ಲಿರುವುದೇ ಲೇಸು ತಂದೆ.

621

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು;
ಉದ್ಧರಿಸುವವನೊಬ್ಬ, ಶಿವಶರಣ, ಸಾಲದೆ ?
ನಾರಾಯಣ ವೃದ್ಧ ಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ದಾನವ ಬೇಡಿದ
ಕೊಟ್ಟ ಬಲಿ ಬಂಧನಕ್ಕೊಳಗಾದ !
ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ
ಕೊಟ್ಟ ದಾಸ ತವನಿಧಿಯ ಪಡೆದ !
ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ
ಕೊಟ್ಟ ಕರ್ಣ ಕಳದಲ್ಲಿ ಮಡಿದ !
ಕಾಮಾರಿ ಜಂಗಮನಾಗಿ ಬಂದು ಸಿರಿಯಾಳನ ಮಗನ ಬೇಡಿದ ;
ಕೊಟ್ಟ ಸಿರಿಯಾಳ ಸೆಟ್ಟಿ ಕಂಚಿಯ ಪುರವ ಕೈಲಾಸಕೊಯ್ದು .
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ;
ಕೊಟ್ಟ ನಾಗಾರ್ಜುನನ ಶಿರ ಹೋಯಿತ್ತು !
ಶಿವನು ಜಂಗಮನಾಗಿ ಬಂದು ಸಿಂಧು ಬಲ್ಲಾಳನ ವಧುವ ಬೇಡಿದ !
ಕೊಟ್ಟ ಸಿಂಧು ಬಲ್ಲಾಳ ಸ್ವಯಂ ಲಿಂಗವಾದ !
ಇದು ಕಾರಣ ಇಲ್ಲಿಯೂ ಲೇಸು ಅಲ್ಲಿಯೂ ಲೇಸು ;
ಕೊಡಿರೇ, ನಮ್ಮ ಕೂಡಲಸಂಗನ ಶರಣರಿಗೆ .

ವೇಷದ ಜ್ಞಾನಿಗಳಿಗೆ ಕೊಟ್ಟು ಹಲವರು ಕೆಟ್ಟರು. ಏನಾದರೂ ಕೊಟ್ಟರೆ ನಿಜ ಶರಣನಿಗೆ ಕೊಡಿ.ಏನಾದರೂ ಕೊಡುವುದು ಅದು ತನ್ನದಲ್ಲ. ತಾನು ನಿರ್ಮಿಸಿದ್ದಲ್ಲ. ನಿಜ ಶರಣ ಪರೀಕ್ಷಿಸುವುದಕ್ಕಾಗಿ ಬೇಡುವ ನಾಟಕ ಮಾಡುತ್ತಾನೆ. ಇದು ಶರಣನ ಆಟವೆಂದು ತಿಳಿದು ಭಕ್ತ ಶರಣ ಬೇಡಿದುದನ್ನು ಕೊಡುತ್ತಾನೆ. ಇದು ಭಕ್ತ ಮತ್ತು ಜಂಗಮನ ವಿನೋದದ ಆಟ !

ಈ ವಚನದಲ್ಲಿ ಇತಿಹಾಸ ಮತ್ತು ಪುರಾಣದ ಕತೆಗಳನ್ನು ಬಸವಣ್ಣನವರು ಒಂದೊಂದು ಸಾಲಿನಲ್ಲಿ ಬಳಸಿಕೊಂಡಿದ್ದಾರೆ. ಇದರ ಗರ್ಭದಲ್ಲಿ ಏಳು ಕತೆಗಳಿವೆ. ಇದು ಜ್ಞಾನಕ್ಕೆ ಹೋಗಿ ಮೌಢ್ಯವನ್ನು ಮುರಿಯುವ ತತ್ವ ಇದರಲ್ಲಿ ಅಡಗಿದೆ.

ನಾರಾಯಣ ಬ್ರಾಹ್ಮಣನಾಗಿ ಬಂದು ಬಲಿ ಚಕ್ರವರ್ತಿಗೆ ಮೂರು ಪಾದ ಇಡಲು ಭೂಮಿ ಬೇಡಿದ. ಕೊಟ್ಟ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದ.

ಈಶ ಭಕ್ತನಾಗಿ ದಾಸಿಮಾರ್‍ಯರನ್ನು ವಸ್ತ್ರ ಬೇಡಿದ. ಕೊಟ್ಟ ದಾಸೀಮಾರ್‍ಯರಿಗೆ ಈಶ ತವನಿಧಿಯ ಕೊಟ್ಟ.

ನಾರಾಯಣ ಯುದ್ಧ ಭೂಮಿಯಲ್ಲಿ ಬ್ರಾಹ್ಮಣ ವೇಷದಲ್ಲಿ ಬಂದು ಕರ್ಣನ ಕವಚ ಬೇಡಿದ.ಕೊಟ್ಟ ಕರ್ಣ ಯುದ್ಧದಲ್ಲಿ ಮಡಿದ !

ಕಾಮಾರಿ ಜಂಗಮ ವೇಷದಲ್ಲಿ ಬಂದು ಸಿರಿಯಾಳನ ಮಗನ ಬೇಡಿದ. ಮೋಹವೆಂಬ ಮಗನನ್ನು ಕೊಟ್ಟ ಸಿರಿಯಾಳನನ್ನು ಕಂಚಿಪುರವನ್ನು ಕೈಲಾಸಕ್ಕೊಯ್ದು!

ನಾರಾಯಣ ಬ್ರಾಹ್ಮಣನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ ; ಕೊಟ್ಟ

ನಾಗಾರ್ಜುನನ ಶಿರ ಹೋಯಿತ್ತು !

ಶಿವನು ಜಂಗಮನಾಗಿ ಬಂದು ಸಿಂಧು ಬಲ್ಲಾಳನ ವಧುವ ಬೇಡಿದ ! ಮನವೆಂಬ ಸತಿಯನ್ನು ಶಿವನೆಂಬ ಪತಿಗೆ ಅರ್ಪಿಸಿದ ಸಿಂಧುಬಲ್ಲಾಳ ಸ್ವಯಂ ಲಿಂಗವಾದ.

ಮಹಾಜ್ಞಾನಿಗಳು ಇಹಲೋಕದಲ್ಲಿಯೂ ಲೇಸು ಪರ ಲೋಕ ದಲ್ಲಿಯೂ ಲೇಸು ಮಾಡುವರು. ಕೊಟ್ಟರೆ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನಿಗೆ ಕೊಡಿ. ಅವರು ಕೇಳುವುದು ತನುವಿನ ಅಜ್ಞಾನವನ್ನು.

622

ಎಚ್ಚು ಬಾಲಿಯ ಕೊಂದ, ಕಟ್ಟಿದನು ಶರಧಿಯ
ಹತ್ತು ತಲೆಯ ರಾವಣನ ಒಂದೆ ಅಂಬಿನಲ್ಲಿ ಮಡುಹಿದ ;
ಛಲದಿಂದ ಲಂಕಾದ್ವೀಪವ ನೆಲವೆಣ್ಣು ಮಾಡಿದ;
ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ ರಾಮನ ತೋರಾ !
ಮಾಯದ ಸಂಸಾರವ ನಚ್ಚಿ, ವಾಯಕ್ಕೆ ಕೆಟ್ಟು
ಬರುದೊರೆವೊಗಬೇಡ;
ಕರ್ತು ಕೂಡಲಸಂಗಂಗೆ ಶರಣೆನ್ನಿರಯ್ಯಾ !

ಅಮಾಯಕ ವಾಲಿಯನ್ನು ಬಾಣದಿಂದ ಕೊಂದು, ಸಮುದ್ರಕ್ಕೆ ಸೇತುವೆ ಕಟ್ಟಿದ. ಹತ್ತು ತಲೆಯ ರಾವಣನನ್ನು ತನ್ನ ಒಂದೇ ಬಾಣದಿಂದ ಕೊಂದು ಛಲದಿಂದ ಲಂಕೆಯ ನೆಲವನ್ನು ಹಣ್ಣು ಮಾಡಿದ. ಕಲಿ ವಿಭೀಷಣನಿಗೆ ಪಟ್ಟ ಕಟ್ಟಿದ ರಾಮ ನಂತರದ ದಿನಗಳನ್ನು ಸುಖದಿಂದ ಕಳೆದನೆ?

ಎಲೆ ತನುವೆ ಮಾಯದ ಸಂಸಾರವನು ಮೆಚ್ಚಿ ಮನದ ಓಟಕ್ಕಾಗಿ ವ್ಯರ್ಥ ಕೆಡಬೇಡ. ಬಲುದೂರ ನಡೆದು ತನುವಿನ ಆಯುಷ್ಯವನ್ನು ಅಜ್ಞಾನದಿಂದ ಕಳೆಯಬೇಡ. ಅರಿವಿನಿಂದ ವಿಚಾರಿಸು. ಸದಾ ಅರಿವಿನ ಮಾತುಗಳನ್ನು ಹೇಳುವ ಅಂಗದಲ್ಲಿಯೇ ಇರುವ ಅರಿವಿನ ಸಂಗಮನಾಥನಿಗೆ ಒಮ್ಮೆ ಶರಣು ಹೋಗು !

623

ವಿಪ್ರರ ಕರೆದು '' ನೃಪರುಗಳು ಇಪ್ಪರೆ
ತಮ್ಮ ಶಿಶುವಿನೊಡನೆಂ''ದು ಬೆಸಗೊಂಡಡೆ,
''ಇಪ್ಪರು,ಇಪ್ಪರು,ತಾವು ಬಿತ್ತಿದ ಫಲಗಳ ತಾವು ಉಣ್ಣದವರುಂಟೆ?''
ಎಂದು ಕಣ್ಣು ಕಾಣದೆ ಹೇಳಿದರು, ಅಣ್ಣಗಳು, ಕರ್ಮದ ಬಟ್ಟೆಯನು.
ಅಂತೆಂದ ಮಾತ ಶಿಶು ಕೇಳಿ,
ಕೆಟ್ಟೋಡಿ ಬಂದು ಲಿಂಗದ ಹೊಟ್ಟೆಯ ಹೊಗಲು,
ಅಟ್ಟಿ ಬಂದು ಖಂಡೆಯವ ಕಳೆದುಕೊಂಡು ಮಂಡೆಯನೊಡೆಯಲು

ಮಂಡೆ ಒಡೆದು ಭೂಮಂಡಲವರಿಯೆ ನಾಲ್ಕು ಪುರವಾಗಲು,
ಘಟಸರ್ಪವ ತುಡುಕಿ ನಾಗನಾಥನಾಗಿ
ಇಪ್ಪತ್ತೇಳು ಬಸದಿಯನೊಡೆಯನೆ ?
ಆಗಳಂತೆ,ಎನ್ನ ಮಾಡಿದ ಕರ್ಮ ನಿಮ್ಮ ಕೈಯಲು ಕೆಡಿಸುವರು.
ಮುನ್ನೊಬ್ಬ ಕೆಡಿಸಿಹನೆಂದು ಬಂದು ಬಂದು ತುತ್ತನಿಟ್ಟು
ಮರಳಿ ಕೈಯಿಡಹೋದಡೆ ತುತ್ತು ಹುಳುಗುಪ್ಪಿಯಾಗದೆ ?
ಶಿವಧರ್ಮ ಕೆಡಿಸಿದವನು ಅಧರ್ಮಕ್ಕಿಳಿವನು;
ಕೂಡಲಸಂಗಮದೇವ ಸಾಕ್ಷಿಯಾಗಿ ,
ಮಕರಭೋಜನವಾಗನೆ ವಿನಾಶಕ್ತಿರಾಯನು ?

ಮಹಾಜ್ಞಾನಿಯ ಮಗ ಮಹಾಜ್ಞಾನಿಯಾಗಲಾರ. ಜ್ಞಾನಿಯನ್ನು ಮತ್ತೆ ಜ್ಞಾನಿಯನ್ನಾಗಿ ಮಾಡುವುದೆಂದರೇನು ? ಆದರೆ ಲೋಕವೆಲ್ಲ ತನ್ನ ಮಗು ತನ್ನಂತೆ ಆಗಬೇಕೆಂದು ಛಲ ತೊಟ್ಟಿದೆ. ಬ್ರಾಹ್ಮಣ ಮಗುವನ್ನು ಬ್ರಹ್ಮನನ್ನಾಗಿ ಮಾಡಲಾರ. ಆದರೆ ಛಲದಿಂದಾಗಿ ತಾವು ಬಿತ್ತಿದ ಫಲ ತಾವು ಉಣ್ಣುವುದುಂಟೆ ? ಎಂದು ಪ್ರಶ್ನೆ ಮಾಡುತ್ತಾರೆ.

ತನುವಿನ ಗರ್ಭದಿಂದ ಹೊರಬಂದ ತನುವಿಗೆ ನೋಡಲು ಕಲಿಸಬಹುದೆ ? ಕೇಳಲು ಕಲಿಸಬಹುದೆ ? ಮೂಸಿಸುವುದನ್ನು, ರುಚಿಸುವುದನ್ನು, ಸ್ಪರ್ಶಿಸುವು ದನ್ನು ಕಲಿಸಬಹುದೆ? ತನುವಿನ ಜ್ಞಾನ ಗರ್ಭದಿಂದಲೇ ಬಂದಿದೆ. ಆದರೆ ಆ ಜ್ಞಾನವನ್ನು ಬಳಸಲು ತನುವಿಗೆ ಸಾಧ್ಯವಾಗುತ್ತಿಲ್ಲ.

ಶಿಶು ಅರಿವಿನ ಖಡ್ಗ ತನುವಿನಲ್ಲಿಯೇ ಕಳೆದುಕೊಂಡು ಮಂಡೆ ಯೊಡೆದು ಹೊರ ಬಂದಿದೆ. ಬಯಲ ಬೀಜದಿಂದ ಬಂದ ಕುಡಿ ಬಯ ಲನ್ನೇ ಮರೆತರೆ ಹೇಗೆ ? ಭೂಮಿ ಜಲ ಅಗ್ನಿ ವಾಯು ಎಂಬ ನಾಲ್ಕು ಬೂತಗಳೊಂದಿಗೆ ಮನವೆಂಬ ಘಟಸರ್ಪ ನಾಗಾನಾಥನ ಹೆಸರು ಪಡೆದು ಶಿಶುವಿನ ತನು ಹೊಕ್ಕಿದೆ.

ನಾಲ್ಕು ಪುರಗಳಿಂದ ಬಯಲು ಜನ್ಮ ಪಡೆದಿಲ್ಲ ; ಬಯಲಿಂದಲೇ ನಾಲ್ಕು ಪುರಗಳು. ಅಜ್ಞಾನದಿಂದಾಗಿ ಭೂಮಿ,ಜಲ,ಅಗ್ನಿ,ವಾಯು ಎಂಬ ನಾಲ್ಕು ಪುರಗಳಲ್ಲಿ ಬಯಲು ಅಡಗಿದಂತಾಗಿದೆ. ಮನ ತನುವನ್ನು ಆವರಿಸಿರುವುದರಿಂದ ಬಯಲು ಅದಕ್ಕೆ ಕಾಣುತ್ತಿಲ್ಲ.

ತನು ಇಪ್ಪತ್ತೇಳು ತತ್ವಗಳ ಅರಿವಿನ ಬಸದಿ. ಮನವೆಂಬ ಘಟಸರ್ಪ ಇದನ್ನು ಆವರಿಸಿದೆ. ಈ ಸರ್ಪವನ್ನು ಅಭರಣವನ್ನಾಗಿ ಧರಿಸಿಕೊಳ್ಳುವ ನಾಗಭೂಷಣ ಮನಕ್ಕೆ ಹೊಳೆಯದಿದ್ದರೆ. ಇಪ್ಪತ್ತೇಳು ಬಸದಿಯನ್ನು ಯಾರೂ ಒಡೆಯಲು ಆಗುವುದಿಲ್ಲ. ಇದನ್ನು ಕೆಡಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ.ಅರಿವಿನ ತನುವಿಗೆ ಯಾರೂ ಗುರುವಾಗಲಾರ. ಶಿಷ್ಯನೆಂದು ಮಗನೆಂದು ಶಿಶುವೆಂದು ತುತ್ತುಮಾಡಿ ಯಾವ ಗುರುದೇವನೂ ಅರಿವಿನ ಊಟ ಉಣ್ಣಿಸಲರಿಯ. ಏಕೆಂದರೆ ಉಣ್ಣಿಸಲು ಹೋದ ತುತ್ತೇ ಹುಳು ಗುಪ್ಪಿಯಾಗುವುದು ! ತನುವಿನಲ್ಲಿ ಇದ್ದ ಅರಿವಿನ ಧರ್ಮ ಕೆಟ್ಟು ಅಧರ್ಮ ಕ್ಕಿಳಿಯುವುದು.

ತನುವಿನಲ್ಲಿಯೇ ಇದ್ದ ಶಕ್ತಿ ತನುವಿನಲ್ಲಿಯೇ ಇದ್ದ ಮೊಸಳೆಗೆ ತುತ್ತಾಗಿ ಅದಕ್ಕೆ ತನು ಆಹಾರವಾಗುವುದು. ತನು ಜಲದಿಂದಲೇ ಗಟ್ಟಿಯಾಗಿದೆ. ಜಲವೇ ತನುವಿಗಾಧಾರ. ಆ ಜಲದಲ್ಲಿಯೇ ಮೊಸಳೆಯೆಂಬ ಮೃಗ ಜನಿಸಿದೆ. ಜಲಬಿಟ್ಟು ಮೊಸಳೆ ಜೀವಿಸದು. ಜಲದಲ್ಲಿಯೇ ಅದಕ್ಕೆ ಆನೆಬಲ. ಜಲದಲ್ಲಿಯೇ ಅದಕ್ಕೆ ಮೃತ್ಯು .

624

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ;
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು , ನೋಡಾ !
ಒಬ್ಬ ಜಂಗಮದಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು !
ಸಂದಿತ್ತು , ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ !

ಶರಣರು ಇತಿಹಾಸ ನಿರ್ಮಿಸಿದವರಲ್ಲ. ದಾಖಲಿಸಿದವರೂ ಅಲ್ಲ. ತನು ಮತ್ತು ತನುವಿನಲ್ಲಿರುವ ಸತ್ಯದ ವಿಚಾರಗಳನ್ನು ಹೇಳುತ್ತಾ ಅದನ್ನು ಬಳಕೆ ಮಾಡುವ ಬಗೆ ಹೇಳಿದ್ದಾರೆ. ಈ ವಚನದಲ್ಲಿ ಐತಿಹಾಸಿಕ ಸೂಕ್ಷ್ಮತೆಗಳ ವಿಚಾರಕ್ಕೆ ಕೊಂಡೊಯ್ದರೂ ಅರಿವಿನಿಂದ ನೋಡಿದಾಗ ಆ ವಿಚಾರವನ್ನು ಸುಳ್ಳಾಗಿಸುತ್ತದೆ.

ತನು ಅದನ್ನು ಆವರಿಸಿದ ಮನವೆಂಬ ಅರಸ, ಆ ತನುವಿನಿಂದ ಹೊರಬಂದು ಹೋಗುವ ವಿಚಾರಗಳು ಮತ್ತು ತನುವಿನ ಶೃಂಗಾರ ಸ್ಥಿರವಾದುದಲ್ಲ . ಹಾಗೆಯೇ ಅದರ ಒಳಹೊರಗೆ ಸಂಬಂಧಿಸಿದ ಸಿರಿಯೂ ಸ್ಥಿರವಲ್ಲ.

ಮನವೆಂಬ ಅರಸನ ಹಟದಿಂದಾಗಿ ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವಿನ ಆದೇಶ ಪಾಲಿಸುವ ಜಂಗಮನಿಂದಾಗಿ ಸಂಪದ್ಭರಿತವಾದ ತನುವೆಂಬ ಕಲ್ಯಾಣ ಹಾಳಾಗುತ್ತದೆ. ಅದು ಅಂದಿಗೂ ಸತ್ಯ ಇಂದಿಗೂ ಸತ್ಯ ; ಎಂದೆಂದಿಗೂ ಸತ್ಯ. ''ಲಾಂಛನಕ್ಕೆ ಶರಣೆಂಬೆ, ಅವರಂತರಂಗವ ನೀವೆ ಬಲ್ಲಿರಿ; ಅರಸನ ಸುದ್ದಿ ಎಮಗೇಕಯ್ಯಾ? ಕೂಡಲಸಂಗನ ಶರಣರು ನಿಮ್ಮ ಪಡಿಯಚ್ಚು '' ತನುವಿನ ಕಲ್ಯಾಣದ ಸಂಪತ್ತು, ಅದರ ಸಿರಿವಂತಿಕೆ, ಮನವೆಂಬ ಅರಸನ ಗುಣ, ತನುವೆಂಬುದೊಂದು ಅರಿವಿನ ಲಾಂಛನ, ಭೂಮಿಯ ಮೇಲಿದ್ದ ಸರ್ವ ತನುಗಳು ಕೂಡಾ ಅರಿವಿನ ಲಾಂಛನ ! ಎನ್ನುವ ಬೆಡಗು ಬಸವಣ್ಣನವರ ವಚನದಲ್ಲಿದೆ. ಇಂತಹ ಅಪರೂಪದ ವಚನಗಳನ್ನು ನಿಧಾನವಾಗಿ ಓದಿದರೆ ಗಮನಕ್ಕೆ ಬರುತ್ತದೆ.

ತನುವನ್ನು ಆವರಿಸಿದ ಅರಸನ ಆಳ್ವಿಕೆ ನಿಂತಾಗ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನ ಪರಿಚಯವಾಗುತ್ತದೆ. ಜಂಗಮನ ಜೋಳಿಗೆಗೆ ಅರಸನ ಅಜ್ಞಾನದ ಆಳ್ವಿಕೆ ಗುರಿಯಾಗುತ್ತದೆ.

625

ಬೇವಿನ ಬೀಜವ ಬಿತ್ತಿ ; ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದಡೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ಕೂಡಲಸಂಗಮದೇವಾ.

ಅಜ್ಞಾನದಲ್ಲಿ ನಿರತವಾದ ತನುಗಳೊಂದಿಗೆ ಜ್ಞಾನದ ಮಾತುಗಳನ್ನು ಆಡ ಬಾರದು.

ಅದು ರುಚಿಸಲಾರದು. ಮನರಂಜನೆಗಾಗಿ ಜ್ಞಾನದ ಮಾತುಗಳನ್ನು ಕೇಳಿದರೆ ಅವು ಸಂಗ್ರಹವಾಗುತ್ತವೆ. ಸಂಗ್ರಹವಾದ ಮಾತುಗಳು ಆಪತ್ಕಾಲಕ್ಕೆ ಬಳಕೆ ಯಾಗುವುದಿಲ್ಲ.

ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು :

ತನುವಿನಲ್ಲಿ ತನ್ಮಯವಾದ ಅರಿವೇ ಗುರು; ಆ ಗುರುದೇವನೇ ಶಿವ ! ತನುವನ್ನು ಆವರಿಸಿದ ಮನವೇ ಭಕ್ತ. ಈತ ಅರಿವೆಂಬ ಶಿವನಿಗೆ ಭಕ್ತನಾಗಬೇಕು. ತನ್ನದೇ ಜ್ಞಾನ; ತನ್ನದೇ ಮನ. ತನ್ನ ಮನ ತನ್ನ ಜ್ಞಾನಕ್ಕೆ ಭಕ್ತನಾಗಬೇಕು.

ಒಂದು ತನುವಿನಲ್ಲಿ ಅರಿವೂ ಇದೆ; ಮನವೂ ಇದೆ. ತನುವಿ ನಲ್ಲಿರುವ ಅರಿವನ್ನು ಅರಿಯದ ಭಕ್ತನಿಗೆ ಮತ್ತೊಂದು ತನು ಅರಿವಿನ ಮಾತುಗಳನ್ನು ಆಡಿದರೆ ರುಚಿಸುವುದಿಲ್ಲ. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನಿಗೆ ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳ ಮಾತುಗಳು ಬೇಕಿಲ್ಲ. ಏಕೆಂದರೆ ಸ್ವಯಂ ಅರಿವೇ ತಾನಾಗಿದ್ದಾನೆ. ಆತನಿಂದಲೇ ಸರ್ವ ಪುಸ್ತಕಗಳು ಪ್ರಕಟಗೊಂಡಿವೆ.

ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳ ಮಾತುಗಳು ಮನಕ್ಕೆ ನಾಟುವುದಿಲ್ಲ! ಮನಕ್ಕೆ ಅರಿವು ನಾಟುವುದಿಲ್ಲ ; ಅರಿವಿಗೆ ಅರಿವು ಬೇಕಿಲ್ಲ ! ಶಿವ ಭಕ್ತರಲ್ಲದವರ ಕೂಡೆ ನುಡಿಯಲಾಗದು.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಾಮರಸ್ಯದ ಸುಖವನ್ನು ಅಂಗವನ್ನೇ ಆವರಿಸಿದ ಮನ, ಆ ಅಂಗದಲ್ಲಿಯೇ ಸಂಗಮವಾಗಬೇಕು. ಇಂತಹ ಅಂಗಗ ಳೊಂದಿಗಲ್ಲದೆ ಇತರ ಅಂಗಗಳ ಕೂಡೆ ಅರಿವಿನ ಮಾತುಗಳನ್ನು ನುಡಿಯಲಾಗದು. ಅದು ನಿಷ್ಫಲ.

ಬೇವಿನ ಬೀಜ ಬಿತ್ತಿ, ಬೆಲ್ಲದ ಕಟ್ಟೆ ಕಟ್ಟಿ ಆಕಳ ಹಾಲ ಎರೆದು ಜೇನು ಹೊಯ್ದರೂ ಅದು ಸಿಹಿಯಾಗಲರಿಯದು.

626

ಕರ್ತನನರಿಯದವನು ವಿಪ್ರನಾದಡೇನು, ಚತುರ್ವೇದಿಯಾದಡೇನು?
ಭುಕ್ತಿ ಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯಾ !
ಭವಿ ಮಾಡಿದ ಪಾಕವ ತಂದು,
ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು
ಕೂಡಲಸಂಗನ ಶರಣರ ಒಕ್ಕುದ ಕೊಂಡು
ಅನ್ಯವನಾಚರಿಸಿದಡೆ ತಪ್ಪದು-
ಸೂಕರನ ಶುಚಿಭ್ರೂತತೆಯ ಪ್ರಾಣಿಯಂತೆ !

ಕರ್ತನನರಿಯದವನು ವಿಪ್ರನಾದಡೇನು, ಚತುರ್ವೇದಿಯಾದಡೇನು? ಭುಕ್ತಿ ಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯಾ :

ವೇದ ಆಗಮ ಉಪ ನಿಷತ್ತುಗಳನ್ನು ಓದಿ ಬ್ರಾಹ್ಮಣನಾಗಬಹುದು. ನಾಲ್ಕು ವೇದಗಳನ್ನು ಓದಿ ಪಂಡಿತನಾಗಬಹುದು. ಇವು ತನುವಿಗೆ ಕ್ಷಣಿಕ ಸುಖವನ್ನು ನೀಡಬಲ್ಲವು. ಇವುಗಳನ್ನು ನುಡಿಯುವುದರಿಂದ ತನು ಲೋಕದ ಇಚ್ಛೆಗೆ ಮರು ಳಾಗಿ ವ್ಯವಹಾರ ಸುಖಕ್ಕೆ ಗುರಿಯಾಗುತ್ತಲ್ಲದೆ,

ಮನ ಚತುರ್ವೇದಗಳನ್ನು ಸೃಷ್ಟಿ ಸಿದ ಕರ್ತನನು ಅರಿಯದು.

ತನು ಕರ್ತಾರ ಸೃಷ್ಟಿಸಿದ ಕಮ್ಮಟ. ಅರಿವಿನ ಟಂಕಶಾಲೆ. ಇದು ಎಲ್ಲಿಯೂ ಕಲಿಯಬೇಕಿಲ್ಲ; ಎಲ್ಲವನ್ನು ಬಲ್ಲ ಕರ್ತಾರನೇ ಈ ಕಮ್ಮಟದಲ್ಲಿ ವಾಸ ಮಾಡಿದ್ದಾನೆ. ಕರ್ತಾರನನ್ನು ಅರಿಯದ ಮನ ಸಕಲ ವೇದಗಳನ್ನು ಓದಿದರೇನು ? ವಿಪ್ರನಾದರೇನು? ತನುವಿನ ಬಾಹ್ಯ ಸುಖಕ್ಕಾಗಿ ಲೋಕದ ಇಚ್ಛೆಗೆ ನುಡಿಯುವವನಲ್ಲದೆ ಸ್ವ ಸುಖವನು ಅರಿಯಲಾರ.

ಭವಿ ಮಾಡಿದ ಪಾಕವ ತಂದು,ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು :

ತನುವಿನಲ್ಲಿಯೇ ಮಿಗೆ ಮಿಗೆ ಮೀಸಲ ಅರಿವಿನ ಪ್ರಸಾದವಿರುವಾಗ ಅದನ್ನು ಉಣಬಡಿಸುವ ಕರ್ತನೂ ಇರುವಾಗ, ಏನೂ ಅರಿಯದ, ವ್ಯವಹಾರಕ್ಕಾಗಿ ಮಾತ್ರ ನುಡಿಯುವ ನುಡಿಗಳನ್ನು ತಂದು ತನುವಿಗೆ ಉಣ ಬಡಿಸುವುದೇ ? ವೇದ ಉಪ ನಿಷತ್ತುಗಳನ್ನು ಉದಾಹರಿಸಿ ನುಡಿಯುವ ಉಪನ್ಯಾಸ ಪ್ರಸಾದವದು ಭವಿಯ ಪಾಕ. ಅಂಗದಲ್ಲಿಯೇ ಇರುವ ಅರಿವಿನ ಲಿಂಗಯ್ಯನೆಂಬ ಕರ್ತಾರನನ್ನು ಅರಿಯದವ, ಲಿಂಗ,ಜನಿವಾರ,ರುದ್ರಾಕ್ಷಿಗಳನ್ನು ಧರಿಸಿದ್ದರೂ, ವೇದ ಆಗಮ ಉಪ ನಿಷತ್ತುಗಳನ್ನು ಅಭ್ಯಾಸ ಮಾಡಿದ್ದರೂ, ಆತ ನೀಡುವ ಉಪನ್ಯಾಸ ಅದು ಭವಿಯ ಪಾಕ ! ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯ ಈ ಉಪನ್ಯಾಸವನ್ನು ಒಪ್ಪುವುದಿಲ್ಲ.

ಕೂಡಲಸಂಗನ ಶರಣರ ಒಕ್ಕುದ ಕೊಂಡು ಅವ್ಯವಹಾರವನಾಚರಿಸಿದಡೆ ತಪ್ಪದು ಸೂಕರನ ಶುಚಿರ್ಭೂತತೆಯ ಪ್ರಾಣಿಯಂತೆ :

ಅಂಗದಲ್ಲಿಯೇ ಕೂಡಿದ ಅರಿವಿನ ಸಂಗಯ್ಯನಿಗೆ ಶರಣು ಹೋದ ಮನ ಶರಣರ ಮನ; ಘನಮನ ! ಇವರು ಮಾಡುವ ಸತ್ಸಂಗದ ಊಟವದು ಅಮೃತ. ಮಹಾಜ್ಞಾನಿಗಳ ಚರ್ಚಾಕೂಟದಲ್ಲಿ ಭಾಗವಹಿಸಿ ಅರಿವಿನ ಊಟ ಉಂಡು ಅಗೋಚರದ ಆಚಾರದಲ್ಲಿ ಬಂಧಿ ಯಾದ ಮೇಲೆ ಪುನಃ ಗೋಚರದ ಆಚಾರಕ್ಕೆ ಮರುಳಾದರೆ ಅದು ತನುವಲ್ಲ ಹಂದಿ. ಸ್ನಾನ ಮಾಡಿ ಶುಚಿರ್ಭೂತನಾದ ಮೇಲೆ ಹಂದಿ ಪ್ರಸಾದಕ್ಕಾಗಿ ಮಲಕ್ಕೆಳಿಸಿದಂತೆ.

627

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು;
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು
ಎಂತಯ್ಯಾ , ಅವರ ಭಕ್ತರೆಂಬೆ ?
ಎಂತಯ್ಯಾ ಅವರ ಮುಕ್ತರೆಂಬೆ ?
ಕೂಡಲಸಂಗಮದೇವ, ಕೇಳಯ್ಯಾ
ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯಾ .

ಉಂಬಲ್ಲಿ ಉಡುವಲ್ಲಿ ಜಾತಿಯನರಸುವುದಿಲ್ಲ. ಕೊಂಬಲ್ಲಿ ಕೊಡುವಲ್ಲಿ ಮನ ಜಾತಿಯನು ಹುಡುಕುತ್ತದೆ. ಮನ ತನುವಿನಲ್ಲಿರುವ ಯುಕ್ತಿ ಬಳಸಿ ನೋಡದಿದ್ದರೆ ಅದು ಎಂದೂ ಶುದ್ಧವಾಗುವುದಿಲ್ಲ.

ಮನಕ್ಕೆ ಈ ವಿಚಾರ ಗೊತ್ತಿಲ್ಲವೆಂದಲ್ಲ ; ಆದರೆ ಗೊತ್ತಿರುವ ಅರಿವು ಬಳಕೆಯಾಗಬೇಕಾದರೆ ಬಹಳ ಶಕ್ತಿ ಬೇಕಾಗುತ್ತದೆ. ಹಾಗೆಯೇ ಸತ್ಯದ ರೂಢಿಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ.

ಮನದ ವಿಚಾರವೇ ಹೊಲಸು. ನುಡಿಯುವಾಗ ಸತ್ಯ ಬಳಸುತ್ತದೆ. ನಡೆಯುವಾಗ

ಅಸತ್ಯ ಬಳಸುತ್ತದೆ. ಹೊಲತಿ ಎಂದರೆ ಅದು ಹುಟ್ಟಿನಿಂದ ಬರುವಂತಹುದಲ್ಲ. ನಡತೆಯಲ್ಲಿ ಮನ ಹೊಲತಿಯಾಗಿ, ನುಡಿಯುವಲ್ಲಿ ಕುಲಜವಾದಡೆ ಅದು ಶುದ್ಧ ನೀರಲ್ಲಿ ಮಿಂದಂತೆ ! ಮನದ ಮೈಲಿಗೆ ತೊಲಗುವುದಿಲ್ಲ.

628

ಭಕ್ತರನಲ್ಲದೇ ಒಲ್ಲೆವೆಂದೆಂಬಿರಿ;
ಭಕ್ತರಿಗಲ್ಲದೇ ಕೈಯಾನೆವೆಂಬಿರಿ, ಇದೇನ ಮಾಡುವಿರಿ ?
ಇದೆಲ್ಲಿಗೊಯ್ಯುವಿರಿ?
ಪಾವನವಾದುದನು ಲಿಂಗಕ್ಕೆ ಮಾಡುವುದೇ ಆಚಾರ.
ವಿಷಯಕ್ಕೆ ಇಕ್ಕಿ, ಅಸುಗತಿಗಿಳಿಯದಿರಿ,
ಕೂಡಲಸಂಗನ ಶರಣರ ಒಡವೆಯಾ!

ತನು ಅರಿವಿನ ಸಂಗಯ್ಯನ ಒಡವೆ. ಅಗೋಚರದ ಅರಿವಿನ ಆಚಾರದಲ್ಲಿ ತೊಡಗಿದವರೇ ಕುಲಜರು; ನಿಜಭಕ್ತರು. ಅಂತಹ ಭಕ್ತರೊಂದಿಗಲ್ಲದೇ ಅನ್ಯ ತೋರಿಕೆಯ ಭಕ್ತರೊಂದಿಗೆ ಸಂಗ ಮಾಡುವುದಿಲ್ಲವೆಂದು ಮನ ನುಡಿಯುತ್ತದೆ. ಆದರೂ ಅರಿವಿನ ಒಡವೆಯನ್ನು ಅಂದರೆ ಲಿಂಗವುಳ್ಳ ಅಂಗವನ್ನು ವಿಷಯ ಸುಖಕ್ಕೆ ಸಂಗ ಮಾಡಲು ಕರೆದೊಯ್ಯುತ್ತದೆ. ಅಸತ್ಯಕ್ಕೆ ಇಳಿಯುತ್ತದೆ. ಇದು ಮನಕ್ಕೆ ಗೊತ್ತಿಲ್ಲವೆಂದಲ್ಲ, ನುಡಿಯುತ್ತದೆ ನುಡಿದಂತೆ ನಡೆಯುವುದಿಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಒಡೆಯ ಸಂಗಮನಾಥನ ಒಡವೆಯನ್ನು ಅಂದರೆ ಲಿಂಗಾಂಗವನ್ನು ವಿಷಯಕ್ಕೆ ಬಳಸದಿರು ಎಲೆ ಮನವೇ!

629

ಮಾರಿ ಮಸಣೆಯೆಂಬವು ಬೇರಿಲ್ಲ ಕಾಣಿರೋ !
ಮಾರಿಯೆಂಬುದೇನು?
ಕಂಗಳು ತಪ್ಪಿ ನೋಡಿದಡೆ ಮಾರಿ,
ನಾಲಗೆ ತಪ್ಪಿ ನುಡಿದಡೆ ಮಾರಿ,
ನಮ್ಮ ಕೂಡಲಸಂಗಮದೇವನ ನೆನಹ ಮರೆದಡೆ ಮಾರಿ !

ಮಾರಿ ಮಸಣೆಯೆಂಬುದು ಬೇರಿಲ್ಲ. ನೋಡುವ ಕಣ್ಣನ್ನು ಆವರಿಸಿದ ಮನ ನೋಡಬಾರದ್ದನ್ನು ನೋಡಿದರೆ ತನುವಿಗೆ ಮಾರಿ. ನಾಲಗೆಯಲ್ಲಿ ಆವರಿಸಿದ ಮನ ರುಚಿಸಬಾರದ್ದನ್ನು ರುಚಿಸಿದರೆ ತನುವಿಗೆ ಮಾರಿ. ನುಡಿಯಬಾರದ್ದನ್ನು ನುಡಿದರೆ ತನುವಿಗೆ ಮಾರಿ.

ಮನವೇ ಮಾರಿ; ಮನವೇ ಮಹಾದೇವ. ಮನ ಮಾರಿಯಾಗದೇ ಮಹಾ ದೇವನಾಗಿ ನೋಡಿದರೆ ನೋಡುವ ಕಣ್ಣಿನಲ್ಲಿಯ ಸತ್ಯ ಬಳಕೆಯಾಗಿ ತನು ಮಹಾ ದೇವನಾಗುತ್ತದೆ. ತನುವಿನಲ್ಲಿ ರಾಸಾಯನಿಕ ಕ್ರಿಯೆ ಉಂಟಾಗುವುದಿಲ್ಲ.

ರಾವಣನಿಗೆ ಶ್ರೀರಾಮನ ಸತಿ ಸೀತಾದೇವಿ ಅಪ್ಸರೆಯಾಗಿ ಕಂಡಳು. ತನುವಿನಲ್ಲಿ ರಾಸಾಯನಿಕ ಕ್ರಿಯೆ ಹುಟ್ಟಿ ಭೋಗದ ಲಾಲಸೆ ಕೆರಳಿತು. ರಾವಣ ರಕ್ಕಸನಾದ. ರಾವಣನ ನೋಟವೆ

ರಾವಣನಿಗೆ ಮಾರಿಯಾಯಿತು. ಆ ಒಂದು ನೋಟವೇ ಮಾರಿಯಾಗಿ ತನ್ನ ರಾಜ್ಯವನ್ನು , ಸಂಬಂಧಿಕರನ್ನು , ಅಪಾರ ಸೈನ್ಯವನ್ನು ಹಾಳು ಮಾಡಿತು. ರಾವಣನ ಕಣ್ಣಿನಲ್ಲಿರುವ ಸತ್ಯ ಬಳಕೆಯಾಗಿದ್ದರೆ ಹೆಂಡತಿ ಮಂಡೋದರಿಯ ದೇಹ, ಸೀತಾಮಾತೆಯ ದೇಹ, ತನ್ನ ಮತ್ತು ಶ್ರೀರಾಮನ ದೇಹ ಕೂಡಾ ಚರ್ಮದ ಕವಚದಿಂದ ಬಂಧಿಯಾಗಿದ್ದು ತಿಳಿಯುತ್ತಿತ್ತು.

ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಹೊರ ಚೆಲ್ಲದಂತೆ ಬಂಧಿಸಲ್ಪಟ್ಟ ಚರ್ಮವೆಲ್ಲ ಒಂದೇ ಆಗಿದೆ. ಚರ್ಮ ಸ್ಪರ್ಶದ ಅರಿವನ್ನು ಹೊಂದಿದೆ. ಕಣ್ಣಿನಲ್ಲಿಯ, ಚರ್ಮದಲ್ಲಿಯ ಅರಿವು ರಾವಣನ ಮನಕ್ಕೆ ಬಳಕೆಯಾಗದ ನಿಮಿತ್ಯ ರಾವಣನ ಮನವೆ ರಾವಣನ ತನುವಿಗೆ ಮಾರಿಯಾಯಿತು. ಮನ ಅರಿವಿನ ಕಂಗಳನ್ನು ಬಳಸದೆ ಅಜ್ಞಾನದ ಕಂಗಳನ್ನು ಬಳಸುವ ತಪ್ಪು ಮಾಡಿತು. ತನುವನ್ನು ತನುವಿನ ಜ್ಞಾನೇಂದ್ರಿಯಗಳನ್ನು ಆವರಿಸಿದ ಮನ ಆಶ್ರಯಕೊಟ್ಟ ತನುವಿಗೇ ಮುಳುವಾಯಿತು.

ಬಲಿ ವಾಮನನಿಗೆ ಮೂರು ಪಾದದಷ್ಟು ಭೂಮಿ ಕೊಡುವುದಾಗಿ ನುಡಿದ. ನುಡಿದಂತೆ ನಡೆಯಲಾಗದ ಬಲಿ ವಾಮನನಿಗೆ ತುತ್ತಾದ. ಭೂಮಿ ಹೇಮ ವಿಷಯಗಳನ್ನು ತನ್ನದೇ ಎಂದು ಮೆರೆಯುತ್ತಾ ಮೈ ಮರೆತಿದ್ದ ಬಲಿಗೆ ವಾಮನನಿಂದ ಜ್ಞಾನೋದಯವಾಯಿತು.

ಅಂಗದಲ್ಲಿಯೇ ಇದ್ದ ಅರಿವೆಂಬ ಸಂಗಯ್ಯನ ನೆನಹು ಮರೆತರೆ ಮನಕ್ಕೆ ಮಾರಿ! ನೋಡುವಾಗ ಕೇಳುವಾಗ ಮುಟ್ಟುವಾಗ ರುಚಿಸುವಾಗ ನುಡಿಯುವಾಗ ಮೂಸಿಸುವಾಗ ಮನ ಬಳಕೆಯಾಗಬಾರದು. ಅದು ಅರಿವೆಂಬ ಗುರುದೇವನಲ್ಲಿ ಸಂಗಮವಾಗಿ ಆ ಗುರುದೇವನೇ ನೋಡುವ ಕೇಳುವ ರುಚಿಸುವ ನುಡಿಯುವ ಮೂಸಿಸಿ ಮುಟ್ಟುವ ಕೆಲಸ ಮಾಡಬೇಕು. ಸರ್ವಾಂಗದಲ್ಲಿಯೂ ಅರಿವೆಂಬ ಲಿಂಗವಿದೆ. ಲಿಂಗ ಬಳಕೆಯಾದ ಅಂಗವು ಬರೀ ಅಂಗವಲ್ಲ; ಅದು ಲಿಂಗಾಂಗ!

630

ಆಯುಧ ವಿಕ್ಕಿದವಂಗೆ ವೀರದ ಮಾತೇಕೆ ?
ಲಿಂಗವು ಅಂತರಿಸಿದವಂಗೆ ಒಳನುಡಿ ಏಕೆ ?
ಐದೆ-ಅಣಚಿಯಿಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ ?
ಸತ್ಯನಲ್ಲದವಂಗೆ ನಿತ್ಯ ನೇಮವೇಕೆ ?
ಕರ್ತಾರ ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ ?
ಕೂಡಲಸಂಗಮದೇವಯ್ಯಾ ,
ನೀನಿಲ್ಲದವಂಗೆ ಶಿವಾಚಾರದ ಮಾತೇಕೆ ?

ವಿದ್ಯೆ ಇಲ್ಲದವನ ಬರಿಮುಖವು ಹಾಳೂರು ಹದ್ದಿಗಿಂತ ಕಡೆ ಎಂದು ಸರ್ವಜ್ಞ ಹೇಳಿದ್ದಾನೆ. ವಿದ್ಯೆ ಇಲ್ಲದವನು ಎಂದರೆ ಅಕ್ಷರ ಕಲಿಯದವನಲ್ಲ; ಸ್ವಾನುಭವ ವಿದ್ಯೆ ಇಲ್ಲದವನು. ಅವನ ಬರಿ ಮುಖವು ಹಾಳೂರ ರಣ ಹದ್ದಿಗಿಂತ ಕಡೆ.

ಅಣ್ಣನವರು ಮೇಲ್ಕಂಡ ವಚನದಲ್ಲಿ ತನುವಿನ ಸ್ವಾನುಭವವನ್ನು ಮನ ಬಳಕೆ ಮಾಡಿಕೊಳ್ಳುವುದಕ್ಕಾಗಿಯೆ ಆರು ಉದಾಹರಣೆಗಳನ್ನು ಕೊಟ್ಟಿದ್ದಾರೆ.

ಆಯುಧವನ್ನು ಕೆಳಗಿಟ್ಟವ ವೀರತನದ ಮಾತುಗಳನ್ನಾಡಿಯೂ ಫಲವಿಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಕ್ಕೂ ಮನಕ್ಕೂ ಅಂತರವಿದ್ದ ತನುವಿಗೆ ಒಳನುಡಿ ಏಕೆ ?

ಕಣ್ಣು ಮೂಗು ಕಿವಿ ನಾಲಿಗೆ ಚರ್ಮ ತನುವಿನ ಜ್ಞಾನದ ಬಾಗಿಲುಗಳು. ಇವು ಸದಾ ಜಾಗೃತವಾಗಿವೆಯೆಂದು ಸೂಚಿಸುವುದಕ್ಕಾಗಿ ಹೆಣ್ಣಾದವಳಿಗೆ ಗದ್ದಕ್ಕೆ ಮೂರು, ಗಲ್ಲಕ್ಕೆ ಒಂದು, ಹಣೆಗೆ ಒಂದು ಹೀಗೆ ಐದು ಅಣಚೆಗಳನ್ನು ಹಾಕುತ್ತಾರೆ. ತಿಳುವಳಿಕೆ ಬಂದಮೇಲೆ ಹಾಕಿದ ಅಣಚೆಗಳು ತನುವಿನೊಂದಿಗೆ ಸದಾ ಇರುತ್ತವೆ. ತನುವಿನೊಂದಿಗೆ ಹೋಗುತ್ತವೆ. ಸದಾ ಸ್ವಾನುಭವದಿಂದ ನಡೆಯುವ, ನುಡಿಯುವ ತನುವೆಂದು ಈ ಚಿಹ್ನೆಗಳು ಸೂಚಿಸುತ್ತವೆ. ಇದನ್ನು ಹೆಣ್ಣಿಗೆ ಮಾತ್ರ ಹಾಕುತ್ತಾರೆ.

ಆಧ್ಯಾತ್ಮ ಭಾಷೆಯಲ್ಲಿ ಹೆಣ್ಣು ಎಂದರೆ ಮನ. ಗಂಡು ಎಂದರೆ ಅರಿವು. ದೇಹ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಅರಿವು ಮತ್ತು ಮನಗಳೆರಡಕ್ಕೂ ಬಳಕೆ ಮಾಡುವ ಉಪಕರಣ! ಅದಕ್ಕಾಗಿಯೇ ಆಧ್ಯಾತ್ಮ ಭಾಷೆಯಲ್ಲಿ ದೇಹವನ್ನು ಅರ್ಧನಾರೀಶ್ವರ ಎಂದು ಕರೆದರು. ಮಹಾಜ್ಞಾನಿ ಕಲಾವಿದನೊಬ್ಬ ದೇಹದಲ್ಲಿಯೇ ಅರ್ಧಭಾಗ ಪಾರ್ವತಿ, ಇನ್ನರ್ಧಭಾಗ ಪರಮಪುರುಷ ಪರಮೇಶ್ವರನನ್ನು ಚಿತ್ರಿಸಿದ ! ಮನ ಪಾರ್ವತಿಯಾದರೆ, ಅರಿವು ಪರಮೇಶ್ವರ !

ಸ್ವಾನುಭವಕ್ಕೆ ಹೋದ ಮನ ಪಾರ್ವತಿಯಾಗುತ್ತಾಳೆ. ಪರಮ ಪುರುಷ ಪರಮೇಶ್ವರನಲ್ಲಿ ಸಂಗಮವಾಗಿ ಪರಮೇಶ್ವರನೂ ಆಗುತ್ತಾಳೆ. ಸ್ವಾನುಭವಕ್ಕೆ ಹೋಗದ ಮನ ತನು ಹಿಡಿದು ಅರ್ಧನಾರೀಶ್ವರನ ಚಿತ್ರ ಪೂಜಿಸಿ ಧನ್ಯನಾದೆನೆಂದು ಭ್ರಮಿಸುತ್ತದೆ.

ಸತ್ಯ ಗೊತ್ತಿಲ್ಲದ ಮನ ನಿತ್ಯ ನೇಮದಲ್ಲಿ ತೃಪ್ತಿಪಡುತ್ತದೆ. ತನು ಪರಮಪುರುಷ ಪರಮೇಶ್ವರನ ಕೊಡುಗೆ. ಆತ ತನುವಿನಲ್ಲಿ ಅರಿವಿನ ವಿರಾಟ ಸ್ವರೂಪವನ್ನು ತಾಳಿ ಚುಳುಕಾಗಿದ್ದಾನೆ. ಆ ಕರ್ತಾರನು ರಚಿಸಿದ ಕಮ್ಮಟವೇ ತನು. ಇದನ್ನು ಅನುಭವದಿಂದ ತಿಳಿಯುವ ಮನವೇ ಹೆಣ್ಣು. ತಿಳಿದರೆ ಪಾರ್ವತಿಯಾಗುತ್ತಾಳೆ. ತಿಳಿಯದಿದ್ದರೆ ರಕ್ಕಸಿಯಾ ಗುತ್ತಾಳೆ. ಹೀಗೆ ತಿಳಿಯುವುದೇ ಸ್ವಾನುಭವದ ವಿದ್ಯೆ. ಈ ವಿದ್ಯೆ ಇಲ್ಲದ ತನು ಹಾಳೂರ ಹದ್ದಿನಂತಿಕ್ಕು.

ಐದೆ-ಅಣಚೆಯಿಲ್ಲದವಳಿಂಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ ?: ತನು ಸತ್ತಾಗ ಹಿಂದೆ ಬರುವುದು ಅಣಚೆಯೊಂದೇ. ಅಣಚೆ ಎಂದರೆ ಜ್ಞಾನದ ಮುದ್ರೆ. ಕಣ್ಣು , ಕಿವಿ, ಮೂಗು, ನಾಲಿಗೆ, ಚರ್ಮ ಕೂಡಾ ಜ್ಞಾನದ ಐದು ಮುದ್ರೆಗಳೇ. ಆದರೆ ಅಜ್ಞಾನದಿಂದಾಗಿ ವಿಷಯದ ಸಂಕೇತಗಳಾಗಿವೆ. ಈ ಸಂಕೇತವನ್ನು ಮರೆ ಮಾಚಲು ಮುಖದ ಮೇಲೆ ಐದು ಅಣಚೆಗಳ ಮುದ್ರೆ ಹಾಕಿದರು. ಮುಂದಿನ ಜನ್ಮಕ್ಕೆ ಸಹಕಾರಿಯಾಗಲೆಂದು, ಆದರೆ ನೋಡೋದನ್ನ ನೋಡಲರಿಯದ ಅಜ್ಞಾನಿ ಕಣ್ಣಿಗೆ ಅಣಚೆಗಳು ಕೂಡಾ ವಿಷಯದ ಸೌಂದರ್ಯವನ್ನು ಮರೆಸಿದವು ! ಇದು ಮನದ ದುರ್ದೈವ ! ಮನ ವಾಸ ಮಾಡಿದ ತನುವಿನ ದುರ್ದೈವ !

ಕರ್ತಾರ ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ :

ತಂದೆ ಚೆಲ್ಲಿದ ಜಲ ಬಿಂದುವಿನ ಮೂಲಕ ಬೆಳಕಾಗಿ ಬಂದ ಕರ್ತಾರ ತಾಯಿ ಗರ್ಭ ಸೇರಿದ ! ಆ ಬೆಳಕಿನ ಜೊತೆಗೆ ನೆರಳಾಗಿ ಸೇರಿತು ಮನ. ಜಲ ಬಿಂದುವನ್ನೇ ರಕ್ತವಾಗಿಸಿದ ! ಆ ರಕ್ತವನ್ನೇ ಮಾಂಸ, ಮೂಳೆಯನ್ನಾಗಿ ಮಾಡಿದ ! ಮಜ್ಜಾ ಮೇದಸ್ಸಿನಲ್ಲಿ ಪ್ರವೇಶಿಸಿ ಚೇತನವಾದ. ಮಾಂಸ ಪಿಂಡಕ್ಕೆ ಅರಿವಿನ ಚರ್ಮ ಹೊದಿಸಿ ಕರ್ತಾರನಾಗಿ ತನುವಿನಲ್ಲಿಯೇ ತನ್ಮಯವಾಗಿ

ತಾಯಿ ಗರ್ಭದಿಂದ ಹೊರ ಬಂದ.

ಕರ್ತಾರನೆಂಬ ಅರಿವು ಬೆಳಕಾದರೆ ಅದನ್ನು ತಿಳಿಯುವ ಮನ ನೆರಳು. ಬೆಳಕು ನೆರಳಿಗೆ ಅವಿನಾಭಾವ ಸಂಬಂಧ ! ಬೆಳಕನ್ನು ನೆರಳು ತಿಳಿದು ಬೆಳಕಾಗಬಹುದು. ನೆರಳ ಮೇಲೆ ಬೆಳಕು ಬಿದ್ದು ಬೆಳಕಾಗಿಸಬಹುದು.ಇವೆರಡೂ ಕರ್ತಾರ ರಚಿಸಿದ ದೇಹವೆಂಬ ಕಮ್ಮಟದಲ್ಲಿಯೇ ಸಿದ್ಧವಾಗಬೇಕು. ಅದು ಕರ್ತಾರನ ಒಲವುಳ್ಳ ಶಂಭುವಿನ ದೇಹ. ಕರ್ತಾರನಿಗೆ ಶರಣು ಹೋದ ಶರಣನ ದೇಹ! ಇಂತಹ ದೇಹಗಳನ್ನು ಬಂಧುಗಳನ್ನಾಗಿ ಮಾಡಿಕೊಂಡ ದೇಹ ಪಾವನ ! ಅದು ಅರಿವಿನ ಸ್ವಕ್ಷೇತ್ರ. ಸ್ವಾನುಭವದ ಹಂಬಲವುಳ್ಳ, ಅದಕ್ಕಾಗಿ ಹಗಲಿರುಳು ಪರಿತಪಿಸುವ ಶಿವಾಚಾರದ ದೇಹ. ಅಗೋಚರ ಆಚಾರ ಬಯಕೆ ಉಳ್ಳ ದೇಹ. ಇಂತಹ ಒಲವಿಲ್ಲದ ದೇಹಕ್ಕೆ ಶಂಭುವಿನ ಬಂಧುಗಳೇಕೆ, ಶರಣರ ಸಂಗವೇಕೆ ? ಎಂದಿದ್ದಾರೆ ಬಸವಣ್ಣ.

631

ಇರುಳೆಂದೇನೊ ಕುರುಡಂಗೆ? ಹಗಲೆಂದೇನೊ ಕುರುಡಂಗೆ ?
ತಾಳವ ಬಾರಿಸಿದಡೇನೊ,
ಪಂಚ ಮಹಾ ವಾದ್ಯವ ನುಡಿಸಿದಡೇನೊ ಕಿವುಡಂಗೆ-
ಕೂಡಲಸಂಗಮದೇವಯ್ಯನ
ಪಥವಿನ್ನಾವುದೆಂದರಿಯದವಂಗೆ ?

ತನುವಿನ ಅರಿವಿನ ಪಥ ಮನಕ್ಕೆ ಪ್ರಮುಖವಾದುದು. ಆ ಪಥವನು ಅರಿತು ಗಮ್ಯ ಸೇರದ ಮನ ವ್ಯರ್ಥ; ತನು ವ್ಯರ್ಥ. ಅರಿವಿನ ಪಥವನರಿಯದ ತನು ಕುರುಡು ತನು. ಅದಕ್ಕೆ ಹಗಲಾದರೇನು ? ಇರುಳಾದರೇನು ಎರಡೂ ಒಂದೇ.

ಕತ್ತಲಿನಲ್ಲಿ ತನುವಿಗೆ ಸುಖದ ನಿದ್ರೆ. ಮನ ಹೆಣ್ಣೆಂದು ಗಂಡೆಂದು ಕೂಡಾ ಗುರುತಿಸಲರಿಯದು. ಶ್ರೀಮಂತ ಬಡತನ ಇಲ್ಲ; ಜಾತಿ ಮತ ಪಂಥಗಳೂ ತನುವಿಗಿಲ್ಲ, ಅಧಿ ಕಾರಿ ಜವಾನನೂ ಅಲ್ಲ. ಶಾಸಕ ಸಚಿವನೆಂಬ ನೆನಪು ನಿದ್ರೆಯಲ್ಲಿ ತನುವಿಗಿರುವುದಿಲ್ಲ. ರಾತ್ರಿ ತನು ಮಲಗಿದಾಗ ಏನೂ ಅಲ್ಲವೆಂದು ನೆನಪಿಸಿದರೂ ಎದ್ದ ಕೂಡಲೇ ಮನ ತನುವಿಗೆ ಏನೆಲ್ಲ ಅಜ್ಞಾನದ ಕಂಬಳಿ ಹೊದಿಸಿ ಕಾಣದಂತೆ ಕುರುಡನನ್ನಾಗಿಸುತ್ತದೆ.

ಅಜ್ಞಾನಿ ಮನಕ್ಕೆ ರಾತ್ರಿ ಕಾಣುವುದಿಲ್ಲ; ಹಗಲೂ ಕಾಣುವುದಿಲ್ಲ.

ಅಜ್ಞಾನಿ ಮನ ಕಿವಿಗೆ ಆವರಿಸಿರುವುದರಿಂದ ಪಂಚ ಮಹಾವಾದ್ಯದ ರುಚಿ ಹಿತವೆನ್ನಿಸುವುದಿಲ್ಲ. ಕಣ್ಣಿನಿಂದ ನೋಡುವುದು, ಕಿವಿಯಿಂದ ಕೇಳುವುದು, ನಾಲಗೆಯಿಂದ ರುಚಿಸುವುದು, ಮೂಗಿನಿಂದ ವಾಸಿಸುವುದು, ಚರ್ಮದಿಂದ ಮುಟ್ಟುವುದು ತನುವಿನ ಮಹಾಜ್ಞಾನ ತಿಳಿದ ಮನಕ್ಕೆ ಮಾತ್ರ ವೇದ್ಯವಾಗುತ್ತದೆ. ಇದು ಸಾಧ್ಯವಾಗದ ಮನದ ತನುಗಳೆಲ್ಲ ಕುರುಡ ಮತ್ತು ಕಿವುಡ ತನುಗಳು. ಅರಿವಿನ ಪಥ ಯಾವುದೆಂದು ಅರಿಯದ ತನುಗಳು. ಅದಕ್ಕೆ ಹಗಲಾದರೇನು ಇರುಳಾ ದರೇನು ಕುರುಡು ತನುಗಳೇ. ಕಣ್ಣು ಕಾಣುತ್ತದೆ ಆದರೆ ವಸ್ತುವಿನಲ್ಲಿಯ ಸತ್ಯವನ್ನು ಅರಿಯುವ ಶಕ್ತಿ ಕಣ್ಣಿನಲ್ಲಿಯೇ ಉಳಿದಿರುತ್ತದೆ. ಆ ಶಕ್ತಿಯನ್ನು ಬಳಸುವ ಮಾರ್ಗದ ಮಾಹಿತಿ ಮನಕ್ಕೆ ಇರುವುದಿಲ್ಲ.

632

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ ?
ಸುಂಡಿಲು ಮುರಿದಡೆ ಗಜವೇನು ಬಾತೆ ?
ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ ?
ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ,
ಕೂಡಲಸಂಗಮದೇವಾ ?

ನಡು ಮುರಿದ ಸಿಂಹನಿಂದ, ಸೊಂಡಿಲು ಮುರಿದ ಆನೆಯಿಂದ, ಪರಾಕ್ರಮ ತೋರಿಸದ ವೀರನಿಂದ, ಮೂಗಿಲ್ಲದ ಶೃಂಗಾರದಿಂದ ಏನೂ ಪ್ರಯೋಜನವಿಲ್ಲ. ಹಾಗೆಯೇ ನಿಜವೇ ತುಂಬಿದ ತನುಗಳಲ್ಲಿ ಅರಿವು ತುಳುಕಾಡದಿದ್ದರೆ ಅಂತಹವರ ಸಂಗದಿಂದ ಏನೂ ಪ್ರಯೋಜನವಿಲ್ಲ.

ಸರ್ವ ಅಂಗಗಳಲ್ಲಿಯೂ ಅರಿವೇ ಸಂಗಮವಾಗಿದೆ. ಅರಿವಿಲ್ಲದ ಅಂಗ ಒಂದೂ ಇಲ್ಲ. ಆದರೆ ಅಂಗವನ್ನು ಆವರಿಸಿದ ಮನಕ್ಕೆ ಅಂಗದಲ್ಲಿ ಸಂಗಮವಾದ ಅರಿವಿನ ಸಂಗ ಮಾಡುವುದು ತಿಳಿಯುತ್ತಿಲ್ಲ.

ತನುವಿನಲ್ಲಿ ತನ್ಮಯವಾದ ಅರಿವೇ ಗುರುವೆಂದು, ಆ ಗುರುದೇವನೇ ಮಹಾದೇವನೆಂದು ಆತನೇ ಸದಾಶಿವ-ಸಾಕ್ಷಾತ್ ಪರಬ್ರಹ್ಮನೆಂದು ಮನಕ್ಕೆ ಮನ ದಟ್ಟಾಗುತ್ತಿಲ್ಲ. ಇಂತಹ ಮನ, ಮನವುಳ್ಳ ತನುಗಳು ಯಾವ ತನುವಿನ ಸಂಗ ಮಾಡಿದರೂ ಕೂಡಾ ವ್ಯರ್ಥ. ವ್ಯರ್ಥ ಮಾತು,ವ್ಯರ್ಥ ನೋಟ, ವ್ಯರ್ಥವಾದ ಪ್ರಲಾಪನೆ ನಡೆದು ತನುವಿನ ಆಯುಷ್ಯವನ್ನು ಮನ ವ್ಯರ್ಥವಾಗಿ ಅಜ್ಞಾನದಿಂದ ಕಳೆಯುತ್ತದೆ. ಅರಿವಿನ ಅನುಭಾವಕ್ಕಿಳಿಯದ ಮನದ ತನುಗಳೆಲ್ಲ ನಿಷ್ಪ್ರಯೋಜಕ!

633

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೂ ಅಳವಡವು ನೋಡಾ !
ಬಲ್ಲೆನಾಗಿ ಒಲ್ಲೆನು-ಅವರು ಸಲ್ಲರು ಶಿವಪಥಕ್ಕೆ,
ಒಳ್ಳಿಹ ಮೈಲಾರನ ಸಿಂಗಾರದಂತೆ,
ವೇಶಿಯ ಬಾಯ ಎಂಜಲನುಂಬ ದಾಸಿಯ ಸಂಸಾರದಂತೆ,
ಕೂಡಲಸಂಗನ ಶರಣರನರಿಯದ ಉಳಿದ ಭಂಗಿತರ !

ಪುರಾತನರು, ಆದ್ಯರು ಅಂಗದಲ್ಲಿರುವ ಮಹಾಜ್ಞಾನದ ಹಾದಿಯನು ಸೂತ್ರದ ಮೂಲಕ ಕಂಡುಕೊಂಡು ಆ ಸುಖದಲ್ಲಿ ಮಿಂದು ಶಾಶ್ವತ ಸುಖಿಗಳಾದರು. ಅವರ ತನುಗಳ ಮನ ಘನ ಮನವಾಯಿತು. ಅರಿಷಡ್ವರ್ಗಗಳು ಸಪ್ತ ವ್ಯಸನಗಳು ಅಷ್ಟ ಮದಗಳು ಅಂಜಿ ಲಿಂಗಾಂಗದಲ್ಲಿ ಸಂಗಮವಾದವು.

ಆದ್ಯರಿಗೆ ಅರಿವು ಅಳವಟ್ಟಂತೆ ಇತರ ಅಂಗಗಳಿಗೆ ಅರಿಷಡ್ವರ್ಗಗಳು ಅಳವಡವು ನೋಡಾ. ಅಂಗದಲ್ಲಿರುವ ಅರಿವೆಂಬ ಗುರುದೇವನು ಬಲ್ಲನು ಅವರು ಶಿವ ಪಥಕ್ಕೆ ಸಲ್ಲರು ಎಂಬುದನ್ನು.

ಅಂಗಕ್ಕೆ ಮೈಲಾರನಂತೆ ಚಿತ್ತಾರದ ವೇಷ ಧರಿಸಿದರೇನು ? ಕಾಮಕ್ರೋಧ ಲೋಭ ಮೋಹ ಮದ ಮತ್ಸರಗಳು ಸಪ್ತ ವ್ಯಸನಗಳು ಅಷ್ಟ ಮದಗಳು ತನುವನ್ನು ಬಾಧಿಸದೆ ಬಿಡವು ; ತನುವಿನಲ್ಲಿಯೇ ತನ್ಮಯವಾದ ಶಿವಪಥದ ಸುಖವನು ಅರಿಯವು.

ವೇಶಿಯ ಬಾಯ ಎಂಜಲುಂಬ ದಾಸಿಯ ಸಂಸಾರದಂತೆ ಕೂಡಲಸಂಗನ ಶರಣರನರಿಯದ ಉಳಿದ ಭಂಗಿತರ :

ವೇಶಿ ಎಂದರೆ ಹೆಣ್ಣಲ್ಲ ; ದಾಸಿ ಎಂದರೂ ಹೆಣ್ಣಲ್ಲ. ತನುವನ್ನು ಆವರಿಸಿರುವ ಮನ ವೇಶಿಯೂ ಆಗುತ್ತದೆ ದಾಸಿಯೂ ಆಗುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತನುವಿನ ಮೂಲಕ ಬಳಸಿಕೊಳ್ಳುತ್ತದೆ.

ಮನಕ್ಕೆ ಮತ್ತೊಂದು ತನುವನ್ನು ನೋಡಿ ಕಾಮದ ಬಯಕೆಯಾಗುತ್ತದೆ. ಕಾಮದ ಸುಖವನ್ನುಣ್ಣಲು ಮನ ಹೇಳಿದಂತೆ ಕೇಳುವ ತನುವನ್ನೇ ದಾಸಿಯನ್ನಾಗಿ ಮಾಡಿಕೊಳ್ಳುತ್ತದೆ. ಮನ ಆವರಿಸಿದ ತನು ಮತ್ತೊಂದು ತನುವಿನೊಂದಿಗೆ ಸುಖಿಸುತ್ತದೆ. ಆಗ ತನುವಿನ ಸುಖದ ಎಂಜಲುಂಡು ಮನ ಸುಖಿಸುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಅಂಗವನ್ನು ಆವರಿಸಿಕೊಂಡ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಅರಿಯಲು ಸಾಧ್ಯವಾಗುವುದಿಲ್ಲ. ಅಂಗ ಲಿಂಗ ಸಮರಸವಾಗಿ ಬೆರೆತರೂ ಈ ಸಾಮರಸ್ಯವನ್ನು ಅರಿಯದವರು ಅರಿವಿಗೆ ಶರಣು ಹೋದ ಕೂಡಲಸಂಗನ ಶರಣರನ್ನೇನು ಅರಿಯಬಲ್ಲರು ? ಇವರು ಭಂಗಿತರು.

ಸುಖ ದುಃಖಗಳು,ಅರಿವು ಅಪರಾಧಗಳು, ಜ್ಞಾನ ಅಜ್ಞಾನ, ಬಡತನ ಶ್ರೀಮಂತಿಕೆ ಮುಂತಾದ ತುಮುಲಗಳೆಲ್ಲ ತನುವಿನ ಮೂಲಕ ನಡೆಯುತ್ತದೆ ಅದಕ್ಕೆ ಬೇರೆ ತನುಗಳೇ ಕಾರಣ ಎಂದು ಮನ ಭಾವಿಸಿದೆ. ಹಗಲಿರುಳೆನ್ನದಂತೆ ಸುಖಕ್ಕಾಗಿಯೇ ದುಃಖ ಹೇರಿಕೊಳ್ಳುತ್ತದೆ. ದುಃಖದಿಂದಾಗಿ ಸುಖ ಹುಡುಕುತ್ತದೆ.

ಸುಖವೆಂದರೇನು ? ಆ ಸುಖಕ್ಕೆ ಯಾವ ವಸ್ತು ಕಾರಣ ? ಆ ವಸ್ತುವಿನಲ್ಲಿ ಅಂಗ ಸುಖಿಸುವಂತಹ ಯಾವ ಪದಾರ್ಥವಿದೆ ಎಂದು ಮನ ಅರಿವಿನಿಂದ ಯುಕ್ತಿ ಯಿಂದ ವಿಚಾರಿಸಲು ಹೋದರೆ ಆ ಎಲ್ಲಾ ವಸ್ತುಗಳು ಅನಾವರಣಗೊಳ್ಳುತ್ತವೆ. ತನ್ನ ಅಜ್ಞಾನಕ್ಕೆ ಮನವೇ ಮರುಗಿ ಅರಿವಿನ ಗಮ್ಯ ಸೇರಿ ಘನ ಮನವಾಗುತ್ತದೆ.

ಶರಣರು ತನು ಮನ ಧನ ಅಂದರೆ ಅರಿವಿನ ಬಗ್ಗೆ ಚಿಂತಿಸಿದರು. ತನುವನ್ನು ಆವರಿಸಿದ ಮನ ತನುವಿನಲ್ಲಿ ತನ್ಮಯವಾದ ಅರಿವಿನೊಂದಿಗೆ ಬೆರೆತು ಚಿಂತಿಸಿ ಹೇಗೆ ಆನಂದದಿಂದ ಇರಬಹುದೆಂದು ಕಂಡು ಹಿಡಿದರು. ಕ್ರಿಷ್ಣ, ಕ್ರಿಸ್ತ, ಮಹಾವೀರ, ಬುದ್ಧ ಚಿಂತಿಸಿದಂತೆ ಶರಣರು ಚಿಂತಿಸಿದ್ದಾರೆ. ಇನ್ನೂ ಸರಳವಾದ ಸೂತ್ರ ಕಂಡು ಹಿಡಿದು ಸುಖಿಗಳಾಗುವ ಬಗ್ಗೆ ವಚನಗಳ ಮೂಲಕ ಬರೆದಿದ್ದಾರೆ.

634

ಗೀಜಗನ ಗೂಡು ಕೋಡಗದಣಲ ಸಂಚ,
ಬಾದುಮನ ಮದುವೆ ಬಾವಲ ಬಿದ್ದಿನಂತೆ,
ಜೂಜುಗಾರನ ಮಾತು, ಬೀದಿಯ ಗುಂಡನ ಸೊಬಗು,

ಒಡಿನೊಳಗೆ ಅಗೆಯ ಹೊಯ್ದಂತೆ, ಕಾಣಿರೋ !
ಶಿವನಾದಿಯನಂತವನರಿಯದವನ ಭಕ್ತಿ
ಸುಖಶೋಧನೆಗೆ ಮದ್ದ ಕೊಂಡಂತೆ,
ಕೂಡಲಸಂಗಮದೇವಾ !

ಬಾಲ್ಯ ಬ್ರಹ್ಮಚರ್ಯೆ ಕಳೆದ ಮೇಲೆ ಮದುವೆ, ಬಾಲ್ಯದಿಂದ ಮದುವೆಯ ವರೆಗೂ ತನುವಿಗೆ ಒಂದು ಬಗೆಯ ಆತಂಕ, ಆಟ,ಸುಖದ ಕಲ್ಪನೆ, ನಾನಾ ವಿಚಾರಗಳು, ಹೇಳಿಕೊಳ್ಳದ ನಾಚಿಕೆಗಳು, ದುಃಖಗಳು ಎದುರಾಗುತ್ತವೆ. ಮದುವೆಯಾದ ಮೇಲೆ ಎರಡು ತನುಗಳು ಒಂದಾಗಿ ಬಾಳ ಸಂಗಾತಿಗಳಾಗುತ್ತವೆ. ಇದು ಬಾಲ್ಯದ ಬೊಂಬೆಯ ಮದುವೆಯಂತಲ್ಲ. ಎರಡು ಬೊಂಬೆಗಳನ್ನು ಒಂದು ಮಾಡುವ ನಾಟಕೀಯ ಬೆಳವಣಿಗೆ ಬೊಂಬೆ ಮದುವೆ. ಆದರೂ ಒಂದಾಗುವುದಿಲ್ಲ. ಸುಖ ದುಃಖಗಳ ಪರಿಚಯವೇ ಬೊಂಬೆಗಳಿಗಿಲ್ಲ. ಅದೊಂದು ಆಟವೆಂದು ತಿಳಿಯದೆ ಮದುವೆ ಔತಣ ನಡೆಯುತ್ತದೆ. ನಂತರ ಮುರಿದು ಬೀಳುತ್ತದೆ ; ಬಾವಲದ ರಸದೌತಣದಂತೆ ತಲೆಕೆಳಗಾಗಿ ಕಾಲು ಮೇಲಾಗುತ್ತದೆ. ಬೀದಿಯ ಗುಂಡ, ಜೂಜುಗಾರನ ಸಂಸಾರದಂತೆ. ಹಂಚಿನ ಮೇಲೆ ಮಣ್ಣಿರಚಿ ಸಸಿಯ ಬೆಳೆದಂತೆ. ಅರಿವಿನ ಆದಿಯನು ಅಂತ್ಯವನು ಅರಿಯದೆ ಸತಿಪತಿಗಳು ಒಂದಾದಂತೆ. ಎರಡು ತನುಗಳು ಒಂದಾದರೂ ಸುಖದ ಶೋಧನೆ ನಿಲ್ಲುವುದೇ ಇಲ್ಲ. ದುಃಖದ ಸಮಾಪ್ತಿ ಆಗುವುದೇ ಇಲ್ಲ.

ಸುಖ ದುಃಖಗಳು ತನುವಿನ ಎರಡು ಮಹಾ ರೋಗಗಳು. ಎರಡು ತನುಗಳು ಒಂದಾಗಿ ಬಾಳಸಂಗಾತಿಗಳಾಗಿ ಸುಖವೆಂದರೇನೆಂದು ಹುಡುಕಬೇಕು. ದುಃಖವೆಂದರೇನೆಂದು ಹುಡುಕಬೇಕು. ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ. ಸುಖ ದುಃಖಗಳಿಗೆ ಮೀರಿದ ಶಾಶ್ವತ ಸುಖಕ್ಕಾಗಿ ಪ್ರತಿನಿತ್ಯ ಅರಿವಿನ ಮದ್ದನು ಅರೆಯಬೇಕು.

ಸುಖದ ಅರಿವಿನ ಮದ್ದನರೆದು ಲೇಪಿಸಿಕೊಳ್ಳುವ ಸೂತ್ರವನು ಮಹಾಜ್ಞಾನಿ ಶರಣರಿಂದಲೇ ತಿಳಿಯಬೇಕು. ಏಕೆಂದರೆ ಅವರು ಸತಿಪತಿಗಳೊಂದಾಗಿ, ಶಾಶ್ವತ ಸುಖದ ಚಿಂತನೆ ಮಾಡಿ, ಅರಿವಿನ ಮದ್ದನರೆದು ಹಚ್ಚಿ, ಅಜ್ಞಾನದ ಗಾಯ ಕಳೆದು ಕೊಂಡವರು. ಸತಿಪತಿಗಳೊಂದಾಗಿ ಶಾಶ್ವತ ಸುಖವನು ಪಡೆದು ಸುಖ ದುಃಖ ಗಳನ್ನು ದೂರೀಕರಿಸಿದವರು. ಸತಿಪತಿಗಳು ಒಂದಾದ ಅರಿವಿನ ಭಕ್ತಿ ಶಿವನಿಗೆ ಹಿತವಾಗಿಪ್ಪುದು ಎಂದು ಕಂಡುಹಿಡಿದು ಸತಿಪತಿಗಳು ಒಂದಾದವರು.

'' ಪುರುಷನೆನ್ನಬಹುದೆ ಆನು ಬಸವಂಗೆ ? ಸತಿ ಎನ್ನಬಹುದೆ ಬಸವನು ಎನಗೆ? ಆನು ಬಸವಂಗೆ ಶಿಶುವಾದೆ; ಬಸವನು ಎನಗೆ ಶಿಶುವಾದ '' ಎಂದು ಸತಿಪತಿಗಳೊಂದಾಗಿ ಶಿಶುಗಳಾಗಿ ಶಾಶ್ವತ ಸುಖದ ಸೂತ್ರವನ್ನು ನೀಲಮ್ಮ ತಾಯಿ ಹೇಳಿದ್ದಾಳೆ.

ಮದುವೆಯಾದ ಬೊಂಬೆಗಳು ಸುಖವೆಂದರೇನು ದುಃಖವೆಂದರೇನೆಂದು ತಿಳಿಯವು. ಆದರೆ ತನುಗಳು ಹಾಗಲ್ಲ. ಸುಖಕ್ಕಾಗಿ ಮದುವೆಯಾಗಿ, ಸುಖ ಅನುಭವಿಸಿ, ಸುಖವೆಂದರೇನೆಂದು ತಿಳಿಯದಿದ್ದರೆ ಹೇಗೆ ?

ಮದುವೆಗೆ ಮುನ್ನ ತನುವಿಗೆ ಸುಖದ ಕಲ್ಪನೆಯಿತ್ತು . ಆ ಸುಖಕ್ಕಾಗಿ ತನು ಮತ್ತೊಂದು ತನುವಿಗಾಗಿ ಹಾತೊರೆಯುತ್ತಿತ್ತು. ಎರಡು ತನುಗಳು ಬಾಳಸಂಗಾ ತಿಗಳಾದವು. ಸತಿಪತಿಗಳಾಗಿ ಒಂದಾದವು. ಮದುವೆಗೆ ಮುನ್ನ ಒಂದು ತನುವಿನಲ್ಲಿದ್ದ ಸುಖ ಮತ್ತೊಂದು ತನುವಿಗೆ

ಗೊತ್ತಿರಲಿಲ್ಲ.ಮದುವೆಯಾಗಿ ಒಂದಾದ ಮೇಲೆ, ಒಂದು ತನುವಿನಲ್ಲಿದ್ದ ಸುಖ ಎರಡೂ ತನುಗಳಿಗೆ ಅನುಭವಕ್ಕೆ ಬಂದಿತು. ಆದರೆ ಸುಖ ಎಲ್ಲಿತ್ತು ಎಂದು ಚಿಂತಿಸದ ನಿಮಿತ್ತ ಎರಡೂ ತನುಗಳ ಆ ಸುಖವೇ ದುಃಖಕ್ಕೆ ಕಾರಣವಾಯಿತು. ಈ ಸುಖ ದುಃಖಗಳಿಗೆ ಕಾರಣವಾದ ರೋಗಕ್ಕೆ ಮದ್ದು ಹುಡುಕುವ ಗೊಡವೆಗೆ ಎರಡೂ ತನುಗಳು ಹೋಗಲಿಲ್ಲ. ಸಾಸಿವೆಯಷ್ಟು ಸುಖ ಸಾಗರದಷ್ಟು ದುಃಖವನ್ನು ಮನ ತನುವಿಗೆ ಹೇರಿತು. ಬೊಂಬೆಯ ಮದುವೆಯಂತೆ, ಬಾವಲದ ರಸದೌತಣದಂತೆ, ಗೀಜಗನ ಗೂಡು ಕೋಡಗದಣಲ ಸಂಚಿನಂತೆ, ಜೂಜುಗಾರನ ಮಾತಿನಂತಾಯಿತು. ಬೀದಿಯ ಗುಂಡನ ಸೊಬಗಿನಂತಾಯಿತು. ಹೆಂಚಿನಲ್ಲಿ ಸಸಿಯ ಹಚ್ಚಿದಂತಾಯಿತ್ತು.

ಸುಖ ದುಃಖಗಳಿಗೆ ಕಾರಣವಾದ ಅಜ್ಞಾನವನು ಕಡೆಗಾಣಿಸುವ ಸೂತ್ರ ತಿಳಿದುಕೊಳ್ಳುವ ಗೋಜಿಗೆ ತನು ಹೋಗಲಿಲ್ಲ. ತನುವಿನಲ್ಲಿ ಉಂಟಾದ ಸುಖ ದುಃಖ ಗಳನ್ನು ಶೋಧನೆ ಮಾಡಿ ಅರಿವಿನ ಮದ್ದನು ಅರೆಯಲಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ತಿಳಿಯಲಿಲ್ಲ.

635

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ,
ಕುಚ್ಚಿತ್ತರ ಸಂಗ ಸುಸಂಗಿಗೆ ಸಂಗಡವಿಲ್ಲ !
ಗುರುಗುಂಜಿ ಮಾಣಿಕ್ಯಕ್ಕೆ ಸರಿಯಪ್ಪುದೆ ;
ಕೂಡಲಸಂಗಮದೇವಾ ?

ಹಿತ್ತಾಳೆಗೆ ಹೊನ್ನಿನ ಬಣ್ಣ ಬಳಿದರೆ ಹೊನ್ನು ಹಿತ್ತಾಳೆ ಒಂದೇ ತೆರನಾಗಿ ಕಾಣುತ್ತದೆ. ಆದರೆ ಪರೀಕ್ಷಿಸಿದಾಗ ಹೊನ್ನು ಬೇರೆ, ಬಣ್ಣ ಕಳೆದುಕೊಂಡ ಹಿತ್ತಾಳೆ ಬೇರೆ ಯಾಗಿ ಉಳಿಯುತ್ತದೆ. ಎರಡೂ ಲೋಹಗಳೇ ಆಗಿವೆ. ಹೊನ್ನಿಗೆ ಹೊರ ಒಳಗೆನ್ನದಂತೆ, ಬೇರ್ಪಡಿಸಲು ಬಾರದಂತೆ ಬಣ್ಣ ಲೋಹದಲ್ಲಿ ತನ್ಮಯವಾಗಿದೆ. ಅಕ್ಕಸಾಲಿಗನಿಗೂ ಬಣ್ಣ ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಹಿತ್ತಾಳೆ ಹಾಗಲ್ಲ. ಅಕ್ಕಸಾಲಿಗ ಹೊನ್ನ ಬಣ್ಣವನ್ನು ಸುಟ್ಟು ತೆಗೆದು ಹಿತ್ತಾಳೆಯ ಲೋಹವನ್ನು ತೋರಿಸುತ್ತಾನೆ. ಲೋಹದೊಂದಿಗೆ ಬಣ್ಣ ಬೇರ್ಪಡಿಸದಂತೆ ಬೆರೆತು ಹೊನ್ನಾಗಿದೆ.

ಅರಿವು ಅಂಗವನ್ನು ಬೇರ್ಪಡಿಸದಂತೆ ಬೆರೆತು ಸಂಗ ಮಾಡಿದೆ. ಮನವೆಂಬ ಅಕ್ಕಸಾಲಿಗನಿಗೆ ಇದು ತಿಳಿದಿಲ್ಲ. ಹೊನ್ನು ಕದ್ದು ಹಿತ್ತಾಳೆಗೆ ಬೆರೆಸಿ ಆಭರಣ ಮಾಡುತ್ತಾನೆ. ಅಕ್ಕಸಾಲಿಗ ಆಭರಣ ಮಾಡುವ ಕೂಲಿಯಾಳೆ ಹೊರತು ಮತ್ತೇನೂ ಅಲ್ಲ. ಅವನು ಆಭರಣ ಮಾಡಿದ್ದಕ್ಕಾಗಿ ಹೊನ್ನು ಹೊನ್ನಾಗಿಲ್ಲ. ಆಭರಣವೂ ಹೊನ್ನೇ; ಹೊನ್ನೂ ಹೊನ್ನೇ ಆಗಿದೆ. ಹೊನ್ನಿಗೆ ವೇಷಬೇಕಿಲ್ಲ. ಆದರೆ ಮನ ತನುವಿಗೆ ಅದು ಚಿನ್ನವೆಂದು ತಿಳಿಯದೆ ಹೊಂಬಣ್ಣದ ಹಿತ್ತಾಳೆ ವೇಷ ಧರಿಸುತ್ತದೆ. ಕಾವಿ,ಖಾದಿ ಹಾಕಿ ಮೆರೆಸುತ್ತದೆ. ಪಂಡಿತ,ಮಠ,ಪೀಠಾಧಿಪತಿಯ ವೇಷ ಧರಿ ಸುತ್ತದೆ. ಬೈಬಲ್,ಭಗವದ್ಗೀತೆ, ವೇದ ಆಗಮ, ಉಪ ನಿಷತ್ತುಗಳನ್ನು ಪಠಿಸಿ ಪ್ರವಚನ ನೀಡುತ್ತದೆ. ಮನಕ್ಕೆ ತಿಳಿದಿಲ್ಲ; ಇವೆಲ್ಲ ಪುಸ್ತಕಗಳನ್ನು ಸೃಷ್ಟಿಸಿದ್ದು ತನುವೇ ಎಂದು !

ಕುತ್ಸಿತ ಬುದ್ಧಿಯ ಮನ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳ ವೇಷ

ತನುವಿಗೆ ಹಾಕಿ ತನ್ನ ಸುಖಕ್ಕಾಗಿ ಅಂಗದ ಸಂಗ ಮಾಡುತ್ತದೆ. ಅಂಗದಲ್ಲಿಯೇ ಸಂಗಮವಾದ ಮಂಗಳಮಯ ಅರಿವಿನ ಸಂಗಯ್ಯನ ಸಂಗ ಮಾಡುವುದನ್ನು ಮರೆಯುತ್ತದೆ. ಕುತ್ಸಿತರ ಸಂಗ ಸುಖವನ್ನು ನೆಚ್ಚಿದ ಮಂಗ ಬುದ್ಧಿಯ ಮನಕ್ಕೇನು ಗೊತ್ತು ? ಅರಿವಿನ ಸುಸಂಗಿ ಸಂಗಯ್ಯನ ಸಂಗ ! ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೆ ?

636

ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ ?
ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ ?
ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ ?
ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ ?
ಮುನ್ನಿನ ಪುರಾತರ ನೆನೆದು ಧನ್ಯನಾದೆಹೆನೆಂಬ
ಮಾತಿನ ರಂಜಕರನೇನೆಂಬೆ,
ಕೂಡಲಸಂಗಮದೇವಾ ?

ಬೆಳಕು ಕತ್ತಲನ್ನು ನೆನೆದರೆ ಕತ್ತಲಾಗದು. ಕತ್ತಲು ಬೆಳಕನ್ನು ನೆನೆದರೆ ಬೆಳಕಾಗದು. ಭೂಮಿ ಬೆಳಕ ಸುತ್ತುವ ಕ್ರಿಯೆ ನಡೆಯಲೇಬೇಕು. ನೆನೆದರಾಗದು. ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಲಾರ. ಸಿರಿವಂತ ದರಿದ್ರನ ನೆನೆದಡೆ ದರಿದ್ರ ನಾಗಲಾರ. ಕ್ರಿಯೆ ನಡೆಯಲೇಬೇಕು.

ಕ್ರಿಷ್ಣ ,ಕ್ರಿಸ್ತ, ಬುದ್ಧ, ಮಹಾವೀರ, ಬಸವಾದಿ ಶರಣರನ್ನು, ದಾಸರನ್ನು ನೆನೆದು ಅವರಿಗೆ ಮಂದಿರಗಳನ್ನು ಕಟ್ಟಿಸಿದಗೆ ಅವರಂತಾಗನು. ಅವರು ಬರೆದ ಸೂತ್ರದ ಪುಸ್ತಕಗಳನ್ನು ಪಠಿಸಿ ಉಪನ್ಯಾಸ ನೀಡಿದರೆ ಅವರಂತಾಗನು. ಅವರ ಪುಣ್ಯತಿಥಿ, ಜನ್ಮದಿನಗಳನ್ನು ನಾಡಿನಾದ್ಯಂತ ಆಚರಿಸಿದರೂ ಅವರಂತಾಗನು. ಮಾತಿನ ರಂಜಕನಾದಾನು ; ಮತ್ತೇನೂ ಆಗನು.

ಕೆಂಚನದು ಬೆಳಕು ಬೆಳಗುವ ಕೆಲಸ. ಕರಿಕನದು ಕತ್ತಲ ಹರಡುವ ಕೆಲಸ. ಇವರಿಬ್ಬರೂ ದೇಹವನ್ನೇ ಬಳಸಿಕೊಂಡಿದ್ದಾರೆ. ಕೆಂಚ ಬೆಳಗುತ್ತಾನೆ; ಕರಿಕ ಕತ್ತಲ ಹರಡುತ್ತಾನೆ ! ಬೆಳಕಿನಿಂದಲೇ ಕತ್ತಲು ಸೃಷ್ಟಿಯಾಗಿದೆ. ಬೆಳಕು ಕತ್ತಲ ಆಟ ಸರ್ವರಿಗೂ ತಿಳಿದಿದೆ. ಭೂಮಿ ತಿರುಗುವುದರಿಂದ ಹನ್ನೆರಡು ಗಂಟೆ ಬೆಳಕು; ಹನ್ನೆರಡು ಗಂಟೆ ಕತ್ತಲು ಉಂಟಾಗುತ್ತದೆ. ಭೂಮಿ ಬೆಳಕಿನೆಡೆಗೆ ಚಲಿಸಿ ಬೆಳಕಾಗುತ್ತದೆ. ಕತ್ತಲೆಡೆಗೆ ಚಲಿಸಿ ಕತ್ತಲಾಗುತ್ತದೆ. ಕತ್ತಲು ಬೆಳಕಿನತ್ತ ಪಯಣಿಸಿ ಬೆಳಕಾಗುತ್ತಿಲ್ಲ. ಬೆಳಕು ಕತ್ತಲನ್ನು ಬೆಳಗುತ್ತಿಲ್ಲ; ಕತ್ತಲು ಬೆಳಕನ್ನು ಹರಡುವುದಿಲ್ಲ; ಆದರೂ ಬೆಳಕು ಕತ್ತಲುಗಳ ಭ್ರಮೆ ಉಂಟಾಗಿದೆ.

ಸೂರ್ಯ ಸದಾ ಬೆಳಗುತ್ತಾನೆ. ಆ ಬೆಳಕಿನ ನೆರಳಿನಿಂದಲೆ ಕತ್ತಲು ಸೃಷ್ಟಿಯಾಗಿದೆ. ಹಾಗೆಯೇ ತನುವನ್ನೇ ಭೂಮಿ ಮಾಡಿಕೊಂಡು ಅರಿವಿನ ಸೂರ್ಯ ಸದಾ ಬೆಳಗುತ್ತಾನೆ; ಈತ ಕೆಂಚ ! ಈತನ ಬೆಳಕಿನಿಂದಲೇ ನೆರಳೆಂಬ ಕತ್ತಲು ಸೃಷ್ಟಿಯಾಗಿದೆ. ಈತ ಕರಿಕ ! ಕೆಂಚನನ್ನು ನೆನೆದರೆ ಬೆಳಕಾಗಲರಿಯ.ಕೆಂಚ ಕರಿಕನನ್ನು ನೆನೆದರೆ ಬೆಳಕು ಮಾಡಲರಿಯ ! ಇವರಿಬ್ಬರೂ ಒಬ್ಬರನ್ನೊಬ್ಬರು ನೆನೆದರಾಗದು. ಇವರಿಬ್ಬರ ಕ್ಷೇತ್ರವೂ ಅಂಗವೆಂಬ ಲಿಂಗವೇ ಆಗಿದೆ.

ಕೆಂಚ ಕರಿಕನ ಹತ್ತಿರ ಸುಳಿಯುತ್ತಿಲ್ಲ; ಕರಿಕ ಕೆಂಚನ ಹತ್ತಿರ ಸುಳಿಯುತ್ತಿಲ್ಲ. ಪೂಜಿಸಿದರೆ

ಧ್ಯಾನಿಸಿದರೆ ಪಠಿಸಿದರೆ ಮಂದಿರ, ಮಸೀದೆ, ಚರ್ಚ್‌ಗಳನ್ನು ನಿರ್ಮಿಸಿದರೆ ಬೆಳಕಾಗಲು ಸಾಧ್ಯವಿಲ್ಲ. ಸಮಾಧಿ, ಮಠ, ಆಶ್ರಮಗಳನ್ನು ಕಟ್ಟಿಸಿದರೆ ಬೆಳಕಾಗಲು ಸಾಧ್ಯವಿಲ್ಲ. ಉತ್ಸವ, ಜಾತ್ರೆ, ಪುಣ್ಯಸ್ಮರಣೆ,ಜನ್ಮದಿನಗಳನ್ನು ಆಚರಿಸಿದರೆ ಬೆಳಕಾಗುವುದಿಲ್ಲ. ಗ್ರಂಥಗಳನ್ನು ಬರೆದು ಪಠಿಸಿದರೂ ಬೆಳಕಾಗುವುದಿಲ್ಲ. ತನುವಿಗೆ ಕಾವಿ ಧರಿಸಿ ಪೀಠದ ಮೇಲೆ ಕುಳ್ಳಿರಿಸಿ, ಪಲ್ಲಕ್ಕಿಯಲ್ಲಿ ಹೊತ್ತು ತಿರುಗಿದರೂ ಬೆಳಕಾಗುವುದಿಲ್ಲ.

ತನುವಿನಲ್ಲಿ ಸದಾ ಬೆಳಗುವ ಬೆಳಕೂ ಇದೆ ; ಆ ಬೆಳಕಿನಿಂದಲೇ ಸದಾ ಕತ್ತಲು ಆವರಿಸಿದೆ.ಇದು ಬೆಳಕು ಕತ್ತಲಿನ ಚೋದ್ಯ. ಬೆಳಕೂ ಇದೆ ಕತ್ತಲೂ ಇದೆ ಇದೇನು ಚೋದ್ಯವೋ? '' ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ '' ಎಂದಿದ್ದಾರೆ ಪ್ರಭುಗಳು. ಬೆಳಕಿದ್ದಾಗ ಕತ್ತಲು ಬರುವುದಿಲ್ಲ ; ಕತ್ತಲಿದ್ದಾಗ ಬೆಳಕು ಬರುವುದಿಲ್ಲ. ಇವೆರಡೂ ವಿರುದ್ಧ. ಆದರೆ ತನುವಿನಲ್ಲಿ ಬೆಳಕು ಎನ್ನುವ ಅರಿವೂ ಇದೆ ; ಕತ್ತಲು ಎನ್ನುವ ಅಜ್ಞಾನವೂ ಇದೆ. ಇವರೆಡರ ವಾಸ ದೇಹದಲ್ಲಿಯೇ ! ಬೆಳಕು ಕತ್ತಲಿನತ್ತ ಪಯಣಿಸಿ ಬೆಳಕು ಮಾಡುತ್ತಿಲ್ಲ. ಕತ್ತಲು ಬೆಳಕಿನತ್ತ ಪಯ ಣಿಸಿ ಬೆಳಕಾಗುತ್ತಿಲ್ಲ. ಆದರೂ ಕತ್ತಲು ಎನ್ನುವ ಮನ ಬೆಳಕು ಎನ್ನುವ ದೇವನನ್ನು ನೆನೆಯುವುದನ್ನು ಬಿಡುತ್ತಿಲ್ಲ. ನೆನೆದರಾಗದು ! ಕತ್ತಲು ನಡೆದು ಬೆಳಕಿನತ್ತ ಪಯಣಿಸಿ ಬೆಳಕಾಗಬೇಕು. ಇಲ್ಲ ಬೆಳಕೇ ಕತ್ತಲಿನತ್ತ ನಡೆದು ಕತ್ತಲಿನ ಮೇಲೆ ಬೆಳಕು ಚೆಲ್ಲಿ ಬೆಳಕು ಮಾಡಬೇಕು !

637

ಆನೆಯನೇರಿಕೊಂಡು ಹೋದಿರೆ ನೀವು
ಕುದುರೆಯನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ !
ಸತ್ಯದ ನಿಲವನರಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬಸದ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮದೇವನರಿಯದೆ
ನರಕಕ್ಕೆ ಭಾಜನವಾದಿರಲ್ಲಾ !

ಕುಲಮದ, ಛಲಮದ, ಧನಮದ, ರೂಪಮದ, ಯೌವ್ವನಮದ, ವಿದ್ಯಾಮದ, ರಾಜ್ಯ ಮದ, ತಪಸ್ಸಿನ ಮದವನ್ನು ತನುವಿನ ಮೇಲೆ ಹೇರಿಕೊಂಡು ಕುಂಕುಮ ಕಸ್ತೂರಿಯ ಸುಗಂಧ ದ್ರವ್ಯಗಳನ್ನು ಹಚ್ಚಿಕೊಂಡು ತನುವಿರುವವರೆಗೆ ಸವಾರಿ ಮಾಡಿದಿರಲ್ಲಾ; ಒಮ್ಮೆಯೂ ತನುವಿನ ಲ್ಲಿಯೇ ತನ್ಮಯವಾದ ಸತ್ಯದ ನಿಲುವಿನೆಡೆಗೆ ಹೋಗಲಿಲ್ಲ. ವಿರಾಟಸ್ವರೂಪವೇ ತಾನಾದ ತನು ವೆತ್ತ? ಅಷ್ಟಮದಗಳನ್ನು ಹೊತ್ತ ಅಜ್ಞಾನದ ಆನೆಯೆತ್ತ? ಸದ್ಗುಣವೆಂಬ ಫಲವನ್ನು ಬಿತ್ತದೆ ಬೆಳೆ ಯದೆ ಹೋದಿರಲ್ಲಾ ಅಣ್ಣಗಳಿರಾ. ಸತ್ಯದ ನಿಲವನರಿಯದೆ ಹೋದಿರಲ್ಲಾ ಅಣ್ಣಗಳಿರಾ!

ಜ್ಞಾನದ ತನುವನ್ನು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ವ್ಯರ್ಥ ಬಲಿ ಕೊಟ್ಟಿರಲ್ಲಾ ಅಣ್ಣಗಳಿರಾ. ತನು ಮನ ಧನ ರಾಜ್ಯ ವ್ಯಸನಗಳಿಗಾಗಿ ಅರಿವಿನ ತನುವನ್ನು ಬಲಿಕೊ ಟ್ಟಿರಲ್ಲಾ ಅಣ್ಣಗಳಿರಾ.

ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಅಹಂಕಾರವೆಂಬ ಮದ ಗಜವೇರಿ ವಿಧಿಗೆ ಗುರಿಯಾಗಿ ಹೋದಿರಲ್ಲಾ ! ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಅಂಗ ವನ್ನೇ ಆವರಿಸಿದ ಅಣ್ಣಾಗಳಿರಾ, ಅರಿಯದೆ ವ್ಯರ್ಥ ನರಕಕ್ಕೆ ಭಾಜನರಾದಿರಲ್ಲಾ! ಕುಂಕುಮ ಕಸ್ತೂರಿ ಪೂಸಿಕೊಂಡು ಹೋದಿರೆ ನೀವು ಅಣ್ಣಗಳಿರಾ! ಸತ್ಯದ ನಿಲವನರಿಯದೆ ಹೋದಿರಲ್ಲಾ! ಇದು ತನು ಮನ ಅರಿವಿನ ಸಂಭಾಷಣೆ.

638

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು;
ಮುಂದೆ ಬಂದು ಕಾಡುವವು ಪಂಚೇದ್ರಿಯಂಗಳು !
ಸತಿ ಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು ?
ಸತಿ ಪತಿ ರತಿ ಭೋಗೋಪಭೋಗ ವಿಳಾಸವ
ಬಿಟ್ಟನೇ ಸಿಂಧುಬಲ್ಲಾಳನು ?
ನಿಮ್ಮ ಮುಟ್ಟಿ ಪರಧನ-ಪರಸತಿಗೆಳೆಸಿದಡೆ
ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವಾ !

ಇಂದ್ರಿಯ ನಿಗ್ರಹವ ಮಾಡಿದಡೆ ಹೊಂದುವವು ದೋಷಂಗಳು ; ಮುಂದೆ ಬಂದು ಕಾಡುವವು ಪಂಚೇದ್ರಿಯಂಗಳು :

ತನು ಒಂದು ಜ್ಞಾನ ಭಂಡಾರದ ಕೇಂದ್ರ. ಇದಕ್ಕೆ ಐದು ಜ್ಞಾನದ ಬಾಗಿಲುಗಳು ; ಕಣ್ಣು ಕಿವಿ ಮೂಗು ನಾಲಗೆ ಚರ್ಮ. ಇವೆ ಐದು ಮಹಾದ್ವಾರಗಳು. ಇವುಗಳನ್ನು ಪಂಚೇಂದ್ರಿಯ-ಜ್ಞಾನೇಂದ್ರಿಯಂಗಳು ಎಂದು ಕರೆಯುತ್ತಾರೆ. ಐದು ಇಂದ್ರಿಯಗಳನ್ನು ಸದ್ಬಳಕೆ ಮಾಡಿಕೊಳ್ಳುವ ಮಹಾಜ್ಞಾನಿ ತನುವಿನಲ್ಲಿ ಇದ್ದಾನೆ. ಇವುಗಳಿಗೆ ಅಜ್ಞಾನದ ಐದು ವಿಷದ ಹಾವುಗಳು ಆವರಿಸಿವೆ. ಐದು ಬಾಗಿಲುಗಳ ಮೂಲಕ ಐದು ಹಾವುಗಳು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳತ್ತ ತನುವನ್ನು ಸೆಳೆದರೆ ಜ್ಞಾನಿ ತನ್ನತ್ತ ಸೆಳೆಯುತ್ತಾನೆ.

ಜ್ಞಾನದೆಡೆಗೆ ಒಮ್ಮೆ ಅಜ್ಞಾನದೆಡೆಗೆ ಮತ್ತೊಮ್ಮೆ ತನು ಬಳಕೆಯಾಗುತ್ತಲೇ ಇರುತ್ತದೆ. ಜ್ಞಾನೇಂದ್ರಿಯಗಳಿಗೆ ಆವರಿಸಿದ ಹಾವನ್ನು ಬುಟ್ಟಿಯಲ್ಲಿಯೇ ಹಾಕಿ ಮುಚ್ಚಿಟ್ಟರೆ ಇಂದ್ರಿಯ ಗಳನ್ನು ಅಜ್ಞಾನದಿಂದ ನಿಗ್ರಹಿಸಿದಂತೆ. ತೋರಿಕೆಗೆ ತನುವಿಗೆ ಅರಿವಿನ ವೇಷ ಹಾಕಿದಂತೆ !

ಇಂದ್ರಿಯಗಳಿಗೆ ಆವರಿಸಿದ ಮನವೆಂಬ ಐದೆಡೆ ಹಾವು ಕಣ್ಣಿನ ಮೂಲಕ ನೋಡಿ ತನುವಿಗೆ ವಿಷದ ನಂಜು ಚಿಮ್ಮಿ ಕಾಮುಕನನ್ನಾಗಿ ಮಾಡುತ್ತದೆ. ಕಣ್ಣಿಗೆ ನೆರಳಾಗಿ ನಿಗ್ರಹದಲ್ಲಿದ್ದು ತನುವಿಗೆ ಅರಿವಿನ ಕಾವಿ ಹೊದಿಸಿ ಸ್ವಾಮಿಯನ್ನಾಗಿ ಮಾಡುತ್ತದೆ. ಪುಟ್ಟಿಯಲ್ಲಿದ್ದ ಹಾವು ಆಹಾರಕ್ಕಾಗಿ ಮುಚ್ಚಳ ತೆಗೆದು ಪುಟಿದೇಳುತ್ತದೆ. ತನು ಜ್ಞಾನದ ಸೊತ್ತು; ಆದರೂ ಹಾವಿನ ದಾಸಿ. ಹಾವು ಹೇಳಿದಂತೆ ತನು ಕೇಳಬೇಕು ! ಹಾವು ತನುವನ್ನು ನೆರಳಾಗಿ ಕಾಡುತ್ತದೆ. ಹಾವು ಸಾಯುವುದಿಲ್ಲ ; ಕೋಲು ಮುರಿಯುವುದಿಲ್ಲ. ಇಂದ್ರಿಯ ನಿಗ್ರಹದ ಆಟ ತನು ವಿರುವವರೆಗೆ ಮುಂದುವರಿಯುತ್ತದೆ. ಮನಕ್ಕೆ ಈ ಶಿಕ್ಷೆ ಬೇಕೇ ?

ಸತಿ ಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು ? ಸತಿಪತಿ ರತಿ ಭೋಗೋಪ

ಭೋಗ ವಿಳಾಸವ ಬಿಟ್ಟನೆ ಸಿಂಧು ಬಲ್ಲಾಳನು :

ಶರಣರು ಮಹಾಜ್ಞಾನಿಗಳು ! ಸತಿ ಪತಿಗಳು ಒಂದಾಗಿ ರತಿಸುಖವೆಂದರೇನೆಂದು ಕಂಡು ಕೊಂಡರು. ಅದರಿಂದ ಬಂದೊದಗುವ ದುಃಖವನ್ನು ಅರಿವಿನಿಂದ ಅನಾವರಣ ಮಾಡಿ ನೋಡಿದರು. ಅರಿವಿನಿಂದ ಸತಿ ಪತಿಯನ್ನು ನೋಡಿದರು, ಅರಿವಿನಿಂದ ಪತಿ ಸತಿಯನ್ನು ನೋಡಿದರು. ಸತಿ ಪತಿ ಕೂಡಿ ಅನುಭವಿಸುವ ರತಿಸುಖದ ಕೂಟ ಅನಾವರಣ ಮಾಡಿದರು. ಅರಿವಿನ ತನುವಿನ ಜನ್ಮಕ್ಕಾಗಿ ಇದ್ದ ರತಿಸುಖ ಮತ್ತೆ ಮತ್ತೆ ಯಾಕೆ ಬೇಕು? ಸತಿ ಇರಲು ಪರಸತಿಯನ್ನು ಬೇಡುವುದಾದರೂ ಯಾಕೆ ಬೇಕು? ಇಂದ್ರಿಯ ನಿಗ್ರಹ ಮಾಡಿ ಹೌದೆನ್ನಿಸಿಕೊಳ್ಳುವುದು; ಸುಖಿಸಿ ಅಲ್ಲ ಎನ್ನಿಸಿ ಕೊಳ್ಳುವುದರಲ್ಲಿ ಯಾವ ಸುಖ ಅಡಗಿದೆ? ಸುಖ ಸಿಗದಿದ್ದರೆ ಯಾಕೆ ದುಃಖವಾಗುತ್ತದೆ. ಈ ಸುಳ್ಳು ಸುಖ ದುಃಖಗಳು ತನುವಿಗೆ ಬೇಕೆ ? ಮನ ಇಂದ್ರಿಯಗಳನ್ನು ಕಾಡುವುದಾದರೂ ಏಕೆ ? ಎಂದು ಶರಣರು ಜ್ಞಾನ ಬಳಕೆ ಮಾಡಿಕೊಂಡು ಸತಿಪತಿಗಳು ಕೂಡಿಯೇ ವಿಚಾರಿಸಿದರು. ಪಂಚ ಜ್ಞಾನೇಂದ್ರಿಯಗಳಿಗೆ ಆವರಿಸಿದ ಅಜ್ಞಾನದ ಪೊರೆ ಕಳಚಿ ಬಿತ್ತು . ಹಾವು ಆಭರಣವಾಯಿತು; ಸತಿಪತಿಗಳೊಂದಾಗಿ ವಿಚಾರಿಸಿದ ಅರಿವಿನ ಭಕ್ತಿ ಶಿವನಿಗೆ ಪ್ರಿಯವಾಯಿತು.

639

ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ;
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಲ್ಲಿಯೂ ಮೇಳ !
ಮೊಲೆಯೆಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲಸಂಗಮದೇವಾ.

ಲಿಂಗ ಜಂಗಮರು ಒಂದೆ ಎಂದು ನಂಬಿದ ಬಳಿಕ ಅವರಂಗನೆಯರು ಲಿಂಗದ ರಾಣಿವಾಸ :

ಅಂಗದಲ್ಲಿ ಅರಿವೆಂಬ ಲಿಂಗದೇವನಿದ್ದಾನೆ; ಆತನನ್ನು ತಿಳಿದು ಆತನ ಆದೇಶ ಪಾಲಿಸುವ ಜಂಗಮನೂ ಇದ್ದಾನೆ. ಇವರಿಬ್ಬರೂ ಅಂಗದಲ್ಲಿಯೇ ಮನೆ ಮಾಡಿಕೊಂಡಿದ್ದಾರೆ. ಇವರಿಗೆ ಅಂಗನೆಯರೂ ಇದ್ದಾರೆ. ಅವರು ರಾಣಿವಾಸದ ಕುಲಜರು.

ಅಂಗವನ್ನು ಮನವೆಂಬ ಅಜ್ಞಾನ ಆವರಿಸಿದೆ. ಇದು ಅರಿವಿನ ಅಂಗವೆಂಬ ಅರಮನೆಯನ್ನು ಕೆಣಕಿ ರಾಣಿವಾಸಕ್ಕೆ ಕನ್ನ ಹಾಕುತ್ತದೆ. ಅವರೊಂದಿಗೆ ಹಾದರಕ್ಕಿಳಿಯುತ್ತದೆ. ಪರಸತಿಯನ್ನು ಕೆಣಕಿ, ರಾಣಿವಾಸಕ್ಕೆ ಕಿಚ್ಚು ಹಚ್ಚುತ್ತದೆ. ಅಲ್ಲಿಯೂ ಮೇಳೈಸುವುದಿಲ್ಲ, ಇಲ್ಲಿಯೂ ಮೇಳೈಸುವುದಿಲ್ಲ, ಅಗ್ನಿ ಸಾಕ್ಷಿಯಾಗಿ ಪಡೆದ ಸತಿಯಲ್ಲಿಯೂ ಮೇಳೈಸುವುದಿಲ್ಲ !

ಮನ ಸಂಬಂಧಗಳನ್ನು ಕೂಡಲೇ ಕಲ್ಪಿಸುತ್ತದೆ. ಆ ಸಂಬಂಧದೊಂದಿಗೆ ಕೂಡಲೇ ಹಾದರ ಮಾಡುತ್ತದೆ. ಮನಕ್ಕೆ ಮೊಲೆಯುಂಡ ಅಂಗದ ನೆನಪೂ ಇರುವುದಿಲ್ಲ, ಮೊಲೆಯುಣ್ಣಿಸಿದ ಅಂಗದ ನೆನಪೂ ಇರು ವುದಿಲ್ಲ.

ಮನಕ್ಕೆ ತನು ಮನ ಗುರು ಲಿಂಗ ಜಂಗಮದ ಸೂತ್ರ ತಿಳಿದ ಮೇಲೆ ಅದು ಘನ ಮನ ! ಅಂಗನೆ ಲಿಂಗದ ರಾಣಿವಾಸ ! ಅಂಗನೆ ಯಲ್ಲಿಯೂ ಮೇಳ; ಲಿಂಗದಲ್ಲಿಯೂ ಮೇಳ;

ಜಂಗಮದಲ್ಲಿಯೂ ಮೇಳ. ಸಾಕ್ಷಾತ್ ಚೌಡೇಶ್ವರಿಯಲ್ಲಿಯೂ ಮೇಳ. ಅಂಗದ ಭಾವ ಅಳಿದು ಅರಿವಿನ ಲಿಂಗದ ನಿರ್ಭಾವ ಮಾತ್ರ ಉಳಿಯುತ್ತದೆ.

640

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದಡೆ,
ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ ;
ಕಾಣಿರಣ್ಣಾ ! ಒಡೆಯನರಸಿಯ ಸರಸ ಬೇಡ !
ಕೂಳ ಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ ;
ಕೂಡಲಸಂಗಮದೇವ ಕರ ಸಿತಗನಯ್ಯಾ !

ಜ್ಞಾನಿಗಳೊಂದಿಗೆ ಮನೆಗೆ ಹೋದಾಗ ತುಡುಗುಣಿಯಂತೆ ಪರವಧುವ ನೋಡುವ ಸರಸ ಬೇಡ ; ಒಡೆಯನ ಅರಸಿಯೊಂದಿಗೆ ಸರಸ ಬೇಡ, ಉಂಡ ಕೂಳ ಸೊಕ್ಕು ತಲೆಗೇರಿ ರಾಣಿವಾಸದೊಡನೆ ಸರಸ ಬೇಡ, ಏಕೆಂದರೆ ಅಂಗದಲ್ಲಿಯೇ ವಾಸವಾದ ಅರಿವಿನ ಸಂಗಯ್ಯ ಬಲು ನಿಷ್ಠುರವಾದಿ.

ಕೂಡಲ ಸಂಗಮದೇವ ಕರ ಸಿತಗನಯ್ಯ :

ವಚನದ ನಾಲ್ಕು ಸಾಲುಗಳು ಗುರುವಿನೊಂದಿಗೆ ಮನೆಗೆ ಹೋದ ಶಿಷ್ಯ ಹೇಗಿರಬೇಕೆಂದು ಸೂಚಿಸುತ್ತವೆ. ಗುರು ಶಿಷ್ಯ ಸಂಬಂಧವನ್ನು ದಾಖಲಿಸಿವೆ. ಶಿಷ್ಯ ಗುರು ಹೇಳಿದ ಮಾತುಗಳನ್ನು ಕಲಿಯಬಲ್ಲ. ಆತ ಹೇಳಿಕೊಟ್ಟ ವೇದ ಆಗಮ ಉಪ ನಿಷತ್ತುಗಳನ್ನು ಕೂಡಾ ಕಲಿಯಬಲ್ಲ. ಹಾಗೆಯೇ ಗುರು ನುಡಿದಂತೆ ನುಡಿದು ಹೌದೆನ್ನಿಸಿಕೊಳ್ಳಬಲ್ಲ. ಆದರೆ ಗುರು ಇದ್ದಂತೆ ಇರಲು ಸಾಧ್ಯವಾಗುವುದಿಲ್ಲ. ಗುರುದೇವನು ಶಾಸ್ತ್ರ ಅಭ್ಯಾಸ ಮಾಡಿಸಬಲ್ಲ; ತನ್ನಂತೆ ಇರಲು ಸಾಧ್ಯವಾಗುವ ಸೂತ್ರಗಳನ್ನು ಹೇಳಿಕೊಡಬಲ್ಲ; ಆದರೆ ತನ್ನಂತೆ ಅರಿವಿನಿಂದ ಇರುವಂತೆ ಮಾಡಲು ಬರುವುದಿಲ್ಲ. ಅರಿವಿನಿಂದ ಇರುವ ಕ್ರಿಯೆ ಶಿಷ್ಯನಿಂದಲೇ ಸಾಧ್ಯವಾಗಬೇಕು. ಶಿಷ್ಯನಿಗೆ ಇದು ಸಾಧ್ಯವಾಗದ ನಿಮಿತ್ಯ ಶಾಸ್ತ್ರ ಅಭ್ಯಾಸ ಮಾಡಿ ಗುರುವಿನಂತೆ ಉಪನ್ಯಾಸ ನೀಡುತ್ತಾನೆ. ಗುರುವಿನೊಂದಿಗೆ ಗುರುವಿನ ಮನೆಗೆ ಹೋದಾಗ ಗುರುಪತ್ನಿಯನ್ನು ಗುರುಮಾತೆ ಎಂದು ಗೌರವಿಸಿ ನಮಸ್ಕರಿಸುತ್ತಾನೆ. ಆದರೆ ತುಡುಗುಣಿತನದಲ್ಲಿ ಒಡೆಯನ ಅರಸಿಯೊಂದಿಗೆ ಮನದಲ್ಲಿ ಸರಸದ ಹಾದರ ಮಾಡುತ್ತಾನೆ.

ಗುರುವಿಕ್ಕಿದ ಜ್ಞಾನದ ಕೂಳಿನ ಸೊಕ್ಕು ತಲೆಗೇರಿ ಅದು ಗುರುವಿಕ್ಕಿದ ಭಿಕ್ಷೆಯೆಂದು ನೆನಪಾಗುವುದೇ ಇಲ್ಲ. ಆಪತ್ಕಾಲದಲ್ಲಿ ಜ್ಞಾನ ನೆನಪಾಗದೆ, ಅಜ್ಞಾನದ ಸುಖ ಬಯಸಿದಡೆ ಗುರುಶಿಷ್ಯ ಸಂಬಂಧವಾದರೂ ಯಾಕೆ ಬೇಕು ? ಗುರು ಹೇಳಿದ ಶಾಸ್ತ್ರಜ್ಞಾನ ತನುವಿಗೆ ಬಳಕೆಯಾಗದೆ ತನುವಿನಲ್ಲಿಯೇ ಉಳಿಯಿತು. ತನುವನ್ನು ಆವರಿಸಿದ ವಿಷಯ ಸುಖ ತನುವಿಗೆ ಬಳಕೆಯಾಯಿತು. ಗುರು ಹೇಳಿದ ಶಾಸ್ತ್ರ ತನುವಿನಲ್ಲಿ ಸಂಗ್ರಹವಾಗಿ ತನುವಿನ ವ್ಯವಹಾರಕ್ಕೆ ಬಳಕೆಯಾಯಿತು. ಗುರು ಮತ್ತು ಶಿಷ್ಯ ಎಂಬ ಎರಡು ತನುಗಳ ವಿವರ ವಚನದ ನಾಲ್ಕು ಸಾಲುಗಳಲ್ಲಿದೆ. ಆದರೆ ಅಣ್ಣನವರ ನಿಜ ಉದ್ದೇಶ ಕೆಳಗಿನ ಒಂದು ಸಾಲಿನಲ್ಲಿ ಅಡಗಿದೆ.

ಕೂಡಲಸಂಗಮದೇವ ಕರಸಿತಗನಯ್ಯಾ : ಶ್ರೀಗುರು ಶಿಷ್ಯನಿಗೆ ಶಾಸ್ತ್ರ ಬೋಧಿಸಬಲ್ಲ; ತನುವಿನಲ್ಲಿ ತನ್ಮಯವಾದ ಜ್ಞಾನ ಹೇಳಬಲ್ಲ. ಆದರೆ ಶಿಷ್ಯ ಎಷ್ಟರ ಮಟ್ಟಿಗೆ ಸಫಲನಾಗಿದ್ದಾನೆ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ. ಶಾಸ್ತ್ರಹೇಳುವುದನ್ನು ಕೇಳಿ ಸಂತೋಷಪಡಬಲ್ಲ. ಶಿಷ್ಯನ ತನುವಿನಲ್ಲಿ ನಡೆಯುವ ಹಾದರದ ತುಂಟಾಟ ತಿಳಿಯಲು, ತಿಳಿದರೆ ನಿಲ್ಲಿಸಲು ಶ್ರೀಗುರುವಿಗೆ ಸಾಧ್ಯವಾಗುವುದಿಲ್ಲ.

ಕೂಡಲಸಂಗಮದೇವನೆಂಬ ಸದ್ಗುರು ಕರ ಸಿತಗನಯ್ಯಾ ! ಕರ ಎಂದರೆ ಕೈ- ತನು- ಅಂಗ-ದೇಹ ಎಂದು ಅರ್ಥೈಸಬೇಕು. ಕೈಯಲ್ಲಿ ಐದು ಬೆರಳು ಗಳಿವೆ. ಇವು ಕಣ್ಣು ಕಿವಿ ಮೂಗು ನಾಲಗೆ ಚರ್ಮ ಎನ್ನುವ ಐದು ಮಹಾಜ್ಞಾನದ ದ್ವಾರಗಳು. ಈ ಐದು ದ್ವಾರಗಳ ಬೆನ್ನ ಹಿಂದೆ ಸದ್ಗುರುವಿ ದ್ದಾನೆ. ಈತ ಬಲು ನಿಷ್ಠುರವಾದಿ ! ಶ್ರೀಗುರು ಶಿಷ್ಯನಿಗೆ ಸದಾ ಅಮೃತ ವನ್ನು ಮಾತ್ರ ಉಣ್ಣಿಸುತ್ತಾನೆ. ಶಿಷ್ಯ ಮಾಡಿದ ಸರ್ವ ತಪ್ಪುಗಳನ್ನು ಕ್ಷಮಿಸುತ್ತಾನೆ. ಆದರೆ ಸದ್ಗುರು ಹಾಗಲ್ಲ. ಶಾಸ್ತ್ರಕ್ಕೂ ಹಾದರಕ್ಕೂ ಕಡಿವಾಣ ಹಾಕುತ್ತಾನೆ. ಶಿಷ್ಯ ಹೇಳುವ ವ್ಯವಹಾರದ ಶಾಸ್ತ್ರವನ್ನು ಬಲ್ಲ. ಶಿಷ್ಯನ ಹಾದರವನ್ನೂ ಬಲ್ಲ. ಶಿಷ್ಯ ಗುರುಪತ್ನಿ ಯನ್ನು ಹಾದರದಿಂದ ನೋಡಿದರೆ, ನೋಡುವ ಕಣ್ಣ ಹಿಂದಿನ ಜ್ಞಾನವಾಗಿ ಸದ್ಗುರು ಶಿಷ್ಯನಿಗೆ ಹಾದರದ ನಾಯಿ ಎಂದು ಜರಿದು ನುಡಿಯುತ್ತಾನೆ. ರೂಪನೋಡಿ ನಾಲಗೆ ಜೊಲ್ಲು ಸುರಿಸಿದರೆ; ನಾಲಗೆ ಹಿಂದಿನ ಜ್ಞಾನವಾಗಿ ನೀಚ ನಾಲಗೆ ಎಂದು ಸದ್ಗುರು ಜರಿದು ನುಡಿಯುತ್ತಾನೆ. ಸ್ಪರ್ಶಿಸುವ ಚರ್ಮದ ಹಿಂದೆ, ಕೇಳುವ ಕಿವಿಯ ಹಿಂದೆ ಮೂಸಿಸುವ ಮೂಗಿನ ಹಿಂದೆ ಸದ್ಗುರು ವಾಸವಾಗಿ ಅಜ್ಞಾನಿ ಶಿಷ್ಯನ ಕಿವಿ ಹಿಂಡುತ್ತಾನೆ.

ಹಾದರದ ನೆನಪಿನ ಸುರುಳಿ ಬಿಚ್ಚಿಟ್ಟು ಹಗಲಿರುಳೆನ್ನದೆ ಕಾದ ಬಾಣಲೆಯಲ್ಲಿ ಅದ್ದಿ ಅದ್ದಿ ತೆಗೆಯುತ್ತಾನೆ. ಸದ್ಗುರು, ಶಿಷ್ಯನ ತನುವಿನಲ್ಲಿ ತನ್ಮಯವಾಗಿ ತನುವಿನ ಹಾದರವನ್ನು ಅಲ್ಲಗಳೆದು ತನ್ನಂತೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ.

ಅರಿವೆಂಬ ಸದ್ಗುರು ಒಂದು ಮಹಾನದಿ, ಮನವೆಂಬ ಶಿಷ್ಯನೂ ಒಂದು ಮಹಾನದಿ. ಇವರಿಬ್ಬರೂ ಬೇರೆ ಬೇರೆ ಹರಿಯುವಾಗ ಒಂದು ಗುರು ನದಿಯೆಂದು ಮತ್ತೊಂದು ಶಿಷ್ಯ ನದಿಯೆಂದು ಗುರುತಿಸಬಹುದು. ಇವೆರಡೂ ನದಿಗಳು ಸಂಗಮವಾಗಿ ಒಂದನ್ನೊಂದು ಬೆರೆತಾಗ ಅಲ್ಲಿ ಗುರು ನದಿ ಹುಡುಕಲು ಸಾಧ್ಯವಿಲ್ಲ; ಶಿಷ್ಯನದಿ ಹುಡುಕಲು ಸಾಧ್ಯವಿಲ್ಲ. ಎರಡೂ ಜ್ಞಾನ ಸಂಗಮಗಳೇ ! ತನುವನ್ನೇ ಕ್ಷೇತ್ರ ಮಾಡಿಕೊಂಡು ಗುರು ಶಿಷ್ಯ ಸಂಬಂಧ ಮುರಿದು ಸಂಗಮಗೊಂಡಿವೆ !

641

ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ, ಕಾಣಿರೋ.
ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ, ಕಾಣಿರೊ !
ಒಂದಾಸೆಗೆ ಸಾಸಿರ ವರುಷ ನರಕದೊಳದ್ದುವ
ಕೂಡಲಸಂಗಮದೇವ !

ಅರಿವೆಂಬ ಗುರುದೇವನೆ ಪರಮ ಪುರುಷ ! ಆ ಪರಮ ಪುರುಷ ನೊಂದಿಗೆ ಬೆರೆತು ಒಂದಾಗುವ ಬಯಕೆ ಉಳ್ಳ ಮನವೇ ಸ್ತ್ರೀ ! ಪುರುಷ ಸ್ತ್ರೀಯೊಂದಿಗೆ ಕೂಡುವ ಕೂಟಕ್ಕೆ

ಸಮಾಜದಲ್ಲಿ ಮಾನ್ಯತೆಯಿದೆ. ಸ್ತ್ರೀ ತಾನು ಸ್ವತಃ ಸ್ತ್ರೀಯಾಗಿ ಪರಸ್ತ್ರೀಯೊಂದಿಗೆ ಕೂಡುವ ಕೂಟಕ್ಕೆ ಸಮಾಜದಲ್ಲಿ ಮಾನ್ಯತೆಯಿಲ್ಲ ; ಬದಲಾಗಿ ಶಿಕ್ಷೆಯಿದೆ. ಈ ಕೂಟದಿಂದ ಪ್ರತಿಫಲ ಶೂನ್ಯ !

ಹೆಣ್ಣಾದರೇನು ? ಗಂಡಾದರೇನು ? ತನು ಎನ್ನುವುದು ಅರಿವೆಂಬ ಪರಮ ಪುರುಷನು ವಾಸಿಸುವ ಕ್ಷೇತ್ರ ; ಆ ಪರಮ ಪುರುಷ ಹೇಳಿದಂತೆ ಕೇಳುವ ಮನವೆಂಬ ಕುಲೀನ ಸ್ತ್ರೀ ವಾಸಿಸುವ ಮನೆ ! ಮನೆಯ ಒಡತಿ ಹಾದರಿಗಳಾದರೆ ಮನೆಯನ್ನು ನಿಂದಿಸುತ್ತಾರೆ. ಹೀಗಾಗಿ ತನು ಸತಿಯ ಮನೆ. ತನು ಹೆಣ್ಣಾದರೇನು ? ಗಂಡಾದರೇನು ? ಅದು ಹೆಣ್ಣೇ ! ಹೆಣ್ಣು ಹಾದರಕ್ಕಾಗಿ ಮತ್ತೊಂದು ಹೆಣ್ಣನ್ನು ಕೂಡುವಂತಿಲ್ಲ, ನೋಡುವಂತಿಲ್ಲ, ಹಾದರದ ಬಯಕೆಯಿಂದ ನುಡಿಸುವಂತಿಲ್ಲ. ಏಕೆಂದರೆ ಅದು ಪರಸ್ತ್ರೀ ! ಒಂದು ದೇಹ ಮತ್ತೊಂದು ದೇಹ ಬಯಸಿ ಕೂಡುವ ಕೂಟವಾದರೂ ಯಾವ ಸುಖಕ್ಕಾಗಿ ? ಸಂತಾನದ ಬಯಕೆಯಾದರೆ ಮಾತ್ರ ಒಡಂಬಡಿಕೆಯಾದ ದೇಹದೊಂದಿಗೆ ಕೂಡಿ ಮಗು ಪಡೆಯಬಹುದು. ಅದು ಪರಸ್ತ್ರೀಯೊಂದಿಗೆ ಕೂಡಿದ ಕೂಟವೆನಿಸುವುದಿಲ್ಲ. ಒಂದು ಭಿತ್ತಿನ ಅಡಿಯಲ್ಲಿ ಕೂಡಿದ ಅಧಿಕೃತ ಕೂಟವೆನಿಸುತ್ತದೆ. ಅರಿವಿನ ಮತ್ತೊಂದು ಕುಡಿ ಬಯಸಿ ಕೂಡಿದ ಕೂಟವೆನಿಸುತ್ತದೆ. ಹಾದರದ ಕೂಟವೆನ್ನಿಸು ವುದಿಲ್ಲ.

ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ, ಕಾಣಿರೊ ! ಒಂದಾಸೆಗೆ ಸಾಸಿರ ವರುಷ ನರಕದೊಳದ್ದುವ ಕೂಡಲಸಂಗಮದೇವ :

ಸಂತಾನ ಬಯಸಿ ಹೊರಬರುವ ಸುಖದ ದ್ರವ್ಯ ತನುವಿನಲ್ಲಿ ತನ್ಮಯವಾಗಿದೆ. ಇದು ಒಡಂಬಡಿಕೆಯಾದ ತನುವಿನ ಕೂಟಕ್ಕೆ ಮಾತ್ರ ಮೀಸಲು ; ಪರಸತಿಗಲ್ಲ ; ಪರತನುವಿಗೂ ಅಲ್ಲ ! ಸೊಣಗನಂತೆ ಪರಸ್ತ್ರೀಯ ಬಯಸಿದಡೆ ಪರಮ ಪುರುಷ ಟಗರಿನಂತೆ ಬೆನ್ನತ್ತಿ ಹಿರಿವ !

ನಾಯಿ ನಾಲಿಗೆ ಚಪಲಕ್ಕಾಗಿ ಬೆನ್ನತ್ತಬಹುದು ; ಟಗರ ತಿರುಗಿಬಿದ್ದರೆ ಸೊಣಗನನ್ನು ಹಿರಿದು ಕೊಲ್ಲುತ್ತದೆ. ಗರತಿಯಾಗಬೇಕಾದ ಮನ ನಾಯಿಯಾದರೆ ಅರಿವೆಂಬ ಪರಮಪುರುಷ ಟಗರಾಗಿ ಹಿರಿಯುತ್ತಾನೆ.

ಸಾಸುವೆಯ ಸುಖಕ್ಕಾಗಿ ಸಾವಿರ ವರುಷದವರೆಗೂ ಕುಲಹೀನ ಸ್ತ್ರೀಯೆಂಬ ಮನವನ್ನು ಪರಮ ಪುರುಷ ಟಗರದಂತೆ ಬೆನ್ನ ಹತ್ತಿ ಹಿರಿಸುತ್ತಾನೆ. ಮನವೂ ತನುವಿನಲ್ಲಿಯೇ ಇದೆ. ಅರಿವು ಮನಗಳೆರಡೂ ತಮ್ಮ ಕ್ರಿಯೆಗಾಗಿ ತನುವನ್ನೇ ಬಳಕೆ ಮಾಡಬೇಕು. ಅರಿವಿನ ಗಂಡನ ಸುಖ ಅರಿಯದ ಮನವೆಂಬ ನಾರಿ ನಾಯಿಯಂತೆ ಅರಿವಿನ ತನುವನ್ನೇ ಬಳಸಿಕೊಂಡು ತನುವನ್ನೇ ನಾಯಿಯಾಗಿ ಮಾಡುತ್ತಾಳೆ. ಅರಿವಿನ ಗಂಡ ಕೂಡಾ ತನುವನ್ನೇ ಬಳಸಿಕೊಂಡು ತನುವಿನಲ್ಲಿಯೇ ನಾಯಿಯನ್ನು ಟಗರಿನಂತೆ ಸಾವಿರಾರು ವರುಷದವರೆಗೂ ಹಿರಿದು ಹಿರಿದು ಕಾಡುತ್ತಾನೆ. ಈ ಸೂಕ್ಷ್ಮತೆಯ ಅರಿವು ಮನವೆಂಬ ನಾಯಿಗೆ ಆದರೆ ತನುವೇ ಸ್ವರ್ಗ. ಮನಕ್ಕೆ ಅರಿವಾಗದಿದ್ದರೆ ತನುವೇ ನರಕ. ಮನ ಮುಖವಾಡ ಧರಿಸಿದ ನಾಯಿಬಾಳು !

642

ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂ ಬೋ, ತೊರೆಯಿಂ ಬೋ ;
ಪರನಾರಿಯರ ಸಂಗವ ತೊರೆಯಿಂ ಬೋ !

ಪರಧನದಾಮಿಷವ ತೊರೆಯಿಂ ಬೋ !
ಇವ ತೊರೆಯದೆ ಹೋಗಿ ತೊರೆಯ ಮಿಂದಡೆ,
ಬರುದೊರೆ ಹೋಹುದು, ಕೂಡಲಸಂಗಮದೇವಾ.

ತೊರೆಯಲ್ಲಿ ಮೀವ ಅಣ್ಣಗಳಿರಾ, ಸ್ವಾಮಿಗಳಿರಾ, ಆಚಾರ್ಯರುಗಳಿರಾ ತೊರೆಯಿರಿ ಪರನಾರಿಯರ ಸಂಗವ ! ತೊರೆಯಿರಿ ಪರಧನದಾಮಿಷವ ! ಇವ ತೊರೆಯದೆ ಹೋಗಿ ಕೆರೆಯಲ್ಲಿ ಮಿಂದಡೆ, ಕೂಡಲಸಂಗಮದೇವ ಬಲುದೂರ.

ತನು ಒಂದು ಜಲಭರಿತ ಕೆರೆ. ಅದರಲ್ಲಿ ಹರಿದಾಡುವ ಮನವೆಂಬ ನಾರಿಯಿದ್ದಾಳೆ. ತನುವಿನಲ್ಲಿಯೇ ಭರಿತವಾದ ಧ(ಅರಿವು)ನವೂ ಇದೆ. ತನುವೆಂದರೆ ದೇಹ, ಮನವೆಂದರೆ ಸುಖಕ್ಕಾಗಿ ಹರಿದಾಡುವ ನಾರಿ. ಧನವೆಂದರೆ ತನುವಿನಲ್ಲಿಯೇ ತನ್ಮಯವಾದ ಅರಿವು. ಇವುಗಳನ್ನು ಒಟ್ಟಾಗಿ ಶರಣರು ತನು ಮನ ಧನವೆಂದು ಕರೆದಿದ್ದಾರೆ.

ಪರಧನವ ತೊರೆಯಿಂ ಬೋ:

ವೇದ ಆಗಮ ಉಪನಿಷತ್ತು, ಭಗವದ್ಗೀತೆ, ಬೈಬಲ್‌ಗಳಲ್ಲಿದ್ದ ಜ್ಞಾನ (ಧನ) ವನ್ನು ಓದಿ ಕೇಳಿ ತನ್ನದೆಂದು ಸಂಗ್ರಹ ಮಾಡಿದರೆ ಅಂತಹ (ಧನ) ಅರಿವು ಆಪತ್ಕಾಲದಲ್ಲಿ ಬಳಕೆಯಾಗುವುದಿಲ್ಲ. ಅಂದರೆ ಮನ ಪರಸ್ತ್ರೀಯೊಂದಿಗೆ ಸಂಗ ಮಾಡಲು ತನುವಿನೊಂದಿಗೆ ಸುಖಿಸುವ ಕಾತುರಪಟ್ಟಾಗ ಕಲಿತು ಸಂಗ್ರಹಿಸಿಕೊಂಡ ವೇದ ಆಗಮ ಉಪ ನಿಷತ್ತುಗಳು ಮನದ ಸಹಾಯಕ್ಕೆ ಬರುವುದಿಲ್ಲ. ಅವು ಜ್ಞಾನವಾದರೂ ಕೂಡಾ ಪರರಿಂದ, ಪುಸ್ತಕಗಳಿಂದ ಬಂದು ತನುವಿನಲ್ಲಿ ಸಂಗ್ರಹವಾಗಿದೆ. ಹೀಗಾಗಿ ಆಪತ್ಕಾಲದಲ್ಲಿ ಬಳಸಲು ಬರುವುದಿಲ್ಲ ! ಆದರೂ ಗುರುವಿನಿಂದ, ಗ್ರಂಥಗಳಿಂದ ಜ್ಞಾನ ಪಡೆಯಬೇಕೆಂಬ ದಾಹ ಆಮಿಷ ಮನದಲ್ಲಿ ಹುಟ್ಟುತ್ತದೆ. ಇದು ವ್ಯರ್ಥ. ಪಂಡಿತನಾದರೂ ನೀಚ ಬುದ್ದಿ ಹೋಗಲಿಲ್ಲ ಎಂದು ತನುವಿನಲ್ಲಿ ತನ್ಮಯವಾದ ಅರಿವು ತನುವನ್ನು ಆವರಿಸಿದ ಮನಕ್ಕೆ ನಿಂದಿಸುತ್ತದೆ.

ತನುವಿನಿಂದ ನೋಡಲ್ಪಡುವ ಮತ್ತೊಂದು ತನು ಪುರುಷನಾದರೇನು ? ಸ್ತ್ರೀಯಾದರೇನು? ರಕ್ತ ಮಾಂಸ ಮೂಳೆ ಮಜ್ಜಾ ಮೇದಸ್ಸುಗಳನ್ನು ಬಂಧಿಸಿದ ಚರ್ಮದ ಕವಚವೇ ಆಗಿದೆ.

ತನ್ನ ಒಂದು ಕೈ ಮತ್ತೊಂದು ಕೈಯನ್ನು ಮುಟ್ಟಿದರೆ ತನುವಿನಲ್ಲಿ ವಿಷಯದ ರಸಾಯನಿಕ ಕ್ರಿಯೆಗಳು ಉಂಟಾಗುವುದಿಲ್ಲ. ಏಕೆಂದರೆ ಚರ್ಮ ತನ್ನ ಜ್ಞಾನವನ್ನು ಮಾತ್ರ ಬಳಸುತ್ತದೆ. ಒಂದು ಕೈ ಮತ್ತೊಂದು ತನುವಿನ ಕೈಯನ್ನು ಮುಟ್ಟಿದರೆ ತನುವಿನಲ್ಲಿ ವಿಷಯದ ರಾಸಾಯನಿಕ ಕ್ರಿಯೆ ಉಂಟಾಗುತ್ತದೆ. ಭೋಗದ ಕೂಟಕ್ಕೆ ಸಿದ್ಧವಾಗುತ್ತದೆ. ಇದು ಮನದಲ್ಲಿ ವಿಷಯದ ಸುಖದ ರುಚಿ ಸಂಗ್ರಹಿಸಿಕೊಂಡ ಪರಜ್ಞಾನ. ಈ ಜ್ಞಾನ ಬಳಕೆಯಾದರೆ (ಪರಧನ) ತನುವಿಗೆ ಹಾದರದ ಪಟ್ಟ ಕಟ್ಟಿಟ್ಟ ಬುತ್ತಿ. ಸ್ವಾನುಭವದ ಜ್ಞಾನದಿಂದ ಪರ ತನುವಿನ ಕೈ ಮುಟ್ಟಿದರೆ ಅದು ಕೂಡಾ ತನ್ನಂತೆ ರಕ್ತ ಮೂಳೆ ಮಾಂಸ ಮಜ್ಜಾ ಮೇದಸ್ಸುಗಳನ್ನು ಚರ್ಮದ ಕವಚದಲ್ಲಿ ಬಂಧಿಸಿಕೊಂಡ ಅರಿವಿನ ತನುವೇ ಆಗಿದೆ ಎಂದು ತಿಳಿದು ಆ ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟಾಗುವುದಿಲ್ಲ ; ಪರಧನ ಬಳಕೆಯಾಗುವುದೂ ಇಲ್ಲ. ಪರಧನದ ಆಮಿಷ ಮತ್ತೊಂದು ತನುವಿನಿಂದ, ಪುಸ್ತಕದಿಂದ ಜ್ಞಾನ ಪಡೆಯಬೇಕು ಎಂಬ ಆಶೆ ತನ್ನಷ್ಟಕ್ಕೆ ತಾನೇ ತನುವಿನಿಂದ ಕಳಚಿ ಬೀಳುತ್ತದೆ. ಸ್ವಾನುಭವದ ಅರಿವು ಮಾತ್ರ ತನುವಿನಲ್ಲಿ ಸದಾ ಬಳಕೆಯಾಗುತ್ತದೆ.

643

ಸತ್ಯ ಶೌಚ ನಿತ್ಯನೇಮವ ತಪ್ಪದೆ ಮಾಡಬಲ್ಲಡೆ ಅದು ಲೇಸು.
ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿರ್ದಲ್ಲಿ ಫಲವೇನು ?
ಚಿತ್ತ ಸ್ಯಾಂತರ್ಗತೋದೋಷಃ ತೀರ್ಥ ಸ್ನಾನಾನ್ನ ಶುದ್ಧತಿ ।
ಶತಕುಂಭ ಜಲೇ ಶೌಚಂ ಸುರಾಭಾಂಡಮಿವಾ ಶುಚಿಃ ॥
ಆಗಡವ ಮಾಡಿ ಮಾಗುಡುವ ಮಿಂದಡೆ,
ತಾ ಕೊಡಬಲ್ಲನೆ ಕೂಡಲಸಂಗಮದೇವಾ ?

ಸತ್ಯ ಶೌಚ ನಿತ್ಯ ನೇಮವ ತಪ್ಪದೆ ಮಾಡಬಲ್ಲಡೆ ಅದು ಲೇಸು :

ನೋಡುವಾಗ, ಕೇಳುವಾಗ, ಮುಟ್ಟುವಾಗ, ರುಚಿಸುವಾಗ, ಮೂಸಿಸುವಾಗ ತನುವಿನ ಸತ್ಯ ತನುವಿಗೆ ಬಳಕೆಯಾಗಬೇಕು. ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟಿ ತನು ಶೌಚಾಲಯದಂತಾಗಬಾರದು. ಸತ್ಯ ಬಳಕೆ ಮಾಡಿ ಶಿವಾಲಯವಾಗಬೇಕು.

ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿರ್ದಲ್ಲಿ ಫಲವೇನು :

ತನುವಿನ ಸತ್ಯ ತನುವಿಗೆ ಬಳಕೆಯಾಗದೆ; ತನುವಿಗೆ ಮಡಿಯ ವೇಷ ಹಾಕಿ, ಕಾವಿ ಕಾಷಾಯವ ಹೊದ್ದು, ಲಿಂಗ ಜನಿವಾರ ರುದ್ರಾಕ್ಷಿ ಮಾಲೆಯ ಧರಿಸಿ ಮೀನು ಆಮೆ ಕಪ್ಪೆಯಂತೆ ಸದಾ ಜಲದಲ್ಲಿ ಮಿಂದ ರೇನು ?

ಮನದಿಂದ ಮಲಿನವಾದ ಪಾಪವು ಜಲದಿಂದ ಪಾವನವಾಗುವುದಿಲ್ಲ. ಹೆಂಡದ ಮಡಕೆಯನ್ನು ನೂರು ಕುಂಭಗಳಿಂದ ತೊಳೆದರೂ ಅದರೊಳಗಿದ್ದ ವಾಸನೆ ಕಿಂಚಿತ್ತೂ ಹೋಗುವುದಿಲ್ಲ.

ತನುವಿನಿಂದ ಪಾಪದ ಕೆಲಸಗಳನ್ನು ಮಾಡಿ, ಆ ತನುವನ್ನು ಗಂಗಾ ಜಲದಿಂದ ತೊಳೆದರೆ ಆಗಡವ ಮಾಡಿ ಮಾಗಡವ ಮಿಂದಂತೆ. ತನುವಿನಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ತನುವನ್ನೇ ಆವರಿಸಿದ ಪಾಪದ ಮನವನ್ನು ತನುವಿನಲ್ಲಿ ಅಪ್ಪಿಕೊಂಡು ಅರಿವಿನ ಸುಖವನ್ನು ನೀಡಲಾರ. ಕಾಯವನ್ನೇ ಕೈಲಾಸ ಮಾಡಲಾರ.

644

ಕುಳ್ಳಿರ್ದಲ್ಲಿ ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ ;
ಬೆಳ್ಳೆತ್ತಿನ ಮರೆಯಲಿರ್ದು ಹುಲ್ಲೆಗಂಬ ತೊಡುವಂತೆ !
ಕಳ್ಳ ಹಾದರಿಗ ಕೈಯಲು, ಪೂಜೆಯ ಕೊಳ್ಳ
ನಮ್ಮ ಕೂಡಲಸಂಗಮದೇವ.

ಕುಳ್ಳಿರ್ದಲ್ಲಿ ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ ! ಬೆಳ್ಳೆತ್ತಿನ ಮರೆಯಲಿರ್ದು ಹುಲ್ಲೆಗಂಬ ತೊಡುವಂತೆ :

ಅಂಗದ ಮೇಲೆ ಕಟ್ಟಿಕೊಂಡ ಲಿಂಗವನ್ನು ಹೊರಗೆ ತೆಗೆದು ಜಲ ದಿಂದ, ಪಂಚಾಮೃತದಿಂದ ಅಭಿಷೇಕ ಮಾಡಿ, ಪತ್ರಿ ಪುಷ್ಪ ಗಂಧ ವಿಭೂತಿ ಧರಿಸಿ, ನಾನಾ ಮಂತ್ರಗಳಿಂದ ಪೂಜಿಸಿ,

ಸತ್ಕರ್ಮಗಳನ್ನು ಮಾಡಲು ಅರಿಯದಿದ್ದರೆ ಅದು ಪೂಜೆಯಲ್ಲ. ಪೂಜೆಗೊಳಗಾದ ಲಿಂಗ ವರವನ್ನು ಕೊಡುವುದಿಲ್ಲ; ಶಾಪವನ್ನು ಕೊಡುವುದಿಲ್ಲ.

ಎತ್ತಿನ ಮರೆಯಲ್ಲಿ ನಿಂತು ಜಿಂಕೆಯ ಬೇಟೆಯಾಡಿದಂತೆ, ತನುವಿನ ಮರೆಯಲ್ಲಿಯೇ ನಿಂತು ಮನದ ಹಾದರವನ್ನು ಖಂಡಿಸುತ್ತಾನೆ. ಮನವನ್ನು ಬಾಣಲೆಯಲ್ಲಿ ಅದ್ದಿ ಅದ್ದಿ ತೆಗೆಯುತ್ತಾನೆ.

ಕಳ್ಳ ಹಾದರಿಗ ಮನಕ್ಕೆ ಲಿಂಗವೆಂದರೆ ಯಾರೆಂದು ಹೊಳೆಯುವುದೇ ಇಲ್ಲ. ಕಲ್ಲನ್ನೆ ಲಿಂಗವೆಂದು ಪೂಜಿಸುವುದು ಬಿಡುವುದಿಲ್ಲ, ಕಳವು ಹಾದರವನ್ನು ತನು ಹಿಡಿದು ಮಾಡುವುದನ್ನು ಬಿಡುವುದಿಲ್ಲ. ನಿತ್ಯ ಪೂಜೆಗೆ ಒಳಗಾಗುವ ಲಿಂಗವದು ಎರೆದರೆ ನೆನೆಯದು ಮರೆತರೆ ಬಾಡದು. ಮನ ಮಾಡುವ ಪೂಜೆಯದು ಹುರುಳಿಲ್ಲದ ಪೂಜೆ.

ಅಂಗದಲ್ಲಿಯೇ ಮರೆಯಾದ ಅರಿವಿನ ಸಂಗಯ್ಯ ಮರೆವಿನ ಕಳ್ಳ ಹಾದರಿಗ ಮನದೊಂದಿಗೆ ಪೂಜೆಗೊಳ್ಳ. ಮನ ಘನವನರಿಯದು; ಘನ ಮನವನಪ್ಪಿಕೊಳ್ಳದು. ಮನ ತಿಳಿಯದಿದ್ದರೆ ಈ ಹಾದರ ಕಳುವಿನ ಪೂಜೆ ತನುವಿರುವವರೆಗೆ ನಡೆಯುತ್ತದೆ. ಅಂಗದ ಮರೆಯಲ್ಲಿಯೇ ಇದ್ದ ಲಿಂಗಯ್ಯನಿಗೆ ಯಾವ ಬಾಧೆಯೂ ಇಲ್ಲ. ಅರಿಯದ ಮನವನ್ನು ತನು ವಿನೊಂದಿಗೆ ಬಾಧಿಸುವುದನ್ನು ಬಿಡ !

645

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ.
ನುಡಿಯಲು ಬಾರದು, ನಡೆಯಲು ಬಾರದು,
ಲಿಂಗದೇವನೆ ದಿಬ್ಯವೊ ಅಯ್ಯಾ
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು, ಕಾಣಾ, ಕೂಡಲಸಂಗಮದೇವಾ.

ನುಡಿದಂತೆ ನಡೆಯುವುದು ಬಲುಕಷ್ಟ. ನುಡಿಯುವಾಗ ಮನಕ್ಕೆ ಸುಖ; ನುಡಿದಂತೆ ನಡೆಯುವಾಗ ಮನಕ್ಕೆ ದುಃಖ. ಹೀಗಾಗಿ ಮನ ನುಡಿಯುವಾಗ ಎಡವುತ್ತದೆ ; ನುಡಿದಂತೆ ನಡೆಯುವಾಗಲೂ ಎಡವುತ್ತದೆ. ನುಡಿಯುವಾಗ ಎಚ್ಚರದಲ್ಲಿದ್ದು, ನಡೆಯಲ್ಲಿ ತಪ್ಪಿದಡೆ ತನು ವನ್ನು ಹಿಡಿದ ಅರಿವೆಂಬ ಲಿಂಗವು ಸರ್ಪವಾಗಿ ಮನವನ್ನು ತನುವನ್ನು ಕಚ್ಚುತ್ತದೆ.

ನುಡಿಯಲು ಬಾರದು, ನಡೆಯಲೂ ಬಾರದು, ಲಿಂಗದೇವನೆ ದಿಬ್ಯವೊ ಅಯ್ಯಾ :

ತಪ್ಪಿ ನುಡಿಯಲು ಬಾರದು, ತಪ್ಪಿ ನಡೆಯಲು ಬಾರದು. ನುಡಿಯುವಾಗಲೂ, ನಡೆಯುವಾಗಲೂ ಅರಿವೆಂಬ ಲಿಂಗವು ಸಾಕ್ಷಿಯಾಗಿ ತಪ್ಪಿದ ನಡೆಯನ್ನು ಘಟಸರ್ಪದಂತೆ ಕಚ್ಚುತ್ತದೆ. ಸಂಗ್ರಹ ಮಾಡಿ ಕೊಳ್ಳುತ್ತದೆ. ಇಂದು ತಪ್ಪಿ ನುಡಿದ ನುಡಿಯನ್ನು ತನುವಿರುವವರೆಗೂ ಘಟಸರ್ಪದಂತೆ ಕಚ್ಚುತ್ತದೆ.

ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ ಕಡೆದಾಂಟದು:

ಕೋಪವೂ ತನ್ನದೇ ನುಡಿಯುವ ನಾಲಗೆಯೂ ತನ್ನದೆ, ಕಚ್ಚುವ ಹಲ್ಲು ವಸಡುಗಳೂ ತನ್ನವೇ, ದವಡೆಯೂ ತನ್ನದೆ. ತನ್ನ ಕೋಪ ತನ್ನ ದವಡೆಗೆ ಮೃತ್ಯುವಾದಂತೆ. ನಡೆದು ನುಡಿಯುವಲ್ಲಿ

ಸುಖವಿದೆ; ನುಡಿದು ನಡೆಯದೇ ಇರುವಲ್ಲಿ ದುಃಖವಿದೆ.

646

ತನು ಶುಚಿಯಿಲ್ಲದವನ ದೇಹಾರವೇಕೆ ?
ದೇವರು ಕೊಡನೆಂಬ ಭ್ರಾಂತದೇಕೆ ?
ಮನಕ್ಕೆ ಮನವೆ ಸಾಕ್ಷಿ; ಸಾಲದೆ ತಂದೆ ?
ಹೇಂಗೆ ಮನ ಹಾಂಗೆ ನಿಮ್ಮ ಘನ, ತಪ್ಪದು,
ಕೂಡಲಸಂಗಮದೇವ.

ತನು ಶುಚಿಯಿಲ್ಲದವನ ದೇಹಾರವೇಕೆ ? ದೇವರು ಕೊಡನೆಂಬ ಭ್ರಾಂತದೇಕೆ ? ಮನಕ್ಕೆ ಮನವೆ ಸಾಕ್ಷಿ; ಸಾಲದೆ ತಂದೆ :

ತನು ಮನ ಶುಚಿಯಿಲ್ಲದೆ ಪೂಜೆ ಮಾಡುವುದು; ದೇವರು ಕೊಡಲಿಲ್ಲವೆಂದು ಭ್ರಾಂತಿಯಿಂದ ನುಡಿಯುವುದು. ದೇವರನ್ನು ಯಾಕೆ ಪೂಜಿಸಬೇಕು ? ಮನ ಬೇಡುವ ವಸ್ತು ತನುವಿಗೆ ಯಾಕೆ ಬೇಕು ? ವಸ್ತು ಬೇಕಾದಲ್ಲಿ, ಮನ ತನುವಿನೊಂದಿಗೆ ಪ್ರಯತ್ನಿಸಬೇಕೆ ವಿನಹ ಪೂಜಿಸಿದರೂ ಕೂಡಾ ಪ್ರಯತ್ನವಿಲ್ಲದೆ ದೊರೆಯದು. ಪೂಜಿಸುವು ದೊಂದು ಭ್ರಾಂತಿ ; ಬೇಡುವುದು ಮತ್ತೊಂದು ಭ್ರಾಂತಿ.

ಪೂಜಿಸಿಕೊಳ್ಳುವ ದೇವರಿಗೆ ಪೂಜಿಸುವುದು ತನುವೆನ್ನುವ ಅರಿವಿಲ್ಲ. ಬೆಳಗಾದರೆ ಸಾಕು ತನು ಮಾಡಿದ ದೇವರನ್ನು ತನುವೇ ಜಲದಿಂದ ತೊಳೆದು ವಿಭೂತಿ ಬಿಲ್ವ ಕ್ಷೀರದಿಂದ ಪೂಜಿಸುತ್ತದೆ. ನೈವೇದ್ಯವಿಟ್ಟು ಭ್ರಮೆಯಿಂದ ಬೇಡಿಕೆಗಳನ್ನಿಟ್ಟು ಬೇಡುವ ಸಂಪ್ರದಾಯದ ಗೀಳು ಹಚ್ಚಿಕೊಂಡಿದೆ.

ತಾನು ಪೂಜಿಸುವುದು ದೇವರಿಗೆ ಗೊತ್ತಿಲ್ಲ. ದೇವರು ಕೊಡುತ್ತಾ ನೆಂದು ಭ್ರಮಿಸಿದ ತನು ಒಮ್ಮೆಯೂ ಏನನ್ನು ಪಡೆದಿಲ್ಲ. ಆದರೂ ದೇವರೆಂದರೆ ಯಾರು; ಆತನನ್ನು ಹೇಗೆ ಅರಿವಿನಿಂದ ಪೂಜಿಸಬೇಕು ಎನ್ನುವ ಚಿಂತನೆ ಮಾಡುತ್ತಿಲ್ಲ.

ಕಲ್ಲನ್ನೇ ದೇವರೆಂದು ಪೂಜಿಸಿದರೆ ಅದು ಮನದ ಭ್ರಮೆ. ಪೂಜಿಸುವ ದೇವರನ್ನು ಮನ ಅನಾವರಣ ಮಾಡಿ ನೋಡಿದರೆ ಕಾಣುವ ಸತ್ಯವೇ ದೇವರು. ಪೂಜೆಯಿಲ್ಲ ಅಭಿಷೇಕವಿಲ್ಲ ಬರೀ ನೋಟದ ಪೂಜೆ !

647

ಶರಣರ ನಿಚ್ಚ ನಿಚ್ಚ ಪೂಜಿಸುವಂಗೆ-ಇದಕ್ಕಿದೆ ದೃಷ್ಟ ದೀವಿಗೆ-
ಪಾದೋದಕ ಕೋಶಪಾನವಲ್ಲದೆ ಏನೂ ಇಲ್ಲವಯ್ಯಾ
ಮಜ್ಜನಕ್ಕೆರೆವುದು ಲಿಂಗ-
ಅದು ಲಿಂಗ ಕರಸ್ಥಲದ ದಿಬ್ಯ-
ಗುರುವಚನ ಭಾಷಾಪತ್ರ ಶಿವಕರದಲ್ಲಿ !
ಸತ್ಯದಿಂದ ನಡೆವಂಗೆ ನಿತ್ಯ ನೇಮವಾಗಿ ಸಲಿಸುವನಲ್ಲದೆ,
ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ !
ಲಿಂಗವ ಪೂಜಿಸಿ ಮರಳಿ ಅನ್ಯಕೆರಗಿದಡೆ

ಕೂಡಲಸಂಗಮದೇವನವರ ಹಲ್ಲಕಳೆವ !

ನಿತ್ಯ ನಿತ್ಯ ಅರಿವಿನ ಪೂಜೆಯಲ್ಲಿ ನಿರತನಾದ ಶರಣನಿಗೆ ದೃಷ್ಟಿಯೇ ದೀವಿಗೆ. ಕಿವಿಯೇ ಘಂಟಾನಾದ. ಮೂಗು ಅನಂತ ಪರಿಮಳದ ಪುಷ್ಪ. ನಾಲಗೆಯೇ ಷಡ್ರಸಾನ್ನದ ನೈವೇದ್ಯ . ತನುವೇ ಅರಿವಿನ ಲಿಂಗಯ್ಯನ ಪಾದೋದಕದ ಕೋಶ ಪಾನ. ಚರ್ಮವೇ ಉದಕದ ಬಿಂದಿಗೆ. ಇದು ಅರಿವಿನ ಲಿಂಗಯ್ಯನ ಮನೆಯೂ ಹೌದು ಆತನ ವಾಸಸ್ಥಳವೂ ಹೌದು. ಇದು ಸತ್ಯ; ಇದೇ ಸಾಕ್ಷಿ !

ಶಿವನು ವಾಸಿಸಿದ ಈ ತನುವಿನಲ್ಲಿ ಗುರುವಚನ ಭಾಷಾಪತ್ರಗಳೇ ತುಂಬಿವೆ. ವೇದ ಆಗಮ ಉಪ ನಿಷತ್ತುಗಳು, ಭಗವದ್ಗೀತೆ ಬೈಬಲ್‌ಗಳು ತುಂಬಿವೆ. ಸತ್ಯವನ್ನೇ ಬಳಕೆ ಮಾಡುವ ಮನಕ್ಕೆ ತನುವೇ ಅರಿವಿನ ತವರು. ಅದೊಂದು ವಿಶ್ವ ವಿದ್ಯಾ ಲಯ ! ಅಸತ್ಯವನ್ನೇ ಬಳಕೆ ಮಾಡುವ ಮನಕ್ಕೆ ತನುವೇ ಸುಡುವ ಕಿಚ್ಚು !

ಅರಿವಿನ ಲಿಂಗವನ್ನೇ ಪೂಜಿಸುವ ಮನ ಅನ್ಯಕ್ಕೆರಗಿದಡೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಅಜ್ಞಾನದ ಹಲ್ಲ ಕಳೆವ !

648

ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ ?
ನಾರಿವಾಣವಕ್ಕುದೆ ನಾಯಿಗೆ ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಿಗೆ.

ತನುವೆಂಬುದು ತೆಂಗಿನಕಾಯಿ. ನಾರು ಸುಲಿದು, ಕರಟ ಒಡೆದಾಗ ಕಾಣುವುದೇ ಅರಿವಿನ ತಿರುಳು. ನಾಯಿಗುಣದ ಮನಕ್ಕೆ ಸುಲಭವಾಗಿ ತೆಂಗಿನ ತಿರುಳು ದಕ್ಕುವುದಿಲ್ಲ. ಮನದ ಕೋಪ ತಾಪಗಳು ಅಡಗಬೇಕು. ಅರಿವಿನಿಂದ ತೆಂಗಿನ ಕಾಯೊಳಗಿದ್ದ ತಿರುಳು ಗಮನಿಸಿ ಯುಕ್ತಿಯಿಂದ ನಾರು ಬಿಚ್ಚಬೇಕು. ಶಕ್ತಿಯಿಂದ ಗರಟ ಹೊಡೆದಾಗ ತಿರುಳು ಕಾಣುತ್ತದೆ. ಅರಿವಿನ ತಿರುಳನ್ನು ಮೆಲ್ಲುವುದು ಬಲು ಆನಂದ.

ನಾಯಿಯಾಗಿ ಪ್ರಯತ್ನಿಸಿದರೆ ತೆಂಗಿನ ಕಾಯಿಯ ತಿರುಳು ಬಿಚ್ಚು ವುದಿಲ್ಲ. ಅರಿವಿನ ನರನಾಗಿ ಪ್ರಯತ್ನಿಸಿದರೆ ಸುಲಭವಾಗಿ ಬಿಚ್ಚುವುದು. ಗರಟೆ ಹೊಡೆದು ತಿರುಳು ಸೇವಿಸಿದಾಗ ಆ ನರನೇ ಹರನಾಗುತ್ತಾನೆ. ಪಾಪ, ಕೋಪಗಳು ಅರಿವಿನ ಅಗ್ನಿಯಲ್ಲಿ ಬೆಂದು ನಂದಾದೀವಿಗೆಯಾ ಗುತ್ತದೆ. ತನು ಅರಿವಿನ ಬೆಳಕಾಗಿ ಬೆಳಗಿಂಗೆ ಬೆಳಕಾಗಿ ಬೆಳಗುತ್ತದೆ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ಮನ ನಂಬ ಬೇಕು. ಮನದ ಕೋಪ ತಾಪಗಳು ಅರಿವಿನ ಬೆಳಕಿನಲ್ಲಿ ಕತ್ತಲಿ ನಂತೆ ಕರಗಬೇಕು. ಪಾಪಿ ಎನ್ನುವವನು ಬೇರೆಯಲ್ಲ ; ಕೋಪಿ ಎನ್ನುವವನು ಬೇರೆ ಅಲ್ಲ. ಅರಿವು ತಿಳಿಯದ ಮನವೇ ಪಾಪಿ. ಅರಿವು ತಿಳಿಯದ ಮನವೇ ಕೋಪಿ. ಅದು ತನುವಿನೊಂದಿಗೆ ಪಾಪಿ ಕೋಪಿಯಾಗಿ ಕಾಣುತ್ತದೆ. ಅರಿತರೆ ಅರಿವಿನ ಶರಣನಾಗಿ ಕಾಣುತ್ತದೆ. ಅಂಗ ಲಿಂಗಾಂಗವಾಗಿ ಬೆಳಗುತ್ತದೆ !

649

ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ !
ಪಾಪಿ ಹೂವನೇರಿಸಲು ಮಸೆದಡಾಯುಧದ ಗಾಯ !
ಕೂಪವರನಾರನೂ ಕಾಣೆನು ಮಾದಾರ ಚೆನ್ನಯ್ಯನಲ್ಲದೆ.
ಕೂಪವರನಾರನೂ ಕಾಣೆನು ಡೋಹರ ಕಕ್ಕಯ್ಯನಲ್ಲದೆ.
ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯಾ ,
ನಿನ್ನಾಪತ್ತಿಗರಿವರಯ್ಯಾ , ಕೂಡಲಸಂಗಯ್ಯಾ !

ಕೋಪಿ ಪಾಪಿಗಳು ಗೋಚರದ ಪೂಜೆ ಮಾಡುತ್ತಾರೆ. ತನುವನ್ನು ಆವರಿಸಿದ ಮನವೇ ಕೋಪಿ; ತನುವನ್ನು ಆವರಿಸಿದ ಮನವೇ ಪಾಪಿ ! ಇವರು ಮಾಡುವ ಪೂಜೆ ಗೋಚರದ ಆಚಾರದ ಪೂಜೆ. ಈ ಪೂಜೆಗೆ ಕೋಳಿ ಕುರಿ ಕೋಣಗಳೇ ಬೇಕು. ರಕ್ತದ ಔತಣ ನೀಡಿ ಪೂಜಿಸುವುದೆಂದರೆ ಕೋಪಿ ಮನಕ್ಕೆ ಬಲು ಇಷ್ಟ. ಈ ಪೂಜೆಗೆ ಮನ ಅರಿವಿನ ತನುವನ್ನೇ ಬಳಕೆ ಮಾಡಿಕೊಳ್ಳುತ್ತದೆ. ಕಡಿದು ಬಡಿದು ಕೊಂದು ರಕ್ತಧಾರೆ ಹರಿಸಿ ಪೂಜಿಸುವುದು, ಅರಳಿನಿಂತ ಪ್ರಕೃತಿಯನ್ನೇ ಪೂಜಿಸುವ ಹೂಗಳ ಕತ್ತು ಕೊಯ್ದು ತಂದು ಕ್ಷುದ್ರ ದೇವತೆಗೆ ಅರ್ಪಿಸುವುದು ಕೋಪಿ ಪಾಪಿಯ ಮನದ ತನುಗಳು ಮಾಡುವ ಪೂಜೆ.

ಶರಣ ಮಾದಾರ ಚೆನ್ನಯ್ಯ ರುಚಿಯ ನಿಯಮದ ಪೂಜೆಯನು ಮಾಡಿದಾತ. ಅರಿವಿನ ಶಿವನಿಗೆ ಅಂಬಲಿಯ ನೈವೇದ್ಯ ಮಾಡಿ ಉಣ ಬಡಿಸಿದಾತ.

ಡೋಹರ ಕಕ್ಕಯ್ಯ ಪ್ರಸಾದದ ನಿಯಮದಾತ. ನೋಡುವ ಅಜ್ಞಾ ನದ ನೋಟವನ್ನು, ಕೇಳುವ ಅಜ್ಞಾನದ ಶಬ್ದವನ್ನು, ಸ್ಪರ್ಶಿಸಿ, ರುಚಿಸಿ, ಮೂಸಿಸುವ ಅಜ್ಞಾನದ ದುರ್ಗಂಧವನ್ನೇ ಪ್ರಸಾದ ಮಾಡಿ ಉಂಡಾತ. ಅರಿವಿನ ಪರಿಮಳವನ್ನು ಲಿಂಗಯ್ಯನಿಗೆ ಧಾರೆ ಎರೆದು ಅಗೋಚರ ಆಚಾರದಿಂದ ಪೂಜಿಸಿದಾತ.

ಮಡಿವಾಳ ಮಾಚಯ್ಯ ಮನದ ಮೈಲಿಗೆಯನ್ನು ತೊಳೆದು ಪೂಜಿಸಿದಾತ. ಇವರು ತನುವಿನಲ್ಲಿಯೇ ವಾಸಿಸುವ ಅರಿವೆಂಬ ದೇವರಿಗೆ ತನುವಿನೊಂದಿಗೆ ಆಪತ್ತು ತಂದೊಡ್ಡುವ, ಕೋಪಿ ಪಾಪಿ ಮನವನ್ನು ಅರಿತ ಶರಣರು. ಇವರು ಗೋಚರದ ಪೂಜೆಯನ್ನು ಅರಿಯರು. ಮಜ್ಜನಕ್ಕೆರೆದು ಹೂವನೇರಿಸಿ ಪೂಜಿಸುವುದಿಲ್ಲ. ಅಗೋಚರದ ಆಚಾರವೇ ಇವರ ಪೂಜೆ !

650

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ ;
ಅವರಾರಾಧನೆ ದಂಡ !
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ
ಕೂಡಲಸಂಗಮದೇವ, ಭೂಭಾರಕರ !

ನಿತ್ಯ ನಿತ್ಯ ಪಾಪಕ್ಕೆ ಗುರಿಯಾಗುವುದು, ಪ್ರಾಯಶ್ಚಿತ್ತಕ್ಕಾಗಿ ದೇವರಲ್ಲಿ ಮೊರೆ ಹೋಗುವುದು ಇದು ಒಂದು ಧರ್ಮದ ಕೆಲಸ. ಅದನ್ನೆ ಧರ್ಮವೆಂದು ಬಲವಾಗಿ ನಂಬಿದ ಮನದ ತನುಗಳ

ಕೆಲಸ.

''ಪುಣ್ಯ ಪಾಪವೆಂಬುದು ತಮ್ಮ ಇಷ್ಟವು ಕಂಡಿರೆ : 'ಅಯ್ಯಾ' ಎಂದರೆ ಸ್ವರ್ಗ: 'ಎಲವೊ'ಎಂದರೆ ನರಕ ! ' ದೇವಾ, ಭಕ್ತ, ಜಯಾಜೀಯಾ 'ಎಂಬ ನುಡಿಯೊಳಗೆ ಕೈಲಾಸಮೈದುವುದೆ ಕೂಡಲ ಸಂಗಮದೇವಾ ''

ಪುಣ್ಯವೆಂಬುದು ಒಂದು ಶಬ್ದ. ಅದು ಮನಕ್ಕೆ ಇಷ್ಟ. 'ಅಯ್ಯಾ' ಎನ್ನುವ ಶಬ್ದಕ್ಕೆ ಮನ ಸ್ವರ್ಗವೆಂದು ಕಲ್ಪಿಸಿಕೊಂಡಿದೆ. 'ಎಲವೊ' ಎನ್ನುವ ಶಬ್ದಕ್ಕೆ ಮನ ನರಕವೆಂದು ಕಲ್ಪಿಸಿಕೊಂಡಿದೆ. ' ದೇವಾ, ಭಕ್ತ, ಜಯಾ ಜೀಯಾ ' ಎನ್ನುವ ನುಡಿ ಯೊಳಗೆ ಕೈಲಾಸವಿದೆಯಾ ? ಹಾಗೆ ನುಡಿದರೆ ಆತ ಕೈಲಾಸಕ್ಕೆ ಹೋಗುವನೆ ?

ಎಲವೊ ಎನ್ನುವ ಶಬ್ದ ಕೇಳಿದ ತನು ಪಾಪದ್ದೊ, ನುಡಿದ ತನು ಪಾಪದ್ದೊ ? ನುಡಿದ ತನು ಕೋಪದಿಂದ ನುಡಿಯಿತು. ಕೇಳಿದ ತನು ಅಜ್ಞಾನದಿಂದ ಕೇಳಿ ಕೆರಳಿತು. ಎರಡು ತನುಗಳಲ್ಲಿ ಒಂದು ತನು ಕೂಡಾ ಅರಳಲಿಲ್ಲವೆಂದ ಮೇಲೆ ಇವರು ಆಚರಿಸುವ ಆರಾಧನೆಗಳು ದಂಡ ! ನುಡಿದು ಪ್ರಾಯಶ್ಚಿತ್ತ ಅನುಭವಿಸಿತು ; ಕೇಳಿ ಪ್ರಾಯಶ್ಚಿತ್ತ ಅನುಭವಿಸಿತು. ಇವರಿಬ್ಬರೂ ಭೂಭಾರಕರು ; ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಇವರಿಬ್ಬರನೂ ಒಲ್ಲ!

651

ನೂರನೋದಿ ನೂರ ಕೇಳಿದಡೇನು ?
ಆಸೆ ಹರಿಯದು, ರೋಷ ಬಿಡದು.
ಮಜ್ಜನಕ್ಕೆರೆದು ಫಲವೇನು ?
ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ.

ನೂರನೋದಿ ನೂರ ಕೇಳಿದಡೇನು ? ಆಸೆ ಹರಿಯದು, ರೋಷ ಬಿಡದು :

ನೂರಾರು ಪುಸ್ತಕಗಳನ್ನು ಓದಿದಡೇನು ? ನೂರಾರು ಉಪನ್ಯಾಸಗಳನ್ನು ಕೇಳಿದಡೇನು ? ತನುವನ್ನು ಆವರಿಸಿಕೊಂಡ ಮನದ ಆಸೆ ಹರಿಯದು ; ಅದರ ರೋಷವೂ ಬಿಡದು. ಓದಿದ ಪುಸ್ತಕಗಳು ಸಂಗ್ರಹವಾಗಿ ಓದಿದೆನೆಂಬ ಅಹಂಕಾರ ಮನೆ ಮಾಡಿಕೊಂಡು ಓದುವ ಆಸೆ ಇಮ್ಮಡಿಗೊಂಡಿತು. ಆಸೆ ಆಮಿಷ ರೋಷ ಬಿಡುವ ನೂರಾರು ಉಪನ್ಯಾಸಗಳನ್ನು ಕೇಳಿದರೇನು ಅದೆಲ್ಲಾ ಕೇಳುವ ಕಿವಿಯಲ್ಲಿ ಸಂಗ್ರಹ ವಾಗುತ್ತದೆ. ಆದರೆ ತನುವನ್ನು ಆವರಿಸಿದ ಮನದ ರೋಷ ತೊಲಗುವುದಿಲ್ಲ.

ಮನ ಅರಿತರೆ ತನುವೇ ಒಂದು ಬೃಹದ್ ಗ್ರಂಥಾಲಯ. ಸಕಲ ಗ್ರಂಥಗಳಿಗೂ ತನು ಜನ್ಮ ನೀಡಿದೆ. ಓದಿದ ಗ್ರಂಥಗಳೆಲ್ಲ ತನುವಿನಿಂದಲೇ ಬಂದ ಕಾರಣ ತನುವು ಅವುಗಳನ್ನು ಸಂಗ್ರಹಿಸಿಕೊಳ್ಳುವುದಿಲ್ಲ. ಮನ ಸಾಧ್ಯವಾದಷ್ಟು ಸಂಗ್ರಹಿಸಿಕೊಂಡು ಆಸೆಯಿಂದ ಮತ್ತೆ ಮತ್ತೆ ಓದುತ್ತದೆ. ಮನದ ಅಹಂಕಾರ ದ್ವಿಗುಣಗೊಂಡು ಪುಸ್ತಕದ ಉದಾಹರಣೆಗಳೇ ಮನದಲ್ಲಿ ಮನೆ ಮಾಡುತ್ತವೆ. ಪುಸ್ತಕಗಳ ತವರು ತನುವೆಂಬುದನ್ನೆ ಮನ ಮರೆಯುತ್ತದೆ.

ಮಜ್ಜನಕ್ಕೆರೆದು ಫಲವೇನು ? ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ ನಗುವ

ನಮ್ಮ ಕೂಡಲಸಂಗಮದೇವ :

ಅಂಗದ ಮೇಲೆ ಲಿಂಗ ಕಟ್ಟಿಕೊಂಡು ನಿತ್ಯ ನಿತ್ಯ ಮಜ್ಜನಕ್ಕೆರೆದು ಪೂಜಿಸಿದರೆ ಫಲವಿಲ್ಲ. ಎರೆದರೆ ನೆನೆಯದ ಮರೆತರೆ ಬಾಡದ ಲಿಂಗಕ್ಕೆರೆದರೂ ಫಲವಿಲ್ಲ. ಎರೆದರೆ ನೆನೆಯುವ, ಮರೆತರೆ ಬಾಡುವ ಸರ್ವಾಂಗದಲ್ಲಿ ಸಮರಸವಾಗಿ ಬೆರೆತ ಅರಿವೆಂಬ ಲಿಂಗ ವಾಸಮಾಡಿದ ಅಂಗಕ್ಕೆ ಎರೆದರೆ ನೆನೆದು ಅರಳುತ್ತದೆ. ಎರೆಯುವುದು ಮರೆತರೆ ಬಾಡುತ್ತದೆ. ಅಂಗದಲ್ಲಿಯೇ ವಾಸ ಮಾಡಿದ ಅರಿವಿನ ಸಂಗಯ್ಯನನ್ನು ಅರಿಯದ ಡೊಂಬ ಮನವನ್ನು ನೋಡಿ ನಗುವನು !

652

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.
ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವವರ ಮೆಚ್ಚ ಕೂಡಲಸಂಗಮದೇವ.

ತಂದೆಯ ಕೋಪ ಮಗ ಮಾಡಿದ ತಪ್ಪಿಗೆ ಹೊರತು ಮಗನ ಪ್ರಾಣಕ್ಕೆ ಅಲ್ಲ. ಲಿಂಗವಂತ, ಲಿಂಗವಂತನ ಅವಗುಣಕ್ಕೆ ಮುನಿಯುವನಲ್ಲದೆ ಅವನು ಕಟ್ಟಿಕೊಂಡ ಲಾಂಛನಕ್ಕಲ್ಲ.

ಲಿಂಗಭಕ್ತನು ಲಿಂಗಪಥವ ಹೇಳಿದಡೆ ಮತ್ಸರ ಪಡುವವರ ಮೆಚ್ಚ ನಮ್ಮ ಕೂಡಲಸಂಗಮದೇವ:

ಮಗ ತಪ್ಪು ಮಾಡಲು ಕಾರಣವೇನೆಂದು ತಂದೆ ಅರಿಯ. ಮತ್ತೊಮ್ಮೆ ತಪ್ಪು ಮಾಡದಿರಲು ಸಲಹೆ ಮಾಡುತ್ತಾನೆ. ಮಗ ಮತ್ತೆ ತಪ್ಪು ಮಾಡುತ್ತಾನೆ. ತಂದೆ ಮತ್ತೆ ಮತ್ತೆ ಸಲಹೆ ನೀಡುತ್ತಾನೆ. ಮಗ ತಂದೆಯಾಗುವವರೆಗೂ ಮಗನ ತಪ್ಪು ನಿರಂತರ ನಡೆಯುತ್ತದೆ.

ಲಿಂಗ ಕಟ್ಟಿಕೊಂಡರೇನು ? ಮನ ತನುವನ್ನು ಹಿಡಿದು ಅವಗುಣಗಳಿಂದ ಬೀಗುತ್ತದೆ. ಲಿಂಗ ಕಟ್ಟಿಕೊಂಡವ ಲಿಂಗಕ್ಕೆ ಮುನಿಯ ; ಅವಗುಣಕ್ಕೆ ಮುನಿಯುತ್ತಾನೆ. ಮನ ಗುಣ ಅವಗುಣದ ಮಾಲೀಕ !

ಇವರಿಬ್ಬರದೂ ನಿರಂತರ ನಡೆಯುವ ಕ್ರಿಯೆ. ತನುವಿರುವವರೆಗೂ ಇದು ನಡೆಯುತ್ತದೆ.

ಲಿಂಗಭಕ್ತನ ಕೆಲಸವೇ ಬೇರೆ : ತನುವಿರುವುದರೊಳಗಾಗಿ ಮನದ ತಪ್ಪನ್ನು ಅರಿತು ಅರಿವಿನ ಆಚರಣೆಯಲ್ಲಿ ತೊಡಗುವ ಶಾಶ್ವತ ಪಥವನ್ನು ಮನಕ್ಕೆ ಸೂಚಿಸುತ್ತಾನೆ. ಲಿಂಗಭಕ್ತನೆಂದರೆ ಅರಿವಿಗೆ ಭಕ್ತನಾದವನು. ಅರಿವಿನ ಹಾದಿಯನ್ನು ತನುವಿನಲ್ಲಿಯೇ ಕಂಡುಕೊಂಡು ಅದರ ಸುಖವನುಂಡವನು. ಇಂತಹ ಲಿಂಗ ಭಕ್ತರನ್ನು ಮತ್ಸರದಿಂದ ಕಾಣುವ ಕುತ್ಸಿತ ಬುದ್ಧಿಯುಳ್ಳ ಮನದ ತನುಗಳನ್ನು ಅರಿವಿನ ಸಂಗಯ್ಯ ಮೆಚ್ಚುವುದಿಲ್ಲ. ಮತ್ಸರದ ತನುಗಳನ್ನು ತನುಗಳಲ್ಲಿಯೇ ಸುಟ್ಟು ಬೂದಿ ಮಾಡುತ್ತಾನೆ.

653

ಗುರೂಪದೇಶ ಮಂತ್ರ ವೈದ್ಯ ; ಜಂಗಮೋಪದೇಶ ಶಸ್ತ್ರವೈದ್ಯ ನೋಡಾ.
ಭವರೋಗವ ಕಳೆವ ಪರಿಯ ನೋಡಾ
ಕೂಡಲಸಂಗನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ !

ಗುರುವು ಕಣ್ಣು ಕಿವಿ ಮೂಗು ನಾಲಿಗೆ ಮತ್ತು ಚರ್ಮಕ್ಕೆ ಅರಿವಿನ ಮಾತಿನ ಔಷಧೋಪಚಾರ ಮಾಡಿ ತನುವಿನ ರೋಗ ಕಳೆಯುತ್ತಾನೆ. ಈತನನ್ನು ಗುರುದೇವ ಎಂದು ಕರೆಯುತ್ತಾರೆ.

ಜಂಗಮ ಕಣ್ಣಿನ ಅಜ್ಞಾನದ ಪೊರೆಯನ್ನು ಶಸ್ತ್ರ ಚಿಕಿತ್ಸೆಯಿಂದ ಕಳೆಯುತ್ತಾನೆ. ಕಿವಿಯ ಅಜ್ಞಾನದ ಶಬ್ದದ ಪೊರೆಯನ್ನು, ನಾಲಿಗೆಯ ರುಚಿಯ ಅಜ್ಞಾನದ ಪೊರೆಯನ್ನು ಮೂಗು ಮತ್ತು ಚರ್ಮದ ಅಜ್ಞಾನದ ಪೊರೆಯನ್ನು ಶಸ್ತ್ರಚಿಕಿತ್ಸೆ ಯಿಂದ ಕತ್ತರಿಸಿ ತೆಗೆಯುತ್ತಾನೆ. ಇವರಿಬ್ಬರೂ ಭವರೋಗ ಕಳೆವ ವೈದ್ಯರು.

ಕೂಡಲಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ:

ಅಂಗ 'ದಲ್ಲಿಯೇ ಸಂಗಮವಾದ ಅರಿವನ್ನು ಮನ ದಿಂದಲೇ ಪಡೆಯುವ ಬಗೆಯನ್ನು ಗುರುವಿನ ಷಡಕ್ಷರ ಮಂತ್ರವೆಂಬ ದಿವ್ಯ ಔಷಧಿಯಿಂದ ಅರಿತವರು. ತನುವಿನ ಅಜ್ಞಾನದ ಐದು ಪೊರೆಗಳನ್ನು ಜಂಗಮನ ಶಸ್ತ್ರ ವೈದ್ಯದಿಂದ ಕಳೆದುಕೊಂಡು ಜಂಗಮವೇ ತಾವಾದವರು.

ಗುರುವು ತಾವೇ, ಜಂಗಮವೂ ತಾವೇ, ಲಿಂಗವೂ ತಾವೇ ಆಗಿ ಗುರು ಲಿಂಗ ಜಂಗಮವೇ ತಾವಾದ ಭವರೋಗದ ವೈದ್ಯರು. ಇಂತಹ ಶರಣರು ಸರ್ವ ತನುಗಳ ಮನದ ಮೈಲಿಗೆಯನ್ನು ಮಡಿವಾಳನಂತೆ ತೊಳೆಯುವ ಕಾಯಕದಲ್ಲಿ ನಿರತರಾದವರು.

ಶರಣರು ಆಯಾ ತನುಗಳ ಮನದ ಮೈಲಿಗೆಯನ್ನು ಗುರುವಾಗಿ ಷಡಕ್ಷರಿ ಮಂತ್ರದ ಮೂಲಕ ಔಷಧ ಲೇಪಿಸಿ ಮೈಲಿಗೆಯನ್ನು ತೊಳೆಯುತ್ತಾರೆ. ಮಂತ್ರ ದಿಂದ ರೋಗ ಹರಿಯದಿದ್ದರೆ ಜಂಗಮನಾಗಿ ಶಸ್ತ್ರ ಚಿಕಿತ್ಸೆಯ ಮೂಲಕ ಅಜ್ಞಾನದ ಪೊರೆಯನ್ನು ಕತ್ತರಿಸುತ್ತಾರೆ.

654

ಕೇಳಿರೆ ಕೇಳಿರೆ ಹಿರಿಯರು ಗುರುವಿನುಪದೇಶವನು.
ಒಂದು ಗೀಜಗನ ಉಪದೇಶದಿಂದೆ
ಪೌಲಸ್ಯನಂದು ಹಡೆಯನೆ ದಶಮುಖನ ?
ಶಿರವ ಹರಿದಿಕ್ಕೆ ಪರಮನಿದ್ದೆಡೆಯು ಕಾಣದೇನಿಳೆಯಲ್ಲಿ?
ಕರುಳ ತಂತಿಯುಪದೇಶದಿಂದೆ
ಅಸುರನಂದು ಹಡೆಯನೆ ಸುರಪದವ ?
ತರುಣೆ ಹರಣೆಯುಪದೇಶದಿಂದೆ ಗತಿಪಥ ಮುಕ್ತಿಯ ಪಡೆದು
ಬಟ್ಟೆಯ ಹತ್ತನೆ ವಿನಾಶಕ್ತಿರಾಯನು ?
ರಂಭೆಯುಪದೇಶದಿಂದೆ

ಶಂಭುವಿನೋಲಗದಲ್ಲಿ ಕುಳ್ಳಿರನೆ ಶ್ವೇತನು ?
ನಮ್ಮ ಕೂಡಲಸಂಗನ ಶರಣರ ಉಪದೇಶವ ಕೇಳಿದವರಿಗೆ
ದುರಿತ ಪಾಪಂಗಳು ಬಿಟ್ಟು ಹೋಗಿ
ಮನ ನಿರತರಾಗಿಪ್ಪರು ಲಿಂಗದಲ್ಲಿ.

ಗೀಜಗನ ಉಪದೇಶದಿಂದ ಪುಲಸ್ತ್ಯ ರಾವಣನನ್ನು ಪಡೆದ. ರಾವಣ ಕೋತಿಯ ಕರುಳಿನ ನಾದ ಕೇಳಿ, ಕರುಳ ತಂತಿಯ ಮಾಡಿ ಶಿವನ ಕೃಪೆಗೆ ಪಾತ್ರನಾದ. ಜಿಂಕೆಯ ಉಪದೇಶದಿಂದ ವಿನಾಶಕ್ತಿರಾಯ ಶಿವನ ಕೃಪೆಯಿಂದ ಶಾಪ ವಿಮೋಚನೆ ಪಡೆದ. ಶ್ವೇತ ರಂಭೆಯ ಉಪದೇಶದಿಂದ ಜ್ಞಾನ ಪಡೆದು ಶಂಭುವಿನ ಓಲಗದಲ್ಲಿ ಸ್ಥಾನ ಪಡೆದ. ಈ ನಾಲ್ಕೂ ಕತೆಗಳಲ್ಲಿ ಬರುವ ಪಾತ್ರಗಳು ಬೆಟ್ಟದನಿತಪರಾಧವನ್ನು ಮಾಡಿದಾಗ್ಯೂ ಜ್ಞಾನೋದಯವಾದರೆ ಸಾಕು ಒಂದು ಬೊಟ್ಟಿಲೆ ತೊಡೆವ ಎನ್ನುವ ಮಹತ್ವಕ್ಕಾಗಿ ಹೇಳಿದವುಗಳಾಗಿವೆ.

ಅಂಗುಲಿಮಾಲ ಒಂದು ಸಾವಿರ ಕೊಲೆಗಳನ್ನು ಮಾಡಿದ್ದರೂ ಬುದ್ಧನ ದರ್ಶನದಿಂದಾಗಿ ತನ್ನರಿವಿಗೆ ಹೋಗಲು ಸಾಧ್ಯವಾಯಿತು. ಅಂಗುಲಿಮಾಲ ಕೂಡ ಬುದ್ಧನಾಗಲು ಸಾಧ್ಯವಾಯಿತು.

ಕನ್ನಮಾರಿ ಮಾರಯ್ಯ, ಸೂಳೆ ಸಂಕವ್ವೆ, ಉರಿಲಿಂಗ ಪೆದ್ದಿಗಳನ್ನು ಉದಾಹರಿಸಬಹುದಾಗಿದೆ.

655

ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ
ಆಚಾರ ಶಿವಾಚಾರ ತಮತಮಗೆ ಸೂರೆಯೆ,
ಕೂಡಲಸಂಗಮದೇವನ ನೆರೆ ಪೂಜಿಸಿದವಂಗಲ್ಲದೆ ?

ಭ್ರಮೆ ಬಿಟ್ಟ ಮನ ಮಾತ್ರ ಬ್ರಹ್ಮನನ್ನು ಅರಿಯಬಲ್ಲದು, ಅರಿವಿನ ಚಿಂತೆ, ಅರಿವಿನ ಜ್ಞಾನ ಕತೆ ಕೇಳುವುದರಿಂದ ಬರುವುದಿಲ್ಲ. ವೇದ ಉಪ ನಿಷತ್ತುಗಳನ್ನು ಪಠಿಸಿ ಬೋಧಿಸುವುದರಿಂದಲೂ ಬರುವುದಿಲ್ಲ. ಅಗೋಚರದ ಆಚಾರದ ಮೂಲಕ ತಮತಮಗೆ ತಾವೇ ಕಂಡುಕೊಳ್ಳಬೇಕು.

ಗುರುದೇವನು ತನುವಿನಲ್ಲಿಯೇ ಜ್ಞಾನ ತನ್ಮಯವಾಗಿದೆಯೆಂದು ತೋರಿಸ ಬಲ್ಲನೆ ಹೊರತು ಕೊಡಲು ಬರುವುದಿಲ್ಲ. ಶಿಷ್ಯ ತೆಗೆದುಕೊಳ್ಳಲೂ ಬರುವುದಿಲ್ಲ. ಪುಸ್ತಕಗಳನ್ನು ಓದಿ ಪ್ರವಚನ ಕೇಳಿದರೂ ಬರುವುದಿಲ್ಲ. ಅವೆಲ್ಲ ರೋಗಗಳಾಗಿ ಪರಿಣಮಿಸಿ ದೇಹದ ಮೇಲೆ ಸವಾರಿ ಮಾಡುತ್ತವೆಯೇ ಹೊರತು ತನುವಿನಲ್ಲಿಯೇ ತನ್ಮಯವಾದ ಅರಿವು ಮನಕ್ಕೆ ಒಲಿಯುವುದಿಲ್ಲ.

'ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು. ತನ್ನ ತಾನರಿತ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು. ತನ್ನಿರುವಿನ ಆ ಅರಿವೆ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ ' ಎಂದು ಆದಯ್ಯ ಶರಣರು ಮನ ಅರಿವಿಗೆ ಹೋಗುವ ಸೂತ್ರವನ್ನು ಹೆಣೆದಿದ್ದಾರೆ.

ಅಂಗದಲ್ಲಿಯೇ ಅರಿವು ನೆಲೆಸಿದೆ. ಅಂಗಕ್ಕೆ ಮನ ಆವರಿಸಿದೆ. ಅರಿವಿನ ನೆಲೆ ಕಂಡುಕೊಂಡ ಮನ ಮಾತ್ರ ಘನಮನವಾಗಬಲ್ಲದು.

656

ಶ್ವಪಚನಾದಡೇನು ? ಲಿಂಗಭಕ್ತನೆ ಕುಲಜನು.
ನಂಬಿ ನಂಬದಿದ್ದಡೆ ಸಂದೇಹಿ, ನೋಡಾ,
ಕಟ್ಟಿದಡೇನು, ಮುಟ್ಟಿದಡೇನು, ಹೂಸಿದಡೇನು ಮನ ಮುಟ್ಟದನ್ನಕ್ಕ?
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು,
ಕೂಡಲಸಂಗಮದೇವ ನೊಲಿದನಂಗಲ್ಲದೆ.

ತನುವಿಗೆ ಜಾತಿ ದೇಶ ಹೆಣ್ಣು ಗಂಡು ಶ್ರೀಮಂತ ಬಡವ, ಅಧಿಕಾರಿ, ಜವಾನ ಎನ್ನುವ ಭ್ರಮೆ ಆವರಿಸಿಕೊಂಡಿದೆ. ತನು ಯಾವುದಾದರೇನು ? ತನುವಿನಲ್ಲಿಯೇ ತನ್ಮಯವಾದ ಅರಿವಿನ ನೆಲೆ ಬಲ್ಲ ಮನದ ತನುವೆ ಕುಲಜ ತನು ! ಅರಿವನ್ನು ನಂಬಿ ನಂಬದಿದ್ದಡೆ ಅದು ಸಂದೇಹಿ ಮನದ ತನು.

ಅಂಗದ ಮೇಲೆ ಲಿಂಗ ಕಟ್ಟಿದಡೇನು ತನು ಮತ್ತೊಂದು ತನುವನ್ನು ಮುಟ್ಟಿದಡೇನು, ಅಂಗಕ್ಕೆ ವಿಭೂತಿ ಹೂಸಿದಡೇನು, ಮನ ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಮುಟ್ಟದನ್ನಕ್ಕ ?

ಭಾವ ದುರ್ಭಾವಗಳು ಕಳೆದು ನಿರ್ಭಾವ ಪರಿಚಯವಾಗದ ಮನಕ್ಕೆ ಅರಿವು ನೆಲೆಗೊಳ್ಳದು. ಮನವೆಂಬ ನಲ್ಲೆಗೆ ಅಂಗದಲ್ಲಿಯೇ ಸಂಗಮವಾದ ಅರಿವಿನ ನಲ್ಲ ಪರಿಚಯವಾಗದನ್ನಕ್ಕ ಆಕೆ ಕುಲಜಳಾಗಳು.

657

ಅವರ ನಡೆಯೊಂದು ನುಡಿಯೊಂದಾದಡೆ
ಶಿವಾಚಾರಕ್ಕವರು ಸಲ್ಲರಯ್ಯಾ !
ಬಲ್ಲನು, ಸಾತ್ವಿಕರಲ್ಲದವರನೊಲ್ಲನು ;
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು,
ಪ್ರಪಂಚಿಯ ಮನವನೊಲ್ಲನು ಕೂಡಲಸಂಗಮದೇವನು.

ನಡೆಯೊಂದು ನುಡಿಯೊಂದಾದಡೆ ಆ ತನುವಿನ ಮನ ಶಿವಾಚಾರಕ್ಕೆ ಸಲ್ಲದು. ಮನದಲ್ಲಿ ಹುಟ್ಟಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನು ಬಲ್ಲನು. ಅರಿವಿನ ಸಂಗಯ್ಯ ಅಲ್ಲಿ ನಿಲ್ಲನು.

ಸಾತ್ವಿಕ ರಾಜಸ ತಾಮಸದ ಮನವನು ಬಲ್ಲನು. ಅದರ ಮೂರು ಗುಣಗಳನ್ನು ಬಲ್ಲನು. ಅಲ್ಲಿ ನಿಲ್ಲನು. ಸಾತ್ವಿಕ ಎನ್ನುವುದು ಕೂಡಾ ಮನದ ಗುಣಗಳಲ್ಲಿ ಒಂದು. ಸಾತ್ವಿಕ ಮನ ಆಚರಿಸುವ ಆಚಾರವು ಕೂಡಾ ಶಿವಾಚಾರವೇ ಆಗಿರುತ್ತದೆ. ಆದರೆ ತೋರಿಕೆಯದು. ಸಾತ್ವಿಕ ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು. ಅದು ಪ್ರಪಂಚಕ್ಕೆ ತೋರುವ ಸಾತ್ವಿಕ ಗುಣವಾದರೂ ಮನದ ಆಂತರಿಕ ದುರ್ಗುಣಗಳು ಹೋಗುವುದಿಲ್ಲ.ಅವರ ನಡೆ ತೋರಿಕೆಯ ಶಿವಾಚಾರದ ನಡೆ. ಅವರ ನುಡಿ ಪ್ರಪಂಚಿಗರನು ಮರಳು ಮಾಡುವ ನುಡಿ. ಅವರು ಶಿವಾಚಾರಕ್ಕೆ ಸಲ್ಲರು. ಅರಿವಿನ ಸಂಗಯ್ಯ

ಬಲ್ಲನು; ಅಲ್ಲಿ ನಿಲ್ಲನು !

658

ನಿಧಾನವನರಸಿಹೆನೆಂದು ಹೋದಡೆ, ವಿಘ್ನ ಬಪ್ಪುದು ಮಾಣ್ಬುದೆ?
ಸದಾಶಿವನೆಂದಡೆ ಬೆದರಟ್ಟಿ ಸುಡುವುದು ಮಾಣ್ಬುದೆ ?
ಹದುಳಿಗನಾಗಿ ಉಳಿದಡೆ ಪದವನೀವ, ಕಾಣಾ,
ಕೂಡಲಸಂಗಮದೇವಾ.

ಭೂಮಿಯಲ್ಲಿ ಹಿರಿಯರು ಸಂಪತ್ತು ಹೂತಿದ್ದಾರೆಂದು ಜ್ಯೋತಿಷಿಗಳು ಹೇಳಿದರೆ ಮನೆತುಂಬಾ ತೆಗ್ಗು ಅಗೆದು, ಆದಿವಾರ ಅಮವಾಸ್ಯೆ, ಗ್ರಹಣ ದಿನಗಳಲ್ಲಿ ವಾಮಾಚಾರದ ಕ್ರಿಯೆಗಳನ್ನು ಮಾಡಿ, ಪ್ರಾಣಿಬಲಿ, ಕುರಿಬಲಿ, ನರಬಲಿ ಕೊಡಲು ಹೇಸುವುದಿಲ್ಲ. ಏಕೆಂದರೆ ಹೂಳಿಟ್ಟ ಧನ ಪಡೆಯುವತ್ತ ತನುವಿನ ಗುರಿ ಇರುತ್ತದೆ.

ಆಚಾರದಲ್ಲಿ ಎಡವಟ್ಟಾಯಿತು ; ಸಂಪತ್ತು ಮುಂದಿನ ಜಾಗಕ್ಕೆ ಪಲ್ಲಟ ಗೊಂಡಿದೆ ಎಂದು ಹೇಳುವುದಕ್ಕೂ ಆಚಾರಿಗಳು ಹೇಸುವುದಿಲ್ಲ. ಹೂಳಿಟ್ಟ ನಿಧಿ ತೆಗೆಯಲು ಜೀವನ ಪರ್ಯಂತ ಇದ್ದ ಬಿದ್ದ ಆಸ್ತಿಯನ್ನು ವಾಮಾಚಾರಕ್ಕೆ ಕೂಲಿನಾಲಿಗೆ ಕಳೆದುಕೊಂಡು ಹಗಲಿರುಳು ಪರಿತಪಿಸ ಬೇಕಾಗುತ್ತದೆ. ಆದರೂ ನಿಧಿ ಸಿಗುವುದಿಲ್ಲ ; ಭೂಮಿ ಅಗೆಯುವುದು ಬಿಡುವುದಿಲ್ಲ. ಇದು ಭೂಮಿಯೊಳಗೆ ಹುಡುಕಲು ಹೋದ ತನುವಿಗೆ ಬರುವ ವಿಘ್ನ !

ಅಂಗದಲ್ಲಿ ಸಂಗಮವಾಗಿರುವ ಸಂಪತ್ತು ಅಂಗಕ್ಕೆ ದಕ್ಕುವುದಕ್ಕೆ ಅಂಗ ಅನೇಕ ವಿಘ್ನಗಳನ್ನು ಎದುರಿಸಬೇಕಾಗುತ್ತದೆ. ಅಂಗದ ಮೇಲೆ ಲಿಂಗ ಕಟ್ಟಿ ಕೊಂಡು ಹಗಲಿರುಳು ಪೂಜಿಸುವುದು, ಪುಣ್ಯ ಕ್ಷೇತ್ರಗಳನ್ನು ಸುತ್ತುವುದು, ಗಿಡ ಮರಗಳಿಗೆ ಪೂಜಿಸಿ, ಜಪತಪ ಮಾಡುವುದು, ಉಪವಾಸವಿದ್ದು ಆಯಾ ವಾರಗಳಲ್ಲಿ , ತಿಥಿ, ನಕ್ಷತ್ರ, ಅಮವಾಸ್ಯೆಯಂದು ದಾನ ಧರ್ಮ ಮಾಡುವುದು, ಜಂಗಮರಿಗೆ, ಬ್ರಾಹ್ಮಣರಿಗೆ ಭೋಜನ ಮಾಡಿಸುವುದು, ಮಂದಿರ ಮಸೀದಿ ಚರ್ಚ್‌ಗಳನ್ನು ಕಟ್ಟಿಸಿ ಪೂಜೆ ಪ್ರಾರ್ಥನೆ ಮಾಡುವುದು, ಭಗವದ್ಗೀತೆ, ಬೈಬಲ್, ವೇದ ಆಗಮಗಳನ್ನು, ಉಪನಿಷತ್ತುಗಳನ್ನು ಅಭ್ಯಾಸ ಮಾಡುವುದು, ಉತ್ತಮ ಗುರುಗಳಿಂದ ಶಿಷ್ಯತ್ವ ಪಡೆದು ಹಗಲಿರುಳೆನ್ನದೆ ಅವರ ಸೇವೆ ಮಾಡುವುದು. ಹೆಂಡತಿ ಮಕ್ಕಳನ್ನು ಬಿಟ್ಟು ಹಿಮಾಲಯಕ್ಕೆ ಹೋಗುವುದು, ಕಾವಿ ಹಾಕಿ ಸನ್ಯಾಸ ದೀಕ್ಷೆ ಪಡೆಯುವುದು, ಸತ್ಸಂಗದಲ್ಲಿ ನಿರಂತರ ಭಾಗಿಯಾಗುವುದು, ಆದರೂ ಅಂಗದಲ್ಲಿಯೇ ಹೂಳಿಟ್ಟ ಅರಿವು ಅಂಗಕ್ಕೆ ಒಲಿಯುವುದಿಲ್ಲ; ಅನೇಕ ವಿಘ್ನಗಳು ಬಂದೊದಗುತ್ತವೆ.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಹೂಳಿದ್ದ ಧನಕ್ಕಾಗಿ ಹಲವಾರು ಕ್ರಿಯೆಗಳನ್ನು ಅಂಗ ಹಿಡಿದು ಹೊರಗೆ ಹುಡುಕುತ್ತದೆಯೇ ಹೊರತು ಅಂಗದೊಳಗೆ ಹುಡುಕುವುದಿಲ್ಲ. ಕ್ರಿಯೆಗಳನ್ನು ಆಚಾರಗಳನ್ನು ಮಾಡುವುದರಲ್ಲಿದ್ದ ಸಂತೋಷ ಅರಿವಿನಿಂದ ಅಂಗದೊಳಗೆ ಹುಡುಕು ವುದರಲ್ಲಿ ಇಲ್ಲ. ಅರಿವೆ ಗುರು. ಆ ಗುರುದೇವನೇ ಮಹಾದೇವ. ಆ ಮಹಾದೇವನೆ ಸದಾಶಿವ. ಆ ಸದಾಶಿವನೇ ತಾನೆಂದು, ಸಾಕ್ಷಾತ್ ಪರಬ್ರಹ್ಮನೇ ತಾನೆಂದು ಅರಿವಿನಿಂದ ತಿಳಿಯುವ ಚಿಕ್ಕ ಕೆಲಸವನ್ನು ಮಾಡಲು ಮನಕ್ಕೆ ನೂರು ವರುಷಗಳೇ ಬೇಕಾಗುತ್ತದೆ. ಆದರೂ ಅಂಗದಲ್ಲಿಯೇ ಹೂಳಿಟ್ಟ ಅರಿವಿನ ನಿಧಿ ಮನಕ್ಕೆ ಸಿಕ್ಕರೆ ಸಿಗಬಹುದು ಇಲ್ಲದಿದ್ದರೆ ಇಲ್ಲ.

ಅಂಗಕ್ಕೆ ಆವರಿಸಿದ ಮನ ಅಂಗದಲ್ಲಿಯೇ ಹದುಳಿಗನಾಗಿದ್ದರೆ ಸ್ವ ಸ್ವರೂಪದ, ವಿರಾಟ ಸ್ವರೂಪದ ಪದವಿಯನಿತ್ತು ಕಾಯುತ್ತಾನೆ ಅರಿವಿನ ಸಂಗಮನಾಥ !

659

ಅಡಿಗಡಿಗೆ ದೇವರಾಣೆ ಅಡಿಗಡಿಗೆ ಭಕ್ತರಾಣೆ
ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ? ಹೊಲ್ಲ !
ಮುಂದೆ ಪಥಕ್ಕೆ ಸಲ್ಲರು
ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದಡೆ
ನಗುತಲಿರಿದು ಕೊಂಡಡೆ ಅಲಗು ನೆಡದಿಹುದೆ
ಕೂಡಲ ಸಂಗಮದೇವಾ.

ಮಾತನಾಡಿದರೆ ದೇವರಾಣೆ, ಭಕ್ತರಾಣೆ, ಗುರುವಿನಾಣೆ ಎಂದು ಆಣೆ ಇಟ್ಟು ತಾನು ಆಡಿದ ಮಾತು ಸತ್ಯ ಎಂದು ಯಾರಿಗೂ ನಂಬಿಸುವ ಅವಶ್ಯಕತೆಯಿಲ್ಲ . ದೇವರು, ಭಕ್ತ, ಗುರುವನ್ನು ಹೊರಗಿನವರೆಂದು ತಿಳಿಯುವುದು ಮೂರ್ಖತನ. ಅವರ ಮೇಲೆ ಆಣೆ ಇಟ್ಟು ಉಳಿದುಕೊಂಡೆನೆಂದು, ಮಾತಿನ ಮೇಲೆ ನಂಬಿಗೆ ಬರುವಂತೆ ನುಡಿದೆನೆಂದು ತಿಳಿಯುವುದು ಶತ ಮೂರ್ಖತನ. ಅದು ಸ್ವಯಂಕೃತ ಅಪರಾಧ.

ಅಂಗದಲ್ಲಿ ಸಂಗಮವಾದ ಅರಿವೇ ಗುರು. ಆ ಗುರುದೇವನೇ ಮಾಹದೇವ, ಸದಾಶಿವನೂ ಹೌದು. ಅಂಗಕ್ಕೆ ಆವರಿಸಿದ ಮನವೇ ಭಕ್ತ ! ತಿಳಿಯದ್ದಕ್ಕಾಗಿ ಮನ ತಾನು ಆಡಿದ ಮಾತು ಸತ್ಯವೆಂದು ನಂಬಿಸಲು ದೇವರ ಮೇಲೆ, ಭಕ್ತನ ಮೇಲೆ, ಗುರವಿನ ಮೇಲೆ ಆಣೆ ಇಟ್ಟು ನುಡಿಯುತ್ತದೆ.

ಮುಂದೆ ಪಥಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದಡೆ ನಗುತಲಿರಿದು ಕೊಂಡಂತೆ !

ಅಂಗ ಅರಿವಿನ ಕುಲ. ಮನ ಅರಿಯದಿದ್ದಕ್ಕಾಗಿ ಮರೆವಿನ ಕುಲವಾಗಿದೆ. ಅರಿವನ್ನು ಅರಿಯುವುದಕ್ಕಾಗಿ ತನ್ನ ನೂರು ವರ್ಷಗಳನ್ನು ಕಳೆಯುತ್ತದೆ. ಆದರೂ ಮನಕ್ಕೆ ಅರಿವು ಒಲಿಯುವುದಿಲ್ಲ. ಇಂತಹ ಜಟಿಲ ಪರಿಸ್ಥಿತಿಯನ್ನಿಟ್ಟುಕೊಂಡು ಆಣೆ ಇಡುವುದು ಅರಿವಿನ ಹಾದಿಗೆ ಬೇಲಿ ಹಾಕಿದಂತೆ ! ಮನ ತನ್ನ ಮಾತಿನ ಕತ್ತಿಯಿಂದ ತಾನೇ ಹಿರಿದುಕೊಂಡಂತೆ! ಅರಿವಿನ ಸಂಗಯ್ಯ ಮನ ಆಡಿದ ಮಾತಿನಿಂದಲೇ ಮನವನ್ನು ಚುಚ್ಚಿ ಚುಚ್ಚಿ ತನು ಇರುವವರೆಗೆ ಬಾಧೆ ಕೊಡುತ್ತಾನೆ. ಮನಕ್ಕೆ ಇದು ಬೇಕೆ?

660

ಅರಗಿನ ಪುತ್ಥಳಿಯ ಉರಿಯ ನಾಲಗೆ ಹೊಯಿದು
ಮಾತನಾಡುವ ಸರಸ ಬೇಡ !
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚಲ್ಲವಾಡಿದಡೆ ಹಲ್ಲು ಹೋಹುದು!

ಕೂಡಲಸಂಗನ ಶರಣರೊಡನೆ ಸರಸವಾಡಿದಡೆ
ಅದು ವಿರಸ ಕಾಣಿರಯ್ಯ !

ಕಣ್ಣು ಮಾತನಾಡುವುದಿಲ್ಲ. ಕಿವಿ ಮಾತನಾಡುವುದಿಲ್ಲ. ಮೂಗು, ಚರ್ಮ ಮಾತನಾಡುವುದಿಲ್ಲ. ರುಚಿಯನ್ನು ಆನಂದದಿಂದ ಅನು ಭವಿಸುವ ನಾಲಗೆ ಕೂಡಾ ಮಾತನಾಡುವುದಿಲ್ಲ. ಇವೆಲ್ಲವುಗಳನ್ನೂ ದುರ್ಬಳಕೆ ಮಾಡಿಕೊಂಡ ಮನ ಬಾಯಿಂದ ನೋಡಿದೆನೆಂದು, ಕೇಳಿದೆನೆಂದು, ಮುಟ್ಟಿದೆನೆಂದು, ರುಚಿಸಿ ಮೂಸಿಸಿದೆನೆಂದು ಸುಳ್ಳು ಬೊಗಳು ತ್ತದೆ. ನೋಡಿದ ಕಣ್ಣು, ಕೇಳಿದ ಕಿವಿ, ಮುಟ್ಟಿದ ಚರ್ಮ, ರುಚಿಸಿದ ನಾಲಗೆ, ಮೂಸಿಸಿದ ಮೂಗು ಮಾತನಾಡಲಿಲ್ಲ. ಮನ ಬಾಯಿಯನ್ನು ಆವರಿಸಿ ಸುಳ್ಳು ನುಡಿಯಿತು. ಮಾತುಗೆಟ್ಟಲ್ಲದೆ ತಾನಾಗಬಾರದು. ಮಾತಿನಿಂದಲೇ ಬರುವುದು ಭವಭಾರಘೋರ !

ಕಣ್ಣು ಕಿವಿ ಮೂಗು ನಾಲಗೆ ಚರ್ಮ ಇವು ಅಂಗದ ಐದು ಜ್ಞಾನ ಲಿಂಗಗಳು. ಅಲ್ಲಿ ಸಂಗಮನಾಥ ವಾಸವಾಗಿದ್ದಾನೆ. ಮನವೆಂಬುದು ಅರಗಿನ ಪುತ್ಥಳಿ. ಐದು ಜ್ಞಾನಲಿಂಗಗಳ ಬೆಳಗಿನಿಂದಲೇ ಹುಟ್ಟಿದ ನೆರಳು.

ನಾನೇ ಬೆಳಗಿದೆನೆಂದು ನುಡಿದರೆ ಅದು ದಿಟವಾದೀತೆ? ಮೇಣದ ಬೊಂಬೆಗೆ ಉರಿಯುವ ನಾಲಿಗೆ ಜೋಡಿಸಿ ಮಾತನಾಡಿಸಿದಂತೆ! ಬೆಣ್ಣೆಯ ಬೆನಕನಿಗೆ ಕೆಂಡದ ಕಡಬು ನೈವೇದ್ಯ ಮಾಡಿದಂತೆ!

ಹೊರಗಿದ್ದಾನೆಂದು ಮನ ಮರೆತು ಮಾತನಾಡುವುದು ಅರಿವಿನ ತನುವಿಗೆ ಅಪಾಯ ತಂದುಕೊಂಡಂತೆ. ಕೂಡಲಸಂಗನ ಬಲ್ಲ ಶರಣರೊಂದಿಗೆ ಸರಸವಾಡಿದಡೆ ವಿರಸವಾಗುತ್ತದೆ. ವಿನಾಶಕ್ಕೆ ಗುರಿಯಾಗುತ್ತದೆ.

661

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲೆಯಾಡುವಂತೆ
ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದಡೆ,
ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ!

ಮಹಾಜ್ಞಾನಿಗಳೊಂದಿಗೆ ಮರೆತು ಮಾತನಾಡುವುದು ಹಾವಿನ ಹೆಡೆ ಹಿಡಿದು ಕೆನ್ನೆ ತುರಿಸಿಕೊಂಡಂತೆ, ಉರಿವ ಕೊಳ್ಳಿಯ ಹಿಡಿದು ತಲೆ ಕೂದಲ ಸಿಕ್ಕ ಬಿಡಿಸಿದಂತೆ, ಹುಲಿಯ ಮೀಸೆಯ ಹಿಡಿದು ಉಯ್ಯಾಲೆ ಯಾಡುವಂತೆ, ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

ಜ್ಞಾನಿಗಳೊಂದಿಗೆ ಮರೆತು ಮಾತನಾಡುವುದಕ್ಕಿಂತ ಮುಚ್ಚಿದ ಕಿವಿ ತೆರೆದು ಅವರ ಅನುಭಾವ ಕೇಳಬೇಕು. ಅಜ್ಞಾನಿ ಮನ ಜ್ಞಾನದೊಂದಿಗೆ ಬೆರೆಯುವ ಸೂತ್ರ ಹೇಳುವಾಗ ಶರಣರೊಂದಿಗೆ ಮಾತನಾಡಲು ಬಾಯಿತೆರೆದು ಏನು ಫಲ? ಕಿವಿಗೆ ಕೆಲಸ ಕೊಟ್ಟು ಬಾಯಿಗೆ ಬೀಗ ಹಾಕುವುದೇ ಲೇಸು.

662

ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡೆ ಉರಿವುದು ಮಾಣ್ಬುದೆ?
ಕಲ್ಲು ಗುಗ್ಗರಿಯ ಮೆಲಿದಡೆ ಹಲ್ಲು ಹೋಹುದು ಮಾಣ್ಬುದೆ?
ಶರಣರೊಡನೆ ಸರಸವಾಡಿದಡೆ ನರಕ ತಪ್ಪದು, ಕಾಣಾ,
ಕೂಡಲಸಂಗಮದೇವಾ!

ಶರಣರೊಂದಿಗೆ ಅನುಚಿತವಾಗಿ ವರ್ತಿಸಿದವನು ದುಃಖಕ್ಕೆ ಈಡಾಗುತ್ತಾನೆ. ಶರಣರಿಗೆ ಸುಖವಿಲ್ಲ ದುಃಖವಿಲ್ಲ. ಸುಖದುಃಖಗಳನ್ನು ದೂರೀಕರಿಸಿ ಶಾಶ್ವತ ಸುಖವನು ಉಂಡವರು. ಇದು ಸಾಮಾನ್ಯನಿಗೆ ಗೊತ್ತಾಗುವುದಿಲ್ಲ.

ಶಬ್ದದೊಂದಿಗೆ ಮಾತನಾಡಲು ಹೋದರೆ ಅವರು ಶಬ್ದ ನಿಃಶಬ್ದ ಮಾಡಿ ಶಬ್ದ ಕರಗಿಸಿ ಕೇಳುತ್ತಾರೆ. ಶಬ್ದದ ಆಡಂಬರದಲ್ಲಿ ಸಿಕ್ಕವನಿಗೆ ಶಬ್ದದಿಂದ ಗಾಯವಾಗುತ್ತದೆ; ಶಬ್ದದಿಂದಲೇ ಸುಖವಾಗುತ್ತದೆ. ಶರಣರು ಹಾಗಲ್ಲ. ಶಬ್ದ ಪ್ರಯೋಗ ಮಾಡಿದರೆ ಶರಣರು ಶಬ್ದವನ್ನು ನಪುಂಸಕವನ್ನಾಗಿಸಿ ಅರಿವಿನಿಂದ ಸ್ವೀಕರಿಸುತ್ತಾರೆ. ಶಬ್ದ ನುಡಿದವನಿಗೆ ಗಾಯವಾಗುತ್ತದೆ. ಶಬ್ದ ಕೇಳಿದ ಶರಣನಿಗೆ ಗಾಯವೂ ಆಗುವುದಿಲ್ಲ ಸುಖವೂ ಆಗುವುದಿಲ್ಲ. ಶಬ್ದ ಅನಾವರಣ ಮಾಡಿ ಸ್ವೀಕರಿಸುವ ಶಕ್ತಿ ಆತನಿಗಿದೆ.

ಶಬ್ದ ನುಡಿದವನನ್ನೇ ಸುಟ್ಟು ಗಾಯಮಾಡುತ್ತದೆ. ಕಾರಣ ಶರಣರೊಂದಿಗೆ ಮಾತನಾಡುವಾಗ ಎಚ್ಚರದಿಂದ ಮಾತನಾಡಬೇಕು. ಅವರು ನಿಶಬ್ದವೇದಿಗಳು.

663

ಕೋಣನ ಹೇರಿಂಗೆ ಕುನ್ನಿ ಬಸುಕುತ್ತಾ ಬಡುವಂತೆ
ತಾವು ನಂಬರು, ನಂಬುವರನೂ ನಂಬಲೀಯರು!
ತಾವು ಮಾಡರು, ಮಾಡುವರನೂ ಮಾಡಲೀಯರು!
ಮಾಡುವ ಭಕ್ತರ ಕಂಡು ಸೈರಿಸಲಾರದವರ,
ಕೂಗಿಡೆ, ಕೂಗಿಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವಾ.

ಅಂಗದಲ್ಲಿಯೇ ಅರಿವು ಸಂಗಮವಾಗಿದ್ದು ಅದನ್ನು ಶರಣರು ನಿತ್ಯ ನಿತ್ಯ ಮಾಡುವ ಸತ್ಸಂಗದ ಮೂಲಕವೇ ಕಂಡುಕೊಳ್ಳುತ್ತಾರೆ. ಇಂತಹ ಸತ್ಸಂಗದಲ್ಲಿ ಭಾಗಿಯಾದವರನ್ನು ಕಂಡು ನಾಯಿಯಂತೆ ಬುಸುಗುಡುವ ಜನರಿಂದ ಏನೂ ಸಾಧ್ಯವಾಗುವುದಿಲ್ಲ.

ತಾವೂ ನಂಬರು. ನಂಬುವ ಭಕ್ತರನ್ನು ನಂಬಲೀಯರು. ತಾವು ಅರಿವಿನ ಅಗೋಚರದ ಆಚಾರವನ್ನು ಮಾಡರು. ಮಾಡುವವರನ್ನೂ ಮಾಡಲೀಯರು. ಅಪಹಾಸ್ಯದ ಮಾತುಗಳನ್ನು ಆಡಿ ಜೊಲ್ಲು ಕಳೆದುಕೊಳ್ಳುವ ಕುನ್ನಿಗಳವರು.

ಶರಣರು ಹಿಮಾಲಯದಂತೆ ಅರಿವಿನ ಕಾಯಕದಲ್ಲಿ ಅತಿ ಎತ್ತರಕ್ಕೆ ಬೆಳೆದವರು. ಅವರ ಕುರಿತು ಅನುಚಿತವಾಗಿ ನುಡಿಯುವ ಕುನ್ನಿಗಳು ಗುಡ್ಡಕ್ಕೆ ಒದರಿದ ಗೂದಿನಾಯಂತೆ ಬಸವಳಿದು ಸಾಯುತ್ತಾರೆ. ನರಕಕ್ಕೆ ಭಾಜನರಾಗುತ್ತಾರೆ.

664

ಚೇಳಿಂಗೆ ಬಸುರಾಯಿತ್ತೆ ಕಡೆ, ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ!
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದಡೆ ಅದೇ ಕಡೆ,
ಕೂಡಲಸಂಗಮದೇವಾ.

ಪ್ರಪಂಚದಲ್ಲಿರುವ ಪ್ರತಿಯೊಂದು ತನುವೂ ಸುಖವನ್ನು ಹುಡುಕುತ್ತಲಿದೆ. ಸುಖಕ್ಕಾಗಿಯೇ ಅದು ಜನ್ಮ ತಳೆದಿದೆ. ತನು ಶಾಶ್ವತವಲ್ಲ. ಚೇಳು ಬಸುರಾದರೆ ತನುವನ್ನು ಸೀಳಿಕೊಂಡು ಮರಿಗಳನ್ನು ಹೊರ ಹಾಕಿ ಸಾಯುತ್ತದೆ. ಬಾಳೆ ಫಲಭರಿತ ಸಿಹಿಫಲಗಳನ್ನು ನೀಡಿ ದಂಟಿಗೆ ಇಂಬುಕೊಡದೆ ಸಾಯುತ್ತದೆ. ತನು ಕೂಡಾ ಹಾಗೆ. ಇದೇ ಜನ್ಮ ಕಡೆ. ಮನ ತನುವಿನಲ್ಲಿಯ ಅರಿವನ್ನು ಬಳಸಿಕೊಳ್ಳದೆ ಹೊರಗಿನ ಸುಖಕ್ಕಾಗಿ ಹಾತೊರೆದು ಸತ್ತರೆ ಅದೇ ಜನ್ಮ ಕಡೆ. ಅದು ಬಲು ಹೀನ ಜನ್ಮವೆಂದು ಮನವೇ ಅರಿಯಬೇಕು.

ರಣರಂಗದಲ್ಲಿ ಹೋರಾಡುವ ಸೈನಿಕ ಸೈನ್ಯ ನೋಡಿ ಹಿಮ್ಮೆಟ್ಟಿದರೆ ಅವನಿಗೆ ಅದೇ ಜನ್ಮ ಕಡೆ. ತನು ಮನಗಳೆರಡೂ ರಣರಂಗದಲ್ಲಿ ನಡೆದ ಯುದ್ಧದಂತೆ ಅರಿವಿನ ಸುಖ ಉಣ್ಣು ವುದಕ್ಕಾಗಿಯೇ ಹಗಲಿರುಳೂ ಹೋರಾಡಬೇಕು. ಅದನ್ನು ಪಡೆದು ತನಿವಿನಲ್ಲಿಯೇ ತನ್ಮಯವಾದ ಅರಿವಿನ ಸುಖ ಉಂಡು ಅಲ್ಲಿಯೇ ಲೀನವಾಗಬೇಕು.

665

ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗೆ ಉಣಬಾರದು;
ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು.
ಅಳಿಮನದಾಸೆಯವರ ಮೂಗ ಹಲುದೋರ ಕೊಯ್ವ,
ಕೂಡಲಸಂಗಮದೇವ.

ಅಂಗವನ್ನು ಆವರಿಸಿಕೊಂಡ ಮನವೆಂಬ ಸದೃಢ ಭಕ್ತನಿಗೆ ಮಾತ್ರ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಪೂಜಿಸಲು ಸಾಧ್ಯ. ಹುಲಿಯ ಹಾಲು ಹುಲಿ ಮರಿಗಳಿಗಲ್ಲದೆ ಜಿಂಕೆಯ ಮರಿಗಳಿಗೆ ಜೀರ್ಣವಾಗುವುದಿಲ್ಲ.

ಯುದ್ಧದಲ್ಲಿ ಗೆದ್ದ ಮಾಹಾಬಲಿಷ್ಟನಿಗೆ ಹಾಕುವ ವಿಜಯದ ಕಾಲು ಕಡಗ ಹೇಡಿಗೆ ಶೋಭಿಸುವುದಿಲ್ಲ.

ಅರಿವಿನ ಅಗೋಚರದ ಆಚಾರದಲ್ಲಿ ನಂಬಿಗೆಯುಳ್ಳ ಮನವೆಂಬ ಸದ್ಭಕ್ತನಿಗೆ ಮಾತ್ರ ಘನದ ಗಮ್ಯವನ್ನು ಸೇರಲು ಸಾಧ್ಯವೇ ಹೊರತು ಅಳಿಮನದವನಿಗೆ ಸಾಧ್ಯವಾಗುವುದಿಲ್ಲ. ಚಂಚಲ ಮನಕ್ಕೆ ಅರಿವಿನ ಕೃಪೆ ಆಗುವುದಿಲ್ಲ. ಘನ ಮನವೂ ಆಗುವುದಿಲ್ಲ.

666

ಅರ್ಥಪ್ರಾಣಭಿಮಾನ ನಿಮ್ಮದೆಂಬಿರಿ.

ಒತ್ತಿ ನೋಡಿದರೆ ಮುಟ್ಟಲೀಯರಿ.
ಮುಟ್ಟಬಂದಲ್ಲಿ ಕಠಾರಿಯ ಕಾಳಗವ ನೀವಾಡಿಸುವಿರಲ್ಲದೆ
ಲಿಂಗಜಂಗಮವಂತನಾಗಬಾರದು!
ಕೂಡಲಸಂಗಮದೇವಾ, ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯ.

ಅರ್ಥ ಪ್ರಾಣ ಅಭಿಮಾನವೆಂದರೆ ಏನೆಂದು ಬಲ್ಲ ಶರಣನಿಗೆ ಮಾತ್ರ ತಿಳಿಯುತ್ತದೆಯೇ ಹೊರತು ಉಳಿದ ತೋರಿಕೆಯ ಭಕ್ತರಿಗೆ ಅದು ತಿಳಿಯುವುದಿಲ್ಲ.

ಕರೆನ್ಸಿ ಮತ್ತು ಚಿನ್ನ ಪ್ರಾಣ ಮತ್ತು ಅಭಿಮಾನಕ್ಕಿಂತ ದೊಡ್ಡದಲ್ಲ. ಚಿನ್ನ ಮತ್ತು ಕರೆನ್ಸಿಯನ್ನು ಕಳುವು ಮಾಡಲು ಬಂದ ಕಳ್ಳನನ್ನು ಸಂಗ್ರಹ ಮಾಡಿದವನು ಪ್ರಾಣ ಪಣಕ್ಕಿಟ್ಟು ತಡೆಯುತ್ತಾನೆ. ಅದು ತನ್ನದೆಂಬ ಅಭಿಮಾನದಿಂದ ಹೋರಾಡುತ್ತಾನೆ. ಕಳುವು ಮಾಡಲು ಬಂದ ಕಳ್ಳ ಆತನ ಪ್ರಾಣ ಕಳೆದಾದರೂ ಅಭಿಮಾನ ಒತ್ತೆಯಿಟ್ಟು ದೋಚುತ್ತಾನೆ. ಇವರಿಬ್ಬರೂ ಅರ್ಥಕ್ಕಾಗಿಯೇ ಪ್ರಾಣವನ್ನು ಅಭಿಮಾನವನ್ನು ಮೀಸಲಿಟ್ಟವರು. ಒಬ್ಬ ಸಂಪತ್ತು ಸಂಗ್ರಹಿಸಿ ಶ್ರೀಮಂತನೆನಿಸಿಕೊಳ್ಳುತ್ತಾನೆ ಮತ್ತೊಬ್ಬ ಸಂಗ್ರಹಿಸಿದ ಸಂಪತ್ತು ದೋಚಿ ಕಳ್ಳನೆನ್ನಿಸಿಕೊಳ್ಳುತ್ತಾನೆ.

ಪ್ರಾಣಭಿಮಾನದ ಹಿತಕಾಯುವುದಕ್ಕಾಗಿಯೇ ದೇವರನ್ನು ಪ್ರಾರ್ಥಿಸುತ್ತಾರೆ. ಇವರಿಬ್ಬರೂ ಸಂಗ್ರಹಿಸಿ, ದೋಚಿದ ಸಂಪತ್ತಿನಿಂದ ನಿಮ್ಮದೆಂದು ದೇವರಿಗೆ ಕಿರೀಟ ಪಾದುಕೆಗಳನ್ನು ಮಾಡಿಸುತ್ತಾರೆ. ಇವರಿಬ್ಬರ ಆರಾಧನೆಯೇ ಸುಳ್ಳು. ಇವರಿಬ್ಬರ ಹೊರತಾಗಿ ಜ್ಞಾನಿಗೆ ಪೂಜೆ ಬೇಕಿಲ್ಲ! ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯ :

ಶ್ರೀಮಂತ ಕಳ್ಳ ಇವರಿಬ್ಬರೂ ದೇವರನ್ನು ಪೂಜಿಸುತ್ತಾರೆ ಆರಾಧಿಸುತ್ತಾರೆ. ಇವರು ವೇಷ ಡಂಭಕರು. ಸಂಪತ್ತಿಗಾಗಿ ಪ್ರಾಣವನ್ನು ಅಭಿ ಮಾನವನ್ನು ಪಣಕ್ಕಿಟ್ಟವರು. ಇವರಿಬ್ಬರಿಗೂ ಅರಿವಿನ ಸಂಗಯ್ಯ ಒಲಿಯುವುದಿಲ್ಲ!

667

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು,
ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು;
ಶಬ್ದಲೊಟ್ಟೆಯ ತನದಲ್ಲಿ ಎಂತಪ್ಪುದಯ್ಯಾ ಭಕ್ತಿ ,
ಪಾಪಿಯ ಕೂಸನೆತ್ತಿದಂತೆ,
ಕೂಡಲಸಂಗಮದೇವರ ಭಕ್ತಿ ,
ಅಳಿಮನದವರಿಗೆ ಅಳವಡದಯ್ಯ .

ಮನ ಭಕ್ತನಾಗಿ ಅರಿವಿನ ಅಲಗನ್ನಿಡಿದು ಅಜ್ಞಾನದೊಂದಿಗೆ ಯುದ್ಧ ಮಾಡಿ ಅರಿಷಡ್ವರ್ಗಗಳನ್ನು, ಅಷ್ಟಮದಗಳನ್ನು, ಸಪ್ತ ವ್ಯಸನಗಳನ್ನು ಜಯಿಸಿ ಮಹಾವೀರನಾಗಬೇಕು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗಾಗಿ ನುಡಿದ ನುಡಿ ಜಾರಿದಡೆ ಮನಕ್ಕೆ ಮನವೇ ನಾಚಬೇಕು.

ತಾನು ಭಕ್ತನೆಂದು ನುಡಿದ ನುಡಿಯಲ್ಲಿ ಭಕ್ತಿಯಿಲ್ಲ. ಅದು ಶಬ್ದದ ಬರಿ ಲೊಟ್ಟೆ. ತಾನು ವಿರಕ್ತನೆಂದು, ಸನ್ಯಾಸಿಯೆಂದು ನುಡಿದ ನುಡಿಯಲ್ಲಿ ಶಕ್ತಿಯಿಲ್ಲ ಅದು ಬರಿಲೊಟ್ಟೆ. ಅದು ತನಗೆ

ತಾನೇ ಪ್ರಮಾಣಿಸಿಕೊಂಡು ಪಡೆಯುವ ಸರ್ಟಿಫಿಕೇಟ್. ವೇಷ ನೋಡಿ ನುಡಿಯುವುದು ಶಬ್ದವಲ್ಲ; ವೇಷಧರಿಸಿ ನುಡಿಯುವುದೂ ಶಬ್ದ ಅಲ್ಲ. ನುಡಿದು ನಡೆಯಲಾಗದ ಹೇಸಿಮನ ವೇಷದ ಪಾಪಿಯು ಕೂಸನು ಎತ್ತಿಕೊಂಡಂತೆ. ಅಳಿಮನದ ತನುವಿಗೆ ಅಳವಡದ ಭಕ್ತಿ!

668

ಹರ ಬೀಜವಾದಡೆ ಹಂದೆ ತಾನಪ್ಪನೆ?
ಒರೆಗಟ್ಟಿ ಇರಿಯದವರ ಲೋಕ ಮೆಚ್ಚುವದೆ?
ಉಟ್ಟ ಚಲ್ಲಣ ಕೈಯ ಪಟ್ಟೆಯವಿಡಿದು,
ಗರುಡಿಯ ಕಟ್ಟಿ ಶ್ರವವ ಮಾಡುವಂತೆ
ತನ್ನ ತಪ್ಪಿಸಿಕೊಂಡಡೆ, ಶಿವ ಮೆಚ್ಚುವನೆ?
ಅರಿಯದವನಿಗೆ ಒಳ್ಳೆ ಹೆಡೆಯನೆತ್ತಿಯಾಡುವಂತೆ
ಬೊಳ್ಳೆಗನ ಭಕ್ತಿ , ಕೂಡಲಸಂಗಮದೇವಾ!

ಅಂಗ ಹರನ ಬೀಜದಿಂದ ಹುಟ್ಟಿದ ಸಂತಾನ. ಅದಕ್ಕಾಗಿಯೇ ಬಸವಣ್ಣನವರು ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯಾ ಎಂದು ಹಾಡಿದರು. ಹರ ಬೀಜವಾದಡೆ ಅಂಗವನ್ನು ಆವರಿಸಿದ ಮನ ಹೇಗೆ ಹೇಡಿಯಾಗುತ್ತದೆ. ಯಾವ ಅಂಗವೂ ಹೇಡಿಯಲ್ಲ. ಮನ ಅರಿವಿನೊಂದಿಗೆ ಬೆರೆತು ಅಜ್ಞಾನವನ್ನು ಇರಿಯುವುದು ಕಲಿಯಬೇಕು. ಗರುಡಿಯ ಕಟ್ಟಿ ಸಾಧನೆ ಮಾಡಬೇಕು.

ತನ್ನ ತಪ್ಪಿಸಿಕೊಂಡಡೆ ಶಿವ ಮೆಚ್ಚುವನೆ; ಚಪಲಕ್ಕಾಗಿ ಮನ ಒಡಲನ್ನು ತನ್ನಿಚ್ಛೆಯಂತೆ ಬಳಸಿಕೊಂಡಡೆ ಒಡಲೊಳಗಿದ್ದು ಒಡಲ ಸೋಂಕದೆ ಒಡಲ ಬೆಳಗುವ ಒಡಲೊಡೆಯ ಮೆಚ್ಚುವುದಿಲ್ಲ. ತನ್ನ ಅರಿವಿನ ಬಿಂದುವಿನಿಂದ ಹುಟ್ಟಿದ ಒಡಲ ರಕ್ಷಣೆಗಾಗಿ ಹಗಲಿರುಳು ಮನವನ್ನು ತನ್ನತ್ತ ಸೆಳೆದು ತನ್ನಂತೆ ಮಾಡಿಕೊಳ್ಳುತ್ತಾನೆ. ಹೇಡಿಯ ಕೈಯಲ್ಲಿ ಅರಿವಿನ ಖಡ್ಗ ಕೊಟ್ಟು ಅಜ್ಞಾನವನ್ನು ಹೊಡೆದೋಡಿಸಲು ಆಜ್ಞಾಪಿಸುತ್ತಾನೆ; ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನು!

669

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?
ಭಾಷೆ ತಪ್ಪಿದ ಬಳಿಕ ದೇವಾ, ಬಲ್ಲಿದ ಭಕ್ತನೇನ ಮಾಡುವನು?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯ ಹಾರಿದಡೆ
ಮೀಸಲನು ಸೊಣಗ ಮುಟ್ಟಿದಂತೆ,
ಕೂಡಲಸಂಗಮದೇವಾ!

ಹರಿತವಲ್ಲದ ಖಡ್ಗ ಅಂಗವನ್ನು ಸೀಳದು. ವಿಷ ತಪ್ಪಿದ ಹಾವು ಕಚ್ಚಿದರೆ ಗಾಯವಾಗಬಹುದು ಸಾವ ತರಲಾರದು. ಭಾಷೆ ತಪ್ಪಿದ ಭಕ್ತ ಏನು ಮಾಡಲೂ ಅರಿಯ.

ನಾಯಿ ಮೀಸಲ ಮುಟ್ಟಿದಂತೆ.

ಅಂಗದಲ್ಲಿ ಬಲವಿರುವಾಗಲೇ ಅಂಗದಲ್ಲಿಯೇ ಸಂಗಮವಾದ ಅರಿವಿನ ಸುಖವನ್ನು ಮನ ಉಣ್ಣಬೇಕು. ಆ ಸುಖವೆಂದರೇನೆಂದು ಮನ ಘನಮನವಾಗಿ ಅಂಗದ ಬಲವಿದ್ದಾಗಲೇ ತಿಳಿಯಬೇಕು. ಅಂಗ ಆಯುಷ್ಯ ಕಳೆದುಕೊಂಡು ಮೃತ್ಯುವನ್ನು ಸಮೀಪಿಸಿದಾಗ ಅದರ ಬಲವೇ ಕುಗ್ಗಿದಾಗ ಮೊನೆ ಕಳೆದುಕೊಂಡ ಅಲಗು ಕೈಯಲ್ಲಿ ಹಿಡಿದಂತೆ. ವಿಷ ಕಳೆದುಕೊಂಡ ಹಾವು ಬೆದರಿಕೆ ಒಡ್ಡಿದಂತೆ. ಭಾಷೆ ತಪ್ಪಿದ ಅಂಗ ಭಕ್ತನ ವೇಷ ಧರಿಸಿದಂತೆ! ನಾಯಿ ಮೀಸಲ ಅಡಿಗೆಯ ಮುಟ್ಟಿದಂತೆ!

ಯುದ್ಧದ ಹಲವಾರು ವರಸೆಗಳನ್ನು ಅರಿತ ಮನ ಮುಪ್ಪಿನ ಅವಸ್ಥೆಯಲ್ಲಿ ಜಂಬ ಕೊಚ್ಚಿಕೊಂಡಂತೆ. ಬಲಕುಗ್ಗಿದಾಗ ವೀರತನದ ಮಾತುಗಳು ಕೆಲಸಕ್ಕೆ ಬಾರವು. ಅಂಗಕ್ಕೆ ಅರಿವಿನ ಲಿಂಗಸುಖ ವೇದ್ಯವಾಗದು.

670

ಶರಣ ಸಂಬಂಧವನರಿದ ಬಳಿಕ
ಮರಳಿ ಭವಿಯ ಬೆರಸಲಾಗದು.
ಬ್ರಹ್ಮಹತ್ಯೆ , ಭ್ರೂಣಹತ್ಯೆ, ವೈತರಣಿ, ದುರ್ಗತಿ
ಪಂಚಮಹಾಪಾತಕದಿಂದಧಿಕ ನೋಡಾ!
ಅಳುಪಿ ಭವಿಯೊಡನುಂಡಡೆ, ಭಕ್ತನಲ್ಲ,
ಕೂಡಲಸಂಗಮದೇವಾ.

ತನು ಸತ್ಯವೂ ಶಿವಮಯವೂ ಸುಂದರವೂ ಆಗಿದೆ. ತನುವಿನಲ್ಲಿರುವ ಈ ಸಂಬಂಧವನ್ನು ತನುವನ್ನು ಆವರಿಸಿದ ಮನವು ಶರಣರ ಸಂಗ ಮಾಡಿ ಸತ್ಯದ ಜೊತೆಗೆ ಸಂಬಂಧ ಬೆಳೆಸುವ ಮಾರ್ಗವನ್ನು ಕಂಡು ಕೊಳ್ಳಬೇಕು.

ನಿತ್ಯ ಸತ್ಸಂಗದಲ್ಲಿ ಭಾಗವಹಿಸುವ ಭವಿ ಮನ ಹಂತ ಹಂತವಾಗಿ ಭಕ್ತನಾಗುತ್ತದೆ. ತನುವಿನಲ್ಲಿಯೇ ತನ್ಮಯವಾದ ಸತ್ಯವನ್ನು ಕಂಡುಕೊಳ್ಳುತ್ತದೆ.

ಸತ್ಯವೆಂದರೆ ಬ್ರಹ್ಮ. ಭ್ರಮೆಯಲ್ಲಿದ್ದ ಭವಿ ಮನ ಬ್ರಹ್ಮವೆಂದರೆ ಏನೆಂದು ಅರಿಯದೆ ನಿತ್ಯ ನಿತ್ಯ ಬ್ರಹ್ಮ ಹತ್ಯೆಯನ್ನು ಮಾಡುತ್ತದೆ. ಅರಿವಿನ ತನುವನ್ನು ಮಾಂಸದ ಭ್ರೂಣವನ್ನಾಗಿ ಮಾಡುತ್ತದೆ. ಮನ ಆ ಭ್ರೂಣದಲ್ಲಿದ್ದು ನಿತ್ಯ ನಿತ್ಯ ಭ್ರೂಣಹತ್ಯೆ ಮಾಡುತ್ತದೆ.

ತನು ಒಂದು ಅರಿವಿನ ಪುಣ್ಯಭೂಮಿ. ಈ ಭೂಮಿಯಾದ್ಯಂತ ಅರಿವಿನ ರಕ್ತದ ವಿರಕ್ತ ನದಿಗಳು ಹಗಲಿರುಳೆನ್ನದೆ ಹರಿಯುತ್ತಲಿವೆ. ಈ ಜ್ಞಾನದ ಮಹಾನದಿಯಲ್ಲಿ ಮಿಂದ ಭವಿಮನ ಮಹಾಭಕ್ತನಾಗಿದೆ.

ಇದಾವುದನ್ನೂ ಅರಿಯದೆ ಇದ್ದಾಗ ಮನ ಭವಿಯಾಗಿತ್ತು . ಭ್ರಮೆಯಿಂದಾಗಿ ತನುವಿನಲ್ಲಿ ತನ್ಮಯನಾದ ಬ್ರಹ್ಮನನ್ನೆ ಹತ್ಯೆ ಮಾಡುತ್ತಿತ್ತು . ಅರಿವಿನ ತನುವೆಂದರಿಯದೆ, ಮಂತ್ರ ಪಿಂಡವೆಂದರಿಯದೆ, ಮಾಂಸ ಪಿಂಡ ಮಾಡಿ ಭ್ರೂಣಹತ್ಯೆ ಮಾಡುತ್ತಿತ್ತು .

ತನುವನ್ನೇ ಪಾಪದ ಭೂಮಿಯನ್ನಾಗಿಸಿ ವೈತ (ಪಾಪದ) ರಿಣಿ ನದಿಯಲ್ಲಿ ಮಿಂದು

ಭವಿಮನ ನಿತ್ಯ ನಿತ್ಯ ದುರ್ಗತಿ ಹೊಂದುತ್ತಿತ್ತು.

ಪಂಚ ಮಹಾಪಾತಕದಿಂದಧಿಕ ನೋಡಾ! ಅಳುಪಿ ಭವಿಯೊಡನುಂಡಡೆ, ಭಕ್ತನಲ್ಲ, ಕೂಡಲಸಂಗಮದೇವಾ:

ಭವಿಯಾಗಿದ್ದ ಮನ, ಶರಣರ ಸಂಬಂಧ ಮಾಡಿ, ನಿತ್ಯ ನಿತ್ಯ ಸತ್ಸಂಗ ಮಾಡಿ, ಭಕ್ತನಾಗಿ ಪರಿವರ್ತನೆಯಾದ ಬಳಿಕ, ಪುನಃ ಭವಿಯೊಂದಿಗೆ ಬೆರೆಯಬಾರದು. ಹಾಗೆ ಬೆರೆತು ಅರಿವಿನ ಸುಖ ಬಿಟ್ಟು ಭವಿಸುಖ ವನ್ನುಂಡಡೆ ಗುರದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರ ದ್ರೋಹ, ಪ್ರಸಾದದ್ರೋಹವೆಂಬ ಪಂಚಮಹಾಪಾತಕದಿಂದಧಿಕ ನೋವನ್ನನುಭವಿಸುತ್ತದೆ. ಭಕ್ತನಲ್ಲ; ಅಂಗದಲ್ಲಿ ಸಂಗಮವಾದ ಅರಿವಿನ ಸಂಗಯ್ಯ ಭವಿಸಂಗಿಯನೊಲ್ಲ.

671

ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯ ;
ವೀರನಾದಡೆ ವೈರಿಗಳು ಮೆಚ್ಚಬೇಕು;
ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು;
ಭಕ್ತನಾದಡೆ ಜಂಗಮ ಮೆಚ್ಚಬೇಕು;
ಈ ನುಡಿಯೊಳಗೆ ತನ್ನ ಬಗೆಯಿರೆ
ಬೇಡಿದ ಪದವಿಯನೀವ ಕೂಡಲಸಂಗಮದೇವ.

ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯಾ ; ವೀರನಾದಡೆ ವೈರಿಗಳು ಮೆಚ್ಚಬೇಕು:

ಚಕ್ರವರ್ತಿ ಸಾಮ್ರಾಟನಾಗಿ ಇಡೀ ಪ್ರಪಂಚವನ್ನೇ ತನ್ನ ಮುಷ್ಟಿಯಲ್ಲಿ ಇಟ್ಟುಕೊಳ್ಳಬಹುದು. ಆದರೆ ವೀರನಾಗಲು ಸಾಧ್ಯವಿಲ್ಲ. ವರ್ಧಮಾನ ಸಿದ್ಧಾರ್ಥರಿಬ್ಬರೂ ಸಾಮ್ರಾಟರು. ಇಡೀ ದೇಶದ ಜನ ಅವರನ್ನು ಸಾಮ್ರಾಟನೆಂದು ಗೌರವಿಸಿದರು. ಸಾಮ್ರಾಟದ ಆ ಪದ ವೀರತನದ ಪದವಿಗೆ ಮೆಚ್ಚುಗೆಯಾಗಲಿಲ್ಲ. ಅವರಿಬ್ಬರಲ್ಲಿದ್ದ ವೈರಿಗಳೂ ಸಾಯಲಿಲ್ಲ. ಅವರಿಬ್ಬರ ಸಾಮ್ರಾಟತನದ ಪದವಿ ಅವರಿಬ್ಬರಲ್ಲಿದ್ದ ವೈರಿಗಳನ್ನು ಹಿಮ್ಮೆಟ್ಟಿಸಲಿಲ್ಲ. ಸಾಮ್ರಾಟದ ಪದವಿಯನ್ನು ತ್ಯಜಿಸಿದರು. ವೈರಿಗಳನ್ನು ಗೆಲ್ಲಲು ನಿರ್ಧರಿಸಿದರು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ವೈರಿಗಳೊಂದಿಗೆ ವರ್ಧಮಾನ ಸಿದ್ಧಾರ್ಥರೆಂಬ ಸಾಮ್ರಾಟರು ಅನೇಕ ವರ್ಷಗಳವರೆಗೆ ಯುದ್ಧ ಮಾಡಿದರು. ವೈರಿಗಳನ್ನು ಜಯಸಿ ಅವರಿಂದ ಮೆಚ್ಚುಗೆ ಪಡೆದರು. ಆನಂದದಿಂದ ಕೊಂಡಾಡಿ ಅವರಿಬ್ಬರಿಗೆ ಮರುನಾಮಕರಣ ಮಾಡಿ ಮಹಾವೀರ, ಬುದ್ಧನೆಂದು ಕರೆದರು.

ಇಡೀ ಪ್ರಪಂಚ ಸಾಮ್ರಾಟನೆಂದು ಹೊಗಳಬಹುದು ಆದರೆ ಅರಿ ಷಡ್ವರ್ಗಗಳನ್ನು ಜಯಿಸಿ ವೀರನಾಗಲು ಸಾಧ್ಯಾವಾಗುವುದಿಲ್ಲ. ಅಂತರಂಗದ ವೈರಿಗಳನ್ನು ಗೆದ್ದಾಗ ಆಗುವ ಆನಂದವೇ ಪರಮಾನಂದ. ಆತನೇ ನಿಜವಾದ ವೀರ. ವೈರಿಗಳೊಂದಿಗೆ ಮೆಚ್ಚುಗೆ ಪತ್ರ ಪಡೆದ ಪರಮ ವೀರ.

ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು:

ಅಂಗವನ್ನು ಆವರಿಸಿದ ಮನ ಸುಖಕ್ಕಾಗಿ ಅಂಗನೆಯನ್ನು ಸಂಗಾತಿಯನ್ನಾಗಿ ಮಾಡಿಕೊಂಡಿದೆ. ಮತ್ತೊಂದು ಪುಟ್ಟ ಅಂಗ ಬೇಕಾದಾಗ ಮಾತ್ರ ಮನ ಅಂಗನೆಯನ್ನು

ಬಯಸಬೇಕು. ಆದರೆ ಸುಖಕ್ಕಾಗಿ ಮನ ಮತ್ತೆ ಮತ್ತೆ ಅಂಗನೆಯರನ್ನು ಬಯಸುತ್ತದೆ. ಅದು ಉಪಯೋಗವಿಲ್ಲವೆಂದು ತಿಳಿದ ಮನವೇ ಅಂಗಕ್ಕೆ ಬ್ರಹ್ಮಾಚಾರಿಯ ವೇಷ ಹಾಕುತ್ತದೆ. ಅಂಗನೆಯರ ಸುಖದ ಆಸೆಯೂ ಬಿಡುವುದಿಲ್ಲ, ಸುಖದ ವೇಷವೂ ತೊಲಗುವುದಿಲ್ಲ. ಅರಿವಿನ ಅಂಗ ಗೊಂದಲದ ಗೂಡಾಗುತ್ತದೆ.

ಮನ ಮತ್ತೊಂದು ಅಂಗದಲ್ಲಿ ಸುಖವಿದೆಯೆಂದು ಭಾವಿಸುತ್ತದೆ. ವ್ರತಿ ಯಾದರೂ ಸುಖದ ಕಾತುರತೆ ತೊಲಗುವುದಿಲ್ಲ. ಜನ ವ್ರತಿಯೆಂದು ಗೌರವಿಸುತ್ತಾರೆ; ಮನ ಅಂಗನೆಯ ಸುಖ ಬಯಸುತ್ತಾಳೆ. ಜನ ಗೌರವಿಸಿದರೂ ಅರಿವು ಟೀಕಿಸುವುದು ಬಿಡುವುದಿಲ್ಲ.

ತನ್ನಂತೆಯೇ ಇರುವ ಅಂಗ ಅಂಗನೆ ಹೇಗಾಗುತ್ತಾಳೆ? ಮನವೆಂಬ ಅಂಗನೆಗೆ ಅರಿವಾದರೆ ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೊಂದಿಗೆ ಬೆರೆತು ಒಂದಾಗುತ್ತಾಳೆ. ಆಗ ಮನವೆಂಬ ಅಂಗನೆಗೆ ಅಂಗ ಬೇಕಿಲ್ಲ. ಅಂಗ ದಲ್ಲಿಯೇ ಇದ್ದ ಸುಖದ ದ್ರವ್ಯ ಹೊರಬಂದು ಅಂಗಕ್ಕೆ ಸುಖವಾಗುತ್ತದೆ. ಈ ಸುಖ ಅಂಗನೆಯ ಅಂಗದಿಂದ ದೊರೆತ ಸುಖವಲ್ಲ, ತನ್ನಂಗದಿಂದಲೇ ದೊರೆತ ಸುಖವೆಂದು ಮನಕ್ಕೆ ಮನವರಿಕೆಯಾಗುತ್ತದೆ. ಅಂಗವನ್ನು ಆವರಿಸಿದ ಮನವೆಂಬ ಮಾಯಾಂಗನೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಅರಸನೊಂದಿಗೆ ಕೂಡುತ್ತಾಳೆ. ವ್ರತಿಯನ್ನು ಕೂಡಿ ಪತಿವ್ರತಿಯಾಗುತ್ತಾಳೆ.

ಭಕ್ತನಾದಡೆ ಜಂಗಮ ಮೆಚ್ಚಬೇಕು :

ವೀರ ವ್ರತಿ ಭಕ್ತನೆಂದು ವೇಷ ಧರಿಸಿ ಅನ್ಯರಿಂದ ಹೊಗಳಿಸಿಕೊಳ್ಳುವುದು ಸುಲಭ. ಶರಣ ಇದನ್ನು ಮೆಚ್ಚುವುದಿಲ್ಲ.

ಸ್ವತಹ ಪ್ರಯೋಗಕ್ಕೆ ಹೋಗಿ ಅರಿಷಡ್ವರ್ಗಗಳನ್ನು ಜಯಿಸಿ ವೀರನಾಗಬೇಕು. ತನು ಮನ ಅರಿವು ಒಂದಾಗಿ ಅರಿವಿನ ಸಂಗಮವಾಗಿ, ಮನವೆಂಬ ಅಂಗನೆಯೇ ಅಂಗದ ಅರಿವನ್ನು ಮೆಚ್ಚಿ ಪ್ರಮಾಣಿಸಬೇಕು. ಹಾಗೆಯೇ ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಅರಿವನ್ನು ಆಶ್ರಯಿಸಿ ಸಂಗಮವಾಗಬೇಕು. ಸದಾ ಅರಿವೆಂಬ ಗುರುದೇವನ ಮಾತು ಪಾಲಿಸುವ ಜಂಗಮನನ್ನು ಅಂಗದಲ್ಲಿಯೇ ಕಂಡು ಆತನ ಮೆಚ್ಚುಗೆಯ ಪತ್ರವನ್ನು ಭಕ್ತ ಪಡೆಯಬೇಕು.

ತನು ಮನ ಅರಿವು ಒಂದಾದ ಅರಿವಿನ ಮಹಾ ಸಂಗಮಕ್ಕೆ ಯಾವ ವಿಶ್ವವಿದ್ಯಾಲಯದ ಪ್ರಮಾಣ ಪತ್ರವೂ ಬೇಡ, ಸರಕಾರ ಸಮಾಜದ ಪ್ರಮಾಣ ಪತ್ರವೂ ಬೇಡ. ಅರಿವಿನ ನದಿ ಹರಿದು ಮಹಾ ಸಮುದ್ರ ಸೇರಿದಂತೆ. ಸಕಲ ಹೆಸರುಗಳನ್ನು ಕಳೆದುಕೊಂಡು ತನ್ನೊಳಗೆ ತಾನು ಬಗೆದು ತಾನೇ ಆ ಸಾಗರವಾದಂತೆ ! ತನಗೆ ತಾನೇ ಅರಿವಿನ ಪದವಿಯ ಪ್ರಧಾನ ಮಾಡಿಕೊಂಡಂತೆ ವಿರಾಟ ಸ್ವರೂಪನೇ ತಾನಾದಂತೆ !

672

ಕಲಿತನ ತನಗುಳ್ಳಡೆ ಸೂಜಿಬಾಳು ಮೊದಲಾಗಿ ಕಾದಲೆಬೇಕು.
ಶರಣಪಥ ತನಗುಳ್ಳಡೆ ಶಿವಭಕ್ತರ ಮನೆಯ ಶಿವರಸವ
ಪಂಚಾಮೃತವ ಮಾಡಿಕೊಳ್ಳಬೇಕು.
ಭ್ರಾಂತುವಿಡಿದು ಲಿಂಗಕ್ಕೋಗರವನರಸುವ
ಪಾತಕರ ಮೆಚ್ಚ ಕೂಡಲಸಂಗಮದೇವ.

ಕಲಿತನ ಮನಕ್ಕುಳ್ಳಡೆ ತನುವಿನಲ್ಲಿಯೇ ಉತ್ಪತ್ತಿಯಾಗುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ವೈರಿಗಳೊಂದಿಗೆ ಯುದ್ಧ ಮಾಡಲೇಬೇಕು.

ಶರಣಪಥ ಮನಕ್ಕೆ ಉಳ್ಳಡೆ ಮಹಾಜ್ಞಾನಕ್ಕೆ ಭಕ್ತಿ ಮಾಡಿದ ಶಿವ ಭಕ್ತರ ಸಂಗಮಾಡಿ ಜ್ಞಾನರಸವನ್ನೇ ಪಂಚಾಮೃತ ಮಾಡಿಕೊಂಡು ಪಾನ ಮಾಡಬೇಕು.

ಭ್ರಾಂತಿ ಹಿಡಿದು ತನುವಿಗೆ ಸುರೆ ಮಾಂಸದ ರುಚಿಯನು ಹುಡುಕುವ ಮನವೆಂಬ ಪಾತಕನನ್ನು ಅರಿವಿನ ಸಂಗಯ್ಯ ಮೆಚ್ಚುವುದಿಲ್ಲ.

ಮರ ಅನ್ನಕ್ಕಾಗಿ ಹುಡುಕುವುದಿಲ್ಲ. ಬೇರು ಕಾಂಡ ಚಿಗುರು ಮೊಗ್ಗು ಹೂ ಕಾಯಿ ಹಣ್ಣಿಗೆ ಬೇಕಾದ ಆಹಾರವನ್ನು ಮರ ತನ್ನಲ್ಲಿಯೇ ಉತ್ಪನ್ನ ಮಾಡಿಕೊಳ್ಳುತ್ತದೆ ಹುಡಿಮಣ್ಣಿಗೆ ಜಲ ಕಳಿಸಿ ವದ್ದೆಮಾಡಿ ಬೇರು ಭದ್ರವಾಗುತ್ತದೆ. ಕಾಂಡ ದಪ್ಪವಾಗಿ ಸುಂದರವಾದ ಚರ್ಮ ರೂಪದ ತೊಗಟೆ ಆವರಿಸಿ ಕೊಂಬೆ ರೆಂಬೆಗಳಲ್ಲಿ ಚಿಗುರೆಲೆಗಳು ನಳನಳಿಸಿ ಮೊಗ್ಗು ಬಿಟ್ಟು ಹೂವಾಗಿ ಅರಳುತ್ತವೆ. ಹೂ ಕಾಯಿಯಾಗಿ ಹಣ್ಣಾಗಿ ಮರದ ಗುಣಗಳನ್ನೆಲ್ಲಾ ಬೀಜದಲ್ಲಿ ತುಂಬಿ ತನುವಿಗೆ ಆಹಾರವಾಗಿ ನೆಲಕ್ಕೆ ತಳ್ಳುತ್ತದೆ. ತನ್ನ ಗರ್ಭದಲ್ಲಿ ಕೀಟಕ್ಕೆ ಪ್ರಾಣಿ ಪಶು ಪಕ್ಷಿ ವರ್ಗಕ್ಕೆ ಆಶ್ರಯ ಕೊಡುತ್ತದೆ. ಮರ ಯಾರ ಆಶ್ರಯವನ್ನು ಪಡೆಯುವುದಿಲ್ಲ. ಹಾಗೆಯೇ ಕಲಿತನವುಳ್ಳ ಮನ ಅರಿಷಡ್ವರ್ಗಗಳೊಂದಿಗೆ ಹೋರಾಡಿ ಜಯಿಸಿ ಅಂಗ ದಲ್ಲಿಯೇ ಸಂಗಮವಾದ ಅರಿವಿನ ಅರಸನೊಂದಿಗೆ ಬೆರೆತು ಅರಿವಿನ ಊಟ ಮಾಡುತ್ತದೆ. ಅನ್ನಕ್ಕಾಗಿ ಅಂಗ ಅರಸುವುದಿಲ್ಲ. ಅರಿವಿನ ಅನ್ನ ಉಂಡು ಅರಳುತ್ತದೆ.

673

ಕಟ್ಟಿ ಬಿಡುವನೆ ಶರಣನು? ಬಿಟ್ಟು ಹಿಡಿವನೆ ಶರಣನು?
ನಡೆದು ತಪ್ಪುವನೆ ಶರಣನು? ನುಡಿದು ಹುಸಿವನೆ ಶರಣನು?
ಸಹಜ ಸಜ್ಜನಿಕೆ ತಪ್ಪಿದಡೆ,
ಕೂಡಲಸಂಗಯ್ಯ ಮೂಗ ಹಲುದೋರ ಕೊಯ್ವ.

ಕಟ್ಟಲು ಬರುವುದಿಲ್ಲ; ಕಟ್ಟಿದುದನ್ನು ಬಿಡಲು ಬರುವುದಿಲ್ಲ. ಲಿಂಗ ಕಟ್ಟುವುದೊಂದು ಭ್ರಮೆ; ಲಿಂಗ ಕಟ್ಟದೆ ಬಿಡುವುದೊಂದು ಭ್ರಮೆ! ಲಿಂಗವಿಲ್ಲದ ಅಂಗವೇ ಇಲ್ಲವೆಂದಮೇಲೆ ಕಟ್ಟುವುದೊಂದು ನಾಟಕ, ಕಟ್ಟದೆ ಬಿಡುವುದೊಂದು ನಾಟಕ.

ಜಗದಲ್ಲಿರುವ ಸರ್ವ ಅಂಗಗಳಿಗೂ ಅರಿವೆಂಬ ಲಿಂಗ ಅಂಗದ ಕಣ ಕಣದಲ್ಲಿ ಸಹಜವಾಗಿ ಸಂಗಮವಾಗಿರುವಾಗ ಕಟ್ಟುವುದೆಂದರೇನು? ಕಟ್ಟದೇ ಬಿಡುವುದೆಂದರೇನು ಕಟ್ಟಿ ಪೂಜಿಸುವುದೆಂದರೇನು? ಪೂಜೆಗೆ ಬಾರದ ಲಿಂಗವನು ಪೂಜಿಸುವುದೊಂದು ಹುಸಿ. ಪೂಜಿಸಿದೆನೆಂದು ತಪ್ಪು ನುಡಿಯುವದೊಂದು ಹುಸಿ.

ಸಹಜ ಸಜ್ಜನಿಕೆಯ ಅರಿವೆಂಬ ಲಿಂಗ ಅಂಗದ ಕಣಕಣದಲ್ಲಿದೆ. ನಿಶಬ್ದದಿಂದ ನುಡಿದು ಹೇಳುವ ನುಡಿಯನು ಆಲಿಸುವ ಸಹಜತೆ ಮನಕ್ಕೆ ಮನವರಿಕೆಯಾಗಬೇಕು. ಇಲ್ಲದಿದ್ದರೆ ಮೂಗ ಹಲುದೋರ ಕೊಯ್ವ. ಅರಿವನು ಅರಿಯದ ಮನಕ್ಕೆ ಶಿಕ್ಷೆಯುಂಟು.

674

ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ, ಪೂರ್ವಾಶ್ರಯವ ಕಳೆದು
ಹೊಂದುವಲ್ಲಿ ಭವಿಯಾಗಿ ಹೋಹರ ಮುಟ್ಟಲಾಗದು.
ಅವನ ಮುಟ್ಟಿದವ ಮುನ್ನವೆ ವ್ರತಗೇಡಿ,
ಅವನ ಶ್ರಾದ್ಧ ಕಾಲವೆ ಶ್ವಾನ ಮಾಂಸ,
ಕ್ರಿಯಾಕಾರವೇ ಕ್ರಿಮಿಗಳು, ತದ್ದಿನವೆ ಮದ್ಯಮಾಂಸ!
ಇದು ಕಾರಣ, ಕೂಡಲಸಂಗಮದೇವಾ,
ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕನರಕ.

'ಭವಿ ಬೀಜವೃಕ್ಷ ಫಲದೊಳಗೆ, ಭಕ್ತಿಬೀಜ ವೃಕ್ಷ ಪಲ್ಲವಿಸಿತ್ತು! ಭಕ್ತಿ ಬೀಜವೃಕ್ಷದ ಫಲದೊಳಗೆ, ಶರಣಬೀಜ ವೃಕ್ಷ ಪಲ್ಲವಿಸಿತ್ತು! ಶರಣಬೀಜ ವೃಕ್ಷ ಫಲದೊಳಗೆ; ಕುಲನಾಶಕನಾದ ಶರಣ ಒಂದೆ ಬಸುರಲ್ಲಿ ಬಂದ ಬಂಧು, ಬಳಗಕ್ಕೆ ತನ್ನ ಕುಲಕ್ಕೆ ತಾನೆ ಮಾರಿಯಾದ ಶರಣ. ಭವಿಭಕ್ತ ಭವಿಬೀಜವೃಕ್ಷದ ತಂಪು ನೆಳಲ ಬಿಟ್ಟು, ಕುಳ್ಳಿರ್ದಲ್ಲಿಯೆ; ಬಳಿ ಬಳಿಯ ಬಯಲಾದ ಶರಣ! ಬಿಂದು ಬೀಜವಟ್ಟ ಹಾಳಾಗಿಹಾರಿ ಹೋದಲ್ಲಿ; ಇನ್ನೇನ ಹೇಳಲುಂಟು? ಗುಹೇಶ್ವರನೆಂಬ ಲಿಂಗವನರಿದು ಭವಿಗೆ ಭವಿಯಾದಾತಂಗೆ ಇನ್ನೇನು ಪಥವುಂಟಯ್ಯಾ'

ಬೀಜದ ಗರ್ಭದಲ್ಲಿ ವೃಕ್ಷವು ಅಡಗಿದೆ. ಬೀಜ ಭವಿಯಾದರೆ ವೃಕ್ಷ ಭಕ್ತ. ಭಕ್ತಿ ಬೀಜವೃಕ್ಷದ ಫಲದೊಳಗೆ ಶರಣ ಬೀಜವೃಕ್ಷ ಪಲ್ಲವಿಸಿತ್ತು! ಬೀಜ ಪೂರ್ವಾಶ್ರಯ ಕಳೆದುಕೊಂಡು ಕೆಳಗೆ ಬೇರಾಗಿ, ಮೇಲೆ ಅಂಕುರ ಒಡೆದು, ಬೀಜದ ಕವಚಕ್ಕೆ ಮಾರಿಯಾಗಿ ಶರಣ ಬೀಜವೃಕ್ಷವಾಯಿತು. ಬೀಜದಿಂದ ಪುಟಿದೆದ್ದು ಬಂದ ವೃಕ್ಷ ಬೀಜಕುಲಕ್ಕೆ ಮಾರಿಯಾಯಿತು. ಎಸಳು ಚಿಗುರು ಎಲೆ ಹೂ ಕಾಯಿಯಾಗಿ, ತಂಪು ನೆಳಲ ಬಿಟ್ಟು ತನಿವಣ್ಣು ನೀಡಿ ವೃಕ್ಷಕುಲಕ್ಕೆ ತಾಯಿಯಾಯಿತು. ಬೀಜ ಹೊಟ್ಟಾಗಿ ಹೊರಬಂದು ಹಾಳಾಗಿ ಹಾರಿ ಹೋದಲ್ಲಿ ಇನ್ನೇನ ಹೇಳಲುಂಟು? ಬೀಜ ಭವಿಯಾದರೆ ವೃಕ್ಷಭವಿಗೆ ಭವಿಯಾಗಿ ಭವಿಕುಲವನ್ನೇ ನಾಶಮಾಡಿ ವೃಕ್ಷ ಕುಲವಾಯಿತು.

ತನು ಹುಟ್ಟುವಲ್ಲಿ ಭವಿ, ಮರಳಿ ಆ ಭವಿಯ ಹೊಟ್ಟೆಯಲ್ಲಿ ಭಕ್ತ ಹುಟ್ಟಿ ಪೂರ್ವಾಶ್ರಯವನ್ನು ಕಳೆದುಕೊಂಡಂತೆ. ಹುಟ್ಟುವಲ್ಲಿ ಭವಿ, ನಂತರ ಭಕ್ತನಾಗಿ ಪುನಃ ಭವಿ ಸ್ಥಿತಿಯನ್ನು ಹೊಂದಲಾಗದು. ಏಕೆಂದರೆ ಬೀಜದಲ್ಲಿ ಅಡಗಿದ ವೃಕ್ಷ ಬೀಜವನ್ನು ಹೊಟ್ಟು ಮಾಡಿ ಹೊರಬಂದು ಪುನಃ ಬೀಜದಲ್ಲಿ ಪ್ರವೇಶ ಮಾಡಲು ಹೇಗೆ ಸಾಧ್ಯವಲ್ಲವೋ ಹಾಗೆಯೇ ಭವಿ ಭಕ್ತನಾದ ಮೇಲೆ ಪುನಃ ಭವಿಯಾಗಲಾರ.

675

ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ;
ಎಡೆಯಲಾದ ಒಂದು ಉಡುಗೆಯನುಟ್ಟು,
ಸಡಲಿದಡೆ ಲಜ್ಜೆನಾಚಿಕೆಯಾಯಿತ್ತೆಂಬ
ನುಡಿ ದಿಟವಾಯಿತ್ತು ಲೌಕಿಕದಲ್ಲಿ,
ಹಡೆದ ಗುರುಕರುಣದೊಡನೆ ಹುಟ್ಟಿದ ನೇಮವನು ಬಿಡದಿರೆಲವೊ!

ಬಿಟ್ಟಡೆ ಕಷ್ಟ, ಕೂಡಲಸಂಗಮದೇವನಡಸಿ
ಕೆಡಹುವ ನಾಯಕ ನರಕದಲ್ಲಿ!

ಅಂಗ ಧರಿಸಿದ ವಸ್ತ್ರ ಸಡಿಲಿದರೆ ಲಜ್ಜೆ ನಾಚಿಕೆಗಳೆರಡೂ ಏಕಕಾಲಕ್ಕೆ ಆಗಿ ತನುವಿನಲ್ಲಿ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ನೋಡಿದ ತನುವಿನಲ್ಲಿಯೂ ರಸಾಯನಿಕ ಕ್ರಿಯೆ ಹುಟ್ಟುತ್ತದೆ. ಅಂಗ ಮಹಾಜ್ಞಾನದ ಸ್ಪರ್ಶಶಕ್ತಿಯುಳ್ಳ ಚರ್ಮವನ್ನೇ ಕವಚವನ್ನಾಗಿಸಿ ಗರ್ಭದಿಂದಲೇ ಧರಿಸಿಕೊಂಡು ಬಂದಿದೆ.

ಅಂಗಕ್ಕೆ ಅರಿವಿನ ಲಿಂಗವೇ ವಸ್ತ್ರ. ಗುರುಕರುಣೆಯಿಂದ ಜ್ಞಾನಬಿಂದುವಿನ ಮೂಲಕ ಗರ್ಭ ಪ್ರವೇಶ ಮಾಡಿ ಜ್ಞಾನಾಂಗವಾಗಿ ಅರಿವಿನ ಬಟ್ಟೆಯುಟ್ಟು ಹುಟ್ಟು ಬಟ್ಟೆಯೊಂದಿಗೆ ಹೊರಬಂದಿದೆ. ಅದು ಎಂದೂ ಸಡಲದ ಬಟ್ಟೆ ! ಉಟ್ಟಬಟ್ಟೆ ಇದು ಎಡೆಯಲಾದ ಯಕಶ್ಚಿತ್ ಒಂದುಡುಗೆ ಮಾತ್ರ .

ಕೌಶಿಕನಿಗೆ ಅಕ್ಕಮಹಾದೇವಿಯ ಮಹಾಜ್ಞಾನದ ಹುಟ್ಟುಡುಗೆಯನ್ನು ನೋಡಲು ಸಾಧ್ಯವಾಗಲಿಲ್ಲ. ಕಾಮುಕನಾಗಿ ಎಡೆಯಲಾದ ಉಡುಗೆಯನು ಸಡಲಿಸಲು ನೋಡಿದ. ಅಕ್ಕ ಲಜ್ಜೆ ನಾಚಿಕೆ ಇಲ್ಲದವಳು. ಮಹಾಜ್ಞಾನದ ಹುಟ್ಟುಡುಗೆಯನು ಧರಿಸಿದವರಿಗೆ ಲಜ್ಜೆಯಿಲ್ಲ ನಾಚಿಕೆಯಿಲ್ಲ. ಜಗತ್ತು ಹುಟ್ಟುಡುಗೆಯನು ಮರೆತುದಕ್ಕಾಗಿ ತೊಟ್ಟುಡುಗೆಯಾಚೆ ನೋಡಲು ತವಕಪಡುತ್ತದೆ.

ಕೌಶಿಕನೇ! ತೊಟ್ಟುಡುಗೆಯನ್ನು ಕಳಚಿ ನೋಡುವ ಅಜ್ಞಾನದ ತವಕ ನಿನಗೊಂದೇ ಅಲ್ಲ; ಇಡೀ ಜಗತ್ತಿಗೇ ಇದೆ! ಸಾಧ್ಯವಾದರೆ ನೀನು ಮತ್ತು ಇಡೀ ಜಗತ್ತು ಜ್ಞಾನದ ಹುಟ್ಟುಡುಗೆಯನ್ನು ನೋಡಿ! ಎಂದ 'ು ಕೂಡಲೇ ತೊಟ್ಟುಡುಗೆಯನ್ನು ಕಳಚಿದಳು ಅಕ್ಕ!

ಪಶುಗಳು ಯಾವ ಉಡುಗೆಯನ್ನು ತೊಡುವುದಿಲ್ಲ. ಹುಟ್ಟುಡಗೆಯಲ್ಲಿಯೇ ಆನಂದದಿಂದಿರುತ್ತವೆ. ಆ ಪಶುವಿನ ಚರ್ಮವನ್ನು ನೋಡಿಯಾದರೂ ಜಗತ್ತು ಕಲಿಯಲಿ ಎಂದು ಶಿವ ಚರ್ಮವನ್ನೇ ವಸ್ತ್ರ ಮಾಡಿಕೊಂಡು ಚರ್ಮಾಂಬರಿಯಾದ! ಜಗತ್ತು ಚರ್ಮಾಂಬರಿಯನ್ನು ಪೂಜಿಸಿತೆ ಹೊರತು ಜ್ಞಾನದ ಹುಟ್ಟು ಕಣ್ಣಿನಿಂದ ಕೇವಲ ಚರ್ಮ ನೋಡಲರಿಯಲಿಲ್ಲ. ಹುಟ್ಟಿದ ನೇಮವನು ಆಚರಿಸಲಿಲ್ಲ. ಹೆಣ್ಣಾದರೇನು ಗಂಡಾದರೇನು? ಅದು ಚರ್ಮವೆಂಬ ಸಾಮಾನ್ಯ ಜ್ಞಾನ ಪಶುಗಳಿಗೆ ಹೊಳೆಯಿತು. ಮನುಷ್ಯನ ಕಣ್ಣಿಗೆ ಕೂಡಲೇ ಹೊಳೆಯಲಿಲ್ಲ. ಸಾಯುವವರೆಗೆ ಹೊಳೆಯುವುದೂ ಇಲ್ಲ.

676

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ;
ಛಲಬೇಕು ಶರಣಂಗೆ ಪರಸತಿಯ ನೊಲ್ಲೆನೆಂಬ;
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ;
ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ;
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ;
ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ.

ಸತ್ಯ ಸೌಂದರ್ಯ ತನುವಿನಲ್ಲಿ ತನ್ಮಯವಾಗಿ ಶಿವಮಯವಾಗಿದೆ. ಶರಣುಹೋದ ಮನಕ್ಕೆ ಸಹಜವಾಗಿಯೇ ಒಲಿಯುತ್ತದೆ. ಛಲದ ಅವಶ್ಯಕತೆಯೂ ಇರುವುದಿಲ್ಲ. ಆದರೆ ಛಲವಿಲ್ಲದೆ ಶರಣುಹೋಗಿ ಶರಣನಾಗುವ ವಿಧಾನವೂ ತಿಳಿಯುವುದಿಲ್ಲ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ :

ಧನವೆಂದರೆ ಕರೆನ್ಸಿ, ಆಭರಣ, ಶೇರುಪತ್ರಗಳಲ್ಲ. ತನು ಮನ ಧನ. ತನು ಮನ ಮತ್ತು ಜ್ಞಾನ. ಜ್ಞಾನ ತನುವಿನಲ್ಲಿಯೇ ಇರುವ ತನುವಿನ ಸಂಪತ್ತು! ಅದು ಪ್ರತಿಯೊಂದು ತನುವಿನಲ್ಲಿಯೂ ತನ್ಮಯವಾಗಿದೆ. ಆ ತನುವಿನ ಜ್ಞಾನವನ್ನು ಪಡೆಯುವ ಛಲ ಮನಕ್ಕೆ ಇರಬೇಕು. ಇಲ್ಲದಿದ್ದರೆ ಮನ ಜ್ಞಾನವನ್ನು ಪುಸ್ತಕದಲ್ಲಿ, ಪರತನುವಿನಲ್ಲಿ ಹುಡುಕುತ್ತದೆ. ಸಂಗ್ರಹ ಮಾಡಿಕೊಳ್ಳುತ್ತದೆ. ಪರರನ್ನೇ ಹೊಗಳುತ್ತದೆ. ಹಾಡಿ ಆಡಿ ಆನಂದಿಸುತ್ತದೆ. ತನುವಿನಲ್ಲಿಯೇ ತನ್ಮಯವಾದ ಸ್ವಜ್ಞಾನವನ್ನು ಪಡೆದು ಆ ಜ್ಞಾನಕ್ಕೆ ಶರಣುಹೋಗಿ ಶರಣನಾಗಬೇಕೆಂಬುದು ತನುವನ್ನು ಆವರಿಸಿದ ಮನಕ್ಕೆ ಹೊಳೆಯದೇ ಹೋಗುತ್ತದೆ. ಪರ(ಧನ) ಜ್ಞಾನವನ್ನೇ ಹುಡುಕುತ್ತದೆ. ಬೈಬಲ್ ಭಗವದ್ಗೀತೆ ವೇದ ಆಗಮ ಉಪನಿಷತ್‌ಗಳನ್ನು ಓದಿ, ಪ್ರವಚನ ಮಾಡಿ, ಕೇಳಿ, ಬರೆದು ದಣಿಯುತ್ತದೆ. ಪರ (ಜ್ಞಾನ) ಧನವನೊಲ್ಲೆನೆಂಬ ಛಲ ಮನಕ್ಕೆ ಹುಟ್ಟುವುದೇ ಇಲ್ಲ.

ಯಾವ ಪುಸ್ತಕಗಳಾದರೇನು ? ಅವೆಲ್ಲವುಗಳನ್ನು ತನು ಬರೆದು ಮುದ್ರಿಸಿ ಪ್ರಕಟಿಸಿದೆ. ಓದುವ ಮೂಲಕ, ಕೇಳುವ ಮೂಲಕ, ನೋಡಿ, ಮುಟ್ಟಿ, ರುಚಿಸಿ, ಮೂಸಿಸಿ ತಿಳಿಯುವ ಮೂಲಕ ಮನ ತನುವಿನ ಜ್ಞಾನದತ್ತ ಪ್ರವೇಶ ಮಾಡಬಹುದು. ಕಣ್ಣು ಕಿವಿ ಮೂಗು ನಾಲಗೆ ಚರ್ಮ ಇವು ಐದು ತನುವಿನ ಮಹಾಜ್ಞಾನ ಕೇಂದ್ರಗಳು; ಬೃಹತ್ ವಿಶ್ವ ವಿದ್ಯಾಲಯಗಳು. ಇವುಗಳಿಂದ ಬಂದ ಎಂಜಲೇ ಪುಸ್ತಕಗಳು ! ತನು ತನ್ನಿಂದ ಹೊರಬಂದ ಎಂಜಲನ್ನು ಪುನಃ ತಾನು ತಿನ್ನಲು ಬಯಸುವುದಿಲ್ಲ. ತನುವಿನ ಅರಿವಿನ ಅಮೃತ ಉಣ್ಣುವ ಬಯಕೆ ಮನಕ್ಕೆ ಆದರೆ ಸಾಕು; ಹೊರಗಿನದೆಲ್ಲ ಗೌಣವಾಗುತ್ತದೆ.

''ನಿತ್ಯ ನಿರಂಜನ ತಾನೆಂದರಿಯದೆ ತತ್ತ್ವಮಸಿ ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲಾ ನಾಯಿ ಸಾವ! ತಮ್ಮ ತಾವರಿಯದೆ ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ''. ಕ್ರಿಷ್ಣ ಕ್ರಿಸ್ತ ಮನು ಮುನಿಗಳು, ಮಹಾವೀರ ಬುದ್ಧಾದಿ ಶರಣರು, ದಾಸವರೇಣ್ಯರು; ಮನ ತನುವಿನಲ್ಲಿರುವ ಜ್ಞಾನ ಹೇಗೆ ಪಡೆಯಬೇಕೆಂದು ಸೂತ್ರಗಳನ್ನು ಬರೆದಿಟ್ಟು ಸತ್ತು ಹೋಗಿದ್ದಾರೆ. ಅವರು ಬರೆದ ಪತ್ರಗಳನ್ನೇ ಜ್ಞಾನವೆಂದು ತಿಳಿದು ಅವರನ್ನೇ ಹೊಗಳಿ ಹೊಗಳಿ ಸತ್ತರೆ ನಿನಗೆತ್ತಣ ಮುಕ್ತಿ ಎಲೆ ಮನವೆ ಎಂದು ಪ್ರಭು ಪ್ರಶ್ನಿಸಿದ್ದಾರೆ.

'ತತ್ವಮಸಿ' ತತ್ವ ನೀನೆ ಇದ್ದೀಯ; ಅದನ್ನು ತಿಳಿ ಎನ್ನುವ ಸೂತ್ರ ಹಿಡಿದು ಒಳಗೆ ಪ್ರವೇಶ ಮಾಡುವುದನ್ನು ಬಿಟ್ಟು ಅದನ್ನೇ ಹೊರಗೆ ನಾಯಿಯಂತೆ ಬೊಗಳುವ ಮನಕ್ಕೆ ಏನೆನ್ನಬೇಕು? ತನುವಿನ ಜ್ಞಾನ ಸವಿಯಲು ಬಂದ ಮನ, ಪರ(ಧನ) ಜ್ಞಾನವನ್ನೇ ಜ್ಞಾನವೆಂದು ತನುವಿನ ಆಯುಷ್ಯ ವ್ಯರ್ಥ ಕಳೆಯುತ್ತದೆ.

ಅಣ್ಣನವರು ಈ ಮಾತನ್ನು ಯಾರಿಗೂ ಹೇಳಲಿಲ್ಲ. ತನುವಿನ ಜ್ಞಾನದತ್ತ ಪಯಣಿಸಬೇಕಾದ ಮನಕ್ಕೆ ಹೇಳಿದ್ದಾರೆ. ಅದು ತನುವಿನ ಜ್ಞಾನದೊಂದಿಗೆ ಸುಖಿಸಬೇಕೆಂದು ನಿರ್ಧರಿಸಿದರೆ ತನುವಿನಲ್ಲಿಯೇ ಸ್ವ ಜ್ಞಾನ ಹುಡುಕುತ್ತದೆ; ಇಲ್ಲ ತನುವನ್ನು ಹಳ್ಳಕ್ಕೆ ನೂಕಿ ಪುಸ್ತಕಗಳಲ್ಲಿ ಪುಣ್ಯ ಕ್ಷೇತ್ರಗಳಲ್ಲಿ ಪರ ತನುಗಳಲ್ಲಿ ಹುಡುಕುತ್ತದೆ. ಸ್ವತಃ ಜ್ಞಾನಿಯಾಗಿದ್ದು ಪರಜ್ಞಾನವನ್ನು ಪಡೆದು

ಪರರನ್ನೇ ಹಾಡಿ ಹೊಗಳಿ ಹೊಗಳಿ ತನುವಿನೊಂದಿಗೆ ಮನ ಆಯುಷ್ಯ ಕಳೆದು ವ್ಯರ್ಥ ಸಾಯುತ್ತದೆ.

ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ:

ಧನ -ಪರಧನ, ಸತಿ-ಪರಸತಿ. ಸ್ವಧನ ಪರಧನದ ವಿಷಯ ಮನಕ್ಕೆ ತಿಳಿಯಿತು. ಹಾಗೆಯೇ ಸತಿ-ಪರಸತಿ ಎಂದರೇನೆಂಬುದು ಕೂಡಾ ಮನಕ್ಕೆ ತಿಳಿಯಬೇಕು. ತನುವಿನಲ್ಲಿ ಅರಿವು ಇದೆ; ಅದನ್ನು ತಿಳಿಯುವ ಮನವೂ ಇದೆ. ಅರಿವು ಹೊರಗಿದೆಯೆಂದು ಮನ ತಿಳಿದರೆ ತನುವಿನ ಆಯುಷ್ಯ ವ್ಯರ್ಥವಾಗುವುದು. ಹಾಗೆಯೇ ತನು ಎಂಬ ಮನೆಯಲ್ಲಿ ಅರಿವು ಎಂಬ ಪತಿ ಇದ್ದಾನೆ; ಮನವೆಂಬ ಸತಿ ಇದ್ದಾಳೆ! 'ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ' ಸ್ವತಹ ಮನ, ತಾನು ಸತಿಯಾಗಿದ್ದು ಅರಿವಿನ ರತಿ ಸುಖಕ್ಕಾಗಿ ಪರಸತಿಯನ್ನು ಬೇಡುವುದು, ನೋಡುವುದು, ಆಸೆ ಪಡುವುದು ಸರಿಯೆ? ಎಂದು ಮನವೆಂಬ ಸತಿಯೇ ನಿರ್ಧರಿಸಬೇಕು. ಹೆಣ್ಣು ಹೆಣ್ಣು ಕೂಡುವ ಕೂಟ ಅದು ಅರಿವಿನ ರತಿ ಸುಖ ಹೇಗಾಗುತ್ತದೆ!

ಅರಿವಿನ ಮತ್ತೊಂದು ಕುಡಿ ಬೇಕೆನಿಸಿದಾಗ ಮಾತ್ರ ಒಡಂಬಡಿಕೆಯಾದ ಎರಡು ತನುಗಳು ನಿರ್ಧರಿಸಿ ಒಂದನ್ನೊಂದು ಕೂಡಿ ಅರಿವಿನ ತನುವನ್ನು ಪಡೆಯಬಹುದು. ಇಲ್ಲದಿದ್ದರೆ ಒಂದು ತನು ಮತ್ತೊಂದು ತನುವನ್ನು ಬಯಸುವುದು ವ್ಯರ್ಥವಲ್ಲವೆ? ಸತಿ ಎಂಬ ಮನಕ್ಕೆ ಇದು ಮನವರಿಕೆಯಾಗಬೇಕು.

ತನು ಹೆಣ್ಣು ಅಲ್ಲ ಗಂಡೂ ಅಲ್ಲ! ತನುವಿನ ಕಣಕಣದಲ್ಲಿ ವಾಸ ಮಾಡಿದ ಅರಿವು (ಧನ-ಜ್ಞಾನ) ಗಂಡು; ಮನ ಹೆಣ್ಣು! ಇವರಿಬ್ಬರೂ ತನುವಿನ ಒಂದೇ ಮನೆಯಲ್ಲಿ ವಾಸ ಮಾಡಿದ ಸತಿ ಪತಿಗಳು! 'ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ; ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ, ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ'

ಮನಕ್ಕೆ ಅರಿವಾದರೆ ತನುಗಳೆಲ್ಲ ಅರಿವಿನ ತನುಗಳೆ! ಅರಿವಿನ ಬಯಕೆ ಉಳ್ಳ ಹೆಣ್ಣು ತನುಗಳು. ಹೆಣ್ಣು ಹೆಣ್ಣನ್ನು ಕೂಡಲು ಬಯಸುವುದಿಲ್ಲ. ಮನಕ್ಕೆ ಸಹಜ ಅರಿವಾಗಿ ಅರಿವಿನ ಗಂಡನ ಸುಖ ಪಡೆದು ಹೊರಗೆ ಸುಳಿಯದೆ, ಸುಳಿಯದ ನಲ್ಲನೊಂದಿಗೆ ತನುವಿನಲ್ಲಿಯೇ ವಿರಮಿಸುತ್ತದೆ. ತನುವಿನಲ್ಲಿಯೇ ಬಚ್ಚಿಟ್ಟುಕೊಂಡ ಪರಶಿವ ಮನವೆಂಬ ಸತಿಗೆ ಒಲಿಯುತ್ತಾನೆ.

ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ:

ಮನ ಅರಿತರೆ ತನಗೆ ಬೇಕಾದ ದೈವ ತನುವಿನಲ್ಲಿಯೇ ತನ್ಮಯವಾಗಿದೆ. ಪರದೈವದ ಚಿಂತೆಯನ್ನೆ ಮಾಡುವುದಿಲ್ಲ. ಅರಿವೇ ಗುರು. ಮಣ್ಣನ್ನು ಅರಿವಿನಿಂದ ನೋಡಿದರೆ ಅದು ಮಣ್ಣು ಮಾತ್ರ. ಆ ಮಣ್ಣನ್ನೇ ರಾಮ, ಸೀತೆ, ವೆಂಕಟೇಶ, ಈಶ್ವರ ಕ್ರಿಸ್ತನನ್ನಾಗಿ ಮಾಡಿದರೆ ಹಲವಾರು ದೇವರು ಸೃಷ್ಟಿಯಾಗುತ್ತಾರೆ. ಕಣ್ಣು ಮಣ್ಣು ಮರೆತು ತನುವನ್ನು ಆರಾಧನೆಗೆ ಹಚ್ಚುತ್ತದೆ. ಮನ ದೇವಸ್ಥಾನಗಳನ್ನು ನಿರ್ಮಿಸಿ ದೇವರಿಗೆ ಕಲ್ಯಾಣೋತ್ಸವದ ಹುಚ್ಚು ನಾಟಕವನ್ನಾಡುತ್ತದೆ. ಭಕ್ತಿಯಿಂದ ಕೈಮುಗಿದು ಕಿರೀಟ ವಸ್ತ್ರಗಳನ್ನು ಧರಿಸಿ ಛತ್ರಿ ಚಾಮರಗಳನ್ನು ಬೀಸಿ ಶಯನ ಗೃಹಕ್ಕೂ ಕಳಿಸುತ್ತದೆ. ಕಣ್ಣಿನಲ್ಲಿ ಮಣ್ಣು ಬಚ್ಚಿಟ್ಟುಕೊಂಡು, ದೇವರು ಸೃಷ್ಟಿಯಾದರು. ಮಣ್ಣು ನೋಡಿದ ಕಣ್ಣು ಕುರುಡಾಯಿತು. ಪುನಃ ಮನ ತನ್ನ ಪೊರೆಯನ್ನು ಕಳಚಿಕೊಂಡು ಮೂರ್ತಿಯಲ್ಲಿದ್ದ ಮಣ್ಣು ನೋಡಿದರೆ ಪರದೈವ ಬೇಕಾಗಿಲ್ಲ. ಆರಾಧನೆ ಉತ್ಸವಗಳು ನಿಲ್ಲುತ್ತವೆ! ಮಣ್ಣು ನೋಡುವಾಗ ಮನದಲ್ಲಿ ಅರಿವಿತ್ತು! ಮೂರ್ತಿ ನೋಡಿದಾಗ ಮನ ಕುರುಡಾಯಿತು. ಇದು ಸಹಜ ಅರಿವು. ಅರಿವಿಗೆ ಶರಣು ಹೋದ ಶರಣನ ಅರಿವು. ಘನಮನದ ಅರಿವು. ತನು ಮನ ಧನ ಒಂದಾದಾಗ

ತನುವಿನ ಸಹಜ ಅರಿವು!

ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೇ ಎಂಬ:

ಅಂಗದಲ್ಲಿ ಅರಿವೆಂಬ ಲಿಂಗವಿದೆ. ಅರಿವನ್ನು ತಿಳಿಯುವ ಮನವೂ ಇದೆ. ಆ ಅರಿವನ್ನು ಪಾಲಿಸುವ ಜಂಗಮನೂ ಇದ್ದಾನೆ. ಈ ಸೂಕ್ಷ್ಮ ಶಿಕ್ಷಣ ಮನ ಪಡೆದರೆ ಸಾಕು ಯಾವ ಜಪತಪಗಳನ್ನು ಮಾಡಬೇಕಿಲ್ಲ. ''ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ? ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ. ಇನ್ನು ಜಂಗಮವೆ ಲಿಂಗವೆಂದು ನಂಬಿದೆ, ಕೂಡಲಸಂಗಮದೇವಾ''

ಅರಿವೆಂಬ ಗುರುದೇವನೆ, ಮನವೆಂಬ ನಾನು ನಿನ್ನ ತಿಳಿಯದ ಮುನ್ನ ನೀನು ಎಲ್ಲಿದ್ದೆ? ನನ್ನೊಳಗೆ ಇದ್ದು ನಿನ್ನನ್ನು ಎನಗೆ ತೋರಿಸುವುದಕ್ಕಾಗಿಯೇ ನೀನು ತನುವಿನ ರೂಪವನ್ನು ಧರಿಸಿದೆ. ಅಂಗದಲ್ಲಿಯೇ ಸಂಗಮವಾದ ಅರಿವನ್ನು ಲಿಂಗವೆಂದು ತಿಳಿದೆ. ಆ ಅರಿವನ್ನು ಪಾಲಿಸುವ ಜಂಗಮನನ್ನು ಲಿಂಗಜಂಗಮವೆಂದು ನಂಬಿದೆ. ಅಂಗ ಲಿಂಗ ಜಂಗಮರು ಸಂಗಮವಾದ ಅರಿವಿನ ಕ್ಷೇತ್ರವೆಂದು ಆರಾಧಿಸಿದೆ. ಯಾವ ಅಂಗವಾದರೇನು? ಸರ್ವಾಂಗವೂ ಲಿಂಗವೇ ಆಗಿದೆ.

ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ :

ಪ್ರಸಾದವೆಂದರೆ ಊಟವಲ್ಲ, ಅನ್ನ ನಾಲಿಗೆಗೆ ತಟ್ಟಿ ಬಾಯಿಯಲ್ಲಿ ನುರಿತು ಅಂಗದಲ್ಲಿ ಜೀರ್ಣವಾಗುತ್ತದೆ. ರಕ್ತ, ಮೂಳೆ, ಮಾಂಸವಾಗಿ ಚರ್ಮಕ್ಕೆ ಕಾಂತಿ ನೀಡುತ್ತದೆ. ಇದನ್ನು ಪ್ರಸಾದ ವೆಂದು ಹೇಳಬಹುದು. ಅಜೀರ್ಣವಾದರೆ ಅದು ಪ್ರಸಾದವಲ್ಲ. ಹಾಗೆಯೇ ನೋಡಿದ ನೋಟ, ಕೇಳಿದ ಶಬ್ದ, ಸ್ಪರ್ಶಿಸಿದ ಚರ್ಮ, ರುಚಿಸಿದ ನಾಲಿಗೆ, ಮೂಸಿಸಿದ ಮೂಗಿನಲ್ಲಿ ಗಂಧ ದುರ್ಗಂಧ ಗಳು ಎನ್ನದೆ ಪ್ರಸಾದವಾಗಬೇಕು.

ಮಣ್ಣು ನೋಡಿದ ಕಣ್ಣಿನಲ್ಲಿ ಮಣ್ಣು ಜೀರ್ಣವಾಯಿತು, ಆ ಮಣ್ಣೆ ಮೂರ್ತಿಯಾಗಿ ದೇವರಾದ ಮೇಲೆ ಮಣ್ಣೆಂದು ಜೀರ್ಣವಾಗಲಿಲ್ಲ. ಮಣ್ಣು ಕಣ್ಣಿಗೆ ಪ್ರಸಾದವಾಗಲಿಲ್ಲ.

ಹಾಗೆಯೇ ಶಬ್ದ, ಸ್ಪರ್ಶ, ರೂಪ, ರುಚಿ, ವಾಸನೆ, ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟು ಮಾಡಿದರೆ ಅದು ಸುಖವಾದರೇನು ದುಃಖವಾದರೇನು ಪ್ರಸಾದವಾಗಲಿಲ್ಲ. ವಸ್ತುವಿನ ಸತ್ಯ ಮನದ ಗೋಚರಕ್ಕೆ ದಿಟವಾದರೆ ಮಾತ್ರ ಪ್ರಸಾದವಾಗುತ್ತದೆ. ಮನ ಛಲದಿಂದ ಅರಿವಿಗೆ ಶರಣು ಹೋದರೆ ಮಾತ್ರ ಈ ಸಹಜ ಪ್ರಸಾದ ತತ್ವ ಸಾಧ್ಯವಾಗುತ್ತದೆ.

ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ :

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನನ್ನು ತಿಳಿಯುವ ಬಯಕೆ ಮನಕ್ಕೆ ಆದಾಗ ಆ ಅರಿವೆ ಮನಕ್ಕೆ ಅರಿವಿನ ಪಾಠ ಮಾಡಿ ಅರಿವಿನ ಸಂಗಕ್ಕೆ ಹಾದಿ ಮಾಡಿಕೊ ಡುತ್ತದೆ. ಇಲ್ಲದಿದ್ದರೆ ಅರಿವು ಮತ್ತು ಮನ ಅಂಗದಲ್ಲಿಯೇ ಸಂಗಮವಾಗಿದ್ದರೂ ವಿರುದ್ಧ ದಿಕ್ಕಿನಲ್ಲಿ ಪಯಣಿಸುತ್ತವೆ. ಅರಿವು ಹೇಳಿದ್ದು ಮನಕ್ಕೆ ತಿಳಿಯುವುದಿಲ್ಲ, ಮನಕ್ಕೆ ಬೇಕಾದ ಹೊರಗಿನ ಸುಖ ಅರಿವಿಗೆ ಬೇಕಾಗುವುದಿಲ್ಲ. ಚಿನ್ಮಯವಾದ ಲಿಂಗ ರಕ್ಕಸ ಅಂಗವೆಂದು ಗುರುತಿಸಲ್ಪಟ್ಟು ಅಂತ್ಯ ಕಾಣುತ್ತದೆ.

677

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ ;

ಕೊಲುವನೆಂಬ ಭಾಷೆ ದೇವನದು; ಗೆಲುವೆನೆಂಬ ಭಾಷೆ ಭಕ್ತನದು.
ಸತ್ಯವೆಂಬ ಕೂರಲಗನೆ ತಳೆದುಕೊಂಡು
ಸದ್ಭಕ್ತರು ಗೆದ್ದರು, ಕಾಣ, ಕೂಡಲಸಂಗಮದೇವಾ.

ತನು ಒಂಬತ್ತು ದ್ವೀಪಗಳುಳ್ಳ ಅಖಂಡ ಅರಿವಿನ ಪೃಥ್ವಿ. ಒಂಬತ್ತು ಖಂಡಗಳನ್ನು ಹೊಂದಿ ಅಖಂಡವಾಗಿದೆ. ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊರಳೆಗಳು, ಒಂದು ಬಾಯಿ, ಮೂತ್ರದ್ವಾರ, ಗುದದ್ವಾರ ಸೇರಿ ಒಟ್ಟು ಒಂಬತ್ತು ಖಂಡಗಳುಳ್ಳ ಅಖಂಡ ಪೃಥ್ವಿ!

ತನುವೆಂಬ ಈ ಪೃಥ್ವಿಯೊಳಗೆ ಸುಖ, ದುಃಖ, ರಾಗ, ದ್ವೇಷ, ಬುದ್ಧಿ, ಭಾವನೆ ಪ್ರಯತ್ನ, ಧರ್ಮ ಮತ್ತು ಅಧರ್ಮಗಳ ಮೂಲಕ ಕೊಲುವೆನೆಂಬ ಭಾಷೆ ದೇವನದಾಗಿದೆ. ತನು ಮೇಲ್ಕಂಡ ಒಂಬತ್ತು ವಿಧಗಳ ಪ್ರಯತ್ನದಲ್ಲಿ ಏರಿಳಿತಗಳನ್ನು ಕಂಡುಕೊಂಡು ರಸಾಯನಿಕ ಕ್ರಿಯೆಯಿಂದಾಗಿ ಒಮ್ಮೆ ಸುಖಿಸುತ್ತದೆ ಮತ್ತೊಮ್ಮೆ ದುಃಖಕ್ಕೆ ಕಾರಣವಾಗುತ್ತದೆ. ಸುಖವೇಕಾಯಿತು? ಸುಖ ಹುಡುಕಲು ಹೋಗಿ ದುಃಖವೇಕೆ ಉಂಟಾಯಿತು ಎಂದು ಸುಖ ದುಃಖಗಳನ್ನು ಉಂಟುಮಾಡುವ ಒಂದಾಳಿಗೆ ಗೊತ್ತಾಗುವುದೇ ಇಲ್ಲ. ಏಕೆಂದರೆ ಸುಖದುಃಖಗಳನ್ನು ಉಂಟು ಮಾಡುವುದೇ ಆ ಆಳಿನ ವ್ಯವಹಾರ. ಈತನೇ ಮಹಾದೇವ ಸೆಟ್ಟಿ!

ಒಂಬತ್ತು ದ್ವೀಪಗಳ ಮೂಲಕ ದೇವನ ಕೊಲುವ ಭಾಷೆ ವ್ಯಾಪಿಸಿಕೊಂಡು ಪೃಥ್ವಿಯಾದ್ಯಂತ ನಡೆಯುತ್ತದೆ. ಭಾಷಾ ವ್ಯವಹಾರದಿಂದ ತನುವೆಂಬ ಪೃಥ್ವಿ ಒಮ್ಮೆ ಅರಳುತ್ತದೆ ಮತ್ತೊಮ್ಮೆ ಕೆರಳಿ ಜ್ವಾಲಾಮುಖಿಯಂತೆ ಬೆಂಕಿಯ ಕೆಂಡಗಳನ್ನು ಉಗುಳುತ್ತದೆ.

ತನುವೆಂಬ ಪೃಥ್ವಿಯ ನವ ಖಂಡಗಳನ್ನು ಭಕ್ತನೆಂಬ ಆಳು ಸೂಕ್ಷ್ಮವಾಗಿ ವೀಕ್ಷಿಸುತ್ತಾನೆ. ಕಣ್ಣುಗಳೆಂಬ ಎರಡು ಖಂಡಗಳಲ್ಲಿ ಪ್ರವೇಶ ಮಾಡಿ ನೋಡುವ ನೋಟವನ್ನು ಸತ್ಯದಿಂದ ನೋಡುತ್ತಾನೆ. ನೋಟದಲ್ಲಿ ಎರಡಾಳಿನ ಭಾಷೆಯಿದೆ. ಒಂದು ಬೆಳಗುವ ಭಾಷೆ, ಮತ್ತೊಂದು ಕೊಲ್ಲುವ ಭಾಷೆ!

ಕರೆನ್ಸಿಯ ಮೇಲೆ ಬೆಳಗುವ ಭಾಷೆಯ ಬೆಳಕು ಬಿದ್ದರೆ; ಅದು ಕಾಗದ; ಸರಕಾರದ ಪ್ರತಿನಿಧಿಯ ಸಹಿಯುಳ್ಳ ಕಾಗದ! ತನುವೆಂಬ ನವಖಂಡದ ಪೃಥ್ವಿಯಲ್ಲಿ ರಸಾಯನಿಕ ಕ್ರಿಯೆಗಳು ಉಂಟಾಗಲಿಲ್ಲ. ಕಾಗದ ನೋಡಿದ ತನುವಿಗೆ ಸುಖವಾಗಲಿಲ್ಲ ದುಃಖವಾಗಲಿಲ್ಲ. ಅದು ವಿನಿಮಯಕ್ಕೆ ಇದ್ದ ವಸ್ತುವೆಂದು ಅರಿವಾಯಿತು. ಇದು ಗೆಲುವೆನೆಂಬ ಸಂಕಲ್ಪ ಮಾಡಿದ ಸಹಜ ಭಕ್ತನ ಅರಿವಿನ ಭಾಷೆ!

ಕೊಲುವೆನೆಂಬ ಭಾಷೆಯ ಬೆಳಕು ಕರೆನ್ಸಿಯ ಮೇಲೆ ಬಿದ್ದರೆ ಅದನ್ನು ಪಡೆಯುವುದಕ್ಕಾಗಿ ನವಖಂಡಗಳುಳ್ಳ ತನುವೆಂಬ ಪೃಥ್ವಿ ಹಗಲಿರುಳು ದುಡಿಯಿತು; ಸಂಗ್ರಹಿಸಿ ಶ್ರೀಮಂತನಾಯಿತು. ಕಳುವು ಮಾಡಿ ಕಳ್ಳನಾಯಿತು. ಕೊಲೆ ಮಾಡಿ ಪಡೆದು ಕೊಲೆಗಡುಕನಾಯಿತು. ನ್ಯಾಯ ಹೇಳಿ ನ್ಯಾಯಾಧೀಶನಾಯಿತು. ಮುದ್ರಿಸಿ ಸರಕಾರವಾಯಿತು. ನಾನಾ ವಿಕಲ್ಪಗಳಿಂದ ತನು ಛಿದ್ರ ಛಿದ್ರವಾಯಿತು. ಸುಖವಾಯಿತು, ದುಃಖವಾಯಿತು. ಒಂಬತ್ತು ಅರಿವಿನ ದ್ವೀಪಗಳುಳ್ಳ ಅಖಂಡ ಪೃಥ್ವಿ ಎನ್ನಿಸಿಕೊಂಡ ತನು ಚೇತನವಿಲ್ಲದ ಕರೆನ್ಸಿ ಎಂಬ ಒಂದು ಅಜ್ಞಾನಕ್ಕೆ ಬಲಿಯಾಯಿತು.

ಒಂಬತ್ತು ದ್ವೀಪಗಳುಳ್ಳ ಅರಿವಿನ ಅಖಂಡ ತನುವಿನಲ್ಲಿ ಅರಿವಿನ ಮಹಾದೇವನು ನೆಲೆಸಿ ಕೊಲುವೆನೆಂಬ ಭಾಷೆಯನ್ನೂ ಬರೆದ ; ಗೆಲುವೆನೆಂಬ ಭಾಷೆಯನ್ನೂ ಬರೆದು ತನುವೆಂಬ ಅರಿವಿನ ಅಖಂಡ ಪೃಥ್ವಿಗೆ ಗೆಲ್ಲುವ, ಕೊಲುವ ಎರಡು ಆಳುಗಳನ್ನೂ ಕಾವಲಿಟ್ಟ!

ಸತ್ಯವೆಂಬ ಕೂರಲಗಿನಿಂದ ಅಜ್ಞಾನವೆಂಬ ಕೊಲುವ ಆಳನ್ನು ಗೆದ್ದು ಅಖಂಡ ಪೃಥ್ವಿಯನ್ನು ಜಯಿಸಿದವನೇ ಸದ್ಭಕ್ತ!

678

ಮುನ್ನಿನ ಕಲಿ ವೀರ ಧೀರರು ಕಾದಿದ ರಣಗಳನು
ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ
ಆ ದಳವಿದಿರಾದಲ್ಲಿ ಬಿರಿದುಪಚಾರಿಸಿ, ಕಾದಿ ತೋರಲು ಬಾರದು.
ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ
ಪರಿಪರಿಯಲು ಬಣ್ಣಿಸಲು ಬಹುದಲ್ಲದೆ
ಪುರುಷನಿರ್ವಾಣಕ್ಕುರಿವಗ್ನಿಯ
ಬಂದು ಹೊಕ್ಕು ತೋರಲು ಬಾರದು.
ಮುನ್ನಿನ ಪುರಾತನರೆಲ್ಲರೂ ತನುಮನಧನವನಿತ್ತು
ಮಾಡಿ, ನೀಡಿ ತೋರಲುಬಾರದು.
ಇಂತೀ ಅರೆಬಿರಿದಿನ ಬಂಟರು, ಪುರುಷವ್ರತಿಯರು, ಪುರಾತನರು
ಬರಿಯ ಮಾತನಾಡಿ ಹೊರಗೆ ಮೆರಿವರಲ್ಲ!
ಪರೀಕ್ಷೆಯುಂಟಾಗಿಯಿದ್ದಡೆ ಒಳಗಣವರ ಹೆಸರ ಹಿಡಿದು
ಪರಿಪರಿಯಲು ಹೊಗಳುವರು
ಶರೀರ ಅರ್ಥ ಪ್ರಾಣ ಗುರು ಲಿಂಗ ಜಂಗಮಕೆ ಪರೀಕ್ಷೆ ಉಂಟಾಗಿಯೆ
ಆತ ಮಹೇಶ್ವರ ಪುರಾತವಳಿ ಎಂಬ
ಪರಮ ಬಂಧುಗಳಾತನ ನೆನೆನೆನೆದು ಬದುಕುವರು.
ಇಂತೀ ಅನುಭಾವದ ಓದಿನ ಅಕ್ಷರಾಭ್ಯಾಸವ
ಸಾಧಿಸಿ ತರ್ಕಿಸಿ ನಿಂದಿಸಲಾಗದು.
ಕೂಡಲಸಂಗನ ಶರಣರಿಗಲ್ಲದನುಭಾವವಿಲ್ಲ.

ಪುರಾತನರು ಸಾಧಿಸಿದುದನು ಹೊಗಳಬಹುದು, ಆರಾಧಿಸಬಹುದು, ಪೂಜಿಸಿ ಇತಿಹಾಸ ಬರೆಯಬಹುದು ಆದರೆ ನಡೆಯಲು ಬರುವುದಿಲ್ಲ. ಪುರಾತನರು ನಡೆದರು. ನಡೆಯುವುದು ಹೇಗೆಂದು ನುಡಿಯ ಮೂಲಕ ಸೂತ್ರ ರೂಪದಲ್ಲಿ ಬರೆದರು. ಅವರು ಬರೆದ ಬರಹ ಕೇವಲ ನಡೆಯುವುದಕ್ಕಾಗಿಯೇ ಹೊರತು ಅವರನ್ನು ಹಾಡಿ ಹೊಗಳಿ ನುಡಿಯುವುದಕ್ಕಾಗಿ ಅಲ್ಲ. ಆರಾಧಿಸುವುದಕ್ಕಾಗಿ ಅಲ್ಲ, ಪುರಾತನರು ಆರಾಧಿಸುವುದನ್ನು ನುಡಿಯ ಮೂಲಕ ಅಲ್ಲಗಳೆದಿದ್ದಾರೆ. ನಡೆಯುವುದಕ್ಕಾಗಿ ಪುರಾತನರನ್ನು ಆರಾಧಿಸಿದ್ದಾರೆ. ಆದರಿಸಿದ್ದಾರೆ.

ಸತ್ಯದ ನಡೆ ಹೇಗೆ ನಡೆಯಬೇಕೆಂಬುದನ್ನು ಆಧಾರವಾಗಿಟ್ಟುಕೊಂಡು ರಾಜ ಮಹಾರಾಜರ ಕಲಿತನವನ್ನು, ಪತಿ ಸತ್ತಾಗ ಸತಿ ಹೋದವರ ದಿಟ್ಟತನವನ್ನು ಉದಾಹರಿಸಿದ್ದಾರೆ.

ನಡೆಯುವುದಕ್ಕಾಗಿ ನುಡಿಯಬೇಕೆ ಹೊರತು, ನುಡಿದೂ ನಡೆಯದಂತಾಗಬಾರದು. ಇದು ಹೇಡಿ ಮನದ ಲಕ್ಷಣ; ಕಲಿತನ ಹೊಂದಿದ ಅರಿವಿನ ಭಕ್ತನ ಲಕ್ಷಣವಲ್ಲ.

679

ಕಬ್ಬಿನ ಹಣೆದವನಾಡುವರಲ್ಲದೆ, ಕಾಯದ ಹಣೆದವನಾಡುವರೆ?
ಮೇಲೊಡ್ಡವಾಯಿತ್ತೆಂದು, ಕೂಡಲಸಂಗಮದೇವಾ,
ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ!

ಕಬ್ಬನ್ನು ತುಂಡು ತುಂಡಾಗಿ ಕತ್ತರಿಸುವ ಕೆಲಸವನ್ನು ಪಣಕ್ಕೆ ಒಡ್ಡಬಹುದು. ನಾ ಮುಂದು ತಾ ಮುಂದು ಎಂದು ಕಬ್ಬು ಕತ್ತರಿಸಿ ಹಾಕಬಹುದು. ಇದನ್ನು ಆಟ ಎಂದು ಪರಿಗಣಿಸಬಹುದು. ಆದರೆ ಕೂಡಲಸಂಗಯ್ಯನಿಕ್ಕಿದ ಆಟ ಅಂತಿಂತಹದಲ್ಲ! ಮಗನನ್ನೇ ಪಣಕ್ಕಿಟ್ಟು ತುಂಡು ತುಂಡಾಗಿ ಕಡಿದು ಅಡಿಗೆ ಮಾಡಿಕೊಡುವಂತೆ ಸಿರಿಯಾಳನಿಗೆ ಪಂದ್ಯವನೊಡ್ಡಿದ. ಪಂದ್ಯದ ನಿಯಮಗಳನ್ನು ಹೇಳಿದ.

ಸಿರಿಯಾಳ ಚೆಂಗಳೆಯರು ಬಲು ಜಾಣರು! ಸಂಗಯ್ಯನೊಡ್ಡಿದ ಪಣದಲ್ಲಿ ಸರಳವಾಗಿ ಗೆದ್ದರು. ಕಾಯದಲ್ಲಿಯೇ ಕೈಲಾಸವನ್ನು ಕಂಡರು.

ಧೃತರಾಷ್ಟ್ರನಿಗೆ ಮಗ ದುರ್ಯೋಧನನ ಮೇಲಿನ ಮೋಹ ಕುರುಡನನ್ನಾಗಿಸಿತು. ಸಭೆಯಲ್ಲಿ ಸಹೋದರರ ಸಂಪತ್ತು ಗೆದ್ದಾಗ ಮಗನನ್ನು ಕೊಂಡಾಡಿದ. ಪಾಂಡವರನ್ನು ದ್ರೌಪದಿಯನ್ನೂ ದಾಸರನ್ನಾಗಿ ಮಾಡಿಕೊಂಡಾಗ ಆನಂದಪಟ್ಟ. ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆ ಸೆಳೆದಾಗ ಕಿವಿಯಿಂದ ಕೇಳಿ ಆನಂದಪಟ್ಟ. ಇಡೀ ಸಭೆಯಲ್ಲಿಯ ಪಂಡಿತರು, ವೀರರು, ಆಚಾರ್ಯರು ಮಮ್ಮಲ ಮರುಗಿದರು. ಲೋಕವೆಲ್ಲಾ ದುರ್ಯೋಧನನನ್ನು ತೆಗಳಿತು. ಆದರೂ ಮಗನ ಮೇಲಿನ ಮೋಹ ಕಳೆದುಕೊಳ್ಳಲು ಧೃತರಾಷ್ಟ್ರನಿಗೆ ಸಾಧ್ಯವಾಗಲಿಲ್ಲ.

ಕುರುಡನನ್ನಾಗಿಸಿತು; ಕಿವುಡನನ್ನಾಗಿಸಿತು. ಇಂತಹ ಅಜ್ಞಾನಿ ಮಗನ ಮೇಲಿನ ಮೋಹವನ್ನು ಕಬ್ಬಿನಂತೆ ಕಡಿ ಕಡಿದು ಅಡಿಗೆ ಮಾಡಲು ಧೃತರಾಷ್ಟ್ರನಿಗೆ ಸಾಧ್ಯವಾಗಲಿಲ್ಲ.

ಶರಣ ದಂಪತಿಗಳಾದ ಸಿರಿಯಾಳ ಚಂಗಳೆಯರಿಬ್ಬರೂ ಮಹಾಜ್ಞಾನಿಗಳು. ಚೀಲಾಳನೆಂಬ ಮಗನ ಮೇಲಿನ ಅಜ್ಞಾನದ ಮೋಹವನ್ನು ಕಬ್ಬಿನಂತೆ ಕಡಿ ಕಡಿದು ಅರಿವಿನ ಸಿಹಿ ಅಡಿಗೆ ಮಾಡಿ ಸಂಗಯ್ಯನಿಗೆ ಉಣಬಡಿಸಿದರು.

ಇದೊಂದು ಅರಿವಿನ ಕತೆ. ತನುವಿನ ಆಳದಲ್ಲಿ ಜ್ಞಾನದ ಸಿರಿ ತುಂಬಿದೆ. ಚೆಲುವಾದ ರೂಪದೊಂದಿಗೆ ಚಂಗಳೆಯಂತೆ ಕಾಣುತ್ತದೆ. ಕೀವು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳು ತೊಗಲಿನ ಚೀಲದಾಳಕ್ಕೂ ತುಂಬಿದ ಅರಿವಿನ ಚೀಲವಿದು! ಮನ ಹೇಗೆ ಬಳಸುತ್ತದೊ ತನು ಹಾಗೆ ಬಳಕೆಯಾಗುತ್ತದೆ!

680

ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.

ಇವೆಲ್ಲ ಹೊರಗಣ ಮಾತು!

ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ.

ಈ ವಚನದಲ್ಲಿ ಸೂಕ್ಷ್ಮಾತಿ ಸೂಕ್ಷ್ಮ ವಿಚಾರ ಅಡಗಿದೆ. ದಾಸೀಮಾರ್ಯರು ತಾವು ನೇಯ್ದ ವಸ್ತ್ರವನ್ನು ಕೊಟ್ಟರು. ಸಿಂಧು ಬಲ್ಲಾಳ ತನ್ನ ವಧುವನ್ನು ಕೊಟ್ಟ. ಭಕ್ತ ಸಿರಿಯಾಳ ತನ್ನ ಮಗನನ್ನು ಕೊಟ್ಟ. ಇವರು ಪ್ರಮಥರೆಂದು ಹೆಸರು ಪಡೆದಿದ್ದಾರೆ. ತಾವು ಪ್ರೀತಿಸುವ ವಸ್ತುವನ್ನು ಕೊಟ್ಟರೆ ಹೊರತು ಅರ್ಥ ಪ್ರಾಣ ಅಭಿಮಾನವನ್ನು ಕೊಡಲಿಲ್ಲವೆಂದಿದ್ದಾರೆ ಬಸವಣ್ಣನವರು.

ಅರ್ಥವೆಂದರೆ ತನು ಅರಿವಿನ ಸಂಪತ್ತಿನಿಂದ ಭರಿತವಾಗಿದೆ. ತನುವಿಗೆ ಪ್ರಾಣವೂ ಅಭಿಮಾನವೂ ಇದೆ. ತನುವಿನಲ್ಲಿ ಇವು ಮೂರು ಸಂಗಮವಾಗಿವೆ. ಇವು ಮೂರೂ ಬಿಡಲು ಬರುವುದಿಲ್ಲ; ಕೊಡಲೂ ಬರುವುದಿಲ್ಲ.

ಕಣ್ಣಿನಲ್ಲಿ ನೋಡುವ ನೋಟದ ಶಕ್ತಿಯಿದೆ. ವಸ್ತುವನ್ನು ನೋಡಿದಾಗ ಅದು ಸಂಪತ್ತೆಂದು ಕಣ್ಣಿನ ಅರಿವಿಗೆ ಬರುತ್ತದೆ.

ಅದು ತನ್ನದೆನ್ನುವ ಅಭಿಮಾನವೂ ಮೂಡುತ್ತದೆ. ಆ ವಸ್ತುವನ್ನು ಕಳೆದುಕೊಳ್ಳುವ ಸ್ಥಿತಿ ಬಂದಾಗ ಪ್ರಾಣ ತನ್ನದೆಂಬ ಅಭಿಮಾನವನ್ನು ತೊರೆದು ವಸ್ತುವನ್ನೇ ಪ್ರಧಾನ ಮಾಡಿ ಹೋರಾಡುತ್ತದೆ.

ವಸ್ತು ಜಡ. ಅದಕ್ಕೆ ಚೇತನವಿಲ್ಲ. ವಸ್ತು ದೊಡ್ಡದೊ? ಪ್ರಾಣ ಮತ್ತು ಅರಿವು (ಅರ್ಥ) ಅಭಿಮಾನಗಳನ್ನು ಹೊಂದಿದ ತನು ದೊಡ್ಡದೊ ಎಂದು ತನು ತಿಳಿಯಬೇಕು. ಇದು ತನುವಿಗೆ ಬಂದೊದಗುವ ಆಪತ್ಕಾಲ.

ವಸ್ತುವೂ ದೊಡ್ಡದಲ್ಲ; ಅರ್ಥ ಪ್ರಾಣ ಅಭಿಮಾನ ಹೊಂದಿದ ತನು ಕೂಡಾ ದೊಡ್ಡದಲ್ಲ. ಸಿಂಧು ಮರಾಳನೆಂಬ ಅರಿವಿನ ಅರಸನೊಬ್ಬನೆ ತನ್ನ ಕೊಟ್ಟವನು.

ನಾನು ಎಂಬ ಅಹಂಕಾರ ತನುವಿನಲ್ಲಿರುವವರೆಗೆ ಯಾವುದನ್ನೂ ಕೊಡಲು ಬರುವುದಿಲ್ಲ. ಅಭಿಮಾನವನ್ನು ಕೊಡಲು ಬರುವುದಿಲ್ಲ ಕಳೆದುಕೊಳ್ಳಲೂ ಬರುವುದಿಲ್ಲ. ಅರಿವನ್ನು ಕೊಡಲು ಬರುವುದಿಲ್ಲ ಕಳೆದುಕೊಳ್ಳಲೂ ಬರುವುದಿಲ್ಲ. ಪ್ರಾಣವನ್ನು ಕೊಡಲು ಬರುವುದಿಲ್ಲ ಕಳೆದುಕೊಳ್ಳಲೂ ಬರುವುದಿಲ್ಲ.

ಕಣ್ಣಿಗೆ ವಸ್ತುವಿನ ಸಹಜ ದರ್ಶನವಾದಾಗ ವಸ್ತು ಪ್ರಧಾನವಲ್ಲ. ಕಣ್ಣು ಕಣ್ಣಿನ ದೃಷ್ಟಿ ಪ್ರಧಾನ. ಕಣ್ಣು ವಸ್ತುವಿನ ಮೇಲೆ ಬೆಳಕು ಚೆಲ್ಲಿ ಅದರ ಬಣ್ಣ ಮಾಟ ನೋಡಿ ಆನಂದ ಪಡುತ್ತದೆ. ಅದು ತನ್ನದು ಪರರದು ಎನ್ನುವ ಅಜ್ಞಾನ ಕಣ್ಣಿಗೆ ಮೆತ್ತುವುದಿಲ್ಲ. ಸೂರ್ಯನ ಬೆಳಕು ಸಕಲ ವಸ್ತುಗಳ ಮೇಲೆ ಬೀಳುತ್ತದೆ. ಸಕಲ ವಸ್ತುಗಳು ಸೂರ್ಯನ ಬೆಳಕಿನ ಗೋಚರಕ್ಕೆ ಬರುತ್ತವೆ. ಆದರೆ ಆ ಬೆಳಕು ಒಂದು ವಸ್ತುವನ್ನು ತನ್ನದೆನ್ನುವುದಿಲ್ಲ. ಏಕೆಂದರೆ ಅದಕ್ಕೆ ಬೆಳಕಿನ ಜಡ ಶಕ್ತಿಯಿದೆಯೇ ಹೊರತು ಚೇತನವಿಲ್ಲ. ಆದರೆ ಕಣ್ಣು ಹಾಗಲ್ಲ; ಅದಕ್ಕೆ ಚೇತನದ ಬೆಳಕು ಚೆಲ್ಲಿ ಬಾಚಿಕೊಳ್ಳದೆ ಆನಂದ ಪಡುವ ಶಕ್ತಿ ಇದೆ. ಹಾಗೆಯೇ ವಸ್ತು ತನ್ನದೆಂದು ಬಾಚಿಕೊಳ್ಳುವ ಅಜ್ಞಾನವೂ ಇದೆ.

ತನುವಿನ ಅರ್ಥ ಪ್ರಾಣ ಅಭಿಮಾನವನ್ನು ಯಾರಿಗಾದರೂ ಕೊಡಲು ಬರುವುದಿಲ್ಲ; ಯಾರಾದರೂ ಕಸಿದುಕೊಳ್ಳಲು ಬರುವುದಿಲ್ಲ. ಕೊಟ್ಟೆನೆಂಬುದು ಬಿಟ್ಟೆನೆಂಬುದು ಹೊರಗಣ ಮಾತು. ತನ್ನ ತಾ ಅರಿವಿನಿಂದ ಕೊಟ್ಟುದೇ ಸಹಜ ಮಾತು. ಅರಿವಿನ ಸಂಗಯ್ಯ ಮೆಚ್ಚುವ

ಮಾತು!

681

ಒಂದು ಮಾತೆನ್ನಬಹುದೆ ಶಬ್ದ ಸಾರಾಯವನು ?
ಒಂದು ಮಾತೆನ್ನಬಹುದೆ ಶರಣ ಸಂಬಂಧವನು ?
ಕೂಡಲಸಂಗಮದೇವರು
ನಂಬಿಗೆ ಓ ಎಂದುದನೊಂದು ಮಾತೆನ್ನಬಹುದೆ ?

ಒಂದು ಮಾತೆನ್ನಬಹುದೆ ಶಬ್ದ ಸಾರಾಯವನು? ಒಂದು ಮಾತೆನ್ನಬಹುದೆ ಶರಣ ಸಂಬಂಧವನು:

ಮಾತಲ್ಲದ ಮಾತನ್ನು ಮಾತೆನ್ನಬಹುದೆ? ಮಾತನಳಿಯುವ ಮಾತನ್ನೂ ಮಾತೆನ್ನಬಹುದೆ? ಶಬ್ದ ನಿಃಶಬ್ದ ಮಾಡಿ ಶಬ್ದವನ್ನೇ ಬ್ರಹ್ಮವಾಗಿಸುವ ಶಬ್ದವನ್ನು ಶಬ್ದವೆನ್ನಬಹುದೆ?

ಕೈಕೇಯಿಯ ಎರಡು ಶಬ್ದಗಳು ರಾಮನನ್ನು ವನವಾಸಕ್ಕಟ್ಟಿದವು. ದ್ರೌಪದಿಯ ಒಂದು ಶಬ್ದ ಪಾಂಡವರನ್ನು ವನವಾಸಕ್ಕಟ್ಟಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ದ್ರೌಪದಿಯ ಶಬ್ದಕ್ಕೆ ಬಲಿಯಾಗಿ ರಕ್ತದ ಕಾಲುವೆ ಹರಿಯಿತು. ಮಹಾಭಾರತವನ್ನೇ ನಿರ್ಮಾಣ ಮಾಡಿತು. ಇಂತಹ ಶಬ್ದಗಳನ್ನು ನಪುಂಸಕ ಮಾಡುವ ಶಬ್ದ ಸಾರಾಯವನು ಮಾತೆನ್ನಬಹುದೆ?

ಒಂದು ಶಬ್ದದಿಂದಲೇ ಎರಡನೇ ಮಹಾಯುದ್ಧವಾಯಿತು ಒಂದು ಲಕ್ಷ ತೊಂಬತ್ತೈದು ಸಾವಿರ ಜನ ಸತ್ತರು. ಶಬ್ದ ಕೇಳಿ ಕೊಂದವರುಳಿಯಲಿಲ್ಲ. ಶಬ್ದ ಮಾಡಿ ಸಾವಿಗೆ ಕಾರಣರಾದವರುಳಿಯಲಿಲ್ಲ. ಶಬ್ದ ಸಾರಾಯವನು ಅರಿಯದಿದ್ದರೆ ಎಷ್ಟು ವಿದ್ಯೆಗಳು ಕಲಿತರೂ ವ್ಯರ್ಥ !

ಶಬ್ದ ತನುವಿನ ಪ್ರೊಡೆಕ್ಟ್ ! ಅದನ್ನು ತನುವೇ ಅರಿಯದಿದ್ದರೆ ಹೇಗೆ? ತನು ಹೊರಚೆಲ್ಲಿದ ಶಬ್ದಗಳಿಂದ ಪ್ರಾಣಿಗಳಿಗೆ ಸಿಟ್ಟು ಬರುವುದಿಲ್ಲ. ಅವುಗಳಿಗೆ ಸಂತೋಷವೂ ಆಗುವುದಿಲ್ಲ; ಕೇಳಿದರೆ ದುಃಖವೂ ಆಗುವುದಿಲ್ಲ ಹಾಗೆಯೇ ಅರಿವಾಗುವುದಿಲ್ಲ. ಶಬ್ದ ನುಡಿಯುವ ಕೇಳುವ ಅರ್ಥೈಸಿಕೊಳ್ಳುವ ಶಕ್ತಿ ತನುಗಳಿಗೊಂದೇ ಇದೆ.

ಒಂದು ಭಾಷೆ ಬಲ್ಲ ದೇಹ ನುಡಿದುದನ್ನು ಆ ಭಾಷೆ ಬಾರದ ದೇಹ ಕೇಳಿಸಿಕೊಳ್ಳಬಹುದು ; ಅರ್ಥೈಸಿಕೊಳ್ಳುವುದಿಲ್ಲ; ಸುಖದುಃಖಗಳ ಬಾಧೆಯಾಗುವುದಿಲ್ಲ. ಭಾಷೆ ಬಲ್ಲ ದೇಹ ಶಬ್ದ ಕೇಳಿಸಿಕೊಂಡು ಹಚ್ಚಿಕೊಂಡಾಗ ಸುಖ ದುಃಖ ಕೋಪತಾಪಗಳುಂಟಾಗುತ್ತವೆ. ಕೊಲೆ ಆತ್ಮಹತ್ಯೆ ಜಗಳ ಯುದ್ಧ ಕಲಹಗಳು ನಡೆಯುತ್ತವೆ. ಸಾವು ನೋವುಗಳು ಸಂಭವಿಸುತ್ತವೆ.

ಶಬ್ದ ಅರ್ಥೈಸಿಕೊಂಡು ಕೇಳಿದರೆ ಪ್ರತಿ ಶಬ್ದದಲ್ಲಿಯೂ ಅರಿವಿದೆ. ಶಬ್ದದಲ್ಲಿಯೇ ಸು-ಶಬ್ದವೂ ಕು-ಶಬ್ದವೂ ಅಡಗಿದೆ. ಶಬ್ದ ಬರೆದರೆ ನಪುಂಸಕವಾಗುತ್ತದೆ. ಓದಿದರೆ ಅರಿವಿಗೆ ಬರುತ್ತದೆ. ಶಬ್ದ ನನಗಾಗಿಯೇ ಅಂದದ್ದು ಎಂದು ಹಚ್ಚಿಕೊಂಡರೆ ಸುಖ ಇಲ್ಲ ದುಃಖವಾಗಿ ಸಾವು ನೋವುಗಳು ಸಂಭವಿಸುತ್ತವೆ.

ಶಬ್ದ ಹಚ್ಚಿಕೊಂಡು ಒಮ್ಮೆ ಕೇಳಿದರೆ ಸಾಕು; ಶಬ್ದ ನುಡಿದ ತನು ಸತ್ತರೂ; ಕೇಳಿದ ತನುವಿನಲ್ಲಿ ಸಂಗ್ರಹವಾದ ಶಬ್ದ ಸಾಯುವುದಿಲ್ಲ. ತನು ಇರುವವರೆಗೂ ಶಬ್ದ ವಿಷಾಣುವಿನಂತೆ

ಮತ್ತೆ ಮತ್ತೆ ತನುವಿನಲ್ಲಿಯೇ ರಿಂಗಣಿಸಿ ತನುವನ್ನು ಹಂತ ಹಂತವಾಗಿ ಕೊಲ್ಲುತ್ತದೆ.

ಮನುಷ್ಯ ಎಷ್ಟೇ ಶಕ್ತಿಶಾಲಿಯಾದರೂ, ಪಂಡಿತನಾದರೂ, ಸಾಹಿತಿ-ಲೇಖಕನಾದರೂ ಭಾಷಾ ಶಾಸ್ತ್ರಜ್ಞನಾದರೂ ತನುವಿನಲ್ಲಿ ಸಂಗ್ರಹಗೊಂಡು ಸುಖ ದುಃಖಗಳನ್ನುಂಟು ಮಾಡುವ ಶಬ್ದವನ್ನು ಅಳಿಸಿಹಾಕಲು ಬರುವುದಿಲ್ಲ. ಶಬ್ದ ಸಾರಾಯವನು ತಿಳಿದ ನಿಃಶಬ್ದವೇದಿಗೆ ಮಾತ್ರ ಶಬ್ದ ನಪುಂಸಕಗೊಳಿಸಿ ಅರಿವಿನಿಂದ ಕೇಳಲು ಸಾಧ್ಯವಾಗುತ್ತದೆ.

ವಚನ ಪಾಲನೆ ತಿಳಿದ ಶ್ರೀರಾಮ ಅದನ್ನು ಜಗತ್ತಿಗೆ ತಿಳಿಸಬೇಕೆಂದು ತಾಯಿ ಕೈಕೇಯಿಯ ಶಬ್ದಗಳನ್ನು ಸುಖದಿಂದ ಸ್ವೀಕರಿಸಿದ. ಸುಖಕ್ಕಾಗಿ ಶಬ್ದ ನುಡಿದ ಕೈಕೇಯಿಗೆ ಸುಖವಾಗಲಿಲ್ಲ. ಶ್ರೀರಾಮ ಹದಿನಾಲ್ಕು ವರ್ಷ ವನವಾಸ ಮುಗಿಸಿ ಬಂದರೂ ಕೈಕೇಯಿಯಲ್ಲಿ ಮಡುಗಟ್ಟಿದ ದುಃಖ ನಿಲ್ಲಲಿಲ್ಲ. ಕೊರಗಿ ಕೊರಗಿ ಸತ್ತಳು. ಪುನಃ ಶ್ರೀರಾಮ ಮಡಿವಾಳನ ಮಾತುಕೇಳಿ ತುಂಬಿದ ಗರ್ಭಿಣಿ ಸೀತಾಮಾತೆಯನ್ನು ಕಾಡಿಗಟ್ಟಿದ. ವಚನ ಪಾಲಿಸುವ ಶಕ್ತಿಯುಳ್ಳ ಶ್ರೀರಾಮ ಮರ್ಯಾದ ಪುರುಷೋತ್ತಮನೆನ್ನಿಸಿಕೊಂಡ.

ವಾಲ್ಮೀಕಿ ಮಹರ್ಷಿಗಳು ಶಬ್ದ ಮತ್ತು ಸ್ಪರ್ಶಜ್ಞಾನದ ಸಾರಾಯದ ಸುಖವನು ಜನ ಓದಿ ಕೇಳಿ ತಿಳಿಯಲೆಂದೆ ಶ್ರೀರಾಮಯಣವನ್ನು ರಚಿಸಿದ. ತನುವಿನಲ್ಲಿ ಕತೆ ಮತ್ತು ಚಿತ್ರಗಳು ಸಂಗ್ರಹವಾದುವೆ ಹೊರತು ಶಬ್ದ ಸಾರಾಯದ ಸುಖ ತಿಳಿಯಲಿಲ್ಲ. ಶಬ್ದವನ್ನು ಭೇದಿಸಿ ತನು ನಿಃಶಬ್ದ ವೇದಿಯಾಗಲಿಲ್ಲ.

ಶಬ್ದ ಯಾವುದಾದರೇನು? ಅದರಲ್ಲಿ ಸಾರಾಯವು ಅಡಗಿದೆ. ಅದು ಹೇಗೆ ಅಡಗಿದೆ ಎಂದು ತಿಳಿಯುವ ಶಿಕ್ಷಣವೇ "ನಿಃಶಬ್ದವೇದಿ ಶಿಕ್ಷಣ"

ಇದು ಶರಣರ ಶಿಕ್ಷಣ ! ಅದಕ್ಕಾಗಿಯೇ ಜ್ಞಾನಭಂಡಾರಿ ಅಣ್ಣ ಬಸವಣ್ಣನವರು: ಶರಣರ ಮಾತನ್ನು ಒಂದು ಮಾತೆನ್ನಬಹುದೆ? ಶರಣರ ಮಾತು ಬರೀ ಮಾತಲ್ಲ; ಮಾತನ್ನು ಅಳಿಯುವ ಮಾತಲ್ಲದ ಮಾತು ! ಅದು ಬರೀ ಶಬ್ದವಲ್ಲ; ಶಬ್ದ ಸಾರಾಯ ! ಒಂದು ಮಾತೆನ್ನಬಹುದೆ ಶರಣ ಸಂಬಂಧವನು ? ಅಂಗದಲ್ಲಿಯೇ ಸಂಗಮವಾದ ಕೂಡಲ ಸಂಗಯ್ಯ ನುಡಿಯುವ ನುಡಿ ಬರೀ ನುಡಿಯಲ್ಲ. ಅಡಿಗಡಿಗೆ ಶರಣರ ಅಡಿಗೆರಗಿ ಶರಣರಿಗೆ ಶರಣು ಹೊಕ್ಕು ಕೇಳಿದಾಗ ನುಡಿಯ ಕರಗಿಸುವ ನುಡಿ ಕರಗತವಾಗುತ್ತದೆ.

ನುಡಿಯಲ್ಲದ ನುಡಿಯನ್ನು ನಂಬಿ; ನಂಬಿ ಕರೆದಾಗ, ನಂಬಿಗೆ ಓ ಎಂದುದನು ಒಂದು ಮಾತೆನ್ನಬಹುದೆ ? ಬಾರದು.

ಸೂಚನೆ: ಹೆಚ್ಚಿನ ವಿವರಗಳಿಗೆ ಸದ್ಗುರು ಶ್ರೀ ವಿದ್ಯಾನಂದ ಶರಣರು ಡಬ್ಬೇರು ಮಡುವು ಅವರು ಬರೆದ ಶರಣೆ ಸತ್ಯಕ್ಕಳ ತೆರೆಹಿಲ್ಲದಭವ ನುಡಿಗೆಡೆಗೊಡನು ಪುಸ್ತಕ ಓದಿ.

682

ಭಕ್ತರೆ ಸಮರ್ಥರು, ಅಸಮರ್ಥರೆಂದೆನಲುಂಟೆ?
ಚೆನ್ನ ನೆತ್ತ, ಚೋಳನೆತ್ತ ?
ಚೆನ್ನನೊಡನುಂಡ ಶಿವನು, ಆಹಾ, ಅಯ್ಯಾ,
ಚೆನ್ನ ಚೋಳನ ಮನೆಯ ಕಂಪಣಿಗನಯ್ಯಾ !

ಕೂಡಲಸಂಗಮದೇವ, ಭಕ್ತಿಲಂಪಟನಯ್ಯಾ !

ಚೆನ್ನಯ್ಯನವರು ಚೋಳನ ಅರಮನೆಯ ಕುದುರೆಲಾಯದಲ್ಲಿ ಕೆಲಸಕ್ಕಿದ್ದವರು. ಕುದುರೆಗಳಿಗೆ ಹುಲ್ಲು ತಂದು ಹಾಕುವುದು ಇವರ ಕೆಲಸವಾಗಿತ್ತು. ಚೆನ್ನಯ್ಯನವರು ನಾಲಗೆಯ ರುಚಿಯ ತತ್ತ್ವ ನಿಪುಣರು. ತಂತ್ರಜ್ಞರು.

ರಾಜನಾದರೇನು ? ರಾಜನ ಕಾಲಾಳಾದರೇನು ? ಇಬ್ಬರ ನಾಲಗೆಯೂ ಒಂದೇ! ನಾಲಗೆಗಳೆರಡೂ ಕಾಲಾಳಲ್ಲ, ರಾಜನೂ ಅಲ್ಲ. ಅದು ಬರೀ ನಾಲಗೆ ಮಾತ್ರ. ಮನಸ್ಸು ನಾಲಗೆಯ ಮೇಲೆ ನೆಲೆಸಿ ಕಾಲಾಳು ಎಂದು ನುಡಿಸಿ ಸ್ವತಹ ರಾಜನಿಗೆ ಸೇವಕನಾಗಿದೆ. ಅದೇ ಮನಸು ನಾಲಗೆಯ ಮೇಲೆ ನೆಲೆಸಿ ಸ್ವತಃ ರಾಜನೆಂದು ನುಡಿದು ಮತ್ತೊಂದು ನಾಲಗೆಯುಳ್ಳ ತನುವನ್ನು ಸೇವಕನನ್ನಾಗಿ ಮಾಡಿಕೊಂಡಿದೆ. ಇವೆರಡು ನಾಲಗೆಯಲ್ಲಿ ವ್ಯತ್ಯಾಸವಿಲ್ಲದಿದ್ದರೂ, ವ್ಯತ್ಯಾಸದ ಅಜ್ಞಾನ ಕಲ್ಪಿಸಿಕೊಂಡು ನಾಲಗೆಯ ಅರಿವನ್ನು ಅದರ ರುಚಿಯ ತತ್ವವನ್ನು ಮನಸ್ಸು ಬಳಸಿಕೊಳ್ಳದೆ ಹಾಗೆಯೇ ಬಿಟ್ಟಿದೆ.

ನಾಲಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ ಎಂದು ಪುರಂದರದಾಸರು ಹಾಡಿದರು. ನಾಲಗೆಯನ್ನಾವರಿಸಿದ ನೀಚಬುದ್ಧಿಯ ಮನವನ್ನು ನಿಂದಿಸಿದರು.

ಚೆನ್ನಯ್ಯ ಶರಣರು ಚೋಳನ ಅರಮನೆಯ ಲಾಯದಲ್ಲಿ ಕೆಲಸಕ್ಕಿದ್ದರೂ ನಾಲಗೆಯ ರುಚಿಯ ತತ್ತ್ವ ಬಲ್ಲ ನಿಪುಣರಾದುದರಿಂದ ಅಂಬಲಿಯನ್ನೆ ಅಮೃತದಂತೆ ಸವಿಯುತ್ತಿದ್ದರು. ಚೋಳನ ನಾಲಗೆಗೆ ಅಮೃತವೂ ಮೃಷ್ಟಾನ್ನವೂ ರುಚಿಸುತ್ತಿರಲಿಲ್ಲ. ಬೆಳಗಿನ ತಿಂಡಿ, ಮಧ್ಯಾಹ್ನ , ರಾತ್ರಿಯ ಊಟಗಳಲ್ಲಿ ಅಡಿಗೆ ಬೇರೆ ಬೇರೆಯೇ ಇರಬೇಕು. ಹಾಗೆ ಇರದಿದ್ದರೆ ಅಡಿಗೆ ಭಟ್ಟನಿಗೆ ಶಿಕ್ಷೆ.

ಚೆನ್ನಯ್ಯ ಅಂಬಲಿಯನ್ನು ಮೂರೂ ವೇಳೆಯಲ್ಲಿಯೂ ಅಮೃತದಂತೆ ಸವಿಯುತ್ತಿದ್ದ. ಪ್ರತಿ ಊಟಕ್ಕೂ ಆನಂದ. ಏಕೆಂದರೆ ರುಚಿಯ ತತ್ತ್ವಬಲ್ಲ ನಿಪುಣನಾಗಿದ್ದ.

ನಾಲಿಗೆ ಜಲದಿಂದ ಆವರಿಸಿಕೊಂಡಿದೆ. ಸಕ್ಕರೆ ಬೆಲ್ಲ ಕಡಲೆ ಜೋಳ ಮೆಣಸಿನಕಾಯಿ ಬೊಳ್ಳೊಳ್ಳಿ, ಈರುಳ್ಳಿಗೂ ಜಲಹರಿದು ಆಯಾ ಪದಾರ್ಥಗಳಾಗಿವೆ. ಅಂಬಲಿಯೂ ಜಲದಿಂದಲೇ, ಮೃಷ್ಟಾನ್ನವೂ ಜಲದಿಂದಲೇ, ನಾಲಗೆಯೂ ಜಲದಿಂದಲೇ ಆಗಿದೆ.

ಜಲಕ್ಕೆ ರುಚಿಯಿಲ್ಲ, ಬಣ್ಣವಿಲ್ಲ, ವಾಸನೆಯಿಲ್ಲ, ಸಮಮಟ್ಟ ಕಾಯ್ದುಕೊಳ್ಳತ್ತದೆ. ಜಲದಿಂದಾದ ಪದಾರ್ಥಕ್ಕೆ ರುಚಿಯಿದೆ, ವಾಸನೆಯಿದೆ. ಜಲದಲ್ಲಿ ಬೆರೆತರೆ ರುಚಿ ವಾಸನೆ ಬಣ್ಣ ಕಳೆದುಕೊಂಡು ಜಲದಂತೆ ಜಲದಲ್ಲಿಯೇ ಸಮವಾಗುತ್ತದೆ.

ತುತ್ತಿನ ಮೊದಲ ರುಚಿಗೆ, ನಂತರ ತುತ್ತುಗಳ ರುಚಿಗೆ ಅಂತರವಿದೆ. ನಾಲ್ಕೈದು ತುತ್ತುಗಳಲ್ಲಿಯೇ ಪದಾರ್ಥ ರುಚಿ ಕಳೆದುಕೊಂಡು ಜಲದಂತಾಗುತ್ತದೆ. ನಾಲ್ಕೈದು ತುತ್ತುಗಳಲ್ಲಿಯೇ ಮನ ವಿಲಿ ವಿಲಿ ಒದ್ದಾಡುತ್ತದೆ. ರುಚಿಗೆ ಮರುಳಾಗಿ ಇಡೀ ಜ್ಞಾನದ ತನುವನ್ನೇ ರುಚಿಗಾಗಿ ಒತ್ತೆ ಇಡುತ್ತದೆ. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ ಎನ್ನುವ ಗಾದೆಯಂತೆ ನಾಲಗೆ ರುಚಿಗಾಗಿ ಪ್ರಾಣ ಕಳೆದುಕೊಳ್ಳುತ್ತದೆ. ಇಲ್ಲ ಪ್ರಾಣ ಕಳೆಯುತ್ತದೆ.

ನಾಲಗೆಯ ರುಚಿಯ ತತ್ತ್ವ ತಿಳಿಯದ್ದಕ್ಕಾಗಿ ಪ್ರಪಂಚದ ಶೇ 20 ಜನರ ಪ್ರಾಣಗಳು ವ್ಯರ್ಥವಾಗಿ ಹೋಗುತ್ತವೆ. ನಾಲಗೆಯಲ್ಲಿರುವ ಅರಿವೇ ಶಿವ. ನಾಲಗೆಗೆ ಆವರಿಸಿದ ಅಜ್ಞಾನವೇ ಮನ. ನಾಲಿಗೆಗೆ ಅರಿವಿನ ರುಚಿ ತಿಳಿಯುವ ಶಕ್ತಿಯೂ; ರುಚಿಗಾಗಿ ಪ್ರಾಣವನ್ನೇ ಕಳೆದುಕೊಳ್ಳುವ

ಅಥವಾ ಕಳೆಯುವ ಅಜ್ಞಾನವೂ ಇದೆ. ನಾಲಿಗೆಯ ಜ್ಞಾನ ಚೆನ್ನಯ್ಯನಂತೆ ನಾಲಿಗೆಗೆ ತಿಳಿದರೆ ಜ್ಞಾನದ ತನುವಾಗುತ್ತದೆ. ನಾಲಗೆಯನ್ನು ಆವರಿಸಿದ ಮನಕ್ಕೆ ನಾಲಗೆಯಲ್ಲಿ ತನ್ಮಯವಾದ ಅರಿವೆಂಬ ಶಿವನನ್ನು ಅರಿಯಲು ತವಕವಾಗಬೇಕು. ಆ ಜ್ಞಾನಕ್ಕೆ ಮನ ಭಕ್ತಿ ಮಾಡಬೇಕು. ಅರಿವೆಂಬ ಸಂಗಯ್ಯನು ಭಕ್ತಿ ಲಂಪಟನು. ಭಕ್ತಿ ಇಲ್ಲದ ಅಜ್ಞಾನಿ ನೀಚ ನಾಲಗೆಗಳನ್ನು ಬಲ್ಲನು.

683

ನಿಸ್ಸೀಮ ಗುಗ್ಗುಳವನ್ನಿಕ್ಕಿದವನೊಬ್ಬ ಶರಣ,
ಉಘೇ ಚಾಂಗು ಭಲಾ ಎಂಬ ಹೊಗೆ ಗಗನವ ತೀವೆ,
ಓಹಿಲನ ಮೆರೆದ ಸೌರಾಷ್ಟ್ರ ಮಂಡಲದಲ್ಲಿ,
ಕೂಡಲಸಂಗಮದೇವ ಭಕ್ತ ವತ್ಸಲನಾಗಿ.

ನಿಃಕುಂಬರಾಯನ ಮಗ ಓಹಿಲ. ಸೌರಾಷ್ಟ್ರದ ವಿಲಾಸವತಿ ನಗರ ಆಳುತ್ತಿದ್ದ. ತಂದೆಯ ಮರಣದ ನಂತರ ರಾಜ್ಯ ತೊರೆದು ಸೋಮೇಶ್ವರನನ್ನು ಆರಾಧಿಸತೊಡಗಿದ . ಜನ ಶಿವಲಿಂಗಕ್ಕೆ ತಂದು ಕೊಡುತ್ತಿದ್ದ ಗುಗ್ಗುಳವನ್ನು ಓಹಿಲ ಅರ್ಪಿಸುತ್ತಿದ್ದ. ಗುಗ್ಗುಳ ಇದೊಂದು ಜಾತಿಯ ಮರ. ಇದರಿಂದ ಬರುವ ಅಂಟು ಲೋಬಾನ.

ಒಂದು ಬಿಂದಿಗೆಯನ್ನು ಅರ್ಧಕ್ಕೆ ಕತ್ತರಿಸಿ ಉಳಿದ ಭಾಗವನ್ನು ಅದರಲ್ಲಿಟ್ಟು ಗುಗ್ಗುಳ ಕಟ್ಟಿಗೆಯಿಂದ ಉರಿಸುವ ಅಗ್ನಿಯ ಮೂಲಕ ಒಡಪು-ವಚನಗಳನ್ನು ಹೇಳುತ್ತ ಆಚರಿಸುವುದೇ ಗುಗ್ಗುಳ ಪೂಜೆ. ರುದ್ರ ಮತ್ತು ವೀರಭದ್ರನ ವಿಶೇಷ ಪೂಜೆ ಗುಗ್ಗುಳದಿಂದಲೇ ನೆರವೇರುವುದು. ಗುಗ್ಗುಳ ಪೂಜೆ ಮಾಡಿ ಮದುವೆ ಮಾಡುವುದೂ ಉಂಟು. ಇದು ತೋರಿಬರುವ ಗುಗ್ಗುಳ !

ನಿಸ್ಸೀಮ ಗುಗ್ಗುಳವನಿಕ್ಕಿದವನೊಬ್ಬ ಶರಣ, ಉಘೇ ಚಾಂಗು ಭಲಾ ಎಂಬ ಗಗನವ ತೀವೆ:

ಜಲಬಿಂದುವಿನ ಬೀಜದಿಂದಲೇ ತನುವಾಗಿದೆ. ಅದರೊಳಗೆ ಕಿಚ್ಚು ಬಚ್ಚಿಟ್ಟುಕೊಂಡಿದೆ ; ಅದು ಉದಕದೊಳಗೆ ಬಯಚಿಟ್ಟ ಬಯಕೆಯ ಕಿಚ್ಚು. ಮನ ತನಗೆ ಬೇಕಾದ ಸುಖ ಬಯಸಿದಾಗೊಮ್ಮೆ ತನುವಿನಲ್ಲಿ ಕಿಚ್ಚು ಹೊತ್ತಿಕೊಂಡು ಉರಿಯುತ್ತದೆ. ಕಾಮ ಕ್ರೋಧ ಲೋಭ ಮದ ಮತ್ಸರಗಳಿಂದಾಗಿ ಅದು ಜ್ವಾಲಾಮುಖಿಯಂತೆ ತನುವನ್ನೆ ಸುಡುತ್ತದೆ.ತನುವಿನಲ್ಲಿ ಹುಟ್ಟಿದ ಈ ಕಿಚ್ಚು ಜಲ ಸುರಿದುಕೊಂಡರೂ ತಣ್ಣಗಾಗುವುದಿಲ್ಲ.

ಬಯಕೆ ಮಾಡಿದಾಗ ಉರಿಯುತ್ತದೆ, ಬಯಸಿದ್ದು ಸಿಗದಿದ್ದಾಗಲೂ ಉರಿಯುತ್ತದೆ. ನೋಡಿದರೂ ಕಿಚ್ಚು, ಕೇಳಿದರೂ ಕಿಚ್ಚು, ಮುಟ್ಟಿ ರುಚಿಸಿದರೂ ಕಿಚ್ಚು. ಓಹಿಲಯ್ಯ ಮಹಾಶರಣ ! ಈ ಕಿಚ್ಚಿಗೆ ಕಾರಣವಾದ ಅರಿಷಡ್ವರ್ಗಗಳನ್ನು ಗುಗ್ಗುಳದಲ್ಲಿ ಹಾಕಿ ಕೊಳ್ಳಿಯನಿಟ್ಟ. ಉಘೇ ಚಾಂಗು ಭಲಾ ಎಂದು ಆನಂದದಿಂದ ಕುಣಿದಾಡಿದ. ಅದರ ಹೊಗೆ ಗಗನದಲ್ಲಿ ವ್ಯಾಪಿಸಿ ಇಲ್ಲವಾಯಿತು. ನಿಸ್ಸೀಮ ಗುಗ್ಗುಳವನ್ನು ಸೌರಾಷ್ಟ್ರ ಸೀಮೆಯಲ್ಲಿ ಅರಿವಿನಿಂದ ಮೆರೆದ.

684

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು.
ಲಿಂಗವಂತರು ತಾವು ಅಂಜಲೇಕೆ ?

ಲಿಂಗವಿರಿಸಿದಂತಿಪ್ಪುದಲ್ಲದೆ
ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ.
ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ
ಬಂದ ನುಡಿಗಳು ; ಲಿಂಗವಂತರು ತಾವು ಅಂಜಲೇಕೆ:

ಲಿಂಗವಂತನಾದವನು ನಿಪುಣ ; ಮಾತು ನೋಟ ಸ್ಪರ್ಶ ರುಚಿ ವಾಸನೆಯ ತತ್ವಬಲ್ಲ ತಂತ್ರಜ್ಞಾನಿ. ಆತ ಯಾರಿಗೂ ಅಂಜುವುದಿಲ್ಲ ; ಅಳುಕುವುದಿಲ್ಲ ; ಲಿಂಗ ಕಟ್ಟಿಕೊಂಡರೆ ಇದು ಸಾಧ್ಯವಾಗುವುದಿಲ್ಲ. ಸಾಧ್ಯವಾದವರು ಲಿಂಗಧರಿಸುವ ಅವಶ್ಯಕತೆಯೂ ಇಲ್ಲ. ಲಿಂಗ (ಅರಿವು) ಎಲ್ಲರಿಗೂ ಇದೆ. ಅರಿವು ಧರಿಸದ ತನುವೇ ಇಲ್ಲ. ಲಿಂಗ ಮಧ್ಯೆ ಜಗತ್‌ಸರ್ವಂ. ಜಗದ ತನುಗಳೆಲ್ಲ ಲಿಂಗದಿಂದಲೇ ಭರಿತವಾಗಿವೆ. ಆದರೆ ಲಿಂಗ (ಅರಿವು) ಧರಿಸಿಕೊಂಡು ಮಾತನಾಡುವ, ನೋಡುವ, ಸ್ಪರ್ಶಿಸಿ ರುಚಿಸಿ ಮೂಸಿಸುವ ನೈಪುಣ್ಯತೆಯ ತಂತ್ರಜ್ಞಾನವನ್ನು ಪಡೆದುಕೊಂಡಿಲ್ಲ. ತನುವಿನಲ್ಲಿ ಲಿಂಗ ಹಾಗೇ ಉಳಿದು ಬಳಕೆಗೆ ಬಾರದೆ ಇರುವುದರಿಂದ ದೃಶ್ಯಕ್ಕೆ , ಶಬ್ದಕ್ಕೆ, ಸ್ಪರ್ಶಕ್ಕೆ ರುಚಿ ಮತ್ತು ವಾಸನೆಗೆ ತನು ಅಂಜುತ್ತದೆ.

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು. ಒಂದು ತನುವಿನ ನಡೆ ನುಡಿಯನ್ನು ಮತ್ತೊಂದು ತನು ಅರಿವಿನಿಂದ ಸ್ವೀಕರಿಸಿದರೆ ; ಸ್ವೀಕರಿಸಿದ ತನುವಿನಲ್ಲಿ ರಸಾಯನಿಕ ಕ್ರಿಯೆ ಹುಟ್ಟುವುದಿಲ್ಲ. ತನುವಿಗೆ ಸುಖ ದುಃಖಗಳು ಉಂಟಾಗುವುದಿಲ್ಲ. ಬದಲಿಗೆ ಅರಿವಿನಿಂದ ಸ್ವೀಕರಿಸಿದ ಶಾಶ್ವತ ಸುಖ ಉಂಟಾಗುತ್ತದೆ.

ತನುವಿನ ನಡೆ ತನುವಿನ ನುಡಿ ತನು ಅರಿಯದಿದ್ದರೆ ಅದು ಲಿಂಗ (ಅರಿವಿನ) ವಶದಲ್ಲಿ ಇಲ್ಲ ಎಂದು ತಿಳಿಯಬೇಕು. ಅರಿವಿನಿಂದ ನಡೆ ನುಡಿಯನ್ನು ಸ್ವೀಕರಿಸಿದರೆ ಆ ತನು ಮಾತ್ರ ಲಿಂಗವಶದಲ್ಲಿದ್ದ ತನು. ಅದು ಭ್ರಮಿತಗೊಳ್ಳುವ ನಡೆ ನುಡಿಗಳನ್ನು ಬ್ರಹ್ಮನಾಗಿ ಸ್ವೀಕರಿಸುತ್ತದೆ.

ಲಿಂಗವಿರಿಸಿದಂತಿಪ್ಪುದಲ್ಲದೆ ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ:

ಅಂಗದಲ್ಲಿಯೇ ಸಂಗಮವಾದ ಅರಿವು ಅಂಗವನ್ನು ಆವರಿಸಿದ ಮನಕ್ಕೆ ಅರಿವಾದರೆ ಅರಿವಿರಿಸಿದಂತೆ ಮನ ಇರುತ್ತದೆ. ಮನ ಅರಿವಿಗೆ ಭಕ್ತನಾದಾಗ ಮಾತ್ರ ಆ ಭಕ್ತನನ್ನು ಸಂಗಯ್ಯ ಅಪ್ಪಿಕೊಳ್ಳುತ್ತಾನೆ. ಇದೊಂದು ಅರಿವಿನ ತಂತ್ರಜ್ಞಾನ ಸೂತ್ರ!

685

ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು ಹೋದಡೆ
ನುಗ್ಗು ಮಾಡುವ, ನುಸಿಯ ಮಾಡುವ;
ಮಣ್ಣ ಮಾಡುವ, ಮಸಿಯ ಮಾಡುವ;
ಕೂಡಲಸಂಗಮದೇವರ ನೆರೆ ನಂಬಿದನಾದಡೆ
ಕಡೆಗೆ ತನ್ನಂತೆ ಮಾಡುವ.

ತನುವಿನ ಮೇಲೆ ಲಿಂಗಧರಿಸಿ, ಮೂರು ಬಾರಿ ನೀರು ಸುರಿದು; ವಿಭೂತಿ ಧರಿಸಿ , ನಾನಾ ಪುಷ್ಪ ಪತ್ರೆಗಳಿಂದ ಪೂಜಿಸಿ ಶಿವ ಭಕ್ತನಾದೆನೆಂದು, ತನ್ನ ಅರಿಷಡ್ವರ್ಗಗಳ ಕಳೆದುಕೊಂಡೆನೆಂದು ತನ್ನ ಹಿಡಿಯಲು ಹೋದಡೆ ನುಗ್ಗು ಮಾಡುವ, ನುಸಿಯ ಮಾಡುವ ; ಮಣ್ಣು ಮಾಡುವ

ಮಸಿಯ ಮಾಡುವ. ಪೂಜಿಸಿದರಾಗದು ; ಅರಿಯದನ್ನಕ್ಕ. ಅರಿತರಾಗದು ಅರಿದು ನಡೆಯದನ್ನಕ್ಕ.

ತನುವಿಗೆ ಧರಿಸಿದ ಶಿವಭಕ್ತ ವೇಷ ಕಾಮ ಕ್ರೋಧ ಲೋಭ ಮದ ಮತ್ಸರಗಳನ್ನು ಸುಡಲರಿಯದು. ತನ್ನನ್ನು ತಾನು ತಿಳಿಯಲರಿಯದು.

ಅಂಗಕ್ಕೆ ಆವರಿಸಿದ ಮನ ಶಿವಭಕ್ತನಾಗಿ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಶಿವನನ್ನು ಆರಾಧಿಸಿ ಪೂಜಿಸಿ ಅರಿವಿನಿಂದ ನೋಡಿ ನಡೆದಾಗ, ಅರಿವೆಂಬ ಸಂಗಯ್ಯ ಅಂಗವನ್ನು ಆವರಿಸಿದ ಮನವನ್ನೇ ಘನಮನವನ್ನಾಗಿ ಮಾಡಿ ತನ್ನಂತೆ ಮಾಡಿಕೊಳ್ಳುತ್ತಾನೆ.

686

ಅರೆವನಯ್ಯ ಸಣ್ಣವಹನ್ನಕ್ಕ,
ಒರೆವನಯ್ಯಾ ಬಣ್ಣಗಾಂಬನ್ನಕ್ಕ,
ಅರೆದಡೆ ಸಣ್ಣನಾಗಿ, ಒರೆದಡೆ ಬಣ್ಣವಾದಡೆ,
ಕೂಡಲಸಂಗಮದೇವನೊಲಿದು ಸಲಹುವನು.

ಮಣ್ಣು ಅಗೆದು ಒಂದು ಟನ್ನು ಕಲ್ಲು ಅರೆದಾಗ ಒಂದು ಗ್ರಾಂ ಚಿನ್ನ ದೊರೆಯುತ್ತದೆ. ಆ ಚಿನ್ನವನ್ನು ಸುಟ್ಟು ಒರೆದು ಶುದ್ಧಿ ಮಾಡಿದಾಗ ಬಣ್ಣಗಾಣುತ್ತದೆ. ಒಳ ಹೊರಗೆನ್ನದೆ ಕಡಿದಂತೆಲ್ಲ ಹೊಂಬಣ್ಣವೇ ಬರುತ್ತದೆ.

ತನುವಿನಲ್ಲಿ ಒಳ ಹೊರಗೆನ್ನದಂತೆ ಕಣ ಕಣದಲ್ಲಿ ಅರಿವು ಬೆರೆತಿದೆ. ಬಣ್ಣವನ್ನು ಲೋಹವನ್ನು ಬೇರ್ಪಡಿಸಲು ಬಾರದ ಚಿನ್ನದಂತೆಯೇ ಅರಿವು ತನ್ಮಯವಾಗಿದೆ. ಹಾಗೆಯೇ ಅರಿಷಡ್ವರ್ಗಗಳು, ಅಷ್ಟಮದಗಳು ಸಪ್ತ ವ್ಯಸನಗಳು, ತನುವನ್ನು ಆವರಿಸಿಕೊಂಡಿವೆ.

ಅರೆದು ಒರೆದು ಬಣ್ಣಗಾಂಬನ್ನಕ್ಕ ಶ್ರಮಿಸಿದರೆ ಅಂಗದಲ್ಲಿಯೇ ಸಂಗಮವಾದ ಚಿನ್ಮಯಿ ಸಂಗಯ್ಯ ಒಲಿದು ಸಲಹುವನು.

687

ಅಂಜಿದಡಾಗದು, ಅಳಕಿದಡಾಗದು, ವಜ್ರ ಪಂಜರದೊಳಗಿದ್ದಡಾಗದು.
ತಪ್ಪದುವೋ! ಲಲಾಟಲಿಖಿತ.
ಕಕ್ಕುಲತೆಗೆ ಬಂದಡಾಗದು, ನೋಡಾ.
ಧೃತಿಗೆಟ್ಟಡೆ ಮನ ಧಾತುಗೆಟ್ಟಡೆ ಅಪ್ಪುದು ತಪ್ಪದು,
ಕೂಡಲಸಂಗಮದೇವಾ.

ಹಣೆಬರಹವನ್ನು ಯಾರೂ ಅಳಿಸಲು ಸಾಧ್ಯವಿಲ್ಲವೆಂದು, ಅಂಜುವುದು ಅಳುಕುವುದು, ಅದರ ಭಯಕ್ಕೆ ಪಂಜರದೊಳಗಿರುವುದು. ಇದು ಮನದ ರೋಗ; ಮನ ತನುವನ್ನು ಹೆದರಿಸಿ ಏನೂ ಮಾಡದಂತೆ ನಿರ್ಧರಿಸಿ ಹಣೆಬರಹಕ್ಕೆ ಒಳಗಾಗಿದೆ.

ಪಂಚಾಂಗ, ಶಾಸ್ತ್ರಕ್ಕೆ ಮಾರುಹೋಗಿ ಮನ ತನುವಿನ ಹಣೆಬರಹವನ್ನು ಕಾಗದದಲ್ಲಿ ಬರೆದ ಶಾಸ್ತ್ರಿಯನ್ನು ಶಾಸ್ತ್ರವನ್ನು ನಂಬಿದೆ. ಶಾಸ್ತ್ರ ಪಂಚಾಂಗವನ್ನು ಬರೆದ ತನುವಿನ ಅರಿವನ್ನೇ ಮನ ಮರೆತು ಹೋಗಿದೆ. ಶ್ರೀ ರಾಮನ ಹಣೆಬರಹವನ್ನು ಯಾರಿಂದಲೂ ಅಳಿಸಲು ಸಾಧ್ಯವಾ

ಗಲಿಲ್ಲ; ಪಾಂಡವರ ಹಣೆಬರಹವನ್ನು ಯಾರಿಂದಲೂ ಅಳಿಸಲು ಸಾಧ್ಯವಾಗಲಿಲ್ಲ ಎಂದು ಧೃಢ ಪಡಿಸಿ ಶಾಸ್ತ್ರದ ಬರಹಕ್ಕೆ ಜನ ಬಲ ನೀಡಿತು. ಆದರೆ ಅರಿವನ್ನು ಬಳಕೆ ಮಾಡಿ ಶಾಸ್ತ್ರದಲ್ಲಿ ಬರೆದ ಬರಹವನ್ನು ಕಿತ್ತೆಸೆಯಲು ಸಾಧ್ಯ! ಅಂಗದಲ್ಲಿಯೇ ಸಂಗಮವಾದ ಸಂಗಯ್ಯನ ನಂಜಿದರೆ ಹಣೆಯಲ್ಲಿ ಬರೆದ ಹಣೆಬರಹ ಕಿತ್ತೆಸೆಯಲು ಸಾಧ್ಯ.

688

ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ
ತಪ್ಪದು ನೋಡಯ್ಯಾ.
ಎನಗಿನ್ನೆಂತೊ, ಎನಗಿನ್ನೆಂತೊ, ಎನಗಿನ್ನೆಂತೊ ಎಂದೆನಬೇಡ
ನಾಭುಕ್ತಂ ಕ್ಷೀಯತೇ ಕರ್ಮ ಎಂಬ ಶ್ರುತಿ ತಪ್ಪದು
ಕೂಡಲಸಂಗಮದೇವಾ.

ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ ತಪ್ಪದು ನೋಡಯ್ಯಾ:

ಕಬೀರದಾಸರು ಬಹಳ ದೊಡ್ಡ ಸಂತರು. ಅವರ ಹೆಸರು ಎಲ್ಲೆಡೆ ಪಸರಿಸಿತು. ಆಸ್ಥಾನ ದಲ್ಲಿಯೂ ಅವರದೇ ಮಾತು. ಪಂಡಿತರಿಗೆ ಶಾಸ್ತ್ರಿಗಳಿಗೆ ಇದು ಸರಿ ಎನ್ನಿಸಲಿಲ್ಲ. ಅವರು ವಾದ ವಿವಾದದಲ್ಲಿ ಗೆದ್ದು ಪಂಡಿತರೆನ್ನಿಸಿಕೊಂಡವರು. ಕಬೀರದಾಸರು ಯಕಃಶ್ಚಿತ್ತ ಒಬ್ಬ ಫಕೀರ.

ಕಬೀರದಾಸರ ಹೆಸರಿಗೆ ಮಸಿ ಬಳಿಯಬೇಕೆಂದು ಪಂಡಿತರು ಯೋಚಿಸಿದರು. ನಗರದ ವೇಶ್ಯೆಯೊಬ್ಬಳು ಆಸ್ಥಾನಕ್ಕೆ ಬಂದು ರಾಜನಿಗೆ ದೂರನಿತ್ತಳು. ಕಬೀರದಾಸರು ನನ್ನ ಗಂಡ. ಈ ನ ಗರದಲ್ಲಿಯೇ ಅವರು ತಂಗಿದ್ದಾರೆ. ನನ್ನನ್ನು ಬಿಟ್ಟು ನನಗೆ ಅನ್ಯಾಯ ಮಾಡಿದ್ದಾರೆ. ನಾನು ಹೇಗೆ ಬದುಕಲಿ? ದಯವಿಟ್ಟು ನನಗೆ ನ್ಯಾಯಕೊಡಿಸಿ. ನನ್ನ ಗಂಡನ ಜೊತೆಗೆ ನಾನು ಬಾಳುವಂತೆ ಮಾಡಿ. ಎಂದು ಮನವಿ ಮಾಡಿಕೊಂಡಳು.

ಆಸ್ಥಾನದಲ್ಲಿದ್ದ ಹಿರಿಯರು, ಪಂಡಿತರು, ಸೇನಾಧಿಪತಿಗಳು ನೆರೆದ ಸಭೆ ಹುಬ್ಬೇರಿಸಿತು. ಸಂತರನ್ನು ನಾವು ಒಳ್ಳೆಯವರೆಂದು ತಿಳಿದುಕೊಂಡಿದ್ದೆವು. ಆದರೆ ಅವರು ಒಳ್ಳೆಯವರಲ್ಲ ಎಂದು ಮಾತನಾಡಿಕೊಂಡಿತು. ರಾಜ ಸೈನಿಕರನ್ನು ಕಳಿಸಿ ಕಬೀರರನ್ನು ಹಿಡಿದು ತರಿಸಿದ. ತುಂಬಿದ ಸಭೆಯಲ್ಲಿ ಕಬೀರರನ್ನು ನೋಡಿದ ಹೆಂಗಸು ಇವರೇ ನನ್ನ ಗಂಡ. ನನ್ನನ್ನು ಬಿಟ್ಟು ಈ ನಗರ ಸೇ ರಿದ್ದಾರೆ ಎಂದು ಗೋಗರೆದು ಅಳಹತ್ತಿದಳು.

ಕಬೀರರು ಒಂದು ಕ್ಷಣವೂ ವಿಚಲಿತರಾಗಲಿಲ್ಲ. ಪಾಲಿಗೆ ಬಂದುದನ್ನು ಅನುಭವಿಸಲೇಬೇಕೆಂದು ನಿರ್ಧರಿಸಿದರು. ರಾಜ ಪ್ರಶ್ನಿಸಿದರು. ಕಬೀರರೆ ಇವಳು ನಿಮ್ಮ ಹೆಂಡತಿಯೇ? ಕಬೀರರು ಸಭೆಯಲ್ಲಿ ಹೌದೆಂದು ಒಪ್ಪಿಕೊಂಡರು. ತಾವು ಎಲ್ಲಿಗೆ ಹೋಗಿದ್ದಿರಿ? ಇಷ್ಟು ದಿವಸ ಹೇಗಿದ್ದಿರಿ? ಬನ್ನಿ ಮನೆಗೆ ಹೋಗೋಣ ಎಂದು ಹೆಂಗಸನ್ನು ಕರೆದರು.

ನಿತ್ಯ ಸುಖದ ಸುಪ್ಪತಿಗೆಯಲ್ಲಿ ಮೆರೆದ ವೇಶ್ಯೆ ಕಬೀರರ ಮಾತುಕೇಳಿ ವಿಚಲಿತಳಾದಳು. ಅವಳಿಗೆ ಕಬೀರರನ್ನು ಅಪಮಾನ ಮಾಡುವುದಕ್ಕಾಗಿ ಮಾತ್ರ ಒಪ್ಪಂದವಾಗಿತ್ತು. ಆದರೆ ಹೆಂಡತಿ ಎಂದು ಸ್ವೀಕರಿಸಿ ಮನೆಗೆ ಕರೆಯುತ್ತಿದ್ದಾರೆ: ಕಬೀರರು ವಾಸಿಸಿದ್ದು ಮನೆಯಲ್ಲ ; ಅದೊಂದು ಮುರುಕು ಗುಡಿಸಲು. ಸೂರ್ಯನ ಬೆಳಕು, ಗಾಳಿ, ಮಳೆ, ಚಂದ್ರನ ಬೆಳದಿಂಗಳು

ಅದರಲಿಯೇ. ನಿತ್ಯ ಭಿಕ್ಷೆ ತಂದುದನ್ನೇ ಉಣ್ಣಬೇಕು. ಈ ಒಪ್ಪಂದದಿಂದ ವೇಶ್ಯೆಗೆ ಹೆದರಿಕೆಯಾಯಿತು. ಕೂಡಲೇ ರಾಜನಲ್ಲಿ ಕ್ಷಮೆ ಬೇಡಿದಳು. ಇದು ಸಂತರು ಕಟ್ಟಿದ ತಾಳಿಯಲ್ಲ. ತಮ್ಮ ಪಂಡಿತರು ಕಬೀರರನ್ನು ಅಪಮಾನಗೊಳಿಸಲು ನನಗೆ ದುಡ್ಡಿನ ಆಮಿಷ ಒಡ್ಡಿದರು. ಅದಕ್ಕಾಗಿ ಈ ವೇಷ ಧರಸಿದೆ. ನಾನು ಈ ನಗರದ ವೇಶ್ಯೆ ಎಂದು ಸತ್ಯ ನುಡಿದಳು.

ಕಬೀರದಾಸರು ತಮಗೆ ಬಂದ ಆಪತ್ಕಾಲವನ್ನು ಎನಗಿನ್ನೆಂತೋ, ಎನಗಿನ್ನೆಂತೋ ಎಂದು ಉಸುರಲಿಲ್ಲ. ಪಾಲಿಗೆ ಬಂದದ್ದು ಪಂಚಾಮೃತ ಎಂದು ಆ ವಿಷವನ್ನೇ ಸವಿದರು. ಅದು ಅಲ್ಲಿಯೇ ನಿರ್ವಿಷಯವಾಗಿ ಗೋಚರಕ್ಕೆ ಬಂತು. ಸತ್ಯಕ್ಕೆ ಶರಣುಹೋಗಿ ಸಂತನಾದ ಕಬೀರ ಸತ್ಯದ ಸವಿಯನು ಆನಂದದಿಂದ ಸವಿದ. ಅದು ಕಲ್ಲುಸಕ್ಕರೆಗಿಂತಲೂ ಸಿಹಿಯಾಯಿತು.

689

ಆಯುಷ್ಯ ತೀರಿದಲ್ಲದೆ ಮರಣವಿಲ್ಲ.
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ.
ಅಂಜಲದೇಕೋ ಲೋಕ ವಿಗರ್ಭಣೆಗೆ?
ಅಂಜಲದೇಕೋ, ಕೂಡಲಸಂಗಮದೇವಾ ನಿಮ್ಮಾಳಾಗಿ.

ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ :

ಶಬ್ದ ಸುಖಕ್ಕೆ ಮೆಚ್ಚಿ ಮಾತಿಗೆ ಮಾತು ಕೊಟ್ಟು ಬದುಕುವುದು ಬದುಕಲ್ಲ. ಇದರಿಂದ ಅನುಭಾವ ವೃದ್ಧಿಯಾಗುವುದಿಲ್ಲ. ತನು ಅನೇಕ ಸಂಪತ್ತುಳ್ಳ ಸ್ವ ಅನುಭಾವದ ಅಮೃತದ ಕೊಡ. ತನುವಿಗೆ ಮರಣ ಉಂಟು. ಅದರ ಆಯುಷ್ಯವನ್ನು ಅದು ಪಡೆದುಕೊಂಡು ಬಂದಿದೆ. ಅದು ತೀರುವವರೆಗೆ ಅದಕ್ಕೆ ಮರಣವಿಲ್ಲ. ಆದರೆ ತನುವಿನಲ್ಲಿಯೇ ತನ್ಮಯವಾದ ಅರಿವಿನ ಅಮೃತ ತನುವನ್ನು ಆವರಿಸಿದ ಮನಕ್ಕೆ ದೊರೆಯದಿದ್ದರೆ ಆ ತನುವಿಗೆ ದಾರಿದ್ರ್ಯ ತಪ್ಪಿದ್ದಲ್ಲ. ಬಾಹ್ಯ ಶ್ರೀಮಂತಿಕೆ ಅನುಭಾವದ ಶ್ರೀಮಂತಿಕೆಯನ್ನು ಸರಿಗಟ್ಟದು. ಅನುಭಾವಕ್ಕೆ ಸಂಪತ್ತು ತೃಣ! ಅದಕ್ಕಾಗಿಯೇ ಬುದ್ಧ ಮಹಾವೀರ ಬಸವಾದಿ ಶರಣರು ದಾಸವರೇಣ್ಯರು ಅನುಭಾವದ ಅಮೃತಕ್ಕೆ ಬೆನ್ನು ಬಿದ್ದರು. ಶ್ರೀಮಂತಿಕೆಯನ್ನು ತೃಣವಾಗಿ ಕಂಡರು.

ಅಮೃತ ಕೊಡವ ತುಂಬಿ ಒಡೆಯ ಹೊಯ್ದು ಅರಸಲುಂಟೆ? ಅನುಭಾವದ ಅಮೃತ ಪುಸ್ತಕದಲ್ಲಿ ತುಂಬಿಲ್ಲ. ಅದು ತನುವಿನ ಕೊಡದಲ್ಲಿ ಭರಿತವಾಗಿದೆ. ಮನ ಬರೀ ಮಾತಿನ ಬೆನ್ನು ಹತ್ತಿದರೆ ಕೊಡವನು ಹೊಡೆದು; ಪುಸ್ತಕ ಪುಣ್ಯ ಕ್ಷೇತ್ರಗಳಲ್ಲಿ ಹುಡುಕಿದಂತೆ, ತನು ಸವೆದು ತನ್ನ ಆಯುಷ್ಯವನ್ನು ಅಮೃತವನ್ನು ಕಳೆದುಕೊಳ್ಳುತ್ತದೆ.

ಮರಣ ತಂದುಕೊಳ್ಳಬೇಕಿಲ್ಲ, ಭಾಷೆ ಕೊಟ್ಟು ದಾರಿದ್ರ್ಯ ತಂದುಕೊಳ್ಳಬೇಕಿಲ್ಲ. ಲೋಕದ ಮಾತಿಗೆ ಅಂಜಬೇಕಿಲ್ಲ. ಅನುಭಾವದ ಅಮೃತ ಲೇಪಿಸಿ ಮಾತು ಸ್ವೀಕರಿಸಿದರೆ ಅದು ಮಾತಲ್ಲದ ಮಾತಾಗಿ ತನು ಸೇರುತ್ತದೆ. ತನುವನ್ನು ಕಲಕುವುದಿಲ್ಲ. ಅರಿವಿನ ಗುರುದೇವನ ಆಳಾದ ಮೇಲೆ ಲೋಕದ ಮಾತಿಗೆ ಅಂಜಲದೇಕೋ? ಲೋಕ ಮಾತನರಿಯದು. ಶರಣ ನಿಃಶಬ್ದವೇದಿ. ಶಬ್ದವನ್ನು ಅರಿವಿನಿಂದ ಭೇದಿಸಿ ಅನಾವರಣ ಮಾಡಿ ಸ್ವೀಕರಿಸುವ ಶಕ್ತಿ ಆತನಿಗೆ ಮಾತ್ರ ಇದೆ. ಲೋಕಕ್ಕೆ ಇದು ತಿಳಿಯದು. ಕಾರಣ ಲೋಕದ ಮಾತಿನ ಚಿಂತೆ ಶರಣನಿಗಿಲ್ಲ !

ಮನ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ,
ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು.
ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭ ಸೂಚನೆ ಒಂದಾಗಿರದ
ನಚ್ಚು ಮಚ್ಚು ಪಾರವೈದುವುದೆ?
ಶಿರ ಹರಿದರೇನು? ಕರುಳು ಕುಪ್ಪಳಿಸಿದಡೇನು ?
ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದಡೇನು?
ಚಿತ್ತ ಮನ ಬುದ್ಧಿ ಒಂದಾದ ಮಚ್ಚು ಬಿಚ್ಚಿ ಬೇರಾಗದಿದ್ದಡೆ
ಮೆಚ್ಚುವ ನಮ್ಮ ಕೂಡಲಸಂಗಮದೇವಾ.

ಜ್ಞಾನ ಭಂಡಾರಿ ಬಸವಣ್ಣನವರು ಈ ವಚನದಲ್ಲಿ ತನುವಿನ ಜ್ಞಾನದ ಮೂಲಕ್ಕೆ ಹೋಗುವ ಸೂತ್ರ ಹೆಣೆದಿದ್ದಾರೆ. ಚಿತ್ತ ಬುದ್ಧಿ ಮನ ಅರಿವು ಪ್ರಾಣದ ಸಂಪೂರ್ಣ ತಂತ್ರಜ್ಞಾನವೇ ಈ ವಚನದಲ್ಲಿದೆ.

ಮನ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು:

ಚಿನ್ನ ನೋಡಿ ಖರೀದಿಸಿ ಆಭರಣ ಮಾಡಿಸಿ ತನುವಿನೊಂದಿಗೆ ಸಂತೋಷ ಪಡುವ ಮನ ಒಂದು. ಖರೀದಿಸಲಾಗದೆ ತನುವಿನೊಂದಿಗೆ ಕಳುವು ಮಾಡಿ ಸುಖಿಸುವ ಮನ ಒಂದು. ಖರೀದಿಸುವಾಗ ಮನಕ್ಕೆ ಬಳಕೆಯಾಗುವ ಮನ ಒಂದು. ಖರೀದಿಸಲಾಗದೆ ತನುವಿನೊಂದಿಗೆ ಕಳುವಿಗೆ ಬಳಕೆಯಾಗುವ ಮನ ಒಂದು. ಚಿನ್ನ ಖರೀದಿಸುವಾಗಲೂ, ಕಳುವು ಮಾಡುವಾಗಲೂ ಇದು ಬೇಕೆ ? ಎಂದು ಪ್ರಶ್ನಿಸುವ ಅರಿವು ಒಂದು.

ತನುಗಳೆಲ್ಲ ಒಂದೇ; ಮನಗಳೆಲ್ಲ ಒಂದೇ; ಅರಿವು ಕೂಡಾ ಒಂದೇ. ಆದರೂ ಮನ ಮನ ಒಂದಾಗುತ್ತಿಲ್ಲ ; ಅರಿವು ಅರಿವು ಒಂದಾಗುತ್ತಿಲ್ಲ ; ತನು ತನುಗಳು ಒಂದಾಗುತ್ತಿಲ್ಲ; ಅರಿವಿನಿಂದ ನೋಡಲು ಹೋದರೆ ಅರಿವು ಮನ ಚಿತ್ತ ಬುದ್ಧಿ ಪ್ರಾಣ ತನುವಿನಲ್ಲಿ ಬಂಧಿಯಾಗಿ ತನು ಮಾತ್ರ ಕಾಣುತ್ತದೆ. ಆದರೂ ತನುವಿನಲ್ಲಿ ಮನ ಆವರಿಸಿ ಚಿತ್ತ ಬುದ್ಧಿಯಿಂದ ತನುವನ್ನೇ ಛಿದ್ರ ಛಿದ್ರಗೊಳಿಸಿ ನರಕಯಾತನೆಯನ್ನು ಅನುಭವಿಸುತ್ತಿದೆ.

ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭ ಸೂಚನೆ ಒಂದಾಗಿರದ ನಚ್ಚು ಮಚ್ಚು ಪಾರವೈದುವುದೆ :

ಮನಕ್ಕೆ ಹಾದರದ ವಿಷಯ ಸುಖ ಬೇಕೆನಿಸಿದಾಗ ತನುವನ್ನು ಪ್ರಾಣದೊಂದಿಗೆ ಕರೆದು ಕೊಂಡು ಹೋಗಿ ಮನ ಸುಖಿಸುತ್ತದೆ. ಆಗ ಪ್ರಾಣಕ್ಕೆ ಭೀತಿಯಿಲ್ಲ. ಸುಖವೂ ಇಲ್ಲ. ಮನದ ಸುಖದ ಕ್ರಿಯೆಯಲ್ಲಿ ಪ್ರಾಣ ಭಾಗಿಯಲ್ಲ. ಆದರೂ ಮನ ಹೇಳಿದಂತೆ ಕೇಳಿ ತನು ಪ್ರಾಣಗಳೆರಡು ಮನದ ದುಷ್ಕ್ರಿಯೆಯಲ್ಲಿ ಭಾಗಿಯಾಗುತ್ತವೆ. ನಂತರ ತನುವಿಗೆ ಪ್ರಾಣಕ್ಕೆ ಪ್ರಾಣ ಭೀತಿಯುಂಟಾಗುತ್ತದೆ. ಪ್ರಾಣ ಪ್ರಾಣ ಒಂದಾಗಿ ಶುಭ ಅಶುಭ ಸೂಚನೆಯ ಅರಿವಾಗದಿದ್ದರೆ ಪ್ರಾಣ ಪ್ರಾಣ ಮನ ಮನ ತನುವಿನಲ್ಲಿ ಒಂದಾಗಿ ಕಂಡರೂ ಅರಿವಿನ ದಡ ಸೇರಲು ಅರಿಯವು.

ಚಿತ್ತ ಮನ ಬುದ್ಧಿ ಒಂದಾದ ಮಚ್ಚು ಬಿಚ್ಚಿ ಬೇರಾಗದಿದ್ದಡೆ ಮೆಚ್ಚುವ ನಮ್ಮ ಕೂಡಲಸಂಗಮದೇವ :

ತನುವಿನ ಶಿರ ಹರಿದಡೇನು ? ಕರುಳು ಕುಪ್ಪಳಿಸಿದಡೇನು ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದಡೇನು ? ಮನ ಅರಿವು ಚಿತ್ತ ಬುದ್ಧಿ ಪ್ರಾಣ ತನುವಿನಲ್ಲಿ ಬಿಚ್ಚಿ ಬೇರಾಗದೆ ಒಂದಾಗಿದ್ದಲ್ಲಿ ಅದು ಅಚ್ಚು ಮೆಚ್ಚಿನ ತನು.

ತನುವಿನಲ್ಲಿರುವ ಚಿತ್ತ ವಸ್ತುವಿನ ಮೇಲೆ ನೆಟ್ಟರೆ ಬುದ್ಧಿ ವಸ್ತುವನ್ನು ಪಡೆಯಲು ಯೋಜನೆ ಹಾಕುತ್ತದೆ. ಮನ ಪ್ರಾಣ ತನುವಿನೊಂದಿಗೆ ವಸ್ತುವನ್ನು ಪಡೆದು ಸುಖಿಸುತ್ತದೆ. ವಸ್ತು ಪ್ರಧಾನವಾಗಿ ತನು ಅರಿವು ಪ್ರಾಣ ಗೌಣವಾಗುತ್ತದೆ. ಚಿತ್ತ ಬುದ್ಧಿ ಮನ, ತನು ಪ್ರಾಣ ಮತ್ತು ಅರಿವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ಚಿತ್ತ ವಸ್ತುವಿನ ಸತ್ಯದತ್ತ ನೆಟ್ಟರೆ ಮನಕ್ಕೆ ವಸ್ತು ಗೌಣವಾಗಿ ಅರಿವು ಪ್ರಧಾನವಾಗುತ್ತದೆ. ಚಿತ್ತ ಬುದ್ಧಿ ಮನ, ತನು ಪ್ರಾಣ ಅರಿವಿನಲ್ಲಿ ನೆಟ್ಟು ಬಿಚ್ಚಿ ಬೇರಾಗದಂತೆ ಒಂದಾಗಿ ಅರಿವಿನ ತನುವಾಗುತ್ತದೆ. ಜಗದಗಲ ಮುಗಿಲಗಲಕ್ಕೂ ಪಸರಿಸಿ ವಿರಾಟ ಸ್ವರೂಪವೇ ತಾನಾಗುತ್ತದೆ.

ಮಾಹೇಶ್ವರ ಮಾಹೇಶ್ವರಸ್ಥಲ

691

ಎನಿಸೆನಿಸೆಂದಡೆ ನಾ ಧೃತಿಗೆಡೆನಯ್ಯಾ ;
ಎಲುದೋರಿದಡೆ, ನರ ಹರಿದಡೆ, ಕರುಳು ಕುಪ್ಪಳಿಸಿದಡೆ
ನಾ ಧೃತಿಗೆಡೆನಯ್ಯಾ.
ಶಿರ ಹರಿದು ಅಟ್ಟೆ ನೆಲಕ್ಕೆ ಬಿದ್ದಡೆ,
ನಾಲಗೆ ಕೂಡಲಸಂಗಾ, ಶರಣೆನ್ನುತ್ತಿದ್ದೀತಯ್ಯಾ !

ಹೌದೆನ್ನಿಸಿಕೊಳ್ಳುವುದು, ಅಲ್ಲ ಎನ್ನಿಸಿಕೊಳ್ಳುವುದು ತನುವಿನಲ್ಲಿ ಮನದಿಂದಾಗಿ ನಡೆಯುವ ಒಂದು ರಸಾಯನಿಕ ಕ್ರಿಯೆ ! ಅರಿವು ಬಳಕೆಯಾಗದೆ ಅಜ್ಞಾನದಿಂದಾಗಿ ತನುವಿನಲ್ಲಿ ಎರಡು ವಿಧದಲ್ಲಿ ರಸಾಯನಿಕ ಕ್ರಿಯೆಗಳು ಉಂಟಾಗುತ್ತದೆ.

ಹೌದು ಎಂದು ಜನ ಹೊಗಳಿದರೆ, ಮನ ಹೊಗಳಿಕೆಯನ್ನು ಅಜ್ಞಾನದಿಂದ ಸ್ವೀಕರಿಸಿ ತನುವಿನಲ್ಲಿ ಸುಖದ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ಇದರಿಂದಾಗಿ ತನು ಅರಳುತ್ತದೆ. ಅಲ್ಲ ಎಂದು ಜನ ತೆಗಳಿದರೆ ಮನ ತೆಗಳಿಕೆಯನ್ನು ಅಜ್ಞಾನದಿಂದ ಸ್ವೀಕರಿಸಿ ತನುವಿನಲ್ಲಿ ದುಃಖದ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ಇದರಿಂದಾಗಿ ತನು ಕೆರಳುತ್ತದೆ. ಇವೆರಡೂ ಶಬ್ದಗಳು ಅಜ್ಞಾನದಿಂದಾಗಿ ತನುವಿನಲ್ಲಿ ಸಂಗ್ರಹವಾಗಿ ತನು ಇರುವವರೆಗೆ ಮತ್ತೆ ಮತ್ತೆ ನೆನಪಿಗೆ ಬಂದು ಅರಳುವ ಕೆರಳುವ ಕ್ರಿಯೆಯಲ್ಲಿ ತನು ತೊಡಗುತ್ತದೆ.

ತನುವಿಗೆ ಬಡಿದ ಶಬ್ದವನ್ನು ಮನ ಅರಿವಿಗೆ ಹೋಗಿ ಅರಿವಿನ ಮೂಲಕ ಸ್ವೀಕರಿಸಿದರೆ ಸುಖ ದುಃಖಗಳನ್ನುಂಟು ಮಾಡುವ ಶಬ್ದಗಳಿಂದ ತನು ಅರಳುವುದಿಲ್ಲ ; ಕೆರಳುವುದಿಲ್ಲ. ಶಬ್ದದಿಂದ ಉಂಟಾಗುವ ತೊಂದರೆಯಿಂದ ಎಲುಬು ಮುರಿದರೇನು, ಮಾಂಸ ಹೊರಚೆಲ್ಲಿದರೇನು

ಕರುಳು ಹರಿದು ಬಿದ್ದರೇನು, ಶಿರಹರಿದು ದೇಹ ನೆಲಕ್ಕೆ ಬಿದ್ದರೇನು ಮನ ಅರಿವಿಗೆ ಶರಣು ಹೋಗಿ ತನು ಧೃತಿಗೆಡುವುದಿಲ್ಲ. ನಾಲಗೆ ಸಮಾಧಾನದಿಂದ ಅರಿವಿನ ನುಡಿಗಳನ್ನ ನುಡಿಯುತ್ತದೆ.

ತನುವಿನಲ್ಲಿ ತನ್ಮಯವಾದ ಮಹಾಜ್ಞಾನವನ್ನು ಬಳಕೆ ಮಾಡಿಕೊಂಡ ಮನ ಮಹವೇ ತಾನಾಗಿ ಮಹಾದೇವನಾಗುತ್ತದೆ.

692

ಒಣಗಿಸಿ ಎನ್ನ ಘಣಘಣಲನೆ ಮಾಡಿದಡೆಯೂ,
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ,
ಶರಣೆಂಬುದ ಮಾಣೆ, ಮಾಣೆ.
ಕೂಡಲಸಂಗಮದೇವಯ್ಯಾ , ಎನ್ನ ಹೆಣನ ಮೇಲೆ
ಕಂಚಿಟ್ಟುಂಡಡೆಯೂ ಮಾಣೆ , ಮಾಣೆ.

ಒಣಗಿಸಿ ಎನ್ನ ಘಣ ಘಣಲನೆ ಮಾಡಿದಡೆಯೂ ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ :

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ತನುವನ್ನು ಪರೀಕ್ಷೆಗೆ ಒಡ್ಡಿ, ಕಾಡಿಸಿ ಘಣ ಘಣಲನೆ ಜಾಡಿಸಿದಡೆಯೂ ಪ್ರಾಣವುಳ್ಳನ್ನಕ್ಕ , ತನುವಿನಲ್ಲಿಯೇ ತನ್ಮಯವಾದ, ನಿಮ್ಮ ಶ್ರೀಚರಣವ ನೆನೆಯುವುದನ್ನು ಬಿಡುವುದಿಲ್ಲ . ಬಿಡೆ ಬಿಡೆ ನಿಮ್ಮಲ್ಲಿ ಶರಣು ಹೋಗುವುದನ್ನು ಬಿಡೆ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಮನಾಥನೇ, ನಿನ್ನತ್ತ ಬಾರದಿರಲು ಮನಕ್ಕೆ ಯಾವ ಆಸೆ ಆಮಿಷಗಳನ್ನು ತಂದೊಡ್ಡಿದರೂ ಕಠಿಣ ಶಿಕ್ಷೆಯನಿತ್ತು ದೇಹವನ್ನು ಹೆಳವ ನಂತೆ ಮಾಡಿ ಅದರ ಮೇಲೆ ಕಂಚಿನ ತಟ್ಟೆಯಿಟ್ಟು ಉಂಡಡೆಯೂ ಮಾಣೆ, ಮಾಣೆ, ನಿಮ್ಮ ಅರಿವಿನ ಶ್ರೀಚರಣವ ನೆನೆವುದ ಮಾಣೆ !

693

ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ ತಲೆದಂಡ, ತಲೆದಂಡ !
ಹುಸಿಯಾದಡೆ , ದೇವ, ತಲೆದಂಡ , ತಲೆದಂಡ !
ಕೂಡಲಸಂಗಮದೇವಾ , ನೀವಲ್ಲದೆ ಅನ್ಯವ ನೆನೆದಡೆ
ತಲೆದಂಡ , ತಲೆದಂಡ !

ಮನಕ್ಕೆ ಅರಿವಾಗದಿದ್ದರೆ ಹಗಲಾದರೇನು , ರಾತ್ರಿಯ ಸ್ವಪ್ನವಾದರೇನು , ಸುಷುಪ್ತಿ ಯಾದರೇನು ? ತನುವಿನೊಂದಿಗೆ ಹಾದರ ಮಾಡುವುದು ತಪ್ಪುವುದಿಲ್ಲ. ಮನವೇ ತನುವಿಗೆ ಕುತ್ತಾಗಿ ಕಾಡುವುದು ತಪ್ಪುವುದಿಲ್ಲ. ಮನ ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೊಂದಿಗೆ ಬೆ ರೆತು ಸಂಗ ಮಾಡಿದಾಗ ಅದು ಮತ್ತೆ ತಪ್ಪಿ ಮತ್ತೊಂದ ನೆನೆದಡೆ ತಲೆದಂಡ, ತಲೆದಂಡ !

ತನು ಮನ ಧನ (ಅರಿವು) ಒಂದಾದ ತನುವಿಗೆ ಹಗಲು ರಾತ್ರಿಗಳಿಲ್ಲ. ಜಾಗ್ರ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳೂ ಇಲ್ಲ. ಹಗಲಿನಲ್ಲಿಯೂ ಜಾಗ್ರವಾಗಿರುತ್ತದೆ. ರಾತ್ರಿ ಸ್ವಪ್ನದಲ್ಲಿಯೂ ಹಾದರ ಮಾಡುವುದಿಲ್ಲ. ಸುಷುಪ್ತಿಯಲ್ಲಿಯೂ ಜಾಗ್ರವಾಗಿದ್ದು ಮತ್ತೊಂದು ನೆನೆಯುವುದಿಲ್ಲ. ಅರಿವಿನ ಹೊರತಾಗಿ ಅನ್ಯವ ನೆನೆದಡೆ ತಲೆದಂಡ , ತಲೆದಂಡ !

694

ಸುಖ ಬಂದಡೆ ಪುಣ್ಯದ ಫಲವೆನ್ನೆನು,
ದುಃಖ ಬಂದಡೆ ಪಾಪದ ಫಲವೆನ್ನೆನು ;
ನೀ ಮಾಡಿದಡಾಯಿತ್ತೆಂದೆನ್ನೆನು ,
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು ,
ಉದಾಸೀನವಿಡಿದು ಶರಣೆನ್ನೆನು.
ಕೂಡಲಸಂಗಮದೇವಾ,
ನೀ ಮಾಡಿದುಪದೇಶವು ಎನಗೀ ಪರಿಯಲ್ಲಿ ;
ಸಂಸಾರವ ಸವೆಯೆ ಬಳಸುವೆನು .

ಸುಖ ಬಂದೆಡೆ ಪುಣ್ಯದ ಫಲವೆನ್ನೆನು , ದುಃಖ ಬಂದಡೆ ಪಾಪದ ಫಲವೆನ್ನೆನು :

ಸುಖವನ್ನು ಮನ ಕಾಯದಿಂದಲೇ ಅನುಭವಿಸುತ್ತದೆ. ದುಃಖವನ್ನು ಸಹಿತ ಮನ ಕಾಯದಿಂದಲೇ ಅನುಭವಿಸುತ್ತದೆ. ಸುಖವನ್ನು ಉಂಡ ಕಾಯ ಆಯುಷ್ಯ ತೀರಿದ ಮೇಲೆ ಮಣ್ಣು ಸೇರುತ್ತದೆ. ದುಃಖವನ್ನು ಉಂಡ ಜೀವವು ತನುವಿನ ಆಯುಷ್ಯ ಮುಗಿದ ಮೇಲೆ ಬಯಲು ಸೇರುತ್ತದೆ.

ಸುಖ ದುಃಖಗಳನ್ನು ಅರಿವಿನ ಬೆಳಕಿನಿಂದ ಅರಿಯದ ಮನ ನಿರ್ಮಾಣ ಮಾಡಿಕೊಂಡ ಅಜ್ಞಾನ ! ಅರಿವಿಗೆ ಶರಣು ಹೋದ ಶರಣ ಮಾತ್ರ ಸುಖ ದುಃಖವೆಂಬ ಉಭಯವನು ಬಲ್ಲ ಜಾಣ. ಸುಖವೂ ಇಲ್ಲ ದುಃಖವೂ ಇಲ್ಲ ಅದು ಮನದ ಅಜ್ಞಾನ.

695

ಕಾಯದ ಕಳವಳಕ್ಕಂಜಿ , 'ಕಾಯಯ್ಯಾ' ಎನ್ನೆನು ;
ಜೀವನೋಪಾಯಕ್ಕಂಜಿ , 'ಈಯಯ್ಯಾ' ಎನ್ನೆನು ;
ಯದ್ ಭಾವಂ ತದ್ ಭವತಿ : ಉರಿ ಬರಲಿ , ಸಿರಿ ಬರಲಿ
ಬೇಕು ಬೇಡೆನ್ನೆನಯ್ಯಾ
ಆ ನಿಮ್ಮ ಹಾರೆನು , ಮಾನವರ ಬೇಡೆನು ;
ಆಣೆ , ನಿಮ್ಮಾಣೆ , ಕೂಡಲಸಂಗಮದೇವಾ.

ಅರಿವಿನ ತಂತ್ರಜ್ಞಾನ ಒಲಿತ ನಿಪುಣರು ಮಾತ್ರ ಆಡುವ ಮಾತಿದು ; ಅವರಿಗೆ ಮಾತ್ರ ತಿಳಿಯುವ ಮಾತಿದು. ಹಲವಾರು ವಿಷಯಗಳಿಗೆ ನೋಟಕ್ಕೆ ಶಬ್ದಕ್ಕೆ ವಿಕಾರವಾಗಿ ಕಾಡುವ ಕಾಯಕ್ಕೆ ಹೊಳೆಯದ ಮಾತು. ಮನದಿಂದ ವಿಕಾರವಾಗಿ ಕಾಡುವ ಕಾಯಕ್ಕೆ ದಕ್ಕದ ಮಾತು.

ಇಂದ್ರಿಯಗಳಿಂದ ವಿಕಾರವಾಗಿ ವಿಲಿವಿಲಿ ಒದ್ದಾಡುವ ಕಾಯಕ್ಕೆ ಅರಿಯದ ಮಾತು. ಅರಿಷಡ್ವರ್ಗಗಳ ಸುಳುವಿನೊಳಗೆ ಸುಳಿ ಸುಳಿದು ಬಳಲುವ ಕಾಯಕ್ಕೆ ತಿಳಿಯದ ಮಾತು.

ಅನುಪಮವಾದ ಅರಿವಿನ ಸುಖ ಸಾರಾಯವನು ಅರಿತ ಘನಮನಕ್ಕೆ ಮಾತ್ರ ಅರಿಯುವ ಮಾತಿದು. ಆ ಕಾಯ ಅರಿವಿನ ಕಾಯ, ಘನ ಕಾಯ ! ಕಳವಳಕ್ಕಂಜಿ ಕಾಯ್ಯಯ್ಯಾ ಎನ್ನದು. ಜೀವನೋಪಾಯಕ್ಕೆ ಅಂಜಿ ಕೊಡಯ್ಯಾ ಎಂದು ಯಾವ ದೇವರನ್ನೂ ಬೇಡದು. ಬೇಡುವವನಿಗೂ ಬೇಡಿಸಿಕೊಂಬುವವನಿಗೂ ಮುಕ್ತಿಯಿಲ್ಲ ಎಂದು ತಿಳಿದ ಕಾಯ ಉರಿ ಬರಲಿ, ಸಿರಿಬರಲಿ ಬೇಕು ಬೇಡ ಎಂದು ಉಸುರದು. ಅರಿವೆಂಬ ಗುರುದೇವನ ಮಾತನ್ನು ಬಿಡದೆ ಪಾಲಿಸುವುದು. ನರಮಾನವರ ಬೇಡದು. ಆಣೆ ನಿಮ್ಮಾಣೆ ಸಂಗಯ್ಯ !

696

ನಾಳೆ ಬಪ್ಪುದು ನಮಗಿಂದೆ ಬರಲಿ ;
ಇಂದು ಬಪ್ಪದು ನಮಗೀಗಲೆ ಬರಲಿ ;
ಇದಕಾರಂಜುವರು , ಇದಕಾರಳುಕುವರು ?
ಜಾತಸ್ಯ ಮರಣಂಧ್ರುವಂ ಎಂದುದಾಗಿ,
ನಮ್ಮ ಕೂಡಲಸಂಗಮದೇವರು ಬರೆದ ಬರೆಹವ
ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ!

ಲೋಕಕ್ಕೆ ಸುಖದುಃಖಗಳಾಗಬಹುದು ತಿಳಿದ ಮಹಾಜ್ಞಾನಿ ಶರಣನಿಗೆ ಸುಖವಿಲ್ಲ ದುಃಖವಿಲ್ಲ. ಲೋಕ ದುಃಖಕ್ಕೆ ಅಂಜಿ ಯಜ್ಞಯಾಗಾದಿಗಳನ್ನು ಮಾಡಿಸಿ ದೂರವಿಡಲು ಪ್ರಯತ್ನಿಸಬಹುದು. ಆದರೆ ಶರಣ ಮಾತ್ರ ಲೋಕಕ್ಕೆ ಬರುವ ದುಃಖವನ್ನು ಆಮಂತ್ರಣ ಮಾಡಿಕೊಳ್ಳುತ್ತಾನೆ.

ಹುಟ್ಟಿದ ಮೇಲೆ ತನು ಒಮ್ಮೆ ಇಲ್ಲವಾಗುತ್ತದೆ. ಹುಟ್ಟು ಸಾವುಗಳನ್ನು ಗೆದ್ದ ಶರಣನಿಗೆ ಜನನವಿಲ್ಲ ಮರಣವಿಲ್ಲ. ಹರಿ ಬ್ರಹ್ಮಾದಿಗಳೆಲ್ಲ ಹುಟ್ಟಿದರು. ಅವರು ಏನೆಲ್ಲ ಕಷ್ಟ ಕೋಟಲೆಗಳಿಗೆ ಒಳಗಾದರು. ಒಮ್ಮೆ ಇಲ್ಲವಾದರು. ಅವರು ಇದ್ದಾರೆಂದು ಪೂಜೆ ನಡೆಯುವುದು ಒಂದು ಭ್ರಮೆಯಷ್ಟೆ. ಅಂಗದಲ್ಲಿ ಸಂಗಮವಾದ ಸಂಗಯ್ಯ ಪ್ರತ್ಯಕ್ಷವಾದ ಶರಣನಿಗೆ ದುಃಖವಿಲ್ಲ. ಅದಕ್ಕಂಜುವುದೂ ಇಲ್ಲ.

697

ಕಳಹೋದಡೆ ಕನ್ನದುಳಿಯ ಹಿಡಿವೆ ;
ಬಂದಿವಿಡಿದಡೆ ನಿಮ್ಮಿಂದ ಮುಂದೆ ನಡೆವೆ ;
ಮನ ಭೀತಿ ಮನ ಶಂಕೆಗೊಂಡೆನಾದಡೆ
ನಿಮ್ಮಾಣೆ , ನಿಮ್ಮ ಪುರಾತನರಾಣೆ !
ಆಳ್ದರ ನಡೆ ಸದಾಚಾರವೆನ್ನದಿರ್ದಡೆ ,
ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ ,

ಕೂಡಲಸಂಗಮದೇವಾ.

ಕಳಹೋದಡೆ ಕನ್ನದುಳಿಯ ಹಿಡಿವೆ ; ಬಂದಿವಿಡಿದಡೆ ನಿಮ್ಮಿಂದ ಮುಂದೆ ನಡೆವೆ :

ಭೂಮಿ ನಿನ್ನದಲ್ಲ ; ಹೇಮ ನಿನ್ನದಲ್ಲ ; ಕಾಮಿನಿ ನಿನ್ನವಳಲ್ಲ ಇವು ಜಗಕ್ಕಿಕ್ಕಿದ ವಿಧಿ ಎಂದು ಪ್ರಭುಗಳು ಹೇಳಿದ ಮೇಲೆ , ಅದು ಶರಣನಿಗೆ ತಿಳಿದ ಮೇಲೆ , ಯಾವ ವಸ್ತುವನ್ನು ಕಳುವು ಮಾಡಬೇಕು ? ಹೇಮ ಮಣ್ಣಗರ್ಭದಿಂದ ಹೊರಬಂದ ಒಂದು ಲೋಹ. ಜಲ ಕುದ್ದು ಗಟ್ಟಿಗೊಂಡು ಮಣ್ಣಾಗಿದೆ. ಆ ಜಲವೇ ಕುದ್ದು ಮಣ್ಣ ಗರ್ಭದಲ್ಲಿ ಖನಿಜವಾಗಿದೆ. ಇನ್ನು ವಿಷಯವೆಂಬುದು ಮನದ ಭ್ರಮೆ. ತನುವಿನಲ್ಲಿ ಹುಟ್ಟಿ ದ್ರವವಾಗಿ ಹೊರಬಂದು , ಮೈನವಿರೇಳುತ್ತದೆ.

ನಿನ್ನದೆಂಬುದು ಜ್ಞಾನರತ್ನ ! ಇದನ್ನು ಬಳಕೆ ಮಾಡಿದಾಗ ಮಾತ್ರ ಭೂಮಿ ಹೇಮ ಕಾಮಿನಿ ನಿನ್ನದಲ್ಲ ಎಂಬುದು ಮನಕ್ಕೆ ತಿಳಿಯುತ್ತದೆ. ಆ ವಸ್ತುವಿನಲ್ಲಿ ಏನೂ ಇಲ್ಲವೆಂದು ತಿಳಿದಾಗ ಕಳವು ಮಾಡುವುದಿಲ್ಲ. ಕಳುವು ಮಾಡಲು ಹೋದರೆ ತನುವಿನಲ್ಲಿಯೇ ತನ್ಮಯವಾದ ಅರಿವು ಕನ್ನದುಳಿಯನ್ನು ಕತ್ತಿಗೆ ಹಿಡಿದು ನಿಲ್ಲು ಎಂದು ವಸ್ತುವಿನ ಸತ್ಯವನ್ನು ತೋರಿಸುತ್ತದೆ.

ಬಂದಿವಿಡಿದಡೆ ಭಯವಿಲ್ಲ. ನಿರ್ಭಯಿ ಅರಿವು ಸದಾ ನಿಶ್ಚಿಂತ. ಕಳವು ಮಾಡಲು ಪ್ರೇರಣೆ ನೀಡಿ ತನುವನ್ನು ಮುಂದೆ ತಳ್ಳಿದ ಮನವೇ ಘನಮನವಾಗಿದೆ. ಉಳಿದಿರುವುದು ಅರಿವೊಂದೆ. ಇನ್ನು ಪುಸ್ತಕದಲ್ಲಿರುವ ಜ್ಞಾನ ಓದಿ ಆನಂದವಾಗಿ ಬಂದಿವಿಡಿದು ಸಂಗ್ರಹಿಸಲು ಹೋದರೆ ಅದು ನಿನ್ನಲ್ಲಿಯೇ ಇದೆ ; ತನುವಿನಿಂದ ಹೊರಬಂದು ಪುಸ್ತಕದಲ್ಲಿ ಬಂದಿಯಾಗಿದೆ. ಅದೇನಿದ್ದರೂ ತನುವಿನ ಎಂಜಲು ಎಂದು ಮುಂದೆ ಹೋಗುತ್ತದೆ.

ಮನಕ್ಕೆ ಅರಿವಾದ ಮೇಲೆ ಅದರ ಭೀತಿ ಕಳೆದು ಘನಮನವಾಗಿದೆ. ಮನದಲ್ಲಿ ಮೂಡುವ ಶಂಕೆಗಳಿಗೆಲ್ಲ ತನುವಿನಲ್ಲಿಯೇ ಸಿದ್ಧ ಉತ್ತರ ದೊರೆತಿದೆ. ಆಳ್ದರು ಪುರಾತನರು ನುಡಿದು ನಡೆದ ನಡೆಗಳೆಲ್ಲ ಸದಾಚಾರದ , ಆಗೋಚರದ ಆಚಾರದ ನುಡಿಗಳೆಂದು ಮನಕ್ಕೆ ತಿಳಿದಿದೆ. ಮನ ತನುವಿನಲ್ಲಿಯ ಸಂಗಯ್ಯನೊಂದಿಗೆ ಸಂಗಮವಾಗಿದೆ.

698

ಜೋಳವಾಳಿಯಾನಲ್ಲ , ವೇಳೆವಾಳಿಯವ ನಾನಯ್ಯಾ ;
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ ;
ಕೇಳು , ಕೂಡಲಸಂಗಮದೇವಾ ,
ಮರಣವೆ ಮಹಾನವಮಿ !

ಕರ್ಮಣ್ಯೇವಾಧಿಕಾರಸ್ಯೇ ಮಾ ಫಲೇಶು ಕದಾಚನ ಪ್ರತಿಫಲವನ್ನು ಮನದಲ್ಲಿಟ್ಟುಕೊಂಡು ಮಾಡುವ ಕೆಲಸ ಕೆಲಸವೇ ಅಲ್ಲ. ಕೋಗಿಲೆ ಯಾವ ಪ್ರತಿಫಲವನ್ನಿಟ್ಟುಕೊಂಡು ಕೂಗುವುದಿಲ್ಲ ; ನವಿಲು ಯಾವ ಪ್ರತಿಫಲವ ನ್ನಿಟ್ಟುಕೊಂಡು ನರ್ತನ ಮಾಡುವುದಿಲ್ಲ. ಮರ ಯಾವ ಪ್ರತಿಫಲವನಿಟ್ಟುಕೊಂಡು ಹೂ ಕಾಯಿ ಹಣ್ಣು ಬಿಡುವುದಿಲ್ಲ. ಅದು ಅವುಗಳ ಆನಂದ ಅದಕ್ಕಾಗಿಯೇ ಪ್ರಕೃತಿ ಸುಂದರವಾಗಿದೆ.

ಬೇರಿದ್ದ ಮರ ಮೂರೂ ಋತುಗಳಲ್ಲಿ ತನ್ನ ಕೆಲಸ ತಾನು ಯಾವ ಪ್ರತಿ ಫಲವಿಲ್ಲದೆ

ಮಾಡುತ್ತದೆ. ಹಾಗೆಯೇ ತನು ಕೂಡಾ ಅರಿವಿನ ಮಾತುಗಳನ್ನಾಡುವ , ಅರಿವಿನಿಂದ ನೋಡುವ , ಅರಿವಿನಿಂದ ಕೇಳಿ, ಮೂಸಿಸಿ , ರುಚಿಸುವ ಬೇರಿಲ್ಲದೆ ನಡೆದಾಡುವ ಜ್ಞಾನದ ಮರ. ಆಯಾ ವೇಳೆಯಲ್ಲಿ ಮಾಡುವ ಕೆಲಸ ಗಳನ್ನು ಹಾಳುಗೆಡಿಸಿ ಓಡುವ ಅಜ್ಞಾನದ ಆಳಿನಂತೆ ಮಾಡದೆ ಅರಿವಿನಿಂದ ಮಾಡಬೇಕು. ತನುವಿಗೆ ಮರಣ ಕಟ್ಟಿಟ್ಟ ಬುತ್ತಿ. ಅರಿತ ಶರಣನಿಗೆ ಮರಣವೇ ಮಹಾನವಮಿ !

699

ಕರ್ಮವೆಂಬ ಅಂಕದೊಡನೆ ತೊಡರಿದೆ ;
ಭಿನ್ನಪ ಅವಧಾರು !
ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ,
ಕೆಡಹುವೆನಂಕವ ;
ಕರೆದಡೋ ಎನಿಸದಡೆ ನಿಮ್ಮಾಳಲ್ಲ !
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ , ಕೂಡಲಸಂಗಮದೇವಾ.

ಕರ್ಮವೆಂಬ ಅಂಕದೊಡನೆ ತೊಡರಿದೆ ಭಿನ್ನಪ ಅವಧಾರು:

ಮನೆಕಟ್ಟಬೇಕು , ರಾಜ್ಯ ಕಟ್ಟಬೇಕು, ಸಂಸಾರ ವಿಸ್ತರಿಸಬೇಕು , ಭೂಮಿ ಹೇಮ ಕೊಂಡು ಹೌದೆನ್ನಿಸಿಕೊಳ್ಳಬೇಕು. ರಾಜ್ಯ ವಿಸ್ತರಿಸಬೇಕು , ಶ್ರೀಮಂತನಾಗಬೇಕು. ಆಗಬೇಕು ಮಾಡಬೇಕು ಗೆಲ್ಲಬೇಕು ಎನ್ನುವ ಕರ್ಮ ಎಂಬ ಆಳಿನ ಸಂಗ ಮಾಡಿ ತೊಡರಿದೆ ತಂದೆ. ನಾನು ನಿಮ್ಮಾಳು. ಅರಿವೆಂಬ ಗುರುದೇವ ಹೇಳಿದ ಮಾತು ಕೇಳುವ ಕಾಟ್ಟಾಳು ಎನ್ನುವುದನ್ನೇ ಮರೆತೆ ತಂದೆ. ಎನ್ನನು ಮನ್ನಿಸು ; ಅವಧಾರು !

ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ. ರಣರಂಗದ ಕೊನೆಗೆ ಚಿಮ್ಮುವೆ. ಅಜ್ಞಾನದ ಕರ್ಮಕಾಂಡಿಯ ಆಳು ಹಾಗೆಯೇ ಸಾಯುವುದಿಲ್ಲ. ಜ್ಞಾನದ ಯುದ್ಧಭೂಮಿಯಲ್ಲಿ ಸತ್ಯದೊಂದಿಗೆ ಸಂಗ ಮಾಡಿ ಮಂಡೆಯೂರಿ ಜ್ಞಾನದ ಅಲಗಿನಿಂದಿರಿದು ಕೊಲುವೆ. ಗಣಮೇಳಾಪದಿಂದ ಹೊರಬಂದ ಜ್ಞಾನದ ಅಲಗು ಬಲು ಹರಿತ ! ಸಿದ್ಧಾರ್ಥನನು ಕೊಂದು ಬುದ್ಧನಾಗಿಸಿತು. ವರ್ಧಮಾನನ ಕೊಂದು ಮಹಾವೀರನಾಗಿಸಿತು. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ಹರಿತವಾದ ಅಲಗು ಮನವೆಂಬ ಆಳನು ಹಿರಿದು ಘನಮನವಾಗಿಸಿತು.

700

ಕಟ್ಟಿದೆ ನೊರೆಯ , ಬಿಟ್ಟೆ ಜನ್ನಿಗೆಯರ,
ಮುಟ್ಟಬಂದಿರಿದಡೆ ಓಸರಿಸುವವನಲ್ಲ ;
ಓಡದಿರು , ಓಡದಿರು !
ನಿಮ್ಮ ಶರಣರ ಮನೆಯ ಬಿರಿದಿನ ಅಂಕಕಾರ
ಓಡದಿರು , ಓಡದಿರು. ಎಲೆ ಎಲೆ ದೇವಾ,

ಎಲೆ ಎಲೆ ಸ್ವಾಮೀ , ಎಲೆ ಎಲೆ ಹಂದೇ !
ಕೂಡಲಸಂಗಮದೇವಾ !

ತನು ಅಜ್ಞಾನದಲ್ಲಿದ್ದಾಗ ಮನದಲ್ಲಿ ಕಾಮ ಕ್ರೋದ ಲೋಭ ಮೋಹ ಮದ ಮತ್ಸರಗಳು , ಸಪ್ತ ವ್ಯಸನಗಳು , ಅಷ್ಟಮದಗಳು ಹುಟ್ಟಿ ತನುವಿನ ವೈರಿಗಳಾಗಿ ಕಾಡುತ್ತಿದ್ದರು; ಮನ ಜ್ಞಾನಕ್ಕೆ ಪಯಣಿಸಿ, ಜ್ಞಾನವೇ ತಾನಾದಾಗ ಆ ಜ್ಞಾನ ಹೇಳಿದ ಮಾತು ಪಾಲಿಸುವ ಜಂಗಮನೇ ತಾನಾದಾಗ, ತನುವನ್ನೇ ಆವರಿಸಿದ ಅರಿಷಡ್ವರ್ಗಗಳು, ಅಷ್ಟ ಮದಗಳು, ಸಪ್ತ ವ್ಯಸನಗಳು ಈಗ ಜನ್ನಿಗೆಯರಾಗಿದ್ದಾರೆ . ತನುವಿಗೆ ಬಡಿದ ಅಜ್ಞಾನದ ಒಂದು ರವುದೆಯನ್ನೂ ಅರಿವಿನ ಯಜ್ಞಕುಂಡದಲ್ಲಿ ಹಾಕಿ ಸುಡುತ್ತಾರೆ. ಜಾಗ್ರತ ಸ್ವಪ್ನ ಸುಷುಪ್ತಿಯಲ್ಲಿ ಎಡೆಬಿಡದೆ ರಕ್ಷಿಸುತ್ತಾರೆ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಅರಿತು ಆತನಿಗೆ ಶರಣುಹೋದ ಶರಣರ ಮಹಾಮನೆಯ ಬಿರಿದಿನ ಅಂಕಕಾರನ ಕೆಲಸ ಮನಕ್ಕೆ ದೊರೆತಿದೆ. ಆತ ಈಗ ಮಹಾದೇವನ ಮನೆಯ ಮಹಾವೀರನೆಂಬ ಕಾವಲುಗಾರ.

ಹಿಂದೆ ಪರೀಕ್ಷೆ ಮಾಡಿದ ದೇವ ಇಂದು ಆ ಕಾವಲುಗಾರನನ್ನು ನೋಡಿ ಓಡುತ್ತಿದ್ದಾನೆ. ಓಡದಿರು ಓಡದಿರು ಎಲೆ ಎಲೆ ದೇವಾ , ಎಲೆ ಎಲೆ ಸಾಮಿಯೇ , ಎಲೆ ಎಲೆ ಅಂಜುಗುಳಿಯಾಗಿ ಓಡದಿರು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವ ನಿಯಮಿಸಿದ ಆಳು ಆತ!

701

ಗರುಡಿಯ ಕಟ್ಟಿ , ಅರವತ್ತುನಾಲ್ಕು
ಕೋಲ ಅಭ್ಯಾಸವ ಮಾಡಿದೆನಯ್ಯಾ ;
ಇರಿವ ಘಾಯ , ಕಂಡೆಯ ಭೇದವಿನ್ನೂ ತಿಳಿಯದು !
ಪ್ರತಿ ಗರುಡಿಕಾರ ಬಿರಿದ ಪಾಡಿಂಗೆ ಒದಗಲು
ವೀರಪಟ್ಟೆಯ ಕಟ್ಟಿ ತಿಗುರನೇರಿಸಿಕೊಂಬೆ .
ಗುರುಕಳನನೇರಿ ಕಠಾರಿಯ ಕೊಂಡಲ್ಲಿ 'ಹೋಯಿತ್ತು ಗಳೆ ಎಂದಡೆ '
ಎನ್ನ ನಿನ್ನಲ್ಲಿ ನೋಡು , ಕೂಡಲಸಂಗಮದೇವಾ !

ಅರವತ್ತುನಾಲ್ಕು ಶೀಲದಲ್ಲಿ ನಡೆದು ತೋರಿದನೆನಗೆ ಬಸವಣ್ಣ ನೋಡಯ್ಯಾ ಆ ನಡೆಯನು ಹಿಡಿದು ಬಿಡದೆ ನಡೆವೆನು, ಲಿಂಗ ಜಂಗಮ ಸಾಕ್ಷಿಯಾಗಿ. ಈ ನಡೆಯನು ಹಿಡಿದು ನಡೆವೆನು, ಪ್ರಸಾದ ಸಾಕ್ಷಿಯಾಗಿ . ಧೃಡದಿಂದ ಹಿಡಿದು ಬಿಡದೆ ಕಡೆ ಮುಟ್ಟಿ ಸಲಿಸುವೆ, ಕೂಡಲಚೆನ್ನ ಸಂಗಮದೇವಾ.

ಮನ ತನು ಹಿಡಿದು ಅರವತ್ನಾಲ್ಕು ತಿರುವುಗಳನ್ನು ಬಳಸಿ ಅಜ್ಞಾನಕ್ಕೆ ಹೋದರೆ ಜ್ಞಾನದಿಂದಲೇ ಅಜ್ಞಾನದ ಕೇಡನು ಕಳೆದು ತನುವನ್ನು ಅರಿವಿನಲ್ಲಿ ತನ್ಮಯಗೊಳಿಸುವ ಶಿಕ್ಷಣವನ್ನು ಅಭ್ಯಸಿಸಿದರು ಕೂಡಾ , ತನುವನ್ನು ಮನ ಖಡ್ಗದಿಂದ ಸೀಳಿ ಘಾಯಗೊಳಿಸುವ ಭೇದವಿನ್ನೂ ತಿಳಿಯದೆ ಹಾಗೇ ಉಳಿದಿದೆ.

ಮನ ತನುವನ್ನು ಹಿಡಿದು ಅಜ್ಞಾನದಿಂದ ಇರಿವ ಘಾಯ ಅಪಾರ. ಮನ ತನುವಿನ ಜ್ಞಾನ ಹಿಡಿದು ಅದರಲ್ಲಿ ಲೀನವಾಗಿ ಅನುಭವಿಸುವ ಅರಿವಿನ ಸುಖವೂ ಅನಂತ ; ಈ ಸುಖವನ್ನು

ಬಣ್ಣಿಸಲಾಗದು ! ಜ್ಞಾನವೂ ತನುವಿನಲ್ಲಿಯೇ ಅಜ್ಞಾನವೂ ತನುವಿನಲ್ಲಿಯೇ ; ಬಳಸುವ ನಿರ್ಧಾರ ಮನ ಮಾಡಬೇಕು. ತನು ಹಿಡಿದು ಮನ ಅಭ್ಯಾಸ ಮಾಡಲೇಬೇಕು.

ಅರವತ್ನಾಲು ಜ್ಞಾನ ಸೂತ್ರ ಭೋದಿಸಿ ಅದರಲ್ಲಿ ನಡೆದು ತೋರುವ ಬಗೆಯನ್ನು ಬಸವಣ್ಣ ನನಗೆ ಅರುಹಿದರು ಎಂದು ಚೆನ್ನಬಸವಣ್ಣ ನೆನೆದಿದ್ದಾರೆ. ಧೃಡದಿಂದ ಹಿಡಿದು ಬಿಡದೆ ಕಡೆಮುಟ್ಟಿ ನಡೆದು ಗುರು ಕಾಣಿಕೆಯನ್ನು ಸಲ್ಲಿಸುವೆ. ಇದಕ್ಕೆ ನನ್ನ ಅರುವಿನ ಪ್ರಸಾದವೇ ಸಾಕ್ಷಿ ಎಂದು ಅರಿವಿನ ಮೇಲೆ ಆಣೆ ಮಾಡಿ ಗುರುಕಾಣಿಕೆಯನ್ನು ಜ್ಞಾನದಿಂದ ನಡೆಯುವುದರ ಮೂಲಕ ಸಲ್ಲಿಸಿದ್ದಾರೆ; ಜ್ಞಾನಿ ಚೆನ್ನಬಸವಣ್ಣ

702

ಶರಣರೊಡನೆ ಶ್ರವವ ಮಾಡಿ ಮಾರುಗೋಲ ಬಿಡುವೆನಯ್ಯಾ :
ತಾಗಲಿ , ತಪ್ಪಲಿ ಗೆಲವೆನ್ನದೆಂಬೆನಯ್ಯಾ ,
ಕಳನಿಂದ ಕಡೆಗಳಕ್ಕೆ ಓಡುವೆ ,
ಕೂಡಲಸಂಗಯ್ಯಾ .

ಜ್ಞಾನವೂ ತನ್ನಲ್ಲಿದೆ ; ಅದನ್ನು ಬಳಸಲು ಬಾರದ ಅಜ್ಞಾನವೂ ತನ್ನಲ್ಲಿದೆ. ಈ ಶಿಕ್ಷಣ ಬಲ್ಲವರಿಂದ ತಿಳಿದುಕೊಳ್ಳಬೇಕು. ಶರಣರು ಈ ಶಿಕ್ಷಣದಲ್ಲಿ ನಿಪುಣರು. ಅರಿವಿಗೆ ಶರಣು ಹೋಗಿ ಶರಣರಾದವರು. ಇದನ್ನು ಕಲಿಯುವುದೆಂದರೆ ರಣರಂಗದಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡಿದಂತೆ. ಕಲಿಯುವಾಗ ಎಡವಿ ಬೀಳುವುದು ಸಹಜ. ಆದರೆ ಕಲಿಯುವುದು ಮುಖ್ಯ.

ಶರಣರೊಂದಿಗೆ ಜ್ಞಾನದ ಕಾಳಗದಲ್ಲಿ ಯುದ್ಧ ಮಾಡುವುದು ಎಂದರೆ ಸಾಮಾನ್ಯವೇ ? ಅನೇಕ ವರಸೆಗಳನ್ನು ಅವರು ಪ್ರಯೋಗದ ಮೂಲಕ ಕಲಿಸುತ್ತಾರೆ. ಆ ಸಂದರ್ಭದಲ್ಲಿ ಎಸೆದ ಬಾಣ ಗುರಿ ತಲುಪಲಿಕ್ಕಿಲ್ಲ. ಆದರೆ ತಾಲೀಮು ಮಾಡದ ವಿನಹ ಅರಿವಿನ ಶಿಕ್ಷಣ ಕೈಗೆಟುಕುವುದಿಲ್ಲ. ಶರಣರೊಂದಿಗೆ ಯುದ್ಧ ಮಾಡಿ ಸೋತು ಓಡುವುದೂ ಒಂದು ಸಂತೋಷದ ವಿಷಯವೇ. ಸೋತರೇನಾಯಿತು; ಮುಂದೊಂದು ದಿನ ಗೆಲ್ಲುವ ಸೂತ್ರ ಹೊಳೆಯಿತು. ಮನ ನಿರಂತರ ತನುವಿನೊಂದಿಗೆ ತಾಲೀಮು ಮಾಡಬೇಕು.

ದೇಶ ವಿದೇಶಗಳೊಂದಿಗೆ ಯುದ್ಧ ಮಾಡಿ ಅಲೆಕ್ಸಾಂಡರಿನಂತೆ ಚಕ್ರವರ್ತಿ ಎನ್ನಿಸಿಕೊಳ್ಳುವುದು ಸುಲಭ. ಆದರೆ ತನುವಿನಲ್ಲಿರುವ ಅಜ್ಞಾನಿ ವೈರಿಗಳೊಂದಿಗೆ ಯುದ್ದ ಮಾಡಿ ಗೆಲ್ಲುವುದು ಕಠಿಣ. ವರ್ಧಮಾನನನ್ನು ಗೆದ್ದು ಮಹಾವೀರನಾದ. ಸಿದ್ಧಾರ್ಥನನ್ನು ಗೆದ್ದು ಬುದ್ಧನಾದ. ಹೀಗೆ ತಮ್ಮನ್ನು ತಾವೇ ಗೆದ್ದು ಶರಣರು, ದಾಸರು ಮಹಾವೀರರಾದರು. ಮಹಾವೀರನ ಪದವಿ ಯಾರೂ ಕೊಡುವುದಲ್ಲ ; ಯಾರೊಂದಿಗೆ ಕಾದಿದರೂ ಸಿಗುವುದಿಲ್ಲ. ತನ್ನೊಂದಿಗೆ ತಾನು ಹಗಲಿರುಳು ಯುದ್ಧ ಮಾಡಿ ತಾನೇ ಸಂಪಾದಿಸುವ ಶ್ರೇಷ್ಠ ಪದವಿ ! ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಯ್ಯ ನೀಡುವ ಉಚ್ಚ ಪದವಿ!

703

ಎಲೆ ಗಂಡುಗೂಸೆ ನೀ ಕೇಳಾ ,

ನಿನಗೊಬ್ಬಗೆಂದುಟ್ಟೆ ಗಂಡುಡಿಗೆಯನು !
ಮತ್ತೊಮ್ಮೆಯಾನು ಗಂಡಪ್ಪೆನಯ್ಯಾ ,
ಮತ್ತೊಮ್ಮೆಯಾನು ಹೆಣ್ಣಪ್ಪೆನಯ್ಯಾ :
ಕೂಡಲಸಂಗಮದೇವಾ,
ನಿನಗೆ ವೀರನಪ್ಪೆ , ನಿಮ್ಮ ಶರಣರಿಗೆ ವಧುವಪ್ಪೆ !

ದೇಹ ಹೆಣ್ಣು ಅಲ್ಲ ಗಂಡೂ ಅಲ್ಲ . ಮನ ತಾನು ಹೆಣ್ಣೆಂದು ಗಂಡೆಂದು ಅಜ್ಞಾನದಿಂದ ವೇಷ ಹಾಕಿಕೊಂಡಿದೆ. ಕಣ್ಣು , ಕಿವಿ, ಮೂಗು, ನಾಲಗೆ, ಚರ್ಮದ ಗರ್ಭದಲ್ಲಿದ್ದ ಜ್ಞಾನ ಹೆಣ್ಣು ಅಲ್ಲ ಗಂಡೂ ಅಲ್ಲ. ಹೀಗಿದ್ದೂ ಆ ಜ್ಞಾನದ ನೆರಳಿನಿಂದ ಮನ ಸೃಷ್ಟಿಯಾಗಿ ತನುವಿಗೆ ಹೆಣ್ಣು ಗಂಡು ವೇಷಗಳನ್ನು ಧರಿಸಿದೆ.

ಮನ ಹೆಣ್ಣಾದರೆ, ಹೆಣ್ಣೂ ಗಂಡೂ ಅಲ್ಲದ ಗಂಡುಗೂಸೇ ಅರಿವು. ಆ ಅರಿವೆಂಬ ಸಂಗಯ್ಯನಿಗೆ ಅಣ್ಣನವರು ಗಂಡುಗೂಸು ಎಂದು ನಾಮಕರಣ ಮಾಡಿದ್ದಾರೆ. ತಾನು ಯಾರೆಂದು ಈ ಕೂಸು ತಿಳಿಸಬಹುದಾಗಿತ್ತು . ಆದರೆ ಕಾಲುಕೆದರಿ ಗಂಡುಡಿಗೆಯನು ಉಟ್ಟು ಆ ಗಂಡುಗೂಸಿನೊಂದಿಗೆ ಯುದ್ಧ ಮಾಡದ ವಿನಹ ತಾನು ಯಾರೆಂಬುದನ್ನು ತಿಳಿಸುವುದಿಲ್ಲ.

ತನು ನಿದ್ರಿಸುವಾಗ ಅದು ಹೆಣ್ಣಲ್ಲ , ಗಂಡಲ್ಲ. ಅದಕ್ಕೆ ಯಾವ ಹೆಸರೂ ಇಲ್ಲ. ಶ್ರೀಮಂತನಲ್ಲ, ಬಡವನಲ್ಲ; ಶಾಸಕ ಸಚಿವ ಅಧಿಕಾರಿಯಂತೂ ಮೊದಲೇ ಅಲ್ಲ. ನಿದ್ರಿಸುವಾಗ ಏನೂ ಅಲ್ಲ; ಎಚ್ಚರವಾದಾಗ ಎನೆಲ್ಲವೂ ತಾನೆ ! ಗಂಡು ತಾನೇ ಹೆಣ್ಣು ತಾನೇ. ಹೆಂಡತಿ ತಾಯಿ ಮಗಳು ಅತ್ತೆ ಅತ್ತಿಗೆ ನಾದಿನಿ ತಂಗಿ ಅಕ್ಕ ಸೊಸೆ ಎಷ್ಟೊಂದು ಪಾತ್ರಗಳು ;ಎಚ್ಚರವಾದಾಗ ಧುತ್ತೆಂದು ಕಾಡುತ್ತವೆ. ಗಂಡ , ತಂದೆ , ಮಗ , ಅಣ್ಣ , ತಮ್ಮ, ಮಾವ , ಅಳಿಯ ,ಭಾವ ,ಮೈದುನ ಎಷ್ಟೊಂದು ವೇಷಗಳಲ್ಲಿ ಗಂಡು ಕಾಣುತ್ತದೆ.

ಇದೆಲ್ಲವನ್ನು ತಿಳಿಸುವ ಅರಿವು ಹೆಣ್ಣು ಅಲ್ಲ ; ಗಂಡೂ ಅಲ್ಲ . ಹೆಣ್ಣು ಗಂಡಿನ ಪಾತ್ರದಲ್ಲಿರುವ ಎರಡು ತನುಗಳಿಗೂ ಇದು ಮನದಟ್ಟಾಗುತ್ತದೆ. ವಿಚಾರಿಸಲು ಹೋದಾಗ ಒಂದೇ ಎಂದು ಅರಿವಿಗೆ ಬರುತ್ತದೆ . ಹೀಗೆ ಅರಿವಿಗೆ ತಂದುಕೊಡುವ ಅರಿವನ್ನು ಕುರಿತು ಎಲೆ ಗಂಡುಗೂಸೆ ನೀ ಕೇಳಾ, ನಿನಗೊಬ್ಬಗೆಂದುಟ್ಟೆ ಗಂಡುಡಿಗೆಯನು ಎಂದಿದ್ದಾರೆ ಮಹಾಜ್ಞಾನಿ ಜ್ಞಾನ ಭಂಡಾರಿ ಬಸವಣ್ಣನವರು.

ನಿನಗೆ ವೀರನಪ್ಪೆ , ನಿಮ್ಮ ಶರಣರಿಗೆ ವಧುವಪ್ಪೆ :

ಎಲೆ ಗಂಡುಗೂಸೆಂಬ ಅರಿವಿನ ತಂದೆಯೇ ಹೆಣ್ಣು ಗಂಡೆಂಬ ಮುಂತಾದ ಅಜ್ಞಾನವನ್ನು ತನುವಿನಲ್ಲಿ ನೀನೇ ಚೆಲ್ಲಿದೆ ; ಪುನಃ ನೀನೇ ಅರುಹಿದೆ. ನಿನ್ನೊಂದಿಗೆ ಅರಿವಿನ ಯುದ್ಧ ಮಾಡದ ವಿನಹ ನೀನು ಹೇಳಿಕೊಡುವುದಿಲ್ಲ . ಅರಿವಿನ ಯುದ್ಧ ಕಲೆಯನ್ನು ಬಲ್ಲ ಶರಣರಿಗೆ ವಧುವಾಗದ ಮುನ್ನ ಅವರೂ ನನಗೆ ದಾರಿ ತೋರುವುದಿಲ್ಲ. ಕಾರಣ ಎಲೆ ಗಂಡುಗೂಸೇ ಗಂಡುಡಿಗೆಯನ್ನುಟ್ಟು ನಿನ್ನೊಂದಿಗೆ ಕಾದುವೆ. ನಿನಗೆ ಶರಣು ಹೋದ ಶರಣರಿಗೆ ವಧುವಾಗಿ ಯುದ್ಧ ಜ್ಞಾನದ ಕಲೆಯನ್ನು ಕಲಿಯುವೆ ತಂದೆ ಎಂದು ಸಕಲರಿಗೂ ತಿಳಿಯುವಂತೆ ಅಣ್ಣನವರು ಅರಿವಿನ ಯುದ್ಧ ಕಲೆಯನ್ನು ಈ ವಚನದ ಮೂಲಕ ಬೋಧಿಸಿದ್ದಾರೆ.

ಮಾಹೇಶ್ವರನ ಭಕ್ತಸ್ಥಲ

704

ಕಟ್ಟುವೆನುಪ್ಪರಗುಡಿಯ ಜಗವರಿಯೆ ,
ಮಾಡುವೆನೆನ್ನ ಕಾಯ ಕೆಡೆವನ್ನಕ್ಕ ,
ಬೇಡುವುದೆನ್ನ ತನುಮನಧನವ
ಬೇಡಲಾರದ ಹಂದೇ , ನೀ ಕೇಳಾ ,
ಈ ಬಿರಿದು ಸಂದಿತ್ತು , ಕೂಡಲಸಂಗಮದೇವಾ.

ಜಗವೆಲ್ಲ ತಿಳಿಯಲು , ಕಾಯ ಕೆಡುವ ಮುನ್ನ , ಈ ಕಾಯವನ್ನೇ ಅರಿವಿನ ಪತಾಕೆಯಾಗಿ ಹಾರಿಸುವೆ. ಇದಕ್ಕೆ ತನು ಮನ ಧನವನ್ನು ಅರ್ಪಿಸಿದರೆ ಸಾಕು . ಕೂಡಲಸಂಗಯ್ಯ ತನು ಮನ ಧನವನ್ನೇ ಬೇಡುವ.

ಆತ ಬೇಡಿದ್ದನ್ನು ಕೊಟ್ಟು ಅರಿವೆಂಬ ಗುರುದೇವನನ್ನು ಪಡೆಯುವ ಶಕ್ತಿ ಇಲ್ಲದ ಹೇಡಿ ನೀನು. ಭಕ್ತಿಯಿಲ್ಲದ ಹೆಳವ ನೀನು.

ಭೂಮಿ ತನುವಿನದಲ್ಲ , ಹೇಮವೂ ತನುವಿನದಲ್ಲ , ತನು ಬಯಸುವ ವಿಷಯವೂ ಅನ್ಯ ತನುಗಳಲ್ಲಿ ಇಲ್ಲ. ಇದೆಲ್ಲ ಜಗಕ್ಕಿಕ್ಕಿದ ವಿಧಿ. ತನುವಿನದೆಂಬುದು ಜ್ಞಾನರತ್ನ. ಅದನ್ನು ಕೆಡಗೊಡದೆ ಅಲಂಕರಿಸಿ ನೋಡಿದರೆ, ಭೂಮಿ ಹೇಮ ಕಾಮಿನಿ ತನ್ನದಲ್ಲ ಎಂದು ತನಗೆ ತಿಳಿಯುತ್ತದೆ. ಇವು ಮೂರು ತನುವಿಗೆ ಅಂಟಿದ ಪ್ರಧಾನ ಅಜ್ಞಾನ ವಿಧಿಯಾಗಿ ಕಾಡುತ್ತಲಿದೆ ಎಂದು ತನುವಿಗೆ ಮನದ ಮೂಲಕ ತಿಳಿಯುತ್ತದೆ. ತನುವನ್ನು ಆವರಿಸಿದ ಮನ ಜ್ಞಾನದೊಂದಿಗೆ ಬೆರೆತು ಜ್ಞಾನವೇ ತಾನಾಗುತ್ತದೆ. ಮನ ಅಳಿದು ಘನಮನವಾಗುತ್ತದೆ. ಆಗ ತನು ಮನ ಧನವನ್ನು ಘನ ಮನದಿಂದಲೇ ಅರಿವಿನ ಸಂಗಯ್ಯನಿಗೆ ನೀಡಿ ಧನ್ಯನಾಗುತ್ತದೆ; ಖಾಲಿ ಖಾಲಿಯಾಗುತ್ತದೆ. ನಿರಾಳ ತಾನಾಗಿ ನಿಜ ಸುಖಿಯಾಗುತ್ತದೆ.

705

ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದಡೆ
ಲಕ್ಷ ಸಂಖ್ಯೆಯ ಹಿರಣ್ಯವ ತಂದು ಸಂತೋಷ ಪಡಿಸುವಂತೆ ,
ಕಾಳಗದ ಮುಖವಾವುದೆಂದರಿಯದ ಹಂದೆ ನೃಪಂಗೆ
ಒಬ್ಬ ಕ್ಷತ್ರಿಯ ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲ್ಲಿ
ಕಡಿದು ಮುಳುಗಾಡುವ ಕೊಳಗುಳವ ಕಂಡು ಪರಿಣಾಮಿಸುವಂತೆ,
ಆನು ಪರಿಣಾಮಿಸುವೆನಯ್ಯಾ , ಕೂಡಲಸಂಗಮದೇವಾ ,
ನೀವು ಬಂದೆನ್ನ ಬೇಡಿದಡೆ !

ಹುಟ್ಟುತ್ತಲೇ ದ್ರವ್ಯವನು ಅರಿಯದ ದರಿದ್ರನಿಗೆ ಐಶ್ವರ್ಯವಂತ ಮಗನಾದಡೆ ಅವನ ಸಂತೋಷಕ್ಕೆ ಪಾರವೇ ಇಲ್ಲ.

ಕಾಳಗದ ಮುಖವನೇ ಅರಿಯದ ಹೇಡಿ ರಾಜನಿಗೆ ಒಬ್ಬ ಕ್ಷತ್ರಿಯ ಮಗ ಹುಟ್ಟಿದರೆ ಅವನ ಸಂತೋಷಕ್ಕೂ ಕೊನೆ ಮೊದಲೆಂಬುದೇ ಇಲ್ಲ.

ಹುಟ್ಟುತ್ತಲೆ ಬೇಕು ಎನ್ನುವುದನ್ನೇ ಬೆನ್ನಿಗೆ ಹಾಕಿಕೊಂಡವನೊಬ್ಬ. ಯುದ್ಧವನ್ನೇ ಅರಿಯದ ಹೇಡಿ ರಾಜನೊಬ್ಬ. ಇವರಿಬ್ಬರ ಉದಾಹರಣೆಗಳು ಈ ವಚನದಲ್ಲಿವೆ.

ಅರಿವಿನ ಶ್ರೀಮಂತಿಕೆಯ ಗರ್ಭದಿಂದಲೇ ಹುಟ್ಟಿದ ಮನ ಅರಿವೆಂದರೇನೆಂದು ಅರಿಯದ ದರಿದ್ರದ ವಿಧಿ ಅದರ ಬೆನ್ನಿಗೆ ಬಿದ್ದಿದೆ.

ಅರಿವನ್ನು ಪುಸ್ತಕದಲ್ಲಿ, ಪುಣ್ಯ ಪುರುಷರಲ್ಲಿ, ಕ್ಷೇತ್ರಗಳಲ್ಲಿ ಹುಡುಕಿ ಹುಡುಕಿ ಬಡತನ ಅದರ ಬೆನ್ನೇರಿದೆ. ಅರಿವಿಗೆ ಶರಣುಹೋದ ಶರಣರು ಬಂದು ದರಿದ್ರವೆಂಬ ಮನವನು ಹಿಡಿದು, ನೋಡು ನಿನ್ನ ಗರ್ಭದಲ್ಲಿಯೇ ಇದ್ದ ಶ್ರೀಮಂತಿಕೆಯನು. ಎಂದು ತೋರಿಸಿದಾಗ ಅದಕ್ಕೆ ಆದ ಸಂತೋಷ ಅಷ್ಟಿಷ್ಟಲ್ಲ.

ರಣರಂಗವೆಂದರೇನೆಂದು ಅರಿಯದ ಹೇಡಿ ರಾಜನೊಬ್ಬ ಯುದ್ಧಕ್ಕಾಗಿ ಹಪಹಪಿಸಿ ಬಳಲಿದ್ದ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಅರಿಷಡ್‌ವರ್ಗಗಳೊಂದಿಗೆ ಯುದ್ಧ ಮಾಡಿ ಜಯಿಸುವ ಕಲೆ ತಂದೆ ತಿಳಿದಿರಲಿಲ್ಲ. ತನುವಿನ ಗರ್ಭದಲ್ಲಿಯೇ ಇದ್ದ ಮಹಾ ವೀರನೆಂಬ ಪುತ್ರನೊಂದಿಗೆ ಈ ಕಲೆ ತಿಳಿಯಬೇಕೆಂದು ಶರಣರು ಸೂಚಿಸಿದಾಗ ರಾಜನಿಗಾದ ಸಂತೋಷ ಅಷ್ಟಿಷ್ಟಲ್ಲ.

ಶರಣರು ಬಂದು ಮನದ ದರಿದ್ರವನು ಬೇಡಿ ಆ ಮನಕ್ಕೆ ಶ್ರೀಮಂತಿಕೆಯ ಸೊಬಗನ್ನು ಅರುಹಿದರು. ವೀರನಾಗುವ ಶಿಕ್ಷಣವನ್ನು ತನುವಿನಲ್ಲಿಯೇ ತೋರಿದರು.

706

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ ,
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ ,
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ
ಅಭಿಮಾನಂಗೊಂಡು ನೆರೆವುತ್ತಿರಲಿ ;
ಇಂತೀ ತ್ರಿವಿಧವು ಹೊರಗಣವು.
ಇನ್ನೆನ್ನಂಗದ ಮೇಲೆ ಬರಲಿ ಹಿಡಿ ಖಂಡವ ಮಾಡಿ ಕೊಯ್ಯಲಿ
ಇಕ್ಕುವ ಶೂಲ ಪ್ರಾಪ್ತಿಸಲಿ
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ ;
ಮತ್ತೆಯೂ ಲಿಂಗಾರಾಧನೆಯ ಮಾಡುವೆ ,
ಜಂಗಮಾರಾಧನೆಯ ಮಾಡುವೆ , ಪ್ರಸಾದಕ್ಕೆ ತಪ್ಪೆ !
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ
ನೀನಂದೆ ಮೂಗು ಕೊಯಿ , ಕೂಡಲಸಂಗಮದೇವಾ!

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ :

ಅರ್ಥ ಅನರ್ಥ ಮಾಡುವುದು ಸುಲಭದ ಮಾತಲ್ಲ. ಒಡವೆ ಕರೆನ್ಸಿ ಸಂಗ್ರಹ ಮಾಡಿ, ಬಡ್ಡಿ ವ್ಯವಹಾರಕ್ಕೆ ಕೊಟ್ಟು, ಒಂದಕ್ಕೆ ಹತ್ತು, ಹತ್ತಕ್ಕೆ ನೂರು, ಸಾವಿರ ಮಾಡಿ, ಮನೆಯಲ್ಲಿ

ಭದ್ರವಾಗಿಟ್ಟಾಗ ಆ ಹಣ ಕಳುವಾದರೆ, ಮನದಲ್ಲಿ ಕೋಲಾಹಲವೇಳುತ್ತದೆ. ಅರಿವಿನಿಂದ ನೋಡಲು ಹೋದರೆ, ಕರೆನ್ಸಿ ಕಾಗದ ! ಆಭರಣಗಳೆಲ್ಲ ಲೋಹ ! ಕಾಗದ ಮತ್ತು ಲೋಹದ ಅರಿವಿಲ್ಲದೆ ಆಯುಷ್ಯ ಪರ್ಯಂತ ತನು ಅರ್ಥ ಸಂಗ್ರಹಿಸುತ್ತದೆ. ಮತ್ತೊಂದು ತನು ಕೂಡಾ ಕಾಗದ, ಲೋಹದ ಅರಿವಿಲ್ಲದೆ ಕಳುವು ಮಾಡುತ್ತದೆ. ಎರಡು ತನುಗಳಿಗೂ ಅರ್ಥವನು ಅನರ್ಥ ಮಾಡಲು ಬರಲಿಲ್ಲ. ಅರ್ಥಕ್ಕಾಗಿ ಕೋಲಾಹಲಕ್ಕೆ ಕಾರಣವಾಗುವವು . ಬಡ್ಡಿ ವ್ಯವಹಾರ ಒಂದು ತನು ಮಾಡಿದರೆ ಮತ್ತೊಂದು ತನು ಸಂಗ್ರಹ ಮಾಡಿದ್ದನ್ನು ಕಳುವು ಮಾಡಿ ಕಳ್ಳ ಎನ್ನಿಸಿಕೊಂಡಿತು. ಎರಡು ತನುಗಳಲ್ಲಿ ಕೋಲಾಹಲ ಸೃಷ್ಟಿಯಾಯಿತು.

ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿವುತ್ತಿರಲಿ :

ತನು ಒಂದು ನವಖಂಡಗಳ ಅಖಂಡ ಅರಿವಿನ ದೇಹ. ಆದರೆ ಗರ್ಭದಿಂದ ಹೊರ ಬಂದ ತನುವನ್ನು ಅಖಂಡ ಅರಿವಿನ ದೇಹವೆಂದು ಪ್ರೀತಿಸದೆ ಗರ್ಭದಲ್ಲಿ ಹುಟ್ಟಿದ ನನ್ನ ಮಗುವೆಂಬ ವ್ಯಾಮೋಹ ಸೃಷ್ಟಿಯಾಗುತ್ತದೆ. ಧೃತರಾಷ್ಟ್ರನ ಮಗನ ಮೇಲಿನ ಅಜ್ಞಾನದ ಮೋಹದಿಂದಾಗಿ ಮಹಾಭಾರತ ಸೃಷ್ಟಿಯಾಯಿತು. ಮಹಾ ಯುದ್ಧವಾಗಿ ಹದಿನೆಂಟು ಅಕ್ಷೋಹಿಣಿ ಸೈನ್ಯ ನಾಶವಾಯಿತು. ಆದರೂ ಧೃತರಾಷ್ಟ್ರನ ಮೋಹಕ್ಕೆ ಚ್ಯುತಿ ಬರಲಿಲ್ಲ.

ಭಕ್ತ ಸಿರಿಯಾಳ ಮಗನ ಮೇಲಿನ ಮೋಹವನ್ನು ನವ ಖಂಡ ಮಾಡಿ , ಕತ್ತರಿಸಿ ಜ್ಞಾನಿಗೆ ಉಣಬಡಿಸಿದ. ತನುವಿನ ಎರಡು ಕಣ್ಣುಗಳು , ಎರಡು ಕಿವಿಗಳು , ಮೂಗಿನ ಎರಡು ಹೊರಳೆಗಳು , ನಾಲಗೆ , ಚರ್ಮ , ಮೂತ್ರ ಮತ್ತು ಗುದದ್ವಾರಗಳೇ ನವಖಂಡಗಳು. ತನುವಿನ ಈ ಒಂಬತ್ತು ಖಂಡಗಳಲ್ಲಿ ಜ್ಞಾನವು ಇದೆ ; ಅಜ್ಞಾನವೂ ಆವರಿಸಿದೆ. ತನುವಿಗೆ ಆವರಿಸಿದ ಅಜ್ಞಾನವನು ತುಂಡರಿಸಲು ಬಂದವನೇ ಜ್ಞಾನಿ. ಮಗುವೆಂಬ ಅಜ್ಞಾನದ ಮೋಹವನ್ನು ಕಳೆದುಕೊಂಡವನೇ ಜ್ಞಾನಿ!

ಮುಟ್ಟುವ ಸ್ತ್ರೀಯ ಕಣ್ಣ ಮುಂದೆ ಅಭಿಮಾನಂಗೊಂಡು ನೆರೆವುತ್ತಿರಲಿ ; ಇಂತೀ ತ್ರಿವಿಧವು ಹೊರಗಣವು :

ಸತಿಪತಿಗಳ ಇರುವಿಕೆ ಈ ಜಗತ್ತಿನಲ್ಲಿ ಚರ್ಮಕ್ಕೆ ಮಾತ್ರ ಸೀಮಿತವಾಗಿದೆ. ಇದೊಂದು ದುರ್ದೈವದ ಸಂಗತಿ. ಸಿಂಧು ಬಲ್ಲಾಳ ಮಹಾರಾಜ. ಆತನ ಸತಿಯನ್ನು ಜಂಗಮ ಬೇಡಲು ಕೂಡಲೇ ಆ ಜಂಗಮನಿಗೆ ಕೊಟ್ಟ. ಗಂಡ ಹೆಂಡತಿ ಎನ್ನುವವರು ಬಾಳ ಸಂಗಾತಿಗಳು. ಅವೆರಡೂ ದೇಹಗಳು. ದೇಹಕ್ಕೆ ಆವರಿಸಿದ ಅಜ್ಞಾನಿ ಮನವೇ ಸತಿ. ಇದು ಮಾತ್ರ ಹೆಣ್ಣು . ಸಿಂಧು ಬಲ್ಲಾಳನ ಸತಿಯನ್ನು ಬೇಡಿದ ಜಂಗಮನ ದೇಹಕ್ಕೆ ಆವರಿಸಿದ ಮನವೂ ಹೆಣ್ಣೇ!

ಹೆಣ್ಣಿಗೆ ಬೇಡುವ ಗುಣವಿದೆ. ದೇಹದ ಕಣಕಣದಲ್ಲಿದ್ದ ಜ್ಞಾನವೇ ಗಂಡು. ಗಂಡಿಗೆ ಏನನ್ನೂ ಬೇಡದ ಎಲ್ಲವನ್ನೂ ಅರಿವಿನಿಂದ ನೋಡುವ ನಿರ್ಗುಣವಿದೆ. ಬೇಡುವ ಹೆಣ್ಣು ಬೇಡದ ಗಂಡನನ್ನು ಕೂಡಿದ ಕೂಟವೇ ಕೂಡದಗಲದ ಕೂಟ. ಸತಿಪತಿಗಳೊಂದಾದ ಕೂಟ ! ಅರಿವೆಂಬ ಗಂಡನೊಂದಿಗೆ ಮನವೆಂಬ ಹೆಂಡತಿ ಕೂಡಿ ಒಂದಾದ ಕೂಟ. ಈ ಜ್ಞಾನದ ಕೂಟಕ್ಕಾಗಿಯೇ ಬಾಳಸಂಗಾತಿಗಳು ಹಗಲಿರುಳೆನ್ನದೇ ಶ್ರಮಿಸಬೇಕು.

ಮಹಾರಾಜ ಸಿಂಧು ಬಲ್ಲಾಳನ ಮನವೂ ಹೆಣ್ಣೇ , ಬೇಡಲು ಬಂದ ಜಂಗಮನ ಮನವೂ ಹೆಣ್ಣೇ, ಇವೆರಡೂ ಕೂಡಿದ ಕೂಟ ಹೆಣ್ಣು ಹೆಣ್ಣು ಕೂಡಿದ ಕೂಟ. ಅರ್ಥವಿಲ್ಲದ ಸಮಾಜಬಾಹಿರ ಅಜ್ಞಾನಿ ಕೂಟ! ಇದನ್ನು ಜಗತ್ತು ತಿಳಿಯುವುದಿಲ್ಲ ; ಜ್ಞಾನಿ ಮಾತ್ರ

ತಿಳಿಯುತ್ತಾನೆ. ಮಹಾಜ್ಞಾನಭಂಡಾರಿ ಬಸವಣ್ಣನವರು ಹೀಗೆ ಹೇಳಿದ್ದಾರೆ :

''ಕಾಮನೇಮವೆಂಬ ಸಿಂಧು ಬಲ್ಲಾಳನ ವಧುವ ಸರ್ವಭುವನದೊಡೆಯ ಸಂಗಮದೇವರು ಬೇಡುವಂತಲ್ಲ, ಎನ್ನ ಸತಿ ನೀಲಾಲೋಚನೆ ಪೃಥ್ವಿಗಗ್ಗಳೆಯ ಚೆಲುವೆ, ಆಕೆಯನು ಸಂಗಮದೇವಾ , ನೀನು ಜಂಗಮರೂಪಾಗಿ ಬಂದು ಎನ್ನ ಮುಂದೆ ಸಂಗವ ಮಾಡುತ್ತಿರಲು ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದಡೆ ನಿಮ್ಮಾಣೆ , ನಿಮ್ಮ ಪ್ರಮಥರಾಣೆ, ಮನದೊಡೆಯ ನೀನೆ ಬಲ್ಲೆ .''

ಬಾಳಸಂಗಾತಿಗಳಾದ ಜ್ಞಾನಿಗಳು ತನುವಿನಲ್ಲಿ ಮೂಡುವ ಸಕಲ ಅಜ್ಞಾನಗಳನ್ನು ಕಳೆದುಕೊಳ್ಳುವ ರೀತಿಯಿದು. ಇದಕ್ಕೆ ಉತ್ತರವೆನ್ನುವಂತೆ ಮಹಾಜ್ಞಾನಿ ನೀಲಮ್ಮ ಹೇಳುತ್ತಾಳೆ: ಸ್ತ್ರೀ ಎನ್ನಬಹುದೆ ಬಸವನು ಎನಗೆ ? ಪುರುಷನೆನ್ನಬಹುದೆ ಬಸವನನು ನಾನು ? ಆನು ಬಸವನಿಗೆ ಶಿಶುವಾದೆ ; ಬಸವ ಎನಗೆ ಶಿಶುವಾದ. ಇಬ್ಬರೂ ಮಹಾಜ್ಞಾನಿಗಳಾದರು ಬಾಳಸಂಗಾತಿಗಳಾದರು. ಬಸವಣ್ಣ ಸತಿಯಾಗಿ ತನ್ನ ಜ್ಞಾನಿ ಪತಿಯೊಂದಿಗೆ ಸಂಗ ಮಾಡಿ ಶಿಶುವಾದ. ನೀಲಮ್ಮ ಸತಿಯಾಗಿ ತನ್ನ ಜ್ಞಾನಿ ಗಂಡನೊಂದಿಗೆ ಸಂಗ ಮಾಡಿ ಶಿಶುವಾದಳು.

ದೇಹ ದೇಹ ಕೂಡುವುದು ಜ್ಞಾನದ ಶಿಶುವಿನ ಬೇಡಿಕೆ ಉಂಟಾದಾಗ ಮಾತ್ರ. ಇಲ್ಲದಿದ್ದರೆ ಅದು ಅನರ್ಥ ; ಅಜ್ಞಾನ. ಹೆಣ್ಣು ಹೆಣ್ಣು ಅಜ್ಞಾನದಿಂದ ಕೂಡಿದಂತೆ; ಅರ್ಥವಿಲ್ಲದ್ದು. ಇದಕ್ಕೆ ಯಾವ ದೇಹವೂ ಸಾಯಬೇಕಿಲ್ಲ, ಆತ್ಮಹತ್ಯೆ ಮಾಡಿಕೊಳ್ಳಬೇಕಿಲ್ಲ, ಕೊಲೆ ಮಾಡಬೇಕಿಲ್ಲ, ತನುವಿನಲ್ಲಿ ಕೋಲಾಹಲ ಉಂಟಾಗಬೇಕಿಲ್ಲ ಎನ್ನುವ ಸತ್ಯವನ್ನು ಶರಣರು ಸೂತ್ರದ ಮೂಲಕ ಪ್ರತಿಪಾದಿಸಿದ್ದಾರೆ.

ಇಂತೀ ತ್ರಿವಿಧವು ಹೊರಗಣವು :

ಸಂಗ್ರಹ ಮಾಡಿದ ಅರ್ಥ ಅನರ್ಥವಾದರೆ ತನುವಿನಲ್ಲಿ ಕೋಲಾಹಲವಾಗುತ್ತದೆ. ಹುಟ್ಟಿದ ಮಗು ಇಲ್ಲವಾದರೆ ಮೋಹದಿಂದಾಗಿ ತನುವಿನಲ್ಲಿ ಕೋಲಾಹಲವುಂಟಾಗುತ್ತದೆ. ಮುಟ್ಟಿದ ಸ್ತ್ರೀ ಅಂದರೆ ಮಾಡಿಕೊಂಡ ಹೆಂಡತಿ ಕಣ್ಣ ಮುಂದೆ ಪರಪುರುಷನೊಂದಿಗೆ ನೆರೆಯುತ್ತಿದ್ದಾಗ ತನುವಿನಲ್ಲಿ ಕೋಲಾಹಲವಾಗುತ್ತದೆ. ಇವು ಮೂರೂ ಹೊರಗಣವು. ಅರಿವಿನಿಂದ ಸಮಾಧಾನ ಮಾಡಿಕೊಳ್ಳಬಹುದು ಇನ್ನು

''ಎನ್ನಂಗದ ಮೇಲೆ ಬರಲಿ, ಹಿಡಿಖಂಡವ ಮಾಡಿ ಕೊಯ್ಯಲಿ, ಇಕ್ಕುವ ಶೂಲ ಪ್ರಾಪ್ತಿಸಲಿ ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ ; ಮತ್ತೆಯೂ ಲಿಂಗಾರಾಧನೆಯ ಮಾಡುವೆ, ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ ! ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ ನೀನಂದೆ ಮೂಗ ಕೊಯಿ ಕೂಡಲಸಂಗಮದೇವಾ''

''ಇಂತೀ ತ್ರಿವಿಧವು ಹೊರಗಣವು, ಎನ್ನ ಬೇನೆಯೊಳಗಲ್ಲ. ಇನ್ನು ನಾನಿದೇನೆ? ಕದ್ದ ಕಳ್ಳನ ಕಟ್ಟುವಂತೆ ಕಟ್ಟಿ ನೀನು ಜಂಗಮ ರೂಪಾಗಿ ಬಂದು ಎನ್ನಂಗದ ಮೇಲೆ ಶಸ್ತ್ರವನಿಕ್ಕಿ ನೋಡು, ಬಸಿದ ಶೂಲ ಪ್ರಾಪ್ತಿಯ ಮಾಡಿ ನೋಡು, ನವಖಂಡವ ಮಾಡಿ ಕಡಿಕಡಿದು ನೋಡು, ಆ ಶೂಲವೈದ್ಯೆದು ಮುಖವಾಗಿ ಹಾಯುವಾಗ ಹರಿತಿನಿಸಿ ನೋಡು. ಈ ರೀತಿಯಲ್ಲಿ ಎನ್ನ ಭಂಗಬಡಿಸಿ ನೋಡಿದಡೆಯು ಲಿಂಗಾರ್ಚನೆಯ ಮಾಡುವುದ ಬಿಡೆ, ಜಂಗಮ ದಾಸೋಹವ ಮಾಡುವುದ ಬಿಡೆ, ಪಾದ ತೀರ್ಥ ಪ್ರಸಾದವ ಕೊಂಬುವದ ಬಿಡೆ. ಇಂತೀ ತ್ರಿವಿಧಕ್ಕೆ ರೋಷವ ಮಾಡಿ ಬಿಟ್ಟೆನಾದಡೆ , ನಿಮ್ಮಾಣೆ , ನಿಮ್ಮ ಪ್ರಮಥರಾಣೆ. ಇಷ್ಟರೊಳಗೆ ತಪ್ಪುಳ್ಳಡೆ ಮೂದಲಿಸಿ ಮೂಗ

ಕೊಯಿ, ಕೂಡಲಸಂಗಮದೇವಾ''

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ ; ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ ಕಾಣಾ. ಅದನ್ನು ಕೆಡಗೊಡದೆ ಅಲಂಕರಿಸಿದಡೆ ನಿನ್ನಂತ ಸಿರಿವಂತರು ಯಾರೂ ಇಲ್ಲ ಎಲೆ ಮನವೆ. ಭೂಮಿ , ಹೇಮ , ವಿಷಯವಸ್ತುವನ್ನು ಜ್ಞಾನದಿಂದ ನೋಡಿದರೆ ಅವು ಮೂರೂ ವಸ್ತುಗಳು ತನುವನ್ನು ಬಾಧೆ ಪಡಿಸುವುದಿಲ್ಲ. ಆದರೆ ಜ್ಞಾನದಿಂದ ನೋಡುವ ತಂತ್ರಜ್ಞಾನ ತನಗೆ ಬಲವಾಗಿ ಒಲಿಯಬೇಕು. ಅಂದರೆ ಮಾತ್ರ ಖಂಡಿತ ಸಾಧ್ಯವಾಗು ವುದು. ತನುವನ್ನು ಸಂಕಟಪಡಿಸದೆ ಕಣ್ಣಿಗೆ ಪ್ರಸಾದವಾಗುವುದು.

ಹಾಗೆಯೇ ತನುವನ್ನು ಕೂಡಾ ಕದ್ದ ಕಳ್ಳನ ಕಟ್ಟುವಂತೆ ಕಟ್ಟಿ , ಅಂಗದ ಮೇಲೆ ಶಸ್ತ್ರವನಿಕ್ಕಿ , ಶೂಲದಿಂದ ಹಿರಿದು , ನವಖಂಡ ಮಾಡಿ ಕಡಿ ಕಡಿದು ನೋಡಿ , ಆ ಶೂಲವು ಐದೈದು ಮುಖದಿಂದ ಹಿರಿಯುವಾಗಲೂ ತನುವಿಗೆ ಭಂಗವುಟಾಗುವುದಿಲ್ಲ. ಅರಿವಿನಿಂದ ನೋಡಲಾಗಿ, ತನು ಬಯಲಬೀಜ!

ಬಯಲು , ತನ್ನಲ್ಲಿ ಬೆರೆತ ಜಲಜನಕವನ್ನೂ ಆಮ್ಲಜನಕವನ್ನೂ ಒಂದು ಮಾಡಿ ತಾನು ಅದರಲ್ಲಿ ಬೆರೆತು ಜೀವಜಲಬಿಂದುವಾಗಿ ತಂದೆ ಗರ್ಭದಿಂದ ತಾಯಿ ಗರ್ಭ ಸೇರಿ ತನುವಾಗಿದೆ. ತನು ಅರಿವಿನ ಭಂಡಾರ ! ಮನ ಆವರಿಸಿದ್ದಕ್ಕಾಗಿ ಸಾವು ನೋವುಗಳ ಭಯ ತನುವಿಗೆ ಆವರಿಸಿದೆ.

ತನುವಿನ ಕಣ್ಣು ರೂಪವಾದರೆ ಅದರ ದೃಷ್ಟಿ ನಿರೂಪ! ನಿರೂಪಕ್ಕೆ ಜೀವದ ಭಯವಿಲ್ಲ. ಕಿವಿ ರೂಪವಾದರೆ ಅದರ ಶಬ್ದ ನಿರೂಪ ! ಮೂಗು ರೂಪವಾದರೆ ಅದರ ವಾಸನೆ ನಿರೂಪ ! ನಾಲಗೆ ರೂಪವಾದರೆ ಅದರ ರುಚಿ ನಿರೂಪ! ಚರ್ಮ ರೂಪವಾದರೆ ಅದರ ಸ್ಪರ್ಶ ಶಕ್ತಿ ನಿರೂಪ! ನಿರೂಪದಿಂದಲೇ ನಿರೂಪದ ಮನ ಸೃಷ್ಟಿಯಾಗಿದೆ. ಆದರೆ ಮನಕ್ಕೆ ಏನೆಲ್ಲ ಬೇಕು. ನಿರೂಪವೆಂಬ ವಿರಾಟ ಸ್ವರೂಪಕ್ಕೆ ಏನೂ ಬೇಡ. ಏಕೆಂದರೆ ಏನೆಲ್ಲ ಅದೇ ಆಗಿದೆ. ಅಂಗವನ್ನು ಸೃಷ್ಟಿಸಿ ಅಂಗದಲ್ಲಿ ಚುಳುಕಾಗಿದೆ.

ನಿರೂಪಕ್ಕೆ ಸಾವು ನೋವುಗಳಿಲ್ಲ. ನಿರೂಪದಿಂದ ಆದ ರೂಪಕ್ಕೆ ಹಾಗೂ ಅದನ್ನು ಆವ ರಿಸಿದ ಮನಕ್ಕೆ ಮಾತ್ರ ಸುಖವೂ ಇದೆ ; ದುಃಖವೂ ಇದೆ. ಮರಣವೂ ಇದೆ. ಮನ ತನುವಿನಲ್ಲಿ ಇಲ್ಲದ ರಸಾಯನವನ್ನು ಸೃಷ್ಟಿಸಿ ತನುವಿನ ಝುಂಗಾಬಲವನ್ನೇ ತಂತಿಯಿಂದ ಮೀಟುತ್ತದೆ. ಅದರ ತರಂಗಗಳಿಂದ ಇಡೀ ತನುವೆಲ್ಲ ಜರ್ಜರಿತವಾಗುತ್ತದೆ.

ಹಳೆ ಒಡಂಬಡಿಕೆಯಲ್ಲಿ ಯೋಬನ ಕತೆಯೊಂದು ಬರುತ್ತದೆ. ಈತ ಊಚ್ ದೇಶದ ಸಂತ. ಏಳುಜನ ಗಂಡುಮಕ್ಕಳು ಮೂವರು ಹೆಣ್ಣು ಮಕ್ಕಳು ಅಪಾರ ಶ್ರೀಮಂತಿಕೆಯನ್ನು ಹೊಂದಿ ಹೆಂಡತಿಯೊಂದಿಗೆ ಸುಖವಾಗಿದ್ದ. ಒಮ್ಮೆ ಮನವೆಂಬ ಸೈತಾನನು ದೇವನನ್ನು ಕಾಣಲು ಹೋಯಿತು. ಎಲ್ಲರೂ ನನ್ನ ಆಧೀನದಲ್ಲಿದ್ದಾರೆ. ನನ್ನ ಪಾಲನೆ ಪೋಷಣೆ ಮಾಡುತ್ತಾರೆ ಎಂದು ಸಂತೋಷದೊಂದಿಗೆ ದೇವನ ಮುಂದೆ ಬೀಗಿತು.

ಊಚ್‌ದೇಶದಲ್ಲಿ ನನ್ನ ಭಕ್ತ ಯೋಬನಿದ್ದಾನೆ. ಅವನು ಮಾತ್ರ ನಿನಗೆ ಮಣಿಯುವು ದಿಲ್ಲ. ನಿನ್ನ ಎಲ್ಲ ತೊಂದರೆಗಳನ್ನು ನನಗೆ ಅರ್ಪಿಸಿ ಸುಖದಿಂದ ಇರಬಲ್ಲ ಯೋಧನವನು ಎಂದರು. ಹೋಗಿ ಪರೀಕ್ಷಿಸು ಎಂದು ಆಜ್ಞೆ ಮಾಡಿದರು.

ಯೋಬನ ಏಳು ಮಕ್ಕಳು ಮತ್ತು ಅವನ ಅಪಾರ ಸೈನ್ಯ ಹಾಗೂ ಸಂಪತ್ತಿನ ಮೇಲೆ ನೆರೆ

ರಾಜರು ಯುದ್ಧ ಸಾರಿ ಎಲ್ಲವನ್ನೂ ಸೂರೆ ಮಾಡಿ ಮಕ್ಕಳನ್ನು ಕೊಂದರು. ಅವರ ಹೆಂಡಂದಿರನ್ನು ಕಬಳಿಸಿದರು. ಈ ಸುದ್ದಿಯನ್ನು ಒಬ್ಬ ಸೈನಿಕ ಬಂದು ಯೋಬನಿಗೆ ಹೇಳಿದ. ಯೋಬನಿಗೆ ದುಃಖವಾಗಲಿಲ್ಲ. ಬದಲಾಗಿ ಇಲ್ಲಿಯವರೆಗೂ ಅವರಿಂದ ಸಿಕ್ಕ ಸುಖಕ್ಕಾಗಿ ದೇವನಿಗೆ ವಂದನೆಗಳನ್ನು ಸಲ್ಲಿಸಿದರು. ನಿನ್ನಿಂದಲೇ ಬಂದರು ; ನಿನ್ನಲ್ಲಿಯೇ ಲೀನವಾದರು. ನಿನ್ನಿಂದ ಬಂದಾಗ ಸುಖವಾಯಿತು. ನಿನ್ನಲ್ಲಿಗೆ ಪುನಃ ಬಂದಾಗ ಇನ್ನೂ ಸುಖವಾಯಿತು ತಂದೆ ಎಂದರು.

ಸ್ವಲ್ಪ ದಿನದಲ್ಲಿಯೇ ಹೆಂಡತಿ ಸತ್ತಳು. ಹೆಣ್ಣು ಮಕ್ಕಳೂ ಸತ್ತರು. ಆಗಲೂ ಯೋಬನಿಗೆ ಕಿಂಚಿತ್ತು ದುಃಖವಾಗಲಿಲ್ಲ. ಸೈತಾನನಿಗೆ ಸಿಟ್ಟು ಬಂತು. ಯೋಬನ ಮೈ ತುಂಬಾ ಗುಳ್ಳೆಗಳಾದವು. ಕೀವು ರಕ್ತ ಹೊರಬಂದು ದೇಹದಲ್ಲಿ ಹುಳುಗಳು ಬಿದ್ದವು. ಆಗಲೂ ಯೋಬನಿಗೆ ದುಃಖವಾಗಲಿಲ್ಲ. ಇಷ್ಟು ದಿನಗಳವರೆಗೆ ಸುಖಕೊಟ್ಟೆ. ಇದು ನಿನ್ನ ಕಾಯ. ನಿನ್ನ ಕಾಯವನ್ನು ನೀನು ಪರೀಕ್ಷಿಸಿದರೆ ನನಗೇನು ತೊಂದರೆ ತಂದೆ ? ಎಂದನು. ಇನ್ನೂ ಪರೀಕ್ಷಿಸುವಲ್ಲಿ ಸೈತಾನ ಸೋತು ಹೋದನು. ಯೋಬ ಮೊದಲಿನಂತೆ ಸಂಪತ್ತನ್ನು ಹೊಂದಿ ಮಕ್ಕಳು ಮೊಮ್ಮಕ್ಕಳೊಂದಿಗೆ ನೂರಾನಲ್ವತ್ತು ವರ್ಷ ಬಾಳಿದನೆಂದು ಬೈಬಲ್‌ನ ಹಳೆ ಒಡಂಬಡಿಕೆಯ 42 ನೇ ಸಂದಿಯಲ್ಲಿ ಬರುತ್ತದೆ.

ಜ್ಞಾನಿಗಳು ಯಾವ ದೇಶದಲ್ಲಿದ್ದರೇನು ? ಯಾವ ಭಾಷೆ ಮಾತಾಡಿದರೇನು ? ಜ್ಞಾನವೆಲ್ಲಾ ಒಂದೇ ಆಗಿದೆ. ಜ್ಞಾನಕ್ಕೆ ಹೋಗುವ ಸೂತ್ರಗಳೆಲ್ಲಾ ಒಂದೇ ಆಗಿವೆ. ಕಾಲಘಟ್ಟದ ಭಾಷೆಯಲ್ಲಿ ಮಾತ್ರ ಬೆಡಗು ತುಂಬಿರುತ್ತದೆ. ಅದನ್ನು ಬಿಚ್ಚಿ ಅಂತರಾಳಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಕೂಡಾ ಓದುವ ಎಲ್ಲ ತನುಗಳಲ್ಲಿ ಇದೆ. ಅರಿವಿನಿಂದ ಜ್ಞಾನಿಗಳ ಸೂತ್ರ ಓದಿದಾಗ ಮಾತ್ರ ಅದು ಮನಕ್ಕೆ ದಿವ್ಯ ಔಷಧಿಯಾಗಲು ಸಾಧ್ಯವಾಗುತ್ತದೆ.

ಬಸವಣ್ಣನವರ ಈ ವಚನ ಹಳೆ ಒಡಂಬಡಿಕೆಯ ಯೋಬನ ಕತೆ ಒಂದೇ ಆಗಿದ್ದರೂ ಎಂಟುನೂರು ವರ್ಷಗಳ ವ್ಯತ್ಯಾಸವಿದೆ. ಕ್ರೈಸ್ತ ಸಂಶೋಧಕರು ಇದನ್ನು ಓದಿದರೆ ಶರಣರು ಹಳೆ ಒಡಂಬಡಿಕೆಯ ಕಾಪಿ ಮಾಡಿದ್ದಾರೆ ಎನ್ನುವುದಕ್ಕೂ ಹಿಂಜರಿಯುವುದಿಲ್ಲ. ಜ್ಞಾನಿಗಳು ಯಾವ ಶತಮಾನದಲ್ಲಿದ್ದರೇನು ? ಯಾವ ದೇಶದವರಾದರೇನು ? ಯಾವ ಭಾಷೆ ಬಳಸಿಕೊಂಡರೇನು ಜ್ಞಾನ ಒಂದೇ ! ಅವರ ವಿಚಾರಗಳೂ ಒಂದೇ ! ಅವರ ನಡೆ ನುಡಿ ಕೂಡಾ ಒಂದೇ ಆಗಿರುತ್ತದೆ. ಜ್ಞಾನಿಗಳನ್ನು ಆರಾಧಿಸಿ ಪೂಜಿಸುವವರಿಗೆ ಮಾತ್ರ ಅಜ್ಞಾನದ ರೋಗ ! ಜ್ಞಾನವನ್ನು ಆರಾಧಿಸಿ ಪೂಜಿಸುವವರು ಮಾತ್ರ ಸರ್ವಕಾಲದಲ್ಲಿಯೂ ಮುಕ್ತರು. ಸಶಕ್ತರು.

707

ತನುವ ಬೇಡಿದಡೀವೆ , ಮನವ ಬೇಡಿದಡೀವೆ,
ಧನವ ಬೇಡಿದಡೀವೆ , ಬೇಡು , ಬೇಡೆಲೆ ಹಂದೇ !
ಕಣ್ಣ ಬೇಡಿದಡೀವೆ , ತಲೆಯ ಬೇಡಿದಡೀವೆ ;
ಕೂಡಲಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪೆ
ನಿಮ್ಮ ಪುರಾತರ ಮನೆಯಲ್ಲಿ.

ತನು ಒಂದು ಭವ್ಯವಾದ ಅರಿವಿನ ಅರಮನೆ. ಈ ಅರಿವಿನ ಮನೆಯಲ್ಲಿ ಹೇಗೆ ವಾಸ ಮಾಡಬೇಕೆಂದು ಪುರಾತನರು ಹೇಳಿಕೊಟ್ಟಿದ್ದಾರೆ. ಹಾಗೆಯೇ ವಾಸಮಾಡಿ ಜಗದ ತನು

ಸಂತತಿಗಳಿಗೆಲ್ಲ ಸಾರಿ ಹೋಗಿದ್ದಾರೆ. ತನು ಪುರಾತನರ ಸಂತಾನ. ಯಾವ ದೇಶವಾದರೇನು? ಯಾವ ಭಾಷೆಯಾದರೇನು? ಆಯಾ ದೇಶ ಭಾಷೆಯ ಪುರಾತನರ ಸಂತಾನವೇ ತನುವಾಗಿದೆ.

ಓಹಿಲಯ್ಯನು ತನ್ನ ಅಜ್ಞಾನದ ಸೂಕ್ಷ್ಮ ತನುವನ್ನು ಗುಗ್ಗುಳದಲ್ಲೆಸೆದು ಮಹಾಜ್ಞಾನವನ್ನು ಮಾತ್ರ ಉಳಿಸಿಕೊಂಡ. ಸಿಂಧುಮರಾಳ ತನ್ನ ದೇಹದ ಅರ್ಧ ಅಜ್ಞಾನದ ಭಾಗವನ್ನೇ ಅರಿವಿನ ಗರಗಸದಿಂದ ಕೊರೆದು ಶಿವನಿಗೆ ಅರ್ಪಿಸಿದ. ಬೇಡದ ಅಜ್ಞಾನದ ಕಣ್ಣನ್ನು ತೆಗೆದು ಅರಿವೆಂಬ ಶಿವನಿಗಿತ್ತು ನಿಜಕಣ್ಣನುಳಿಸಿಕೊಂಡು ಕಣ್ಣಪ್ಪನೆಂದೇ ಪ್ರಖ್ಯಾತಿಯಾದ ಬೇಡರ ಕಣ್ಣಪ್ಪ! ಇಂತಹ ಪುರಾತನರೇನು ಸಾಮಾನ್ಯರೇ?

ಅಜ್ಞಾನವೆಂಬುದೊಂದು ತನುವಿಗಂಟಿದ ಮಹಾರೋಗ. ಅದು ಅರಿವಿನ ಗರಗಸಕ್ಕೆ ಮಾತ್ರ ಹೋಗುತ್ತದೆ. ಪುರಾತನರು ತನುವಿನಲ್ಲಿ ಆವರಿಸಿದ ಅಜ್ಞಾನವನ್ನು ತನುವಿನಲ್ಲಿಯೇ ಇದ್ದ ಮಹಾಜ್ಞಾನಯುಧದಿಂದಲೇ ಕಳೆದುಕೊಂಡರು.

ತನು ಎನ್ನುವುದು ಒಂದೇ ಆಗಿ ಕಂಡರೂ ಅದರಲ್ಲಿ ಮೂರು ತನುಗಳಿವೆ. ಒಂದು ಸ್ಥೂಲ ತನು. ಅದು ಎಲ್ಲರಿಗೂ ಕಾಣುತ್ತದೆ. ಮತ್ತೊಂದು ಕಾರಣ ತನು. ಈ ತನುವಿನಿಂದಲೇ ಸ್ಥೂಲ ತನುವಿನ ಜನನವಾಯಿತು. ಇದನ್ನು ಜ್ಞಾನ ತನುವೆಂದು ಕರೆಯಬಹುದು. ಈ ಜ್ಞಾನ ತನುವಿನ ಬೆಳಕಿನಿಂದಲೇ ನೆರಳೆಂಬ ಸೂಕ್ಷ್ಮ ತನುವಿನ ಉಗಮವಾಯಿತು. ಇದು ಸ್ಥೂಲ ತನುವನ್ನು, ಕಾರಣ ತನುವನ್ನು ತನ್ನ ನೆರಳಿನ ಸೂಕ್ಷ್ಮ ವಸ್ತ್ರದಿಂದ ಬಂಧಿಸಿತು. ಹೀಗಾಗಿ ಸ್ಥೂಲ, ಸೂಕ್ಷ್ಮ, ಕಾರಣ ಎಂದು ಒಂದು ತನುವಿನಲ್ಲಿ ಮೂರು ಭಾಗಗಳಾದವು.

ಸ್ಥೂಲ ತನು ನಿಮಿತ್ಯ ಮಾತ್ರವಾಗಿ, ಸೂಕ್ಷ್ಮ ತನು ಸ್ಥೂಲ ತನುವಿನ ಮೇಲೆ ಆಡಳಿತ ಸ್ಥಾಪಿಸಿತು. ಸ್ಥೂಲ ತನುವಿನ ಅಜ್ಞಾನದ ಒಡೆಯನಾಯಿತು.

ಕಾರಣ ತನುವದು ಜ್ಞಾನದ ತನು ; ಶಿವತನು. ತನುವಿನ ಕಣಕಣದಲ್ಲಿ ಶಿವನೆಂಬ ಅರಿವು ಬೆರೆತು ಶಿವಮಯವಾಯಿತು. ಆದರೂ ನುಡಿದು ಹೇಳುವ ಈ ಅರಿವನು ಸೂಕ್ಷ್ಮ ತನುವೆಂಬ ಮನ ಕೇಳದಂತೆ ಕಿವುಡಾಯಿತು; ನೋಡದಂತೆ ಕುರುಡಾಯಿತು. ಮುಟ್ಟದಂತೆ, ಅರಿವಿನಿಂದ ಮೂಸಿಸಿ ರುಚಿಸದಂತೆ ಜಡವಾಯಿತು. ಮನದಿಂದಾಗಿ ಸ್ಥೂಲ ತನು ಅಜ್ಞಾನದ ಸಾಮ್ರಾಜ್ಯವೇ ಆಯಿತು.

ಸ್ಥೂಲ ತನುವಿನ ಮನೆಯ ಒಡೆಯರೆಂದರೆ ; ಪುರಾತನರು. ಅವರು ಅಜ್ಞಾನದ ಸೂಕ್ಷ್ಮ ತನುವನ್ನು ಅರಿವಿನಿಂದ ಕತ್ತರಿಸಬಲ್ಲ ನಿಪುಣರು. ಅರಿವಿನ ತನುವಿನಿಂದ ಅಂದರೆ ಕಾರಣ ತನುವಿನಿಂದ , ಸೂಕ್ಷ್ಮ ತನುವನ್ನು ಕತ್ತರಿಸಿದರೆ ಮಾತ್ರ ಸೂಕ್ಷ್ಮ ತನು ಇಲ್ಲವಾಗುತ್ತದೆ. ಸೂಕ್ಷ್ಮ ತನುವನ್ನೇ ಕಾರಣ ತನುವಿನ ಬೆಳಕಿನಿಂದ ಬೆಳಗಿಸಿದರೂ ಬೆಳಕಾಗುತ್ತದೆ ಅಥವಾ ಸೂಕ್ಷ್ಮ ತನುವನ್ನು ಪಳಗಿಸಿ ಅರಿವೆಂಬ ಗುರು ತನುವಿಗೆ ಭಕ್ತನನ್ನಾಗಿಸಿದರೂ ಅದರ ಅಜ್ಞಾನ ತೊಲಗುತ್ತದೆ.

ಕೂಡಲಸಂಗಮದೇವಾ , ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತರ ಮನೆಯಲ್ಲಿ:

ತನು ಜ್ಞಾನದ ಮನೆ! ಪುರಾತರ ಸಂತತಿ! ಪುರಾತರು ಈ ಮನೆಯಲ್ಲಿ ಸುಂದರವಾಗಿ ಬಾಳಿ ಬದುಕಿದರು. ಅವರು ಹೇಗೆ ಬದುಕಿದರು ಎಂಬ ನಿದರ್ಶನಕ್ಕಾಗಿ ತನುವಿನ ಸಾಹಿತ್ಯವನ್ನು ಬಿಟ್ಟು ಹೋಗಿದ್ದಾರೆ. ಅರಿವಿನ ಅಡಿಗೆ ಉಂಡು ಅರಿವಿನ ತೇಗು ತೇಗಿದ್ದಾರೆ. ಅರಿವಿನ ಉಪಕರಣಗಳನ್ನು ಬಿಟ್ಟಿದ್ದಾರೆ. ಈ ಮನೆಯ ಅಜ್ಞಾನವನು ಇದೇ ಮನೆಯ ಜ್ಞಾನಿಗೆ ನೀಡಿ, ಶುದ್ಧನಾಗಿ,

ಪುರಾತರ ಮನೆಯಲ್ಲಿ ಅರಿವಿನಿಂದ ಉಂಡು , ಅರಿವಿನಿಂದ ನೋಡಿ, ಅರಿವಿನಿಂದ ಕೇಳಿ, ಅರಿವಿನಿಂದ ಮೂಸಿಸಿ, ಅರಿವಿನಿಂದ ಮುಟ್ಟಿ ಕುಣಿ ಕುಣಿದಾಡಿ ಆನಂದದಿಂದಿರುವ ಜ್ಞಾನದ ಮಹಾಸೂತ್ರವನ್ನು ಪುರಾತರ ಸಂತಾನವಾದ ಈ ತನುಗಳು ಕಲಿಯಬೇಕಿದೆ.

708

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು ;
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ,
ಕೂಡಲಸಂಗಮದೇವಾ.

ನಾನು ಆರಂಭ ಮಾಡುವೆನಯ್ಯಾ ಗುರುಪೂಜೆಗೆಂದು:

ಅಂಗದಲ್ಲಿ ಲಿಂಗಯ್ಯನಿದ್ದಾನೆ, ಜಂಗಮನೂ ಇದ್ದಾನೆ, ಗುರುದೇವನೂ ಇದ್ದಾನೆ. ಅಂಗ ಕೃಷಿ ಕಾಯಕದಲ್ಲಿ ನಿರತವಾದರೆ ಈ ಮೂರರ ಹೊರತಾಗಿ ಮತ್ತಾವ ಘನ ಕಾರ್ಯಕ್ಕೂ ಇರುವುದಿಲ್ಲ. ಆದರೆ ಅಂಗದಲ್ಲಿ ಗುರು ಮರೆಯಾಗಿ ಬೋಧೆ ಮಾಡುವುದರಿಂದ ಭವಿಗೆ ಗುರುವೆಂದರೆ ಯಾರೆಂದು ತಿಳಿಯುತ್ತಿಲ್ಲ. ಸಮರ್ಥ ಗುರುವನ್ನು ಹುಡುಕಿ ಅಂಗದಲ್ಲಿ ಸಂಗಮ ವಾದ ಗುರುವಿನ ಸಂಬಂಧ ಬೆಳೆಸುವುದಕ್ಕೆ ಮನವೆಂಬ ಭವಿಗೆ ಇಷ್ಟವಾಗುತ್ತಿಲ್ಲ. ಹೀಗಾಗಿ ಮಾಡಿದ ಎಲ್ಲಾ ಕೃಷಿಯ ಕಾಯಕವನ್ನು ತಾನು ಮಾಡಿದೆ, ತನಗಾಗಿ ಮಾಡಿದೆ, ತನ್ನವರಿಗಾಗಿ ಮಾಡಿದೆನೆಂಬ ಅಹಂಕಾರ ಮನೆ ಮಾಡುತ್ತದೆ. ಈ ಅಹಂಕಾರದಲ್ಲಿ ಗುರುಲಿಂಗ ಜಂಗಮರು ಪ್ರಕಟವಾಗದಂತೆ ಅಂಗದಲ್ಲಿಯೇ ಉಳಿದು ಬಿಡುತ್ತಾರೆ.

ಬೆಳೆದ ಸರ್ವ ಪದಾರ್ಥಗಳಲ್ಲಿಯೂ ತನ್ನದೇ ಆದ ರುಚಿಯಿದೆ. ಆ ರುಚಿ ಪದಾರ್ಥದ ಲ್ಲಿದೆಯೆಂದು ಸೂಚಿಸಿದ್ದು ಕೂಡಾ ಗುರುದೇವನೇ ಆಗಿದ್ದಾನೆ. ಪದಾರ್ಥದಲ್ಲಿ ರುಚಿ, ತನ್ನಂಗದಲ್ಲಿ ಪದಾರ್ಥದ ರುಚಿಯನ್ನು ಸವಿಯುವ ಚೇತನವನ್ನು ಗುರುದೇವ ಸೃಷ್ಟಿಸಿ ಅದನ್ನು ಅಂಗದ ಮೂಲಕ ತಾನೇ ಸವಿಯುತ್ತ ಆನಂದ ಪಡುತ್ತಾನೆ.

ಈ ಕ್ರಿಯೆ ಪದಾರ್ಥ ಬೆಳೆದ ರೈತನೊಬ್ಬನಿಗೆ ಅಲ್ಲದೆ ಎಲ್ಲ ತನುಗಳಲ್ಲಿಯೂ ಈ ಶಕ್ತಿ ಅಡಗಿದೆ. ಸರ್ವ ತನುಗಳಲ್ಲಿ ತನ್ಮಯವಾದ ಗುರುದೇವನಿಗಾಗಿ ನಾನು ಸಕಲ ಪದಾರ್ಥಗಳನ್ನು ಬೆಳೆಯುತ್ತೇನೆ. ಈ ಭಾಗ್ಯ ರೈತನಾದ ನನಗೊಬ್ಬನಿಗೇ ಗುರುದೇವ ಕರುಣಿಸಿದ. ಆತನ ಸೇವೆಗಾಗಿಯೇ ಅಂಗಕ್ಕೆ ರೈತನ ಕಾಯಕಪಟ್ಟ ಕರುಣಿಸಿದ್ದಾನೆ. ಆತ ಕರುಣಿಸಿದ ದ್ರವ್ಯವು ಆತನಿಗೆ ಸವೆಯಲಿ. ಎಂದು ತಿಳಿದು ಮಾಡುವ ಕೃಷಿ ಅದು ಗುರುದೇವನಿಗಾಗಿ ಮಾಡಿದ ಕೃಷಿ. ಸಕಲ ಗುರು ತನುಗಳಿಗಾಗಿ ಮಾಡಿದ ಕೃಷಿ.

ಕೃಷಿಕನಿಗೆ ಇದು ಬಿಟ್ಟು ಬೇರಿಲ್ಲ. ತಾನು ಬೆಳೆದ ಪದಾರ್ಥ ತಾನೊಂದೆ ತಿನ್ನುವುದಿಲ್ಲ.

ಬೆಳೆದ ಪದಾರ್ಥಕ್ಕೂ ತನುವಿನ ರುಚಿಗೂ ಅವಿನಾಭಾವ ಸಂಬಂಧದ ಚೇತನ ಶಕ್ತಿಯ ಬಾಂಧವ್ಯ ವಿದೆ. ಬೆಳೆಯುವಾಗ, ತಿನ್ನುವಾಗ ಈ ಅರಿವು ಮರೆವಾಗಿದೆ. ಅರಿವಾದರೆ ಮಾತ್ರ ಕೃಷಿ ಕಾಯ ಕದ ಫಲ ದೊರೆಯುತ್ತದೆ.

ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು:

ಯಾವುದೇ ವ್ಯವಹಾರ ಮಾಡಲಿ ಅದು ತನಗೊಂದೆ ಅಲ್ಲ. ತನ್ನವರಿಗೊಂದೆ ಅಲ್ಲ. ಅದು ಎಲ್ಲರಿಗಾಗಿ. ಬೆಳೆದ ದ್ರವ್ಯವನ್ನು ಕೆಡದಂತೆ ಸಂಗ್ರಹಿಸಿ ಸಕಲರಿಗೂ ಸಮಾನವಾಗಿ ಹಂಚು ವುದು ಸಣ್ಣ ಮಾತಲ್ಲ. ಹಾಗೇ ಹಂಚುವುದು ಕೂಡಾ ಅಂಗಕ್ಕಾಗಿಯೇ. ಅದು ತನ್ನಂಗವಾದ ರೇನು, ಇತರರ ಅಂಗಗಳಾದರೇನು? ಸರ್ವಾಂಗಗಳಲ್ಲಿ ಲಿಂಗಯ್ಯ ಸಂಗಮವಾಗಿದ್ದಾನೆ. ಹೀಗಾಗಿ ಕಣ್ಣು ಕಿವಿ ನಾಲಿಗೆ ಚರ್ಮ ಮೂಗು ಸಮಾನವಾಗಿ ಕಾರ್ಯನಿರ್ವಹಿಸುತ್ತವೆ.

ಮಾಡುವ ವ್ಯವಹಾರದಲ್ಲಿ ದೋಷ ಕಂಡುಬಂದರೆ ಅದು ತನ್ನಂಗಕ್ಕೆ ಕೇಡು. ಮಾಡಿದ ಮೋಸವೆಲ್ಲ ಲಿಂಗಯ್ಯನಿಗೆ ಗೊತ್ತಿದೆ. ಆತ ಮಹಾದೇವ ಸೆಟ್ಟಿ. ಮೋಸದ ಲೆಕ್ಕಗಳನ್ನೆಲ್ಲ ಬರೆದಿಟ್ಟು ಕೊಂಡು ಮತ್ತೆ ಮತ್ತೆ ಡಬ್ಬಣ್ಣದಿಂದ ಮೋಸ ಮಾಡಿದ ಅಂಗಕ್ಕೆ ಚುಚ್ಚುತ್ತಾನೆ. ಸರ್ಕಾರದಿಂದ ತಪ್ಪಿಸಿಕೊಳ್ಳಬಹುದು ; ಮಹಾದೇವಸೆಟ್ಟಿಯಿಂದ ತಪ್ಪಿಸಿಕೊಳ್ಳಲು ಬರುವುದಿಲ್ಲ. ಸಕಲ ಅಂಗಗಳಲ್ಲಿ ಸಂಗಮವಾಗಿರುವ ಲಿಂಗಯ್ಯನ ಅರ್ಚನೆಗಾಗಿಯೇ ವ್ಯವಹಾರ ಎನ್ನುವುದು ತನ್ನಿಂದ ತನಗೆ ತಿಳಿಯಬೇಕು.ಅಂದರೆ ಮಾತ್ರ ಹಾಗೆ ವ್ಯವಹಾರ ಮಾಡಲು ಸಾಧ್ಯ.

ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು :

ಅಂಗದಲ್ಲಿಯೇ ಸಂಗಮವಾದ ಗುರು ಲಿಂಗ ಜಂಗಮರು ಭವಿ ಮನಕ್ಕೆ ತಿಳಿದ ಮೇಲೆ ಆ ಮನವದು ಘನಮನ. ಆಗ ಅಂಗ ನೋಡಿ ಬಳಲುವುದಿಲ್ಲ; ಕೇಳಿ ಕಿಡಿಕಾರುವುದಿಲ್ಲ; ಮುಟ್ಟಿ ವಿಕೃತನಾಗುವುದಿಲ್ಲ; ರುಚಿಸಿ ರೊಚ್ಚಿಗೇಳುವುದಿಲ್ಲ; ಮೂಸಿಸಿ ಮೂಗು ಮುಚ್ಚಿಕೊಳ್ಳುವುದಿಲ್ಲ. ಅಂಗದ ಈ ಎಲ್ಲಾ ಅಜ್ಞಾನವನ್ನು ಜಂಗಮ ನಷ್ಟ ಮಾಡುತ್ತಾನೆ. ಇಂತಹ ಜಂಗಮ ಜಗದ ಸರ್ವ ಅಂಗಗಳಲ್ಲಿ ಭರಿತನಾಗಿದ್ದಾನೆ. ಹೀಗೆ ತನ್ನರಿವು ತನಗೆ ತಿಳಿದ ಅಂಗವೇ ಭಕ್ತನ ಅಂಗ. ಅಂಗದಲ್ಲಿ ಸಂಗಮವಾದ ಗುರು ಲಿಂಗ ಜಂಗಮನ ಸೇವೆ ಮಾಡುವುದೇ ಭಕ್ತನ ಕೆಲಸ.

ಗುರುಪೂಜೆಗಾಗಿ ಕೃಷಿಕಾಯಕ ಮಾಡುತ್ತಾನೆ. ಲಿಂಗಾರ್ಚನೆಗಾಗಿ ವ್ಯವಹಾರ ಮಾಡುತ್ತಾನೆ. ಜಂಗಮ ದಾಸೋಹಕ್ಕಾಗಿ ಪರಸೇವೆ ಮಾಡುತ್ತಾನೆ. ಕಾಯ ಯಾವ ಕಾಯಕದಲ್ಲಿ ನಿರತವಾದರೂ ಆ ಕಾಯಕದ ಫಲವನ್ನು ಗುರುಲಿಂಗ ಜಂಗಮರೇ ಕೊಡುತ್ತಾರೆ. ಸೇವೆಗೆ ಗುರಿಯಾದ ಅಂಗ ನಿಮಿತ್ತ ಮಾತ್ರ. 'ಕರ್ಮಣ್ಯೇನಾವಾಧಿಕಾರಸ್ಯೇ ಮಾ ಫಲೇಶು ಕದಾಚನ.'

ಕಾಯ ಯಾವ ಕಾಯಕದಲ್ಲಿ ನಿರತವಾದಡೇನು? ಅದು ಕಾಯದ ಅಭ್ಯುದಯಕ್ಕಾಗಿಯೇ ಹೋರಾಡಬೇಕು. ಕಾಯದ ಅಭ್ಯುದಯ ಕಾಯದ ಹೊರಗಿಲ್ಲ. ಕಾಯದ ಅಭ್ಯುದಯ ಕಾಯದೊಳಗೇ ಇದೆ. ಕಾಯ ಕಾಯವನ್ನು ಆವರಿಸಿದ ಮಾಯದ ಕಾಯಾದಿಂದಲೇ ನಿಜ ಕಾಯಾವನ್ನು ತಿಳಿಯಬೇಕು. ಕಾಯ ಕಾಯಕ್ಕೆ ಸವೆಸುವ ಸೇವೆಯಿದು.

709

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ ಮಕ್ಕಳಿಗೆಂದು

ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
''ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ॥
ಎಂಬ ಶ್ರುತಿಯ ಬಸವಣ್ಣ ನೋದುವನು'' ಎಂಬರು.
'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆ'ಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ!
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಂಗೆ ಕುದಿವೆನಲ್ಲದೆ, ಎನ್ನ ವಡಲವಸರಕ್ಕೆ ಕುದಿದೆನಾದಡೆ
ತಲೆದಂಡ! ಕೂಡಲಸಂಗಮದೇವಾ.

ಅರಿವಿನಿಂದ ನೋಡುವ, ಅರಿವಿನಿಂದ ಕಾಯಕ ಮಾಡುವ ಸುಳುವು ಸಕಲ ಕಾಯಗಳಿಗೂ ಲಭ್ಯವಾಗಲಿ ಎನ್ನುವ ಕಳಕಳಿ ಈ ಸೂತ್ರದಲ್ಲಿ ಅಡಗಿದೆ.

ಕಾಯಕದಲ್ಲಿ ಮೇಲು ಕೀಳುಗಳಿಲ್ಲ. ಕಾಯಕ್ಕೆ ಬೇಕಾದ ಪ್ರಸಾದ, ಕಾಯವೇ ಹುಡುಕಬೇಕು. ಪ್ರಸಾದಕ್ಕಾಗಿ ಕಾಯ ಹುಟ್ಟಿಲ್ಲ. ಆದರೂ ಒಡಲಲ್ಲಿ ವ್ಯಸನಗಳು ಹುಟ್ಟಿವೆ. ಒಡಲ ಒಡವೆ ಅರಿವು! ಅದು ಒಡಲಲ್ಲಿಯೇ ಇದೆ. ಒಡಲಿಂಗೆ ಆಧಾರವಾಗಿದೆ. ಒಡಲ ಸೋಂಕದೆ ಒಡಲನ್ನು ಬೆಳಗುತ್ತಲಿದೆ. ಬೆಳಗಿಂಗೆ ಬೆಳಗಾಗಿ ಬೆಳಗುತ್ತಲಿದೆ. ಒಡಲ ಬೆಳಗಿಗಾಗಿ ಒಡಲು ಬದುಕಿದೆ. ಬೆಳಗನರಿತ ಒಡಲು ಒಡಲಿಗಾಗಿ ಕುದಿಯುವುದಿಲ್ಲ. ಒಡವೆಗಾಗಿ ಕುದಿಯುವುದಿಲ್ಲ. ಮಡದಿ ಮಕ್ಕಳಿಗೆಂದು ಕುದಿಯುವುದಿಲ್ಲ. ಎಲ್ಲವೂ ಒಡಲುಗಳಾಗಿರುವುದರಿಂದ ಒಡಲ ಒಡವೆಯೇ ಒಡಲಿಗೆ ದಕ್ಕಬೇಕು. ಆ ಒಡವೆಯಿಂದಲೇ ಒಡಲು ಬೆಳಗಬೇಕು.

ತನ್ನ ಒಡಲಿನಿಂದ ಮಡದಿ ಮಕ್ಕಳ ಒಡಲು ಬೆಳಗಲು ಬರುವುದಿಲ್ಲ. ಮಡದಿ ಮಕ್ಕಳಿಗಾಗಿ ಅತ್ತರೆ ಒಡಲೊಡೆಯ ಹಾಗೂ ಒಡೆಯರು ಸುಮ್ಮನಿರುವುದಿಲ್ಲ. ಒಡೆಯರು ಹಾಕಿದ ಪ್ರಶ್ನೆಗೆ ಉತ್ತರ ಕೊಡಲೂ ಸಾಧ್ಯವಾಗುವುದಿಲ್ಲ. ಒಡೆಯರು, ಪ್ರಮಥರು ಒಡಲ ಒಡೆಯನ ತೋರಿದವರು. ಅವರು ಸಮರ್ಥರು. ಓಲೈಸುವ ಒಡಲನ್ನು ಸೇರುವುದಿಲ್ಲ.

ಶರಣರಿಗೆ ಉತ್ತರ ಕೊಡುವುದು ಸಾಧ್ಯವಾಗುವುದಿಲ್ಲ. ಒಡಲೊಡೆಯನ ಅರಿಯದವರ ಒಡಲ ಸೇವೆ ಮಾಡಿಯಾದರೂ ಅವರ ಮನೆಯ ಹೊಕ್ಕು ಕೂಲಿಯ ಮಾಡಿಯಾದರೂ, ಒಡಲ ಒಡೆಯನ ತೋರುವ ಮಹನೀಯರ ಸೇವೆಗಾಗಿ ಕುದಿವೆನಲ್ಲದೆ, ಒಡಲಸರಕ್ಕೆ ಕುದಿಯಲಾರೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗಾಗಿ ಬದುಕಿದೆನಾದಡೆ ತಲೆದಂಡ! ಇದಕ್ಕೆ ಒಡಲಲ್ಲಿಯೇ ಸಂಗಮವಾದ ಸಂಗಮನಾಥನೇ ಸಾಕ್ಷಿ.

710

ದೇವ, ದೇವಾ, ಭಿನ್ನಪ, ಅವಧಾರು:
ವಿಪ್ರ ಮೊದಲು ಅಂತ್ಯಜ ಕಡೆಯಾಗಿ

ಶಿವಭಕ್ತರಾದವರನೆಲ್ಲರನೊಂದೆ ಎಂಬೆ;
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೆ ಎಂಬೆ;
ಈ ಹೀಂಗೆಂದು ನಂಬುವುದೆನ್ನ ಮನವು
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ,
ಹಲುದೋರೆ ಮೂಗ ಕೊಯಿ, ಕೂಡಲಸಂಗಮದೇವಾ.

ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರ ನೊಂದೆ ಎಂಬೆ:

ತನು ಅರಿವಿನ ಕುಲ. ಮನದ ಅಜ್ಞಾನದಿಂದಾಗಿ ಜಾತಿಗಳನ್ನು ತನುವಿಗೆ ಹೇರಿಕೊಂಡಿದೆ. ಮನವೇ ತನುವಿನಲ್ಲಿ ತನ್ಮಯವಾದ ಅರಿವನ್ನು ಅರಿತರೆ ಆ ತನುಗಳೆಲ್ಲ ಒಂದೇ. ತನುವಿಗಂಟಿದ ಅಜ್ಞಾನದ ಜಾತಿ ರೋಗ ಅರಿವಿನ ಬಳಕೆಯಿಂದ ಹರಿಯುತ್ತದೆ. ಹಾರುವನಿಲ್ಲ, ಅಂತ್ಯಜನಿಲ್ಲ.

ತನುವಿನಲ್ಲಿ ತನ್ಮಯವಾದ ಅರಿವು ಮನಕ್ಕೆ ಬಳಕೆಯಾಗದಿದ್ದರೆ ಅದು ಭವಿ ತನು; ಬ್ರಾಹ್ಮಣ, ಶ್ವಪಚ ತನುವೆಂದು ತನುವಿನ ಮನವೇ ತನ್ನನ್ನು ತಾನು ಭಿನ್ನವಾಗಿ ನೋಡಿಕೊಳ್ಳುತ್ತದೆ.

ಮನಕ್ಕೆ ಸ್ಪಷ್ಟವಾಗಿ ಗೋಚರಕ್ಕೆ ಬಂದರೂ ಅರಿವಾಗದಿದ್ದರೆ ಆಚರಣೆಯಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ. ನುಡಿದು ವಿಚಾರವಾದಿ, ಪಂಡಿತ, ಶಾಸ್ತ್ರಿ ಎನ್ನಿಸಿಕೊಳ್ಳುತ್ತದೆ.

ಮನ ಅರಿವಿನ ಶಿಕ್ಷಣಕ್ಕಾಗಿ ಹಪಹಪಿಸಿದರೆ, ತನುವಿನಲ್ಲಿ ತನ್ಮಯವಾದ ಅರಿವು ಮನಕ್ಕೆ ಮನದಟ್ಟಾಗುತ್ತದೆ. ಆ ಅರಿವಿನತ್ತ ಮನ ಪಯಣಿಸಿ ಆ ಅರಿವಿನಲ್ಲಿಯೇ ಮಿಂದು ಭವಿತನ ಕಳೆದುಕೊಳ್ಳುತ್ತದೆ; ಭಕ್ತನಾಗಿ ಮನ ಘನಮನವಾಗುತ್ತದೆ.

711

ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ;
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು,
ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ,
ಕೂಡಲಸಂಗಮದೇವಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ!

ನಿನ್ನ ಬೆಳಕಿನ ಕಿರಣಗಳಿಂದಲೇ ಹುಟ್ಟಿದವರಾದರೂ ಅವರು ನಿನ್ನವರಲ್ಲ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇವರೆಲ್ಲರೂ ನಿನ್ನ ತನುವಿನಿಂದಲೇ ಹುಟ್ಟಿದವರು. ನಿನ್ನ ಬೆಳಕಿನ ತನುವನ್ನೇ ಹಾಳುಗೆಡವಿದವರು. ಅವರು ನಿನ್ನವರಲ್ಲ. ಆದರೆ ನಿನ್ನಿಂದಲೇ ಹುಟ್ಟಿದವರು. ನೀ ಮುನಿದಡೆಯೂ ಅಡ್ಡಿಯಿಲ್ಲ; ಅಂಥವರನು ಒಲ್ಲೆನಯ್ಯಾ, ಒಲ್ಲೆನಯ್ಯಾ. ಜಗವೆಲ್ಲರಿಯಲು ಒಲ್ಲೆನಯ್ಯಾ.

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನೇ ನಿನ್ನಾಣೆ, ನಿಮ್ಮ ಪ್ರಮಥರಾಣೆ! ಅಂಥವರನು ಒಲ್ಲೆನಯ್ಯಾ ತನುವೆಂಬುದು ಪ್ರಮಥರು ನೀಡಿದ ದತ್ತಿ. ಇದು ಅರಿವಿನ ಬುತ್ತಿ. ಅಂದಿನವರು ಕಟ್ಟಿದ ಅರಿವಿನ ಬುತ್ತಿ ಇಂದಿಗೂ ಹಳಿಸಿಲ್ಲ. ಅದು ಎಂದೆಂದಿಗೂ ಹಳಸುವುದಿಲ್ಲ. ನಿಮ್ಮ ಪ್ರಮಥರ ಮೇಲೆ ಆಣೆ ಮಾಡಿ ಹೇಳುವೆ ಅವರಿಗೆ ಬೇಡವಾದವರು, ನನಗೂ ಬೇಡ ತಂದೆ! ಯಾರಾರಿಗೂ ಬೇಡ ತಂದೆ!

712

ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ,
ಎನ್ನವರೆನ್ನೆನು ಎನ್ನವರೆನ್ನೆನು!
ಎನ್ನವರೆಂದಡೆ, ಸಂಗಾ ನಿಮ್ಮಲ್ಲಿಗೆ ದೂರ!
ಎನ್ನವರಾದಡೆ ಜನ್ಮಕ್ಕೆ ನಡೆವರೆ?
ಎನ್ನವರಲ್ಲ, ಕೂಡಲಸಂಗಮದೇವಾ, ನಿಮ್ಮಾಣೆ!

ಎನ್ನವರಾದಡೆ ಜನ್ಮಕ್ಕೆ ನಡೆವರೆ:

ಕಾಯವೇ ಒಂದು ಅರಿವಿನ ಕೈಲಾಸವಿರುವಾಗ ಈ ಕಾಯವನ್ನೇ ಹಿಡಿದುಕೊಂಡು ವೇದ, ಶಾಸ್ತ್ರದ ಸಹಾಯದಿಂದ ಸ್ವರ್ಗಕ್ಕೆ ಹೋಗಬೇಕೆಂದು ಆದಿ ಅನಾದಿಕಾಲದಿಂದಲೂ ಪ್ರಯತ್ನಿಸುವವರು ಎನ್ನವರು ಹೇಗೆ ಆಗುತ್ತಾರೆ. ಅವರು ಅರಿವಿನಿಂದ ಬಲು ದೂರ. ಅಜ್ಞಾನಕ್ಕೆ ಬಲು ಹತ್ತಿರ.

ನಿಮ್ಮಾಣೆ, ನಿಮ್ಮ ಪ್ರಮಥರ ಮೇಲೆ ಆಣೆ ಅವರು ಎನ್ನವರಲ್ಲ. ಎನ್ನವರಾದರೆ ಅವರು ಅರಿವಿನ ಕುಲದವರು. ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ; ಸತ್ಯವ ನುಡಿವ ತನುವೇ ದೇವಲೋಕ. ಮಿಥ್ಯವ ನುಡಿಯುವ ತನುವೇ ಮರ್ತ್ಯಲೋಕ. ಸದಾ ಸತ್ಯವನ್ನೇ ನುಡಿವ ತನುವೇ ಕರ್ತಾರನ ಕಮ್ಮಟ!

713

ಅಣ್ಣ, ತಮ್ಮ, ಹೆತ್ತಪ್ಪ, ಗೋತ್ರವಾದಡೇನು,
ಲಿಂಗ ಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ .
ನಂಟು-ಭಕ್ತಿ ನಾಯಕ ನರಕ,
ಕೂಡಲಸಂಗಮದೇವಾ.

ತಂದೆ ತಾಯಿ ಬಂಧು ಬಳಗ ಸ್ವಗೋತ್ರವಾದರೇನು? ಮನಕ್ಕೆ ಅರಿವಿಗೆ ಹೋಗುವ ಕಲೆ ತಿಳಿಯದವರನು ತಂದೆ ತಾಯಿ ಬಂಧು ಬಳಗ ಸ್ವಗೋತ್ರವೆಂದು ಕರೆಯಲು ಸಾಧ್ಯವಾಗುವುದಿಲ್ಲ. "ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯಾ ಕೂಡಲಸಂಗಮದೇವಾ ನಿಮ್ಮ ಧರ್ಮ. ಹಾಲಲಾದರೂ ಅದ್ದು, ನೀರಲಾದರೂ ಅದ್ದು".

ಮನ ಹೊರಗಿನ ಗೆಳೆತನ ಮಾಡಿದರೆ ತಂದೆ ತಾಯಿ ಬಂಧು ಬಳಗ ಸ್ವಗೋತ್ರದ ಗೆಳೆಯರು, ಸಂಬಂಧಿಗಳು ಸಿಗುತ್ತಾರೆ. ಬಾಂಧವ್ಯ ಮತ್ತು ಸಂಬಂಧದಿಂದ ಮನ ಅರಳುತ್ತದೆ. ಬಾಂಧವ್ಯ ಮತ್ತು ಸಂಬಂಧದಲ್ಲಿ ಕೊರತೆಯುಂಟಾದರೆ ಅರಳಿದ ಮನ ಕೆರಳುತ್ತದೆ. ಹಡೆದ ತಂದೆ ತಾಯಿಯನ್ನು , ಒಡ ಹುಟ್ಟಿದವರನ್ನು , ಬಂಧುಬಳಗ ಸ್ವಗೋತ್ರದವರನ್ನು ವೈರಿಯಾಗಿ ನೋಡುತ್ತದೆ. ಕೊಂದು ಹಾಕಲೂ ಹೇಸುವುದಿಲ್ಲ. ಪಾಂಡವರು ಕೌರವರು ಯುದ್ಧ ಮಾಡಿ ನಾಶವಾದಂತೆ.

ಮನ ತನುವಿನಲ್ಲಿಯೇ ತನ್ಮಯವಾದ ಅರಿವಿನ ಗೆಳೆತನ ಮಾಡಿದರೆ ಆ ಅರಿವೆ ಮನಕ್ಕೆ

ತಂದೆ ತಾಯಿ ಬಂಧು ಬಳಗ ಏನೆಲ್ಲ ಆಗುತ್ತದೆ. ಬಸವಣ್ಣನವರು, ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನನ್ನೇ ತಂದೆಯನ್ನಾಗಿ ಮಾಡಿಕೊಳ್ಳುವ ಸೂತ್ರ ಹೇಳಿದರು.

ಮನಕ್ಕೆ ಅರಿವಿನ ದರ್ಶನವಾಗಿ, ಅರಿವೇ ತಾನಾದರೇ ಆ ಅರಿವಿನಿಂದ ನೋಡಿದರೆ ಜಗದ ತುಂಬಾ ಅರಿವೇ ತುಂಬಿದೆ. ಅರಿವಿಲ್ಲದ ಜಾಗವಿಲ್ಲ. ಹೆಣ್ಣು ಗಂಡೆಂಬುದಿಲ್ಲ, ಜಾತಿ ಮತ ಪಂಥಗಳಿಲ್ಲ, ದೇಶ ವಿದೇಶ ಗಡಿಗಳಿಲ್ಲ, ವಿಶ್ವದ ಮನುಜರೆಲ್ಲ ಬಂಧುಗಳೇ ಆಗುತ್ತಾರೆ. ಅವರೆಲ್ಲ ನೆಂಟರೇ ಆಗುತ್ತಾರೆ.

ಮನಕ್ಕೆ ಅರಿವಾಗದಿದ್ದರೆ ಅನ್ಯ ತನುಗಳನ್ನು ಅರಿವಿನಿಂದ ನೋಡಲು ಬರುವುದಿಲ್ಲ. ನೋಡುವ ಕಣ್ಣು ದೃಷ್ಟಿ ಕಳೆದುಕೊಂಡು ಚರ್ಮವನ್ನು ಹೆಣ್ಣು ಗಂಡು ಎಂದು ತಂದೆ ತಾಯಿ ಬಂಧು ಬಳಗ ಎಂದು ಸ್ವಗೋತ್ರ ಪರಗೋತ್ರವೆಂದೂ ಸ್ವದೇಶ ಪರದೇಶವೆಂದು ವೈರಿ ಎಂದು ನೋಡುತ್ತದೆ. ಅರಿವಿನಿಂದ ನೋಡಿದರೆ, ಮೂಳೆ ಮಾಂಸ ರಕ್ತ ಮಜ್ಜಾ ಮೇದಸ್ಸು ಚೆಲ್ಲದಂತೆ ಸುಂದರವಾಗಿ ಬಂಧಿಸಲ್ಪಟ್ಟ ಅರಿವಿನ ಚರ್ಮವಾಗಿ ಕಣ್ಣಿಗೆ ಕಾಣುತ್ತದೆ. ಈ ಶಿಕ್ಷಣ ಸಕಲ ತನುಗಳಿಗೂ ಅವಶ್ಯ!

714

ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೊಗುವಂತೆ
ನೀನಿಲ್ಲವಾದವರ ಮನೆಯ ಹೊಗೆನು, ಸಂಗಯ್ಯ.
ಸ್ವಪಚೋಪಿಗಳಾಗಲಿ, ಕೂಡಲಸಂಗಯ್ಯಾ,
ನೀನಿದ್ದವನೆ ಕುಲಜನು.

ತನು ಒಂದು ಅರಿವಿನ ಮನೆ . ಈ ಮನೆಗೆ ಅರಿವೆಂಬ ಗುರುದೇವನೆ ಒಡೆಯ. ತನುವನ್ನು ಆವರಿಸಿಕೊಂಡ ಮನವೇ ಮನೆಯ ಮುತ್ತು ಗುರುದೇವನ ಸೇವಕ. ಈ ಸೇವಕನಿಗೆ ಮನೆಯ ಒಡೆಯನ ಪರಿಚಯವಾಗದಿದ್ದರೆ ಅದು ತುಡುಗುಣಿ ನಾಯಿಯಾಗುತ್ತದೆ. ಗುರುವಿನ ಮನೆಯಲ್ಲಿ ವಾಸ ಮಾಡಿ, ಆ ಮನೆಯನ್ನೆ ಹಾದರಕ್ಕೆ ಬಳಸುತ್ತದೆ. ಒಡೆಯನ ಮಾತು ಕೇಳುವುದಿಲ್ಲ.

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ತುಂಬಿಕೊಂಡು ನಾಯಿ ಮನ ಬಂದಂತೆ ಬೊಗಳುತ್ತದೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ , ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ? ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವಾ.

ಒಡೆಯನಿಲ್ಲದ ಮನೆಯೇ ಇಲ್ಲ. ಪ್ರತಿ ತನುವಿನಲ್ಲಿಯೂ ಗುರುದೇವನೆಂಬ ಅರಿವಿನೊಡೆಯ ವಾಸವಾಗಿದ್ದಾನೆ. ಮನವೆಂಬ ನಾಯಿಗೆ ಈ ಒಡೆಯನ ಪರಿಚಯವಿಲ್ಲದ ನಿಮಿತ್ಯ, ಹೊಸ್ತಿಲಲ್ಲಿ ಹುಲ್ಲು ಹುಟ್ಟಿದೆ. ತನುವಿನ ಮನೆ ತುಂಬಾ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕಸ ತುಂಬಿದೆ.

ಮನಕ್ಕೆ ಮನೆಯೊಡೆಯನಿದ್ದಾನೆ ಎನ್ನುವುದಾದರೂ ತಿಳಿಯಬೇಕು. ಅಥವಾ ಒಡೆಯನಿಗೆ ಆಳಿನೊಂದಿಗೆ ಅರಿವಿನ ಸೇವೆ ಮಾಡಿಸಿಕೊಳ್ಳಲೇಬೇಕು ಎನ್ನುವ ಬಯಕೆಯಾದರೂ ಹುಟ್ಟಬೇಕು. ಇವೆರಡರಲ್ಲಿ ಒಂದು ಘಟಿಸಿದರೆ ಸಾಕು. ತನುವಿನ ಮನೆ ಸ್ವಚ್ಛ ಮನೆ. ಕಾಯವದು ಕಸ ಕಳೆದುಕೊಂಡ ಕೈಲಾಸ. ತುಡುಗುಣಿ ನಾಯಿ ಸತ್ತು ಅರಿವಿನ ನ್ಯಾಯದ ಮನೆಯಾಗುತ್ತದೆ. ಕೂಡಲ ಸಂಗಯ್ಯನಿದ್ದ ಕುಲುಜನ ಮನೆಯಾಗುತ್ತದೆ.

715

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾಯ ಬರುದೂರೆ ಹೋಹ ಕೆಡುಕ ಹಾರುವ ನಾನಲ್ಲ!
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ,
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಕೂಡಲಸಂಗಮದೇವನು ವಿಪ್ರ ಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದವನಾಗಿ!

ಹೊನ್ನು ಹೆಣ್ಣು ಮಣ್ಣಿನ ಬಲೆಯಲ್ಲಿ ಮನ ಸಿಲುಕಿದುದಕ್ಕಾಗಿ ಇಡೀ ಜಗದ ತನುಗಳನ್ನು ಹೊನ್ನು ಹೆಣ್ಣು ಮಣ್ಣು ವಿಧಿಯಾಗಿ ಕಾಡುತ್ತಲಿದೆ. ಜಗದ ತನುಗಳೆಲ್ಲ ಇವುಗಳಿಗಾಗಿ ಬದುಕಿವೆ. ಇವುಗಳಿಗಾಗಿ ಯುದ್ಧ ಮಾಡುತ್ತಲಿವೆ. ಇವುಗಳಿಗಾಗಿಯೇ ಮಠ ಮಂದಿರ ದೇವಾಲಯಗಳು ಸೃಷ್ಟಿಯಾಗಿವೆ. ಇವುಗಳಿಂದಲೇ ದೇವಾಲಯಗಳನ್ನು ಅಲಂಕರಿಸಲ್ಪಡುತ್ತದೆ. ಇವುಗಳಿಂದಲೇ ತನು ಅಭಿವೃದ್ಧಿ ಮತ್ತು ಸರ್ವನಾಶವನ್ನು ಕಂಡುಕೊಳ್ಳುತ್ತದೆ. ಅರಿವಿನ ತನುವಿಗೆ ಇವು ಮೂರು ವಿಧಿಯಾಗಿ ಕಾಡುತ್ತಲಿವೆ. ಅವುಗಳಿಗಾಗಿ ಮನ ವೃಥಾ ಹಾರುತ್ತದೆ. ಭೂಮಿಗಾಗಿ ಹಾರುತ್ತದೆ, ಹೇಮಕ್ಕಾಗಿ ಹಾರುತ್ತದೆ, ಕಾಮಿನಿಗಾಗಿ ಹಾರುತ್ತದೆ.

ಮನ ಮರ್ಕಟನಂತೆ, ಅದು ತನುವನ್ನು ಹಿಡಿದು ಅರಿವಿನ ತನುವನ್ನೇ ಮರ್ಕಟನಂತೆ ಮಾಡುತ್ತದೆ. ಹಳದಿ ಲೋಹ ನೋಡಿ , ಅದಕ್ಕೆ ಬೆಲೆ ಕಟ್ಟಿ , ಹೊನ್ನೆಂದು ಹೆಸರಿಟ್ಟು, ಆ ಹೊನ್ನಿಗಾಗಿ ದೇಹದೊಂದಿಗೆ ಹಾರುತ್ತದೆ. ಮಣ್ಣು ಹೆಣ್ಣು ಕಿರೀಟದಾಸೆಗಾಗಿ ತಲೆಯನ್ನೇ ಕಡಿಯುತ್ತದೆ. ಕಾಲುಕೆರೆದು ಯುದ್ಧ ಮಾಡುತ್ತದೆ. ಅರಿವು ಗೌಣವಾಗಿ ಹಾರುತ್ತದೆ. ಮನ ತನು ಹಿಡಿದು ಅರಿವಿಗಾಗಿ ಹಾರುವುದಿಲ್ಲ.

ಮನ ಅರಿವಿನಿಂದ ನೋಡಿದರೆ ಮಣ್ಣ ಗರ್ಭದಿಂದ ಬಂದ ಹಳದಿ ಲೋಹ! ಅರಿವಿನಿಂದ ನೋಡಿದರೆ ರಕ್ತ ಮೂಳೆ ಮಾಂಸ ಚೆಲ್ಲದಂತೆ ಸುಂದರವಾಗಿ ಬಂಧಿಸಿದ ಚರ್ಮ! ಅದು ಹೆಣ್ಣಲ್ಲ ಗಂಡೂ ಅಲ್ಲ! ಅರಿವಿನಿಂದ ನೋಡಿದರೆ ಜಲ ಕುದ್ದು ಗಟ್ಟಿಯಾಗಿ ಮಣ್ಣಾಗಿದೆ ; ಖನಿಜವಾಗಿದೆ; ಕಲ್ಲು ಬಂಡೆಗಳಾಗಿವೆ; ಬೆಟ್ಟ ಗುಡ್ಡಗಳಾಗಿವೆ. ಅರಿವಿನಿಂದ ನೋಡಿದರೆ ಜೀವ ಜಲಬಿಂದುವೇ ರಕ್ತ ಮೂಳೆ ಮಾಂಸವಾಗಿದೆ. ಚರ್ಮದ ಕವಚ ಹೊಂದಿ ಗರ್ಭದಿಂದ ಹೊರಬಂದಿದೆ.

ಮನ ಜ್ಞಾನಕ್ಕಾಗಿ ಹಾರಿದರೆ ಶುದ್ಧ ತನುವಿನ ಪಟ್ಟ! ಮನ ಭೂಮಿ ಹೇಮ ಕಾಮಿನಿಗಾಗಿ ಹಾರಿದರೆ ಅಶುದ್ಧ ತನುವಿನ ಪಟ್ಟ!

" ಭೂಮಿ ನಿನ್ನದಲ್ಲ. ಹೇಮ ನಿನ್ನದಲ್ಲ. ಕಾಮಿನಿ ನಿನ್ನವಳಲ್ಲ. ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನ ರತ್ನ ಕಾಣಾ.ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತಹ ಸಿರಿವಂತರು ಯಾರೂ ಇಲ್ಲ ಎಲೆ ಮನವೆ " ಎಂದು ಪ್ರಭುಗಳು ಹೇಳಿದ್ದಾರೆ.

ಮನ, ಅರಿವಿಗೆ ಶರಣು ಹೋದರೆ ಶರಣ ಮನ. ಅಂತಹ ಮನ ಶರಣರ ಬರುವಿಗಾಗಿ ಹಾರುತ್ತದೆ. ಶರಣರಿದ್ದಲ್ಲಿಗೆ ಹಾರುತ್ತದೆ. ಅರಿವಿಗಾಗಿ ಹಾರುತ್ತದೆ. ಅರಿವಿನ ಭಕ್ತರಿದ್ದಲ್ಲಿಗೆ ಹಾರುತ್ತದೆ. ಅವರಿಗಾಗಿ ಗುಡಿಕಟ್ಟಿ ಜ್ಞಾನಿಗಳ ಬರುವಿಗಾಗಿ ಕುಣಿ ಕುಣಿದಾಡುತ್ತದೆ ; ನಲಿನಲಿದಾಡುತ್ತದೆ.

716

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ.
ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯಿವೆ, ನೋಡಯ್ಯಾ.
ಮಹಾದಾನಿ ಕೂಡಲಸಂಗಮದೇವಾ,
ಮಾದರ ಚೆನ್ನಯ್ಯನ ಮನೆಯ ಮಗ ನಾನಯ್ಯ.

ತನುವೆಂಬುದು ಅರಿವಿನ ಮನೆ. ಈ ಮಹಾಮನೆಯಲ್ಲಿ ಮಾದಾರ ಚೆನ್ನಯ್ಯ ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ ಮುಂತಾದ ಜ್ಞಾನಿಗಳು ಹುಟ್ಟಿದರು. ಇಂತಹ ಮಹಾಜ್ಞಾನಿಗಳು ಹುಟ್ಟಿದ ಮನೆಯ ಆಳು ಮಗ ನಾನಯ್ಯ! ಬಸವಣ್ಣನವರು ಹೇಳಿದ ಈ ಮಾತು ಬಲು ಸುಂದರ. ನವರಸಗಳನ್ನು ಏಕಕಾಲಕ್ಕೆ ಸೃಷ್ಟಿ ಮಾಡುವ ಸಾಮರ್ಥ್ಯ ಉಳ್ಳ ಕವಿಗೂ ಜ್ಞಾನದ ಮತ್ತು ಬರಿಸುವ ಮಾತಿದು. ಅರಿವಿನ ಸಾಹಿತ್ಯದ ಮುಂದೆ ಯಾವ ಸಾಹಿತ್ಯವೂ ನಿಲ್ಲಲಾರದು.

ವೇದ ಎನ್ನುವುದು ತನುವಿನ ಜ್ಞಾನದ ಮನೆಯಿಂದಲೇ ಬಂದ ಎಂಜಲು. ಅದೇನಾದರೂ ಅರಿವಿನ ಮನೆಗೆ ಉಪದೇಶವನು ಮಾಡಬಲ್ಲುದೆ ? ಉಪದೇಶ ಮಾಡುವೆನೆಂದು ಹೇಳುವ ವೇದವನ್ನು ಅರಿವಿನ ಖಡ್ಗದಿಂದಲೇ ಹಿರಿದು ಹಾಕುವೆ. ಅರಿವಿನ ಮನೆಯಿಂದಲೇ ಸರ್ವ ಶಾಸ್ತ್ರಗಳು ಹುಟ್ಟಿಕೊಂಡಿವೆ. ಕಾಗದದಲ್ಲಿ ಮುದ್ರಿಸಿದ ಶಾಸ್ತ್ರ ಅರಿವಿನ ತನುವಿಗೆ ಶಾಸ್ತ್ರ ಹೇಳಲು ಸಾಧ್ಯವೇ ? ಇಂತಹ ಶಾಸ್ತ್ರವನ್ನು ಕಬ್ಬಿಣದ ಕೋಳಗಳಿಂದ ಬಂಧಿಸುವೆ. ತನುವಿನಿಂದ ಬಂದ ತರ್ಕ ತನುವನ್ನು ತರ್ಕಿಸಲು ಸಾಧ್ಯವೆ ? ಇಂತಹ ತರ್ಕದ ಬೆನ್ನಹತ್ತಿ ಬಾರುಕೋಲಿನಿಂದ ಹೊಡೆಯುವೆ. ತನುವಿನಿಂದ ಬಂದ ಆಗಮ ಉಪನಿಷತ್ತುಗಳು ತನುವಿಗೆ ಬೋಧಿಸಲು ಸಾಧ್ಯವೆ? ಇಂತಹ ಆಗಮಗಳ ಮೂಗ ಕೊಯಿವೆ.

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನಿಂದ ಹುಟ್ಟಿದ ಕುನ್ನಿಗಳು ಸಂಗಯ್ಯನಿಗೆ ಬೋಧಿಸಲು ಸಾಧ್ಯವೆ? ಸಂಗಮನಾಥನ ಮನೆಯದು ಅರಿವಿನ ಮನೆ. ಈ ಮನೆಯಲ್ಲಿ ಮಾದರ ಚೆನ್ನಯ್ಯ ಹುಟ್ಟಿದ್ದಾನೆ. ಈತನ ಮನೆಯ ಮಗ ನಾನು! ಅರಿವೆಂಬ ಗುರುದೇವನ ಆಳು ಮಗ ನಾನು!

717

ಆವ ಕುಲವಾದಡೇನು ? ಶಿವಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ , ಜಾತಿ ಸಂಕರನಾದ ಬಳಿಕ?
ಶಿವಧರ್ಮ ಕುಲೇಜಾತಃ ಪುನರ್ಜನ್ಮ ವಿವರ್ಜಿತಃ ।
ಉಮಾ ಮಾತಾ ಪಿತಾ ರುದ್ರ ಐಶ್ವರ್ಯಂ ಕುಲಮೇವ ಚ ॥ ಎಂದುದಾಗಿ,
ಒಕ್ಕುದ ಕೊಂಬೆನವರಲ್ಲಿ , ಕೂಸ ಕೊಡುವೆ,
ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನು.

ಅಂಗದ ಕಣಕಣದಲ್ಲಿ ಅರಿವಿನ ಲಿಂಗವೇ ಇದೆ. ಇದು ಅರಿವಿನ ಶಿವಲಿಂಗ. ಶಿವಲಿಂಗವಿಲ್ಲದ ತನುಗಳೇ ಇಲ್ಲ. ಆದರೆ ತನುವನ್ನು ಆವರಿಸಿದ ಮನ ಮರೆತಿರುವುದರಿಂದ ಜಾತಿ ಕುಲ ಎನ್ನುವ ಅಜ್ಞಾನ ತನುವಿನ ಬೆನ್ನು ಬಿದ್ದಿದೆ.

ಅರಿವಿಗೆ ಶರಣು ಹೋಗಿ ಶರಣರಾದವರಿಗೆ ಜಾತಿ ಕುಲ ಮತ ಪಂಥಗಳಿಲ್ಲ. ಅವರು ಶಿವಲಿಂಗವುಳ್ಳ ಶಿವಧರ್ಮಿಗಳು. ಶಿವಧರ್ಮ ಸ್ವೀಕರಿಸಿದ ಮೇಲೆ ಸರ್ವರೂ ಶಿವ ಪಾರ್ವತಿಯ ಮಕ್ಕಳು.

ಏನೂ ತಿಳಿಯದ ಅಜ್ಞಾನದ ಮನವೆಂಬ ಕೂಸನು ಅರಿವೆಂಬ ಗುರುದೇವನಿಗಿತ್ತ ಮೇಲೆ ಸದ್ಗುರು ಸಂಗಯ್ಯನ ಮಕ್ಕಳು. ಅರಿವಿನ ಮಕ್ಕಳು. ತಾನು ಅರಿವಿನ ಕುಲ. ತನುಗಳೆಲ್ಲ ಅರಿವಿನ ಕುಲವೇ ಆಗಿವೆ.

718

ಕಳ್ಳ ಬಂದಿಕಾರ ಹಾವಾಡಿಗ ಹಾದರಿಗ,
ಬಂಟನೋಲೆಯಕಾರನೆಂದೆನಾದಡೆ;
ನೀ ಮುಂತಾಗಿ ಬಂದ ಭಕ್ತರ ನೀ ಎನ್ನದಿದ್ದಡೆ, ಅದೆ ದ್ರೋಹ!
ನಡೆ ನುಡಿ ಹುಸಿಯುಂಟಾದಡೆ,
ಕೂಡಲಸಂಗನ ತೋರಿದ ಚೆನ್ನಬಸವಣ್ಣನಾಣೆ!

ಗುರುದೇವನಿದ್ದ ತನುವನ್ನು ಕಳ್ಳ ಬಂದಿಕಾರ ಎನ್ನಬಹುದೆ? ಮಹಾದೇವನಿದ್ದ ಮಹಾ ತನುವನ್ನು ಹಾವಾಡಿಗ ಹಾದರಿಗನೆನ್ನಬಹುದೆ? ಬ್ರಹ್ಮನೇ ವಾಸವಾಗಿದ್ದ ಬ್ರಹ್ಮ ತನುವನ್ನು ಬಂಟನು ಓಲೆಕಾರನೆಂದು ಕೂಗಿ ಕರೆಯಬಹುದೆ?

ಯಾವ ತನುವಾದರೇನು? ಸಕಲ ತನುಗಳೆಲ್ಲ ಅರಿವಿನ ತನುಗಳೇ ಆಗಿರುವಾಗ, ಅರಿವೆಂಬ ಗುರುದೇವನ ತನುವೆಂದು ಕರೆಯದಿದ್ದರೆ ಅದೇ ದ್ರೋಹ!

ಚಿನ್ನವನ್ನು ಅರಿಯದೆ ಖರೀದಿಸಿದ; ಚಿನ್ನವನ್ನು ಅರಿಯದೆ ಕಳುವು ಮಾಡಿದ. ಖರೀದಿಸುವುದು, ಕಳುವು ಮಾಡುವುದು ಈ ಎರಡೂ ಮನದ ವ್ಯವಹಾರವಲ್ಲದೆ ಬೇರಲ್ಲ. ಖರೀದಿಸಿ ಶ್ರೀಮಂತನಾಯಿತು, ಕಳುವು ಮಾಡಿ ಕಳ್ಳನಾಯಿತು! ಇವೆರಡೂ ತನುವನ್ನು ಹೆಸರಿಸುವ ಅಜ್ಞಾನದ ಪಟ್ಟಗಳು. ಚಿನ್ನವೆಂದರೇನೆಂದು ಅರಿತರೆ ಖರೀದಿಸಲಿಲ್ಲ, ಕಳುವು ಮಾಡಲಿಲ್ಲ. ಹೀಗೆಂದು

ಅರಿತ ತನು ಮಹಾದೇವನ ತನುವಾಯಿತು! ಈ ತನುವಿಗೆ ಶ್ರೀಮಂತ ಮತ್ತು ಕಳ್ಳನ ಎರಡು ವೃತ್ತಿಗಳೂ ಗೌಣ. ತಿಳಿದ ತನು ಶ್ರೀಮಂತನೆನ್ನಲಿಲ್ಲ, ಕಳ್ಳನೆನ್ನಲಿಲ್ಲ. ಮಹಾದೇವನ ತನುವೆಂದು ಗೌರವಿಸಿತು.

ತನುವನ್ನು ಆವರಿಸಿದ ಮನ ಅರಿವನ್ನು ಅರಿತು, ಆ ಅರಿವೇ ತಾನಾದ ಮೇಲೆ ತನುಗಳನ್ನೆಲ್ಲ ಅರಿವೆಂಬ ಗುರುದೇವನ ತನುವೆಂದು ಕರೆಯಿತು; ಗೌರವಿಸಿತು. ನಡೆದಂತೆ ನುಡಿಯಿತು; ನುಡಿದಂತೆ ನಡೆಯಿತು. ತನು ಮತ್ತೊಂದು ತನುವಿಗೆ ದ್ರೋಹವೆಸಗಲಿಲ್ಲ.

719

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲಿ ಮಾಂಸ,
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ,
ಅವರ ಲಿಂಗವೆಂಬೆ, ಸಂಗನೆಂಬೆ,
ಕೂಡಲಸಂಗಮದೇವಾ, ಅವರ ಮುಖಲಿಂಗಿಗಳೆಂಬೆ!

ತನುವಿನ ಆಹಾರವು ಏನಾದರಾಗಲಿ; ಅದು ಅರಿವಿನ ತನುವೆ ಆಗಿದೆ. ನಾಲಿಗೆಯಲ್ಲಿ ಆವರಿಸಿದ ಮನಕ್ಕೆ ರುಚಿಯ ತತ್ವ ಗೊತ್ತಾಗದಿದ್ದರೆ ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ.

ಸಸ್ಯ ತಿಂದರೂ , ಸಸ್ಯ ಜನ್ಯ ಕಾಳು ತಿಂದರೂ, ಮಾಂಸ ತಿಂದರೂ, ಪ್ರಾಣಿ ಜನ್ಯ ಹಾಲು ಕುಡಿದರೂ, ಪಕ್ಷಿ ತಿಂದರೂ, ಪಕ್ಷಿ ಜನ್ಯ ತತ್ತಿ ತಿಂದರೂ ತನುವು ಮಾಂಸದಿಂದಲೆ ತುಂಬಿಕೊಳ್ಳುತ್ತದೆ. ಸಸ್ಯ ತಿಂದ ತನುವನ್ನು ಸಸ್ಯದ ತನುವೆಂದು ಕರೆಯುವುದಿಲ್ಲ. ತನುವಿನ ಆಹಾರ ಸಸ್ಯವಾಗಿರಲಿ ಅಥವಾ ಮಾಂಸವೇ ಆಗಿರಲಿ; ಅದು ತನುವಿನಲ್ಲಿ ರಕ್ತ ಮೂಳೆ ಮಾಂಸವಾಗಿ ಗಟ್ಟಿಗೊಳ್ಳುತ್ತದೆ. ಚರ್ಮ ಕಾಂತಿಯಿಂದ ಕಂಗೊಳಿಸುತ್ತದೆ.

ತನು ಏನು ತಿಂದರೂ ಅಂಗವೆಂಬ ಲಿಂಗಕ್ಕೆ ಆಹಾರವಾಗುತ್ತದೆ. ಮನ ಅರಿತರೆ ಆಹಾರ ಮುಖ್ಯವಲ್ಲ. ಆಹಾರಕ್ಕಾಗಿ ವ್ಯವಹರಿಸುವ ಅರಿವು ಮುಖ್ಯವಾಗುತ್ತದೆ. ಸಸ್ಯ ತಿಂದರೇನು? ಮಾಂಸ ತಿಂದರೇನು ? ಕಣ್ಣಿನಿಂದ ಹರಿಯುವ ದೃಶ್ಯ ಒಂದೇ. ಕೇಳುವ ಶಬ್ದ ಒಂದೇ. ಸ್ಪರ್ಶಿಸಿ ಮೂಸಿಸಿ ರುಚಿಸುವ ಪದಾರ್ಥ ಒಂದೇ.

ಅರಿವಿನಿಂದ ನೋಡಿದರೆ ತನು ಯಾವ ವೇಷದಲ್ಲಿದ್ದರೇನು? ಅದು ಅರಿವಿನ ತನುವಾಗಿ ಕಾಣದಿದ್ದರೆ ನೋಡುವ ಕಣ್ಣಿನಲ್ಲಿ ದೋಷವಿದೆಯೆ ಹೊರತು ವೇಷದಲ್ಲಿ ತನುವಿನ ದೋಷವಿಲ್ಲ. ಅದು ಲಿಂಗ ತನು, ಲಿಂಗಾಂಗ ತನು, ಕೂಡಲಸಂಗನ ತನು! ಅದರ ಸರ್ವಾಂಗವೆಲ್ಲ ಲಿಂಗಾಂಗವೇ ಆಗಿದೆ.

720

ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ,
ಮೋಟನಂತಪ್ಪ ಗಂಡ ನೋಡೆನಗೆ!

ಮರಗಾಲಲಟ್ಟಟ್ಟಿ ಸದೆದು ನೋಡಯ್ಯಾ.
ಇಂದೆನ್ನ ಒಕತನ ಹೋದಡೆ ಹೋಗಲಿ
ಮರಗಾಲ ಬಿಟ್ಟೆನಾದಡೆ,
ಕೂಡಲಸಂಗಮದೇವಾ, ನಿಮ್ಮಾಣೆ!

ಯೋಚಿಸಿದರೆ ಜೀವನ ಒಂದು ನರಕ! ಗುಮ್ಮಡಿಯಂತಪ್ಪ ತಾಯಿ ನೋಡೆನಗೆ, ಕಲಕೇತನಂತಪ್ಪ ತಂದೆ ನೋಡೆನಗೆ. ಹೆಣ್ಣು ಪಿಶಾಚಿಯಂತಹ ತಾಯಿ; ಗಂಡು ಪಿಶಾಚಿಯಂತಹ ತಂದೆ. ಇವರಿಬ್ಬರೂ ಕಾಮ ಪಿಶಾಚಿಗಳು. ಅರಿವಿನ ಮಗು ಬೇಕೆಂಬ ಬಯಕೆಯಿಂದ ಒಮ್ಮೆಯೂ ಕೂಡಲಿಲ್ಲ. ಕಾಮದ ದಾಹ ತೀರಿಸಿಕೊಳ್ಳಲು ಪಿಶಾಚಿಯಂತೆ ಕೂಡಿದರು. ಮಾಂಸ ಪಿಂಡಗಳು ಮತ್ತೊಂದು ಮಾಂಸಪಿಂಡಕ್ಕೆ ಜನ್ಮ ಕೊಟ್ಟಿತ್ತೇ ಹೊರತು ಮತ್ತೇನೂ ಆಗಲಿಲ್ಲ.ಆದರೇನಾಯಿತು ಕೈ ಹಿಡಿದು ಅರಿವಿನ ದಾರಿಯಲ್ಲಿ ನಡೆಸುವ ಗಂಡ ಕೂಡಾ ದೊರೆಯಲಿಲ್ಲ. ಮಾಡಿಕೊಂಡ ಗಂಡನಿಗೆ ಕೈಗಳೇ ಇಲ್ಲ. ಮರಗಾಲಲಟ್ಟಟ್ಟಿ ನೋಡು ಎನ್ನನು. ಇಂದೆನ್ನ ಒಕತನ, ಬಾಳುವೆ ಹೋದಡೆ ಹೋಗಲಿ ನಿನ್ನ ಮರಗಾಲ ಬಿಡುವುದಿಲ್ಲ.

721

ತನುವ ಬಂದಲೆವರಯ್ಯಾ ಎನ್ನ, ಮನವ ಬಂದು ನೋಡುವರಯ್ಯಾ.
ಎನ್ನ ಧನವ ಬಂದು ಸೂರೆಗೊಂಬರಯ್ಯಾ ಜಂಗಮವನವರತ!
ಕೂಡಲಸಂಗಮದೇವಾ,
ನಿಮ್ಮ ಬಯಕೆಯ ಭಂಡಾರಕ್ಕೆ ನಾನು ಶುದ್ಧನಯ್ಯಾ.

ರಾಜನಿಗೆ ಹೊನ್ನು ಹೆಣ್ಣು ಮಣ್ಣು ಕಾಣುತ್ತದೆ. ಅವುಗಳಿಗಾಗಿ ಯುದ್ಧ ಮಾಡುತ್ತಾನೆ. ಸಾವು ನೋವುಗಳಲ್ಲಿ ಸಾಮ್ರಾಟನ ಜೀವನ ಸಮಾಪ್ತಿಯಾಗುತ್ತದೆ.ಶರಣನೆಂಬ ಮಹಾವೀರನ ಬಯಕೆ ಹಾಗಲ್ಲ. ಎಲ್ಲಿ ನೋಡಿದರೂ ಆತನಿಗೆ ಅರಿವಿನ ಭಂಡಾರದಿಂದ ತುಂಬಿ ತುಳುಕುವ ತನುಗಳೇ ಕಾಣುತ್ತವೆ.

ಅರಿವಿನ ತನುವನ್ನು ಕಂಡು ಶರಣ ಅರಿವಿನೊಂದಿಗೆ ಮಾತನಾಡುತ್ತಾನೆ. ತನುವನ್ನು ಆವರಿಸಿದ ಮನವನ್ನು ಮಾತನಾಡಿಸಿ ಅಜ್ಞಾನಿ ಮನವನ್ನು ನೀವಾಳಿಸಿ ಒಗೆಯುತ್ತಾನೆ. ಅರಿತರಿತು ಅರಿಯುವ ಮರೆವಿನ ಅರಿವನ್ನು ಸೂರೆಗೊಳ್ಳುತ್ತಾನೆ. ಅಖಂಡ ಅರಿವನ್ನು ಬಿಟ್ಟು ನವಖಂಡದ ಅರಿವನ್ನು ತುಂಡರಿಸುತ್ತಾನೆ. ಅರಿವಿನ ಬಯಕೆಯ ಭಂಡಾರಕ್ಕೆ ಶುದ್ಧನನ್ನಾಗಿಸಿ ತನ್ನಂತೆ ಮಾಡಿಕೊಳ್ಳುತ್ತಾನೆ. ತನುವಿನ ತುಂಬಾ ಅಲೆದಲೆದು ನೋಡಿ ತನುವಿನಲ್ಲಿಯೇ ತನ್ಮಯವಾಗಿ ನಿಲ್ಲುತ್ತಾನೆ.

722

ಒಡೆಯರೊಡವೆಯ ಕೊಂಡಡೆ ಕಳ್ಳಂಗಳಲಾಯಿತ್ತೆಂಬ
ಗಾದೆ ಎನಗಾಯಿತ್ತಯ್ಯಾ.
ಇಂದೆನ್ನ ವಧು, ನಾಳೆನ್ನ ಧನವ,
ನಾಡಿದ್ದೆನ್ನ ತನುವ ಬೇಡಿರೇಕಯ್ಯಾ?

ಕೂಡಲಸಂಗಮದೇವಾ, ಆನು ಮಾಡಿದುದಲ್ಲದೆ
ಬಯಸಿದ ಬಯಕೆ ಸಲುವುದೆ, ಅಯ್ಯಾ?

ಒಡೆಯನೊಡವೆಯ ಒಡೆಯ ಪಡೆದರೆ ಕಳ್ಳ ದುಃಖಿಸಿದಂತೆ ಎಂಬ ಗಾದೆಯಿದೆ. ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ ಕಾಮಿನಿ ನಿನ್ನವಳಲ್ಲ ಇವು ಜಗಕ್ಕಿಕ್ಕಿದ ವಿಧಿ. ಎನ್ನುವ ಮಾತನ್ನು ಪ್ರಭುಗಳು ಹೇಳಿದ್ದಾರೆ. ನನ್ನದೆನ್ನುವ ಯಾವುದೇ ವಸ್ತುವನ್ನು ನಾನು ತಯಾರಿಸಿರಬೇಕು. ಅಂತಹ ವಸ್ತುವನ್ನು ಮಾತ್ರ ನನ್ನ ವಸ್ತು ಎಂದು ಹೇಳಬಹುದು. ಅಂದಮೇಲೆ ಭೂಮಿಯ ಮೇಲೆ ವಾಸ ಮಾಡುವ ಪ್ರತಿಯೊಬ್ಬ ವ್ಯಕ್ತಿ ಬಳಕೆ ಮಾಡುವ ಯಾವ ಪದಾರ್ಥವನ್ನೂ ತಾನು ತಯಾರು ಮಾಡಿಲ್ಲ. ಭೂಮಿ ಹೇಮ ಕಾಮಿನಿ ತನ್ನದಲ್ಲ. ತನ್ನ ಪ್ರೊಡೆಕ್ಟ್ ಕೂಡಾ ಅಲ್ಲ. ಕಳುವು ಮಾಡುವವನೊಬ್ಬನೆ ಕಳ್ಳನಲ್ಲ; ಬಳಕೆ ಮಾಡುವವರೆಲ್ಲರೂ ಕಳ್ಳರೇ ಆಗಿದ್ದಾರೆ.

ಸಕಲ ವಸ್ತುಗಳ ಮಾಲೀಕ ಶಿವ ಮಾತ್ರ ಆಗಿದ್ದಾನೆ. ಕೊಂಡವನದೂ ಅಲ್ಲ; ಕದ್ದು ಪಡೆದವನದೂ ಅಲ್ಲ! ಈ ಶಿವ ಯಾರು? ನಿನ್ನದೆಂಬುದು ಜ್ಞಾನರತ್ನ ಕಾಣಾ. ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತಹ ಸಿರಿವಂತರು ಯಾರೂ ಇಲ್ಲ ಎಲೆ ಮನವೆ ಎನ್ನುತ್ತಾರೆ ಅಲ್ಲಮ ಪ್ರಭುಗಳು.

ವಸ್ತುವನ್ನು ಕೊಂಡು ತನ್ನದೆನ್ನದೆ; ಕದ್ದು ತನ್ನದೆನ್ನದೆ, ಯೋಚಿಸಿ, ವಸ್ತುವಿನ ಸತ್ಯವನ್ನು ತನ್ನ ಜ್ಞಾನದಿಂದ ನೋಡಿದರೆ ಮಾತ್ರ ಅದನ್ನು ಕೊಳ್ಳಬೇಕೊ ಅಥವಾ ಕದಿಯಬೇಕೊ ಬೇಡವೋ ಎನ್ನುವ ಅರಿವಾಗುತ್ತದೆ.

ಅಜ್ಞಾನದಿಂದ ಕೊಂಡು ತನ್ನದೆನ್ನುತ್ತದೆ ; ಕದ್ದು ತನ್ನದೆನ್ನುತ್ತದೆ. ಇದು ಮನದ ವ್ಯವಹಾರ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಕೊಂಡರೇನು? ಕದ್ದರೇನು ಎರಡೂ ಒಂದೇ. ಅದನ್ನು ತನ್ನ ಜ್ಞಾನದಿಂದಲೇ ನೋಡಬೇಕು.

ಜ್ಞಾನವೆಂಬುದು ಮಾತ್ರ ನಿನ್ನದು ಅದನ್ನು ಕೆಡಗೊಡದೆ ಅಲಂಕರಿಸು ಎಂದು ಪ್ರಭುಗಳು ಹೇಳಿದರೆ; ಕಳಬೇಡ, ಜ್ಞಾನವನ್ನು ಮಾತ್ರ ಕಳುವು ಮಾಡಬೇಡ. ಕೊಲ್ಲಬೇಡ, ಜ್ಞಾನವನ್ನು ಬಳಸದೆ ಕೊಲ್ಲಬೇಡ. ಬಳಸದ ಮುನ್ನ ನೀನು ಸತ್ತರೆ ಜ್ಞಾನ ಕೂಡಾ ನಿನ್ನೊಂದಿಗೆ ಇಲ್ಲವಾಗುತ್ತದೆ. ಎಂದು ಬಸವಣ್ಣನವರು ಹೇಳುತ್ತಾರೆ.

ಅದಕ್ಕಾಗಿಯೇ ಬಸವಣ್ಣನವರು ಈ ವಚನದಲ್ಲಿ ಇಂದೆನ್ನ ವಧುವ ಬೇಡು, ನಾಳೆನ್ನ ಧನವ ಬೇಡು, ನಾಡಿದ್ದು ಎನ್ನ ತನುವ ಬೇಡು. ನನ್ನದು ನನಗೆ ದಕ್ಕುವುದಲ್ಲದೆ ಬಯಸಿದ ಬಯಕೆ ಸಲುವುದೆ ಅಯ್ಯಾ ಎಂದು ಪ್ರಶ್ನಿಸುತ್ತಾರೆ. ಈ ಸೂತ್ರ ನೀಡಿ ಬಸವಣ್ಣನವರು ಮನುಕುಲಕ್ಕೆ ಎಷ್ಟೊಂದು ಉಪಕಾರ ಮಾಡಿದ್ದಾರೆ. ಅವರು ನುಡಿದಂತೆ ಮನುಕುಲ ನಡೆಯುವುದೇ ಅವರ ದಿವ್ಯ ಸ್ಮರಣೆಯಾಗಿದೆ. ಪೂಜಿಸಿದರಾಗದು, ನೆನೆದರಾಗದು ಎನ್ನುವ ಅವರ ಮಾತನ್ನು ದಿಟ ಮಾಡಲೇಬೇಕಾಗಿದೆ.

723

ಕಲಿ ಕರುಳ ತರ್ಕೈಸಿ ಹರಿಯಬಲ್ಲನಲ್ಲದೆ
ಸಾಯ ಕಾದಿಸುವಡೆ, ಎಡೆಗೋಲನಿಕ್ಕುವಡೆ, ದಾತಾರನಾಧೀನವಲ್ಲದೆ
ಕೂಡಲಸಂಗಮದೇವಾ, ನೀ ಮಾಡಿದಂತಹುದಯ್ಯಾ ;

ತನುಮನ ಧನದಲ್ಲಿ ವಂಚನೆಯ
ಆನು ಬಯಸಿದಡೆಂತಹುದಯ್ಯಾ ?

ಇದೊಂದು ಯುದ್ಧ ಭೂಮಿ. ತನು ಹೇಗಿದ್ದರೂ ಅದು ಯುದ್ಧ ಮಾಡಲೇಬೇಕು. ಆಹಾರಕ್ಕಾಗಿ ಬೇಡಿಕೆಗಾಗಿ ಬಯಕೆಗಾಗಿ ಅಧಿಕಾರಕ್ಕಾಗಿ ಹೋರಾಟ ನಡೆದೇ ಇರುತ್ತದೆ. ತನು ಪಾಲ್ಗೊಳ್ಳದಿದ್ದರೇನು? ಮತ್ತೊಂದು ತನು ಬಳಸಿಕೊಳ್ಳುತ್ತದೆ. ಇಲ್ಲದಿದ್ದರೆ ಉಳಿಗಾಲವಿಲ್ಲ. ಉಸಿರಿರುವವರೆಗೆ ನಿರಂತರ ನಡೆಯುವ ಜೀವನದ ಯುದ್ಧದಲ್ಲಿ ಕಲಿಯಾದವನು ತನ್ನ ತನುವಿನ ಜ್ಞಾನವೆಂಬ ಬ್ರಹ್ಮಾಸ್ತ್ರವನ್ನು ಬಳಸಿ ಪಾರಾಗಬೇಕು. ಮಾಲೀಕನ ಆಜ್ಞೆ ಬರುವವರೆಗೆ ಯುದ್ಧ ಮಾಡಲೇಬೇಕು. ಸಾಯುವ ಸ್ಥಿತಿಯಲ್ಲಿದ್ದರೂ, ಕರುಳು ಕಿತ್ತಿ ಹೊರಬಂದರೂ ಜ್ಞಾನದ ಮಹಾಯುದ್ಧ ನಿಲ್ಲಿಸುವಂತಿಲ್ಲ. ತನು ಮನ ಅರಿವಿನಲ್ಲಿ ವಂಚನೆಯಿಲ್ಲದೆ, ಯುದ್ಧದಲ್ಲಿ ಪಾಲ್ಗೊಳ್ಳಲೇಬೇಕು.

724

ಬಾಲಾಭ್ಯಾಸವ ಮಾಡಹೋದಡೆ ಎನ್ನ ಸುರುಗಿ ಎನ್ನ ನಟ್ಟಿತ್ತು ;
ಎಂತಯ್ಯಾ ಕಲಿಯೊಡನೆ ಶ್ರವವ ಮಾಡುವೆನು?
ರಾಯ ರಾಜಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು;
ಸರಿಸದ ಮೇಲೆ ಹಿಡಿಯ ಹೋದಡೆ
ಚದುರಂಗದ ಮೇಲೆ ಮಸಿಯ ತೋರಿದ ಕೂಡಲಸಂಗಮದೇವ.

ಐವತ್ತೆರಡು ಅಕ್ಷರಗಳನ್ನು ಅಭ್ಯಾಸ ಮಾಡಿ ಕಲಿಯಬಹುದು. ತನುವಿನಲ್ಲಿ ತನ್ಮಯವಾದ ಜ್ಞಾನವನ್ನು ಕೂಡಾ ಅಕ್ಷರಗಳ ಮೂಲಕ ಕಲಿಯಬೇಕೆ? ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳು ಅಕ್ಷರದಲ್ಲಿ ಮುದ್ರಣಗೊಂಡಿವೆ. ಬಾಲ್ಯದಿಂದಲೂ ತನುವಿನ ಆಯುಷ್ಯ ಮುಗಿಯುವವರೆಗೆ ಓದಿದರೂ ಓದಬೇಕೆನ್ನಿಸುತ್ತದೆ. ಬಾಲ್ಯ ತೀರುವುದೇ ಇಲ್ಲ. ಬಾಲಾಭ್ಯಾಸ ನಿಲ್ಲುವುದೇ ಇಲ್ಲ. ಈ ಅಭ್ಯಾಸ ಮಾಡಿ ಗುರುವಿನೊಂದಿಗೆ ಯುದ್ಧ ಮಾಡಲು ಸಾಧ್ಯವೇ? ಆತ ಸಕಲ ವಿದ್ಯೆಗಳನ್ನು ಬಲ್ಲ ಕಲಿ !

ಬಾಲಾಭ್ಯಾಸ ಮಾಡಿ ಯುದ್ಧ ಮಾಡಲು ಹೋದರೆ ತನುವಿನ ಅರಿವಿನ ಕತ್ತಿ ತನುವನ್ನೇ ಚುಚ್ಚಿ ಗಾಯಗೊಳಿಸುವುದು. ತನುವಿನಲ್ಲಿಯೇ ತನ್ಮಯವಾದ ಸದ್ಗುರವೆಂಬ ಕಲಿಯೊಂದಿಗೆ ಯುದ್ಧ ಮಾಡಲು ಸಾಧ್ಯವೇ ? ಅಭ್ಯಾಸ ಅಭ್ಯಾಸವೇ; ಯುದ್ಧ ಯುದ್ಧವೇ ಆಗಿದೆ. ಅಭ್ಯಾಸವೇ ಶ್ರೇಷ್ಠವೆಂದು ಯುದ್ಧ ಮಾಡಲು ಹೋದರೆ ಚದುರಂಗದ ಮೇಲೆ ಅಂದರೆ ಯುದ್ಧ ಕ್ಷೇತ್ರದ ಮೇಲೆಯೆ ಮಸಿಯ ಚೆಲ್ಲಿ ಏನೂ ಕಾಣದಂತೆ ಮಾಡುತ್ತಾನೆ.

ರಾಯ ರಾಜಗುರು ! ಜಗದ ಬಿನ್ನಾಣಿ ! ಆತ ಹಾಕಿದ ತೊಡಕ ಬಾಲ ಅಭ್ಯಾಸದಿಂದ ಬಿಡಿಸಲುಬಾರದು. ಜಗದಗಲ ಮುಗಿಲಗಲಕ್ಕೂ ಪಸರಿಸಿದ ಮಹಾಜ್ಞಾನವನ್ನು ಬ್ರಹ್ಮಾಂಡದಿಂದತ್ತತ್ತಲೂ, ಪಾತಾಳದಿಂದತ್ತತ್ತಲೂ ಚಾಚಿದ ಮಹಾಜ್ಞಾನವನ್ನು ತನ್ನ ಬಲದಿಂದ ತನುವಿನಗಲಕ್ಕೆ ತಂದು ಚುಳುಕಾಗಿಸಿ ಚುಳುಕಾಗಿದ್ದಾನೆ. ಅಂತಹ ಕಲಿಯ ಕೈ ಹಿಡಿದು ನಡೆಯಬೇಕಲ್ಲದೆ, ಬಾಲಾಭ್ಯಾಸ ಮಾಡಿ, ವೇದ ಆಗಮ ಉಪನಿಷತ್ತು ಭಗವದ್ಗೀತೆ

ಬೈಬಲ್‌ಗಳನ್ನು ಓದಿ ಮಹಾಕಲಿಯೊಂದಿಗೆ ಜ್ಞಾನ ಯುದ್ಧ ಮಾಡಲು ಸಾಧ್ಯವೇ ?

ಓದಲು ಬಂದವನಿಗೆ ನಡೆಯಲು ಬರಬೇಕಲ್ಲ. ನುಡಿಯಲು ಬಂದವನಿಗೆ ನಡೆಯಲು ಬರಬೇಕಲ್ಲ. ಪುಸ್ತಕದಲ್ಲಿ ಓದಿ ಯುದ್ಧ ಮಾಡಲು ಸಾಧ್ಯವೇ? ಯುದ್ಧ ಮಾಡಲು ಹೋದರೆ ತನ್ನ ಕತ್ತಿ ತನಗೇ ಚುಚ್ಚಿ ಗಾಯಗೊಳಿಸುತ್ತದೆ. ಜ್ಞಾನಯುದ್ಧ ಬಲು ಸೂಕ್ಷ್ಮ. ಕಲಿಯೊಂದಿಗೆ ಕೈ ಹಿಡಿದು ನಡೆಯಬೇಕು.

725

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು
ಶಿವಚಿತ್ತವೆಂಬ ಕೂರಲಗ ಕೊಂಡು
ಶರಣಾರ್ಥಿಯೆಂಬ ಶ್ರವವ ಕಲಿತಡೆ
ಆಳುತನಕ್ಕೆ ದೆಸೆಯಪ್ಪೆ ನೋಡಾ.
ಮಾರಂಕ ಜಂಗಮ ಮನೆಗೆ ಬಂದಲ್ಲಿ, ಇದಿರೆದ್ದು ನಡೆವುದು:
ಕೂಡಲಸಂಗಮದೇವರನೊಲಿಸುವಡಿದು ಚಿಹ್ನ !

ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನು ಮಾಲಕನು ಹೌದು, ಮಾರಂಕ ಅಂದರೆ ವೈರಿಯೂ ಹೌದು. ಮನವನ್ನು ಪರೀಕ್ಷೆಗೆ ಒಡ್ಡಿ ವೈರಿಯಾಗುತ್ತಾನೆ. ಮನಕ್ಕೆ ಅರಿವಿನ ಕೆಲಸ ಹೇಳಿ ಮಾಲಕನಾಗುತ್ತಾನೆ. ಮನವನ್ನೇ ಮಗುವನ್ನಾಗಿಸಿ ಕೈ ಹಿಡಿದು ತನ್ನತ್ತ ತಬ್ಬಿಕೊಳ್ಳುವ ಸಂಗಮನಾಥನೂ ಆಗುತ್ತಾನೆ.

ಮನ ಸಮಚಿತ್ತವೆಂಬ ನೇಮದ ಗುರಾಣಿ ಹಿಡಿದು ಶಿವ ಚಿತ್ತವೆಂಬ ಹರಿತವಾದ ಅರಿವಿನ ಖಡ್ಗ ಹಿಡಿದು ಜ್ಞಾನದ ಯುದ್ಧ ಕಲಿತರೆ ಕಾಲಾಳಿಗೆ ಬಲ ಬರುತ್ತದೆ. ಸಕಲ ಜ್ಞಾನದ ವರಸೆಗಳನ್ನು ಕಲಿತ ಕಾಲಾಳು ಒಮ್ಮೆ ಅರಿವಿನ ಅರಸನಾಗಿ ಮೆರೆಯುವ ದೆಸೆ ಬರುತ್ತದೆ. ವೈರಿ ಮನೆಗೆ ಬಂದರೆ ಜಂಗಮನಂತೆ ಎದುರುಗೊಂಡು ಆದರದಿಂದ ಗೌರವಿಸುತ್ತಾನೆ. ಅರಿವು ಅಂಗೈಗೆ ಬಂದ ಚಿಹ್ನೆಯಿದು !

726

ಅಟ್ಟಾಟಿಕೆಯ ಮಾತನಾಡಲದೇಕೋ ?
ಮುಟ್ಟಿ ಬಂದುದಕ್ಕಂಜಲದೇಕೋ ?
ಕಾದಿದಲ್ಲದೆ ಮಾಣೆನು; ಓಡಿದಡೆ ಭಂಗ ಹಿಂಗದಾಗಿ,
ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ !

ಕಾದಿದಲ್ಲದೆ ಮಾಣೆನು: ಓಡಿದಡೆ ಭಂಗ ಹಿಂಗದಾಗಿ, ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ:

ಮನ ಮಾಡಿದ ತಪ್ಪು ತನುವಿನ ಅರಿವಿನ ಮೂಲಕ ತನುವಿಗೆ ಮೊದಲು ಗೊತ್ತಾಗುವುದು. ಮನಕ್ಕೆ ತನು ಒಲಿಯಿತು ; ತಪ್ಪು ಮಾಡಿತು. ಅರಿವಿನ ಮಾತು ತನುವಿಗೆ ಹಿಡಿಸಿತು; ಆದರೆ ಅದರಂತೆ ನಡೆಯಲಿಲ್ಲ. ತಪ್ಪು ಮಾಡುವ ಮುನ್ನ ಹೇಳಿತು; ಮಾಡಬೇಡವೆಂದು. ತಪ್ಪು

ಮಾಡಿದ ಮೇಲೆ ಹೇಳಿತು ಮಾಡಿದುದು ತಪ್ಪೆಂದು; ಮತ್ತೊಮ್ಮೆ ಮಾಡಬೇಡವೆಂದು.

ಮಾಡಿದ ತಪ್ಪು ತನಗೇ ತಪ್ಪೆಂದು ಅರಿವಿನಿಂದ ತಿಳಿದ ಮೇಲೆ ಸರಿಯೆಂದು ಹೇಳಿ ಅಹಂಕಾರದಿಂದ ವಾದಿಸುವ ಅಟ್ಟಾಟಿಕೆಯ ಮಾತುಗಳೇಕೆ? ಅರಿವಿನಿಂದ ತಿಳಿದು ಹಿಮ್ಮೆಟ್ಟಲೇಕೆ? ಅರಿವು ಅಜ್ಞಾನದ ಯುದ್ಧದಲ್ಲಿ ಜಯಗೊಳಿಸದಿದ್ದರೆ ಸಾಧ್ಯವಾಗದು. ಯುದ್ಧ ಮಾಡಲೇಬೇಕು; ಅರಿವಿನ ಧ್ವಜ ಹಾರಿಸಲೇಬೇಕು. ಅಜ್ಞಾನದ ಅರಿವಿನ ಯುದ್ಧದಲ್ಲಿ ಓಡಿದರೆ ಭಂಗ ; ಮನದ ಈ ಭಂಗಕ್ಕೆ ಅರಿವೆಂಬ ಗುರುದೇವನೇ ನೀನೇ ಕಾರಣನಾಗಿರುವಿ. ಸೋಲು ನಿನ್ನದೆ; ಗೆಲುವು ಕೂಡಾ ನಿನ್ನದೆ!

ಅಂಜೆನು ಅಳುಕೆನು; ಅಹಂಕಾರದಿಂದ ಮಾತನೂ ಆಡೆನು. ಯುದ್ಧ ಮಾಡುವುದನ್ನೂ ಬಿಡೆನು. ಓಡಿದಡೆ ಭಂಗ ಹಿಂಗುವುದಿಲ್ಲ. ಒಂದು ವೇಳೆ ಓಡುವ ಪ್ರಸಂಗ ಬಂದರೆ ಆ ಭಂಗ ಕೂಡಾ ನನ್ನದಲ್ಲ; ಅದು ನಿಮಗೆ ಸಂಬಂಧ ಪಟ್ಟದ್ದು.

ಅರಿವಿನ ಯುದ್ಧದ ಸೂಕ್ಷ್ಮಾತಿ ಸೂಕ್ಷ್ಮ ಸೂತ್ರವಿದು. ಈ ಕಲೆ ತಿಳಿದರೆ ಅನುಸರಿಸುವುದು ಸುಲಭ. ಇಲ್ಲದಿದ್ದರೆ ಬರೀ ಅರಿವಿನ ವೇಷ. ಮಠ ಪೀಠ ಆಶ್ರಮದ ಅಧಿಪತ್ಯದ ವೇಷ. ತಂತ್ರಜ್ಞಾನವಿಲ್ಲದ ಬರಿ ವೇಷ , ತನುವಿಗೆ ಅಪಾಯವೆಂದು ಮನ ತಿಳಿಯಬೇಕು!

727

ಲಿಂಗಕ್ಕಲ್ಲದೆ ಮಾಡೆನೀ ಮನವನು,
ಜಂಗಮಕ್ಕಲದೆ ಮಾಡೆನೀ ಧನವನು,
ಪ್ರಸಾದಕ್ಕಲ್ಲದೆ ಮಾಡೆನೀ ತನುವನು,
ಲಿಂಗ ಜಂಗಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ
ಅನರ್ಪಿತವಾದಡೆ ತಪ್ಪೆನ್ನದು
ಮೂಗ ಕೊಯಿ ಕೂಡಲಸಂಗಮದೇವಾ.

ಅರಿವಿಗಲ್ಲದೆ ಬಳಕೆ ಮಾಡೆನು ಈ ಮನವನು. ಅರಿವನ್ನು ಪಾಲಿಸುವುದಕ್ಕಲ್ಲದೆ ಬಳಸೆನು ಈ ಅರಿವನು. ಅರಿವಿಗಲ್ಲದೆ ಬಳಸೆನೀ ತನುವನು.

ಅರಿವಿನ ನೋಟಕ್ಕಲ್ಲದೆ, ಅರಿವಿನ ಮಾಟಕ್ಕಲ್ಲದೆ, ಅರಿವಿನಿಂದ ಸ್ವೀಕರಿಸುವ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನು. ಅಜ್ಞಾನಕ್ಕಾಗಿ ಬಳಸೆನು ಭಾಷೆಯನು. ಒಂದು ವೇಳೆ ತಪ್ಪಿ ನುಡಿದಡೆ, ತಪ್ಪಿ ನಡೆದಡೆ ಆ ತಪ್ಪೆನ್ನದು. ಹಿಡಿದು ಮೂಗು ಕೊಯಿ.

ಮನ ಸುಖವೆಂದರೇನೆಂದು ಅರಿಯದು, ದುಃಖವೆಂದರೇನೆಂದು ಅರಿಯದು. ಸುಖಕ್ಕಾಗಿ ಅಜ್ಞಾನದಿಂದ ನಡೆದು ದುಃಖ ತಂದುಕೊಳ್ಳುತ್ತದೆ. ಇಂತಹ ಅಜ್ಞಾನಿ ಮನವನು ಅರಿವಿಗಲ್ಲದೆ ಮತ್ತೊಂದಕೆ ಬಳಸೆನು.

ಅರಿವು ನೋಡುವುದಕ್ಕೆ ಕೇಳುವುದಕ್ಕೆ ಮುಟ್ಟುವುದಕ್ಕೆ ತಿನ್ನುವುದಕ್ಕೆ ಹಾಗೂ ಮೂಸಿಸಿ ಅರಿವಿನ ಪರಿಮಳ ಮೂಸಿಸುವುದಕ್ಕಾಗಿ ಇದೆ. ಅದಕ್ಕೆ ಮಾತ್ರ ಬಳಕೆಯಾಗಬೇಕು. ಹಾಗೆ ಬಳಕೆ ಮಾಡುವ ಜಂಗಮ ಹೆಸರಿನ ಅವ್ಯಕ್ತನೊಬ್ಬ ತನುವಿನಲ್ಲಿ ಜಗಜಟ್ಟಿಯಾಗಿ ಕಾರ್ಯನಿರ್ವಹಿಸುತ್ತಾನೆ. ಆತನಿಗಾಗಿ ಅರಿವು ಬಳಕೆ ಮಾಡಬೇಕು. ಹೀಗೆ ಅರಿವು ಬಳಕೆ ಮಾಡುವುದಕ್ಕಾಗಿಯೇ

ಜಂಗಮನೆಂದರೆ ಯಾರೆಂದು ಬಲ್ಲವರಿಂದ ತಿಳಿಯಬೇಕು. ತಿಳಿದ ಮೇಲೆ ಸಕಲ ಜವಾಬ್ದಾರಿಯನ್ನು ಆತನಿಗೆ ಹೊರಿಸಬೇಕು. ಅದಕ್ಕಾಗಿಯೇ ಅರಿವು ಬಳಸಬೇಕು.

ನೋಡಿದ ಜ್ಞಾನ ಅಜ್ಞಾನ ದೃಶ್ಯಗಳು, ಕೇಳಿದ ಜ್ಞಾನ ಅಜ್ಞಾನದ ಮಾತುಗಳು, ಮುಟ್ಟಿದ ಸ್ಪರ್ಶ, ರುಚಿಸಿದ ರುಚಿ, ಮೂಸಿಸಿದ ಸುಗಂಧ ದುರ್ಗಂಧಗಳೆಲ್ಲ ತನುವಿಗೆ ಪ್ರಸಾದವಾಗಬೇಕು. ಈ ನಿಟ್ಟಿನಲ್ಲಿ ತನು ಅರಳಬಾರದು ಕೆರಳಬಾರದು. ಇದನ್ನು ಪ್ರಸಾದವೆನ್ನಲಾಗುತ್ತದೆ. ಇಂತಹ ಅರಿವಿನ ಪ್ರಸಾದಕ್ಕಲ್ಲದೆ ತನುವನು ಅನ್ಯಕ್ಕೆ ಬಳಕೆ ಮಾಡುವುದಿಲ್ಲ ಎನ್ನುವ ದೃಢ ನಿಲುವಾಗಬೇಕು.

ಲಿಂಗ ಜಂಗಮ ಪ್ರಸಾದಕ್ಕಲ್ಲದೆ ಬಾಯ್ದೆರೆಯನೆಂಬುದೆನ್ನ ಭಾಷೆ ಅನರ್ಪಿತವಾದಡೆ ತಪ್ಪೆನ್ನದು:

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಕ್ಕೆ ಭಾಷೆ ಬಳಕೆಯಾಗಬೇಕು. ಅಂಗದಲ್ಲಿಯೇ ಸಂಗಮವಾದ ಅರಿವನ್ನು ಬಳಕೆ ಮಾಡುವ ಜಟ್ಟಿ ಜಂಗಮನಿಗಾಗಿ ಭಾಷೆ ಬಳಕೆಯಾಗಬೇಕು. ನೋಟ ಶಬ್ದ ಸ್ಪರ್ಶ ರುಚಿ ವಾಸನೆ ಏನೊಂದರಿಯದಂತೆ ಅರಿವಿನಿಂದಲೇ ತನುವಿಗೆ ಪ್ರಸಾದವಾಗುವುದಕ್ಕಾಗಿ ಭಾಷೆ ಬಳಕೆಯಾಗಬೇಕು. ಅನರ್ಪಿತವಾದಡೆ ತಪ್ಪೆನ್ನದು!

ನುಡಿದರೆ ಮುತ್ತಿನ ಹಾರದಂತಿರಬೇಕು! ಮುತ್ತು ನುಡಿಯುವುದಿಲ್ಲ. ಆದರೆ ಬೆಳಗುವ ಮೂಲಕ ನುಡಿಯುತ್ತದೆ. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ಸ್ಫಟಿಕ ಕೂಡಾ ಬೆಳಗುವ ಮೂಲಕ ನುಡಿಯುತ್ತದೆ. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ಮಾಣಿಕ್ಯವು ಕೂಡಾ ಬೆಳಗುವ ಮೂಲಕ ನುಡಿಯುತ್ತದೆ. ಇವು ಮೂರು ಜಲದಿಂದ ಗಟ್ಟಿಗೊಂಡು ಜಲವಾಗದೆ ಬೆಳಗುತ್ತವೆ. ತನು ಜಲಬಿಂದುವಿನಿಂದ ಗಟ್ಟಿಗೊಂಡು ಜಲವಾಗದೆ, ಜ್ಞಾನದ ಭಾಷೆಯಿಂದ ಬೆಳಗುತ್ತದೆ.

ಮಾಹೇಶ್ವರನ ಪ್ರಸಾದಿಸ್ಥಲ

728

ಅಂಕ ಕಂಡಾ ; ಕೋಲಾಸೆ ಮತ್ತೇಕಯ್ಯಾ ?
ಲೆಂಕ ಕಂಡಾ; ಪ್ರಾಣದಾಸೆ ಮತ್ತೇಕಯ್ಯಾ ?
ಭಕ್ತ ಕಂಡಾ ; ತನು ಮನ ಧನದಾಸೆ ಮತ್ತೇಕಯ್ಯಾ ?
ನಿಮ್ಮ ಅಂಕೆಗೆ ಝುಂಕೆಗೆ ಶಂಕಿಸಿದೆನಾದಡೆ
ಎನ್ನ ಲೆಂಕತನಕ್ಕೆ ಹಾನಿ, ಕೂಡಲಸಂಗಮದೇವಾ !

ಯೋಧನಿಗೆ ಉಪಯೋಗಿಸುವ ಆಯುಧಗಳ ಮೇಲೆ ಆಸೆ ಇರುವುದಿಲ್ಲ. ಸೇವಕನಿಗೆ ಪ್ರಾಣದ ಮೇಲೆ ಆಸೆ ಬರುವುದಿಲ್ಲ. ಭಕ್ತನಿಗೆ ತನು ಮನ ಧನದ ಮೇಲೆ ಆಸೆ ಬರುವುದಿಲ್ಲ. ಇವರೆಲ್ಲ ಆಯಾ ಕಾಯಕದ ಮೇಲಿನ ನಿಪುಣರು.

ಭಕ್ತ ತನು ಮನ ಅರಿವಿನ ಮೇಲೆ ನೈಪುಣ್ಯತೆಯನ್ನು ಪಡೆದಾತ. ಧನವೆಂದರೆ ಭೂಮಿ, ಆಭರಣ, ಕರೆನ್ಸಿಯಲ್ಲ, ಮುತ್ತು ರತ್ನ ಮಾಣಿಕ್ಯವೂ ಅಲ್ಲ. ಇದೇನಿದ್ದರೂ ವಿನಿಮಯ ಮಾಡಿ

ಕೊಂಡು ವಸ್ತುಗಳನ್ನು ಪಡೆಯುವುದಕ್ಕಾಗಿ. ತನು ಅಂದರೆ ದೇಹ. ಮನ ಅಂದರೆ ದೇಹವನ್ನು ಆವರಿಸಿದ ಸೂಕ್ಷ್ಮ ದೇಹ. ಧನವೆಂದರೆ ತನು ಮತ್ತು ಮನದ ಸೃಷ್ಟಿಗೆ ಕಾರಣವಾದ ಕಾರಣ ದೇಹ. ಇದು ಅತ್ಯಂತ ಪ್ರಮುಖವಾದುದು. ಇವು ಮೂರೂ ದೇಹಗಳು ಭಕ್ತನ ಅರಿವಿಗೆ ಬಂದು, ಆಸೆ ಮಾಡುವ ಮನವನ್ನು, ಘನಮನವನ್ನಾಗಿಸಿಕೊಂಡು ಆ ಮನದಿಂದಲೆ ಕಾರಣ ದೇಹ (ಧನ) ದತ್ತ ಪ್ರಯಾಣ ಮಾಡಿ ಘನದಲ್ಲಿ ಲೀನವಾಗಿಸುತ್ತಾನೆ. ತನು ಮನ ಧನ ಇವು ಮೂರೊಂದಾಗಿ ಮೂರೊಂದಾದ ಘನವೇ ತಾನಾಗುತ್ತಾನೆ. ಇಂತಹ ಭಕ್ತನಿಗೆ ತನುವಿನಾಸೆ ಇಲ್ಲ, ಮನದಾಸೆಯೂ ಇಲ್ಲ, ಧನದಾಸೆಯೂ ಇರುವುದಿಲ್ಲ. ಭಕ್ತನ ಭಕ್ತಿ ಶಂಕೆಯಿಲ್ಲದ ಭಕ್ತಿ. ಅಗೋಚರದ ಭಕ್ತಿ. ಇದು ತೋರಿಸುವ ಭಕ್ತಿಯಲ್ಲ. ತನಗೆ ತಾನೇ ಅಗೋಚರದಿಂದ ಆಚರಿಸಿಕೊಳ್ಳುವ ಅರಿವಿನ ಭಕ್ತಿ.

ಭಕ್ತನ ಭಕ್ತಿಯಲ್ಲಿ ಜಪ ತಪ ಪೂಜೆ ಆಚಾರಗಳು ಇರುವುದಿಲ್ಲ. ಕೇವಲ ಅರಿವಿನ ಅಗೋಚರದ ಆಚಾರ ಮಾತ್ರ ಇರುತ್ತದೆ. ತಾನು ಇತರರನ್ನು ಹೇಗೆ ನೋಡುತ್ತೇನೆ ಎಂದು ಹೇಳಲು ಬರುವುದಿಲ್ಲ. ಸಾಧ್ಯವಾದರೆ ಇರಲು ಬರುತ್ತದೆ. ಅದು ನಿಪುಣ ಭಕ್ತನಿಗೆ ಮಾತ್ರ ಸಾಧ್ಯವಾಗುತ್ತದೆ. ಶಂಕಿಸಿದಡೆ ತನ್ನ ಸೇವಾತನಕ್ಕೆ ಹಾನಿ.

729

ನೀವಿರಿಸಿದ ಮನದಲ್ಲಿ ನಾನಂಜೆನಯ್ಯಾ ;
ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ.
ನೀವಿರಿಸಿದ ಧನದಲ್ಲಿ ನಾನಂಜೆನಯ್ಯಾ ;
ಧನವು ಸತಿ ಸುತ ಮಾತಾ ಪಿತರಿಗೆ ಹೋಗದಾಗಿ.
ನೀವಿರಿಸಿದ ತನುವಿನಲ್ಲಿ ನಾನಂಜೆನಯ್ಯಾ ;
ತನುವು ಸರ್ವಾರ್ಪಿತದಲ್ಲಿ ನಿಯತ ಪ್ರಸಾದ ಭೋಗಿಯಾಗಿ.
ಇದು ಕಾರಣ ವೀರ ಧೀರ ಸಮ ಗ್ರಾಹಕನಾಗಿ,
ನಿಮಗಾನಂಜೆ, ಕೂಡಲಸಂಗಮದೇವಾ!

ಮನ ಮತ್ತು ಧನ (ಅರಿವು) ತನುವಿನಲ್ಲಿ ಸಮರಸವಾಗಿ ಬಂಧಿಯಾಗಿದ್ದರೂ ಅರಿವಿನ ಮಾತು ಮನ ಕೇಳುವುದಿಲ್ಲ. ತನುವಿಗೆ ತಕ್ಕಂತೆ ಮನ ನಡೆಯುವುದಿಲ್ಲ. ತನು ಮನ ಧನ ಕುರಿತು ಸರಳ ಶಿಕ್ಷಣಗಳಿಲ್ಲದ ನಿಮಿತ್ಯ, ಮನದ ಸಾಮ್ರಾಜ್ಯ ಎಲ್ಲೆಲ್ಲೂ ಇದೆ. ಮನಕ್ಕೆ ಯಾರ ಅಂಜಿಕೆಯೂ ಇಲ್ಲ.

ತನು ಮನದ ಸ್ವತ್ತಲ್ಲ; ಅರಿವಿನ ಸಂಪತ್ತು.

ನೀವಿರಿಸಿದ ಮನದಲ್ಲಿ ನಾನಂಜೆನಯ್ಯಾ ; ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ:

ಮನ ಮತ್ತು ಅರಿವಿಗೆ ಆದೇಶ ನೀಡುವ ಘನವೊಂದಿದೆ. ಈ ಘನವನ್ನು ಮನದಿಂದಲೇ ತಿಳಿದುಕೊಳ್ಳಬೇಕು. ಉದಾ: ಮನ ತನ್ನ ಸುಖಕ್ಕಾಗಿ ತನುವನ್ನು ಕಳ್ಳನ ವೃತ್ತಿಯಲ್ಲಿ ಬಂಧಿಸಿದೆ. ಮನಕ್ಕೆ ಆಭರಣವೆಂದರೆ ಸುಖ. ಅದನ್ನು ಪಡೆಯಲು ತನುವನ್ನು ಬಳಕೆ ಮಾಡಿಕೊಂಡು

ಕಳುವು ಮಾಡುತ್ತದೆ. ಜನ ತನುವನ್ನು ನೋಡುತ್ತಾರೆ; ಮನವನ್ನು ನೋಡುವುದಿಲ್ಲ. ಸಿಕ್ಕರೆ ತನುವಿಗೆ ಶಿಕ್ಷೆ ; ಮನಕ್ಕೆ ಶಿಕ್ಷೆಯಿಲ್ಲ. ಮನ ಮಾಡಿದ ಕಳುವಿನ ಎಣಿಕೆಗಳೆಲ್ಲ ಘನದಲ್ಲಿ ಸಂಗ್ರಹ ವಾಗಿವೆ. ಅರಿವಿನ ಮೂಲಕ ತಪ್ಪೆಂದು ಮನಕ್ಕೆ ಬೋದಿಸಿದರೂ, ಮನ ಅರಿವಿನ ಮಾತು ಕೇಳು ವುದಿಲ್ಲ. ಕದಿಯುವಾಗ ಸಾವು ನೋವುಗಳು ಘಟಿಸಿದರೂ ಮನಕ್ಕೆ ದುಃಖವಾಗುವುದಿಲ್ಲ. ಅರಿವು ತಪ್ಪೆಂದು ಬೋಧಿಸುವುದೂ ಬಿಡುವುದಿಲ್ಲ.

ಆಭರಣ ಅದೊಂದು ಹಳದಿ ಬಣ್ಣವುಳ್ಳ ಲೋಹ. ಬಣ್ಣ, ಲೋಹ, ಮಾಟಗಳು ಪ್ರಾಣಕ್ಕಿಂತಲೂ ದೊಡ್ಡವಲ್ಲ. ಆದರೂ ಮನದ ಬಾಲಿಷಗುಣಗಳಿಂದಾಗಿ ಅದೆಷ್ಟು ಪ್ರಾಣಗಳು ಹೋಗುತ್ತವೆಯೋ? ಮನಕ್ಕೆ ಘನದ ಪರಿಚಯವಾದರೆ: ಚಿನ್ನ ಹಳದಿ ಬಣ್ಣದ ಲೋಹವೆಂದು, ತನು ಘನವಾದುದೆಂದು ಬೋಧಿಸಿ ಮನವನ್ನು ಘನಮನವನ್ನಾಗಿ ಮಾಡುತ್ತದೆ.

ಮನ ಘನಕ್ಕೆ ಶರಣು ಹೋಗಿರುವುದರಿಂದ ಚಿನ್ನಕ್ಕೆ ಮರುಳಾಗುವುದಿಲ್ಲ. ಅದನ್ನು ಕೊಳ್ಳುವುದಿಲ್ಲ. ಕದಿಯುವುದಿಲ್ಲ! ಚಿನ್ನ ಕೊಂಡು ಸಂಗ್ರಹಿಸಿದರೆ ತನುವಿಗೆ ಶ್ರೀಮಂತನ ಪಟ್ಟ. ಕದ್ದರೆ ತನುವಿಗೆ ಕಳ್ಳನ ಪಟ್ಟ. ಕೊಳ್ಳುವುದು ಕದಿಯುವುದು ಒಂದು ನಾಣ್ಯದ ಎರಡು ಮುಖ ಗಳಿದ್ದಂತೆ!

ನೀವಿರಿಸಿದ ಧನದಲ್ಲಿ ನಾನಂಜೆನಯ್ಯಾ ; ಧನವು ಸತಿ ಸುತ ಮಾತಾಪಿತರಿಗೆ ಹೋಗದಾಗಿ:

ತನುವಿನಲ್ಲಿ ಅರಿವು ತನ್ಮಯವಾಗಿರುವುದರಿಂದ ಅದನ್ನು ತನುವಿನ ಮೂಲಕ ಬಳಸಲು ಬರುತ್ತದೆ. ಅರಿವು ತನುವಿನ ಸಂಪತ್ತು! ಅರಿವಿನ ಈ ಸಂಪತ್ತನ್ನು ಸತಿ ಸುತ ಮಾತ ಪಿತರಿಗೆ ಹಂಚಲು ಬರುವುದಿಲ್ಲ. ಮಾರಲು, ಕೊಳ್ಳಲು ಬರುವುದಿಲ್ಲ. ಕೇವಲ ತನಗೆ ಮಾತ್ರ ಬಳಕೆ ಮಾಡಲು ಬರುತ್ತದೆ.

ನೀವಿರಿಸಿದ ತನುವಿನಲ್ಲಿ ನಾನಂಜೆನಯ್ಯಾ ; ತನುವು ಸರ್ವಾರ್ಪಿತದಲ್ಲಿ ನಿಯತ ಪ್ರಸಾದ ಭೋಗಿಯಾಗಿ:

ತನುವನ್ನು ನಿಯಂತ್ರಿಸುವ ಅರಿವು ಮತ್ತು ಮನಗಳೆರಡೂ ಘನಕ್ಕೆ ಶರಣು ಹೋಗಿರು ವುದರಿಂದ ಅವೆರಡೂ ಘನಮನ ಘನ ಅರಿವು ಆಗಿ ಮಾರ್ಪಡುತ್ತವೆ. ತನುವನ್ನು ಘನ ಮಾತ್ರ ಬಳಕೆ ಮಾಡುತ್ತದೆ. ಕಣ್ಣು ಅರಿವಿನಿಂದ ನೋಡುತ್ತದೆ. ಕಿವಿ ಅರಿವಿನಿಂದ ಕೇಳುತ್ತದೆ. ನಾಲಗೆ ಅರಿವಿನಿಂದ ರುಚಿಸುತ್ತದೆ. ಮೂಗು ಅರಿವಿನಿಂದ ಮೂಸಿಸುತ್ತದೆ. ಚರ್ಮ ಅರಿವಿನಿಂದ ಸ್ಪರ್ಶಿಸುತ್ತದೆ.

ಬೆಳಕು ವಸ್ತುವಿನ ಮೇಲೆ ಚೆಲ್ಲುತ್ತದೆ. ಆದರೆ ಯಾವ ವಸ್ತವನ್ನು ಅದು ಪಡೆಯುವುದಿಲ್ಲ. ಸೂರ್ಯನ ಬೆಳಕಿಗೆ, ವಿದ್ಯುತ್ ಬೆಳಕಿಗೆ ಅರಿವಿಲ್ಲ. ಕಣ್ಣು ಚೆಲ್ಲುವ ಬೆಳಕಿಗೆ ಅರಿವಿದೆ, ಆನಂದವಿದೆ. ಮನ ಇದನ್ನು ಬಳಸುತ್ತಿರಲಿಲ್ಲ. ಘನಕ್ಕೆ ಕಣ್ಣಿನ ಬೆಳಕು ಬಳಕೆಯಾದ ಮೇಲೆ ಬರೀ ಆನಂದ ಮಾತ್ರ ಉಳಿಯುತ್ತದೆ. ಯಾವ ವಸ್ತುವನ್ನೂ ಪಡೆಯುವುದಿಲ್ಲ.ಆ ವ ಸ್ತುವಿನ ಅವಶ್ಯಕತೆ ಘನಕ್ಕೆ ಇರುವುದಿಲ್ಲ. ಏಕೆಂದರೆ ಘನದಿಂದಲೇ ಆ ವಸ್ತು ಸೃಷ್ಠಿಯಾಗಿದೆ. ಹೀ ಗಾಗಿ ನೋಡಿದ ಪದಾರ್ಥ ಕಣ್ಣಿಗೆ ಪ್ರಸಾದವಾಯಿತು. ಕೇಳಿದ ಶಬ್ದ, ಮೂ ಸಿಸಿದ ಪರಿಮಳ, ರುಚಿಸಿದ ಪದಾರ್ಥಗಳೆಲ್ಲ ತನುವಿಗೆ ಪ್ರಸಾದವಾಯಿತು. ಸ್ಪರ್ಶಿಸಿದ ವಸ್ತು ಚ ರ್ಮಕ್ಕೆ ಪ್ರಸಾದವಾಯಿತು.

ಇದು ಕಾರಣ ವೀರಧೀರ ಸಮುಗ್ರಾಹಕನಾಗಿ, ನಿಮುಗಾನಂಜೆ,

ಕೂಡಲಸಂಗಮದೇವಾ:

ಸಿದ್ಧಾರ್ಥ ವರ್ಧಮಾನ ಎಲ್ಲವನ್ನೂ ಬೇಡುತ್ತಿದ್ದರು. ಏಕೆಂದರೆ ಅವರು ಸಾಮ್ರಾಟ ಚಕ್ರವರ್ತಿಗಳಾಗಿದ್ದರು. ಬುದ್ಧ ಮತ್ತು ಮಹಾವೀರರಿಬ್ಬರು ಏನನ್ನೂ ಬೇಡಲಿಲ್ಲ. ಏಕೆಂದರೆ ಅವರಿಬ್ಬರು ಮಹಾವೀರಧೀರರಾಗಿ ಸಮಗ್ರಾಹಕರಾಗಿದ್ದರು. ಅವರಿಬ್ಬರೂ ಸಿದ್ಧಾರ್ಥನಿಗೆ ಅಂಜಲಿಲ್ಲ. ವರ್ಧಮಾನನಿಗೂ ಅಂಜಲಿಲ್ಲ. ನಿರ್ಭಯಾನಂದರಾಗಿದ್ದರು. ಘನವೀರರಾಗಿದ್ದರು. ಇದು ಅವರಿಬ್ಬರಿಗೊಂದೇ ಅಲ್ಲ ಕಲಿತರೆ ಎಲ್ಲರಿಗೂ ಬರುತ್ತದೆ. ಹೇಗೆ ಕಲಿಯಬಹುದೆಂದು ಬರೆದಿದ್ದಾರೆ. ಆದರೆ ಮನ ಬರೆದವರನ್ನು ಪೂಜಿಸಿ ಆನಂದ ಪಡುತ್ತಲಿದೆ. ನಡೆದು ಮಹಾವೀರ ನಾಗುತ್ತಿಲ್ಲ; ಕಲಿತು ಬುದ್ಧನಾಗುತ್ತಿಲ್ಲ. ತನುವಿನ ಜ್ಞಾನ ಶಿಕ್ಷಣ ತನುವಿಗೆ ಸಿಗದ ನಿಮಿತ್ತ ಅಜ್ಞಾನದ ಅಂಧಕಾರದಲ್ಲಿ ಕ್ಷಣಿಕ ಸುಖ ಅನುಭವಿಸಿ ವ್ಯರ್ಥ ಸಾಯುತ್ತದೆ. ತನುವಿನ ಜ್ಞಾನ ತನುವಿಗೆ ಬಳಕೆಯಾಗದೆ ತನುವಿನೊಂದಿಗೆ ಇಲ್ಲವಾಗುತ್ತದೆ.

730

ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ
ಮನವೆರಡಾದಡೆ ಆಣೆ, ನಿಮ್ಮಾಣೆ!
ಮಾಡುವ ನೇಮಕ್ಕೆ ಫಲವಿಲ್ಲದಿದ್ದಡೆ ಆಣೆ!
ಕೂಡಲಸಂಗಮದೇವ, ಎನ್ನ ಮನವ ನೋಡಲೆಂದಟ್ಟಿದಡೆ
ಪ್ರಸಾದವಲ್ಲದೆ ಕೊಂಡೆನಾದಡೆ ಆಣೆ, ನಿಮ್ಮಾಣೆ.

ಮನಕ್ಕೆ ಅರಿವಾದ ಮೇಲೆ ಅದು ಒಂಟಿ ಸಲಗವಲ್ಲ; ಮಾವುತನ ಕೈವಶವಾದ ಪಳಗಿದ ಆನೆ. ಉಣ್ಣುವಾಗ ತಿನ್ನುವಾಗ ನೀರಿಗೆ ಹೋಗುವಾಗ ನಡೆಯುವಾಗ ಮಾವುತನ ಮಾತು ಮಾತ್ರ ಕೇಳುತ್ತದೆ. ಆತನ ಅಪ್ಪಣೆಯಂತೆ ನಡೆಯುತ್ತದೆ. ಹಾಗೆಯೇ ಮನ ಸಂಪೂರ್ಣ ಅರಿವಿನ ಮಾತು ಕೇಳುತ್ತದೆ.

ಮನ ಘನದೊಂದಿಗೆ ಬೆರೆತು ಘನಮನವಾಗುತ್ತದೆ. ಆಗ ಮನಗಳೆರಡಲ್ಲ. ಮುಂಚೆ ಮನಗಳೆರಡು. ಮನ ಒಂದು, ಮತ್ತೊಂದು ಮುಖವಾಡದ ಮನ. ಕಣ್ಣಿನಲ್ಲಿ ಕಾಮ ದ್ವೇಷ ಮತ್ಸರ ಅಸೂಯೆ ಜಾತಿ ಮತ . ತುಟಿಯಲ್ಲಿ ಸಂತನ ಮಾತು. ಕಣ್ಣಿಗೂ ತುಟಿಗೂ ಸಂಬಂಧವೇ ಇರಲಿಲ್ಲ. ಕಣ್ಣೊಂದು ನೋಡಿದರೆ ತುಟಿಯೊಂದು ನುಡಿಯುವುದು. ಅಮಾಯಕ ತನುವಿಗೆ ಮದದ ಮತ್ತು ತುಂಬಿ ಖೆಡ್ಡದಲ್ಲಿ ಕೆಡವುವುದು ಮನದ ಕೆಲಸವಾಗಿತ್ತು. ಇಂತಹ ಅಜ್ಞಾನದ ಮನಗಳೆರಡೂ ಕಾಣೆಯಾಗಿ ನಿಮ್ಮಾಣೆಯಾಗಿ ಮನ ಅರಿವೆಂಬ ಗುರುದೇವನ ವಶವಾಗಿದೆ. ಎರಡು ನುಡಿಯುವ ಮನ ನಿಮ್ಮಾಣೆಯಾಗಿಯೂ ಕಾಣೆಯಾಗಿದೆ.

ಎನ್ನ ಮನವ ನೋಡಲೆಂದಟ್ಟಿದಡೆ ಪ್ರಸಾದವಲ್ಲದೆ ಕೊಂಡೆನಾದಡೆ ಆಣೆ, ನಿಮ್ಮಾಣೆ:

ನೋಡಿದ ದೃಶ್ಯವೆಲ್ಲ ನಿಮಗೆ ನೈವೇದ್ಯ. ಕೇಳಿದ ಶಬ್ದವೆಲ್ಲಾ ನಿಮಗೆ ನೈವೇದ್ಯ . ಮೂಸಿಸಿದ ವಾಸನೆಯೆಲ್ಲ ನಿಮಗೆ ನೈವೇದ್ಯ . ಸ್ಪರ್ಶಿಸಿದ ಸ್ಪರ್ಶನೆಯೆಲ್ಲಾ ನಿಮಗೆ ನೈವೇದ್ಯ. ರುಚಿಸಿದ ಪದಾರ್ಥವೆಲ್ಲಾ ನಿಮಗೆ ನೈವೇದ್ಯ ಮಾಡಿ, ನನಗೆ ಪ್ರಸಾದವಾದ ಬಳಿಕ; ಮನವೆರಡಾಗಲು ಸಾಧ್ಯವೇ ? ಹಲ್ಲು ಹತ್ತಿ ನಾಲಗೆ ಹೊರಳದೆ ಜೋತುಬಿದ್ದರೂ ಮನವೆರಡಾಗದು. ಆಣೆ, ನಿಮ್ಮಾಣೆ !

731

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೋ?
ದೇವಾ, ನೀನೊಲಿದವನ, ಸ್ವಾಮೀ, ನೀ ಹಿಡಿದವನ ಕುಲವೇನೋ?
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ
ಕೂಡಲಸಂಗಮದೇವಾ.

ತನು ಒಂದೇ ಆದರೂ ಅರಿವಿನ ತನುವೊಂದು, ಮನದ ತನುವೊಂದು , ತನುವೊಂದೆಂದು ಮೂರು ತನುಗಳಾಗಿದ್ದವು. ತನು ಮತ್ತು ಮನದ ತನು ಇವೆರಡೂ ಒಂದಾದಾಗ ಅದು ಮರ್ಕಟನಾಗಿತ್ತು. ಮರದಿಂದ ಮರಕ್ಕೆ, ಕೊಂಬೆಯಿಂದ ಕೊಂಬೆಗೆ ಮನ ಹಾರಿದಂತೆಲ್ಲ ತನು ಹಾರುತ್ತಿತ್ತು.

ಅರಿವೆಂಬ ದೇವನ ದರುಶನದಿಂದ , ಸ್ವಾಮಿಯೆಂಬ ಅರಿವಿನ ತನುವಿನ ದರುಶನದಿಂದ ಮನವೆಂಬ ಮರ್ಕಟ ಆಂಜನೇಯನಾಗಿದೆ! ಇನ್ನು ತನು ಮರ್ಕಟವಲ್ಲ ; ಆಂಜನೇಯ! ಈತ ಶ್ರೀರಾಮನ ಸೊತ್ತು!

ತಾಯಿ ಊಟ ಮಾಡಿಸುವಾಗ ಮಗುವಿಗೆ ಯಾವ ತೊಂದರೆಯೂ ಇಲ್ಲ. ಹುಳಿ ಉಪ್ಪು ಕಹಿ ಒಗರು ಕ್ಷಾರವನು ತಾನುಂಡು ಸಿಹಿ ಅಡಿಗೆಯನು ಮಾತ್ರ ಮಗುವಿಗೆ ಉಣ್ಣಿಸುತ್ತಾಳೆ. ತಾಯಿ ಶಬರಿಯಂತೆ ! ಅರಿವು ಮತ್ತು ತನುವಿನ ಸಂಬಂಧವೂ ಹೀಗೆಯೇ. ವಸ್ತುವಿನ ಅಜ್ಞಾನ ಕಳೆದು ಅರಿವಿನ ತನು, ತನುವಿಗೆ ಅರಿವಿನ ಪ್ರಸಾದವನಿಕ್ಕುತ್ತದೆ.

ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ಕೂಡಲಸಂಗಮದೇವಾ:

ಅರಿವಿನ ಶಿಕ್ಷಣವನ್ನು ಅರಿತು ಅದರಲ್ಲಿಯೇ ನುರಿತ ಮಾದಾರ ಚೆನ್ನಯ್ಯ ಮಹಾಜ್ಞಾನಿ. ಅರಿವಿಗೆ ಶರಣು ಹೋದ ಮಾದಾರ ಚೆನ್ನಯ್ಯ ಮಾಡಿದ ಅಂಬಲಿಯನ್ನು ಮಹಾದೇವನಿಗೆ ಉಣ್ಣಿಸಿದ. ಆಹಾ ಎಂತಹ ರುಚಿ; ಏನು ಸವಿ ಎಂದು ಆನಂದ ಪಟ್ಟ ಮೇಲೆ ಆತ ಉಂಡುದನು ಉಂಡು ಆತನಿಗಿಂತ ಅಧಿಕನೆನ್ನಿಸಿಕೊಂಡ!

732

ಹುಟ್ಟಿದ ಮಕ್ಕಳೆಲ್ಲ ಅರ್ಥ ಪ್ರಾಣ ಅಭಿಮಾನಕ್ಕೆ
ಒಡೆಯರಾದ ಪರಿಯ ನೋಡಾ.
ಅಟ್ಟಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ!
ಕೂಡಲಸಂಗಮದೇವಯ್ಯಾ , ನಿಮಗೆಂದಟ್ಟಡಿಗೆಯ
ನೀಡ ಕಲಿಸಿದಾತ ಕೆಂಭಾವಿಯ ಭೋಗಯ್ಯಾ .

ತನುವಿನಲ್ಲಿ ಹುಟ್ಟಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಮಕ್ಕಳು ಅರ್ಥ ಪ್ರಾಣ ಅಭಿಮಾನಕ್ಕೆ ಒಡೆಯರಾದರು.

ಕಣ್ಣಿನಲ್ಲಿ ಹುಟ್ಟಿದ ಕಾಮವೆಂಬ ಮಗ ನೋಡುವ ರುಚಿಯನ್ನು ಕಲಿತ. ನೋಡಿದ್ದನ್ನು ಬೇಡಿ ಅನುಭವಿಸುವ ರುಚಿಯನ್ನು ತನುವಿಗೆ ಕಲಿಸಿದ. ನೋಡುವ ವಸ್ತುವಿನಲ್ಲಿ ವಿಷವೂ ಇದೆ;

ಅಮೃತವೂ ಇದೆ. ಅನಾವರಣ ಮಾಡಿ ನೋಡುವ ಶಕ್ತಿ ಅರಿವಿಗೆ ಮಾತ್ರ ಇದೆ. ಕಣ್ಣಿನ ಅರಿವು ಅಮೃತ ಸವಿದರೆ ಕಣ್ಣನ್ನು ಆವರಿಸಿದ ಮನ ವಿಷ ಸವಿಯುತ್ತದೆ. ಚಿನ್ನದ ಬಣ್ಣ ವಿಷವಾದರೆ, ಬಣ್ಣ ಕಳೆದ ಲೋಹ ಅಮೃತ !

ಚಿನ್ನದ ಬಣ್ಣ ನೋಡಿದ ಮನ ಕೊಳ್ಳಲು, ಕದಿಯಲು ತನುವಿಗೆ ಆದೇಶ ನೀಡುತ್ತದೆ. ಲೋಹ ನೋಡಿದ ಅರಿವು ಕೊಳ್ಳದಂತೆ ಕದಿಯದಂತೆ ತನುವಿಗೆ ಆದೇಶ ನೀಡುತ್ತದೆ. ಪಾಲಿಸಿದ ತನು ವಿಷವನ್ನು ಅರಿವಿಗೆ ಕೊಟ್ಟು ಅಮೃತವನ್ನು ತಾನುಣ್ಣುತ್ತದೆ !

ಕೆಂಬಾವಿಯ ಭೋಗಯ್ಯ ಅಜ್ಞಾನದ ವಿಷದ ಅಡಿಗೆಯನ್ನು ಶಿವನಿಗಿತ್ತು ಜ್ಞಾನದ ಅರಿವಿನ ಅಡಿಗೆಯನ್ನು ತಾನುಣ್ಣುವ ಅರಿವಿನ ಶಿಕ್ಷಣ ಕಲಿತ ನಿಪುಣ. ಈತ ಈಗಿನ ಯಾದಗಿರಿ ಜಿಲ್ಲೆಯ ಕೆಂಭಾವಿಯಾತ.

ಕರುವೊಂದು ಸತ್ತು ಬಿದ್ದಿತ್ತು . ಸತ್ತುದನೆಳೆವವ ನೆತ್ತಣ ಹೊಲೆಯ? ಹೊತ್ತು ತಂದು ಕೊಲುವಿರಿ ನೀವು! ಎನ್ನುವ ಸೂತ್ರ ಅರಿತ ಬ್ರಾಹ್ಮಣನೀತ. ಬ್ರಾಹ್ಮಣ್ಯವನ್ನು ಕಳೆದುಕೊಂಡು ಬ್ರಹ್ಮನೇ ಆದಾತ. ಸಸ್ಯ ತಿಂದರೂ ಮಾಂಸವಾಗುತ್ತದೆ; ಮಾಂಸ ತಿಂದರೂ ಮಾಂಸವಾಗುತ್ತದೆ. ಬದುಕಿದ ಕರುವನ್ನು ಕೊಂದು ತಿನ್ನುವುದು ವಿಷ. ಸತ್ತ ಹಸುವಿನ ಕರುವನ್ನು ತನುವಿನ ಹಸಿವಿಗೆ ಅರ್ಪಿಸುವುದು ಅಮೃತ!

'ಕುರಿ ಕೋಳಿ ಕಿರಿ ಮೀನು ತಿಂಬವವರನೆಲ್ಲ ಕುಲಜರೆಂಬರು. ಶಿವನಿಗೆ ಪಂಚಾಮೃತವ ಕರೆವ ಪಶುವ ತಿಂಬುವವನ ಮಾದಿಗನೆಂಬರು. ಬ್ರಾಹ್ಮಣರುಂಡ ಪುಲ್ಲಿಗೆ ನಾಯಿಗೆ ಶೋಭಿತವಾಯಿತು. ಮಾದಿಗನುಂಡ ಪುಲ್ಲಿಗೆ ಬ್ರಾಹ್ಮಣಂಗೆ ಶೋಭಿತವಾಯಿತ್ತು . ಅದೆಂತೆಂದೊಡೆ: ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು. ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರನಿಗೆ ನಾಯಕ ನರಕ ತಪ್ಪದು' ಎಂದು ಶರಣೆ ಕಾಳವ್ವೆ ಹೇಳಿದ್ದಾಳೆ.

ಕುಲಜರು ಉಂಡ ಎಲೆ ಬೀಸಾಡಿದಾಗ ಅದನ್ನು ನಾಯಿ ನೆಕ್ಕುತ್ತದೆ. ಮಾದಿಗ ಸತ್ತ ಹಸುವಿನ ಮಾಂಸ ಚರ್ಮದಿಂದ ಬಿಡಿಸಿ ಉಣ್ಣುತ್ತಾನೆ. ಆ ಚರ್ಮದ ಎಲೆಯಲ್ಲಿ (ಸಿದ್ದಲಿಕೆ) ತುಪ್ಪದ ಚೀಲ, ನೀರೆತ್ತುವ ಚೀಲ (ಸಗ್ಗಳೆ) ಮಾಡುತ್ತಾನೆ. ಸಿದ್ದಲಿಕೆಯ ತುಪ್ಪವನು ಸಗ್ಗಳೆಯ ನೀರನು ಶುದ್ದವೆಂದು ಕುಡಿಯುವ ಕುಲಜರಿಗೆ ನಾಯಕ ನರಕ ತಪ್ಪದು. ಕುಲಜರೆನ್ನಿಸಿಕೊಳ್ಳುವ ಇವರು ನಿತ್ಯ ನಿತ್ಯ ವಿಷವನ್ನೇ ಉಣ್ಣುತ್ತಾರೆ. ವಿಷವನ್ನು ಅರಿವಿಗೆ ನೀಡುವ ಸೂತ್ರ ಕುಲಜರಿಗೆ ಹೊಳೆಯುವುದೇ ಇಲ್ಲ. ಮಾದಿಗನುಂಡ ಎಲೆ ಕುಲಜರಿಗೆ ಸೀಮಿತವಾಯಿತು.

ಕೆಂಬಾವಿಯ ಭೋಗಯ್ಯ ಸಮಾಜದ ಅಜ್ಞಾನದ ವಿಷವನು ಅರಿವಿಗೆ ಉಣ್ಣಿಸಿದ. ಅರಿವಿನ ಅಮೃತದ ಉಟವಾನು ತಾ ಮಾಡಿ ಮಹಾಶರಣನಾದ. ಅರಿವಿನ ಅಮೃತದ ಅಟ್ಟಡಿಗೆಯನು ಜ್ಞಾನಿ ಜಿಜ್ಞಾಸುಗಳಿಗೆ ನೀಡ ಕಲಿಸಿದಾತ ಕೆಂಬಾವಿಯ ಭೋಗಯ್ಯನೆಂದು ಬಸವಣ್ಣನವರು ಪ್ರಮಾಣಪತ್ರ ನೀಡಿದ್ದಾರೆ.

733

ಅಂಗದ ಮೇಲಣ ಲಿಂಗ ಹಿಂಗಿ ಬಂದ ಸುಖವನಾರಿಗರ್ಪಿಸುವೆ ?
ಹಿಂಗಲಾಗದು ಭಕ್ತಿ ಪಥಕ್ಕೆ ಸಲ್ಲದಾಗಿ !

ಹಿಂಗಲಾಗದು ಶಿವಶರಣ ಪಥಕ್ಕೆ ಸಲ್ಲದಾಗಿ !
ಕೂಡಲಸಂಗಮದೇವಾ ಹಿಂಗಿನುಂಗಿದುಗುಳು ಕಿಲ್ಬಿಷ !

ಅಂಗದಲ್ಲಿರುವ ಅರಿವೆಂಬ ಲಿಂಗದ ಸುಖವನ್ನು ಮನ ಅರಿಯದಿದ್ದರೆ ಅದು ಯಾರಿಗೂ ಅರ್ಪಣೆಯಾಗುವುದಿಲ್ಲ. ಅಂಗದ ಸುಖಕ್ಕಾಗಿ ಮನ ಅರಿವಿನ ಮಾತು ಕಡೆಗಣಿಸುತ್ತದೆ. ಅಜ್ಞಾನದ ಸುಖ ಭೋಗಿಸಿ ದುಃಖ ತಂದುಕೊಳ್ಳುತ್ತದೆ. ಅಜ್ಞಾನ ಅರಿವಿನಲ್ಲಿ ಹಿಂಗಿ ಜ್ಞಾನದ ಸುಖ ಮನಕ್ಕೆ ಅರಿವು ಧಾರಾಕಾರವಾಗಿ ಎರೆಯುವುದನ್ನು ಮನ ಅರಿಯದೆ ಹೋಗುತ್ತದೆ. ಹಿಂಗಲಾರದ ಅಜ್ಞಾನ ಅರಿವಿನ ಪಥಕ್ಕೆ ಸಲ್ಲದು, ಹಿಂಗಲಾರದ ಅಜ್ಞಾನ ಶಿವಶರಣರ ಪಥಕ್ಕೂ ಸಲ್ಲದು.

ಕೂಡಲಸಂಗಮದೇವರ ಹಿಂಗಿನುಂಗಿದುಗುಳು ಕಿಲ್ಬಿಷ :

ವೇದ ಶಾಸ್ತ್ರ ಪುರಾಣ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳಿಂದ ಸಂಗ್ರಹ ಮಾಡಿಕೊಂಡ ಅರಿವು ಅರಿವಾದರೂ ಅದು ತನ್ನರಿವಲ್ಲ. ನುಡಿಯಲು ಬಂದು ನಡೆಯಲು ಬಾರದ ಅರಿವು ಕ್ರಿಷ್ಣನದಾದರೇನು, ಕ್ರಿಸ್ತನದಾದರೇನು? ಅದು ಅರಿವಲ್ಲ ಕಿಲ್ಬಿಷ!

ಅರಿವಿನ ಕಾವಿ ಧರಿಸಿ ನುಡಿಯಲು ಬಂತು, ನುಡಿದುದನು ಕುಳಿತು ಕೇಳಲು ಬಂತು; ಆದರೆ ನಡೆಯಲು ಬರಲಿಲ್ಲ. ನುಡಿಯಲು, ಕೇಳಲು ಬಂದು ನಡೆಯಲು ಬಾರದ ಅರಿವು ಅರಿವಲ್ಲ; ಕಿಲ್ಬಿಷ. ತನುವಿನಲಿ ಉಂಟಾದ ಕಿಲ್ಬಿಷ ಅರಿವಿಗೆ ಅರ್ಪಣೆಯಾಗಿ ತನುವಿಗೆ ಅರಿವಿನ ಅಮೃತ ಬಳಕೆಯಾದುದೇ ಅಜ್ಞಾನವನ್ನು ಲಿಂಗ ಹಿಂಗಿ ಲಿಂಗದಿಂದ ಹೊರಬಂದ ಸುಖ.

734

ಬತ್ತೀಸಾಯುಧದಲ್ಲಿ ಅಭ್ಯಾಸವ ಮಾಡಿದಡೇನು?
ಹಗೆಯ ಕೊಲುವಡೆ ಒಂದಲಗು ಸಾಲದೆ?
ಲಿಂಗವ ಗೆಲುವಡೆ, ಶರಣಸತಿ ಲಿಂಗಪತಿಯೆಂಬುದೊಂದಲಗು ಸಾಲದೆ?
ಎನಗೆಯೂ ನಿನಗೆಯೂ ಜಂಗಮಪ್ರಸಾದವೆಂಬ ಅಲಗು ಸಾಲದೆ?
ಕೂಡಲಸಂಗಮದೇವಾ.

ಮೂವತ್ತೆರಡು ಆಯುಧಗಳಿಂದ ಅಭ್ಯಾಸವ ಮಾಡಿದಡೇನು? ಹಗೆಯ ಕೊಲುವಡೆ ಒಂದಲಗು ಸಾಕು. ಮೂವತ್ತೆರಡು ಹಲ್ಲುಗಳನ್ನು ಬಳಸಿಕೊಂಡು ವೇದ ಪುರಾಣ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್ ಮುಂತಾದ ಗ್ರಂಥಗಳನ್ನು ಅಭ್ಯಾಸ ಮಾಡಿದರೂ ತನುವಿನಲ್ಲಿಯೇ ತನ್ಮಯವಾದ ಅಖಂಡ ಅರಿವಿನ ಜ್ಞಾನವೊಂದು ಒಲಿಯದಿದ್ದರೆ ಅಜ್ಞಾನದ ಒಂದಲಗು ಸಾಕು; ಹಗೆಯ ಕೊಲುವಡೆ!

ಲಿಂಗವ ಗೆಲುವಡೆ ಶರಣಸತಿ ಲಿಂಗಪತಿಯೆಂಬುದೊಂದಲಗು ಸಾಲದೆ:

ಮನ ಅಂಗದ ಕಣ ಕಣದಲ್ಲಿರುವ ಅರಿವೆಂಬ ಲಿಂಗವನು ಗೆಲ್ಲಲೇಬೇಕು. ಅದಕ್ಕಾಗಿ ಮನ ಸತಿಯಾಗಿ ಲಿಂಗಕ್ಕೆ ಶರಣು ಹೋಗಿ ಶರಣನಾಗಬೇಕು. ಆಗ ಲಿಂಗ ಪತಿಯಾಗಿ ಸತಿಯೆಂಬ ಮನವನ್ನು ಆಲಿಂಗಿಸಿಕೊಳ್ಳುತ್ತದೆ.

ಶರಣಸತಿ ಲಿಂಗ ಪತಿಯೆಂಬ ಒಂದಲಗ ಹಿಡಿದು ತನುವಿನ ಅರಿಷಡ್ವರ್ಗವೆಂಬ ಅಜ್ಞಾ

ನದ ಹಗೆಯನು ಸರಳವಾಗಿ ಕೊಲ್ಲಬಹುದು.

ತನುವಿಗೂ ತನುವಿನ ಮನಕ್ಕೂ ಜಂಗಮ ಪ್ರಸಾದವೆಂಬ ಒಂದಲಗು ಸಾಕು. ಮನಕ್ಕೆ ಜ್ಞಾನ ಅಜ್ಞಾನವೆಂಬುದು ತಿಳಿಯುತ್ತದೆ. ಆದರೆ ಸದಾ ಜ್ಞಾನದಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ. ಮನ ಘನಮನವಾದಾಗ ಅಂಗದಲ್ಲಿಯೇ ಸಂಗಮವಾದ ಜಂಗಮ ಅಜ್ಞಾನವನ್ನು ಹಿಂಗಿ ಜ್ಞಾನದ ಹಾದಿ ಸುಗಮಗೊಳಿಸುತ್ತಾನೆ. ಇದು ಲಿಂಗಾಂಗದ ಶಿಕ್ಷಣ!

ಮಾಹೇಶ್ವರನ ಪ್ರಾಣಲಿಂಗಿಸ್ಥಲ

735

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ,
ಒಲ್ಲೆನಯ್ಯಾ ಪರಸತಿಯರ ಸಂಗವೇ;
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ!
ಬಳ್ಳದ ಬಾಯಂತೆ ಒಂದೆ ಮನವ ಮಾಡಿ
ನಿಲ್ಲೆಂದು ನಿಲಿಸಯ್ಯಾ , ಕೂಡಲಸಂಗಮದೇವಾ.

ಮನ ರುಚಿಯ ಸೂತ್ರವನು ಅರಿತರೆ ಬಾಯಿ ಚಪಲಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಅಂಗದ ಸುಖಕ್ಕಾಗಿ ಪರಸತಿಯರನ್ನು ಬಯಸುವುದಿಲ್ಲ. ಮುಂದೆ ತೊಡಕುಂಟೆಂಬುದನು ತನಗೆ ತಾನೇ ತಿಳಿಯುತ್ತದೆ.

ಪರಸತಿ: ಮನವೆಂಬುದೇ ಒಂದು ಸತಿ; ಅದು ಹೆಣ್ಣು. ಆದರೂ ಅಂಗದ ಸುಖಕ್ಕಾಗಿ ಮತ್ತೊಂದು ಹೆಣ್ಣನ್ನು ಬೇಡುತ್ತದೆ. ಹೆಣ್ಣು ಹೆಣ್ಣು ಕೂಡುವ ಕೂಟವದು ಕೂಡಿ ಅಗಲುವ ಕೂಟ.

ಲಿಂಗಪತಿ: ಅರಿವೆಂಬುದು ಲಿಂಗ. ಅದನ್ನು ಪುರುಷ ಎನ್ನುತ್ತಾರೆ. ಮನ ಸತಿಯಾಗಿ ಲಿಂಗಪತಿಯನ್ನು ಕೂಡುವ ಕೂಟವದು ಕೂಡದ ಅಗಲದ ಅರಿವಿನ ಕೂಟ! ಈ ಕೂಟಕ್ಕೆ ಸಮಾಜದ ಮಾನ್ಯತೆ ಇದೆ. ಈ ಅರಿವಿನ ಕೂಟವನು ಬಲ್ಲ ಸತಿ ಮಾತ್ರ ಪರಸತಿಯರ ಸಂಗವನು ಒಲ್ಲಳು.

ಮತ್ತೊಂದು ಅರಿವಿನ ಅಂಗ ಬೇಕೆನಿಸಿದಾಗ ಮಾತ್ರ ಒಡಂಬಡಿಕೆಯಾದ ಅಂಗದೊಂದಿಗೆ ಕೂಡಿ ಅರಿವಿನ ಮತ್ತೊಂದು ಅಂಗವನು ಪಡೆಯಬಹುದು. ಇದೊಂದು ಬಯಲ ಬೀಜದ ಪ್ರಸರಣ. ಅರಿತ ಶರಣರಿಗೆ ಅರಿವಿನ ಕ್ರಿಯೆಯಿದು. ಈ ಕ್ರಿಯೆಯ ರುಚಿ ಅಜ್ಞಾನಿ ಮನದಲ್ಲಿ ಸಂಗ್ರಹವಾಗಿ ಕೂಟಕ್ಕಾಗಿ ಮತ್ತೆ ಮತ್ತೆ ಆಸೆ ಪಡುತ್ತದೆ. ಮನ ಸ್ವತಹ ಸತಿಯಾಗಿದ್ದು ಪರಸತಿಯರ ಸಂಗ ಮಾಡುವುದೆಂದರೆ ಹಾಸ್ಯಸ್ಪದವೇ ಸರಿ. ರುಚಿಗಾಗಿ ಅಂಗದ ಸಂಗ ಮಾಡುವುದು ಅಜ್ಞಾನವೇ ಸರಿ. ಮುಂದೆ ತೊಡಕುಂಟೆಂಬುದು ಅಜ್ಞಾನಿ ಮನಕ್ಕೆ ತಿಳಿಯದು. ಅರಿವಿನತ್ತ ಮುಖ ಮಾಡಿದ ಮನಕ್ಕೆ ತಿಳಿಯದೇ ಇರದು.

ಅಳೆಯುವ ಬಳ್ಳಕ್ಕೆ ಒಂದೇ ಬಾಯಿ. ಅಜ್ಞಾನಿ ಮನಕ್ಕೆ ಹಲವಾರು ಬಾಯಿ. ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲಿಸು ತಂದೆ ಎಂದು ಅಂಗವನ್ನು ಆವರಿಸಿದ

ಮನ, ಅಂಗದಲಿಯೇ ಸಂಗಮವಾದ ಸಂಗಯ್ಯನನ್ನು ಬೇಡಬೇಕು.

736

ಆನೆ ಅಂಕುಶಕ್ಕೆ ಅಂಜುವುದೆ, ಅಯ್ಯಾ,
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ?
ಆನೀ ಬಿಜ್ಜಳಂಗಂಜುವೆನೆ, ಅಯ್ಯಾ ಕೂಡಲಸಂಗಮದೇವಾ,
ನೀನು ಸರ್ವ ಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ!

ಆನೀ ಬಿಜ್ಜಳಂಗಂಜುವೆನೆ, ಅಯ್ಯಾ ಕೂಡಲಸಂಗಮದೇವಾ ನೀನು ಸರ್ವಜೀವದಯಾ ಪಾರಿಯಾದ ಕಾರಣ ನಿನಗಂಜುವೆನಲ್ಲದೆ:

ಮಹಾಜ್ಞಾನಿ ನಿರ್ಭಯಿ. ಸಾಮ್ರಾಟ, ಚಕ್ರವರ್ತಿಗೆ ಅನೇಕ ಸೈನಿಕರು ಅಂಗರಕ್ಷಕರು ಇದ್ದರೂ ಆತ ಭಯಗ್ರಸ್ತ.ರಾಜ್ಯ ಭಯ, ಮರಣ ಭಯ ,ಸಿಂಹಾಸನ ಭಯ, ಯುದ್ಧ ಭಯ ದಿಂದ ಕ್ಷಣ ಕ್ಷಣಕ್ಕೂ ತಲ್ಲಣಗೊಳ್ಳುತ್ತಾನೆ. ಹಗಲಿರುಳು ಅದೇ ಚಿಂತೆಯಲ್ಲಿ ಕಾಲಕಳೆಯುತ್ತಾನೆ.

ಜ್ಞಾನಿಗೆ ಜನನ ಮರಣಗಳ ಭಯವಿಲ್ಲ. ರೋಗ ರುಜನಿಗಳ ಭಯವಿಲ್ಲ. ಅಧಿಕಾರ ಹಣದ ಭಯವಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಮಾತ್ರ ಅಂಜುತ್ತಾನೆ. ಆತ ತನಗೊಂದೆ ಅಲ್ಲ; ಸರ್ವಜೀವಗಳಿಗೆ ದಯವನ್ನು ತೋರಿಸುವ ಗುರುದೇವನೇ ಆಗಿದ್ದಾನೆ. ಅಂಗದೊಳಗೆ ಸಂಗಮವಾಗಿ ಅಂಗ ಸೋಂಕಿಲ್ಲದೆ ಅಂಗವನ್ನೇ ಬೆಳಗುತ್ತಾನೆ.

737

ಬಂದೆಹೆನೆಂದು ಬಾರದೆ ಇದ್ದಡೆ, ಬಟ್ಟೆಗಳ ನೋಡುತ್ತಿದ್ದೇನಯ್ಯಾ.
ಇನ್ನಾರನಟ್ಟುವೆ, ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯಾ?
ಕೂಡಲಸಂಗನ ಶರಣರು ಬಾರದಿದ್ದಡೆ
ಅಟ್ಟುವೆನೆನ್ನ ಪ್ರಾಣವನು!

ಕೊಟ್ಟಿಗೆಯಲ್ಲಿದ್ದ ಹಸು ತಾಯಿಯ ನಿರೀಕ್ಷಿಸುವಂತೆ, ಬಂದಾನೋ ಬಾರನೋ ಎಂದು ಶರಣ ಬರುವ ದಾರಿ ಹಿಡಿದು ನೋಡುವ ಆತನಿಗಾಗಿ ನಿತ್ಯ ನಿತ್ಯ ಹಂಬಲಿಸುವ ಸಂಬಂಧವದು ಅವಿನಾಭಾವ ಸಂಬಂಧ. ಹಸು ಕರುವಿನ ಸಂಬಂಧ. ತಾಯಿ ಮಗುವಿನ ಸಂಬಂಧ. ಹೂ ಮತ್ತು ದುಂಬಿಯ ಸಂಬಂಧ.

ಬೆಳ್ಳಿ ಬಟ್ಟಲಲ್ಲಿ ಹಾಲು ಅನ್ನ ಕಲಿಸಿಕೊಂಡು ಮಗುವಿಗೆ ಚಂದ್ರ ಚುಕ್ಕಿಯ ತೋರಿ ಬೆನ್ನು ಬಿದ್ದು ಉಣ್ಣಿಸುವಾಗ ಉಣ್ಣದೆ ಓಡುವ ಮಗುವಿನ ಅಜ್ಞಾನ ಬಾಲ್ಯದಲ್ಲಿ ಅರ್ಥವಾಗುವುದೇ ಇಲ್ಲ. ಮಗು ಸಧೃಡವಾಗಲಿ ಎಂದು ಆಶಿಸುವ ತಾಯಿ ಕರುಳಿನ ಪ್ರೇಮ ತಿಳಿಯುವುದೇ ಇಲ್ಲ. ಹಾ ಗೆಯೇ ಗುರು ಶಿಷ್ಯನನ್ನು ಹತ್ತಿರ ಕರೆದು ಜ್ಞಾನದ ತುತ್ತು ಮಾಡಿ ಹಗಲಿರುಳೆನ್ನದೆ ಉಣ್ಣಿಸುವಾಗ ಶಿಷ್ಯನಿಗೆ ತಿಳಿಯುವುದೇ ಇಲ್ಲ. ಆತ ತನ್ನನ್ನು ಬಿಟ್ಟು ಬಹುದೂರ ಹೋದಾಗ ಆತನಿಗಾಗಿ ಹಗ

ಲಿರುಳೆನ್ನದೆ ಪರಿತಪಿಸುವುದನ್ನು ಬಿಡುವುದಿಲ್ಲ.

ಎಡದ ಕೈಯಲು ಹಾಲಬಟ್ಟಲು ಬಲದ ಕೈಯಲು ಓಜುಗಟ್ಟಿಗೆ ; ಆವಾಗ ಬಂದಾನೋ ನಮ್ಮಯ್ಯ ಬಡಿದು ಹಾಲ ಕುಡಿಸುವ ತಂದೆ ? ಕೂಡಲಸಂಗಮದೇವಯ್ಯ ತಾನೆ ಭಕ್ತಿ ಪಥವ ತೋರುವ ತಂದೆ !

ಗುರುದೇವನೇ ! ನಿನ್ನ ಅಗಲುವಿಕೆಯಿಂದಾದ ನೋವನು ಇನ್ನಾರಿಗೆ ಹೇಳಲಿ? ಬರುವೆನೆಂದು ಹೇಳಿ ಬಾರದೆ ಇದ್ದಡೆ ಆ ನೋವನು ಹೇಗೆ ಸಹಿಸಲಿ ? ನೀವು ಹೇಳಿದ ಕನಿಕರದ ಮಾತುಗಳು ಯಾವ ಪುಸ್ತಕದಲ್ಲಿಯೂ ಸಿಗಲಿಲ್ಲ ತಂದೆ ? ನೀನು ಬಾರದಿದ್ದರೆ ನಾನು ಯಾವ ದಾರಿಯಲ್ಲಿ ಹುಡುಕಲಿ? ತುತ್ತು ಮಾಡಿ ಉಣಿಸುವಾಗ ಉಣಲಿಲ್ಲ. ಉಣ್ಣುವ ಬಯ ಕೆಯಾದಾಗ ಮತ್ತೆ ಬರುವೆನೆಂದು ಹೇಳಿ ಬಾರದಿದ್ದಡೆ ಹೇಗೆ ತಂದೆ ? ನಿನ್ನ ಬರುವಿಕೆಗಾಗಿ ಇನ್ನಾರನಟ್ಟಲಿ? ಇನ್ನಾರ ಪಾದವ ಹಿಡಿಯಲಿ ತಂದೆ ? ನಿನಗಾರಾದರೂ ಸರಿಯೇ? ಅಟ್ಟುವೆನೆನ್ನ ಪ್ರಾಣವನು!

ಮಾಹೇಶ್ವರನ ಶರಣಸ್ಥಲ

738

ಅರಸರು ಎನ್ನ ಮಂಚಕ್ಕೆ ಬರಿಸಿ ಎನ್ನ ಬೆರಸಿದ ಬಳಿಕ
ಆನಂಜುವಳೆ? ಆನು ಸಿರಿಯಕ್ಕನೇ.
ಪರುಷ ಮುಟ್ಟಿದ ಬಳಿಕ ಲೋಹವೆ?
ಕೂಡಲಸಂಗಮದೇವ, ಎನ್ನನೊಲ್ಲದಡಾನು ಬದುಕುವೆನೆ ?

ಮಹಾಜ್ಞಾನವೆಂಬುದೇ ಅರಸ; ಮನವೆಂಬುದೇ ಹೆಣ್ಣು. ಜ್ಞಾನವೆಂಬುದೇ ಪತಿ; ಮನವೆಂಬುದೇ ಸತಿ. ಜ್ಞಾನವೆಂಬುದೇ ಗುರು; ಮನವೆಂಬುದೇ ಶಿಷ್ಯ. ಜ್ಞಾನವೆಂಬುದೇ ಸಖ; ಮನವೆಂಬುದೇ ಸಖಿ. ರಾಧೆ-ಕೃಷ್ಣ ಎರಡಂಗಗಳಲ್ಲ; ಒಂದೇ ಅಂಗ. ಕೃಷ್ಣ ಜ್ಞಾನವೆಂಬ ಸಖ ನಾದರೆ; ರಾಧೆ ಮನವೆಂಬ ಸಖಿ. ಕೃಷ್ಣ ರುಕ್ಮಿಣಿಯರು ಬೇರ್ಪಡಬಹುದು. ರಾಧೆ-ಕೃಷ್ಣರು ಬೇರ್ಪಡಲು ಸಾಧ್ಯವಿಲ್ಲ. ಏಕೆಂದರೆ ಅವರಿಬ್ಬರೂ ಒಬ್ಬರೇ ಆಗಿದ್ದಾರೆ.

ಜ್ಞಾನದ ಗಂಡನನ್ನು ಹೇಗೆ ತನ್ನವನನ್ನಾಗಿ ಮಾಡಿಕೊಳ್ಳಬಹುದು ಅಥವಾ ಗಂಡನೇ ತನಗಾಗಿ ಮೀಸಲಿದ್ದ ಹೆಣ್ಣನ್ನು ಹೇಗೆ ಬರಸೆಳೆದು ಅಪ್ಪಿಕೊಳ್ಳಬಹುದು ಎಂಬುದನ್ನು ಬಸವಣ್ಣನ ವರು ಈ ನಾಲ್ಕು ಸಾಲಿನ ಸೂತ್ರವನ್ನು ಓದುಗರಿಗೆ ನೀಡಿದ್ದಾರೆ.

ಅರಸ ಮಂಚಕ್ಕೆ ಬರಿಸಿ ಬರಸೆಳೆದು ಬೆರಸಿದ ಬಳಿಕ ಆ ಹೆಣ್ಣು ಸಿರಿವಂತಳೆ. ಅವಳನ್ನು ನೋಡುವ ವಿಧಾನವೇ ಬೇರೆ. ಸಖ ಸಖಿಯೊಂದಿಗೆ ಒಂದಾದಂತೆ ! ಸಖಿ ಇನ್ನು ನಿಶ್ಚಿಂತಳು. ಸಂಪೂರ್ಣ ಜ್ಞಾನದ ಸುಖ ಸಿಕ್ಕ ಮೇಲೆ ತನ್ನ ಸಕಲ ಚಾಂಚಲ್ಯವನ್ನು ಕಳೆದುಕೊಂಡು ಸಖಿ ಸುಖದ ಸುಖಿಯಾಗುತ್ತಾಳೆ.

ಪರುಷ ಮುಟ್ಟಿದ ಮೇಲೆ ಲೋಹ ಚಿನ್ನವಾಗುತ್ತದೆ. ಅದು ಪುನಹ

ಲೋಗವಾಗುವುದಿಲ್ಲ. ಪರುಷದ ಚುಂಬಕ ಗುಣವೇ ಹಾಗೆ ಲೋಹವನ್ನೆಲ್ಲಾ ಆವಲೋಹ ಮಾಡುವುದು.

ಅಂಗದಲ್ಲಿಯೇ ಸಂಗಮವಾದ ಅರಿವು ಅಂಗಕ್ಕೆ , ಅಂಗವನ್ನು ಆವರಿಸಿದ ಮನಕ್ಕೆ ದೊರೆಯದಿದ್ದರೆ ಅಂಗ ಬದುಕಿಯೂ ಸತ್ತಂತೆ. ಅದು ಜ್ಞಾನಾಂಗವಾಗಿ ಉಳಿಯುವುದಿಲ್ಲ. ಕ್ಷಣ ಕ್ಷಣಕ್ಕೂ ಜ್ಞಾನ ಮನವನ್ನು ಅಪ್ಪಿಕೊಳ್ಳಬೇಕೆಂದು ಹತ್ತಿರ ಬಂದಂತೆಲ್ಲ ಮನ ಜ್ಞಾನವನ್ನು ಕೊಡವಿ ಬಹುದೂರ ಸರಿಯುತ್ತದೆ. ಅಂಗ ನೂರು ವರ್ಷದ ಪರ್ಯಂತ ಪ್ರಯತ್ನಿಸಿದರೂ ಫಲಿಸದಿದ್ದರೆ ಜ್ಞಾನವಾದರೂ ಏನು ಮಾಡೀತು? ಅಂಗ ಬಿಟ್ಟು ದೂರ ಸರಿಯುತ್ತದೆ. ಮನ ಸಂಗಮದ ಕೂಟವನರಿಯದೆ ತನು ಸಾವಿಗೆ ಹತ್ತಿರವಾಗುತ್ತದೆ.

739

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ: ಗರುವತನವೆ ?
ದಾಸನ ವಸ್ತ್ರವನುಡುವುದೊಂದು ಗರುವತನವೆ !
ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ !
ಬಲ್ಲಾಳನ ವಧುವ ಬೇಡುವುದೊಂದು ಗರುವತನವೆ !
ಕೋಡಗವ ಹುಲ್ಲಲಿ ಮುಸುಂಕಿದಂತೆ
ಕೂಡಲಸಂಮದೇವ, ನಿನ್ನ ಪರಿ !

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೆ ಮನವೆಂಬ ಕೋಡಗವನ್ನು ಪರೀಕ್ಷಿಸುವ ನಿನ್ನ ವಿಧಾನವು ಸರಿಯೇ? ಅಂಗದಲ್ಲಿಯೇ ಸಂಗಮವಾದ ನಿನಗೂ, ಅಂಗವನ್ನೇ ಆವರಿಸಿದ ಮನಕ್ಕೂ, ನಿಮ್ಮಿಬ್ಬರನ್ನೂ ತನ್ನ ಗರ್ಭದಲ್ಲಿಯೇ ಬಂಧಿಸಿಕೊಂಡ ಅಂಗಕ್ಕೂ ಬಹಳ ದೂರವಿದೆಯೆ? ಸಂಪರ್ಕವೇ ಇಲ್ಲದಷ್ಟು , ಶಬ್ದವೇ ಕೇಳದಷ್ಟು ದೂರವಿದೆಯೆ? ನೀನು ಇಚ್ಛಿಸಿದರೆ ಕೂಡಲೇ ಮರ್ಕಟವನ್ನು ಕೊಂದು ಮನವನ್ನು ನಿನ್ನಂತೆ ಮಾಡಿಕೊಳ್ಳಬಹುದು. ಹೀಗೆ ಮಾಡಲು ನಿನಗೇನು ಅಡ್ಡಿ?

ದಾಸೀಮಾರ್ಯರನ್ನು ವಸ್ತ್ರ ಬೇಡಿ ಪಡೆಯುವದೊಂದು ಹೆಗ್ಗಳಿಕೆಯೆ? ಆ ವಸ್ತ್ರವನು ಪಡೆದು ಉಡುವುದೊಂದು ನಿನಗೆ ಹೆಗ್ಗಳಿಕೆಯೆ? ಪಶುವಿನ ಚರ್ಮ ಕಿತ್ತಿ ಉಟ್ಟ ನೀನು ಪಶುಪತಿಯೇ ಆದೆ. ಚರ್ಮಾಂಬರಿಯೇ ಎನ್ನಿಸಿಕೊಂಡೆ. ಪುನಹ ನಿನಗೆ ದಾಸ ನೇಯ್ದ ವಸ್ತ್ರ ಬೇಡಿ ಪರೀಕ್ಷಿಸಬೇಕೆಂಬ ಬಯಕೆಯಾಯಿತೆ? ನಿನ್ನ ಬಯಕೆಯೇ ವಿಚಿತ್ರ! ನಿನ್ನ ಪರೀಕ್ಷೆಯೇ ವಿಚಿತ್ರ!

ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ!

ಅಂದು ಪಾರ್ವತಿಯ ಮಗನ ಬೇಡಿ ಗಣೇಶನ ಮಾಡಿದೆ. ಮತ್ತೊಬ್ಬ ಮಗನ ಬೇಡಿ ಷಣ್ಮುಖನ ಮಾಡಿದೆ. ವಿಷ್ಣುವಿನ ಮಗ ಮನ್ಮಥನನ್ನು ಕೊಂದು ಕಾಮನನ್ನು ಬದುಕಿಸಿದೆ. ಪುನಹ ಸಿರಿಯಾಳ ಚಂಗಳೆಯರ ಮಗ ಚೀಲಾಳನನ್ನು ಬೇಡುವುದೊಂದು ನಿನಗೆ ಹಿರಿತನವೆ?

ಬಲ್ಲಾಳನ ವಧುವ ಬೇಡುವುದೊಂದು ಗರುವತನವೆ:

ಹಾರುವವಳನ್ನು ವರಿಸಿ ಅರ್ಧಾಂಗಿಯನ್ನಾಗಿಸಿಕೊಂಡೆ. ಗಂಗೆಯನ್ನು ವರಿಸಿ ಗಂಗಾಧರನೆನ್ನಿಸಿಕೊಂಡೆ. ಮನವೆಂಬ ನಾರಿಯನ್ನು ಘನವೆಂಬ ಈಶ್ವರನನ್ನು ಅರ್ಧರ್ಧ ಮಾಡಿ

ಅರ್ಧನಾರೀಶ್ವರನೆನ್ನಿಸಿಕೊಂಡೆ. ನಿನಗಿದು ಸುಲಭವಾಯಿತು! ಇತರರಿಗೇಕೆ ತೊಂದರೆ ಕೊಡುವೆ? ಬಲ್ಲಾಳನ ವಧುವ ಬೇಡಿದೆ; ಕೊಟ್ಟು ಧನ್ಯನಾದ. ಇತರರಿಗೆ ಇದು ಸಾಧ್ಯವೇ? ವಧುವ ಬೇಡುವುದೊಂದು ನಿನಗೆ ಹೆಗ್ಗಳಿಕೆಯೆ?

ಕೋಡಗವ ಹುಲ್ಲಲಿ ಮುಸುಂಕಿದಂತೆ ಕೂಡಲಸಂಗಮದೇವಾ ನಿನ್ನ ಪರಿ:

ಕೋತಿ ಚಿನ್ನದ್ದಾದರೇನು, ಲೋಹದ್ದಾದರೇನು ? ಅದು ಕೋತಿಯೇ. ಕೋತಿ ತನ್ನ ಗುಣವ ಬಿಡದು. ಅದನ್ನು ಬೇಡಿ ಹುಲ್ಲಲ್ಲಿ ಮುಚ್ಚಿಟ್ಟರೇನು ? ಕೊಡವಿ ಹೊರಬರಲು ಅದಕ್ಕೆ ಅಲ್ಪ ಸಮಯ ಸಾಕು. ವಸ್ತ್ರ ಬೇಡುವುದರಿಂದ, ಮಗನ ಬೇಡುವುದರಿಂದ , ವಧುವ ಬೇಡುವದರಿಂದ ಮನದ ಮರ್ಕಟತನ ಮಾಯವಾದೀತೆ ? ಅಂಗದಲ್ಲಿಯೇ ಸಂಗಮವಾದ ನೀನು, ಅಂಗವನ್ನು ಆವರಿಸಿದ ಮನ, ಅತ್ತಿತ್ತ ಸರಿಯದಂತೆ ಅಪ್ಪಿಕೊಳ್ಳಬೇಕು. ಆ ಮನವನ್ನು ನಿನ್ನ ತೋಳ್ತೆಕ್ಕೆಯಲ್ಲಿ ಬಂಧಿಸಿಕೊಂಡು ಅರ್ಧನಾರೀಶ್ವರನಾಗಬೇಕು. ಹಾರುವ ಮನವನ್ನು ಬಂಧಿಸಿ ಪಾರ್ವತಿಯನ್ನಾಗಿಸಿ ನೀನೇ ವರಿಸಿ ಪರಮೇಶ್ವರನಾಗಬೇಕು. ಹರಿಯುವ ಮನವನ್ನು ಹಿಡಿದು ಅಂಗದಲ್ಲಿಯೇ ಧರಿಸಿ ಗಂಗಾಧರನಾಗಬೇಕು. ಮಾಯಾ ಜಿಂಕೆಯಂತೆ ಓಡುವ ಮನವನ್ನು ಹಿಡಿದು ಅದರ ಚರ್ಮ ಸುಲಿದು ಚರ್ಮಾಂಬರಿಯಾಗಬೇಕು. ಇದು ನಿನಗೆ ಗರುವ ತನವು ತಂದೆ. ಜಗದ ತನುಗಳ ಮನವನು ಹಿಡಿದು ಮಾಯಾ ಜಿಂಕೆಯ ಚರ್ಮ ಸುಲಿದು ಅರಿವಿನ ಚರ್ಮಾಂಬರಿಯನ್ನಾಗಿಸು ತಂದೆ. ಇದು ನಿನಗೆ ಗರುವತನವು ! ಇದು ನಿನ್ನ ಪರಿ.

740

ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ ಕಾಡಿದೆ,
ಚೋಳನ ಮನೆಯಲ್ಲುಣಲೊಲ್ಲದೆ ಚೆನ್ನನ ಮನೆಯಲ್ಲುಂಡೆ;
ಒಬ್ಬರಿಗೊಂದು ಪರಿಯ ಮಾಡಿದೆ, ಕೂಡಲಸಂಗಮದೇವಾ !

ನೀನು ದೂರವೆಂದರೆ, ದೂರವಿಲ್ಲ. ಸಮೀಪವೆಂದರೆ ಸಮೀಪವೂ ಇಲ್ಲ. ಅಂಗದಲ್ಲಿಯೇ ಸಂಗಮವಾಗಿದ್ದು ಬಂಗ ಬಡಿಸಿ ಕಾಡುವೆ. ನಿನ್ನ ಕಾಡಾಟಕ್ಕೆ ಸಿರಿಯಾಳ ಚೆಂಗಳೆಯರು ದಂಗು ಬಡಿದು ನಿಂತರು. ಅವರ ಮಗನನ್ನು ಕೊಂದು ಅಡಿಗೆ ಮಾಡಲು ಅಪ್ಪಣೆ ಕೊಟ್ಟೆ. ಇದ್ದೊಬ್ಬ ಚೀಲಾಳನನ್ನು ಕೊಂದು ಅಡಿಗೆ ಮಾಡಿ ಬಡಿಸಲು ಮಗನಿಲ್ಲದ ಮನೆಯಲ್ಲಿ ಉಣ್ಣುವುದಿಲ್ಲವೆಂದು ಹಟ ಹಿಡಿದು ಕಾಡಿದೆ. ಮಗನ ಮಾಂಸ ಬೇಯಿಸಿ ಉಣ ಬಡಿಸಲು ಹೇಳಿದೆ. ಅಡಿಗೆ ಮಾಡಿ ನೀಡಲು ಉಣಲೊಲ್ಲದೆ ಕಾಡಿದೆ.

ಚೋಳನ ಮನೆಯಲ್ಲುಣಲೊಲ್ಲದೆ ಚೆನ್ನನ ಮನೆಯಲ್ಲುಂಡೆ:

ಚೆನ್ನಯ್ಯ, ಚೋಳನ ಅರಮನೆಯಲ್ಲಿ ಆನೆ ಲಾಯದಲ್ಲಿ ಕೆಲಸಕ್ಕಿದ್ದವರು. ಚೋಳ ಅರಸ! ಚೆನ್ನಯ್ಯ ಚೋಳನ ಸೇವಕ. ಅರಸನ ಮನೆಯಲ್ಲಿ ಮೃಷ್ಟಾನ್ನವನು ಒಲ್ಲೆ ಎಂದೆ. ಚೋಳನ ಮನೆಯಲ್ಲಿ ಅಂಬಲಿ ಸವಿದು ಆನಂದದಿಂದ ಡೇಗಿದೆ.

ಮಗನ ಮಾಂಸ ಉಣಲೊಲ್ಲದೆ ಸಿರಿಯಾಳನ ಕಾಡಿದೆ. ಚೋಳನರಮನೆಯ ಮೃಷ್ಟಾನ್ನವನು ಉಣಲೊಲ್ಲದೆ ಚೋಳನ ಕಾಡಿದೆ. ಚೆನ್ನಯ್ಯನ ಮನೆಯ ಅಂಬಲಿಯನುಂಡು ಚೋಳನ ರೇಗಿಸಿದೆ. ಒಬ್ಬರಿಗೊಂದು ನ್ಯಾಯ, ಮತ್ತೊಬ್ಬರಿಗೊಂದು ನ್ಯಾಯವೆ? ಅಂಗದಲ್ಲಿಯೇ ಸಂಗ

ಮವಾದ ನೀನು ಸರ್ವ ಅಂಗಗಳಿಗೂ ಸಮದರ್ಶನ ನೀಡಬಾರದೆ ಎಂದು ಗಟ್ಟಿಯಾಗಿ ಕೇಳಿದ್ದಾರೆ ಅಣ್ಣಬಸವಣ್ಣನವರು.

741

ಒಬ್ಬನ ಮನೆಯಲುಂಡು ಹೊತ್ತುಗಳೆದೆ;
ಒಬ್ಬನ ಮನೆಯಲುಂಡಲೊಂದು ಗಳಿಸಿದೆ;
ಗರ್ವ ಬೇಡ, ಬೇಡ ನಿನಗೆ !
ಚೆನ್ನಯ್ಯನ ಮನೆಯಲಂಬಲಿಯನುಂಡು ಬದುಕಿದೆ,
ಗರ್ವ ಬೇಡ, ಬೇಡ !
ಕೂಡಲಸಂಗಯ್ಯಾ, ಸಿರಿಯಾಳನಿಂದ ಮಾನಿಸಲೋಕಗಂಡೆ !

ಬಸವಣ್ಣನವರು ಮಾಡುವ ಸಂಭಾಷಣೆಯೊಂದು ಜ್ಞಾನದ ಚಮತ್ಕಾರ ವಿದ್ಯೆ ! ವಚನ ಓದುವವನಿಗೆ ಅವರು ಭಗವಂತನೊಂದಿಗೆ ಮಾತನಾಡುತ್ತಾರೆ ಎಂದು ಭಾಸವಾಗುತ್ತದೆ. ಇದು ಸರ್ವರಿಗೂ ಸಾಧ್ಯವಲ್ಲದ ಮಾತು ಎಂದು ನಿರ್ಧಾರವಾಗುತ್ತದೆ. ಹಾಗೆ ನಿರ್ಧಾರ ಮಾಡುವುದು ಸಲ್ಲದು. ಸರ್ವರಿಗೂ ಹೀಗೆ ಭಗವಂತನೊಂದಿಗೆ ಮಾತನಾಡಲು ಸಾಧ್ಯ ಎಂದು ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಸಕಲರಿಗೂ ಅರಿವಿನ ಸುಖ ಸಿಗಲೆಂಬುದೇ ಬಸವಣ್ಣನವರ ಆಶಯವಾಗಿದೆ.

ಚೋಳ ಮಹಾರಾಜ; ಆತ ಪ್ರತಿ ನಿತ್ಯ ಶಿವನಿಗೆ ಮೃಷ್ಟಾನ್ನ ಉಣ ಬಡಿಸುತ್ತಿದ್ದ. ಆದರೂ ಶಿವನಿಗೆ ಅದು ರುಚಿಸಲಿಲ್ಲ. ಚೆನ್ನಯ್ಯ ಶರಣರು ಚೋಳನ ಆಶ್ರಯದಲ್ಲಿ ಸೇವೆಗಿದ್ದವರು. ಆತನ ಮನೆಯ ಅಂಬಲಿಯ ಸವಿದು ಶಿವ ಅಲ್ಲಿಯೇ ತಂಗಿದ.

ಇದೊಂದು ವಿಚಿತ್ರವಾದ ಬೆಡಗಿನ ಜ್ಞಾನದ ಮಾತು. ನೀಚ ಬುದ್ಧಿಯ ನಾಲಗೆಗೆ ರುಚಿಯ ತತ್ವ ಹೇಳಿಕೊಡುವ ಜ್ಞಾನದ ಸೂತ್ರದ ಮಾತು. ಶಿವ ಎಂದರೆ ಜ್ಞಾನ; ಅರಿವು. ಅದು ನಾಲಗೆಯಲ್ಲಿ ಪವಡಿಸಿದೆ. ತಿಳಿಯದಿದ್ದರೆ ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ. ಆನೆ ಸಾಕಿದ ರಾಜನ ನಾಲಗೆಗೆ ನಿತ್ಯ ಮೃಷ್ಟಾನ ಬೇಕು. ರುಚಿಯಲ್ಲಿ ವ್ಯತ್ಯಾಸವಾದರೆ ಅಡಗೆ ಭಟ್ಟನ ತಲೆ ಹೋಗುತ್ತದೆ. ರಾಜನಾದರೂ ಆತನಿಗೆ ರುಚಿಯ ತತ್ವ ತಿಳಿದಿಲ್ಲ.

ಚೆನ್ನಯ್ಯ ಶರಣ. ರಾಜನ ಆನೆಗಳ ಸೇವೆ ಮಾಡಿಕೊಂಡಿದ್ದಾತ. ಅಂಬಲಿಯನ್ನು ಮೃಷ್ಟಾನ್ನದಂತೆ, ಪಕ್ವಾನ್ನದಂತೆ ನಿತ್ಯ ನಿತ್ಯ ಸೇವಿಸುತ್ತಿದ್ದ. ಅಂಬಲಿ ಪ್ರತಿನಿತ್ಯ ಒಂದೊಂದು ರುಚಿಯಾಗಿ ನಾಲಗೆಗೆ ಆನಂದ ನೀಡುತ್ತಿತ್ತು. ನಾಲಗೆಯಲ್ಲಿ ಪವಡಿಸಿದ ಶಿವ ಅಂಬಲಿ ಸೇವಿಸಿ ಆನಂದ ಪಡುತ್ತಿದ್ದ. ಚೆನ್ನಯ್ಯ ಶರಣರು ನಾಲಗೆಯ ರುಚಿಯ ನಿಯಮ ಅರಿತವರು.

ಪಕ್ವಾನ್ನಗಳಾದರೇನು? ಅಂಬಲಿಯಾದರೇನು ಜಲದಿಂದ ಸಿದ್ಧವಾದದ್ದು. ಜಲಹರಿದು ಕಬ್ಬು ಸಿಹಿಯಾಯಿತು, ಬೆಳ್ಳುಳ್ಳಿ ಘಾಟಾಯಿತು, ಈರಳ್ಳಿ ಖಾಕಾಯಿತು. ಮೆಣಸಿಕಾಯಿ ಖಾರವಾಯಿತು. ಜಲಹರಿದು ಜೋಳ, ಗೋಧಿ, ಹೆಸರು, ಅಲಸಂದಿ ಅವರೆ ಮುಂತಾದ ಪದಾರ್ಥವಾಯಿತು. ಜಲವೆ ಗಟ್ಟಿಯಾಗಿ ಸಕಲ ಪದಾರ್ಥಗಳಾದವು. ಜಲ ಪದಾರ್ಥದಲ್ಲಿ ಅಡಗಿದೆ. ಜಲ ಗಟ್ಟಿಯಾಗಿ ತನುವಾಯಿತು! ಜಲಬಿಂದುವೇ ರಕ್ತ ಮೂಳೆ ಮಾಂಸ ಮಜ್ಜಾ

ಮೇದಸ್ಸು ಆಗಿ ಚರ್ಮದ ಕವಚ ಹೊಂದಿ ತನುವಾಯಿತು. ತನುವಿನಲ್ಲಿ ಜಲ ಅಡಗಿದೆ.

ಜಲಕ್ಕೆ ರುಚಿ ಇಲ್ಲ, ಬಣ್ಣವಿಲ್ಲ, ವಾಸನೆಯಿಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ. ಆದರೆ ಪದಾರ್ಥಕ್ಕೆ ಸೇರಿದ ಜಲ ರುಚಿಯಾಗಿದೆ! ತನುವಿನ ನಾಲಿಗೆ ಸೇರಿದ ಜಲ ರುಚಿ ಅನುಭವಿಸುತ್ತಲಿದೆ! ಜಲದಿಂದ ಆವೃತ್ತವಾದ ತನು ನೋಡುವ, ಮಾತನಾಡುವ,ಕೇಳುವ, ಮೂಸಿಸುವ, ಮುಟ್ಟಿ ಆನಂದ ಪಡುವ, ರುಚಿಸುವ ಕೃತಕ ಅರಿವಿನ ಗುಣಗಳನ್ನು ಹೊಂದಿದೆ.

ಮೊದಲ ತುತ್ತು ರುಚಿ, ಎರಡನೇ ತುತ್ತು ಸ್ವಲ್ಪ ಕಡಿಮೆ, ಮೂರನೇ ತುತ್ತಿಗೆ ರುಚಿಯಿಲ್ಲ. ತನು ತುತ್ತಿನ ಚೀಲ ತುಂಬಿಕೊಳ್ಳುತ್ತದೆ. ನಾಲಗೆ ಮತ್ತು ಪದಾರ್ಥಗಳೆರಡೂ ರುಚಿ ಕಳೆದುಕೊಳ್ಳುತ್ತದೆ. ಇದು ಕೃತಕ ರುಚಿ ಎಂದು ನಾಲಗೆಗೆ ತಿಳಿಯುವುದಿಲ್ಲ. ತನುವಿಗೆ ಅರಿವಾಗುವುದಿಲ್ಲ. ಮೊದಲು ಪದಾರ್ಥದಲ್ಲಿ ಇದ್ದ ರುಚಿ ಎಲ್ಲಿಗೆ ಹೋಯಿತೆಂದು ಅರಿವಾಗು ವುದಿಲ್ಲ. ಆದರೆ ನಿತ್ಯ ನಿತ್ಯ ರುಚಿಗಾಗಿಯೇ ಪ್ರಪಂಚದಲ್ಲಿ ಸಾವು ನೋವುಗಳುಂಟಾಗುತ್ತವೆ.

ರಾಜ ಉಣ್ಣುವುದಕ್ಕಾಗಿ ಯುದ್ಧ ಮಾಡುತ್ತಾನೆ ; ಸರಕಾರ ರಚಿಸುತ್ತಾನೆ. ಬಡವ ಉಣ್ಣುವುದಕ್ಕಾಗಿಯೇ ರಾಜನಿಗೆ ಸೇವಕನಾಗಿದ್ದಾನೆ. ರಾಜ ಮತ್ತು ಸೇವಕನ ಪಾತ್ರದಲ್ಲಿದ್ದ ಎರಡು ತನುಗಳ ಪಾತ್ರಗಳು ಬೇರೆ ಬೇರೆ ಆದರೂ ಆಶಯ ಒಂದೇ. ತನುವಿನ ಗುಣ ಒಂದೆ. ತನುವಿನ ಚರ್ಮ ನಾಲಗೆ ಕಣ್ಣು ಕಿವಿ ಮೂಗು ಕೂಡಾ ಒಂದೆ. ಇವು ತನುವಿನಲ್ಲಿ ಒಂದೇ ರೀತಿಯಲ್ಲಿ ಕೆಲಸ ಮಾಡುತ್ತವೆ.

ಜಲಕ್ಕೆ ರುಚಿಯಿಲ್ಲ, ಬಣ್ಣವಿಲ್ಲ, ವಾಸನೆಯಿಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ ಎಂದು ತನು ವಿಜ್ಞಾನ ವಿಷಯದಲ್ಲಿ ಓದುತ್ತದೆ, ಕೇಳುತ್ತದೆ, ಬರೆಯುತ್ತದೆ. ಆದರೆ ತನುವಿನ ಜಲದಲ್ಲಿ ಸಮರಸವಿಲ್ಲ ಇದೆಲ್ಲವನ್ನು ಮರೆತು ಕೇವಲ ರುಚಿಗಾಗಿ ಅಮೂಲ್ಯವಾದ ಅರಿವಿನ ಜೀವವನ್ನು ಒತ್ತೆಯಿಡುತ್ತದೆ. ಜಲತತ್ವ ಜಲಕ್ಕೆ ಬಳಕೆಯಾಗದೇ ತನುವಿನ ಜಲದಲ್ಲಿಯೇ ಉಳಿಯುತ್ತದೆ.

ಅರಿವನ್ನು ಅರಿಯದೆ ಅಂಗದಲ್ಲಿ ಬಂಧಿಸಿಕೊಂಡು ಮರೆವನ್ನು ಮಾತ್ರ ಬಳಕೆ ಮಾಡುವ ಇದೊಂದು ಅದ್ಭುತ ಮನುಷ್ಯ ಲೋಕ ! ತನುವಿನಲ್ಲಿ ಅರಿವು ತನ್ಮಯವಾಗಿ ಅರಿವಿನ ಪಾಠ ಮಾಡುತ್ತ ಮರೆಯಾಗಿದೆ. ರುಚಿ ಅನುಭವಿಸಿ ಒಮ್ಮೆ ಸುಖಿಸಿ ಮತ್ತೊಮ್ಮೆ ದುಃಖಕ್ಕೆ ಈಡು ಮಾಡುವ ಮನ ತನುವನ್ನು ಆವರಿಸಿಕೊಂಡಿದೆ. ಮನ ಮತ್ತು ಅರಿವಿನ ಜುಗಲ್ಬಂದಿ ತನುವಿನಲ್ಲಿ ಅನವರತ ನಡೆದಿದೆ. ಮನ ಅರಿವಿನ ಸಂಬಂಧ ಬೆಳೆಸುತ್ತಿಲ್ಲ; ಅರಿವು ಮನದ ಸಂಬಂಧ ಬೆಳೆಸುತ್ತಿಲ್ಲ.

ಅರಿವಿನ ವಿಷಯ ತಿಳಿಸಲು ಹೋದ ಕ್ರಿಷ್ಣ ದೇವರಾದ, ತಿಳಿದು ಆಚರಿಸಿ, ಆಚರಿಸಲು ಹೇಳಿದ ಕ್ರಿಸ್ತ ಕೂಡಾ ದೇವರಾದ. ಅರಿವಿಗೆ ಶರಣು ಹೋಗಿ ಶರಣರಾಗುವ ಬಗೆ ತಿಳಿಸಲು ಅಣಿಯಾದ ಶರಣರೂ ದೇವರಾದರು. ಅರಿವಿಗೆ ದಾಸನಾಗಿ ದಾಸರಾಗುವ ಬಗೆ ಹೇಳಿದ ದಾಸರು ಕೂಡಾ ದೇವರಾದರು. ಎಲ್ಲೆಡೆ ಕೃತಕ ದೇವರು ಅವರ ಪೀಠಗಳು, ಪೀಠಾಧಿಪತಿಗಳು, ಮಠಾಧಿಪತಿಗಳು, ಚರ್ಚ್‌ಗಳು ಸ್ಥಾಪಿಸಲ್ಪಟ್ಟವು. ಅಜ್ಞಾನದ ವ್ಯವಹಾರ ಪ್ರಪಂಚದ ತುಂಬಾ ವೃದ್ಧಿಯಾಯಿತು. ಅಂಗದಲ್ಲಿರುವ ಅರಿವು ಅಂಗದಲ್ಲಿಯೇ ಮರೆಯಾಯಿತು. ತನುವಿನ ಸಿರಿ ತನುವಿನ ಆಳದಲ್ಲಿ ಹಾಗೆ ಉಳಿಯಿತು. ಅರಿವಿನ ಮನುಷ್ಯಲೋಕವನ್ನು , ಮನುಷ್ಯರು ಅರಿವಿನಿಂದ ಕಂಡುಕೊಳ್ಳಲೇ ಇಲ್ಲ. ಕಂಡುಕೊಂಡು ಹೀಗೆಂದು ವಿವರಿಸಲು ಹೋದವರೆಲ್ಲ

ದೇವರಾದರು!

742

ಹರಿಯಜ ಮುನಿಗಳೆಲ್ಲರು, ನಿಜ ನಿಮ್ಮ ಬಾಗಿಲ ಕಾಯ್ದಿಹರು;
ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ?
ಡಿಂಗರಿಗನ ಮನೆಗೆ ಅಂಗಜಾವಹಕ್ಕೆ ಹೋಗಿದ್ದವರೊಳರೆ
ಕೂಡಲಸಂಗಮದೇವಾ?

ಭಾರತ ಜ್ಞಾನ ಪ್ರಧಾನವಾದ ದೇಶ. ಹಿಂದಿನಿಂದಲೂ ಈ ರಾಷ್ಟ್ರದ ಜನ ಜ್ಞಾನಕ್ಕೆ ಮಹತ್ವ ಕೊಟ್ಟಿದ್ದಾರೆ. ಜ್ಞಾನವನ್ನು ದೇವನನ್ನಾಗಿಸಿ ಪೂಜಿಸಿದ್ದಾರೆ. ಹಗಲಿರುಳು ಜಪ ತಪ ವ್ರತ ಮಾಡಿ ಒಲಿಸಿಕೊಂಡಿದ್ದಾರೆ. ದೇವರು ಕಾಣುತ್ತಿಲ್ಲವೆಂದು ಕಾಣುವಂತೆ ಗುಡಿ ಗುಂಡಾರಗಳನ್ನು ನಿರ್ಮಿಸಿ ಅದನ್ನೇ ದೇವರೆಂದು ಪೂಜಿಸಿ ಅರ್ಚಿಸಿ ಉತ್ಸವಗಳನ್ನಾಗಿ ಮಾಡಿ ಆರಾಧಿಸಿ ಆನಂದ ಪಡುತ್ತಿದ್ದಾರೆ. ನಂಬಿಕೆ ಬಲವಾಗಿ , ಸಂಪ್ರದಾಯಗಳು ಪ್ರಧಾನವಾಗಿ ಜ್ಞಾನದ ಬಯಕೆಯ ಹಿನ್ನಡೆಯಾಗಿದೆ.

ಮನುಷ್ಯ ಕುಲವೇ ಹೀಗೆ. ನುಡಿಯುವ ಮನುಷ್ಯನಿಗೆ ರೂಪವಿದೆ. ಮನುಷ್ಯನಿಗೆ ಹಗಲಿರುಳೂ ಅಂಗದಲ್ಲಿಯೇ ತಿಳಿ ಹೇಳುವ ಅವ್ಯಕ್ತನಿಗೆ ರೂಪವಿಲ್ಲ. ಆ ನಿರೂಪವನ್ನೇ ರೂಪ ಮಾಡಿ ಪೂಜಿಸುವವನೊಬ್ಬನಾದರೆ, ಆ ನಿರೂಪವನ್ನೇ ದೇವರೆಂದು ಪ್ರಾರ್ಥಿಸುವವ ಮತ್ತೊಬ್ಬ. ಇವರಿಬ್ಬರ ಬಯಕೆ ಒಂದೇ ಆದರೂ ಒಬ್ಬರಿಗೊಬ್ಬರು ಸಾಮ್ಯವಿಲ್ಲ. ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಚಿತ್ರಿಸಿ ದೇವನೆಂದು ಹೆಸರಿಸಿದರೆ ತಲೆ ಕಡಿಯುತ್ತಾರೆ. ದೇವರೆಂದು ಹೆಸರಿಸಿದ ಚಿತ್ರವನ್ನು ಅಳಿಸಿದರೆ ತಲೆ ಕಡಿಯುತ್ತಾರೆ. ಅರಿವೇ ಗುರು. ಆ ಗುರುದೇವನೇ ಮಹಾದೇವನೆಂದು ಇವರಿಬ್ಬರಿಗೆ ಯಾರು ಹೇಳಬೇಕು? ಜ್ಞಾನಿಗಳ ಮಾತು ಕೇಳುವುದಿಲ್ಲ. ಜ್ಞಾನಿಗಳಿಗಾದರೋ ಕೋಡು ಇರುವುದಿಲ್ಲ. ತನ್ನಂತೆಯೇ ಇರುವ ಜ್ಞಾನಿಯನ್ನು ಜ್ಞಾನಿಯೆಂದು ಇವರಿಬ್ಬರೂ ತಿಳಿಯುವುದಿಲ್ಲ.

ಹರಿ ಬ್ರಹ್ಮ ಮನು ಮುನಿಗಳೆಲ್ಲರೂ ಈ ಜ್ಞಾನ ತಿಳಿಯಲು ಹಗಲಿರುಳು ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನ ಬಾಗಿಲ ಕಾಯ್ದರು. ಆದರೆ ಅರಿವೆಂಬ ಸಂಗಮನಾಥ ಬಾಣನೆಂಬ ಮಹಾರಾಜನ ಬಾಗಿಲ ಕಾಯ್ದ.

ತನುವಿನಲ್ಲಿ ಸಾವಿರಾರು ಅಜ್ಞಾನದ ಅಲೆಗಳು ಮನದಿಂದಾಗಿ ರಾಕ್ಷಸ ರೂಪದಲ್ಲಿ ಸುಳಿಯುತ್ತವೆ. ಅಲೆ ಅಲೆಯಾಗಿ ಅಂಗದ ಬಾಗಿಲ ತೆರೆದು ನುಸುಳುತ್ತವೆ. ಆದರೆ ಬಾಣ ಸಾವಿರಾರು ಅಲೆಗಳು ಒಳ ಸುಳಿಯದಂತೆ ಅರಿವೆಂಬ ಸಂಗಮನಾಥನನ್ನೇ ಬಾಗಿಲ ಕಾಯಲು ದ್ವಾರಪಾಲಕನನ್ನಾಗಿ ನಿಯಮಿಸಿದ. ಇಂತಹ ಜಾಣತನದ ಸುಳುಹು ಅರಿತ ಅರಿವಿನ ಮನಕ್ಕೆ ಮಾತ್ರ ಮಹಾದೇವನೊಲಿಯುತ್ತಾನೆ.

743

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ

ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ.
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ!
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ.
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ!

ತನು ಒಂದು ವಿರಾಟ ಸ್ವರೂಪವೆಂದು ಕಂಡುಕೊಳ್ಳಲು ಬರುತ್ತದೆ. ನಂತರ ಇತರ ತನುಗಳು ಕೂಡಾ ವಿರಾಟಸ್ವರೂಪವೆಂದು ನೋಡಲು ಬರುತ್ತದೆ. ಇದು ಕಂಡುಕೊಂಡವರಿಗೆ ಮಾತ್ರ ನೋಡಲು ಸಾಧ್ಯ. ತೋರಿಸಲು ಬರುವುದಿಲ್ಲ; ಕಂಡುಕೊಳ್ಳಬೇಕು; ಕಂಡುಕೊಳ್ಳಲು ಮಾತ್ರ ಸಾಧ್ಯ.

ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ:

ಸೂರ್ಯ ಚಂದ್ರ ಭೂಮಿ ನಕ್ಷತ್ರಗಳು ದೇವಾನು ದೇವತರು ರಾಕ್ಷಸರು ಸಮುದ್ರಗಳು ಇಡೀ ಜಲರಾಶಿ ಸಸ್ಯಕಾಶಿ ಬಯಲು ಗಾಳಿ ಬೆಂಕಿಯನ್ನು ತನು ತನ್ನ ಗರ್ಭದಲ್ಲಿಟ್ಟುಕೊಂಡು ಚುಳುಕಾಗಿಸಿದೆ. ತನುವಿನಲ್ಲಿ ಜಗದ ಸಕಲ ವಸ್ತುಗಳೂ ನ್ಯಾನೊ ಆಗಿವೆ. ಚುಳುಕಾಗಿವೆ.

ಕಣ್ಣುಗಳಲ್ಲಿ ಸೂರ್ಯ ಚಂದ್ರ ನಕ್ಷತ್ರಗಳು ಬಂಧಿಯಾಗಿವೆ. ಅವುಗಳನ್ನು ನೋಡಲು ತಿಳಿಯಲು ಬಂಧಿಸಲು ಬರುತ್ತದೆ. ಅವು ದೊಡ್ಡವಾದರೂ ಅರಿವುಳ್ಳ ಕಣ್ಣಿನ ಬೆಳಕಿಗೆ ಅವು ಸಾಸುವೆಯಷ್ಟಾಗಿವೆ. ಭೂಮಿ ಗಾಳಿ ಬೆಂಕಿ ತನುವಿನಲ್ಲಿ ಬಂಧಿಯಾಗಿವೆ. ಬಯಲ ಬ್ರಹ್ಮಾಂಡವೇ ತನುವಿನಲ್ಲಿ ಚುಳುಕಾಗಿ ತನು ವಿರಾಟ ಸ್ವರೂಪವೇ ಆಗಿದೆ. ಮನು ಮುನಿಗಳು, ದೇವಾನು ದೇವತೆಗಳನ್ನು ಮನವೇ ಸೃಷ್ಠಿ ಮಾಡಿ ತನುವಿನಲ್ಲಿ ಚುಳುಕಾಗಿಸಿಕೊಂಡಿದೆ.

ಕರಸ್ಥಲವೆಂದರೆ ಅಂಗೈ. ಅಂಗೈ ಎಂದರೆ ಅಂಗದ ಐದು ಭಾಗಗಳುಳ್ಳ ಅಂಗ. ಕಣ್ಣು ಕಿವಿ ಮೂಗು ನಾಲಗೆ ಚರ್ಮವುಳ್ಳ ಅಂಗವೇ ಅಂಗೈ ; ಕರಸ್ಥಲವಾಗಿದೆ. ಈ ಅಂಗದಲ್ಲಿ ಅರಿವೆಂಬ ಲಿಂಗಯ್ಯ ಅಡಗಿದ್ದಾನೆ. ದೃಶ್ಯವಾಗಿ ಕಣ್ಣಿನಿಂದ ನೋಡುತ್ತಾನೆ, ಶಬ್ದವಾಗಿ ಕಿವಿಯಿಂದ ಕೇಳುತ್ತಾನೆ, ಚರ್ಮವಾಗಿ ಸ್ಪರ್ಶದ ಸುಖ ಅನುಭವಿಸುತ್ತಾನೆ. ಪರಿಮಳವಾಗಿ ಮೂಗಿನ ಸುಖ ಅನುಭವಿಸುತ್ತಾನೆ. ರುಚಿಯಾಗಿ ನಾಲಗೆ ಮೂಲಕ ಸತ್ಯದ ಸುಖ ಆನುಭವಿಸುತ್ತಾನೆ. ಇವೆಲ್ಲ ಒಟ್ಟಾಗಿ ಅರಿವಿನಿಂದ ನೋಡಿ ತಿಳಿಯಲು ಮಾತಲ್ಲದ ಮಾತಿನ ಮೂಲಕ ಮಾತಿನಿಂದಲೇ ಅಂಗಕ್ಕೆ ಬೋಧಿಸುತ್ತಾನೆ. ಇದನ್ನು ಅರಿವಿನಿಂದ ತಿಳಿದು ಆಚರಣೆಯಲ್ಲಿ ತೊಡಗಿದ ಮನವೇ ಘನಮನ. ಜಗದಗಲ ಮುಗಿಲಗಲ ಮಿಗೆಯಗಲವಿದ್ದ ಅರಿವಿನ ಸುಖ ಅಂಗೈಗೆ ಬಂದಿದೆ. ಇಂತಹ ಅರಿವಿನ ಅಂಗದ ಪಾದಗಳು ಪಾತಾಳದಿಂದಲೂ ಅತ್ತತ್ತ ಚಾಚಿಕೊಂಡಿವೆ. ಇಂತಹ ಅರಿವಿನ ಅಂಗದ ಮುಖ ಶ್ರೀ ಮುಕುಟವಾಗಿ ಬ್ರಹ್ಮಾಂಡದಿಂದಲೂ ಅತ್ತತ್ತ ಚಾಚಿಕೊಂಡಿದೆ.

ಅರಿವಿನ ಅಂಗವೆಂಬ ಲಿಂಗವನ್ನು ಯಾವ ವಿಶ್ವವಿದ್ಯಾಲಯಗಳು ಹೀಗೆ ಎಂದು ಪ್ರಮಾಣಿಸಲು ಬರುವುದಿಲ್ಲ. ಯಾರ ಗಮನಕ್ಕೂ ಯಾರ ಗೋಚರಕ್ಕೂ ನಿಲುಕದ ಅರಿವೆಂಬ ಅಂಗವದು ಅಗಮ್ಯವೂ ಅಗೋಚರವೂ ಆಗಿದೆ ಇದರ ಅವ್ಯಕ್ತ ರೂಪ! ಇಂತಹ ಅಪ್ರತೀಮವಾದ ಅರಿವಿನ ಲಿಂಗವು ಅಂಗದಲ್ಲಿ ಬಂದು ಚುಳುಕಾಗಿದೆ. ವಿರಾಟ ಸ್ವರೂಪವೇ ಆಗಿದೆ.

ತನ್ನ ಶಕ್ತಿ ತಿಳಿಯದ ಮನದ ಅಜ್ಞಾನದಿಂದಾಗಿ ಅಜ್ಞಾನದ ಲಿಂಗವಾಗಿದೆ. ತಿಳಿದ ಜ್ಞಾನಿಗೆ ಸಲಕ ಅಂಗಗಳೂ ವಿರಾಟಸ್ವರೂಪವೇ ಆಗಿವೆ. ಸಾಕ್ಷಾತ್ ಶಿವ ಸ್ವರೂಪವೇ ಆಗಿವೆ. ಲಿಂಗವೇ ಆಗಿವೆ.

ಅರಿವಾದರೆ ಅಂಗವೇ ಲಿಂಗ! ಮನಕ್ಕೆ ಅರಿವಾಗದಿದ್ದರೆ ಅಂಗ ಜಾತಿ ಮತ ಪಂಥಗಳಿಂದ ಗೋಚರಿಸುತ್ತದೆ. ಹೆಣ್ಣು ಗಂಡು , ಶ್ರೀಮಂತ ಬಡವ , ಜ್ಞಾನಿ ಅಜ್ಞಾನಿ, ಸ್ವಾಮಿ ಸೇವಕ, ಗುರು ಶಿಷ್ಯ, ಕಳ್ಳ , ಪ್ರಾಮಾಣಿಕ , ಶಾಸಕ , ಸಚಿವ , ಅಧಿಕಾರಿ , ಗುಂಡಾ , ಕೊಲೆಗಡುಕ , ಅತ್ಯಾಚಾರಿ , ಅನಾಚಾರಿ , ಸದಾಚಾರಿ ಎಂದು ಗುರುತಿಸಿಕೊಳ್ಳುತ್ತದೆ.

ಮನಕ್ಕೆ ಅರಿವಾದರೆ ಅಂಗವೇ ಲಿಂಗ! ಅದು ವಿರಾಟಸ್ವರೂಪ! ಏನೊಂದುಸರಲೂ ಬಾರದ ಘನಲಿಂಗ! ಜಗದಗಲ ಮುಗಿಲಗಲ ಮಿಗೆಯಗಲವಿದ್ದ ಲಿಂಗ ಅಂಗದಗಲಕ್ಕೆ ಬಂದು ಅಂಗದಲ್ಲಿಯೇ ಚುಳುಕಾಗಿದೆ. ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವು ಅಂಗದ ಐದು ಭಾಗಗಳಲ್ಲಿ ಚುಳುಕಾಗಿ ಅರಿವೆಂಬ ಗುರುದೇವನ ಹೆಸರಿನಿಂದ ; ಮಹಾದೇವನ ಹೆಸರಿನಿಂದ; ಸಾಕ್ಷಾತ್ ಸದಾಶಿವನ ಹೆಸರಿನಿಂದ; ಪರಬ್ರಹ್ಮನ ಹೆಸರಿನಿಂದ ಕರೆಯಿಸಿಕೊಂಡಿದೆ. ಅಂಗದಲ್ಲಿಯೇ ಸಂಗಮವಾಗಿ ಜ್ಞಾನಭಂಡಾರಿ ಬಸವಣ್ಣನಿಂದ ಸಂಗಮನಾಥನೆಂದು ಕರೆಯಿಸಿಕೊಂಡಿದೆ.

744

ಗೋತ್ರ ನಾಮವ ಬೆಸಗೊಂಡಡೆ
ಮಾತ ನೂಕದೆ ಸುಮ್ಮನಿದ್ದಿರಿದೇನಯ್ಯಾ ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ ?
ಗೋತ್ರ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನೆಂಬುದೇನು;
ಕೂಡಲಸಂಗಮದೇವಾ?

ಶಿವನಿಗೆ ಅಂಬಲಿ ಕುಡಿಯಲು ಕೊಟ್ಟ ಮಾದರ ಚೆನ್ನಯ್ಯ ಸಾಮಾನ್ಯನೇ? ಒಕ್ಕುದನು ಇಕ್ಕದ ಡೋಹರ ಕಕ್ಕಯ್ಯ ಸಾಮಾನ್ಯನೆ? ಇವರಿಬ್ಬರೂ ಅಸಾಮಾನ್ಯ ಶರಣರು.

ಶರಣರು ಕುಲಗೋತ್ರವನು , ಜಾತಿ ಮತವನು , ಶ್ರೀಮಂತ ಬಡವನೆಂಬ ಅಜ್ಞಾನವನು, ಹೆಣ್ಣು ಗಂಡೆಂಬ ಭೇದವನು ಕಳೆದುಕೊಂಡ ಮಹಾಜ್ಞಾನಿಗಳು.

ಯಾವ ಗೋತ್ರದವರೆಂದು ಕೇಳಿದರೆ ಮಾದಾರ ಚೆನ್ನಯ್ಯ ಡೋಹಾರ ಕಕ್ಕಯ್ಯನ ಗೋತ್ರದವರೆಂದು ಹೇಳಿರಿ. ಕೂಡಲಸಂಗಯ್ಯನ ಕುಲದವರೆಂದು ಕೇಳಿದವರಿಗೆ ಕೂಡಲೆ ಉತ್ತರ ಕೊಡಿ. ಕುಲಗೋತ್ರವಿಲ್ಲವೆಂದು ತಲೆ ತಗ್ಗಿಸಿ ನೆಲನ ಗೀಚುವುದೇಕೆ? ಚೆನ್ನಯ್ಯ, ಕಕ್ಕಯ್ಯನ ಗೋತ್ರದವರೆಂದು ಡಂಗುರ ಬಡಿದು ಹೇಳಿ.

745

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು

ಸರ್ಪನ ಹೆಡೆಯ ಮಾಣಿಕದಂತಿಪ್ಪರು ಭೂಷಣರಾಗಿ!
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು,
ಕೂಡಲಸಂಗಮದೇವಾ, ನಿಮ್ಮ ಶರಣರು.

ಅಂಗದ ಕಣಕಣದಲ್ಲಿ ಸಂಗಮವಾದ ಅರಿವೆಂಬ ಲಿಂಗವನು ಮನದಿಂದ ಪೂಜಿಸಿ ಆ ಮನವನ್ನೇ ಘನಮನವನ್ನಾಗಿಸಿಕೊಂಡವರು ಶರಣರು. ಬೇಡುವ ಮನ, ಅಜ್ಞಾನದಿಂದ ನೋಡಿ ಮುಟ್ಟಿ ರುಚಿಸುವ ಮನ ಘನಮನವಾಗಿರುವುದರಿಂದ ಅದು ಏನನ್ನೂ ಬೇಡದು. ಯಾರಿಗೂ ಬೆದರದು, ತಲೆ ಎತ್ತಿ ಸರ್ಪನ ಹೆಡೆಯ ಮಾಣಿಕದಂತೆ ಇಪ್ಪರು; ಭೂಷಣರಾಗಿ!

ದರ್ಪಣದೊಳಗಣ ಬಿಂಬಕ್ಕೆ ಗಾಯವಿಲ್ಲ. ಸುಖ ದುಃಖಗಳಿಲ್ಲ. ಅಳಿಸಿದರೆ ಹೋಗುವುದಿಲ್ಲ. ಪ್ರಾಣ ಭೀತಿಯಿಲ್ಲ. ಜನನ ಮರಣದ ಬಾಧೆ ಮೊದಲೇ ಇಲ್ಲ. ಅಂಗದಲ್ಲಿ ಸಂಗಮವಾದ ಅರಿವು ದರ್ಪಣದಂತೆ ಕಂಗೊಳಿಸುವುದು. ಮನ ನಿಷ್ಠೆಯಿಂದ ಅಂಗದಲ್ಲಿಯೇ ಇದ್ದ ಲಿಂಗದ ಸಂಗ ಮಾಡಬೇಕಷ್ಟೆ.

746

ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ ;
ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ.
ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ ;
ಕೂಡಲಸಂಗಮದೇವನೊಬ್ಬನೆ ದೈವವೆಂದು.

ಲಿಂಗ ಜಂಗಮಗಳೆರಡು ಅಂಗದಲ್ಲಿಯೇ ಬಿಚ್ಚಲು ಬಾರದಂತಹ ಗಂಟುಗಳೊಂದಿಗೆ ಬಿಗಿದುಕೊಂಡಿವೆ. ಲಿಂಗವೆಂದರೆ ಅರಿವು. ಜಂಗಮವೆಂದರೆ ಅದನ್ನು ಪಾಲನೆ ಮಾಡುವ ವೀರ. ಈ ಕಗ್ಗಂಟು ಮನಕ್ಕೆ ಮುಂಡಿಗೆಯಾಗಿದೆ. ಅರಿವಾದರೆ ಮನ ಕೂಡಲೇ ಶಿಖಾಮಣಿಯಂತೆ ಬಿಚ್ಚಿ ಕೊರಳಿಗೆ ಆಭರಣದಂತೆ ಧರಿಸಿಕೊಳ್ಳುತ್ತದೆ.

ಮನಕ್ಕೆ ಮುಂಡಿಗೆ ಬಿಚ್ಚಲು ಬಂದರೆ ಅಂಗ ಶಿವಲೋಕವೇ ಆಗುತ್ತದೆ. ಶಿವ ಲೋಕಕ್ಕೆ ಸರಿಗಟ್ಟುವ ಬೇರೆ ಲೋಕಗಳೇ ಇಲ್ಲ. ಮನಕ್ಕೆ ಮುಂಡಿಗೆ ಬಿಚ್ಚಲು ಬಾರದಿದ್ದರೆ ಅಂಗವೇ ಮರ್ತ್ಯಲೋಕ ! ಮನವೇ ಮರ್ಕಟ !

ಮನಕ್ಕೆ ಶಿವ ಮಂತ್ರ ಪಠಿಸಲು ಬಂದರೆ ಮುಂಡಿಗೆ ಕೂಡಲೇ ಬಿಚ್ಚುತ್ತದೆ. ಕೂಡಲಸಂಗ ಮದೇವನೊಬ್ಬನೆ ದೈವವೆಂದು ಪಠಿಸುತ್ತಾ ಕುಣಿಕುಣಿದಾಡುತ್ತದೆ.

747

ಈಶ್ವರ ಸದ್ಭಾವೇ ಕಿಂ ಪ್ರಮಾಣಂ
ಎಂಬ ಮೀಮಾಂಸಕನ ಮೂಗಿನ ಕೊನೆಯನು
ವಿಶ್ವ ತಶ್ಚ ಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರತ ವಿಶ್ವತಃ ಪಾತ್ !
ಸಂ ಬಾಹುಭ್ಯಾಂ ಧಮತಿ ಸಂ ಪತತ್ರೈಃ

ದ್ಯಾವಾಭೂಮೀ ಜನಯನ್ ದೇವ ಏಕಃ
ಎಂಬ ಸುರಗಿಯಲಿರಿದು ವೈಶೇಷಿಕ ಎಂಬ ಇಟ್ಟಿಗೆಯಲೊರಸಿ
ಕೂಡಲಸಂಗಯ್ಯನೆಂಬ ಕನ್ನಡಿಯ ತೋರುವೆನು.

ಈಶ್ವರ ಸದ್ಭಾವೇ ಕಿಂ ಪ್ರಮಾಣಂ:

ಈಶ್ವರನನ್ನು ಸದ್ಭಾವದಿಂದ ನೋಡಲು ಪ್ರಮಾಣಗಳೇ ಇಲ್ಲ. ಈಶ್ವರ ಎನ್ನುವವನಿಲ್ಲ ಒಂದು ವೇಳೆ ಇದ್ದರೆ ಅದಕ್ಕೆ ಪ್ರಮಾಣವೇನು ? ಎನ್ನುವ ಅಜ್ಞಾನೀ ಮೀಮಾಂಸಕನ ಮೂಗಿನ ಕೊನೆಯನು ಹರಿತವಾದ ಕತ್ತಿಯಲಿ ಇರಿದು, ವೈಶೇಷಿಕ ಎಂಬ ಇಟ್ಟಿಗೆಯಲೊರಸಿ, ಕೂಡಲ ಸಂಗಯ್ಯನೆಂಬ ಕನ್ನಡಿಯ ತೋರುವೆನು ಎಂದಿದ್ದಾರೆ ಬಸವಣ್ಣನವರು.

ಈಶ್ವರನನ್ನು ಸದ್ಭಾವದಿಂದ ನೋಡಿದವರಿಗೆ ಮಾತ್ರ ಹೇಳಲು ಸಾಧ್ಯವಾಗುತ್ತದೆ. ಈಶ್ವರನನ್ನು ನೋಡುವ ಬಯಕೆಯುಳ್ಳವರಿಗೆ ತೋರಿಸುವ ಶಕ್ತಿ ಉಳ್ಳವರಿಗೆ ಮಾತ್ರ ಹೀಗೆ ನುಡಿಯಲು ಸಾಧ್ಯವಾಗುತ್ತದೆ.

ಎತ್ತೆತ್ತ ನೋಡಿದಡೆ ಅತ್ತತ್ತಲೆಲ್ಲ ಇದ್ದ ಶಿವನನ್ನು ಪುಸ್ತಕದಿಂದ ಅಕ್ಷರಗಳಿಂದ ಸಿದ್ಧ ಮಾಡಿ ತೋರಲು ಸಾಧ್ಯವೆ ? ಸಕಲ ವಿಸ್ತಾರದ ರೂಹು ಆತನೇ ಆಗಿರುವ ದೇವನನ್ನು ಗ್ರಂಥಗಳ ಆಧಾರದಿಂದ ನೋಡಲು ಸಾಧ್ಯವೆ ? ವಿಶ್ವತಶ್ಚಕ್ಷು, ವಿಶ್ವತೋ ಮುಖ, ವಿಶ್ವತೋ ಬಾಹು, ವಿಶ್ವತೋ ಪಾದವಾಗಿ ಅಂಗದ ಕಣಕಣದಲ್ಲಿ ಚುಳುಕಾಗಿದ್ದಾನೆ. ವಿಶ್ವದ ವ್ಯಕ್ತ ಅವ್ಯಕ್ತ ಸ್ವರೂಪದಲ್ಲಿ ಚುಳುಕಾಗಿ ವ್ಯಾಪಿಸಿಕೊಂಡಿದ್ದಾನೆ.

ವೇದ ಒಂದು ಶಬ್ದಗಳ ಜಾಲ. ಮೀಮಾಂಸಕ ವೇದವನ್ನು ಯಾರೂ ಬರೆಯಲಿಲ್ಲ ಅದು ಆವಿರ್ಭವಿಸಿತು ಎಂದು ಹೇಳುತ್ತಾನೆ. ಅದು ತಾನಾಗಿಯೇ ಹುಟ್ಟಿದ ವೇದದಲ್ಲಿ ಕೂಡಾ ಏಕೋದೇವೊ ರುದ್ರೋ ನ ದ್ವಿತೀಯ ಓಂ ದ್ಯಾವಾಭೂಮೀ ಜನಯನ್ ದೇವ ಏಕ ಏವ ರುದ್ರೋ ನ ದ್ವಿತೀಯಃ ಎಂದು ಹೇಳುತ್ತದೆ. ಚಕಿತಮಭಿದತ್ತೆ ಎಂದು ಶ್ರುತಿ ಕೂಡಾ ಸಾರುತ್ತಿದೆ.

ಭೂಮಿ ಆಕಾಶಗಳನ್ನು ಸೃಷ್ಟಿಸಿದ ರುದ್ರ ಶಿವನು ಒಬ್ಬನೇ; ಭಗವಂತನೇ ಅದ್ವಿತಿಯನೆಂದು ಸ್ವಯುಂಭು ಎನಿಸಿದ ವೇದಗಳೇ ಹೇಳುತ್ತವೆ.

ಕಾಣುವ ಕಣ್ಣುಗಳನ್ನೆಲ್ಲ ಪ್ರಮಾಣಿಸಬಹುದು ಕಣ್ಣಿನಿಂದ ಪ್ರವಹಿಸುವ ದೃಶ್ಯ ಅದರ ಬೆಳಕನ್ನು ಪ್ರಮಾಣಿಸಲು ಸಾಧ್ಯವೇ? ಆ ದೃಶ್ಯದಲ್ಲಿದ್ದ ಸದ್ಭಾವ ಪ್ರಮಾಣಿಸಲು ಸಾಧ್ಯವೆ? ಈ ದೃಶ್ಯ ನಿರ್ಭಾವ ಶಿವಮಯವಾಗಿ ಜಗದ ಪ್ರಾಣಿಗಳ ಸಕಲ ಕಣ್ಣುಗಳಲ್ಲಿ ಚುಳುಕಾಗಿದೆ. ಇದನ್ನು ಶಬ್ದಗಳಲ್ಲಿ ಹಿಡಿದು ತೋರಿಸಲು ಸಾಧ್ಯವಾದೀತೆ?

ಜಗದ ಬಾಹುಗಳಲ್ಲಿ ಸ್ಪರ್ಶಿಸುವ ನಿರ್ಭಾವ ಸತ್ಯ ಅಡಗಿದೆ. ಬಾಹುಗಳನ್ನು ಪ್ರಮಾಣಿಸ ಬಹುದು; ಬಾಹುಗಳಲ್ಲಿ ಆಡಗಿದ ಶಿವಮಯ ನಿರ್ಭಾವವನ್ನು ಶಬ್ದಗಳಿಂದ ಪ್ರಮಾಣಿಸಬಹುದೆ? ಈ ಶಕ್ತಿ ಬರಿಗಣ್ಣಿಗೆ ಕಾಣಲು ಸಾಧ್ಯವೆ?

ವಿಶ್ವದಲ್ಲಿರುವ ಸಕಲ ಪಾದಗಳು ಕಣ್ಣಿಗೆ ಕಾಣುತ್ತವೆ. ಶಿವಮಯವಾಗಿ ಚಾಚಿಕೊಂಡಿರುವ ನಿರ್ಭಾವ ಪಾತಾಳದಿಂದ ಅತ್ತತ್ತಲೂ ಪಸರಿಸಿದೆ ಇಂತಹ ಅದ್ಭುತವಾದ ಶಕ್ತಿಯನ್ನು ಶಬ್ದದಿಂದ ಪ್ರಮಾಣಿಸಬಹುದೆ?

ಮೂರ್ತ ಸ್ವರೂಪದ ಶಕ್ತಿ ಅಮೂರ್ತದಲ್ಲಿ ಅಡಗಿದೆ. ಹೀಗಾಗಿ ಮೂರ್ತ ಸ್ವರೂಪ

ಕಣ್ಣಿಗೆ ಕಾಣುತ್ತದೆ ಎನ್ನುವ ಜ್ಞಾನವನ್ನು ಹೊಂದಿದ್ದರೂ ಬಳಕೆ ಮಾಡದೆ ವಾದದ ವ್ಯಾಧಿಯಲ್ಲಿ ಮುಳುಗಿದ ಅಜ್ಞಾನಿಗೆ ಶಿವಮಯ ಜ್ಞಾನದರ್ಶನ ಬಹುದೂರ.

ವಾಸನೆಯ ಜ್ಞಾನ ತತ್ವವನು ಅರಿವಿನ ಪರಿಮಳವನೇ ಅರಿಯದ ಅಜ್ಞಾನಿ ಮೂಗಿಗೆ ಶಬ್ದಗಳ ಜಾಲವೆಂಬ ಹರಿತಾದ ಕತ್ತಿಯಿಂದ ಇರಿದು ಅದೇ ಶಬ್ದಗ್ಗಳ ಜಾಲದ ಇಟ್ಟಂಗಿಯಲಿ ತಿಕ್ಕಿ ಅರಿವಿನ ಪರಿಮಳ ಹೀರುವ ಶಕ್ತಿಯನ್ನು ಮೀಮಾಂಸಕನ ಸ್ವ ಮೂಗಿನಲ್ಲಿಯೇ ತೋರಿದ್ದಾರೆ ಜ್ಞಾನಭಂಡಾರಿ ಬಸವಣ್ಣ!

748

ಪಂಚಬ್ರಹ್ಮವ ಕೆಡಿಸಿತ್ತು ; ಪ್ರಣವ ಮಂತ್ರವ ನೀಡಾಡಿತ್ತಲ್ಲಾ;
ಕರ್ಮಂಗಳನೆ ಕಳೆಯಿತ್ತು ; ಕ್ರೀಗಳನೆ ಮೀರಿತ್ತಲ್ಲಾ;
ಆಗಮದ ಹಲ್ಲ ಕಳೆಯಿತ್ತು
ಕೂಡಲಸಂಗಯ್ಯನ ಭಕ್ತಿಗಂಜಿ ಹೊ!

ಮನದ ಅಜ್ಞಾನವೇ ಹೀಗೆ. ಉಂಡ ಮನೆಯ ಜಂತಿ ಎಣಿಸುವ ಗುಣ ಅದಕ್ಕೆ. ಘನದಿಂದ ಹುಟ್ಟಿದ ಮನ ಘನವನ್ನೇ ಈಡಾಡಿತ್ತು. ಪಂಚಬ್ರಹ್ಮರಿಗೆ ಆವರಿಸಿದ ಮನ ಬ್ರಹ್ಮವನ್ನೇ ಕೆಡಿಸಿ ತನ್ನ ಭ್ರಮೆಯ ಸಾಮ್ರಾಜ್ಯವನ್ನು ಸೃಷ್ಟಿಸಿತ್ತು. ಕಣ್ಣು, ಕಿವಿ, ಮೂಗು, ನಾಲಗೆಯಲ್ಲಿ ಬ್ರಹ್ಮನೇ ಪವಡಿಸಿದ್ದಾನೆ. ಆದರೆ ಆ ಬ್ರಹ್ಮನ ಮೇಲೆ ತನ್ನ ಕತ್ತಲೆಂಬ ಕರಿನೆರಳನ್ನು ಚೆಲ್ಲಿ ಭ್ರಮೆ ಉಂಟು ಮಾಡಿತ್ತು. ಅವುಗಳ ಸತ್ಯ ಕರ್ಮಗಳನ್ನು ಕಳೆದು ಅವುಗಳ ಕ್ರೀಗಳನೆ ಮೀರಿತ್ತಲ್ಲಾ.

ನೋಡುವ ಕಣ್ಣನ್ನು ನೋಡಲು ಬಾರದಂತೆ ಕುರುಡಾಗಿಸಿತು. ಕೇಳುವ ಕಿವಿಯನ್ನು ಕೇಳಲು ಬಾರದಂತೆ ಕಿವುಡಾಗಿಸಿತು. ನಾಲಿಗೆ ಚರ್ಮ ಮೂಗುಗಳಲ್ಲಿ ಮನ ತನ್ನ ಅಜ್ಞಾನದ ನರ್ತನೆ ಮಾಡಿ ತನ್ನತನವ ಮೆರೆಯಿತ್ತು.

ಅಂಗ, ವಿರಾಟಸ್ವರೂಪದ ಮಹಾಲಿಂಗ ! ಅದು ಪ್ರಣವ ! ಗಾಳಿ, ನೀರು,ಬೆಂಕಿ, ಆಕಾಶ, ಭೂಮಿಗಳು ಚುಳುಕಾದ ಸಂಗಮ ! ಅರಿವಿನ ಸಂಗಯ್ಯನ ಸುಕ್ಷೇತ್ರ. ಈ ಮಹಾಜ್ಞಾನ ಕ್ಷೇತ್ರದಲ್ಲಿ ಪಂಚಬ್ರಹ್ಮರು ಚುಳುಕಾಗಿದ್ದಾರೆ. ಓಂ ನಮಃ ಶಿವಾಯ ವೆಂಬ ಪ್ರಣವ ಭರಿತವಾಗಿದೆ. ಇಂತಹ ಅರಿವಿನ ಅಂಗವನ್ನು ಆವರಿಸಿ ಅರಿವು ಅರಿವಿಗೆ ಬಾರದಂತೆ ಭೋಗಾಂಗವಾಗಿ ಬಳಸಿ ಕೊಂಡಿತ್ತು. ಆಗಮನಗಳನೆಲ್ಲ ಕಲಿತು ಆಗಮದ ಹಲ್ಲ ಕಳೆಯಿತ್ತು. ಆದರೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಭಕ್ತಿ ಮಾಡಿ ಆತನಿಗಂಜಿ ಹೋ ಎಂದಿತ್ತು.

749

ವೇದ ನಡನಡುಗಿತ್ತು , ಶಾಸ್ತ್ರವಗಲಿ ಕೆಲಕೆ ಸಾರಿದ್ದಿತ್ತಯ್ಯಾ !
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ !
ಆಗಮ ಹರತೊಲಗಿ ಅಗಲಿದ್ದಿತ್ತಯ್ಯಾ ,
ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ !

ವೇದ ಆಗಮ ಶಾಸ್ತ್ರ ತರ್ಕಗಳು ಆತ್ಮವಿದ್ಯೆಯನ್ನು ಅರಿಯುವುದಕ್ಕಾಗಿ ಬರೆದ

ಸೂತ್ರಗಳಾದರೂ ಅಜ್ಞಾನದಿಂದಾಗಿ ಆ ಶಾಸ್ತ್ರದ ಪುಸ್ತಕಗಳೆಲ್ಲಾ ಯಜ್ಞ, ಹೋಮ, ಶಾಂತಿಯ ನೆಪದಲ್ಲಿ ರುಚಿಯ ಅಜ್ಞಾನಕ್ಕೆ ಗುರಿಯಾದವು. ಪೂಜೆ ಶಾಂತಿ ನೆಪದಲ್ಲಿ ಯಜ್ಞ, ಯಾಗಾದಿಗಳನ್ನು ಆಚರಿಸಿ ಪ್ರಾಣಿವಧೆ ಮಾಡಿ ರುಚಿಕರವಾದ ಆಹಾರ ಸೇವನೆಗಾಗಿ ಹಾದಿ ಮಾಡಿಕೊಂಡರು. ದೇವರ ಹೆಸರಿನಲ್ಲಿ ಅನಾಚಾರಗಳು ನಡೆದವು.

ನಿತ್ಯ ಮೃಷ್ಟಾನ್ನವನ್ನುಣ್ಣುವ ದೇವರೆ ಚೆನ್ನಯ್ಯನ ಅಂಬಲಿಗೆ ಬಲಿಯಾದ. ಆತನ ಅಂಬಲಿ ಸವಿಯುವುದಕ್ಕಾಗಿಯೇ ಮಹಾರಾಜ ಚೋಳನ ಮನೆಯನ್ನೆ ತ್ಯಜಿಸಿದ. ರುಚಿಯ ತತ್ವಬಲ್ಲ ಜ್ಞಾನಿಗಳ ಮಹಾಜ್ಞಾನಕ್ಕೆ ವೇದ ಆಗಮ ತರ್ಕ ಶಾಸ್ತ್ರಗಳು ಗಡಗಡನೆ ನಡುಗಿದವು.

750

ಚಿಕ್ಕದೊಂದು ಹೊತ್ತುಗೆ ಬೆನಕನ ಕರಡಿಗೆಯಯ್ಯಾ,
ನೀಡುಂಡುಟ್ಟ ಗೊರವನಯ್ಯಾ,
ಪುಣ್ಯವೇನಾದಡಾಗಲಿ ಡಕ್ಕೆಯ ಮೇಲೆ ಅಕ್ಕಿಯ ತಳಿದೆನು.
ನಮ್ಮ ಕೂಡಲಸಂಗಮದೇವನಲ್ಲದೆ
ಅನ್ಯದೈವ ಉಂಟೆನ್ನದಿರು ಕಂಡಾ !

ಅಂಗವೆಂಬುದು ಲಿಂಗಯ್ಯನೇ ಸಂಗಮವಾಗಿರುವ ಮಹಾ ಜ್ಞಾನವೇ ಚುಳುಕಾದ ಚಿಕ್ಕದೊಂದು ಹೊತ್ತಗೆ. ಮಹಾಗಣನಾಯಕನಾದ ಬೆನಕನ ಬುಟ್ಟಿಯೂ ಹೌದು!

ಪುಣ್ಯ ಪಾಪಗಳ ಹೊರತಾದ ಸುಲಿಪಲ್ಲ ಗೊರವನ ಈ ಡಕ್ಕೆಯಲ್ಲಿ ಸಂಗಯ್ಯನೇ ಚುಳುಕಾಗಿ ನುಡಿಯುತ್ತಾನೆ. ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಿಗಿಂತ ಅನ್ಯ ದೈವವಿಲ್ಲವೆಂದು ನುಡಿದು ಈ ಡಕ್ಕೆಯನ್ನು ಬಾರಿಸಬೇಕಿದೆ. ಜಗತ್ತಿಗೆ ಡಕ್ಕೆಯ ಗೊರವನ ಅರಿವಿನ ಮಹಿಮೆಯನ್ನು ಸಾರಬೇಕಿದೆ.

ಅಂಗವೇ ಲಿಂಗವಾಗಿ ಅನ್ಯ ದೈವ ಉಂಟೆಂದು ಸಾರುವ ಲಿಂಗಾಂಗವನ್ನು ಏನೆಂದು ಕರೆಯಬೇಕು? ಅಂಗ ಮರೆತ ಲಿಂಗವನ್ನು ಮತ್ತೆ ಅರಿಯಬೇಕು.

751

ನೀನಲ್ಲದನ್ಯ ದೈವವುಂಟೆಂಬವನ ಬಾಯ
ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ,
ಎನ್ನ ಕೋಪವಡಗದಯ್ಯಾ !
ಎನ್ನ ಭಿನ್ನಪವನವಧರಿಸು, ಕೂಡಲಸಂಗಮದೇವಾ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೇ, ಮನವೆಂಬ ಕುನ್ನಿ ನಿನ್ನನ್ನು ಪೂಜಿಸಿ ನಿನ್ನನ್ನೇ ಹಾಡಬೇಕಿತ್ತು. ಏಕೆಂದರೆ ಅದು ನಿನ್ನ ಬೆಳಕಿನಿಂದಲೇ ಹುಟ್ಟಿದ ಕುನ್ನಿಯದು! ಆದರೂ ನಿನ್ನನ್ನು ಅರಿಯದೇ ನಿನ್ನ ಆಶ್ರಯದಲ್ಲಿಯೇ ಇದ್ದು ಅನ್ಯ ದೈವಗಳನ್ನು ಆರಾಧಿಸುತ್ತದೆ. ನೀನು ವಾಸ ಮಾಡಿದ ನಿನ್ನ ಅಂಗದಿಂದಲೇ ಮತ್ತೊಂದು ದೈವವನ್ನು ನಿರ್ಮಿಸಿ ಪೂಜಿಸಿ ಆರಾಧಿಸುತ್ತದೆ. ಅದಕ್ಕೆಷ್ಟು ಧೈರ್ಯ?

ಅದರ ಕೆನ್ನೆ ಬಾಯಿಗಳನ್ನು ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ; ಎನ್ನ ಕೋಪವು ಅಡಗದಯ್ಯಾ. ಎನ್ನ ಮಸವಿಯನ್ನು ಮನ್ನಿಸಿ ಜಗದ ಮನಗಳನ್ನು ಹಿಡಿದು ಘನಮ ನವನ್ನಾಗಿಸು ತಂದೆ. ಅಂಗದಲ್ಲಿರುವ ಅರಿವಿನ ಲಿಂಗ ತಂದೆಗಿಂತ ಅನ್ಯ ದೈವರುಂಟೆ? ಮನಕ್ಕೆ ತಿಳಿಯುತ್ತಿಲ್ಲ ಎನ್ನ ಭಿನ್ನಪವನು ಅವಧರಿಸು ಲಿಂಗ ತಂದೆ.

752

ಆರು ಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ !
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕರ ?

ಜ್ಞಾನಿ, ಸುಖದ ಸುಖಿ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಜಯಿಸಿದ ವೀರಾಧಿವೀರ. ಜ್ಞಾನಿಯೊಬ್ಬನೆ ಒಂದೆಡೆ; ಊರೆಲ್ಲ ಒಂದೆಡೆ. ಮನೆ ಮಂದಿಗೆಲ್ಲ ಊರಿಗೆಲ್ಲ ಬೇಕಾದ ಸಂಪ್ರದಾಯ ಜ್ಞಾನಿಗೆ ಬೇಡ. ಆತ ನಿಶ್ಚಿಂತ. ಮದವೇರಿದ ಆನೆಯನ್ನು ಪಳಗಿಸಿ ಅದರ ಮೇಲೆ ಸವಾರಿ ಮಾಡುವಾತನಿಗೆ ಶ್ವಾನ ಕಚ್ಚಬಲ್ಲುದೆ ?

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನೇ ಆದ ಸಂಗಮನಾಥನು ಅಕ್ಕರೆಯಿಂದ ಮಾತನಾಡಿಸುವನ್ನಕ್ಕರ ಪರರ ಚಿಂತೆ ತನಗೇಕೆ? ತನುವನ್ನು ಆವರಿಸಿಕೊಂಡ ಮನವೆಂಬ ನಾಯಿಯನ್ನು ಉಪಚರಿಸದಿದ್ದರಾಯಿತು.

753

ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ ;
ಲೋಕ ವಿರೋಧಿ, ಶರಣನಾರಿಗಂಜುವನಲ್ಲ ,
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.

ಶರಣ ಲೋಕ ವಿರೋಧಿ. ಆತ ಯಾರಿಗೂ ಅಂಜುವುದಿಲ್ಲ. ನ್ಯಾಯ ನಿಷ್ಠುರಿ, ದಾಕ್ಷಿಣ್ಯ ಪರನು ಅಲ್ಲ. ಅರಿವಿಗೆ ಶರಣು ಹೋದಾತ. ಸಕಲವನ್ನು ಅರಿವಿನಿಂದ ನೋಡುವಾತ. ಸಂಪ್ರದಾಯಗಳನ್ನು ಧಿಕ್ಕರಿಸುವಾತ.

ಜಾತಿ-ಮತ ಪಂಥಗಳನ್ನು, ಹೆಣ್ಣು ಗಂಡು, ಶ್ರೀಮಂತ ಬಡವ ಎಂಬ ಅಜ್ಞಾನವನ್ನು ಕಳೆದುಕೊಂಡಾತ. ಸಕಲರನ್ನೂ ಹೀಗೆ ನೋಡಿ ಆನಂದ ಪಡುವಾತ.

ಸು-ಶಬ್ದ, ಕು-ಶಬ್ದಗಳನ್ನು ಅಳಿದು ಶಬ್ದ ಕೇಳುವಾತ. ಭಾವ-ದುರ್ಭಾವಗಳನ್ನು ಕಳೆದುಕೊಂಡು ನಿರ್ಭಾವಿಯಾದಾತ. ನೋಡುವ ನೋಟದಲ್ಲಿ ನಿರ್ಭಾವ; ರುಚಿಸುವ ಪದಾರ್ಥದಲ್ಲಿ ನಿರ್ಭಾವ; ಕೇಳುವ ಶಬ್ದದಲ್ಲಿ ನಿರ್ಭಾವ; ಮುಟ್ಟಿ ಮೂಸಿಸುವ ಪರಿಮಳದಲ್ಲಿ ನಿರ್ಭಾವ ತತ್ವವನ್ನು ಅದರ ರುಚಿಯನ್ನು ಸವಿದು ಸದಾ ರಾಜತೇಜದಲ್ಲಿಪ್ಪನು.

754

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ ?
ಕೂಡಲಸಂಗಮದೇವರುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ.

ಜ್ಞಾನಿಗೆ ತನುವಿನಲ್ಲಿ ತನ್ಮಯವಾದ ಅರಿವೆ ಸಂಪತ್ತು. ಅದು ಹಾಲಹಳ್ಳ ! ಆಭರಣ ನೋಡಲು ಹೋದರೆ ಶರಣನಿಗೆ ಅದೊಂದು ಲೋಹ ! ಲೋಕಕ್ಕೆ, ಲೋಕವನ್ನಾಳುವ ರಾಜನಿಗೆ ಚಿನ್ನ! ಕರೆನ್ಸಿ ಶರಣನಿಗೆ ಕಾಗದವಾಗಿ ಕಂಡರೆ ಲೋಕಕ್ಕೆ ಅದು ಕರೆನ್ಸಿಯಾಗಿ ಕಾಣುತ್ತದೆ.

ರಾಜ ಚಿನ್ನದ ಆಸೆಗಾಗಿ ಮತ್ತೊಂದು ರಾಜನ ಮೇಲೆ ಯುದ್ಧ ಮಾಡುತ್ತಾನೆ. ರಾಜನನ್ನು ಅಪಾರ ಸೈನ್ಯವನ್ನು ಕೊಲ್ಲುತ್ತಾನೆ. ಸಾವು ನೋವುಗಳು ಸಂಭವಿಸುತ್ತವೆ. ಮನುಷ್ಯನಿಗೆ ಬೇಕಾದ ಚಿನ್ನ ನಾಯಿಗೂ ಬೇಡ ! ಯಾವ ಪಶು ಪಕ್ಷಿ ಪ್ರಾಣಿಗೂ ಬೇಡ ! ಮನುಷ್ಯನಿಗೇಕೆ ಬೇಕು ಎಂದು ಮನುಷ್ಯನಿಗೆ ಹೊಳೆದಾಗ ಚಿನ್ನದ ಬಣ್ಣ ಅನಾವರಣವಾಗಿ ಲೋಹ ಕಾಣುತ್ತದೆ. ಈ ಅರಿವು ಅಂಗದಲ್ಲಿ ಹಾಲಹಳ್ಳವಾಗಿ ಜ್ಞಾನದ ರೂಪದಲ್ಲಿ ಧಾರಾಕಾರವಾಗಿ ಹರಿಯುತ್ತದೆ. ಬಳಸಿದಂತೆಲ್ಲ ಹೆಚ್ಚಾಗಿ ಅಂಗ ಜ್ಞಾನ ದಾಸೋಹಕ್ಕೆ ಅಣಿಯಾಗುತ್ತದೆ. ಅನ್ನ ದಾಸೋಹ ದಾಸೋಹವಲ್ಲ. ಬಸವಣ್ಣನ ಜ್ಞಾನ ಭಂಡಾರದ ಮುಂದೆ ಬಿಜ್ಜಳನ ಭಂಡಾರ ಬರೀ ಲೋಹ ತುಂಬಿದ ಪೆಟ್ಟಿಗೆಗಳು.

ಪುರಂದರದಾಸರು ವಿಜಯನಗರದ ಅರಸನ ಅರಮನೆಗೆ ಭಿಕ್ಷೆಗೆ ಹೋದರು. ದಾಸರು ಮಹಾಜ್ಞಾನಿಗಳು; ಅವರು ಮತ್ತೆ ಭಿಕ್ಷೆ ಬೇಡುವುದು ಬೇಡವೆಂದು ಅಕ್ಕಿಯಲ್ಲಿ ಮುತ್ತು ರತ್ನಗಳನ್ನು ಸೇರಿಸಿ ಭಿಕ್ಷೆ ನೀಡಿದರು. ಪುರಂದರ ದಾಸರು ಜೋಳಿಗೆಯಲ್ಲಿದ್ದ ಅಕ್ಕಿ ತೆಗೆದು ಅನ್ನ ಮಾಡಲು ಹೋದಾಗ ಅವರಿಗೆ ಬರೀ ಕಲ್ಲುಗಳು ಕಾಣಹತ್ತಿದವು. ರಾಜರು ಅದೆಷ್ಟು ಜಿಪುಣರು. ಅಕ್ಕಿಯಲ್ಲಿ ಬರೀ ಕಲ್ಲು ಬೆರಸಿ ಭಿಕ್ಷೆ ನೀಡಿದ್ದಾರೆ ಎಂದು ಆರಿಸಿ ಪುನಃ ಭೂಮಿಯಲ್ಲಿ ಹುಗಿದರಂತೆ.

ಮುತ್ತು ರತ್ನಗಳು ಯಾರಿಗೆ ದೊರೆತರೂ ಅಂಗದಲ್ಲಿ ರಸಾಯನಿಕ ಕ್ರಿಯೆ ಉಂಟಾಗುತ್ತದೆ. ಅಂಗ ತಲ್ಲಣಗೊಂಡು ಅದನ್ನು ಪಡೆಯಲು ಕೊಲೆ ಮಾಡಲೂ ಹೇಸುವುದಿಲ್ಲ; ಕಳ್ಳನಾಗಲೂ ಹೇಸುವುದಿಲ್ಲ. ಅಂಗದ ಮುಂದೆ ಹಾಲಹಳ್ಳ ಹರಿಯುತ್ತಿರುವುದು ಇವರಿಗೆ ಕಾಣುವುದೇ ಇಲ್ಲ.

755

ಹೋಗಬಿಟ್ಟು, ಮರಳಿ ಹಿಂದೆ ನೋಡಿ,
ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ
ಅದೆ ಪರದ್ವಾರ ನಾಯಕ ನರಕ, ತಪ್ಪದು !

ಅನ್ಯ ವಧುವೆಂಬುದು ನಿಮ್ಮ ರಾಣಿವಾಸ,
ಇದೇ ದಿಬ್ಯ ಕೂಡಲಸಂಗಮದೇವಾ.

ಅನ್ಯ ವಧುವೆಂಬುದು ನಿಮ್ಮ ರಾಣಿವಾಸ, ಇದೇ ದಿಬ್ಯ :

ಕಾವಿ ಧರಿಸಿ, ಹತ್ತಾರು ವರುಷಗಳವರೆಗೆ ಆಗಮ ಉಪನಿಷತ್ತು ಭಗವದ್ಗೀತೆಗಳ ಅಭ್ಯಾಸ ಮಾಡಿ ಪೀಠಾಧಿಪತಿಯಾದ ಜಗದ್ಗುರು, ಸ್ವಾಮಿ ಆಶ್ರಮ ವಾಸಿಗಳಿಗೂ ಇದು ಸಾಧ್ಯ ವಾಗುವುದಿಲ್ಲ. ಎದೆ ತಟ್ಟಿಕೊಂಡು ನಾನು ಬ್ರಹ್ಮಚಾರಿ ಸನ್ಯಾಸಿ ಎಂದು ಹೇಳುವವರಿಗೂ ಸಾಧ್ಯ ವಾಗುವುದಿಲ್ಲ. ಅನ್ಯ ವಧುವೆಂಬುದು ನಿಮ್ಮ ರಾಣಿವಾಸ ಎಂಬ ಸೂತ್ರ ಹಿಡಿದು ತಂತ್ರಜ್ಞಾನ ದೊಂದಿಗೆ ತಿಳಿದ ಜ್ಞಾನಿಗೆ ಮಾತ್ರ ಇದು ಅರ್ಥವಾಗುತ್ತದೆ. ಸಮರ್ಥವಾಗಿ, ಸಹಜವಾಗಿ ಬಸವಣ್ಣನ ಮಾತನ್ನು ಆತ ನೆರವೇರಿಸುತ್ತಾನೆ. ಅನ್ಯ ವಧು ಆತನಿಗೆ ಈಶ್ವರನ ಅರ್ಧಾಂಗಿಯಾಗಿ ಕಾಣುತ್ತಾಳೆ.

ತನು ಒಂದೇ. ತನು ಆವರಿಸಿಕೊಂಡ ಮನ ಒಂದೇ. ತನುವಿನ ಕಣಕಣದಲ್ಲಿದ್ದ ಅರಿವೆಂಬ ಗುರುದೇವನೂ ಒಂದೇ. ಆತನೇ ಮಹಾದೇವ; ಆತನೇ ಸದಾಶಿವ ! ತನುವಿನ ಈ ಸೂತ್ರ ಜಗದ ಸರ್ವತನುಗಳಿಗೂ ಸಂಬಂಧಿಸಿದ್ದು.

ತನುವಿನಲ್ಲಿ ಅರಿವಿದೆ; ಆ ಅರಿವಿಗೆ ಕಾಮ ಬೇಡ ! ತನುವನ್ನು ಮನ ಆವರಿಸಿಕೊಂಡಿದೆ ಆ ಮನಕ್ಕೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಬೇಕು ! ಮನ ತನ್ನಲ್ಲಿ ಉಂಟಾದ ಕಾಮದ ತೃಷೆಯನ್ನು ತನುವಿನ ಮೂಲಕ ಈಡೇರಿಸಿಕೊಳ್ಳುತ್ತದೆ. ಹೀಗೆ ಸುಖಿಸಿ ಆನಂದ ಪಡಲು ಅದಕ್ಕೆ ಮತ್ತೊಂದು ತನು ಬೇಕು. ಮನ, ಕಾಮದ ರುಚಿಯನ್ನು ಮನದಲ್ಲಿ ಬಂಧಿಸಿ, ಆ ರುಚಿಗಾಗಿ ಮತ್ತೊಂದು ತನುವನ್ನು ಮತ್ತೆ ಮತ್ತೆ ನೋಡುತ್ತದೆ. ಸಾಮಾಜಿಕ ಕಟ್ಟಳೆಗಳಿಗೆ ಹೆದರಿ ಮನದಲ್ಲಿಯೇ ಆ ತನುವಿನೊಂದಿಗೆ ಸುಖಿಸಿ ಹಾದರ ಮಾಡುತ್ತದೆ. ತುಟಿಯಲ್ಲಿ ಸನ್ಯಾಸದ ಮಂತ್ರ ಪಠಿಸುತ್ತದೆ. ಅರಿವಿದ್ದರೂ ಅದು ಬಳಕೆಯಾಗದೆ ಮನ ಮತ್ತೆ ಮತ್ತೆ ನೋಡಿ, ನೆನಪಿಸಿಕೊಂಡು ಹಾದರ ಮಾಡುತ್ತದೆ. ಅರಿವಿನಿಂದ ನೋಡಿದರೆ ಈ ಸುಖದ ಅವಶ್ಯಕತೆಯೇ ಇಲ್ಲ. ಮತ್ತೊಂದು ಅರಿವಿನ ತನು ಬೇಕಾದರೆ ಮಾತ್ರ ತನು ತನುವಿನೊಂದಿಗೆ ಸಮಾಗಮ ಗೊಂಡು ಮಗು ಪಡೆಯಬಹುದು. ಜಗತ್ತಿನ ಪ್ರಾಣಿ ಪಶು ಪಕ್ಷಿ ಜಲವರ್ಗಗಳು ಕೂಡಾ ಈ ನಿಯಮದಲ್ಲಿ ಸಹಜವಾಗಿ ಜೀವಿಸುತ್ತಿವೆ. ಆದರೆ ಮನುಷ್ಯ ಮಾತ್ರ ಹಾದರದಿಂದ ಬದುಕುತ್ತಿದ್ದಾನೆ.

ರಾತ್ರಿಯಲ್ಲಿ ಕೊಟ್ಟಿಗೆಯಲ್ಲಿದ್ದ ದನಗಳನ್ನು ದನಗಾಯಿ ಬಿಚ್ಚಿ ಮೇಯಲು ಬಿಡುತ್ತಾನೆ. ಗ್ರಾಮದ ಎಲ್ಲ ದನಗಳು ಬೆತ್ತಲೆ ಸಾಲು ಹಿಡಿದು ಹೋಗುತ್ತವೆ. ಒಂದು ದನ ಮತ್ತೊಂದ ದನಕ್ಕೆ ಕಾಮದ ಸುಖಕ್ಕಾಗಿ ತೊಂದರೆ ಕೊಡುವುದಿಲ್ಲ. ಸಂತಾನ ಬಯಸಿದ ದನದ ಬೇಡಿಕೆಯನ್ನು ಮತ್ತೊಂದು ದನ ಈಡೇರಿಸುತ್ತದೆ. ಸಂತಾನ ಪಡೆದ ದನ, ಸಂತಾನ ಭಾಗ್ಯ ನೀಡಿದ ದನಗಳೆರಡೂ ಸಂತಾನ ಆಗುವವರೆಗೆ ಮತ್ತೆಂದೂ ಸಂತಾನ ಕ್ರಿಯೆಯಲ್ಲಿ ತೊಡಗುವುದಿಲ್ಲ. ದನಗಳಿಗೆ ಪ್ರಾಣಿ ಪಕ್ಷಿಗಳಿಗೆ ಇದು ಸಹಜ ಅರಿವು. ಇದೊಂದು ಸಂತಾನ ಕ್ರಿಯೆ ಮಾತ್ರ; ಸುಖ ದುಃಖಗಳಲ್ಲ !

ಮನುಷ್ಯನಲ್ಲಿ ಅರಿವಿದ್ದರು ಅದು ಬಳಕೆಯಾಗದೆ ಮನಸ್ಸು ಮತ್ತೆ ಮತ್ತೆ ಕಾಮ ಸುಖಕ್ಕಾಗಿ ಹಾತೊರೆಯುತ್ತದೆ. ಸಂತಾನ ಕ್ರಿಯೆ ಗೌಣವಾಗುತ್ತದೆ. ಸುಖ ಪ್ರಧಾನವಾಗುತ್ತದೆ. ಸುಖ

ಸಿಗದಿದ್ದರೆ ಮನದಲ್ಲಿ ಕ್ರೋಧ, ತನಗೆ ಮಾತ್ರ ಸುಖ ಬೇಕೆನ್ನುವ ಲೋಭ, ಮೋಹ, ಮದ, ಮತ್ಸರಗಳು ಸೃಷ್ಟಿಯಾದವು. ಅರಿವು ಬಳಕೆಯಾದರೆ ಮಾತ್ರ ಅರಿಷಡ್ವರ್ಗಗಳು ಸಹಜವಾಗಿ ತೊಲಗುತ್ತವೆ. ಆದರೆ ಮನ ಇದನ್ನು ಬಿಡಬೇಕೆಂದು ನಿರ್ಧರಿಸಿ ಸನ್ಯಾಸಿ, ಬ್ರಹ್ಮಾಚಾರಿಯ ವೇಷ ಧರಿಸಿ ಬೋಧಿಸುವ ಮತ್ತೊಂದು ವ್ಯವಹಾರ ಸೃಷ್ಟಿಸಿಕೊಂಡು ಜಗದ್ಗುರು, ಪೀಠಾಧಿಪತಿ, ಮಠಾಧಿಪತಿಯಾಗಿದೆ. ಸುಪ್ತವಾಗಿ ಸುಖ ಅನುಭವಿಸುತ್ತದೆ.

ಮನವೆಂಬ ಸತಿಯ ದುರ್ವ್ಯವಹಾರ ಅರಿವೆಂಬ ಪತಿಯ ಸಂಗದಿಂದ ಮಾತ್ರ ತೊಲಗುತ್ತದೆ. ಅರಿವೆಂಬ ಪತಿ ಈಶ್ವರನಾದರೆ , ಮನವೆಂಬ ಸತಿ ಈಶ್ವರಿ. ಇವರಿಬ್ಬರೂ ಅಂಗದಲ್ಲಿಯೇ ಸಂಗ ಮಾಡಿ ಸಂಗಮವಾಗಿದ್ದಾರೆ. ಯಾವ ಅಂಗವಾದರೇನು ? ಅದು ಹೆಣ್ಣಾದರೇನು, ಗಂಡಾದರೇನು ? ಅಂಗ, ಅರ್ಧನಾರೀಶ್ವರ ವಾಸ ಮಾಡಿದ ರಾಣಿವಾಸ ! ಮನ ಸಾಕ್ಷಾತ್ ಈಶ್ವರನ ರಾಣಿವಾಸದೊಂದಿಗೆ ಸುಖಿಸಬಹುದೇ ? ಅಥವಾ ರಾಣಿವಾಸ ರಾಣಿವಾಸದೊಂದಿಗೆ ಸುಖಿಸಬಹುದೆ ?

ಅರಿವಿನಿಂದ ತಿಳಿದು ರಾಣಿವಾಸವೆಂಬ ಅಂಗವನ್ನು ಹೋಗಬಿಟ್ಟು, ಮರಳಿ ಹಿಂದೆ ನೋಡಿ, ಮತ್ತೆ ರಾಣಿವಾಸವೆಂಬ ಅಂಗದೊಂದಿಗೆ ಸಂಗಸುಖ ಹೊಂದಬೇಕೆಂಬ ಸಂದೇಹ ಉಂಟಾದರೆ ಅದೇ ಪರದ್ವಾರ ನಾಯಕ ನರಕ, ತಪ್ಪದು !

756

ಕಂಡುದಕ್ಕೆಳಸೆನೆನ್ನ ಮನದಲ್ಲಿ, ನೋಡಿ ಸೋಲೆನೆನ್ನ ಕಣ್ಗಳಲ್ಲಿ,
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ,
ಕೂಡಲಸಂಗಮದೇವಾ, ನಿಮ್ಮ ಶರಣರ
ಪರಿ ಇಂತುಟಯ್ಯಾ.

ಮನ ಕಂಡುದಕ್ಕೆ ವಾಲದು. ಕಣ್ಣುಗಳು ನೋಡಿ ಸೋಲವು. ನಾಲಿಗೆ ಹುಸಿಯ ನುಡಿಯದು. ಮನ ಅರಿವಿಗೆ ಶರಣು ಹೋಗಿ ಶರಣನೇ ತಾನಾದ ತನುವಿನ ಪರಿ.

ಎಲ್ಲ ತನುಗಳಲ್ಲಿಯೂ ಜ್ಞಾನವಿದೆ. ತನುವನ್ನು ಆವರಿಸಿಕೊಂಡ ಮನ ಮಾತ್ರ ತನುವಿನಲ್ಲಿಯೇ ತನ್ಮಯವಾದ ಜ್ಞಾನವನ್ನು ಬಳಸಿಕೊಂಡಿಲ್ಲ, ಆ ಜ್ಞಾನದಲ್ಲಿ ಮನ ಲೀನವಾಗಿಲ್ಲ. ಅಥವಾ ಜ್ಞಾನವೇ ಮನವನ್ನು ಹಿಡಿದು ತನ್ನಂತೆ ಮಾಡಿಕೊಂಡಿಲ್ಲ.

ದೋಷಪೂರಿತ ಮನಗಳಿಗಾಗಿ ಅಥವಾ ಮನದ ದೋಷದಿಂದಾಗಿ ಅರಿವಿನ ತನುವಿಗೆ ಶಿಕ್ಷೆ. ಏಕೆಂದರೆ ಆ ಮನ ಕಂಡುದಕ್ಕೆ ತನುವನ್ನೆಳಸುತ್ತದೆ. ನೋಡಿ ಸೋತ ಕಣ್ಗಳು ತನುವನ್ನು ಬಾಗಿಸುತ್ತವೆ. ಹುಸಿ ನುಡಿದ ನಾಲಿಗೆ ತನುವನ್ನು ಅಪಮಾನಕ್ಕೀಡು ಮಾಡುತ್ತದೆ.

ಸರಕಾರ ಶಿಕ್ಷಣ ಸಂಸ್ಥೆಗಳು ನ್ಯಾಯಲಯ, ಪ್ರವಚನ ಪಟುಗಳು ತನುವಿಗೆ ಶಿಕ್ಷಣ ಕೊಡುತ್ತಾರೆಯೇ ಹೊರತು; ಮನಕ್ಕೆ ಶಿಕ್ಷಣ ಕೊಡುವುದಿಲ್ಲ. ಮನಕ್ಕೆ ಶಿಕ್ಷಣ ಕೊಡುವ ಶಿಕ್ಷಣವನ್ನು ಶಿಕ್ಷಕರು ಕಲಿತಿಲ್ಲ. ಏಕೆಂದರೆ ಅವರು ಮನಕ್ಕೆ ಶಿಕ್ಷಣ ಕೊಡುವ ತಾಂತ್ರಿಕತೆಯನ್ನು ನೈಪುಣ್ಯತೆಯನ್ನು ಹೊಂದಿಲ್ಲ.

ಮನ ಕಣ್ಣಿನಲ್ಲಿ ಆವರಿಸಿದೆ; ನಾಲಗೆಯಲ್ಲಿ ಆವರಿಸಿದೆ, ಚರ್ಮದಲ್ಲಿ ಆವರಿಸಿದೆ,

ಕಿವಿಯಲ್ಲಿ , ಮೂಗಿನಲ್ಲಿ ಆವರಿಸಿದೆ. ಕಣ್ಣು ಕಿವಿ ಮೂಗು ನಾಲಗೆ ಚರ್ಮಕ್ಕೆ ಹೇಗೆ ಶಿಕ್ಷಣ ಕೊಡಬೇಕೆಂಬುದು ಶಿಕ್ಷಕರಿಗೆ ಗೊತ್ತಿಲ್ಲದ ನಿಮಿತ್ಯ ಶಿಕ್ಷಕರಾದವರ ಕಣ್ಣುಗಳೂ ಶಿಷ್ಯಳ ತನುವಿಗೆ ಸೋತು ಪಾತ ಮಾಡುವಾಗಲೇ ಹಾದರ ಮಾಡುತ್ತವೆ. ಈ ಹಾದರ ಪ್ರಾಥಮಿಕ ಪ್ರೌಢ ಕಾಲೇಜು ವಿಶ್ವವಿದ್ಯಾಲಯಗಳ ಶಿಕ್ಷಕರಿಗೂ ಹೊರತಾಗಿಲ್ಲ.

ಕಂಡುದಕ್ಕೆಳಸದೆನ್ನ ಮನ, ನೋಡಿ ಸೋಲವೆನ್ನ ಕಣ್ಣುಗಳು, ಆಡಿ ಹುಸಿಯದೆನ್ನ ನಾಲಿಗೆ ಎನ್ನುವ ಶಕ್ತಿಯನ್ನು ತನಗೆ ತಾನೆ ಪಡೆದುಕೊಳ್ಳಬೇಕು. ಈ ತಂತ್ರಜ್ಞಾನದ ನೈಪುಣ್ಯದ ಶಿಕ್ಷಣವನ್ನು ಪಡೆಯಲು ಮನಕ್ಕೆ ಬಯಕೆಯಾಗಬೇಕು. ಆಗ ಮನವೇ ಘನಮನವಾಗುತ್ತದೆ.

757

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ !
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿರ್ದಡೆ,
ಕೂಡಲಸಂಗಮದೇವಾ,
ನೀ ಸಾಕ್ಷಿಯಾಗಿ ಛೀ ಎಂಬೆನು.

ಅಂಗ ಅರಿವಿನ ಲಾಂಛನ ! ಷಟಸ್ಥಲ ಧ್ವಜ ! ಅಂಗದ ಐದು ಭಾಗಗಳಲ್ಲಿ ಸಕಲ ಅರಿವು ಅಡಗಿದೆ. ಅದಕ್ಕಾಗಿಯೇ ಅಂಗವನ್ನು ಅರಿವೆಂಬ ಲಿಂಗವುಳ್ಳ ಅಂಗೈ ಎನ್ನುತ್ತಾರೆ. ಷಟಸ್ಥಲಗಳುಳ್ಳ ಕರಸ್ಥಲವೆಂದು ಕರೆಯುತ್ತಾರೆ ಶರಣರು.

ಕೃಷಿಯೇ ಮಾಡಲಿ ವ್ಯವಹಾರವೇ ಮಾಡಲಿ ಅಥವಾ ಸೇವೆಯನ್ನಾದರೂ ಮಾಡಲಿ ಅಂಗದಲ್ಲಿರುವ ಅರಿವೆಂಬ ಲಿಂಗಯ್ಯನ ಆಪ್ಯಾಯನಕ್ಕಾಗಿ ಮಾತ್ರ ಎಂದು ಮನ ಅರಿಯಬೇಕು.

ಲಾಂಛನಕ್ಕೆ ಶರಣೆಂಬೆ: ಅಂಗ ಯಾವುದಾದರೇನು ? ಅದು ಅರಿವಿನ ಅಂಗ! ಅರಿವೆಂಬ ಗುರುದೇವನಿದ್ದ ಅಂಗ. ಮಹಾದೇವನ ಮನೆ. ಸದಾಶಿವನ ಲಾಂಛನ ! ಲಾಂಛನವ ಕಂಡು ನಂಬುವೆ; ಅವರಂತರಂಗವ ನೀವೆ ಬಲ್ಲಿರಿ! ತೊತ್ತಿಂಗೆ ತೊತ್ತು ಗೆಲಸವಲ್ಲದೆ ಅರಸರ ಸುದ್ದಿ ಎನಗೇಕಯ್ಯಾ ರತ್ನ ಮೌಕ್ತಿಕದಚ್ಚು, ಕೂಡಲಸಂಗಮದೇವಾ ನಿಮ್ಮ ಶರಣರು.

ಅಂಗ ಅರಿವಿನ ಲಾಂಛನ! ಅದು ಯಾವ ವೃತ್ತಿಯಲ್ಲಿದ್ದರೇನು ? ಮನ ಅರಿವಿನ ತೊತ್ತು ; ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಅದಕೇಕೆ? ಅರಿವಿನ ಸೇವೆ ಮಾಡುವುದೊಂದೆ ಮನದ ಕೆಲಸ. ಅಂಗ ಅರಿವಿನ ಲಾಂಛನ! ಆ ಲಾಂಛನಕ್ಕೆ ಶರಣೆಂಬೆ! ಜಗದಲ್ಲಿರುವ ಸಕಲ ಲಾಂಛನಗಳೂ ರತ್ನ ಮೌಕ್ತಿಕದ ಅಚ್ಚುಗಳೇ ಆಗಿವೆ. ಥಳ ಥಳನೆ ಬೆಳಗುವ ಜಾತಿ ಮುತ್ತಿನ ಪ್ರತಿರೂಪವೇ ಆಗಿವೆ. ಅರಿವಿನ ಸಂಕೇತಗಳೇ ಆಗಿವೆ.

ಲಾಂಛನಕ್ಕೆ ತಕ್ಕ ಆಚರಣೆಗಳು ಅರಿವಿನ ಸೇವೆ ಮಾಡುವ ಮನದಲ್ಲಿ ಮೂಡದಿದ್ದರೆ ನೀ ಸಾಕ್ಷಿಯಾಗಿ, ಸಂಗಮನಾಥನ ಸಾಕ್ಷಿಯಾಗಿ ಛೀ ಎಂಬೆನು.

758

ಮಾಡುವ ನೀಡುವ ಭಕ್ತನ ಕಂಡಡೆ
ನಿಧಿ ನಿಧಾನವ ಕಂಡಂತಾಯಿತ್ತು .

ಪಾದೋದಕ ಪ್ರಸಾದ ಜೀವಿಯ ಕಂಡಡೆ
ಹೋದ ಪ್ರಾಣ ಬಂದಾಂತಾಯಿತ್ತು.
ಅನ್ಯರ ಮನೆಗೆ ಹೋಗಿ, ತನ್ನುದರವ ಹೊರೆಯುದ
ಅಚ್ಚ ಶರಣರ ಕಂಡಡೆ
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.

ಸದಾ ಮನ ಅರಿವಿಗೆ ಭಕ್ತಿ ಮಾಡಿ ಫಲಭರಿತ ಬಾಳೆಯ ಗೊನೆಯಂತೆ ನೆತ್ತಿ ಬಾಗಿದ ಭಕ್ತನ ಕಂಡರೆ ಗುರುವಿಗೆ ನಿಧಿ ಸಂಪತ್ತು ಕಂಡಂತಾಗುತ್ತದೆ. ಅಂತಹ ಭಕ್ತನನ್ನು ಗುರು ಹುಡುಕಿಕೊಂಡು ಹೋಗುತ್ತಾನೆ. ಇಂತಹ ಅರಿವಿನ ತಂತ್ರಜ್ಞಾನವನ್ನು ಸೂಚಿಸುವ ಗುರುವನ್ನು ಹುಡುಕಿಕೊಂಡು ಭಕ್ತ ಹೋಗುತ್ತಾನೆ. ಅವರಿಬ್ಬರೂ ಹೂವಿನೊಳಗಣ ಪರಿಮಳವಿದ್ದಂತೆ. ಹೂ ಬಿಟ್ಟು ಪರಿಮಳವಿರುವುದಿಲ್ಲ; ಪರಿಮಳ ಬಿಟ್ಟು ಹೂ ಇರುವುದಿಲ್ಲ.

ಗುರುವಿನ ಜ್ಞಾನೋದಕವೇ ಭಕ್ತನಿಗೆ ಪಾದೋದಕ. ಗುರುವಿನ ಅಂತರಂಗದ ಅರಿವಿನ ನುಡಿಗಳೇ ಭಕ್ತನಿಗೆ ಪ್ರಸಾದ. ಇವರಿಬ್ಬರೂ ಎರಡಂಗವುಳ್ಳ ಒಂದು ಪ್ರಾಣದ ಜೀವಿಗಳು. ಇವರಿಬ್ಬರು ಅನ್ಯರ ಮನೆಗೆ ಉದರ ಹೊರೆಯುವುದಕ್ಕಾಗಿ ಹೋಗರು. ನಿಶ್ಚಯವಾಗಿಯೂ ಅರಿವಿಗೆ ಶರಣು ಹೋದ ಅಚ್ಚ ಶರಣರು. ಅಂಗದಲ್ಲಿಯೇ ಅರಿವಿನ ಸಂಗಮನಾಥನನ್ನು ಕಂಡು ಆತನ ಅರಿವಿನ ಸುಖ ಉಂಡ ನಿಶ್ಚಿಂತರು. ಜೀವನ್ಮುಕ್ತರು. ಜನನ ಮರಣಗಳಿಂದ ಹೊರತಾದವರು. ಸುಖ ದುಃಖಗಳನ್ನು ಕೊಡವಿ ಸುಖದ ಸುಖವನುಂಡವರು.

759

ಗುರುಭಕ್ತಿಯ ಮಾಡಬಹುದಲ್ಲದೆ ಲಿಂಗಭಕ್ತಿಯ ಮಾಡಬಾರದು.
ಲಿಂಗಭಕ್ತಿಯ ಮಾಡಬಹುದಲ್ಲದೆ ಜಂಗಮಭಕ್ತಿಯ ಮಾಡಬಾರದು.
ಜಂಗಮಭಕ್ತಿಯ ಮಾಡಬಹುದಲ್ಲದೆ ಸಮಯ ಭಕ್ತಿಯ ಮಾಡಬಾರದು.
ಸಮಯ ಭಕ್ತಿಯ ಮಾಡಬಹುದಲ್ಲದೆ ಸಮಯ ಸಂತೋಷ ಮಾಡಬಾರದು.
ಇವೆಲ್ಲವ ಮಾಡಬಹುದಲ್ಲದೆ ತನ್ನ ತಾನರಿಯಬಾರದು;
ತನ್ನ ತಾನರಿದಿಹೆನೆಂಬ ಅಹಂಕಾರವುಳ್ಳಡೆ ನಿಮ್ಮವರಿಗೆ ದೂರ,
ಎಲೆ ದೇವಾ, ಅನ್ಯಕ್ಕೆ ಆಸೆ ಮಾಡಿದೆನಾದಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ, ಕೂಡಲಸಂಗಮದೇವಾ !

ಅನ್ಯಕ್ಕೆ ಆಸೆ ಮಾಡಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ:

ಭೂಮಿ ಹೇಮ ವಿಷಯದ ಮೇಲೆ ಆಸೆ ಮಾಡುವ ತನುವಿನ ರೋಗ; ಮನ ತನುವಿನೊಂದಿಗೆ ಜಪತಪ ಪೂಜೆ ಮಾಡಿದರೆ ಹೋಗುವುದಿಲ್ಲ. ಗುರುಲಿಂಗ ಜಂಗಮ ಭಕ್ತಿ ಮಾಡಿದರೆ ಹೋಗುವುದಿಲ್ಲ. ತನ್ನನ್ನು ತಾನು ತಿಳಿಯಬೇಕು. ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಅರಿವಿನ ಅನುಭವವಾಗಬೇಕು. ಆ ಅರಿವೇ ತಾನಾಗಬೇಕು. ಮನಕ್ಕೆ ಅರಿವಾಯಿತೆಂಬ ಅಹಂಕಾರ ಉಂಟಾದರೂ ತನುವಿನಲ್ಲಿಯೇ ಇರುವ ಅರಿವು ಮನಕ್ಕೆ ಬಹುದೂರ !

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ; ಇವು ಜಗಕ್ಕಿಕ್ಕಿದ ವಿಧಿ! ನಿನ್ನದೆಂಬುದು ಜ್ಞಾನರತ್ನ ಕಾಣಾ ! ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ಗುಹೇಶ್ವರ ಲಿಂಗದಲ್ಲಿ ನಿನ್ನಂತಹ ಸಿರಿವಂತರು ಯಾರೂ ಇಲ್ಲ ಎಲೆ ಮನವೇ.

ಜಗತ್ತಿನ ಜನ ಭೂಮಿ ಹೇಮ ವಿಷಯ ಸುಖಕ್ಕಾಗಿ ಅವುಗಳಿಗೆ ಆಸೆ ಮಾಡಿವೆ. ಇವು ಮೂರೂ ಜಗದಲ್ಲಿರುವ ಜನಕ್ಕೆಲ್ಲ ವಿಧಿಯಾಗಿ ಕಾಡುತ್ತಲಿದೆ. ಅಂಗಕ್ಕೆ ಆಸೆಯ ಈ ರೋಗ ದೂರವಾಗಬೇಕಾದರೆ ಮನ ಅಂಗದಲ್ಲಿರುವ ಅರಿವಿಗೆ ಶರಣು ಹೋಗಬೇಕು. ಅಂದರೆ ಅಂಗ ದಲ್ಲಿರುವ ಮನ ಅಂಗದಲ್ಲಿರುವ ಅರಿವನ್ನೇ ಅರಿಯಬೇಕು; ತನ್ನ ತಾನರಿಯಬೇಕು. ಇದು ಸರಳವಲ್ಲ.

ಅಂಗದಲ್ಲಿರುವ ಗುರು ಲಿಂಗ ಜಂಗಮರೆಂದರೆ ಯಾರೆಂದು ಅಂಗವನ್ನು ಆವರಿಸಿದ ಮನ ಅರಿಯಬೇಕು. ಅವರಿಗೆ ಭಕ್ತಿ ಮಾಡುವ ಮೂಲಕ ತನ್ನನ್ನು ತಾನರಿಯಬೇಕು. ಅರಿತೆನೆಂಬ ಅಹಂಕಾರವು ಲವಲೇಷ ಮೂಡದಂತೆ ತನ್ನನ್ನೇ ತಾನರಿಯಬೇಕು. ಅರಿತ ಮೇಲೆ ಆ ಅರಿವೆಂಬ ಗುರುದೇವನೇ ತಾನಾಗುತ್ತಾನೆ !

760

ದಾಸನಂತೆ ತವನಿಧಿಯ ಬೇಡುವನಲ್ಲ;
ಚೋಳನಂತೆ ಹೊನ್ನ ಮಳೆಯ ಕರೆಸೆಂಬವನಲ್ಲ;
ಅಂಜದಿರು ! ಅಂಜದಿರು ! ಅವರಂದದವ ನಾನಲ್ಲ !
ಎನ್ನ ತಂದೆ, ಕೂಡಲಸಂಗಮದೇವಾ,
ಸದ್ಭಕ್ತಿಯನೆ ಕರುಣಿಸೆನಗೆ.

ಬಲು ಜಾಣತನದಿಂದ ಮನ ಅರಿವಿನ ಘನ ಸಂಪತ್ತನ್ನು ಹೊಂದಬೇಕು. ತನು ಮನ ಅರಿವು ಒಂದೆಡೆ ಬಂಧಿಯಾಗಿದ್ದರೂ ಅದು ಮನಕ್ಕೆ ಸಾಧ್ಯವಾಗುವುದೇ ಇಲ್ಲ.

ತನುವೊಂದು ಅರಿವಿನ ತವನಿಧಿ. ಬೇಡಿದ್ದನ್ನು ಕೊಡುವ ಕಾಮಧೇನು. ದಾಸಿಮಾರ್ಯರು ಬೇಡಿದ ಭಕ್ತರಿಗೆ ಬೇಕಾದುದನೆಲ್ಲ ತಮ್ಮ ತವ ನಿಧಿಯಿಂದ ನೀಡಿದರೆಂದು ಕತೆಯಿದೆ. ತವ ನಿಧಿಯನ್ನು ದಾಸಿಮಾರ್ಯರು ತಾವು ನೇಯ್ದ ವಸ್ತ್ರವನಿತ್ತು ಬೇಡಿದರಂತೆ; ಬೇಡಿದ ತವ ನಿಧಿಯನ್ನು ಶಿವ ಕೊಟ್ಟನೆಂದು ಕತೆಯಿದೆ.

ಚೋಳರಾಜ ಮಹಾಭಕ್ತ. ಶಿವನನ್ನು ಒಲಿಸಿಕೊಂಡ. ಹೊನ್ನ ಮಳೆಯನ್ನೇ ಸುರಿಸೆಂದು ಶಿವನನ್ನು ಬೇಡಿ ವರಪಡೆದನೆಂಬ ಕತೆಯಿದೆ. ಈ ಎರಡು ಕತೆಗಳು ಅರಿವಿನ ಕತೆಯೆಂದು ಬಸವಣ್ಣನವರಿಗೆ ತಿಳಿದಿದ್ದರೂ ಜನಕ್ಕೆ ಇನ್ನೂ ಸರಳವಾಗಿ ತಿಳಿಯಲೆಂದು ಅವರಂತೆ ಬೇಡುವವ ನಾನಲ್ಲ. ಬೇಡಿದವರಿಗೆ ಒಲಿದು ಕರುಣಿಸಿದೆ. ಬೇಡಿದವರಿಗೆ ಬೇಡಿದುದನು ನೀಡಿದೆ. ದಾಸನಂತೆ ತವನಿಧಿಯ ಬೇಡುವುದಿಲ್ಲ; ಚೋಳನಂತೆ ಹೊನ್ನ ಮಳೆ ಸುರಿಸೆಂದು ಬೇಡುವುದಿಲ್ಲ . ನಿನ್ನ ಬೊಕ್ಕಸಕ್ಕೆ ಕೈ ಹಾಕುವುದಿಲ್ಲ.

ನೀನು ಅರಿವೆಂಬ ಗುರುದೇವನು ಹೌದು; ಮಹಾದೇವನೂ ಸದಾಶಿವನೂ ಹೌದು. ನಿನಗೆ ಭಕ್ತಿ ಮಾಡುವುದನ್ನು ಮಾತ್ರ ನನಗೆ ಕರುಣಿಸು ತಂದೆ. ಅರಿವಿಗೆ ಭಕ್ತಿ ಮಾಡಿ ದಾಸನಂತೆ ಶರಣು ಹೋಗುವುದನ್ನು ಕರುಣಿಸು. ಸದ್ಭಕ್ತಿಯನೆ ಬೇಡುವೆನು. ನೀನೊಲಿದ ಮನೆಯೆ

ಅರಮನೆ; ಜ್ಞಾನದ ಭಂಡಾರ ! ಅದನ್ನೇ ಕರುಣಿಸು ಎನಗೆ ಎಂದು ಬೇಡುವ ಸೂತ್ರವನ್ನು ಬಸವಣ್ಣನವರು ಓದುಗರಿಗೆ ಅರಿವಾಗುವಂತೆ ದಾಖಲಿಸಿದ್ದಾರೆ.

761

ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸದರ್ಥರು,
ಲಿಂಗದಲ್ಲಿ ಸೊಮ್ಮು ಸಂಬಂಧವರಿತ ಸ್ವಾಮಿ ಭೃತ್ಯರೆಲ್ಲರು,
ನಿಮ್ಮ ಬೇಡೆ, ಅಂಜದಿರು !
ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು,
ಇದು ಕಾರಣ, ಕೂಡಲಸಂಗಮದೇವರ ಲೋಕವ
ಹಂಚಿಕೊಳ್ಳಿ ನಿಮ ನಿಮಗೆ

ಶರಣರು ಅಂಗದಲ್ಲಿರುವ ಅರಿವೆಂಬ ಲಿಂಗವನು ತಿಳಿದು ಸಮ್ಯಕ್ ಜ್ಞಾನವನ್ನು ಹೊಂದಿದವರು. ಲಿಂಗಾಂಗದ ಅನುಭಾವಿಗಳು; ಸಮರ್ಥರು. ಅಂಗದಲ್ಲಿಯೇ ಇರುವ ಲಿಂಗಾಂಗ ಸಾಮರಸ್ಯದ (ಸೊಮ್ಮು) ಸಂಪತ್ತನ್ನು ಅರಿತ ಸ್ವಾಮಿಯ ಸೇವಕರೆಲ್ಲರು ನಿಮ್ಮನ್ನು ಬೇಡರು; ಎಲೆ ದೇವನೆ ಅಂಜದಿರು.

ತಿಳಿದರೆ ಅಂಗವೇ ಲಿಂಗವೆಂಬ ಸ್ವರ್ಗದ ಮನೆ. ಇಂತಹ ಅನುಭಾವಿ ಮಹಾಗಣಂಗಳೆಂಬ ಲೋಕವುಂಟು ನನಗೆ. ನನಗೊಂದೆ ಅಲ್ಲ; ಅಂಗವುಳ್ಳ ಅಂಗಿಗಳೆಲ್ಲ ಲಿಂಗಾಂಗಿಗಳೇ ಆಗಿದ್ದಾರೆ. ಸಾಧ್ಯಾವಾದರೆ ಮನವನ್ನು ಘನಮನವನ್ನಾಗಿಸಿಕೊಂಡು ಹಂಚಿಕೊಳ್ಳಿರಿ. ಲೋಕದ ತನುಗಳೆಲ್ಲ ನಿಮ ನಿಮಗೆ ಎಟಕಿದಷ್ಟು !

ಮಾಹೇಶ್ವರನ ಐಕ್ಯಸ್ಥಲ

762

ಅಂದಂದಿನ ಹೊಂದಿಗೆಯ ಬಿಂದು ಮಾತ್ರದಲಾದ
ಅಂದವ ಕೆಡಿಸಲರಿಯದ ಅಂಧಕರ ನೋಡಾ !
ಸಮರಸವಿಲ್ಲದೆ ನೆರಹಿ ಮಾಡಿ ಭಕ್ತರಾದೆವೆಂಬವರನೇನೆಂಬೆ ?
ಆಚಾರವಂಚಕರ ಎನಗೆ ತೋರದಿರು
ಕೂಡಲಸಂಗಮದೇವಾ, ನಿಮ್ಮ ಧರ್ಮ !

ಜಲಬಿಂದು ಜಲಬಿಂದುವನೇ ಸೇರಿ ಬಿಂದು ಮಾತ್ರದಲಾದ ಅರಿವಿನ ಅಂಗವಿದು. ಅಂದಂದಿನ ಹೊಂದಿಗೆಯ ಬಿಂದು ಮಾತ್ರದಿಂದ ಅರಿವಿನ ಅಂಗವಾಗಿ ಗರ್ಭದಲ್ಲಿಯೇ ರೂಪುಗೊಂಡು ಅರಿವಿನ ನಿರೂಪವನ್ನೇ ಹೊಂದಿ ಹೊರಬಂದಿದೆ.

ಬಿಂದು ಮಾತ್ರದಲಾದ ಅರಿವಿನ ಅಂಗವನು ಅಂಧಕರಾಗಿ ಕೆಡಿಸಿಕೊಳ್ಳುವ ಆಚಾರವಂಚಕ ಮನವನ್ನು ಎನಗೆ ತೋರದಿರಾ. ಕೂಡಲಸಂಗಮದೇವಾ ನಿಮ್ಮ ಧರ್ಮ !

ಅಂಗದಲ್ಲಿರುವ ಅರಿವಿಗೆ ಭಕ್ತಿ ಮಾಡಿ ಆಚಾರದಿಂದ ಮೆರೆಯಬೇಕಾದ ಮನ ಅರಿವಿನ ಆಚಾರದ ವಂಚನೆಗೆ ಒಳಗಾಗಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳಿಗೆ ಬಲಿಯಾಗಿದೆ. ಅದನ್ನೇ ಸುಖವೆಂದು ತಿಳಿದು ವಂಚನೆಗೆ ಒಳಗಾಗಿದೆ. ಇಂತಹ ವಂಚಕರನ್ನು ತೋರದಿರು ತಂದೆ ಎಂದಿದ್ದಾರೆ.

763

ಕಲಿಯ ಕೈಯ ಕೈದುವಿನಂತಿರಬೇಕಯ್ಯಾ ,
ಎಲುದೊರೆ ಸರಸವಾಡಿದಡೆ ಸೈರಿಸಬೇಕಯ್ಯಾ ,
ರಣದಲ್ಲಿ ತಲೆಹರಿದು ಅಟ್ಟೆ ನೆಲಕ್ಕೆ ಬಿದ್ದು
ಬೊಬ್ಬಿಡಲದಕ್ಕೊಲಿವ ನಮ್ಮ ಕೂಡಲಸಂಗಮದೇವ

ರಣದಲ್ಲಿ ತಲೆಹರಿದು ಅಟ್ಟೆ ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೊಲಿವ:

ಅಂಗದಲ್ಲಿ ಸಂಗಮವಾದ ಅರಿವಿನ ಸಂಗಯ್ಯ ಒಲಿಯಲು ಆತ ಕೈಲಾಸದಲ್ಲಿಲ್ಲ. ಅಂಗದಲ್ಲಿಯೇ ಇದ್ದು ಅಂಗಕ್ಕೆ ಒಲಿಯದೆ ಅಂಗವನ್ನೇ ಮಂಗನನ್ನಾಗಿಸಿದ್ದಾನೆ. ತಾನು ಅಂಗದ ಲ್ಲಿಯೇ ಆನಂದದಿಂದ ಇದ್ದಾನೆ.

ಜಗದಲ್ಲಿರುವ ಅಂಗಗಳೆಲ್ಲ ಅರಿವಿನಿಂದ ನೋಡಲು ಒಂದೇ ತೆರನಾಗಿ ಕಂಡರೂ ಪರೀಕ್ಷಿಸಲು ಹೋದರೆ ಒಂದಾಗಿಲ್ಲ. ಒಂದಂಗ ಒಂದೊಂದು ತೆರನಾಗಿ ಕಾಣುವುದು. ಶ್ರೀಮಂತ, ಬಡವನೆಂದು, ಕಳ್ಳ , ಹಾದರಿಗ, ವೇಶ್ಯೆ ವಿಷಯಲಂಪಟ, ಸೋಮಾರಿ, ಹೆಣ್ಣು, ಗಂಡು, ಕುರೂಪಿ, ಸುಂದರಿಯ ರೂಪದಲ್ಲಿ ಕಾಣುತ್ತವೆ. ಅರಿವಿನಿಂದ ನೋಡಿದರೆ ರಕ್ತ, ಮೂಳೆ, ಮಾಂಸ, ಮಜ್ಜೆ, ಮೇದಸ್ಸು ಉಳ್ಳ ಚರ್ಮದ ಕವಚದಿಂದ ಬಂಧಿಸಲ್ಪಟ್ಟ ಅರಿವಿನ ಅಂಗ. ಈ ಅಂಗದ ಕಣಕಣದಲ್ಲಿ ಲಿಂಗ ಭರಿತವಾಗಿದ್ದರೂ ಮನ ಅದನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ರಾವಣ ಕರಳು ಹರಿದುಕೊಂಡು ತಂತಿಯ ಮಾಡಿ, ಬೆರಳನ್ನೇ ಕಡ್ಡಿಯನ್ನಾಗಿ ಮಾಡಿ, ವೀಣೆ ಬಾರಿಸಿದ. ಸಿರವನ್ನೇ ಸೋರೆಯನ್ನಾಗಿಸಿದರೂ ಆ ನೋವನ್ನು ಸೈರಿಸಿದ. ಒಲಿವನೋ, ಒಲಿಯನೋ ಎಂಬ ಚಿಂತೆಯೊಂದೇ ಕಾಡುತ್ತಿತ್ತು.

ಮೂರು ಪಾದ ಇಡಲು ಭೂಮಿ ಬೇಡಿ ವಾಮನನನ್ನೇ ಪಾತಾಳಕ್ಕೆ ತುಳಿದ. ಜಗದಗಲ ಮುಗಿಲಗಲ ವ್ಯಾಪಿಸಿಕೊಂಡುದೆಲ್ಲ ನನ್ನದೆಂಬುದನ್ನು ಸೂಚಿಸಲು ಹೀಗೆ ಮಾಡಿದ, ಸಕಲರಿಗೂ ಅರಿವಿನ ಪಾಠ ಬಲಿಯ ಮೂಲಕ ತಿಳಿಸಿದ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಮನವನ್ನು ದಾಳವಾಗಿಸಿಕೊಂಡು, ಅಂಗವನ್ನೇ ರಣರಂಗ ಮಾಡಿ, ಅರಿಷಡ್ವರ್ಗಗಳನ್ನು, ಸಪ್ತವ್ಯಸನಗಳನ್ನು , ಅಷ್ಟಮದಗಳನ್ನು ಅಂಗ ದಲ್ಲಿಯೇ ಸೃಷ್ಟಿಸಿದ. ಪಾಂಡವರನ್ನು ಕೌರವರನ್ನು ಅಂಗದಲ್ಲಿಯೇ ಸೃಷ್ಟಿಸಿ ವ್ಯಾಸನ ಅವತಾರದಲ್ಲಿ ಕತೆ ಬರೆಯಿಸಿದ. ಅಂಗದಲ್ಲಿಯೇ ಶ್ರೀ ಕೃಷ್ಣನನ್ನು ಸೃಷ್ಟಿಮಾಡಿ, ಅಂಗದೊಂದಿಗೆ ಪಾಂಡವರನ್ನು ರಕ್ಷಿಸಿದ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮಕ್ಕೆ ಹೊಸ ವ್ಯಾಖ್ಯೆ ಬರೆದು ಧರ್ಮ, ಭೀಮ , ಅರ್ಜುನ, ನಕುಲ, ಸಹದೇವರೆಂದು ಹೆಸರಿಸಿದ. ಮನವನ್ನೇ ದ್ರೌಪದಿಯನ್ನಾಗಿಸಿ ಸಹ ಧರ್ಮಿಣಿಯನ್ನಾಗಿಸಿದ! ಇದನ್ನೇ ಅಂಗದ ರಣರಂಗವೆಂದು ಹೆಸರಿಸಿ ಪ್ರಸಿದ್ಧಿ ಪಡಿಸಿದ.

764

ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ
ಆಚಾರವ ಶಿವಾಚಾರವ ಮಾಡುವೆ;
ಭಯ ಭಕ್ತಿಯಿಂದ ತೋರುವೆ ಮನದಲ್ಲಿ ವಂಚನೆಯಿಲ್ಲದೆ;
ಭಾವ ಶುದ್ಧ ಪೂಜೆಯ ಮಾಡುವೆ
ಎನ್ನ ಪ್ರಾಣ ಶಕ್ತಿಯಿಂದ ಕೂಡುವೆ
ಕೂಡಲಸಂಗಮದೇವರ.

ಲಿಂಗಕ್ಕೆ ಪತ್ರೆ ಪುಷ್ಪಗಳನ್ನಿರಿಸಿ ಭಸ್ಮ ಧರಿಸಿ ತ್ರಿಕಾಲ ಪೂಜಿಸುವುದು ಗೋಚರದ ಆಚಾರ. ಅಂಗದ ಮೇಲೆ ಲಿಂಗ ಕಟ್ಟಿ ಈ ಆಚಾರ ಮಾಡಿದರೆ ಆಸೆ ರೋಷ ಹರುಷಾದಿಗಳು ನೂರಾರು ವರ್ಷ ಕಳೆದರೂ ಹೋಗುವುದಿಲ್ಲ. ಅವು ತೊಲಗಬೇಕಾದರೆ ಅಗೋಚರದ ಅರಿವಿನ ಶಿವಾಚಾರವ ಮಾಡಲೇಬೇಕು.

ಅಂಗ ವೈರಿಯೂ ಹೌದು; ಮಿತ್ರನೂ ಹೌದು. ಭಾವ ಹರುಷಾದಿಗಳಿಂದ ಅರಳಿ ಮಿತ್ರನಾಗುತ್ತದೆ. ಭಾವ ಹರುಷಾದಿಗಳು ಕೆರಳಿ ವೈರಿಯಾಗುತ್ತದೆ. ಅಂಗ ಅಂಗದಂತೆಯೇ ಸಹಜವಾಗಿ ತೋರುವ ಕ್ರಿಯೆ ಕಣ್ಣಿನ ನಿರ್ಭಾವದಲ್ಲಿ ಅಡಗಿದೆ. ಭಾವದಿಂದಾಗಿ ಕಣ್ಣಿಗೆ ಆಸೆ ರೋಷ ಹರುಷಾದಿಗಳು ಆವರಿಸಿಕೊಂಡಿವೆ. ಆಸೆ ರೋಷ ಹರುಷಾದಿಗಳು ನಿರ್ಭಾವವನ್ನು ಮುಟ್ಟಲರಿಯವು. ಭಾವವನ್ನು ಮುಟ್ಟಿ ದುರ್ಭಾವಗೊಳಿಸದೆ ಬಿಡಲರಿಯವು. ಗೋಚರದ ಆಚಾರಕ್ಕೆ ಅಗೋಚರದ ನಿರ್ಭಾವ ತಿಳಿಯದು. ಅಗೋಚರದ ಶಿವಾಚಾರದಿಂದಾಗಿ ಭಾವ ದುರ್ಭಾವಗಳು ಅಳಿದು ನಿರ್ಭಾವ ಮಾತ್ರ ಉಳಿಯುತ್ತದೆ.

ಮನ ಅರಿವಿಗೆ ಭಕ್ತಿ ಮಾಡಿ ವಂಚನೆಯಿಂದ ಮುಕ್ತವಾಗಿದೆ. ಅರಿವಿನ ಪೂಜೆಯಿಂದಾಗಿ ಭಾವ ಶುದ್ಧವಾಗಿ ನಿರ್ಭಾವವಾಗಿದೆ. ಪ್ರಾಣ ಶಕ್ತಿ ಅಧಿಕವಾಗಿ ಮನ ಘನಮನವಾಗಿದೆ. ಭಾವ ನಿರ್ಭಾವವಾಗಿ ಅಂಗ ಸಂಪೂರ್ಣ ಅರಿವಿನಿಂದ ಸಂಗಮವಾಗಿ ಸಂಗಮದೇವನೇ ಆಗಿದೆ.

765

ಪೂರ್ವಬೀಜ ವಾಯು ಪ್ರಾಣಿಯಲ್ಲ,
ಲಿಂಗಪ್ರಾಣಿಯಾ ಶರಣನು.
ಏಕೋಗ್ರಾಹಿ ಭಾವಭೇದವಿಲ್ಲಾಗಿ
ಮನ ಪ್ರವೇಶಿಯಾ ಶರಣನು.
ನಿಮ್ಮ ಪೂಜಿಸಿ ತನುಧರ್ಮವ ಮರೆದು
ನಿಮ್ಮ ಪ್ರತಿಬಿಂಬದಂತಿಪ್ಪ,
ಕೂಡಲಸಂಗಮದೇವಾ, ನಿಮ್ಮ ಶರಣನು.

ಪೂರ್ವಬೀಜ ವಾಯು ಪ್ರಾಣಿಯಲ್ಲ, ಲಿಂಗ ಪ್ರಾಣಿಯಾ ಶರಣನು:
ಪೂರ್ವಾಶ್ರಯದ ತಂದೆ ಬಿತ್ತಿದ ಬೀಜ ಜಲಬಿಂದುವಿನಿಂದ ಕೂಡಿತ್ತು. ಜಲಬಿಂದುವಿನ

ಬೀಜದಲ್ಲಿ ಆಮ್ಲಜನಕ, ಜಲಜನಕ, ಬಯಲುಸೇರಿ ಜೀವಜಲ ಬಿಂದುವಿನ ಬೀಜವಾಗಿ ಗರ್ಭದಲ್ಲಿ ಹರಿದಿತ್ತು. ಆ ಗರ್ಭದಿಂದ ಉದಯಿಸಿದ ಅಂಗ ಮನವೆಂಬ ವಾಯು ಸುಳಿಯುತ್ತ ಬೆಳೆದಿದೆ. ವಾಯು ಹರಿದಂತೆಲ್ಲ ಅಂಗ ಹರಿದು ವಾಯುಪ್ರಾಣ ಎನ್ನಿಸಿಕೊಂಡಿದೆ.

ಬೀಜ ಬಿತ್ತಿದ ಪೂರ್ವಾಶ್ರಯದ ತಂದೆ ತಾಯಿಗಳು ವಾಯು ಪ್ರಾಣ ಎಂಬ ಮಾಂಸ ಪಿಂಡಕ್ಕೆ ಜನ್ಮ ನೀಡಿದರು. ಮಾಂಸ ಪಿಂಡವನ್ನೇ ಮಂತ್ರಪಿಂಡವನ್ನಾಗಿಸಿದ ಅರಿವೆಂಬ ಗುರುತಂದೆ. ಅಂದಿನಿಂದ ಪೂರ್ವಾಶ್ರಯದ ಬೀಜ ಕಳೆದು ಬಯಲ ಬೀಜವಾಯಿತು.

ವಾಯು ಪ್ರಾಣಿಯೆಂಬ ಮನ ಅರಿವಿನ ತಂದೆಯನ್ನು ಕುರಿತು ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಎಂದು ಹಾಡಿ ಬಯಲಲ್ಲಿ ಸೇರಿ ಬಯಲಾಯಿತು.

ಮನ ಏಕೋಗ್ರಾಹಿಯಾಯಿತು. ಭೇದ ಭಾವಗಳನು ಕಳೆದುಕೊಂಡು ಚಲನೆ ಇಲ್ಲದೆ ನಿಶ್ಚಲವಾಯಿತು. ಬಯಲನೆ ಪೂಜಿಸಿದ ಮನ ತನು ಧರ್ಮವನ್ನೇ ಮರೆಯಿತು. ತನುವಿನ ಪ್ರತಿ ಬಿಂಬದ ಬಯಲಾಯಿತು. ಅಂಗ ಮನಗಳೆರಡು ಲಿಂಗದಲ್ಲಿ ಸಂಗಮವಾಗಿ ಸಂಗಮನಾಥನೇ ತಾನಾಯಿತು.

ಪ್ರಸಾದಿಸ್ಥಲ

ಪ್ರಸಾದಿಯ ಜ್ಞಾನಿ ಸ್ಥಲ

766

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ ;
ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯಾ.
ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯಾ !
ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ.
ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ.
ಇದು ಕಾರಣ ಕೂಡಲಸಂಗಮದೇವರ ಪೂಜಿಸಿ
ಪ್ರಸಾದವ ಹಡೆವರೊಬ್ಬರೂ ಇಲ್ಲ !

ಸ್ನಾನ ಪೂಜೆ ಮುಗಿಯುವವರೆಗೂ ಅನ್ನ ನೀರು ಮುಟ್ಟುವುದಿಲ್ಲ ಎನ್ನುವ ವ್ರತದಲ್ಲಿ ಮುಳುಗಿದವರು ಕೋಟ್ಯಾನುಕೋಟಿ ಜನ. ಹಸಿವು ತೃಷೆ ಆಗುವ ಮುನ್ನ ಆರಾಧ್ಯ ದೇವರ ಪೂಜೆಗೆ ಮುನ್ನ, ಸ್ನಾನ ಮಾಡಿ ಗಂಧ ವಿಭೂತಿ ರುದ್ರಾಕ್ಷಿ ಧರಿಸಿಕೊಂಡು ಆರಾಧ್ಯ ದೇವರನ್ನು ಪೂಜಿಸಿ ಆ ದೇವರಿಗೆ ನೈವೇದ್ಯ ಅರ್ಪಿಸಿ ತಾವು ಉಣ್ಣುತ್ತಾರೆ.

ಸ್ನಾನ ಮಾಡುವುದರಿಂದ ದೇಹದ ಕೊಳೆ ಹೋಗಬಹುದು. ದೇವರಿಗೆ ಮಜ್ಜನ ಮಾಡುವುದರಿಂದ ದೇವರ ಮೇಲಿದ್ದ ಧೂಳು ಹೋಗಬಹುದು. ಭ್ರಮೆಯಿಂದಾಗಿ ಪೂಜಿಸಿದ ಸುಖ ಉಂಟಾಗಬಹುದು. ಉಂಡ ಮೇಲೆ ಹಸಿವು ಹಿಂಗಬಹುದು. ಆದರೆ ಪೂಜಿಸಿದ್ದು ಯಾತಕ್ಕಾಗಿ ? ತನ್ನ ಹಸಿವು ನೀರಡಿಕೆ ಹಿಂಗುವುದಕ್ಕಾಗಿಯೊ ? ದೇವರ ಮೇಲಿನ ಧೂಳು ಕಳೆಯುವುದಕ್ಕಾಗಿಯೇ ? ದೇವರೆಂದರೆ ಯಾರು ? ನಾನು ಹೀಗೇಕೆ ಮಾಡುತ್ತೇನೆ. ದೈನಿಕ ತೊಂದರೆಗಳು ಪೂಜಿಸುವುದರಿಂದ ಕಡಿಮೆಯಾಗಲಿಲ್ಲವಲ್ಲ ಎಂದು ಒಮ್ಮೆಯಾದರೂ ಚಿಂತಿಸದೆ ಆಯುಷ್ಯ ಕಳೆಯುವವರಿಗೆ ಪೂಜಿಸಿದರೂ ದೇವರು ಪ್ರತ್ಯಕ್ಷವಾಗುವುದಿಲ್ಲ.

ಭ್ರಮೆಯಿಂದ ದೇವರನ್ನು ಪೂಜಿಸಿದ. ಭ್ರಮೆಯಿಂದಲೇ ದೆವ್ವವನ್ನು ಸೃಷ್ಟಿಸಿದ. ಈ ಎರಡೂ ಭ್ರಮೆಯಿಂದಾಗಿ ಅಂಗದಲ್ಲಿಯೇ ಸಂಗಮವಾದ ಬ್ರಹ್ಮನ ಇರುವು ಹಾಗೆಯೇ ಉಳಿಯಿತು.

ಮನದ ಭ್ರಮೆ ಕಳೆಯಲು ಅರಿವಿನ ಊಟ ಮಾಡಲಿಲ್ಲ, ಜ್ಞಾನದ ಸ್ನಾನ ಮಾಡಲಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ದೇವರ ಪೂಜಿಸಿ ಅರಿವಿನ ಪ್ರಸಾದವ ಹಡೆಯಲಿಲ್ಲ. ಭ್ರಮೆ ಕಳೆದುಕೊಂಡು ಪೂಜಿಸುವ ದೇವರನ್ನು ನೋಡಿದರೆ ಅದೊಂದು ಕಲ್ಲು; ಕೆತ್ತಿದ ಕಲ್ಲು. ಉಳಿಯಪೆಟ್ಟು ಬಿದ್ದು ಮೂರ್ತಿಗೊಂಡ ಕಲ್ಲು. ಮೂರ್ತಿಯಲ್ಲಿ ಕಲ್ಲು ತನ್ಮಯವಾಗಿದೆ. ಎಂದು ತಿಳಿದು ನೋಡುವುದೇ ಕಣ್ಣಿನಿಂದ ಪೂಜಿಸುವುದು. ಕಲ್ಲೊಳಗಣ ಬೆಲ್ಲ ಮೆದ್ದು ಮಜ್ಜನ ಮಾಡುವುದು. ಹಸಿವಾಯಿತ್ತೆಂದು ಪೂಜಿಸಲಿಲ್ಲ.

ಜಡದೇವರ ಪೂಜೆ ನಿಂತು ಹೋಯಿತು. ದೇವರೊಳಗಣ ಕಲ್ಲು ತೋರಿದ ಅರಿವಿನ ದೇವರ ಪೂಜೆ ಆರಂಭವಾಯಿತು. ದೇವರಿಗೆ ಉಣಿಸುತ್ತ ಉಂಡ; ದೇವರಿಗೆ ಎರೆಯುತ್ತ ಮಜ್ಜನ ಮಾಡಿದ. ಕಣ್ಣಿಗೆ ಆರತಿ ಬೆಳಗಿದ. ಮೂಗಿಗೆ ಪರಿಮಳ ತೋರಿದ. ನಾಲಗೆಗೆ ನೈವೇದ್ಯ

ಮಾಡಿದ. ಕಿವಿಗೆ ವಾದ್ಯ ನುಡಿಸಿ ಘಂಟಾನಾದವ ಮಾಡಿದ. ಚರ್ಮದ ಮೂಲಕ ಸ್ಪರ್ಶನಂಗೈದು ಛತ್ರಿ ಚಾಮರ ಬೀಸಿದ.

ಮಷ್ಟಾನ್ನಗಳನ್ನು ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಿಗೆ ಉಣ್ಣಿಸಿ ತಾನುಂಡು ಅರ್ಪಿತವ ಮಾಡಿದ. ಅರಿವಿನ ಪ್ರಸಾದವ ಹಡೆದ. ಕಣ್ಣು ಕಿವಿ ಮೂಗು ನಾಲಗೆ ಚರ್ಮ ಅರಿವಿನಿಂದ ಥಳಥಳನೆ ಅಂಗದಂತೆ ಹೊಳೆದವು. ಅಂಗದಲ್ಲಿಯೇ ಸಂಗಮವಾದ ಅರಿವಿನ ಜಗದ್ಗುರುಗಳಿಗೆ ಉಣ್ಣಿಸಿ ತಾನುಂಡ. ಉಣ್ಣಿಸಿ ಉಂಡ ಅಡಿಗೆಯಲ್ಲಾ ಪ್ರಸಾದವಾಯಿತು!

767

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ ?
ಗುರುಕಾರುಣ್ಯವ ಪಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ
ಗುರುದ್ರೋಹ, ಲಿಂಗದ್ರೋಹ , ಜಂಗಮದ್ರೋಹ,
ಆಚಾರದ್ರೋಹ, ಪ್ರಸಾದದ್ರೋಹ !
ಇಂತೀ ಪಂಚ ಮಹಾಪಾತಕಂಗಳು
ಭಕ್ತಂಗಲ್ಲದೆ ಭವಿಗೆಲ್ಲಿಯದೊ ?
ಗುರುವಿದು, ಲಿಂಗವಿದು, ಜಂಗಮವಿದು,
ಆಚಾರವಿದು, ಪ್ರಸಾದವಿದೆಂದರಿಯದಿದ್ದಡೆ
ಕುಂಭೀಪಾತಕ ನಾಯಕನರಕ !
ಕೂಡಲಸಂಗಮದೇವಾ.

ಜಲ ತನ್ನ ಪೂರ್ವಾಶ್ರಯ ಕಳೆದುಕೊಂಡು ಮುತ್ತಾಗಿ ಬೆಳಗುತ್ತದೆ. ಮತ್ತೆ ಜಲವಾಗುವುದಿಲ್ಲ. ಜಲದ ಯಾವ ಗುಣಗಳು ಮುತ್ತಲ್ಲಿ ಇರುವುದಿಲ್ಲ.

ಜೀವಜಲಬಿಂದು ಗರ್ಭಕ್ಕೆ ಹರಿದು ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಕಾಂತಿ ಯುಕ್ತ ಚರ್ಮದಲ್ಲಿ ಬಂಧನಗೊಂಡು ನೋಡುವ, ಕೇಳುವ, ಮುಟ್ಟುವ, ಮೂಸಿಸುವ, ರುಚಿಸುವ ಅರಿವಿನ ಗುಣಗಳನ್ನು ಹೊಂದಿ ಜಲ ತನ್ನ ಪೂರ್ವಾಶ್ರಯ ಕಳೆದುಕೊಂಡಿದೆ.

ನೋಡುವಾಗ, ಕೇಳುವಾಗ, ರುಚಿಸುವಾಗ, ಮೂಸಿಸುವಾಗ, ಸ್ಪರ್ಶಿಸುವಾಗ ತನುವಿನಲ್ಲಿ ತನ್ಮಯವಾದ ಅರಿವು ತನುವಿಗೆ ಬಳಕೆಯಾಗದೆ ತನುವು ಸಂಕಟಕ್ಕೆ ಈಡಾಗುತ್ತದೆ. ಜಲದಲ್ಲಿ ಅಲೆಗಳು, ಗುರುಳೆಗಳು ಉಂಟಾದಂತೆ ತನುವಿನಲ್ಲಿ ಸುಖದುಃಖಗಳು ಉಂಟಾಗಿವೆ.

ತನುವಿನಲ್ಲಿ ಉಂಟಾದ ಸುಖ ದುಃಖಗಳನ್ನು ತನುವಿನಲ್ಲಿರುವ ಅರಿವೆಂಬ ಗುರುದೇವ ನಿಂದಲೇ ಕಳೆದುಕೊಳ್ಳಬೇಕು. ಮನಕ್ಕೆ ಗುರುದೇವನ ಪರಿಚಯ ಆಗುವುದಿಲ್ಲ. ತನುವಿನ ದುಃಖ ನಿಲ್ಲುವುದಿಲ್ಲ. ದುಃಖ ನಿವಾರಣೆಗಾಗಿ ಮನ ಗುರುದೇವನನ್ನು ಹುಡುಕಿ ಬೋಧೆ ಪಡೆಯುತ್ತದೆ. ಗುರುವಿಗೆ ಶಿಷ್ಯನಾಗಿ ಗುರುಸೇವೆ ಮಾಡುತ್ತದೆ. ಗುರುಕಾರುಣ್ಯವ ಪಡೆಯುತ್ತದೆ. ಆದರೂ ತನುವಿನ ಪೂರ್ವಾಶ್ರಯವಾದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಸಪ್ತ ವ್ಯಸನಗಳು, ಅಷ್ಟಮದಗಳು ತೊಲಗುವುದಿಲ್ಲ. ಆಚಾರದಲ್ಲಿ ಗುರು ಹೇಳಿದಂತೆ ನಡೆಯುವುದನ್ನು ಬಿಡುವುದಿಲ್ಲ. ಗುರುವಿನ ಉಪನ್ಯಾಸ, ಶಿಷ್ಯನ ಆಚಾರಗಳು ಗೋಚರಿಸುತ್ತವೆ.

ಮುತ್ತು ನೀರಲಿ ಹುಟ್ಟಿ ಸಹಜವಾಗಿ ಬೆಳಗಿತು. ಬೆಳಗುವುದಕ್ಕೆ ಯಾರ ಉಪದೇಶವೂ ಮುತ್ತಿಗೆ ಬೇಕಾಗಲಿಲ್ಲ. ಜಲಬಿಂದುವಿನಿಂದ ಹುಟ್ಟಿದ ತನು ಅರಿವಿನ ಕಾಂತಿಯಿಂದ ಬೆಳಗಬೇಕಿತ್ತು; ತನು ಜಲವಾಗಲಿಲ್ಲ; ಆದರೆ ಅರಿವಿನಿಂದ ಬೆಳಗಲಿಲ್ಲ. ಅರಿವಿಗಾಗಿ ಗುರುವಿನ ನೆರವು ಪಡೆಯಿತು. ಆ ನೆರವು ಆಚಾರದಿಂದ ಗೋಚರಿಸಿ ನಡೆಯದೆ ಆಚಾರ ದ್ರೋಹವೆಸಗಿತು.

ಜಲದಿಂದ ಹುಟ್ಟಿದ ಮುತ್ತು ಸಹಜವಾಗಿ ಬೆಳಗಿದಂತೆ, ಜಲದಿಂದ ಹುಟ್ಟಿದ ಅರಿವೆಂಬ ಲಿಂಗಭರಿತ ಅಂಗ ಸಹಜವಾಗಿ ಬೆಳಗಬೇಕಿತ್ತು. ಗುರುವಿನ ನೆರವು ಪಡೆದರೂ ಬೆಳಗದೆ ಲಿಂಗ ದ್ರೋಹವೆಸಗಿತು.

ಅಂಗ ಜಲವು, ಅಂಗದಿಂದಾದ ಮನ ಕೂಡಾ ಜಲವು, ಅಂಗದಲ್ಲಿರುವ ಅರಿವು ಕೂಡಾ ಜಲವೇ. ಅಂಗದ ಪೂರ್ವಾಶ್ರಯವೂ ಜಲವಲ್ಲ ! ಜಲದ ಪೂರ್ವಾಶ್ರಯವೂ ಜಲವಲ್ಲ ! ಜಲಜನಕ ಆಮ್ಲಜನಕವನ್ನು ಬಯಲು ತನ್ನಲ್ಲಿ ಬಂಧಿಸಿ ಜಲವನ್ನಾಗಿ ಮಾಡಿತು. ಆ ಜಲದಲ್ಲಿ ಬಯಲಾಗಿ ಸೇರಿ, ಜೀವಜಲವಾಗಿ ಗರ್ಭ ಸೇರಿತು. ಅರಿವಿನ ಅಂಗವೆಂಬ ಲಿಂಗವಾಗಿ ಉದಯಿಸಿತು. ಆ ಲಿಂಗದಲ್ಲಿ ಜಂಗಮವನ್ನು ಸೃಷ್ಟಿಸಿ ಅರಿವು ಪಾಲನೆ ಮಾಡಲು ಹಚ್ಚಿತು. ಅರಿವಿನ ಬೆಳಕಿನಿಂದಲೇ ಮನ ಸೃಷ್ಟಿಯಾಗಿ ಗುರು ಲಿಂಗ ಜಂಗಮವನು ಅರಿತು ಅರಿವಿನ ಆಚಾರದಲ್ಲಿ ನಿರತವಾಗಿ ಪ್ರಸಾದದ ರುಚಿಯನು ಸವಿಯಿತು.

ಮುತ್ತು ನೀರಲಿ ಹುಟ್ಟಿ ಮತ್ತೇ ನೀರಾಗಲಿಲ್ಲ; ಆದರೆ ಬೆಳಗುವುದನು ಮರೆಯಲಿಲ್ಲ.

ಜಲದಿಂದ ಹುಟ್ಟಿದ ತನು ಜಡವಲ್ಲ; ಅರಿವಿದೆ, ಅರಿವನ್ನು ತಿಳಿಯುವ ಮನವಿದೆ! ತಿಳಿಯದಿದ್ದರೆ ತಿಳಿಹೇಳುವ ಗುರುವಿದ್ದಾನೆ. ತಿಳಿದುದನ್ನು ಅರಿವಿನಿಂದ ಪಾಲಿಸುವ ಜಂಗಮನೂ ಇದ್ದಾನೆ. ಇದೇ ಸದಾಚಾರ. ಇದರಿಂದ ಉಂಟಾಗುವ ಸಂತೋಷವೇ ಅರಿವಿನ ಪ್ರಸಾದ.

ಗುರುಕರುಣೆ ಪಡೆದು, ಗುರುಸೇವೆ ಮಾಡಿ, ಗುರುಹೇಳಿದ ಆಚಾರ ಮಾಡಿದರೂ ಅರಿವನು ಅರಿಯದಿದ್ದರೆ ಗುರುದ್ರೋಹ ಲಿಂಗದ್ರೋಹ ಜಂಗಮದ್ರೋಹ ಆಚಾರದ್ರೋಹ ಪ್ರಸಾದದ್ರೋಹದ ಪಂಚಮಹಾಪಾತಕಂಗಳು ಗುರುಕರುಣೆ ಪಡೆದ ಭಕ್ತನಿಗಲ್ಲದೆ ಗುರುವಿನ ಬೋಧೆ ಅರಿಯದ ಭವಿ ಮನಕ್ಕೆ ಅಲ್ಲ.

ಗುರುಕರುಣೆ ಗುರುವಿಗೆ ಬೇಡ. ಏಕೆಂದರೆ ಪ್ರತಿ ಅಂಗದಲ್ಲಿಯೂ ಅರಿವೆಂಬ ಗುರುವಿದ್ದಾನೆ. ಜಲದಿಂದಲೇ ಮುತ್ತುಗಳು ಹುಟ್ಟುತ್ತವೆ. ಮುತ್ತಿನಿಂದ ಮುತ್ತು ಹುಟ್ಟುವುದಿಲ್ಲ. ಮುತ್ತು ಮುತ್ತಿಗೆ ಬೋಧಿಸಿ ಬೆಳಗುವುದು ಕಲಿಸುವುದಿಲ್ಲ. ಹೀಗಾಗಿ ಅಂಗದಲ್ಲಿಯೇ ಇರುವ ಅರಿವೆಂಬ ಗುರುದೇವನಿಗೆ ಯಾವ ಗುರುವಿನ ಬೋಧೆಯೂ ಬೇಡ ! ಏಕೆಂದರೆ ಆತ ಸ್ವಯಂ ಗುರುವಾಗಿದ್ದಾನೆ.

ಅಂಗವನ್ನು ಆವರಿಸಿದ ಭವಿ ಎಂಬ ಮನ ಭಕ್ತನ ವೇಷ ಧರಿಸಿ ಗುರುಕರುಣೆ ಪಡೆದರೂ ಗುರುವಿನ ಮಾತು ಭವಿಗೆ ತಿಳಿಯುವುದಿಲ್ಲ. ಗುರುಕರುಣೆಯಿಂದ ಆದ ಉಪದೇಶವು ಆಚರಣೆಯಲ್ಲಿ ಬಂದು ಅಜ್ಞಾನವಾಗಿ ಪರಿಣಮಿಸುತ್ತದೆ.ಇಂತೀ ಮಹಾಪಾತಕಂಗಳು ಗುರುಕರುಣೆ ಪಡೆದ ಭಕ್ತನಿಗಲ್ಲದೆ ಭವಿಗೆಲ್ಲಿಯದೋ ? ಕುಂಭೀಪಾತಕ ನಾಯಕನರಕ ಭಕ್ತಂಗೆ.

ಬೋಧೆಯಿಂದ ತನು ಬೆಳಗುವುದಿಲ್ಲ. ಬೆಳಗುವುದು ತನುವಿನ ಸಹಜಕ್ರಿಯೆ; ಮುತ್ತಿನಂತೆ !

768

ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ ತಿಂಬುವದೀ ಲೋಕ.
ಅಡಗ ಮಚ್ಚಿ ಸೊಣಗನೆಂಜಲ ತಿಂಬುದೀ ಲೋಕವೆಲ್ಲ.
ಲಿಂಗವ ಮಚ್ಚಿ ಜಂಗಮಪ್ರಸಾದ ಕೊಂಬವರ ನೋಡಿ ನಗುವರ
ಕುಂಭೀಪಾತಕ ನಾಯಕನರಕದಲ್ಲಿಕ್ಕುವ
ಕೂಡಲಸಂಗಮದೇವಾ.

ಸೂಳೆಯೆಂದರೆ ಹೆಣ್ಣಲ್ಲ; ನಾವು ತಿಳಿದಂತೆ ವೇಶ್ಯೆಯೂ ಅಲ್ಲ. ಆ ವೃತ್ತಿಗೆ ಕಾರಣವಾದ ಮನ ! ಕಾಮ ಕ್ರೋದ ಲೋಭ ಮೋಹ ಮದ ಮತ್ಸರಗಳೇ ಮನದ ಬಂಟರು. ಸಪ್ತ ವ್ಯಸನಗಳು, ಅಷ್ಟ ಮದಗಳು ಕೂಡಾ ಮನದ ಬಂಟರು. ಭವಿ ಮನವೇ ಒಂದು ಸೂಳೆ; ಆ ಸೂಳೆಯ ಬಂಟರ ಎಂಜಲು ತಿಂದು ಬದುಕುವುದು ಲೋಕ. ಮಾಂಸವೆಂದೇ ಮೆಚ್ಚಿ ಎಲುಬು ತಿನ್ನುವ ನಾಯಿಯ ಎಂಜಲು ತಿಂಬುವುದೀ ಲೋಕವೆಲ್ಲ.

ಮನ ಎಂಜಲು ರುಚಿ ಸವಿಯುವುದೇ ಹೊರತು ಮೀಸಲು ರುಚಿ ಮನಕ್ಕೆ ಮನವರಿಕೆಯಾಗಿಲ್ಲ. ಎಂಜಲೆಂದರೆ ಅರಿವಿನಿಂದ ಬಂದ ಗ್ರಂಥಗಳೆಲ್ಲ ಅರಿವಿನ ಎಂಜಲು. ಭಗವದ್ಗೀತೆ, ಬೈಬಲ್ ಎಂದರೆ ಮನಕ್ಕೆ ಬಲು ಇಷ್ಟ. ಉಪನ್ಯಾಸಗಳು ಕೂಡಾ ಬಲು ಇಷ್ಟ. ಕೇಳಿ ಆನಂದ ಪಡುವುದು, ಓದಿ ಚರ್ಚಿಸುವುದು, ಶಾಸ್ತ್ರ ಹೇಳಿ ಶಾಸ್ತ್ರಿ ಪಂಡಿತ ಉಪನ್ಯಾಸಕ ಎನ್ನಿಸಿಕೊಳ್ಳುವುದು, ವ್ಯವಹಾರದಲ್ಲಿ ತೊಡಗುವುದು. ಭವ್ಯವಾದ ದೇವಸ್ಥಾನ, ಮಠ, ಆಶ್ರಮಗಳನ್ನು ಕಟ್ಟುವುದು ಪಲ್ಲಕ್ಕಿಗಳಲ್ಲಿ ಮೆರೆಯುವುದು ಮನಕ್ಕೆ ಬಲು ಇಷ್ಟ. ಗ್ರಂಥಗಳು ಅರಿವಿನಿಂದ ಬಂದ ಎಂಜಲು !

ಅಂಗದಲ್ಲಿ ಅರಿವು ಸಂಗಮವಾಗಿದೆ. ಆ ಅರಿವೇ ಮೀಸಲು. ಅಂಗವನ್ನು ಆವರಿಸಿಕೊಂಡ ಮನ ಮೀಸಲುಂಡರೆ ಅದು ಘನಮನವಾಗುತ್ತದೆ. ಮೀಸಲು, ಜಂಗಮಪ್ರಸಾದ. ಈ ಜಂಗಮ ಪ್ರಸಾದಕೊಂಬ ಶರಣರ ನೋಡಿ ನಗುವವರು ಕುಂಭೀಪಾತಕ ನಾಯಕನರಕಕ್ಕೆ ಭಾಜನವಾಗುತ್ತಾರೆ.

769

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ?
ಕುಲವುಂಟೇ ಜಂಗಮವಿದ್ದೆಡೆಯಲ್ಲಿ ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ !
ನಿಷ್ಕಳಂಕ ನಿಜೈಕ್ಯ ತ್ರಿವಿಧ ನಿರ್ಣಯ;
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ.

ಅಂಗದಲ್ಲಿ ಲಿಂಗ ಸಂಗಮವಾಗಿದೆ. ಮನಕ್ಕೆ ತಿಳಿಯದ ನಿಮಿತ್ಯ ಹೊಲೆಯನಾಗಿದೆ; ಅಜ್ಞಾನಿಯಾಗಿದೆ. ಅಂಗದಲ್ಲಿ ಅರಿವನ್ನು ಪಾಲನೆ ಮಾಡುವ ಜಂಗಮವೂ ಸಂಗಮವಾಗಿದೆ.

ಅರಿಯದ ನಿಮಿತ್ಯ ಮನ ಕುಲವನೆಣಿಸುತ್ತಲಿದೆ. ಅಂಗದಲ್ಲಿ ಅರಿವೆಂಬ ಗುರುದೇವನ ಪ್ರಸಾದ ಭರಿತವಾಗಿದೆ. ಮನ ಅರಿಯದ ನಿಮಿತ್ಯ ಎಂಜಲನ್ನು ಮಾತ್ರ ಸೇವಿಸುತ್ತಲಿದೆ.

ಶಬ್ದ - ಸುಶಬ್ದವೆಂದು ಶಬ್ದವನ್ನು ವಿಂಗಡಿಸುವಂತಿಲ್ಲ. ಓದಿದರೆ ಅರಿವಾಗುತ್ತದೆ. ಶಬ್ದ ಕೇಳಿ ಹಚ್ಚಿಕೊಂಡರೆ ಅಂಗಕ್ಕೆ ಸೂತಕದ ಪಾತಕ ಆವರಿಸುತ್ತದೆ. ಶಬ್ದದಲ್ಲಿ ಸೂತಕವಿಲ್ಲ; ಅರಿವು ಮಾತ್ರ ಭರಿತವಾಗಿದೆ. ಮನ ಘನಮನದಲ್ಲಿ ಲೀನವಾಗಿ ಅರಿವಿನಿಂದ ಕೇಳಿದರೆ ಶಬ್ದವದು ನಿಃಶಬ್ದ! ಮನದಿಂದ ಕೇಳಿದರೆ ಶಬ್ದವೇ ಸೂತಕವಾಗಿ ತನು ವಿಲಿವಿಲಿ ಒದ್ದಾಡುತ್ತದೆ. ಕೇಳಿದ ಶಬ್ದದ ಸೂತಕ ತನುವನ್ನು ಘಾಸಿಗೊಳಿಸಿ, ತನುವಿನಲ್ಲಿಯೇ ಉಳಿದು ತನುವಿರುವವರೆಗೆ ತನುವನ್ನು ಕಾಡುತ್ತದೆ. ನುಡಿದ ಅಪವಿತ್ರ ನುಡಿಯು ನುಡಿದ ಅಂಗವನ್ನೇ ಸೂತಕದ ಪಾತಕವಾಗಿ ತನುವಿರುವವರೆಗೆ ಕಾಡುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಮೀಸಲ ಪ್ರಸಾದ ಸೇವಿಸಿ ಮೀಸಲು ಅರಿತು ಆ ಮೀಸಲ ಬಳಸದಿದ್ದರೆ ಅಂಗದಲ್ಲಿ ಹೊಲೆ, ಕುಲ, ಎಂಜಲು ಎನ್ನುವ ಅಪವಿತ್ರ ನುಡಿಯ ಸೂತಕ ಉಂಟಾಗಿ ನಿಷ್ಕಳಂಕ ನಿಜೈಕ್ಯ ತ್ರಿವಿಧ ನಿರ್ಣಯ ಬಳಕೆಗೆ ಬಾರದೆ ಅಂಗದಲ್ಲಿಯೇ ಉಳಿಯುತ್ತದೆ.

ನಿಶಬ್ದವೇದಿಯ ಸೂತ್ರ ಬಳಸಿ ಮೀಸಲುಂಡು ಹೊಲೆತನದ ಕುಲವೆಂಬ ಅಜ್ಞಾನ ಕಳೆದುಕೊಳ್ಳುವುದು ನಿಜ ಶರಣನಿಗೆ ಮಾತ್ರ ಸಾಧ್ಯವಾಗುತ್ತದೆ. ಅರಿತರೆ ಸರ್ವರಿಗೂ ಸಾಧ್ಯವಾಗುತ್ತದೆ.

770

ಬಾರದು, ಬಾರದು ಭಕ್ತಂಗೆ ಪರಧನ ಪರಸತಿ
ಬಾರದು, ಬಾರದು, ವಿಷಯಿಗೆ ಪಶುಪತಿಯ ವ್ರತವು
ಬಾರದು, ಬಾರದು, ಭವಭಾರಿಗೆ
ಕೂಡಲಸಂಗಮದೇವನ ಒಕ್ಕುದ ಕೊಳಬಾರದು.

ಭಕ್ತ, ಅರಿವನು ಅರಿತು ಅರಿವನೆ ಬಳಸಿಕೊಂಡು ಅರಿವಿನ ಅಡಿಗೆಯ ನಿತ್ಯ ನಿತ್ಯ ಉಣ್ಣುವ ಜಾಣ. ಆತನಿಗೆ ಕೈಗಡದ ಅರಿವು ಬೇಡ. ಪುಸ್ತಕದ ಅರಿವು ಬೇಡ. ಶಾಸ್ತ್ರ ಆಗಮ ಉಪನಿಷತ್ತುಗಳ ಪಾಂಡಿತ್ಯದ ಅರಿವು ಕೂಡಾ ಬೇಡ. ಇದೆಲ್ಲ ಪರಧನದ ಅರಿವು. ಓದು ಉಪನ್ಯಾಸ ಸಂತೋಷವನ್ನುಂಟು ಮಾಡಬಹುದು. ಆಪತ್ಕಾಲದಲ್ಲಿ ಬಳಕೆಗೆ ಬಾರದಿದ್ದರೆ ಅದು ಮಾತನಾಡಲು ಮಾತ್ರ ಸೀಮಿತವಾಗುತ್ತದೆ. ಕೇಳುವುದು, ಕೇಳಿದ್ದನ್ನೇ ಮಾತನಾಡುವುದು.

ಪರಧನ ಪರಸತಿ ಬಾರದು, ಬಾರದು ಬಳಕೆಗೆ ಬಾರದು. ಬಾರದು, ಬಾರದು ಬಳಕೆಗೆ ಬಾರದು ವಿಷಯಿಗೆ ಪಶುಪತಿಯ ಅರಿವು. ಪಶುಪತಿಯ ವ್ರತವು.

ಮನ ಪಶು. ವಿಷಯವೆಂಬ ಹಸಿರು ಕಾಣಿಸಿಕೊಂಡರೆ ಬಾಯಿ ಹಾಕುತ್ತದೆ. ತನುವನ್ನು ಬಳಸಿಕೊಂಡು ಮೇಯುತ್ತದೆ. ತನುವಿನಲ್ಲಿ ತನ್ಮಯವಾದ ಪತಿಯ ಅರಿವಿನ ಮೇವು ಉಣ್ಣುವು ದಿಲ್ಲ. ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೇ ಪಶುಪತಿ. ಆತನ ಅರಿವಿನ ವ್ರತವು ಆಚರಿಸಲು ಬಾರದು, ಬಾರದು, ಭವಭಾರಿಗೆ. ಆತ ಒಕ್ಕುದನು ಉಣ್ಣಲು ಕೂಡಾ ಬಾರದು ಬಾರದು ಭವಬಾರಿಗೆ.

771

ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು;
ಸರ್ಪದಷ್ಟವಾದಡೂ ಸಾಯರು ನಿಶ್ಶಂಕಿತರಾದವರು.
ಕೂಡಲಸಂಗಮದೇವಯ್ಯಾ ,
ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟ ವಿಷವು !

ಶಂಕಿತನಿಗೆ ಪ್ರಸಾದ ಸಿಂಗಿ ಕಾಳಕೂಟ ವಿಷವು:

ಸತ್ಯ ಎಂದರೆ ಅಮೃತದ ರಸದೌತಣ. ಮಾತಿನ ಮೂಲಕ ಸವಿದು, ಪ್ರಯೋಗದಲ್ಲಿ ನಿಲುಕದಿದ್ದರೆ ಅಥವಾ ಸತ್ಯದ ಮಾತು ಪ್ರಯೋಗಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗದಿದ್ದರೆ ಆತ ಶಂಕಿತ. ಆತನಿಗೆ ಪ್ರಸಾದ ಕಾಳಕೂಟ ವಿಷ!

ನಿಶ್ಯಂಕಿತನಿಗೆ ಭಯವಿಲ್ಲ; ಆತ ನಿರ್ಭಯಿ. ಸರ್ಪಕ್ಕೆ ಹೆದರುವುದಿಲ್ಲ. ಅದರ ವಿಷಕ್ಕೂ ಹೆದರುವುದಿಲ್ಲ. ಅದು ವಾಸ ಮಾಡುವ ಹುತ್ತಕ್ಕೂ ಹೆದರುವುದಿಲ್ಲ. ಜಲಬಿಂದುವೇ ಹಾವಿನಲ್ಲಿ ವಿಷವಾಗಿದೆ. ಹಸುವಿನಲ್ಲಿ ಅಮೃತವಾಗಿದೆ. ತನುವಿನಲ್ಲಿ ಅರಿವಾಗಿದೆ. ಬೀಜದಲ್ಲಿ ವೃಕ್ಷವಾಗಿದೆ. ಜಲ ಬಿಂದುವೇ ಗಟ್ಟಿಗೊಂಡು ಮಣ್ಣಾಗಿ ಹುತ್ತಾವಾಗಿದೆ.

ಹಸುವಿಗೂ, ಹಾಲಿಗೂ, ಹಾವಿಗೂ, ವಿಷಕ್ಕೂ, ವೃಕ್ಷಕ್ಕೂ, ಮಣ್ಣಿಗೂ, ಹುತ್ತಕ್ಕೂ, ತನುವಿಗೂ, ಅರಿವಿಗೂ ಜಲಬಿಂದು ಜನ್ಮಕೊಟ್ಟು ಆಯಾರೂಪ ಹೊಂದಿ ನಿರೂಪವಾಗಿದೆ. ಹಸು ಅದು ಹಿಂಡುವ ಹಾಲು ರೂಪವಾದರೆ ಹಸುವಿನ ಪ್ರಾಣ, ಹಾಲಿನ ರುಚಿ ನಿರೂಪ ! ಹಾವು, ವಿಷ ರೂಪವಾದರೆ ವಿಷ ನಿರೂಪ ! ಬೀಜ ವೃಕ್ಷ ರೂಪವಾದರೆ ಅದರ ಪ್ರಾಣ ನಿರೂಪ ! ಜಲ ರೂಪವಾದರೆ ಜಲಜನಕ ಆಮ್ಲಜನಕ ನಿರೂಪ ! ಅವೆರಡನ್ನೂ ಬಂಧಿಸಿ ಜಲವನ್ನು, ಜೀವ ಜಲವನ್ನಾಗಿಸಿ ಅದರಲ್ಲಿ ಚುಳುಕಾದ ಬಯಲು ನಿರೂಪ !

ಬಯಲು, ಅಣು ರೇಣು ತೃಣ ಕಾಷ್ಠದಲ್ಲಿದ್ದು ಶಂಕಿತನಿಗೆ ಸಿಂಗಿಕಾಳ ಕೂಟ ಭಯಂಕರವಾದ ವಿಷವಾದರೆ; ನಿಶ್ಯಂಕಿತನಿಗೆ ಪ್ರಸಾದ.

ಜಲಕುದ್ದು ಮಣ್ಣಾಯಿತು. ಮಣ್ಣಿನ ಗರ್ಭದಲ್ಲಿ ಚಿನ್ನವಾಯಿತು. ಆ ಜಲವೇ ಕುದ್ದು ಗಟ್ಟಿಯಾಗಿ ವಿವಿಧ ಖನಿಜವಾಗಿ; ಕಲ್ಲಾಯಿತು! ಅರಿವಿನ ಪ್ರಸಾದದ ರುಚಿಯನು ಅರಿಯದ ನಿಮಿತ್ಯ ಶಂಕಿತ ಭೂಮಿ ಅಗೆದು ಹಳದಿ ಲೋಹ ತೆಗೆದು ಚಿನ್ನ ಎಂದು ಹೆಸರಿಟ್ಟು ಉದ್ದಿಮೆ ಅನ್ನಿಸಿಕೊಂಡು ವ್ಯವಹಾರ ಮಾಡಿದ. ಕೊಂಡು ಶ್ರೀಮಂತ ಎನ್ನಿಸಿಕೊಂಡ. ಕದ್ದು ಕಳ್ಳ ಎನ್ನಿಸಿಕೊಂಡ. ಸೈನ್ಯ ಕಟ್ಟಿ ಯುದ್ಧ ಮಾಡಿ ಪಡೆದು ರಾಜ ಎನ್ನಿಸಿಕೊಂಡ. ಪ್ರವಚನ ಪಟು ಇದೆಲ್ಲವನ್ನು ಪ್ರವಚನ ಮಾಡಿದ. ಮಠಾಧಿಪತಿ, ಜನ ಕುಂತು ಕೇಳಿದರು. ಹೇಳಿದ ಪ್ರವಚನಕಾರನಿಗೆ ಕುಂತು ಕೇಳಿದ ಜನ ಚಿನ್ನದ ಉಂಗುರ ತೊಡಿಸಿದರು. ಕೇಳಲು ಅಣಿ ಮಾಡಿದ ಪೀಠಾಧಿಪತಿಗಳಿಗೆ ಬೆಳ್ಳಿ ಪಾದುಕೆ, ಚಿನ್ನದ ಸಿಂಹಾಸನ, ಕಿರೀಟ, ಉಂಗುರುಗಳನ್ನು ತೊಡಿಸಿ ಪಲ್ಲಕ್ಕಿಯಲ್ಲಿ ಮೆರೆಸಿದರು. ಇವರೆಲ್ಲ ಶಂಕಿತರು. ಅರಿವಿನ ಪ್ರಸಾದ ಯಾರಿಗೂ ದಕ್ಕಲಿಲ್ಲ.ಅಜ್ಞಾನದ ಸರ್ಪ ಸರ್ವರಿಗೂ ಕಚ್ಚಿದೆ. ಶಂಕಿತನಾದವನೆ ನಿಶ್ಯಂಕಿತನಾಗಬೇಕು. ಪ್ರವಚನದಿಂದ, ವೇಷದಿಂದ, ಪುಸ್ತಕದ ಪಾಂಡಿತ್ಯದಿಂದ, ಸ್ವಾಮಿ, ಗುರು, ಶಿಷ್ಯ, ಅಧಿಕಾರಿ, ಶಾಸಕ, ಸಚಿವ ಪದವಿಗಳಿಂದ, ವಿಶ್ವವಿದ್ಯಾಲಯಗಳ ಕಲಿಕೆಯಿಂದ ಶಂಕೆ ನಿವಾರಣೆಯಾಗುವುದಿಲ್ಲ. ಶಂಕೆಯ ವಿಷ; ನಿಶ್ಯಂಕೆಯ

ಅಮೃತ ಅಂಗದಲ್ಲಿಯೇ ಸಂಗಮವಾಗಿದೆ. ಆಯ್ಕೆ ಮಾಡಿಕೊಂಡು, ನಿರ್ಭಯದಿಂದ ಬಳಕೆ ಮಾಡುವ ಸಧೃಢ ನಿಲುವು ಮನ ಹೊಂದಬೇಕು. ವಿಷ ಬೇಕೋ, ಅಮೃತ ಬೇಕೋ ಎಂದು ನಿರ್ಧರಿಸಬೇಕಾದುದು ಮನ ಮಾತ್ರ!

772

ನಂಬಿದಡೆ ಪ್ರಸಾದ; ನಂಬದಿದ್ದಡೆ ವಿಷವು.
ತುಡುಕಬಾರದು ನೋಡಾ; ಲಿಂಗನ ಪ್ರಸಾದ ಸಂಗನ ಪ್ರಸಾದ.
ಕೂಡಲಸಂಗನ ಪ್ರಸಾದ ಸಿಂಗಿಕಾಳಕೂಟ ವಿಷವು.

ನಂಬಿದಡೆ ವಿಷಯ ಪ್ರಸಾದವಾಗುತ್ತದೆ. ನಂಬದಿದ್ದಡೆ ವಿಷಯ ಸುಖವೇ ವಿಷವಾಗುತ್ತದೆ. ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ; ಪಶುವೇನ ಬಲ್ಲುದು, ಹಸುರೆಂದೆಳೆಸುವುದು. ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ, ಸು-ಬುದ್ಧಿಯೆಂಬ ಉದಕವ ನೆರೆದು ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

ಅರಿವೆಂಬ ಲಿಂಗಯ್ಯನ ಪ್ರಸಾದವೂ ಅಂಗದಲ್ಲಿ ಸಂಗಮವಾಗಿದೆ. ಅಜ್ಞಾನವೆಂಬ ವಿಷಯವು ಅಂಗದ ಮೇಲೆ ಆವರಿಸಿಕೊಂಡಿದೆ. ಹೆಣ್ಣಾದರೇನು, ಗಂಡಾದರೇನು ?ಎರಡನ್ನೂ ಅಂಗವೆಂದೇ ಕರೆಯುತ್ತೇವೆ. ಸುಂದರವಾದ ಚರ್ಮದ ಹೊದಕೆಯೊಳಗೆ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳು ಬಂಧಿಯಾಗಿ ಅಂಗವೆಂದು ಹೆಸರು ಪಡೆದಿದೆ. ಚರ್ಮ ಅದರೊಳಗೆ ಬಂಧಿಸಲ್ಪಟ್ಟ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳು ಹೆಣ್ಣು ಅಲ್ಲ, ಗಂಡೂ ಅಲ್ಲ. ಕಣ್ಣು ಕಿವಿ ಮೂಗು ನಾಲಗೆ ಇವು ಕೂಡಾ ಹೆಣ್ಣು ಅಲ್ಲ, ಗಂಡೂ ಅಲ್ಲ. ಅಂಗಕ್ಕೆ ಅರಿವು ಮತ್ತು ಮನ ಕೂಡಾ ಒಂದೇ. ನಂಬಿದಡೆ, ಅಂಗ ಮನಕ್ಕೆ ಅರಿವಿನ ಅಂಗವಾಗಿ ಕಾಣುತ್ತದೆ. ನಂಬದಿದ್ದಡೆ ಅಂಗವೇ ಮನಕ್ಕೆ ಹೆಣ್ಣಾಗಿ ಗಂಡಾಗಿ ಕಾಣುತ್ತದೆ.

ಮನ ದುಡುಕಿದರೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಪ್ರಸಾದ ಭಯಂಕರ ಕಾಳಕೂಟ ವಿಷವಾಗಿ ಮನವನ್ನು, ಅಂಗವನ್ನು ಕಾಡುತ್ತದೆ.

ವಿಷಯವೆಂಬುದು ಮತ್ತೊಂದು ಅರಿವಿನ ಅಂಗಕ್ಕೆ ಜನ್ಮ ನೀಡುವ ಚೇತನ. ಇದು ಅಂಗದಲ್ಲಿಯೇ ಹುಟ್ಟಿ, ಅಂಗದಲ್ಲಿಯೇ ಲಯವಾಗುತ್ತದೆ. ಒಪ್ಪಂದದ ಆಧಾರದ ಮೇಲೆ ಅರಿವಿನ ಅಂಗ ಪಡೆಯುವ ಸದಿಚ್ಛೆಯ ಬಯಕೆಯಿಂದಾಗಿ ಎರಡೂ ಅಂಗಗಳಲ್ಲಿ ಅರಿವಿನ ಚೇತನದ ಬುಗ್ಗೆ ಹರಿಯುತ್ತದೆ. ಇದರಿಂದಾಗಿ ಎರಡೂ ಅಂಗಗಳು ಆನಂದದಿಂದ ಮೈಮರೆಯುತ್ತವೆ.

ಮನ ಈ ಸಮಯದ ಸುಖವನ್ನು ಸಂಗ್ರಹಿಸಿಕೊಂಡು ತಾನು ಹೆಣ್ಣೆಂದು ಗಂಡೆಂದು ಅಜ್ಞಾನದಿಂದ ಕರೆದುಕೊಂಡಿದೆ. ಹಗಲಿರುಳು ಅಜ್ಞಾನದ ವಿಷಯ ಸುಖಕ್ಕಾಗಿ ಹಾತೊರೆಯುತ್ತದೆ. ಮನ ಅರಿವಿಗೆ ಶರಣು ಹೋಗಿ ಅರಿವಿನಿಂದ ನೋಡಿದರೆ ಅಂಗ ಹೆಣ್ಣು ಅಲ್ಲ, ಗಂಡೂ ಅಲ್ಲ. ಸುಖದ ಚೇತನದ ದ್ರವ್ಯ, ಅಂಗದಿಂದಲೇ ಹೊರಬಂದು, ಅಂಗಕ್ಕೆ ಸುಖ ನೀಡಿ, ಅಂಗದಲ್ಲಿಯೇ ಮರೆಯಾಗುತ್ತದೆ. ಮತ್ತೊಂದು ಅಂಗದಿಂದ ಸುಖವಾಯಿತೆಂದು ಮನ ಭ್ರಮಿಸುತ್ತದೆ. ಮನದ ಈ ಅಜ್ಞಾನದ ವಿಷಯ ಸುಖದಿಂದಾಗಿ ವಿಷ ಉತ್ಪನ್ನವಾಗಿ ಅಂಗ ಕಾಳಕೂಟ ವಿಷಕ್ಕೆ ಗುರಿಯಾಗುತ್ತದೆ.

ರಾವಣ ಮಂಡೋದರಿ ಸತಿಪತಿಗಳು. ರಾಮ ಸೀತೆ ಸತಿಪತಿಗಳು. ಒಪ್ಪಂದ ಮಾಡಿ

ಕೊಂಡು ಅರಿವಿನ ಮತ್ತೊಂದು ಅಂಗ ಪಡೆಯಲು ನಿರ್ಧರಿಸಿದವರು. ನಂಬಿ ಪಡೆದ ಪ್ರಸಾದದಿಂದ ಇಂದ್ರಜಿತು, ಲವ-ಕುಷ ಹುಟ್ಟಿದರು. ಈ ಕುಮಾರರು ವೀರಾಧಿವೀರರು.

ರಾವಣನಿಗೆ ಮಂಡೋದರಿ ಇದ್ದರೂ, ಸೀತಾ ಮಾತೆಯನ್ನು ರಾವಣನ ಮನ ಬಯಸಿತು. ಮಂಡೋದರಿಯ ಅಂಗ, ಸೀತಾಮಾತೆಯ ಅಂಗ, ರಾವಣನ ಅಂಗ ಚರ್ಮದಿಂದ ಬಂಧಿಸಲ್ಪಟ್ಟಿದ್ದರೂ ಚರ್ಮದಲ್ಲಿ ವಿಷಯದ ವಿಷ ಹರಿದು ಸೀತಾಮಾತೆಯ ಚರ್ಮ ರಾವಣನಿಗೆ ಹೆಣ್ಣಾಗಿ ಕಂಡಿತು. ರಾವಣನ ಚರ್ಮ ಗಂಡಾಗಿ ಸೀತಾಮಾತೆಯ ಅಂಗವನ್ನು ಅಪಹರಿಸಿತು. ರಾವಣನ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಯ್ಯನ ಪ್ರಸಾದ ಬಳಕೆಯಾಗದ್ದಕ್ಕಾಗಿ ರಾವಣನಿಗೆ ಆತನ ರಾಜ್ಯಕ್ಕೆ ಸಿಂಗಿ ಕಾಳಕೂಟ ವಿಷವಾಗಿ ಹರಡಿತು. ಶ್ರೀರಾಮನ ಅರಿವಿನ ಬಾಣ ತಾಗಿ ರಾವಣ ಸತ್ತ. ಆತನ ರಾಜ್ಯ ಕಾಳಕೂಟ ವಿಷದಿಂದ ನಾಶವಾಯಿತು. ವಿಷಯ ಸುಖ ವಿಷವಾಗಿ ಹರಡಿತು.

ಅಂಗದಲ್ಲಿ ಅರಿವಿನ ಸುಖ ಸಂಗಮವಾಗಿತ್ತು. ವಿಷಯ ಸುಖ ಆವರಿಸಿತ್ತು. ರಾವಣನ ಮನ ವಿಷಯ ಸುಖವನ್ನು ಬಳಸಿತು. ಅರಿವಿನ ಸುಖದತ್ತ ಹೆಜ್ಜೆ ಹಾಕಲಿಲ್ಲ. ಅಂಗದಲ್ಲಿರುವ ಅರಿವನ್ನು ಅಂಗವನ್ನು ಆವರಿಸಿದ ಮನ ನಂಬಿದರೆ ಅರಿವಿನ ಪ್ರಸಾದ! ನಂಬದಿದ್ದರೆ ವಿಷ! ಮನ ದುಡುಕಬಾರದು ನೋಡಾ, ದುಡುಕಿದರೆ ಲಿಂಗನ ಪ್ರಸಾದವಿಲ್ಲ; ಸಂಗನ ಪ್ರಸಾದವಿಲ್ಲ; ಅಂಗದಲ್ಲಿಯೇ ಕೂಡಿ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನ ಪ್ರಸಾದ ಸಿಂಗಿ ಕಾಳಕೂಟ ವಿಷವು !

773

ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತ ಕರ್ಮ ಉಂಡಲ್ಲದೆ ಬಿಡದು !
ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದೆಂದು ಶೃತಿ ಸಾರುತ್ತೈದಾವೆ, ನೋಡಾ;
ತಾನಾವ ಲೋಕದೊಳಗಿದ್ದಡೆಯೂ ಬಿಡದು,
ಕರ್ಮಫಲಗೂಡಿ ಕೂಡಲಸಂಗಮದೇವಂಗೆ
ಆತ್ಮ ನೈವೇದ್ಯವ ಮಾಡಿದವನೆ ಧನ್ಯ.

ಪಂಡಿತನಿಗೆ, ಮೂರ್ಖನಿಗೆ ಸಂಚಿತ ಕರ್ಮ, ಪ್ರಾರಬ್ಧ ಕರ್ಮ ಬಿಡದು. ಏಕೆಂದರೆ ಇವರಿಬ್ಬರೂ ಶೃತಿಯ ಮೇಲೆ ಅವಲಂಬಿತರು. ಶರಣರು ಹಾಗಲ್ಲ. ಸಕಲ ಫಲಗಳನ್ನು ಅರಿವಿಂಗೆ ಅರ್ಪಿಸಿ ಭೋಗಿಸುವ ನಿಜಸುಖಿಗಳು. ಲೋಕಕ್ಕೆ ಸುಖದುಃಖಗಳು; ಶರಣನಿಗೆ ಸುಖವಿಲ್ಲ, ದುಃಖವಿಲ್ಲ. ಸುಖದ ಸುಖಿ !

ಸುಖ ಬಂದಡೆ ಪುಣ್ಯದ ಫಲವೆನ್ನೆನು, ದುಃಖ ಬಂದಡೆ ಪಾಪದ ಫಲವೆನ್ನೆನು; ನೀ ಮಾಡಿದಡಾಯಿತ್ತೆಂದೆನ್ನೆನು, ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು, ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀಪರಿಯಲ್ಲಿ; ಸಂಸಾರವ ಸವೆಯೆ ಬಳಸುವೆನು.

ಆತ್ಮನೈವೇದ್ಯವ ಮಾಡಿದವನೆ ಧನ್ಯ :

ಪಂಡಿತ ಪಾಮರ, ತನಗೆ ಬಂದ ವಿಪತ್ತುಗಳನ್ನು ಯಜ್ಞ, ಯಾಗ ಮಾಡಿ ದೇವರಿಗೆ ಅರ್ಪಿಸಿ, ಪಂಚಾಂಗ ಹೊತ್ತಿಗೆಗಳನ್ನು ನೋಡಿ, ನವಗ್ರಹ, ವರದ ಶಂಕರ, ಸತ್ಯನಾರಾಯಣ ಕತೆ

ಹೇಳಿಸಿ ಕಳೆದುಕೊಳ್ಳಲು ಯತ್ನಿಸುತ್ತಾರೆ.

ಶರಣ ಹುಟ್ಟು ಸಾವುಗಳನ್ನು ಕೂಡಾ ಅರಿವಿನಿಂದ ನೋಡಿ,ಜನನವಿಲ್ಲ ಮರಣವಿಲ್ಲವೆಂ ದು ಅರಿತು ನಿರ್ಧರಿಸಿದ ನಿರ್ಭಯಿ. ಅಂದಮೇಲೆ ಸಂಚಿತ ಪ್ರಾರಬ್ಧ ಕರ್ಮಗಳ ಚಿಂತೆ ಆತನಿಗಿರುವುದಿಲ್ಲ. ವರ್ತಮಾನ ಕಾಲದ ಘಟನೆಗಳನ್ನು ಮಾತ್ರ ಅರಿವಿನಿಂದ ನಗುನಗುತ್ತಾ ಸ್ವೀಕರಿಸುತ್ತಾನೆ. ಹೆಂಡಿರು ಮಕ್ಕಳಿಗಾಗಿ, ಸಂಸಾರಕ್ಕಾಗಿ, ಬಂಧು ಬಳಗಕ್ಕಾಗಿ, ಲೋಕಕ್ಕಾಗಿ ಶರಣ ಚಿಂತಿಸುವುದಿಲ್ಲ.

ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವಾ!

ಮತ್ತೊಬ್ಬರಿಗೆ ಶಾಶ್ವತ ಸುಖ ಕೊಡಲು ಬರುವುದಿಲ್ಲ. ಮತ್ತೊಬ್ಬರ ದುಃಖವನ್ನು ಶಾಶ್ವತವಾಗಿ ಕಸಿದುಕೊಳ್ಳಲೂ ಬರುವುದಿಲ್ಲ. ಸುಖವು ದುಃಖವೇ ಆಗಿದೆ. ದುಃಖವೂ ದುಃಖವೇ ಆಗಿದೆ. ಸುಖವಾವುದು ದುಃಖವಾವುದು ಎಂದು ಅರಿವಿನಿಂದ ನೋಡುವ ಶಕ್ತಿ ಸಾಮಾನ್ಯನಿಗೆ ಇರುವುದಿಲ್ಲ. ಹೀಗಾಗಿ ಅದು ನನ್ನ ಕರ್ಮವೆಂದು ಸಾಮಾನ್ಯ ಸ್ವೀಕರಿಸುತ್ತಾನೆ. ಸಂಚಿತ ಪ್ರಾರಬ್ಧವೆಂದು ಹೆಸರಿಸಿ ಸಮಾಧಾನ ಪಟ್ಟುಕೊಳ್ಳುತ್ತಾನೆ.

774

ಒಲ್ಲೆನೆಂಬುದು ವೈರಾಗ್ಯ , ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದಡೇನು ? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ.
ಕೂಡಲಸಂಗಮದೇವರನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು.

ಅಂಗಕ್ಕೆ ಏನೆಲ್ಲ ಬೇಕು. ಲಿಂಗಕ್ಕೆ ಏನೂ ಬೇಡ. ಒಲಿವೆನೆಂಬುದು ಕಾಯಗುಣ. ಒಲ್ಲೆನೆಂಬುದು ವೈರಾಗ್ಯ. ಬೇಕು ಬೇಡಗಳ ಸಂಘರ್ಷ ಬೇಡವೇ ಬೇಡವೆಂಬ ದೃಢ ನಿರ್ಧಾರ. ಇವಿಷ್ಟು ಅಂಗದಲ್ಲಿಯೇ ಇದ್ದು ಅಂಗದಲ್ಲಿಯೇ ಮನೆ ಮಾಡಿಕೊಂಡಿದೆ. ಮನಕ್ಕೆ ಏನೆಲ್ಲ ಬೇಕು. ಅದು ತನುವನ್ನು ಆವರಿಸಿಕೊಂಡಿದೆ. ತನಗೆ ಬೇಕಾದ ಎಲ್ಲ ಪದಾರ್ಥಗಳನ್ನು ಅಂಗದ ಮೂಲಕವೇ ಸ್ವೀಕರಿಸುತ್ತದೆ. ಒಮ್ಮೆ ಒಲ್ಲೆನೆಂದು ವೈರಾಗ್ಯ ವ್ಯಕ್ತಪಡಿಸುತ್ತದೆ. ಒಮ್ಮೆ ಬೇಕೆಂದು ಆಸೆ ಪಡುತ್ತದೆ. ಅಂಗದಲ್ಲಿಯೇ ಇದ್ದ ಅರಿವೆಂಬ ಲಿಂಗಯ್ಯನಿಗೆ ಏನೇನೂ ಬೇಡವೇ ಬೇಡ. ಆತ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ !

ಮನ ಅಂಗದಲ್ಲಿಯೇ ಇರುವ ಅರಿವೆಂಬ ಲಿಂಗಯ್ಯನ ಸಂಗ ಮಾಡಲು ಬಂದಿದೆ. ಅಂಗದಲ್ಲಿರುವ ಲಿಂಗಯ್ಯನ ಸಂಗ ಏರ್ಪಟ್ಟು ಮನ ನಿಸ್ಸಂಗಿ ಆಗುವವರೆಗೆ, ಪ್ರಸಾದಕ್ಕಾಗಿ ಬಂದ ಅಂಗವನ್ನು ಕೆಡಿಸಬಾರದು. ಅಂಗ ಕೆಟ್ಟರೆ ಅರಿವಿನ ದರ್ಶನ ಮನಕ್ಕೆ ಆಗುವುದೇ ಇಲ್ಲ. ಅಂಗ ಇರುವವರೆಗೆ ಮನಕ್ಕೆ ಸಂಗಕ್ಕಾಗಿ ಬಂದವನು ನಾನು ಎಂದು ಹೊಳೆಯುವುದೇ ಇಲ್ಲ. ಅಂಗದ ಸುಖಕ್ಕಾಗಿ ಬದುಕುತ್ತದೆ. ಅಂಗದ ಸುಖಕ್ಕಾಗಿ ಸಾಯುತ್ತದೆ. ಅಂಗದಲ್ಲಿರುವ ಸಂಗಯ್ಯನ ಸಂಗ ಸುಖವನ್ನೆ ಮರೆಯುತ್ತದೆ.

ಅಂಗದಲ್ಲಿಯೇ ಇರುವ ಅರಿವಿನ ಸಂಗಯ್ಯನ ಸುಖವನ್ನು ಹೊಂದುವವರೆಗೆ ಮನ ತಾನು ಬಯಸಿದ್ದನ್ನೆಲ್ಲ ಸಂಗಯ್ಯನಿಗೆ ಅರ್ಪಿಸಿ ಭೋಗಿಸುವ ಅರಿವಿನ ಮಾರ್ಗವನ್ನು ಗುರುವಿನಿಂದ ಅರಿತು ಪ್ರಸಾದ ಕಾಯವನ್ನು ಕೆಡಿಸದಂತೆ ನೋಡಿಕೊಳ್ಳಬೇಕು. ಇದು ಮನದ ಕರ್ತವ್ಯ ಕೂಡಾ ಆಗಿದೆ.

775

ಒಪ್ಪವ ನುಡಿವಿರಯ್ಯಾ ತುಪ್ಪವ ತೊಡೆದಂತೆ,
ಶರಣ ತನ್ನ ಮರೆವನೆ ಬಿನ್ನಾಣಿಯಂತೆ ?
ಕೂಡಲಸಂಗನ ಪ್ರಸಾದದಿಂದ ಬದುಕುವನಲ್ಲದೆ
ತನ್ನ ಮರೆವನೆ ?

ಶರಣ, ಅಂಗದಲ್ಲಿಯೇ ಇರುವ ಅರಿವೆಂಬ ಸಂಗಮನಾಥನಿಗೆ ಶರಣು ಹೋಗಿ ಶರಣನಾದಾತ. ಮನದ ಸಕಲ ಗುಣಾವಗುಣಗಳನ್ನು ಕಳೆದುಕೊಂಡು ನಿರ್ಗುಣಿಯಾದಾತ. ತುಪ್ಪದ ಸವಿಗಾಗಿ ಒಪ್ಪವ ನುಡಿಯುವಾತನಲ್ಲ. ತನ್ನನ್ನು ತಾನು ಎಂದೂ ಬಣ್ಣಿಸಿಕೊಳ್ಳುವಾತನೂ ಅಲ್ಲ. ಏಕೆಂದರೆ ತಾನು ಬಣ್ಣನೆಗೆ ನಿಲುಕದಾತನೆಂದು ಆತನಿಗೆ ಹೊಳೆದಿದೆ. ತಾನು ಜಗದಗಲ ಮುಗಿಲಗಲ ಮಿಗೆಯಗಲವಾದಾತನೆಂದು ತನಗೆ ಅರಿವಾಗಿದೆ. ಅಗಮ್ಯ ಅಗೋಚರ ಅಪ್ರಮಾಣ ಅಪ್ರತಿಮನೆಂದೂ ತನಗೆ ಅರಿವಾಗಿದೆ. ಹೀಗಾಗಿ ಆತ ತನ್ನನ್ನು ತಾನು ಬಣ್ಣಿಸಿ
ಕೊಳ್ಳುವುದಿಲ್ಲ.

ಶರಣನಿಗೆ ಯಾರ ಹಂಗೂ ಬೇಕಿಲ್ಲ. ಅಂಗದಲ್ಲಿಯೇ ಇರುವ ಅರಿವೆಂಬ ಸಂಗಮನಾಥನ ಪ್ರಸಾದದಿಂದ ಬದುಕಿದ ಮಹಾಜ್ಞಾನಿಯಾತ. ಆತನಿಗೆ ತಾನಾರೆಂದು ಗೊತ್ತಿದೆ. ತನ್ನ ಅರಿವು ತನಗಿದೆ. ಹೀಗಾಗಿ ತನ್ನ ಮರೆಯದೆ ಕ್ಷಣ ಕ್ಷಣಕ್ಕೂ ಅರಿವಿನಿಂದ ಬದುಕಿ, ಅರಿವಿನಿಂದಲೇ ಬೆಳಗಿ, ಬೆಳಗಿಂಗೆ ಬೆಳಗಾಗಿ ಸದಾ ಬೆಳಗುತ್ತಾನೆ. ಸ್ವಯಂಬೆಳಕಿನಲ್ಲಿ.

776

ಅರ್ಪಿತ ಅರ್ಪಿತವೆಂದೆನುತ್ತಿಹಿರಿ;
ಗುರುವಿಂಗೆ ಕೊಡುವುದು ಅರ್ಪಿತವೆ, ಸವಿ ಸವಿದು ಕೊಡಬೇಕಲ್ಲದೆ ?
ಅರ್ಪಿತ ಅರ್ಪಿತವೆಂದೆನುತ್ತಿಹಿರಿ;
ಲಿಂಗಕ್ಕೆ ಕೊಡುವುದು ಅರ್ಪಿತವೆ, ಸವಿಸವಿದು ಕೊಡಬೇಕಲ್ಲದೆ ?
ಅರ್ಪಿತ ಅರ್ಪಿತವೆನುತ್ತಿಹರೆಲ್ಲರು
ಅರ್ಪಿತ ಮುಖವನರಿಯರು ನೋಡಾ.
ಜಂಗಮಕ್ಕೆ ನೀಡಿ ಜಂಗಮಪ್ರಸಾದವ ಕೊಂಡಡೆ
ನಿನಗರ್ಪಿತ ಕಾಣಾ, ಕೂಡಲಸಂಗಮದೇವಾ.

ಜಂಗಮಕ್ಕೆ ನೀಡಿ ಜಂಗಮ ಪ್ರಸಾದವ ಕೊಂಡಡೆ ನಿನಗರ್ಪಿತ ಕಾಣಾ, ಕೂಡಲಸಂಗಮದೇವಾ:

ಮನೆಯಲ್ಲಿ ಹಬ್ಬ ಮಾಡಿ,ಜಗಲಿಯಲ್ಲಿರುವ ದೇವರಿಗೆ ಅರ್ಪಿಸಿ ಸ್ವೀಕಾರ ಮಾಡುವುದು ಅರ್ಪಣೆ ಅಲ್ಲ. ಅಂಗದ ಮೇಲೆ ಲಿಂಗ ಕಟ್ಟಿಕೊಂಡು, ಆ ಲಿಂಗಯ್ಯನಿಗೆ ಅರ್ಪಿಸಿ ಸ್ವೀಕರಿಸುವುದು ಕೂಡಾ ಅರ್ಪಣೆ ಅಲ್ಲ. ಜಂಗಮರನ್ನು, ಬ್ರಾಹ್ಮಣರನ್ನು ಮನೆಗೆ ಕರೆದು ಅವರಿಗೆ ಬಡಿಸಿ ತಾನುಣ್ಣುವುದು ಕೂಡಾ ಅರ್ಪಣೆ ಅಲ್ಲ.

ನಾಲಗೆಯಲ್ಲಿ ಉಂಟಾದ ರುಚಿಯನ್ನು ನಾಲಗೆಯಲ್ಲಿಯೇ ತನ್ಮಯವಾದ ಜಂಗಮನಿಗೆ ಅರ್ಪಿಸಿ ಸ್ವೀಕರಿಸುವುದೇ ಅರ್ಪಣೆ. ಕಣ್ಣಿನಲ್ಲಿ ಉಂಟಾದ ದೃಶ್ಯದ ಆನಂದವನ್ನು, ಚರ್ಮದಲ್ಲಿ ಉಂಟಾದ ಸ್ಪರ್ಶದ ಸುಖ ದುಃಖವನು, ಮೂಗಿನಲ್ಲಿ ಉಂಟಾದ ಸುಗಂಧ ದುರ್ಗಂಧವನು ಸುಖ ದುಃಖವನು, ಕಿವಿಯಲ್ಲಿ ಉಂಟಾದ ಸು-ಶಬ್ದ ಕು-ಶಬ್ದವನು ಅಲ್ಲಲ್ಲಿಯೇ ಇದ್ದ ಜಂಗಮನಿಗೆ ಅರ್ಪಿಸಿ ನಿರ್ಭಾವದಿಂದ ಸ್ವೀಕರಿಸುವುದೆ ಅರ್ಪಣೆ.

ಶಬರಿ ರಾಮನಿಗೆ ಸಿಹಿಬೋರೆಯನ್ನು ರುಚಿಸಿ ಕೊಡಬಹುದು; ಅಲ್ಲಿ ರಾಮ ಮತ್ತು ಶಬರಿ ಇಬ್ಬರಿದ್ದಾರೆ. ಕಣ್ಣು ಕಿವಿ ಮೂಗು ನಾಲಗೆ ಚರ್ಮದಿಂದ ಸುಖಿಸುವಾಗ ತಾನೊಬ್ಬನೆ ಇರುತ್ತಾನೆ. ಸಿಹಿ ಕಹಿಗಳ ಫಲ ತನಗೊಂದೆ ಆಗಿ ಅಂಗಕ್ಕೆ ಆಪತ್ಕಾಲ ಬಂದೆರಗುತ್ತದೆ.

ಉದಾಹರಣೆಗೆ ಕಣ್ಣು ದೃಶ್ಯ ಸುಖವನ್ನು ಹೀರುವಾಗ ಚರ್ಮ ಮತ್ತು ಅಂಗಕ್ಕೆ ಆಪತ್ಕಾಲ ಬಂದೊದಗುತ್ತದೆ. ಇದನ್ನು ತಪ್ಪಿಸಿಕೊಳ್ಳಲು ಕಣ್ಣು ಸವಿ ಸವಿದು ಲಿಂಗಕ್ಕೆ ಅರ್ಪಿಸಬೇಕು. ಕಣ್ಣು ಸವಿ ಸವಿದು ಜಂಗಮಕ್ಕೆ ಅರ್ಪಿಸಬೇಕು. ಲಿಂಗ ಜಂಗಮರಿಬ್ಬರು ದೃಶ್ಯ ಸುಖವನ್ನು ಸವೆದು ಅಂಗಕ್ಕೆ ಬಂದೊದಗುವ ಆಪತ್ಕಾಲವನ್ನು ಕೂಡಲೇ ತಡೆಯುತ್ತಾರೆ.

ಲಿಂಗ ಜಂಗಮರು ಯಾರು ? ಅವರಿಗೆ ಅರ್ಪಣೆ ಹೇಗೆ ಮಾಡಬೇಕು ? ಅವರು ಇರುವ ಜಾಗ ಯಾವುದು ? ರುಚಿಗೆ ಸಿದ್ಧವಾದ ಜಾಗ ಯಾವುದು ಎಂದು ಗುರುಮುಖೇನ ತಿಳಿಯದಿದ್ದರೆ ಅರ್ಪಣೆ ಮಾಡಿ ಸ್ವೀಕರಿಸುವುದು ಮನಕ್ಕೆ ತಿಳಿಯುವುದಿಲ್ಲ. ಮನ ಬರೀ ಸಂಪ್ರದಾಯದ ಅರ್ಪಣೆಯಲ್ಲಿ ಭಾಗಿಯಾಗುತ್ತದೆ. ಆದರಿಂದ ಅಂಗಕ್ಕೆ ಬಂದೊದಗುವ ಆಪತ್ಕಾಲಗಳು ನಿಲ್ಲುವುದಿಲ್ಲ.

ಹಬ್ಬ ಹರಿದಿನಗಳಲ್ಲಿ ಜಂಗಮರನ್ನು ಕರೆದು, ಲಿಂಗಯ್ಯನಿಗೆ ಎಡೆಮಾಡಿ, ಅರ್ಪಿಸುವ ಸಂಪ್ರದಾಯಕ್ಕೆ ಮನ ಶರಣು ಹೋದರೆ ತನುವಿಗೆ ತೊಂದರೆ ತಪ್ಪಿದ್ದಲ್ಲ. ಅರ್ಪಿತ ಮುಖವನು ಅರಿತು ನೋಡಬೇಕು.

ಪ್ರಸಾದಿಯ ಪ್ರಸಾದಿ ಸ್ಥಲ

777

ಗುರುಲಿಂಗ ಜಂಗಮದಿಂದೆ ಪಾದೋದಕ ಪ್ರಸಾದವಾಯಿತ್ತು.
ಆ ಭಾವವೇ ಮಹಾನುಭಾವವಾಗಿ,
ಎನಗೆ ಮತ್ತೆ ಬೇರೆ ಪ್ರಸಾದವೆಂಬುದಿಲ್ಲ,
ಕೂಡಲಸಂಗಮದೇವಾ.

ಗುರುಲಿಂಗ ಜಂಗಮದಿಂದಲೇ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾ

ನುಭಾವವಾಗಿ, ಎನಗೆ ಮತ್ತೆ ಬೇರೆ ಪ್ರಸಾದವೆಂಬುದಿಲ್ಲ. ಈ ಮಾತು ಮಹಾಜ್ಞಾನಿಗಳಿಗೆ ಮಾತ್ರ ಅರ್ಥವಾಗುತ್ತದೆ. ನಿಧಾನವಾಗಿ ಯೋಚಿಸಿದರೆ ಎಲ್ಲರಿಗೂ ತಿಳಿಯುತ್ತದೆ. ಆದರೆ ಆ ಮಹಾನುಭಾವದಲ್ಲಿ ಉಳಿಯಲು ಸಾಧ್ಯವಾಗಲಿಕ್ಕಿಲ್ಲ; ಪ್ರಯತ್ನಿಸಿದರೆ ಸಾಧ್ಯವಾಗದೇ ಇರದು.

ಗುರು ಲಿಂಗ ಜಂಗಮಕ್ಕೆ ಎಡೆ ಮಾಡಿದ ಪದಾರ್ಥ ಪ್ರಸಾದವಲ್ಲ; ಗುರು ಲಿಂಗ ಜಂಗಮರ ಪಾದ ತೊಳೆದ ನೀರು ಪಾದೋದಕವೂ ಅಲ್ಲ. ಆ ಜಲದಿಂದ, ಪದಾರ್ಥದಿಂದ ಅಂಗಕ್ಕೆ ಯಾವ ಸೌಭಾಗ್ಯವೂ ದಕ್ಕುವುದಿಲ್ಲ!

ಶರಣರು ಹೇಳಿದ ಪಾದೋದಕವೇ ಬೇರೆ, ಪ್ರಸಾದವೇ ಬೇರೆ.

ಕಿವಿಗೆ ಬಿದ್ದ ಶಬ್ದ, ದೃಷ್ಟಿಗೆ ತೋರಿದ ಚಿತ್ರಣ, ಮೂಗಿಗೆ ಬಡಿದ ವಾಸನೆ, ಚರ್ಮಕ್ಕೆ ತಾಕಿದ ಸ್ಪರ್ಶ, ನಾಲಗೆಗೆ ತಾಕಿದ ರುಚಿ ತನುವಿನಲ್ಲಿ ಸುಖ ಹಾಗೂ ದುಃಖದ ರಸಾಯನಗಳನ್ನು ಸೃಷ್ಟಿ ಮಾಡುತ್ತದೆ.

ಪದಾರ್ಥ ತನುವಿಗೆ ಸುಖ ಉಂಟು ಮಾಡಿದರೆ, ಮನ ಆ ಪದಾರ್ಥಗಳನ್ನು ಮತ್ತೆ ಮತ್ತೆ ಬೇಡುತ್ತದೆ. ದೊರೆಯದಿದ್ದರೆ ಕಳುವು, ತುಡುಗು, ಹಾದರ, ಕೊಲೆ ಮಾಡಿ ಪದಾರ್ಥ ಪಡೆಯುತ್ತದೆ.

ಪದಾರ್ಥ ತನುವಿಗೆ ದುಃಖ ಉಂಟು ಮಾಡಿದರೆ ಮನ ತನುವನ್ನು ಸಾಯುವ, ಆತ್ಮಹತ್ಯೆ ಮಾಡಿಕೊಳ್ಳುವ, ಯುದ್ಧ ಮಾಡಿ ಸೋಲಿಸುವ ಸಿಟ್ಟು ಉಂಟು ಮಾಡುತ್ತದೆ.

ದೃಶ್ಯ ಶಬ್ದ ಗಂಧ ರಸ ಸ್ಪರ್ಶ ತನುವಿಗೆ ಅರಿವಾಗಲಿಲ್ಲ. ಕಾರಣ ಸ್ವೀಕರಿಸಿದಾಗ ಪ್ರಸಾದವಾಗಲಿಲ್ಲ. ಅಂದರೆ ತನುವಿನಲ್ಲಿ ಅದರ ಶೇಷ ಭಾಗ ಉಳಿಯದೆ ಸಂಪೂರ್ಣ ಜೀರ್ಣವಾಗಲಿಲ್ಲ.

ನೋಡಿದ ದೃಶ್ಯ ತನುವನ್ನು ತಲ್ಲಣಗೊಳಿಸಿತು. ಜ್ಞಾನದಿಂದ ದೃಶ್ಯ ತನುವಿನಲ್ಲಿ ಜೀರ್ಣವಾಗಲಿಲ್ಲ. ಕೇಳಿದ ಶಬ್ದ ತನುವನ್ನು ಯಾತನೆಗೆ ಗುರಿ ಮಾಡಿತು; ಜ್ಞಾನದಿಂದ ಶಬ್ದ ಕಿವಿಯಲ್ಲಿ ಪ್ರಸಾದವಾಗಲಿಲ್ಲ. ಸ್ಪರ್ಶ ತನುವನ್ನು ಯಾತನೆಗೆ ಗುರಿ ಮಾಡಿತು; ಪ್ರಸಾದವಾಗಲಿಲ್ಲ. ವಾಸನೆ, ರುಚಿಗಳು ಕೂಡಾ ತನುವನ್ನು ಸಂಕಟಕ್ಕೆ ಈಡು ಮಾಡಿದವು ಪ್ರಸಾದವಾಗಲಿಲ್ಲ.

ಮನದ ಭಾವ ಸ್ವೀಕರಿಸಿದ ವಸ್ತುಗಳಿಂದ ದುರ್ಭಾವವಾಯಿತು. ಮನದ ಭಾವ ನಿರ್ಭಾವವಾಗಿ ಮಹಾನುಭಾವವಾಗುವ ಬಗೆ ಮನಕ್ಕೆ ಅರಿವಾಗಲಿಲ್ಲ. ಜ್ಞಾನೋದಕದಿಂದ ಮಾತ್ರ ಸಕಲ ಪದಾರ್ಥಗಳು ಪ್ರಸಾದವಾಗಲು ಸಾಧ್ಯವಾಗುತ್ತದೆ . ಇದು ಗುರುಲಿಂಗ ಜಂಗಮರಿಂದ ಮಾತ್ರ ಸಾಧ್ಯವಾಗುತ್ತದೆ.

ಆದರೆ ಮನ ಗುರುವನ್ನು ಮಾಡಿಕೊಳ್ಳುತ್ತದೆ. ಆ ಗುರುವಿನಿಂದ ಬೋಧೆ ತೆಗೆದುಕೊಂಡು ಶಿಷ್ಯನಾಗುತ್ತಾದೆ. ಆ ಗುರುದೇವ ಹೇಳಿದಂತೆ ಅಂಗದ ಮೇಲೆ ಲಿಂಗಧರಿಸುತ್ತದೆ. ಆ ಲಿಂಗವನ್ನು ಮೂರು ವೇಳೆ ಪೂಜಿಸಿ ಭಕ್ತನಾಗುತ್ತದೆ. ಗುರು ಹೇಳಿದಂತೆ ಮನ ಜಂಗಮನನ್ನು ಕರೆದು ಪಾದ ತೊಳೆದು ಪೂಜಿಸುತ್ತದೆ. ಆತನಿಗೆ ಅರ್ಪಿಸಿ ತಾನು ಪ್ರಸಾದ ತೆಗೆದುಕೊಳ್ಳುವ ಈ ಸಂಪ್ರದಾಯ ಎಲ್ಲೆಡೆಯೂ ಇದೆ. ಇದು ಗುರು ಲಿಂಗ ಜಂಗಮ ಪೂಜೆಯಲ್ಲ. ಪಾದೋದಕ ಪ್ರಸಾದವಲ್ಲ ಎಂದು ಗುರುವಾದಾತನಿಗೆ ತಿಳಿದಿಲ್ಲ; ಜಂಗಮವಾದಾತನಿಗೂ ತಿಳಿದಿಲ್ಲ. ಭಕ್ತನಾದಾತನಿಗೂ ತಿಳಿದಿಲ್ಲ. ಈ ಗುರು ಲಿಂಗ ಜಂಗಮರು, ಇವರನ್ನು ಪೂಜಿಸುವ ಭಕ್ತರು ರೋಗಗ್ರಸ್ತರೇ ಹೊರತು ನಿರೋಗಿಗಳಲ್ಲ. ಇವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂದರೇ

ನೆಂದು ತಿಳಿದಿಲ್ಲ . ಭಾವ ಬಲಿತು ಮಹಾನುಭಾವರಾಗದ ಹೊರತು ನಿರ್ಭಾವಿಗಳಲ್ಲ. ವೇಷ ಧರಿಸಿದವರಿಗೆ ಜ್ಞಾನಿಗಳಾಗಬೇಕೆಂಬ ಬಯಕೆಯೇ ಇಲ್ಲ. ವ್ಯವಹಾರದ ಸುಖಕ್ಕಾಗಿ ತಮ್ಮನ್ನು ಮೋಸ ಮಾಡಿಕೊಳ್ಳುತ್ತಾರೆ ಹಾಗೂ ಭಕ್ತರನ್ನು ಮೋಸ ಮಾಡುತ್ತಾರೆ.

ಅಂಗದಲ್ಲಿಗುರುವಿದ್ದಾನೆ; ಲಿಂಗವೂ ಇದೆ; ಜಂಗಮನೂ ಇದ್ದಾನೆ ! ಪಾದೋದಕವೆಂಬ ಜ್ಞಾನೋದಕವೂ ಇದೆ; ಪ್ರಸಾದವೂ ಇದೆ. ಭಾವವೂ ಇದೆ; ಮಹಾನುಭಾವವೂ ಇದೆ; ನಿರ್ಭಾವವೂ ಇದೆ. ಮನ ಇದೆಲ್ಲವನ್ನೂ ತನಗೆ ತಾನೆ ಕಂಡುಕೊಳ್ಳಬೇಕು. ಈ ಕ್ರಿಯೆಗಾಗಿ ಮನ ಬಲ್ಲ ಮಹಾನುಭಾವರನ್ನು ಹುಡುಕಬೇಕು. ಇದರ ಹೊರತಾಗಿ ಬೇರೆ ಪ್ರಸಾದವೆಂಬುದೇ ಇಲ್ಲ.

778

ದಾಸೋಹವೆಂಬ ಸೋಹೆಗೊಂಡು ಹೋಗಿ
ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ
ಇಂತೀ ಚತುರ್ವಿಧ ಸಂಪನ್ನನಾದೆ, ಕಾಣಾ,
ಕೂಡಲಸಂಗಮದೇವಾ.

ಸೂಕ್ಮಾತಿ ಸೂಕ್ಷ್ಮ ಶಬ್ದವಿದು. ಬೇಕಾದದ್ದನ್ನು ಬೇಡವಾದದ್ದನ್ನು ಮನ ತಾನು ಸ್ವೀಕರಿಸದೆ ಗುರುವಿಗೆ ಅರ್ಪಣೆ ಮಾಡಿ, ಲಿಂಗಕ್ಕೆ ಅರ್ಪಣೆ ಮಾಡಿ, ಜಂಗಮಕ್ಕೆ ಅರ್ಪಣೆ ಮಾಡಿ ಅವರು ಸ್ವೀಕರಿಸಲು ಮನಕ್ಕೆ ಅಪ್ಪಣೆ ಮಾಡಿದರೆ ಮಾತ್ರ ಅದು ಪ್ರಸಾದವಾಗುತ್ತದೆ.

ಪ್ರಸಾದ ಸರ್ವಗುಣಗಳನ್ನು ಕಳೆದುಕೊಂಡು ನಿರ್ಭಾವವಾಗಿರುತ್ತದೆ. ಗುಣಗಳು ಭಾವ ಗಳು ದೋಷದಿಂದ ಕೂಡಿರುತ್ತವೆ. ಈ ದೋಷಗಳನ್ನು ಗುರು ಲಿಂಗ ಜಂಗಮರು ಸ್ವೀಕರಿಸಿ ಶುದ್ಧ ನಿರ್ಭಾವ ಪ್ರಸಾದವನ್ನು ಮನಕ್ಕೆ ಧಾರೆ ಎರೆಯುತ್ತಾರೆ. ಆ ಪ್ರಸಾದ ಸ್ವೀಕರಿಸಿದ ಮನ ಮರ್ಕಟದ ಗುಣಗಳನ್ನು ಕಳೆದುಕೊಂಡು ಮಹಾದೇವನಾಗುತ್ತದೆ.

ಅಂಗವನ್ನು ಆವರಿಸಿದ ಮನ, ಅಂಗದಲ್ಲಿಯೇ ಸಂಗಮವಾಗಿರುವ ಗುರುದೇವನನ್ನು, ಲಿಂಗವನ್ನು, ಜಂಗಮನನ್ನು ,ಅವರು ನೀಡುವು ಪ್ರಸಾದವನ್ನು ಕಂಡು ಅದನ್ನು ಉಂಡು ಚತುರ್ವಿಧ ಸಂಪನ್ನನಾಗುತ್ತದೆ.

ದಾಸೋಹದ ದಾರಿ ಮನಕ್ಕೆ ಗೊತ್ತಾಗಬೇಕು. ಮತ್ತೆ ಮತ್ತೆ ಮರ್ಕಟನಂತೆ ಕುಣಿದಾಡುವ ಮನ ತನುವಿನಲ್ಲಿಯೇ ಅನುವಿನಿಂದ ದಾಸೋಹದ ದಾರಿಯನು ಹುಡುಕಬೇಕು. ದಾರಿ ತಿಳಿದ ಮಹಾನುಭಾವರನ್ನು ಹುಡುಕಿ ಅವರಿಂದ ದಾಸೋಹಕ್ಕೆ ಹೋಗುವ ದಾರಿ ಕೇಳಬೇಕು.

ಆ ಮಹಾನುಭಾವರು ಕೈವಲ್ಯದ ದಾರಿ ತೋರಿಸಿ ಕೈ ಮರದಂತೆ ಉಳಿಯಬೇಕು. ದಾರಿ ತೋರುವ ಕೈಮರವನ್ನು ನೋಡಿ ಜನ ದಾರಿ ನಡೆದು ಗಮ್ಯ ಸೇರುತ್ತಾರೆ. ಮತ್ತೆ ಬಂದು ಕೈ ಮರವನ್ನು ಯಾರೂ ಪೂಜಿಸುವುದಿಲ್ಲ. ಆದರೆ ಇದೀಗ ದೇಶದಲ್ಲಿ ದಾರಿ ತೋರುವವರದೆ ದರಬಾರು! ಗುರುವಾಗಿ ಉಳಿಯುತ್ತಾರೆ. ತಿಳಿಯದವರನ್ನು ದಾರಿ ಕೇಳಿ ನಡೆದು ನಡೆದು ದಣಿಯುತ್ತಾರೆ.

ಸುಂಕ ಪಡೆದು ದಾರಿ ತೋರುವವನು ಗುರುವಾಗಲು ಸಾಧ್ಯವಿಲ್ಲ. ಸುಂಕ ಕೊಟ್ಟು ದಾರಿ ನಡೆಯುವವನಿಗೆ ದಾರಿ ಕಾಣುವುದೇ ಇಲ್ಲ. ಕೈ ಮರಕ್ಕೆ ಪೂಜಿಸಿದರೆ ದಾರಿ ಸಾಗಲು ಸಾಧ್ಯವೇ ? ಗುರುವಾದರೇನು ಶಿಷ್ಯನಾದರೇನು ? ಸಕಲರೂ ಗುರುಲಿಂಗ ಜಂಗಮನನ್ನು

ಕಾಣಲು ದಾರಿ ನಡೆಯಬೇಕಿದೆ. ಪ್ರಸಾದ ಉಂಡು ಚತುರ್ವಿಧ ಸಂಪನ್ನನಾಗಬೇಕಿದೆ.

ಅಂಗವನ್ನು ಆವರಿಸಿದ ಮನ ಅಂಗದೊಂದಿಗೆ ಚಂದ್ರಲೋಕಕ್ಕೆ ಹೋಗಬಹುದು. ಸಮುದ್ರದ ಆಳಕ್ಕೆ ಇಳಿಯಬಹುದು. ಜಗದಗಲ ಸುತ್ತಬಹುದು. ಜಗವನ್ನು ಗೆಲ್ಲಬಹುದು. ಆದರೆ ಅಂಗದಲ್ಲಿಯೇ ನಡೆದು ಅಂಗದಲ್ಲಿಯೇ ಇರುವ ಗುರು ಲಿಂಗ ಜಂಗಮರನ್ನು ಕಂಡು ಅವರಿಂದ ಪ್ರಸಾದ ಪಡೆಯುವುದು ಬಲು ಕಠಿಣ. ಇದು ಪ್ರಯಾಸದ ದಾರಿ; ದುರ್ಗಮವಾದ ದಾರಿ !

ಪ್ರಸಾದಿಯ ಭಕ್ತಸ್ಥಲ

779

ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ !
ಶ್ರೀ ಗುರುಪಾದವ ಹಿಡಿದು ಪಾವನನಾದೆನಯ್ಯಾ !
ಪಾದೋದಕ ಪ್ರಸಾದದಿಂದ ಭವಗೆಟ್ಟೆನು,
ಕೂಡಲಸಂಗಮದೇವಾ.

ಅರಿವಿಗೆ ಶರಣು ಹೋದ ಶರಣರು ಅರಿವಿಗೆ ಹೋಗುವ ಮಾರ್ಗವನ್ನು ಹೇಳಿಕೊಡ ಬಲ್ಲರು. ಅಂತಹ ಶರಣರ ಕಂಡು ಮನ ಹಿರಿಹಿರಿ ಹಿಗ್ಗುತ್ತದೆ. ಮನಕ್ಕೆ ಸಸಿಯ ಮೇಲೆ ಸಾಗರವೇ ಹರಿದಂತಾಗುತ್ತದೆ. ಗಣ ತಿಂತಿಣಿಯನ್ನು ಕಂಡು ಕುಣಿಕುಣಿದಾಡುತ್ತದೆ. ನಲಿನಲಿದಾಡುತ್ತದೆ. ಸಾಗರ ಬಿಸಿಲಲ್ಲಿ ಕರಗಿ ಆವಿಯಾಗಿ ತುಂತುರು ಹನಿಗಳ ರೂಪದಲ್ಲಿ ಸಸಿಯ ಮೇಲೆ ಹನಿಸಿದಂತಾಗುತ್ತದೆ. ಸಸಿ ಉಬ್ಬಿ ಕೊಬ್ಬಿ ನಲಿ ನಲಿದಾಡುತ್ತದೆ.

ಶರಣರ ಕಂಡು ಅವರು ಹೇಳಿದಂತೆ ಅರಿವೆಂಬ ಗುರುದೇವನಿಗೆ ಶರಣು ಹೋಗಿ ಅಂಗದಲ್ಲಿಯೇ ಗುರುದೇವನೆಂಬ ಲಿಂಗಯ್ಯನ ಪಾದವ ಹಿಡಿದ ಮನ ಪಾವನವಾಯಿತು; ಘನಮನವಾಯಿತು.

ಅರಿವೆಂಬ ಗುರುದೇವನ ಪಾದೋದಕ ಪ್ರಸಾದಿಂದ ಜನನ ಮರಣಗಳ ಬಾಧೆಯನು ಕಳೆದುಕೊಂಡು ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೊಂದಿಗೆ ಸಂಗಮವಾಯಿತು.

780

ಕಿವಿಯಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ.
ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ,
ನಾನಾ ಸೂತಕ ಹೊಯಿತ್ತು ನಿಮ್ಮ ಶರಣರನುಭಾವಿಯಾಗಿ.
ಕೂಡಲಸಂಗಮದೇವಾ ಕೇಳಯ್ಯಾ,
ಎನ್ನ ಮನದ ಸೂತಕ ಹೊಯಿತ್ತು ನೀವಲ್ಲದಿಲ್ಲೆಂದರಿದೆನಾಗಿ.

ಸಮಾಜದಲ್ಲಿ ರಜೊ ಸೂತಕ, ಜನನ ಸೂತಕ, ಮರಣ ಸೂತಕಗಳನ್ನು ಮಾತ್ರ ನಂಬಿದ್ದಾರೆ. ಅದನ್ನು ಆಚರಣೆಗೆ ತಂದಿದ್ದಾರೆ. ಆದರೆ ಈ ಮೂರೂ ಸೂತಕಗಳು ನಿಸರ್ಗದತ್ತವಾದವುಗಳು. ಇವುಗಳಿಂದ ಭಯವಿಲ್ಲ; ಆದರೂ ಭಯದಿಂದ ಸೂತಕಗಳೆಂದೇ ಕರೆಯುತ್ತಾರೆ.

ಬಸವಣ್ಣನವರು ಕಿವಿಯ ಸೂತಕ, ಕಂಗಳ ಸೂತಕ, ಕಾಯದ ಸೂತಕ, ಬಾಯಿ ಸೂತಕ ಮತ್ತು ಮನದ ಸೂತಕಗಳನ್ನು ಹೆಸರಿಸಿದ್ದಾರೆ. ಇವು ಭಯಂಕರವಾದ ಸೂತಕಗಳು !

ಕೈಕೇಯಿಯ ಎರಡು ಶಬ್ದಗಳು ಶ್ರೀರಾಮನಿಗೆ, ದಶರಥನಿಗೆ, ಇಡೀ ಅರಮನೆಗೆ, ರಾಜ್ಯಕ್ಕೆ, ನುಡಿದ ಕೈಕೇಯಿಗೆ ಕೂಡಾ ಸೂತಕವಾಗಿ ಪರಿಣಮಿಸಿತು. ಎರಡು ಶಬ್ದಗಳು ರಾಜ್ಯದ ಕಿವಿಗಳನ್ನು ತೂತು ಹಾಕಿ ಹದಿನಾಲ್ಕು ವರ್ಷ ಕಾಡಿದವು. ಶಬ್ದ ನುಡಿದ ಕೈಕೇಯಿಗೆ ಜೀವನ ಪರ್ಯಂತ ಕಾಡಿ ಕಾಡಿ ನರಳಿನರಳಿ ಸತ್ತಳು. ಸದ್ಗುರುವಿನ ದಯೆಯಿಂದ ಕಿವಿಯ ಮೂಲಕ ಸೂತಕ ಕಳೆದುಕೊಳ್ಳಲು ಸಾಧ್ಯವಾಗಲೇ ಇಲ್ಲ.

ಶರಣರ ವಚನ ಹೇಳುತ್ತಾ ಮಠ ಆಶ್ರಮಗಳನ್ನು ಕಟ್ಟಿಕೊಂಡ ಪೀಠಾಧಿಪತಿಗಳಿಗೆ ಕೂಡಾ ಕಿವಿಯ ಸೂತಕ ಕಳೆದುಕೊಳ್ಳಲು, ಕಳೆಯಲು ಸಾಧ್ಯವಾಗುತ್ತಿಲ್ಲ. ದ್ರೌಪದಿಯ ಒಂದು ಶಬ್ದ ದುರ್ಯೋಧನನಿಗೆ ಸೂತಕವಾಗಿ ಹದಿನೆಂಟು ಅಕ್ಷೋಹಿಣಿ ಸೈನ್ಯ ನಾಶವಾಯಿತು. ರಕ್ತದ ಕಾಲುವೆ ಹರಿಯಿತು. ವ್ಯಾಸ ಮಹರ್ಷಿಗಳಿಗೆ ಕಿವಿಯ ಸೂತಕ ಕಳೆಯಲು ಸಾಧ್ಯವಾಗಲಿಲ್ಲ. ಶಬ್ದ ಅನಾವರಣ ಮಾಡಿ ಹೇಗೆ ಕೇಳಬೇಕು ಎನ್ನುವ ತತ್ವದ ಸೂತ್ರವನ್ನು ವ್ಯಾಸರು ಮಹಾಭಾರತದಲ್ಲಿ ಹೆಣೆಯಲಿಲ್ಲ.

ಶರಣರು ತಮ್ಮ ಜೀವನ ಪರ್ಯಂತ ಐದು ಸೂತಕಗಳನ್ನು ಹೇಗೆ ಕಳೆದುಕೊಳ್ಳಬೇಕೆಂದು ಒಂದು ಲಕ್ಷ ತೊಂಬತ್ತಾರು ಸಾವಿರ ಜನರಿಗೆ ಪಾಠ ಮಾಡಿದರು. ಏಳುನೂರಾ ಎಪ್ಪತ್ತು ಉಪನ್ಯಾಸಕರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದರು. ಅವರು ಅಮರ ಗಣಂಗಳೆನ್ನಿಸಿಕೊಂಡು ನಾಡಿನ ತುಂಬಾ ಸುತ್ತಿ ಸೂತಕ ಕಳೆಯುವ ಪಾಠ ಮಾಡುತ್ತಾ ಉಪನ್ಯಾಸ ನೀಡಿದರು. ಒಂದೆಡೆ ನಿಲ್ಲದೆ ಚರ ಜಂಗಮರೆನ್ನಿಸಿಕೊಂಡರು. ಆ ಶರಣರ ಹೆಸರಿನ ಪೀಠಗಳು ಇಂದಿಗೂ ಇವೆ. ಆದರೆ ಪೀಠಾಧಿಪತಿಗಳಿಗೆ ಸೂತಕಗಳು ಆವರಿಸಿಕೊಂಡಿವೆ. ಕೊಡವಿಕೊಳ್ಳಲು ಸಾಧ್ಯವಾಗದೆ ವಿಲಿವಿಲನೆ ಒದ್ದಾಡುತ್ತಿದ್ದಾರೆ.

ಸು-ಶಬ್ದ, ಕು-ಶಬ್ದ ಶಬ್ದದಲ್ಲಿಯೇ ಅಡಗಿದೆ. ಶಬ್ದ ನೋಡುವಡೆ ನಪುಂಸಕ; ಹರಿಹರ ಬ್ರಹ್ಮಾದಿಗಳನ್ನು ಮುರಿದು ಕಟ್ಟಿತ್ತು ಇಂತಹ ಶಬ್ದದೊಂದಿಗೆ ಆಡಿ, ಶಬ್ದವನ್ನು ನಪುಂಸಕಗೊಳಿಸಿ ಅರಿವಿನಿಂದ ಶಬ್ದ ಹೇಗೆ ಕೇಳಬೇಕೆನ್ನುವ ಶಿಕ್ಷಣ ವಚನಗಳ ಸೂತ್ರದಲ್ಲಿಯೇ ಅಡಗಿದೆ. ಇಪ್ಪತ್ತೈದು ವರ್ಷಗಳ ಪರ್ಯಂತ ಅಭ್ಯಾಸ ಮಾಡಿ ಒಂದು ಲಕ್ಷಕ್ಕೂ ಅಧಿಕ ಸಂಬಳ ಪಡೆಯುವ ಮೂರ್ಖ ಸಂಶೋಧಕ, ಸಾಹಿತಿಗಳು ಶರಣರ ವಚನಗಳ, ದಾಸರ ಪದಗಳ, ತತ್ತ್ವಪದಗಳ ಹೊರಾವರಣವನ್ನು ನೋಡಿ ಸೈ ಎನ್ನಿಸಿಕೊಂಡರೆ ಹೊರತು ಅನುಭಾವಿಗಳು ಆಗಲಿಲ್ಲ. ಅನುಭಾವದತ್ತ ಹೆಜ್ಜೆ ಹಾಕಲಿಲ್ಲ. ತಾವು ತಿಳಿದ ಹೊರಾವರಣದ ಅಜ್ಞಾನವನ್ನೇ ಮಕ್ಕಳಿಗೆ ಬೋಧಿಸಿದರು. ಶರಣರು, ದಾಸವರೇಣ್ಯರ ಹೆಸರಿನಲ್ಲಿ ಸಂಭಾವನೆ ಪಡೆದು ನಾಯಿಯಂತೆ ಬೊಗಳುವ ಅನ್ಯಾಯಿಗಳ ಪಾಠವನ್ನು ಕೇಳಿದ ಮಕ್ಕಳು ಕಿವಿಯ ಸೂತಕಗಳನ್ನು ಕಂಗಳ ಸೂತಕಗಳನ್ನು ಮನದ ಸೂತಕವನ್ನು, ಬಾಯಿಯ ಸೂತಕವನ್ನು ಕಾಯದ ಸೂತಕವನ್ನು ಕಳೆದುಕೊಳ್ಳುವುದು ಹೇಗೆ:

ಕಿವಿಯಿಂದ ಶಬ್ದ ಕೇಳಿದರೆ ತನುವಿಗೆ ತೊಂದರೆಯಾಗುತ್ತದೆ, ಕಂಗಳಿಂದ ದೃಶ್ಯ ನೋಡಿದರೆ ತನುವಿಗೆ ತೊಂದರೆಯಾಗುತ್ತದೆ. ತನು, ತನುವನ್ನು ಮುಟ್ಟಿದರೆ ತನುವಿಗೆ ತೊಂದರೆಯಾಗುತ್ತದೆ.

ಬಾಯಿಯಿಂದ ನುಡಿದರೆ ನುಡಿದ ಬಾಯಿಗೂ ಕೇಳಿದ ಕಿವಿಗೂ ತೊಂದರೆಯಾಗುತ್ತದೆ. ಮನದಲ್ಲಿ ಉಂಟಾದ ಶಂಕೆ ತನುವಿನಲ್ಲಿ ಉರಿ ಎಬ್ಬಿಸಿ ಸುಡುತ್ತದೆ. ಈ ಎಲ್ಲಾ ಸೂತಕಗಳು ತನು ಇರುವವರೆಗೆ ಹೋಗುವುದೇ ಇಲ್ಲ. ತನುವಿನಲ್ಲಿಯೇ ಸಂಗ್ರಹವಾಗಿ ಮತ್ತೆ ಮತ್ತೆ ತನುವಿಗೆ ನೆನಪಿಸಿ, ತನುವನ್ನೇ ಸುಡುತ್ತವೆ. ಏಕೆ ಹೀಗೆ ? ಎಂದು ಪ್ರಶ್ನೆ ಕೇಳುವ ಶಕ್ತಿ ಮಗುವಿಗೆ ಗೊತ್ತಿಲ್ಲ, ಕೇಳಿದರೆ ಹೇಳುವ ಶಕ್ತಿಯೂ ಅಧ್ಯಾಪಕನಿಗೆ ಇಲ್ಲ. ಮಠಾಧಿಪತಿ ಪೀಠಾಧಿಪತಿಗೂ ಇಲ್ಲ.

ಇಂತಹ ಪಾಠಗಳಿಗೆ ಮಾತ್ರ ಅವಕಾಶ ಮಾಡಿಕೊಡಿ ಎಂದು ಹೇಳುವ ಶಕ್ತಿ ಸರಕಾರಕ್ಕೂ ಇಲ್ಲ. ಭಾರತ ಜ್ಞಾನ ಪ್ರಧಾನವಾದ ವೈಜ್ಞಾನಿಕ ರಾಷ್ಟ್ರವಾದರೂ ಎಲ್ಲ ಜ್ಞಾನದ ಸೂತ್ರಗಳು ಹೊತ್ತಿಗೆಯಲ್ಲಿಯೇ ಬಂಧಿಯಾಗಿವೆ. ಆ ಸೂತ್ರಗಳನ್ನು ಬಿಚ್ಚಿ ಪಾಠ ಮಾಡುವ ಶಕ್ತಿ ಕಂಡುಕೊಳ್ಳಲು ಅಧ್ಯಾಪಕರಿಗೆ ಸಾಧ್ಯವಾಗಿಲ್ಲ. ಪಾಠಗಳಲ್ಲಿ ಶರಣರ ವಚನಗಳು ತತ್ತ್ವಪದಕಾರರ, ದಾಸವರೇಣ್ಯರ, ಕಬೀರರ, ಕ್ರಿಸ್ತ, ಬುದ್ಧ, ಮಹಾವೀರ ಮುಂತಾದ ಮಹಾಜ್ಞಾನಿ ನಾಯಕರ ಪಾಠಗಳಿದ್ದರೂ ಸರಿಯಾಗಿ ಓದಿ ತಿಳಿದು ತಿಳಿಸಿಕೊಂಡು ಅಧ್ಯಯನ ಮಾಡಿ, ಪಾಠ ಮಾಡುವ ಗೋಜಿಗೆ ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯಗಳು ಹೋಗುತ್ತಿಲ್ಲ. ಮಾನವ ಸಂಬಂಧಿ ಜ್ಞಾನ ವಿಜ್ಞಾನ ಮಾನವನಲ್ಲಿಯೇ ಬಳಕೆಯಾಗದೆ ಉಳಿದು ಮಾನವನೊಂದಿಗೆ ಸಾವಿಗೀಡಾಗುತ್ತದೆ.

ಜ್ಞಾನಿ ಎನ್ನಿಸಿಕೊಂಡು ಸಂತೋಷದಿಂದ ಕಾಲಕಳೆಯಬೇಕಾದ ಮಾನವ, ಸರಕಾರದ ಅಜ್ಞಾನದ ದೆಸೆಯಿಂದಾಗಿ ವಿಶ್ವವಿದ್ಯಾಲಯಗಳ ಬಾಲಿಶತನದಿಂದಾಗಿ ಕಳ್ಳ, ಸುಳ್ಳ, ಕೊಲೆಗಡುಕ, ಬಡವ, ಶ್ರೀಮಂತ ಎನ್ನುವ ಹಣೆಪಟ್ಟಿ ಹೊತ್ತುಕೊಂಡು ಅವಸಾನ ಹೊಂದುತ್ತಾನೆ. ಸರಕಾರ ಶಿಕ್ಷಣ ಇಲಾಖೆಗಳು, ಮಾನವ ಜ್ಞಾನ ಸಂಬಂಧಿ ಶಿಕ್ಷಣ ಸಂಸ್ಥೆಗಳು, ಪೀಠ, ಮಠಾಧೀಪತಿಗಳು ಎಚ್ಚರವಾಗದಿದ್ದರೆ ತನುವಿನ ಸೂತಕಗಳು ತನುವನ್ನೇ ಕಾಡಿ ತನು ಅವಸಾನ ಹೊಂದುತ್ತದೆ.

ಅರಿವಿಗೆ ಶರಣು ಹೋಗಿ ಶರಣನಾಗುವ ಹಾದಿ ಶರಣರ ವಚನಗಳ ಮೂಲಕ ಅನುಭಾವದಿಂದ ಅಧ್ಯಾಪಕರು ಮಕ್ಕಳಿಗೆ ಪಾಠ ಮಾಡಿದರೆ ಸರ್ವ ಮಕ್ಕಳು ಕಣ್ಣು, ಕಿವಿ, ಬಾಯಿ, ತನು, ಮನದ ಸೂತಕಗಳನ್ನು ಕಳೆದುಕೊಂಡು ಜ್ಞಾನಿಗಳಾಗುತ್ತಾರೆ , ವಿಜ್ಞಾನಿಗಳಾಗುತ್ತಾರೆ. ಬಸವಾದಿ ಶರಣರ ಬುದ್ಧ ಮಹಾವೀರರ ಜ್ಞಾನ ಸಾಮ್ರಜ್ಯವೇ ನಿರ್ಮಾಣವಾಗುತ್ತದೆ.

781

ಲಿಂಗ ಪ್ರಸಾದಿಗಳಲ್ಲದವರ ಸಂಗ
ಭಂಗವೆಂದುದು ಗುರುವಚನ.
ಲಿಂಗ ಪ್ರಸಾದಿಗಳಲ್ಲದವರ ಸಂಗ
ಪಂಚಮಹಾಪಾತಕವೆಂದುದು ಲಿಂಗವಚನ
ಆಸನೇ ಶಯನೇ ಯಾನೇ ಸಂಪರ್ಕೇ ಸಹಬೋಜನೇ।
ಸಂಚರಂತಿ ಮಹಾಘೋರೇ ನರಕೆ ಕಾಲಮಕ್ಷಯಂ ॥ ಇಂತೆಂದುದಾಗಿ
ಕೂಡಲಸಂಗಮದೇವಾ,
ನಿಮ್ಮ ಶರಣರಿಗೆ ಶರಣೆಂದು ಶುದ್ಧನಯ್ಯಾ.

ಅಂಗವನ್ನು ಆವರಿಸಿದ ಮನಕ್ಕೆ ಲಿಂಗವೆಂದರೇನೆಂದು ತಿಳಿಯದು. ಅದಕ್ಕಾಗಿಯೇ ಮನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳ ಸಂಗ ಮಾಡಿ ಅಂಗದೊಂದಿಗೆ ಭಂಗಕ್ಕೆ

ಗುರಿಯಾಗಿದೆ.

ಅಂಗದಲ್ಲಿಯೇ ಅರಿವೆಂಬ ಲಿಂಗ ಸಂಗಮವಾಗಿದೆ. ಮನ ಅಂಗವನ್ನು ಆವರಿಸಿದೆ. ಅಂಗ ಲಿಂಗ ಮನ ನೋಡಲು ಇವು ಮೂರೂ ಸಂಗಮವಾಗಿದ್ದರೂ ಒಂದನ್ನು ಒಂದು ಸಂಗ ಮಾಡಲು ಸಾಧ್ಯವಾಗಿಲ್ಲ. ಸಂಗ ಮಾಡುವ ವಿಧಾನವನ್ನು ತಿಳಿಯಲು ಕೂಡಾ ಸಾಧ್ಯವಾಗುತ್ತಿಲ್ಲ. ಮನಕ್ಕೆ ಅಂಗದ ಸಂಗವೆಂದರೆ ಬಲು ಇಷ್ಟ. ಹೀಗಾಗಿ ಮನ ಕಾಮದ ಸಂಗ ಮಾಡಿದೆ. ಆ ಸಂಗ ಸುಖ ನಿರಂತರ ಹೊಂದಲು ಕ್ರೋಧದ ಸಂಗ ಮಾಡಿದೆ. ಕಾಮದ ಸುಖ ನಿರಂತರವಾಗಿ ತನಗೆ ಸಿಕ್ಕಲಿ ಎಂದು ಲೋಭದ ಸಂಗ ಮಾಡಿದೆ. ಕಾಮದ ಸುಖ ತಪ್ಪದಿರಲಿ ಎಂದು ಮೋಹದ ಸಂಗ ಮಾಡಿದೆ. ತನಗೆ ದಕ್ಕಿದ ಸುಖ ಮತ್ತಾರಿಗೂ ಇಲ್ಲವೆಂದು ಬೀಗುವುದಕ್ಕಾಗಿ ಮದದ ಸಂಗ ಮಾಡಿದೆ. ಈ ಸುಖದ ಹತ್ತಿರ ಮತ್ತಾರು ಸುಳಿಯದಂತೆ ಮನ ಮತ್ಸರದ ಸಂಗ ಮಾಡಿ ಅರಿಷಡ್ವರ್ಗಗಳ ಸಂಗದೊಂದಿಗೆ ಸುಖಿಸಿ ತನಗೆ ತಾನೆ ಭಂಗವನ್ನುಂಟು ಮಾಡಿಕೊಂಡಿದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ವಚನ ಮನಕ್ಕೆ ರುಚಿಸುವುದಿಲ್ಲ ರುಚಿಸಿದರೆ ಅರಿಷಡ್ವರ್ಗಗಳ ಗೆಳೆತನಕ್ಕೆ ಭಂಗ ಉಂಟಾಗುತ್ತದೆ. ಮನ ಗುರುವಿಗೆ ಸೋತು ಅರಿವಿಗೆ ಶರಣಾಗುತ್ತದೆ. ಅಂಗವೇ ಲಿಂಗಾಂಗವಾಗಿ ಪರಿಶುದ್ಧವಾಗುತ್ತದೆ. ಅಂಗಕ್ಕೆ ಬಂದೆರಗಿದ ಪಂಚ ಮಹಾಪಾತಕಗಳು ದೂರ ಸರಿಯುತ್ತವೆ. ಕಣ್ಣು ಕಾಮ ಬಯಸುವುದಿಲ್ಲ. ಮೂಗು, ಚರ್ಮ, ಕಿವಿ, ನಾಲಗೆ ಕಾಮ ಬಯಸುವುದಿಲ್ಲ. ಇವುಗಳಿಗೆ ಬಂದೆರಗಿದ ಪಂಚಮಹಾಪಾತಕಗಳು ತೊಲಗಿ ಪಂಚಾಚಾರ್ಯರಾಗಿ ಶುದ್ಧಾಂಗವಾಗುತ್ತದೆ.

782

ಸಯಿದಾನವ ತಂದು ನೀಡುವೆನಲ್ಲದೆ
ಸಂಬಂಧಿ ನಾನಲ್ಲಯ್ಯ.
ಕರ್ತಂಗೆ ಭೃತ್ಯಾಚಾರವ ಮಾಡಿ,
ಒಕ್ಕುದ ಕೊಂಡಿಪ್ಪೆನಯ್ಯಾ.
ಭೋಗಾಧಿ ಭೋಗವ ಸಮವಾಗಿ ಭೋಗಿಸಲು
ಅಘೋರನರಕದಲ್ಲಿಕ್ಕುವ ಕೂಡಲಸಂಗಮದೇವ.

ಕಣ್ಣು ಕಿವಿ ಮೂಗು ನಾಲಗೆ ಚರ್ಮಕ್ಕೆ ತಗುಲಿದ ಆಪತ್ಕಾಲಗಳನ್ನು ಅಂಗದಲ್ಲಿಯೇ ಇದ್ದ ಅರಿವೆಂಬ ಲಿಂಗಯ್ಯನಿಗೆ ಅರ್ಪಣೆ ಮಾಡುವೆ ನಲ್ಲದೆ ಅದರ ಆಗು ಹೋಗುಗಳ ಸಂಬಂಧಿ ನಾನಲ್ಲ.

ಅಂಗವೆಂಬುದು ಕರ್ತಾರನ ಕಮ್ಮಟ. ಈ ಕಮ್ಮಟದೊಡೆಯನ ಸೇವಕ ನಾನು. ಆತನಿಗೆ ಸೇವೆ ಮಾಡಿ, ಆತ ಉಂಡು ಬಿಟ್ಟುದನು ಉಣ್ಣುವುದಷ್ಟೆ ಸೇವಕನ ಕರ್ತವ್ಯ.

ಮನಕ್ಕೆ ಏನೆಲ್ಲ ಉಣ್ಣುವ ಆಸೆ. ಲಿಂಗಯ್ಯನನ್ನು ಬಿಟ್ಟು ಅಂಗ ದೊಂದಿಗೆ ಉಂಡರೆ ಅಘೋರ ನರಕದಲ್ಲಿಕ್ಕುವ, ಭೋಗಾದಿ ಭೋಗಗಳನು ಸಮಾವಾಗಿ ಭೋಗಿಸಲು ಹೋದರೆ ಸೇವಕ ಮಾಲೀಕನಿಗೆ ಸಮನಲ್ಲ. ಕರ್ತನಿಗೆ ಭೃತ್ಯಾಚಾರವ ಮಾಡಿ, ಒಕ್ಕುದ ಕೊಂಡಿಪ್ಪುದೆ ಸುಖ, ಸುಖದ ಸುಖ.

ಅಂಗದಲ್ಲಿ ಸಂಗಮವಾದ ಸಂಗಮನಾಥನ ಪರಿಚಯ ಅಂಗವನ್ನು ಆವರಿಸಿದ ಮನಕ್ಕೆ

ಆದರೆ ಆ ಸಂಗಯ್ಯನೊಂದಿಗೆ ಸೇವಕನಿಗೆ ಸೇವೆಯ ಸಂಗ ಮಾಡಲು ಬರುತ್ತದೆ.

ಅರಿವು ಗುರುವಾದರೆ ಅರಿವನ್ನು ತಿಳಿಯುವ ಮನ ಶಿಷ್ಯನಾಗುತ್ತಾನೆ. ತನಗೆ ಬಂದ ಆಪತ್ಕಾಲವನ್ನು ಗುರುವಿಗೆ ಅರ್ಪಿಸಿ ಶಿಷ್ಯ ಸುಖಿಯಾಗಿರುತ್ತಾನೆ.

ಅರಿವು ಗಂಡನಾದರೆ ಮನ ಹೆಂಡತಿಯಾಗಿ ಗಂಡನ ಸೇವೆ ಮಾಡುತ್ತಾಳೆ. ತನಗೆ ಬಂದೆರಗಿದ ಸುಖ ದುಃಖಗಳನ್ನು ಗಂಡನಿಗೆ ಅರ್ಪಿಸಿ ಹೆಂಡತಿ ಸುಖಿಯಾಗುತ್ತಾಳೆ.

ಅರಿವು ಸಖನಾದರೆ ಮನ ಸಖಿ. ಸುಖ ದುಃಖಗಳಿಗೆ ಈಡಾಗದೆ ಸಖನ ಬರುವಿಗಾಗಿ ಹಗಲಿರುಳೆನ್ನದೆ ಕಾದು ಸಖನ ತೆಕ್ಕೆಯಲ್ಲಿ ಸಖಿ ಸುಖಿಸುತ್ತಾಳೆ.

ಇದೆಲ್ಲ ಅಮೂರ್ತ ಸ್ವರೂಪಕ್ಕೆ ಸಂಬಂಧಿಸಿದ್ದರೂ ಸತ್ಯ. ಕಾಣುವುದು ಮಾತ್ರ ಸತ್ಯವಲ್ಲ. ಕಾಣುವುದಕ್ಕೆ ಕಾರಣವಾದುದೇ ಪರಮಸತ್ಯ. ತನು ಕಂಡರೆ ಅದರ ಪ್ರಾಣ ಮನ ಅರಿವು ಕಾಣುವುದಿಲ್ಲ. ಇವು ಮೂರೂ ಇಲ್ಲದ ತನುವನ್ನು ತನು ಎನ್ನಲು ಬರುವುದಿಲ್ಲ. ಈ ಮೂರನ್ನೂ ತಿಳಿಯದ ಮನುಷ್ಯನನ್ನು ಮನುಷ್ಯ ಎನ್ನಲೂ ಬರುವುದಿಲ್ಲ. ಏಕೆಂದರೆ ತನುವನ್ನು ತನು ಎಂದು ಗೌರವಿಸುವುದಿಲ್ಲ. ಹೆಣ್ಣು ಗಂಡೆಂದು, ಶ್ರೀಮಂತ ಬಡವನೆಂದು, ಜಾತಿ ಮತ ಪಂಥ, ಜ್ಞಾನಿ ಅಜ್ಞಾನಿ ಎಂದು ಮುಂತಾಗಿ ಭೇದ ಕಲ್ಪಿಸಿಕೊಂಡು ತನುವನ್ನು ಹೀಯಾಳಿಸುತ್ತಾನೆ. ತನುವಿನಲ್ಲಿ ತನ್ಮಯವಾದ ಅರಿವಿನ ಶ್ರೀಮಂತಿಕೆ ಕಾಣದೆಹೋದ ತನುವಿಗೆ ತನು ಎನ್ನಲು ಬರುತ್ತದೆಯೆ ?

ತನುವಿನಲ್ಲಿ ಅರಿವಿನ ಶ್ರೀಮಂತಿಕೆ ತನ್ಮಯವಾಗಿದೆ. ಆ ಶ್ರೀಮಂತಿಕೆಯನ್ನು ತನುವನ್ನು ಆವರಿಸಿದ ಮನವೆಂಬ ಅಮೂರ್ತ ರೂಪದಿಂದಲೇ ಅಮೂರ್ತ ಸ್ವರೂಪ ಅರಿವೆಂಬ ಗುರುದೇವನನ್ನು ಕಂಡು, ಆತನಿಗೆ ಮನವೆಂಬ ಅಮೂರ್ತರೂಪ ಸೇವಕನಾಗಬೇಕಿದೆ. ಈ ಕ್ರಿಯೆ ಮೂರ್ತಸ್ವರೂಪದ ತನುವಿನಲ್ಲಿಯೇ ಘಟಿಸುತ್ತದೆ.

783

ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ ,
ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯಾ ,
ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯಾ ,
ಗುರುಲಿಂಗ ಜಂಗಮವ ಏಕತ್ರಯವಾಗಿ ಕಾಣಲರಿಯದಿದ್ದಡೆ
ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತೈದಾವೆ !
ತನುಮನಧನವ ನಿವೇದಿಸಲರಿಯನಾಗಿ
ಕೂಡಲಸಂಗಮದೇವ, ಒಲಿ ಎಂದೊಡೆಂತೊಲಿವ ?

ಶುದ್ಧ ಸಿದ್ಧ ಪ್ರಸಿದ್ಧವಾದುದನೆ ಗುರುಲಿಂಗ ಜಂಗಮಕೆ ಕೊಡಬೇಕೆಂದು ಜನ ಬಯಸುತ್ತಾರೆ. ಹಾಗೆ ಮಾಡುತ್ತಾರೆ. ಗುರುಲಿಂಗ ಜಂಗಮರನ್ನು ಬೇರೆ ಬೇರೆಯಾಗಿ ಕಂಡು ಕೊಂಡವರ ಮಾತಿದು. ಗುರುಲಿಂಗ ಜಂಗಮರು ತ್ರಿಮೂರ್ತಿಗಳಲ್ಲ. ಅವರು ಮೂರೂ ಜನ ಬೇರೆ ಬೇರೆಯಾಗಿಲ್ಲ. ಅಂಗದಲ್ಲಿಯೇ ಈ ಮೂವರು ಏಕತ್ರಯವಾಗಿ ಸಂಗಮಗೊಂಡಿದ್ದಾರೆ. ಇವರಿಗೆ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ ಕೊಡಲು ಬರುತ್ತದೆಯೆ? ಹಾಗೆ ಕೊಟ್ಟರೆ ಅವರು ಸ್ವೀಕರಿಸುತ್ತಾರೆಯೇ ? ಆ ಮೂರೂ ಮಹನೀಯರನ್ನು ತನ್ನ ಅಂಗದಲ್ಲಿ ಹೇಗೆ ಕಾಣಲು ಸಾಧ್ಯ? ಅವರಿಗೆ ತಾನುಂಬ

ಊಟವನು, ತಾಕೊಂಬ ರತಿ ಸುಖವನು ಕೊಡಲು ಹೇಗೆ ಸಾಧ್ಯವಾಗುವುದು? ತಾ ಕೊಡುವ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೇ ಒಡನೆ ನಗುತ್ತೈದಾವೆ. ತನು ಮನ ಧನವ ನಿವೇದಿಸಲು ಅರಿಯೆನಾಗಿ ಕೂಡಲಸಂಗಮದೇವ, ಒಲಿ ಎಂದೊಡೆಂತೊಲಿವ ?

ತನ್ನನು ತಾನು ಅರಿಯದಿದ್ದರೆ ತನುವಿನಲ್ಲಿಯೇ ತನ್ಮಯವಾದ ಗುರುದೇವನನ್ನು ಅರಿಯಲು ಬರುವುದಿಲ್ಲ. ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನನ್ನು ಅರಿಯಲು ಬರುವುದಿಲ್ಲ. ಅಂಗದಲ್ಲಿಯೇ ಸಂಗಮವಾದ ಜಂಗಮನನ್ನೂ ಅರಿಯಲು ಬರುವುದಿಲ್ಲ. ಅಂಗದಲ್ಲಿ ಸಂಗವುವಾದ ಈ ಮೂರೂ ಮಹಾನೀಯರು ಅಂಗದಲ್ಲಿಯೇ ಮಾಡುವ ಮಹಾತ್ಕಾರ್ಯವನ್ನು ಅರಿಯಲು ಬರುವುದಿಲ್ಲ. ಮನಕ್ಕೆ ತನಗೆ ಎರಗಿ ಬಂದ ಆಪತ್ಕಾಲದ ಸಿಹಿ ಕಹಿ ಘಟನೆಗಳನ್ನು ಮಹನೀಯರಿಗೆ ಅರ್ಪಣೆ ಮಾಡಿ ತಾನು ಸುಖಿಯಾಗಿರಲೂ ಬರುವುದಿಲ್ಲ.

ಶುದ್ಧ ಸಿದ್ಧ ಪ್ರಸಿದ್ಧಿಯನು ಗುರುಲಿಂಗ ಜಂಗಮರಿಗೆ ಅರ್ಪಿಸುವ ವಿಧಾನವನ್ನು ಬಲ್ಲ ಶರಣರಿಂದ ಅರಿತುಕೊಂಡು ಅವರನ್ನು ಮನವೆಂಬ ಮರ್ಕಟ ಒಲಿಸಿಕೊಂಡರೆ ಮರ್ಕಟದ ಸರ್ವಗುಣಗಳನ್ನು ಗುರುಲಿಂಗಜಂಗಮರಿಗೆ ಅರ್ಪಿಸಲು ಮನಕ್ಕೆ ಬರುತ್ತದೆ. ಆಗ ಮನ ಮಹಾದೇವನಾಗುತ್ತದೆ. ಸಂಗಮನಾಥನೊಲಿದ ಮನ ಘನಮನವಾಗುತ್ತದೆ.

ಪ್ರಾಸಾದಿಯ ಮಾಹೇಶ್ವರಸ್ಥಲ

784

ಒಡಲ ಕಳವಳಕ್ಕೆ ಬಾಯ ಸವಿಗೆ
ಬಯಸಿ ಉಂಡೆನಾದಡೆ ನಿಮ್ಮ ತೊತ್ತಿನ ಮಗನಲ್ಲ !
ಬೇಡೆ, ಬೇಡೆ, ನಿಮ್ಮ ನಂಬಿದ ಸದ್ಭಕ್ತರ;
ಅವರೊಕ್ಕುದ ಉಂಬೆ, ಅವರೆಂದಂತೆ ಎಂಬೆ.
ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ ಹಿಡಿದೆನಾದಡೆ
ನಿಮ್ಮ ಪಾದದಾಣೆ !

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನೇ ನಿಮ್ಮ ಅರಿವಿನ ಬೆಳಕಿನಿಂದ ಹುಟ್ಟಿದ ಮನ, ಅದು ನಿಮ್ಮ ನೆರಳೆಂಬ ಸೇವಕ ! ಅವನು ನಿಮ್ಮ ತೊತ್ತು. ಅವನ ಮಗ ನಾನು. ನಾಲಿಗೆಯಲ್ಲಿ ನೀನಿರುವಿ. ಅದು ನುಡಿಯುವ ಬಾಯಿಯಲ್ಲಿಯೂ ನೀನಿರುವಿ. ಅದು ಬಯಸಿದ ರುಚಿಯಲ್ಲಿಯೂ ನೀನಿರುವಿ. ನಿನ್ನ ತೊತ್ತು ಒಡಲ ಕಳವಳಕ್ಕಾಗಿ , ಬಾಯಿ ಸವಿಗಾಗಿ ಬೇಡಿದ ಪದಾರ್ಥವನು ನಾನು ಉಂಡೆನಾದಡೆ ಅಂದಿನಿಂದ ನಿಮ್ಮ ತೊತ್ತಿನ ಮಗ ನಾನಲ್ಲ !

ಪದಾರ್ಥ ಉತ್ತಮವಾದದ್ದೊ ಅಲ್ಲವೋ ಎಂದು ನೋಡಿದ ಕಣ್ಣಿಗೆ ಅರ್ಥವಾಗುತ್ತದೆ. ಏಕೆಂದರೆ ಕಣ್ಣಿನಲ್ಲಿ ಅರಿವಿದೆ. ಆದರೂ ಒಡಲ ಕಳವಳಕ್ಕೆ ಬಾಯಿ ಸವಿಗೆ ಸೇವಿಸಿದರೆ ಅದು ಅಜ್ಞಾನ. ನಾಲಿಗೆ ಮತ್ತು ಕಣ್ಣುಗಳಲ್ಲಿದ್ದ ಅರಿವು ಹೇಳುವುದಕ್ಕೆ ಸಾಧ್ಯವಾಯಿತು. ಆ ಎರಡೂ ಸ್ಥಾನಗಳಲ್ಲಿದ್ದ ಜಂಗಮ ಬೇಡವೆಂದು ತಡೆಹಿಡಿಯಲಿಲ್ಲ. ಅಂಗದಲ್ಲಿ ಜಂಗಮ ಕೆಲಸ ಮಾಡದೆ ಹಾಗೆ ಉಳಿದ. ಆ ಜಂಗಮನನ್ನು ಅರಿವನ್ನು ತಿಳಿಯಲೇಬೇಕಾದ ತೊತ್ತಿನ ಮಗ ಮನವೆಂಬ

ಮರ್ಕಟ ತಿಳಿಯಲಿಲ್ಲ. ಹೀಗಾಗಿ ಮನ ಮರ್ಕಟವಾಯಿತು; ಬಾಯಿ ಸವಿಗೆ ಶರಣಾಯಿತು; ಅರಿವಿಗೆ ಅರಿವು ಹೇಳಿದುದನ್ನು ಪಾಲನೆ ಮಾಡುವ ಜಂಗಮನಿಗೆ ಶರಣಾಗಲಿಲ್ಲ. ಹೀಗಾಗಿ ಮನ ತೊತ್ತಿನ ಮಗನಲ್ಲ !

ಅರಿವಿನ ವ್ರತದಲ್ಲಿರುವವರು, ಅರಿವು ಪಾಲನೆ ಮಾಡಿ ಆ ಅರಿವಿಗೆ ಶರಣು ಹೋಗಿ ಶರಣರಾದವರು ಮಾತ್ರ ನಿಮ್ಮ ನಂಬಿದವರು. ಅವರು ಅರಿವೆಂಬ ಗುರುದೇವನ ಸದ್ಭಕ್ತರು. ಆ ಗುರುದೇವನ ಮಾತನ್ನು ಪಾಲನೆ ಮಾಡುವ ಜಂಗಮ ನಿಷ್ಠರು. ನಿಮ್ಮ ನಂಬಿದ ಸದ್ಭಕ್ತರನ್ನು ಬಾಯಿ ರುಚಿಗಾಗಿ , ಚರ್ಮದ ರುಚಿಗಾಗಿ, ಕಂಗಳ ರುಚಿಗಾಗಿ, ವಾಸನೆ ಮತ್ತು ಶಬ್ದದ ರುಚಿಗಾಗಿ ನಾನು ಏನನ್ನೂ ಬೇಡುವುದಿಲ್ಲ. ನಾನು ಏನು ಬೇಡಿದರೂ ಅಜ್ಞಾನಿ ಮನವಾದ ನನ್ನ ಮಾತು ಅಲ್ಲಿ ನಡೆಯುವುದಿಲ್ಲ.

ಶಿವ ಶರಣರು ಇಷ್ಟವಾದುದನು ಉಣ್ಣುತ್ತಾರೆ; ಅವರು ಉಂಡು ಬಿಟ್ಟುದನು ನಾನು ಉಣ್ಣುತ್ತೇನೆ. ಅವರು ಸದಾ ಸತ್ಯವನ್ನೇ ನೋಡುತ್ತಾರೆ. ಸತ್ಯ ನುಡಿದು ಸತ್ಯ ಕೇಳುತ್ತಾರೆ. ಅವರು ನುಡಿದಂತೆ ನುಡಿವೆ ನಾನು. ಶರಣರಿಗೆ ಬೇಡವಾದುದನ್ನು ಹಿಡಿದೆನಾದರೆ ನಿಮ್ಮ ಪಾದದಾಣೆ. ಏಕೆಂದರೆ ಮನದಲ್ಲಿ ಮರ್ಕಟ ಗುಣಗಳು ಶರಣರ ದಯೆಯಿಂದ ಭಸ್ಮವಾಗಿವೆ. ಸುಟ್ಟ ನುಲಿ ನುಲಿಯಂತೆ ಕಾಣುತ್ತದೆ; ಹಿಡಿಯಲು ಹೋದರೆ ಬರೀ ಭಸ್ಮ.

785

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ ಕೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದೆನಾದಡೆ
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ .
ಲಿಂಗಾರ್ಪಿತವಲ್ಲದೆ ಹಲ್ಲುಕಡ್ಡಿಯ ಕೊಂಡೆನಾದಡೆ
ನಾ ಬಲ್ಲೆ ಮುಂದೆ ಭವ ಘೋರ ನರಕವೆಂಬುದ !
ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು.
ಅಳವರಿಯದೆ ನುಡಿದೆನು ;
ಕಡೆಮುಟ್ಟ ಸಲಿಸದಿದ್ದಡೆ ತಲೆದಂಡ
ಕೂಡಲಸಂಗಮದೇವಾ.

ಅರಿವಿನಿಂದ ನೋಡಿ, ಕೇಳಿ, ಮೂಸಿಸಿ, ಸ್ಪರ್ಶಿಸಿ ಅರಿವಿನಿಂದ ರುಚಿಸಿ ಅರಿವು ಒಪ್ಪಿದ ಪದಾರ್ಥವನ್ನು ಮಾತ್ರ ಸ್ವೀಕರಿಸುವೆ. ಅರಿವಿನ ಮೇಲೆ ಆಣೆ, ಸದಾ ಅರಿವನ್ನು ಪಾಲಿಸುವ ಪ್ರಮಥರ ಮೇಲೆ ಆಣೆ. ಈ ಮಾತು ಹೇಳಲು ಸರಳ; ಕೇಳಲು ಸರಳ; ಓದಲು ಸರಳ. ತಿಳಿಯುವುದು ಕಠಿಣ; ಪಾಲಿಸುವುದು ಬಲು ಕಠಿಣ ! ಪಾಲಿಸಿ ನಿತ್ಯ ನಿತ್ಯ ಸತ್ಯದ ರೂಢಿಯಲ್ಲಿರುವುದು ಇನ್ನೂ ಕಠಿಣ. ಆದರೆ ಬಲು ಸುಖ; ಸುಖದ ಸುಖ ! ಸುಖ ದುಃಖಗಳನ್ನು ಕಳೆದ ಬರೀ ಸುಖ !

ಲಿಂಗಾರ್ಪಿತವಲ್ಲದೆ ಉದಕವ ಮುಕ್ಕಳಿಸಿದೆನಾದಡೆ ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ :

ಅಂಗದಲ್ಲಿ ಐದು ಅರಿವಿನ ಮುಖಗಳಿವೆ. ಅವು ಲಿಂಗ ಮುಖಗಳು ಹೌದು ! ತಿಳಿಯದಿದ್ದರೆ ಅಜ್ಞಾನದ ಬಾಗಿಲುಗಳು ಹೌದು. ಅಂಗದೊಳಗೆ ಏನಾದರೂ ಪ್ರವೇಶವಾಗಬೇಕಿದ್ದರೆ

ಈ ಐದು ಬಾಗಿಲುಗಳಿಂದಲೇ ! ಕಣ್ಣು ಒಂದು ಬಾಗಿಲು. ಮುಚ್ಚಿದರೆ ಕತ್ತಲು ; ತೆರೆದರೂ ಕತ್ತಲು. ಕಲ್ಲು ನೋಡಿದ ಕಣ್ಣು ಕೆತ್ತಿದ ಮೇಲೆ ದೇವರೆಂದು ಹೇಳಲು ಬಾಯಿಗೆ ಸುಳ್ಳು ಸಂದೇಶ ರವಾನೆ ಮಾಡುತ್ತದೆ. ಕಣ್ಣು ಹೇಳಿದ ಮಾತು ಕೇಳಿದ ಅಂಗ ಕಲ್ಲಿನಿಂದ ದೇವಸ್ಥಾನ ನಿರ್ಮಿಸಿ, ಹಗಲಿರುಳು ಪ್ರಾರ್ಥಿಸಿ, ಗಂಡು ದೇವರಿಗೊಂದು ಹೆಣ್ಣು ದೇವರನ್ನು ಕಲ್ಲಿನಲ್ಲಿಯೇ ಮಾಡಿ, ಅವೆರಡಕ್ಕೆ ತನ್ನಂತೆ ಮದುವೆ ಮಾಡಿ, ಛತ್ರಿ ಚಾಮರ ಬೀಸಿ, ಶಯನ ಗೃಹಕ್ಕೆ ಕಳಿಸಿ, ಶೋಭಾನೆ ಪದ ಹಾಡುತ್ತದೆ. ಉತ್ಸವಗಳನ್ನು ಮಾಡಿ ನಿತ್ಯ ನಿತ್ಯ ಅನ್ನದಾನದ ನಾಟಕ ಆಡುತ್ತದೆ.

ಕಲ್ಲನ್ನು ನೋಡಿ ಕಲ್ಲು ಎಂದು ಹೇಳಿದ ಕಣ್ಣು, ಕಣ್ಣು ಮುಚ್ಚಿಕೊಂಡು ಕಣ್ಣಿನಲ್ಲಿಯೇ ಕುಳಿತಿದೆ. ನೋಡಲು ಸಾಧ್ಯವಾಗದ ಕುರುಡುಗಣ್ಣು ರಾಜ್ಯಭಾರ ಮಾಡುತ್ತಲಿದೆ. ಅರಿವಿನ ಅಂಗವನ್ನು ಮಂಗವನ್ನಾಗಿಸಿ ಅಜ್ಞಾನದ ಆಟ ಆಡುತ್ತಲಿದೆ. ಮಕ್ಕಳು ಆಡಿದರೆ ಮಕ್ಕಳಾಟ; ಅದು ಸುಳ್ಳು! ದೊಡ್ಡವರಾಡಿದರೆ ಅದು ಸತ್ಯ!

ಕುರುಡುಗಣ್ಣು ಆಡುವ ಅಜ್ಞಾನದ ಆಟವನ್ನು ಕಲ್ಲು ನೋಡಿದ ಅರಿವೆಂಬ ಗುರುದೇವನ ನಿಜಗಣ್ಣು ಸತ್ಯವೆನ್ನಲು ಸಾಧ್ಯವೇ? ಕೆತ್ತಿದ ಕಲ್ಲಾದರೇನು, ಕಲ್ಲಾದರೇನು ಅದು ಕೇವಲ ಕಲ್ಲು ಎಂದು ದಿಟ ನುಡಿದು ನುಡಿದಂತೆ ನಡೆಯುವ ಜಂಗಮನನ್ನು ಅಲ್ಲಗಳೆಯಲು ಸಾಧ್ಯವೆ?

ಕಣ್ಣಿನಲ್ಲಿಯೇ ಇರುವ ಅರಿವೆಂಬ ಗುರುದೇವನು ಕಲ್ಲನ್ನು ನೋಡಿ ಕಲ್ಲೆನ್ನುವಾತ! ಗುರುದೇವನ ಮಾತು ಕೇಳಿ ಇದು ಕಲ್ಲು ಇದಕ್ಕೆ ಪೂಜೆ ಸಲ್ಲದು ಎಂದು ಧಿಕ್ಕರಿಸುವಾತನೇ ಜಂಗಮ! ಇವರಿಬ್ಬರೂ ಕಣ್ಣಿನಲ್ಲಿಯೇ ಉಳಿದರು. ಕಲ್ಲನ್ನು ದೇವರೆಂದು ಪೂಜಿಸುವ ಕುರುಡ ಮಾತ್ರ ಕಣ್ಣು ತರೆದಿದ್ದಾನೆ. ಈತನಿಗೆ ಕಣ್ಣು ಕಾಣುವುದಿಲ್ಲ.

ಕಣ್ಣಿದ್ದ ಶರಣ ಬಂದು ನಿಜ ಕಣ್ಣಿನಿಂದಲೇ ಕುರುಡನನ್ನು ಎಬ್ಬಿಸಿ, ಮೈದಡವಿ ಇದು ದೇವರಲ್ಲ ಕಲ್ಲು! ಸಾಧ್ಯವಾದರೆ ನಿನ್ನ ನಿಜ ಕಣ್ಣಿನಿಂದ ನೋಡು ಎಂದು ಕಣ್ಣಿನಿಂದಲೇ ಹೇಳಿದರೆ, ಕುರುಡು ಮನ ನಿಜ ಕಣ್ಣಿನತ್ತ ಪ್ರಯಾಣ ಮಾಡಿ ಅರಿವೆಂಬ ಗುರುದೇವ ಹೇಳಿದಂತೆ ಕೇಳುತ್ತಾನೆ. ಜಂಗಮನಿಗೆ ಪಾಲನೆಯ ಜವಬ್ದಾರಿ ನೀಡಿ ಕುರುಡ ಸಂಪೂರ್ಣ ಹೆಳವನಾಗುತ್ತಾನೆ. ಅಂಗದಲ್ಲಿಯೇ ಸಂಗಮವಾದ ಗುರುದೇವನ ಮಾತು ಜಂಗಮನ ಮಾತು ಚಾಚು ತಪ್ಪದೆ ಪಾಲಿಸುತ್ತಾನೆ.

ಲಿಂಗಾರ್ಪಿತವಲ್ಲದೆ ಹಲ್ಲುಕಡ್ಡಿಯ ಕೊಂಡೆನಾದಡೆ ನಾ ಬಲ್ಲೆ ಭವ ಘೋರ ನರಕವೆಂಬುದ:

ನೋಡಿದರೆ ನೋಡುವ ನೋಟ ಅರಿವಿಗೆ ಅರ್ಪಿಸಬೇಕು, ಕೇಳುವ ಶಬ್ದ, ವಾಸನೆ, ಪ್ರಸಾದ, ಸ್ಪರ್ಶ ಅರಿವಿಗೆ ಅರ್ಪಿಸಿ ಸ್ವೀಕರಿಸುವುದರಿಂದ ತನು ಸುಡುವುದಿಲ್ಲ. ಮನದ ಅಜ್ಞಾನವನ್ನು ಅರಿವಿಗೆ ಅರ್ಪಿಸಿ ಅರಿವಿನ ಪ್ರಸಾದವನು ತನು ಸ್ವೀಕರಿಸುವುದರಿಂದ ತನು ಸುಡುವುದಿಲ್ಲ; ನರಕಯಾತನೆ ಅನುಭವಿಸುವುದಿಲ್ಲ. ಸತ್ಯ ಮಾತ್ರ ಸ್ವೀಕರಿಸುತ್ತದೆ. ಅಜ್ಞಾನವನ್ನೂ ಸೋಸಿ ಬಿಡುತ್ತದೆ. ಮನ ಕೊಳ್ಳುಬಾಕ ಸಂಸ್ಕೃತಿಯನ್ನು ಬಿಟ್ಟು ಕೊಳ್ಳುವ ಹಲ್ಲುಕಡ್ಡಿಯನ್ನು ಕೂಡ ಅರಿವಿಗೆ ಅರ್ಪಣೆ ಮಾಡಿ ಅರಿವು ಕೊಳ್ಳೆಂದರೆ ಕೊಳ್ಳುತ್ತದೆ.

ಮನ ಮತ್ತೊಬ್ಬರ ಮಾತು ಕೇಳುವುದಿಲ್ಲ. ತನಗೆ ಸುಖವೆನಿಸಿದ್ದು ಬಿಡುವುದಿಲ್ಲ. ಸಿದ್ಧಾರ್ಥನ ಮನಕ್ಕೆ ಸುಖವಾಯಿತು. ಯುವರಾಜನಾದ, ಮದುವೆಯಾದ, ಮಗು ಪಡೆದ, ಯುದ್ಧ ಮಾಡಿ ರಾಜಾಧಿರಾಜರನ್ನು ಸಾಯಿಸಿದ. ಸಿದ್ಧಾರ್ಥನ ಮನಕ್ಕೆ ಸುಖವಾಯಿತು ತಾ ಮಾಡಿದುದನ್ನೇ ಮತ್ತೊಮ್ಮೆ ಯೋಚಿಸಿದ. ಸುಖಕ್ಕಾಗಿ ರಾಜನಾಗಬೇಕೇ? ರಾಜ ಮತ್ತೊಬ್ಬ ರಾಜನನ್ನು ಕೊಲ್ಲಬೇಕೆ ? ಸೈನಿಕರು ಮಾಡಿದ ಅಪರಾಧವೇನು? ರಾಜನಿಗೆ ರಾಜ್ಯದ ವಿಸ್ತರಣೆ

ಯಾಕೆ ಬೇಕು? ಕಿರೀಟಕ್ಕಾಗಿ, ಸಿಂಹಾಸನಕ್ಕಾಗಿ, ಚಿನ್ನಾಭರಣಕ್ಕಾಗಿ, ಭೂಮಿಗಾಗಿ ಯುದ್ಧ ಮಾಡಬೇಕೆ? ಸಿದ್ಧಾರ್ಥ ತನ್ನನ್ನೇ ಪ್ರಶ್ನಿಸಿಕೊಂಡ ; ಹೊಳೆಯಲಿಲ್ಲ. ಅರಿವೆಂಬ ಬುದ್ಧನತ್ತ ಸಿದ್ಧಾರ್ಥ ಪಯಣಿಸಿದ; ಸಿದ್ಧಾರ್ಥ ಹೆಳವನಾದ ಬುದ್ಧ ಹೊರಬಂದ.

ಅಂಗ ಒಂದೇ. ಅಂಗದಲ್ಲಿರುವ ಅರಿವು, ಮನ ಕೂಡಾ ಒಂದೇ. ಇವೆರಡನ್ನೂ ಅಂಗದಲ್ಲಿಯೇ ಕಾಣಬೇಕು. ಮನ ಸಿದ್ಧಾರ್ಥನಾದರೆ; ಅರಿವು ಬುದ್ಧ ! ಮನ ಅಂಗವನ್ನು ಸಿದ್ಧಾರ್ಥನನ್ನಾಗಿ ಬಳಸಿಕೊಂಡಿತು. ಅರಿವು ಅಂಗವನ್ನು ಬುದ್ಧನನ್ನಾಗಿ ಬಳಸಿಕೊಂಡಿತು. ಸಿದ್ಧಾರ್ಥ ಅಂಗದಲ್ಲಿಯೇ ಕಳೆದು ಹೋಗಿ ಬುದ್ಧನಾದ. ಅಂಗ ಕಡೆ ಮುಟ್ಟುವವರೆಗೆ ಮತ್ತೆ ಸಿದ್ಧಾರ್ಥನಾಗಲೇ ಇಲ್ಲ ! ಸಿದ್ಧಾರ್ಥ ಎಲ್ಲೆಲ್ಲೊ ಸುಖಿಸಿದ. ರಾಜನಾಗಿ, ವೀರನಾಗಿ, ಗಂಡನಾಗಿ, ತಂದೆಯಾಗಿ, ಒಡೆಯನಾಗಿ, ದಾನಿಯಾಗಿ ಸುಖಿಸಿದ; ಸುಖದ ದಾಹ ತೀರಲಿಲ್ಲ. ಬುದ್ಧನಲ್ಲಿ ಸುಖಿಸಿದ. ಅಲ್ಲಿಯೇ ವಿರಮಿಸಿದ ! ಅರಿವಿನ ಸುಖವದು ಸುಖದ ಸುಖ. ಆ ಸುಖದ ಮುಂದೆ ಮತ್ತೊಂದು ಸುಖವಿಲ್ಲ. ಮನ ಅರಿಯಬೇಕು. ಅರಿವಿನ ಜಾಡು ಹಿಡಿದು ಅರಿವಿನತ್ತ ನಡೆಯಬೇಕು. ನಡೆದು ನಡೆದು ಅರಿವಿನ ಗಮ್ಯ ಸೇರಬೇಕು.

ಪ್ರಸಾದಿಯ ಪ್ರಾಣಲಿಂಗಿಸ್ಥಲ

786

ಮೌನದಲುಂಬುದು ಆಚಾರವಲ್ಲ;
ಲಿಂಗಾರ್ಪಿತವ ಮಾಡಿದ ಬಳಿಕ,
ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು.
ಕರಣವೃತ್ತಿಗಳಡಗುವವು,
ಕೂಡಲಸಂಗನ ನೆನೆವುತ್ತಲುಂಡಡೆ.

ಪದಾರ್ಥವನ್ನು ಮತ್ತೆ ಮತ್ತೆ ಬಯಸುವುದು ನಾಲಗೆಯ ಗುಣ. ರುಚಿಯನ್ನು ನಾಲಗೆಯಲ್ಲಿ ಬಂಧಿಸಿ; ರುಚಿಯ ಸವಿಗಾಗಿ ನಾಲಗೆ ಪ್ರಸಾದವನ್ನು ಬೇಡುತ್ತದೆ; ಮೌನದಲ್ಲಿ ಸವಿದರೆ ರುಚಿಕರ ಪ್ರಸಾದದ ಬೇಡಿಕೆ; ಪ್ರತಿ ಊಟದ ತಟ್ಟೆಯಲ್ಲಿಯೂ ಮನಕ್ಕೆ ಬೇಕೆನ್ನಿಸುತ್ತದೆ. ರುಚಿಯ ತತ್ತ್ವ ಮನಕ್ಕೆ ಮತ್ತು ಮನ ಆವರಿಸಿದ ನಾಲಗೆ ಕಣ್ಣು ಮೂಗು ಚರ್ಮ ಕಿವಿಗಳಿಗೆ ತಿಳಿಯುವುದೇ ಇಲ್ಲ.

ಪ್ರಸಾದದ ಹೆಸರನ್ನು ಶಬ್ದದಿಂದ, ವಾಸನೆಯನ್ನು ಮೂಗಿನಿಂದ, ಸ್ಪರ್ಶವನ್ನು ಕೈಗಳಿಂದ, ದೃಶ್ಯವನ್ನು ಕಣ್ಣುಗಳಿಂದ ರುಚಿಯನ್ನು ಮನ ನಾಲಗೆಯಿಂದ ತಿಳಿದು ಮೌನದಲ್ಲಿ ಉಂಡು ಸವಿಗಾಗಿ ಮತ್ತೆ ಮತ್ತೆ ಬೇಡಿಕೆಯನ್ನು ಒಡ್ಡುತ್ತದೆ. ರುಚಿಯನರಸುವರೆ ಪ್ರಸಾದದಲ್ಲಿ ಎನ್ನುವ ನಿಜ ತತ್ವವ ಕರಣೇಂದ್ರಿಯಗಳಿಗೆ ಹೊಳೆಯುವುದಿಲ್ಲ. ಪದಾರ್ಥ ಬಯಸಿದ ಇಂದ್ರಿಯಗಳಿಗೆ ಪ್ರಸಾದದಲ್ಲಿರುವ ರುಚಿಯ ನಿಯಮ ತಿಳಿದು ಆ ನಿಯಮವನ್ನು ಅರಿವೆಂಬ ಗುರುದೇವನಿಗೆ ಅರ್ಪಣೆ ಮಾಡಿದ ಬಳಿಕ ಮತ್ತೆಂದೂ ಪದಾರ್ಥವನು ಬೇಡಿ ಪಡೆಯಬಾರದು.

ಪದಾರ್ಥ ತಟ್ಟೆಯಲ್ಲಿದ್ದ ಬಳಿಕ ತುತ್ತಿಗೊಮ್ಮೆ ಶಿವಶರಣೆನುತ್ತ ಅಂದರೆ ಅರಿವಿಗೆ ಅರ್ಪಿಸಿ

ಅರಿವಿನಿಂದ ರುಚಿಯನ್ನು ಆಸ್ವಾದಿಸುತ್ತ ಉಣ್ಣಬೇಕು. ಮೊದಲ ತುತ್ತಿನಲ್ಲಿ ನಾಲಗೆ ಹುಳಿ, ಉಪ್ಪು, ಖಾರ, ಸಿಹಿ, ಒಗರು, ಖಾದ್ಯದ ಸವಿಯನ್ನು ಸವಿಯುತ್ತದೆ. ಎರಡನೇ ತುತ್ತಿನಲ್ಲಿ ರುಚಿ ಕಮ್ಮಿಯಾಗುತ್ತದೆ. ಮೂರು ಮತ್ತು ನಾಲ್ಕನೇ ತುತ್ತಿನಲ್ಲಿ ರುಚಿ ಸಂಪೂರ್ಣ ಕಮ್ಮಿಯಾಗುತ್ತದೆ. ಹುಳಿ ಉಪ್ಪು ಖಾರ ಸಿಹಿ ಒಗರು ಪದಾರ್ಥಗಳೆಲ್ಲ ನಾಲಗೆಗೆ ಒಂದೇ ರುಚಿಯಾಗಿ ಗೋಚರಿಸುತ್ತದೆ.

ನಾಲಗೆಗೆ ಆದ ಮೊದಲ ಅನುಭವ ನಂತರದ ಅನುಭವವನ್ನು ತಾಳೆ ನೋಡಿದಾಗ ಮೊದಲು ಸುಖಿಸಿದ್ದು ನಾಲಗೆ, ನಂತರ ರುಚಿಸಿದ್ದು ನಾಲಗೆಯೇ ಮೊದಲು ಅನುಭವಿಸಿದ ರುಚಿ ಪದಾರ್ಥದಲ್ಲಿತ್ತೊ, ನಾಲಗೆಯಲ್ಲಿತ್ತೊ? ಮೊದಲಿದ್ದ ರುಚಿ ನಂತರ ಇಲ್ಲ. ಪದಾರ್ಥ ರುಚಿ ಇಲ್ಲವೆಂದು ಜಗಳ ಮಾಡುವ ಇಂದ್ರಿಯಗಳು ಕೊಲೆ ಮಾಡಲೂ ಹೇಸುವುದಿಲ್ಲ. ಪ್ರಾಣ ಕಳೆದುಕೊಳ್ಳಲೂ ಹೇಸುವುದಿಲ್ಲ. ಕರಣೇಂದ್ರಿಯಗಳಲ್ಲಿದ್ದ ರುಚಿಯ ಅಜ್ಞಾನ ಮೂರು ತುತ್ತುಗಳ ನಂತರ ಎಲ್ಲಿ ಹೋಯಿತೆಂದು ರುಚಿಸಿದ ಇಂದ್ರಿಯಗಳ ಮೂಲಕವೇ ಮೌನ ಮುರಿದು ಅರಿವಿನಿಂದ ಯೋಚಿಸಿದರೆ ರುಚಿಯ ತತ್ತ್ವ ತನಗೆ ಹೊಳೆಯುತ್ತದೆ.

ರುಚಿಯ ಅಜ್ಞಾನವನ್ನು ಅಂಗದಲ್ಲಿಯೇ ಇರುವ ಅರಿವೆಂಬ ಲಿಂಗಯ್ಯನಿಗೆ ಅರ್ಪಣೆ ಮಾಡಿ ಅಂಗಕ್ಕೆ ಅರಿವಿನಿಂದ ಆಹಾರ ತೆಗೆದುಕೊಂಡರೆ ಕರಣೇಂದ್ರಿಯಗಳ ಅಜ್ಞಾನದ ವೃತ್ತಿಗಳು ಅಡಗುವವು.

ಅಂಗ ಜಲದಿಂದ ಭರಿತವಾಗಿದೆ. ಅಂಗದಲ್ಲಿರುವ ಸರ್ವಾಂಗಗಳು ಜಲದಿಂದ ಗುರುತಿಸಿಕೊಂಡು ಗಟ್ಟಿಯಾಗಿವೆ. ಅರಿವಿನ ಜೀವ ಜಲಬಿಂದುವೇ ಗರ್ಭದಲ್ಲಿ ಹೊಕ್ಕು ಅಂಗವಾಗಿ ಅರಿವಿನ ಲಿಂಗವಾಗಿ ಹೊರಬಂದಿದೆ. ಜೀವ ಜಲಬಿಂದುವಿನಿಂದಲೇ ಬೀಜವಾಗಿ ಜಲ ಬೀಜಕ್ಕೆ ಹರಿದು ಸಸಿಯಾಗಿ, ಪದಾರ್ಥವಾಗಿದೆ. ಜಲ ಕಬ್ಬಿಗೆ ಹರಿದು ಸಿಹಿಯಾಗಿದೆ. ಮೆಣಸಿಗೆ ಹರಿದು ಖಾರ, ಬೆಳ್ಳೊಳ್ಳಿ ಘಾಟು, ಈರುಳ್ಳಿ ಕಾಕು, ಜಲ ಹುಣಸೆಗೆ ಹರಿದು ಹುಳಿ, ಒಗರು, ಕಹಿಯಾಗಿದೆ. ಜಲ ನಾನಾ ಪದಾರ್ಥಗಳಿಗೆ ಹರಿದು ಆಯಾ ರುಚಿ ಎನ್ನಿಸಿಕೊಂಡಿದೆ.

ಜಲ ಅಂಗದಲ್ಲಿ ಬಂಧಿಯಾಗಿ ಸರ್ವರುಚಿಗಳನ್ನು ಜ್ಞಾನದಿಂದ ಸವಿಯುವ ಲಿಂಗವಾಗಿದೆ; ಲಿಂಗಾಂಗವಾಗಿದೆ. ಸುಂದರವಾದ ಲಿಂಗಾಂಗವನ್ನು ಮನವೆಂಬ ಮರ್ಕಟ ಕರಣೇಂದ್ರಿಯಗಳ ಮೂಲಕ ಆವರಿಸಿ ಸರ್ವರುಚಿಗಳನ್ನು ಸಂಗ್ರಹಿಸಿಕೊಂಡಿದೆ. ರುಚಿ ಮನಕ್ಕೆ ಗೊತ್ತು. ಅಂಗದ ಮೂಲಕ ಸವಿಯುತ್ತದೆ. ಮತ್ತೆ ಮತ್ತೆ ಬೇಡುತ್ತದೆ. ರುಚಿಯ ತತ್ತ್ವ ಲಿಂಗಕ್ಕೆ ಗೊತ್ತು. ಆದರೆ ಲಿಂಗದ ಪರಿಚಯ ಮನಕ್ಕಿಲ್ಲ; ಮನದ ಪರಿಚಯ ಅಂಗಕ್ಕಿಲ್ಲ. ಅಂಗ ಲಿಂಗ ಜಂಗಮ ಪ್ರಸಾದ ಪಾದೋದಕದ ಜುಗಲ್‌ಬಂದಿ ಅಂಗದಲ್ಲಿಯೇ ನಡೆದಿದೆ. ಅರಿವಿನ ಆಚಾರವಿಲ್ಲದೆ ಮೌನದಲ್ಲಿ ಉಂಡರೆ ಅರಿವಿನ ಅಂಗಕ್ಕೆ ಭಂಗ ಬರುವುದು ತಪ್ಪುವುದಿಲ್ಲ. ಮೌನ ಮುರಿದು ಪ್ರತಿ ತುತ್ತನ್ನು ಶಿವನಿ (ಅರಿವಿ) ಗರ್ಪಿಸಿ ಶಿವಶರಣೆನ್ನುತ್ತ ಉಂಡರೆ ಕರಣ ವೃತ್ತಿಗಳು ಅಡಗುವವು.

ಶಿವನೆಂದರೆ ಸತ್ಯ! ಸುಂದರ! ಸತ್ಯಂ ಶಿವಂ ಸುಂದರಂ. ಅಣು ರೇಣು ತೃಣ ಕಾಷ್ಠದಲ್ಲಿ ಭರಿತವಾಗಿದೆ.

787

ಕಾಯದ ಕರಣದ ಕೈಯಲು ಪದಾರ್ಥವ ಹಿಡಿವಲ್ಲಿ
ನಿಮಗೆ ಕೊಡುವ ಭರದ ಭೀತಿಯಿಂದಾನರಿಯದಿಪ್ಪೆನಾಗಿ,

ಎನ್ನ ನೀನರಿದು ಸಲಹುತ್ತಿಪ್ಪೆಯಯ್ಯಾ,
ಕೂಡಲಸಂಗಮದೇವಾ.

ಕಾಯ ಕೈ. ಕಾಯಕ್ಕೆ ಐದು ಕೈಗಳಿವೆ. ಕಣ್ಣು ಕಾಯದ ಒಂದು ಕೈ. ಅದು ಪದಾರ್ಥ ನೋಡಿ ಬಂಧಿಸಿಕೊಳ್ಳುತ್ತದೆ. ಕಾಯ ಹೋಗು ವವರೆಗೆ ಬಿಡುವುದಿಲ್ಲ. ಚರ್ಮ ಕಾಯದ ಮತ್ತೊಂದು ಕೈ. ಸ್ಪರ್ಶಿಸಿದ ಪದಾರ್ಥವನ್ನು ಮುಟ್ಟಿ ಬಂಧಿಸಿಕೊಳ್ಳುತ್ತದೆ. ಕಾಯ ಹೋಗುವವರೆಗೆ ಬಿಡುವುದಿಲ್ಲ. ಮೂಗು ನಾಲಗೆ ಮತ್ತು ಕಿವಿಗಳು ಕೂಡ ಕಾಯದ ಮೂರು ಕೈಗಳೇ ಆಗಿವೆ. ಮೂಸಿಸಿದ ಪದಾರ್ಥ ಮೂಗು, ರುಚಿಸಿದ ಪದಾರ್ಥ ನಾಲಗೆ, ಕೇಳಿದ ಶಬ್ದವನ್ನು ಕಿವಿ ಕಾಯ ಹೋಗುವವರೆಗೆ ಬಂಧಿಸಿಕೊಳ್ಳುತ್ತದೆ. ಸುಖಕ್ಕಾಗಿ ಬಂಧಿಸಿಕೊಂಡ ಅಜ್ಞಾನದ ಪದಾರ್ಥಗಳಿಂದಾಗಿ ಹಿಡಿದ ಕಾಯದ ಕೈಗಳಿಗೆ ಒಮ್ಮೊಮ್ಮೆ ಭೀತಿ ಉಂಟಾಗುತ್ತದೆ. ಬಿಸಡುವ ಜ್ಞಾನವಿಲ್ಲ. ಹಿಡಿದರೆ ಸುಡುತ್ತದೆ.

ಪದಾರ್ಥ ಹಿಡಿದ ಕೈಗಳ ಹಿಂದೆಯೇ ಅರಿವಿನ ಐದು ಕಾಣದ ಕೈಗಳೂ ಇವೆ. ಕಾಣದ ಆ ಕೈಗಳ ಅರಿವಿನಿಂದಲೇ ಕಾಣುವ ಐದು ಕೈಗಳೂ ಬದುಕಿವೆ. ನಿರ್ಭಾವ ದೃಶ್ಯದ ಬೆಳಕಿಲ್ಲದಿದ್ದರೆ ಕಾಣುವ ಕಣ್ಣಿಗೆ ಅರ್ಥವೇ ಇಲ್ಲ. ಕಾಯದ ಒಂದು ಕೈ ವ್ಯರ್ಥ ! ನಿರ್ಭಾವ ಸ್ಪರ್ಶದ ಜ್ಞಾನವಿಲ್ಲದಿದ್ದರೆ ಚರ್ಮವಿದ್ದೂ ವ್ಯರ್ಥ ! ನಿರ್ಭಾವ ರುಚಿಯ ಜ್ಞಾನ ವಿಲ್ಲದ ನಾಲಗೆ ಅದು ನೀಚಬುದ್ಧಿಯ ನಾಲಗೆ. ಇದ್ದೂ ಇಲ್ಲದಂತೆ ! ನಿರ್ಭಾವ ಶಬ್ದ ಅರಿಯದ ಕಿವಿ ಇಲ್ಲದಿದ್ದರೆ ಕಿವಿ ಇದ್ದೂ ಇಲ್ಲದಂತೆ. ನಿರ್ಭಾವ ವಾಸನೆಯ ಮೂಗನರಿಯದ ಮೂಗು ಅದು ವ್ಯರ್ಥ ಮೂಗು!

ಕಾಯದ ಐದು ಅಜ್ಞಾನ ಕೈಗಳಲ್ಲಿ ಹಿಡಿದ ಪದಾರ್ಥ ಜ್ಞಾನಕ್ಕೆ ಅರ್ಪಣೆ ಮಾಡಬೇಕೆನ್ನುವ ಉದ್ದೇಶದಿಂದಲೇ ಹಿಡಿಯಲ್ಪಟ್ಟಿದೆ. ಆದರೆ ಭೀತಿಯಿಂದ ಮರೆವು ಆಗಿದೆ. ಅರಿಯದಂತೆ ಅಜ್ಞಾನವನು ಹಿಡಿದಿದೆ. ಹಿಡಿದ ಕೈಗಳ ಹಿಂದೆ ಅರಿವಿನ ಕೈಗಳಿವೆ. ಹಿಡಿದ ನಾನರಿಯದಿದ್ದರೇನಾಯಿತು ? ನೀನರಿಯಬಾರದೆ ?

ನನ್ನ ಕೈಯಲು ಹಿಡಿದುದನು ನೀ ಕಿತ್ತಿಕೊಂಡು ಎನ್ನನು ನೀನು ಸಲುಹಬಾರದೆ ? ನಾ ಹಿಡಿದುದನು ನೀ ಪಡೆದು ಸಲುಹಬಾರದೇ ? ಕಾಯದ ಕರಣಂಗಳ ಕಣ್ಣ ಕಿತ್ತಿ ಕಾಯದಲ್ಲಿ ನೀನೊಬ್ಬನೆ ಉಳಿಯ ಬಾರದೆ ಅಯ್ಯಾ ಕೂಡಲಸಂಗಮದೇವ.

788

ಆಳಿಕಾರನೆನಗೊಬ್ಬ ಮಗ ಹುಟ್ಟಿದನೆಂದು
ಆಳಿಕೆಯ ಕೆಡಿಸಲೀಸದೆ ನಡೆಸುವ ನಮ್ಮಯ್ಯ.
ಪಂಚಭೂತ ಕಾಯವ ಭವಿಯೆಂದೆನಿಸಲೀಯದೆ
ಪ್ರಸಾದಕಾಯವ ಮಾಡಿ ಸಲಹುವ ನಮ್ಮಯ್ಯ.
ಆಳಿ ಸವೆವಲ್ಲಿ ಅವಧಾನಿಯಾಗಿದ್ದಡೆ
ಆಳ್ದನು ನಮ್ಮ ಕೂಡಲಸಂಗಮದೇವ.

ಅಂಗ ಒಂದು ಆಳ್ವಿಕೆ ಮಾಡುವ ಅರಸನ ಮನೆ. ಆತನಿಗೆ ಮನವೆಂಬ ಮರ್ಕಟ

ಬುದ್ಧಿಯ ಮಗ ಹುಟ್ಟಿದನೆಂದು ಕೆಡಲು ಬಿಡು ವಂತಿಲ್ಲ. ಸುಲಲಿತವಾಗಿ ಪಂಚ ಮಹಾದ್ವಾರಗಳನ್ನು ಅರಿವಿನ ತಂತ್ರಗಾರಿಕೆಯಿಂದ ಬಂಧಿಸಿ ಪಂಚಭೂತಗಳುಳ್ಳ ಕಾಯವನ್ನು ಭವಿಯ ಕಾಯವೆಂದೆನಿಸಲೀಯದೆ, ಅರಿವಿನ ಪ್ರಸಾದಕಾಯವ ಮಾಡಿ ಸಲಹುವನು.

ಭಕ್ತ ಭವಿಯಾಗದೆ, ಪಂಚ ಮಹಾಜ್ಞಾನದ ಬಾಗಿಲುಗಳಾದ ಕಣ್ಣು ಕಿವಿ ಮೂಗು ನಾಲಗೆ ಚರ್ಮಕ್ಕೆ ತಟ್ಟಿದ ಅಜ್ಞಾನವನ್ನು ಅರಿವಿನ ಅರಸನಿಗೆ ಅರ್ಪಿಸಿ ಅರಸನ ಜ್ಞಾನವನು ಅವಧಾನಿಯಾಗಿ ಆಲಿಸಿದಡೆ ಅಂಗದ ಮನೆಯನ್ನೆ ಕೈಲಾಸದ ಮಹಾಮನೆಯನ್ನಾಗಿ ಮಾಡುವನು ಸಂಗಮನಾಥನು.

789

ಶಿವಾಚಾರವೆಂಬುದೊಂದು ಬಾಳಬಾಯಧಾರೆ,
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು.
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು.
ಬಿಚ್ಚಿ ಬೇರಾದಡೆ ಮೆಚ್ಚುವನೆ ನಮ್ಮ ಕೂಡಲಸಂಗಮದೇವ.

ಅರಿವಿನ ಆಚಾರವೇ ಶಿವಾಚಾರ. ಇದು ಅಗೋಚರದ ಆಚಾರ. ಈ ಆಚಾರವನ್ನು ಅಂಗದಲ್ಲಿರುವ ಅರಿವೆಂಬ ಗುರುದೇವನು ಮೆಚ್ಚಬೇಕು. ಅರಿವನ್ನು ಪಾಲನೆ ಮಾಡುವ ಗುರುದೇವನ ಮಾತು ಕೇಳುವ ಜಂಗಮ ಮೆಚ್ಚಬೇಕು. ತನುವಿಗೆ ಒದಗಿ ಬಂದ ಆಪತ್ತು ವಿಪತ್ತುಗಳನ್ನು ಸರಳವಾಗಿ ನಿರಾಯಾಸವಾಗಿ ಸ್ವೀಕರಿಸುವ ಪ್ರಸಾದ ಮೆಚ್ಚಿ ಅದು ತನ್ನಲ್ಲಿಯೇ ಸ್ವಾಯತವಾಗಬೇಕು.

ಆಭರಣ ನೋಡಿ ದುಡಿದು ಇಲ್ಲ ಕಳುವು ಮಾಡಿ ಪಡೆಯಬೇಕೆಂಬುದು ಮನದ ಗುಣ. ದುಡಿದು ಪಡೆಯುವುದು ಸಮಾಜಕ್ಕೆ ಹಿತಕರ. ಕದ್ದು ಪಡೆಯುವುದು ಸಮಾಜಕ್ಕೆ ಅಹಿತಕರ. ಇವೆರಡೂ ಅಂಗದಲ್ಲಿರುವ ಮನಕ್ಕೆ ಪಡೆಯುವ ಉದ್ದೇಶವಿದೆ. ಆಭರಣ ಪಡೆಯುವುದೇ ಮನಕ್ಕೆ ಸುಖಕರ. ಇವೆರಡೂ ಅಜ್ಞಾನದ ಆಚಾರ. ದುಡಿದು ಪಡೆದರೇನು ಕದ್ದು ಪಡೆದರೇನು ? ಮನಕ್ಕೆ ಇರುವ ಆಭರಣದ ಮೇಲಿನ ಆಸೆ ಒಂದೇ. ಪಡೆಯುವುದು, ಕದಿಯುವುದು ಗೋಚರದ ಆಚಾರಗಳು. ಈ ಎರಡೂ ಆಚಾರಕ್ಕೆ ಲಿಂಗ ಮೆಚ್ಚುವುದಿಲ್ಲ; ಜಂಗಮ ಮೆಚ್ಚುವುದಿಲ್ಲ. ಲಿಂಗ ಜಂಗಮರಿಗೆ ಆಭರಣ ಕದಿಯುವುದೂ ಒಂದೇ, ದುಡಿದು ಪಡೆಯುವುದೂ ಒಂದೇ ! ಇವೆರಡು ಕೃತ್ಯಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ! ಪ್ರಸಾದಕ್ಕೆ ಯೋಗ್ಯವಲ್ಲ.

ಆಭರಣ ಕದ್ದ ನೆನೆಪು ಗಳಿಸಿದ ನೆನಪು ಅಂಗದಲ್ಲಿ ಜೀರ್ಣವಾಗದೇ ಹಾಗೇ ಉಳಿಯಿತು. ಪ್ರಸಾದವಾಗಲಿಲ್ಲ. ಶಿವಾಚಾರವೆಂಬುದು ಹಾಗಲ್ಲ. ಇದು ಅಗೋಚರದ ಆಚಾರ. ಆಭರಣ ಕದಿಯಲಿಲ್ಲ; ಖರೀದಿಯೂ ಮಾಡಲಿಲ್ಲ. ಮಾಟಕ್ಕೆ ಬೆಲೆಗೆ ಮರುಳಾಗಲಿಲ್ಲ. ಏಕೆಂದರೆ ಆಭರಣ ಹಳದಿ ಲೋಹದಿಂದ ಮಾಡಲ್ಪಟ್ಟಿದೆ. ಹಳದಿ ಬಣ್ಣವಿಲ್ಲದಿದ್ದರೆ ಅದು ಚಿನ್ನವಲ್ಲ. ಕಳ್ಳ ಕದಿಯುತ್ತಿರಲಿಲ್ಲ; ಶ್ರೀಮಂತ ಕೊಳ್ಳುತ್ತಿರಲಿಲ್ಲ. ಸಮಾಜ ಸರಕಾರ ಬೆಲೆ ಕಟ್ಟುತ್ತಿರಲಿಲ್ಲ.

ಬಣ್ಣಕ್ಕೆ ಬೆಲೆಯೊ ? ಮಾಟಕ್ಕೆ ಬೆಲೆಯೊ ? ಲೋಹಕ್ಕೆ ಬೆಲೆಯೊ ? ಎಂದು ಸರಿಯಾಗಿ ತಿಳಿಯದೆ ಕದಿಯುವ, ಖರೀದಿಸುವ, ಚಿನ್ನಕ್ಕಾಗಿ ಪ್ರಾಣ ತೆಗೆಯುವ, ಪ್ರಾಣ ಕಳೆದುಕೊಳ್ಳುವ, ಗೋಚರದ ಆಚಾರಗಳು ಘಟಿಸಿ ಹೋಗುತ್ತವೆ. ಅಂಗದಲ್ಲಿ ಅರಿವೆಂಬ ಶಿವಾಚಾರವು ಬಳಕೆಯಾಗದೆ ಆಭರಣ ಅಂಗಕ್ಕೆ ಪ್ರಸಾದವಾಗುವುದಿಲ್ಲ. ಅಂಗದ ಅರಿವು ಅಂಗಕ್ಕೆ ಸ್ವಾಯತವಾಗುವುದಿಲ್ಲ. ಅಂಗದ

ಅರಿವು ಮತ್ತು ಅಜ್ಞಾನ ಬೇರಾಗಿ ಅಂಗವನ್ನು ಭಂಗಕ್ಕೆ ಈಡು ಮಾಡಿ ಒಂದು ಅಂಗ ಶ್ರೀಮಂತ ಎಂದು ಕರೆಯಿಸಿಕೊಂಡರೆ ಮತ್ತೊಂದು ಅಂಗ ಕದಿಯುವ ವೃತ್ತಿಯಲ್ಲಿ ತೊಡಗಿ ಕಳ್ಳ ಎಂದು ಕರೆಯಿಸಿಕೊಳ್ಳುತ್ತದೆ. ಶಿವಾಚಾರವೆಂಬುದು ಬಾಯಿ ಮಾತಿನಲ್ಲಿ ಮಾತ್ರ ಉಳಿದುಕೊಳ್ಳುತ್ತದೆ. ಅಗೋಚರದ ಅರಿವಿನ ಆಚಾರ ಅಂಗದಲ್ಲಿಪ್ರಧಾನವಾಗಿದ್ದರೂ ಅದು ಬಳಕೆಗೆ ಬಾರದೆ ಹಾಗೆಯೇ ಉಳಿದು ಗೋಚರದ ಆಚಾರಗಳು ಮಾತ್ರ ಮನಕ್ಕೆ ಸುಖ ನೀಡುತ್ತವೆ. ಇದೊಂದು ಅಂಗದ ದುರದೃಷ್ಟ ! ಅರಿವಾದರೆ ಅಂಗದ ಅದೃಷ್ಟ !

ಪ್ರಸಾದಿಯ ಶರಣಸ್ಥಲ

790

ತ್ರಿವಿಧ ಪ್ರಸಾದವೆಂದೆಂಬರು ಅದೆಂತಹುದೋ ?
ಶುದ್ಧ ಪ್ರಸಾದ ಗುರುವಿನದದು, ಸಿದ್ಧ ಪ್ರಸಾದ ಲಿಂಗದದು,
ಪ್ರಸಿದ್ಧ ಪ್ರಸಾದ ಜಂಗಮದದು.
ಇಂತೀ ತ್ರಿವಿಧ ಒಂದಾದವರ ತೋರಾ,
ಕೂಡಲಸಂಗಮದೇವಾ.

ಮೂರೂ ಕಾಲ ಲಿಂಗಕ್ಕೆ ನೀರೆರೆದು ಪ್ರಸಾದ ಸ್ವೀಕರಿಸುವ ನಿಯಮಕ್ಕೆ ತ್ರಿವಿಧ ಪ್ರಸಾದಿಗಳೆನ್ನುವರು. ಇದೊಂದು ಸಂಪ್ರದಾಯ. ಎರೆದರೆ ನೆನೆಯದ ಮರೆತರೆ ಬಾಡದ ಲಿಂಗಕ್ಕೆ ನೀರೆರೆದು ಪೂಜಿಸಿ ಸ್ವೀಕರಿಸುವ ಪ್ರಸಾದ ಪ್ರಸಾದವಲ್ಲ. ಅವರು ಪ್ರಸಾದಿಗಳೂ ಅಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ಪೂಜಿಸುವ ವಿಧಾನ ಮನಕ್ಕೆ ಹೊಳೆಯಬೇಕು. ಮನ ಸ್ವೀಕರಿಸಿ ಭುಂಜಿಸದೆ, ಗುರುವಿಗೆ ಎಡೆ ಮಾಡಿ ಆತ ಸ್ವೀಕರಿಸಿದ ಮೇಲೆ ಉಳಿದುದು ಸ್ವೀಕರಿಸುವುದೇ ಸಿದ್ಧ ಪ್ರಸಾದ.

ಮನ ಸ್ವೀಕರಿಸದೆ, ಭುಂಜಿಸದೆ ಅಂಗದ ಕಣ ಕಣದಲ್ಲಿದ್ದ ಲಿಂಗಯ್ಯನೆಂಬ ಗುರುವಿಗೆ ಎಡೆಮಾಡಿ ಆತ ಉಂಡು ಉಳಿದುದನು ಮನ ಉಣ್ಣುವುದೇ ಸಿದ್ಧ ಪ್ರಸಾದ.

ಅಂಗದಲ್ಲಿಯೇ ಇದ್ದ ಜಂಗಮನನ್ನು ಪರಿಚಯಿಸಿಕೊಂಡು ಆತನನ್ನು ಪೂಜಿಸುವ ವಿಧಾನವನ್ನು ಮನ ತಿಳಿದುಕೊಂಡು ಪೂಜಿಸಿ ಜಂಗಮನಿಗೆ ಎಡೆಮಾಡಿ, ಆತ ಉಂಡು ಉಳಿದುದನ್ನು ಉಣ್ಣುವುದೇ ಪ್ರಸಿದ್ಧ ಪ್ರಸಾದ.

ಅಂಗದಲ್ಲಿಯೇ ಇರುವ ಅರಿವೆಂಬ ಗುರುವನು ಕಂಡು, ಅಂಗದ ಕಣಕಣದಲ್ಲಿರುವ ಅರಿವೆಂಬ ಲಿಂಗವನು ಕಂಡು, ಗುರುದೇವ, ಲಿಂಗದೇವ ನುಡಿದ ನುಡಿಯನು ಚಾಚೂ ತಪ್ಪದೇ ಪಾಲಿಸುವ ಜಂಗಮನನ್ನು ಕೂಡಾ ಅಂಗದಲ್ಲಿಯೇ ಕಂಡು ಮನ ಆತನಿಗೆ ಎರಗಿ ಬಂದ ಆಪತ್ಕಾಲಗಳನ್ನು, ವಿಪತ್ಕಾಲಗಳನ್ನು, ಸುಖದುಃಖಗಳನ್ನು, ಆಗುಹೋಗುಗಳನ್ನು ತ್ರಿಮೂರ್ತಿಗಳಿಗೆ ಇತ್ತು. ಮನ ನಿರಾಭಾರಿಯಾಗಿ ಗುರುಲಿಂಗ ಜಂಗಮರನ್ನು ಜಾಗ್ರತ್ ಸ್ವಪ್ನ ಸುಷುಪ್ತಿಯೆಂಬ ತ್ರಿಕಾಲದಲ್ಲಿ ಪೂಜಿಸುತ್ತಾ ಇರುವುದೇ ತ್ರಿವಿಧ ಒಂದಾದ ಅಂಗ. ಗುರುಲಿಂಗ ಜಂಗಮರೊಂದಾದ ಅಂಗ. ಮಹಾಶಿವಭಕ್ತನ ಅಂಗ !

ಗುರುವಿಗೆ ಅರ್ಪಿಸಿ ಶುದ್ಧ ಪ್ರಸಾದಿಯಾದ. ಲಿಂಗಕ್ಕೆ ಅರ್ಪಿಸಿ ಸಿದ್ಧ ಪ್ರಸಾದಿಯಾದ. ಜಂಗಮಕ್ಕೆ ಅರ್ಪಿಸಿ ಪ್ರಸಿದ್ಧ ಪ್ರಸಾದಿಯಾದ.

791

ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದಡೇನಯ್ಯಾ ?
ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದಡೇನಯ್ಯಾ ?
ಸುಚರಿತ್ರರು ಎಂತಿದ್ದಡೇನಯ್ಯಾ ?
ಅವಲೋಹವ ಕಳೆವ ಪರುಷ ಎಂತಿದ್ದಡೇನಯ್ಯಾ ?
ಕೂಡಲಸಂಗನಶರಣರು
ರಸದ ವಾರುಧಿಗಳು ಎಂತಿದ್ದಡೇನಯ್ಯಾ ?

ನೋಟದಲ್ಲಿ ಶಬ್ದದಲ್ಲಿ ಪರಿಮಳದಲ್ಲಿ ರುಚಿಯಲ್ಲಿ ಸ್ಪರ್ಶದಲ್ಲಿ ನಿರ್ಭಾವದ ಮೂಲಕ ಅರಿವಿನ ಶಿವನ ನಂಬಿದ ಶರಣರು ಆ ಅರಿವಿಗೆ ಶರಣು ಹೋದ ಶರಣರು ಎಂತಿದ್ದಡೇನು ? ಅವರು ಮಹಾಮಹಿಮರು. ಮಹಾಜ್ಞಾನಿಗಳು. ಸರ್ವರನ್ನೂ ತನ್ನಂತೆಯೇ ನೋಡಿ ಆನಂದ ಪಡುವ ತಂತ್ರಜ್ಞಾನಿ ನಿಪುಣರು.ಅರಿವಿನ ಕಲೆಯನ್ನು ಅದರ ಮಾಹಿತಿಯನ್ನು ಲೋಕಕ್ಕೆ ವ್ಯವಹಾರ ರಹಿತವಾಗಿ ತಿಳಿಸುವ ಸುಜ್ಞಾನಿಗಳು. ತಮ್ಮ ಚಿಂತೆ, ಲೋಕದ ಚಿಂತೆಯನ್ನು ಹೇಗೆ ಬಿಡಬೇಕೆಂದು ಹೇಳಿಕೊಡುವ ಜ್ಞಾನಿಗಳು ಮಹಾಪುರುಷರು ಎಂತಿದ್ದರೇನು, ಹೇಗಿದ್ದರೇನು ? ಅವರು ಶಿವನನ್ನು ನಂಬಿದ ಶಿವಶರಣರು.

ತನು ಮನ ಘನ ಒಂದಾದ ಸುಚರಿತ್ರರು. ಜಾಗ್ರತ್ ಸ್ವಪ್ನ ಸುಷುಪ್ತಿ ಕಳೆದುಕೊಂಡು ತ್ರಿಕಾಲದಲ್ಲಿಯೂ ಒಂದೇ ಆದ ಘನವಂತರು. ಅವರು ಎಂತಿದ್ದಡೇನು ? ಹೇಗಿದ್ದಡೇನು ?

ಅವಲೋಹವ ಕಳೆವ ಪರುಷ ಯಾವ ಆಕಾರದಲ್ಲಿದ್ದರೇನು ? ಅದು ಮುಟ್ಟಿದ ಲೋಹಗಳೆಲ್ಲ ಚಿನ್ನವೇ.

ಅರಿವೆಂಬ ಗುರುದೇವನಿಗೆ ಮನವೆಂಬ ಭಕ್ತ ಮಾರು ಹೋಗಿ ಗುರುವಿನಲ್ಲಿ ತನ್ಮಯವಾಗಿ ಆ ಗುರುವೇ ತಾನಾದ ಲಿಂಗಾಂಗ ಅದು ರಸದ ವಾರುಧಿ ಅಮೃತದ ಹಾಲಹಳ್ಳ. ಮುತ್ತು ರತ್ನಗಳೇ ಭರಿತವಾದ ಸಮುದ್ರ. ಅರಿವಿನ ಜಲರಾಶಿ. ಅದು ಎಲ್ಲಿ ಹರಿದರೆ ಅಲ್ಲೆಲ್ಲ ಪಾವನವೇ ಪಾವನ. ಅಂಗಕ್ಕೆ ಅಂಗವನ್ನು ಆವರಿಸಿದ ಮನಕ್ಕೆ ಅಂಗದಲ್ಲಿಯೇ ಇರುವ ಪರಮ ಸುಖ ಅಂಗ ಇರುವುದರೊಳಗಾಗಿ ಒಮ್ಮೆ ಅನುಭವಿಸಲು ಬರಬೇಕು. ಅಂಗವೆಂಬ ಲಿಂಗ ಹಾಗೆ ಅನುಭವಿಸುವ ಸುಖವನ್ನು ಆನಂದವನ್ನು ಅಂಗಕ್ಕೆ ನೋಡುವ ಭಾಗ್ಯವಾದರೂ ಗುರುದೇವ ದಯಪಾಲಿಸಬೇಕು. ಈ ಸುಖದ ಮುಂದೆ ಮತ್ತಾವ ಸುಖವೂ ಇಲ್ಲ.

792

ಉರಿ ತಾಗಿದ ಮೃಗವು ಒಂದಡಿಯನಿಡುವುದೆ ?
ತನುವ ತಾಗಿದ ಸುಖವು ಅಗಲುವುದೆ ?
ಕೂಡಲಸಂಗನ ಶರಣರ ಅನುಭಾವವರಿದವರ

ಮರಳಿಮರ್ತ್ಯರೆಂದೆನಬಹುದೆ ?

ಸುಖವೆನ್ನುವುದೆ ಹಾಗೆ. ಮನ ತನುವಿನೊಂದಿಗೆ ಅನುಭವಿಸಿದ ಸುಖವನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಭೂಮಿ, ಹೇಮ, ಕಾಮಿನಿಯ ಸುಖವನ್ನೇ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಇನ್ನು ಮನಕ್ಕೆ ಸುಖದ ಸುಖ ಸಾರಾಯದ ಸುಖ ಸಿಕ್ಕರೆ ಸುಲಭವಾಗಿ ಬಿಟ್ಟುಕೊಟ್ಟೀತೆ? ಸಾರಾಯದ ಸುಖವದು ಕೂಡಲಸಂಗನ ಶರಣರಿಂದ ತನ್ನಂಗದಲ್ಲಿಯೇ ಕಂಡುಕೊಂಡ ಶಾಶ್ವತ ಸುಖ. ಈ ಸುಖವನ್ನು ಬಿಟ್ಟು ಮನ ಮರ್ತ್ಯಕ್ಕೆ ಬರಲೊಲ್ಲದು.

ಮರ್ತ್ಯನೆನ್ನಿಸಿಕೊಂಡ ಮನ ಸುಖ ತಾಗಿದ ಮೇಲೆ ಭಕ್ತನೆನ್ನಿಸಿಕೊಂಡು ಮತ್ತೆ ಮರ್ತ್ಯಕ್ಕೆ ಬರಲೊಲ್ಲದು. ಮನ, ಭೂಮಿ, ಹೇಮ ಕಾಮಿನಿಯನ್ನು ಪಡೆದರೆ ಸುಖಿ ಎನ್ನುತ್ತಾರೆ. ಜನ. ಮನ ತನುವಿನೊಂದಿಗೆ ಸಾರಾಯದ ಸುಖ ಹೊಂದಿ ಶಾಶ್ವತ ಸುಖದ ಸುಖಿಯಾದರೆ ಜನ ಆ ತನುವನ್ನು ಸರ್ವ ಸಂಗ ಪರಿತ್ಯಾಗಿ ಎನ್ನುತ್ತಾರೆ. ಮನಕ್ಕೆ ಸುಖವಾದರೆ ಬಿಡುವುದಿಲ್ಲ; ದುಪ್ಪಟ್ಟು ಸುಖವಾದರೆ ಸುಖಬಿಟ್ಟು ದುಪ್ಪಟ್ಟು ಸುಖಕ್ಕೆ ಜಾರುತ್ತದೆ. ಮನದ ಈ ವೃತ್ತಿಯನ್ನು ತ್ಯಾಗ ಎನ್ನಲು ಬರುವುದಿಲ್ಲ. ಭವಿಯಾಗಿದ್ದ ಮನ ಭವಿ ಸುಖವನು ಅನುಭವಿಸಿತು. ಭಕ್ತನಾಗಿ ಪಲ್ಲಟಗೊಂಡ ಮನ ಭಕ್ತನ ಸುಖ ಅನುಭವಿಸಿತು. ಗುರುವಾಗಿ ಪಲ್ಲಟಗೊಂಡ ಮನ ಗುರುವಿನ ಸುಖ ಅನುಭವಿಸಿತು. ಲಿಂಗವಾಗಿ ಪಲ್ಲಟಗೊಂಡ ಮನ ಲಿಂಗದ ಸುಖ ಅನುಭವಿಸಿತು. ಜಂಗಮನಾಗಿ ಪಲ್ಲಟಗೊಂಡ ಮನ ಜಂಗಮವಾಗಿ ಸುಖ ಅನುಭವಿಸಿತು. ಪ್ರಸಾದಿಯಾಗಿ ಪಲ್ಲಟಗೊಂಡ ಮನ ಪ್ರಸಾದಿಯಾಗಿ ಸುಖ ಅನುಭವಿಸಿತು. ಐಕ್ಯನಾಗಿ ಪಲ್ಲಟಗೊಂಡ ಮನ ಐಕ್ಯನ ಸುಖ ಅನುಭವಿಸಿತು.

ಮನಕ್ಕೆ ಸುಖದ ಸುಖ ದಕ್ಕುವ ಸುಖ ಸಾರಾಯದ ಮಾರ್ಗ ತನಗಾದರೂ ಹೊಳೆಯಬೇಕು; ಇತರರಿಂದಲಾದರೂ ತನಗೆ ಹೊಳೆಯಬೇಕು. ಆ ಸುಖದ ಮಾರ್ಗ ಸವಿ ಸವಿದು ಆಯಾ ಸ್ಥಾನದಲ್ಲಿ ನಿಂತು ಮುಂದೆ ಮುಂದೆ ಸಾಗಬೇಕು. ಭಕ್ತನ ಮಾರ್ಗವೆಂದರೂ ಚಿಕ್ಕದಲ್ಲ; ಐಕ್ಯನ ಮಾರ್ಗವೆಂದರೂ ದೊಡ್ಡದಲ್ಲ. ವ್ಯತ್ಯಾಸವಿಲ್ಲದಂತೆ ಅನುಭವಿಸುವುದು ಸುಖಿಗೇ ಗೊತ್ತು. ತಾನುಂಬ ಊಟವನು ತಾ ಕೊಂಬ ರತಿ ಸುಖವನು ನುಡಿದು ಹೇಳಲು, ಬರೆಯಲು ಸಾಧ್ಯವೇ? ಕೂಡಿ ಕ್ಷಣಾರ್ಧದಲ್ಲಿ ಅಗಲುವ ಸುಖವನ್ನು ಹೇಳಲು ಸಾಧ್ಯವಿಲ್ಲವೆಂದ ಮೇಲೆ ಕೂಡದೆ ಅಗಲದೆ ಶಾಶ್ವತ ಸುಖ ಹೊಂದುವ ಸುಖವನು ಹೇಳಲು ಹೇಗೆ ಸಾಧ್ಯ ? ಇದು ತೀರಾ ವೈಯಕ್ತಿಕ ಸುಖ; ತನ ತನಗೆ ಪಡೆದುಕೊಳ್ಳಬೇಕು. ತನಗೆ ತಾನೇ ಅನುಭವಿಸಬೇಕು.

793

ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹರಿಯಿತ್ತು.
ನಿಮ್ಮ ಪ್ರಸಾದದಿಂದ ನಾನು ಭವಗೆಟ್ಟೆ, ನೋಡಯ್ಯಾ !
ಮನ ಪರುಷ, ದೃಷ್ಠಿ ಪರುಷ, ಭಾವ ಪರುಷ
ಲಿಂಗಗುಣಂಗಳು.
ಕೂಡಲಸಂಗಮದೇವಾ, ನಿಮ್ಮ ಶರಣರ ಅನುಭಾವದಿಂದ
ಆನು ಸುಖಿಯಾದೆನು.

ಅಂಗದಲ್ಲಿಯೇ ಇರುವ ಗುರುಲಿಂಗ ಜಂಗಮನ ಶ್ರೀಪಾದವನ್ನು ಅಂಗವನ್ನು ಆವರಿಸಿರುವ

ಮನವೇ ಮುಟ್ಟಿ ಮನದ ಭವರೋಗಗಳು ಹರಿದು ನಿಶ್ಚಿಂತವಾಯಿತು. ಜನನ ಮರಣಗಳ ಭ್ರಮೆಯನ್ನು ಕಳೆದುಕೊಂಡು ಸುಖಿಯಾಯಿತು.

ಗುರುಲಿಂಗ ಜಂಗಮರ ಪ್ರಸಾದದಿಂದ ಜನನ ಮರಣಗಳ ಬಾಧೆ ನಿವಾರಣೆಯಾಯಿತು. ಸಾವಿಲ್ಲದ ರೂಹಿಲ್ಲ ಕೇಡಿಲ್ಲದ ಗುರುಲಿಂಗಜಂಗಮರೆಂಬ ಚೆಲುವರು ಒಲಿದುದಕ್ಕಾಗಿ ಸಾವಿಲ್ಲದಾಯಿತು. ರೂಹಿದ್ದರು ಅದಕ್ಕೆ ಕಾರಣವಾದ ರೂಹಿಲ್ಲದ ಸುಖ ಸಿಕ್ಕು ಸಾವ ಕೆಡುವ ರೂಹನು ಕೊಡವಿಕೊಂಡು ರೂಹಿಲ್ಲದ ಚೆಲುವನ ಸುಖವುಂಡೆ. ರೂಹಿಗೆ ಕೇಡುಂಟು. ಸಾವುಂಟು. ಜನನಮರಣಗಳುಂಟು. ದುಗುಡಗಳುಂಟು. ಭಯವುಂಟು.

ಸಾವಿಲ್ಲದ ರೂಹಿಲ್ಲದ ಚೆಲುವನಿಗೆ ಕೇಡು ಬರಲು ಸಾಧ್ಯವೇ ? ಜಲಕ್ಕೆ ಕೇಡುಂಟು; ಜಲಜನಕ ಆಮ್ಲಜನಕಗಳಿಗೆ ಕೇಡುಂಟು. ಇವೆರಡನ್ನು ಬಂಧಿಸಿ ಜಲ ಸೃಷ್ಟಿ ಮಾಡಿದ ಬಯಲಿಗೆ ಕೇಡುಂಟೆ ? ಜಲದಿಂದಲೇ ಭೂಮಿ ಅಗ್ನಿ ಉಂಟು ಮಾಡಿದ ಬಯಲಿಗೆ ಕೇಡುಂಟೆ ? ಇಳೆ ಬಯಲದಾನ, ಅದರ ಮೇಲೆ ಬೆಳೆಯುವ ಬೆಳೆಯೂ ಬಯಲದಾನ. ಸುಳಿದು ಸೂಸುವ ಗಾಳಿಯೂ, ಹೊತ್ತಿ ಉರಿಯುವ ಅಗ್ನಿಯೂ ಬಯಲ ದಾನಗಳು. ಬಯಲಿಂದಲೇ ಹುಟ್ಟಿ, ಬಯಲಲ್ಲಿಯೇ ವಾಸ ಮಾಡಿ, ಬಯಲ ಗರ್ಭದಲ್ಲಿಯೇ ಆಡಿ ಹಾಡಿ ಬಯಲಲ್ಲಿಯೇ ಲಯವಾಗುವ ಬಯಲ ಬೀಜಗಳವು. ಬಯಲಿಗೆ ಕೇಡುಂಟೆ ?

ಬಯಲನ್ನು ನೆನೆದ ಭಾವ ಪರುಷ! ಬಯಲನ್ನು ನೋಡಿದ ದೃಷ್ಟಿ ಪರುಷ ! ಬಯಲ ಸುಖವನ್ನು ಅನುಭವಿಸಿ ಭಾವ ಪರವಶವಾಗಿ ಬಯಲೇ ಆದ ಭಾವವೂ ಪರುಷ ! ನಿನ್ನನು ಆರಿತ ಅವಗುಣಂಗಳೆಲ್ಲ ಲಿಂಗಗುಣಂಗಳಾಗಿ ಬಯಲಿಂಗೆ ಬಯಲಾಗಿ ಬಯಲಾದವು. ಕೂಡಲಸಂಗಮದೇವಾ, ನಿಮ್ಮನು ಅರಿತು, ನೀವೇ ಆದ ಶರಣರಿಂದ, ಶರಣರ ಅನುಭಾವದಿಂದ ನಾನು ಸುಖಿಯಾದೆನು !

ಪ್ರಸಾದಿಯ ಐಕ್ಯಸ್ಥಲ

794

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡಲ್ಲಿ ಚೆನ್ನ!
ಪ್ರಥಮರೊಳಗೆ ಚೆನ್ನ, ಪುರಾತರೊಳಗೆ ಚೆನ್ನ,
ಸವಿ ನೋಡಿ ಅಂಬಲಿ ರುಚಿಯಾಯಿತ್ತೆಂದು,
ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ.

ಚನ್ನಯ್ಯನ ನಡೆ ಚನ್ನ, ಚನ್ನಯ್ಯನ ನುಡಿ ಚನ್ನ, ಎಲ್ಲಿ ನೋಡಿದರೂ ಚೆನ್ನ! ಚೆನ್ನಯ್ಯನೇ ಚೆನ್ನ ! ಪ್ರಮಥರಲ್ಲಿಯೂ ಪ್ರಥಮ ! ಪುರಾತನರಲ್ಲಿಯೂ ಪುರಾತನ ! ಸವಿ ನೋಡಲು ಹೋದರೆ ಬಲು ರುಚಿ ! ಕೂಡಲಸಂಗಯ್ಯನಿದ್ದ ಅಂಗಗಳೆಲ್ಲ ತನಗೆ ಬೇಕೆಂದು ಎತ್ತಿಕೊಂಡ. ತನ ತನಗೆ ತಿಳಯಲೆಂದು ಕೈದೆಗೆದ !

ಅಂಗದಲ್ಲಿಯೇ ಸಂಗಮವಾದ ಚೆಲುವ ಚೆನ್ನಿಗರಾಯನನ್ನು ಇಂದಿನವನೆನ್ನಬಹುದೆ ? ಹಿಂದಿನವನೆನ್ನಬಹುದೆ? ಪ್ರಥಮ ಪುರಾತನೆನ್ನಬಹುದೆ ? ಆತನ ನಡೆ ನುಡಿ ಚೆನ್ನ. ಎಲ್ಲಿ

ನೋಡಿದಡಲ್ಲಿ ಚೆನ್ನ .

ಕಿವಿಯಲ್ಲಿ ಶಬ್ದ ಬ್ರಹ್ಮಾಂಡವಡಗಿದೆ. ಕಣ್ಣಿನಲ್ಲಿ ದೃಶ್ಯಕ್ಕೆ ನಿಲುಕದ ಸೌಂದರ್ಯದ ಬ್ರಹ್ಮಾಂಡವಡಗಿದೆ. ಮೂಗಿನಲ್ಲಿ ನಿಸರ್ಗದ ಪರಿಮಳವೇ ಅಡಗಿದೆ. ನಾಲಗೆಯಲ್ಲಿ ವಿಶ್ವದ ರುಚಿ ತತ್ವ ಅಡಗಿದೆ. ಚರ್ಮದಲ್ಲಿ ಸ್ಪರ್ಶಿಸಿ ಸುಖಿಸುವ ಸುಖವಡಗಿದೆ.

ಸರ್ವಾಂಗ ಸುಂದರವಾದ ಅಂಗದ ಲಿಂಗ ತಂದೆ ಬಹು ಪುರಾತನ! ಕಾಳಿಕಂಕಾಳದಿಂದಲೂ ಮುನ್ನಿನವನು; ಉಮೆಯ ಕಲ್ಯಾಣಕ್ಕಿಂತಲೂ ಮುನ್ನಿನವನು; ಹರಿವಿರಂಚಿಗಳಿಗಿಂತಲೂ ಮುನ್ನಿನವನು. ಮುನ್ನ ಮುನ್ನ ಮುನ್ನ ಅಂದಿಂಗೆ ಎಲ್ಲರೂ ಈ ಚೆನ್ನನಗಿಂತ ಎಳೆಯರೇ. ಚೆನ್ನನೊಬ್ಬನೇ ಹಳೆಯ! ಏಕೆಂದರೆ ಅಂಗದಲ್ಲಿಯೇ ಅರಿವಿನ ಸಂಗಯ್ಯ ಸಂಗಮವಾಗಿರುವುದರಿಂದ ಸರ್ವಾಂಗವೇ ಲಿಂಗ; ಅದು ವಿರಾಟ ಸ್ವರೂಪ! ಅಂದು ಇಂದು ಎಂದೆಂದೂ ಇದ್ದದ್ದು ! ಹಳತಿಗಿಂತ ಹಳತಾದುದು!

795

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ.
ಜಂಗಮವಿಕಾರಿಗೆ ಧನ ವಿಕಾರವೆಂಬುದಿಲ್ಲ.
ಪ್ರಸಾದವಿಕಾರಿಗೆ ಮನೋವಿಕಾರವೆಂಬುದಿಲ್ಲ.
ಇಂತೀ ತ್ರಿವಿಧ ಗುಣವನರಿದಾತನು.
ಅಚ್ಚ ಲಿಂಗೈಕ್ಯನು ಕಾಣಾ, ಕೂಡಲಸಂಗಮದೇವಾ.

ಅಂಗದ ಮೇಲಿರುವ ಲಿಂಗಕ್ಕೆ ಅಪಚಾರವಾದರೆ ಅಂಗವಿಕಾರ ವಾಗುತ್ತದೆ. ಸಂಪ್ರದಾಯದ ಅಂಗ ಅಂಗದ ಮೇಲಿರುವ ಲಿಂಗವನ್ನೇ ತ್ರಿಕಾಲದಲ್ಲಿಯೂ ಪೂಜಿಸಿ ಪೂಜಿಸಿ ದಣಿಯುತ್ತದೆ. ಪೂಜೆಯಲ್ಲಿ ವ್ಯತ್ಯಾಸವಾದರೆ ಸಾಕು ಅಂಗ ವಿಕಾರವಾಗುತ್ತದೆ. ಅಂಗದ ಪರಿಚಯ ಲಿಂಗಕ್ಕಿಲ್ಲ. ನಿಜಲಿಂಗದ ಪರಿಚಯ ಅಂಗಕ್ಕಿಲ್ಲ. ಇವೆರಡರ ಪರಿಚಯವನ್ನು ಮಾಡಿಕೊಳ್ಳದೆ ಮನ ಅಂಗದ ಮೇಲಿರುವ ಲಿಂಗವನ್ನು ಪೂಜಿಸುತ್ತದೆ.

ಮನಕ್ಕೆ ಅಂಗದ ಕಣಕಣದಲ್ಲಿರುವ ಅರಿವೆಂಬ ಲಿಂಗ ತಂದೆ ಪರಿಚಯವಾದ ಮೇಲೆ ಅಂಗದ ಮೇಲಿದ್ದ ಲಿಂಗವೇ ಪಾಷಾಣವಾಗಿ ಕಾಣುತ್ತದೆ. ಅಂಗ ಲಿಂಗದ ಸುಳ್ಳು ಸಂಬಂಧ ಹಳಚುತ್ತದೆ. ಅಂಗದ ಮೇಲಿರುವ ಲಿಂಗ ವಿಕಾರಗೊಂಡು ಸರ್ವಾಂಗದಲ್ಲಿರುವ ಲಿಂಗ ಗೋಚರಕ್ಕೆ ಬಂದು ಅಗೋಚರದ ಪೂಜೆ ಪ್ರಾರಂಭವಾಗುತ್ತದೆ. ಸರ್ವಾಂಗವೇ ಲಿಂಗವಾಗಿ ಅಂಗಗಳೆಲ್ಲ ಲಿಂಗಗಳಾಗಿ ಕಂಗೊಳಿಸುತ್ತವೆ.

ಜಂಗಮ ವಿಕಾರಿಗೆ ಧನವಿಕಾರವೆಂಬುದಿಲ್ಲ:

ಅಂಗವನ್ನು ಆವರಿಸಿದ ಮನಕ್ಕೆ ಅಂಗವೆಂದರೇನು, ಲಿಂಗವೆಂದರೇನು, ಜಂಗಮವೆಂದರೇನು ಎಂದು ತಿಳಿಯದಿದ್ದರೆ ಅಂಗದ ಮೇಲೆ ಲಿಂಗಧರಿಸಿ ಲಿಂಗಾಯತನಾಗುತ್ತದೆ. ಲಿಂಗಕ್ಕೆ ಅಪಚಾರವಾದಾಗ ಅಂಗ ಕೆರಳಿ ಕೆಂಡವಾಗುತ್ತದೆ. ಅಂಗದ ಮೇಲೆ ಲಿಂಗಕಟ್ಟಿ ಉಪದೇಶ ಮಾಡಿದ ಅಂಗವನ್ನು ಮನ ಜಂಗಮನೆಂದು ಪೂಜಿಸುತ್ತದೆ. ಜಂಗಮನಿಗೆ ಅಪಚಾರವಾದಾಗ ಅಂಗದ ಕಣಕಣದಲ್ಲಿರುವ ಅರಿವು ಕೆರಳಿ ಕೆಂಡವಾಗುತ್ತದೆ.

ಅಂಗವನ್ನು ಆವರಿಸಿದ ಮನಕ್ಕೆ ಅಂಗದಲ್ಲಿರುವ ಅರಿವು, ಅರಿವಿಗೆ ಸಂಬಂಧಿಸಿದ ಅಂಗವೇ ಲಿಂಗವೆಂದು ತಿಳಿದ ಬಳಿಕ ಅಂಗ ವಿಕಾರ ವಾಗುವುದಿಲ್ಲ. ಅಂಗದಲ್ಲಿರುವ ಅರಿವು ಆ ಅರಿವಿನ ಮಾತು ಪಾಲಿಸುವ ಜಂಗಮನ ಪರಿಚಯವಾದ ಮೇಲೆ ಅರಿವು ವಿಕಾರವಾಗುವುದಿಲ್ಲ. ಧನವೆಂದರೆ ಅಂಗದ ಕಣಕಣದಲ್ಲಿರುವ ಅರಿವಿನ ಸಂಪತ್ತು. ಅದನ್ನು ಶರಣರು ಧನವೆಂದು ಕರೆದರು. ಧನವೆಂದರೆ ಲೋಕ ತಿಳಿದುಕೊಂಡ ಧನವಲ್ಲ. ವಸ್ತ್ರ, ವಸ್ತು, ಒಡವೆ, ಭೂಮಿ ಧನವಲ್ಲ. ವಿನಿಮಯಕ್ಕಾಗಿ ಬಳಸುವುದು ಜಡ ! ಅದಕ್ಕೆ ಪ್ರಾಣವಿಲ್ಲ; ಜೀವವಿಲ್ಲ. ಅದು ಎಂದೂ ವಿಕಾರ ಹೊಂದುವುದಿಲ್ಲ. ಶರಣರು ಹೇಳಿದ ಜಂಗಮವೆಂಬ ನಿಜಧನ ಮನಕ್ಕೆ ಹೊಳೆಯದಿದ್ದರೆ ತನು ವಿಕಾರ ಹೊಂದುತ್ತದೆ.

ಪ್ರಸಾದ ವಿಕಾರಿಗೆ ಮನೋವಿಕಾರವೆಂಬುದಿಲ್ಲ:

ಅಂಗವನ್ನು ಆವರಿಸಿದ ಅಜ್ಞಾನಿ ಮನ, ಅಂಗದ ಮೇಲೆ ಧರಿಸಿದ ಲಿಂಗವನ್ನೇ ಲಿಂಗವೆಂದು ಭಾವಿಸಿದೆ; ಅಂಗಕ್ಕೆ ಲಿಂಗಕಟ್ಟಿ ಉಪದೇಶ ನೀಡಿದ ಜಂಗಮನನ್ನೇ ನಿಜವಾದ ಜಂಗಮನೆಂದು ಭಾವಿಸಿದೆ. ಜಂಗಮನು ತಾನುಂಡು ಉಳಿದ ಪ್ರಸಾದವನ್ನೇ ಪ್ರಸಾದವೆಂದು ಭಾವಿಸಿದೆ. ಪ್ರಸಾದದಲ್ಲಿ ಅಪಚಾರವಾದರೆ ಸಿದ್ಧಪಡಿಸಿದ ಅಂಗದ ಮೇಲೆ ಮನ ವಿಕಾರಗೊಳ್ಳುತ್ತದೆ. ಅಂಗವನ್ನು ವಿಕೃತಗೊಳಿಸಿ ತೊಂದರೆಗೀಡು ಮಾಡುತ್ತದೆ.

ಅಂಗದಲ್ಲಿರುವ ಅರಿವೆ ಗುರು ಲಿಂಗ ಜಂಗಮ. ಈ ಮೂರು ಮಹಾಪುರುಷರು ಅಂಗದ ಕಣಕಣದಲ್ಲಿದ್ದು ಒಂದೊಂದು ಚಮತ್ಕಾರಿ ಮಹಾಕಾರ್ಯವನ್ನು ಮಾಡುತ್ತಾರೆ. ಮನದ ವಿಕಾರವನ್ನು ಅದರ ಅಜ್ಞಾನವನ್ನು ಮೂರೂ ಜನ ಪ್ರಸಾದ ರೂಪದಲ್ಲಿ ಸೇವಿಸಿ ಅದರ ವಿಕೃತ ಸ್ವಭಾವವನ್ನು ಕಳೆಯುತ್ತಾರೆ. ಅಂದಿನಿಂದ ಮನವೇ ಘನಮನವಾಗಿ ಮನೋವಿಕಾರವನ್ನು ನಷ್ಟ ಮಾಡಿಕೊಂಡು ತ್ರಿವಿಧ ಗುಣವನರಿತು ನಿರ್ಗುಣಿಯಾಗುತ್ತದೆ.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಗುರು ಲಿಂಗ ಜಂಗಮರನ್ನು ಕಂಡು ತನ್ನ ಅವಗುಣಗಳನ್ನು ಅಳಿದುಕೊಂಡು ಅಲ್ಲಿಯೇ ಐಕ್ಯವಾಗುತ್ತದೆ. ಅಂಗದಲ್ಲಿಯೇ ಸಂಗಮವಾಗಿ ಕೂಡಲಸಂಗಮನಾಥನಾಗುತ್ತದೆ.

ಪ್ರಾಣಲಿಂಗಿಸ್ಥಲ

ಪ್ರಾಣಲಿಂಗಿಯ ಜ್ಞಾನಸ್ಥಲ

796

ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ,
ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ ?
ಲಿಂಗವಿರಹಿತವಾಗಿ ನುಡಿವ ಪರಿ ಇನ್ನೆಂತೋ ?
ಪಂಚೇಂದ್ರಿಯ ಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು;
ಲಿಂಗವಿರಹಿತವಾಗಿ ಉಗುಳ ನುಂಗಲಾಗದು.
ಇಂತೆಂದುದು ಕೂಡಲಸಂಗನ ವಚನ.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಗುರು ಲಿಂಗ ಜಂಗಮರಲ್ಲಿ ಐಕ್ಯವಾಗಿ ಅವರೇ ತಾನಾದ ಬಳಿಕ ಅದು ಬರೀ ಮನವಲ್ಲ ಅದು ಲಿಂಗಮನ ಗುರುಮನ ಘನಮನ !

ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕೇ ಆದಂತೆ. ಮತ್ತೆ ಕತ್ತಲಾಗಲು ಅರಿಯದು. ಘನಲಿಂಗಕ್ಕಾಗಿ ಹಾತೊರೆಯುವ ಮನ ಲಿಂಗದಲ್ಲಿ ಲೀನವಾಗಿ ಅರಿವಿನ ಲಿಂಗವೇ ತಾನಾದ ಬಳಿಕ ಮತ್ತೆ ಲಿಂಗವನ್ನು ಬಿಡಲು ಸಾಧ್ಯವೇ ? ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕಾದ ಮೇಲೆ ಮತ್ತೆ ಕತ್ತಲಾಗಲು ಸಾಧ್ಯವೇ ?

ನಡೆಯುವ ನಡಿಗೆಯೂ ಲಿಂಗ, ನುಡಿಯುವ ನುಡಿಯೂ ಲಿಂಗ! ಪಂಚೇಂದ್ರಿಯಗಳ ಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು.

ಲಿಂಗವಿರಹಿತವಾಗಿ ಉಗುಳ ನುಂಗಲಾಗದು ಇಂತೆಂದುದು ಕೂಡಲಸಂಗನ ವಚನ:

ನೋಡುವ ಕಣ್ಣಿನಲ್ಲಿ ಬೆಳಕಿದ್ದರೂ ಮನದ ಪೊರೆ ಕತ್ತಲಾಗಿ ಕುರುಡಾಗಿಸಿತ್ತು. ಕತ್ತಲೂ ಬೆಳಕುಗಳೆರಡೂ ಕಣ್ಣಿನಲ್ಲಿಯೇ ಇದ್ದು ಒಂದನ್ನು ಮತ್ತೊಂದು ಅರಿತಿರಲಿಲ್ಲ. ಮನ ತನಗೆ ತಾನೇ ತಿಳಿದು ಕಣ್ಣ ಬೆಳಕಲ್ಲಿ ಲೀನವಾಗಿ ಬೆಳಕಾಯಿತು. ಮತ್ತೆ ಕತ್ತಲಾಗಲೇ ಇಲ್ಲ. ಅರಿವಿನ ಬೆಳಕಿನಿಂದ ನೋಡಿದ ಕಣ್ಣಿಗೆ ಕತ್ತಲು ಕಾಣಲೇ ಇಲ್ಲ. ನೋಡಿದ ನೋಟವೆಲ್ಲ ಬೆಳಕು ! ನಡೆದ ದಾರಿಯೆಲ್ಲ ಬೆಳಕು! ನೋಡಲ್ಪಟ್ಟ ಅಂಗಗಳೆಲ್ಲ ಘನಲಿಂಗಗಳಾಗಿ ಕಂಡವು. ಹೆಣ್ಣು ಗಂಡೆಂಬ ಕತ್ತಲು ಕಣ್ಣಲ್ಲಿ ಮುಳುಗಿ ಬೆಳಕಿನ ಲಿಂಗಗಳಾದವು. ಮತ್ತೆ ಅಂಗಗಳಾಗಿ ಕಾಣಲೇ ಇಲ್ಲ. ಕಣ್ಣು ಅದರ ದೃಶ್ಯ ಸುಖವನು ಲಿಂಗಸಹಿತವಾಗಿ ಭುಂಜಿಸಿತು.

ಕೇಳುವ ಕಿವಿಯಲ್ಲಿ ಶಬ್ದ ಜ್ಞಾನವಿದ್ದರೂ ಮನ ಕಿವಿಯ ಪೊರೆಗೆ ಅಜ್ಞಾನವಾಗಿ ಆವರಿಸಿರುವುದರಿಂದ ಶಬ್ದ ಸುಖ ದುಃಖದಿಂದ ಸ್ವೀಕರಿಸುತ್ತದೆ. ಶಬ್ದವನ್ನು ನಿಶಬ್ದಗೊಳಿಸಿ ಅರಿವಿನಿಂದ ಕೇಳುವ ಜ್ಞಾನ ಲಿಂಗಕ್ಕೆ ಮಾತ್ರವಿದೆ. ಮನ ಕಿವಿಯಲ್ಲಿ ಭರಿತವಾದ ಲಿಂಗದಲ್ಲಿ ಲೀನವಾಗದ ನಿಮಿತ್ತ ತನ್ನ ಮೂಗಿನ ನೇರಕ್ಕೆ ಶಬ್ದವನ್ನು ಅರ್ಥೈಸುತ್ತದೆ. ಇಂತಹ ಅಜ್ಞಾನಿ ಮನ ಲಿಂಗದಲ್ಲಿ ಲೀನವಾದ ಬಳಿಕ ಕಿವಿಗೆ ಬಡಿದ ಶಬ್ದ ಲಿಂಗ ಸ್ವೀಕರಿಸುತ್ತದೆ. ನಿಃಶಬ್ದ ಬ್ರಹ್ಮವಾಗುತ್ತದೆ. ಲಿಂಗಸಹಿತವಾಗಿ ನಿಃಶಬ್ದ ಬ್ರಹ್ಮ ಸೇವಿಸಿದ ಕಿವಿ ಶಬ್ದದ ನಿಜ ಸುಖವನು ಹೊಂದುತ್ತದೆ.

ಗಂಧದಲ್ಲಿ ದುರ್ಗಂಧ ಸುಗಂಧವೆಂದಿಲ್ಲ. ಮೂಗನ್ನು ಆವರಿಸಿದ ಮನ ಮೂಗಿನಲ್ಲಿಯೇ ಸಂಗಮವಾದ ಮಹಾಜ್ಞಾನವೆಂಬ ಲಿಂಗವನು ಅರಿಯದ ನಿಮಿತ್ತ ಮೂಸಿಸಿ ಸುಖ ದುಃಖಗಳಿಗೆ ಈಡಾಗುತ್ತದೆ. ಮನ ಮೂಗಿನಲ್ಲಿ ಸಂಗಮ ವಾದ ಲಿಂಗವರಿತು ಲಿಂಗದಲ್ಲಿ ಲೀನವಾದ ಬಳಿಕ ಗಂಧದಲ್ಲಿದ್ದ ಅರಿವಿನ ಪರಿಮಳ ವನ್ನು ಮಾತ್ರ ಆಸ್ವಾದಿಸುತ್ತದೆ. ಮನ ಲಿಂಗ ಸಹಿತ ಪರಿಮಳ ಭುಂಜಿಸಿ ಸುಖಿಸುತ್ತದೆ.

ಚರ್ಮದಲ್ಲಿ ಸುಖದ ಸ್ಪರ್ಶ ದುಃಖದ ಸ್ಪರ್ಶವೆಂದಿಲ್ಲ. ಚರ್ಮದಲ್ಲಿ ಮನ ಆವರಿಸಿ ರುವುದರಿಂದ ಸುಖ ದುಃಖಗಳನ್ನು ಅನುಭವಿಸಿ ಅಜ್ಞಾನವನ್ನು ಸಂಗ್ರಹಿ ಸಿಕೊಳ್ಳುತ್ತದೆ. ಚರ್ಮದಲ್ಲಿ ಅರಿವಿನ ಲಿಂಗಜ್ಞಾನ ಸಂಗಮವಾಗಿದೆ. ತನ್ನ ಚರ್ಮ ತನಗೆ ತಾಗಿದರೆ ಸುಖವಿಲ್ಲ ದುಃಖವಿಲ್ಲ. ಇದು ಚರ್ಮದ ನಿಜ ಜ್ಞಾನ ! ಚರ್ಮ ತನ್ನದಾದರೇನು ಮತ್ತೊಂದು ಅಂಗದ್ದಾದರೇನು ಚರ್ಮ ಚರ್ಮವೇ. ಚರ್ಮದಲ್ಲಿ ಬಂಧಿಯಾದ ಪದಾರ್ಥಗಳಿಗೆ ಕೂಡಾ ಲಿಂಗಭೇದವಿಲ್ಲ. ಆದರೂ ಮನ ಭೇದ ಮಾಡುತ್ತದೆ. ಅಜ್ಞಾನಿ ಮನ ಅರಿವಿನ ಲಿಂಗದಲ್ಲಿ ಬೆರೆತ ಬಳಿಕ ನಿಜಜ್ಞಾನಿ ಯಾಗು ತ್ತದೆ. ತನ್ನ ಚರ್ಮಕ್ಕೂ ಅನ್ಯ ಅಂಗದ ಚರ್ಮಕ್ಕೂ ಸ್ಪರ್ಶ ಭೇದ ಅಳಿಯು ತ್ತದೆ. ಭಾವ ದುರ್ಭಾವಗಳು ಕೂಡಾ ಅಳಿದು ಪ್ರತಿ ಅಂಗವನ್ನು ಲಿಂಗದಂತೆ ನಿರ್ಭಾವದಿಂದ ಸ್ಪರ್ಶಿಸಿ ಅರಿವಿನ ಸುಖ ಅನುಭವಿಸುತ್ತದೆ.

ನಾಲಗೆಯಲ್ಲಿ ಪ್ರಸಾದದ ಜ್ಞಾನ ತತ್ವ ಮಾತ್ರ ಅಡಗಿದೆ. ಮನ ಆವರಿಸಿ ರುವುದರಿಂದ ರುಚಿಯ ಸುಖದುಃಖಗಳಿಂದ ವಂಚನೆಗೆ ಒಳಗಾಗಿದೆ. ಜಲಕ್ಕೆ ರುಚಿಯಿಲ್ಲ ಬಣ್ಣವಿಲ್ಲ ವಾಸನೆಯಿಲ್ಲ ತನ್ನ ಮಟ್ಟ ತಾನು ಕಾಪಾಡಿಕೊಳ್ಳುತ್ತದೆ. ಜಲ ತತ್ವ ಹೊಂದಿದ ತನು ಅದರ ನಾಲಗೆ ಕಣ್ಣು ಮೂಗು ಚರ್ಮ ಮನದಿಂದಾಗಿ ಸರ್ವದೋಷಗಳ ಅಜ್ಞಾನದ ಸುಖ ದುಃಖಗಳನ್ನು ಎಳೆದುಕೊಂಡಿದೆ. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುದೇವನಿಗೆ ಆತನ ಆಜ್ಞೆ ಪಾಲಿಸುವ ಜಂಗಮನಿಗೆ , ಅಂಗದಲ್ಲಿ ಭರಿತವಾದ ಲಿಂಗಯ್ಯನಿಗೆ ಸುಖವಿಲ್ಲ ದುಃಖವಿಲ್ಲ.

ಏಕೆಂದರೆ ಲಿಂಗ ಬಯಲ ಸ್ವರೂಪಿ! ಅಂಗ ಜಲಸ್ವರೂಪಿ! ಜೀವಜಲ ಬಿಂದು ಸ್ವರೂಪಿ, ಅಂಗಕ್ಕೆ ಮನ ಆವರಿಸಿರುವುದರಿಂದ ರುಚಿ ಬಣ್ಣ ವಾಸನೆ ಅಸಮತೆಯ ಅಜ್ಞಾನ ಅಮರಿ ಕೊಂಡಿದೆ. ಅಂಗದಲ್ಲಿ ಅರಿವು ಲಿಂಗ ಸ್ವರೂಪದಲ್ಲಿ ಸಂಗಮವಾಗಿರುವುದರಿಂದ ಲಿಂಗದಿಂದಲೇ ಜಲರೂಪೀ ಅಂಗವನ್ನು ಅರಿಯುವುದರಿಂದ ವಾಸನೆ ಸುಳ್ಳು, ರುಚಿ ಸುಳ್ಳು , ಬಣ್ಣ ಸುಳ್ಳು ಎಂದು ಗೋಚರಿಸಿ ಸಮ ಸ್ವರೂ ಪವೇ ಬೆಳಗುವುದು.

ಅಂಗದಲ್ಲಿ ಭರಿತವಾದ ಜಲವು ಜಲವಲ್ಲ. ಏಕೆಂದರೆ ಆಮ್ಲಜನಕ ಜಲ ಜನಕಗಳು ಬೆರೆತ ಮೇಲೆ ಜಲವಾಗಿದೆ. ಜಲಜನಕವೂ ಜಲವಲ್ಲ. ಆಮ್ಲಜನಕವೂ ಜಲವಲ್ಲ. ಜಲಜನಕ ಆಮ್ಲಜನಕಗಳೆರಡನ್ನೂ ಬಂಧಿಸಿ ಜಲವನ್ನಾಗಿಸಿದ ಬಯಲು ಜಲವಲ್ಲ. ಎಲ್ಲ ಸಮಸ್ವರೂಪೀ ಅರಿವಿನ ಲಿಂಗಗಳೇ ಆಗಿವೆ.

ಇದನರಿತ ಮೇಲೆ ಮನ ಅರಿವಿನ ಲಿಂಗಾಂಗದಲ್ಲಿ ಬೆರೆತು ಲಿಂಗವೇ ಆಗಿದೆ. ಘನಲಿಂಗವೇ ಆಗಿದೆ. ಮತ್ತೆ ಲಿಂಗ ವಿರಹಿತನಾಗಿ ಮನಕ್ಕೆ ಉಗುಳ ನುಂಗಲೂ ಆಗದು. ಇಂತೆಂದುದು ಕೂಡಲಸಂಗನ ವಚನ. ಅಂಗದಲ್ಲಿ ಸಂಗಮವಾದ ಅರಿವಿನ ಸಂಗಯ್ಯನ ಘನ ವಚನ !

797

ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು
ಮುಟ್ಟುವ ತೆರನನರಿಯದನ್ನಕ್ಕ ?
ಕಟ್ಟಿದಡೇನು ಬಿಟ್ಟಡೇನು
ಮನವು ಲಿಂಗದಲ್ಲಿ ಮುಟ್ಟದನ್ನಕ್ಕ ?
ಮಾತಿನಲೆ ಒಲಿಸಿ ಮಹತ್ತಪ್ಪ ಲಿಂಗವ ಕಂಡೆಹೆನೆಂಬ
ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ.

ವೇದ, ಆಗಮ, ಉಪನಿಷತ್ತುಗಳು; ಭಗವದ್ಗೀತೆ, ಬೈಬಲ್‌ಗಳು; ರಾಮಾಯಣ ಮಹಾಭಾರತ ಮುಂತಾದ ತತ್ತ್ವಗಳನ್ನು ಹೇಳುವ ಸಾವಿರಾರು ಗ್ರಂಥಗಳಿಗೆ ಜನ್ಮ ಕೊಟ್ಟ ಅಂಗ ಮಾತ್ರ ಹೃದಯವೇ ಆಗಿದೆ. ಕೋಟಿಗಟ್ಟಲೇ ಗ್ರಂಥಗಳು ಅಂಗದಲ್ಲಿ ಅಡಗಿವೆ. ಅಂಗಕ್ಕೆ ಅನುಕೂಲವಾಗಲೆಂದು ಗೀತೆಗಳು ಅಂಗದಿಂದಲೇ ಹುಟ್ಟಿದವು. ಅಂಗದಿಂದ ಹುಟ್ಟಿದ ಗೀತೆಗಳು ಅಂಗಕ್ಕೆ ಅನುಕೂಲವಾಗದಿದ್ದರೆ ಫಲವೇನು ? ಗೀತೆಗಳನ್ನು ಹಾಡಿ ಹೊಗಳಲು ಅಂಗ ಬಳಕೆ ಯಾದರೆ ಗೀತೆಗಳಿಗೆ ಅರ್ಥಕಟ್ಟಿ ಉಪನ್ಯಾಸ ನೀಡುವುದಕ್ಕಾಗಿ ಕೇಳಿ ಸಂತೋಷಪಡುವುದಕ್ಕಾಗಿ ಬಳಕೆಯಾದರೆ ಫಲವೇನು? ಮುಟ್ಟುವ ತೆರನನರಿಯದೆ ಕಟ್ಟಿದಡೇನು ಬಿಟ್ಟಡೇನು? ಮನವು ಲಿಂಗದಲ್ಲಿ ಮುಟ್ಟದನ್ನಕ್ಕ? ಬರಹದಲಿ ಮಾತಿನಲಿ ಮಹತ್ತಪ್ಪ ಲಿಂಗವ ಕಂಡೆಹೆನೆಂಬ ಪಾತಕರ ಮೆಚ್ಚ ಕೂಡಲಸಂಗಮದೇವಾ

ಬರೆಯುವ, ಬರೆದುದನು ನುಡಿದು ಹೇಳುವ, ನುಡಿದುದನು ಕೇಳುವ ಅಂಗಗಳೆಲ್ಲ ಲಿಂಗಗಳೇ ಆಗಿರುವಾಗ ಬರೆಯುವ ಅಂಗ ದೊಡ್ಡದೆ ? ಬರೆದ ಬರಹವು ದೊಡ್ಡದೆ ? ಬರೆದು ದನು ನುಡಿಯುವ ಅಂಗ ದೊಡ್ಡದೆ ನುಡಿದುದನು ಕೇಳುವ ಅಂಗ ಚಿಕ್ಕದೆ? ಸರ್ವಾಂಗಗಳಲ್ಲಿ ಅರಿವಿನ ಲಿಂಗವೇ ಸಂಗಮವಾಗಿರುವುದರಿಂದ ಬರೆಯಲು ಹೊಳೆ ಯಿತು. ಬರೆದುದನು ಓದಲು ಹೊಳೆಯಿತು. ಓದಿದನು ನುಡಿಯಲು ಹೊಳೆಯಿತು. ನುಡಿದುದನು ಕೇಳಲು ಹೊಳೆಯಿತು.

ಓದುವಲ್ಲಿ ಬರೆಯುವಲ್ಲಿ ನುಡಿಯುವಲ್ಲಿ ಕೇಳುವಲ್ಲಿ ಸಂತೋ ಷವಾಗಿ ನುಡಿದಂತೆ ನಡೆಯಲು ಬಾರದ ಪಾತಕತನವನು ಮೆಚ್ಚ, ಅಂಗದಲ್ಲಿ ಸಂಗಮವಾದ ಸಂಗಯ್ಯನು !

798

ಶ್ವಾನ ಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ
ಜ್ಞಾನತ್ರಯಂಗಳೇನಾದುವು ?
ಕೂಡಲಸಂಗಮದೇವಾ,
ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ !

ಭೂತ, ಭವಿಷ್ಯತ್, ವರ್ತಮಾನ ಇವುಗಳನ್ನು ಜ್ಞಾನತ್ರಯಗಳೆಂದು ಕರೆಯುವರು. ನಾಯಿ ಆನೆ ಕೋಳಿಗಳು ಈ ಜ್ಞಾನವನ್ನು ಹೊಂದಿವೆ. ಅವುಗಳನ್ನು ಜ್ಞಾನಿಗಳೆಂದು ಕರೆಯಲು ಸಾಧ್ಯವೆ?

ಮನುಷ್ಯನಾದವನು ಸ್ವಪ್ರಯತ್ನದಿಂದ ಈ ಮೂರೂ ಜ್ಞಾನವನು ಅರಿತರೆ ಅವನನ್ನು ಜ್ಞಾನಿಯೆನ್ನಲು ಸಾಧ್ಯವೆ ? ನಾಯಿ ಆನೆ ಕೋಳಿಗಿಂತ ಕರಕಷ್ಟ ಅವನ ಬದುಕು.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ಅಂಗವನ್ನು ಆವರಿಸಿದ ಮನ ತಿಳಿದು ಮಹಾಜ್ಞಾನಿಯಾಗಬೇಕು. ಭೂತ ಭವಿಷ್ಯತ್ ವರ್ತಮಾನ ಜ್ಞಾನವನು ತಿಳಿದು ಪಂಡಿತನಾದರೆ ಅದು ವ್ಯವಹಾರಿಯಾಗುತ್ತದೆ. ಅಂಗಕ್ಕೆ ಸಾವು ನೋವುಗಳ ಸಮಾಚಾರ ತಿಳಿಸಿ ಜ್ಯೋತಿಷಿಯಾಗುತ್ತದೆ. ಬರೆದುದನು ಬೊಗಳುವ ಶಾಸ್ತ್ರಿಯಾಗಿ, ಭವಿಷ್ಯವನು ಹೇಳುವ ಪಂಡಿತನಾಗಿ, ವರ್ತಮಾನವನು ಲೆಕ್ಕ ಹಾಕಿ ತಿಳಿಸುವ ಜ್ಯೋತಿಷಿಯಾಗಿ ಸಾಯುತ್ತದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನಾದ ನಿಮ್ಮನ್ನು, ಅಂಗವನ್ನು ಆವರಿಸಿದ ಮನ ಭಕ್ತನಾಗಿ ತಿಳಿಯಬೇಕಿದೆ. ಎಲ್ಲವನ್ನೂ ತಿಳಿದು, ನಿಮ್ಮನ್ನು ಅರಿಯದ ಜ್ಞಾನವೆಲ್ಲಾ ಅಜ್ಞಾನ ! ಭೂತ ಭವಿಷ್ಯ ವರ್ತಮಾನದ ಜ್ಞಾನವನ್ನು ತಿಳಿಯಬಹುದು. ಅದು ಹೊರಗಿನದು, ತನ್ನನ್ನು ತಾನು ಅರಿಯುವುದು ಬಲು ಜಟಿಲ. ಇದು ಒಳಗಿನದು. ಜ್ಞಾನತ್ರಯಂಗಳಿಗೆ ಮೀರಿದುದು. ಅರವತ್ನಾಲ್ಕು ವಿದ್ಯೆಗಳಿಗೂ ಮಿಗಿಲಾದುದು ಲಿಂಗಾಂಗ ಸಾಮರಸ್ಯ ವಿದ್ಯೆ ! ಇದು ಬ್ರಹ್ಮ ವಿದ್ಯೆ. ಉಳಿದುದೆಲ್ಲ ಭ್ರಮಾ ವಿದ್ಯೆ.

799

ಗುರು ತೋರಿದ ಲಿಂಗವು ಮನಸ್ಥಲವಾಗಿರಲು,
ಪವನ ಭೇದದಿಂದ ಅರಿದಿಹೆನೆಂದಡೆ , ಅದೆ ದ್ರೋಹ !
ಇಡಾ ಪಿಂಗಳಾ ಸುಷುಮ್ನಾಳವಿಡಿದು ಅರಿದಿಹೆನೆಂದಡೆ
ಕೂಡಲಸಂಗಮದೇವ ಮೂಗಕೊಯ್ಯದೆ ಮಾಣ್ಬನೆ ?

ಲಿಂಗ ಅಂಗದಲ್ಲಿ ಸಮರಸವಾಗಿ ಬೆರೆತಿದ್ದರೂ ಮನ ಅಂಗವನ್ನು ಮರ್ಕಟದಂತೆ ಕಾಡು ಮೇಡು ಅಲಿಸುತ್ತದೆ. ಗುಡ್ಡ ಬೆಟ್ಟ ಹಿಮಾಲಯಗಳಿಗೆ ಸಂಚರಿಸಿ ಪವನ ಭೇದದಿಂದ ಅರಿಯಬೇಕೆಂದು ಪ್ರಯಾಸಪಡುತ್ತದೆ. ಮೂಗು ಮುಚ್ಚಿ ಗಾಳಿ ಬಂಧಿಸಿ ಕುಂಭಕ ರೇಚಕಗಳ ಮೂಲಕ ಅಂಗವನ್ನು ಮನವೆಂಬ ಮಂಗ ವ್ಯರ್ಥ ದಣಿಸುತ್ತದೆ. ಸಾಯುವವರೆಗೆ ಯೋಗದಿಂದ ಸಾಧಿಸಲು ಹೆಣಗುತ್ತದೆ. ಸಾಧಿಸಿದೆನೆಂದು ಪ್ರಾಣಾಯಾಮಗಳ ಪಾಠಶಾಲೆ ತೆರೆದು ಅಂಗ ಮಣಿಸುವ ಮರ್ಕಟ ವಿದ್ಯೆಯನ್ನು ಸರ್ವ ಅಂಗಗಳಿಗೂ ಕಲಿಸುವ ಗುರುತನದ ಜವಾಬ್ದಾರಿಯನ್ನು ಹೊತ್ತು ವ್ಯವಹಾರಕ್ಕೆ ಇಳಿಯುತ್ತದೆ. ಬಾಬಾ ಗುರು ಶಂಕರ ಎಂದು ಹೆಸರಿಟ್ಟುಕೊಂಡು ಮೋಸ ಮಾಡುತ್ತದೆ.

ಅಂಗಗಳೆಲ್ಲ ಲಿಂಗಾಂಗಗಳೆ ಆಗಿರುವುದರಿಂದ ಅಂಗಕ್ಕೆ ಮೋಸ ಮಾಡುವ ಗುರು ಹೆಸರಿನ ಅಂಗಗಳೆಲ್ಲ ಮೋಸ ಹೋಗುವ ಅಂಗಗಳು. ತನಗೆ ತಾನೆ ಮೋಸ ಮಾಡಿಕೊಳ್ಳುವ ಅಂಗಗಳು.

ಲಿಂಗಾಂಗದಲ್ಲಿರುವ ಲಿಂಗ ಜ್ಞಾನವನ್ನು ಲಿಂಗಬಲ್ಲ ಅಂಗವೇ ತೋರಬೇಕು. ತೋರಿದ ಅಂಗ ಗುರುವಲ್ಲ ; ಕಂಡುಕೊಂಡ ಅಂಗ ಶಿಷ್ಯನಲ್ಲ. ಎಲ್ಲ ಅಂಗಗಳು ಲಿಂಗ ಕಾಣುವ ಉದ್ದೇಶಕ್ಕಾಗಿ ಜನ್ಮ ತಳೆದಿವೆ. ಅರಿವೆಂಬ ಗುರುದೇವನನ್ನು ಕಂಡ ಅಂಗ ಮಾತ್ರ ಅಂಗದಲ್ಲಿರುವ

ಲಿಂಗವನ್ನು ತೋರುವ ಅಧಿಕೃತ ಅಧಿಕಾರ ಪಡೆದಿದೆ. ಈ ಅಧಿಕಾರ ಪೀಠದಲ್ಲಿ ಕುಳಿತು ಮೆರೆಯುವುದಕ್ಕಾಗಿ ಅಲ್ಲ . ಪಲ್ಲಕ್ಕಿಯಲ್ಲಿ ಕುಳಿತು ಮೆರೆಯುವುದಕ್ಕಾಗಿ ಅಲ್ಲ. ಮಠ ಮಂದಿರ ಆಶ್ರಮ ಕಟ್ಟುವುದಕ್ಕಾಗಿ ಅಲ್ಲ. ಅಂಗವನ್ನೇ ಬ್ರಹ್ಮಪೀಠ ಮಾಡಿಕೊಂಡ ಅಂಗಕ್ಕೆ ಭ್ರಮೆ ಪೀಠದ ಅವಶ್ಯಕತೆಯಿಲ್ಲ.

ಗುರುದೇವನು ಕರುಣಾಮಯಿ. ಅಂಗವನ್ನು ಹತ್ತಿರ ಕರೆದು , ಅಂಗವನ್ನು ಆವರಿಸಿದ ಮನವೆಂಬ ಮರ್ಕಟವನ್ನು ಹಿಡಿದು, ಅದರ ನೆತ್ತಿಯ ಸವರಿ, ನೇವರಿಸಿ, ಮುದ್ದಾಡಿ, ತನ್ನಂತೆ ಮಾಡಿಕೊಳ್ಳುತ್ತಾನೆ. ಮನ ವಾಸ ಮಾಡಿದ ಅಂಗದಲ್ಲಿಯೇ ಅರಿವೆಂಬ ಗುರುದೇವನನ್ನು ತೋರಿ ಆತನನ್ನು ಸೆರಗೊಡ್ಡಿ ಬೇಡಲು ಮನಕ್ಕೆ ಕೆಲಸ ಹಚ್ಚುತ್ತಾನೆ. ಆ ಅಂಗದಲ್ಲಿಯೇ ಅರಿವೆಂಬ ಲಿಂಗವನ್ನು ತೋರಿ ಪೂಜಿಸಲು ಹಚ್ಚುತ್ತಾನೆ. ಗುರುದೇವನ ಮಾತು ಪಾಲಿಸುವ ಜಂಗಮನನ್ನು ಅಂಗದಲ್ಲಿಯೇ ತೋರಿ ಆತನ ಸಂಗ ಮಾಡಲು ಮನಕ್ಕೆ ಉಪದೇಶ ಕೊಡುತ್ತಾನೆ. ಗುರುಲಿಂಗ ಜಂಗಮರಿಗೆ ಪ್ರಸಾದ ಅರ್ಪಣೆ ಮಾಡಿ ಸೇವನೆ ಮಾಡುವ ನಿಯಮವನ್ನು ಹಂತ ಹಂತವಾಗಿ ತೋರಿ ಹಿಂದೆ ಸರಿಯುತ್ತಾನೆ.

ಗುರುವಿನ ಗುರುತನ ಕೆಡಿಸಿಕೊಂಡು, ಶಿಷ್ಯನ ಶಿಷ್ಯತ್ವ ಕೆಡಿಸಿ ಅಂಗ ವನ್ನೇ ಅರಿವಿನ ಲಿಂಗವಾಗಿಸಿ ಮುಂದೆ ಸಾಗುತ್ತಾನೆ. ಗುರು ತೋರಿದ ಲಿಂಗವು ಮನಸ್ಥಲಕ್ಕೆ ಸಂಬಂಧಪಟ್ಟಿರಲು ಪವನ ಭೇದದಿಂದ ಅರಿಯಲು ಸಾಧ್ಯವೇ ? ಅದು ಗುರುವಿಗೆ ದ್ರೋಹ ! ಲಿಂಗಭರಿತ ಅಂಗಕ್ಕೆ ಪ್ರಾಣಾ ಯಾಮ ಹೇಳಿಕೊಟ್ಟು ಅದರಿಂದಲೇ ಜ್ಞಾನ ಲಭಿಸುತ್ತದೆ ಎಂದು ಹೇಳಿದ ಅಂಗಕ್ಕೆ ದ್ರೋಹ !

ಗಾಳಿ ಹಿಡಿದು ಅಂಗ ಮಣಿಸಿ ಅರಿವು ಅರಿದಿಹೆನೆಂದಡೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಮೂಗ ಕೊಯ್ಯದೆ ಬಿಡುವುದಿಲ್ಲ.

800

ಕಬ್ಬುನ ಪರುಷವೇದಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ ?
ಮನೆಯೊಳಗಣ ಕತ್ತಲೆ ಹರಿಯದಡಾ ಜ್ಯೋತಿಯದೇಕೊ ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದಡಾ ಪೂಜೆಯದೇಕೊ ?

ಒಡಲೊಳಗೆ ಬೆಳಕೂ ಇದೆ. ಕತ್ತಲೂ ಇದೆ. ಬೆಳಕು ಕತ್ತಲನ್ನು ಬೆಳಗತ್ತಿಲ್ಲ. ಕತ್ತಲು ಬೆಳಕಿನತ್ತ ನಡೆದು ಬೆಳಕಾಗುತ್ತಿಲ್ಲ. ಬೆಳಕಿದ್ದಲ್ಲಿ ಕತ್ತಲಿರುವುದಿಲ್ಲ; ಕತ್ತಲಿದ್ದಲ್ಲಿ ಬೆಳಕು ಇರುವುದಿಲ್ಲ. ಆದರೆ ಅಂಗದ ದುರ್ದೈವ. ಬೆಳಕು ಕತ್ತಲುಗಳೆರಡೂ ಅಂಗದಲ್ಲಿಯೇ ಇವೆ.

ಬೆಳಕೂ ಇದೆ ಕತ್ತಲೂ ಇದೆ ಇದೇನು ಚೋದ್ಯವೊ ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ ಎಂದು ಪ್ರಭುಗಳು ಹೇಳಿದ್ದಾರೆ. ಕತ್ತಲು ಬೆಳಕಿನತ್ತ ಹೋಗಿ ಬೆಳಕಾಗಲು ಬೆಳಕಿನ ಶಾಸ್ತ್ರ ಓದಬೇಕೆ ? ಬೆಳಕಿನ ಮಾತುಗಳನ್ನು ಆಡಿದರೆ ಕತ್ತಲು ಬೆಳಕಾಗುವುದೆ ? ಕತ್ತಲೆ ನಿಂತು ಬೆಳಕಿನ ಶಾಸ್ತ್ರ ಹೇಳಿ ಹಣ ಪಡೆಯುವುದೆಂದರೇನು ? ತಾನು ಕತ್ತಲು ಆಗಿದ್ದು ಬೆಳಕಿನ ಮಾತುಗಳನ್ನು ಆಡಿ ಬೋಧೆ ಮಾಡಿದರೆ ಕತ್ತಲು ಬೆಳಕಾಗುವುದೆ ? ಕತ್ತಲ ಮಾತು ಕೇಳಿ ಕತ್ತಲು

ಬೆಳಗುವುದೆ?

ಹೇಳುವ ವೇಷದ ಗುರು ಕತ್ತಲು. ಕೇಳುವ ಶಿಷ್ಯ ಕೂಡಾ ಕತ್ತಲು. ಇಬ್ಬರೂ ಕತ್ತಲು ಕಳೆದುಕೊಳ್ಳುವ ಕೆಲಸದಲ್ಲಿ ತೊಡಗಬೇಕೆ ವಿನಹ ವ್ಯವಹಾರಕ್ಕಲ್ಲ.

ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ ಒಡಲ ಬೆಳಗುವ ಬೆಳಕನ್ನು ಕತ್ತಲು ಎನ್ನುವ ಮನ ತಿಳಿದು ಬೆಳಕಿನೊಳಗೊಂದಾಗಿ ಬೆಳಗಿದರೆ ಸಂತೋಷವೇ ಹೊರತು, ಮನ ಒಡಲಿಡಿದು ಬೆಳಕಿನ ಮಾತಾಡಿ ಬೆಳಕೆಂದರೇನೆಂದು ಅರಿಯದಿದ್ದರೆ ಬೆಳಕಿನೊಂದಿಗಿದ್ದರೂ ಕತ್ತಲು ಬೆಳಕಾಗಲಿಲ್ಲ. ಬೆಳಗಿದ್ದರೂ ಕತ್ತಲನ್ನು ಬೆಳಗಿಸಲಿಲ್ಲ.

ಕಬ್ಬಿಣ ಹೊನ್ನ ವೇಷ ಧರಿಸಿ ಹೊನ್ನಾಗದಂತೆ; ಪರುಷ ವೇಷ ಧರಿಸಿ ಹೊನ್ನ ಮಾಡದಂತೆ. ಮನೆಯೊಳಗಣ ಕತ್ತಲ ಕಳೆಯದ ಜ್ಯೋತಿಯಂತೆ.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಬೆಳಕಿನ ಸಂಗಯ್ಯನನ್ನು ಮನ ಮುಟ್ಟಿ ಪೂಜಿಸಿ ಬೆಳಕಾಗದಿದ್ದಡೆ ಮನದ ಆ ಪೂಜೆಯದೇಕೊ ?

801

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೊ ?
ಅಹಂಕಾರಕ್ಕೆ ಎಡೆಗೊಡದೆ ಲಿಂಗ ತನುವಾಗಿರಬೇಕು.
ಅಹಂಕಾರ ರಹಿತವಾದಲ್ಲಿ ಸನ್ನಹಿತ ಕಾಣಾ,
ಕೂಡಲಸಂಗಮದೇವಾ.

ಮನ ಅರಿವನು ಅರಿಯದಿದ್ದಕ್ಕಾಗಿ; ಅರಿವೇ ತಾನೆಂದು ವರ್ತಿಸುತ್ತಿರುವುದಕ್ಕಾಗಿ ತನುವನು ಹಿಡಿದು ಅಹಂಕಾರಿಯಾಗಿದೆ. ಅರಿವೆಂಬ ಲಿಂಗ ನುಡಿಗಳನ್ನು ಎರವಲು ಪಡೆದು ಪಂಡಿತ, ಶಾಸ್ತ್ರಿ, ಸ್ವಾಮಿ, ಪೀಠಾಧಿಪತಿ, ಪದವೀಧರನಾಗಿ ಅಹಂಕಾರಿಯಾಗಿದೆ. ಲಿಂಗ ನುಡಿ ಅಂಗದಲ್ಲಿ ಬಳಸದೆ ಭದ್ರವಾಗಿದೆ. ಅಂಗ ಲಿಂಗದ ಸ್ವತ್ತಾದರೂ ಮನದ ಅಹಂಕಾರ ಅಂಗದಲ್ಲಿ ಮನೆ ಮಾಡಿರುವುದರಿಂದ ಲಿಂಗಕ್ಕೂ ಮನಕ್ಕೂ ಸಮೀಪವಿದ್ದರೂ ಅಹಂಕಾರಿ ಮನ ಲಿಂಗದಿಂದ ಬಹುದೂರ ಉಳಿದಿದೆ.

ಅಂಗದಲ್ಲಿ ಸಂಗಮವಾದ ಲಿಂಗವೆಂಬ ಅರಿವನು ಮನ ಅರಿತರೆ ಮನವನು ಇಂಬುಗೊಂಡ ಅಹಂಕಾರ ಬಲುದೂರ ಸರಿಯುವುದು. ಅಂಗವು ಲಿಂಗಾಂಗವಾಗುವುದು. ಅಹಂಕಾರ ದೂರ ಸರಿದಂತೆಲ್ಲ ಮನ ಲಿಂಗವೆಂಬ ಅರಿವಿನ ಹತ್ತಿರ ಸರಿದು ಘನಮನವಾಗುವುದು. ಅಂಗವನ್ನು ಆವರಿಸಿದ ಮನವೇ ಲಿಂಗಾಂಗದಲ್ಲಿ ಸಂಗಮವಾಗಿ ಕೂಡಲ ಸಂಗಮವಾಗುವುದು.

802

ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೆಕು.
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.

ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲ ಸಂಗಮದೇವನೆಂತೊಲಿವನಯ್ಯಾ ?

ಜಲವೆಲ್ಲ ಮುತ್ತಾಗುವುದಿಲ್ಲ. ಮುತ್ತಾದ ಜಲ ಮತ್ತೆ ಜಲವಾಗು ವುದಿಲ್ಲ. ಮುತ್ತು ನುಡಿಯುವುದಿಲ್ಲ. ಮುತ್ತಿನ ಹಾರವೂ ನುಡಿಯು ವುದಿಲ್ಲ. ಮುತ್ತು ಬೆಳಗುವ ಮೂಲಕ ನುಡಿಯುತ್ತದೆ. ಜಲಬಿಂದುವಿಗೆ ಮುತ್ತಾಗುವ ಶಕ್ತಿ ಇದೆ. ಬೆಳಗುವ ಮೂಲಕ ನುಡಿಯುವ ಶಕ್ತಿಯೂ ಇದೆ. ನುಡಿಯುವ ದೇಹವನ್ನು ಅಲಂಕರಿಸಿ, ದೇಹದೊಂದಿಗೆ ಮುತ್ತಿನ ಹಾರ ಬೆಳಗುತ್ತದೆ.

ಮುತ್ತಿನ ಹಾರ ಅಲಂಕರಿಸಿಕೊಂಡ ದೇಹವೂ ಜಲವೇ. ದೇಹದಲ್ಲಿ ಅಲಂಕೃತವಾದ ಮುತ್ತಿನ ಹಾರ ಕೂಡಾ ಜಲವೇ. ಜಲಬಿಂದುವೇ ದೇಹವಾಗಿ ಮುತ್ತಿನಂತೆ ಮಾತಾಡುತ್ತದೆ. ಮತ್ತೆ ಜಲವಾಗುವುದಿಲ್ಲ. ಮುತ್ತು ಹಾರದ ರೂಪದಲ್ಲಿ ದೇಹವನ್ನು ಅಲಂಕರಿಸಿ ಬೆಳಗುವ ಮೂಲಕ ನುಡಿಯುತ್ತದೆ. ಮತ್ತೆ ಜಲವಾಗುವುದಿಲ್ಲ.

ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು:

ಜಲ ಗಟ್ಟಿಗೊಂಡು ಮಾಣಿಕ್ಯವಾಗಿ ದೀಪ್ತಿಯಂತೆ ಬೆಳಗುತ್ತದೆ. ಹೊಳೆ ಯುತ್ತದೆ. ಮಾಣಿಕ್ಯವು ನವರತ್ನಗಳಲ್ಲಿ ಒಂದು. ನುಡಿಯುವುದಿಲ್ಲ. ಹಾಗೆಯೇ ಸ್ಫಟಿಕ ಕೂಡಾ ಜಲಬಿಂದುವಿನಿಂದಲೆ ಗಟ್ಟಿಗೊಂಡು ಹೊಳೆಯುತ್ತದೆ ಮತ್ತೆ ಜಲವಾಗದೆ ಬೆಳಗುತ್ತದೆ.

ಮುತ್ತು ಮಾಣಿಕ್ಯ ಸ್ಫಟಿಕ ನುಡಿಯದಿದ್ದರೂ ಅಣ್ಣನವರು ನುಡಿ ಯುವ ಉಪಮೆಗಾಗಿ ಇವುಗಳನ್ನು ಬಳಸಿದ್ದಾರೆ.

ಜಲಬಿಂದುವಿಗೆ ಬೆಳಗುವ ಶಕ್ತಿಯಿದೆ. ಜಲಬಿಂದುವೇ ದೇಹವಾಗಿ ಮುತ್ತು ಮಾಣಿಕ್ಯ ಸ್ಫಟಿಕದಂತೆ ಬೆಳಗುವ ನುಡಿಗಳನ್ನು ಪೋಣಿಸಿ ನುಡಿಯುವ ಶಕ್ತಿಯಿದೆ.

ಉದಕದೊಳಗೆ ಬಯಚಿಟ್ಟ ಬಯಕೆಯ ಅರಿವಿನ ಕಿಚ್ಚು ಮುತ್ತು ಮಾಣಿಕ್ಯ ಸ್ಫಟಿಕದಂತೆ ಬೆಳಗುತ್ತದೆ. ನುಡಿಯುತ್ತದೆ. ಮೊಗ್ಗಿನೊಳಗೆ ಪರಿಮಳ ಬಂಧಿಯಾಗಿ ಹೂವಾಗಿ ಅರಳುತ್ತದೆ. ಸಸಿಯೊಳಗೆ ಬಂಧಿಯಾಗಿ ರುಚಿಯಾಗಿ ಸಿಹಿ ಉಣಿಸಿ ತಣಿಯುತ್ತದೆ.

ಕನ್ಯೆಯೊಳಗೆ ಸ್ನೇಹದ ರೂಪದಲ್ಲಿ ಬಂಧಿಯಾಗಿ ಅರಿವಿನ ನಲ್ಲನೊಂದಿಗೆ ಬೆರೆಯುತ್ತದೆ; ಜಲಬಿಂದುವಿಗೆ ಅದೆಷ್ಟು ಶಕ್ತಿ!

ನುಡಿದಡೆ ಲಿಂಗಮೆಚ್ಚಿ ಅಹುದುಹುದೆನಬೇಕು:

ಜಲಬಿಂದುವೇ ಮುತ್ತಾಗಿ ಬೆಳಗಿದೆ. ಜಲಬಿಂದುವೆ ಮಾಣಿಕ್ಯವಾಗಿ ಬೆಳಗಿದೆ. ಜಲಬಿಂದುವೇ ಸ್ಫಟಿಕವಾಗಿ ಬೆಳಗಿದೆ. ಜಲಬಿಂದುವೇ ಅಂಗ ವಾಗಿದೆ. ಅಂಗದಲ್ಲಿ ಅರಿವಿನ ಲಿಂಗವಾಗಿದೆ. ಅರಿವನ್ನು ತಿಳಿಯುವ ಮನವಾಗಿದೆ. ಅರಿವನ್ನು ಪಾಲಿಸುವ ಜಂಗಮನಾಗಿದೆ, ಅರಿವಿನಿಂದ ನುಡಿದು ಹೇಳುವ ಗುರುವಾಗಿ ಜಲಬಿಂದು ಅಂಗದಲ್ಲಿಯೇ ಸಂಗಮ ವಾಗಿದೆ.

ಜಲಬಿಂದುವಿನ ಪಾತ್ರ ಒಂದೆರಡಲ್ಲ; ಅನೇಕ! ಅಂಗವನ್ನು ನುಡಿ ಯುವಂತೆ ಮಾಡುತ್ತದೆ. ನುಡಿದುದನ್ನು ಕೇಳಿ ಸುಖಿಸುವಂತೆ ದುಃಖಿ ಸುವಂತೆ ಮಾಡುತ್ತದೆ. ನುಡಿಯುತ್ತದೆ; ನುಡಿದಂತೆ ನಡೆಯದ ಪಾತ್ರವೂ ಮಾಡುತ್ತದೆ. ಮರೀಚಿಕೆಯಂತೆ! ಬಿಸಿಲ್ಗುದುರೆಯಂತೆ! ಜಲದಂತೆ ತೋರುತ್ತದೆ; ಜಲವಲ್ಲ ಆದರೂ ಜಲ!

ಜಲವನ್ನು ಸೀಳಿ ನೋಡಲು ಜಲವಲ್ಲ ! ಜಲಜನಕ ಆಮ್ಲಜನಕ ಬೆರೆತು ಜಲವಾಗಿದೆ. ಇವೆರಡೂ ಜಲವಲ್ಲ, ಇವೆರಡರ ಅಸ್ತಿತ್ವವು ಬಯ ಲಿನಲ್ಲಿ, ಬಯಲಲ್ಲಿದ್ದ ಜಲಜನಕವನ್ನು ಬಯಲಲ್ಲಿಯೇ ಇದ್ದ ಆಮ್ಲ ಜನಕವನ್ನು ಬಯಲುದೇವ ಬಂಧಿಸಿ; ತಾನು ಅದರಲ್ಲಿ ಸಂಗಮವಾಗಿ ಜೀವಜಲಬಿಂದುವಾದ. ಮುತ್ತಾಗಿ ಬೆಳಗಿದ; ಮಾಣಿಕ್ಯವಾಗಿ ಬೆಳಗಿದ; ಸ್ಫಟಿಕವಾಗಿ ಬೆಳಗಿದ. ಅಂಗವಾಗಿ ಬೆಳಗಿ, ಅರಿವಿನ ಲಿಂಗವಾಗಿ ನುಡಿದ ! ಗುರುದೇವನಾಗಿ ನುಡಿದ ನುಡಿಗಳೇ ಮುತ್ತು ಮಾಣಿಕ್ಯ ಸ್ಫಟಿಕವಾಗಿ ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳಾದವು. ಬಸವಾದಿಶರಣರ ವಚನಗಳಾದವು. ದಾಸವರೇಣ್ಯರ ಉಗಾಭೋಗಾಗಳಾದವು ಮುಂಡಿಗೆಗಳಾದವು !

ನುಡಿದದ್ದು ಅಂಗವೇ. ನುಡಿದದ್ದನ್ನು ಬರೆದದ್ದು ಕೂಡಾ ಅಂಗವೇ. ಬರೆದದ್ದನ್ನು ಓದಿ ನುಡಿದದ್ದು ಕೂಡಾ ಅಂಗವೇ. ನುಡಿದದ್ದನ್ನು ಕೇಳಿ ಆನಂದದಿಂದ ಅಹುದಹುದೆಂದದ್ದು ಕೂಡಾ ಅಂಗವೇ ಆಗಿದೆ.

ಪ್ರತಿ ನುಡಿಯಲ್ಲಿ ಅರಿವಿನ ಬೆಳಕಿದೆ. ನುಡಿದ ನುಡಿಯನ್ನು ಅರಿವಿ ನಿಂದ ತಿಳಿಯುವ ಶಕ್ತಿ ನುಡಿದ ಅಂಗಕ್ಕೂ ಇದೆ; ನುಡಿ ಕೇಳಿದ ಅಂಗಕ್ಕೂ ಇದೆ. ಆದರೆ ಅಂಗದ ಕಣಕಣದಲ್ಲಿ ಬೆಳಗುವ ಜಲಬಿಂದುವಿನ ಬೆಳಕಿ ನಿಂದ ಹುಟ್ಟಿದ ನೆರಳು ಮನವೆಂಬ ಹೆಸರು ಪಡೆದು ಅಂಗವೆಂಬ ಲಿಂಗವನ್ನು ಆವರಿಸಿದೆ. ಅಂಗದಲ್ಲಿಯೇ ಬೆಳಕು ನೆರಳಿನ ಆಟ ನಡೆದಿದೆ.

ಬೆಳಕು ನೆರಳುಗಳೆರಡೂ ಅಂಗವೆಂಬ ಲಿಂಗದಿಂದಲೇ ನುಡಿ ಯುತ್ತವೆ. ಲಿಂಗ ಬೆಳಕಾದರೆ ಈ ಬೆಳಕಿನಿಂದ ಹುಟ್ಟಿದ ನೆರಳೇ ಮನ! ನೆರಳು ಬೆಳಕಿನಂತೆ ನುಡಿಯುತ್ತದೆ. ಆದರೆ ಬೆಳಕಲ್ಲ! ನೆರಳು ನುಡಿ ಯುತ್ತದೆ; ನುಡಿದಂತೆ ನಡೆಯುವುದಿಲ್ಲ. ನೆರಳು ನುಡಿದ ನುಡಿ ಬೆಳಕು ಕೇಳುತ್ತದೆ ಆದರೆ ಮೆಚ್ಚುವುದಿಲ್ಲ.

ನೆರಳು ಬೆಳಕಿನಲ್ಲಿ ಬೆರೆತು ಬೆಳಕಾಗಬಹುದು; ಅಥವಾ ಬೆಳಕು ನೆರಳ ಮೇಲೆರಗಿ ಬೆಳಕಾಗಿಸಬಹುದು. ಇವೆರಡೂ ಕ್ರಿಯೆಗಳು ಅಂಗದಲ್ಲಿಯೇ ನಡೆಯಬೇಕು. ಆದರೆ ಸರಳವಾಗಿ ನಡೆಯುವುದಿಲ್ಲ. ಮನ, ಅರಿವಿನ ಲಿಂಗ ಬೆಳಗಿದ ಬೆಳಕಿನ ನುಡಿಗಳನ್ನು ಅಂಗದ ಮೂಲಕ ನುಡಿಯುತ್ತದೆ. ಭಗವದ್ಗೀತೆ ಬೈಬಲ್ ವೇದ ಉಪನಿಷತ್ತುಗಳನ್ನು ಉದಾಹರಿಸುತ್ತದೆ; ಆದರೆ ಅದು ಯಾವುದು ಬೆಳಕಲ್ಲ ! ಕತ್ತಲು ಬೆಳಕಿನ ಮಾತು ಆಡಿ ಹೇಗೆ ಬೆಳಗಿಸಲು ಸಾಧ್ಯವಿಲ್ಲವೊ ಹಾಗೆಯೇ ಮನದ ಕೆಲಸ. ಮನ ಅಂಗದಲ್ಲಿಯೇ ಇರುವ ಲಿಂಗದತ್ತ ಪಯಣಿಸಿ ಅರಿವಿನ ಲಿಂಗವೇ ಆಗಿ ನುಡಿದಡೆ ಅದು ಲಿಂಗದ ನುಡಿ. ನುಡಿದಡೆ ಮುತ್ತಿನ ಹಾರದಂತೆ ಬೆಳಗುತ್ತದೆ. ನುಡಿದಡೆ ಮಾಣಿಕ್ಯದ ದೀಪ್ತಿಯಂತೆ ಬೆಳಗುತ್ತದೆ. ನುಡಿದಡೆ ಸ್ಫಟಿಕದ ಸಲಾಕೆಯಂತೆ ಬೆಳಗುತ್ತದೆ. ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನುವಂತೆ ಬೆಳಗಿ ನುಡಿಯುತ್ತದೆ. ನುಡಿಯೊಳಗಾಗಿ ನಡೆಯುತ್ತದೆ. ನಡೆ ನುಡಿ ಒಂದಾಗಿ ನುಡಿಯುತ್ತದೆ.

ಅಂಗವನ್ನು ಆವರಿಸಿದ ಮನ ಗುರು ಲಿಂಗ ಜಂಗಮದಲ್ಲಿ ಸಂಗಮವಾಗಿ ಅವರೊಲಿದಂತೆ ಲಿಂಗವೇ ಆಗಿ ನುಡಿಯುತ್ತದೆ. ಜಂಗಮವಾಗಿ ನುಡಿಯುತ್ತದೆ. ಗುರುವಾಗಿ ಗುರುವಿನ ನುಡಿ ನುಡಿಯುತ್ತದೆ.

803

ಮನದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ.
ಆದಿವಿಡಿದು ಬಂದಾತನೆ ಭಕ್ತ;
ಅನಾದಿವಿಡಿದು ಬಂದಾತನೆ ಜಂಗಮ !
ಆದಿ ಗುರು: ಅನಾದಿ ಶಿಷ್ಯ !
ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ,
ಕೂಡಲಸಂಗಮದೇವಾ.

ಅಂಗ ಅರಿವಿನ ಮನೆ. ಅಂಗವನ್ನು ಮನ ಆವರಿಸಿದೆ. ಈ ಮನಕ್ಕೆ ಸರಳವಾಗಿ ನಿಲುಕದಂತೆ ಮನದ ಮೊನೆಯ ಮೇಲೆ ಅರಿವೆಂಬ ಗುರುದೇವ ಜ್ಞಾನದ ಮಹಾ ದಾಸೋಹಿಯಾಗಿ ಮನೆಯ ಮಾಡಿಕೊಂಡಿದ್ದಾನೆ.

ಅರಿವಿನ ಮನೆಯ ದಾಸನಾಗಬೇಕೆಂದು, ಮನ ಬಯಸಿ ಬಂದರೆ ಆ ಮನವೇ ಭಕ್ತನಾಗುತ್ತದೆ. ಮನದ ಈ ಬಯಕೆ ಗುರುವಿನಿಂದ ಹುಟ್ಟುತ್ತದೆ. ಹೀಗಾಗಿ ಇದು ಆದಿ !

ಅರಿವಿನ ಮನೆಯಲ್ಲಿ ಅರಿವೆಂಬ ಗುರುದೇವನು ನುಡಿದ ನುಡಿ ಪಾಲಿಸುವ ಜಂಗಮನಿದ್ದಾನೆ. ಈತ ಅನಾದಿ !

ಆದಿ ಗುರು: ಅನಾದಿ ಶಿಷ್ಯ :

ಅಂಗದಲ್ಲಿ ಅರಿವೆಂಬ ಗುರುದೇವನಿದ್ದಾನೆ. ಗುರುದೇವನು ನುಡಿದ ನುಡಿಯನ್ನು ಪಾಲಿಸುವ ಜಂಗಮನಿದ್ದಾನೆ. ಅಂಗಕ್ಕೆ ಆವರಿಸಿದ ಮನವೂ ಇದೆ. ಗುರುವೆಂದರೆ ಯಾರು? ಜಂಗಮನೆಂದರೆ ಯಾರೆಂದು ಮನಕ್ಕೆ ತಿಳಿಯದಂತೆ ಮನದ ಮೊನೆಯ ಮೇಲೆ ಮನೆ ಮಾಡಿಕೊಂಡು ಇವರಿಬ್ಬರು ದಾಸೋಹಿಗಳಾಗಿ ವಾಸವಾಗಿದ್ದಾರೆ.

ಮನ ಮರ್ಕಟದಂತೆ ಗುರುದೇವನನ್ನು ಆತನ ಮಾತು ಪಾಲಿಸುವ ಜಂಗಮನನ್ನು ಹುಡುಕಲು ಎಲ್ಲೆಂದರಲ್ಲಿ ಅಲಿಯುತ್ತದೆ. ಅತ್ತ ಇತ್ತ ಅಲೆ ಅಲೆದು ಬೇಸತ್ತು ಶ್ರೀ ಗುರುವಿನಿಂದ ಬೋಧೆ ಪಡೆದು ಭಕ್ತನಾಗುತ್ತದೆ. ಶ್ರೀ ಗುರು ಬೋಧಿಸಿದಂತೆ ಭಕ್ತನೆಂಬ ಮನ ಅಂಗದಲ್ಲಿಯೇ ಹುಡುಕುತ್ತದೆ. ಅಂಗವನ್ನು ಆವರಿಸಿದ ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡ ದಾಸೋಹಿ ಸಿಕ್ಕುತ್ತಾನೆ. ಆತನಿಗೆ ದಾಸು ಹೋಗಿ ದಾಸನಾಗುತ್ತದೆ. ಗುರುದೇವನ ಜಾಡು ಹಿಡಿದು ಬಂದು ಭಕ್ತನಾಗುತ್ತದೆ.

ಭಕ್ತನಿಗೆ ಹಾದಿ ತೋರಿದ ಶ್ರೀ ಗುರುವೇ ಆದಿ ! ಅಂಗವನ್ನು ಆವರಿಸಿದ ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿದ್ದ ದಾಸೋಹಿಯನ್ನು ಎಲ್ಲೆಡೆ ಹುಡುಕಿ ತನ್ನಂಗದಲ್ಲಿಯೇ ಸಂಗಮವಾದ ಶಿಷ್ಯನೇ ಅನಾದಿ ! ಉಭಯ ಕುಳಸ್ಥಳವನು ಅರಿತಾತನೆ ಅನಾದಿ! ಅನಾದಿಯಿಂದತ್ತತ್ತಲಿದ್ದ ಲಿಂಗ ಸಂಬಂಧಿ !

ಮನದ ಕೊನೆಯ ಮೊನೆಯ ಮೇಲೆ ಅರಿವಿನ ಮನೆಯ ಮಾಡಿಕೊಂಡಿದ್ದರೂ ಮನಕ್ಕೆ ನಿಲುಕದ ಶಿಕ್ಷಣವಿದು; ಸೂಕ್ಷ್ಮಾತಿ ಸೂಕ್ಷ್ಮವಾದ ಅರಿವಿನ ಶಿಕ್ಷಣ. ಇದಕ್ಕೆ ಅಕ್ಷರದ ಅವಶ್ಯಕತೆಯಿಲ್ಲ. ಅಕ್ಷರೋತ್ತಮನನ್ನು ಅರಿಯುವ ಉತ್ಕಟ ಬಯಕೆಯಿದ್ದರೆ ಸಾಕು ಮನಕ್ಕೆ ! ಮನದ ಕೊನೆಯ

ಮೊನೆಯ ಮೇಲೆಯೇ ಅರಿವಿನ ಮನೆ ಸಿಕ್ಕುತ್ತದೆ. ಅರಿವನ್ನು ಹಂಚುವ, ಅರಿವನ್ನು ಬಳಕೆ ಮಾಡುವ, ಅರಿವಿನ ಮಾತು ಪಾಲಿಸುವ ದಾಸೋಹಿ ಸಿಕ್ಕುತ್ತಾನೆ.

804

ಅರಿದರಿದು ಸಮಗಾಣಿಸಬಾರದು;
ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದಡೆ
ಈಶ್ವರನು ಒಡೆಯಿಕ್ಕದೆ ಮಾಣುವನೆ ?
ಪಾತ್ರ ಅಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು ?
ಜೀವ ಜೀವಾತ್ಮಾ ಸರಿಯೆಂದು ಕಂಡಡೆ
ಸಮವೇದಿಸದಿಪ್ಪನೆ ಶಿವನು ?
ತನ್ನ ಮನದ ಯತ್ರ ಜೀವಃ ತತ್ರ ಶಿವನೆಂದು
ಸರ್ವಜೀವದಯಾಪಾರಿಯಾದಡೆ ಕೂಡಲಸಂಗಮದೇವನು
ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ ?

ಒಂದು ತಟ್ಟೆಯಲ್ಲಿ ಅರಿವು ಮತ್ತೊಂದು ತಟ್ಟೆಯಲ್ಲಿ ಮನ; ತನುವನ್ನು ದಂಡಿಗೆಯ ಮಾಡಿ ಈಶ್ವರನೇ ತೂಗುತ್ತಿಹನು. ಕಾಣೆಯ ಸೋಲ, ಅರ್ಧಗಾಣೆಯ ಗೆಲ್ಲ. ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ. ಅಂಗವೆಂಬುದು ಮಹಾದೇವಸೆಟ್ಟಿಯ ಅಂಗಡಿ. ಒಮ್ಮನವಾದಡೆ ಒಡನೆ ನುಡಿವನು. ಇಮ್ಮನವಾದಡೆ ನುಡಿಯನು.

ಅಂಗವನ್ನು ಅರಿದರಿದು ಸಮಗಾಣಿಸುವುದು ಒಂದು ವ್ಯವಹಾರ ವಾಗುತ್ತದೆ. ಸಾಹಿತ್ಯದ ವ್ಯವಹಾರದಲ್ಲಿ ಸೋಲುಂಟು, ಗೆಲುವುಂಟು. ವಾದ ವಿವಾದ ಶಾಸ್ತ್ರ ಪ್ರಮಾಣ ಗ್ರಂಥಗಳುಂಟು. ಮನದಿಂದಲೇ ಅರಿವನು ಅರಿದರಿದು ವಾದಿಸುವುದಕ್ಕಿಂತ, ಮನ ಅರಿವಿನತ್ತ ಪಯಣಿಸಿದರೆ ಅರಿವು ಮನಗಳೆರಡು ತಕ್ಕಡಿಯ ಎರಡು ಸಹಜ ತಟ್ಟೆಗಳಾಗುತ್ತವೆ.

ಸಹಜ ಸುಖ ಸಕಲ ಪ್ರಾಣಿ ಪಶು ಪಕ್ಷಿಗಳಿಗೆ ಬಳಕೆಯಾಗುತ್ತಿದ್ದರೂ ಅರಿವಿನ ಅಂಗಕ್ಕೆ ಬಳಕೆಯಾಗದಿರುವುದು ದುರಂತವೇ ಸರಿ. ಮನದಿಂದ ಅರಿದರಿದು ನೋಡಿದರೆ ಅರಿವು ಅದನ್ನರಿತು ಸಹಜವಾಗಿರುವ ಮನವು ತನುವಿನಲ್ಲಿ ತನ್ಮಯವಾಗಿದೆ.

ತನುಗಳಲ್ಲಿ ಪಾತ್ರ ಅಪಾತ್ರವೆಂದಿಲ್ಲ. ಗುರು ತನು, ಶಿಷ್ಯ ತನು ಎಂದಿಲ್ಲ, ರಾಜ ಮಂತ್ರಿ ಪ್ರಧಾನಿ ಕಳ್ಳ ಪಂಡಿತ ಪಾಮರನೆಂದಿಲ್ಲ. ತನು ಒಂದೇ, ತನುವಿನ ಅರಿವು ಒಂದೇ. ಅರಿವನ್ನು ಅರಿವಿನೊಂದಿಗೆ ಸಕಲ ಬ್ರಹ್ಮಾಂಡವನ್ನು ತಿಳಿಯುವ ಮನ ಒಂದೇ. ಮನದ ಘನವೊಂದೆ! ಇದನ್ನು ತಿಳಿದು ಸಹಜವಾಗಿದ್ದೊಡೆ, ಸರ್ವ ಜೀವ ದಯಾಪಾರಿ ಯಾದಡೆ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನು ಕಾಯವನ್ನೇ ಕೈಲಾಸ ಮಾಡಿ ಆ ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ?

805

ಸ್ಥಾವರ ಜಂಗಮವೆಂಬ ಉಭಯ ಪಕ್ಷ ಒಂದೆ;

ಆವ ಮುಖದಲ್ಲಿ ಬಂದಡೂ ತೃಪ್ತಿ ಒಂದೆ;
ಕೂಡಲಸಂಗಮದೇವರ ಆಪ್ಯಾಯನವೊಂದೆ.

ಅಂಗದಲ್ಲಿ ಅರಿವೆಂಬ ಗುರುದೇವ ಮತ್ತು ಅರಿವನ್ನು ಬಳಕೆ ಮಾಡಿ ಪಾಲನೆ ಮಾಡುವ ಜಂಗಮದೇವರು ಇದ್ದಾರೆ. ಅಂಗವನ್ನು ಆವರಿಸಿದ ಮನ ಗುರುವಿನ ಶ್ರೀ ಪಾದದಲಿ ಲೀನವಾದ ಬಳಿಕ ಗುರುದೇವ ಮತ್ತು ಜಂಗಮರು ಮಾತ್ರ ಬಳಕೆ ಮಾಡುವ ಅಂಗ ಸ್ಥಾವರ ಲಿಂಗವಾಗುತ್ತದೆ.

ಜಂಗಮ ಹೇಳಿದಂತೆ ಅಂಗವೆಂಬ ಲಿಂಗ ಕೇಳುತ್ತದೆ. ಗುರು ಹೇಳಿದಂತೆ ಜಂಗಮ ಕೇಳುತ್ತಾನೆ. ಅಂಗವೆಂಬ ಲಿಂಗ ಸ್ಥಾವರವಾಯಿತು. ಅದನ್ನು ತನ್ನ ಅಣತಿಯಂತೆ ಚಾಲನೆ ಮಾಡುವ ಜಂಗಮ ಅಂಗದ ಚಾಲಕನಾದ ! ಜಂಗಮನಿಗೆ ಹಸಿವಾದರೆ ಅಂಗದಿಂದಲೇ ಉಣ್ಣಬೇಕು. ಜಂಗಮ ನಡೆದರೆ ಅಂಗದಿಂದಲೇ ನಡೆಯಬೇಕು. ಜಂಗಮ ನಿದ್ರಿಸಿದರೆ ಅಂಗದಿಂದಲೇ ನಿದ್ರಿಸಬೇಕು. ಜಂಗಮ ನುಡಿದರೆ ಅಂಗದಿಂದಲೇ ನುಡಿಯಬೇಕು.

ಸ್ಥಾವರದಿಂದಲೇ ಜಂಗಮನನು ಕಾಣಬೇಕು. ಜಂಗಮ ಸ್ಥಾವರದಿಂದಲೇ ನೋಡಬೇಕು. ಸ್ಥಾವರ ಜಂಗಮ ಬೇರೆ ಬೇರೆ ಅಲ್ಲ. ಉಭಯರೂ ಅಂಗವೆಂಬ ಲಿಂಗದಲ್ಲಿಯೇ ಒಂದಾಗಿದ್ದಾರೆ. ಸ್ಥಾವರದಿಂದ ಬಂದರೂ ಜಂಗಮ ತೃಪ್ತಿ. ಅಂಗದಲ್ಲಿಯೇ ಸಂಗಮವಾದ ಸಂಗಮದೇವರ ಅಪ್ಯಾಯನ ಒಂದೆ.

806

ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು;
ತತ್ತ್ವ ಘಟಿಸಿದ ಸುಮುಹೂರ್ತದಲ್ಲಲ್ಲದೆ,
ಚಿತ್ತ ವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ.
ಕರ್ತು ಕೂಡಲಸಂಗಮದೇವರ ಒಲವಿನ ದಯದ
ಚಿತ್ತವಿಡಿದಂಗಲ್ಲದೆ, ಶಿವತತ್ತ್ವಸಾಹಿತ್ಯವಾಗದು.

ಉದಕವೂ ಇದೆ ಚಿಪ್ಪು ಇದೆ. ಆದರೂ ಉದಕವೆಲ್ಲಾ ಮುತ್ತಾಗದು. ಉದಕವೆಲ್ಲಾ ಚಿಪ್ಪುಗಳಾಗವು. ಉದಕದಿಂದಲೇ ಮುತ್ತು; ಉದಕದಿಂದಲೇ ಚಿಪ್ಪು ! ಉದಕ ಚಿಪ್ಪಾಗಬೇಕಾದರೆ ಆ ಸಮಯ ಕೂಡಿ ಬರಬೇಕು. ಉದಕದಲ್ಲಿಯೇ ರಸಾಯನ ಉಂಟಾಗಿ ಚಿಪ್ಪಾಗುವ ಸಮಯ ಒದಗಿ ಬರಬೇಕು. ಉದಕ ಚಿಪ್ಪಾದರೇನಂತೆ ? ಚಿಪ್ಪುಗಳೆಲ್ಲಾ ಉದಕವನ್ನು ಮುತ್ತು ಮಾಡಲಾರವು. ಮುತ್ತು ಮಾಡಲೇಬೇಕೆಂದು ಚಿಪ್ಪು ಸ್ವಾತಿಯ ಉದಕಕ್ಕಾಗಿ ಬಾಯ್ದೆರೆದಿರಬೇಕು.

ಚಿಪ್ಪಿಗೆ ಬಿದ್ದ ಸ್ವಾತಿ ಹನಿಗಳೆಲ್ಲ ಉದಕವಾಗವು. ಸ್ವಾತಿ ಹನಿಗಾಗಿ ಮುತ್ತು ಮಾಡಲೆಂದು ತವಕಿಸಿ ಬಾಯ್ದೆರೆದ ಚಿಪ್ಪಿನಲ್ಲಿ ಬಿದ್ದ ಸ್ವಾತಿ ಹನಿ ಮಾತ್ರ ಮುತ್ತಾಗಬಲ್ಲದು. ಈ ಸಮಯಕ್ಕಾಗಿ ಚಿಪ್ಪು ಉದಕಗಳೆರಡೂ ತವಕಿಸಬೇಕು.

ಭೂಮಿಯ ಮೇಲೆ ಜನ್ಮವೆತ್ತಿದ ಅಂಗಗಳೆಲ್ಲ ಅರಿವಿನ ಲಿಂಗಗಳಾಗಿ ಶಿವತತ್ತ್ವ ಸಾರುವ ಸಾಹಿತ್ಯ ಭೂಮಿಕೆಯಾಗಲಾರವು. ಅಂಗವನ್ನು ಆವರಿಸಿರುವ ಮನ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನತ್ತ ಪಯಣಿಸಿ ಆತನ ಶ್ರೀ ಪಾದದಲ್ಲಿ ಲೀನವಾಗಬೇಕು. ಹೀಗಾಗದ ಮುನ್ನ ಮನಕ್ಕೆ ಅರಿವಿನ ಚಿತ್ತ ವೇದ್ಯವಾಗದು. ಸದ್ಗುರುವಿನ ಕರಣದಿಂದ ಅಂಗ ಅರಿವಿನ

ಲಿಂಗವಾಗುವುದರಲ್ಲಿ ಸಂದೇಹವೇ ಇಲ್ಲ.

ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು ಬಳಕೆ ಮಾಡುವ ಕಾಲವಿತ್ತು. ಆದರೆ ಇದೀಗ ಹಾಗಲ್ಲ. ಮುತ್ತು ಮಾಡುವ ವಿಧಾನವನ್ನು ಕಂಡು ಹಿಡಿಯಲಾಗಿದೆ. ಉದಕ ರಸಾಯನಕ್ಕೆ ಒಳಪಟ್ಟು ಮುತ್ತಾಗುವ ವಿಧಾನವನ್ನು ಕಂಡು ಹಿಡಿಯಲಾಗಿದೆ.

ಕೋಟಿಗೊಬ್ಬ ಶರಣ ಎನ್ನುವ ಅದೊಂದು ಕಾಲವಿತ್ತು. ಹನ್ನೆರಡನೇ ಶತಮಾನದಲ್ಲಿ ಒಂದು ಲಕ್ಷತೊಂಬತ್ತಾರು ಸಾವಿರ ಜನ ಅರಿವಿಗೆ ಶರಣು ಹೋಗಿ ಶರಣರಾಗಲು ಪ್ರಯತ್ನಿಸಿದರು. ಚಿತ್ತ ಸದ್ಗುರುವಿನ ಕರುಣೆಗೆ ವೇದ್ಯವಾಯಿತು. ಏಳು ನೂರಾ ಎಪ್ಪತ್ತು ಜನ ಶರಣರಾದರು; ಅಮರಗಣಂಗಳಾದರು. ಎರಡು ನೂರಾ ಐವತ್ತೈದು ಜನರಿಗೆ ಒಬ್ಬ ಶರಣನಾದ. ಮನ ಗುರು ಕರುಣೆಯಾಗಿ ಹಾತೊರೆದರೆ ಭೂಮಿಯ ಮೇಲಿರುವ ಸರ್ವಾಂಗಗಳೆಲ್ಲ ಅರಿವಿನ ಲಿಂಗಗಳಾಗುವುದರಲ್ಲಿ ಸಂದೇಹವೇ ಇಲ್ಲ.

ಉದಕದಲ್ಲಿ ಮುತ್ತು ಮಾಣಿಕ್ಯ ಸ್ಫಟಿಕ ಮಾಡುವ ಗುಣವಿದೆ. ಉದಕದಲ್ಲಿ ಅರಿವಿನ ಅಂಗಗಳನ್ನಾಗಿ ಮಾಡುವ ಶ್ರೇಷ್ಠಾತಿಶ್ರೇಷ್ಠಗುಣವೂ ಇದೆ. ಉದಕದಿಂದಾದ ಅಂಗಗಳೆ ಅರಿವಿನ ಕ್ರಿಯೆಯಿಂದ ಲಿಂಗಗಳಾಗಿ ಮಾರ್ಪಡುವ ನಿರ್ಗುಣ ಶಕ್ತಿಯೂ ಇದೆ. ಅಂಗಕ್ಕೆ ಅರಿವಿನ ಲಿಂಗ ಶಕ್ತಿ ಬಳಕೆಯಾಗಬೇಕು. ಇದೊಂದು ವಿಜ್ಞಾನವೆಂದು ಮನಕ್ಕೆ ಮನವರಿಕೆಯಾಗಬೇಕು.

807

ಕಾಯದ ಗಡಣೆ ಕೆಲಬರಿಗುಂಟು
ಜೀವದ ಗಡಣೆ ಕೆಲಬರಿಗುಂಟು.
ಭಾವದ ಗಡಣೆ ಕೆಲಬರಿಗುಂಟು.
ವಚನದ ಗಡಣೆ ಕೆಲಬರಿಗುಂಟು.
ಪ್ರಾಣಲಿಂಗದ ಗಡಣೆ ಆರಿಗೂ ಇಲ್ಲ,
ಕೂಡಲಸಂಗನ ಶರಣರೊಳಗೆ ತಂಗಟೂರ ಮಾರಯ್ಯಂಗಲ್ಲದೆ.

ವಜ್ರಕಾಯ ಮಾಡಿಕೊಂಡು ಇದೇ ಸಾಧನೆ ಎನ್ನುವ ಸಾಧಕರು ಹಲವರಿರುತ್ತಾರೆ. ಕುಂಭಕ ರೇಚಕಗಳನ್ನು ಕಲಿತು ಕಾಯವನ್ನು ನೂರಾರು ವರ್ಷಗಳವರೆಗೆ ಜೀವದಿಂದ ಸದೃಢವಾಗಿರಬೇಕೆಂದು ಸಾಧಿಸುವ ಸಾಧಕರು ಹಲವರಿರುತ್ತಾರೆ. ಭಾವದಿಂದ ಶಾಂತಸ್ವಭಾವದ ಕಾಯವಾಗಬೇಕೆಂದು ಸಾಧನೆ ಮಾಡುವ ಸಾಧಕರೂ ಹಲವರಿರುತ್ತಾರೆ. ವೇದ ಆಗಮ ಉಪನಿಷತ್ತು, ಭಗವದ್ಗೀತೆ ರಾಮಾಯಣ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡುವ ಮೂಲಕ ಸಾಧನೆಗೈದ ಪ್ರವಚನ ಪಟುಗಳೂ ಹಲವರಿರುತ್ತಾರೆ.

ಅಂಗ ಪ್ರಾಣ ಗುರು ಲಿಂಗ ಜಂಗಮ, ಭಕ್ತ ಸಂಗಮವಾಗಿ ಕೂಡಲ ಸಂಗಮನಾಥನೇ ತಾನಾಗುವ ಅರಿವಿನ ಪ್ರಾಣಲಿಂಗದ ಗಡಣೆ ತಂಗಟೂರು ಮಾರಯ್ಯಂಗಲ್ಲದೆ ಯಾರಿಗೂ ಇಲ್ಲ ಎಂದು ಬಸವಣ್ಣನವರು ಹೇಳಿದ್ದಾರೆ.

ತಂಗಟೂರು ಮಾರಯ್ಯ ಅರಿವಿನ ಮಹಾಮನೆಯ ಸೇವಕ. ಸತಿ ಪತಿಗಳನ್ನು ಶರಣಸತಿಯಾಗಿ ಲಿಂಗಪತಿಯಾಗಿ ಕೂಡಲೇ ಪರಿವರ್ತನೆ ಮಾಡುವ ಶರಣ ಅನುಭವಿ ನಿಪುಣ! ಸತಿ ಪತಿಗಳು ಒಂದಾಗಿ ಅರಿವಿನ ಸುಖ ಅನುಭವಿಸಬೇಕೆಂದು ಬಯಕೆ ಮಾಡಿ ಮಹಾಮನೆಗೆ

ಬಂದ ಕೂಡಲೇ ತಂಗಟೂರು ಮಾರಯ್ಯ ಶರಣರು ಅವರನ್ನು ಅರಿವಿನ ಅನುಭವ ಲೋಕಕ್ಕೆ ಕೊಂಡೊಯ್ದು ಶರಣಸತಿ ಯಾರು ಲಿಂಗಪತಿ ಯಾರೆಂದು ಅವರಿಗೆ ಅರಿವಾಗುವಂತೆ ಹೇಳುತ್ತಿದ್ದರು. ಸತಿಯೊಳಗೆ ಸತಿಯನ್ನು ಕಂಡುಕೊಂಡು ಲಿಂಗ ಪತಿಯನ್ನು ಕೂಡುವ ಕೂಡದಗಲದ ಕೂಟದ ಸುಖವನ್ನು ಸತಿಗೆ ಹೇಳಿಕೊಡುತ್ತಿದ್ದರು. ಪತಿಯನ್ನು ಕರೆದು, ಪತಿಯೊಳಗೆ ಸತಿಯನ್ನು ಕಂಡು ಶರಣಸತಿಯಾಗಿ, ಲಿಂಗಪತಿಯನ್ನು ಕೂಡುವ ಕೂಡದ ಅಗಲದ ಕೂಟದ ಸುಖವನ್ನು ಪತಿಗೆ ಹೇಳಿಕೊಡುತ್ತಿದ್ದರು.

ಸತಿಯೊಳಗೆ ಶರಣಸತಿಯನ್ನು ಲಿಂಗಪತಿಯನ್ನು ಕಂಡು ಸತಿ ಸುಖಿಸುತ್ತಿದ್ದಳು. ಪತಿಯೊಳಗೆ ಶರಣಸತಿಯನ್ನು ಲಿಂಗಪತಿಯನ್ನು ಕಂಡು ಪತಿ ಸುಖಿಸುತ್ತಿದ್ದ.

ಮಹಾಮನೆಯಿಂದ ಮನೆಗೆ ಹೋಗುವುದರೊಳಗಾಗಿ ಪತಿಗೆ ಪತಿ ಎನ್ನದೆ ಪತಿಗೆ ಸತಿ ಶಿಶುವಾಗುತ್ತಿದ್ದಳು. ಸತಿಗೆ ಸತಿ ಎನ್ನದೆ ಸತಿಗೆ ಪತಿ ಶಿಶುವಾಗುತ್ತಿದ್ದ. ಸತಿ ಪತಿಗಳಿಬ್ಬರೂ ಶಿಶುವಿನ ನಿಜಸುಖ ಉಂಡು ಸುಖದ ಸುಖಿಗಳಾಗುತ್ತಿದ್ದರು. ತಂಗಟೂರು ಮಾರಯ್ಯ ಸತಿ ಪತಿಗಳನ್ನು ಅರಿವಿನ ಸಹಜ ಶಿಶುಗಳನ್ನಾಗಿ ಪರಿವರ್ತನೆ ಮಾಡುವ ಕಾಯಕದಲ್ಲಿ ತಾಂತ್ರಿಕತೆಯ ನೈಪುಣ್ಯತೆಯನ್ನು ಮೈಗೂಡಿಸಿಕೊಂಡಿದ್ದ. ಈ ವೃತ್ತಾಂತವನ್ನು ಜ್ಞಾನಭಂಡಾರಿ ಬಸವಣ್ಣನವರು ಓದುಗರಿಗೆ ಒಂದು ಸಾಲಿನಲ್ಲಿ ಹೇಳಿದ್ದಾರೆ.

808

ಚಂದ್ರಕಾಂತನ ಶಿಲೆಯಲ್ಲಿ ಜಲವಿಲ್ಲದನ್ನಕ್ಕ
ಶೈತ್ಯವ ತೋರುವ ಪರಿಯೆಂತೊ ?
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ
ಉಷ್ಣವ ತೋರುವ ಪರಿಯೆಂತೊ?
ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ
ಕೂಡಲಸಂಗಯ್ಯನನರಿವ ಪರಿಯೆಂತೊ ?

ಅರಿವಿಗೆ ಭಕ್ತಿ ಮಾಡುವತ್ತ ಮನ ಪಲ್ಲಟವಾಗಬಹುದು ಅಥವಾ ಗರ್ಭದಿಂದ ಬರುವಾಗಲೆ ಕಾಯಕ್ಕೆ ಆ ಭಾಗ್ಯ ದೊರೆಯಬಹುದು. ಮೊದಲನೆಯದು ಮನದ ಪರಿಶ್ರಮವಾದರೆ ಮತ್ತೊಂದು ಗುರುದೇವನ ಆಶಿರ್ವಾದ.

ಮನ ಪರಿಶ್ರಮದಿಂದ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ಸೇವೆ ಮಾಡುವುದರಿಂದ ಆತನಿಗೆ ಭಕ್ತಿ ಮಾಡಿ ಆತನಲ್ಲಿಯೇ ಸಂಗಮವಾಗುವುದರಿಂದ ಕಾಯ ಭಕ್ತಿಕಾಯವಾಗುತ್ತದೆ.

ಜಲವಿಲ್ಲದ ಶಿಲೆಯನ್ನು ಯಾರೂ ಚಂದ್ರಕಾಂತ ಅಥವಾ ಸಂಗಮರಮರಿ ಶಿಲೆಯೆಂದು ಕರೆಯುವುದಿಲ್ಲ. ಭಕ್ತಿ ಇಲ್ಲದ ಕಾಯವನ್ನು ಯಾರೂ ಪೂಜ್ಯಭಾವನೆಯಿಂದ ನೋಡುವುದಿಲ್ಲ. ಕಾಯ ವೃತ್ತಿಗೆ ಸಂಬಂಧಿಸಿದ ಹೆಸರು ಪಡೆದು ಹಣೆಪಟ್ಟಿ ಧರಿಸಿಕೊಳ್ಳುತ್ತದೆ.

ಮನ, ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಭಕ್ತಿ ಮಾಡಿ ಕಾಯವನ್ನು ಮೃದುಗೊಳಿಸದಿದ್ದರೆ, ಮನಕ್ಕೆ ಸಂಗಮನಾಥನ ದರುಶನ ಸಾಧ್ಯವಾಗುವುದಿಲ್ಲ. ಸಂಗಮನಾಥನನು ಅರಿತು ಆ ಅರಿವು ಪಡೆಯದಿದ್ದರೆ ಅರಿವಿನ ಕಾಯ ಎನ್ನಿಸಿಕೊಳ್ಳುವುದಿಲ್ಲ.

ಕಾಯ ಶಿಲೆಯಲ್ಲ; ಜಲ ಸಂಗಮವಾದ ಅರಿವಿನ ಕಾಯ ! ಕಾಯ ಶಿಲೆಯಲ್ಲ; ಅಗ್ನಿ ಸಂಗಮವಾದ ಅರಿವಿನ ಕಾಯ ! ಶೀತ ಉಷ್ಣಗಳೆರಡೂ ಸಮರಸವಾಗಿ ಬೆರೆತಿವೆ. ನೋಡುವ, ಕೇಳುವ, ಮಾತನಾಡುವ, ಮೂಸಿಸಿ, ರುಚಿಸಿ ಸುಜ್ಞಾನದಿಂದ ಆನಂದ ಪಡುವ ಭಕ್ತಿಯ ಅನಂತ ಶಕ್ತಿಯನ್ನು ಕಾಯ ಹೊಂದಿದೆ.

ಮನ ಅಕಾಯ; ಅರಿವು ಅಕಾಯ ! ಇವೆರಡೂ ಕಾಯದಲ್ಲಿ ಸಂಗಮುಗೊಂಡು ಜ್ಞಾನಕಾಯ, ಭಕ್ತಕಾಯ ಎಂದು ಹೆಸರು ಪಡೆದಿದೆ. ಜ್ಞಾನದ ಬಲದಿಂದ ಕಾಯದ ಅಜ್ಞಾನ ನಷ್ಟ ಮಾಡಿಕೊಂಡು ಭಕ್ತಿ ಕಾಯವಾಗದ ವಿನಹ ಸಂಗಮನಾಥನ ದರುಶನ ಭಾಗ್ಯ ದೊರೆಯುವುದಿಲ್ಲ.

ಸರ್ವಕಾಯಗಳೂ ಈ ನಿಟ್ಟಿನತ್ತ ಪ್ರಯತ್ನಿಸಬೇಕು. ಭಕ್ತಿ ಕಾಯದ ಗುರಿ ತಲುಪಬೇಕು.

809

ಮುನ್ನೂರರವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು ?
ಅದು ಸ್ವಾತಿಗಲ್ಲದೆ ಬಾಯ್ದೆರೆಯದು ಕೇಳು, ಕೇಳಾ, ತಂದೆ.
ಎಲ್ಲವಕ್ಕೆ ಬಾಯಬಿಟ್ಟಡೆ ತಾನೆಲ್ಲಿಯ ಮುತ್ತಪ್ಪುದು ?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು
ಕರುಣಾದಿ ಗುಣಂಗಳ ಮರೆದರು;
ಇದು ಕಾರಣ ಕೂಡಲಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ.

ಸ್ವಾತಿ ಹನಿಗಳಿಗಾಗಿ ಬಾಯಿ ಬಿಟ್ಟ ಚಿಪ್ಪು ಹನಿ ಬಿದ್ದಕೂಡಲೇ ಮುಚ್ಚಿಕೊಂಡು ಮುತ್ತು ಮಾಡುವುದು. ಮುತ್ತು ಮಾಡಲು ಬಯಕೆ ಮಾಡಿದ ಚಿಪ್ಪಿಗೂ ಇದು ತಿಳಿದಿದೆ; ಮುತ್ತಾಗಲು ಸಿದ್ಧಗೊಂಡ ಸ್ವಾತಿಯ ಹನಿಗೂ ತಿಳಿದಿದೆ. ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ.

ಹಾಗೆಯೇ ಅಂಗದ ಇಂದ್ರಿಯಗಳಿಗೆ ಮೆತ್ತಿಕೊಂಡ ಅಜ್ಞಾನವನ್ನು, ಅಂಗಕ್ಕೆ ಮೆತ್ತಿಕೊಂಡ ಸಪ್ತವ್ಯಸನಗಳನ್ನು ಕಿತ್ತಿಕೊಂಡು ಅಜ್ಞಾನದ ಚಿಪ್ಪಿನಿಂದ ಹೊರಬಂದು ಮುತ್ತಾಗುವ ಶಕ್ತಿ ಪರಮಂಗಲ್ಲದೆ ಅನ್ಯರಿಗೆ ಸಾಧ್ಯವಾಗುವುದು ಸುಲಭದ ಸಂಗತಿಯಲ್ಲ.

ತನುವಿಗೆ ಅಂಟಿದ ತನು ವ್ಯಸನ, ತನುವನ್ನು ಆವರಿಸಿಕೊಂಡ ಮನೋವ್ಯಸನ, ತನುವಿನಲ್ಲಿಯೇ ಉಂಟಾದ ಧನವ್ಯಸನ, ರಾಜ್ಯವ್ಯಸನ ತನುವಿನಲ್ಲಿಯೇ ಉಂಟಾಗಿ ಇಲ್ಲವಾಗುವ ಉತ್ಸಾಹವ್ಯಸನ, ಸೇವಕವ್ಯಸನಗಳೆಂಬ ಸಪ್ತವ್ಯಸನಗಳು ಅರಿವುಳ್ಳ ತನುವನ್ನು ಹಿಂಡಿ ಹಿಪ್ಪೆ ಮಾಡುತ್ತವೆ.

ಕಣ್ಣು ಕಿವಿ ಮೂಗು ಚರ್ಮ ನಾಲಿಗೆಗೆ ಅಂಟಿದ ಅಜ್ಞಾನವನ್ನು, ತನುವಿಗೆ ಅಂಟಿದ ಸಪ್ತವ್ಯಸನಗಳನ್ನು ಪೊರೆಯಂತೆ ಕಿತ್ತಿಹಾಕಿ ಕೂಡಲೇ ಮುತ್ತಾಗುವ ಶಕ್ತಿ ಶರಣನಿಗಿದೆ. ಸಮರ್ಥ ಪರಮನಿಗಿದೆ !

ಚಿಪ್ಪು ಸ್ವಾತಿ ಮಳೆಗೆ ತವಕಿಸಿದಂತೆ ತವಕಿಸುವುದೂ ಶರಣನಿಗೆ ಬೇಕಿಲ್ಲ. ತನುವಿನ ಕಣಕಣದಲ್ಲಿ ಜ್ಞಾನದ ಮುತ್ತು ಪೋಣಿಸಿಕೊಂಡು ಗರ್ಭದ ಸಿಂಪಿನಿಂದ ಹೊರಬಂದಿದ್ದಾನೆ.

ಹೊಳೆಯುವ ಕಣ್ಣುಗಳೆರಡು ಜ್ಞಾನದ ಮುತ್ತುಗಳೇ ! ಕೇಳುವ ಕಿವಿಗಳೆರಡು ಮಹಾಜ್ಞಾನದ ಮುತ್ತುಗಳೇ ! ಸ್ಪರ್ಶಿಸುವ ಚರ್ಮದ ಕಣಕಣದಲ್ಲಿ ಮುತ್ತುಗಳು ರಾರಾಜಿಸುತ್ತಿವೆ! ರುಚಿಸುವ ನಾಲಿಗೆಯಲ್ಲಿ , ಅರಳಿದ ಮೂಗಿನ ಎರಡು ಹೊರಳೆಗಳಲಿ ಪರಿಮಳ ಬೀರುವ ಮುತ್ತುಗಳೇ

ಇವೆ. ಅಜ್ಞಾನದ ಪೊರೆ ಕಿತ್ತಿಕೊಂಡರೆ ಸಾಕು; ಚೇತನದ ಮುತ್ತುಗಳು ಮಿನುಗುತ್ತವೆ. ಕರಣಾದಿಗುಣಗಳನು, ಸಪ್ತವ್ಯಸನಗಳ ಪೊರೆಯನು ಶರಣ ಮಾತ್ರ ಕಿತ್ತಿಕೊಳ್ಳಬಲ್ಲ ! ತಿಳಿದರೆ ಸರ್ವ ತನುಗಳಿಗೂ ಇದು ಸಾಧ್ಯ !

ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ

810

ಮೈಗೆ ಕಾಹ ಹೇಳುವರಲ್ಲದೆ ಮನಕ್ಕೆ ಕಾಹ ಹೇಳುವರೆ ?
ಅಣಕದ ಮಿಂಡನ ಹೊಸಪರಿಯ ನೋಡಾ !
ಕೂಡಲಸಂಗಮದೇವನೆನ್ನ ಮನವ ನಂಬದೆ
ತನ್ನಲ್ಲಿದ್ದ ಲೇಸ ಕಾಹ ಹೇಳಿದನು.

ಯೌವ್ವನಕ್ಕೆ ಬಂದ ಮಕ್ಕಳ ಶೀಲ ಹರಣವಾಗಬಾರದೆಂದು ತಂದೆ ತಾಯಿಗಳು ಕಾಯುತ್ತಾರೆ. ಮಠಾಧಿಪತಿಗಳ ಶೀಲ ಹಾಳಾಗಬಾರದೆಂದು ಭಕ್ತರು ಹಗಲಿರುಳು ಸ್ವಾಮಿಗಳನ್ನು ಕಾಯುತ್ತಾರೆ. ಗಂಡನ ಶೀಲ ಹೆಂಡತಿ, ಹೆಂಡತಿಯ ಶೀಲ ಗಂಡ ಕಾಯುತ್ತಾನೆ. ಅವರಿಬ್ಬರ ಶೀಲ ಅತ್ತೆ ಮಾವ ಹಡೆದವರು ಕಾಯುತ್ತಾರೆ. ಒಬ್ಬರಿಗೊಬ್ಬರು ತನು ಹಾದರಕ್ಕೆ ಒಳಗಾಗಬಾರದೆಂದು ತನುವಿನ ಶೀಲಕ್ಕೆ ಕಾವಲು ಹಾಕಿದರೆ ಹೊರತು ಮನದ ಹಾದರಕ್ಕೆ ಕಾವಲು ಹಾಕಲಿಲ್ಲ.

ತನು ತನುವಿನೊಂದಿಗೆ ಕೂಡುವುದನ್ನು ತಡೆಯಬಹುದು. ಮನ ತನುವಿನೊಂದಿಗೆ ಕೂಡಿ ಹಾದರ ಮಾಡುವುದನ್ನು ತಡೆಯಲು ಸಾಧ್ಯವೆ ? ಇದು ಯಾವ ರಾಜ ಮಹಾರಾಜನಿಂದಲೂ ಸಾಧ್ಯವಾಗದ ಮಾತು. ಯಾವ ಗಂಡ ಹೆಂಡತಿಯಿಂದ ಸಾಧ್ಯವಾಗದ ಮಾತು. ಯಾವ ತಂದೆ ತಾಯಿಗಳಿಂದಲೂ, ಗುರು ಶಿಷ್ಯರಿಂದಲೂ, ಸ್ವಾಮಿ ಭಕ್ತರಿಂದಲೂ ಮನದ ಹಾದರವನ್ನು ಕಾಯುವುದು ಸಾಧ್ಯವಾಗದ ಮಾತು.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೆಂಬ ಮಿಂಡನ ಹೊಸಪರಿಯ ನೋಡಾ ! ಈತ ಮನದ ಮಹಾ ಕಾವಲುಗಾರ ! ಹಲವಾರು ಮಜಲುಗಳಲ್ಲಿ ತನುವನ್ನು ಹಿಡಿದು ಮಾಡುವ ಮನದ ಸಕಲ ವರಸೆಗಳನ್ನು ಬಲ್ಲ ಮಹಾಮಿಂಡನೀತ. ತನುವಿಗೆ ಕಾವಲು ಹಾಕದೆ, ತನುವನ್ನು ಆವರಿಸಿದ ಮನದ ಹಾದರಕ್ಕೆ ಕಡಿವಾಣ ಹಾಕುತ್ತಾನೆ. ಜಾಗ್ರತ್, ಸ್ವಪ್ನ, ಸುಶುಪ್ತಿಯ ಮೂರು ಕಾಲಗಳಲ್ಲಿಯೂ ಮನದ ಬೆನ್ನು ಬಿದ್ದು ಕಾವಲು ಕಾದು ಅರಿವಿನ ಸುಳಿದೆಗೆದು ಬೆಳೆದ ಬೆಳೆಯನ್ನು ಉಳಿಸಿದ ಮಹಾ ಮಿಂಡನೀತ.

ಮನ ಯಾವ ಸುಳಿಯಲ್ಲಿ ಬಿದ್ದರೂ ಆ ಸುಳಿವನ್ನು ಹಿಡಿದು ಮನದ ಸುಳಿದೆಗೆದು ಬೆಳೆಯ ರಕ್ಷಿಸಿದ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯ ಮನವ ನಂಬದೆ ತನ್ನಲ್ಲಿದ್ದ ಲೇಸ ಕಾಹ ಹೇಳಿದನು.

ಹಗಲಿರುಳೂ ಹಾದರ ಮಾಡಿ, ಅಂಗವೆಂಬ ಲಿಂಗಕ್ಕೆ ಹಾದರದ ಹಣೆಪಟ್ಟಿ ಕಟ್ಟಿ, ಅಂಗವನ್ನೇ ಆವರಿಸಿದ ಹಾದರದ ಮನ , ತನಗೆ ತಾನೇ ಕಾವಲುಗಾರನನ್ನು ಹುಡುಕಿಕೊಂಡು, ತನ್ನ ಮೇಲೆ ಆತನ ಕಾವಲು ಹಾಕಿಕೊಳ್ಳಲು ಸಾಧ್ಯವೆ ? ಇದು ಅಘಟಿತ! ಒಂದು ವೇಳೆ ಮನಕ್ಕೆ

ಘಟಿಸಿದರೆ ಅಣಕದ ಮಿಂಡನ ಜೊತೆಗೆ ಮನ ಹಾದರ ಮಾಡಿ ಆತನ ಮನದನ್ನೆಯಾಗುತ್ತಾಳೆ. ಹೊರಗಣ ಹಾದರ ಮರೆಯುತ್ತಾಳೆ. ಇದು ಮನದ ಹಾದರ ಕಾಯುವ ಮಿಂಡನ ಹೊಸ ಪರಿ!

811

ಮನ ವಂಚನೆಯ ಅನ್ಯ ಲಿಂಗಾರ್ಚನೆ !
ಅದು ನಿಜವಲ್ಲ, ನಿಜವಲ್ಲ,
ಕೂಡಲಸಂಗಮದೇವನು ಮನದಂತರ್ಯಾಮಿ ತಾನಾಗಿ.

ಲಿಂಗಾರ್ಚನೆ ಮಾಡದಿದ್ದರೂ ಮನಕ್ಕೆ ಸಮಾಧಾನವಿಲ್ಲ. ಲಿಂಗಾರ್ಚನೆ ಮಾಡಿದರೂ ಮನಕ್ಕೆ ಸಮಾಧಾನವಿಲ್ಲ. ಲಿಂಗಕ್ಕೂ ಅಂಗಕ್ಕೂ ಸಂಬಂಧವಿಲ್ಲದ ವಸ್ತುವನ್ನು ಲಿಂಗವೆಂದು ಹೆಸರಿಸಿ, ಅಂಗದ ಮೇಲೆ ಧರಿಸಿ, ಮೂರು ಕಾಲ ಅರ್ಪಿಸಿ ಪೂಜಿಸಿದರೂ ಲಿಂಗ ನೆನೆಯಲಿಲ್ಲ. ಅಂಗಕ್ಕೆ ಲಿಂಗ ಏನೊಂದನೂ ಹೇಳಲಿಲ್ಲ. ಲಿಂಗದೇವರಾಗಿ ಪ್ರತ್ಯಕ್ಷವಾಗಲಿಲ್ಲ. ಪುರಾಣದಲ್ಲಿ ಕತೆ ಕೇಳಿ ಪೂಜಿಸಿದೆನೆ ಹೊರತು ಪೂಜಿಸಿದಲ್ಲಿ ಪ್ರತ್ಯಕ್ಷವಾಗಲಿಲ್ಲ.

ಪೂಜಿಸುವಾಗ ಎರೆಯುವ ಲಿಂಗ ನೆನೆಯಬೇಕು. ತಂಪೆರೆದ ಅನುಭವದಿಂದ ಮೈನವಿರೇಳಬೇಕು. ರೋಮಗಳು ನಿಮಿರಬೇಕು. ತನಗೆ ಅರ್ಪಿಸಿದ ಹೂಗಳಿಂದ ಪರಿಮಳ ಹೀರಬೇಕು. ಗಂಧ ಆಸ್ವಾದಿಸಬೇಕು. ನೈವೇದ್ಯ ಸ್ವೀಕರಿಸಿದ ನಾಲಗೆ ಪ್ರಸಾದ ಸುಖ ಅನುಭವಿಸಬೇಕು. ಲಿಂಗದ ಕಂಗಳು ಅರಳಿ ಪೂಜೆಯನು ಸ್ವೀಕರಿಸಬೇಕು ಆನಂದ ಭಾಷ್ಪ ಧಾರಾಕಾರವಾಗಿ ಹೊರಹೊಮ್ಮಿ ಪುಳಕಿತಗೊಳಿಸಬೇಕು. ಅಂಗಕ್ಕೆ ಬೆಳಗಿದ ಜ್ಯೋತಿ ಕಾಂತಿಯುಕ್ತ ಚರ್ಮದಲ್ಲಿ ಪ್ರಜ್ವಲಿಸಿ ತೊಳಗಿ ಬೆಳಗಬೇಕು.

ಇದು ಮನ ಘನವನು ಪೂಜಿಸಿದ ಪೂಜೆ ! ಎರೆದರೆ ನೆನೆಯುವ ಪೂಜೆ ! ಅಂಗ, ಲಿಂಗಾಂಗಕ್ಕೆ ಪೂಜಿಸುವ ಪೂಜೆ ! ಅಂಗ ಜಂಗಮನಿಗೆ ಪೂಜಿಸುವ ಪೂಜೆ ! ಇದು ನಿಜಪೂಜೆ! ಮನಘನ ಮನವಾಗಿ ಘನ ಲಿಂಗವನು ಪೂಜಿಸುವ ಪೂಜೆ !

812

ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ.
ಮನದ ಮದವರಿಯದೆ ನಿಮ್ಮ ಕೃಪೆಯಿಂದ ನಿಮ್ಮ ನೆನೆವೆ.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪೆಯಯ್ಯಾ ,
ಕೂಡಲಸಂಗಮದೇವಾ ನೀನೆನ್ನ ಪ್ರಾಣನಾಥನಾಗಿ.

ಜ್ಯೋತಿಯೊಂದಿಗೆ ಪತಂಗ ಕೂಡಿ ಸುಖಿಸುವ ಬೆಸನದಿಂದ ಪತಂಗ ಪ್ರಾಣ ಕಳೆದುಕೊಳ್ಳುತ್ತದೆ. ಸರ್ಪ ಕೂಡಾ ಹಾಗೆ. ಹೊಸ ಜೀವಕ್ಕೆ ನಾಂದಿ ಹಾಡುವ ಸುಖದಿಂದಾಗಿ ಅವುಗಳಿಗೆ ಬಂದ ತೊಂದರೆ ಏನೇನೂ ಅಲ್ಲ. ಮನದ ಮದವರಿಯದೆ ಸುಖಿಸುವ ನೆಪದ ಬೆಸನದಂತೆ.

ಪತಂಗದಂತಲ್ಲ; ಸರ್ಪನಂತೆಯೂ ಅಲ್ಲ. ಅಂಗದಲ್ಲಿಯೇ ಸಂಗಮವಾದ ನಿಮ್ಮ ಕೃಪೆಯಿಂದ ನಿಮ್ಮನ್ನು ನೆನೆವೆ. ಅರಿವನ್ನು ಆವರಿಸಿದ ಮನ ಅರಿವನ್ನು ಅರಿಯುವುದು ಬಲು ಕಷ್ಟ. ಏಕೆಂದರೆ ಅರಿವೆಂಬ ಗುರುದೇವನು ಮನದ ಭಾವದ ಕೊನೆಯ ಮೊನೆಯ ಮೇಲೆಯೇ ಮನೆ ಮಾಡಿಕೊಂಡಿದ್ದಾನೆ.

ಮನ ತನ್ನ ಮದವನ್ನು ಮುರಿದುಕೊಂಡು ಅರಿವೆಂಬ ಸಂಗಮನಾಥನನ್ನು ಅರಿತು ಪ್ರಾಣನಾಥನನ್ನಾಗಿ ಮಾಡಿಕೊಂಡು ಆತನೊಂದಿಗೆ ಬೆರೆತು ಸುಖಿಸಿ ಘನಮನವಾಯಿತು. ಕೂಡದ ಅಗಲದ ಸಂಯೋಗ ಸುಖದಲ್ಲಿ ನಿರತವಾಯಿತು.

813

ಪೃಥ್ವಿ , ಅಪ್ಪು, ತೇಜ, ವಾಯು, ಆಕಾಶ ನಿರಂಜನದೇವಾ;
ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ
ಕಾಣಲಾರಿಗೆಯೂ ಬಾರದಯ್ಯಾ .
ಜ್ಞಾನಜ್ಯೋತಿ ಧ್ಯಾನದಿಂದ ನಾಳಶುದ್ಧ ದ್ವಾರನಾಗಿ
ಆರಾಧಿಸಿಕಂಡೆ ನಮ್ಮ ಕೂಡಲಸಂಗಮದೇವನ.

ಅಂಗವು ಅರಿವಿನ ಸಂಗಯ್ಯ ಕೂಡಿದ ಕೂಡಲ ಸಂಗಮನ ಕ್ಷೇತ್ರ. ಘಟಪ್ರಭ, ಕೃಷ್ಣೆ ನದಿಯಾಗಿ ಹರಿದು, ಸಂಗಮದಲ್ಲಿ ಕೂಡಿ ಹೆಸರು ಕಳೆದುಕೊಂಡು ಸಂಗಮವಾದಂತೆ. ಸಂಗಮದಲ್ಲಿ ಕೃಷ್ಣೆಯೂ ಇಲ್ಲ ; ಘಟಪ್ರಭವೂ ಇಲ್ಲ. ಹೆಸರು ಕಳೆದುಕೊಂಡ ಕೇವಲ ಸಂಗಮ !

ಭೂಮಿ, ಜಲ, ಅಗ್ನಿ, ವಾಯು, ಆಕಾಶವೆಂಬ ನಿರಂಜನ ದೇವರುಗಳು ಅಂಗದಲ್ಲಿ ಸಂಗಮವಾಗಿ ಸರ್ವಾಂಗವೂ ಪ್ರಣವ ಸ್ವರೂಪಿಯಾಗಿದೆ. ಮಹಾಮಹಿಮಂಗಲ್ಲದೆ. ಜ್ಞಾನಜ್ಯೋತಿಯ ಧ್ಯಾನದಿಂದ ಅಜ್ಞಾನದ ನಾಳ ಶುದ್ಧಿ ಮಾಡಿಕೊಂಡ ಶರಣನಿಗಲ್ಲದೆ ಅನ್ಯರಿಗೆ ಕಾಣಬಾರದು. ಕಾಣಲಾರಿಗೆಯೂ ಸಾಧ್ಯವಿಲ್ಲ.

ಅಂಗದಲ್ಲಿಯೇ ಸಂಗಮವಾದ ಜ್ಞಾನ ಸರೋವರನ್ನು ಅಂಗವನ್ನು ಆವರಿಸಿದ ಮನದಿಂದಲೇ ಕಂಡುಕೊಂಡು ಅಲ್ಲಿಯೇ ಸಂಗಮವಾದ ತವಕ ಉಳ್ಳ ಮನದ ಅಂಗಗಳು ಸರ್ವ ಅಂಗಗಳಿಗೆಯೂ ಸಾಧ್ಯ !

814

ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು,
ತುಟಿ ಮಿಡುಕದೆ ಅಟ್ಟೆಯಾಡಿತ್ತಲ್ಲಾ !
ಬಿಟ್ಟ ಕಣ್ಣು, ಬಿಗಿದ ಹುಬ್ಬು , ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ.
ಕೂಡಲಸಂಗಮದೇವ ಹಿಡಿವಡೆದ.

ತನು, ಸುಂದರವಾದ ಅರಿವಿನ ಬ್ರಹ್ಮಪೀಠ. ಮನವೆಂಬ ಭ್ರಮೆ ತನುವನ್ನು ಆವರಿಸಿದ್ದಕ್ಕಾಗಿ ತನುವಿನಲ್ಲಿಯೇ ತನ್ಮಯವಾದ ಬ್ರಹ್ಮ ಭ್ರಮೆಗೆ ಬಹುದೂರವಾಗಿದೆ. ಬ್ರಹ್ಮದೇವನನ್ನು ಒಲಿಸಿಕೊಳ್ಳುವುದಕ್ಕಾಗಿ ಭ್ರಮೆಯಿಂದ ಮನ ಅಂಗವನ್ನೇ ಅಟ್ಟೆಯಂತೆ ಮಾಡಿ ನಿಟ್ಟೆಲುವು

ಮುರಿಯುವಂತೆ ಪದ್ಮಾಸನದಲ್ಲಿ ತುಟಿ ಮಿಡುಕದೆ ಕುಳಿತು ದಣಿಯುತ್ತದೆ. ಭ್ರಮೆಗೆ ಬ್ರಹ್ಮ ಒಲಿಯುವುದೇ ಇಲ್ಲ.

ಭ್ರಮಾಧೀನವಾದ ಮನ ತನ್ನ ಭ್ರಮೆಯನ್ನು ಕಳೆದುಕೊಂಡು ಕಣ್ಣು ಬಿಟ್ಟರೆ ಸಾಕು. ಬಿಟ್ಟ ಕಣ್ಣಿನ ಗರ್ಭದಲ್ಲಿಯೇ ಬ್ರಹ್ಮನ ಗುಡಿ ಇದೆ. ತುಟಿಯಿಂದ ಪಟಿಸಿದ ಶಬ್ದದ ಮರೆಯಲ್ಲಿಯೇ ಬ್ರಹ್ಮ ಪದವಿದೆ. ಶಬ್ದ ಕೇಳಿದ ಕಿವಿಯ ಮರೆಯಲ್ಲಿಯೇ ಬ್ರಹ್ಮನ ಮಹಾಮನೆಯಿದೆ. ಮೂಗು, ಚರ್ಮದ ನಿರ್ಭಾವದ ಅರಿವೇ ಬ್ರಹ್ಮನ ವಾಸಸ್ಥಳ. ಮನದ ಭ್ರಮೆ ಬ್ರಹ್ಮನಲ್ಲಿ ಲೀನವಾದಾಗಲೇ ಬ್ರಹ್ಮಪದವಿ ಮನಕ್ಕೆ ಲಭಿಸಿ ಮನವೇ ಘನಮನವಾಗುತ್ತದೆ.

815

ಸುನಾದ ಬಿಂದು ಪ್ರಣವ ಮಂತ್ರ ದಗ್ರದ ಕೊನೆಯಲ್ಲೈದುವುದೆ ?
ಸೋಹಂ ಸೋಹಂ ಎಂದೆನುತ್ತಿದ್ದಿತ್ತು.
ಕೋಹಂ ಎಂಬುದ ಕಳೆದು ಬ್ರಹ್ಮರಂಧ್ರದೊಳಗೆ.
ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ!
ಆನಂದಂ ಬ್ರಹ್ಮಣೋ ವಿದ್ವಾನ್‌ನ ಬಿಭೇತಿ ಕುತಶ್ಚನ
ಇಂತೆಂದುದಾಗಿ,
ಅಗಮ್ಯ ಕೂಡಲಸಂಗಮದೇವನಲ್ಲದೆ ಮತ್ತಾರು ಇಲ್ಲ.

ಪ್ರಣವ ಮಂತ್ರ ಎನ್ನುವುದು ಶಬ್ದವಲ್ಲ. ಶಬ್ದದಿಂದ ನುಡಿಯುವುದು ಪ್ರಣವವೂ ಅಲ್ಲ. ಅದರಲ್ಲಿರುವ ನಾದಬಿಂದು ಪಠಿಸಿದರೆ ಒಲಿಯುವುದೂ ಅಲ್ಲ. ಅದು ಕೊನೆಯಲ್ಲಿ ವಶವಾಗುತ್ತದೆ ಎನ್ನುವುದೂ ಸುಳ್ಳು. ಪ್ರಣವವೇ ತಾನೆಂದು ತನಗೆ ಮನವರಿಕೆಯಾಗಬೇಕು.

ನಾನು ಯಾರು ಎಂದು ನನ್ನನ್ನೇ ನಾನು ಪ್ರಶ್ನಿಸಿಕೊಳ್ಳುವ ಶಕ್ತಿಯೇ ಬಿಂದು; ಪ್ರಶ್ನಿಸಿಕೊಳ್ಳುವ ನಾನೇ ಪ್ರಣವ ಎಂದು ತಿಳಿಯುವ ಶಕ್ತಿ ಬರುವವರೆಗೆ ಪ್ರಣವ ತಾನೇ ಆಗಿದ್ದು ಪ್ರಣವವನ್ನು ಪಠಿಸುವುದು ಬಿಡುವುದು ಸಾಧ್ಯವಾಗುವುದಿಲ್ಲ.

ತಾನು ಯಾರೆಂದು ತನಗೆ ತಾನೇ ಪ್ರಶ್ನಿಸಿಕೊಂಡು ತಾನೇ ಪ್ರಣವ ಎಂದು ತನಗೆ ತಾನೇ ಅನುಭವಕ್ಕೆ ಬರುವವರೆಗೆ ಪ್ರಣವ ಪಠಿಸುವ ನೀನೇ ಪ್ರಣವ ಎಂದು ನುಡಿದು ಹೇಳಿದರೂ ತಿಳಿಯುವುದಿಲ್ಲ.

ಯಾರನ್ನು ಹುಡುಕುವ ನೀನು ಅದೇ ನೀನಾಗಿರುವೆಯೋ ಆ ಬ್ರಹ್ಮನಿಗೆ ಯಾವ ಭ್ರಮೆಯ ಮಾತುಗಳೂ ತಟ್ಟವು. ಯಾವ ಮನಸ್ಸಿನ ದುರಾಲೋಚನೆಗಳೂ ಬಡಿಯವು. ಹರಿತವಾದ ಖಡ್ಗವೂ ಸೀಳದೆ ದೂರ ಸರಿಯುವುದು. ಅಗಮ್ಯವೂ ಅಪ್ರಮಾಣವೂ ಅಪ್ರತಿಮವಾದ ಬ್ರಹ್ಮಾನಂದವು ಉಂಟಾಗಿ ಅಮೃತಾತ್ಮನೆ ತಾನಾಗುತ್ತಾನೆ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಲ್ಲದೆ ಮತ್ತೊಬ್ಬ ದೇವನಿಲ್ಲ. ಮನ ಭ್ರಮೆಯನ್ನು ಕಳೆದುಕೊಂಡು ಬ್ರಹ್ಮನಲ್ಲಿ ಲೀನವಾಗಬೇಕು. ಅವನು ಅಪ್ರತಿಮನು, ಅಪ್ರಮಾಣನು, ಅಗಮ್ಯನು, ಜಗದಗಲ ಮುಗಿಲಗಲ ವ್ಯಾಪಿಸಿಕೊಂಡವನು ಬ್ರಹ್ಮಾಂಡದಿಂದತ್ತತ್ತಲೂ ಪಾತಾಳದಿಂದತ್ತತ್ತಲೂ ಚಾಚಿಕೊಂಡವನು. ಅಂಗದಲ್ಲಿ ಸಂಗಮವಾದ ಸಂಗಮನಾಥನು!

816

ಬೆಳಗಿನೊಳಗಣ ಬೆಳಗು ಮಹಾಬೆಳಗು !
ಶಿವಾ ಶಿವಾ; ಪರಮಾಶ್ರಯವೇ ತಾನಾಗಿ,
ಶತಪತ್ರಮಳ ಕರ್ಣಿಕಾ ಮಧ್ಯದಲ್ಲಿ
ಸ್ವತಃಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ.

ಶತಪತ್ರ ಅಮಲಾನಂದ ಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿ, ಪರಮಾಶ್ರಯವೇ ತಾನಾಗಿ, ಬೆಳಗಿನೊಳಗಣ ಬೆಳಗು ಮಹಾಬೆಳಗು ಕೂಡಲಸಂಗಮದೇವ.

ಬೆಳಕಿನೊಂದಿಗೆ ಬಂದ ನೆರಳು ಬೆಳಕಿನಿಂದಲೇ ಜನ್ಮ ಪಡೆದಿದ್ದರೂ ಮಹಾಬೆಳಗನರಿಯದ ಅಂಧಕಾರದ ಕತ್ತಲದು. ಬೆಳಕಿನ ಮನೆಯಲ್ಲಿ ಕತ್ತಲು ಮಾಡಿಕೊಂಡು ಬೆಳಕನುಡುಕುತ್ತಾ ಬೆಳಕಿನ ಮನೆಯೊಂದಿಗೆ ಕಾಲಕಳೆಯುತ್ತದೆ.

ಮನದ ಗುಣವೇ ಹೀಗೆ! ಇದು ಯಾವ ಜಪತಪಗಳನ್ನು ಮಾಡಬೇಕಿಲ್ಲ. ಬೆಳಕಿನಿಂದ ಬಂದ ಬೆಳಕಿನ ಬೀಜದ ಕತ್ತಲ ಸಿಪ್ಪೆಯಿದು. ಶತಪತ್ರ ಅಮಲಾನಂದದಲ್ಲಿಯ ಪರಮಾಶ್ರಯ ಹೊಂದಿರುವ ಮಹಾಬೆಳಗಿನಲ್ಲಿ ಲೀನವಾದರೆ ಸಾಕು. ಕತ್ತಲಸಿಪ್ಪೆ ಬೆಳಗಿನಂತೆ ಬೆಳಗುತ್ತದೆ. ಮಹಾಬೆಳಗೇ ತಾನಾಗುತ್ತದೆ.

817

ಆಚಾರ ಶಿವಾಚಾರವೆಂದರಿಯದ ಕಾರಣ,
ಷಡುದರುಶನಗಳೆಲ್ಲಾ ತಮತಮಗೆ ಶರಣೆನುತ್ತಿದ್ದವು.
ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲಾ ಶರಣು ಶರಣೆನುತ್ತಿದ್ದವು.
ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ
ಬಹಿರಂಗದಲ್ಲಿ ವರ್ತಿಸುವವರಿಗೆ ಎಲ್ಲಿಯದೋ ?

ಅಗೋಚರದ ಆಚಾರವೇ ಶಿವಾಚಾರವೆಂದು ಅರಿಯದ ಕಾರಣ ಷಡುದರುಶನಗಳು ಕೂಡಾ ಶಿವನನ್ನು ಕಾಣಲರಿಯವು. ಶಿವನ ವೃತ್ತಾಂತ ಹೇಳಿದರು ಕೂಡಾ, ಅರಿವಿನ ವೃತ್ತಾಂತ ಹೇಳಿದರೂ ಕೂಡಾ ಶಿವನು ಯಾರು ? ಶಿವ ಹೇಗಿದ್ದಾನೆ ಎಂದು ಅರಿಯದೆ ತಮಗೆ ತಾವೇ ಶರಣೆಂದುಕೊಳ್ಳುತ್ತಿದ್ದವು.

ಮಹತ್ವದ ಶಿವತತ್ತ್ವವನೆ ಬೀರುವ ಶೈವಾಗಮಗಳು ಕೂಡಾ ಶಿವನನ್ನು ಅರಿಯವು. ತತ್ತ್ವಂಗಳನ್ನು ವೇದ ಆಗಮಂಗಳನು ಶಿವಾಚಾರಂಗಳನು ಹೇಳುವ ಪುಸ್ತಕಗಳಲ್ಲಿ ಶಿವನಿಲ್ಲ. ಶಿವ, ಪುಸ್ತಕಗಳಿಂದ ಸಿದ್ಧನಾಗುವುದಿಲ್ಲ. ಇದು ಬಹಿರಂಗದ ವ್ಯವಹಾರ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸದಾಶಿವನ ಅಗೋಚರದ ಆಚಾರದಿಂದಲೇ ಸರ್ವಪುಸ್ತಕಗಳೂ ಸಿದ್ಧವಾಗಿವೆ. ಪುಸ್ತಕಳಿಗೆ ಮಾರುಹೋದ ಮನ ಅರಿವಿಗೆ ಮಾರು ಹೋಗಬೇಕು.

818

ತಮತಮಗೆಲ್ಲ ನೊಸಲಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲ ಖಟ್ವಾಂಗ ಕಪಾಲ ತ್ರಿಶೂಲಧರರು.
ದೇವರಾರು, ಭಕ್ತರಾರು ? ಹೇಳಿರಯ್ಯಾ !
ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು;
ಎನ್ನ ಬಚ್ಚಬರಿಯ ಬಸವನೆನಿಸಯ್ಯಾ.

ಕಣ್ಣೊಳಗಿನ ಅರಿವಿನ ಕಣ್ಣು ತಿಳಿದರೆ ಸಾಕು ಕಣ್ಣ ಕಸ ಸುಟ್ಟ ನೊಸಲ ಕಣ್ಣು ಕಾಣುವುದು. ಅದೇ ಶಿವನ ಕಣ್ಣು ! ಪಶು ಪ್ರವೃತ್ತಿಯನ್ನು ಕಳೆದುಕೊಂಡು ಆ ನಂದಿಯನ್ನೇ ವಾಹನ ಮಾಡಿ ಚಲಿಸುವವನೇ ನಂದಿವಾಹನರು. ಇವರು ಪಶುಪತಿಯೂ ಹೌದು. ಖಟ್ವಾಂಗ ಕಪಾಲ ತ್ರಿಶೂಲಧರನೂ ತಾನೇ.

ವ್ಯವಹಾರದಿಂದ ನೋಡಲು ಹೋದ ಭಕ್ತನಿಗೆ ವ್ಯವಹಾರದ ದೇವರು ಸಿಗುತ್ತಾನೆ. ತಾನು ನಿಜ ಭಕ್ತನಾಗುವಂತಿಲ್ಲ; ಪೂಜೆಗೊಳಗಾದ ದೇವರು ಎಂದೂ ನಿಜದೇವರಾಗಲು ಸಾಧ್ಯವಿಲ್ಲ.

ದೇವರನು ಅರಿಯಲು ಹೋದ ಭಕ್ತ ತಾನೇ. ಆತನಿಗೆ ಶರಣುಹೋದ ಶರಣನು ತಾನೇ. ಭಕ್ತನಲ್ಲಿಯೇ ದೇವರನ್ನು ಕಂಡ. ಆತನಿಗೆ ಶರಣುಹೋಗಿ ಶರಣನಾದ. ಅಜ್ಞಾನದ ಕಣ್ಣ ಕಳೆದುಕೊಂಡು ನೊಸಲ ಕಣ್ಣ ನೋಡಿದ. ತನ ತನಗೆ ನೊಸಲಕಣ್ಣವನಾದ.

ದೇವರಿಲ್ಲ; ಭಕ್ತರಿಲ್ಲ. ಅರಿವಿಗೆ ಶರಣು ಹೋದ ಶರಣರು ತಮ ತಮಗೆ ಸ್ವತಂತ್ರರು. ದೇವರು ಭಕ್ತ ಶರಣ ಎಂದು ನಾನಾ ಹೆಸರಿನಿಂದ ಕರೆಯಿಸಿಕೊಳ್ಳುವುದಕ್ಕಿಂತ ನನ್ನನ್ನು ಬಚ್ಚ ಬರಿಯ ಬಸವನೆಂದೆನಿಸಯ್ಯ ಕೃಪೆ ಮಾಡು ತಂದೆ ; ಅಂಗವನ್ನೇ ಅರಿವಿನ ಮನೆ ಮಾಡಿಕೊಂಡು ಆನಂದದಿಂದ ಮೆರೆಯುವ ಸಂಗಮನಾಥನೆ !

819

ಗುರುವಿನ ಸದಾಚಾರ; ಲಿಂಗದಲ್ಲಿ ಅನುದಿನ ವೇಳೆ,
ಜಂಗಮದಲ್ಲನುಭಾವ, ಸಮಯಾಚಾರ; ಲಿಂಗದಲ್ಲಿ ಅನುದಿನ ವೇಳೆ
ಈ ಉಭಯಚಾರದಿಂದ ತಿಳಿದ ತಿಳಿವು ಲಿಂಗದಲ್ಲಿ ಅನುದಿನ ವೇಳೆ.
ಬೇರೆ ತೋರಲಿಲ್ಲ
ಲಿಂಗಜಂಗಮದಲ್ಲಿ ಲೀಯವಾದ ಸಮಯಾಚಾರ.
ಇದು ಕಾರಣ, ಕೂಡಲಸಂಗಮದೇವಾ,
ಲಿಂಗದಲ್ಲಿ ಅನುದಿನ ವೇಳೆ.

ಅರಿವಿನ ಅಂಗದಲ್ಲಿ ಅದ್ಭುತವಾದ ಚಮತ್ಕಾರವೇ ಇದೆ. ಇದನ್ನು ಅಂಗವನ್ನೇ ಆವರಿಸಿದ ಮನದಿಂದಲೇ ತಿಳಿದುಕೊಳ್ಳಬೇಕು. ಅಂಗದಲ್ಲಿ ಅರಿವೆಂಬ ಗುರುದೇವನಿದ್ದಾನೆ. ಆ ಗುರುವಿಗೆ ಮನವೇ ಭಕ್ತಿ ಮಾಡಿ ಗುರುದೇವನ ಸದಾಚಾರವನ್ನು ಗುರುವಿನಿಂದಲೇ ಅನುದಿನ ತಿಳಿಯಬೇಕು. ಇದು ಅಂಗವೆಂಬ ಅರಿವಿನ ಲಿಂಗದಲ್ಲಿ ಅನುದಿನವೂ ನಡೆಯುವ ಘಟನೆ. ಸದಾಚಾರದ ಗುರುವಿನ

ಆನಂದಮಯ ಘಟನೆ.

ಅಂಗದಲ್ಲಿಯೇ ಗುರುದೇವ ಸಂಗಮವಾಗಿದ್ದಾನೆ. ಸದಾಚಾರದ ಸವಿಯ ನುಡಿಯನೇ ನುಡಿಯುತ್ತಾನೆ. ಅಂಗದಲ್ಲಿ ಜಂಗಮನು ಸಂಗಮವಾಗಿದ್ದಾನೆ. ಈತ ಗುರುವಿನ ಸವಿ ನುಡಿಯನು ಸದಾ ಪಾಲಿಸುತ್ತಾನೆ. ಅನುದಿನವೂ ಪಾಲಿಸುತ್ತಾನೆ. ಗುರುವಿನ ಸದಾಚಾರವನು ಜಂಗಮ ಅನುಭವಿಸಿ ಸ್ವಾನುಭವದಿಂದ ಸಮಯಾಚಾರ; ಅಂಗವೆಂಬ ಅರಿವಿನ ಲಿಂಗದ ಮೂಲಕ ಅನುದಿನ ಪಾಲಿಸುತ್ತಾನೆ.

ಗುರವಿನ ಸದಾಚಾರ ; ಜಂಗಮದ ಅನುಭಾವ ಈ ಉಭಯಾಚಾರದಿಂದ ತಿಳಿದ ತಿಳಿವು ಅರಿವಿನ ಅಂಗದಲ್ಲಿ ಮನಕ್ಕೆ ಅನುದಿನ ವೇಳೆ ಬೇರೆ ತೋರದಂತೆ ಘಟಿಸುವ ಲಿಂಗ ಜಂಗಮದಲ್ಲಿ ಲೀಯವಾದ ಸಮಯಾಚಾರವು.

ಅಂಗವನ್ನು ಆವರಿಸಿರುವ ಮನ ಸತ್ಯದಿಂದ ಘಟಿಸುವ ಅರಿವಿನ ಲಿಂಗದಲ್ಲಿಯೇ ಅನುದಿನವೂ ತಿಳಿತಿಳಿದು ಲೀಯವಾದರೆ ಸಾಕು. ಮನ ಮಾಡುವ ಕೆಲಸವೇ ಇಲ್ಲ. ಲಿಂಗ ಜಂಗಮರು ಗುರುವಿನ ಮಾತು ಪಾಲನೆ ಮಾಡಿ ಅನುದಿನವೂ ಪಾಲಿಸುತ್ತಾರೆ.

ಇದು ಜ್ಞಾನಭಂಡಾರಿ ಬಸವಣ್ಣನವರ ಸರಳ ಅರಿವಿನ ಸತ್ಯದ ಸೂತ್ರ !

820

ಉಳ್ಳವರು ಶಿವಾಲಯವ ಮಾಡುವರು;
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೆ ಹೊನ್ನ ಕಲಶವಯ್ಯಾ.
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಉಳ್ಳವರು ಶಿಲೆಯನ್ನು ಕಟೆದು, ಆಲಯ ಕಟ್ಟಿ, ಶಿಲೆಯಲ್ಲಿಯೇ ಶಿಖರ ನಿರ್ಮಿಸಿ; ಶಿಲೆಯ ಕಟೆದು, ಶಿಲೆಯಲ್ಲಿಯೇ ಶಿವನನ್ನು ಮಾಡಿ ಶಿವಾಲಯವ ಮಾಡುವರು. ಶಿಲೆ ಮರೆತು ಶಿವನೆಂದು ಪೂಜಿಸುವರು. ನಾನೇನ ಮಾಡುವೆ ಬಡವನಯ್ಯಾ.

ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯಾ. ಕೂಡಲ ಸಂಗಮದೇವಾ ಕೇಳಯ್ಯಾ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ:

ಅಂಗ, ಶಿಲೆಯಿಂದ ಶಿವಾಲಯವನ್ನು ನಿರ್ಮಿಸಿತು. ಮನ ಅಂಗದಲ್ಲಿಯೆ ಸಂಗಮವಾದ ಶಿವನನ್ನು ಬಳಸಿ ಶಿಲೆಯಲ್ಲಿಯೇ ಶಿವಾಲಯ ನಿರ್ಮಿಸಿತು. ಶಿವನಿದ್ದ ಅಂಗವನ್ನೇ ಮರೆತು, ಶಿಲೆಯನ್ನೂ ಮರೆತು, ಆಲಯವನ್ನು, ಶಿಲೆಯ ಶಿವನನ್ನು ಪೂಜಿಸಿತು.

ಶಿವನಿದ್ದ ಅಂಗವೂ ಸ್ಥಾವರ, ಶಿಲೆಯಿದ್ದ ಶಿವಾಲಯವು ಸ್ಥಾವರ. ಇವೆರಡಕ್ಕೂ ಅಳಿವುಂಟು. ಇದು ತನ್ನಿಂದಲೇ ಸಿದ್ಧವಾಗುವುದು. ಆದರೂ ಅಂಗದಲ್ಲಿ ಸಂಗಮವಾದ ಮನಕ್ಕೆ ತಿಳಿಯಲಿಲ್ಲ. ಜಂಗಮನಿಗೆ ಅಳಿವಿಲ್ಲವೆಂದು ಮನಕ್ಕೆ ತಿಳಿಯಲಿಲ್ಲ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಜಂಗಮನಿದ್ದ ಶಿವಾಲಯ ಮನಕ್ಕೆ ತಿಳಿಯಲಿಲ್ಲ.

ನಡೆದಾಡುವ ಚೇತನದ ಕಾಲಕಂಬಗಳ ಶಿವಾಲಯ ಮನಕ್ಕೆ ತಿಳಿಯಲಿಲ್ಲ. ದೇವರಿದ್ದ ದೇಹವೇ ಶಿವಾಲಯವೆಂದು ಮನಕ್ಕೆ ತಿಳಿಯಲಿಲ್ಲ. ಸಹಸ್ರ ಕಮಲ ಪತ್ರಗಳುಳ್ಳ ಅರಿವಿನ ಶಿರವೇ ಶಿವಾಲಯದ ಹೊನ್ನ ಕಳಶವೆಂದು ಅಜ್ಞಾನಿ ಮನಕ್ಕೆ ತಿಳಿಯಲಿಲ್ಲ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲವೆಂದು ಅರಿವಿನ ಲಿಂಗವಿದ್ದ ಅಂಗಕ್ಕೆ ಅಂಗವನ್ನು ಆವರಿಸಿದ ಮನಕ್ಕೆ ತಿಳಿಯಲಿಲ್ಲ. ಶಿಲೆಯಿಂದಾದ ಶಿವಾಲಯದ ಪೂಜೆ ನಿಲ್ಲಲೇ ಇಲ್ಲ.

ಪ್ರಾಣಲಿಂಗಿಯ ಭಕ್ತಸ್ಥಲ

821

ಅಷ್ಟದಳ ಕಮಳಾತ್ಮದೊಳಗೆ,
ನೆಟ್ಟನೆ ಮನಃಪ್ರೇರಕನೆಂದು ನಂಬಿದೆ; ಮತ್ತೊಂದನರಿಯದೆ.
ನಿತ್ಯ ಸ್ವತಂತ್ರನು ನೀನೆ; ದೃಷ್ಟಲಿಂಗಜಂಗಮ ಒಂದೆ ಎಂದಿಪ್ಪೆನು
ಪ್ರಭುವೆ, ಕೂಡಲಸಂಗಮದೇವಾ.

ಅಂಗವೆಂಬುದು ಒಂದು ಅಷ್ಟದಳ ಕಮಲ. ಸುಗಂಧ ಭರಿತವಾದ ಸಂಗಮನಾಥನ ವಾಸಸ್ಥಳ! ಮನವೆಂಬ ದುಂಬಿಯನ್ನು ಆಕರ್ಷಿಸುವ ಪ್ರೇರಕ ಮೂರ್ತಿ!

ಮಕರಂಧವೇ ಸರ್ವಸ್ವವೆಂದು ತಿಳಿದ ದುಂಬಿ ಮತ್ತೊಂದನರಿಯದೆ ಅಷ್ಟದಳ ಕಮಲದಲ್ಲಿರುವ ಅರಿವಿನ ಮಕರಂದವನ್ನು ಹೀರುತ್ತ ಮೈಮರೆತರೆ; ಮಕರಂದವಾವುದೊ ಅದನ್ನು ಹೀರುವ ತಾನಾರೋ ಎಂಬುದನ್ನರಿಯದೆ ಪಕಳೆಗಳಲ್ಲಿ ಬಂಧಿಯಾಗಿ ಮಕರಂದವೂ ದುಂಬಿಯೂ ಒಂದಾಗಿ ಸಂಗಮವಾಯಿತು.

ಅಂಗದಲ್ಲಿರುವ ಅರಿವೆಂಬ ಸಂಗಮನಾಥನು ಸದಾ ಮನ ಪ್ರೇರಕನು! ಕಮಲದ ಹೂ ಮಕರಂಧವನ್ನು ಗಾಳಿಯಲ್ಲಿ ಚೆಲ್ಲಿ ಹಾರುವ ದುಂಬಿಯನ್ನು ಕರೆತಂದು ತನ್ನ ಬಾಹುಗಳಲ್ಲಿ ಬಂಧಿಸಿಕೊಂಡಂತೆ. ಮತ್ತೆ ಎತ್ತೆತ್ತಲೂ ಹಾರದಂತೆ ಹೆಳವನ ಮಾಡಿ ದುಂಬಿಯ ಪ್ರಾಣವನ್ನು ಮಕರಂಧದದಲ್ಲಿ ಸಂಗಮ ಮಾಡಿಕೊಳ್ಳುತ್ತದೆ !

822

ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ ?
ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲಸಂಗಮದೇವಾ.

ಭಕ್ತ ದೇವರನ್ನು ಅರಿಯದ ಮುನ್ನ ದೇವರೆಲ್ಲಿದ್ದ ? ಭಕ್ತನ ಸರ್ವಾಂಗದಲ್ಲಿದ್ದು ದೇವರನು ಭಕ್ತನಿಗೆ ತೋರಲಿಕೆ ಭಕ್ತನ ರೂಪ ಧರಿಸಿದ. ಆ ರೂಪವೇ ಅರಿವಿನ ಅಂಗವೆನಿಸಿ ಅಲ್ಲಿಯೇ ಸಂಗಮವಾಗಿ ಲಿಂಗಾಂಗವೆನಿಸಿದ. ಆ ಲಿಂಗದಲ್ಲಿಯೇ ಜಂಗಮವಾಗಿ ಕಂಡ.

ಅಂಗವೆ ಲಿಂಗವೆಂದು, ಲಿಂಗವೇ ಜಂಗಮವೆಂದು ಭಕ್ತ ನಂಬಿದ ಕಾರಣ ರೂಪದಲ್ಲಿಯೇ ನಿರೂಪ ಸಂಗಮವಾದುದು ಭಕ್ತನ ನಿರೂಪ ದೃಷ್ಟಿಗೆ ಗೋಚರವಾಗಿ ರೂಪೆಂದರೆ ನಿರೂಪ! ನಿರೂಪವೆಂದರೆ ರೂಪ !

ನಿರೂಪವಾಗಿ ತೋರದ ದೇವನು ಭಕ್ತನ ರೂಪದಲ್ಲಿಯೇ ದರ್ಶನವಿತ್ತ. ಹೂ ರೂಪಾದರೇನು ? ಅದನ್ನು ನೋಡುವ ದೃಷ್ಟಿ ನಿರೂಪ. ಹೂವಿನ ಸೌಂದರ್ಯ ಸುಖ ಸವಿಯುವ ಅಂಗ ರೂಪ. ನಿರೂಪವಿಲ್ಲದಿರೆ ರೂಪಕ್ಕೆ ಅರ್ಥವಿಲ್ಲ !

823

ಗುರು ಮುನಿದಡೆ ಒಂದು ದಿನ ತಾಳುವೆ,
ಲಿಂಗ ಮುನಿದಡೆ ದಿನವರೆ ತಾಳುವೆ,
ಜಂಗಮ ಮುನಿದಡೆ ಕ್ಷಣ ಮಾತ್ರ ತಾಳಿದೆನಾದಡೆ,
ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ.

ಅಂಗದಲ್ಲಿಯೇ ಸಂಗಮವಾಗಿ ಅರಿವಿನ ಪಾಠ ಮಾಡುವ ಸದ್ಗುರು ಮುನಿದಡೆ ಒಂದು ದಿನ ತಾಳಬಹುದು. ಅಂಗದಲ್ಲಿಯೇ ಸಂಗಮವಾದ ಲಿಂಗವೆಂಬ ಅರಿವು ಮುನಿದಡೆ ಒಂದುವರೆ ದಿನ ತಾಳಬಹುದು. ಇವರಿಬ್ಬರೂ ಅಂಗದಲ್ಲಿಯೇ ಇದ್ದು ಅರಿವಿನ ಮಾಹಿತಿ ನೀಡುವವರು. ಅರಿವಿನ ಮಾಹಿತಿ ಅಂಗದಲ್ಲಿಯೇ ಸಂಗಮವಾದ ಮನಕ್ಕೆ ಲಭ್ಯವಾಯಿತು. ಆದರೇನು ಸುಖ?

ಅರಿವೆಂದರೆ ಏನು, ಗುರುವೆಂದರೆ ಯಾರು, ಜಂಗಮನೆಂದರೆ ಯಾರು ಎಂದು ಮನ ಮಾಹಿತಿ ಪಡೆದುಕೊಳ್ಳಬಹುದು. ಆದರೆ ಮನ ಸ್ವತಹ ಪಾಲಿಸಲರಿಯದು.

ಜಂಗಮ ಮುನಿದಡೆ ಒಂದು ಕ್ಷಣ ಮಾತ್ರ ತಾಳಲು ಮನಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಹೌದು ಅಲ್ಲಗಳನ್ನು ಕತ್ತರಿಸಿ ಅರಿವಿನಿಂದ ಅಂಗವನ್ನು ಸಶಕ್ತಗೊಳಿಸುವವನು ಜಂಗಮನೇ ಆಗಿರುವುದರಿಂದ.

824

ಅರಸು ಮುನಿದಡೆ ನಾಡೊಳಗಿರಬಾರದಯ್ಯ ;
ಗಂಡ ಮುನಿದಡೆ ಹೆಂಡತಿಗೆ ಇರಬಾರದಯ್ಯಾ .
ಕೂಡಲಸಂಗಮದೇವಾ,
ಜಂಗಮ ಮುನಿದಡೆ ನಾನೆಂತು ಬದುಕುವೆ ?

ಅರಸು ಮುನಿದಡೆ ನಾಡು ಬಿಡಬಹುದು. ಗಂಡ ಮುನಿದಡೆ ಹೆಂಡತಿ ಮನೆ ಬಿಡಬಹುದು. ಅಂಗದಲ್ಲಿದ್ದು, ಅಂಗದಲ್ಲಿಯೇ ಸಂಗಮವಾದ ಜಂಗಮ ಮುನಿದಡೆ ಅಂಗ ಬದುಕುವುದೆಂತು ?

ಅಂಗವನ್ನು ಆವರಿಸಿದ ಮನ ಪ್ರಜೆಯ ಸ್ಥಾನದಲ್ಲಿದ್ದು ಅರಸನನ್ನು ಗೌರವಿಸುತ್ತದೆ. ಹೆಂಡತಿಯ ಸ್ಥಾನದಲ್ಲಿದ್ದು ಗಂಡನನ್ನು ಒಲೈಸುತ್ತದೆ. ಅಂಗವನ್ನು ಆವರಿಸಿದ ಮನಕ್ಕೆ ಅಂಗದಲ್ಲಿಯೆ ಸಂಗಮವಾದ ಜಂಗಮನನ್ನು ತಿಳಿಯುವುದು ಸಾಧ್ಯವಾಗುವುದಿಲ್ಲ.

ಅಂಗದಲ್ಲಿಯೇ ಸಂಗಮವಾದ ಜಂಗಮ ಮುನಿದಡೆ ಅಂಗವನ್ನು ಆವರಿಸಿದ ಮನವೆಂಬ ಮರ್ಕಟವೂ ಬದುಕುವುದಿಲ್ಲ; ಅಂಗವೂ ಬದುಕುಳಿಯುವುದಿಲ್ಲ.

ಜಂಗಮನನ್ನು ಬಿಟ್ಟು ಅಂಗವಿಲ್ಲ; ಅಂಗವನ್ನು ಬಿಟ್ಟು ಮನವಿಲ್ಲ. ಜಂಗಮದಿಂದಲೇ ಜನ್ಮ ಪಡೆದ ಅಂಗ ಮನಗಳೆರಡೂ ಜಂಗಮನೆ ಸರ್ವಸ್ವವೆಂದು ತಿಳಿಯದಿದ್ದರೆ ಗತ್ಯಂಥರವಿಲ್ಲ.

825

ರಚ್ಚೆಯ ನೆರವಿಗೆ ನಾಣುನುಡಿ ಇಲ್ಲದಿಹುದೆ ?
ಅದರೆಂತೆನಬಹುದೆ ಸಜ್ಜನ ಸ್ತ್ರೀಯ ?
ಅದರೆಂತೆನಬಹುದೆ ಭಕ್ತಿರತಿಯ ?
ಕರುಳಕಲೆ ಪ್ರಕಟಿತವುಂಟೆ,
ಕೂಡಲಸಂಗಮದೇವಾ.

ಅರಿವಿನ ಸುಖವೆಂದರೆ ಅದು ಕರುಳ ಕಲೆ. ನುಡಿದು ಹೇಳಲು ಸಾಧ್ಯವಾಗುವುದಿಲ್ಲ. ಬಾಹ್ಯ ಸುಖವನ್ನು ನುಡಿದು ಹೇಳಬಹುದು. ಆಂತರಂಗಿಕ ಸುಖವನ್ನು ಸಜ್ಜನ ಸ್ತ್ರೀ ಹೇಗೆ ನುಡಿದು ಹೇಳಲು ಬರುವುದಿಲ್ಲವೋ ಹಾಗೆಯೇ ಭಕ್ತಿ ರತಿ ಕೂಡಾ ಆಗಿದೆ. ತಾನುಂಬ ಊಟವನ್ನು , ತಾ ಕೊಂಬ ರತಿ ಸುಖವನು ಅನ್ಯರಿಂದ ಮಾಡಿಸಲೂ ಬರುವುದಿಲ್ಲ; ಅನ್ಯರಿಗೆ ಹೇಳಲೂ ಬರುವುದಿಲ್ಲ.

ಅರಿವಿನ ಸುಖ ತೀರಾ ವೈಯಕ್ತಿಕ ಸುಖ. ಹೆಂಡತಿ ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡಬಹುದು. ಆದರೆ ತಾನು ಅನುಭವಿಸಿದ ಅರಿವಿನ ಶ್ರೀಮಂತಿಕೆಯ ಸುಖವನು ಹೆಂಡತಿ ಮಕ್ಕಳಾದರೂ ಕೂಡಾ ಮಿತ್ರರು ನೆರೆ ಹೊರೆಯವರಾದರೂ ಕೂಡಾ ಸ್ವಾನುಭವದಿಂದ ಅನುಭವಿಸಿಯೇ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ.

826

ಭೂತ ಒಲಿದು ಆತ್ಮನ ಸೋಂಕಿದ ಬಳಿಕ
ಭೂತದ ಗುಣವಲ್ಲದೆ ಆತ್ಮನ ಗುಣವುಂಟೆ ?
ಗುರುಕಾರುಣ್ಯವಾಗಿ ಹಸ್ತಮಸ್ತಕ ಸಂಯೋಗವಾದ ಬಳಿಕ
ಗುರುಲಿಂಗಜಂಗಮವೆ ಗತಿಯಾಗಿರ್ದ
ಕೂಡಲಸಂಗಮದೇವಾ.

ಅಂಗವನ್ನು ಆವರಿಸಿದ ಮನವೆಂಬ ಅಜ್ಞಾನದ ಪೆಡಂಭೂತ ಆತ್ಮ ಸೋಂಕಿದ ಬಳಿಕ ಅಂಗಕ್ಕೆ ಭೂತದ ಗುಣವಲ್ಲದೆ ಆತ್ಮನ ಗುಣವುಂಟೆ ? ಆತ್ಮ ಅರಿವಿನ ಮಾರ್ಗದತ್ತ ಸೆಳೆಯುವುದನ್ನು ಬಿಡುವುದಿಲ್ಲ . ಮರ್ಕಟಮಯವಾದ ಮನ ಅಂಗವನ್ನು ತನ್ನತ್ತ ಸೆಳೆಯುವುದೂ ಬಿಡುವುದಿಲ್ಲ.

ಮನಕ್ಕೆ ಅಂಗವೇ ಬಾಯಿ ! ಮನವೆಂಬ ಮರ್ಕಟ ಅಂಗವನ್ನು ಬಳಸಿಕೊಂಡು ತಿನ್ನುತ್ತದೆ, ಭೋಗಿಸುತ್ತದೆ, ಕುಡಿಯುತ್ತದೆ, ನೋಡುತ್ತದೆ, ಸ್ಪರ್ಶಿಸಿ, ಮೂಸಿಸುತ್ತದೆ. ಅಂಗವೆಂಬ ಘನಲಿಂಗವನ್ನೇ ಮರ್ಕಟ ತನ್ನ ಮಾಯಾಜಾಲದಲ್ಲಿ ಬಂಧಿಸುತ್ತದೆ.

ಅಂಗವನ್ನು ಆವರಿಸಿದ ಮನ, ಗುರುದೇವನನ್ನು ಹುಡುಕಿ ಆತನ ಅರಿವಿನ ಹಸ್ತ, ಮಸ್ತಕದ ಮೇಲೆ ಬಿದ್ದು, ಹಸ್ತ ಮಸ್ತಕ ಸಂಯೋಗವಾದ ಬಳಿಕ ಗುರುಲಿಂಗ ಜಂಗಮವೇ ಮನಕ್ಕೆ ಗತಿಯಾಗಿ ಮನದ ಮರ್ಕಟತನವು ಅಳಿದು; ಘನಮನವಾಯಿತು.

827

ಹಸಿವು; ತೃಷೆ, ನಿದ್ರೆ, ವಿಷಯಂಗಳ ಮರೆದೆ;
ನೀವು ಕಾರಣ !
ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಂಗಳ ಮರೆದೆ;
ನೀವು ಕಾರಣ !
ಪಂಚೇಂದ್ರಿಯ ಸಪ್ತಧಾತು ಅಷ್ಟಮದಂಗಳ ಮರೆದೆ;
ನೀವು ಕಾರಣ !
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಅಪ್ಯಾಯನವಾದಡೆ ಎನಗೆ ತೃಪ್ತಿಯಾಯಿತ್ತು.

ಹಸಿವು, ತೃಷೆ, ನಿದ್ರೆ ವಿಷಯಕ್ಕೆ ಕಾರಣವಾದ ಮನ ನಿಮ್ಮ ಅರಿವಿನತ್ತ ಹೊರಳಿ ನಿಮ್ಮಲ್ಲಿಯೇ ಲೀನವಾದ ಕಾರಣ; ಅಲ್ಲಿಯೇ ನಿದ್ರೆ ಗೈದ ಕಾರಣ; ಅಜ್ಞಾನ ಮರೆತು ಘನಮನವಾಯಿತು.

ಕಾಮ , ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಆಸಕ್ತವಾದ ಮನ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಬೆರೆತು ಅಲ್ಲಿಯೇ ಮೈಮರೆತು ಅರಿವನು ಅರಿತು ಮತ್ತೆ ಅಜ್ಞಾನಕ್ಕೆಳೆಸಲೇ ಇಲ್ಲ. ಇದಕ್ಕೆಲ್ಲ ನೀವೇ ಕಾರಣ.

ಪಂಚೇಂದ್ರಿಯ ಸಪ್ತಧಾತು ಅಷ್ಟಮದಂಗಳ ಮರೆದೆ ನೀವು ಕಾರಣ:

ಅರಿವಿನ ಅಂಗಕ್ಕೆ ಜನ್ಮಕೊಟ್ಟು ಆ ಅಂಗದಲ್ಲಿಯೇ ಸಂಗಮವಾದ ಗುರುದೇವನನ್ನು ಮರೆತ ಕಾರಣ; ಮನವೇ ಅಂಗಕ್ಕೆ ಆವರಿಸಿ ಅಂಗದಲ್ಲಿಯೇ ಲಿಂಗಸ್ವರೂಪವಾದ ಪಂಚೇಂದ್ರಿಯಗಳನ್ನು ಮರೆಯಿತ್ತು. ಸಪ್ತಧಾತು ಅಷ್ಟಮದಗಳ ಮೂಲಕ ಅಂಗದೊಂದಿಗೆ ಸುಖಿಸಿತು. ಪುನಃ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ಗುರುಕರುಣೆಯಿಂದ ಅರಿತು ಅಜ್ಞಾನವನ್ನು ಮರೆಯಿತು.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ಕರುಣೆಯಿಂದಾಗಿ ಅಂಗವನ್ನು ಆವರಿಸಿದ ಮನ ಸಕಲ ಅಜ್ಞಾನಗಳನು ಕಳೆದುಕೊಂಡು ಅಂಗದಲ್ಲಿಯೇ ಸಂಗಮವಾಯಿತು.

828

ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ.
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ.
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ.
ಇಂತೀ ತ್ರಿವಿಧವು ನಿಮ್ಮದೆಂದ ಬಳಿಕ
ಇಂತೀ ಬೇರೆ ವಿಚಾರವುಂಟೆ, ಕೂಡಲಸಂಗಮದೇವಾ?

ತನು ಒಂದು ಬೆಳಕಿನ ಬಯಲ ಜಲಬಿಂದುವಿನ ಬೀಜ. ಮನ ಬೆಳಕಿನ ಬಯಲ ಬೀಜದ ನೆರಳು. ಧನವೆಂದರೆ ಅರಿವು. ಬಯಲ ಬೀಜವನ್ನು, ಅದನ್ನು ತಿಳಿಯುವ ಮನವನ್ನು, ಇವೆರಡನ್ನು ತಿಳಿಯುವ ಶಕ್ತಿ ಅರಿವಿಗಿದೆ.

ತನುವೆನ್ನುವ ಸ್ಥೂಲ ಶರೀರವು ನಿಮ್ಮದೆ. ಮನ ಎನ್ನುವ ಸೂಕ್ಷ್ಮ ಶರೀರವು ನಿಮ್ಮದೆ. ಧನ ಎನ್ನುವ ಕಾರಣ ಶರೀರವು ನಿಮ್ಮದೆ. ಇವು ಮೂರೂ ಶರೀರಗಳನ್ನು ಸೃಷ್ಟಿಸಿದ ಸೃಷ್ಟಿಕರ್ತರು ನೀವೆ ಎಂದ ಬಳಿಕ ನನಗೆ ಬೇರೆ ತನುವಿಲ್ಲ, ಮನವಿಲ್ಲ, ಧನವಿಲ್ಲ.

ತನು ಮನ ಧನವೆಂಬ ತ್ರಿವಿಧವು ನಿಮ್ಮದೆಂದು ಮನದಿಂದಲೇ ತಿಳಿಯಲು ಹೋಗಿ ಆ ಮನ ಅರಿವೆಂಬ ಗುರುದೇವನಲ್ಲಿ ಸಂಗಮವಾದ ಬಳಿಕ, ತಿಳಿಯಲು ಹೋದ ಮನವಿಲ್ಲವೆಂದ ಮೇಲೆ ತನುವಿಲ್ಲ ; ಧನವಿಲ್ಲ ! ತನುವಿನಲ್ಲಿ ಅರಿವು ತನ್ಮಯವಾಗಿ; ಅರಿವಿನಲ್ಲಿ ಮನ ತನ್ಮಯವಾಗಿ, ಮನ ಅರಿವುಗಳೆರಡು ತನುವಿನಲ್ಲಿ ಸಂಗಮವಾದವು.

ಪ್ರಾಣಲಿಂಗಿಯ ಮಾಹೇಶ್ವರಸ್ಥಲ

829

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿ ಭೋ, ನಿಮ್ಮ ಧರ್ಮ !
ಬೊಬ್ಬಿಡದಿರಿ ಭೋ, ನಿಮ್ಮ ಧರ್ಮ !
ಆರಡದಿರಿಂ ಭೋ, ನಿಮ್ಮ ಧರ್ಮ !
ಅಲ್ಲಿ ಉಂಬಡೆ ಸಂಗ, ಇಲ್ಲಿ ಉಂಬಡೆ ಸಂಗ !
ಕೂಡಲಸಂಗಮದೇವ ಏಕೋಭಾವ.

ಆಕಳು ಜೀವನೋಪಾಯಕ್ಕೆ ಪ್ರಧಾನವಾದುದು. ಅದನ್ನು ಕೊಂಡು ತಂದರೂ ತನ್ನದಲ್ಲ; ಕದ್ದು ತಂದರೂ ತನ್ನದಲ್ಲ. ಆಕಳು ತನ್ನ ಕರುವಿಗೆ ಉಣ್ಣಿಸಬೇಕಾದ ಹಾಲನ್ನು ಕೊಂಡು ತಂದವರು, ಕದ್ದು ತಂದವರಿಬ್ಬರೂ ಕದಿಯುತ್ತಾರೆ.

ಇಬ್ಬರಿಗೂ ಉಪಜೀವನವೇ ಪ್ರಧಾನವಾದ್ದರಿಂದ ಒಬ್ಬ ದುಡಿದು ಆಕಳು ಕೊಂಡು ಕಟ್ಟಿದ. ಮತ್ತೊಬ್ಬ ಕದ್ದು ಆಕಳು ಕಟ್ಟಿದ. ರಾಜನಾದವನು ಯುದ್ಧ ಮಾಡಿ ಪರ ರಾಜ್ಯದ ಆಕಳುಗಳನ್ನು ತಂದು ಕಟ್ಟಿದ. ಮೂರು ಜನರ ವೃತ್ತಿಗಳ ಉದ್ದೇಶ ಉಪಜೀವನವೇ ಆಗಿದೆ. ಉಪಜೀವನಕ್ಕಾಗಿ ಪರವಸ್ತುವಿನ ಮೇಲೆ ಅವಲಂಬಿಸಿದ್ದಾರೆ. ಮೂರೂ ಜನರಿಗೆ ಜೀವನವೆಂದರೇನೆಂದು ಗೊತ್ತಿಲ್ಲ. ಕದ್ದು ತಿನ್ನುವುದೇ ಮೂವರಿಗೂ ಉಪಜೀವನದ ಹಾದಿಯಾಗಿದೆ.

ಅಂದಿನ ಜನಜೀವನದಲ್ಲಿ ಆಕಳುಗಳೇ ಸಂಪತ್ತಾಗಿದ್ದವು. ಸಧೃಢ ಆಕಳುಗಳಿಗಾಗಿ ಕೌರವ ಸೈನ್ಯ ವಿರಾಟ ರಾಜನ ಮೇಲೆ ಯುದ್ಧ ಘೋಷಿಸಿತು. ಆಕಳನ್ನು ಕೊಳ್ಳುವುದು, ಆಕಳನ್ನು ಕದಿಯುವುದು, ಆಕಳುಗಳನ್ನು ಯುದ್ಧ ಮಾಡಿ ಪಡೆಯುವ ತನುವಿನ ಮನೋಧರ್ಮವೆಲ್ಲ ಒಂದೇ ಆಗಿದೆ.

ಆಕಳ ಕೊಂಡವನು ಸತ್ಪ್ರಜೆ, ಕದ್ದವನು ಕಳ್ಳ, ಯುದ್ಧ ಮಾಡಿಕೊಂಡು ಆಕಳ ತಂದವನು ರಾಜ! ಈ ಮೂರು ಜನ ತನು ಉಳ್ಳವರು. ಮೂರೂ ತನುಗಳ ಮನ ಒಂದೇ. ಮೂರೂ

ತನುಗಳ ಅರಿವು ಕೂಡಾ ಒಂದೇ ಆಗಿದೆ. ಮೂರೂ ತನುಗಳ ಉದ್ದೇಶ ಕೂಡಾ ಒಂದೇ ಆಗಿದೆ. ಈ ಮೂರೂ ಜನರಿಗೆ ಆಕಳ ಹಾಲು, ಬೆಣ್ಣೆ, ತುಪ್ಪ, ಮೊಸರು, ಮಜ್ಜಿಗೆ, ಮಾಂಸ, ಚರ್ಮ, ಸೆಗಣಿ ಬೇಕಾಗಿದೆ. ಈ ಉದ್ದೇಶಕ್ಕಾಗಿಯೇ ಒಂದು ತನು ಕೊಳ್ಳುವ ಕಾಯಕ, ಮತ್ತೊಂದು ತನು ಕದಿಯುವ ಕಾಯಕ, ಮಗದೊಂದು ತನು ಆಡಳಿತದ ಚುಕ್ಕಾಣಿ ಹಿಡಿದು ತನುಗಳನ್ನು ಕೊಂದು ಕದಿಯುವ ರಾಜನ ಕಾಯಕದಲ್ಲಿ ನಿರತವಾಗಿವೆ.

ಮೂರೂ ತನುಗಳಿಗೆ ಅರಿವಿನ ಧರ್ಮ ಗೊತ್ತಿಲ್ಲ. ತನುವಿನ ಅರಿವಿನ ಧರ್ಮ ಒಂದೇ; ತನುವಿನ ಮರೆವಿನ ಧರ್ಮವೂ ಒಂದೇ.

ತನುವಿನ ಅರಿವಿನ ಧರ್ಮ ಏಕೋಭಾವ. ಅದು ಶರಣಧರ್ಮ. ಶರಣ ಮಹಾಜ್ಞಾನಿ! ತನುವಿನಲ್ಲಿ ತನ್ಮಯವಾದ ಮಹಾಜ್ಞಾನಕ್ಕೆ ಶರಣು ಹೋದಾತ. ಕಳ್ಳ, ರಾಜ, ಪ್ರಜೆಯ ವೇಷದಲ್ಲಿದ್ದ ತನುಗಳೆಲ್ಲ ಒಂದೇ. ಆಕಳು ನನ್ನದು ಎನ್ನುವ ಭಾವ ಪ್ರಜೆ ಹೊಂದಿದ್ದಾನೆ. ಕೊಂಡು ತಂದು ಉಣ್ಣುತ್ತಾನೆ. ಆಕಳುಗಳು ಮತ್ತೊಬ್ಬ ರಾಜನಾದಾದರೇನಂತೆ ಯುದ್ಧ ಮಾಡಿ ಸೈನ್ಯವನ್ನು ಕೊಂದು ಆಕಳುಗಳನ್ನು ಅದು ನೀಡುವ ಆಹಾರ ಸಕಲರಿಗೂ ಅವಶ್ಯವೆಂದು ತಂದು ಉಣ್ಣುದಭಾವ ರಾಜನದು.

ಆಕಳು ಒಂದೇ; ತನು ಒಂದೇ; ಮನದ ಭಾವವು ಮಾತ್ರ ಭಿನ್ನ ಭಿನ್ನ. ಆಕಳನ್ನು ಈ ಮೂರೂ ಜನ ಒಂದು ವಸ್ತುವೆಂದು ನೋಡಿದರೆ ವಿನಹ ತನ್ನಂತೆ ಪ್ರಾಣವುಳ್ಳ ಒಂದು ಚೇತನವೆಂದು ಮೂರು ಜನ ಭಾವಿಸಲಿಲ್ಲ. ಮೂರೂ ಜನರ ಭಾವ ದುರ್ಭಾವಕ್ಕೊಳಪಟ್ಟು ಆಕಳನ್ನು ವಸ್ತುವೆಂದು, ಸಂಪತ್ತೆಂದು ಭಾವಿಸಿದರು.

ಆಕಳು ತನ್ನ ಕರುವಿಗೆ ಉಣ್ಣಿಸಬೇಕಾದ ಹಾಲು, ಮನ ತನುಗಳಿಗಾಗಿ ಕದಿಯುವ ಕಳ್ಳನೆಂದು ಅರಿವಾಗಲಿಲ್ಲ. ಈ ಅರಿವಿಲ್ಲದ್ದಕ್ಕಾಗಿ ಕೊಂಡ, ಕದ್ದ, ಕೊಂದು ಕದ್ದು ತಂದ.

ಶರಣನ ಭಾವ ಏಕೋಭಾವ ! ಈ ಮೂರೂ ಜನರ ಭಾವದಂತಲ್ಲ. ಅರಿದರಿದು ನೋಡಿದ. ಕರು ಆಕಳ ಕೆಚ್ಚಲಿಗೆ ಬಾಯಿ ಹಾಕಿ ಉಣ್ಣುವುದನ್ನು ಆನಂದದಿಂದ ನೋಡಿದ. ಉಳಿದುದನ್ನು ಕರೆದ ಇತರರಿಗೆ ಉಣ್ಣಿಸಿ ತಾನೂ ಉಂಡ. ಆಕಳನ್ನು ಕರುವನ್ನು ಬಂಧನದಲ್ಲಿಡಲಿಲ್ಲ. ಅದನ್ನು ತನ್ನದೆನ್ನಲಿಲ್ಲ; ಇತರರದೆನ್ನಲಿಲ್ಲ. ತನ್ನಂತೆಯೇ ಪರಿಪೂರ್ಣ ಚೇತನವೆಂದು ನೋಡಿದ.

ಆಕಳ ಕದ್ದವನನ್ನು ಕಳ್ಳ ಎನ್ನಲಿಲ್ಲ. ಕದಿಯುವುದು, ಕೊಳ್ಳುವುದು, ಕೊಂದು ಪಡೆಯುವುದು ತನುವಿನ ಮನದ ಪ್ರವೃತ್ತಿ. ಈ ಮೂರು ಪ್ರವೃತ್ತಿಗಳು ಚೇತನದ ತೃಪ್ತಿಗಾಗಿ ಕೆಲಸ ಮಾಡುತ್ತವೆ. ಆದರೆ ಮನದ ಈ ಮೂರೂ ಪ್ರವೃತ್ತಿಗಳಿಗೆ ಸದಾ ದುಗುಡ! ಹಾಲು ಕೊಡುವ ಆಕಳು ಕರುಗಳನ್ನೇ ಮರೆಯುತ್ತವೆ !

ಮನದ ಮರ್ಕಟ ತನವನ್ನು ತನುವಿನಲ್ಲಿಯೇ ತನ್ಮಯವಾದ ಅರಿವಿನಲ್ಲಿ ಲೀನಗೊಳಿಸಿ ಅರಿವಿನಿಂದ ಸಕಲವನ್ನು ನೋಡಿ ಅರಿವನ್ನು ಬಳಕೆ ಮಾಡುವಾತನೇ ಜ್ಞಾನಿ; ಶರಣ !

ಅಲ್ಲಿ ಉಂಬಡೆ ಸಂಗ ಇಲ್ಲಿ ಉಂಬಡೆ ಸಂಗ! ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನು ಏಕೋಭಾವ.

830

ಅರ್ಥಪ್ರಾಣಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೇ ? ಅಲ್ಲ.

ಆದಿರುದ್ರನ ಮಗಳು ಆದಿಶಕ್ತಿ;
ಆದಿಶಕ್ತಿಯ ಮಗ ವಿಷ್ಣು;
ವಿಷ್ಣುವಿನ ಅರ್ಧಾಂಗಿ ಲಕ್ಷ್ಮೀ
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೇ ? ಅಲ್ಲ
ಎನ್ನ ಮನದೊಡೆಯ ಮಹಾದೇವಾ,
ನಿಮ್ಮ ಮನವ ನಿಮಗೊಪ್ಪಿ ನಾನು ಶುದ್ಧ ಕಾಣಾ,
ಕೂಡಲಸಂಗಮದೇವಾ.

ಅರ್ಥ ಪ್ರಾಣ ಅಭಿಮಾನ ಎನ್ನುವುದು ಮನ ನಿರ್ಮಿಸಿಕೊಂಡ ಸಂಪತ್ತು; ಮನದ ಸೃಷ್ಟಿ. ಆದಿರುದ್ರನ ಮಗಳು ಆದಿಶಕ್ತಿ; ಇದು ಮನ. ಆದಿಶಕ್ತಿಯ ಮಗ ವಿಷ್ಣು ; ಇದು ತನು. ವಿಷ್ಣುವಿನ ಅರ್ಧಾಂಗಿ ಲಕ್ಷ್ಮೀ . ಇದು ಕರೆನ್ಸಿ ಎಂದು ಕರೆಯುತ್ತೇವೆ. ಇದು ಕೂಡಾ ಮನವೇ ಆಗಿದೆ. ಸೇವಕನ ಸೇವಕನು ಪಡೆದಂತಹ ಪಡಿದೊತ್ತನ್ನು ಅರ್ಪಿಸಿದಲ್ಲಿ ಭಕ್ತನಪ್ಪನೇ ? ಅದು ಸಾಧ್ಯವಾಗುವುದಿಲ್ಲ.

ತನು ಅರಿವಿನ ಸೃಷ್ಟಿ. ತನುವನ್ನು ಆವರಿಸಿದ ಮನ ಕೂಡಾ ಅರಿವಿನ ಸೃಷ್ಟಿ. ಅರ್ಥ ಪ್ರಾಣ ಅಭಿಮಾನಗಳು ಮನದ ಸೃಷ್ಟಿಗಳಾಗಿವೆ. ಮನ ಸೃಷ್ಟಿಸಿದ ವಸ್ತುಗಳೆಲ್ಲ ನಿಜವಲ್ಲ; ಅವು ಸತ್ಯ ಅಲ್ಲವೇ ಅಲ್ಲ. ಅರ್ಥ ಎನ್ನುವುದು ಹಿಂದೆ ಆಕಳಾಗಿತ್ತು. ನಂತರ ಲೋಹವಾಯಿತು; ಚರ್ಮದ ನಾಣ್ಯವಾಯಿತು; ಕಾಗದದ ಕರೆನ್ಸಿಯಾಯಿತು; ಕ್ರೆಡಿಟ್ ಕಾರ್ಡಾಯಿತು. ಮುಂದೇನಾಗುವುದೋ ತಿಳಿಯದು. ಈ ಭ್ರಮೆಯನ್ನು ಅರ್ಪಿಸಿದಂತೆಲ್ಲ ಮತ್ತೆ ಮತ್ತೆ ಸುಳ್ಳು ಸೃಷ್ಟಿಗೆ ಕಾರಣವಾಗುತ್ತದೆ. ಸುಳ್ಳು ಸೃಷ್ಟಿಗಳನ್ನು ಸೃಷ್ಟಿಸುವ ಮನವನ್ನೇ ಅರಿವಿಗೆ ಅರ್ಪಿಸಿ ಪರಿಶುದ್ಧನಾಗುವ ಸೂತ್ರವನ್ನು ಜ್ಞಾನಭಂಡಾರಿ ಬಸವಣ್ಣನವರು ಲೋಕದ ಮನಗಳಿಗೆ ಅರುಹಿದ್ದಾರೆ.

831

ಮಾಡುವಾತ ನಾನಲ್ಲಯ್ಯಾ , ನೀಡುವಾತ ನಾನಲ್ಲಯ್ಯಾ ,
ಬೇಡುವಾತ ನಾನಲ್ಲಯ್ಯಾ , ನಿಮ್ಮ ಕಾರುಣ್ಯವಲ್ಲದೆ.
ಎಲೆ ದೇವಾ ಮನೆಯ ತೊತ್ತಲಸಿದಡೆ ಒಡತಿ ಮಾಡಿಕೊಂಬಂತೆ.
ನಿನಗೆ ನೀ ಮಾಡಿಕೋ ಕೂಡಲಸಂಗಮದೇವಾ.

ಯಾರಿಗೆ ಮಾಡಬೇಕು ? ಯಾರಿಗೆ ನೀಡಬೇಕು ? ಯಾರನ್ನು ಬೇಡಬೇಕು. ಮಾಡುವ ನೀಡುವ ಬೇಡುವ ತನುಗಳು ಒಂದೇ ಆಗಿರುವಾಗ ಮಾಡುವುದು, ಬೇಡುವುದು, ನೀಡುವುದು ಮನದ ಭ್ರಮೆಯೇ ಹೊರತು ಮತ್ತೇನೂ ಅಲ್ಲ.

ತನ್ನಂತೆಯೇ ಇರುವ ಸಮರ್ಥ ತನುವಿಗೆ ಮತ್ತೊಂದು ತನು ಮಾಡುವುದೆಂದರೇನು? ತನ್ನಂತೆಯೇ ಇರುವ ಸಮರ್ಥ ತನುವಿಗೆ ನೀಡಿ ದಾನಿ ಎನ್ನಿಸಿಕೊಳ್ಳುವುದೆಂದರೇನು? ತನ್ನಂತೆಯೇ ಇರುವ ತನುವನ್ನು ಬೇಡಿ ಭಿಕ್ಷುಕನೆನ್ನಿಸಿಕೊಳ್ಳುವುದೆಂದರೇನು ? ಒಂದು ತನುವಿನಲ್ಲಿಯೇ ಮಾಡುವ ನೀಡುವ ಮನದ ಅಜ್ಞಾನದ ಗುಣಗಳು ನಿರ್ಮಾಣವಾಗಿವೆ.

ತನುವಿನಲ್ಲಿಯೇ ತನ್ಮಯವಾದ ಅರಿವಿಗೆ, ಆ ಅರಿವೆಂಬ ಗುರುದೇವನಿಗೆ ಮನದ

ಭ್ರಮೆಯನ್ನು ಒಪ್ಪಿಸಿ ಭಕ್ತಿ ಮಾಡಲು ಸಾಧ್ಯವೆ? ಮನದ ಅಜ್ಞಾನವನ್ನು ಅರಿವೆಂಬ ಗುರುದೇವನಿಗೆ ನೀಡಲು ಸಾಧ್ಯವೇ ? ಅಂಗದಲ್ಲಿಯೇ ಸಂಗಮವಾದ ಅರಿವಿನ ಜಂಗಮನನ್ನು ಮನದ ಅಜ್ಞಾನ ಪಡೆಯುವಂತೆ ಬೇಡಲು ಸಾಧ್ಯವೆ ?

ಮಾಡುವುದಿಲ್ಲ, ನೀಡುವುದಿಲ್ಲ, ಬೇಡುವುದಿಲ್ಲ ! ಮಾಡುವುದಕ್ಕಾಗಿ ತನುವಿನ ಪ್ರೊಡೆಕ್ಟ್ ಎನ್ನುವುದು ಯಾವುದಾದರೂ ಇದೆಯೆ ? ನೀಡುವುದಕ್ಕೆ ತನು ತಯಾರಿಸಿದ ವಸ್ತುಗಳಾದರೂ ಇವೆಯೆ? ಬೇಡುವುದಕ್ಕೆ ತನು ನಿರ್ಮಾಣ ಮಾಡಿದ ವಸ್ತುಗಳಾದರೂ ಯಾವವು ?

ಭೂಮಿ ತನುವಿನದಲ್ಲ ; ಹೇಮವೂ ತನುವಿನದಲ್ಲ; ಭೂಮಿಯ ಮೇಲೆ ಬೆಳೆದ ಸಕಲ ಪಡಿ ಪದಾರ್ಥಗಳು ತನುವಿನವಲ್ಲ. ಅಂದ ಮೇಲೆ ತನು ಭೋಗ್ಯಕ್ಕಾಗಿ ಬಂದಿದೆಯೇ ಹೊರತು ಮಾಡುವುದಕ್ಕಾಗಿ ನೀಡುವುದಕ್ಕಾಗಿ, ಬೇಡುವುದಕ್ಕಾಗಿ ಬಂದಿಲ್ಲ. ಇದೆಲ್ಲವನ್ನು ತನುವಿನಲ್ಲಿ ತನ್ಮಯವಾದ ಅರಿವಿನ ಕರುಣಾಮೂರ್ತಿಯಿಂದಲೇ ತಿಳಿಯಬೇಕು.

ಮಾಡುವ ಬೇಡುವ ನೀಡುವ ಅಹಂಕಾರದ ಕೆಲಸಗಳನ್ನು ಬಿಟ್ಟು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ಬೇಡು. ಮನವನ್ನು ಆತನ ತೊತ್ತಾಗಿಸಿ ಬೇಡು, ತೊತ್ತಾಗಿ ಬೇಡುವುದು ಎನ್ನ ಮನಕ್ಕೆ ಸಾಧ್ಯವಾಗದಿದ್ದರೇನಂತೆ; ತೊತ್ತಿಗೆ ನೀಡುವ ಒಡೆಯನೆ ನಿನಗೆ ನೀನೆ ಮಾಡಿಕೋ, ಬೇಡಿಕೋ, ನೀಡಿಕೋ ತಂದೆ. ತೊತ್ತಿಗೆ ತೊತ್ತಾದ ತೊತ್ತನ್ನು ಅಪ್ಪಿಕೊಂಡು ತೊತ್ತಿನ ಭ್ರಮೆ ಕಳೆದು ಅಪ್ಪಿಕೊ ತಂದೆ.

832

ಮುನ್ನಿನ ಜನ್ಮದಲ್ಲಿ ಗುರು ಲಿಂಗ ಜಂಗಮವ ಪೂಜಿಸಲರಿಯದ ಕಾರಣ
ಬಹುಜನ್ಮಕ್ಕೆ ತಂದಿಕ್ಕಿದೆಯಯ್ಯಾ ಎನ್ನನು.
ಎನಗೆ ಗುರುಪಥವ ತೋರಿದವರಾರು ?
ಲಿಂಗಪಥವ ತೋರಿದವರಾರು ?
ಜಂಗಮುಪಥವ ತೋರಿದವರಾರು ?
ತೋರುವ ಮನವೆ ನೀವೆಂದರಿದೆ.
ಎನಗಿನ್ನಾವ ಭಯವಿಲ್ಲ, ಕೂಡಲಸಂಗಮದೇವಾ.

ಬೆಳಕು ಇಂದಿನದಲ್ಲ; ಬೆಳಕಿನಿಂದಲೇ ಹುಟ್ಟಿದ ಕತ್ತಲು ಕೂಡಾ ಇಂದಿನದಲ್ಲ. ಬೆಳಕಿನ ಜಲಬಿಂದುವಿನ ಬಯಲ ಬೀಜವೂ ಇಂದಿನದಲ್ಲ. ಬಿಂದುವಿನ ಬೀಜಕ್ಕಂಟಿದ ನೆರಳೂ ಇಂದಿನದಲ್ಲ. ಎಲ್ಲಿ ಬೆಳಕೊ ಅಲ್ಲಿ ಕತ್ತಲಿದೆ.

ಬೆಳಕಿನ ಬೀಜದಿಂದ ಹುಟ್ಟಿದಾತ ಗುರು ಲಿಂಗ ಜಂಗಮ. ಆ ಬೀಜದ ನೆರಳಿನಿಂದ ಹುಟ್ಟಿದುದೇ ಮನ ! ಮನ, ಗುರು ಲಿಂಗ ಜಂಗಮರನು ಪೂಜಿಸಲು ಅರಿಯದ ಕಾರಣ ಅಂಗವಾಗಿ ಬಹು ಜನ್ಮದಿಂದಲೂ ಅಂಗದಲ್ಲಿಯೇ ಜನ್ಮ ತಳೆಯುತ್ತಲಿದೆ. ಅಂಗವನ್ನು ಆವರಿಸಿದ ಮನದಿಂದಾಗಿ ಅಂಗವನ್ನು ಅರಿವಿನ ಲಿಂಗವೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ.

ಕತ್ತಲ ಮನಕ್ಕೆ ಬೆಳಕಾಗುವ ತವಕ ಇರಬೇಕಾಗಿತ್ತು . ಆದರೂ ಅರಿಯಲು ಸಾಧ್ಯವಾಗುತ್ತಿಲ್ಲ. ಇನ್ನು ಎನಗೆ ಭಯವಿಲ್ಲ. ನಿಮ್ಮನ್ನು ಅರಿಯುವ ಮನವೆ ನಿಮ್ಮದೆಂದು ಅರಿದೆ. ಗುರುಪಥ,

ಲಿಂಗಪಥ, ಜಂಗಮ ಪಥವನು ತೋರುವ ಮನವೆ ನೀವೆಂದರಿದೆ. ಅರಿದ ಕಾರಣ ಇನ್ನು ಭಯವಿಲ್ಲ. ಕತ್ತಲನ್ನು ಸೃಷ್ಟಿ ಮಾಡಿದ ಬೆಳಕಿಗೆ ಕತ್ತಲನ್ನು ಬೆಳಗಿ ಬೆಳಕು ಮಾಡಲು ಅರೆಕ್ಷಣವೂ ಸಾಕು.

ಅಂಗವನ್ನು ಸೃಷ್ಟಿಸಿ, ಅಂಗದೊಳಗಿದ್ದು, ಅಂಗವನ್ನು ತಾಗದೆ, ಗುರುಲಿಂಗ ಜಂಗಮವಾಗಿ ಬೆಳಗುವ ಬೆಳಕನ್ನು ನೀವೆಂದು ತಿಳಿದ ಕಾರಣ ಇನ್ನು ಎನಗೆ ಭಯವಿಲ್ಲ. ಅಂಗವನ್ನು ಆವರಿಸಿದ ಮನವೆಂಬ ಕತ್ತಲನ್ನು ತೊಳಗಿ ಬೆಳಗುವ ನೀವು ಪರಿಚಯವಾದ ಕಾರಣ ಎನಗೆ ಇನ್ನು ಭಯವಿಲ್ಲ.

ಪ್ರಾಣಲಿಂಗಿಯ ಪ್ರಸಾದಿಸ್ಥಲ

833

ಜನ್ಮ ಜನ್ಮಕ್ಕೆ ಹೋಗಲೀಯದೆ ಸೋಹಂ ಎಂದೆನಿಸದೆ,
ದಾಸೋಹಂ ಎಂದೆನಿಸಯ್ಯಾ.
ಲಿಂಗ ಜಂಗಮ ಪ್ರಸಾದದ ನಿಲವ ತೋರಿ ಬದುಕಿಸಯ್ಯಾ,
ಕೂಡಲಸಂಗಮದೇವಾ, ನಿಮ್ಮ ಧರ್ಮ.

ಅಂಗ ಜನ್ಮದಿಂದಲೇ ಅರಿವಿನ ಲಿಂಗವಾಗಿ ಗರ್ಭದಿಂದ ಹೊರ ಬಂದರೂ ಲಿಂಗವೆಂದು ಅಂಗವನ್ನು ಆವರಿಸಿದ ಮನಕ್ಕೆ ತಿಳಿಯಲು ಸಾಧ್ಯವಾಗುತ್ತಿಲ್ಲ.

ಲಿಂಗವನ್ನು ಅಂಗದ ಮೇಲೆ ಧರಿಸಿ ಅದನ್ನೇ ಲಿಂಗವೆಂದು ಅಂಗ ಆವರಿಸಿದ ಮನ ಪೂಜಿಸಿ ಪೂಜಿಸಿ ಜನ್ಮ ಜನ್ಮಗಳನ್ನೇ ಕಳೆಯುತ್ತಲಿದೆ. ಮನಕೆ ಲಿಂಗವೆಂದರೇನು? ಜಂಗಮವೆಂದರೇನು? ಗುರುವೆಂದರೇನು ಎಂದು ತಿಳಿಯಲು ಸಾಧ್ಯವಾಗಿಲ್ಲ.

ಅಂಗದಿಂದಲೇ ರಚಿಸಿದ ಸಾಹಿತ್ಯದ ಮೂಲಕ ಅಂಗವನ್ನು ಆವರಿಸಿದ ಮನ ತಾನೇ ಶಿವನೆಂದು ತಿಳಿದು ಭ್ರಮೆಗೆ ಒಳಗಾಗಿದೆ. ಅಹಂ ಬ್ರಹ್ಮಾಸ್ಮಿ ಎಂದರೆ ಭ್ರಮಾಧೀನವಾದ ಮನ ಬ್ರಹ್ಮನಾಗಲು ಸಾಧ್ಯವೆ? ಬ್ರಹ್ಮನನ್ನು ಅರಿತು ಆ ಬೆಳಕಿನಿಂದ ಕತ್ತಲ ಕಳೆದುಕೊಂಡು ಬೆಳಕಾಗಬೇಕಲ್ಲ?

ಅಂಗದಲ್ಲಿಯೇ ಸಂಗಮವಾದ ಅರಿವನರಹುವ ಗುರು ಪರಿಚಯವಾಗಬೇಕು. ಅಂಗವೇ ಅರಿವೆನ್ನುವ ಲಿಂಗ ಪರಿಚಯವಾಗಬೇಕು. ಗುರು ಅರುಹಿದ ಅರಿವನ್ನು ಪ್ರಸಾದದಂತೆ ಸ್ವೀಕರಿಸುವ ಜಂಗಮನ ಪರಿಚಯವಾಗಬೇಕು.

ಗುರುಲಿಂಗ ಜಂಗಮರು ಸಂಗಮವಾದ ಅಂಗದಿಂದಲೇ ಅಂಗವನ್ನು ಆವರಿಸಿದ ಮನ ತಿಳಿದು ಆ ಅಂಗದಲ್ಲಿಯೇ ಸಂಗಮವಾಗಬೇಕು. ಇದು ನಿಮ್ಮ ಧರ್ಮ. ಜನ್ಮ ಜನ್ಮಗಳಿಗೂ ಅಂಗವನ್ನು ಅಲೆದಾಡಿಸುವ ಮನಕ್ಕೆ ಸಾಧ್ಯವಾಗದ ಮಾತು. ಅದು ಅಹಂಕಾರಿ. ಮಾತಿನಿಂದ ಬೆಳಕಾಗೆಂದರೆ ಬೆಳಕಾಗದು. ಬತ್ತಿ ಹೊಸೆದು ಎಣ್ಣೆ ಹಾಕಿ ದೀಪ ಚುಂಬಿಸಿ ಬೆಳಗಬೇಕು. ದೀಪದಿಂದಲೇ ಕತ್ತಲು ಬೆಳಗಿ ಬೆಳಕಾಗುತ್ತದೆ ಹೊರತು; ಬೆಳಕಿನ ಮಾತಿನಿಂದ ಕತ್ತಲು ಬೆಳಗುವುದಿಲ್ಲ.

ಆಶೆಯಾಮಿಷ ತಾಮಸದಿಂದ ಭವಬಂಧನವಾದುದನರಿಯಾ !
ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ !
ಓಂ ನಮಃ ಶಿವಾಯ ಶರಣೆಂಬುದ ಬಿಡದೆ ನೆನಯಾ ಮನವೆ!
ಮಹತಃ ಶಿವಲಿಂಗಸ್ಯ ಮಹತೋ ಜಂಗಮಸ್ಯ ಚ ।
ತತ್‌ಪ್ರಸಾದೋ ಮಹನೇವ ಮಹದ್ಭಿರಿದ ಮೀರಿತಂ ॥
ಕೂಡಲಸಂಗಮದೇವನ ಪ್ರಸಾದ ಸಾನಿಧ್ಯದಿಂದ
ಭವಜನ್ಮ ಕರ್ಮ ಪಂಚಭೂತ ಪೂರ್ವನಾಸ್ತಿ .

ಆಸೆ ಆಮಿಷ ತಾಮಸಾದಿ ಗುಣಗಳು ಜನನ ಮರಣಗಳನ್ನು ಹುಟ್ಟು ಹಾಕುತ್ತವೆ. ಅದರಿಂದಾಗಿ ಅಂಗಕ್ಕೆ , ಅಂಗವನ್ನು ಆವರಿಸಿದ ಮನವೆಂಬ ನಿನಗೂ ತೊಂದರೆ ಇದೆ ಎಂಬುದನ್ನು ತಿಳಿ. ಆಸೆ ಆಮಿಷ ತಾಮಸವೆಂಬ ತ್ರಿವಿಧ ಗುಣಗಳು ಸಾತ್ವಿಕ ರಾಜಸ ತಾಮಸಾದಿಗುಣಗಳಿಂದಲೆ ಬಂದುದೆಂಬುದನ್ನು ತಿಳಿದು, ಅದನ್ನು ನಿರ್ಗುಣದಿಂದ ಅಳಿದು ಮರೆದು ಮೆರೆಯಾ !

ಓಂ ನಮಃ ಶಿವಾಯ ಶರಣೆಂಬುದ ಬಿಡದೆ ನೆನೆಯಾ ಮನವೆ:

ಎಲೆ ಮನವೆ ಅಂಗವೆಂಬುದು ನೀನಲ್ಲ; ಅದು ಓಂ ನಮಃ ಶಿವಾಯ ; ಲಿಂಗ! ಲಿಂಗಾಂಗ! ಅದು ಸತ್ಯವೂ ಶಿವಮಯವೂ ಸುಂದರವೂ ಆಗಿದೆ.

ಶಿವ ಇಡೀ ವಿಶ್ವಕ್ಕೆ ದೊಡ್ಡವನು. ಆತ ನುಡಿದಂತೆ ನಡೆದು ಆತನ ಮಾತು ಪಾಲನೆ ಮಾಡುವ ಜಂಗಮ ಆತನಿಗಿಂತ ದೊಡ್ಡವನು. ಏಕೆಂದರೆ ಅಂಗಕ್ಕೆ ಬಂದ ಆಪತ್ಕಾಲಗಳನ್ನೆಲ್ಲ ಲಿಂಗಕ್ಕರ್ಪಿಸಿ ಪ್ರಸಾದದಂತೆ ಸ್ವೀಕರಿಸುವ ಶಕ್ತಿ ಜಂಗಮನಿಗೊಬ್ಬನಿಗೆ ಇದೆ.

ಕೂಡಲಸಂಗಮದೇವನ ಪ್ರಸಾದ ಸಾನ್ನಿಧ್ಯದಿಂದ ಭವಜನ್ಮ ಕರ್ಮ ಪಂಚಭೂತಪೂರ್ವನಾಸ್ತಿ:

ಭೂಮಿ ನೀರು ಬೆಂಕಿ ಗಾಳಿ ಆಕಾಶ ಇವು ಪಂಚಭೂತಗಳು. ವಿಕೃತ ಸ್ವಭಾವಗಳನ್ನು ಹೊಂದಿವೆ. ಭೂಮಿ ಬಿರಿದು ಲಾವಾರಸ ಚೆಲ್ಲಿ ತೊಂದರೆ ಉಂಟು ಮಾಡುತ್ತದೆ. ನೀರು ಭೋರ್ಗರೆದು ಹರಿದು, ಮಳೆಯಿಂದಾಗಿ ಸುನಾಮಿಗಳುಂಟಾಗಿ ಜಲಪ್ರಳಯವಾಗಿ ತೊಂದರೆಯುಂಟು ಮಾಡುತ್ತದೆ. ಬೆಂಕಿ ಉರಿದು ತನ್ನ ಕೆನ್ನಾಲಿಗೆಯಿಂದ ಸಕಲವನ್ನು ಬೂದಿ ಮಾಡುತ್ತದೆ. ಗಾಳಿ ಐದುನೂರು ಕಿ.ಮೀ ವೇಗದಲ್ಲಿ ಬೀಸಿ ಸಕಲವನ್ನು ತನ್ನ ಗರ್ಭದಲ್ಲಿ ಸೇರಿಸಿಕೊಳ್ಳುತ್ತದೆ. ಆಕಾಶ ಸಿಡಿಲು ಸೃಷ್ಟಿಸಿ ತನ್ನ ವಿಕೃತಿಯನ್ನು ಮೆರೆಯುತ್ತದೆ.

ಬಯಲು, ಪಂಚಭೂತಗಳ ಈ ವಿಕೃತಿಯನ್ನು ಏನೂ ಆಗಲಿಲ್ಲವೆಂಬಂತೆ ಸರಳವಾಗಿ ತನ್ನ ಗರ್ಭದಲ್ಲಿ ಬಂಧಿಸಿಕೊಳ್ಳುತ್ತದೆ. ಪಂಚಭೂತಗಳು ಜನನಕ್ಕೂ ಮರಣಕ್ಕೂ ಕಾರಣವಾಗಿ ಜನನ ಮರಣಗಳನ್ನು ಸೃಷ್ಟಿಸುತ್ತವೆ. ಪಂಚಭೂತಗಳು ಸೃಷ್ಟಿಸಿದ ಜನನ ಮರಣಗಳನ್ನು ತನ್ನ ಗರ್ಭದಲ್ಲಿ ಬಂಧಿಸಿಕೊಳ್ಳುವ ಬಯಲಿಗೆ ಮರಣವಿಲ್ಲ.

ಪಂಚಭೂತಗಳು ನಮಃ ಶಿವಾಯವಾದರೆ ಇದನ್ನು ಗರ್ಭದಲ್ಲಿ ಬಂಧಿಸಿಕೊಳ್ಳುವ ಬಯಲು ಓಂ ಆಗಿದೆ. ಇದನ್ನು ಪ್ರಣವವೆಂದು ಕೂಡಾ ಕರೆಯುತ್ತಾರೆ. ಓಂಕಾರವೆಂಬ ಬಯಲಿಗೆ ಜನನವಿಲ್ಲ ಮರಣವಿಲ್ಲ. ತನ್ನ ಗರ್ಭದಲ್ಲಿಯೇ ಜಲಜನಕವನ್ನು ಆಮ್ಲಜನಕವನ್ನು ಸೃಷ್ಟಿಸಿತು. ಎರಡನ್ನೂ ಬಂಧಿಸಿ ಜಲವನ್ನಾಗಿಸಿತು. ಜಲದಲ್ಲಿಯೇ ಅಗ್ನಿಯನ್ನು ಸೃಷ್ಟಿಸಿತು. ಜಲವನ್ನೇ ಗಟ್ಟಿ

ಮಾಡಿ ಭೂಮಿಯನ್ನಾಗಿಸಿತು. ಸಕಲವನ್ನು ತನ್ನ ಗರ್ಭದಲ್ಲಿ ಬಂಧಿಸಿ ತಂದೆಯಾಯಿತು. ತಾಯಿಯಾಯಿತು. ಬಂಧು ಬಳಗವಾಯಿತು. ಬಯಲಿಲ್ಲದೆ ಯಾವುದೂ ಇಲ್ಲ. ಓಂ ನಮಃ ಶಿವಾಯ ಶರಣೆಂಬುದ ಬಿಡದೆ ನೆನೆಯಾ ಎಲೆ ಮನವೆ !

ಬಯಲು ಬಯಲನೆ ಬಿತ್ತಿ , ಬಯಲು ಬಯಲನೆ ಬೆಳೆದು, ಬಯಲ ಬಯಲಾಗಿ ಬಯಲಾಯಿತ್ತಯ್ಯಾ . ಬಯಲ ಜೀವನ, ಬಯಲ ಭಾವನೆ, ಬಯಲ ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು; ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

ಜನನ ಮರಣಗಳು ಬಯಲಲ್ಲಿಯೇ ಸಂಗಮವಾದವು, ಪಂಚಭೂತಗಳು ಬಯಲಲ್ಲಿಯೇ ಸಂಗಮವಾದವು. ಅವು ಚೆಲ್ಲುವ ವಿಕೃತ ಸುಕೃತಗಳೆಲ್ಲ ಬಯಲಲ್ಲೆ ಸಂಗಮವಾದವು. ಉರಿಯುವ ಬೆಂಕಿ ಬಯಲನ್ನು ಸುಡಲಾರದು. ಭೋರ್ಗರೆದು ಹರಿಯುವ ಜಲ, ರಭಸದಿಂದ ಬೀಸುವ ಗಾಳಿ, ಬಿರಿದು ಲಾವಾರಸ ಚೆಲ್ಲುವ ಭೂಮಿ, ಫಡ ಫಡಲ್ಲನೆ ಸಿಡಿಯುವ ಸಿಡಿಲು ಬಯಲನ್ನು ಬಾಧಿಸಲಾರವು. ಪಂಚಭೂತಗಳ ಚೇಷ್ಟೆಯನ್ನು ಬಯಲು ತನ್ನ ಗರ್ಭದಲ್ಲಿಯೇ ಮಕ್ಕಳಂತೆ ಬಂಧಿಸಿಕೊಳ್ಳುತ್ತದೆ.

ಗರ್ಭಧರಿಸಿದ ಸ್ತ್ರೀ ಮಗುವಿನ ತುಂಟಾಟದಿಂದ ಸುಖಿಸುವಂತೆ ಬಯಲು ಪಂಚಭೂತಗಳ ವಿಕೃತವನ್ನು ಗರ್ಭದಲ್ಲಿರುವ ಮಗುವಿನ ಚೇಷ್ಟೆಯಂತೆ ಸುಖಿಸುತ್ತದೆ. ಭವ ಜನ್ಮ ಕರ್ಮ, ಪಂಚಭೂತ ಪೂರ್ವನಾಸ್ತಿ !

835

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ :
ಪಾಪದ ಬಲೆಯ ತಂದು ಮುಂದೆ ಒಡ್ಡಿದಿರಯ್ಯಾ .
ಬೇಟೆಗಾರನು ಮೃಗವನಟ್ಟಿ ಬರಲು ಮೃಗ ಗೋರಿಗೊಳಗಾಗದಯ್ಯಾ .
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲಸಂಗಮದೇವಂಗೆ ಓಗರವಾಯಿತ್ತು .

ಸೂರ್ಯನ ಬೆಳಕಿಗೆ ಕತ್ತಲು ಮುಸುಕಿದಂತೆ; ಕತ್ತಲನ್ನು ನುಂಗಿ ಪುನಃ ಸೂರ್ಯ ಬೆಳಗಿದಂತೆ. ಕತ್ತಲು ಬೆಳಕುಗಳು ಸಹಜ.

ಜಗದಗಲ ಮುಗಿಲಗಲ ಪಾತಾಳದಿಂದತ್ತತ್ತ ಬ್ರಹ್ಮಾಂಡದಿಂದಲೂ ಅತ್ತತ್ತ ಚಾಚಿದ ಬೆಳ್ಳಂಬೆಳಕಿಗೆ ಕತ್ತಲು ಮುಸುಕುವುದೆಂದರೇನು ? ಪಾಪದ ಕತ್ತಲೆಮೃಗ ಬೆಳಕನ್ನು ಮುಸುಗಲು ಬಂದು ಮಹಾಜ್ಞಾನಿ ಮಹಾದೇವಸೆಟ್ಟಿಯೊಡ್ಡಿದ ಬೆಳಕಿನ ಬಲೆಗೆ ಸಿಲುಕಿದ ಮನವೆಂಬ ಅಜ್ಞಾನದ ಮೃಗವು ಆತನಿಗೆ ಓಗರವಾಯಿತ್ತು .

ಬೆಳಕಿನ ಬಲೆಗೆ ಸಿಲುಕಿದ ಕತ್ತಲೆ ಮೃಗ ಬೆಳಕಿಂಗೆ ಬೆಳಕಾಗಿ ಬೆಳಕಿಗೆ ಆಹಾರವಾಯಿತು.

836

ಪರಿಯಾಣವೆ ಭಾಜನವೆಂಬರು; ಪರಿಯಾಣ ಭಾಜನವಲ್ಲ.

ಲಿಂಗಕ್ಕೆ ತನ್ನ ಮನವೆ ಭಾಜನ.
ಪ್ರಾಣವನು ಬೀಸರವೊಗದೆ ಮೀಸಲಾಗರ್ಪಿಸಬಲ್ಲಡೆ,
ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

ಅಂಗ ಲಿಂಗ ಮತ್ತು ಮನಗಳೆರಡೂ ಬಳಕೆ ಮಾಡುವ ಅಮೃತ ಪಾತ್ರೆ. ಅರಿವಿನ ಪಾತ್ರೆ! ಅಂಗವನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಮನ ಅದರಲ್ಲಿ ತನಗೆ ಪ್ರಿಯವೆನಿಸಿದ ಸೆರೆಯನ್ನು ಸುರಿಯಬಹುದು. ಅನ್ಯ ವಿಚಾರ ಆಚಾರಗಳನ್ನು ಸುರಿಯಬಹುದು. ಭಗವದ್ಗೀತೆ, ಬೈಬಲ್, ವೇದ ಆಗಮ, ಉಪನಿಷತ್ತುಗಳನ್ನು ಸುರಿಯಬಹುದು. ಅನ್ಯ ವಸ್ತುಗಳ ಮೇಲೆ ಮನ ಆಸೆಯಿಟ್ಟು ಪಡೆಯಲು ಕಳ್ಳ ಪ್ರಾಮಾಣಿಕ ಮುತ್ಸದ್ದಿಯ ವೇಷವನ್ನು ಅಂಗಕ್ಕೆ ಹಾಕಬಹುದು.

ಹನ್ನೆರಡು ವರ್ಷಗಳ ಪರ್ಯಂತ ಮನ ಅಂಗದೊಂದಿಗೆ ಪರ್ಯಟನ ಮಾಡಿ ಜ್ಞಾನಿ ಎಂದು ಘೋಷಿಸಿಕೊಳ್ಳಬಹುದು. ಜನರನ್ನು ಆಕರ್ಷಿಸಿ ಆಧ್ಯಾತ್ಮದ ವ್ಯವಹಾರ ಮಾಡಬಹುದು.

ಅಂಗವೇ ಸರ್ವಸ್ವವೆಂದು ಮನ ಪ್ರಾಣವನು ವ್ಯರ್ಥವಾಗಿ ಕಳೆಯದೆ, ಸರ್ವಾಂಗದ ಕಣಕಣದಲ್ಲಿದ್ದ ಲಿಂಗವೇ ಸರ್ವಸ್ವವೆಂದು ಮೀಸಲಾಗಿ ಅರ್ಪಿಸಬಲ್ಲಡೆ, ಕೂಡಲೇ ಕೂಡಿಕೊಂಡಿಪ್ಪ ಕೂಡಲಸಂಗಯ್ಯ.

ಲಿಂಗದಲ್ಲಿಯೇ ಹುಟ್ಟಿದ ಮನ ಲಿಂಗದಲ್ಲಿ ಲೀನವಾಗುವುದೇ ಮೀಸಲು ! ಲಿಂಗದಲ್ಲಿ ಹುಟ್ಟಿ, ಹುಟ್ಟಿದ ಜಾಡನ್ನೇ ಮರೆತು; ಅಂಗವನ್ನು ಅತ್ತಿತ್ತ ಸುಳಿದಾಡಿಸುವುದು ಭಾಜನವಲ್ಲ. ನಿಜಸುಖವನು ಅರಿಯದ ಮನ ವ್ಯರ್ಥ ಪ್ರಾಣಕಳೆದುಕೊಂಡಂತೆ. ಅಂಗ ಲಿಂಗ ಮನ ಸಂಗಮವಾಗಿದ್ದರೂ ತಿಳಿಯದ ಮನ ವ್ಯರ್ಥ ಪ್ರಯಾಣ ಮಾಡಿದಂತೆ.

837

ಆತ್ಮ ಲಿಂಗ, ಪರಮಾತ್ಮ ಜಂಗಮ;
ತನು ಮಧ್ಯೆ ಪ್ರಸಾದವಾಯಿತ್ತು.
ನಿಶ್ಚಿಂತ ನಿವಾಸವಾಯಿತ್ತು
ಕೂಡಲಸಂಗನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು !

ಲಿಂಗಮಧ್ಯೆ ಜಗತ್‌ಸರ್ವಂ, ಲಿಂಗ ಜಂಗಮರಿಬ್ಬರೂ ಅಂಗದಲ್ಲಿ ಸಂಗಮವಾಗಿದ್ದಾರೆ. ಜಗದಗಲ ಮುಗಿಲಗಲ ವ್ಯಾಪಿಸಿಕೊಂಡ ಲಿಂಗ ಜಂಗಮರಿಬ್ಬರೂ ಅಂಗವನ್ನು ತಮ್ಮ ನಿಶ್ಚಿಂತ ನಿವಾಸವನ್ನಾಗಿ ಮಾಡಿಕೊಂಡಿದ್ದಾರೆ.

ಲಿಂಗ ಜಂಗಮರಿಬ್ಬರೂ ನಿಶ್ಚಿಂತವಾಗಿರಲು ಅಂಗವನ್ನು ವಾಸಸ್ಥಾನವಾಗಿ ಬಳಸಿಕೊಂಡಿದ್ದಾರೆ. ಕಣ್ಣಿನ ಮೂಲಕ ನೋಡುವಂತೆ, ಕಿವಿಯ ಮೂಲಕ ಕೇಳುವಂತೆ, ಮೂಗಿನ ಮೂಲಕ ಪರಿಮಳ ಹೀರುವಂತೆ, ಚರ್ಮದ ಮೂಲಕ ಸ್ಪರ್ಶಿಸುವಂತೆ, ನಾಲಗೆಯ ಮೂಲಕ ರುಚಿಸುವಂತೆ ಮಾಡಿ ಅಂಗವನ್ನೇ ನಡೆದಾಡುವ ಲಿಂಗ ಜಂಗಮ ದೇವರನ್ನಾಗಿ ಮಾಡಿದ್ದಾರೆ.

ಲಿಂಗಾಂಗದಿಂದ ಅದೆಷ್ಟು ಪುಸ್ತಕಗಳನ್ನು ಹೊರತಂದಿದ್ದಾರೆ. ಅದೆಷ್ಟು ಭವ್ಯ ಭವನಗಳನ್ನು ನಿರ್ಮಿಸಿದ್ದಾರೆ! ಆಕಾಶದಲ್ಲಿ ಹಾರುವ, ಜಲಮಾರ್ಗದಲ್ಲಿ ಚಲಿಸುವ ಅದೆಷ್ಟೋ ಪರಿಕರಗಳನ್ನು

ಅಂಗದಿಂದಲೇ ನಿರ್ಮಿಸಿದ್ದಾರೆ. ಆತ್ಮ ಅರಿವಿನ ಲಿಂಗವಾಗಿ, ಪರಮಾತ್ಮ ಪಾಲಿಸುವ ಜಂಗಮವಾಗಿ ಅಂಗದಲ್ಲಿಯೇ ಸಂಗಮವಾಗಿ ಅರಿವಿನ ಪ್ರಸಾದವಾಗಿದ್ದಾರೆ.

ಅಂಗವನ್ನು ಆವರಿಸಿರುವ ಮರ್ಕಟ ಮನ ಕೂಡಲಸಂಗನ ಶರಣರ ಸಂಗ ಮಾಡಿ ಈ ವಿಷಯವನ್ನು ತಿಳಿದರೆ ಸಾಕು; ಅಂಗವೇ ಅರಿವಿನ ಮನೆ; ನಿಶ್ಚಿಂತ ನಿವಾಸವಾಗುತ್ತದೆ. ಲಿಂಗ ಅರುಹಿದಂತೆ ಜಂಗಮ ಪಾಲಿಸುತ್ತಾನೆ. ಮನ ನಿಶ್ಚಿಂತವಾಗುತ್ತದೆ. ಇದೊಂದು ಲಿಂಗಾಂಗ ಸಾಮರಸ್ಯದ ವಿಜ್ಞಾನ. ಮನಕ್ಕೆ ಮನವರಿಕೆಯಾಗಬೇಕು ಅಷ್ಟೇ!

838

ಲೋಹ ಪರುಷವ ಮುಟ್ಟುವುದಲ್ಲದೆ,
ಪರುಷ ಪರುಷವ ಮುಟ್ಟುವುದೆ ಅಯ್ಯಾ?
ಅಂಗವಿಡಿದಂಗೆ ಪ್ರಸಾದವಲ್ಲದೆ ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೊ !
ಅಣೋರಣಿಯಾನ ಮಹತೋ ಮಹಿಯಾನ್ !
ಹಿರಿದಿಂಗೆ ಹಿರಿದು, ಕಿರಿದಿಂಗೆ ಕಿರಿದು, ವಾಙ್ಮನಕ್ಕಗೋಚರ,
ಕೂಡಲಸಂಗಮದೇವಾ.

ಬೆಳಕು ಬೆಳಕನ್ನು ಬೆಳಗುವುದು ಆಶ್ಚರ್ಯವಲ್ಲ. ಬೆಳಕು ಕತ್ತಲನ್ನು ಬೆಳಗಿ ತನ್ನಂತೆ ಮಾಡಿಕೊಳ್ಳುವುದು ಪರಮಾಶ್ಚರ್ಯ !

ತಂತಿಯಲ್ಲಿ ವಿದ್ಯುತ್ ಹರಿದು, ಬಲ್ಬಿನ ಮೂಲಕ ಬೆಳಗುತ್ತದೆ. ತಂತಿ ವಿದ್ಯುತ್ ಅಲ್ಲ; ಬಲ್ಬ್ ವಿದ್ಯುತ್ ಅಲ್ಲ; ಬೆಳಕು ಕೂಡಾ ವಿದ್ಯುತ್ ಅಲ್ಲ. ಇವು ಯಾವೂ ಇಲ್ಲದೆ ಬೆಳಕಿಲ್ಲ. ಬೆಳಕಿನ ಪ್ರಸಾದ ಇವೆಲ್ಲವುಗಳಿಂದಲೇ ಹರಿಯುತ್ತದೆ.

ಅಂಗ ಲಿಂಗವಲ್ಲ; ಲಿಂಗವಿಲ್ಲದೆ ಅಂಗವಿಲ್ಲ. ಲಿಂಗವನ್ನು ಮನದ ಸಹಾಯದಿಂದ ಅಂಗದಿಂದಲೇ ನೋಡಬೇಕು. ಲಿಂಗ ಪ್ರಸಾದವನ್ನು ಅಂಗದಿಂದಲೇ ಬೋಗಿಸಬೇಕು. ಅಂಗದ ಮೇಲೆ ಧರಿಸಿದ ಲಿಂಗದಿಂದ ಅಂಗಪ್ರಸಾದವೂ ಇಲ್ಲ; ಲಿಂಗಪ್ರಸಾದವೂ ಇಲ್ಲ.

ಲಿಂಗ ಅಂಗದಲ್ಲಿ ನ್ಯಾನೋ ಆಗಿದೆ; ಅಣುವಿನಲ್ಲಿಯೂ ನ್ಯಾನೋ ಆಗಿದೆ. ಲಿಂಗಾಂಗ ಜಗದಗಲ ಮುಗಿಲಗಲಕ್ಕೂ ವಿಸ್ತರಿಸಿ ಪಾತಾಳದಿಂದಲೂ ಅತ್ತತ್ತ, ಬ್ರಹ್ಮಾಂಡದಿಂದಲೂ ಅತ್ತತ್ತ ಚಾಚಿಕೊಂಡು ವಿರಾಟ ಸ್ವರೂಪವೇ ತಾನಾಗಿದೆ. ಅಣುವಿಂಗೆ ಅಣುವೂ ಹೌದು; ಮಹತ್ತಿಂಗೆ ಮಹತ್ತೂ ಹೌದು. ವಾಕ್ಕಿಗೂ ಮನಕ್ಕೂ ಅಗೋಚರವಾದುದು ಅಂಗದಲ್ಲಿಯೇ ಸಂಗಮವಾದುದು. ರೂಪು ಪ್ರಸಾದವಾದರೆ ನಿರೂಪವು ಲಿಂಗ! ಅಂಗದಲ್ಲಿಯೇ ಲಿಂಗ ಐಕ್ಯವಾಗಿದೆ. ನಿರೂಪು ಪರುಷವಾದರೆ ರೂಪು ಚಿನ್ನ!

839

ಜಂಗಮವೆ ಲಿಂಗವೆನಗೆ; ಜಂಗಮವೆ ಪ್ರಾಣವೆನಗೆ.
ಕೂಡಲಸಂಗಮದೇವಯ್ಯಾ,
ಎನಗೆಯೂ ನಿನಗೆಯೂ ಜಂಗಮ ಪ್ರಸಾದವೆ ಪ್ರಾಣ.

ಲಿಂಗದ ನುಡಿ ಅಂಗಕ್ಕೆ ಮನದಟ್ಟಾದರೂ ನುಡಿದಂತೆ ನಡೆದು ಅಂಗವನ್ನು ಮಹಾಲಿಂಗವನ್ನಾಗಿಸಿದ್ದು ಜಂಗಮವೇ, ಆದುದರಿಂದ ಜಂಗಮವೇ ಅಂಗಕ್ಕೆ ಪ್ರಾಣ.

ಅಂಗದಲ್ಲಿ ಲಿಂಗವೂ ಸಂಗಮವಾಗಿದೆ. ಮನವೂ ಸಂಗಮವಾಗಿದೆ. ಜಂಗಮವೂ ಸಂಗಮವಾಗಿದೆ. ಆದರೂ ಮನದ ಅಜ್ಞಾನದಿಂದಾಗಿ ಅಂಗಕ್ಕೆ ಈ ವೃತ್ತಾಂತವೇ ತಿಳಿಯುತ್ತಿಲ್ಲ. ಅಂಗದಲ್ಲಿ ಪ್ರಾಣವಿದ್ದು ಲಿಂಗಪ್ರಾಣಿ ಎನ್ನಿಸಿಕೊಂಡರೂ ಅದು ಸಾಮಾನ್ಯ ಅಂಗವಾಗಿದೆ. ಅಂಗವೇ ಲಿಂಗವೆಂದು ತಿಳಿಯಲು ಮನವೆ ಅಡ್ಡಗೋಡೆಯಾಗಿ ಪರಿಣಮಿಸಿದೆ.

ಅಂಗವೇ ಜಂಗಮ ಲಿಂಗವೆಂದು, ಜಂಗಮದ ಮಹಾತ್ಕಾರ್ಯದಿಂದಾಗಿ ಮನಕ್ಕೆ ಹೊಳೆದಿದೆ. ಮನ ಅಂಗದಲ್ಲಿ ಸಂಗಮವಾದ ಲಿಂಗದಲ್ಲಿ ಬೆರೆತು ಜಂಗಮನ ಮಹತ್ಕಾರ್ಯವನ್ನು ಕಂಡುಕೊಂಡಿದೆ. ಹೀಗಾಗಿ ಲಿಂಗಾಂಗದ ಶ್ರೇಷ್ಟತೆಯನ್ನು ಜಂಗಮ ಮೆರೆದುದರಿಂದ ಲಿಂಗಕ್ಕೆಯೂ, ಲಿಂಗವನ್ನು ಆವರಿಸಿದ ಮನಕ್ಕೆಯೂ ಜಂಗಮ ಪ್ರಸಾದವೆ ಪ್ರಾಣ !

840

ಅಯ್ಯಾ , ನೀನೆಂದಡೆ ಎಂಬೆನು
ನಿನ್ನ ಹಂಗೇನು ಹರಿಯೇನು ?
ನಿನ್ನ ಮುಖದಲ್ಲಿ ಒಂದಗುಳು ಸವೆಯದು.
ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು !
ಜಂಗಮವೆ ಲಿಂಗವೆಂದು ಒಕ್ಕುದ ಕೊಂಡಡೆ
ಭವಂ ನಾಸ್ತಿಯಾಯಿತ್ತು , ಕೂಡಲಸಂಗಮದೇವಾ.

ಅಯ್ಯಾ , ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೆ; ಅರಿವೆಂಬ ಗುರುದೇವನು ನೀನೆ; ಅಂಗದಲ್ಲಿ ಸಂಗಮವಾದ ಲಿಂಗಯ್ಯನು ನೀನೆ. ಅಂಗವನ್ನು ಆವರಿಸಿದ ಮನವೆಂಬ ನನ್ನ ಸೃಷ್ಟಿಗೆ ನೀನೇ ಕಾರಣನು. ನಿನ್ನ ಪ್ರಸಾದವನ್ನು ಸ್ವೀಕರಿಸಿ ಹುಟ್ಟಿದ ನನಗೆ ನಿನ್ನಿಂದಲೇ ಜನನ ಮರಣಗಳಾದವು. ಎನ್ನ ಭವಕ್ಕೆ ನಿನ್ನ ಪ್ರಸಾದವೇ ಬೀಜವಾಯಿತ್ತು. ನೀನು ಸರ್ವಾಂಗದ ನಿವಾಸಿಯಾದರೂ ನುಡಿದು ಹೇಳಿದ ಒಂದು ನುಡಿ ಎನ್ನಂಗಕೆ ನಾಟದು. ನಿನ್ನ ಮುಖದಲ್ಲಿ ಒಂದಗುಳು ಕೂಡಾ ಸವೆಯದು.

ಅಂಗದಲ್ಲಿಯೇ ಸಂಗಮವಾದ ಜಂಗಮವೇ ಲಿಂಗವೆಂದು ಆತ ಒಕ್ಕುದ ಕೊಂಡೆ. ಎನ್ನ ಜನನ ಮರಣಗಳು ನಾಸ್ತಿಯಾಯಿತು !

841

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ .
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ .
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ.
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ .
ಕೂಡಲಸಂಗನ ಶರಣರ ಅನುಭಾವದಿಂದ

ಎನ್ನ ಭವವದ ಕೇಡು , ನೋಡಯ್ಯಾ .

ಅಣ್ಣನ ವಚನದ ಈ ಸಾಲುಗಳು ಜ್ಞಾನದ ಮಹಾಸೂತ್ರಗಳು. ಶಬ್ದವನ್ನು ಭೇದಿಸಿ ನಿಶಬ್ದ ಫಲವನುಣ್ಣುವ ಪ್ರಾಯೋಗಿಕ ಸೂತ್ರವಿದು. ಶಬ್ದದಿಂದ ಈ ಸೂತ್ರವನು ನುಡಿದರೆ ಉಪಯೋಗಕ್ಕೆ ಬರುವುದಿಲ್ಲ. ಈ ಸೂತ್ರವನ್ನು ಪ್ರಯೋಗಕ್ಕೆ ಕೊಂಡೊಯ್ಯುವ ಬಗೆಯನ್ನು ಸ್ವತಹ ತಿಳಿದುಕೊಳ್ಳಬೇಕು; ಅನುಭವಿಸಬೇಕು; ಸುಖಿಸಬೇಕು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ :

ಭೂಮಿಯನ್ನು ಅಗೆದು ಹಳದಿ ಲೋಹ ತೆಗೆದು ಶುದ್ಧಿ ಮಾಡುವುದು ಜ್ಞಾನ. ಆಭರಣ ಮಾಡಿ ಧರಿಸುವುದು ಕೂಡಾ ಜ್ಞಾನ. ಹಳದಿ ಲೋಹಕ್ಕೆ ಬೆಲೆಕಟ್ಟಿ ವಿನಿಮಯಕ್ಕಾಗಿ ಬಳಸುವುದು ಕೂಡಾ ಜ್ಞಾನವೇ ಆಗಿದೆ.

ಆಭರಣದ ಮಾಟಕ್ಕೆ ಮನಸೋತು ಹಗಲಿರುಳು ದುಡಿದು ಅಂಗದ ಮೇಲೆ ಧರಿಸಿ ಆನಂದ ಪಡುವುದು; ಧರಿಸಿದ ಆ ಆಭರಣಕ್ಕೆ ಮನ ಸೋತು ಕದಿಯುವುದು; ಧರಿಸಿದ ಆಭರಣವನ್ನು ಕಳ್ಳನಿಗೆ ಕೊಡದೆ ಪ್ರಾಣ ಕಳೆದುಕೊಳ್ಳುವುದು; ಪ್ರಾಣ ತೆಗೆದಾದರೂ ಆಭರಣ ಪಡೆಯುವುದು ; ಪ್ರಾಣಕ್ಕಿಂತ ಹೆಚ್ಚು ಆಭರಣವನ್ನು ಮೋಹಿಸುವುದು ಅಜ್ಞಾನ !

ಅಂಗದಲ್ಲಿರುವ ಜ್ಞಾನದಿಂದಲೇ ಚಿನ್ನವೆಂದು ಹೆಸರಿಸಿಕೊಂಡ ಹಳದಿ ಲೋಹಕ್ಕೆ ಅಂಗ ತನಗರಿಯದಂತೆ ಬಲಿಯಾಗಿ ಪ್ರಾಣ ಕಳೆದುಕೊಳ್ಳುತ್ತದೆ. ಕೊಂಡು ಸಂಗ್ರಹಿಸಿದರೂ ಪ್ರಾಣಕ್ಕೆ ಮುಳುವು; ಕದ್ದರೂ ಪ್ರಾಣಕ್ಕೆ ಮುಳುವು.

ಅಂಗದಲ್ಲಿರುವ ಜ್ಞಾನದ ಬಲದಿಂದ ಹೊರಬಂದ ಹಳದಿ ಲೋಹವು ಅಂಗದ ಹೆಗಲೇರಿ ಪ್ರಾಣ ಹೀರುತ್ತದೆ ಎಂದರೇನು ? ಹಳದಿ ಲೋಹಕ್ಕೆ ಅಂಗ ಬಲಿಯಾಗಬಹುದೆ ? ಯುದ್ಧ ಮಾಡಿ ಅಪಾರ ಸೈನ್ಯವನ್ನು ಕೊಲ್ಲಬಹುದೆ ? ಕಳುವು ಮಾಡಿ ಅಂಗದ ಪ್ರಾಣ ಕಳೆಯಬಹುದೆ? ಸಂಗ್ರಹಮಾಡಿ ಹಗಲಿರುಳು ಚಿನ್ನವನ್ನು ಕಾಯಬಹುದೆ ? ಅಂಗ ಪ್ರೀತಿಸಿದ್ದು ಲೋಹವನ್ನೋ, ಬಣ್ಣವನ್ನೋ, ಅದರ ಬೆಲೆಯನ್ನೊ, ಮಾಟವನ್ನೊ? ಇವು ಅಂಗದ ಪ್ರಾಣಕ್ಕಿಂತಲೂ ಅಧಿಕವೆ?

ಲೋಹ, ಬಣ್ಣ, ಬೆಲೆ, ಮಾಟದ ಮೋಹಕ್ಕಾಗಿ ಅಂಗಕ್ಕೆ ಕಳ್ಳ, ಶ್ರೀಮಂತ, ಕೊಲೆಗಡುಕ, ಹಾದರಿಗ, ರಾಜ ಎನ್ನುವ ಹಣೆಪಟ್ಟಿಯನ್ನು ಕಟ್ಟಬಹುದೆ ? ಅಂಗದಿಂದ ಸಿದ್ಧವಾದ ವಸ್ತುವಿಗೆ ಅಂಗವೇ ಬಲಿಯಾಗಬಹುದೆ ?

ಅಂಗದಿಂದ ಸಿದ್ಧವಾದ ಚಿನ್ನ ಅದರ ಮೇಲಿನ ಮೋಹದಿಂದಾಗಿ ಅಂಗಕ್ಕೆ ತಿಳಿಯದೇ ಹೋಗುವುದೆಂದರೇನು ? ವಸ್ತುವಿನ ಸತ್ಯ ಅಂಗಕ್ಕೆ ಹೊಳೆಯದೆ ಇರುವುದೆಂದರೇನು.

ಅಜ್ಞಾನ ವಸ್ತುವಿನಲ್ಲಿದೆಯೊ ನೋಡುವ ಕಣ್ಣಿನಲ್ಲಿದೆಯೊ ? ಕತ್ತಲು ನೋಡುವ ಕಣ್ಣಿನಲ್ಲಿ ಕವಿದಿದೆಯೊ, ವಸ್ತುವಿನಲ್ಲಿ ಕವಿದಿದೆಯೊ ? ಅಂಗದಲ್ಲಿ ಅಸತ್ಯವಿದೆಯೊ; ವಸ್ತುವಿನಲ್ಲಿ ಅಸತ್ಯವಿದೆಯೊ ? ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ : ಅಂಗದಲ್ಲಿ ಜ್ಞಾನದ ಬಲವಿದೆಯೆಂದು ನುಡಿಯ ಮೂಲಕ ಹೊರಬಂದರೂ ಪ್ರಯೋಗಕ್ಕೆ ಹೋಗಿ ಜ್ಞಾನದ ಬಳಕೆ ಮಾಡುವುದು ಅಂಗಕ್ಕೆ ಸಾಧ್ಯವಾಗಿಲ್ಲ.

ಕಣ್ಣಿನ ಬೆಳಕಿನಿಂದ ಬಣ್ಣವನ್ನು ಲೋಹವನ್ನು ನೋಡಿದರೆ ಅದು ಚಿನ್ನವಲ್ಲ; ಬರೀ ಹಳದಿ ಲೋಹ ! ಖರೀದಿಸುವುದಿಲ್ಲ; ಮಾರುವುದಿಲ್ಲ ; ಕದಿಯುವುದಿಲ್ಲ; ಕಿರೀಟದ ಆಸೆಗಾಗಿ ಯುದ್ಧ ಮಾಡಿ ಕೊಂದು ಪಡೆಯುವುದಿಲ್ಲ. ಕಣ್ಣಿನಲ್ಲಿಯೇ ಇರುವ ಜ್ಞಾನದ ಬೆಳಕಿನಿಂದಾಗಿ ಕಣ್ಣಿನಲ್ಲಿಯೇ

ಆವರಿಸಿದ ಅಜ್ಞಾನಕ್ಕೆ ಕೇಡುಂಟಾಯಿತು. ಕಣ್ಣಿನಲ್ಲಿಯೇ ಇರುವ ಸತ್ಯದ ಬಲದಿಂದಾಗಿ ಕಣ್ಣಿನಲ್ಲಿಯೇ ಆವರಿಸಿದ ಅಸತ್ಯಕ್ಕೆ ಕೇಡುಂಟಾಯಿತು. ಕಣ್ಣಿನಲ್ಲಿಯೇ ಇರುವ ಅರಿವಿನ ಪರುಷದಿಂದಾಗಿ ಲೋಹ ಅವಲೋಹವಾಯಿತು.

ಮಹಾಜ್ಞಾನಿಗಳಾದ ಕೂಡಲಸಂಗನ ಶರಣರ ಅನುಭಾವದಿಂದಾಗಿ ಜನನ ಮರಣಗಳ ಭವದ ಬಾಧೆಗೆ ಕೇಡುಂಟಾಯಿತು ! ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಾ ಎಂದು ನುಡಿದರೆ ಫಲವಿಲ್ಲ; ನಡೆದು ಸುಖಿಸಬೇಕು !

842

ಆದ್ಯರ ವಚನ ಆದ್ಯರಿಗಾಯಿತ್ತು
ವೇದ್ಯರಿಗಲ್ಲದೆ ಸಾಧ್ಯವಾಗದು.
ಕೂಡಲಸಂಗಮದೇವಾ,
ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು.

ಆದ್ಯರ ವಚನ, ಆದ್ಯರ ಮಾತುಗಳು ಆದ್ಯರಿಗೇ ತಿಳಿಯುತ್ತದೆ. ಆದ್ಯರ ಚರ್ಚೆ ಆದ್ಯರ ಬರಹ ಆದ್ಯರಿಗೆ ಸುಖ ನೀಡುತ್ತದೆ. ಆದ್ಯರನ್ನು ಅರಿತ ವೇದ್ಯರಿಗೂ ತಿಳಿಯುತ್ತದೆ. ಆದ್ಯರು ಸುಖಿದಷ್ಟೆ ಸುಖವನು ವೇದ್ಯರೂ ಸುಖಿಸುತ್ತಾರೆ. ವೇದ್ಯರಿಗಲ್ಲದೆ ಆದ್ಯರ ವಚನ ಅನ್ಯರಿಗೆ ಸಾಧ್ಯವಾಗದು.

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೇ ನಿಮ್ಮನು ಅರಿತ ಮಹಾಜ್ಞಾನಿಗಳಾದ ಶಿವಶರಣರ ಅನುಭಾವದಿಂದ ಮನಕ್ಕೆ ಅಂಟಿದ ಜನನ ಮರಣಗಳ ದುಃಖ ನಿವಾರಣೆಯಾಯಿತು.

ಅಂಗದಲ್ಲಿಯೇ ಸಂಗಮವಾದ ಜಂಗಮನಿಗೆ, ಅರಿವಿನ ಲಿಂಗಯ್ಯನಿಗೆ ಜನನವಿಲ್ಲ ಮರಣವಿಲ್ಲ ಅಂಗವನ್ನು ಆವರಿಸಿದ ಮನಕ್ಕೆ, ಅಂಗಕ್ಕೆ ಸುಖವುಂಟು ದುಃಖ ಉಂಟು; ಜನನ ಮರಣಗಳುಂಟು. ಮನ ಅನುಭವದಿಂದ ಲಿಂಗ ಜಂಗಮರನ್ನು ಅರಿತರೆ ಜನನ ಮರಣಗಳು ನಾಸ್ತಿ.

843

ಅಸಂಬಂಧ ಸಂಬಂಧವಾಯಿತ್ತು ಲಿಂಗಸಾರಾಯರ ಸನುಮತದಿಂದ.
ಉತ್ತಮ ಮಧ್ಯಮವ ಕೆಡಿಸಿತ್ತು.
ಏಕೋ ಸತಿ ಪತಿ ಗುಣದಿಂದ
ಗರುವರ ಗರುವತನ ಕೂಡಲಸಂಗ್ಯಯನ ಅನುಭಾವದಿಂದ.

ಅಂಗವನ್ನು ಆವರಿಸಿದ ಮನ, ಅಂಗಕ್ಕೂ ಲಿಂಗಕ್ಕೂ ಜಂಗಮನಿಗೂ ಎಂದೂ ಸಂಬಂಧಿಯಲ್ಲ ! ಕಡು ವೈರಿ ! ಅಂಗದಲ್ಲಿಯೇ ಆಶ್ರಯ ಪಡೆದು ಲಿಂಗವೇ ಆಗಬೇಕಾದ ಅಂಗವನ್ನು, ಜಂಗಮನೇ ಆಗಬೇಕಾದ ಅಂಗವನ್ನು, ಬುದ್ಧ ಮಹಾವೀರ ಶರಣ ದಾಸನೇ ಆಗಬೇಕಾದ ಅಂಗವನ್ನು ಮಂಗವನ್ನಾಗಿ ಮಾಡುವ ಕಡುವೈರಿ!

ಅಂಗವೆಂದರೆ ಸಾಮಾನ್ಯವೆ ? ಬ್ರಹ್ಮನು ವಾಸ ಮಾಡಿದ ಮನೆ; ನಾರಾಯಣನಿದ್ದ ಮನೆ! ಸೂರ್ಯ ಚಂದ್ರರಿದ್ದ ಮನೆ. ವಾಯು, ಅಗ್ನಿ, ಗಂಗೆ ಮನೆ ಮಾಡಿಕೊಂಡ ಮನೆ. ಭೂದೇವಿ ಅಷ್ಟದಿಕ್ಪಾಲಕರಿದ್ದ ಮನೆ. ಮನವೆಂಬ ಮರ್ಕಟ, ಇವರೆಲ್ಲರನ್ನೂ ಯಾಮಾರಿಸಿ ಇವರೊಂದಿಗೆ ಸಂಬಂಧ ಮಾಡದೆ ಅಂಗವನ್ನೇ ಮಂಗದಂತೆ ಮಾಡುವ ಮಹಾಕ್ರೂರಿಯಾಗಿದೆ.

ಅಂಗದಲ್ಲಿ ವಾಸ ಮಾಡಿದ ಉತ್ತಮರನ್ನು, ಅತೀ ಉತ್ತಮರನ್ನು, ಮಧ್ಯಮರನ್ನು ಕೆಡಿಸಿತ್ತು ಮನ. ಆದರೂ ಶರಣರ ಅನುಭಾವದಿಂದ ಶರಣಸತಿ ಲಿಂಗಪತಿ ಗುಣದಿಂದ, ಗರುವನ ಗರುವತನ ವನ್ನು ಮುರಿಯುವ ಸಂಗಯ್ಯನ ಅನುಭಾವದಿಂದ, ಅಸಂಬಂಧ ಸಂಬಂಧವಾಯಿತ್ತು ; ಲಿಂಗಸಾರಾಯರ ಸನುಮತದಿಂದ !

ಅಂಗದಲ್ಲಿಯೇ ಸಂಗಮವಾದ ಸಂಗಯ್ಯನು ತನ್ನ ಅನುಭಾವದಿಂದ ಅಂಗವನ್ನು ಆವರಿಸಿದ ಮನವನ್ನು ಅಪ್ಪಿ ಸತಿಯಾಗಿಸಿ, ಘನಮನವನ್ನಾಗಿ ಮಾಡಿದ್ದರಿಂದ ಅಸಂಬಂಧ ಸಂಬಂಧವಾಯಿತ್ತು! ಲಿಂಗ ಪತಿಯಾಗಿ ಮನವನ್ನೇ ಸತಿಯಾಗಿಸಿ ಏಕೋ ಸತಿ ಪತಿ ಗುಣದಿಂದ ಮನದ ಗರುವತನವನ್ನು ಗರುವನೇ ಮುರಿದಿದ್ದರಿಂದ ಸಂಗಯ್ಯನ ಅನುಭಾವವೇ ಅಮೃತವಾಯಿತು.

ಪ್ರಾಣಲಿಂಗಿಯ ಶರಣಸ್ಥಲ

844

ಶರಣ ಸನ್ನಿಹಿತ ಐಕ್ಯವಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ
ತೆತ್ತೀಸಾದಿ ದೇವರ್ಕಳು ಉಘೆ ಉಘೆ ಎನ್ನುತ್ತಿರಲು
ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ಎಂದಡೆ
ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯಾ !
ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಣುಗಳು ಅಗ್ನಿ ಸ್ಥಾನ,
ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ,
ಚರಣಗಳು ಅಷ್ಟದಿಕ್ಪಾಲಕರ ಸ್ಥಾನಗಳು,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ.
ಹೃದಯ ಕಮಲ ಮಧ್ಯದ ಅಂತರಾಳದ
ಏಕಪೀಠದ ಸಿಂಹಾಸನದ ತೆರಹಕೊಡು
ಕೂಡಲಸಂಗಮದೇವಾ.

ಪುರಾತನರು ಮಹಾಜ್ಞಾನಿಗಳು. ಅಂಗದಲ್ಲಿಯೇ ಬ್ರಹ್ಮ ವಿಷ್ಣು ಶಿವ ಸಂಗಮರಾದುದನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ನೋಡಿ ಸುಖಿಸಿದರು. ಬೆಡಗಿನಿಂದ ಸೂಚಿಸಿದರು. ಮನ, ಸೂಕ್ಷ್ಮ ಶರೀರವನ್ನು ಹೊತ್ತಿದೆ; ಕಾಣುವುದಿಲ್ಲ; ಕಾಣದೆ ಕಾಣುವ ಶರೀರದಲ್ಲಿ ಸುಳಿದಾಡುವ ಈ ಸೂಕ್ಷ್ಮ ಶರೀರಕ್ಕೆ ಬ್ರಹ್ಮ ಎಂದು ನಾಮಕರಣ ಮಾಡಿದರು. ಬ್ರಹ್ಮನೆಂಬುವವ ಯಾರೂ ಇಲ್ಲ. ಈ ಅಂಗದ ಸೂಕ್ಷ್ಮ ಭಾಗವೇ ಬ್ರಹ್ಮ. ಇದನ್ನು ವೈಜ್ಞಾನಿಕವಾಗಿಯೂ ಯಾರೂ ಅಲ್ಲಗಳೆಯುವಂತಿಲ್ಲ.

ಕಾಣುವ ಅಂಗಕ್ಕೆ ಜನ್ಮ ಕೊಟ್ಟು , ಅಂಗದಲ್ಲಿ ಅರಿವು ನಿರೂಪ ಲಿಂಗವಾಗಿ, ಅಂಗದ ಮೂಲಕ ಕಾಣುವ ಲಿಂಗವೇ ಶಿವ. ಈತನನ್ನು ಕಾರಣ ಶರೀರ ಎಂದು ಕರೆದರು. ಕಾಣುವ ಶರೀರಕ್ಕೆ ಕಾರಣವಾದ ಕಾರಣ ಶರೀರವೂ ಕಾಣುವುದಿಲ್ಲ. ಇದನ್ನು ವೈಜ್ಞಾನಿಕವಾಗಿಯೂ ಯಾರೂ ಅಲ್ಲಗಳೆಯುವಂತಿಲ್ಲ.

ಪುರಾತನರು ಕಾಣುವ ಅಂಗಕ್ಕೆ ವಿಷ್ಣುವೆಂದು ನಾಮಕರಣ ಮಾಡಿದರು. ಬ್ರಹ್ಮ ವಿಷ್ಣು ಶಿವನನ್ನು ಅಂಗದಲ್ಲಿಯೇ ಕಂಡು ಮಹಾಲಿಂಗವಾಗಿ ಪೂಜಿಸಿದರು. ಪ್ರಪಂಚದಲ್ಲಿಯೆ ಹಿಂದಿನ ಜನಗಣತಿ ಮೂವತ್ಮೂರು ಕೋಟಿ. ಇವರೆಲ್ಲ ದೇವಾನುದೇವತೆಗಳೇ ಆದರು. ಅಂಗ ಹೊತ್ತವರೆಲ್ಲ ಲಿಂಗಿಗಳೇ ಆದರು.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಹಾಯದಿಂದ ತನ್ನ ಭ್ರಮೆಯನ್ನು ಕಳೆದುಕೊಂಡರೆ ತಾನೇ ಬ್ರಹ್ಮ. ಅಂಗವೇ ವಿಷ್ಣು. ಅಂಗದಲ್ಲಿಯೇ ಸಂಗಮವಾದ ಅರಿವೇ ಶಿವ. ಬ್ರಹ್ಮ ವಿಷ್ಣು ಶಿವ ಅಂಗದಲ್ಲಿಯೇ ಸಂಗಮವಾಗಿದ್ದಾರೆ. ಅಂಗವನ್ನು ಆವರಿಸಿದ ಮನಕ್ಕೆ ಅರಿವಾದರೆ ಅಂಗವು ಸಂಗಯ್ಯನ ವಾಸಸ್ಥಾನ. ತಾನೂ ಸಂಗಮನಾಥ; ಕಂಡು ಬರುವ ಅಂಗಗಳೆಲ್ಲ ಸಂಗಮನಾಥನ ನಿವಾಸವೇ ಆಗಿವೆ.

ಅಂಗ ಜಲಮಯವಾಗಿದ್ದು ಗಂಗೆಯ ಸ್ವತ್ತಾಗಿದೆ. ಜಲದಲ್ಲಿಯೇ ಜಲಜನಕವಿದ್ದು ಅಗ್ನಿಯ ಸ್ವತ್ತಾಗಿದೆ. ಶೀತಲ ಗುಣವಿದ್ದು ಚಂದ್ರನ ಸ್ವತ್ತಾಗಿದೆ. ಚಲಿಸುವ ಚರಣಗಳಲ್ಲಿ ಅಷ್ಟ ದಿಕ್ಪಾಲಕರು ವಾಸವಾಗಿದ್ದಾರೆ. ಇವರು ಅರಿವಿನ ಸಂಪತ್ತುಳ್ಳ ಕುಬೇರರು ಆಗಿದ್ದಾರೆ. ಮತ್ತೊಂದು ಅರಿವಿನ ಅಂಗ ಪಡೆಯುವುದಕ್ಕಾಗಿ ರತಿ ಮನ್ಮಥರು ಗುಹ್ಯಸ್ಥಾನದಲ್ಲಿ ವಾಸವಾಗಿದ್ದಾರೆ.

ಕಪಾಲ, ಖಟ್ವಾಂಗ, ತ್ರಿಶೂಲ, ಡಮರುಗ, ರುಂಡಮಾಲಿ, ನಾಗಗಳ ವಾಸವೂ ಅಂಗದಲ್ಲಿಯೇ. ಅವರವರು ಆಯಾಸ್ಥಾನಗಳಲ್ಲಿ ವಾಸವಾಗಿದ್ದಾರೆ.

ಹೃದಯ ಕಮಲ ಮಧ್ಯದ ಅಂತರಾಳದ ಏಕಪೀಠದ ಸಿಂಹಾಸನವೊಂದು ಖಾಲಿ ಇದೆ. ಆ ಸ್ಥಾನವನು ಎನಗೆ ದಯಾಪಾಲಿಸು ಸಂಗಮನಾಥನೆ !

845

ನೀನೊಲಿದಡೆ ಒಲಿ, ಒಲ್ಲದಿದ್ದಡೆ ಸಮವೇದಿಸಿಕೊಳ್ಳಯ್ಯಾ .
ಲಿಂಗದ ಬೆಳಗನೊಳಕೊಂಡು ಸಮವೇದಿಸಿಕೊಳ್ಳಯ್ಯಾ .
ಕೂಡಲಸಂಗಮದೇವನಲ್ಲಿ ತದ್ಗತನಾದೆನಯ್ಯಾ .

ಕಂಡುಬರುವ ಸರ್ವ ಅಂಗಗಳೆಲ್ಲ ಅರಿವಿನ ಲಿಂಗದ ತವರು. ಅಂಗದಲ್ಲಿ ಅರಿವು ಸಮರಸವಾಗಿ ಬೆರೆತಿದೆ. ಅಂಡಲೆಯುವ ಮನಕ್ಕೆ ಒಲಿಯುತ್ತಿಲ್ಲ. ಒಲಿಯದಿದ್ದರೇನಂತೆ ? ಅರಿವು

ಒಲಿತು; ಆ ಅರಿವೇ ತಾನಾದ ಅಂಗದಿಂದ ನೋಡಲು ಹೋದರೆ ಸರ್ವ ಅಂಗಗಳು ಅರಿವಿನ ಸಮರಸ ಭಾವದಿಂದ ಸಂಗಮವಾಗಿದೆ. ಮನದ ದುರ್ಗುಣದಿಂದಾಗಿ ಅರಿಯದ ಅಂಗಕ್ಕೆ , ಅಂಗ ಜ್ಞಾನಿಯಾಗಿಯೂ ಹೆಣ್ಣು ಗಂಡಾಗಿಯೂ, ಕಳ್ಳ , ಸುಳ್ಳ, ಶ್ರೀಮಂತ, ಬಡವ, ಹಾದರಿಗ, ಪ್ರಾಮಾಣಿಕನಾಗಿಯೂ ಕಾಣುತ್ತದೆ. ಮನದ ದುರ್ಗುಣಗಳೆಲ್ಲ ಅಳಿದು ನಿರ್ಗುಣಿಯಾದ ಅಂಗಕ್ಕೆ ಅಂಗಗಳೆಲ್ಲ ಅರಿವಿನ ಲಿಂಗಗಳಾಗಿ ಕಾಣುತ್ತವೆ.

ಅಂಗದಲ್ಲಿಯೇ ಇದ್ದ ಅರಿವು ಅಂಗಕ್ಕೆ ಒಲಿದಡೇನು, ಒಲಿಯದಿದ್ದಡೇನು? ಅಂಗದಲ್ಲಿಯೇ ಅರಿವಿನ ಲಿಂಗವಾಗಿ ಸಮರಸದಿಂದ ಭರಿತವಾಗಿದೆ. ಅರಿವಿನ ಲಿಂಗ ಅಂಗವನು ಒಳಗೊಂಡು ಸಮರಸದಿಂದ ಬೆಳಗುತ್ತಲಿದೆ. ಕೂಡಲಸಂಗಮನಲ್ಲಿ ತದ್ಗತವಾದ ಲಿಂಗಕ್ಕೆ ಬೆಳಗುವ ಲಿಂಗಗಳಾಗಿಯೇ ಕಾಣುತ್ತವೆ.

846

ಮಾಡುವರಿಲ್ಲ, ನೀ ಮಾಡದೆ ನಿಲ ಸಾಲೆ;
ಬೇಡುವರಿಲ್ಲ, ನೀ ಬೇಡದೆ ನಿಲ ಸಾಲೆ;
ಕೂಡುವರಿಲ್ಲ, ನೀ ಕೂಡದೆ ನಿಲ ಸಾಲೆ;
ಕೂಡಲಸಂಗಮದೇವ,
ತಾನು ತಾನಾಗಿ ನೀ ನೋಡದೆ ನಿಲ ಸಾಲೆ !

ಅಂಗಕ್ಕೆ ಅಂಗದಲ್ಲಿಯೇ ಇರುವ ಅರಿವಿನ ಹೊರತಾಗಿ ಯಾರೂ ಏನೂ ಮಾಡುವರಿಲ್ಲ. ನಾ ಮಾಡಿದರಾಯಿತು ಎನ್ನುವುದು ಮನದ ಭ್ರಮೆಯೆ ಹೊರತು ಯಾರೂ ಏನೂ ಮಾಡಲು ಬರುವುದಿಲ್ಲ. ತಂದೆ ತಾಯಿ ಮಾಡುವುದಿಲ್ಲ. ಬಂಧು ಬಳಗ ಮಾಡುವುದಿಲ್ಲ. ಗುರುದೇವನು ಕೂಡಾ ಮಾಡುವುದಿಲ್ಲ. ಸಾರಾಯದ ಮಾರ್ಗ ತೋರುವುದೆಂದರೆ ಮಾಡುವುದಲ್ಲ. ಕೈ ಮರವಿದ್ದಂತೆ; ದಾರಿ ತೋರಿ ಮರೆಯಾಗುವುದು. ಗುರುವಾದರೂ ಕೈಮರದಂತೆ ದಾರಿ ತೋರಿ ಮರೆಯಾಗಿ ತಾನು ಆ ದಾರಿಯಲ್ಲಿ ನಡೆದು ಗಮ್ಯ ಸೇರಬೇಕು. ತನಗೆ ತಾನೇ ತನ್ನಲ್ಲಿರುವ ಅರಿವಿನ ಸಂಗಯ್ಯನ ಜಾಡು ತಿಳಿದು; ನಿನ್ನ ಹೊರತಾಗಿ ಮಾಡುವರಿಲ್ಲ, ನೀ ಮಾಡದೆ ನಿಲಸಾಲೆ ಎಂದು ಗಟ್ಟಿಯಾಗಿ ನಿಲ್ಲಬೇಕು.

ಅಂಗಕ್ಕೆ ಒಳಿತಾಗುವುದೆಂದು ಅಂಗದ ತುಂಬಾ ಅಜ್ಞಾನವನ್ನೇ ತುಂಬಿಕೊಂಡಿರುವೆ. ಅಂಗವೇ ಲಿಂಗವೆಂದರಿಯದೆ, ಅಂಗದಲ್ಲಿ ವೇದ, ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳನ್ನು ತುಂಬಿಕೊಂಡು ಪಂಡಿತ, ಶಾಸ್ತ್ರಿ, ಮಠಾಧೀಶ, ಜಗದ್ಗುರು, ಅಧಿಕಾರಿ, ಪ್ರಜಾಪ್ರತಿನಿಧಿಯಾಗಿ ಪೋಜು ಕೊಡುತ್ತಿರುವೆ. ಅಂಗ ಪದವಿಯನ್ನು ಜಡಿದುಕೊಳ್ಳುವ ಗೋಡೆಯಲ್ಲ ! ಅದು ವಿರಾಟ ಸ್ವರೂಪವೆಂದು ಅರಿಯದೆ ಅರಿವಿನ ಮಹಾಲಿಂಗವೆಂದು ಅರಿಯದೆ, ಒಳಿತಾಗುವುದೆಂದು, ಅಂಗಕ್ಕೆ ಸುಖವಾದೀತೆಂದು, ಅಜ್ಞಾನದ ಕಸವನ್ನೇ ತುಂಬಿಕೊಂಡಿರುವೆ. ಬೇಡುವರಿಲ್ಲ, ನೀ ಬೇಡದೆ ತೊಲಗುವುದಿಲ್ಲ, ಗತ್ಯಂತರವೂ ಇಲ್ಲ, ನೀ ಬೇಡದೆ ನಿಲಸಾಲೆ.

ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ ಹಾಲಲಾದರೂ ಅದ್ದು ನೀರಲಾದರೂ ಅದ್ದು ನಿಮ್ಮ ಧರ್ಮ ತಂದೆ ತಾಯಿಗಳ ಉದರದಿಂದ ಬಂದರೂ ಅವರು ಕೊಡುವರಲ್ಲ. ಮನದಿಂದಾಗಿ ಅಂಗದಲ್ಲಿ

ಸಂಗ್ರಹವಾದ ಅಜ್ಞಾನವನ್ನು ಬೇಡುವವರಲ್ಲ. ಜ್ಞಾನದ ಕೂಸನ್ನಾಗಿ ಮಾಡುವವರೂ ಅಲ್ಲ. ಅಂಗದಲ್ಲಿಯೇ ಕೂಡಿದ ಕೂಡಲ ಸಂಗಯ್ಯನೇ ನೀನಾಗಿರುವುದರಿಂದ ನೀ ಕೂಡದೆ ಗತ್ಯಂತರವಿಲ್ಲ, ನೀ ಕೂಡದೆ ನಾ ಬದುಕಲಾರೆ ನಿಲಸಾಲೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನಾದ ಸಂಗಮನಾಥನೆ ನೀನು ಅಂಗದಲ್ಲಿಯೇ ಕೂಡಿದ್ದನ್ನು ಮನ ಅರಿತ ಮೇಲೆ, ಅಂಗವನ್ನೇ ಸರ್ವಾಂಗ ಲಿಂಗವನ್ನಾಗಿ ಮಾಡಿದ ಮಾಂತ್ರಿಕ ನೀನು. ಮಾಂಸ ಪಿಂಡವನ್ನು ಮಂತ್ರ ಪಿಂಡವನ್ನಾಗಿ ಮಾಡಿದ ಅರಿವಿನ ತಂದೆ ನೀನು. ಜನ್ಮಕೊಟ್ಟು ಅಂಗದಲ್ಲಿಯೇ ಅರಿಯದಂತೆ ವಾಸ ಮಾಡಿದ ತಂದೆ ತಾಯಿ ನೀನು. ಬಂಧು ನೀನು ಬಳಗ ನೀನು. ನೀನಲ್ಲದೆ ಮಾತ್ತಾರು ಇಲ್ಲ . ನೀನು ನೀನಾಗಿಯೇ ಕೂಡು ; ತಾನು ತಾನಾಗಿ ನೀ ನೋಡದೆ ನಿಲ ಸಾಲೆ !

847

ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ.
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು !
ನಮ್ಮ ಕೂಡಲಸಂಗಮದೇವರ ಮುಟ್ಟಿ
ನೆರೆವ ಸುಖವ ನಾನೇನೆಂಬೆ !

ಆಲಿಕಲ್ಲು ಕರಗಿ ನೀರಾದಂತೆ, ಅರಗಿನ ಪುತ್ಥಳಿ ಕರಗಿ ಅರಗಾದಂತೆ ತನು ಕರಗಿ ಬಯಲ ನೆರೆವ ಸುಖವ ಸುಖಿಸಿದವನಿಗೇ ಗೊತ್ತು. ಅದು ಸುಖದ ಸುಖ.

ಅಂಗದಲ್ಲಿ ಸಂಗಮವಾದ ಅರಿವಿನ ಸಂಗಯ್ಯನನ್ನು ಅಂಗವನ್ನು ಆವರಿಸಿದ ಮನ ಬೆರೆಯುವುದೊಂದೆ ತಡ ಕಡೆಗೋಡಿ ಹರಿದು ನಯನದ ಸುಖಜಲಂಗಳು ಧಾರಾಕಾರವಾಗಿ ಚಿಮ್ಮಿದವು. ಧುಮ್ಮಿಕ್ಕಿ ಹರಿದವು.

ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಸಂಗಮವಾದ ಸಂಗಯ್ಯನನ್ನು ಮುಟ್ಟಿ ಘನಮನವಾದ ಸುಖವ ನಾನೇನೆಂಬೆ !

848

ನಾಲಗೆ ತಾಗಿದ ರುಚಿಗೆ ಮನವೆ ಸಾಕ್ಷಿ , ಸಾಲದೆ ಅಯ್ಯಾ ?
ಮಾಲೆಗಾರನ ಕೇಳಿ ನನೆ ಅರಳುವುದೆ ?
ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯಾ ?
ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನು,
ಇದಿರಿಂಗೆ ತೋರುವುದು ಆಚಾರವೇ ಅಯ್ಯಾ ?

ನಾಲಗೆ ತಾಗಿದ ರುಚಿಯನ್ನು ಶಬ್ದದಿಂದ ಹೇಳಲು ಬರುವುದಿಲ್ಲ. ಮನ ಅನುಭವಿಸಿ ಆನಂದ ಪಡುತ್ತದೆ. ನಾಲಗೆಯಲ್ಲಿದ್ದ ಮನ ನಾಲಗೆಗೆ ತಾಗಿದ ರುಚಿ ಅನುಭವಿಸಿ ಇಡೀ ತನುವನ್ನು ಪುಳಕಿತಗೊಳಿಸಿತು.

ಸಸಿಯಲ್ಲಿದ್ದ ಮೊಗ್ಗು ಮಾಲೆಗಾರನಿಗಾಗಿ ಅರಳುವುದಿಲ್ಲ. ಹೂ ಅದರ ಪರಿಮಳ ಸಸಿಯ ಬೇರಿನಲ್ಲಿ, ಕಾಂಡದಲ್ಲಿ, ರೆಂಬೆ ಕೊಂಬೆಗಳಲ್ಲಿ ಚಿಗುರು ಎಲೆಗಳಲ್ಲಿ ಬಂಧಿಯಾಗಿ ಮೊಗ್ಗಾಗಿ ತನ್ನ ಆನಂದಕ್ಕಾಗಿ ಅರಳುತ್ತದೆ. ಗಿಡದ ಎಲ್ಲೆಡೆಯಿದ್ದ ಮೊಗ್ಗು, ಗಿಡದ ಎಲ್ಲೆಡೆಯಿದ್ದ ಪರಿಮಳ, ಗಿಡದ ಎಲ್ಲೆಡೆಯಿದ್ದ ಹೂ ಸರ್ವಕಾಲಕ್ಕೂ ತೋರಲಿಲ್ಲ; ತೋರಲಿಲ್ಲವೆಂದರೆ ಇರಲಿಲ್ಲವೆಂದಲ್ಲ. ಹೂ ಮತ್ತು ಪರಿಮಳ ಎನ್ನುವುದು ಗಿಡದ ಕರುಳಿನ ಕಲೆ. ಇದರ ಆನಂದ ಗಿಡ ಮತ್ತು ಮೊಗ್ಗು ಹೂಗಳಿಗೆ ಮಾತ್ರ ಗೊತ್ತು.

ಅರಿವಿನ ಆನಂದದ ಪರಿಮಳವನ್ನು ಆಗಮ ವೇದ ಉಪನಿಷತ್ತುಗಳ ಮೂಲಕ ನುಡಿದು ಹೇಳಲು ಸಾಧ್ಯವೆ ? ಅರಿವೆಂಬ ಗಂಡನು ಮನವೆಂಬ ಹೆಂಡತಿಯು ಅಂಗದಲ್ಲಿ ಕೂಡಿದ ಕೂಟದ ಕರುಳ ಕಲೆಯ ಸುಖವನು ಇದಿರಿಂಗೆ ನುಡಿಯಲ್ಲಿ ತೋರಿ ಹೇಳುವುದು ಆಚಾರವೇ ? ಹಾಗೆ ಹೇಳಿದರೆ ಹೇಳಿದಾತನಿಗೆ ಕೇಳಿದಾತನಿಗೆ ಪಡೆದು ಸುಖಿಸಿದ ಸುಖವನು ಅರುಹಲು ಸಾಧ್ಯವೆ?

ಅರಿವಿನ ಪರಿಮಳ ಎನ್ನುವುದು ಕರುಳಿನ ಕಲೆ. ಅಂಗದಲ್ಲಿಯೇ ಸಂಗಮವಾದ ಸುಖ. ಅಂಗದಿಂದಲೇ ಮನ ಅರಿವಿನ ಲಿಂಗದಲ್ಲಿ ಬೆರೆತು ಅನುಭವಿಸುವ ಆನಂದದ, ಪರಮಾನಂದದ ಸುಖ ! ಅಂಗ ಉಳ್ಳವರೆಲ್ಲ ಅಂಗದಲ್ಲಿಯೇ ಸಂಗಮವಾದ ಕರುಳಿನ ಕಲೆಯ ಅರಿವಿನ ಸುಖವನು ಅನುಭವಿಸಿಯೇ ಪಡೆಯಬೇಕು.

ಪ್ರಾಣಲಿಂಗಿಯ ಐಕ್ಯಸ್ಥಲ

849

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ;
ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ,
ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ.

ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ. ಅಂಗ ಮತ್ತೊಂದು ಅಂಗದೊಂದಿಗೆ ಮದುವೆಯಾದದ್ದು ಮದುವೆಯಲ್ಲ. ಆ ಮದುವೆ ಎಂದೋ ಆಗಿದೆ. ಕೈಲಾಸದಲ್ಲಿಯೇ ಮದುವೆಯಾಗಿದೆ. ಮದುವೆ ಎನ್ನುವುದು ಒಂದಂಗ ಮತ್ತೊಂದು ಅಂಗದೊಂದಿಗೆ ಬಾಳ ಸಂಗಾತಿಯಾಗಿ ಕೈಲಾಸದಲ್ಲಿ ಆದ ಅರಿವಿನ ಮದುವೆಯನ್ನು ನಿರ್ಧರಿಸುವುದು.

ಕಾಯವೆ ಕೈಲಾಸ. ಇದರ ಒಡೆಯ ಅರಿವಿನ ಕೈಲಾಸಪತಿ. ಈತನನ್ನು ಶಿವ, ಪರಮೇಶ್ವರ, ಅರ್ಧನಾರೀಶ್ವರ, ಗಂಗಾಧರ, ಪಶುಪತಿ, ಪತಿ, ಗಂಡ ಎಂದು ಅನುಭಾವಿಗಳು ಶರಣರು ಕರೆದಿದ್ದಾರೆ.

ಕಾಯವನ್ನು ಆವರಿಸಿದ ಮನವೇ ಸತಿ. ಈಕೆಯನ್ನು ಪಾರ್ವತಿ, ಶಿವೆ, ಅರ್ಧಾಂಗಿ, ಗಂಗೆ, ಗೌರಿ, ಸತಿ ಎಂದು ಅನುಭಾವಿಗಳು ಶರಣರು ಕರೆದಿದ್ದಾರೆ.

ಕಾಯವನ್ನು ಕೈಲಾಸ ಮಾಡಿಕೊಂಡು ಆ ಕೈಲಾಸದಲ್ಲಿ ಸತಿ ಪತಿಗಳು ವಾಸಮಾಡಿದ್ದಾರೆ. ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ ; ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ, ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ.

ಕಾಯವನ್ನು ಆವರಿಸಿದ ಮನದ ನೆಲೆಯನ್ನು ಸತಿ ಪತಿಗಳಾದ ಬಾಳ ಸಂಗಾತಿಗಳಾದ ಕಾಯಗಳೇ ತಿಳಿಯಬೇಕು. ಒಪ್ಪಂದದಿಂದ ಮದುವೆಯಾದ ಎರಡು ಕಾಯಗಳಿಗೂ ಒಂದೇ ಮನವಿದೆ. ಒಂದೇ ಅರಿವಿನ ಗಂಡನಿದ್ದಾನೆ. ಮನವೇ ಸತಿ, ಅರಿವೇ ಪತಿ.

ಎಮ್ಮ ಗಂಡನು ಏಕಾಂತಂ ಬೊಕ್ಕನು ; ಬೇಗ ಬೇಗ ಹೊರ ನಡಿಯಿರಣ್ಣಗಳಿರಾ. ಒಬ್ಬನಿದ್ದಡೂ ಸೈರಿಸನು ಕಪಿಲ ಸಿದ್ಧಮಲ್ಲಿಕಾರ್ಜುನ.

ಅಂಗದಲ್ಲಿಯೇ ಮನವೆಂಬ ಹೆಂಡತಿಯೊಂದಿಗೆ ಏಕಾಂತದ ಸಂಗ ಮಾಡಲು ಅರಿವಿನ ಗಂಡ ಬರುತ್ತಿದ್ದಾನೆ. ಆದರೆ ಮನವೆಂಬ ಹೆಂಡತಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೊಂದಿಗೆ ಸಪ್ತ ವ್ಯಸನಗಳೊಂದಿಗೆ ಸಂಬಂಧ ಬೆಳೆಸಿದ್ದಾಳೆ. ಅವರಲ್ಲಿ ಒಬ್ಬರಿದ್ದಡೂ ಸೈರಿಸನು; ಸತಿಯೊಂದಿಗೆ ಸಂಗ ಮಾಡನು. ಸತಿಯೇ ಅವರೆಲ್ಲರನ್ನೂ ಕಾಯವೆಂಬ ಕೈಲಾಸದಿಂದ ಹೊರಹಾಕಿ ಪತಿಯೊಂದಿಗೆ ಅರಿವಿನ ಏಕಾಂತದ ಸುಖವನು ಅನುಭವಿಸಬೇಕು.

ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ ಅಂಗದಲ್ಲಿಯೇ ಸಂಗಮವಾಗಿ ತನ್ನೊಳಗೆ ಬೈಚಿಟ್ಟನು: ಸಾವಿಲ್ಲದ, ರೂಹಿಲ್ಲದ, ಕೇಡಿಲ್ಲದ ಅರಿವಿನ ಗಂಡನನ್ನು ಗಂಡನಾದ ಕಾಯ, ಹೆಂಡತಿಯಾದ ಕಾಯಗಳೆರಡೂ ಪಡೆಯಲೇಬೇಕು.

ಕಾಯವೇ ಕೈಲಾಸವಾಗಿರುವಾಗ ಈ ಕೈಲಾಸದಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಹುಟ್ಟಲು ಕಾರಣವೇನು ಎಂದು ಗಂಡ ಹೆಂಡತಿಯೆಂದು ಒಪ್ಪಂದ ಮಾಡಿಕೊಂಡ ಕಾಯಗಳೆರಡೂ ಹಗಲಿರುಳೂ ಚಿಂತಿಸಬೇಕು. ಕಾಯದಲ್ಲಿರುವ ಪತಿಯೊಂದಿಗೆ ಕಾಯವನ್ನು ಆವರಿಸಿದ ಸತಿ ಸಂಗ ಮಾಡಿ ಸತಿ ಪತಿಗಳೊಂದಾಗಬೇಕು !

850

ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು;
ಲಿಂಗದ ಬೆಳಗು ಒಳಗೊಂಡುದಾಗಿ ಏನೆಂದರಿಯೆನು;
ಕೂಡಲಸಂಗಮದೇವನ ಧ್ಯಾನದಿಂದ ನಾನೇನೆಂದರಿಯೆನು.

ಜ್ಞಾನ ಸಂಗ್ರಹ ಮಾಡುವ ವಸ್ತುವಲ್ಲ. ಅಳವಡಿಸಿಕೊಳ್ಳುವ ವಸ್ತುವಲ್ಲ. ಕಲಿಯುವ ವಸ್ತುವಲ್ಲ. ಕೊಡುವ ತೆಗೆದುಕೊಳ್ಳುವ ವಸ್ತು ಅಲ್ಲವೇ ಅಲ್ಲ ! ವಿಶ್ವವಿದ್ಯಾಲಯಗಳ ಕಲಿಕೆಯಿಂದ, ಶಾಲಾ ಕಾಲೇಜುಗಳ ಕಲಿಕೆಯಿಂದ ಗಳಿಸುವ ವಸ್ತುವೂ ಅಲ್ಲ. ಓದುವುದರಿಂದ, ಕೇಳುವುದರಿಂದ, ಉಪದೇಶದಿಂದ ಪಡೆಯುವ ವಸ್ತುವೂ ಅಲ್ಲ. ಮಾಹಿತಿ ಪಡೆಯಬಹುದು; ಪಡೆದ ಮಾಹಿತಿ ಜ್ಞಾನವಲ್ಲ.

ಸರ್ವಾಂಗಗಳಲ್ಲಿರುವ ಅರಿವೆಂಬ ಮಹಾಜ್ಞಾನವು ಲಿಂಗದ ಬೆಳಗು. ಜ್ಞಾನ ಅಂಗದಲ್ಲಿಯೇ ಒಳಗೊಂಡಿದೆ. ಆ ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು.

ಅಂಗದಲ್ಲಿಯೇ ಸಂಗಮವಾದ ಜ್ಞಾನವನ್ನು ಅಂಗವನ್ನು ಆವರಿಸಿದ ಮನ ಅಂಗದಲ್ಲಿಯೇ ಅರಿಯಬೇಕು. ಅರಿದರಿದು ನೋಡಬೇಕಾದುದನು ಮತ್ತೊಬ್ಬರಿಂದ ಪಡೆಯಲು ಸಾಧ್ಯವೆ? ಅಂಗದಲ್ಲಿಯೇ ಸಂಗಮವಾದ ಸಂಗಮದೇವನ ಧ್ಯಾನದಿಂದ ಅಂಗದಲ್ಲಿಯೇ ಸಂಗಮವಾಗಿ ಆ ಸಂಗದ ಅರಿವಿನ ಸುಖವನು ನಾನೇನೆಂದರಿಯೇನು !

851

ಕಾಯವೆಂಬ ಘಟಕ್ಕೆ ಚೈತನ್ಯವೆ ಸಯದಾನ
ಸಮತೆ ಎಂಬ ಜಲ ಕರಣಾದಿಗಳೆ ಶ್ರವಣ,
ಜ್ಞಾನವೆಂಬ ಅಜ್ಞೆಯನಿಕ್ಕಿ
ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ ಪರಿಮಾಣದೋಗರವ ನೀಡಿದಡೆ,
ಕೂಡಲಸಂಗಮದೇವಂಗೆ ಆರೋಗಣೆಯಾಯಿತ್ತು.

ಕಾಯವೆ ಕೈಲಾಸ. ಇದರ ಅಧಿಪತಿ ಶಿವ. ಕಾಯವನ್ನು ಆವರಿಸಿ ಮನದ ಚೈತನ್ಯದಿಂದಲೇ ಕೈಲಾಸವನ್ನು ಶಿವನನ್ನು ಕಾಣಬೇಕು. ಕಾಯದ ಕೈಲಾಸಕ್ಕೆ ಐದು ಜ್ಞಾನದ ಮಹಾದ್ವಾರಗಳಿವೆ. ಮನ, ಈ ಜ್ಞಾನ ದ್ವಾರಗಳ ಮೂಲಕ ಪ್ರವೇಶ ಮಾಡಿ ಒಳ ನುಗ್ಗಬೇಕು.

ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವು ಕಾಯವೆಂಬ ಕೈಲಾಸದ ದ್ವಾರಗಳು. ಅದರಾಚೆಯೆ ಕೈಲಾಸಪತಿ ವಾಸವಾಗಿದ್ದಾನೆ. ಜ್ಞಾನವೆಂಬ ಅಗ್ನಿಯಿಂದ ಮನದ ಅಜ್ಞಾನವನು ಭಸ್ಮ ಮಾಡಿ, ಮನದಿಂದ ನೋಡದೆ ಕಣ್ಣೊಳಗಣ ಕಣ್ಣಿನಿಂದ ನೋಡಬೇಕು. ವಸ್ತುವಿನ ಅಸತ್ಯ ಕಳೆದು ಸತ್ಯವನ್ನು ಪಾಕಕ್ಕೆ ತಂದು, ಭಾವದಲಿ ಕುಳ್ಳಿರಿಸಿ, ನಿರ್ಭಾವದ ಪರಿಮಾಣದೋಗರವ ನೀಡಿದಡೆ ಅರಿವಿನ ಸಂಗಯ್ಯನಿಗೆ ಆರೋಗಣೆಯಾಗಿತ್ತು.

852

ಕಂಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ,
ಮಹಂತ ಕೂಡಲಸಂಗಮದೇವನ.

ಕಣ್ಣಿನ ಕತ್ತಲೆ ಕಳೆದು ಮಹಾಜ್ಞಾನ ತುಂಬಿದ ಬಳಿಕ ಅಜ್ಞಾನವನು ನೋಡಲೇ ಇಲ್ಲ. ಕಿವಿಗಳ ಶಬ್ದ ಕಳೆದು ನಿಶಬ್ದವೇ ತುಂಬಿದ ಬಳಿಕ ಶಬ್ದ ಕೇಳಲೇ ಇಲ್ಲ. ಸ್ಪರ್ಶಿಸುವ ಕೈಗಳಲ್ಲಿ ಭಾವ ದುರ್ಭಾವಗಳು ಅಳಿದು ನಿರ್ಭಾವವೇ ತುಂಬಿದ ಬಳಿಕ ಪೂಜಿಸಲಿಲ್ಲ.

ಅಂಗವನ್ನು ಆವರಿಸಿದ ಅಜ್ಞಾನಿ ಮನದಲ್ಲಿ ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನ ತುಂಬಿ; ಮನವೇ ಮಹಾದೇವನಾದ ಬಳಿಕ ನೆನೆಯಲಿಲ್ಲ.

ಅಂಗವನ್ನು ಹಿಡಿದು ದೇವನೆಂದು ಆರಾಧಿಸುವ ಮನವೇ ಮಹಾಂತನಾದ ಬಳಿಕ ಯಾರನ್ನು ನೆನೆಯುವುದು ? ಯಾರನ್ನು ನೋಡುವುದು ? ಏನನ್ನು ಕೇಳುವುದು ? ಏನೆಂದು ಪೂಜಿಸುವುದು ? ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೊಂದಿಗೆ ಬೆರೆತು ಮನ ಘನಮನವಾಗುವುದು.

853

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯ ಕ್ಷೇತ್ರ,
ಅಡಿಗಡಿಗೆ ನಿಧಿಯು ನಿಧಾನ ನೋಡಾ!
ಆತನ ಇರವೆ ವಾರಾಣಾಸಿ, ಅವಿಮುಕ್ತಿ ಕ್ಷೇತ್ರ,
ಕೂಡಲಸಂಗನ ಶರಣ ಸ್ವತಂತ್ರನಾಗಿ.

ವ್ಯಾಸ ಮಹರ್ಷಿ ಅಂಗದ ವೃತ್ತಾಂತವನ್ನು ಮಹಾಭಾರತ ರೂಪದಲ್ಲಿ ರಚಿಸಿ, ಅದರ ಶ್ರೇಷ್ಠ ನುಡಿಗೆ ಭಗವಂತನ ಗೀತೆಯೆಂದು ಕರೆದ. ವಿರಾಟ ಸ್ವರೂಪವೆಂದೂ ಹೆಸರಿಸಿದ.

ಅಂಗವೇ ಮಹಾಲಿಂಗ. ಲಿಂಗದ ನಡಿಗೆಯ ಪ್ರತಿ ಅಡಿಯಲ್ಲಿಯೂ ಅದರದೇ ಆದ ಮಹಾಜ್ಞಾನದ ಸ್ಥಾನ ನಿಧಿಯಿದೆ. ಅಂಗ ಒಂದು ಅಧ್ಭುತವಾದ ಅರಿವಿನ ದಿವ್ಯಕ್ಷೇತ್ರವೂ ಹೌದು. ಅರಿವಿನ ನಿಧಿಯೂ ಹೌದು. ಜ್ಞಾನದ ಭಂಡಾರವೂ ಹೌದು ! ಅಂಗ ಐದು ಅವಿಮುಕ್ತ ಕ್ಷೇತ್ರಗಳುಳ್ಳ ವಾರಾಣಾಸಿಯೂ ಹೌದು.

ಅಂಗ ನೋಡುವ ಜ್ಞಾನವನ್ನು ಹೊಂದಿದ ಪ್ರಪಂಚದ ಶ್ರೇಷ್ಠ ವಿಶ್ವವಿದ್ಯಾಲಯವೂ ಹೌದು. ಕೇಳುವ ಜ್ಞಾನವನ್ನು ಹೊಂದಿದ ಅವಿಮುಕ್ತ ಕ್ಷೇತ್ರ. ರುಚಿಸಿ, ಮೂಸಿಸಿ, ಮುಟ್ಟಿ ಅರಿವಿನ ಆನಂದ ಅನುಭವಿಸುವ ನಿಧಿ ನಿಧಾನವೇ ಅಂಗದಲ್ಲಿ ಸಂಗಮವಾದ ಕೂಡಲಸಂಗನ ಕ್ಷೇತ್ರವಿದು.

ಕೂಡಲಸಂಗನ ಶರಣ ಸ್ವತಂತ್ರ.

ಶರಣಸ್ಥಲ

ಶರಣನ ಜ್ಞಾನಿಸ್ಥಲ

854

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ,
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದಡೆ ಒಲ್ಲೆನೆಂಬವರಿಲ್ಲ;
ಪ್ರಮಾದವಶ ಬಂದಡೆ ಹುಸಿಯೆನೆಂಬವರಿಲ್ಲ,
ನಿರಾಶೆ ನಿರ್ಭಯ, ಕೂಡಲಸಂಗಮದೇವಾ,
ನೀನೊಲಿದ ಶರಣಂಗಲ್ಲದಿಲ್ಲ.

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ, ಇದಾವಂಗಳವಡುವುದಯ್ಯಾ :

ಧನದಲ್ಲಿ ಶುಚಿ ಮತ್ತು ಪ್ರಾಣದಲ್ಲಿ ನಿರ್ಭಯಿ ತತ್ವ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೊಲಿದ ಅಂಗಕ್ಕಲ್ಲದೆ ಅನ್ಯ ಅಂಗಗಳಿಗೆ ಅಳವಡದು. ಭೂಮಿ, ಹೇಮ, ವಿಷಯಾದಿ ಸುಳ್ಳು ಸುಖಗಳೇ ಅಂಗಕ್ಕೆ ಬಲು ಸುಖ ಕೊಡುತ್ತವೆ. ಭೂಮಿ ಹೇಮ ವಿಷಯ ಸುಖ ತಪ್ಪಿ ಬಂದಡೆ ಒಲ್ಲೆನೆಂಬುವ ಅಂಗ ಬಲು ವಿರಳ. ಅರಿವು ಸಂಗಮನಾಥನ ಅಂಗಕ್ಕೆ ಭೂಮಿ ಹೇಮ ವಿಷಯಾದಿಗಳು ಬಲು ಅಸಹ್ಯ.

ಅಂಗದಲ್ಲಿ ಸಂಗಮವಾದ ಅರಿವು ಅಂಗಕ್ಕೆ ಬಳಕೆಯಾಗದ ನಿಮಿತ್ಯ ಭೂಮಿ ಹೇಮ ವಿಷಯಾದಿಗಳು ಅಂಗಗಳಿಗೆ ವಿಧಿಯಾಗಿ ಕಾಡುತ್ತವೆ. ಅರಿವಿನಿಂದ ನೋಡಲು ಹೇಮ ಎನ್ನುವುದೊಂದು ಹಳದಿ ಲೋಹ. ಭೂಮಿ ಎನ್ನುವುದೊಂದು ಜಲಗಟ್ಟಿಯಾಗಿ ಮಣ್ಣಾದದ್ದು. ವಿಷಯ ಸುಖ ಎನ್ನುವುದು ಸುಖವೇ ಅಲ್ಲ. ಮತ್ತೊಂದು ಅರಿವಿನ ತನುವಿನ ಜನ್ಮಕ್ಕೆ ಕಾರಣವಾದದ್ದು. ಇವು ಮೂರೂ ಅಜ್ಞಾನಗಳು, ಅಂಗಗಳಿಗೆ ವಿಧಿಯಾಗಿ ಕಾಡುತ್ತಿರುವುದರಿಂದ, ಪ್ರಾಮಾಣಿಕ ಅಪ್ರಾಮಾಣಿಕ ಎನ್ನುವ ಹುಸಿ ಸತ್ಯದ ಜನನಕ್ಕೆ ಕಾರಣವೂ ಆಯಿತು.

ಸನ್ಯಾಸಿ, ಬ್ರಹ್ಮಚಾರಿ, ಸಂಸಾರಿ, ಹಾದರಿಗ, ಕಳ್ಳ , ಸಾತ್ವಿಕ, ರಾಜಸ, ತಾಮಸಿಗ ಎನ್ನುವ ಪದಗಳಿಗೆ ಅಂಗ ತುತ್ತಾಯಿತು. ಹಿಡಿದು ಬಿಡುವ ಕ್ರಿಯೆಗಳಿಗೆ ತುತ್ತಾಗಿ ಅಂಗ ಅರಿವಿನ ಮುಖವಾಡ ಧರಿಸಿ ಅಜ್ಞಾನಕ್ಕಿಳಿಯಿತು. ಸಹಜ ಜ್ಞಾನದತ್ತ ಮನ ಚಲಿಸಲೇ ಇಲ್ಲ. ನಿಧಾನ ತಪ್ಪಿ ಬಂದಡೆ ಒಲ್ಲೆ ಎನಲಿಲ್ಲ. ಪ್ರಮಾದ ವಶ ಬಂದಡೆ ಹುಸಿಯೆನೆಂಬವರಿಲ್ಲದೆ ಮನದಲ್ಲಿಯೇ ವಿಲಿವಿಲಿ ಒದ್ದಾಡಿತು.

ಅರಿವೆಂಬ ಗುರುದೇವನು ಒಲಿದ ಅಂಗಕ್ಕಲ್ಲದೆ ನಿರಾಶೆ, ನಿರ್ಭಯವೆಂಬುದಿಲ್ಲ. ಅದು ಮಾತ್ರ ಸಂಗಯ್ಯನೊಲಿದ ಅರಿವಿನ ಅಂಗ !

855

ಶರಣ ಸನ್ಮತವಪ್ಪ ನಿಜಗುಣಭರಿತನಪ್ಪಡೆ,
ಸತ್ವ ರಜ ತಮ ಕ್ರೋಧ ಬಿಡದನ್ನಕ್ಕ, ಅನುಭಾವವೆಲ್ಲಿಯದೋ ?
ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ,
ಅರಿಷಡ್ವರ್ಗ ದಶವಾಯು ಬೆರೆಸಿಪ್ಪ

ಕಳಂಕವಪ್ಪ ತನು ಬಿಡದನ್ನಕ್ಕ,
ಸಂಸಾರ ಮಾಣ್ದಲ್ಲದೆ
ಶರಣ ಸಜ್ಜನಿಕೆ, ಸಮಯಾಚಾರ, ನಿಜವ್ರತವು
ದುರಾಚಾರಿಗಳಿಗಳವಡದು,
ನಮ್ಮ ಕೂಡಲಸಂಗನ ಶರಣರಿಗಲ್ಲದೆ.

ಸತ್ವ ರಜ ತಮ ಕ್ರೋಧ ಬಿಡದಿದ್ದರೆ ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಅನುಭಾವವು ವೇದ್ಯವಾಗುವುದಿಲ್ಲ. ಶರಣ ಸನ್ಮತವಪ್ಪ ನಿಜಗುಣವನನು ತುಂಬಿಕೊಂಡಡೆ ಅದು ಆಪತ್ಕಾಲಕ್ಕೆ ಬಳಕೆಯಾಗುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವು ಮನಕ್ಕೆ ವೇದ್ಯವಾಗುವುದಿಲ್ಲ. ಸಾತ್ವಿಕ ರಾಜಸ ತಮೋ ಗುಣಗಳು ಮನಕ್ಕೆ ಜನ್ಮ ಜನ್ಮದಿಂದಲೇ ಬಂದಿವೆ. ಅವು ನಿರ್ಗುಣದಿಂದಲೇ ಅಳಿಯಬಲ್ಲವು.

ಆತ್ಮಸ್ತುತಿ, ಪರನಿಂದೆ, ಅರಿಷ್ಡ್ವರ್ಗಗಳ ಹುಟ್ಟುಗುಣ. ಮನದಿಂದಲೇ ಬಂದು ತನುವಿಗೆ ಕಳಂಕವೊಡ್ಡುತ್ತವೆ. ಈ ದುರಾಚಾರಿಗಳಿಗೆ ಶರಣಸಜ್ಜನಿಕೆ, ಸಮಾಯಾಚಾರ, ನಿಜವ್ರತವು ಅಳವಡದು.

ಕೂಡಲಸಂಗನ ಶರಣರಿಗೆ ಮಾತ್ರ ಸಮಯಾಚಾರದ ನಿಜವ್ರತ ಅಂಗದಲ್ಲಿಯೇ ಸಿದ್ಧವಾಗುವುದು. ಮನ ತನುವಿನ ಅರಿವಿನಲ್ಲಿ ತನ್ಮಯವಾಗಿ ಘನಮನವಾಗುವುದು.

ಆತ್ಮದಲ್ಲಿ ಬೆರೆತ ಮನ ಆತ್ಮವೇ ತಾನಾದಾಗ ಆತ್ಮಸ್ತುತಿ ಅಳಿಯುವುದು. ಸಕಲ ತನುಗಳ ಆತ್ಮವು ಪರಮಾತ್ಮವೇ ತಿಳಿದಾಗ ಪರನಿಂದೆಯನು ಬಿಡುವುದು. ಸೂಕ್ಷ್ಮ ತನುವೆಂಬ ಕಳಂಕ ತನು ಕಾರಣ ತನುವಿನಲ್ಲಿ ತನ್ಮಯವಾಗಿ ಕಾರಣ ತನುವೇ ತಾನಾದಾಗ ಕಳಂಕ ತನು ತನ್ನಷ್ಟಕ್ಕೆ ತಾನೇ ಅಳಿಯುವುದು. ಅದರ ಸಂಸಾರವೂ ಬಿಟ್ಟು ತೊಲಗುವುದು. ಸಜ್ಜನಿಕೆ, ಸಮಯಾಚಾರ, ನಿಜ ಅರಿವಿನ ವ್ರತ ಮಾತ್ರ ಬಳಕೆಗೆ ಬರುವುದು.

856

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ, ನೋಡಾ ;
ಕೊಲುವುದು ತ್ರೈ ಜಗವೆಲ್ಲವ; ತನಗೆ ಬೇರೆ ಪ್ರಳಯವಿಲ್ಲ ;
ನಾಕಡಿಯನೈದುವುದು; ಲೋಕದ ಕಡೆಯನೆ ಕಾಣ್ಬುದು ;
ಸೂಕ್ಷ್ಮ ಪಥದಲ್ಲಿ ನಡೆವುದು ; ತನಗೆ ಬೇರೆ ಒಡಲಿಲ್ಲ ;
ಅಹಮೆಂಬ ಗಾರುಡಿಗನ ನುಂಗಿತ್ತು.
ಕೂಡಲಸಂಗನ ಶರಣರಲ್ಲದುಳಿದವರ !

ತನುವನ್ನು ಆವರಿಸಿ ತನುವನೇ ಆಶ್ರಯಿಸಿ ತನುವಿಗೆ ಮುಳುವಾದ ತಲೆ ಬಾಲವಿಲ್ಲದ ಮನವೆಂಬ ವಿಷದ ಹಾವು ತ್ರೈಜಗದ ತನುಗಳೆಲ್ಲವ ಕೊಲ್ಲುವುದು. ತನುವಿಗೆ ಪ್ರಳಯವೆಂಬುದೇ ಇಲ್ಲ; ಮನವನ್ನು ಹೊರತು ಪಡಿಸಿ, ಗಾಳಿಯಂತೆ ಸುಳಿದಾಡುವುದು, ಅಗ್ನಿಯಂತೆ ಸುಡುವುದು, ಜಲದಂತೆ ಉಸಿರುಗಟ್ಟಿ ಕೊಲ್ಲುವುದು, ಭೂಮಿಯಂತೆ ಬಿರಿದು ಲಾವಾರಸ ಚಿಮ್ಮುವುದು.

ಅಂಗವನ್ನು ಆವರಿಸಿದ ಮನವೆಂಬ ವಿಷದ ತಲೆಬಾಲವಿಲ್ಲದ ಹಾವು ; ಅಂಗದಲ್ಲಿಯೇ

ಸಂಗಮವಾದ ಸಂಗಯ್ಯನೆಂಬ ಗಾರುಡಿಗನನೇ ನುಂಗುವುದು. ಹಾವೆಂದು ಅರಿತು, ಅರಿವಿನ ಮದ್ದನರೆದ ಕೂಡಲಸಂಗನ ಶರಣರನಲ್ಲದೆ ಉಳಿದವರ ಬಿಡದು.

ಭೂಮಿ, ಜಲ, ಅಗ್ನಿ, ವಾಯುಗಳನೆಲ್ಲ ಒಂದು ಮಾಡಿ; ಸುಳಿದಾಡಿ ಕುಣಿ ಕುಣಿದಾಡಿ, ಲೋಕದ ಕಡೆಯನೆ ಕಾಣ್ಬುದು. ಒಡಲಿಲ್ಲದ ಹಾವು, ತಲೆ ಬಾಲವಿಲ್ಲದ ಹಾವು ! ಅರಿವಿನ ಒಡಲನ್ನೇ ಆಶ್ರಯ ಮಾಡಿಕೊಂಡು; ಒಡೆಯನನ್ನೇ ಯಾಮಾರಿಸಿ ; ನಾನೆಂಬ ಹಾವಾಡಿಗನನೇ ನುಂಗಿತ್ತು.

ಸೃಷ್ಟಿ ಮಾಡಿದ ಬ್ರಹ್ಮನ ನುಂಗಿ, ಒಡಲು ಕೊಟ್ಟ ನಾರಾಯಣನ ನುಂಗಿ; ಶಿವನ ಕೊರಳಲ್ಲಿ ಬಂದು ಆಭರಣವಾಗಿ ನಿಂದಿತ್ತು !

857

ಆದಿತ್ಯ ಸೋಮರು ಆಗಿ ಹೋಗುತ್ತ ಇದ್ದಹರು;
ಬ್ರಹ್ಮ ಪ್ರಳಯಕ್ಕೊಳಗಾದ, ಹರಿಯ ಸಿಂಹಾಸನವಡಗಿತ್ತು;
ಆತೋ ನಾಸ್ತಿ ಇತೋ ನಾಸ್ತಿ !
ರೋಮಜರೆಂಬವರು ಸಿಟ್ಟುಗುಟ್ಟಿ ತರುಮರನಡಿಯಲ್ಲಿದ್ದರು.
ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ
ಲಿಂಗದ ನಿಜವನರಿಯನು.
ಇದು ಕಾರಣ ಕೂಡಲಸಂಗಮದೇವಾ,
ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು.

ಮಹಾಜ್ಞಾನಿಯೆಂಬ ಅಂಗದಲ್ಲಿಯೇ ಸಂಗಮವಾದ ಸಂಗಯ್ಯ ಮಹಾ ಚತುರ. ಸಮುದ್ರ ಮಥಿನಿಸಿದಾಗ ಅಮೃತವೂ ವಿಷವೂ ಹೊರಬಂತು. ವಿಷದಿಂದಾಗಿ ತ್ರೈ ಜಗವೆಲ್ಲ ತತ್ತರಿಸಿ ಹೋಯಿತು. ಬ್ರಹ್ಮ ವಿಷ್ಣು ದೇವಾನು ದೇವತೆಗಳೆಲ್ಲ ಗಡಗಡನೆ ನಡುಗಿದರು. ಶಿವ ವಿಷವನ್ನು ಕಂಠದಲ್ಲಿ ಬಂಧಿಸಿಕೊಂಡ; ನೀಲಕಂಠನಾದ ! ಅಮೃತವನ್ನು ಸರ್ವಾಂಗಗಳಲ್ಲಿ ಸಂಗಮ ಮಾಡಿದ; ಲಿಂಗಯ್ಯನಾದ!

ಅಮೃತವೆಂದರೆ ಜಲರೂಪವಲ್ಲ; ಅದು ಬಯಲು ! ಅದಕ್ಕೆ ಪ್ರಳಯವಿಲ್ಲ; ಸಾವಿಲ್ಲ; ಕೇಡಿಲ್ಲ ; ರೂಹು ಮೊದಲೇ ಇಲ್ಲದ ಸುಂದರವಾದ ಚೆಲುವು ! ಇದನ್ನು ಬ್ರಹ್ಮ ಅರಿಯಲು ಹೋಗಿ ಪ್ರಳಯಕ್ಕೆ ತುತ್ತಾದ. ಅರಿತೆನೆಂದು ಸುಳ್ಳು ಹೇಳಿ ತನ್ನ ಒಂದು ತಲೆಯನ್ನೇ ಕಳೆದುಕೊಂಡ. ನಾರಾಯಣ ಶಿವನ ಪಾದ ಹಿಡಿದು ಬ್ರಹ್ಮಾಂಡದವರೆಗೂ ಹುಡುಕಲು ಹೋದ; ಶಿವನಪಾದ ನಾರಾಯಣನಿಗೆ ದಕ್ಕಲೇ ಇಲ್ಲ.

ಮಾರ್ಕಂಡೇಯ ಮಹಾಮುನಿ ಶಿವನನ್ನು ಪೂಜಿಸಿ ಸ್ವೇಚ್ಛಾ ಮರಣಿ ಎನ್ನಿಸಿಕೊಂಡ; ತಾನು ಹೇಗೆ ಲಿಂಗವೆಂದು ನಿಜವನು ಅರಿಯಲಿಲ್ಲ. ತ್ರೈಜಗದ ಮನುಜರೆಲ್ಲ ತರಗುಟ್ಟಿ ತರುಮರಗಳಾಶ್ರಯ ಪಡೆದರು ನಿಜವನರಿಯಲಿಲ್ಲ.

ಬಯಲೆಂಬ ಅರಿವಿನ ಅಮೃತವೇ ಶಿವನಾಗಿ ಶಿವಮಯವಾಗಿ ಸರ್ವಾಂಗಗಳಲ್ಲಿ ಸಂಗಮವಾಗಿ ಸಂಗಮನಾಥನಾದ. ಅಂಗದಲ್ಲಿಯೇ ಸಂಗಮಗೊಂಡ ಅರಿವಿನ ಬಯಲನರಿಯದೆ

ಕಂಠವನಾವರಿಸಿದ ಮನವೆಂಬ ವಿಷದ ಪ್ರಳಯಕ್ಕೆ ತುತ್ತಾಗಿ ಅನಂತ ಹಿರಿಯರೆಲ್ಲ ಸತ್ತು ಹೋದರು. ಕೂಡಲಸಂಗನ ಶರಣರು ಮಾತ್ರ ನಿಜವನರಿತು ನಿಪುಣರಾದರು.

858

ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು ಶಿವಜ್ಞಾನ; ಶಿವಭಕ್ತಿ.
ಲಿಂಗಸ್ಥಲವಳವಡದು; ಜಂಗಮಸ್ಥಲವಳವಡದು;
ಪಾದೋದಕ ಪ್ರಸಾದ ಸ್ಥಲವಳವಡದು.
ನರಕದಲ್ಲಿ ಬೀಳುವ ಕರ್ಮಿಗಳಿಗೆ
ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

ಅನಾದಿ ಶಿವನಾದರೆ; ಆದಿ ಮನ ! ಅರಿವು ಅನಾದಿಯಾದರೆ ಅದನ್ನು ತಿಳಿಯುವ ಮನ ಆದಿ ! ಅಂಗದಲಿ ಅರಿವು ಸಂಗಮವಾಗಿದೆ. ಅರಿವು ತಿಳಿಯಬೇಕಾದ ಮನ ಅಂಗವನು ಆವರಿಸಿಕೊಂಡಿದೆ.

ಮನಕ್ಕೆ ಅರಿವೆಂಬ ಶಿವನನ್ನು ಅರಿಯುವ ಆಸಕ್ತಿ ಇಲ್ಲದಿದ್ದರೆ ಅದಕ್ಕೆ ಶಿವಜ್ಞಾನ ವೇದ್ಯವಾಗದು; ಶಿವಭಕ್ತಿಯೂ ವೇದ್ಯವಾಗದು. ಮನ ಶಿವನನ್ನು ಒಲಿಸಿಕೊಳ್ಳಲು ಅಂಗದ ಮೇಲೆ ಲಿಂಗಧರಿಸಿ ತ್ರಿಕಾಲ ಪೂಜಿಸುವುದು. ಆ ಲಿಂಗವನ್ನು ಸ್ಥಾವರವನ್ನಾಗಿ ಮಾಡಿ ಅದಕ್ಕೆ ದೇವಾಲಯ ನಿರ್ಮಿಸಿ ಪ್ರದಕ್ಷಿಣೆ ಹಾಕುವುದು. ಪುಣ್ಯ ಕ್ಷೇತ್ರಗಳನ್ನು ನಿರ್ಮಿಸಿ ದೇವಾನುದೇವತರುಗಳ ಹೆಸರಿಟ್ಟು ಮೂರ್ತಿ ಕಟೆದು ದೇವಾಲಯಗಳ ಸಂಕೀರ್ಣ ಮಾಡುವುದು.

ನಡೆದಾಡುವ ಅಂಗವೇ ಅರಿವಿನ ಲಿಂಗವಿದ್ದ ರಥ ಎನ್ನುವುದು ಮರೆತು ರಥೋತ್ಸವಗಳನ್ನು ಮಾಡುವುದು. ಇದು ಯಾಕೆ ಎಂದು ಅಜ್ಞಾನಿ ಮನಕ್ಕೆ ಹೊಳೆಯವುದೇ ಇಲ್ಲ. ಏಕೆಂದರೆ ಆದಿಯಲ್ಲಿ ಅರಿವಿನ ಬೀಜ ಮನದಲ್ಲಿ ಅಂಕುರಿಸದ ನಿಮಿತ್ತ ವೇದ್ಯವಾಗದು ಶಿವಜ್ಞಾನ; ಶಿವಭಕ್ತಿ.

ಸರ್ವಾಂಗದಲ್ಲಿಯೇ ಅರಿವಿನ ಲಿಂಗಸ್ಥಲ ಸಂಗಮವಾಗಿದೆ. ಅರಿವನು ಅರಿತು ಅರಿವನು ಪಾಲಿಸುವ ಜಂಗಮ ಸ್ಥಲವೂ ಸಂಗಮವಾಗಿದೆ. ಅಂಗದಲ್ಲಿಯೇ ಜ್ಞಾನ ಜಲ, ಪ್ರಸಾದ ಸ್ಥಲ ಸಂಗಮವಾಗಿದೆ ಆದರೂ ನರಕಕ್ಕೆ ಭಾಜನವಾಗುವ ಮನ ಅಂಗಕ್ಕೆ ಲಿಂಗಕಟ್ಟಿ ಆ ಲಿಂಗವನ್ನೇ ದೇವರೆಂದು ಹಗಲಿರುಳೂ ಪೂಜಿಸುವುದು. ಲಿಂಗಕಟ್ಟುವ ಅಂಗವನ್ನು ಜಂಗಮನೆಂದು ನಂಬಿದೆ. ಕಾಲು ತೊಳೆದ ನೀರೇ ಪಾದೋದಕವೆಂದು ನಂಬಿದೆ. ಜಂಗಮ ನೀಡುವ ಅನ್ನವನು ಪ್ರಸಾದವೆಂದು ನಂಬಿದೆ. ನರಕದಲ್ಲಿ ಬೀಳುವ ಕರ್ಮಿ ಶಿವಬೀಜವಿಲ್ಲದ ಮನಕ್ಕೆ ವೇದ್ಯವಾಗದು ಶಿವಜ್ಞಾನ; ಶಿವಭಕ್ತಿ. ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

859

ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ.
ಕರಿಯು ಕನ್ನಡಿಯೊಳಗಡಗಿದಂತಯ್ಯಾ !
ಗುಣಿ ಅವಗುಣಿಯೊಡನಾಡಿವಡೆ
ಅದೆ ಆತನ ಕರ್ಮದ ಫಲ, ನೋಡಾ !
ಕೂಡಲಸಂಗನ ಶರಣರ ಅನುಭಾವ

ಭವದುಃಖಿಗಳಿಗೆ ವೇದ್ಯವಾಗದಯ್ಯಾ.

ಕ್ಷಣ ಕ್ಷಣಕ್ಕೂ ಪ್ರಾಪಂಚಿಕ ಸುಖಕ್ಕಾಗಿ, ಜೀವನವನ್ನೇ ಉಪಜೀವನಕ್ಕಾಗಿ ಮಾರ್ಪಡಿಸಿ ಕೇವಲ ಸುಖವನ್ನೇ ಹುಡುಕುವ, ದುಃಖವನ್ನು ಹೇರಿಕೊಳ್ಳುವ ತನುವಿಗೆ ಜ್ಞಾನಿಯ ಮಹಾಜ್ಞಾನದ ಸುಖ ವೇದ್ಯವಾಗದು.

ಮಹಾಜ್ಞಾನಿ ಶರಣನ ಸುಖವದು ಸುಖದ ಸುಖ. ಮರುಳ ಕಂಡ ಕನಸಿನಂತೆ. ಅನುಭವಿಸಲು ಬರುತ್ತದೆ; ಹೇಳಲುಬಾರದು. ಮೂಕ ಮೆದ್ದ ಬೆಲ್ಲದ ಸವಿಯಂತೆ ! ಕರಿಯು (ಆನೆ) ಕನ್ನಡಿಯಲ್ಲಿ ಅಡಗಿದಂತೆ; ಬ್ರಹ್ಮಾಂಡವೇ ತನುವಿನೊಳಗೆ ಚುಳುಕಾದಂತೆ !

ಗುಣಿ ಅವಗುಣಿಯೊಡನಾಡಿ ಆನಂದದಿಂದ ಅನುಭಾವ ಮಾಡಿದಂತೆ ! ಇದು ಭವ ದುಃಖಿಗಳಿಗೆ ಸಾಧ್ಯವಾಗದು. ಜನನ ಮರಣಗಳ ಬಾಧೆಯುಳ್ಳ ತನುವಿಗೆ ಸಾಧ್ಯವಾಗದು. ಶರಣನಿಗೆ ಮಾತ್ರ ಸಾಧ್ಯವಾಗುವುದು; ಸಕಲವೂ ವೇದ್ಯವಾಗುವುದು.

ಗುಣಿ ಅವಗುಣಿಗಳಿಬ್ಬರೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ತನು ಇಲ್ಲವಾಗುವವರೆಗೆ ಒಮ್ಮೆ ಗುಣಿಯಾಗುತ್ತದೆ. ಮತ್ತೊಮ್ಮೆ ಅವಗುಣಿಯಾಗುತ್ತದೆ. ಗುಣಾವಗುಣಗಳು ಮನದ ಸಹಜ ಕ್ರಿಯೆಯೆಂದು ಮನಕ್ಕೆ ಗೊತ್ತಾಗುವುದಿಲ್ಲ. ಹೀಗಾಗಿ ಅವಗುಣಿಯಾದ ತನು ಕೂಡಾ ಅವಗುಣಿ ತನುಗಳನ್ನು ಅಳಿಯುತ್ತದೆ. ಗುಣಿ ತನು ಎಲ್ಲ ವಿಷಯಗಳಲ್ಲಿ ಪಾರಂಗತನಾಗಿರುವುದಿಲ್ಲ. ಗುಣಿ ಎನ್ನುವುದು ಮನ ಹಾಕಿಕೊಂಡ ಪಾತ್ರ. ಅದು ತನಗೆ ಬೇಕಾದ ಕಾಲದವರೆಗೆ ತನುವಿನ ಮೂಲಕ ಗುಣಿ ಪಾತ್ರ ಮಾಡುತ್ತದೆ. ನಂತರ ಅವಗುಣಿ ಪಾತ್ರದ ಮೂಲಕ ತನುವನ್ನು ಪ್ರಚುರಪಡಿಸುತ್ತದೆ.

ಶರಣ ಗುಣಾವಗುಣಗಳನ್ನು ಜೀರ್ಣಿಸಿಕೊಂಡ ಪ್ರಸಾದಿಕ. ಅವೆರಡೂ ಪಾತ್ರಗಳನ್ನು ಸಿನಿಮಾದಂತೆ ನೋಡಿ ನಿಜ ಜೀವನದಲ್ಲಿ ಆನಂದದಿಂದ ಅನುಭವಿಸುತ್ತಾನೆ. ಪ್ರಯೋಗದ ಮೂಲಕ ಈ ಎರಡೂ ಪಾತ್ರಗಳನ್ನು ನಷ್ಟ ಮಾಡುವ ವಿಧಾನವನ್ನು ಆಸಕ್ತ ತನುವಿಗೆ ವೇದ್ಯ ಮಾಡುತ್ತಾನೆ. ಜ್ಞಾನವೆಂಬುದು ಒಂದು ವಿಜ್ಞಾನ. ಸೊಗಸಾದ ಸುಖೀ ಜೀವನ ; ಆಯ್ದುಕೊಂಡು ಆಚರಣೆಯಲ್ಲಿ ತೊಡಗಬೇಕು ಅಷ್ಟೇ.

860

ಉಂಬ ಬಟ್ಟಲು ಬೇರೆ ಕಂಚಲ್ಲ; ನೋಡುವ ದರ್ಪಣ ಬೇರೆ ಕಂಚಲ್ಲ;
ಭಾಂಡ ಒಂದೆ, ಭಾಜನ ಒಂದೇ; ಬೆಳಗೆ ಕನ್ನಡಿಯೆನಿಸಿತ್ತಯ್ಯ!
ಅರಿದಡೆ ಶರಣ ಮರೆದಡೆ ಮಾನವ;
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

ಸಂತನಾದರೇನು; ಸಂತನಿಗೆ ಮಣಿಯುವ ಸಾಮಾನ್ಯನಾದರೇನು ? ಗುರುವಾದರೇನು; ಆತನಿಗೆ ಮಣಿಯುವ ಶಿಷ್ಯನಾದರೇನು ? ಸಚಿವನಾದರೇನು; ಮತ ನೀಡಿದ ಪ್ರಜೆಯಾದರೇನು? ಗಂಡನಾದರೇನು; ಹೆಂಡತಿಯಾದರೇನು ? ಅಂಗಗಳೆಲ್ಲ ಒಂದೆ; ಅಂಗದಲ್ಲಿರುವ ಅರಿವು ಒಂದೆ; ಅಂಗವನ್ನು ಆವರಿಸಿದ ಮನ ಒಂದೆ. ಅಂಗದಲ್ಲಿರುವ ಕಣ್ಣು ಕಿವಿ ಮೂಗು ನಾಲಗೆ ಚರ್ಮ ಒಂದೆ. ಅಂಗದಲ್ಲಿರುವ (ಭಾಜನ) ರಕ್ತ ಮೂಳೆ ಮಾಂಸ ಮಜ್ಜೆಗಳು ಕೂಡಾ ಒಂದೇ. ಅಂಗವನ್ನು

ಆವರಿಸಿದ ಮನಕ್ಕೆ ಅಂಗದಲ್ಲಿಯೇ ಇರುವ ಅರಿವು ಮನವರಿಕೆಯಾಗದ ನಿಮಿತ್ತ ತನ್ನನ್ನು ತಾನೇ ಅಧಮನೆಂದು ತಿಳಿದಿದೆ. ತನ್ನನ್ನು ತಾನೇ ಶ್ರೇಷ್ಠಾತಿ ಶ್ರೇಷ್ಠನೆಂದು ತಿಳಿದಿದೆ. ತನಗೆ ತಾನೇ ಕೊಟ್ಟುಕೊಂಡ ಸ್ಥಾನಮಾನಗಳಿಂದಾಗಿ ಹಗಲಿರುಳೂ ದುಃಖದಲ್ಲಿ ಮುಳುಗಿದೆ.

ಅರಿತಡೆ ತಾನು ತನ್ನಂತೆ ; ಇತರರೂ ತನ್ನಂತೆ ! ಭಾಂಡ ಒಂದೆ; ಭಾಜನವೂ ಒಂದೇ; ಆದರೂ ಅರಿಯುವುದು ಎಷ್ಟೊಂದು ಜಟಿಲ. ಉಣ್ಣುವ ತಟ್ಟೆಯಾಗಿ ಬಳಕೆಯಾಗುವ ಕಂಚು ಒಂದೇ. ಬೆಳಗುವ ದರ್ಪಣವಾಗಿ ಬಳಕೆಯಾಗುವ ಕಂಚು ಕೂಡಾ ಒಂದೇ. ಜಾಣತನದಿಂದ ಭಾಂಡ ಭಾಜನವನ್ನು ಬಳಕೆ ಮಾಡಿ, ಕನಿಷ್ಟ ಮಧ್ಯಮ ಉತ್ತಮ ಎನ್ನುವ ಸುಖದುಃಖಗಳನ್ನು ಹೇರಿಕೊಂಡ ಮನಕ್ಕೆ ಯಾರು ಪಾಠ ಮಾಡಬೇಕು ? ತನ್ನನ್ನು ತಾನೇ ಅರಿತರಿತು ನೋಡಿ ನಿರ್ಧರಿಸಿಕೊಳ್ಳಬೇಕು. ಸಂಗ್ರಹದ ಮಾತುಗಳನ್ನು ಕೊಡವಿ; ಅಂಗದಲ್ಲಿರುವ ಅಂತರಾಳದ ಅರಿವಿನ ಲಿಂಗಯ್ಯನ ಮಾತುಗಳಿಂದ ತುಲನೆ ಮಾಡಿ ಸುಖದ ಸುಖವನ್ನು ಸುಖಿಸಬೇಕು.

ಅರಿದಡೆ ಶರಣ ಆತನು ಸದಾ ಸುಖಿ. ಮರೆತಡೆ ಮಾನವ ಆತನು ಸದಾ ದುಃಖಿ. ಎಲೆ ಮನವೇ, ಮರೆಯದೆ ಸದಾ ಪೂಜಿಸು ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು!

861

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಜೆ ಚಿಪ್ಪುಗಳ ಕಾಣಬಹುದು.
ವಾರಿಧಿ ಮೈ ದೆಗೆದಡೆ ರತ್ನಂಗಳ ಕಾಣಬಹುದು.
ನಮ್ಮ ಕೂಡಲಸಂಗನ ಶರಣರು ಮನದೆರೆದು ಮಾತನಾಡಿದಡೆ
ಲಿಂಗವ ಕಾಣಬಹುದು.

ಕೆರೆ ಹಳ್ಳ ಬಾವಿ ವಾರಿಧಿಯಲ್ಲಿ ಹರಿಯುವ ಜಲ ಒಂದೇ. ಸಕಲ ತನುಗಳನ್ನು ಸೃಷ್ಟಿಮಾಡಿದ ಅರಿವಿನ ಜಲಬಿಂದು ಒಂದೇ. ಮೆಣಸು ಕಬ್ಬು ಹುಣಸೆ ಈರುಳ್ಳಿ ಶುಂಠಿ ನೆಲ್ಲು ಜೋಳ ರಾಗಿ ಗೋದಿ ಸಕಲ ಪದಾರ್ಥಗಳಿಗೆ ಹರಿದ ಜಲ ಒಂದೇ. ಪದಾರ್ಥ ಬೇರೆ ಬೇರೆ; ರುಚಿ ಬೇರೆ ಬೇರೆ; ಅರಿತು ನೋಡಿದರೆ ಸತ್ಯ ಒಂದೇ. ಪದಾರ್ಥದ ಮೂಲ ಒಂದೇ. ರುಚಿಯ ಮೂಲವೂ ಒಂದೇ. ಇವೆರಡರ ಮೂಲ ಸತ್ಯವೇ ಆಗಿದೆ.

ಗುಳ್ಳೆಗೆ ಜನ್ಮ ನೀಡಿದ್ದು ಜಲವೇ. ಚಿಪ್ಪಿಗೆ ಜನ್ಮ ನೀಡಿದ್ದು ಜಲವೇ. ರತ್ನಕ್ಕೆ ಜನ್ಮ ನೀಡಿದ್ದು ಕೂಡಾ ಜಲವೇ. ಪದಾರ್ಥ ಬೇರೆ ಬೇರೆ ಆದರೂ ಪದಾರ್ಥಕ್ಕೆ ಜನ್ಮ ನೀಡಿದ ಜಲ ಒಂದೇ. ತನುವಿಗೆ ಜನ್ಮ ನೀಡಿದ ಜಲವೂ ಒಂದೇ. ಇದನ್ನು ಅರಿತು ಸತ್ಯದ ಆಚಾರದಲ್ಲಿದ್ದ ಶರಣನಿಗೆ ಗುಳ್ಳೆ ಗೊರಜೆ ಚಿಪ್ಪು ರತ್ನಂಗಳು ಕಾಣುವುದೇ ಇಲ್ಲ.

ಶರಣನಿಗೆ ಕೇವಲ ಸತ್ಯ ಮಾತ್ರ ಕಾಣುತ್ತದೆ. ಜಲದಿಂದ ಹುಟ್ಟಿದ ಪದಾರ್ಥಗಳೆಲ್ಲ ಜಲವಾಗಿ ಕಾಣುತ್ತವೆ. ಜಲಬಿಂದುವಿನಿಂದ ಹುಟ್ಟಿದ ತನುಗಳೆಲ್ಲ ಅರಿವಿನ ಸಂಗಯ್ಯನಾಗಿ ಕಾಣುತ್ತವೆ. ಸಾಕ್ಷಾತ್ ಲಿಂಗಾಂಗಗಳಾಗಿಯೇ ಕಾಣುತ್ತವೆ.

ಸತ್ಯವನ್ನು ತಿಳಿಯುವ ಶಕ್ತಿ ಅಂಗಕ್ಕೆ ಮಾತ್ರ ಲಭಿಸಿದೆ. ಅದು ಕೂಡಾ ಸತ್ಯ ತಿಳಿಯುವ ಆಸಕ್ತಿ ಉಳ್ಳ ಮನಕ್ಕೆ ಮಾತ್ರ ಲಭಿಸಿದೆ. ತಿಳಿದ ಮನ ಘನಮನವಾಗಿ ಮನದೆರೆದು ಮಾತನಾಡುತ್ತದೆ;

ಮನದೆರೆದು ನೋಡುತ್ತದೆ ; ಮನದೆರೆದು ಪರಿಮಳ ವಾಸಿಸಿ ರುಚಿಸಿ ಸುಖಿಸುತ್ತದೆ. ಅರಿವಿನ ಕೈಗಳಿಂದ ಮುಟ್ಟಿ ಸಕಲವನ್ನು ಅರಿವಿನ ಸಂಗಯ್ಯನೆಂದು ಪೂಜಿಸಿ ಸುಖದ ಫಲವನ್ನು ಉಣ್ಣುತ್ತದೆ.

862

ಪುಣ್ಯ ಪಾಪವೆಂಬ ಉಭಯ ಕರ್ಮವನಾರು ಬಲರಯ್ಯಾ ?
ಇವನಾರುಂಬರು ?
ಕಾಯ ತಾನುಂಬಡೆ ಕಾಯ ತಾನು ಮಣ್ಣು;
ಜೀವ ತಾನುಂಬಡೆ ಜೀವ ಬಯಲು !
ಈ ಉಭಯ ನಿರ್ಣಯವ ಕೂಡಲಸಂಗಮದೇವಾ,
ನಿಮ್ಮ ಶರಣ ಬಲ್ಲ.

ಪುಣ್ಯ ಪಾಪವೆಂಬ ಎರಡು ಶಬ್ದಗಳು ತನುವಿನಿಂದಲೇ ಸೃಷ್ಟಿಯಾಗಿವೆ. ಇದರಿಂದ ತನುಗಳೇ ಜರ್ಜರಿತಗೊಂಡಿವೆ. ಪುಣ್ಯವೆಂದರೇನು ಪಾಪವೆಂದರೇನು ಎಂದು ನಿರ್ಧರಿಸಲು ಇದರಲ್ಲಿ ಭಾಗಿಯಾದ ತನುಗಳಿಗೆ ಸಾಧ್ಯವಾಗದಂತಾಗಿದೆ.

ಪುಣ್ಯದ ಕೆಲಸದಲ್ಲಿ ಭಾಗಿಯಾದ ತನುವನ್ನು ಆವರಿಸಿದ ಮನವೂ ಒಂದೇ; ಪಾಪದ ಕೆಲಸದಲ್ಲಿ ಭಾಗಿಯಾದ ತನುವನ್ನು ಆವರಿಸಿದ ಮನವೂ ಒಂದೇ; ಎರಡು ಕೆಲಸಗಳಲ್ಲಿ ಭಾಗಿಯಾದ ತನುಗಳು ಕೂಡಾ ಒಂದೇ. ಒಂದು ತನು ಮತ್ತೊಂದು ತನುವಿಗೆ ನೀಡಿ ಪುಣ್ಯ ಎಂದುಕೊಳ್ಳುತ್ತದೆ. ಒಂದು ತನುವಿನಲ್ಲಿರುವುದನ್ನು ಕಸಿದುಕೊಂಡು ಪಾಪ ಎಂದು ಕರೆಸಿಕೊಂಡಿದೆ. ನೀಡುವ ಕಸಿದುಕೊಳ್ಳುವ ವಸ್ತುಗಳೆರಡೂ ತನುವಿನವಲ್ಲ ಎಂದು ಎರಡು ತನುಗಳೂ ತಿಳಿದಿವೆ. ಆದರೂ ಪುಣ್ಯ ಪಾಪ ಎನ್ನುವ ಎರಡು ಶಬ್ದಗಳಿಂದ ತನುಗಳೆರಡೂ ಅಸಮಧಾನಗೊಂಡಿವೆ.

ಹಾಲು ಕರೆವ ಹಸು ತನ್ನದಲ್ಲ; ಭೂಮಿ ತನ್ನದಲ್ಲ ; ಭೂಮಿಯೊಳಗಿದ್ದ ಹೇಮವೂ ತನ್ನದಲ್ಲ. ಭೂಮಿ ಬೆಳೆದ ಪದಾರ್ಥವೂ ತನ್ನದಲ್ಲ. ತನ್ನದು ಎನ್ನುವ ತನುವಿನ ಪ್ರೊಡಕ್ಟ್ ಒಂದು ಕೂಡಾ ಭೂಮಿಯ ಮೇಲೆ ಇಲ್ಲ. ಅಂದ ಮೇಲೆ ಏನು ಕೊಟ್ಟರೆ ಪುಣ್ಯ, ಏನು ಕದ್ದರೆ ಪಾಪ! ಪಡೆದು, ಕದ್ದು, ನೀಡಿ, ಬೇಡಿ ಉಣ್ಣುವ ಕಾಯ ಒಂದೇ. ಜೀವವೂ ಒಂದೇ. ಇವೆರಡೂ ಬಯಲಾಗಲೇಬೇಕು.

ಪುಣ್ಯ ಪಾಪವೆಂದು ಉಭಯವನು ನಿರ್ಣಯ ಮಾಡಿದ್ದು ಮನವೇ. ಒಂದು ಶಬ್ದದಿಂದ ತನುವಿಗೆ ಸಂತೋಷ ನೀಡಿ ಮತ್ತೊಂದು ಶಬ್ದದಿಂದ ತನುವಿಗೆ ಘಾಸಿಗೊಳಿಸಿದ್ದು ಮನವೇ. ಪುಣ್ಯ ಪಾಪವೆಂದರೇನೆಂದು ತನುವಿನಲ್ಲಿಯೇ ತನ್ಮಯವಾದ ಅರಿವಿನೊಂದಿಗೆ ಬೆರೆತು ಅರಿಯಬೇಕಾದದ್ದು ಮನವೇ ! ಮನ ಶಬ್ದ ಹಿಡಿದು ತಾನು ವಾಸ ಮಾಡಿದ ತನುವನ್ನೇ ಘಾಸಿಗೊಳಿಸುವುದೆಂದರೇನು?

ಮನ, ತನುವನ್ನು ಆವರಿಸಿ, ತನುವಿನಲ್ಲಿಯೇ ವಾಸ ಮಾಡಿ, ತಿನ್ನುವುದಕ್ಕಾಗಿ ಪದಾರ್ಥ ಪಡೆದು, ತನ್ನದಲ್ಲದ ವಸ್ತುವನು ತಾನು ತಿಂದು , ಮತ್ತೊಂದು ತನುವಿಗೆ ಕೊಡುವುದನ್ನು ಪುಣ್ಯ ಎನ್ನಬಹುದೇ ? ಸಂಗ್ರಹಿಸಿದ ವಸ್ತುವನ್ನು ಕಸಿದುಕೊಂಡರೆ ಪಾಪ ಎನ್ನಬಹುದೇ ? ತಿನ್ನುವ ಪದಾರ್ಥ ಎರಡು ತನುವಿನದೂ ಅಲ್ಲ. ಆದರೂ ನೀಡುವ ಬೇಡುವ ಕದಿಯುವ ಕಸಿದುಕೊಳ್ಳುವ ಸ್ವಭಾವ ಮನದಲಿ ಬೇರೂರಿದೆ. ಮನದಲ್ಲಿ ಮನೆ ಮಾಡಿದ ಅಜ್ಞಾನಕ್ಕೆ ಅರಿವಿನ ತನು ಪುಣ್ಯದ

ತನು ಪಾಪದ ತನು ಎಂದು ಹೆಸರಿಸಿ ಕರೆಯಬಹುದೆ ?

ಮನ, ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಅರಿಯದ ನಿಮಿತ್ಯ ಒಂದು ತನು ಪುಣ್ಯಕ್ಕೆ ಭಾಜನವಾಯಿತು; ಮತ್ತೊಂದು ತನು ಪಾಪಕ್ಕೆ ಭಾಜನವಾಯಿತು. ಅಂಗದಲ್ಲಿಯೇ ಸಂಗಮವಾದ ಅರಿವನ್ನು ಅರಿತ ಮನ ಮಾತ್ರ ಪುಣ್ಯ ಪಾಪಗಳೆರಡನ್ನೂ ತಳ್ಳಿ ಹಾಕಿ ಘನಮನವಾಯಿತು. ಕೂಡಲ ಸಂಗಮದೇವನೇ ತಾನಾಗಿ ಪುಣ್ಯವೆನ್ನಲಿಲ್ಲ ಪಾಪವೆನ್ನಲಿಲ್ಲ !

863

ನಾರುಳಿಯ ಹಣಿದವನಾರಾದಡೆಯೂ ಆಡರೆ ?
ನಾರುಳಿದಡೆ ಮುಂದೆ ಅಂಕುರಿತ ಫಲ ತಪ್ಪದು;
ಮಾಡುವನ್ನಕ್ಕ ಫಲದಾಯಕ !
ಮಾಟವರತು ನಿಮ್ಮಲ್ಲಿ ಸಯವಾದಡೆ
ಆತನೆ ಅಚ್ಚ ಶರಣನಯ್ಯಾ ಕೂಡಲಸಂಗಮದೇವಾ.

ತೆಂಗಿಗೆ, ನಾರು ಗೊರಟಗಳೆರಡೂ ರಕ್ಷಣೆಯ ಕವಚಗಳು. ನಾರು ಸುಲಿದ ಮೇಲೆ ತೆಂಗು ಪ್ರಸಾದವಾಗಲು ಯೋಗ್ಯ ; ಮತ್ತೆ ಫಲವಾಗದು. ನಾರು ಗೊರಟಗಳೆರಡು ಇರುವವರೆಗೆ ಫಲವೂ ಸುರಕ್ಷ; ಅಂಕುರವೂ ಸುರಕ್ಷ. ನಾರುಳಿದಡೆ ಅಂಕುರಿತ ಫಲತಪ್ಪದು. ಜನನ ಮರಣಗಳ ಬಾಧೆಯೂ ತಪ್ಪದು.

ನಾರು ಗೊರಟಗಳೆರಡನ್ನೂ ಕಿತ್ತಿಕೊಂಡು ನಾರಿಯೆಂಬ ಮನ ಅರಿವೆಂಬ ಹರನನ್ನು ಕೂಡಿದಾಗಲೆ ನಾರಿಕೇಳ ಫಲ ಪ್ರಸಾದವಾಗಿ ಮತ್ತೆ ಅಂಕುರ ಹೊಡೆಯದೆ ಹರನನ್ನು ಸೇರುವುದು. ಹುರಿದ ಬೀಜವಾಗಿ ಅಚ್ಚ ಶರಣನಾಗುವುದು.

864

ಭಕ್ತನ ಮಠವೆಂದು ಜಂಗಮ ನಡೆದು ಬಂದಲ್ಲಿ
ಆ ಭಕ್ತನು ಕಾಣುತ್ತ ಆಸನ ತ್ಯಜತೆಯ ಮಾಡುತ್ತ,
ಕೊಂಕುತ್ತ ಕೈ ಮುಗಿದು ನಿಂದಿರ್ದು ಬಾಗಿ ಬಳುಕುತ್ತ,
ಬಿಜಯಂ ಮಾಡಿ ದೇವಾ ಎಂದು ಕರೆದು ಕುಳ್ಳಿರಿಸಿ,
ಪಾದಾರ್ಚನೆಯಂ ಮಾಡಿ ಪಾದೋದಕಮಂ ಕೊಂಡು,
ವಿಭೂತಿ ವೀಳೆಯಮಂ ಕೊಟ್ಟು,
ಕಂಗಳು ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ,
ಬಾಯಿ ತುಂಬಿ ಮಾತನಾಡಿ, ಏಗುವುದು ಏ ಬೆಸನೆಂದು,
ತನು ಕರಗಿ ಮನ ಕರಗಿ ಮಾಡುವುದು ಭಕ್ತಿ ಸ್ಥಲ.
ಬಡವನಾಗಲಿ, ಬಲ್ಲಿದನಾಗಲಿ ಇನಿತು ಮುಖ್ಯವಾಗಿ
ಮಾಡಿಸಿಕೊಂಬುದು ಜಂಗಮ ಸ್ಥಲ.
ಈ ಎರಡೊಂದಾದ ಘನವನಂತಿಂತೆಂದು ಉಪಮಿಸಬಾರದಂತಿರಲಿ !

ಇನಿತಲ್ಲದೆ ಮಾಡಿದ ಮಾಟ ಭಕ್ತಿಸ್ಥಲಕ್ಕೆ ಸಲ್ಲದು; ಫಲದಾಯಕನ್ನೆಸೆ !
ಇನಿತಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು;
ಉಪಜೀವಿತನ್ನೆಸೆ !
ಈ ಎರಡಕ್ಕೆಯೂ ಭವ ಹಿಂಗದು, ಕಾಣಾ, ಕೂಡಲಸಂಗಮದೇವಾ.

ಭಕ್ತನ ಮನೆಗೆ ಜಂಗಮ ಬಂದಲ್ಲಿ, ಜಂಗಮನನ್ನು ಆದರದಿಂದ ಬರಮಾಡಿಕೊಂಡು ತಂಪನೆಯ ಜಲದಿಂದ ಪಾದ ತೊಳೆದು, ಉತ್ತಮ ಆಸನದಲ್ಲಿ ಕುಳ್ಳಿರಿಸಿ, ಕುಡಿಯಲು ನೀರುಕೊಟ್ಟು ಉಣಬಡಿಸಿ ಆನಂದದಿಂದ ಮಾತನಾಡಿಸುವುದು ಭಕ್ತನ ಕರ್ತವ್ಯ. ಭಕ್ತ ಬಡವನೋ ಶ್ರೀಮಂತನೋ ಎಂದು ನೋಡದೆ ಭಕ್ತನ ಸಂತೋಷದಲ್ಲಿ ಭಾಗಿಯಾಗುವುದು ಜಂಗಮನ ಕರ್ತವ್ಯ.

ಈ ಎರಡೊಂದಾದ ಘನವು ಅಂತಿಂತೆಂದು ಉಪಮಿಸಲುಬಾರದು; ಭಕ್ತ ಹೀಗೆ ಮಾಡದಿದ್ದರೆ ಅದು ಭಕ್ತಸ್ಥಲವೆನಿಸದು; ಜಂಗಮ ಹೀಗೆ ಮಾಡದಿದ್ದರೆ ಅದು ಜಂಗಮ ಸ್ಥಲವೂ ಎನ್ನಿಸಿಕೊಳ್ಳದು. ಇವರಿಬ್ಬರದೂ ಉಪಜೀವನದ ಒಂದು ಕ್ರಮ. ಜನನ ಮರಣಗಳ ಬಾಧೆಯಿಂದ ದೂರಸರಿದವರಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ಪರಿಚಯ ಮಾಡಿಕೊಂಡವರಲ್ಲ.

ಭಕ್ತ ಜಂಗಮ ಎನ್ನುವುದು ಎರಡು ವ್ಯಕ್ತಿಗಳು ಆಚರಿಸುವ ಸಂಪ್ರದಾಯವಲ್ಲ. ವ್ಯಕ್ತ ಅವ್ಯಕ್ತನ ಒಂದಾಗುವಿಕೆ. ಭಕ್ತ ತನುವಿನಿಂದ ಗೋಚರಿಸುತ್ತಾನೆ. ಜಂಗಮ ತನುವಿನಲ್ಲಿಯೇ ತನ್ಮಯವಾಗಿ ತನುವಿನ ಮೂಲಕ ಗೋಚರಿಸುತ್ತಾನೆ.

ತನುವಿನ ಮೂಲಕ ಗೋಚರಿಸುವ ಭಕ್ತ; ಅಗೋಚರದ ಜಂಗಮನನ್ನು ಅಂಗದಲ್ಲಿಯೇ ಕಂಡು; ಅಜ್ಞಾನದ, ಅಹಂಕಾರದ ಆಸನವನ್ನು ತ್ಯಜಿಸಿ, ಆತನನ್ನು ಬರಮಾಡಿಕೊಂಡು, ಪಾದಾರ್ಚನೆ ಮಾಡಿ ಪಾದೋದಕವೆಂಬ ಜ್ಞಾನೋದಕವನು ಕೊಂಡು, ಅಹಂಕಾರಿ ತನುವನು ಭಸ್ಮ ಮಾಡಿ ಆ ಭಸ್ಮವನೆ ಧರಿಸಲು ಜಂಗಮನಿಗೆ ಕೊಟ್ಟು, ಕಂಗಳು ತುಂಬಿ ನಿರೀಕ್ಷಿಸಿ, ಕಿವಿಗಳು ತುಂಬಿ ಹಾರೈಸಿ, ಬಾಯಿ ತುಂಬಿ ಮಾತಲ್ಲದ ಮಾತನಾಡಿ, ತನು ಕರಗಿ, ಮನ ಕರಗಿ ಅಂಗದಲ್ಲಿಯೇ ಸಂಗಮವಾದ ಜಂಗಮನಿಗೆ ಮಾಡುವ ಪೂಜೆಯೆ ಭಕ್ತಸ್ಥಲ.

ಅಂಗದಲ್ಲಿಯೇ ಸಂಗಮವಾದ ಜಂಗಮ ಇದನರಿತು ಮಾಡಿಸಿಕೊಂಬ ಅಗೋಚರದ ಪೂಜೆಯೇ ಜಂಗಮಸ್ಥಲ. ಈ ಎರಡು ಒಂದಾದ ಘನವನು ಅಂತಿಂತೆಂದು ಉಪಮಿಸಲು ಬಾರದು. ಇದು ತನಗೆ ತಾನೇ ಮಾಡಿಕೊಂಡ ಫಲದಾಯಕ ಪೂಜೆ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ಒಲಿದು, ಅಲ್ಲಿಯೇ ಸಂಗಮಗೊಂಡು ಮೈ ಮರೆತು ಪೂಜಿಸುವ ಅರಿವಿನ ಪೂಜೆ. ಜನನ ಮರಣಗಳಿಲ್ಲದ ಜಂಗಮನ ಪೂಜೆ !

865

ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತ್ತು;
ಭಕ್ತ ನಿಷ್ಠೆ ಆಚರಣೆಯಲ್ಲಿ ಬೀಯವಾಯಿತ್ತು;
ಪ್ರಸಾದ ನಿಷ್ಠೆ ಬೆರಕೆಯಲ್ಲಿ ಬೀಯವಾಯಿತ್ತು;
ಒಂದೊಂದರ ನಿಷ್ಠೆ ಅಂದಂದಿಗೆ ಬೀಯವಾಯಿತ್ತು.
ಕೂಡಲಸಂಗಮದೇವನ ಭಕ್ತಿ ತ್ರಿಜಗವನಾಳಿಗೊಂಡಿತ್ತು.

ಶರಣರು ಮಹಾಜ್ಞಾನಿಗಳು; ಅರಿವಿನ ವ್ಯವಸಾಯಗಾರರು. ಈ ವ್ಯವಸಾಯವನ್ನು ಹೇಗೆ ಮಾಡಿದರೆ ಬಲು ಬೇಗ ಜ್ಞಾನದ ಬೆಳೆ ಬೆಳೆಯಬಹುದೆಂದು ಸೂತ್ರಗಳನ್ನು ಕಂಡು ಹಿಡಿದರು. ಲಿಂಗ ಭಕ್ತಿ ಪ್ರಸಾದ ಇವು ಮೂರು ಉಪಕರಣಗಳಿಂದ ಜ್ಞಾನ ಬಿತ್ತಿಗೆ ಕೆಲಸ ಪ್ರಾರಂಭಿಸಿದರು. ಒಂದೇ ಉಪಕರಣದ ಮೂರು ಕೂರಿಗೆ ತಾಳಗಳಿದ್ದಂತೆ.

ಪೂಜಿಸುವ ಲಿಂಗ ಲಿಂಗವಲ್ಲ ಅರಿವಿನ ಅಂಗವೇ ಲಿಂಗವೆಂದರು.

ಅರಿವಿನ ಅಂಗವನ್ನು ಅತ್ತಿತ್ತ ಸುಳಿದಾಡಿಸುವ ಮನದ ಭಕ್ತಿ ಭಕ್ತಿಯಲ್ಲ; ಅರಿವಿಗೆ ಮೊರೆ ಹೋಗುವುದೇ ಭಕ್ತಿ ಎಂದರು.

ಲಿಂಗಕ್ಕೆ ಎಡೆ ಮಾಡುವುದು ಪ್ರಸಾದವಲ್ಲ; ಅಂಗಕ್ಕೆ ತಾಗುವ ಅಜ್ಞಾನದ ಅರಿಷಡ್ವರ್ಗಗಳನ್ನು ಅರಿವಿನಿಂದ ಸ್ವೀಕರಿಸುವುದೇ ಪ್ರಸಾದವೆಂದರು. ಇವು ಮೂರು ತನಗೆ ತಾನೇ ಪೂಜಿಸಿಕೊಳ್ಳುವ ಅಗೋಚರದ ಅರಿವಿನ ಆಚಾರದ ಪೂಜೆಗಳು. ಆದರೆ ಗೋಚರದ ಆಚಾರದ ಅಜ್ಞಾನದ ಪೂಜೆಗಳಾಗಿ ಆಚಾರಕ್ಕೆ ಬಂದವು.

ಮನ ಲಿಂಗವನ್ನು ಅಂಗದ ಮೇಲೆ ಕಟ್ಟಿಕೊಂಡು ತ್ರಿಕಾಲ ಪೂಜಿಸಿ ಲಿಂಗಕ್ಕೆ ನಿಷ್ಠೆ ತೋರಿ ಲಿಂಗಾಯತನೆಂದು ಮೆರೆಯಿತು. ಲಿಂಗ ನಿಷ್ಟೆ ಪೂಜೆಯಲ್ಲಿ ಬಯಲಾಯಿತು.

ಅಂಗಕ್ಕೆ ಲಿಂಗ ಕಟ್ಟಿ ಉಪದೇಶ ಮಾಡುವ ಜಂಗಮನ ಅಂಗಕ್ಕೆ ಭಕ್ತಿ ಮಾಡಿ, ಮನ ಭಕ್ತಿ ನಿಷ್ಟೆ ಆಚರಣೆಯಲ್ಲಿ ಬೀಯವಾಯಿತು.

ಜಂಗಮನ ಅಂಗಕ್ಕೆ ಪ್ರಸಾದ ಬಡಿಸಿ, ತಾನುಂಡು, ಇತರರಿಗೂ ಪ್ರಸಾದ ಬಡಿಸಿ, ಪ್ರಸಾದ ನಿಷ್ಟೆ ಬೆರಕೆಯಲ್ಲಿ ಮನ ಬೀಯವಾಯಿತ್ತು.

ಒಂದೊಂದರ ನಿಷ್ಟೆ ಶರಣರ ಸೂತ್ರ ಗೋಚರದ ಆಚಾರದಲ್ಲಿ ಅಂದಂದಿಗೆ ಅಪವ್ಯಯವಾಯಿತು. ಕೂಡಲಸಂಗಮದೇವನ ಭಕ್ತಿ ಗೋಚರಕ್ಕೆ ಬಂದು ತ್ರಿಜಗವನಾಳಿಗೊಂಡಿತ್ತು!

866

ತೆರನನರಿವುದು ಅಪೂರ್ವ;
ಅರಿದು ಮರೆವುದು ಅಪೂರ್ವ;
ಕೂಡೆ ಶರಣೆಂಬುದು ಅಪೂರ್ವ !
ಕೂಡಲಸಂಗಮದೇವನ ಭಕ್ತಿ ಅಭಿಮಾನಿಯ ಜವ್ವನದಂತೆ !

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನನ್ನು ಅರಿಯುವುದು ಅಪೂರ್ವ. ಪೂರ್ವವನ್ನು ಅರಿಯಬಹುದು; ಪೂರ್ವಾಪೂರ್ವ ಅಪೂರ್ವವಾದ ಘನವನು ಅರಿಯುವುದು ಅಪೂರ್ವ. ಅರಿತ ಮೇಲೆ ಅರಿತ ಅರಿವನು ಮರೆಯುವುದು ಅಪೂರ್ವ.

ಅರಿಯಲು ಹೋದ ಮನವೆಂಬ ಶಿಷ್ಯನು ಅಪೂರ್ವ.ಅರಿವು ಅರಿಯ ಹೇಳುವ ಅರಿವೆಂಬ ಗುರುದೇವನೂ ಅಪೂರ್ವ. ಅರಿವೆಂಬ ಗುರುದೇವನನ್ನು ಕೂಡಿ ಶರಣೆಂಬುದು ಅಪೂರ್ವ ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನಿಗೆ ಅಂಗವನ್ನು ಆವರಿಸಿದ ಮನವೆಂಬ ಭಕ್ತ ಭಕ್ತಿ ಮಾಡುವುದು ಇಂದು ನಿನ್ನೆಯ ವಿಷಯವಲ್ಲ; ಅಪೂರ್ವವಾದುದು. ಅಭಿಮಾನಿ ಹೆಂಡತಿಯ ಯೌವ್ವನದಂತೆ. ಆ ಯೌವ್ವನದ ಸುಖವನು ಗಂಡ ಹೆಂಡಿರಿಬ್ಬರೆ ಅರಿದರಿದು ಸುಖಿಸಿದಂತೆ.

867

ಐದು ಮಾನವ ಕುಟ್ಟಿ ಒಂದು ಮಾನವ ಮಾಡು, ಕಂಡಾ ಮದವಳಿಗೆ;
ಇದು ನಮ್ಮ ಬಾಳುವೆ, ಮದವಳಿಗೆ !
ಇದು ನಮ್ಮ ವಿಸ್ತಾರ, ಮದವಳಿಗೆ !
ಮದವಳಿದು ನಿಜವಳಿದ ಬಳಿಕ ಅದು ಸತ್ಯ ಕಾಣಾ,
ಕೂಡಲಸಂಗಮದೇವಾ.

ಅಂಗದಲ್ಲಿಸಂಗಮವಾದ ಜ್ಞಾನ ಒಂದೇ; ಅದನ್ನು ತಿಳಿಯುವ ಮನ ಒಂದೇ. ಆದರೂ ಮನ ಅರಿಯದ್ದಕ್ಕಾಗಿ ಕಣ್ಣು ಕಿವಿ ಮೂಗು ಚರ್ಮ ನಾಲಗೆ ಮೂಲಕ ಸತ್ಯ ಅಸತ್ಯಗಳೆರಡೂ ಪ್ರಕಟವಾಗಿ; ಅಂಗದಲ್ಲಿ ಅಷ್ಟಮದಗಳು, ಸಪ್ತ ವ್ಯಸನಗಳು, ಅರಿಷಡ್ವರ್ಗಗಳು ಸೃಷ್ಟಿಯಾಗಿ ತನು ಮನಗಳೆರಡು ಮದ ತುಂಬಿದ ಮದ್ದಾನೆಯಂತೆ ಬೀಗುತ್ತಲಿದೆ.

ಮದವಳಿದು ನಿಜವುಳಿದ ಮದುವಳಿಗೆಯನ್ನು ಮಾತ್ರ ಮದುಮಗ ಅಪ್ಪಿಕೊಳ್ಳುತ್ತಾನೆ. ತನ್ನಂತೆ ಮಾಡಿಕೊಂಡು ಆಕೆಯೊಂದಿಗೆ ಸುಖಿಸುತ್ತಾನೆ. ಅರಿವಿನ ಒನಕೆಯಿಂದ ಐದು ಮಾನಗಳನ್ನು ಕುಟ್ಟಿ ಒಂದು ಮಾನವ ಮಾಡಿ ; ಒಮ್ಮಳಿಗಳನ್ನಾಗಿ ಮಾಡುತ್ತಾನೆ. ಇದು ಅಂಗದ ಅರಿವಿನ ಬಾಳುವೆ. ಲಿಂಗಾಂಗದ ಸಮರಸ ವಿಸ್ತಾರ !

868

ಕುಲಮದವಳಿಯದನ್ನಕ್ಕ ಶರಣಾಗಲೇಕೆ ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ ?
ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು.
ಹೆಪ್ಪನೆರೆದು ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು
ಕೂಡಲಸಂಗಮದೇವಾ, ನಿಮ್ಮ ಶರಣರು !

ಹಾಲಿನಲ್ಲಿ ಮೊಸರು ಮಜ್ಜಿಗೆ ಬೆಣ್ಣೆ ತುಪ್ಪವಿದೆ. ಹಾಲಿಗೆ ಹೆಪ್ಪನಿಟ್ಟು ಕೆಡದ ಮುನ್ನ ತುಪ್ಪವಾಗದು. ಹಾಗೆಯೇ ತನುವಿನಲ್ಲಿ ಅರಿವೆಂಬ ಗುರುದೇವ ತನ್ಮಯವಾಗಿದ್ದಾನೆ. ತನುವಿನ ಕುಲಮದ ಅಳಿಯದ ಮುನ್ನ ಶರಣಾಗಲು ಬರುವುದಿಲ್ಲ. ತನುವನ್ನು ಆವರಿಸಿದ ಅಜ್ಞಾನ ಬಿಡದ ಮುನ್ನ ಭಕ್ತನಾಗಲು ಬರುವುದಿಲ್ಲ. ಅಹಂಕಾರ ತೊಲಗಿ ಕಿಂಕಿಲನಾಗಲೂ ಬರುವುದಿಲ್ಲ. ಹಾಲು ಕೆಟ್ಟು ತುಪ್ಪವಾಗುವಂತೆ ತನುಗುಣಾದಿಗಳು ಕೆಟ್ಟು ನಿರ್ಗುಣಿಯಾಗದ ಮುನ್ನ ಅಂಗದಲ್ಲಿಯೇ ಸಂಗಮವಾದ ಸಂಗಮನಾಥ ಮನಕ್ಕೆ ಒಲಿತು ಘನಮನವನ್ನಾಗಿ ಮಾಡಲಾರ.

ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಶರಣು ಹೋದ ಶರಣರು ಹಾಲು ಕೆಟ್ಟು ತುಪ್ಪವಪ್ಪಂತೆ.

869

ಮಣ್ಣ ಮಡಕೆ ಮಣ್ಣಾಗದು ಕ್ರೀಯಳಿದು
ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು.
ಹೊನ್ನು ಕಬ್ಬುನವಾಗದು ಕ್ರೀಯಳಿದು.
ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯಳಿದು.
ಕೂಡಲಸಂಗನ ಶರಣನಾಗಿ,
ಮರಳಿ ಮಾನವನಾಗದು ಕ್ರೀಯಳಿದು.

ಮಣ್ಣು ಮಡಕೆಯಾದ ಮೇಲೆ ಮತ್ತೆ ಮಣ್ಣಾಗದು. ಬೆಣ್ಣೆ ಕರಗಿ ತುಪ್ಪವಾದ ಮೇಲೆ ಮತ್ತೆ ಬೆಣ್ಣೆಯಾಗದು. ಲೋಹ ಚಿನ್ನವಾದ ಮೇಲೆ ಮತ್ತೆ ಲೋಹವಾಗದು. ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು.

ಅಂಗದಲ್ಲಿ ಅರಿವು ಸಂಗಮವಾಗಿದೆ. ಮನಕ್ಕೆ ಮನವರಿಕೆಯಾಗಿಲ್ಲ. ಮನ ಅರಿವಿಗೆ ಶರಣು ಹೋಗಿ ಘನಮನವಾದ ಮೇಲೆ ಮತ್ತೆ ತಾನು ಅರಿವೆಂಬುದು ಮರೆತು ಮುನ್ನಿನಂತೆ ಮನವಾಗದು.

870

ಪೂರ್ವಜನ್ಮ ನಿವೃತ್ತಿಯಾಗಿ ಗುರುಕರುಣವಿಡಿದಂಗೆ
ಬಂಧನವೆಲ್ಲಿಯದೊ ?
ಭವಬಂಧನವೆಲ್ಲಿಯದೊ ;
ಸಂಕಲ್ಪ ವಿಕಲ್ಪವೆಂಬ ಸಂದೇಹ ಕಳೆದುಳಿದವಂಗೆ,
ಕೂಡಲಸಂಗಮದೇವರ ತ್ರಿ ಸಂಧ್ಯಾಕಾಲದಲ್ಲಿ ಮಾಣದೆ ನೆನೆವಂಗೆ ?

ಅಜ್ಞಾನ ಎನ್ನುವುದು ಇಂದಿನದಲ್ಲ; ಇಂದಿನ ಜನ್ಮದಿಂದ ಬಂದುದೂ ಅಲ್ಲ. ಪೂರ್ವಜನ್ಮದಿಂದ ಬಂದುದು. ಅಜ್ಞಾನ ಎನ್ನುವುದು ತನುವಿನಲ್ಲಿಯೇ ತನ್ಮಯವಾದ ಅಪೂರ್ವ ಜ್ಞಾನದಿಂದಲೇ ನಿವೃತ್ತಿಯಾಗಬೇಕು. ಗುರುದೇವನ ಕರುಣೆಯಿಂದಲೇ ಅಪೂರ್ವವಾದ ಜ್ಞಾನ ವೇದ್ಯವಾಗುವುದು.

ಬಂಧನವೂ ಇಲ್ಲ ; ಮುಕ್ತಿಯೂ ಇಲ್ಲ. ಸೂರ್ಯ ಪ್ರಕಾಶಕ್ಕೆ ಮೋಡಗಳು ಅಡ್ಡ ಬಂದರೆ ಬೆಳಕು ಇಲ್ಲವೆಂದಲ್ಲ. ಬೆಳಕನ್ನು ಮೋಡಗಳು ಬಂಧಿಸಿವೆಯೆಂದೂ ಅಲ್ಲ. ಪ್ರಕಾಶದಿಂದಲೇ ಮೋಡದ ಜನ್ಮ; ಪ್ರಕಾಶದಿಂದಲೇ ಮೋಡ ಕರಗಿ ಧರೆಗೆ ಉರುಳುವುದು. ಪ್ರಕಾಶ ಇದ್ದಂತೆ ಇರುವುದು. ಪ್ರಕಾಶಕ್ಕೆ ಜನನವಿಲ್ಲ; ಮರಣವಿಲ್ಲ.

ಜ್ಞಾನವೆಂದರೆ ಸೂರ್ಯಪ್ರಕಾಶ; ಅದಕ್ಕಿಂತಲೂ ಪ್ರಖರವಾದದ್ದು. ಆ ಬೆಳಕಿಗಿಂತಲೂ ಮುನ್ನ ಅಪೂರ್ವವಾದುದು. ಅಪೂರ್ವವಾದ ಬೆಳಕನು ಅರಿಯದೆ; ಬೆಳಕು ಹಾಗೆಂದು ಹೀಗೆಂದು; ಬೆಳಕಿನ ಬಗ್ಗೆ ಸಾಹಿತ್ಯ ರಚಿಸಿ; ಆ ಸಾಹಿತ್ಯವನ್ನು ಸಂಗ್ರಹ ಮಾಡಿಕೊಂಡು; ಜಪತಪ ಮಾಡಿ ಹಿಡಿದೆನೆಂದು, ಬಿಟ್ಟೆನೆಂದು. ಬಂಧನವಾಯಿತೆಂದು ಮೋಕ್ಷವಾಯಿತೆಂದು ಮುಕ್ತಿಗಾಗಿ ಅಲೆದಲೆದು

ಬೇಸತ್ತ ಪೂರ್ವಜನ್ಮ ನಿವೃತ್ತಿಯಾಗಬೇಕು.

ಪೂರ್ವಜನ್ಮದ ಅಜ್ಞಾನದ ಕತ್ತಲು ಜ್ಞಾನ ಸೂರ್ಯನಿಂದ ಮಾತ್ರ ಕಳೆಯುತ್ತದೆ. ಬೆಳಕಿನಿಂದ ಸೃಷ್ಟಿಯಾದ ಕತ್ತಲು ಬೆಳಕಿನಿಂದಲೇ ತೊಲಗುತ್ತದೆ. ಬೆಳಕಿನ ಮಾತುಗಳಿಂದ; ಬೆಳಕಿನ ಸಾಹಿತ್ಯದಿಂದ; ಬೆಳಕು ಎಂದು ಬರೆಯುವ ಬರಹದಿಂದ ಕತ್ತಲು ತೊಲಗುವುದಿಲ್ಲ.

ಜಾಗ್ರತ್ ಸ್ವಪ್ನ ಸುಷುಪ್ತಿ ಇವು ಮೂರು ಕತ್ತಲೆಯ ಕಾಲಗಳು. ಜಾಗ್ರತ್‌ನಲ್ಲಿ ಬೆಳಕಿದ್ದರೂ ಕೂಡಾ ಮನ ಕತ್ತಲೆಯ ಸುಖವನ್ನೇ ನೆನೆಯುವುದು; ಕತ್ತಲೆಯನ್ನೇ ಬಯಸುವುದು. ಸ್ವಪ್ನದಲ್ಲಿ ಸ್ವಪ್ನವನ್ನೇ ಕಾಣುವುದು. ಸುಷುಪ್ತಿಯಲ್ಲಿ ಕೂಡಾ ಕತ್ತಲೆಗೆ ಸಮಾನವಾದ ನಿದ್ರೆಯ ಸುಖವನ್ನೇ ಬಯಸುವುದು. ಮನಕ್ಕೆ ಇವು ಮೂರೂ ಬೆಳಕಿನ ಕಾಲಗಳಲ್ಲ.

ಗುರು ಹೇಳಿದ ದಾರಿ ಹಿಡಿದು ಪೂರ್ವಜನ್ಮವನ್ನು ನಿವೃತ್ತಿ ಮಾಡಿಕೊಂಡು, ಸಂಕಲ್ಪ ವಿಕಲ್ಪವೆಂಬ ಸಂದೇಹ ಕಳೆದುಕೊಂಡು ಅಂಗದಲ್ಲಿಯೇ ಸಂಗಮವಾದ ಅರಿವಿನ ದಿವ್ಯ ಬೆಳಕಿನ ಸಂಗವನ್ನು ಅಂಗವನ್ನೇ ಆವರಿಸಿದ ಮನ ಮಾಡುವುದೊಂದೇ ತಡ; ಕೂಡಲೇ ಕೂಡಲಸಂಗಯ್ಯನಾಗುವುದು. ಮನ ಘನಮನವಾಗುವುದು. ಕತ್ತಲು ಪ್ರಖರವಾದ ಬೆಳಕಿನಲ್ಲಿ ಬೆರೆತು ಬೆಳಕೇ ಆಗುವುದು.

871

ಲಗ್ನವೆಲ್ಲಿಯದೊ, ವಿಘ್ನವೆಲ್ಲಿಯದೊ, ಸಂಗಯ್ಯಾ ?
ದೋಷವೆಲ್ಲಿಯದೊ, ದುರಿತವೆಲ್ಲಿಯದೊ, ಸಂಗಯ್ಯಾ ?
ನಿಮ್ಮ ನೆನೆವಂಗೆ ಭವಕರ್ಮವೆಲ್ಲಿಯದೊ
ಕೂಡಲಸಂಗಯ್ಯಾ ?

ಅಜ್ಞಾನಿ ಮನಕ್ಕೆ ಪಂಚಾಂಗಗಳು ಉಂಟು. ಪಂಚ ಅಂಗದಿಂದಲೇ ಸೃಷ್ಟಿಯಾದ ಪಂಚಾಂಗವೆಂಬ ಗ್ರಂಥ, ಅಂಗದ ಜಾತಕಗಳನ್ನು ಬಲ್ಲದು ಎಂದು ಹೇಳಿದರೆ ನಂಬಲು ಸಾಧ್ಯವೆ ? ಆದರೂ ಮನ ನಂಬುತ್ತದೆ. ಮನದಿಂದಲೇ ಬರೆಯಲ್ಪಟ್ಟ ಪಂಚಾಂಗ ನೋಡಿ, ಪಂಚ ಜ್ಞಾನಾಂಗಗಳನ್ನು ಒಂದು ಮಾಡಿದ ದಿವ್ಯಾಂಗಕ್ಕೆ ಹೆಸರಿಟ್ಟು ಕರೆಯುತ್ತದೆ. ಲಗ್ನ ರಾಶಿ ಚಕ್ರ ಫಳ ವಿಫಳ ಘಳಿಗೆಗಳಿಂದ ಅಳೆದು ತುಲನೆ ಮಾಡಿ ನೋಡಿ ದೋಷವನ್ನು ಸೃಷ್ಟಿ ಮಾಡುತ್ತದೆ. ಅಂಗದಿಂದಲೇ ಸೃಷ್ಟಿಯಾದ ಪಂಚಾಂಗ; ಪಂಚ ದಿವ್ಯಾಂಗಗಳ ಮೇಲೆ ದಾಳಿ ಮಾಡುತ್ತದೆ. ಕಾಗದದ ಮೇಲೆ ಬರೆದ ಅಕ್ಷರಗಳು ಅಕ್ಷರೋತ್ತಮನನ್ನು ಆಳುತ್ತವೆ.

ಹಗಲಿರುಳೆನ್ನದೆ ಪ್ರಖರವಾದ ದಿವ್ಯ ಜ್ಞಾನವೇ ಆದ ನಿಮ್ಮನ್ನು ನೆನೆಯುವ ಘನ ಮನಕ್ಕೆ ಲಗ್ನವೆಲ್ಲಿಯದೊ, ವಿಘ್ನವೆಲ್ಲಿಯದೊ ? ದೋಷವೆಲ್ಲಿಯದೊ, ದುರಿತವೆಲ್ಲಿಯದೊ ಸಂಗಯ್ಯಾ ? ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಯ್ಯನ ನೆನೆವ ಘನಮನಕ್ಕೆ !

ಶರಣನ ಶರಣಸ್ಥಲ

872

ಶರಣ ನಿದ್ರೆಗೈದಡೆ ಜಪ ಕಾಣಿರೊ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ.
ಶರಣ ನಡೆದುದೆ ಪಾವನ ಕಾಣಿರೊ.
ಶರಣ ನುಡಿದುದೆ ಶಿವತತ್ವ ಕಾಣಿರೋ
ಕೂಡಲಸಂಗನ ಶರಣನ,
ಕಾಯವೆ ಕೈಲಾಸ ಕಾಣಿರೊ.

ದುಗುಡವಿಲ್ಲದ ಅಂಗವದು ಕೂಡಲಸಂಗಮನಾಥನ ಸುಕ್ಷೇತ್ರ. ತನುವನ್ನು ಆವರಿಸಿದ ಮನ, ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಬೆರೆತ ಬಳಿಕ ತನುವದು ನಿಶ್ಚಲ. ನಿದ್ರೆ ಮಾಡಿದರೆ ಜಪ. ಕುಳಿತರೆ ಶಿವರಾತ್ರಿ. ನುಡಿದುದೇ ಶಿಚತತ್ತ್ವ.

ಕಾಯವೇ ಕೈಲಾಸ ಕಾಣಿರೊ:

ಕಾಯದಲ್ಲಿ ನೋಡುವ ಕಣ್ಣುಗಳಿವೆ. ಕೇಳುವ ಕಿವಿಗಳಿವೆ. ಸ್ಪರ್ಶಿಸಿ ಸುಖಿಸುವ ಚರ್ಮವಿದೆ. ಪರಿಮಳದ ಆನಂದ ಸವಿಯುವ ಮೂಗು ಇದೆ. ಮೃಷ್ಟಾನ್ನ ಸವಿಯುವ ನಾಲಗೆ ಇದೆ. ನೋಡುವ ನೋಟದಲ್ಲಿ ಬ್ರಹ್ಮಾಂಡವೆ ಅಡಗಿದೆ. ಕೇಳುವ ಶಬ್ದದಲ್ಲಿ ಅರಿವೆಂಬ ಗುರುದೇವನೆ ಭರಿತನಾಗಿದ್ದಾನೆ. ಸ್ಪರ್ಶ ವಾಸನೆ ರುಚಿಯಲ್ಲಿ ಕೈಲಾಸದ ಸುಖವೇ ಅಡಗಿದೆ. ತಿಳಿಯದಿದ್ದರೆ ಅಂಗವೇ ಮಂಗ. ತಿಳಿದರೆ ಅಂಗವೇ ಲಿಂಗ. ಕಾಯವೇ ಕೈಲಾಸ !

873

ಉಪಮಿಸಬಾರದ ಉಪಮಾತೀತರು,
ಕಾಲಕರ್ಮರಹಿತರು, ಭಾವವಿರಹಿತರು,
ಕೂಡಲಸಂಗಮದೇವಾ, ನಿಮ್ಮ ಶರಣರು,

ಜ್ಞಾನಿಗಳು ಉಪಮೆಗೆ ಒಳಪಡದ ಉಪಮಾತೀತರು. ಕಾಲಕರ್ಮಗಳಿಂದ ಅತ್ತತ್ತಲಿದ್ದವರು. ಭಾವ ದುರ್ಭಾವಗಳನ್ನು ಕೊಡವಿದ ನಿರ್ಭಾವಿಗಳು. ಭಾವ ರಹಿತರು. ಅಂಗದಲ್ಲಿಯೇ ಸಂಗಮವಾದ ಸಂಗಮನಾಥನ ದರ್ಶನ ಸುಖ ಹೊಂದಿದವರು. ಅರಿವೆಂಬ ಗುರುದೇವನಿಗೆ ಶರಣುಹೋಗಿ ಶರಣರಾದವರು.

ಅಂಗಕ್ಕೆ ಸುಖ ಉಂಟು ದುಃಖ ಉಂಟು. ವರ್ಣನೆ ಮಾಡಿದರೆ ಸುಖವಾಗುತ್ತದೆ. ತೆಗಳಿದರೆ ದುಃಖವಾಗುತ್ತದೆ. ಶಬ್ದ ಸೃಷ್ಟಿ ಮಾಡಿದ ಅಂಗಕ್ಕೆ ಶಬ್ದ ತಿಳಿಯದ್ದರಿಂದ ಸುಖ ದುಃಖಗಳು ಉಂಟಾಗುತ್ತವೆ. ಮನ ಶಬ್ದ ಕೇಳಿ ತನುವಿಗೆ ಸುಖ ಉಂಟು ಮಾಡುತ್ತದೆ. ಮನ ಅರಿವಿನಲ್ಲಿ ಸಂಗಮವಾಗಿ ಅರಿವಿನಿಂದ ಶಬ್ದ ಕೇಳಿದರೆ; ಶಬ್ದ ಅರಿವಾಗುತ್ತದೆ; ನಪುಂಸಕವಾಗುತ್ತದೆ.

ಭಾವದಿಂದ ಶಬ್ದ ಕೇಳಿದರೆ ಅಂಗ ಅರಳುತ್ತದೆ; ದುರ್ಭಾವದಿಂದ ಕೇಳಿದರೆ ಕೆರಳುತ್ತದೆ.

ನಿರ್ಭಾವದಿಂದ ಶಬ್ದ ಕೇಳಿದರೆ ಭಾವ ವಿರಹಿತನಾಗುತ್ತದೆ. ಅರಳುವ ಕೆರಳುವ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ. ಇದು ಶರಣನ ಅಂಗಕ್ಕೆ ಮಾತ್ರ ಸಾಧ್ಯವಾಗುತ್ತದೆ. ಶರಣನಿಗೆ ಮಾತ್ರ ಸಾಧ್ಯವಾಗುತ್ತದೆ. ತಿಳಿದರೆ ಸಕಲರಿಗೂ ಸಾಧ್ಯವಾಗುತ್ತದೆ.

874

ಭವಕ್ಕೆ ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ.
ಆಕಾರ ನಿರಾಕಾರನಲ್ಲ ನೋಡಯ್ಯಾ.
ಕಾಯವಂಚಕನಲ್ಲ, ಜೀವ ವಂಚಕನಲ್ಲ
ಶಂಕೆಯಿಲ್ಲದ ಮಹಾಮಹಿಮ ನೋಡಯ್ಯಾ.
ಕೂಡಲಸಂಗನ ಶರಣನುಪಮಾತೀತ, ನೋಡಯ್ಯಾ.

ಜನನ ಮರಣಗಳಿಲ್ಲದ ಸಂದೇಹ ಸೂತಕಗಳಿಲ್ಲದ ಆಕಾರ ನಿರಾಕಾರನು ಅಲ್ಲದ, ಕಾಯವಂಚಕನಲ್ಲದ, ಜೀವ ವಂಚಕನಲ್ಲದ, ಶಂಕೆಯಿಲ್ಲದ ಮಹಾಮಹಿಮನು.

ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಮನಾಥನನ್ನು ಕೂಡಿ ಕೊಂಡು ಅರಿವಿನ ಸಂಗಯ್ಯನೇ ಆದ ಶರಣನು ಉಪಮಾತೀತನು.

ಅಂಗಕ್ಕೆ ಜನನ ಉಂಟು; ಮರಣ ಉಂಟು. ಅಂಗಕ್ಕೆ ಸಂದೇಹ ಉಂಟು ಸೂತಕಗಳೂ ಉಂಟು. ಅಂಗಕ್ಕೆ ಆಕಾರ ಉಂಟು; ಜೀವ ಉಂಟು. ಅಂಗಕ್ಕೆ ಶಂಕೆಗಳು ಕೂಡಾ ಉಂಟು; ಅಂಗವನ್ನು ಮನ ಆವರಿಸಿರುವುದರಿಂದ !

ಅಂಗಕ್ಕೆ ಜನ್ಮ ನೀಡಿ; ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರು ದೇವನಿಗೆ ಜನನಗಳಿಲ್ಲ ಮರಣಗಳಿಲ್ಲ. ಸಂದೇಹ ಸೂತಕಿಯೂ ಅಲ್ಲ. ಆಕಾರವೇ ಇಲ್ಲದ ನಿರಾಕಾರಿ. ಶಂಕೆಯಿಲ್ಲದ ಮಹಾಮಹಿಮ. ಮನ ಆತನನ್ನು ಅರಿತು; ಆತನಿಗೆ ಶರಣು ಹೋದ ಶರಣ ಕೂಡಾ ಉಪಮಾತೀತ !

875

ಬ್ರಹ್ಮಂಗೆ ವಾಕ್ಪರುಷ, ವಿಷ್ಣುವಿಂಗೆ ನಯನ ಪರುಷ,
ರುದ್ರಂಗೆ ಹಸ್ತ ಪರುಷ,
ನಮ್ಮ ಕೂಡಲಸಂಗನ ಶರಣಂಗೆ ಪಾದವೇ ಪರುಷ !

ಬ್ರಹ್ಮ ವಿಷ್ಣು ರುದ್ರ ಈ ಮೂರು ಜನ ಕೈಲಾಸದಲ್ಲಿ ಇಲ್ಲ. ಕೈಲಾಸವೆಂಬುದೂ ಇಲ್ಲ. ಕಾಯವೇ ಕೈಲಾಸವಾದಾಗ ಈ ಮೂರು ಜನ ಕಾಯದ ಗಮನಕ್ಕೆ ಬರುತ್ತಾರೆ.

ಪೂರ್ವಜರು ಕಾಯದ ಜ್ಞಾನ ಶಿಕ್ಷಣ ಕಲೆಯನ್ನು ಅತ್ಯಂತ ಸೂಕ್ಷ್ಮವಾಗಿ ಕಾಯದಿಂದಲೆ ತಿಳಿದರು. ಕಾಯವನ್ನು ಮೂರು ಭಾಗಗಳನ್ನಾಗಿ ಮಾಡಿದರು. ಅರಿವಿನಿಂದ ಧ್ವನಿ ಮಾಡುವ ಒಂದು ಭಾಗಕ್ಕೆ ಬ್ರಹ್ಮ ಎಂದು ಹೆಸರು ಕೊಟ್ಟರು. ಇದು ಕಾಯದ ಅರಿವಿನ ಕಣ್ಣಿಗೆ ಮಾತ್ರ ಕಾಣುತ್ತದೆ. ಈ ಬ್ರಹ್ಮನಿಂದಲೇ ಕಾಣುವ ಕಾಯ ಸೃಷ್ಟಿಯಾಗುತ್ತದೆ. ಈತ ವಾಕ್ಪುರುಷ. ಈತನಿಂದಲೇ ಜಗತ್ತಿನಲ್ಲಿಯ ಸಕಲ ಸಾಹಿತ್ಯ ಸೃಷ್ಟಿಯಾಗಿದೆ. ಗಿಡಮರ ಬಳ್ಳಿ ಭೂಮಿ ಖನಿಜಗಳು,

ಪಶು ಪಕ್ಷಿ ಪ್ರಾಣಿ ಉರುಗ ಜಲಚರಗಳು ಸೃಷ್ಟಿಯಾಗಿ ಹೆಸರಿಸಲ್ಪಟ್ಟಿವೆ. ಮಾತಿನಿಂದಲೇ ಸಕಲವನ್ನೂ ಸೃಷ್ಟಿಸಬಲ್ಲ ನಿಪುಣ ವಾಕ್ಪುರುಷನೀತ. ಬ್ರಹ್ಮನಿಗೆ ಮತ್ತೊಂದು ಹೆಸರು ಜಲಜ; ಕಮಲದಲ್ಲಿ ಹುಟ್ಟಿದವನು. ಕಮಲ ಜಲದಲ್ಲಿ ಹುಟ್ಟಿದುದು.

ಪೂರ್ಜಜರು ತನುವನ್ನು ಬ್ರಹ್ಮ ಕಮಲವೆಂದು ಕರೆದರು. ವಿಷ್ಣುವನ್ನು ಜಲಜನಾಭ, ಜಲಜಾಕ್ಷನೆಂದು ಕರೆದರು. ವಿಷ್ಣು ಸಮುದ್ರವನ್ನೇ ಹಾಸಿಗೆ ಮಾಡಿಕೊಂಡು ಮಲಗಿದಾತ. ರುದ್ರ ಹಣೆಯಲ್ಲಿಯೇ ಹುಟ್ಟಿದಾತ. ಸೃಷ್ಟಿಕರ್ತ ಬ್ರಹ್ಮನ ವಾಸವೂ ಹಣೆಯಲ್ಲಿಯೇ ! ಲಯ ಕರ್ತ ರುದ್ರನ ವಾಸವೂ ಹಣೆಯಲ್ಲಿಯೇ.

ಸೃಷ್ಟಿಯ ಶಕ್ತಿ ತನುವಿನಲ್ಲಿಯೇ, ಸೃಷ್ಟಿಯ ರಕ್ಷಣೆ ತನುವಿನಲ್ಲಿಯೇ. ಸೃಷ್ಟಿಯ ಲಯವೂ ತನುವಿನಲ್ಲಿಯೇ ಇದೆ. ತನುವಿನಿಂದಲೆ ತನು ಹುಟ್ಟುತ್ತದೆ. ತನು ತನುವಿನಿಂದಲೇ ಬದುಕುತ್ತದೆ. ತನು ತನುವಿನಿಂದಲೇ ಸಾಯುತ್ತದೆ.

ತನು ಜಲಬಿಂದುವಿನಿಂದ ಸೃಷ್ಟಿಯಾಗಿದೆ. ಜಲಬಿಂದು ಬಯಲ ಗರ್ಭದಿಂದ ಹೊರಬಂದಿದೆ. ಜಲಜನಕ ಒಂದು ಅನಿಲ; ಇದರ ವಾಸ ಬಯಲಗರ್ಭದಲ್ಲಿ. ಆಮ್ಲಜನಕವೂ ಒಂದು ಅನಿಲ; ಇದರ ವಾಸವೂ ಬಯಲ ಗರ್ಭದಲ್ಲಿ. ಇವೆರಡೂ ಜಲವಲ್ಲ. ಬಯಲು ಜಲಜನಕವನ್ನು ಆಮ್ಲಜನಕವನ್ನು ಬಂಧಿಸಿ ತಾನು ಅದರಲ್ಲಿ ಬೆರೆತಾಗ, ಜೀವ ಜಲ ಬಿಂದುವಾಗಿ ಗರ್ಭಧರಿಸುತ್ತದೆ. ತನುವಿನ ರೂಪದಲ್ಲಿ ಹೊರಬಂದು ವಿಷ್ಣುವೆಂಬ ಹೆಸರು ಪಡೆದು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಕಣ್ಣಿನಿಂದ ನೋಡಿ ತನುವನ್ನು ಮುಟ್ಟಿ, ತನುವಿನೊಂದಿಗೆ ಸುಖಿಸಿ, ತನುವನ್ನು ಸೃಷ್ಟಿಸುತ್ತದೆ. ತನು ಪರುಷ, ತನುವಿನಿಂದ ಬಂದ ತನು ಪರುಷ, ನೋಡುವ ನೋಟವೆಲ್ಲ ಪರುಷ. ನುಡಿಯುವ ನುಡಿಯೆಲ್ಲ ಪರುಷ, ಮುಟ್ಟಿದ ವಸ್ತುಗಳೆಲ್ಲ ಪರುಷ !

ತನು ಬಯಲ ಬೀಜ. ತನುವಿನಿಂದ ಬಂದ ನುಡಿಯೂ ಬಯಲ ಬೀಜ. ತನುವಿನ ನೋಟವೂ ಬಯಲ ಬೀಜ ! ಮನ ಆವರಿಸಿರುವುದರಿಂದ ತನುವಿನ ಶಕ್ತಿಯ ಸುಖ ತನುವಿಗೆ ಗೊತ್ತಾಗುವುದಿಲ್ಲ.

ಮನವೂ ಬಯಲ ಬೀಜವೇ ಆಗಿದೆ. ಆ ಮನದಿಂದಲೇ ತನುವಿನ ಶಕ್ತಿಯನ್ನು ಕಂಡುಕೊಳ್ಳಬೇಕು. ಬ್ರಹ್ಮನಿಗೆ ನುಡಿಯೇ ಪರುಷ; ವಿಷ್ಣುವಿಗೆ ನಯನವೇ ಪರುಷ. ರುದ್ರನಿಗೆ ಹಸ್ತವೇ ಪರುಷ ಆಗಿದೆ. ಇದೆಲ್ಲವನ್ನೂ ಮನದ ಬಲದಿಂದ ತಿಳಿದು ಆ ಶಕ್ತಿಯೇ ತಾನಾಗುವ ಯುಕ್ತಿ ಅಂಗದ ಪಾದದಲ್ಲಿಯೇ ಅಡಗಿದೆ. ಮನ ತನ್ನ ಅಹಂಕಾರ ನಷ್ಟ ಮಾಡಿಕೊಂಡು ಅಂಗದಲ್ಲಿರುವ ಅರಿವಿನ ಲಿಂಗಯ್ಯನ ಶ್ರೀಪಾದಕ್ಕೆ ಶರಣು ಹೋಗಿ ಅಲ್ಲಿಯೆ ಲೀನವಾದರೆ ಪಾದವೇ ಪರುಷವಾಗುತ್ತದೆ. ಪರುಷ ಮುಟ್ಟಿದ ಲೋಹವೆಲ್ಲ ಅವಲೋಹವಾಗುತ್ತದೆ.

876

ಸಮುದ್ರ ಘನವೆಂಬೆನೆ ?
ಧರೆಯ ಮೇಲಡಗಿತ್ತು.
ಧರೆ ಘನವೆಂಬೆನೆ ?
ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು.
ನಾಗೇಂದ್ರನ ಘನವೆಂಬೆನೆ ?

ಪಾರ್ವತಿಯ ಕಿರುಗುಣಿಕೆಯ ಮುದ್ರಿಕೆಯಾಯಿತ್ತು.
ಅಂತಹ ಪಾರ್ವತಿ ಘನವೆಂಬೆನೆ ?
ಪರಮೇಶ್ವರನ ಅರ್ಧಾಂಗಿಯಾದಳು.
ಅಂತಹ ಪರಮೇಶ್ವರನ ಘನವೆಂಬೆನೆ ?
ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು.

ಜಲದಿಂದ ಪ್ರರಂಭವಾದ ಸೃಷ್ಟಿ ಜಲದ ಕೊನೆಯ ಮೊನೆಯ ಮೇಲೆ ಹೇಗೆ ಅಡಗಿತು ಎನ್ನುವ ಅರಿವಿನ ವಿಚಾರವನ್ನು ಅಣ್ಣನವರು ಈ ವಚನದ ಮೂಲಕ ಸುಂದರವಾಗಿ ಹೆಣೆದಿದ್ದಾರೆ.

ಸಮುದ್ರದ ಮೂಲಕ ಆವರಿಸಿದ ಜಲವನ್ನು ಘನವೆನ್ನಲು ಹೋದರೆ ಅದು ನೆಲದ ಮೇಲೆ ಅಡಗಿದೆ. ನೆಲವನ್ನು ಘನವೆನ್ನಲು ಹೋದರೆ ಅದು ನಾಗೇಂದ್ರನ ಹಣೆಯ ಮಣಿಯ ಮೇಲೆ ಅಡಗಿದೆ. ನಾಗೇಂದ್ರನನ್ನು ಘನವೆನ್ನಲು ಹೋದರೆ ಅದು ಪಾರ್ವತಿಯ ಕಿರುಬೆರಳಿಗೆ ಆಭರಣವಾಯಿತು. ಪಾರ್ವತಿಯನ್ನು ಘನವೆನ್ನಲು ಹೋದರೆ ಪರಮೇಶ್ವರನ ಅರ್ಧಾಂಗಿಯಾದಳು. ಪರಮೇಶ್ವರನನ್ನು ಘನವೆನ್ನಲು ಹೋದರೆ ಕೂಡಲಸಂಗನ ಶರಣರು ಆತನನ್ನು ಹಿಡಿದು ಮನದ ಕೊನೆಯ ಮೊನೆಯ ಮೇಲೆ ಮಡಗಿದರು.

ಸಮುದ್ರ ದೊಡ್ಡದಾದರೇನು ? ಬಯಲ ಜಲ ಬಿಂದುಗಳ ಮೂಲಕ ಜೀವ ಪಡೆಯಿತು. ಆ ಜೀವ ಜಲಬಿಂದುವೆ ಅಂಗದಲ್ಲಿ ಬಂಧಿಯಾಯಿತು. ಜೀವ ಜಲಬಿಂದುವಿನಿಂದ ಸೃಷ್ಟಿಯಾದ ಮರೀಚಿಕೆಯೇ ಮನವಾಯಿತು. ಆ ಮನವೇ ಪಾರ್ವತಿಯ ರೂಪದಲ್ಲಿ ಮನದನ್ನೆಯಾಗಿ ಅಂಗಕ್ಕೆ ಅರ್ಧಾಂಗಿಯಾದಳು. ಅಂಗ ಅರ್ಧನಾರೀಶ್ವರನಾದ. ಮನದ ಅಹಾಂಕಾರದಿಂದ ಹುಟ್ಟಿದ ವಿಷವೇ ಹಾವಾಯಿತು. ಹಾವನ್ನು ಹಿಡಿದು ಕೊರಳಲ್ಲಿಧರಿಸಿದ ಅಂಗ ಈಶ್ವರನಾಯಿತು.

ಇದೆಲ್ಲವನ್ನೂ ಅರಿತ ಶರಣ ತನ್ನ ಮನದ ಕೊನೆಯ ಮೊನೆಯ ಮೇಲೆ ಧರಿಸಿಕೊಂಡು ಕೂಡಲಸಂಗಮನಾಥನೇ ತಾನಾದನು!

877

ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ,
ಅನುಭಾವ ಲಿಂಗವಿಡಿದು ಮಾರ್ಗಕ್ರಿಯಾಲಿಂಗ ಸಿದ್ಧಿ,
ಮಾರ್ಗಕ್ರಿಯಾಲಿಂಗವಿಡಿದು ಮೀರಿದ ಕ್ರಿಯಾಲಿಂಗ ಸಿದ್ಧಿ.
ಮೀರಿದ ಕ್ರಿಯಾಲಿಂಗವಿಡಿದು ಕ್ರಿಯಾ ನಿಷ್ಪತ್ತಿ ಲಿಂಗ ಸಿದ್ಧಿ.
ಇದು ಕಾರಣ, ಕೂಡಲಸಂಗಮದೇವಾ, ಲಿಂಗವಿಡಿದು ಲಿಂಗ ಸಿದ್ಧಿ !

ಅಂಗದ ಮೇಲಿರುವ ಲಿಂಗವನ್ನು ಅಂಗದಿಂದಲೇ ಪೂಜಿಸ ಹೋದರೆ ಆಚಾರ. ಹಗಲಿರುಳು ಪೂಜಿಸುವ ಈ ಆಚಾರದಿಂದ ಲಿಂಗವು ಅಂಗಕ್ಕೆ ಯಾವ ಅನುಭವವನ್ನು ನೀಡಲು ಸಾಧ್ಯವಾಗುವುದಿಲ್ಲ. ಅಂಗದ ಅನುಭವ ಬಳಕೆಗೆ ಬಾರದೆ ಅಂಗದಲ್ಲಿಯೇ ಉಳಿಯುತ್ತದೆ. ಪೂಜಿಸುವ ಗೋಚರದ ಆಚಾರ ಗಮನಕ್ಕೆ ಬರುತ್ತದೆ.

ಅಂಗದಲ್ಲಿ ಅರಿವಿನ ಆಚಾರದ ಅಗೋಚರ ಲಿಂಗವಿದೆ. ಅಂಗವನ್ನು ಆವರಿಸಿದ ಮನ,

ಅಂಗದ ಕಣಕಣದಲ್ಲಿರುವ ಅರಿವಿನ ಆಚಾರದ ಲಿಂಗವನ್ನು ಪೂಜಿಸಬೇಕು. ಅಂಗದಲ್ಲಿಯೇ ಸಂಗಮವಾದ ಅರಿವಿನ ಆಚಾರದ ಲಿಂಗಕ್ಕೆ ನೋಡಲು ಬರುತ್ತದೆ. ಕೇಳಲು, ಸ್ಪರ್ಶಿಸಲು, ಮೂಸಿಸಿ ರುಚಿಸಿ ಅರಿವಿನ ಪರಿಮಳ ಮಾತ್ರ ಹೀರಲು ಬರುತ್ತದೆ. ಮನ ಅರಿವಿನ ಆಚಾರಲಿಂಗವಿಡಿದು ಪೂಜಿಸಿ ಅನುಭಾವ ಲಿಂಗವನ್ನು ಸಿದ್ಧಿ ಮಾಡಿಕೊಳ್ಳಬೇಕು.

ಅನುಭಾವಲಿಂಗ ಹಿಡಿದು ಮಾರ್ಗಕ್ರಿಯಾಲಿಂಗ ಸಿದ್ಧಿ:

ಅನುಭಾವ ಲಿಂಗ ಹಿಡಿದು ಅಂಗಕ್ಕೆ ಬಡಿದ ಶಬ್ದ ಕೇಳಿದರೆ, ಕೇಳಿದ ಶಬ್ದಗಳೆಲ್ಲ ಅರಿವೇ ಆಗುತ್ತವೆ. ಕೇಳಿದ ಪ್ರತಿ ಶಬ್ದವೂ ಅರಿವಿನ ಲಿಂಗವಾಗಿ ಅನುಭವಕ್ಕೆ ಬಂದು ಅಂಗ ತತ್ತರಿಸಲಿಲ್ಲ; ಅರಳಲಿಲ್ಲ.ಅರಿವು ತುಂಬಿದ ಶಬ್ದ ಅರಿವಿನ ಅಂಗದಲ್ಲಿ ಬೆರೆತು ಅರಿವೇ ಆಯಿತು. ಅನುಭಾವ ಲಿಂಗ ಹಿಡಿದು ಶಬ್ದ ಕೇಳಲು ಮಾರ್ಗ ಸರಳವಾಯಿತು. ಕ್ರಿಯಾಲಿಂಗವಾಯಿತು.

ಮಾರ್ಗಕ್ರಿಯಾಲಿಂಗ ಹಿಡಿದಿಡಿದು ಪರೀಕ್ಷಿಸಿ ನೋಡಿ ಸ್ವೀಕರಿಸಿದ ಪ್ರಸಾದದಿಂದ ಕ್ರಿಯಾಲಿಂಗ ಸಿದ್ಧಿಯಾಯಿತು. ಅಂಗದಲ್ಲಿಯೇ ಸಂಗಮವಾದ ಅರಿವಿನ ಕ್ರಿಯಾಲಿಂಗ ಎನ್ನುವುದು ಸಿದ್ಧವಸ್ತು. ಮನ ಆ ಸಿದ್ಧವಸ್ತುವನ್ನು ಪಡೆಯಲು ಈ ಸೂತ್ರಹಿಡಿಯಲೇಬೇಕು.

ಮನ ಸಿದ್ಧ ವಸ್ತುವನ್ನು ಪಡೆದು, ಆ ಸಿದ್ಧವಸ್ತುವೆಂಬ ಅರಿವಿನಲ್ಲಿಯೇ ಲೀನವಾದರೆ ನಿಷ್ಪತ್ತಿಲಿಂಗ ಅಂಗವನ್ನು ಆವರಿಸುತ್ತದೆ. ಅಂಗವೇ ಘನ ಲಿಂಗವಾಗುತ್ತದೆ. ಮನ, ಅರಿವಿನ ಆಚಾರ ಲಿಂಗವಿಡಿದು ಲಿಂಗವೇ ಆಗುತ್ತದೆ.

878

ನೆಲನೊಂದೆ ಹೊಲೆಗೇರಿ-ಶಿವಾಲಯಕ್ಕೆ.
ಜಲವೊಂದೆ ಶೌಚಾಚಮನಕ್ಕೆ.
ಕುಲವೊಂದೆ ತನ್ನತಾನರಿದವಂಗೆ.
ಫಲವೊಂದೆ ಷಡುದರುಶನ ಮುಕ್ತಿಗೆ.
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನರಿದವಂಗೆ.

ಕಾಯ ಅರಿವಿನ ಕೈಲಾಸ. ಸಕಲವನ್ನೂ ಸಮದೃಷ್ಟಿಯಿಂದ ತಿಳಿಯುವ ಶಿವನ ವಾಸಸ್ಥಾನ. ಷಡುದರುಷನಗಳಿಂದಾದ ಅರಿವಿನ ಫಲ; ಮುಕ್ತಿಧಾಮವೂ ಹೌದು.

ಕಾಯವನ್ನು ಮಾಯೆ ಎನ್ನುವ ಮನ ಆವರಿಸಿರುವುದರಿಂದ, ಕಾಯವೇ ಕೈಲಾಸ ಎಂದು ಕಾಯಕ್ಕೆ ತಿಳಿಯದಂತೆ ಆಗಿದೆ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸುಗಳನ್ನು ಹೊರಚೆಲ್ಲದಂತೆ ಬಂಧಿಸಿದ ಸುಂದರವಾದ ಅರಿವಿನ ಕಾಂತಿಯುಕ್ತ ಚರ್ಮವುಳ್ಳ ಕಾಯ ಷಡುದರುಶನಗಳ ಮುಕ್ತಿ ಮಂದಿರ! ಅಜ್ಞಾನದ ಮಾಯೆ ಕಾಯಕ್ಕೆ ಆವರಿಸಿರುವುದರಿಂದ ಹೆಣ್ಣು ಗಂಡು, ಜಾತಿ ಮತ ಪಂಥ, ರಾಜ ಸೈನಿಕ ಕಾಲಾಳು, ಗುರು ಶಿಷ್ಯ ಭಕ್ತ ಭವಿ ಜಂಗಮ, ಶ್ರೀಮಂತ ಬಡವ, ಅಧಿಕಾರಿ ಜವಾನ, ಶಾಸಕ, ಮಂತ್ರಿ ಎಂದು ಗುರುತಿಸಿಕೊಂಡು ಅಜ್ಞಾನವನ್ನು ಹೇರಿಕೊಂಡಿದೆ.

ಶಿವಾಲಯಕ್ಕೂ ಶೌಚಾಲಯಕ್ಕೂ ಬಳಸಿಕೊಂಡ ನೆಲವೊಂದೆ. ಶೌಚಕ್ಕೂ ಪೂಜೆಗೂ ಪಾನಕ್ಕೂ ಬಳಸಿಕೊಂಡ ಜಲವೊಂದೆ. ನೆಲದ ಮೇಲೆ ಜೀವಿಸಿದ ಕಾಯದ ಭಾಷೆ ಯಾವುದಾದರೇನು ? ಧ್ವನಿ ಒಂದೇ ಅದರಲ್ಲಿರುವ ಅರಿವು ಒಂದೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಇದನ್ನು ತಿಳಿಯುವ ಅರಿವು ಒಂದೇ. ಕಾಯದ ಮಾಯೆಗೆ ಈ ಷಡುದರುಶನಗಳು ತಿಳಿದರೆ ಕಾಯವೆಲ್ಲ

ಒಂದೆ; ಅದು ಕೈಲಾಸ ! ಹೆಣ್ಣು ಗಂಡು ಎನ್ನುವ ಮಾಯೆ ತೊಲಗಿ ಕಾಯವೇ ಕೈಲಾಸವಾಗುತ್ತದೆ.

ಕಾಯವನ್ನು ಆವರಿಸಿದ ಮಾಯೆಯಿಂದಲೇ ಕಾಯದ ಷಡುದರುಷನ ತಿಳಿಯಬೇಕು. ತನ್ನ ತಾನು ಅರಿದ ಕಾಯ ಕೈಲಾಸವಾಗುತ್ತದೆ. ಕಾಯಗಳೆಲ್ಲ ಕೈಲಾಸಗಳೇ ಆಗುತ್ತವೆ.

ಶರಣನ ಭಕ್ತಸ್ಥಲ

879

ಮಧ್ಯಪಿಂಡಗಳೆಲ್ಲವೂ ಶಿವನಿದ್ದೆಡೆಯನರಿಯವು.
ಪೂರ್ವಪಿಂಡಗಳೆಲ್ಲವೂ ಶಿವನಾದ್ಯಂತವನರಿಯವು.
ಕಾಲಪಿಂಡಗಳೆಲ್ಲವೂ ಶಿವನ ನಿಲುಕಡೆಯನರಿಯದೆ
ಕಾಲಚಕ್ರದೊಳಗಾದವೆಲ್ಲವು.
ಸಂಶಯ ಪಿಂಡಗಳೆಲ್ಲವ ಮರೆದು
ನಿಮ್ಮ ಶರಣರ ಸೇವೆಯಲ್ಲಿರಿಸಯ್ಯಾ, ಕೂಡಲಸಂಗಮದೇವಾ.

ಮಂತ್ರ ಪಿಂಡವೇ ಆಗಬೇಕಾದ ಕಾಯ, ಮುಸುಕಿದ ಮಾಯೆಯಿಂದಾಗಿ ಮಾಂಸಪಿಂಡವಾಗಿದೆ. ಕಾಯವೇ ಕೈಲಾಸ. ''ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ'' ಅದರಲ್ಲಿ ಗುರುದೇವ ಮಹಾದೇವ ಸದಾಶಿವ ಸಾಕ್ಷಾತ್ ಪರಬ್ರಹ್ಮರೇ ವಾಸವಾಗಿದ್ದಾರೆ. ಕಾಯವನ್ನು ಆವರಿಸಿದ ಮಾಯೆ ಅವರಿದ್ದೆಡೆಗೆ ಹೋಗಲರಿಯದು.

ಕಾಯವನ್ನು ಆವರಿಸಿದ ಮಾಯೆ ಮಧ್ಯಮ ಪಿಂಡವನ್ನು ದಾಟಿ ಶಿವನಿದ್ದೆಡೆಗೆ ಹೋಗಲರಿಯದು. ಪೂರ್ವಪಿಂಡ ಶಿವನಾದ್ಯಂತವನು ಅರಿಯದು. ಕಾಲಚಕ್ರದೊಳಗಾದ ಪಿಂಡ ಶಿವನ ನಿಲುಕಡೆಯನರಿಯದು. ಸಂಶಯ ಪಿಂಡಗಳೆಲ್ಲವ ಮರೆದು, ಮಾಯೆ ಕಾಯದಲ್ಲಿಯೇ ಸಂಗಮವಾದ ಸಂಗಮನಾಥನನ್ನು ಕೂಡಿಕೊಂಡು ಕೂಡಲಸಂಗಮದೇವನೇ ತಾನಾಗುವುದು.

ಸಕಲ ವೇದ ಶಾಸ್ತ್ರ ಆಗಮ ಉಪನಿಷತ್‌ಗಳನ್ನು ಓದಿ ಅಭ್ಯಾಸಮಾಡಿ ಅರಿವನ್ನೇ ಸರಕಾಗಿಸಿಕೊಂಡು, ಅರಿವಿಗೆ ಹೋಗಿ, ಅರಿವೇ ತಾನಾಗದೆ ಗುರುವೆಂದು ವ್ಯವಹರಿಸುವ ಪಿಂಡವೇ ಮಧ್ಯಮ ಪಿಂಡ.

ಕಲ್ಲಿನಿಂದ ಕಟೆದ ಮೂರ್ತಿಯನ್ನೇ ದೇವರೆಂದು ತಿಳಿದು ಅದಕ್ಕೆ ಆಲಯ ನಿರ್ಮಿಸಿ, ಚತ್ರಿ ಚಾಮರ ಬೀಸಿ, ಕಲ್ಯಾಣೋತ್ಸವಗಳನ್ನು ಮಾಡಿ, ವಸ್ತ್ರ ಆಭರಣ ಪಾದುಕೆಗಳನ್ನು ತೊಡಿಸಿ ಧನ್ಯನಾದೆನೆಂದು ಮೆರೆಯುವ ಪಿಂಡವೇ ಪೂರ್ವಪಿಂಡ.

ಯಜ್ಞಯಾಗ ಅಭಿಷೇಕ ಪಂಚಾಂಗ ಶಾಸ್ತ್ರಜ್ಯೋತಿಷ್ಯ ಅಯ್ಯಾಚಾರ ಉಪನಯನ ದೆವ್ವ, ಭೂತ, ಭಾನಾಮತಿ. ಮುಂತಾದ ಕಾಲಚಕ್ರದೊಳಗೆ ಸಿಲುಕಿ ಶಿವನ ಅರಿವೆಂಬ ನಿಲುಕಡೆಯನರಿಯದ ಪಿಂಡವೇ ಕಾಲಪಿಂಡ.

ಇವೆಲ್ಲವುಗಳನ್ನು ಮರೆತು, ಕಾಯವೇ ಕೈಲಾಸವೆಂದು ಅರಿತು ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಬೆರೆತ ಶರಣರಸಂಗದಲ್ಲಿ ನಿರತವಾಗಿ ಅರಿವಿನ ಸೇವೆ ಮಾಡುವ ಕಾಯಕದಲ್ಲಿರಿಸಯ್ಯ ಎಂಬು ಮಾಯೆಗೆ ಅರಿವಾಗಬೇಕು.

880

ಪರಮ ತತ್ತ್ವದ ನಿಜ ಸಂಯುಕ್ತರ,
ಆನು ನೀನೆಂಬ ಶಬ್ದ ಸುಖಿಗಳ ತೋರಾ, ಎನಗೆ.
ಮಹಾನುಭಾವರ ತೋರಾ, ಎನಗೆ.
ಲಿಂಗೈಕ್ಯರ, ಲಿಂಗಸುಖಿಗಳ, ಲಿಂಗಗೂಡಾಗಿಪ್ಪವರ,
ಲಿಂಗಾಭಿಮಾನಿಗಳ ತೋರಾ, ಎನಗೆ.
ಅಹೋರಾತ್ರಿ ನಿಮ್ಮ ಶರಣರ ಸೇವೆಯಲ್ಲಿರಿಸು
ಕೂಡಲಸಂಗಮದೇವಾ.

ಹಲವಾರು ಕಲೆ, ಹಲವಾರು ಸಾಹಿತ್ಯ, ಹಲವಾರು ತತ್ತ್ವಗಳಿಗೆ ಜನ್ಮಕೊಟ್ಟ ಅಂಗವೇ ಶ್ರೇಷ್ಠ. ಗರ್ಭೀಕರಿಸಿಕೊಂಡ ಪರಮ ನಿಜತತ್ತ್ವವನ್ನು ಅರಿತ ಮಹಾಮಹಿಮನನ್ನು ತೋರಾ ಎನಗೆ. ಅಂಗದಲ್ಲಿ ಸಂಗಮವಾದ ಅರಿವೇ ಗುರು. ಅಂಗವನ್ನು ಆವರಿಸಿದ ಮನವೇ ಭಕ್ತ. ಇವರಿಬ್ಬರೂ ಆನು-ನೀನು ಎಂದು ಅಂಗದಲ್ಲಿಯೇ ಸಿದ್ಧವಾಗುತ್ತಾರೆ. ಆನು ಎಂದರೆ ಅವನೇ; ನೀನು ಎಂದರೂ ಅವನೇ. ಇವೆರಡೂ ಒಂದು ನಾಣ್ಯದ ಎರಡು ಮುಖಗಳು. ಈ ಶಬ್ದ ತಿಳಿದವನೇ ನಿಜ ಸುಖಿ. ಇಂತಹ ಅರಿವಿನ ಮೂರ್ತಿಯನ್ನು ತೋರಾ ಎನಗೆ. ಇಂತಹ ಮಹಾನುಭಾವರ ತೋರಾ ಎನಗೆ !

ಅಂಗದ ಮೇಲೆ ಲಿಂಗ ಕಟ್ಟಿಕೊಂಡು ತ್ರಿಕಾಲ ಪೂಜಿಸುವವರು ಸುಖಿಗಳಲ್ಲ. ಅಂಗವೇ ಲಿಂಗವೆಂದು ಅರಿತು; ಆ ಲಿಂಗದಲ್ಲಿಯೇ ಐಕ್ಯವಾಗಿ; ಅರಿವಿನ ಸುಖವನ್ನು ಅರಿತರಿತು ಅನುಭವಿಸುವಾತನೇ ಲಿಂಗೈಕ್ಯ ; ಲಿಂಗ ಸುಖಿ; ಲಿಂಗವೇ ಗೂಡಾಗಿ ಮಾಡಿಕೊಂಡ ಲಿಂಗಾಭಿಮಾನಿ. ಈ ಸುಖ ಗೊತ್ತಾದವನು ಮಾತ್ರ ಇವರನ್ನು ಹುಡುಕಬಲ್ಲ. ಹಗಲಿರುಳೆನ್ನದೆ ಅವರ ಸೇವೆ ಮಾಡುತ್ತ ಸುಖದ ಮಾರ್ಗವನು ಹುಡುಕಬಲ್ಲ. ಅರಿವಿನ ಸುಖದ ಸುಖಿಯಾಗಿ ಶಾಶ್ವತ ಸುಖ ಹೊಂದಬಲ್ಲ.

881

ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ
ಮಹಾನುಭಾವರ ಕಾಣಬಹುದಯ್ಯಾ.
ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು.
ಲಿಂಗವನರಿಯಬಹುದು, ಜಂಗಮವನರಿಯಬಹುದು.
ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು.
ಇದು ಕಾರಣ ಸದ್ಭಕ್ತರ ಸಂಗವನೆ ಕರುಣಿಸು
ಕೂಡಲಸಂಗಮದೇವಾ, ನಿಮ್ಮ ಧರ್ಮ.

ತನುವಿನಲ್ಲಿ ಸಂಗ್ರಹವಾದ ಭಾವ ದುರ್ಭಾವಗಳನ್ನು ತಂತ್ರಗಾರಿಕೆಯಿಂದ ಕಳದುಕೊಂಡು ಸದ್ಭಾವರಾದವರೇ ನಿಜ ಶರಣರು. ಅವರು ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಶರಣು

ಹೋದ ಶರಣರು. ಅಂತಹ ಮಹಾನುಭಾವರನ್ನು ಹುಡುಕುವುದಕ್ಕೆ ಆಸೆ ಆಸಕ್ತಿ ಹಂಬಲ ಬೇಕು. ದುಂಬಿ ಮಕರಂದದ ವಾಸನೆ ಹಿಡಿದು ಹೂ ಹುಡುಕುತ್ತ ಹೋಗುವಂತಹ ನೈಪುಣ್ಯತೆ ಅಂಗಕ್ಕೆ ಇದ್ದರೆ ಮಾತ್ರ ಮಹಾನುಭಾವರು ಸಿಕ್ಕುತ್ತಾರೆ. ಭಾವ ದುರ್ಭಾವಗಳನ್ನು ಕಳೆದುಕೊಂಡು, ಸದ್ಭಾವದ ಹಾದಿಯನ್ನು ಅಂಗದಲ್ಲಿಯೇ ನೋಡಿಕೊಳ್ಳುವಂತೆ ಬೋಧಿಸುತ್ತಾರೆ.

ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು:

ಮಹಾನುಭವವನ್ನು ಹೊಂದಿದ ಶರಣ ಕರುಣಾಮಯಿ ! ಆಸಕ್ತಿಯಿಂದ ಶ್ರೀಗುರುದೇವನನ್ನು ತಿಳಿಯಲು ಬಂದ ಭಕ್ತನ ಮೈದಡವಿ; ಆತನ ಅಂಗಮುಟ್ಟಿ, ಅಂಗದಲ್ಲಿಯೇ ಹಗಲಿರುಳು ಅರಿವನು ಬೋಧಿಸುವ ಶ್ರೀಗುರುವಿನ ಚಲನವಲನವನ್ನು ಸೂಚಿಸುತ್ತಾರೆ. ಆತನಿಗೆ ಶ್ರೀಗುರುವಿನಿಂದ ಕ್ಷಣಕ್ಷಣಕ್ಕೂ ದೊರೆಯುವ ಅನುಭಾವವನ್ನು ಬಿಡಿಬಿಡಿಸಿ ಹೇಳಿ ಸಮಾಧಾನ ಮಾಡುತ್ತಾರೆ. ತಿಳಿಯದಿದ್ದರೆ ಮತ್ತೆ ಮತ್ತೆ ತಿಳಿಯುವಂತೆ ಹೇಳುತ್ತಾರೆ. ತಾಯಿ ಮಗುವಿಗೆ ತುತ್ತು ಮಾಡಿ ಉಣ್ಣಿಸುವಂತೆ ಉಣಿಸಿ ಸದೃಢನನ್ನಾಗಿ ಮಾಡುತ್ತಾರೆ. ಮಹಾನುಭಾವರ ಸಂಗ ಮಾಡುವುದು ಅಂಗಕ್ಕೆ ಒದಗಿಬಂದ ಪೂರ್ವಜನ್ಮದ ಪುಣ್ಯ !

ಇಂತಹ ಮಹಾನುಭಾವರ ಸಂಗದಿಂದ ಅಂಗದಲ್ಲಿಯೇ ಸಂಗಮವಾದ ಲಿಂಗವನರಿಯ ಬಹುದು, ಜಂಗಮವನರಿಯ ಬಹುದು, ಪ್ರಸಾದವನರಿಯಬಹುದು, ತನ್ನ ತಾನರಿಯ ಬಹುದು. ಇದು ಪೂರ್ವಜನ್ಮದ ಪುಣ್ಯವಾಗಿರುವುದರಿಂದ ಅಂಗದಲ್ಲಿಯೇ ಸಂಗಮವಾದ ಸಂಗಮನಾಥನನ್ನು ಸದ್ಭಕ್ತರ ಸಂಗ ಕರುಣಿಸು ತಂದೆ ಎಂದು ಹಗಲಿರುಳು ಬೇಡಬೇಕು.

882

ಮರ ಮರ ಮಥನದಿಂದ ಅಗ್ನಿ ಹುಟ್ಟಿ,
ಆ ಮರನೆಲ್ಲವ ಸುಡದಿಪ್ಪುದೆ ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ,
ಎನ್ನ ತನು ಗುಣವೆಲ್ಲವ ಸುಡದಿಪ್ಪುದೆ ?
ಇದು ಕಾರಣ, ಮಹಾನುಭಾವರ ತೋರಿಸು
ಕೂಡಲಸಂಗಮದೇವಾ.

ತನು, ಬೇರಿಲ್ಲದ ಮರ. ನಡೆದಾಡುತ್ತ ಜ್ಞಾನಾಗ್ನಿ ಬೀರುವ ಅರಿವಿನ ಮರ. ನೋಡುವ ನೋಟದಲ್ಲಿ, ಕೇಳುವ ಕಿವಿಯಲ್ಲಿ, ನುಡಿಯುವ ನಾಲಿಗೆಯಲ್ಲಿ, ಸ್ಪರ್ಶಿಸುವ ಚರ್ಮದಲ್ಲಿ, ಪರಿಮಳ ಮೂಸಿಸುವ ಮೂಗಿನಲ್ಲಿ ಅರಿವಿನ ಜ್ಞಾನಾಗ್ನಿ ತುಂಬಿದೆ. ಮನ ತನುವನ್ನು ಆವರಿಸಿರುವುದರಿಂದ ಈ ಐದೂ ಜ್ಞಾನಗಳು ಅಗ್ನಿಯಾಗಿ ಮಾರ್ಪಟ್ಟು ತನುವಿನ ಬೇರಿಲ್ಲದ ಮರ ಮತ್ತೊಂದು ತನುವಿನ ಬೇರಿಲ್ಲದ ಮರವನ್ನು ಸುಡುತ್ತದೆ. ತನುವಿನಲ್ಲಿ ಹುಟ್ಟಿದ ಅಜ್ಞಾನದ ಕಿಚ್ಚು ಸುಡುವ ಕಿಚ್ಚಿನಂತಲ್ಲ. ಕಿಚ್ಚು ನಂದುತ್ತದೆ. ಅಜ್ಞಾನದ ಕಿಚ್ಚು ನಂದುವುದಿಲ್ಲ. ತನುವಿನಲ್ಲಿ ಹುಟ್ಟಿ, ತನುವನ್ನು ಸುಟ್ಟು, ತನುವಿರುವವರೆಗೆ ಸುಡುತ್ತಲೇ ಇರುತ್ತದೆ.

ಮಹಾನುಭಾವರ ಸಂಗದಿಂದ ಮಾತ್ರ , ತನುವಿನಲ್ಲಿ ಹುಟ್ಟಿದ ಕಿಚ್ಚು ತನು ಗುಣವ ಸುಟ್ಟು ನಂದುತ್ತದೆ. ಅಜ್ಞಾನದ ಕಿಚ್ಚು ಜ್ಞಾನದ ಕಿಚ್ಚಿನಿಂದಲೇ ನಂದುತ್ತದೆ.

ಮರದಲ್ಲಿ ಹುಟ್ಟಿದ ಕಿಚ್ಚು ಮರಕ್ಕೆ ಶೋಭೆ ತರುವುದಿಲ್ಲ. ಹಾಗೆಯೇ ತನುವಿನಲ್ಲಿ ಹುಟ್ಟಿದ

ಕಿಚ್ಚು ತನುವಿಗೆ ಶೋಭೆ ತರುವುದಿಲ್ಲ. ಹುಟ್ಟಿದ ಕಿಚ್ಚನ್ನು ವೃದ್ಧಿಸಿಕೊಳ್ಳದೆ ಮಾಹಾನುಭಾವರ ಸಂಗದಿಂದ ನಂದಿಸಿಕೊಳ್ಳಬೇಕು.

883

ಅರಿದುದ ಅರಿಯಲೊಲ್ಲದು, ಅದೆಂತಯ್ಯಾ ?
ಮರೆದುದ ಮರೆಯಲೊಲ್ಲದು ಅದೆಂತಯ್ಯಾ ?
ಅರಿದು ಮರೆದ ಮನವ
ಕೂಡಲಸಂಗಯ್ಯ ತಾನೆ ಬಲ್ಲ.

ಅಂಗದಲ್ಲಿ ಮಹಾಜ್ಞಾನ ಸಂಗಮವಾಗಿದೆ. ಅಂಗವನ್ನು ಆವರಿಸಿದ ಮನವೇ ಅರಿಯಬೇಕು. ಆದರೆ ಅರಿಯಲೊಲ್ಲದು. ಅರಿವು ತಿಳಿದು ಅರಿವಿನ ಜಾಡಿನಲ್ಲಿ ನಡೆಯದಿದ್ದರೆ ಗತ್ಯಂಥರವಿಲ್ಲ. ಆದರೆ ಅರಿದರಿದು ಆ ಅರಿವೆ ತಾನಾಗಿ ನಡೆಯಲೊಲ್ಲದು; ಅದೆಂತಯ್ಯಾ ?

ಅರಿತ ಜ್ಞಾನದಿಂದ ಅಜ್ಞಾನವನು ನೋಡಿದರೆ, ಆ ಅಜ್ಞಾನವನು ಕೂಡಲೇ ಮರೆಯಬೇಕು. ಆದರೆ ಮರೆಯಲೊಲ್ಲದು ! ಅದೆಂತಯ್ಯಾ ? ಅಜ್ಞಾನದಿಂದ ಕೂಡಲೇ ಸುಖ ಸಿಗುತ್ತದೆ. ಅದರ ಬೆನ್ನಿಗೆ ಶಾಶ್ವತ ದುಃಖವೂ ಇದೆ. ಮನಕ್ಕೆ ತಿಳಿಯುವುದೂ ಗೊತ್ತು. ತಿಳಿದುದನು ಪಾಲಿಸದೆ ಇರುವುದೂ ಗೊತ್ತು. ತಿಳಿದುದನು ಆಚರಿಸದೆ ಇರುವುದು ಗೊತ್ತು.

ಅರಿಯುವುದು, ಅರಿದುದನು ಮರೆಯುವುದು; ಅರಿದು ಮರೆದ ಮನವ ಕೂಡಲಸಂಗಯ್ಯ ತಾನೇ ಬಲ್ಲ. ತನಗೆ ತಿಳಿಯದುದು ಏನೂ ಇಲ್ಲ.

884

ಮೀಸಲು ಬೀಸರವಾದ ಪರಿಯ ನೋಡಾ ;
ಕಾಲು ತಾಗಿದ ಅಗ್ಘವಣೆ, ಕೈ ಮುಟ್ಟಿದ ಅರ್ಪಿತ,
ಮನ ಮುಟ್ಟಿದ ಆರೋಗಣೆಯನೆಂತು ಘನವೆಂಬೆನಯ್ಯಾ ?
ಬಂದ ಪರಿಯಲಿ ಪರಿಣಾಮಿಸಿ, ನಿಂದ ಪರಿಯಲಿ ನಿಜವ ಮಾಡಿ,
ಆನೆಂದ ಪರಿಯಲಿ ಕೈಕೋ ಕೂಡಲಸಂಗಮದೇವಾ.

ಮನಕ್ಕೆ ಅರಿವಾಗದಿದ್ದರೆ, ಹರಿಯುವ ನೀರಲ್ಲಿ ನಿಂತು, ಆ ನೀರನ್ನು ಪಾತ್ರೆಗೆ ಶುದ್ಧವೆಂದು ತುಂಬಿ, ಅಭಿಷೇಕ ಮಾಡಿ ತೀರ್ಥವೆಂದು ಸ್ವೀಕರಿಸುವ ಅಜ್ಞಾನ ಮನೆ ಮಾಡಿಕೊಳ್ಳುತ್ತದೆ. ಕೈಯಿಂದ ಮುಟ್ಟಿದ ಪದಾರ್ಥವೆ ಪ್ರಸಾದವಾಗುತ್ತದೆ. ಮನ ಮುಟ್ಟಿದ ಆರೋಗಣೆಯೇ ಘನವಾಗುತ್ತದೆ. ಇದನ್ನೇ ಮೀಸಲೆಂದು ತಿಳಿದು ತನುವಿನೊಂದಿಗೆ ಗೋಚರದ ಆಚಾರದಲ್ಲಿ ತೊಡಗಿದೆ ಮನ. ಇದು ಮೀಸಲಾಗಲು ಸಾಧ್ಯವೇ ? ಮೀಸಲಲ್ಲ. ಮಿಗೆ ಮಿಗೆ ಮೀಸಲ ಅರಿವು ಬಳಕೆಯಾಗದೆ ಅಂಗದಲ್ಲಿ ಸಂಗಮವಾಗಿ ಹಾಗೆಯೇ ಉಳಿದಿದೆ.

ಮನಕ್ಕೆ ಅರಿವಾದರೆ, ಆ ಅರಿವನ್ನು ಬಳಕೆ ಮಾಡುವುದೇ ಮೀಸಲು ಬಳಕೆ ಮಾಡಿದಂತೆ. ಕಾಲು ನೆತ್ತಿ ಕೈಗಳಲ್ಲಿ ವ್ಯತ್ಯಾಸವಿಲ್ಲ. ಕಣ್ಣು ಕಿವಿ ಮೂಗು ನಾಲಗೆಯಲ್ಲಿ ವ್ಯತ್ಯಾಸವಿಲ್ಲ. ಇವುಗಳಿಂದ ಹೊರಬಂದ ಯಾವ ಪದಾರ್ಥವೂ ಎಂಜಲಲ್ಲ. ಎಲ್ಲವೂ ಮೀಸಲೆ. ಸರ್ವಾಂಗವೂ ಅರಿವಿನ

ಲಿಂಗವೇ ಇರುವಾಗ ಬಂದ ಪರಿಯಲಿ ಪರಿಣಾಮಿಸಿ, ನಿಂದ ಪರಿಯಲಿ ನಿಜವುಂಟಾಗುವುದು.

885

ಹಾಲೆಂಜಲು ಪೇಯನ, ಉದಕವೆಂಜಲು ಮತ್ಸ್ಯದ,
ಪುಷ್ಪವೆಂಜಲು ತುಂಬಿಯ,
ಎಂತು ಪೂಜಿಸುವೆನಯ್ಯಾ, ಶಿವ ಶಿವಾ, ಎಂತು ಪೂಜಿಸುವೆ ?
ಈ ಎಂಜಲವನತಿಗಳೆವಡೆ ಎನ್ನಳವಲ್ಲ;
ಬಂದುದ ಕೈಕೋ ಕೂಡಲಸಂಗಮದೇವಾ.

ಹಾಲು, ನೀರು, ಪುಷ್ಪ ಮೀಸಲೆಂದು ಅರ್ಪಿಸಿ ಪೂಜಿಸುವ ಮನ ತನುವನ್ನು ತನಗೆ ತಿಳಿದಂತೆ ವತ್ತೆ ಇಟ್ಟುಕೊಂಡು ದುರ್ಬಳಕೆ ಮಾಡುತ್ತದೆ.

ಕರು ಕೆಚ್ಚಲಿಗೆ ಬಾಯಿ ಹಾಕಿದಾಗಲೇ ಹಾಲು ಬರುತ್ತದೆ. ಅದು ಹೇಗೆ ಮೀಸಲು ಎಂದು ಮನಕ್ಕೆ ತಿಳಿಯಬೇಡವೆ ? ದುಂಬಿ ಮಕರಂಧ ಹೀರಲೆಂದೇ ಪುಷ್ಪ ಅರಳುತ್ತದೆ. ಅಂದ ಮೇಲೆ ಪುಷ್ಪ ಹೇಗೆ ಮೀಸಲಾಗುತ್ತದೆ ? ಮೀನು ಕಪ್ಪೆ ಜಲಚರಗಳು ಉದಕ ಕುಡಿದು ಉದಕದಲ್ಲಿಯೇ ಮಲ ಮೂತ್ರ ವಿಸರ್ಜಿಸುತ್ತವೆ ಅಂದ ಮೇಲೆ ಉದಕ ಹೇಗೆ ಮೀಸಲು ಎಂದು ಮನ ತಿಳಿಯಬೇಡವೆ ? ಆದರೂ ಗೋಚರದ ಆಚಾರದಲ್ಲಿ ಎಂಜಲು ಮೀಸಲೆಂದು ತನುವನ್ನು ಬಳಸಿ ತನುವಿಗೆ ಸಂಕಟ ಒಡ್ಡಿ ಮನ ಸುಖಿಸುತ್ತದೆ. ಇದೆಲ್ಲವನು ಅರಿವಿನಿಂದ ಅತಿಗಳೆದು ಮನ ಅರಿವಿನ ಅಗೋಚರದ ಆಚಾರದಲ್ಲಿ ತೊಡಗಬಾರದೆ ?

ಅರಿವಿನ ಆಚಾರ ಅಗೋಚರದ ಆಚಾರ ; ಮಿಗೆ ಮಿಗೆ ಮೀಸಲ ಆಚಾರ. ಶಿವಾಚಾರ. ಪುಷ್ಪ, ಉದಕ, ಹಾಲು, ಜೇನು, ಪಂಚಾಮೃತಗಳ ಅವಶ್ಯಕತೆಯೇ ಇಲ್ಲ. ಅಂಗದ ಮೇಲೆ ಲಿಂಗ ಕಟ್ಟಿ ತ್ರಿಕಾಲ ಪೂಜಿಸುವ ಅವಶ್ಯಕತೆಯೂ ಇಲ್ಲ. ಎರೆದರೆ ನೆನೆಯದ ಮರೆತರೆ ಬಾಡದ ಲಿಂಗವನ್ನು ಉದಕ ಹಾಲು ಎರೆದು ಪುಷ್ಪಗಳಿಂದ ಪೂಜಿಸಬಹುದೆ ?

ಎರೆದರೆ ನೆನೆಯುವ ಮರೆತರೆ ಬಾಡುವ ಅಂಗವೆಂಬ ಅರಿವಿನ ಲಿಂಗ ಲಿಂಗವೊ? ಅಂಗದ ಮೇಲೆ ಕಟ್ಟಿಕೊಂಡು ತ್ರಿಕಾಲ ಪೂಜಿಸುವ ಲಿಂಗ ಲಿಂಗವೊ ? ಸರ್ವಾಂಗಕ್ಕೆ ಉದಕ ಎರೆದರೆ ಆನಂದದಿಂದ ಉಲಿಯುವುದು; ಹಾಲು ಎರೆದರೆ ನಲಿ ನಲಿದಾಡುವುದು. ತುರುಬಿಗೆ ಪುಷ್ಪ ಧರಿಸಿದರೆ ಪರಿಮಳದಿಂದ ಮೂಗು ಅರಳುವುದು. ಅಂಗ ಕಾಂತಿಯುತವಾಗಿ ಲಿಂಗದಂತೆ ಮಿರಿ ಮಿರಿ ಮಿಂಚುವುದು. ಸರ್ವಾಂಗವೇ ಲಿಂಗವೆಂದು ತಿಳಿದರೆ ಅಂಗಕ್ಕೆ ಎಂಜಲೆನ್ನುವುದೇ ಇಲ್ಲ ಬರೀ ಮೀಸಲು !

886

ಶುದ್ಧವಾಯಿತ್ತೆಂಬೆನೆ ಸುಯಿಧಾನಿ ನಾನಲ್ಲ.
ಅನುವಾಯಿತ್ತೆಂಬೆನೆ ? ಅವಧಾನಿ ನಾನಲ್ಲ.
ಸುಯಿಧಾನ ಅವಧಾನ ಅರ್ಪಿತವ ನಾನರಿಯೆ
ಇದ್ದ ಪರಿಯಲಿ ನೀಡಿದಡೆ, ಬಂದ ಪರಿಯಲಿ ಕೈಕೋ,

ಕೂಡಲಸಂಗಮದೇವಾ.

ಶಬ್ದ ದೃಶ್ಯ ಸ್ಪರ್ಶ ವಾಸನೆ ರುಚಿ ತನುವಿಗೆ ಬಡಿದು ಬಾಧಿಸುತ್ತವೆ. ತೋರಿಕೆಗೆ ಸಮಾಧಾನಿಯಾದರೆ ತನು ಸುಡುತ್ತದೆ. ಸಂಘರ್ಷಕ್ಕೆ ಇಳಿದರೆ ತನು ಅಪಮಾನಕ್ಕೆ ಒಳಗಾಗುತ್ತದೆ. ಇದ್ದ ಪರಿಯಲಿ ನೀಡಿದಡೆ, ಬಂದ ಪರಿಯಲಿ ಕೈಕೊಳ್ಳುವುದು ಸುಲಭದ ಮಾತಲ್ಲ. ಯತಾರ್ಥ ಸಹಜ ಜ್ಞಾನಿ ಮಾತ್ರ ಬಂದ ಪರಿಯಲಿ ಬಂದುದನು ಸ್ವೀಕರಿಸಬಲ್ಲ.

ಎಚ್ಚರಿಕೆಯಿಂದ ಸ್ವೀಕರಿಸಿ ಎಚ್ಚರಿಕೆಯಿಂದ ಬಳಸುವುದು ಒಂದು ರೂಢಿಗತ ಶಿಕ್ಷಣ; ಅದು ಜ್ಞಾನವಲ್ಲ. ಪ್ರತಿ ಪದದಲ್ಲಿ ಪ್ರತಿ ಪದಾರ್ಥದಲ್ಲಿ ಸತ್ಯವಿದೆ. ಸತ್ಯ ವಸ್ತುವನ್ನು ಸತ್ಯ ವಸ್ತುವೆ ಸಹಜವಾಗಿ ಸ್ವೀಕರಿಸಲು ಸಾಧ್ಯ.

ತನುವಿನಲ್ಲಿ ಸಂಗಮವಾದ ಅರಿವು ಸತ್ಯ. ವಸ್ತುವಿನ ಮೂಲವೂ ಸತ್ಯ! ಅರಿವಿನ ಗರ್ಭದಲ್ಲಿ ವಸ್ತುವಿನ ಮೂಲ ಸಂಗಮವಾಗಿ ವಸ್ತು ಗೌಣವಾಗುತ್ತದೆ. ಪದಾರ್ಥದಲ್ಲಿ ರುಚಿಯಿಲ್ಲ. ವಸ್ತುವಿನಲ್ಲಿ ಸೌಂದರ್ಯವಿಲ್ಲ. ಶಬ್ದದಲ್ಲಿ ಕಠಿಣವಿಲ್ಲ. ವಾಸನೆಯಲ್ಲಿ ದುರ್ಗಂಧ ಸುಗಂಧಗಳಿಲ್ಲ. ಸ್ಪರ್ಶದಲ್ಲಿ ಸುಖದುಃಖಗಳಿಲ್ಲ ! ತನುವಿನ ಮೂಲವೂ ಸಹಜ; ವಸ್ತುವಿನ ಮೂಲವೂ ಸಹಜ.

ಸಹಜ ಚೈತನ್ಯದಲ್ಲಿ ಸರ್ವ ಪದಾರ್ಥಗಳು ಸಹಜವಾಗಿಯೇ ಬಂದುದ ಬಂದ ಪರಿಯಲ್ಲಿಯೇ ಸಂಗಮವಾಗುತ್ತವೆ.

887

ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಗೆ.
ಶರಣಾರ್ಥಿಯೆಂಬೆನಯ್ಯ ಒಕ್ಕುದ ಕೊಂಬ ಹಂಗಿಗೆ.
ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ, ಭಕ್ತಿ!
ಕೂಡಲಸಂಗನಶರಣರ ನಿಲವನರಿಯದೆ,
ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯಾ ಎನ್ನ ಭಕ್ತಿ.

ಮನ ತನ್ನ ಸುಖಕ್ಕಾಗಿ ತನುವನ್ನು ಯಾವ ತೊಂದರೆಗೆ ಬೇಕಾದರೂ ತಳ್ಳುತ್ತದೆ. ಆಟಿಗೆಯನ್ನಾಗಿ ಮಾಡಿಕೊಳ್ಳುತ್ತದೆ. ಕಾಲಾಳಾಗಿ ದುಡಿದು ರಾಜನಾಗುತ್ತದೆ. ಶಿಷ್ಯನಾಗಿ ಸೇವೆ ಮಾಡಿ ಗುರುವಾಗುತ್ತದೆ. ಮಾಲಕನಲ್ಲಿ ಕೆಲಸಕ್ಕಿದ್ದು ಮಾಲಕನಾಗುತ್ತದೆ. ಮನಕ್ಕೆ ಬೇಕಾದರೆ ಯಾವ ಅಹಂಕಾರ ಅಭಿಮಾನಗಳೂ ಇಲ್ಲದೆ ಕೆಲಸ ಮಾಡುತ್ತದೆ. ಮನ ಬಲು ಸ್ವಾರ್ಥಿ. ಇನ್‌ಸ್ಟ್ಯಾಂಟ್ ಸುಖಕ್ಕೆ ಮಾರು ಹೋಗುತ್ತದೆ.

ಮನ, ಶಾಶ್ವತ ಸುಖಕ್ಕಾಗಿ ಮೇಲಿನ ವಚನದ ಸೂತ್ರವನ್ನು ಪಾಲನೆ ಮಾಡಲೇಬೇಕು. ಪಾದಾರ್ಚನೆ ಮಾಡಬೇಕು ಜ್ಞಾನದ ಉದಕದ ಹಂಗಿಗಾಗಿ. ಶರಣಾರ್ಥಿ ಎನ್ನಬೇಕು; ಶರಣ ಮಾಡುವ ಗೋಷ್ಠಿಯಲ್ಲಿ ಭಾಗಿಯಾಗಿ, ಅವರ ಸೇವೆ ಮಾಡುತ್ತ ಅವರು ಉಂಡು ಹೆಚ್ಚಾದ ಜ್ಞಾನದ ಅಮಲನ್ನು ಮೇಯುವುದಕ್ಕಾಗಿ. ಆದರೆ ಮನಕ್ಕೆ ಇದು ಬಲು ಕಷ್ಟ. ಅಂದುಕೊಂಡಂತೆ ಕೂಡಲೇ ಸುಖ ಸಿಗುವಂಥಹದ್ದೂ ಅಲ್ಲ.

ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ ಭಕ್ತಿ! ಕೂಡಲಸಂಗನ ಶರಣರ ನಿಲವನರಿಯದೆ:

ಭೂಮಿ, ಹೇಮ, ವಿಷಯ ಸುಖಕ್ಕೆ ಕರೆದೊಯ್ಯುವುದಕ್ಕಾಗಿ ಮಾಡುವ ಬಡ್ಡಿ ವ್ಯವಹಾರದಿಂದ ಮನಕ್ಕೆ ಕೂಡಲೇ ಸುಖ ಸಿಗುತ್ತದೆ. ಇದು ಕ್ಷಣಿಕ ಸುಖ; ಸುಳ್ಳು ಸುಖ. ಇಂತಹ ಕ್ಷಣಿಕ ಸುಖಕ್ಕೆ ಮೆಚ್ಚಿಕೊಂಡ ಮನ ಶಾಶ್ವತ ಸುಖವನ್ನು ಕಳೆದುಕೊಳ್ಳುತ್ತದೆ.

ಭಕ್ತಿರಸ ಶ್ರೇಷ್ಠವಾದದ್ದು. ನವರಸದ ಸುಖದಂತಲ್ಲ. ಮನ ಮಹಾಜ್ಞಾನಕ್ಕೆ ಭಕ್ತಿ ಮಾಡಿ, ಪಾದಾರ್ಚನೆಯ ಮಾಡಿ ಪೂಜಿಸಿದರೆ ಸಾಕು ಜ್ಞಾನೋದಕ ಪಾದೋದಕದ ಮೂಲಕ ನಿರಂತರ ಚಿಮ್ಮುತ್ತದೆ. ಯಾವ ತನುವನ್ನು ನೋಡಿದರೂ ತನ್ಮಯವಾದ ಜ್ಞಾನಕ್ಕೆ ಶರಣಾರ್ಥಿಯೆಂದು ನೆತ್ತಿ ಬಾಗುತ್ತದೆ.

888

ಯಸ್ಯ ಕ್ರಿಯಾ ತಸ್ಯ ಭವತಿ ಎಂದು ಕಟ್ಟಾಚಾರದಲ್ಲಿ ಇದ್ದು,
ನಾನು ಅನುಸರಿಸಿಕೊಂಡು ನಡೆಯುವನ್ನಕ್ಕ ಕರ್ಮಕಾಂಡಿಯಲ್ಲ.
ಉತ್ಪತ್ತಿ- ಸ್ಥಿತಿ ಭೋಗ ಭುಕ್ತಿ ಕಾಯವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ.
ಪರವು ಸಾಧ್ಯವಾಯಿತ್ತೆಂದು ಕ್ರೀಯೆಲ್ಲವ ಮೀರಿ ನಡೆವೆನು;
ಪರತತ್ತ್ವವನರಿದೆಹೆನೆಂಬನ್ನಕ್ಕ ಜ್ಞಾನಕಾಂಡಿಯಲ್ಲ.
ಇನ್ನು ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡ
ಈ ತ್ರಿವಿಧದಲ್ಲಿ ವಂಚಕನಾದಡೆ,
ಈಸು ವಿಧದೊಳಗೆ ಅಂಗವಿಲ್ಲ, ಮೇಲೆ ಸತ್ಪುರುಷರ ಸಂಗವಿಲ್ಲ.
ಯುಕ್ತಿಯಿಲ್ಲ, ಎನಗೆ ಭಕ್ತಿಯೆಂತಹುದಯ್ಯಾ?
ಬಲ್ಲವರ ಬೆಸಗೊಂಡಡೆ ಎನ್ನ ಬಿಮ್ಮು ಕೆಟ್ಟಿಹುದೆಂದು
ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ.
ಕೂಡಲಸಂಗಮದೇವಾ, ಎನ್ನ ಗುಣವ ನೋಡದೆ
ಶಿವರಾತ್ರಿಯ ಸಂಕಣ್ಣಗಳಿಗೆ ಕರುಣಿಸಿದಂತೆ
ಎನಗೆ ಕೃಪೆ ಮಾಡಯ್ಯಾ.

ಕಾಯ ಕರ್ಮಕಾಂಡಿಯೂ ಅಲ್ಲ, ಭಕ್ತಿ ಕಾಂಡಿಯೂ ಅಲ್ಲ, ಜ್ಞಾನಕಾಂಡಿಯೂ ಅಲ್ಲ. ಕಾಯವನ್ನು ಆವರಿಸಿದ ಮನ ತನಗೆ ಇಷ್ಟವಾದ ಕಾಯಕದಲ್ಲಿ ತೊಡಗಿಸಿ ಕರ್ಮಕಾಂಡಿಯೆಂದು, ಭಕ್ತಿಕಾಂಡಿ ಎಂದು, ಜ್ಞಾನಕಾಂಡಿಯೆಂದು ಕರೆಯಿಸಿಕೊಳ್ಳುತ್ತದೆ. ಈ ಮೂರೂ ಕ್ಷೇತ್ರದ ರುಚಿಯನ್ನು ಮನ ಕಾಯದೊಂದಿಗೆ ಸವಿಯುತ್ತದೆ.

ಕರ್ಮಣ್ಯೇವಾಧಿಕಾರಸ್ಯೇ ಮಾ ಫಲೇಶು ಕದಾಚನ ಎನ್ನುವ ತಂತ್ರಗಾರಿಕೆ ತಿಳಿಯದೆ ಮನಕ್ಕೆ ಕರ್ಮಕಾಂಡಿಯಾಗಲು ಬರುವುದಿಲ್ಲ. ಯಾರಿಗೆ ಭಕ್ತಿ ಮಾಡಬೇನ್ನುವ ತಂತ್ರಗಾರಿಕೆ ತಿಳಿಯದಿದ್ದರೆ ಮನಕ್ಕೆ ತನುವಿನೊಂದಿಗೆ ಭಕ್ತಿ ಮಾಡಲು ಬರುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಪರತತ್ತ್ವ ತಿಳಿಯುವ ತಂತ್ರಗಾರಿಕೆ ಮನಕ್ಕೆ ಹೊಳೆಯದಿದ್ದರೆ ಜ್ಞಾನಕಾಂಡಿಯಾಗಲೂ ಬರುವುದಿಲ್ಲ.

ಈ ಮೂರೂ ತಂತ್ರಗಾರಿಕೆಗಳನ್ನು ಕಾಯದ ಮೂಲಕ ಮನ ಗೋಚರಿಸುವಂತೆ ತೋರಿ

ಸಲು ಬರುವುದಿಲ್ಲ. ಹಾಗೆ ತೋರಿಕೆಯ ಮೂಲಕ ಕಾಣುವ ಕಾಯಗಳು ಆ ನೈಪುಣ್ಯತೆಯನ್ನು ಹೊಂದಿರುವುದಿಲ್ಲ. ಮನ ಕಾಯದ ಮೂಲಕ ಭಕ್ತಿಕಾಂಡಿಯೆಂದು, ಕರ್ಮಕಾಂಡಿ, ಜ್ಞಾನಕಾಂಡಿಯೆಂದು ಹೇಳಿಕೊಳ್ಳುತ್ತಿದ್ದರೆ; ಅದು ಹೇಗೆ ಕರ್ಮಕಾಂಡಿ ಎಂದು ತನಗೆ ತಾನು ಪ್ರಶ್ನಿಸಿಕೊಂಡರೆ ಹೊಳೆಯುತ್ತದೆ. ಫಲಾಪೇಕ್ಷೆ ಇಟ್ಟುಕೊಂಡು ಮಾಡುವ ಕಾಯಕ ಕರ್ಮವಲ್ಲ. ಅದು ಕಾಯದ ಸೋಗು. ಮನ ಕಾಯಕ್ಕೆ ಹಾಕಿದ ಕರ್ಮದ ವೇಷ !

ಮನ, ತ್ರಿವಿಧದಲ್ಲಿ ವಂಚಕ. ಕರ್ಮವನ್ನು ಅರಿಯದು, ಭಕ್ತಿಯನ್ನು ಅರಿಯದು, ಜ್ಞಾನವನ್ನು ಅರಿಯದು. ಬಲ್ಲವರನ್ನು ಕೇಳಿದರೆ ತನ್ನ ಅಭಿಮಾನಕ್ಕೆ ಧಕ್ಕೆಯುಂಟಾಗುತ್ತದೆ.

ಕಾಯವನ್ನೇ ಕೈಲಾಸವಾಗಿರಿಸಿಕೊಂಡ ಅರಿವಿನ ಸಂಗಮನಾಥನೇ, ಕಾಯವನ್ನು ಆವರಿಸಿಕೊಂಡ ಮನಕ್ಕೆ ಶಿವರಾತ್ರಿಯ ಸಂಕಣ್ಣನಂತೆ ಒಲಿದು ಸಕಲ ಕಾರ್ಯಗಳನ್ನು ಕೈಲಾಸ ಮಾಡು ತಂದೆ.

ಶಿವರಾತ್ರಿಯ ಸಂಕಣ್ಣ ಉಪಜೀವನಕ್ಕಾಗಿ ಬೇಟೆಗಾರನ ಕಾಯಕದಲ್ಲಿ ತೊಡಗಿದ್ದ. ಬೇಟೆಗೆಂದು ಹೋದಾಗ ಹುಲಿ ಬೆನ್ನು ಹತ್ತಿತು. ಅತ್ತ, ಹಸಿದ ಹುಲಿ. ಇತ್ತ ಹಸಿದ ಕಾಯ. ಕಾಯಕವನ್ನು ಮರೆತ ಹಸಿದ ಕಾಯದ ರಕ್ಷಣೆಗೆಗಾಗಿ ಓಡೋಡಿ ಹೋಗಿ ಮರ ಹತ್ತಿ ಕುಳಿತ. ಕೆಳಗೆ ಹುಲಿ, ಮೇಲೆ ತಾನು. ಹಸಿವಿನ ಬಾಧೆಗಾಗಿ ಎಷ್ಟೊ ಪ್ರಾಣಿಗಳನ್ನು ಕೊಂದು ತಿಂದಿದ್ದ. ಸಂಗ್ರಹಿಸಿದ್ದ. ಉಳಿದ ಪ್ರಾಣಿಗಳು ಹಾಗಲ್ಲ. ಅವು ಬದುಕಿಗಾಗಿ ತಿನ್ನುತ್ತಿದ್ದವು. ತಾನು ಬದುಕುವುದಕ್ಕಾಗಿಯೇ ಹಿರಿದು ತಿನ್ನುತ್ತಿದ್ದ. ಕೊಲ್ಲದೆ ತಿನ್ನುವುದು ಗೊತ್ತಿತ್ತು. ಆದರೂ ಕೊಲ್ಲುತ್ತಿದ್ದ. ಹುಲಿ ಸಹಜ. ತಾನು ಅಸಹಜನೆಂದು ಮರದ ಮೇಲೆ ಕುಳಿತು ಚಿಂತಿಸಿದ. ಕೂಡಲೇ ಸಹಜ ಕರ್ಮಕಾಂಡಿಯಾದ. ಚಿಂತಿಸಿ ಅರಿವಿಗೆ ಭಕ್ತಿ ಮಾಡಿ ಭಕ್ತಿಕಾಂಡಿಯಾದ. ಅರಿವಿನಿಂದ ತಿಳಿದು, ಅರಿವು ಹೇಳಿದಂತೆ ನಡೆದು ಜ್ಞಾನ ಕಾಂಡಿಯಾದ.

ಸಂಕಣ್ಣ ಹುಲಿಯ ಬಾಯಿಂದ ತಪ್ಪಿಸಿಕೊಂಡು ಮರ ಹತ್ತಿದ ಅಂದಿನ ದಿನ ಶಿವರಾತ್ರಿಯ ದಿನ. ಶಿವನನ್ನು ನೆನೆಯುವ ಇಡೀ ರಾತ್ರಿಯನ್ನು ಅರಿವಿನತ್ತ ಯೋಚಿಸುತ್ತ ಮರದಲ್ಲಿಯೇ ಕಳೆದ. ಕೆಳಗೆ ಹುಲಿ ಹಸಿವಿಗಾಗಿ ಕಾಯುತ್ತಿತ್ತು; ಬಿಲ್ವ ಮರದ ಮೇಲೆ ಸಂಕಣ್ಣ ಹಸಿವು ಮರೆತು ಚಿಂತಿಸುತ್ತಿದ್ದ. ಚಿಂತನೆಯ ಫಲ ಸಂಕಣ್ಣನಿಗೆ ಒಲಿಯಿತು. ಶಿವರಾತ್ರಿಯ ಸಂಕಣ್ಣನೆಂದು ಹೆಸರು ಪಡೆದ ; ತ್ರಿಕಾಲಜ್ಞಾನಿಯಾಗಿ ಮೆರೆದ.

889

ಕಳಾಬಿಂದು ವಟಾಮುಖಿಯೆಂಬ ಹೆಂಗೂಸಿನ ಕೈಯಲು
ಜಲಾಕಾರವೆಂಬ ಗಡಿಗೆಯಿದ್ದಿತ್ತು.
ಆ ಗಡಿಗೆಯಲ್ಲಿ ಚೆನ್ನಬಸವಣ್ಣ ನೀರು ತಂದ.
ಮಡಿವಾಳಯ್ಯ ಸಯದಾನವ ತಂದ.
ಇದರ ಒಲೆಯಡಿಯನುರುಹಿ ಕೊಡಾ,
ಕೂಡಲಸಂಗಮದೇವಾ.

ತನುವೆಂಬುದು ಅರಿವಿನ ಬಿಂದುವಿನಿಂದ ಜನ್ಮ ತಳೆದ ವಟ ವೃಕ್ಷ ! ತನ್ನಿಂದ ತಾನೆ ನಾದ ಮಾಡುವ ಕಲೆಯುಳ್ಳ ಬಿಂದುವೂ ಹೌದು ! ಇದನ್ನು ಅಂಗವೆಂದು, ನವರಂಧ್ರದ ಚಿತ್ತಾರವುಳ್ಳ

ಗಡಿಗೆಯೆಂದು, ಅರಿವನ್ನು ಅಂಗದಲ್ಲಿ ಬಂಧಿಸಿಕೊಂಡ ಲಿಂಗವೆಂದು ಕರೆಯುತ್ತಾರೆ. ಈ ಅಂಗವನ್ನು ಆವರಿಸಿದ ಮನವೇ ಹೆಂಗೂಸು. ಈ ಹೆಂಗೂಸಿನ ಸೆರೆಯಾಳಾಗಿ ಅಂಗ ಕೆಲಸ ಮಾಡುತ್ತದೆ. ಅದಕ್ಕಾಗಿಯೇ ಅಣ್ಣನವರು ಹೆಂಗೂಸಿನ ಕೈಯಲು ಜಲಾಕಾರವೆಂಬ ಗಡಿಗೆಯಿದ್ದಿತ್ತು ಎಂದಿದ್ದಾರೆ.

ಅಂಗದಲ್ಲಿ ಹೆಣ್ಣು ಗಂಡೆಂಬ ಜಾತಿಯಿಲ್ಲ. ಅಂಗವನ್ನು ಆವರಿಸಿದ ಮನ ಹೆಣ್ಣು ! ಅಂಗದಲ್ಲಿ ಸಂಗಮವಾದ ಅರಿವು ಗಂಡು ! ಅಂಗದಲ್ಲಿ ಸಂಗಮವಾದ ಅರಿವು ಮನಕ್ಕೆ ಮನವರಿಕೆಯಾದರೆ , ಆ ಮನವನ್ನು ಹೆಣ್ಣು ಎಂದು ಕರೆದಿದ್ದಾರೆ ಶರಣರು. ಮನಕ್ಕೆ ಮನವರಿಕೆಯಾಗದೆ ಅರಿವನ್ನು ಮನ ಹೊರಗೆ ಹುಡುಕುತ್ತಿದ್ದರೆ ಅಂತಹ ಮನವನ್ನು ಶರಣರು ಸೂಳೆ ಎಂದು ಕರೆದಿದ್ದಾರೆ.

ಮನದ ಕೈಯಲ್ಲಿ ಸೆರೆಯಾದ ಅಂಗವೆಂಬ ಜಲಾಕಾರದ ಗಡಿಗೆಯಲ್ಲಿ ಚೆನ್ನಬಸವಣ್ಣ ನೀರು ತಂದ. ಮಡಿವಾಳಯ್ಯ ಪಡಿ ಪದಾರ್ಥ ತಂದ. ಒಲೆಯ ಹೂಡಿ ಅಂಗದಲ್ಲಿ ಅರಿವಿನ ಅಡಿಗೆ ಸಿದ್ಧಪಡಿಸಿ ಆನಂದದಿಂದ ಉಣ್ಣುವುದು.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಯ್ಯನನ್ನು ಕೂಡುವುದು.

ಗಡಿಗೆಯೂ ಇದೆ; ಜಲವೂ ಇದೆ; ಅಗ್ನಿಯೂ ಇದೆ; ಪಡಿ ಪದಾರ್ಥವೂ ಇದೆ; ಮಾಡುವ ಹೆಣ್ಣೂ ಇದ್ದಾಳೆ ; ಉಣ್ಣುವ ಗಂಡನೂ ಇದ್ದಾನೆ. ಅಂಗದಲ್ಲಿಯೇ ಸಂಗಮವಾದ ಸಿದ್ಧ ಅರಿವಿನ ಅಡಿಗೆಯನ್ನು ಆನಂದದಿಂದ ಉಣ್ಣುವುದು.

890

ದಿಟವ ಮಾಡಿ ಪೂಜಿಸಿದಡೆ ಸಟೆಯ ಮಾಡಿ ಕಳೆವೆ.
ಸಟೆಯ ಮಾಡಿ ಪೂಜಿಸಿದಡೆ ದಿಟವ ಮಾಡಿ ಕಳೆವೆ.
ಏನೆಂಬೆ, ಎಂತೆಂಬೆ ? ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ.
ಆನು ಮಾಡಿದ ಭಕ್ತಿ ಎನಗಿಂತಾಯಿತ್ತು ಕೂಡಲಸಂಗಮದೇವಾ.

ಆಲಯದಲ್ಲಿರುವ ಮೂರ್ತಿಯನ್ನೇ ದೇವರೆಂದು ಪೂಜಿಸಿದರೆ ದೇವರಲ್ಲ; ಅದು ಕಲ್ಲೆಂದು ದಿಟವ ಮಾಡಿ ತೋರುವ. ಅದು ಸುಳ್ಳೆಂದು ಪೂಜಿಸ ಹೋದಡೆ ಅದನ್ನೇ ಸತ್ಯವೆಂದು ಬಿಂದುವಾಗಿ ತನ್ನ ಸ್ವರೂಪವೇ ಎಂದು ಸತ್ಯ ಮಾಡಿ ತೋರುವ.

ಏನೆಂಬೆ; ಎಂತೆಂಬೆ ? ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ:

ತನುವನ್ನು ಆವರಿಸಿದ ಮನ, ತನುವನ್ನು ಬೆಳಗುವ ದೀವಿಗೆಯಾಗಬೇಕಿತ್ತು . ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ ಒಡಲ ಬೆಳಗುವ ಬದಲು, ಬೆಳಗುವ ಒಡಲನ್ನೇ ಸುಡುವುದೆಂದರೇನು? ತನುವಿನ ಶಾಶ್ವತ ಸುಖಕ್ಕಾಗಿ ತನುವನ್ನು ಆಶ್ರಯಿಸಿ ತನುವನ್ನು ಬೆಳಗುವ ದೀವಿಗೆಯಾಗಬೇಕಾದ ಮನ ತನುವನ್ನೇ ಸುಡುವುದೆಂದರೇನು ?

ಆನು ಮಾಡಿದ ಭಕ್ತಿ ಎನಗಿಂತಾಯಿತ್ತು ಕೂಡಲಸಂಗಮದೇವಾ:

ನಾನು ಎನ್ನುವ ಮನ. ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಭಕ್ತಿ ಮಾಡಿದ್ದರೆ, ಮನ ಅರಿವಿನ ಬೆಳಕಿನಲ್ಲಿ ಬೆಳಕಾಗಿ ಅರಿವಾಗಿ ಬೆಳಗುತ್ತಿತ್ತು. ಮನದ ಕತ್ತಲ ಚೇಷ್ಟೆ ಕಳೆದುಕೊಂಡು ದೀಪ್ತಿಯಾಗುತ್ತಿತ್ತು. ಆದರೆ ತನ್ನ ಸುಖಕ್ಕಾಗಿ ದೀಪವನ್ನು ಪ್ರಣತಿಯನ್ನು ಹಾಳುಗೆಡವಿತು. ಅಂಗವನ್ನು

ಹಿಡಿದು ಅಂಗದಲ್ಲಿಯೇ ಸಂಗಮವಾಗದೆ, ಅಂಗವನ್ನು ಹಿಡಿದು ಅಂಗದೊಂದಿಗೆ, ಅನ್ಯವಸ್ತುಗಳ ಸಂಗ ಮಾಡಿತು. ಲಿಂಗದಂತೆ ಬೆಳಗುವ ಅಂಗ ಅಂಗದಲ್ಲಿಯೇ ಉಳಿಯಿತು. ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಿತು.

ಅಂಗದಿಂದ ಬೆಳಗಿದ ಶಬ್ದ, ಅಂಗವನ್ನೇ ಸುಟ್ಟಿತು. ಅಂಗವನ್ನು ಬೆಳಗಿದ ಕಣ್ಣಿನ ಬೆಳಕು ಅಂಗವನ್ನೆ ಸುಟ್ಟಿತು. ಅಂಗವನ್ನು ಮುಟ್ಟಿ ಲಿಂಗವೇ ಆಗಬೇಕಾದ ಚರ್ಮ ಅಂಗವನ್ನೇ ಸುಟ್ಟಿತು. ಅಂಗಕ್ಕೆ ಸ್ಫೂರ್ತಿ ನೀಡುವ ನಾಲಿಗೆ ಅಂಗವನ್ನೇ ಸುಟ್ಟಿತು. ಅಂಗಕ್ಕೆ ಪರಿಮಳದ ವಾಸನೆ ಬೀರುವ ಮೂಗು ಅಂಗವನ್ನೇ ಸುಟ್ಟಿತು. ಸರ್ವಾಂಗವನ್ನು ಲಿಂಗವಾಗಿ ಬೆಳಗುವ ಬೆಳಕು ಅಂಗವನ್ನೇ ಸುಟ್ಟಿತು. ಮನ ಅರಿವಿಗೆ ಭಕ್ತಿ ಮಾಡದ್ದಕ್ಕಾಗಿ !

891

ಎಂಬತ್ತೆಂಟು ಪವಾಡವ ಮೆರೆದು
ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ !
ತನುವಿನೊಳಗೆ ಮನ ಸಿಲುಕದೆ
ಮನದೊಳಗೆ ತನು ಸಿಲುಕದೆ,
ತನು ಅಲ್ಲಮನಲ್ಲಿ ಸಿಲುಕಿತ್ತು.
ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು !
ನಾನೇತರಲ್ಲಿ ನೆನೆವೆನಯ್ಯಾ ಕೂಡಲಸಂಗಮದೇವಾ.

ಪವಾಡ ಮೆರೆದು ಅಂಗ ಶ್ರೇಷ್ಠವೆನ್ನಿಸಿಕೊಳ್ಳಬೇಕಾಗಿಲ್ಲ. ಪವಾಡವೆನ್ನುವುದು ತನಗೂ ಇತರ ತನುಗಳಿಗೂ ಮಾಡುವ ಮೋಸ. ತನುವೇ ಒಂದು ಪವಾಡ. ಕಣ್ಣಿನ ಬೆಳಕಿನಲ್ಲಿ ಭಾವದ ಪವಾಡವಿದೆ. ದುರ್ಭಾವದ ಹೊಲಸಿದೆ. ನಿರ್ಭಾವದ ನಿಜತತ್ವವೂ ಇದೆ. ಇದೆಲ್ಲದರ ಕುರಿತು ತನುವಿಗೆ ತಿಳಿಯುವ ಸುಳುಹಿನ ಮನದ ಅರಿವೂ ಇದೆ. ಇದೊಂದು ತನುವಿಗೆ ಪವಾಡವಲ್ಲವೆ?

ಹೀಗೆ ತನುವಿನಲ್ಲಿ ತನ್ಮಯವಾದ ಶಕ್ತಿ ಕಿವಿ ನಾಲಿಗೆ ಮೂಗು ಚರ್ಮಕ್ಕೆ ಪಸರಿಸಿ ತನುವು ಅರಿವಿನ ಪವಾಡದ ಮನೆಯಾಗಿದೆ. ತನು ಆವರಿಸಿದ ಮನ ತನುವಿನೊಳಗೆ ಸಿಲುಕದೆ ಹೊರಗಣ ಪವಾಡಕ್ಕೆ ತನುವನ್ನು ಮರುಳು ಮಾಡಿ ಮೋಸದ ಪಟ್ಟಕಟ್ಟಿದೆ.

ತನು ಅಲ್ಲಮನೆಂಬ ಅರಿವಿನ ವೈದ್ಯನಲ್ಲಿ ಸಿಲುಕಿ ತನುಮನಗಳೆರಡೂ ಅಜ್ಞಾನಕ್ಕೆಳೆಸದಂತೆ ಹೆಳವನಾಯಿತು. ತನುವೇ ಅರಿವಿನ ಮನೆಯಾಗಿ ಅದ್ಭುತ ಜ್ಞಾನದ ಪವಾಡ ಮೆರೆಯಿತು.

892

ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ,
ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ,
ಸಾರಿ ಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ.
ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ,
ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ.

ತನುವಿನಲ್ಲಿ ಅರಿವಿನ ಸಂಪತ್ತು ಹೇರಳವಾಗಿ ಇದೆ. ಅದಕ್ಕಾಗಿಯೇ ತನು ಉಳ್ಳವ ವಿಷ್ಣುವಾದ, ತನು ಉಳ್ಳವ ರುದ್ರನಾದ, ತನು ಉಳ್ಳವ ಬ್ರಹ್ಮನಾದ. ಕ್ರಿಷ್ಣ , ಲಕ್ಷ್ಮೀ, ಸರಸ್ವತಿ, ಅಕ್ಕಮಹಾದೇವಿ, ಮೀರಾ, ಶಂಕರ, ಮಧ್ವ, ರಾಮಾನುಜ ಮುಂತಾದ ಶರಣ ದಾಸವರೇಣ್ಯರಾದರು.

ತನುವನ್ನು ಆವರಿಸಿದ ಮನ, ತನುವನ್ನು ಮಹಾಜ್ಞಾನಿ ಎನ್ನಿಸಿಕೊಳ್ಳಲು ಬಿಡುತ್ತಿಲ್ಲ. ತನು ಆವರಿಸಿರುವ ಮನವೇ ಮೆಲ್ಲ ಮೆಲ್ಲನೆ ತನುವಿನಲ್ಲಿರುವ ಅರಿವಿನ ಸಂಪತ್ತನ್ನು ತಿಳಿಯುವ ನಿಪುಣ ಭಕ್ತನಾಗಬೇಕು. ಯುಕ್ತಿಯಿಂದ, ನಾನಾವರಸೆಗಳಿಂದ, ಮೆಲ್ಲ ಮೆಲ್ಲನೆ ತಿಳಿದು ಯುಕ್ತನಾಗಬೇಕು.

ತನುವಿನಲ್ಲಿಯೇ ತನ್ಮಯವಾದ ಅರಿವಿನ ಸಂಪತ್ತನ್ನು ಯುಕ್ತಿಯಿಂದ ತಿಳಿಯುವ ಭಕ್ತನೆ ಆ ಮಹಾಜ್ಞಾನಕ್ಕೆ ಶರಣು ಹೋಗಬೇಕು. ಶರಣನೆನ್ನಿಸಿಕೊಳ್ಳಬೇಕು.

ಹೆಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ :

ನಿಮ್ಮಿಂದ ಅಧಿಕನೆನಿಸುವೆನಯ್ಯಾ ಎಂದರೆ ಶಿವನಿಂದ ಅಧಿಕನೆನಿಸುವುದು. ಇದು ಶರಣರಿಗೆ ಮಾತ್ರ ಸಾಧ್ಯವಾಗುತ್ತದೆ. ಶಿವ ಹೊರಗಿಲ್ಲ; ಲಿಂಗಯ್ಯನು ಹೊರಗಿಲ್ಲ. ಹೊರಗೆ ಹುಡುಕಿ ಆತನನ್ನು ಒಲಿಸಿಕೊಳ್ಳುವದಕ್ಕೆ ಜಪತಪಗಳನ್ನು ಮಾಡುವ ಅಗತ್ಯವಿಲ್ಲ. ಒಡಲೊಳಗೆ ಇದ್ದಾನೆ; ಒಡಲು ಸೋಂಕಿಲ್ಲ. ಒಡಲಿಂಗೆ ಆಧಾರವಾಗಿ, ಒಡಲು ತಾನಲ್ಲದೆ; ಒಡಲಿಂಗೆ ಒಡಲಾಗಿ ಒಡಲು ಬೆಳಗುತ್ತಿದ್ದಾನೆ.

ಎಡಹುವ ಗುಳಿಗಳನ್ನು ಮೆಲ್ಲಮೆಲ್ಲನೆ ದಾಟಿ ಅಂಗದೊಳಗೆ ಸಂಗಮವಾದ ಲಿಂಗಯ್ಯನತ್ತ ಸಾರಿ; ಲಿಂಗಯ್ಯನಲ್ಲಿಯೇ ಐಕ್ಯವಾಗಿ ಲಿಂಗೈಕ್ಯನೆನಿಸುತ್ತಾನೆ.

ಆತ ಬೆಳಗಬಹುದು; ಬೆಳಗುವ ಮೂಲಕ ನೋಡಲರಿಯ. ನೋಡಿ ಆನಂದ ಪಡಲರಿಯ. ಮುಟ್ಟಿ, ಕೇಳಿ, ರುಚಿಸಿ, ಸ್ಪರ್ಶಿಸಿ, ಮೂಸಿಸಿ ಆನಂದ ಪಡಲರಿಯ.

ಓದಿಸಿಕೊಳ್ಳುವ ಅಕ್ಷರೋತ್ತಮ ತಾನಾದರೆ; ಓದಿ ಆನಂದ ಪಡುವ ಅಕ್ಷರ ನಾನು. ಪರಿಮಳ ಆತನಾದರೆ; ಅದಕ್ಕೆ ಮೆರಗು ತಂದು ನಳನಳಸಿ ಪರಿಮಳವನ್ನು ಬಂಧಿಸಿದ ಹೂ ನಾನು. ಬಯಲು ಆತನಾದರೆ; ಅದನ್ನು ಭೇದಿಸಿ ಕುಲುಕುಲನೆ ಸುಳಿದಾಡುವ ತಂಗಾಳಿ ನಾನು. ಜೀವ ಜಲಬಿಂದು ಆತನಾದರೆ; ಅದನ್ನು ಬಂಧಿಸಿದ ಜಲಜನಕ ಆಮ್ಲಜನಕ ನಾನು. ಅರಿವೆಂಬ ಗುರುದೇವನು ಆತನಾದರೆ; ಆತನಿಗೆ ಆಶ್ರಯ ನೀಡಿದ ತನು ನಾನು; ಆತನನ್ನು ತಿಳಿಯುವ ಮನ ನಾನು ! ಗಂಡ ಆತನಾದರೆ ಸದಾ ಆತನ ಸೇವೆ ಮಾಡುವ ಹೆಂಡತಿ ನಾನು. ಲಿಂಗಯ್ಯ ಆತನಾದರೆ ಆತನನ್ನು ಬಂಧಿಸಿದ ಅಂಗ ನಾನು ! ಅರ್ಧನಾರೀಶ್ವರ ಆತನಾದರೆ; ಆತನಿಗಿಂತ ಅಧಿಕಳಾಗಿ, ಆತನನ್ನು ತಿಳಿದು ಆತನಲ್ಲಿಯೇ ಒಂದಾಗಿ ಬೇರ್ಪಡಿಸದಂತಹ ಅರ್ಧಾಂಗಿ ನಾನು.

ಮೆಲ್ಲಮೆಲ್ಲನೆ ತಿಳಿದು ಭಕ್ತಳೆನಿಸಿದೆ. ಮೆಲ್ಲಮೆಲ್ಲನೆ ತಿಳಿದು ಯುಕ್ತಳೆನಿಸಿದೆ. ಮೆಲ್ಲಮೆಲ್ಲನೆ ಬಳಿ ಸಾರಿ ಶರಣು ಹೋಗಿ ಶರಣಳೆನಿಸಿದೆ. ಎಡಹುವ ಕುಳಿಗಳನು ದಾಟಿ ಅಂಗದಲ್ಲಿಯೇ ಸಂಗಮವಾದ ಲಿಂಗದ ಬಳಿ ಸಾರಿ ಲಿಂಗೈಕ್ಯಳೆನಿಸಿದೆ. ನಿಮ್ಮನು ತಿಳಿದು, ನಿಮ್ಮಲ್ಲಿಯೇ ಕೂಡಿ ಬೇರಾಗದಂತೆ ನಿಮ್ಮಿಂದಧಕಳೆನಿಸಿದೆ.

893

ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ ? ಹೇಳಯ್ಯಾ ;
ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ,
ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ, ನೀನೆ ಅಯ್ಯಾ ; ಕೂಡಲಸಂಗಮದೇವಾ.

ಆಭರಣದ ಸತ್ಯ ಲೋಹ. ಕರೆನ್ಸಿಯ ಸತ್ಯ ಕಾಗದ. ದೇವರ ಮೂರ್ತಿಯನ್ನು ಕೆತ್ತಿದ ಸತ್ಯ ಕಲ್ಲು. ರುಚಿಯ ಸತ್ಯ ಜಲ. ವಾಸನೆಯ ಸತ್ಯ ಅರಿವು. ಸ್ಪರ್ಶದ ಸತ್ಯ ನಿರ್ಭಾವ. ಕತ್ತಲ ಸತ್ಯ ಬೆಳಕು.

ವಸ್ತುವಿನ ಸತ್ಯ ತಿಳಿದ ಮಹಾ ವಿಜ್ಞಾನಿ ಬಸವಣ್ಣ ! ಸ್ವರ್ಗ ಮರ್ತ್ಯಗಳನ್ನು ಕಳೆದು ಕಾಯಕದಲ್ಲಿಯೇ ಕೈಲಾಸ ಕಂಡ ಶರಣ ಬಸವಣ್ಣ. ಇಂತಹ ಮಹಾತ್ಮರಿಗೆ ಕಾಯ ಕಾಣುವುದೇ ಇಲ್ಲ. ಕಾಯದ ಸತ್ಯ ಕೈಲಾಸ ಮಾತ್ರ ಕಾಣುತ್ತದೆ. ಶರಣನನ್ನು, ಭಕ್ತನನ್ನು, ಜ್ಞಾನಿಯನ್ನು, ಜಗದ್ಗುರುವನ್ನು, ಕಳ್ಳನನ್ನು, ಹತ್ಯಾಚಾರಿಯನ್ನು ಗುರುತಿಸುವುದು ಕಾಯದಿಂದಲೇ.

ಕಾಯದ ಜ್ಞಾನವನ್ನು ಮನದಿಂದ ತಿಳಿದು, ಜ್ಞಾನಕ್ಕೆ ಶರಣು ಹೋಗಿ ಶರಣನಾದ. ಬಸವಣ್ಣ ಮಹಾಜ್ಞಾನಿ ಎನ್ನಿಸಿಕೊಂಡ. ಮನ ಆಯಾ ಕಾಯಗಳಿಗೆ ವೇಷ ಹಾಕಿ ತನುವಿನ ಮೂಲಕ ಕಳ್ಳ, ಗುರು, ಹತ್ಯಾಚಾರಿ, ಹೆಣ್ಣು, ಗಂಡು, ಜಾತಿ ಮತ ಪಂಗಡ ಎಂದು ಗುರುತಿಸಿಕೊಳ್ಳುತ್ತದೆ.

ತನು ಅರಿವೆಂಬ ಗುರುದೇವನದು; ಜಂಗಮನದು. ಲಿಂಗ ಜಂಗಮನ ಸಂಪತ್ತು. ಇದು ಮಹಾಜ್ಞಾನಿ ಭಕ್ತನಿಗೆ ಮಾತ್ರ ಗೋಚರಕ್ಕೆ ಬರುತ್ತದೆ. ಅದಕ್ಕಾಗಿಯೇ ಬಸವಣ್ಣನವರು, ಮಹಾಮನೆಗೆ ಕನ್ನ ಹಾಕಲು ಬಂದ ಕನ್ನಮಾರಿ ಮಾರಯ್ಯನನ್ನು ಕೂಡಲಸಂಗಯ್ಯ ಎಂದು ಕರೆದ; ಪೂಜಿಸಿದ, ಗೌರವಿಸಿದ ! ಆಭರಣದ ಮೇಲಿನ ಮೋಹದಿಂದ ಬಳಲುತ್ತಿದ್ದ ಸತಿಗೆ ನಿಜ ಲೋಹದ ದರ್ಶನ ನೀಡಿದ ಮಹಾತ್ಮ ಎಂದು ಮಾರಯ್ಯನನ್ನು ಹೊಗಳಿದ! ಮಾರಯ್ಯನಿಗೂ, ಮಹಾಮನೆಯ ಶರಣರಿಗೂ ಸತಿಗೂ ಏಕಕಾಲಕ್ಕೆ ಜ್ಞಾನದರ್ಶನ ನೀಡಿ ಕಾಯವನ್ನೇ ಕೈಲಾಸ ಮಾಡಿದ ಬಸವಣ್ಣ.

ಮಹಾಮನೆಯ ಆಕಳು ಕದ್ದ ಕಳ್ಳನಿಗೆ; ಅಲ್ಲಿ ಉಂಡರೆ ಸಂಗ ಇಲ್ಲಿ ಉಂಡರೆ ಸಂಗ. ಕರುವನ್ನು ಆಕಳಿದ್ದಲ್ಲಿಗೆ ಕಳುಹಿಸಿ ಎಂದು ಕಾಯವನ್ನು ಕೈಲಾಸವಾಗಿ ಕಂಡ ! ಕಾಯದ ತಂತ್ರಜ್ಞಾನವನ್ನು ಹೊಂದಿದ ಜ್ಞಾನಿಗೆ ಕಾಯವೇ ಲಿಂಗ ಜಂಗಮ; ಕೈಲಾಸ ! ಮನಕ್ಕೆ ಬಯಕೆಯಾದರೆ ಈ ತಂತ್ರಜ್ಞಾನ ಎಲ್ಲ ಕಾಯಗಳಿಗೂ ಸಾಧ್ಯ! ಕಾಯದ ನಿಜ ಜ್ಞಾನ ಲಭಿಸಿದ ಮನಕ್ಕೆ ಸರ್ವಕಾಯಗಳೂ ಲಿಂಗ ಜಂಗಮವೇ !

ಶರಣನ ಮಾಹೇಶ್ವರಸ್ಥಲ

894

ಪರಮ ಪ್ರಭುವೆ, ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದಡೆ

ಆನು ಸೈರಿಸಿದೆನಯ್ಯಾ.
ಕುಲಮದ ಛಲಮದವಿದೇನಯ್ಯಾ? ದರುಶನ ಭ್ರಾಂತಿಯಿದೇನಯ್ಯಾ?
ಯದ್ಯಪಿ ಸ್ಯಾತ್ ತ್ರಿಕಾಲಜ್ಞಃ ತ್ರೈಲೋಕ್ಯಾಕರ್ಷಣಕ್ಷಮಃ
ತಥಾಪಿ ಲೌಕಿಕಾಚಾರಂ ಮನಸಾಪಿನಲಂಘಯೇತ್ ॥
ಇತೆಂಬುದ ಮೀರಿದೆನಾಗಿ, ಲಿಂಗಯ್ಯಾ, ನಿಮ್ಮ ನಂಬಿದೆನಯ್ಯಾ.
ಇನ್ನು ಕಲಿಯುಗದಲ್ಲಿ ಬಳಸಿದಡೆ,
ಕೂಡಲಸಂಗಮದೇವಾ, ನಿಮ್ಮ ರಾಣಿವಾಸದಾಣೆ.

ಕಾಯವೇ ಕೈಲಾಸ! ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ ಸತ್ಯವ ನುಡಿವುದೆ ದೇವಲೋಕ, ಮಿಥ್ಯವ ನುಡಿಯುವುದೇ ಮರ್ತ್ಯಲೋಕ. ದೇಹವನ್ನು ಕಾಣದಂತೆ ಸೀಳಿ, ಒಂದು ದೇವಲೋಕವನ್ನಾಗಿಸಿ ಮತ್ತೊಂದು ಮರ್ತ್ಯಲೋಕವನ್ನಾಗಿಸಿದೆ; ನೀನು ದೇವಲೋಕದೊಳು ವಾಸ ಮಾಡಿ ಈ ದೇಹವನ್ನೇ ಮರ್ತ್ಯವನ್ನಾಗಿ ಮಾಡಿ ಈ ದೇಹವನ್ನೇ ಮರೆಯುವುದೆ ?

ದೇಹ ಒಂದೆನ್ನಲು ಬಾರದಂತೆ ಅರಿವು, ಅದನ್ನು ತಿಳಿಯುವ ಮನವೆಂದು ಎರಡು ಭಾಗಗಳನ್ನಾಗಿ ಮಾಡಿದೆ. ಅರಿವು ಗುರುದೇವ, ಮಹಾದೇವ, ಸದಾಶಿವನ ಪಾತ್ರದಲ್ಲಿ ದೇವಲೋಕದಲ್ಲಿದ್ದಾನೆ. ಮನ ಹೆಣ್ಣು ಗಂಡಾಗಿ ಹಲವಾರು ಪಾತ್ರಗಳಲ್ಲಿ ತೋರುತ್ತಾ ಮರ್ತ್ಯಲೋಕದಲ್ಲಿದೆ. ಪರಮ ಪ್ರಭುವಾಗಿ, ನೀ ಮುನಿದು ಮರ್ತ್ಯಲೋಕದೊಳಗಿರಿಸಿದಡೆ ತಿಳಿದು ಆನು ಸೈರಿಸುವುದೆಂತು ? ಕುಲಮದ ಛಲಮದವಿದೇನಯ್ಯಾ? ದರುಶನ ಭ್ರಾಂತಿಯಿದೇನಯ್ಯಾ?

ದೇಹ ಒಂದೆನ್ನಲು ಅರಿವು ಮನವೆಂದು ಎರಡಾಗಿ ಭೇದಿಸಿದೆ. ದೇಹ ಅರಿವ ಮನವೆಂದು ಮೂರಾಗಿ ಭೇದಿಸಿದೆ. ಅರಿವಿನಿಂದ ಅರಿತು ನೋಡಲು ಅರಿವೇ ದೇಹವಾಗಿ ಜನ್ಮ ತಳೆದು ಅರಿವಿಂಗೆ ಅರಿವಾಗಿ ಒಂದೇ ಆಗಿದೆ. ಪುನಃ ಅರಿತರಿತು ಅರಿವಿನಿಂದ ನೋಡಲು ಒಂದೆನಲೂ ಬಾರದಂತೆ ಅರಿವೇ ತಾನಾಗಿ ಬಯಲಾಗಿದೆ.

ಅರಿವು ಲಿಂಗಜಂಗಮವಾಗಿ, ಗುರುದೇವ ಮಹಾದೇವ ಸದಾಶಿವನಾಗಿ, ಸಾಕ್ಷಾತ್ ಪರಬ್ರಹ್ಮನೇ ತಾನಾಗಿ ಅಂಗದಲ್ಲಿ ಸಂಗಮವಾಗಿದ್ದರೂ ಅಂಗದಲ್ಲಿ ಕುಲಮದ ಛಲಮದ ಸೃಷ್ಟಿಸಿದೆ. ಹೆಣ್ಣು ಗಂಡು ಶ್ರೀಮಂತ ಬಡವ ಎಂದು ಸೃಷ್ಟಿಸಿದೆ. ಗುರು ಶಿಷ್ಯ ರಾಜ ಕಾಲಾಳು ಎಂದು ಭೇದ ಕಲ್ಪಿಸಿದೆ. ಭವಿ ಭಕ್ತ ಮುಕ್ತ ಎನ್ನುವುದನ್ನು ಸೃಷ್ಟಿಸಿದೆ. ಇದೇನಯ್ಯಾ ನಿನ್ನ ಅರಿವಿನ ಲೀಲೆ ! ನಿನ್ನ ದರುಶನ ಭಾಗ್ಯ ದೊರೆತಿದೆಯೆಂದು ಅದೆಷ್ಟು ತನುಗಳು ವೇಷ ಹಾಕಿದವು ? ಆ ವೇಷಗಳೆಲ್ಲ ನಿನ್ನದೆಂಬ ಅಮಾಯಕ ತನವನ್ನು ಅಂಗದಲ್ಲಿ ಸೃಷ್ಟಿಸಿ, ಅಂಗದಲ್ಲಿಯೇ ನೀನಿದ್ದು ಅಂಗಕ್ಕೆ ನಿನ್ನನ್ನು ಹುಡುಕಲು ಹಚ್ಚಿದೆ ಪ್ರಭುವೆ !

ಇಂತೆಂಬುದು ಮೀರಿದೆನಾಗಿ, ಲಿಂಗಯ್ಯಾ, ನಿಮ್ಮ ನಂಬಿದೆನಯ್ಯಾ ಇನ್ನು ಕಲಿಯುಗದಲ್ಲಿ ಬಳಸಿದಡೆ, ಕೂಡಲಸಂಗಮದೇವಾ, ನಿಮ್ಮ ರಾಣಿವಾಸದಾಣೆ.

ಅಣ್ಣನವರು ಈ ವಚನದಲ್ಲಿ ದೇವ ಭಾಷೆಯನ್ನು ಬಳಸಿದ್ದಾರೆ. ಅವರು ಆಡುವ ಈ ಭಾಷೆ ಶರಣರಿಗೆ ಮಾತ್ರ ವೇದ್ಯವಾಗುತ್ತದೆ. ಆನಂದವಾಗುತ್ತದೆ. ತಿಳಿದವರು ಕೇಳಿ ಪುಳಕಿತರಾಗಿ ನಲಿನಲಿದಾಡುತ್ತಾರೆ; ಕುಣಿಕುಣಿದಾಡುತ್ತಾರೆ. ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯನನ್ನು ನಂಬಿ ನಚ್ಚಿ ಕರೆದಿದ್ದಾರೆ; ಕರೆಯುವ ಬಗೆಯನ್ನು ಹೇಳಿದ್ದಾರೆ. ಕಲಿಯುಗದಲ್ಲಿ ಈ ಭಾಷೆಯನ್ನು

ನಂಬುವವರು ಯಾರು ? ಯಾರು ನಂಬಿ ನಚ್ಚಿ ಕರೆಯುತ್ತಾರೆಯೋ ಅವರು ಮಾತ್ರ ಸುಖಿಗಳು. ಕೊಲುವೆನೆಂಬ ದೇವ ಭಾಷೆಯನು ಗೆಲುವೆನೆಂಬ ಭಕ್ತನ ಹೊರತುಪಡಿಸಿ ಮತ್ತೊಂದು ಅಂಗ ನಂಬಲು ಸಾಧ್ಯವೆ? ನಂಬಿದೆನಯ್ಯಾ. ಇನ್ನು ಕಲಿಯುಗದಲಿ ಬಳಸಿದೆನಾದಡೆ ನಿಮ್ಮ ರಾಣಿವಾಸದಾಣೆ !

895

ತನುಮನಧನವೆಂಬ ಕನ್ನಡ ನೋಡಯ್ಯಾ ;
ಎನ್ನದೂ ಅಲ್ಲ, ನಿನ್ನದೂ ಅಲ್ಲ, ಬರಿಯ ಭ್ರಮೆಯ ಮಾತು.
ಆ ಭ್ರಮೆಯೊಳಗಾಗೆ ನಿಮ್ಮ ಶ್ರೀಚರಣವ ಬಿಡೆ,
ಕೂಡಲಸಂಗಮದೇವಾ.

ಮನ ಮತ್ತು ಧನವೆಂಬ ಅರಿವಿನ ಬಿಂದುವಿನಿಂದಲೇ ತನುವೆಂಬ ಬಿಂಬವಾಗಿ, ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಕಾಣುತ್ತದೆ. ತನುವೂ ಇಲ್ಲದ್ದು, ಪ್ರತಿ ಬಿಂಬವೂ ಇಲ್ಲದ್ದು. ಕನ್ನಡಿಯೆಂಬುದು ಬರೀ ಭ್ರಮೆ ! ತೋರಿ ಇಲ್ಲವಾಗುತ್ತದೆ. ಅದು ತನುವಿನದೂ ಅಲ್ಲ; ಅರಿವೆಂಬ ಗುರುದೇವನದೂ ಅಲ್ಲ; ಮನದ್ದು. ಮನವನ್ನು ನೋಡಲು ಹೋದರೆ ಅದು ಇಲ್ಲದ್ದು. ಅಂದೂ ಇರಲಿಲ್ಲ; ಇಂದೂ ಇಲ್ಲ; ಎಂದೆಂದಿಗೂ ಇರುವುದಿಲ್ಲ. ಬರೀ ಭ್ರಮೆ !

ತನು ಮನ ಧನವೆಂದರೇನೆಂದು ತಿಳಿದ ಅಂಗವದು ಬರೀ ಅಂಗವಲ್ಲ. ಭ್ರಮೆ ಕಳೆದುಕೊಂಡ ಬ್ರಹ್ಮಲಿಂಗ; ಜಂಗಮಲಿಂಗ. ಬರೀ ಭ್ರಮೆಯೊಳಗಾಗದೆ ಅರಿವಿನ ನಿಮ್ಮ ಶ್ರೀ ಚರಣವ ಬಿಡೆ, ಕೂಡಲಸಂಗಮದೇವಾ.

896

ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣನೈಕ್ಯನು
ಮೆಲ್ಲಮೆಲ್ಲನೆ ಆದೆಹೆನೆಂಬನ್ನ ಬರ ನಾನೇನು ವಜ್ರದೇಹಿಯೇ ?
ನಾನೇನು ಅಮೃತವ ಸೇವಿಸಿದೆನೆ ?
ನಾನೇನು ಮರುಜೆವಣಿಯ ಕೊಂಡೆನೆ ?
ನುಡಿದ ನುಡಿಯೊಳಗೆ ಷಡುಸ್ಥಲ ಬಂದು
ಎನ್ನ ಮನವ ನಿಂಬುಗೊಳ್ಳದಿದ್ದಡೆ
ಸುಡುವೆ ನೀ ತನುವ ಕೂಡಲಸಂಗಮದೇವಾ.

ಅಣ್ಣನವರ ಭಾಷೆಯೇ ಹೀಗೆ. ಬಲ್ಲ ಶರಣರಿಗೆ ಬೆಲ್ಲ ಸವಿದಂತೆ ! ಮೆಲ್ಲ ಮೆಲ್ಲನೆ ಭಕ್ತನೆನ್ನಿಸುವೆ, ಮೆಲ್ಲ ಮೆಲ್ಲನೆ ಯುಕ್ತನೆನ್ನಿಸುವೆ, ಮೆಲ್ಲ ಮೆಲ್ಲನೆ ಶರಣನೆನ್ನಿಸುವೆ, ಎಡಹುವ ಗುಳಿಗಳ ದಾಟಿ ಬರಬರ ಲಿಂಗೈಕ್ಯನೆನ್ನಿಸುವೆ; ನಿಮ್ಮಿಂದಧಿಕನೆನ್ನಿಸುವೆ ಎಂದು ಹೇಳಿದವರು ಕೂಡಾ ಅಣ್ಣನವರೆ !

ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನು ಮೆಲ್ಲ ಮೆಲ್ಲನೆ ಆಗಲು ನಾನೇನು ವಜ್ರದೇಹಿಯೇ ? ಅಮೃತವ ಸೇವಿಸಿದವನೆ ? ಮರಣವಿಲ್ಲದ ಹಣ್ಣ ಮೆದ್ದವನೆ?

ಇಲ್ಲ. ಇದು ಯಾರಿಗೂ ಸಾಧ್ಯವಿಲ್ಲ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನು ಆಗಲೇಬೇಕು. ಆಗದೆ ಎಂದೆಂದೂ ಹೋಗಲೇಬಾರದು. ಅಂಗದ ಉದ್ದೇಶವೇ ಇದು. ಇದನ್ನು ಹೊಂದದೆ ಅಂಗ ಲಿಂಗಾಂಗವೇ ಅಲ್ಲ.

ಅಂಗದಲ್ಲಿಯೇ ಲಿಂಗವಿದೆ. ಅಂಗಕ್ಕೆ ಮನ ಆವರಿಸಿದೆ. ಆ ಮನ, ಅಂಗದಲ್ಲಿಯೇ ಸಂಗಮುವಾದ ಷಡುಸ್ಥಲವನು ಇಂಬುಗೊಳ್ಳಬೇಕು. ಹಾಗಾಗದಿದ್ದಡೆ ಸುಡುವೆ ನೀ ಅಂಗವನು; ಅಂಗವನು ಆವರಿಸಿದ ಅರಿಷಡ್ವರ್ಗವನು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವನು. ಇವು ಸುಟ್ಟು ಉಳಿದುದೆ ಷಡುಸ್ಥಲ. ಮನವ ನಿಂಬುಗೊಂಡು ಬಂದ ಘನಮನ.

ಜಪ ತಪ ಮಾಡಿದರೆ ಬರುವುದಲ್ಲ. ಯಜ್ಞ ಯಾಗ ಮಾಡಿದರೂ ಬರುವುದಲ್ಲ. ಹೋಮ ಹಯನ ಮಾಡಿದರೂ ಬರುವುದಲ್ಲ. ಮನ ಘನದತ್ತ ಪಯಣಿಸಿ ಅಲ್ಲಿಯೇ ಲೀಯವಾದರೆ ಸಾಕು. ಅಜ್ಞಾನದ ತನು ಬೆಂದು ಅರಿವಿನ ತನುವಾಗುವುದು. ನುಡಿದ ನುಡಿಯೊಳಗೆ ಷಡುಸ್ಥಲ ಬಂದು ಮನವ ನಿಂಬುಗೊಳ್ಳುವುದು.

897

ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು;
ಛಲಗೆಟ್ಟಡೆ ಕೆಡಬಹುದಲ್ಲದೆ ಭಕ್ತಿಯ ಅನು ಕೆಡಬಾರದು;
ಭಕ್ತಿಯ ಅನುಕೆಟ್ಟಡೆ ಕೆಡಬಹುದಲ್ಲದೆ ಆಯತ ಕೆಡಬಾರದು;
ಆಯತ ಕೆಟ್ಟಡೆ ಕೆಡಬಹುದಲ್ಲದೆ ಸ್ವಾಯತ ಕೆಡಬಾರದು !
ಎಲೆ, ಕೂಡಲಸಂಗಮದೇವಯ್ಯಾ, ಮುನ್ನ ಮುಟ್ಟಿತ್ತೆ ಮುಟ್ಟಿತ್ತು;
ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ !

ಮನ ಮರ್ಕಟ; ತನಗೆ ಬೇಕಾದುದನ್ನು ತನುವಿನ ಮೂಲಕ ಭೋಗಿಸುತ್ತದೆ. ಅರಿವು ತನುವಿನ ಮಾಲೀಕ; ತನುವಿಗೆ ಬೇಡವಾದುದನ್ನು ತಡೆಯುತ್ತದೆ. ವಸ್ತುವಿನ ಸತ್ಯ ಅನಾವರಣ ಮಾಡಿ; ಮನವನ್ನು ಸುಮ್ಮನಾಗಿಸುತ್ತದೆ. ಮನವೆಂದರೇನು ? ತನುವೆಂದರೇನು? ಅರಿವೆಂದರೇನೆಂದು ಮನಕ್ಕೆ ಮನದಟ್ಟಾದ ಮೇಲೆ ಛಲಗೆಡುವುದು ಅಪರಾಧ ! ಭಕ್ತಿಯ ಅನು ಕೆಡುವುದು ಅಪರಾಧ ! ಅರಿವನ್ನು ಆಯತ ಮಾಡಿಕೊಂಡು ಧರಿಸಿದ ಮೇಲೆ ಅರಿವು ಕೆಡುವುದು ಅಪರಾಧ. ಅರಿವು ಆಯತ ಮಾಡಿಕೊಂಡು, ಆ ಅರಿವನ್ನೇ ಸ್ವಾಯತ ಮಾಡಿಕೊಂಡು, ಆ ಅರಿವೇ ತಾನಾದ ಮೇಲೆ ಮತ್ತೆ ಅಜ್ಞಾನದತ್ತ ಸಾಗುವುದು ಮಹಾಪರಾಧ.

ಎಲೆ ಕೂಡಲ ಸಂಗಮದೇವಯ್ಯಾ, ಮುನ್ನ ಮುಟ್ಟಿತ್ತೆ ಮುಟಿತ್ತು; ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ:

ಅರಿವೆಂದರೇನು; ಮನವೆಂದರೇನು; ತನುವೆಂದರೇನೆಂದು ಅರಿಯದ ಮುನ್ನ ಕುಲಗೆಟ್ಟೆ, ಛಲಕೆಟ್ಟೆ, ಭಕ್ತಿಕೆಟ್ಟೆ, ಆಯತ ಕೆಟ್ಟೆ, ಸ್ವಾಯತವೂ ಕೆಟ್ಟೆ. ಅರಿವಾಗದ ಮುನ್ನ ಮನಕ್ಕೆ ಅಜ್ಞಾನವೆಂದರೆ ಬಲುಸುಖ. ಅದು ತನುವಿನ ಮೂಲಕ ನೋಡಿ, ಕೇಳಿ, ಮುಟ್ಟಿ, ರುಚಿಸಿ, ಮೂಸಿಸಿ ಸವಿಯುತ್ತದೆ. ಮನಕ್ಕೆ ಆನಂದ; ಅರಿವಿಗೆ ಬೇಸರ; ತನುವಿಗೆ ಸಂಕಟವಾಗುತ್ತದೆ.

ತನುವನ್ನು ಮನ ಆವರಿಸಿದೆ. ಅರಿವು ತನುವಿನಲ್ಲಿ ಸಂಗಮವಾಗಿದೆ. ತನು ಅರಿವಿನದು. ಮನ ತನುವನ್ನು ಆವರಿಸಿ ಬಾಡಿಗೆಗೆ ಇದೆ. ತನ್ನ ಅಜ್ಞಾನದ ಸುಖಕ್ಕಾಗಿ ಅರಿವಿನ ಮನೆಯನ್ನೇ

ಬಳಸುತ್ತದೆ. ಮನಕ್ಕೆ ಅರಿವಿನ ಮನೆಯ ಮಾಲೀಕ ಯಾರೆಂದು ತಿಳಿದ ಮೇಲೆ, ಆ ಮಾಲೀಕನೊಂದಿಗೆ ಸಂಗ ಮಾಡಿದ ಮೇಲೆ ತನ್ನ ಅಜ್ಞಾನವನ್ನು ಬಿಡಬೇಕು. ಮತ್ತೆ ಮುಟ್ಟಬಾರದು. ತಿಳಿಯದ ಮುನ್ನ ಮುಟ್ಟಿದ್ದೆ ಮುಟ್ಟಿದ್ದು. ತಿಳಿದ ಮೇಲೆ ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ ! ಅರಿವಿನ ಸಂಗಯ್ಯನೊಂದಿಗೆ ಸಂಗ ಮಾಡಿದ ಮನದನ್ನೆ ರಾಣಿಯ ಮೇಲೆ ಆಣೆ; ಆಕೆ ವಾಸ ಮಾಡಿದ ಅರಿವಿನ ಮನೆಯ ಮೇಲೆ ಆಣೆ; ತನುವಿನ ಮೇಲೆ ಆಣೆ !

898

ಅಷ್ಟವಿಧಾರ್ಚನೆ ಷೋಡಶೋಪಚಾರವಲ್ಲದೆ
ನಿಮ್ಮ ಮುಟ್ಟಲರಿಯದವರ ಕಂಡಡೆ, ಅಯ್ಯನೆಂತೆಂಬೆನವರ ?
ಆವ ಭಾವದಲ್ಲಿ, ಆವ ಜ್ಞಾನದಲ್ಲಿ, ಆವ ಮುಖದಲ್ಲಿ
ಅರಿವವರದಾಯ್ಯಾ? ಏನೆಂಬೆ ?
ನಿಮ್ಮಲ್ಲಿ ಸಮ್ಯಕ್ಯರಾದ ಸತ್ಯ ಶರಣರ ಕಂಡು,
ಕೂಡಲಸಂಗಮದೇವಾ, ಅವರನಯ್ಯಾ ಎಂಬೆನು.

ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಕಲ್ಲು ಲಿಂಗವನ್ನೇ ಮುಟ್ಟಿ ಮುಟ್ಟಿ ದೇವರೆಂದು ಪೂಜಿಸುವ ಅಂಗಗಳು, ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಮುಟ್ಟಲರಿಯರು. ಕಲ್ಲು ಲಿಂಗವನ್ನೇ ದೇವರೆಂದು ಪೂಜಿಸುವ ಅಂಗಗಳನ್ನು ಗೌರವಿಸಿ ಅಯ್ಯಾ ಎನ್ನಲು ಸಾಧ್ಯವೇ?

ಲಿಂಗಕ್ಕೆ ಪಂಚಾಮೃತದಿಂದ ಅಭಿಷೇಕ ಮಾಡಿ, ವಿಭೂತಿ ಗಂಧ ಧರಿಸಿ, ರುದ್ರಾಕ್ಷಿ ಹಾಕಿ, ನಾನಾ ವಿಧ ಪತ್ರ ಪುಷ್ಪ ಧರಿಸಿ, ದೂಪ ದೀಪಾರಾಧನೆ ಮಾಡಿ, ಫಲ ತಾಂಬೂಲ ನೈವೇದ್ಯವ ಮಾಡಿ, ಗೀತ ಸ್ತೋತ್ರ ಮಾಡಿ, ಅಕ್ಷತೆ ಹಾಕಿ, ಘಂಟನಾದವ ಮಾಡಿ, ಪ್ರದಕ್ಷಿಣೆ ಹಾಕಿ ನಮಸ್ಕಾರವ ಮಾಡಿ ಕಲ್ಲು ಲಿಂಗವ ಪೂಜಿಸಿ ನಿಮ್ಮ ಮುಟ್ಟಲರಿಯದವರ ಕಂಡು ಅಯ್ಯಾ ಎನಬಹುದೆ ?

ಕಲ್ಲುಲಿಂಗವನ್ನೇ ದೇವರೆಂದು ಪೂಜಿಸುವ ಅವರು ಆವ ಭಾವದಿಂದ ನಿಮ್ಮ ಮುಟ್ಟಲು ಸಾಧ್ಯ? ಯಾವ ಜ್ಞಾನದಿಂದ ನಿಮ್ಮ ನು ಅರಿಯಲು ಸಾಧ್ಯ? ಕಲ್ಲು ಆಲಯವನ್ನೇ ದೊಡ್ಡದು ಮಾಡಿ, ಅದನ್ನು ನಿರ್ಮಿಸಿದ ಅರಿವಿನ ಶಿವಾಲಯವನ್ನೇ ಕಿರಿದು ಮಾಡಿದವರು ಅದಾವ ಮುಖದಿಂದ, ಅದಾವ ಸುಳುಹಿನಿಂದ ನಿಮ್ಮನರಿಯಲು ಸಾಧ್ಯ?

ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಮನಾಥನನ್ನು ಕಂಡು ಆ ಅರಿವಿನಲ್ಲಿಯೇ ಸಮ್ಯಕ್ಯರಾದ ಸತ್ಯ ಶರಣರಿಗೆ ಶರಣುಹೋಗಿ ಅಯ್ಯಾ ಎಂದು ಮೊರೆಹೋಗುವೆ ಸಂಗಯ್ಯಾ?

ಸರ್ವರಿಗೂ ಸಾಧ್ಯವಾಗದ ಅರಿವನ್ನು ಸರಳವಾಗಿ ಸರ್ವರಿಗೂ ಎಟಕುವಂತೆ ಅನಾವರಣ ಮಾಡಿ ತೋರಿಸಿದ್ದಾರೆ ಅಣ್ಣ ಬಸವಣ್ಣನವರು.

899

ಮರನ ಹೂವ ಕೊಯಿದು ಮರಕ್ಕೇರಿಸಿ,
ನದಿಯುದಕವ ನದಿಗರ್ಪಿತವ ಮಾಡಿ,
ಕರುವನಗಲಿಸಿ ತಾಯ ಮರುಗಿಸಿ

ಮೊಲೆವಾಲ ಕರೆದುಣಬೇಡವೋ !
ಕೂಡಲಸಂಗಮದೇವ, ಮಾಡಿದ ಮಾಯೆ,
ಹಲಬರ ಬಾಯ ಟೊಣೆದೇ ಹೋಯಿತ್ತು !

ಅರಿವಿನಿಂದ ನೋಡಿದರೆ ಮಾಡುವ ಪೂಜೆ, ಹೋಮ, ಹವನವೆಲ್ಲ ವ್ಯರ್ಥ. ಮರದ ಹೂ ತಂದು, ಮರದ ಬೊಂಬೆಯಲಿ ನಿರ್ಮಿಸಿದ ಮೂರ್ತಿಯನು ದೇವರೆಂದು ಪೂಜಿಸಿ, ವರ ಪಡೆದೆವೆಂದು ಭ್ರಮೆ ಪಡುವುದು ಅದೆಷ್ಟು ಸರಿ ?

ಮರದಲ್ಲಿ ಬಚ್ಚಿಟ್ಟುಕೊಂಡ ಹೂ ತಾನರಳುವ ಕಾಲಕ್ಕಾದರೂ ಅರಳಿತು. ತನುವಿನಲ್ಲಿ ಬಚ್ಚಿಟ್ಟುಕೊಂಡ ಜ್ಞಾನ ಅರಳಬೇಡವೆ ?

ನದಿಯಲಿ ನಿಂತು, ನದಿಯ ಉದಕವನು ನದಿಗೆ ಚೆಲ್ಲಿ ಪೂಜಿಸುವುದೆಂದರೇನು? ನದಿಯೊಳಗಿದ್ದ ನದಿಯಿಂದಲೇ ಜನ್ಮ ತಳೆದ ಜಲಚರಗಳು ತನುವಿಗಿಂತ ಶ್ರೇಷ್ಠವಾಗಲಿಲ್ಲವೆ? ಉದಕದಿಂದಲೇ ಆದ ಜಲಚರಗಳು, ಉದಕದಿಂದಲೇ ಆದ ತನುಗಳು ಉದಕವನ್ನು ಪೂಜಿಸುವುದು ಉಚಿತವೆ ? ಮಾತನಾಡದೆ ಹರಿಯುವ ಉದಕ, ಮಾತನಾಡುವ ನೋಡುವ ಕೇಳುವ ಮುಟ್ಟುವ ರುಚಿಸುವ ಮೂಸಿಸುವ ತನುವೆಂಬ ಉದಕ, ಉದಕಕ್ಕಿಂತಲೂ ಮಿಗಿಲಲ್ಲವೆ?

ಕರುವಿಗಾಗಿ ಬಿಟ್ಟ ಹಸುವಿನ ಮೊಲೆವಾಲು ಕದ್ದು ಕರೆದುಂಡು ಮೇಲೆ ಹಸುವನ್ನು ಪೂಜಿಸುವ ಅಜ್ಞಾನಿ ತನುಗಳಿಗೆ, ಇದು ತಪ್ಪೆಂದು ಗೊತ್ತಿಲ್ಲವೆ ? ಗೊತ್ತಿದ್ದೂ ಮಾಡುವುದು ತನುವಿಗೆ ಆವರಿಸಿದ ಮನದ ಮಾಯೆ ! ತನುವಿನಲ್ಲಿಯೇ ತನ್ಮಯವಾದ ಅರಿವಿದ್ದೂ, ಅಜ್ಞಾನವನ್ನು ಅರಿಯದ ಅರಿವಿನ ಮಹಾ ಮಾಯೆ ! ಮಾಯೆಯಿಂದಲೇ ಮಾಯೆಯನ್ನು ಅರಿತು ಮಾಯಾ ಮಾಡುವುದು ಸುಲಭದ ಮಾತಲ್ಲ. ಈ ಮಾಯೆಯ ಕುರಿತು ಮಾತಾಡಿ ಮಾತಾಡಿ ಹಲವರ ಬಾಯಿಗಳು ಟೊಣೆದು ಹೋಗಿವೆ. ಮಾಡದ ವಿನಹ ಗತಿಯಿಲ್ಲ; ಮಾತನಾಡುವುದನು ಮರೆತು ಅರಿತರೆ !

900

ತಾಪತ್ರಯವೆಂದಡೆ ರೂಪ ಕಾಣುತ್ತ ಕನಲಿದ.
ಕೋಪದಲ್ಲಿ ಶಿವಕಳೆಯದ ಕರಡಿಗೆಯನೆ ಮುರಿದ,
ಧೂಪದ ಗುಂಡಿಗೆಯನೊಡೆದ, ದೀಪಾರತಿಯ ನಂದಿಸಿದ,
ಬಹ ಪರಿಯಾಣದೋಗರವ ತುಡುಕಿದ.
ಪಾಪಕರ್ಮಸಂಹರನು ಕೂಡಲಸಂಗಮದೇವಾ, ನಿಮ್ಮ ಶರಣ !

ತನುವಿಗೆ ಮನ ಕ್ಷಣ ಕ್ಷಣಕ್ಕೂ ತಾಪತ್ರಯವನು ಒಡ್ಡುತ್ತದೆ. ತನುವಿನ ಕೋಪಕ್ಕೆ ಮನವೇ ಕಾರಣ. ತನುವಿನ ಅರಿವಿಗೂ ಮನವೇ ಕಾರಣ.

ತನುವಿಗೆ ತನುವಿನಂತಹದೇ ರೂಪ ಕಂಡರೆ ಸಾಕು, ತನುವಿನಲ್ಲಿ ತಾಪತ್ರಯ ಉಂಟಾಗುತ್ತದೆ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಉತ್ಪತ್ತಿಯಾಗುತ್ತವೆ. ಅರಿತರೆ ತನು! ತನುವನ್ನು ನೋಡಿದ್ದು ಕೂಡಾ ತನುವೆ ! ಆದರೂ ರೂಪ ತನುವಿನಲ್ಲಿ ಕಾಮ ಹುಟ್ಟಿಸಿತು. ತನು ದಕ್ಕದಿದ್ದರೆ ಕ್ರೋಧ ಸೃಷ್ಟಿಸಿತು. ದಕ್ಕಿದರೆ ಲೋಭ ಸೃಷ್ಟಿಯಾಯಿತು. ಮತ್ತೆ

ಮತ್ತೆ ಭೋಗಿಸಬೇಕೆಂಬ ಮೋಹ ಸೃಷ್ಟಿಯಾಯಿತು. ತನಗೆ ದಕ್ಕಿದ ರೂಪ ಮತ್ತಾರಲ್ಲಿಯೂ ಇಲ್ಲವೆಂಬ ಮದ ಸೃಷ್ಟಿಯಾಯಿತು. ಮತ್ತೊಂದು ರೂಪ ನೋಡಿದರೆ ಮತ್ಸರ ಸೃಷ್ಟಿಯಾಯಿತು. ಇದು ತನುವಿನ ತಾಪತ್ರಯ; ಮನದಿಂದಾಗಿ ಸೃಷ್ಟಿಯಾದ ತಾಪತ್ರಯ !

ತನುವಿನಲ್ಲಿ ಸೃಷ್ಟಿಯಾದ ಕೋಪ ತಾಪತ್ರಯ, ತನುವಿನಿಂದಲೇ ಸೃಷ್ಟಿಯಾದ ಲಿಂಗ ಹೊತ್ತ ಕರಡಿಗೆಯನು ಮುರಿಯಿತು. ಧೂಪದ ಗುಂಡಿಗೆಯನು ಒಡೆಯಿತು. ದೀಪಾರತಿಯ ನೈವೇದ್ಯವನು ಹಾಳುಗೆಡವಿತು. ತನುವಿನ ಸುಖಕ್ಕಿಂತ ತನು ನಿರ್ಮಿಸಿದ ದೇವರು ದೊಡ್ಡದಲ್ಲ ಎಂದು ಮನ ಧೃಡಪಡಿಸಿತು. ಆದರೂ ಕ್ಷಣಮಾತ್ರ ! ಯಥಾರೀತಿ ಪೂಜೆ; ಯಥಾರೀತಿ ಭೋಗ; ಯಥಾರೀತಿ ತಾಪತ್ರಯ.

ತನುವನ್ನು ಆವರಿಸಿದ ಮನದ ಚೇಷ್ಟೆಗಳನ್ನು ಮನವೇ ನಿಲ್ಲಿಸಲಾಗದು. ತನುವಿನಲ್ಲಿಯೇ ಸಂಗಮವಾದ ಅರಿವಿಗೆ ಮಾತ್ರ ಸಾಧ್ಯ. ಅಂಗದಲ್ಲಿ ಸಂಗಮವಾದ ಅರಿವೆಂಬ ಸಂಗಮನಾಥನು ಮನದ ಪಾಪಕರ್ಮಗಳನ್ನು ಮಟ್ಟ ಹಾಕಬಲ್ಲ ಮಹಾವೀರ ! ಆತ ಪಾಪಕರ್ಮಗಳ ಸಂಹರನು!

901

ಈ ಲೋಕದ ಭೀತರು, ಆ ಲೋಕದ ಕಲಿಗಳು,
ಸಾಲೋಕ್ಯ , ಸಾಮೀಪ್ಯ , ಸಾಯುಜ್ಯರೆಲ್ಲರು
ಅಜನಿತಂಗೆ ಸರಿಯೆ ?
ಮೂಜಗದಲ್ಲಿ ನಿರತರು ಕೂಡಲ ಸಂಗನಶರಣರು,
ತ್ರಿವಿಧವನರಿಯರು.

ಶರಣರು, ಕಾಯವನ್ನೇ ಕೈಲಾಸ ಮಾಡಿಕೊಂಡವರು. ದೇವಲೋಕ ಮರ್ತ್ಯಲೋಕವನ್ನು ದೂರೀಕರಿಸಿ, ಸತ್ಯವ ನುಡಿವ ಕಾಯವನ್ನೇ ಕೈಲಾಸ ಮಾಡಿಕೊಂಡವರು.

ಮರ್ತ್ಯಲೋಕದ ಭೀತರು, ಸ್ವರ್ಗಲೋಕದ ಕಲಿಗಳು, ಸಾಲೋಕ್ಯ, ಸಾಮೀಪ್ಯ , ಸಾರೂಪ್ಯ , ಸಾಯುಜ್ಯರೆಲ್ಲರೂ. ಅಷ್ಟೇ ಏಕೆ ಸೃಷ್ಟಿಕರ್ತನೆಂಬ ಬ್ರಹ್ಮನೂ ಶರಣನಿಗೆ ಸರಿ ಸಾಟಿಯೆ?

ಮೂಜಗದಲ್ಲಿ ನಿರತರು ಕೂಡಲಸಂಗನ ಶರಣರು, ತ್ರಿವಿಧವನರಿಯರು:

ಕಾಯವಿರುವುದು ಒಂದೇ ಲೋಕದಲ್ಲಿ; ಅದು ಭೂಲೋಕ. ಆದರೂ ಕಾಯ ಮೂರು ಲೋಕಗಳನ್ನು ಸೃಷ್ಟಿಸಿಕೊಂಡಿದೆ. ಸತ್ವಲೋಕ; ಸಾತ್ವಿಕರು ವಾಸಿಸುವ ಲೋಕ. ರಜೋಲೋಕ; ರಾಜ ಗುಣದವರು ವಾಸಿಸುವ ಲೋಕ. ತಮೋಲೋಕ ! ತಮಸ್ಸಿನ ಗುಣದವರು ವಾಸಿಸುವ ಲೋಕ. ಹೀಗೆ ಕಾಯ ಒಂದಾದರೂ ಕಾಯದಲ್ಲಿಯೇ ಮೂರು ಲೋಕಗಳು ಸೃಷ್ಟಿಯಾಗಿವೆ. ಜಾಗ್ರತ್ ಸ್ವಪ್ನ ಸುಷುಪ್ತಿ ಎಂದು ಕಾಯ ಕಾಯಕವನ್ನು ಸೃಷ್ಟಿಸಿಕೊಂಡಿದೆ.

ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಸಂಗಮನಾಥನಿಗೆ ಅಂಗವನ್ನು ಆವರಿಸಿದ ಮನ ಶರಣು ಹೋಗಿ ಶರಣನಾದ ಮೇಲೆ ಆ ಅಂಗ ಬರೀ ಅಂಗವಲ್ಲ; ಲಿಂಗಾಂಗ! ಅಂಗವನ್ನು ಆವರಿಸಿದ ಮಂಗನನ್ನು ಮಂಗದ ಮೂರು ಗುಣಗಳನ್ನು ಕಳೆದುಕೊಂಡ ಅರಿವಿನ ಮಹಾಲಿಂಗ! ಇಂತಹ ಶರಣ ತ್ರಿವಿಧವನು ಅರಿಯ.

902

ತಾಗು ನಿರೋಧದ ಆಗು ಹೋಗವನರಿಯದ
ಶರಣನ ಚರಿತ್ರವ ನೋಡಿ ನೋಡಿ ಬೆರಗಾದೆನಯ್ಯಾ.
ಕೂಡಲಸಂಗಮದೇವಯ್ಯನಲ್ಲಿ ತಾನೆ ಸುಯಿಧಾನಿಯಾಗಿ.

ತಾಗುವುದರಿಂದ ಆಗುವ ಸುಖದುಃಖಗಳು; ತಾಗದೇ ಇರುವುದರಿಂದ ಆಗುವ ಸುಖ ದುಃಖಗಳು ಇವೆರಡು ತನುವಿಗೆ ಏಕಕಾಲಕ್ಕೆ ಸುಖವನ್ನು ನರಕಯಾತರ್ನೆಯನ್ನು ಉಂಟು ಮಾಡುತ್ತವೆ. ಸ್ಪರ್ಶದಿಂದ ತನುವಿನಲ್ಲಿ ಹಾವು ಹರಿದಂತೆ ಭಾಸವಾಗುತ್ತದೆ. ಸ್ಪರ್ಶಸುಖವನ್ನು ತಡೆಹಿಡಿಯುವಲ್ಲಿಯೂ ತನುವಿಗೆ ಸಂಕಟ ದುಃಖ ಕಾತುರ ನಾನಾ ರೀತಿಯ ಯಾತನೆಯಿಂದ ತನು ಮೈ ಮರೆಯುತ್ತದೆ.

ಒಂದು ತನುವಿನಲ್ಲಿ ಏನಿದೆಯೊ ಮತ್ತೊಂದು ತನುವಿನಲ್ಲಿಯೂ ಅವೇ ವಸ್ತುಗಳಿವೆ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಇವುಗಳನ್ನು ಹೊರಚೆಲ್ಲದಂತೆ ಬಂಧಿಸಿದ ಚರ್ಮ; ಇವು ತನುವಿನಲ್ಲಿದ್ದ ಪದಾರ್ಥಗಳು. ಮತ್ತೊಂದು ತನು ಕೂಡಾ ಇಂತಹ ಪದಾರ್ಥಗಳನ್ನೇ ಹೊಂದಿದ್ದರೂ ಒಂದು ತನು ಮತ್ತೊಂದು ತನುವನ್ನು ತಾಗುವಾಗ, ತಾಗದೇ ಅದುಮಿಡಿದು ನಿರೋಧಿಸುವಾಗ ಉಂಟಾಗುವ ಸುಖದುಃಖಗಳು ಅಷ್ಟಿಷ್ಟಲ್ಲ. ತಿಳಿದರೆ ಆ ಯಾತನಾಮಯ ಅಜ್ಞಾನದ ಸುಖ ಯಾವ ತನುವಿಗೂ ಬೇಡ.

ತಿಳಿಯುವ ಜ್ಞಾನ, ತಿಳಿಯದೇ ಭೋಗಕ್ಕೆ ಒಳಗಾಗಿ ಯಾತನೆ ಪಡುವ ಅಜ್ಞಾನಗಳೆರಡೂ ತನುವಿನಲ್ಲಿಯೇ ಇವೆ. ತನುವಿನಲ್ಲಿ ತಾಗುವಿಕೆಯಿಂದ ಹುಟ್ಟುವ ಅಜ್ಞಾನ, ತಾಗದೆ ನಿರೋಧ ವ್ಯಕ್ತಪಡಿಸುವ ಅಜ್ಞಾನ; ಇವೆರಡನ್ನೂ ಶರಣ ಜ್ಞಾನದ ಬೆಳಕಿನಿಂದಲೇ ಬೆಳಗಿದ.

ತಾಗುವುದು ಅಜ್ಞಾನವೇ, ತಾಗುವ ಬಯಕೆ ಹೊಂದಿ ನಿರೋಧಿಸುವುದೂ ಅಜ್ಞಾನವೆ.ಇವೆರಡೂ ಚರ್ಮದಲ್ಲಿ ಹುಟ್ಟಿದ ಕಾಮಪ್ರೇರಿತ ದುರ್ಭಾವಗಳು.

ಚರ್ಮದಲ್ಲಿ ಭಾವವಿದೆ, ದುರ್ಭಾವವು ಇದೆ. ನಿರ್ಭಾವವೂ ಇದೆ. ನಿರ್ಭಾವ ಚರ್ಮದ ಮಹಾಜ್ಞಾನವಾದರೆ, ಭಾವ ದುರ್ಭಾವಗಳು ಚರ್ಮದ ಅಜ್ಞಾನ !

ಅಣ್ಣ ತಂಗಿ ಅಕ್ಕ ಮಾವ ಅತ್ತಿಗೆ ತಂದೆ ತಾಯಿ ಮಗ ಮಗಳು ಗೆಳೆಯ ಗೆಳತಿ ಗುರು ಶಿಷ್ಯ ಇವು ಚರ್ಮದಲ್ಲಿ ಹುಟ್ಟಿದ ಭಾವಗಳು. ಈ ಭಾವದಿಂದ ಪ್ರೀತಿಸಿದರೆ ಚರ್ಮಕ್ಕೆ ಗೌರವ. ಚರ್ಮ ಹೊಂದಿದ ತನುವಿಗೂ ಗೌರವ! ಆದರೆ ಈ ಭಾವ ಚರ್ಮದಲ್ಲಿ ಬಹಳ ಕಾಲದವರೆಗೆ ಉಳಿಯುವುದಿಲ್ಲ. ನಿರಂತರ ಏರಿಳಿತಗಳಾಗುತ್ತವೆ. ತೋರಿಕೆಯ ಭಾವದಿಂದ ಚರ್ಮದ ಅಂತರಾಳದಲ್ಲಿ ತಾಗುವ ರುಚಿ ನಿರೋಧಿಸುವ ಸಂಕಟಗಳೆರಡೂ ಏಕಕಾಲಕ್ಕೆ ಉಂಟಾಗಿ ಭಾವ ದುರ್ಭಾವಕ್ಕೆ ಪಲ್ಲಟಗೊಳ್ಳುತ್ತದೆ.

ಚರ್ಮವನ್ನು ಆವರಿಸಿದ ಭಾವ ದುರ್ಭಾವಗಳಿಂದಾಗಿ ತನು ಹಾದರದ ಹಣೆಪಟ್ಟಿ ಧರಿಸಿ ಶಿಕ್ಷೆ ಅನುಭವಿಸುತ್ತದೆ. ಶಿಕ್ಷೆ ಕೊಡುವ ಚರ್ಮ ಉಳ್ಳ ತನುಗಳೂ ಇದಕ್ಕೆ ಹೊರತಾಗಿಲ್ಲ. ಜ್ಞಾನ ಶಿಕ್ಷಣ ಗೊತ್ತಿಲ್ಲದ್ದಕ್ಕಾಗಿ ತನುವಿನ ಮನದ ಅಪರಾಧಕ್ಕೆ ತನುವೇ ಶಿಕ್ಷೆ ಕೊಡುತ್ತದೆ. ಚರ್ಮ ಮಾಡಿದ ದುರ್ಭಾವದ ಅಪರಾಧಕ್ಕಾಗಿ ಚರ್ಮದಲ್ಲಿರುವ ನಿರ್ಭಾವದಿಂದಲೇ ಶಿಕ್ಷೆ ಇದೆಯೆಂದು ಇತರ ತನುಗಳಿಗೆ ತಿಳಿಯದೇ ಹೋಗುತ್ತದೆ.

ಚರ್ಮದಲ್ಲಿರುವ ನಿರ್ಭಾವವೇ ಮಹಾಜ್ಞಾನ; ಸಹಜಜ್ಞಾನ ! ತಾಗುವಿಕೆಯಿಂದಾಗಿ ನೋವಿಲ್ಲ, ಸಂಕಟವಿಲ್ಲ, ಕಾಮ ಕ್ರೋಧ ಮದ ಮತ್ಸರಗಳಿಲ್ಲ. ತಾಗದೆ ಇರುವ ನಿರೋಧದಲ್ಲಿ ತಾಗಬೇಕೆಂಬ ಬಯಕೆಯಿಲ್ಲ.

ತನುವಿನ ಒಂದು ತೊಡೆ ಮತ್ತೊಂದು ತೊಡೆಯನ್ನು ತಾಗಿದರೆ ನಿರ್ಭಾವ. ಏಕೆಂದರೆ ತಾಗು ನಿರೋಧದ ಆಗು ಹೋಗನರಿಯದು. ಎರಡೂ ತೊಡೆಗಳು ಬೇರೆ ಬೇರೆಯಾದರೂ ತನು ಒಂದೇ. ತೊಡೆಯ ಚರ್ಮ ಒಂದೇ. ತಾಗುವಿಕೆಯಿಂದ ಸುಖದುಃಖವಿಲ್ಲ; ಅಗಲುವಿಕೆಯಿಂದಲೂ ತಾಗುವ ಬಯಕೆಯಿಲ್ಲ. ಬರೀ ನಿರ್ಭಾವ ಮಾತ್ರ! ತನುವಿನ ತೊಡೆ ಮತ್ತೊಂದು ತನುವಿನ ತೊಡೆಗೆ ತಾಗಿದರೆ ಸುಖ; ತಾಗದಿದ್ದರೆ ತಾಗುವ ಬಯಕೆಯ ಸುಖ; ನಿರೋಧದ ದುಃಖ. ತನು ಎರಡಾದರೂ ತನುಗಳಲ್ಲಿರುವ ಪದಾರ್ಥ ಒಂದೇ, ಚರ್ಮ ಒಂದೇ ಆದರೂ ತಾಗು ನಿರೋಧದ ಆಗುಹೋಗನರಿಯವು. ಸುಖಿಸಬೇಕೆಂಬ ಭಾವ, ಸುಖ ಸಿಗಲಿಲ್ಲವೆಂಬ ದುರ್ಭಾವ ಎರಡೂ ತನುಗಳಲ್ಲಿ ಹುಟ್ಟಿತು. ಚರ್ಮದಲ್ಲಿ ಹುಟ್ಟಿದ ಭಾವ ದುರ್ಭಾವಗಳೆರಡೂ ಅಳಿದ ಮೇಲೆ ಉಳಿಯುವುದೇ ನಿರ್ಭಾವ.

ನಿರ್ಭಾವ ಚರ್ಮ, ಚರ್ಮಕ್ಕೆ ತಾಗಿದರೆ ತಾಗಿದ ಸುಖವನು ಅರಿಯದು, ದುಃಖವನ್ನೂ ಅರಿಯದು. ಚರ್ಮದಲ್ಲಿ ಯಾವ ರಸಾಯನಿಕ ಕ್ರಿಯೆ ಕೂಡಾ ಉಂಟಾಗದು. ಈ ತಂತ್ರಜ್ಞಾನವನ್ನು ಬಲ್ಲ ಮಹಾಶರಣನಿಗೆ ಮಾತ್ರ ಸಾಧ್ಯ. ಈತನ ಚರಿತ್ರವೇ ವಿಪರೀತ. ಆತನನ್ನು ನೋಡುವುದೇ ಒಂದು ಆನಂದ. ಅಂಗದಲ್ಲಿಯೇ ಸಂಗಮವಾದ ನಿರ್ಭಾವ ಸುಖದ ಸುಯಿದಾನಿಯಾತ.

903

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ;
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ.
ನೀನು ಜಗಕ್ಕೆ ಬಲ್ಲಿದನು; ಆನು ನಿನಗೆ ಬಲ್ಲಿದನು, ಕಂಡಯ್ಯಾ
ಕರಿಯ ಕನ್ನಡಿಯೊಳಗಡಗಿದಂತಯ್ಯಾ.
ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ:

ಇಡೀ ಜಗತ್ತಿಗೆ ದೇವರು ಗೊತ್ತಿದ್ದಾನೆ. ಆದರೆ ದೇವರೆಂದರೆ ಯಾರು ? ಆತ ಹೇಗಿದ್ದಾನೆ? ಹೆಣ್ಣೊ ? ಗಂಡೋ ? ಆತನನ್ನು ನೋಡಿದವರು ಇದ್ದಾರೆಯೇ ? ಆತನ ವಾಸಸ್ಥಾನವೆಲ್ಲಿ? ಸ್ವರ್ಗ ಎಂದು ಹೇಳುವುದಾದರೆ, ಅದನ್ನು ನೋಡಿದವರು ಇದ್ದಾರೆಯೇ ? ಎಂದು ಪ್ರಶ್ನಿಸಿದರೆ ಇಲ್ಲವೆಂದು ಉತ್ತರ ಬರುತ್ತದೆ. ಖಚಿತವಾಗಿ ದೇವರು ಇದ್ದಾನೆ; ಆತ ಬೇರಾರು ಅಲ್ಲ. ಕಾಣುವ ನೀನೆ ದೇವರು ಎಂದು ಜ್ಞಾನಿಯೊಬ್ಬ ಉತ್ತರ ಕೊಟ್ಟರೆ ಆತನ ಮಾತನ್ನು ನಂಬುವವರು ವಿರಳ. ನಂಬಿದರೂ ಆತನಂತೆ ತಿಳಿಯುವವರು ವಿರಳ. ಆತನ ಮಾತಿಗೆ ಮರುಳಾಗಿ; ಆತ ಸತ್ತ ನಂತರ ಆತನನ್ನೇ ದೇವರಾಗಿ ಪೂಜಿಸುವವರೇ ಹೇರಳ.

ದೇವರನ್ನು ನಾನು ನೋಡಿದ್ದೇನೆ; ಆತನೇ ನೀನು. ನಿನಗಿಂತ ಆತ ಭಿನ್ನನಲ್ಲ ಎಂದು ವೈಜ್ಞಾನಿಕವಾಗಿ ಹೇಳಿದ ಜ್ಞಾನಿಯನ್ನೇ ದೇವರೆಂದು ಪೂಜಿಸಿ, ತನ್ನನ್ನು ದೇವರು ಅಲ್ಲ ಎಂದು

ಅಲ್ಲಗಳೆದುಕೊಳ್ಳುವುದು ; ಇದು ದೇವನು ರಚಿಸಿದ ಮಾಯೆಯೇ ಸರಿ. ಈ ಮಾಯೆ ಮನದ ಹೆಸರು ಪಡೆದು ತನುವನ್ನು ಆವರಿಸಿಕೊಂಡಿದೆ. ಜಗದ ತನುಗಳನ್ನು ಆವರಿಸಿಕೊಂಡಿದೆ. ತನುವಿನಲ್ಲಿ ತನ್ಮಯವಾದ ದೇವನನ್ನೂ ಆವರಿಸಿಕೊಂಡಿದೆ !

ದೇವರು ಕಾಣದಂತೆ ಮಾಯೆ ಇಡೀ ಜಗವನ್ನು ಆವರಿಸಿಕೊಂಡಿದ್ದರೆ ಜ್ಞಾನಿಯ ಮಾತೇ ಬೇರೆ. ಆತನ ಮನ ಆತನ ತನುವಿನಲ್ಲಿಯೇ ತನ್ಮಯವಾದ ದೇವನನ್ನು ಸುತ್ತಿದೆ.

ದೇವರೆಂದರೆ ಸತ್ಯ , ಚೈತನ್ಯ , ಸದಾಬೆಳಗುವ ಬೆಳಕು, ಅರಿವು, ಬ್ರಹ್ಮ, ಪರಮಪುರುಷ ಮಹಾಜ್ಞಾನ. ಮಾಯೆಯೆಂದರೆ ಮನ, ಕತ್ತಲು, ಚಂಚಲೆ, ಹೆಣ್ಣು, ಸೂಳೆ, ಸತಿ.

ದೇವರೆಂದರೆ ಅರಿವು ಎನ್ನುವ ಗಂಡು. ಮಾಯೆಯೆಂದರೆ ದೇವರನ್ನು ತಿಳಿಯುವ ಹೆಣ್ಣು. ಇವೆರಡೂ ಅವ್ಯಕ್ತ . ಇವುಗಳ ವಾಸ ದೇಹದಲ್ಲಿಯೇ ! ದೇಹ ಮಾತ್ರ ವ್ಯಕ್ತ . ದೇಹವನ್ನು ಮಾಯೆ ಸುತ್ತಿರುವುದರಿಂದ ದೇಹ ಹೆಣ್ಣಾಗಿ ಗಂಡಾಗಿ ಕಾಣುತ್ತದೆ. ದೇಹದಲ್ಲಿಯೇ ಇರುವ ಅರಿವೆಂಬ ದೇವರು ಮನಕ್ಕೆ ಒಲಿತಾಗ ದೇಹವೇ ದೇವರಾಗುತ್ತದೆ. ಅರಿವೆಂಬ ಗಂಡನನ್ನು ಮನವೆಂಬ ಹೆಣ್ಣು ಅಪ್ಪಿಕೊಂಡು ಅರ್ಧನಾರೀಶ್ವರನಾಗುತ್ತದೆ. ಅರಿವೆಂಬ ಲಿಂಗಪತಿಗೆ ಮನ ಶರಣು ಹೋಗಿ ಶರಣಸತಿಯಾಗುತ್ತದೆ.

ನೀನು ಜಗಕೆ ಬಲ್ಲಿದನು; ಆನು ನಿನಗೆ ಬಲ್ಲಿದನು. ಜಗದ ಜನ ನಿನ್ನನ್ನು ಗಿಡ ಮರ ಕಲ್ಲು ಆಲಯ ಮಂದಿರ ಚರ್ಚ್ ಸಮಾಧಿ ಪುಣ್ಯಕ್ಷೇತ್ರಗಳ ಮೂಲಕ, ನದಿ ಕೆರೆ ಹಳ್ಳ ಬಾವಿಗಳ ಮೂಲಕ ಪೂಜಿಸಬಲ್ಲರು. ಅವರಿಗೆ ನೀನು ಬಲ್ಲಿದನು. ನಿನಗೆ ನಾನು ಬಲ್ಲಿದನು ಕಂಡಯ್ಯಾ. ಜಗತ್ತು ಮೂರ್ತಿಯಲ್ಲಿ ದೇವರನ್ನು ಕಂಡು ಪೂಜಿಸಿದರೆ, ನನಗೆ ಕಲ್ಲೆಂದು ತೋರಿ ಪೂಜಿಸದಂತೆ ಮರೆಯಾದೆ. ಪೂಜಿಸುವ ತನುಗಳಲ್ಲಿ ದರ್ಶನ ನೀಡಿ ಪೂಜಿಸೆಂದು ಅಪ್ಪಿಕೊಂಡೆ. ನೀನು ಜಗಕೆ ಬಲ್ಲಿದನು. ನಾನು ನಿನಗೆ ಬಲ್ಲಿದನು.

ಜಗದಗಲ ಮುಗಿಲಗಲವಿದ್ದ ಬಯಲು ದೇವನು ನೀನು. ದೇಹ ನಾನು. ಕರಿಯು ಕನ್ನಡಿಯೊಳು ಚುಳುಕಾದಂತೆ ಎನ್ನ ದೇಹವನ್ನೇ ಆಲಯ ಮಾಡಿಕೊಂಡು ಚುಳುಕಾದ ಮಹಾದೇವ ನೀನು. ಎನ್ನೊಳಗೆ ನೀನಡಗಿದೆ. ಅಂಗದಲ್ಲಿಯೇ ಕೂಡಿ ಕೂಡಲಸಂಗಮದೇವನಾದೆ.

ಶರಣನ ಪ್ರಸಾದಿಸ್ಥಲ

904

ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ;
ಎನಗೆಯೂ ನಿನಗೆಯೂ ಸಮಯಾಚಾರ ಸರಿ;
ಕೂಡಲಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ !

ಅರಿವು ಬೇರಲ್ಲ, ಮನ ಬೇರಲ್ಲ. ಅರಿವು ಬೆಳಕಾದರೆ ಮನ ಬೆಳಕಿನ ನೆರಳು. ಬೆಳಕು ಬೆಳಕು ಕೂಡಿದರೆ ಬೆಳಕೇ. ಎರಡೂ ಏನೆಂದರಿಯದ ಘನ. ನೆರಳು ಬೆಳಕಿನಿಂದ ಜನ್ಮ ತಳೆದಿದೆ. ನೆರಳೆಂದರೇನೆಂದು ಬೆಳಕಿಗೆ ಗೊತ್ತು. ಬೆಳಕೆಂದರೇನೆಂದು ನೆರಳಿಗೆ ಗೊತ್ತು. ಬೆಳಕು ನೆರಳುಗಳೆರಡು ಒಂದೇ ಗರ್ಭದಲ್ಲಿ ಜನಿಸಿದ ಸೋದರರು. ಬೆಳಕೆಂಬ ಅಣ್ಣನ ಜನನ ಮೊದಲಾದರೆ, ಅಣ್ಣನ ಬೆನ್ನ

ಹಿಂದೆಯೆ ಜನ್ಮ ತಳೆದ ನೆರಳೇ ತಮ್ಮ. ಅಣ್ಣನನ್ನು ತಮ್ಮ ಅರಿಯಲಿಲ್ಲ. ತಮ್ಮನನ್ನು ಅಣ್ಣ ಅರಿಯಲಿಲ್ಲ. ಇವರಿಬ್ಬರೂ ಅಂಗದಲ್ಲಿಯೇ ಸಂಗಮವಾಗಿದ್ದಾರೆ. ಬೆಳಕಿಗೂ ನೆರಳಿಗೂ ಸಮಯಾಚಾರವೇ ಸರಿ. ಅಣ್ಣ ಮೊದಲು; ತಮ್ಮ ನಂತರ.

ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ:

ಚೆನ್ನಯ್ಯನ ಅಂಬಲಿ ಉಂಡು ನೀನು ಪ್ರಸನ್ನನಾದೆ. ಚೆನ್ನಯ್ಯನಿಂದ ತಿಳಿದು ನಿನ್ನನ್ನು ನಾನು ಧನ್ಯನಾದೆ. ಆತ ನನಗೆ ಗುರುವಾದ; ಆತನಿಂದ ನಿನ್ನನ್ನು ತಿಳಿದ ನಾನು ನಿನಗೆ ಅಣ್ಣನಾದೆ. ನೀನೆನಗೆ ಚಿಕ್ಕ ತಮ್ಮನಾದೆ. ಎನಗೆಯೂ ನಿನಗೆಯೂ ಸಮಯಾಚಾರವೇ ಸರಿ !

905

ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು ರತ್ನಕ್ಕೆ
ಹೆಣಗಾಟವನಾಡಿಹರು.
ಅವರ ಹೆಣಗಾಟವ ನೋಡಿ ಆ ರತ್ನವ ಸೆಳೆದುಕೊಂಡಡೆ
ಕೂಡಲ ಸಂಗಮದೇವಂಗಾರೋಗಣೆಯಾಯಿತ್ತು.

ಅನುಭವಕ್ಕೆ ವೇದ್ಯವಾಗುವುದನ್ನು ಅನುಭವಿಸಿಯೇ ಆನಂದ ಹೊಂದಬೇಕು. ಮಾತಿನ ಮೂಲಕ ಅಕ್ಷರದ ಮೂಲಕ ಹೇಳುವುದು ಸುಲಭದ ಮಾತಲ್ಲ. ಅದಕ್ಕಾಗಿಯೇ ಶರಣ ಸಂತರು ಬೆಡಗಿನ ಮೂಲಕ ಹೇಳಿದ್ದಾರೆ. ಬೆಡಗು ಲೋಕದ ಮಾತಿನಂತಿದ್ದರೂ ಅದು ಲೋಕದ ಮಾತಲ್ಲ ಅನುಭವಿಸಿ ನುಡಿದ ಜ್ಞಾನಿಯ ನುಡಿ; ಶರಣನ ವಚನ !

ಪರಮಾತ್ಮ ಶುದ್ಧಾತ್ಮವನ್ನು ಸೃಷ್ಟಿ ಮಾಡಿ ಅಂಗದೊಂದಿಗೆ ಸಂಗೈಸಿದ್ದಾನೆ. ಅವರಿಬ್ಬರನ್ನು ತಿಳಿಯುವ ಮನವೆಂಬ ರತ್ನವನ್ನೂ ಅಂಗದೊಂದಿಗೆ ಮೇಳೈಸಿದ್ದಾನೆ. ಶುದ್ಧಾತ್ಮ ಪರಮಾತ್ಮರಿಬ್ಬರೂ ಆ ಒಂದು ರತ್ನಕ್ಕೆ ಹೆಣಗಾಟವನಾಡತ್ತಿದ್ದಾರೆ.

ಅಂಗದಲ್ಲಿಯೇ ಸಂಗಮವಾದ ಸಂಗಯ್ಯನಿಗೆ ಮನವೆಂಬ ರತ್ನ ಆರೋಗಣೆಯಾಗಿತ್ತು.

906

ಆ ರತ್ನಪ್ರಸಾದವನಾರಾಧಿಸುತ್ತಿರಲು
ಆ ಪ್ರಸಾದವಲ್ಲಿ ಬೀಳುತ ಆಳುತ್ತಿದ್ದಿತ್ತು ನೋಡಾ.
ಅದ ಹಲಬರು ನೋಡಿ ನೋಡಿ ಹೋಗುತ್ತಿದ್ದರು.
ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು.
ಇದ ಪದಾರ್ಥವ ಮಾಡಿಕೊಡಯ್ಯಾ, ಕೂಡಲಸಂಗಮದೇವಾ.

ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲು ಸೋಂಕದೆ, ಒಡಲು ಬೆಳಗುವ ಅರಿವಿನ ಬೆಳಕೆ ರತ್ನಪ್ರಸಾದ. ಆ ಪ್ರಸಾದವನ್ನು ಜಗತ್ತಿನಲ್ಲಿರುವ ಮನುಜರೆಲ್ಲ ಆರಾಧಿಸುತ್ತಿದ್ದಾರೆ. ಆ ಪ್ರಸಾದ ಒಡಲೊಳಗೆ ಬಿದ್ದು ಒಡಲನ್ನೇ ಬೆಳಕಿನ ಲೋಕವಾಗಿ ಆಳುತ್ತಲಿದೆ.

ಒಡಲು ಬೆಳಗುವ ಬೆಳಕನ್ನು ಒಡಲಿನ ಮೂಲಕವೇ ನೋಡಬೇಕು. ಕೆಲವರು ನೋಡಿ ನೋಡಿ ಹೋಗುತ್ತಿದ್ದಾರೆ. ಬೆಳಕೆಂದರಿಯರು. ಬೆಳಕಿದ್ದೂ ಕತ್ತಲನ್ನು ಬೆಳಗದು; ಕತ್ತಲಿದ್ದೂ ಬೆಳಕಿನೆಡೆಗೆ

ಪಯಣಿಸದು.

ಬೆಳಕೂ ಕತ್ತಲೂ ಒಡಲಲ್ಲಿಯೇ ಇದೆ. ಕತ್ತಲು ಬೆಳಕಿಗೆ ಪ್ರಸಾದವಾಗದು. ಬೆಳಕೆಂದು ಕತ್ತಲು ತಿಳಿದರೆ ಸಾಕು ಕೂಡಲೇ ಪ್ರಸಾದವಾಗಿ ಸುತ್ತಿಕೊಳ್ಳುವುದು.

907

ಎಲ್ಲರ ಗಂಡರು ಬೇಂಟೆಯ ಹೋದರು;
ನೀನೇಕೆ ಹೋಗೆ, ಎಲೆ ಗಂಡನೆ ?
ಸತ್ತುದ ತಾರದಿರು, ಕೈ ಮುಟ್ಟಿ ಕೊಲ್ಲದಿರು,
ಅಡಗಿಲ್ಲದೆ ಮನೆಗೆ ಬಾರದಿರು !
ದೇವರ ಧರ್ಮದಲೊಂದು ಬೇಂಟೆ ದೊರಕೊಂಡಡೆ,
ಕೂಡಲ ಸಂಗಮದೇವಂಗರ್ಪಿತವ ಮಾಡುವೆ, ಎಲೆ ಗಂಡನೆ.

ಹುಲಿಯ ಬಾಯಿಗೆ ಹುಲ್ಲೆ ತಾನಾಗಿಯೇ ಬೀಳದು. ಹುಲ್ಲೆಯನ್ನು ಹಿಡಿದು ಬೇಟೆಯಾಡಲು ಹುಲಿ ಹೋಗಲೇಬೇಕು. ಹಾಗೆಯೇ ಅಂಗದಲ್ಲಿಯೇ ಮನೆ ಮಾಡಿದ ಅರಿವಿನ ಗಂಡ ಚಂಚಲೆ ಮನವನ್ನು ಬೇಟೆಯಾಡಿ ಹಿಡಿದು ತರಲೇಬೇಕು.

ಮನವೆಂಬ ಮಾಯಾ ಮೃಗ ಬಲು ಚಂಚಲೆ; ಅದರ ವೇಗ ಗಾಳಿ ಬೆಳಕಿಗಿಂತಲೂ ತೀಕ್ಷ್ಣ. ಅದಾಗಿಯೇ ಬಂದು ಹುಲಿಯ ಬಾಯಿಗೆ ಬೀಳದು. ಅರಿವಿನ ಗಂಡನ ಸಂಗವನೂ ಮಾಡದು. ಎಲ್ಲರ ಗಂಡರು ಬೇಟೆಗೆ ಹೋದರು ನೀನೇಕೆ ಹೋಗೆ ಎಲೆ ಗಂಡನೆ ? ನೀನು ಹೋಗದಿದ್ದರೆ ನಿನಗೆ ಬೇಟೆ ದಕ್ಕದು. ಬೇಟೆಯೇ ನಿನ್ನ ಬಾಯಿಗೆ ಬಂದು ಬೀಳದು. ಮನಕ್ಕೆ ಅರಿವಾಗದಿದ್ದರೇನಂತೆ ಅರಿವೆಂಬ ಗಂಡನಿಗೆ ಅರಿವು ಬೇಡವೆ ? ಮಾಯಾ ಮೃಘವನ್ನು ಬೇಟೆ ಆಡುವುದೇ ನಿನ್ನ ಧರ್ಮ. ಪಶುಪ್ರವೃತ್ತಿಯ ಮನವನ್ನು ಪಳಗಿಸಿ ಪಶುವನ್ನೇ ವಾಹನ ಮಾಡಿಕೊಂಡು, ಪಶುಪತಿಯಾಗುವುದೇ ನಿನ್ನ ಧರ್ಮ.

ಮನವೆಂಬ ಮಾಯಾಮೃಗ ಕೈಗೆ ಸಿಗಲಿಲ್ಲವೆಂದು ಮುನಿದು ಕೈ ಮುಟ್ಟಿ ಕೊಲ್ಲಬೇಡ. ಸತ್ತುದನೂ ತರಬೇಡ. ಅಡಿಗೆ ಇಲ್ಲದೆ ಮನೆಗೆ ಬರೀಕೈಲಿ ಬರಬೇಡ. ಅರಿವಿನ ಧರ್ಮ ಮೆರೆವ ಮನ ಮನೆಗೆ ಬಂದರೆ ಘನಮನವಾಗಿ ತನುವನ್ನು ಬೆಳಗುವುದು. ಆ ಬೆಳಕಿನ ಪ್ರಸಾದವನು ಕೂಡಲಸಂಗಮದೇವನಿಗೆ ಅರ್ಪಣೆ ಮಾಡುವೆ ಎಲೆ ಗಂಡನೆ.

ಶರಣನ ಪ್ರಾಣಲಿಂಗಿಸ್ಥಲ

908

ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯಾ ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕರಿಯರಯ್ಯಾ ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯಾ ?

ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕರಿಯರಯ್ಯಾ ?
ಸ್ಪರ್ಶನದೊಳಗೆ ಸ್ಪರ್ಶನವಿದ್ದು ಮುಟ್ಟಲೇಕರಿಯರಯ್ಯಾ ?
ಕಾಯದೊಳಗೆ ಕಾಯವಿದ್ದು ಬಿಡದು, ಬೇರಾಗದು.
ಕೂಡಲಸಂಗಮದೇವಾ, ನೀನಿಕ್ಕಿದ ಅಣಕದ ಭೇದವ ಭೇದಿಸಬಾರದು.

ಕಣ್ಣೊಳಗೆ ಅರಿವಿನ ಕಣ್ಣಿದ್ದು ಕಣ್ಣು ಅರಿವಿನ ಕಣ್ಣನು ಕಾಣಲರಿಯದು. ಕಣ್ಣಿಗೆ ದೇವಾಲಯ ಕಾಣುತ್ತದೆ. ದೇವರು ಕಾಣುತ್ತಾನೆ. ಕಲ್ಲು ಕಾಣುವುದೇ ಇಲ್ಲ. ಅರಿವಿನ ಕಣ್ಣಿಗೆ ಬರೀ ಕಲ್ಲು ಕಾಣುತ್ತದೆ. ದೇವಾಲಯವೂ ಕಲ್ಲೆ, ಶಿಖರವೂ ಕಲ್ಲೆ, ಕಂಬವೂ ಕಲ್ಲೆ, ಕೆತ್ತಿದ ದೇವರೂ ಕಲ್ಲೆ. ಅರಿವಿನ ಒಳ ಕಣ್ಣು ಬರೀ ಕಲ್ಲನ್ನು ನೋಡಿ ದೇವಾಲಯವೆನ್ನುವುದಿಲ್ಲ; ದೇವರೆಂದು ಕೈ ಮುಗಿಯಲು ದೇಹಕ್ಕೆ ಆದೇಶ ಕೊಡುವುದಿಲ್ಲ.

ಕಣ್ಣು ಚಿನ್ನ ನೋಡಿ ಆಭರಣ ಕೊಳ್ಳಲು ಇಲ್ಲ ಕದಿಯಲು ದೇಹಕ್ಕೆ ಆದೇಶ ನೀಡಿದರೆ; ಅರಿವಿನ ಒಳ ಕಣ್ಣು ಲೋಹ ನೋಡಿ ಕೊಳ್ಳುವುದಿಲ್ಲ; ಕದಿಯಲು ಆದೇಶ ದೇಹಕ್ಕೆ ಕೊಡುವುದಿಲ್ಲ. ಕಣ್ಣು ದೇಹವನ್ನು ಹೆಣ್ಣೆಂದು ಗಂಡೆಂದು ನೋಡುತ್ತದೆ. ಯುವತಿ ಯುವಕನೆಂದು ಮೋಹಿಸುತ್ತದೆ. ರಾಜ ಅಧಿಕಾರಿ ಸೈನಿಕ ಜವಾನ ಗುರು ಶಿಷ್ಯ ವೈರಿ ಮಿತ್ರ ಅಣ್ಣ ತಮ್ಮ ಬಂಧುವೆಂದು ಭೇದಿಸಿ ನೋಡುತ್ತದೆ. ಅರಿವಿನ ದೇವರಿದ್ದ ದೇವಾಲಯವೆಂದು ಕೈ ಮುಗಿಯುತ್ತದೆ.

ಕಿವಿಯೊಳಗೆ ಕಿವಿಯಿದ್ದು ಕೇಳಲೇಕರಿಯರಯ್ಯಾ :

ಒಂದು ಭ್ರಮಾ ಕಿವಿ. ಮತ್ತೊಂದು ಕಿವಿಯೊಳಗಣ ಕಿವಿ ಅರಿವಿನ ಕಿವಿ; ಬ್ರಹ್ಮ ಕಿವಿ! ಶಬ್ದವನ್ನು ಕಿವಿ ಭ್ರಮೆಯಿಂದ ಕೇಳಿ, ತನುವಿಗೆ ಸುಖ ದುಃಖ ಕ್ರೋಧ ಸಂಕಟ ಉಂಟು ಮಾಡುತ್ತದೆ. ಶಬ್ದದಲ್ಲಿ ಅರಿವು ಮಾತ್ರ ಇದೆಯೆಂದು ಭ್ರಮಾ ಕಿವಿಗೆ ಗೊತ್ತಾಗುವುದಿಲ್ಲ. ಕತ್ತೆ ಎನ್ನುವ ಶಬ್ದದಲ್ಲಿ ಅರಿವಿದೆ. ಅದು ಒಂದು ಪ್ರಾಣಿ; ಅದನ್ನು ಕರೆಯಲು ಇಟ್ಟ ಹೆಸರು. ಆದು ಕತ್ತೆಯಲ್ಲ . ಕತ್ತೆ ಎಂದು ಕರೆದರೆ ಕತ್ತೆಗೆ ಸುಖದುಃಖಗಳೆರಡೂ ಇಲ್ಲ. ಕತ್ತೆಯೇ ಕತ್ತೆ ಅಲ್ಲ ಎಂದ ಮೇಲೆ ಮನುಷ್ಯ ಹೇಗೆ ಕತ್ತೆ ? ಆದರೆ ಕಿವಿಗೆ ಬಿದ್ದ ಶಬ್ದ ಭ್ರಮೆಯಿಂದಾಗಿ ತನುವಿಗೆ ಸಂಕಟ ಉಂಟು ಮಾಡುತ್ತದೆ. ಅರಿವಿನ ಬ್ರಹ್ಮ ಕಿವಿ ಶಬ್ದವನ್ನು ನಿಃಶಬ್ದಗೊಳಿಸಿ, ನಪುಂಸಕಗೊಳಿಸಿ ಕೇಳುತ್ತದೆ. ಕತ್ತೆಯೂ ಕತ್ತೆಯಲ್ಲ; ನಾನು ಹೇಗೆ ಕತ್ತೆ ? ಶಬ್ದ ನುಡಿದ ತನುವಿಗೆ ಭ್ರಮೆ ಆವರಿಸಿದೆ ಎಂದು ತಿಳಿದು ಕೇಳಿ ಕೂಡಲೇ ಸುಮ್ಮನಾಗುತ್ತದೆ.

ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯಾ :

ತೋರಿಕೆಗೆ ಮೂಗು ಒಂದೇ ಆಗಿ ಕಂಡರೂ, ಮೂಗಿನೊಳಗೆ ಅರಿವಿನ ಮೂಗೊಂದಿದೆ. ಅದು ಮಲ್ಲಿಗೆಯ ಮಕರಂಧವನ್ನು, ಮೀನಿನ ದುರ್ಗಂಧವನು ಅರಿವಿನಿಂದ ಮೂಸಿಸುತ್ತದೆ. ಎರಡೂ ವಾಸನೆಗಳೆ ಆಗಿವೆ. ಒಂದು ವಾಸನೆ ಮೂಗಿಗೆ ಪರಿಮಳ ಎನ್ನಿಸಿದರೆ ಮತ್ತೊಂದು ದುರ್ಗಂಧ. ಅರಿವಿನ ಮೂಗು ಸುಗಂಧ ದುರ್ಗಂಧಗಳೆರಡನ್ನು ಪರಿಮಳದಂತೆ ಸ್ವೀಕರಿಸುತ್ತದೆ.

ಮೀನು ತಿನ್ನುವ ಬಯಕೆಯುಳ್ಳ ತನುವಿನ ಮೂಗಿಗೆ ಮೀನು ಪರಿಮಳ. ಮಲ್ಲಿಗೆಯೂ ಪರಿಮಳ. ಮೀನು ತಿನ್ನದ ತನುವಿನ ಮೂಗಿಗೆ ಮೀನು ದುರ್ಗಂಧ; ಮಲ್ಲಿಗೆ ಪರಿಮಳ. ಮೂಗು ಒಂದೇ. ಪರಿಮಳದಲ್ಲಿ ವ್ಯತ್ಯಾಸ ಕಾಣದ ಮೂಗು ಅರಿವಿನ ಒಳಮೂಗು. ಪರಿಮಳವಲ್ಲಿ ದುರ್ಗಂಧ ಸುಗಂಧದ ವ್ಯತ್ಯಾಸ ಕಾಣುವ ಮೂಗು ಅಜ್ಞಾನದ ಮೂಗು.

ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕರಿಯರಯ್ಯಾ :

ನಾಲಿಗೆಗೆ ಸಿಹಿ ಖಾರ ಹುಳಿ ಒಗರು ಉಪ್ಪು ಸಪ್ಪೆಯ ರುಚಿಯಲ್ಲಿ ವ್ಯತ್ಯಾಸವಾಗಬಾರದು; ಹಿತವಾಗಿರಬೇಕು. ರುಚಿಯಲ್ಲಿ ಪರಿಮಿತವಾದರೆ ನಾಲಗೆ ತನುವಿಗೆ ಸಂಕಟ ಉಂಟು ಮಾಡುತ್ತದೆ. ಇದು ನಾಲಗೆಯ ಅಜ್ಞಾನ. ಅರಿವಿನ ಒಳ ನಾಲಗೆ ಹಾಗಲ್ಲ. ರುಚಿಯನ್ನು ಅನಾವರಣ ಮಾಡಿ ಸ್ವೀಕರಿಸುತ್ತದೆ. ರುಚಿ ಅರುಚಿಯಾಗದೆ ಪದಾರ್ಥ ನಾಲಗೆಗೆ ಪ್ರಸಾದವಾಗುತ್ತದೆ. ತನು ಜಲಮಯ; ಪದಾರ್ಥವೂ ಜಲಮಯ. ಜಲ ಜಲದಲ್ಲಿ ಲೀನವಾಗಬೇಕಾದರೆ ಸಮಯ ಬೇಕು. ಆ ಸಮಯದವರೆಗೆ ನಾಲಗೆ ರುಚಿ ಅರುಚಿಯನ್ನು ಸವಿಯುತ್ತದೆ. ನಂತರ ಬರೀ ಜಲ. ರುಚಿಯಿಲ್ಲ, ವಾಸನೆಯಿಲ್ಲ, ಬಣ್ಣವಿಲ್ಲ. ಅರಿವಿನ ನಾಲಗೆಗೆ ಮಾತ್ರ ಇದು ತಿಳಿಯುತ್ತದೆ. ನಾಲಗೆಯ ಅಜ್ಞಾನ ನಾಲಗೆಗೆ ಪ್ರಸಾದವಾಗುತ್ತದೆ.

ಸ್ಪರ್ಶನದೊಳಗೆ ಸ್ಪರ್ಶನವಿದ್ದು ಮುಟ್ಟಲೇಕರಿಯರಯ್ಯಾ :

ಕಣ್ಣಿನೊಳಗೆ ಜ್ಞಾನವೂ ಇದೆ; ಅಜ್ಞಾನವೂ ಇದೆ. ಕಿವಿಯೊಳಗೆ ಜ್ಞಾನವು ಇದೆ; ಅಜ್ಞಾನವೂ ಇದೆ. ಮೂಗಿನೊಳಗೆ ಜ್ಞಾನವು ಇದೆ; ಅಜ್ಞಾನವೂ ಇದೆ. ನಾಲಗೆಯೊಳಗೆ ಜ್ಞಾನವು ಇದೆ. ಅಜ್ಞಾನವೂ ಇದೆ. ಹಾಗೆಯೇ ಚರ್ಮದೊಳಗೆ ಜ್ಞಾನವು ಇದೆ; ಅಜ್ಞಾನವೂ ಇದೆ. ಜ್ಞಾನ ಬಳಕೆ ಮಾಡುವ ಶಿಕ್ಷಣ ಜಾರಿ ಇಲ್ಲದ್ದರಿಂದ ತನು ಅಜ್ಞಾನದಿಂದ ಅವಸಾನ ಹೊಂದುತ್ತದೆ. ಮನ, ಜ್ಞಾನಿ ಎನ್ನಿಸಿಕೊಳ್ಳಬೇಕು ಎನ್ನುವ ಪ್ರಯತ್ನದ ಮುಖವಾಡ ಬಹಳ ದಿನ ಉಳಿಯದೆ ತನು ವಿಫಲವಾಗುತ್ತದೆ.

ಚರ್ಮ, ಅನ್ಯ ತನುವಿನ ಚರ್ಮವನ್ನು ಅರಿವಿನಿಂದ ಸ್ಪರ್ಶಿಸಿದರೆ ಬರೀ ಚರ್ಮ! ಕಾಮ ಪ್ರೇಮ ವಿರಹ ದ್ವೇಷ ಕ್ರೌರ್ಯ ಕೋಮಲದ ಭಾವ ದುರ್ಭಾವಗಳು ತನುವಿನಲ್ಲಿ ಉಂಟಾಗುವುದಿಲ್ಲ. ಇದನ್ನು ಚರ್ಮದಲ್ಲಿರುವ ಅನುಭವದ ತಂತ್ರಜ್ಞಾನದೊಂದಿಗೆ ಅರಿಯಬೇಕು. ಉದಾ; ಎಡತೊಡೆಯನ್ನು ಬಲತೊಡೆ ಸ್ಪರ್ಶಿಸಿದರೆ ಯಾವ ಭಾವನೆಗಳೂ ಹುಟ್ಟುವುದಿಲ್ಲ. ಎಡತೊಡೆಯೂ ಚರ್ಮ, ಬಲತೊಡೆಯೂ ಚರ್ಮ. ಎರಡೂ ತೊಡೆಗಳು ಚರ್ಮದ ಸಹಜ ಅನುಭವದಿಂದ ಸ್ಪರ್ಶಿಸಿತು. ಅನ್ಯ ತನುವಿನ ತೊಡೆಯಾದರೂ ಚರ್ಮವೇ ಆಗಿದೆ. ಆದರೆ ವಸ್ತು ಒಂದೇ ಎನ್ನುವ ಅನುಭವ ಅರಿವಿನ ಚರ್ಮದಲ್ಲಿ ಬಳಕೆಯಾಗದೆ ಹಾಗೇ ಉಳಿಯಿತು. ಸ್ಪರ್ಶಿಸಿ ಸುಖಿಸಬೇಕೆನ್ನುವ ಅಜ್ಞಾನ ಚರ್ಮ ಮಾತ್ರ ಬಳಕೆಯಾಯಿತು. ಚರ್ಮ ಅರಿವಿನಿಂದ ಮುಟ್ಟಲು ಅರಿಯಲಿಲ್ಲ. ಅರಿವಿನ ಒಳ ಚರ್ಮಕ್ಕೆ ಹೊಳೆಯುವ ಸಹಜ ಅರಿವಿನ ಅನುಭವ ಹೊರ ಚರ್ಮಕ್ಕೆ ಹೊಳೆಯುವುದಿಲ್ಲ. ಅರಿವಿನಿಂದ ಮುಟ್ಟುವ ಈ ತಂತ್ರಜ್ಞಾನವನ್ನು ಚರ್ಮ ಅರಿವಿನ ಚರ್ಮದಿಂದಲೇ ಅರಿಯಬೇಕು.

ಕಾಯದೊಳಗೆ ಕಾಯವಿದ್ದು ಬಿಡದು ಬೇರಾಗದು. ಕೂಡಲಸಂಗಮದೇವಾ, ನೀನಿಕ್ಕಿದ ಅಣಕದ ಭೇದವ ಭೇದಿಸಬಾರದು:

ಕಾಯದೊಳಗೆ ಅರಿವಿನ ಕಾಯವಿದೆ. ಅದು ಕೈಲಾಸ. ಅದನ್ನು ಬಳಕೆ ಮಾಡುವ ಅರಿವಿನ ದೇವರೂ ಇದ್ದಾನೆ. ಆತನೇ ಮಹಾದೇವ. ಆದರೆ ಕಾಯವನ್ನು ಆವರಿಸಿದ ಮನ ಅರಿವಿನ ಕಾಯವನು ಅರಿಯದು, ಅರಿವಿನ ಮಹಾದೇವನನೂ ಅರಿಯದು. ಕಾಯ ಅರಿವಿನ ಮಹಾದೇವನ ಸಂಪತ್ತು. ಮನ ತನ್ನ ಮನ ಬಂದಂತೆ, ತನಗೆ ರುಚಿಸಿದಂತೆ, ತನಗೆ ಬೇಕಾದಂತೆ ಕಾಯವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ಮನ ಕಾಯವನು ಬಿಡದು ಬೇರಾಗದು. ಅರಿವಿನ ಕಾಯದೊಳು ಸಂಗಮವಾಗಿ ಒಂದಾಗದು. ಅರಿವಿನ ಮಹಾದೇವನು ಇಕ್ಕಿದ ಅಣಕದ ಭೇದವನು

ಭೇದಿಸಬಾರದು.

909

ಗ್ರಹ ಬಂದು ಆವರಿಸಲೊಡನೆ ತನ್ನ ಮರೆಸುವುದು.
ಮತ್ತೊಂದಕ್ಕಿಂಬುಗೊಡಲೀಯದಯ್ಯಾ.
ಕೂಡಲಸಂಗಮದೇವನ ಅರಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ.

ಕಾಯ ಒಂದು ಅರಿವಿನ ಕೈಲಾಸ. ಅರಿವಿನ ನವಗ್ರಹಗಳ ಒಡೆಯನ ವಾಸಸ್ಥಾನ ! ಕಾಯದ ಅರಿವಿನ ನವಗ್ರಹಳಿಗೆ ಗ್ರಹ ಬಡಿದು ಅದು ಕೈಲಾಸವೆಂಬುದನ್ನೇ ಮರೆತು ಹೋಗಿದೆ. ಕಣ್ಣುಗಳೆರಡು ಅರಿವಿನ ಗ್ರಹಗಳು. ಆದರೆ ನೋಡಬಾರದ್ದನ್ನು ಸತ್ಯವಲ್ಲದ್ದನ್ನು ನೋಡಿ ತನುವನ್ನು ಸಂಕಟಕ್ಕೆ ಒಡ್ಡುತ್ತದೆ. ಕಿವಿಗಳೆರಡು ಕೂಡಾ ಅರಿವಿನ ಗ್ರಹಗಳು; ಮೂಗಿನ ಎರಡು ಹೊರಳೆಗಳು, ಬಾಯಿ, ಗುದ, ಮೂತ್ರದ್ವಾರಗಳು ಇವು ಒಂಬತ್ತು ; ತನುವಿನ ಅರಿವಿನ ಗ್ರಹಗಳು. ಆದರೆ ಇಡೀ ಕಾಯದ ಒಂಬತ್ತು ಗ್ರಹಗಳಿಗೂ ಗ್ರಹ ಬಡಿದಿದೆ. ಕಾಯ ತನ್ನನ್ನು ತಾನು ಮರೆತು ಹೋಗಿದೆ.

ಅಂಗದಲ್ಲಿಯೇ ಸಂಗಮವಾದ ಸಂಗಮನಾಥನ ಅರಿವು ಅನುಪಮವಾಗಲೊಡನೆ ಅಂಗವನ್ನು ಆವರಿಸಿದ ಮನವೆಂಬ ಮರ್ಕಟ ಕಾಯದ ವ್ಯವಹಾರದೊಳಗೆ ಇರಲೀಯದಯ್ಯಾ. ಮನದಿಂದಲಾದರೂ ಕಾಯದ ಅರಿವನು ಅರಿಯಬೇಕು. ಅರಿವಿನಿಂದಲಾದರೂ ಕಾಯವನು ಆವರಿಸಿದ ಮನವನು ಅರಿಯಬೇಕು. ಅರಿತರಿತು ಅರಿವಿನ ನಡೆಯಲ್ಲಿ ಕಾಯ ನಡೆಯಬೇಕು.

910

ಭೂತಿಕನ ಸೀರೆಯ ಸಾತ್ವಿಕ ನೆರೆ ಉಟ್ಟಡೆ
ಭೂತಿಕ ಸಾತ್ವಿಕನಾದ, ಸಾತ್ವಿಕ ಭೂತಿಕನಾದ:
ಈ ಮಾತು ಬಿದ್ದುದು ನೋಡಾ, ರಾಜ ಬೀದಿಯಲ್ಲಿ
ಅಯ್ಯಾ, ಭೂತ ಕೆಣಕಿದಡಿಲ್ಲ ! ಮಾತು ಮುಟ್ಟಿದಡಿಲ್ಲ;
ಓತು ಕೂಡುವ ಅನುವ ಕೂಡಲಸಂಗಮದೇವ ತಾನೇ ಬಲ್ಲ.

ಸಾತ್ವಿಕ ಶಿವನ ವೇಷ ಧರಿಸಿದಡೆ ಶಿವನಾದ. ಶಿವ ಸಾತ್ವಿಕನ ವೇಷ ಧರಿಸಿದಡೆ ಸಾತ್ವಿಕನಾದ. ಶಿವನೇ ಸಾತ್ವಿಕನಾದ; ಶಿವನೇ ಶಿವನಾದ. ಇದು ನಾಡ ನುಡಿ ಸತ್ಯ ಕೂಡಾ.

ತನುವಿನ ಮೂಲ ಅರಿವಿನ ಜಲಬಿಂದು. ಅದು ಸತ್ಯವೂ ಶಿವಮಯವೂ ಸುಂದರವೂ ಆಗಿದೆ. ಇದು ಮಾತಾಗಿ ಉಳಿದಿದೆ. ಅರಿವಿಗೆ ಬಂದರೆ ಮಾತ್ರ ಇದು ಸತ್ಯವೂ ಶಿವಮಯವೂ ಸುಂದರವೂ ಎಂದು ತನುವಿಗೆ ತಿಳಿಯುತ್ತದೆ. ಇಲ್ಲದಿದ್ದರೆ ಭೂತ ಕೆಣಕಿದಡಿಲ್ಲ ! ಮಾತು ಮುಟ್ಟಿದಡಿಲ್ಲ. ಓತು ಕೂಡುವ ಅನುವ ಕೂಡಲಸಂಗಮದೇವ ತಾನೇ ಬಲ್ಲ.

ಅಂಗದಲ್ಲಿ ಸಂಗಮವಾದ ಅರಿವೇ ಶಿವ. ಆ ಶಿವನಿಗೆ ಇಚ್ಛೆಯಾದರೆ ಮಾತ್ರ ಅಂಗವನ್ನು

ಆವರಿಸಿದ ಮಂಗವನ್ನು ಶಿವಲಿಂಗವನ್ನಾಗಿ ಮಾಡುತ್ತಾನೆ. ಈ ಸೂತ್ರವನು ಶಿವನೇ ಬಲ್ಲ. ತಿಳಿಯುವ ಬಯಕೆ ಮನಕ್ಕಾಗಬೇಕು.

ಶರಣನ ಐಕ್ಯಸ್ಥಲ

911

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ ,
ಅಂಗವಿದ್ಯೆಯನೊಲ್ಲ ;
ಕಣ್ಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ ;
ಕೈಯ ತೊಳೆದಲ್ಲದೆ ಮುಟ್ಟಲೀಯ ;
ಕಾಲ ತೊಳೆದಲ್ಲದೆ ಹೊದ್ದಲೀಯ ;
ಇಂತೀ ಸರ್ವಾಂಗ ತಲೆದೊಳೆದ ಕಾರಣ ,
ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ !

ಅಂಗವನ್ನೇ ಮನೆ ಮಾಡಿಕೊಂಡು ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನೆಂಬ ಮನೆಯ ಗಂಡನ ಮನೆ ವಾರ್ತೆಯನೇನ ಹೇಳುವೆನವ್ವಾ. ಅಂಗವಿದ್ಯೆಯನೊಲ್ಲ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವು ಅಂಗ ವಿದ್ಯೆಗಳು ಈ ವಿದ್ಯೆಯನ್ನು ಪ್ರದರ್ಶಿಸಿ ಅರಿವಿನ ನಲ್ಲನನು ಒಲಿಸಿಕೊಳ್ಳಲು ಸಾಧ್ಯವಿಲ್ಲ.

ಕಣ್ಣೊಳಗಿನ ಕಸ ಕಳೆದುಕೊಂಡು ನೋಡಲು ಬಾರದಿದ್ದರೆ ಕಾಣ. ಕೈ ತೊಳೆದುಕೊಂಡು ಮುಟ್ಟಲರಿಯದಿದ್ದರೆ ನಿಲುಕ. ಕಾಲ ತೊಳೆದುಕೊಂಡಲ್ಲದೆ ಹೊದ್ದಲೀಯ. ಸರ್ವಾಂಗದ ಕಸ ಕಿತ್ತಿ ತೊಳೆದು ಬೆಳಗಿದಾಗ ಅಂಗದಲ್ಲಿಯೇ ಸಂಗಮವಾದ ಸಂಗಯ್ಯನೆಂಬ ನಲ್ಲನು ಮನದನ್ನೆಯನ್ನು ಕೂಡಿಕೊಂಡನವ್ವಾ.

912

ಅಳಿಯನ ಕಂಡಡೆ ನಾಚೆಂಬೆ, ಮಗಳೆ,
ಅಳಿಯನ ಕಂಡಡೆ ತೊಲಗೆಂಬೆ ಮಗಳೆ,
ನಾಚುವರೆ ಮೊರೆಯಿಲ್ಲ, ತೊಲಗುವರೆ ನೆಲನಿಲ್ಲ
ಇಬ್ಬರಿಗೊಬ್ಬ ಗಂಡನಾದ ಬಳಿಕ
ಇನ್ನೆಲ್ಲಿಯ ಮೊರೆ, ಮಗಳೆ ?
ಕೂಡಲಸಂಗಮದೇವಯ್ಯನೆಂಬ ಗಂಡನಾದ ಬಳಿಕ
ಇನ್ನೆಲ್ಲಿಯ ಮೊರೆ, ಮಗಳೆ ?

ಅಳಿಮನವನ್ನು ಕಳೆದು ಜ್ಞಾನದ ಮಗಳನ್ನು ಬಿಗಿದಪ್ಪುವ ಅಳಿಯನನ್ನು ಕಂಡು ಮಗಳಿಗೆ ನಾಚಿಕೆಯಾಗಬೇಕು. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಥಳಿಸಿ ಮಗಳನ್ನು

ಮಾತ್ರ ತನ್ನ ಜ್ಞಾನದ ಅಜಾನುಬಾಹುಗಳಿಂದ ಬಿಗಿದಪ್ಪುವ ಅಳಿಯನನ್ನು ಕಂಡು ನಾಚು ಮಗಳೆ.

ನಿನ್ನ ಅಜ್ಞಾನದ ಪೊರೆಯನ್ನು ಕಿತ್ತೆಸೆದು ನಿನ್ನನ್ನು ಬೆರೆತು ಬೇರಾಗದಂತೆ ಅಪ್ಪುವ ಜ್ಞಾನಿ ಅಳಿಯನ ಕಂಡು ತೊಲಗೆಂಬೆ ಮಗಳೆ.

ನಾಚುವರೆ ಮೊರೆಯಿಲ್ಲ: ಮಗಳೆ ನೀನು ಆತನೊಂದಿಗೆ ಮದುವೆಯಾಗಿರುವೆ ಗಂಡನಿಗೆ ನಾಚುವರೆ ಮೊರೆಯಿಲ್ಲ, ಅನಿವಾರ್ಯ. ನಾಚಲೆಬೇಕು. ತೊಲಗುವರೆ ನೆಲನಿಲ್ಲ: ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎನ್ನುವಂತೆ ನಿನಗೆ ಬೇರೆ ಗತಿಯಿಲ್ಲ. ಮಗಳನ್ನು ಅಳಿಯನಿಗೆ ಕೊಟ್ಟು ಮದುವೆ ಮಾಡಿರುವುದು ನೀನು ನಾಚಿ ನೀರಾಗಿ ಅವನನ್ನು ಅಪ್ಪುವುದಕ್ಕಾಗಿ. ಅವನು ನಿನ್ನನ್ನು ಕೆಡಿಸಿ ಸುಖಿಸುವುದಕ್ಕಾಗಿ. ಮಗಳನ್ನು ಅಳಿಯ ಕೆಡಿಸಿದರೆ ತಾಯಿಗೆ ಸುಖವಲ್ಲವೆ ? ನಿನ್ನ ಅಜ್ಞಾನವನ್ನು ಕೆಡಿಸುವ ಗಂಡನನ್ನು ಬಿಟ್ಟು ನೀನು ಎಲ್ಲಿಗೆ ತೊಲಗುವೆ? ತವರಲ್ಲಿ ನಿನಗೆ ಜಾಗವಿಲ್ಲ. ಬೇರೆಡೆಗೆ ತೊಲಗಲು ನೆಲನಿಲ್ಲ. ನಾಚುವರೆ ಮೊರೆಯಿಲ್ಲ ಮಗಳೆ.

ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲ್ಲಿಯ ಮೊರೆ, ಮಗಳೆ:

ನನಗೆ ಅಳಿಯ ನಿನಗೆ ಗಂಡ ! ಮನದ ಅಜ್ಞಾನವನ್ನು ಅಳಿಯುವ ಅಳಿಯ ನನಗೂ ಗಂಡ! ನನಗೂ ನಿನಗೂ ಸೇರಿದಂತೆ ನಮ್ಮಿಬ್ಬರಿಗೂ ಒಬ್ಬನೇ ಗಂಡನಾದ ಮೇಲೆ ಇನ್ನೆಲ್ಲಿಯ ಮೊರೆ, ಮಗಳೆ ? ಅಂಗದಲ್ಲಿಯೇ ಕೂಡಿದ ಕೂಡಲಸಂಗಮದೇವಯ್ಯನೇ ಗಂಡನಾದ ಬಳಿಕ ಇನ್ನೆಲ್ಲಿಯ ಮೊರೆ, ಮಗಳೆ ?

913

ಸತ್ಯವಿದೆ, ಸಮಾಧಾನವಿದೆ, ಮನಕ್ಕೆ ಬಾರದಿದೇನಯ್ಯಾ ?
ಸರ್ವ ಸನುಮತವೆಂಬ ಸುಖವಿದೆ, ಮನಕ್ಕೆ ಸೋಂಕದಿದೇನಯ್ಯಾ ?
ಆ ನೀನೆಂಬುದೊಂದು ಘನವಿದೆ;
ಕೂಡಲಸಂಗಮದೇವಾ, ಭ್ರಮೆಯೊ.

ಬ್ರಹ್ಮವಿದ್ಯೆಯೆಂದರೆ ವೇದ ಉಪನಿಷತ್ತುಗಳಲ್ಲ; ಅದು ಕೇವಲ ಸತ್ಯ ಮಾತ್ರ. ತನುವಿನಲ್ಲಿ ತನ್ಮಯವಾದ ಸತ್ಯದ ಕಲೆಯನ್ನು ತನುವನ್ನು ಆವರಿಸಿದ ಮನದಿಂದಲೇ ಪಡೆದುಕೊಳ್ಳುವ ಒಂದು ಬಗೆಯ ವಿದ್ಯೆ. ಅದಕ್ಕೆ ಬ್ರಹ್ಮವಿದ್ಯೆ ಎಂದು ಹೆಸರಿಸಲಾಯಿತು. ವೇದ ಉಪನಿಷತ್ತುಗಳಿಂದ ಪಡೆದುಕೊಂಡ ವಿದ್ಯೆಯಿಂದ ಪಡೆದೆನೆಂಬ ಅಹಂಕಾರದ ಭ್ರಮೆಯೊಂದು ತನುವಿನಲ್ಲಿ ಮನೆ ಮಾಡುತ್ತದೆ. ತನುವಿನಲ್ಲಿಯೇ ತನ್ಮಯವಾದ ಸತ್ಯ ಸಮಾಧಾನ ಮನಕ್ಕೆ ಬಾರದೆ ಹೋಗುತ್ತದೆ.

ತನುವಿನ ಸತ್ಯ ಒಂದೇ. ಅದು ಭಾರತದ್ದಾದರೇನು, ಇತರ ದೇಶಗಳದ್ದಾದರೇನು? ಸರ್ವ ಸನುಮತ. ಸರ್ವ ತನುಗಳೂ ಒಪ್ಪುತ್ತವೆ. ಆದರೆ ತನುವಿನ ಸುಖವೇ ತನುವನ್ನು ಆವರಿಸಿದ ಮನಕ್ಕೆ ಸೋಂಕದೆ ಹೋಗುತ್ತದೆ.

ಆ ನೀನೆಂಬುದೊಂದು ಘನವಿದೆ ಕೂಡಲಸಂಗಮದೇವಾ ಭ್ರಮೆಯೊ:

ತನುಗಳನ್ನು ನಾನು ಎಂಬ ಮನ ಆವರಿಸಿದೆ. ನೀನು ಎಂಬ ಸತ್ಯ, ಸಮಧಾನ, ಸರ್ವ ಸನುಮತದ ಸುಖವೂ ತನ್ಮಯವಾಗಿದೆ. ಆದರೂ ಮನಕ್ಕೆ ಸೋಂಕುತ್ತಿಲ್ಲ. ಅಂದ ಮೇಲೆ ಮನವೆಂಬುದೊಂದು ಭ್ರಮೆಯೇ ಆಗಿರಬೇಕಲ್ಲ. ಆ ಭ್ರಮೆಯೇ ತನ್ನ ಅಜ್ಞಾನವನ್ನು ಕಳೆದುಕೊಂಡು

ತನುವಿನಲ್ಲಿಯೇ ತನ್ಮಯವಾದ ಬ್ರಹ್ಮನತ್ತ ಪಯಣಿಸಿ ಭ್ರಮೆ ಕಳೆದುಕೊಳ್ಳಬೇಕಲ್ಲ. ಇದು ಮನಕ್ಕೆ ಸಾಧ್ಯವಾಗುವುದಿಲ್ಲ.

ಭ್ರಮೆ ಬ್ರಹ್ಮನತ್ತ ಪಯಣಿಸುವ ನಿಟ್ಟಿನಲ್ಲಿ ವಾಲ್ಮೀಕಿ ಮಹರ್ಷಿಗಳು ಹೊಸ ದೃಷ್ಟಿಕೋನವನ್ನಿಟ್ಟುಕೊಂಡು ರಾಮಾಯಣ ರಚಿಸಿದರು. ತನುವಿನಲ್ಲಿಯೇ ತನ್ಮಯವಾದ ಜ್ಞಾನಕ್ಕೆ ಶ್ರೀ ರಾಮನ ದರ್ಶನ ಭಾಗ್ಯ ಕಲ್ಪಿಸಿ ಆಂಜನೇಯನೆಂದು ಹೆಸರಿಟ್ಟರು. ವಾನರ ಸೈನ್ಯ ರಚಿಸಿ, ಅಜ್ಞಾನಿಯೆಂಬ ರಾವಣನನ್ನು ಕೊಂದರು. ಸತ್ಯ , ಸಮಾಧಾನದ ಸುಖವುಳ್ಳ ಶ್ರೀರಾಮನೊಬ್ಬನೆ ಉಳಿದು ಈ ನಾಡನ್ನು ತೊಳಗಿ ಬೆಳಗಿದ.

914

ಸಿನೆಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ,
ಅವನೆನ್ನ ರಿಣಕ್ಕೆ ಒಡೆಯನಾದ,
ಅವನೆನ್ನ ಧನಕ್ಕೆ ಒಡೆಯನಾದ;
ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ.
ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದಡೆ,
ಇದ್ದನಯ್ಯಾ ಕಾಯ ಮಾತೆಯಾಗಿ, ಜೀವ ಪಿತನಾಗಿ
ನಾನಿರಿಸಿದಂತೆ !

ತನುವಿನ ಅರಿವಿನ ಮೂಲ ಜಲಬಿಂದು; ಆ ಬಿಂದುವಿನ ಮೂಲ ಬಯಲು. ಈ ಬಯಲ ಬೀಜದಿಂದ ತನು ಹುಟ್ಟಿತ್ತು. ಹೀಗಾಗಿ ತನು ಇಲ್ಲದ್ದು. ಅರಿವಿನ ಜಲ ಬಿಂದುವಿನ ನೆರಳೇ ಮನ. ಮನವೆಂದರೆ ಕತ್ತಲು; ಅದು ಅರಿವಿನ ಬೆಳಕಿನಿಂದ ಹುಟ್ಟಿದ ನೆರಳು. ಇದು ಕೂಡಾ ಇಲ್ಲದ್ದು. ತನು ಮತ್ತು ಮನಗಳೆರಡೂ ಇಲ್ಲದ್ದು. ಇವೆರಡೂ ಹುಟ್ಟು ಬಂಜೆಗಳು. ಈ ಬಂಜೆಯರಿಬ್ಬರಿಗೂ ಜ್ಞಾನವೆಂಬ ಒಬ್ಬ ಮಗ ಹುಟ್ಟಿದ. ಈತ ಸಾಕ್ಷಾತ್ ಶಿವ. ತನುವನ್ನು ತನುವಿನ ಮನವನ್ನು ಸೃಷ್ಟಿಸಿ, ತನುವಿನ ರಿಣಕ್ಕೆ ಒಡೆಯನಾದ. ತನುವಿನ ಜ್ಞಾನಕ್ಕೆ ಒಡೆಯನಾದ. ಹಲವು ಕೊಂಬೆಗೆ ಹಾರುವ ಮನ ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ. ಅಂಗದಲ್ಲಿಯೇ ಸಂಗಮವಾದ ಕೂಡಲ ಸಂಗಮದೇವನಂತಪ್ಪ ಮಗನನ್ನು ಅಂಗವೇ ಹಡೆದಡೆ ಅದು ಸಾಕ್ಷಾತ್ ಲಿಂಗಸ್ವರೂಪಿ. ಆ ಲಿಂಗಕ್ಕೆ ಜನ್ಮ ಕೊಟ್ಟ ಕಾಯವೇ ಮಾತೆಯ ಸ್ವರೂಪಿ. ಜೀವವೇ ಪಿತನ ಸ್ವರೂಪಿ. ಆ ಕಾಯ ಜೀವ ಇರಿಸಿದಂತೆ ದೇವನಿರುವು. ಆ ಕಾಯ ಶಿವ ಕಾಯದೊಳಗಡೆ ಕಾಯದ ಲೀಲೆ ಮೆರೆದಂತೆ. ಕಾಯ ಅರಿವಿನ ರಿಣಕ್ಕೆ ಒಡೆಯನಾದಂತೆ. ಮನದ ಅರಿವಿಗೆ ಶಿವ ಒಡೆಯನಾದಂತೆ!

915

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ;
ಮಾಟವುಳ್ಳನ್ನಬರ ಜಂಗಮವ ಹಾಡಿದೆ;
ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ.
ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ ಕಾಣಾ,

ಕೂಡಲಸಂಗಮದೇವಾ.

ಮನದ ಅಜ್ಞಾನವೇ ಹೀಗೆ. ಕಟೆದ ಕಲ್ಲನ್ನೇ ಲಿಂಗವೆಂದು ತಿಳಿದು ತ್ರಿಕಾಲ ಪೂಜಿಸಿ ಪೂಜಿಸಿ, ಹಾಡಿ ಹಾಡಿ ದಣಿಯಿತು. ಎರೆದರೆ ನೆನೆಯದ, ಮರೆತರೆ ಬಾಡದ ಕಲ್ಲನ್ನು ಕಲ್ಲೆಂದೆ ತಿಳಿದು, ಪೂಜಿಸಿ ಹಾಡುವ ಕ್ರಿಯೆಗೆ ಮಂಗಲ ಹಾಡಿತು.

ಜಂಗಮನ ವೇಷ ಕಂಡು ಜಂಗಮನೆಂದೇ ನಂಬಿ, ಜಂಗಮನನ್ನು ಪೂಜಸಿ ಪೂಜಿಸಿ ದಣಿಯಿತು; ತನ್ನಂತಹ ತನುವೆಂದು ತಿಳಿದು ದೂರ ಸರಿಸಿತು.

ನಾಲಿಗೆಯ ರುಚಿಗಾಗಿ ನಾನಾಭಕ್ಷಗಳ ಅಡಿಗೆ ಮಾಡಿ ಎಡೆ ಮಾಡಿ ಪೂಜಿಸಿ ರುಚಿಸಿ ಪ್ರಸಾದವ ಹಾಡಿತು. ಲಿಂಗಯ್ಯ ಒಲಿಯಲೇ ಇಲ್ಲ.

ಈ ತ್ರಿವಿಧ ಪೂಜೆ ನಾಸ್ತಿಯಾಗಿ, ತನುವನ್ನು ಆವರಿಸಿದ ಮನ ತನುವಿನಲ್ಲಿಯೇ ಹುಡುಕಿ, ತನ್ನನ್ನು ತಾನು ಕಂಡುಕೊಂಡು ತಾನೇ ಹಾಡಿಕೊಂಡಡೆ ತಾನೇ ಕೂಡಲಸಂಗಮದೇವ. ಅಂಗದಲ್ಲಿಯೇ ಅರಿವಿನ ಲಿಂಗ ಸಂಗಮವಾಗಿದೆ. ಅಂಗ ಆವರಿಸಿದ ಮನ ಕಂಡುಕೊಂಡು ತಾನೇ ಲಿಂಗವೆಂದು ಹಾಡಿದೆ.

916

ಅನಾಯಾಸದಿಂದ ಮನೆಯ ಮಾಡಿ,
ನಿರಾಯಾಸದಿಂದ ಪರಮ ಸುಖಿ !
ರೂಪಿಸುವಲ್ಲಿ ರೂಪಾಧಿಕ: ನೋಡುವಲ್ಲಿ ನೋಟ ಘನ !
ಇಂತಪ್ಪ ಸಹಜ ಸಂಗಿಯ ನಿಲವಿನ ಪರಿ ;
ಉದಕದೊಳಗಣ ಬಿಂದು ಉದಯ ರತ್ನದಂತೆ
ಕೂಡಲಸಂಗನ ಶರಣರ ನಿಲವು.

ಉದಕದೊಳಗಣ ಅರಿವಿನ ಬಿಂದು ಉದಕ ರತ್ನದಂತೆ ಅಂಗದ ಗರ್ಭದಲ್ಲಿ ಚುಳುಕಾಗಿ, ಅಂಗವನ್ನೇ ಮನೆ ಮಾಡಿಕೊಂಡು, ಅಂಗದ ಮೂಲಕ ಅಂಗವಾಗಿ, ಅರಿವನ್ನು ಗರ್ಭೀಕರಿಸಿಕೊಂಡು, ನಿರಾಯಾಸದಿಂದ ಹೊರಬಂದು ಪರಮ ಸುಖಿಯಾಗಿದೆ.

ರೂಪಿಸುವಲ್ಲಿ ರೂಪವೇ ಅಧಿಕವಾಗಿ ಕಾಣುತ್ತದೆ. ನೋಡುವಲ್ಲಿ ನೋಟವೇ ಘನವಾಗಿ ಕಾಣುತ್ತದೆ. ಅರಿವಿನ ಸುಖವನು ಅದರ ಪರಿಮಳವನು ಸಹಜವಾಗಿ ಬಲ್ಲವನೆ ಪರಮಸುಖಿ. ಸಹಜಸುಖಿ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗದ ಸುಖವನು ಸಹಜವಾಗಿ ಗಮನಿಸಿ ಸಂಗ ಸುಖ ಅನುಭವಿಸುವ ಸಂಗಮನಾಥನನು ಸಹಜ ಸಂಗಿಯೆಂಬ ಮನವೇ ಬಲ್ಲುದು.

917

ಮರುಳು ತಲೆ ಹುರುಳು ತಲೆ ನೀನೆ, ದೇವಾ ;
ಹೆಂಗೂಸು ಗಂಡು ಗೂಸು ನೀನೆ, ದೇವಾ ;

ಎಮ್ಮಕ್ಕನ ಗಂಡ ನೀನೆ, ದೇವಾ -
ಕೂಡಲಸಂಗಮದೇವಾ -
ಭ್ರಾಂತಳಿದು ಭಾವ ಸಂದುದಾಗಿ.

ಅರಿವಿನ ಬಿಂದುವೇ ಅಂಗದ ಮೂಲಕ ಅಂಗದ ಗರ್ಭ ಹೊಕ್ಕು ಅರಿವು ಮರೆವುಳ್ಳ ಅಂಗವಾಗಿ ಹೊರಬಂದಿದೆ. ಮರೆವು ಅರಿವಿನತ್ತ ಪಯಣಿಸಿ ಅರಿವಾಗಬಹುದು. ಮರೆವು ಅರಿವನರಿಯದೆ ಮರೆವಾಗಬಹುದು.

ಮೊಲೆ ಮುಡಿ ಬಂದರೆ ಹೆಣ್ಣೆನ್ನಬಹುದೇ ? ಮೀಸೆ ಗಡ್ಡ ಬಂದರೆ ಗಂಡೆನ್ನಬಹುದೆ ? ಕಣ್ಣು ಕಿವಿ ಮೂಗು ನಾಲಿಗೆ ಚರ್ಮ ಹೆಣ್ಣೂ ಅಲ್ಲ; ಗಂಡೂ ಅಲ್ಲ. ಮರೆವುಳ್ಳ ಅಂಗಕ್ಕೆ ಅಂಗ ಹೆಣ್ಣಾಗಿ ಕಾಣುವುದು, ಗಂಡಾಗಿ ಕಾಣುವುದು. ಅರಿವುಳ್ಳ ಅಂಗಕ್ಕೆ ಅಂಗ ಹೆಣ್ಣೂ ಅಲ್ಲ ಗಂಡೂ ಅಲ್ಲ. ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ; ಲಿಂಗಾಂಗವಾಗಿ ಕಾಣುವುದು.

ಕಣ್ಣಿನ ಭ್ರಾಂತಿ ಅಳಿದು, ಹೆಣ್ಣುಗಂಡೆಂಬ ಅಜ್ಞಾನದಿಂದ ಭಾವ ಸರಿದರೆ ಸಾಕು ಅಂಗವದು ಕೂಡಲಸಂಗಮದೇವ.

918

ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ ;
ತೆರಹಿಲ್ಲದ ಸಂಭಾಷಣೆಯ ಸುಖವು ,
ತೆರಹಿಲ್ಲದೆ ನಂಬಿದೆ, ಸ್ವಾನುಭಾವದ ಸುಖವು ;
ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ;
ಕೂಡಲಸಂಗಮದೇವಾ, ನಿಮ್ಮ ಶರಣಂಗೆ !

ನಡೆದರೆ ನಡೆಯ ಹಿಂದೆಯೇ ಅರಿವಿನ ನಡೆಯಿದೆ. ನುಡಿದರೆ ನುಡಿಯ ಹಿಂದೆಯೇ ಅರಿವಿನ ನುಡಿಯಿದೆ. ಅರಿವಿನ ನಡೆ ; ಅರಿವಿನ ನುಡಿ. ತಿಳಿಯದಿದ್ದರೆ ಕೇಡು; ತಿಳಿದರೆ ಸುಖ. ತಿಳಿಯದಿದ್ದರೆ ಸುಖ ದುಃಖ ತಿಳಿದರೆ ಶಾಶ್ವತ ಸುಖ. ತೆರಹಿಲ್ಲದೆ ನಂಬಿದರೆ ಸ್ವಾನುಭಾವದ ಸುಖವು.

ಮನ ಬಯಸಿದ ಸುಖ ಸಿಕ್ಕರೆ ಕ್ಷಣಿಕ ಸುಖ; ಶಾಶ್ವತ ದುಃಖ ! ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ. ಸುಖ ದುಃಖಗಳಿಗೆ ಮೀರಿದ ಅರಿವಿನ ಸುಖವೇ ತೆರಹಿಲ್ಲದ ಸುಖ. ಸ್ವಾನುಭಾವದ ಸುಖ.

ನಡೆ ನುಡಿ ಸಂಭಾಷಣೆಯನ್ನು ಶರಣ ಅನಾವರಣ ಮಾಡಿ ಅದರ ಹಿಂದೆ ಅಡಗಿದ ಸತ್ಯವನ್ನು ಮಾತ್ರ ಸ್ವೀಕರಿಸುತ್ತಾನೆ. ಸತ್ಯ ಸತ್ಯವೂ ಶಿವಮಯವೂ ಸುಂದರವೂ ಆಗಿರುತ್ತದೆ.

ಐಕ್ಯಸ್ಥಲ

ಐಕ್ಯನ ಜ್ಞಾನಿಸ್ಥಲ

919

ಮೂರರಾಪ್ಯಾಯನ ಐದು ಬೆಟ್ಟವ ನಿಂಬುಗೊಂಡುದು.
ಅಕಟಕಟಾ, ಮಾಡಿ ಕೆಟ್ಟರು, ಮಾಡದೆ ಕೆಟ್ಟರು,
ನೀಡಿ ಕೆಟ್ಟರು, ನೀಡದೆ ಕೆಟ್ಟರು,
ಕೂಡಲಸಂಗಮದೇವನ ಬಸುರ ಮಧ್ಯದ
ಬಯಲು ಸಮಾಧಿಯಲಿಕ್ಕದೆ ಕೆಟ್ಟರು.

ಗುರು ಲಿಂಗ ಜಂಗಮಕ್ಕೆ ದಕ್ಕಬೇಕಾದ ಪ್ರಸಾದ ಪಂಚೇಂದ್ರಿಯಗಳು ಸ್ವೀಕರಿಸಿದವು. ವಸ್ತುವಿನ ಸತ್ಯವನ್ನು ಅರಿತು ವಸ್ತುವಿನ ಅಜ್ಞಾನವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುವ ಗುರುಲಿಂಗ ಜಂಗಮ ಕಣ್ಣಿನಲ್ಲಿಯೇ ಇದ್ದಾರೆ. ಆದರೆ ವಸ್ತುವೆಂದರೇನೆಂದು ತಿಳಿಯದ ಅಜ್ಞಾನಿ ಮನ ವಸ್ತುವಿಗೆ ಮರುಳಾಗಿ ಕೆಟ್ಟಿತು.

ಚಿನ್ನ ಒಂದು ಹಳದಿ ಬಣ್ಣದ ಲೋಹವೆಂದು ನೋಡಿ ಆನಂದ ಪಟ್ಟು ಸುಮ್ಮನಾಗುವ ಸಹಜ ಶಕ್ತಿ ಅಂಗದಲ್ಲಿಯೇ ಸಂಗಮವಾದ ಗುರು ಲಿಂಗ ಜಂಗಮರಿಗೆ ಇದೆ. ಆದರೆ ಮನ ಚಿನ್ನ ಮೋಹಿಸಿ ಹಗಲಿರುಳು ಅಂಗದೊಂದಿಗೆ ದುಡಿದು, ಕಳುವು ಮಾಡಿ, ಕೊಲೆ ಮಾಡಿ ಪಡೆಯುತ್ತದೆ. ಚಿನ್ನವೆಂದರೇನೆಂದು ಅರಿಯದೆ ಚಿನ್ನವನು ಇಂಬುಗೊಂಡು, ಚಿನ್ನದ ವ್ಯಾಮೋಹಕ್ಕಾಗಿ ಮಾಡಿ ಕೆಡುತ್ತದೆ ಮಾಡದೆ ಕೆಡುತ್ತದೆ.

ಚಿನ್ನ ನೀಡಿ ಧನ್ಯನಾದೆನೆಂದು ಕೆಡುತ್ತದೆ; ನೀಡದೆ ಕೆಡುತ್ತದೆ. ಚಿನ್ನ ಮಣ್ಣಿನ ಗರ್ಭದಲ್ಲಿ ಹುಟ್ಟಿದ ಲೋಹ. ಮಣ್ಣಿನ ಮಡಕೆಯಲ್ಲಿಯೇ ಕುದ್ದು ಸ್ವಚ್ಛಗೊಂಡ ಹಳದಿ ಲೋಹ. ನೀಡಿದೆನೆನ್ನುವುದು ಒಂದು ಅಹಂಕಾರ. ನೀಡದೆ ಗಳಿಸಿದೆನೆನ್ನುವುದೊಂದು ಅಹಂಕಾರ. ಚಿನ್ನಕ್ಕಾಗಿ ರಾಜ ಯುದ್ಧ ಮಾಡಿ ಕೆಟ್ಟ. ಯುದ್ಧ ಮಾಡದೆ ಕೆಟ್ಟ, ನೀಡಿ ಕೆಟ್ಟ, ನೀಡದೆ ಕೆಟ್ಟ.

ಕೂಡಲಸಂಗಮದೇವನ ಬಸುರ ಮಧ್ಯದ ಬಯಲು ಸಮಾಧಿಯಲಿಕ್ಕದೆ ಕೆಟ್ಟರು:

ಜಲಬಿಂದು ಗರ್ಭಸೇರಿ ಪಿಂಡವಾಗಿ ತನುವಾಯಿತು. ಜಲಬಿಂದುವೇ ಗಟ್ಟಿಯಾಗಿ ಮಣ್ಣಾಯಿತು. ಜಲಬಿಂದುವೇ ಮಣ್ಣಗರ್ಭಸೇರಿ ಹಳದಿ ಲೋಹವಾಯಿತು. ಚಿನ್ನಕ್ಕೆ ಜನ್ಮ ಕೊಟ್ಟುದು ಜಲಬಿಂದುವೇ, ಮಣ್ಣಿಗೆ ಜನ್ಮ ಕೊಟ್ಟುದು ಜಲಬಿಂದುವೆ, ಪಿಂಡಕ್ಕೆ ಜನ್ಮಕೊಟ್ಟದ್ದು ಜಲಬಿಂದುವೇ ಆಗಿದೆ. ಜಲ ಬಿಂದುವಿಗೆ ಜನ್ಮ ಕೊಟ್ಟುದು ಮಾತ್ರ ಬಯಲು.

ಜಲ ಜಲವಲ್ಲ. ಬಯಲಲ್ಲಿ ಬಯಲಾಗಿ ಬೆರೆತ ಜಲಜನಕದ ಎರಡು ಕಣಗಳು, ಆಮ್ಲಜನಕದ ಒಂದು ಕಣವನ್ನು ಬಯಲು ಹಿಡಿದು ಬಂಧಿಸಿ ಅದರಲ್ಲಿ ತಾನು ಬೆರೆತಾಗ ಜಲ ಬಿಂದುವಾಗಿದೆ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ಬಸುರ ಮಧ್ಯದ ಬಯಲು ಸಮಾಧಿಯಲಿಕ್ಕದೆ ಕೆಟ್ಟರು.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ; ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ! ಮಾಡುವ ನೀಡುವ ನಿಜಗುಣವುಳ್ಳಡೆ ಕೂಡಿಕೊಂಬ ನಮ್ಮ ಕೂಡಲಸಂಗಮದೇವ ! ಮನವು ನಿಜವಲ್ಲ.

ಮನದ ಕೆಲಸವೂ ನಿಜವಲ್ಲ. ಮನ ಅರಿವಿನತ್ತ ವಾಲಿ, ಅರಿವೇ ತಾನಾಗಿ, ಆ ಅರಿವಿನಿಂದ ವಸ್ತುವನ್ನು ನೋಡಿದಾಗ ವಸ್ತುವಿನ ಸತ್ಯ ಗೊತ್ತಾಗುತ್ತದೆ. ವಸ್ತು ತನ್ನದಲ್ಲವೆಂದೂ ಗೊತ್ತಾಗುತ್ತದೆ. ವಸ್ತುವಿನ ಮೂಲ, ತನುವಿನ ಮೂಲದಲ್ಲಿರುವ ಸತ್ಯ ಒಂದೇ ಎಂದು ಗೊತ್ತಾಗುತ್ತದೆ. ವಸ್ತುವಿನ ಸತ್ಯವೂ ತನ್ನ ಸತ್ಯವೂ ಇತರ ತನುವಿನ ಸತ್ಯವೂ ಒಂದೇ ಎಂದು ಅರಿತ ಬಳಿಕ ಯಾರಿಗೆ ನೀಡುವುದು, ಯಾರಿಗೆ ಮಾಡುವುದು. ಇವೆರಡೂ ವ್ಯರ್ಥವೆಂದು ಅರಿಯುತ್ತಾನೆ.

920

ಉಮಾಧಿನಾಥರು ಕೋಟಿ, ಪಂಚವಕ್ತ್ರರು ಕೋಟಿ
ನಂದಿವಾಹನರೊಂದು ಕೋಟಿ ನೋಡಯ್ಯಾ,
ಸದಾಶಿವರೊಂದು ಕೋಟಿ ಗಂಗೆವಾಳುಕ ಸಮರುದ್ರರು.
ಇವರೆಲ್ಲರೂ ಕೂಡಲಸಂಗನ ಸಾನಿಧ್ಯರಲ್ಲದೆ
ಸಮರಸವೇದ್ಯರೊಬ್ಬರೂ ಇಲ್ಲ.

ಅಜ್ಞಾನದೊಂದಿಗೆ ಸಮರ ಸಾರಿ ಪ್ರಸಾದ ಮಾಡಿಕೊಂಡವರೊಬ್ಬರೂ ಇಲ್ಲ; ಕೂಡಲಸಂಗನ ಶರಣರಲ್ಲದೆ. ಅವರು ಸಮರಸವೇದ್ಯರು.

ಉಮಾದಿನಾಥರು, ಪಂಚವಕ್ತ್ರರು, ನಂದಿವಾಹನರು, ಗಂಗೆವಾಳುಕರು, ಸಮರುದ್ರರು ಸಿಗುತ್ತಾರೆ. ಇವರು ಸಮರಸವೇದ್ಯರಲ್ಲ. ಸದಾ ಅರಿವೆಂಬ ಶಿವನೊಂದಿಗೆ ಇದ್ದವರು. ಅರಿವಿನ ಸಾಮೀಪ್ಯವನ್ನು ಸಂಪಾದಿಸಿಕೊಂಡವರು. ಅರಿವೇ ಇವರಲ್ಲ.

ಹೊರಕಣ್ಣು ಒಳಕಣ್ಣು ಒಂದನ್ನು ಒಂದು ಬೆರೆತಿವೆ. ಆದರೆ ಒಳ ಕಣ್ಣಿನ ನೋಟವೇ ಬೇರೆ; ಹೊರಕಣ್ಣಿನ ನೋಟವೇ ಬೇರೆ. ಒಳಕಣ್ಣಿಗೆ ಕಾಣುವ ಅಗೋಚರ ನೋಟ ಹೊರಕಣ್ಣಿಗೆ ಕಾಣುವುದಿಲ್ಲ. ಹೊರ ಕಣ್ಣು ಒಳ ಕಣ್ಣಿನ ಸಾಮೀಪ್ಯವನ್ನು ಸಾಧಿಸಿದೆ ಅಷ್ಟೇ. ಶರಣ ಒಳ ಕಣ್ಣಿಗೆ ಶರಣು ಹೋಗಿ ಶರಣಾಗತನಾಗಿದ್ದಾನೆ. ಒಳ ಕಣ್ಣೇ ತಾನಾಗಿದ್ದಾನೆ. ನೋಡುವ ನೋಟವೆಲ್ಲ ಶಿವಮಯವೂ ಸುಂದರವೂ ಸತ್ಯವಾಗಿ ಗೋಚರಿಸುತ್ತದೆ.

921

ರಕ್ಕಸಿಯ ಮನೆಯಲು ಭೋಜನವನುಂಡು
ತೃಪ್ತಿಯಾಯಿತ್ತೆಂದು ಬೆಸಗೊಂಡಡೆ ಹೇಳಿಹನು;
ನೀರ ಕೈಯಲು ಕಿಚ್ಚ ಬೈಕೆಯ ಕೊಟ್ಟಂತೆ
ಸಾಯುಜ್ಯ ಪದವಿಯನವರೆತ್ತ ಬಲ್ಲರು ?
ಮಹಾದಾನಿ ಕೂಡಲಸಂಗಮದೇವರ
ಸಮರಸದ ಸುಖವನವರೆತ್ತ ಬಲ್ಲರು ?

ಮನವೆಂಬುದು ಮಾಯೆಯೂ ಹೌದು; ರಕ್ಕಸಿಯೂ ಹೌದು. ಕೈಕೇಯಿಯಂತೆ ಮಗನನ್ನು ಕಾಡಿಗಟ್ಟಲೂ ಹೇಸದು; ಕೈಕೇಯಿ ರಕ್ಕಸಿಯೊಂದಿಗೆ ಭೋಜನವನುಂಡ ಕಾರಣ !

ಶ್ರೀರಾಮನಿಗೆ ಬೇಸರವಾಗಲಿಲ್ಲ; ಸಮರಸದ ಸುಖವನುಂಡ ಕಾರಣ ! ಶಬ್ದವನ್ನು ಪ್ರಸಾದ

ಮಾಡಿಕೊಂಡ; ಸರಳವಾಗಿ ಕಾಡಿಗೆ ನಡೆದ. ಕೈಕೇಯಿಗೆ ನುಡಿಯುವಾಗ ಸುಖವಾಯಿತು; ಶ್ರೀರಾಮ ಕಾಡಿಗೆ ನಡೆದಾಗಲೂ ಸುಖವಾಯಿತು.

ತನು ಒಂದು ನೀರಬೊಂಬೆ. ಅದನ್ನು ಆವರಿಸಿದ ಮಾಯೆಗೆ ಸುಖವಾದರೆ ನೆನೆದು ತಂಪಾಗುತ್ತದೆ. ದುಃಖವಾದರೆ ಕಿಚ್ಚಿನಂತೆ ಬೇಯುತ್ತದೆ. ಶ್ರೀರಾಮ ಕಾಡಿಗೆ ನಡೆದಾಗ ಕೈಕೇಯಿಗೆ ಆದ ಆನಂದ ಅಷ್ಟಿಷ್ಟಲ್ಲ. ಹದಿನಾಲ್ಕು ವರ್ಷಗಳ ಪರ್ಯಂತ ಕೈಕೇಯಿಗೆ ಆದ ದುಃಖವೂ ಅಷ್ಟಿಷ್ಟಲ್ಲ. ನೀರ ಕೈಯ ಕೈಕೇಯಿಯ ಕೈಯಲಿ ಬಯಕೆಯ ಕಿಚ್ಚ ಕೊಟ್ಟಂತಾಯಿತ್ತು. ರಕ್ಕಸಿಯ ಮನೆಯಲ್ಲಿ ಭೋಜನವನುಂಡ ಕೈಕೇಯಿ ತೃಪ್ತಿಯಿಂದ ಶ್ರೀರಾಮನನ್ನು ಕಾಡಿಗೆ ಅಟ್ಟಿದಳು. ನೀರಕೈಯ ಕೈಕೇಯಿ ಬಯಕೆಯ ಕಿಚ್ಚಿನಿಂದ ಬೆಂದಳು.

ವಾಲ್ಮೀಕಿ ಮಹರ್ಷಿ ಕೈಕೇಯಿಗೆ ಸುಂದರವಾದ ಹೆಸರು ಕೊಟ್ಟಿದ್ದಾನೆ. ಕೈ ಅಂದರೆ ಕಾಯದ ಐದು ಭಾಗಗಳು. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ. ಇವು ಜಲದಿಂದ ಆವೃತ್ತವಾದ ಜ್ಞಾನೇಂದ್ರಿಯಗಳು. ಇದು ಅಜ್ಞಾನವೆಂಬ ರಕ್ಕಸಿಯ ಸಂಗ ಮಾಡಿದರೆ ಬಯಕೆಯ ಕಿಚ್ಚು ಕೈಯಲು ಕೊಟ್ಟಂತೆ. 'ಉದಕದೊಳಗೆ ಬಯಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು; ಸಸಿಯೊಳಗಣ ರಸದ ರುಚಿಯಂತಿದ್ದಿತ್ತು; ನನೆಯೊಳಗಣ ಪರಿಮಳದಂತಿದ್ದಿತ್ತು; ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತು.' ನೀರ ಕೈಯಲ್ಲಿ ಕಿಚ್ಚು ಬಚ್ಚಿಟ್ಟುಕೊಂಡಿದೆ. ಅರಿವಿನ ಸಿಹಿರಸದ ರುಚಿಯೂ ಬಚ್ಚಿಟ್ಟುಕೊಂಡಿದೆ. ಅರಿವಿನ ಪರಿಮಳವೂ ಬಚ್ಚಿಟ್ಟುಕೊಂಡಿದೆ. ಬಯ್ಕೆಯ ಕಿಚ್ಚು ಕ್ಷಣಕಾಲ ಸುಖ ಕೊಡಬಹುದು. ಆದರೆ ಶಾಶ್ವತ ದುಃಖಕೊಡುವ ರಕ್ಕಸಿಯೊಂದಿಗಿನ ಭೋಜನವದು. ತನುವಿನಲ್ಲಿಯೇ ಹುಟ್ಟಿ ತನುವನ್ನು ಸುಡುವ ಅಜ್ಞಾನದ ಕಾಡ್ಗಿಚ್ಚು ಅದು.

'ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ, ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ. ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ, ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದೆನಯ್ಯಾ, ಎನ್ನ ಅಜಗಣ್ಣನ ಯೋಗಕ್ಕೆ.' ಮುಕ್ತಾಯಕ್ಕ ಮಹಾಜಾಣೆ. ಕಾಯದ ಜ್ಞಾನವನ್ನು ಒಲಿಸಿಕೊಂಡು ಅದರ ಸೂತ್ರವನ್ನು ಓದುಗರಿಗೆ ಕರುಣಿಸಿದ ಶಿವಶರಣೆ.

ತನು ನೀರಬೊಂಬೆಯೂ ಹೌದು; ಕರ್ಪುರದ ಪುತ್ಥಳಿಯೂ ಹೌದು. ಕಾಣುವ ಕಾಯದಲ್ಲಿ ಕಾಣದ ಬಯಲ ಅಕಾಯವೂ ಇದೆ. ಸದಾ ಉರಿಯುವ ಅಗ್ನಿಯ ಸಿಂಹಾಸನವೂ ಇದೆ.

ಶ್ರೀರಾಮನಾದರೇನು, ಕೈಕೇಯಿಯಾದರೇನು ? ಎರಡೂ ನೀರಬೊಂಬೆಗಳೆ. ಶ್ರೀರಾಮ ನೀರಬೊಂಬೆಗೆ ನಿರಾಳದ ಜ್ಞಾನ ಗೆಜ್ಜೆಯನು ಕಟ್ಟಿ, ಮಹಾಜ್ಞಾನದ ಬಯಲ ಬೊಂಬೆಯನು ಕೈಯಲಿ ಕೊಟ್ಟು ತಾಯಿ ಕೈಕೇಯಿಯ ಮಾತು ಕೇಳಿ ಆನಂದದಿಂದ ನರ್ತಿಸುತ್ತಾ ಕಾಡಿಗೆ ಹೋದ. ಸಿಂಹಾಸನದ ಮೇಲೆ ಕುಳಿತು ರಾಜ್ಯವಾಳಬೇಕಾದ ಕೈಕೇಯಿಯ ಮಾತು ಇತರ ತನುಗಳನು ಅಗ್ನಿಯ ಜ್ವಾಲೆಯಂತೆ ದಹಿಸಿತು. ಶ್ರೀರಾಮ ಜ್ಞಾನದಿಂದ ಸ್ವೀಕರಿಸಿ, ಅಗ್ನಿಯ ಸಿಂಹಾಸನದ ಮೇಲೆ ಕುಳಿತ. ಅಜ್ಞಾನದ ಅಗ್ನಿ ಕರಗಿತು. ಸಮರಸದ ಕರ್ಪುರದ ಕಂಪು ಉಳಿದು ಎಲ್ಲೆಡೆ ಬೆಳಗಿತು. ಇದು ಜ್ಞಾನಭಂಡಾರಿ ಬಸವಣ್ಣನವರ ಸಮರಸದ ಸುಖ !

922

ಬಯಲ ರೂಪ ಮಾಡಬಲ್ಲಾತನೆ ಶರಣನು !
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭವಿ,

ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ?
ಆರೂಪ ಬಯಲ ಮಾಡಲರಿಯದಿದ್ದಡೆ ಎಂತು ಲಿಂಗಾನುಭವಿಯೆಂಬೆ ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ
ಕೂಡಲಸಂಗಮದೇವಾ ?

ಶರಣನೆಂದು ಹೆಸರಿಟ್ಟುಕೊಂಡು ಕರೆಯಿಸಿಕೊಳ್ಳುವುದು ಸುಲಭ. ಆದರೆ ಬಯಲನು ಹಿಡಿದು ರೂಪ ಮಾಡಲು ಸಾಧ್ಯವಾಗುವುದಿಲ್ಲ. ಬಯಲ ಹಿಡಿದು ರೂಪ ಮಾಡಲು ಸಾಧ್ಯವಾದಾಗ ಶರಣನಾಗುತ್ತಾನೆ. ಇತರರು ಶರಣನೆಂದು ಕರೆದರೆ ಶರಣನಾಗಲಾರ; ಹೆಸರಿಟ್ಟುಕೊಂಡರೂ ಶರಣನಾಗಲಾರ. ಬಯಲನು ಹಿಡಿದು ರೂಪ ಮಾಡುವ ಕಲೆ ಅರಿತರೆ ಶರಣನಾಗಲು ಸಾಧ್ಯ. ಅದು ತನಗೆ ತಾನೇ ವೇದ್ಯವಾಗಬೇಕು.

ಬಯಲ ಹಿಡಿದು ರೂಪು ಮಾಡಿ, ಪುನಃ ಆ ರೂಪವನು ಹಿಡಿದು ಬಯಲ ಮಾಡುವಾತನೆ ಲಿಂಗಾನುಭವಿ. ಲಿಂಗ ಅಂಗದ ಮೇಲೆ ಧರಿಸಿ, ಮೂರು ಕಾಲಗಳಲ್ಲಿ ಪೂಜಿಸಿದರೆ ಲಿಂಗಾನುಭವಿಯಾಗಲಾರ. ಬಯಲ ಹಿಡಿದು ರೂಪ ಮಾಡಿ, ಆ ರೂಪವನು ಹಿಡಿದು ಪುನಃ ಬಯಲು ಮಾಡುವ ಕಲೆಯನ್ನು ಅರಿತವನೇ ಲಿಂಗಾನುಭವಿ. ಇದು ಕೂಡಾ ತನಗೆ ತಾನೇ ವೇದ್ಯವಾಗಬೇಕು. ಕೇಳಿದರೆ ಅನುಭವಕ್ಕೆ ವೇದ್ಯವಾಗುವಂತೆ ಹೇಳಲು ಸಾಧ್ಯವಾಗಬೇಕು. ಆತನನ್ನು ಶರಣನೆನ್ನಬಹುದು; ಲಿಂಗಾನುಭವಿ ಎನ್ನಬಹುದು. ಆತನಿಂದ ಇವೆರಡನ್ನೂ ತಿಳಿದುಕೊಂಡು ಪುನೀತನಾಗಬಹುದು.

ಬಯಲ ಹಿಡಿದು ರೂಪ ಮಾಡುವ ಜ್ಞಾನ ಕಲೆ ಸಿದ್ಧಿಯಾಗದ ವೇಷದ ತನುವನ್ನು ಶರಣನೆನ್ನಲು ಬರುವುದಿಲ್ಲ. ಆತ ಶರಣನಾಗಲಾರ. ಶರಣನಾಗುವುದು ಸುಲಭವಲ್ಲ. ತನ್ನಿಂದ ತಾನೇ ಆಗಬೇಕು. ತಾನು ಶರಣ ಎಂದು ಕ್ರಿಯೆಯಿಂದ ಹೇಳಿಕೊಳ್ಳಬೇಕು. ನುಡಿದು ಶರಣನಾಗಲಾರ.

ರೂಪ ಹಿಡಿದು ಬಯಲು ಮಾಡುವ ಜ್ಞಾನ ಕಲೆ ಸಿದ್ಧಿಯಾಗದ ವೇಷದ ತನುವನ್ನು ಲಿಂಗಾನುಭವಿ ಎಂದೆನ್ನಲು ಬರುವುದಿಲ್ಲ. ಶರಣ, ಲಿಂಗಾನುಭವಿ ಎನ್ನುವ ಎರಡು ಪದಗಳು ಜ್ಞಾನದಿಂದ ಸಿದ್ಧಿಯಾಗುವ ಕಲೆಗಳು. ನಡೆಯಲು ಬರುತ್ತದೆ. ಇದು ಸ್ವ ಸುಖದ ಜ್ಞಾನಕಲೆ. ತನಗೆ ತಾನೇ ಸಾಧಿಸಿಕೊಳ್ಳಬೇಕು.

ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ ಕೂಡಲಸಂಗಮದೇವಾ:

ಬಯಲು ಕಾಣುವುದಿಲ್ಲ; ರೂಪ ಕಾಣುತ್ತದೆ. ಕಾಣುವ ರೂಪ, ಕಾಣದ ಬಯಲುಗಳೆರಡೂ ಅಂಗದಲ್ಲಿಯೇ ಸಂಗಮವಾಗಿವೆ. ಅಂಗವನ್ನು ರೂಪವೆನ್ನಲು ಬರುವುದಿಲ್ಲ. ಅದು ಹೆಣ್ಣಲ್ಲ; ಗಂಡೂ ಅಲ್ಲ. ಅರಿವಿನ ಲಿಂಗ. ಬಯಲು, ನೋಡುವ ಬೆಳಕಾಗಿ ಕಣ್ಣುಗಳಲ್ಲಿ ಚುಳುಕಾಗಿದೆ. ಕೇಳುವ ಧ್ವನಿಯಾಗಿ ಕಿವಿಗಳಲ್ಲಿ ಚುಳುಕಾಗಿದೆ. ರುಚಿಯಾಗಿ ನಾಲಗೆಯಲ್ಲಿ, ಸ್ಪರ್ಶದ ಅರಿವಾಗಿ ಚರ್ಮದಲ್ಲಿ, ಅರಿವಿನ ಪರಿಮಳವಾಗಿ ಮೂಗಿನಲ್ಲಿ ಚುಳುಕಾಗಿದೆ. ಮಹಾಜ್ಞಾನವಾಗಿ ತೋರಿ ಬರುವ ಸರ್ವಾಂಗದಲ್ಲಿ ಚುಳುಕಾಗಿದೆ. ನೋಡಲು ಹೋದರೆ ರೂಪ! ಅರಿತು ನೋಡಲು ಹೋದರೆ ಅರಿವು, ಬರೀ ಬಯಲು !

ಅಂಗ ಆಕಾರವುಳ್ಳ ಜ್ಞಾನ ಲಿಂಗವೂ ಹೌದು; ನಿರಾಕಾರದ ನಿರಾಭರಣ ಬಯಲ ಲಿಂಗವೂ ಹೌದು. ಉಭಯ ಒಂದಾಗಿ ತೆರಹಿಲ್ಲದಂತೆ; ಸಂದಿಲ್ಲದಂತೆ ಒಂದರಲ್ಲಿ ಮತ್ತೊಂದು ಬೇರ್ಪಡಿಸದಂತೆ

ಸಂಗಮವಾಗಿ ಕೂಡಲಸಂಗಯ್ಯನಾಗಿದೆ.

923

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯ !
ಸತ್ತು ಬೆರಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ
ಕೂಡಲಸಂಗಮದೇವಾ.

ಸರ್ವಾಂಗವೇ ಲಿಂಗವೆಂದು ಅರಿಯದ ಅಜ್ಞಾನಿ ಅಂಗ ಮಾತ್ರ ದೇವಲೋಕ ಮರ್ತ್ಯಲೋಕವೆಂದು ಬೊಗಳುವುದು. ಅಂಗವನ್ನು ಅರಿತವನಿಗೆ ಅಂಗವೇ ಲಿಂಗ; ದೇಹವೇ ದೇವಲೋಕ; ಕಾಯವೇ ಕೈಲಾಸ ! ಸಕಲ ಲೋಕಗಳು ಕಾಯದಿಂದಲೇ ಸೃಷ್ಟಿಯಾಗಿವೆ. ಸಕಲ ಪುಸ್ತಕಗಳೂ ಕಾಯದಿಂದಲೇ ಜನ್ಮ ತಳೆದಿವೆ.

ಕಾಯವನ್ನು ಆವರಿಸಿದ ಮನ; ಕಾಯವನ್ನು ಗೌರವಿಸಿ, ಕಾಯದಲ್ಲಿಯೇ ತನ್ಮಯವಾದ ಅರಿವಿನ ಕಾಯಕ್ಕೆ ಶರಣು ಹೊದ ಕಾಯವೇ ಶರಣಕಾಯ; ಕೇವಲ ಶರಣ !

ಸತ್ತು ಬೆರಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ:

ಕಾಯ ಸಾಯುವ ಮುನ್ನ ಕಾಯದಲ್ಲಿ ತನ್ಮಯವಾದ ಅರಿವಿನ ಕೈಲಾಸ ದರ್ಶನ ಕಾಯಕ್ಕೆ ಆಗಬೇಕು. ಆ ಕಾಯಕ್ಕೆ ಕಾಯಗಳೆಲ್ಲ ಕೈಲಾಸವಾಗಿ ಕಾಣುತ್ತವೆ. ಕಬ್ಬಿನಲ್ಲಿ ಅಡಗಿದ ಅರಿವಿನ ಸಿಹಿ ರುಚಿಯ ಸುಖ ಕಾಯಕ್ಕೆ ವೇದ್ಯವಾಗುತ್ತದೆ. ಕಾಯ ಸತ್ತ ಮೇಲೆ ಕಾಯಕ್ಕೆ ಅರಿವಿನ ಸುಖವಿಲ್ಲ. ಅಜ್ಞಾನದ ದುಃಖವೂ ಇಲ್ಲ. ಕಾಯ ಇದ್ದಾಗಲೇ ಕಾಯದಲ್ಲಿರುವ ಅರಿವಿನ ಕೈಲಾಸ ಕಾಯವೆ ಕಾಣಬೇಕು. ಜಾತಿ ಮತ ಹೆಣ್ಣು ಗಂಡು ಶ್ರೀಮಂತ ಬಡವ ಎನ್ನುವ ಸೀಮೆಯುಳ್ಳ ಅಜ್ಞಾನದ ಪೊರೆಯನು ಹರಿದು ನಿಸ್ಸೀಮ ಕಾಯವಾಗಬೇಕು !

924

ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿದಿರಿ ?
ಮಾತಾಡಿದಡೆ ಕೆಯ್ಯ ಬೆಳಸೆಂಬುದನರಿಯಿರಿ ಅಯ್ಯಾ ?
ಮಾತುಗೆಟ್ಟಲ್ಲದೆ ತಾನಾಗಬಾರದು.
ಕೂಡಲಸಂಗಮದೇವಯ್ಯಾ
ಮಾತಿಂದ ಬರ್ಕು ಭವಭಾರ ಘೋರ.

ಕಾಯವೇ ಕೈಲಾಸ; ಅರಿವಿನ ಬೆಳಕು ! ಮಾತಲ್ಲದ ಮಾತನಾಡುವ, ನುಡಿಯಲ್ಲದ ಜ್ಞಾನದ ನುಡಿಯನೆ ನುಡಿದು ಸುಜ್ಞಾನದ ಬೆಳೆಯನೆ ಬೆಳೆಯುವ ಬೆಳಸು. ಕೇಳಿದ ಮಾತನು ಕೆಡಿಸಿ ಕೇಳುವ ಕಲೆಯನು ಅರಿತು ನುರಿತಲ್ಲದೆ ತಾನಾಗಬಾರದು !

ನೋಡುವ ಕಣ್ಣಿನಲ್ಲಿ ಅರಿತು ನೋಡುವ ಅರಿವಿನ ನೋಟವೂ ಇದೆ. ಮರೆತು ನೋಡುವ ಮರೆವಿನ ನೋಟವೂ ಇದೆ. ಮರೆವು ಅರಿವಿನಿಂದ ತೊಳಗಿ ಬೆಳಗಿ ಅರಿವಾಗಲು ಬರುತ್ತದೆ. ಇವೆರಡೂ ಕಣ್ಣಿಗೆ ಸಾಧ್ಯವಾಗದಿದ್ದರೂ ಕೂಡಾ ಮಾತಿಲ್ಲ ನುಡಿಯಿಲ್ಲ. ನೋಡಿ ನೋಡಿದುದನು

ನುಡಿದು ಹೇಳಲು, ಮಾತನಾಡಿ ಹೇಳಲು ಕಣ್ಣಿಗೆ ಸಾಧ್ಯವಾಗುವುದಿಲ್ಲ. ಕಣ್ಣು ನೋಡಿದುದನು ನೋಡಿದಂತೆ ಸುಮ್ಮನಾಗುವ ಮೌನಿಯದು !

ನೋಡಲು ಬಾರದ ಕಣ್ಣಿಲ್ಲದ ಬಾಯಿ ನೋಡಿದೆನೆಂದು ಮಾತನಾಡಿ ನುಡಿದರೆ ಏತಕ್ಕೆ ಮುನಿಯುವುದು ? ನೋಡಲು ಬಾರದ ಬಾಯಿ ಹೇಗೆ ನೋಡಿತೆಂದು ತಿಳಿಯುವ ಶಕ್ತಿ ಮುನಿಯುವ ಕಾಯಕ್ಕೆ ಇಲ್ಲವೆ ? ನೋಡಲು ಬಾರದೆ ಇರುವ ಬಾಯಿ ಮತ್ತು ಕಾಯದ ಅಜ್ಞಾನವೆಂದು ತಿಳಿಯಲು ಸಾಧ್ಯವಾಗುವುದಿಲ್ಲವೆ ?

ಮಾತುಗೆಟ್ಟಲ್ಲದೆ ತಾನಾಗಬಾರದು ಕೂಡಲಸಂಗಮದೇವಾ:

ಮಾತು ಕೆಡಿಸಿಕೊಳ್ಳುವ ಶಕ್ತಿ ಕಿವಿಯಲ್ಲಿದೆ. ಆ ಶಕ್ತಿ ಕಿವಿಗೆ ದಕ್ಕದ ವಿನಹ ಶರಣನಾಗಲಾರ. ತನ್ನನ್ನು ತಾನರಿತು ತಾನಾಗಲಾರ ! ಮಾತು ಕೇಳಿದ ಕಿವಿ, ಮಾತಿನಲ್ಲಿರುವ ಸುಖವನ್ನು ದುಃಖವನ್ನೂ ತನುವಿಗೆ ರವಾನೆ ಮಾಡಿ, ಸುಖ ದುಃಖಗಳ ರಸಾಯನ ಸಂಚಲನವನ್ನುಂಟು ಮಾಡುತ್ತದೆ. ಇವೆರಡನ್ನು ಕಿವಿ ಶಾಶ್ವತವಾಗಿ ಸಂಗ್ರಹಿಸಿಕೊಂಡು ತನುವಿಗೆ ಮತ್ತೆ ಮತ್ತೆ ನೆನಪಿಸುತ್ತದೆ. ಇದು ಅರಿವಿನ ಕಿವಿಯಲ್ಲಿ ಬರೀ ಕಿವಿ ಮಾತ್ರ !

ಅರಿವಿನ ಕಿವಿ ಮಾತು ಕೆಡಿಸಿ ಕೇಳುತ್ತದೆ. ಶಬ್ದವನ್ನು ನಪುಂಸಕ ಮಾಡುತ್ತದೆ; ಶಬ್ದವನ್ನು ನಿಃಶಬ್ದ ಮಾಡಿ ಕೇಳುತ್ತದೆ. ಕೇಳಿದ ಮಾತು ಕಾಯಕ್ಕೆ ಅರಿವಿನ ಬೆಳಸಾಗಿ ಪ್ರಸಾದವಾಗುತ್ತದೆ; ಮುನಿಯುವುದಿಲ್ಲ.

ಮಾತಿಂದ ಬರ್ಕು ಭವಭಾರಘೋರ:

ಕೈಕೇಯಿಯ ಎರಡು ಮಾತುಗಳನ್ನು ಕೆಡಿಸಿ ಶ್ರೀರಾಮ ಕೇಳಿದ. ಆನಂದದಿಂದ ಕಾಡಿಗೆ ಹೋದ. ಕಾಡಾದರೇನು ನಾಡಾದರೇನು ? ಕಾಯದ ಅರಿವು ಕಾಯಕ್ಕೆ ಬಳಕೆಯಾದರೆ ಕಾಯವೇ ಕೈಲಾಸ. ಮಾತು ಕೆಡಿಸಿ ಕೇಳಿದ ಶ್ರೀರಾಮನ ಕಾಯಕ್ಕೆ ಮಾತು ನಪುಂಸಕವಾಯಿತು. ಮಾತನಾಡಿದ ಕೈಕೇಯಿಯ ಕಾಯಕ್ಕೆ ಆಡಿದ ಮಾತಿನಿಂದಲೇ ಮಾಯದ ಗಾಯವಾಯಿತು. ಲೋಕಕ್ಕೆ ದುಃಖದ ಮಾತಾದರೂ ಮಾತು ಕೆಡಿಸಿ ಅರಿವಿನಿಂದ ಕೇಳಿದ ಶ್ರೀರಾಮನಿಗೆ ಕೈಕೇಯಿ ಆಡಿದ ಮಾತು ಸುಖ ನೀಡಿತು. ತನ್ನ ಸುಖಕ್ಕಾಗಿ ಆಡಿದ ಮಾತಿನಿಂದಾಗಿ ಕೈಕೇಯಿಗೆ ಬದುಕಿರುವಾಗಲೆ ಘೋರ ನರಕ ಪ್ರಾಪ್ತವಾಯಿತು. ಅತ್ತ ಸಾಯದೆ ಇತ್ತ ಬದುಕದೆ ಕ್ಷಣ ಕ್ಷಣಕ್ಕೂ ಸಂಕಟವನ್ನು ಅನುಭವಿಸಿದಳು. ಮಾತು ಕೆಡಿಸಿ ಕೇಳಬಲ್ಲ ಅರಿವಿನ ಕಲೆಯುಳ್ಳ ಶರಣನಿಗೆ ಕೇಳಿದ ಮಾತುಗಳೆಲ್ಲ ಮಾಣಿಕ್ಯವೇ!

925

ಏನಾದಡೆಯೂ ಸಾಧಿಸಬಹುದು
ಮತ್ತೇನಾದಡೆಯೂ ಸಾಧಿಸಬಹುದಯ್ಯಾ.
ತಾನಾರೆಂಬುದ ಸಾಧಿಸಬಾರದು,
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ.

ಸಚಿವ ಶಾಸಕನಾಗಬಹುದು. ದೇಶದ ಪ್ರಧಾನಿ ಅಧ್ಯಕ್ಷನೂ ಆಗಬಹುದು. ಅಲೆಕ್ಸಾಂಡರನಂತೆ ಇಡೀ ಪ್ರಪಂಚದ ಸಾಮ್ರಾಟನಾಗಬಹುದು. ಆದರೆ ತನ್ನನ್ನು ತಾನು ಅರಿತು ತಾನಾರು ಎಂಬುದನು ಸಾಧಿಸುವುದು ಬಲು ಜಟಿಲ.

ಮನಸ್ಸು, ಹೊರಗಡೆ ಇರುವ ಪದಾರ್ಥವೆನ್ನೆಲ್ಲ ಬಾಚಿಕೊಂಡು ತನ್ನದು ಎಂದು ಘೋಷಣೆ

ಮಾಡುತ್ತದೆ; ಹೊರಗಿನ ಸಂಪತ್ತಿಗೆ ಒಡೆಯನಾಗುತ್ತದೆ. ಆದರೂ ಸುಖಿಯಲ್ಲ. ಗೆದ್ದೆನೆಂಬ ಅಹಂಕಾರದಿಂದ ತನು ವಿಲವಿಲನೆ ಒದ್ದಾಡುತ್ತದೆ. ತನುವಿನಲ್ಲಿಯೇ ತನ್ಮಯವಾದ ಅರಿವಿನ ಸುಖದಿಂದ ಮನ ದೂರವಾಗಿ ಸದಾ ದುಃಖಿಯಾಗುತ್ತದೆ. ಬಾಹ್ಯ ಸಂಪತ್ತು ಎನ್ನುವುದು ತಾನೇ ಸೃಷ್ಟಿಸಿಕೊಂಡದ್ದು.

ಲೋಹ, ಚರ್ಮ, ಕಾಗದವೆಂಬ ಕರೆನ್ಸಿಗಳನ್ನು ಮನಸ್ಸು ವಿನಿಮಯಕ್ಕಾಗಿ ಮಾತ್ರ ಸೃಷ್ಟಿ ಮಾಡಿತು. ಮರೆತು ಮರುಳಾಗಿ ಅದನ್ನೇ ಸಂಪತ್ತೆಂದು ಘೋಷಣೆ ಮಾಡಿತು. ಅದಕ್ಕಾಗಿಯೇ ಯುದ್ಧ ಮಾಡಿತು. ಅದಕ್ಕಾಗಿಯೇ ಬದುಕಿತು. ಅದಕ್ಕಾಗಿಯೇ ಸತ್ತಿತು. ಅದೆಂದರೇನೆಂದು ತಿಳಿಯಲಿಲ್ಲ.

ಏನಾದಡೆಯೂ ಸಾಧಿಸಬಹುದು ಮತ್ತೇನಾದಡೆಯೂ ಸಾಧಿಸಬಹುದು ತಾನರೆಂಬುದ ಸಾಧಿಸಬಾರದು:

ರಾಜನ ತಲೆಯ ಮೇಲೆ ಕಿರೀಟವಿದೆ; ಕೂಡಲು ಸಿಂಹಾಸನವಿದೆ. ಭೋಗಿಸಲು ವಿಷಯ ಸುಖಕ್ಕಾಗಿ ಸತಿಯಿದ್ದಾಳೆ. ಆದರೂ ಕಿರೀಟಕ್ಕಾಗಿ, ಸಿಂಹಾಸನಕ್ಕಾಗಿ, ವಿಷಯ ಸುಖಕ್ಕಾಗಿ ಯುದ್ಧ. ತಾನೇ ಮಾಡಿಕೊಂಡ ಕಿರೀಟ, ತಾನೇ ರಚಿಸಿಕೊಂಡು ಕುಳಿತ ಸಿಂಹಾಸನ. ತನ್ನಿಂದಲೇ ಹೊರಬಂದು ಸುಖ ನೀಡಿದ ವಿಷಯದ ರಸ. ಆದರೂ ವಿಷಯಕ್ಕಾಗಿ, ಕಿರೀಟಕ್ಕಾಗಿ, ಸಿಂಹಾಸನಕ್ಕಾಗಿ ಅನ್ಯ ರಾಜನನ್ನು ಅಮಾಯಕ ಸೈನಿಕರನ್ನು ಕೊಲ್ಲಲು ಹೇಸುವುದಿಲ್ಲ; ಸಾಯಲೂ ಹೇಸುವುದಿಲ್ಲ. ತನುವನ್ನು ಆವರಿಸಿದ ಮನ ಏನಾದಡೆಯೂ ಸಾಧಿಸಬಹುದು, ಮತ್ತೇನಾದಡೆಯೂ ಸಾಧಿಸಬಹುದು. ತಾನಾರೆಂಬುದ ಸಾಧಿಸಬಾರದು.

ತನುವನ್ನು ಆವರಿಸಿದ ಮನ, ತನುವಿನಲ್ಲಿ ತನ್ಮಯವಾದ ಅರಿವನ್ನು ಸಾಧಿಸಲು ಸಾಧ್ಯವೇ? ಆ ಅರಿವಿನೊಂದಿಗೆ ಯುದ್ಧ ಮಾಡಿ ಆ ಅರಿವನ್ನು ಗೆಲ್ಲಲು ಸಾಧ್ಯವೆ ? ಅರಿವಿನ ಸಿಂಹಾಸನಕ್ಕೆ ಅಧಿಪತಿಯಾಗಲು ಸಾಧ್ಯವೆ? ತನ್ನದಲ್ಲದ ಭೂಮಿಯನ್ನು, ತನ್ನದಲ್ಲದ ಹೇಮವನ್ನು, ತನ್ನದಲ್ಲದ ವಿಷಯ ಸುಖವನ್ನು ಗೆದ್ದು ತನ್ನದೆಂದು ಹೇಳಿಕೊಳ್ಳಬಹುದು. ತನ್ನದೇ ಆದ ಜ್ಞಾನ ಸಿಂಹಾಸನದ ಮೇಲೆ ಕುಳಿತು ಜ್ಞಾನರತ್ನವಾಗುವುದಕ್ಕೆ ಜ್ಞಾನದ ಕರುಣೆ ಬೇಕು.

ಜ್ಞಾನ ಒಂದು ಜಡ ವಸ್ತುವಲ್ಲ. ಅಂಗದಲ್ಲಿಯೇ ಸಂಗಮವಾದ ಕೂಡಲ ಸಂಗಮದೇವರು. ಅಂಗವನ್ನು ಆವರಿಸಿದ ಅಜ್ಞಾನಿ ಮನಕ್ಕೆ ಅರಿವಿನ ಸಂಗಯ್ಯನ ಕರುಣೆ ಬೇಕು. ಸಂಗಯ್ಯನ ಕರುಣವುಳ್ಳ ಅಂಗಕ್ಕಲ್ಲದೆ ಅಂಗದ ಜ್ಞಾನ ಅಂಗಕ್ಕೆ ಒಲಿಯದು. ಅರಿವನು ಅರಿಯುವ ತವಕವುಳ್ಳ ಅಂಗಗಳಿಗೆ ಒಲಿಯದೆ ಇರದು.

926

ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಬಡೆ ಹೇಳಿಯೆ ಕೇಳಿ ಭೋ.
ಹುಸಿಯ ಸಂಕಲೆಯಾಗಿದ್ದಲ್ಲಿ ಕಾದುಕೊಂಡಿದ್ದನೊಬ್ಬ ;
ಕಥೆ ಕನಸ ಮಾಡಿ ಹೇಳುತ್ತಿದ್ದನೊಬ್ಬ.
ಪರಾಪರಕ್ಕೆ ಹೋಗಿ ಪರಮನ ಸುದ್ದಿಯ ಕೊಂಡು ಬರುತ್ತಿಪ್ಪ
ಅವರಿಬ್ಬರನೂ ಕೆಡಮೆಟ್ಟಿ ಹೋಹಾಗ,
ಲೋಕ ನಿರ್ಬುದ್ಧಿಗೊಂಡಿತ್ತು , ಕೂಡಲಸಂಗಮದೇವಾ.

ಜೀವ ಅಂತರಾತ್ಮನ ಸುದ್ದಿಯನ್ನು ಮನ ವ್ಯವಹಾರ ರೂಪದಲ್ಲಿ ಕತೆ ಮಾಡಿ ಹೇಳುತ್ತದೆ. ಪರಾಪರಕ್ಕೆ ಹೋಗಿ ಆ ಸುದ್ದಿಯನ್ನೇ ಮನ ಕೊಂಡು ಕೇಳುತ್ತದೆ. ವ್ಯವಹಾರಕ್ಕಾಗಿ ಹೇಳುವ ಮನ, ಹಣ ಕೊಟ್ಟು ಕೇಳುವ ಮನಗಳೆರಡೂ ಅಂಗದಲ್ಲಿ ಸಂಗಮವಾದ ಪರಮನನು ಅರಿಯವು. ಇವೆರಡೂ ಮನಗಳು ಅಜ್ಞಾನದ ಸಂಕಲೆಯಲ್ಲಿ ಬಂಧಿಯಾಗಿವೆ. ಪರಮನನು ಕಂಡೆ ಎಂದು ಸುಳ್ಳು ಹೇಳುವ ಮನಕ್ಕೆ ತನ್ನ ಸುಳ್ಳೆ ಸಂಕೋಲೆಯಾಗಿ ಬಿಗಿದಿದೆ.

ಬೆಳಕಿನಿಂದ ಹುಟ್ಟಿದ ಕತ್ತಲೆಗೆ ಬೆಳಕನು ನೋಡಿದೆನೆಂದು ಹೇಳಲು ಸಾಧ್ಯವೆ ? ಬೆಳಕು ಎಂದು ನುಡಿದು ಕತ್ತಲೆ ಹಾಗೆ ಉಳಿದರೆ ಅದು ಹೇಗೆ ಬೆಳಕನು ಕಂಡೀತು ? ಬೆಳಕನ್ನು ತಿಳಿದು ಬೆಳಕೆ ಆದ ಕತ್ತಲೆ ಅದು ಹೇಗೆ ನಾನು ಕತ್ತಲಿದ್ದೆ ಎಂದು ನುಡಿಯಲು ಸಾಧ್ಯ ? ಕತ್ತಲೆಗೆ ಬೆಳಕಿನ ದರ್ಶನವಾಗಿಲ್ಲವೆಂದೇ ತಿಳಿಯಬೇಕು.

ಲೋಕದ ನಿಯಮವೇ ಹಾಗೆ. ಅಂಗದಲ್ಲಿಯೇ ಸಂಗಮವಾದ ಅರಿವನು ಅಂಗವನ್ನೇ ಆವರಿಸಿದ ಮನ ಅರಿಯದೇ ಹೋಗುತ್ತದೆ. ಆದರೂ ಅರಿತಂತೆ ಅರಿವಿನ ಮಾತನು ಆಡುತ್ತದೆ. ಕತ್ತಲಿಗೆ ಬೆಳಕಿನ ದರ್ಶನವಾಗದೆ ಕತ್ತಲು ಕತ್ತಲಾಗಿಯೇ ಉಳಿದಂತೆ. ನುಡಿದರಾಗದು; ನಡೆದು ಬೆಳಕಿನೆಡೆಗೆ ಹೋಗಿ ಬೆಳಕಗಾದನ್ನಕ್ಕ.

927

ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವ
ಹಿರಿದು ಕಿರಿದಾದುದನಾರು ಅರಿಯರು.
ಪಾಷಾಣ ಪರೀಕ್ಷವಂತನಂತೆ ಗುರುವಿಲ್ಲದವರಂತಿರಲಿ,
ಕೂಡಲಸಂಗಮದೇವಯ್ಯಾ ,
ಗುರುವುಳ್ಳವರ ನಿಜವಿಂತುಟು.

ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವ ಎಂದರೇನೆಂದು ಗುರುವಿಲ್ಲದವರು ಅರಿಯರು. ಗುರುವುಳ್ಳವರಲ್ಲಿ ಕೆಲವರು ಶಬ್ದದಿಂದ ಮಾತ್ರ ಅರಿಯುತ್ತಾರೆ. ನಿಜ ಅರಿಯಲು ಸಾಧ್ಯವಾಗುವುದೇ ಇಲ್ಲ.

ಪಾಷಾಣ ಪರೀಕ್ಷನಂತೆ ಶಬ್ದದಲ್ಲಿ ತಿಳಿದವ ಬೇರ್ಪಡಿಸಬಹುದು; ರತ್ನ ಉತ್ತಮವಾದುದು; ಉತ್ತಮವಲ್ಲವೆಂದು. ಆದರೆ ಸಮರತಿ ಸಮಕಳೆ ಸಮಸುಖ ಸ್ವಾನುಭವ ಹಾಗಲ್ಲ. ಅದು ಅಂಗದಲ್ಲಿಯೇ ಸಂಗಮವಾದ ಸ್ವಯಂ ಲಿಂಗ ! ಅಂಗವನ್ನು ಲಿಂಗಾಂಗವೆಂದೇ ತಿಳಿಯುವ ಸ್ವಾನುಭವದ ಲಿಂಗ. ಸರ್ವಾಂಗವೆಲ್ಲ ಅರಿವಿನ ಲಿಂಗವಾದ ಅಂಗಕ್ಕೆ ಹೆಣ್ಣಿಲ್ಲ ಗಂಡಿಲ್ಲ ಜಾತಿ ಮತ ಪಂಥಗಳಿಲ್ಲ, ಕಾಲ ಸೀಮೆಗಳೂ ಇಲ್ಲದ ನಿಸ್ಸೀಮ ಲಿಂಗ !

928

ಗುರು ಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನ ;
ಹಿಂದ ಬಿಟ್ಟು ಮುಂದ ಹಿಡಿಯಲೆ ಬೇಕು.
ಕೂಡಲಸಂಗಮದೇವ ಕೇಳಯ್ಯಾ

ಕಿಚ್ಚಿನೊಳಗೆ ಕೋಲ ಬಚ್ಚಿಟ್ಟಂತಿರಬೇಕು.

ಅಂಗದಲ್ಲಿ ಸದಾ ಸತ್ಯವನ್ನು ನುಡಿಯುವ ಸದ್ಗುರುವಿದ್ದಾನೆ. ಆ ಸತ್ಯವನ್ನು ಆಲಿಸುವ ಶಿಷ್ಯ ಮನದ ಹೆಸರಿನಲ್ಲಿ ಅಂಗವನ್ನು ಆವರಿಸಿದ್ದಾನೆ. ಶ್ರೀ ಗುರು ಮನವನ್ನು ಹಿಡಿದು ಅತ್ತ ಇತ್ತ ವಾಲುವ ಮರ್ಕಟವನ್ನು ಕೊಂದು, ಸದ್ಗುರುವಿನ ಚರಣ ಕಮಲಕ್ಕೆ ತಳ್ಳುತ್ತಾನೆ. ಗುರುವೆಂದರೆ ಯಾರು, ಶಿಷ್ಯನೆಂದರೆ ಯಾರೆಂದು ಅಂಗವನ್ನು ಮುಟ್ಟಿ, ಅಂಗದಲ್ಲಿಯೇ ಅವರಿಬ್ಬರನ್ನು ಪರಿಚಯಿಸುತ್ತಾನೆ.

ಹಿಂದಣ ಗುರುವನ್ನು ಬಿಟ್ಟು ಮುಂದಣ ಗುರುವನ್ನು ಹಿಡಿಯಲೇಬೇಕು. ಶ್ರೀ ಗುರುವಿನ ಉದ್ದೇಶವೇ ಅದು. ಶಿಷ್ಯನೆಂದರೆ ಕೋಲು; ಗುರುವೆಂದರೆ ಕಿಚ್ಚು. ಕಿಚ್ಚಿನೊಳಗೆ ಕೋಲು ಬಚ್ಚಿಟ್ಟುಕೊಂಡಿದೆ. ಸರ್ವಾಂಗದೊಳಗೆ ಅರಿವೆಂಬ ಗುರುದೇವ ಬಚ್ಚಿಟ್ಟುಕೊಂಡಿದ್ದಾನೆ. ಅದನ್ನು ತಿಳಿಯುವ ಮನವೆಂಬ ಶಿಷ್ಯನು ಅಂಗದೊಳಗೆ ಇದ್ದಾನೆ. ಹಿಂದ ಬಿಟ್ಟು ಮುಂದ ಹಿಡಿದವನಿಗೆ ಮಾತ್ರ ದಕ್ಕುತ್ತಾನೆ.

929

ಲಿಂಗವ ಪೂಜಿಸಿ ಫಲವೇನಯ್ಯಾ ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ ?
ಲಿಂಗವ ಪೂಜಿಸಿ ಫಲವೇನಯ್ಯಾ ,
ಕೂಡಲಸಂಗಮದೇವರ ಪೂಜಿಸಿ,
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ ?

ಅಂಗವೆಂದರೆ ಅರಿವಿನ ಲಿಂಗ; ಲಿಂಗವೆಂದರೆ ಅರಿವಿನ ಅಂಗ. ಅಂಗದಲ್ಲಿಯೇ ಅರಿವು ಸಂಗಮವಾಗಿದೆ. ಅಂಗವನ್ನು ಮನ ಆವರಿಸಿದೆ. ಮನ, ಸರ್ವಾಂಗದಲ್ಲಿರುವ ಅರಿವೆಂಬ ಗುರುದೇವನನ್ನು ತಿಳಿದ ಮೇಲೆ ಅಂಗ, ಮನ, ಗುರು ಬೇರಲ್ಲ. ಅಂಗದಲ್ಲಿಯೇ ಕೂಡಿ ಸಂಗಮವಾದ ಕೂಡಲಸಂಗಮದೇವ. ಸರ್ವಾಂಗ ಲಿಂಗ !

ಒಂದು ಘಟಪ್ರಭ, ಮತ್ತೊಂದು ಭೀಮ, ಮಗದೊಂದು ಕೃಷ್ಣೆ. ಇವು ಮೂರೂ ನದಿಗಳು. ಘಟಪ್ರಭ, ಭೀಮಾ, ಕೃಷ್ಣೆಯ ಹೆಸರಿನಿಂದ ಹರಿಯುವ ಜೀವನದಿಗಳು. ಇವು ಮೂರು ಸಂಗಮಗೊಂಡಾಗ ಅದು ಕೇವಲ ಸಂಗಮ ಎಂದು ಕರೆಯಿಸಿಕೊಂಡು ಮೂರು ಹೆಸರುಗಳನ್ನು ಕಳೆದುಕೊಳ್ಳುತ್ತದೆ. ನದಿಯೊಳಗೆ ನದಿ ಬೆರೆತು ಮಹಾಸಂಗಮವೇ ತಾನಾದಾಗ ಸಮರತಿ ಸಮಕಳೆ ಸಮಸುಖಿಯಾಗುತ್ತದೆ. ಸರ್ವಾಂಗವೂ ಮಹಾಲಿಂಗವಾಗುತ್ತದೆ; ಗಂಡು, ಹೆಣ್ಣು, ಅಂಗವೆನ್ನುವ ಹೆಸರು ಕಳೆದುಕೊಂಡು ಅರಿವಿನ ಸಂಗಮನಾಥನೆ ತಾನಾಗುತ್ತದೆ.

ಸಂಗಮನಾಥನ ದರುಶನ ಪಡೆದು ಸಂಗಯ್ಯನಾಗದಿದ್ದರೆ ನಿತ್ಯ ನಿತ್ಯ ಲಿಂಗವ ಪೂಜಿಸಿ ಫಲವೇನು ?

ಐಕ್ಯನ ಐಕ್ಯಸ್ಥಲ

930

ಒಲೆಯಡಿಯನುರುಹಿದಡೆ
ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು,
ಮಹೀತಳನ ಜಡೆ ಸೀಯಿತ್ತು, ಮರೀಚಕನ ಸಿರಬೆಂದಿತ್ತು;
ರುದ್ರನ ಹಾವುಗೆ ಉರಿಯಿತ್ತು, ದೇವಗಣಂಗಳು ನಿವಾಟವಾದರು.
ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು.
ಕೂಡಲಸಂಗಮದೇವ ಭಸ್ಮಧಾರಿಯಾದ.

ಸರ್ವಾಂಗವೇ ಲಿಂಗ. ವಿರಾಟಸ್ವರೂಪಿ. ಗೋಳಕನಾಥ, ರುದ್ರರ ವಾಸವೂ ಇಲ್ಲಿಯೇ. ಮಹೀತಳ, ಮರೀಚನೆಂಬ ಮನವೂ ಇಲ್ಲಿಯೇ ಇದೆ. ದೇವಗಣಂಗಳು ಇಲ್ಲಿಯೇ ಇದ್ದಾರೆ. ಐದು ಜ್ಞಾನೇಂದ್ರಿಯಗಳೆಂಬ ಗಂಡಂದಿರನ್ನು ಮನವೇ ಮಡದಿಯರ ಪಾತ್ರದಲ್ಲಿ ಹಿಡಿದುಕೊಂಡಿದ್ದಾಳೆ.

ಸರ್ವಾಂಗವೇ ಲಿಂಗವೆಂದು ಅಂಗ ತಿಳಿಯುತ್ತಿಲ್ಲ. ಶ್ರೀ ಗುರು ಅಂಗವನ್ನು ಹಿಡಿದು, ಅರಿವಿನ ಮಾಹಿತಿಯ ಕಿಚ್ಚನು ಅಡಿಗೆ ಹಚ್ಚಿ ಉರಿಯಿಸಿದಾಗ, ಎದ್ದ ಹೊಗೆಯಿಂದಾಗಿ ಮುಸುಕಿದ ಅಜ್ಞಾನವೆಲ್ಲ ದೂರವಾಯಿತು. ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು.

ಅಂಗ ಸುಟ್ಟು ಭಸ್ಮವಾಯಿತು. ಅಂಗದಲ್ಲಿಯೇ ಸಂಗಮವಾದ ಸಂಗಮನಾಥ ಭಸ್ಮಧಾರಿಯಾದ.

931

ಆ ಭಸ್ಮ ತಾಗಿ ಬ್ರಹ್ಮ ತನ್ನ ಕಪಾಲವಿಡಿದನು.
ಗಣನಾಥನ ಐವತ್ತೆರಡು ಸರ ಹರಿದು ಬಿದ್ದವು.
ಆ ಭಸ್ಮ ತಾಗಿ ಅಂಡಜ ಮುಗ್ದೆಯ ಮೂರು ಮೊಲೆ ಹರಿದು ಬಿದ್ದವು.
ನಾದಪ್ರಿಯ ನಂದಿಯನೇರಿಕೊಂಡು
ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು
ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

ಸೆಗಣಿಯನ್ನು ಮುಟ್ಟುವುದಿಲ್ಲ; ಮೂಸಿಸುವುದಕ್ಕೂ ಅಸಹ್ಯ; ಕಣ್ಣಿಗೆ ತೊಂದರೆ ಕೊಡುತ್ತದೆ. ಇಂತಹ ಸೆಗಣಿ ಒಣಗಿ ಕುರುಳಾಗುತ್ತದೆ; ಅಗ್ನಿ ತಾಗಿ ಭಸ್ಮವಾಗುತ್ತದೆ. ಹಣೆಗೆ ವಿಭೂತಿಯಾಗುತ್ತದೆ. ಧರಿಸಿದ ತನುವನ್ನು ವಿಭೂತಿ ಪುರುಷನೆಂದು ಗೌರವಿಸುತ್ತಾರೆ.

ಸೆಗಣಿಯಲ್ಲಿ ಭಸ್ಮವಿದೆ; ಅದು ಶರಣನಿಗೆ ಮಾತ್ರ ಗೋಚರವಾಗುತ್ತದೆ. ಪ್ರತಿ ತನುವಿನಲ್ಲಿ ಜ್ಞಾನ ಭಸ್ಮದಂತೆ ತನ್ಮಯವಾಗಿದೆ. ಸೆಗಣಿ ನೋಡುವ ಕಣ್ಣಿಗೆ ಜ್ಞಾನ ಕಾಣುವುದಿಲ್ಲ. ಜ್ಞಾನ ನೋಡುವ ಕಣ್ಣಿಗೆ ಸೆಗಣಿ ಕಾಣುವುದಿಲ್ಲ.

ಜ್ಞಾನಾಗ್ನಿ ತಾಗಿ ಭಸ್ಮವೇ ಆದ ತನುವಿನ ವಿರಾಟ ಸ್ವರೂಪ ನೋಡಲು ಹೋದರೆ ಮೈ ನವಿರೇಳುತ್ತದೆ. ತನುವಿನಲ್ಲಿ ತನ್ಮಯವಾದ ಬ್ರಹ್ಮ ತನ್ನ ಕಪಾಲವ ಹಿಡಿದ. ತನುವಿಗಂಟಿದ ಐವತ್ತೆರಡು ಅಕ್ಷರಗಳ ಸಕಲ ವಿದ್ಯೆಗಳ ಮಾಲೆಗಳು ಉದುರಿ ಬಿದ್ದವು. ಜಾಗ್ರತ್ ಸ್ವಪ್ನ ಸುಷುಪ್ತಿಗಳು, ರಾಜಸ ಸಾತ್ವಿಕ ತಾಮಸ ಗುಣಗಳು ಹರಿದು ಬಿದ್ದವು.

ನಾದಪ್ರಿಯ ನಂದಿಯ ನೇರಿಕೊಂಡು ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

ಲಿಂಗ ಮಧ್ಯೆ ಜಗತ್ ಸರ್ವಂ. ಲಿಂಗ ಬಯಲು. ಅದು ತನ್ನ ಸ್ವರೂಪ ಮೆರೆಯಲು ಅಂಗದಲ್ಲಿ ಚುಳುಕಾಗಿದೆ. ಆದರೆ ಅಂಗಕ್ಕೆ ಅತೀತವಾದುದು. ಅಂಗವನ್ನು ಆವರಿಸಿದ ಮನಕ್ಕೆ ಸರ್ವಾಂಗದಲ್ಲಿ ಚುಳಕಾದ ಲಿಂಗದ ವಾರ್ತೆ ತಿಳಿದರೆ ಮನವಿಲ್ಲ. ಘನದಿಂದ ಹುಟ್ಟಿದ ಮನ ಘನದ ವಾರ್ತೆ ತಿಳಿದು ಘನದಲ್ಲಿ ಬೆರೆತು ಘನವಾಯಿತು. ಪಶು, ಪತಿಗೆ ವಾಹನವಾಯಿತು. ಅತೀತನ ಮೇಲೆ ಆನಂದ ಸಿಂಹಾಸನವನ್ನಿಕ್ಕಿ ಕುಳಿತ ಸಂಗಯ್ಯನ ದೇವತ್ವ ಕೆಟ್ಟಿತ್ತು.

ಭೂಮಿಗೆ ಜಲ ಆಶ್ರಯ, ಅಗ್ನಿಗೆ ವಾಯು ಆಶ್ರಯ, ವಾಯುವಿಗೆ ಜಲಕ್ಕೆ ಭೂಮಿ ಆಶ್ರಯ ಭೂಮಿ ಆಕಾಶದಲ್ಲಿರುವ ಸರ್ವ ಗ್ರಹಗಳಿಗೆ ಬಯಲು ಆಶ್ರಯ. ಹೀಗಿದ್ದಾಗ ಬಯಲಿಗೆ ಯಾರು ಆಶ್ರಯ ನೀಡಿದರು ? ಅದು ಸತ್ಯ ; ಶಿವಮಯ; ಸುಂದರ. ದೇವತ್ವವನ್ನು ಕೆಡಿಸಿಕೊಂಡು ತಾನು ತಾನೇ ಆಗಿ ಸದಾಕಾಲ ಉಳಿದ ಸತ್ಯ. ಇಂತಹ ಸತ್ಯವೇ ತಾನೆಂದು ತಿಳಿದಾಗ ಇನ್ನೇನಿನ್ನೇನು.

932

ನಾನೊಮ್ಮೆ ಬೇಂಟೆಯ ಹೋದಡೆ ಬಸಿತಕ್ಕಾಹುತಿಯನಿಕ್ಕಿಹೆನೆಂದು
ಸಾಸಿರದೇಳು ನೂರು ವರುಷ ಒಬ್ಬ ರಾಜನ ಕೊಂದೆನು.
ಅವನ ಹೆಂಡತಿ ಐವತ್ತೆರಡು ಕಣ್ಣವಳು.
ಅವಳು ತನ್ನ ಹೂ ಮುಡಿಯ ಬಿಟ್ಟು ಅತ್ತಳು.
ಅವಳ ಬಾಯಲ್ಲಿ ಅಜ ಬಿದ್ದ, ಕಂಗಳಲ್ಲಿ ಧೂಮಕೇತು ಬಿದ್ದ;
ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

ಮನುಷ್ಯ ಹುಟ್ಟಿ ಹಲವಾರು ಸಾವಿರ ವರ್ಷಗಳಾಗಿವೆ. ಮನುಷ್ಯನಿಗೆ ಇದ್ದಷ್ಟು ಅರಿವು ಯಾವ ಪ್ರಾಣಿಗೂ ಇಲ್ಲ. ಆದರೂ ಸಾವಿರಾರು ವರ್ಷಗಳಿಂದಲೂ ತನ್ನ ಅಜ್ಞಾನದ ವಿರುದ್ಧ ತಾನೇ ಯುದ್ಧ ಮಾಡುತ್ತಿದ್ದಾನೆ. ತನ್ನ ರಕ್ತವನ್ನು ತಾನೇ ಕುದಿಸಿಕೊಂಡು ತನುವನ್ನು ಬೇಯಿಸಿ ತನುವಿನಲ್ಲಿಯೇ ಹುಟ್ಟಿದ ಅಹಂಕಾರದ ರಾಜನನ್ನು ತಾನೇ ಕೊಂದು ತಾನೇ ಸಂತೋಷದಿಂದ ಕೊಂದೆನೆಂದು ಬೀಗುತ್ತಾನೆ.

ಶ್ರೀ ಕೃಷ್ಣ ಬ್ರಹ್ಮಜ್ಞಾನಿಯಾದರೂ ಜಾಂಬುವಂತನೊಂದಿಗೆ ಸಾವಿರಾರು ವರ್ಷ ಯುದ್ಧ ಮಾಡಿದ. ಮಗಳೊಂದಿಗೆ ವರಿಸಿ ಮಣಿಯನ್ನು ತಂದ. ಇದು ಜ್ಞಾನ ಪ್ರಧಾನವಾದ ಕತೆಯಾದರೂ ಅಜ್ಞಾನದಿಂದ ಕೃಷ್ಣನದೊಂದು ಪಂಗಡ ಜಾಂಬುವಂತನದೊಂದು ಪಂಗಡವಾಗಿದೆ. ತನು ಒಂದೇ. ಪಂಗಡಗಳು ಎರಡು. ಎರಡು ಪಂಗಡದ ತನುಗಳಲ್ಲಿ ಜ್ಞಾನವಿದೆ. ಅಜ್ಞಾನವಿದೆ. ತನು ಮೂಲತಃ ಜ್ಞಾನಿ ಎಂದು ಗುರುತಿಸಲ್ಪಟ್ಟರೂ ತನುವಿನ ಅಜ್ಞಾನದ ಬೇಟೆ ನಿಂತಿಲ್ಲ.

ಬೇಟೆಯಾಡಿ ಅಜ್ಞಾನ ಕೊಂದೆ ಎಂದು ಸಂತೋಷ ಪಡುವಷ್ಟರಲ್ಲಿಯೇ ಜ್ಞಾನದ ಅಹಂಕಾರ ಸೂಕ್ಷ್ಮವಾಗಿ ತನುವನ್ನು ಕಾಡುವುದು. ತನುವಿನ ಸೂಕ್ಷ್ಮ ಜ್ಞಾನಕ್ಕೆ ಬಸವಣ್ಣನವರು ಹೆಂಡತಿ ಎಂದು ಕರೆದರು. ಅರಿವಿಗೆ ಗಂಡನೆಂದು ಕರೆದರು. ಅಜ್ಞಾನಕ್ಕೆ ಅಹಂಕಾರಿ ರಾಜನೆಂದು ಕರೆದಿದ್ದಾರೆ. ವ್ಯಾಸ ಮಹರ್ಷಿಗಳು ಶುದ್ಧ ಮನಕ್ಕೆ ದ್ರೌಪದಿಯೆಂದು ಹೆಸರಿಟ್ಟರು. ಪಂಚಜ್ಞಾನೇಂದ್ರಿಯಗಳಿಗೆ ಪಾಂಡವರೆಂದು ಕರೆದರು. ಆ ಐದು ಜನರಿಗೆ ಒಬ್ಬಳನ್ನೇ ಮದುವೆ ಮಾಡಿದರು.

ಆದರೂ ಅಜ್ಞಾನ ತೊಲಗಲಿಲ್ಲ. ತನುವಿನ ಉದರದಲ್ಲಿಯೇ ಪಾಂಡವರು ಕೌರವರು ಜನಿಸಿದರು. ತನುಗಳು ತನುಗಳೊಂದಿಗೆ ಯುದ್ಧ ಮಾಡಿದವು. ಸಾವಿರಾರು ವರುಷಗಳಾದರೂ ತನುವಿನಲ್ಲಿ ಹುಟ್ಟಿದ ಅಜ್ಞಾನವನ್ನು ತನು ಕೊಲ್ಲಲಾಗಲಿಲ್ಲ.

ಅವನ ಹೆಂಡತಿ ಐವತ್ತೆರಡು ಕಣ್ಣವಳು. ಅವಳು ತನ್ನ ಹೂ ಮುಡಿಯ ಬಿಟ್ಟು ಅತ್ತಳು. ಅವಳ ಬಾಯಲ್ಲಿ ಅಜ ಬಿದ್ದ, ಕಂಗಳಲ್ಲಿ ಧೂಮಕೇತು ಬಿದ್ದ; ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು:

ತನು ಮೂಲತಃ ಜ್ಞಾನಿಯಾದರೂ ತನುವನ್ನು ಆವರಿಸಿದ ಮನ ಜ್ಞಾನಕ್ಕೆ ಸೋಲುವುದಿಲ್ಲ; ಸೋತು ಜ್ಞಾನಿಯಂತೆ ನಟಿಸುತ್ತದೆ. ಹೀಗೆ ನಟಿಸುವ ಮನಕ್ಕೆ ಅಣ್ಣನವರು ಹೆಂಡತಿ ಎಂದು ಹೆಸರಿಸಿದ್ದಾರೆ. ಈಕೆ ಐವತ್ತೆರಡು ಅಕ್ಷರ ಕಲಿತವಳು. ಸಕಲ ವೇದ ಆಗಮ ಉಪನಿಷತ್ತು ಭಗವದ್ಗೀತೆ ಬೈಬಲ್‌ಗಳನ್ನು ಓದಿದವಳು. ಬಾಯಿಂದ ನುಡಿಯುವುದೆಲ್ಲ ಬ್ರಹ್ಮ ನುಡಿ. ಅವಳ ಬಾಯಲ್ಲಿ ಬ್ರಹ್ಮ ಬಿದ್ದ. ಕಂಗಳಲ್ಲಿ ಮಾತ್ರ ದೂಮಕೇತು ಬಿದ್ದ. ನೋಡಿದ್ದೆಲ್ಲ ಭಸ್ಮ.ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನದೇ ಅಂಗವಾದರೂ, ಆತನೇ ಗಂಡನಾದರೂ ಮನವೆಂಬ ಹೆಂಡತಿಯದೇ ಕಾರುಬಾರು. ಅರಿವಿನ ಗಂಡ ಕೂಡಲ ಸಂಗಮದೇವರ ದೇವತ್ವ ಕೆಟ್ಟಿತ್ತು.

ಸೂಕ್ಷ್ಮಾತಿ ಸೂಕ್ಷ್ಮ ವಚನ. ಸಾಧಕರಿಗೆ ಸೂತ್ರ ಪ್ರಧಾನವಾದ ವಚನ. ಅನುಭವಕ್ಕೆ ಮಾತ್ರ ಬರುವುದನ್ನು ಅಕ್ಷರಗಳಲ್ಲಿ ಬಂಧಿಸುವುದು ಸುಲಭವಲ್ಲ. ಇಚ್ಚಿಸಿದರೆ ಅನುಭವಕ್ಕೆ ತಂದುಕೊಳ್ಳುವುದು ಕಠಿಣವಲ್ಲ.

933

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೆ ಐದಾರೆ.
ಆನು ದೇವಾ ಹೊರಗಣವನು,
ಸಂಬೋಳಿ ಎನುತ್ತ ಇಂಬಿನಲ್ಲಿ ಇದೇನೆ.
ಕೂಡಲಸಂಗಮದೇವಾ,
ನಿಮ್ಮ ನಾಮವಿಡಿದ ಅನಾಮಿಕ ನಾನು.

ಅಂಗದಲ್ಲಿಯೇ ಅರಿವಿನ ಲಿಂಗ ಸಂಗಮವಾಗಿದೆ. ಅದನ್ನು ಮನದಿಂದಲೇ ತಿಳಿದು ಪೂಜಿಸಬೇಕು. ಮನ ಅರಿಯದಿದ್ದರೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಅಂಗದಲ್ಲಿಯೇ ಉಳಿಯುತ್ತವೆ. ತ್ರಿಕಾಲ ಲಿಂಗಾರ್ಚನೆ ಮಾಡಿ ಅಂಗದ ಮೇಲೆ ಲಿಂಗ ಧರಿಸಿ ಅಂಗದಲ್ಲಿಯೇ ಅರಿಷಡ್ವರ್ಗಗಳು ಸಲಿಗೆಯಿಂದ ಉಳಿಯುತ್ತವೆ.

ಆನು ದೇವಾ ಹೊರಗಣವನು, ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದೇನೆ ಕೂಡಲಸಂಗಮದೇವಾ:

ಅಂಗದಲ್ಲಿಯೇ ಸಂಗಮವಾದ ಅರಿವು, ಅಂಗವನ್ನು ಆವರಿಸಿದ ಮನಕ್ಕೆ ಅರಿವಾದರೆ ಆ ಅರಿವೇ ಗುರುವಾಗುತ್ತಾನೆ. ಆ ಗುರುದೇವನೇ ಮಹಾದೇವನಾಗುತ್ತಾನೆ. ಆ ಮಹಾದೇವನೇ ಸದಾಶಿವನಾಗುತ್ತಾನೆ; ಸಾಕ್ಷಾತ್ ಪರಬ್ರಹ್ಮನಾಗುತ್ತಾನೆ. ಅರ್ಚನೆ ಪೂಜನೆಗೆ ಒಳಗಾದ ದೇವನಿಂದ ಹೊರಗಾಗುತ್ತಾನೆ. ಅರಿವಿನ ದೇವನಿಗೆ ಹತ್ತಿರವಾಗಿ, ಅರಿವಿನೊಳಗೆ ಅರಿವೆ ಆಗಿ ಒಂದಾಗುತ್ತಾನೆ. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನ ನಾಮ ಹಿಡಿದು ಅನಾಮಿಕನಾಗುತ್ತಾನೆ. ಹೆಸರಿಲ್ಲದ ಅರಿವಿನ ಅರಸನಾಗುತ್ತಾನೆ.

934

ಶಿವ ಶಿವಾ, ಮೂರ್ತಿಗೆ ಸತ್ಯ ಶುದ್ಧ ಉಂಟೆಂಬಿರಿ;
ಸತ್ಯ ಶುದ್ಧ ವುಳ್ಳವಂಗೆ ಗುರುವಿಲ್ಲ.
ಸತ್ಯ ಶುದ್ಧ ವುಳ್ಳವಂಗೆ ಲಿಂಗವಿಲ್ಲ.
ಸತ್ಯ ಶುದ್ಧ ವುಳ್ಳವಂಗೆ ಜಂಗಮವಿಲ್ಲ.
ಸತ್ಯ ಶುದ್ಧ ವುಳ್ಳವಂಗೆ ಪ್ರಸಾದವಿಲ್ಲ.
ಸತ್ಯ ಶುದ್ಧ ವುಳ್ಳವಂಗೆ ಗಣತ್ವವಿಲ್ಲ ಕೇಳಿರೆ.
ಸತ್ಯ ಶುದ್ಧ ದೇವರಿಗೆ ಉಪಚಾರವುಂಟು.
ಸತ್ಯ ಶುದ್ಧ ದೇವರಿಗೆ ಧ್ಯಾನ ಮೌನ ಅನುಷ್ಠಾನವುಂಟು,
ಸತ್ಯ ಶುದ್ಧ ಉಪದೇಶಕ್ಕೆ ಜಪತಪ ಸಂಜೆ ಸಮಾಧಿ
ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರವುಂಟು.
ಆದ ಕಾರಣ ಇಂತಪ್ಪ ಸತ್ಯ ಶುದ್ಧ ಗುರುವಿಂಗೆ ಶರಣೆನ್ನೆ,
ಇಂತಪ್ಪ ಸತ್ಯ ಶುದ್ಧ ಲಿಂಗಕ್ಕೆ ಶರಣೆನ್ನೆ,
ಇಂತಪ್ಪ ಸತ್ಯ ಶುದ್ಧ ಪ್ರಸಾದಕ್ಕೆ ಕೈಯಾನೆ.
ಇವರೆಲ್ಲ ಬ್ರಹ್ಮನ ಮಕ್ಕಳು.
ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ,
ಆವ ಸಹಜವೂ ಇಲ್ಲದ ಲಿಂಗೈಕ್ಯ ಕಾಣಾ,
ಕೂಡಲಸಂಗಮದೇವಾ.

ಶಿವ ಶಿವಾ, ಮೂರ್ತಿಗೆ ಸತ್ಯ ಶುದ್ಧ ಉಂಟೆಂಬಿರಿ:

ಕಲ್ಲು ತಂದು, ಕಲಾವಿದನಿಗೆ ಕೊಟ್ಟು, ಮೂರ್ತಿ ಮಾಡಿಸಿ, ಒಂಬತ್ತು ಧಾನ್ಯಗಳಲ್ಲಿ ಮಲಗಿಸಿ ಪ್ರಾಣ ಪ್ರತಿಷ್ಠಾನ ಮಾಡಿ, ವೇದ ಮಂತ್ರಗಳನ್ನು ಘೋಷಿಸಿ ರುದ್ರಾಭಿಷೇಕ ಮಾಡಿದ ಮೇಲೆ ಮೂರ್ತಿ ಸತ್ಯ ಶುದ್ಧವಾಯಿತು ಎಂದು ಹೇಳುತ್ತಾರೆ. ಆದರೆ ಕಲ್ಲು ಎನ್ನುವ ಅರಿವು ಸಂಪೂರ್ಣವಾಗಿ ಹೋಗಿ ದೇವರಾಯಿತು. ಇಂತಹ ದೇವರನ್ನು ಪೂಜಿಸುವ ಅಂಗ, ಸತ್ಯ ಶುದ್ಧ ಉಳ್ಳ ಅಂಗ. ಈ ಅಂಗಕ್ಕೆ ಅಂಗದಲ್ಲಿಯೇ ಸಂಗಮವಾದ ಲಿಂಗದ ದರುಶನವಿಲ್ಲ. ಅಂಗದಲ್ಲಿಯೇ ಸಂಗಮವಾದ

ಅರಿವೆಂಬ ಜಂಗಮನ ದರುಶನವಿಲ್ಲ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಅಜ್ಞಾನ ಅಂಗಕ್ಕೆ ಪ್ರಸಾದವಾಗುವುದಿಲ್ಲ.

ಇಂತಹ ಸತ್ಯ ಶುದ್ಧ ಉಳ್ಳ ದೇವರಿಗೆ ನಾನಾ ವಿಧ ಫಲ ಪುಷ್ಪಗಳಿಂದ ಉಪಚಾರವುಂಟು. ಧ್ಯಾನ ಮೌನ ಅನುಷ್ಠಾನ ಉಂಟು. ಜಪ ತಪ ಸಮಾಧಿ ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರವುಂಟು. ಆದ ಕಾರಣ ಇಂತಪ್ಪ ಸತ್ಯ ಶುದ್ಧ ಗುರುವಿಗೆ ಶರಣೆನ್ನೆ, ಎರೆದರೆ ನೆನೆಯದ ಸತ್ಯ ಶುದ್ಧ ಲಿಂಗಕ್ಕೆ ಶರಣೆನ್ನೆ. ಗೋಚರದ ಆಚಾರದಲ್ಲಿ ನಿರತನಾದ ಜಂಗಮನಿಗೂ ಶರಣೆನ್ನೆ. ಕಲ್ಲನ್ನೇ ದೇವರೆಂದು ತಿಳಿದು ಎಡೆ ಮಾಡಿದ ಪ್ರಸಾದಕ್ಕೆ ಕೈಯಾನೆ. ಇವರೆಲ್ಲ ಬ್ರಹ್ಮನ ಮಕ್ಕಳು; ಭ್ರಮೆ ಉಳ್ಳವರು; ಬ್ರಹ್ಮರಲ್ಲ !

ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಆವ ಸತ್ಯವೂ ಇಲ್ಲದ ಲಿಂಗೈಕ್ಯ ಕಾಣಾ, ಕೂಡಲಸಂಗಮದೇವಾ:

ಅಂಗದಲ್ಲಿಯೇ ಸಂಗಮವಾದ ಅರಿವಿಗೆ ಇದಾವುದೂ ಬೇಡ. ಅದು ಸಹಜ; ಸದಾ ಸತ್ಯ. ಅಂಗದಲ್ಲಿಯೇ ಐಕ್ಯವಾಗಿದೆ. ಅಂಗವನ್ನು ಆವರಿಸಿದ ಮನ ಸಹಜ ಅರಿವನ್ನು ತಿಳಿದರೆ ಸಾಕು. ಸತ್ಯವೂ ಇಲ್ಲ, ಅಸತ್ಯವೂ ಇಲ್ಲ. ಸದಾ ಸಹಜ !

ಐಕ್ಯನ ಭಕ್ತಸ್ಥಲ

935

ಭಕ್ತನಾಯಿತ್ತೆ ಭಕ್ತಿ ದಾಸೋಹ; ಯುಕ್ತನಾಯಿತ್ತೆ ಯುಕ್ತಿ ದಾಸೋಹ;
ಐಕ್ಯನಾಯಿತ್ತೆ ಮಮಕಾರ ದಾಸೋಹ.
ಸರ್ವದಲೆ ದಾಸೋಹವೇ ಬೇಕು;
ಈ ದಾಸೋಹದ ಅನುವ ಕೂಡಲಸಂಗಯ್ಯ ತಾನೆ ಬಲ್ಲ.

ತನುವನ್ನು ಆವರಿಸಿದ ಮನ, ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಮೂರು ವಿಧಾನಗಳಿಂದ ಪಡೆದು ಜ್ಞಾನಿಯಾಗಬಹುದು; ಭಕ್ತಿಯಿಂದ, ಯುಕ್ತಿಯಿಂದ, ಐಕ್ಯ ಮಮಕಾರ ದಾಸೋಹದಿಂದ ಮಾತ್ರ ಪಡೆಯಬಹುದಾಗಿದೆ.

ಭಕ್ತಿಯಿಂದ ಜ್ಞಾನ ಪಡೆಯುವ ಬಗೆ:

ತನುವಿನಲ್ಲಿ ಅರಿವೆಂಬ ಅವ್ಯಕ್ತ ಗುರುದೇವನಿದ್ದಾನೆ. ಆತ ತನುವನ್ನು ಅರಿವಿನಿಂದ ಕೈ ಹಿಡಿದು ನಡೆಸುತ್ತಾನೆ. ಇಂತಹ ತನುವನ್ನು ಮನವೆಂಬ ಭವಿ ಆವರಿಸಿದೆ. ಈ ಭವಿಯೇ ಅರಿವೆಂಬ ಗುರುದೇವನಿಗೆ ಭಕ್ತಿ ಮಾಡಿ ತನ್ನ ಭವಿತನ ಕಳೆದುಕೊಳ್ಳಬೇಕು. ಭವಿ ಎಂದರೆ ಅಜ್ಞಾನ. ಮನದ ಅಜ್ಞಾನವನ್ನು ತನುವಿನಲ್ಲಿಯೇ ತನ್ಮಯವಾದ ಜ್ಞಾನಕ್ಕೆ ದಾಸೋಹದ ಮೂಲಕ ಭಕ್ತಿಯಿಂದ ಅರ್ಪಿಸಬೇಕು. ಇದು ಭಕ್ತಿ ದಾಸೋಹ. ಅರಿವಿನ ದಾಸೋಹದ ಅಗೋಚರದ ಆಚಾರ. ಮಹಾಜ್ಞಾನಿ ಜ್ಞಾನಭಂಡಾರಿ ಬಸವಣ್ಣನವರು ಭಕ್ತಿ ದಾಸೋಹದ ಅಗೋಚರ ಜ್ಞಾನಾಚಾರವನ್ನು ಆಚರಿಸಿ ಸಕಲ ತನು ಕುಲಕ್ಕೆ ಭಕ್ತಿ ದಾಸೋಹ ಸೂತ್ರವನ್ನು ಕರುಣಿಸಿದ್ದಾರೆ.

ಯುಕ್ತಿ ದಾಸೋಹ:

ಸಕಲ ವಸ್ತುವಿನ ಸತ್ಯವನ್ನು ಅರಿವಿನಿಂದ ನೋಡುವುದು ಯುಕ್ತಿಯಿಂದ ಉದಾಸೀನ ಮಾಡುವುದು; ಯುಕ್ತಿ ದಾಸೋಹ. ಉದಾ; ದೇವಾಲಯದ ಸತ್ಯ ಕಲ್ಲು. ದೇವರ ಮೂರ್ತಿಯ ಸತ್ಯವೂ ಕಲ್ಲು. ದೇವರು ಎನ್ನುವ ಅಜ್ಞಾನದ ದಾಸೋಹವನ್ನು ಯುಕ್ತಿಯಿಂದ ಕಲ್ಲಿಗೆ ಅರ್ಪಿಸಿದರೆ ದೇವರಿಲ್ಲ; ಪೂಜೆಯೂ ಇಲ್ಲ. ಪ್ರಯಾಣವೂ ಇಲ್ಲ. ದೇವಾಲಯಗಳ ನಿರ್ಮಾಣವೂ ಇಲ್ಲ. ಸದಾ ಯುಕ್ತಿಯಿಂದ ಮನಕ್ಕೆ ಅರಿವು ಬಳಕೆಯಾಗಿ, ತನುವಿನಲ್ಲಿ ಹುಟ್ಟಿದ ಅಜ್ಞಾನವನ್ನು ತನುವಿನಲ್ಲಿಯೇ ತನ್ಮಯವಾದ ಅರಿವಿಗೆ ಮನ ಯುಕ್ತಿಯಿಂದ ಅರ್ಪಿಸುವುದೇ ಯುಕ್ತಿ ದಾಸೋಹ.

ಐಕ್ಯನಾಯಿತ್ತೆ ಮಮಕಾರ ದಾಸೋಹ:

ಮನ ಭಕ್ತಿಯಿಂದ, ಯುಕ್ತಿಯಿಂದ ಅರಿವಿನಲ್ಲಿ ಐಕ್ಯವಾದರೂ ಅದರ ಮಮಕಾರದ ಅಜ್ಞಾನ ಕೂಡಲೇ ತೊಲಗುವುದಿಲ್ಲ. ಮನದಲ್ಲಿ ಉಂಟಾದ ಮಮಕಾರವನ್ನು ಕೂಡಾ ಅರಿವಿಗೆ ಅರ್ಪಿಸಿ ದಾಸೋಹಿಯಾಗಬೇಕು. ಸರ್ವ ಅಗೋಚರದ ದಾಸೋಹವೇ ಬೇಕು. ಈ ದಾಸೋಹದ ಅನುವಿನ ಸೂತ್ರಗಳನ್ನು ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನೇ ಮನಕ್ಕೆ ಹೇಳಿ ಕೊಡುತ್ತಾನೆ. ಮನ ಅರಿವಿನಿಂದ ಅಂತರಂಗದಲ್ಲಿಯೇ ಆಲಿಸಬೇಕು.

936

ಜಲವ ನುಂಗಿತ್ತಯ್ಯಾ ಎನ್ನ ಕರವು,
ಪತ್ರೆಯ ನುಂಗಿತ್ತಯ್ಯಾ ಎನ್ನ ಶಿಖೆ;
ಎನ್ನಯ ಮಂತ್ರ ಭಿನ್ನವಾಯಿತ್ತು !
ಇಂತೀ ದ್ವಿವಿಧ ಒಂದಾಗದ ಮುನ್ನ
ಕೂಡಲಸಂಗಮ ದೇವರು ಪೂಜೆಗೊಂಡರು.

ಗಂಗೆಯ ನುಂಗಿ ಅಂಗವಾಗಿದೆ; ಲಿಂಗಾಂಗವಾಗಿದೆ. ಅದಕ್ಕಾಗಿಯೇ ಗಂಗೆಯ ನುಂಗಿದ ಅಂಗಕ್ಕೆ ಗಂಗಾಧರನೆಂದು ಕರೆದು ಪೂಜಿಸುತ್ತಾರೆ. ಶಿಖೆಯ ಮೇಲೆ ಪತ್ರೆ ಪುಷ್ಪವನಿತ್ತು ಗಂಗಾಧರನನ್ನು ಪೂಜಿಸುತ್ತಾರೆ. ಅಂಗವೆಲ್ಲ ಗಂಗೆಯಿಂದಲೇ ಗಟ್ಟಿಯಾಗಿದೆ. ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಆಗಿ ಹೊರ ಚೆಲ್ಲದಂತೆ ಚರ್ಮದಲ್ಲಿ ಬಂಧಿಸಿದ ಗಂಗೆಯೆ ಗಂಗಾಧರನೆಂಬ ಹೆಸರು ಪಡೆದಿದೆ.

ಗಂಗೆ, ಗಂಗಾಧರ ಒಂದಾಗದ ಮುನ್ನ ಅಂಗವಲ್ಲ. ಅಂಗದ ಸೃಷ್ಟಿಗೆ ಗಂಗೆಯೇ ಕಾರಣ. ಗಂಗೆಯನ್ನು ಸೃಷ್ಟಿಸಿ ಅಂಗದಲ್ಲಿ ಧರಿಸಿದ ಗಂಗಾಧರನೆ ಕಾರಣ. ಇವೆರಡೂ ಒಂದಾಗದ ಮುನ್ನ ಪೂಜೆಯುಂಟು. ಅಂಗ ಬೇರಲ್ಲ; ಅಂಗವನ್ನು ಧರಿಸಿದ ಲಿಂಗವೂ ಬೇರಲ್ಲ ಎಂದು ಅರಿವಿನಿಂದ ತಿಳಿದ ಬಳಿಕ ಪೂಜೆಯಿಲ್ಲ. ಪೂಜಿಸಿದರೆ ತನ್ನನ್ನು ತಾನು ಪೂಜಿಸಿಕೊಳ್ಳಬೇಕು.

937

ಎಲ್ಲವ ಬೇಡಿದರೆಮ್ಮವರು ಒಂದು ಬೇಡ ಮರೆದರಯ್ಯಾ;
ಮರ್ತ್ಯಲೋಕದ ಗಣಂಗಳು ಒಂದು ಬೇಡ ಮರೆದರು.
ಕೂಡಲಸಂಗಮದೇವಾ, ಎನ್ನ ಬೇಡ ಮರೆದರು.

ನಾನು ಎನ್ನುವ ಅಹಂಕಾರದ ಅಜ್ಞಾನವನ್ನು ಜಂಗಮನಿಗೆ ಬೇಡುವುದು

ಸಾಧ್ಯವಾಗುವುದಿಲ್ಲ. ಭೂಮಿ, ಹೇಮ ಬೇಡುವ ಜಂಗಮ ಜಂಗಮನಲ್ಲ. ಪಡಿ ಪದಾರ್ಥ ಪ್ರಸಾದ ವಸ್ತ್ರ ಬೇಡುವವನೂ ಜಂಗಮನಲ್ಲ. ಲಿಂಗ ತತ್ವ ಬೋಧಿಸಿದೆನೆಂದು ಹೆಮ್ಮೆಯಿಂದ ಎಲ್ಲವನೂ ಬೇಡಬಹುದು. ಆದರೆ ತನುವನ್ನು ಮಾರಿಯಂತೆ ಆವರಿಸಿದ ನಾನು ಎನ್ನುವ ಅಹಂಕಾರವನ್ನು ; ಬೇಡುವ ಜಂಗಮನಿಗೆ ಬೇಡಲು ಬರುವುದಿಲ್ಲ.

'ಬೇಡುವವನು ಜಂಗಮನೇ ? ನೀಡುವವನು ಭಕ್ತನೆ ? ಬೇಡುವವನಿಗೂ ಬೇಡಿಸಿಕೊಂಬುವವನಿಗೂ ಮುಕ್ತಿಯಿಲ್ಲ.' ನಾನು ಎನ್ನುವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಜಂಗಮನಿಗೆ ನೀಡಿ ಧನ್ಯನಾಗಬೇಕೆಂಬ ಕಲೆ ಭಕ್ತನಿಗೆ ಹೊಳೆಯಬೇಕು. ಅಂತಹ ಜಂಗಮನನ್ನು ಹಗಲಿರಳೂ ಭಕ್ತ ಹುಡುಕಬೇಕು.

ತನುವಿನ ಅಹಂಕಾರ ಧಾರೆ ಎರೆದು ನೀಡುವ ಭಕ್ತನನ್ನು ಜಂಗಮ ಹಗಲಿರುಳೂ ಹುಡುಕಬೇಕು. ಅನುವು ನೋಡಿ ಭಕ್ತನನ್ನು ಜಂಗಮ ಬೇಡಬೇಕು. ಅಂಗದಲ್ಲಿಯೇ ಸಂಗಮವಾದ ಜಂಗಮನನ್ನು ಭಕ್ತನಿಗೆ ತೋರಿ ಜಂಗಮ ಪ್ರಸನ್ನನಾಗಬೇಕು. ನೀಡುವ ಬೇಡುವ ಕ್ರಿಯೆ ಸಂಪನ್ನವಾಯಿತೆಂದು ಇಬ್ಬರೂ ಆನಂದದಲ್ಲಿ ಮುಳಗಬೇಕು.

938

ಭಿತ್ತಿಯಿಲ್ಲದ ಚಿತ್ತಾರದಂತೆ
ಭಕ್ತಿಯಿಲ್ಲದ ಪ್ರಮಥನಾಗಿ ಎಂದಿಪ್ಪೆನಯ್ಯಾ ?
ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯಾ ?
ಗರಿಯಿಲ್ಲದ ಕೋಲಿನಲ್ಲಿ ಉದ್ದರೆಯನಿಕ್ಕಿದ
ಭಂಡದ ಹರದನಂತಾದೆನಯ್ಯಾ ಕೂಡಲಸಂಗಮದೇವಾ.

ಬೆಳಕು ನೆರಳಿನಿಂದ ಉಂಟಾದ ಚಿತ್ರಗಳಿಗೆ ಭಿತ್ತಿಯ ಅವಶ್ಯಕತೆ ಇಲ್ಲ. ಬಣ್ಣ ಕುಂಚದ ಅವಶ್ಯಕತೆಯೂ ಇಲ್ಲ. ಎಷ್ಟೋ ಚಿತ್ರಗಳು ಹುಟ್ಟುತ್ತವೆ; ಹುಟ್ಟಿದ ಎಷ್ಟೋ ಚಿತ್ರಗಳು ಇಲ್ಲವಾಗುತ್ತವೆ. ಪ್ರಮಥನಾಗಿ ಮೆರೆಯುವ ಚಿತ್ರ ಮಾತ್ರ ಅಲ್ಲೊಂದು ಇಲ್ಲೊಂದು!

ಆ ಚಿತ್ರಕ್ಕೆ ಸುಳ್ಳು ಸತ್ಯಗಳು ಬೇಕಿಲ್ಲ. ವ್ಯವಹಾರದ ಗೋಜು ಗದ್ದಲವಿಲ್ಲ. ಕಾಣೆಯ ಸೋಲ, ಅರ್ಧಗಾಣಿಯ ಗೆಲ್ಲ. ಒಮ್ಮನವಾದಡೆ ಒಡನೆ ನುಡಿವನು. ಇಮ್ಮನವಾದಡೆ ನುಡಿಯನು. ಧರಣಿಯ ಮೇಲೆ ಒಂದು ಹಿರಿದಪ್ಪ ಅಂಗಡಿಯನು ಇಟ್ಟು ವ್ಯಾಪಾರಕ್ಕೆ ಕುಳಿತ್ತಿದ್ದಾನೆ ನಮ್ಮ ಮಹಾದೇವಸೆಟ್ಟಿ. ಅದು ಭಿತ್ತಿ ಇಲ್ಲದ ಚಿತ್ರದ ಅಂಗಡಿ!

ವಿಚಿತ್ರ ಆದರೂ ಸತ್ಯ. ಸಿನಿಮಾದಲ್ಲಿ ಬಿಳಿಯ ಭಿತ್ತಿಯೊಂದಿದೆ ಆ ಭಿತ್ತಿಯನ್ನು ಯಾರೂ ನೋಡುವುದಿಲ್ಲ. ಆ ಭಿತ್ತಿಯ ಮೇಲೆ ಮೂಡುವ ಚಿತ್ರ ನೋಡುವುದಕ್ಕಾಗಿ ತವಕ. ರಾಮಾಯಣ ಮಹಾಭಾರತದ ಚಿತ್ರ. ಘೋರ ಯುದ್ಧ , ಸಾವು, ನೋವುಗಳು, ಗುಡುಗು, ಸಿಡಿಲು ,ಭೋರ್ಗರೆವ, ಮಳೆ , ಪ್ರವಾಹ , ಭೂಕಂಪ , ಚಿಮ್ಮುವ ಲಾವಾರಸ , ಹೊತ್ತಿ ಉರಿಯುವ ಬೆಂಕಿ, ಸಾವು ನೋವುಗಳು ಖಡ್ಗದ ಹಿರಿತದಿಂದ ಉಂಟಾದ ರಕ್ತದ ಮಡುವು. ಕಾಲುವೆಯಾಗಿ ಹರಿಯುವ ರಕ್ತ. ಹಿಮಾಲಯ, ಕೈಲಾಸ, ಯಮಲೋಕ, ದೇವಲೋಕಗಳು. ಮಾನವ ರಕ್ಕಸರ ಯುದ್ಧ. ಈ ಎಲ್ಲ ಚಿತ್ರಗಳು ಭಿತ್ತಿಯ ಮೇಲೆ ಕಂಡರೂ ಭಿತ್ತಿಯ ಕಳೆ ಕುಂದಲಿಲ್ಲ. ಕತ್ತಿಯ

ಮೊನೆಯಿಂದ ಭಿತ್ತಿ ಹರಿಯಲಿಲ್ಲ. ರಕ್ತದ ಕಲೆಗಳು ಭಿತ್ತಿಗೆ ಅಂಟಲಿಲ್ಲ. ಇದೆಲ್ಲ ಬೆಳಕು ನೆರಳಿನ ಆಟ!

ಬಿಳಿಯ ಭಿತ್ತಿ ಯಾರೂ ನೋಡುವುದಿಲ್ಲ, ನೋಡಿದ ಚಿತ್ರಗಳು ಸಮಾಧಾನ ತರುವುದಿಲ್ಲ. ಭಿತ್ತಿಯಿಲ್ಲದ ಚಿತ್ತಾರದ ವ್ಯವಹಾರ ನಿರಂತರ ನಡೆದಿದೆ. ಭಕ್ತಿಯಿಂದ ಭಿತ್ತಿ ನೋಡಿದ ತನು ಪ್ರಮಥನಾಗಿ ಉಳಿಯುತ್ತದೆ. ಸತ್ಯವಲ್ಲದ ಚಿತ್ರವನ್ನು ನೋಡದೆ ಇಲ್ಲದ ಭಿತ್ತಿಗೆ ಶರಣು ಹೋಗಿ ಶರಣನಾಗಿ ಉಳಿಯುತ್ತಾನೆ. ಗರಿಗಳಿಲ್ಲದ ಕೋಲಿನಿಂದ ವಸ್ತ್ರ ಅಳೆದು ವ್ಯವಹರಿಸುತ್ತಾನೆ. ಹಣವಿಲ್ಲದೆ ವ್ಯವಹಾರ ಮಾಡುವ ಜ್ಞಾನದ ವ್ಯಾಪಾರಿಯಾಗುತ್ತಾನೆ.

939

ಆಯತ ಒಂದೆಡೆಯಲ್ಲಿ ತೆರನನರಿಯರಾಗಿ
ನೋಡಬಾರದು, ನೋಡಿ ನುಡಿಸಬಾರದು;
ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ !

ಬಿಚ್ಚಿ ಬೇರಾಗದಂತೆ ಅಂಗದೊಂದಿಗೆ ಆಯತವಾದ ಅರಿವಿನ ಲಿಂಗವನು ಅರಿಯದೆ, ಅಂಗದ ಮೇಲೆ ಒಂದೆಡೆಯಲ್ಲಿ ಆಯತ ಮಾಡಿಕೊಂಡ ಲಿಂಗವನು ಪೂಜಿಸುವುದು ನಿರಂತರ ನಡೆದಿದೆ.

ನೋಡಬಾರದು ನೋಡಿ ನುಡಿಸಲುಬಾರದು; ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ:ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವಾ.

ತನುವಿನ ಡೊಂಕು ಅಥವಾ ಅಜ್ಞಾನಕ್ಕೆ ತನುವಿನ ಮನವೇ ಕಾರಣ. ಮನಕ್ಕೆ ಇತರ ತನುಗಳ ಡೊಂಕು ಹೊಳೆಯುವುದೇ ಹೊರತು ತನ್ನ ಡೊಂಕು ತನಗೆ ಹೊಳೆಯುವುದಿಲ್ಲ. ಮನ ತನ್ನ ರುಚಿಗಾಗಿ ತನುವನ್ನು ಉಪಕರಣವಾಗಿ ಬಳಸಿಕೊಳ್ಳುತ್ತದೆ. ಮನದ ತಪ್ಪು ಮನಕ್ಕೆ ಹೊಳೆಯವುದಿಲ್ಲ. ಇತರ ಮನಗಳ ತಪ್ಪು ಕೂಡಾ ಮನಕ್ಕೆ ಹೊಳೆಯುವುದಿಲ್ಲ. ಅದು ತನುಗಳ ದೋಷವೆಂದು ಮನ ತಿಳಿದು ನಿರ್ಧರಿಸುತ್ತದೆ. ಹೀಗಾಗಿ ಮನ ಲೋಕದ ತನುಗಳದ್ದೆ ಡೊಂಕು ಎಂದು ನಿರ್ಧರಿಸುತ್ತದೆ. ತನುಗಳ ಡೊಂಕು ತಿದ್ದುವುದಕ್ಕಾಗಿ ಮನ ಉಪದೇಶ ಆದೇಶ ಮಾಡುತ್ತದೆ. ಮನ ಮತ್ತಷ್ಟು ರೊಚ್ಚಿಗೆದ್ದು ಉಪದೇಶ ನೀಡಿದ, ಆದೇಶ ಮಾಡಿದ ತನುವನ್ನೇ ಅಲ್ಲಗಳೆಯುತ್ತದೆ.

ತನುವಿನ ಡೊಂಕು ನೋಡಬಾರದು, ನೋಡಿ ತನುವನ್ನು ನುಡಿಸಬಾರದು. ಏಕೆಂದರೆ ಅದು ತನುವಿನ ಡೊಂಕಲ್ಲ; ಮನದ ಡೊಂಕು. ಅದು ಎಂದೆಂದಿಗೂ ತಿದ್ದಲು ಬಾರದ ಡೊಂಕು!

ಮನಕ್ಕೆ ಉಪದೇಶ ನಿಲ್ಲುವುದಿಲ್ಲ; ಅರಿವಿಗೆ ಉಪದೇಶ ಬೇಕಿಲ್ಲ. ತನುವಿನಲ್ಲಿ ಅರಿವಿದೆ; ತನು ಅರಿವಿನ ಸಂಪತ್ತು . ಮನ ತನುವನ್ನು ಆವರಿಸಿದೆ; ಅದು ಅರಿವಿನ ಬೆಳಕಿನಿಂದಾದ ಕತ್ತಲು. ಕತ್ತಲ ಮನವನ್ನು ಮತ್ತೊಂದು ಕತ್ತಲ ಮನದಿಂದಲೇ ಬೆಳಗಿಸಲು ಸಾಧ್ಯವಿಲ್ಲ.

ಮನದಿಂದ ಮನವನ್ನು ನೋಡಬಾರದು, ನೋಡಿ ನುಡಿಸಬಾರದು. ಏಕೆಂದರೆ ಅದು ಎಂದೆಂದಿಗೂ ತಿದ್ದಲು ಬಾರದ ಡೊಂಕು. ಲೋಕದ ಡೊಂಕನ್ನು ಮತ್ತೊಂದು ಡೊಂಕಿನಿಂದ ತಿದ್ದಲು ಬರುವುದಿಲ್ಲ. ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ

ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವಾ.

ಮನ ತನುವಿನ ಮೂಲಕ ಮತ್ತೊಂದು ತನುವಿಗೆ ಪಾಠ ಮಾಡಲು ಬರುವುದಿಲ್ಲ. ಏಕೆಂದರೆ ಪಾಠ ಕೇಳುವ ತನುವನ್ನು ಮನ ಆವರಿಸಿಕೊಂಡಿದೆ. ಮನ ಹೇಳುವ ಪಾಠ ಮನವೇ ಕೇಳುವುದರಿಂದ ಪಾಠದಲ್ಲಿ ಹುರುಳಿಲ್ಲವೆಂದು ಮನ ನಿರ್ಧರಿಸುತ್ತದೆ. ಅಥವಾ ಕೇಳಿ ರುಚಿಸಿದರೆ ಸಂಗ್ರಹಿಸಿಕೊಳ್ಳುತ್ತದೆ. ಸಂಗ್ರಹಿಸಿದ್ದನ್ನೇ ನುಡಿಯುತ್ತದೆ. ಆದರೆ ನುಡಿದಂತೆ ನಡೆಯಲು ಬರುವುದಿಲ್ಲ. ಏಕೆಂದರೆ ಅದು ತನ್ನ ಅರಿವಿನ ಅನುಭವದಿಂದ ಬಂದ ಮಾತಲ್ಲ.

ತನುವಿನಲ್ಲಿಯೇ ತನ್ಮಯವಾದ ಅರಿವಿನತ್ತ ತನುವನ್ನು ಆವರಿಸಿದ ಮನ ಪಯಣಿಸಿ ಆ ಅರಿವಿನಿಂದ ಲೋಕದ ತನುಗಳನ್ನು ನೋಡಿದಾಗ ನೋಡಬಾರದ ಮನ ಕಾಣುತ್ತದೆ; ನೋಡಿ ನುಡಿಸುವುದಿಲ್ಲ. ಏಕೆಂದರೆ ಅದು ತಿದ್ದಲುಬಾರದ ಮನವೆಂಬ ಮರ್ಕಟ ! ಅದು ಸದಾ ಡೊಂಕು. ಮರ್ಕಟ ಆಂಜನೇಯನಾಗಬೇಕಾದರೆ ಆಯಾ ತನುವಿನಲ್ಲಿ ತನ್ಮಯವಾದ ಶ್ರೀರಾಮನ ದರ್ಶನವೇ ಆಗಬೇಕು. ಮನದ ಡೊಂಕು ಅಳಿಯಬೇಕಾದರೆ ತನುವಿನ ಅರಿವಿನ ದರ್ಶನ ಆಗಲೇಬೇಕು. ತನುವಿನ ಮನದ ಡೊಂಕು ತನುವಿನ ಅರಿವಿನಿಂದಲೇ ನಿವಾರಿಸಿಕೊಳ್ಳಬೇಕು. ಇದು ಬಸವಣ್ಣನವರ ಸೂತ್ರ. ಈ ಸೂತ್ರವನ್ನು ಪ್ರಧಾನವಾಗಿಟ್ಟುಕೊಂಡು ಲೋಕದ ಡೊಂಕು ನಿವಾರಣೆಗೆ ಸರಕಾರ ಶಿಕ್ಷಣ ಇಲಾಖೆಗಳನ್ನು ಸಧೃಡಪಡಿಸಬೇಕು.

ಲೋಕದ ಡೊಂಕು ತಿದ್ದಲು ಬರುವುದಿಲ್ಲ. ತನುವಿನ ಡೊಂಕಿಗೆ ಕಾರಣವಾದ ಮನದ ಅಜ್ಞಾನವನ್ನು ತನುವಿನ ಜ್ಞಾನದಿಂದಲೇ ನಿವಾರಿಸಬೇಕು. ತಮ್ಮ ತಮ್ಮ ತನುವನು, ತಮ್ಮ ತಮ್ಮ ಮನವನು, ತಮ್ಮ ತಮ್ಮ ತನುವಿನ ಅರಿವಿನಿಂದಲೇ ಸಂತೈಸಿಕೊಳ್ಳಬೇಕು. ತನು ಲೋಕಕ್ಕೆ ಹೊರತಾಗಿಲ್ಲ. ತನುವಿನ ಮನ ಸುಧಾರಿಸಿದರೆ ಲೋಕ ಸುಧಾರಣೆಯಾಗುತ್ತದೆ. ಈ ಅರಿವು ಅಂಗದಲ್ಲಿಯೇ ಆಯತವಾಗಿದೆ. ಆಯತವಾದ ವಿಧಾನವನು ಮನ ಕಂಡುಕೊಳ್ಳಬೇಕು.

ಐಕ್ಯನ ಮಾಹೇಶ್ವರ ಸ್ಥಲ

940

ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ,
ಆಕಾರ ನಿರಾಕಾರ ನೋಡಯ್ಯಾ !
ಕಾಯವಂಚಕನಲ್ಲ, ಜೀವವಂಚಕನಲ್ಲ,
ನಿರಂತರ ಸಹಜ ನೋಡಯ್ಯಾ ,
ಕೂಡಲಸಂಗನ ಶರಣನುಪಮಾತೀತ ನೋಡಯ್ಯಾ .

ಸ್ಥೂಲ ಶರೀರದಲ್ಲಿ ಸೂಕ್ಷ್ಮ ಶರೀರವೊಂದು ಇದೆ. ಕಾರಣ ಶರೀರವೊಂದು ಇದೆ. ಸ್ಥೂಲ ಶರೀರಕ್ಕೆ ಹುಟ್ಟು ಇದೆ. ಸಾವು ಇದೆ. ಸೂಕ್ಷ್ಮ ಶರೀರ ಸ್ಥೂಲ ಶರೀರವನ್ನು ಆವರಿಸಿರುವುದರಿಂದ ಸದಾ ಸಂದೇಹಗೊಳ್ಳುವ ಸೂತಕದ ಫಲ ಸ್ಥೂಲ ಶರೀರಕ್ಕೆ ಬಂದೊದಗಿದೆ. ಹೀಗಾಗಿ ಸ್ಥೂಲ ಶರೀರ ಸದಾ ವಂಚನೆಯುಳ್ಳ ಕಾಯ. ಸಹಜ ಗುಣಗಳಿಲ್ಲದ ಜೀವ ವಂಚಕವೂ ಆಗಿದೆ. ಇದೆಲ್ಲ ಸಂದೇಹಿ ಸೂತಕವುಳ್ಳ ಸೂಕ್ಷ್ಮ ಶರೀರದ ಗುಣಗಳೇ ಹೊರತು; ಸ್ಥೂಲ ಶರೀರದ್ದಲ್ಲ.

ಕಾರಣಶರೀರದಿಂದಲೇ ಕಾಣುವ ಸ್ಥೂಲ ಶರೀರ ಜನ್ಮ ತಳೆದಿದೆ. ಇದಕ್ಕೆ ಜನನ ಮರಣಗಳಿಲ್ಲ. ಸಂದೇಹ ಸೂತಕಿಯಲ್ಲ. ಅಂಗದಲ್ಲಿ ಚುಳುಕಾಗಿ ಆಕಾರವಾಗಿದೆ. ಆ ಅಂಗವೇ ಲಿಂಗಾಂಗವಾಗಿ, ಅರಿವಿನ ಅಂಗವಾಗಿ, ಕಾರಣ ಶರೀರವಾಗಿ ನಿರಾಕಾರವಾಗಿದೆ. ಕಾಯದಲ್ಲಿ ಆಕಾಯ ಚುಳುಕಾಗಿ ಕಾಯವಂಚಕನಲ್ಲ. ಜೀವದಲ್ಲಿ ಚುಳುಕಾಗಿ ಜೀವ ವಂಚಕನಲ್ಲ. ಕಾಯದಲ್ಲಿದ್ದು ನಿಃಕಾಯನಾಗಿ ನಿರಂತರ ಸಹಜ ನೋಡಯ್ಯಾ. ಶಂಕೆಯಿಲ್ಲದ ಮಹಾಮಹಿಮನು ನೋಡಯ್ಯಾ ಕೂಡಲಸಂಗನ ಶರಣನು ಉಪಮಾತೀತ ನೋಡಯ್ಯಾ.

ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ ಒಡಲ ಬೆಳಗುವ ಪರಿಯ ನೋಡಾ ಎಂದು ಪ್ರಭುದೇವರು ಹೇಳಿದಂತೆ ಒಡಲೊಳಗಿದ್ದು, ಒಡಲು ಬೆಳಗುವ ಒಡಲು, ಒಡಲನ್ನು ಆವರಿಸಿದ ಮನಕ್ಕೆ ಅರಿವಾದರೆ ಆ ಮನ ಘನಮನವಾಗುವುದು. ಒಡಲೊಳಗೆ ಸಂಗಮವಾದ ಅರಿವಿನ ಒಡಲನ್ನು ಅರಿತ ಒಡಲು, ಅರಿವಿನ ಒಡಲಿಗೆ ಶರಣು ಹೋಗಿ ಶರಣನಾಗುವುದು; ಉಪಮಾತೀತನಾಗುವುದು.

941

ದಶದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯಾ.
ಲಿಂಗಮಧ್ಯೆ ಜಗತ್‌ಸರ್ವಂ ಎಂಬುದ ನಾನರಿಯೆನಯ್ಯಾ.
ಲಿಂಗಸೋಂಕಿನ ಸುಖದೊಳಗೆ
ಕೂಡಲಸಂಗಮದೇವಯ್ಯಾ,
ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ
ಭಿನ್ನ ಭಾವವನರಿಯದೆ ಶಿವ ಶಿವಾ ಎನುತಿದ್ದೆನು ನಾನು.

ಅರಿವಿನ ಜಲಬಿಂದು ಗರ್ಭದಲ್ಲಿ ಹೊಕ್ಕು, ತನುವಾಗಿ ಸಕಲವನೂ ಸೃಷ್ಟಿಸಿ, ಅರಿವನು ಮರೆತಿದೆ. ಅರಿವಿನ ಸೋಂಕಿನ ಸುಖದೊಳಗಿದ್ದರೂ ಅರಿವನು ಅರಿಯುವುದು ತನುವಿಗೆ ಸಾಧ್ಯವಾಗುತ್ತಿಲ್ಲ; ಮನ ಅರಿವನು ಮಾತ್ರ ಅರಿಯದೆ ದಶದಿಕ್ಕುಗಳನು ನೋಡುತ್ತದೆ. ಅಹಂಕಾರದಿಂದ ಅಹಂ ಬ್ರಹ್ಮಾಸ್ಮಿ ಎನ್ನುತ್ತದೆ; ಬ್ರಹ್ಮ ತಾನೆಂಬುದನು ಅರಿಯದೆ.

ಬ್ರಹ್ಮ ತಾನಾದ ಮೇಲೆ ಬ್ರಹ್ಮವೇ ನಾನೆಂದು ಹೇಗೆ ಹೇಳಲು ಬರುವುದಿಲ್ಲವೋ ಹಾಗೆಯೇ ಸಮುದ್ರವೇ ಕರಗಿ ಆವಿಯಾಗಿ ಆಕಾಶಕ್ಕೆ ಹಾರಿ ಆಲಿಕಲ್ಲಾಗಿ ಸಮುದ್ರದೊಳಗೆ ಬಿದ್ದಂತೆ. ಸಮುದ್ರ ಬೇರಲ್ಲ; ಆಲಿಕಲ್ಲು ಬೇರಲ್ಲ. ನಾನು ಎನ್ನುವ ಅಜ್ಞಾನ ಸಮುದ್ರಕ್ಕೂ ಆಲಿಕಲ್ಲಿಗೂ ಇರುವವರೆಗೆ ಮನ ತನು ಅರಿವು ಒಂದಾಗಿ ಸಹಜನಾಗುವುದು ಜಟಿಲ. ತಿಳಿದರೆ ಅದು ಸಹಜ ತಾನೇ. ಬೇರೆ ಎನ್ನಲೂ ಬರುವುದಿಲ್ಲ.

ಐಕ್ಯನ ಪ್ರಸಾದಿಸ್ಥಲ

942

ಮಿಥ್ಯವನಳಿದುಳಿದ ಸತ್ಯ ಪ್ರಸಾದಿ,

ರಂಜನವಿಲ್ಲದ ನಿರಂಜನ ಪ್ರಸಾದಿ,
ದುಃಖವನಳಿದ ಘನಾನಂದ ಪ್ರಸಾದಿ,
ಅನಿತ್ಯವಿಲ್ಲದ ನಿತ್ಯ ಪ್ರಸಾದಿ,
ಖಂಡಿತವಲ್ಲದ ಅಖಂಡಿತ ಪ್ರಸಾದಿ,
ಕೂಡಲಸಂಗಮದೇವರಲ್ಲಿ ತಾನೇ ಪ್ರಸಾದಿ.

ಅಂಗದಲ್ಲಿ ಸಂಗಮವಾದ ಅರಿವಿನ ಬೆಳಗು, ಅಂಗವನ್ನು ಆವರಿಸಿದ ಮಿಥ್ಯದ ಕತ್ತಲನು ಪ್ರಸಾದದಂತೆ ಸೇವಿಸಿದ ಸತ್ಯ ಪ್ರಸಾದಿ. ಬೆಳಗಿನಿಂದ ಹುಟ್ಟಿದ ಕತ್ತಲು ಬೆಳಗಿಗೆ ಪ್ರಸಾದವಾಗಿ ಸತ್ಯ ಪ್ರಸಾದಿ. ರಂಜನೆ ಇಲ್ಲದ ನಿರಂಜನನಿಗೆ ರಂಜನೆಯೆ ಪ್ರಸಾದವಾಗಿ ನಿರಂಜನ ಪ್ರಸಾದಿ.

ಸುಖ ಸುಖವೂ ಅಲ್ಲ; ದುಃಖ ದುಃಖವೂ ಅಲ್ಲ. ಸುಖ ದುಃಖಗಳಿಗೆ ಮೀರಿದ ಶಾಶ್ವತ ಸುಖ ಹುಡುಕಲು ಮನ ಅರಿವಿನ ಅಂತರಾಳಕ್ಕಿಳಿದಾಗ, ಘನ ಮನವನೇ ನುಂಗಿ ಘನಾನಂದವಾಯಿತು. ಸುಖಿಸಲು ಹೋದ ಮನ ಘನಕ್ಕೆ ಪ್ರಸಾದವಾಗಿ ಘನಾನಂದ ಪ್ರಸಾದಿಯಾಯಿತು.

ಅನಿತ್ಯವಿಲ್ಲದ ನಿತ್ಯನು ಖಂಡಿತವಿಲ್ಲದ ಅಖಂಡಿತನು. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನು ಅರಿತ ಮನ ತಾನೇ ಪ್ರಸಾದಿ.

943

ಹುಸಿಯಿಂದ ಜನಿಸಿದೆನಯ್ಯಾ ಮರ್ತ್ಯಲೋಕದೊಳಯಿಂಕೆ
ಹುಸಿಯಿಂದ ಲಿಂಗದ ಹೆಸರುಗೊಂಡು ಕರೆದನಯ್ಯಾ.
ಅದು ಎನಗೆ ಭಾವವು ಅಲ್ಲ, ನಿರ್ಭಾವವೂ ಅಲ್ಲದೆ ನಿಂದಿತ್ತಯ್ಯಾ,
ಅದರ ಅವಯವಂಗಳೆಲ್ಲ ಜಂಗಮವಯ್ಯಾ.
ಅದಕ್ಕೆ ಎನ್ನಲ್ಲುಳ್ಳ ಸಯದಾನವ ಮಾಡಿ ನೀಡಿದೆನಯ್ಯಾ;
ಆ ಪ್ರಸಾದಕ್ಕೆ ಶರಣೆಂದೆನಯ್ಯಾ;
ಅದು ಸಾರವೂ ಅಲ್ಲ, ನಿಸ್ಸಾರವೂ ಅಲ್ಲ.
ಆ ಪ್ರಸಾದದಲ್ಲಿ ನಾನೇ ತದ್ಗತನಾದೆ ಕಾಣಾ,
ಕೂಡಲಸಂಗಮದೇವಾ.

ಕತ್ತಲು ಇಲ್ಲವೆಂದು ಹೇಳಿದರೆ ಯಾರೂ ನಂಬುವುದಿಲ್ಲ. ಅದು ಹುಸಿ ಎಂದು ಹೇಳಿದರೆ ಯಾರೂ ನಂಬುವುದಿಲ್ಲ. ಹುಸಿ ಎನ್ನುವುದೇ ಇಲ್ಲ. ಅಸ್ಥಿತ್ವದಲ್ಲಿ ಇರುವುದು ಎಲ್ಲವೂ ಸತ್ಯ. ಆದರೆ ಇಲ್ಲದ ಹುಸಿಮನ ಇದೆ ಎಂದು ಸೃಷ್ಟಿಯಾಗಿದೆ. ಮನ ಭಾವವೂ ಅಲ್ಲದೆ; ನಿರ್ಭಾವವೂ ಅಲ್ಲದೆ ದುರ್ಭಾವವಾಗಿ ನಿಂತಿದೆ.

ಮನ ಇಲ್ಲ ಆದರೆ ಇಲ್ಲದ ಹುಸಿಮನದ ಅವಯವಗಳೆಲ್ಲ ನಿತ್ಯ ಸತ್ಯ; ಜಂಗಮವಾಗಿ ವಿರಾಟಸ್ವರೂಪವಾಗಿ ನಿಂತಿದೆ. ಹೇಗೆಂದರೆ ಬೆಳಕು ಸತ್ಯ; ಅದು ನಿತ್ಯ ಕೂಡಾ. ಆ ಬೆಳಕಿನಿಂದಲೇ ಕತ್ತಲು ಸೃಷ್ಟಿಯಾಗಿದೆ. ಬೆಳಗಿದರೆ ಕತ್ತಲು ಇಲ್ಲ. ಕತ್ತಲಿನ ಅವಯವವೇ ಬೆಳಗಿನ ಜಂಗಮ. ಬೆಳಕು ಇಲ್ಲ ಎನ್ನಲು ಬರುವುದಿಲ್ಲ. ಬೆಳಕಿನಿಂದ ಸೃಷ್ಟಿಯಾದ ಕತ್ತಲಿಗೆ ಅವಯವಗಳಿಲ್ಲ. ಹಾಗೆಯೇ

ಅರಿವಿನ ಬಿಂದುವಿನ ನೆರಳಿನಿಂದಲೇ ಮನ ಸೃಷ್ಟಿಯಾಗಿದೆ. ಅದು ಕೂಡಾ ಇಲ್ಲದ್ದು. ಶರಣರು ಮನವನ್ನು ಬಂಜೆಯ ಮಗ, ಮೊಲದ ಕೋಡು, ಸೂಳೆ ಎಂದು ಕರೆದರು. ಇವೆಲ್ಲ ಹುಸಿ.

ಅರಿವಿನ ಜಲಬಿಂದುವಿನಿಂದ ಹುಟ್ಟಿದ ಅಂಗವದು ಲಿಂಗಾಂಗ. ಇದು ಹೆಸರಿಲ್ಲದ ವೃಕ್ಷ. ಅರಿವಿನ ಅಂಗಕ್ಕೆ ಹುಸಿಯಿಂದಾಗಿ ಹೆಸರುಗೊಂಡು ಕರೆಯುವುದು ಶೋಭೆಯೇ? ಆ ಹೆಸರು ಭಾವವೂ ಅಲ್ಲ ನಿರ್ಭಾವವೂ ಅಲ್ಲ. ಅದರ ಅವಯವ ಮಾತ್ರ ಲಿಂಗಾಂಗ ಜಂಗಮ! ಇಲ್ಲದ ಮನಕ್ಕೆ ಇಲ್ಲದ ಹೆಸರಿಡುವುದೆಂದರೇನು ? ಇಲ್ಲದ ಆ ಹೆಸರು ಲಿಂಗಾಂಗವಾಗಲು ಸಾಧ್ಯವೇ? ಸತ್ಯಕ್ಕೆ ಯಾವುದಾದರೂ ಹೆಸರಿಟ್ಟು ಕರೆಯಬಹುದೆ ? ಅದು ಅಸತ್ಯವನ್ನು ನುಂಗಿದ ಸತ್ಯ ಪ್ರಸಾದ. ಅದಕ್ಕೆ ಶರಣೆನ್ನಬೇಕು. ಅದು ಸಾರವೂ ಅಲ್ಲ; ನಿಸ್ಸಾರವೂ ಅಲ್ಲ. ಸತ್ಯದಲ್ಲಿ ಅಸತ್ಯ ತದ್ಗತನಾಗಿ ಸತ್ಯ ತಾನೇ ಆದ ಕಾರಣ. ಅಂಗದಲ್ಲಿ ಲಿಂಗಾಂಗವಾಗಿ ಸಂಗಮಗೊಂಡು ಸಂಗಮನಾಥನಾದ ಕಾರಣ. ಅಂಗ ಹೆಸರಿಲ್ಲದ ಅರಿವಿನ ವೃಕ್ಷ !

944

ಬೆಳಗಿನೊಳಗಣ ಬೆಳಗು ಮಾಹಬೆಳಗೆಂಬ
ಪ್ರಸಾದದಲ್ಲಿ ಒದಗಿದ ಪ್ರಸಾದಿಯ ಪರಿಣಾಮದ
ಪರಮಾನಂದವನೇನೆಂದುಪಮಿಸುವೆನಯ್ಯಾ ?
ಪರಮಾಶ್ರಯವೆ ತಾನಾಗಿ, ಕೂಡಲಸಂಗಮದೇವಯ್ಯಾ ,
ಚೆನ್ನಬಸವಣ್ಣನೆಂಬ ಮಹಾಪ್ರಸಾದಿ
ಎನ್ನ ವಾಙ್ಮನಕ್ಕಗೋಚರನಾಗಿ, ನಾನೇನೆಂಬೆನಯ್ಯಾ ?

ಬಲ್ಬ್‌ಗೆ ಬೆಳಗುವ ಶಕ್ತಿಯಿಲ್ಲ. ವಿದ್ಯುತ್ ತಂತಿಗೂ ಬೆಳಗುವ ಶಕ್ತಿಯಿಲ್ಲ. ತಂತಿಯ ಮೇಲಿನ ಕವಚಕ್ಕೂ ಬೆಳಗುವ ಶಕ್ತಿಯಿಲ್ಲ. ಇವು ಮೂರೂ ಬೆಳಗಲ್ಲ. ಇವು ಮೂರೂ ಬೆಳಗಿಗೆ ಕಾರಣ. ಇವು ಮೂರರಲ್ಲಿಯೂ ಬೆಳಗಿನ ಶಕ್ತಿ ಹರಿದು ಬೆಳಕಿಗೆ ಕಾರಣವಾಗಿವೆ. ಬಲ್ಬ್ ಕತ್ತಲನ್ನು ನುಂಗಿ ಬೆಳಗಾಗಿ ಬೆಳಗುತ್ತದೆ.

ಅಂಗದೊಳಗಣ ಬೆಳಕು ಮಹಾಬೆಳಕಾಗಿ ಅಂಗದ ಮೂಲಕ ಬೆಳಗುತ್ತದೆ. ಬೆಳಗುವ ಅಂಗದ ಮುಂದೆ ಬರುವ ಕತ್ತಲೆಲ್ಲ ಬೆಳಕಿಗೆ ಪ್ರಸಾದವಾಗಿ ಒದಗುತ್ತದೆ. ಇದರ ಪರಿಣಾಮದಿಂದ ಉಂಟಾಗುವ ಪರಮಾನಂದ ಉಪಮೆಗೆ ನಿಲುಕದ್ದು ಉಪಮಾತೀತವಾದುದು. ಪರಮಾನಂದದ ಪರಮಾಶ್ರಯವನು ಅನುಭವಿಸುವವನು ತಾನಾಗಿ.

ವಾಕ್ಕಿಗೂ ಮನಕ್ಕೂ ಅಗೋಚರವಾದುದನು ಶಬ್ದವಲ್ಲದ ನಿಃಶಬ್ದದ ಮೂಲಕ, ದೃಶ್ಯಕ್ಕೆ ಅಗೋಚರವಾದುದನು ದೃಶ್ಯದ ಮೂಲಕ, ಸ್ಪರ್ಶಕ್ಕೆ ನಿಲುಕದ ನಿರ್ಭಾವವನು ಸ್ಪರ್ಶದ ಮೂಲಕ ಕರುಣಿಸಿದ ಮಾಹಾಮಹಿಮ ಮಹಾಪ್ರಸಾದಿ ಚೆನ್ನಬಸವಣ್ಣನನು ಏನೆಂದು ಉಪಮಿಸುವೆನಯ್ಯಾ ? ಆತ ಬೆಳಗಿನೊಳಗಣ ಬೆಳಕು ಮಾಹಾಬೆಳಕು. ಬೆಳಂಗಿಗೆ ಬೆಳಗಾಗಿ ಬೆಳಗುವ ಮಹಾಪ್ರಸಾದಿ!

ಐಕ್ಯನ ಪ್ರಾಣಲಿಂಗಿಸ್ಥಲ

945

ಆಯತವೆಂಬುದು ಭಂಗ, ಸ್ವಾಯತವೆಂಬುದು ಭಂಗ,
ಆಯತವನರಿಯೆ, ಸ್ವಾಯತವನರಿಯೆ
ಭಾವದಲ್ಲಿ ವ್ರತಗೆಟ್ಟುದಾಗಿ
ಆ ಭಾವದಲ್ಲಿ ಜೀವ ಸಂಹಾರಿ,
ಕೂಡಲಸಂಗಮದೇವ ಸರ್ವನಿವಾಸಿಯಾಗಿ.

ಅರಿವೇ ಅಂಗವನ್ನು ಆಯತ ಮಾಡಿಕೊಂಡು ಆ ಅರಿವೇ ಅಂಗವಾಗಿರುವಾಗ ಅಂತಹ ಅಂಗಕ್ಕೆ ಮತ್ತೊಂದು ಲಿಂಗವನ್ನು ಆಯತ ಮಾಡಿಕೊಂಡು ಕಟ್ಟಿಕೊಳ್ಳಬೇಕೆ ? ಅರಿವೇ ಅಂಗವಾಗಿ ಸ್ವಯಂ ಲಿಂಗವಾಗಿರುವಾಗ ಅದು ಸಹಜ. ಆಯತ ಸ್ವಾಯತವನು ಅರಿಯದು.

ಅರಿಯುವ ಭಾವದ ವ್ರತಗೆಟ್ಟು ನಿರ್ಭಾವವಾಗಿದೆ. ಸಹಜ ಅರಿವಾಗಿದೆ. ಅಂಗದಲ್ಲಿ ಸಂಗಮವಾದ ಅರಿವನು ಅಂಗವನು ಆವರಿಸಿದ ಮನ ಅರಿತು ಆ ಅರಿವಿನಲಿ ಬೆರೆತು ಅರಿವೇ ಆಗಿದೆ. ಸರ್ವಾಂಗದಲ್ಲಿ ನಿವಾಸಿಯಾದ ಅರಿವಿನಲ್ಲಿ ಒಂದಾಗಿದೆ. ಅಂಗವೆಂದರೆ ಅರಿಯದ, ಅರಿವೆಂದರೆ ಅರಿಯದ, ಮನವೆಂದರೆ ಅರಿಯದ ಸರ್ವ ನಿವಾಸಿಯಾಗಿದೆ.

946

ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ
ದೇವಲೋಕವೆಂಬುದೇನೊ ? ಮರ್ತ್ಯಲೋಕವೆಂಬುದೇನೊ ?
ಆವುದರಲ್ಲಿಯೂ ಭೇದವೇನಯ್ಯಾ,
ಕೂಡಲಸಂಗಮದೇವಾ, ಬಳಿಕ ಆಲಸ್ಯವುಂಟೆ ?

ಭೌತಿಕ ವಸ್ತುಗಳನ್ನೇ ಸುಖವೆಂದು ನಂಬಿದ ಮನಕ್ಕೆ ಅಂಗದಲ್ಲಿಯೇ ಸಂಗಮವಾದ ಸ್ವಯಂ ಅರಿವೆಂಬ ಲಿಂಗದ ಅನುಭಾವ ಮನಕ್ಕೆ ಆದ ಮೇಲೆ ದೇವಲೋಕವೆಂಬುದೂ ಇಲ್ಲ ಮರ್ತ್ಯಲೋಕವೆಂಬುದೂ ಇಲ್ಲವಾಗುತ್ತದೆ. ಆವುದರಲ್ಲಿಯೂ ಭೇದವನು ಅರಿಯದ ಕಾಯವೇ ಕೈಲಾಸವಾಗುತ್ತದೆ.

ಅಂಗದಲ್ಲಿ ಸಂಗಮವಾದ ಅರಿವೆಂಬ ಸಂಗಮನಾಥನು ಮನಕ್ಕೆ ವೇದ್ಯವಾದ ಬಳಿಕ ಅಲಸ್ಯ ಕಳೆದು ಹೋಗುತ್ತದೆ. ನೋಡುವ ನೋಟವೆಲ್ಲ ಸತ್ಯವಾಗಿ ಶಿವಮಯವಾಗಿ ಸುಂದರವಾಗಿ ಕಾಣುತ್ತದೆ; ಸ್ವಯಲಿಂಗದನುಭಾವ ಮನಕ್ಕೆ ದೊರಕೊಂಡ ಬಳಿಕ.

947

ಏನೆಂಬೆ, ಏನೆಂಬೆ ಒಂದೆರಡಾದುದ ?
ಏನೆಂಬೆ, ಏನೆಂಬೆ, ಎರಡೊಂದಾದುದ ?

ಏನೆಂಬೆ, ಏನೆಂಬೆ, ಅವಿರಳ ಘನವ,
ಮಹಾದಾನಿ ಕೂಡಲಸಂಗಮದೇವಯ್ಯಾ ತಾನೇ ಬಲ್ಲನಯ್ಯ !

ಅಂಗದ ಭಾಷೆ ಯಾವುದಾದರೇನು? ಅಂಗಗಳೆಲ್ಲ ಒಂದೇ ; ನೋಡಲು ಅಂಗ ಒಂದೇ ಆಗಿ ಕಂಡರೂ; ಒಂದಲ್ಲ. ಒಂದಂಗ ಎರಡಾಗಿ ಕಾಣುತ್ತದೆ.

ಅಂಗವನ್ನು ಆವರಿಸಿದ ಮನವೊಂದು ಅಂಗ. ಇದು ಸೂಕ್ಷ್ಮಾಂಗ. ಅಂಗಕ್ಕೆ ಕಾರಣವಾದ ಅಂಗವೊಂದು ಅಂಗ. ಇದು ಕಾರಣಾಂಗ. ಎರಡಂಗಗಳನ್ನು ಹೊತ್ತು ಆ ಎರಡರ ಆದೇಶ ಪಾಲಿಸುವ ಒಂದಂಗ. ಇದು ಸ್ಥೂಲಾಂಗ. ಈ ಅಂಗ ಮಾತ್ರ ನೋಡುವುದಕ್ಕೆ ಹೆಣ್ಣಾಗಿ ಗಂಡಾಗಿ ಕಾಣುತ್ತದೆ.

ಏನೆಂಬೆ, ಏನೆಂಬೆ ಒಂದೆರಡಾದುದ ? ಏನೆಂಬೆ, ಏನೆಂಬೆ, ಎರಡೊಂದಾದುದ? ಏನೆಂಬೆ, ಏನೆಂಬೆ, ಅವಿರಳ ಘನವ, ಮಹಾದಾನಿ ಕೂಡಲ ಸಂಗಮದೇವಯ್ಯಾ ತಾನೇ ಬಲ್ಲನಯ್ಯಾ !

ಅಂಗ ಒಂದೇ; ಆದರೆ ಅಂಗದಲ್ಲಿರುವ ಅರಿವು ಒಂದು. ಅದು ಅಂಗವಲ್ಲ. ಅಂಗದಲ್ಲಿರುವ ಅರಿವನ್ನು ತಿಳಿಯುವ ಮನವೊಂದು; ಅದೂ ಅಂಗವಲ್ಲ. ಹೀಗೆಂದು ಮನದ ಗಮನಕ್ಕಿದೆ. ಅಂಗದಲ್ಲಿ ಇರುವ ಅರಿವೆ ಲಿಂಗ; ಅದು ಘನ; ಕಾರಣಾಂಗ ! ಅಂಗವನ್ನು ಆವರಿಸಿದ ಮನವೇ ಸೂಕ್ಷ್ಮಾಂಗ! ಈ ಸೂಕ್ಷ್ಮಾಂಗವೆಂಬ ಮನ ಘನದಲ್ಲಿ ಬೆರೆತಾಗ ಘನಾಂಗ ! ಏನೆಂಬೆ ಏನೆಂಬೆ ಎರಡೊಂದಾದುದ! ಏನೆಂಬೆ ಏನೆಂಬೆ ಅವಿರಳ ಘನವ. ಮನ ಘನದಲ್ಲಿ ಬೆರೆತು ಘನಮನವಾಗಿದೆ.

ಅಂಗ, ಅಂಗದಲ್ಲಿ ಸುಳಿಯುವ ಗಾಳಿ, ಅಂಗದಲ್ಲಿ ಬೆಳೆಯುವ ಅರಿವಿನ ಬೆಳೆಯೆಲ್ಲ ಮಹಾದಾನಿ ಕೂಡಲಸಂಗಮನಾಥನ ಸಂಪತ್ತು. 'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ.'

ಅರಿವೆಂಬ ಸಂಗಮನಾಥನು ಅಂಗವನ್ನು, ಅಂಗದಲ್ಲಿ ಸುಳಿದು ಬೀಸುವ ಗಾಳಿಯನು, ಅಂಗವನ್ನು ತಿಳಿಯುವ ಮನವನ್ನು ಕರುಣಿಸಿ ಅಂಗದಲ್ಲಿಯೇ ಸಂಗಮವಾದ. ಅಂಗವೆಂಬ ಅರಿವಿನ ಲಿಂಗವು ಸಂಗಮನಾಥನು ನೀಡಿದ ದಾನವೇ ಆಗಿರುವಾಗ ಒಂದಂಗ ಮತ್ತೊಂದು ಅಂಗಕ್ಕೆ ತನ್ನದೇ ಆದ ವಸ್ತುವನ್ನು ನೀಡಲು ಸಾಧ್ಯವೇ ? ಸಾಧ್ಯವಿಲ್ಲ. ಈ ಘನವಾದ ಅರಿವನು ಕೂಡಾ ಆತನೇ ಬಲ್ಲ.

948

ಕುರುಹಿಲ್ಲ ಕುರುಹಿಲ್ಲ ಲಿಂಗವೆಂದೆಂಬಡೆ
ತೆರಹಿಲ್ಲ ತೆರಹಿಲ್ಲ ಜಂಗಮವೆಂದೆಂಬಡೆ
ಇದೆ ನೋಡಾ ಶಿವಾಚಾರ, ಇದೆ ನೋಡಾ ಶಿವದೊಡಕು !
ಆತ್ಮನಾಂ ಪ್ರಕೃತಿಃ ಸ್ವಭಾವ ಎಂಬುದಾಗಿ
ಮುಟ್ಟಬಾರದ ಠಾವ ಮರೆಗೊಂಡಿರ್ಪ
ಮಮಕರ್ತ ಕೂಡಲಸಂಗಮದೇವ.

ಕುರುಹಿಲ್ಲದ ಲಿಂಗ ಎನ್ನುವಲ್ಲಿ, ತೆರಹಿಲ್ಲದ ಜಂಗಮ ಎನ್ನುವಲ್ಲಿ ಸತ್ಯವಿದೆ. ಆದರೂ ತೊಡಕು ಇದೆ. ಇದು ಅಗೋಚರದ ಆಚಾರದ ಶಿಕ್ಷಣವನ್ನು ಬಲ್ಲ ಶಿವಾಚಾರವೂ ಹೌದು. ಸಕಲ

ಆಚಾರಗಳುಳ್ಳವರಿಗೆ ಶಿವದೊಡಕೂ ಹೌದು.

ತನುವಿಗೆ ತಾನೇ ಬಂಧಿಸಿಕೊಂಡ ಶಿವದೊಡಕನ್ನು ತನುವನ್ನು ಆವರಿಸಿದ ಮನವೇ ಬಿಡಿಸಿಕೊಳ್ಳಬೇಕು. ಕುರುಹಿಲ್ಲದ ಲಿಂಗವನ್ನು ತೆರಹಿಲ್ಲದ ಜಂಗಮವನ್ನು ಅಂಗವನ್ನು ಆವರಿಸಿದ ಮನವೇ ಕಂಡು ಹಿಡಿಯಬೇಕು. ತನುವಿಗೆ ಮುತ್ತಿದ ಶಿವದೊಡಕನ್ನು ಯಾವ ಪೀಠಾಧಿಪತಿಯೂ ಕಿತ್ತೆಸೆಯಲಾರ. ಯಾವ ವಿಶ್ವವಿದ್ಯಾಲಯಗಳೂ ಕಿತ್ತೆಸೆಯಲರಿಯವು.

ಮುಟ್ಟಬಾರದ ಠಾವ ಮರೆಗೊಂಡಿರ್ಪ ಮಮಕರ್ತ ಕೂಡಲಸಂಗಮದೇವ:

ಕುರುಹಿಲ್ಲದ ಅರಿವಿನ ಲಿಂಗಯ್ಯನು ಮತ್ತು ಅರಿವನ್ನು ಪಾಲಿಸುವ ತೆರಹಿಲ್ಲದ ಜಂಗಮರಿಬ್ಬರು ಮುಟ್ಟಬಾರದ ಠಾವ ಅಂದರೆ ಬೆಳ್ಳನೆಯ ಹಾಳೆಯಲ್ಲಿ ಮರೆಗೊಂಡ ಮಮಕರ್ತರು.

ರಜತ ಪರದೆಯ ಮೇಲೆ ಬಿದ್ದ ಚಿತ್ರಗಳೆಲ್ಲ ಸುಳ್ಳು; ರಜತ ಪರದೆಯೊಂದೆ ಸತ್ಯ. ಸಿನಿಮಾದಲ್ಲಿರುವ ಬೆಳ್ಳನೆಯ ಪರದೆ ಮೇಲೆ ಏನೆಲ್ಲ ಕತೆಯುಳ್ಳ ಚಿತ್ರಗಳು ಬಂದು ಹೋಗುತ್ತವೆ. ಆ ಕತೆಯ ಒಂದು ಕಲೆಯೂ ಪರದೆಗೆ ಅಂಟುವುದಿಲ್ಲ. ಹಾಗೆ ಕತೆ ಸಂಗ್ರಹವಾಗುವುದಿಲ್ಲ. ಎಷ್ಟೋ ಚಿತ್ರಗಳು, ಸಾವಿರಾರು ಸಿನಿಮಾ ಚಿತ್ರಗಳು; ಯುದ್ಧ, ಅಳುವು, ಆಕ್ರಂದನ, ಚೀರಾಟ, ದೊಂಬಿ, ಕಳುವು, ಹಲ್ಲೆ, ಅತ್ಯಾಚಾರ, ಕೊಲೆ ಸಾವು ನೋವುಗಳು. ಆದರೂ ಕಲೆರಹಿತ ಬೆಳ್ಳನೆಯ ಪರದೆ ಮಾತ್ರ ಒಂದೇ. ಇದು ಯಾರಿಗೂ ಕಾಣುವುದಿಲ್ಲ. ಚಿತ್ರ ನೋಡುವ ತನುವಿಗೆ ಶಿವದೊಡಕು ಆಗಿ ಪರಿಣಮಿಸಿದೆ. ಪರದೆ ನೋಡಿ ಆನಂದ ಪಡುವ ತನುವಿಗೆ ಅರಿವಿನ ಆಚಾರದ ಶಿವಾಚಾರವಾಗಿ ಪರಿಣಮಿಸಿದೆ. ಇದು ಮಮಕರ್ತ ಸಂಗಯ್ಯನ ಆಟ.

ಐಕ್ಯನ ಶರಣಸ್ಥಲ

949

ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ
ಆದಿಯಾಧಾರದ ಪರಮಾತ್ಮ ಲಿಂಗದಲ್ಲಿ !
ಆದಿ ಮಧ್ಯ ಅವಸಾನವರಿಯದ
ಅಗಮ್ಯ ವೇದಾದಿ ಸಕಲ ಶಾಸ್ತ್ರಪ್ರಮಾಣರು
ಅದನಂತಿಂತೆಂದುಪಮಿಸಲಿಲ್ಲ,
ಮಹಾಂತ ಕೂಡಲಸಂಗಮದೇವಾ.

ಬಯಲು ದೇವರು ಆದಿ ಅನಾದಿಯಿಂದಲೂ ಅತ್ತತ್ತ. ಅವನಿಗೆ ಆದಿ ಅನಾದಿ ಎನ್ನಲು ಬರುವುದಿಲ್ಲ. ಬಯಲ ಬೀಜದಿಂದಲೇ; ಬಯಲ ಗರ್ಭದಿಂದಲೇ ಭೂಮಿ ನೀರು ಅಗ್ನಿ ಅಂಬರಗಳು ಹುಟ್ಟಿದವು. ಬಯಲ ಆಧಾರ ಹೊಂದಿ ಬಯಲಲ್ಲಿಯೇ ನಿಂತವು.

ಬಯಲು ಆದಿಯನು ಅರಿಯದು, ಮಧ್ಯವನು ಅರಿಯದು, ಅವಸಾನವನೂ ಅರಿಯದು. ಅದು ಅಗಮ್ಯ ಅಗೋಚರ ಅಪ್ರಮಾಣ. ಅಪ್ರತಿಮ ಲಿಂಗವಾಗಿ ಬಂದು ಅಂಗದಲ್ಲಿ ಚುಳುಕಾಗಿದೆ. ಇಂತಹ ಲಿಂಗಾಂಗದಿಂದಲೇ ಹುಟ್ಟಿದ ವೇದಾದಿ ಸಕಲ ಶಾಸ್ತ್ರಗಳಿಂದ ವಿರಾಟ

ಸ್ವರೂಪವಾಗಿ ನಿಂತ ಲಿಂಗಾಂಗವನು ಇಂತೆಂದು ಉಪಮಿಸಲು ಸಾಧ್ಯವೇ ? ಅಂಗದಲ್ಲಿ ಸಂಗಮವಾದ ಮಹಾಂತ ಸಂಗಮದೇವನನು !

950

ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ
ಲಿಂಗ ಬೇರೆ ರೂಪು ನಿರೂಪನಲ್ಲ.
ಲಿಂಗ ಬೇರೆ ಕಾಯ ಸಂಬಂಧಿಯಲ್ಲ;
ಲಿಂಗ ಬೇರೆ ಮಹಾಘನದಿಂದತ್ತತ್ತಲೆ !
ಕೂಡಲಸಂಗಮದೇವರ ನಿಲವು ಆರಿಗೆಯೂ ಅಳವಡದು !

ಮಹಾಲಿಂಗವೆಂದರೆ ಕಾಯ ಸಂಬಂಧಿಯಲ್ಲ. ರೂಪದ ಸಂಬಂಧವೂ ಅಲ್ಲ ; ನಿರೂಪದ ಸಂಬಂಧಿಯೂ ಅಲ್ಲ. ಆಚಾರಲಿಂಗ ಗುರುಲಿಂಗ ಶಿವಲಿಂಗ ಮುಂತಾದ ಹೆಸರಿನಿಂದ ಮಹಾಲಿಂಗವನ್ನು ಕರೆದರೂ ಅದು ನಾಮ ಮಾತ್ರವೇ ಆಗಿದೆ ಹೊರತು ಲಿಂಗವೆನ್ನುವುದಕ್ಕೆ ಹೆಸರಿಲ್ಲ.

ಮಹಾಲಿಂಗ ಬೇರೆಯೇ ; ಅದು ಮಹಾಘನದಿಂದ ಅತ್ತತ್ತ . ಅಂಗದಲ್ಲಿ ಸಂಗಮವಾದ ಅರಿವಿನ ದೇವರ ನಿಲವು ಆರಿಗೆಯೂ ಅಳವಡದು. ಸೂಕ್ಷ್ಮವಾಗಿ ಗಮನಿಸಿ ಅದರತ್ತ ಒಲವುಳ್ಳ ಸಕಲರಿಗೂ ಆಳವಡದೇ ಇರದು.

951

ಹುತ್ತಕ್ಕೆ ಏಸು ಬಾಯಾದಡೇನು ? ಸರ್ಪನಿಪ್ಪುದು ಒಂದೇ ಸ್ಥಾನ !
ಭಾವ ಭ್ರಮೆಯಳಿದು ನೋಡಾ ;
ಆ ಭಾವ ಭಾವಿಸಲು ನಿರ್ಭಾವ ಕೂಡಲಸಂಗಮದೇವಾ.

ಹುತ್ತಕ್ಕೆ ಏಸು ಬಾಯಾದಡೇನು ? ಹುತ್ತ ಒಂದೇ ಸರ್ಪ ಒಂದೇ, ದೇಹಕ್ಕೆ ಐದು ಬಾಯಿ ಇದ್ದಡೇನು ? ದೇಹ ಒಂದೇ, ಮನ ಒಂದೇ. ದೇಹದ ಚರ್ಮ, ಕಣ್ಣು, ಕಿವಿ, ಮೂಗು, ನಾಲಿಗೆ ಎಂಬ ಐದು ಇಂದ್ರಿಯಗಳನ್ನೇ ಬಾಯಿ ಮಾಡಿಕೊಂಡ ಮನ ಐದೂ ಇಂದ್ರಿಯಗಳ ಮೂಲಕ ಸರ್ಪದಂತೆ ಹರಿದಾಡುತ್ತದೆ. ಕಣ್ಣಿನಲ್ಲಿ ಮನ ಇಣಿಕಿ ಹಾಕಿ ಸರ್ಪದಂತೆ ವಿಷ ಚೆಲ್ಲುತ್ತದೆ. ನೋಡಿ ಕಣ್ಣು ದೇಹಕ್ಕೆ ಭಾವ ದುರ್ಭಾವದ ಸಂದೇಶ ಕಳಿಸಿ ಸಂಕಟವನ್ನೊಡ್ಡುತ್ತದೆ.

ಭಾವ ಭಾವಿಸಿ ಭ್ರಮೆಯಳಿದು ನೋಡಿದರೆ ಆ ಭಾವ ಭಾವಿಸಲು ನಿರ್ಭಾವ ಕೂಡಲಸಂಗಮದೇವಾ:

ಉದಾ: ಕಲ್ಲು ಕೆತ್ತಿ ಕಲಾವಿದ ಈಶ್ವರನ ರಚಿಸಿದರೆ ಭಾವದಿಂದ ಪೂಜಿಸಲು ದೇಹಕ್ಕೆ ಮನ ಆದೇಶ ನೀಡುತ್ತದೆ. ಕಲ್ಲು ನೋಡಲು ನಿರ್ಭಾವ. ಕೆತ್ತಿದ ಕಲ್ಲನ್ನು ಭಾವದಿಂದ ಈಶ್ವರನೆಂದು ಭಾವಿಸಿದ ಮನ ಭ್ರಮೆಯಳಿದು ನೋಡಿದರೆ ಬರೀ ಕಲ್ಲು. ಈಶ್ವರನೆಂದು ಪೂಜಿಸಲಿಲ್ಲ; ಕಲ್ಲು ಪೂಜೆಗೊಳಗಾಗಲಿಲ್ಲ. ಕೆತ್ತಿದ ಕಲ್ಲನ್ನೇ ಈಶ್ವರನೆಂದು ಭಾವಿಸಿದ ಭಾವ ನಿರ್ಭಾವವಾಗಿ ಕಣ್ಣಿಗೆ

ಕಲ್ಲು ಕಂಡಿತು. ಕಣ್ಣಿಗೆ ಆವರಿಸಿದ ಅಜ್ಞಾನದ ಸರ್ಪ ಸತ್ತು ಅರಿವೊಂದೆ ಉಳಿಯಿತು. ಈಶ್ವರನ ಮೂರ್ತಿ ಕಲ್ಲಲ್ಲಿ ಸಂಗಮವಾಗಿ ಕಣ್ಣಿಗೆ ಸತ್ಯ ದರ್ಶನ ನೀಡಿತು.

ನಿರ್ಭಾವ ಕಣ್ಣಿನಲ್ಲಿಯೇ ಇದೆ. ಭಾವ ಕಣ್ಣಿಗೆ ಆವರಿಸಿದೆ. ಭಾವದ ಭ್ರಮೆಯ ಕಿದುಕೊಂಡು ನಿರ್ಭಾವದಿಂದ ನೋಡುವ ಶಕ್ತಿ ಮನಕ್ಕೆ ಇದೆ. ಮನ ಘನಕ್ಕೆ ಹೋಗಿ ಘನಮನದಿಂದ ನೋಡುವ ನೋಟಕ್ಕೆ ಮಾತ್ರ ಈ ಶಕ್ತಿ ಇದೆ.

ತನು ಎಂಬದು ಅರಿವಿನ ಬಾಯಿ ಉಳ್ಳ ಒಂದೇ ಹುತ್ತ. ಮನ ನಿರ್ಭಾವಕ್ಕೆ ಹೋದರೆ ಮಾತ್ರ ಸರ್ಪದ ಗುಣಗಳು ತೊಲಗುತ್ತವೆ. ಸರ್ಪ ಕೊರಳಿಗೆ ಆಭರಣವಾಗುತ್ತದೆ. ತನು ಮನ ಅರಿವು ಒಂದೇ ಆಗುತ್ತದೆ.

952

ವೇದ ವೇದಿಸಲರಿಯದೆ ಅಭೇದ್ಯ ಲಿಂಗವೆಂದು ನಡು ನಡುಗಿತ್ತು.
ಶಾಸ್ತ್ರಸಾಧಿಸಲರಿಯದೆ ಅಸಾಧ್ಯ ಲಿಂಗವೆಂದು ಸಾರುತ್ತೈದಾವೆ.
ತರ್ಕ ತರ್ಕಿಸಲರಿಯದೆ ಅತರ್ಕ್ಯ ಲಿಂಗವೆಂದು ಮನಂಗೊಳ್ಳವು
ಆಗಮ ಗಮಿಸಲರಿಯದೆ ಅಗಮ್ಯ ಲಿಂಗವೆಂದು ಹೋದವು.
ನರರು ಸುರರು ಅಂತುವ ಕಾಣರು;
ನಮ್ಮ ಕೂಡಲಸಂಗನ ಪ್ರಮಾಣ ಶರಣ ಬಲ್ಲ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗ ವೇದದ ಹೆಸರಿನಲ್ಲಿ ಪುಸ್ತಕದಲ್ಲಿ ಮುದ್ರಿಸಲ್ಪಟ್ಟಿದೆ. ಅಂಗವನ್ನು ಆವರಿಸಿದ ಮನ ಅಂಗದಲ್ಲಿಸಂಗಮವಾದ ಲಿಂಗವನು ಅನುಭಾವದ ಮೂಲಕ ಅರಿತು ಘನಮನವಾಗಬೇಕು. ಇದನ್ನು ಮರೆತು ವೇದವನು ಓದಿ ವೇದಿಸಲು ಅರಿಯದೆ ಅಬೇದ್ಯಲಿಂಗವೆಂದು ಗಡಗಡನೆ ನಡುಗಿತು. ವೇದ ವ್ಯವಹಾರಕ್ಕೆ ಕಾರಣವಾಯಿತೆ ಹೊರತು ಸಾಧಿಸಲರಿಯಲಿಲ್ಲ.

ಮನ ಸಕಲ ಶಾಸ್ತ್ರಗಳನ್ನು ಅಭ್ಯಸಿಸಿ ಶಾಸ್ತ್ರಿಯಾಯಿತೆ ಹೊರತು ಘನಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಕಾರಣ ಅಸಾಧ್ಯ ಲಿಂಗವೆಂದು ಸಾರಿ ಶಾಸ್ತ್ರಕ್ಕೆ ಮೊರೆಹೋಯಿತು.

ಮನ, ತರ್ಕಶಾಸ್ತ್ರ ಕಲಿತು ಘನವನು ತರ್ಕದಿಂದ ತರ್ಕಿಸಲು ಹೋಯಿತು. ತರ್ಕಕ್ಕೆ ನಿಲುಕದ ಅತರ್ಕ ಲಿಂಗವೆಂದು ಅರಿತು ತರ್ಕದಲ್ಲಿಯೇ ಮುಳುಗಿತು.

ಮನ ಆಗಮಗಳನು ಕಲಿತು ಘನವನು ಗಮನಿಸಲು ಹೋಯಿತು. ಆಗಮಕ್ಕೆ ನಿಲುಕದ ಅಗಮ್ಯ ಲಿಂಗವೆಂದು ಅರಿತು ಆಗಮದಲ್ಲಿಯೇ ವಿರಮಿಸಿತು.

ನರರು ಸುರರು ಅಂತುವ ಕಾಣದೇ ಹೋದರು. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಶರಣು ಹೊಗಿ ಕೂಡಲಸಂಗನ ಪ್ರಮಾಣವನು ಶರಣ ಮಾತ್ರ ಅರಿತ.

953

ವೇದಾತೀತ ಷಡುವರ್ಣರಹಿತ, ಅಷ್ಟತ್ರಿಂಶತ್ಕಳಾತೀತ

ವ್ಯೋಮಾತೀತ, ಕೂಡಲಸಂಗಮದೇವ.

ವೇದಗಳಿಗೂ ವರ್ಣಗಳಿಗೂ ಸಕಲ ಕಲೆಗಳಿಗೂ ಅತೀತನಾದವನು. ವ್ಯೋಮಾತೀತನಾದ ಅರಿವಿನ ಸಂಗಯ್ಯನು ಅಂಗದಲ್ಲಿಯೇ ಸಂಗಮವಾಗಿ ಲಿಂಗಾಂಗವೆಂದು ಹೆಸರು ಪಡೆದನು.

ಲಿಂಗಾಂಗದಿಂದಲೇ ಸಕಲ ವೇದಗಳು ಹುಟ್ಟಿದವು. ವರ್ಣಗಳು ಹುಟ್ಟಿದವು. ಸಕಲ ಕಲೆಗಳೂ ಹುಟ್ಟಿದವು. ವ್ಯೋಮಾತೀತನಾಗಿ ವ್ಯೋಮವೆಂಬ ಹೆಸರು ಕೂಡಾ ಲಿಂಗಾಂಗದಿಂದಲೇ ಹುಟ್ಟಿತು.

ಘನದ ಬೆಳಕಿನ ನೆರಳಿನಿಂದಲೇ ಹುಟ್ಟಿದ ಮನ ಸಕಲ ಕಲೆಗಳನ್ನು ಸೃಷ್ಟಿಸಿ, ಮರೆತು, ತಾನು ಸೃಷ್ಟಿಸಿದ ಕಲೆಗಳಿಗೆ ತಾನೇ ಮರುಳಾಯಿತು. ಮರುಳು ಮನಕ್ಕೆ ತಿರುಳು ಹೊಳೆದರೆ ಘನದಲ್ಲಿ ಬೆರೆತು ಘನಮನವಾಯಿತು. ವೇದಾತೀತವಾಯಿತು. ವ್ಯೋಮಾತೀತವಾಯಿತು. ಅಂಗದಲ್ಲಿ ಸಂಗಮವಾಗಿ ಕೂಡಲಸಂಗಯ್ಯನು ತಾನೇ ಆಯಿತು.

954

ವಿಶ್ವಜಿತನು, ಧನುಜಿತನು, ಸ್ವರ್ಜಿತನು,
ಸುತ್ರಾಮಜಿತನು, ನೃಜಿತನು, ಊರ್ವರಾಜಿತನು,
ಅಶ್ವ ಜಿತನು, ಗೋಜಿತನು, ಸ್ವಜಿತನು,
ಸ್ವಸಂವೇದನು, ವೇದನಾದಾತೀತನು.
ತುರೀಯ ಪರಮಾನಂದ ನಿರವಯ
ಸೂರ್ಯಕೋಟಿ ಪ್ರಭೆಯ ಬೆಳಗಿನ
ಸಹಸ್ರ ಕಿರಣದ ಅಗ್ರಪಟಲದ ಬೆಳಗು ಕೂಡಲಸಂಗನು.

ಲಿಂಗಾಂಗಕ್ಕೆ ಅದ್ಭುತವಾದ ಶಕ್ತಿಯಿದೆ. ಅದು ಅಂಗದಲ್ಲಿಯೇ ಚುಳುಕಾಗಿದೆ. ಅಂಗವನ್ನು ಆವರಿಸಿದ ಮನವೇ ಆ ಶಕ್ತಿಯನ್ನು ಅರಿತು ಪಡೆದರೆ ಅದು ತನಗೆ ತಾನೇ ವಿಶ್ವಕ್ಕೆ ಒಡೆಯ, ಕಾಮವನ್ನು ಗೆದ್ದ ನಿಃಕಾಮಿ, ತನ್ನ ಅಜ್ಞಾನವನ್ನು ತಾನೇ ಗೆದ್ದವನು. ದೇವಾನು ದೇವತೆಗಳಿಗೂ ಒಡೆಯನಾದ ಇಂದ್ರನನ್ನೂ ಗೆದ್ದವನು. ನರನನ್ನು ಗೆದ್ದ ನಾರಾಯಣನು ತಾನೇ. ಸ್ವಯಂವೇದನು, ವೇದನಾದತೀತನು ತಾನೇ. ತುರೀಯ ಪರಮಾನಂದ ನಿರವಯನು ತಾನೇ. ಕೋಟಿ ಸೂರ್ಯರನ್ನು ಬೆಳಗುವ ಸಹಸ್ರ ಕಿರಣಗಳ ಅಗ್ರ ಪಟಲದ ಬೆಳಕು ತಾನೇ. ಅಂಗದಲ್ಲಿಯೇ ಕೂಡಿದ ಕೂಡಲಸಂಗಮದೇವನು ತಾನೇ !

955

ಸಹಸ್ರ ಶೀರ್ಷನಾದಿ ಪುರುಷನೊಬ್ಬನು.
ವೇದ ಪುರುಷನೊಬ್ಬ ಪುರುಷನು.
ತ್ರೀಪಾದೂರ್ಧ್ವನೊಬ್ಬ ಪುರುಷನು.
ಉದಯ ಮುಖನೊಬ್ಬ ಪುರುಷನು.
ವಿರಾಟ್ಪುರುಷನೊಬ್ಬ ಪುರುಷನು.

ಆದಿ ಪುರುಷನೊಬ್ಬ ಪುರುಷನು.
ವಿಯತ್ಪುರುಷನೊಬ್ಬ ಪುರುಷನು.
ತದ್ವಿಯತ್ಪುರುಷ ಪುರುಷರಿಲ್ಲದ ಪ್ರಭೆಯ ನೋಡಿರೆ,
ವೇದನಾದಾತೀತ ತುರೀಯ ಪರಮಾನಂದ ನಿರವಯ
ಷಟ್‌ತ್ರಿಂಶತ್ ಪ್ರಭಾ ಪಟಲದ ಪ್ರಭೆಯೆ ಬೆಳಗಿದೆ ನೋಡಿರೆ.
ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲಸಂಗಯ್ಯ.

ಲಿಂಗಾಂಗವೆಂದರೆ ಸಾಮಾನ್ಯವೇ ? ಶರಣರು ಸಂತರು, ಅಂಗಗಳನ್ನು ಮೂವತ್ಮೂರು ಕೋಟಿ ದೇವಾನು ದೇವತೆಗಳು ಎಂದು ಕರೆದರು. ಆ ಕಾಲಘಟ್ಟದಲ್ಲಿ ಜಗತ್ತಿನ ಜನಸಂಖ್ಯೆಯೇ ಅಷ್ಟಿತ್ತು. ಜಗದಲ್ಲಿರುವ ಅಂಗಗಳೆಲ್ಲ ದೇವಾನುದೇವತೆಗಳು. ಅಂಗದ ಶಕ್ತಿ ಅಂಗಕ್ಕೆ ನಿಲುಕದಿದ್ದರೆ ಅದು ಬರೀ ಅಂಗ. ನಿಲುಕಿದರೆ ಅದು ದೇವಾಂಗ! ಸಹಸ್ರ ಶೀರ್ಷನೂ ಅನಾದಿ ಪುರುಷನ ಲಿಂಗಾಂಗ. ವೇದ ಪುರುಷ, ತ್ರಿಪಾದ ಊರ್ಧ್ವ ಪುರುಷನ ಲಿಂಗಾಂಗ. ಉದಯಮುಖ ವಿರಾಟಪುರುಷನ ಲಿಂಗಾಂಗ ಆದಿಪುರುಷನ, ವಿಯತ್ಪುರುಷನ ತದ್ವಿಯತ್ಪುರುಷ ಪುರುಷನಿಲ್ಲದ ಪ್ರಭೆಯ ನೋಡಿರೆ.

ವೇದನಾದಾತೀತನು, ತುರೀಯನು, ಪರಮಾನಂದ ನಿರವಯನು, ಮೂವತ್ತೆಂಟು ಕಲೆಗಳಿಂದ ಪ್ರಭಾ ಪಟಲದ ಪ್ರಭೆಯ ಬೆಳಗಿದ ಮಹಾಪುರುಷನನು ನೋಡಿರೆ. ಸರ್ವಾಂಗ ಲಿಂಗವನು ನೋಡಿರೆ. ಬೆಳಗಿನೊಳಗಣ ಮಹಾಬೆಳಗಿನ ಬೆಳಗು ನೋಡಿರೆ. ಅಂಗದೊಳಗೆ ಮಹಾಲಿಂಗವಾಗಿ ಅಂಗ ಬೆಳಗುವ ಕೂಡಲಸಂಗಮದೇವನ ನೋಡಿರೆ.

956

ಅಷ್ಟತನು ಮೂರ್ತಿ ಲಿಂಗವೆಂದೆಂಬರು ಕೇಳಿರಯ್ಯಾ.
ಆದಿಯ ಮಗ ಅತೀತ ಅತೀತನ ಮಗ ಆಕಾಶ,
ಆಕಾಶದ ಮಗ ವಾಯು, ವಾಯುವಿನ ಮಗ ಅಗ್ನಿ,
ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ,
ಪೃಥ್ವಿಯಿಂದ ಸಕಲ ಜನನವು.
ಮನಸಿನ ಮಗ ಚಂದ್ರ, ಚಂದ್ರನ ಮಗ ಸೂರ್ಯ.
ಸೂರ್ಯನ ಮಗ ದೇಹ, ದೇಹದ ಮಗ ಆತ್ಮ.
ಇಂತೀ ಅಷ್ಟತನುವೆಲ್ಲಕ್ಕೆಯು ಉತ್ಪತ್ಯವುಂಟು.
ಉತ್ಪತ್ಯರಹಿತ ಅಯೋನಿಜ ಶೂನ್ಯ ನಿರಾಳ
ನಮ್ಮ ಕೂಡಲ ಸಂಗಮದೇವಂಗೆ ಮಾತಾ ಪಿತರಿಲ್ಲ.

ಆದಿ ಅತೀತ ಆಕಾಶ ವಾಯು ಅಗ್ನಿ ಅಪ್ಪು ಪೃಥ್ವಿ ಇವೆಲ್ಲವುಗಳಿಗೂ ಮಾತಾಪಿತರಿದ್ದಾರೆ. ಮನಸ್ಸು ಚಂದ್ರ ಸೂರ್ಯ ದೇಹ ಆತ್ಮಕ್ಕೂ ಕೂಡಾ ಮಾತಾಪಿತರಿದ್ದಾರೆ. ಜನನ ಉಂಟು. ಉತ್ಪತ್ತಿ ಉಂಟು.

ಉತ್ಪತ್ಯರಹಿತ ಅಯೋನಿಜ ಶೂನ್ಯ ನಿರಾಳ. ನಮ್ಮ ಕೂಡಲಸಂಗಮದೇವ. ಆತನಿಗೆ ಮಾತ್ರ ಮಾತಾಪಿತರಲ್ಲ. ಬಯಲ ಗರ್ಭದಿಂದಲೇ ಸಕಲವೂ ಜನಿಸಿವೆ. ಬಯಲಿಗೆ ಯಾರು ಜನ್ಮ ಕೊಟ್ಟಿಲ್ಲ. ಆ ಬಯಲೇ ಚುಳುಕಾಗಿ ಅಂಗದಲ್ಲಿ ಸಂಗಮವಾಗಿ ಸಂಗಮನಾಥನಾಗಿದೆ.

957

ಘನ ಗಂಭೀರ ಮಾಹಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ
ಮುಗ್ಧವಾದುದುನೇನೆಂಬೆನಯ್ಯಾ?

ಘನ ಗಂಭೀರವಾಗಿ, ಮಹಾಘನದೊಳಗೆ ಘನವಾಗಿ, ಮಹಾಬೆಳಗಿನೊಳಗಿನ ಬೆಳಗಾಗಿದ್ದೇನೆಂಬ ಶಬ್ದವು ಕೂಡಾ ಮುಗ್ದವಾಗಿ ಇರುವುದು ಇದು ಮಹಾಬೆಳಗಿನ ಸ್ಥಿತಿ.

ಬೆಳಗಿನ ಶಬ್ದ, ಬೆಳಗಿನ ನೋಟ, ಬೆಳಗು ಬೆಳಗಾಗಿ ಬೆಳಗಿಂಗೆ ಬೆಳಗಾಗಿ ಇರುವಿಕೆ. ಘನಗಂಭೀರವಾಗಿ ಇರುವಿಕೆ. ಬೆಳಗಿನ ಬಿಂದುವಿನಿಂದ ಬಂದ ಅಂಗ ಬೆಳಗಿಂಗೆ ಬೆಳಗಾಗಿ ಕೋಟಿ ಸೂರ್ಯರನ್ನು ನಾಚಿಸುವಂತೆ ಬೆಳಗುವ ಬೆಳಕಿನ ಆನಂದ ಅನುಭವಿಸಲು ಬರುವುದೆಂದರೇನು ಸುಲಭದ ಮಾತೆ? ಬೆಳಗಿನ ನುಡಿಯಲ್ಲಿ ನುಡಿಯುವ ಮೂಲಕ ನುಡಿದು ಹೇಳಲು ಬರುತ್ತದೆ ಎಂದರೆ ಸಾಮಾನ್ಯವೇ? ಸಕಲರು ಈ ಮಾತಿನ ಈ ನೋಟದ ಸವಿಯನ್ನು ಅನುಭವಿಸಲು ಸಿದ್ಧರಾಗಲೇಬೇಕು. ಅಣ್ಣನವರು ತಿಳಿಸಿದ ಸೂತ್ರಗಳಂತೆ ಮನ ಘನಮನದ ಸುಖ ಆನಂದದಿಂದ ಅನುಭವಿಸಲು ಸಿದ್ಧರಾಗಲೇಬೇಕು.

958

ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ !
ಬೆಳಗಿಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೇ ಬಲ್ಲ !

ಬೆಳಗು ಕತ್ತಲಿನ ಆಟ! ಬೆಳಗು ಸಮಸ್ತ ಕತ್ತಲನು ಸೃಷ್ಟಿಸಿ ಪುನಃ ಬೆಳಗಿ ಕತ್ತಲನು ಕಳೆದು ಬೆಳಗಾಗುವ ಆಟ. ಬೆಳಗನು ಬೆಳಗಿ ಬೆಳಗುವ ಆಟ.

ಬೆಳಗಿದ ಆ ಬೆಳಕಿನಿಂದ ಕತ್ತಲನು ತಾನೆ ಸೃಷ್ಟಿಸಿದ. ಪುನಃ ಆ ಕತ್ತಲನು ಬೆಳಕು ಮಾಡಿ ಬೆಳಗಿದ. ಬೆಳಕಿನಿಂದಲೇ ಕತ್ತಲು ಆವರಿಸಿ ಏನನ್ನೂ ಕಾಣದಂತೆ ಮಾಡಿತು. ಪುನಃ ಬೆಳಗಿ ಎಲ್ಲವನ್ನು ಕಾಣುವಂತೆ ಮಾಡಿತು. ಕತ್ತಲು ಬೆಳಕಿಗೆ ಸಿಂಹಾಸನವಾಯಿತು.

ಬೆಳಕಿನ ಜಲಬಿಂದುವಿನಿಂದಲೇ ಕತ್ತಲು ಹುಟ್ಟಿತು. ಬೆಳಕಿನ ಬಯಲ ಬಿಂದುವಿನ ಬೀಜ ಅದರ ನೆರಳು ಅಂಗದಲ್ಲಿ ಸಂಗಮವಾಗಿ ಬೇರಿಲ್ಲದ ಜ್ಞಾನದ ಮರ ಹುಟ್ಟಿತು. ಬೆಳಕೂ ಇದೆ

ಕತ್ತಲೂ ಇದೆ ಇದೇನು ಚೋದ್ಯವೋ ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ ಆನೆ ಸಿಂಹಕ್ಕಂಜುವುದಿಲ್ಲ. ಸಿಂಹ ಆನೆಯನು ನುಂಗುವುದಿಲ್ಲ. ಸಿಂಹದ ಘನ ಘರ್ಜನೆ, ಆನೆಯ ಘೀಳು ಒಂದೇ ಕಡೆಯಿದೆ.

ಮಹಾಬೆಳಕು ಬೆಳಕಿನ ಲೀಲೆಯಿಂದ ಮೆರೆಯಬೇಕೆಂದು ಅಂಗದಲ್ಲಿ ಬೆಳಕಿನ ಬೀಜವಾಗಿ ಬಿದ್ದು, ಬಿಂದುವಿನ ನೆರಳನು ಅಂಗವನು ಮಹಾಬೆಳಗಾಗಿ ಬೆಳಗಿದರೆ ಸಾಕು ಸಮಸ್ತ ಕತ್ತಲೆಯ ಮಸಕವ ಕಳೆದು ಬೆಳಗುವ ಮಹಾಬೆಳಕಿನ ಇರವ ನೋಡಾ !

ಬೆಳಗಿಗೆ ಬೆಳಗಿನಿಂದ ಹುಟ್ಟಿದ ಕತ್ತಲೆ ಸಿಂಹಾಸನವಾಗಿ ಬೆಳಗು ಬೆಳಗ ಕೂಡಿದ ಮಹಾಬೆಳಗಿನ ಕೂಟವ ಅಂಗದಲ್ಲಿಯೇ ಸಂಗಮವಾದ ಕೂಡಲಸಂಗಯ್ಯ ತಾನೇ ಬಲ್ಲ ! ತಿಳಿದರೆ ಸಕಲ ಅಂಗಗಳು ಲಿಂಗಾಂಗಗಳಾಗಿ ಬೆಳಗಿಂಗೆ ಬೆಳಗಾಗಿ ಬೆಳಗಿ ಮಹಾಬೆಳಗಿನ ಸವಿಯ ಆನಂದದಿಂದ ಅನುಭವಿಸುವವು.

959

ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ !
ನಾದಬಿಂದು ಕಳಾತೀತ, ಆದಿಯಾಧಾರ ನೀನೆ ಅಯ್ಯಾ !
ಆರೂಢದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ!

ಅಂಗದ ಬಹಿರಂಗವನು ಆವರಿಸಿದ ಮನಕ್ಕೆ ಅಂಗದ ಅಂತರಂಗ ಹೊಳೆದರೆ ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಆಗುತ್ತದೆ. ಜಗದ ಅಂಗಗಳೆಲ್ಲ ದೇವಾಂಗಗಳಾಗಿ ಕಾಣುತ್ತವೆ! ಬಹಿರಂಗದ ಮನ, ಅಂತರಂಗವನ್ನು ಪ್ರವೇಶಿಸುವ ಕಲೆ ಆಸಕ್ತಿಯಿಂದ ಕಲಿತುಕೊಳ್ಳಬೇಕು.

ಮನ, ತನ್ನಂಗವನು ತಾನೇ ನೋಡಿದರೆ ತಿಳಿಯುತ್ತದೆ. ಇತರ ಅಂಗಗಳನು ನೋಡಿದರೂ ತನಗೇ ತಿಳಿಯುತ್ತದೆ. ತನ್ನ ಅಂತರಂಗದಿಂದ ಬಹಿರಂಗದ ವ್ಯವಹಾರಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳಬೇಕು. ಬಹಿರಂಗದ ಮನದಿಂದ ಅಂತರಂಗಕ್ಕೆ ಹೋಗಿ ಅಲ್ಲಿ ಒಂದಾಗಿ ಬಹಿರಂಗಗಳನು ನೋಡಿದರೆ ಅಂಗಕ್ಕೆ ಜಗದ ಅಂಗಗಳೆಲ್ಲ ಒಂದೇ ಆಗಿ ಕಾಣುತ್ತವೆ.

ಅಂಗದ ನಾದ ಒಂದೇ ! ಅದರ ಜನ್ಮಕ್ಕೆ ಕಾರಣವಾದ ಬಿಂದುವೊಂದೇ ! ಜಗದ ಅಂಗಗಳ ಕಲೆಗಳೆಲ್ಲ ಒಂದೇ ! ಅಂಗದ ಆದಿಯೂ ಒಂದೇ ! ಅಂಗಕ್ಕೆ ಆಧಾರವಾದ ಅರಿವು ಒಂದೇ! ಅಂಗದ ರೂಢಿಯೂ ಒಂದೇ. ಅಂಗದ ಅರಿವಿನ ಆರೂಢಿಯೂ ಒಂದೇ. ಅಂಗದ ಕೂಟವೂ ಒಂದೇ. ಅಂಗದಲ್ಲಿಯೇ ಅರಿವು ಮತ್ತು ಮನದ ಕೂಡದ ಅಗಲದ ಕೂಟದ ಸುಖವೂ ಒಂದೇ. ಅಂತರಂಗ ಬಹಿರಂಗ ಆತ್ಮಸಂಗ ಮಾಡಿ ಕೂಡದ ಅಗಲದ ಕೂಟದ ಸುಖವನು ಅಂಗದಲ್ಲಿಯೇ ಸಂಗಮವಾದ ಸಂಗಯ್ಯನು ತಾನೇ ಬಲ್ಲ.

ಅಂತರಂಗದ ಅಂಗದಲ್ಲಿ ಗುರುದೇವನು ಅರಿವನು ಹೇಳುವ ಮೂಲಕ ಸಂಗಮವಾಗಿದ್ದಾನೆ. ಬಹಿರಂಗದಲ್ಲಿ ಆವರಿಸಿದ ಮನವೆಂಬ ಶಿಷ್ಯನು ಅಂತರಂಗದ ಗುರುವಿನೊಂದಿಗೆ ಸಂಬಂಧ ಬೆಳೆಸಿ ಶಿಷ್ಯತ್ವ ಸ್ವೀಕರಿಸಬೇಕು. ಆತ್ಮ ಸಂಗ ಮಾಡಿ ಬಹಿರಂಗದ ಶಿಷ್ಯ ಅಂತರಂಗದ ಗುರುವಿನೊಂದಿಗೆ ಒಂದಾಗಿ ಆತ್ಮ ಸಂಗ ಮಾಡಬೇಕು. ಅಂತರಂಗದಲ್ಲಿದ್ದು ಅರಿವು ಹೇಳುವಾತನೇ ಗುರು; ಬಹಿರಂಗದಲ್ಲಿದ್ದು ಆ ಅರಿವನು ಕೇಳಿ ಗುರು ವಾಕ್ಯ ಪೂರೈಸುವಾತನೇ

ಶಿಷ್ಯ. ಇವರೀರ್ವರಿಗೂ ಅವಿನಾಭಾವ ಸಂಬಂಧ.

ಇವರೀರ್ವರ ನಾದವೂ ಒಂದೇ. ಇವರ ಜನ್ಮಕ್ಕೆ ಕಾರಣವಾದ ಬಿಂದುವೊಂದೇ. ಇವರೀರ್ವರ ಕಲೆಗಳೂ ಒಂದೇ. ಇವರೀರ್ವರಲ್ಲಿ ಆದಿಯಾರೋ ತಿಳಿಯದು ಅನಾದಿಯಾರೋ ತಿಳಿಯದು. ಆದಿ ಆಧಾರಗಳಿಗೆ ಅತೀತರಾದವರು. ಗುರುಶಿಷ್ಯರ ಸಂಬಂಧ ಪೂರ್ವಾಪೂರ್ವ. ಗುರು ಮೊದಲು ಎನ್ನಲು ಬರುವುದಿಲ್ಲ. ಶಿಷ್ಯ ಮೊದಲು ಎನ್ನಲು ಬರುವುದಿಲ್ಲ. ಗುರುವಿನ ಬೆನ್ನ ಹಿಂದಿನ ನೆರಳಾಗಿ ಶಿಷ್ಯ ಬಂದ. ಗುರು ಬಂದಾಗಲೇ ಶಿಷ್ಯ ಬಂದ; ಶಿಷ್ಯ ಬಂದಾಗಲೇ ಗುರು ಬಂದ. ಗುರು ಶಿಷ್ಯನನು ತೊಳಗಿ ಬೆಳಗಬೇಕು ಇಲ್ಲ ಶಿಷ್ಯನೇ ಗುರುವಿನ ಬೆಳಕಿನಲ್ಲಿ ಮಿಂದು ಬೆಳಗಿಂಗೆ ಬೆಳಗಾಗಿ ಬೆಳಗಬೇಕು. ಇವೆರಡೂ ಅಂತರಂಗ ಬಹಿರಂಗದ ಕಾರ್ಯಗಳು. ಅರಿವಿನ ಕಾಯದ; ಆ ಕಾಯದಲ್ಲಿಯೇ ಸಂಗಮವಾದ ಸಂಗಯ್ಯನ ಕಾರ್ಯಗಳು !

ಬಹಿರಂಗಕ್ಕೆ ಅಂತರಂಗ ತಿಳಿಯದ ಹೊರತು ಅಂಗಕ್ಕೆ ಮತ್ತೊಂದು ಅಂಗ ನೆರವಾಗಲು ಬರುವುದಿಲ್ಲ. ಒಂದು ಅಂಗ ಮತ್ತೊಂದು ಅಂಗಕ್ಕೆ ಗುರುವಾಗಲು ಬರುವುದಿಲ್ಲ. ಶಿಷ್ಯನಾಗಲು ಬರುವುದಿಲ್ಲ. ಏಕೆಂದರೆ ಅಂತರಂಗದ ವಿಷಯ ಬಹಿರಂಗಕ್ಕೆ ಮನದಟ್ಟಾಗಬೇಕು ಇಲ್ಲ ಬಹಿರಂಗ ಅಂತರಂಗದತ್ತ ಸಾಗಬೇಕು. ಹೀಗೆ ಬಹಿರಂಗಕ್ಕೆ ಅನುವಾಗುವಂತೆ ಅಂತರಂಗ ಬಹಿರಂಗ ಒಂದಾದ ಅಂಗ ಮತ್ತೊಂದು ಅಂಗದೊಂದಿಗೆ ಸಂಪರ್ಕ ಬೆಳೆಸಬಹುದು. ಆದರೆ ಆ ಅಂಗವನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುವಂತಿಲ್ಲ. ಆ ಅಂಗಕ್ಕೆ ಗುರುವಾಗುವಂತೆಯೂ ಇಲ್ಲ. ಬಹಿರಂಗ ಅಂತರಂಗದೊಂದಿಗೆ ಪ್ರವೇಶಿಸಲು ತವಕಿಸಿ ಮತ್ತೊಂದು ಅಂಗದೊಂದಿಗೆ ತಿಳಿಯ ಇಚ್ಛಿಸಿದರೆ ಅಂತರಂಗದ ವಿಷಯವನು ಆನಂದದಿಂದ ಸೂತ್ರದೊಂದಿಗೆ ಹೇಳಬಹುದು. ಆಗ ಮಾತ್ರ ಅಂತರಂಗ ತಿಳಿದ ಅಂಗ ಮತ್ತೊಂದು ಅಂಗಕ್ಕೆ ಕೈ ಮರವಾಗಿ ಹಾದಿ ಸೂಚಿಸುತ್ತದೆ. ಆ ಹಾದಿ ಹಿಡಿದು ಬಹಿರಂಗ ಅಂತರಂಗದತ್ತ ಹೆಜ್ಜೆ ಹಾಕಬೇಕು. ಹಾದಿ ಸೂಚಿಸಿದ ಅಂಗವನ್ನು ಕೂಡಲೇ ಮರೆತು ಅಂತರಂಗದೊಂದಿಗೆ ಬೆರೆತು ಅರಿವಿನ ಸುಖವನು ಅನುಭವಿಸಬೇಕು.

ಹುಟ್ಟಿದಂದಿನಿಂದಲೇ ಗುರುವಿನೊಂದಿಗೆ ಬಂದ ಅಂಗಕ್ಕೆ ಮತ್ತೊಂದು ಅಂಗ ಗುರುವಾಗುವುದೆಂದರೇನು ? ಶಿಷ್ಯನಾಗುವುದೆಂದರೇನು ಇವೆರಡೂ ಅಪಹಾಸ್ಯದ ಮಾತುಗಳೇ ಆಗಿವೆ. ಬಹಿರಂಗದ ಗುರು ಹೇಳಿದ ವಾಕ್ಯಗಳು ಬಹಿರಂಗದ ಅಂಗದಲ್ಲಿಯೇ ಸಂಗ್ರಹವಾದರೆ ಆ ಅಂಗ ಮತ್ತೊಂದು ಅಂಗದೊಂದಿಗೆ ಗುರುವಿನ ವ್ಯವಹಾರ ಮಾಡುತ್ತದಲ್ಲದೆ ಗುರುವೆಂದರೇನು ಶಿಷ್ಯನೆಂದರೇನೆಂದು ಸಲಹೆ ನೀಡುವುದಿಲ್ಲ. ಅಂತರಂಗ ಬಹಿರಂಗ ಒಂದೇ ಎಂದು ತೋರಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅಂತರಂಗದ ವಿಷಯಗಳನ್ನು ಪುಸ್ತಕದ ಮೂಲಕ, ಗುರುವಿನ ಮೂಲಕ ಬಹಿರಂಗ ಪಡೆಯುತ್ತ ವ್ಯವಹರಿಸುತ್ತ ಬಹಿರ್‌ಸುಖ ಪಡೆಯುತ್ತದೆಯೇ ಹೊರತು ಅಂತರಂಗಕ್ಕೆ ಪ್ರವೇಶಿಸಲರಿಯದು. ಕತ್ತಲು ಬೆಳಕಿನ ಮಾತನಾಡಿದರೆ ಬೆಳಕಾಗಲರಿಯದು. ಬೆಳಗು ಕತ್ತಲನ್ನು ಬೆಳಗಿದಾಗಲೇ ಬೆಳಕಾಗುತ್ತದೆಂದು ಕತ್ತಲು ಅರಿಯದೆ ಕತ್ತಲು ಕತ್ತಲಾಗಿಯೇ ಬಹಿರಂಗವನ್ನು ಆವರಿಸುತ್ತದೆ. ಬೆಳಕು ಬೆಳಕಿಂಗೆ ಬೆಳಕಾಗಿ ಅಂತರಂಗವನ್ನು ಬೆಳಗುತ್ತದೆ. ಅಂತರಂಗ ಅಂತರಗವಾಗಿಯೇ ಉಳಿಯುತ್ತದೆ. ಬಹಿರಂಗ ಬಹಿರಂಗವಾಗಿಯೇ ಉಳಿಯುತ್ತದೆ. ಎರಡಂಗಗಳಿಗೂ ಒಂದೇ ಅಂಗ ಆಧಾರವಾಗಿದ್ದರೂ ಕೂಟದ ಸುಖವನು ಬಹಿರಂಗ ಕಂಡುಕೊಳ್ಳುವುದಿಲ್ಲ.

ಹೀಗಾಗಿ ಅಂಗಗಳಿಗೆ ಯಾವ ವಿಶ್ವವಿದ್ಯಾಲಯಗಳೂ ಪಾಠ ಮಾಡಬೇಕಿಲ್ಲ. ಮಾಹಿತಿ ಜ್ಞಾನವಲ್ಲ ಎಂದು ಹೇಳುವ ಅಂಗ ಕೇಳುವ ಅಂಗಗಳೆರಡೂ ತಿಳಿಯಲೇಬೇಕು. ಏಕೆಂದರೆ ಜ್ಞಾನವನು ಬೋಧಿಸುವ ಗುರುವು ಅಂಗದಲ್ಲಿಯೇ ಸಂಗಮವಾಗಿದ್ದಾನೆ. ಜ್ಞಾನ ಕೇಳಿ ಮಹಾಜ್ಞಾನಿಯಾಗುವ ಶಿಷ್ಯ ಬಹಿರಂಗದಲ್ಲಿ ವಾಸವಾಗಿದ್ದಾನೆ. ಗುರು ಹೇಳುವುದು ಬಿಡುವುದಿಲ್ಲ. ಶಿಷ್ಯ ಕೇಳುವುದೇ ಇಲ್ಲ. ಇವರಿಬ್ಬರ ಸಂಬಂಧವನು ಯಾರು ಬೆಸೆಯಲು ಸಾಧ್ಯ ! ಅಂತರಂಗದಲ್ಲಿ ಗುರು, ಬಹಿರಂಗದಲ್ಲಿ ಶಿಷ್ಯ. ಇವರಿಬ್ಬರಿಗೂ ಒಂದಂಗವೇ ಆಧಾರ. ಆದರೂ ಗುರುಶಿಷ್ಯರ ಸಮಾಗಮ ಸುಖ ಏರ್ಪಡದು ! ಪೊರೆ ಕಳಚಿದರೆ ಸಾಕು ಇಬ್ಬರೂ ಘನಗಂಭೀರರು. ಮಹಾಘನದೊಳಗೆ ಘನಕ್ಕೆ ಘನವಾಗಿ ಬೆರೆತು ಘನವೇ ತಾವಾದವರು. ಅಂಗದೊಳಗೆ ಸಂಗಮವಾಗಿ ಮಹಾಬೆಳಗಿನ ಬೆಳಕ ಕಂಡವರು. ಗುರುಶಿಷ್ಯರೀರ್ವರೂ ಅಪೂರ್ವರು.

ಇಂದು ಗುರು ಪೂರ್ಣಿಮೆ. ಗುರು ಶಿಷ್ಯರಿಬ್ಬರೂ ಒಂದಾದ ದಿನ. ಚಂದ್ರ ಕೃಷನಾಗಿ ಪೂರ್ಣಿಮೆಯಂದು ಸಂಪೂರ್ಣ ಬೆಳಗುತ್ತಾನೆ. ಮತ್ತೆ ಕೃಷನಾಗುತ್ತಾನೆ. ಗುರುಶಿಷ್ಯರೊಂದಾದ ದಿನ ಹಾಗಲ್ಲ. ಅಂತರಂಗದಲ್ಲಿ ಸದಾ ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕಿನಲ್ಲಿ ಶಿಷ್ಯ ಪ್ರವೇಶ ಮಾಡುತ್ತಾನೆ. ಆ ಬೆಳಕಿನಲ್ಲಿ ಒಂದಾಗಿ ಬೆಳಗಿಂಗೆ ಬೆಳಕಾಗಿ ಬೆಳಗುತ್ತಾನೆ. ಅಂತರಂಗ ಬಹಿರಂಗ ಒಂದಂಗವಾಗಿ ಕೂಡಿ ಆ ಅಂಗದಿಂದ ಪೂರ್ಣಚಂದಿರನಾಗಿ ಬೆಳಗುತ್ತಾನೆ. ಎಂದೆಂದಿಗೂ ಕೃಷನಾಗದೆ ಜ್ಞಾನದ ಬೆಳಕಿನಿಂದ ಬೆಳಕಿಂಗೆ ಬೆಳಕಾಗಿ ಬೆಳಗುತ್ತಾನೆ.

ಜ್ಞಾನಭಂಡಾರಿ ಬಸವಣ್ಣನವರ ವಚನಗಳು ಬಹಿರಂಗವನ್ನು ಬೆಳಗುವ ಜ್ಞಾನಜ್ಯೋತಿಗಳು. ಅಂತರಂಗದ ಬೆಳಕಿನೊಂದಿಗೆ ಸಮಾಗಮವಾಗಲು ಸೂತ್ರ ಪ್ರಧಾನವಾದ ಕೋಲ್ಮಿಂಚುಗಳು! ಸದ್ಗುರು ವಿದ್ಯಾನಂದರು ಜಗಜ್ಯೋತಿ ಬಸವಣ್ಣನವರು ಪ್ರೇರಣೆ ನೀಡಿದಂತೆ ಅಕ್ಷರಗಳ ಮೂಲಕ ನುಡಿದಿರುವೆ. ಬಹಿರಂಗಕ್ಕೆ ಬೇಸರವಾದಲ್ಲಿ ನನ್ನನ್ನು ನಿಂದಿಸಿ. ಅಂತರಂಗಕ್ಕೆ ಆನಂದವಾದಲ್ಲಿ ಅವರನ್ನು ಅಪ್ಪಿಕೊಳ್ಳಿ. ಬಹಿರಂಗ ಅಂತರಂಗ ಒಂದಂಗವಾಗಿ ಬೆಳಕಿಂಗೆ ಬೆಳಕಾಗಿ ಬೆಳಗುವ ಸದುದ್ದೇಶ ಪಾಲಿಸುವವರೆಗೆ ಅಂಗ ವಿರಮಿಸದಿರಲಿ. ಸರ್ವಂಗಗಳಿಗೂ ಶರಣರ ಕೃಪೆಯಾಗಲಿ.

ಶುಭಮಂಗಲ

ವಚನಾನುಕ್ರಮಣಿಕೆ

ಲೇಖಕರ ಕೃತಿಗಳು

ಬೆಳಕಿನ ಬಳ್ಳಿ	-	2011
ಬಯಲ ಬೀಜಗಳು	-	2012
ರೂಹಿಲ್ಲದ ಚೆಲುವೆ	-	2012
ಜ್ಞಾನಭಂಡಾರಿ ಬಸವಣ್ಣ (ಭಾಗ -1)	-	2014

ಸಂಪಾದಿಕ ಕೃತಿಗಳು

ಗಗನ ಸಿದ್ಧಾಂತ - 2006 ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು
ತೆರೆಹಿಲ್ಲದಭವ ನುಡಿಗೆಡೆಗೊಡನು - 2011
ಗುರುಕನ್ಯೆ - 2017


ಇ-ಕೃತಿಗಳು

ಹಡಪದ ಅಪ್ಪಣ್ಣಗಳ ವಚನಾನುಭವ
ಅಂಬಿಗರ ಚೌಡಯ್ಯಗಳ ವಚನಾನುಭವ
ಮಾದಾರ ಚೆನ್ನಯ್ಯಗಳ ವಚನಾನುಭವ

ಸಂಪಾದಿತ ಇ-ಕೃತಿಗಳು

ಅಕಾಯ ಭಕ್ತ	-	ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು
ಅಂತರಾತ್ಮ ಬೋಧೆ	-	ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು
ಗುರು ಕಾರುಣ್ಯ	-	ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು
ಉಪದೇಶಾಮೃತ	-	ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು
ನಿಶ್ಯಬ್ಧ ವೇದಿ	-	ಶ್ರೀ ವಿದ್ಯಾನಂದ ಶರಣರು ಡಬ್ಬೇರಮಡುವು

ಸಂಪಾದಿತ ಇ-ಕೃತಿ ಹಾಗೂ ಲೇಖಕರ ಇತರೆ ಪುಸ್ತಕಗಳನ್ನು ಓದಲು
www.suddimoola.com ಗೆ ಭೇಟಿ ನೀಡಿ
Book Store ನಲ್ಲಿ ಲಾಗ್ ಆನ್ ಮಾಡಿ



"ಕಳಬೇಡ ಕೊಲಬೇಡ" ಎನ್ನುವ ಬಸವಣ್ಣನವರ ವಚನ ಅವರ ವಚನಗಳಲ್ಲಿಯೇ ಅತ್ಯಂತ ಪ್ರಮುಖವಾದುದು, ಈ ವಚನವನ್ನು ಸರಳ, ಸುಲಭವೆಂದು ಸಾಮಾನ್ಯವಾಗಿ ಸರ್ವರೂ ಭಾವಿಸುತ್ತಾರೆ, ಆದರೆ, ಅದರ ತಿರುಳು ಬೇರೆಯದೇ ಆಗಿದೆ. ಓದುಗರು ಅದನ್ನು ಓದಿಯೇ ತಿಳಿಯಬೇಕು.

...... ಈ ಪುಸ್ತಕದ ಆಯ್ದ ಕೆಲ ವಾಕ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ.

- ಅಧಿಕಾರ, ಕರೆನ್ಸಿ, ಚಿನ್ನ, ಭೂಮಿಗೆ ಮರುಳಾದ ರಾಜ ಮಹಾರಾಜರು ಯುದ್ಧ ಮಾಡಿ ರಕ್ತದ ಕಾಲುವೆ ಹರಿಸಿ ಮಣ್ಣು ಸೇರಿದ್ದಾರೆ. ಅವರ ತನುವಿನಲ್ಲಿದ್ದ ಸದಾಶಯ ಒಂದಿಷ್ಟು ಬಳಕೆಯಾಗದೆ ಅವರ ಜೊತೆಗೆಯೇ ಮಣ್ಣು ಸೇರಿ ಹೊರಟು ಹೋಯಿತು.

- ದೇಹ ಎನ್ನುವುದು ಒಂದು ಕುದುರೆ. ಈ ಕುದುರೆಯಲ್ಲಿ ಅರಿವೆಂಬ ಗುರುವು ಇದ್ದಾನೆ; ಈ ಗುರುದೇವನನ್ನು ತಿಳಿಯುವ ಮನವೆಂಬ ಶಿಷ್ಯನೂ ಇದ್ದಾನೆ. ಆ ಗುರುದೇವನೇ ಬುದ್ಧ, ಆತನಿಗೆ ಶಿಷ್ಯನಾದವನೇ ಸಿದ್ಧಾರ್ಥ. ಬುದ್ಧ ಸಿದ್ಧಾರ್ಥನನ್ನು ತನ್ನಂತೆ ಮಾಡಿಕೊಂಡು ಜ್ಞಾನ ಯುದ್ಧಕ್ಕೆ ಹೋದ. ಎದುರಾದ ಅಜ್ಞಾನದ ಸೈನ್ಯವೆಲ್ಲ ನಾಶವಾಯಿತು. ಅಂಗುಲಿಮಾಲ ಸತ್ತು ಬುದ್ಧನೇ ಆದ!

- ಅರಿವು ಗ್ರಂಥದಲ್ಲಿದೆಯೆಂದು ಮನ ಓದಿ ಪಂಡಿತನಾಗುತ್ತದೆ. ಓದುವ ಸಕಲ ಗ್ರಂಥಗಳೂ ತನುವಿನಿಂದಲೇ ಬಂದದ್ದೆಂದು ಸಂದೇಹಿ ಮನಕ್ಕೆ ತಿಳಿಯುವುದೇ ಇಲ್ಲ. ಸಂದೇಹಿ ಮನವನ್ನು ಅರಿವು ತನ್ನತ್ತ ಸುಳಿಯಗೊಡುವುದಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ತನುವಿನಲ್ಲಿ ಹುಟ್ಟಿದ ಮನ ತನುವನ್ನೇ ತುಕ್ಕು ಹಿಡಿಸಿ ತನುವಿನೊಂದಿಗೆ ಇಲ್ಲವಾಗುತ್ತದೆ.

ಹೀಗೆ ಪುಟ ಪುಟದಲ್ಲೂ ಓದುಗರನ್ನು ಮನ ತನ್ನ ಅರಿವಿನತ್ತ ಕರೆದುಕೊಂಡು ಹೋಗುವ ತಿರುಳಿದೆ. ಓದುಗರು ಈ ಗ್ರಂಥವನ್ನು ಸಮಾಧಾನದಿಂದ ಓದಿ ಸ್ವಯಂ ಜ್ಞಾನ ಕ್ರಾಂತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂಬ ಕಳಕಳಿ ನಮ್ಮದಾಗಿದೆ. ಈ ಅಕ್ಷರ ಕ್ರಾಂತಿಯ ಸೇವೆಯಲ್ಲಿ ಬಾಲಂಕು ಸೇವಾ ಫೌಂಡೇಶನ್ ಸಂಸ್ಥೆಗೆ ಅವಕಾಶ ಮಾಡಿಕೊಟ್ಟ ಲೇಖಕರಿಗೆ ವಂದನೆಗಳು.

ಡಾ॥ ಶ್ರೀಧರ ರೆಡ್ಡಿ

ಅಧ್ಯಕ್ಷರು, ಬಾಲಂಕು ಸೇವಾ ಫೌಂಡೇಶನ್

ರಾಯಚೂರು